

ಸಂಪುಟ ೨] ಗುರುವಾರ ೨-೯-೪೩ [ಸಂಚಿಕೆ ೪೨

ಇಟಲಿ ಶಾಂತಿಗೆ ಒಡಂಬಟ್ಟಿದೆಯೋ ?

ಜರ್ಮನರು ಕ್ರಿಮಿಯಾ, ಕ್ಯೂಬನ್ ಕ್ಷೇತ್ರವನ್ನು ತ್ಯಜಿಸುವರು

ಸ್ವೀಡಿಷ್-ಜರ್ಮನ್ ಬಾಂಧವ್ಯ ಕೆಡುತ್ತಿದೆ

ಭಾರಿ ಕಳುವು

ಮೈಸೂರು ೨

ಕೃಷ್ಣ ಸಿನಿಮಾ ಮುಂದಿರುವ ೧೦ನೇ ಕ್ರಾಸ್ ರಸ್ತೆಯಲ್ಲಿರುವ ಅಹಂ ಮಹಮದ್ ಎಂಬುವರ ಅಂಗಡಿಯಲ್ಲಿ ಮೊನ್ನೆ ದಿನ ರಾತ್ರಿ ಯಾರೋ ನುಗ್ಗಿ, ಒಡವೆ ಮತ್ತು ನಗದು ಹಣ, ಒಟ್ಟು ೧೫೦೦ ರೂ.ಗಳನ್ನು ಇಟ್ಟಿದ್ದ ಕಬ್ಬಿಣದ ಪೆಟ್ಟಿಗೆಯನ್ನು ಅಪಹರಿಸಿಕೊಂಡು ಹೋಗಿದ್ದಾರೆಂತು ವರದಿಯಾಗಿದೆ. ಪೆಟ್ಟಿಗೆಯಲ್ಲಿದ್ದ ಹಣವನ್ನು ತೆಗೆದುಕೊಂಡು, ಖಾಲಿ ಪೆಟ್ಟಿಗೆಯನ್ನು ಸ್ವಲ್ಪ ದೂರದ ಚರಂಡಿಯಲ್ಲಿ ಎಸೆದುಹೋಗಿದ್ದುದನ್ನು ಪೋಲೀಸರು ಕಂಡುಹಿಡಿದಿದ್ದಾರೆ. ಮುಂದಿನ ತನಿಖೆ ನಡೆಯುತ್ತಿದೆ.

ಕಿವಿ ಕತ್ತರಿಸಿದ ಪ್ರಸಂಗ

ರಾಜಧಾನಿಯ ಆದಿಕರ್ಣಾಟಕಪುರದ ಶ್ರೀರಂಗ ಉರುಫ್ ಕರಿಯ ಎಂಬುವನು ೮ ನೇ ತಾ|| ರಾತ್ರಿ ಚಿಕ್ಕರಂಗ ಎಂಬುವ ಹತ್ತಿರ ಜಗಳವಾಡಿ ಅವನ ಕಿವಿಯನ್ನು ಚಾಕುವಿನಿಂದ ಕತ್ತರಿಸಿ, ಮತ್ತು ದೊಣ್ಣೆಯಿಂದ ಹೊಡೆದು ಗಾಯಪಡಿಸಿರುವನೆಂದು ವರದಿಯಾಗಿದೆ.

ಮದ್ರಾಸ್ ಡೆಟಿನ್ಯೂ

ಮದ್ರಾಸ್ ಜಿಲ್ಲೆಯ ವೆಲ್ಲೂರ್ ಜೈಲಿನಲ್ಲಿ ಡೆಟಿನ್ಯೂ ಆಗಿರುವ ಶ್ರೀ ದಯಾನಂದ ರಾಜು ಎಂಬುವರು ೧೫ ದಿವಸ ಪೆರೋಲ್ ಮೇಲೆ ರಾಜಧಾನಿಗೆ ಬಂದಿದ್ದು, ಅವರಿಗೆ ಪುನಃ ಪೆರೋಲ್ ಅವಧಿಯನ್ನು ಹೆಚ್ಚಿಸಲಿಲ್ಲವಾದ್ದರಿಂದ ಪೋಲೀಸರ ವಶಕ್ಕೆ ಒಳಗಾಗಿದ್ದಾರೆ.

ಫುಟ್ ಬಾಲ್

ಆ|| ಭಾ|| ಫುಟ್ ಬಾಲ್ ಟೋರ್ನಮೆಂಟಿನ ಫೈನಲ್ಸ್ ಪಂದ್ಯವು ನಿನ್ನೆ ಸಂಜೆ ನಡೆದು, ಬೆಂಗಳೂರು ಮುಸ್ಲಿಂ ಕ್ಲಬ್ಬಿನವರು ಮೈಸೂರು ರೋವರ್ಸ್ಸರವರನ್ನು ೧ ಗೋಲಿನಿಂದ ಸೋಲಿಸಿದರು.

ಶ್ರೀ ಗ. ದ.ದರ್ಶರವರು ಬಹುಮಾನಗಳನ್ನು ವಿನಿಯೋಗಿಸಿದರು.

ಇಟಲಿ ರೈಲ್ವೆಗಳಿಗೆ ಗಂಡಾಂತರ

ಮೊನ್ನೆ ಮಿತ್ರ ವಿಮಾನಗಳು ಇಟಲಿ ರೈಲ್ವೆಗಳ ಮೇಲೆ ಪುನಃ ಧಾಳಿಮಾಡಿ ನುಚ್ಚುನೂರು ಮಾಡಿದುವು. ರೋಮಿಗೆ ಪಾಯುವ್ಯದಲ್ಲಿ ೮೫ ಮೈಲಿದೂರದಲ್ಲಿರುವ ಒಂದು ಪಟ್ಟಣವನ್ನು ಧಾಳಿಗೆ ಗುರಿಮಾಡಲಾಯಿತು. ನೇಪಲ್ಸ್ಸಿಗೆ ಕೆಲವು ಮೈಲಿಗಳ ದೂರದಲ್ಲಿರುವ ಒಂದು ನಗರ ಮತ್ತು ವಿಲಿಟೋ ವಿಮಾನ ನೆಲೆಗಳ ಮೇಲೆ ಧಾಳಿ ಮಾಡಿ, ೩೧ ಶತ್ರು ವಿಮಾನಗಳನ್ನು ಧ್ವಂಸಮಾಡಿದುವು. ಮಿತ್ರಪಕ್ಷದ ೧೫ ವಿಮಾನಗಳು ನಾಶವಾದುವೆಂದು ವರದಿಯಾಗಿದೆ.

ವಿವಾಕಿಗೆ ಪುನಃ ಪೆಟ್ಟು

ಮಿತ್ರವಿಮಾನಗಳು ಮತ್ತೊಮ್ಮೆ ವಿಬಾಕಿನ ಮೇಲೆ ಧಾಳಿಮಾಡಿ ಒಟ್ಟು ೩೭ನ್ನು ವಿಮಾನಗಳನ್ನು ನಾಶಗೊಳಿಸಿದುವು. ನೈಋತ್ಯ ಪೆಸಿಫಿಕ್‌ನಲ್ಲಿ ಮಿತ್ರಸೈನ್ಯಗಳು ಸಿಬೋವಿನ ಕಡೆಗೆ ಮುನ್ನುಗ್ಗುತ್ತಿವೆ. ಜಪಾನರ ಪ್ರತಿಧಾಳಿಗಳೆಲ್ಲಾ ವ್ಯರ್ಥವಾಗಿ ಅವರಿಗೆ ಅಪಾರ ನಷ್ಟವುಂಟಾಗುತ್ತಿದೆಯೆಂದು ವರದಿಯಾಗಿದೆ.

ಇಟಲಿ ಒಪ್ಪಂದಕ್ಕೆ ಬಂದಿದೆಯೆ ?

ಇಟಲಿಯ ಬಡೋಗ್ಲಿ ಸರ್ಕಾರವು ಮಿತ್ರಪಕ್ಷದವರೊಡನೆ ಒಪ್ಪಂದದ ಶಾಂತಿಗೆ ಸಹಿ ಹಾಕಿದೆಯೆಂದು ಜಿನೀವಾದಿಂದ ವರದಿಯಾಗಿದೆ. ಇತ್ತೀಚೆಗೆ ಇಟಲಿಯಿಂದ ಅನುಕೂಲವಾದ ವಾರ್ತೆಯನ್ನು ವಿ|| ಚರ್ಚಿಲರು ತಿಳಿಸುವರಾಗಿದ್ದಾರೆಂದು ಹೇಳಲಾಗಿದೆ.

ನಾಜಿ ಕ್ರೂರಾಚರಣೆ

ಪಶ್ಚಿಮ ರಣಕ್ಷೇತ್ರದಲ್ಲಿ ಜರ್ಮನರು ೬೦ ಪಕ್ಷೆ ಓಡುತ್ತಾ, ಹಳ್ಳಿಗಳನ್ನು ಸುಟ್ಟು, ಜನರನ್ನು ಹಿಡಿಸಿಕೊಂಡು ಹೋಗುತ್ತಿದ್ದರು. ರಷ್ಯನರು ಟ್ಯಾಗನ್‌ರಾಗ್ ನಗರವನ್ನು ಸ್ವಾಧೀನಪಡಿಸಿಕೊಂಡಾಗ, ಜರ್ಮನರು ಅದನ್ನು ಸಂಪೂರ್ಣ ಸುಟ್ಟುಹಾಕಿದ್ದರು.

ಸ್ವೀಡನ್-ಜರ್ಮನ್ ಬಾಂಧವ್ಯ ಕೆಟ್ಟಿದೆ

ಸ್ವೀಡನ್ನು ಜರ್ಮನಿಗೆ ವ್ಯತಿರಿಕ್ತವಾಗಿ ನಡೆಯುತ್ತಿದ್ದು, ಅವರ ಶಾಟಿಸ್ಟೆಯನ್ನು ಕಾಪಾಡಿಕೊಳ್ಳುತ್ತಿಲ್ಲವಾದ್ದರಿಂದ ಸ್ವೀಡನ್-ಜರ್ಮನ್ ಬಾಂಧವ್ಯಕ್ಕೆ ವಿಪತ್ತು ಬಂದಿರುವುದೆಂದೂ, ಈ ೪೮ ಗಂಟೆಗಳ ಕಾಲದಲ್ಲಿಯೇ ವಿಷಯ ಸ್ಪಷ್ಟಗೊಳ್ಳಬಹುದೆಂದೂ ಹೇಳಲಾಗಿದೆ.

ರೋಂ ಜನಗಳ ಮುಷ್ಕರಕ್ಕೆ ಪ್ರೇರಣೆ

ರೋಂನಗರದ ಕೆಲಸಗಾರರು ಮುಷ್ಕರ ಹೂಡಬೇಕೆಂದು ಜನರಿಗೆ ಪ್ರೇರಿಸುವ ಕರಪತ್ರಿಕೆಗಳನ್ನು ಹಂಚಲಾಯಿತೆಂದೂ, ನಗರ ರಕ್ಷಕರನ್ನು ಪಡೆಗೆ ಕರೆಯಲಾಗಿದೆಯೆಂದೂ ತಿಳಿಸಲಾಗಿದೆ.

ಕಳ್ಳ ಸಿಕ್ಕಿಬಿದ್ದ

ಕರಿಕಂಡಿಯಲ್ಲಿ ಶ್ರೀ ಜೋಗ್ಯಲಿಂಗಂ ಚೆಟ್ಟಿಯವರ ಮನೆಯಲ್ಲಿ ಕೆಲಸದಲ್ಲಿದ್ದ ಮರಿಯಪ್ಪ ಎಂಬುವನು ಸಿಂದಾ ರೂ. ಬೆಲೆಬಾಳುವ ಒಡವೆಗಳನ್ನು ಕದ್ದು ಪರಾರಿಯಾಗಿದ್ದು ಈಗ ಪೋಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

ಹಸಿವಿನ ಸಂಕಟದಿಂದ ೨೩ ಮಂದಿ ಮರಣ

ಕಲ್ಕತ್ತೆಯ ನಗರದ ಬೀದಿಗಳಲ್ಲಿ ಮೊನ್ನೆ ದಿವಸ ಹೊಟ್ಟೆಗಿಲ್ಲದೆ ನರಳುತ್ತಿದ್ದ ೧೫೦ ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ಅವರ ಪೈಕಿ ೨೩ ಮಂದಿ ಸತ್ತರೆಂದೂ ಪ್ರಕಟವಾಗಿದೆ.

ನಗರದ ಎಲ್ಲಾ ಕಡೆಗಳಲ್ಲೂ ಉಚಿತ ಭೋಜನ ಶಾಲೆಗಳನ್ನು ಏರ್ಪಡಿಸಲಾಗಿದೆಯೆಂದು, ಒಟ್ಟು ೬೪ ಭೋಜನಶಾಲೆಗಳನ್ನು ತೆರೆದಿವೆಯೆಂದು ವರದಿಯಾಗಿದೆ.

ಚಂದಾಪುರದಲ್ಲಿ ಈ ಸಾರ್ತಿ ತಿಂಗಳಲ್ಲಿ ಹೊಟ್ಟೆಗಿಲ್ಲದೆ ಬಿದ್ದಿದ್ದವರ ಪೈಕಿ ಸತ್ತವರೊಂದಿಗ ಒಟ್ಟು ೯೬೦ ಮಂದಿ ಮತ್ತು ಮೂರು ಶವ ಸಂಸ್ಕಾರವನ್ನು ಮಾಡಲಾಯಿತೆಂದು ಹೇಳಲಾಗಿದೆ.

ಬೊಂಬಾಯಿ ನಗರದಿಂದ ಮದರಾಸಿಗೆ ೫೦ ಸಾವಿರ ರೂ. ಗಳನ್ನು ಕಳುಹಿಸಲಾಗಿದೆ.

ಭಾರತ ಹೈ ಕಮೀಷನರನ್ನು ವಾಪಸ್ಸು ಕಳುಹಿಸಿ

ದಕ್ಷಿಣ ಆಫ್ರಿಕಾದಲ್ಲಿರುವ ಭಾರತ ಹೈಕಮೀಷನರವರಾದ ಸರ್ ಷಫತ್ ಅಹಮದರನ್ನು ಅಲ್ಲಿಂದ ವಾಪಸು ಕಳುಹಿಸಿ, ದಕ್ಷಿಣ ಆಫ್ರಿಕಾದಲ್ಲಿ ಭಾರತ ಪ್ರತಿನಿಧಿಗಳು ಇರುವುದನ್ನು ತಪ್ಪಿಸಬೇಕೆಂದು ಅಲ್ಲಿನ "ಟ್ರಾನ್ಸ್ ವಾಲ್" ಎಂಬ ಪತ್ರಿಕೆಯು ಬರೆದಿದೆ. ನೆಟಾಲ್ ಇಂಡಿಯನ್ ಕಾಂಗ್ರೆಸ್ ಸಂಸ್ಥೆಯನ್ನು ಭಾರತ ಸರ್ಕಾರವು ಅಂಗೀಕರಿಸುವುದನ್ನು ಖಂಡಿಸಿ, ದಕ್ಷಿಣ ಆಫ್ರಿಕಾ ವಿಚಾರದಲ್ಲಿ ಭಾರತ ಸರ್ಕಾರವೂ ಮತ್ತು ಅವರ ಪ್ರತಿನಿಧಿಗಳೂ ಕೈ ಹಾಕಬಾರದು ಎಂದು ಆ ಪತ್ರಿಕೆಯು ಬರೆಯುತ್ತದೆ.

ಟರ್ಕಿ ನೀತಿ ಬದಲಾಯಿಸಬೇಕಾಗುವುದು

ಸೋವಿಯೆಟ್ ಸೇನೆಗಳ ಜಯದಿಂದ ಬಲ್ಕೇರಿಯಾದಲ್ಲಿ ಪ್ರಜಾ ಶೋಭೆ ಎದ್ದು, ಅಲ್ಲಿನ ಪರಿಸ್ಥಿತಿ ಬದಲಾವಣೆಗೊಂಡಿರುವುದು. ಟರ್ಕಿಯು ತನ್ನ ನಿಷ್ಪಕ್ಷ ನೀತಿಯನ್ನು ಬದಲಾಯಿಸಬೇಕಾಗಬಹುದೆಂದು, ರಷ್ಯ ಮತ್ತು ಬ್ರಿಟನ್‌ನನ್ನು ಒಂದು ದಿಕ್ಕಿನಲ್ಲಿ ತನ್ನ ನೀತಿಯನ್ನು ಕೈಗೊಳ್ಳಬೇಕೆಂದೂ ಟರ್ಕಿಯ "ಟಾನಿನ್" ಪತ್ರಿಕೆಯು ಬರೆಯುತ್ತದೆ.

ದ್ವಿತೀಯ ಮತ್ತು ತೃತೀಯ ರಣರಂಗಗಳ ಸ್ಥಾಪನೆ

ಕ್ವಿಬೆಕ್ಕಿನಿಂದ ಮಿ|| ಚರ್ಚಿಲ್ ಮತ್ತು ರೂಸ್‌ವೆಲ್ಟರವರು ಜಂಟಿಯಾಗಿ ಸ್ಟಾಲಿನ್‌ಗೆ ವಿಚಾರವಾಗಿ ಹೇಳಿಕೆ ಕಳುಹಿಸಿರುವರೆಂದೂ, ಆದಕ್ಕಾಗಿಯೇ ರಷ್ಯಾದ ರಾಯಭಾರಿಗಳು ಇದರಲ್ಲಿ ಭಾಗವಹಿಸದೆ ಸುಮ್ಮನಾಗಲಿಲ್ಲವೆಂದೂ ತಿಳಿಸಿದರು.

ಮಿ|| ಚರ್ಚಿಲ್ ರವರು ಕೆನಡ ಪ್ರಜೆಗಳ ಮುಂದೆ ಯುದ್ಧ ಕಾರ್ಯಾಚರಣೆಯ ವಿಚಾರವಾಗಿ ಮಾತನಾಡುತ್ತ ಕ್ವಿಬೆಕ್ಕಿನಲ್ಲಿಯೇ ಈ ಎರಡು ರಾಷ್ಟ್ರಗಳ ಸಮ್ಮೇಳನವು ನಡೆಯಿತೆಂದು ಹೇಳಿದರು. ದ್ವಿತೀಯ ಮತ್ತು ತೃತೀಯ ರಣರಂಗಗಳ ವಿಚಾರವಾಗಿ ತುಂಬ ಆಲೋಚಿಸುತ್ತಿರುವುದಾಗಿ ಅವರು ತಿಳಿಸಿದರು. ತಮ್ಮ ಯತ್ನಗಳು ಸಂಪೂರ್ಣವಾಗಿ ನಾವರ ಗುರಿಗಳನ್ನು ಇಟ್ಟು ನಡೆಸಲಾಗುವುದೆಂದು ಚರ್ಚಿಲರು ಹೇಳಿದರು.

ಜರ್ಮನಿ ಅಷ್ಟು ಬೇಗ ಪತನವಾಗುವುದಿಲ್ಲ

ಜರ್ಮನಿಯು ಸದ್ಯದಲ್ಲಿಯೇ ಪತನವಾಗುವುದಿಲ್ಲವೆಂದು ಬ್ರಿಟಿಷ್ ವಾರ್ ಮಂತ್ರಿಗಳಾದ ಮಿ|| ಗ್ರಿಗ್ ರವರು ಹೇಳಿದ್ದಾರೆ.

ಜರ್ಮನರು ಕ್ರಿಮಿಯಾವನ್ನು ತ್ಯಜಿಸುವರೆ

ರಷ್ಯಾದ ಟ್ಯಾಗನ್‌ರಾಗ್ ನಗರವನ್ನು ಜರ್ಮನರು ತ್ಯಜಿಸುವರಲ್ಲದೆ, ಕ್ಯೂಬನ್ ಮತ್ತು ಕ್ರಿಮಿಯಾ ಕ್ಷೇತ್ರವನ್ನು ಬಿಟ್ಟು ನೀಪರ್ ನದಿಯ ಬಳಿ ಹೋಗುವ ಸಂಭವವಿದೆಯೆಂದು ಹೇಳಲಾಗಿದೆ.

ನಿವೃತ್ತ ಸೆಷನ್ಸ್ ಜಡ್ಜರವರ ದಸ್ತಗಿರಿ

ಪಂಜಾಬಿನ ನಿವೃತ್ತ ಸೆಷನ್ಸ್ ಜಡ್ಜರಾದ ಖಾನ್ ಬಹದ್ದೂರ್ ದೀನ್ ಮಹಮದ್‌ರವರನ್ನು ಶ್ರೀನಗರದಲ್ಲಿ ದಸ್ತಗಿರಿ ಮಾಡಿದ್ದಾರೆ. ಇವರು ನ್ಯಾಯಾಧಿಕಾರಿಯಾಗಿದ್ದಾಗ ಇವರಿಗೂ ಮತ್ತು ಲಾಹೋರಿನ ಬ್ಯಾಂಕ್ ಒಂದರ ಮೇನೇಜರ್ ಮಹಮದ್‌ರವರಿಗೂ ಇದ್ದ ಬಹಳ ಹಣ ವ್ಯವಹಾರದ ಸಂಬಂಧದಲ್ಲಿ ದಸ್ತಗಿರಿ ಮಾಡಿದರೆಂದು ವರದಿಯಾಗಿದೆ.

ಬಾಲ್ಕನ್‌ನಿಂದ ಇಟಲಿ ಸೈನ್ಯ ವಾಪಸು

ಬಾಲ್ಕನ್ ಕ್ಷೇತ್ರದಲ್ಲಿರುವ ಇಟಾಲಿಯನ್ ಸೈನ್ಯವನ್ನು ಸೈನ್ಯ ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಇಟಲಿಯಲ್ಲಿ ಸರಿಪಡಿಸುತ್ತಿರುವರೆಂದು ವರದಿಯಾಗಿದೆ.

ಉತ್ತರ ಯುಕ್ರೇನ್ ಆಕ್ರಮಣ

ಉತ್ತರ ಯುಕ್ರೇನನ್ನು ರಷ್ಯನರು ಆಕ್ರಮಿಸಿರುವರೆಂದು ವರದಿಯಾಗಿದೆ.

ಮಧ್ಯ ರಷ್ಯ ಕ್ಷೇತ್ರದಲ್ಲಿ ರಷ್ಯನರು ಜರ್ಮನರ ಸಂಬಂಧವನ್ನು ಕೇವಲ ೧೦ ಮೈಲಿ ದೂರದಲ್ಲಿ ಕಡಿದಿದ್ದಾರೆ.

ಬರ್ಲಿನ್ ಗ್ರಾಮದ ರಾಕೆಟ್ಟಿನಲ್ಲಿ ರಷ್ಯನರ ಧಾಳಿಯಿಂದ ಬರ್ಲಿನ್ ನಗರಕ್ಕೆ ಹಾನಿಯುಂಟಾಯಿತು.

ವಿಂಡ್ ಸರ್‌ಗೆ ಸುರಂಗದ ಸಂಬಂಧ

ಡ್ಯೂಕ್ ಆಫ್ ವಿಂಡ್ ಸರ್ ರವರ ಮೈದುನ ನ್ಯಾಯಾಲಯದ ಹೇಳಿಕೆಯಿಂದ ತಿಳಿಯುವುದೇನು ಎಂದರೆ ಮಾನ್ಯರ ಮಗಳೊಂದು ತೀರ್ಪಾಯಿತು.

ಪ್ರೊ॥ ಸಬ್ ಇನ್ಸ್‌ಪೆಕ್ಟರವರ ನಡತೆ ಟೀಕೆ

ಬೆಂಗಳೂರು, ೧

ಚಿಕ್ಕಬಳ್ಳಾಪುರದ ತಾ॥ ಗಂಗಸಂದ್ರ ಗ್ರಾಮದಲ್ಲಿ ಸಿದ್ದಪ್ಪ ಎಂಬಾತನು ಪ್ರಾಣನಷ್ಟಕ್ಕೆ ಕಾರಣನಾದನೆಂಬ ಆಪಾದನೆಯ ಮೇಲೆ ರಂಗಪ್ಪ ಎಂಬುವನಿಗೆ ೫ ವರ್ಷ ಕಠಿಣ ಶಿಕ್ಷೆಯನ್ನು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಟಿ. ಚನ್ನಯ್ಯಂಗಾರ್ಯರು ವಿಧಿಸಿದರು.

ಅವರ ತೀರ್ಪಿನಲ್ಲಿ ಸಬ್ ಇನ್ಸ್‌ಪೆಕ್ಟರ ನಡವಳಿಕೆಯ ಬಗ್ಗೆ ಟೀಕೆ ಮಾಡಿದ್ದಾರೆ. ಪೋಸ್ಟ್‌ಮಾರ್ಟಂ ಪರೀಕ್ಷೆಗೆ ಮುಂಚೆ ಹೆಣವಾಗಿ ಮೂರು ದಿನಗಳಾಗಿತ್ತೆಂದೂ, ಡಾಕ್ಟರು ಮರಣದ ಕಾರಣದ ಬಗ್ಗೆ ಅಭಿಪ್ರಾಯ ಕೊಡಲು ಅವಕಾಶವಿಲ್ಲವೆಂದೂ ತಿಳಿಸಿದ್ದಾರೆ. ಸಬ್ ಇನ್ಸ್‌ಪೆಕ್ಟರಾದ ಶ್ರೀ ಪಟೇಲ್ ಸಿದ್ಧಲಿಂಗಯ್ಯನವರು ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸಿಲ್ಲವೆಂದೂ, ಮಹಜರು ನಡೆಸಲು ಸ್ಥಳಕ್ಕೆ ಹೋದವರೇ ಡಾಕ್ಟರನ್ನು ಕರೆಸಿಕೊಂಡು ಆ ದಿನವೇ ಶವದ ಪರೀಕ್ಷೆ ನಡೆಯುವಂತೆ ಮಾಡಬೇಕಾಗಿತ್ತೆಂದೂ, ಹಾಗೆ ಮಾಡದೆ ಹೋದ ಕಾರಣ ಮೊಕದ್ದಮೆಯಲ್ಲಿ ಮುಖ್ಯವಾದ ಸಾಕ್ಷ್ಯವು ದೊರೆಯದೇ ಹೋಯಿತೆಂದೂ ತಿಳಿಸಿದ್ದಾರೆ.

ವರ್ಗ

ಶಿವಮೊಗ್ಗದ ಮೊದಲನೇ ಮ್ಯಾಜಿಸ್ಟ್ರೇಟರಾದ ಶ್ರೀ ಜಿ. ನಟರಾಜರವರಿಗೆ ಸೆ॥ ೬ ರಿಂದ ಒಂದು ತಿಂಗಳ ರಜ ಕೊಡಲಾಗಿದೆ. ಶಿವಮೊಗ್ಗ ಮುನಿಸೀಫರಾದ ಶ್ರೀ ಶ್ರೀನಿವಾಸಾಚಾರ್ಯರನ್ನು ೧ ನೇ ಮ್ಯಾ॥ ರಾಗಿ ನೇಮಿಸಿ, ಹೈಕೋರ್ಟ್ ಡೆ॥ ರಿಜಿಸ್ಟ್ರಾರ್ ಶ್ರೀ ವಿ. ನರಸಿಂಹಮೂರ್ತಿಯವರನ್ನು ಮುನಿಸೀಫರಾಗಿ ವರ್ಗಾಯಿಸಲಾಗಿದೆ.

ಭದ್ರಾವತಿ ಕಾರ್ಖಾನೆಯ ರಿಸರ್ಚ್ ಆಫೀಸರಾದ ಡಾ॥ ಕೆ. ಅಶ್ವತ್ಥನಾರಾಯಣರಾಯರನ್ನು ಸರ್ಕಾರದ ಇಂಡಸ್ಟ್ರಿಯಲ್ ಕಮಿಷನರ್ ಡೈರೆಕ್ಟರ ಟೆಕ್ನಿಕಲ್ ಅಸಿಸ್ಟೆಂಟರಾಗಿ ನೇಮಿಸಲಾಗಿದೆ.

ಆಹಾರ ಸರಬರಾಜು ವ್ಯವಸ್ಥೆ ಉತ್ತಮವಾಗಬೇಕು

ಆಹಾರ ಸಮಸ್ಯೆಯ ಬಗ್ಗೆ ಯಾವ ಬಗೆಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದನ್ನು ನಿರ್ಧರಿಸಲು ತಾವು ಶೀಘ್ರದಲ್ಲಿಯೇ ಕಾಂಗ್ರೆಸ್ ಮತ್ತು ಇತರರಿಂದ ಕೂಡಿದ ಸಭೆಯೊಂದನ್ನು ಸೇರಿಸುವುದಾಗಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಸ್ಥಳೀಯ ಸಂಪಾದಕರುಗಳ ಸಭೆಯಲ್ಲಿ ಈ ದಿನ ತಿಳಿಸಿದರು.

"ಜನರು ಸಹನೆಯಿಂದಲೂ ಕಳವಳದಿಂದಲೂ ಕೂಡಿದ್ದಾರೆ. ಆಹಾರ ಸರಬರಾಜು ವ್ಯವಸ್ಥೆಯಲ್ಲಿ ವಿಪರೀತ ಅಕ್ರಮ ನಡವಳಿಕೆ ನಡೆಯುತ್ತಿದೆ. ಅಂತಹುದನ್ನು ತಪ್ಪಿಸಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು. ಆಹಾರ ವಸ್ತುಗಳೆಲ್ಲವನ್ನೂ ಸೆಂಟ್ರಲೈಸ್ ಮಾಡುವುದರಿಂದ ಹಳ್ಳಿಯ ಜನರಿಗೆ ತುಂಬಾ ತೊಂದರೆಯುಂಟಾಗುತ್ತಿದೆ. ಇದರ ಬದಲು ಅನೇಕ ಗ್ರಾಮಗಳನ್ನು ಒಟ್ಟುಸೇರಿಸಿ, ಅಲ್ಲಿ ಕೇಂದ್ರಗಳನ್ನು ಏರ್ಪಡಿಸಿ ಆ ಕೇಂದ್ರಕ್ಕೆ ಒಳಪಟ್ಟ ಗ್ರಾಮಗಳಿಗೆ ಬೇಕಾದಷ್ಟು ಆಹಾರ ಸಂಗ್ರಹಿಸಬೇಕು ಮತ್ತು ಗ್ರಾಮಗಳಿಗೆ ಬೇಕಾಗುವಷ್ಟು ರೇಷನ್ ಮೂಲಕ ಕೊಡಬೇಕು. ಜನರು ಈಗ ವ್ಯವಸ್ಥೆಯಿಂದಲೂ ಜಾಗರೂಕತೆಯಿಂದಲೂ ವರ್ತಿಸಬೇಕು. ಈಗಿನ ಪರಿಸ್ಥಿತಿಯೇ ಇಷ್ಟು ಕಷ್ಟವಾದರೆ ಮುಂದಿನ ಪರಿಸ್ಥಿತಿ ಇನ್ನೂ ಭಯಂಕರವಾಗುವಂತೆ ಕಾಣುತ್ತದೆ" ಎಂದು ಶ್ರೀ ದಾಸಪ್ಪನವರು ತಿಳಿಸಿದರು.

ರೇಷನ್ ಹತೋಟಿ

ರೇಷನ್ ಹತೋಟಿ ಆಜ್ಞೆಯನ್ನು ಸರ್ಕಾರದವರು ಜಾರಿಗೆ ತಂದು ೧೯೪೪ ನೇ ಸೆಪ್ಟೆಂಬರ್‌ವರೆವಿಗೆ ಇದು ಜಾರಿಯಲ್ಲಿರುವುದೆಂದು ಆಜ್ಞೆ ಮಾಡಿದ್ದಾರೆ

Edited, printed and published by A. R Nagarajan, at the Sadhvi Press, D. Subbiah Road, Mysore.

ರೇಷನ್ ಕಾರ್ಡ್ ದುರುಪಯೋಗಕ್ಕೆ ಶಿಕ್ಷೆ

ದಂಡಿನ ತಿಮ್ಮಯ್ಯ ರಸ್ತೆಯಲ್ಲಿರುವ ಟಿ. ಎ. ಸಯ್ಯದ್ ಅಸ ಎಂಬುವನು ಬೇರೆ ಯಾರದೋ ಕಾರ್ಡಿನಲ್ಲಿ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳುತ್ತಿದ್ದನೆಂದು ಅತನಿಗೆ ಎರಡು ತಿಂಗಳು ಕಠಿಣ ಶಿಕ್ಷೆ ವಿಧಿಸಲಾಗಿದೆ.

• • • •

ನಾರ್ತ್ ಇಂಡಿಯಾ ಹೋಟೆಲಿನ ಕಾರ್ಡನ್ನು ಭಾರತ ಕೆಫೆಯ ಮಾಲೀಕರಾದ ಶ್ರೀ ಶಿವಪ್ರಸಾದರು ಉಪಯೋಗಿಸಿದರೆಂದು ಅವರಿಗೆ ೩೦೦ ರೂ. ದಂಡ ಬಿತ್ತು. ಮುಚ್ಚಿದ ನಾರ್ತ್ ಇಂಡಿಯಾ ಹೋಟೆಲಿನ ಮಾಲೀಕರಾದ ಸುಬ್ಬಯ್ಯರವರು ರೇಷನ್ ಕಾರ್ಡನ್ನು ವಾಪಸು ಕೊಡದಿದ್ದುದರಿಂದ ಅವರಿಗೆ ೩೦೦ ರೂ. ಜುಲ್ಮಾನೆಯಾಯಿತು.

ಅದೇ ಹೋಟೆಲಿನ ದಸ್ತ್ರಿಯ ಪಾಂಡುರಂಗ ಶ. ಭಟ ಎಂಬುವನು ಸಾಮಾನುಗಳನ್ನು ಒದಗಿಸುತ್ತಿದ್ದನೆಂಬ ಆಪಾದನೆಯ ಮೇಲೆ ಒಂದು ತಿಂಗಳು ಕಠಿಣ ಶಿಕ್ಷೆ ವಿಧಿಸಲಾಯಿತು.

ಕೃಷಿಗಾರರಿಗೆ ೧ ಕೋಟಿ ರೂ. ಸಹಾಯ

ಬಂಗಾಳ ಸರ್ಕಾರವು ಬಡ ರೈತರ ಕಷ್ಟವನ್ನು ಪರಿಹಾರಮಾಡಲು ಒಂದು ಕೋಟಿ ರೂ. ಧನ ಸಹಾಯ ನೀಡಿದೆ. ತಕಾವಿ ಸಾಲಗಳಿಗಾಗಿ ೪೮ ಲಕ್ಷ, ಪರಿಹಾರಾರ್ಥವಾಗಿ ೩೯ ಲಕ್ಷ ರೂ ಕೊಟ್ಟಿದೆಯೆಂದೂ, ಆಗಸ್ಟ್ ಮಾಹೆಯಲ್ಲಿ ೨೦ ದಿವಸಗಳಲ್ಲಿ ಪರಿಹಾರಕ್ಕಾಗಿ ೩೭ ಲಕ್ಷ, ತಕಾವಿ ಸಾಲಗಳಿಗಾಗಿ ೩೭ ಲಕ್ಷ, ಪರಿಹಾರಾರ್ಥವಾಗಿ ೫ ಲಕ್ಷ ರೂ. ಒದಗಿಸಿರುವುದಾಗಿ ತಿಳಿಯಬರುತ್ತೆ.

ಬರ್ಲಿನ್ ಮೇಲೆ ಉಗ್ರ ಧಾಳಿ

ಪೋಲೆಂಡಿನ ಮೇಲೆ ಜರ್ಮನರು ನಡೆಸಿರುವ ಆಕ್ರಮಣದ ೪ ನೇ ವಾರ್ಷಿಕ ಸ್ಮಾರಕವಾಗಿ ಮಿತ್ರವಿಮಾನಗಳು ಬರ್ಲಿನ್ ಮೇಲೆ ಉಗ್ರ ಧಾಳಿಯನ್ನು ಮಾಡಿದವು ಎಂದು ತಿಳಿಯಬರುತ್ತೆ.

ಬೆಲ್ಜಿಯನ್ನರ ಕೊಲೆ

ರಹಸ್ಯ ಸಂಘಗಳನ್ನು ಸ್ಥಾಪಿಸಿ, ಜರ್ಮನ್ ಸೈನಿಕರ ಮೇಲೆ ಬೀಳುತ್ತಿದ್ದರೆಂದು ೪೦ ಮಂದಿ ಬೆಲ್ಜಿಯಂ ಜನರನ್ನು ಜರ್ಮನರು ಕೊಲೆಮಾಡಿದ್ದಾರೆ

ಸೂಚನೆ

ವಿನಾಯಕ ಚೌತಿ ಪ್ರಯುಕ್ತ ನಾಳೆ ನಮ್ಮ ಪತ್ರಿಕೆ ಪ್ರಕಟವಾಗುವುದಿಲ್ಲ.

ವ್ಯವಸ್ಥಾಪಕ, ಸಾಧ್ವಿ.

ಡೆನ್ಮಾರ್ಕಿನಲ್ಲಿ ವಿಷಮ ಪರಿ

ಡೆನ್ಮಾರ್ಕಿನಲ್ಲಿ ವಿಷಮಾವಸ್ಥೆ ತ
ಗುತ್ತಿದೆ. ಕ್ರಿಶ್ಚಿಯನ್ ದೊರೆಗಳ ಕ
ಮಗ ಮತ್ತು ಸಹೋದರ ಪುತ್ರ
ನಿರ್ಬಂಧದಲ್ಲಿಡಲಾಗಿದೆ. ಡೆನ್ಮಾರ್ಕ
ಈಗ ಗೆಸ್ಟಪೋಗಳ ಹಿಡಿತದಲ್ಲಿದೆ
ನರ ಸೇನಾಪತಿಗೆ ವಿಶಿಷ್ಟ ಅಧಿಕಾರಗ
ಕೊಡಲಾಗಿದೆ. ನೂತನ ಕಾನೂನ
ಯಾರಿಕೆ ಮತ್ತು ಅವುಗಳ ಬಳಸು
ಅಧಿಕಾರವು ಅತನಿಗೇ ವಹಿಸಲಾಗಿದೆ
ಗ ೫೦ ಮಂದಿ ಮುಖಂಡರನ್ನು ಬ
ದಲ್ಲಿಟ್ಟಿರುವರು. ರಾಜಕೀಯ ಪ್ರ
ಸೇಕರನ್ನೂ ಮತ್ತು ಇಬ್ಬರು ಪತ್ರಿಕಾ
ಸಂಪಾದಕರನ್ನೂ ದಸ್ತಗಿರಿಮಾಡಿದರು.
ನಿಷ್ ನೌಕಾದಳ, ಸೈನಿಕರೂ, ಬಂ
ಲ್ಲಿರುವರು. ಲೈಸೆನ್ಸ್ ಇಲ್ಲದೆ ಸಾಗ
ಮೋಟಾರುಗಳಲ್ಲಿ ಸಂಚರಿಸುವಂತಿಲ್ಲ
ಜರ್ಮನರಿಗೂ, ಡೇನಿಷ್ ಗ್ಯಾರಿಸ
ಕೋಪನ್‌ಹೇಗನ್‌ಗೆ ದಕ್ಷಿಣದಲ್ಲಿ ಕಾದಾ
ಯಿತು. ಮೊನ್ನೆ ರಾತ್ರಿ ಕೋಪನ
ನಲ್ಲಿ ಭಾರಿ ಗಲಭೆಗಳುಂಟಾದುವು.
ನರು ಬೀದಿಗಳಲ್ಲಿ ಫಿರಂಗಿಗಳನ್ನು
ನಿಲ್ಲಿಸಿರುವರು. ಗೆಸ್ಟಪೋಗಳು ಪ
ಸ್ ರಾಜ್ಯಗಳನ್ನು ಆಕ್ರಮಿಸಿರುವರು
ಡೇನಿಷ್ ಪೋಲೀಸರು ಜರ್ಮನರ
ವರ್ಗಾಗಲು, ಪ್ರಮಾಣ ವಚನವ
ದ್ದುದೇ ಇದಕ್ಕೆ ಕಾರಣ. ಮು
ಇನ್ನೂ ಅನೇಕ ಪ್ರದೇಶಗಳಲ್ಲಿ
ಮತ್ತು ಕೂಲಿಕಾರರ ಮುಖಂಡರನ್ನು
ಧನದಲ್ಲಿಡಲಾಗಿದೆ, ಡೇನಿಷ್ ಡಿ
ರೊಂದು ಸಾಹಸದಿಂದ ಸ್ವೀಡನ್ನಿಗೆ
ರುವುದು ಎಂದು ವರದಿಯಾಗಿದೆ.

ಸಾರ್ವಜನಿಕ ರಕ್ಷಣಾ ಯೋಜನೆ ರದ್ದು

ಯುದ್ಧ ಪರಿಸ್ಥಿತಿಗಳು ಉತ್ತಮಗೆ
ರುವ ಕಾರಣದಿಂದ ಸಾರ್ವಜನಿಕ
ಪರಿಸ್ಥಿತಿಯಲ್ಲಿ ಭಾರತ ಸರ್ಕಾರ
ಮಾಡಿರುವ ಬದಲಾವಣೆಯನ್ನನು
ಉದಕಮಂಡಲ, ಕಂಜೀವರಂ ಮ
ಲಂ ಈ ನಗರಗಳಲ್ಲಿ ಸಾರ್ವಜನಿಕ
ಯೋಜನೆಯನ್ನು ರದ್ದುಮಾಡಿ,
ಕೊಟ್ಟು ಇರಿಸಿದ್ದ ನೌಕರರ ಸಂಖ್ಯೆ
ಕಡಿಮೆ ಮಾಡಲು ಮದರಾಸ್ ಸ
ಆಜ್ಞೆಯಾಗಿದೆ.

RETURN TICKET
RADIANT YOUT
AT
New Royal
Dispensary

ಈಗ ಆಗುತ್ತಿರುವ ಬಟ್ಟೆಗಳ ಏರಿಳಿತಗಳಲ್ಲಿ ಗೌರಿ ಹಬ್ಬಕ್ಕೆ
ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.
ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ
ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ
ನಲ್ಲೇ ಕೊಂಡುಕೊಳ್ಳಿ.
ಜುಯಲರಿ ಮತ್ತು ಎಲ್ಲಾ ಕೈಗಳಲ್ಲೂ ಹೊಸ ಮಾದರಿಯಲ್ಲಿ ಹೊಲೆದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು ಇವರ ಅಂಗಡಿಯಲ್ಲಿ ಹೊಸದಾಗಿ ತೆರೆದಿದ್ದಾರೆ.

ಶ್ರೀಯುತರ ಸೌಕರ್ಯಕ್ಕಾಗಿ
ತಾ॥ ೧-೯-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿಪುಡಿ
ಯನ್ನೇ ಉಪಯೋಗಿಸಿ.
ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು
ಪಿ. ಸೂ.— ಚಿಲ್ಲರೆಯಾಗಿ ಸಂಸ್ಕೃತ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಅಕ್ಕಿ ಸಹಾ ದೊರೆಯುತ್ತವೆ.

ಇದೇ ಸೆಪ್ಟೆಂಬರ್ ೨, ೩ ನೇ ತಾ॥ ಗಳಲ್ಲೂ ಮತ್ತು
ಪ್ರತಿ ಶನಿವಾರ ಮತ್ತು ಭಾನುವಾರ 3-30 ಕ್ಕೆ ಮ್ಯಾಟಿನಿ ಇರುತ್ತೆ.
ನ್ಯೂ ಆಪೇರಾ ಟಾಕೀಸ್
೧—೯—೪೩ ರಿಂದ
ಎಸ್. ಡಿ. ಸುಬ್ಬಯ್ಯ, ಯು. ಆರ್. ಜೀವರತ್ನಂ, ಕೆ. ಕೆ. ಪೆರುಮ
ಶಿವಭಾಗ್ಯಂ, ಕಾಳಿ ಎನ್. ರತ್ನಂ, ದೊರೆರಾಜ್ ಮುಂತಾದ ಪಾತ್ರವ
ಭಕ್ತ ಗೌರಿ

ಸಂಪುಟ ೨] ಶನಿವಾರ ೪-೯-೪೩ [ಸಂಚಿಕೆ ೪೩

ಇಟಲಿ ಮುತ್ತಿಗೆ ಆರಂಭ

ಜಪಾನ್ - ಪೋರ್ಚುಗಲ್ ಯುದ್ಧವೇ ?
ಜರ್ಮನಿ ಮೇಲೆ ೯೬ ಸಾವಿರ ಟನ್ ಬಾಂಬು ಸುರಿಮಳೆ

ಜೇಬಿನ ಕಳ್ಳ ಸಿಕ್ಕಿಬಿದ್ದ

ಮೈಸೂರು ೪

ಎಲಕ್ಟ್ರಿಕ್ ಆಫೀಸಿನ ಶ್ರೀ ವೆಂಕಟರಾಮಯ್ಯ ಎಂಬುವರು ಮೊನ್ನೆ ದಿವಸ ಸಂಜೆ ದೇವರಾಜಾ ಮಾರ್ಕೆಟ್ ಬೀದಿಯಲ್ಲಿ ವ್ಯಾಪಾರ ಮಾಡುತ್ತಿರುವಾಗ್ಗೆ, ಅವರ ಜೇಬಿನಲ್ಲಿದ್ದ ೬೫೦ ರೂ. ಗಳು ಕಳುವಾಯಿತು. ನಂತರ ದೇವರಾಜಾ ಪೋಲೀಸರು ತನಿಖೆ ನಡೆಸಿ, ಅದೇ ರಾತ್ರಿ ಮಹಮದ್ ಖಾಸಿಂ ಉರುಫ್ ಜೋಟು ಎಂಬ ಕೇಡಿಯನ್ನು ದಸ್ತಗಿರಿ ಮಾಡಿ ಅವನಿಂದ ೬೫೦ ರೂ. ಗಳನ್ನು ಪತ್ತೆಹಚ್ಚಿದ್ದಾರೆ.

ಕಳವು ಮಾಲು ಪತ್ತೆ

ಕೃಷ್ಣಾ ಸಿನಿಮಾ ಮುಂದಿಂದ ಹಿಂಭಾಗದ ರವೇ ಬೀದಿಯಲ್ಲಿ ೩೧-೮-೪೩ ನೇ ರಾತ್ರಿ ಅಹಮಹಮದ್ ಎಂಬುವರ ಅಂಗಡಿಯಲ್ಲಿ ೧೫೦೦ ರೂ ಗಳ ಬಟ್ಟೆ, ಒಡವೆಗಳು ಮತ್ತು ನಗದು ಹಣ ಕಳುವಾಯಿತೆಂದು ವರದಿಯಾಗಿದೆಯಷ್ಟೆ. ಈಗ ಇನ್ಸ್‌ಪೆಕ್ಟರ್ ಶ್ರೀ॥ [illegible] ತನಿಖೆ ನಡೆಸಿ, ಅದೇ ಅಂಗಡಿಯಲ್ಲಿ ದರ್ಜಿ ಕೆಲಸ ಮಾಡುತ್ತಿದ್ದ [illegible] ನಂಜಯ್ಯ, ಶಾಂತರಾಜಯ್ಯ ಮೊದಲಾದ [illegible] ಮಂದಿಗಳನ್ನು ದಸ್ತಗಿರಿ ಮಾಡಿ ಅವರಿಂದ ೧೫೦೦ ರೂ. ಗಳ ಕಳವು ಮಾಲನ್ನು ಪತ್ತೆಹಚ್ಚಿದ್ದಾರೆ.

ಪಾರಿತೋಷಕ ಸಭೆ

ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯ ವಾರ್ಷಿಕ ವಿದ್ಯಾರ್ಥಿ ಪಾರಿತೋಷಕ ಬಹುಮಾನ ಸಭೆಯು ೬-೯-೪೩ ನೇ ಸೋಮವಾರ ಸಂಜೆ ೬ ಗಂಟೆಗೆ ಶ್ರೀ ಮಾ॥ ಕೆ. ಗುರುದತ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ವಾರ್ಷಿಕೋತ್ಸವ

ಸಂಸ್ಕೃತ ಮಹಾ ಪಾಠಶಾಲಾ ವಿದ್ಯಾರ್ಥಿ ಸಂಘದ ದ್ವಾದಶ ವಾರ್ಷಿಕೋತ್ಸವವೂ ಮತ್ತು ಸಂಸ್ಕೃತೋತ್ಸವವೂ ಇದೇ ೭ ನೇ ತಾ॥ ಮಂಗಳವಾರ ಸಂಜೆ ೬ ಗಂಟೆಗೆ ಶ್ರೀ ಕೆ. ಗುರುದತ್‌ರವರ ಅಧ್ಯಕ್ಷತೆಯಲ್ಲಿ ನಡೆಯಲು ಏರ್ಪಡಿಸಿದೆ.

ಗಣಪತಿ ಮಂಗಳಾರತಿ

ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ೪-೯-೪೩ ರಿಂದ ೩೦-೯-೪೩ ರ ವರೆಗೆ ಶ್ರೀ ವಿದ್ಯಾಗಣಪತಿ ಮಂಗಳಾರತಿ ಮಹೋತ್ಸವವು ನಡೆಯುವುದು.

ಈ ದಿನ ಸಂಜೆ ೬ ಗಂಟೆಗೆ ಮಾ॥ ವಿ॥ ಪಾಠಕ್ ನಾರಾಯಣ ಶಾಸ್ತ್ರಿಗಳು ಜನ್ಮಸಾಫಲ್ಯದ ವಿಷಯವಾಗಿ ಉಪನ್ಯಾಸ ಮಾಡುವರು.

ಟ್ಯಾಗನ್‌ರಾಗ್‌ನಲ್ಲಿ ಶತ್ರುಗಳ ಅಗಾಧ ನಷ್ಟ

ರಷ್ಯನರಿಂದ ಸುತ್ತುಗಟ್ಟಲ್ಪಟ್ಟ ಜರ್ಮನ್ ಸೈನ್ಯಗಳು ಈಗ ಸಂಪೂರ್ಣವಾಗಿ ನಾಶಹೊಂದಿವೆ. ಜರ್ಮನರಿಗೆ ಟ್ಯಾಗನ್‌ರಾಗ್‌ನಲ್ಲಿ ಮಹತ್ತರವಾದ ಪರಾಜಯವುಂಟಾಗಿ ಅವರ ೮ ಡಿವಿಜನ್ ಸೇನೆಗಳೂ ಮತ್ತು ಟ್ಯಾಂಕ್ ಪಡೆಗಳೂ, ೧ ಮೋಟಾರ್ ಪಡೆಯೂ ಹಿಂದಾ ನಷ್ಟಹೊಂದಿವೆ.

೩೩,೦೦೦ ಮಂದಿ ಶತ್ರುಗಳು ಹತರಾಗಿ ಉಳಿದ ೫ ಸಾವಿರ ಮಂದಿ ಸೆರೆಸಿಕ್ಕಿರುವುದರ ಜೊತೆಗೆ ೧೩೬ ಟ್ಯಾಂಕುಗಳೂ ನಾಶವಾದುವು. ಶತ್ರುವಿನ ಅನೇಕ ವಸ್ತುಗಳು ರಷ್ಯನರ ವಶವಾಗಿದೆ.

ಜಪಾನ್ ಮೇಲೆ ಪೋರ್ಚುಗಲ್ ಯುದ್ಧಮಾಡುವುದೆ ?

ಪೋರ್ಚುಗಲ್ ಜಪಾನ್ ಮೇಲೆ ಯುದ್ಧ ಘೋಷಿಸಬಹುದೆಂದು ಲಿಸ್‌ಬನ್‌ನಲ್ಲಿ ವದಂತಿ ಹೊರಟಿದೆ. ಪೆಸಿಫಿಕ್‌ನಲ್ಲಿರುವ ಪೋರ್ಚುಗೀಸ್ ಸ್ಥಾನಗಳ ಮೇಲೆ ಜಪಾನರು ವಿರುದ್ಧವಾಗಿ ಕಾರ್ಯನಡೆಸುತ್ತಿರುವುದು ಮತ್ತು ತಮ್ಮ ಬಂದರಿನಲ್ಲಿದ್ದ ಬ್ರಿ॥ ಹಡಗನ್ನು ಜಪಾನರು ಹಿಡಿದುಕೊಂಡದ್ದು ಈ ವಿಚಾರಗಳಿಂದ ಪೋರ್ಚುಗಲ್ ತನ್ನ ನೀತಿಯನ್ನು ಬದಲಾಯಿಸಿ, ಮಿತ್ರರಿಗೆ ಸೇರಬಹುದೆಂದು ಹೇಳಲಾಗಿದೆ.

ಇಟಲಿ ಮುತ್ತಿಗೆ ಆರಂಭ

ಯುದ್ಧ ಪ್ರಾರಂಭವಾಗಿ ನಿನ್ನೆ ದಿವಸಕ್ಕೆ ೪ ವರ್ಷಗಳಾಯಿತು. ಈ ಸಂಬಂಧದಲ್ಲಿ ಬ್ರಿ॥ ೮ ನೇ ಮತ್ತು ಕೆನಡಿಯನ್ ಸೈನ್ಯಗಳು, ವಿಮಾನ ಮತ್ತು ನೌಕಾದಳಗಳ ಸಹಾಯದಿಂದ ಮೆಸ್ಸಿನಾ ಜಲಸಂಧಿಯನ್ನು ದಾಟಿ, ದಕ್ಷಿಣ ಇಟಲಿಯ [illegible] ಭೂಖಂಡದಲ್ಲಿ ಇಳಿದು ದಂಡಯಾತ್ರೆ ಆರಂಭಿಸಿವೆ. [illegible] ಬೆಳಗಿನ ಜಾವದಲ್ಲಿ ಮಿತ್ರ ಸೈನ್ಯ ಮುತ್ತಿತೆಂದೂ, ಜರ್ಮನರ ಪ್ರತಿಘಟನೆ ಹೆಚ್ಚಾಗಿತ್ತೆಂದೂ ಹೇಳಲಾಗಿದೆ. ಮೆಸ್ಸಿನ ಜಲಸಂಧಿಯ ಇಟಲಿ ರೆಗ್ಗಿಯೋ ನಗರದ ದಕ್ಷಿಣಭಾಗದಿಂದ ಮಿತ್ರರು ಕಾರ್ಯಾಚರಣೆ ನಡೆಸುತ್ತಿರುವರೆಂದು ವರದಿಯಾಗಿದೆ.

ಬ್ರಿ॥ ಮತ್ತು ಕೆನಡಿಯನ್ ಸೈನ್ಯವು ದಂಡಯಾತ್ರೆ ಆರಂಭಮಾಡಲು ಸಿಸಿಲಿ ದ್ವೀಪದಲ್ಲಿ ತಂಗಿಸಲಾಗಿದೆಯೆಂದು ಹೇಳಲಾಗಿದೆ.

ರೂಸ್ವೆಲ್ಟರಿಗೆ ಪೋಪರ ಗುಪ್ತ ಸಂದೇಶ

ಮಿತ್ರ ಪಕ್ಷದವರು ಪಶ್ಚಿಮದಲ್ಲಿ ಆಕ್ರಮಣ ಮಾಡಿದರೆ, ಅದನ್ನು ಎದುರಿಸುವ ಸಿದ್ಧತೆ ಪೂರ್ವರಂಗದಿಂದ ಅಂದರೆ ರಷ್ಯದಿಂದ ಅನೇಕ ಜರ್ಮನ್ ಸೈನ್ಯ ಪಡೆಗಳನ್ನು ಕರೆಸಲಾಗಿದೆಯೆಂದೂ, ತಟಸ್ಥ ರಾಷ್ಟ್ರಗಳ ಮೂಲಕ [illegible] ವರದಿಯಾಗಿದೆಯೆಂದೂ ಸ್ಟಾಕ್‌ಹೋಂ ವಾರ್ತೆ ತಿಳಿಸುತ್ತದೆ.

ವಾಷಿಂಗ್‌ಟನ್‌ಗೆ ಪ್ರಯಾಣಮಾಡಿರುವ ವ್ಯಾಟಿಕನ್ ವಿಶೇಷ ರಾಯಭಾರಿಯು ಲಿಸ್ಬನ್ನಿಗೆ ವಿಮಾನದ ಮೂಲಕ ಬಂದಿದ್ದಾರೆ. ಆ ರಾಯಭಾರಿ ಪೋಪರ ಗುಪ್ತ ಸಂದೇಶವನ್ನು ರೂಸ್ವೆಲ್ಟರಿಗೆ ಕೊಡಲು ಹೋಗಿದ್ದಾರೆಂದು ಹೇಳಲಾಗಿದೆ.

ಡೆನ್ಮಾರ್ಕಿನಲ್ಲಿ ಅಶಾಂತಿ

ಡೆನ್ಮಾರ್ಕಿನಲ್ಲಿ ಜರ್ಮನರಿಗೂ, ಡೇನರಿಗೂ ಘರ್ಷಣೆ ಆಗುತ್ತಲೇ ಇದೆ. ರಾಜ ಮನೆತನದವರೆಲ್ಲರನ್ನೂ ಮತ್ತು ೧೫೦ ಡೇನಿಷ್ ಪ್ರಮುಖರನ್ನು ಜರ್ಮನರು ದಸ್ತಗಿರಿ ಮಾಡಿದ್ದಾರೆ. ನಾಜಿಗಳು ನೂತನ ಡೇನಿಷ್ ಸರ್ಕಾರ ಸ್ಥಾಪಿಸಲು ನಡೆಸಿದ ಪ್ರಯತ್ನ ಫಲಗೊಳ್ಳಲಿಲ್ಲ. ಕೋಪನ್ ಹೇಗನ್‌ನಲ್ಲಿ ಮತ್ತು ಇತರ ಸ್ಥಳಗಳಲ್ಲಿ ಸ್ವೀಡ್ ಗ್ರಾಮಸ್ಥರನ್ನು ವಶಪಡಿಸಿಕೊಳ್ಳಲು ಜರ್ಮನರು ಬಾಂಬುಗಳನ್ನೂ ಟ್ಯಾಂಕುಗಳನ್ನೂ ಉಪಯೋಗಿಸಬೇಕಾಯಿತು.

ಜರ್ಮನರ ಓಟ

[illegible] ಸಪೋರೋಝಿಯ ಹಿಂತಿರುಗಿ ಓಡಿದ ರಷ್ಯದಿಂದಲೇ ಜರ್ಮನರೂ ಓಡುತ್ತಿದ್ದಾರೆ. ಸ್ಮೊಲೆನ್ಸ್ಕ್ ಕ್ಷೇತ್ರದ ಕಡೆಗೆ ರಷ್ಯನರು ಮುನ್ನುಗ್ಗುತ್ತಿದ್ದಾರೆ. ಈ ಕ್ಷೇತ್ರದ ಮುಖ್ಯವಾದ ಟಗ್ರೋಗ್ ಮತ್ತು ಬ್ರಿಯಾನ್ಸ್ಕ್ ನೌಕಾರಂಗಗಳನ್ನು ರಷ್ಯನರು ಆಕ್ರಮಿಸಿಕೊಂಡಿದ್ದಾರೆ. ಕ್ರಿಮಿಯ ಕ್ಷೇತ್ರವನ್ನು ಸಂಪೂರ್ಣವಾಗಿ ಜರ್ಮನರು ತ್ಯಜಿಸಿದ್ದಾರೆ.

ಪೋರ್ಚುಗಲ್ಲಿನಲ್ಲಿ ಸೈನ್ಯ ಸಿದ್ಧತೆ

ಪೋರ್ಚುಗೀಸ್ ಸರ್ಕಾರವು ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಗಮನಿಸಿ, ದೇಶದ ರಕ್ಷಣೆಗಾಗಿ ಅಪಾರ ಯುದ್ಧ ಸಲಕರಣೆಗಳನ್ನು ಶೇಖರಿಸುತ್ತಿದೆಯೆಂದೂ, ಬಹು ಜಾಗ್ರತೆ ಅದು ನಾಗರಿಕ ಮತ್ತು ಮಿಲಿಟರಿ ಶಿಕ್ಷಣ ಕೊಡುವ ಪ್ರಯತ್ನವನ್ನು ಕೈಗೊಳ್ಳಲಾಗುವುದೆಂದೂ ತಿಳಿಯಬರುತ್ತೆ.

ಏಷ್ಯಾ ಕಮ್ಯಾಂಡಿನ ಮುಖ್ಯ ಕಛೇರಿ

ಆಗ್ನೇಯ ಏಷ್ಯಾ ಕಮ್ಯಾಂಡರಾದ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್‌ರವರು ತಮ್ಮ ಹೆಡ್ ಕ್ವಾರ್ಟರ್ಸನ್ನು ಬೆಂಗಳೂರು, ಕೊಲಂಬೋ, ಕಲ್ಕತ್ತಾ ಅಥವಾ ರಾಂಚಿ ನಗರಗಳಲ್ಲಿ ಯಾವುದಾದರೊಂದರಲ್ಲಿ ಏರ್ಪಡಿಸಿಕೊಳ್ಳಬಹುದೆಂದು ಊಹಿಸಲಾಗಿದೆ.

ಟೆಸ್ಟ್ ಕ್ರಿಕೆಟ್ ಆಟಗಾರರ ಮರಣ

ಇಂಗ್ಲೆಂಡಿನ ಸುಪ್ರಸಿದ್ಧ ಟೆಸ್ಟ್ ಕ್ರಿಕೆಟ್ ಆಟಗಾರರಾದ ವೆರಿಟಿಯವರು ಸಿಸಲಿ ರಣಕ್ಷೇತ್ರದಲ್ಲಿ ಗಾಯಗೊಂಡು, ಇಟಲಿ ಕೈಸೆರೆಯಾಗಿ ಈಗ ಮರಣಹೊಂದಿದರೆಂದು ವರದಿಯಾಗಿದೆ.

ತಿರುಪತಿಯಲ್ಲಿ ಕಾಲೇಜು ಸ್ಥಾಪನೆ

ತಿರುಪತಿ ದೇವಸ್ಥಾನ ಕಮಿಟಿಯವರು ತಿರುಪತಿಯಲ್ಲಿ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ತೆರೆಯಬೇಕೆಂದು ನಿರ್ಧರಿಸಿದ್ದಾರೆ.

ಜಿಬ್ರಾಲ್ಟರಿನಲ್ಲಿ ಬ್ರಿ॥ ನೌಕಾಪಡೆ

ಜಿಬ್ರಾಲ್ಟರಿನಲ್ಲಿ ಭಾರಿ ಬ್ರಿ॥ ನೌಕಾ ಪಡೆ ಒಂದನ್ನು ಇಡಲಾಗಿದೆಯೆಂದು ವರದಿಯಾಗಿದೆ. ೪ ಏರ್ ಕ್ರಾಫ್ಟ್ ಕ್ಯಾರಿಯರ್, ೩ ಯುದ್ಧ ಹಡಗುಗಳು, ೨೦ ಡಿಸ್ಟ್ರಾಯರ್ಸ್ ಮತ್ತು ೪೫ ವರ್ತಕ ಹಡಗುಗಳನ್ನು ಶೇಖರಿಸಲಾಗಿದೆಯೆಂದು ಹೇಳಲಾಗಿದೆ.

ಬಲ್ಗೇರಿಯಾ ಸೈನ್ಯವು ಗ್ರೀಸನ್ನು ಆಕ್ರಮಿಸಿತು

ಸಾಲೋನಿಕಾವನ್ನು ಮಾತ್ರ ಬಿಟ್ಟು ಮಿಕ್ಕ ಗ್ರೀಸ್ ದೇಶವನ್ನೆಲ್ಲಾ ಬಲ್ಗೇರಿಯಾ ಸೈನ್ಯವು ಆಕ್ರಮಿಸುತ್ತಿರುವುದನ್ನು ಪ್ರತಿಭಟಿಸಲು ಗ್ರೀಸ್‌ನಲ್ಲಿ ಜನಗಳು ಪ್ರದರ್ಶನ ನಡೆಸಿ, ಮುಷ್ಕರ ಹಿಡಿದಿರುವರೆಂದು ವರದಿಯಾಗಿದೆ.

ಜರ್ಮನ್ ಮೇಲೆ ಬಾಂಬುಗಳ ಸುರಿಮಳೆ

ಜರ್ಮನ್ ಮೇಲೆ ೧೯೪೩ ರಲ್ಲಿ ಮಿತ್ರ ವಿಮಾನಗಳು ಉಗ್ರ ಧಾಳಿ ನಡೆಸಿ, ೯೬,೦೦೦ ಟನ್ನಿನ ಬಾಂಬುಗಳನ್ನು ಎಸೆದಿವೆ. ಡ್ಯೂಕ್ ಫ್ರಾನ್ಸಿನ ಮೇಲೆ ೫೦ ಸಾವಿರ ಟನ್ ಬಾಂಬುಗಳನ್ನು ಎಸೆಯಲಾಗಿದೆ.

ಸಿಂಗಾಪೂರ್ ಆಸ್ತಿ ವಶಪಡಿಸಿಕೊಳ್ಳಲಾಯಿತು

ಇಟಲಿ ಫ್ಯಾಸಿಸ್ಟ್ ಪಾರ್ಟಿಯ ಅಧಿಕಾರಿಗಳು ಮತ್ತು ಮುಸೋಲಿನಿ ಪುತ್ರ ಮತ್ತು ಅಳಿಯನಾದ ಕೌಂಟ್ ಸಿಯಾನೊ, ಇವರುಗಳ ಆಸ್ತಿ-ಪಾಸ್ತಿಗಳನ್ನೆಲ್ಲಾ ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಗಿದೆ.

ಜಪಾನ್ ವೈಮಾನಿಕ ಶಕ್ತಿಗೆ ಗಂಡಾಂತರ

ಉತ್ತರ ಸಾಲೊಮನ್ನಿನ ಕಹಿಲಿನಲಿಯ ಮೇಲೆ ಮೊಟಾರ್ ವಿಮಾನಗಳು ಉಗ್ರ ಧಾಳಿ ನಡೆಸಿ, ೩೬ ಷೈಟರುಗಳನ್ನು ಉರುಳಿಸಲಾಯಿತೆಂದೂ, ೬ ೨ ವಿಮಾನಗಳು ನಾಶವಾದುವೆಂದೂ ವರದಿಯಾಗಿದೆ.

LATEST NEWS

ಕ್ರಿಕೆಟ್ ಪಂದ್ಯ

ಮೈಸೂರು ೪

ಮೈಸೂರು ಸ್ಟೇಟ್ ಕ್ರಿಕೆಟ್ ಲೀಗ ಪಂದ್ಯದಲ್ಲಿ ಈ ದಿನ ಬೆಂಗಳೂರು ಸೆಂಟ್ರಲ್ ಕಾಲೇಜಿನವರು ಮೈಸೂರು ಮಹಾರಾಜಾ ಕಾಲೇಜಿನವರನ್ನು ೧೦೮ [illegible] ಸೋಲಿಸಿದರು.

ಸೆಂಟ್ರಲ್ ಕಾಲೇಜು - ೨ ವಿಕೆಟ್ಟಿನಲ್ಲಿ ೨೨೮ ರನ್ನುಗಳು (ಸಿ. ಎಲ್. [illegible] ಸುಂದರ್ ೧೦೧, ಎ. ಕೆ. ಎಸ್. [illegible], ಎ. ಆರ್. ಸುಂದರೇಶ್ ೪೯. ಬಿ. ಎಸ್. ಅರಸ್ಸ ೭೯ ರನ್ನುಗಳಿಗೆ ೪ ವಿಕೆಟ್ಟು ಗಳು, ರಾಮಗೋಪಾಲ್ [illegible] ರನ್ನುಗಳಿಗೆ ೪ ವಿಕೆಟ್ಟುಗಳು)

ಮಹಾರಾಜಾ ಕಾಲೇಜು ೧೨೦ ರನ್ನುಗಳು (ವೈ. ಎಸ್. [illegible], ರಾಜಗೋಪಾಲ್ [illegible] ರನ್ನುಗಳಿಗೆ ೬ ವಿಕೆಟ್ಟುಗಳು, ಅನಂತಕೃಷ್ಣ [illegible] ರನ್ನುಗಳಿಗೆ ೨ ವಿಕೆಟ್ಟುಗಳು)

ಕಲ್ಪತರು ಜ್ಞಾನ ನಿವಾರಣೆಗೆ ಸಹಾಯ

ಬೆಂಗಳೂರು ೩

ಬೆಂಗಳೂರು ದಂಡಿನಲ್ಲಿರುವ ಮೇಜರ್ ಸಾಹೇಬ್ ಎ. ವಿ. ಪಾಟೀಲ ಮುಂತಾದವರು ಕಲ್ಪತರು ಜ್ಞಾನನಿವಾರಣೆಗೆ ನಿಧಿ ಕೂಡಿಸಲು ಪ್ರಯತ್ನ ಮಾಡಿ, ದಂಡಿನ ಕಮಿಷನರ್ ರವರಿಗಿರುವ ಅಂಗಡಿಯವರಿಂದ ಹಣವನ್ನು ಶೇಖರಿಸಿ ಒಟ್ಟು ೫೦೦೦ ರೂಪಾಯಿಗಳನ್ನು ಕಲ್ಪತರು ನಿಧಿಯಾಗಿ ಕಳುಹಿಸಿದರೆಂದು ವರದಿಯಾಗಿದೆ.

ರೇಷನ್ ಕಾರ್ಡ್ ಬಗ್ಗೆ ಶಿಕ್ಷೆ

ದಂಡಿನ ಪೊಲೀಸಿನಲ್ಲಿರುವ ಅಬ್ದುಲ್ ಕರೀಂ ಮತ್ತು ಅಬ್ದುಲ್ ಜಬ್ಬಾರ್ ಎಂಬ ಇಬ್ಬರಿಗೆ ರೇಷನ್ ಪಡೆಯಲು ಕೊಡುತ್ತಿದ್ದ ಚೀಟಿಗಳನ್ನು ಕಳ್ಳತನದಿಂದ ಕಿತ್ತು ಬಳಸಿದರೆಂದು ಆಪಾದನೆಯ ಮೇರೆಗೆ ದಂಡಿನ ಮೊದಲನೆ ದರ್ಜೆ ನ್ಯಾಯಾಧೀಶರು ಆಪಾದಿತರಿಗೆ ತಲಾ ಒಂದೊಂದು ತಿಂಗಳು ಕಠಿಣ ಶಿಕ್ಷೆ ವಿಧಿಸಿದರೆಂದು ತಿಳಿದುಬರುತ್ತೆ.

ಕನ್ನ ಕಳುವಿಗೆ ಶಿಕ್ಷೆ

ಗೋವಿಂದಸ್ವಾಮಿ ಅಲಿಯಾಸ್ ಮುನಿಸಾಮಿ ಎಂಬುವನು ಕನ್ನ ಕಳುವು ಮಾಡಿದನೆಂಬ ಆಪಾದನೆಯ ಮೇಲೆ ಮೊಕದ್ದಮೆಗಳಲ್ಲಿ ೫, ನ್ಯಾ॥ ರು ತೀರ್ಪಿತ್ತು ಆಪಾದಿತನಿಗೆ ಎರಡು ಮೊಕದ್ದಮೆಗಳಲ್ಲೂ ತಲಾ ೨ ವರ್ಷ ಕಠಿಣ ಶಿಕ್ಷೆ ವಿಧಿಸಿ, ಎರಡನ್ನೂ ಒಟ್ಟಿಗೇ ಅನುಭವಿಸಬೇಕೆಂದು ಆಜ್ಞೆ ಮಾಡಿದ್ದಾರೆ. ಆಜ್ಞೆ ಶಿಕ್ಷೆ ಮುಗಿದನಂತರ ೨ ವರ್ಷ ಕಾಲ ಆಪಾದಿತನು ತನ್ನ ನಿವಾಸವನ್ನು ಪೋಲೀಸರಿಗೆ ತಿಳಿಸುತ್ತಿರಬೇಕೆಂದು ಆಜ್ಞೆಯಿತ್ತಿದ್ದಾರೆ. ಆಪಾದಿತನು ಹಿಂದೆ ೧೨ ಸಲ ಶಿಕ್ಷೆ ಅನುಭವಿಸಿದ್ದನೆಂದು ತಿಳಿದುಬರುತ್ತೆ.

Edited, printed and published by A R. Nagarajan, at the Sadhvi Press, D Subbiah Road, Mysore.

ಮೀರೂರಿನ ಬಡ ಜನರಿಗೆ ಸಹಾಯ

ಇಂದಿನ ಆಹಾರ ಅಭಾವ ಪರಿಸ್ಥಿತಿಯಲ್ಲಿ ಸ್ತ್ರೀಯರಿಗೆ ಮತ್ತು ಕೆಲಸ ಕಳೆದುಕೊಂಡಿರುವ ಬಡಜನರಿಗೆ ಸಹಾಯ ನೀಡುವುದಕ್ಕಾಗಿ ಸ್ಥಾಪಿಸಲಾಗಿರುವ ಸಮಿತಿಯ ಮಾರ್ಗದರ್ಶನಗಳ ೧೫೦೦೦ ರೂ. ಗಳ ಬಂಡವಾಳದಿಂದ ಕಾರ್ಯಾರಂಭ ಮಾಡಬೇಕೆಂದು ಯೋಚಿಸಿದ್ದಾರೆ. ಪ್ರಕೃತದಲ್ಲಿ ೧೮೫೦ ರೂ. ಗಳು ವಸೂಲಾಗಿವೆ. ಇದಿ [illegible] ಸೂಕ್ತ ರೀತಿಯಲ್ಲಿ ಸಹಾಯ ನೀಡಲು ಪ್ರಯತ್ನ ನಡೆಯುತ್ತಿದೆಯೆಂದು ವರದಿಯಾಗಿದೆ.

ಆಮರಣಾಂತ ಶಿಕ್ಷೆ

ಶಿವನಸಮುದ್ರದ ಮಾದಯ್ಯ ಎಂಬವನನ್ನು ಬಸವಯ್ಯ ಎಂಬುವನು ಕೊಲೆಮಾಡಿದನೆಂಬ ಆಪಾದನೆ ಮೇಲೆ ಸೆಷನ್ಸ್ ಜಡ್ಜರು ವಿಚಾರಣೆ ನಡೆಸಿ ಆಪಾದಿತನಾದ ಬಸವಯ್ಯನಿಗೆ ಆಮರಣಾಂತ ಶಿಕ್ಷೆ ಅನುಭವಿಸಬೇಕೆಂದು ತೀರ್ಪಿತ್ತರು.

ದೋಣಿ ಮುಗುಚಿಕೊಂಡು ೫೦ ಮಂದಿ ಮರಣ

ನವಾಖಾಲಿಯಲ್ಲಿ ೧೫೦ ಜನ ಯಾತ್ರಿಕರನ್ನೊಳಗೊಂಡ ಒಂದು ದೋಣಿಯು ಮುಗುಚಿಕೊಂಡು, ೫೦ ಮಂದಿ ಮುಳುಗಿ ಹೋದರೆಂದೂ, ಅವರ ಪೈಕಿ ೫ ಮಕ್ಕಳಿದ್ದರೆಂದೂ ವರದಿಯಾಗಿದೆ.

ಆಕಾಶವಾಣಿ

ಸೆಪ್ಟೆಂಬರ್ ೫ ನೇ ಭಾನುವಾರ

... ಉಪನ್ಯಾಸ ಏರ್ಪಾಡಾದವ : ವಿದ್ವಾನ್ ಟಿ. ಎಸ್. ಶಾಮರಾವ್

RETURN TICKET TO RADIANT YOUTH
AT
New Royal Dispensary

ನಾಜಿ ಪ್ರಮುಖನಿಗೆ ಬುದ್ಧಿಭ್ರಮಣೆ

ಪ್ರಸಿದ್ಧ ಕೈದಿಯಾದ "ನಾಜಿ ಪ್ರಮುಖನಾದ ರುಡೋಲ್ಫ್ ಹೆಸ್ ಎಂಬುವನಿಗೆ ಈಗ ಬುದ್ಧಿ ಭ್ರಮಣೆಯುಂಟಾಗಿದೆ. ಗ್ರಾಮಾಂತರ ಪ್ರದೇಶದ ಒಂದು ಮನೆಯಲ್ಲಿ ಅವನನ್ನು ಸೆರೆಯಲ್ಲಿಟ್ಟು ಕಾವಲಿರುತ್ತಾರೆ. ಈ ಮನೆಯ ಸಮೀಪದಲ್ಲಿ ಮತ್ತೊಂದು ಇಟಲಿ ಸೈನ್ಯಾಧಿಕಾರಿಯಾದ ಜನರಲ್ ಅರ್ನಿಮ್‌ನು ಸೆರೆಯಲ್ಲಿದ್ದಾನೆ. ನಾಜಿ ಪ್ರಮುಖನಾದ ಹೆಸ್‌ನು ಅತ್ಯಂತ ವ್ಯಥೆಯುಳ್ಳವನಾಗಿದ್ದನು. ಈಗ ಅವನು ಮನೋವ್ಯಾಕುಲದಿಂದ ದುರ್ಬಲನೂ, ರೋಗಪೀಡಿತನೂ ಆಗಿರುವನು. ೨ ವರ್ಷಗಳ ಹಿಂದೆ ಇವನು ಪ್ಯಾರಾಚೂಟ್ ಮೂಲಕ ಸ್ಕಾಟ್ಲೆಂಡಿನಲ್ಲಿಳಿದಾಗ, ಇಂಗ್ಲೆಂಡಿನಲ್ಲಿ 'ಕ್ವಿಸ್ಲಿಂಗ್' ಒಬ್ಬನನ್ನು ತಯಾರುಮಾಡಬಹುದೆಂದು ಊಹಿಸಿದ್ದನು. ಈಗ ಅದು ನಿರಾಶೆಯಾದ್ದರಿಂದ ಹುಚ್ಚು ಹಿಡಿದಿದೆ" ಎಂದು ಬ್ರಿಟಿಷ್ ಪ್ರಚಾರಕಾರ್ಯ ಮಂತ್ರಿಗಳಾದ ಬ್ರೆಂಡನ್ ಬ್ರಾಕೆನ್ ಹೇಳಿದುದಕ್ಕೆ ಈಗ ಸಮರ್ಥನೆ ದೊರಕಿದೆ.

೮॥ ದಿನದಲ್ಲಿ ಡಿಸ್ಟ್ರಾಯರ್ ನಿರ್ಮಾಣ

ಬ್ರಿಟನ್ನಿಗೋಸ್ಕರ ಕೇವಲ ಎಂಟೂವರೆ ದಿವಸಗಳಲ್ಲಿ ಅಮೆರಿಕನ್ ನೌಕಾ ನಿರ್ಮಾಣ ಕಾರ್ಖಾನೆಯು ಒಂದು ಡಿಸ್ಟ್ರಾಯರನ್ನು ತಯಾರುಮಾಡಿದೆಯೆಂದು ವರದಿಯಾಗಿದೆ.

೧೯೪೫ ರ ವರೆಗೂ ಯುದ್ಧ ನಡೆಯುವುದು

'ಅಮೆರಿಕನ್' ಎಂಬ ಪತ್ರಿಕೆಯಲ್ಲಿ ಮಿ॥ ಪ್ಯಾರಿಪಾಪ್‌ಕಿನ್ಸ್ ಎಂಬುವರು "೧೯೪೪ ರಲ್ಲಿ ನಾವು ಗೆಲ್ಲಬಲ್ಲೆವು" ಎಂಬ ಲೇಖನ ಬರೆಯುತ್ತ, "ಈ ಯುದ್ಧದಲ್ಲಿ ರಷ್ಯಾ ಮುಖ್ಯವಾದುದು, ಅದು ಪತನವಾದರೆ, ನಾವು ಜಯ ಹೊಂದುವ ಕಾಲ ಇನ್ನೂ ಬಹಳ ವರ್ಷ ಮುಂದಕ್ಕೆ ಹಾಕಬೇಕಾಗುವುದು. ನಾವು ಬೇಗ ಯುದ್ಧದಲ್ಲಿ ಗೆಲ್ಲುವುದಿಲ್ಲ, ಇನ್ನೂ ೨ ವರ್ಷ ಕಾಲ ಕಠೋರವಾದ ಯುದ್ಧಮಾಡಬೇಕಾಗುವುದು" ಎಂದು ತಿಳಿಸಿದ್ದಾರೆ.

ಅಮೆರಿಕನ್ ಸೈನ್ಯ ನಷ್ಟ

ಯುದ್ಧಾರಂಭವಾದಾಗಿನಿಂದ ಇದುವರೆಗೆ ಒಟ್ಟು ೧ ಲಕ್ಷ ಅಮೆರಿಕನ್ ಸೈನ್ಯ ನಷ್ಟವಾಗಿದೆಯೆಂದು ಪ್ರಕಟವಾಗಿದೆ. ಸೈನ್ಯದಲ್ಲಿ ೧೬,೫೦೦ ಮಂದಿ ಸತ್ತಿರುವರೆಂದೂ, ೧೯,೫೦೦ ಮಂದಿಗಳಿಗೆ ಗಾಯಗಳಾಗಿವೆಯೆಂದೂ, ೧೯,೦೦೦ ಮಂದಿ ಶತ್ರು ಕೈಸೆರೆಯಾಗಿರುವರೆಂದೂ ವರದಿಯಾಗಿದೆ.

ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಚೈನಾ ವಿದ್ಯಾರ್ಥಿ

ಭಾರತದಲ್ಲಿ ಉನ್ನತ ಶಿಕ್ಷಣ ಪಡೆಯಲು ಚೈನಾದೇಶದ ಹೂಚುಕಿ ಎಂಬ ವಿದ್ಯಾರ್ಥಿಯನ್ನು ಮದರಾಸ್ ವಿಶ್ವವಿದ್ಯಾಲಯಕ್ಕೆ ಕಳುಹಿಸಲಾಗಿದೆ.

ಇದೇ ಸೆಪ್ಟೆಂಬರ್ ೨, ೩ ನೇ ತಾ॥ ಗಳಲ್ಲೂ ಮತ್ತು
ಪ್ರತಿ ಶನಿವಾರ ಮತ್ತು ಭಾನುವಾರ 3-30 ಕ್ಕೆ ಮ್ಯಾಟಿನಿ ಇರುತ್ತೆ.

ನ್ಯೂ ಆಪೇರಾ ಟಾಕೀಸ್

೧—೯—೪೩ ರಿಂದ

ಎಸ್. ಡಿ. ಸುಬ್ಬಯ್ಯ, ಯು. ಆರ್. ಜೀವರತ್ನಂ, ಕೆ. ಕೆ. ಪೆರುಮಾಳ್, ಶಿವಭಾಗ್ಯಂ, ಕಾಳಿ ಎನ್. ರತ್ನಂ, ಬೊರೆರಾಜ್ ಮುಂತಾದವರು ಪಾತ್ರ ವಹಿಸಿರುವ

ಭಕ್ತ ಗೌರಿ
(ತಮಿಳು ಭಾಷೆ)

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೊಸದಾಗುವುದಲ್ಲದೆ ಅದರ ಬೆಳ್ನೊರೆಯು ಬಂದುಗು ರೋಮ ರಂಧ್ರಗಳನ್ನೆಲ್ಲಾ ಶೋಧಿಸಿ ಮೈಯೊಳಗಿನ ಅಶುದ್ಧ ವಸ್ತುಗಳನ್ನು ತೆಗೆದುಹಾಕುವುದು. ಅದರ ಮೆತ್ತನೆಯ ಗುಣವೂ, ಸುಗಂಧವೂ ಚರ್ಮಕ್ಕೆ [illegible]ವುದು.

ಮೈಸೂರು ಸ್ಯಾಂಡಲ್ ಸೋಪ್

[illegible]

ಈಗ ಆಗುತ್ತಿರುವ ಬಟ್ಟೆಗಳ ಏರಿಳಿತಗಳಲ್ಲಿ ಗೌರಿ ಹಬ್ಬಕ್ಕೆ
ಬಟ್ಟೆ, ಅನ್ನ ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.
ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಜುಂಜುಲರಿ ಮುತ್ತು ಎಲ್ಲಾ ವೈವಿಧ್ಯ ಹೊಸ ಮಾದರಿಯಲ್ಲಿ ಹೊಲಿದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜೀರಾವ್ ರೋಡ್, ಮೈಸೂರು ಇವರ ಅಂಗಡಿಯಲ್ಲಿ ದೊರಯುತ್ತದೆ

[illegible]

ಸ್ತ್ರೀಯರ ಸೌಕರ್ಯಕ್ಕಾಗಿ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಪರೀಕ್ಷೆ ಮಾಡಿರಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible]

ಜಿಲ್ಲಾಧಿಕಾರಿಗಳ ಸಭೆ

ಮೈಸೂರು [illegible]

ಮೈಸೂರು ಜಿಲ್ಲೆ ಅಧಿಕಾರಿಗಳ ಸಭೆಯೊಂದು ನಿನ್ನೆ ಮಧ್ಯಾಹ್ನ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೇರಿ, ಆಹಾರ ಸರಬರಾಜು ವಿಚಾರವಾಗಿ ಚರ್ಚಿಸಲಾಯಿತೆಂದು ಗೊತ್ತಾಗಿದೆ.

ಪತ್ರಿಕೋದ್ಯೋಗಿಗಳ ಸಂಘ

ಮೈಸೂರು, ಪತ್ರಿಕೋದ್ಯೋಗಿಗಳ ಸಂಘದ ಸಭೆಯು ನಿನ್ನೆ ಸಂಜೆ ಶ್ರೀ ಜ.ಆರ್. ಕ್ರೋಸ್ಮೆರ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಂಘದ ಕಾರ್ಯದರ್ಶಿಸ್ಥಾನಕ್ಕೆ ಶ್ರೀ ಟಿ. ನಾರಾಯಣರಾಯರು ರಾಜೀನಾಮೆಯಿತ್ತ ಪ್ರಯುಕ್ತ ಶ್ರೀ ಎ. ಎಸ್. ನಂಜುಂಡಶಾಸ್ತ್ರಿಗಳನ್ನು ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು.

ವಿದ್ಯಾರ್ಥಿಗಳಲ್ಲಿ ಮನವಿ

ದೇಶದ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಲು ಶ್ರೀ ದಾಸಪ್ಪನವರು ಇಷ್ಟರಲ್ಲಿ ಪ್ರಾಂತ ಕಾಂಗ್ರೆಸ್ ಮತ್ತು ಇತರ ಪ್ರಮುಖ ಸಮ್ಮೇಳನವನ್ನು ಸೇರಿಸಲಿದ್ದಾರೆ. ಕನ್ನಡಿಗರ ನಾವು ಅವರೊಡನೆ ಸಹಕರಿಸಿ ದೇಶದ ಘೋರ ಪರಿಸ್ಥಿತಿಯನ್ನು ಬಗೆಹರಿಸಲು ಮತ್ತು ವಿದ್ಯಾರ್ಥಿವೃಂದಕ್ಕೆ ಒದಗಿರುವ ಎಲ್ಲಾ ತೊಂದರೆಗಳನ್ನು ನಿವಾರಿಸಿಕೊಳ್ಳಲು ಇದೇ ಸಮ್ಮೇಳನದ ಜೊತೆಯಲ್ಲಿ ನಾಡಿನ ಎಲ್ಲಾ ಭಾಗದ ವಿದ್ಯಾರ್ಥಿ ಪ್ರತಿನಿಧಿಗಳು ಒಟ್ಟು ಸೇರಬೇಕೆಂದು ಮೈಸೂರು ವಿದ್ಯಾರ್ಥಿಸಂಘದ ಅಧ್ಯಕ್ಷರಾದ ಶ್ರೀ ಯಂ. ವಿ. ಕೃಷ್ಣಪ್ಪನವರು ವಿದ್ಯಾರ್ಥಿಗಳಲ್ಲಿ ಮನವಿಮಾಡಿಕೊಂಡಿದ್ದಾರೆ.

ದೇಶೀಯ ವಿದ್ಯಾಶಾಲೆ

ಮೇಲ್ಕಂಡ ಶಾಲಾ ವಾರ್ಷಿಕೋತ್ಸವ ನಾಳೆ ಸಂಜೆ [illegible] ಗಂಟೆಗೆ ಬನುಮಯ್ಯ ಹೈಸ್ಕೂಲಿನಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಜೂಜುಗಾರರ ದಸ್ತಗಿರಿ

ಕೃಷ್ಣರಾಜ ಮೊಹಲ್ಲಾ ಗೌಳಗೇರಿ ಬೀದಿಯ [illegible] ಎಂಬುವರ ಮನೆಯಲ್ಲಿ ಜೂಜಾಡುತ್ತಿದ್ದ [illegible] ಮಂದಿಯನ್ನು ನಿನ್ನೆ ಮಧ್ಯಾಹ್ನ ಕೃಷ್ಣರಾಜ ಮೊಹಲ್ಲಾ ಪೋಲೀಸಿನವರು ದಸ್ತಗಿರಿ ಮಾಡಿ ಅಲ್ಲಿದ್ದ [illegible] ರೂ. ಗಳನ್ನು ವಶಪಡಿಸಿಕೊಂಡಿದ್ದಾರೆ.

ಜಾಡಮಾಲಿಗಳ ಮುಷ್ಕರ

ಅಲಹಾಬಾದಿನ [illegible] ಜಾಡಮಾಲಿಗಳು ಮುಷ್ಕರ ಹಿಡಿದಿದ್ದಾರೆ. ಪೌರಸಭೆಯವರು ತಮ್ಮ ಕೂಲಿ ಭತ್ಯವನ್ನು ಇನ್ನೂ ಹೆಚ್ಚಿಸಬೇಕೆಂದು ಕೇಳಿದ್ದಾರೆ. ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಇದು ಸಾಧ್ಯವಿಲ್ಲವೆಂದೂ, ಭಾರತ ರಕ್ಷಣಾ ರೀತ್ಯಾ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ವಿಷಯದಲ್ಲಿ ಕೈಹಾಕಿ ಜಾಡಮಾಲಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದೂ ಮುನಿಸಿಪಲ್ ಚೇರ್ಮನ್ನರು ವಿನಂತಿಮಾಡಿಕೊಂಡಿದ್ದಾರೆ.

ಯುರೋಪಿನಲ್ಲೂ ಮುಕ್ತಿಗೆ

ಇಟಲಿಯಲ್ಲಿ ಈಗ ವಿಪ್ಲವ ಮುಕ್ತಿಯಾಗಿರುವಂತೆಯೇ ಇನ್ನೂ ಅನೇಕ ಭಾಗಗಳಲ್ಲಿ ಮತ್ತು ಯುರೋಪಿನ ಮುಕ್ತಿಗೆ [illegible] ಸಂಭವವಾಗುವುದೆಂದು ಹೇಳಲಾಗಿದೆ

ಸಂಪುಟ ೨] ಭಾನುವಾರ ೫-೯-೪೩ [ಸಂಚಿಕೆ ೪೪

ಹಿಟ್ಲರನು ಯುಕ್ರೇನ್ ತ್ಯಜಿಸುವನಂತೆ!

ಸಾರ್ಡಿನಿಯದಲ್ಲಿ ಅಮೆರಿಕನ್ ಸೈನ್ಯ ಇಳಿಯಿತು

ದ|| ಇಟಲಿಯ ರಿಗೋ ಮತ್ತು ಗಿಯಾನಿ ನಗರಗಳ ಆಕ್ರಮಣ

ನಾಜಿಗಳು ಯುಕ್ರೇನ್ ತ್ಯಜಿಸುವರೆ?

ಯುಕ್ರೇನ್ ಕ್ಷೇತ್ರವನ್ನು ಸಂಪೂರ್ಣವಾಗಿ ತ್ಯಜಿಸಿ, ನೀಸ್ಟರ್ ಭಾಗದಲ್ಲಿರುವ ಪ್ರಿನ್ಸ್ ಹ್ಯೂಬರ್ಟಸ್ ಹಿಂಭಾಗಕ್ಕೆ ಸೈನ್ಯವನ್ನೆಲ್ಲ ಕಳಿಸಿ, ನೀಗ್ರರನ್ನು ಬದ್ಧಪಡಿಸುವುದಾಗಿ ಹಿಟ್ಲರನು ತನ್ನ ಯುದ್ಧ ಮಂತ್ರಿ ಮಂಡಲದಲ್ಲಿ ನಿರ್ಧಾರಕ್ಕೆ ಬಂದಿರುವನೆಂದು ಮ್ಯಾಡ್ರಿಡ್‌ನಿಂದ ವರದಿಯಾಗಿದೆ.

ರಷ್ಯ-ಜೆಕ್ ಒಪ್ಪಂದ

ರಷ್ಯ ಮತ್ತು ಜೆಕೋಸ್ಲೋವಕಿಯಾ ದೇಶಗಳು ಕರಾರುಮಾಡಿಕೊಳ್ಳಲು ಒಪ್ಪಿದೆಯೆಂದೂ ಡಾ|| ಬೆನೆಸ್‌ರವರು ಒಪ್ಪಂದಕ್ಕೆ ಸಹಿಹಾಕಲು ಮಾಸ್ಕೋ ನಗರಕ್ಕೆ ಇಷ್ಟರಲ್ಲಿಯೇ ಹೋಗುವರೆಂದೂ ವರದಿಯಾಗಿದೆ.

ಲಾರ್ಡ್ ಮೌಂಟ್ ಬ್ಯಾಟನ್

ಆಗ್ನೇಯ ಏಷ್ಯ ಕಮ್ಯಾಂಡರಾಗಿ ನೇಮಿಸಲಾಗಿರುವ ಲಾರ್ಡ್ ಲೂಯಿಸ್ ಮೌಂಟ್ ಬ್ಯಾಟನ್‌ರವರು ಈ ತಿಂಗಳು ಕೊನೆಯಲ್ಲಿ ಬ್ರಿಟನ್ನನ್ನು ಬಿಟ್ಟು, ನವ ದೆಹಲಿಯಲ್ಲಿ ತಮ್ಮ ಹೆಡ್ ಕ್ವಾರ್ಟರ್ಸ್‌ನ್ನು ಮಾಡಿಕೊಳ್ಳುವರೆಂದು ಹೇಳಲಾಗಿದೆ.

ಸಾರ್ಡಿನಿಯಾದಲ್ಲಿ ಅಮೇರಿಕಾ ಸೈನ್ಯ

ಸಾರ್ಡಿನಿಯಾದಲ್ಲಿ ಅಮೆರಿಕಾ ಸೈನ್ಯ ಬಂದಿಳಿದಿದೆಯೆಂದು ಹೇಳಲಾಗಿದೆ. ವಾಷಿಂಗ್‌ಟನ್ನಲ್ಲಿ ಈ ವರದಿಗೆ ಆಧಾರವಿಲ್ಲದಿದ್ದರೂ ಕೂಡ, ಹೀಗಾಗಬಹುದೆಂದು ಕೆಲವು ವಾರಗಳಲ್ಲಿಯೇ ಊಹಿಸಲಾಗಿತ್ತೆಂದು ವಿಲಿಯಂ ಸುದ್ದಿಗಾರರು ತಿಳಿಸುತ್ತಾರೆ

ದಕ್ಷಿಣ ಇಟಲಿಯಲ್ಲಿ ಭೀಕರ ಕದನ

ದಕ್ಷಿಣ ಇಟಲಿಯಲ್ಲಿ ಶತ್ರುಗಳ ಪ್ರತಿಭಟನೆ ಹೆಚ್ಚಾಗಿ, ಭೀಕರ ಕದನ ನಡೆಯುತ್ತಿದೆಯೆಂದೂ, ಜನರಲ್ ಮಾಂಟಗೋಮರಿ ಸೈನ್ಯವು ಉತ್ತರ ಮತ್ತು ಪೂರ್ವ ಭಾಗದಲ್ಲಿ ಟ್ಯಾಂಕು ಪಡೆಗಳ ಸಹಾಯದಿಂದ ಮುಂದುವರಿಯುತ್ತಿದೆಯೆಂದೂ, ಮೆಸ್ಸಿನಾ ಕೊಲ್ಲಿಯಿಂದ ಹೆಚ್ಚು ಸೈನ್ಯ ಹೆಚ್ಚಾಗಿ ಬರುತ್ತಿದೆಯೆಂದೂ ಅಲ್ಜಿಯರ್ಸ್ ರೇಡಿಯೋ ತಿಳಿಸುತ್ತದೆ.

ಆಕ್ಸಿಸ್ ಮುಖ್ಯ ಪ್ರದೇಶವಾದ [illegible] ಬಳಿ ಬ್ರಿಟಿಷ್ [illegible] ನೇ ಸೈನ್ಯವು ಮುಂದುವರಿದಿದೆಯೆಂದು ಹೇಳಲಾಗಿದೆ

ರೀಗೋದಲ್ಲಿ ಮಿತ್ರರ ಆಕ್ರಮಣ

ದಕ್ಷಿಣ ಇಟಲಿ ತುದಿಯ ಭಾಗದಲ್ಲಿರುವ ರೀಗೋ ಮತ್ತು ಸ್ಯಾನ್‌ಗಿಯಾನಿಯನ್ನು ಮಿತ್ರ ಸೈನ್ಯ ಆಕ್ರಮಿಸಿದೆಯೆಂದು ವರದಿಯಾಗಿದೆ. ಉತ್ತರ ರೀಗೋದಲ್ಲಿ ಬಂದಿಳಿದ ಮಿತ್ರಸೈನ್ಯವು ಅಲ್ಲಿಂದ ಸ್ಕಿಲಾ ಬಳಿಗೆ ಮುನ್ನುಗ್ಗುತ್ತಿವೆ. ಇಟಾಲಿಯ ನೌಕೆಯು ಪ್ರತಿಭಟಿಸಿ, ಅಲ್ಲಿಂದ ಉತ್ತರಕ್ಕೆ ಹಿಂತಿರುಗಿತು.

ಯೂರೋಪಿನ ಯುದ್ಧ ಕೋಟೆಗಳನ್ನು ನಾಶಮಾಡಲಾಗುವುದು

"ಈಗಾಗಲೇ ಮಿತ್ರ ವಿಮಾನಗಳು ಯುರೋಪಿನ ಯುದ್ಧ ಕೋಟೆಯನ್ನು ಹಲವು ಕಡೆ ಭೇದಿಸಿವೆಯೆಂದೂ, ಅವುಗಳನ್ನು ನಾಶಪಡಿಸುವುದು ನಿಶ್ಚಯವೆಂದೂ ಮತ್ತು ಆಕ್ರಮಿತ ಪ್ರದೇಶಗಳ ಜನರು ಸ್ವಾತಂತ್ರ್ಯಕ್ಕಾಗಿ ಕಾತರಿಸುತ್ತಿರುವರೆಂದೂ" ಯುರೋಪಿಯ ಕ್ಷೇತ್ರದ ಅಮೇರಿಕಾ ಕಮ್ಯಾಂಡರಾದ ಜನರಲ್ ಡೇವಿಸ್‌ರವರು ತಿಳಿಸಿದ್ದಾರೆ. ಯುದ್ಧದ [illegible] ನೇ ವರ್ಷದಲ್ಲಿ ಯುರೋಪಿಗೆ ನುಗ್ಗುವ ಪ್ರಯತ್ನದಲ್ಲಿ ಇಟಲಿ ದಂಡಯಾತ್ರೆಯು ಮೊದಲನೆಯದೆಂದೂ, ಶೀಘ್ರದಲ್ಲಿಯೇ ಯುರೋಪಿನ ಭೂಭಾಗವನ್ನು ಆಕ್ರಮಿಸುವುದೆಂದೂ ತಿಳಿಸಿದ್ದಾರೆ

ಬೀಜಗಳ ಸಟ್ಟಾ ವ್ಯಾಪಾರಕ್ಕೆ ಪ್ರತಿಬಂಧಕ

ಹಿಪ್ಪೆ, ಹತ್ತಿ, ಎಳ್ಳು ಬೀಜಗಳ ಧಾರಣೆ ಹೆಚ್ಚಾಗುತ್ತಿರುವುದರಿಂದ ಅವನ್ನು ತಡೆಗಟ್ಟಲು ಸೆಪ್ಟೆಂಬರ್ [illegible] ರಿಂದ ಯಾರು ಅವುಗಳ ಸಟ್ಟಾ ವ್ಯಾಪಾರ ಮಾಡಕೂಡದೆಂದು ಭಾರತ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಕಡಲೆಕಾಯಿ, ಸಾಸಿವೆ ಮತ್ತು ಅಗಸೆಬೀಜಗಳ ಸಟ್ಟಾ ವ್ಯಾಪಾರವನ್ನು ಮೇ ತಿಂಗಳಲ್ಲಿಯೇ ನಿಷೇಧಿಸಿದ್ದಾರೆ

[illegible] ಜಪಾನ್ ಹಡಗುಗಳ ನಾಶ

ವೀವಾಕ್ ಬಂದರಿನಲ್ಲಿರುವ ಜಪಾನ್ ಪಡೆಗೆ ಸಹಾಯಮಾಡಲು ಇಟ್ಟಿದ್ದ ಒಂದು ಭಾರಿ ನೌಕಾ ಕಾನ್‌ವಾಯ್ ಮೇಲೆ ಮಿತ್ರ ವಿಮಾನಗಳು ಧಾಳಿ ನಡೆಸಿ, [illegible] ಶತ್ರು ಹಡಗುಗಳನ್ನು ಮುಳುಗಿಸಿದುವು. [illegible] ಶತ್ರು ವಿಮಾನಗಳನ್ನು ಉರುಳಿಸಲಾಯಿತು.

ಬಂಗಾಳ ಕ್ಷಾಮ ನಿವಾರಣೆಗೆ ವಿದ್ಯಾರ್ಥಿ ನಿಧಿ

ಮೈಸೂರು [illegible]

ಮೈಸೂರು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಬಿ. ಶ್ರೀಕಂಠಯ್ಯನವರು ಮಹಾಜನಗಳಲ್ಲಿ ಈ ರೀತಿ ವಿಜ್ಞಾಪಿಸಿಕೊಂಡಿದ್ದಾರೆ—

" ಅಂತರಾಷ್ಟ್ರೀಯ ಬಿಕ್ಕಟ್ಟಿನಿಂದ ನಮ್ಮ ದೇಶದ ಆಹಾರ ಸಮಸ್ಯೆ ಬಿಗಡಾಯಿಸಿಕೊಂಡಿದೆ. ದಿನದಿನವೂ ಬಂಗಾಳದಲ್ಲಿ ಹೊಟ್ಟೆಗಿಲ್ಲದೆ ಸಾಯುವವರ ಸಂಖ್ಯೆ ಏರುತ್ತಿದೆ. ಈ ಕ್ಷಾಮದ ಆಕ್ರಾಂತವು ಎಲ್ಲ ಕಡೆಗೂ ಹರಡುವ ಸೂಚನೆಗಳು ಆಗಲೇ ಕಂಡುಬರುತ್ತಿವೆ. ಬಂಗಾಳದ ಕ್ಷಾಮನಿವಾರಣೆಗಾಗಿ ನಮ್ಮ ಕೈಯಲ್ಲಾದ ಸಹಾಯವನ್ನು ನೀಡಬೇಕಾಗಿದೆ. ಈ ಉದ್ದೇಶದಿಂದಲೇ ನಮ್ಮ ಸಂಘದ ಆಶ್ರಯದಲ್ಲಿ ಕ್ಷಾಮ ನಿವಾರಣ ಕಾರ್ಯವನ್ನು ನಿರ್ವಹಿಸಲು ಒಂದು ಸಮಿತಿಯನ್ನು ಸಿದ್ಧಗೊಳಿಸಿ ಶ್ರೀ ಹೆಚ್. ಸಿ. ದಾಸಪ್ಪನವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಗಿದೆ. ಶ್ರೀಗಳಾದ ಕೆ. ಎಸ್. ಸತ್ಯನಾರಾಯಣ ಮತ್ತು ಮುನಿರೆಡ್ಡಿಯವರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ. ವಿದ್ಯಾರ್ಥಿಗಳು ಮತ್ತು ಮಹಾಜನರು ಉದಾರವಾಗಿ ಸಹಾಯ ನೀಡಬೇಕೆಂದು ಪ್ರಾರ್ಥನೆ"

ಪತ್ರಿಕಾ ಸಂಪಾದಕರಿಗೆ ಕೋರ್ಟಿನ ವಾರೆಂಟು

"ಬಾಂಬೆ ಸೆಂಟಿನಲ್" ಪತ್ರಿಕೆ ಸಂಪಾದಕರಾದ ಮಿ|| ಬಿ. ಜಿ. ಹಾರ್ನಿಮನ್‌ರು ತಮ್ಮ ಪತ್ರಿಕೆಯಲ್ಲಿ 'ಅಲಹಾಬಾದ್ ಕೋರ್ಟಿನ ನಡವಳಿ' ಎಂಬ ಶಿರೋನಾಮೆಯ ಲೇಖನವನ್ನು ಬರೆದು ಟೀಕೆಮಾಡಿದ್ದಾರೆಂದೂ, ಅದರಿಂದ ಕೋರ್ಟಿಗೆ ಅವಮಾನವಾಗಿರುವುದೆಂದೂ ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಈಗ ಕೋರ್ಟಿನವರು ಅವರನ್ನು ಕೈಸೆರೆಹಿಡಿಯಲು ಆಜ್ಞೆ ಇತ್ತಿರುವರು.

[illegible] ಬಂಗಾಲಿ ಮರಣ

ಕಲ್ಕತ್ತಾದಲ್ಲಿ ಉಪವಾಸದಿಂದ ಬೀದಿಗಳಲ್ಲಿ ಬಿದ್ದ [illegible] ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಇವರ ಪೈಕಿ [illegible] ಮಂದಿ ಮರಣಹೊಂದಿದರು.

ಬಂಗಾಳದ ಪರಿಹಾರದ ಮಿಡ್ನ ಪ್ರೆಸ್ ಟ್ರಸ್ಟ್ ಸಂಸ್ಥೆಗೆ ಜಯಪುರದ [illegible] ನೇ ಮತ್ತು [illegible] ನೇ ಮಹಾರಾಜರವರು [illegible] ಸಾವಿರ ರೂ. ಕೊಟ್ಟಿರುವರು.

ಬೊಂಬಾಯಿ ದಕ್ಷಿಣ ಪ್ರದೇಶದಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿದ್ದ [illegible] ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅವರಲ್ಲಿ [illegible] ಮಂದಿ ಸತ್ತರು

ರೋಂ ನಗರದಿಂದ ಇಟಲಿಗೆ ತಪ್ಪಿಸಿಕೊಂಡು ಹೋದ ಕೌಂಟ್ ಸಿಯಾನೋ ಜರ್ಮನಿ ಅಧಿಕಾರಿಯಂತೆ ವೇಷ ಹಾಕಿಕೊಂಡು ಓಡಿಹೋದನೆಂದೂ, ಆತನ ಪತ್ನಿ ಮತ್ತು ಮುಸೋಲಿನಿಯವರ ವಿಚಾರ ಇನ್ನೂ ಗೊತ್ತಿಲ್ಲವೆಂದು ಹೇಳಲಾಗಿದೆ

ಜಿಬ್ರಾಲ್ಟರಿನ ಬಂದರಿನಲ್ಲಿ [illegible] ಹಡಗಿಗೆ ಬೆಂಕಿ ಇಟ್ಟನೆಂಬ [illegible] ಮೇಲೆ ಜೋಸ್ [illegible] ಸ್ಪೈನಿಷ್ ಕೆಲಸಗಾರನನ್ನು ನೇಣಿಗೆ ಏರಿಸಲಾಗಿದೆ. [illegible] ಇಂಗ್ಲೆಂಡಿನ ಹಡಗಿನ ಮೇಲೆ [illegible] ಸ್ಪೈನಿಷ್ ಕೆಲಸಗಾರರು [illegible] ಪತ್ತೆಯಾಗಿದ್ದಾರೆ

ಆಸ್ಪತ್ರೆಗೆ ಸಹಾಯ

ಬೆಂಗಳೂರು ೪

ನೂತನ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗೆ ಮಿಲಿಟರಿ ಕಂಟ್ರ್ಯಾಕ್ಟರ ಸಂಘದವರು ಕಲೆಕ್ಟ್ ಮಾಡಿದ ೫೦೦ ರೂ ಗಳನ್ನೂ, ಬಟ್ಲರ್ ಬ್ರದರ್ಸ್ ೩ ಸಾವಿರ ರೂ ಗಳನ್ನೂ, ಕರಗುಪ್ಪೆಯ ವರ್ತಕರಾದ ಶ್ರೀ ಬಿ. ಪುಟ್ಟಯ್ಯನವರ ೧ ಸಾವಿರ ರೂ. ಗಳನ್ನು ಕೊಟ್ಟಿದ್ದಾರೆ.

ತಯಾರಿಸಕೂಡದು

ದಂಡಿನಲ್ಲಿ ಸೆಪ್ಟೆಂಬರ್ ೬ ರಿಂದ ಯಾರೇ ಆಗಲಿ ಪೈದಾಹುಟ್ಟು, ಗೋಧಿಹಿಟ್ಟು, ಮುಂತಾದವುಗಳಿಂದ ಬಿಸ್ಕತ್ತು, ಕೇಕ್ಸ್, ಪೇಸ್ಟ್ರಿ ಇತ್ಯಾದಿಗಳನ್ನು ತಯಾರಿಸಕೂಡದೆಂದು ದಂಡಿನ ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆಯನ್ನು ಜಾರಿಮಾಡಿದ್ದಾರೆ ಈ ಆಜ್ಞೆಯನ್ನು ಉಲ್ಲಂಘಿಸಿದವರಿಗೆ ೬ ವರ್ಷ ಶಿಕ್ಷೆ ವಿಧಿಸಲಾಗುವುದು.

ಬಟ್ಟೆ ಮಾರಾಟ

ಆಗಸ್ಟ್ ೨೮ ನೇ ತಾ॥ ನ ಒಳಗಾಗಿ ಪಿ ಟ್ಟದ ಕಾಟನ್ ಬೇಲ್‌ಗಳನ್ನು ಮಾರಾಟ ಮಾಡುವುದಕ್ಕಾಗಿ ಕಾಲಾವಧಿಯನ್ನು ಇನ್ನು ಗೊತ್ತುಮಾಡಿಲ್ಲವೆಂದೂ, ದೀರ್ಘಕಾಲ ಮಾರಾಟ ಸೌಕರ್ಯಗಳನ್ನು ಕೊಡಲಾಗುವುದೆಂದೂ ಭಾರತದ ಸರಬರಾಯಿ ಶಾಖೆಯ ಆ ಡೆ ಪ್ಯೂಟಿಗಳು ಶ್ರೀ ರಾಮನಾರಾಯಣ ಚಲ್ಲಾರಾಂರವರಿಗೆ ತಿಳಿಸಿದ್ದಾರೆ ಆದಿನಾಲ್ಕರಿಂದ ಆಗಸ್ಟ್ ೨೮ ರ ಒಳಗಾಗಿ ಬಿಟ್ಟ ಬಿಟ್ಟ ಬಟ್ಟೆ ಬೇಲ್‌ಗಳನ್ನು ಆನಂತರ ಬಿಟ್ಟಲು ಅವಕಾಶ ಕೊಡಬೇಕೆಂದು ಶ್ರೀ ಚಲ್ಲಾರಾಂರವರು ಕೇಳಿಕೊಂಡಿದ್ದರು ಆ ರೀತಿ ಅರ್ಜಿ ಹಾಕಿಕೊಳ್ಳಬಹುದೆಂದೂ, ಅವುಗಳನ್ನು ಪರಿಶೀಲಿಸಲಾಗುವುದೆಂದೂ ಉತ್ತರ ಬಂದಿದೆ.

ಪ್ರ॥ಪ್ರ॥ಸಭೆ ಅಧ್ಯಕ್ಷನದ ಬಗ್ಗೆ ಶ್ರೀ ದಾಸಪ್ಪನವರ ಹೇಳಿಕೆ

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದು ಈಗ ಬಂಧನದಲ್ಲಿರುವ ಆ ಸದಸ್ಯರಿಗೆ ಅಧಿವೇಶನಕ್ಕೆ ಬರಬೇಕೆಂದು ಸರ್ಕಾರ ಆಹ್ವಾನ ಕೊಡುತ್ತಿರುವ ವಿಷಯದಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರು ಒಂದು ಹೇಳಿಕೆ ಕೊಟ್ಟು, " ಇಂಥದೆ ಆಹ್ವಾನ ಕೊಡುವುದರಿಂದ ಅವರು ಸಭೆಗೆ ಬರಲು ಸಾಧ್ಯವಿಲ್ಲವೆಂದೂ, ಅವರ್ಣ್ನುನಿತರನ್ನು ಬಂಧನದಿಂದ ಬಿಡುಗಡೆ ಮಾಡಬೇಕೆಂದೂ, ಇಲ್ಲವಾದರೆ ಅವರಿಗೆ ಆಹ್ವಾನವನ್ನೇ ಕೊಡಕೂಡದೆಂದೂ, ಸರ್ಕಾರದವರು ಈಗ ಕೈಗೊಂಡಿರುವ ಅಸ್ವಾಭಾವಿಕ ಅನೌಚಿತ್ಯವನ್ನು ಬೇಗನೆ ಇಂತು ತಕ್ಷಣ ವರ್ತಿಸಬೇಕೆಂದೂ ಅವರು ತಿಳಿಸಿದ್ದಾರೆ.

ಕನ್ಯಾಪಹಾರ ಮೊಕದ್ದಮೆ

ಹೊಳೆನರಸೀಪುರದ ಮರಾಠಿ ಜಾತಿಯ ಕೃಷ್ಣಾಬಾಯಿಯವರ ಪುತ್ರಿ ೧೧ ವರ್ಷದ ಗೌರಿ ಎಂಬ ಹುಡುಗಿಯನ್ನು ಅಪಹರಿಸಿದ ಎಂಬನಾ. ಆಗಸ್ಟ್ ೧೭ ನೇ ತಾ॥ ಅಪಹರಿಸಿದನೆಂಬ ಆಪಾದನೆ ಮೇಲೆ ಮುನಿಸ್ವಾಮಿ ಪ್ಯಾಗಿ... ಅವನನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿದರು

ಲಾರಿ ಹರಿದು ಮರಣ

ಮೆಟ್ರೋಪಾಲಿಟನ್ ಕಂಪೆನಿಯ ಬೆಂಗಳೂರು ಪ್ರತಿನಿಧಿ ಶ್ರೀ ಕೆ. ಟಿ ರಾವ್‌ರವರು ಲಾರಿಯ ಅಪಘಾತಕ್ಕೆ ಸಿಕ್ಕಿ ಮರಣ ಹೊಂದಿದರು

ಜೂಜುಗಾರರ ದಸ್ತಗಿರಿ

ಶಿವಾಜಿನಗರ ಟಾಕೀಸ್ ಬಳಿ ನಿನ್ನೆ ರಾತ್ರಿ ಪೋಲೀಸರು ಒಂದು ಜೂಜಿನ ಕಟ್ಟೆಯನ್ನು ಮುತ್ತಿ ೧೫೦ ರೂ. ಗಳನ್ನು ವಶಪಡಿಸಿಕೊಂಡು, ೬೭ ಜನರನ್ನು ದಸ್ತಗಿರಿ ಮಾಡಿದ್ದಾರೆ

ಬಂಗಾಳ ಸರ್ಕಾರದ ಬಗ್ಗೆ ಮಿ॥ ಹಕ್ಕರ ಟೀಕೆ

ಬಂಗಾಳದ ಆಹಾರ ಪರಿಸ್ಥಿತಿಯು ವಿಷಮವಾಗಿ, ಮಿ॥ ಎ. ಕೆ. ಫಜಲುಲ್ ಹಕ್ ರವರು ಒಂದು ಪ್ರಕಟನೆ ಹೊರಡಿಸಿದ್ದಾರೆ. ಅದರಲ್ಲಿ " ಬಂಗಾಳದ ಮಂತ್ರಿಗಳು ಬರೀ ಟೊಳ್ಳು ಆಶೆಗಳನ್ನು ಪ್ರಕಟಿಸುವುದರ ಹೊರತು ಜನರ ದುಃಖವನ್ನು ಹೋಗಲಾಡಿಸುವ ಧ್ಯೇಯಕ್ಕಾಗಿ ಯಾವ ಕಾರ್ಯವನ್ನೂ ಕೈಗೊಂಡಿಲ್ಲ. ಇಂಥ ಘೋರ ವಿಪತ್ತು ಜನರಿಗೆಲ್ಲಾ ಸಂಭವಿಸಿರುವ ಸಮಯದಲ್ಲಿ ಅವರನ್ನು ಪೋಷಿಸುವ ಸಂಪೂರ್ಣ ಜವಾಬ್ದಾರಿಯು ಸರ್ಕಾರದ್ದಾಗಿರುವುದು ಇದನ್ನು ಅಸಂಬ್ಲಿಯ ಆದಿ ಪ್ರತಿಯೊಬ್ಬನೂ ಸರಿ ಸರ್ಕಾರಕ್ಕೆ ಬೆರಳಿಗೆಯಾಗಿ ಸಹಕಾರ ಮಾಡದೆ ಇರಲಾರರು ಆದರೆ ಜನರು ಬಿದ್ದು ಆರ್ತನಾದದಿಂದ ಬೀದಿಗಳಲ್ಲಿಯೂ ಸರ್ಕಾರದವರು ಕಿವುಡರಂತೆ ನಟಿಸಿದರೆ, ಬಂಗಾಳದ ಅಸೆಂಬ್ಲಿ ಮತ್ತು ಕೌನ್ಸಿಲ್‌ನ ಪ್ರತಿಯೊಬ್ಬ ಸದಸ್ಯನೂ ಮುಂದಿನ ಅಧಿವೇಶನದಲ್ಲಿ ಮಂಡಿಸಲ್ಪಡಲಿರುವ ಬಡ್ಜೆಟ್ಟನ್ನು ವಿರೋಧಿಸಲೇಬೇಕು. ಸರ್ಕಾರವು ಕೈಗೊಂಡಿರುವ ಬರಗಾಲ ಪರಿಹಾರ ಪ್ರಯತ್ನ ಪೇಲವ. ಜನರ ಧರ್ಮಶೀಲತೆ ಪಾಲಿನವೇ ಆಗಿರುತ್ತೆ. ಇವನ್ನು ನಿಗ್ರಹಿಸುವಲ್ಲಿ ೧೦೦ ಕ್ಕೆ ೧ ರಷ್ಟು ಕೂಡ ಸರ್ಕಾರವು ಪ್ರಯತ್ನ ಮಾಡಿರುವುದಿಲ್ಲ " ಎಂಬುದಾಗಿ ಟೀಕಿಸಿದ್ದಾರೆ.

ಅಕ್ಕಿ ಹಂಚಿಕೆ

ಮುಸ್ಲಿಂ ಮಹಾಜನರಿಂದ ಪ್ರಯತ್ನ ಡರ್ಬನ್‌ನ ಭಾರತೀಯ ಸಂಸ್ಥೆಯು ೪೦೦೦ ಪೌಂಡು ಬೆಲೆಯುಳ್ಳ ೩೭೦ ಚೀಲ ಅಕ್ಕಿಯನ್ನು ೧೦ ಸಹಸ್ರ ಪ್ರತಿಗಳಿಗೆ ಹಂಚಿಕೆಂದು ವರದಿಯಾಗಿದೆ.

ಜಪಾನಿನ ನೌಕಾ ದುರ್ಬಲತೆ

ಜಪಾನಿನ ನೌಕಾ ದುರ್ಬಲತೆಯನ್ನು ಪ್ರಸ್ತಾಪಿಸುತ್ತಾ ಅಮೇರಿಕ ನೌಕಾ ಕಾರ್ಯದರ್ಶಿ ಕ॥ ನಾಕ್ಸ್‌ರವರು ಈ ರೀತಿ ತಿಳಿಸಿದ್ದಾರೆ. " ಜಪಾನರು ಪರ್ಲ್ ಹಾರ್ಬರ್ ಘಟನೆಯಲ್ಲಿ ೬೫ ಲಕ್ಷ ಟನ್ನೇಜಿನ ಕಾರ್ಗೋ ನೌಕೆಗಳನ್ನು ಹೊಂದಿದ್ದರು. ನೂತನ ನೌಕಾ ನಿರ್ಮಾಣದಿಂದ ಮತ್ತು ಇತರ ನೌಕೆಗಳನ್ನು ವಶಪಡಿಸಿಕೊಳ್ಳುವುದರಿಂದ ೭೫ ಲಕ್ಷ ಟನ್ನೇಜಿಗೆ ಹೆಚ್ಚಿಸಿದರು. ಇತ್ತ ಗಳಲ್ಲಿ ಮಿತ್ರಪಕ್ಷದವರು ೨೫ ಲಕ್ಷ ಟನ್ನಿನ ನೌಕೆಗಳನ್ನು ಮುಳುಗಿಸಿದ್ದಾರೆ. ಇದರಲ್ಲಿ ಅಮೇರಿಕ ಸಬ್‌ಮೆರೀನುಗಳು ಶೇ॥ ... ರಷ್ಟು ನೌಕೆಗಳನ್ನು ಮುಳುಗಿಸಿವೆ. ಈ ರೀತಿ ಜಪಾನಿ ನೌಕಾಬಲವು ಬಲಹೀನವಾಗುತ್ತಿದೆ "

ಸಾಲೊಮನ್ ಪ್ರದೇಶದಿಂದ ಜಪಾನರ ಓಟ

ಜಪಾನರು ಸಾಂತಾ ಇಸಬೆಲಾ ದ್ವೀಪ ಸ್ತೋಮವನ್ನು ಖಾಲಿ ಮಾಡಿದ್ದಾರೆಂದು ತಿಳಿದುಬಂದಿದೆ. ಕೊಲಂಬಂಗಾರ ಒಂದೇ ಜಪಾನರಿಗೆ ಸಾಲೊಮನ್ಸ್‌ನಲ್ಲಿ ಉಳಿದಿರುವ ದ್ವೀಪ. ಮಿತ್ರ ಪಡೆಗಳು ಈಗಾಗಲೇ ಆ ದ್ವೀಪವನ್ನು ಹಾದುಹೋಗಿರುತ್ತವೆ. ಫಾಸ್ಟರ್ ನೇಲಿಯಾಗಿ ಮಾರ್ಪಡಿಸಿರುವ ರಿಕ್ಕಾಕೊಲ್ಲಿಯ ಪ್ರದೇಶದಲ್ಲಿ ಜಪಾನರು ಏನೂ ಬಿಟ್ಟುಬಿಟ್ಟರೆಂಬ ವರ್ತಮಾನವಿದೆ. ಇದಕ್ಕೆ ಮಿತ್ರಪಕ್ಷದ ಸಮರ್ಥನೆಯಿಲ್ಲ.

ಜರ್ಮನರ ಗುಪ್ತ ಶಸ್ತ್ರ

ಪೂರ್ವ ರಂಗದಲ್ಲಿ ಗುಪ್ತವಾಗಿಟ್ಟಿದ್ದ ೧ ನೂತನ ಆಯುಧವನ್ನು ಜರ್ಮನರು ಉಪಯೋಗಿಸಲಿರುವರೆಂದು ವರದಿಯಾಗಿದೆ

Edited, printed and published by A. R. Nagarajan at the Sadhvi Press, D Subbaiah Road, Mysore.

ಈಗ ಅನುತ್ತರುವ ಬಟ್ಟೆಗಳ ನಿರ್ಬಂಧಗಳಲ್ಲಿ ಗೌರಿ ಹಬ್ಬಕ್ಕೆ
ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ
ನೇ. ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ
ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ
ನಲ್ಲೇ ಕೊಂಡುಕೊಳ್ಳಿ.
ಬಯಲಿರಿ ನಾತ್ಸು ... ಹೊಲಿದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಬಟ್ಟೆಗಳನ್ನು ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು ಯವರ ಅಂಗಡಿಯಲ್ಲಿ ಮಾರಾಟಕ್ಕೆ ಇಟ್ಟಿದ್ದಾರೆ

ಸ್ತ್ರೀಯರ ಸೌಕರ್ಯಕ್ಕಾಗಿ
ಹಿ॥ ೧೦ ವರ್ಷಗಳಿಂದ ಪ್ರತ್ಯೇಕವಾಗಿ ... ಕೊಡುವ ಪ್ರಖ್ಯಾತಿ ಪಡೆದಿರುವ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿಪುಡಿ
ಉಪಯೋಗಿಸಿ.
ಡಿ. ಪುಟ್ಟಯ್ಯ ದಿನಸಿ ಮಂಡಿ. ದೇವರಾಜ ಮಾರ್ಕೆಟ್, ಮೈಸೂರು
ವಿ ಸೂ — ಚಿಲ್ಲರೆಯಾಗಿ ಎಂಥದ ಸಕ್ಕರೆ, ಬೆಲ್ಲ, ಸಕ್ಕರೆ, ಬಟಾಣಿ ಸಕ್ಕರೆ ಮತ್ತು ಅಕ್ಕಿ ಸದಾ ದೊರೆಯುತ್ತವೆ

EXPERT IN WORLD MEDICINES
ನೀವು ಒಂದುಸಾರಿ ನಮ್ಮಲ್ಲಿಗೆ ಬಂದರೆ ನವಚೈತನ್ಯವನ್ನು ಹೊಂದುವಿರಿ.
ಹುಕಿಂ ದೇಶದ ಚಕ್ರವರ್ತಿಗಳಿಂದಲೂ ರಾಜ ಮಹಾರಾಜರುಗಳಿಂದಲೂ ಸನ್ಮಾನ ಪಡೆದು ಪ್ರಸಿದ್ಧರಾಗಿರುವ ವೈದ್ಯನಿಪುಣರು ಈಗ ನಿಮ್ಮ ಊರಿನಲ್ಲಿ ನಿಮ್ಮ ಸೇವೆಗಾಗಿ ಸಿದ್ಧರಾಗಿದ್ದಾರೆ
ಕ್ಷಯ, ಮೇಹ, ಮೂಲವ್ಯಾಧಿ, ಪಾರ್ಶ್ವವಾಯು, ವಾತರೋಗ, ಕೆಮ್ಮು, ಗುರಲು, ಮೂತ್ರ ಮತ್ತು ವೀರ್ಯ ದೋಷಗಳು, ಅಲ್ಲದೆ ಹೊಟ್ಟೆಯ ಯಕೃತ್ ಮತ್ತು ರಕ್ತ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಖಾತರಿಯಾದ ಚಿಕಿತ್ಸೆ ಮಾಡುವ ನಿಪುಣರು
ನಷ್ಟವಾದ ವೀರ್ಯವನ್ನು ಪುನಃ ಪಡೆಯಲು ಅಪೂರ್ವ ಸಮಯ
ಚಿಕಿತ್ಸೆಯ ಕಾಲ —
ಬೆಳಿಗ್ಗೆ 9 ರಿಂದ 12 ಘಂಟೆಯವರೆಗೆ
ಸಂಜೆ 5 ರಿಂದ 9 ಘಂಟೆಯವರೆಗೆ
ನ್ಯೂ ರಾಯಲ್ ಡಿಸ್ಪೆನ್ಸರಿ
ಅಶೋಕ ರೋಡ್ (ದೊಡ್ಡ ಗಡಿಯಾರದ ಬಳಿ), ಮೈಸೂರು.

ಪ್ರಕಟಣೆ
ಆಮಶಂಕೆ, ಅತಿಸಾರಗಳನ್ನು ಖಾತರಿಯಾಗಿ ನಿವಾರಿಸುವ
ಡಿಸೆಂಟಿಸೈಡ್
ಕೇವಲ 2 ಆಣೆಗಳಿಗೆ ಅವರುಗಳ ದೊರೆಯುತ್ತೆ:
ಮೈಸೂರು :—
ಶ್ರೀ ಗುರುರಾಜ ಸ್ಟೋರ್ಸ್.
ವೆಂಕಟೇಶ ಬುಕ್ ಡಿಪೋ.
ಧನ್ವಂತರಿ ವೈದ್ಯಶಾಲಾ.
ಟಿ. ಸಿ ಸಟಿಂಜ್.
ಎಂ. ವಿ. ವೀರಣ್ಣಶೆಟ್ಟಿ ಅಂಡ್ ಸನ್
ಕಾಂತರಾಜು ಅಂಡ್ ಕೋ.
ಕೆ. ಎಸ್. ಜಾನಕಿರಾಮ್.
ಸಿ. ಎನ್. ರುಕ್ಮಯ್ಯಶೆಟ್ಟಿ, ಗೋವಿಂದಶೆಟ್ಟಿ
ಮಾಡರ್ನ್ ಆಯುರ್ವೇದಿಕ್ ಫಾರ್ಮಸಿ
ಭಾರತ ಸ್ಟೋರ್ಸ್.

ಚಿನ್ನ, ಬೆಳ್ಳಿ, ಒಡವೆಗಳಿಗೆ ಬೆಳ್ಳಿಯ ಪಾತ್ರೆಗಳಿಗೆ
ಅಶೋಕ ರೋಡ್ (ದೊಡ್ಡಪೇಟೆ) ಮೈಸೂರು

WEEKLY EDITION

ಸಂಪುಟ ೨] ಸೋಮವಾರ ೬--೯--೪೩ [ಸಂಚಿಕೆ ೪೫

ಇಟಾಲಿಯನ್ನರು ಓಡಿಹೋಗುತ್ತಿದ್ದಾರೆ

ಫ್ರಾನ್ಸಿನ ಮೇಲೆ ದಂಡಯಾತ್ರೆ ನಡೆಸುವ ಸೂಚನೆ

ಇಟಲಿಯು ಷರತ್ತಿಲ್ಲದೆ ಶರಣಾಗತವಾಗಬೇಕು

ಲೈಸೆನ್ಸ್ ರೇಡಿಯೊ ಬಗ್ಗೆ ಮೊಖದ್ದಮೆ

ಮೈಸೂರು ೬

ಲಕ್ಷ್ಮೀಪುರಂ ನಿವಾಸಿ ವಾಲಳ್ಳಿ ಶ್ರೀ ಸಿ. ಎಸ್. ಸುಬ್ರಹ್ಮಣ್ಯಂರವರು ತಮ್ಮ ಮೋಟಾರು ಗಾಡಿಯಲ್ಲಿ ಲೈಸೆನ್ಸ್ ಇಲ್ಲದೆ ರೇಡಿಯೊ ಸೆಟ್ಟನ್ನು ಇಟ್ಟುಕೊಂಡಿದ್ದರೆಂದು ಅವರ ಮೇಲೆ ಪೋ॥ ಸಿಟಿ ಮ್ಯಾ॥ ಕೋರ್ಟಿನಲ್ಲಿ ಮೊಖದ್ದಮೆ ಹೂಡಿದ್ದಾರೆ.

ಪಟ್ಟಾಭಿಷೇಕ ಮಹೋತ್ಸವ

ಶ್ರೀಮನ್ಮಹಾರಾಜರವರ ತೃತೀಯ ಪಟ್ಟಾಭಿಷೇಕದ ಪ್ರಯುಕ್ತ ಈ ದಿನ ಅರಮನೆಯ ನೌಕರರೆಲ್ಲರೂ ಸೇರಿ ಚಾಮುಂಡಿ ಜಗನ್ಮೋಹನದಲ್ಲಿ ಮಹೋತ್ಸವವನ್ನು ಆಚರಿಸಿದರು. ಶ್ರೀ ಕೆ. ಗುರುದತ್ತ್‌ರವರು ಅಗ್ರಾಸನ ವಹಿಸಿದ್ದರು.

ಪೋಲೀಸ್ ಅಧಿಕಾರಿಗಳ ಭೇಟಿ

ಸಂಸ್ಥಾನದಲ್ಲಿ ಬಟ್ಟೆ ಹತೋಟಿ ಆಜ್ಞೆಯನ್ನು ಸರ್ಕಾರದವರು ಜಾರಿಗೆ ತಂದಿರುವಷ್ಟೆ. ಈ ಸಂಬಂಧದಲ್ಲಿ ಜಿಲ್ಲಾ ಪೋಲೀಸ್ ಸೂ॥ ಶ್ರೀ ಕೇಶವಗಿರಿಯವರು ನಿನ್ನೆ ದಿವಸ ರಾಜಧಾನಿಯ ಕೆಲವು ಬಟ್ಟೆ ಅಂಗಡಿಗಳಿಗೆ ಮೊದಲು ತಿಳಿಸದೆ ಭೇಟಿಯಿತ್ತು ಪದಾರ್ಥಗಳನ್ನು ಪರಿಶೀಲಿಸಿದರು. ಈ ಹತೋಟಿ ಆಜ್ಞೆಯನ್ನು ಉಲ್ಲಂಘಿಸುವವರಿಗೆ ಕಠಿನವಾದ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದೆಂದು ಎಚ್ಚರಿಕೆಕೊಟ್ಟರು.

ವಿನಂತಿ

ರಾಜಧಾನಿಯ ಪತ್ರಿಕೋದ್ಯೋಗಿಗಳ ವಿಳಾಸಗಳನ್ನು ತಿಳಿಯದವರು ತಾವು ಪತ್ರಿಕಾ ಪ್ರಕಟಣೆ ಬಗ್ಗೆ ಕಳಿಸಿಕೊಡಬೇಕಾದ ಸಂದರ್ಭದಲ್ಲಿಯಾಗಲಿ, ಮತ್ಯಾವ ಪತ್ರವ್ಯವಹಾರಗಳನ್ನು ನಡೆಸಬೇಕಾದ ಸಂದರ್ಭದಲ್ಲಿಯಾಗಲಿ ಅಂತಹ ಪತ್ರವ್ಯವಹಾರಗಳನ್ನೆಲ್ಲಾ ದಯವಿಟ್ಟು ಲ್ಯಾನ್ಸ್‌ಡೌನ್ ಬಜಾರ್ ಮಹಡಿ ಮೇಲಿರುವ ಪತ್ರಿಕೋದ್ಯಮಿಗಳ ಕಛೇರಿಗೆ ಕಳಿಸಿಕೊಡಬೇಕೆಂದು ಸಂಘದ ಕಾರ್ಯದರ್ಶಿಯವರು ಮಹಾಜನರಲ್ಲಿ ವಿನಂತಿಸಿಕೊಂಡಿದ್ದಾರೆ.

ಶ್ರೀಮದ್ಭಾಗವತ ಪ್ರವಚನ

ಈ ದಿನದಿಂದ ಆ॥ವಿ॥ ರಂಗಾಚಾರ್ಯರವರು ಕೋಟೆ ವರಾಹಸ್ವಾಮಿ ದೇವಸ್ಥಾನದಲ್ಲಿ ೧೪ನೆ ತಾ॥ ಪೂರ್ತ ಒಂದು ವಾರ ಪರ್ಯಂತರ ದಿನವು ಬೆಳಗ್ಗೆ ೭॥ ಯಿಂದ ೯॥ ಗಂಟೆಯವರೆಗೂ ಮತ್ತು ಸಂಜೆ ೬ ರಿಂದ ೮ ರವರೆವಿಗೂ ಶ್ರೀಮದ್ಭಾಗವತ ಪ್ರವಚನ ನಡೆಸುವರು.

ಸಭೆ

ಮೈಸೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಟೌನ್ ಹಾಲಿನಲ್ಲಿ ಶ್ರೀಮತಿ ಕೇಸರಿ ಕೇಶವರವರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಸಭೆ ನಡೆಯುವುದು. ಶ್ರೀ॥ ಹೆಚ್. ಸಿ. ದಾಸಪ್ಪನವರು "ಇಂದಿನ ಆಹಾರ ಪರಿಸ್ಥಿತಿ ಮತ್ತು ಬಂಗಾಳದ ಕ್ಷಾಮ ನಿವಾರಣೆ" ಎಂಬ ವಿಷಯದಲ್ಲಿ ಭಾಷಣ ಮಾಡುವರು.

ಹುಲಿ ಕಾಟ

ಗುಂಡ್ಲುಪೇಟೆ ತಾ॥ ಹತ್ತಿರ ಒಂದು ಗ್ರಾಮದಲ್ಲಿ ಹನುಮಂತ ಎಂಬ ೧೧ ವರ್ಷದ ಹುಡುಗನು ಆತನ ತಾಯಿಯೂ ಸೌದೆ ತರುವುದಕ್ಕೆ ಹೋದಾಗ ಒಂದು ಹುಲಿಯು ಆ ಹುಡುಗನನ್ನು ಎತ್ತಿಕೊಂಡು ಹೋಗಿ ತಿಂದುಹಾಕಿತೆಂದು ವರದಿಯಾಗಿದೆ.

ಇಟಲಿಯು ಷರತ್ತಿಲ್ಲದೆ ಶರಣಾಗತವಾಗಬೇಕು

ಮಿತ್ರ ದಂಡಯಾತ್ರೆ ಫಲವಾಗಿ ಇಟಲಿಯ ಒಳ ಪರಿಸ್ಥಿತಿ ಬಹಳ ತೀಕ್ಷ್ಣವಾಗಿದೆಯೆಂದು ಹೇಳಲಾಗಿದೆ. "ನಮಗೆ ಸ್ವಲ್ಪ ಅವಕಾಶ ಕೊಟ್ಟರೆ ನಾವು ಮಿತ್ರರೊಂದಿಗೆ ಸಂಧಾನ ನಡೆಸಲು ಕಾರ್ಯಕ್ರಮ ತೆಗೆದುಕೊಳ್ಳುವೆವು. ನ್ಯಾಯಬದ್ಧವಾದ ಮತ್ತು ಉಪಯೋಗವಾದ ಸರಕಾರವೊಂದನ್ನು ಸ್ಥಾಪಿಸಲು ಸಿದ್ಧರಾಗಿದ್ದೇವೆ" ಎಂಬದಾಗಿ ರೋಂ ರೇಡಿಯೋ ಬ್ರಿಟನ್ನಿಗೆ ಸಂದೇಶ ಕಳುಹಿದೆ.

ಇಟಲಿಯು ಯಾವ ಷರತ್ತೂ ಇಲ್ಲದೆ ಶರಣಾಗತರಾಗುವವರೆಗೆ ಸಂಧಿ ನಡೆಸಲಾಗುವುದಿಲ್ಲವೆಂದು ಬ್ರಿ॥ ಸರ್ಕಾರದವರು ಬಡೋಗ್ಲಿಯೊ ಸರ್ಕಾರಕ್ಕೆ ತಿಳಿಸಿದ್ದಾರೆಂಬುದು ವರದಿಯಾಗಿದೆ.

ಫ್ರಾನ್ಸ್ ಮೇಲೆ ದಂಡಯಾತ್ರೆ ಸೂಚನೆ

ಪ್ಯಾರಿಸ್ ನಗರದ ಮೇಲೆ ಮೊನ್ನೆ ದಿವಸ ನಡೆದ ಮಿತ್ರ ಧಾಳಿಯು ಫ್ರಾನ್ಸ್ ಮೇಲೆ ದಂಡಯಾತ್ರೆ ನಡೆಯುವ ಸೂಚನೆಯೆಂದು ವ್ಯಾಚಿ ರೇಡಿಯೊ ರಾಜಕೀಯ ವೀಕ್ಷಕರು ತಿಳಿಸಿದ್ದಾರೆ.

ಇಟಲಿಯಲ್ಲಿ ಮಿತ್ರ ಸೈನ್ಯ ಮುನ್ನುಗ್ಗುತ್ತಿದೆ

ದಕ್ಷಿಣ ಇಟಲಿ ದಂಡಯಾತ್ರೆಯು [illegible] ಕಾರಿಯಾಗಿ ಸಾಗುತ್ತಿದೆ. ಮಿತ್ರ ಸೈನ್ಯಗಳು ಬೇಗ್‌ನಾಲ್ ಮತ್ತು ಪೆಲಿಟೋಗಳನ್ನು ಆಕ್ರಮಿಸಿಕೊಂಡಿವೆ. ಕೆನೆಡಿಯನ್ ಸೈನ್ಯವು ಕೆಲಬ್ರಿಯಾ ಭಾಗದಲ್ಲಿ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡು ಒಳ ಭಾಗದಲ್ಲಿ ನುಗ್ಗುತ್ತಿದ್ದಾರೆ. ಆದರೆ ಇಲ್ಲಿ ಶತ್ರು ಪ್ರತಿಭಟನೆ ಬಹಳವಾಗಿದೆಯೆಂದು ಹೇಳಲಾಗಿದೆ. ಬ್ರಿಟಿಷ್ ಸೈನ್ಯವು ಅನೇಕ ಭಾಗಗಳಲ್ಲಿ ಮುನ್ನುಗ್ಗುತ್ತಿದೆ. ೮ ಮಿತ್ರ ನೌಕೆಗಳು ಆಕ್ಸಿಸ್ ಸ್ಥಾನಗಳ ಮೇಲೆ ಅವಿಚ್ಛಿನ್ನವಾಗಿ ಧಾಳಿ ಮಾಡುತ್ತಿವೆ. ಟ್ಯಾರಂಟೋ ಬಂದರನ್ನು ಶತ್ರುಗಳು ಸಂಪೂರ್ಣವಾಗಿ ತ್ಯಜಿಸಿದ್ದಾರೆ.

ವಿಯನ್ನಾ ನಗರ ಖಾಲಿ ಮಾಡಲಾಗುವುದೆ?

ವಿಯನ್ನಾ ನಗರವನ್ನು ಖಾಲಿ ಮಾಡಬೇಕೆಂದು ಜರ್ಮನ್ ಸರ್ಕಾರ ನಿರ್ಧರಿಸಿದೆಯೆಂದೂ, ಅಲ್ಲಿರುವ ಜನರೆಲ್ಲರೂ ದಕ್ಷಿಣ ಆಸ್ಟ್ರಿಯಾ ಕಡೆಗೆ ಹೋಗಲು ಸಿದ್ಧತೆ ನಡೆಯುತ್ತಿದೆಯೆಂದೂ ವರದಿಯಾಗಿದೆ.

ಬಿ. ಎ. ಪರೀಕ್ಷೆಮಾಡಲು ೧೯ ವರ್ಷ ಪ್ರಯತ್ನ

ಕಲ್ಕತ್ತಾ ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿಯೊಬ್ಬನು ಬಿ. ಎ. ಪರೀಕ್ಷೆ ತೇರ್ಗಡೆಯಾಗಲು ೧೯ ವರ್ಷ ಪ್ರಯತ್ನ ಪಟ್ಟ ಕಷ್ಟದ ಅಂಶ ಹೊರಬಿದ್ದಿದೆ. ಆತನು ೧೮ ಸಲ ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಕೊನೆಗೆ ಈ ವರ್ಷ ಪ್ಯಾಸುಮಾಡಿದನೆಂದೂ, ಆತನಿಗೆ ಈಗ ೪೭ ವರ್ಷವೆಂದೂ, ಪರೀಕ್ಷೆ ಹಣವಾಗಿಯೇ ೧ ಸಾವಿರ ರೂ. ಕೊಟ್ಟಿರುವನೆಂದೂ ಹೇಳಲಾಗಿದೆ.

ಶ್ರೀ ಜಯಪ್ರಕಾಶರು ಪುನಃ ತಪ್ಪಿಸಿಕೊಂಡರು

ಕಾಂಗ್ರೆಸ್ ಸೋಷಿಯಲಿಸ್ಟ್ ನಾಯಕರಾದ ಶ್ರೀ ಜಯಪ್ರಕಾಶ್ ನಾರಾಯಣ್‌ರವರನ್ನು ಕೆಲವು ದಿನಗಳಲ್ಲಿ ನೇಪಾಲ್ ಪೋಲೀಸರು ದಸ್ತಗಿರಿಮಾಡಿದ್ದರೆಂದೂ, ಆದರೆ ಅವರು ಪುನಃ ತಪ್ಪಿಸಿಕೊಂಡುಹೋದರೆಂದು ಹೇಳಲಾಗಿದೆ. ಅವರನ್ನು ಹಿಡಿದು ಕೊಟ್ಟವರಿಗೆ ಬಹುಮಾನ ಕೊಡುವುದಾಗಿ ಸರ್ಕಾರ ಹಿಂದೆಯೇ ತಿಳಿಸಿದೆ.

ಖಾದಿ ಕೊಳ್ಳುವವರಿಗೆ ಕಮಿಷನ್

ನಿನ್ನೆ ದಿನದಿಂದ ೩೦ ನೇ ತಾ॥ ವರೆಗೆ ಎಲ್ಲ ಕರ್ನಾಟಕ ಚರಕ ಸಂಘದ ಖಾದಿ ಭಂಡಾರಗಳಲ್ಲಿ ಮತ್ತು ಉತ್ಪತ್ತಿ ಕೇಂದ್ರಗಳಲ್ಲಿ ಖಾದಿ ಕೊಳ್ಳುವವರಿಗೆ ರೂಪಾಯಿಗೆ ೧ ಆಣೆ ಕಮಿಷನ್ ಕೊಡಲಾಗುವುದು. ಬಿಜಾಪುರ ಬರಗಾಲದ ಕಷ್ಟ ಪೀಡಿತರಿಗೆ ಹೀಗೆ ಖಾದಿ ಕೊಳ್ಳುವುದರಿಂದ ಸಹಾಯವಾಗುವುದು. ಬೆಂಗಳೂರಿನಲ್ಲಿ ಕೋಟೆ ಖಾದಿ ವಸ್ತ್ರಾಲಯದಲ್ಲಿ ಈ ಸೌಕರ್ಯ ಜಾರಿಗೆ ಬಂದಿದೆ.

ತೃತೀಯ ಮಿತ್ರರಾಷ್ಟ್ರಗಳ ಸಮ್ಮೇಳನ

ನೆ ಬಟರ್ಲಿನ್ ೧ ಕ್ಷೇತ್ರದಲ್ಲಿ ನಡೆಯುತ್ತಿರುವ [illegible] ಕಾರ್ಯಾಚರಣೆಯಲ್ಲಿ ಸ್ವಲ್ಪ [illegible] ಗಿದಲು ಎಂದು ಸಮಿತಿಯನ್ನು ರಚಿಸಲಾಗುವುದೆಂದೂ ಅದರಲ್ಲಿ ರಷ್ಯ [illegible] ಳೂ ಇರುವರೆಂದೂ ವಾಷಿಂಗ್‌ಟನ್ನಿನ ವರದಿ ತಿಳಿಸಿದೆ. ಇದಲ್ಲದೆ ರಷ್ಯಾ, ಬ್ರಿಟನ್ ಮತ್ತು ಸಂಯುಕ್ತ ಸಂಸ್ಥಾನಗಳ ವಿದೇಶಾಂಗ ಮಂತ್ರಿಗಳ ಸಮ್ಮೇಳನವೊಂದು ನಡೆಯುವುದೆಂದು ಹೇಳಲಾಗಿದೆ. ಪ್ರೆಸಿಡೆಂಟ್ ರೂಸ್ವೆಲ್ಟ್, ಮಿ॥ ಚರ್ಚಿಲ್ ಮತ್ತು ಮಾರ್ಷಲ್ ಸ್ಟಾಲಿನ್‌ರವರು ಭೇಟಿ ಮಾಡಲು ಹಂಚಿಕೆ ನಡೆದಿದೆಯೆಂದು ವರದಿಯಾಗಿದೆ.

ಹುಚ್ಚಾಸ್ಪತ್ರೆಯಲ್ಲಿ ಫ್ರೆಂಚ್ ಮಾಜಿ ಪ್ರಧಾನಿ

ಫ್ರೆಂಚ್ ಮಾಜಿ ಪ್ರಧಾನಿಗಳಾಗಿದ್ದ ಎಡ್ವರ್ಡ್ ಹೆರಿಯಟ್ ಎಂಬುವರನ್ನು ಹುಚ್ಚಾಸ್ಪತ್ರೆಗೆ ದಾಖಲ್ಮಾಡಲಾಗಿದೆಯೆಂದು ಜರ್ಮನ್ ವಾರ್ತೆ ತಿಳಿಸುತ್ತದೆ. ಉತ್ತರ ಆಫ್ರಿಕಾದಲ್ಲಿ ಮಿತ್ರರವರೊಡನೆ ಸಂಪರ್ಕ ನಡೆಸಲು ಯತ್ನಿಸಿದರೆಂದು ಅವರನ್ನು ಜರ್ಮನರು ಬಂಧಿಸಿದ್ದರು.

ಕೌಂಟ್ ಸಿಯಾನೊ ದಸ್ತಗಿರಿ

ರೋಮ್ ನಗರದಿಂದ ತಪ್ಪಿಸಿಕೊಂಡು ಹೋದ ಕೌಂಟ್ ಸಿಯಾನೊರವರನ್ನು ಇಟಾಲಿಯನ್ನರು ದಸ್ತಗಿರಿ ಮಾಡಿರುವರೆಂದು ಜರ್ಮನ್ ವಾರ್ತೆ ತಿಳಿಸುತ್ತದೆ.

ಸಾಲಮೋನಾದಲ್ಲಿ ಭೀಕರ ಕದನ

ನ್ಯೂಗಿನಿಯಾದಲ್ಲಿ ಜಪಾನೀ ಸೈನ್ಯದ ಬಲವಾದ ಕೇಂದ್ರವಾದ ಸಾಲಮೋವಾದಲ್ಲಿ ಭೀಕರ ಕದನ ನಡೆದು ಜಪಾನೀ ಸೈನ್ಯಕ್ಕೆ ಅಪಾರ ನಷ್ಟವುಂಟಾಯಿತೆಂದು ಹೇಳಲಾಗಿದೆ.

ನ್ಯೂ ಬ್ರಿಟನ್ ತೀರ ಪ್ರದೇಶದಲ್ಲಿ ೧೩ ಜಪಾನೀ ದೋಣಿಗಳನ್ನು ಮುಳುಗಿಸಲಾಯಿತು. ಚೆಂಗ್‌ಕಿಂಗ್‌ನ ವರದಿಯ ಪ್ರಕಾರ [illegible] ಜಪಾನೀ ಸೈನ್ಯ ಕೇಂದ್ರಗಳ ಮೇಲೆ ಮಿತ್ರ ವಿಮಾನಗಳು [illegible] ದಾಳಿ ನಡೆಸಿವೆ.

[illegible] ಯಾದ ಜಪಾನೀ [illegible] ಸುಧಾರಿಸಿಕೊಳ್ಳುವ [illegible] ವ್ಯವಸ್ಥೆ [illegible] ನಡೆಸುತ್ತಿವೆ.

ಕ್ರಿಕೆಟ್ ಪಂದ್ಯ

ಮೈಸೂರು ಸ್ಟೇಟ್ ಕ್ರಿಕೆಟ್ ಲೀಗಿನಲ್ಲಿ ನಿನ್ನೆ ಬೆಂಗಳೂರು ಸೆಂಟ್ರಲ್ ಕಾಲೇಜಿಗೂ ಮೈಸೂರು ಜಿಂಖಾನಾದವರಿಗೂ ಪಂದ್ಯ ನಡೆದು ಡ್ರಾ ಆಯಿತು.

ಸೆಂಟ್ರಲ್ ಕಾಲೇಜು ೭ ವಿಕೆಟ್ಟುಗಳಿಗೆ ೨೦೪ ರನ್ನುಗಳು. (ಭಾಸ್ಕರನ್ [illegible], [illegible] ೩೭, [illegible] ಎಂ. [illegible] ರಿಗೆ [illegible] ವಿಕೆಟ್ಟುಗಳು)

ಜಿಂಖಾನಾ ೮ ವಿಕೆಟ್ಟುಗಳಿಗೆ [illegible] ಗಳು. ([illegible] ಎಸ್. [illegible] ರನ್ನುಗಳಿಗೆ [illegible] ವಿಕೆಟ್ಟುಗಳು, [illegible] ರನ್ನುಗಳಿಗೆ ೩ ವಿಕೆಟ್ಟುಗಳು)

ಪೂರ್ಣ ಸ್ವಾತಂತ್ರ್ಯ ಅವಶ್ಯಕ

ಅಖಿಲ ಭಾರತ ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷರಾದ ಸರ್ ಎಂ. ವಿಶ್ವೇಶ್ವರಯ್ಯನವರು ಸಂಘದ ಕೇಂದ್ರ ಸಮಿತಿ ಸಭೆಯಲ್ಲಿ ಬೊಂಬಾಯಿನಲ್ಲಿ ಮಾತನಾಡುತ್ತ ಯುದ್ಧ ಮುಗಿದಮೇಲೆ ಭರತಖಂಡದಲ್ಲಿ ಅನುಸರಿಸಲು ಬೇಕಾದ ಪುನರ್ವ್ಯವಸ್ಥಿತ ಕಾರ್ಯ ಮಾರ್ಗವನ್ನು ಗೊತ್ತುಮಾಡಲು ತಕ್ಷಣ ಪ್ರಯತ್ನ ನಡೆಸಬೇಕಾದ್ದು ಅತ್ಯಗತ್ಯವೆಂದರು. 'ಪೂರ್ಣ ಜವಾಬ್ದಾರಿ ಸರ್ಕಾರ ದೊರೆತ ಹೊರತು ನಮ್ಮ ಎಲ್ಲ ದೊಡ್ಡ ಸಮಸ್ಯೆಗಳನ್ನು ತೃಪ್ತಿಕರವಾಗಿ ಬಿಡಿಸಲು ಸಾಧ್ಯವೇ ಇಲ್ಲ' ಎಂದರು ಸರ್ ಎಂ. ವಿಶ್ವೇಶ್ವರಯ್ಯನವರು.

೧,೦೦೦ ಕೋಟಿ ರೂಗಳ ಬಂಡವಾಳ ಹಾಕಿ ೫ ವರ್ಷಗಳಲ್ಲಿ ಭಾರಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಭರತಖಂಡದಲ್ಲಿ ಉತ್ಪತ್ತಿಯಾಗುವ ವಸ್ತುಗಳ ನಿಖರವಾದ ಅಂಕಿಗಳನ್ನು ಸಂಗ್ರಹಿಸಬೇಕು. ನಿರ್ಬಂಧ ಶಿಕ್ಷಣವನ್ನು ಆಚರಣೆಗೆ ತರಬೇಕು. ಬೇಗನೆ ಭಾರತದಲ್ಲಿ ರಾಷ್ಟ್ರೀಯ ಸರ್ಕಾರ ಸ್ಥಾಪನೆಯಾಗಬೇಕೆಂಬ ಭಾವನೆಯೇ ತಮ್ಮ ಈ ಎಲ್ಲ ಸಲಹೆಗಳಿಗೂ ಆಧಾರವಾಗಿದೆಯೆಂದೂ, ಈ ವಿಚಾರದಲ್ಲಿ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಪುನರ್ನಿರ್ಮಾಣ ಸಮಿತಿಗಾಗಲಿ, ಅದರ ಅಧ್ಯಕ್ಷರಿಗಾಗಲಿ ತಿಳಿಸಿ ಸಮಿತಿಯು ಅವಶ್ಯಕವಾಗಿ ಮುಂದಿನ ಕಾರ್ಯಮಾರ್ಗವನ್ನು ಗೊತ್ತುಮಾಡುವಂತೆ ನೋಡಿಕೊಳ್ಳಬೇಕೆಂದು ತಾವು ಭಾವಿಸುವುದಾಗಿಯೂ ತಿಳಿಸಿದರು.

"ಸಲಹೆಗಳಿಗೂ, ಅಭಿವೃದ್ಧಿ ಕಾರ್ಯಗಳಿಗೂ ಮುಖ್ಯವಾಗಿ ಆರ್ಥಿಕ ವ್ಯವಸ್ಥೆಯಲ್ಲಿ ಆಗಿನ ಸರ್ಕಾರದ [illegible] ತ್ತಿಲ್ಲ. ಇದು ನಿಜವೆಂದು ಇಂಡಿಯಾ ಸರ್ಕಾರವೇ ಒಪ್ಪುತ್ತದೆಂದು ನಾನು ಭಾವಿಸುತ್ತೇನೆ. ಯುದ್ಧಕ್ಕೆ ಮುಂಚೆ ಸಾಮೂಹಿಕ ಶಿಕ್ಷಣ ಪ್ರಗತಿ, ದೊಡ್ಡ ದೊಡ್ಡ ಕೈಗಾರಿಕೆ ಸ್ಥಾಪಿಸುವ ಕಾರ್ಯ ಇದಕ್ಕೆ ಸರ್ಕಾರ ಬುದ್ಧಿಪೂರ್ವಕವಾಗಿ ಅಡಚಣೆ ತಂದೊಡ್ಡಿತು. ಸುಮಾರು ೨೫ ಕೋಟಿ ಪ್ರಜೆಗಳನ್ನು ಸರ್ಕಾರದವರು ಇಂದು ಅನಕ್ಷರಸ್ಥರಾಗಿ ಉಳಿಸಿದ್ದಾರೆ. ಭರತಖಂಡದಲ್ಲಿಂದು ಕೈಗಾರಿಕೆಗಳಿಂದ ಬರುವ ಆದಾಯ ತಲೆಗೆ ೧೫ ರೂ. ಮಾತ್ರ! ಬ್ರಿಟನ್ನಿನಲ್ಲಿ ಕೈಗಾರಿಕೆಗಳಿಂದ ತಲೆ ಒಂದಕ್ಕೆ ೮೨೦ ರೂ. ಅಮೆರಿಕದಲ್ಲಿ ೧,೫೦೦ ರೂ. ಬರುತ್ತಿದೆ. ಅತ್ಯಾವಶ್ಯಕ ವಸ್ತುಗಳ ಮತ್ತು ಕೂಲಿಗಾರರ ಸಹಾಯದಿಂದ ನಾವು ಯುದ್ಧದಲ್ಲಿ ಕೈಗೂಡಿರುವ [illegible] ಈ ಸಂಗ್ರಾಮದಲ್ಲಿ ನಾವು ಮಾಡಿದ ಸಹಾಯಕ್ಕೆ ತಕ್ಕ ಸ್ಥಾನವನ್ನು ಭಾರತೀಯರಿಗೆ ಕೊಟ್ಟಿಲ್ಲ.

ಪುನರ್ನಿರ್ಮಾಣ ಕಾರ್ಯ

"ಸಂಗ್ರಾಮಾನಂತರ ಪುನರ್ವ್ಯವಸ್ಥೆ ಕಾರ್ಯದಲ್ಲಿ ಇಂಡಿಯಾ ಸರ್ಕಾರದವರು ಏಕ ಮುಖವಾದ ಕಾರ್ಯಕ್ರಮವೇನನ್ನೂ ಅನುಸರಿಸುತ್ತಿಲ್ಲ. ಇದು ತೀರ ವಿಷಾದಕರ. [illegible] ಅರ್ಥಿಕ ನಿಪುಣರ ಸಮಿತಿ [illegible] ನನ್ನೂ [illegible] ಉಪಸಮಿತಿಗಳನ್ನೂ ಸರ್ಕಾರವು ನೇಮಿಸಿತು. ಅವರ ಕಳೆದ ಕೆಲವು ಮಾಸಗಳಲ್ಲಿ ಹೊಸ ಸಮಿತಿ ಒಂದು ರೂಪುಗೊಂಡಿದೆ. ಇದರಲ್ಲಿ ವೈಸ್‌ರಾಯರ ಮಂತ್ರಿಗಳಿದ್ದಾರೆ. ಪುನರ್ನಿರ್ಮಾಣ ಕಾರ್ಯಕ್ಕೆ ಸ[illegible]

ಬಿಟ್ಟ ಎಲ್ಲ ಪ್ರಶ್ನೆಗಳನ್ನು ಅವರೇ ನಿರ್ಧರಿಸುವರಂತೆ. ಹಳೆಯ ಸಮಿತಿಯು ಏನೂ ಕೆಲಸ ಮಾಡಿದಂತೆ ತೋರಲಿಲ್ಲ. ಹಿಂದಿನ ಸಮಿತಿ ಏಕೆ ಕೆಲಸಮಾಡಲಿಲ್ಲವೆಂದು ಸರ್ಕಾರ ವಿವರಣೆ ಕೊಡಲಿಲ್ಲ. ಅದರಲ್ಲಿ ಹೆಚ್ಚು ದೋಷಗಳಿದ್ದುವೆಂದು ನನಗೆ ತೋರುತ್ತದೆ. ಸದಸ್ಯರಿಗೆ ಸರಿಯಾದ ಜವಾಬ್ದಾರಿ ವಹಿಸಿಕೊಟ್ಟಿರಲಿಲ್ಲ. ರಹಸ್ಯವಾಗಿ ಕೆಲಸಮಾಡಬೇಕೆಂದು ಅವರಿಗೆ ಸೂಚನೆ ಕೊಡಲಾಯಿತು. ಈ ಪುನರ್ವ್ಯವಸ್ಥೆ ಕಾರ್ಯದಲ್ಲಿ ಕೈಗಾರಿಕೆಗಳ ವಿಚಾರವೇ ಅತಿ ಮುಖ್ಯವಾದದ್ದು. ಅದನ್ನು ಪೂರ್ಣವಾಗಿ ಸಮಿತಿಯವರು ಕೈಬಿಟ್ಟರು. ಹೊಸ ಸಮಿತಿಯವರು ಯಾವ ಕೆಲಸ ಮಾಡುವರೆಂಬುದರ ಬಗ್ಗೆ ಸಾರ್ವಜನಿಕರು ಸರಿಯಾದ ವಿವರಣೆಯನ್ನು ನಿರೀಕ್ಷಿಸುತ್ತಾರೆ. ಬೇಗನೆ ಏನೂ ಭರವಸೆ ಕೊಡದೆ ಇದ್ದರೆ, ಸಂಗ್ರಾಮದ ಹಿಂದೆ ಇದ್ದಂತಹ ಪರಿಸ್ಥಿತಿಗೇ ದೇಶವನ್ನು ಒಯ್ಯುವ ಹಂಚಿಕೆಯಿದೆ ಎಂಬ ಭಯ ಜನರಿಗೆ ಉಂಟಾದೀತು.

ಸರ್ ಎಂ.ವಿ. ಯವರು ತಮ್ಮ ಭಾಷಣವನ್ನು ಮುಗಿಸುತ್ತಾ "ದೇಶದಲ್ಲಿ ಬುದ್ಧಿವಂತರನೇಕರಿದ್ದಾರೆ. ಪುನರ್ವ್ಯವಸ್ಥೆಗಾಗಿ ಅಪೇಕ್ಷಿತ ಸಹಾಯ ಪಡೆಯಬಹುದು. ಭಾರತದಲ್ಲಿರುವಷ್ಟು ಮಂದಿ ವಿಶ್ವವಿದ್ಯಾನಿಲಯದ ಪದವೀಧರರು ಇತರ ಬ್ರಿಟಿಷ್ ದ್ವೀಪಗಳಲ್ಲಿಲ್ಲ. ಹೀಗಿರುವ ಪರಿಸ್ಥಿತಿಯಲ್ಲಿ ಪುನರ್ನಿರ್ಮಾಣ ಯೋಜನೆಯನ್ನು ರೂಪಿಸುವ ಮತ್ತು ಆಚರಣೆಗೆ ತರುವ ಕಾರ್ಯದಲ್ಲಿ ಭಾರತ ಪ್ರತಿನಿಧಿಗಳು ಹೆಚ್ಚು ಹೆಚ್ಚಾಗಿ ಸಹಕರಿಸದೇ ಇರುವುದಕ್ಕೆ ಕಾರಣವೇನೂ ಇಲ್ಲ" ಎಂದರು.

ನೂತನ ಬಟ್ಟೆ ತಯಾರಿಕೆ

ನೂಲುವುದು ಅಥವಾ ನೇಯುವುದು ಇಲ್ಲದೆ ಹತ್ತಿ ಬಟ್ಟೆಗಳನ್ನು ತಯಾರಿಸುವಂತಹ ಒಂದು ನೂತನ ಕ್ರಮವನ್ನು ಅಮೇರಿಕಾದಲ್ಲಿ ಕಂಡುಹಿಡಿಯಲಾಗಿದೆಯೆಂದು ಹೇಳಲಾಗಿದೆ. ಈ ನೂತನ ಸಂಶೋಧನೆಯಿಂದ ಟೇಬಲ್ ಕ್ಲಾತ್, ಟವಲ್ಸ್ ಮತ್ತು ಬೆಡ್‌ಶೀಟುಗಳನ್ನು ತಯಾರಿಸಲಾಗುತ್ತಿದೆ.

ನೂತನ ಬೆಂಕಿ ಕಡ್ಡಿ

ನೀರಿನಲ್ಲಿ ಕೆಲವು ಗಂಟೆಗಳ ಕಾಲ ಇಟ್ಟಿದ್ದರೂ ಕೂಡ ಕೆಡದಂತಹ ಬೆಂಕಿಕಡ್ಡಿಗಳನ್ನು ಅಮೇರಿಕಾದಲ್ಲಿ ತಯಾರಿಸಲಾಗಿದೆ.

ಟಿ. ಸಿ. ನಟರಾಜ್
ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಒಬ್ಬ ಸಮರ್ಥ ಡಾಕ್ಟರಿಂದ ಮಾಡಲ್ಪಡುತ್ತದೆ.

ಸ್ಟಾಂಡರ್ಡ್ ಅಲೋಪತಿಕ್, ಹೋಮಿಯೋಪತಿಕ್ ಔಷಧಿಗಳೆಲ್ಲವೂ ಸದಾ ದೊರೆಯುತ್ತವೆ

ಚಿತ್ರಮಂದಿರದ ಮಾಲೀಕರ ತಾಪತ್ರಯ

ಇಂಡಿಯಾ ಸರ್ಕಾರ ಈಗೊಂದು ಹೊಸ ಶಾಸನ ಮಾಡಿದೆ. ಇದುವರೆಗೂ ಚಿತ್ರಮಂದಿರಗಳಲ್ಲಿ ಯುದ್ಧವಾರ್ತೆಯ ರೀಲುಗಳನ್ನು ತೋರಿಸುತ್ತಿದ್ದರಷ್ಟೆ. ಮೊದಲು ಅವುಗಳನ್ನು ಮಂದಿರದ ಮಾಲೀಕರು ತಮಗೆ ಇಷ್ಟಬಂದರೆ ಮಾತ್ರ ತೋರಿಸಬಹುದಾಗಿತ್ತು. ನಂತರ ಕಡ್ಡಾಯವಾಗಿ ಪ್ರದರ್ಶಿಸಲೇಬೇಕೆಂಬ ಅಪ್ಪಣೆ ಬಂತು. ಚಿತ್ರಮಂದಿರದ ಮಾಲೀಕರೂ ಅದಕ್ಕೆ ಒಪ್ಪಿದರು. ಎಲ್ಲ ಚಿತ್ರಮಂದಿರಗಳಲ್ಲೂ ಅವನ್ನು ತೋರಿಸುತ್ತಿದ್ದರು. ಈಗ ಇನ್ನೂ ಒಂದು ಅಪ್ಪಣೆ ಹೊರಟಿದೆ. ಇದರ ಪ್ರಕಾರ ಇಷ್ಟುದಿನ ಪ್ರದರ್ಶನಕ್ಕೆ ಬಿಟ್ಟಿ ಸಿಗುತ್ತಿದ್ದ ಈ ವಾರ್ತಾ ರೀಲುಗಳಿಗೆ ಇನ್ನು ಮುಂದೆ ಚಿತ್ರಮಂದಿರದ ಮಾಲೀಕರು ದುಡ್ಡು ಕೊಡಬೇಕು. ದುಡ್ಡು ಕೊಟ್ಟರೂ ಪ್ರದರ್ಶನದ ಸ್ವಾತಂತ್ರ್ಯ ಅವರಿಗೆ ಸೇರಿಲ್ಲ, ಸರ್ಕಾರದ ಅಪ್ಪಣೆ ಅಂತೂ ಸರ್ವತಂತ್ರ ಸ್ವತಂತ್ರಗಳಾಗಿದ್ದ ಸಿನಿಮಾ ಮಾಲೀಕರಿಗೂ ಈಗ ಈ ಅಧಿಕಾರದ ಬಿಸಿ ತಟ್ಟಿದೆ.

ತಯಾರಿಕರಿಗೊಂದು ಬಾಣ

ಮಾಲೀಕರಿಗೆ ಈ ಅಸ್ತ್ರಪ್ರಯೋಗವಾದರೆ ತಯಾರಕರಿಗೆ ಮತ್ತೊಂದು ಅಸ್ತ್ರಪ್ರಯೋಗ. ಈ ಸಾರಿ ಸರ್ಕಾರದವರು ಚಿತ್ರ ತಯಾರಕರಲ್ಲಿ ಕೆಲವರನ್ನು ಆರಿಸಿ, ಅವರು ಯುದ್ಧ ಪ್ರಚಾರಕ್ಕಾಗಿ ಚಿತ್ರಗಳನ್ನು ತಯಾರಿಸಬೇಕೆಂದೂ, ಅದಕ್ಕಾಗಿ ತಾವು ಒಪ್ಪಿದ ವಸ್ತುಗಳನ್ನು ಆರಿಸಬೇಕೆಂದೂ, ಆ ಬಳಿಕ ತಾವು ಅದಕ್ಕೆಲ್ಲಾ ಬೇಕಾದಷ್ಟು ಫಿಲಂ ಕೊಡುವುದಾಗಿಯೂ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಇಟಲಿಯಲ್ಲಿ ಜರ್ಮನ್ ಸೈನ್ಯಶೇಖರಣೆ

ಉತ್ತರ ಇಟಲಿ ಮತ್ತು ದಕ್ಷಿಣ ಫ್ರಾಂಸ್ ಮತ್ತು ಕೆಲಬ್ರಿಯಾಗಳಲ್ಲಿ ಜರ್ಮನರು ಹೆಚ್ಚಾಗಿ ಸೈನ್ಯ ಶೇಖರಿಸಿರುವರೆಂದು ಹೇಳಲಾಗಿದೆ.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ ೪೦ ಮಾತ್ರೆಗಳ ಪೆಟ್ಟಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ, 184, ಜೈನಾ ಬಜಾರುರಸ್ತೆ, ಮದರಾಸು.

ಏಜೆಂಟರು : ಅಶೋಕಾ ಫಾರ್ಮಸಿ ಹಳೇಮೈಸೂರುಬ್ಯಾಂಕು ರಸ್ತೆ, ಮೈಸೂರು

EXPERT IN WORLD MEDICINES

ನೀವು ಒಂದುಸಾರಿ ನಮ್ಮಲ್ಲಿಗೆ ಬಂದರೆ ನವಚೈತನ್ಯವನ್ನು ಹೊಂದುವಿರಿ.

ತುರ್ಕಿ ದೇಶದ ಚಕ್ರವರ್ತಿಗಳಿಂದಲೂ ರಾಜ ಮಹಾರಾಜರುಗಳಿಂದಲೂ ಸನ್ಮಾನ ಪಡೆದು ಪ್ರಸಿದ್ಧರಾಗಿರುವ ವೈದ್ಯನಿಪುಣರು

ಈಗ ನಿಮ್ಮ ಊರಿನಲ್ಲಿ ನಿಮ್ಮ ಸೇವೆಗಾಗಿ ಸಿದ್ಧರಾಗಿದ್ದಾರೆ

ನಿಶ್ಶಕ್ತಿ, ಮೇಹ, ಮೂಲವ್ಯಾಧಿ, ಪಾರ್ಶ್ವವಾಯು, ವಾತರೋಗ, ಕೆಮ್ಮಲು, ಗೂರಲು, ಮೂತ್ರ ಮತ್ತು ವೀರ್ಯ ದೋಷಗಳು, ಅಲ್ಲದೆ ಹೊಟ್ಟೆಯ ಯಕೃತ್ ಮತ್ತು ರಕ್ತ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಖಾತರಿಯಾದ ಚಿಕಿತ್ಸೆಮಾಡುವ ನಿಪುಣರು

ನಷ್ಟವಾದ ವೀರ್ಯವನ್ನು ಪುನಃ ಪಡೆಯಲು ಅಪೂರ್ವ ಸಮಯ

ಚಿಕಿತ್ಸೆಯ ಕಾಲ—

ಬೆಳಗ್ಗೆ 9 ರಿಂದ 12½ ಘಂಟೆಯುವರೆಗೆ
ಸಂಜೆ 5 ರಿಂದ 9 ಘಂಟೆಯುವರೆಗೆ

ನ್ಯೂ ರಾಯಲ್ ಡಿಸ್ಪೆನ್ಸರಿ

ಅಶೋಕ ರೋಡ್ (ದೊಡ್ಡ ಗಡಿಯಾರದ ಬಳಿ), ಮೈಸೂರು.

ಈಗ ಆಗುತ್ತಿರುವ ಬಟ್ಟೆಗಳ ಕಿರಿಕಿರಿಗಳಲ್ಲಿ

ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಜಾಯಲರಿ ಮತ್ತು ಎಲ್ಲಾ ಸ್ಟೈಲಿನಲ್ಲೂ ಹೊಸ ಮಾದರಿಯಲ್ಲಿ ಹೊಲಿದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು ಯವರ ಅಂಗಡಿಯಲ್ಲಿ ಹೊಸದಾಗಿ ತೆರೆದಿದ್ದಾರೆ.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಬೆಲ್ಲ, ಬೂರಾ ಸಕ್ಕರೆ ಸಿಕ್ಕುತ್ತದೆ. ಇಲ್ಲೂ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿ ಮತ್ತು ೧ ರೂ. ಗೆ ೨ ಸೇರು ರವೆ ದೊರೆಯುತ್ತೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

೬-೯-೪೩ ರಿಂದ ೧೨-೯-೪೩ ರವರೆಗೆ

ಮೇಷ...ಸೌಖ್ಯ, ಧನಾಗಮ, ಸ್ಥಾನ ಭ್ರಷ್ಟನಾಗುವ ಕುರುಹು, ಆರೋಗ್ಯ ಕೆಡುವ ಸಂಭವ, ಶತ್ರುಗಳಿಂದ ತೊಂದರೆ, ವ್ಯಯ ಪ್ರಸಂಗ, ಚಿಂತೆ, ಸೌಖ್ಯಾಭಿವೃದ್ಧಿ ಸಾಧಾರಣ.

ವೃಷಭ...ವೃಥಾ ಕಲಹ, ಸ್ತ್ರೀ ಸುಖ, ಕಾರ್ಯ ಜಯ, ಜನಗಳಲ್ಲಿ ವಿರೋಧ, ದೇಹಾರೋಗ್ಯ ಚೆನ್ನಾಗಿರುತ್ತೆ. ಧನಾಗಮ. ಕಾರ್ಯಸಿದ್ಧಿ, ಉತ್ತಮ.

ಮಿಥುನ...ಕಾರ್ಯವಿಘ್ನ, ರೋಗಬಾಧೆ, ಸಂತಾಪ, ಪುತ್ರನ ದೇಹಾಲಸ್ಯವಾಗುವ ಸಂಭವ, ಸ್ತ್ರೀ ಸುಖ ಚೆನ್ನಾಗಿದೆ, ಭೂಲಾಭವಾಗುವ ಯೋಗವಿದೆ, ಸಂಪತ್ತು ವೃದ್ಧಿ.

ಕರ್ಕ...ಸುಖ, ಸಂಪತ್ತು, ಜನರಲ್ಲಿ ವಿರೋಧ, ಸ್ತ್ರೀ ಬಾಧೆ, ಪುತ್ರರಿಗೆ ತೊಂದರೆ, ಚಿಂತೆ. ಪ್ರಯಾಣ ಮಾಡುವ ಸಂಭವ, ಈ ವಾರ ಅಷ್ಟು ಅನುಕೂಲವಿಲ್ಲ.

ಸಿಂಹ...ಕಾರ್ಯವಿಘ್ನ, ವೃಥಾ ತಿರಸ್ಕಾರ, ಚಿಂತೆ, ಕಲಹ, ಆರೋಗ್ಯ ಕೆಡುವ ಸಂಭವ, ಹೆಂಗಸರಿಂದ ತೊಂದರೆ, ಪುತ್ರ ಸುಖ, ಈ ವಾರ ಚೆನ್ನಾಗಿದೆ

ಕನ್ಯಾ....ಶತ್ರುಗಳನ್ನು ಜಯಿಸುವಿರಿ, ಮಿತ್ರರ ಆಗಮನ, ಮೃತ್ಯುಭಯ, ಪ್ರಯತ್ನದ ಕಾರ್ಯದಲ್ಲಿ ಜಯ, ವ್ಯಥೆ, ಆರೋಗ್ಯ ಕೆಡಬಹುದು, ಈ ವಾರ ಸಾಧಾರಣ ಪರಿಸ್ಥಿತಿ.

ತುಲಾ...ಧನಲಾಭವಾಗುವುದು, ಪುತ್ರರು ಅನುಕೂಲ, ಮಾನಹಾನಿಯಾಗುವ ಸಂಭವವಿದೆ ಪತ್ನಿಗೆ ಕಷ್ಟ, ಧನಾಗಮ, ಕಾರ್ಯದಲ್ಲಿ ಜಯ.

ವೃಶ್ಚಿಕ...ಶತ್ರುಗಳಿಂದ ತೊಂದರೆ ಬರುವ ಸಂಭವವಿದ್ದರೂ, ಜಯ ಲಭಿಸುವುದು, ಸಂಪತ್ತು, ಸುಖ, ಧನಹಾನಿ, ಭೂಲಾಭ, ಈ ವಾರ ಉತ್ತಮವಾಗಿದೆ.

ಧನುಸ್ಸು....ಶತ್ರು ಭಯ, ಧನಹಾನಿ, ಅಪಜಯ, ಸ್ಥಾನಪಲ್ಲಟವಾಗುವ ಸಂಭವವಿದೆ. ಚಿಂತೆ, ಭಯ, ಈ ವಾರ ಸ್ವಲ್ಪ ಎಚ್ಚರಿಕೆಯಿಂದಿರುವುದು ಉತ್ತಮ.

ಮಕರ... ಭೂಲಾಭ, ಆರೋಗ್ಯ ಚೆನ್ನಾಗಿರುತ್ತೆ. ಕಾರ್ಯಸಫಲವಾಗುವುದು, ಮಾನಹಾನಿಯಾಗುವ ಸಂಭವವಿದೆ, ಮನೋವ್ಯಥೆ, ಸಾಧಾರಣ ಫಲ

ಕುಂಭ....ಶತ್ರುಗಳಿಂದ ಸೋಲುವಿರಿ, ದುಃಖ, ಭಯ, ಧನಹಾನಿ, ಜನರಲ್ಲಿ ವಿರೋಧ, ಕಾರ್ಯವಿಘ್ನ, ಐಶ್ವರ್ಯ ಪ್ರಾಪ್ತಿಯೋಗ, ದೇಹಸೌಖ್ಯ ಚೆನ್ನಾಗಿರುವುದು. ಮಧ್ಯಮ ಫಲ.

ಮೀನ...ಕಾರ್ಯಸಿದ್ಧಿ, ದೇಹಸೌಖ್ಯ, ಧನಪ್ರಾಪ್ತಿ, ಶತ್ರುಜಯ, ಸ್ವಜನ ವಿರೋಧ, ಸ್ತ್ರೀಬಾಧೆ, ಪುತ್ರಲಾಭ, ಪೀಡೆ, ಹಾನಿ. ಈ ವಾರ ಚೆನ್ನಾಗಿದೆ

ಸ್ವೀಕಾರ ಮತ್ತು ವಿಮರ್ಶೆ

ಮೈಸೂರಿನಲ್ಲಿರುವ ಆಯುರ್ವೇದ ವಿದ್ವಾನ್ ಡಾ|| ಎಸ್.ಎಸ್. ಸುಬ್ರಹ್ಮಣ್ಯಶಾಸ್ತ್ರಿಯವರು ರಚಿಸಿರುವ '**ಬಸರಿ ಮತ್ತು ಬಾಣಂತಿ ತನದ ಕೈಪಿಡಿ**' ಎಂಬ ಗ್ರಂಥವು ನಮ್ಮ ಹಸ್ತಗತವಾಗಿದೆ.

ಮೇಲ್ಕಂಡ ಗ್ರಂಥದಲ್ಲಿ ಡಾ|| ಶಾಸ್ತ್ರಿಯವರು ಪುರಾತನ ಗ್ರಂಥಗಳ ಆಧಾರದಿಂದ ಅನೇಕ ಉಪಯುಕ್ತವಾದ ಯಂತ್ರ, ಮಂತ್ರ ಮತ್ತು ಆಯುರ್ವೇದ ಚಿಕಿತ್ಸಾ ಕ್ರಮಗಳನ್ನು ಬರೆದಿರುತ್ತಾರೆ. ಪ್ರಕೃತ ಪರಿಸ್ಥಿತಿಯಲ್ಲಿ ಪಾಶ್ಚಾತ್ಯ ವೈದ್ಯ ಚಿಕಿತ್ಸೆ ಮತ್ತು ಔಷಧಿಗಳು ದೊರೆಯುವುದು ಕಷ್ಟವಾಗಿರುತ್ತೆ. ಇಂಥಾ ಸನ್ನಿವೇಶದಲ್ಲಿ ಡಾ|| ಶಾಸ್ತ್ರಿಯವರ ಮೇಲ್ಕಂಡ ಗ್ರಂಥದಿಂದ ಸಾರ್ವಜನಿಕರು ಉಪಯೋಗಿಸುವುದರಲ್ಲಿ ಅನೇಕ ಚಿಕಿತ್ಸೆಗಳನ್ನು ಸ್ವತಃ ಮಾಡಿಕೊಳ್ಳಲು ಅನುಕೂಲವಾಗುತ್ತೆ.

ಗ್ರಂಥದ ಬೆಲೆ, ಸಾಧಾರಣ ಪ್ರತಿ ರೂ. ೧; ಉತ್ತಮ ಪ್ರತಿ ರೂ. ೧-೮, ಕಾಗದ ಮತ್ತು ಮುದ್ರಣದ ವೆಚ್ಚವು ಬಹಳ ಏರುಪೇರಿದುದರಿಂದ ಈ ಗ್ರಂಥದ ಬೆಲೆಯು ವಿಚಾರದಿಂದ ಆಕ್ಷೇಪಣೆಗೆ ಅವಕಾಶವಿಲ್ಲ. ಸಾರ್ವಜನಿಕರು ಮೇಲ್ಕಂಡ ಗ್ರಂಥದ ಸಂಪೂರ್ಣ ಪ್ರಯೋಜನ ಹೊಂದುವರೆಂದು ಆಶಿಸುತ್ತೇವೆ, ಅಲ್ಲದೆ ಡಾ|| ಸುಬ್ರಹ್ಮಣ್ಯಶಾಸ್ತ್ರಿಗಳವರ ಈ ಉದ್ಯಮವನ್ನು ನಾವು ಶ್ಲಾಘಿಸುತ್ತೇವೆ

ಯೂರೋಪಿಗೆ ನುಗ್ಗಲು ಇಟಲಿ ಮುಖ್ಯ ಸೇತುವೆ

ಯುದ್ಧದ ಐದನೆಯ ವಾರ್ಷಿಕೋತ್ಸವದ ದಿನ ಇಟಲಿ ಮೇಲೆ ದಂಡೆತ್ತಿ ಹೋಗಲಾಗಿದೆ; ಯೂರೋಪಿನ ಮುಖ್ಯ ಪ್ರದೇಶಕ್ಕೆ ನುಗ್ಗಲು ಇಟಲಿಯೇ ಮುಖ್ಯ ಸೇತುವೆಯಾಗಿದೆ—ಎಂದು ಐರೋಪ್ಯ ರಂಗದ ಅಮೇರಿಕ ಪಡೆಗಳ ದಂಡನಾಯಕ ಲೆ. ಜೇಮ್ಸ್‌ರವರು ತಿಳಿಸಿದ್ದಾರೆ.

ಶತ್ರು ಆಕ್ರಮಿತ ದೇಶದಲ್ಲಿನ ಪ್ರಜೆಗಳು ದಾಸ್ಯ ವಿಮೋಚನೆಯಾಗುವುದೆಂಬ ಭರವಸೆಯನ್ನು ಕಾಲಿಟ್ಟು ಎಂದು ಅವರು ತಿಳಿಸಿದ್ದಾರೆ.

——

ಲಾಭ ಕೋರನೊಡನೆ ಹೋರಾಡಲು ಉತ್ತಮ ಉಪಾಯ

ಮುಂಬರುವ ದಿನಗಳಿಗಾಗಿ ಕೂಡಿಡಿ. ಅನವಶ್ಯ ಪದಾರ್ಥಗಳನ್ನು ಯುದ್ಧಕಾಲದಲ್ಲಿ ಕೊಳ್ಳುವುದು ಮೂರ್ಖತನ; ಅದರಿಂದ ಲಾಭಕೋರನಿಗೆ ಲಾಭವಾಗುತ್ತದೆ, ಅವರ ಏರಿದ ಬೆಲೆಯಲ್ಲಿ ನೀವು ಕೊಂಡ ಪ್ರತಿಸಾರಿಯೂ ನೀವು ನಷ್ಟ ಮಾಡಿಕೊಳ್ಳುವಿರಿ. ಹಣವನ್ನು ಇಂದೇ ಕೂಡಿಡಿ! ಅತ್ಯಾವಶ್ಯಕವಾದವುಗಳಿಗೆ ಮಾತ್ರ ಖರ್ಚುಮಾಡಿ. ವಿಜಯವು ಲಭಿಸಿದ ಬಳಿಕ ಕಡಿಮೆ ಬೆಲೆಯನ್ನು ಪಡೆದುಕೊಂಡ ಸಾಮಾನುಗಳನ್ನು ಕೊಳ್ಳಬೇಡಿ.

ವಿಜಯದ ನಂತರ ಕೊಡುವುದಕ್ಕಾಗಿ ಹಣವನ್ನು ಇಟ್ಟುಕೊಳ್ಳುವ ಬಗ್ಗೆ. ಬಂಗಾರದ ಬೆಳ್ಳಿಯ ಆಭರಣಗಳನ್ನು, ಭೂಮಿ, ಕಟ್ಟಡಗಳು ಮತ್ತು ಸಾಮಾನುಗಳ ಮೇಲೆ ವಿನಿಯೋಗಿಸುವುದು ಬುದ್ಧಿವಂತಿಕೆಯಲ್ಲ. ಏಕೆಂದರೆ ಎಂದಾದರೊಂದು ದಿನ ಈಗಿನ ಹೆಚ್ಚಿನ ಬೆಲೆಗಳು ಕುಸಿದು ಬೀಳುವುದು ನಿಜ, ಅದು ಹಠಾತ್ತಾಗಿ ಒದಗಿ ಬರಲೂ ಒದಗಬಹುದು.

ನಿಮ್ಮ ಹಣವನ್ನು ಸುರಕ್ಷಿತವಾದ ಕಡೆ ಕೂಡಿಡಿ. ಸರಕಾರದ ಸಂಸ್ಥೆಯಲ್ಲಿ ವಿನಿಯೋಗಿಸಿ, ಇನ್ಶೂರೆನ್ಸ್ ಪಾಲಿಸಿಯನ್ನು ತೆಗೆದುಕೊಳ್ಳಿ, ಬ್ಯಾಂಕ್, ಅಥವಾ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ಹಣ ಕೂಡಿಡಿ. ಇದಕ್ಕಿಂತಲೂ ಉತ್ತಮವಾದುದು ಡಿಫೆನ್ಸ್ ಸರ್ಟಿಫಿಕೇಟು ಮತ್ತು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ವಿನಿಯೋಗಿಸಿರಿ

ದಿನವೂ ನಾಲ್ಕು ಆಣೆ ಕೂಡಿಡಿ!

ಮುಂಬರುವ ದಿನಗಳಿಗಾಗಿ ಕೂಡಿಡಿ

ರಾಷ್ಟ್ರೀಯ ಯುದ್ಧ ಮುಂಬರುವ ದಿನಗಳಿಗಾಗಿ ಕೂಡಿಡಿ ...

CPU-117.

ಪೋ|| ಸಬ್ ಇನ್ಸ್‌ಪೆಕ್ಟರಿಗೆ ಶಿಕ್ಷೆ

ಬೆಂಗಳೂರಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರಾದ ಮಿ|| ಅಬ್ದುಲ್ ಸತ್ತಾರ್ ಎಂಬುವರು ಲಾಕಪ್‌ನಲ್ಲೊಂದು ಕಳವಿನ ಸಂಬಂಧದಲ್ಲಿ ಓರ್ವ ಹೆಂಗಸನ್ನು ಮತ್ತು ಆಕೆಯ ತಮ್ಮನನ್ನು ಠಾಣೆಗೆ ಗುರಿಮಾಡಿ ದಸ್ತು ಬಂದಿಸಿದರೆಂಬ ಮೇಲೆ ಅವರಿಗೆ ೧ ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಪೆಸಫಿಕ್‌ನಲ್ಲಿ ಜಪಾನ್ ವಿಮಾನ ನಾಶ

ನೈರುತ್ಯ ಪೆಸಿಫಿಕ್‌ನಲ್ಲಿ ಕಳೆದ ತಿಂಗಳು ಮಿತ್ರ ವಿಮಾನಗಳು ಜಪಾನಿಯರ ೪೦೦ ವಿಮಾನಗಳನ್ನು ನಾಶಮಾಡಿವೆಯೆಂದೂ, ೧೫೦ ಮಿತ್ರ ವಿಮಾನಗಳು ನಷ್ಟಹೊಂದಿರುವುದಾಗಿಯೂ ತಿಳಿಯಬರುತ್ತೆ.

ಜರ್ಮನ್ ಸರಬರಾಜು ನೆಲೆ ರಷ್ಯನರ ವಶ

ರಷ್ಯನರ ಬೇಸಿಗೆ ಧಾಳಿ ಆರಂಭವಾದ ಮೇಲೆ ಸ್ಟಾಲಿನ್ ಹೊರಡಿಸಿರುವ ಎಂಟನೆಯ ಸರೂಪದಲ್ಲಿ ಯುಕ್ರೇನಿನ ಪ್ರಮುಖ ಜರ್ಮನ್ ನೆಲೆಯಾದ ಸ್ಟೊಮಿನೊ ಎಂಬುದನ್ನು ರಷ್ಯನರು ಸ್ವಾಧೀನಪಡಿಸಿಕೊಂಡರೆಂದು ತಿಳಿಸಿದ್ದಾರೆ. ಇನ್ನೇ ಅಲ್ಲದೆ ಆ ಕ್ಷೇತ್ರದಲ್ಲಿರುವ ರಷ್ಯನ್ ಪಡೆಗಳು ಡನ್ಸ್‌ನಿಂದ ತೀರಕ್ಕೆ ಹೋಗುವ ರೈಲ್ವೆ ಮಾರ್ಗದ ಪ್ಲೆರಿಫ ಇಂಗ್ಲೆಂಡು ಮುಖ್ಯ ಕಟ್ಟಣವನ್ನು ವಶಪಡಿಸಿಕೊಂಡಿವೆ.

ಕೋಕೋ ದುರಂತ

ಕೋಕೋ ಹವಿಲದಾರ್ ಪ್ರಸಿದ್ಧ ಹಾಸ್ಯನಟ. ಬರು ಬಾಮಾ ಪ್ರವೀಣ. ಈ ಪ್ರಸ್ತು ದಿನವೂ ಒಳ್ಳೆ ಹೆಸರು ಗಳಿಸಿ, ಕಡೆಗೆ ಹಣ ಗಳಿಸಲಿಲ್ಲವೆ ಸಾಲ್ಲು ದಿನ ಹೊಟ್ಟೆಯಾಡಿಸಿ ಹೊಟ್ಟೆ ತುಂಬಿಕೊಂಡು ಅದೂ ಸಾಗದೆ ಆತ್ಮಹತ್ಯೆ ಮಾಡಿಕೊಂಡ. ಜನರ ಆನಂದ ಸದನವನ್ನು ಯಾರೂ ಕರುಣೆಗಳು ದಹನವಾಡಿದರು.

ಕೊನೆಯುವರಗೆ ಯುದ್ಧ ಮಾಡಿ

೪ ನೇ ವರ್ಷದ ಯುದ್ಧ ಅಂತ್ಯ ಸಮಯದಲ್ಲಿ ಜರ್ಮನ್ ರೇಡಿಯೋ ವಿ.ಟಿ.ಸಿ ಟೀಕೆಗಾರರಾದ ಜನರಲ್ ಡಿಟ್‌ಮಾರ್‌ರವರು "ಕೊನೆಯವರೆಗೆ ಕದನ ನಡೆಸಿ" ಎಂಬುದಾಗಿ ಜರ್ಮನಿಗೆ ತಿಳಿಸಿದ್ದಾರೆ. "ನಮಗೆ ಉಳಿದಿರುವುದು ಇದು ಒಂದೇ. ನಮ್ಮ ಅಂತ್ಯಗಾರರು ಯುದ್ಧದಲ್ಲಿ ಗೆಲ್ಲಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ಕಷ್ಟವನ್ನು ಸಹಿಸಿಕೊಂಡು ಯುದ್ಧ ನಡೆಸಬೇಕು" ಎಂದು ಬ್ರಾಡ್‌ಕ್ಯಾಸ್ಟ್ ಮಾಡಿದ್ದಾರೆ.

ಕ್ಷುದ್ಬಾಧೆಯಿಂದ ೨೮ ಜನರ ಮರಣ

ಕಲ್ಕತ್ತಾ ನಗರದ ಬೀದಿಗಳಲ್ಲಿ ನೆನ್ನೆ ದಿನ ಹೊಟ್ಟೆಗಿಲ್ಲದೆ ನರಳುತ್ತಿದ್ದ ೧೫೩ ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅವರಲ್ಲಿ ೨೮ ಜನ ಮರಣಹೊಂದಿದರು.

ಸ್ಪೆಷಲ್ ಕೋರ್ಟುಗಳು

ಸಂಕ್ರಾಂತದ ಯುದ್ಧ ಇಲಾಖೆಗಳಲ್ಲಿ ಲಂಚ, ಮೋಸ ಮುಂತಾದುವುಗಳ ಆಪಾದನೆಗೆ ಗುರಿಯಾಗಿರುವ ಅಧಿಕಾರಿಗಳು ಮತ್ತು ಕಂಟ್ರಾಕ್ಟರುಗಳನ್ನು ವಿಚಾರಣೆಮಾಡಲು ಭಾರತ ಸರ್ಕಾರವು ಎರಡು ಸ್ಪೆಷಲ್ ಕೋರ್ಟುಗಳನ್ನು ಬೊಂಬಾಯಿ ಮತ್ತು ಲಾಹೋರ್ ನಗರಗಳಲ್ಲಿ ಸ್ಥಾಪಿಸುವರೆಂದು ಹೇಳಲಾಗಿದೆ. ಹೈಕೋರ್ಟಿನಲ್ಲಿ ಮಾತ್ರ ಅಪೀಲು ಇವೆಯೆಂದೂ, ಇದರ ಸಂಬಂಧದಲ್ಲಿ ನೂತನ ಆರ್ಡಿನೆನ್ಸ್ ಹೊರಡುವುದೆಂದೂ ಹೇಳಲಾಗಿದೆ.

* * * *

ಪೆಸಿಫಿಕ್ಕಿನಲ್ಲಿ ಹೆಚ್ಚು ಕಾರ್ಯಾಚರಣೆ

ಪೆಸಿಫಿಕ್ ಕ್ಷೇತ್ರದಲ್ಲಿ ಈಗ ನಡೆಯುತ್ತಿರುವ ಮಿತ್ರ ಕಾರ್ಯಾಚರಣೆಯನ್ನು ಇನ್ನೂ ಹೆಚ್ಚಿಸಲಾಗುವುದೆಂದು ಅಮೇರಿಕೆಯ ಯುದ್ಧದ ಅಂಡರ್ ಸೆಕ್ರೆಟರಿ ವಿಚಾರದಲ್ಲಿ ನ್ಯೂಜಿಲೆಂಡ್ ಸರ್ಕಾರದವರಲ್ಲಿ ಚರ್ಚಿಸಲು ಈಗ ಆಕ್ಲೆಂಡಿಗೆ ಬಂದಿದ್ದಾರೆ.

ಮೈಸೂರು ವೈಮಾನಿಕರ ಸಾಹಸ

ಉತ್ತರ ಫ್ರಾನ್ಸ್ ರಷ್ಯ, ಸಿಲ್ವಾನಗಳ ಮೇಲೂ ಮತ್ತು ರೇ ಎಬಿವಿಲ ಮುಂತಾದ ರೈಲ್ವೆ ಜಂಕ್ಷನ್‌ಗಳ ಮೇಲೂ ಧಾಳಿಮಾಡಲಾಯಿತು. ಈ ಧಾಳಿಯಲ್ಲಿ ಮೈಸೂರು ದೇಶದ ವೈಮಾನಿಕರು ಪಾತ್ರವಹಿಸಿ ಒಂದು ಜರ್ಮನ್ ವಿಮಾನ ನಾಶಪಡಿಸಿದರು.

Available:—

1) Mixed Fertilisers
2) Copper Sulphate
3) Bavaria Pencils, Etc.

Enquire at:—

Sri Umamaheswari And Co.
"Lakshmisthanam",
Geetha Road, Mysore.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಪ್ರಭಾವಶಾಲಿ ಜೀವನಿ ಔಷಧ

ಗರ್ಭಾಶಯಕ್ಕೆ ಶಕ್ತಿವರ್ಧಕ.
ಜೀವನಿಯನ್ನು ಕೆಲವು ಕಾಲ ನಿತ್ಯವೂ
ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷ
ಸಾವ ಶಕ್ತಿಯುಂಟಾಗುತ್ತದೆ.
ಮುಟ್ಟು ದೋಷಕ್ಕೆ ಗಂಡೌಷಧ.
ಮುಟ್ಟು ಕಾಲದಲ್ಲಿ ಆಗುವ ಅಮಿತ
ಹೋಗುವ ಅಧಿಕ ರಕ್ತಸ್ರಾವ, ಬಿಳುಪು
ಹೋಗುವುದು, ಅಕ್ರಮ ಬಿಡುಗಡೆ
ಮುಂತಾದುವುಗಳನ್ನು "ಜೀವನಿ"
ಜಾಗ್ರತೆ ಶಮನಗೊಳಿಸುತ್ತದೆ.
ಅಗ್ನಿಮಾಂದ್ಯ ಉಷ್ಣ ಶಾಮಕ.
ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೂ
'ಜೀವನಿ' ಪ್ರಶಸ್ತವಾದುದು.
ರಕ್ತ ಹೀನತೆ, ನರಗಳ ದೌರ್ಬಲ್ಯ
ಬೆನ್ನುನೋವು, ಸೊಂಟನೋವು, ಗರ್ಭಸ್ರಾವ,
ಬಂಜೆತನಗಳಿಗೆ "ಜೀವನಿ"
ಅತ್ಯುತ್ಕೃಷ್ಟವಾದುದು.

ಬರ್ಲಿನ್ ಮೇಲೆ ಅಗಾಧ ಧಾಳಿ

ಬರ್ಲಿನ್ ನಗರದ ಮಿತ್ರ ವಿಮಾನಗಳು ೨೦ ನಿಮಿಷಗಳ ಕಾಲ ಅಗಾಧ ಧಾಳಿನಡೆಸಿ ೧ ಸಾವಿರ ಟನ್ ಬಾಂಬುಗಳನ್ನು ಸುರಿಸಿದುವು. ಹಾಲೆಂಡ್ ಮತ್ತು ಉತ್ತರ ಫ್ರಾನ್ಸಿನ ಮೇಲೂ ಧಾಳಿಮಾಡಲಾಯಿತು, ೨೨ ಮಿತ್ರ ವಿಮಾನಗಳು ವಾಪಸು ಬರಲಿಲ್ಲ.

ಚಿನ್ನದ ಕವಚ ಮಾಯ

ಕುಂಭಕೋಣದ ಶ್ರೀ ರಾಮಸ್ವಾಮಿ ದೇವಸ್ಥಾನದಲ್ಲಿ ಮೂಲ ಮಂಡಲದಲ್ಲಿ ಧರಿಸಲ್ಪಡುತ್ತಿದ್ದ ಚಿನ್ನದ ಕವಚ ಮಾಯವಾಗಿದೆಯೆಂದು ವರದಿಯಾಗಿದೆ.

ಆಹಾರ ಪ್ರಮಾಣ

೭೦ ವರ್ಷ ಜೀವಿತ ಕಾಲದಲ್ಲಿ ಒಬ್ಬನು ೨೫ ಟನ್‌ಗಳನ್ನು ಆಹಾರ ಪದಾರ್ಥಗಳನ್ನು ಸೇವಿಸುವನಂತೆ !

* * * *

೫೦ ಜನ ಸ್ತ್ರೀ ಸೈಕಲ್ ಸವಾರರು

ದಿವಾನ್ ಬಹದ್ದೂರ್ ಚಕ್ರಕ್ಕೆ ೫೦ ಸೈಕಲ್ಲುಗಳೂ ೫೦ ಜನ ಸೈಕಲ್ ಸ್ತ್ರೀ ಸವಾರರೂ ಬೇಕಾಗಿದ್ದಾರಂತೆ !

ಕಳ್ಳತನವನ್ನು ಕಲಿಸುವ ಪಾಠಶಾಲೆ !

ಪ್ಯಾರಿಸ್ ನಗರದಲ್ಲಿ ಒಂದು ಪಾಠಶಾಲೆ ಇದ್ದಿತಂತೆ. ಲೂಲು ಎಂಬ ಹೆಂಗಸು ಈ ಪಾಠಶಾಲೆಯನ್ನಿಟ್ಟಿದ್ದಳಂತೆ !

ಚೀನಾಕ್ಕೆ ಸಹಾಯ

ಚೀನಾದಲ್ಲಿರುವ ಅಮೇರಿಕ ವಿಮಾನಗಳ ಜೊತೆಗೆ ಬ್ರಿಟಿಷ್ ವಿಮಾನಗಳೂ ಸೇರಬೇಕು ... ನನ್ನು ಮುತ್ತಬೇಕು. ಚೀನಾಕ್ಕೆ ... ಸಂಗ್ರಾಮ ನೌಕೆಗಳ ಸಹಾಯವು ... ಎಂದು ಚೀನಾ ಪತ್ರಿಕೆಯು ಮನವಿ ...

ಕಳ್ಳರ ಕಿವಿಗೆ ಕೆಂಪುಬಣ್ಣ

ರುಮೇನಿಯಾ ದೇಶದಲ್ಲಿ ಕಳ್ಳರಿಗೆ ಚಿತ್ರ ಶಿಕ್ಷೆ ಕೊಡುತ್ತಿದ್ದರಂತೆ. ಕಾರಾವಾಸ ಕಳೆದನಂತರ ಅವರ ಕಿವಿಗೆ ಕೆಂಪು ಬಣ್ಣ ಬಳಿಯುತ್ತಿದ್ದರಂತೆ. ದಿನೇ ದಿನೇ ಹೆಚ್ಚುತ್ತಿರುವ ಸಣ್ಣಪುಟ್ಟ ಕಳ್ಳತನಗಳನ್ನು ತಪ್ಪಿಸುವುದೇ ಇದರ ಧ್ಯೇಯ. ಅಪರಾಧಿಗಳು ಪ್ರತಿತಿಂಗಳೂ ಪೋ|| ಸ್ಟೇಷನಿಗೆ ಬರಬೇಕು. ಕೆಂಪು ಬಣ್ಣ ಅಳಿಸಿದ್ದರೆ ಅದನ್ನು ಪುನಃ ಹಾಕಿಸಿಕೊಳ್ಳಬೇಕೆಂದು ಅವರಿಗೆ ಕೊಟ್ಟ ನಿಬಂಧನೆ.

Edited, printed and p[ubli]shed by A. R. Naga[r...] at the Sadhvi Press, D[...]biah Road, Mysore.

ಪ್ರಕಟಣೆ

ದಿ ಬೆಂಗಳೂರು ಪ್ರಾವಿಡೆಂಟ್ ಇನ್ಷೂರೆನ್ಸ್ ಕಾರ್ಪೊರೇಷನ್, ಲಿಮಿಟೆಡ್

(ಸ್ಥಾಪನೆ : ೧೯೩೯)

ಮುಖ್ಯ ಕಚೇರಿ : "ಏಷ್ಯಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ನಗರ

ಹಿಂದೂಸ್ಥಾನದ ಎಲ್ಲ ಭಾಗಗಳಲ್ಲಿ ಉದಾರ ಕರಾರುಗಳ ಮೇಲೆ ಮತ್ತು ಅನುಕಮಿಷನ್ನಿನ ಮೇಲೆ ಏಜಂಟರನ್ನು ನೇಮಿಸಿಕೊಳ್ಳುವವರಿದ್ದೇವೆಂದು ಪ್ರಕಟಿಸಲು ಆನಂದವಾಗುತ್ತದೆ. ಏಜಂಟರು ಪ್ರತಿ ತಿಂಗಳು ಸುಲಭವಾಗಿ ೧೦೦ ರೂ. ದಿಗಬಹುದು.

ಶ್ರೀ ಪಿಂಗಳಿ ವೆಂಕಟರಾಮರೆಡ್ಡಿ ಡೈರೆಕ್ಟರು : ೧) ಏಷ್ಯಾಟಿಕ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಇನ್ಷೂರೆನ್ಸ್ ಕಂ. ಲಿ., ಬೆಂಗಳೂರು ಸಿಟಿ. ೨) ... ಲೈಫ್ ಇನ್ಷೂರೆನ್ಸ್ ಕಂ. ಲಿ., ಬೊಂಬಾಯಿ. ೩) ದಿ ಯೂನಿವರ್ಸ ಲೈಫ್ ... ಬೊಂಬಾಯಿ. ೪) ಮಿನರ್ವಾ ಮಿಲ್ಸ್ ಲಿ., ಬೆಂಗಳೂರು ೫) ಮಾಡರ್ನ್ ... ಲಿ., ಬೊಂಬಾಯಿ. ೬) ಸಿಂಧ್ ಶುಗರ್ ಕಂ. ಲಿ., ಬೊಂಬಾಯಿ. ೭) ಸ್ಟೀಮ್ ನ್ಯಾವಿಗೇಷನ್ ಕಂ ಲಿ., ಬೊಂಬಾಯಿ ೮) ಈಸ್ಟರ್ನ್ ಬ್ಯಾಂಕರ್ಸ್ [ಇಂಡಿಯಾ] ಲಿ., ಬೊಂಬಾಯಿ. ೯) ಈಸ್ಟರ್ನ್ ಬ್ಯಾಂಕರ್ಸ್ [ಬರ್ಮಾ] ಲಿ., ಬೊಂಬಾಯಿ ೧೦) ಸರೋತ್ತಮ ಲಿ., ಬೊಂಬಾಯಿ. ೧೧) ಕೋ-ಆಪರೇಟಿವ್ ಡೊಮಿನಿಯನ್ ಬ್ಯಾಂಕ್ ಲಿ, ಹೈದರಾಬಾದ್, [ಡೆಕನ್] ೧೨) ಸದಸ್ಯರು, ಅಡ್ವೈಸರಿ ಬೋರ್ಡ್ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಲಿ. ಮತ್ತು ದೇಶಮುಖ್, ಜವಾಹಿರ ಬ್ಯಾಂಕರ್, ಅಸರಿಂ ಸನ್ಸ್ ಜಡ್ಜ್, ಹೈದರಾಬಾದ್ [ಡೆಕನ್]. ಚೇರ್ಮನ್.

ಶ್ರೀ ಎಚ್. ವೆಂಕಟರಾಮಯ್ಯ, ಡಿವಿಜನಲ್ ಸೂಪರಿಂಟೆಂಡೆಂಟ್, ಟಿಕ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಇನ್ಷೂರೆನ್ಸ್ ಕಂ. ಲಿ., ಬೆಂಗಳೂರು ಮ್ಯಾನೇಜಿಂಗ್ ಡೈರೆಕ್ಟರ್.

ಕಾರ್ಪೊರೇಷನ್ನಿನ ಬಗ್ಗೆ ಮಹತ್ವದ ಸಂಗತಿಗಳು

೧) ಇನ್ಷೂರೆನ್ಸ್ ಕಾಯಿದೆಯನ್ವಯ ಮೈಸೂರು ಮತ್ತು ಬ್ರಿಟಿಷ್ ಸರ್ಕಾರದಲ್ಲಿ ಠೇವುಗಳನ್ನು ಇಡಲಾಗಿದೆ.
೨) ೧೫ ವರ್ಷ ಅನುಭವದ ಡೈರೆಕ್ಟರ ಅಧೀನದಲ್ಲಿ ಭದ್ರವಾದ ಮತ್ತು ಪ್ರಭಾವಶಾಲಿಗಳಾದ ಡೈರೆಕ್ಟರುಗಳ ಮತ್ತು ವ್ಯವಸ್ಥಾಪಕ ಮಂಡಳಿ.
೩) ಈಗ ದೊರೆತ ಉದ್ಯಮ ೭ ಲಕ್ಷಕ್ಕಿಂತ ಹೆಚ್ಚಿಗೆ ಮತ್ತು ಕಾರ್ಯಕರ್ತರ ಸಂಖ್ಯೆ
೪) ಜೀವನಿಧಿ ೯೫% ರಷ್ಟಿಗೆ.
೫) ಡಾಕ್ಟರ್ ಪರೀಕ್ಷೆಗೊಳಪಟ್ಟು ರೂ ೨೦೦, ರೂ. ೩೦೦, ರೂ. ೪೦೦ ... ೫೦೦ ಗಳಿಗೆ ಹೋಲ್ ಲೈಫ್, ಜಾಯಿಂಟ್ ಲೈಫ್ ಮತ್ತು ಎಂಡೋಮೆಂಟ್ ಪಾಲಿಸಿಗಳನ್ನು ಕೊಡಲಾಗುವುದು. ರೂ. ೨೫ ಕ್ಕೆ ಸಹ ಪಾಲಿಸಿಗಳನ್ನು ಕೊಡಲಾಗುವುದು. ದಯವಿಟ್ಟು ವಿವರಗಳಿಗೆ ಬರೆಯಿರಿ.

ಪಾರಿತೋಷಕ ಸಭೆ

ಮೈಸೂರು ೭

ಶ್ರೀನ ಸ್ವರಾಜ ಸಂಸ್ಕೃತ ಪಾಠ[illegible] ವಾರ್ಷಿಕ ವಿದ್ಯಾರ್ಥಿ ಬಹುಮಾನ ವಿತರಣಾ ಸಭೆಯು [illegible] ಶ್ರೀ ಕೆ. ಗು[illegible]ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ|| ವಿ|| ದೊರೆಸ್ವಾಮಿ ಅಯ್ಯಂಗಾರ್‌ರವರ ಪ್ರಾರ್ಥನೆಯಾದನಂತರ, ಆನೇಕನ ಪತ್ರಿಕಾ [illegible]ವಾಯಿತು. ನಂತರ ಅಧ್ಯಕ್ಷರು ಪಾರಿತೋಷಕಗಳನ್ನು ವಿನಿಯೋಗಿಸಿದರು. ಪ್ರಧಾನೋಪಾಧ್ಯಾಯರಾಗಿದ್ದ ಬ್ರ|| ಶ್ರೀ|| [illegible] ಮತ್ತು ಬ್ರ|| ಶ್ರೀ|| ವೇದ [illegible] ವಿದ್ಯಾರ್ಥಿಗಳವರ ಭಾವ[illegible]ವನ್ನು ಅಧ್ಯಕ್ಷರು [illegible]

ವಿದ್ಯಾ ಗಣಪತಿ ಮಹಾ ಮಂಗಳಾರತಿ [illegible] 'ಮಧ್ಯಮವ್ಯಾಯೋಗ ಮತ್ತು [illegible]' ಎಂಬ ಸಂಸ್ಕೃತ ನಾಟಕಗಳ ಪ್ರದರ್ಶನವಾಯಿತು.

ವಾರ್ಷಿಕೋತ್ಸವ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿ ನ[illegible] ವಿದ್ಯಾಶಾಲೆ ವಾರ್ಷಿಕೋತ್ಸವ ನೆನ್ನೆ ಸಂಜೆ [illegible] ನವರ [illegible] ನಲ್ಲಿ ನಡೆಯಿತು. ಪ್ರೊ|| [illegible] ಅಧ್ಯಕ್ಷರಾದ ಶ್ರೀ [illegible] ನವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಹೆಚ್. ವೈ ಶಾರದಾ [illegible]ರವರ ಸ್ವಾಗತ ಭಾಷಣ, ಸಂಸ್ಥೆಯ [illegible] ಶ್ರೀ [illegible]ನವರ ವರದಿ, ಇವು ನಡೆದ ನಂತರ ಅ[illegible] ದೇಶೀ ವಿದ್ಯಾಶಾಲೆಗಳು ರಾಜ್ಯದಲ್ಲಿ ಸ್ಥಾಪಿತವಾಗಿರುವಂತೆಯೇ ಸಂ[illegible] ಎಲ್ಲಾ ಗ್ರಾಮಗಳಲ್ಲಿಯೂ ಸ್ಥಾಪಿಸಬೇಕಾಗಿ [illegible] ಜನಜೀವನೋದ್ಧಾರ[illegible] ವಿದ್ಯೆಯನ್ನು ಬೋಧಿಸಬೇಕು. ಇಂದಿನ ವಿದ್ಯಾಭ್ಯಾಸ[illegible] ನೀರಸ ಶಿಕ್ಷಣವ[illegible] ಕ್ರಮಗಳನ್ನು [illegible] ದೇಶದ [illegible] ಕಾರ್ಯಕ್ರಮಗಳನ್ನು [illegible] ಒಳಗೊಳ್ಳಬೇಕೆಂದು ತಿಳಿಸಿದರು.

ಪೌರ ಸಭೆ

ಶ್ರೀ|| ಟಿ ಎಸ್. ರಾಜಗೋಪಾಲಯ್ಯಂಗಾರ್ ಮತ್ತು ೧೬ ಮಂದಿ ಸದಸ್ಯರ [illegible] ಸಹಿಯುಳ್ಳ ಈ ಕೆಳಗೆ ಕಂಡ ನಿರ್ಣಯವ[illegible] ಚರ್ಚಿಸಲು [illegible] ನೇ ತಾರೀಕು [illegible] ಪೌರ ಸಭೆಯ ಸ್ಪೆಷಲ್ ಮೀಟಿಂಗ್ ಸೇರುವುದು "ಪತ್ರಿಕೆಗಳಿಗೆ [illegible] ಮತ್ತು [illegible]ವನ್ನು ಕೊಂಡ [illegible] ನೀಡಬೇಕೆಂದು ಸರ್ಕಾರವನ್ನು [illegible]"

ಗಣಪತಿ ಉತ್ಸವ

[illegible] ಕೋಸ್ಪಲ್ಲಿನ [illegible] ನೆನ್ನೆ ಸಂ[illegible] ವಿಜೃಂಭಣೆಯಿಂದ ನೆರವೇರಿಸಿದ ಉತ್ಸವವ[illegible] ಎತ್ತು [illegible] ನಡೆಯಿತು.

ಜೂಜುಗಾರರಿಗೆ ಶಿಕ್ಷೆ

[illegible] ಮೊದಲಿದ್ದ [illegible] ಜೂಜಾಡುತ್ತಿದ್ದ [illegible] ಮ್ಯಾಜಿಸ್ಟ್ರೇಟರು [illegible] ದಂಡ ವಿಧಿಸಿದರು.

ಸಂಪುಟ ೫] ಮಂಗಳವಾರ ೭—೯—೪೩ [ಸಂಚಿಕೆ ೪೬

ಇಟಲಿ ಸೈನಿಕರ ಶರಣಾಗತಿ

ಪರ್ಷಿಯಾದಲ್ಲಿ ನಾಜಿ ಗೂಢಚಾರರ ಹಂಚಿಕೆ

ನ್ಯೂಗಿನಿ ಹೂರ್ ಕೊಲ್ಲಿಯಲ್ಲಿ ಮಿತ್ರ ಸೈನ್ಯ ಬಂದಿಳಿಯಿತು

ಇಟಾಲಿಯನ್ ಸೈನಿಕರ ಶರಣಾಗತಿ

ದಕ್ಷಿಣ ಇಟಲಿಯಲ್ಲಿ ಬ್ರಿಟಿಷ್ ಎಂಟನೇ ಸೈನ್ಯದವರು [illegible] ಜರ್ಮನ್ ಸೈನ್ಯ[illegible] ಹಿಮ್ಮೆಟ್ಟಿಸುತ್ತಿದ್ದಾರೆ; ಇವರಿಂದ ಮಿತ್ರರ [illegible] ಯಾವ ಅಡಚಣೆಯೂ ಇಲ್ಲವೆಂದೂ ವರದಿಯಾಗಿದೆ. ಜರ್ಮನರು ಹಿಂದಿನ ರಣಕ್ಷೇತ್ರದಲ್ಲಿ [illegible]ಗೊಂಡ [illegible] ಕಾರ್ಯ[illegible] ಇಟಲಿಯ [illegible] ಸೈನ್ಯದ [illegible] ನಾಶವಾದ [illegible] ಪಟ್ಟಣವಲ್ಲಿದ್ದ [illegible] ಇಟಲಿ ನ[illegible] ಭಾಗದಲ್ಲಿ ಅನೇಕ [illegible] ಸೈನ್ಯಗಳು [illegible]

[illegible] ಸೈನ್ಯ[illegible] ಮಿಸುಕ[illegible] ಪಡೆ [illegible] ನಿರತವಾಗಿದೆ.

[illegible] ಇಟಲಿ ಉತ್ತರದಲ್ಲಿ ಇರುವ ಪಾಲ್ಮಿಯಲ್ಲಿ ಬ್ರಿಟಿಷ್ ಸೈನ್ಯವು ಬಂದಿಳಿದಿವೆಯೆಂದು ಜರ್ಮನ್ ರೇಡಿಯೋ ತಿಳಿಸುತ್ತದೆ.

ಪರ್ಷಿಯಾದಲ್ಲಿ ಜರ್ಮನ್ ಗೂಢಚಾರರ ಸಂಸ್ಥೆ

ಪರ್ಷಿಯಾದಲ್ಲಿ ಜರ್ಮನ್ ಗೂಢಚಾರ ಸಂಸ್ಥೆಯೊಂದನ್ನು ಕಂಡು ಹಿಡಿದಿರುವ[illegible] [illegible] ಮಂತ್ರಿಗಳು ತಿಳಿಸಿದ್ದಾರೆ.

ಜನ್ಮೂ ಘೋರಯುದ್ಧ ಮಾಡಬೇಕು

'[illegible] ಜಯವನ್ನು ಪಡೆಯಬೇಕಾದರೆ [illegible] ಜನ್ಮೂ ಘೋರ [illegible] ಮಾಡಬೇಕಾದ ದಿನಗಳು [illegible] ಉತ್ತರದ ಜಗ[illegible] ಬೇಕ[illegible]" ಎಂದು [illegible]

ಜ|| ಗೋರಿಂಗ್

[illegible] ರೇಡಿಯೋ [illegible]

ಕಲ್ಕತ್ತಾದಲ್ಲಿ ಭೀಕರ ಪರಿಸ್ಥಿತಿ

ಕಲ್ಕತ್ತಾ ನಗರದಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿದ್ದ ೧೭೬ ಜನರನ್ನು ಆಸ್ಪತ್ರೆಗೆ ಸೇರಿಸಲಾಯಿತು. ೩೬ ಮಂದಿ ಮೃತಪಟ್ಟರು. [illegible] ಆಸ್ಪತ್ರೆಯಿಂದ ಚಿಕಿತ್ಸೆ ಮಾಡಿ ಕಳುಹಿಸಲಾಯಿತು. [illegible] ಆಸ್ಪತ್ರೆಯಲ್ಲಿ [illegible] ಇರುವರೆಂದು ವರದಿಯಾಗಿದೆ.

ಪುಂಡರಿಗೂ ಪೋಲೀಸರಿಗೂ ಹೊಡೆದಾಟ

[illegible] ಪುರದಿಂದ [illegible] ದೂರದಲ್ಲಿರುವ [illegible] ಪೋಲೀಸ್ [illegible] ಒಂದು ರಕ್ತ ಪುಂಡರ [illegible] ಪೋಲೀಸರಿಗೂ ಹೊಡೆದಾಟವಾಯಿತೆಂದು ವರದಿಯಾಗಿದೆ. [illegible] ಪುಂಡರು ಪೋಲೀಸರ ಮೇಲೆ ಬಿದ್ದು [illegible] ಹೆಡ್ ಕಾನ್ಸ್ಟೇಬಲ್ ಮತ್ತು ೭ ಜನ ಪೋಲೀಸರಿಗೂ [illegible] ಪೆಟ್ಟು ಬಿದ್ದವು. ಪುಂಡರ ಪೈಕಿ ೫ ಜನ ಸತ್ತರು, ಅನೇಕರಿಗೆ ಗಾಯವಾಗಿದೆ.

ಪ್ಲೇಗು ಉಪದ್ರವ

ಕೊಪ್ಪ ತಾಲ್ಲೂಕಿನಲ್ಲಿ ಪ್ಲೇಗಿನ ಉಪದ್ರವ [illegible] ಇಲ್ಲಿಯವರೆಗೆ [illegible] ಜನ ಸತ್ತರೆಂದು ವರದಿಯಾಗಿದೆ.

ರಾಜಕೀಯ ಕೈದಿಗಳ ಬಿಡುಗಡೆ

[illegible] ಸರ್ಕಾರದವರು [illegible] ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿದ್ದಾರೆ.

[illegible] ಕಮ್ಯೂನಿಸ್ಟ್ ಪಾರ್ಟಿಯ ಅಧ್ಯಕ್ಷರಾದ ಪಿ|| [illegible], ಶ್ರೀ [illegible] ಸಿಂಗ್ ಮತ್ತು [illegible] ಜನರನ್ನು ಬಿಡುಗಡೆ ಮಾಡಲಾಗಿದೆ.

ರಷ್ಯನ್ ನೌಕಾ ಕಾರ್ಯಾಚರಣೆ

[illegible] ಕೊಲ್ಲಿ[illegible] ಪೂರ್ವ ಭಾಗದ [illegible] ಪ್ರದೇಶದ [illegible] ಶತ್ರುವಿನ [illegible] ನೌಕಾದಳ [illegible] ವರದಿಯಾಗಿದೆ.

ಪ್ರಭುತ್ವ ಸುದ್ದಿ

ಬೆಂಗಳೂರು ೬

ರಾಜಧಾನಿಯ ಪಬ್ಲಿಕ್ [illegible] ಯೋಗನಿರ್ವಾಹಕ ಸಮಿತಿಗೆ [illegible] ದ ಮಹನೀಯರುಗಳು ೧೯೪೩—೪೪ ನೇ ಸಾಲಿಗೆ ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ.

ಚುನಾವಣೆಯಿಂದ—ಶ್ರೀ [illegible] ನರಸಿಂಹಮೂರ್ತಿ, ಎಂ. ವೆಂಕಟೇಶ್, ಜಿ ಆರ್. ಜೋಸ್ಯರ್, ಹೆಚ್ ಸಿ [illegible] ರಾವ್, ಜೆ. ಎನ್. ಕೃಷ್ಣಯ್ಯಂಗಾರ್, ಎಂ. ರಾಜಾರಾವ್, ಎಲ್ ಶೇಷಗಿರಿರಾವ್, ಎಫ್. ಸಿ. ದೇವರಾಜ ಅರಸ್, ಎ ಎಸ್. ಜಗನ್ನಾಥ ಶರ್ಮ ಮತ್ತು ಮಿಸೆಸ್ [illegible] ಆರ್ ಶೇಷು.

ನಾಮಕರಣದಿಂದ—ರಾಜಸೇವಾ ಪ್ರಸಕ್ತ ಎನ್. ರಾಮರಾವ್ (ಅಧ್ಯಕ್ಷರು) ರಾ|| ಸಾ|| ಆರ್. ಎನ್. [illegible], ರೆವರೆಂಡ್ ಫ್ರೆಡರಿಕ ಆಂಗ್ಲೇಸ್ಟ್ರಿಲ್, ಶ್ರೀಗಳಾದ ನರಸಿಂಹಯ್ಯ ಮತ್ತು ಪಿ|| ಮಹಮ್ಮದ್ [illegible].

* * * *

ಡೆಹರಾಡೂನಿನಲ್ಲಿರುವ ಪ್ರಿನ್ಸ್ ಆಫ್ ವೇಲ್ಸ್ ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿರುವ ಮೈಸೂರು ಸಂಸ್ಥಾನದ ಹುಡುಗರ [illegible] ಮುಂದಿನ [illegible] ಗಾಗಿ ತಮ್ಮ ದರಖಾಸ್ತುಗಳನ್ನು ಸರ್ಕಾರದ [illegible] ಕಳುಹಿಸಿಕೊಡಬಹುದೆಂದೂ [illegible] ಕಾಲೇಜಿನಿಂದ [illegible] ಪ್ರಭುತ್ವ ಪ್ರಕಟಣೆ ತಿಳಿಸುತ್ತದೆ.

ಸರ್ಕಾರಿ ಸುದ್ದಿ

ಮೈಸೂರು ಟ್ರಸ್ಟ್ ಬೋರ್ಡ್ ಆಫೀಸಿನ [illegible] ನಿಯ ವರನ್ನು [illegible] ನೇಮಿಸಿ, ಮಧ್ಯೆಗೆ ನರ್ಗಾಯಿಸಲಾಗಿದೆ.

ಹೂರ್ ಕೊಲ್ಲಿಯಲ್ಲಿ ಮಿತ್ರ ಸೈನ್ಯ

ನ್ಯೂಗಿನಿಯಿಂದ ಉತ್ತರ ತೀರದಲ್ಲಿರುವ ಹೂರ್ ಕೊಲ್ಲಿಯಲ್ಲಿ ಮಿತ್ರ ಸೈನ್ಯವು ಬಂದಿಳಿದಿರುವುದೆಂದೂ ವರದಿಯಾಗಿದೆ. [illegible] ಆಕಸ್ಮಾತ್ ಮುತ್ತಿಗೆಯು [illegible] ಪ್ರತಿಭಟನೆಯನ್ನು [illegible]

ಕೌಂಟ್ ಹಿರೋಡಿ ಮರಣ

ಸೈರುತ್ಯ ಪೆಸಿಫಿಕ್‌ನ [illegible] ದಲ್ಲಿ ಜಪಾನಿ ಪ್ರಿನ್ಸ್ [illegible] ಕೌಂಟ್ ಹಿರೋಡಿ [illegible] ಸತ್ತರೆಂದು ವರದಿಯಾಗಿದೆ.

ಆತ್ಮರಕ್ಷಣೆಗೆ ಗಂಡನನ್ನು ಕೊಂದಿದ ಪ್ರಸಂಗ

[illegible] ಆತ್ಮ ರಕ್ಷಣೆಗಾಗಿ ತನ್ನ ಗಂಡನನ್ನು ಕೊಲ್ಲಬೇಕಾಯಿತೆಂದು [illegible] ಕೋರ್ಟಿನಲ್ಲಿ ತಿಳಿಸಿದ್ದಾಳೆ.

ಆಕೆ ಗಂಡನು [illegible] ಕೊಲ್ಲುವನೆಂದು [illegible] ಕೊಡಲಿಯಿಂದ ಹೊಡೆದು [illegible] ಹೊಡೆಯಲಾಗಿದೆ.

ಅಕ್ಷರ ಪ್ರಚಾರಕ್ಕೆ ಸಹಾಯ

ಬೆಂಗಳೂರು ೬

ಬೆಂಗಳೂರು ಜಿಲ್ಲಾ ಬೋರ್ಡ್ ಸಭೆ ೧೯೩ ಮಿ॥ ಬಿ. ಅಬ್ದುಲ್ ಲತೀಫ್‌ರವರ ಅಧ್ಯಕ್ಷತೆಯಲ್ಲಿ ಸೇರಿ, ಜಿಲ್ಲೆಯ ಅಕ್ಷರ ಪ್ರಚಾರ ಸಮಿತಿಗೆ ಒಂದು ಸಾವಿರ ರೂಪಾಯಿಗಳ ಸಹಾಯ ನೀಡುವ ನಿರ್ಣಯವಾಯಿತು

ಕಳ್ಳನ ಪರಾರಿ

ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಮುತ್ತುಸ್ವಾಮಿ ಎಂಬ ಖೈದಿಯು ಜೈಲಿನಿಂದ ತಪ್ಪಿಸಿಕೊಂಡು ಪರಾರಿಯಾಗಿರುವನೆಂದು ಗೊತ್ತಾಗಿದೆ.

ಅಧ್ಯಕ್ಷರ ಚುನಾವಣೆ

ಮೈಸೂರು ಸಂಸ್ಥಾನದ ವೃತ್ತಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಶ್ರೀಗಳಾದ ಡಿ. ವಿ. ಗುಂಡಪ್ಪ, ಬಿ. ಟಿ. ಕೇಶವ, ಪಿ. ಆರ್. ರಾಮಯ್ಯ ಮತ್ತು ಜಿ. ಆರ್. ಜೋಸ್ಯರ್ ಇವರುಗಳನ್ನು ಸೂಚಿಸಲಾಗಿದೆ. ಇವರ ಪೈಕಿ ಶ್ರೀ ಡಿ. ವಿ. ಗುಂಡಪ್ಪನವರು ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ೧೦ ನೇ ತಾ॥ ಹೊತ್ತಿಗೆ ವೋಟಿನ ಕಾಗದಗಳನ್ನು ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಬೇಕು.

ಜಿಲ್ಲಾ ಬೋರ್ಡಿನಲ್ಲಿ ವಾಗ್ಯುದ್ಧ

ಬೆಂಗಳೂರು ಜಿಲ್ಲಾ ಬೋರ್ಡಿನ ಸಭೆಯಲ್ಲಿ ಅಧ್ಯಕ್ಷರ ನಡವಳಿಕೆ ಬಗ್ಗೆ ಅನೇಕ ಪೂರಿತ ಭಾಷಣಗಳು ಮತ್ತು ಬಿಸಿಬಿಸಿ ಮಾತುಗಳು ನಡೆದುವು. ಶ್ರೀ ಗುರುವಾರೆಡ್ಡಿಯವರು ಅಧ್ಯಕ್ಷರಿಗೆ ಕೋದ ಸಭೆಯಲ್ಲಿ ಸಭಾತ್ಯಾಗ ಮಾಡಿದರು, ಕೋರಂ ಇಲ್ಲದಿದ್ದರೂ ಸಭೆಯನ್ನು ಮುಂದುವರಿಸಿ ಬಜೆಟ್ ಮಂಜೂರಾಯಿತೆಂದು ಪತ್ರಿಕೆಗೆ ವರದಿಮಾಡಿರುವುದು ಸರಿಯೆ? ಎಂದು ಪ್ರಶ್ನಿಸಿದರು. ಸಭಾತ್ಯಾಗವಾದ ಮೇಲೆ ಪುನಃ ಇಬ್ಬರು ಸದಸ್ಯರು ಬಂದುದರಿಂದ ಕೋರಂ ಸಿಕ್ಕಿ ಬಜೆಟ್ ಮಂಜೂರಾಯಿತೆಂದು ಅಧ್ಯಕ್ಷರು ನುಡಿದರು. ಆ ಇಬ್ಬರು ಸದಸ್ಯರು ಇದು ನಿಯಮಕ್ಕೆ ವಿರೋಧವಾಗಿದೆಯೆಂದು ತಿಳಿಸಿದರು. "ನಿಮ್ಮನ್ನು ನಂಬುವುದಿಲ್ಲ" ಎಂದು ಅಧ್ಯಕ್ಷರು ಹೇಳಿದರು. ಶ್ರೀ ಗುರುವಾರೆಡ್ಡಿಯವರು "ನಮ್ಮ ಜೊತೆ ಬಂದವರು ಪ್ರಕಟಣ ಪತ್ರಿಕೆಯನ್ನು ಪಾಸುಮಾಡಿದ... ... ಗಳ್ಳಾ ಸದಸ್ಯರ ನೇರ ತಪ್ಪು ಹೊರಿಸುವುದು ತಪ್ಪು. ಆದ್ದರಿಂದ ನೀವು ಸದಸ್ಯರುಗಳ ಮೇಲೆ ಹೇಳಿದ ಅಪವಾದವನ್ನು ವಾಪಸು ತೆಗೆದುಕೊಳ್ಳಬೇಕು." ಎಂದರು. ಅಧ್ಯಕ್ಷರು ವಾಪಸು ತೆಗೆದುಕೊಳ್ಳಲು ಒಪ್ಪಿದ್ದರಿಂದ ಆ ಪ್ರಸಂಗ ಅಲ್ಲಿಗೆ ಮುಕ್ತಾಯವಾಯಿತು.

ನೂತನ ಹುದ್ದೆ

ನಿವೃತ್ತ ರೆವಿನ್ಯೂ ಕಮಿಷನರಾದ ರಾಜಸೇವಾಸಕ್ತ ಶ್ರೀ ಬಿ. ಟಿ. ಕೇಶವಯ್ಯಂಗಾರ್‌ರವರು ಬೊಂಬಾಯಿ ಸರ್ ಶ್ರೀ ಅಂಬಾಲಾಲ್ ಸಾರಾಭಾಯ್‌ರವರ ಪ್ರೈವೇಟ್ ಸೆಕ್ರೆಟರಿಗಳಾಗಿ ಹೋಗಲಿದ್ದಾರೆಂದು ತಿಳಿದುಬಂದಿದೆ

ವರ್ಗಾವರ್ಗಿ

ಅಸಿ ಪೊಲೀಸ್ ಸೂಪರಿಂಟೆಂಡೆಂಟರಾದ ಮಿ॥ ಖಾದರ್ ಅಲಿಖಾನರವರನ್ನು ಡಿ. ಎಸ್. ಪಿ ಹುದ್ದೆಗೇರಿಸಿ ಕೈಲ್ಸ್ ಮತ್ತು ಸಿ. ಐ. ಡಿ ಶಾಖೆಗೆ ವರ್ಗಾಯಿಸಲಾಗಿದೆ. ಬೆಂಗಳೂರು ಜಿಲ್ಲೆಯ ಅಸಿ ಸೂ॥ ರಾದ ಮಿ॥ ಡಿ ಅಂಚರ್‌ಸರವರನ್ನು ತುಮಕೂರು ಡಿ ಎಸ್. ಪಿ ಗಳನ್ನಾಗಿ ನೇಮಿಸಲಾಗಿದೆ. ಕೈಲ್ಸ್ ಮತ್ತು ಸಿ. ಐ. ಡಿ. ಸೂ॥ ರಾದ ಮಿ॥ ಸಜೀರ್ ಅಹಮದ್‌ರವರನ್ನು ತುಮಕೂರು ಡಿ. ಎಸ್. ಪಿ. ಗಳಾಗಿ ನೇಮಕವಾಗಿದೆ. ಕೆ. ಜಿ. ಎಫ್. ನ ಪೊ॥ ಇನ್ಸ್‌ಪೆಕ್ಟರಾದ ಮಿ॥ ಸಯ್ಯದ್ ಜಾಹಿರುದ್ದೀನರವರನ್ನು ಬೆಂಗಳೂರು ಸಿಟಿ ಎ. ಎಸ್. ಪಿ. ಯಾಗಿಯೂ, ಬೆಂಗಳೂರು ಅಸಿ॥ ಪೊ॥ ಇ॥ ರಾದ ಶ್ರೀ ಕೆ. ರಾಜಶೇಖರಯ್ಯನವರನ್ನು ಬೆಂಗಳೂರು ಜಿಲ್ಲೆಯ ಎ.ಎಸ್. ಪಿ. ಗಳನ್ನಾಗಿಯೂ ವರ್ಗಾಯಿಸಲಾಗಿದೆ.

ಶೀಘ್ರಲಿಪಿಗಾರರ ವಾರ್ಷಿಕ ಸಭೆ

ಧರ್ಮಪ್ರಕಾಶ ದೇವರಾಜ್ ಶಿವರಾಂರವರ ಅಧ್ಯಕ್ಷತೆಯಲ್ಲಿ ಮೈಸೂರು ಸಂಘದ ವಾರ್ಷಿಕ ಸಭೆಯು ನಡೆಯಿತು. ಸರ್ ಸಿ. ವಿ. ರಾಮನ್‌ರವರ ಛಾಯಾಚಿತ್ರವನ್ನು ಅಧ್ಯಕ್ಷರು ಅನಾವರಣ ಮಾಡಿದರು. ಅಲ್ಲದೆ ಸರ್ಕಾರಿ ನೌಕರರ ಹಿತದ ಸಲುವಾಗಿ ಕೆಲವು ಸೂಚನೆಗಳನ್ನಿತ್ತು ಭಾಷಣ ಮಾಡಿದರು. ಶ್ರೀ ಎ. ಡಿ. ಗಣೇಶರಾಯರು ಸಂಘಕ್ಕೆ ನೂರು ರೂಪಾಯಿಗಳನ್ನು ಕೊಟ್ಟರು.

ಕಾರ್ಮಿಕರಿಗೆ ರೂಸ್‌ವೆಲ್ಟರ ಸಂದೇಶ

"ನಾವು ಕಳೆದ ೨೪ ವರ್ಷಗಳಲ್ಲಿ ವಿಶ್ವ ಸಂಗ್ರಾಮದಲ್ಲಿ ಜಯಶೀಲರಾಗಿದ್ದೇವೆ. ಈಗ ಅವಶ್ಯಕವಾದ ಹೆಚ್ಚಿನ ಸಮರವು ನಡೆಯುತ್ತಲಿದೆ. ಪ್ರಪಂಚದಲ್ಲಿರುವ ಸ್ವತಂತ್ರಪ್ರಿಯ ಪ್ರಜೆಗಳ ಭವಿಷ್ಯ ಈ ಯುದ್ಧದ ಜಯಾಪಜಯಗಳನ್ನವಲಂಬಿಸಿದೆ. ನಾವೆಲ್ಲಾ ನಮ್ಮ ಸರ್ವಶಕ್ತಿಯನ್ನು ಉಪಯೋಗಿಸಿ ಈ ಯುದ್ಧದಲ್ಲಿ ಜಯ ಗಳಿಸಲು ಹೋರಾಡುತ್ತಿದ್ದೇನೆ. ಆದ್ದರಿಂದ ಮಾನವ ಶಕ್ತಿ ಮತ್ತೆ ಗುಲಾಮತನಕ್ಕೆ ಸೋಲದಂತೆ ಪ್ರಯತ್ನಿಸುತ್ತಿದ್ದೇವೆ. ನಾವು ಪಾಶವೀ ಬಲಗಳ ಗುಲಾಮರಾಗಲೊಲ್ಲೆವು" ಎಂದು ಅಧ್ಯಕ್ಷ ರೂಸ್‌ವೆಲ್ಟರು ಕಾರ್ಮಿಕ ದಿನಾಚರಣೆ ಸಂದರ್ಭದಲ್ಲಿ ಸಂದೇಶವಿತ್ತಿರುವರು.

ಸತಿ ರೂಸ್‌ವೆಲ್ಟರಿಗೆ ಸಮರ್ಪಣೆ

ಆಸ್ಟ್ರೇಲಿಯಾದವರನ್ನು ಕುರಿತು ಹಿಡಿದ ಕ್ಯಾಪ್ಟನ್ ಫೋರ್ಡ್‌ನ್ನು ಕ ... ಪ್ರಧಾನಿ ಕರ್ಟಿನ್‌ರವರು ಸತಿ ರೂಸ್‌ವೆಲ್ಟರಿಗೆ ಸಮರ್ಪಿಸಿದರು.

ಪ್ರಧಾನ ಸೇನಾನಿ ಮೇಲೆ ಸ್ಲೊವಾಕ್ ಸೈನಿಕರ ದಂಗೆ

ಸ್ಲೊವಾಕಿಯಾದ ಬ್ರಾಟಿಸ್ಲಾವದಲ್ಲಿ ೧೫೦ ಸಾವಿರ ಜನ ಸ್ಲೊವಾಕ್ ಸೈನಿಕರು ತಮ್ಮ ಪ್ರಧಾನಿ ಮೇಲೆ ದಂಗೆ ಎದ್ದದ್ದಾಗಿಯೂ, ಜರ್ಮನ್ ಸೈನಿಕರು ದಂಗೆಯನ್ನು ಅಡಗಿಸಿ, ಆ ಸೈನಿಕರನ್ನು ಜರ್ಮನಿಗೆ ಸಾಗಿಸಿದರೆಂದೂ ವರದಿಯಾಗಿದೆ.

ಜರ್ಮನಿ ಮೇಲೆ ಅತ್ಯುಗ್ರ ದಂಡಯಾತ್ರೆ

ವಾಷಿಂಗ್‌ಟನ್ನಿನಲ್ಲಿ ಸೇರಿರುವ ಚರ್ಚಿಲ್-ರೂಸ್‌ವೆಲ್ಟರ ಮಾತುಕತೆ ಇಟಲಿ-ಜರ್ಮನಿಗಳಮೇಲೆ ಯುದ್ಧ ಮುಂದುವರಿಸುವುದಕ್ಕೆ ಸಂಬಂಧಪಟ್ಟಿದೆಯೆಂದು ಹೇಳಲಾಗಿದೆ.

೧೯೪೪ ರಲ್ಲಿ ಜರ್ಮನ್ ಮೇಲೆ ಅತ್ಯುಗ್ರ ದಂಡಯಾತ್ರೆಯನ್ನು ಕೈಗೊಳ್ಳಲಾಗುವುದೆಂದೂ, ಅಕ್ರಮಿತ ರಾಷ್ಟ್ರಗಳ ದಂಗೆ ಏಳುವುದರ ಮೇಲೆ ಭಾರಹಾಕಿ ಕಾಲಕಳೆಯುವುದಕ್ಕಿಂತ, ತಮ್ಮ ರಂಗದಿಂದ ಹೊರಗಿನ ಜರ್ಮನ್ ಬಲವನ್ನು ಎದುರಿಸಲು ಶಕ್ತ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆಯೆಂದೂ ಹೇಳಲಾಗಿದೆ.

ನ್ಯೂಗಿನಿ ಮೇಲೆ ಮಿತ್ರ ದಂಡಯಾತ್ರೆ

ಮಿತ್ರರು ನ್ಯೂಗಿನಿದ್ವೀಪದ ಮೇಲೆ ಘೋರದ ದಂಡಯಾತ್ರೆಯನ್ನು ಆರಂಭಿಸಿರುವರು. ಮಿತ್ರ ಸೇನೆಯು ಈಗಾಗಲೇ ಲೇ ನೆಲೆಯ ಬಳಿ ಬಂದಿಳಿದಿವೆಯೆಂದು ವರದಿಯಾಗಿದೆ. ರಾಬೂಲಿನ ಮೇಲೆ ಮಹತ್ತರ ಧಾಳಿ ಮಾಡಲಾಯಿತು.

* * *

ಇಟಲಿ ಅನೇಕ ಪ್ರದೇಶಗಳ ಆಕ್ರಮಣ

ಬ್ರಿ॥ ಮತ್ತು ಕೆನಡಿಯನ್ ಪಡೆಗಳು ಮೆಸ್ಸಿನಾ ಜಲಸಂಧಿಗೆ ಅಭಿಮುಖವಾಗಿರುವ ದಕ್ಷಿಣ ಇಟಲಿಯ ಮುಖ್ಯ ಪ್ರದೇಶಗಳನ್ನೆಲ್ಲಾ ತಮ್ಮ ವಶದಲ್ಲಿಟ್ಟುಕೊಂಡಿವೆ. ೪೦ ಮೈಲಿ ಉದ್ದ ಮತ್ತು ೬ ಮೈಲಿಯ ಅಗಲವುಳ್ಳ ಅಂದರೆ ಉತ್ತರದಲ್ಲಿ ಬಗ್ನಾರದಿಂದ ದಕ್ಷಿಣ ಮೆಲಿಟೊ ವರೆಗೆ ಮುಖ್ಯ ಸ್ಥಳವನ್ನು ಮಿತ್ರರು ಸ್ಥಾಪನೆಮಾಡಿರುವರು. ಈ ೬ ನಗರಗಳನ್ನು ಕೂಡಿಸುವ ತೀರದ ರಸ್ತೆಗಳೆಲ್ಲ ಮಿತ್ರರ ವಶವಾಗಿದೆ. ಇಟಾಲಿಯನ್ ಹಿಂದೂಣೆ ಪಡೆಗಳು ಸಾಮಾನ್ಯ ಕೈ ಪ್ರತಿಭಟನೆ ಮಾಡುತ್ತಿವೆ. ಕೆಲವು ದಿವಸಗಳಿಂದ ಅನೇಕ ಸಹಸ್ರ ಶತ್ರುಸೈನಿಕರು ಸೆರೆ ಸಿಕ್ಕಿರುವರು.

ಡೆನ್ಮಾರ್ಕಿನಲ್ಲಿ ತೀವ್ರ ಘಟನೆಗಳು

ಡೆನ್ಮಾರ್ಕಿನಲ್ಲಿ ರಾಷ್ಟ್ರೀಯ ಆಂದೋಳನವು ಹೆಚ್ಚಿ ದಿನದಿನಕ್ಕೂ ಪರಿಸ್ಥಿತಿ ತುಂಬಾ ಉಗ್ರವಾಗುತ್ತಿದೆ. ಜರ್ಮನ್ ವಿರುದ್ಧವಾಗಿ ವಿನಾಶಕೃತ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಮುಖ ರೈಲ್ವೆಯನ್ನು ನಾಶಗೊಳಿಸಲಾಯಿತು. ಕ್ರಿಶ್ಚಿಯನ್ ನೌಕಾನೆಲೆಯನ್ನು ನಿರ್ನಾಮಮಾಡಲಾಗಿದೆ. ರೈಲ್ವೆ ಸಿಗ್ನಲ್ಲಿನಲ್ಲಿ ನಂದಲ್ಲಿ ಆಸ್ಫೋಟನೆಗಳು ನಡೆಯಿತು.

ಬಂಗಾಳ ಕ್ಷಾಮನಿವಾರಣ ಹುಂಡಿಕೆ

ಸಂಘಜೀವಿಗಳ ಸಭೆಯೊಂದು ಲಾಲಾ ರಾಮ್ ಚಂದ್ ಶರ್ಮರ್ ಅಧ್ಯಕ್ಷತೆಯಲ್ಲಿ ಸೇರಿ ಬಂಗಾಳ ಪರಿಹಾರ ನಿಧಿಗೆ ೧ ಲಕ್ಷ ರೂ. ಸಹಾಯ ಮಾಡಲು ತೀರ್ಮಾನಿಸಲಾಯಿತು. ಮಾರ್ವಾಡಿ ಪರಿಹಾರ ಸಮಿತಿಯವರು ೧ ಲಕ್ಷ ರೂ. ಶೇಖರಿಸಲಾಗಿದೆ ಈ ಸಂಸ್ಥೆಯು ೧೫ ಉಚಿತ ಭೋಜನಶಾಲೆಗಳನ್ನು ತೆರೆದಿದೆ ಮತ್ತು ಹಳ್ಳಿಗಳಲ್ಲಿ ಇವುಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸಲಿದೆ. ಅಲ್ಲದೆ ೧೦ ಲಕ್ಷ ರೂ. ಸಹಾಯಬೇಕೆಂದು ವಿನಂತಿಮಾಡಿರುವುದು.

ಡಾ॥ ಶ್ಯಾಮಪ್ರಸಾದ ಮುಖರ್ಜಿಯವರು ಬಂಗಾಳದ ಅನಾಥ ಮಕ್ಕಳ ಪೈಕಿ ೧೦೦ ಜನರನ್ನು ಲಾಹೋರಿಗೆ ಕಳುಹಿಸಲಾಗುವುದೆಂದೂ, ರೈಲ್ವೆ ಸೌಕರ್ಯ ದೊರೆತಂತೆ ಇನ್ನುಳಿದ ಮಕ್ಕಳನ್ನು ರವಾನಿಸಲಾಗುವುದೆಂದೂ ಹೇಳಿದ್ದಾರೆ.

ಒರಿಸ್ಸಾದಿಂದ ಬಂಗಾಳಕ್ಕೆ ೬೦೦ ಸರ ಮಣ ಅಕ್ಕಿಯನ್ನು ಪ್ರಧಾನಿ ಪಾಲಿ ಮಡಿ ರಾಜರವರು ಮತ್ತು ಮದ್ರಾಸಿನಿಂದ ಬ್ರಾಡ್‌ಸ್ಟರವರು ಕಳುಹಿಸಿರುವರು ೬೨೦ ಟನ್ ಅಕ್ಕಿ ಕಳಿಸಲೊಪ್ಪಿರುತ್ತಾರೆ.

—

ಆ ಕಾ ಶ ವಾ ಣಿ

ಸೆಪ್ಟೆಂಬರ್ ೮ ನೇ ಬುಧವಾರ

ಹಾಡುಗಾರಿಕೆ : ವಿದ್ವಾನ್ ಎಸ್. ಬಿ. ಸುಬ್ರಹ್ಮಣ್ಯಂರವರಿಂದ.

RETURN TICKET T
RADIANT YOUTH
AT
New Royal Dispensary
Ashoka Road, Mysore.

Available:—
(1) Mixed Fertilisers
(2) Copper Sulphate
(3) Bavaria Pencils, Etc.
Enquire at:—
SRI UMAMAHESWARI AND C
"Lakshmisthanam",
Geetha Road, Mysor

Edited, printed and pub shed by A. R. Nagaraja at the Sadhvi Press, D.Su biah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಜಿ. ಪುಟ್ಟಣ್ಣಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.— ಚಿಲ್ಲರೆಯಾಗಿ ಮುದ್ದೆ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುವುದಿಲ್ಲ. ಇಲ್ಲೂ ಮತ್ತು ಸೆಂಟ್ರಲ್ ಬಜಾರ್ ಆಫೀಸಿನಲ್ಲೂ ಅಕ್ಕಿಯೂ ಮತ್ತು ೧ ರೂ ಗೆ ೬ ಸೇರವೇ ದೊರೆಯುತ್ತೆ.

ಸಂಪುಟ ೨] ಬುಧವಾರ ೮—೯—೪೩ [ಸಂಚಿಕೆ ೪೭

ಕೆಲಿಬ್ರಿಯಾವನ್ನು ಆಕ್ಸಿಸ್ ತ್ಯಜಿಸಿದರು

ಅಥೆನ್ಸ್ ಮತ್ತು ಸಾಲೋನಿಕಾವನ್ನು ನಾಜಿ ಆಕ್ರಮಿಸಿದರು

ಇಟಲಿ ಶಾಂತಿ ಸಂಧಾನಕ್ಕೆ ರೋಂ ರೇಡಿಯೋ ಮನವಿ

ಕೆಲಿಬ್ರಿಯಾ ಖಾಲಿಮಾಡಲಾಗುತ್ತಿದೆ

ಇಟಲಿಯಲ್ಲಿ ೮ನೇ ಬ್ರಿಟಿಷ್ ಸೈನ್ಯ ದೂರ ಮುಂದುವರಿದಿರುವರೆಂದೂ, ಪಾಲ್ಮಿ ಮತ್ತು ಡಿಲಿನವೋ ನಗರಗಳನ್ನು ಆಕ್ರಮಿಸಲಾಗಿದೆಯೆಂದು ವರದಿಯಾಗಿದೆ.

ದಕ್ಷಿಣ ಕ್ಯಾಲಬ್ರಿಯಾವನ್ನು ಇಟಾಲಿಯನ್ ಮತ್ತು ಜರ್ಮನ್ ಸೈನ್ಯಗಳು ಖಾಲಿ ಮಾಡುತ್ತಿವೆಯೆಂದೂ, ಮತ್ತು ಅಲ್ಲಿನ ಜನರನ್ನು ಬೇರೆ ಕಡೆಗೆ ಕಳುಹಿಸಲಾಗುತ್ತಿದೆಯೆಂದೂ ಹೇಳಲಾಗಿದೆ.

ಅನೇಕ ಇಟಾಲಿಯನ್ ಸೈನಿಕರು ಬ್ರಿಟಿಷರಿಗೆ ಬಂದು ಸೆರೆ ಸಿಕ್ಕಿರುವರೆಂದು ತಿಳಿದುಕೊಳ್ಳುತ್ತಿದ್ದಾರೆ.

ಅಥೆನ್ಸ್ ಮತ್ತು ಸಾಲೋನಿಕಗಳ ಆಕ್ರಮಣ

ಗ್ರೀಕ್ ದೇಶದ ಅಥೆನ್ಸ್ ಮತ್ತು ಸಾಲೋನಿಕಾ ನಗರಗಳನ್ನು ಜರ್ಮನರು ಆಕ್ರಮಿಸಿರುವರೆಂದು ಬುಡಾಪೆಸ್ಟ್ ಪತ್ರಿಕೆಯೊಂದು ತಿಳಿಸುತ್ತದೆ. ಇಟಾಲಿಯನರು ಇಲ್ಲಿಂದ ವಾಪಸು ಹೋಗಿರುವರೆಂದೂ, ಆ ನಗರಗಳ ರಸ್ತೆಯಲ್ಲಿ ಜರ್ಮನರು ಮೆಷೀನ್‌ಗನ್ನುಗಳನ್ನಿಟ್ಟು ದಂಗೆಯನ್ನು ಸದೆ ಬಡಿಯಲು ಸಿದ್ಧರಾಗಿರುವರೆಂದು ಹೇಳಲಾಗಿದೆ. ಅನೇಕ ರಾಜನೀತಿಜ್ಞರನ್ನೂ ಸ್ವದೇಶಾಭಿಮಾನಿಗಳನ್ನೂ ಜರ್ಮನರ ಬಂಧಿಗಳ ಶಿಬಿರಕ್ಕೆ ಕಳುಹಿಸಿದ್ದಾರೆ.

ಡಾನ್‌ಬಾಸ್ ಕ್ಷೇತ್ರದಿಂದ ಜರ್ಮನರ ಓಟ

ಕೋನಟೋಪ್‌ಜೇಸಿನಲ್ಲಿರುವ ಸ್ಟಾಲಿನೋ ನಗರಕ್ಕೆ ಕೇವಲ ೩ ಮೈಲಿ ದೂರದಲ್ಲಿ ರಷ್ಯನರು ಬಂದಿರುವರೆಂದೂ, ಈಗಾಗಲೇ ರಷ್ಯನ್ ಫಿರಂಗಿಗಳು ಬೆಂಕಿಯನ್ನು ಕಾರುತ್ತಿವೆಯೆಂದೂ ಹೇಳಲಾಗಿದೆ.

ಜರ್ಮನರು ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಯತ್ನಿಸಿ, ವಿನಾಶಕೃತ್ಯಗಳಿಗೆ ಆರಂಭಿಸಿದ್ದಾರೆ. ಹಳ್ಳಿಗಳು ಗಣಿಗಳನ್ನು ಪ್ರವಾಹದಿಂದ ತುಂಬಿ, ಕಾರ್ಖಾನೆಗಳನ್ನು ನಾಶಮಾಡಿ, ಅನೇಕ ಹಳ್ಳಿಗಳಿಗೆ ಬೆಂಕಿ ಇಡುತ್ತಿದ್ದಾರೆ. ಡಾನ್‌ಬಾಸ್ ಕ್ಷೇತ್ರದಿಂದ ಜರ್ಮನರು ಓಡುತ್ತಿದ್ದಾರೆ. ಕೀವ್ ಕಡೆಯಿಂದ ರಷ್ಯನರು ಶತ್ರುವನ್ನು ಹಿಂಬಾಲಿಸುತ್ತಿದ್ದಾರೆ.

ಸ್ಟಾಲಿನೋಕ್ಕೆ ಗಂಡಾಂತರ

ರಷ್ಯನ್ ಪಡೆಗಳು ಡೋನೇಜ್ ಪ್ರಾಂತ್ಯದಲ್ಲಿ ಜರ್ಮನರ ಅಧೀನದಲ್ಲಿರುವ ಭಾರಿ ಕೈಗಾರಿಕಾ ನಗರವಾದ ಸ್ಟಾಲಿನೋ ಮೇಲೆ ಫಿರಂಗಿಗಳಿಂದ ಶೆಲ್‌ಗಳ ಮಳೆಸುರಿಸುತ್ತಿದ್ದಾರೆ.

ಉತ್ತರದಲ್ಲಿ ಸ್ಮೋಲೆನ್‌ಸ್ಕ್ ರಂಗದಿಂದ ನೊವರಿಟ್ಸು, ದಕ್ಷಿಣದಲ್ಲಿ ಅಜೋವ್ ಸಮುದ್ರದವರೆಗೆ ಒಂದಂಗುಲ ಜಾಗ ಸಹ ಶತ್ರುಗಳಿಗೆ ಬಿಟ್ಟುಕೊಡದಂತೆ ರಷ್ಯನರು ಬಲವಾಗಿ ಕಾದಾಡುತ್ತಿರುತ್ತಾರೆ.

ಮಧ್ಯರಂಗದಲ್ಲಿ ಮುಖ್ಯ ರೈಲ್ವೆ ಜಂಕ್ಷನ್ ಆದ ಕೊನಟೋಪ್ ರಷ್ಯನ್ ವಶವಾಗಿದೆ.

ಬಾಲ್ಕನ್ ದಂಡಯಾತ್ರೆ

ಮಿತ್ರ ದಂಡಯಾತ್ರೆಯನ್ನು ಎದುರಿಸಲು ಇಟಲಿಗೆ ಆಗುವುದಿಲ್ಲವೆಂದೂ, ಇವರ ಪತನದಿಂದ ಜರ್ಮನಿಗೆ ತೊಂದರೆಯಾಗುವುದೆಂದೂ ಟರ್ಕಿಷ್ ಪತ್ರಿಕೆಯೊಂದು ತಿಳಿಸುತ್ತದೆ. ಮಿತ್ರರ ಇಟಲಿ ಮುತ್ತಿಗೆ ಇಟಲಿ ಆಕ್ರಮಿಸಿಕೊಳ್ಳಬೇಕೆಂಬ ಧ್ಯೇಯವಲ್ಲ. ಇದರಿಂದ ಜರ್ಮನಿಯನ್ನು ಸದೆಬಡಿಯಲು ಉಪಯೋಗವಾಗಲೆಂದು ಈ ಕಾರ್ಯಕ್ರಮ ಹಿಡಿದು ಕೊಂಡಿದ್ದಾರೆ. ಶೀಘ್ರದಲ್ಲಿಯೇ ಬಾಲ್ಕನ್ ದಂಡಯಾತ್ರೆ ಆರಂಭವಾಗುವುದೆಂದು ಹೇಳಲಾಗಿದೆ. ಒಂದು ಕಡೆಯಿಂದ ಮಿತ್ರರು ಪಶ್ಚಿಮ ಯೂರೋಪಿನಲ್ಲಿ ಜರ್ಮನಿಯನ್ನು ಮುತ್ತುವುದು ಮತ್ತೊಂದು ಕಡೆ, ರಷ್ಯನರ ಮುಂದೋಟ ಇವುಗಳಲ್ಲಿ ಸಿಕ್ಕಿ, ಜರ್ಮನರ ಅವಸ್ಥೆ ಬಹಳ ಕಷ್ಟಕ್ಕೀಡಾಗುವುದೆಂದು ಭಾವಿಸಲಾಗಿದೆ.

೨೦,೦೦೦ ಜಪಾನ್ ಸೈನಿಕರ ಸೆರೆ

ನ್ಯೂಗಿನಿಯಾದಲ್ಲಿ ಮಿತ್ರ ಸೇನೆಗಳಿಂದ ಆವೃತವಾಗಿರುವ ಲೈ ಮತ್ತು ಸಾಲಮೋವದಲ್ಲಿ ೨೦ ಸಾವಿರ ಜಪಾನ್ ಸೈನಿಕರ ಸೆರೆ ಸಿಕ್ಕಿದ್ದಾರೆಂದು ಹೇಳಲಾಗಿದೆ.

ರೈಲು ಅಪಘಾತದಿಂದ ಮರಣ

ಫಿಲಡೆಲ್ಫಿಯಾದಿಂದ ನ್ಯೂಯಾರ್ಕಿಗೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲು ಹಳಿತಪ್ಪಿ ಬಿದ್ದುದರಿಂದ, ೭೫ ಮಂದಿ ಸತ್ತರೆಂದೂ, ೬೦ ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ.

ಆಹಾರ ಪರಿಸ್ಥಿತಿ ವಿಷಮವಾಗುತ್ತಿದೆ

ಮೈಸೂರು ೮

ಮೈಸೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಶ್ರೀ ... ಕೇಸರಿ ಕೇಶವರವರು ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಅನೇಕ ವಿದ್ಯಾರ್ಥಿಗಳೂ ಮತ್ತು ಇತರ ಮಹನೀಯರೂ ನೆರೆದಿದ್ದರು. ಶ್ರೀಗಳಾದ ಸಂಗಪ್ಪ, ಆರ್. ... ಎಲ್. ರಾವ್, ಟಿ ಕೃಷ್ಣರಾಯರು ಮತ್ತು ಇತರರು ಇಂದಿನ ಆಹಾರ ಪರಿಸ್ಥಿತಿಯ ಬಗ್ಗೆ ಇರುವ ತೊಂದರೆಗಳನ್ನು ವಿವರಿಸಿದರು. ಬಂಗಾಳದಲ್ಲಿ ತಾಂಡವಾಡುತ್ತಿರುವ ಘೋರ ಕ್ಷಾಮವನ್ನು ಕುರಿತು ಮಾತನಾಡಿದರು. ಅದಕ್ಕಾಗಿ ಕೈಲಾದ ಮಟ್ಟಿಗೆ ಎಲ್ಲರೂ ಸಹಾಯನೀಡಬೇಕೆಂದು ಕೋರಿದರು. ನಮ್ಮ ದೇಶದಲ್ಲಿ ಇಂದಿನ ಆಹಾರ ಪರಿಸ್ಥಿತಿ, ರೇಷನ್ ಕ್ರಮದಿಂದುಂಟಾಗುತ್ತಿರುವ ಕಷ್ಟನಷ್ಟಗಳು ಇವುಗಳನ್ನು ವಿವರಿಸಿದರು. ಇದಕ್ಕಾಗಿ ಸರ್ಕಾರದವರು ತೆಗೆದುಕೊಳ್ಳುತ್ತಿರುವ ಕಾರ್ಯವು ಶ್ಲಾಘನೀಯವಾದರೂ ಅದರಲ್ಲಿ ಇನ್ನೂ ಮಾರ್ಪಾಡುಗಳಾಗಿ ಬಡ ಜನಗಳ ಅನುಕೂಲಕ್ಕನುಗುಣವಾಗಿ ಕಾರ್ಯಕ್ರಮ ಮಾಡುವುದು ಅತ್ಯವಶ್ಯವೆಂದು ತಿಳಿಸಿದರು.

ನಂತರ ಶ್ರೀ ಹೆಚ್. ಸಿ. ದಾಸಪ್ಪನವರು ಬಂಗಾಳದ ಕ್ಷಾಮದ ಪರಿಸ್ಥಿತಿಯನ್ನು ವರ್ಣಿಸಿ, ಅದೇ ಪರಿಸ್ಥಿತಿ ನಮ್ಮ ದೇಶಕ್ಕೆ ಬರುವುದಕ್ಕೆ ಮುಂಚೆಯೇ ಎಚ್ಚರಗೊಳ್ಳುವುದು ಉತ್ತಮವೆಂದು ತಿಳಿಸಿದರು. ... ಪ್ರತಿಯೊಬ್ಬರ ಸಹಕಾರ, ಸೌಹಾರ್ದಗಳು ಆವಶ್ಯಕವೆಂದೂ, ಪ್ರತಿ ಹಳ್ಳಿ, ತಾಲ್ಲೂಕುಗಳಲ್ಲೂ ಆಹಾರ ಪರಿಸ್ಥಿತಿ ವಿಚಾರಿಸಲು ಒಂದೊಂದು ಸಂಸ್ಥೆ ಸ್ಥಾಪಿತವಾಗಬೇಕೆಂದೂ ತಿಳಿಸಿದರು. ಸರ್ಕಾರದವರು ಅನುಸರಿಸುತ್ತಿರುವ ದಾಸ್ತಾನಿನ ಕ್ರಮ ಅಂದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೆಚ್ಚಿಗೆ ದಾಸ್ತಾನವನ್ನು ಸಾಗಿಸುವುದು ಅನುಚಿತವೆಂದೂ ಅಲ್ಲಿಯ ಹೆಚ್ಚಿನ ಆಹಾರ ಪದಾರ್ಥವನ್ನು ಅಲ್ಲೇ ಇಟ್ಟರೆ ಆ ಪ್ರದೇಶದ ಜನಗಳಿಗೆ ವಿನಿಯೋಗವಾಗಲು ತುಂಬಾ ಸಹಾಯವಾಗುವುದೆಂದೂ ಹೇಳಿದರು. ಹಾಗಿಲ್ಲದಿದ್ದರೆ ಜನಗಳು ಊರಿಂದೂರಿಗೆ ಬಂದು ಆಹಾರ ಪಡೆಯುವುದು ತುಂಬಾ ಕಷ್ಟವಾಗುವುದು. ಆದುದರಿಂದ ಸರ್ಕಾರದವರು ಪ್ರತಿ ಹಳ್ಳಿ ಮತ್ತು ಡಿಸ್ಟ್ರಿಕ್ಟುಗಳಲ್ಲಿರುವ ಹೆಚ್ಚಿನ ದಾಸ್ತಾನನ್ನು ಹೊರಗೆ ಸಾಗಿಸದೆ ಅಲ್ಲಿನ ಜನಗಳಿಗಾಗಿಯೇ ಉಪಯೋಗಿಸುವುದು ಬಹಳ ಅನುಕೂಲ ಮತ್ತು ಸಹಾಯವಾಗುವುದೆಂದು ಹೇಳಿದರು. ಆಹಾರ ಪರಿಸ್ಥಿತಿಯನ್ನು ಚರ್ಚಿಸುವ ಸಂಘಕ್ಕೆ ಎಲ್ಲರ ಸಹಕಾರವೂ ಆವಶ್ಯಕವೆಂದೂ ಇಂದಿನ ಸ್ಥಿತಿಯಲ್ಲಿ ಜನಗಳು ಪಡುತ್ತಿರುವ ಕಷ್ಟವನ್ನು ನಿವಾರಿಸುವುದು ಪ್ರತಿಯೊಬ್ಬರ ಕರ್ತವ್ಯವೆಂದೂ ತಿಳಿಸಿದರು.

ಬಂಗಾಳ ಕ್ಷಾಮನಿವಾರಣೆಗೆ ತಮ್ಮ ಕೈಲಾದ ಸಹಾಯವನ್ನು ನಗರದ ಜನಗಳು ನೀಡಬೇಕೆಂದು ಶ್ರೀ ಹೆಚ್. ಸಿ. ದಾಸಪ್ಪನವರು ಕೋರಿದರು.

ಶ್ರೀ ರಾಮಚಂದ್ರಶೆಟ್ಟರವರು ೫೦ ರೂಪಾಯಿಗಳನ್ನು ಉದಾರದಾನ ಮಾಡಿದರು.

ವಾರ್ಷಿಕೋತ್ಸವ

ಮೈಸೂರು ೭-೮

ಸಂಸ್ಕೃತ ಪಾಠಶಾಲೆ ವಿದ್ಯಾರ್ಥಿ ಸಂಘದ ದ್ವಾದಶ ವಾರ್ಷಿಕೋತ್ಸವವು ... ಸ್ವಾತಂತ್ರ್ಯೋತ್ಸವವು ನಿನ್ನೆ ಸಂಜೆ ನಡೆಯಿತು. ಶ್ರೀ ಕೆ. ಗುಂಡಪ್ಪನವರು ಅಧ್ಯಕ್ಷರಾಗಿದ್ದರು.

ಪ್ರಭಾತ್ ಅಮೆಚೂರ್ ಸಂಘ

ಮೈ॥ ಪ್ರಭಾತ್ ಅಮೆಚೂರ್ ಸಂಘದವರ ನಿನ್ನೆ ಸಂಜೆ ಒಂಟಿಕೊಪ್ಪಲಿನ ಆನಂದ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಸವಂತೆ ಅರಸಿನವರನ್ನು ಸದಸ್ಯರಿಗೆ ಪರಿಚಯಮಾಡಿಕೊಡಲು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಅಧ್ಯಕ್ಷರು ಕಲಾಭಿವೃದ್ಧಿಗೋಸ್ಕರ ಒಂದು ಸಂಸ್ಥೆಯನ್ನು ಏರ್ಪಡಿಸುವುದು ಶ್ಲಾಘನೀಯವೆಂದು ತಿಳಿಸಿ, ಸದಸ್ಯರೆಲ್ಲರೂ ಒಟ್ಟಿಗೆ ಕಲೆತು ಒಂದು ಕ್ರಮವನ್ನು ಅನುಸರಿಸಬೇಕೆಂದು ಉಪದೇಶಮಾಡಿ, ತಮ್ಮನ್ನು ಅಧ್ಯಕ್ಷರನ್ನಾಗಿ ನೇಮಿಸಿದುದಕ್ಕೆ ಅಭಿನಂದಿಸಿದರು. ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸಮೂರ್ತಿಗಳು ಕೆಲವು ಮಾತುಗಳನ್ನಾಡಿದರು. ಶ್ರೀ ನಂಜುಂಡಶಾಸ್ತ್ರಿ ... ವಂದನಾರ್ಪಣೆ ಆದನಂತರ ಸಭೆಯು ಮುಕ್ತಾಯವಾಯಿತು.

ಕಲ್ಕತ್ತಾದಲ್ಲಿ ಕ್ಷಾಮವ್ಯಾಪ್ತಿ

ಕಲ್ಕತ್ತಾ ನಗರದಲ್ಲಿ ಬೀದಿಯಲ್ಲಿ ಬಿದ್ದವರನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಸಾಗಿಸಲಾಯಿತು. ೩೦ ಮಂದಿ ಮೃತಪಟ್ಟರು.

ಗಂಜಾಮಿನಲ್ಲೂ ಕ್ಷಾಮವ್ಯಾಪ್ತಿ

ಗಂಜಾಂ ಜಿಲ್ಲೆಯ ಹಲವು ತಿಂಗಳಿಂದ ಇಲ್ಲಿಯವರೆಗೆ ಹೊಟ್ಟೆಗಿಲ್ಲದೆ ೩೦೦ ಮಂದಿ ಸತ್ತರೆಂದು ಅಧಿಕೃತ ಪ್ರಕಟಣೆಯಾಗಿದೆ.

ರಾಷ್ಟ್ರೀಯ ಸ್ವಾತಂತ್ರ್ಯ ಕಾಪಾಡಿದರೆ ಶಾಂತಿಗೆ ಸಿದ್ಧ

"ಇಟಲಿಯು ಶಾಂತಿ ಸಂಧಾನಕ್ಕೆ ಸಿದ್ಧವಾಗಿದೆ. ಆದರೆ ತನ್ನ ಸ್ವಾತಂತ್ರ್ಯ ಮತ್ತು ದೇಶದ ಏಕೀಭಾವವನ್ನು ಮನ್ನಿಸಬೇಕು ... ನಾವು ಸಿದ್ಧರಿದ್ದೇವೆ ... ಫ್ಯಾಸಿಸ್ಟ್ ಆಡಳಿತವನ್ನು ರದ್ದು ಮಾಡಿ, ಪ್ರಜಾ ಪ್ರಭುತ್ವಕ್ಕೆ ಹಿಂದಿರುಗಿದ್ದೇವೆ ... ನಮ್ಮ ಘನತೆಗೆ ತಕ್ಕುದಲ್ಲ" ಎಂಬುದಾಗಿ ರೋಂ ರೇಡಿಯೋ ಬ್ರಿಟಿಷ್ ... ಬ್ರಾಡ್‌ಕ್ಯಾಸ್ಟಿನಲ್ಲಿ ಮನವಿ ಮಾಡಿಕೊಂಡಿದೆ.

ರಾಗಿ ರಫ್ತಿಗೆ ಪ್ರತಿಬಂಧಕ

ಬೊಂಬಾಯಿ ಸರ್ಕಾರ ಆಹಾರ ... ಹತೋಟಿ ಶಾಸನವನ್ನು ... ಈ ಪ್ರಾಂತ್ಯದ ... ರಾಗಿ ರಫ್ತು ... ಪ್ರತಿಬಂಧಕವೆಂದೂ, ಈ ಆಜ್ಞೆಯನ್ನು ಉಲ್ಲಂಘಿಸಿದವರ ... ಶಿಕ್ಷೆ ... ಕೊಡಲಾಗಿದೆಯೆಂದೂ ವರದಿಯಾಗಿದೆ.

ಆಹಾರ ಪದಾರ್ಥಗಳ ... ಹೆಚ್ಚು, ತಪ್ಪು ... ಪ್ರತಿಯೊಬ್ಬರೂ ... ರಿಜಿಸ್ಟರ್ ... ತಿಳಿಸಲಾಗಿದೆ.

ಪತಿ ಮೃತಿಹೊಂದಿದ್ದಕ್ಕೆ ಪತ್ನಿಯ ಆತ್ಮಹತ್ಯೆ

ಬೆಂಗಳೂರು ೭

ಚಿಕ್ಕಪೇಟೆಯಲ್ಲಿ ತನ್ನ ಪತಿಯು ಮೃತಿಹೊಂದಿದನೆಂಬ ವಾರ್ತೆ ಕೇಳಿದು ದುಃಖವನ್ನು ಸಹಿಸಲಾರದೆ ಶಾರದಾ ಎಂಬಾಕೆಯು [illegible]ಪುರದ ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಪ್ರಸಂಗ ಪೋಲೀಸರಿಗೆ ವರದಿಯಾಗಿದೆ.

ಒಡವೆ ದುರುಪಯೋಗಕ್ಕೆ ಶಿಕ್ಷೆ

ವಿಶ್ವೇಶ್ವರಪುರದ ರಸ್ತೆಯಲ್ಲಿ ಬಿದ್ದಿದ್ದ ಸುಮಾರು ೧೬೦೦ ರೂ. ಬೆಲೆ ಬಾಳುವ ಒಡವೆಗಳನ್ನು ತೆಗೆದುಕೊಂಡು ದುರುಪಯೋಗ ಪಡಿಸಿಕೊಂಡನೆಂದು ಫಕೃದ್ದೀನ್ ಎಂಬುವನಿಗೆ ೧ ತಿಂಗಳು ಕಠಿಣ ಶಿಕ್ಷೆ ವಿಧಿಸಲಾಗಿದೆ.

ಇದ್ದಿಲು ರಫ್ತಿಗೆ ಪ್ರತಿಬಂಧಕ

ಮೈಸೂರು ಸಂಸ್ಥಾನಕ್ಕೆ ಸೇರಿದ ಪ್ರದೇಶವಾಗಿದ್ದು ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿರುವ ಯಾವ [illegible] ಪ್ರದೇಶದಿಂದಲೂ ಮತ್ತು ಬೆಂಗಳೂರು ದಂಡಿನಿಂದಲೂ ಕಲೆಕ್ಟರ್ ಮತ್ತು ಆಯಾ ಪ್ರದೇಶದ ಜಿಲ್ಲಾಧಿಕಾರಿಗಳ ಅಪ್ಪಣೆಯಿಲ್ಲದೆ ಯಾವ ಬಗೆಯ ಇದ್ದಿಲನ್ನೂ ಸಾಗಿಸಕೂಡದೆಂದು ಬ್ರಿಟಿಷ್ ರೆಸಿಡೆಂಟರು ಆಜ್ಞೆ ಮಾಡಿದ್ದಾರೆ.

ಬೊಂಬಾಯಿ ಕೇಡಿ ದಸ್ತಗಿರಿ

ರಾಜಾ ಮಹಲ್ ಗುಟ್ಟಹಳ್ಳಿಯ ಮನೆಯೊಂದರ ಬೀಗವನ್ನು ಮುರಿದು ಸುಮಾರು ೩೦೦ ರೂ. ಬೆಲೆ ಬಾಳುವ ಒಡವೆ, ಬಟ್ಟೆಗಳನ್ನು ಕಳುವುಮಾಡಿ ಓಡಿಹೋಗುತ್ತಿದ್ದ ಬೊಂಬಾಯಿನ ಖ್ಯಾತ ಕೇಡಿಯಾದ [illegible] ಎಂಬುವನನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಪತ್ರಿಕೋದ್ಯೋಗಿಗಳ ಸಹಾಯ ನಿಧಿ

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಹಾಯ ನಿಧಿಗೆ ಘನವೆತ್ತ [illegible] ವಾಣಿಜ್ಯಮಂತ್ರಿಗಳಾದ ಶ್ರೀ ಕೆ. ವಿ. [illegible]ರವರು ೧೦೦ ರೂ. ಗಳನ್ನು ಕೊಟ್ಟಿದ್ದಾರೆ.

ಸ್ಪೆಷಲ್ ಡ್ಯೂಟಿ ಆಫೀಸರ್

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯಟ್ಟಿನ ರಿಜಿಸ್ಟ್ರಾರಾದ ಶ್ರೀ ಬಿ. ರಂಗ[illegible]ನವರನ್ನು ದಸರಾ ಉತ್ಸವದ ಸಂಬಂಧದಲ್ಲಿ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನೇಮಿಸಲಾಗಿದೆ.

ಮಹಾಪ್ರಭುಗಳ ಭಾವಚಿತ್ರ ಅನಾವರಣ

ವಿದ್ಯಾಸಚಿವರಾದ ಶ್ರೀ ಅಪ್ಪಾಜಿಗೌಡರು ದಾವಣಗೆರೆಯ ಪೌರಸಭಾ ಮಂದಿರದಲ್ಲಿ ಶ್ರೀಮನ್ಮಹಾರಾಜರವರ ಭಾವಚಿತ್ರವನ್ನು ಅನಾವರಣ ಮಾಡಿದರು. ಜಿಲ್ಲೆಯ ವತ್ತಳಿಗೆ ಉತ್ತರವಾಗಿ ದಾವಣಗೆರೆಯಲ್ಲಿ ಒಂದು ಇಂಟರ್ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಇನ್ನು ಕೆಲವು ವರ್ಷಗಳಲ್ಲಿ [illegible] ದಾವಣಗೆರೆಯಲ್ಲಿ ಎಲ್ಲಾ ಸೌಕರ್ಯಗಳನ್ನೂ [illegible] ಕಾಲೇಜನ್ನು ಸ್ಥಾಪಿಸುವ ವಿಚಾರ ಸರ್ಕಾರದವರು ಪರ್ಯಾಲೋಚಿಸಿರುವುದಾಗಿ ತಿಳಿಸಿದರು.

ಸರ್ಕಾರಿ ನೌಕರಿಗಳಿಗೆ ಜಾತಿಯೊರೆಯು ಬೇಡ !

"ಸರ್ಕಾರಿ ನೌಕರಿಗಳಿಗೆ ಜಾತಿಯೊರೆಯ, [illegible] ಆಧಾರದ ಮೇಲೆ ನೇಮಕ ಮಾಡಬಾರದು. ಭಾರತ ಮತ್ತು ಮೈಸೂರಿನಲ್ಲಿ ಹಿಂದೂಗಳು ಸೇವೆಮಾಡಿ ಗೌರವವಾದ ಜೀವನೋಪಾಯಗಳನ್ನು ಕಲ್ಪಿಸಿಕೊಳ್ಳಲು ಬೇಕಾದಷ್ಟು ಅವಕಾಶವಿದೆ. ಸಿವಿಲ್ ಸರ್ವೀಸ್ ಕೈಗಾರಿಕೆ ಮತ್ತು ವಾಣಿಜ್ಯಸಂಸ್ಥೆಗಳಲ್ಲಿ ಉದ್ಯೋಗಗಳನ್ನು ಪಡೆಯಲು ಯತ್ನಮಾಡಿರಿ" ಎಂಬುದಾಗಿ ಬೆಂಗಳೂರಿನ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಸಂಸ್ಥೆಯ ವಾರ್ಷಿಕ ಸಮಾರಂಭದಲ್ಲಿ ದಿವಾನ್ ಬಹದ್ದೂರ್ ಶ್ರೀ ಕೆ. ವಿ. [illegible]ರವರು ವಾಣಿಜ್ಯ ವಿದ್ಯಾರ್ಥಿಗಳಿಗೆ ಉಪದೇಶಮಾಡಿದರು.

ಗ್ರಾಮಾಭಿವೃದ್ಧಿ ಪ್ರಚಾರಕಾರ್ಯದ ಅಧಿಕಾರಿಗಳು

ಶಿವಮೊಗ್ಗಾ [illegible] ಶ್ರೀ [illegible] ರವರನ್ನು ಸಂಸ್ಥಾನದ ಗ್ರಾಮಾಭಿವೃದ್ಧಿ ಯೋಜನೆಗಳ ಪ್ರಚಾರಕರನ್ನಾಗಿ ೭ ವರ್ಷ ಕಾಲ [illegible] ೧೨೦ ರೂ. ಸಂಬಳದ ಮೇಲೆ ಸರ್ಕಾರದವರು ನೇಮಿಸಿದ್ದಾರೆ.

ನಾಜಿ ಕೃತ್ಯ

[illegible] ನಗರವನ್ನು ೭ ನೇ ತಾ [illegible] ಜರ್ಮನರು ಆಕ್ರಮಿಸಿದಾಗ ಅವರು ನಡೆಸಿದ ಹಿಂಸಾಕೃತ್ಯವು ಈಗ ಹೊರಬಿದ್ದಿದೆ. ೨೦೦ ಮಂದಿ [illegible] ಒಂದು ಕಟ್ಟಡದಲ್ಲಿ ಇಟ್ಟಿದ್ದ [illegible] ಅಗ್ನಿಕ್ರಿಯೆಯೊಂದನ್ನು ಸಂಪೂರ್ಣವಾಗಿ ಸುಡಲಾಯಿತು. [illegible] ಜನರನ್ನು ಮನೆಯವರಿಗಳನ್ನು ಬಿಟ್ಟು ಓಡಿಸಲಾಯಿತು. ಆ ನಗರದ ಕೇಂದ್ರ ಭಾಗವನ್ನು ಪೂರ್ಣವಾಗಿ ಭಸ್ಮಮಾಡಿದ್ದಾರೆ.

ಇಟಲಿಯಲ್ಲಿ ಮಿತ್ರರ ಮುಂದೋಟ

ದಕ್ಷಿಣ ಇಟಲಿ ತೀರದ ಉತ್ತರ ದಿಕ್ಕಿನಲ್ಲಿ ಬ್ರಿಟಿಷ್ ಸೈನ್ಯವು ಒಂದೇ ಸಮನಾಗಿ ಮುಂದಕ್ಕೆ ನುಗ್ಗುತ್ತ ಪ್ರಗತಿಯನ್ನು ಸಾಧಿಸುತ್ತಿದೆ. ಮಿತ್ರ ಸೇನೆಗಳು ಇನ್ನೂ ೧೦ ಊರುಗಳನ್ನು ವಶಪಡಿಸಿಕೊಂಡು ಒಳದೇಶದ ೧೦ ಮೈಲಿವರೆಗೆ ನುಗ್ಗಿವೆಯೆಂದು ವರದಿಯಾಗಿದೆ. ಇದುವರೆಗೆ ೩ ಸಾವಿರ ಕೈದಿಗಳನ್ನು ಸೆರೆಹಿಡಿಯಲಾಗಿದೆ.

ರೋಮಿಗೆ ೮೦ ಮೈಲಿ ದೂರದಲ್ಲಿರುವ ನೇಪಲ್ಸ್ ಮೇಲೆ ಮತ್ತು ನೇಪಲ್ಸ್ ಪ್ರದೇಶಗಳ ಮೇಲೂ ಮಿತ್ರ ವಿಮಾನಗಳು ಧಾಳಿ ಮಾಡಿ, ೭ ಶತ್ರು ವಿಮಾನಗಳನ್ನು ನಾಶ ಮಾಡಿರುವುವು.

ಜರ್ಮನಿ ಮೇಲೆ ಅಗಾಧ ಧಾಳಿ

ಪಶ್ಚಿಮ ಯೂರೋಪಿನಲ್ಲಿ ಜರ್ಮನಿ, ಫ್ರಾನ್ಸ್, ಹಾಲೆಂಡ್ ಮತ್ತು ಬೆಲ್ಜಿಯಂಗಳ ಮೇಲೆ ಬ್ರಿಟಿಷ್ ಗುರಿಗಳ ಮೇಲೆ ಬಾರಿ ಧಾಳಿ ನಡೆಯಿತಾದರೆ [illegible] ಮತ್ತು [illegible] ಮೇಲೆ ನಡೆದ [illegible] ಧಾಳಿ ನಡೆಯಿತು. [illegible] ಮಿತ್ರ ವಿಮಾನಗಳು ಮಾಯವಾದುವು. ಒಂದಲ್ಲ [illegible] ವಿಮಾನಗಳು ನಾಶವಾದವು.

ಶತ್ರು ಸುಖ್ಯಸನೆಲೆಗಳಲ್ಲಿ ಮಿತ್ರ ಪಡೆ ಮುನುಗ್ಗುತ್ತಿವೆ

ಮಿತ್ರ ಸೇನೆಗಳು ನ್ಯೂಗಿನಿ ಪ್ರಮುಖ ಶತ್ರು ನೆಲೆಗಳಾದ ಲೈ ಮತ್ತು ಸಾಲ ಮೊವಾಗಳ ಸುತ್ತಲೂ ಇರುವ ಬಹಿರಾವರ್ತವನ್ನು ದಾಟಿ, ಮುನ್ನುಗ್ಗುತ್ತಿರುವ ಫಲವಾಗಿ ಶತ್ರುಗಳು ತಪ್ಪಿಸಿಕೊಂಡು ಹೋಗಲು ಬೇರೆ ಮಾರ್ಗ ಇಲ್ಲದಂತಾಗಿರುವುದು.

ಲೈಗೆ ಪಶ್ಚಿಮದಲ್ಲಿರುವ ಮೂರ್ಖಾಂ ಕಣಿವೆಯಲ್ಲಿ ಮಿತ್ರ ಪ್ಯಾರಾಚೂಟ್ ಸೈನಿಕರಿಳಿದಿರುವ ಪ್ರಯುಕ್ತ ಶತ್ರುಗಳಿಗೆ 'ಲೈಗೆ' ಬರುತ್ತಿದ್ದ ಸರಬರಾಜೆಲ್ಲ ನಿಂತುಹೋಗಿದೆ. ಲೈಗೆ ಪೂರ್ವದಲ್ಲಿ ೯ ಮೈಲಿ ದೂರದಲ್ಲಿರುವ ಒಂದು ಗ್ರಾಮದಿಂದ ಜಪಾನಿಗಳನ್ನು ಓಡಿಸಲಾಗಿದೆ.

ಕ್ಯಾಂಟನ್ ಮೇಲೆ ಅಮೆರಿಕ ವಿಮಾನ ಧಾಳಿ

ಅಮೆರಿಕ ವಿಮಾನಗಳು ಕ್ಯಾಂಟನ್ ವಿಮಾನ ನೆಲೆಯ ಮೇಲೆ ಭಾರಿ ಧಾಳಿ ನಡೆಸಿದವು. ಚೈನಾ ಮತ್ತು ಇಂಡೋಚೈನಾ ಗಡಿಯಲ್ಲಿ ಜಪಾನಿ ಸ್ಥಾನಗಳ ಮೇಲೂ ಅಗಾಧ ಧಾಳಿಮಾಡಲಾಯಿತು.

೭ ಶತ್ರು "ಇ" ಬೋಟುಗಳು ಮುಳುಗಿದುವು

ಬಿಸ್ಕೇ ಕೊಲ್ಲಿಯ ಮುಂಭಾಗದಲ್ಲಿ ೭ ಜರ್ಮನ್ "ಇ" ಬೋಟುಗಳನ್ನು ಮಿತ್ರ ನೌಕ ಮತ್ತು ವಿಮಾನ ಪಡೆಗಳು ಮುಳುಗಿಸಿದುವೆಂದೂ, ೭ ಘಂಟೆಗಳ ಕಾಲ ಧಾಳಿ ನಡೆಸಿತೆಂದೂ ವರದಿಯಾಗಿದೆ.

ಪೀಟೇನರವರನ್ನು ವಿಚಾರಣೆಗೆ ಗುರಿಪಡಿಸಲಾಗುವುದು

ಯುದ್ಧಾನಂತರ ಫ್ರಾನ್ಸಿನ ಮಾರ್ಷಲ್ ಪೀಟೇನ್ ಮತ್ತು ಇತರ ಮಂತ್ರಿಗಳನ್ನು ವಿಚಾರಣೆಗೆ ಗುರಿಪಡಿಸಲು ಮಿತ್ರರಿಗೆ ಒಪ್ಪಿಸಲಾಗುವುದೆಂದು, ಫ್ರೀಚ್ ರಾಷ್ಟ್ರೀಯ ಸಮಿತಿಯವರು ನಿರ್ಧರಿಸಿದ್ದಾರೆ.

ಶ್ರೀ ಶ್ರೀಕಂಠೇಶ್ವರ ಸ್ಪರ್ಧೆ

ನಂ. ೨೨ ರ ಸರಿಯಾದ ಉತ್ತರ

ಎಡದಿಂದ ಬಲಕ್ಕೆ— 1 ಕಮಲ, 3 ಉಪಕಾರ, 6 ಐವಾಲಿ (ಐವಾಲಿ), 7 ಜಾರ, 11 ರಾಮ, 12 ಶಾಂಭವಿ, 14 ತಪಸ್ಸು, 17 ಮಣ್ಣು, 18 ಜಪ, 19 ಧೇನು.

ಮೇಲಿನಿಂದ ಕೆಳಕ್ಕೆ—1 ಕದನ 2 ಲಿಪ, 4 ಪರಶು 5 ರಜತ, 7 ಜಾತಕ, 8 ನಿರಾಕ್ಷಕ 9 ಕ್ರಮ, 10 ಡಂಭ, 11 ರಾಮಾನುಜ, 12 ಶಾಂತಿ, 13 ವಣಿ (ಧ್ವನಿ), 15 ಪದಾತಿ 16 ಅದೃಷ್ಟ.

ಮ್ಯಾನೇಜರ್

ಜ॥ ಮಾರ್ಷಲ್‌ರವರು ದಂಡನಾಯಕ[illegible]

ಅಮೆರಿಕದ ಸೈನ್ಯಾಧಿಕಾರಿಗಳ ಮು[illegible] ಧಿಕಾರಿಗಳಾಗಿರುವ ಜ॥ ಮಾರ್ಷಲ[illegible]ನ್ನು ಯೂರೋಪ್ ಯುದ್ಧ ದಂಡನಾ[illegible] ಕರನ್ನಾಗಿ ನೇಮಿಸಲಾಗುವುದೆಂದೂ, [illegible]ಟನಿಂದ ಈ ಖಂಡದ ಮೇಲೆ ದಂಡ[illegible] ಕ್ರಿಯನ್ನಾರಂಭಿಸುವ ಜವಾಬ್ದಾರಿಯ[illegible] ವಹಿಸುವರೆಂದೂ 'ಈವ್ನಿಂಗ್ ಸ್ಟಾರ್' ಪ[illegible] [illegible]ಳಿಸುತ್ತದೆ.

ಮೊನ್ನೆ ಶುಕ್ರವಾರ ಬರ್ಲಿನ ಮೇ[illegible] ಡೆದ ಮಿತ್ರ ಧಾಳಿ ಫಲವಾಗಿ ಸೂರಾರ[illegible] ನರು ಅಲ್ಲಿನ ಗೆಸ್ಟಾಪೋ ಮತ್ತು ಪೊ[illegible] ಸ್ ಅಧಿಕಾರಿಗಳ ಮೇಲೆ ಬಿದ್ದರೆಂದೂ [illegible] ನೇಕ ಮಂದಿ ಸತ್ತರೆಂದೂ ಹೇಳಲಾಗಿ[illegible]

EXPERT IN WORLD MEDICINE

ನಿವು ಒಂದುಸಾರಿ ನಮ್ಮಲ್ಲಿಗೆ ಬ[illegible] ನವಚೈತನ್ಯವನ್ನು ಹೊಂದುವಿರಿ.

ತುರ್ಕಿ ದೇಶದ ಚಕ್ರವರ್ತಿಗಳಿಂದಲೂ [illegible] ರಾಜ ಮಹಾರಾಜರುಗಳಿಂದಲೂ ಸನ[illegible] ಪಡೆದು ಪ್ರಸಿದ್ಧರಾಗಿರುವ ವೈದ್ಯನಿಪು[illegible]

ಈಗ ನಿಮ್ಮ ಊರಿನಲ್ಲಿ ನಿಮ್ಮ ಸೆ[illegible] ಗಾಗಿ ಸಿದ್ಧರಾಗಿದ್ದಾರೆ

ನಿಶ್ಶಕ್ತಿ, ಮೇಹ, ಮೂಲವ್ಯಾಧಿ, ಪಾ[illegible] ವಾಯು, ವಾತರೋಗ, ಕಮ್ಮಲು, [illegible] ಲು, ಮೂತ್ರ, ಮತ್ತು ವೀರ್ಯ ದೋಷ[illegible] ಅಲ್ಲದೆ ಹೊಟ್ಟೆಯ ಯಕೃತ್ ಮತ್ತು ಸಂಬಂಧವಾದ ಎಲ್ಲಾ ವ್ಯಾಧಿಗಳ[illegible] ಖಾತರಿಯಾದ ಚಿಕಿತ್ಸೆಮಾಡುವ ನಿಪು[illegible]

ನಷ್ಟವಾದ ವೀರ್ಯವನ್ನು ಪುನಃ [illegible]ಯಲು ಅಪೂರ್ವ ಸಮಯ

ಚಿಕಿತ್ಸೆಯ ಕಾಲ—

ಬೆಳಗ್ಗೆ 9 ರಿಂದ 12½ ಘಂಟೆಯ[illegible]

ಸಂಜೆ 5 ರಿಂದ 9 ಘಂಟೆಯ[illegible]

ನ್ಯೂ ರಾಯಲ್ ಡಿಸ್ಪೆನ್ಸ[illegible]

ಅಶೋಕ ರೋಡ್ (ದೊಡ್ಡ ಗಡಿಯಾ[illegible] ಬಳಿ), ಮೈಸೂರು.

Available:—

1) Mixed Fertilisers

2) Copper Sulphate

3) Bavaria Pencils, Etc.

Enquire at: —

SRI UMAMAHESWARI AND [illegible]

"Lakshmisthanam",

Geetha Road, Myso[illegible]

Edited, printed and pu[illegible] shed by A. R. Nagaraj at the Sadhvi Press, D.S[illegible] biah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

೧೯೩೧ ರಿಂದ ಪ್ರತ್ಯೇಕವಾಗಿ ವ್ಯಾಪಾರ ನಡೆಸುವ ಏರ್ಪಾಡು ಮಾಡಿ[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿ[illegible]ಮುಂಡಿ, ದೇವರಾಜ ಮಾರ್ಕೆಟ್, ಮೈಸೂ[illegible]

ವಿ ಸೂ.— ಚಿಲ್ಲರೆಯಾಗಿ ಮುಂಭಾಗದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ [illegible] ಇಲ್ಲೂ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿಯೂ ಮತ್ತು [illegible] ದೊರೆಯುತ್ತವೆ

ಸಂಪುಟ ೨] ಶುಕ್ರವಾರ ೧೦—೯—೪೩ [ಸಂಚಿಕೆ ೪೯

ಬಲ್ಗೇರಿಯಾಕ್ಕೆ ಜರ್ಮನ್ ಅಲ್ಟಿಮೇಟಂ

ನೇಪಲ್ಸ್‌ನಲ್ಲಿ ಮಿತ್ರ ಸೈನ್ಯ ಬಂದಿಳಿಯಿತು

ಬರ್ಲಿನ್ ಮತ್ತು ಟೋಕಿಯೋ ಮಿತ್ರರ ಅಂತ್ಯ ಗುರಿ

ಬಂಗಾಳ ಪರಿಹಾರ ನಿಧಿ

ಮೈಸೂರು ೧೦

ಬಂಗಾಳದಲ್ಲಿ ಕ್ಷಾಮ ಪೀಡಿತರಾದ ನಿರಾಶ್ರಿತರಿಗೆ ಸಹಾಯ ಮಾಡುವ ಸಲುವಾಗಿ "ಮೈಸೂರು ಮಹಾಜನ ಕ್ಷಾಮ ರಿಲೀಫ್ ಫಂಡ್" ಎಂಬ ನಿಧಿಯನ್ನು ರಾಜಧಾನಿಯಲ್ಲಿ ತೆರೆಯಲಾಗಿದೆ. ಇದಕ್ಕೆ ಶ್ರೀ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷರು ಮತ್ತು ಶ್ರೀ ನ ಭದ್ರಯ್ಯನವರು ಕೋಶಾಧ್ಯಕ್ಷರು. ಮಹಾಜನರೆಲ್ಲ ಇದಕ್ಕೆ ಉದಾರ ಸಹಾಯ ಮಾಡಬೇಕೆಂದು ಕೋರಲಾಗಿದೆ.

೧೨-೯-೪೩ ನೇ ಗುರುವಾರ ಸಂಜೆ ೭ ಗಂಟೆಗೆ ರಂಗ್ಮಹಲ ಥಿಯೇಟರಿನಲ್ಲಿ ವಿವಿಧ ವಿನೋದಾವಳಿಯನ್ನು ಏರ್ಪಡಿಸಲಾಗಿದೆ.

ಈ ನಿಧಿಗೆ ಮಹಾರಾಜಾ ಕಾಲೇಜಿನ ಪ್ರೊಫೆಸರಾದ ಕೆ. ಬಿ. ಮಾಧವ ೧೦೦ ರೂ. ಶ್ರೀ. ಪದ್ಮನಾಭಯ್ಯನವರು ೧೦೧ ರೂ. ಮತ್ತು ಶ್ರೀ ಕೃಷ್ಣ ಭವನ್ ೫೧ ರೂ. ಕೊಟ್ಟಿರುವರು.

ಚಿಲ್ಲರೆ ತಂದೊಪ್ಪಿಸಲು ಆಜ್ಞೆ

ಚಾಮರಾಜನಗರದಲ್ಲಿನ ಬಜಾರ್ ಪೆಟ್ರೋಲ್ ಏಜೆಂಟರಾದ ಶ್ರೀ ಸಿ. ವಿ ರಾಮರಾವ್‌ರವರು ತಮ್ಮ ಬಳಿಯಿರುವ ಚಿಲ್ಲರೆಯನ್ನು ಕೊಡಲು ನಿರಾಕರಿಸಿದ ಪ್ರಯುಕ್ತ, ಅವರಿಗೆ ವ್ಯಾಪಾರದಲ್ಲಿ ಬರುವಂತಹ ಚಿಲ್ಲರೆ ನಾಣ್ಯಗಳನ್ನೆಲ್ಲ ಚಾಮರಾಜನಗರ ಕಾ|| ಟ್ರೆಜರಿಗೆ ಒಪ್ಪಿಸಬೇಕೆಂದು ಜಿಲ್ಲಾಧಿಕಾರಿಗಳಾದ ಶ್ರೀ ರಣಸಿಂಘ್ ಸಿಂಗ್‌ರವರು ಭಾರತ ರಕ್ಷಣಾ ಶಾಸನದ ಪ್ರಕಾರ ಆಜ್ಞೆ ಮಾಡಿದ್ದಾರೆ.

ಜೂಜುಗಾರನಿಗೆ ಜುಲ್ಮಾನೆ

ಕೃಷ್ಣರಾಜ ಪೊಲೀಸ್ ಠಾಣೆಗೆ ಸೇರಿದ ಸ್ಥಳದಲ್ಲಿ ಜೂಜಾಡುತ್ತಿದ್ದ ಪೋ|| ಕೈಗೆ ಸಿಕ್ಕಿದ್ದ ೧೭ ಜನರ ಪೈಕಿ, ಚಾಮುಂಡಿ ಎಂಬವನು ತಪ್ಪಿಸಿಕೊಂಡು ಹೋಗಿದ್ದನು. ಈಗ ಅವನು ಪೋ|| ಕೈಗೆ ಸಿಕ್ಕಿ, ದ್ವಿತೀಯ ಮ್ಯಾ|| ೩೦ ರೂ ದಂಡವಿಧಿಸಿದರು.

ನೇಪಲ್ಸ್ ನೆಲೆಗಳ ವಶ

ನೇಪಲ್ಸ್ ಪ್ರದೇಶದಲ್ಲಿ ಮಿತ್ರಸೇನೆಗಳು ಯುದ್ಧಕಾರ್ಯಾಚರಣೆಯನ್ನು ಕೈಕೊಂಡಿವೆ.

ಇಟಲಿ ಮಧ್ಯಭಾಗದಲ್ಲಿ ಬ್ರಿಟಿಷ್ ಕನೇಡಿಯನ್ ಮತ್ತು ಅಮೆರಿಕನ್ ಸೇನೆಗಳು ಬಂದಿವೆ. ಬ್ರಿ|| ಎಂಟನೆ ಸೇನೆಯು ಇಟಲಿಯಲ್ಲಿ ಜರ್ಮನರೊಂದಿಗೆ ಘರ್ಷಣೆ ನಡೆಸಿತು. ಅಲ್ಲಿದೆ ಭಾರಿ ಕದನವಾಗುವ ಸಂಭವವಿರುವುದು. ಜರ್ಮನರು ಇಲ್ಲಿ ಬಲಗಿ ಫಿರಂಗಿಗಳನ್ನು ಸ್ಥಾಪಿಸಿದ್ದರೆಂದೂ ಸಕ್ಕಿ ಬ್ರಿಟಿಷ್ ಎಂಟನೇ ಸೇನೆಯು ಅವರ ಕೊರತೆಕ್ಕೆ ತೊಂದರೆ ಹೇಳಲಾಗಿದೆ. ನೇಪಲ್ಸ್ ಪ್ರದೇಶದ ಎರಡು ಮುಖ್ಯ ವಿಮಾನ ನೆಲೆಗಳನ್ನು ವಶಪಡಿಸಿಕೊಂಡರು.

ಚೀನಾ ಕಮ್ಯೂನಿಸ್ಟ್ ಸೈನಿಕರ ದೊಂಬಿ

ಚೀನಾದ ಕಮ್ಯೂನಿಸ್ಟ್ ಪಂಗಡದ ಸೈನ್ಯ ದಂಗೆಯೆದ್ದು, ಅವರಿಗೂ, ಸರ್ಕಾರ ಸೈನ್ಯಕ್ಕೂ ತೀವ್ರ ಘರ್ಷಣೆ ನಡೆದು ಸರ್ಕಾರದ ಸೈನಿಕರನ್ನು ತ ಚಿಂಗ್ ಕ ಓಡಿಸಿದರು. ಸರ್ಕಾರದ ಸೈನ್ಯದ ಕಮಾಂಡರ್ ಚೀಫ್ ಚಿಯಾಂಗ್‌ರವರು, ಅಪ್ಪಣೆ ಮಾಡಿಕೊಂಡರೆಂದು ವರದಿಯಾಗಿದೆ.

ನೇಪಲ್ಸ್ ಬಳಿ ಮಿತ್ರ ಸೈನ್ಯ

ಮಿತ್ರ ಸೈನ್ಯವು ನೇಪಲ್ಸ್ ಬಳಿ ಬಂದಿಳಿದಿದೆಯೆಂದು ಹೇಳಲಾಗಿದೆ. ಇಟಲಿ ಶರಣಾಗತನಾದ ಕೂಡಲೇ ನೇಪಲ್ಸ್ ಕ್ಷೇತ್ರದಲ್ಲಿ ಮಿತ್ರಕಾರ್ಯಾಚರಣೆ ಆರಂಭವಾಯಿತು. ದಕ್ಷಿಣ ಇಟಲಿ ತುದಿಭಾಗದಲ್ಲಿ ಬ್ರಿಟಿಷ್ ಎಂಟನೇ ಸೈನ್ಯಕ್ಕೂ ಜರ್ಮನಿ ಸೈನ್ಯಕ್ಕೂ ಘರ್ಷಣೆ ಉಂಟಾಗಿದೆಯೆಂದು ಹೇಳಲಾಗಿದೆ.

ಬಲ್ಗೇರಿಯಾಕ್ಕೆ ಜರ್ಮನ್ ಅಲ್ಟಿಮೇಟಂ

ಬಲ್ಗೇರಿಯಾ ಸೈನ್ಯವು ಯಾವ ವಿರೋಧ ಇಲ್ಲದೆ ಜರ್ಮನಿಗೆ ಶರಣಾಗತವಾಗಬೇಕೆಂದು ಬಲ್ಗೇರಿಯಾಕ್ಕೆ ಜರ್ಮನಿಯು ಅಲ್ಟಿಮೇಟಂ ಕೊಟ್ಟಿದೆಯೆಂದು ಸ್ವಿಸ್ ವಾರ್ತೆ ತಿಳಿಸುತ್ತದೆ.

ಬರ್ಲಿನ್ ಮತ್ತು ಟೋಕಿಯೋ ಅಂತ್ಯಗುರಿ

ಇಟಲಿ ಶರಣಾಗತವಾದ ಮಾತ್ರದಿಂದ ಮೆಡಿಟರೇನಿಯನ್ ಕ್ಷೇತ್ರದಲ್ಲಿ ಯುದ್ಧ ಮುಗಿದಂತಾಗಲಿಲ್ಲ. ಈ ಯುದ್ಧದಲ್ಲಿ ನಮ್ಮ ಅಂತ್ಯ ಗುರಿ ಬರ್ಲಿನ್ ಮತ್ತು ಟೋಕಿಯೋ ಎಂಬುದಾಗಿ ಪ್ರೆಸಿಡೆಂಟ್ ರೂಸ್‌ವೆಲ್ಟರು ತಮ್ಮ ಬ್ರಾಡ್‌ಕಾಸ್ಟ್ ಭಾಷಣದಲ್ಲಿ ಹೇಳಿದ್ದಾರೆ.

ಲಂಡನ್ನಿಗೆ ಫಿಲಿಪ್ಸರ ಭೇಟಿ

ಪ್ರೆ|| ರೂಸ್‌ವೆಲ್ಟರ ವಿಶೇಷ ಪ್ರತಿನಿಧಿಗಳಾದ ಮಿ|| ವಿಲಿಯಂ ಫಿಲಿಪ್ಸರು ಯುದ್ಧ ಕಾರ್ಯದ ವಿಶೇಷ ಕೆಲಸದ ಪ್ರಯುಕ್ತ ಲಂಡನ್ನಿಗೆ ಹೋಗಿ ಬರುವರೆಂದು ಹೇಳಲಾಗಿದೆ.

ಇಟಲಿ ಒಳಭಾಗದಲ್ಲಿ ಮಿತ್ರ ಸೈನ್ಯ ಬಂದು ನಿಂತಿದೆ

ಅಮೆರಿಕನ್ ಮತ್ತು ಕೆನಡಿಯನ್ ಸೈನ್ಯವು ಇಟಲಿಯ ಒಳಭಾಗದ ಅನೇಕ ಪ್ರದೇಶಗಳಲ್ಲಿ ಬಂದಿಳಿಯುತ್ತಿದೆಯೆಂದು ಟೋನಿಸ್ ರೇಡಿಯೋ ತಿಳಿಸುತ್ತದೆ.

೩೦,೦೦೦ ರಷ್ಯನರ ಕೊಲೆ

ಓರಲ್ ನಗರವನ್ನು ವಶಪಡಿಸಿಕೊಳ್ಳುವ ಮೊದಲು ಶತ್ರು ಪಟ್ಟಣದಲ್ಲಿದ್ದ ೩೦ ಸಾವಿರ ರಷ್ಯನ್ ಜನರನ್ನು ಕೊಂದು, ಕ್ರಿಮಿನಲ್ ಕೃತ್ಯವೆಸಗಿರುವರೆಂದು ವರದಿಯಾಗಿದೆ.

ಪತ್ರಿಕೆ ಮೇಲೆ ಮೊಕದ್ದಮೆ

ಲಾಹೋರಿನ 'ಟ್ರಿಬ್ಯೂನ್' ಪತ್ರಿಕೆಯ ಸಂಪಾದಕರೂ, ಮುದ್ರಣಕಾರರೂ ಮತ್ತು ಪ್ರಕಾಶಕರೂ ಇವರುಗಳ ಮೇಲೆ ಲಾಹೋರಿನ ಹೈಕೋರ್ಟಿನವರು ೧ ನೋಟೀಸ್ ಕೊಟ್ಟು, 'ಕಂಟೆಂಪ್ಟ್ ಆಫ್ ಕೋರ್ಟ್' ವ್ಯವಹಾರವನ್ನು ಏಕೆ ನಡೆಸಬಾರದೆಂದು ಕೇಳಿದ್ದಾರೆ. ಆ ಪತ್ರಿಕೆಯಲ್ಲಿ ಹೈಕೋರ್ಟ್ ಮೊಕದ್ದಮೆ ವಿಚಾರದಲ್ಲಿ ಕೋರ್ಟಿಗೆ ಅವಮಾನಕರವಾದ ಲೇಖನವನ್ನು ಬರೆದರೆಂದು ಹೇಳಲಾಗಿದೆ.

೧೯ ಲಕ್ಷ ರೂ. ಸಾಲ ರದ್ದಾಯಿತು

ಬಳ್ಳಾರಿ ಜಿಲ್ಲೆಯಲ್ಲಿ ಕ್ಷಾಮದಿಂದ ನರಳುತ್ತಿರುವ ರೈತರಿಗೆ ಮದ್ರಾಸ್ ಸರ್ಕಾರವು ಸಹಾಯಕ್ಕಾಗಿ ಕೊಟ್ಟಿದ್ದ ೧೯,೫೮,೭೮೮ ರೂ. ಸಾಲವನ್ನು ರದ್ದು ಮಾಡಲು ಆಜ್ಞೆ ಮಾಡಿದ್ದಾರೆ.

ಬಿಹಾರ್‌ನಲ್ಲಿ ರೇಷನಿಂಗ್

ಬಿಹಾರ್ ಪ್ರಾಂತ್ಯದ ಕೈಗಾರಿಕೆ ಮತ್ತು ಇತರ ದೊಡ್ಡ ನಗರಗಳಲ್ಲಿ ರೇಷನಿಂಗ್ ಜಾರಿಗೆ ತರಲಾಗುವುದೆಂದು ಹೇಳಲಾಗಿದೆ.

ಬಂಗಾಳ ಪರಿಹಾರ ನಿಧಿ

ಮದರಾಸಿನ "ಇಂಡಿಯನ್ ಎಕ್ಸ್‌ಪ್ರೆಸ್" ಬಂಗಾಳ ಪರಿಹಾರ ನಿಧಿಗೆ ಇದುವರೆಗೆ ೬,೪೬೬ ರೂ. ೧೪೯. ವಸೂಲಾಗಿದೆ.

ಹೆಚ್ಚು ಲಾಭ ನಿಲ್ಲಿಸಲು ಆರ್ಡಿನೆನ್ಸ್

ಹೆಚ್ಚು ಲಾಭ ಮತ್ತು ದಾಸ್ತಾನು ಶೇಖರಿಸುವ ವ್ಯಾಪಾರಿಗಳ ಮೇಲೆ ಭಾರತ ಸರ್ಕಾರವು ಶೀಘ್ರದಲ್ಲಿಯೇ ಹೊಸದಾದ ಆರ್ಡಿನೆನ್ಸ್ ಜಾರಿಗೆ ತರಲಾಗುವುದೆಂದು ಹೇಳಲಾಗಿದೆ.

ಕಪಟ ಸ್ವಾಮಿಗೆ ಶಿಕ್ಷೆ

ಚಿಂತಾಮಣಿಯಲ್ಲಿ "ಸ್ವಾಮಿ" ಎಂದು ಅನೇಕ ಜನರನ್ನು ಮೋಸಪಡಿಸಿದ ಸ್ವಾಮಿ ಶಿವಾನಂದ ಚಿಕ್ಕನಾಯಕ ಎಂಬುವನಿಗೆ ೩ ವರ್ಷ ಕಠಿಣ ಶಿಕ್ಷೆ ಮತ್ತು ೩೦೦ ರೂ. ದಂಡ ವಿಧಿಸಿದೆ.

ರೋಂ ಹತ್ತಿರ ಮಿತ್ರ ಸೈನ್ಯ

ರೋಂ ನಗರದ ಉತ್ತರ ಮತ್ತು ದಕ್ಷಿಣ ಭಾಗದ ಗೇಟಾ, ನೋರಾ ಮುಂತಾದ ಪ್ರದೇಶಗಳಲ್ಲಿ ಮಿತ್ರ ಸೈನ್ಯವು ಬಂದಿಳಿದಿರುವುದೆಂದು ಬ್ರಾಡ್‌ಕಾಸ್ಟ್ ವಾರ್ತೆ ತಿಳಿಸುತ್ತದೆ.

ಇಟಲಿಯ ಟ್ರಿಯೆಸ್ಟ್ ಪ್ರಾಂತದಲ್ಲಿ ಅಮೆರಿಕ ವಿಮಾನ ಸೈನ್ಯವು ಬಂದಿಳಿದಿದೆಯೆಂದೂ, ಇಟಲಿಯನ್ ವಿಮಾನ ನಿಲ್ದಾಣಗಳಲ್ಲಿ ನೂರಾರು ಮಿತ್ರ ವಿಮಾನಗಳು ಬಂದಿಳಿಯುತ್ತಿವೆಯೆಂದೂ ಸ್ವಿಸ್ ವಾರ್ತೆ ವರದಿಮಾಡಿದೆ.

ಡೆನ್ಮಾರ್ಕಿನಲ್ಲಿ ನಾಜಿ ದೌರ್ಜನ್ಯ

ಡೆನ್ಮಾರ್ಕಿನಲ್ಲಿ ನಾಜಿಗಳು ಕೈಗೊಂಡ ದೌರ್ಜನ್ಯಕೃತ್ಯಗಳು ಈಗ ಹೊರಬೀಳುತ್ತಿವೆ. ವಿನಾಶಕೃತ್ಯ ನಡೆಸಿದನೆಂಬ ಅಪವಾದನೆಯ ಮೇಲೆ ಒಬ್ಬ ಡೇನನನ್ನು ೧೨.೩ ಸಿಂದ ಹೊಡೆದು ಕೊಲ್ಲಲಾಯಿತೆಂದೂ, ತಲೆತಪ್ಪಿಸಿಕೊಂಡು ಹೋಗುತ್ತಿದ್ದ ಆನಾದಿ ಕನ್ನೊಬ್ಬನನ್ನು ಕೊಲೆಮಾಡಲಾಯಿತೆಂದು ತಿಳಿಯಬಂದಿದೆ.

ಡೆನ್ಮಾರ್ಕಿನಲ್ಲಿರುವ ಜರ್ಮನ್ ಸೇನಾನಿಯು ಜರ್ಮನ್ ವಿರೋಧ ನಡೆಸಿದವರನ್ನು ಎದುರಿಸಲು ಹಿಡಿದವರಿಗೆ ೧೦,೦೦೦ ಕ್ರೋನ್ ಬಹುಮಾನ ಕೊಡುವುದಾಗಿ ಪ್ರಕಟಿಸಿರುವುದಾಗಿ ತಿಳಿಯಬಂದಿದೆ.

ಇಟಲಿ ಘೋರ ರಣಕ್ಷೇತ್ರ ಆಗುವುದು

ಇಟಲಿ ಶರಣಾಗತವಾದರೂ ಕೂಡ, ಇಟಲಿ ಘೋರ ರಣಕ್ಷೇತ್ರವಾಗುವುದೆಂದು ಹೇಳಲಾಗಿದೆ. ಉತ್ತರ ಇಟಲಿಯಲ್ಲಿ ೩೦ ಜರ್ಮನ್ ಡಿವಿಜನ್ ಸೈನ್ಯ ನಿಲ್ಲಿಸಲಾಗಿದೆಯೆಂದೂ, ಇಟಲಿಯು ಹೆಚ್ಚಾಗಿ ಜರ್ಮನ್ ಅಧೀನದಲ್ಲಿದೆಯೆಂದೂ ಹೇಳಲಾಗಿದೆ. ಶತ್ರುವು ಘೋರ ಕದನ ನಡೆಸುವರೆಂದೂ ಬರ್ಲಿನ್ ವ್ಯಾಖ್ಯಾನಕಾರರು ತಿಳಿಸುತ್ತಾರೆ.

ವಿಮಾನ ಮುಂಜಾಗ್ರತೆ ಸಿದ್ಧತೆ

ಅರ್ಜೆಂಟೈನಾ ಸರ್ಕಾರದವರು ವಿಮಾನ ಮುಂಜಾಗ್ರತೆ ಕಾರ್ಯಕ್ರಮ ಕೈಗೊಳ್ಳಲು ಆಜ್ಞೆ ಮಾಡಿದ್ದಾರೆ.

ಪ್ರತ್ಯೇಕ ವಿದ್ಯಾಭ್ಯಾಸ ಆವಶ್ಯಕ

ಸ್ತ್ರೀಯರಿಗೆ ಪ್ರತ್ಯೇಕ ವಿದ್ಯಾಭ್ಯಾಸ ಆವಶ್ಯಕವೆಂದೂ, ಇದಕ್ಕೋಸ್ಕರ ಪ್ರತ್ಯೇಕ ಕಾಲೇಜುಗಳು ಸ್ಥಾಪಿಸಬೇಕೆಂದೂ ಕಲ್ಕತ್ತ ಸರ್ಕಾರದ ವಿದ್ಯಾ ಸಲಹಾ ಸಮಿತಿಯು ತೀರ್ಮಾನ ಮಾಡಿದ್ದಾರೆ.

ಜಪಾನಿ ಕಳವಳ

ಟೋಕಿಯೋದಲ್ಲಿ ಜಪಾನಿ ಒಳಕ್ಷೇತ್ರದ ಮಂತ್ರಿಗಳು ಜಪಾನ್ ರಾಜ್ಯದ ಬಗೆಗಿನ ವಿಷಯಗಳ ಚರ್ಚಿಸಿದರೆಂದೂ, ಜಪಾನಿ ಪ್ರಧಾನಿ ಟೋಜೋ ಚಕ್ರವರ್ತಿಯನ್ನು ಭೇಟಿಮಾಡಿದರೆಂದೂ ವರದಿಯಾಗಿದೆ.

ಮಿತ್ರ ಸೈನ್ಯ ಅಭ್ಯಾಸ ಶ್ರಮ

ಇಂಗ್ಲೆಂಡಿನಲ್ಲಿ ದೊಡ್ಡ ಪ್ರಮಾಣದಲ್ಲಿ ದಾಳಿ ಮಾಡುವ ಅಭ್ಯಾಸ ನಡೆಯುತ್ತಿದೆ. ಇಂಗ್ಲಿಷ್ ಕಡಲ್ಗಾಲುವೆಯ ಸ್ವಲ್ಪ ದೂರದ ಭಾಗದಲ್ಲಿ ಈ ಅಭ್ಯಾಸ ನಡೆಯುತ್ತಿದೆ. ಕೇವಲ ಇದು ಸೈನ್ಯಗಳ ಅಭ್ಯಾಸವಾದುದರಿಂದ ಗಾಬರಿಪಡಬಾರದೆಂದು ಹೇಳಲಾಗಿದೆ.

೧೫,೦೦೦ ರೂ. ಕಳುವು

ಬೆಂಗಳೂರು ೯

ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಕೂಡ್ಲಿಗಿ ನಿವಾಸಿಗಳೊಬ್ಬರು ತಮಗೆ ಬರಬೇಕಾದ ಬಾಕಿ ವಸೂಲಿಯನ್ನು ಮಾಡಿ, ಕಬ್ಬನ್‌ಪೇಟೆಯಲ್ಲಿದ್ದ ತಮ್ಮ ಸ್ನೇಹಿತರ ಮನೆಯಲ್ಲಿ ಇಳಿದುಕೊಂಡು, ಟ್ರಂಕಿನಲ್ಲಿ ೧೫ ಸಾವಿರ ರೂ ಇಟ್ಟು ನಂಗಿ ಹೋಗಿದ್ದಾಗ ಸ್ನೇಹಿತರ ಮನೆಯವರು, ಬೀಗವನ್ನು ತೆಗೆದು ಹಣವೆಲ್ಲ ಅಪಹರಿಸಿ ಪರಾರಿಯಾಗಿರುವ ಸಂಗತಿ ಪೋಲೀಸರಿಗೆ ವರದಿಯಾಗಿದೆ

ಹೊಟ್ಟೆನೋವು ತಡೆಯದೆ ಆತ್ಮಹತ್ಯೆ

ತ್ರಿಚಿನಾಪಳ್ಳಿಯ ೬ ನೇ ಕ್ರಾಸ್ ರಸ್ತೆ ಯಲ್ಲಿರುವ ರಾಜಮ್ಮ ಎಂಬ ೩೫ ವರ್ಷದ ವಿಧವೆಯೊಬ್ಬಳು ಹೊಟ್ಟೆನೋವನ್ನು ಸಹಿಸಲಾರದೆ ಆತ್ಮಹತ್ಯ ಮಾಡಿಕೊಂಡಳೆಂದು ತಿಳಿದಿದೆ

ಸ್ಟ್ಯಾಂಡರ್ಡ್ ಬಟ್ಟೆ

ಮೈಸೂರು ಸರ್ಕಾರದವರು ೧೪ ಬಗೆಯ ಸ್ಟ್ಯಾಂಡರ್ಡ್ ಬಟ್ಟೆಗಳನ್ನು ತಯಾರಿಸುವರು. ಇವಲ್ಲಿ ೬೬, ೫೪ ಮತ್ತು ೪೫ ಇಂಚು ಅಗಲದ ಶೀಟಿಂಗ್‌ಗಳೂ ಸ್ತ್ರೀ ಪುರುಷರ ಅಂಗಿ ಬಟ್ಟೆ ಮತ್ತು ೮ ಮೊಳದ ಹೆಂಗಸರ ಸೀರೆಗಳೂ ಸೇರಿರುವುವು. ಪ್ರತಿ ಜಿಲ್ಲೆಯ ಪ್ರಜಾ ಸಂಘಗಳ ಮೂಲಕ ಈ ಬಟ್ಟೆ ಗಳನ್ನು ಹಂಚಲಾಗುವುದು.

ಜೂಜುಗಾರರಿಗೆ ಶಿಕ್ಷೆ

ಶಿವಾಜಿನಗರ ಪೋಲೀಸ್ ಸ್ಟೇಷನ್ ಹತ್ತಿರ ಜೂ ಜಾಡುತ್ತಿದ್ದ ೬೦ ಜನರಿಗೆ ತಲಾ ೧೫ ರೂ. ಜುಲ್ಮಾನೆಯನ್ನೂ, ಜೂಜಾಡಲು ಸ್ಥಳ ಕೊಟ್ಟ ಮ. ಸ್ವಾಮಿ ಎಂಬುವನಿಗೆ ೪೦ ರೂ. ಮತ್ತು ಶ್ರೀನಿವಾಸರಾವ್ ಎಂಬುವನಿಗೆ ೩೦ ರೂ ಜುಲ್ಮಾನೆ ಹಾಕಲಾಗಿದೆ.

ಡಾನೆಟ್ಸ್ ಬೇಸಿನ್ ರಷ್ಯ ವಶ

ಸ್ಟಾಲಿನೋ ಮತ್ತು ಡಾನೆಟ್ಸ್‌ಬೇಸಿನ್ ಪ್ರದೇಶವೆಲ್ಲ ರಷ್ಯರ ವಶವಾಯಿತೆಂದೂ ಸ್ಟಾಲಿನೋದಿಗೆ ೬೦ ಮೈಲಿಯಲ್ಲಿರುವ ಕ್ರಾಸ್ನೋ ಆರ್ಮಿಸ್ಕ್ ನಗರ ರಷ್ಯರ ವಶವಾಗಿದೆ ಎಂದು ವರದಿಯಾಗಿದೆ

ಇಟಲಿ ಶರಣಾಗತವಾಯಿತು

ಇಟಲಿಯು ಯಾವ ಷರತ್ತೂ ಇಲ್ಲದೆ ಶರಣಾಗತವಾಗಿದೆ ಎಂದು ಅಧಿಕಾರಯುತವಾಗಿ ತಿಳಿಸಲಾಗಿದೆ. ಇಟಲಿಯಲ್ಲಿ ಇದರ ಫಲವಾಗಿ ಕೂಡಲೇ ಕದನವನ್ನು ನಿಲ್ಲಿಸಬೇಕೆಂದು ಮಿತ್ರ ಸೈನ್ಯಗಳ ಕಮ್ಯಾಂಡರಾದ ಜನರಲ್ ಐಸೆನ್ ಹೋವರ್‌ರವರು ಆಜ್ಞೆ ಮಾಡಿದ್ದಾರೆ

ಇಟಲಿಯಲ್ಲಿ ಕದನವನ್ನು ನಿಲ್ಲಿಸಿ ಶಾಂತಿಯನ್ನುಂಟುಮಾಡಿರುವುದು ಕೇವಲ ಮಿಲಿಟರಿ ಕಾರ್ಯವೇ ಹೊರತು, ಇದರಲ್ಲಿ ರಾಜಕೀಯ ಮತ್ತು ಆರ್ಥಿಕ ವಿಷಯವೇನೂ ಅಡಗಿಲ್ಲವೆಂದು ಲಂಡನಿನಿಂದ ಅಧಿಕೃತವಾದ ಪ್ರಕಟಣೆಯಾಗಿದೆ.

"ಇಟಲಿ ಸರ್ಕಾರವು ತನ್ನ ಶಸ್ತ್ರ ಸಜ್ಜಿತ ಸೈನ್ಯಗಳನ್ನೆಲ್ಲಾ ಯಾವ ಷರತ್ತೂ ಇಲ್ಲದೆ ಶರಣಾಗತ ಮಾಡಿದೆ. ಜರ್ಮನರನ್ನು ಇಟಲಿಯಿಂದೋಡಿಸಲು ಸ್ರಯತ್ನಪಡುವಂತಹ ಎಲ್ಲ ಇಟಲಿಯವರಿಗೂ ಮಿತ್ರರಾಷ್ಟ್ರಗಳ ಬೆಂಬಲವೂ ಸಹಾಯವೂ ಪೂರ್ಣವಾಗಿದೆ" ಎಂಬುದಾಗಿ ಜನರಲ್ ಐಸೆನ್ ಹೋವರ್‌ರವರು ತಿಳಿಸಿದ್ದಾರೆ.

ಮಿತ್ರ ಸೈನ್ಯಗಳನ್ನೆದುರಿಸಿ ಅಸಮಾನವಾದ ಕದನ ನಡೆಸುವುದು ಅಸಾಧ್ಯವೆಂಬುದಾಗಿಯೂ, ತಮ್ಮ ರಾಷ್ಟ್ರಕ್ಕೆ ಇನ್ನೂ ಹೆಚ್ಚಿನ ಅಪಾಯಕರವಾದ ಕಷ್ಟವನ್ನು ತಪ್ಪಿಸುವುದು ಅವಶ್ಯಕವೆಂದು ಇಟಲಿ ಸರ್ಕಾರ ಮನಗಂಡು ಶಾಂತಿ ಭಿಕ್ಷೆ ಬೇಡಲಾಯಿತು. ಅದ್ದರಿಂದ ಇಟಲಿ ಸೈನ್ಯಗಳು ಮಿತ್ರರ ಮೇಲೆ ಕದನ ನಡೆಸದೆ ನಿಲ್ಲಿಸಬೇಕು. ಆದರೆ ಇಟಲಿಯ ಮೇಲೆ ನಡೆಯುವ ಜರ್ಮನಿ ಧಾಳಿಗಳನ್ನು ಇಟಲಿ ಪ್ರತಿಭಟಿಸಿ ನಿಲ್ಲಿಸುವುದು ಎಂದು ಬಡೋಗ್ಲಿಯವರು ತಿಳಿಸಿದ್ದಾರೆ.

ಮೆಡಿಟರೇನಿಯ ಮತ್ತು ಕಪ್ಪು ಸಮುದ್ರದಲ್ಲಿರುವ ಎಲ್ಲ ಇಟಲಿ ಹಡಗುಗಳೂ ಮಿತ್ರ ಬಂದರುಗಳಿಗೆ ಬಂದುಬಿಡಬೇಕೆಂದೂ, ಜರ್ಮನರ ಕೈವಶವಾಗುವ ಸಂಭವವಿದ್ದರೆ ಅಂತಹವು ಆತ್ಮನಾಶವಮಾಡಿಕೊಳ್ಳಬೇಕೆಂದು ಮಿತ್ರನೌಕಾ ಕಮ್ಯಾಂಡರು ಆಜ್ಞೆ ಮಾಡಿದ್ದಾರೆ

Edited, printed and published by A. R. Nagarajan, at the Sadhvi Press, D.Subbiah Road, Mysore.

ಜರ್ಮನಿ ಮೇಲೆ ಯುದ್ಧ ನಡೆಸಲು ಫ್ರೆಂಚ್ ಸೈನ್ಯ

ಜರ್ಮನಿ ಮೇಲೆ ಯುದ್ಧ ಮಾಡಲು ಸುವ್ಯವಸ್ಥಿತವಾದ ೩ ಲಕ್ಷ ಸೈನಿಕರುಳ್ಳ ಒಂದು ಫ್ರೆಂಚ್ ಸೈನ್ಯ ಪಡೆಯು ಫ್ರಾನ್ಸಿನಲ್ಲಿ ರುವುದೆಂದೂ, ಈ ಸೇನೆಯು ತನ್ನದೇ ಆದ ಮಿಲಿಟರಿ ವ್ಯವಸ್ಥೆಯನ್ನು ಮಾಡಿ ಕೊಂಡು ಒಳಸಂಚು ನಡೆಸುತ್ತಿರುವುದಾಗಿಯೂ, ಜರ್ಮನಿಗೆ ಕೆಲಸಮಾಡಲು ಕಡ್ಡಾಯವಾಗಿ ಕಳಿಸುವರೆಂಬ ಭಯದಿಂದ ೩ ಲಕ್ಷ ಫ್ರೆಂಚರು ಗುಪ್ತವಾಗಿ ಕೆಲಸಮಾಡುತ್ತಿರುವರೆಂದು ಹೇಳಲಾಗಿದೆ

ಡಾರ್ವಿನ್ ಮೇಲೆ ಜಪಾನಿ ಧಾಳಿ

ಡಾರ್ವಿನ್ ಮೇಲೆ ಜಪಾನರು ಧಾಳಿ ನಡೆಸಿದರೆಂದೂ, ೧೪ ಜಪಾನಿ ವಿಮಾನಗಳನ್ನು ಉರುಳಿಸಲಾಯಿತೆಂದೂ ವರದಿಯಾಗಿದೆ

EXPERT IN WORLD MEDICINES

ನೀವು ಒಂದುಸಾರಿ ನಮ್ಮಲ್ಲಿಗೆ ಬಂದರೆ ನವಚೈತನ್ಯವನ್ನು ಹೊಂದುವಿರಿ.

ಟರ್ಕಿ ದೇಶದ ಚಕ್ರವರ್ತಿಗಳಿಂದಲೂ ರಾಜ ಮಹಾರಾಜರುಗಳಿಂದಲೂ ಸನ್ಮಾನ ಪಡೆದು ಪ್ರಸಿದ್ಧರಾಗಿರುವ ವೈದ್ಯನಿಪುಣರು

ಈಗ ನಿಮ್ಮ ಊರಿನಲ್ಲಿ ನಿಮ್ಮ ಸೇವೆಗಾಗಿ ಸಿದ್ಧರಾಗಿದ್ದಾರೆ

ನಿಶ್ಶಕ್ತಿ, ಮೇಹ, ಮೂಲವ್ಯಾಧಿ, ಪಾರ್ಶ್ವವಾಯು, ವಾತರೋಗ, ಕೆಮ್ಮಲು, ಗಜರಲು, ಮೂತ್ರ ಮತ್ತು ವೀರ್ಯ ದೋಷಗಳು, ಅಲ್ಲದೆ ಹೊಟ್ಟೆಯ ಮುಕ್ಕುಳ್ ಮತ್ತು ರಕ್ತ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಖಾತರಿಯಾದ ಚಿಕಿತ್ಸೆಮಾಡುವ ನಿಪುಣರು

ನಷ್ಟವಾದ ವೀರ್ಯವನ್ನು ಪುನಃ ಪಡೆಯಲು ಅಪೂರ್ವ ಸಮಯ

ಚಿಕಿತ್ಸೆಯ ಕಾಲ—

ಬೆಳಗ್ಗೆ 9 ರಿಂದ 12½ ಘಂಟೆಯವರೆಗೆ

ಸಂಜೆ 5 ರಿಂದ 9 ಘಂಟೆಯವರೆಗೆ

ನ್ಯೂ ರಾಯಲ್ ಡಿಸ್ಪೆನ್ಸರಿ

ಅಶೋಕ ರೋಡ್ (ದೊಡ್ಡ ಗಡಿಯಾರದ ಬಳಿ), ಮೈಸೂರು.

ಭಾರತಕ್ಕೆ ಅಮೇರಿಕಾ ಸೆನೇಟರುಗಳ ಭೇಟಿ

ವಿಶ್ವದ ಅನೇಕ ಯುದ್ಧ ರಂಗಗಳಲ್ಲಿರುವ ಅಮೇರಿಕಾ ಪಡೆಗಳನ್ನು ಪರಿಶೀಲಿಸಲು ಪ್ರವಾಸಮಾಡುತ್ತಿರುವ ೫ ಮಂದಿ ಅಮೇರಿಕಾ ಸೆನೇಟರುಗಳು ಈಚೆಗೆ ಭಾರತಕ್ಕೆ ಭೇಟಿಯಿತ್ತರು. ಅಮೇರಿಕಾ ವಿಮಾನ ದಳದ ಕೇಂದ್ರ ಕಛೇರಿ, ಅಮೇರಿಕಾ ಸೇನಾ ಶಿಬಿರ, ರೆಡ್‌ಕ್ರಾಸ್ ಕ್ಯಾಂಟೀನ್ ಇವುಗಳಿಗೆ ಭೇಟಿಕೊಟ್ಟು ಸೈನಿಕರೊಂದಿಗೆ ಮತ್ತು ಸೇನಾನಿ ಸರ್ ಕ್ಲಾಡ್ ಆಕಿನ್‌ಲೆಕ್‌ರೊಂದಿಗೆ ಮಾತುಕತೆ ನಡೆಸಿದರು. ಕೇಂದ್ರಶಾಸನ ಸಭೆಗೂ ಭೇಟಿಯಿತ್ತರು.

ಜರ್ಮನ್ ಸೈನ್ಯ ಕತ್ತರಿಸಲು ಮಿತ್ರನೌಕಾ ಹಂಚಿಕೆ

ದಕ್ಷಿಣ ಇಟಲಿಯಲ್ಲಿರುವ ಜರ್ಮನ್ ಸೈನ್ಯಗಳನ್ನೆಲ್ಲಾ ಪ್ರತ್ಯೇಕಗೊಳಿಸಿ ಇವು ಉತ್ತರದ ಕಡೆ ತಪ್ಪಿಸಿಕೊಂಡು ಹೋಗದಂತೆ ತಡೆಗಟ್ಟಲು ಮತ್ತು ಇದಕ್ಕೂ ಮತ್ತು ಇತರ ಜರ್ಮನ್ ಸೈನ್ಯಗಳಿಗೂ ಸಂಬಂಧ ತಪ್ಪಿಸಲು, ಅಮೇರಿಕ ಹಡಗುಗಳು ಎರಡು ಬಲವಾದ ಶಾಸಾಹಯ್ಯ ಗುಂಪು ಸಿಸಲಿಯ ಉತ್ತರದಿಂದ ಹೊರಟು ದಕ್ಷಿಣ ಇಟಲಿಯಲ್ಲಿ ಜರ್ಮನ್ ಸೈನ್ಯಗಳ ಹಿಂಬದಿಯಲ್ಲಿ ಬಂದಿಳಿಯಲು ಯತ್ನಿಸುತ್ತಿರುವುದೆಂದು ಜರ್ಮನ್ ವಾರ್ತೆ ತಿಳಿಸುತ್ತದೆ.

ನೇಪಲ್ಸ್‌ನಲ್ಲಿ ಕದನ

ನೇಪಲ್ಸ್‌ನಲ್ಲಿ ಬಂದಿಳಿದ ಮಿತ್ರ ಸೈನ್ಯಕ್ಕೂ, ಜರ್ಮನ್ ಸೈನ್ಯಕ್ಕೂ ಯುದ್ಧ ಪ್ರಾರಂಭವಾಗಿದೆಯೆಂದು ವರದಿಯಾಗಿದೆ. ನೇಪಲ್ಸ್ ಮತ್ತು ಇಟಲಿಯಲ್ಲಿ ಅನೇಕ ಜರ್ಮನ್ ಡಿವಿಜನ್ ಸೈನ್ಯವಿದೆಯೆಂದೂ, ಈ ಪ್ರದೇಶಗಳಲ್ಲಿ ಉಗ್ರ ಶತ್ರು ಪ್ರತಿಭಟನೆ ಇರುವುದೆಂದೂ ಮಿಲಿಟರಿ ವೀಕ್ಷಕರು ತಿಳಿಸುತ್ತಾರೆ.

ಆ ಕಾ ಶ ವಾ ಣಿ

ಸೆಪ್ಟೆಂಬರ್ ೧೧ ನೇ ಶನಿವಾರ

೮-೩೦ ಕೀರ್ತನ : ಸಾಧು ಜನಾಬಾಯಿ —ಶ್ರೀಮತಿ ಶೇಷಗಿರಿಯಮ್ಮನವರಿಂದ

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೊಸದಾಗುವುದಲ್ಲದೆ ಅದರ ಚೆಲ್ವನೊರೆ ಬೆವರಿನ ರೋಮ ರಂಧ್ರಗಳನ್ನೆಲ್ಲಾ ಹೊಕ್ಕು ಮೈಕೊಳೆಗಳ ಅಶುದ್ಧಿಯನ್ನೆಲ್ಲಾ ತೆಗೆದುಹಾಕುವುದು. ಅದರ ಮೆತ್ತನೆಯ ಗುಣವೂ, ಸುಗಂಧವೂ ಚಿರಸ್ಮರಣೀಯವು.

ಮೈಸೂರು ಸ್ಯಾಂಡಲ್ ಸೋಪ್

ಸ್ತ್ರೀ ಯರ ಸೌ ಕ ರ್ಯ ಕ್ಕಾ ಗಿ

೧೯೩೯ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ — ಚಿಲ್ಲರೆಯಾಗಿ ಸಂಕ್ರಾಂತಿ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ ಇಲ್ಲದೆ ಮತ್ತು ಸಂಕ್ರಾಂತಿ ಜೆಲ್ ಅಧಿಕಾರಿಗಳಲ್ಲಿಯೂ ಅತ್ತಿಯೂ ಮತ್ತು ೧ ರೂ.ಗೆ ೩ ಸೇರು ದರ ಸಹ ದೊರೆಯುತ್ತೆ

ಬಂಗಾಳಾ ಕ್ಷಾಮ ನಿವಾರಣ ಸಹಾಯ ನಿಧಿಗೆ

ವಿ ವಿ ಧ ವಿ ನೋ ದಾ ವ ಳಿ

ಶಿವರಾಮ ಪೇಟೆಯಲ್ಲಿರುವ ಲಕ್ಷ್ಮೀವಿಲಾಸ ಥಿಯೇಟರಿನಲ್ಲಿ

16 - 9 - 43 ನೇ ಗುರುವಾರ ಸಂಜೆ 7 ಘಂಟೆಗೆ

ಸಂಪುಟ ೨] ಶನಿವಾರ ೧೧—೯—೪೩ [ಸಂಚಿಕೆ ೫೦

ಜರ್ಮನಿ ಮೇಲೆ ಇಟಲಿ ಯುದ್ಧ ಹೂಡಿತು

ಮುಸೋಲಿನಿಯನ್ನು ಮಿತ್ರರ ವಶಪಡಿಸಲಾಯಿತು

ಆಲ್ಬೇನಿಯಾದಲ್ಲಿ ಇಟಲಿ-ಜರ್ಮನ್ ಕದನ

ಬಂಗಾಳ ಪರಿಹಾರ ನಿಧಿ

ಮೈಸೂರು: ೧೧

ಬಂಗಾಳ ಕ್ಷಾಮನಿವಾರಣೆಗೋಸ್ಕರ ತೆರೆದಿರುವ ಮೈಸೂರು ಮಹಾಜನ ಸ್ಟಾರ್ ರಿಲೀಫ್ ಫಂಡಿಗೆ ನಿನ್ನೆ ಪ್ರಕಟವಾದ ಪಟ್ಟಿಯಲ್ಲದೆ ಈಗ ಇತರ ಹೆಸರುಗಳನ್ನು ಕೊಡಲಾಗಿದೆ— ಶ್ರೀಗಳಾದ ಜಿ. ಕೆ. ಡಿ. ಭಂಡಾರಯ್ಯ ೧೦೧ ರೂ, ಟಿ ಎಸ್. ಶಾಂತಪ್ಪ ೧೦೧ ರೂ, ಎ ಡಿ. ರಾಜಾರಾಂ ೧೦೧ ರೂ, ಕೃಷ್ಣಭವನ್ (ಎ ನೇ ರೋ) ೫೫ ರೂ

ವಿದ್ಯಾರ್ಥಿ ಬಿಡುಗಡೆ

ದಾವಣಗೆರೆ ಹೈಸ್ಕೂಲು ವಿದ್ಯಾರ್ಥಿ ಶ್ರೀ ಪ್ರಭಾಕರ್ ಎಂಬುವರು ೧ ವರ್ಷ ಕಾಲ [illegible] ಶಿಕ್ಷೆಯನ್ನನುಭವಿಸಿ, ಈ ದಿನ ಮೈಸೂರು ಜೈಲಿನಿಂದ ಬಿಡುಗಡೆಯಾದರು

ಶಿಕ್ಷೆ

ಪಂಚಾಪಟ್ಟಣದ ಗಡಿಯಿಂದ ರಹದಾರಿ ಇಲ್ಲದೆ ೩೦ ಕುರಿಗಳನ್ನು ಸಾಗಿಸಿದ [illegible] ಆಪಾದನೆಯ ಮೇಲೆ ನಾರಣಪ್ಪ ಎಂಬವನಿಗೆ ೫೦ ರೂ ಜುಲ್ಮಾನೆಯನ್ನೂ, ಎಮ್ಮೆ ಸಾಗಿಸಿದ್ದ ಚನ್ನಪ್ಪ ಎಂಬುವನಿಗೆ ೧೦ ರೂ. ದಂಡವನ್ನೂ ನ್ಯಾಯಾಧೀಶರು ವಿಧಿಸಿದ್ದಾರೆ.

ಮೈಸೂರು ಜೈಲಧಿಕಾರಿಗಳು

ಸೆಂಟ್ರಲ್ ಜೈಲಿನ ಚೀಫ್ ಜೈಲರಾದ [illegible] ಅವರನ್ನು ಮೈಸೂರು ಜೈಲ್ ಸೂಪರಿಂಟೆಂಡೆಂಟರಾಗಿ ನೇಮಿಸಲಾಗಿದೆ.

ಗುಮಾನಿ ಮೇಲೆ ದಸ್ತಗಿರಿ

ಶ್ರೀಕೃಷ್ಣರಾಜೇಂದ್ರ ಮಿಲ್ಲಿನ ಮ್ಯಾನೇಜರಾದ ಶ್ರೀ|| ಶ್ರೀನಿವಾಸಯ್ಯಂಗಾರ್‌ರವರ ಮನೆಯಲ್ಲಿ ಹಿಂದಿನ ತಿಂಗಳು ಬೆಳ್ಳಿ ತಟ್ಟೆ ಮತ್ತು ಒಂದು ಗಡಿಯಾರ ಕಳುವಾಗಿತ್ತು. ಈ ಸಂಬಂಧದಲ್ಲಿ ಇಂಟರ್‌ಮೀಡಿಯೆಟ್ ಕಾಲೇಜಿನ ವಿದ್ಯಾರ್ಥಿಯಾದ ಎಂ ಎ. [illegible] ಎಂಬುವರನ್ನು ಗುಮಾನಿ ಮೇಲೆ ಪೋಲೀಸರು ದಸ್ತಗಿರಿ ಮಾಡಿದ್ದಾರೆ.

—

ಜರ್ಮನ್-ಇಟಲಿ ಘರ್ಷಣೆ

ಉತ್ತರ ಇಟಲಿಯಲ್ಲಿ ಇಟಾಲಿಯನ್ನರ ವಶದಲ್ಲಿದ್ದ ರಕ್ಷಣಾಸ್ಥಾನಗಳನ್ನು ಹಿಡಿಯಲು ಜರ್ಮನರು ಹೋದಾಗ ಪರಸ್ಪರ ಘರ್ಷಣೆ ನಡೆಯಿತೆಂದು ವರದಿಯಾಗಿದೆ

ಉತ್ತರ ಇಟಲಿ ಜರ್ಮನ್ ವಶ

ದಕ್ಷಿಣ ಫ್ರಾನ್ಸಿನ [illegible] ಜರ್ಮನ್ ಸೈನಿಕರು ಆಕ್ರಮಿಸಿರುವ [illegible] ಇಟಲಿಯ ಇತರ ಜಿಲ್ಲೆಗಳನ್ನೂ [illegible] ಇಟಲಿ-ಜರ್ಮನ್ ಗಡಿಯನ್ನೂ [illegible] ಆಗ್ನೇಯ ಯೂರೋಪ್ ಭಾಗವನ್ನೂ ಜರ್ಮನರು ಆಕ್ರಮಿಸಿರುವರೆಂದು ಹೇಳಲಾಗಿದೆ

ಡೆನ್ಮಾರ್ಕಿನಲ್ಲಿ ಜರ್ಮನ್ ಸೈನ್ಯ ರಕ್ಷಣೆ

ಡೆನ್ಮಾರ್ಕಿನಲ್ಲಿರುವ ಜರ್ಮನ್ ಸೈನ್ಯಗಳ [illegible] ದೃಷ್ಟಿಯಿಂದ, ಅಲ್ಲಿರುವ ಯಾವ [illegible] ಗವನ್ನಾಗಲಿ, ಭೂಮಿಯನ್ನಾಗಲಿ ವಶಪಡಿಸಿಕೊಳ್ಳುವ ಅಧಿಕಾರವು ತನಗಿದೆಯೆಂದು ಡೆನ್ಮಾರ್ಕಿನ ಸೇನಾನಾಯಕ [illegible] ನ್ನು ಜಾರಿಗೆ ತಂದಿರುವನು.

ಬರ್ಲಿನ್‌ನಲ್ಲಿ ಇಟಾಲಿಯನ್ "ಕ್ವಿಸ್ಲಿಂಗ್ ಸರ್ಕಾರ"

ಬರ್ಲಿನ್‌ನಲ್ಲಿ ಮುಸೋಲಿನಿ ಹೆಸರಿನಲ್ಲಿ ಇಟಾಲಿಯನ್ 'ಕ್ವಿಸ್ಲಿಂಗ್' ಸರ್ಕಾರ ಏರ್ಪಟ್ಟಿರುವುದಾಗಿಯೂ ಇದಕ್ಕೆ ನಾಜಿ ಫ್ಯಾಸಿಸ್ಟ್ ನಾಯಕರ ಬೆಂಬಲವಿತ್ತಿರುವಂತೆ ಹೇಳಲಾಗಿದೆ.

ಬಡೋಗ್ಲಿಯೋ ಸರ್ಕಾರವು ಮಿತ್ರರಿಗೆ ಶರಣಾಗತವಾಯಿತೆಂಬ ವಾರ್ತೆಯನ್ನು ಕೇಳಿ ಜರ್ಮನಿ ವೃತ್ತಪತ್ರಿಕೆಗಳಿಗೆ ಸಿಡಿಲು ಬಡಿದಂತಾಗಿ, ಬಡೋಗ್ಲಿಯೋ ಮಿತ್ರದ್ರೋಹಿ ಎಂದು ಬರೆಯುತ್ತಿವೆ

ಜರ್ಮನಿ ಮೇಲೆ ಇಟಲಿ ಯುದ್ಧವೆ

ಇಟಲಿಯ ಬಡೋಗ್ಲಿಯೋ ಸರ್ಕಾರವು ಜರ್ಮನಿ ಮೇಲೆ ಯುದ್ಧ ಘೋಷಿಸಲು ತೀರ್ಮಾನಿಸಿವೆಯೆಂದು ಪ್ರೆಸ್ ನ್ಯೂಸ್ ಸಮಾಚಾರವು ಹೊರಟಿದೆ

ಇಟಲಿ ದೊರೆಗಳ ರಾಜ್ಯತ್ಯಾಗ

ಇಟಲಿಯ ದೊರೆಗಳಾದ ವಿಕ್ಟರ್ ಇಮ್ಯಾನುಯಲ್‌ರವರು ರಾಜ್ಯತ್ಯಜಿಸಿರುವರೆಂದೂ, ಸ್ವಿಸ್‌ನರದಿಗೆ ಹೋದವಿಲ್ಲವೆಂದೂ ಇಟಲಿಯ ವಾರ್ತಾ ಸಂಸ್ಥೆಯು ತಿಳಿಸುತ್ತದೆ.

ಆದರೆ ನಿನ್ನೆ ದಿವಸ ದೊರೆಗಳು ರಾಜ್ಯತ್ಯಾಗಮಾಡಿದರೆಂದು ಜರ್ಮನ್ ವಾರ್ತಾ ತಿಳಿಸುತ್ತದೆ

ಆರ್ಜೆಂಟೈನಾದ ಮಂತ್ರಿಗಳ ರಾಜೀನಾಮೆ

ಆರ್ಜೆಂಟೈನಾದ ವಿದೇಶಾಂಗ ಮಂತ್ರಿಯಾದ ಅಡ್ಮಿರಲ್ ಸ್ಟೋರ್ನಿಯವರು ರಾಜೀನಾಮೆ ಕೊಟ್ಟಿರುವರು ಅಮೆರಿಕದ ರಾ|| ಕಾರ್ಡೆಲ್ ಹಲ್‌ರವರು ಅವರ ನೀತಿಯ ಬಗ್ಗೆ ತೀವ್ರವಾಗಿ ಖಂಡಿಸಿದುದೇ ರಾಜೀನಾಮೆಗೆ ಕಾರಣವೆಂದು ಹೇಳಲಾಗಿದೆ.

ಆರ್ಜೆಂಟೈನಾವು ಆಕ್ಸಿಸ್ ಬಾಂಧವ್ಯವನ್ನು ಬಿಡುವುದಿಲ್ಲವೆಂದು ವಿದೇಶಾಂಗ ಮಂತ್ರಿಗಳಾಗಿದ್ದ ಸ್ಟೋರ್ನಿಯವರು ತಿಳಿಸಿದ್ದಾರೆ

ಪರ್ಷಿಯಾ-ಜರ್ಮನ್ ಯುದ್ಧ

ಪರ್ಷಿಯಾ ಜರ್ಮನಿ ಮೇಲೆ ಯುದ್ಧ ಘೋಷಿಸಿದೆಯೆಂದು ವರದಿಯಾಗಿದೆ

ಮುಸೋಲಿನಿ ಮಿತ್ರರ ಕೈಗೆ ಸಿಕ್ಕಿಬಿದ್ದರು

ಬಂಧನದಲ್ಲಿಟ್ಟಿದ್ದ ಮುಸೋಲಿನಿಯನ್ನು ಮಿತ್ರರಿಗೆ ವಶಪಡಿಸಲಾಯಿತೆಂದೂ, ಅವರನ್ನು ಉತ್ತರ ಆಫ್ರಿಕಾಕ್ಕೆ ಕಳುಹಿಸಲಾಗಿದೆಯೆಂದೂ, ಸ್ವಿಸ್ ಪತ್ರಿಕೆಯೊಂದು ವರದಿಮಾಡಿದೆ.

—

ಇಟಲಿಯಲ್ಲಿ ಜರ್ಮನರು ಕದನ ನಡೆಸುವರು

ಹಿಟ್ಲರನು ಮುಖ್ಯಯುದ್ಧ ಸಭೆಯೊಂದನ್ನು ನಡೆಸಿ ಇಟಲಿಯಲ್ಲಿ ಕೊನೆಯವರೆಗೂ ಯುದ್ಧಮಾಡಲು ನಿರ್ಧರಿಸಿರುವನೆಂದೂ ರೋಮೆಲ್ ಬಳಿಗೆ ಜಾಗ್ರತೆ ಸೈನ್ಯ ಕಳುಹಿಸಲು ಆಜ್ಞೆ ಮಾಡಿರುವನೆಂದೂ ಹೇಳಲಾಗಿದೆ

—

ಆಲ್ಬೇನಿಯಾದಲ್ಲಿ ಕದನ

ಆಲ್ಬೇನಿಯಾದಲ್ಲಿ ಇಟಾಲಿಯನರು ಮತ್ತು ಜರ್ಮನರು ಕದನ ನಡೆಸುತ್ತಿರುವರೆಂದು ಹೇಳಲಾಗಿದೆ. ಜರ್ಮನ್ ಮತ್ತು ಬಲ್ಗೇರಿಯನ್ ಸೈನ್ಯವು ನವಾಪ್ರವನ್ನು ಮುಟ್ಟಲೆತ್ನಿಸುತ್ತಿವೆಯೆಂದು ಹೇಳಲಾಗಿದೆ

ರುಮೇನಿಯಾದಲ್ಲಿದ್ದ ಇಟಾಲಿಯನ್ ಸೈನ್ಯಗಳು ತಪ್ಪಿಸಿಕೊಂಡು ಹೋಗದಂತೆ ಜರ್ಮನ್ ಅಧಿಕಾರಿಗಳು ಕಾರ್ಯಾಚರಣೆ ಕೈಗೊಂಡಿರುವರೆಂದು ವರದಿಯಾಗಿದೆ.

—

ಸಾರ್ಡಿನಿಯಾದಲ್ಲಿ ಮಿತ್ರ ಸೈನ್ಯ

ಸಾರ್ಡಿನಿಯಾ ಮತ್ತು ಕಾರ್ಸಿಕಾದಲ್ಲಿ ಮಿತ್ರ ಸೈನ್ಯ ಬಂದಿಳಿದಿದೆಯೆಂದೂ ಮತ್ತು ಟಾರೆಂಟೊ ಬಂದರಿಗೆ ಬ್ರಿ|| ಯುದ್ಧ ನೌಕೆಗಳು ಬಂದಿವೆಯೆಂದೂ ವರದಿಯಾಗಿದೆ.

—

ರೋಮೇನ್ ರೋಲೆಂಡ್‌ರವರ ಬಂಧನ

ಗಾಂಧೀಜಿಯವರ ಜೀವನಚರಿತ್ರೆಯನ್ನು ಬರೆದ ಫ್ರಾನ್ಸಿನ ಪ್ರಮುಖ ಗ್ರಂಥಕರ್ತರಾದ ಎ. ರೋಮೇನ್ ರೋಲೆಂಡ್‌ರವರನ್ನು ಜರ್ಮನ್ ಕಾನ್ಸನ್‌ಟ್ರೇಷನ್ ಶಿಬಿರಕ್ಕೆ ಕಳುಹಿಸಲಾಗಿದೆ ಎಂದು ಹೇಳಲಾಗಿದೆ

ಕೊನೆಯವರೆಗೂ ಜರ್ಮನ್ ಹೋರಾಡುವುದು

ಇಟಲಿಯ ನಡವಳಿಕೆಯು [illegible] ಒಪ್ಪಂದಕ್ಕೆ ವಿರೋಧವಾದುದು [illegible] ಶರಣಾಗತವಾಗಿರುವುದು ಯುದ್ಧ ಕಾರ್ಯಕ್ರಮದಲ್ಲಿ ಯಾವ ಬದಲಾವಣೆ ಆಗುವುದಿಲ್ಲ ಅಂತ್ಯ ಜಯ ಲಭಿಸುವವರೆಗೂ ಕದನ ನಡೆಸಲಾಗುವುದು" ಎಂದು ಜರ್ಮನ್ ವಾರ್ತಾ ಶಾಖೆಯು ಒಂದು ಪ್ರಕಟಣೆ ಹೊರಡಿಸಿದೆ

—

ಸ್ಪೇಜಾದಲ್ಲಿ ಮಿತ್ರ ಸೈನ್ಯ

ನೇಪಲ್ಸ್ ಬಳಿ ಸಾವಿರಾರು ಬ್ರಿ|| ಸೈನ್ಯ ಮತ್ತು ಟ್ಯಾಂಕುಗಳು ಬಂದಿಳಿಯುತ್ತಿವೆಯೆಂದು ಹೇಳಲಾಗಿದೆ ಜರ್ಮನ್ ಸೈನ್ಯದೊಡನೆ ಸಂಘರ್ಷವಾಗಿದ್ದರೂ ಕೂಡ, ಘೋರ ಯುದ್ಧ ಪ್ರಾರಂಭವಾಗಿಲ್ಲವೆಂದು ವರದಿಯಾಗಿದೆ.

ಇಟಲಿ ಮುಖ್ಯ ನೌಕಾ ಕೇಂದ್ರವಾದ ಸ್ಪೇಜಾದಲ್ಲಿ ಬ್ರಿ|| ಸೈನ್ಯ ಬಂದಿಳಿದಿದೆಯೆಂದೂ, ಸ್ಪೇಜಾದಿಂದ ಇಟಲಿ ದಕ್ಷಿಣದ [illegible] ಪ್ರದೇಶವೆಲ್ಲ ಈಗ ಮಿತ್ರರ ವಶದಲ್ಲಿದೆಯೆಂದೂ ಹೇಳಲಾಗಿದೆ.

—

ದಸ್ತಗಿರಿ

ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ನೌಕರರಾದ ಶ್ರೀ ಹೆಚ್. ಎಂ ಕಾಳೆಯವರನ್ನು ಪೋಲೀಸರು ಭಾರತ ರಕ್ಷಣಾ ಶಾಸನ ರೀತ್ಯಾ ದಸ್ತಗಿರಿ ಮಾಡಿದ್ದಾರೆ.

—

ಪೋರ್ಚುಗಲ್ ಮೇಲೆ ಜಪಾನ್ ಬೆದರಿಕೆ

ಪೋರ್ಚುಗಲ್ಲಿಗೆ ಸೇರಿದ ಮಕಾವೋವನ್ನು ಆಕ್ರಮಿಸಲಾಗುವುದೆಂದು ಜಪಾನ್ ಎಚ್ಚರಿಸಿದೆಯೆಂದು ಹೇಳಲಾಗಿದೆ

ಮಕಾವೋ ಹತ್ತಿರದ ಭಾಗದಲ್ಲಿ ಹೆಚ್ಚಾಗಿ ಜಪಾನ್ ಸೈನ್ಯವನ್ನು ಕಳುಹಿಸಲಾಗಿದೆಯೆಂದೂ ಮಕಾವೋ ಸರ್ಕಾರದಲ್ಲಿ ಜಪಾನಿ ಸಲಹೆಗಾರರನ್ನು ನೇಮಿಸಬೇಕೆಂದೂ ಇದನ್ನು ನಿರಾಕರಿಸಿದರೆ ಮಿಲಿಟರಿ ಆಕ್ರಮಣ ಮಾಡಲಾಗುವುದೆಂದೂ ಬೆದರಿಸಿದ್ದಾರೆ

—

೩೩ ರಾಜಕೀಯ ಖೈದಿಗಳ ಬಿಡುಗಡೆ

ಆಗಸ್ಟ್ ತಿಂಗಳಲ್ಲಿ ಚಳುವಳಿಯಲ್ಲಿ ಶಿಕ್ಷೆಗೆ ಒಳಗಾದ ೬೬ ಮಂದಿ ರಾಜಕೀಯ ಖೈದಿಗಳ ಪೈಕಿ ೩೩ ಮಂದಿಯ ಬಿಡುಗಡೆ ಮಾಡಲು ಹೈದರಾಬಾದ್ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

[illegible]

ಟಿ. ಸಿ. ನಟರಾಜನ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ [illegible] ಔಷಧಿಗಳೂ [illegible] ದೊರೆಯುವುವಲ್ಲದೆ [illegible] ಚಿಕಿತ್ಸೆಯು ಬಹಳ [illegible] ಮಾಡಲ್ಪಡುತ್ತದೆ

ಝಂಡೂರವರ [illegible] ಔಷಧಿಗಳೆಲ್ಲವೂ ಸದಾ ದೊರೆಯುತ್ತವೆ

[illegible]

ದಿ: ಸ್ತ್ರಾನ ಒಪ್ಪಿಸಲು ಅವಧಿ ಹೆಚ್ಚಿತು

ಬೆಂಗಳೂರು ೧೦

ಸರ್ಕಾರದವರು ಹೊರಡಿಸಿದ ಕಮ್ಯಾಂಡಿಯರಿಂಗ್ ಆಜ್ಞೆ ಪ್ರಕಾರ ಈ ಮಾಹೆ ತಾ॥ ೧೧ ರೊಳಗಾಗಿ ದಿ: ಸ್ತ್ರಾನನ್ನು ಒಪ್ಪಿಸಬೇಕಾಗಿದ್ದ ಆಜ್ಞೆಯನ್ನು ಮಾರ್ಪಡಿಸಿ, ಅವಧಿಯನ್ನು ೧೮ ನೇ ತಾ॥ ಹೆಚ್ಚಿಸಲಾಗಿದೆ.

ಸುವರ್ಣದ ಗಟ್ಟಿ ಇಟ್ಟಿದ್ದ ಜಿರೋಪ್ಯರಿಗೆ ಶಿಕ್ಷೆ

ಕೋಲಾರದ ಚಿನ್ನದ ಗಣಿಯಲ್ಲಿ ಆ॥ ಟ್ರೀಟ್‌ಮೆಂಟ್ ಫೋರ್ಮ್ಯಾನಾಗಿದ್ದ ಮಿ॥ ಬಾಸ್ಟ್ಯಾಂ ಎಂಬುವರು ೧೭೩೦ ರೂ. ಬೆಲೆಯುಳ್ಳ ಬಂಗಾರದ ಗಟ್ಟಿ ಇಟ್ಟಿದ್ದರೆಂದು ಅವರಿಗೆ ಚೀಫ್ ಜಸ್ಟಿಸ್ ಆಫ್ ಪೀಸ್‌ರಾದ ಮಿ॥ ಜಿ. ಜೆಸ್ಪರ್‌ರವರು ೪ ತಿಂಗಳು ಸಾದಾ ಸಜವನ್ನೂ, ರಹದಾರಿ ಇಲ್ಲದೆ ಬಂದೂಕ, ರಿವಾಲ್ವರ್ ಮತ್ತು ತೋಟಾಗಳನ್ನು ಇಟ್ಟಿದ್ದನರಿಂದ ೫೦ ರೂ ದಂಡವನ್ನೂ ವಿಧಿಸಿದ್ದಾರೆ

ಮೋಸ ಮಾಡಿದ್ದಕ್ಕೆ ದಸ್ತಗಿರಿ

ಪಟ್ಟಣಪ್ಪದ ಡಿ. ಎಸ್. ರಾವ್ ಮತ್ತು ಪಿ ಎಸ್. ರಾವ್ ಎಂಬುವರಿಬ್ಬರನ್ನೂ ಮೋಸದ ಆಪಾದನೆಯ ಮೇಲೆ ದಸ್ತಗಿರಿ ಮಾಡಿದ್ದಾರೆ. ಮದ್ರಾಸಿನ ಜಾರ್ಜ್‌ಟೌನಿನ ಆನೇಕ ರೂ. ಬೆಲೆಬಾಳುವ ಸಾಮಾನುಗಳನ್ನು ಕೊಂಡು ಅದಕ್ಕೆ ಹಣಪಾವತಿ ಮಾಡಲು ಮೋಸದ ಚೆಕ್ಕನ್ನು ಬರೆಯಿಸಿ, ಪರಾರಿಯಾಗುತ್ತಿದ್ದಾಗ್ಗೆ ಪೋಲೀಸರು ದಸ್ತಗಿರಿಮಾಡಿದರೆಂದು ತಿಳಿದುಬಂದಿದೆ.

ಬೆಂಗಳೂರು ನಗರದ ಚಿಕ್ಕಪೇಟೆಯಲ್ಲೂ ಇದೇ ಬಗೆಯ ಮೋಸಕೃತ್ಯ ನಡೆಸಿದರೆಂದೂ ಹೇಳಲಾಗಿದೆ.

ಆಹಾರ ಬವಾನೆಗೆ ಸೌಲಭ್ಯ

ಬಂಗಾಳದ ದುಸ್ಥಿತಿಯನ್ನು ನಿವಾರಿಸುವಸಲುವಾಗಿ ಭಾರತದ ನಾನಾ ಕಡೆಗಳಿಂದ ಆಹಾರ ದಿನಸಿಗಳ ರವಾನೆ ಬಗ್ಗೆ ಭಾರತ ಸರ್ಕಾರದವರು ನೂತನ ಆಜ್ಞೆಯೊಂದನ್ನು ಹೊರಡಿಸಿದ್ದಾರೆ ದಾನಿಗಳುವರು ಮತ್ತು ಪರಿಹಾರ ಸಂಸ್ಥೆಗಳವರು ಆಹಾರ ದಿನಸಿಗಳನ್ನು ಆಯಾ ಪ್ರಾಂತ್ಯಗಳು ಮತ್ತು ಸಂಸ್ಥಾನದ ಸರ್ಕಾರಗಳು ಬಂಗಾಳಕ್ಕೆ ಕಳಿಸಬಹುದೆಂದು ತಿಳಿಸಿದ್ದಾರೆ.

ಬಂಗಾಳಕ್ಕೆ ದಿನಂಪ್ರತಿ ೧೧೦ ವ್ಯಾಗನ್ ಆಹಾರ ಸಾಮಗ್ರಿ

ಬಂಗಾಳ ಕ್ಷಾಮನಿವಾರಣೆಗೋಸ್ಕರ ಪಂಜಾಬಿನಿಂದ ಬಂಗಾಳಕ್ಕೆ ಪ್ರತಿದಿನವೂ ೧೧೦ ವ್ಯಾಗನ್‌ಗಳ ಆಹಾರ ಪದಾರ್ಥಗಳನ್ನು ರವಾನಿಸುತ್ತಿದೆಯೆಂದು ಬಂಗಾಳ ಸಿವಿಲ್ ಸಪ್ಲೈ ಮಂತ್ರಿಗಳು ಹೇಳುತ್ತಾರೆ.

ಒರಿಸ್ಸಾ ಸರ್ಕಾರದವರು ೪ ಲಕ್ಷ ಮಣದಷ್ಟು ಭತ್ತವನ್ನು ಕಳುಹಿಸಲು ಭರವಸೆ ಕೊಟ್ಟಿರುವರು.

ವಿ ಟಿಟಿರ ಅಧಿಕಾರಿಗಳು ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯವರಿಗೆ ೨೦೦ ಟನ್‌ಗಳಷ್ಟು ಹಾಲನ್ನು ಕೊಟ್ಟಿರುವರು. ಇವನ್ನು ಬಾಣಂತಿಯರಿಗೂ, ಮಕ್ಕಳಿಗೂ ಉಪಯೋಗಿಸಬೇಕೆಂದು ಸೂಚಿಸಿರುವರು.

ಬಂಗಾಳ ಪರಿಸ್ಥಿತಿ ಉಗ್ರವಾಗುತ್ತಿದೆ

"ಬಂಗಾಳದಲ್ಲಿ ಪದಾರ್ಥಗಳ ಅಭಾವ ಬಹಳ ತೀವ್ರ ರೀತಿಯಲ್ಲಿದೆ. ಮುಂದಿನ ೩ ತಿಂಗಳಂತೂ ಗಂಡಾಂತರ ಕಾಲ. ಆಹಾರ ಪದಾರ್ಥಗಳ ಸರಬರಾಯಿ ವಿಚಾರದಲ್ಲಿ ರೈಲ್ವೆಯವರ ಸಹಕಾರ ಅಷ್ಟೇನು ತೃಪ್ತಿಕರವಾಗಿಲ್ಲ. ಆದುದರಿಂದ ನೌಕೆಗಳ ಮೂಲಕ ಸಾಗಿಸಲು ಸೌಕರ್ಯ ಕಲ್ಪಿಸಲಾಗುವುದು. ಈ ಕಷ್ಟ ಪರಿಸ್ಥಿತಿಯಿಂದ ಪಾರಾಗಬೇಕಾದರೆ ದವಸ, ಧಾನ್ಯಗಳನ್ನು ಭಾರತದ ಇತರ ಕಡೆಗಳಿಂದ ಪಡೆದುಕೊಂಡು ಬಂಗಾಳಕ್ಕೆ ಕಳಿಸಬೇಕು. ಇಲ್ಲದಿದ್ದರೆ ಬೇರೆ ಉಪಾಯವೇ ಇಲ್ಲ" ಎಂಬುದಾಗಿ ಆಹಾರ ಸಚಿವರಾದ ಶ್ರೀ ವಸ್ಸನರು ತಿಳಿಸಿದ್ದಾರೆ.

ಕಲ್ಕತ್ತಾದಲ್ಲಿ ಇದುವರೆಗೆ ೪೪೧ ಉಚಿತ ಭೋಜನಾಲಯಗಳನ್ನು ತೆರೆದು, ೭೫ ಸಾವಿರ ಮಂದಿಗೆ ಆಹಾರ ಒದಗಿಸಲಾಗುತ್ತಿದೆ.

ಸುದ್ದಿ ತಿಳಿಸಿದವರಿಗೆ ೧,೦೦೦ ರೂ. ಬಹುಮಾನ

ಬಂಗಾಳ ಸರ್ಕಾರದವರು ಆಹಾರ ಸಾಮಗ್ರಿ ಹತೋಟಿ ರೀತ್ಯಾ ಶಿಕ್ಷೆ ಪಡೆಯಲು ಅರ್ಹರಾದವರ ಸುದ್ದಿಯನ್ನು ತಿಳಿಸುವಂಥವರಿಗೆ ೧ ಸಾವಿರ ರೂ. ಬಹುಮಾನಕೊಡುವುದಾಗಿ ಪ್ರಕಟಿಸಿರುವರು

ಬಟ್ಟೆ ವ್ಯಾಪಾರಿಗಳಿಗೆ ಎಚ್ಚರಿಕೆ

"ಹತ್ತಿಯ ಮತ್ತು ನೂಲಿನ ಬಟ್ಟೆಗಳ ಬೆಲೆಯು ಏರುತ್ತಿದೆಯೆಂದು ತಿಳಿದುಬರುತ್ತದೆ ಸರ್ಕಾರದವರು, ಸಿ॥ ೪ ರಲ್ಲಿ ಹೊರಡಿಸಿದ ಪ್ರಕಟಣೆಮೇರೆ ಧಾರಣೆಗಳನ್ನು ಅನುಸರಿಸಲು ವ್ಯಾಪಾರಿಗಳು ಪ್ರಯತ್ನ ಮಾಡದಿದ್ದರೆ ಉಗ್ರಕ್ರಮವನ್ನು ಕೈಗೊಳ್ಳಲಾಗುವುದು ಮತ್ತು ಸಾಮಾನ್ಯವಾಗಿ ಕೊಟ್ಟಿರುವ ಸೌಲಭ್ಯಗಳನ್ನೆಲ್ಲಾ ರದ್ದು ಮಾಡಲಾಗುವುದು." ಎಂಬುದಾಗಿ ಬೊಂಬಾಯಿ ಟೆಕ್ಸ್‌ಟೈಲ್ ಕಮಿಷನರ್ ಎಚ್ಚರಿಕೆ ಕೊಟ್ಟಿದ್ದಾರೆ.

ಹೊಟ್ಟೆಗಿಲ್ಲದೆ ೩೭ ಮಂದಿ ಮರಣ

ಕಲ್ಕತ್ತಾ ನಗರದ ಬೀದಿಗಳಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿದ್ದ ೧೫೭ ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ, ಅವರ ಪೈಕಿ ೩೭ ಮಂದಿ ಮರಣಹೊಂದಿದರೆಂದೂ ವರದಿಯಾಗಿದೆ.

Available Houses :—

1. Bestha Gali, No. 556
2. Ateeroot Street, No 712
3. Chamundi Extention, No. 2841
4. Mandi Mohalla, No 388
5. Ciment House, Chamundi Extention, No 997
6. 100 ft Road.

Enquire at :—
Sri Umamaheswara And Co.
"Lakshmisthanam",
Geetha Road, Mysore.

ಪತ್ರ ವ್ಯವಹಾರ

ಇದೇನೀ ವಿಪರೀತ ?

ರಾಜಧಾನಿಯ ಲ್ಯಾನ್ಸ್‌ಡೌನ್ ಬಜಾರ್‌ನಲ್ಲಿರುವ ಅಂಗಡಿ ಮಳಿಗೆಗಳ ಬಾಡಿಗೆ ವಸೂಲಿ ಮತ್ತು ಮೇಲ್ವಿಚಾರಣೆಯು ಅಸಿಸ್ಟೆಂಟ್ ಇಂಜನಿಯರ್ ಒಬ್ಬರ ಅಧೀನದಲ್ಲಿದೆ. ಮಾಹೆವಾರು ಬಾಡಿಗೆಯು ಪ್ರತಿ ತಿಂಗಳು ೧೫ ನೇ ತಾ॥ ರೊಳಗಾಗಿ ಪಾವತಿಯಾಗಬೇಕೆಂದೂ, ಅನಂತರ ತಕ್ಕ ಜೆನಾಲ್ಟಿಯೊಡನೆ ಸಂದಾಯಮಾಡಬೇಕೆಂದೂ ನಿಯಮವಿದೆ. ಬಾಡಿಗೆಗಳು ೧೦-೫-೦, ೬ ರೂ. ಚಿಲ್ಲರೆ, ಹೀಗಿದ್ದು ಪಾವತಿಯಾಗಬೇಕಾಗಿದ್ದರೆ ಎಷ್ಟು ಚಿಲ್ಲರೆಯೋ, ಅಷ್ಟೇ ಸರಿಯಾಗಿ ಪಾವತಿ ಮಾಡಬೇಕೆಂದು ವಸೂಲಿ ಗುಮಾಸ್ತರು ಹೇಳುತ್ತಾರೆ. ಹತ್ತೂವರೆ ರೂ. ಗೆ ಬದಲು ಎಲೆಕ್ಟ್ರಿಕ್ ಆಫೀಸಿನಲ್ಲಿ ಮಾಡಿದಂತೆ ೧೦ ರೂ. ಪಡೆದು ಬಾಕಿ ಎಂಟಾಣೆಯನ್ನು ಬರುವ ತಿಂಗಳ ಬಾಡಿಗೆಗೆ ಸೇರಿಸಿ ಪಡೆಯಿರಿ ಎಂದು ಹೇಳಿದರೆ ಅದಕ್ಕೂ ಒಪ್ಪುವುದಿಲ್ಲ. ಹೋಗಲಿ, ಹತ್ತೂವರೆ ರೂ. ಗೆ ಬದಲು ಹನ್ನೊಂದು ರೂ. ಪಡೆದು, ಹೆಚ್ಚಿನ ಎಂಟಾಣೆಯನ್ನು ಮುಂದಿನ ತಿಂಗಳ ಲೆಕ್ಕಕ್ಕೆ ಜಮಾ ಮಾಡಿಕೊಳ್ಳಿ ಎಂತ ಹೇಳಿದರೂ ಕೂಡ ಅಧಿಕಾರಿಗಳು ಇದಕ್ಕೆ ಯಾವುದಕ್ಕೂ ಒಪ್ಪುವುದಿಲ್ಲ ಹೆಚ್ಚೂ ಬೇಡ, ಕಮ್ಮಿಯೂ ಬೇಡ, ಎಷ್ಟು ಬರಬೇಕೋ ಅಷ್ಟನ್ನೇ ಕ್ರಮ ಪ್ರಕಾರ ವಸೂಲ್ಮಾಡಿ ಎಂದು ತಿಳಿಸುತ್ತಾರೆ ಎಂದು ಬಾಡಿಗೆದಾರರಿಗೆ ವಿವರಣೆ ಕೊಡುತ್ತಾರೆ. ಚಿಲ್ಲರೆ ದೊರೆಯದೆ ಪ್ರಪಂಚವೇ ಪಾತೊರೆಯುತ್ತಿರುವಾಗ ಈ ವಿಪರೀತವು ಉಂಟೆ ಎನ್ನಿ. ಸುತ್ತದ ಸಂಬಂಧಪಟ್ಟವರು ಸೂಕ್ತ ಸಲಹೆಯನ್ನೀಯುವರೆಂದು ನಂಬಿದ್ದೇನೆ.

ಓರ್ವ ಬಾಡಿಗೆದಾರ.

ಶತ್ರುವಿನ ೩೧ ನೌಕೆಗಳ ಜಲಸಮಾಧಿ

ದೂರಪ್ರಾಚ್ಯ ಸಮುದ್ರದಲ್ಲಿ ಜಪಾನಿ ನೌಕೆಯೊಂದನ್ನು ಅಮೇರಿಕ ಸಬ್‌ಮೆರೀನ್‌ಗಳು ಮುಳುಗಿಸಿದವು. ೪ ಶತ್ರು ವ್ಯಾಪಾರ ನೌಕೆಗಳಿಗೆ ನಷ್ಟವನ್ನು ಉಂಟುಮಾಡಿವೆ. ಯುದ್ಧಾರಂಭವಾದಾಗಿನಿಂದ ಇದುವರೆಗೆ ೩೧೯ ಜಪಾನಿ ನೌಕೆಗಳನ್ನು ಮುಳುಗಿಸಲಾಗಿದೆ.

ಜಪಾನಿ ಸೇನೆಗೆ ಗಂಡಾಂತರ

ಸಾಲಮೋವಾ ಮತ್ತು ಲೆ ದ್ವೀಪಗಳಲ್ಲಿರುವ ೨೦ ಸಹಸ್ರ ಜಪಾನೀ ಸೈನ್ಯವನ್ನು ಮಿತ್ರಪಡೆಗಳು ಸುತ್ತುಗಟ್ಟಿ ಭಾರಿ ಧಾಳಿಯನ್ನು ಆರಂಭಿಸಿವೆ. ೩ ಜಪಾನಿ ವಿಮಾನಗಳನ್ನು ಹೊಡೆದುರುಳಿಸಲಾಯಿತು. ಆ ದ್ವೀಪದ ಜಪಾನಿ ರಕ್ಷಣಾ ನೆಲೆಗಳ ಮೇಲೆ ಮಿತ್ರವಿಮಾನಗಳು ಧಾಳಿ ಮಾಡಿ ೭೩ ಟನ್ ಬಾಂಬುಗಳನ್ನು ಸುರಿಸಿದುವು. ವೆಲ್ಲಾದಲ್ಲಿ ಮೂರು ದೋಣಿಗಳನ್ನು ಮುಳುಗಿಸಲಾಯಿತು.

ಜರ್ಮನರ ಪಲಾಯನ

ಉತ್ತರ ಯುಕ್ರೇನಿನಲ್ಲಿ ಮುಖ್ಯ ರೈಲ್ವೆ ಸಿಲ್ದಾಣವಾದ ಬಕ್‌ಮಕ್ ನಗರವನ್ನು ರಷ್ಯನರು ಹಿಡಿದಿದ್ದಾರೆ. ಪಟ್ಟಣದ ರಸ್ತೆಗಳಲ್ಲಿ ಭೀಕರ ಕದನ ನಡೆಸಿ, ಅದನ್ನು ಆಕ್ರಮಿಸಲಾಯಿತೆಂದು ಹೇಳಲಾಗಿದೆ.

ಡೊನೆಟ್ಸ್‌ನಲ್ಲಿ ಸ್ಟಾಲಿನೋದಿಂದ ಉತ್ತರ ಯುಕ್ರೇನಿನಲ್ಲಿ ಕೊನಟಾಫ್‌ವರೆಗಿನ ೧೫೫ ಮೈಲಿಗಳ ವಿಸ್ತಾರವಾದ ರಣಕ್ಷೇತ್ರದಲ್ಲಿ ಜರ್ಮನರು ಸಂಪೂರ್ಣವಾಗಿ ಪಲಾಯನ ಮಾಡುತ್ತಿರುವರು.

ನೀಪರ್ ನದಿಯ ತೀರದಲ್ಲಿರುವ ಮುಖ್ಯ ಪಟ್ಟಣವಾದ ನೀಪ್ರೋ ಪೆಟ್ರೋವ್‌ಸ್ಕ ಕಡೆಗೆ ರಷ್ಯನರು ನುಗ್ಗುತ್ತಿದ್ದಾರೆ

ಡಾಲ್ಮೇಷಿಯಾ ಆಕ್ರಮಣ

ಬಾಲ್ಕನ್ ಪ್ರದೇಶದಲ್ಲಿ ನೂತನ ನಡೆವಳಿಕೆಗಳಿಗೆ ಮೊದಲಾಗಿದೆ ಇಟಲಿ ಶರಣಾಗತವಾದ ಪ್ರಕಟಣೆ ಬಂದ ೧೨ ಗಂಟೆಗಳ ನಂತರ ಕ್ರೋಶಿಯನ್ ಸೈನ್ಯಗಳು ಡಾಲ್ಮೇಷಿಯಾ ತೀರಪ್ರದೇಶವನ್ನು ಆಕ್ರಮಿಸಲು ಹಿಟ್ಲರ್ ಸಮ್ಮತಿಸಿರುವನು ಈ ಸೈನ್ಯಕ್ಕೆ ಜರ್ಮನ್ ಸೇನೆಗಳು ಸಹಾಯ ಕೊಡಲು ಸಿದ್ಧವಾಗಿವೆ

RETURN TICKET TO RADIANT YOUTH AT

New Royal Dispensary

Ashoka Road, Mysore.

Edited, printed and published by A. R. Nagarajan at the Sadhvi Press, D.Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿ ಮಂಡಿ, ದೇವರಾಜ ಮಾರ್ಕೆಟ್ಟು, ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತದೆ ಇಲ್ಲದ ಮತ್ತು ಸಂತೆಪೇಟೆ ಪೋಸ್ಟ್ ಆಫೀಸಿನಲ್ಲೂ ಅಕ್ಕಿಯೂ ಮತ್ತು ೧ ರೂ. ಗೆ ೩ ಸೇರು ದರ ದೊರೆಯುತ್ತೆ.

ಬಂಗಾಳಾ ಕ್ಷಾಮ ನಿವಾರಣ ಸಹಾಯ ನಿಧಿಗೆ

ವಿವಿಧ ವಿನೋದಾವಳಿ

ಶಿವರಾಮ ಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ

16 - 9 - 43 ನೇ ಗುರುವಾರ ಸಂಜೆ 7 ಘಂಟೆಗೆ

WEEKLY EDITION

ಸಂಪುಟ ೨] ಸೋಮವಾರ ೧೩-೯-೪೩ [ಸಂಚಿಕೆ ೫೨

ಉತ್ತರ ಇಟಲಿ ಮೇಲೆ ಜರ್ಮನ್ ಕೈಮುಷ್ಟಿ

ಜಪಾನಿನಲ್ಲಿ ಭೂಕಂಪವಾಗಿ ೧,೪೦೦ ಮಂದಿ ಮರಣ
ಮಿಲಾನ್, ಟ್ಯೂರಿನ್ ನಗರಗಳು ಜರ್ಮನ್ ವಶ

.ರಿನವರಿಗೆ ನೂತನ ಹುದ್ದೆ

ಮೈಸೂರು ೧೩

.ರು ನೇರದ ಸಬ್ ಜಡ್ಜರಾದ .ರಾಮಣ್ಣನವರ ಮಕ್ಕಳಾದ ಶ್ರೀ ... ನಾ ರವರನ್ನು ಇಂಡಿಯಾ ಸರ್ಕಾರದ ಸಪ್ಲೈ ಇಲಾಖೆಯಲ್ಲಿ ಅಸಿಸ್ಟೆಂಟ್ ಡೈರೆಕ್ಟರಾಗಿ ನೇಮಿಸಲಾಗಿದೆ. ಅವರು ಈಗ ಮೆಟ್ಟೂರಿನಲ್ಲಿ ಚೀಫ್ ಕೆಮಿಸ್ಟರಾಗಿದ್ದಾರೆ. ಬೆಂಕಿಕಡ್ಡಿ ತಯಾರಿಕೆಗೆ ಬೇಕಾದ ಬಹು ಮುಖ್ಯವಾದ ಪೊಟಾಸಿಯಂ ಕ್ಲೋರೈಡ್ ಯುದ್ಧದಿಂದ ಹೊರಗಿನಿಂದ ಬರುವುದು ನಿಂತು ಹೋಗಿರುವುದರಿಂದ, ಅದರ ತಯಾರಿಕೆ ಬಗ್ಗೆ ನೂತನವಾಗಿ ಸಂಶೋಧನೆ ನಡೆಸಿ, ಅವರು ಕಂಡುಹಿಡಿದುದನ್ನು ಇಂಡಿಯಾ ಸರ್ಕಾರದವರು ಪ್ರಶಂಸಿಸಿ, ಅದಕ್ಕೆ ಉತ್ತೇಜನ ಕೊಡಲು ಈ ಹುದ್ದೆ ಕೊಟ್ಟಿರುವರು.

ಕೃಷ್ಣರಾಜನಗರದ ರೈತರ ಅಹವಾಲು

ಕೃಷ್ಣರಾಜನಗರದ ರೈತರ ಪರವಾಗಿ ಪ್ರಜಾ ಪ್ರ ಸಭಾ ಸದಸ್ಯರಾದ ಶ್ರೀ|| ಪುಟ್ಟಬಸಪ್ಪ ಮತ್ತು ಇತರರು ಈ ದಿನ ಬೆಳಗ್ಗೆ ಸರಬರಾಜು ಸಚಿವರಾದ ಶ್ರೀ|| ಎಂ. ಎ. ಶ್ರೀನಿವಾಸನ್‌ರವರನ್ನು ಭೇಟಿ ಮಾಡಿ, ರೈತರ ಕುಂದು ಕೊರತೆಗಳನ್ನು ಹೇಳಿಕೊಂಡರು. ಸರ್ಕಾರೀ ಅಧಿಕಾರಿಗಳು ಕೃಷ್ಣರಾಜನಗರದ ರೈತರುಗಳಿಂದ ದಿನಸಿಗಳನ್ನು ಕೊಂಡುಕೊಂಡು, ಅವರಿಗೆ ತಕ್ಷಣ ಹಣವನ್ನು ಕೊಡದೆ ತುಂಬಾ ತಪ್ಪಿಸುತ್ತಿರುವರೆಂದೂ, ಅನೇಕ ವೇಳೆ ಆ ಹಣವನ್ನು ಕಂಟ್ರಾಕ್ಟರುಗಳೇ ತೆಗೆದುಕೊಳ್ಳಲಾಗಿದೆಯೆಂದು ತಿಳಿಸಿ, ಅಮಲ್ದಾರರು ಮತ್ತು ಇತರ ಅಧಿಕಾರಿಗಳು ರೈತರಿಗೆ ತುಂಬಾ ತೊಂದರೆ ಕೊಡುತ್ತಿರುವರೆಂದು ತಿಳಿಸಿದರು.

ಸಚಿವರು, ಹೀಗೆ ಮಾಡುತ್ತಿರುವುದು ನಿಜವಾದರೆ ಅದು ಸರ್ಕಾರದ ಆಜ್ಞೆಗೆ ವಿರುದ್ಧವೆಂದೂ, ಇಲ್ಲಿಯವರೆಗೆ ಕಂಟ್ರಾಕ್ಟರರು ತೆಗೆದುಕೊಂಡ ಹಣವನ್ನು ರೈತರಿಗೆ ವಾಪಸು ಮಾಡಲಾಗುವುದೆಂದೂ, ದಿನಸಿಗಳ ಬೆಲೆಯನ್ನು ಕೂಡಲೇ ಪಾವತಿ ಮಾಡುವಂತೆ ಏರ್ಪಡಿಸಲಾಗುವುದೆಂದೂ ಭರವಸೆ ಕೊಟ್ಟರೆಂದು ತಿಳಿಯುಬರುತ್ತೆ.

ಅನಾವರಣ ಮಹೋತ್ಸವ

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ದಿವಂಗತ ... ಎ. ಕೃಷ್ಣರಾಯರ ತೈಲಚಿತ್ರವನ್ನು ಸಹಕಾರ ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ನಿನ್ನೆ ಸಂಜೆ ಬ್ಯಾಂಕಿನ ...ಲಿನಲ್ಲಿ ಅನಾವರಣ ಮಾಡಿದರು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಿ. ನರಸಿಂಹಯ್ಯನವರು ಸ್ವಾಗತ ಭಾಷಣವನ್ನು ಮಾಡಿ, ಶ್ರೀ ಕೃಷ್ಣರಾಯರು ಸಹಕಾರ ಸಂಸ್ಥೆಗಳಿಗೆ ಸಲ್ಲಿಸಿದ ಸೇವೆಯನ್ನು ವಿವರಿಸಿ ಅವರ ಗುಣಕಥನ ಮಾಡಿದರು. ... ಅವರು ಬ್ಯಾಂಕಿನ ಅಧ್ಯಕ್ಷರಾಗಿದ್ದುಕೊಂಡು ನಡೆಸಿದ ಅಗಾಧ ಸೇವೆಯು ಚಿರಸ್ಮರಣೀಯವಾದುದೆಂದು ತಿಳಿಸಿದರು.

ಸಚಿವರು ಅನಾವರಣ ಮಹೋತ್ಸವವನ್ನು ನೆರವೇರಿಸಿ, ಶ್ರೀ ಕೃಷ್ಣರಾಯರ ಅ...ಧ ಸೇವೆಯನ್ನು ಪ್ರಶಂಸಿಸಿದರು.

ಬಡಜನಗಳಿಗೆ ಸಹಾಯ ಮಾಡಲು ವರ್ತಕರ ನಿಧಿ

ಶ್ರೀ|| ರಂಗಪ್ಪ ಮೊದಲಾದ ಕೆಲವು ವರ್ತಕರು ಈ ದಿನ ಸಚಿವರನ್ನು ಭೇಟಿ ಮಾಡಿ, ರಾಜಧಾನಿಯ ಕೆಲವು ವರ್ತಕರು ಬಡಜನಗಳಿಗೆ ಕಡಿಮೆ ದರದಲ್ಲಿ ಆಹಾರ ದಿನಸಿ ಸರಬರಾಜು ಮಾಡಲು, ಒಂದು ನಿಧಿಯನ್ನು ಏರ್ಪಡಿಸಲಾಗುವುದೆಂದೂ, ಹಲವು ಮೊಹಲ್ಲಾಗಳಲ್ಲಿ ಡಿಪೋಗಳನ್ನು ತೆರೆದು ದಿನಸಿಗಳನ್ನು ಮಾರಾಟ ಮಾಡಲಾಗುವುದೆಂದೂ, ಇದಕ್ಕೆ ದಿನಸಿಗಳ ಸರಬರಾಜು ವ್ಯವಸ್ಥೆ ಮಾಡಬೇಕೆಂದೂ ಪ್ರಾರ್ಥಿಸಿದರು. ಸಚಿವರು ಈ ಯೋಜನೆಯನ್ನು ಸರ್ಕಾರದ ಭಾಗದಿಂದ ಪರಿಶೀಲಿಸುವುದಾಗಿ ಭರವಸೆಯಿತ್ತರು.

ಬಂಗಾಳ ಪರಿಹಾರ ನಿಧಿ

ರಾಜಧಾನಿಯಲ್ಲಿ ಏರ್ಪಡಿಸಿದ ಬಂಗಾಳ ಪರಿಹಾರ ನಿಧಿಗೆ ಕೆಳಕಂಡ ಮಹನೀಯರು ಈ ರೀತಿ ದ್ರವ್ಯ ಸಹಾಯ ಮಾಡಿದ್ದಾರೆ:—

ಶ್ರೀ|| ಗಳಾದ

ಎಸ್. ಜಿ. ನಾಗರಾಜ	೧೦೭ ರೂ
ಬೊಂಬಾಯಿ ಆನಂದ ಭವನ	೫೧ ರೂ
ಸಿ. ವೆಂಕಟರಾಮ್ ಚೆಟ್ಟಿ	೫೦ ರೂ
ಎಂ. ವಿ. ನಾಗಪ್ಪ	೨೦ ರೂ
ಅಂಜಿನಪ್ಪ	೧೫ ರೂ

ಕನ್ನಡ ಚಲನ ಚಿತ್ರ

ಮಹಾರಾಜರ ಶ್ರೀ ವಿಜಯ ಫಿಲಂಸ್‌ನವರು ತಯಾರಿಸುತ್ತಿದ್ದ ಮೊದಲನೆಯ ಕನ್ನಡ ಚಲನ ಚಿತ್ರ "ರಾಧಾ ರಮಣ" ಪೂರ್ತಿಯಾದ ಸಂದರ್ಭದಲ್ಲಿ ನಿನ್ನೆ ಸಂಜೆ ೫-೩೦ ಗಂಟೆಗೆ ಮೈಲಾಪುರ ಜನ ಭಾರತಿ ಸ್ಟುಡಿಯೋದಲ್ಲಿ ಒಂದು ಸಭೆ ಏರ್ಪಡಿಸಲಾಗಿದೆ.

ಬಡೋಗ್ಲಿಯವರ ಕೊಲೆಯೆ

ಮಾರ್ಷಲ್ ಬಡೋಗ್ಲಿಯವರು ಕೊಲ್ಲಲ್ಪಟ್ಟಿರುವರೆಂದು ಇಟಾಲಿಯನ್ ಪತ್ರಿಕೆಯೊಂದು ತಿಳಿಸುತ್ತದೆ. ಆದರೆ ಇದಕ್ಕೆ ಯಾವ ಅಧಿಕಾರಯುಕ್ತ ರುಜು ಸಿಕ್ಕಿಲ್ಲ ವೆಂದು ತಿಳಿಸುತ್ತದೆ.

ವಿಕ್ಟರ್ ದೊರೆಗಳು ಸಿಸಲಿಗೆ ಓಡಿದರೆ?

ಇಟಲಿ ದೊರೆಗಳಾದ ವಿಕ್ಟರ್ ಇಮ್ಯಾನ್ಯುಯಲ್ ಮತ್ತು ಬಡೋಗ್ಲಿಯವರು ಸಿಸಲಿಗೆ ಓಡಿಹೋಗಿರುವರೆಂದು ಜರ್ಮನ್ ರೇಡಿಯೊ ತಿಳಿಸುತ್ತದೆ. ದೊರೆಗಳು ರಾಜ್ಯ ತ್ಯಾಗ ಮಾಡಿ ಪ್ರಿನ್ಸ್ ಉಂಬರ್ಟೋರವರು ಪಟ್ಟಕ್ಕೆ ಬರುವರೆಂದೂ, ಆದರೆ ಫ್ಯಾಸಿಸ್ಟ್ ಸಂಗಡದವರು ಕೌಂಟ್ ಸ್ಫೋರ್ಜಾರವರನ್ನ ತರಬೇಕೆಂದು ಹಂಚಿಕೆ ಹಾಕಿರುವರೆಂದು ವರದಿಯಾಗಿದೆ.

ಅರ್ಜೆಂಟೈನಾದಲ್ಲಿ ಸೈನಿಕರ ದೊಂಬಿ

ಅರ್ಜೆಂಟೈನಾದಲ್ಲಿ ಸೈನಿಕರ ದೊಂಬಿನಡೆದು ಅಲ್ಲಿನ ಸರ್ಕಾರವನ್ನು ಸರ್ಕಾರವನ್ನು ಪದಚ್ಯುತಿ ಪಡಿಸಲಾಗುತ್ತಿದೆಯೆಂದು ಹೇಳಲಾಗಿದೆ. ಅಲ್ಲಿ ಒಂದು ನೂತನ ಮಿಲಿಟರಿ ದೊಂಬಿಗಾರರ ಸಂಸ್ಥೆ ರಚಿಸಲಾಗಿದೆಯೆಂದೂ, ಈಗಾಗಲೇ ಜನರಲ್ ರಮಿರೇಜ್‌ರವರನ್ನ ತಳ್ಳಹಾಕಲಾಗಿದೆಯೆಂದೂ ನ್ಯೂಯಾರ್ಕಿನಿಂದ ವರದಿಯಾಗಿದೆ.

ಇಟಲಿ ಸರ್ಕಾರ ರೋಂ ನಗರವನ್ನು ತ್ಯಜಿಸಿತು

ಇಟಲಿ ದೊರೆಗಳು ಮತ್ತು ಅವರ ಸರ್ಕಾರ ರೋಂ ನಗರವನ್ನು ಬಿಟ್ಟು ದಕ್ಷಿಣ ಇಟಲಿ ಪ್ರದೇಶದ ಒಂದು ನಗರಕ್ಕೆ ಹೋಗಲಾಗಿದೆಯೆಂದು ಇಟಲಿ ರೇಡಿಯೋ ಘೋಷಣೆ ಯನ್ನು ಪ್ರಧಾನಿ ಬಡೋಗ್ಲಿಯವರು ಬ್ರಾಡ್‌ಕ್ಯಾಸ್ಟ್ ಮಾಡಿದ್ದಾರೆ.

ಅಲ್ಬೇನಿಯಾ ಸ್ವತಂತ್ರವೆ

ಅಲ್ಬೇನಿಯಾ ಮತ್ತು ಮಾಂಟಿನೆಗ್ರೋದವರು ತಾವು ಸ್ವತಂತ್ರರೆಂದು ಸಾರಿದ್ದಾರೆಂದು ಜರ್ಮನ್ ರೇಡಿಯೊ ತಿಳಿಸಿದೆ.

ಲಾರ್ಡ್ ವೇವಲ್‌ರವರು ಯುದ್ಧ ಮುಗಿಯುವವರೆಗೇ ವೈಸ್ರಾಯರು

ಭಾರತದ ವೈಸರಾಯರಾಗಿ ನೇಮಿಸಿರುವ ಲಾರ್ಡ್ ವೇವಲ್‌ರವರು ಯುದ್ಧ ಮುಗಿಯುವವರೆಗೂ ವೈಸರಾಯರಾಗಿರುವರೆಂದೂ, ನಂತರ ಮಾರ್ಕೆಲ್ ಲೋಥಿಯನ್ ಸೆಕ್ರೆಟರಿಯಾಗಿದ್ದ ಅರುಂಡೆಲ್‌ರವರನ್ನ ನೇಮಿಸಲಾಗುವುದೆಂದು ಹೇಳಲಾಗಿದೆ.

ನಾಟಕ ಪ್ರದರ್ಶನ ಸ್ಪರ್ಧೆ ಬಹುಮಾನ ವಿನಿಯೋಗ

ಮೈಸೂರು ೧೩

ಮೈಸೂರು ನಾಟಕ ಸಂಘದವರು ... ದೆ ಏರ್ಪಡಿಸಿದ್ದ ನಾಟಕ ಪ್ರದರ್ಶನ ಸ್ಪರ್ಧೆಯಲ್ಲಿ ಬಹುಮಾನ ಪಡೆದ ... ಪಾರಿತೋಷಕಗಳನ್ನು ಸಲ್ಲಿಸುವ ... ಮೊನ್ನೆ ದಿನ ಸಂಜೆ ಟೌನ್‌ಹಾಲಿನಲ್ಲಿ ಒಂದು ಸಭೆ ಏರ್ಪಡಿಸಲಾಗಿತ್ತು. ಶ್ರೀ ಕೆ. ಗುರುದತ್ತರವರು ಅಗ್ರಾಸನ ವಹಿಸಿದ್ದರು.

ಸಣ್ಣ ಮಕ್ಕಳಿಂದ ಸ್ವಾಗತ ಮತ್ತು ... ಪ್ರಾರ್ಥನೆಯಾದ ನಂತರ, ಡಾ|| ಎಂ. ಎಚ್. ಕೃಷ್ಣರವರು "ನಾಟಕ ಕಲೆಯ ಮಹತ್ವ"ದ ವಿಚಾರವಾಗಿ ಭಾಷಣ ಮಾಡಿದರು. ಶ್ರೀ ನಂ. ಶ್ರೀಕಂಠಶಾಸ್ತ್ರಿಗಳು ಸಂಘದ ವರದಿಯನ್ನು ಒಪ್ಪಿಸಿ, ಕಲಾಭಿವೃದ್ಧಿಗಾಗಿ ನಡೆಸುತ್ತಿರುವ ಕಾರ್ಯಕ್ರಮವನ್ನು ವಿವರಿಸಿದರು.

ಅಧ್ಯಕ್ಷರು ಬಹುಮಾನ ವಿತರಣಮಾಡಿ ನಾಟಕಕಲಾಭಿವೃದ್ಧಿಗಾಗಿ ನಡೆಸುತ್ತಿರುವ ಕೆಲಸವನ್ನು ಪ್ರಶಂಸಿಸಿದರು.

ವಂದನಾರ್ಪಣೆಯಾದ ನಂತರ ಸಭೆ ಮುಕ್ತಾಯವಾಯಿತು.

ಭೂಕಂಪದಿಂದ ೧,೪೦೦ ಜನ ಮರಣ

ನೈಋತ್ಯ ಜಪಾನಿನಲ್ಲಿ ಒಂದು ಬಲ ಭೂಕಂಪವಾಗಿ ೧೪೦೦ ಜನ ಸತ್ತರೆಂದು ಟೋಕಿಯೋ ರೇಡಿಯೋ ತಿಳಿಸಿದೆ.

ಉತ್ತರ ಇಟಲಿಯಲ್ಲಿ ಜರ್ಮನ್ ಸಿದ್ಧತೆ

ಉತ್ತರ ಮತ್ತು ಮಧ್ಯ ಇಟಲಿಯ ಅನೇಕ ನಗರಗಳಲ್ಲಿ ಜರ್ಮನರು ಬಲವಾದ ಸಂರಕ್ಷಣೆ ಸಿದ್ಧತೆ ನಡೆಸುತ್ತಿರುವರೆಂದೂ ವರದಿಯಾಗಿದೆ.

ಮಿಲಾನ್ ಜರ್ಮನ್ನರ ವಶವೆ

ಮಿಲಾನ್ ಮತ್ತು ಟ್ಯೂರಿನ್ ನಗರಗಳನ್ನು ಜರ್ಮನರು ಆಕ್ರಮಿಸಿರುವರೆಂದು ಹೇಳಲಾಗಿದೆ.

ಫೀಲ್ಡ್ ಮಾರ್ಷಲ್ ರೋಮೆಲ್‌ರು ಉತ್ತರ ಇಟಲಿಯಲ್ಲಿ ಸಿದ್ಧತೆ ನಡೆಸಲು ವಿಚಾರಮಾಡುತ್ತಿರುವರೆಂದೂ ಇಟಲಿ ಫ್ಯಾಸಿಸ್ಟರನ್ನೆಲ್ಲಾ ನಿಶ್ಶಕ್ತರನ್ನಾಗಿ ಮಾಡಲಾಗಿದೆಯೆಂದೂ ಹೇಳಲಾಗಿದೆ.

ಮಿಲಾನಿನಲ್ಲಿ ಬ್ರಿಟಿಷ್ ಮತ್ತು ಅಮೆರಿಕ ಸೈನಿಕರನ್ನು ಇಟಲಿಯವರು ಬಿಡುಗಡೆ ಮಾಡಿರುವರೆಂದು ವರದಿಯಾಗಿದೆ.

ಜರ್ಮನರ ಹಿಂದೋಟ

ಇಟಲಿಯ ದಕ್ಷಿಣ ... ಪ್ರದೇಶಗಳನ್ನು ... ಕೈಬಿಟ್ಟು ... ನ್ನು ... ಹೋಗುತ್ತಿದ್ದಾರೆ.

... ಕ್ಷೇತ್ರದಲ್ಲಿ ... ನಗರಗಳಲ್ಲಿ ... ಜರ್ಮನ್ ಡಿವಿಜನ್ ... ನಿರ್ನಾಮ ಮಾಡಿದ್ದಾರೆ.

ಬ್ರಿಯಾನ್ಸ್ಕ್ ... ಗಳನ್ನು ಆಕ್ರಮಿಸಿ ೨೦೦ ... ವನ್ನು ಸಂಪಾದಿಸಿದ್ದಾರೆ.

ವಾರ ಭವಿಷ್ಯ

(ಶ್ರೀ ವಿದ್ಯಾನಂದ ಸ್ವಾಮಿಗಳವರಿಂದ)

ತಾ|| ೧೩-೯-೫೪ ರಿಂದ ೧೯-೯-೫೪ ರವರೆಗೆ

ಮೇಷ ... ಈ ವಾರ ನಿಮ್ಮ ಆರೋಗ್ಯ, ಮಾನಸಿಕ ಸ್ಥಿತಿಗಳು ಚೆನ್ನಾಗಿರುವವು. ಆರ್ಥಿಕ ಸ್ಥಿತಿ ತೃಪ್ತಿಯಾಗಿದ್ದರೂ ಹೆಚ್ಚು ಖರ್ಚು. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಲಾಭ ಮತ್ತು ಏಳಿಗೆ. ಪ್ರವಾಸ ಯೋಗ, ಶುಭಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು. ತಾ|| ೧೩ ಲಾಭ.

ವೃಷಭ ... ಈ ವಾರ ತೀವ್ರ ಕಷ್ಟದಿಂದ ಕಳೆಯುವಿರಿ. ಆರೋಗ್ಯ ಚೆನ್ನಾಗಿದೆ. ಮಾನಸಿಕ ತೊಂದರೆ, ಆರ್ಥಿಕ ಸಾಧಾರಣ, ಪ್ರವಾಸ ಉತ್ತಮವಿಲ್ಲ, ವ್ಯಾಪಾರ, ಉದ್ಯೋಗಗಳಲ್ಲಿ ಹಾನಿ. ಶತ್ರುಪೀಡೆ ತಾ|| ೧೪, ೧೫ ಉತ್ತಮ.

ಮಿಥುನ ... ನಿಮ್ಮ ಆರೋಗ್ಯ ಈ ವಾರ ಚೆನ್ನಾಗಿರಲಾರದು, ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ, ಪ್ರವಾಸ ನಿಷ್ಫಲವಲ್ಲದೆ ಉತ್ತಮ, ವ್ಯಾಪಾರೋದ್ಯೋಗಗಳಲ್ಲಿ ನಷ್ಟವಾಗುವ ಸಂಭವವಿದೆ, ಮಾನಸಿಕ ಚಿಂತೆ ತಾ|| ೧೩, ೧೬ ಸ್ವಲ್ಪ ಹಾನಿ.

ಕರ್ಕ .. ಆರೋಗ್ಯ ಸ್ಥಿತಿ ಚೆನ್ನಾಗಿರುವುದು, ಮಾನಸಿಕ ತೊಂದರೆ ಜಾಸ್ತಿ. ಪ್ರವಾಸದಲ್ಲಿ ಜಯ, ಉದ್ಯೋಗ, ನೌಕರಿಗಳಲ್ಲಿ ಸಮ ಫಲ, ಶುಭಕಾರ್ಯಗಳನ್ನು ಮಾಡಿ. ತಾ|| ೧೩, ೧೮ ತೊಂದರೆ.

ಸಿಂಹ.... ಆಳಿದುದನ್ನು ಪಡೆಕು ಮುಂದೆ ದೃಷ್ಟಿಯಿಡಿ. ಆರೋಗ್ಯ ಚೆನ್ನಾಗಿದೆ ಕೈಗೊಂಡ ಕಾರ್ಯಸಿದ್ಧಿ. ದ್ರವ್ಯಪ್ರಾಪ್ತಿ, ವ್ಯವಹಾರದಲ್ಲಿ ಜಯ, ವ್ಯಾಪಾರೋದ್ಯೋಗ ನೌಕರಿಗಳಲ್ಲಿ ಲಾಭ ಮತ್ತು ಏಳಿಗೆ. ತಾ|| ೧೪, ೧೫ ಒಳ್ಳೆಯದು.

ಕನ್ಯಾ ..ಮಿತ್ರಲಾಭ, ಆರೋಗ್ಯ ಚೆನ್ನಾಗಿರುವುದು ಸಾಂಪತ್ತಿಕ ಸ್ಥಿತಿ ಉತ್ತಮ. ಪ್ರವಾಸದಲ್ಲಿ ಜಯ. ಶುಭಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು. ಉದ್ಯೋಗಾದಿಗಳಲ್ಲಿ ಲಾಭ, ಪತ್ನೀಸಹವಾಸ ಪ್ರಾಪ್ತಿ. ತಾ|| ೧೩ ಹೆಚ್ಚು ಖರ್ಚು.

ತುಲಾ....ನಿಮಗೆ ಅನುಕೂಲವೇ. ಆರೋಗ್ಯ, ಪ್ರವಾಸದಲ್ಲಿ ಹಾನಿ, ಆರ್ಥಿಕ ಸ್ಥಿತಿ ಸಾಧಾರಣ. ವ್ಯವಹಾರದಲ್ಲಿ ನಷ್ಟ. ಪತ್ನಿಯಲ್ಲಿ ಕಲಹ, ಶತ್ರುಪೀಡೆ ತಾ|| ೧೪, ೧೫ ಚಿಂತೆ.

ವೃಶ್ಚಿಕ ...ಸಂಕಲ್ಪ ಪಟ್ಟಿದ ಕಾರ್ಯ ಹಾನಿ, ಆರೋಗ್ಯ ಸ್ಥಿತಿ ಚೆನ್ನಾಗಿದೆ. ವ್ಯಾಪಾರೋದ್ಯೋಗಗಳಲ್ಲಿ ಇಷ್ಟಸಿದ್ಧಿ. ಧನಪ್ರಾಪ್ತಿ ಚೆನ್ನಾಗಿದೆ. ಹೆಚ್ಚು ಖರ್ಚು. ವೈವಾಹಿಕ ಗಂಡು ಅಪೇಕ್ಷಿಸುವವರು ಸ್ತ್ರೀ ವಿಷಯದ ಚಿಂತೆ ತಾ|| ೧೩ ಮಧ್ಯಮ ಫಲ

ಧನುಸ್ಸು ... ವ ನಿಷ್ಪಿಷ್ಟ ಕಡೆ ವಾರ್ತೆ. ಆರೋಗ್ಯ ಚೆನ್ನಾಗಿದೆ ಕಾರ್ಯದಲ್ಲಿ ಜಯಪ್ರಾಪ್ತಿ, ವ್ಯಾಪಾರೋದ್ಯೋಗಗಳಲ್ಲಿ ಲಾಭ, ಪ್ರವಾಸದಲ್ಲಿ ಸಫಲತೆ, ಶುಭಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು ತಾ|| ೧೪, ೧೫ ಖರ್ಚು ಧನ್ಯಕಾರ್ಯ.

ಮಕರ ... ಆರ್ಥಿಕ, ಮಾನಸಿಕ ಸ್ಥಿತಿಗಳು ಉತ್ತಮವಾಗಿವೆ. ವ್ಯಾಪಾರ, ಉದ್ಯೋಗಾದಿಗಳಲ್ಲಿ ಲಾಭ. ಪ್ರವಾಸಾದಿಗಳಲ್ಲಿ ಜಯ, ಗೌರವ ಪ್ರಾಪ್ತಿ, ಮಿತ್ರಲಾಭ, ಸುಖ. ತಾ|| ೧೩, ೧೮ ದ್ರವ್ಯಲಾಭ

ಕುಂಭ .. ಬಹಳ ಬೇಜಾರಿನವರು ನೀವು, ಚಟುವಟಿಕೆಯೂ ಇರಿ. ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಸಾಧಾರಣವಾಗಿರುವವು, ವ್ಯಾಪಾರ, ಉದ್ಯೋಗಾದಿಗಳಲ್ಲಿ ಕೊಂಚ ಬೇಜಾರು, ಪ್ರವಾಸ ಉತ್ತಮವಲ್ಲ, ಶುಭಕಾರ್ಯಗಳಲ್ಲಿ ಉದಾಸೀನತೆ ತಾ|| ೧೩ ಕ್ಲೇಶ

ಮೀನ .. ಈ ವಾರ ಆರೋಗ್ಯ ಚೆನ್ನಾಗಿರುವುದು ಆರ್ಥಿಕ ಮಾನಸಿಕ ಸ್ಥಿತಿಗಳು ಉತ್ತಮವಾಗಿರುವವು ಉದ್ಯೋಗ ವ್ಯಾಪಾರಾದಿಗಳಲ್ಲಿ ಸನ್ಮಾನ ದೊರೆತು, ಮನಸ್ಸಿಗೆ ಆನಂದವಾಗುವುದು. ಪ್ರವಾಸದಿಂದ ಲಾಭ, ಶುಭಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು ತಾ|| ೧೩ ಲಾಭ

— —

ಉಚಿತ ಚಿತ್ರಗಳು

ಅಮೇರಿಕ ಯೋಧರ ಮನರಂಜನೆಗಾಗಿ ಹಾಲಿವುಡ್ ಚಿತ್ರ ತಯಾರಕರು ಚಿತ್ರಗಳನ್ನು ಉಚಿತವಾಗಿ ಪ್ರದರ್ಶಿಸಲು ಏರ್ಪಾಡುಮಾಡಿದ್ದಾರೆ. ಪ್ರತಿ ರಾತ್ರಿಯೂ ೫ ಲಕ್ಷ ಜನ ಯೋಧರು ಈ ಚಿತ್ರಗಳನ್ನು ನೋಡುತ್ತಿದ್ದಾರೆಂದು ಹೇಳಲಾಗಿದೆ.

ಟಾರ್ಪೆಡೋ ನಗರ

ಅಮೇರಿಕದ ಮಿಡ್‌ವೆಸ್ಟ್ ಪ್ರಾಂತ್ಯದಲ್ಲಿ ಒಂದು ನಗರವಿದೆ. ಅದು ಹಿಂದೆ ಗಾಲ್ಫ್ ಆಟದ ಮೈದಾನವಾಗಿತ್ತು. ಇಂದು ಆ ಮೈದಾನವನ್ನು ೨ ಕೋಟಿ ರೂ. ಗಳ ವೆಚ್ಚದಿಂದ ನಗರವಾಗಿ ಮಾರ್ಪಡಿಸಲಾಗಿದೆ ಅಮೇರಿಕಾ ಸೈನ್ಯಕ್ಕೆ ಬೇಕಾಗುವ ಟಾರ್ಪೆಡೊಗಳೆಲ್ಲಾ ಇಲ್ಲಿ ತಯಾರಾಗುತ್ತವೆ. ಆದ್ದರಿಂದ ಇದಕ್ಕೆ ಟಾರ್ಪೆಡೊ ನಗರವೆಂದು ಹೆಸರು ಬಂದಿದೆ.

——

ನಾಯಿಗಳಿಗೆ ತರಪೇತು

ನ್ಯೂಯಾರ್ಕಿನ ಪ್ರದರ್ಶನದಲ್ಲಿ ೭೭ ನಾಯಿಗಳನ್ನು ತೂಕಮಾಡಿ, ಅವುಗಳ ಉಷ್ಣಾಂಶ ಕಂಡುಹಿಡಿದು, ಅವುಗಳ ಮುಂದೆ ತೋಪು ಹಾರಿಸಲಾಯಿತು. ಏಕೆಂದರೆ ಈ ನಾಯಿಗಳು ಯುದ್ಧದಲ್ಲಿ ಭಾಗವಹಿಸುವ ದರ್ಜೆಯವೇ ? ಎಂದು ಪರೀಕ್ಷಿಸಲು ಅಷ್ಟೆ.

ನೂತನ ಪೆಟ್ರೋಲ್

ಅಮೇರಿಕಾದಲ್ಲಿ ವಿಮಾನಗಳಿಗೆ ಟ್ರಿಪ್ಟೇನ್ ಎಂಬ ಹೊಸ ನಮೂನೆ ಪೆಟ್ರೋಲು ತಯಾರಾಗುತ್ತಿದೆ. ಈ ಪೆಟ್ರೋಲನ್ನು ಉಪಯೋಗಿಸಿದರೆ, ಸಾಮಾನ್ಯ ಪೆಟ್ರೋಲಿಗಿಂತ ೪೦೦ ರಷ್ಟು ಹೆಚ್ಚು ಶಕ್ತಿ ಹೊಂದಬಹುದು ವಿಮಾನಗಳ ವೇಗ ಹೆಚ್ಚುವುದೂ ಅಲ್ಲದೆ ನೆಟ್ಟಗೆ ಹಾರಲು ಸಾಧ್ಯವಾಗುತ್ತದೆ

ಟಿ. ಸಿ. ನಟರಾಜ್ ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಜರ್ಮನ್ ಔಷಧಿಗಳೂ ಸದಾ ಕಾಲದಲ್ಲಿಯ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಛಾರ್ಜಿನ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಿಗಳೆಲ್ಲವೂ ಸದಾ ದೊರೆಯುತ್ತ

ಧಾತುಪುಷ್ಟಿ ಮತ್ತು ಶಕ್ತಿವರ್ಧ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯನ ಧಾತುವಿಕಾರ ಮೊದಲಾದುದನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯವನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ... ಉತ್ಸಾಹಗಳನ್ನು ಕೊಡುತ್ತದೆ ಕ್ರ... ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮೆಸಿ 184, ಚೈನಾ ಬಜಾರು ರಸ್ತೆ, ಮದರಾ...

ಏಜೆಂಟರು : ಅಶೋಕಾ ಫಾರ್ಮ... ಹಳೇ ಮೈಸೂರು ಬ್ಯಾಂಕು ರಸ್ತೆ, ಮೈಸೂ...

ಶ್ರೀ ಶ್ರೀಕಂಠೇಶ್ವರ ಸ್ಪರ್ಧೆ ನಂ. 23

ಪ್ರಥಮ ಬಹುಮಾನ — 125 ರೂ.	ಉತ್ತರ ಸೇರುವ ಕಡೆಯ ತಾರೀಖು		22-9-...
ಇತರ ಬಹುಮಾನ — 75 ರೂ.	ಉತ್ತರ ಪ್ರಕಟಿಸುವ ತಾರೀಖು : ಜನವಾಣಿ, ತಾಯಿನಾಡು ಸಾಧ್ವಿ		25-9-...
ಸ್ಪೆಷಲ್ ಬಹುಮಾನ — ೯ ರೂ.	ಫಲಿತಾಂಶ ಪ್ರತ್ಯೇಕವಾಗಿ		30-9-...

ಹೆಚ್ಚು ಉತ್ತರ ಕಳುಹಿಸಿದವರಿಗೆ ಸ್ಪೆಷಲ್ ಬಹುಮಾನ ಕೊಡಲಾಗುತ್ತೆ.

8 ಆಣೆಗೆ 3 ಉತ್ತರದ ಪ್ರಕಾರ ಎಷ್ಟು ಬೇಕಾದರೂ ಕಳುಹಿಸಬಹುದು ಉತ್ತರಗಳನ್ನು ಖಾಲಿ ಕಾಗದದಲ್ಲೂ ಚೌಕದಂತೆ ಹಾಕಿಕೊಂಡು ಬರೆಯಬಹುದು. ಪ್ರವೇಶಧನಕ್ಕೆ ನಗದಾಗಲೀ, ಕ್ರಾಸ್ ಮಾಡದಿರುವ ಪೋಸ್ಟಲ್ ಆರ್ಡರನ್ನಾಗಲೀ, ಮನಿಯಾರ್ಡರ್ ನೊಂದಿಗೆ ಪೋಸ್ಟ್ ಆಫೀಸ್ ಎಂದೇ ಬರೆದು ಕಳುಹಿಸಬೇಕು. ಬಾಕಿ ನಿಯಮಗಳು ಮಾಮೂಲಿನಂತೆ. ಪ್ರವೇಶಧನವಿಲ್ಲದಿರುವ ಕೂಪನುಗಳು ಖಂಡಿತಾ ನಿರಾಕರಿಸಲ್ಪಡುತ್ತವೆ. ಬಹುಮಾನದ ಪಟ್ಟಿ ಅಪೇಕ್ಷಿಸುವವರು ೯ ಕಾಸಿನ ಸ್ಟಾಂಪು ಕಳುಹಿಸಬೇ...

ಉತ್ತರ ಮತ್ತು ಹಣವನ್ನು ಕಳುಹಿಸಬೇಕಾದ ವಿಳಾಸ— ಮ್ಯಾನೇಜರ್, ಶ್ರೀಕಂಠೇಶ್ವರ ಸ್ಪರ್ಧೆ, ಮೈಸೂ...



ಸುಳುಹುಗಳು—ಎಡದಿಂದ ಬಲಕ್ಕೆ—1 ವಿದ್ಯಾಧಿದೇವತೆ 2 ಪತಿವಿಹೀನ ಇದು ಮನುಷ್ಯನ ನಿಜವನ್ನು ಮರೆಮಾಚುತ್ತೆ 4 ಕೆಲವರಲ್ಲಿ ಇದು ವಿಶೇಷವಾಗಿ ಕಂಡುಬರುತ್ತೆ 7 ಒಂದು ಬಣ್ಣ 8 ಒಂದು ಆಟ 11 ಯಾವ ಕೆಲಸ ಮಾಡಬೇಕಾದರೂ ಇದು ಇರಬೇಕು 16 ಪುರಾಣ ಪ್ರಸಿದ್ಧವಾದ ಗ್ರಂಥ 17 ಪಕ್ಷಿ (ಕಟ್ಟಿಳ) 18 ದೊರಕಿದ ಇದನ್ನು ಕಳೆದುಕೊಳ್ಳುವುದು ಬುದ್ಧಿವಂತನಲ್ಲವೇ ?

ಮೇಲಿನಿಂದ ಕೆಳಕ್ಕೆ—1 ಸಂವತ್ಸರಗಳಲ್ಲೊಂದು 3 ಹರದು (ಕೆದರು) 5 ಒಂದು ಬಣ್ಣ 6 ವಿಷ್ಣುವಿಗೆ ಈ ಹೆಸರು ಉಂಟು 8 ಒಂದು ಪುಷ್ಪ 9 ಮನುಷ್ಯನಿಗೆ ಮುಖ್ಯವಾಗಿ ಇದು ಬೇಕೇ ಬೇಕು 10 ಹಾಂ 12 ...ಗೆ ಎಷ್ಟು ಮುಂದಾಲೋಚನೆಯಿದ್ದರೂ ಅನ್ಯಾಯ ಸ್ಥಿತಿ 13 ಶ್ರೀಕೃಷ್ಣನ ಹೆಂಡತಿಯರಲ್ಲೊಬ್ಬಳು 14 ನೆರಳು 15 ಇದರಿಂದ ಉಂಟಾಗುವ ಬಾಧೆ ಸೈರಿಸುವುದು ಕಷ್ಟ.

N. B.—ಕೂಪನಿನ ಹಿಂಭಾಗದಲ್ಲಿ ತಮ್ಮ ಪೂರ್ಣ ವಿಳಾಸವನ್ನೂ ಕೂಪನ್ ಸಂಖ್ಯೆಯನ್ನೂ ತಪ್ಪದೆ ಬರೆಯಿರಿ.

ಮೈಸೂರಿನವರು—ಗೀತಾ ಸ್ಟೋರ್ಸ್, ತ್ಯಾಗರಾಜ ರೋಡು (ಹಳೇ ಅಗ್ರಹಾರ) ಸ್ಟೂಡೆಂಟ್ಸ್ ಹಾಲ್, ಬ್ಯಾಸ್ಟನ್ ಬಿಲ್ಡಿಂಗ್ಸ್‌ನಲ್ಲಾಗಲೀ ಮತ್ತು ಮಧ್ಯಾಹ್ನ 3 ರಿಂದ 5 ರ ವರೆಗೆ ನಮ್ಮ ಆಫೀಸಿನಲ್ಲಾಗಲೀ, ಹಣವನ್ನೂ, ಉತ್ತರವನ್ನೂ ಕೊಟ್ಟು ರಶೀತಿ ಪಡೆಯಬಹುದು

ನಂ. ೨೨ ರ ಸರಿಯಾದ ಉತ್ತರ—ಎಡದಿಂದ ಬಲಕ್ಕೆ :— 1 ಕಮಲ 3 ಉಪಕಾರ, 6 ಪವಾಲಿ[ದವಾಲಿ], 7 ... 11 ರಾಮ, 12 ಸಾಂಭವಿ, 14 ಕಪಿ, 17 ಸುಬ್ಬಾ, 18 ಜವಿ, 19 ಧನಿಷ್ಠ,

ಮೇಲಿನಿಂದ ಕೆಳಕ್ಕೆ :—1 ಕದನ, 2 ಲಲಿತ, 4 ಪರಮ, 5 ರಜತ, 7 ಜಾತಕ 8 ಶಿಲಾಸ್ತಂಭ, 9 ಕ್ರಮ, 10 ... 11 ರಾಮಾನುಜ, 12 ಸಾಂತಿ, 13 ದಪಿ [ಧ್ವನಿ] 15 ಸದಾಶಿ, 16 ಅನ್ನಪ್ಪ.

ಸ್ವತಂತ್ರ ಭಾರತವು ಒಂದು ಮಹಾ ಆಸ್ತಿ

ಪ್ರೊಫೆಸರ್ ಲಾಸ್ಕಿಯವರ ಟೀಕೆ

"ಬ್ರಿಟನ್ನು ಸ್ವಾತಂತ್ರ್ಯಕ್ಕಾಗಿ, ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿದೆ ಆದರೆ, ಗಾಂಧೀಜಿಯನ್ನೂ, ನೆಹ್ರೂರವರನ್ನೂ ಸೆರೆಮನೆಯಲ್ಲಿಟ್ಟಿದೆ ಅದೇ ಬ್ರಿಟನ್. ಭಾರತವು ಸ್ವತಂತ್ರವಾಗಿ, ಅದು ಸಂಯುಕ್ತ ಜನಾಂಗಗಳ ಮಧ್ಯೆ ತಾನೇ ಆರಿಸಿಕೊಂಡು ಸ್ಥಾನದಲ್ಲಿ ಬಂದು ಕುಳಿತರೆ ಆಗ ಸಂಯುಕ್ತ ಜನಾಂಗಗಳಿಗೆ ಭಾರಿ ಬಲ ಬಂದಂತೆ ಆಗುತ್ತದೆ. ಈ ಬಲ ಮತ್ತಾವುದರಿಂದಲೂ ದೊರೆಯಲಾರದು" ಎಂಬುದಾಗಿ ಪ್ರೊ॥ ಹೆರಾಲ್ಡ್ ಲಾಸ್ಕಿಯವರು ಹೊಸದಾಗಿ ಬರೆದಿರುವ "ನಮ್ಮ ಕಾಲದ ಕ್ರಾಂತಿಯ ತರಂಗಗಳು" ಎಂಬ ಪುಸ್ತಕದಲ್ಲಿದೆ.

"ಈ ಸಂಗ್ರಾಮದಲ್ಲಿ ಭರತ ಖಂಡದಂತಹ ಮಹಾ ಮಾನಸಿಕ ಸಮಸ್ಯೆ ಮತ್ತಾವುದೂ ಏಳಲಿಲ್ಲ. ಆದರೆ ಆ ಸಮಸ್ಯೆಯ ಸ್ವಭಾವವನ್ನಾಗಲಿ, ಅದು ದೊರಕಿಸುವ ಅಪೂರ್ವ ಅವಕಾಶವನ್ನಾಗಲಿ ಗ್ರಹಿಸುವಂತಹ ಮನೋಧಾರ್ಢ್ಯವೇ ಬ್ರಿಟನ್ನಿಗಿಲ್ಲ. ಈಗ ನಮ್ಮ ಮುಂದಿರುವ ಬೇಡಿಕೆ ಪೂರೈಸಲು ಅಸಾಧ್ಯವಾದುದೂ ಅಲ್ಲ. ಅಥವಾ ಕಾಲ ಅನುಕೂಲವಾಗಿಲ್ಲವೆಂದು ಹೇಳುವಂತೆಯೂ ಇಲ್ಲ. ಸಂಗ್ರಾಮ ನಡೆಯುತ್ತಿದ್ದಾಗಲೇ ಭಾರತ ಸಮಸ್ಯೆ ಬಿಡಿಸುವ ಮೊದಲು, ಅವಕಾಶವನ್ನು ಕಳೆದುಕೊಳ್ಳಲಾಯಿತು. ಕ್ರಿಪ್ಸ್ ಸಂಧಾನದೊಂದಿಗೆ ತನಗೆ ಅವಕಾಶ ದೊರಕಿತು. ಆಗ ಸರ್ಕಾರ ಭಾರತ ಸಮಸ್ಯೆಯ ಹಿಂದಿರುವ ನಿಜವಾದ ಚಿತ್ರವನ್ನೇ ಅರ್ಥಮಾಡಿಕೊಳ್ಳದೇ ಹೋಯಿತು.

ಸರ್ ಸ್ಟ್ಯಾಫರ್ಡ್ ಕ್ರಿಪ್ಸರ ಮುಂದೆ ೩ ಕಷ್ಟಗಳು ನಿಂತುವು.

(೧) ಕಾಲ ಅವರಿಗೆ ವಿರುದ್ಧವಾಗಿತ್ತು.

(೨) ಅವರಿಗೆ ಕೊಟ್ಟ ಸೂಚನೆಗಳು ಬಹಳ ಬಿಗಿಯಾಗಿದ್ದುವು. ಸಂಧಾನಕಾಲದಲ್ಲಿ ಅವುಗಳನ್ನು ಕೊಂಚ ಎಳೆದು ಮುಂದೆ ಹೋಗಲು ಸಾಧ್ಯವಿರಲಿಲ್ಲ.

(೩) ಅವರ ಸಹೋದ್ಯೋಗಿಗಳು ಹಲವು ಅವರಿಗೆ ಶತ್ರುಗಳಾದರು. ಕ್ರಿಪ್ಸ್ ಯಶಸ್ವಿಯಾದರೆ ನಮ್ಮ ಗತಿಯೇನು ಎಂದು ಅವರು ಶಂಕಿಸಿದರು!

"ಭರತ ಖಂಡದ ವಿಚಾರವನ್ನು ಮುಖ್ಯವಾದ ೨ ಅಂಶಗಳು ತೋರಬೇಕಲ್ಲದೆ ಇರಲಾರವು. ರಷ್ಯನರು ಅಧೀನ ಜನಾಂಗವಾಗಿದ್ದಾಗ ೨೪ ವರ್ಷಗಳಲ್ಲಿ ತೋರಿಸಿದ ಪ್ರಗತಿಯನ್ನೂ, ಭಾರತೀಯರು ಒಂದೂವರೆ ಶತಮಾನದಲ್ಲಿ ಸಹ ತೋರಿಸಲು ಸಾಧ್ಯವಾಗಲಿಲ್ಲ! ದೂರದ ಪೂರ್ವದೇಶಗಳ ಜನ, ಮುಖ್ಯವಾಗಿ ಚೀನರು "ನಾವು ನಮ್ಮ ಹಕ್ಕುಬಾಧ್ಯತೆಯ ಮೇಲೆ ಮಾತ್ರ ಅಮೇರಿಕಾದವರೊಡನೆ ಸಹಕರಿಸಬಲ್ಲೆವು" ಎಂದು ಹೇಳುತ್ತಿದ್ದಾರೆ. ಪರಿಸ್ಥಿತಿಗೆ ಹೊಂದಿಕೊಳ್ಳಲು ಬ್ರಿಟನ್ ಸಿದ್ಧವಾಗಿಲ್ಲದುದನ್ನು ನೋಡಿದರೆ ವ್ಯಥೆಯಾಗುತ್ತದೆ. ಕ್ರಿಪ್ಸ್ ಸಂಧಾನ ವಿಫಲವಾದ ಮೇಲಂತೂ ಗುಟ್ಟು ಅದೇ. ಭಾರತೀಯರು ಭಿನ್ನಾಭಿಪ್ರಾಯವಾಗಿದೆಯೆಂದೇ ಒಪ್ಪಿಕೊಳ್ಳೋಣ. ನಮ್ಮ ಸಂಯುಕ್ತ ರಾಜ್ಯದಲ್ಲಿ ಸ್ವಾತಂತ್ರ್ಯ ಹೊಂದಿದ್ದ ಕಾಲದಲ್ಲೂ ಇದ್ದ ಭಿನ್ನತೆ ಆ ಭಿನ್ನತೆ ಹೋಗುವಂತೆ ಬೆಸುಗೆ ಹಾಕಬಹುದಾಗಿತ್ತೆಂಬುದು ಗಮನೀಯ. ಭಾರತೀಯರಲ್ಲಿರುವ ಭಿನ್ನತೆಯನ್ನು ಮೊದಲಿಂದಲೂ ಉತ್ಪ್ರೇಕ್ಷೆಮಾಡುತ್ತಲೇ ಬಂದಿದ್ದಾರೆ" ಎಂದು ತಿಳಿಸಿದ್ದಾರೆ.

'ತಟ್ಟೆ ಚೆನ್ನಾಗಿ ನೆಕ್ಕಿ'

ಅಮೇರಿಕಾದಲ್ಲಿ ಹೋದ ವರ್ಷ ತಟ್ಟೆಗಳಲ್ಲಿ ತಿಂದು ಮಿಗಿಸಿ ಬಿಟ್ಟಿದ್ದ ಪದಾರ್ಥದಿಂದ ಶೇಕಡ ೧೫ ರಷ್ಟು ಆಹಾರ ಪದಾರ್ಥ ವ್ಯರ್ಥವಾಯಿತಂತೆ. ಅದಕ್ಕಾಗಿ ಈಗ "ತಟ್ಟೆಯನ್ನು ಚೊಕ್ಕಟವಾಗಿ ನೆಕ್ಕಿ" ಎಂದು ಚಳುವಳಿ ಆರಂಭವಾಗಿದೆ. ನ್ಯೂಯಾರ್ಕ್ ಪಟ್ಟಣದಲ್ಲಿ ಇದಕ್ಕಾಗಿ ಒಂದು ಸಂಘ ಕೂಡಾ ಸ್ಥಾಪಿತವಾಗಿದೆ.

ಮರಮರೆದು ಮಣ್ಣು ಮುಕ್ಕಿದ ಇಟಲಿ!

ತನ್ನ ಬಗ್ಗೆ ಎಂದೆಂದಿಗೂ ಕಲಂಕಕಾಗದೆಂದು ಇಟಲಿ ಹೇಳಿಕೊಳ್ಳುತ್ತಿತ್ತು. ಮಿತ್ರರ ಮಂಚಿನ ವೃಷ್ಟಿಯಿಂದ ಇಟ್ಟಿಗೆಯಂತೆ ಕರಗಿತು. ಮುಸೋಲಿನಿ ಆಗ ಹೊರಟ. ಮಿತ್ರರು ೩ ಹೆಜ್ಜೆ ಮುಂದಿಡುತ್ತಲೇ 'ನೀವು ಹೇಳಿದಂತೆ ಕೇಳುತ್ತೇನೆ' ಎಂದು ನಮಸ್ಕಾರ ಮಾಡಿತು ಇಟಲಿ. ರಷ್ಯ, ಅಮೇರಿಕಾ, ಬ್ರಿಟನುಗಳ ಪಾದಕ್ಕೆ ತಲೆಬಾಗಿ ಸಲಾಮು ಹೊಡೆಯಿತು. ೩ ದಿನದ ಮಟ್ಟಿಗೆ ಉರುಳಿದ್ದರೂ ದೂಮ್ ಕೇತು ವಿನಂಥ ಮುಸೋಲಿನಿಯಿಂದ ಸ್ಥಾಪಿತವಾದ ಇಟಲಿ, ಕಗ್ಗತ್ತಲೆ ಬ್ರಹ್ಮಾಂಡವಾಗಿ ಮರೆಯಾಗಿ ಬಿತ್ತು!

ಬಟ್ಟೆ ತಯಾರಿಕೆ ಕ್ರಮ

ಬಟ್ಟೆ ತಯಾರಿಸಲು ಹೊಸ ರೀತಿಯನ್ನು ಅಮೇರಿಕನರು ಕಂಡುಹಿಡಿದಿದ್ದಾರೆ. ಹತ್ತಿ ಎಳೆಯನ್ನು ರೆಸಿನ್ ಎಂಬ ಗೋಂದಿನೊಂದಿಗೆ ಸೇರಿಸಿ ಪ್ರೆಸ್ ಕ್ರಮದಲ್ಲಿ ಬಟ್ಟೆಯಾಗುತ್ತದೆ. ಎಲ್ಲಾ ಬಗೆಯ ಬಟ್ಟೆಗಳನ್ನೂ ಈ ವಿಧದಲ್ಲಿ ತಯಾರಿಸಬಹುದು.

ಪ್ರಜ್ವಲಿತ ನೆಲಗಳು

ನೆಲಗಳಿಗೆ ಕಾಂಕ್ರೀಟ್ ಗಾರೆ ಹಾಕಿ ಬಿಳಿಯ ಸಿಮೆಂಟ್ ಉಪಯೋಗಿಸಿ ನಯಗಾರಿ ಮಾಡಿದರೆ, ನೆಲಗಳು ಬೆಳಕನ್ನು ಪ್ರತಿಫಲಿಸುತ್ತವೆ. ಈ ತೆರನಾದ ನೆಲವಿರುವ ಭವನದಲ್ಲಿ ದೀಪಗಳು ತುಂಬಾ ಪ್ರಕಾಶದಿಂದಿರುವುವು.

ಎಲ್ಲವೂ ಬಹುಕಾಲ ಬಾಳಿಕೆ ಬರುವಂತೆ ಮಾಡಿ ಮತ್ತು

ಮುಂಬರುವ ದಿನಗಳಿಗೋಸ್ಕರ

ಕೂಡಿಡಿ

ಯುದ್ಧಸಮಯದಲ್ಲಿ ಕೊಂಡ ಪದಾರ್ಥಗಳು ನಿಮ್ಮ ಹಣಕ್ಕೆ ಸರಿಯಾದ ಮೌಲ್ಯವನ್ನು ಕೊಡುವುದಿಲ್ಲ. ನಿಮ್ಮಲ್ಲಿರುವ ಬಟ್ಟೆ ಮತ್ತು ಪ್ರತಿಯೊಂದು ಪದಾರ್ಥವೂ ಬಹುಕಾಲ ಬಾಳಿಕೆ ಬರುವಂತೆ ಮಾಡಿಕೊಳ್ಳಿ, ಏಕೆಂದರೆ ನೀವು ಇಂದು ಕೊಳ್ಳುವ ಪ್ರತಿಯೊಂದು ಹೊಸ ಪದಾರ್ಥದ ಬೆಲೆಯೂ ಅದರ ಯೋಗ್ಯತೆಗೆ ಮೀರಿ ಅಧಿಕವಾಗಿದೆ. ಮೋಜಿನ ತಂಟೆಗೇ ಹೋಗಬೇಡಿ. ಅತ್ಯಾವಶ್ಯಕವಾದುವುಗಳಿಗೆ ಮಾತ್ರವೇ ವೆಚ್ಚ ಮಾಡಿ, ಮತ್ತು ಮೊದಲಿನ ಧಾರಣೆಗಳು ಬರುವವರೆಗೂ ನೀವು ಕೂಡಿಡಬಹುದಾದ ಪ್ರತಿಯೊಂದು ಆಣೆಯನ್ನು ಶೇಖರಿಸಿ.

ಸುರಕ್ಷಿತವಾಗಿ ಕೂಡಿಡಿ ನೀವು ಕೂಡಿಡುವ ಹಣದ ರಕ್ಷಣೆ ಬಗ್ಗೆ ಖಾತ್ರಿಪಡಿಸಿಕೊಳ್ಳಿ ನಿಮ್ಮ ಹಣವನ್ನು, ಭಂಗಾರ, ಬೆಳ್ಳಿ, ಆಭರಣಗಳು, ಮನೆ, ಜಮೀನುಗಳು ಅಥವಾ ಸಾಮಾನುಗಳನ್ನಾಗಿ ಮಾರ್ಪಡಿಸಿದರೆ, ಮೊದಲಿನ ಧಾರಣೆಗಳು ಬಂದಾಗ ಕೊಂಡಿಸಿದ ನಿಮ್ಮ ಹಣದ ಹೆಚ್ಚಿನ ಮೌಲ್ಯವು ನಾಶವಾಗುತ್ತದೆ. ಆದ್ದರಿಂದ ನಿಮ್ಮ ಹಣವನ್ನು ಸರಕಾರಿ ಸಾಲಪತ್ರಗಳನ್ನೂ, ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ವಿನಿಯೋಗಿಸಿ.



ರಾಷ್ಟ್ರೀಯ ಯುದ್ಧಮುಖದವರು ದೇಶೀಯರಿಗೆ ಮಾಡುವ ಮನವಿ

ಜರ್ಮನಿಗೆ ಹಿಟ್ಲರನ ಭರವಸೆ

ಪ್ರಜೆಗಳನ್ನು ಶಾಂತಿಯಲ್ಲಿಡಲಾಗಿದೆ

"ಜರ್ಮನ್ ಪ್ರಜೆಗಳೇ. [illegible]

ಇಟಲಿ ಘನಿಸ್ಟ ಗೊತ್ತಿತ್ತು

"ಇಟಲಿಯ [illegible]

ಮಿತ್ರರಾಷ್ಟ್ರಗಳ ಕೇವಲ ಬೆದರಿಕೆಗೆ ಸೋತಿತು

[illegible]

ರಕ್ಷಣಾ ಪ್ರಶ್ನೆ ಇಲ್ಲ

[illegible]

[illegible]

[illegible]

ಸರ್ಕಾರ ಪ್ರಜೆಗಳ ಜವಾಬ್ದಾರಿ ಹೊರಬೇಕು

[illegible] ಬಂಗಾಳದ ಗವರ್ನರ [illegible] ಬಹಿರಂಗ ಪತ್ರವೊಂದನ್ನು ಬರೆದಿರು [illegible]—

[illegible]

ಸಾಧಾರಣ ಟಾರ್ಪೆಡೊ

[illegible]

೩ ತಿಂಗಳೊಳಗಾಗಿ ಯುದ್ಧ ಮುಗಿಯುವುದೆ ?

[illegible]

ಮಗುವಿನ ಅಪಹಾರದ ಪತ್ತೆ

ಬೆಂಗಳೂರು

೩ ವರ್ಷದ ಮಗುವನ್ನು ಅಪಹರಿಸಿ ಅ ವನ ಮೈಮೇಲಿದ್ದ ಒಡವೆಗಳನ್ನು ಕದ್ದನೆಂದು ಪೋಲೀಸರು ರಾಮ ಎಂಬುವನನ್ನು ವಸ್ತಗಿರಿ ಮಾಡಿದ್ದರು ನಾರಾಯಣ ಎಂಬ ಮಗುವು ಇಲ್ಲವೆಂದು ಹಿಂದಿನ ತಿಂಗಳು ದೂರು ಕೊಡಲಾಗಿತ್ತು. ಪೋಲೀಸರು ಮಗುವನ್ನು ಪತ್ತೆ ಮಾಡಿರುತ್ತಾರೆ

—

೩ ಜರ್ಮನ್ ಡಿಸ್ಟ್ರಾಯರ್ ನಾಶ

ನಾರ್ವೆಯ ಟ್ರಾಂಡ್‌ಹ್ಯಾಂ ಬಂದರಿನಲ್ಲಿ ೩ ಜರ್ಮನ್ ಡಿಸ್ಟ್ರಾಯರುಗಳನ್ನು ಮುಳುಗಿಸಲಾಗಿದೆಯೆಂದೂ, ಅದು ನಾರ್ವೆಯ ಗೊರಿಲ್ಲಾ ಪಡೆಗಳ ಕಾರ್ಯವೆಂದೂ ಹೇಳಲಾಗಿದೆ.

—

ಯುಕ್ರೇನಿನಲ್ಲಿ ರಷ್ಯನರ ಮುಂದೋಟ

ಯುಕ್ರೇನಿನಲ್ಲಿ ರಷ್ಯನರು ಮುಸ್ಕಗ್ರಿತ್ಸ್ಕಾ, ಬಾರ್ವೆಂಕೋವಾ ಮತ್ತು ಮರಿವಾಲ್ ನಗರಗಳನ್ನು ವಶಪಡಿಸಿಕೊಂಡಿದ್ದಾರೆ

—

ಜರ್ಮನ್ ನಾಣ್ಯದ ಬೆಲೆ ಇಳಿಯುತ್ತಿದೆ

ಸ್ವಿಟ್ಜರ್ಲೆಂಡಿನಲ್ಲಿ ಜರ್ಮನ್ ನಾಣ್ಯಕ್ಕೆ ಮೊದಲಿನ ಬೆಲೆ ಇಲ್ಲ. ಒಂದು ಮಾರ್ಕಿಗೆ ೭ ಆಣೆ ಇದ್ದದ್ದು ಈಗ ಒಂದಾಣೆಗೆ ಇಳಿದಿದೆ

ಮೆಡಿಟರೇನಿಯನ್‌ನಲ್ಲಿ ಮಿತ್ರ ದಂಡಯಾತ್ರೆ

ಇಟಲಿ ದಂಡಯಾತ್ರೆಯ ಜೊತೆಗೆ ಮೆಡಿಟರೇನಿಯನ್‌ನಲ್ಲಿ ಸಾರ್ಡೀನಿಯಾ, ಕಾರ್ಸಿಕಾ ಮತ್ತು ಕ್ರೀಟ್ ಮುತ್ತಿಗೆ ನಡೆಸಲಾಗುವುದೆಂದೂ ಮುಮ್ಮುನೆ ಕುಳಿತಿದೆ, ಜರ್ಮನಿ ಸ್ಥಾನಗಳ ಮೇಲೆ ಆದಷ್ಟು ಪೆಟ್ಟು ಕೊಡಲಾಗುವುದೆಂದೂ ಜನರಲ್ ಐಸೆನ್‌ಹೋವರ್ ರವರು ತಿಳಿಸಿದ್ದಾರೆ.

ಆ ಕಾ ಶ ವಾ ಣಿ

ಸೆಪ್ಟೆಂಬರ್ ೧೪ ನೇ ಮಂಗಳವಾರ

..೮-೩೦ ಹಾಡುಗಾರಿಕೆ : ಶ್ರೀಮತಿ ಚನ್ನಮ್ಮ

Available Houses :—

1 Bestha Gari, No. 536

2. Ancsorot Street, No 712

3. Chamundi Extention, No. 2341

4. Mandi Mohalla, No 388

5. Ciment House, Chamundi Extention, No. 997

6. 100 ft Road.

Enquire at :—

SRI UMAMAHESWARI AND CO.

"Lakshmisthanam",

Geetha Road, Mysore.

Edited, printed and published by A R Nagarajan, at the Sadhvi Press, D.Subbiah Road, Mysore

ಸ್ಪಿಟ್ಸ್‌ಬರ್ಗ್‌ ದ್ವೀಪದ ಮೇಲೆ ಧಾಳಿ

ಆರ್ಕ್‌ಟಿಕ್ ಸಮುದ್ರದಲ್ಲಿರುವ ಸ್ಪಿಟ್ಸ್ ಎಂಬ ದ್ವೀಪದ ಮೇಲೆ ಜರ್ಮನ್ ನೌಕೆಗಳು ಧಾಳಿಮಾಡಿತೆಂದು ಜರ್ಮನ್ ವಾರ್ತೆ ತಿಳಿಸುತ್ತದೆ. ನಾರ್ವೆಗೆ ಸೇರಿದ ಈ ದ್ವೀಪವನ್ನು ಕೆಲವು ತಿಂಗಳ ಹಿಂದೆ ರಷ್ಯಾ ಯುದ್ಧ ಸಾಮಗ್ರಿಗಳನ್ನು ಸರಬರಾಜು ಮಾಡಲು ಉಪಯೋಗವಾದ ಮಾರ್ಗವೆಂ ಮಿತ್ರರು ಹಿಡಿದುಕೊಂಡಿದ್ದರು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತ[illegible]

ಪ್ರಭಾವಶಾಲಿ **ಜೀವನಿ** [illegible]

ಗರ್ಭಾಶಯಕ್ಕೆ ಶಕ್ತಿವರ್ಧಕ.

ಜೀವನಿಯನ್ನು ಕೆಲವು ಕಾಲ ನಿತ್ಯವು ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಮುಟ್ಟು ದೋಷಕ್ಕೆ ಗಂಡೌಷಧ.

ಮುಟ್ಟು ಕಾಲದಲ್ಲಿ ಅಥವಾ ಆಮೇಲೆ ತೋರುವ ಅಧಿಕ ರಕ್ತಸ್ರಾವ, ಬಿಳುಪು ಹೋಗುವುದು, ಅಕ್ರಮ ಬಹಿಷ್ಟೆ ಮುಂತಾದುವುಗಳನ್ನು "ಜೀವನಿ" ಜಾಗ್ರತೆ ಶಮನಗೊಳಿಸುತ್ತದೆ.

ಅತ್ಯುತ್ತಮ ಉಷ್ಣಶಾಮಕ.

ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೆ 'ಜೀವನಿ' ಪ್ರಶಸ್ತವಾದುದು

ರಕ್ತ ಹೀನತೆ, ನರಗಳ ದೌರ್ಬಲ್ಯ ಬೆನ್ನುನೋವು, ಸೊಂಟನೋವು, ಗರ್ಭಸ್ರಾವ ಬಂಜೆತನಗಳಿಗೆ "ಜೀವನಿ" ಅತ್ಯುಪಯುಕ್ತವಾದುದು.

ಬೇಕಾಗಿದೆ

ಮುಂದೆ ಬರುವ ದಸರಾ ಮಹೋತ್ಸವಕ್ಕೆ ಬರುವ ಅತಿಥಿಗಳಿಗೆ ಸ್ಥಳವನ್ನು ಕಲ್ಪಿಸುವುದಕ್ಕಾಗಿ ಉತ್ತಮವಾದ ಎಲೆಕ್ಟ್ರಿಕ್ ದೀಪ ಮತ್ತು ನೀರಿನ ಸೌಕರ್ಯಗಳುಳ್ಳ ಬಂಗಲೆಗಳು ಮೈಸೂರಿನಲ್ಲಿ ಬೇಕಾಗಿವೆ. ಇದಕ್ಕಾಗಿ ತ[illegible] ಬಂಗಲೆಗಳನ್ನು ಬಾಡಿಗೆಗೆ ಕೊಡಲು ಇಷ್ಟಪಡುವವರು ಅವುಗಳ ನಂಬರು, ಇರುವ ಸ್ಥಳ, ಅಪೇಕ್ಷಿಸತಕ್ಕ ಬಾಡಿಗೆ ಮುಂತಾದ ವಿವರಗಳನ್ನು ದಸರಾ ಸ್ಪೆಷಲ್ ಡ್ಯೂಟಿ ಆಫೀಸರವರಿಗೆ ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತಿಳಿಸಬೇಕೆಂದು ಕೋರಿದೆ:—

1943 ನೇ ಇಸವಿ ಸೆಪ್ಟೆಂಬರು ನೇ [illegible]—ಬೆಂಗಳೂರು ಆಫೀಸಿನ ವಿಳಾಸಕ್ಕೆ.

ಆಮೇಲೆ – ಮೈಸೂರಿನಲ್ಲಿ ಗೆಸ್ಟ್ ಹೌಸಿನಲ್ಲಿ ಸ್ಪೆಷಲ್ ಡ್ಯೂಟಿ ಆಫೀಸ್ ವಿಳಾಸಕ್ಕೆ.

ಇತರ ಯಾವುದಾದರೂ ವಿವರ ಬೇಕಾದಲ್ಲಿ ಸ್ಪೆಷಲ್ ಡ್ಯೂಟಿ ಆಫೀಸಿಗೆ ಬರೆದು ತಿಳಿದುಕೊಳ್ಳಬಹುದು

ಟಿ. ರಂಗಮಲ್ಲಯ್ಯ

ಸ್ಪೆಷಲ್ ಡ್ಯೂಟಿ ಆಫೀಸರ್

10—9—

ಸ್ತ್ರೀಯರ ಸೌಖ್ಯಕ್ಕಾಗಿ

[illegible]

ಸಮ್ಮುಖದಲ್ಲಿ [illegible] ಸುಪ್ರಸಿದ್ಧ

[illegible] ಫಾರ್ಮಸಿ [illegible]

[illegible] ಪುರಾತನ ಮಾರ್ಕೆಟ್, ಮೈಸೂರು

[illegible]

ಸಂಪುಟ ೨] ಮಂಗಳವಾರ ೧೪—೯—೪೩ [ಸಂಚಿಕೆ ೫೩

ಇಟಲಿಯಲ್ಲಿ ಅರಾಜಕತೆ ಆಗಲಿದೆ

ಮೈಸೂರು ನಗರದಲ್ಲಿ ರೇಷನಿಂಗ್ ಬರುವುದು ಸಿದ್ಧ

“ಕಳ್ಳ ವ್ಯಾಪಾರ ಮಾಡುವವರು ರಾಜದ್ರೋಹಿಗಳು”

೪೭ ಸಾವಿರ ಖಂಡುಗ ಭತ್ತ ಹೊರಕ್ಕೆ ಬಂತು

ಮೈಸೂರು, ೧೩

ಆಹಾರ ದಿನಸಿಗಳ ದಾಸ್ತಾನು ಬಗ್ಗೆ ಹೊರಡಿಸಿರುವ ಸರ್ಕಾರದ ಆಜ್ಞಾನಂತರ ಮೈಸೂರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ಸುಮಾರು ೪೭ ಸಾವಿರ ಖಂಡುಗ ಭತ್ತ, ೧೭ ಸಾವಿರ ಪಲ್ಲ ರಾಗಿ ಮತ್ತು ೧೪ ಸಾವಿರ ಪಲ್ಲ ಜೋಳ ಹೊರಕ್ಕೆ ಬಂತೆಂದು ತಿಳಿಯಬರುತ್ತದೆ.

ಸಚಿವರೊಡನೆ ಭೇಟಿ

ಚಾಮರಾಜ ನಗರ ಮತ್ತು ಗುಂಡ್ಲುಪೇಟೆ ರೈತರ ಪರವಾಗಿ ಶ್ರೀ|| ಕೆ. ಸಿ. ಸುಬ್ಬಣ್ಣ ಮೊದಲಾದವರು ಈ ದಿನ ಬೆಳಗ್ಗೆ ಸರಬರಾಜು ಸಚಿವರಾದ ಶ್ರೀ|| ಎಂ. ಎ. ಶ್ರೀನಿವಾಸನ್‌ರವರನ್ನು ಭೇಟಿ ಮಾಡಿ ಆಹಾರ ಪದಾರ್ಥಗಳ ಕುಂದು ಕೊರತೆಗಳನ್ನೂ ಮತ್ತು ೧೪ ಪಲ್ಲ ಭತ್ತದ ಮೇಲೆ ದಾಸ್ತಾನು ಮಾಡಕೂಡದೆಂಬ ಸರ್ಕಾರದ ಆಜ್ಞೆಯಿಂದ ಜನರಿಗೆ ತುಂಬಾ ತೊಂದರೆಯಾಗಿರುವುದೆಂದೂ ತಿಳಿಸಿದರೆಂದು ಗೊತ್ತಾಗಿದೆ.

ಈ ದಿನ ೧೧ ಗಂಟೆಗೆ ಸಚಿವರು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಜೂಜುಗಾರರ ದಸ್ತಗಿರಿ

ಶಿವರಾಂಪೇಟೆ ಬೆಳ್ಳಿ ಕಟ್ಟೆಗೆ ಸಮೀಪದ [illegible]ಟಪ್ಪನ ಗರಡಿ ಹತ್ತಿರ ನಿನ್ನೆ ರಾತ್ರಿ ಜೂಜಾಡುತ್ತಿದ್ದ ೧೨ ಮಂದಿಯನ್ನು ದೇವರಾಜ ಪೋಲೀಸರು ದಸ್ತಗಿರಿ ಮಾಡಿ, ಅವರ ಮೇಲೆ ಮೊಕದ್ದಮೆ ಹೂಡಿದ್ದಾರೆ.

ಕಳುವು

ಮೈಸೂರು ಟ್ರೈನಿಂಗ್ ಕಾಲೇಜು ಹಾಸ್ಟೆಲಿನ ಶ್ರೀ|| ಕೆ. ಶಿವಲಿಂಗಪ್ಪ ಎಂಬ ವಿದ್ಯಾರ್ಥಿಯ ಕೊಠಡಿಯಲ್ಲಿ ಮೊನ್ನೆ ರಾತ್ರಿ, ಅವರು ಇಲ್ಲದಿರುವಾಗ್ಗೆ, ೫೦ ರೂ ಬೆಲೆ ಬಾಳುವ ಬಟ್ಟೆ ಮತ್ತು ಇತರ ವಸ್ತುಗಳನ್ನು ಯಾರೋ ಅಪಹರಿಸಿರುವರೆಂದು ವರದಿಯಾಗಿದೆ.

ಶ್ರೀ|| ಷಾ ರವರ ಮೇಲೆ ಗಡೀಪಾರು ಆಜ್ಞೆ

ಮೈಸೂರು ಜೈಲಿನಲ್ಲಿ ಡಿಟೆನ್ಯೂ ಆಗಿದ್ದ ಶ್ರೀ|| ಎಂ. ಹೆಚ್. ಷಾರವರನ್ನು ನಿನ್ನೆ ಸಂಜೆ ಬಿಡುಗಡೆ ಮಾಡಿ ಅವರು ಸಂಸ್ಥಾನವನ್ನು ಕೂಡಲೇ ಬಿಟ್ಟು ಹೋಗಬೇಕೆಂದು ಗಡೀಪಾರಾಜ್ಞೆಯನ್ನು ಅವರ ಮೇಲೆ ಜಾರಿ ಮಾಡಲಾಯಿತು. ಅವರು ಬಿಜಾಪುರಕ್ಕೆ ಪ್ರಯಾಣ ಬೆಳೆಸಿದರು.

ಟ್ಯೂರಿನ್ ಹತ್ತಿರ ಉಗ್ರ ಕದನ

ಉತ್ತರ ಇಟಲಿಯಲ್ಲೆಲ್ಲಾ ಜರ್ಮನಿಗೆ ವಿರೋಧ ಭಾವ ಜನರಲ್ಲಿ ಉಂಟಾಗಿದೆಯೆಂದೂ, ಮತ್ತು ಅಶಾಂತಿ ಹೆಚ್ಚಾಗುತ್ತಿದೆಯೆಂದೂ ವರದಿಯಾಗಿದೆ.

ಟ್ಯೂರಿನ್ ಹತ್ತಿರ ಇಟಾಲಿಯನ್ ಜನರು ತಮ್ಮ ಸೈನಿಕರೊಡನೆ ಸೇರಿ ಜರ್ಮನ್ ಸೈನ್ಯಗಳ ಮೇಲೆ ಉಗ್ರ ಕದನ ನಡೆಸುತ್ತಿರುವರೆಂದು ಹೇಳಲಾಗಿದೆ. [illegible] ಅಶಾಂತಿ ಹೆಚ್ಚಾಗಿದೆಯೆಂದೂ, ರೋಮ್ ಅಥವಾ ಮಿಲಾನ್ ನಗರಗಳನ್ನು ರೋಮೆಲ್ ಆಕ್ರಮಿಸಿಲ್ಲವೆಂದೂ ಹೇಳಲಾಗಿದೆ. ಬಂಧನದಿಂದ ಬಿಡುಗಡೆಯಾದ ಮಿತ್ರ ಸೈನಿಕರನ್ನು ಇಟಾಲಿಯನ್ ಜನರು ಕಾಪಾಡುತ್ತಿದ್ದಾರೆ.

ಬಂಗಾಳ ಪರಿಹಾರ ನಿಧಿ

ಬಂಗಾಳಾ ಕ್ಷಾಮ ನಿವಾರಣೆಗಾಗಿ ಮದರಾಸಿನ “ಇಂಡಿಯನ್ ಎಕ್ಸ್‌ಪ್ರೆಸ್” ಪತ್ರಿಕೆಯವರು ತೆರೆದಿರುವ ನಿಧಿಗೆ ಇಲ್ಲಿಯವರೆಗೆ ಒಟ್ಟು ೮೦ ಸಾವಿರ ರೂ ಗಳು ವಸೂಲಾಗಿದೆ.

ಮಾಜಿ ಶಾಸನ ಸಭೆ ಸದಸ್ಯರ ಕೊಲೆ

ಚಿದಂಬರದ ಮಾಜಿ ಪೌರ ಸಭೆ ಅಧ್ಯಕ್ಷರೂ ಮತ್ತು ಜಿಲ್ಲಾ ದೇವಸ್ಥಾನ ಸಮಿತಿ ಅಧ್ಯಕ್ಷರೂ ಮತ್ತು ಮಾಜಿ ಶಾಸನ ಸಭಾ ಸದಸ್ಯರೂ ಆದ ಶ್ರೀ ಪಿ ವೇಣುಗೋಪಾಲ ಪಿಳ್ಳೆಯವರನ್ನು ನಿನ್ನೆ ಬೆಳಗ್ಗೆ ಬಸ್‌ಸ್ಟಾಪ್ ಹತ್ತಿರ ಚಾಕುವಿನಿಂದ ತಿವಿದು ಕೊಲೆಮಾಡಲ್ಪಟ್ಟರೆಂದು ವರದಿಯಾಗಿದೆ.

೬೦ ವರ್ಷದ ಜನರು ಸೈನ್ಯಕ್ಕೆ ಸೇರಬೇಕು

ಜರ್ಮನಿಯಲ್ಲಿ ಈಗ ೬೦ ವರ್ಷ ವಯಸ್ಸಿನ ಜನರೆಲ್ಲಾ ಸೈನ್ಯಕ್ಕೆ ಬಂದು ಸೇರಬೇಕೆಂದು ಆಜ್ಞೆಯಾಗಿದೆ.

ಇಟಲಿಯ ೩೦ ಡಿವಿಜನ್ ಸೈನ್ಯ ಜರ್ಮನ್ ಕಡೆಗೆ ಸೇರಿತೆ?

ಇಟಲಿಯ ೩೦ ಡಿವಿಜನ್ ಸೈನ್ಯ ಜರ್ಮನಿ ಸಂಗಡ ಸೇರಿಕೊಂಡಿವೆಯೆಂದೂ, ಅದು ಫ್ಯಾಸಿಸ್ಟ್ ಪಂಗಡಕ್ಕೆ ಸೇರಿದವೆಂದೂ ಬರ್ಲಿನ್ ರೇಡಿಯೋ ತಿಳಿಸುತ್ತದೆ. ಆದರೆ ಇಲ್ಲಿಯವರೆಗೂ ಇದಕ್ಕೆ ಆಧಾರ ದೊರೆತಿಲ್ಲವೆಂದು ಹೇಳಲಾಗಿದೆ.

ಇಟಲಿಯಲ್ಲಿ ಒಳಯುದ್ಧ ಸೂಚನೆ?

ಮುಸೋಲಿನಿಯನ್ನು ಇಟಾಲಿಯನರ ಕೈವಶದಿಂದ ಜರ್ಮನರು ತಪ್ಪಿಸಿದರೆಂಬ ವಾರ್ತೆ ತಿಳಿದ ಕೂಡಲೇ, ಇಟಲಿಯಲ್ಲಿ ತೀವ್ರ ಅಶಾಂತಿ ಉಂಟಾಗಿದೆಯೆಂದೂ ಅಲ್ಲಿ ಒಂದು ಒಳಯುದ್ಧ ಆರಂಭವಾಗುವ ಸೂಚನೆಯಿದೆಯೆಂದೂ ಹೇಳಲಾಗಿದೆ.

ನೂತನ ಟಾರ್ಪೆಡೊ ಬಾಂಬರ್

ಪ್ರಪಂಚದಲ್ಲಿ ಇಲ್ಲಿಯವರೆಗೆ ನಿರ್ಮಿಸದ ಒಂದು ನೂತನ ಪ್ರಾಣಘಾತಕರಾದ ನೌಕಾ ಟಾರ್ಪೆಡೊ ಬಾಂಬರನ್ನು ತಯಾರಿಸಲಾಗುತ್ತಿದೆಯೆಂದೂ [illegible] ತಿಳಿಸಿದ್ದಾರೆ.

ಕಳ್ಳ ವ್ಯಾಪಾರ ಮಾಡುವವರು ರಾಜದ್ರೋಹಿಗಳು

ಮೈಸೂರು ೧೩

‘ಈಗಿನ ಹೊಸ ನೀತಿ ಹಳ್ಳಿಯಿಂದ ದವಸ ಧಾನ್ಯಗಳನ್ನು ತೆಗೆದುಕೊಂಡುಹೋಗುವುದಕ್ಕಲ್ಲ. ದೇಶದಲ್ಲಿ ಗುಪ್ತವಾಗಿಟ್ಟಿರುವ ಎಲ್ಲಾ ದವಸ ಧಾನ್ಯಗಳನ್ನೂ ಹೊರಕ್ಕೆ ತೆಗೆಯುವುದಕ್ಕಾಗಿ ಮತ್ತು ಅನಂತರ ಅದು ನಮಗೆ ಸಾಕಾಗುತ್ತೋ ಇಲ್ಲವೋ ಎಂದು ಪರ್ಯಾಲೋಚಿಸುವುದಕ್ಕಾಗಿ. ಮೈಸೂರು ಬೆಂಗಳೂರು ಪಟ್ಟಣಗಳಿಗೆ ಹಳ್ಳಿಯಿಂದ ದವಸ ತೆಗೆದುಕೊಂಡುಹೋಗಿ [illegible] ಅದು ಸರ್ಕಾರದ ಉದ್ದೇಶವೇ ಅಲ್ಲ. ಹಳ್ಳಿ ಮತ್ತು ಪಟ್ಟಣ ಎರಡರಲ್ಲೂ ಸಂಗ್ರಹಿಸುವ ಪದ್ಧತಿಯನ್ನು ತಪ್ಪಿಸಲಾಗುತ್ತದೆ. ಹಳ್ಳಿಯ ದವಸಗಳನ್ನು ಹಳ್ಳಿ ಕಡೆಯ ಡಿಪೋಗಳಲ್ಲೇ ಶೇಖರಿಸಲಾಗುತ್ತದೆ. ಹಳ್ಳಿಯಿಂದ ಪಟ್ಟಣಗಳಿಗೆ ದವಸ ಬರಬೇಕಲ್ಲದೆ ಪಟ್ಟಣದ ಜನರ ದಸ್ತುಗಳಲ್ಲಿ ಬೀಳುವುದಿಲ್ಲ” ಹೀಗೆಂಬುದಾಗಿ ನಿನ್ನೆ ಸರಬರಾಜು ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ ಕೊಟ್ಟಾಗ ಇಂದಿನ ರೇಷನು ವಿಚಾರವಾಗಿ ವಿವರಿಸಿದರು.

ಮುಂದುವರಿಯುತ್ತಾ ಸಚಿವರು, “ಹೆಚ್ಚು ಅಕ್ಕಿ ಬರಲೆಂದು ಮಿಲ್ಲಿನವರು ಸರಿಯಾಗಿ ಪಾಲಿಷ್ ಕೊಡುತ್ತಿಲ್ಲ. ಹಾಗೆ ಮಾಡಿದ ಪಕ್ಷದಲ್ಲಿ ಪುನಃ ಆ ಅಕ್ಕಿಯನ್ನು ಅದೇ ಮಿಲ್ಲಿಗೆ ವಾಪಸ್ಸು ಕಳುಹಿಸಿ ಮಿಲ್ಲಿನವರ ಸ್ವಂತ ಖರ್ಚಿನಲ್ಲೇ ಸರಿಯಾಗಿ ಪಾಲಿಷ್ ಕೊಡಬೇಕೆಂದೂ ಆಜ್ಞೆ ಮಾಡಲಾಗಿದೆ” ಎಂದು ತಿಳಿಸಿದರು.

ಲಂಚದ ವಿಷಯವಾಗಿ ಸಚಿವರು ಬಹಳ ತೀವ್ರವಾಗಿ ಖಂಡಿಸುತ್ತಾ, ಸಾರ್ವಜನಿಕರು ಅಥವಾ ಅಧಿಕಾರಿ ವರ್ಗದಲ್ಲಿ ಯಾರೇ ಆಗಲಿ ಈ ತರಹ ವರ್ತಿಸುತ್ತಿದ್ದರೆ ಅದು [illegible] ಸಂಗ್ರಹಿಸಿಟ್ಟು ಮೋಸ [illegible] ಸರ್ಕಾರದವರ ವಿಚಾರದಲ್ಲಿ ಸುದ್ದಿ ಕೊಟ್ಟವರಿಗೆ ಬಹುಮಾನ ಕೊಡಲಾಗುತ್ತೆ. ಕಳ್ಳ ವ್ಯಾಪಾರ ಮಾಡುವವರು ರಾಜದ್ರೋಹಿಗಳು. ಈ ಸಂದರ್ಭದಲ್ಲಿ ಜನಾನ್ನ ತೊಂದರೆ ಪಡಿಸುವ [illegible] ಬೇಕಿಲ್ಲ. ಈ ತರಹ ಸಂಗ್ರಹ ಮಾಡದವರೆಗೆ ಎಂದಿದ್ದರೂ ತುಂಬಾ ಅನಾನುಕೂಲವೇ ಹೊರತು, ಸುಖವೆಂದಿಗೂ ಇಲ್ಲ.

ಆಹಾರ ಸರಬರಾಜು [illegible] ವವರೆಗೂ ರೇಷನಿಂಗ್ ಅತ್ಯವಶ್ಯಕ. [illegible] ದೊಂದರಿಂದ ಎಲ್ಲರಿಗೂ ಸರಿಯಾಗಿ ಪದಾರ್ಥ ದೊರೆಯುವುದು. ಇಲ್ಲವಾದರೆ ‘[illegible] ತಿನ ಮಡಿಕೆಗೆ ತುಂಬಿದಂತೆ.’

ಸಾಧ್ಯವಾದಷ್ಟು ಜಾಗ್ರತೆಯಾಗಿ ಮೈಸೂರಲ್ಲಿಯೂ ರೇಷನಿಂಗ್ ಜಾರಿಗೆ ಬರುವುದು. ಆದರೆ ಆಗ ಬೆಂಗಳೂರಿನಲ್ಲಿ ಆಗುತ್ತಿರುವಂತಹ ತೊಂದರೆಯು ಮೈಸೂರಲ್ಲಿ ಆಗಬಾರದೆಂಬುದೇ ನಮ್ಮ ಮುಂದಾಲೋಚನೆ” ಎಂಬುದಾಗಿ ಸಚಿವರು ತಿಳಿಸಿದರು.

ಗ್ರಾಮ ಸುಧಾರಕರಿಗೆ ಬಹುಮಾನ

ಮೈಸೂರು ಜಿಲ್ಲಾ ಬೋರ್ಡಿನ ಸಭೆ ಈ ದಿನ ಮಧ್ಯಾಹ್ನ ಶ್ರೀ ಕೆ ಸಿ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಗ್ರಾಮಾಭಿವೃದ್ಧಿ ಯೋಜನೆಯ ೧೦ ಕೇಂದ್ರದಲ್ಲಿ ನೇಮಕ ಮಾಡಿಕೊಂಡಿರತಕ್ಕ ಗ್ರಾಮ ಗ್ರಾಮಸುಧಾರಕರ ಪೈಕಿ ಚೆನ್ನಾಗಿ ಕೆಲಸ ಮಾಡಿದವರಿಗೆ ಬಹುಮಾನವಾಗಿ ೭೫ ರೂ. ಬೆಲೆಬಾಳುವ ೧ ಸೈಕಲ್ಲು ಕೊಡತಕ್ಕದೆಂದು ತೀರ್ಮಾನಿಸಲಾಯಿತು.

ಜಿಲ್ಲಾ ಬೋರ್ಡಿನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲು ಇರುವರೆವಿಗೂ, ಸುಂಕವನ್ನು ವಸೂಲು ಮಾಡದೆ ಇರತಕ್ಕ ಕೆಲವು ಸಂತೆಗಳಲ್ಲಿ ಮಾರಾಟಕ್ಕೆ ಬರುವ ಪದಾರ್ಥಗಳ ಮೇಲೆ ಸುಂಕ ಹಾಕಬೇಕು ಎಂದು ಒಂದು ಸರ್ಕಾರಿ ಆರ್ಡರನ್ನು ರದ್ದು ಮಾಡಲಾಯಿತು.

ಹಿಂದೂ ಮುಸ್ಲಿಂ ದೊಂಬಿ

ಮದರಾಸ ಪ್ರಾಂತ್ಯದ ಮನ್ನಾರ್‌ಗುಡಿಗೆ ಸೇರಿದ ಮತ್ತು ಪೇಟೆಯಲ್ಲಿ ಹಿಂದೂ-ಮುಸ್ಲಿಂ ದೊಂಬಿ ಎದ್ದು, ಪೋಲೀಸರು ಗುಂಡು ಹಾರಿಸಿ ಶಾಂತಗೊಳಿಸಿದರೆಂದು ವರದಿಯಾಗಿದೆ. ಹಿಂದೂಗಳಿಗೆ ಸೇರಿದ ಕೆಲವು ಅಂಗಡಿಗಳನ್ನು ಮುಸಲ್ಮಾನರು ಕೊಳ್ಳೆ ಹೊಡೆದುದರ ಪರಿಣಾಮವಾಗಿ ಘರ್ಷಣೆ ಉಂಟಾಯಿತೆಂದೂ, ೮ ಮಂದಿಗೆ ತೀವ್ರ ಗಾಯಗಳಾಗಿವೆಯೆಂದು ಗೊತ್ತಾಗಿದೆ.

ಸರಿಯಾದ ರಶೀತಿ ಕೊಡದಿದ್ದುದಕ್ಕೆ ೫,೧೦೦ ರೂ. ಗಳ ದಂಡ

ಮಂಗಳೂರಿನ [illegible] ವರ್ತಕರಾದ ಶ್ರೀ ಜೋಗಿ [illegible] ವೆಂಕಟ ಸುಬ್ಬರಾವ್ ಎಂಬುವರು [illegible] ಮಾಡಿದರೆಂಬ ಆಪಾದನೆ [illegible] ಗಳ ಜುಲ್ಮಾನೆಯನ್ನು [illegible] ವಿಧಿಸಿದರು. [illegible] ದಂಡವನ್ನು ತೆರಲು ತಪ್ಪಿದರೆ [illegible] ಶಿಕ್ಷೆ ವಿಧಿಸಿದರು. [illegible] ಲ್ಯಾನೆ ಜಪ್ತಿ [illegible]

ಕೊಟ್ಟಿಗೆ [illegible] ಪಡಿಸಿಕೊಂಡಿ [illegible]

ಬಂಗಾಳ ಪರಿಹಾರ ನಿಧಿ

ಬೆಂಗಳೂರು ೧೩

ಬಂಗಾಳ ಪರಿಹಾರ ನಿಧಿಗೆ ಬೆಂಗಳೂರು ವಿದ್ಯಾರ್ಥಿಗಳ ಸಂಘದವರು ಒಕ್ಕಲಿಗರವರಿಗೆ ೧೦೦ ರೂ ಕಳಿಸಿಕೊಟ್ಟಿರುವರು

ರೇಷನ್ ಪರಿಮಿತಿ ಹೆಚ್ಚಬೇಕು

ಬೆಂಗಳೂರು ನಗರದಲ್ಲಿ ಈಗ ಕೊಡುವ ಗಂಜಿಯ ೧ ಪ ಘ ಅಕ್ಕಿ ರೇಷನ್ ಸಾಲದ ಕಾರಣ ಒಬ್ಬೊಬ್ಬರಿಗೆ ಪಡಿಗೆ ಹೆಚ್ಚಿಸಬೇಕು ಮತ್ತು ಸರ್ಕಾರದವರು ಈಗ ರಾಗಿಗೆ ನಿಗದಿಪಡಿಸಿರುವ ಮಾರಾಟದ ಬೆಲೆ ಬಡವರಿಗೆ ಬಹಳ ದುಬಾರಿಯಾಗಿರುವುದರಿಂದ ಬೆಲೆಯನ್ನು ಕಡಿಮೆ ಮಾಡಬೇಕೆಂದು ನಿರ್ಣಯ [illegible] ಸಭೆಯಲ್ಲಿ ನಿರ್ಧರಿಸಲಾಯಿತು

ನೂತನ ಅಣೆಕಟ್ಟು ಯೋಜನೆ

ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳ [illegible] ವಿಭಾಗದ [illegible] ಶಿವ [illegible] ದೂರದಲ್ಲಿರುವ [illegible] ೧,೭೬,೦೦೦ ರೂ ವೆಚ್ಚದಿಂದ ೧ ಅಣೆಕಟ್ಟು ಕಟ್ಟುವ ಯೋಜನೆ ಸಿದ್ಧವಾಗಿದೆಯೆಂದೂ, ಅದರಿಂದ ೨೪ ಕೆರೆಗಳಿಗೆ ನೀರು ಲಭಿಸಿ, ೧,೫೦೦ ಎಕರೆ ಸಾಗುವಳಿಯಾಗುತ್ತವೆ

ಆಹಾರ ಸಮ್ಮೇಳನ

ಶ್ರೀ [illegible] ಮತ್ತು ಸಿದ್ದಲಿಂಗಯ್ಯನವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ 'ಸಂಸ್ಥಾನದ ಆಹಾರ ಸಮಸ್ಯೆ ದಿನೇ ದಿನೇ ಬಿಗಡಾಯಿಸುತ್ತಿದೆ. ಈ ಪ್ರಶ್ನೆ [illegible] ರೂಪದ [illegible] ಮಾಡಲು ಪರಿಹಾರೋಪಾಯಗಳನ್ನು ಆಲೋಚಿಸಿ ಅವರಿಂದ ಕೆಲಸಮಾಡಲು ಈ ತಿಂಗಳು ೨೬ ರಲ್ಲಿ ಆಹಾರ ಸಮ್ಮೇಳನ ನಡೆಸಲು ನಿರ್ಧಾರ ಮಾಡಿದ್ದೇವೆ. ಪ್ರಜಾಪ್ರತಿನಿಧಿ ಸಭಾ ಸದಸ್ಯರೂ, ಶಾಸನ ಸಭಾ ಸದಸ್ಯರೂ ಜಿಲ್ಲಾ ಬೋರ್ಡ್, ಪೌರ ಸಭೆಗಳ ಸದಸ್ಯರೂ ಮತ್ತು ಇತರರೂ ಸಮ್ಮೇಳನಕ್ಕೆ ಸಕಾಲದಲ್ಲಿ ಬಂದು ಭಾಗವಹಿಸಬೇಕೆಂದು ಪ್ರಾರ್ಥಿಸುತ್ತೇವೆ".

೧೪೮೫ ಜನ ಕಾಲರಾದಿಂದ ಸತ್ತರು

[illegible]

ವಾರ್ತಾನಿರೋಧ ಪಂಚಿಕೆ ರದ್ದು

[illegible]

ಸಾಲೆರ್ನೋ ತೀರದಲ್ಲಿ ಮಿತ್ರ ಸೇನೆಗಳ ಮಿಲನ

ಸಾಲೆರ್ನೋ ಆಗ್ನೇಯ ತೀರ ಪ್ರದೇಶದ ನಾನಾ ಕಡೆಗಳಲ್ಲಿ ಇಳಿದ ಬ್ರಿಟಿಷ್ ಮತ್ತು ಅಮೇರಿಕ ಸೇನೆಗಳು ಈಗ ಒಟ್ಟುಗೂಡಿವೆ. ಸಮುದ್ರ ತೀರಪ್ರದೇಶದಲ್ಲಿ ಮಿತ್ರಸೇನೆಗಳು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳುತ್ತಿವೆ. ನೇಪಲ್ಸ್ ನಗರಕ್ಕೆ ಹೋಗುವ ರಸ್ತೆಯಲ್ಲಿ ಒಂದು ಊರಿಗಾಗಿ ಉಗ್ರಕದನ ನಡೆದು, ಅನೇಕ ಸಾರಿ ಅದು ಕೈ ಕೈ ಬದಲಾಯಿಸಿತು. ಈಗ ಅದು ಮಿತ್ರರ ವಶವಾಗಿದೆ.

ರೋಡ್ಸ್ ದ್ವೀಪದಲ್ಲಿ ಉಗ್ರಕದನ

ರೋಡ್ಸ್ ದ್ವೀಪದಲ್ಲಿ ಇಟಲಿ ಸೈನ್ಯಕ್ಕೂ, ಜರ್ಮನ್ ಸೈನ್ಯಕ್ಕೂ ಉಗ್ರ ಕದನ ನಡೆಯುತ್ತಿದೆಯೆಂದು [illegible] ವಿಯಾಗಿದೆ ಡೊಡೆಕನೀಸನಲ್ಲಿ ೮೦೦೦ ಜರ್ಮನ್ ಮತ್ತು ೪೦ ಸಾವಿರ ಇಟಲಿ ಸೈನಿಕರು ಇರುವುದಾಗಿ ಹೇಳಲಾಗಿದೆ

ಯುಗೋಸ್ಲೇವಿಯಾದಲ್ಲಿ ಇಟಲಿ-ಜರ್ಮನ್ ಘರ್ಷಣೆ

ಏಡ್ರಿಯಾಟಿಕ್ ತೀರದಲ್ಲಿರುವ ಕೊಟಾರ್ ಎಂಬ ಯುಗೋಸ್ಲೇವಿಯಾ ದೇಶದ ಪಟ್ಟಣದಲ್ಲಿ ಇಟಾಲಿಯನ್ ಮತ್ತು ಜರ್ಮನ್ ಸೈನ್ಯಗಳಿಗೆ ಒಂದೇ ಸಮನಾಗಿ ಉಗ್ರ ಹೋರಾಟವಾಗುತ್ತಿದೆಯೆಂದು ಹೇಳಲಾಗಿದೆ.

ಯುಗೋಸ್ಲಾವಿಯಾ ದೇಶದ ಸ್ವದೇಶ ಪ್ರೇಮಿಗಳು ಇಟಾಲಿಯನ್ ಸೈನಿಕರ ಸಂಗಡ ಸೇರಿಕೊಂಡು ಹೋರಾಡ್ತಾ ಯುದ್ಧ ನಡೆಸುತ್ತಿರುವರೆಂದೂ ವರದಿಯಾಗಿದೆ.

ಮುಸೋಲಿನಿ ಜರ್ಮನರ ವಶ

ಮುಸೋಲಿನಿಯನ್ನು ಬ್ರಿಟನಿಗೆ ಒಪ್ಪಿಸಲು ಬಡೋಗ್ಲಿಯೋ ಸರ್ಕಾರವು ಮಾಡಿದ ಪ್ರಯತ್ನವನ್ನು ವಿಫಲಗೊಳಿಸಿ, ಜರ್ಮನರು ಮುಸೋಲಿನಿಯನ್ನು ಕರೆದೊಯ್ದರೆಂದು ಬರ್ಲಿನ್ ರೇಡಿಯೋ ತಿಳಿಸಿದೆ

ಹೊಟ್ಟೆಗಿಲ್ಲದ ನಾಯಿಗಳಿಗೆ ಸಹಾಯ

ಹೊಟ್ಟೆಗಿಲ್ಲದ ನಾಯಿಗಳ ಸಹಾಯಕ್ಕೆ ಕರಾಚಿ ನಗರದ ಮಾರ್ವಾಡಿ ಜನರು [illegible] ರೂಗಳನ್ನು ಡಾಗ್ಸ್ ಸೊಸೈಟಿಯವರಿಗೆ ಕಳುಹಿಸಿದರು.

RETURN TICKET TO RADIANT YOUTH AT

New Royal Dispensary

Ashoka Road, Mysore

ಇಟಲಿ ನಗರಗಳಲ್ಲಿ ಮಾರ್ಷಲ್ ಲಾ

ಇಟಲಿಯಲ್ಲಿ ಯಾವ ಪ್ರದೇಶಗಳನ್ನು ಜರ್ಮನರು ಆಕ್ರಮಿಸಿಕೊಂಡಿರುವರೋ ಅಲ್ಲೆಲ್ಲ ಮಾರ್ಷಲ್ ಲಾ ಜಾರಿಗೆ ತಂದಿದ್ದಾರೆ. ಮುಖ್ಯರುಗಳನ್ನು ಪ್ರತಿಬಂಧಿಸಿ, ಸೈನ್ಯಗಳನ್ನು ನಿಶ್ಶಸ್ತ್ರರನ್ನಾಗಿ ಮಾಡಲಾಗುತ್ತಿದೆ.

ಇಟಾಲಿಯನ್ನರು ಮಿತ್ರಶಕ್ತಿ ಪರಸ್ತ್ರಗಳಿಗೆ ಒಪ್ಪದೆ ಜರ್ಮನರ ಕಡೆ ಸೇರಬೇಕೆಂದು ಜರ್ಮನರ ದುಷ್ಪ್ರೇರಣೆ ಮಾಡುತ್ತಿದ್ದಾರೆ ಜರ್ಮನಿಯಲ್ಲಿ ಇಟಾಲಿಯನ್ ಫ್ಯಾಸಿಸ್ಟ್ ಪಕ್ಷ ಸ್ಥಾಪಿಸಲಾಗಿದೆಯೆಂದು ಬರ್ಲಿನ್ ರೇಡಿಯೋ ತಿಳಿಸುತ್ತದೆ

ನೇಪಲ್ಸಿನ ಉತ್ತರದಲ್ಲಿ ಇಟಾಲಿಯನ್ನರು ಮಿತ್ರ ಸೇನೆಗಳೊಡನೆ ಜರ್ಮನಿ ಮೇಲೆ ಕಾದಾಡುತ್ತಿದ್ದಾರೆ, ಆಕ್ರಮಣ ನಡೆವ ಕಡೆಗೆ ಇಟಾಲಿಯನ್ನರು ಅಡ್ಡಿ ಕೊಡುತ್ತಿದ್ದಾರೆ.

ಸಾಲಮೋವಾ ಹತ್ತಿರ ಜಪಾನಿ ಸೋಲು

ನ್ಯೂಗಿನಿಯಲ್ಲಿ ಜಪಾನಿ ಪ್ರಮುಖ ನೆಲೆಯಾದ ಸಾಲಮೋವಾ ಇಸ್ತಮಸ್ಸಿನ ಪತನವಾಗಿದೆ. ಅದಕ್ಕೆ ಕೇವಲ ೩ ಮೈಲಿ ದೂರದಲ್ಲಿರುವ ವಿಮಾನ ನೆಲೆಯನ್ನು ಮಿತ್ರಸೈನ್ಯ ವಶಪಡಿಸಿಕೊಂಡಿದೆ. ಶತ್ರುವು ಅನೇಕ ಸಾಮಗ್ರಿಗಳನ್ನು ಬಿಟ್ಟು ಓಡುತ್ತಿವೆ. ಈಗ ನ್ಯೂಗಿನಿಯ ಫ್ರಾನ್ಸಿಸ್ಕ ನದಿಯ ದಕ್ಷಿಣ ಭಾಗವೆಲ್ಲಾ ಮಿತ್ರವಶವಾಗಿದೆ. ಲೇ ದ್ವೀಪಕ್ಕೆ ಮುತ್ತಿಗೆ ಹಾಕಲಾಗಿದೆ.

ಬ್ರಿಂಡಿಸಿ ಮಿತ್ರರ ವಶ

ಇಟಲಿಯ ಪೂರ್ವ ತೀರದಲ್ಲಿರುವ ಬ್ರಿಂಡಿಸಿ ಬಂದರನ್ನು ಮಿತ್ರ ಸೈನ್ಯಗಳು ಆಕ್ರಮಿಸಿವೆ ಇದರಿಂದ ಬಾಲ್ಕನ್ ಯುದ್ಧಗಳ ಮೇಲೆ ಧಾಳಿ ನಡೆಸಲು ಅನುಕೂಲವೆಂದು ಹೇಳಲಾಗಿದೆ

ಟಾರೆಂಟೋ ಬಂದರಿನ ಹತ್ತಿರ ಜರ್ಮನ್ ಪ್ಯಾರಾಚೂಟ್ ಸೈನ್ಯಕ್ಕೂ ಬ್ರಿಟಿಷ್ ಎಂಟನೇ ಸೈನ್ಯಕ್ಕೂ ಕದನ ನಡೆಯುತ್ತಿದೆ.

ಜರ್ಮನರ ಹಿಂಸಾ ಕೃತ್ಯ

ಜರ್ಮನ್ ಆಕ್ರಮಿತ ಇಟಲಿ ನಗರಗಳಲ್ಲಿ ಬಂಧನದಲ್ಲಿದ್ದ ಎಲ್ಲಾ ಫ್ಯಾಸಿಸ್ಟ್ ನಾಯಕರನ್ನೂ ಜರ್ಮನರು ಬಿಡುಗಡೆ ಮಾಡಿದ್ದಾರೆ. ಬಡೋಗ್ಲಿಯೋ ಸರ್ಕಾರಕ್ಕೆ ಸಹಾಯ ನೀಡಿದ ಜನರೆಲ್ಲರನ್ನೂ ಹಿಂಸೆಗೆ ಗುರಿ ಮಾಡುತ್ತಿದ್ದಾರೆ

Edited, printed and published by A. R Nagarajan, at the Sadhvi Press, D Subbiah Road, Mysore.

ಶಾಲಾ ಸಮಿತಿ ಸದಸ್ಯರುಗಳ ಮೇಲೆ ಹುಡುಗರ ದೊಂಬಿ

ಗುಂಟೂರಿನ ಹಿಂದೂ ಕಾಲೇಜ್ ಸ್ಕೂಲು ಸಮಿತಿಯ ಅಧ್ಯಕ್ಷರಾದ ಶ್ರೀ [illegible] ಕೃಷ್ಣನರಸಿಂಹರವರಿಗೂ ಮತ್ತು ಸೆಕ್ರೆಟರಿಯವರಿಗೂ ಅಲ್ಲಿನ ವಿದ್ಯಾರ್ಥಿಗಳು ಕಲ್ಲುಗಳ ದ ಹೊಡೆದು ಗಾಯಪಡಿಸಿದರೆಂದು ವರ್ತಮಾನವಾಗಿದೆ. ಹಿಂದಿನ ಹೆಡ್‌ಮಾಸ್ಟರಾದ ಶ್ರೀ ನಾರಾಯಣರಾಯರು ಶಾಲೆಗೆ ಬೀಗ ಮುದ್ರೆಹಾಕಿದುದರಿಂದ, ಅದನ್ನು ಕೆಲ [illegible] ಯ ಅಧಿಕಾರಿಗಳು ಎದುರಿಗೆ ತೆಗೆಯಲು ಹೋದಾಗ ವಿದ್ಯಾರ್ಥಿಗಳು ಗಲಭೆ ನಡೆಸಿ, ಕಲ್ಲುಗಳಿಂದ ಹೊಡೆದರೆಂದು ಹೇಳಲಾಗಿದೆ.

ಕ್ಷುದ್ಬಾಧೆಯಿಂದ ೩೭ ಮಂದಿ ಮರಣ

ಕಲ್ಕತ್ತಾ ನಗರದ ಬೀದಿಗಳಲ್ಲಿ ನಿರ್ಗತಿಕರಾದ ೧೩೭ ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಯಿತು. ಮೊನ್ನೆ ದಿನ ೫ ಆಸ್ಪತ್ರೆಗಳಲ್ಲಿ ಒಟ್ಟು ೩೭ ಮಂದಿ ನಿರ್ಗತಿಕರು ಸತ್ತರೆಂದೂ, ಅವರ ಪೈಕಿ ೨೭ ಮಂದಿ ಸತ್ತರೆಂದೂ ವರದಿಯಾಗಿದೆ

ಬೇಕಾಗಿದೆ

ಮುಂದೆ ಬರುವ ದಸರಾ ಮಹೋತ್ಸವಕ್ಕೆ ಬರುವ ಅತಿಥಿಗಳಿಗೆ ಸ್ಥಳ ವಸತಿಯನ್ನು ಕಲ್ಪಿಸುವುದಕ್ಕಾಗಿ ಉತ್ತಮವಾದ ಎಲೆಕ್ಟ್ರಿಕ್ ದೀಪ ಮತ್ತು ನೀರಿನ ಸೌಕರ್ಯಗಳುಳ್ಳ ಬಂಗಲೆಗಳು ಮೈಸೂರಿನಲ್ಲಿ ಬೇಕಾಗಿವೆ. ಇದಕ್ಕಾಗಿ ತಮ್ಮ ಬಂಗಲೆಗಳನ್ನು ಬಾಡಿಗೆಗೆ ಕೊಡಲು ಇಷ್ಟಪಡುವವರು ಅವುಗಳ ನಂಬರು, ಇರುವ ಸ್ಥಳ, ಅನುಕೂಲತೆಗಳು ಬಾಡಿಗೆ ಮುಂತಾದ ವಿವರಗಳನ್ನು ದಸರಾ ಸ್ಪೆಷಲ್ ಡ್ಯೂಟಿ ಆಫೀಸರವರಿಗೆ ಈ ಕೆಳಗೆ ಕಾಣಿಸಿರುವ ಅವರ ವಿಳಾಸಕ್ಕೆ ಬರೆದು ತಿಳಿಸಬೇಕೆಂದು ಕೋರಿದೆ:-

1943 ನೇ ಇಸವಿ ಸೆಪ್ಟೆಂಬರು ೨೫ ನೇ ತಾರೀಖಿನವರೆಗೂ-ಬೆಂಗಳೂರು ಅಠಾರಾ ಕಚೇರಿಯ ವಿಳಾಸಕ್ಕೆ.

ಅನಂತರ - ಮೈಸೂರಿನಲ್ಲಿ ಗೆಸ್ಟ್ ಹೌಸ್‌ನಲ್ಲಿ ಸ್ಪೆಷಲ್ ಡ್ಯೂಟಿ ಆಫೀಸರಿಗೆ

ಇತರ ಯಾವುದಾದರೂ ವಿವರಗಳು ಬೇಕಾದಲ್ಲಿ ಸ್ಪೆಷಲ್ ಡ್ಯೂಟಿ ಆಫೀಸರಿಗೆ ಬರೆದು ತಿಳಿದುಕೊಳ್ಳಬಹುದು

ಟಿ. ರಂಗಮಲ್ಲಯ್ಯ

ಸ್ಪೆಷಲ್ ಡ್ಯೂಟಿ ಆಫೀಸರ್

10-9-43

FROM 15-9-43 Daily 3 shows

Thief of Bagdad (in magic Technicolor)

with MYSORE SABU

AT NEW OPERA TALKIES

Next Change 'SHARADA' in Hindi

ಸ್ತ್ರೀಯರ ಸೌಕರ್ಯಕ್ಕಾಗಿ

೩-೧೧ ರಿಂದ [illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ

ಡಿ. ಕೃಷ್ಣಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ. — ಚಿಲ್ಲರೆಯಾಗಿ ದಿನಸ್ಸಿನ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ [illegible] ಇಲ್ಲಿ ಮತ್ತು [illegible] ಅಪೇಕ್ಷಿಸಿದಲ್ಲಿ [illegible]

ಇಟಾಲಿಯನ್ನರಿಗೆ ಉಗ್ರ ಎಚ್ಚರಿಕೆ

ರೋಂ ನಗರದಲ್ಲಿಯ ಜರ್ಮನ್ ಸೇನಾನಿಯು ನಗರದಲ್ಲಿ ಯಾರಾದರು ಸಿಕ್ಕಿಬಿದ್ದರೆ ಅವರು ಅಥವಾ ಶಸ್ತ್ರ ಸಹಿತರಾಗಿರುವುದು ಇವುಗಳನ್ನು ನೋಡಿದ್ದೇ ಆದರೆ ಅಂಥವರನ್ನು ಗುಂಡಿನಿಂದ ಹೊಡೆದು ಸಾಯಿಸಲಾಗುವುದೆಂದು ಆಜ್ಞೆ ಹೊರಡಿಸಿದಾನೆ

ಬ್ರೆನ್ನರ್ ಕಣಿವೆ ಸೇತುವೆಯೊಂದನ್ನು ನಾಶಪಡಿಸಲೆತ್ನಿಸಿದ ೩ ಮಂದಿ ಇಟಾಲಿಯನ್ನರನ್ನು ಗುಂಡಿನಿಂದ ಹೊಡೆದು ಸಾಯಿಸಲಾಯಿತೆಂದು ವರದಿಯಾಗಿದೆ

ಸ್ವಿಸ್ ಗಡಿಯಲ್ಲಿ ಸೈನ್ಯ ಸಿದ್ಧತೆ

ಇಟಲಿಗೂ, ಮಿತ್ರ ಪಕ್ಷಗಳಿಗೂ ಒಪ್ಪಂದವಾದ ಕೂಡಲೆ, ಸ್ವಿಟ್ಜರ್ಲೆಂಡ್ ಅನಿರೀಕ್ಷಿತ ಘಟನೆಗಳನ್ನು ಎದುರಿಸುವುದಕ್ಕೋಸ್ಕರ ಗಡಿಯಲ್ಲಿ ಸೈನ್ಯ ಸಿದ್ಧತೆ ಮಾಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ. ಆಲ್ಪ್ಸ್ ಪರ್ವತ ಮಾರ್ಗಗಳನ್ನೆಲ್ಲಾ ಭದ್ರವಾಗಿ ಕಾಯಲಾಗುತ್ತಿದೆ.

ಬಾಲ್ಕನ್ ದಂಡಯಾತ್ರೆ

ಬಾಲ್ಕನ್ನಲ್ಲಿ ಮಿತ್ರರ ದಂಡಯಾತ್ರೆ ಆರಂಭಿಸುವರೆಂದೂ, ರಷ್ಯನ್ ಕ್ಷೇತ್ರದಲ್ಲಿದ್ದ ನೇಕ ಡಿವಿಜನ್ ಸೈನ್ಯಗಳನ್ನು ಜರ್ಮನಿ ಬಾಲ್ಕನ್ನಿಗೆ ಕಳಿಸಲಾಗಿದೆಯೆಂದೂ ಮತ್ತು ಏಡ್ರಿಯಾಟಿಕ್ ಯುದ್ಧ ಕೇಂದ್ರವಾಗುವುದೆಂದೂ ಜರ್ಮನ್ ಮಿಲಿಟರಿ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ

ಇಟಲಿಯಿಂದ ಮಿತ್ರರು ಬಾಲ್ಕನ್ ಕಡೆಗೆ ನುಗ್ಗುವುದರಿಂದ ದಕ್ಷಿಣ ಯೂರೋಪಿನ ಸಂಸ್ಥಾನಗಳೆಲ್ಲಾ ಯುದ್ಧದಿಂದ ಹೊರಬೀಳಬಹುದೆಂದು ಬರ್ಲಿನ್‌ನಿಂದ ಸುದ್ದಿ ಹೊರಟಿದೆ.

ಜರ್ಮನ್ ಸೈನ್ಯಗಳನ್ನು ಹಿಂದಕ್ಕೆ ಕಳಿಸಲಾಗುತ್ತಿದೆ

ದಕ್ಷಿಣ ಇಟಲಿಯ ತುದಿಯ ಭಾಗದಲ್ಲಿ ಬ್ರಿ॥ ಅಷ್ಟಮ ದಳವು ಜಾಗ್ರತೆಯಿಂದ ನುಗ್ಗಿ ಜರ್ಮನರನ್ನು ಉತ್ತರದ ಕಡೆಗೆ ಓಡಿಸುತ್ತಿದೆ. ಈ ಕ್ಷೇತ್ರದಲ್ಲಿ ಜರ್ಮನರು ತಮ್ಮ ಸೈನ್ಯವನ್ನು ವಿಮಾನದ ಮೂಲಕ ಹಿಂದಕ್ಕೆ ಕಳಿಸುತ್ತಿರುವರೆಂದು ಹೇಳಲಾದೆ. ಟರಾಂಟೋಗೆ ಉತ್ತರದಲ್ಲಿರುವ ಅಲ್ಟಮೂರ ಎಂಬ ಮುಖ್ಯ ರೈಲ್ವೆ ಜಂಕ್ಷನ್ನನ್ನು ಬ್ರಿ॥ ಸೈನ್ಯವು ಆಕ್ರಮಿಸಿಕೊಂಡಿದೆ. ಸಲೆರ್ನೋಗೆ ೩೦ ಮೈಲಿ ದೂರದಲ್ಲಿರುವ ಪೊಟೆಂಜಾ ನಗರವನ್ನು ಮಿತ್ರರು ಹಿಡಿದಿರುವರು

ಯುಗೋಸ್ಲೇವಿಯಾದಲ್ಲಿ ಇಟಲಿ ಜರ್ಮನ್ ಘರ್ಷಣೆ

ಬೆಲ್‌ಗ್ರೇಡಿನಲ್ಲಿರುವ ಇಟಲಿ ಸೈನಿಕರನ್ನು ಜರ್ಮನರು ನಿಶ್ಶಸ್ತ್ರರನ್ನಾಗಿ ಮಾಡಲಿ ಹೋದಾಗ ಎರಡು ಪಕ್ಷದವರಿಗೂ ಉಗ್ರ ಕದನ ನಡೆಯಿತೆಂದೂ, ಬೆಲ್‌ಗ್ರೇಡ್ ಪ್ರಾಂತ್ಯದ ಇಟಾಲಿಯನ್ ಸೈನಿಕರನ್ನು ನಾಜಿಗಳು ಕೊಂದುಹಾಕಿದರೆಂದೂ, ಹೇಳಲಾಗಿದೆ

೨ ಸಾವಿರ ಇಟಾಲಿಯನ್ ಸೈನಿಕರು ಮಾಂಟೆನೀಗ್ರೋ ಪರ್ವತದ ಕಡೆಗೆ ತಪ್ಪಿಸಿಕೊಂಡು ಓಡಿಹೋದರೆಂದೂ, ಅವರು ಈ ಸರ್ಬಿಯಾದ ಗೆರಿಲ್ಲಾ ಸೈನಿಕರೊಡನೆ ಸೇರಿಕೊಂಡು ಒಂದು ಕದನ ನಡೆಸುತ್ತಿರುವರೆಂದು ವರದಿಯಾಗಿದೆ.

ಸಂಪುಟ ೨] ಬುಧವಾರ ೧೫--೯--೪೩ [ಸಂಚಿಕೆ ೫೪

ಬಾಲ್ಕನ್ ದಂಡಯಾತ್ರೆ ಆರಂಭವಾಗಲಿದೆ

ಪ್ರಜಾಸಂಖ್ಯೆ ಹೆಚ್ಚಿಸಲು ಬ್ರಿಟನ್ನಿನಲ್ಲಿ ನೂತನ ಯೋಜನೆ

ಜರ್ಮನಿಯಲ್ಲಿ ಮುಸೋಲಿನಿ ಫ್ಯಾಸಿಸ್ಟ್ ಅಧಿಕಾರ ಸ್ವೀಕಾರ

ಕ್ಷಾಮಪೀಡಿತರಿಗೆ ಸರ್ಕಾರದ ಸಹಾಯ

ಮದರಾಸ್ ಪ್ರಾಂತ್ಯದ ಸೀಡೆಡ್ ಜಿಲ್ಲೆಗಳಲ್ಲಿ ಕ್ಷಾಮ ಪೀಡಿತರಾದ ಜನಗಳ ಪರಿಹಾರಕ್ಕಾಗಿ ಸರ್ಕಾರದವರು ೩೦ ಲಕ್ಷ ರೂ. ಕೊಟ್ಟಿರುವರು.

ಆಹಾರ ಸರಬರಾಜಿಗಾಗಿ ನೂರೊಂದರ ಕೋಟಿ ರೂ.

ಬಂಗಾಳ ಶಾಸನ ಸಭೆಯಲ್ಲಿ ಹಣಕಾಸಿನ ಮಂತ್ರಿಗಳಾದ ಶ್ರೀ ಗೋಸ್ವಾಮಿಯವರು ಮುಂದಿನ ವರ್ಷದ ಸರ್ಕಾರದ ಬಜೆಟ್ಟಿನ ಬಗ್ಗೆ ಮಾತನಾಡುತ್ತಾ, ಆಹಾರ ಪದಾರ್ಥಗಳ ಸರಬರಾಜಿಗೋಸ್ಕರ ನೂರೊಂದು ಕೋಟಿ ರೂ. ಕೊಡಲಾಗಿದೆಯೆಂದೂ ಕ್ಷಾಮ ನಿವಾರಣೆಗೋಸ್ಕರ ೩೫ ಲಕ್ಷ ರೂ. ಮತ್ತು 'ಹೆಚ್ಚು ಬೆಳೆ ಬೆಳೆಯಿರಿ' ಎಂಬ ಯೋಜನೆಗೆ ೬೬ ಲಕ್ಷ ರೂ. ಕೊಡಲಾಗಿದೆಯೆಂದೂ ತಿಳಿಸಿದರು.

ಮೋಸದ ರೂಪಾಯಿ ತಯಾರಿಕರಿಗೆ ಶಿಕ್ಷೆ

ಲಾಹೋರಿನಲ್ಲಿ ಒಂದು ರೂ. ನ ಕರೆನ್ಸಿ ನೋಟುಗಳನ್ನು ತಯಾರು ಮಾಡುತ್ತಿದ್ದ ೧೪ ಮಂದಿಯನ್ನು ಪೋಲೀಸರು ಹಿಡಿದು ೧೦ ಸಾವಿರ ರೂಪಾಯಿಗಳನ್ನು ವಶಪಡಿಸಿಕೊಂಡು ಮೊಕದ್ದಮೆ ಹೂಡಿದ್ದರು. ೧೩ ಜನ ಅಪರಾಧಿಗಳಿಗೆ ಎರಡು ವರ್ಷದಿಂದ ೧೪ ವರ್ಷದವರೆಗೂ ಶಿಕ್ಷೆಯನ್ನು ವಿಧಿಸಿದರು.

ರೈಲ್ವೆ ಕಂಪನಿ ಬಹುಮಾನ ಕೊಡುವರು

ಇತ್ತೀಚೆಗೆ ಸಂಸ್ಥಾನದ ಹತ್ತಿರ ಸಂದ್ರಿ ಮತ್ತು ಖ.ಮಗಾನ್ ಮಧ್ಯದಲ್ಲಿ ಈಗ ಕೆಲವು ದಿನಗಳ ಹಿಂದೆ ನಡೆದ ರೈಲ್ವೆ ಅಪಘಾತಕ್ಕೆ ಕಾರಣರಾದವರನ್ನು ಹಿಡಿದುಕೊಟ್ಟವರಿಗೆ ೫ ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಕೊಡುವುದಾಗಿ ಎಂ. ಎಸ್. ಎಂ. ರೈಲ್ವೆಯವರು ತಿಳಿಸಿದ್ದಾರೆ.

ಜರ್ಮನ್ ರಾಯಭಾರಿಯ ಭೇಟಿ

ಸವೋನ್ ಎಂ. ಗ್ರೀಕ್ ಡ್ರೇಕನ ಜರ್ಮನ್ ರಾಯಭಾರಿಯವರು ಟರ್ಕಿಯಲ್ಲಿ ಭೇಟಿ ಮಾಡಿಕೊಂಡಿರುವರೆಂದು ಹೇಳಲಾಗಿದೆ.

ಪ್ರಜಾ ಸಂಖ್ಯೆ ಹೆಚ್ಚಿಸಲು ಮಕ್ಕಳಿಗೆ ಹೆಚ್ಚಿನ ಭತ್ಯ

ಬ್ರಿಟನ್ನಿನಲ್ಲಿ ಪ್ರಜಾಸಂಖ್ಯೆ ಕಡಿಮೆಯಾಗುತ್ತಿರುವುದರಿಂದಲೂ ಮತ್ತು ಇದರಿಂದ ಮುಂದೆ ಬ್ರಿ॥ ಸಾಮ್ರಾಜ್ಯದ ಅಭಿವೃದ್ಧಿಗೆ ಧಕ್ಕೆ ಬರಬಹುದೆಂಬ ಭೀತಿಯಿಂದ ಮಕ್ಕಳನ್ನು ಕಾಪಾಡಲು ಹೆಚ್ಚಿನ ಭತ್ಯ ಕೊಡಬೇಕೆಂದು ೮೭ ಮಂದಿ ಪಾರ್ಲಿಮೆಂಟ್ ಸದಸ್ಯರು ಮುಂದೆ ನಡೆಯಲಿರುವ ಪಾರ್ಲಿಮೆಂಟ್ ಸಭೆಯಲ್ಲಿ ಒಂದು ನಿರ್ಣಯವನ್ನು ತರಲಿರುವರು

ದೇಶದ ವಿಪತ್ತನ್ನು ಪರಿಹರಿಸಲು ನಿಧಿ

ದೇಶದಲ್ಲಿನ ವಿಪತ್ತನ್ನು ಪರಿಹರಿಸಲು ನೆರವಾಗುವುದಕ್ಕೆ ಅಹಮದಾಬಾದಿನ ಲಕ್ಷಾಧೀಶರು ಸಭೆಸೇರಿ, ೪ ಲಕ್ಷ ರೂ. ಧನ ಕೂಡಿಸಲು ಆಲೋಚನೆ ಮಾಡಿದ್ದಾರೆ

ಸಾಲೆರ್ನೋ ಕ್ಷೇತ್ರದಲ್ಲಿ ಭೀಕರ ಕದನ

ದಕ್ಷಿಣ ಇಟಲಿಯ ಸಾಲೆರ್ನೋ ಕ್ಷೇತ್ರದಲ್ಲಿ ಭೀಕರ ಕದನ ನಡೆಯುತ್ತಿದೆಯೆಂದು ಹೇಳಲಾಗಿದೆ. ಪಂಚಮ ಸೈನ್ಯವು ಆಕ್ರಮಿಸಿದ್ದ ಕೆಲವು ಭಾಗಗಳನ್ನು ಪುನಃ ಜರ್ಮನರು ವಶಪಡಿಸಿಕೊಂಡಿರುವರೆಂದು ವರದಿಯಾಗಿದೆ. ಮಿತ್ರರು ಬೇರಿ ನಗರವನ್ನು ಆಕ್ರಮಿಸಿದ್ದಾರೆ.

ನೇಪಲ್ಸಿನ ಉತ್ತರ ಮತ್ತು ದಕ್ಷಿಣಭಾಗದ ಪರ್ವತದಲ್ಲಿ ಜರ್ಮನ್ ಮತ್ತು ಇಟಾಲಿಯನ್ ಸೈನ್ಯಗಳು ಕದನ ನಡೆಸುತ್ತಿವೆಯೆಂದೂ ಟ್ರೈಸ್ಟ್ ಕ್ಷೇತ್ರದಲ್ಲೆಲ್ಲಾ ಉಗ್ರ ಕದನ ನಡೆಯುತ್ತಿದೆಯೆಂದೂ ಹೇಳಲಾಗಿದೆ

ಉತ್ತರ ಇಟಲಿಯಲ್ಲಿ ರೋಮೆಲ್‌ನ ಅಧಿಕಾರತ್ವ

ಉತ್ತರ ಇಟಲಿಯಲ್ಲವೂ ಜರ್ಮನಿ ಮಿಲಿಟರಿ ಅಧಿಕಾರಿಯಾದ ರೋಮೆಲ್‌ನ ಅಧಿಕಾರದಲ್ಲಿದೆಯೆಂದೂ ಹೇಳಲಾಗಿದೆ. ಜಿನೋವಾ ನಗರವನ್ನು ಜರ್ಮನರು ಆಕ್ರಮಿಸಿದ್ದಾರೆ. ಸ್ಲೋವಿಯಾ ದಕ್ಷಿಣಭಾಗವೆಲ್ಲ ಬಡೋಗ್ಲಿಯೋ ಸರ್ಕಾರದ ಅಧೀನದಲ್ಲಿದೆಯೆಂದೂ, ನೇಪಲ್ಸ್ ದಕ್ಷಿಣಭಾಗ ಮಿತ್ರರ ವಶದಲ್ಲಿದೆಯೆಂದು ಹೇಳಲಾಗಿದೆ

ಗ್ರೀಕ್ ಪಟ್ರಿಯಟ್ಸ್ ಸಂಸ್ಥೆಯ ರಚನೆ

ಗಡಿನಾಡಿನ ಗ್ರಾಮಾಂತರಗಳಲ್ಲಿ ... ಪಟ್ರಿಯಟ್ಸ್ ಎಂಬ ನೂತನ ಸಂಸ್ಥೆಯೊಂದು ಮುಸ್ಲಿಂ ಲೀಗಿನ ಆಶ್ರಯದಲ್ಲಿ ರಚಿತವಾಗಿದೆಯೆಂದೂ, ಈಗಾಗಲೇ ಇದಕ್ಕೆ ಸಾವಿರಾರು ಜನ ಸೇರಿರುವರೆಂದು ಹೇಳಲಾಗಿ

ವಿಮಾನ ಧಾಳಿಯಿಂದ ೩೭೨ ಮಂದಿ ಸಾವು ನೋವು

ಬ್ರಿಟನ್ನಿನಲ್ಲಿ ಶತ್ರು ವಿಮಾನ ಧಾಳಿಯಿಂದ ಆಗಸ್ಟ್ ತಿಂಗಳಲ್ಲಿ ೧೬೮ ಜನರು ಸತ್ತರೆಂದೂ ೨೦೪ ಜನಗಳಿಗೆ ಗಾಯವಾಯಿತೆಂದೂ ವರದಿಯಾಗಿದೆ.

ಪೆಸಿಫಿಕ್‌ನಲ್ಲಿ ಮಿತ್ರರ ಕಾರ್ಯಾಚರಣೆ

ಇಟಲಿ ಪತನದಿಂದ ಮೆಡಿಟರೇನಿಯನ್ ಕ್ಷೇತ್ರದಲ್ಲಿ ಶತ್ರು ಭಯ ಕಡಿಮೆಯಾಯಿತೆಂದೂ, ಆದರಿಂದ ಪೆಸಿಫಿಕ್ ಕ್ಷೇತ್ರದಲ್ಲಿ ಹೆಚ್ಚಿನ ನೌಕಾ ಕಾರ್ಯಾಚರಣೆ ಆರಂಭಿಸಬಹುದೆಂದು ಹೇಳಲಾಗಿದೆ. ಇಟಾಲಿಯನ್ ನೌಕೆಗಳನ್ನು ಉಪಯೋಗಿಸಲಾಗುವುದೆಂದೂ ವರದಿಯಾಗಿದೆ. ಈಗಾಗಲೇ ನಾಲ್ಕು ದ್ವೀಪ ಮತ್ತು ಇತರ ಜಪಾನ್ ಸ್ಥಾನಗಳ ಮೇಲೆ ಧಾಳಿ ಮಾಡಲಾಗುತ್ತಿದೆ.

ರೈಲ್ವೆಕಂಪನಿಯು ೩ ಲಕ್ಷ ರೂ. ಪರಿಹಾರ ದ್ರವ್ಯ ಕೊಡಬೇಕಾಯಿತು

ಬೊಂಬಾಯಿಯ ಭಾರಿ ವರ್ತಕರಾದ ನಗರ್‌ಮಲ್ ಜಿ ಎಂಬುವರ ಮಕ್ಕಳವರು ಬಿ ಬಿ ಅಂಡ್ ಸಿ ಐ ರೈಲ್ವೆ ಕಂಪನಿಯ ಮೇಲೆ ಇಪ್ಪತ್ತೊಂದೂವರೆ ಲಕ್ಷ ರೂ. ಗಳ ನಷ್ಟ ಮೊಕದ್ದಮೆಯನ್ನು ಹೂಡಿದ್ದರು. ೧೯೪೦ ನೇ ವರ್ಷದ ಮೇ ೧೪ ರಲ್ಲಿ ನಗರಮಲ್ ಜಿಯವರ ಪತ್ನಿ ಮತ್ತು ೩ ಮಕ್ಕಳು ಫ್ರಾಂಟಿಯರ್ ಮೇಲ್ ರೈಲುಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದಾಗ, ಇನ್ನೊಂದು ರೈಲುಗಾಡಿಗೆ ಡಿಕ್ಕಿ ಹೊಡೆದು ಅಪಘಾತವಾದ ಕಾರಣದಿಂದ ನಗರಮಲ್‌ರವರ ಪತ್ನಿ ಮತ್ತು ಅವರ ೪ ಮಕ್ಕಳು ಮರಣ ಹೊಂದಿದರೆಂದೂ, ಆದರಿಂದ ರೈಲ್ವೆ ಕಂಪನಿಯವರು ಅವರಿಗೆ ಪರಿಹಾರ ಕೊಡಬೇಕೆಂದು ನಷ್ಟ ಮೊಕದ್ದಮೆ ಹೂಡಿದ್ದರು. ಅದರಲ್ಲಿ ಬೊಂಬಾಯಿ ನ್ಯಾಯಸ್ಥಾನದವರು ೩ ಲಕ್ಷ ರೂ. ರೈಲ್ವೆ ಕಂಪನಿಯವರು ಕೊಡಬೇಕೆಂದು ಆಜ್ಞೆ ಮಾಡಿದ್ದಾರೆ

ಆಸ್ಟ್ರೇಲಿಯನ್ ಪಾರ್ಲಿಮೆಂಟ್ ಸಭೆಗೆ ಪ್ರಥಮ ಮಹಿಳೆ

ಆಸ್ಟ್ರೇಲಿಯನ್ ಪಾರ್ಲಿಮೆಂಟ್ ಸಭೆಗೆ ಡೇಮ್ ಎನಿಡ್ ಲಿಯಾನ್ಸ್ ಎಂಬ ಮಹಿಳೆ ಚುನಾಯಿತರಾಗಿರುವರು. ಈ ಪಾರ್ಲಿಮೆಂಟ್ ಸಭೆಗೆ ಇದೇ ಮೊದಲನೆಯ ಮಹಿಳೆಯೆಂದು ಹೇಳಲಾಗಿದೆ

ಬರ್ನಾರ್ಡ್ ಷಾ ಪತ್ನಿಯವರ ನಿಧನ

ಸುಪ್ರಸಿದ್ಧ ಗ್ರಂಥಕರ್ತರಾದ ಬರ್ನಾರ್ಡ್ ಷಾರವರ ಪತ್ನಿಯವರು ಶನಿವಾರ ನಿಧನರಾದರು.

ಮುಸೋಲಿನಿ ಸ್ವತಂತ್ರ

ಮುಸೋಲಿನಿ ಹಿಂದಿನ ಸ್ಥಾನಕ್ಕೆ ... ಫ್ಯಾಸಿಸ್ಟ್ ಮುಸೋಲಿನಿಯು ಜರ್ಮನಿಗೆ ಬಂದಿರುವನೆಂದು ಬರ್ಲಿನ್ ವಾರ್ತೆ ತಿಳಿಸುತ್ತದೆ.

ಉತ್ತರ ಭಾರತಕ್ಕೆ ಪ್ರಯಾಣ

ಬೆಂಗಳೂರು ೧೪

ಸಿವಿಲ್ ಸಪ್ಲೈ ಡೈರೆಕ್ಟರ ಆಫೀಸಿನ ವಿ.. ಅಬೂಬೇಕರ್‌ರವರು ಬೊಂಬಾಯಿಗೆ ಈ ದಿನ ಪ್ರಯಾಣಮಾಡಿದರು. ಬೇರೆ ಪ್ರಾಂತ್ಯಗಳಿಂದ ಮೈಸೂರಿಗೆ ಬೇಸಿಗೆ ಪ್ಲಾನಿನಪ್ರಕಾರ ಬರುವ ಪದಾರ್ಥಗಳ ಬಗ್ಗೆ ವ್ಯವಸ್ಥೆ ಮಾಡಲು, ಮಧ್ಯಪ್ರಾಂತ್ಯ, ಸಿಂದ್, ಪಂಜಾಬ, ಸಂಯುಕ್ತ ಪ್ರಾಂತ್ಯಗಳಿಗೆ ಭೇಟಿಕೊಡುವರು.

ಕಳ್ಳನ ದಸ್ತಗಿರಿ

ತರೀಸ್ಕಾ ರೋಡಿನಲ್ಲಿರುವ ನೂಲಿನ ವರ್ತಕರಾದ ಪರ್ತಬ್‌ಮಲ್‌ರವರ ಅಂಗಡಿಗೆ ಹೋಗಿ ವ್ಯಾಪಾರ ಮಾಡುವವನಂತೆ ನಟಿಸಿ, ವ್ಯಾಪಾರದ ಸೋಗಿನಲ್ಲಿ ನೂಲಿನ ಕಟ್ಟನ್ನು ಅಪಹರಿಸಿ ಪರಾರಿಯಾಗ ... ಮಹಮದ್ ... ಎಂಬುವವನನ್ನು ಪೋಲೀಸರು ದಸ್ತಗಿರಿ ಮಾಡಿದರು.

ಹೊಡೆದಾಟದಿಂದ ಮರಣ

ಬೆಂಗಳೂರು. ತಾ|| ಬೇಗೂರಿನಲ್ಲಿ ಎರಡು ಪಂಗಡದವರಿಗೆ ಹೊಡೆದಾಟವಾಗಿ ಅಂತೋಣಪ್ಪ ಎಂಬುವನು ಮರಣ ಹೊಂದಿದನೆಂದೂ, ಅನೇಕರಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ.

ಕೂಲಿಗಾರರ ಮೊರೆ

ಚನ್ನಪಟ್ಟಣದ ಗಣಿಯ ಮಾಲೀಕರು ... ಕೂಲಿಗಾರರು ದಿವಾನರನ್ನು ಭೇಟಿ ಮಾಡಿ, ತಮಗೆ ಹೆಚ್ಚಿನ ತುಟ್ಟಿಭತ್ಯ ಕೊಡಿಸಬೇಕೆಂದೂ, ಇಂಡಸ್ಟ್ರಿಯಲ್ ಕೋರ್ಟ್ ಸ್ಥಾಪಿತವಾಗಬೇಕೆಂದೂ ಕೋರಿದರು. ಸಮಾಧಾನಕರವಾದ ಪರಿಶೀಲಿಸಲಾಗುವುದೆಂದು ದಿವಾನರು ಭರವಸೆಯಿತ್ತರು.

ಜಾತ್ರೆಯಲ್ಲಿ ಜನ ಸೇರಕೂಡದು

ಕೋಳ್ಕಿಗ್ರಾಮದ ೧೦ ಹಳ್ಳಿಗಳಲ್ಲಿ ಕಾಲರಾ ಬಲವಾಗಿರುವುದರಿಂದ ಈ ವರ್ಷ ನಡೆಯಲಿರುವ ವಸ್ತುಪ್ರದರ್ಶನ ಜಾತ್ರೆಯಲ್ಲಿ ೫೦ ಮಂದಿಗಿಂತ ಹೆಚ್ಚಾಗಿ ಜನ ಸೇರಕೂಡದೆಂದು ಸರ್ಕಾರದ ಆಜ್ಞೆಯಾಗಿದೆ.

ಯುದ್ಧೋದ್ಯಮಕ್ಕೆ ಯಂತ್ರ ಕುಶಲರು

ಬೊಂಬಾಯಿ ಪ್ರಾಂತ್ಯದಲ್ಲಿ 'ಬೆವಿನ್' ತರಬೇತಿ ... ಜನ ಯಂತ್ರ ಕುಶಲರನ್ನು ಯುದ್ಧಕ್ಕೆ ಒದಗಿಸಲಾಗಿದೆಯೆಂದೂ, ಟ್ರೈನಿಂಗ್ ಕೇಂದ್ರಗಳಲ್ಲಿ ಇನ್ನೂ ... ಮಂದಿ ತರಬೇತು ಹೊಂದುತ್ತಿರುವರೆಂದು ಪ್ರಕಟವಾಗಿದೆ.

ಮುಸೋಲಿನಿ ಫ್ಯಾಸಿಸ್ಟ್ ಅಧಿಕಾರ ವಹಿಸಿದ

ಜರ್ಮನಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಫ್ಯಾಸಿಸ್ಟ್ ಸರ್ಕಾರದ ಅಧಿಕಾರವನ್ನು ಮುಸೋಲಿನಿ ಸ್ವೀಕರಿಸಿರುವುದಾಗಿ ಬರ್ಲಿನ್ ರೇಡಿಯೋ ತಿಳಿಸುತ್ತದೆ.

ಮುಸೋಲಿನಿ ನೆಲಸಿರುವ ಸ್ಥಳ ಗೊತ್ತಿಲ್ಲ

ಮುಸೋಲಿನಿಯನ್ನು ರಕ್ಷಿಸಿದನೆಂಬ ಜರ್ಮನ್ ವಾರ್ತೆಯು ದೃಢಪಟ್ಟಿಲ್ಲ. ಆಲ್ಲದೆ ಮುಸೋಲಿನಿಯನ್ನು ರಕ್ಷಣೆ ಮಾಡಿದ ಸಂದರ್ಭದಲ್ಲಿ ಪ್ರಮುಖ ಫ್ಯಾಸಿಸ್ಟರನ್ನೂ ಸಹ ಬಿಡುಗಡೆ ಮಾಡಲಾಯಿತೆಂದು ಜರ್ಮನರು ಹೇಳಿದ್ದರೂ ಅವರ ಹೆಸರುಗಳನ್ನು ಪ್ರಕಟಿಸಿಲ್ಲ. ಮುಸೋಲಿನಿ ಎಲ್ಲಿ ಬಂಧಿತರಾಗಿದ್ದರೆಂಬುದನ್ನೂ ಅವರು ತಿಳಿಸಿಲ್ಲ ಮತ್ತು ಲಂಡನ್ನಿನಲ್ಲೂ ಈ ವಿಚಾರ ಯಾರಿಗೂ ಗೊತ್ತಿರುವುದಿಲ್ಲ.

ಕ್ರೆಮೋನಾ ನಗರದಲ್ಲಿ ಮುಸೋಲಿನಿ

ಮುಸೋಲಿನಿಯು ಕ್ರೆಮೋನಾ ಎಂಬ ನಗರಕ್ಕೆ ತೆರಳಿರುವನೆಂದೂ ಅಲ್ಲಿ ಜರ್ಮನರಿಂದ ಸ್ಥಾಪಿತವಾಗಿರುವ ಫ್ಯಾಸಿಸ್ಟ್ ಸರ್ಕಾರದ ಅಧಿಕಾರವನ್ನು ವಹಿಸಿಕೊಂಡಿರುವನೆಂದೂ ಕೇಳಲಾಗಿದೆ.

---

೧೯ ಶತ್ರು ಹಡಗುಗಳು ಮುಳುಗಿತು

ಉತ್ತರ ಫ್ರಾನ್ಸ್ ಮೇಲೆ ಬ್ರಿಟಿಷ್ ವಿಮಾನಗಳು ಧಾಳಿಮಾಡಿವೆ. ಡಚ್ ತೀರದಾಚೆ ಶತ್ರು ಹಡಗುಗಳ ಮೇಲೆ ಧಾಳಿ ಮಾಡಿ, ೧೯ ಜರ್ಮನ್ ಹಡಗುಗಳನ್ನು ಮುಳುಗಿಸಲಾಯಿತು.

ಕ್ರೀಟ್‌ಮೇಲೆ ದಂಡಯಾತ್ರೆ

ಕೈರೋದಿಂದ ಗ್ರೀಕ್ ಪಟಿವರು ತಮ್ಮ ಜನಗಳಿಗೆ ಎಚ್ಚರಿಕೆ ಕೊಡುತ್ತಾ, ಜರ್ಮನರ ಮೇಲೆ ಗ್ರೀಸಿನಲ್ಲೇ ನಡೆಸುವ ಯುದ್ಧಕ್ಕೆ ಸಿದ್ಧರಾಗಬೇಕೆಂದೂ, ಕ್ರೀಟ್ ವಿಮಾನ ನೆಲೆಗಳ ಮೇಲೆ ದಂಡಯಾತ್ರೆ ಮಾಡುವುದು ಸಿದ್ಧವೆಂದೂ ಹೇಳಿದ್ದಾರೆ.

ಸಾಲಮೋವಾದಿಂದ ಜಪಾನರ ಓಟ

ಆಸ್ಟ್ರೇಲಿಯಾ ಮತ್ತು ಅಮೇರಿಕ ಸೇನೆಗಳು ಸಾಲಮೋವಾವನ್ನು ವಶಪಡಿಸಿಕೊಂಡಿವೆ. ಅಲ್ಲಿದ್ದ ಜಪಾನ ಸೈನ್ಯ ಪಡೆಗಳು ಭಾರಿ ಶಸ್ತ್ರಾಸ್ತ್ರಗಳನ್ನು ಮತ್ತು ಯಂತ್ರ ... ಗಳನ್ನು ಬಿಟ್ಟು ಓಡಿವೆ.

ಕಲ್ಕತ್ತಾದ ಪರಿಸ್ಥಿತಿ

ಕಲ್ಕತ್ತಾ ನಗರದ ಬೀದಿಗಳಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿದ್ದ ೧೩೭ ಮಂದಿಯನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅದರಲ್ಲಿ ೩೯ ಮಂದಿ ಮರಣಹೊಂದಿದರು.

ಬಂಗಾಳ ಕ್ಷಾಮ ನಿಧಿಗೆ ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯವರು ೫೦ ಲಕ್ಷ ರೂ.ಗಳ ಚಂದಾ ವಸೂಲ್ಮಾಡಿದ್ದಾರೆ. ಮುಸ್ಲಿಂ ವಾಣಿಜ್ಯ ಸಂಸ್ಥೆಯವರು ಇದುವರೆಗೆ, ೧,೦೭,೦೦೦ ರೂ ಗಳನ್ನು ಸಂಗ್ರಹಿಸಿದ್ದಾರೆ. ಬಂಗಾಳದ ೫೦೦ ಮುಸ್ಲಿಂ ಅನಾಥರಿಗೆ ಪಂಜಾಬ್ ಮುಸ್ಲಿಂ ಲೀಗಿನವರು ಸೌಕರ್ಯ ಒದಗಿಸಲು ಒಪ್ಪಿದ್ದಾರೆ. ಕಲ್ಕತ್ತಾ ನಗರದಲ್ಲಿ ಅನಾಥಾಲಯದಲ್ಲಿ ೨೦೦ ಮಕ್ಕಳು ಸಾಯುತ್ತಾ ಇರುವರು.

ನವಖಾಲಿಯ ಭೀಕರ ಸ್ಥಿತಿ

ಬಂಗಾಳ ಪ್ರಾಂತ್ಯದ ನವಖಾಲಿಯಲ್ಲಿ ಗಂಡಸರೂ, ಹೆಂಗಸರೂ, ಮಕ್ಕಳೂ ಅಧಿಕ ಸಂಖ್ಯೆಗಳಲ್ಲಿ ರಸ್ತೆಗಳಲ್ಲಿ ಬಿದ್ದು ಸಾಯುತ್ತಿದ್ದಾರೆ. ಮಧ್ಯಮ ತರಗತಿಯ ಜನಗಳು ಮನೆಗಳಲ್ಲಿ ಬಾಗಿಲು ಹಾಕಿಕೊಂಡು ತಮ್ಮನ್ನು ಸಹಿಸಲಾರದ ಹಸಿವಿನ ದೆಸೆಯಿಂದ ಬದುಕಿಸಬೇಕೆಂದು ಭಗವಂತನನ್ನು ಪ್ರಾರ್ಥಿಸುತ್ತಿದ್ದಾರೆ. ಮೊನ್ನೆ ದಿವಸ ೧೫ ಮಂದಿ ಹೊಟ್ಟೆಗಿಲ್ಲದೆ ಸತ್ತರು. ಶವಸಂಸ್ಕಾರವು ಒಂದು ದೊಡ್ಡ ಸಮಸ್ಯೆಯಾಗಿ ಸರಿಯಾಗಿ ಶವವನ್ನು ಹೂಳಲು ಆಗದೆ ಸುಡಲು ಸಾಧ್ಯವಿಲ್ಲದೆ ನದಿಗೆ ಎಸೆಯುತ್ತಿರುವ ಸಂಖ್ಯೆ ಅಧಿಕವಾಗಿದೆ.

ಸಾಯುವ ಮನುಷ್ಯನನ್ನು ನರಿ ಕಚ್ಚಿತು

ಬಂಗಾಳದ ಬೋಗ್ರಾ ಜಿಲ್ಲೆ ಎಂಬ ನಗರದಲ್ಲಿ ಹಸಿವಿನಿಂದ ನರಳುತ್ತಾ ಬೀದಿಯಲ್ಲಿ ಸಿಕ್ಕಿಹಾಕಿಕೊಂಡು ಬಿದ್ದಿದ್ದ ಒಬ್ಬ ಮನುಷ್ಯನ ಕಾಲನ್ನು ನರಿಯು ಕಡಿದು ತಿನ್ನುತ್ತಿದ್ದಾಗ, ಅವನ ಕೂಗುವ ಧ್ವನಿ ಕೇಳಿ ಜನರು ಬಂದು ನರಿಯನ್ನು ಓಡಿಸಿದರೆಂದೂ, ಆದರೆ ಅವನು ಅಲ್ಲಿಯೇ ಸತ್ತುಹೋದನೆಂಬ ಒಂದು ಭೀಕರ ಪ್ರಸಂಗ ವರದಿಯಾಗಿದೆ.

...

ಆ ಕಾ ಶ ವಾ ಣಿ

ಸೆಪ್ಟೆಂಬರ್ ೧೬ ನೇ ಗುರುವಾರ

...ಗಂಟೆ ನಾಗಸ್ವರ : ಪಿಟೀಲು ...

ಕ್ರೋಟೋನ್ ಆಕ್ರಮಣ

ಇಟಲಿ ಪೂರ್ವತೀರದಲ್ಲಿರುವ ಮುಖ್ಯ ಬಂದರೂ, ರೈಲ್ವೆ ಜಂಕ್ಷನ್ನೂ ಆದ ಕ್ರೋಟೋನನ್ನು ಬ್ರಿಟಿಷ್ ಅಷ್ಟಮ ಸೈನ್ಯ ಆಕ್ರಮಿಸಿಕೊಂಡಿದೆ.

ದಕ್ಷಿಣ ಇಟಲಿ ಸಾಲೆರ್ನೊ ಕ್ಷೇತ್ರದಲ್ಲಿರುವ ಗುಡ್ಡಗಾಡು ಪ್ರದೇಶಗಳ ಮೇಲೆ ಮಿತ್ರಪಕ್ಷದ ನೌಕೆಗಳು ತೋಪುಗಳನ್ನು ಹಾರಿಸುತ್ತಿವೆ. ಆ ಪ್ರದೇಶದಲ್ಲಿ ಉಗ್ರ ಯುದ್ಧಗಳು ನಡೆಯುತ್ತಿವೆ.

ಜರ್ಮನ್ ಕಾನ್ವಾಯ್ ಮೇಲೆ ಧಾಳಿ

ಇಟಾಲಿಯನ್ "ಇ" ಬೋಟುಗಳು ಈಜಿಯನ್ ಸಮುದ್ರ ಎಲ್ಬಾ ದ್ವೀಪಗಳ ಸಮೀಪ ಹೋಗುತ್ತಿದ್ದ ಜರ್ಮನ್ ಕಾನ್ವಾಯ್ ಮೇಲೆ ಧಾಳಿಮಾಡಿದುವೆಂದೂ ಜರ್ಮನರ ೬ "ಇ" ಬೋಟುಗಳನ್ನೂ, ೧ ಡಿಸ್ಟ್ರಾಯರನ್ನು ಮುಳುಗಿಸಿದರೆಂದೂ ವರದಿಯಾಗಿದೆ.

ಬ್ರಿಯಾನ್ಸ್ಕ್‌ನಲ್ಲಿ ರಷ್ಯನರ ಮುಂದೋಟ

ರಷ್ಯನ್ ಸೈನ್ಯದ ಪಡೆಗಳು ಮಾಸ್ಕೋವಿನ ನೈರುತ್ಯದಲ್ಲಿರುವ ಕೀವ್ ಮಾರ್ಗದಲ್ಲಿ ಬ್ರಿಯಾನ್ಸ್ಕ್ ನಗರ ಒಬಾವನಗೆ ಸಾಗ್ಗಿವೆ. ಈಚೆಗೆ ಸಾಗಿ ಬರುವಾಗ ೩ ರೈಲ್ವೆ ಜಂಕ್ಷನ್‌ಗಳನ್ನು ವಶಪಡಿಸಿಕೊಂಡು ೩ ಸಾವಿರ ಜರ್ಮನರನ್ನು ಸಂಹಾರಮಾಡಿವೆ.

ಶ್ರೀ ಹಾರ್ನಿಮನ್ನರ ಬಂಧನ

ಕೋರ್ಟಿಗೆ ಅವಮಾನ ಮಾಡಿದ ಆಪಾದನೆ ಮೇಲೆ ಅಲಹಾಬಾದ್ ಹೈಕೋರ್ಟಿನವರು ಹೊರಡಿಸಿದ ವಾರಂಟಿನ ಮೇಲೆ ಬೊಂಬಾಯಿನ "ಬಾಂಬೆ ಸೆಂಟಿನಲ್" ಪತ್ರಿಕೆ ಸಂಪಾದಕರಾದ ಶ್ರೀ. ಹಾರ್ನಿಮನ್ನರನ್ನು ದಸ್ತಗಿರಿ ಮಾಡಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

RETURN TICKET T
RADIANT YOUTH
AT
New Royal
Dispensary
Ashoka Road, Mysore.

Edited, printed and published by A. R. Nagaraj at the Sadhvi Press, D. Subbiah Road, Mysore.

ಶ್ರೀ ಯು ರ ಪ ಕಾ ಫಿ ಯ ರ್ ಕ್ಸಾ ಗಿ

... ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಸ್ವಾಮಯ್ಯ ಏನಸಿಸಮಂಡಿ, ದೇವರಾಜ ಮಾರ್ಕೆಟ್, ಮೈಸೂರು

... ವಿಕ್ಟೋರಿಯಾ ... ಸಕ್ಕರೆ, ಬೆಲ್ಲ, ಕಲ್ಲುಸಕ್ಕರೆ ... ಸಗಟು ಮತ್ತು ಚಿಲ್ಲರೆ ಧಾನ್ಯ ... ಆಕ್ಸಿಯೂ ಮತ್ತು ... ದರ ... ಸಿಗುತ್ತದೆ.

ಬಂಗಾಳದ ಕ್ಷಾಮ ನಿವಾರಣ ಸಹಾಯ ನಿಧಿಗೆ

ವಿ ವಿ ಧ ವಿ ನೋ ದಾ ವ ಳಿ

ಶಿವರಾಮ ಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ

16-9-43 ನೇ ಗುರುವಾರ ಸಂಜೆ 7 ಘಂಟೆಗೆ

FROM 15-9-43 Daily 3 shows

Thief of Bagdad (in magic Technicolor)

with MYSORE SABU

AT NEW OPERA TALKIES

Next Change— "SHARADA" in Hindi

ಸಂಪುಟ ೨]   ಗುರುವಾರ ೧೬—೯—೪೩   [ಸಂಚಿಕೆ ೫೫

ನೂತನ ದಂಡಯಾತ್ರೆ ಸೂಚನೆ

ಆಗ್ನೇಯ ಯೂರೋಪಿನ ಮುತ್ತಿಗೆಯನ್ನು ಬಲ್ಗೇರಿಯರು ಎದುರಿಸುವರೇ ?

ಸಿರಿಯಾ-ಪ್ಯಾಲಸ್ಟೈನ್ ತೀರದಲ್ಲಿ ಮಿತ್ರನೌಕಾ ಕಾರ್ಯಾಚರಣೆ

೨೩ ಗಾಡಿಗಳನ್ನು ಹಿಡಿದು ಹಾಕಲಾಗಿದೆ

ಮೈಸೂರು ೧೬

ನಿನ್ನೆ ಸಂಜೆ ಶ್ರೀರಂಗಪಟ್ಟಣದ ರಸ್ತೆಯಲ್ಲಿ ೧೫ ಪುರಿ ಮತ್ತು ಇತರ ದವಸ ಧಾನ್ಯಗಳನ್ನು ರಹದಾರಿ ಇಲ್ಲದೆ ತೆಗೆದುಕೊಂಡು ಹೋಗುತ್ತಿದ್ದರೆಂದು ೨೫ ಗಾಡಿಗಳನ್ನು ನಂಜಿ ಪೋಲೀಸ್ ಸ್ಟೇಷನ್ನಲ್ಲಿ ಹಿಡಿದು ಹಾಕಲಾಗಿದೆ.

ಶ್ರೀ ನವನೀತಂರವರು ಐ.ಜಿ.ಪಿ. ಗಳೇ ?

ಪೋಲೀಸ್ ಇಲಾಖೆ ಮುಖ್ಯಾಧಿಕಾರಿಗಳಾದ ಮಿ॥ ಎ. ಎ. ಖಾನರವರು ಹುದ್ದೆಯಿಂದ ನಿವೃತ್ತಿಯಾಗುವುದಕ್ಕೆ ಮುಂಚೆ, ಅಕ್ಟೋಬರ್ ೨೫ ರಿಂದ ೩ ತಿಂಗಳು ರಜ ತೆಗೆದುಕೊಳ್ಳುವರೆಂದೂ, ಅವರ ಸ್ಥಾನದಲ್ಲಿ ಶ್ರೀ ಎಂ. ನವನೀತಂ ನಾಯ್ಡುರವರನ್ನು ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ಬಂಗಾಳ ಪರಿಹಾರ ನಿಧಿ

ಬಂಗಾಳ ಕ್ಷಾಮ ನಿವಾರಣೆಗಾಗಿ ಮೈ॥ ಸಂಸ್ಥಾನ ಜನ ಕ್ಷಾಮ ನಿವಾರಣ ನಿಧಿಗೆ ತಾ॥ ೧೫—೯—೪೩ ರವರೆಗೆ ೩,೮೧೭—೧—೧೦ ರೂ. ವಸೂಲಾಗಿದೆ.

ಪ್ರ॥ ಪ್ರ॥ ಸಭೆ

ಪ್ರಜಾ ಪ್ರತಿನಿಧಿ ಸಭೆ ಅಕ್ಟೋಬರ್ ೭ ನೇ ತಾ॥ ನಿಂದ ಪ್ರಾರಂಭವಾಗ ವುದು.

ಗಣಪತಿ ಮಂಗಳಾರತಿ

ಸದ್ವಿದ್ಯಾ ಪಾಠಶಾಲೆಯಲ್ಲಿ ನಿನ್ನೆ ಸಂಜೆ ವಿದ್ಯಾಗಣಪತಿ ಮಂಗಳಾರತಿ ವಿಜೃಂಭಣೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ಈ ಶಾಲೆಯ ಪ್ರಾಕ್ತನ ವಿದ್ಯಾರ್ಥಿಯಾದ ಧರ್ಮಪ್ರವರ್ತಕ ಎ ಎಸ್. ರಂಗಸ್ವಾಮಿ ಅಯ್ಯಂಗಾರ್ಯರವರು ಹುಡುಗರಿಗೆ ದೇವತಾಭಕ್ತಿ, ಗುರುಭಕ್ತಿ ಮತ್ತು ಸತ್ಸಂಗ ಇವುಗಳ ವಿಷಯದಲ್ಲಿ ಬುದ್ಧಿವಾದ ಪೂರ್ವಕವಾದ ಸಣ್ಣ ಉಪನ್ಯಾಸ ಕೊಟ್ಟರು

— •

ಮಿತ್ರ ಸೈನ್ಯದ ಗುಪ್ತ ದಂಡಯಾತ್ರೆ

ಮಿತ್ರರ ೯ ನೇ ಸೈನ್ಯವು ನೂತನ ದಂಡಯಾತ್ರೆ ನಡೆಸಲು ಗುಪ್ತವಾದ ಸ್ಥಳಕ್ಕೆ ಹೊರಟಿದೆಯೆಂದೂ, ಈಗ ಕೆಲವು ದಿವಸಗಳಿಂದ ಸಿರಿಯಾ ಮತ್ತು ಪ್ಯಾಲೆಸ್ಟೈನ್ ತೀರಪ್ರದೇಶಗಳಲ್ಲಿ ಹೆಚ್ಚಿನ ನೌಕಾ ಕಾರ್ಯಾಚರಣೆ ನಡೆಯುತ್ತಿದೆಯೆಂದೂ, ಸಾಕ್ಷ್ಯಾಂದ ಸುದ್ದಿ ಹೊರಟಿದೆ. ಇವುಗಳಲ್ಲೇ ಅತಿ ಮುಖ್ಯವಾದ ಒಂದು ಸುದ್ದಿ ದೊರೆತಿಲ್ಲವೆಂದು ಅಲ್ಜಿಯರ್ಸ್ ರೇಡಿಯೋ ತಿಳಿಸುತ್ತದೆ.

———

ಲೋಡ್ಸ್ ನಗರವನ್ನು ನಾಜಿಗಳು ನಾಶಪಡಿಸಿದರು

ಇಟಲಿ ಶರಣವಾದ ಕೇವಲ ಒಂದು ಗಂಟೆಯೊಳಗಾಗಿ ಡೊಡಕನೀಸ್‌ನಲ್ಲಿರುವ ಲೋಡ್ಸ್ ಪಟ್ಟಣದ ಮೇಲೆ ಜರ್ಮನರು ಪ್ರಬಲವಾದ ಧಾಳಿ ನಡೆಸಿ, ಮುಖ್ಯಾಲು ಕಟ್ಟಡಗಳನ್ನೆಲ್ಲಾ ನಾಶ ಮಾಡಿರುವರೆಂದೂ ಅನೇಕ ಜನರು ಸತ್ತುಹೋದರೆಂದೂ ವರದಿಯಾಗಿದೆ.

ಇಟಲಿಯಲ್ಲಿ ೫೦ ಡಿವಿಜನ್ ಜರ್ಮನ್ ಸೈನ್ಯ

ಇಟಲಿಯಲ್ಲಿ ೫೦ ಜರ್ಮನ್ ಡಿವಿಜನ್ ಸೈನ್ಯ ಇರುವುದೆಂದೂ ಅಲ್ಲಿ ಸ್ಥಿತಿಯೊಂದು ಕಾಣಲಿಕ್ಕೂ ಬಿಡದೆ ಜರ್ಮನರು ಹೋರಾಡುವರೆಂದೂ ಅಮೆರಿಕನ್ ವಾರ್ತೆ ತಿಳಿಸುತ್ತದೆ.

ಬಡೋಗ್ಲಿಯೋ ಉತ್ತರ ಆಫ್ರಿಕಾದಲ್ಲಿರುವರೇ ?

ವಿಕ್ಟರ್ ಎಮ್ಯಾನುಯಲ್ ದೊರೆಗಳು ಮತ್ತು ಮಾರ್ಷಲ್ ಬಡೋಗ್ಲಿಯೋರವರು ರೋಂ ನಗರದಿಂದ ತಪ್ಪಿಸಿಕೊಂಡು ಹೋಗಲು ಬಹಳ ಸಾಹಸಪಡಬೇಕಾಯಿತೆಂದೂ ಜರ್ಮನ್ ಸೈನ್ಯ ಅಲ್ಲಿಗೆ ಬರುವುದರೊಳಗಾಗಿ ಪಾಲರ್ಮೋಕ್ಕೆ ವಿಮಾನದಿಂದ ಹೊರಟರೆಂದೂ ಈಗ ಅವರುಗಳು ಉತ್ತರ ಆಫ್ರಿಕಾದಲ್ಲಿರಬಹುದೆಂದೂ ಹೇಳಲಾಗಿದೆ

———

ಸಾಲೆರ್ನೋದಲ್ಲಿ ಭೀಕರಕದನ

ದಕ್ಷಿಣ ಇಟಲಿಯ ಸಾಲೆರ್ನೋ ಕ್ಷೇತ್ರದಲ್ಲಿ ಭೀಕರ ಕದನ ನಡೆಯುತ್ತಿದೆಯೆಂದೂ, ಜರ್ಮನ್ ಟ್ಯಾಂಕ್ಸ್ ಮತ್ತು ಸಿಪಾಯಿದಳವು ಹೆಚ್ಚು ಹೆಚ್ಚಾಗಿ ಬರುತ್ತಿರುವುದೆಂದೂ ಹೇಳಲಾಗಿದೆ. ಮಿತ್ರರ ವಿಮಾನಗಳೂ ಮತ್ತು ನೌಕಾ ಪಡೆಗಳೂ ಆ ಕ್ಷೇತ್ರದಲ್ಲಿ ಹೆಚ್ಚಾಗಿ ಪಾತ್ರ ವಹಿಸುತ್ತಿರುವುದೆಂದೂ ವರದಿಯಾಗಿದೆ

ಇಟಾಲಿಯನ್ ಕಮ್ಯಾಂಡರ್ ಕೈಸೆರೆ

ಬಾಲ್ಕನ್ಸಿನ ಇಟಾಲಿಯನ್ ಮುಖ್ಯ ಕಮ್ಯಾಂಡರಾದ ಜ॥ ರೋಸಿ ಮತ್ತು ಜನರಲ್ ಟರಣರವರನ್ನು ಜರ್ಮನ್ ಪ್ಯಾರಾಚೂಟ್ ಸೈನ್ಯವು ಟಿರಾನಾದಲ್ಲಿ ಕೈಸೆರೆ ಹಿಡಿದಿದೆಯೆಂದು ವರದಿಯಾಗಿದೆ.

ಜರ್ಮನ್ ಸೈನಿಕರ ನಾಶ

ಸ್ಯಾಲರ್ನೋ ಪಶ್ಚಿಮದಲ್ಲಿ ನಡೆದ ಕದನದಲ್ಲಿ ೧,೫೦೦ ಜರ್ಮನರನ್ನು ಕೊಲೆಮಾಡಲಾಯಿತೆಂದೂ, ಬ್ರಿಟಿಷ್‌ರ ಸ್ಪೈಫೈರ್ ಜಂಕರ್ಸ್ ೩ ಸಾವಿರ ಜರ್ಮನ್ ಸೈನಿಕರನ್ನು ಸಿದ್ದುಮಾಡಲಾಯಿತೆಂದು ಹೇಳಲಾಗಿದೆ

ಯೂರೋಪ್ ಕೋಟೆಗಳನ್ನು ಬಲಪಡಿಸಲಾಗಿದೆ

ಬಾಲ್ಕನಿಗೆ ಯುದ್ಧವು ಅತಿ ಹತ್ತಿರಬರುತ್ತಿರುವುದರಿಂದ ಯೂರೋಪಿನ ಕೋಟೆ ಕೊತ್ತಲಗಳನ್ನೆಲ್ಲಾ ಹಿಟ್ಲರನು ಬಲಪಡಿಸುತ್ತಿರುವನೆಂದು ಹೇಳಲಾಗಿದೆ. ಯುಗೋಸ್ಲೇವಿಯಾದಲ್ಲಿ ಸೈನ್ಯಕ್ಕೆ ಸೇರಬೇಕೆಂದು ಒತ್ತಾಯಮಾಡಿ ಜನಗಳನ್ನೆಲ್ಲಾ ಮಿಲಿಟರಿ ಶಿಬಿರಕ್ಕೆ ಕಳಿಸಲಾಗುತ್ತಿದೆಯೆಂದು ಹೇಳಲಾಗಿದೆ

ಬೆಲ್‌ಗ್ರೇಡ್ ಮತ್ತು ಜೆಗ್ರೆಬ್‌ಗಳಲ್ಲಿರುವ ಇಟಾಲಿಯನ್ ಸೈನಿಕರನ್ನು ಜರ್ಮನರು ನಿಶಸ್ತ್ರರನ್ನಾಗಿ ಮಾಡಲು ಪ್ರಯತ್ನಿಸಿದುದರಿಂದ ಉಗ್ರಕದನ ನಡೆಯುತ್ತಿದೆಯೆಂದು ಮತ್ತು ಬಲ್ಗೇರಿಯಾಕ್ಕೆ ಹೆಚ್ಚಿನ ಜರ್ಮನ್ ಸೈನ್ಯ ಕಳುಹಿಸಲಾಗುತ್ತಿದೆಯೆಂದು ವರದಿಯಾಗಿದೆ.

ಆಗ್ನೇಯ ಯೂರೋಪಿನ ಮುತ್ತಿಗೆ ಎದುರಿಸಲಾಗುವುದು

ಆಗ್ನೇಯ ಯೂರೋಪಿನಲ್ಲಿ ಬ್ರಿ॥ ಮತ್ತು ಅಮೆರಿಕನ್ ಸೈನ್ಯ ಇಳಿಸುವುದನ್ನು ಬಲ್ಗೇರಿಯನ್ನರು ವಿರೋಧಿಸಿ ತಡೆಗಟ್ಟುವರೆಂದೂ, ಆದರೆ ರಷ್ಯನ್ ಸೈನ್ಯವು ಬಲ್ಗೇರಿಯಾಕ್ಕೆ ಮೊದಲು ಬಂದರೆ ಅವರೊಡನೆ ಕದನ ನಡೆಸುವುದಿಲ್ಲವೆಂದೂ, ಬಲ್ಗೇರಿಯಾ ರೀಜೆಂಟ್‌ರವರು ಜರ್ಮನರಿಗೆ ತಿಳಿಸಿರುವರೆಂದೂ ಟರ್ಕಿ ಸುದ್ದಿಗಾರರ ತಿಳಿಸುತ್ತಾರೆ

———

ರೋಂ ನಗರದ ರಸ್ತೆಗಳಲ್ಲಿ ಭೀಕರ ಕದನ

ರೋಂ ನಗರದಲ್ಲಿ ಜರ್ಮನ್ ಮತ್ತು ಇಟಾಲಿಯನ್ನರಿಗೆ ರಸ್ತೆಗಳಲ್ಲಿ ಉಗ್ರ ಕದನ ನಡೆಯುತ್ತಿದೆಯೆಂದು ವರದಿಯಾಗಿದೆ

ಇಟಲಿಯ ಎಲ್ಲಾ ಪ್ರದೇಶಗಳಲ್ಲೂ ಜರ್ಮನರನ್ನು ಇಟಾಲಿಯನ್ನರು ವಿರೋಧಿಸುತ್ತಿರುವರು.

ಜರ್ಮನ್ ಸಬ್ ಮೆರೀನ್ ಹಾವಳಿ

ಮೆಡಿಟರೇನಿಯನ್ ಸಮುದ್ರದಲ್ಲಿ ಯುದ್ಧವಾಗಬೇಕಾದರೂ ಸಬ್ ಮೆರೀನ್‌ಗಳನ್ನು ಜರ್ಮನರು ಉಪಯೋಗಿಸಬಹುದೆಂದು ಅಮೆರಿಕದ ರಾಜಕಾರಣಿಗಳು ಎಚ್ಚರಿಸಿದ್ದಾರೆ

ಚೀನಾಕ್ಕೆ ಜಪಾನ್ ಶಾಂತಿ ಸಂಧಾನ

ಶತ್ರುಪಕ್ಷಕ್ಕೆ ಸೇರಿದ ಪ್ರಾಂತಗಳ ಮೇಲೆ ಧಾಳಿ ನಡೆಸಲು ಮತ್ತು ಎಲ್ಲಾ ಪ್ರಾಂತಗಳನ್ನು ತನ್ನದಾಗಿ ಮಾಡಲು ಜಪಾನಿನೊಡನೆ ಚೀನಾ ಸಹಕರಿಸುವುದಾದರೆ ಜಪಾನ್ ಚೀನಾದ ಪ್ರದೇಶವನ್ನು ಬಿಡುವುದಾಗಿ ಶಾಂತಿ ಸಂಧಾನದ ಆಸೆಗಳನ್ನು ಕಳಿಸುತ್ತಿರುವುದೆಂದು ಚೀನಾ ವಿದೇಶಾಂಗ ಮಂತ್ರಿಯಾದ ಸೂಂಗ್‌ರವರು ತಿಳಿಸಿದ್ದಾರೆ.

———

ಕೌಂಟ್ ಸಿಯಾನೊ

ಜರ್ಮನ್ ಸೈನಿಕರು ಬಿಡಿಸಿದ ಅನೇಕ ಫ್ಯಾಸಿಸ್ಟ್ ನಾಯಕರ ಪೈಕಿ, ಕೌಂಟ್ ಸಿಯಾನೊ ಸೇರಿಲ್ಲವೆಂದೂ, ಆತನು ಈಗ ಎಲ್ಲಿರುವನೆಂಬುದು ಗೊತ್ತಿಲ್ಲವೆಂದೂ ಹೇಳಲಾಗಿದೆ. ಸಿಸಿಲಿಗೆ ಹೋದ ಬಡೋಗ್ಲಿಯವರಜೊತೆಗೆ ಸಿಯಾನೊ ಹೋಗಿದ್ದರು ಹೋಗಿರಬಹುದೆಂದು ಹೇಳಲಾಗಿದೆ

ಫ್ಯಾಸಿಸ್ಟ್ ಸಂಘದಲ್ಲಿ ಅವನು ಪಾತ್ರ ವಹಿಸುವುದು ಅಷ್ಟು ನಂಬಿಕೆಯಿಲ್ಲವೆಂದು ಹೇಳಲಾಗಿದೆ

———

ಭಾರತಕ್ಕೆ ಬರುವ ಸೂಚನೆ ಇಲ್ಲ

"ನಾನು ಭಾರತಕ್ಕೆ ಹಿಂತಿರುಗುವ ಸೂಚನೆ ಇಲ್ಲವೆಂದೂ, ತಮ್ಮ ಲಂಡನ್ನಿನ ಪ್ರವಾಸ ಬಹಳ ತಿಂಗಳ ಕಾಲ ಹಿಡಿಯಬಹುದೆಂದೂ" ಫಿಲಿಪ್ಸ್‌ರು "ನ್ಯೂ ಕ್ರಾನಿಕಲ್" ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ

———

ರಾಜಕೀಯ ಕೈದಿಗಳ ಬಿಡುಗಡೆ

ಬಂಧನದಲ್ಲಿರುವ ಎಲ್ಲಾ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಬೇಕೆಂದು ಇಂದೋರ್ ಶಾಸನ ಸಭೆಯಲ್ಲಿ ನಿರ್ಧರಿಸಲಾಯಿತು.

———

ಇಟಲಿಯಲ್ಲಿ ಮಿತ್ರ ಸೇನೆ ಕೂಡುವಿಕೆ

ಇಟಲಿಯಲ್ಲಿ ೪೮ ಗಂಟೆಗಳ ಕಾಲದೊಳಗಾಗಿ ೨ ಮಿತ್ರ ಸೈನ್ಯಗಳು ಒಟ್ಟಿಗೆ ಕೂಡುವ ಸಂಭವವಿದೆಯೆಂದು ಅಲ್ಜಿಯರ್ಸ್ ರೇಡಿಯೋ ತಿಳಿಸುತ್ತದೆ

ಉ॥ ಇಟಲಿಯಲ್ಲಿ ಫ್ಯಾಸಿಸ್ಟ್ ಸರ್ಕಾರ ಸ್ಥಾಪನೆ

ಉತ್ತರ ಇಟಲಿಯಲ್ಲಿ ಜರ್ಮನಿ ಸಹಾಯದಿಂದ ಮುಸಲೋನಿಯು ಫ್ಯಾಸಿಸ್ಟ್ ಸರ್ಕಾರವನ್ನು ಸ್ಥಾಪಿಸುವನೆಂದೂ, ಯುದ್ಧ ಮಾಡಲು ಒಂದು ಫ್ಯಾಸಿಸ್ಟ್ ಸೈನ್ಯವನ್ನು ರಚಿಸಲಾಗುವುದೆಂದೂ ಹೇಳಲಾಗಿದೆ.

ಇಂದೂರು ಮಹಾರಾಜರು

ಇಂದೂರಿನ ಮಹಾರಾಜರು ಮತ್ತು ಅವರ ನೂತನ ಅಮೆರಿಕನ್ ಪತ್ನಿಯವರೂ ಕೊಲಂಬೋಕ್ಕೆ ಬಂದಿರುವರೆಂದೂ ಶೀಘ್ರದಲ್ಲಿಯೇ ಭಾರತಕ್ಕೆ ಬರುವರೆಂದೂ ವರದಿಯಾಗಿದೆ

ಕ್ಷಾಮನಿವಾರಣೆಗೆ ಸಹಾಯ

ಬಂಗಾಳ ಕ್ಷಾಮ ನಿವಾರಣೆಗೆ ಕಲ್ಕತ್ತ ಕಾರ್ಪೋರೇಷನ್ನಿನವರು ೧೦ ಸಾವಿರ ರೂಪಾಯಿಗಳನ್ನು ಕೊಟ್ಟಿರುವರು

ಹಾಲಿನ ಪರಿಶೋಧನೆಗೆ ೧ ಲಕ್ಷ ರೂ.

ಬೆಂಗಳೂರು ೧೫

ಬೆಂಗಳೂರಿನಲ್ಲಿರುವ ಇಂಪೀರಿಯಲ್ ಡೈರಿ ರಿಸರ್ಚ್ ಇನ್ಸ್ಟಿಟ್ಯೂಟಿನಲ್ಲಿ ಹಾಲಿನ ಪರಿಶ್ರಮಕ್ಕೆ ಸಂಬಂಧಿಸಿದ ಅತ್ಯುಪಯುಕ್ತ ಪರಿಶೋಧನೆಗಳನ್ನು ೩ ವರ್ಷಗಳ ಕಾಲ ನಡೆಸಲು ಇಂಪೀರಿಯಲ್ ಕೌನ್ಸಿಲ್ ಆಫ್ ರಿಸರ್ಚ್‌ನವರು ಒಂದು ಲಕ್ಷ ರೂಗಳನ್ನು ಮಂಜೂರು ಮಾಡಿರುವರು

ಎ. ಆರ್. ಪಿ. ಸಿಬ್ಬಂದಿ ಕಡಿಮೆ ಯಾಗುತ್ತದೇ ?

ಬೆಂಗಳೂರಿನಲ್ಲಿರುವ ಎ ಆರ್. ಪಿ. ಸಿಬ್ಬಂದಿಯನ್ನು ಆರ್ಧಕ್ಕೆ ಇಳಿಸಬೇಕೆಂದು ಸರ್ಕಾರದವರ ಆಲೋಚನೆಯಲ್ಲಿರುವುದಾಗಿಯೂ, ಈ ಬಗ್ಗೆ ನ್ಯೂಸ್ ವಾರ್ತನರೂ ಇತರರೂ ದಿವಾನರಲ್ಲಿ ನಿಯೋಗ ಹೋಗುವರೆಂದು ತಿಳಿಯಬರುತ್ತೆ.

ಫೆಡರಲ್ ಸರ್ವಿಸ್ ಪರೀಕ್ಷೆಯಲ್ಲಿ ಜಯಶೀಲರಾದರು

ಮೈಸೂರಿನವರಾದ ರಿಟೈರ್ಡ್ ಮೆಡಿಕಲ್ ಇನ್ಸ್ಪೆಕ್ಟರಾದ ಶ್ರೀ ಸುಂದರರಾಜಯ್ಯಂಗಾರ್‌ರ ದ್ವಿತೀಯ ಪುತ್ರರಾದ ಶ್ರೀ ಮುತ್ತಣ್ಣ ಎಂಬುವರು ಫೆಡರಲ್ ಸರ್ವಿಸ್ ಕಮಿಷನ್ ನಡೆಸಿದ ಇಂಜನಿಯರ್‌ಗಳ ಸ್ಪರ್ಧಾ ಪರೀಕ್ಷೆಯಲ್ಲಿ ಉಚ್ಚ ತರಗತಿಯಲ್ಲಿ ಉತ್ತೀರ್ಣರಾಗಿ, ಈಗ ಟೆಲಿಗ್ರಾಫ್ ಇಂಜನಿಯರ್ ಸರ್ವಿಸಿನಲ್ಲಿ ಅಸಿಸ್ಟೆಂಟ್ ಇಂಜನಿಯರಾಗಿ ನೇಮಿತರಾಗಿದ್ದಾರೆ

ಸಿಡಿತದಿಂದ ಬೆರಳು ಕತ್ತರಿಸಲ್ಪಟ್ಟಿತು

ಚನ್ನಪಟ್ಟಣ ತಾಲ್ಲೂಕಿನಲ್ಲಿ ಬಂಡೆಯ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಡೈನಮೈಟ್ ಆಸ್ಫೋಟನೆ ನಡೆದು ತಿಮ್ಮಪ್ಪ ಎಂಬುವನ ಎರಡು ಕೈಬೆರಳು ಕತ್ತರಿಸಿಹೋಗಿದೆಯೆಂದು ಗೊತ್ತಾಗಿದೆ.

ಬೋರ್ಡಿನ ಬಜೆಟ್ ವಾಪಸಾಯಿತು

ಬೆಂಗಳೂರು ನಗರದ ಜಿಲ್ಲಾ ಬೋರ್ಡಿನ ಅಧ್ಯಕ್ಷರು ಸಮರ್ಪಕವಾದ ವಿವರಗಳನ್ನು "ಬಜೆಟ್" ಗೆ ಕೊಡಲಿಲ್ಲವೆಂದು ಪ್ರತಿಭಟಿಸಿ ೮ ಮಂದಿ ಸದಸ್ಯರು ಸಭಾತ್ಯಾಗ ಮಾಡಿದ್ದರು ಅಧ್ಯಕ್ಷರು ಸಭೆಯಲ್ಲಿ ಕೋರಂ ಇಲ್ಲವೆಂದು ಪರಿಗಣಿಸಿ ಬಜೆಟ್ ಅಂಗೀಕಾರವಾದಂತಾಗಿ ಸರ್ಕಾರಕ್ಕೆ ಕಳುಹಿಸಿದ್ದರು. ಬಜೆಟ್ಟನ್ನು ಸಭೆಯು ಅಂಗೀಕರಿಸಿದ ನಂತರ ಕಳುಹಿಸಬೇಕೆಂದು ತಿಳಿಸಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಿಗೆ ಸರ್ಕಾರದವರು ವಾಪಸು ಕಳುಹಿಸಿರುವರು.

ಮುದ್ರಣ ಕಾಗದದ ದುರುಪಯೋಗ

ಬಲಿಜಾ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಟಿ ತಿಮ್ಮಣ್ಣ ಶೆಟ್ಟಿ ಎಂಬುವರು ತಮಗೆ 'ಅಲಾಟ್' ಮಾಡಿದ್ದ ಮುದ್ರಣ ಕಾಗದವನ್ನು ಬೇರೆಯವರಿಗೆ ಮಾರಿ ದುರುಪಯೋಗಪಡಿಸಿದರೆಂಬ ಆಪಾದನೆಯ ಮೇಲೆ ಬೆಂಗಳೂರು ಸಿಟಿ ಕೋರ್ಟಿನಲ್ಲಿ ಭಾರತ ರಕ್ಷಣಾ ಶಾಸನ ರೀತ್ಯಾ ಮೊಕದ್ದಮೆ ಹೂಡಲಾಗಿದೆ

೨೭ ಮೂಟೆ ದವಸವನ್ನು ವಶಪಡಿಸಿಕೊಳ್ಳಲಾಯಿತು

ಅರಳೀಪೇಟೆಯ ಹೋಟೆಲೊಂದರಲ್ಲಿ ನಿಯಮಿತ ಪ್ರಮಾಣಕ್ಕಿಂತ ಜಾಸ್ತಿಯಾಗಿದ್ದ ೨೭ ಮೂಟೆ ಆಹಾರ ದಿನಸಿಯನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ.

ಬಂಗಾಳ ಪರಿಹಾರ ನಿಧಿ

ಬಂಗಾಳದ ಕ್ಷಾಮ ನಿವಾರಣಾ ನಿಧಿಯನ್ನು ಶೇಖರಿಸಲು ನಿನ್ನೆ ದಿವಸ ನಡೆದ ಸಾರ್ವಜನಿಕ ಸಭೆಯಲ್ಲಿ ರೆವಿನ್ಯೂ ಸಚಿವರಾದ ರಾಜಮಂತ್ರಪ್ರವೀಣ ಕೆ ಅನಂತರಾಮಯ್ಯನವರು ಕಷ್ಟಕ್ಕೀಡಾಗಿರುವ ಜನಗಳಿಗೆ ನೆರವಾಗಬೇಕೆಂದು ಮನವಿ ಮಾಡಿಕೊಂಡರು. ಸಭೆಯಲ್ಲೇ ೫೭೦೦ ರೂ. ಗಳ ಚಂದಾ ವಸೂಲಾಯಿತು.

ರೋಸ್ಟೋವಿಗೆ ಗಂಡಾಂತರ

ಜರ್ಮನರು ಬ್ರಿಯಾನ್ಸ್ಕ್ ನಗರವನ್ನು ತ್ಯಜಿಸಿದ್ದಾರೆ ಈ ನಗರವು ೧೯೪೧ ನೇ ಅಕ್ಟೋಬರಿನಿಂದ ಜರ್ಮನರ ವಶದಲ್ಲಿಯೇ ಇದ್ದಿತು. ಬ್ರಿಯಾನ್ಸ್ಕ್ ಪಟ್ಟಣವು ರಷ್ಯನರ ವಶವಾದ್ದರಿಂದ ಬ್ರಿಯಾನ್ಸ್ಕ್ ಮತ್ತು ಸ್ಮೋಲೆನ್ಸ್ಕಿಗೆ ಮಧ್ಯೆ ಇರುವ ರೋಸ್ಲೋವ್ ಪಟ್ಟಣಕ್ಕೆ ಅಪಾಯ ತುಂಬ ಹೆಚ್ಚುತ್ತಿದೆ ಈ ಪಟ್ಟಣಕ್ಕೆ ರಷ್ಯನರು ೪ ಕಡೆಗಳಿಂದಲೂ ನುಗ್ಗುತ್ತಿರುವರು.

ಜಪಾನರ ಶಕ್ತಿ ಕುಗ್ಗುತ್ತಿದೆ

ಜಪಾನಿಗೆ ಮುಖ್ಯ ಕೇಂದ್ರವಾದ ಸಾಲಮೋವಾ ಪತನದಿಂದ, ಮಿತ್ರ ಸೈನ್ಯಗಳಿಗೆ ನ್ಯೂ ಗಿನಿಯ ಬ್ರಿಟನಿಗೆ ೧೦೦ ಮೈಲಿ ದೂರದೊಳಗಿದೆ ಜಪಾನರ ಸಮರೋಪಕರಣಗಳು ಮಿತ್ರರ ಕೈಗೆ ಬಿದ್ದವು. ನ್ಯೂಗಿನಿಯದ ಮೇಲೆ ಜಗಳ ಜೆಟ್ ಪ್ರಯೋಗಿಸಲಾಗುತ್ತಿದೆ ಲೇ ಪೂರ್ವದಲ್ಲಿದ್ದ ಜಪಾನ್ಯ ಪ್ರದೇಶಗಳು ಮತ್ತು ಸಲಾಮವ್ ಕಣಿವೆಯಲ್ಲಿ ವಿಮಾನ ಗಳು ಮಿತ್ರರ ವಶವಾಗಿವೆ

ಉತ್ತರ ಯೂರೋಪಿನಲ್ಲಿ ಯುದ್ಧ ಆರಂಭ

ಉತ್ತರ ಯೂರೋಪಿನಲ್ಲಿ ಯುದ್ಧ ಪ್ರಾರಂಭವಾಗುವ ಸಂಭವ ಇರುವುದೆಂದೂ, ಯೂರೋಪಿನ ಇತರ ಪ್ರದೇಶಗಳಲ್ಲಿಯೂ ಯುದ್ಧ ಕಾರ್ಯಾಚರಣೆ ಹೆಚ್ಚಾಗುವದೆಂದೂ ಬರ್ಲಿನ್, ಸ್ವಿಟ್ಜರ್ಲೆಂಡಿನಲ್ಲಿ ಹೆಚ್ಚಿನ ಮಿಲಿಟರಿ ಜಮಾವಣೆ ಮಾಡಲ್ಪಟ್ಟಿದೆಯೆಂದೂ ವರದಿಯಾಗಿದೆ

ಇಟಾಲಿಯನ್ ನೌಕೆ ಜಪಾನ್ ಕೈಗೆ ಬಿತ್ತು

ಪೂರ್ವ ಏಷ್ಯದಲ್ಲಿ ಜಪಾನರು ಇಟಾಲಿಯನ್ನರ ೬ ಯುದ್ಧ ಹಡಗುಗಳನ್ನೂ, ಇತರ ೧೧ ಹಡಗುಗಳನ್ನೂ ವಶಪಡಿಸಿಕೊಂಡಿರುವುದಾಗಿ ವರದಿಯಾಗಿದೆ ಕಾಂಟೆ ವರ್ಡೆ ಎಂಬ ಇಟಾಲಿಯನ್ ಪ್ರಯಾಣಿಕ ಹಡಗು ಮತ್ತು ೧ ಇಟಾಲಿಯನ್ ಸಬ್‌ಮೆರೀನ್, ಷಾಂಘೈ ಬಂದರಿನಲ್ಲಿ ಆತ್ಮನಾಶ ಹೊಂದಿದುವೆಂದು ತಿಳಿದುಬರುತ್ತದೆ.

ಯುದ್ಧೋದ್ಯಮದಲ್ಲಿ ಆಲಸ್ಯ ಕೂಡದು

"ಜರ್ಮನರೂ, ಜಪಾನಿಗಳೂ ಸ್ವಲ್ಪ ಮಟ್ಟಿಗೆ ಬಲಕುಂದಿದ್ದರೂ ಅವರನ್ನು ಬಲಹೀನರೆಂದು ಇದ್ದಾರೆಂಬುದನ್ನು ಮರೆಯಬಾರದು ಇಟಲಿಯಲ್ಲಿ ಜರ್ಮನರು ಬಲವಾಗಿ ಸೇರಿಕೊಂಡಿದ್ದಾರೆ. ಆ ದೇಶವನ್ನು ಜಯಿಸಬೇಕಾದರೆ ನಾವು ಬಹಳ ಪ್ರಯತ್ನ ಮಾಡಬೇಕು ಯುದ್ಧ ಗೆಲ್ಲಲು ಇನ್ನೂ ದೀರ್ಘಕಾಲಬೇಕು ಮುಂದೆ ಎಷ್ಟೋ ನಿಷ್ಠುರಗಳಿವೆ ಆದ್ದರಿಂದ ನಾವು ಒಂದು ಕ್ಷಣವೂ ಆಲಸ್ಯದಿಂದಿರದೆ ಕೆಲಸ ಮಾಡಬೇಕು" ಎಂದು ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ಎಚ್ಚರಿಸಿದ್ದಾರೆ

ಅಧ್ಯಕ್ಷ ರೂಸ್ವೆಲ್ಟರು ಮಿ॥ ವಿಲಿಯಂ ಫಿಲಿಪ್ಸ್‌ರನ್ನು ರಾಯಭಾರಿ ಸ್ಥಾನಕ್ಕೆ ನೇಮಿಸಿರುತ್ತಾರೆ

Edited, printed and published by A R Nagarajan, at the Sadhvi Press, D.Subbiah Road, Mysore.

FROM 15—9—43 Daily 3 shows

Thief of Bagdad (in magic Technicolor)

with MYSORE SABU

AT NEW OPERA TALKIES

Next Change— 'SHARADA' in Hindi

ಶ್ರೀ ಯರ ಶಾ ಕಯ ರ ಕ್ತಾ ಗಿ

೧೯೧೧ ರಿಂದಲೂ ಅತ್ಯುತ್ತಮವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಪ್ರಯೋಗಿಸಿರಿ

ಡಿ. ಪುಟ್ಟೆಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ. ಸೂ - ಟೀಪುಡಿ, ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ ಇಲ್ಲದೆ ಮತ್ತು ಸಂತೆಪೇಟೆ ಕೊ ಅಲ್ಲಿಯೂ ಅಕ್ಕಿಯೂ ಮತ್ತು ೧ ರೂ ಗೆ ೨ ಸೇರು ರವೆ ಸಹ ದೊರೆಯುತ್ತೆ.

FOR SALE

ONE HOUSE IN D. SUBBIAH'S ROAD

with Well, Tap Flush & Electric light

Price Rs 6850.

ONE BUNGALOW AT LAXMIPURAM

Area of the site is more than 3000 Sq. yds

Price Rs 30000.

Re' TITLE or INSPECTION or DETAILS

Please write to me or call at my offic

B S. SUBBA RAO,

Proprietor '

City Auctioneering, J M Palace View, Mysore

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಸ್ನಾನಮಾಡುವುದರಿಂದ ಅದರ ಪರಿಮಳವು ಬಹು ಹೊತ್ತು ದೇಹದಲ್ಲಿದ್ದು ಮೈಗೆ ಬಹು ಹಿತಕರವಾಗಿರುವುದು ಇದರ ಮೃದುತ್ವವೂ, ಸುಗಂಧವೂ ಚರ್ಮಕ್ಕೆ ಹಿತವಾದುದು

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೩] ಶುಕ್ರವಾರ ೧೭--೯--೪೩ [ಸಂಚಿಕೆ ೫೭

ಡೊಡೆಕೆನೀಸ್ ಜರ್ಮನ್ ವಶವಾಯಿತು

ಮುಸೋಲಿನಿಯನ್ನು ಗುಂಡಿನಿಂದ ಹೊಡೆದು ಕೊಲ್ಲಲಾಯಿತೆ

ಜರ್ಮನಿಯಲ್ಲಿ ಹತ್ತು ಸಾವಿರ ಜಪಾನಿ ವೈಮಾನಿಕರು

ಜರ್ಮನಿಯಲ್ಲಿ ೧೦ ಸಾವಿರ ಜಪಾನಿ ವೈಮಾನಿಕರು

ಜರ್ಮನಿಯಲ್ಲಿ ಈಗ ತರಪೇತಾದ ೧೦ ಸಾವಿರ ಜಪಾನಿ ವೈಮಾನಿಕರು ಇರುವರೆಂದೂ, ಬ್ರಿಟಿಷ್ ನಗರಗಳ ಮೇಲೆ ಪ್ರತಿ ಧಾಳಿ ನಡೆಸಲು ಅವರನ್ನು ಉಪಯೋಗಿಸಲಾಗುವುದೆಂದೂ, ಮಿತ್ರರಿಗೆ ಸೆರೆ ಸಿಕ್ಕಿದ ಜರ್ಮನ್ ಸೈನಿಕರು ತಿಳಿಸಿದ್ದಾರೆಂದು ವರದಿಯಾಗಿದೆ.

ಜರ್ಮನಿಯಲ್ಲಿ ಹೆಚ್ಚಾಗಿ ವಿಮಾನಗಳು ಇದ್ದರೂ, ವೈಮಾನಿಕರ ಅಭಾವವು ಹೆಚ್ಚಾಗಿರುವುದರಿಂದ, ಸಬ್‌ಮೆರಿನ್ನುಗಳಿಂದ ಜಪಾನಿ ವೈಮಾನಿಕರನ್ನು ಕರೆತರಲಾಗಿದೆಯೆಂದೂ ಇಂತಹ ನಾಜಿ ಚಟ್ಟುವಟಿಕೆಗಳನ್ನು ಇಟಲಿಯಲ್ಲಿರುವ ಜರ್ಮನರು ನಂಬುವರೆಂದೂ ಹೇಳಲಾಗಿದೆ.

೮ ನೆಲೆಗೆ ಗಂಡಾಂತರ

ನ್ಯೂಗಿನಿಯ ೮ ನೆಲೆಗೆ ಮಿತ್ರ ಸೇನೆ ನಾಲ್ಕು ಭಾಗಗಳಿಂದ ಮುತ್ತಿಗೆ ಹಾಕಿದೆ. ಅಲ್ಲಿಯ ಮೂರು ಮುಖ್ಯ ಜಪಾನಿ ಸೇನೆ ಅಲ್ಲಿಂದ ತಪ್ಪಿಸಿಕೊಂಡು ಹೋಗದಂತೆ ಮಿತ್ರನೌಕೆಗಳೂ, ವಿಮಾನಗಳೂ, ಸರ್ಪಗಾವಲನ್ನೇರ್ಪಡಿಸಿವೆ. ೮ ನೆಲೆಗೆ ಕೇವಲ ೩ ಮೈಲಿ ದೂರದಲ್ಲಿ ಬಂದಿದ್ದಾರೆ.

ಇಟಲಿ ಹಡಗು ಶರಣಾಗತವಾಯಿತು

ಇಟಲಿಗೆ ಸೇರಿದ ೨೦,೦೦೦ ಟನ್ 'ಎಟ್ರಿ' ಎಂಬ ಹಡಗು ಕೊಲಂಬೊ ಬಂದರಿನಲ್ಲಿ ಶರಣಾಗತವಾಗಿದೆ ಎಂದು ವರದಿಯಾಗಿದೆ.

ಎರಡು ದ್ವೀಪಗಳು ಮಿತ್ರರ ವಶವಾದುವು

ಡೊಡೆಕೆನೀಸಿನಲ್ಲಿರುವ ಲೀರೋ ದ್ವೀಪವನ್ನೂ ಮತ್ತು ಏಜಿಯನ್ ಸಮುದ್ರದ ಸಾಮೋಸ್ ದ್ವೀಪವನ್ನೂ ಮಿತ್ರರು ವಶಪಡಿಸಿಕೊಂಡಿರುವರೆಂದು ವರದಿಯಾಗಿದೆ.

ಬ್ರಿ॥ ಖೈದಿಗಳಿಗೆ ಸಹಾಯ ಮಾಡಕೂಡದು

ಬ್ರಿಟಿಷ್ ಖೈದಿಗಳು ತಪ್ಪಿಸಿಕೊಂಡು ಹೋಗಲು ಸಹಾಯಮಾಡುವ ಇಟಾಲಿಯನ್ನರನ್ನು ಶಿಕ್ಷೆಗೊಳಪಡಿಸಲಾಗುತ್ತದೆಂದು ಜರ್ಮನ್ ಅಧೀನದಲ್ಲಿರುವ ರೋಂ ರೇಡಿಯೋ ತಿಳಿಸುತ್ತದೆ.

ಸಾಲರ್ನೋದಲ್ಲಿ ಜರ್ಮನ್ ಪ್ರತಿಭಟನೆ ನಿಂತಿದೆ

ದಕ್ಷಿಣ ಇಟಲಿಯ ಸಾಲರ್ನೋ ರಣಕ್ಷೇತ್ರದಲ್ಲಿ ಈಗ ಕದನ ಶಿಥಿಲವಾಗಿದೆಯೆಂದು ಹೇಳಲಾಗಿದೆ. ಮಿತ್ರರ ಮುತ್ತಿಗೆ ಆರಂಭವಾದಾಗಿನಿಂದ ಜರ್ಮನರು ೮-೯ ಘಂಟೆಗಳಲ್ಲಿ ಹೆಚ್ಚು ಪ್ರತಿಭಟನೆ ನಡೆಸಲು ಆಗಲಿಲ್ಲವೆಂದೂ, ಅವರು ಅನೇಕ ಭಾಗಗಳನ್ನು ತ್ಯಜಿಸುತ್ತಿರುವರೆಂದೂ ವರದಿಯಾಗಿದೆ.

ಅಮೇರಿಕನ್ ಸೈನ್ಯ ನಷ್ಟ

ಯುದ್ಧ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ೧೯,೭೩೦ ಅಮೇರಿಕನ್ ಸೈನಿಕರು ಸತ್ತಿರುವರೆಂದೂ, ೨೬,೭೩೩ ಮಂದಿ ಗಾಯಗೊಂಡಿರುವರೆಂದೂ ಮತ್ತು ೨೬,೯೦೯ ಜನ ಶತ್ರುಗಳು ಸೆರೆಯಾಗಿರುವರೆಂದೂ ಪ್ರಕಟವಾಗಿದೆ.

ಮುಸೋಲಿನಿಯನ್ನು ಕೊಲ್ಲಲಾಯಿತೇ ?

ಜರ್ಮನ್ ಪ್ಯಾರಾಚೂಟ್ ಸೈನ್ಯವು ಮುಸೋಲಿನಿಯನ್ನು ಬಂಧನ ವಿಮೋಚನೆ ಮಾಡಲು ಯತ್ನಿಸಿದರೆಂದು ತಿಳಿದು ಅಲ್ಲಿ ಕಾವಲಿದ್ದ ಇಟಾಲಿಯನ್ ಸೈನಿಕನು ಮುಸೋಲಿನಿಯನ್ನು ಗುಂಡಿನಿಂದ ಹೊಡೆದು ಸಾಯಿಸಿದನೆಂದು ಆಶ್ಚರ್ಯಕರವಾದ ಸುದ್ದಿ ಮ್ಯಾಡ್ರಿಡ್‌ನಿಂದ ಹೊರಟಿದೆ.

ಡೊಡೆಕೆನೀಸ್ ದ್ವೀಪ ಜರ್ಮನರ ವಶ

ಡೊಡೆಕೆನೀಸ್ ದ್ವೀಪವು ಜರ್ಮನರ ವಶವಾಯಿತೆಂದು ಹೇಳಲಾಗಿದೆ.

ಜರ್ಮನರಿಗಿಂತ ೮ ರಷ್ಟು ಹೆಚ್ಚಾಗಿ ಸೈನ್ಯವಿದ್ದರೂ ಕೂಡ, ಇಟಾಲಿಯನ್ ಗವರ್ನರ್ ಮತ್ತು ಏಜಿಯನ್ ಕಮ್ಯಾಂಡರಾದ ಅಡ್ಮಿರಲ್ ಕೋಬಿಂಗ್‌ರವರು ಜರ್ಮನ್ ಧಾಳಿಗೆ ಶರಣಾಗತರಾದರೆಂದೂ, ಇಟಾಲಿಯನ್ ಬ್ಲಾಕ್ ಷರ್ಟ್‌ಗಳ ಸೈನಿಕರು ಜರ್ಮನರೊಂದಿಗೆ ಸೇರಿ, ಅವರು ಮುಖ್ಯ ಸ್ಥಾನಗಳನ್ನು ಆಕ್ರಮಿಸಲು ಸಹಾಯಕರಾದರೆಂದೂ ಹೇಳಲಾಗಿದೆ.

ಹೊಟ್ಟೆಗಿಲ್ಲದೆ ಮಗುವನ್ನು ಮಾರಿದ ಪ್ರಸಂಗ

ಮಕ್ಕಳನ್ನು ಸಾಕಲಾರದೆ ತನ್ನ ಒಂದು ೮ ವರ್ಷದ ಮಗುವನ್ನು ೨೦ ರೂ. ಮಾರಿದ ತಾಯಿಯು ಢಾಕಾದ ಕೋರ್ಟಿನಲ್ಲಿ ಶಿಕ್ಷೆ ಹೊಂದಿದ್ದಾಳೆ. ಬಹಳ ದಿನಗಳಿಂದ ಆಕೆ ಗಂಡನು ಆಸ್ಪತ್ರೆಯಲ್ಲಿದ್ದು ತನ್ನ ೬ ಮಕ್ಕಳನ್ನು ಸಾಕಲಾರದೆ ತನ್ನ ೧ ಮಗುವನ್ನು ಮಾರಿದಳೆಂದೂ, ತನ್ನ ಗಂಡನು ಮನೆಗೆ ಬಂದು ತಿಳಿದಾಗ ಪೋಲೀಸರಿಗೆ ಫಿರ್ಯಾದಿ ಕೊಟ್ಟು ಬಹಳ ಕಷ್ಟದಿಂದ ಆ ಮಗುವನ್ನು ಪಡೆಸಲಾಯಿತೆಂದೂ ವರದಿಯಾಗಿದೆ.

೫ ಮಕ್ಕಳನ್ನು ಹೆತ್ತಳು

ಅಮೆರಿಕದ ಕೊಲಂಬಿಯಾ ನಗರದಲ್ಲಿ ೭ ವರ್ಷ ಹೆಂಗಸು ಏಕಕಾಲದಲ್ಲಿ ೫ ಮಕ್ಕಳನ್ನು ಹೆತ್ತಿರುವಳೆಂದೂ, ಮಗು, ತಾಯಿ ಆರೋಗ್ಯವಾಗಿರುವರೆಂದೂ ವರದಿಯಾಗಿದೆ.

ಆಗಾಖಾನರ ದಾಂಪತ್ಯ ವಿಚ್ಛೇದನ

ಆಗಾಖಾನರು ಜನೀವಾ ಕೋರ್ಟಿನಲ್ಲಿ ತಮ್ಮ ಪತ್ನಿಯಾದ ನೀ ಆಂಡ್ರೀಕಾರೋನರ ಮೇಲೆ ದಾಂಪತ್ಯ ವಿಚ್ಛೇದನ ಮೊಖದ್ದಮೆಯೊಂದನ್ನು ಹೂಡಿರುವರೆಂದು ವರದಿಯಾಗಿದೆ.

ಐ. ಸಿ. ಎಸ್. ಅಧಿಕಾರಿಗಳನ್ನು ಸಸ್ಪೆನ್ಸಿಗೆ ಗುರಿಮಾಡಲಾಯಿತು

ಸಂಯುಕ್ತಪ್ರಾಂತ ಸರ್ಕಾರದ ಮಾಜಿ ಸೆಕ್ರೆಟರಿಗಳಾಗಿದ್ದ ಶ್ರೀ ಬಿ. ಬಿ. ಸಿಂಗ್‌ರವರನ್ನು ಮತ್ತು ಇನ್ನೂ ನಾಲ್ಕು ಮಂದಿಗಳು ಬಿಲೇಸಿಯಾ ಎಂಬ ಜಪಾನಿಯನ್ನು ಕೊಲೆಮಾಡಿದರೆಂಬ ಆಪಾದನೆಯ ಮೇಲೆ ಸಸ್ಪೆನ್ಸ್ ವಿಚಾರಣೆಗೆ ಗುರಿಮಾಡಲಾಗಿದೆ.

ಷರತ್ತಿನ ಮೇಲೆ ಮದರಾಸ್ ಬಂದಿಗಳ ಬಿಡುಗಡೆ

ಮದರಾಸ್ ಪ್ರಾಂತ್ಯದಲ್ಲಿ ಬಂಧನದಲ್ಲಿರುವ ೨೩೩ ಡೆಟಿನ್ಯೂಗಳು ಇನ್ನು ಮುಂದೆ ಯುದ್ಧಕ್ಕೆ ಭಂಗ ಬರುವಂತಹ ಚಳುವಳಿಯಲ್ಲಿ ಭಾಗವಹಿಸುವುದಿಲ್ಲವೆಂದು ಭರವಸೆ ಕೊಟ್ಟಲ್ಲಿ, ಅವರುಗಳನ್ನು ಬಿಡಲಾಗುವುದೆಂದು ಮದರಾಸ್ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಈಗಾಗಲೆ ೧೨ ಜನಗಳು ಮೇಲಿನ ಪತ್ರನ್ನು ಕೊಟ್ಟಿದ್ದರಿಂದ ಅವರನ್ನು ಬಿಡಲು ಆಜ್ಞೆಯಾಗಿದೆ.

ಬಂಗಾಳ ಸರ್ಕಾರ ಲಾಭ ಪಡೆಯುತ್ತಿದೆಯೆ ?

ಪಂಜಾಬಿನಿಂದ ಆಗಸ್ಟ್ ೧೫ ರಿಂದ ಒಟ್ಟು ೪೮ ಸಾವಿರ ಟನ್ ಗೋಧಿಯನ್ನು ಬಂಗಾಳಕ್ಕೆ ಮಣಕ್ಕೆ ಹನ್ನೊಂದೂವರೆ ರೂ ನಂತೆ ಸರಬರಾಜು ಮಾಡಲಾಗಿದೆಯೆಂದೂ, ಅದರೆ ಅಲ್ಲಿ ಮಣಕ್ಕೆ ಹದಿನೇಳೂವರೆ ರೂ ನಂತೆ ಮಾರುತ್ತಿರುವುದು ನೋಡಿದರೆ ಬಂಗಾಳ ಸರ್ಕಾರದವರು ಇಲ್ಲಿಯವರೆಗೆ ೨೦ ಲಕ್ಷ ರೂ ಲಾಭ ಪಡೆದಿರುವರೆಂದು ಪಂಜಾಬಿನ ಆಹಾರ ಮಂತ್ರಿಗಳು ತಿಳಿಸಿರುವರು. ಈ ಪೆಟ್ಟಿನ ಲಾಭವು ಸರ್ಕಾರಕ್ಕೋ ಅಥವಾ ಮಧ್ಯ ವ್ಯಾಪಾರಗಾರರಿಗೋ ಅಥವಾ ಬಿಕ್ಕಟ್ಟಿನವರಿಗೋ ಹೋಗುತ್ತಿದೆಯೆಂದು ತಿಳಿಸಿದ್ದಾರೆ.

ಹೆಂಡತಿಗೆ ಜೀವನಾಂಶ ಕೊಡಬೇಕಾಯಿತು

ಮೈಸೂರು ೧೬

ಮೈಸೂರು ತಾ॥ ನಾಗಪುರದ ನ. ನ. ತಪ್ಪ ಉರುಫ್ ಕರಿಯಪ್ಪ ಎಂಬುವರ ಹೆಂಡತಿ ಮಾರಮ್ಮ ಎಂಬಾಕೆಯು ಒಂದು ಜೀವನಾಂಶದ ಅರ್ಜಿಯನ್ನು ದ್ವಿತೀಯ ನ್ಯಾಯಾಧೀಶರ ಕೋರ್ಟಿನಲ್ಲಿ ಸಲ್ಲಿಸಿ, ತಾನು ಗರ್ಭಿಣಿಯಾದಾಗ ಗಂಡನ ಮನೆಯವರು ಚಿತ್ರಹಿಂಸೆಮಾಡಿ ಓಡಿಸಿದರೆಂದೂ, ತನ್ನ ಜೀವನಕ್ಕೆ ಕಷ್ಟವಾಗಿರುವುದರಿಂದ ಜೀವನಾಂಶ ಕೊಡಿಸಬೇಕೆಂದೂ ಕೋರಿದ್ದಳು. ಅದರ ಮೇಲೆ ನ್ಯಾಯಾಧೀಶರು ತಿಂಗಳಿಗೆ ೫ ರೂ ಜೀವನಾಂಶವನ್ನು ಕರಿಯಪ್ಪನು ಕೊಡಬೇಕೆಂದು ಆಜ್ಞೆ ಮಾಡಿದ್ದಾರೆ.

ಟೆಕ್ಸ್‌ಟೈಲ್ ಕಮೀಷನರು

ಭಾರತ ಸರ್ಕಾರದ ಟೆಕ್ಸ್‌ಟೈಲ್ ಕಮೀಷನರಾದ ಶ್ರೀ ಕೆ. ಮೇಲೋಡಿಯವರು ಬೆಂಗಳೂರಿಗೆ ಈದಿನ ಸಂಜೆ ಆಗಮಿಸುವರೆಂದು ಹೇಳಲಾಗಿದೆ.

ಕಳ್ಳನಿಗೆ ಶಿಕ್ಷೆ

ಕೃಷ್ಣ ಮೂರ್ತಿ ಪುರದಲ್ಲಿ ಬಟ್ಟೆ ಮತ್ತು ಪಾತ್ರೆಗಳನ್ನು ಕದ್ದನೆಂಬ ಆಪಾದನೆ ಮೇಲೆ ಪಾಪು ಎಂಬುವನಿಗೆ ಸಿಟಿ ಮ್ಯಾಜಿಸ್ಟ್ರೇಟರು ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿದ್ದಾರೆ.

ಮುಂದಿನ ವೈಸ್ರಾಯರು

ಲಾರ್ಡ್ ವೇವಲ್‌ರವರು ಅಕ್ಟೋಬರ್ ೨೦ ನೇ ತಾ॥ ವೈಸ್ರಾಯ್ ಪದವಿಯನ್ನು ವಹಿಸಿಕೊಳ್ಳುವರೆಂದು ಹೇಳಲಾಗಿದೆ.

ವಿಷಮದ್ಯಪಾನದಿಂದ ಮರಣ

ಬೊಂಬಾಯಿನಲ್ಲಿ ೭ ಮಂದಿ ಮದ್ಯಪಾನ ಮಾಡಿ, ಮನೆಗೆ ಹಿಂತಿರುಗುವಾಗದಾರಿ ಮಡಿ ಸತ್ತರೆಂದೂ, ವಿಷ ಪ್ರಯೋಗವಾಗಿರಬಹುದೆಂದೂ ಹೇಳಲಾಗಿದೆ.

೩೬೦ ರೆಡ್‌ಷರಟುಗಳ ಬಿಡುಗಡೆ

ಗಡಿನಾಡು ಸರ್ಕಾರದವರು ೩೬೦ ರೆಡ್ ಷರ್ಟ್ ಖೈದಿಗಳನ್ನು ಹರಿಪುರ ಜೈಲಿನಿಂದ ಬಿಡುಗಡೆ ಮಾಡಿದ್ದಾರೆ.

ಆಹಾರ ದಿನಸಿಗಳ ಸಿತೋಟಿ

ದೇಶದಲ್ಲಿ ಆಹಾರ ಪದಾರ್ಥಗಳ ಬೆಲೆಯನ್ನು ಇಳಿಸಲು ಮುಖ್ಯವಾದ ಆಹಾರ ದಿನಸಿಗಳ ಮೇಲೆ ಸತೋಟಿ ಅಳ್ಳೆಯನ್ನು ಇದೇ ಮಾಹೆ ೨೦ ರಿಂದ ಜಾರಿಗೆ ತರಲಾಗುವುದೆಂದು ಬಿಹಾರ್ ಪ್ರಾಂತ್ಯದ ಸಿವಿಲ್ ಸಪ್ಲೈ ಡೈರೆಕ್ಟರ್ ಮಿ॥ ಜೆನ್ಸನ್‌ರವರು ತಿಳಿಸಿದ್ದಾರೆ.

ಕಳ್ಳರೆಂದು ತಿಳಿದು ಜನಗಳ ಮೇಲೆ ಗುಂಡು ಹಾರಿಸಲಾಯಿತು

ಬಿಜಾಪುರ ಜಿಲ್ಲೆ ಇರಗಾಂ ಗ್ರಾಮದಲ್ಲಿ ರಾತ್ರಿ ಪೊಲೀಸರು ಸಿಕ್ಕಿದ ೬೦ ಜನರ ಗುಂಪಿನ ಮೇಲೆ ಗುಂಡು ಹಾರಿಸಿದರೆಂದೂ, ಇಬ್ಬರು ಸತ್ತರೆಂದು ವರದಿಯಾಗಿದೆ.

ಕಳ್ಳರ ಗುಂಪೊಂದು ಹಳ್ಳಿಯನ್ನು ಲೂಟಿ ಮಾಡುತ್ತಿರುವರೆಂದು ಸುದ್ದಿ ಬಂದು, ಪೋಲೀಸರು ಅವರನ್ನು ಓಡಿಸಿದರು. ಸೋತಾಗ, ರಾತ್ರಿಯಲ್ಲಿ ಪೊಲೀಸರು ಹಿಮ್ಮೆಟ್ಟಿದಾಗ ಜನಗಳು ಸಿಕ್ಕರು. ಒಬ್ಬರನ್ನು ಹಿಡಿದು ಹೊಡೆಯಲು ಹೋಗಿದ್ದರಿಂದ ಪೊಲೀಸರು ಕಾರಣ ಇಲ್ಲದೆ ಕಳ್ಳರ ಗುಂಪೆಂದು ತಿಳಿದು ಗುಂಡು ಹಾರಿಸಿದರೆಂದು ಹೇಳಲಾಗಿದೆ.

ಕಾಗದ ರವಾನೆಗೆ ನಿರ್ಬಂಧ

ಬೆಂಗಳೂರು ೧೬

ಮೈಸೂರು ಕಾಗದದ ಕಾರ್ಖಾನೆಯಲ್ಲಿ ತಯಾರಾದ ಕಾಗದವನ್ನು ಸಂಸ್ಥಾನದಲ್ಲಿ ರವಾನೆ ಪೈಲ್ವೆ ಸಿಲ್ಕಾಬಿನಿಂದಲೂ ಮದರಾಸ್ ಅಧಿಪತ್ಯದ ಹೊರಗಡೆ, ಅಥವಾ ಬೆಳಗಾಂ, ಬಾಗಲಕೋಟೆ, ರಾಯಚೂರು ಈ ಸ್ಥಳಗಳಿಂದಾಚೆಗೆ ಸರ್ಕಾರದ ಅನುಮತಿಯಿಲ್ಲದೆ ರವಾನಿಸಕೂಡದೆಂದೂ, ಈ ಆಜ್ಞೆಯು ಮೈಸೂರು ಪ್ರದೇಶಗಳಿಗೆ ರವಾನಿಸುವುದಕ್ಕೂ, ಮದರಾಸ್ ಅಧಿಪತ್ಯದಲ್ಲಿ ಬೆಳಗಾಂ, ಬಾಗಲಕೋಟೆ ಮತ್ತು ರಾಯಚೂರು ದಕ್ಷಿಣಭಾಗಕ್ಕೂ ಅನ್ವಯಿಸುವುದಿಲ್ಲವೆಂದು ಸರ್ಕಾರವು ಆಜ್ಞೆಮಾಡಿದೆ.

ಮೂಳೆ ಸಾಗಿಸಕೂಡದು

ಮೈಸೂರು ಜಿಲ್ಲೆಯಿಂದ ಯಾವ ಪ್ರದೇಶದಿಂದಲೂ ಹೊರಗಡೆಗೆ ರಹದಾರಿಯಿಲ್ಲದೆ ಎಲುಬು ಮೂಳೆಗಳನ್ನು ಕಳುಹಿಸಕೂಡದೆಂದು ಭಾರತ ರಕ್ಷಣಾ ಶಾಸನದ ಪ್ರಕಾರ ಸರ್ಕಾರವು ಆಜ್ಞೆಯಿತ್ತಿದೆ.

ಅಸಿಸ್ಟೆಂಟ್ ಕಂಟ್ರೋಲರ ನೇಮಕ

ಆಹಾರ ಶಾಖೆಯಲ್ಲಿ ಸರ್ವಶ್ರೀ ಎ. ಜೆ. ಶ್ರೀ ಕೆ. ನರಸಿಂಹ ಮತ್ತು ಶ್ರೀ ವಿ. ಚಕ್ಕಣ್ಣ ಇವರುಗಳನ್ನು ಅಸಿಸ್ಟೆಂಟ್ ಕಂಟ್ರೋಲರುಗಳನ್ನಾಗಿ ನೇಮಕ ಮಾಡಲಾಗಿದೆ.

ಆಹಾರ ಸಮ್ಮೇಳನಕ್ಕೆ ಅನುಮತಿ

ಬೆಂಗಳೂರಿನಲ್ಲಿ ೨೩ ನೇ ತಾ|| ಆಹಾರ ಸಮ್ಮೇಳನ ನಡೆಸಲು ಶ್ರೀ ನಾಗಪ್ಪನವರಿಗೆ ಜಿಲ್ಲಾಧಿಕಾರಿಗಳು ಅನುಮತಿ ಕೊಟ್ಟಿದ್ದಾರೆ.

ಕೋರ್ಟಿನ ನಡವಳಿಕೆಗೆ ತೊಂದರೆ ಕೊಟ್ಟದ್ದಕ್ಕೆ ಶಿಕ್ಷೆ

ಕ್ರಿಮಿನಲ್ ಕೇಸಿನ ನ್ಯಾಯಸ್ಥಾನದ ನಡವಳಿಕೆಗಳಿಗೆ ತೊಂದರೆಯುಂಟುಮಾಡಿದ ರಿಂದ ಅವಾಚ್ಯ ಮೇಲೆ ಸಂಪಂಗರಾಮಯ್ಯ ಬಿ. ಶ್ರೀನಿವಾಸಯ್ಯ ಎಂಬುವರಿಗೆ ೫೦ ಮ್ಯಾಜಿಸ್ಟ್ರೇಟರು ೧ ತಿಂಗಳ ಸಾದಾ ಶಿಕ್ಷೆ ವಿಧಿಸಿದರು.

ಇಟಾಲಿಯನ್ನರಿಗೆ ಎಚ್ಚರಿಕೆ

ಜರ್ಮನ್ ಮಿಲಿಟರಿ ಅಧಿಕಾರಿಗಳಿಗೆ ಶಸ್ತ್ರಾಸ್ತ್ರ ನೀಡದ ಇಟಾಲಿಯನ್ನರನ್ನು ಮರಣದಂಡನೆಗೆ ಗುರಿಪಡಿಸಲಾಗುವುದೆಂದು ಜರ್ಮನ್ ಅಧೀನದಲ್ಲಿರುವ ರೋಮ್ ರೇಡಿಯೋ ಎಚ್ಚರಿಕೆ ಕೊಟ್ಟಿದೆ.

ಮಿತ್ರ ಸೈನ್ಯ ಕತ್ತರಿಸಲು ಜರ್ಮನ್ ಯತ್ನ

ಜರ್ಮನರು ಮಿತ್ರ ಪಕ್ಷದ ಸೈನ್ಯಗಳನ್ನು ಪ್ರತ್ಯೇಕಿಸಲು ಉದ್ದೇಶಿಸಿದ್ದ ಪ್ರಯತ್ನ ವಿಫಲವಾಯಿತು.

ಆಹಾರಪರಿಸ್ಥಿತಿ ಬಗ್ಗೆ ಸರ್ಕಾರ ಗಮನಿಸಬೇಕಾದ ಅಂಶಗಳು

ಮೈಸೂರು ೧೬

ಶ್ರೀ ಜೆ. ಸಿ. ನಾಗಪ್ಪನವರು ಆಹಾರ ಪರಿಸ್ಥಿತಿ ಬಗ್ಗೆ ಒಂದು ಪ್ರಕಟನೆ ಹೊರಡಿಸಿದ್ದಾರೆ —

"ಹೊಸ ಆಹಾರ ಶಾಸನದ ಪ್ರಕಾರ ಜನರು ತಮ್ಮ ಬೆಳೆಯುಳ್ಳ ಹೆಚ್ಚಿನ ದವಸಗಳನ್ನು ಸರ್ಕಾರದ ಉಗ್ರಾಣಗಳಿಗೆ ತಂದೊಪ್ಪಿಸುವ ಕಾಲಾವಧಿ ಮುಗಿಯುತ್ತಾ ಬಂತು. ಆದ್ದರಿಂದ ಸರ್ಕಾರದವರು ಈ ಅಂಶಗಳಿಗೆ ತೀವ್ರ ಗಮನ ಕೊಡಬೇಕೆಂದು ಕೇಳುತ್ತೇನೆ.

೧. ದವಸಗಳನ್ನು ಮಾರುವ ಬೆಲೆ ಕಂಟ್ರೋಲು ಬೆಲೆಗಿಂತ ದರಕ್ಕೆ ಮಾರುವುದು ಕಷ್ಟವಾದರೆ ಪಲ್ಲ ೧ಕ್ಕೆ ೮ ಆಣೆಗಿಂತ ಹೆಚ್ಚಿಗೆ ಮಾರುವುದು ಧರ್ಮವಲ್ಲ.

೨. ಜನರು ಸರ್ಕಾರದ ಕೋರಿಕೆಗೆ ದವಸ ತಂದು ಹಾಕಿದ ತಕ್ಷಣವೇ ಅವರಿಗೆ ಹಣ ಪಾವತಿಯಾಗಬೇಕು ಮತ್ತು ತಂದಾಯ ಮುಂತಾದ ಬಾಕಿಗಳಿಗಾಗಿ ದವಸದ ಹಣವನ್ನು ಮುರಿದುಕೊಳ್ಳಕೂಡದು.

೩. ಜನರು ತಮ್ಮ ಊರಿನಿಂದ ಸರ್ಕಾರದ ಕೋರಿಕೆಗೆ ದವಸ ಸಾಗಿಸುವ ವೆಚ್ಚವನ್ನು ಸರ್ಕಾರವೇ ವಹಿಸಬೇಕು.

೪. ಸರಿಯಾದ ಅಳತೆ ಒದಗಿಸುವುದು ಅಗತ್ಯ.

೫. ಪೈರಿನಲ್ಲಿ ಬಂಧಿತರಾಗಿರುವವರು ಸರ್ಕಾರದವರ ದಾಸ್ತಾನುಗಳ ಪಟ್ಟಿಗಳನ್ನು ಕೊಡಲು ಸಾಧ್ಯವಿಲ್ಲದ ಕಾರಣ, ಅವರ ಮನೆಗಳಿಂದ ಹೆಚ್ಚಿನ ದಾಸ್ತಾನನ್ನು ತೆಗೆದುಕೊಂಡು ಹೋಗುವ ಸಂದರ್ಭಗಳಲ್ಲಿ, ಅವರು ಕಮ್ಯಾಂಡಿಯರಿಂಗ್ ಪರಿಸ್ಥಿತಿಗಳ ನ್ಯಾಯವಾಗಿ ನಡೆದುಕೊಳ್ಳಲಿಲ್ಲವೆಂಬ ಕಾರಣದಿಂದ ಸರ್ಕಾರದವರು ಬೆಲೆ ಮತ್ತು ಅಂಥವರ ಜಮೀನು ಪಂಚಾಯತಿಗಳಿಗೆ ಅವಶ್ಯಕವಾಗುವ ಹೆಚ್ಚಿನ ದಾಸ್ತಾನಿನ ಅವಶ್ಯಕ ಪತ್ರಿಕೆ ವಿಷಯಾಂಶಗಳನ್ನು ಅವರಿಗೆ ತಪ್ಪಿಸಲಾಗದು.

ಈ ಅಂಶಗಳಿಗೆ ಸರ್ಕಾರವು ತಕ್ಷಣ ಗಮನ ಕೊಟ್ಟರೆ, ಹೊಸ ಆಹಾರ ಶಾಸನದ ಉದ್ದೇಶವು ನೆರವೇರುವುದು."

RETURN TICKET TO RADIANT YOUTH AT

New Royal Dispensary

Ashoka Road, Mysore.

Edited, printed and published by A. R. Nagarajan, at the Sadhvi Press, D.Subbiah Road, Mysore.

ಸುಗ್ಗಿ ಫಸಲನ್ನು ಪತ್ತೋಟಿಗೆ ತೆಗೆದುಕೊಳ್ಳಲಾಗುವುದು

ಆಹಾರ ಧಾನ್ಯಗಳನ್ನು ಆದಷ್ಟು ಉಚಿತವಾಗಿ ಉಪಯೋಗಿಸಿಕೊಂಡು ಹಂಚಲು ಸಾಧ್ಯವಾಗುವಂತೆ, ಎಲ್ಲ ಪ್ರಾಂತ್ಯಗಳೂ, ಸಂಸ್ಥಾನಗಳೂ ಧಾನ್ಯ ಕೊಳ್ಳುವ ಏರ್ಪಾಟನ್ನು ಜಾಗ್ರತೆ ಮುಗಿಸಬೇಕೆಂದು ಇಂಡಿಯಾ ಸರ್ಕಾರದವರು ಸೂಚಿಸಿದ್ದಾರೆ ಇದರಿಂದ ಇಂಡಿಯಾ ಸರ್ಕಾರದವರು ಮುಂದಿನ ಸುಗ್ಗಿ ಆದಕೂಡಲೇ ಹರೀಫಸಲನ್ನು ಪತ್ತೋಟಿಗೆ ತೆಗೆದುಕೊಳ್ಳಲು ಸಾಧ್ಯವಾಗುತ್ತೆಂದು ತಿಳಿಸಿದ್ದಾರೆ

ಮಂತ್ರಿಗಳ ಬಂಧನ

ಬಡೊಗ್ಲಿಯೊ ಸರ್ಕಾರದ ಎಲ್ಲಾ ಮಂತ್ರಿಗಳನ್ನೂ ಜರ್ಮನರು ದಸ್ತಗಿರಿ ಮಾಡಿರುವುದಾಗಿ ವರದಿಯಾಗಿದೆ.

ಕ್ಷುದ್ಬಾಧೆಯಿಂದ ೪೧ ಮಂದಿ ಮರಣ

ಕಲ್ಕತ್ತಾ ಆಸ್ಪತ್ರೆಗೆ ಹೊಟ್ಟೆಗಿಲ್ಲದಿದ್ದ ೧೫೭ ಜನ ಅನಾಥರನ್ನು ಸೇರಿಸಲಾಯ್ತು. ೪೧ ಮಂದಿ ಸತ್ತರು

ಬಂಗಾಳ ಕ್ಷಾಮ ನಿವಾರಣೆಗೆ ಅಮೆರಿಕದ ಬೆಂಬಲ

ಬಂಗಾಳದ ಕ್ಷಾಮ ಪರಿಸ್ಥಿತಿಯನ್ನು ನಿವಾರಣೆಮಾಡಲು ಬ್ರಿ|| ಮತ್ತು ಭಾರತೀ ಅಧಿಕಾರಿಗಳು ನಡೆಸುತ್ತಿರುವ ಪ್ರಯತ್ನಗಳಿಗೆ ಅಮೆರಿಕವು ಸೂಕ್ತವಾದ ಸರ್ವ ಬೆಂಬಲವನ್ನೂ ಕೊಡುವುದಾಗಿ ಅಧ್ಯಕ್ಷ ರೂಸ್ವೆಲ್ಟರು ಹೇಳಿರುವ ಭರವಸೆಯನ್ನು ಅಮೆರಿಕ ಕಾನ್ಸಲ್ ಜನರಲ್‌ರು ಕಲ್ಕತ್ತಾ ನೇತಾರರಿಗೆ ತಿಳಿಸಿದ್ದಾರೆ.

ಜರ್ಮನ್-ಜಪಾನ್ ಒಪ್ಪಂದಕ್ಕೆ ಕುಂದುಕವಿಲ್ಲ

ಇಟಲಿಯು ಯಾವ ಸಂಕಷ್ಟಕ್ಕೆ ಇಳಿದ ಶರಣಾಗತಿಯಿಂದ ತ್ರಿರಾಷ್ಟ್ರ ಒಪ್ಪಂದಕ್ಕೆ ಯಾವ ಅಪೋಹವೂ ಇಲ್ಲವೆಂದೂ ಜರ್ಮನಿ ಮತ್ತು ಜಪಾನ್ ಈಗ ತಮ್ಮ ಪೂರ್ಣ ಬಲದೊಂದಿಗೆ ಯುದ್ಧ ಮುಂದುವರಿಸುವುದಾಗಿ ಘೋಷಣೆಯೊಂದನ್ನು ಹೊರಡಿಸಿದೆ

ಫ್ರ್ಯಾನ್ಸ್ ಹೊರಭಾಗದಲ್ಲಿ ಮಿತ್ರ ಧಾಳಿ

ಅಮೆರಿಕ ಫ್ಲೈಯಿಂಗ್ ಫಾರ್ಟ್ರೆಸ್ ವಿಮಾನಗಳು ಉತ್ತರ ಫ್ರ್ಯಾನ್ಸಿಗೆ ಹೋಗಿ ಪ್ಯಾರಿಸ್ಸಿನ ಹೊರಭಾಗದಲ್ಲಿರುವ ಜರ್ಮನರ ವಿಮಾನ ಕಾರ್ಖಾನೆಗಳ ಮೇಲೆ ಉಗ್ರಧಾಳಿ ನಡೆಸಿದವು.

೪೫ ಜಪಾನ್ ದೋಣಿಗಳ ನಾಶ

ಬ್ರಿ|| ವಿಮಾನಗಳು ಅರಕಾನ್ ಮತ್ತು ಇರಾವಡಿ ಪ್ರದೇಶಗಳ ಮೇಲೆ ಧಾಳಿಮಾಡಿ, ಕಾರ್ಖಾನೆಗಳ ಮೇಲೆ ಬಾಂಬುಗಳನ್ನು ಹಾಕಿದುವು. ಮಾಯೂ ನದಿ ಮೇಲೆ ನಡೆಸಿದ ಧಾಳಿಯಲ್ಲಿ ೪೫ ಜಪಾನ್ ದೋಣಿಗಳು ಮುಳುಗಿ ೩೦೦ ಸೈನಿಕರು ನೀರುಪಾಲಾದರು

ಇಟಲಿಯಲ್ಲಿ ಮುಸೋಲಿನಿ ಫ್ಯಾಸಿಸ್ಟ್ ಅಧಿಕಾರ

ಇಟಲಿಯಲ್ಲಿ ಫ್ಯಾಸಿಸ್ಟ್ ಅಧಿಕಾರ ಪೂರ್ಣಾಧಿಕಾರ್ಯವನ್ನು ತಾವು ವಹಿಸಿರುವುದಾಗಿ ಮುಸೋಲಿನಿಯವರು ಜರ್ಮನರ ಅಧೀನದಲ್ಲಿರುವ ರೋಂ ರೇಡಿಯೋದಿಂದ ತಿಳಿಸುತ್ತಾರೆ ರೋಂನಲ್ಲಿ ಸರ್ಕಾರದ ಮುಖ್ಯ ಸ್ಥಾನಗಳನ್ನು ಫ್ಯಾಸಿಸ್ಟ್ ಅಧಿಕಾರಿಗಳು ವಹಿಸಿರುವರೆಂದು ವರದಿಯಾಗಿದೆ. ನೈಕಲ್ ಕವಾಲನವರನ್ನು ಮಂತ್ರಿಗಳ ಸ್ಥಾನದಲ್ಲಿ ನೇಮಿಸಲಾಗಿದೆಯೆಂದೂ, ಈಗಿನ ಮಿಲಿಟರಿ ಪರಿಸ್ಥಿತಿಯಲ್ಲಿ ಈ ಮಂತ್ರಿಗಳು ತಮ್ಮ ಕರ್ತವ್ಯ ನಡೆಸಲು ಅಸಮರ್ಥರೆಂಬುದಾಗಿ ತಿಳಿಸಲಾಗಿದೆ

ಕೀವ್ ಕಡೆಗೆ ಮುಂದೊತ್ತು

ರಷ್ಯನ್ ಸೈನ್ಯಗಳು ಕೀವ್ ಕಡೆಗೆ ನುಗ್ಗುತ್ತಾ ಈಶಾನ್ಯದಲ್ಲಿ ೭೫ ಮೈಲಿ ದೂರದ ಮುಖ್ಯ ಸ್ಥಳವಾದ ಜಂಕ್ಷನ್ ಒಂದನ್ನು ಹಿಡಿದರು.

ಮಾರ್ಷಲ್ ಸ್ಟಾಲಿನರು ಒಂದು ದಿನ ಕಳೆದು, ಈ ಪಟ್ಟಣವು ಕೀವ್‌ನಗೆ ಅತಿ ಮುಖ್ಯವಾದದ್ದೆಂದೂ, ಇದರ ರಷ್ಯನರ ಹಿಡಿದದ್ದರಿಂದ ಬಲವಾದ ನೆಲೆಯೊಂದು ದೊರೆತಿದೆಯೆಂದೂ ತಿಳಿಸಿದರು

ಯುಗೋಸ್ಲೇವ್ ಗೊರಿಲ್ಲಾಗಳ ಚಟುವಟಿಕೆ

ಪೂರ್ವ ಬೋಸ್ನಿಯಾದಲ್ಲಿರುವ ಗೊಜೆಲ್ ಎಂಬ ನಗರವನ್ನು ಯುಗೋಸ್ಲೇವ್ ದೇಶಾಭಿಮಾನಿಗಳು ವಶಪಡಿಸಿಕೊಂಡಿರುವರೆಂದೂ, ಅವರು ಬೆಲ್‌ಗ್ರೇಡ್ ಮತ್ತು ಸಾಲೋನಿಕಾ ರೈಲ್ವೆ ಸಂಚಾರಮಾರ್ಗವನ್ನು ಕತ್ತರಿಸಿದರೆಂದೂ ವರದಿಯಾಗಿದೆ.

ಸ್ವಿಟ್ಜರ್ಲೆಂಡ್ ಗಡಿಯನ್ನು ಮುಚ್ಚಿದೆ

ಸ್ವಿಟ್ಜರ್ಲೆಂಡನ್ನು ಎಲ್ಲ ಭಾಗಗಳಿಂದ ಜರ್ಮನ್ ಆಕ್ರಮಣಾಧಿಕಾರಿಗಳು ಮುಚ್ಚಿ, ಹೊರದೇಶದ ವ್ಯವಹಾರಗಳನ್ನು ಕತ್ತರಿಸಿದರೆಂದು ಸ್ವಿಸ್ ರೇಡಿಯೋ ತಿಳಿಸುತ್ತದೆ.

FROM 15-9-43 Daily 3 shows

Thief of Bagdad (in magic Technicolor)

with MYSORE SABU

AT NEW OPERA TALKIES

Next Change - "SHARADA" in Hindi

ಸ್ತ್ರೀಯರ ಸೌಖ್ಯಕ್ಕಾಗಿ

೧೯೧೯ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರ್ಯಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಸ್ವಾಮಿಯ್ಯ ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ. - ಚಿಲ್ಲರೆಯಾಗಿ ಯಂತ್ರದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಕ್ಕರೆ ಜಿಲ್ಲೆಗಳ ಮತ್ತು ಸಂಗಸೇಟ್ ಪೋಸ್ಟ್ ಆಫೀಸಿನಲ್ಲೂ ಅಕ್ಕಿಯೂ ಮತ್ತು ೧ ರೂಗೆ ೨ ಅವೆ ಸದ ದೊರೆಯುತ್ತೆ.

ಸಂಪುಟ ೨] ಶನಿವಾರ ೧೮--೯--೪೩ [ಸಂಚಿಕೆ ೫೭

ಭಾರತ ಸ್ವಾತಂತ್ರ್ಯಕ್ಕೆ ಎಲ್ಲರು ಪ್ರಯತ್ನಿಸಬೇಕು

ಡಾಲ್ಮೇಷಿಯನ್ ತೀರದಲ್ಲಿಯ ರೇವು ಯುಗೋಸ್ಲಾವ್ ವಶ?

ರಷ್ಯನ್ ಪಡೆಗಳು ನೊವೆರಸಿಸ್ಕ್ ವಶಪಡಿಸಿಕೊಂಡಿವೆ

ಚಾಮರಾಜ ಮೊಹಲ್ಲಾ ಆಹಾರ ಸಮಿತಿ

ಮೈಸೂರು ೧೮

ನಿನ್ನೆ ಸಾಯಂಕಾಲ ೭ ಚಾಮರಾಜ ಮೊಹಲ್ಲಾದ ನಿವಾಸಿಗಳ ಒಂದು ಸಾರ್ವಜನಿಕಸಭೆಯು ದೇಶೀಯ ವಿದ್ಯಾಶಾಲೆಯಲ್ಲಿ ಸೇರಿತ್ತು. ೧೫೦ ಜನಗಳುಳ್ಳ ಚಾಮರಾಜ ಮೊಹಲ್ಲಾ ಜನತೆಯ ಆಹಾರ ಸಮಿತಿಯನ್ನು ಚುನಾಯಿಸಬೇಕೆಂದು ನಿರ್ಧಾರವಾಯಿತು. ಅವರಲ್ಲಿ ೯ ಜನರನ್ನು ಅಲ್ಲಿಯೇ ಸ್ಥಿರವಾಗಿ ಚುನಾಯಿಸಿ ಇನ್ನು ೬ ಜನ ಸದಸ್ಯರನ್ನು ಸೇರಿಸಿಕೊಳ್ಳುವ ಹಕ್ಕನ್ನು ಆ ಸಮಿತಿಗೆ ಕೊಟ್ಟಿದೆ.

ಸ್ವಯಂ ಸೇವಕರ ದಳಕ್ಕೆ ಶ್ರೀ ಪಿ ಬಿ. ಶ್ರೀನಿವಾಸ ಮೂರ್ತಿಗಳು ನಾಯಕರಾಗಿ ನೇಮಿಸಲ್ಪಟ್ಟಿರುವರು ಸ್ವಯಂ ಸೇವಕರಾಗ ಬಯಸುವವರು ಅವರಿಗೆ ಹೆಸರನ್ನು ಕೊಡಬೇಕೆಂದು ಕೋರಿದೆ

ಮೈಸೂರು ನಗರದ ರೇಷನಿಂಗ್ ಅಧಿಕಾರಿಗಳು

ರಾಜಧಾನಿಯ ಪೌರ ಸಭಾಧ್ಯಕ್ಷರಾದ ಶ್ರೀ. ಬಿ. ಎಸ್ ರಾಘವೇಂದ್ರರಾಯರನ್ನು ಈಗಿನ ತಮ್ಮ ಹುದ್ದೆಯ ಜೊತೆಗೆ ಮೈಸೂರು ನಗರದ ರೇಷನಿಂಗ್ ಅಧಿಕಾರಿಗಳನ್ನಾಗಿಯೂ ನೇಮಕ ಮಾಡಲಾಗುವುದೆಂದು ಕೇಳಲಾಗಿದೆ

ಬಾವಿಗೆ ಬಿದ್ದು ಮರಣ

ಈ ದಿನ ಬೆಳಗ್ಗೆ ರಾಜಧಾನಿಯ ಹಳ್ಳದ ಕೇರಿಯ ಒಂದು ಮನೆಯಲ್ಲಿ ಒಬ್ಬ ಬ್ರಾಹ್ಮಣನು ಬಾವಿಗೆ ಬಿದ್ದು ಮರಣ ಹೊಂದಿರುವ ಪೋಲೀಸರು ಮೃತನ ಶರೀರದ ಮಹಜರು ನಡೆಸಿದರು.

ಕೈಲ್ಸೆಕೇಂದ್ರವು ರಷ್ಯನರ ವಶ

ಯುಕ್ರೇನಿನ ರಾಜಧಾನಿಗೆ ೬೦ ಮೈಲಿ ದೂರದಲ್ಲಿರುವ ರಾಮ್ನೆ ರೈಲ್ವೆಕೇಂದ್ರವನ್ನು ರಷ್ಯನರು ವಶಪಡಿಸಿಕೊಂಡಿರುವರು ಮತ್ತು ಕೀವ್ ನಗರದ ಹೊರ ರಕ್ಷಣೆಗಳಲ್ಲಿ ಭಯಂಕರ ಯುದ್ಧ ನಡೆಯುತ್ತಿದ್ದರೆ, ಆ ರ ಮುನ್ನಡೆ ತಡೆಗಟ್ಟಲು ಜರ್ಮನರು ಹೊಸ ಸೈನ್ಯಗಳನ್ನು ಕಳಿಸುತ್ತಿದ್ದಾರೆ

ದೆಲ್ಲಿಯಲ್ಲಿ ಪ್ರದರ್ಶನ

ಜ|| ವೇವೆಲ್ ಅರ್ನೋಲ್ಡರು ತಮ್ಮ ಪರಾಕ ಸೇನೆಯೊಡನೆ ಟ್ಯುನೀಸಿಯಾ ಯುದ್ಧದಲ್ಲಿ ಭಾರತೀಯ ಸೈನ್ಯಕ್ಕೆ ದೊರೆತ ವರನ್ನು ಅವರು ಈ ನಾಳೆ ೧೮ ರಿಂ ೨೪ನೇ ತಾ|| ವರೆಗೆ ದೆಲ್ಲಿಯಲ್ಲಿ ಪ್ರದರ್ಶಿಸಲ್ಪಡುವವು.

ದಕ್ಷಿಣಗ್ರೀಸ್ ಮೇಲೆ ಧಾಳಿ

ದಕ್ಷಿಣ ಗ್ರೀಸಿನಲ್ಲಿ ಮಿತ್ರರ್ನನ್ನು ಬಾಂಬರುಗಳು ರೈಲ್ವೆ ಗುರಿಗಳ ಮೇಲೆ ಧಾಳಿ ನಡೆಸುವ ಸಾಲೋನೀಕದಲ್ಲಿ ಮಿತ್ರ ಸೈನಿಕರನ್ನು ಪ್ರತಿಭಟಿಸಲು ಮೈಲಿಗಳಿಗೆ ಬಿಟ್ಟಿರುವರು ಬ್ರಿಟನ್ ಮತ್ತು ಅಮೇರಿಕ ಸೈನ್ಯಗಳು ಜೊತೆಗೆ ಸಾಗುತ್ತಿವೆ ಜರ್ಮನರನ್ನು ಬಾಲ್ಕನ್ನಿನಿಂದ ಓಡಿಸಿವೆ "ಬಲಾಢ್ಯನಾದ ಶತ್ರುವಿನೊಡನೆ ಕಾದಾಡಬೇಕೆಂದು ನಾವು ಮೊದಲೇ ತಿಳಿದಿದ್ದೆವು" ಎಂದು ಅಮೇರಿಕಾದ ಯುದ್ಧ ಕಾರ್ಯದರ್ಶಿ ಮಿ|| ಸ್ಟಿಂಸನ್ನರು ತಿಳಿಸಿರುವರೆ

ನೊವೆರಸಿಸ್ಕ್ ಆಕ್ರಮಿಸಲಾಯಿತು

ರಷ್ಯನರು ಕಪ್ಪು ಸಮುದ್ರದ ಮುಖ್ಯ ರೇವಾದ ನೊವೆರಸಿಸ್ಕನ್ನು ಸ್ವಾಧೀನಪಡಿಸಿಕೊಂಡರೆಂದು ಸ್ಟಾಲಿನ್ರು ತಿಳಿಸಿರುವರು. ನೊವೆರಸಿಸ್ಕ್ ಹಸ್ತಗತವಾಗುವುದಕ್ಕೆ ಮೊದಲು ರಷ್ಯನ್ ವಿಮಾನ ಮತ್ತು ನೌಕಾ ಪಡೆಗಳು ಉಗ್ರಧಾಳಿ ನಡೆಸಿದವು ಈ ರೇವು ರಷ್ಯನರ ವಶವಾದ್ದರಿಂದ, ಜರ್ಮನರು ಕ್ರಿಮಿಯಾ ನೌಕಾನೆಲೆಯನ್ನು ಉಪಯೋಗಿಸಲು ಅವಕಾಶವಿಲ್ಲದಾಯಿತು. ಅಲ್ಲದೆ ಆ ವರ ಒಂದೊಂದು ಪರಿಸರ ನೆಲೆಯೂ ನಷ್ಟವಾಗಿದೆ ಜರ್ಮನರು ಸಮುದ್ರ ಮಾರ್ಗವಾಗಿ ಹಿಮ್ಮೆಟ್ಟಲು ಇದ್ದ ಮಾರ್ಗವೂ ಕೂಡ ಕಡಿದುಹೋಗಿದೆ

ಬ್ರಿಟಿಷ್ ಅಮೇರಿಕನ್ ಸೇನೆಗಳು ಸಂಧಿಸಿವೆ

ಸಾಲೆರ್ನೊ ಪ್ರದೇಶದಲ್ಲಿ ಬ್ರಿಟನ ೮ನೇ ಮತ್ತು ೫ನೇ ಸೇನೆಗಳು ಸಂಧಿಸಿರುವುವು ೫ನೇ ಸೇನೆಯು ತೀವ್ರ ಕದನ ನಡೆಸಿ, ವಶಪಡಿಸಿಕೊಂಡು ಹಿಂದಿರುಗಿದ್ದರೂ, ಶತ್ರುವಿನ ಜಾಗ ಬಿಟ್ಟುಕೊಟ್ಟರೂ ತನ್ನ ಸ್ಥಾನಗಳನ್ನು ಭದ್ರಪಡಿಸಿರುವುದಾಗಿ ತಿಳಿಸಿದೆ ಸಾಲೆರ್ನೊ ಕಪ್ಪು ನೆಲೆಯ ಮೇಲೆ ಎ ಸಾವಿರಕ್ಕಿಂತ ಹೆಚ್ಚು ವಿಮಾನಗಳು ಧಾಳಿಮಾಡಿ ೬೦೦ ಟನ್ ಬಾಂಬುಗಳನ್ನು ಸುರಿಸಿವೆಯೆಂದೂ, ೮ನೇ ಸೇನೆಯು ಸಾಲೆರ್ನೊಗೆ ೫೦ ಮೈಲಿ ದೂರದಲ್ಲಿರುವುದೆಂದೂ ತಿಳಿಯಬರುತ್ತದೆ

ಜಪಾನೀಯರ ಪರಿಸ್ಥಿತಿ

ಮಿತ್ರಸೈನ್ಯಗಳು ಲೀ ನೆಲೆಯ ಸಮೀಪದಲ್ಲಿ ಮುತ್ತಿಗೆಗೆ ಪ್ರಾರಂಭಿಸಿವೆ ಮಿತ್ರರ ಮುನ್ನುಗ್ಗುವಿಕೆಯನ್ನು ತಡೆಯಲಾರದೆ ದತ್ತ್ರಗಳು ಹಿಂದಿನಗಳನ್ನು ಉಪಯೋಗಿಸುತ್ತಿರುವುದಾಗಿ ಅವರು ಅವನ್ನೆಲ್ಲಾ ನಿರ್ಮೂಲವಾಗುತ್ತಿವೆ ಎಂದು ಅಲ್ಲಿನ ವಾರ್ತಾ ಪತ್ರಿಕೆಗಳು ತಿಳಿಸಿವೆ

ಮಿತ್ರಸೇನೆಗಳು ಲೀ ರಕ್ಷಣಾಪ್ರದೇಶದ ಒಳಭಾಗಗಳಲ್ಲಿ ಮುಖ್ಯ ಜಪಾನ್ಯ ಸ್ಥಾನಗಳನ್ನು ವಶಪಡಿಸಿಕೊಂಡಿವೆ

ಭಾರತದ ಸ್ವಾತಂತ್ರ್ಯವು ಪ್ರತಿಯೊಬ್ಬ ಪ್ರಜೆಯದು

ಚೀನಾದ ಸುಪ್ರಸಿದ್ಧ ಗ್ರಂಥಕರ್ತರಾದ ಮಿ|| ಲಿನ್ ಯುಟಾಂಗರು ಅಮೇರಿಕಾದಲ್ಲಿರುವ ಇಂಡಿಯಾ ಲೀಗಿನ ಪ್ರೆಸಿಡೆಂಟರಾದ ಶ್ರೀ. ಜೆ. ಜೆ. ಸಿಂಗ್‌ರವರಿಗೆ ಈ ರೀತಿ ತಿಳಿಸಿದ್ದಾರೆ:- "ನೀವು ನನ್ನನ್ನು ಇಂಡಿಯಾ ಲೀಗಿನ ಗೌರವ ಸದಸ್ಯರನ್ನಾಗಿ ಆರಿಸಿಕೊಂಡಿರುವಿರಿ. ಅದರೆ ಈಗ ನೀವು ಭಾರತದಲ್ಲಿನ ಜನಾಂಗಗಳ ಒಟ್ಟಿಗೂ ದುಡಿತದನ್ನು ಯೋಚಿಸಿರುವಿರೆಂದು ನಂಬುತ್ತೇನೆ ಚೀನಾದ ಸ್ವಾತಂತ್ರ್ಯವು ಪ್ರತಿಯೊಬ್ಬನದಾಗಿದೆ ಅದನ್ನು ಪಡೆಯಲು ಪ್ರಯತ್ನಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ ಯಾವ ಷರತ್ತು ಇಲ್ಲದೆ ಭಾರತಕ್ಕೆ ಸ್ವಾತಂತ್ರ್ಯ ಲಭಿಸಬೇಕೆಂಬುದೇ ನನ್ನ ಆಕಾಂಕ್ಷೆಯೂ ಆಗಿದೆ"

ಇಟಲಿ ನೌಕೆಗಳು ಬಂದಿವೆ

ಅಲೆಗ್ಸಾಂಡ್ರಿಯಾಕ್ಕೆ ಬ್ರಿಟನ್ ಯುದ್ಧ ನೌಕೆಗಳ ರಕ್ಷಣೆಯಲ್ಲಿ ಇಟಲಿ ನೌಕೆಗಳ ನಾಲ್ಕಾರಿಂದ ಬಂದಿರುತ್ತಿವೆ ಸಿಸಿಲಿಯಲ್ಲಿ ರೂಪ ಮಾಲ್ಟಾವೊಳಕ್ಕೆ ೩೩ ಇಟಲಿಯವರ ನೌಕೆಗಳು ಬಂದಿರುತ್ತವೆ

---

೫೫ ಶತ್ರು ವಿಮಾನ ನಾಶ

ಜಪಾನರ ಘಾಂ ವಿಮಾನ ನೆಲೆಯಾದ ವೀವಾಕಿನ ಮೇಲೆ ಘೋರ ಕಾಳಗವೊಂದು ನಡೆದು ೫೫ ಜಪಾನ್ ವಿಮಾನಗಳನ್ನು ನಾಶಮಾಡಲಾಯಿತು.

ಡಾಲ್ಮೇಷಿಯಾ ರೇವು ಯುಗೋಸ್ಲಾವರ ವಶ

ಡಾಲ್ಮೇಷಿಯಾ ತೀರದಲ್ಲಿರುವ ರೇವೊಂದನ್ನು ಯುಗೋಸ್ಲಾವ್ ವೀರರ ವಶಪಡಿಸಿಕೊಂಡರೆಂದೂ ಅಲ್ಲಿ ಜರ್ಮನಿಗೆ ಮುಖ್ಯನಾದ ರೈಲ್ವೆಯೂ ಸಹ ವಶವಾಯಿತೆಂದೂ ತಿಳಿದು ಬಂದಿದೆ ಇಟಾಲಿಯನ್ ಪಡೆಗಳು ಇವರೊಡನೆ ಸೇರಿ ಯುದ್ಧ ಮಾಡಲು ಮುಂದೆ ಬಂದಿರುವುದರಿಂದ ಸೇರಿಕೊಂಡಿವೆ.

... ರತಕ್ಕೆ ಸಂಪೂರ್ಣ ಸ್ವಾತಂತ್ರ್ಯ

ಭಾರತದ ನೂತನ ವೈಸರಾಯರು ವೇವೆಲ್ಲರು ಲಂಡನ್ನಿನ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ "ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅದರ ಅಧಿಕಾರಿಗಳನ್ನು ಚುನಾಯಿಸುವ ಹಕ್ಕನ್ನು ಸಹಾಯವನ್ನು ನೀಡುವುದಕ್ಕೆ ನನಗೆ ಅಭಿಪ್ರಾಯವಿದೆ. ಬ್ರಿಟಿಷ್ ಪ್ರಜೆಗಳ ಈ ಅಭಿಮತವನ್ನು ನಾನು ತಿಳಿದಿರುವೆ. ಭಾರತಕ್ಕೆ ನಾನು ಹಿಂತಿರುಗಿ ಹೋದ ನಂತರ ಎಂದಿನಂತೆಯೇ ಸಾಮ್ರಾಜ್ಯದ ಜಾಗೃತಿ ಯಶಸ್ವಿಯಾಗಿ ಆಗಬೇಕು ಜಪಾನಿನ ಮೇಲೆ ಯುದ್ಧ ನಡೆಸು ಪ್ರತಿ ದಿನವೂ ಸರ್ಕಾರದ ಮೇಲೆ ಬರುವ ಆರ್ಥಿಕ ಮತ್ತು ಸಾಮಾಜಿಕ ಪ್ರಶ್ನೆಗಳು ಎಂದಿನಂತೆಯೇ ಭಾರತದಲ್ಲಿ ಭಾರತದ ರಾಜಕೀಯ ಪ್ರಗತಿ ಭಾರತದ ಬಗ್ಗೆ ನನಗೆ ಸಂಪೂರ್ಣವಾದ ನಂಬಿಕೆ ಜಪಾನಿನ ವಿಶ್ವಾಸವಿದೆ. ನಾನು ಯೋಧನಾಗಿ ಜಯ ಪಡೆದಿರುವೆನು ಭಾರತ ಸೇನಾ ಪ್ರಭಾವದಿಂದ ನಾನು ಅದಕ್ಕೆ ಚಿರಋಣಿಯಾಗಿದ್ದೇನೆ. ಸಂಯುಕ್ತ ರಾಷ್ಟ್ರಗಳು ಅಂತೆಯೇ ಜಯಶಾಲಿಗಳಾಗಿವೆ. ಜರ್ಮನರನ್ನು ಸಂಪೂರ್ಣ ಸೋಲಿಸಿ, ತಿರುಗಿ ಜಪಾನರನ್ನೂ ಪೂರ್ಣ ಸೋಲಿಸಿ ಯುರೋಪಿನ ತನ್ನ ಸಾಮ್ರಾಜ್ಯದಲ್ಲಿ ಸಮಗಾರಿಕೆ ಸ್ಥಾಪಿಸಬೇಕು ರಾಜಕೀಯ ಸುರಕ್ಷಿತವಾಗುವುದು

ಜಪಾನರ ವಿಮಾನ ನೆಲೆ ಮೇಲೆ ಧಾಳಿ

ಮಿತ್ರ ವಿಮಾನಗಳು ಜಪಾನರ ಪ್ರಮುಖ ವಿಮಾನ ನೆಲೆಯಾದ ವಿವಾಕ್ ಮೇಲೆ ಆಗಾಧ ಧಾಳಿ ನಡೆಸಿದುವು. ೬೦ ಜಪಾನೀ ವಿಮಾನಗಳು ನಾಶವಾದುವು ಮಾರ್ಕಸ್ ಬಳಿಯಿರುವ ನೌಕಾ ಕೇಂದ್ರಗಳ ಮೇಲೆ ಮತ್ತು ಫಿನ್ಸ್‌ಚಾಫೆನ್ ನೆಲೆಯ ಮೇಲೆ ಮಿತ್ರ ವಿಮಾನಗಳು ಧಾಳಿ ಮಾಡಿದವು.

ಟೊಕಿಯೋ ಸಮಾಚಾರ ಸ್ಥಿರವಿದ ಮೂಲಕ ಜಪಾನರು ಆಕ್ರಮಿಸಿದ್ದ ಅನೇಕ ನವ ರಷ್ಯನ್ ಪಡೆಗಳ ಒಟ್ಟಿಗೆ ಆ ಪರ್ವತ ಪ್ರದೇಶಕ್ಕೆ ಮುನ್ನುಗ್ಗುತ್ತಿದ್ದರೆ. ಬ್ಲೇಡು ಮತ್ತು ಕಾಗದವನ್ನು ಮೊದಲಿಗೆ ನೌಕಾ ಯಾನಕ್ಕೆ ಸಂ ಎಸ್. ಎಂ ಕಾಣುವ ಉಂಟಾಗಿರುವ ಕಚ್ಚಾ ಸಾಮಗ್ರಿಗಳನ್ನೂ ಮತ್ತು ಪತ್ರಿಕೆ ಕಾಗದವನ್ನೂ ಅಧಿಕ ಪ್ರಮಾಣದಲ್ಲಿ ಕಡಿಮೆ ಮಾಡುವ ಯುನೈಟೆಡ್ ಸ್ಟೇಟ್ಸ್‌ನಿಂದ ಮಿತ್ರರ ನೌಕೆಗಳಿಂದ ಬ್ಲೇಡುಗಳನ್ನು ಬೇಗನೆ ತರಿಸಿಕೊಳ್ಳಲಾಗುವುದು ಅದಕ್ಕಾಗಿ ಸರಕಾರ ಇತ್ತೀಚಿನ ಅನುಕೂಲತೆಯನ್ನು ಮಾಡಿದೆ.

ಬ್ರಿಯಾನ್ಸ್ಕವು ರಷ್ಯ ಜರ್ಮನರ ವಶದಲ್ಲಿದೆ

ಬರ್ಲಿನಿನಿಂದ ಬಂದ ವಾರ್ತೆ ಪ್ರಕಾರ ರಷ್ಯ ಸರಿಯಾದ ಬ್ರಿಯಾನ್ಸ್ಕ್ ಬಿಟ್ಟಿರುವ ರಷ್ಯನ ಜರ್ಮನರ ವಶದಲ್ಲೇ ಇರುವನೆಂದು, ಜರ್ಮನಿಯು ತಿಳಿಸಿದ ಪ್ರಕಾರ ರಷ್ಯದವರಿಂದ

ಇಟಲಿಯ ಪರವಾದ ಮಿತ್ರ ರಾಷ್ಟ್ರಗಳು ಇಟಲಿಯ ರಾಜನ ಸರಕಾರದ ಜೊತೆ ಸಹಕರಿಸಲು ಆಸಕ್ತಿ ಪ್ರದರ್ಶಿಸಿವೆ ಎಂದು ಜನರಲ್ ಐಸೆನ್‌ಹೋವರ್‌ರವರು ತಿಳಿಸಿರುವರೆಂದು ರೋಮ್ ತಿಳಿಸುತ್ತದೆ

ರೇಷನಿಂಗ್ ವ್ಯವಸ್ಥೆಯಲ್ಲಿ ಜನಗಳಿಗೆ ಹೆಚ್ಚಿನ ಅನುಕೂಲ

ಬೆಂಗಳೂರು ೧೭

ಬೆಂಗಳೂರು ನಗರಸಭೆಯ ವಿಶೇಷ ಸಭೆಯಲ್ಲಿ ರೇಷನಿಂಗ್ ಆಫೀಸರಾದ ಶ್ರೀ ಓ. ವಿ. ನಾರಾಯಣನವರು ಮಾತನಾಡುತ್ತ "ಬೆಂಗಳೂರು ನಗರದಲ್ಲಿ ರೇಷನಿಂಗ್ ವ್ಯವಸ್ಥೆಯನ್ನು ಉತ್ತಮವಾಗಿ ಏರ್ಪಡಿಸಲು ಸಾಧ್ಯವಾದ ಮಟ್ಟಿಗೆ ಪ್ರಯತ್ನ ಪಡುತ್ತಿದ್ದೇವೆ. ರೇಷನಿಂಗ್ ಪದ್ಧತಿಯು ಸಾಧ್ಯವಾದಷ್ಟು ಮಟ್ಟಿಗೆ "ಡೆಮೊಕ್ರಾಟಿಕ್" ಆಗಿ ಮಾಡಬೇಕೆಂಬುದೇ ನಮ್ಮ ಆಶಯ. ಆಹಾರ ಸಮಸ್ಯೆಯು ದೊಡ್ಡ ಸಮಸ್ಯೆಯಾಗಿದೆ. ಮುಂದಿನ ತಿಂಗಳಿಂದ ಹೊಸದಾದ ರೇಷನಿಂಗ್ ವ್ಯವಸ್ಥೆ ತರಲಾಗುವುದು. ನಂತರ ಹೊಸ ನಮೂನೆ ರೇಷನ್ ಕಾರ್ಡ್ ಕೊಡಲಾಗುವುದು. ನಿರ್ದಿಷ್ಟ ಡಿಪೋಗಳಲ್ಲಿಯೇ ಸಾಮಾನು ಕೊಳ್ಳಲು ವ್ಯವಸ್ಥೆ ಮಾಡಲಾಗುವುದು. ಇದಕ್ಕೆ ೪೫ ಸಾವಿರ ಕಾರ್ಡುಗಳು ಸಿದ್ಧ ಮಾಡಲಾಗುವುದು. ಉಳಿದ ೨೦ ಸಾವಿರ ಕಾರ್ಡುಗಳಿಗೆ ನಂಬಿಕೆಗೆ ಅರ್ಹವಾದ ಪರಸ್ಪರ ಸಹಕಾರ ಸಂಘಗಳೂ, ಮತ್ತು ಸುಮಾರು ೩೦ ಡಿಪೋಗಳೂ ಹಂಚುವುವು. ಹಾಗೆ ಈ ಹೊಸ ರೇಷನಿಂಗ್ ಕಾರ್ಡುಗಳು ಮುಂದಿನ ಹೊಸ ರೇಷನ್ ಕಾರ್ಡುಗಳ ಮೂಲಕ ಹಂಚಲಾಗುವುದು. ಅವು ಅಕ್ಟೋಬರ್ ಒಂದನೇ ತಾರೀಖಿನಿಂದ ಜಾರಿಗೆ ಬರಲಿರುವುವು. ಒಂದೊಂದು ಡಿವಿಜನ್ನಿಗೂ ಒಂದೊಂದು ಸೆಂಟ್ರಲ್ ಡಿಪೋ ಇದ್ದು ಉಳಿದ ಡಿಪೋಗಳಿಗೆ ಅಲ್ಲಿಂದ ಸಾಮಗ್ರಿ ಸರಬರಾಜಾಗುವುದು. ಪ್ರತಿ ಡಿಪೋಗಳಿಗೂ ೪ ಮಂದಿ ಖಾಸಗಿ ಮಹನೀಯರು ಭೇಟಿ ಕೊಟ್ಟು ತಪ್ಪು ಸಲಹೆ ಸೂಚಿಸಲು ಅವಕಾಶವಾಗುವುದು. ನಿಮ್ಮ ಪ್ರೀತ್ಯಾದ ಆಸ್ಥೆ ಸಹಕಾರವೂ ಅಗತ್ಯ." ಎಂದು ತಿಳಿಸಿದರು.

ಆಹಾರ ಸಮ್ಮೇಳನ

ಆಹಾರ ಸಮ್ಮೇಳನವು ೨೨ ನೇ ತಾರೀಕು ಬುಧವಾರ ೧೦ ಗಂಟೆಗೆ ಅವಿನ್ಯೂ ರೋಡಿನಲ್ಲಿರುವ ಚಂದ್ರಶೇಖರ್ ಶ್ರೀ ವೆಂಕಟ ರಾಮಯ್ಯನವರ ಛತ್ರದಲ್ಲಿ ನಡೆಯಲಿರುವುದೆಂದು ತಿಳಿದುಬಂದಿದೆ.

ಓಟರುಗಳ ಪಟ್ಟಿಯ ಪರಿಶೀಲನ ಸಭೆ

ಬೆಂಗಳೂರು ನಗರ ಸಭೆಯ ವಿಶೇಷ ಸಭೆಯೊಂದ ಈ ತಿಂಗಳು ೨೨ ನೇ ತಾ|| ಮಧ್ಯಾಹ್ನ ೩ ಗಂಟೆಗೆ ಪೌರ ಸಭಾ ಭವನದಲ್ಲಿ ಸೇರುವುದು. ಮುಂದಿನ ಸಾರ್ವತ್ರಿಕ ಚುನಾವಣೆಗಳಿಗೋಸ್ಕರ ಓಟರುಗಳ ಪಟ್ಟಿಯಲ್ಲಿ ಸೇರಿರುವವರ ಹೆಸರುಗಳನ್ನು ಪರಿಶೀಲಿಸುವ ವಿಚಾರವಾಗಿ ಬಂದಿರುವ ಅರ್ಜಿಗಳನ್ನು ತೀರ್ಮಾನ ಮಾಡಲಾಗುವುದು.

ನ್ಯಾ|| ವಿ|| ಸಮಿತಿಯ ಪ್ರಿವಿಲೆಜ್ ಸಮಿತಿ

ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನ್ಯಾಯ ವಿಧಾಯಕ ಸಭೆಯ ಭವನದಲ್ಲಿ ಮುಂದಿನ ಸೋಮವಾರ ಮತ್ತು ಮಂಗಳವಾರ ಪ್ರಿವಿಲೆಜಸ್ ಸಮಿತಿಯು ಸೇರಲಿರುವುದೆಂದು ತಿಳಿಯುಬರುತ್ತೆ.

ಬಟ್ಟೆ ದರ ಹೆಚ್ಚಿಸಕೂಡದು

"ಬಟ್ಟೆ ಮತ್ತು ನೂಲಿನ ದರಗಳು ಈಗ ಹೆಚ್ಚಾಗಿದೆ. ಆದ್ದರಿಂದ ಬಟ್ಟೆ ಮತ್ತು ನೂಲಿನ ವ್ಯಾಪಾರಿಗಳು ದರಗಳನ್ನು ಹೆಚ್ಚು ಮಾಡಕೂಡದು. ಹಾಗೆ ಮಾಡಿದರೆ ಸೆಪ್ಟೆಂಬರ್ ೮ ರಲ್ಲಿ ಪ್ರಕಟವಾದ ಇಂಡಿಯಾ ಸರ್ಕಾರದ ಆರ್ಡರ್ ಮೀರಿಗೆ ದರಗಳನ್ನು ಹೆಚ್ಚಿಸಿದ್ದಲ್ಲಿ ತಕ್ಕ ಕಾರ್ಯಕ್ರಮ ಕೈಗೊಳ್ಳಲಾಗುವುದು." ಎಂದು ಮೈ|| ಸ|| ಪ್ರಕಟಣಾಧಿಕಾರಿಗಳು ತಿಳಿಸಿರುತ್ತಾರೆ.

ರಿ|| ಪೋ|| ಕಾನ್‌ಸ್ಟೇಬಲ್ ದಸ್ತಗಿರಿ

ಮೈ|| ರಿ|| ಪೋ|| ದಳದ ಅಬ್ದುಲ್ ಲತೀಫ್ ಎಂಬುವನನ್ನು ಮೇ ತಿಂಗಳು ೧೩ ರಿಂದ ಕೆಲಸಕ್ಕೆ ಬಂದೆ ತಪ್ಪಿಸಿಕೊಂಡಿದ್ದನೆಂಬ ಆಪಾದನೆ ಮೇಲೆ ಪೋಲೀಸರು ಅವನನ್ನು ದಸ್ತಗಿರಿಮಾಡಿರುತ್ತಾರೆ.

ಬಿಜಾಪುರದಲ್ಲಿ ಎಂ. ಹೆಚ್. ಷಾರವರು ಪೋ|| ವಶ

ಶ್ರೀ|| ಎಂ. ಹೆಚ್. ಷಾರವರನ್ನು ಮೈ|| ಪೋ|| ಬಿಜಾಪುರದಲ್ಲಿ, ಬಿಜಾಪುರದ ಪೋಲೀಸರಿಗೆ ಒಪ್ಪಿಸಿದರೆಂದು ಸುದ್ದಿ ಬಂದಿದೆ.

ಮಾಜಿ ಕಾನ್‌ಸ್ಟೇಬಲಿಗೆ ಜುಲ್ಮಾನೆ

ಮಾಜಿ ಪೋ|| ಕಾನ್‌ಸ್ಟೇಬಲ್ ವಿ. ವೆಂಕಟಪ್ಪ ಎಂಬುವನ ಮೇಲೆ ಸೈಕಲ್ ಕಳವಿನ ಸಂಬಂಧದಲ್ಲಿ ಇದ್ದ ೩ ಮೊಕದ್ದಮೆಗಳಲ್ಲಿ ಸಿ|| ಮ್ಯಾ|| ಪ್ರತಿಯೊಂದಕ್ಕೂ ತಲಾ ೫೦ ರೂ ದಂಡ ಜುಲ್ಮಾನೆ ವಿಧಿಸಿರುವರು. ಜುಲ್ಮಾನೆ ತಪ್ಪಿದರೆ ಪ್ರತಿಯೊಂದು ಮೊಕದ್ದಮೆಗೂ ಒಂದೊಂದು ತಿಂಗಳು ಕಠಿಣ ಶಿಕ್ಷೆ ಅನುಭವಿಸಲು ಆಜ್ಞೆಯಾಗಿದೆ.

ಕಲ್ಕತ್ತಾಕ್ಕೆ ಧಾನ್ಯ ರವಾನೆ

ಈಚಿಗೆ ಕಲ್ಕತ್ತಕ್ಕೆ ಸೆಪ್ಟೆಂಬರ್ ಮೊದಲಿನ ೧೦ ದಿನಗಳಲ್ಲಿ ೨೫೦೦೦ ಟನ್ನುಗಳಷ್ಟು ಆಹಾರವನ್ನು (ಅಕ್ಕಿ, ಗೋಧಿ) ಇದೇ ಕಾಲದಲ್ಲಿ ದಿನಕ್ಕೆ ೧೭೦೦ ಟನ್ನುಗಳಷ್ಟು ಆಹಾರ ಪದಾರ್ಥಗಳನ್ನು ರೈಲಿನ ಮೂಲಕ ರವಾನಿಸಲಾಗಿದೆಯೆಂದೂ, ಇನ್ನೂ ಹೆಚ್ಚಿನ ದಿನಸಿಗಳು ಹೋಗುತ್ತಿವೆಯೆಂದೂ ತಿಳಿದುಬಂದಿದೆ.

'ಉರ್ದು' ಭಾಷೆ ಐಚ್ಛಿಕ ಭಾಗವಾಗಿ ತೆಗೆದುಕೊಳ್ಳಬಹುದು

ಹೈಸ್ಕೂಲ್‌ಗಳಲ್ಲಿ ಹ್ಯೂಮನಿಸ್ಟಿಕ್ ಗ್ರೂಪ್‌ನಲ್ಲಿ 'ಉರ್ದು' ಭಾಷೆಯನ್ನು ಐಚ್ಛಿಕ ಭಾಗವಾಗಿ ಅಭ್ಯಾಸಮಾಡಲು ಸರ್ಕಾರದವರು ಏರ್ಪಡಿಸಿರುವರು. ೧೯೪೩ ಮತ್ತು ಅಲ್ಲಿಂದ ಮುಂದೆ ನಡೆಯತಕ್ಕ ಪರೀಕ್ಷೆಗಳಿಗೆ 'ಉರ್ದು' ಸೇರಿಸಲ್ಪಡುತ್ತೆ. ೧೯೪೪-೪೫ ನೇ ವರ್ಷದಲ್ಲಿ ಹೈ ಸ್ಕೂಲ್ ದ್ವಿತೀಯ ತರಗತಿಗಳಲ್ಲಿರತಕ್ಕವರು ಉರ್ದುವನ್ನು ಐಚ್ಛಿಕವನ್ನಾಗಿ ತೆಗೆದುಕೊಳ್ಳಬಹುದು. ಆದರೆ, ಉರ್ದು ಮಾತೃ ಭಾಷೆಯಾಗಿರತಕ್ಕವರು ಮತ್ತು ದ್ವಿತೀಯ ಭಾಷೆಯನ್ನಾಗಿ ಅಭ್ಯಾಸ ಮಾಡುತ್ತಿರುವವರು ಇದನ್ನು ಐಚ್ಛಿಕಭಾಗವನ್ನಾಗಿ ತೆಗೆದುಕೊಳ್ಳಲು ಅವಕಾಶವಿಲ್ಲ, ಯಾವ ವಿದ್ಯಾರ್ಥಿಯೂ ಉರ್ದುವನ್ನು ದ್ವಿತೀಯ ಭಾಷೆ ಮತ್ತು ಐಚ್ಛಿಕ ಭಾಗ ಇವೆರಡನ್ನೂ ಒಟ್ಟಿಗೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

ಸತ್ಕಾರ ಕೂಟ

ಮೌ|| ಅ|| ಶ್ರೀ ಕೆ. ಗೋವಿಂದರಾಜಲು ರವರು ನಾಳೆ ದಿನ ಸಂಜೆ ೬-೩೦ ಕ್ಕೆ ಪತ್ರಿಕೋದ್ಯೋಗಿಗಳ ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳಿಗಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿರುತ್ತಾರೆ.

ಭಾರಿ ಕಳವು

ನರಸಿಂಹರಾಜಾರಸ್ತೆಯಲ್ಲಿರುವ ಮದ್ರಾಸ್ ಆಟೋ ಸರ್ವೀಸ್ ಅಂಗಡಿಯ ಬಾಗಿಲನ್ನು ಯಾರೋ ಮುರಿದು ಹಣದ ಪೆಟ್ಟಿಗೆಯಲ್ಲಿದ್ದ ನಗದು, ಚೆಕ್ಕು ಮುಂತಾದುವನ್ನು ಅಪಹರಿಸಿದರೆಂದೂ ಸುಮಾರು ರೂ. ೩,೮೦೦ ರಷ್ಟು ಕಳುವಾಗಿದೆಯೆಂದು ಹೇಳಲಾಗಿದೆ.

ಮಂತ್ರಿ ಮಂಡಲ ವಿಶೇಷ ಸಭೆ

ಮೊನ್ನೆ ಮಧ್ಯಾಹ್ನ ದಿವಾನರ ಅಧ್ಯಕ್ಷತೆಯಲ್ಲಿ ಮಂತ್ರಿ ಮಂಡಲದ ವಿಶೇಷ ಸಭೆಯೊಂದು ನಡೆಯಿತೆಂದೂ, ಬಹಳ ಸಮಾಲೋಚನೆ ನಡೆಯಿತೆಂದೂ, ರಾಜಕೀಯ ಬಂಧಿಗಳ ಬಿಡುಗಡೆ ಪ್ರಶ್ನೆಯೂ ಚರ್ಚಿಸಲಾಯಿತೆಂದು ತಿಳಿಯುಬರುತ್ತೆ.

ರೇಸಿಡೆಂಟರ ಪ್ರವಾಸ

ಬ್ರಿ|| ರೆಸಿಡೆಂಟರಾದ ಕರ್ನಲ್ ಪ್ರೇಸರ್ ರವರ. ಆಕ್ಟೋಬರ್ ೬ ರಿಂದ ಸಂಸ್ಥಾನದ ಹಲವು ಗಡಿಗಳಲ್ಲಿ ಪ್ರವಾಸ ಮಾಡುವರೆಂದು ಹೇಳಲಾಗಿದೆ

ಬೊಂಬಾಯಿನ ಆಟಗಾರರು ಬಂದಿರುವರು

ಬೊಂಬಾಯಿನ "ಸುಂದರ್ ಕ್ರಿಕೆಟ್ ಕ್ಲಬ್ಬಿನ" ಆಟಗಾರರು ಬಂದಿರುವರು ಇವರು ಇಂದಿನಿಂದ ಮೈಸೂರು ಸ್ಟೇಟ್ ಟೀಮಿನೊಡನೆ ಆಟವಾಡುವರು.

ಬ್ರಿಟನ್ ಮೇಲೆ ಧಾಳಿ

ಮೊನ್ನೆ ರಾತ್ರಿ ೧೫ ಶತ್ರು ವಿಮಾನಗಳು ಲಂಡನ್ನಿನ ಆಗ್ನೇಯ ತೀರದ ಮೇಲೆ ಧಾಳಿ ಮಾಡಿವೆ. ೩ ಶತ್ರು ವಿಮಾನಗಳನ್ನು ನಾಶಮಾಡಲಾಯಿತು ಸ್ವಲ್ಪ ಸಾವುನೋವುಗಳುಂಟಾಗಿವೆ

ಕಲ್ಲಿದ್ದಲಿನ ರೇಷನ್

ಅತ್ಯವಶ್ಯಕ ಉದ್ಯಮಗಳಿಗೆ ಮತ್ತು ಯುದ್ಧಕಾರ್ಯಗಳಿಗಾಗಿ ಕಲ್ಲಿದ್ದಲಿನ ಆವಶ್ಯಕತೆ ಹೆಚ್ಚಾಗಿರುವುದರಿಂದ ಕಲ್ಲಿದ್ದಲಿನ ರೇಷನಿಂಗ್ ಮಾಡುವ ಯೋಜನೆಯನ್ನೂ ಕಲ್ಲಿದ್ದಲು ಗಣಿಗಳಲ್ಲಿ ಉತ್ಪಾದನೆ ಹೆಚ್ಚಿಸುವ ಮತ್ತು ಸಮುದ್ರ ಮಾರ್ಗವಾಗಿ ಕಲ್ಲಿದ್ದಲನ್ನು ಸಾಗಿಸುವ ವಿಚಾರವನ್ನು ಭಾರತ ಸರ್ಕಾರದವರು ಪರಿಶೀಲಿಸುತ್ತಿರುವರಾಗಿ ತಿಳಿಯುಬರುತ್ತೆ.

Edited, printed and published by A R. Nagarajan at the Sadhvi Press, D.Subbiah Road, Mysore.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಪ್ರಭಾವಶಾಲಿ **ಜೀವನಿ** ಔಷಧ

ಗರ್ಭಾಶಯಕ್ಕೆ ಶಕ್ತಿವರ್ಧಕ.

ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಋತು ದೋಷಕ್ಕೆ ಗಂಡೌಷಧ.

ಋತು ಕಾಲದಲ್ಲಿ ಅಥವಾ ಅವೇಳೆ ತೋರುವ ಅಧಿಕ ರಕ್ತಸ್ರಾವ, ಬಿಳುಹೋಗುವುದು, ಅಕ್ರಮ ಬಹಿಷ್ಠೆ ಮುಂತಾದುವುಗಳನ್ನು "ಜೀವನಿ" ಜಾಗ್ರತೆ ಪರಿಹರಿಸುತ್ತದೆ.

ಅತ್ಯುತ್ತಮ ಉಷ್ಣ ಶಾಮಕ.

ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೆ 'ಜೀವನಿ' ಪ್ರಶಸ್ತವಾದುದು.

ರಕ್ತ ಹೀನತೆ, ನರಗಳ ದೌರ್ಬಲ್ಯ ಬೆನ್ನುನೋವು,ನಡನೋವು, ಗರ್ಭಿಣಿ ಬಾಣಂತಿಯರಿಗೆ "ಜೀವನಿ" ಅತ್ಯುಪಯುಕ್ತವಾದುದು.

ಶ್ರೀ ಯುರ ಶೌಕಿಯರ್ ಕ್ಕಾಗಿ

೫೦ ವರ್ಷಗಳ ಹಿಂದೆ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ,

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಒಮ್ಮೆ ಉಪಯೋಗಿಸಿ.

ಡಿ. ಸುಬ್ಬಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಓ ನಂ. ಬೆಲ್ಲದಂಗಡಿ ಸಂಚ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮುಂತಾದವು ಇಲ್ಲಿ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿಯೂ ಮತ್ತು ೧ ರೂ.ಗೆ ೨ ಸೇರು ರವೆ ಸಹ ದೊರೆಯುತ್ತೆ

ಶ್ರೀ. ಸಿ. ನಟರಾಜ್ ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ಸದಾ ದೊರೆಯುತ್ತವೆ

FROM 15—9—43 Daily 3 sho

Thief of Bagdad (in magic Technicolor)

with MYSORE SABU

AT NEW OPERA TALKIES

Next Change— "SHARADA" in Hindi

ಸಂಪುಟ ೨] ಭಾನುವಾರ ೧೯--೯--೪೩ [ಸಂಚಿಕೆ ೫೮

ರ್‍ಹೋಡ್ಸ್ ದ್ವೀಪ ಮಿತ್ರ ವಶವಾಯಿತು

ವ್ಯಾಟಿಕನ್ ನಗರದ ಎಲ್ಲಾ ಬಾಹ್ಯ ಸಂಬಂಧ ತ್ಯಾಗ
ಡಾಲ್ಮೇಷಿಯಾದ ಇಟಾಲಿಯನ್ ಕಮ್ಯಾಂಡರರ ಕೊಲೆ

ಕಳುವು ಮಾಡಿದಳೆಂದು ಕಠಿಣ ಸಜ

ಹುಬ್ಬಳ್ಳಿ ಕಡೆಯ ರಾಜಮ್ಮ ಬುಕ್ಕಾ [illegible] ಎಂಬಾಕೆಯು ಒಂದು ಬಂಗಾರದ [illegible] ನ್ನು ಕಳವು ಮಾಡಿದಳೆಂಬ ಅಪಾದನೆಯ ಮೇಲೆ ಬೆಂಗಳೂರಿನ ಆ|| ಸೆ|| ನ್ಯಾಯಾಧೀಶರು ಆಕೆಯು ತಪ್ಪಿತಸ್ಥಳೆಂದು ತೀರ್ಪಿತ್ತು ೨ ವರ್ಷ ೧ ತಿಂಗಳು ಕಠಿಣ ಸಜ ವಿಧಿಸಿದರು.

೧೧೦೦೦ರೂ ಖಾದಿ ವ್ಯಾಪಾರ

ಬಿಜಾಪುರದ ಬಡಗಣಲನಿಧಿ ಖಾದಿ ವಸ್ತ್ರಾಲಯದವರು ನಡೆಸುತ್ತಿದ್ದ ೦ ವಾರದ [illegible] ನ ೧೬ ನೇ ತಾ|| ಗೆ ಮುಕ್ತಾಯವಾಗಿ, ಒಟ್ಟು ೧೧೦೦೦ ರೂ ಗಳ ವ್ಯಾಪಾರವಾಯಿತೆಂದು ತಿಳಿಯಬರುತ್ತೆ.

ಫುಡ್ ಇಲಾಖೆಗೆ ಪೋಲೀಸ್ ಸಿಬ್ಬಂದಿ ಹೆಚ್ಚಿಸಿದೆ

ಫುಡ್ ಇಲಾಖೆಗೆ ಒಬ್ಬ ಅ|| ಪೋ|| ಸೂ|| ರನ್ನು ಇಬ್ಬರು ಪೋ|| ಇನ್ಸ್‌ಪೆಕ್ಟರುಗಳನ್ನೂ ಕೆಲವು ಸಬ್ ಇನ್ಸ್‌ಪೆಕ್ಟರುಗಳನ್ನೂ ನೇಮಿಸಲು ಸರ್ಕಾರವು ಮಂಜೂರಾತಿ ಇತ್ತಿರುವುದಾಗಿ ತಿಳಿಯ ಬರುತ್ತೆ.

ಬೈದಿದ್ದಕ್ಕೆ ಜುಲ್ಮಾನೆ

ಶೈಲ್ವಾ ಅಬ್ದುಲ್ ರಜಾಕ್ ಎಂಬುವನು ಕಬ್ಬಿಣದ ವ್ಯಾಪಾರಿ ಅಬ್ದುಲ್ ರಜಾಕ್ ಎಂಬುವವನನ್ನು ದುರ್ಭಾಷೆಯಿಂದ ಬೈದನೆಂದು ನ|| ಡ್ವಿ|| ನ್ಯಾ|| ರು ಅಪಾದಿತನಿಗೆ ೧೦ ರೂ ಜುಲ್ಮಾನೆ, ಇದು ಕೊಡದಿದ್ದರೆ ೫ ದಿನ ಸಾದಾ ಸಜ ವಿಧಿಸಿದರು.

ದಂಡಿನವಲ್ಲಿ ಮೋಟಾರು ಮಾರಲು ಪ್ರತಿ ಬಂಧಕ

ದಂಡಿನ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳ ಅಪ್ಪಣೆಯಿಲ್ಲದೆ ಯಾರೂ ಮೋಟಾರು ವಾಹನಗಳನ್ನು ಮಾರಕೂಡದೆಂದೂ, ಮತ್ತೆ ಮೋಟಾರಿನ ಯಾವ ಭಾಗವನ್ನೂ ಕೂಡ ಮಾರಲಾಗದೆಂದು ಆಜ್ಞೆ ಮಾಡಿರುವರು

ಮೆಡಿಟರೇನಿಯನ್ ದಾರಿ ಸುಗಮವಾಗಿದೆ.

"ಕೆಲವರು ಯುದ್ಧಕ್ಷೇತ್ರಗಳನ್ನ ಪಶ್ಚಿಮ ಯೂರೋಪ್, ಬರ್ಮಾ ರಣಕ್ಷೇತ್ರ, ಪ್ಯಾಸಿಫಿಕ್ [illegible] ಮುಂತಾದವು ರಣಕ್ಷೇತ್ರಗಳಾಗಿ ಬೇರೆ ಬೇರೆ ವಿಂಗಡಿಸ್ಸ [illegible]. ಇದು ತಪ್ಪು ಭಾವನೆ. ಈ ಎಲ್ಲ ರಣಕ್ಷೇತ್ರಗಳೂ ಒಂದೇ. ಎಲ್ಲ ಯುದ್ಧಗಳೂ ಬೇರೆ ಬೇರೆಯಾದವುವೆಂದು ನಾವು ಭಾವಿಸಬೇಕಾಗಿಲ್ಲ. ಎಲ್ಲವೂ ಒಂದೇ ಯುದ್ಧ. ಮೆಡಿಟರೇನಿಯನ್ ಮಾರ್ಗವು ಸುಗಮವಾಗಿರುವುದರಿಂದ ಪೂರ್ವದ ಯುದ್ಧಕ್ಷೇತ್ರಕ್ಕೂ ಹಿಂದೂಮಹಾಸಾಗರ, ಬಂಗಾಳಕೊಲ್ಲಿ ಇವುಗಳಿಗೂ ಬಹಳ ಅನುಕೂಲವೇರ್ಪಟ್ಟಿದೆ.

ಇಟಲಿ ನೌಕಾಬಲ ಎಂದಿನವರೆಗೆ [illegible] [illegible] ವರೆಗೆ ಮೆಡಿಟರೇನಿಯನ್‌ನಲ್ಲಿ ಬಹಳ [illegible] [illegible] [illegible]"

ರೋಡ್ಸ್ ದ್ವೀಪದಲ್ಲಿ ಮಿತ್ರ ಪಡೆಗಳು

ಮಿತ್ರ ಸೈನ್ಯಪಡೆಗಳು ರೋಡ್ಸ್ ದ್ವೀಪದಲ್ಲಿ ಬಂದಿಳಿದಿವೆ. ಜರ್ಮನ್ ದಳಗಳೊಂದಿಗೆ ಇಟಾಲಿಯನ್ ಪಡೆಗಳು ಯುದ್ಧ ಮಾಡುತ್ತಿವೆ. ಬ್ರಿಟಿಷ್ ಮತ್ತು ಅಮೆರಿಕನ್ ಪಡೆಗಳು ಕಾಸ್, ಲಿರೋಸ್, ಸಾಮೋಸ್ ದ್ವೀಪಗಳನ್ನು ಆಕ್ರಮಿಸಿಕೊಂಡವು.

ವ್ಯಾಟಿಕನ್‌ನೊಡನೆ ಸಂಬಂಧ ಕತ್ತರಿಸಲ್ಪಟ್ಟಿತು

ವ್ಯಾಟಿಕನ್ ನಗರದೊಡನೆ ಬಾಹ್ಯ ಪ್ರಪಂಚದ ಸಂಬಂಧವನ್ನು ಸಂಪೂರ್ಣವಾಗಿ ಕತ್ತರಿಸಲಾಗಿದೆಯೆಂದು ಇಟಲಿಯ [illegible] ಯೆಂದ ತಿಳಿಸುತ್ತವೆ. ಜರ್ಮನರು ನಗರದ ಎಲ್ಲಾ ಪ್ರವೇಶದ್ವಾರಗಳಲ್ಲೂ ಕಾವಲಿರುವರೆಂದೂ ಮತ್ತು ಸಾರ್ವಜನಿಕರ ಸೇಂಟ್‌ಪೀಟರ್ಸ್ ಚರ್ಚ್ ಪ್ರಾರ್ಥನೆ ನಡೆಸುವುದನ್ನು ಪ್ರತಿಬಂಧಿಸಲಾಗಿದೆಯೆಂದು ವರದಿಯಾಗಿದೆ

ಪೆಸಿಫಿಕ್ ಶತ್ರು ರಾಜ್ಯಗಳಮೇಲೆ ಧಾಳಿ

ನ್ಯೂಗಿನಿಯದಲ್ಲಿ ಶತ್ರು [illegible] ಮಿತ್ರವಿಮಾನಗಳು ಧಾಳಿ ಮಾಡುತ್ತಿವೆ. [illegible] ಶತ್ರು ನೆಲೆಗಳ ಮೇಲೆ ವಿಮಾನದಾಳಿ ಮಾಡಲಾಯಿತು. ಅಲ್ಲಿ ಜಪಾನಿ ಸರಬರಾಯಿ ನೌಕೆಗಳಿಗೆ ತುಂಬಾ ನಷ್ಟವುಂಟಾಗಿದೆ. [illegible] ಪ್ರದೇಶದಲ್ಲಿ [illegible] ನೆಲೆಗಳ ಮೇಲೆ ಧಾಳಿ ಮಾಡಲಾಯಿತು. ೧೦೦ ಜಪಾನಿ ವಿಮಾನಗಳು ಹೊಡೆದುರುಳಿಸಲ್ಪಟ್ಟವು. [illegible] ವಿಮಾನಗಳು ಕಳೆದುಹೋಗಿವೆ.

ಡಿಸ್ಟ್ರಾಯರು ಮುಳುಗಿತು

ಮೆಡಿಟರೇನಿಯನ್‌ನಲ್ಲಿ ಬ್ರಿಟಿಷರ ಒಂದು ಡಿಸ್ಟ್ರಾಯರು ನಷ್ಟವಾಗಿದೆಯೆಂದು [illegible]

ಕೌಂಟ್ ಸಿಯಾನೊ

ಇಟಲಿಯ ಮಾಜಿ ವಿದೇಶಾಂಗ ಮಂತ್ರಿ ಕೌಂಟ್ ಸಿಯಾನೋ [illegible] [illegible] [illegible]

ಡಾಲ್ಮೇಷಿಯಾ ಕಮ್ಯಾಂಡರರ ಕೊಲೆ

ದಕ್ಷಿಣ ಡಾಲ್ಮೇಷಿಯಾದ ಇಟಾಲಿಯನ್ ಕಮ್ಯಾಂಡರ ಜನರಲ್ [illegible] ರನ್ನು ಫ್ಯಾಸಿಸ್ಟರು ಗುಂಡು ಹೊಡೆದು ಕೊಂದರೆಂದು ವರದಿಯಾಗಿದೆ.

ಯುಗೋಸ್ಲಾವಿಯಾ ಪ್ರದೇಶದಲ್ಲಿ ಮುಂದುವರಿಯುತ್ತಿದ್ದ ಜರ್ಮನ್ ಪಡೆಯನ್ನು [illegible] ನಗರವು ಕರಗತವಾಗುವಂತೆ ಮಾಡಿದರೆಂಬ ಆಪಾದನೆಯ ಮೇಲೆ ಈ [illegible] ನಡೆಸಲಾಯಿತೆಂದು ಹೇಳಲಾಗಿದೆ.

ಜರ್ಮನಿ ಯು ಬೋಟ್ ಪಡೆಯನ್ನು ಸದೆಬಡಿಯಲಾಗಿದೆ.

ಮಿತ್ರಪಡೆಗಳು ಸಮುದ್ರ ಕದನದಲ್ಲಿ ಜರ್ಮನ್ ಯು ಬೋಟುಗಳನ್ನೆಲ್ಲಾ ಸದೆ ಬಡಿಯಲಾಗಿದೆಯೆಂದೂ, ಜನರಿ ಅವುಗಳ ಇನ್ನೂ ಅಪಾಯದಿಂದ ಇನ್ನೂ [illegible] ತಿಳಿಸಿದೆಂದೂ ವರದಿಯಾಗಿದೆ.

ಭಾರಿ ಆಸ್ಫೋಟನದಿಂದ ೧೪ ಮಂದಿ ಮರಣ

ನೌಕಾನೆಲೆಯ ಹತ್ತಿರ ಒಂದು ಪೆಟ್ರೋಲ್ ಲಾರಿಯಿಂದ ಭಾರಿ ಆಸ್ಫೋಟನೆಯುಂಟಾಗಿ ಬೆಂಕಿ ಹತ್ತಿಕೊಂಡು ೧೪ ಮಂದಿ ಸತ್ತರೆಂದೂ, [illegible] ಮಂದಿಗೆ ಗಾಯಗಳಾಗಿವೆಯೆಂದೂ [illegible] ಬಂದ ವಾರ್ತೆಯು ತಿಳಿಸುತ್ತದೆ.

ಇಟಲಿ ರಾಜಮರ್ಯಾದೆಗೆ ಮುಸೋಲನಿ ಪ್ರತಿಬಂಧಕ

ಇಟಲಿ ದೊರೆಗೆ ರಾಜ್ಯಪ್ರಕಟಿತವಾದ [illegible] ರಾಜಮರ್ಯಾದೆಯ ಮನ್ನಣೆ [illegible] ಪ್ರಮಾಣವಚನವನ್ನು ಕೊಡದಿರಲು ಮುಸೋಲಿನಿಯು ಆಜ್ಞೆ ಹೊರಡಿಸಿರುವುದಾಗಿ ಜರ್ಮನರ ವಶದಲ್ಲಿರುವ ರೇಡಿಯೋ ತಿಳಿಸುತ್ತದೆ.

ಮಿತ್ರ ವಿಮಾನಗಳ ದಾಳಿ

[illegible] ನೆಲೆಯ ಮೇಲೆ [illegible] ವಿಮಾನಗಳು ಪ್ರಥಮ ಧಾಳಿ ನಡೆಸಿದೆ [illegible] ಪ್ರದೇಶದ [illegible] ಜಪಾನಿ ನೌಕೆಗಳೊಂದನ್ನು ಮುಳುಗಿಸಲಾಗಿದೆ [illegible] ಪ್ರದೇಶದಲ್ಲಿ ೨೦ ಶತ್ರು ವಿಮಾನಗಳನ್ನು ನಿರ್ನಾಮ ಮಾಡಲಾಗಿದೆ.

ಕರಿಯ ೫|| ಭಾ|| ಮಾಸ ಪತ್ರಿಕೆ ಪ್ರಕಾಶನವು

[illegible] ೧೯

"ಶ್ರೀ [illegible], [illegible] ರು ಇದೇ ಸೆಪ್ಟೆಂಬರ್ ೧೭ ನೇ [illegible] ವಾರದ ದಿನ ಬೆಳಗ್ಗೆ ತಾವು [illegible] ಭಾರತಿ' ಮಾಸ ಪತ್ರಿಕೆಯ [illegible] ದು ಪ್ರೊ|| ಡಿ|| ವ್ಯಾಲ್ಟನ್ [illegible] ಡಿಕ್ಲೇರ್ ಮಾಡಿಕೊಂಡರು".

ನೆಹ್ರೂ ಸಂಘ

ಇಂದಿನ ದಿನ [illegible] ರಾಜರವರ ಅಗ್ರಹಾರದಲ್ಲಿ ನೆಹ್ರೂ ಸಂಘದಲ್ಲಿ ಗಣಪತಿ ಉತ್ಸವಗಳ ಕಡೆ ನಡೆಯುವುದು. ವಿ|| [illegible] ಅಧ್ಯಕ್ಷತೆ ವಹಿಸುವರು.

ಚಾಮರಾಜನಗರದ ಹಾ|| ಸ್ಥಿತಿ

೧೮. [ಸ್ವಂ ಸ.]

ಈಚೆಗೆ ಸರ್ಕಾರದವರು [illegible] ರಲ್ಲಿ ಹೊರಡಿಸಿರತಕ್ಕ [illegible] ದ ಈಚೆಗೆ ಕಟ್ಟಾದ ಬೇಳೆಕಟ್ಟಳೆ [illegible] ಸಿಕ್ಕುತ್ತಿಲ್ಲವಾದರೂ [illegible] ತಾಲ್ಲೂಕಿನಲ್ಲಿ ಸರ್ಕಾರದವರು [illegible] ಮಾಲನ್ನು ಡಿಕ್ಲೇರ್ ಮಾಡಿಸಿ [illegible] ಕೊಂಡು [illegible] ಇರುವವರಿಂದಲೂ [illegible] ಬಹಳ ಕೊರತೆಯುಂಟಾಗಿದೆ [illegible] ಗ್ರಾಮಾಂತರಗಳಲ್ಲಿ ಫುಡ್ ಇನ್ಸ್‌ಪೆಕ್ಟರರು ಮತ್ತು ಇತರ ನೌಕರರೂ [illegible] ತಪ್ಪು ತಿಳುವಳಿಕೆ [illegible] ೭೦೦೦ ಪಲ್ಲಕ್ಕಿಂತ ಹೆಚ್ಚು [illegible] ಳನ್ನು [illegible] ಸರ್ಕಾರದವರು ಕೂಡಲೆ ಇದಕ್ಕೆ ಗಮನಕೊಟ್ಟು ಇದನ್ನು ನಿಲ್ಲಿಸುವುದಿಲ್ಲವೆ? ಹೊಸ ಮಾಲು ಹಿಗಮ ಕೊಂಡಿರುವ ರೈತರು [illegible] ಮಾಲನ್ನು [illegible] ಕೊಡಿಸಲು [illegible] ಸದ್ಯದಲ್ಲಿ ರೈತರಿಗೆ [illegible] ಯಾಗಿ [illegible] ವಾಗಿರುವ ಜನಸಂಖ್ಯೆ [illegible] ಗೈರೆಗಳ [illegible] ಡ. ಮುಂದಿನ ವರ್ಷ [illegible] ಕಳೆದುಹೋಗದಂತೆ [illegible] ದಿನಗಳು [illegible] ಬಾಗ್ರತೆಯಿಂದ [illegible] ತ್ತೇನೆ

ಕಲ್ಕತ್ತದಲ್ಲಿ ಶೋಚನೀಯ ಪರಿಸ್ಥಿತಿ

ಕಲ್ಕತ್ತಾ ನಗರದಲ್ಲಿ [illegible] [illegible] ಆಯಿತು [illegible] [illegible] [illegible] ಯಾಗಿದೆ

ಕಲ್ಕತ್ತಾ ನಗರದಲ್ಲಿ [illegible] [illegible] [illegible] ಕೊಂಡಿದ್ದವನಾಗಿ [illegible]

[illegible] ಪ್ರಿಯಾರಿಟಿ [illegible] ದಿದ್ದರೆ [illegible] [illegible]

ಆಹಾರ ಸಾಮಗ್ರಿಗಳ ಬಗ್ಗೆ ದಿವಾನರವರ ಭಾಷಣ

ಬೆಂಗಳೂರು ೧೮

೧೭ನೇ ತಾ|| ರ|| ಬೆಳಗೆ ನ್ಯೂ ಮಾರ್ಕೆಟ್ ಶಂಕುಸ್ಥಾಪನೆ ಮಹೋತ್ಸವದಲ್ಲಿ ದಿವಾನರವರಾದ ಸರ್ ಎನ್. ಮಾಧವರಾಯರವರು ಮಾತನಾಡುತ್ತಾ ಈ ರೀತಿ ಹೇಳಿದರು:—

"ಸರ್ಕಾರವು ಸಂಸ್ಥಾನದಲ್ಲಿ ಆಹಾರ ಸಾಮಗ್ರಿಗಳನ್ನು ಸಮರ್ಪಕವಾಗಿ [illegible]

[illegible]

ದೇಶಬಂಧು ಸಂಪಾದಕರು

ಶ್ರೀ ಬಿ. ಎಸ್. ವೆಂಕಟರಾಯರವರು ದೇಶಬಂಧು ವಾರಪತ್ರಿಕೆಯ ಸಂಪಾದಕರಾಗಿಯೂ ಮತ್ತು ದೇಶಬಂಧು ಪ್ರೆಸ್ ಪ್ರಿಂಟರಾಗಿಯೂ ನಿನ್ನೆಯ ದಿವಸ ಡಿಕ್ಲೇರ್ ಮಾಡಿಕೊಂಡರು.

ಕ್ರಿಕೆಟ್ ಪಂದ್ಯ

ಬೊಂಬಾಯಿ [illegible] ಕ್ಲಬ್ಬಿನವರು ಆಡಿದ ಕ್ರಿಕೆಟ್ ಪಂದ್ಯದಲ್ಲಿ [illegible] ಕ್ಲಬ್ಬಿನವರು ಮೊದಲು ಆಡಿ, ಫಲಾಹಾರದ ಹೊತ್ತಿಗೆ [illegible] ವಿಕೆಟ್ಟಿಗೆ [illegible] ರನ್ನುಗಳಾಗಿದ್ದುವು.

ಗ್ರೇನ್ ಮರ್ಚೆಂಟ್ಸ್ ಅಸೋಸಿಯೇಷನ್

ಗ್ರೇನ್ ಮರ್ಚೆಂಟ್ಸ್ ಅಸೋಸಿಯೇಷನ್ನಿನ ಸದಸ್ಯರುಗಳು [illegible] ಮತ್ತು [illegible] ಶ್ರೀ. ಎ. ಎ. [illegible] ಅವರನ್ನು ಭೇಟಿ ಮಾಡಿ, [illegible]

[illegible]

ಲೈ ನಿಲ್ದಾಣ ಮಿತ್ರ ವಶ

[illegible]

ಯೂರೋಪಿನ ಆಕ್ರಮಿತ ದೇಶಗಳಲ್ಲಿ ದಂಗೆ

[illegible] ಸಂದೇಶದಲ್ಲಿ ಸೂಚಿಸಿರುವ ಅಂಶಗಳಿವು:—

"ಬ್ರಿಟಿಷ್ ವಿಮಾನಗಳು ಯೂರೋಪಿನ ಆಕ್ರಮಿತ ಪ್ರದೇಶಗಳಲ್ಲಿ ಹಿಟ್ಲರನ ನಿಲ್ದಾಣಗಳ ಮೇಲೆ ಬಲವಾದ ಧಾಳಿಮಾಡುತ್ತಿರುವುವು. [illegible]"

ಜಪಾನ್ ಮೇಲೆ ಯುದ್ಧ

"ಜಪಾನಿನ ಮೇಲೆ ನಡೆಸುತ್ತಿರುವ [illegible] ಅಂಥ ಸುಲಭವಾದುದೇನೂ ಅಲ್ಲ. [illegible] ಸಿದ್ಧರಿರುತ್ತೇವೆ [illegible] ಅವರ ಶಕ್ತಿ [illegible]."

ಹಿಟ್ಲರನಿಗೂ ನೆಪೋಲಿಯನ್ ಗತಿ

"ಉತ್ತರ ಆಫ್ರಿಕಾದಲ್ಲಿ ಮಿತ್ರ ಪಕ್ಷ ಯಾತ್ರೆ, ಸಿಸಿಲಿಯ ಆಕ್ರಮಣ, ಇಟಲಿಯಲ್ಲಿ [illegible] ಫ್ರಾನ್ಸ್ ಮತ್ತು ಹಾಲೆಂಡ್ [illegible] ನೆಪೋಲಿಯನಿಗೆ [illegible] ಹಿಟ್ಲರನಿಗೂ ನೆಪೋಲಿಯನ್ನಿನ ಗತಿಯೇ [illegible]

ಟೋಜೋರವರ ರಾಜೀನಾಮೆ

ಜಪಾನಿನ ಮುಖ್ಯ ಮಂತ್ರಿಯಾದ ಟೋಜೋರವರು ಯುದ್ಧ ಪರಿಸ್ಥಿತಿ [illegible] ವಿರುದ್ಧವಾಗಿದೆಯೆಂದು [illegible] ಮಂತ್ರಿಪದಕ್ಕೆ ರಾಜೀನಾಮೆಯನ್ನಿತ್ತಿರುವುದಾಗಿಯೂ, ಜಪಾನಿನಲ್ಲಿ ಉಗ್ರವಾದ ರಾಜಕೀಯ ಬದಲಾವಣೆಗಳಾಗಬಹುದೂ ಟೋಕಿಯೋ ಅಧಿಕಾರಿಯೊಬ್ಬರು [illegible]

ಜಪಾನ್ ಸ್ಥಾನಗಳ ಮೇಲೆ ಧಾಳಿ

ಮಿತ್ರ ವಿಮಾನ ಪಡೆಗಳು [illegible] ಜಪಾನರಿಗೆ ಸ್ವಲ್ಪವೂ ವಿರಾಮ [illegible] ಶತ್ರು ಸೈನ್ಯಗಳ ಬ್ಯಾರಕ್ [illegible] ಕೇಂದ್ರಗಳ ಮೇಲೂ [illegible] ಮಾಡುತ್ತಿವೆ. [illegible]

ಜರ್ಮನರ ಪಲಾಯನ

ಸಾಲೆರ್ನೊ ಯುದ್ಧರಂಗದಿಂದ ಜರ್ಮನರು ಓಡುತ್ತಿರುವರೆಂದೂ, [illegible] ಮಿತ್ರ [illegible] ಉಗ್ರವಾದ ಧಾಳಿ ನಡೆಸುತ್ತಿರುವರೆಂದೂ [illegible]

ಪ್ರಕಟಣೆ

ಆಮಶಂಕೆ, ಅತಿಸಾರಗಳ ಖಾತರಿಯಾಗಿ ನಿವಾರಿಸು

ಡಿಸೆಂಟಿಸೈಡ

ಕೇವಲ 2 ಆಣೆಗಳಿಗೆ ಇವರುಗಳಲ್ಲಿ ದೊರೆಯುತ್ತೆ:

ಮೈಸೂರು:—
ಶ್ರೀ ಗುರುರಾಜ ಸ್ಟೋರ್ಸ್.
ವೆಂಕಟೇಶ ಬುಕ್ ಡಿಪೋ.
ಧನ್ವಂತರಿ ವೈದ್ಯಶಾಲಾ.
ಟಿ. ಸಿ. ನಟರಾಜ್.
ಎಂ. ಎ. ವೀರಣ್ಣ ಶೆಟ್ಟಿ ಅಂಡ್ ಸನ್.
ಕಾಂತರಾಜ್ ಅಂಡ್ ಕೊ.
ಕೆ. ಎಸ್. ಜಾನಕಿರಾಮ್.
ಸಿ. ಎಸ್. ರುಕ್ಮಯ್ಯಶೆಟ್ಟಿ, ಗೋವಿಂದ ಮಾರ್ಕೆಟ್ ಆಯುರ್ವೇದಿಕ್ ಫಾರ್ಮಸಿ.
ಭಾರತ ಸ್ಟೋರ್ಸ್.

Edited, printed and published by A. R. Nagarajan, at the Sadhvi Press, D.Subbiah Road, Mysore.

RETURN TICKET TO RADIANT YOUTH AT

New Royal Dispensary

Ashoka Road, Mysore

ಶ್ರೀ ಯ ರ [illegible]

[illegible]

[illegible] ಪ್ರಸಿದ್ಧ

[illegible] ಬ್ರಾಂಡ್ ಕಾಫಿ ಪುಡಿ

[illegible]

ಡಿ. [illegible] ದೇವರಾಜ ಮಾರ್ಕೆಟ್, ಮೈಸೂರು

[illegible]

FROM 15-9-43 Daily 3 sho[ws]

Thief of Bagdad (in magic Technicolor)

with MYSORE SABU

AT NEW OPERA TALKIES

Next Change— "SHARADA" in Hindi

ಚಿನ್ನ, ಬೆಳ್ಳಿ ಒಡವೆಗಳಿಗೆ ಬೆಳ್ಳಿಯ ಸಾಮಾನುಗಳಿಗೆ

[illegible]

ಅಶೋಕ ರೋಡ (ದೊಡ್ಡಪೇಟೆ) ಮೈಸೂರು

WEEKLY EDITION

ಸಂಪುಟ ೭]   ಸೋಮವಾರ ೨೦—೯—೪೩   [ಸಂಚಿಕೆ ೪೮

ಇಟಲಿ ಮತ್ತು ಜರ್ಮನ್ ದಳಗಳ ಘರ್ಷಣೆ

ಸಾಲೆರ್ನೊ ಆಗ್ನೇಯ ಭಾಗದಲ್ಲಿ ೩ ಪಟ್ಟಣಗಳು ಮಿತ್ರ ವಶ

ವಿಚಿ ಪೋಲೀಸರಿಗೆ ಶಸ್ತ್ರಾಸ್ತ್ರಗಳ ಸಲಕರಣೆ ಕೊಡಲಾಗಿದೆ

ಆಯುರ್ವೇದ ವೈದ್ಯ ಸಂಘ

ಮೈಸೂರು ೨೦

ರಾಜಧಾನಿಯ ಆಯುರ್ವೇದ ವೈದ್ಯ ಸಂಘದ ಸಮ್ಮೇಳನವು ಅಕ್ಟೋಬರ್ ೩ನೇ ೧೦ ರಲ್ಲಿ ನಡೆಯುವುದಾಗಿ ಸಂಘದ ಅಧ್ಯಕ್ಷರು ತಿಳಿಸುತ್ತಾರೆ

ಪತ್ರವ್ಯವಹಾರ

ಸ್ವಾಮಿ,

ನಿನ್ನೆ ರಾತ್ರಿ ೮-೩೦ ಗಂಟೆಯಿಂದ ೧೦ ರ ವರೆಗೆ ಆಕಾಶವಾಣಿಯಲ್ಲಿ ವೇಣುಗಾನ ಕಛೇರಿ ನಡೆಯಿತು. ವೇಣುಗಾನವೂ, ಪಕ್ಕವಾದ್ಯ ವಾದನವೂ ಕೇಳಲು ಇಂಪಾಗಿತ್ತು. ವೇಣುಗಾನ ಮಾಡಿದವರಾರೆಂಬುದನ್ನು ಮಾತ್ರ ಆಕಾಶವಾಣಿಯವರು ಪ್ರಚಾರಪಡಿಸಿದರು. ಆದರೆ ಪಕ್ಕವಾದ್ಯ ಬಾರಿಸಿದವರ ಹೆಸರನ್ನು ಮಾತ್ರ ಯಾತಕ್ಕೆ ಪ್ರಚುರಪಡಿಸಲಿಲ್ಲವೋ ಗೊತ್ತಾಗಲಿಲ್ಲ. ಈ ಸಂಗತಿ ಸಂಶಯಕ್ಕೆ ಎಡೆಕೊಟ್ಟಿದೆ. ಆಕಾಶವಾಣಿಯಲ್ಲೇ ಕೆಲವು ಬಾರಿ ಪಕ್ಕವಾದ್ಯದವರ ಹೆಸರು ಪ್ರಚಾರಿತವಾಗಿದೆ. ಹಲವು ಬಾರಿ ಪ್ರಚಾರಿತವಾಗುವುದೇ ಇಲ್ಲ. ವೈಯಕ್ತಿಕ ಭೇದಭಾವವೇನಾದರು ತನ್ನ ಪಾತ್ರವಹಿಸಿರುವುದೋ ಏಂಬುವದೊಂದೇ ಸಂದೇಹ. ಆಕಾಶವಾಣಿಯು ಒಂದು ಗೃಹಬದ್ಧವಾದ ಸಂಸ್ಥೆ ಎನಿಸಿಕೊಳ್ಳಬೇಕು ಮತ್ತು ತನ್ನ ಜವಾಬ್ದಾರಿಗಳನ್ನು ವೈಯಕ್ತಿಕ ಭೇದಭಾವವಿಲ್ಲದೇ ನಡೆಸುವುದನ್ನು ಕಲಿಯಬೇಕೆಂದು ನನ್ನ ಆಶಯ

ಮೈಸೂರು ಲಿಸನರ್

ಕಲ್ಕತ್ತಾ ದುಸ್ಥಿತಿ

ಕಲ್ಕತ್ತಾ ನಗರದ ಮುಖ್ಯ ರಾಜಬೀದಿಯಲ್ಲಿ ಶವ ನಾರುತ್ತಿದೆ. ಆ ಶವದ ಮೇಲೆ ನೊಣಗಳು ಹಾರುತ್ತಿವೆ. ನೂರಾರು ಮಂದಿ ಆ ಕಡೆ ಹಾದು ಹೋಗುವವರು ಕೊಳೆತು ನಾರುವ ದುರ್ಗಂಧಕ್ಕೆ ಮೂಗು ಮುಚ್ಚಿ ಧಾವಿಸುವರೇ ವಿನಃ ಆ ಹೆಣವನ್ನು ಓರೆ ನೋಟದಿಂದಲೂ ನೋಡರು

ಕಲ್ಕತ್ತಾದಲ್ಲಿ ಕ್ಷುದ್ಬಾಧಾ ಪೀಡಿತರು

ಕಲ್ಕತ್ತಾದಲ್ಲಿ ಕ್ಷುದ್ಬಾಧಾ ಪೀಡಿತರಲ್ಲಿ ಆಗಸ್ಟ್ ೧ ರಿಂದ ಸೆಪ್ಟೆಂಬರ್ ೧೫ ರವರೆಗೆ ೫೫೦೭ ಹೆಣಗಳನ್ನು ಪೋಲೀಸ್ ದಳದವರು ಮತ್ತು ಹಿಂದೂ ಸಹಕಾರ ಸಮಿತಿಯವರು ಹೊತ್ತು ಹಾಕಿರುವರೆಂದೂ, ಸೆಪ್ಟೆಂಬರ್ ೬ ನೇ ತಾ|| ದಿಂದ ಅಕ್ಟೋಬರ್ ೧೬ ರವರೆಗೆ ೫೪೩೧ ಮಂದಿ ಕ್ಷುದ್ಬಾಧಾ ಪೀಡಿತರನ್ನು ಆಸ್ಪತ್ರೆಗೆ ಸೇರಿಸಲಾಗುವುದಾಗಿಯೂ ತಿಳಿಸಲಾಗಿದೆ.

ಹೋಟೆಲಿಗೆ ಆಹುತಿ

ಪಟಿಯಾಲದಿಂದ ಬಂದ ವರ್ತಮಾನದ ಪ್ರಕಾರ ಗೋವಿಂದಗಢ್ ಎಂಬಲ್ಲಿ ವಿಠಲದಾಸ್ ಎಂಬ ಹೋಟೆಲಿನವನು ತನ್ನ ಬಾಲಕನನ್ನು ನಿಯಮಿಸಿದ್ದನು. ರಾತ್ರಿ ಒಂದು ಗಳಿಗೆ ಬಂದು ಬಾಲಕನ ಬೇಹದ ಬಂಧನವನ್ನು ತಂದು ಮರುದಿನ ಊದಗಗಳನ್ನು ಭಕ್ಷಿಸಿದನು. ಬಾಲಕನ ನ ನಾಶವು ಯಾರಿಗೂ ತಿಳಿಯದೆ ಹೋಯಿತು. ಮಾರನೇ ದಿನ ಎಲ್ಲರೂ ಹುಡುಗನ ಬಗ್ಗೆ ಹುಡುಕಿ ಆತನ [illegible] ತಂದರು

ಇಟಾಲಿಯನ್ ಪಡೆಗಳ ಪ್ರತಿಭಟನೆ

ಜರ್ಮನ್ನರ ಪಡೆಗಳನ್ನು ಎರಡು ಇಟಾಲಿಯನ್ ತಂಡಗಳು ಪ್ರತಿಭಟಿಸಿದವೆಂದೂ, ಅವುಗಳು ಕಾರ್ಸಿಕಾಕ್ಕೆ ಹಿಂತಿರುಗಲಿಲ್ಲವೆಂದು ಅಲ್ಜೀರ್ಸ್‌ನಿಂದ ಬಂದ ವರ್ತಮಾನ ತಿಳಿಸುತ್ತದೆ

ಸಲೆರ್ನೋದಲ್ಲಿ ಮಿತ್ರ ಪಡೆಗಳು

ಮಿತ್ರ ಪಕ್ಷದ ಕೇಂದ್ರಗಳಿಂದ ಬಂದಿರುವ ವಾರ್ತೆಯು ಜರ್ಮನರು ದಕ್ಷಿಣದಿಂದ ಮತ್ತು ಹೆಚ್ಚಿನ ರಭಸದಿಂದ ಮುನ್ನುಗ್ಗುತ್ತಿರುವರು. ಸಾಲೆರ್ನೋದ ಆಗ್ನೇಯ ಭಾಗದಲ್ಲಿ ಎರಡು ಪಟ್ಟಣಗಳನ್ನು ವಶಪಡಿಸಿಕೊಂಡಿವೆ. ಸಾಲೆರ್ನೊ ಪ್ರದೇಶದಲ್ಲಿ ಮಿತ್ರಪಕ್ಷದ ಸೈನ್ಯದವರಿಗೂ, ಸಾಮುದ್ರಿಕ ವಾಹನಗಳೂ ಬಂದಿಳಿಯುತ್ತಿವೆ. ಅಲ್ಲಿ ಶತ್ರುಗಳ ಮೇಲೆ ವಿಮಾನ ಧಾಳಿ ನಡೆಸಲಾಗುತ್ತಿದೆಯೆಂದು ತಿಳಿಸುತ್ತದೆ.

ನಾಜಿ ಸೈನ್ಯ ಸರಸರಾಜು

ಬಾಲ್ಕನ್ ಪ್ರದೇಶಗಳಿಂದ ಬಂದ ವರ್ತಮಾನದಂತೆ ಭಾರಿ ಜರ್ಮನರ ಪಡೆಗಳು ಉತ್ತರದಿಂದ ದಕ್ಷಿಣಕ್ಕೆ ಚಲಿಸುತ್ತಿವೆಯೆಂದೂ ಸೈನ್ಯ ಪಡೆಗಳು ಮತ್ತು ಸಲಕರಣೆಗಳು, ವಿಶೇಷವಾಗಿ ದಕ್ಷಿಣದ ಮೆಸಡೋನಿಯಾ ಮತ್ತು ದಕ್ಷಿಣ ಗ್ರೀಸಿಗೆ ಸಾಗುತ್ತಿರುವುವೆಂದು ತಿಳಿದುಬಂದಿದೆ. ಜರ್ಮನರು ಇಟಲಿಯಲ್ಲಿ ತಮ್ಮ ದಳಗಳನ್ನು ತಂದುತ್ತಿರುವರು. ಇಟಲಿಗೆ ಮತ್ತೆ ೧೦ ಜರ್ಮನ್ ದಳಗಳು ಹೋಗಿವೆ. ಇವು ಒಟ್ಟು ಜರ್ಮನ್ ಮಿಲಿಟರಿ ಪಡೆಗಳು. ಅಲ್ಲಿ ಇರುವುವು. ಇವುಗಳು ಇಟಲಿ ಮತ್ತು ಬಾಲ್ಕನ್ ನಾಗಿ ಕಳಿಸಲಾಗಿದೆ

ಬರ್ಲಿನ್ ಮೇಲೆ ಧಾಳಿ

ಆರ್. ಎ. ಎಫ್. ವಿಮಾನ ಪಡೆಗಳು ಉಗ್ರಧಾಳಿ ಮಾಡಿ ಬರ್ಲಿನ್‌ನಲ್ಲಿ ನಷ್ಟವುಂಟುಮಾಡಿರುವುದಾಗಿಯೂ ವಿಮಾನದವರು ತಿಳಿಸಿದ್ದಾರೆ. ಜರ್ಮನ್ನರು ಏರ [illegible] [illegible]

ವಿಚಿ ಪೋಲೀಸರಿಗೆ ಶಸ್ತ್ರಾಸ್ತ್ರ

ವಿಚಿಯಲ್ಲಿರುವ ಎಲ್ಲ ಪೋಲೀಸರಿಗೂ ಬಂದೂಕು ಮತ್ತು ಆಯುಧಗಳನ್ನು ಸರ್ಕಾರದವರು ಸಲಕರಣೆ ಮಾಡಿ ಕೊಟ್ಟಿರುವರೆ. ಅವುಗಳನ್ನು ಉಪಯೋಗಿಸಲು ಯಾವ ಅಭ್ಯಂತರವಿಲ್ಲವೆಂದೂ, ವೈರಿಗಳು ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದ್ದಾದರೆ ಆಯುಧಗಳನ್ನುಪಯೋಗಿಸಲು ಆಜ್ಞೆಯಿತ್ತಿರುವುದಾಗಿ ವರದಿಯಾಗಿದೆ

ಸಂಗ್ರಾಮ ಸಲಕರಣೆ ಉತ್ಪತ್ತಿ

ಯುದ್ಧ ಸಲಕರಣೆಗಳನ್ನು ಉತ್ಪತ್ತಿ ಮಾಡುವುದರಲ್ಲಿ ಕೆನಡಾ ದೇಶವು ೪ ನೇ ಸ್ಥಾನ ಪಡೆಯುವುದು. ಇಲ್ಲಿ ನಿರ್ಮಾಣವಾಗುವ ವಸ್ತುಗಳಲ್ಲಿ ಶೇ|| ೭೦ ರಷ್ಟು ಮಿತ್ರ ರಾಷ್ಟ್ರಗಳಿಗೆ ರವಾನಿಸಲಾಗುವುದು.

ಹಾಪ್ಕಿನ್ಸರ ಭವಿಷ್ಯ

ಶ್ರೀ|| ರೂಸ್ವೆಲ್ಟರ ವಿಶೇಷ ಸಹಾಯಕರಾದ ಹ್ಯಾರಿ ಹಾಪ್ಕಿನ್ಸರು ಅಮೇರಿಕಾ ಎಂಬ ಪತ್ರಿಕೆಯಲ್ಲಿ, "ನಾವು ಈಗಿನ ಪಕ್ಷಯುದ್ಧದಲ್ಲಿ ಜಯಶೀಲರಾಗುವೆವು" "ಐರೋಪ್ಯ ನಾಡಿನಲ್ಲಿ ಒಂದು ಲೇಖನ ಬರೆದಿರುವರು. ಅದರಲ್ಲಿ, ರಷ್ಯಾ ಈ ಯುದ್ಧದಲ್ಲಿ ಬಹು ಗಣನೀಯವಾದುದು. ಅದನ್ನು ನಾವು ಕಳೆದುಕೊಂಡರೂ ಸಹ ಯುದ್ಧದಲ್ಲಿ ಪರಾಜಯ ಹೊಂದುವೆವೆಂದು ನಾನು ಭಾವಿಸುವುದಿಲ್ಲ. ಆದರೆ ನಾನು ಏನೆಸಿದ ವಿಷ್ಟು ಜಾಗ್ರತೆ ಜಯ ಲಭಿಸದು. ನಾವು ಇನ್ನೂ ಎರಡು ವರ್ಷಗಳು, ಕನಿಷ್ಟ, ಯುದ್ಧ ಮಾಡಬೇಕೆಂದು ನಾನು ನಂಬುತ್ತೇನೆ ಎಂದು ಬರೆದಿರುವರು.

ಚೀನಾ ವ್ಯಾಸಂಗಕ್ಕೆ ಭಾರತದ ಪ್ರಥಮ ಮಹಿಳೆ

ಚೀನಾದಲ್ಲಿ ಭಾ ಕ ರ್ಯದ ಪಿಎಚ್. ಡಿ. ಪದವೀಧರರಾದ ಮಿ|| ಕೆ. ಪಿ. ಮೆನನ್ ರವರ ಪತ್ನಿ ಮಿಸೆಸ್ ಶಾರದಾ ಮೆನನ್‌ರವರು, ೧೯೩೦ ಗ್ರ್ಯಾಜುಯೇಟ್ ನ ನಿರ್ವಾಣ್ ಕಾಲೇಜಿನಲ್ಲಿ ಮಹಿಳೆಯರು ಮತ್ತು ಸಕ್ರಿಯ ವೃತ್ತಿ ಶಿಕ್ಷಣ ಪಡೆದಿದ್ದರು. ಚೀನಾದ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆಯಲು ಭಾರತದಿಂದ ಚೀನಾಕ್ಕೆ ಹೋಗುವ ಪ್ರಥಮ ಮಹಿಳೆಯಾಗಿ [illegible]

ಟಿಂಬ್ಯಾರಾ ದ್ವೀಪದಲ್ಲಿ ಕದನ

"ಪೆಸಿಫಿಕ್ ಸಾಗರದ ದ್ವೀಪ [illegible] ಭಾಗದಲ್ಲಿ ಜಪಾನೀ [illegible] ಕರ ಧಾಳಿ ನಡೆಸಿದರು. ಪ್ರಬಲ [illegible] ಪ್ರತಿಭಟನೆಗಳು ನಡೆದವೆಂದು ಅಮೆರಿಕನ್ ಸೈನ್ಯಾಧಿಪರು ತಿಳಿಸಿದ್ದಾರೆ

ಇಟಲಿ ಸ್ವಾಧೀನವು ನಾಜಿಗಳ ವಶ

ಜರ್ಮನ್ ಸೈನ್ಯ ದಳಗಳು ಇಟಲಿಯ ನರ ಸ್ವಾತಂತ್ರ್ಯಗಳನ್ನು ಆಕ್ರಮಿಸಿರುವುದಾಗಿಯೂ ಕಮ್ಯೂನಿಸ್ಟ್ ಸಂಘಟನೆಯವರಿಗೆ ಈ ಸ್ವಾತಂತ್ರ್ಯಗಳ ಮೇಲೆ ಪ್ರಭುತ್ವ ವಿನಃ ಇನ್ನು ಮುಂದೆ ಅವಕಾಶವಿಲ್ಲವೆಂದು ಹಾಗೆ ಕೊನೆಯ ಎಚ್ಚರಿಕೆಯೆಂದು ಅವರಿಗೆ ಇಟಲಿಯಲ್ಲಿರುವ ಜರ್ಮನ್ ಸೈನ್ಯ ಕಮ್ಯಾಂಡರು ತಿಳಿಸಿರುವುದಾಗಿ ವರದಿಯಾಗಿದೆ

ಇಟಲಿದೇಶದ ದೊರೆಯು ತನ್ನ ದೇಶಕ್ಕೆ ವಿಶ್ವಾಸಘಾತ ಮಾಡಿರುವನು

ಮುಸೋಲಿನಿಯು ಇಟಾಲಿಯ ಜನತೆಗೆ ತಿಳಿಸಿದೆ. ಮಾತನಾಡುತ್ತಾ ತಾನು ಜೀವ ಸಹಿತ ಶತ್ರುಗಳ ಕೈಸೆರೆ ಸಿಗುವುದಿಲ್ಲವೆಂದೂ, ಇಟಲಿಯ ದೊರೆಯಾದ ವಿಕ್ಟರ್ ಇಮಾನುಯಲ್ಲನು ತನ್ನ ದೇಶಕ್ಕೆ ಮೋಸ ಮಾಡಿರುವನೆಂದೂ ಅವನನ್ನು ತಕ್ಷಣ ವಿಚಾರಣೆಗೆ ಗುರಿಪಡಿಸಬೇಕೆಂದು ಹೇಳಿರುವುದಾಗಿ ರೇಡಿಯೊ ಬರ್ಲಿನ್ ತಿಳಿಸುತ್ತದೆ

ಅನೇಕ ಜಪಾನಿ ಸೈನಿಕರ ಆತ್ಮಹತ್ಯೆ

ನ್ಯೂಗಿನಿಯಲ್ಲಿ ಅನೇಕ ಜಪಾನಿ ಸೈನಿಕರ ಸೋಲಿನ ಅವಮಾನ ಸಹಿಸದೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿಯೂ, ಶತ್ರುಗಳು ಕತ್ತರಿಸಿಕೊಂಡ ಅನೇಕ ಜಪಾನಿಯರು ರಣರಂಗದಲ್ಲಿ ಬಿದ್ದಿರುವುದಾಗಿಯೂ ಅವರು ತಮ್ಮ ಕಾಲು ಬೆರಳ ಸಹಾಯದಿಂದ ರೈಫಲ್‌ಗಳ ಗುಂಡುಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು [illegible] ಮಾಡಿದ್ದರೆಂದು ವರದಿಯಾಗಿದೆ. [illegible] ಅನೇಕ ಜಪಾನಿ ಶವಗಳನ್ನು ಸೇನಾಪಡೆ [illegible] ತಿಳಿಯಬರುತ್ತಿದೆ.

ಇರಾಕಿಗೆ ನೂತನ ವಿಮಾನ ದಳಪತಿ

ಇರಾಕ್ ಮತ್ತು ಪರ್ಷಿಯಾಗಳಿಗೆ ವೈಮಾನಿಕ ದಳದ [illegible] ವೈಮಾನಿಕ ದಳಪತಿಯಾಗಿ [illegible] ನೇಮಿಸಿರುವರೆಂದು ತಿಳಿಸಲಾಗಿದೆ.

ಫ್ರುಟ್ ಬಾಲ್

[illegible]

ಪತ್ರಿಕೆಗಳ ಕರ್ತವ್ಯವು ಲೋಕದ ಕಲ್ಯಾಣ ಸಾಧನೆ

ಪತ್ರಿಕೋದ್ಯೋಗಿಗಳ ಸಮ್ಮೇಳನ

(ಸ್ವಂ ವಿ ಜಾ) ಬೆಂಗಳೂರು ೯ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಂಘದ ಸ್ಥಾಪನೆಯನ್ನು ನೆರವೇರಿಸಿ, ತಮ್ಮ ಮುಂದೆ ಕೊಡಬೇಕೆನ್ನುವ ಇದರಿಂದ ನಿವಾರಿಸಲು ಸಹಾಯವಾಗುವುದೆಂದೂ ತಿಳಿಸಿದರು. ಈ ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳಿಗೆ ತಮ್ಮ ಕೈಲಾದಷ್ಟು ಸೌಕರ್ಯಗಳನ್ನು ಕಲ್ಪಿಸಿಕೊಡುವುದಾಗಿಯೂ ಭರವಸೆ ಇತ್ತರು.

ಮೈಸೂರು ಸಂಸ್ಥಾನ ಪತ್ರಿಕೋದ್ಯೋಗಿಗಳ ಸಮ್ಮೇಳನವು ಈ ದಿವಸ ಪ್ರಾತಃಕಾಲ ಗಂಟೆ ೯-೩೦ ಕ್ಕೆ ಕರ್ನಾಟಕ ಸಾಹಿತ್ಯ ಪರಿಷನ್ಮಂದಿರದಲ್ಲಿ ಪ್ರಾರಂಭವಾಯಿತು. ಸಂಸ್ಥಾನದನೇಕ ಭಾಗಗಳಿಂದ ೧೫೦ ಕ್ಕೆ ಮೇಲ್ಪಟ್ಟು ಪ್ರತಿನಿಧಿಗಳು ಹಾಜರಿದ್ದರು.

ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಸಿ. ಬಿ. ಶ್ರೀನಿವಾಸರಾಯರು ಸ್ವಾಗತ ಭಾಷಣ ಮಾಡಿ ಎಲ್ಲರನ್ನೂ ಸ್ವಾಗತಿಸಿದರು.

ದಿವಾನರಾದ ಪ್ರಧಾನ ಶಿರೋಮಣಿ, ಎಸ್. ನಾಗಪ್ಪನವರು ಸಮ್ಮೇಳನದ ಆರಂಭೋತ್ಸವವನ್ನು ನಡೆಸಿದರು. ಪತ್ರಿಕೋದ್ಯೋಗದ ಮಹಿಮೆ, ಈ ವೃತ್ತಿಯಲ್ಲಿ ಒದಗಬಹುದಾದ ಎಡರು ತೊಡರುಗಳು, ಈ ಕಸುಬಿನ ಹಿರಿಯ ಆದರ್ಶ ಸಾಧನೆ ಎಂತು ಜನ ಸಮುದಾಯದ ಮೇಲೆ ಕೆಲಸ ಮಾಡುತ್ತದೆ ಎಂಬ ಅಂಶಗಳನ್ನು ಕ್ರೋಢೀಕರಿಸಿ ಭಾಷಣ ಮಾಡಿದರು.

ನಂತರ ಶ್ರೀ ಗುಪ್ತರವರು ಸಮ್ಮೇಳನದ ಯಶಸ್ಸನ್ನು ಕೋರಿ ಕಳುಹಿಸಿದ ಸಂದೇಶಗಳನ್ನು ಓದಿದರು. ಸರ್ ಎಂ. ವಿಶ್ವೇಶ್ವರಯ್ಯ, ಡಾ॥ ಜಯಕರ್, ಸರ್ ಫ್ರಾನ್ಸಿಸ್ ಲೋಲೆಸ್, ಪಿ. ಕ್ರಿಪ್ಸ್, ಶ್ರೀ ಸಿ. ಆರ್ ಪಟೇಲ್, ಡಾ॥ ಸಾವರ್ಕರ್, ಶ್ರೀ ರಾಮನಾಥ ಗೋಯೆಂಕ, ಶ್ರೀ ಗೋಪಾಲ ಸ್ವಾಮಿ, ಶ್ರೀ ಕೇಳ್ಕರ್, ಶ್ರೀ ಮೋದಿ, ಶ್ರೀ ಹೆಚ್. ಸಿ. ದಾಸಪ್ಪ ಮೊದಲಾದವರು ಶುಭ ಸಂದೇಶಗಳನ್ನು ಕಳಿಸಿದ್ದರು.

ನಂತರ ಅಧ್ಯಕ್ಷರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರು ಭಾಷಣ ಮಾಡಿದರು.

ಅಧ್ಯಕ್ಷರ ಭಾಷಣ

"ಪತ್ರಿಕೆಯ ಪ್ರತಿ ... ಪತ್ರಿಕಾ ಕರ್ತ ... ಆದರ್ಶದಿಂದ ... ಪತ್ರಿಕಾ ಕರ್ತ ... [illegible]

... ರೂ ವೃತ್ತಪತ್ರಿಕೆಗಳು ನಿಃಶಂಕವಾಗಿ ಬೆಳೆಯಬೇಕೆಂದರೆ ಅವಕಾಶವಿಲ್ಲವಾಗಿದೆ. ಮೈಸೂರಿನ ವೃತ್ತಪತ್ರಿಕಾ ಶಾಸನಗಳ ಸ್ವರೂಪ ಸಂಚಯವನ್ನು ತಾವು ನೋಡಿ ಕೊಂಡಿರಾದರೆ ನನ್ನ ಮಾತು ತಮಗೆ ಅರ್ಥವಾಗುತ್ತದೆ. ೧೯೦೮ ರಲ್ಲಿ ಮೈಸೂರು ಸರಕಾರದವರೊಂದು ಶಾಸನ ಮಾಡಿದರು. ಅದರಂತಹ ಭಯಂಕರವಾದ ಶಾಸನವನ್ನು ಊಹಿಸಲಿಕ್ಕಾಗದು. ಈ ಶಾಸನವು ಬಹಳ ಕ್ರೂರವಾದುದೆಂದೂ, ಅದನ್ನು ತೆಗೆದು ಹಾಕಬೇಕೆಂದೂ ಜನರು ಚಳವಳ ಹೂಡಿದರು. ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭಾ ಕಾರ್ಯಕಲಾಪಗಳ ವರದಿಗಳನ್ನು ಬಿಚ್ಚಿ ಓದಿದರೆ ಸದಸ್ಯರ ಭಾವೋದ್ರೇಕವು ಸ್ಪಷ್ಟವಾಗುತ್ತದೆ. ಹಾಗೆಯೇ ಪ್ರಭುತ್ವದವರ ಹಟಮಾರಿತನವೂ ವಿಶದವಾಗುತ್ತದೆ. ಏಕಪ್ರಕಾರವಾಗಿ ಚಳವಳ ನಡೆಸಿದುದರ ಫಲವಾಗಿ ೧೯೦೮ ನೆಯ ವರ್ಷದ ಕಾನೂನು ಹೋಯಿತು. ಆದರೆ ಅದಕ್ಕೆ ಬದಲಾಗಿ ಸರ್ವವ್ಯಾಪಕವಾದೊಂದು ಹೊಸ ಶಾಸನ ಬಂತು. ನಾವೆಲ್ಲ ಏಕೋದ್ದಿಷ್ಟನಿಷ್ಠರಾಗಿ ಕೆಲಸ ಮಾಡಬೇಕು; ಈಗ ಆಚರಣೆಯಲ್ಲಿರುವ ಶಾಸನವನ್ನು ತೆಗೆದುಹಾಕಿಸಿ ಬಿಡಬೇಕು. ಎಂದಿನವರೆಗೆ ಈ ಶಾಸನವು ಆಚರಣೆಯಲ್ಲಿರುವುದೋ ಅಂದಿನವರೆಗೆ ಪತ್ರಿಕೆಗಳು ಸಹಜವಾದ ಬೆಳೆಯ ಬೆಳೆಗುವುದಿಲ್ಲ. ಈಗ ಭಾರತ ಸಂರಕ್ಷಣ ಕಾನೂನೊಂದು ಬಂದಿದೆ. ಪತ್ರಿಕೆಗಳು ಬಲಕ್ಕೆ ತಿರುಗಿದರೂ ತಪ್ಪು; ಎಡಕ್ಕೆ ಹೊರಳಿದರೂ ತಪ್ಪು. ಭರತ ಖಂಡದಲ್ಲೆಲ್ಲ ಈ ಕಾನೂನು ಸವಿಯನ್ನು ಮೈಸೂರಿನ ಪತ್ರಿಕೆಗಳಲ್ಲಿ ನೋಡಿವೆ.

ಹೀಗೆ ಹೇಳಿದ ಮಾತ್ರದಿಂದ ಶಾಸನ ವೆಂಬುದೇ ಇರಬಾರದು. ಪತ್ರಿಕಾ ಕರ್ತರು ನಿಃಶಂಕರಾಗಿರಬೇಕೆಂದು ನಾವು ಬಯಸುವೆನೆಂದು ಯಾರೂ ಭಾವಿಸಬಾರದು. ಶಾಸನವೊಂದಿರಬೇಕು. ಪತ್ರಿಕಾ ಕರ್ತರನ್ನು ದಂಡಿಸುವುದಕ್ಕಲ್ಲ; ಜೀವನದ ಬೆಳವಣಿಗೆಗೆ ಅತ್ಯಗತ್ಯವಾದ ಸಂಯಮವನ್ನು ಪತ್ರಿಕಾಕರ್ತರಿಗೆ ಕಲಿಸಿಕೊಡಲಿಕ್ಕೆ. ಈಗ ಮೈಸೂರಿನ ಶಾಸನ ಕಡತದಲ್ಲಿರುವ ವೃತ್ತಪತ್ರಿಕಾ ಶಾಸನ ಸ್ವರೂಪವನ್ನು ಚೆನ್ನಾಗಿ ಪರಿಶೀಲಿಸಿ ನೋಡಿದ್ದಾದರೆ ಅದು ಪತ್ರಿಕೆಗಳ ಬೆಳವಣಿಗೆಗೆ ಸಹಾಯಕವಾಗಿಲ್ಲ. ಅದಕ್ಕೆ ಬದಲಾಗಿ ನಿತ್ಯಭಯಂಕರವಾಗಿದೆ. ಇದು ಕೊಂಚ ಬಿರುಸಿನ ಮಾತೆಂದೇತು ನಾನೇನು ಮಾಡಲಿ? ಅನುಭವವೇ ನನ್ನನ್ನು ಹೀಗೆ ಅನ್ನಿಸುತ್ತದೆ. ಮೈಸೂರು ಸರಕಾರದವರು ಉಗ್ರವಾದ ಈ ಶಾಸನವನ್ನು ತೆಗೆದುಹಾಕಬೇಕು. ಅದನ್ನು ತೆಗೆದುಹಾಕುವುದರಿಂದ ಮೈಸೂರಿನಲ್ಲಿ ಏನ ಬಾರದೇನೂ ಆಗುವುದಿಲ್ಲ. ನಮ್ಮ ಪತ್ರಿಕಾಕರ್ತರಿಗೆ ರಾಜಭಕ್ತಿಯುಕ್ತರೆನಿಸಿದ್ದಾರೆ. ದೇಶಭಕ್ತರಾಗಿದ್ದಾರೆ. ಉತ್ಸಾಹದ ದಿಂದ ಪೂರ್ವಾಗಲಾದರೂ ಒಂದು ಹೆಜ್ಜೆ ಮುಂದಿಡಲಿ. ಅವರು ನಾಡಕ್ಕೆ ದರ್ಶ ಶಿಕ್ಷೆಗೆ ಯೋಗ್ಯರೆಂದು ಪ್ರಭುತ್ವದವರು ನಿರ್ಣಯಕ್ಕೆ ಬಂದು ಬಿಡಬಾರದು.

ಭಕ್ತಿಯು ನಾವೆಲ್ಲ ನಮ್ಮ ಪಡುವಂತಹುದು. ಅವರಂತೆ ಅನೇಕರು ಗಾಂಧೀಜಿಯವರು ಆರಂಭಿಸಿದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಪೂರ್ವವಾದ ಧೈರ್ಯವನ್ನು ತೋರಿಸಿದ್ದಾರೆ. ಯಾವ ದೇಶದಲ್ಲೇ ನೋಡಿ, ಸ್ವಾತಂತ್ರ್ಯಕ್ಕೆ ಹೋರಾಡುವವರಲ್ಲಿ ಪತ್ರಿಕಾಕರ್ತರೇ ಅಗ್ರಗಾಮಿಗಳು. ಭರತ ಖಂಡದಲ್ಲಿ ನೋಡಿ, ಒಂದು ದೊಡ್ಡ ಪಟ್ಟಿಯನ್ನೇ ಕೊಡಬಹುದು. ರಾಷ್ಟ್ರರಚನಾ ಕಾರ್ಯದಲ್ಲಿ ಪತ್ರಿಕಾಕರ್ತರು ಜವಾಬ್ದಾರಿ ವಹಿಸಿದ್ದಾರೆ.

ಆದರೆ ಈಗ ನಾವೆಲ್ಲ ಗುಲಾಮರು. ಸ್ವಾತಂತ್ರ್ಯದ ಉಸಿರಾಡಲಿಕ್ಕೆ ನಮ್ಮ ಹಣೆಯಲ್ಲಿ ಇನ್ನೂ ಬರೆದಿಲ್ಲ. ನ್ಯಾಷನಲ್ ಕಾಂಗ್ರೆಸಿನ ಇತಿಹಾಸ, ಗಾಂಧಿ, ನೆಹರೂ ಮೊದಲಾದ ದೇಶಭಕ್ತರು ವೀರ ಜೀವನ, ತ್ಯಾಗ ಇದನ್ನೆಲ್ಲ ಜನಪದಕ್ಕೆ ಪರಿಚಯ ಮಾಡಿಕೊಡತಕ್ಕ ಭಾಗ್ಯ ಪತ್ರಿಕೆಗಳಿಗೆ ಸೇರಿದೆ. ಪತ್ರಿಕೆಗಳಿಲ್ಲದೆ ಹೋಗಿದ್ದರೆ ಕಾಂಗ್ರೆಸಿನ ಸಂದೇಶವು ಒಳನಾಡಿನ ಜನರ ಕಿವಿಗೆ ಬೀಳುತ್ತಿರಲಿಲ್ಲ.

ಈ ಸ್ವಾತಂತ್ರ್ಯ ಸಾಧಕರು ಸುದ್ದಿ ಕೇಳದ್ದಿಲ್ಲ ಬೇಗ್ಗೆ ಪತ್ರಿಕೆಗಳಲ್ಲಿ ಬಂದು ಬಿಡುತ್ತವೆ. ಇದೆಂತಹ ಸೇವೆ ಕಂಡಿರಾ? ಸ್ವಾತಂತ್ರ್ಯಕ್ಕಾಗಿ ಪತ್ರಿಕೆಗಳು ದುಡಿಯುತ್ತಿವೆ. ಆಂಗ್ಲೋ ಇಂಡಿಯನ್ ಪತ್ರಿಕೆಗಳು ಹಲವನ್ನು ಬಿಟ್ಟರೂ ಉಳಿದ ಎಲ್ಲ ಪತ್ರಿಕೆಗಳೂ ಸ್ವಾತಂತ್ರ್ಯವಾದಿಗಳೇ. ಇದು ಪತ್ರಿಕೆಗಳ ಜೀವನ ಭಾಗ್ಯ. ಪತ್ರಿಕೆಗಳ ಜೀವನ ಪ್ರಭಾವವು ರಾಷ್ಟ್ರಜೀವನದ ಮೇಲೆ ಬಿದ್ದು ಆ ಜೀವನವನ್ನು ಭವ್ಯವನ್ನಾಗಿ ಮಾಡುತ್ತದೆ. ಮತ್ತೊಂದು ತರವನ್ನಾಗಿ ಮಾಡುತ್ತದೆ. ಮತ್ತೆ ರಾಷ್ಟ್ರಜೀವನವು ತನ್ನ ಪ್ರಭಾವವನ್ನು ಪತ್ರಿಕೆಗಳ ನಿತ್ಯ ಜೀವನದ ಮೇಲೆ ಬೀರುತ್ತದೆ.

ಕಳೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕರು ಮುಂದೆ ಬಂದು, ಕ್ಷಾತ್ರವನ್ನು ಬೆಳಗಿದರು. ಪತ್ರಿಕಾಕರ್ತರು ಅಸಂಖ್ಯಾತರಾಗಿ ಮುಂದೆ ಬಂದು ದೇಶಸೇವೆ ಸಲ್ಲಿಸಿದರು. ಇಂದು ರಾಷ್ಟ್ರ ಪುನರ್ನಿರ್ಮಾಣ ಕಾರ್ಯದಲ್ಲಿ ಪತ್ರಿಕಾಕರ್ತರ ಜವಾಬ್ದಾರಿಯು ಘೋರವೆಂದು. ಅವರು ಈಗ ಜೀವನದ ನಾನಾ ಕ್ಷೇತ್ರಗಳನ್ನು ಪ್ರವೇಶ ಮಾಡಿ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಮೈಸೂರಿನ ಪತ್ರಿಕೆಗಳು ಸಹ ತಮಗಿರುವ ವಿಶಿಷ್ಟ ಮಿತಿಗಳಲ್ಲಿ ತಮ್ಮ ಸೇವೆ ಸಲ್ಲಿಸುತ್ತಿವೆ. ನಮ್ಮ ಕನ್ನಡ ಪತ್ರಿಕೆಗಳು ರಾಷ್ಟ್ರ ಜೀವನದ ಮೇಲೆ ತಮ್ಮ ಪ್ರಭಾವ ಬೀರುವ ಕಾಲ ಇನ್ನೂ ಬರಲಿಲ್ಲ. ನಮ್ಮ ಪತ್ರಿಕಾ ಜೀವನದಲ್ಲಿ ಮಹಾ ಪ್ರತಿಭಾಶಾಲಿಗಳ ಅವತಾರವಾಗಬೇಕಾಗಿದೆ. ಅಂತಹ ಅವತಾರಕ್ಕೆ ಬೇಕಾದ ವಾತಾವರಣವನ್ನು ಕಲ್ಪಿಸುವ ಕರ್ತವ್ಯ ನಮ್ಮದು. ಲೋಕಮಾನ್ಯ ತಿಲಕರು ನರಸಿಂಹ ಚಿಂತಾಮಣಿ, ಕೇಳಕರ್‌ಗಳು ಹುಟ್ಟಿದರು. ಮಹಾರಾಷ್ಟ್ರದ ಸ್ವರೂಪವನ್ನೇ ಬದಲಾಯಿಸಿ ಬಿಟ್ಟರು.

ಮೈಸೂರು ದೇಶದಲ್ಲೂ ಪತ್ರಿಕೆಗಳು ರಾಜಕೀಯ ಸಾಹಿತ್ಯಗಳ ಮೇಲೆ ತಮ್ಮ ಪ್ರಭಾವ ಬೀರಬೇಕಾಗಿದೆ. ರಾಜಕೀಯ ಸುಧಾರಣೆಗಳು ಬಂದಾಗ ಪತ್ರಿಕೆಗಳಲ್ಲಿ ಬಹಳ ದೂರದೃಷ್ಟಿಯುಳ್ಳವಾದ ವಿಮರ್ಶೆ

ಪ್ರಾಯವನ್ನು ಕ್ರೋಢೀಕರಿಸಿ ಪ್ರಭುತ್ವ ಮುಂದಿಡುತ್ತಿವೆ. ಈ ಕೆಲಸದ ಸಫಲತೆಯು ಸರಕಾರದ ದೂರದೃಷ್ಟಿಯನ್ನವಲಂಬಿಸಿರುತ್ತದೆ. ಆದರೆ ಇದುವರೆಗೆ ಕಾದರ ಸರಕಾರದ ರೀತಿ ನೀತಿಗಳಲ್ಲಿ ಯಾವ ಬದಲಾವಣೆಯೂ ಕಾಣಬರಲಿಲ್ಲ. ಪತ್ರಿಕೆಗಳು ಧೈರ್ಯದಿಂದ ಮುಂದುವರಿದು, ಪ್ರಜೆಗಳ ಹೃದಯದಲ್ಲಿ ಸ್ವಾತಂತ್ರ್ಯದ ವೀರದಾಹವನ್ನು ಹುಟ್ಟಿಸಬೇಕಾಗಿದೆ. ಪತ್ರಿಕೆಗಳ ಜೀವನವು ಎಷ್ಟು ನಿರ್ಮಲವಾಗಿರುವುದೋ ಅಷ್ಟುಮಟ್ಟಿಗೆ ಅವುಗಳ ಪ್ರಭಾವವು ಪ್ರಭುತ್ವದ ಆಡಳಿತದ ವಿಧಾನಗಳ ಮೇಲೆ ಬೀಳುತ್ತದೆ.

ಪತ್ರಿಕೆಗಳ ಕರ್ತವ್ಯ ಲೋಕ ಕಲ್ಯಾಣ ಸಾಧನ

ಪತ್ರಿಕೆಗಳ ಕರ್ತವ್ಯವು ಲೋಕ ಕಲ್ಯಾಣ ಸಾಧನೆ. ನಾವು ನಮ್ಮ ಪತ್ರಿಕೆಗಳನ್ನು ನಮ್ಮ ನಾಗರಿಕತೆ, ಸಂಸ್ಕೃತಿಗಳ ವಾಹಿಗಳನ್ನಾಗಿ ಮಾಡಬೇಕು. ನಮ್ಮ ಹಿರಿಯ ಜೀವನದ ಭವ್ಯತೆಯ ಪರಿಚಯವನ್ನು ನಂಗೆ ಮಾಡಿಕೊಡಬೇಕು. ಏ. ಧ್ಯಾಭಿವನತ್ತೆ ರಾಷ್ಟ್ರಗಳ ವಿನಾಶಕ್ಕೆ ಕಾರಣ.

ಯಾರು ಯಾವ ಅಭಿಮಾನವನ್ನೆ ತೋರಿಸಲಿ ಪತ್ರಿಕಾಕರ್ತರು ಮಾತ್ರ ನಿಷ್ಪಕ್ಷಪಾತಿಗಳಾಗಿ ವರ್ತಿಸಬೇಕು.

ಸತ್ಯದ ಪ್ರಚಾರ ಮತ್ತು ಪ್ರಕಟನೆ ಮಹಾ ಪುಣ್ಯದ ಕೆಲಸ. ಪತ್ರಿಕೆಗಳಿಗೆ ಭಾಗ್ಯವು ಲಭಿಸಿದೆ.

ಕನ್ನಡ ನಿಘಂಟು

ಕನ್ನಡ ಪತ್ರಿಕೆಗಳಲ್ಲಿ ಗದ್ಯವು ನಾನಾ ರೂಪಗಳನ್ನು ಪಡೆಯಬೇಕು. ಲೇಖಕರೊಬ್ಬೊಬ್ಬರೂ ಪ್ರತ್ಯೇಕ ಶೈಲಿಗಳನ್ನು ಸೃಷ್ಟಿಸಬೇಕು. ಕನ್ನಡ ಗದ್ಯಕ್ಕೆ ಜೀವ ಕಳೆಯನ್ನು ಬರಬೇಕಾದರೆ ಕನ್ನಡ ವೃತ್ತಪತ್ರಿಕಾ ಕಾರ್ಯಾಲಯಗಳಲ್ಲಿ ಪ್ರಚಂಡ ಉದ್ಯೋಗವಾಗಬೇಕು. ಹಾಗೆಯೇ ಶಬ್ದಗಳನ್ನು ಸೃಷ್ಟಿಮಾಡುವ ಕಾರ್ಯಸ್ಥಾನಗಳು ಪತ್ರಿಕಾ ಕಾರ್ಯಾಲಯಗಳು. ಕಳೆದ ಸಮ್ಮೇಳನದಲ್ಲಿ ಇದಕ್ಕಾಗಿಯೇ ಒಂದು ಉಪಸಮಿತಿಯ ರಚನೆಯಾಯಿತು. ಇಂದಿನವರೆಗೂ ಆ ಸಮಿತಿ ಕೂಡಲಿಲ್ಲ. ಈಗಲಾದರೂ ಆ ಕಾರ್ಯವಾಗಬೇಕೆಂದು ನಾನು ಆಶಿಸುತ್ತೇನೆ. ಕನ್ನಡ ಪತ್ರಿಕಾ ಕಾರ್ಯಾಲಯಗಳಿಗೆ ರಾಜಕೀಯ ಪದಗಳ ನಿಘಂಟುವೊಂದು ಬೇಕು.

ಕನ್ನಡ ಅಭಿಮಾನ ಹೆಚ್ಚಬೇಕು

ಕನ್ನಡ ಪತ್ರಿಕೆಗಳು ಅಭಿವೃದ್ಧಿಗೆ ಬರಬೇಕಾದರೆ, ಸರ್ಕಾರದ ಅಧಿಕಾರಿಗಳಲ್ಲಿ ಕನ್ನಡದ ಮೇಲೆ ಅಭಿಮಾನವಿಟ್ಟು ಆ ಭಾಷೆಯಲ್ಲೇ ವ್ಯವಹರಿಸಬೇಕಾಗಿದೆ. ಇನ್ನು ಮುಂದೆಯೂ ಸರಿಸ್ಥಿತಿ ಹೀಗೆಯೇ ಇರಬೇಕೆಂದು ಅಧಿಕಾರಿಗಳು ಭಾವಿಸಿ ನಂಬಿಕೊಂಡಿರುವುದು ಯುಕ್ತವಲ್ಲ. ಕನ್ನಡ ಪತ್ರಿಕೆಗಳಿಗೆ ಮತ್ತೊಂದು ದೊಡ್ಡ ಜವಾಬ್ದಾರಿ ಇದೆ. ಕನ್ನಡ ಪತ್ರಿಕೆಗಳ ಭವಿಷ್ಯವು ಆ ದಿನ್ನಾಶ್ರಯಿಸಿದೆ. ಮೈಸೂರಿನ ರಾಜಭಾಷೆ ಕನ್ನಡ. ಸರಕಾರದ ಸಕಲಕಾರ್ಯಗಳನ್ನು ಕನ್ನಡದಲ್ಲೇ ನಡೆಸುವುದರಲ್ಲಿ ... ಏನೂ ಇರಬಾರದು. ಕನ್ನಡ ಪತ್ರಿಕೆಗಳು ಈ ಸುಧಾರಣೆಯ ಸಫಲತೆಗಾಗಿ ಪ್ರಬಲ ಚಳವಳ ಹೂಡಬೇಕಾಗಿದೆ. ಕನ್ನಡ ಪ

[ಹಿಂದಿನ ಪುಟದಿಂದ]

ಗಳನ್ನು ವರ್ಷಂದಕ್ಕೆ ಬರಬೇಕು : ಅವು ಆ ...ಗ ವೃಥಕಾಯಗಳಾಗಬೇಕು.

ಆರ್ಥಿಕ ಸ್ಥಿತಿ ತೃಪ್ತಿಕರವಾಗಿಲ್ಲ

ಪತ್ರಿಕಾ ಕರ್ತರಿಲ್ಲರ ಆರ್ಥಿಕ ಸ್ಥಿತಿಯು ತೃಪ್ತಿಕರವಾಗಿಲ್ಲ. ಅವರಿಗೆ ಸಲ್ಲುತ್ತಿರುವ ...ಂಬಳ ಸಾರಿಗೆಗಳು ತೀರ ಅಲ್ಪ. ಪತ್ರಿಕೆಗಳ ಆರ್ಥಿಕ ಸ್ಥಿತಿಯು ಬಹಳ ಬಿಂಕಾಜನಕವಾಗಿದೆ. ಪತ್ರಿಕಾ ಕರ್ತರಿಗೆ ಸಿಗುವ ...ಣ್ಣ ನೆರವಾದಲ್ಲಿ ಅವರು ಈ ಸಂಘದ ಸದಸ್ಯತ್ವ ಶುಲ್ಕವನ್ನು ಕೊಡಬೇಕು. ಅನಾರೋಗ್ಯ, ರೋಗರುಜಿನಾದಿಗಳಿಗೆ ಹಣಕೊಡಬೇಕು. ಏನಾದರೂ ವರಾಡಿ ವೃತ್ತಿ ಬಾಂಧವರಿಗೆ ಆಗತ್ಯಬಿದ್ದಾಗ ಸ್ವಲ್ಪಮಟ್ಟಿಗಾದರೂ ದ್ರವ್ಯ ಸಹಾಯ ಮಾಡಬೇಕೆಂದು ಒಂದು ಸಹಾಯ ನಿಧಿಯನ್ನು ಸಂಘದವರು ಸ್ಥಾಪಿಸಿದರು.

ನಮ್ಮ ಸಂಘವು ವರ್ಷಂದಕ್ಕೆ ಏರಲಿ, ಸ್ರ್ವಾಂಗಸುಂದರವಾಗಿ ಬೆಳೆಯಲಿ, ಸಂಘದವರೆಲ್ಲ ಆತ್ಮವಿಶ್ವಾಸದಿಂದ ತೇಜೋವಂತರಾಗಿ ಮೆರೆಯಲಿ "

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನ ನಡೆಯಬೇಕು

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ದ್ವಿತೀಯ ಸಮ್ಮೇಳನದ ಬಹಿರಂಗ ಅಧಿವೇಶನವು, ಶ್ರೀ ಟಿ. ಟಿ. ಶರ್ಮರವರ ಅಧ್ಯಕ್ಷತೆಯಲ್ಲಿ ಈದಿನ ಮಧ್ಯಾಹ್ನ ಆರಂಭವಾಯಿತು.

ಆಳುವ ಮಹಾಸ್ವಾಮಿಯವರಲ್ಲಿ ಸಮ್ಮೇಳನದವರು ತಮಗಿರತಕ್ಕ ರಾಜಭಕ್ತಿಪೂರ್ಣವಾದ ವಂದನೆಗಳನ್ನು ಅರ್ಪಿಸುವುದಲ್ಲದೆ ಮಹಾಸ್ವಾಮಿಯವರು ಪತ್ರಿಕೋದ್ಯೋಗಿಗಳ ಸಹಾಯ ನಿಧಿಗೆ ದಯಪಾಲಿಸಿದ ಸಾವಿರ ... ಉದಾರ ಸಹಾಯಕ್ಕಾಗಿ ಅವರಲ್ಲಿ ...ನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ ಎಂ... ನಿರ್ಣಯಗಳು ಅಧ್ಯಕ್ಷರಿಂದ ಸೂಚಿತವಾಗಿ, ಅಂಗೀಕಾರವಾಯಿತು.

ನಂತರ ಮಂಗಳೂರಿನ "ಸ್ವದೇಶಾಭಿಮಾನಿ" ವಾರ ಪತ್ರಿಕೆ ಉಪಸಂಪಾದಕರಾದ ಶ್ರೀ ಕೆ. ಕೆ. ರಾವ್‌ರವರು, ಬರುವ ಡಿಸೆಂಬರ್ ತಿಂಗಳಲ್ಲಿ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನವನ್ನು ಮಂಗಳೂರಿನಲ್ಲಿ ನಡೆಸಲು ಏರ್ಪಡಿಸಿರುವುದಾಗಿಯೂ, ಅದಕ್ಕೆ ಸಂಸ್ಥಾನದ ಎಲ್ಲ ಪತ್ರಿಕೋದ್ಯೋಗಿಗಳು ಸಹಕರಿಸಿ ಸಮ್ಮೇಳನದಲ್ಲಿ ಭಾಗವಹಿಸಬೇಕೆಂದೂ, ಅಲ್ಲಿನ ಪತ್ರಿಕೋದ್ಯೋಗಿಗಳ ಸಂಘದ ಪರವಾಗಿ ಸಭೆಯನ್ನು ಪ್ರಾರ್ಥಿಸಿದರು.

ಇಟಲಿ ರೈಲ್ವೆಗಳ ಮೇಲೆ ಧಾಳಿ

ಮಿತ್ರ ವಿಮಾನಗಳು ಫ್ರಾನ್ಸ್ ಮತ್ತು ಇಟಲಿ ಮಧ್ಯದಲ್ಲಿ ಶತ್ರುವಿನ ರೈಲ್ವೆ ಸ್ಥಾನಗಳ ಮೇಲೆ ಉಗ್ರ ಧಾಳಿ ನಡೆಸಿ ನಷ್ಟವುಂಟುಮಾಡಿರುವುದಾಗಿ ವರದಿಯಾಗಿದೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

ತಾ|| ೨೦-೯-೪೩ ರಿಂದ ೨೬-೯-೪೩ ರವರೆಗೆ

ಮೇಷ—ಯಾವ ಕಾರ್ಯವನ್ನು ಪ್ರಾರಂಭಿಸಬೇಕಾದರೂ ಮೊದಲು ಶತ್ರುಗಳನ್ನು ನಿರ್ಮೂಲವಾಡಿ ಆಮೇಲೆ ಕಾರ್ಯತತ್ಪರರಾಗಿರಿ. ಶರೀರಪ್ರಕೃತಿ ಚೆನ್ನಾಗಿರುವುದು. ನೆನೆದ ಕಾರ್ಯಗಳು ಜಯಪ್ರದವಾಗುವುವು. ಮಾನ ಮರ್ಯಾದೆಗಳು ಲಭಿಸುವುವು. ಖರ್ಚಿನ ಬಾಬು ಕಡಿಮೆಯಾಗುವುದು. ಆಪ್ತೇಷ್ಟರ ಭೇಟಿ ಲಭಿಸುವುದು. ಪ್ರವಾಸವು ಸುಖಕರವಾಗಿ ನೆರವೇರುವುದು. ಧರ್ಮಕಾರ್ಯಾದಿಗಳು ನಿರ್ವಿಘ್ನವಾಗಿಯೂ, ಅವಿಚ್ಛಿನ್ನವಾಗಿಯೂ ಜರಗುವುವು.

ತಾ|| ೧೯, ೨೦ ಲಾಭ.

ವೃಷಭ—ನಿಮ್ಮ ಹುಟ್ಟು ತಳೆಯಲ್ಲಿ ಯೋಚನೆಯೇ ಒಂದು ತರಹ ಅದರ ಕೃತಿಯೇ ಒಂದು ತರಹ, ತುಂಬಾ ಬೇಸರವಾಗುವುದು. ಆಪ್ತೇನೂ ಚೆನ್ನಾಗಿರಲಾರದು. ನೌಕರಿಯಲ್ಲಿ ಹೆಚ್ಚಾಗಿ ತೊಂದರೆಯಾಗುವುದು. ಅಜ್ಞಾತ (ನೌಕರಿಯಲ್ಲಿ ನಿಮಗಿಂತ ಹೆಚ್ಚಿನ ಸ್ಥಾನದಲ್ಲಿರುವವರ)ರ ಆಗ್ರಹಕ್ಕೆ ಪಾತ್ರರಾಗಬೇಕಾಗುವುದು. ವ್ಯಾಪಾರ, ಉದ್ಯೋಗಗಳಲ್ಲಿ ಪ್ರತಿಸ್ಪರ್ಧಿಗಳ ಕಾಟ ಹೆಚ್ಚಾಗುವುದು. ಲಾಭವು ಬರಲಾರದು.

ತಾ|| ೨೩, ೨೪ ಸಖ ಶಾಂತಿ

ಮಿಥುನ—ಎಲ್ಲರೂ ಮಂಚಿಸಲು ಪ್ರಯತ್ನಿಸುತ್ತಾರೆ. ಆಪ್ತೇ ಅಲ್ಲ ಅನುಭವಕ್ಕೆ ಬರುವುದು. ನಿಮ್ಮ ಆರೋಗ್ಯಸ್ಥಿತಿ ಅಷ್ಟೊಂದು ಚೆನ್ನಾಗಿರಲಾರದು. ಆರ್ಥಿಕ ಸ್ಥಿತಿ ಉತ್ತಮವಾಗಿರತಕ್ಕ ಸಂಧಿಯು ದೊರೆತರೂ ಉಪಯೋಗಿಸಿಕೊಳ್ಳಬಹುದು. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ವಿರುದ್ಧ ಪಕ್ಷದವರ ಕಡೆಯಿಂದ ತೊಂದರೆ ಕೊಟ್ಟಿದ್ದರೆ, ಪ್ರವಾಸವನ್ನು ನಿಲ್ಲಿಸಿ ಮನಸ್ಸಿನಲ್ಲಿ ಕಲ್ಪಿಸಲ್ಲದ ಯೋಚನೆಗಳು.

ತಾ|| ೧೯, ೨೦ ಸಂತ ಪಜನರ ಕಾಗದ ಪತ್ರಗಳು ಬರುವವು

ಕರ್ಕ—ಮನಸ್ಸಿನಲ್ಲಿ ದೃಢ ನಿಶ್ಚಯ ಮಾಡಿರಿ, ಸುಮ್ಮನೆ ಅಳೆದುಸುರುವರಂತೆ ಹಿಂಜರಿಯಬೇಡಿ, ಒಳ್ಳೆಯದಾಗುವುದು. ಪ್ರಕೃತಿಯ ದೃಷ್ಟಿಯಿಂದ ಚೆನ್ನಾಗಿದ್ದರೂ ಮೇಲಿಂದಮೇಲೆ ಅನಿಷ್ಟ ವಿಚಾರಗಳು ತಲೆಗೆ ಬೀಳುವುದರಿಂದ ಮಾನಸಿಕಸ್ಥಿತಿಯು ಚೆನ್ನಾಗಿರಲಾರದು. ಆರ್ಥಿಕಸ್ಥಿತಿಯು ಸಾಧಾರಣವಿರುವುದು. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಬರತಕ್ಕಷ್ಟು ಒಳ್ಳೆಯ ಲಾಭವನ್ನು ಕೆಡಿಸಲು ನಿಮ್ಮ ಚಿರ ಶತ್ರುಗಳು ಬದ್ಧಕಂಕಣರಾಗುವರು. ಪ್ರವಾಸವನ್ನು ತೊರೆಯಿರಿ

ತಾ|| ೨೧, ೨೨, ೨೩ ಅಪ್ರಿಯವಾರ್ತೆ.

ಸಿಂಹ—ಈ ವಾರ ಆರೋಗ್ಯಸ್ಥಿತಿಯು ಚೆನ್ನಾಗಿರುವುದು ದ್ರವ್ಯವು ಚೆನ್ನಾಗಿ ಕೈಸೇರುವುದು. ಕೋರ್ಟು ಕಚೇರಿ ಕೆಲಸಗಳಲ್ಲಿ ಜಯಪ್ರಾಪ್ತಿಯಾಗುವುದು. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಹೆಚ್ಚಿನ ಸ್ಥಾನ ದೊರಕಬಹುದು. ಧರ್ಮಕಾರ್ಯಗಳು ನಿರ್ವಿಘ್ನವಾಗಿ ನೆರವೇರುತ್ತವೆ

ತಾ|| ೨೧, ೨೩ ದ್ರವ್ಯಲಾಭ.

ಕನ್ಯಾ—ಯಾರದೇ ತಪ್ಪನ್ನು ಯಾರ ಮೇಲೋ ಆರೋಪಿಸಿ, ಜಗಳಾಡುವಿರಿ ಅಂತಹ ನಿಮ್ಮ ಸ್ವಭಾವವನ್ನು ಬಿಟ್ಟು ಚೆನ್ನಾಗಿ ಪೂರ್ವಾಪರವಿಚಾರಮಾಡಿ. ಆರೋಗ್ಯಸ್ಥಿತಿಯು ಚೆನ್ನಾಗಿರುವುದು. ಆರ್ಥಿಕಸ್ಥಿತಿಯಂತೂ ತುಂಬಾ ಲಾಭವಾಗುವುದು. ಲೇಖಕ ಲೇಖಕಿಯರ ಲೇಖನಾದಿಗಳಿಗೆ ಗೌರವ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಲಾಭ, ಪ್ರಗತಿ ಮಿತ್ರರಭೇಟಿ, ವಿದ್ಯಾರ್ಥಿ ವಿದ್ಯಾರ್ಥಿನಿಯರ ಅಭ್ಯಾಸವು ಉತ್ತಮದರ್ಜೆಯಲ್ಲಿ ಗಣಿಸಲ್ಪಡುವುದು. ವೈವಾಹಿಕ ಸೌಖ್ಯ ಅತ್ಯುತ್ತಮ

ತಾ|| ೨೪, ೨೫ ಆನಂದದಾಯಕ ದಿನ.

ತುಲಾ—ಆರೋಗ್ಯಸ್ಥಿತಿ ಕಡೆ ಹೆಚ್ಚು ಲಕ್ಷ್ಯಕೊಡಿ. ಕೋಪದಲ್ಲಿ ಅತ್ಯಂತ ಅವಿಚಾರಗಳು ಸಂಭವಿಸಬಹುದು, ಈ ವಾರ ಕ್ಲೇಶಕಾರಕವಿರುವುದು. ಯಾವ ಕಾರ್ಯವನ್ನು ಕೈಗೊಂಡರೂ ವಿಘ್ನಪರಂಪರೆಗಳೇ ಮುಂದೆ ಬಂದು ನಿಲ್ಲುವುದು. ಗೃಹಕಲಹಾದಿಗಳು ಹೆಚ್ಚಾಗುತ್ತವೆ, ನೌಕರಿ, ಉದ್ಯೋಗ, ವ್ಯಾಪಾರಗಳಲ್ಲಿ ಪತ್ಯಹಾನಿ, ಪ್ರಿಯಜನ ವಿರಹ

ತಾ|| ೧೯, ೨೦ ಕಷ್ಟದಿನ

ವೃಶ್ಚಿಕ—ಆರೋಗ್ಯಪ್ರಕೃತಿಯಿಂದ ಚೆನ್ನಾಗಿರುವುದು, ಆದರೆ ಪತ್ನಿಯ ಆರೋಗ್ಯ ಹೆಚ್ಚು ಗಮನಕೊಡಿ. ಈ ವಾರ ಸಾಂಪತ್ತಿಕಸ್ಥಿತಿ ಚೆನ್ನಾಗಿದ್ದರೂ ಖರ್ಚು ಬಹಳ. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ದುಷ್ಟರಿಂದ ದೂರವಿದ್ದರೆ ಪ್ರಗತಿ, ಆಕಸ್ಮಿಕವಾಗಿ ಪ್ರವಾಸವು ಸಂಘಟಿಸಬಹುದು.

ತಾ|| ೨೧, ೨೨ ವಿರಹ, ಚಿಂತೆ.

ಧನು—ಕಾಲಕ್ಕೆ ಸರಿಯಾಗಿ ಎಲ್ಲ ಕೆಲಸಗಳನ್ನು ಮಾಡಿರಿ, ಆರೋಗ್ಯಸ್ಥಿತಿಯು ಚೆನ್ನಾಗಿರುವುದು. ಆರ್ಥಿಕಸ್ಥಿತಿ ಉತ್ತಮಗೊಂಡು ಲಾಭವಾಗುತ್ತದೆ. ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಪ್ರಗತಿ. ಸ್ವಲ್ಪ ಕಿರುಕುಳ.

ತಾ|| ೧೯, ೨೦ ವಿಶ್ರಾಂತಿ ಕಡಿಮೆ

ಮಕರ—ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಲಾಭ, ಪ್ರವಾಸವು ನೆರವೇರುವು

ದು, ಆರೋಗ್ಯ, ಆರ್ಥಿಕಸ್ಥಿತಿ ಉತ್ತಮ. ವಿದ್ಯಾರ್ಥಿ ವಿದ್ಯಾರ್ಥಿನಿಯರ ಅಭ್ಯಾಸದಲ್ಲಿ ಪ್ರಗತಿ

ತಾ|| ೧೯, ೨೦, ೨೪, ಶುಭವಾರ್ತೆ ದೊರೆತಿ

ಕುಂಭ—ನಿಮ್ಮ ಮನಸ್ಸು ... ಕ್ರೋಧದಿಂದ ಕೂಡಿರುತ್ತದೆ. ಆರೋಗ್ಯಸ್ಥಿತಿಯು ಅಷ್ಟಕ್ಕಷ್ಟೇ. ಮನಸ್ಸಿಗೆ ಕ್ಲೇಶ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಬಿಂಕಾಜನಕಸ್ಥಿತಿ. ಅಪ್ರಿಯ, ಪ್ರವಾಸದಲ್ಲಿ ಗಡಿಬಿಡಿ.

ತಾ|| ೧೯, ೨೦ ನಷ್ಟ.

ಮೀನ—ಈ ವಾರ ನಿಮಗೆ ಅತ್ಯುತ್ತಮವಾಗಿದೆ, ಆರೋಗ್ಯ ಮಾನಸಿಕಸ್ಥಿತಿಗಳು ತೃಪ್ತಿಕರವಾಗಿರುವವು. ಉದ್ಯೋಗ, ನೌಕರಿ ಮತ್ತು ಕೋರ್ಟುಕಚೇರಿ ವ್ಯವಹಾರಗಳಲ್ಲಿ ಜಯ ವೈವಾಹಿಕ ಸುಖವಿದೆ.

ತಾ|| ೨೦, ೨೪, ೨೫, ಲಾಭ, ಪ್ರಗತಿ.

ಹೂಗ್ಲಿ ನದಿಯಲ್ಲಿ ೨ ದೋಣಿಗಳಿಗೆ ಘರ್ಷಣೆಯಾಗಿ ೬ ಮಂದಿ ಜಲಸಮಾಧಿಯಾದರೆಂದೂ ಮತ್ತು ಅನೇಕರಿಗೆ ಗಾಯವಾಗಿರುವುದೆಂದೂ ವರದಿಯಾಗಿದೆ

ಟಿ. ಸಿ. ನಟರಾಜನ್
ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಕ್ರಮದಿಂದ ಮಾಡಲ್ಪಡುತ್ತದೆ

ಘುಂತೂರವರ ಆಯುರ್ವೇದ ಔಷಧಿಗಳೆಲ್ಲವೂ ಸದಾ ದೊರೆಯುತ್ತವೆ

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

... ಮಾತ್ರೆಗಳು

ಬಲಹೀನತೆ, ... ಧಾತುವಿಕಾರ ನೋವಲು ಮತ್ತು ... ದಲ್ಲೇ ಪಾಮುಂಸಿ ... ಫಲಕಾರಿ ... ಉತ್ಸಾಹಗಳನ್ನು ಕೊಡುತ್ತದೆ ... ಮಾತ್ರೆಗಳ ಡಬ್ಬಿ 1ಕ್ಕೆ ರೂ 1.

ಮದನಮಂಜರಿ ಫಾರ್ಮಸಿ,

181, ಚೈನಾ ಬಜಾರ್ ಸ್ಟ್ರೀಟ್, ...

ಏಜೆಂಟರು : ಆರೋಗ್ಯ ಫಾರ್ಮಸಿ ...

ಶ್ರೀಯರ ಸಾಕೆಯರ್ ಫ್ಯಾಕ್ಟರಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ...

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ...

ವಿ ಸೂ — ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ... ಇಲ್ಲೂ ಮತ್ತು ಸಂತೆಪೇಟೆ ... ದೊರೆಯುತ್ತೆ.

FROM 15-9-43 Daily 3 shows

Thief of Bagdad (in magic Technicolor)

with MYSORE SADU

AT NEW OPERA TALKIES

Next Change— "SHARADA" in Hindi

ಜಪಾನ ಮತ್ತು ವಿಶಾಲ ಪ್ರಪಂಚ

ವಿಶಾಲ ಜಗತ್ತಿನ ವಿಷಯ ದಲ್ಲಿ ಜಪಾನ್ ಇಟ್ಟಿರುವ ಭಾವನೆಯು ಅವರ ಶಾಲಾ ಪಠ್ಯ ಗಳನ್ನು ಪರಿಶೀಲಿಸುವುದರಿಂದ ತಿಳಿದುಬರುತ್ತದೆ.

ಜಗತ್ತಿನ ಸ್ವಾಮ್ಯ ಜಪಾನಿಗಳದ್ದು ನಿರ್ಧರಿಸಿ ತೋರಿಸಿ ಹೀಂಗೆ ಹೇಳಿ, ಶತ್ರುವ ನೆಂದರೆ ಜಪಾನ್ ಪ್ರಪಂಚಕ್ಕೊಬ್ಬನೇ ತಕ್ಕವ ನು ಎಂಬ ವಿಷಯವನ್ನು ಪ್ರತಿಯೊಬ್ಬ ಜ ಪಾನೀಯನ ಮನಸ್ಸಿನಲ್ಲಿಯೂ ಚೆನ್ನಾಗಿ ನೆಲಸುವಂತೆ ಪಾಠವಿಟ್ಟಿದೆ.

ಮೊದಲನೆಯ ಸಂಗತಿಯೆಂದರೆ ಜಗತ್ತಿ ನಲ್ಲಿರತಕ್ಕ ಸರ್ವರಿಗಿಂತಲೂ ಶ್ರೇಷ್ಠರಾಗಿ ರುವ ಸಾಕ್ಷಾತ್ ಭಗವಂತನ ವಂಶೀಯರಾ ದ ನಾವು.

ಎರಡನೆಯ ಸಂಗತಿಯೆಂದರೆ ಜಗತ್ತಿನಲ್ಲಿ ರತಕ್ಕ ಹೀನ ವರ್ಣೀಯರಾದ ಅನಾಗರಿಕ ರು ಇಟ್ಟುಕೊಂಡಿರುವಂತಹ ನಾನಾ ಸಂಗತಿ ಯವರೆಂದರೆ "ಕೋಲಂಬ" ರು ಇಂಡಿಯ ಸಿಲೋನ್ ಮತ್ತು ನೀಗ್ರೋ ಜನಾಂಗಗಳ ಜನರು

ಮಾನವರ ಕೋಟಿಯ ಪೈಕಿ ಜಪಾನೀ ಯರೇ ಸರ್ವೋತ್ತಮರೆಂದೂ, ಭಗವಂತ ನು ಸೃಷ್ಟಿಸಿರುವ ಜೀವ ಕೋಟಿಯ ಪೈಕಿ ಜಪಾನೀಯರೇ ಅಸ್ಪೃಷ್ಟರೆಂದೂ, ಇಂಥ ಜಪಾನೀಯರು ಎಲ್ಲರಿಗಿಂತ ಹೆಚ್ಚಿನ ದವೇ ಸರ್ವೋತ್ತಮವಾದುದೆಂದೂ, ಇದು ದರಿಂದ ವಿಶಾಲ ಪ್ರಪಂಚ ಪೂರ್ತಾ ಜನಾಂಗ ಗಳೂ ಜಪಾನೀಯರಿಂದಲೇ ಆಗಬೇಕಾದುದೆಂದೂ, ಆದ್ದರಿಂದಾಗಿ ಮ ತ್ತೆಲ್ಲ ಪ್ರಪಂಚ ರಾಷ್ಟ್ರಗಳೂ ಜಪಾನ್ ಅಧೀ ನವಾಗಿರಬೇಕೆಂದು ಪ್ರೊ! ಬೋಧಿಸುತ್ತಿರು ತ್ತಾರೆ.

ಈ ಕಿರಿದಾದ ಅಭಿಪ್ರಾಯವೇ ಜಪಾ ನು ಪ್ರಾಂತಗಳನ್ನು ಕೇಳಿದರೆ, ಯಾವುದಾ ದರೂ ರಾಜ್ಯಗಳು-ಜಪಾನಿನ ವಶವಾದಲ್ಲಿ ಅವು ಎಂತಹ ಸ್ಥಿತಿಯಲ್ಲಿ ಅಧೋಗತಿಯ ನ್ನೈದುವುವು ಎಂಬುದನ್ನು ತಿಳಿದುಕೊಳ್ಳಬ ಹುದಾಗಿದೆ. ಯಾವ ರಾಜ್ಯವನ್ನು ತನ್ನ ಸಂಕಲ್ಪಾನುಸಾರ ರಾಜ್ಯವೆಂಬುದಾಗಿ ಜ ಪಾನರೇ ಚೆನ್ನಾಗಿ ವ್ಯಕ್ತಪಡಿಸಿವೆ.

ಮುಖ್ಯ ಸೇನಾಪತಿ ನೇಮಕ

ಬ್ರಿಗೇಡಿಯರ್ ಜ! ಗಿಲ್ಬರ್ಟ್ ಟಾಮ್ ರನ್ನು ಅಮೇರಿಕಾ ಸಂಯುಕ್ತ ಸಂಸ್ಥಾನದ ನೂತನ ಸಚಿವ. ಮಧ್ಯಪ್ರಾಚ್ಯದ ಸೈನ್ಯ ಕ್ಕೆ ಚೀಫ್ ಸ್ಟಾಫ್ ಆಗಿ ನೇಮಿಸಲಾಗಿದೆ. ಇಂಡಿಯಾದ ಕೊನೆಯ ತೀರ ಪ್ರದೇಶದಿಂ ದ ಅಟ್ಲಾಂಟಿಕ್ ವರೆಗೂ ಆಫ್ರಿಕಾ, ಮೊರಾಕೋ ಮತ್ತು ಇತರ ಕೆಲವು ಪ್ರದೇ ಶಗಳು ಇವರ ಅಧೀನಕ್ಕೆ ಒಳಪಟ್ಟಿರು ವುವಾಗಿ ತಿಳಿದುಬಂದಿದೆ.

ಬಾಳೇಹಣ್ಣಿನ ರೊಟ್ಟಿ

ಅಮೇರಿಕಾ ಸೈನಿಕರಿಗೆ ಒಂದು ಹೊಸ ಮಾದರಿ ರೊಟ್ಟಿ ತಯಾರಾಗಿದೆ. ಒಣಗಿಸ ಲಾಗುತ್ತಿದೆ. ಚೆನ್ನಾಗಿ ಮಾಗಿದ ಬಾಳೇ ಹಣ್ಣನ್ನು ಒಣಗಿಸಿ, ಹಿಟ್ಟು ರೊಟ್ಟಿಯಾಕಾ ರದ ರೂಪದಲ್ಲಿ ಮಾಡಿ ಉಪಯೋಗಿಸಲಾ ಗುತ್ತಿದೆ. ಈ ಹೊಸ ರೊಟ್ಟಿಯನ್ನು ತಿನ್ನ ವರು ಒಂದಿನ ದ ಗಂಟೆಗಳ ವರೆಗೆ ಪ್ರೊ ಟೀನ್ ಮಾತ್ರ ಹೆಚ್ಚಾಗಿ ದ ತಿಂದಂತೆ ತೃಪ್ತರು.

ಆಸ್ಟ್ರೇಲಿಯಾ ಕುರಿಗಳ ರವಾನೆ

ಕ್ಯೂಬನ್ ಪ್ರದೇಶವನ್ನು ಜರ್ಮನರು ತ್ಯಜಿಸುತ್ತಿರುವರೆಂದು ಹೇಳಲಾಗಿದೆ ಸ್ಮೋಲೆನ್ಸ್ಕ್ ನಗರಕ್ಕೆ ಕೇವಲ ೧೦ ಮೈಲಿ ದೂರದಲ್ಲಿ ರಷ್ಯನ್ ಸೇನೆಯು ಬಂದಿಳಿದಿವೆಯೆಂದೂ, ಕೀವ್ ಮತ್ತು ಮಧ್ಯ ಕ್ಷೇತ್ರದಲ್ಲಿ ಉಗ್ರ ಕದನ ನಡೆಯುತ್ತಿವೆಯೆಂದೂ ವರದಿಯಾಗಿದೆ ಪೋಲಟಾವ್ ನಗರವನ್ನು ರಷ್ಯನರು ವಶಪಡಿಸಿಕೊಂಡು ಯುಕ್ರೇನ್ ಕ್ಷೇತ್ರಕ್ಕೆ ಗಂಡಾಂತರ ತಂದಿದ್ದಾರೆ

ಯುಕ್ರೇನ್ ರಾಜಧಾನಿಯಾದ ಕೀವ್‌ನಗರದಕಡೆ ರಷ್ಯನರು ಮುನ್ನುಗ್ಗುತ್ತಿದ್ದಾರೆ.

ಭಾರತ ವಿಚಾರದಲ್ಲಿ ನಾವು ತಪ್ಪುಮಾಡಿರುವೆವು

ಲಾರ್ಡ್ ವೇವಲ್‌ರವರು ನಿನ್ನೆಯ ದಿನ ವಿಂಚೆಸ್ಟರ್ ನಗರದ ಸ್ವಾತಂತ್ರ್ಯ ದೀಕ್ಷೆಯನ್ನು ಸ್ವೀಕರಿಸುತ್ತಾ ಭಾರತದ ವಿಚಾರವನ್ನು ಕುರಿತು ಭಾಷಣಮಾಡಿದರು.

"ಭಾರತ ವಿಷಯದಲ್ಲಿ ನಾವು ಕೈಗೊಂಡ ಕೆಲಸಗಳ ಬಗ್ಗೆ ಹೆಮ್ಮೆಪಟ್ಟುಕೊಳ್ಳುವ ವಿಚಾರಗಳಿವೆಯೇ ಹೊರತು, ನಾಚಿಕೆಪಡ ತಕ್ಕಂತಹವು ಯಾವುವೂ ಇಲ್ಲ ಭಾರತ ವಿಚಾರದಲ್ಲಿ ನಾವು ತಪ್ಪುಮಾಡಿರುವುದು ನಿಜ, ಆದರೆ ಭೀತಿ ಮತ್ತು ದ್ವೇಷದಿಂದ ಆರೋಪಮಾಡುವುದು ಅತಿ ವಿರಳ ಆದರೆ ಹಿಂದೆಂದೂ ನೋಡಿ ಅರಿಯದ ರಾಷ್ಟ್ರೀಯ ಭಾವನೆ ಮತ್ತು ಶಾಂತಿಯನ್ನು ನಾವು ಕೊಟ್ಟು ಪೋಷಿಸುತ್ತಿದ್ದೇವೆ ಭಾರತವು ತನ್ನ ಕೆಲವು ತೊಂದರೆಗಳನ್ನು ನಿವಾರಣೆಮಾಡಿಕೊಂಡು ಮುಂದುವರಿಯಲು ನಾವು ಸಹಾಯ ನೀಡಿದ್ದೇವಾದರೆ ನಮ್ಮ ಘನ ಉದ್ದಿಷ್ಟ ನೆರವೇರಿದಂತೆಯೇ ಆಗುವುದು." ಎಂಬದಾಗಿ ಭಾರತೀಯರ ಸಹಾಯ ಮತ್ತು ಸಹಕಾರಗಳನ್ನು ಇಚ್ಛಿಸಿ ತಿಳಿಸಿದರು.

ಫ್ರೆಂಚ್ ಬಂದರಿನ ಮೇಲೆ ಧಾಳಿ

ಫ್ರಾನ್ಸ್ ಮತ್ತು ಬೆಲ್ಜಿಯಂ ತೀರಪ್ರದೇಶಗಳಮೇಲೆ ಮಿತ್ರವಿಮಾನಗಳು ಧಾಳಿನಡೆಸಿದವು ಫ್ರೆಂಚ್ ಬಂದರಿನ ನ್ಯಾಂಟ್ಸ್ ಮೇಲೆ ಭೀಕರ ಧಾಳಿ ನಡೆದು, ಹಡಗುಗಳ ಮೇಲೆ ಬಾಂಬುಗಳನ್ನು ಹಾಕಲಾಯಿತು

ಪೆಸಿಫಿಕ್ ಚಾರ್ಟರ್

ಪೆಸಿಫಿಕ್ ಕ್ಷೇತ್ರದ ಪ್ರಜೆಗಳಿಗೆ ಸ್ವಾತಂತ್ರ್ಯ, ಶಾಂತಿ ಮತ್ತು ಮುಂದೆ ನಿರ್ಭಯ ಜೀವನಗಳನ್ನು ಕೊಡಲು ಒಂದು "ಪೆಸಿಫಿಕ್ ಚಾರ್ಟರ್" ನ್ನು ರಚಿಸಬೇಕೆಂದು ಅಮೆರಿಕ ಪ್ರತಿನಿಧಿಯಾದ ವಿಲಿಯಂ ಬ್ಲಾರಿರವರು ಒಂದು ಮಸೂದೆಯನ್ನು ತಂದಿರುವರು.

ಜಪಾನನ್ನು ಸೋಲಿಸುವುದೇ ಭಾರತದ ಪ್ರಥಮ ಕರ್ತವ್ಯ

ಭಾವಿ ವೈಸರಾಯರಾದ ಲಾರ್ಡ್ ವೇವಲ್ಲರು ಲಂಡನ್ನಿನಲ್ಲಿ ರಾಯಲ್ ಎಂಪೈರ್ ಸೊಸೈಟಿಯವರು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಭಾಷಣ ಮಾಡುತ್ತಾ ಭಾರತದ ಭವಿಷ್ಯತ್ತಿಗೆ ಮುಂದಿನ ಕೆಲವು ವರ್ಷಗಳು ಬಹಳ ಮುಖ್ಯವಾದುವಾಗಿವೆ ಎಂದು ತಿಳಿಸಿದರು. "ಭಾರತವು ರಕ್ಷಣೆ ಮಾಡಿಕೊಳ್ಳುವ ಸ್ಥಿತಿಯಲ್ಲಿಲ್ಲದೆ ಅದಕ್ಕೆ ಆಕ್ರಮಣ ಭೀತಿಯು ಉಂಟಾಗಿತ್ತು. ಆದರೆ ಈಗ ತನ್ನ ಮಿತ್ರರೊಂದಿಗೆ ಧಾಳಿ ನಡೆಸಲು ಮುನ್ನುಗ್ಗುತ್ತಿದೆ ಈ ಸಂಗ್ರಾಮದಲ್ಲಿ ಭಾರತವು ಸಲ್ಲಿಸುತ್ತಿರುವ ಸೇವೆ ಮತ್ತು ತ್ಯಾಗಗಳಿಗಾಗಿ ಸಂಯುಕ್ತ ರಾಷ್ಟ್ರಗಳು ಅವಕ್ಕೆ ಋಣಿಯಾಗಿವೆ. ಭಾರತದ ವ್ಯವಹಾರ ಆರ್ಥಿಕ ಮತ್ತು ಹಣ ಕಾಸಿನ ಪದ್ಧತಿಗಳೀಗ ಹೆಚ್ಚು ತೊಂದರೆಗೀಡಾಗಿರುವುದರಿಂದ ಅದರ ಮೇಲೆ ಇನ್ನೂ ಹೆಚ್ಚಿನ ಹೊರೆಯನ್ನು ಹೊರಿಸಬಾರದು" ಎಂದು ನುಡಿದರು "ಭಾರತದ ಭವಿಷ್ಯತ್ತಿನಲ್ಲಿ ಅಕ್ಷಯ ಪ್ರಯೋಜನ ಸ್ವಾತಂತ್ರ್ಯದ ಹಂಬಲಗಳಿಗನುಸಾರವಾಗಿ ನಾವು ಅವರಿಗೆ ಸಹಾಯ ಮಾಡಬಹುದಾದರೆ, ಅದಕ್ಕೂ ಪ್ರಯತ್ನಪಡುವ ಉದ್ದೇಶದಿಂದ ಅಲ್ಲಿಗೆ ಹೋಗುತ್ತಿದ್ದೇನೆ" ಎಂದು ತಿಳಿಸಿದರು.

ಜಪಾನನ್ನು ಸೋಲಿಸುವುದೇ ಭಾರತದ ಪ್ರಥಮ ಕರ್ತವ್ಯವೆಂದು ತಿಳಿಸಿದರು.

ಯುರೋಪ್ ರಣ ಕ್ಷೇತ್ರದ ಮುಖ್ಯ ದಂಡನಾಯಕರು

ಯೂರೋಪಿನ ಕ್ಷೇತ್ರಕ್ಕೆ ಅಮೆರಿಕಾದ ಜ|| ಮಾರ್ಷಲ್‌ರವರನ್ನು ಮುಖ್ಯ ದಂಡನಾಯಕರಾಗಿ ನೇಮಿಸಲಾಗುವುದೆಂದು ವಾಷಿಂಗ್‌ಟನ್ನಿಂದ ವರದಿಯಾಗಿದೆ

ಶ್ರೀ. ಆರ್. ಎಸ್. ಪಂಡಿತ ಬಿಡುಗಡೆ

ಅಲಹಾಬಾದಿನ ಶ್ರೀ. ಆರ್ ಎಸ್. ಪಂಡಿತರವರನ್ನು ಲಕ್ನೋ ಸೆಂಟ್ರಲ್ ಜೈಲಿನಿಂದ ನಿನ್ನೆ ದಿನ ಬಿಡುಗಡೆ ಮಾಡಲಾಯಿತು ಬಿಡುಗಡೆಯಾದ ನಂತರವೇ ಅವರು ಬಂಗಾಳ ಪರಿಹಾರ ನಿಧಿಗೆ ... ರೂ. ಗಳನ್ನು ಕಳುಹಿಸಿದರು

ಶಿವಮೊಗ್ಗೆಯಲ್ಲಿ ಹಿಂದೂ ಮುಸ್ಲಿಂ ಗಲಭೆ

ಶಿವಮೊಗ್ಗದಲ್ಲಿ ... ಜಗಳ ... ಪರಿಸ್ಥಿತಿಗೇರಿ ಹಿಂದೂಮುಸ್ಲಿಂ ಜಗಳದಲ್ಲಿ ಪರಿಣಮಿಸಿದ ಪ್ರಸಂಗವೊಂದು ನಿನ್ನೆ ದಿನ ನಡೆಯಿತೆಂದು ವರದಿಯಾಗಿದೆ. ... ಪೇಟೆಯಲ್ಲಿ ರಹೀಂಬೀ ... ಹಿಂದೂ ಸ್ತ್ರೀಗೆ ನೀರುಹಿಡಿ... ವಿಷಯದಲ್ಲಿ ಜಗಳ ನಡೆದು, ನಂತರ ಪುರುಷರು ರಂಗಕ್ಕೆ ಬಂದು ಕೈಕೈ ಮಿಲಾಯಿಸಿತು. ... ವರು ಮುಸ್ಲಿಂರಿಗೂ, ಆರು ಹಿಂದೂಗಳಿಗೂ ಗಾಯಗಳಾಗಿ, ಆಸ್ಪತ್ರೆಗೆ ಸಾಗಿಸಲಾಯಿತು ಪೋಲೀಸರು ಸ್ಥಳಕ್ಕೆ ಬಂದು ಗಲಭೆ ಅಡಗಿಸಿದರು

ಆಹಾರ ಸರಬರಾಜು ಬ್ರಿಟಿಷರಿಗೆ ಸೇರಿದುದು

ಬಂಗಾಳ ... ಕ್ಷಾಮ ... ತಿಸ್ತ್ ಮೊಯಿಲ್ ರವರಿಂದ ... ಬಂದಿದೆಯೆಂದೂ, ಅವರೆ ... ಭೌಮ ಸರ್ಕಾರದಿಂದ ... ಅಮೆರಿಕಾದ ಲೆಂಡ್ ಲೀಸ್ ... ವಾಷಿಂಗ್‌ಟನ್ನಿನಲ್ಲಿ ತಿಳಿಸಿದ್ದಾರೆ ... ಹಾಯವು ಬ್ರಿಟಿಷರಿಗೆ ಸೇರಿದುದು ... ರಲ್ಲಿ ಹೆಚ್ಚಾಗಿ ಆಹಾರವಿದೆ ಮತ್ತು ... ಗಿಂತ ಅತಿ ಸ್ವಲ್ಪ ಕಾಲದಲ್ಲಿಯೇ ಅವರು ಕಳುಹಿಸಬಹುದು" ಎಂಬುದಾಗಿ ತಿಳಿಸಿದ್ದಾರೆ

ನೀಗ್ರೋ ಜನಾಂಗದವರಿಗೆ ವಸತಿ ನಿರಾಕರಿಸಿದ ಘಟನೆ

ಸುಪ್ರಸಿದ್ಧ ವೆಸ್ಟ್ ಇಂಡೀಸ್ ಟೆಸ್ಟ್ ಕ್ರಿಕೆಟ್ ಆಟಗಾರರಾದ ಕಾನ್ಸ್‌ಟೆನ್ಟೈನ್ ಎಂಬ ನೀಗ್ರೋರವರಿಗೆ ಲಂಡನ್ನಿನ ... ಯಲ್ ಹೋಟೆಲಿನವರು ... ಜನಾಂಗದವರೆಂದು ಸ್ಥಳವಸತಿ ಕೊಡಲು ನಿರಾಕರಿಸಿದ ವಿಚಾರವಾಗಿ ... ಪ್ರಶ್ನೆ ನಡೆದು, ಆ ಹೋಟೆಲು ಮಾಲೀಕರ ವರ್ಣದ್ವೇಷ ವರ್ತನೆಯನ್ನು ಖಂಡಿಸಿ, ... ರ ಲೈಸೆನ್ಸನ್ನು ರದ್ದಾಗಬೇಕೆಂದು ... ಮೇಲೆ ಮೊಕದ್ದಮೆ ನಡೆಯುತ್ತಿದೆ ಎಂದು ಸರ್ಕಾರದವರು ತಿಳಿಸಿದರು

ಫ್ಯಾಸಿಸ್ಟ್ ರಿಪಬ್ಲಿಕ್ ಸಂಸ್ಥಾನ ರಚನೆ

ಉತ್ತರ ಇಟಲಿಯಲ್ಲಿ ... ಸ್ಥಾಪಿಸಲಾಗಿರುವ ಫ್ಯಾಸಿಸ್ಟ್ ... ಮುಸೋಲಿನಿಯು ಪ್ರಥಮ ... ಮತ್ತು ವಿದೇಶಾಂಗ ಮಂತ್ರಿ ... ರುವನು ಒಂದು ನೂತನ ... ರಿಪಬ್ಲಿಕ್ ಸ್ಟೇಟನ್ನು ರಚಿಸಲಾಗಿದೆಯೆಂದೂ ಬರ್ಲಿನ್ ವಾರ್ತೆ ತಿಳಿಸುತ್ತದೆ

ಭಾರತದ ಆಹಾರ ... ರಿಸಲು ಆಸ್ಟ್ರೇಲಿಯಾ ಸರ್ಕಾರದವರು ... ಆದ ಸಹಾಯ ... ಈ ೬ ತಿಂಗಳುಗಳಲ್ಲಿ ... ಧಿಯನ್ನು ... ಎಂದು ಆಸ್ಟ್ರೇಲಿ...

ಲಂಚದ ಆಪಾದನೆ

ಬೆಂಗಳೂರು, ೨೪

ಶಿವಮೊಗ್ಗ ಜಿಲ್ಲೆಯ ಕೆಲವು ಅಧಿಕಾರಿಗಳ ಮೇಲೆ ಲಂಚದ ಆಪಾದನೆ ಬಂದ ಪ್ರಯುಕ್ತ ಅವರನ್ನು ಸಸ್ಪೆಂಡ್ ಮಾಡಿ ಸರ್ಕಾರದವರು ಆಪಾದನೆಗಳ ವಿಚಾರಣೆ ನಡೆಸಲು ಗೊತ್ತುಮಾಡಿದ್ದಾರೆಂದು ತಿಳಿದು ಬರುತ್ತೆ.

ಬಟ್ಟೆ ಅಂಗಡಿ ಶೋಧನೆ

ಮೈಸೂರು ಸಂಸ್ಥಾನದಲ್ಲಿ ಡಿಪುಟಿ ಟೆಕ್ಸ್‌ಟೈಲ್ ಕಮೀಷನರು ಪೊಲೀಸ್ ಸಹಾಯದೊಡನೆ ಚಿಕ್ಕಪೇಟೆಯಲ್ಲಿ ಹಲವು ಬಟ್ಟೆ ಅಂಗಡಿಗಳನ್ನು ತನಿಖೆ ನಡೆಸಿ, ಶ್ರೀ. ಎಂ ಎಸ್ ಕೃಷ್ಣಮೂರ್ತಿ, ಕಲ್ಯಾಣ ಪಾಸ್‌ಪೋರ್ಟ್ ಪಂಪ್, ರಾಜಮಲ್ ಸಕ್ಕರ್ ಚಂದ್, ಹಾಜಿ ಇಬ್ರಾಹಿಂ ಇಜ ಕ್ ಇವರುಗಳ ಅಂಗಡಿಯಲ್ಲಿದ್ದ ವಸ್ತ್ರ ನೂಲಿನ ಹಲವು ಗಂಟೆ ಸರ್ಕಾರದಿಂದ ಒಪ್ಪಿಗೆ ಪಡೆಯದಿದ್ದ ಬಟ್ಟೆ ಬೇಲುಗಳನ್ನು ವಶಪಡಿಸಿಕೊಂಡರು. ಮತ್ತು ಅವರುಗಳ ಮೇಲೆ ಭಾರತ ರಕ್ಷಣಾ ಶಾಸನ ರೀತ್ಯಾ ಕ್ರಮ ಜರುಗಿಸಲಾಗುವುದು.

ಅಕ್ಟೋಬರ್ ತಿಂಗಳಲ್ಲಿ ದೇಶ್ಯ ಗೂಡ್ಸ್ ಹ ಗ ೧೫ ಆನೆ ೬ ಕಾಸಿನಂತೆ ಮಾರಬೇಕೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಯೂನಿವರ್ಸಿಟಿಗಳ ಪುರಸ್ಕಾರ

ಬೆಂಗಳೂರು ನಗರದ ನೌಕರರು ಯೂನಿವರ್ಸಿಟಿಗೆ ಸನ್ಮಾನದ ಪುರಸ್ಕಾರ ಪಡೆದು, ಅವರಿಗೆ ಅಂಗೀ ಮತ್ತು ಕಟ್ಟೆ ಪಟ್ಟಿ ಕೊಡುವರು. ಮತ್ತು ಬಿರುದನ್ನು ಕೊಡುವರು. ಇವೇ ಮೊದಲಾದ ಸೇವೆಗಳನ್ನು ಸರ್ಕಾರದ ಪುರಸ್ಕೃತರು ಅಲ್ಲದೆ ಆಯಾ ಕಛೇರಿ ಬಳಿ ಎಲ್ಲರೂ ಸೇರಿ ದಿವಾನರನ್ನು ಕಂಡು, ತಮ್ಮ ಕುಂದು ಕೊರತೆಗಳನ್ನು ಮನವಿ ಮಾಡಿಕೊಂಡಿರುವರು.

ರೇಷನ್ ಕಾರ್ಡ್ ದುರುಪಯೋಗಕ್ಕೆ ೨೦೦ ರೂ. ದಂಡ

ದಂಡಿಸ ಸ್ಪೆಷಲ್ ನ್ಯಾಯಾಧೀಶರು ಪಟ್ಟಣದ ಪೇಟೆಯ ಅಗಸವಡಿಸೀಲು ಮೊದಲಿಯಾರ್ ಮತ್ತು ಲಕ್ಷ್ಮಿ ಎಂಬ ಕೂಲಿ, ಇವರು ತಮ್ಮ ರೇಷನ್ ಕಾರ್ಡನ್ನು ತಿದ್ದಿ ದುರುಪಯೋಗ ಪಡಿಸಿದರೆಂಬ ಆಪಾದನೆ ಮೇಲೆ ಇಬ್ಬರಿಗೂ ತಲಾ ೨೦೦ ರೂ. ಜುಲ್ಮಾನೆ ತಪ್ಪಿದರೆ ೩ ತಿಂಗಳ ಸಾದಾ ಸಜ ವಿಧಿಸಿರುವರು.

ಅನ್ನವಿಲ್ಲದೆ ೧೧೦ ಮಂದಿ ಮರಣ

ಚಾಂದ್‌ಪುರದಲ್ಲಿ ಸೃಷ್ಟಿಯಿಂದ ಸೆ ೧೦ ರಿಂದ ೨೨ ರವರೆಗೆ ೧೧೦ ಮಂದಿಗಿಂತ ಹೆಚ್ಚಾಗಿ ಸತ್ತರೆಂದು ವರದಿಯಾಗಿದೆ

ವೈದ್ಯನಿಗೆ ಜುಲ್ಮಾನೆ

ಮಂಡ್ಯದ ತಿಂಡಗೀಗೌಡ ಎಂಬಾತನ ಪತ್ನಿ ಗೊರವಾಲೆ ಕೆಂಪಮ್ಮ ಎಂಬಾಕೆಯು ಒಂದು ಹೋಟಲಿಗೆ ಹೋಗಿ ಅಲ್ಲಿ ಬ್ರಾಹ್ಮಣನನ್ನು ಹೀನಾಯವಾಗಿ ಬೈದಳೆಂದೂ, ಅಕೆಗೆ ಸ್ಪೆಷಲ್ ಮ್ಯಾಜಿಸ್ಟ್ರೇಟರು ೫೧ ರೂ. ದಂಡ ವಿಧಿಸಿದರು. ಜುಲ್ಮಾನೆ ಕೊಡದಿದ್ದಲ್ಲಿ ೨ ವಾರ ಸಾದಾ ಸಜ ವಿಧಿಸಿದರು

— —

ಬಟ್ಟೆ ವ್ಯಾಪಾರಿಗಳಿಗೆ ಎಚ್ಚರಿಕೆ

ಬಟ್ಟೆ ವ್ಯಾಪಾರಿಗಳು ಬೆಲೆ ನಿಯಂತ್ರಣದಿಂದ, ಆಗ್ಗ ಕೆಲವು ವಾರಗಳಿಂದ ಧಾರಣೆ ಏರುತ್ತಿರುವುದೆಂಬ ಸಂಗತಿ ಗಮನಕ್ಕೆ ಬಂದಿರುವುದಾಗಿಯೂ, ಧಾರಣೆಗಳು ನಿಯಮವಾದ ದರ್ಜೆಗೆ ಬರುವವರೆಗೆ ಪ್ರಾಂತೀಯ ಮತ್ತು ಸಂಸ್ಥಾನ ಸರ್ಕಾರಗಳು ತೀವ್ರ ಕಾರ್ಯಕ್ರಮ ಕೈಗೊಳ್ಳುವುದೆಂದೂ, ಭಾರತ ಸರ್ಕಾರದ ಟೆಕ್ಸ್‌ಟೈಲ್ ಕಮೀಷನರು ಹತ್ತಿ ಬಟ್ಟೆ ವ್ಯಾಪಾರಿಗಳಿಗೆ ಎಚ್ಚರಿಸಿರುವರು.

— —

ತಾಯಿ ಮಗಳನ್ನು ಮಾರಿದಳು

ಬಂಗಾಳ ಪ್ರಾಂತ್ಯದ ಜಿಲ್ಲೆಯಲ್ಲಿ ಆಹಾರ ಸಿಕ್ಕದೆ ನರಳುತ್ತಿದ್ದ ಆ ಯೊಬ್ಬಳು ತನ್ನ ಮಗಳನ್ನು ೧೫ ರೂ. ಗಳಿಗೆ ಮಾರಿದಳೆಂದು ಹೇಳಲಾಗಿದೆ.

ಬಂಗಾಳಕ್ಕೆ ಆಸ್ಟ್ರೇಲಿಯಾ ಗೋಧಿ ಕಳುಹಿಸಿ

ಬಂಗಾಳ ಕ್ಷಾಮ ನಿವಾರಣೆಗಾಗಿ ಗೋಧಿಯನ್ನು ಪಶ್ಚಿಮ ಆಸ್ಟ್ರೇಲಿಯಾದಿಂದ ಕಳುಹಿಸಬೇಕೆಂದು ಆಸ್ಟ್ರೇಲಿಯಾದ ಸೆಂಟ್ರಲ್ ಕೌನ್ಸಿಲ್ಲಿನ ವಿಕ್ಟೋರಿಯಾ ಪ್ರದೇಶದ ಸಂಗಡದವರು ಅಲ್ಲಿನ ಪ್ರಧಾನ ಮಂತ್ರಿಗಳಿಗೆ ಒತ್ತಾಯ ಪಡಿಸುವ ಒಂದು ನಿರ್ಣಯವನ್ನು ಕಳುಹಿಸಿದ್ದಾರೆ.

ಶ್ರೀ ಶ್ರೀಕಂಠೇಶ್ವರ ಸ್ಪರ್ಧೆ

ನಂ. ೨೩ ರ ಸರಿಯಾದ ಉತ್ತರ

ಎಡದಿಂದ ಬಲಕ್ಕೆ: ೧ ಶಾರದೆ, ೩ ತಿಂಕೆ, ೪ ನಾಮಕಾರ, ೭ ಶಾಕಿ, ೮ ಸೇರು, ೧೩ ರಾಮಾಯಣ, ೧೭ ರಿವಾಜು, ೧೮ ಚಾಕರಿ, ೧೧ ಮತಿ (ಮಿತಿ).

ಮೇಲಿನಿಂದ ಕೆಳಕ್ಕೆ: ೧ ಶಾಸ್ತ್ರಿ (ಶಾಸ್ತಿ), ೩ ತೆರು, ೫ ಕಾಕಿ, ೬ ವನಮಾಲ, ೮ ಸೇವಂತಿಗೆ, ೯ ಐದ್ಯ, ೧೦ ಕವಿ (ಕಮಿ), ೧೨ ಸಂಸಾರಿ, ೧೩ ಛಾಮ, ೧೪ ಛಾಯ (ಚಾಯ), ೧೫ ಕಟಾರಿ (ಕಠಾರಿ).

ಬಹುಮಾನಿತರ ಪಟ್ಟಿಯನ್ನು ಮುಂದಿನ ವಾರ ಪ್ರಚುರ ಪಡಿಸುತ್ತೆ.

ಮ್ಯಾನೇಜರ್.

Edited, printed and published by A. R Nagarajan, at the Sadhvi Press, D.Subbiah Road, Mysore.

Office of the President,
City Municipal Council, Mysore
Dated 21st September, 43

Applications are called for from the candidates who have passed the L A M S. Examination of the Mysore Government Ayurvedic College for the post of an Ayurvedic Pandit in Narasimharaja Mohalla on a monthly grant of Rs. 15. The applications together with the certificates should be sent so as to reach this office on or before the 10th October 1943, and no notice will be taken of any applications that may be received after that date.

(Sd) B S Raghavendra Rao,
President.

ಸ್ತ್ರೀಯರ ಸೌಕರ್ಯಕ್ಕಾಗಿ

ಈಗ ೧೮-೧೦-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿರಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ — ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ ಕಣ್ಣಿನ ಮತ್ತು ಸಂತೆಪೇಟೆ ಪೆಂಡ್ ಆಫೀಸಿನಲ್ಲಿ ರಾಗಿ, ಬೇಳೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

Next Attraction ! Daily 3 Shows

New Opera Talkies, Mysore

KARDAR PRODUCTIONS FIRST SMASH HIT

SHARADA

HINDI

With Mehtab, Ulhas, Nirmal kumari

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಸಯಾಜಿ.ರಾವ್ ರೋಡು, ಮೈಸೂರು

	ರೂ ಆ.		ರೂ. ಆ.
ಬಾಲ್ ಮಿಲ್ಸ್ ಚೆಕ್ಸ್ ಗಜ ೧ ಕ್ಕೆ	0—9	ಲಾಂಗ್ ಕ್ಲಾತ್ಸ್ :—	
ವಿಕ್ರಮ ಮಿಲ್ಸ್ ,, ,,	0-8½	ಡಬಲ್ ಸ್ಪೆಷಲ್ ಮಾರ್ಕ್	0—8¾
ಡೋರಿಯಾ ವಾಯಿಲ್ ,,	0—13	ನಂ. 3640	0 -7½
ಡಬಲ್ ಕಲರ್ ವಾಯಿಲ್ 45"	1—0	ಹಿಂದೂ ಮಾತ	0—12
ಹುಡುಗರಿಗಾಗಿ ಶುದ್ಧ ಉಣ್ಣೆ ಸ್ವೆಟರ್ 1 ಕ್ಕೆ	2—0	ಮಿನರ್ವ ಮಿ.ಲ್ಸ್	0— 9
ಕರ್ನಾಟಕ್ ಮಿಲ್ಸ್ ಪ್ಯಾಕೆಟ್ ಗಜ 1 ಕ್ಕೆ	0-14	ಬಕಿಂಗ್ಹ್ಯಾಂ ಮಿಲ್ಸ್	0—10
,, 72" ಷೀಟಿಂಗ್ 1 ಗಜ	2-0	ಕರ್ನಾಟಕ್ ಮಿ.ಲ್ಸ್ 45"	0—15
ಬಕಿಂಗ್ಹ್ಯಾಂ ಮಿ.ಲ್ಸ್ ಟ್ವಿಲ್ ,,	0-14	ನಗ್ರಿ ಮಿಲ್ಸ್	0-10
ಅನ್ಬ್ಲೀಚ್ಡ್ ಲಾಂಗ್ ಕ್ಲಾತ್ 45"	0 11	ಹಾಫ್ ಆರಂ ಷರ್ಟುಗಳು 1 ಕ್ಕೆ	1—[illegible]
,, 50" ಮಲ್	0—9	ಪೈಜಾಮಾ ,,	1-1[illegible]
ಗೀರಿನ ಬಿಷ್ಟರ್ ಚೆಕ್ ಷರ್ಟಿಂಗ್	0—6	ಸ್ಪೋರ್ಟ್ ಷರ್ಟಿಂಗ್ 1 ನೇ ದರ್ಜೆ 1 ಗಜಕ್ಕೆ	0—1[illegible]
ಹತ್ತಿ ನೂಲಿನ ರಗ್ 1 ಕ್ಕೆ	3—8	,, ಹಾಫ್ ಆರಂ ಷರ್ಟ್ 1 ಕ್ಕೆ	2-[illegible]
ಆಸ್ಟ್ರೇಲಿಯಾ ಸೈನಿಂಗ್ 18" 1 ಗಜ	1—8	ಸೋಲಾಪುರ ಗರೆ ಕೋಟಿಂಗ್	0—1[illegible]
ಸೇಲಂ ಬಾರ್ಡರ್ ಸ್ಪಿಫ್ ಕ್ಲಾತ ,,	1—0	ಸೂರತ್ ಕೋಟಿಂಗ್ 1 ಗಜಕ್ಕೆ	1
ವ್ಯಾಲಿ ಬ್ರದರ್ಸ್ ಡ್ರಿಲ್	0—12	ಚೆಕ್ ಕೋಟಿಂಗ್ ,,	0—1[illegible]
ಕೃ. ರಾ. ಮಿಲ್ ಡ್ರಿಲ್	0—10	ಕೃಷ್ಣಾ ಮಿ.ಲ್ಸ್ ಕೋಟಿಂಗ್	1—[illegible]
ಮಿನರ್ವಾ ಮಿ.ಲ್ಸ್ ಡ್ರಿಲ್	1—0	ಮಿ.ಲ್ ಷರ್ಟಿಂಗ್	0—1[illegible]
		ಕೃ. ರಾ. ಮಿಲ್ ಧೋತಿ 2.8 ಗಜ	6—6
		ಫೆಲ್ಟ್ ಮಾಡಲು ,,	8—8
		ಮರ್ಸರೈಸ್ಡ್ ಸಂಚಿ ,,	9—8
		ಲ್ಯಾಂಕಷೈರ್ ಸೇಲು	9—12

ಇವಲ್ಲದೆ ಸೊಕ್ಕೆ ಘರದೆಗಳು, ವಿದ್ಯಾರ್ಥಿ ಪುಲ್ಲಿ ರಗ್ಗುಗಳು, ಫ್ರಾಕ್ಸ್, ಸ್ವಾಡ್ಸ್, ಬ್ಲ್ಯಾಂಕೆಟ್ಸ್, ಆಯಿಲ್ ಕ್ಲಾತ್, ಬೆಂಗಳೂರು, ಕಾಶ್ಮೀರ, ಬನಾರಸ್, ಕೊಯಮತ್ತೂರು ಗಳ ರೇಷ್ಮೆ ಸೀರೆಗಳು ಸಹ ದೊರೆಯುತ್ತವೆ

ದಯವಿಟ್ಟು ಪ್ರಿಂಟೆಡ್ ಸೀರೆಗಳ ನಾನಾ ಬಣ್ಣಗಳು ಮತ್ತು ಬಗೆಗಳ ಮಾದರಿಗಳನ್ನು ನೋಡಲು ತಪ್ಪದೇ ಬನ್ನಿ

ಸಂಪುಟ ೨] ಮಂಗಳವಾರ ೨೬--೧೦--೪೩ [ಸಂಚಿಕೆ ೮೪

ಬಾಲ್ಕನ್‌ನಲ್ಲಿ ಜರ್ಮನರ ರಕ್ಷಣಾ ಕೋಟೆ

ಮುಂದಿನ ಪೂರ್ವ ವಿಶ್ವದ ನಾಯಕತ್ವ ಭಾರತಕ್ಕೇ ಸೇರಿದ್ದು

ಜಪಾನಿನ ಮೇಲೆ ಘೋರ ಯುದ್ಧ ಮಾಡಲೇಬೇಕಾಗುವುದು

ಸೈ ಸುಟ್ಟುಕೊಂಡ ಮಗುವಿನ ಮರಣ

ಮೈಸೂರು ೨೫

ಕೃಷ್ಣರಾಜ ಮೊಹಲ್ಲಾದ ಪೊಲೀಸ್ ಲೈನ್ ನಿವಾಸಿ ಶ್ರೀ ನಾಗರಾಜರಾವ್ ಎಂಬುವರ ಕಮಲಮ್ಮ ಎಂಬ ೭ ವರ್ಷದ ಮಗುವು, ೨೩ ನೇ ತಾ|| ಅಡಿಗೆ ಮನೆಯಲ್ಲಿ ಆಟವಾಡುತ್ತಿದ್ದಾಗ ಮೈಸುಟ್ಟು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ನಿನ್ನೆ ರಾತ್ರಿ ಮೃತಹೊಂದಿತೆಂದು ವರದಿಯಾಗಿದೆ.

ರೇಷನಿಂಗ್ ಆಫೀಸ್

ಮೈಸೂರು ನಗರದ ರೇಷನಿಂಗ್ ಅಧಿಕಾರಿಗಳ ಆಫೀಸನ್ನು ಎಸ್ಸಿಬಿಷನ್ ಭವನದಲ್ಲಿ ತೆರೆಯಲಾಗುವುದು.

ಆಯುರ್ವೇದ ವೈದ್ಯ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ಈ ದಿನ ಸಾಯಂಕಾಲ ೭ ಘಂಟೆಗೆ ರಾಜಧಾನಿಯ ಶ್ರೀ ಮನ್ಮಹಾರಾಜಾ ಸಂಸ್ಕೃತ ವೇದ ಮಹಾ ಪಾಠಶಾಲೆಯಲ್ಲಿ ಶ್ರೀ ಧನ್ವಂತರೀ ಜಯಂತ್ಯುತ್ಸವವನ್ನು ಆಚರಿಸಲು ಏರ್ಪಾಡಾಗಿದೆ.

ಈ ಸಂದರ್ಭದಲ್ಲಿ ವೈಣಿಕ ವಿದ್ವಾನ್ ಶ್ರೀ ನಾರಣಯ್ಯರ್‌ರವರ ವೀಣಾವಾದನವೂ ಮತ್ತು ಆಯುರ್ವೇದ ವಿದ್ವಾನ್ ಡಾ|| ಸಿ. ಎಸ್. ಸುಬ್ರಹ್ಮಣ್ಯ ಶಾಸ್ತ್ರಿ, ಎಲ್. ಎಂ. ಪಿ. ರವರ ಭಾಷಣವೂ ನಡೆಯುವುವು.

ಮದ್ರಾಸಿನಲ್ಲಿ ಪಾನನಿರೋಧ ರದ್ದಾಗುವುದೆ ?

ಮದರಾಸ್ ಪ್ರಾಂತ್ಯದ ಕೆಲವು ಜಿಲ್ಲೆಗಳಲ್ಲಿರುವ ಪಾನನಿರೋಧ ಕಾನೂನನ್ನು ರದ್ದುಮಾಡಲು ಸರ್ಕಾರದವರು ಆಲೋಚಿಸುತ್ತಿರುವರೆಂದು ತಿಳಿಯಬರುತ್ತದೆ. ಈ ಯೋಚನೆಬಗ್ಗೆ ಸಾರ್ವಜನಿಕರಲ್ಲಿ ಉದಾಸೀನತೆ ಮತ್ತು ಬೆಂಬಲ ಕಡಿಮೆಯಾಗುತ್ತಿರುವುದು ಮತ್ತು ಕಳ್ಳತನದಿಂದ ಹೆಂಡ ತಯಾರಿಸುವುದು ಹೆಚ್ಚಾಗುತ್ತಿರುವುದು ನಿಷೇಧವನ್ನು ತೆಗೆದುಹಾಕುವುದಕ್ಕೆ ಕಾರಣವೆಂದು ಹೇಳಲಾಗಿದೆ.

ಪೋಸ್ಟಾಫೀಸಿನಲ್ಲಿ ೩ ಸಾವಿರ ರೂಪಾಯಿಗಳ ಕಳವು

ಮದರಾಸಿನ ಮೌಂಟ್ ರೋಡ್ ಪೋಸ್ಟಾಫೀಸಿನಲ್ಲಿ ೩ ಸಾವಿರ ರೂ. [illegible] ಇನ್ಷೂರೆನ್ಸ್ ಕವರು ಕಳುವಾಗಿದೆಯೆಂದು ವರದಿಯಾಗಿದೆ. ಶ್ರೀ ಪಟೇಲ್ ಎಂಬ [illegible]ಕರು ಇನ್ಷೂರೆನ್ಸ್ ಕವರನ್ನು ಕೌಂಟರಿನ ಮೇಲಿಟ್ಟು ಸ್ಟಾಂಪುಗಳನ್ನು ಹಾಕುತ್ತಿದ್ದಾಗ ೧೬ ವರ್ಷದ ಒಬ್ಬ ಹುಡುಗನು [illegible] ಹತ್ತಿರ ಬಂದು ಕೆಳಗೆ ಸ್ಟಾಂಪುಗಳು ಬಿದ್ದಿವೆಯೆಂದು ಹೇಳಿ, ಅದರಂತೆ ಅವರು [illegible] ಬಗ್ಗಿದಾಗ, ಆ ಕವರನ್ನು ಅಪಹರಿಸಿಕೊಂಡು ಹೋದನೆಂದು ಹೇಳಲಾಗಿದೆ.

ಭೂಕಂಪ

[illegible], [illegible], [illegible], [illegible], ಜೆನೀವಾ ಮತ್ತು [illegible]ಗಳಲ್ಲಿ ನಿನ್ನೆ ರಾತ್ರಿ ಭೂಕಂಪವಾಯಿತೆಂದು ಹೇಳಲಾಗಿದೆ. [illegible] ನಷ್ಟವೇನೂ ಆಗಲಿಲ್ಲವೆಂದೂ ವರದಿಯಾಗಿದೆ.

ಗಾಂಧೀಜಿ ಪ್ರಪಂಚದ ಮಹಾಪುರುಷರು

ಮುಂದಿನ ಪೂರ್ವ ವಿಶ್ವದ ನಾಯಕತ್ವವು ಭಾರತಕ್ಕೆ ಸೇರುತ್ತದೆ, ಜಪಾನ್ ಅಥವ ಚೈನಕ್ಕಲ್ಲವೆಂದು ಅಮೇರಿಕದ ಸುಪ್ರಸಿದ್ಧ [illegible] ಪತ್ರಿಕೆಗಳ ಬಾತ್ಮೀದಾರರಾದ ಮಿ|| [illegible] ಜೋಹಾನ್ಸ್‌ಬರ್ಗಿನಲ್ಲಿ ತಿಳಿಸಿದ್ದಾರೆ. ಗಾಂಧೀಜಿಯವರು ಪ್ರಪಂಚದ ಮಹಾಪುರುಷರಲ್ಲಿ ಅಗ್ರಸ್ಥಾನ ಪಡೆದಿದ್ದಾರೆ.

ಹೊಟ್ಟೆಗಿಲ್ಲದ ಮನುಷ್ಯನನ್ನು ನರಿಗಳು ತಿಂದ ದೃಶ್ಯ

ಹೊಟ್ಟೆಗಿಲ್ಲದೆ ರಸ್ತೆಯಲ್ಲಿ ಬಿದ್ದುಕೊಂಡಿದ್ದ ಒಬ್ಬ ಮನುಷ್ಯನ ದೇಹವನ್ನು ನರಿಗಳು ತಿಂದ ಘೋರ ದೃಶ್ಯ [illegible] ನಡೆದಿದೆಯಾಗಿ ವರದಿಯಾಗಿದೆ. [illegible] ಮನುಷ್ಯನು [illegible] ಊಟಕ್ಕಾಗಿ [illegible] ಮಾಡಿ, ಅವನ ಶಕ್ತಿ ನಿಶ್ಶಕ್ತಿಯಾಗುತ್ತಿದ್ದಾಗ, ನರಿಗಳು ಅವನ ಸ್ವಲ್ಪ ದೇಹವನ್ನು ತಿಂದುಹಾಕಿದವು. ಆದರೂ ಅವನು ಸ್ವಲ್ಪ ಕಾಲ ಬದುಕಿದ್ದು ನಂತರ ಮರಣ ಹೊಂದಿದನಂತೆ.

ಕೈಕ್ಲೋಸ್ಟೇಷನ್ ಕುಸಿದುಬಿದ್ದು ೩ ಮಂದಿ ಮರಣ

ಹೈದರಾಬಾದ್ [illegible] ಕಟ್ಟಡವನ್ನು ರಿಪೇರಿ ಮಾಡುತ್ತಿದ್ದಾಗ, [illegible] ಕುಸಿದುಬಿದ್ದು ೩ ಮಂದಿ ಕೆಲಸಗಾರರು ಸತ್ತರೆಂದೂ ಇತರ [illegible] ಗಾಯಗೊಂಡರೆಂದೂ ವರದಿಯಾಗಿದೆ.

---

೫ ನಿಮಿಷಕ್ಕೊಂದು ವಿಮಾನ ತಯಾರಿಕೆ

ಅಮೇರಿಕದಲ್ಲಿ [illegible] ಸೆಪ್ಟೆಂಬರ್ ತಿಂಗಳಿನಲ್ಲಿ [illegible] ೮,೦೦೦ ವಿಮಾನಗಳು [illegible] ವಿಮಾನ [illegible]

ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ಕೊಡಿ

ಬ್ರಿಟಿಷ್ ಲೇಬರ್ ಸಂಗಡಕ್ಕೆ ಸೇರಿದ ಮಿ|| ಹೆನ್ರಿ ಸೋರೆನ್ಸನ್ ಬ್ರೌನ್ಸರ [illegible] 'ಸ್ಟೇಟ್ಸ್ ಇಂಡಿಯಾ' ಎಂಬ ಪತ್ರಿಕೆಯಲ್ಲಿ ಭಾರತದ ಬಿಕ್ಕಟ್ಟನ್ನು ಬಗೆಹರಿಸಲು ಕೆಲವು ಸಲಹೆಗಳನ್ನು [illegible] ಬಂಧನದಲ್ಲಿರುವ ಎಲ್ಲಾ ನಾಯಕರನ್ನೂ ಬಿಡುಗಡೆ ಮಾಡಿ, ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕೆಂದೂ [illegible] ಮಾಡಬೇಕೆಂದು [illegible].

ಐರಿಷ್ ಹಡಗಿನ ಮೇಲೆ ಧಾಳಿ

ಐರಿಷ್ [illegible] ಪ್ರದೇಶಕ್ಕೆ ೧೦೦ ಮೈಲಿ ದೂರದಲ್ಲಿ ಅಪರಿಚಿತ ವಿಮಾನವೊಂದು ಐರಿಷ್ ಹಡಗಿನ ಮೇಲೆ ದಾಳಿ ನಡೆಸಿತೆಂದೂ ಕ್ಯಾಪ್ಟನ್ ಮತ್ತು ೩ ಮಂದಿ ಗಾಯವಾಗಿದೆಯೆಂದೂ ವರದಿಯಾಗಿದೆ.

ಬಾಲ್ಕನ್‌ನಲ್ಲಿ ಜರ್ಮನರ ಸಿದ್ಧತೆ

ಬಾಲ್ಕನ್ ಪ್ರದೇಶದಲ್ಲಿ ರಕ್ಷಣಾ [illegible] ಸಿದ್ಧತೆ ನಡೆಯುತ್ತಿದೆಯೆಂದು ಜರ್ಮನ್ [illegible] ಸಾಲೋನಿಕ, [illegible], ಬಾಲ್ಕನ್ ಪ್ರದೇಶ [illegible] ಪ್ರದೇಶಗಳಲ್ಲಿ ರಕ್ಷಣಾ ಕೋಟೆಗಳನ್ನು ಕಟ್ಟಲು [illegible] ಕರೆದುಕೊಂಡು ಹೋಗುತ್ತಿದ್ದಾರೆಂದು ವರದಿಯಾಗಿದೆ.

ದೆಹಲಿ ಕಾಂಗ್ರೆಸ್ ನಾಯಕರ ದಸ್ತಗಿರಿ

ದೆಹಲಿ ಪ್ರಾಂತೀಯ ಕಾಂಗ್ರೆಸ್ ಸಮಿತಿ [illegible] ಶ್ರೀ [illegible] ಎಂಬುವರನ್ನು ಮಧ್ಯಪ್ರಾಂತ್ಯದ [illegible] ದಸ್ತಗಿರಿ ಮಾಡಲಾಯಿತು. [illegible]

[illegible]

ಜರ್ಮನಿ ಮೇಲಿನ ಅಂತ್ಯ ಧಾಳಿ ಆರಂಭವಾಗಬೇಕು

ಜರ್ಮನಿ ಮೇಲಿನ ಅಂತ್ಯ ಧಾಳಿಯನ್ನು ಈಗಲೇ ಆರಂಭಿಸಬೇಕೆಂದೂ, ಬ್ರಿಟಿಷ್ ಲೇಬರ್ ನಾಯಕರಾದ ಮಿ|| [illegible] ವರು ತಿಳಿಸಿದ್ದಾರೆ. ಮುಂದಿನ [illegible] ಶತ್ರುವಿಗೆ ಬಲವಾದ ಏಟು ಕೊಡದೆ ಹೋದರೆ ಫೀಲ್ಡ್ ಮಾರ್ಷಲ್ ಸ್ಮಟ್ಸ್‌ರವರು [illegible] ಇರುವುದು ರಷ್ಯಾಕ್ಕೆ ಯಾವ ಪ್ರಯೋಜನವೂ ಇಲ್ಲವೆಂದು ಹೇಳಿದ್ದಾರೆ.

೪೦ ಜರ್ಮನ್ ಡಿವಿಜನ್ ಸೈನ್ಯ ಕಟ್ಟುಹಾಕಿದೆ

ಇಟಲಿ ಮತ್ತು ಬಾಲ್ಕನ್ ಕ್ಷೇತ್ರದಲ್ಲಿ ೪೦ ಡಿವಿಜನ್ ಜರ್ಮನ್ ಸೈನ್ಯವಿದೆಯೆಂದೂ, ಮಿತ್ರರ ೫ ನೇ ಮತ್ತು ೮ ನೇ ಸೈನ್ಯದ ಕಾರ್ಯಾಚರಣೆಯಿಂದ ಇಷ್ಟು ಜರ್ಮನ್ ಸೈನ್ಯವು ಕಟ್ಟುಹಾಕಲ್ಪಟ್ಟು, ರಷ್ಯಾಕ್ಕೆ ಇದನ್ನು ಕಳಿಸಲು ಸಾಧ್ಯವಿಲ್ಲವಾಗಿರುವುದೆಂದು ಜನರಲ್ ಸರ್ ಹೆರಾಲ್ಡ್ ಅಲೆಕ್ಸಾಂಡರ್‌ರವರು ತಿಳಿಸಿದ್ದಾರೆ.

ವಿಮಾನ ಧಾಳಿ ಬಗ್ಗೆ ಜನರಿಗೆ ಎಚ್ಚರಿಕೆ

ಮದರಾಸಿನಲ್ಲಿ ೧೧ ನೇ ತಾ|| ನಡೆದ ವಿಮಾನ ಧಾಳಿಯಲ್ಲಿ ಜನರಿಗೆ ಎಚ್ಚರಿಕೆ ಕೊಡಲಿಲ್ಲವೆಂಬ ಆಕ್ಷೇಪಣೆ ಬಗ್ಗೆ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿ, ವಿದ್ಯುಚ್ಛಕ್ತಿಯು ಇಲ್ಲದಿದ್ದುದರಿಂದ ಸೈರನ್ನುಗಳನ್ನು ಕೂಗಿಸಲು ಆಗಲಿಲ್ಲವೆಂದು ತಿಳಿಸಿ, ಇನ್ನು ಮುಂದೆ ವಿಮಾನ ಧಾಳಿ ನಡೆದು ಬಾಂಬುಗಳು ಬೀಳುತ್ತಿದ್ದಾಗ, ಎಚ್ಚರಿಕೆ ಕೊಡುವುದು ಸಾಧ್ಯವಿಲ್ಲವೆಂದೂ, ಮತ್ತು ಸೈರನ್ನುಗಳು ಯಾವಾಗಲೂ ಕೂಗಿಸಲಾಗುವುದೆಂದೇ ಹೇಳಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಬಾಂಬುಗಳು ಬೀಳುವುದನ್ನು ಕಂಡ ತಕ್ಷಣವೇ ಜನಗಳು ಆಶ್ರಯಸ್ಥಾನಗಳಿಗೆ ಹೋಗಬೇಕೆಂದು ಎಚ್ಚರಿಸಿದ್ದಾರೆ.

ಜಪಾನಿನ ಮೇಲೆ ದೀರ್ಘ ಯುದ್ಧವೇ ?

ಪೆಸಿಫಿಕ್ಕಿನಲ್ಲಿ ಅಮೇರಿಕವು ಜಪಾನಿನ ಮೇಲೆ ದೀರ್ಘ ಮತ್ತು ಭೀಕರವಾದ ಯುದ್ಧ ನಡೆಸಬೇಕಾಗುವುದೆಂದು ಅಮೇರಿಕದ ಅಡ್ಮಿರಲ್ [illegible] ಎಚ್ಚರಿಕೆ ಕೊಟ್ಟಿದ್ದಾರೆ. ಈವರೆಗೆ ಜಪಾನರನ್ನು ಸ್ವಲ್ಪವಾದರೂ ಸೋಲಿಸಿಲ್ಲವೆಂದೂ, ಜಪಾನಿನ ಹತ್ತಿರ ಹೋದಾಗಲೆಲ್ಲಾ ಜಪಾನರು ಕಠಿಣವಾಗುವರೆಂದೂ ಅವರನ್ನು ಒಂದಕ್ಕೆ [illegible] ಸೋಲಿಸುವುದು ಕಷ್ಟವೆಂದೂ ತಿಳಿಸಿದ್ದಾರೆ.

ಪ್ರವಾಹದಿಂದ ನೊಂದವರಿಗೆ ೫೦,೦೦೦ ರೂ. ಸಹಾಯ

ಮದರಾಸಿನಲ್ಲಿ ಪ್ರವಾಹದಿಂದ [illegible] ಪರಿಹಾರಕ್ಕಾಗಿ ಸರ್ಕಾರದವರು [illegible] ಸಾವಿರ ರೂ. [illegible] ೫೦ ಸಾವಿರ ರೂ. [illegible]

ಮೈಸೂರು ಪರಿಹಾರ ನಿಧಿ ತೆರೆದಿದ್ದಾರೆ

[illegible]

ಪೌರಸಭೆಯ ಬಡ ನೌಕರರಿಗೆ ಕ್ಯಾಂಟೀನ್

ಮೈಸೂರು ಪೌರಸಭೆಯಲ್ಲಿ ತೀರ್ಮಾನ

ಮೈಸೂರು ೨೬

ಮೈಸೂರು ಮುನಿಸಿಪಲ್ ಮೀಟಿಂಗ್ ನಿನ್ನೆ ಸಂಜೆ ನಡೆಯಿತು.

ಸಂತಾಪ ಸೂಚನೆ

ಕಾರ್ಯ ಕಲಾಪಗಳು ಪ್ರಾರಂಭವಾಗುವುದಕ್ಕೆ ಮುಂಚೆ, ಕೋರ್ಟ್ ಮಹಾರಾಜರವರ ನಿಧನದ ಬಗ್ಗೆ ಒಂದು ಸಂತಾಪ ಸೂಚನಾ ನಿರ್ಣಯವನ್ನು ಶ್ರೀ ಇ. ಪಿ. ನಂಜಪ್ಪನವರು ಸೂಚಿಸಿದರು. ಇದು ಸರ್ವಾನುಮತದಿಂದ ಅಂಗೀಕಾರವಾಯಿತು.

ನಲ್ಲಿಗಳ ಕಳವು

ರಾಜಧಾನಿಯ ಹಲವು ಮೊಹಲ್ಲಾಗಳಲ್ಲಿ ಜನರು ನೀರಿಲ್ಲದೆ ತೊಂದರೆ ಪಡುತ್ತಿರುವುದರಿಂದ ಹೆಚ್ಚಾಗಿ ಪಬ್ಲಿಕ್ ನಲ್ಲಿಗಳನ್ನು ಹಾಕಬೇಕೆಂದು ಶ್ರೀ ಬಸಪ್ಪನವರು ಸೂಚಿಸಿದರು. ಸಾರ್ವಜನಿಕರಿಗೋಸ್ಕರ ಇಟ್ಟಿರುವ ನಲ್ಲಿಗಳನ್ನು ಒಡೆದು ಅವುಗಳನ್ನು ತೆಗೆದುಕೊಂಡು ಹೋಗುವುದನ್ನು ನಿಲ್ಲಿಸಲು ತಕ್ಕ ಕ್ರಮ ಏರ್ಪಡಿಸಬೇಕೆಂದು ಹಲವು ಸದಸ್ಯರು ಅಧ್ಯಕ್ಷರ ಗಮನಕ್ಕೆ ತಂದರು.

ಬಡ ಸಂಸಾರಿಗಳಿಗೆ ಮನೆಗಳು

ರಾಜಾರಾಂ ಅಗ್ರಹಾರದಲ್ಲಿ ಬಡಸಂಸಾರಿಗಳಿಗೆ ಮಾತ್ರ ಮನೆಗಳನ್ನು ಕೊಡಬೇಕೆಂದು ಶ್ರೀಮನ್ಮಹಾರಾಜರು ಆರಂಭೋತ್ಸವ ನಡೆಸಿದಾಗ ತಿಳಿಸಿದ್ದರೂ ಕೂಡ, ಮಾಹೆಯಾನ ೫೦-೬೦ ರೂ ಸಂಬಳ ಬರುವವರಿಗೂ ಕೊಡಲಾಗುತ್ತಿದೆಯಲ್ಲ ಇದಕ್ಕೆ ಕಾರಣವೇನು ಎಂದು ಶ್ರೀ ಎಂ ಆರ್. ಬಿ. ಬಸಪ್ಪನವರು ಪ್ರಶ್ನೆ ಕೇಳಿದರು.

ಬಡವರಿಗೇನೇ ಮಾತ್ರ ಈಗ ಕೊಡಲಾಗುತ್ತಿದೆ. ಮುಂದೆ ಕಮ್ಮಿ ಸಂಬಳದವರಿಗೆ ಮಾತ್ರ ಕೊಡುವ ಏರ್ಪಾಡು ಮಾಡಲಾಗುತ್ತದೆಂದು ಅಧ್ಯಕ್ಷರು ಉತ್ತರವಿತ್ತರು.

ನಿರ್ಗತಿಕರಿಗೆ ಸೌಕರ್ಯ

ನಂತರ ಶ್ರೀ ಎಂ. ಆರ್. ಬಿ. ಬಸಪ್ಪನವರು ಒಂದು ನಿರ್ಣಯವನ್ನು ಮಂಡಿಸಿ, "ರಾಜಧಾನಿಯಲ್ಲಿ ಸಾಂಕ್ರಾಮಿಕ ರೋಗಗಳಿಂದ ನರಳುತ್ತಿದ್ದು ಭಿಕ್ಷಾಟನೆಯಿಂದ ರಸ್ತೆಗಳಲ್ಲಿ ಬಿದ್ದುಕೊಂಡಿರುವವರನ್ನು ಕ್ಷಣ ಆಸ್ಪತ್ರೆಗೆ ಸಾಗಿಸುವ ಏರ್ಪಾಟನ್ನು ಪೌರಸಭೆಯವರು ಮಾಡಬೇಕೆಂದು" ಸೂಚಿಸಿ, ಆಸ್ಪತ್ರೆಯಲ್ಲಿ ಇಂತಹವರನ್ನು ಸೇರಿಸುತ್ತಿಲ್ಲವೆಂದು ತಿಳಿಸಿದರು.

ಅಧ್ಯಕ್ಷರು: ಜಿಲ್ಲಾಧಿಕಾರಿಗಳು ಈ ವಿಚಾರದಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ರಸ್ತೆಗಳಲ್ಲಿ ನಿರ್ಗತಿಕರು ನರಳುತ್ತಾ ಬಿದ್ದಿದ್ದರೆ ಅಂತಹವರನ್ನು ತಕ್ಷಣ ಆಸ್ಪತ್ರೆಗೆ ಸೇರಿಸಬೇಕೆಂದು ತಿಳಿಸಿದ್ದಾರೆಂದೂ, ಅದ್ದರಿಂದ ಆಸ್ಪತ್ರೆಯಲ್ಲಿ ಇವರುಗಳನ್ನು ಸೇರಿಸುತ್ತಿಲ್ಲವೆಂಬುದು ನಿಜಾಂಶವಲ್ಲವೆಂದೂ ತಿಳಿಸಿ, ಕೈಲಾದ ಮಟ್ಟಿಗೆ ಈ ಕೆಲಸ ನಡೆಯುತ್ತಿದೆಯೆಂದೂ ಹೇಳಿದರು.

ಶ್ರೀ ಪಾಲಳ್ಳಿ ಸೀತಾರಾಮಯ್ಯನವರು ಮಾತನಾಡುತ್ತಾ, ಅನೇಕ ರೋಗಿಗಳು ಭಿಕ್ಷಾಟನೆಯನ್ನೇ ಒಂದು ವೃತ್ತಿಯಾಗಿ ಮಾಡಿಕೊಂಡು ರಸ್ತೆಗಳಲ್ಲಿ ಬಿದ್ದುಕೊಂಡಿರುತ್ತಾರೆ. ಇಂತಹವರು ರೋಗಗಳನ್ನು ನಗರದಲ್ಲಿ ಹರಡದಂತೆ ನೋಡಿಕೊಳ್ಳಬೇಕು. ಮುನಿಸಿಪಲ್ ಕಾನೂನಿನ ಪ್ರಕಾರವೇ ಇಂತಹವರನ್ನು ಬಲಾತ್ಕಾರದಿಂದ ಹಿಡಿದು ಹೊರಗೆ ಕಳಿಸುವ ಅಧಿಕಾರವಿದೆ. ಅದಕ್ಕೆ ತಕ್ಕ ಏರ್ಪಾಟು ಮಾಡಬೇಕೆಂದು ತಿಳಿಸಿದರು.

ಸರ್ಕಾರದವರು ಸಹ ಭಿಕ್ಷಾಟನೆ ಬಗ್ಗೆ ಒಂದು ಮಸೂದೆಯನ್ನು ತರಲಿರುವುದರಿಂದ ಈ ನಿರ್ಣಯವನ್ನು ಮುಂದೆ ಹಾಕಲಾಯಿತು.

ನಾಯಿಗಳ ಕಾಟ

ರೋಗದ ಮತ್ತು ಇತರ ನಾಯಿಗಳ ಕಾಟವು ಹೆಚ್ಚಾಗಿರುವುದರಿಂದ ಅವುಗಳನ್ನು ಹಿಡಿದು ಕೊಂದುಹಾಕಬೇಕೆಂದು ಶ್ರೀ ವೆಂಕಟರಾಮಯ್ಯನವರು ಸೂಚಿಸಿದರು. ಪೌರಸಭೆಯಲ್ಲಿ ನಾಯಿ ಕೊಲ್ಲುವ ಯಂತ್ರವಿದ್ದರೂ, ನಾಯಿಗಳನ್ನು ಹಿಡಿದುಕೊಂಡು ಬರುವ ಜನರಿಲ್ಲವೆಂದೂ ಸಾಧ್ಯವಾದ ಮಟ್ಟಿಗೂ ಕ್ರಮ ಜರುಗಿಸಲಾಗುವುದೆಂದೂ ಅಧ್ಯಕ್ಷರ ಭರವಸೆ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ರಸ್ತೆಗಳ ರಿಪೇರಿ

ರಾಜಧಾನಿಯ ಕಾಳಮ್ಮನ ದೇವಸ್ಥಾನದ ರಸ್ತೆ, ಕಾಳಿದಾಸ ಮತ್ತು ಇತರ ರಸ್ತೆಗಳನ್ನು ರಿಪೇರಿಯಾಗದೆ ದುರವಸ್ಥೆಯಲ್ಲಿರುವುದನ್ನು ಸರಿಪಡಿಸಬೇಕೆಂದು ಶ್ರೀ ಎ ಕೃಷ್ಣದಾಸರವರು ನಿರ್ಣಯವೊಂದನ್ನು ಸೂಚಿಸಿದರು.

ಈಗಿನ ಮುಸ್ಸಿನ ಮಳೆಯಿಂದ, ಸಾಮಗ್ರಿಗಳು ಸಿಕ್ಕದೆ, ಕೆಲಸಗಳು ನಿಂತುಹೋಗಿವೆಯೆಂದೂ, ಆದರೂ ಎಲ್ಲಾ ವರ್ಷಕ್ಕಿಂತ ಈ ವರ್ಷ ರಸ್ತೆ ೪೦ ಸಾವಿರ ರೂ ಖರ್ಚು ಮಾಡಲಾಗಿದೆಯೆಂದೂ ಆಗ ಮೈಲಿಗಳನ್ನು ರಿಪೇರಿ ಮಾಡಲಾಗಿದೆಯೆಂದೂ, ಇನ್ನು ಮುಂದೂ ಕೆಲಸ ನಡೆಸಲಾಗುತ್ತೆಂದೂ ಅಧ್ಯಕ್ಷರು ತಿಳಿಸಿದ್ದರಿಂದ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಅಧ್ಯಕ್ಷರ ಕೆಲಸ ಕಮ್ಮಿಮಾಡಬೇಕು

ಪೌರ ಸಭೆ ಅಧ್ಯಕ್ಷರಿಗೆ ಇತರ ಸಂಸ್ಥೆಗಳನೇಕಲೂ ವಿಚಾರಣೆ ಅಧಿಕಾರ ಕೊಟ್ಟಿರುವುದರಿಂದ ಪೌರ ಸಭೆಯ ಕೆಲಸಗಳಿಗೆ ಅಡಚಣೆ ಉಂಟಾಗಿರುವುದರಿಂದ, ಅದನ್ನು ತೆಗೆದುಹಾಕಬೇಕೆಂದು ಸರ್ಕಾರದಲ್ಲಿ ಪ್ರಾರ್ಥಿಸುವ ಶ್ರೀ ಜನಾರ್ಧನನಾಯ್ಡುರವರ ನಿರ್ಣಯವನ್ನು ಅನುಮೋದಿಸಲಾಯಿತು.

ಬಡ ನೌಕರರಿಗೆ ಊಟದ ಏರ್ಪಾಟು

ರಾಜಧಾನಿಯಲ್ಲಿ ಬಡವರಿಗೆ ಅನ್ನದಾನ ಮಾಡಲು ಒಬ್ಬ ಮಹಸ್ತ್ರೀಯರು ೧೨೦೦ ರೂ ಗಳನ್ನು ಕೊಟ್ಟು, ತಿಂಗಳಿಗೆ ೧೦೦ ರೂ. ಗಳನ್ನು ಉಪಯೋಗಿಸಬೇಕೆಂದೂ ಮತ್ತು ಇದಕ್ಕಾಗಿಯೇ ಶ್ರೀ ವೈ. ಮಲ್ಲಿಕಾರ್ಜುನಪ್ಪಗೌಡರು ೧೫೦ ರೂ. ಗಳನ್ನು ಕೊಟ್ಟಿರುವ ವಿಷಯವನ್ನೂ ಅಧ್ಯಕ್ಷರು ತಿಳಿಸಿ, ಈ ವಿಚಾರದಲ್ಲಿ ಒಂದು ಯೋಜನೆಯನ್ನು ಸಭೆಯ ಮುಂದಿಟ್ಟರು.

ಮುನಿಸಿಪಲ್ ಬಡ ನೌಕರರಲ್ಲಿ ೫೦ ರೂ ಗಳಿಂತ ಕಮ್ಮಿ ಸಂಬಳ ಬರುವವರಿಗೆ ಸಿದ್ಧಪಡಿಸಿದ ಆಹಾರವನ್ನು 2/3 ದರದಿಂದ ಕೊಡಲು ಒಂದು ಕ್ಯಾಂಟೀನ್ ಏರ್ಪಡಿಸಬೇಕೆಂದೂ, ಅದಕ್ಕಾಗಿ ಪೌರಸಭೆಯವರು ೨೦೦ ರೂ. ಗಳನ್ನು ಕೊಡಬೇಕೆಂದೂ ಸಾರ್ವಜನಿಕರಿಂದ ಬಂದ ಹಣವನ್ನು ಒಂದು ನಿಧಿಯಾಗಿ ಏರ್ಪಡಿಸಬಹುದೆಂದೂ ತಿಳಿಸಿದರು. ಸಭೆಯವರು ಇದನ್ನು ಅನುಮೋದಿಸಿದರು.

ಈ ಸಂಬಂಧದಲ್ಲಿ ಶ್ರೀಮನ್ಮಹಾರಾಜರವರ ಔದಾರ್ಯದಿಂದ ದಿನಕ್ಕೆ ೧೫೦೦ ಮಂದಿ ಬಡ ಜನರಿಗೆ ಉಚಿತ ಊಟವನ್ನು ಏರ್ಪಡಿಸಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು.

ರೇಷನಿಂಗ್ ಅಧಿಕಾರಿಗಳು

ಮೈಸೂರು ಪೌರಸಭಾಧ್ಯಕ್ಷರನ್ನು ನಗರದ ಚೀಫ್ ರೇಷನಿಂಗ್ ಅಧಿಕಾರಿಗಳಾಗಿಯೂ, ಶ್ರೀ ವೆಂಕಟಶಿವರೆಡ್ಡಿಯವರನ್ನು ಚೀಫ್ ರೇಷನಿಂಗ್ ಸೆನ್ಸಸ್ ಅಧಿಕಾರಿಗಳಾಗಿಯೂ ಮತ್ತು ರೆವಿನ್ಯೂ ಆಫೀಸರಾದ ಶ್ರೀ ಹೆಚ್. ಸಿ. ಜಂಬುಕೇಶ್ವರಯ್ಯನವರನ್ನು ಡಿ|| ರೇಷನಿಂಗ್ ಸೆನ್ಸಸ್ ಅಧಿಕಾರಿಗಳಾಗಿಯೂ ನೇಮಿಸಿರುವ ಸರ್ಕಾರಿ ಆಜ್ಞೆಯನ್ನು ರಿಕಾರ್ಡು ಮಾಡಲಾಯಿತು.

Edited, printed and published by A R. Nagarajan, at the Sadhvi Press, D.Subbiah Road, Mysore.

ಹೊರಗಿನಿಂದ ಮೈಸೂರಿಗೆ ೬ ಸಾವಿರ ಟನ್ ಅಕ್ಕಿ

ಬೆಂಗಳೂರು ೨೫

ಮೈಸೂರು ಸಂಸ್ಥಾನಕ್ಕೆ ಇತರ ಪ್ರಾಂತ್ಯಗಳಿಂದ ಕೊಡಲಾಗುವ ದವಸಗಳ ಕೋಟಾದಲ್ಲಿ ಈ ಸಾರಿ ೬೦೦೦ ಟನ್ನುಗಳಷ್ಟು ಅಕ್ಕಿಯನ್ನು ದೆಹಲಿಯ ಆಹಾರ ಸಮ್ಮೇಳನದಲ್ಲಿ ಹೆಚ್ಚುಮಾಡಲಾಯಿತೆಂದು ಆಹಾರ ಸಚಿವರಾದ ಶ್ರೀ ಎಂ. ಎ ಶ್ರೀನಿವಾಸರವರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ತಿಳಿಸಿದರು.

ಬೆಂಗಳೂರು ನಗರದಲ್ಲಿ ಹಿಂದಿನ ರೇಷನ್ ಕಾರ್ಡುಗಳ ಪ್ರಕಾರ ೪,೬೪,೦೦೦ ಜನರಿದ್ದರೆಂದೂ, ಆದರೆ ಈಗಿನ ರೇಷನ್ ಸೆನ್ಸಸ್‌ನಿಂದ ಆ ಸಂಖ್ಯೆಯು ಒಂದು ಲಕ್ಷದಷ್ಟು ಕಡಿಮೆಯಾಗುವ ನಿರೀಕ್ಷಣೆಯಿದೆಯೆಂದೂ ಡಿಸೆಂಬರ್ ೧ ನೇ ತಾ|| ಹೊಸ ರೇಷನ್ ಕಾರ್ಡುಗಳನ್ನು ಬೆಂಗಳೂರಿನಲ್ಲಿ ಕೊಡಲಾಗುವುದೆಂದೂ ತಿಳಿಸಿದರು.

ಕ್ಷಾಮಪೀಡಿತ ಪ್ರಾಂತಗಳಿಗೆ ಪಂಜಾಬಿನ ಸಹಾಯ

ಕ್ಷಾಮಪೀಡಿತ ಪ್ರಾಂತ್ಯಗಳಿಗೆ ಪಂಜಾಬಿನಿಂದ ಬೇಕಾದಷ್ಟು ಧಾನ್ಯ ಸಹಾಯ ಮಾಡಲಾಗಿದೆಯೆಂದೂ, ೧೯೪೭-೪೮ ರಲ್ಲಿ ಇಂಡಿಯಾ ಸರ್ಕಾರಕ್ಕೆ ೯ ಲಕ್ಷ ಟನ್‌ಗಳಷ್ಟು ಗೋಧಿಯನ್ನು ಸರಬರಾಜು ಮಾಡುವುದಾಗಿ ಒಪ್ಪಿಕೊಂಡು, ಈಗಾಗಲೇ ೯೫ ಟನ್ನುಗಳಷ್ಟು ಗೋಧಿ ಕಳುಹಿಸಲಾಗಿದೆಯೆಂದೂ, ಅಕ್ಕಿ, ಬಾರ್ಲಿ, ಜೋಳ ಮುಂತಾದ ೫,೨೪,೧೪೪ ಟನ್‌ಗಳಷ್ಟು ಆಹಾರ ಪದಾರ್ಥಗಳನ್ನು ಈಗಾಗಲೇ ಒದಗಿಸಲಾಗಿದೆಯೆಂದೂ ಪಂಜಾಬಿನ ಆಹಾರ ಸಚಿವರಾದ ಸರ್ದಾರ್ ಬಲದೇವಸಿಂಗ್‌ರವರು ತಿಳಿಸಿದ್ದಾರೆ.

ಸಂಯುಕ್ತಪ್ರಾಂತ್ಯ, ಬಂಗಾಳ, ಸಿಂಧ ಪ್ರಾಂತ್ಯಗಳು ಹೆಚ್ಚು ಲಾಭ ಗಳಿಸಿರುವವು, ಇದರಿಂದ ತಮಗೆ ಬರಬೇಕಾದ ೧ ಲಕ್ಷ ರೂ ಲಾಭ ಹೋಯಿತೆಂದೂ, ಅದರಿಂದ ಪಂಜಾಬು ಲಾಭ ಸಂಪಾದಿಸಿಲ್ಲವೆಂದೂ ಅವರು ತಿಳಿಸಿದ್ದಾರೆ.

ಪಂಜಾಬಿನಲ್ಲಿ ರೈತರು ಮತ್ತು ಇತರರು ದವಸವನ್ನು ದಾಸ್ತಾನು ಮಾಡಿರುವರೆಂಬ ಆಪಾದನೆಯನ್ನು ಪ್ರತಿಭಟಿಸಿದರು.

ಆಕಾಶವಾಣಿ

೨೭ ನೇ ಬುಧವಾರ

...೮-೩೦ ಹಾಡುಗಾರಿಕೆ : ವಿದ್ವಾನ್ ಬಿ ಪುಟ್ಟಸ್ವಾಮಯ್ಯ

ಬಡುಪುಗಳು ! ಬನಾರಸ್ ಸೀರೆಗಳು ವಾಯಿಲ್ ಸೀರೆಗಳು !
ಬಹುಮಾನಕ್ಕೆ ನವೀನ ಮಾದರಿಗಳಲ್ಲಿ — ಬೇಕಾದ ನಗಗಳು
ನಿಮ್ಮ ಮನಸ್ಸೊಪ್ಪುವಂತೆ ! ಕಣ್ಣಿಗಾನಂದವಾಗುವಂತೆ !
ಬೆಂಗಳೂರು ಕೆ ಎಚ್. ಬಾಬೂರಾವ್ ಅಂಡ್ ಸನ್ಸ್‌ರವರಿಂದ ತಯಾರಿಸಲ್ಪಟ್ಟ
ಉಡುಪುಗಳು ಬನಾರಸ್ ವಾಲಾರವರ ಇಲ್ಲಿ ಬಂದು ಕಡಿಮೆ ಬೆಲೆಗೆ
ಮಾರುವ ಸೀರೆಗಳು, ಕಣಗಳು, ಇತ್ಯಾದಿ ಇತ್ಯಾದಿ
ಗ್ಯಾರಂಟಿಯಾದ ಚಿನ್ನ ಬೆಳ್ಳಿ ನಗಗಳು
ಸ್ಥಳ—ಜೆ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್ಸ್
ಜವಾಹಿರಿ ಮತ್ತು ಬಟ್ಟೆವ್ಯಾಪಾರಿಗಳು,
ಸಯ್ಯಾಜಿರಾವ್ ರೋಡ್, ಮೈಸೂರು.

ಶ್ರೀಯುರ ಸೌಕರ್ಯಕ್ಕಾಗಿ
೧-೧-೧೯೪೭ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿ ಪುಡಿ
ಯನ್ನೇ ಉಪಯೋಗಿಸಿ.
ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂ
ವಿ ಸೂ.— ಚೆನ್ನಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತ
ಇಲ್ಲೂ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿ
ಸಹ ದೊರೆಯುತ್ತೆ.

WEEKLY EDITION

ಸಂಪುಟ ೭] ಸೋಮವಾರ ೨೭—೯—೪೩ [ಸಂಚಿಕೆ ೪೯

ಪೆಸಿಫಿಕ್ ರಣಕ್ಷೇತ್ರದ ಪ್ರಾಮುಖ್ಯತೆ

ಬಂಗಾಳದಲ್ಲಿ ಕರುಳು ಕತ್ತರಿಸುವ ಪರಿಸ್ಥಿತಿ

"ಮೈಸೂರು, ಬೆಂಗಳೂರು ನಗರಗಳಲ್ಲೂ ಆಹಾರ ಪರಿಸ್ಥಿತಿ ಹದಗೆಡುತ್ತಿದೆ"

ವಿಮಾನದ ಆಗಮನ

ಮೈಸೂರು ೨೭

ದಿವಾನರಾದ ಪ್ರಧಾನ ಶಿರೋಮಣಿ ಎನ್. ಮಾಧವರಾಯರು ಇವತ್ತು ವಿಮಾನದಲ್ಲಿ ರಾಜಧಾನಿಗೆ ಆಗಮಿಸಿದರು.

ಆತ್ಮಹತ್ಯೆ

೫ ನೆಂ ೨ ಬಡಾವಣೆ ಸಿಮೆಂಟ್ ಬಿಲ್ಡಿಂಗಿನಲ್ಲಿ ೧೨ ವರ್ಷದ ಕುರುಬ ಜಾತಿಯ ಮಾದಮ್ಮ ಎಂಬ ಯುವತಿಯು ಮೊನ್ನೆ ಮಧ್ಯಾಹ್ನ ಬಾವಿಯಲ್ಲಿ ಬಿದ್ದು ಪ್ರಾಣಕಳೆದುಕೊಂಡಳೆಂದು ವರದಿಯಾಗಿದೆ. ಆಕೆ ಗರ್ಭಿಣಿಯಾಗಿದ್ದು, ಹೊಟ್ಟೆನೋವಿನ ರೋಗ ಒಂದು ಇದ್ದಿತೆಂದೂ, ಅದನ್ನು ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಂಡಳೆಂದೂ ಹೇಳಲಾಗಿದೆ.

ಗಾಂಧೀಜಿ ಜಯಂತ್ಯುತ್ಸವ

ಮಹಾತ್ಮಾ ಗಾಂಧೀಜಿಯವರ ೭೫ ನೇ ಜಯಂತ್ಯುತ್ಸವ ಅಕ್ಟೋಬರ್ ೨ ಮತ್ತು ೩ ನೇ ತಾರೀಖುಗಳಲ್ಲಿ ಮೈಸೂರು ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ನೆರವೇರಿಸಲ್ಪಡುವುದು. ತಾ॥ ೨-೧೦-೪೩ ಬೆಳಗ್ಗೆ ೯ ರಿಂದ ೧೨ ಗಂಟೆಯವರೆಗೆ ಖಾದಿ ಮಾರಾಟ, ಮಧ್ಯಾಹ್ನ ೩ ರಿಂದ ೫ ಗಂಟೆಯವರೆಗೆ ನೂಲುವ ಸ್ಪರ್ಧೆ [ಹಿಂದಿ ಪ್ರಚಾರ ಸಭೆ] ಅದೇ ಕಡೆ ಸಾಯಂಕಾಲ ೫ ರಿಂದ ೭ ಗಂಟೆಯವರೆಗೆ ಗಾಂಧೀಜಿಯವರ ವಿಚಾರವಾಗಿ ಹಿಂದಿಯಲ್ಲಿ ಭಾಷಣ ಸ್ಪರ್ಧೆ,

ತಾ॥ ೩-೧೦-೪೩ ಬೆಳಗ್ಗೆ ೯ ರಿಂದ ೧೨ ಗಂಟೆಯವರೆಗೆ ಖಾದಿ ಮಾರಾಟ. ಮಧ್ಯಾಹ್ನ ೫ ಗಂಟೆಗೆ ಮೈಸೂರು ಸಿಟಿ ಕೊ-ಆಪರೇಟಿವ್ಸ್ ಹೋಂನಲ್ಲಿ ಬಹಿರಂಗ ಸಭೆ.

ಮೇಲ್ಕಂಡ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಅರ್ಜಿಗಳನ್ನು ಮೈಸೂರು ಲಕ್ಷ್ಮೀಪುರಂ ಹಿಂದೀ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ ೩೦-೯-೪೩ ರೊಳಗಾಗಿ ತಲುಪಿಸಬೇಕಾಗಿ ಕೋರಿದೆ. ಸ್ಪರ್ಧೆಗಳಲ್ಲಿ ಮೊದಲನೆ ಮತ್ತು ಎರಡನೆಯವರಾಗಿ ಉತ್ತೀರ್ಣರಾಗುವವರಿಗೆ ಪುರಸ್ಕಾರವೂ ಕೊಡಲಾಗುತ್ತೆ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮೈಸೂರು ವೈಶ್ಯ ಯುವಜನ ಮಹಾಸಭೆ

ಮೈಸೂರು ಸಂಸ್ಥಾನ, ಕೊಡಗು ಪ್ರಾಂತ್ಯ, ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ವೈಶ್ಯ ಸಂಘಕ್ಕೆ ಸೇವೆಯನ್ನು ಸಲ್ಲಿಸುತ್ತಿರುವ "ವೈಶ್ಯ ಸಂಘದ ಕಾರ್ಯಕರ್ತರ ಮಹಾಸಭೆ"ಯು ಮೈಸೂರು ನಗರದ ಆರೋಗ್ಯಾಶ್ರಮದಲ್ಲಿರುವ ವಾಸವಾಂಬಾ ಭವನದಲ್ಲಿ ಬೀರೂರಿನ ಶ್ರೀಮಾನ್ ಕೆ. ಟಿ. ಸತ್ಯನಾರಾಯಣ ಶ್ರೇಷ್ಠಿಯವರ ಅಧ್ಯಕ್ಷತೆಯಲ್ಲಿ ತಾ॥ ೧೦-೧೦-೪೩ ನೇ ಭಾನುವಾರ ಪ್ರಾತಃಕಾಲ ನಡೆಯುವುದು.

ಅಖಿಲ ಭಾರತ ವಾಣಿಜ್ಯ ಕಾರ್ಪೊರೇಷನ್ ರಚಿಸಬೇಕು

ಆಹಾರ ವಿಷಯಗಳನ್ನು ವಹಿಸಿಕೊಂಡು, ಅದನ್ನು ಹಂಚುವ ಸಲುವಾಗಿ ಅಖಿಲ ಭಾರತ ವಾಣಿಜ್ಯ ಕಾರ್ಪೊರೇಷನನ್ನು ಆದಷ್ಟು ಬೇಗನೆ ಸ್ಥಾಪಿಸಬೇಕೆಂದು ಎಂಡ್ರೂ ಯೂಲ್ ಕಂಪೆನಿಯವರು ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಬೇಕೆಂದು ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ಸ್‌ನವರು ತಿಳಿಸಿದ್ದಾರೆ.

ಮೈಸೂರು ಬೆಂಗಳೂರು ನಗರಗಳಲ್ಲೂ ಆಹಾರ ಪರಿಸ್ಥಿತಿ ಕೆಡುತ್ತಿದೆ.

ಭಾರತದ ಆಹಾರ ಸಮಸ್ಯೆಯ ವಿಷಯವಾಗಿ ವಿ॥ ಎಸ್. ರಿಯವರು ಕೇಂದ್ರ ಶಾಸನ ಸಭೆಯಲ್ಲಿ ಮಾತನಾಡುತ್ತಾ, ಬಂಗಾಳದಲ್ಲಿಯೂ, ಕಲ್ಕತ್ತಾದಲ್ಲಿಯೂ ಪರಿಸ್ಥಿತಿಯು ಬಹಳ ಭೀಕರವಾಗಿದೆಯೆಂದೂ, ಕಳೆದ ೭ ತಿಂಗಳಲ್ಲಿ ಮರಣದ ಸಂಖ್ಯೆಯು ಸು॥ ೩೦ ರಷ್ಟು ಹೆಚ್ಚಿರುವುದೆಂದು ತಿಳಿಸಿದರು.

ಮೈಸೂರು, ಬೆಂಗಳೂರು, ಇಂದೋರ್, ಜಮಷೆಡ್‌ಪುರ ಮುಂತಾದ ಕೈಗಾರಿಕೆ ಪ್ರದೇಶಗಳಲ್ಲಿ ಆಹಾರ ಪರಿಸ್ಥಿತಿಯು ಹದಗೆಡುತ್ತಿದೆಯೆಂದೂ ಹೇಳಿದರು.

ಬ್ರಿಟಿಷ್ ಸರ್ಕಾರವು ಸಾಧ್ಯವಾದಷ್ಟು ಮಟ್ಟಿಗೆ ಸಹಾಯ ನೀಡುತ್ತಿದೆಯೆಂದೂ, ಇಂಡಿಯಾ ಸರ್ಕಾರದವರು ತಮ್ಮಲ್ಲಿರುವ ಅಧಿಕಾರ ಬಲವನ್ನು ಚಲಾಯಿಸುವುದಕ್ಕೆ ಹಿಂಜರಿಯುವುದಿಲ್ಲವೆಂದು, ಆದರೆ ಆಹಾರ ಸರಬರಾಯಿ ಮಾಡುವ ಜವಾಬ್ದಾರಿ ಬಂಗಾಳ ಸರ್ಕಾರಕ್ಕೆ ಮುಖ್ಯವಾದದ್ದೆಂದು ತಿಳಿಸಿದರು.

ಪೆಸಿಫಿಕ್ ರಣಕ್ಷೇತ್ರದ ಪ್ರಾಮುಖ್ಯತೆ

ಜರ್ಮನಿ ಮೇಲೆ ಯುದ್ಧವು ಎಷ್ಟು ಮುಖ್ಯವೋ ಅಷ್ಟೇ ಪೆಸಿಫಿಕ್ ರಣಕ್ಷೇತ್ರವು ಮುಖ್ಯವೆಂದು ಅಮೆರಿಕ ನೌಕಾ ಕಾರ್ಯದರ್ಶಿಯಾದ ಮಿ॥ ನಾಕ್ಸ್‌ರವರು ತಿಳಿಸಿದ್ದಾರೆ. ಯೂರೋಪ್ ಯುದ್ಧವೇ ಪ್ರಥಮ ರಂಗವೆಂದು ಮತ್ತು ಪೆಸಿಫಿಕ್ ಕದನ ಎರಡನೆಯದೆಂದು ಬ್ರಿಟಿಷರು ಭಾವಿಸಿದ್ದಾರೆಂದು ಮತ್ತು ಹಿಟ್ಲರನನ್ನು ಸೋಲಿಸಿದ ನಂತರ ಪೆಸಿಫಿಕ್ಕಿನಲ್ಲಿ ಯುದ್ಧ ನಡೆಸಲು ಅಮೆರಿಕಕ್ಕೆ ಬಿಟ್ಟುಬಿಡುವುದೆಂಬ ಭಾವನೆಯು ತಪ್ಪೆಂದೂ ತಿಳಿಸಿದರು. ಪೆಸಿಫಿಕ್ ಕದನವು ಹೆಚ್ಚಾಗಿ ನೌಕಾ ಕದನವೆಂದೂ ಬಹುದೂರದ ಶತ್ರುಗಳ ಮೇಲೆ ದಾಳಿಗಳನ್ನು ಉಪಯೋಗಿಸಲಾಗುತ್ತದೆಯೆಂದೂ ತಿಳಿಸಿದರು.

ಕರುಳು ಕತ್ತರಿಸುವ ಪರಿಸ್ಥಿತಿ

ಬಂಗಾಳ ಪ್ರಾಂತ್ಯದ ಕೊಂಟಾಯಿ ಭಾಗದಲ್ಲಿ ಕರುಳು ಕತ್ತರಿಸುವ ಪರಿಸ್ಥಿತಿಯ ಬಗ್ಗೆ ಶ್ರೀ ಸುಧೀರ ಘೋಷರು ಈ ರೀತಿ ವರ್ಣಿಸಿದ್ದಾರೆ—

"ಸಾಮ್ರಾಜ್ಯದ ದ್ವಿತೀಯ ನಗರವೆನಿಸಿದ ಕಲ್ಕತ್ತೆಯ ಗೋಳೇ ಎಲ್ಲರಿಗೂ ಕೇಳಬರುತ್ತಿದೆ. ಆದರೆ ಒಳನಾಡಿನ ದುಃಖದ ಮುಂದೆ ಅದು ಅಣುಪ್ರಮಾಣವಾಗಿರುವುದು. ಅದರಲ್ಲಿಯೂ ಮಿಡ್ನಾಪುರದ ಜಿಲ್ಲೆಯ ಕೊಂಟಾಯಿ ಸಬ್‌ಡಿವಿಜನ್ನಿನಲ್ಲಿಯ ಪರಿಸ್ಥಿತಿಯನ್ನು ನೋಡಿದರೆ ಕಲ್ಲೆದೆಯೂ ಒಂದೇ ಕ್ಷಣದಲ್ಲಿ ಕರಗುವುದು. ಕಳೆದ ೧೫ ದಿವಸ ಬೀದಿಗಳಲ್ಲಿ ಹೆಣಗಳನ್ನು ನೋಡದ ದಿನ ಒಂದೂ ಇಲ್ಲ. ಪ್ರೇತಭಕ್ಷಣಕ್ಕಾಗಿ ರಣಹದ್ದು ಮತ್ತು ನಾಯಿಗಳ ನಡುವೆ ಹೊಡೆದಾಡುವುದು ಅಪರೂಪವಲ್ಲ. ಭಿಕ್ಷುಕರು ಮತ್ತು ನಿರ್ಗತಿಕರಿಂದ ನಗರ ತುಂಬಿರುವುದು. ಅವರೆಲ್ಲರೂ ಸಾಂಕ್ರಾಮಿಕ ರೋಗಗಳಿಂದ ನರಳುತ್ತಿರುವರು. ಸತ್ತವರನ್ನು ಸ್ಮಶಾನ ಕಾಣಿಸುವುದೇ ಮಹಾ ಸಮಸ್ಯೆಯಾಗಿದೆ. ಹಳ್ಳಿಗಳ ಪರಿಸ್ಥಿತಿ ಇದಕ್ಕೂ ಕಟ್ಟದು. ಸತ್ತವರನ್ನು ಹೊತ್ತುಕೊಂಡು ಹೋಗುವಷ್ಟು ಶಕ್ತಿ ಬದುಕಿರುವವರಲ್ಲಿ ಇಲ್ಲದ್ದರಿಂದ ಹೆಣಗಳನ್ನು ಸಮೀಪದ ಕಾಲುವೆಗಳಲ್ಲಿ ದೂಡಿಬಿಡುತ್ತಿರುವರು. ಬಾಕಿ ಪ್ರೇತಗಳು ಅಸಂಖ್ಯ ತೇಲುತ್ತಿರುವುದು ಕಂಡುಬರುತ್ತಿದೆ."

ದಿನಾಜಪುರದ ನೌಕರರೊಬ್ಬರ ಪತ್ನಿಯು, ಬಂಗಾಳದಲ್ಲಿ ತನ್ನ ತಂದೆಯ ಮನೆಯವರು ಹೊಟ್ಟೆಗಿಲ್ಲದೆ ನರಳುತ್ತಿರುವರೆಂಬ ವಾರ್ತೆಯನ್ನು ಕೇಳಿ ಆತ್ಮಹತ್ಯೆ ಮಾಡಿಕೊಂಡಳೆಂದು ವರದಿಯಾಗಿದೆ.

ವಿಮಾನ ಧಾಳಿ ಕಷ್ಟ ನಿವಾರಣೆಗೆ ೧೦ ಲಕ್ಷ ರೂ. ಸಹಾಯ

ಲಂಡನ್ ನಗರದ ಮೇಯರ್‌ರವರು ಏರ್ಪಡಿಸಿರುವ ಬ್ರಿಟಿಷ್ ವಿಮಾನ ಧಾಳಿ ಕಷ್ಟ ನಿವಾರಣೆಗಾಗಿ ಭಾರತದ ಮಹಾಜನಗಳು ೧೦ ಲಕ್ಷ ರೂಗಳನ್ನು ವೈಸರಾಯರ ಯುದ್ಧ ನಿಧಿಯ ಮೂಲಕ ಕಳುಹಿಸಿರುವರೆಂದು ತಿಳಿಯಲಾಗಿದೆ.

ಬ್ಲಾಕ್ ಮಾರ್ಕೆಟ್ ನಡೆಸಿದ್ದಕ್ಕೆ ಜುಲ್ಮಾನೆ

ಮೈಸೂರು ೨೭

ಸಯ್ಯಾಜಿರಾವ್ ರಸ್ತೆಯ ಮೈಸೂರು ಹಾಲಿನ ಡಿಪೋ ಭಾಗದಲ್ಲಿ ಸಕ್ಕರೆ ಜಾರಿಗೆ ಸಂಬಂಧವಾದ ಬ್ಲಾಕ್ ಮಾರ್ಕೆಟ್ಟನ್ನು ೨೬-೯-೪೩ ರಲ್ಲಿ ನಡೆಸುತ್ತಿದ್ದರೆಂದು ಎನ್. ಪಿ. ಮೇಲಿ ಚಂದ್ರಶೇಖರನ್, ತ್ಯಾಗರಾಜ್, ಕೆರೋಸಿನ್ ರಾವ್ ಮತ್ತು ಸಿದ್ದಪ್ಪ ಇವರುಗಳಿಗೆ ಸಿಟಿ ಮ್ಯಾ॥ ರು ಈ ದಿನ ತಲಾ ೬೦ ರೂ ಜುಲ್ಮಾನೆ ವಿಧಿಸಿದ್ದಲ್ಲದೆ, ವಾಸೆಯ ಮಾಲೀಕರಾದ ವಿ. ಬಿ. ಚಂದ್ರನ್ ಎಂಬುವರಿಗೆ ೧೬೦ ರೂ. ದಂಡ ವಿಧಿಸಿದರು.

ಮಂಡಿಮೊಹಲ್ಲಾದಲ್ಲಿ ಬ್ಲಾಕ್ ಮಾರ್ಕೆಟನ್ನು ೨೪-೯-೪೩ ರಲ್ಲಿ ನಡೆಸುತ್ತಿದ್ದರೆಂದು ಮಹಮದ್ ಜಮಾಲ್ ಎಂಬುವರಿಗೆ ೧೬೦ ರೂ ದಂಡವನ್ನು, ಮಹಮದ್ ಅಸ್ಲಮ್ ಎಂಬುವರಿಗೆ ೬೦ ರೂ ದಂಡವನ್ನು ಸಿಟಿ ನ್ಯಾಯಾಧೀಶರು ವಿಧಿಸಿದರು.

ವೃದ್ಧ ಪಿತಾಮಹರಿಗೆ ವಿಶ್ವವಿದ್ಯಾಲಯದ ಪ್ರಶಸ್ತಿ

ಕಲ್ಕತ್ತಾ ವೃದ್ಧಪಿತಾಮಹರಾದ ೮೩ ವರ್ಷಪ್ರಾಯದ ಸರಳಾ ಮೋಹನ್ ಸನ್ಯಾಲ್ ಎಂಬುವರಿಗೆ ಕಲ್ಕತ್ತಾ ವಿಶ್ವವಿದ್ಯಾಲಯದವರು ಪಿ. ಹೆಚ್. ಡಿ. ಡಿಗ್ರಿಯನ್ನು ದಯಪಾಲಿಸಲು ನಿರ್ಧರಿಸಿದ್ದಾರೆ. ಅವರು ಬಹಾರಿ ಭಾಷೆಯ ಮೂಲ ಮತ್ತು ಅಭಿವೃದ್ಧಿ ವಿಚಾರವಾಗಿ ಪ್ರಬಂಧ ಬರೆದಿದ್ದಕ್ಕೆ ಪ್ರಶಸ್ತಿ ಕೊಡಲಾಗಿದೆ.

ನ್ಯಾಯಾಸ್ಥಾನದ ಮುಂದೆ ಬಾಲಕಿಯ ಮರಣ

ಭಾರತದ ನ್ಯಾಯಾಸ್ಥಾನದ ಮುಂಭಾಗದಲ್ಲಿ ಕ್ಷುದ್ಬಾಧೆಯಿಂದ ನರಳುತ್ತಿದ್ದ ಬಾಲಕಿಯೊಬ್ಬಳು ಹಠಾತ್ತಾಗಿ ಬಿದ್ದು ಮರಣ ಹೊಂದಿದ ಮತ್ತು ಆಕೆಯ ಸಹೋದರನು ಹೆಣದ ಮೇಲೆ ಬಿದ್ದು ಗೋಳಾಡುತ್ತಿದ್ದ ಭೀಕರ ದೃಶ್ಯವು ವರದಿಯಾಗಿದೆ.

ಜೇನುಗಳೂ ದೂತ ಕಾರ್ಯಕ್ಕೆ !

ಜೇನು ಹುಳುವಿನಷ್ಟು ಶ್ರಮಜೀವಿ ಮತ್ತೊಂದಿಲ್ಲ. ಎಷ್ಟು ದೂರ ಹೋದರೂ ಪತ್ತೆ ಕಟ್ಟಿದ ಗೂಡಿಗೆ ಹಿಂದಿರುಗುತ್ತದೆ. ಇದಕ್ಕೇ "ಜೇನು ದಾರಿ" ಎನ್ನುತ್ತಾರೆ. ಚೀನೀ ಸಿಪಾಯಿಗಳು ಜೇನಿನ ಈ ಹುಟ್ಟುಗುಣದ ಉಪಯೋಗವನ್ನು ಚೆನ್ನಾಗಿ ಮಾಡಿಕೊಂಡಿದ್ದಾರೆ. ಹೇಗೆ ಮಾಡುತ್ತಾರೆ ಗೊತ್ತೆ ?

ಇವರು ಎಲ್ಲಿಗೆ ಸುದ್ದಿ ಕಳಿಸಬೇಕೋ ಅಲ್ಲಿಂದ ಒಂದಿಷ್ಟು ಜೇನು ಹುಳುಗಳನ್ನು ತಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಾರೆ. ಆ ಬಳಿಕ ಅವುಗಳ ಬೆನ್ನಿಗೆ ಬಹು ತೆಳುವಾದ ಕಾಗದದ ಚೂರಿನಲ್ಲಿ ಸೂಕ್ಷ್ಮಾಕ್ಷರದಲ್ಲಿ ಬರೆದು ಅಂಟಿಸಿ ಬಿಡುತ್ತಾರೆ. ಹೀಗೆ ಕಳಿಸಿದ ಜೇನುಗಳು ಇದುವರೆಗೂ ಒಂದು ಸಾರಿಯಾದರೂ ಗುರಿ ತಪ್ಪಿಲ್ಲವಂತೆ.

ಭಾರತದಲ್ಲಿ ೧೯೪೩ ನೇ ಆಗಸ್ಟ್ ೩೧ ನೇ ತಾರೀಖಿನವರೆಗೆ ೬೦,೦೦೦ ಜನ ಬಂಧನದಲ್ಲಿದ್ದರೆಂದು ಮಿ॥ ಆಮೆರಿ ಅವರು ಕಾಮನ್ಸ್ ಸಭೆಯಲ್ಲಿ ತಿಳಿಸಿದ್ದಾರೆ.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್, ಮೈಸೂರು

೧೯೪೩ ನೇ ಸೆಪ್ಟೆಂಬರ್ ಮಾಹೆ ೧೮ ರಲ್ಲಿ ಮೈಸೂರು ಸಿಟಿ ಕೋ-ಆಪರೇಟಿವ್ಸ್ ಹೋಂಸ್‌ನಲ್ಲಿ ನಡೆದ ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್ಡಿನ ೨೩ ನೆಯ ವಾರ್ಷಿಕ ಅಧಿವೇಶನಕ್ಕೆ ಅಧ್ಯಕ್ಷರಾಗಿದ್ದ ಷೇರುದಾರರ ಸಮ್ಮುಖದಲ್ಲಿ ಮಿಲ್ಲಿನ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರು ಆದ ಶ್ರೀಮಾನ್ ಎಂ. ಎಸ್. ರಾಮಚಂದ್ರರಾಯರು ಮಾಡಿದ ಭಾಷಣ

ಮಹಾಶಯರೇ,

ಇದೇ ವರ್ಷದ ಮಾರ್ಚಿಯಲ್ಲಿ ನಡೆದ ವಾರ್ಷಿಕ ಅಧಿವೇಶನದನಂತರ ಪುನಃ ಇನ್ನು ಶೀಘ್ರವಾಗಿ ಕರೆಸಿರುವ ಈ ಸಭೆಗೆ ಆಗಮಿಸಿರುವ ತಮ್ಮೆಲ್ಲರನ್ನು ಸ್ವಾಗತಿಸಲು ನಿಮ್ಮ ಡೈರೆಕ್ಟರುಗಳು ಸಂತೋಷಿಸುತ್ತಾರೆ.

ಸರ್ಕಾರದವರು ಇದೇ ಜುಲೈ ತಿಂಗಳಿಂದ ಜಾರಿಗೆ ತಂದಿರುವ ಹತೋಟಿಯು ಪೂರೈಸಿಯುವ ಈ ಕೈಗಾರಿಕೆಯ ಮೇಲೆ ಸಮಸ್ತ ಗುರುತ್ವ ಬಂದ. ನವೀನ ರೀತಿಗಳಲ್ಲಿ ಕಾಲಿಟ್ಟಂತೆ ಆಗಿದೆ. ಇದಕ್ಕೋಸ್ಕರವೂ ಮತ್ತು ಸರ್ಕಾರದಿಂದ ಲೆಕ್ಕದ ವರ್ಷಕ್ಕೆ ಸಂಯೋಗವಾಗುವಂತೆ ಕಂಪನಿಯ ಲೆಕ್ಕಗಳನ್ನು ಇಡುವುದರಿಂದ ಆಗುವ ಇತರ ಅನುಕೂಲಗಳಿಗೋಸ್ಕರವೂ, 1-1-43 ರಿಂದ 30-6-43 ರ ವರೆಗಿನ 6 ತಿಂಗಳ ಕಾರ್ಯಭಾಗವನ್ನು ಪ್ರತ್ಯೇಕ ವರ್ಷವಾಗಿ ಪರಿಗಣಿಸಲಾಗಿದೆ.

ಈ ಅವಧಿಯ ಸಂಸ್ಥೆಯ ಕಂಪನಿಯ ಲೆಕ್ಕಗಳು ಈಗಾಗಲೇ ತಮ್ಮ ಅವಗಾಹನೆಗೆ ತರಲ್ಪಟ್ಟಿವೆ. ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಅದಕ್ಕೆ ಲಗತ್ತಿಸಿರುವ ವರದಿಗಳಿಂದ ಖಚಿತವಾಗುವ ಕಾರ್ಯಭಾಗದ ಚಟುವಟಿಕೆ ತಮಗೆ ಸಂತೋಷವನ್ನು ಉಂಟುಮಾಡಲಿ ಇದೆಂದು ನಿಮ್ಮ ಡೈರೆಕ್ಟರುಗಳು ನಂಬುತ್ತಾರೆ. ಈ ತೃಪ್ತಿಕರವಾದ ಫಲಿತಾಂಶಗಳು ಸ್ವಲ್ಪ ಮಟ್ಟಿಗೆ ಈ ಆರು ತಿಂಗಳಿನಲ್ಲಿಂಟಾದ ಅನುಕೂಲ ಪರಿಸ್ಥಿತಿಗಳ ಸಂಬಂಧಿಸಿದ್ದರೂ, ಮುಖ್ಯವಾಗಿ ಕೆಲವು ವರ್ಷಗಳಲ್ಲಿ ಮಾಡಿರುವ ಆರ್ಥಿಕ ವ್ಯವಸ್ಥೆ ಮತ್ತು ಎಲ್ಲಾ ಭಾಗಗಳಲ್ಲಿಯೂ ಉಪಯೋಗಿಸಿರುವ ವಿಶೇಷ ಜಾಗರೂಕತೆ, ಇವುಗಳಿಂದಲೇ ಉಂಟಾಗಿದೆ ಎಂದು ನಿಮ್ಮ ಡೈರೆಕ್ಟರುಗಳು ತಿಳಿಸಲು ಬಯಸುತ್ತಾರೆ.

ಈ ಕಾರ್ಯಭಾಗದಲ್ಲಿ ಸಿಕ್ಕಿರುವ ಲಾಭದ ವಿನಿಯೋಗದ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಪ್ರತ್ಯಕ್ಷ ಸಾಲದ ಮತ್ತು ಹಿಂದಿನ ಸಾಲಗಳ ಬಾಕಿಗಳನ್ನು ಸಂಪೂರ್ಣ ಪ್ರಯತ್ನಿಸಿಯೂ, ಪರಿಪೂರ್ಣ ಮತ್ತು "ವಾರ್ ಡಿಬೆಂಚರ್‌"ಗಳಿಗಾಗಿ ತೆಗೆದಿಟ್ಟ ಪವಿತ್ರವಾಗಿ ಹಣವನ್ನು ಹೆಚ್ಚಿಸಿ ಪರಿಸಲು ತೀರ್ಮಾನಿಸಿದ್ದೇವೆ. 1913 ನೇ ಇಸವಿ ಅಕ್ಟೋಬರಿನ ಕಂಪನಿಯ ಸ್ಥಿರಾಸ್ತಿಗಳ ಪುನರುದ್ಧರಕ್ಕಾಗಿ ಸಂಪೂರ್ಣವಾಗಿ ತೆಗೆದಿರಲು ಕೊನೆಗೆ ಸಾಧ್ಯವಾಯಿತೆಂಬ ವಿಷಯವನ್ನು ನಿಮ್ಮ ಗಮನಕ್ಕೆ ತರಬೇಕಾಗಿದೆ.

ಈ ಸಾಲದಲ್ಲಿ ಹೋದರೂ ಅಭಿವೃದ್ಧಿ ಸುವ ಅನೇಕ ನಿಧಿಗಳಿಗಾಗಿ ವಿಶೇಷವಾಗಿ ತೆಗೆದಿಟ್ಟಿರುವ ನಮ್ಮ ಆಸ್ತಿಗಳು ಸವೆದು ಹೋಗುವುದಕ್ಕೆ ಸೂಕ್ತವಾಗಿರುವುದಕ್ಕಿಂತ ಕೆಲವು ವರ್ಷಗಳ ಹಿಂದಿನ ಸರಕಾರದವರ ಸುವ್ಯವಸ್ಥೆಯ ನಿಮಿತ್ತ ಹೆಚ್ಚುವರಿಯಾಗಿ ಯಂತ್ರೀಕರಣಗ ಳ ವಿಶೇಷ ತರದ ಬದಲಾವಣೆಗಳಿಗಾಗಿ ನಿಧಿಗಳನ್ನು ಏರ್ಪಡಿಸಬೇಕಾದಲ್ಲಿ ಸದರಿ ಯಂತ್ರಗಳ ಬದಲಾವಣೆಗೆ ಈಗಿರುವ ಬೆಲೆಗಿಂತ ಯುದ್ಧಾನಂತರ ಅವುಗಳಿಗೆ ಕೊಡಬೇಕಾಗುವ ಬೆಲೆಯನ್ನೇ ಆಧಾರವಾಗಿಟ್ಟುಕೊಳ್ಳಬೇಕೆಂಬುದು ಎಲ್ಲರೂ ಒಪ್ಪತಕ್ಕ ವಿಷಯವೇ ಆಗಿದೆ. ಯುದ್ಧಾನಂತರ ಯಂತ್ರೋಪಕರಣಗಳ ಬದಲಾವಣೆ ಖರ್ಚು ವಿಪರೀತ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ನಾವು ಸಾಮಾನ್ಯ ರೀತಿಯಲ್ಲಿ ಈ ಉದ್ದೇಶಗಳಿಗಾಗಿ ತೆಗೆದಿಡುತ್ತಿರುವ ಹಣ ಸ್ವಲ್ಪವೂ ಸಾಲುವುದಿಲ್ಲ. ಈಗಿನ ತಯಾರಿಕೆಯ ಪರಿಮಾಣವನ್ನು ಏಕರೀತಿ ಯಲ್ಲಿಟ್ಟು ಎಲ್ಲಾ ವಿಧದಲ್ಲೂ ಉತ್ತಮಗೊಳಿಸಲು ಬೇಕಾಗುವ ನೊಬಲಗು ನಮ್ಮ ನಷ್ಟದಿಂದ ತೆಗೆಯಬೇಕಾದ ಬಹು ಮುಖ್ಯವಾದ ಮತ್ತು ಪ್ರಥಮ ಖರ್ಚು ಎಂದು ನಿಮ್ಮ ಡೈರೆಕ್ಟರುಗಳು ತಿಳಿಯುತ್ತಾರೆ ಮತ್ತು ಈಗ ಅನುಸರಿಸಿರುವ ನೀತಿಯನ್ನು ನೀವು ಸಂಪೂರ್ಣವಾಗಿ ಅನುಮೋದಿಸುತ್ತೀರೆಂದು ನಂಬುತ್ತಾರೆ. ನಿಧಿಗಳನ್ನು ಸ್ಥಾಪಿಸಲು ನಿಮ್ಮ ಡೈರೆಕ್ಟರುಗಳು ಅನುಸರಿಸಿರುವ ನೀತಿಯು ನಮ್ಮ ಘನ ಸರ್ಕಾರದಿಂದಲೂ ಮನ್ನಣೆಯನ್ನು ಪಡೆದಿದೆಯೆಂಬುದು ಇದೇ ಆಗಸ್ಟ್ 25 ರಲ್ಲಿ ನಡೆದ ಆರ್ಥಿಕ ಅಧಿವೇಶನದ ಸ್ಥಾಯಿ ಸಮಿತಿಯಲ್ಲಿ ನಮ್ಮ ದಿವಾನರವರು ಮಾಡಿದ ಭಾಷಣದಿಂದ ಇಲ್ಲಿ ಉದ್ಧರಿಸಿರುವ ಈ ಕೆಳಕಂಡ ವಾಕ್ಯಗಳಿಂದ ನೋಡಬಹುದು:—

"ಯುದ್ಧದ ಕರಬಾಜು ಮಾಡುವುದು ಹಿಂತ ಕೂಡಲೇ ನಾವು ಕಷ್ಟ ಕಾಲಗಳನ್ನು ಎದುರಿಸಬೇಕಾಗುತ್ತದೆ ಮತ್ತು ಇಂಥಾ ಪರಿಸ್ಥಿತಿಗೆ ನಾವು ಸಿದ್ಧರಾಗಿರಲೇಬೇಕು. ಈ ವಿಷಯದಲ್ಲಿ ಸರ್ಕಾರದ ಪೋಷಣೆಕೊಂಡಿರುವ ಮತ್ತು ಇತರ ಕಂಪೆನಿಗಳು ತಮ್ಮ ಮಿಗತೆ ಕಾಲದ ಲಾಭದಲ್ಲಿ ನಿಧಿಗಳನ್ನು ಸ್ಥಾಪಿಸುತ್ತಿರುವ ರೀತಿಯು ಸ್ತುತ್ಯಾರ್ಹವಾಗಿದೆ. ಇದು 'ಅಧಿಕ ಬೆಲೆಯು'ನ್ನು ನಿರೋಧಿಸುವ ಸ್ವಯಂಕೃತ ಮಾರ್ಗವಾಗುವುದಲ್ಲದೇ ಅಲ್ಲದೆ ಈಗ ಯಂತ್ರಗಳು ಸಾಮಾನ್ಯವಾಗಿ ಬೇಕಾಗುವ ಸಾಮಾನುಗಳ ಅಭಾವದಿಂದ ಹೆಚ್ಚಾಗಿ ಸವೆದುಹೋಗುವ ಯಂತ್ರೋಪಕರಣಗಳನ್ನು ಯುದ್ಧಾನಂತರ ಬದಲಾಯಿಸಲು ಕಂಪೆನಿಗೆ ನೆರವಾಗುತ್ತದೆ".

ಈ ಆರು ತಿಂಗಳಲ್ಲಾದ ಲಾಭಕ್ಕೆ ಅನುಗುಣವಾಗಿಲ್ಲದೆ ಕಡಿಮೆಯಾದ ಡಿವಿಡೆಂಡನ್ನು ಒಪ್ಪಿಕೊಳ್ಳುವಂತೆ ಷೇರುದಾರರಲ್ಲಿ ಸೂಚಿಸುತ್ತಿರುವುದು ನಿಮ್ಮ ಡೈರೆಕ್ಟರುಗಳ ಗಮನದಲ್ಲಿದೆ. ಆದರೆ, ಮುಂದೆ ಬರಬಹುದಾದ ಎಲ್ಲಾ ಸಂಗತಿಗಳನ್ನು ಎದುರಿಸಲು ತಕ್ಕ ನಿಧಿಗಳನ್ನು ಏರ್ಪಡಿಸುವುದಕ್ಕೂ, ಅಲ್ಲದೆ ಕಂಪನಿಯ ಆರ್ಥಿಕ ಸ್ಥಿತಿಯನ್ನು ಭದ್ರಗೊಳಿಸಿ ಪಡೆಯುವುದಕ್ಕೂ ಈ ರೀತಿಯಾದ ಲಾಭವು ಬರುವಂತೆ ಮಾಡಿದ ಉದ್ದೇಶದಿಂದ ನಾವು ಹೀಗೆ ಮಾಡುತ್ತೇವೆ. ಸ್ವರ್ಣ ಪರಿಪೂರ್ಣವಾದ ಕಲ್ಪನೆಗಳನ್ನು ತಾತ್ಕಾಲಿಕ ಅನುಕೂಲಕ್ಕೋಸ್ಕರ ಕಡಿಯುವ ಬದಲು ಅನೇಕಾಲವೂ ಪ್ರತಿಫಲವನ್ನು ಕೊಡುವಂತೆ ಅದನ್ನು ಚೆನ್ನಾಗಿ ಪೋಷಿಸಿಕೊಂಡು ಬರುವುದು ಸಾಧು ಎಂಬುದನ್ನು ನೀವು ಒಪ್ಪತಕ್ಕ ಮಾತಾಗಿದೆ. ಈಗಿನ ಅಸಾಧಾರಣ ಸಮಯದಲ್ಲಿ ನಮ್ಮ ಪ್ರತಿಯೊಂದು ಉದ್ದೇಶವನ್ನು ಮತ್ತು ಕಾರ್ಯಕ್ರಮವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಸರ್ಕಾರದವರು ಮತ್ತು ಜನಸಾಮಾನ್ಯರು ಪರಿಶೀಲಿಸುತ್ತಿದ್ದಾರೆಂಬುದನ್ನು ನಾವು ಮರೆಯಬಾರದಾಗಿಲ್ಲ. ಲಾಭ ಪಡೆಯಬೇಕೆಂಬ ಉದ್ದೇಶದಲ್ಲಿ, ಅಂದರೆ ನಾವು ಹಾಕಿರುವ ಬಂಡವಾಳ ಮತ್ತು ಇಂಥ ಕಾಲದಷ್ಟು ನೊಬಲಗಳನ್ನು ತೆಗೆದಿಟ್ಟನಂತರ ಲೆಕ್ಕದಲ್ಲಿ ನಿಂತ ಆಸ್ತಿಗಳ ನೊಬಲಿಗಿಗೆ ಅಂದರೆ ೯೩ ಲಕ್ಷ ರೂ. ಗಳಿಗೆ ಶೇ ಮಾಡು ಸಂಯೋಗವುವಂತೆ ನಿಧಿಗಳನ್ನು ಅಂದರೆ ೧೩ ಲಕ್ಷ ರೂ. ಗಳನ್ನು ಈಗ ಸ್ಥಾಪಿಸಿರುತ್ತೇವೆ. ಹಾಲಿ ವರ್ಷದಲ್ಲಿ ಈ ನಿಧಿಗಳಿಗೆ ಮತ್ತಷ್ಟು ನೊಬಲಗುಗಳನ್ನು ಸೇರಿಸಿ ವಸೂಲಾದ ಬಂಡವಾಳದ ಅಂದರೆ ೧೮ ಲಕ್ಷ ರೂ ಗಳ ಮಟ್ಟಕ್ಕೆ ತರಲು ಸಾಧ್ಯವಾಗುವುದೆಂದು ನಂಬಿದ್ದೇವೆ. ಆಗ ಕಂಪೆನಿಯ ಆರ್ಥಿಕ ಸ್ಥಿತಿಯು ಮತ್ತಷ್ಟು ಉತ್ತಮಗೊಳ್ಳುವುದು. ಈ ಕೆಳಗೆ ತೋರಿಸುವ ಆಸ್ತಿ ಮತ್ತು ಜವಾಬ್ದಾರಿ ಪಟ್ಟಿಯ ಅಂಕಿಗಳು ನಿಮಗೆ ಭರವಸೆಯನ್ನು ಕೊಡುತ್ತವೆಯೆಂದು ನಿಮ್ಮ ಡೈರೆಕ್ಟರುಗಳು ನಂಬುತ್ತಾರೆ:—

	೩೧-೧೨-೪೧	೩೧-೧೨-೪೨	೩೦-೬-೪೩
ಆಸ್ತಿಗಳು	ರೂ. ೩೨,೫೧,೧೭೯	ರೂ. ೩೭,೬೫,೬೬೬	ರೂ. ೫೫,೨೫,೧೫೬
ಜವಾಬ್ದಾರಿ	" ೩೧,೮೫,೫೩೩	" ೫೧,೭೦,೫೭೭	" ೫೩,೪೫,೭೯೯
ನಿವ್ವಳ ಬೆಲೆ	" ೨,೬೫,೬೪೬	" ೧೫,೯೫,೦೯೯	" ೩೧,೭೯,೪೪೦
	" ೩೨,೫೧,೧೭೯	" ೩೭,೬೫,೬೬೬	" ೫೫,೨೫,೧೫೬

ಉದ್ಯಮದಲ್ಲಿರುವ ಲಾಭ ನಷ್ಟಗಳಿಗೆ ಅನುಗುಣವಾಗಿ ಪ್ರತಿಫಲವನ್ನು ಅಪೇಕ್ಷಿಸುವುದರಲ್ಲಿ ತಪ್ಪೇನೂ ಇಲ್ಲದಿದ್ದರೂ, ಸಮಾಜ ವಿರೋಧವೆನಿಸುವ ಅಧಿಕ ಲಾಭ ಪಡೆಯಲು ಎತ್ತಿಸಿದರೆಂಬ ಆಕ್ಷೇಪಣೆಗೆ ಎಡೆಗೊಡದಂತೆ ನಾವು ಜಾಗರೂಕತೆಯಿಂದಿರಬೇಕಾಗಿದೆ. ಆದ್ದರಿಂದ ಹೆಚ್ಚಾಗಿ ಬಂದ ಲಾಭವನ್ನು ಈ ಕೈಗಾರಿಕೆಯ ಅನುಕೂಲಕ್ಕೆ ಬಿಟ್ಟುಬಿಡುವುದೊಂದೇ ನಮಗೆ ಮಾರ್ಗ. ಅಲ್ಲದೆ ನಮ್ಮ ಕಂಪೆನಿಯ ವಿಚಾರದಲ್ಲಿ ನಮಗೆ ಬರುವ ಆದಾಯವೆಲ್ಲವನ್ನು ಅದನ್ನು ಮಟ್ಟಿಗೆ ಕಾದಿಡಬೇಕಾದ ಮತ್ತೊಂದು ಮುಖ್ಯ ಕಾರಣವುಂಟು. ಅದೇನೆಂದರೆ ಈ ಉದ್ಯಮವನ್ನು ೨೦ ವರ್ಷಗಳ ಹಿಂದೆ ಸ್ಥಾಪಿಸಿ ಈವರೆಗೆ ನಡೆಸಿಕೊಂಡು ಬರುವುದರಲ್ಲಿ ವಿಶೇಷ ನಷ್ಟವನ್ನು ಹೊಂದಿರುತ್ತೇವೆ ಮತ್ತು ಸಾಲ ತಂದ ಹಣದಿಂದ ಮಾತ್ರನೇ ಕಾರ್ಯವನ್ನು ನಡೆಸಲು ಸಾಧ್ಯವಾಗಿದ್ದು ಸದರಿ ಹಣಕ್ಕೆ ಬಡ್ಡಿ ರೂಪದಲ್ಲಿ ಬಹಳ ದ್ರವ್ಯವನ್ನು ಕೊಟ್ಟಿರುತ್ತೇವೆ. ನಮ್ಮ ಕಂಪೆನಿಯನ್ನು ಸ್ವಸಂಪೂರ್ಣವನ್ನಾಗಿ ಮಾಡಲು ಒದಗಿರುವ ಇಂಥಾ ಅನುಕೂಲವಾದ ಸಮಯವನ್ನು ನಾವು ಸರಿಯಾಗಿ ಉಪಯೋಗಿಸಿಕೊಳ್ಳದಿರುವುದು ಸೂಕ್ತವಲ್ಲ.

ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಇವರಲ್ಲಿರುವ ನಮ್ಮ ಕ್ಯಾಷ್ ಕ್ರೆಡಿಟ್ ಲೆಕ್ಕದಲ್ಲಿ ಪಡೆದಿರುವ ಸಾಲವನ್ನು ಈಗ ೧ ಲಕ್ಷರೂ. ಗಳಿಗೆ ಇಳಿಸಿರುವುದನ್ನು ಈ ಸಂದರ್ಭದಲ್ಲಿ ತಮಗೆ ತಿಳಿಸಲು ನಿಮ್ಮ ಡೈರೆಕ್ಟರುಗಳು ಸಂತೋಷಿಸುತ್ತಾರೆ. ಇದಲ್ಲದೆ ಮೈಸೂರು ಸರ್ಕಾರದ ಫಿಕ್ಸೆಡ್ ಡಿಪಾಜಿಟ್ಟಿನಲ್ಲಿ ಒಂದು ಲಕ್ಷ ರೂ. ಗಳನ್ನು ಇಡಲು ಸಾಧ್ಯವಾಗಿದೆ. ನಮ್ಮ ಕಂಪೆನಿಯ ಹಣಕಾಸಿನ ಸ್ಥಿತಿಯು ತೃಪ್ತಿಕರವಾಗಿದೆಯೆಂಬ ಅಂಶವು ಇವುಗಳಿಂದ ವ್ಯಕ್ತವಾಗುತ್ತದೆ. ನಮ್ಮ ಆಸ್ತಿಗಳ ಪುನರುದ್ಧಾರ ... ೧೯೪೦ರ ವರೆಗೆ ತೆಗೆದಿಡಬೇ ೧೯೪೧ರಲ್ಲಿ ನಿವ್ವಳ ಆಸ್ತಿಗಳ ಬೆಲೆಯು ಕೇವಲ ರೂ. ೩೨,೦೦೦ ಗಳಷ್ಟು ಮಾತ್ರ ಇದ್ದದ್ದು ೧೮ ತಿಂಗಳ ನಂತರ ಅಂದರೆ ೧೯೪೩ ನೇ ಜೂನ್ ೩೦ ರಲ್ಲಿ ೩೦ ಲಕ್ಷ ರೂಗಳಿಗೆ ಏರಿರುವುದನ್ನು ಮೇಲ್ಕಂಡ ಅಂಕಿಗಳಿಂದ ನೋಡಬಹುದು.

ಈ ಮೊದಲೇ ತಿಳಿಸಿರುವಂತೆ ಸರ್ಕಾರವು ಹತ್ತಿ ಕೈಗಾರಿಕೆಯ ಮೇಲೆ ಸಂಪೂರ್ಣ ಹತೋಟಿಯನ್ನು ಜಾರಿಗೆ ತಂದಿರುತ್ತದೆ. ಹತ್ತಿ, ಬಟ್ಟೆ ಮತ್ತು ನೂಲಿನ ಬೆಲೆಯ ಸೋಲ್ಪಟ್ಟವನ್ನು ನಿರ್ಣಯಿಸಿರುವುದಲ್ಲದೆ ಈ ಕೈಗಾರಿಕೆಯ ಯಂತ್ರೋಪಕರಣಗಳ ಇತ್ಯಾದಿಗಳ ಬೆಲೆಯನ್ನು ಸಹ ಹತೋಟಿಯಲ್ಲಿಡಲಾಗಿದೆ. ಹತ್ತಿ ಮತ್ತು ಅವರಿಂದ ತಯಾರಾದ ಸಾಮಾನು ಇವುಗಳ ಚಲನವಲನಗಳು ಸಹ ಕಟ್ಟುನಿಟ್ಟಿನಲ್ಲಿಡಲ್ಪಟ್ಟಿವೆ. ಹೀಗಿರುವಲ್ಲಿ ಇನ್ನು ಮುಂದೆ ಈ ಕೈಗಾರಿಕೆಯಿಂದ ಪ್ರತಿಫಲವು ಈ ವರೆಗಿದ್ದಂತೆ ಅನುಕೂಲವಾದ ಮಟ್ಟದಲ್ಲೇ ಇರುತ್ತದೆಯೆಂದು ನಿರೀಕ್ಷಿಸಲು ಸಾಧ್ಯವಿಲ್ಲ. ಆದರೂ ಮಿಲ್ಲಿನ ತಯಾರಿಕೆಯನ್ನು ಅದಷ್ಟು ಉತ್ತಮಸ್ಥಿತಿಯಲ್ಲಿಟ್ಟು, ಮಿಲ್ಲಿನ ಕೆಲಸಗಾರರೆಲ್ಲರಿಗೂ ಸರಿಯಾದ ಪ್ರತಿಫಲದ್ರವ್ಯವನ್ನು ಕೊಡುವುದಕ್ಕೂ ಮತ್ತು ನೇರದಾರರಿಗೆ ಅವರ ಬಂಡವಾಳದ ಮೇಲೆ ಸೂಕ್ತವಾದ ಲಾಭವನ್ನು ಸಹ ದೊರಕಿಸಿಕೊಡಲು ಎಲ್ಲಾ ಕಾರ್ಯಗಳನ್ನೂ ಮಾಡುವುದಾಗಿ ನಿಮ್ಮ ಡೈರೆಕ್ಟರುಗಳು ಭರವಸೆ ಕೊಡುತ್ತಾರೆ.

ಕಂಪೆನಿಯ ಕೆಲಸಗಾರರ ಅನುಕೂಲಕ್ಕೋಸ್ಕರ ಮ್ಯಾನೇಜುಮೆಂಟಿನವರು ಈ ವರೆಗೆ ಮಾಡಿರುವ ಅನೇಕವಾದ ಸೌಕರ್ಯದ ಏರ್ಪಾಟುಗಳನ್ನು ಹಿಂದೆಯೇ ತಮಗೆ ಅರಿಕೆಮಾಡಿರುತ್ತೆ. ಇವುಗಳ ಜೊತೆಗೆ ಕಷ್ಟಕಾಲದಲ್ಲಿ ಕೆಲಸಗಾರರಿಗೆ ಆಹಾರ ಪದಾರ್ಥಗಳನ್ನು ಮತ್ತು ಬಟ್ಟೆಯನ್ನು ನ್ಯಾಯ ಬೆಲೆಯಲ್ಲಿ ಒದಗಿಸಲು ವಿಶೇಷ ಗಮನ ಕೊಡಲಾಗಿದೆ. ಸರ್ಕಾರದಿಂದ ಆಹಾ

...ತ್ತು ೦.ಗಿಗೆ ನಿಗದಿಯಾದ ಬೆಲೆಗೆ ಅಂ ...ಯಾಗೆ ೩॥ ಸೇರು ಅಕ್ಕಿ ಮತ್ತು ...ಸೇರು ರಾಗಿಗೆ ಬದಲು ಮಿಲ್ಲಿನ ಮ್ಯಾ ನೇಜಮೆಂಟಿನವರು ೪॥ ಸೇರು ಅಕ್ಕಿ ಮ ...ಳ ಸೇರು ರಾಗಿಯಂತೆ ಮಾರಲು ಏ ರ್ಪಡಿಸಿರುತ್ತಾರೆ. ಮೇಲೆ ಹೇಳಿರುವ ಅ ನುಕೂಲ ಸೌಕರ್ಯಗಳಿಂದ ಸಾಧ್ಯವಾದಷ್ಟು ಪರಮಾ ನ್ನು ಸಂಪಾದಿಸಲು ನಮ್ಮ ಕೆಲಸಗಾರ ರು ಬೇಕಾದಷ್ಟು ಅವಕಾಶವಿರುತ್ತದೆ, ...ತ್ತು ಈ ಅವಕಾಶವನ್ನು ಅವರು ಸಂ ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾ ...ದೆ. ನಮ್ಮ ಕೆಲಸಗಾರರ ಸ್ಥಿತಿ ಬಹು ...ವಿಗೆ ಮಿಲ್ಲಿನ ಸಮೀಪದಲ್ಲಿ ಆರೋಗ್ಯ ...ನಿಯಮಗಳನ್ನು ಅನುಸರಿಸಿ ವಸತಿಗೃಹಗ ...ನ್ನು ಕಟ್ಟಿಸಲು ಮ್ಯಾನೇಜ್‌ಮೆಂಟಿನವ ...ರು ಏರ್ಪಾಡುಮಾಡುತ್ತಿದ್ದಾರೆ ಅಲ್ಲದೆ ಈ ...ರ್ಷ ವರ್ಷಕ್ಕೆ ವಿಶೇಷತರ ಯುದ್ಧನಿಮಿ ...ತ್ತ ಬೋನಸ್ಸನ್ನು ಕೊಡಲಾಗಿದೆ. ಮಿಲ್ಲಿನ ...ಜೀವಿತ ಸ್ಥಿತಿಯು ಅವರ ಕೆಲಸಗಾರರ ...ಭಿವೃದ್ಧಿಯಮೇಲೆ ನಿಂತಿದೆಯೆಂಬು ...ದನ್ನು ಮ್ಯಾನೇಜ್‌ಮೆಂಟಿನವರು ಮನ ...ಸ್ಸು ಕೆಲಸಗಾರರ ಹಿತಚಿಂತನ ಮತ್ತು ...ಕರ್ಯ ಇವುಗಳ ಪ್ರತಿಯೊಂದು ವಿಚಾರ ...ದ ಸಹಾನುಭೂತಿಯಿಂದ ಕೂಡಿದ ...ನಿರತರವಾದ ಆಸಕ್ತಿಯನ್ನು ಸದಾ ...ವಹಿಸುತ್ತಿರುತ್ತಾರೆ.

ಮಿಲ್ಲಿನ ಸಿಬ್ಬಂದಿ, ಕೆಲಸಗಾರರುಮತ್ತು ...ಗೆ ಸಂಬಂಧಿಸಿದಇತರರೂ ಮಿಲ್ಲಿನ ಕಾ ...ರ್ಯಗಳಲ್ಲಿ ವಿಶೇಷ ಶ್ರದ್ಧೆ ಮತ್ತು ಆ ...ಸಕ್ತಿಯಿಂದ ಕೆಲಸ ಮಾಡಿರುವುದು ಪ್ರಶಂ ...ಸಾರ್ಹವಾಗಿದೆ. ಮಿಲ್ಲಿನ ಅತ್ಯಂತ ವ್ಯಸ್ತ ...ಕಾಲದಲ್ಲಿ ನೆರವಾಗಿ ನಿಂತು ಸಹಾ ...ಯ ಮಾಡಿ ಅವರ ರಕ್ಷಣೆಯ ಭಾರವನ್ನು ...ಹೊತ್ತಾಗಿನಿಂದಲೂ ವಿಶಿಷ್ಟವಾಗಿ ...ವಹಿಸುತ್ತಿರುವ ಸಹಾನುಭೂತಿಗಾಗಿ ಸ ...ರ್ಕಾರದ ಮೈಸೂರು ಸರ್ಕಾರದವರಿಗೆ ಸ ...ದಾ ಕೃತಜ್ಞತಾಪೂರ್ವಕವಾದ ಅನಂತಾ ...ನೇಕ ವಂದನೆಗಳು ಸಲಬೇಕಾಗಿದೆ.

ಯುಗೋಸ್ಲೋವಿಯಾ ಸೈನಿಕರ ಜಯ

ಯುಗೋಸ್ಲೋವಿಯಾ ಲಿಬರೇಷನ್ ಸೈ ...ರ ಸ್ಥಾನವಾದ ಸಿಪ್ಲಿಟ್ ಪ್ರದೇಶದ ...ರನವರು ಹೆಚ್ಚಾಗಿ ಟ್ಯಾಂಕುಗಳೊ ...ದನೆ ಬಂದ ಧಾಳಿಯನ್ನು ಹಿಂದಕ್ಕೆ ನೂ ...ಕಿ ನಾ ನದಿಯ ಕಡೆಗೆ ಓಡಿಸಲಾಯಿ ...ತು. ೩೦೦ ಜರ್ಮನ್ ಸೈನಿಕರು ಮಡಿ ...ದರೆಂದು ವರದಿಯಾಗಿದೆ.

ಪುಷ್ಟಿ ಮತ್ತು ಶಕ್ತಿವರ್ಧಕ

[illegible] ಮಾತ್ರೆಗಳು

ನರ, ದುರ್ಬಲತೆ, ವೀರ್ಯಸ್ಖಲನ ...ರ ಮೊದಲಾದುವನ್ನು ಶೀಘ್ರ ...ಪಡಿಸಿ ರಕ್ತ ಮತ್ತು ವೀರ್ಯಗಳ ...ನ್ನು ಹೆಚ್ಚಿಸಿ, ದೇಹಶಕ್ತಿ, ಸ್ಫೂ ...ರ್ತಿಗಳನ್ನು ಕೊಡುತ್ತದೆ ಕ್ರಯ ...ಗಳ ಪೆಟ್ಟಿಗೆ 1ಕ್ಕೆ ರೂ 1.

ಸನುಂಜರಿ ಫಾರ್ಮಸಿ, ನಾ ಬಜ ಬಿ.ರಸ್ತೆ, ಮದರಾಸು

ಆರೋಗ್ಯ ಫಾರ್ಮಸಿ, ಬ್ಯಾಂಕ ರಸ್ತೆ, ಮೈಸೂರು

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ॥ ೨೭-೯-೪೩ ರಿಂದ ೩-೧೦-೪೩ರ ವರೆಗೆ

ಮೇಷ... ಆರೋಗ್ಯಸ್ಥಿತಿ ಚೆನ್ನಾಗಿರುತ್ತೆ. ಮಾನಸಿಕ ಸ್ಥಿತಿ ಉತ್ತಮ, ಆರ್ಥಿಕ ಸ್ಥಿತಿ ಅನುಕೂಲವಾಗಿರುವುದರಿಂದ ಕಾರ್ಯ ಸಿದ್ಧಿ, ಆದರೆ ಆತ್ಮಪ್ರಶಂಸೆ ಬೇಡ, ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಲಾಭ. ತಾ॥ ೨೮, ೨೯ ವ್ಯರ್ಥ ಯೋಚನೆ.

ವೃಷಭ.. ಈ ವಾರ ನೀವು ಎಚ್ಚರಿಕೆಯಿಂದಿರಿ, ಖರ್ಚು ಜಾಸ್ತಿ, ವ್ಯಾಪಾರಾದಿಗಳಲ್ಲಿ ಹಾನಿ, ಆರೋಗ್ಯ ಸಾಧಾರಣವಾಗಿರುತ್ತದೆ, ತಾ॥ ೨೭, ೨೮ ಖರ್ಚು, ಕಲಹ.

ಮಿಥುನ ಅನವಶ್ಯಕವಾದ ಕೆಲಸದಲ್ಲಿ ಕೈಹಾಕಿ ಅಪಜಯ ಹೊಂದುವಿರಿ, ಕೆಲಸದಲ್ಲಿ ಹಾನಿ, ವಾಹನ, ಅಗ್ನಿಯಿಂದ ಅಪಾಯದ ಸಂಭವ ಇದೆ. ದ್ರವ್ಯ ನಷ್ಟ. ತಾ॥ ೨೮, ೨೯, ೩೦ ಹಾನಿ, ಕಷ್ಟ.

ಕರ್ಕ... ಕಾರ್ಯ ವಿಘ್ನ, ಆರೋಗ್ಯ ಆರ್ಥಿಕ ಸ್ಥಿತಿ ಮಧ್ಯಮ. ವ್ಯಾಪಾರ, ಉದ್ಯೋಗದಲ್ಲಿ ಯಶಸ್ಸು. ವಿದ್ಯಾಭ್ಯಾಸದಲ್ಲಿ ವ್ಯತ್ಯಯ ತಾ॥ ೧, ೨ ಅಪಮಾನ.

ಸಿಂಹ ಸುಪ್ರಸನ್ನ ಕಳತ್ರ ಫಲವಿಲ್ಲ, ಆರ್ಥಿಕ ಸ್ಥಿತಿ, ವ್ಯಾಪಾರ, ಉದ್ಯೋಗ ಮತ್ತು ನೌಕರಿಗಳಲ್ಲಿ ಉತ್ತಮವಾಗಿದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರಗತಿ. ತಾ॥ ೧, ೨ ಲಾಭ.

ಕನ್ಯಾ ಆರೋಗ್ಯ ಸ್ಥಿತಿ ಉತ್ತಮ. ಅಪವಾದ ದೂರವಾಗುವುದು. ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಉತ್ತಮ, ತಾ॥ ೨೯, ೩೦ ಖರ್ಚು.

ತುಲ... ಆರೋಗ್ಯದ ಕಡೆ ಲಕ್ಷ್ಯವಿರಲಿ. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಹಾನಿಯಾಗುವ ಸಂಭವ, ಖರ್ಚು ಜಾಸ್ತಿ. ತಾ॥ ೨೮, ೨೯ ಚಿಂತೆ, ಕಷ್ಟ.

ವೃಶ್ಚಿಕ. ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ, ವಿಘ್ನ ಬಂದರೂ ಜಯ. ಉದ್ಯೋಗಾದಿಗಳಲ್ಲಿ ತೊಂದರೆ ತಾ॥ ೩೦ ಮಧ್ಯಮ.

ಧನುಸ್ಸು... ಶತ್ರುಗಳು ದೂರವಾಗುವರು ಆರೋಗ್ಯ, ಮಾನಸಿಕ, ಆರ್ಥಿಕ, ವ್ಯಾಪಾರ, ಉದ್ಯೋಗಗಳಲ್ಲಿ ಉತ್ತಮ. ತಾ॥ ೧೩ ಅನುಕೂಲ.

ಮಕರ.. ಆರೋಗ್ಯ ಸ್ಥಿತಿ ಉತ್ತಮ. ವ್ಯಾಪಾರ ಉದ್ಯೋಗಗಳಲ್ಲಿ ಜಯ. ಮಾನಸಿಕ ಪಾಕ್ಕ ಚೆನ್ನಾಗಿಲ್ಲ. ತಾ॥ ೨೮, ೨೯ ವಿಘ್ನ ಖರ್ಚು.

ಕುಂಭ ದೇಹಸ್ಥಿತಿಯು ಅನುಕೂಲವಿಲ್ಲ. ಸಂಸಾರ ತಾಪತ್ರಯ ಜಾಸ್ತಿ, ವ್ಯಾಪಾರ ಉದ್ಯೋಗಗಳಲ್ಲಿ ಹಾನಿ. ತಾ॥ ೨೭, ೨೮, ೩೦ ಖರ್ಚು, ಕಷ್ಟ.

ಮೀನ ಆರೋಗ್ಯ ಸ್ಥಿತಿ ಉತ್ತಮ.. ದ್ರವ್ಯಲಾಭ, ಸೌಖ್ಯ, ವ್ಯಾಪಾರ ವಿದ್ಯಾಭ್ಯಾಸದಲ್ಲಿ ಶ್ರೇಷ್ಠವಾಗಿದೆ. ಕಾರ್ಯಜಯ. ತಾ॥ ೧, ೨ ಖರ್ಚು ಜಾಸ್ತಿ, ಮನಸ್ಸಿಗೆ ತೊಂದರೆ.

ಫಿಲಿಪ್ಪೈನ್‌ಗೆ ಕೂಡಲೇ ಸ್ವಾತಂತ್ರ್ಯ ಕೊಡಲೇ ಕೊಡಬೇಕು

ಫಿಲಿಪ್ಪೈನ್ ದ್ವೀಪಕ್ಕೆ ತಕ್ಷಣ ಸ್ವಾತಂತ್ರ್ಯ ಕೊಡಬೇಕೆಂದು ಅಮೇರಿಕನ್ ಸೆನೆಟಿನ ದ ಟೈಡಿಂಗ್ಸ್‌ರವರು ಒಂದು ನಿರ್ಣಯ ತಂದಿದ್ದಾರೆ.

ನೂತನ ಪದವಿ

ಸರ್ ಜಾನ್ ಅಂಡರ್ಸನ್‌ರವರ ಬ್ರಿಟಿಷ್ ಖಜಾನೆಯ ಛಾನ್ಸಲರಾಗಿ ನೇಮಕಲಾಗಿದೆ.

ಆಕಾಶವಾಣಿ

೨೮ ನೇ ಮಂಗಳವಾರ

...೮-೩೦ ನಾಗಸ್ವರ ವಿದ್ವಾನ್ [illegible]

ಯುದ್ಧಾನಂತರದ ನಿಮ್ಮ ಧ್ಯೇಯಗಳೇನು?

ಯುದ್ಧಾನಂತರ ಅಂಗಡಿಗಳಲ್ಲಿ ಸಾಮಾನುಗಳು ಮತ್ತೆ ಯಾಗಿ ತುಂಬಿರುತ್ತವೆ, ಮತ್ತು ನ್ಯಾಯವಾದ ಬೆಲೆಗೆ ದೊರೆಯುತ್ತವೆ. ಯುದ್ಧಕಾಲದ ದುಂದುವೆಚ್ಚ ಮಾಡಿದವರು ಪಶ್ಚಾತ್ತಾಪ ಪಡಬೇಕಾಗುವುದು: ಏಕೆಂದರೆ ಯುದ್ಧಸಮಯದ ಖರೀದಿಗಳು ದುಪ್ಪಟ್ಟಾಯವೇ ಸರಿ, ಯುದ್ಧಾನಂತರದ ನಿಮ್ಮ ಬಾಬತ್ತಿನ ಯೋಜನೆಗಳನ್ನು ಪೂರೈಸಲು ಈಗನಿಂದಲೇ ಕೂಡಿಡಲು ಆರಂಭಿಸಿ. ಅತ್ಯಾವಶ್ಯಕವಾದವುಗಳಿಗೆ ಹಿನಹಾ ಉಳಿದ ಎಲ್ಲಾ ಖರ್ಚು ಬಾಬುಗಳನ್ನೂ ಜೋಪಾನಮಾಡಿ, ಹಣ್ಣು ಧಾರಣೆಗಳು ಏರುವ ವಿನಾಶ್ಯಾಗಿ ಕೂಡಿಡಿ.

ಮುಂಬರುವ ದಿನಗಳಿಗಾಗಿ ಕೂಡಿಡಿ

ನಿಮ್ಮ ಹಣವನ್ನು ಲಾಭ ತೋರುವಂತೆ ತೊಡಗಿಸಿ ಯುದ್ಧ ಮುಗಿಯುವವರೆಗೆ ನಿಮ್ಮ ಹಣವನ್ನು ಸುರಕ್ಷಿತವಾದ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್ ಮತ್ತು ಪೋಸ್ಟಾಫೀಸುಗಳಲ್ಲಿ ಇರಿಸಿ [illegible] ಸರ್ಟಿಫಿಕೇಟುಗಳಲ್ಲಿ ತೊಡಗಿಸಿ [illegible] ಮಾರ್ಗಗಳ ವಿವರಗಳಿಗಾಗಿ [illegible] ಪೋಸ್ಟಾಫೀಸಿನಲ್ಲಿ [illegible] ವಿಚಾರಿಸಿ.

ದಿನವೂ ನಾಲ್ಕು ಆಣೆ ಕೂಡಿಡಿ!

[illegible]

ಬ್ರಿಟಿಷ್ ಯುದ್ಧ ಮುಗಿದ ಮೇಲೆ ದೇಶೀಯ ಜೀವನ [illegible]

ಉಚಿತಭೋಜನ ಶಾಲೆಗಳಿಗೆ ಸರ್ಕಾರದ ಸಹಾಯ

ಸರಬರಾಜು ಕಮೀಷನರ್ ಶ್ರೀ ಎಂ. ಎ. ಶ್ರೀನಿವಾಸನ್‌ರವರು ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಅಲ್ಲಿನ ಆಹಾರ ಪರಿಸ್ಥಿತಿ ವಿಚಾರವಾಗಿ ಮಾತನಾಡುತ್ತಾ, ಸಾರ್ವಜನಿಕರು ಬಡ ಜನಗಳಿಗಾಗಿ ಉಚಿತ ಭೋಜನ ಶಾಲೆಗಳನ್ನು ಏರ್ಪಡಿಸುವುದಾದರೆ, ಅವುಗಳಿಗೆ ಸರ್ಕಾರದವರು ಸಂಪೂರ್ಣ ಸಹಾಯ ಮಾಡುವುದಾಗಿ ಭರವಸೆ ಕೊಟ್ಟರು. ಪ್ರತಿಯೊಂದು ನಗರಗಳಲ್ಲಿ ರೇಷನಿಂಗ್ ಜಾರಿಗೆ ತರಲು ಸರ್ಕಾರದವರು ಯೋಚಿಸುತ್ತಿರುವರೆಂದು ತಿಳಿಸಿದರು

— —

ಇಂಡಿಯಾದಲ್ಲಿರುವ ಯೋಧರ ಸಂಖ್ಯೆ

ಭಾರತದಲ್ಲಿ ಒಟ್ಟು ೨೦ ಲಕ್ಷ ಮಂದಿ ಯೋಧರಿರುವರೆಂದು ತಿಳಿಯಬರುತ್ತೆ.

ಮಹಾರಾಷ್ಟ್ರ ವಿಶ್ವವಿದ್ಯಾಲಯ

ಮಹಾರಾಷ್ಟ್ರಕ್ಕೆ ಒಂದು ವಿಶ್ವವಿದ್ಯಾಲಯ ಆವಶ್ಯಕವೆಂದು ಮಹಾರಾಷ್ಟ್ರ ವಿಶ್ವವಿದ್ಯಾಲಯ ಕಮಿಟಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ.

ಅನಾಥ ಶಿಶು ಸಂರಕ್ಷಣಾಲಯ

ಕಲ್ಕತ್ತಾದಲ್ಲಿ ಅನಾಥ ಶಿಶು ಸಂರಕ್ಷಣಾರ್ಥವಾಗಿ ಅಖಿಲ ಭಾರತ ಮಹಿಳಾ ಸಮ್ಮೇಳನದವರು ಪ್ರಥಮ ಅನಾಥಾಲಯವನ್ನು ನಾಳೆಯಿಂದ ಪ್ರಾರಂಭಿಸಿ, ೧೦೦ ಮಕ್ಕಳಿಗೆ ವಸತಿ, ಅನ್ನ ಬಟ್ಟೆಗಳನ್ನು ಒದಗಿಸಿ ಅವರಿಗೆ ಪ್ರಾಥಮಿಕ ಶಿಕ್ಷಣ ಕೊಡಲಾಗುವುದೆಂದು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತಿಳಿಸಿದ್ದಾರೆ.

Edited, printed and published by A. R. Nagarajan, at the Sadhvi Press, D. Subbiah Road, Mysore.

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಸಯಾಜಿ ರಾವ್ ರೋಡು, ಮೈಸೂರು

	ರೂ. ಅ.		ರೂ. ಅ.
ಬಾಲ್ ಮಿಲ್ಸ್ ಚೀಟ್ಸ್ ಗಜಕ್ಕೆ	0—9	ಲಾಂಗ್ ಕ್ಲಾತ್ಸ್ :—	
ವಿಕ್ರಮ ಮಿಲ್ಸ್ ,, ,,	0-8½	ಡಬಲ್ ಸ್ಟ್ರೈಕಲ್ ಮಾರ್ಕ	0—8¾
ಡೋರಿಯಾ ವಾಯಿಲ್ ,,	0—12	ನಂ. 3640	0 7½
ಡಬಲ್ ಕಲರ್ ವಾಯಿಲ್ 45"	1—0	ಹಿಂದೂ ಮಾತ	0—12
ಹುಡುಗರಿಗಾಗಿ ಶುದ್ಧ ಉಣ್ಣೆ ಸ್ವೆಟರ್ 1 ಕ್ಕೆ	2—0	ಮಿನರ್ವ ಮಿಲ್ಸ್	0— 9
ಕರ್ನಾಟಕ್ ಮಿಲ್ಸ್ ಮಸ್ಲಿಟ ಗಜ 1 ಕ್ಕೆ	0-14	ಬಕಿಂಗ್ಹ್ಯಾಂ ಮಿಲ್ಸ್	0—10
,, 72" ಷೀಟಿಂಗ್ 1 ಗಜ	2-0	ಕರ್ನಾಟಕ ಮಿಲ್ಸ್ 45"	0—15
ಬಕಿಂಗ್ಹ್ಯಾಂ ಮಿಲ್ಸ್ ಟ್ವಿಲ್ ,,	0-14	ನಗ್ರಿ ಮಿಲ್ಸ್	0-10½
ಆಗ್ಲೋಷ್ ಲಾಂಗ್ ಕ್ಲಾತ್ 45"	0-11	ವಾಷ್ ಅರಂ ಷರ್ಟಿಂಗ್ 1 ಕ್ಕೆ	1—9
,, 50" ಮಲ್	0—9	ಪೈಜಾಮಾ ,,	1-10
ಗಿರಿಜ ಬಿಪ್ಲರ್ ಚೆಕ್ ಷರ್ಟಿಂಗ್	0—6	ಸ್ಟ್ರೈಪ್ ಷರ್ಟಿಂಗ್ 1 ನೇ ದರ್ಜೆ 1 ಗಜಕ್ಕೆ	0—14
ಹತ್ತಿ ಮಾಲಿನ ರಗ್ 1 ಕ್ಕೆ	3—8	,, ವಾಷ್ ಅರಂ ಷರ್ಟ್ 1 ಕ್ಕೆ	2—2
ಇಟಾಲಿಯನ್ ಪೈನಿಂಗ್ 48" 1 ಗಜ	1—8	ಸೋಲಾಪುರ ಗರಿ ಕೋಟಿಂಗ್	0—11
ಹೇರ್ ಕಾರ್ಡ್ ಸ್ಟ್ರೈಪ್ ಕ್ಲಾತ್ ,,	1—0	ಸೂರತ್ ಕೋಟಿಂಗ್ 1 ಗಜಕ್ಕೆ	1—4
ರ್‍ಯಾಲಿ ಬ್ರದರ್ಸ್ ಡ್ರಿಲ್	0—12	ಚೆಕ್ ಕೋಟಿಂಗ್ ,,	0—11
ಕೃ. ರಾ. ಮಿಲ್ ಡ್ರಿಲ್	0—10	ಕೃಷ್ಣ ಮಿಲ್ಸ್ ಕೋಟಿಂಗ್	1—4
ಮಿನರ್ವ ಮಿಲ್ ಡ್ರಿಲ್	1—0	ಮಿಲ್ ಷರ್ಟಿಂಗ್	0—12
		ಕೃ. ರಾ. ಮಿಲ್ ಧೋತಿ 2×8 ಗಜ	6—8
		ಛತ್ರಿ ಮಾದರಿ ,,	8—8
		ಮಾರ್ಸೆಲ್ಸ್ ಸಂಚಿ ,,	9—8
		ಬ್ಲ್ಯಾಂಕೆಟ್ಟಿನ ಪೇಟ	9—12

ಇವಲ್ಲದೆ ಹೊಸ ಸೀರೆಗಳು, ಉತ್ತಮವಾದ ಪ್ಲೇನ್ ರಗ್ಗುಗಳು, ಫ್ಯಾನ್ಸಿ, ಸ್ಯಾಟ್ ಬ್ಯಾಂಗಲ್ಸ್, ಅಭಿಮಾನ ಕ್ಲಾತ್, ಬೆಂಗಳೂರು, ಕಾಶ್ಮೀರ, ಬನಾರಸ್, ಬರೋಡಾಗಳ ರೇಷ್ಮೆ ಸೀರೆಗಳು ಸಹ ದೊರೆಯುವುವು ದಾಸ್ತಾನಿದೆ

ದಯವಿಟ್ಟು ಸ್ತ್ರೀಯರ ಸೀರೆಗಳ ನಾನಾ ರೂಪಗಳು ಮತ್ತು ಬಗೆಗಳ ಮಾದರಿಗಳನ್ನು ನೋಡಲು ಕಷ್ಟಪಡಿ

ಸ್ತ್ರೀಯರ ಸೌಕರ್ಯಕ್ಕಾಗಿ

೧ನೇ ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ. ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ, ಕಸ್ತೂರಿ [illegible] ಸಂಕೇಟ್ ಟೀ [illegible] ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಪ್ಲೇಗು ನಿವಾರಣೆ

ನಮ್ಮ ರಾಷ್ಟ್ರದಲ್ಲಿ ಇಲಿಗಳ ಮೇಲೆ ಸಂಶೋಧನೆ ನಡೆಸಿ [illegible] ಕ್ರಿಮಿ ವ್ಯಾಪ್ತಿಯನ್ನು ವಿಭೂತಿ ಧಾರಣೆಯಿಂದ ನಿವಾರಿಸಬಹುದೆಂದು ಹೇಳಿದೆ. ಆದ್ದರಿಂದ ಈಗಾಗಲೇ "ಪ್ಲೇಗು ಇನಾಕ್ಯುಲೇಷನ್" ತಕ್ಷಣ ಸಾಧ್ಯವಿಲ್ಲದೇ ಇರುವವರು ವಿಭೂತಿ ಧಾರಣೆಯಿಂದ ಉಪಯೋಗ ಹೊಂದಬಹುದು.

ಕ್ರಮ: ವಿಭೂತಿಯನ್ನು ಹುಸ್ಸೈನಿ ಹಗ್ಗ ಕಟ್ಟಿ ಹಾಕಿಕೊಂಡರೆ ಉಪಯೋಗವಿಲ್ಲ. ದೇಹಾದ್ಯಂತಕ್ಕೂ ಲೇಪಿಸಿಕೊಂಡು ನೆನೆಸಿದ ಬಳಿಕ ಸ್ನಾನ ಬರುತ್ತದೆ. ಇದನ್ನು ಬೆಳಿಗ್ಗೆಯಿಂದ [illegible] ಪೂರ್ತಿ ಕಳೆದವರಿಗೆ ಬಿಸಿಲಿನಲ್ಲಿ ಮಾಡಬೇಕು. ವಿಭೂತಿ ಹಚ್ಚಿಕೊಂಡ ಮೇಲೆ ಸ್ನಾನ ಮಾಡಿದರೆ ಪುನಃ ಮೊದಲಿನಂತೆ ಹಚ್ಚಿಕೊಳ್ಳಬೇಕೆಂಬುದನ್ನು ದಯವಿಟ್ಟು ಗಮನಿಸಿ

ಎಸ್. ಎನ್. ಸುಬ್ರಹ್ಮಣ್ಯಶಾಸ್ತ್ರಿ
ಬಿ. ಎ., ಎಲ್. ಎಂ. ಎಸ್.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಪ್ರಭಾವಶಾಲಿ **ಜೀವನಿ** ಔಷಧ

ಗರ್ಭಾಶಯಕ್ಕೆ ಶಕ್ತಿವರ್ಧಕ.
ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.
ಮುಟ್ಟಿನ ನೋವಿಗೆ ಗಂಡೌಷಧ.
ಮುಟ್ಟು ಕಾಲದಲ್ಲಿ ಅಥವಾ ಆಮೇಲೆ ಹೋಗುವ ಅಧಿಕ ರಕ್ತಸ್ರಾವ, ಬಿಳಿ ಹೋಗುವುದು, ಅಕ್ರಮ ಬಹಿಷ್ಠೆ ಮುಂತಾದುವುಗಳನ್ನು "ಜೀವನಿ" ಜಾಗ್ರತೆ ಗುಣಪಡಿಸುತ್ತದೆ.
ಅತ್ಯುತ್ತಮ ಉಷ್ಣಶಾಮಕ.
ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೆ "ಜೀವನಿ" ಪ್ರಶಸ್ತವಾದುದು.
ರಕ್ತ ಹೀನತೆ, ನರಗಳ ದೌರ್ಬಲ್ಯ, ಬೆನ್ನು ನೋವು, ಸೊಂಟನೋವು, ಗರ್ಭಸ್ರಾವ ಬಾಧಿತರುಗಳಿಗೆ "ಜೀವನಿ" ಅತ್ಯಂತ ಯುಕ್ತವಾದುದು.

ಶ್ರೀ

ಮೈಸೂರು
[illegible]

ದಿ ಮೈಸೂರು ಇನ್ಷ್ಯೂರೆನ್ಸ್ ಕಂಪೆನಿಯ ಜನರಲ್ ಮ್ಯಾನೇಜರ್ ಅವರ ಸನ್ನಿಧಾನಕ್ಕೆ

ಲಕ್ಷ್ಮೀಸ್ಥಾನಂ, ಲಾಲ್‌ಬಾಗ್ ಫೋರ್ಟ್ ರೋಡು, ಬೆಂಗಳೂರು.

ಮಂಡ್ಯ ಡಿಸ್ಟ್ರಿಕ್ಟ್ ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಗ್ರಾಮದ ಚಿಕ್ಕಣ್ಣಗೌಡರು ವಿನಯಪೂರ್ವಕವಾಗಿ ವಿಜ್ಞಾಪಿಸುವುದೇನೆಂದರೆ:—

ನನ್ನ ಅಣ್ಣ ಪುಟ್ಟೇಗೌಡರವರು ನಿಮ್ಮ ಕಂಪೆನಿಯಲ್ಲಿ ೧೦೦೦ ರೂ ಗಳಿಗೆ ಮಾಡಿಸಿದ್ದ [illegible] ಪಾಲಿಸಿಯನ್ನು ಪಡೆದಿದ್ದು ಅವರು ಕೆಲವು ಕಾಲ ಪ್ರೀಮಿಯಂ ಕಟ್ಟಿ ನಂತರ ಲ್ಯಾಪ್ಸ್ ಮಾಡಿಕೊಂಡಿದ್ದಾಗ್ಯೂ ಕಂಪೆನಿಯ ಅಧಿಕಾರಿಗಳು ನನ್ನ ಹತ್ತಿರ ಬಂದಿದ್ದಾಗ್ಗೆ ಸರಿಯಾದ ತಿಳುವಳಿಕೆ ಕೊಟ್ಟು ರದ್ದಾದ ಪಾಲಿಸಿಯನ್ನು ಸ್ಪೆಷಲ್ ಪಲ್ ಸ್ಕೀಂ ಪ್ರಕಾರ ಪುನರುಜ್ಜೀವನಗೊಳಿಸಿದ ನಂತರ ಕೇವಲ ೩ ಪ್ರೀಮಿಯಂ ಮಾತ್ರ ಪಾವತಿ ಮಾಡಿ ಕೆಲವು ದಿನಗಳ ಹಿಂದೆ ಮೃತಪಟ್ಟರು.

ಕಂಪೆನಿಗೆ ಸಂಗತಿ ತಿಳಿಸಿದ ಕೂಡಲೇ ತಮ್ಮ ಕಂಪೆನಿಯ ಆರ್ಗನೈಜಿಂಗ್ ಸೆಕ್ರೆಟರಿಯವರು ದಿನ ಮಾತ್ರದಲ್ಲಿ ಎಲ್ಲಾ ವಿಧವಾದ ಸೌಕರ್ಯಗಳನ್ನು ಕೊಟ್ಟು ನನಗೆ ಯಾವ ತೊಂದರೆಯೂ ಇಲ್ಲದಂತೆ ಕ್ಲೇಂ ಹಣವನ್ನು ಶೀಘ್ರವಾಗಿ ತಮ್ಮ ಕಂಪೆನಿಯ ಜನರಲ್ ಸೆಕ್ರೆಟರಿಯವರಾದ ಶ್ರೀಮಾನ್ [illegible] ಅವರನ್ನು ಇಲ್ಲಿಗೆ ಕಳುಹಿಸಿ ಮಂಡ್ಯದ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾದ ಮಾ॥ ಕೆ. ಚಿಕ್ಕಲಿಂಗಯ್ಯನವರು, ಬಿ. ಎ., ಎಲ್. ಎಲ್. ಬಿ. ಯವರ ಅಧ್ಯಕ್ಷತೆಯ ದಿವಸ ಮೇಲುಕೋಟೆ ಒಕ್ಕಲಿಗರ ಹಾಸ್ಟಲಿನಲ್ಲಿ ಸಭೆ ಸೇರಿಸಿ, ನನಗೆ ಆ ಕ್ಲೇಂ ಹಣವನ್ನು ಈ ಕೆಳಗೆ ರುಜು ಮಾಡಿರುವ ಪ್ರಮುಖರ ಸಮಕ್ಷಮ ಪಾವತಿ ಮಾಡಿಸಿರುವುದಕ್ಕಾಗಿ ಅವರಿಗೂ ಮತ್ತು ತಮ್ಮ ಕಂಪೆನಿಗೂ ನಾನು ಋಣಿಯಾಗಿರುತ್ತೇನೆ. ನಮ್ಮದೇ ಆದ ಈ ಮೈಸೂರು ಇನ್ಷೂರೆನ್ಸ್ ಕಂಪೆನಿ ಮೊದಲಿನಿಂದಲೂ ಈ ರೀತಿಯಾಗಿ ಕ್ಲೇಂ ಹಣವನ್ನು ಮೃತಪಟ್ಟವರ ವಾರಸುದಾರರಿಗೆ ಪಾವತಿ ಮಾಡುವ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿರುತ್ತದೆ. ಈ [illegible] ನಮ್ಮ ದೇಶಬಾಂಧವರೆಲ್ಲರೂ ವಿಮೆ ಮಾಡಿ, ವಿಮೆಯ ಸೌಕರ್ಯವನ್ನು [illegible] ಲೆಂದೂ, ಈ ಕಂಪೆನಿಯು ಇತೋಪ್ಯತಿಶಯವಾಗಿ ಅಭಿವೃದ್ಧಿಯನ್ನು ಹೊಂದಿ ದೇಶದ ಸೇವೆಯನ್ನು ಸಲ್ಲಿಸಲೆಂದೂ ನಮ್ಮ ಮೇಲುಕೋಟೆಯ ಶ್ರೀ ಚೆಲುವರಾಯಸ್ವಾಮಿಯ ಸನ್ನಿಧಿಯಲ್ಲಿ ಪ್ರಾರ್ಥಿಸಿ ಇಂತಿ, ವಂದಿಸುವ,

ತಮ್ಮ ವಿಧೇಯ
ಚಿಕ್ಕಪುಟ್ಟೇಗೌಡರ ಎಡಗೈ
ಗುರುತಿನ ರುಜುವಿಗೆ ಕುಳ್ಳೇಗೌ

ಈ ಸಭೆಯಲ್ಲಿ ನೆರೆದಿದ್ದ ಪ್ರಮುಖರು.—

ಪಂ॥ ಚಿಕ್ಕಪುಟ್ಟೇಗೌಡ, ಬಿಳ್ಳಿಕೆರೆ	ಕುಳ್ಳೇಗೌಡ, ಛೇರ್ಮನ್
ಶ್ರೀ ಶಿವಾನಂದಸ್ವಾಮಿ, ಒಕ್ಕಲಿಗರ ಹಾಸ್ಟಲ್ ಮ್ಯಾನೇಜಿಂಗ್ ಕಮಿಟಿ ಸೆಕ್ರೆಟರಿ	ವ. ರ. ವೇಣುಗೋಪಾಲ
	ವಿ. ಎಸ್. ನರಸಿಂಹ
ಸಣ್ಣಪ್ಪಗೌಡ, ಪಾಂಡವಪುರ	ಗ. ವಿ. ನಾರಾಯಣ ಬಿಗೌಡ, ನಾ

[illegible]

ಸಂಪುಟ ೨] ಮಂಗಳವಾರ ೨೮—೯—೪೩ [ಸಂಚಿಕೆ ೬೧

ಭಾರತಕ್ಕೆ ಸ್ವಾತಂತ್ರ್ಯ ಲಭಿಸಬೇಕು

ಸಿಂಧ್‌ನಲ್ಲಿ ಮಾರ್ಷಲ್ ಲಾದಿಂದ ದಿನಕ್ಕೆ ೧ ಲಕ್ಷ ರೂ. ವೆಚ್ಚ

ನೋಟುಗಳನ್ನು ದ್ವಿಗುಣಪಡಿಸುತ್ತೇವೆಂದು ನಂಬಿಸಿ ೪೧೫೦ ರೂ. ಗಳ ಮೋಸಮಾಡಿದ ಪ್ರಸಂಗ

ಭಾರಿ ಕಳವು

ಮೈಸೂರು ೨೭

ರಾಜಧಾನಿಯ ಕಾಳಮ್ಮ ದೇವಸ್ಥಾನದ ಬೀದಿಯಲ್ಲಿ ಚಿನ್ನ ಬೆಳ್ಳಿ ವ್ಯಾಪಾರಿಗಳಾದ ಶ್ರೀ ಟಿ. ಎಗ್ ಲಕ್ಷ್ಮಯ್ಯಶೆಟ್ಟರವರ ಅಂಗಡಿಗೆ ಮೊನ್ನೆ ರಾತ್ರಿ ಕನ್ನ ಹಾಕಿ, ಕಬ್ಬಿಣದ ಪೆಟ್ಟಿಗೆಯನ್ನು ಒಡೆದು, ೧೩೦೨ ರೂಗಳ ಬೆಲೆ ಬಾಳುವ ಚಿನ್ನ ಬೆಳ್ಳಿ ಸಾಮಾನುಗಳನ್ನು ಅಪಹರಿಸಿಕೊಂಡು ಹೋದರೆಂದು ಪೋಲೀಸರಿಗೆ ವರದಿಯಾಗಿತ್ತು.

ಇದರ ಮೇಲೆ ತನಿಖೆ ನಡೆಸಿ, ಕೆ. ಪಿ. ಪಡಸಾಲೆ ಮತ್ತು ಕೆಂಚ ಎಂಬ ಇಬ್ಬರು ಕೇಡಿಗಳನ್ನು ಪೋಲೀಸರು ದಸ್ತಗಿರಿಮಾಡಿ ಕಳವುಮಾಲನ್ನು ಪತ್ತೆ ಹಚ್ಚಿದ್ದಾರೆಂದು ಹೇಳಲಾಗಿದೆ.

ಮಲೇರಿಯಾ ನಿವಾರಣ ಹಂಚಿಕೆ

ಇರ್ವಿನ್ ನಾಲಾ ಕ್ಷೇತ್ರದಲ್ಲಿ ಮಲೇರಿಯಾ ನಿವಾರಣ ಕ್ರಮವನ್ನು ಅಲ್ಲಿರುವ ೧೪೩ ಹಳ್ಳಿಗಳಲ್ಲೂ ಕೈಗೊಳ್ಳಲು ಸರ್ಕಾರದವರು ೧॥ ಲಕ್ಷ ರೂ ಗಳ ಗ್ರ್ಯಾಂಟನ್ನು ಈ ವರ್ಷಕ್ಕೆ ಮಂಜೂರ್ಮಾಡಿದ್ದಾರೆ.

ಸಿವಿಕ್ ಗಾರ್ಡ್ಸ್ ಪೆರೇಡ್

ಮೈಸೂರು ಸಿವಿಕ್ ಗಾರ್ಡ್ಸ್ ಮತ್ತು ಪೋಲೀಸ್ ದಳದವರ ಪೆರೇಡ್ ನಿನ್ನೆ ಪ್ಲೆಗ್ಗ ಪೋಲೀಸ್ ಶಾಖೆಯ ವರಿಷ್ಠಾಧಿಕಾರಿಗಳಾದ ಮಿ॥ ...ರವರ ಸಮ್ಮುಖದಲ್ಲಿ ನಡೆಯಿತು.

ಸ್ಟ್ಯಾಂಡರ್ಡ್ ಬಟ್ಟೆ

ರಾಜಧಾನಿಯ ಪೇರ್ ಪ್ರೈಸ್ ಡಿಪೋಗಳಲ್ಲಿ ಸ್ಟ್ಯಾಂಡರ್ಡ್ ಬಟ್ಟೆಯನ್ನು ಶೀಘ್ರದಲ್ಲಿ ಮಾರಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತಿದೆಯೆಂದು ತಿಳಿಯಬರುತ್ತದೆ.

ಶ್ರೀನಿವಾಸ ಕಲ್ಯಾಣೋತ್ಸವ

ರಾಜಧಾನಿಯ ನಾಣೀವಿಲಾಸ ರೋಡಿನಲ್ಲಿರುವ ಶ್ರೀ ಸಂಜೀವರಾಜೇ ಅರಸಿನವರ ಬಂಗಲೆಯಲ್ಲಿ ಮೇಲ್ಕಂಡ ಉತ್ಸವವನ್ನು ಇದೇ ೩೦ ನೇ ತಾ॥ ನಿಂದ ವಿಜಯದಶಮಿವರೆಗೆ ನಡೆಸಲೇರ್ಪಾಡಾಗಿದೆ. ಪ್ರತಿದಿನ ಸಾಯಂಕಾಲ ೫ ಘಂಟೆಗೆ ಶ್ರೀ ವೇಣುಗೋಪಾಲದಾಸರಿಂದ ಪುರಾಣಪಠಣವನ್ನು ಏರ್ಪಾಡುಮಾಡಲಾಗಿದೆ.

— —

ಬಿಳೀ ರಷ್ಯಾದಲ್ಲಿ ರಷ್ಯನ್ ಸೈನ್ಯ

ಬ್ರಿಯಾನಸ್ಕ್‌ನಿಂಗ ಮುಂದ ಸಾಗಿ, ರಷ್ಯನ್ ಸೈನ್ಯವು ಬಿಳೀ ರಷ್ಯದೊಳಗಿರುವ ಸೊರ್ಜೆ ನಗರವೊಂದನ್ನು ವಶಪಡಿಸಿಕೊಂಡಿವೆ. ದಕ್ಷಿಣದಲ್ಲಿ ಗೋಮೆಲ್ ಕಡೆಗೆ ನುಗ್ಗುತ್ತಾ ಸುಮಾರು ೩೦೦ ಸ್ಥಳಗಳನ್ನು ವಶಪಡಿಸಿಕೊಂಡಿವೆ.

ಜರ್ಮನಿಗೆ ಶರಣಾಗತ ನಾಗಕೂಡದು

"ಸತ್ತೇ ಬರಲಿ, ಜರ್ಮನಿಯು ಶರಣಾಗತ ನಾಗಕೂಡದು." ಎಂಬ ನಿರೂಪವನ್ನು ಜರ್ಮನಿಯ ಪ್ರಚಾರ ಸಚಿವರಾದ ಡಾ॥ ಗೋಬೆಲ್ಸ್‌ರವರು ಜರ್ಮನಿಯ ಪ್ರಜೆಗಳಿಗೆ ತಿಳಿಸಿದ್ದಾರೆ.

೩ ಜರ್ಮನ್ ಜಹಜುಗಳ ನಾಶ

ಇಟಲಿ ಶರಣಾಗತವಾದ ಮಾತ್ರ ಕೇಳಿದ ಕೂಡಲೇ ನಾರ್ವೆಯ ಟ್ರೋಂಜ್ ಹೀಂ ಬಂದರಿನಲ್ಲಿದ್ದ ೩ ಜರ್ಮನ್ ನೌಕಾ ಜಹಜುಗಳನ್ನು ಜರ್ಮನರೇ ನಾಶಮಾಡಿದರೆಂದು ವರದಿಯಾಗಿದೆ.

ಭಾರತದ ರಾಷ್ಟ್ರೀಯ ಸರ್ಕಾರ ಸ್ಥಾಪನೆ

ಭಾರತಕ್ಕೆ ರಾಷ್ಟ್ರೀಯ ಸರ್ಕಾರ ಕೊಡುವುದರಿಂದ ಬರ್ಮಾ ದಂಡಯಾತ್ರೆಗೂ ಮತ್ತು ಭಾರತದ ಸಂರಕ್ಷಣೆಗೂ ಸಹಾಯವಾಗುವುದು. ಇಂಡಿಯಾದ ಕಮ್ಯಾಂಡರಾದ ಜ॥ ಆಚಿನ್ ಲೆಕ್‌ರವರು ರಾಷ್ಟ್ರೀಯ ಸರ್ಕಾರ ಸ್ಥಾಪನೆ ಬಗ್ಗೆ ಒತ್ತಾಯಪಡಿಸುವುದು ನಿಶ್ಚಯವೆಂದು ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರಾದ ವಿಂಗ್ ಕಮ್ಯಾಂಡರ್ ಗ್ರ್ಯಾಂಟ್ ಫೆರಿಸ್‌ರವರು, ಪಾಠರ್ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಭಾರತದ ಜನರೆಲ್ಲರೂ ಒಕ್ಕೊರಲಾಗುವವರೆಗೂ, ಭಾರತಕ್ಕೆ ಸ್ವಾತಂತ್ರ್ಯ ಪಡೆಯ ಅರ್ಹವಾಗಿಲ್ಲ ಎಂದು ಹೇಳು ಸಾಧುವಲ್ಲವೆಂದು ಅವರು ಅಭಿಪ್ರಾಯ ಪಟ್ಟರು. ಭಾರತದ ರಾಜಕೀಯ ಬಿಕ್ಕಟ್ಟು ಪರಿಹಾರವಾಗಬೇಕೆಂದು ಮತ್ತು ಭಾರತಕ್ಕೆ ರಾಷ್ಟ್ರೀಯ ಸರ್ಕಾರ ಸ್ಥಾಪನೆಯಾಗಲು ತನ್ನ ಸಹಾನುಭೂತಿಯಿದೆ ಎಂದು ತಿಳಿಸಿದರು.

— —

ಪುಂಡರ ಹಾವಳಿ

ಹಿಂದೂಸ್ಥಾನ್ ಕೋ-ಆಪರೇಟೀವ್ ಇನ್ಶೂರೆನ್ಸ್ ಸೊಸೈಟಿ ಬ್ರಾಂಚ್ ಆರ್ಗನೈಜರಾಗಿದ್ದ ಶ್ರೀ ಗುಸ್ತಪ್ಪನವರು ರೈಲ್ವೆ ಸ್ಟೇಷನ್ನಿಂದ ತಮ್ಮ ಮನೆಗೆ ರಾತ್ರಿವೇಳೆಯಲ್ಲಿ ಬರುವಾಗ್ಯೆ ಯಾರೋ ಒಬ್ಬನು ಅವರನ್ನು ನಿಶ್ಚಿತ ಜಾಗದಿಂದ ಹೊಡೆದನೆಂದೂ ಅವರು ಕೂಗಿಕೊಳ್ಳಲು ಪತ್ತೆದಾರ ಪೋಲೀಸ್ ... ಒಬ್ಬನು ಗಾಡಿಯಿಂದ ಅವರನ್ನು ಸಮಯಿಸಿ, ಅವರ ಪೆಟ್ಟಿಗೆಯೊಂದನ್ನು ಅಪಹರಿಸಿ ಓಡಿದನೆಂದು ವರದಿಯಾಗಿದೆ.

— —

ನೇಪಲ್ಸ್ ಬಳಿ ಭೀಕರ ಕದನ

ನೇಪಿಲ್ಸ್ ಬಳಿ ಕ್ಷೇತ್ರದಲ್ಲಿ ಜೇನ್ ಮತ್ತು ಕ್ರಿಮಿಯಾಗಳ ಬಳಿ ರಷ್ಯನ್ ಮತ್ತು ಜರ್ಮನರಿಗೆ ಭಯಂಕರ ಕದನ ನಡೆಯುತ್ತಿದೆಯೆಂದು ವರದಿಯಾಗಿದೆ. ರಷ್ಯನ್ ವಿಮಾನಗಳು ಜರ್ಮನ್ ಸ್ಥಾನಗಳ ಮೇಲೆ ಬಾಂಬುಗಳನ್ನು ಸುರಿಸುತ್ತಿವೆಯೆಂದೂ ಹೇಳಲಾಗಿದೆ.

ಮಾರ್ಷಲ್‌ಲಾದಿಂದ ದಿನಕ್ಕೆ ೧ ಲಕ್ಷ ರೂ. ಖರ್ಚು

ಸಿಂಧಿನಲ್ಲಿ ಮಾರ್ಷಲ್‌ಲಾವನ್ನು ಒಂದು ವರ್ಷ ಜಾರಿಗೆ ತಂದಿದ್ದರಿಂದ ೪ ಕೋಟಿ ರೂ ಗಳು ವೆಚ್ಚವಾಯಿತೆಂದೂ ಅಂದರೆ ದಿನಕ್ಕೆ ೧ ಲಕ್ಷ ರೂ ಖರ್ಚಾಯಿತೆಂದು ಹೇಳಲಾಗಿದೆ.

ಸ್ಪೇನ್ ಮತ್ತು ಅರ್ಜೆಂಟೈನ ಆಕ್ಸಿಸ್ ತ್ಯಜಿಸಬೇಕು

ಸ್ಪೇನ್ ಮತ್ತು ಅರ್ಜೆಂಟೈನಾ ದೇಶಗಳು ಆಕ್ಸಿಸ್‌ರವರನ್ನು ತ್ಯಜಿಸಲು ಒತ್ತಾಯಪಡಿಸಬೇಕೆಂದು ಪ್ರೆ॥ ರೂಸ್‌ವೆಲ್ಟರಿಗೆ ನ್ಯೂಯಾರ್ಕಿನ ಮೇಯರ್‌ರವರು ಮನವಿ ಮಾಡಿಕೊಂಡಿದ್ದಾರೆ.

ಹೆಚ್ಚು ಬೆಲೆಗೆ ಔಷಧಿ ಮಾರಿದ್ದಕ್ಕೆ ೫ ಸಾವಿರ ರೂ. ಜುಲ್ಮಾನೆ

ಹತೋಟಿ ಬೆಲೆಗಿಂತ ಹೆಚ್ಚಾಗಿ ಔಷಧ ಮಾರಿದ್ದಕ್ಕೆ ಬೊಂಬಾಯಿನ ಅಂಗಡಿಯೊಂದರ ಮಾಲೀಕರಿಗೆ ೧ ಸಾವಿರ ರೂ ಜುಲ್ಮಾನೆಯೂ, ಸಾಮಾನುಗಳ ಬೆಲೆ ಪಟ್ಟಿ ಪ್ರದರ್ಶಿಸದ ಪಟ್ಟಿಯನ್ನು ಪ್ರಧಾನವಾಗಿ ಕಾಣ ಹಾಕದಿದ್ದುದಕ್ಕೆ ಮತ್ತೊಂದು ಸಾವಿರ ರೂ ಜುಲ್ಮಾನೆಯೂ ಹಾಕಲ್ಪಟ್ಟಿತು.

ಕಲ್ಕತ್ತದಲ್ಲಿ ಶವ ಸಂಸ್ಕಾರ

ಕಲ್ಕತ್ತಾ ನಗರದಲ್ಲಿ ಹೊಟ್ಟೆಗಿಲ್ಲದೆ ಪ್ರಾಣತ್ಯಾಗಮಾಡಿದ ೧೧೦ ಜನರುಗಳ ಸಂಸ್ಕಾರ ಮಾಡಲಾಯಿತು. ಪೋಲೀಸ್ ಪಡೆಯು ನಗರದ ರಸ್ತೆಗಳಲ್ಲಿ ಬಿದ್ದಿದ್ದ ಶವಗಳನ್ನು ತೆಗೆದುಹಾಕಿದರು. ಆಗಸ್ಟ್ ೧೬ ರಿಂದ ಸೆಪ್ಟೆಂಬರ್ ೨೩ ನೇ ತಾ॥ ವರೆಗೆ ಒಟ್ಟು ೧೦೦೦ ಜನ ಹಸಿವಿನಿಂದ ಸತ್ತರೆಂದು ವರದಿಯಾಗಿದೆ.

ಮದುವೆ ನಿರಾಕರಿಸಿದ್ದಕ್ಕೆ ಕೊಲೆ

ಬಾರೋಡದ ೨೨ ವರ್ಷದ ಒಬ್ಬನ ಚಿಕ್ಕಪ್ಪನ ಮಗಳನ್ನು ಆತನಿಗೆ ಮದುವೆ ಮಾಡಿಕೊಡಲು ನಿರಾಕರಿಸಿದ್ದರಿಂದ ಆತನ ಚಿಕ್ಕಪ್ಪನನ್ನು ಮತ್ತು ಆತನ ತಾಯಿಯನ್ನೂ ಕೊಂದು ತೀವ್ರ ಗಾಯಪಡಿಸಿದನೆಂದೂ ಅವರು ಆಸ್ಪತ್ರೆಯಲ್ಲಿ ಮೃತಪಟ್ಟರೆಂದೂ ವರದಿಯಾಗಿದೆ.

ನೋಟುಗಳನ್ನು ದ್ವಿಗುಣಪಡಿಸುವರೆಂದು ೪೧೫೦ ರೂ. ಗಳಿಗೆ ಮೋಸ

ಮೈಸೂರು ೨೭

ಮೈಸೂರು ತಾ॥ ನಂಗೇನಹಳ್ಳಿ ವೆಂಕಟೇಗೌಡ ಎಂಬುವರಿಂದ ೪೧೫೦ ರೂಗಳ ಕರೆನ್ಸಿ ನೋಟುಗಳನ್ನು ತೆಗೆದುಕೊಂಡು ಅವುಗಳನ್ನು ದ್ವಿಗುಣಪಡಿಸಿಕೊಡುವುದಾಗಿ ಮೋಸಮಾಡಿದ ಪ್ರಸಂಗ ವರದಿಯಾಗಿದೆ.

ಈಗ ೨೦ ದಿವಸಗಳ ಹಿಂದೆ ಎಡತೊರೆ ಹಳ್ಳಿಯಲ್ಲಿ ಹತೇಮರೊಬ್ಬರು ಶ್ರೀರಂಗಪಟ್ಟಣದಲ್ಲಿರುವ ತಮ್ಮ ಇಬ್ಬರು ಸ್ನೇಹಿತರು ನೋಟುಗಳನ್ನು ದ್ವಿಗುಣ ಮಾಡುವರೆಂದು ವೆಂಕಟೇಗೌಡರಿಗೆ ತಿಳಿಸಿದ ನಂತರ ಶ್ರೀರಂಗಪಟ್ಟಣದಿಂದ ಆ ಇಬ್ಬರು ಒಂದು ರೂಪಾಯಿನ ಕರೆನ್ಸಿ ನೋಟನ್ನು ೨ ರೂಪಾಯಿನ ನೋಟನ್ನಾಗಿ ಮಾಡಿ ಅವರನ್ನು ನಂಬಿಸಿ, ೮ ದಿವಸಗಳ ನಂತರ ವೆಂಕಟೇಗೌಡರಿಂದ ೪೧೫೦ ರೂ ಗಳ ಕರೆನ್ಸಿ ನೋಟುಗಳನ್ನು ತೆಗೆದುಕೊಂಡು, ಅವರು ಒಂದು ಗುಪ್ತ ಕೊಠಡಿಗೆ ಹೋಗಿ, ಅಲ್ಲಿ ಸಾಂಬ್ರಾಣಿ ಹೊಗೆ ಮತ್ತು ಇತರ ಹೊಗೆಯನ್ನು ಹಾಕಿ, ಮಂತ್ರ ಮಾಡುವರೆಂದು ತಿಳಿಸಿ, ಆತನ ಕೈಯಲ್ಲಿ ಒಂದು ಪೊಟ್ಟಣವನ್ನು ಕೊಟ್ಟು ಬರುವ ಒಂಭತ್ತನೆಯ ದಿವಸ ಅದನ್ನು ಒಡೆಯಬೇಕೆಂದೂ ಆ ಏನ್ತ ಹಣವು ಬರುವುದಾಗಿಯೂ ತಿಳಿಸಿ ಹೊರಟುಹೋದರು. ೧೧ ದಿವಸವಾದರೂ ಅವರು ಬರಲಿಲ್ಲವಾದ್ದರಿಂದ, ವೆಂಕಟೇಗೌಡರು ಆ ಪೊಟ್ಟಣವನ್ನು ಒಡೆದು ನೋಡಲು ಅದರಲ್ಲಿ ದ್ವಿಗುಣದ ಹಣದ ಬದಲು ಬರಿ ಕಾಗದ ಮಾತ್ರ ಇತ್ತು. ಗೌಡರು ಪೋಲೀಸರಿಗೆ ಫಿರ್ಯಾದು ಕೊಟ್ಟರು. ಪೋಲೀಸರು ಕೇಸು ರಿಜಿಸ್ಟರ್ ಮಾಡಿ ಮುಂದಿನ ತನಿಖೆ ನಡೆಸುತ್ತಿದ್ದಾರೆ.

— —

ಭಾರಿ ಕೇಡಿಗೆ ಶಿಕ್ಷೆ

ರಾಜಧಾನಿಯ ಬ್ರೋಕಾಲಿನ ಆವರಣದಲ್ಲಿ ಕೃಷ್ಣರಾಜನಗರದ ಸ್ಯಾನಿಟರಿ ಇನ್‌ಸ್ಪೆಕ್ಟರ ಬಟ್ಟೆ, ಫೌಂಟನ್ ಪೆನ್ ಮತ್ತು ಹಣವನ್ನು ಅಪಹರಿಸಿದ್ದಕ್ಕೆ ಮುನಿಸ್ವಾಮಿ ಎಂಬ ಕೇಡಿಗೆ ಸಿಟಿ ನ್ಯಾಯಾಧೀಶರು ಈ ದಿನ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಿದರು.

— —

ವರ್ಗಾವರ್ಗಿ

ಮೈಸೂರು ಮೆಡಿಕಲ್ ಕಾಲೇಜಿನ ಡಾ॥ ಬಿ ರಾಮಣ್ಣನವರನ್ನು ವಿಕ್ಟೋರಿಯಾ ಆಸ್ಪತ್ರೆಗೂ, ಬೌರಿಂಗ್ ಆಸ್ಪತ್ರೆಯ ಡಾ॥ ಎಸ್. ಶ್ರೀನಿವಾಸರಾವ್‌ರವರನ್ನು ಬೆಂಗಳೂರು ವಾಣಿ ವಿಲಾಸ ಆಸ್ಪತ್ರೆಗೂ, ಡಾ॥ ...ರವರನ್ನು ಬೆಂಗಳೂರು ... ಆಸ್ಪತ್ರೆಯಿಂದ ಮೈಸೂರು ಮೆಡಿಕಲ್ ಕಾಲೇಜಿಗೂ ವರ್ಗಾಯಿಸಲಾಗಿದೆ.

— —

ಆಕಾಶವಾಣಿ

೪ ನೇ ಪ್ರೋಗ್ರಾಂ

... ೫೦ ... ...
... ...

ರುಮೇನಿಯಾ ಶಾಂತಿಗೆ ಹೊರಟಿದೆ

ರುಮೇನಿಯಾ ಸರ್ಕಾರವು ಅಂಕಾರದಲ್ಲಿರುವ ರಷ್ಯ, ಬ್ರಿಟನ್ನು ಮತ್ತು ಅಮೇರಿಕಾ ಪ್ರತಿನಿಧಿಗಳೊಡನೆ ಶಾಂತಿ ಸರತ್ತುಗಳನ್ನು ಚರ್ಚಿಸುತ್ತಿರುವುದಾಗಿ ಜರ್ಮನ್ ಕ್ಷೇತ್ರಗಳಿಂದ ವರ್ತಮಾನ ಹೊರಟಿದೆ. ರುಮೇನಿಯ,ದಲ್ಲಿ ಅಂಟೊನೆಸ್ಕು ಪ್ರಭುತ್ವವನ್ನುರುಳಿಸಿ ಪ್ರಜಾಪ್ರಭುತ್ವ ಸರ್ಕಾರವನ್ನ ಸ್ಥಾಪಿಸಲು ಯತ್ನಗಳು ನಡೆಯುತ್ತಿರುವುದಾಗಿ ವರದಿಯಾಗಿದೆ.

—

ಯೂರೋಪ್ ದಂಡಯಾತ್ರೆ

ಇನ್ನು ಕೆಲವು ತಿಂಗಳುಗಳಲ್ಲೇ ಯೂರೋಪಿನ ದಂಡಯಾತ್ರೆಯು ಭೂಮಧ್ಯಾಸಾಗರಗಳಲ್ಲಿ ಭೀಕರ ರೂಪವನ್ನು ತಾಳುವುದೆಂದು ಮಿತ್ರಸೇನಾನಿಗಳು ನಿರೀಕ್ಷಿಸುವುದಾಗಿ ವರದಿಯಾಗಿದೆ

ರಷ್ಯಾದೊಡನೆ ಫಿನ್ಲೆಂಡ್ ಸಂಧಾನ ಸೂಚನೆ

ಫಿನ್ಲೆಂಡ್ ರಷ್ಯಾದೊಡನೆ ಸಂಧಾನ ಮಾಡಿಕೊಳ್ಳುವುದಾಗಿ ಸೂಚಿಸಿದೆ. ಫಿನ್ಲೆಂಡ್ ಮಂತ್ರಿಯಾದ ಟಾನರ್‌ರವರು ಮಾತನಾಡುತ್ತಾ "ಸ್ವದೇಶವು ನಿರೀಕ್ಷಿಸುವುದಕ್ಕಿಂತ ರಷ್ಯಾವು ಹೆಚ್ಚಾದ ಬಲಶಾಲಿಯಾಗಿದೆ. ಫಿನ್ಲೆಂಡು ಅದನ್ನು ತಿಳಿದುಕೊಂಡು ರಷ್ಯಾದೊಡನೆ ಸ್ನೇಹಭಾವದಿಂದ ಇರಲು ಸಿದ್ಧವಿದೆ, ಆದರೆ ಅದು ಗೌರವ ಪೂರ್ವಕವಾಗಿರಬೇಕು. ಆ ರೀತಿಯಾದಲ್ಲಿ ರಷ್ಯಾದೊಡನೆ ಶಾಶ್ವತ ಶಾಂತಿ ಸಂಧಾನ ಮಾಡಿಕೊಳ್ಳಲು ಸಿದ್ಧ" ಎಂದು ತಿಳಿಸಿರುವರು

ಸೂಚನೆ

ಮಹಾಲಯಾ ಅಮಾವಾಸ್ಯೆ ಪ್ರಯುಕ್ತ ನಾಳೆ ದಿನ ನಮ್ಮ ಪತ್ರಿಕೆಯನ್ನು ಪ್ರಕಟಿಸುವುದಿಲ್ಲ ವ್ಯವಸ್ಥಾಪಕ, ಸಾಧ್ವಿ

ಶಾಸನಸಭಾ ಸದಸ್ಯರುಗಳ ಬಿಡುಗಡೆಯಿಲ್ಲವೆ ?

ಬೆಂಗಳೂರು ೨೮

ಕಾಂಗ್ರೆಸ್ಸಿನ ಪ್ರಜಾಪ್ರತಿನಿಧಿ ಸಭೆ ಸದಸ್ಯರು ದಸರಾ ಪ್ರ|| ಪ್ರ|| ಸಭೆ ಅಧಿವೇಶನದಲ್ಲಿ ಭಾಗವಹಿಸಲು ನಿರ್ಬಂಧ ತೆಗೆದುಹಾಕಬೇಕೆಂದು ಕಾಂಗ್ರೆಸ್ ಪಕ್ಷದ ಮುಖಂಡರು ದಿವಾನರಲ್ಲಿ ಪ್ರಾರ್ಥಿಸಿದ್ದರು. ದಿವಾನರೂ ಸಚಿವರೂ ಸಭೆ ಸೇರಿ, ಬಹುಕಾಲ ಚರ್ಚೆ ನಡೆಸಿ, ಅವರುಗಳನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂದು ತೀರ್ಮಾನಿಸಿರುವುದಾಗಿ ತಿಳಿಯಬರುತ್ತೆ.

ಜವಳಿ ವ್ಯಾಪಾರಿಗಳಿಗೆ ಎಚ್ಚರಿಕೆ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈ|| ಡೈ|| ರು ಚಿಕ್ಕಪೇಟೆಯಲ್ಲಿರುವ ಜವಳಿ ಅಂಗಡಿಗಳಿಗೆ ಭೇಟಿಕೊಟ್ಟು ವ್ಯಾಪಾರಿಗಳಲ್ಲಿರುವ ಸ್ಟಾಕನ್ನು ಮಾರಲು ಜೊರಕ್ಕೆ ಬಿಡಬೇಕೆಂದೂ ಆ ರೀತಿ ಮಾಡದಿದ್ದರೆ ಕ್ರಮ ಜರುಗಿಸಬೇಕಾಗುವುದೆಂದೂ ಎಚ್ಚರಿಕೆಯಿತ್ತಿದ್ದಾರೆ.

RETURN TICKET TO RADIANT YOUTH AT

New Royal Dispensary

Ashoka Road, Mysore

ಪೋಲೀಸರು ಗುಂಡು ಹಾರಿಸಿದರು

ಕಾಶ್ಮೀರ ಸಂಸ್ಥಾನದ ಜಮ್ಮು ನಗರದಲ್ಲಿ ಆಹಾರ ಕೊರತೆ ಬಗ್ಗೆ ಜನಗಳು ದೊಂಬಿ ಎದ್ದು ಪೋಲೀಸ್ ಸ್ಟೇಷನನ್ನೂ ದೆ ಗೌರ್‍ನರರ ಮೋಟಾರನ್ನು ಸುಟ್ಟು, ಗಲಾಟೆ ನಡೆಸಿದರೆಂದೂ, ಮಾರನೇ ದಿವಸ ಸರ್ಕಾರದ ಆಜ್ಞೆಗೆ ವಿರುದ್ಧವಾಗಿ ಮೆರವಣಿಗೆ ನಡೆಸಿದರೆಂದೂ, ಇದರ ಪರಿಣಾಮವಾಗಿ ಪೋಲೀಸರು ಗುಂಡು ಹಾರಿಸಿದ್ದರಿಂದ ೭ ಮಂದಿ ಸತ್ತರೆಂದೂ, ೧೭ ಮಂದಿಗೆ ಗಾಯವಾಗಿದೆಯೆಂದೂ ವರದಿಯಾಗಿದೆ. ೨೫ ಮಂದಿ ಪೋಲೀಸ್ ಅಧಿಕಾರಿಗಳಿಗೂ ಗಾಯವಾಗಿದೆ. ಅಲ್ಲಿ ಕರ್ಫ್ಯೂ ಆರ್ಡರನ್ನು ಜಾರಿಗೆ ತರಲಾಗಿದೆ.

ಈ ಘಟನೆ ಬಗ್ಗೆ ಸರ್ಕಾರದವರು ಪರಿಶೀಲಿಸಲು ಪ್ರಜಾಸಭೆಯು ನಡೆಯಬೇಕಾದ್ದನ್ನು ಮುಂದುವರಿಸಲಾಗಿದೆ.

ಜಮ್ಮು ನಗರದಲ್ಲಿ ಆಹಾರ ತೊಂದರೆ ನಿವಾರಿಸಲು ಶ್ರೀಮನ್ಮಹಾರಾಜರವರು ೫೦ ಸಾವಿರ ರೂ. ಗಳನ್ನೂ ಮತ್ತು ಶ್ರೀಮನ್ಮಹಾರಾಣಿಯವರು ೫ ಸಾವಿರ ರೂ. ಗಳನ್ನೂ ಕೊಟ್ಟಿರುವರು.

Edited, printed and published by A. R. Nagarajan, at the Sadhvi Press, D.Subbiah Road, Mysore.

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಸಯಾಜಿ ರಾವ್ ರೋಡು, ಮೈಸೂರು

	ರೂ. ಆ.	ಲಾಂಗ್ ಕ್ಲಾತ್ಸ್:—	ರೂ. ಆ.
ಲಾಲ್ ಮಿಲ್ಸ್ ಚೀಟ್ಸ್ ಗಜ ೧ ಕ್ಕೆ	0—0	ಡಬಲ್ ಸ್ಪೆಷಲ್ ಮಾರ್ಕ್	0—8¾
ವಿಕ್ರಮ ಮಿಲ್ಸ್ „ „	0-8½	ನಂ. 3640	0-7½
ಟೋಬ್ರಲ್ಕೊ ವಾಯಿಲ್ „	0—12	ಬಿಂದೂ ಮಾತ	0—12
ಡಬಲ್ ಕಲರ್ ವಾಯಿಲ್ 45"	1—0	ಮಿನರ್ವ ಮಿಲ್ಸ್	0—9
ಹುಡುಗರಿಗಾಗಿ ರೆಡ್ಡಿ ಉಣ್ಣೆ ಸ್ವೆಟರ್ 1 ಕ್ಕೆ	2—0	ಬಕಿಂಗ್ಹ್ಯಾಂ ಮಿಲ್ಸ್	0—10
ಕರ್ನಾಟಿಕ್ ಮಿಲ್ಸ್ ಪ್ಯಾಟ ಗಜ 1 ಕ್ಕೆ	0-14	ಕರ್ನಾಟಿಕ್ ಮಿಲ್ಸ್ 45"	0—15
„ 72" ಷೀಟಿಂಗ್ 1 ಗಜ	2-0	ನಸ್ತ್ರ ಮಿಲ್ಸ್	0-10½
ಬಕಿಂಗ್ಹ್ಯಾಂ ಮಿಲ್ಸ್ ಟ್ವಿಲ್ „	0-14	ಹಾಫ್ ಆರಂ ಪಟಾಗಳು 1 ಕ್ಕೆ	1—9
ಕಾಷ್ಮೀರ್ ಸಿಲ್ಕ್ ಕ್ರೇಪ್ 45"	0 11	ಪೈಜಾಮಾ „	1-10
„ 50" ವಾಲ್	0—9	ಸ್ವೆಟರ್ ಪಟೆರ್ನ್	
ಗಿರಿನ ಬಿಡ್ಡರ್ ಚೆಕ್ ಪಟೆರ್ನ್	0—6	1 ನೇ ದರ್ಜೆ 1 ಗಜಕ್ಕೆ	0—14
ಕಲ್ಕತ್ತ ಸೂಟಿಂಗ್ 1 ಕ್ಕೆ	3—8	„ ಹಾಫ್ ಆರಂ ಪಟ 1 ಕ್ಕೆ	2—2
ಇಟಾಲಿಯನ್ ಪ್ರಿಂಟ್ 48" 1 ಗಜ	1—8	ಸೋಲಾಪುರ ಗರಿ ಕೋಟಿಂಗ್	0—11
ಪೇಪರ್ ಬಾರ್ಡರ್ ಪ್ರಿಂಟ್ ಕ್ಲಾತ್ „	1—0	ಸೂರತ್ ಕೋಟಿಂಗ್ 1 ಗಜಕ್ಕೆ	1—4
ರಾಣಿ ಬ್ರದರ್ಸ್ ಡ್ರಿಲ್	0—12	ಚೆಕ್ ಕೋಟಿಂಗ್ „	0—14
ಕೃಷ್ಣಾ ಮಿಲ್ ಡ್ರಿಲ್	0—10	ಕೃಷ್ಣಾ ಮಿಲ್ಸ್ ಕೋಟಿಂಗ್	1—4
ಮಿನರ್ವಾ ಮಿಲ್ ಡ್ರಿಲ್	1—0	ಮಿಲ್ ಪಟೆರ್ನ್	0—12
		ಕ್ರೇಪ್ ಮಿಲ್ ಫೋರ್ಟ್ 2-8 ಗಜ	6—8
		ಪಿಸ್ಟ್ಲ್ ಸಾಧಾ „	8—8
		ಮಾರ್ಕೆಟ್ ಪ್ಲೈನ್ ಜಂಟ „	9—8
		ಜ್ಯಾಕ್ವರ್ಡ್ ಸೀಟ	9—12

ಇವಲ್ಲದೆ ಕೊಳ್ಳೆ ಪರದೆಗಳು, ರುಮಾಲು ಪಟ್ಟೆ ರಗ್ಗುಗಳು, ಫ್ರಾಕ್ಸ್, ಸ್ಕಾರ್ಫ್ಸ್, ಬ್ಯಾಂಗಲ್ಸ್, ಆಯಿಲ್ ಕ್ಲಾತ್, ಬೆಂಗಳೂರು, ಕಾಶ್ಮೀರ, ಬನಾರಸ್, ಬರೋಡಾಗಳ ರೇಷ್ಮೆ ಸೀರೆಗಳು ಮತ್ತು ಪೀತಾಂಬರಗಳು ದೊರೆಯುತ್ತವೆ

ದಯವಿಟ್ಟು ಬಂದು, ಬಟ್ಟೆಗಳನ್ನೂ ಮತ್ತು ಒಳಗಿನ ಮಾದರಿಗಳನ್ನು ನೋಡಿ ತೃಪ್ತಿಪಡಿ

ಶ್ರೀ ದಸರಾ ಉತ್ಸವ ಕ್ಕಾಗಿ

ತಾ|| ೧-೧೦-೪೩ ರಿಂದ ಪ್ರತ್ಯೇಕವಾದ ಮಳಿಗೆ ತೆರೆದು ವ್ಯಾಪಾರ ಮಾಡುತ್ತೇವೆ

ಸಮಸ್ತರ ಆದರಣೆಗೆ ಪಾತ್ರವಾದ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಪರೀಕ್ಷಿಸಿ ನೋಡಿರಿ.

ಡಿ. ಪುಟ್ಟಯ್ಯ ಬಿನ್ ನಿಂಗಪ್ಪ, ದೇವರಾಜ ಮಾರ್ಕೆಟ್, ಮೈಸೂರು

ಮಾರಾಟಕ್ಕೆ ದೊರೆಯುವ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮುಂತಾದವು ನಮ್ಮಲ್ಲಿ ಮತ್ತು ಸಂತೆಪೇಟೆ ಬ್ರಾಂಚ್ ಅಂಗಡಿಯಲ್ಲೂ ಸಿಕ್ಕುತ್ತವೆ. ರವೆ ಮತ್ತು ಗೋಧಿ ಹಿಟ್ಟು ದೊರೆಯುತ್ತೆ

From 30-9-1943 Daily 3 Shows

New Opera Talkies, Mysore

KARDAR PRODUCTIONS FIRST SMASH HIT

With Mehtab, Ulhas, Nirmalakumari

SHARADA HINDI

Last Class 0—3—0

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೆಚ್ಚುವುದಲ್ಲದೆ ಚರ್ಮದ ಮೇಲಿನ ಬೆವರು ರೋಮ ರಂಧ್ರಗಳನ್ನೆಲ್ಲಾ ಶುದ್ಧಗೊಳಿಸಿ ಆರೋಗ್ಯವನ್ನುಂಟುಮಾಡುವುದು. ಅದರ ಮೃದುತ್ವವೂ, ಗುಣವೂ, ಸುಗಂಧವೂ ಚಿತ್ತಾಕರ್ಷವೆನಿಸುವುದು.

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೨] ಗುರುವಾರ ೩೦-೯-೪೩ [ಸಂಚಿಕೆ ೬೨

ನೀಪರ್‌ನಲ್ಲಿ ಜರ್ಮನರ ಓಟ

ಗಾಂಧಿ ಜಯಂತ್ಯುತ್ಸವಕ್ಕೆ ಮದರಾಸಿನಲ್ಲಿ ಪ್ರತಿಬಂಧಕ
ಮೈಸೂರು ಜಿಲ್ಲೆಯಿಂದ ಹಾಲು ರಫ್ತಾಗಕೂಡದು

ದಸರಾ ಮಹೋತ್ಸವ

ಮೈಸೂರು ೨೦

ರಾಜಧಾನಿಯಲ್ಲಿ ದಸರಾ ಮಹೋತ್ಸವವು ಈ ದಿನದಿಂದ ಪ್ರಾರಂಭವಾಯಿತು. ಯಥಾವಿಧಿಯಾಗಿ, ಶ್ರೀಮನ್ಮಹಾರಾಜರವರು ಈ ದಿನ ಬೆಳಿಗ್ಗೆ ೧೧-೩೦ ಗಂಟೆಗೆ ದರ್ಬಾರ್ ಹಾಲಿಗೆ ದಯಮಾಡಿಸಿ, ೧೧-೪೦ ಗಂಟೆಗೆ ಸರಿಯಾಗಿ ಶುಭಮುಹೂರ್ತದಲ್ಲಿ ಸಿಂಹಾಸನಾರೂಢರಾದರು. ಒಡನೆಯೇ ಅರಮನೆ ಬತೇರಿಯಿಂದ ಮರ್ಯಾದಾರ್ಥವಾಗಿ ಕುಶಾಲುತೋಪುಗಳು ಹಾರಿಸಲ್ಪಟ್ಟವು.

ದರ್ಬಾರಿನಲ್ಲಿ ದಿವಾನರಾದ ಪ್ರಧಾನ ಶಿರೋಮಣಿ ಎನ್. ಮಾಧವರಾಯರು, ಸರ್ದಾರ್ ಎಂ. ಲಕ್ಷ್ಮೀಕಾಂತರಾಜೇ ಅರಸಿನವರು, ಪ್ರೈವೇಟು ಸೆಕ್ರೆಟರಿಗಳಾದ ರಾಜಸಭಾಭೂಷಣ ಟಿ. ತಂಬೂಚೆಟ್ಟಿಯವರು, ಸಚಿವರು ಮತ್ತು ಇತರ ಅರಸು ಮನೆತನದವರೂ ಶ್ರೀಮನ್ಮಹಾರಾಜರವರಿಗೆ ನಜರನ್ನು ಒಪ್ಪಿಸಿ ರಾಜಭಕ್ತಿಯನ್ನು ಸಲ್ಲಿಸಿದರು.

ಈ ದಿನ ರಾತ್ರಿ ೮ ಗಂಟೆಗೆ ಯಥಾಪ್ರಕಾರವಾಗಿ ದರ್ಬಾರು ನಡೆಯುವುದು.

ದಸರಾ ವಸ್ತು ಪ್ರದರ್ಶನ

ಮೈಸೂರು "ದಸರಾ ವಸ್ತು ಪ್ರದರ್ಶನವು ಈ ದಿನದಿಂದ ಪ್ರಾರಂಭವಾಯಿತು. ಈ ದಿನ ಬೆಳಿಗ್ಗೆ ೯ ಗಂಟೆಗೆ ಸರಬರಾಜು ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸನವರು ಪ್ರದರ್ಶನದ ಆರಂಭೋತ್ಸವವನ್ನು ನಡೆಸಿದರು.

ಸರ್ಕಾರದವರು ನೂತನವಾಗಿ ಕೈಗೊಂಡಿರುವ ಗ್ರಾಮಾಭಿವೃದ್ಧಿ ಯೋಜನೆಗೆ ಸಂಬಂಧಪಟ್ಟ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಕೈಗಾರಿಕೆ ಶಾಖೆಯವರು ಗೃಹ ಕೈಗಾರಿಕೆಗಳ ಪ್ರದರ್ಶನ, ವ್ಯವಸಾಯ ಶಾಖೆಯವರ ಬೆಲ್ಲ ಮಾಡುವ ವಿಧಾನ ಮತ್ತು ಗೊಬ್ಬರಗಳ ಪ್ರದರ್ಶನ ಮತ್ತು ಉದ್ಯಾನವನ ಶಾಖೆಯವರು ತರಕಾರಿ ಮತ್ತು ಹಣ್ಣುಗಳ ಪ್ರದರ್ಶನ ಮತ್ತು ಎಂತಹ ಸಾಲು ಮರಗಳನ್ನು ನೆಡಬೇಕೆಂಬುದನ್ನು ಸೂಚಿಸುವ ಪ್ರದರ್ಶನ ಇತ್ಯಾದಿಗಳು ಕಂಡುಬರುತ್ತವೆ.

ಬಂಗಾಳ ಸರ್ಕಾರದ ಕೈಗಾರಿಕೆ ವಸ್ತುಗಳು ಪ್ರದರ್ಶಿಸಲ್ಪಟ್ಟಿವೆ. ಅಕ್ಷರ ಪ್ರಚಾರ ಸಮಿತಿಯವರು ಅನೇಕ ಪಟಗಳನ್ನು ಪ್ರದರ್ಶಿಸಿ, ಸಾರ್ವಜನಿಕರ ಗಮನಕ್ಕೆ ತಂದಿದ್ದಾರೆ.

ಹಾಲು ರಫ್ತಿಗೆ ಪ್ರತಿಬಂಧಕ

ಹಾಲು ಮತ್ತು ಅದರಿಂದ ತಯಾರಾಗುವ ಪದಾರ್ಥಗಳನ್ನು ಮೈಸೂರು ಜಿಲ್ಲಾಧಿಕಾರಿಗಳ ಅಪ್ಪಣೆಯಿಲ್ಲದೆ ಹೊರಕ್ಕೆ ಕಳುಹಕೂಡದೆಂದು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದಾರೆ.

ಘಟಿಕೋತ್ಸವ

ಮೈಸೂರು ವಿಶ್ವ ವಿದ್ಯಾನಿಲಯದ ಘಟಿಕೋತ್ಸವವು ಅಕ್ಟೋಬರ್ ೧೩ರಲ್ಲಿ ನಡೆಯುವುದಷ್ಟೆ. ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ರವರು ಭಾಷಣ ಮಾಡಲು ಅನನುಕೂಲವೆಂದು ತಿಳಿಸಿದ್ದರಿಂದ ಸರ್ ಸಿ. ಸಿ. ಘೋಷ್‌ರವರು ಭಾಷಣ ಮಾಡುವರೆಂದು ತಿಳಿಯಬರುತ್ತೆ.

ಗಾಂಧಿ ಜಯಂತಿ

ರಾಜಧಾನಿಯ ದೇಶೀಯ ವಿದ್ಯಾಶಾಲೆಯವರು ಗಾಂಧಿ ಜಯಂತಿಯನ್ನು ನಾಳೆ [illegible]

ಪ್ರಭುತ್ವದ ಸುದ್ದಿಗಳು

ತುಮಕೂರು ಜಿಲ್ಲಾ ಗುಬ್ಬಿ ಟೌನ್ ಪೌರಸಭೆಯನ್ನು ರದ್ದುಗೊಳಿಸಿರುವ ಆಜ್ಞೆಯು ೧೯೪೩ನೇ ಡಿಸೆಂಬರ್ ತಿಂಗಳ ಆಖೈರುವರೆಗೂ ಜಾರಿಯಲ್ಲಿರುತ್ತೆ. ೧೯೪೪ನೇ ಜನವರಿ ಒಂದನೇ ತಾರೀಕಿನಿಂದ ಸದರಿ ಪೌರಸಭೆಯು ಪುನರುಜ್ಜೀವನಗೊಳಿಸಲ್ಪಡುವುದು.

• • • •

ಮೈಸೂರು ಸಂಸ್ಥಾನದೊಳಗಿರತಕ್ಕ ಜರ್ಮನ್ ಮಿಷನರಿಗಳು, ಜರ್ಮನ್ ಸರ್ಕಾರದಿಂದ ಹಣವು ಬರದೆ ಸೇವೆಯ ವೆಚ್ಚಕ್ಕಾಗಿ ಬಹುಮಾನ ಪಡೆಯುವ ಆಸ್ಪತ್ರೆಗಳಿಗೆ ಸಂಸ್ಥಾನದಲ್ಲಿ ರಿಯಾಯಿತಿಯನ್ನು ಕೊಡುವ ಅಗತ್ಯವಿಲ್ಲವೆಂದು ತಿಳಿಸಿದ್ದಾರೆ.

• • • •

ಅಧಿಕಾರಾವಧಿ ಹೆಚ್ಚಿಸಲಾಯಿತು

ರಾಜಸೇವಾ ಪ್ರಸಕ್ತ ಎಂ. ವೀರರಾಜ ಅರಸಿನವರಿಗೆ ಒಂದು ವರ್ಷ ಕಾಲ ಜೀವದಾನ ದೊರೆತಿದೆಯೆಂದು ತಿಳಿಯಬರುತ್ತೆ.

ಸಿಂಧ್‌ನಿಂದ ಮೈಸೂರಿಗೆ ಆಹಾರ ಧಾನ್ಯಗಳ ಸರಬರಾಜು

ಮೈಸೂರು ಸರ್ಕಾರದ ಆಹಾರ ಸಿವಿಲ್ ಸಪ್ಲೈಸ್ ಡೈರೆಕ್ಟರಾದ ವಿ. ಆಟೂ ಬೇಕರ್‌ರವರು ಸಿಂಧ್ ಸರ್ಕಾರದಿಂದ ಮೈಸೂರು ಸಂಸ್ಥಾನಕ್ಕೆ ಬರಬೇಕಾದ ಆಹಾರ ಧಾನ್ಯಗಳ ಕೋಟಾವನ್ನು ಕೊಳ್ಳಲು ಈಗ ಕರಾಚಿಯಲ್ಲಿ ಇದ್ದಾರೆ. ೧ ಸಾವಿರ ಟನ್ ಅಕ್ಕಿ, ೪ ಸಾವಿರ ಟನ್ ಗೋಧಿ ಮತ್ತು ೩ ಸಾವಿರ ಟನ್ ಹುರುಳಿ, ಇಷ್ಟು ಕೋಟಾವನ್ನು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ. ಇವುಗಳು ಶೀಘ್ರದಲ್ಲಿಯೇ ಮೈಸೂರಿಗೆ ಕಳುಹಿಸಲು ತಕ್ಕ ಪ್ರಯತ್ನ ನಡೆಸುತ್ತಿರುವರು.

ಪತ್ರಿಕೆಗೆ ಠೇವಣಿ

ಪೌಲ್ಘಾಟ್ ನಗರದ "ಪೌಲ್ಘಾಟ್ ಕ್ರಾನಿಕಲ್" ಎಂಬ ವಾರ ಪತ್ರಿಕೆಯು "ರೋಮ್ ನಗರ ಉರಿಯುತ್ತಿದೆ, ನೀರೋ ಪಿಟೀಲ್" ಎಂಬ ಲೇಖನವನ್ನು ಬರೆದುದಕ್ಕೆ ಮದ್ರಾಸ್ ಸರ್ಕಾರದವರು ೧ ಸಾವಿರ ರೂ. ಠೇವಣಿ ಕೇಳಿದ್ದಾರೆ.

ಗಾಂಧಿ ಜಯಂತಿ ಸಭೆಗಳಿಗೆ ನಿರ್ಬಂಧ

ಮಹಾತ್ಮಾ ಗಾಂಧೀಜೀಯವರ ೭೫ನೇ ಜಯಂತ್ಯುತ್ಸವದ ಸಂಬಂಧದಲ್ಲಿ ಬಹಿರಂಗ ಸಭೆಗಳು ಮತ್ತು ಮೆರವಣಿಗೆಗಳನ್ನು ಅಕ್ಟೋಬರ್ ೧ ರಿಂದ ೧೦ ರ ವರೆಗೆ ನಡೆಸಕೂಡದೆಂದು ಮದರಾಸ್ ನಗರದ ಪೋಲೀಸ್ ಕಮೀಷನರು ಆಜ್ಞೆಮಾಡಿದ್ದಾರೆ.

ಇಂಪೀರಿಯಲ್ ಬ್ಯಾಂಕಿನಲ್ಲಿ ೨೫೦೦ ರೂ. ಕಳವು

ಕರಾಚಿಯ ಇಂಪೀರಿಯಲ್ ಬ್ಯಾಂಕಿನ ಕೌಂಟರಿನಲ್ಲಿ ಟ್ರಾನ್ಸ್‌ಪೋರ್ಟ್ ಕಂಪೆನಿಯ ನೌಕರನೊಬ್ಬನು ೨೫೦೦ ರೂ ಗಳನ್ನು ಬ್ಯಾಂಕಿಗೆ ಕಟ್ಟುತ್ತಿರುವ ಸಮಯದಲ್ಲಿ ಯಾರೋ ಒಬ್ಬನು ಆತನ ಮೇಲೆ ಬಿದ್ದು ಹಣವನ್ನು ಅಪಹರಿಸಿಕೊಂಡು ಹೋದನೆಂದು ವರದಿಯಾಗಿದೆ.

ಶ್ರೀ ಕುಮಾರಪ್ಪನವರಿಗೆ ೨ ವರ್ಷ ಶಿಕ್ಷೆ

"ಗ್ರಾಮ ಉದ್ಯೋಗ ಪತ್ರಿಕೆ" ಯಲ್ಲಿ "ಕ್ರಿಡ್ ಬದಲು ಕಲ್ಲು" ಎಂಬ ಶಿರೋನಾಮೆಯಲ್ಲಿ ಲೇಖನವನ್ನು ಬರೆದರೆಂಬ ಅಪಾದನೆಯ ಮೇಲೆ ಅಖಿಲ ಭಾರತ ವಿಲೇಜ್ ಇಂಡಸ್ಟ್ರೀಸ್ ಅಸೋಸಿಯೇಷನ್ ಕಾರ್ಯದರ್ಶಿಗಳಾದ ಶ್ರೀ ಜೆ. ಸಿ. ಕುಮಾರಪ್ಪನವರಿಗೆ ಕರಾಚಿಯ ನ್ಯಾಯಾಧೀಶರು ೨ ವರ್ಷ ಕಠಿಣ ಶಿಕ್ಷೆ ವಿಧಿಸಿದ್ದಾರೆ.

ಮದ್ರಾಸ್ ಕಲೆಕ್ಟರ ವಿಷಾದಾಂತ ಮರಣ

ಮದನಪಲ್ಲಿ ಸಬ್ ಕಲೆಕ್ಟರಾದ ಮಿ|| ಎಂ. ಆರ್. ಸರ್ಕೀಲಿಯವರು ಮದರಾಸಿನಿಂದ ಡೆಲ್ಲಿಗೆ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದಾಗ ಅವರ ತಲೆಗೆ ತೀವ್ರ ಘಾಯವಾಯಿತೆಂದೂ, ಅದರಿಂದ ಬುದ್ಧಿಭ್ರಮಣೆಯುಂಟಾಗಿ ನಾಗಪುರದ ಆಸ್ಪತ್ರೆಗೆ ಸೇರಿಸಿ, ನಿರ್ಬಂಧದಲ್ಲಿಡಲಾಗಿತ್ತೆಂದೂ, ಆದರೆ ಅವರು ಆಸ್ಪತ್ರೆಯ ಮಹಡಿಯಿಂದ ಬಿದ್ದು ಪ್ರಾಣ ಕಳೆದುಕೊಂಡರೆಂದೂ ವರದಿಯಾಗಿದೆ.

ಸ್ಟಾಂಡರ್ಡ್ ಬಟ್ಟೆ

ಸ್ಟಾಂಡರ್ಡ್ ಬಟ್ಟೆಗಳನ್ನು ದಸರಾ ವಸ್ತು ಪ್ರದರ್ಶನದಲ್ಲಿ ನೋಡಬಹುದು. ಸರ್ಕಾರದವರು [illegible]

ನೀಪರ್‌ನಲ್ಲಿ ಜರ್ಮನರ ಓಟ

ರಷ್ಯನ್ ರಣರಂಗದ ನೀಪರ್ ಲೈನನ್ನು ರಷ್ಯನರು ಈಗಾಗಲೇ ಭೇದಿಸಿದ್ದಾರೆಂದು, ಅಲ್ಲಿ ಜರ್ಮನರು ಸಾವಿರಾರು ಸೈನಿಕರನ್ನೂ ಮತ್ತು ಸಾವಿರಾರು ಟನ್ ಯುದ್ಧ ಸಾಮಗ್ರಿಗಳನ್ನೂ ಕಳೆದುಕೊಂಡಿರುವರೆಂದೂ ಕ್ಯುಬನ್ ಕ್ಷೇತ್ರದ ಟೆಮ್ರಿಕ್ ಬಂದರನ್ನು ರಷ್ಯನರು ಆಕ್ರಮಿಸಿರುವರೆಂದೂ ಹೇಳಲಾಗಿದೆ.

ಕಾರ್ಸಿಕಾದ ಅಂತ್ಯ ಕದನ

ಕಾರ್ಸಿಕಾ ಕದನವು ಅಂತ್ಯವಾಗುವುದರಲ್ಲಿದೆಯೆಂದೂ, ಫ್ರೆಂಚ್ ಸೈನಿಕರು ಈಗಾಗಲೇ ಕಾರ್ಸಿಕಾ ರಾಜಧಾನಿಯಾದ ಬಾಸ್ಟಿಯಾ ನಗರವನ್ನು ಆಕ್ರಮಿಸಿರುವರೆಂದು ಹೇಳಲಾಗಿದೆ ಬ್ಯಾಸ್ಟಿಯಾಕ್ಕೆ ಸಮೀಪದಲ್ಲಿ ಫ್ರೆಂಚರಿಗೂ ಜರ್ಮನರಿಗೂ ಉಗ್ರ ಕದನ ನಡೆದು ಟಿನೋನೋರಿಯಾ ನಿಲ್ದಾಣವನ್ನು ಜರ್ಮನರು ಕೈಬಿಡಬೇಕಾಯಿತೆಂದೂ ಹೇಳಲಾಗಿದೆ.

ಜರ್ಮನ್ ಹಡಗುಗಳ ನಾಶ

ಫ್ರೆಂಚ್ ತೀರ ಪ್ರದೇಶದಲ್ಲಿ ಬ್ರಿ|| ಮತ್ತು ಜರ್ಮನ್ ನೌಕೆಗಳಿಗೆ ಘರ್ಷಣೆಯುಂಟಾಗಿ ಒಂದು ಜರ್ಮನ್ ಹಡಗು ಮುಳುಗಿತೆಂದೂ, ಇನ್ನೊಂದು ಬೆಂಕಿಬಿದ್ದು ನಾಶವಾಯಿತೆಂದೂ ವರದಿಯಾಗಿದೆ.

ಶತ್ರು ವಿಮಾನಗಳ ವಶ

ಇಟಲಿಯ ೬ ವಿಮಾನ ನಿಲ್ದಾಣಗಳಿಂದ ಒಟ್ಟು ೨೫೪ ಆಕ್ಸಿಸ್ ವಿಮಾನಗಳು ಮಿತ್ರರಿಗೆ ವಶವಾಗಿವೆಯೆಂದು ಹೇಳಲಾಗಿದೆ. ಸಿಸಲಿಯಲ್ಲಿ ೧೧೦೦ ವಿಮಾನಗಳನ್ನು ಶತ್ರುವು ಬಿಟ್ಟು ಹೋಗಿರುವನೆಂದು ಹೇಳಲಾಗಿದೆ.

ಜರ್ಮನಿ ಮೇಲೆ ಧಾಳಿ

ಜರ್ಮನಿಯ ಹ್ಯಾನೋವರ್ ನಗರದ ಮೇಲೆ ಬ್ರಿಟಿಷ್ ವಿಮಾನಗಳು ಅಗಾಧ ಧಾಳಿ ನಡೆಸಿ, ಅಪಾರ ನಷ್ಟವನ್ನುಂಟು ಮಾಡಿದುವೆಂದೂ ೨೪ ಮಿತ್ರ ವಿಮಾನಗಳು ವಾಪಸು ಬರಲಿಲ್ಲವೆಂದು ವರದಿಯಾಗಿದೆ. ವಾಯುವ್ಯ ಜರ್ಮನಿ ಮತ್ತು ಹಾಲೆಂಡ್‌ಗಳ ಮೇಲೂ ಧಾಳಿ ನಡೆಸಲಾಯಿತೆಂದೂ ೬ ಶತ್ರು ವಿಮಾನಗಳನ್ನು ನಾಶಮಾಡಲಾಯಿತೆಂದು ಹೇಳಲಾಗಿದೆ.

ನಾಜಿಗಳಿಗೆ ಏಟು

ಕಾರ್ಸಿಕಾ ಮತ್ತು ಜೆನೀವಾಕೊಲ್ಲಿಯಿಂದ ಸಾಗುತ್ತಿದ್ದ ಜರ್ಮನ್ ಸೈನಿಕರಿಗೆ ಮಿತ್ರ ಸೈನಿಕರು ಅಪಾರ ನಷ್ಟವುಂಟು ಮಾಡಿದರೆಂದೂ ಮತ್ತು ೧೦ ಜರ್ಮನ್ ಸಂಚಾರ ಹಡಗುಗಳನ್ನು ಮುಳುಗಿಸಲಾಯಿತೆಂದು ವರದಿಯಾಗಿದೆ.

ಲಂಡನ್‌ನಲ್ಲಿ ಭಾರತದ ಪರಿಹಾರ ಸಮಿತಿ

ಭಾರತದ ಆಹಾರ ವಿಷಮ ಪರಿಸ್ಥಿತಿ ಬಗೆಹರಿಸಲು ಲಂಡನ್ನಿನಲ್ಲಿ ಪಾರ್ಲಿಮೆಂಟ್ ಸದಸ್ಯರಾದ ಮಿ|| ಕ್ಲಮೆಂಟ್ ಡೇವಿಸ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ.

ಗ್ಲಾಸ್ಗೋ, ಮ್ಯಾಂಚೆಸ್ಟರ್ ಮತ್ತು ಬರ್ಮಿಂಗ್ಹ್ಯಾಂ ನಗರಗಳಲ್ಲೂ ಇಂಥಾ ಸಮಿತಿಗಳನ್ನು ರಚಿಸಲಾಗಿದೆ. ಸಾರ್ವಜನಿಕರಿಗೆ ಭಾರತದಲ್ಲಿ ಆಹಾರ ಕೊರತೆ ಬಗ್ಗೆ ತಿಳುವಳಿಕೆಮಾಡಿ ಸರ್ಕಾರದವರು ಶೀಘ್ರವಾಗಿ ಕಾರ್ಯಕ್ರಮ ಕೈಗೊಳ್ಳಬೇಕೆಂದೂ, ಪ್ರಪಂಚದ ಇತರ ಕಡೆ ಇರುವ ಧಾನ್ಯಗಳನ್ನು ಭಾರತಕ್ಕೆ ಕಳುಹುವಂತೆ [illegible]

ಬಿಲ್ಡರ್ಸ್ ಸಹಕಾರ ಸಂಘ

ಮೈಸೂರು ೨೦

ಮೇಲ್ಕಂಡ ಸಂಘದಲ್ಲಿ ಮುಖ್ಯವಾಗಿ [illegible] ಕ್ರ ಯುಕ್ತ ೨ ॥ ೧-೧೦-೪೩ ರ [illegible] ೧೦-೧೦-೪೩ ರ ವರೆಗೆ [illegible] ಒಂದು ಬಗೆ ಮೇಲೆ [illegible] ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮರಣ

ಪ್ರಜಾ ಪ್ರತಿನಿಧಿ ಸಭೆ ಸದಸ್ಯರೂ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಕೌನ್ಸಿಲ್ ಮೆಂಬರಲ್ಲಿರುವ [illegible] ಶ್ರೀ [illegible] ಗೌಡರ [illegible] ಯವರು ಇಲ್ಲಿನ ಕ್ಷಯ ರೋಗದ ಆಸ್ಪತ್ರೆಯಲ್ಲಿ ಈದಿನ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ.

ಚರ್ಚಾ ಸ್ಪರ್ಧೆ

" [illegible] ಎಂಬ ವಿಷಯದ ಮೇಲೆ [illegible] ಮಾಧ್ಯಮಿಕ ಶಾಲಾ [illegible] ಶ್ರೀ [illegible] ಸಂಘದ ಆಶ್ರಯದಲ್ಲಿ [illegible] ನಡೆಯಿತು. ಶ್ರೀ ಎ. ಎನ್. [illegible] ಅಧ್ಯಕ್ಷರಾಗಿದ್ದರು.

ಸ್ಪರ್ಧೆಯಲ್ಲಿ ಚೆನ್ನಾಗಿ ಮಾತನಾಡಿದವರಿಗೆ ಬಹುಮಾನಗಳನ್ನು ಕೊಡಲಾಯಿತು

1 [illegible] ಶಾಲಾ ವಿದ್ಯಾರ್ಥಿ ಕೆ. ಗೋವಿಂದ [ರಜತ ಪದಕ]

2. ಮೈಥಾಡಿಸ್ಟ್ ಶಾಲೆಯ ಕೆ. ವಿ ಕೃಷ್ಣಮೂರ್ತಿ.

3. [illegible] ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿ ಎಲ್. ಗೌರಮ್ಮ.

ವೃಕ್ಷ ವಿದ್ಯಾರ್ಥಿಗಳ ಉಪಹಾರ ನಿಧಿ

[illegible] ದಲ್ಲಿರುವ ಶ್ರೀ ಕನ್ಯಕಾ [illegible] ಅನಾಥಾಲಯದ ವಿದ್ಯಾರ್ಥಿಗಳಿಗೆ ಪ್ರತಿದಿನವೂ ಫಲಾಹಾರವನ್ನೊದಗಿಸಲು ಒಂದು ನಿಧಿಯನ್ನೇರ್ಪಡಿಸಿರುವರು. ಉದಾರಿಗಳಾದ ವೈಶ್ಯ ಮಹಾಶಯರು ಮತ್ತು ಇತರ [illegible] ತಮ್ಮ ಶಕ್ತ್ಯನುಸಾರ ಸಹಾಯವನ್ನು [illegible] ಸಹಕರಿಸಬೇಕೆಂದು [illegible] ದರ್ಶಿಯವರಾದ ಶ್ರೀ [illegible] ಯವರು ಪ್ರಾರ್ಥಿಸುತ್ತಾರೆ.

೬೦ ವರ್ಷಕ್ಕಿಂತ ಹೆಚ್ಚು ವಯಸ್ಸಿನ ವಿಧುರರು ಮದುವೆಯಾಗಕೂಡದು

ಭಾರತದಲ್ಲಿ ವಿಧವೆಯರು ಹೆಚ್ಚಾಗಿರುವುದರಿಂದಲೂ ಮತ್ತು ಯುದ್ಧದ ದೆಸೆಯಿಂದ ಇದು ಹೆಚ್ಚಾಗುತ್ತಿರುವುದರಿಂದಲೂ ೬೦ ವರ್ಷಕ್ಕಿಂತ ಹೆಚ್ಚು ವಯಸ್ಸಿನ ವಿಧುರರು ಕನ್ಯೆಯರನ್ನು ಮದುವೆ ಮಾಡಿಕೊಳ್ಳದ ಹಾಗೆ ಭಾರತ ಸರ್ಕಾರದವರು ತಕ್ಕ ನಿರ್ಬಂಧವನ್ನು ಹಾಕಬೇಕೆಂದು ಲಕ್ನೋ ನಗರದ ವಿಧವಾ ಪುನರ್ವಿವಾಹ ಲೀಗಿನವರು ಒಮ್ಮತದ ನಿರ್ಣಯ ಮಾಡಿದ್ದಾರೆ.

4. ಮಹಾರಾಣಿಯವರ ಮಾಧ್ಯಮಿಕ ಶಾಲಾ ವಿದ್ಯಾರ್ಥಿನಿ ಎಸ್. ಎಸ್. ಸರೋಜ ಸ್ಪರ್ಧೆಯ ಶೀಲ್ಡನ್ನು ಮೈಥಾಡಿಸ್ಟ ಮಾಧ್ಯಮಿಕ ಶಾಲೆಗೆ ಕೊಡಲಾಯಿತು.

Edited, printed and published by A. R. Nagarajan, at the Sadhvi Press, D.Subbiah Road, Mysore.

ದರೋಡೆಗಾರರಿಂದ ೪ ಮಂದಿ ಕೊಲೆ

ಸಿಂಧಿಗೆ ಸೇರಿದ [illegible] ಎಂಬ ಹಳ್ಳಿಗೆ ಸಶಸ್ತ್ರ ದರೋಡೆಗಾರರು ನುಗ್ಗಿ, ಹಳ್ಳಿಯ ಪಟೇಲನನ್ನೂ ಮತ್ತು ಇತರ ಮೂರು ಜನಗಳನ್ನು ಕೊಂದುಹಾಕಿದರೆಂದು ವರದಿಯಾಗಿದೆ.

ಭಾರತದಲ್ಲಿ ರಾಷ್ಟ್ರೀಯ ಸರ್ಕಾರ ಸ್ಥಾಪಿಸಬೇಕು

ಭಾರತದಲ್ಲಿ ರಾಷ್ಟ್ರೀಯ ಸರ್ಕಾರ ಸ್ಥಾಪಿಸಲು ಭಾವಿವೈಸ್‌ರಾಯ್ ರಾದ ಲಾರ್ಡ್ ವೇವಲ್‌ರಿಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಗ್ರೇಟ್ ಬ್ರಿಟನ್ ಆಜ್ಞೆ ಮಾಡಬೇಕೆಂದು ಅಮೇರಿಕ ರೌಂಡ್ ಟೇಬಲ್ ಸಂಸ್ಥೆ ಅಧ್ಯಕ್ಷರಾದ [illegible] ರವರು ಬ್ರಿಟನಿಗೆ ಒತ್ತಾಯ ಪಡಿಸಿರುವರೆಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ತಿಳಿಸಿದ್ದಾರೆ

ನೈಜಾಮರ ಔದಾರ್ಯ

ಬಂಗಾಳ ಪರಿಹಾರದ ಇಂಡಿಯನ್ ರೆಡ್ ಕ್ರಾಸ್ ನಿಧಿಗೆ ೬ ಲಕ್ಷ ರೂ ಗಳು ವಸೂಲಾಗಿವೆ. ಅದರಲ್ಲಿ [illegible] ನೈಜಾಮರಿಂದ ೧ ಲಕ್ಷ ರೂ ಬಂದಿದೆ.

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಸಯ್ಯಾಜಿರಾವ್ ರೋಡು, ಮೈಸೂರು

	ರೂ. ಅ.	ಲಾಂಗ್ ಕ್ಲಾತ್ಸ್ :—	ರೂ. ಅ.
[illegible] ಗಜ ೧ ಕ್ಕೆ	0—9	ಡಬಲ್ ಸೈಕಲ್ ಮಾರ್ಕ್	0—8¾
[illegible] ಮಿಲ್ಸ್ " "	0-8½	ನಂ. 3640	0—7½
[illegible] "	0—12	[illegible]	0—12
ಡಬಲ್ [illegible] 45"	1—0	[illegible] ಮಿಲ್ಸ್	0— 9
[illegible] 1 ಕ್ಕೆ	2—0	ಬಕಿಂಗ್ಹ್ಯಾಂ ಮಿಲ್ಸ್	0—10
ಕರ್ನಾಟಿಕ್ ಮಿಲ್ಸ್ [illegible] ಗಜ 1 ಕ್ಕೆ	0-14	ಕರ್ನಾಟಿಕ್ ಮಿಲ್ಸ್ 45"	0—15
" 72" [illegible] 1 ಗಜ	2-0	[illegible] ಮಿಲ್ಸ್	0-10½
ಬಕಿಂಗ್ಹ್ಯಾಂ ಮಿಲ್ಸ್ [illegible] "	0-14	[illegible] 1 ಕ್ಕೆ	1—9
[illegible] 45"	0-11	[illegible] "	1-10
" 50" [illegible]	0—9	[illegible]	
[illegible]	0—6	1 ನೇ ದರ್ಜೆ 1 ಗಜಕ್ಕೆ	0—14
[illegible] 1 ಕ್ಕೆ	3—8	" [illegible] 1 ಕ್ಕೆ	2—2
[illegible] 48" 1 ಗಜ	1—8	[illegible] ಕೋಟಿಂಗ್	0—11
[illegible] "	1—0	[illegible] ಕೋಟಿಂಗ್ 1 ಗಜಕ್ಕೆ	1—4
[illegible]	0—12	[illegible] ಕೋಟಿಂಗ್ "	0—14
[illegible] ಮಿಲ್ [illegible]	0—10	[illegible] ಮಿಲ್ಸ್ ಕೋಟಿಂಗ್	1—4
[illegible]	1—0	[illegible]	0—12
		[illegible] 2×8 ಗಜ	0—8
		[illegible] "	8—8
		[illegible] "	9—8
		[illegible]	9—12

ಇವಲ್ಲದೆ [illegible] ಬೆಂಗಳೂರು, [illegible] ಗಳ ರೇಷ್ಮೆ ಸೀರೆಗಳು ಸಹ ಬೇಕಾದಷ್ಟು ದೊರೆಯುತ್ತವೆ.

ದಯವಿಟ್ಟು [illegible] ಸೀರೆಗಳ ನಾನಾ ರಕಮುಗಳು ಮತ್ತು [illegible] ರಗಳನ್ನು ನೋಡಲು ಕೃಪೆ ಬೇಡಿ.

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

[illegible]

ಟಿ. [illegible], ದೇವರಾಜ ಮಾರ್ಕೆಟ್, ಮೈಸೂರು

[illegible] ಸಕ್ಕರೆ, ಅಲ್ಲಕ್ಕರೆ, [illegible] ಸಕ್ಕರೆ [illegible] ರವೆ ಮತ್ತು [illegible] ದೊರೆಯುತ್ತೆ.

RETURN TICKET TO RADIANT YOUTH AT

New Royal Dispensary

Ashoka Road, Mysore.

From 30=9=1943 **Daily 3 Shows**

New Opera Talkies, Mysore

KARDAR PRODUCTIONS FIRST SMASH HIT

SHARADA

With Mehtab, Ulhas, Nirmalakumari

HINDI

Last Class 0—3—0

Weakness due to loss appetite, pain in the abdom and at the anus leading anaemia, loss of flesh wit sallow and aged expressi For the relief take DYSENTICIDE. It's a specific tonic for sentery and diarrhoea.

Available at all Chemists and Stores.

SOLE DISTRIBUTORS:

KANTHRAJ & CO,

Chemists, General Stores

Asoka Road, MYSORE

ಸಂಪುಟ ೨]   ಶುಕ್ರವಾರ ೧—೧೦—೪೩   [ಸಂಚಿಕೆ ೬೩

ಜರ್ಮನಿಯು ನೇಪಲ್ಸ್ ತ್ಯಜಿಸುವುದೇ ?

ರುಮೇನಿಯಾ - ಹಂಗೇರಿ ಗಡಿಯಲ್ಲಿ ಸೈನಿಕರ ಘರ್ಷಣೆ

ಟೋಕಿಯೋದಲ್ಲಿ ಜಪಾನರ ಗಡಿಬಿಡಿ

ಗಾಂಧಿ ಜಯಂತಿ

ಮೈಸೂರು ೧

"ಮೈಸೂರು ವಿದ್ಯಾರ್ಥಿ ಸಂಘ"ದ ಆಶ್ರಯದಲ್ಲಿ ನಾಳೆ ಬೆಳಗ್ಗೆ ೯-೩೦ ಗಂಟೆಗೆ ಮೈಸೂರು ಪುರಭವನದಲ್ಲಿ ಗಾಂಧಿಜಯಂತಿಯು ನಡೆಯುತ್ತದೆ. ಶ್ರೀ॥ ಅಡ್ವೋಕೇಟ್ ಲಕ್ಷ್ಮೀನಾರಾಯಣರಾಯರು ಅಧ್ಯಕ್ಷತೆ ವಹಿಸುವರು. ತಿರುವಾಂಕೂರಿನ ಶ್ರೀ॥ ಜಿ ರಾಮಚಂದ್ರರವರು ಭಾಷಣ ಮಾಡುವರು ಅದೇ ದಿನ ಬೆಳಗ್ಗೆ ೮-೩೦ ಗಂಟೆಗೆ ಸುಬ್ಬರಾಯನ ಕೆರೆಯಲ್ಲಿ ಧ್ವಜ ವಂದನೆ ನಡೆಯುವುದು.

ಉತ್ತರ ಇಂಡಿಯಾದಿಂದ ಮೈಸೂರಿಗೆ ಸಹಾಯ

ಕರಾಚಿಯಿಂದ ೧ ಸಾವಿರ ಟನ್ ಅಕ್ಕಿ ಮತ್ತು ೪ ಸಾವಿರ ಟನ್ ಗೋಧಿಯನ್ನು ಮೈಸೂರು ಸಂಸ್ಥಾನಕ್ಕೆ ಕೂಡಲೇ ಕಳುಹಿಸಲಾಗುತ್ತದೆಂದು ಮೈಸೂರು ಸರಬರಾಜು ಶಾಖೆಯ ಮಿ॥ ಅಬೂಬೇಕರ್‌ರವರು ತಿಳಿಸಿದ್ದಾರೆ. ಅವರು ಕರಾಚಿಯಿಂದ ಲಾಹೋರಿಗೆ ಪ್ರಯಾಣಮಾಡಿ, ಅಲ್ಲಿಂದ ೩ ಸಾವಿರ ಟನ್ ಗೋಧಿಯನ್ನು ಕಳುಹಿಸುವರೆಂದು ಹೇಳಲಾಗಿದೆ.

ಇದರಿಂದ ಮೈಸೂರು ಸಂಸ್ಥಾನದ ಆಹಾರ ಧಾನ್ಯಗಳ ಕೊರತೆ ಕಮ್ಮಿಯಾಗುವುದಿಲ್ಲವೆಂದೂ, ಧಾನ್ಯಗಳ ಕೋಟಾವನ್ನು ಕೇಂದ್ರ ಸರ್ಕಾರದವರು ಹೆಚ್ಚುಮಾಡಬೇಕೆಂದೂ ಅವರು ಕೋರಿದ್ದಾರೆ

ಟೋಕಿಯೋಕ್ಕೆ ವಿಮಾನ ಧಾಳಿಯ ಅಂಜಿಕೆ

ಟೋಕಿಯೋ ಮೇಲೆ ವಿಮಾನ ಧಾಳಿ ನಡೆಯುವುದೆಂದು ನಿರೀಕ್ಷಿಸಿ, ಅಲ್ಲಿದ್ದ ಜಪಾನಿನ ಎಲ್ಲಾ ಸರ್ಕಾರದ ಕಛೇರಿಗಳನ್ನು ಬೇರೆ ಕಡೆಗೆ ಸಾಗಿಸುವುದಾಗಿ ಮಂತ್ರಿಮಂಡಲದ ವಿಶೇಷ ಸಭೆಯಲ್ಲಿ ಚರ್ಚಿಸಲಾಯಿತು. ಇದಕ್ಕಾಗಿ ತಕ್ಕ ಕಾರ್ಯಕ್ರಮ ಕೈಗೊಳ್ಳಲು ಮುಖ್ಯ ಮಂತ್ರಿ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕವಾಗಿರುವುದು

ಕೈರೋವಿನಲ್ಲಿ ಯುಗೊಸ್ಲಾವಿಯಾ ಸರ್ಕಾರ

ಕೈರೋವಿನಲ್ಲಿ ಯುಗೋಸ್ಲಾವಿಯಾದ ರಾಜ ಪೀಟರ್‌ರವರು ತಮ್ಮ ಸರ್ಕಾರ ಸ್ಥಾಪನೆ ಮಾಡಲು ಆಲೋಚಿಸುತ್ತಿರುವರೆಂದೂ, ಅವರು ಕೈರೋವಿನಲ್ಲಿರುವರೆಂದು ಹೇಳಲಾಗಿದೆ. ಇದು ತಮ್ಮ ರಾಷ್ಟ್ರವನ್ನು ಪರಾಧೀನತೆಯಿಂದ ಪಾರುಮಾಡುವ ತಳಪ್ರಯತ್ನ ನಡೆಯಬೇಕೆಂದು ಹೇಳಲಾಗಿದೆ.

ಅಮೆರಿಕನ್ ವಿಮಾನ ಅಪಘಾತ

ಅಮೆರಿಕಾಕ್ಕೆ ಸೇರಿದ ಒಂದು ವಿಮಾನ ಕಲ್ಕತ್ತಾ ನಗರದ ಹತ್ತಿರ ನೆಲಕ್ಕೆ ಉರುಳಿ ೩೦ ಪ್ರಯಾಣಿಕರು, ಮತ್ತು ಅಮೆರಿಕನ್ ಅಧಿಕಾರಿಗಳೂ ಸತ್ತರೆಂದು ವರದಿಯಾಗಿದೆ

ಜರ್ಮನ್ ಅಧಿಕಾರಿ ಕೊಲೆ

ಜರ್ಮನಿಯ ಕೈಗಾರಿಕೆಗಳಿಗೆ ಕೆಲಸಗಾರರನ್ನು ಒದಗಿಸುವ ಸಂಸ್ಥೆಯ ನಾಯಕರಾದ ರಿಟ್ಟರ್ ಎಂಬುವರನ್ನು ಪ್ಯಾರಿಸ್ಸಿನಲ್ಲಿ ಕೊಲೆ ಮಾಡಲಾಯಿತೆಂದು ಹೇಳಲಾಗಿದೆ

ಜರ್ಮನಿ ಪತನವಾದರೆ ಜಪಾನಿಗೂ ಸೋಲು

"ಜರ್ಮನಿಯು ಪತನವಾದರೆ ಜಪಾನು ಬೀಳುವುದು ನಿಶ್ಚಯ" ಎಂದು ಜಪಾನಿಯ ಕಮ್ಯಾಂಡರಾದ ಜನರಲ್ ಟ್ಯಾಂಕ್‌ರವರು ತಿಳಿಸಿದ್ದಾರೆ. ಇಂಡೋ ಚೈನಾದಲ್ಲಿರುವ ಜಪಾನ್ ಸೈನಿಕರು ತಮಗೆ ವಿಜಯವಾಗುವುದೆಂದು ನಂಬಿಲ್ಲವೆಂದು, ಅಲ್ಲಿನ ಕಮ್ಯಾಂಡರಾಗಿದ್ದು, ಅಲ್ಲಿಯರ್‌ಗೆ ತಪ್ಪಿಸಿಕೊಂಡು ಹೋದ ಜೆಜರ್‌ಸೋರ್ಲೇರವರು ತಿಳಿಸಿದ್ದಾರೆ

ನೇಪಲ್ಸ್ ಕದನ ಆರಂಭ

ನೇಪಲ್ಸ್ ಕದನ ಆರಂಭವಾಗಿದೆಯೆಂದೂ, ಉರಿಯುತ್ತಿರುವ ನೇಪಲ್ಸ್ ನಗರದಿಂದ ಜರ್ಮನ್ ಸೈನಿಕರು ಓಡುತ್ತಿರುವರೆಂದೂ ವರದಿಯಾಗಿದೆ ಮಿತ್ರರಾಜರ ಸೈನ್ಯವು ನೇಪಲ್ಸ್ ನಗರದ ಮೇಲೆ ಧಾಳಿ ನಡೆಸುತ್ತಿರುವರೆಂದು ಹೇಳಲಾಗಿದೆ

ರುಮೇನಿಯಾ-ಹಂಗೇರಿ ಗಡಿಯಲ್ಲಿ ಸೈನಿಕರ ಘರ್ಷಣೆ

ರುಮೇನಿಯಾ ಮತ್ತು ಹಂಗೇರಿ ಗಡಿಯಲ್ಲಿಯ ಕಾವಲುಗಾರರಿಗೆ ಘರ್ಷಣೆಯುಂಟಾಗಿ ೬ ರುಮೇನಿಯನ್ ಸೈನಿಕರು ಸತ್ತರೆಂದು ವರದಿಯಾಗಿದೆ ಈ ಘಟನೆಯು ರುಮೇನಿಯಾ ಪ್ರಜೆಗಳಲ್ಲಿ ಬಹಳ ಉದ್ರೇಕವುಂಟುಮಾಡಿದೆಯೆಂದೂ, ಹಂಗೇರಿ ಸೈನಿಕರು ರುಮೇನಿಯಾ ಗಡಿಯೊಳಗೆ ಪ್ರವೇಶ ಮಾಡಿದ್ದಾರೆಂದೂ ಹೇಳಲಾಗಿದೆ.

೭೪ ಸಾವಿರ ಮಿಲಿಯನ್ ಡಾಲರುಗಳ ಖರ್ಚು

ಅಮೆರಿಕಾವು ಮುಂದಿನ ವರ್ಷ ೭೪ ಸಾವಿರ ಮಿಲಿಯನ್ ಡಾಲರು ಖರ್ಚಿನಿಂದ ಯುದ್ಧ ಶಸ್ತ್ರಗಳನ್ನು ತಯಾರಿಸಲು ನಿರ್ಧರಿಸಿದೆ. ಇದರ ಪ್ರಕಾರ ೧೨೦೦೦೦ ವಿಮಾನಗಳನ್ನು ತಯಾರಿಸಬಹುದು.

ಕ್ಯಾಂಟ್ ಸ್ಫೋರ್ಜಾರವರು

ಸ್ವತಂತ್ರ ಇಟಲಿ ಸಂಸ್ಥೆಯ ನಾಯಕರಾದ ಕೌಂಟ್ ಸ್ಫೋರ್ಜಾ ರವರು ಇಟಲಿಗೆ ಹಿಂತಿರುಗುವುದಕ್ಕೆ ಅನುಮತಿಯನ್ನು ಕೊಡಲಾಗಿದೆಯೆಂದು ಈಗಿನ ಸರ್ಕಾರದ ...

ಸಿಲೋನಿನಲ್ಲಿ ಸೈನಿಕರ ಅವಿಧೇಯತೆ

ಸಿಲೋನಿನಲ್ಲಿ ಪೂರ್ವ ಆಫ್ರಿಕಾದ ಸೈನಿಕರ ಅವಿಧೇಯತೆಯು ಹೆಚ್ಚುತ್ತಿರುವುದೆಂದೂ ಮತ್ತು ೩ ಜನರನ್ನು ಗುಂಡಿನಿಂದ ಹೊಡೆದು ಸಾಯಿಸಿದ್ದು, ಪ್ರಜೆಗಳಲ್ಲಿ ಅತಿ ಭೀತಿಯನ್ನುಂಟುಮಾಡಿದೆ ಇದನ್ನು ಸರ್ಕಾರದವರು ತಕ್ಷಣ ನಿಲ್ಲಿಸಬೇಕು ಎಂದು ಒಂದು ನಿರ್ಣಯವು ಸಿಲೋನ್ ಶಾಸನ ಸಭೆಯಲ್ಲಿ ಅಂಗೀಕರವಾಯಿತು.

ಮದರಾಸಿನಲ್ಲಿ ವ್ಯಾಪಾರ ತೆರಿಗೆ ಹೆಚ್ಚಾಯಿತು

ಮದರಾಸ್ ಸರ್ಕಾರದವರು ವ್ಯಾಪಾರ ತೆರಿಗೆಯನ್ನು ಹೆಚ್ಚಿಸಲು ಆಜ್ಞೆ ಮಾಡಿರುವರು ೧೦ ಸಾವಿರದಿಂದ ೨೦ ಸಾವಿರ ರೂಪಾಯಿಗಳ ವರೆಗೆ ವರಮಾನವಿರುವವರಿಗೆ ೪ ರೂ ನಿಂದ ೫ ರೂ. ಗಳ ಸೇಲ್ಸ್ ತೆರಿಗೆಯನ್ನು ಹಾಕಿದ್ದಾರೆ. ಇದರಿಂದ ಸರ್ಕಾರಕ್ಕೆ ೩೫ ಲಕ್ಷ ರೂ ಗಳ ವರಮಾನ ಬರುವುದೆಂದು ಹೇಳಲಾಗಿದೆ. ಇದಲ್ಲದೆ ತಂಬಾಕು ಜೂಜಿನ ಮೇಲೂ, ರಿಜಿಸ್ಟ್ರೇಷನ್ ಮತ್ತು ಸ್ಟ್ಯಾಂಪ್ ಗಳ ಮೇಲೂ ತೆರಿಗೆಯನ್ನು ಹೆಚ್ಚಿಸಲಾಗಿದೆ

೮೧ ಮಂದಿ ಕ್ಷುದ್ಬಾಧೆಯಿಂದ ಮರಣ

ಕಲ್ಕತ್ತಾ ನಗರದ ಬೀದಿಗಳಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿದ್ದ ೭೭೫ ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅವರ ಪೈಕಿ ೮೧ ಮಂದಿ ಮರಣಹೊಂದಿದರು

ಹಸಿವಿನಿಂದ ಸಾಯುತ್ತಿರುವವರ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿದೆಯೆಂದು ಹೇಳಲಾಗಿದೆ ಆಗಸ್ಟ್ ೧೬ ರಿಂದ ಸೆಪ್ಟೆಂಬರ್ ೨೫ರವರೆಗೆ ೫೪೮೧ ಜನಗಳನ್ನು ಆಸ್ಪತ್ರೆಗೆ ಸೇರಿಸಲಾಯಿತೆಂದೂ, ಅವರಲ್ಲಿ ೧೭೩೦ ಮಂದಿ ಸತ್ತರೆಂದೂ ಸ್ಟೇಟ್ಸ್‌ಮನ್ ಪತ್ರಿಕೆ ವರದಿ ಮಾಡಿದೆ

ಬಂಗಾಳಕ್ಕೆ ಮಧ್ಯಪ್ರಾಂತ್ಯದ ಸಹಾಯ

ಬಂಗಾಳದ ಕ್ಷಾಮ ನಿವಾರಣೆಗೆ ಮಧ್ಯಪ್ರಾಂತ್ಯದ ಸರ್ಕಾರದವರು ... ಸಾವಿರ ಟನ್ ಗೋಧಿಯನ್ನು ಕಳುಹಿಸಲು ...

ಬೇರಿಯಲ್ಲಿ ವಿಕ್ಟರ್ ದೊರೆಗಳು

ದಕ್ಷಿಣ ಇಟಲಿಯ ಬೇರಿ ನಗರದಲ್ಲಿ ಇಟಲಿ ದೊರೆಗಳು ಮತ್ತು ಬಡೋಗ್ಲಿಯೋರವರು ತಮ್ಮ ಸರ್ಕಾರದ ರಾಜಧಾನಿಯನ್ನು ಸ್ಥಾಪಿಸುವರೆಂದು ವರದಿಯಾಗಿದೆ

ಡಾಲ್ಮೇಷಿಯಾ ತೀರದಲ್ಲಿರುವ ಸ್ಪ್ಲಿಟೊ ಪರಿತ್ಯಾಗ

ಯುಗೋಸ್ಲಾವಿಯಾ ಸ್ವಾತಂತ್ರ್ಯ ಸಾಧಕ ಸೈನ್ಯವು ಭಾರಿ ಕದನ ನಡೆಸಿ, ತೀವ್ರ ಪ್ರತಿಭಟನಾನಂತರ ಡಾಲ್ಮೇಷಿಯಾ ತೀರದಲ್ಲಿರುವ ಸ್ಪ್ಲಿಟೊ ನಗರವನ್ನು ತ್ಯಜಿಸಿರುವುದಾಗಿ ವರದಿಯಾಗಿದೆ

ಬರ್ಮಾದಲ್ಲಿ ೬೦ ರೈಲ್ವೆ ಇಂಜನ್‌ಗಳ ನಾಶ

ಬ್ರಿ॥ ವಿಮಾನಗಳು ಬರ್ಮಾದಲ್ಲಿ ಜಪಾನ್ ಆಕ್ರಮಿತ ಪ್ರದೇಶಗಳಲ್ಲಿ ಧಾಳಿಮಾಡಿ ೬ ತಿಂಗಳಿಂದ ೬೦ ಕ್ಕಿಂತ ಹೆಚ್ಚಾಗಿ ಜಪಾನ್ ಅಧೀನದಲ್ಲಿದ್ದ ರೈಲ್ವೆ ಇಂಜನ್‌ಗಳನ್ನು ನಾಶಮಾಡಿರುವುದಾಗಿ ವರದಿಯಾಗಿದೆ

ಸಾವರ್ಕರರ ರಾಜೀನಾಮೆ

ಅಖಿಲ ಭಾರತ ಹಿಂದೂ ಮಹಾಸಭಾಧ್ಯಕ್ಷರಾದ ಶ್ರೀ॥ ವಿ. ಡಿ. ಸಾವರ್ಕರ್‌ರವರು ತಮ್ಮ ಅಧ್ಯಕ್ಷ ಪದವಿಯನ್ನು ದೇಹಸ್ವಾಸ್ಥ್ಯದ ಕಾರಣದಿಂದ ರಾಜೀನಾಮೆ ಕೊಟ್ಟಿದ್ದಾರೆ

ಪ್ಯಾಲೆಸ್ಟೈನಿಗೆ / ಪ್ಯೂರ್ಟೊರಿಕೋ ದವರಿಗೆ ಸ್ವಾತಂತ್ರ್ಯ

ಅಧ್ಯಕ್ಷ ರೂಸ್ವೆಲ್ಟರು ಅಮೆರಿಕದ ಕಾಂಗ್ರೆಸ್‌ನಲ್ಲಿ ಒಂದು ಮಸೂದೆಯನ್ನು ತಂದು ಪ್ಯೂರ್ಟೊರಿಕೊ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ಸೂಚಿಸಿರುವರು. ಅಲ್ಲಿನ ಜನರು ತಮ್ಮ ಸ್ವಂತ ಆಡಳಿತವನ್ನು ನಡೆಸಿಕೊಳ್ಳಬಹುದಾಗಿದ್ದಾರೆಂದೂ ಅದ್ದರಿಂದ ಸರ್ಕಾರದ ಸಂಪೂರ್ಣ ಆಡಳಿತವನ್ನು ಅವರು ನಿರ್ವಹಿಸಲು ಅವಕಾಶಕೊಡಬೇಕೆಂದು ಅವರ ಅಭಿಪ್ರಾಯಪಟ್ಟಿರುವರು

ಒಪಿಯಂ ಕಳ್ಳನ ದಸ್ತಗಿರಿ

ಡೆಲ್ಲಿ ರೈಲ್ವೆ ಸ್ಟೇಷನ್ನಿನಲ್ಲಿ ೧೦ ಸಾವಿರ ರೂ. ಬೆಲೆ ಬಾಳುವ ಒಪಿಯಂನ್ನು ಕಳ್ಳತನದಿಂದ ಸಾಗಿಸುತ್ತಿದ್ದ ಒಬ್ಬನನ್ನು ದಸ್ತಗಿರಿ ಮಾಡಲಾಯಿತು. ಅವನು ಫ್ರಂಟಿಯರ್ ಮೇಲ್ ಗಾಡಿಯಲ್ಲಿ ಪೂನಾಕ್ಕೆ ಪ್ರಯಾಣ ಮಾಡುತ್ತಿದ್ದನು.

ತಪ್ಪಿಸ್ಕೊಂಡ ಸ್ವಾಮಿ ಸಿಕ್ಕಿಬಿದ್ದ

ಕರಾಚಿಯಲ್ಲಿ ... ಸಿಕ್ಕಿ ... ಹೋಗಿ ಎರಡು ಬಾರಿ ... ಪ್ರಪಂಚದ ... ಸ್ಪೋಲೀಸರ ಕೈಗೆ ಸಿಕ್ಕಿ ... ಜೈಲಿಗೆ ಹೋಗಬೇಕಾದ ... ನು.

ಹಿಂದೆ ಅವನನ್ನು ... ಸರ್ಕಾರದ ... ಹಿಡಿದುಕೊಂಡು ... ಗಳಿಂದ ಕೊಲ್ಲ ... ೧ ಹೇಳಿ ಜಪಾನಿಗೆ ... ದೂ, ... ದ ಸಾವಿರಾರು ... ತೆರೆದ ...

ಗಾಂಧಿ ಜಯಂತಿಗೆ ಪ್ರತಿಬಂಧಕ

ಬೆಂಗಳೂರು ೩೦

ಗಾಂಧಿ ಜಯಂತಿ ಸಂಬಂಧವಾದ ಮೆರವಣಿಗೆ ಸಭೆ ಮುಂತಾದುವನ್ನು ಒಂದು ತಿಂಗಳವರೆಗೆ ನಡೆಸಕೂಡದೆಂದು ಬೆಂಗಳೂರಿನ ಕಲೆಕ್ಟರು ಆಜ್ಞೆ ಮಾಡಿದ್ದಾರೆ.

ಸ್ಥಾನಬದ್ಧ ಸದಸ್ಯರು

ಕಾಂಗ್ರೆಸ್ ಪಕ್ಷದ ಸ್ಥಾನಬದ್ಧ ಶ್ರೀಶ್ರೀ ಸದಸ್ಯರ ವಿಷಯವಾಗಿ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ವೆಂಕಟಪ್ಪನವರು ದಿವಾನರಿಗೆ ಬರೆದ ಕಾಗದಕ್ಕೆ ಈ ವಿಷಯದಲ್ಲಿ ಸ್ಥಾನಬದ್ಧರು ತಕ್ಕ ಅಧಿಕಾರಿಗಳಿಗೆ ಬರೆದುಕೊಳ್ಳಬೇಕೆಂದು ಅಂಡರ್ ಸೆಕ್ರೆಟರಿಯವರು ಉತ್ತರ ಕೊಟ್ಟಿದ್ದಾರೆ.

ಮೊಕದ್ದಮೆ ವಾಪಸು

ಶಿವಮೊಗ್ಗದಲ್ಲಿ ಹಳ್ಳಿ [illegible] ಒಂದು ಮುಸ್ಲಿಂ ಗೋರಿ ಕೆಡವಿದ ಮೊಕದ್ದಮೆ ಹೂಡಲಾಗಿತ್ತು. ಇದು ಶಿವಮೊಗ್ಗೆಗೆ ಮರ್ಯಾದೆ ತರುವುದಿಲ್ಲವೆಂದು ಎರಡು ಪಂಗಡದವರು ಸೇರಿ ರಾಜಿ ಪಂಚಾಯಿತಿಗೆ ಬಂದು, ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳನ್ನು ಪ್ರಾರ್ಥಿಸಿಕೊಂಡ ಪ್ರಯುಕ್ತ ಅದನ್ನು ಹಿಂದಕ್ಕೆ ತೆಗೆದುಕೊಳ್ಳಲು ಆಜ್ಞೆ ಮಾಡಿದ್ದಾರೆ

ಸರ್ಕಾರಿ ಸುದ್ದಿ

ಮೈಸೂರು: ಮಹಾರಾಣಿ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜಿ. ಇಂದಿರಮ್ಮನವರನ್ನು ತುಮಕೂರು ಎಂಪ್ರೆಸ್ ಬಾಲಿಕಾ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿಯಾಗಿಯೂ, ಶ್ರೀಮತಿ ಎ. ಟಿ. ಲಕ್ಷ್ಮಮ್ಮನವರನ್ನು ಮೈಸೂರು ಮಹಾರಾಣಿ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿಯಾಗಿಯೂ ವರ್ಗಾಯಿಸಲಾಗಿದೆ.

ಈಗಿನ ಸ್ಟಾಂಡರ್ಡ್ ಟೈಂ ಇದುವರೆಗೆ ಸಂಸ್ಥಾನದಲ್ಲಿ ಕೋರ್ಟು ಕಛೇರಿಗಳ ಕೆಲಸದ ಕಾಲವು ಆಗಿರುವಂತೆ ಮುಂದೆಯೂ ೧೧ ರಿಂದ ೬ ರ ವರೆಗೆ ಇರತಕ್ಕದೆಂದು ಸರ್ಕಾರದ ಆಜ್ಞೆಯಾಗಿದೆ.

ಭಾರತ ಆಹಾರ ಪರಿಹಾರಕ್ಕೆ ಆಸ್ಟ್ರೇಲಿಯದ ಸಹಾಯ

ಭಾರತದಲ್ಲಿ ಹಸಿವಿನಿಂದ ತೊಂದರೆ ಪಡುತ್ತಿರುವ ಜನಗಳ ಉಪಯೋಗಕ್ಕಾಗಿ 'ಕ್ಷಾಮ ನಿವಾರಣಾ ಸಮಿತಿ'ಯೊಂದನ್ನು ಆಸ್ಟ್ರೇಲಿಯಾದಲ್ಲಿ ಸ್ಥಾಪಿಸಲಾಗಿದೆ

ಇಂಡಿಯಾದಲ್ಲಿ ಆಹಾರಪರಿಸ್ಥಿತಿಯನ್ನು ಪರಿಹರಿಸಲು ಸಕಲ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕೆಂದು ನ್ಯೂ ಸೌತ್‌ವೇಲ್ಸಿನ ಪಾರ್ಲಿಮೆಂಟ್ ಮಂತ್ರಿಯು ಪಾರ್ಲಿಮೆಂಟ್ ಸಭೆಯಲ್ಲಿ ತಿಳಿಸಿದ್ದಾರೆ.

ಆಹಾರಸರ್ವಾಧಿಕಾರಿ ಅವಶ್ಯಕ

ಭಾರತದ ಆಹಾರ ಪರಿಸ್ಥಿತಿಯನ್ನು ಕುರಿತು ಪಾರ್ಲಿಮೆಂಟಿನಲ್ಲಿ ಚರ್ಚಿಸಬೇಕೆಂದು ನ್ಯೂ ಸೌತ್ ವೇಲ್ಸಿನ ಗಣಿ ಕೆಲಸಗಾರರ ಸಂಘದವರು ಒತ್ತಾಯಪಡಿಸಿದ್ದಾರೆ. ಪರಿಹಾರ ನಿಧಿಗೆ ೨೫೦ ಪೌಂಡುಗಳನ್ನು ಕೊಟ್ಟಿದ್ದಾರೆ. ಭಾರತದಲ್ಲಿ ಆಹಾರ ಸಮಸ್ಯೆ ಬಗೆಹರಿಸಲು ಆಹಾರ ಸರ್ವಾಧಿಕಾರಿ ನೇಮಕವಾಗಬೇಕೆಂದು ಸರ್ ಜಾನ್ ಮೇನಾರ್ಡ್‌ರವರು ತಿಳಿಸಿದ್ದಾರೆ.

ಪತ್ರಿಕೆಗೆ ನೋಟೀಸ್

ನಾಗಪುರದ "ಹಿತವಾದ" ಪತ್ರಿಕೆಯ ಸಂಪಾದಕರಿಗೆ ಮಧ್ಯಪ್ರಾಂತ್ಯ ಸರ್ಕಾರದವರು ಒಂದು ನೋಟೀಸ್ ಜಾರಿ ಮಾಡಿ, ಬಂಗಾಳ ಸರ್ಕಾರದ ಚೀಫ್ ಸೆಕ್ರೆಟರಿ ಮಿ|| ಬ್ಲೇರ್‌ರವರ ರಾಜೀನಾಮೆಗೆ ಸಂಬಂಧಪಟ್ಟ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಯನ್ನು ಯಾರು ಕೊಟ್ಟರೋ ಅವರ ಹೆಸರನ್ನು ಕೂಡಲೇ ತಿಳಿಸಬೇಕೆಂದು ಆಜ್ಞೆ ಮಾಡಿದ್ದಾರೆ.

ವೀವಾಕ್ ಮೇಲೆ ಉಗ್ರ ಕದನ

ನ್ಯೂಗಿನಿಯಾಕ್ಕೆ ಉತ್ತರ ತೀರದಲ್ಲಿರುವ ವೀವಾಕ್ ನಿಲ್ದಾಣದ ಮೇಲೆ ೨೦೦ ಮಿತ್ರ ವಿಮಾನಗಳು ಧಾಳಿಮಾಡಿದುವು. ೭ ಶತ್ರು ಹಡಗುಗಳು ಬಂದರಿನಲ್ಲಿ ಮುಳುಗಿದುವು. ೩ ಹಡಗುಗಳಿಗೆ ಬೆಂಕಿಬಿದ್ದಿತು. ವೈಮಾನಿಕ ನಿಲ್ದಾಣಗಳ ಮೇಲೆ ಧಾಳಿ ಮಾಡಿ, ೫೦ ಶತ್ರು ವಿಮಾನಗಳನ್ನು ನಾಶಪಡಿಸಲಾಯಿತು

ನೇಪಲ್ಸ್ ಉರಿಯುತ್ತಿದೆ

ನೇಪಲ್ಸ್ ನಗರವನ್ನು ಜರ್ಮನರು ಭಗ್ನಪಡಿಸುತ್ತಿರುವಾಗ ಅಲ್ಲಿ ಅಗಾಧವಾಗಿ ಅಗ್ನಿಜ್ವಾಲೆಗಳು ಉರಿಯುತ್ತಿವೆ. ಜರ್ಮನರು ಇದೇ ರೀತಿಗೇ ಬೆಂಕಿ ಹಚ್ಚುತ್ತಿದ್ದಾರೆಂದೂ ಹೇಳಲಾಗಿದೆ. ನೇಪಲ್ಸ್ ನಗರಕ್ಕೆ ಕೇವಲ ಸಮೀಪದಲ್ಲಿ ಮಿತ್ರ ಸೈನ್ಯ ಬಂದಿದೆ.

ಇಟಲಿ ನಿಲ್ದಾಣ ಮಿತ್ರ ವಶ

ಬ್ರಿ|| ೮ ನೇ ದಳವು, ಇಟಲಿಯಲ್ಲೆಲ್ಲಾ ಅತ್ಯಂತ ಬಲಯುತ ವಿಮಾನ ನಿಲ್ದಾಣವಾದ ಫಾಗ್ಗಿಯಾವನ್ನು ವಶಪಡಿಸಿಕೊಂಡಿದೆ. ಇದರ ಜೊತೆಗೆ ಫಾಗ್ಗಿಯಾವಿನ ಪೂರ್ವ ದಿಕ್ಕಿನಲ್ಲಿರುವ ಇನ್ನೊಂದು ಪಟ್ಟಣವನ್ನೂ ಸಹ ಹಿಡಿಯಲಾಗಿದೆ.

ಜರ್ಮನ್ ಗೂಢಚಾರನಿಗೆ ಜಪಾನಿನಲ್ಲಿ ಮರಣ ದಂಡನೆ

ಜಪಾನಿನಲ್ಲಿ ಗೂಢಚಾರನಾಗಿ ಕೆಲಸ ಮಾಡುತ್ತಿದ್ದ ಒಬ್ಬ ಜರ್ಮನನನ್ನು ಮರಣ ದಂಡನೆಗೆ ಗುರಿಪಡಿಸಲಾಯಿತೆಂದು ವರದಿಯಾಗಿದೆ.

ಅಪಾದಿತನು ಜರ್ಮನಿಯ ಪತ್ರಿಕೆಯಾದ "ಫ್ರಾಂಕ್ ಫರ್ಟರ್ ಜೀಟುಂಗ್"ನ ಬಾತ್ಮೀದಾರನಾಗಿ ಹಿಂದೆ ಆಗಿದ್ದನೆಂದೂ, ಈತನೊಡನೆ ಒಬ್ಬ ಜಪಾನೀಯನಿಗೂ ಬಲವಾದ ಶಿಕ್ಷೆಗೆ ಗುರಿಪಡಿಸಲಾಯಿತೆಂದೂ ಹೇಳಲಾಗಿದೆ.

ಬಂಗಾಳ ಕ್ಷಾಮ ಪರಿಹಾರ ನಿಧಿ

ಬಂಗಾಳ ಕ್ಷಾಮ ಪರಿಹಾರ ನಿಧಿಗೆ ಬರೋಡಾ ಮಹಾರಾಜರವರು ೨೫ ಸಾವಿರ ರೂ ಗಳನ್ನು ಕೊಟ್ಟಿರುವರು.

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಸಯ್ಯಾಜಿರಾವ್ ರೋಡು, ಮೈಸೂರು

	ರೂ. ಆ.
ಲಾಲ್ ಮಿಲ್ಸ್ ಚೀಟ್ಸ್ ಗಜಕ್ಕೆ	0—9
ವಿಕ್ಟರಿ ಮಿಲ್ಸ್ ,, ,,	0-8½
[illegible] ವಾಯಿಲ್ ,,	0—12
ಡಬಲ್ ಕಲರ್ ವಾಯಿಲ್ 45"	1—0
ಹೊದಿಕೆಗಾಗಿ ದಪ್ಪ ಬಣ್ಣ ಸ್ಕ್ರೀನ್ 1 ಕ್ಕೆ	2—0
ಕರ್ನಾಟಕ್ ಮಿಲ್ಸ್ ದುಪ್ಪಟಿ ಗಜ 1 ಕ್ಕೆ	0-14
,, 72" ಶೀಟಿಂಗ್ 1 ಗಜ	2-6
ಬಕಿಂಗ್‌ಹ್ಯಾಂ ಮಿಲ್ಸ್ ಡ್ರಿಲ್ ,,	0-14
[illegible] ಲಾಂಗ್ ಕ್ಲಾತ್ 45"	0-11
,, 50" ಮಲ್	0—9
[illegible] ಷರ್ಟಿಂಗ್	0—6
[illegible] 1 ಕ್ಕೆ	3—8
[illegible] 18" 1 ಗಜ	1—8
[illegible] ,,	1—0
[illegible]	0—12
[illegible]	0—10
[illegible]	1—0

ಲಾಂಗ್ ಕ್ಲಾತ್ಸ್ :—	ರೂ. ಆ.
ಡಬಲ್ ಸ್ಪೆಷಲ್ ಮಾರ್ಕ್	0—8¾
ನಂ. 3640	0—7½
[illegible]	0—12
[illegible] ಮಿಲ್ಸ್	0—9
ಬಕಿಂಗ್‌ಹ್ಯಾಂ ಮಿಲ್ಸ್	0—10
ಕರ್ನಾಟಕ್ ಮಿಲ್ಸ್ 45"	0—15
[illegible] ಮಿಲ್ಸ್	0-10½
[illegible] ಬಣ್ಣ ಷರ್ಟಿಂಗ್ಗಳು 1 ಕ್ಕೆ	1—9
[illegible] ,,	1-10
[illegible] ಷರ್ಟಿಂಗ್	
1 ನೇ ದರ್ಜೆ 1 ಗಜಕ್ಕೆ	0—14
,, [illegible] ಬಣ್ಣ ಷರ್ಟ್ 1 ಕ್ಕೆ	2—2
[illegible] ಕೋಟಿಂಗ್	0—11
[illegible] ಕೋಟಿಂಗ್ 1 ಗಜಕ್ಕೆ	1—4
[illegible] ಕೋಟಿಂಗ್ ,,	0—14
ಕೃಷ್ಣ ಮಿಲ್ಸ್ ಕೋಟಿಂಗ್	1—4
ಮಿಲ್ ಷರ್ಟಿಂಗ್	0—12
[illegible] ಗಜ	6—8
[illegible] ,,	8—8
[illegible] ,,	9—8
[illegible]	9—12

[illegible]

[illegible]

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ,)

ಮೈಸೂರು

ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ 'ಬಿ' ಬ್ಲಾಕಿನ 1 ಮತ್ತು 2 ನೇ ಸ್ಟಾಲುಗಳಲ್ಲಿನ ನಮ್ಮ ಅಂಗಡಿಗೆ ಭೇಟಿ ಕೊಡಲು ತಪ್ಪಬೇಡಿ.

Edited, printed and published by A. R. Nagarajan at the Sadhvi Press, D.Subbiah Road, Mysore.

From 30-9-1943 Daily 3 Shows

New Opera Talkies, Mysore

KARDAR PRODUCTIONS FIRST SMASH HIT

SHARADA HINDI

With Mehtab, Ulhas, Nirmalakumari

Last Class 0—3—0

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟ[illegible] ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ.— [illegible] ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ [illegible] ಇಲ್ಲೂ ಮತ್ತು [illegible] ಹೆಡ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ [illegible] ದೊರೆಯುತ್ತೆ.

ಸಂಪುಟ ೨] ಶನಿವಾರ ೨-೧೦-೪೩ [ಸಂಚಿಕೆ ೬೪

ಟರ್ಕಿ ಯುದ್ಧಕ್ಕೆ ಇಳಿಯುವುದೇ ?

ನಾರ್ವೆಯನ್ನು ಜರ್ಮನರು ಬಿಡುವರೆ ?

ಗಾಂಧಿ ಜಯಂತಿ ಭಾಷಣಕ್ಕೆ ಬೊಂಬಾಯಲ್ಲಿ ಪ್ರತಿಬಂಧಕ

ಮಾಡರ್ನ್ ಕೆಫೆ ಹೋಟೆಲ್ ಪ್ರಾರಂಭೋತ್ಸವ

ಮೈಸೂರು ೩

ರಾಜಧಾನಿಯ ಗಾಂಧಿ ಚೌಕದಲ್ಲಿ ನೂತನವಾಗಿ ದಾಸಪ್ರಕಾಶ ಆಭಿವರ್ಗದಿಂದ ಸ್ಥಾಪಿತವಾಗಿರುವ "ಮಾಡರ್ನ್ ಕೆಫೆ" ಹೋಟೆಲಿನ ಪ್ರಾರಂಭೋತ್ಸವವನ್ನು ನಿನ್ನೆ ಸಂಜೆ ರೆವಿನ್ಯೂ ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ನೆರವೇರಿಸಿದರು

ಸಮಾರಂಭಕ್ಕೆ ಸಚಿವರುಗಳಾದ ಶ್ರೀ. [illegible] ಗೌಡರು, ಮಿ|| ಇಸ್ಮಾಯಿಲ್‌ರವರು, [illegible] ಗುಂಡಪ್ಪಗೌಡರು, ಶ್ರೀ ಚಂದ್ರಶೇಖರಯ್ಯನವರು, ಶ್ರೀ ಗುರುದತ್ ಮೊದಲಾದ ಅಧಿಕಾರಿಗಳು ಮತ್ತು ನಗರದ ಗಣ್ಯ ಮಹನೀಯರುಗಳೆಲ್ಲರೂ ದಯಮಾಡಿಸಿದ್ದರು

ಸರ್ ಎಂ. ವಿಶ್ವೇಶ್ವರಯ್ಯ, ಶ್ರೀ ಸಿ. ರಾಜಗೋಪಾಲಚಾರಿ, ಮದರಾಸಿನ ಮೇಯರಾದ ಶ್ರೀ ಶಂಗಲಿಂಗ ಮೊದಲಿಯಾರ್ [illegible] ಸೋಮಯ್ಯ ಮೊದಲಾದವರಿಂದ ಬಂದಿದ್ದ ಶುಭ ಸಂದೇಶಗಳನ್ನು ಓದಲಾಯಿತು.

ನಂತರ ಹೋಟೆಲ್ ಮಾಲಿಕರಾದ ಶ್ರೀ ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿದರು.

ಸಚಿವರು ಆರಂಭೋತ್ಸವವನ್ನ ನಡೆಸಿ ರಾಜಧಾನಿಯಲ್ಲಿ ಇಂತಹ ಸುಧಾರಿತ ಕ್ರಮದ ಹೋಟೆಲನ್ನು ಸ್ಥಾಪಿಸಿರುವುದಕ್ಕೆ ಶ್ರೀ ಸೀತಾರಾಮರಾಯರನ್ನು ಅಭಿನಂದಿಸಿದರು

ಸೀತಾರಾಮರಾಯರು, ಮೈಸೂರು, [illegible] ಹೊರಗಡೆ ಹೋಟೆಲ್‌ಗಳನ್ನ ಸ್ಥಾಪಿಸಿ ನಡೆಸುತ್ತಿರುವುದನ್ನೂ ಮತ್ತು [illegible] ರಾಸಿನಲ್ಲಿ ೫೦ ಸಾವಿರ ಸಂಖ್ಯಾತ ಜನರಿಗೆ ಊಟ ವಸತಿಯನ್ನು ಕಲ್ಪಿಸಿದ್ದು ಶ್ಲಾಘನೀಯವಾದುದೆಂದು ಸಚಿವರು ಹೇಳಿದರು.

[illegible] ದಿನ ಹೋಟೆಲ್‌ಗಳಲ್ಲಿರುವ ನ್ಯೂನ್ಯತೆಗಳನ್ನು ವಿವರಿಸಿ, ಕೆಲವು ಸಲಹೆಗಳನ್ನು ಸೂಚಿಸಿದರು

[illegible] ತಿಂಡಿ ಪದಾರ್ಥಗಳ ಸಂಶೋಧನೆಗಾಗಿ, ಅಂತಹ ಸಂಶೋಧಕರಿಗೆ ಬಹುಮಾನಗಳನ್ನು ಕೊಡಬೇಕೆಂದು ಸಲಹೆ [illegible].

ನೂತನ ಹೋಟೆಲು ಮುಂದೆ ಧಾರ್ಮಿಕ ಕೇಂದ್ರಗಳಂತೆ, ಹೋಟೆಲ್‌ಗಳ ಕೇಂದ್ರವಾಗಲೆಂದು ಮತ್ತು ಹೆಚ್ಚಿನ ಅಭಿವೃದ್ಧಿಗೆ ಬರಲೆಂದು ಹಾರೈಸಿದರು.

[illegible] ಎಲ್ಲರಿಗೂ ಉಪಹಾರವನ್ನು [illegible].

[illegible]ಧಿ ಜಯಂತಿ ಭಾಷಣಗಳಿಗೆ ನಿಷೇಧ

[illegible] ಯಿನ ಗುಜರಾತಿ ಸೇವಾಮಂಡಲ, ನಾರ್ತ್ ಇಂಡಿಯಾ ಅಸೋಸಿಯೇಷನ್ ಮತ್ತು ಬೊಂಬಾಯಿ ಕೇರಳ ಸಂಸ್ಥೆಗಳು ಮಹಾತ್ಮ ಗಾಂಧಿಯವರ ಜೀವನಚರಿತ್ರೆ ವಿಷಯವಾಗಿ ಭಾಷಣ ನಡೆಸಲು ಪೋಲೀಸ್ ಕಮಿಷನರ [illegible] ನಿರಾಕರಿಸಿದ್ದಾರೆ. ಈ ಸಂದರ್ಭದಲ್ಲಿ ಇದರಿಂದ ಬಂದ ಹಣವನ್ನು [illegible] ನಿಧಿಗೆ ಕೊಡಲು ನಿರ್ಧ[illegible] . ಗಾಂಧಿ ಜಯಂತಿ ಸಂಬಂಧ [illegible]

ಗಾಂಧಿ ಜಯಂತ್ಯುತ್ಸವ

ಮೈಸೂರು ೩

ಗಾಂಧಿಜೀಯವರ ೭೫ನೇ ವಾರ್ಷಿಕ ಜಯಂತ್ಯುತ್ಸವದ ಪ್ರಯುಕ್ತ, ಈ ದಿನ ಬೆಳಗ್ಗೆ ಸುಬ್ಬರಾಯನ ಕೆರೆ ಆವರಣದಲ್ಲಿ ಶ್ರೀ ಹೆಚ್. ಸಿ ದಾಸಪ್ಪನವರು ಕಾಂಗ್ರೆಸ್ ಮತ್ತು ಮೈಸೂರು ಧ್ವಜಗಳನ್ನು ಆರೋಹಣ ಮಾಡಿದರು

ಮಹಾತ್ಮರು ಚಿರಾಯುವಾಗಲಿ !

ನೂತನ ರಾಜಧಾನಿಯ ಪುರಭವನದಲ್ಲಿ ಶ್ರೀಮತಿ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆನಡೆಯಿತು

ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾದ ಶ್ರೀ ನಾಗಭೂಷಣರವರು ಸ್ವಾಗತಭಾಷಣ ಮಾಡಿದನಂತರ ಶ್ರೀಗಳಾದ ಹೆಚ್. ಸಿ ದಾಸಪ್ಪ, ಬೆಂಗಳೂರಿನ ಜಿ. ರಾಮಚಂದ್ರನ್, ಇವರುಗಳು ಗಾಂಧೀಜಿಯವರ ತತ್ವಗಳು, ಅವರ್ರು ಅನ್ನಗಳಿಂದುಂಟಾಗಿರುವ ಸತ್ಪರಿಣಾಮಗಳನ್ನು ವಿವರಿಸಿದರು. ಮಿಠಾಯಿ ಹಂಚಿದ [illegible] ಹಿಂದೀ ಪ್ರಚಾರ [illegible] ಗಳ ಅಭಿವೃದ್ಧಿಗಾಗಿ ಗಾಂಧಿಜಯಂತ್ಯುತ್ಸವ [illegible] ಅವರ [illegible]

ಗಾಂಧಿ ಜಯಂತಿ

ಹಿಂದಿ ಪ್ರಚಾರ ಸಭೆ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಸಹಕಾರ ಭವನದಲ್ಲಿ ಗಾಂಧೀಜಿಯವರ ೭೫ನೇ ಜಯಂತ್ಯುತ್ಸವವು ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಡುವುದು

ರಾಷ್ಟ್ರೀಯ ರಕ್ಷಣಾ ಬಲ

ಹೆಗ್ಗಡದೇವನ ಕೋಟೆ ತಾ|| ಅಂತರಸಂತೆ ಹೋಬಳಿ ಅಂತರಸಂತೆ ಗ್ರಾಮದಲ್ಲಿ [illegible] ರಲ್ಲಿ ಶ್ರೀ ಸಿ ಶ್ರೀಕಂಠಯ್ಯನವರು ರಾಷ್ಟ್ರೀಯ ರಕ್ಷಣಾ ಬಲ ವಿಚಾರವಾಗಿ ಉಪನ್ಯಾಸ ಮಾಡಿದರು ಹಾಲಿ ಸಂಭವಿಸಿರುವ ಆಹಾರ ಸಮಸ್ಯೆಯನ್ನು ಸಮರ್ಪಕವಾಗಿ ಬಗೆಹರಿಸಲು, ರೈತರು ಸಮಸ್ತ ವಿಧದಲ್ಲೂ ಸರ್ಕಾರದೊಡನೆ ಸಹಕರಿಸಬೇಕೆಂದೂ, ಹೆಚ್ಚು ಬೆಳೆ ಬೆಳೆಯಬೇಕೆಂದೂ ತಿಳಿಸಿದರು.

ಬಂಗಾಳದ ಕ್ಷಾಮಕ್ಕೆ ಎಮೆರಿ ಜವಾಬ್ದಾರರು

ಭಾರತದ ರಾಜಕೀಯ ಬಿಕ್ಕಟ್ಟು ಪರಿಹಾರವಾಗುವುದು ಈಗ ಅತ್ಯಂತ ಅವಶ್ಯಕವೆಂದೂ ಅದಕ್ಕೆ ಮಿ|| ವಾವೆಲ್ಲರು, ಗಾಂಧೀಜಿಯವರು ಮತ್ತು ವರ್ಕಿಂಗ್ ಕಮಿಟಿಯ [illegible] ರನ್ನು ಬಿಡುಗಡೆ ಮಾಡುವುದು ಸೂಕ್ತವೆಂದೂ, ಬಂಗಾಳದ ಕ್ಷಾಮಕ್ಕೆ ಮಿ|| ಎಮೆರಿಯವರೇ ಜವಾಬ್ದಾರರೆಂದೂ, ಕೂಡಲೇ ಇಂಡಿಯಾ ಆಫೀಸನ್ನು [illegible] ಬೇಕೆಂದೂ [illegible] ಬೋಲ್ಲಿಂಗ್ ರವರು ಲಂಡನ್ನಿನ ಸಭೆಯೊಂದರಲ್ಲಿ ತಿಳಿಸಿದ್ದಾರೆ.

ಮಾಜಿ ನ್ಯಾಯಾಧೀಶರಿಗೆ ಶಿಕ್ಷೆ

ಢಾಕಾದಲ್ಲಿ ವಿಶೇಷ ನ್ಯಾಯಾಧೀಶರಾಗಿದ್ದ ಶ್ರೀ ಹರೀಂದ್ರ ಚಂದ್ರ ಚಕ್ರವರ್ತಿಯವರು ಈ ಪ್ರಾಂತ್ಯದಲ್ಲಿ [illegible] ಒಂದು ಮೊಕದ್ದಮೆಯಲ್ಲಿ [illegible] ಅಧಿಕಾರಿಯಾಗಿದ್ದ ರಾವ್ ಬಹದ್ದೂರ್ [illegible] ವಾರ್ತಾಪತ್ರದಿಂದ [illegible] ಗಳನ್ನು [illegible] ಅವರಿಗೆ [illegible]

ಟರ್ಕಿ ಯುದ್ಧಕ್ಕೆ ಇಳಿಯುವುದೇ ?

ಇಟಲಿಯಲ್ಲಿರುವ [illegible] ದಿಂದ ಟರ್ಕಿಯು ಯುದ್ಧಕ್ಕೆ [illegible] ದೆಂದು ಊಹಿಸಲಾಗಿದೆ [illegible] ದ ಬಾಲ್ಕನ್ಸ್ ನೇಜ ಪಿ [illegible] ಡಿಸಲು ತುಂಬಾ ಅನುಕೂಲ [illegible] ಲಾಗಿದೆ

ರುಮೇನಿಯಾ ಮತ್ತು ಬಲ್ಗೇರಿಯಾ [illegible] ಡೆಗೆ ರಷ್ಯನ್ನರು ನುಗ್ಗುತ್ತಿರುವುದರಿಂದಲೂ, ಮಿತ್ರ ಸೈನ್ಯವು ಉತ್ತರ ಇಟಲಿ ಕಡೆ ನುಗ್ಗುತ್ತಿರುವುದರಿಂದಲೂ ಮತ್ತು ಬಾಲ್ಕನ್ ಪ್ರಾಂತ್ಯಗೆ ಆಗುವ [illegible] ಜರ್ಮನಿಯು ಬಾಲ್ಕನ್ ತ್ಯಜಿಸುವುದೆಂದು ಹೇಳಲಾಗಿದೆ .

ನಾರ್ವೆಯನ್ನು ಜರ್ಮನರು ತ್ಯಜಿಸುವರೇ ?

ಜರ್ಮನ್ ಸೈನಿಕರು ನಾರ್ವೆಯನ್ನು ತ್ಯಜಿಸಲು ಕಾತರರಾಗಿರುವರೆಂದೂ, ಆದರೆ ಹಿಟ್ಲರನು ಇದಕ್ಕೆ ಒಡಂಬಟ್ಟಿಲ್ಲವೆಂದೂ ಹೇಳಲಾಗಿದೆ. ಜರ್ಮನ್ ಮಿಲಿಟರಿ ಅಧಿಕಾರಿಗಳು ಇದರ ಬಗ್ಗೆ ತೀವ್ರವಾಗಿ ಆಲೋಚಿಸುತ್ತಿರುವರೆಂದು ವರದಿಯಾಗಿದೆ

ನಾರ್ವೆಯಲ್ಲಿರುವ ೩೦ ಸಾವಿರ ಜರ್ಮನ್ ಸೈನ್ಯವನ್ನು ಜರ್ಮನ್ ಸಂರಕ್ಷಣೆಗಾಗಿ ಸಾಗಿಸಬೇಕೆಂದು ಆಲೋಚಿಸುತ್ತಿರುವರೆಂದು [illegible] ಲಾಗಿದೆ

ಇಟಲಿ ಗಡಿಯಲ್ಲಿ ಕದನ

ಜರ್ಮನ್ ಪಡೆಗಳು ಯುಗೋಸ್ಲಾವಿಯಾ [illegible] ಭಾಗದಲ್ಲಿ ಇರುವ ಇಟಲಿ ಗಡಿಯಲ್ಲಿ ಭೀಕರ ಕದನ ನಡೆಸುತ್ತಿವೆ ಇಟಲಿ ಸೈನಿಕರು ಗೊರಿಲ್ಲಾ ಪಡೆಗಳೊಡನೆ ಸೇರಿಕೊಂಡಿದ್ದಾರೆ ಜರ್ಮನ್ ಪಡೆಗಳು ಮುತ್ತಿಗೆಹಾಕಿವೆ. [illegible] ಹೆಚ್ಚಿನ ಜರ್ಮನ್ ಸೈನ್ಯಗಳನ್ನು ಕಳುಹಿಸಿರುವುದಾಗಿ ವರದಿಯಾಗಿದೆ

ಮಿಲಿಟರಿ ಟ್ರಿಬ್ಯೂನಲ್ ರಚನೆ

ಉತ್ತರ ಆಫ್ರಿಕ [illegible] ಬಂಧನದಲ್ಲಿ [illegible] ಬಗ್ಗೆ [illegible] ಮಿಲಿಟರಿ ಟ್ರಿಬ್ಯೂನಲ್ಲನ್ನು [illegible] ದು ಅಲ್ಜೀರ್ಸ್‌ನ ಫ್ರೆಂಚ್ [illegible] ನಿರ್ಧರಿಸಿದೆ.

ಯುಗೋಸ್ಲೇವಿಯಾದಲ್ಲಿ ಇಟಲಿ-ಬ್ರಿಟಿಷ್ ಸೈನಿಕರ ಸಹಕಾರ

ಇಟಲಿ [illegible] ಬಂದ ಬ್ರಿಟಿಷ್ ಸೈನಿಕರು ಇಟಲಿ ಸೈನಿಕರ ಜೊತೆಯಲ್ಲಿ [illegible] ಯುಗೋಸ್ಲೇವಿಯಾ [illegible] ಕದನ [illegible] ಗಿ ಜರ್ಮನ್ ರೇಡಿಯೋ [illegible] ತ್ತದೆ.

ಬಡೋಗ್ಲಿಯೋ-[illegible] ಸಮ್ಮೇಳನ

[illegible]

ತುಟ್ಟಿ ಭತ್ಯ ಹೆಚ್ಚಿಸಲಾಗುತ್ತೆ

ಬೆಂಗಳೂರು ೧

ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯವನ್ನು ಹೆಚ್ಚಿಸಲು ಸರ್ಕಾರದವರು ನಿರ್ಧರಿಸಿರುವ ದಾಗಿ ಗೊತ್ತಾಗಿದೆ. ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ೫ ರಿಂದ ೭ ರೂ. ಮತ್ತು ೭ ರಿಂದ ೯॥ ರೂ. ಮತ್ತು ಬೇರೆ ಬೇರೆ ಸ್ಥಳಗಳಿಗೆ ೩ ರಿಂದ ೫ ಮತ್ತು ೫ ರಿಂದ ೭॥ ರೂ ಕೊಡಲಾಗುವುದೆಂದು ಹೇಳಲಾಗಿದೆ.

ದಫೇದಾರರಿಗೆ ಶಿಕ್ಷೆ

ಶಿವಮೊಗ್ಗಾ ಜೈಲ್ ಪ್ರೊ॥ ದಫೇದಾರರಾದ ಗಂಗಪ್ಪನವರು ಹೊಳೆಹೊನ್ನೂರು ಮೊಖದ್ದಮೆಯಲ್ಲಿ ಬಂಧಿಯಾಗಿ ಜೈಲಿನ ಲ್ಲಿದ್ದ ಗುರುನಂಜಯ್ಯ ಎಂಬುವರನ್ನು ಹೊಡೆದರೆಂಬ ಆಪಾದನೆ ಮೇಲೆ ದಫೇದಾರರಿಗೆ ೭೫ ರೂ ದಂಡ, ತಪ್ಪಿದಲ್ಲಿ ೩ ತಿಂಗಳು ಕಠಿಣ ಶಿಕ್ಷೆ ವಿಧಿಸಲಾಗಿದೆ

ಮೈಸೂರು ಯುದ್ಧ ನಿಧಿ

ಸೆಪ್ಟೆಂಬರ್ ಮಾಹೆ ೨೫ ನೇ ತಾ॥ ಸಮಾರಾಂತ್ಯದವರೆಗೆ ಮೈಸೂರು ಯುದ್ಧ ನಿಧಿಗೆ ಒಟ್ಟು ೩೩,೭೭,೫೪೭ ರೂ ಜಮಾ ಆಗಿದೆ. ಧನ ರೂಪವಾಗಿ ಬಂದ ವಸ್ತುಗಳ ಮೌಲ್ಯ ೧೩,೦೬೭-೧೦-೦

ಕೋರ್ಟಿನಲ್ಲಿ ಕಳ್ಳತನ

ಬೆಂಗಳೂರು ದ್ವಿತೀಯ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿದ್ದ ಒಂದು ಕೇಸಿಗೆ ಸಂಬಂಧಪಟ್ಟ ೩೭ ಪಾಕೆಟ್ ರೇಜರ್ ಬ್ಲೇಡುಗಳನ್ನು ಸಮಯ ಸಿಕ್ಕಿದಂತೆ ಅಪಹರಿಸಿ ಬೇರೆಯವರಿಗೆ ಮಾರುತ್ತಿದ್ದರೆಂಬ ಆಪಾದನೆ ಮೇಲೆ ಸದರಿ ಕೋರ್ಟಿನ ದಫೇದಾರರಾದ ಚನ್ನಯ್ಯ ಉರುಫ್ ಮಾಂಟ್ಗೊಮ್ರಿ ಮತ್ತು ಆತನ ಸ್ನೇಹಿತ ನಂಜಯ್ಯ ಎಂಬುವರನ್ನು ದಸ್ತಗಿರಿ ಮಾಡಿದ್ದಾರೆ.

ಟ್ರಾನ್ಸ್‌ಪೋರ್ಟ್ ಕಂಪನಿ ಮೇಲೆ ಫಿರ್ಯಾದು

ಟ್ರಾನ್ಸ್‌ಪೋರ್ಟ್ ಕಂಪನಿಯ ಡ್ರೈವರ್ ರಾದ ಬೋರಯ್ಯ ಮತ್ತು ಶ್ರೀ॥ ಅಪ್ಪಾಜೂರಿ ಎಂಬುವರನ್ನು ವಿಚಾರಣೆ ಇಲ್ಲದೆ ಒಂದು ವಾರ ಕಾಲ ಸಸ್ಪೆಂಡ್ ಮಾಡಿದ್ದಕ್ಕಾಗಿ, ಸದರಿ ಕಂಪನಿಯ ಮ್ಯಾನೇಜರ ಮೇಲೆ ಲೇಬರ್ ಆಕ್ಟ್ ಪ್ರಕಾರ ಬೆಂಗಳೂರು ಸಿಟಿ ಮ್ಯಾ॥ ಕೋರ್ಟಿನಲ್ಲಿ ಫಿರ್ಯಾದು ಅರ್ಜಿ ಹಾಕಲಾಗಿದೆ.

Edited, printed and published by A. R Nagarajan, at the Sadhvi Press, D Subbiah Road, Mysore.

ರಿಸರ್ವ್ ಪೋ॥ ಕಾನ್ಸ್ಟೇಬಲ್ ದಸ್ತಗಿರಿ

ಕೆಂಪಾಂಬುಧಿ ಕೆರೆಯ ಅಂಗಳದಲ್ಲಿ ಅಗಸರು ಒಣಹಾಕಿದ ಬಟ್ಟೆಗಳನ್ನು ಗಂಟುಕಟ್ಟಿ, ಅವೇಳೆಯಲ್ಲಿ ಸುಮಾರು ೫೦ ರೂ. ಬೆಲೆ ಬಾಳುವ ಬಟ್ಟೆ ಗಂಟನ್ನು ಅಪಹರಿಸಿದನೆಂಬ ಆಪಾದನೆ ಮೇಲೆ ರಿಸರ್ವ್ ಪೋಲೀಸ್ ಕಾನ್ಸ್ಟೇಬಲ್ ಭೀಮಯ್ಯ ಎಂಬುವನನ್ನು ದಸ್ತಗಿರಿಮಾಡಿದ್ದಾರೆ.

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ,)

ಮೈಸೂರು

ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ 'ಬಿ' ಬ್ಲಾಕಿನ 1 ಮತ್ತು 2 ನೇ ಸ್ಟಾಲುಗಳಲ್ಲಿನ ನಮ್ಮ ಅಂಗಡಿಗೆ ಭೇಟಿ ಕೊಡಲು ತಪ್ಪಬೇಡಿ.

೧೯೪೩ ನೇ ವರ್ಷದ ಮೈಸೂರು ದಸರಾ ಆಕರ್ಷಣೆ

“ಮಾಡರನ್ ಕೆಫೆ”

ಗಾಂಧೀ ಚೌಕ, — ಮೈಸೂರು.

(ಮೈಸೂರು, ಊಟಿ ಗಳಲ್ಲಿರುವ ಮಾಡರ್ನ ಹಿಂದೂ ಹೋಟೆಲುಗಳ ಮತ್ತು ಮದರಾಸಿನ ಮಾಡರ್ನ ಕೆಫೆಯ ಶಾಖೆ ಇದು)

ದಕ್ಷಿಣ ಭಾರತದಲ್ಲಿಯೇ ಅತ್ಯುತ್ತಮ ರೆಸ್ಟೋರೆಂಟ್ ಮತ್ತು ವಿಶ್ರಾಂತಿ ಗೃಹ.

೧೦೦ ಜನರಿಗೆ ವಸತಿ ಸೌಕರ್ಯ ಕೊಡಬಲ್ಲ ಸಕಲಾನುಕೂಲಗಳಿಂದ ಕೂಡಿದ ೭೦ ಕೊಠಡಿಗಳಿವೆ.

ಮಾಲೀಕರು :

ಕೆ. ಸೀತಾರಾಮರಾವ್

His Highness the Maharaja of Mysore

is pleased to appoint

THE

SRI KRISHNA BHAVAN RESTAURANT, MYSORE,

AS CATERERS

to

HIS HIGHNESS

By His Highness' Command

(Sd) SADEG Z. SHAH

Huzur Secretary to H H. the Maharaja of Mysore

THE PALACE

8th April, 1943

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಸಯ್ಯಾಜಿರಾವ್ ರೋಡು, ಮೈಸೂರು

	ರೂ ಅ.	ಲಾಂಗ್ ಕ್ಲಾತ್ಸ್ :—	ರೂ ಅ
ಲಾಲ್‌ಮಿಲ್ಸ್ ಟೆಂಟ್ಸ್ ಗಜ ೧ ಕ್ಕೆ	0—9	ಡಬಲ್ ಸ್ಟೈಲ್ ಮಾರ್ಕ್	0—8½
ವಿಕ್ರಮ ಮಿಲ್ಸ್ ,, ,,	0-8½	ನಂ. 8610	0—7½
ಜೋರಿಯಾ ವಾಯಿಲ್ ,,	0—12	ಹಿಂದೂ ಮಾತ	0—12
ಡಬಲ್ ಕಲರ್ ವಾಯಿಲ್ 45"	1—0	ಮಿನರ್ವ ಮಿಲ್ಸ್	0— 9
ಹುಡುಗರಿಗಾಗಿ ಶುದ್ಧ ಉಣ್ಣೆ ಸ್ವೆಟರ್ 1 ಕ್ಕೆ	2—0	ಬಕಿಂಗ್ಹ್ಯಾಂ ಮಿಲ್ಸ್	0—10
ಕರ್ನಾಟಿಕ್ ಮಿಲ್ಸ್ ವಸ್ಯಾಟ ಗಜ 1 ಕ್ಕೆ	0-14	ಕರ್ನಾಟಿಕ ಮಿಲ್ಸ್ 15"	0—15
,, 72" ಷೀಟಿಂಗ್ 1 ಗಜ	2-0	ನ್ಯೂ ಮಿಲ್ಸ್	0-10½
ಬಕಿಂಗ್ಹ್ಯಾಂ ಮಿಲ್ಸ್ ಟ್ವಿಲ್ ,,	0-14	ಹಾಫ್ ಆರಂ ಪಟ್ಟಗಳು 1 ಕ್ಕೆ	1—9
ಅನ್‌ಬ್ಲೀಚ್ಡ್ ಲಾಂಗ್ ಕ್ಲಾತ್ 45"	0-11	ಪೈಜಾಮ ,,	1-10
,, 50" ಮಲ್	0—9	ಸ್ಪೋರ್ಟ್ ಷರ್ಟಿಂಗ್ 1 ನೇ ದರ್ಜೆ 1 ಗಜಕ್ಕೆ	0—14
ಗೀರಿನ ಪಿರ್ದ್ವರ್ ಚೆಕ್ ಷರ್ಟಿಂಗ್	0—6	,, ಹಾಫ್ ಆರಂ ಪಟ್ 1 ಕ್ಕೆ	2—9
ಹತ್ತಿ ನೂಲಿನ ರಗ್ 1 ಕ್ಕೆ	3—8	ಕೊಲ್ಲಾಪುರ ಗಿರಿ ಕೋಟಿಂಗ್	0—11
ಇಟಾಲಿಯನ್ ಲೈನಿಂಗ್ 18" 1 ಗಜ	1—8	ಸೂರತ್ ಕೋಟಿಂಗ್ 1 ಗಜಕ್ಕೆ	1—[illegible]
ಹೇರ್ ಕಾರ್ಡ್ ಸ್ಟ್ರಿಪ್ ಕ್ಲಾತ್ ,,	1—0	ಚೆಕ್ ಕೋಟಿಂಗ್ ,,	0—11
ರ್ಯಾಲಿ ಬ್ರದರ್ಸ್ ಡ್ರಿಲ್	0—13	ಕೃಷ್ಣಾ ಮಿಲ್ಸ್ ಕೋಟಿಂಗ್	1—4
ಕೃ. ರಾ. ಮಿಲ್ ಡ್ರಿಲ್	0—10	ಮಿಲ್ ಷರ್ಟಿಂಗ್	0—13
ಮಿನರ್ವಾ ಮಿಲ್ ಡ್ರಿಲ್	1—0	ಕೃ. ರಾ. ಮಿಲ್ ಧೋತಿ 2×8 ಗಜ	6—8
		ಫಿನ್ಲೆ ಮಾದರಿ ,,	8—8
		ಮಸ್ಸರೈಸ್ಡ್ ಪಂಚೆ ,,	9—8
		ಲ್ಯಾಂಕಶೈರ್ ವೇಲ್	9—1[illegible]

ಇವಲ್ಲದೆ ಸೊಳ್ಳೆ ಪರದೆಗಳು, ಶುದ್ಧವಾದ ಉಲ್ಲನ್ ರಗ್ಗುಗಳು, ಫ್ರಾಕ್ಸ್, ಸ್ಪ್ರೆಡ್ಸ್, ಬ್ಯಾಂಗಲ್ಸ್, ಆಯಿಲ್ ಕ್ಲಾತ್, ಬೆಂಗಳೂರು, ಕಾಶ್ಮೀರ, ಬಂಗಾಳ, ಬರೋಡಾ ಗಳ ರೇಷ್ಮೆ ಸೀರೆಗಳು ಸಹ ಬೇಕಾದಷ್ಟು ದಾಸ್ತಾನಿವೆ

ದಯವಿಟ್ಟು ಪ್ರಿಂಟೆಡ ಸೀರೆಗಳ ನಾನಾ ರಕಮುಗಳು ಮತ್ತು ಬಣ್ಣಗಳ ಮಾದರಿಗಳನ್ನು ನೋಡಲು ತಪ್ಪಬೇಡಿ

ಸಂಪುಟ ೨] ಭಾನುವಾರ ೩--೧೦--೪೩ [ಸಂಚಿಕೆ ೬೫

ಇಟಲಿ ಬಾಲ್ಕನ್ ಬಿಡಬೇಕು

ರೋಂ ನಗರವನ್ನು ನಾಶಪಡಿಸದಿರಲು ಮಿತ್ರರ ಹಂಚಿಕೆ ?

ಅಟ್ಲಾಂಟಿಕ್‌ನಲ್ಲಿ ಜರ್ಮನ್ ನೂತನ ಯು-ಬೋಟ್ ಹಾವಳಿ

ಬಡವರಿಗೆ ಅನ್ನದಾನ ಮಾಡಲು ಶ್ರೀ ಮಲ್ಲಿಕಾರ್ಜುನ ಗೌಡರ ಸಹಾಯ

ಮೈಸೂರು ೩.

ಮೈಸೂರು ಪ್ರಜಾಪ್ರತಿನಿಧಿ ಸಭಾ ಸದ್ಯರು ಮತ್ತು ಡೆಪ್ಯುಟಿಗಳೂ ಆಗಿರುವ ಎಣ್ಣೆ ಕೊಪ್ಪದ ಶ್ರೀ ಮಲ್ಲಿಕಾರ್ಜುನಪ್ಪಗೌಡರು ತಮ್ಮ ಶಕ್ತಿ ವಿಯೋಗದ ಸಂಬಂಧದಲ್ಲಿ ಬಡಜನಗಳಿಗೆ ಅನ್ನದಾನ ಮಾಡಲು ಮೈಸೂರು ಮುನಿಸಿಪಾಲಿಟಿಯವರಲ್ಲಿ ೧೦೦ ರೂ ಗಳನ್ನು ನಿನ್ನೆ ದಿವಸ ಕೊಟ್ಟಿರುವರು.

ನೂತನ ಕೈಗಾರಿಕೆ ಉಪನಗರ ರಚನೆ

ಶ್ರೀಮನ್ಮಹಾರಾಜರವರ ದಿವ್ಯ ನಾಮ ದಲ್ಲಿ ಬೆಂಗಳೂರಿನಲ್ಲಿ ಹೊಸದೊಂದು ಕೈಗಾರಿಕಾ ಉಪನಗರವೊಂದನ್ನು ನಿರ್ಮಿಸಲಾಗುವುದೆಂದೂ, ಇದಕ್ಕೆ ಜಯ ನಗರವೆಂದು ಕರೆಯಲ್ಪಡುವುದೆಂದೂ ಹೇಳಲಾಗಿದೆ.

ಶ್ರೀ ಪಿ ಹೆಚ್. ಕೃಷ್ಣರಾವ್, ಶ್ರೀ ವಿ. . ಗೋವಿಂದರಾಜುಲು, ವಾಣಿಜ್ಯ ಮತ್ತು ಕೈಗಾರಿಕಾ ಡೈರೆಕ್ಟರುಗಳ ಮತ್ತು ಕೆಲವು ನಗರ ಪ್ರಮುಖರನ್ನೊಳಗೊಂಡ ಒಂದು ಉಪಸಮಿತಿಯನ್ನು ಇದರ ರಚನೆಗಾಗಿ ರಚಿಸಲಾಗಿದೆ.

ರೋಂ ನಗರ ನಾಶವಾಗದೆ ಇರಲು ಮಿತ್ರರ ಯತ್ನ

ರೋಂ ಮತ್ತು ವೆಟಿಕನ್ ನಗರಗಳು ನಾಶಗೊಳ್ಳದಿರಲೆಂಬು ನಗರದೊಳಗೆ ಕದನ ನಡೆಯದಿರಲು ಮಿತ್ರರು ಸರ್ವಪ್ರಯತ್ನ ನಡೆಸುವರೆಂದು ಪ್ರೆ|| ರೂಸ್ವೆಲ್ಟರು ತಿಳಿಸಿರುವರು. ಇಟಲಿಯಲ್ಲಿರುವ ಮಿತ್ರ ಸೈನಿಕರ ಬಯಕೆಯು ರೋಂ ನಗರವು ಸ್ವಾತಂತ್ರ್ಯವಾಗಬೇಕೆಂದೂ, ಆದರೆ ರೋಂ ನಗರದ ಅಪಾಯಕ್ಕೆ ಜರ್ಮನರೇ ಕಾರಣರೆಂದೂ ರೂಸ್ವೆಲ್ಟರು ತಿಳಿಸಿದ್ದಾರೆ.

ಆಸ್ಟ್ರೇಲಿಯಾ, ಭಾರತಕ್ಕೆ ಬ್ರಿ|| ಮಿಲಿಟರಿ ಮಂಡಳಿ

ಜಪಾನಿನ ಮೇಲೆ ಉಗ್ರ ಕಾರ್ಯಕ್ರಮವು ದು ಕೊಳ್ಳಲು ಅಮೇರಿಕದೊಡನೆ ಬ್ರಿ|| ಸರ್ಕಾರದ ಸಂಪೂರ್ಣ ಸಹಕಾರವಿದೆಯೆಂ ಇದನ್ನು ಕಾರ್ಯ ರೂಪಕ್ಕೆ ತರಲು ಬ್ರಿಟಿಷ್ ಮಿಲಿಟರಿ ಮಂಡಲಿಯೊಂದು ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾಕ್ಕೆ ಬರಲಿರುವುದೆಂದೂ ನ್ಯೂಜಿಲೆಂಡ್ ಪ್ರಧಾನಿ ತಿಳಿಸಿದ್ದಾರೆ. ಆ ಮಂಡಳಿಯು ಭಾರತಕ್ಕೂ ಭೇಟಿಕೊಡುವುದೆಂದೂ ಹೇಳಲಾಗಿದೆ.

ಹಂಗೇರಿ ಸೈನಿಕರನ್ನು ಕಳುಹಿಸಲು ನಿರಾಕರಣೆ

ರಷ್ಯಕ್ಕೆ ಮತ್ತು ಬಾಲ್ಕನ್ಸಿಗೆ ಪೋಲೀಸ್ ಕೆಲಸಗಳನ್ನು ಮಾಡಲು ಹಂಗೇರಿ ಸೈನಿಕರನ್ನು ಕಳುಹಬೇಕೆಂದು ಜರ್ಮನರು ಹಂಗೇರಿಯಾಕ್ಕೆ ಕೇಳಿದ್ದನ್ನು ಸರ್ಕಾರ ನಿರಾಕರಿಸಿರುವುದಾಗಿ ವರದಿಯಾಗಿದೆ

ಡ್ಯೂಕ್ ವೆಲಿಂಗ್‌ಟನವರ ಮರಣ

ಇಟಲಿ ರಣಕ್ಷೇತ್ರದಲ್ಲಿ ಬ್ರಿ|| ಕಮ್ಯಾಂಡೋ ಪ್ರಸಿದ್ಧರಾದ ಡ್ಯೂಕ್ ಆಫ್ ವೆಲಿಂಗ್‌ಟನವರು ಮರಣಹೊಂದಿದರೆಂದು ಪ್ರಕಟವಾಗಿದೆ. ಅವರಿಗೆ ಕೇವಲ ೩೧ ವರ್ಷ ವಯಸ್ಸಾಗಿತ್ತು.

ಮ್ಯೂನಿಕ್ ಮೇಲೆ ಧಾಳಿ

ಜರ್ಮನಿಯ ಮುಖ್ಯ ಕೈಗಾರಿಕಾ ಕೇಂದ್ರವಾದ ಮ್ಯೂನಿಕ್ ನಗರದಮೇಲೆ ಅಮೇರಿಕನ್ ವಿಮಾನಗಳು ಧಾಳಿ ನಡೆಸಿದವು. ಉತ್ತರ ಆಫ್ರಿಕಾದಿಂದ ೧೯೦೦ ಮೈಲಿಗಳು ಸಂಚಾರಮಾಡಿ ಧಾಳಿ ನಡೆಸಿರುವುದು ಇದೇ ಪ್ರಥಮಬಾರಿಯೆಂದು ಹೇಳಲಾಗಿದೆ.

ಇಟಲಿ ಮೇಲೆ ಬಾಂಬುಗಳ ಸುರಿಮಳೆ

ಇಟಲಿಯ ಮೇಲೆ ಸೆಪ್ಟೆಂಬರ್ ತಿಂಗಳಲ್ಲಿ ಮಿತ್ರ ವಿಮಾನಗಳು ೧೬ ಸಾವಿರ ಟನ್ ಬಾಂಬುಗಳನ್ನು ಸುರಿಸಿದವೆಂದೂ ೬೩೦ ಜರ್ಮನ್ ವಿಮಾನಗಳನ್ನು ನಾಶಪಡಿಸಲಾಯಿತೆಂದು ವರದಿಯಾಗಿದೆ

ಇಟಲಿ ಬಾಲ್ಕನ್ ಬಿಡಬೇಕು

ಯುದ್ಧಾನಂತರ ಇಟಲಿಯು ಬಾಲ್ಕನ್ ಪ್ರದೇಶಗಳನ್ನು ಸಂಪೂರ್ಣವಾಗಿ ಬಿಡಬೇಕೆಂದು ಯುಗೋಸ್ಲೇವಿಯಾ ಸರ್ಕಾರದವರು ಮುಸೋಲಿನಿ ಪತನವಾದ ಕೂಡಲೇ ಮಿತ್ರ ರಾಷ್ಟ್ರಗಳಿಗೆ ಮನವಿ ಮಾಡಿಕೊಂಡಿರುವರೆಂದು ಹೇಳಲಾಗಿದೆ

ಜರ್ಮನ್ ಹಡಗಿನ ನಾಶ

ಬಾಲ್ಟಿಕ್ ಸಮುದ್ರದಲ್ಲಿ ೧೯ ಸಾವಿರ ಟನ್ ಹಡಗೊಂದನ್ನು ರಷ್ಯನ್ ನೌಕೆಯು ಮುಳುಗಿಸಿತೆಂದು ಪ್ರಕಟವಾಗಿದೆ

ದೋಣಿ ಅಪಘಾತ

ಪಾಟ್ನಾ ಹತ್ತಿರ ಪದ್ಮಾ ನದಿಯಲ್ಲಿ ಒಂದು ದೋಣಿ ಮುಗುಚಿಕೊಂಡು ೩೭ ಜನರು ಜಲಸಮಾಧಿ ಹೊಂದಿದರೆಂದು ವರದಿಯಾಗಿದೆ

ಸಿಮ್ಲಾದಲ್ಲಿ ಗುಂಡಿನ ಪ್ರಕರಣ

ಸಿಮ್ಲಾದಲ್ಲಿ ಮೈತ್ರಿಯಾರ ಬಂಗಲೆಯ ದಕ್ಷಿಣ ಪ್ರವೇಶದ್ವಾರದ ಹತ್ತಿರ ಮಹಲ್ ಡೈರೆಕ್ಟರ್ ಆದ ಗುಲಾಮ್ ಮಹಮದ್ ಎಂಬುವನು ಕಾವಲಿನಲ್ಲಿದ್ದಾಗ ಆತನಿಗೆ ಗುಂಡಿನೇಟು ತಗುಲಿ ಅತಿ ಗಾಯಗೊಂಡು ಆಸ್ಪತ್ರೆಯಲ್ಲಿ ಸತ್ತನೆಂದು ವರದಿಯಾಗಿದೆ.

ರಷ್ಯದೊಡನೆ ಮಿಲಿಟರಿ ಸಮ್ಮೇಳನ

ಈಗಿನ ಯುದ್ಧದ ಪರಿಸ್ಥಿತಿಯಿಂದ ಮಿತ್ರ ರಾಷ್ಟ್ರಗಳು ರಷ್ಯಾದೊಡನೆ ಜೊತೆಯಾಗಿ ಮಿಲಿಟರಿ ವಿಚಾರವಾಗಿ ಮಾತುಕತೆ ನಡೆಸುವ ಆವಶ್ಯಕತೆ ಒದಗಿದೆಯೆಂದೂ ಮತ್ತು ಮುಂದಿನ ಯುದ್ಧ ಕಾರ್ಯಾಚರಣೆ ನಡೆಸಲು ಬ್ರಿ ಮತ್ತು ಅಮೇರಿಕ ಮಿಲಿಟರಿ ಅಧಿಕಾರಿಗಳು, ರಷ್ಯ ಅಧಿಕಾರಿಗಳೊಡನೆ ಸಮ್ಮೇಳನ ನಡೆಸುವರೆಂದು ಊಹಿಸಿದೆ.

ರುಮೇನಿಯಾ ಮೇಲೆ ಮಿತ್ರ ವಿಮಾನಗಳು

ರುಮೇನಿಯಾದ ಮೇಲೆ ಮಿತ್ರ ವಿಮಾನಗಳು ಬಂದಿದ್ದುವೆಂದು ಜರ್ಮನ್‌ವಾರ್ತೆ ತಿಳಿಸುತ್ತದೆ.

ಅಮೇರಿಕನ್ ವಿಮಾನ ನಾಶ

ಸ್ವಿಸ್ ದೇಶದ ಮೇಲೆ ಧಾಳಿನಡೆಸಲು ಹೋದ ಅಮೇರಿಕನ್ ವಿಮಾನಗಳಿಗೂ, ಜರ್ಮನ್ ವಿಮಾನಗಳಿಗೂ ದೊಡ್ಡ ಕದನ ನಡೆದು ಒಂದು ಅಮೇರಿಕನ್ ವಿಮಾನವು ನಾಶವಾಯಿತೆಂದು ವರದಿಯಾಗಿದೆ.

ಅಟ್ಲಾಂಟಿಕ್‌ನಲ್ಲಿ ನೂತನ ಜರ್ಮನ್ ಬೋಟುಗಳು

ಅಟ್ಲಾಂಟಿಕ್ಕಿನಲ್ಲಿ ಜರ್ಮನ್ ಯು-ಬೋಟುಗಳು ಪ್ರಾಣಘಾತಕವಾದ ಟಾರ್ಪೆಡೊಗಳನ್ನು ಉಪಯೋಗಿಸುತ್ತಿವೆಯೆಂದು, ಅಟ್ಲಾಂಟಿಕ್ ಕದನಕ್ಕೆ ಇಂತಹ ನೂತನ ಸಬ್‌ಮರೀನುಗಳು ಹೆಚ್ಚಾಗಿ ಜರ್ಮನರು ಉಪಯೋಗಿಸಲು ಕಳುಹಿಸಲಾಗಿದೆಯೆಂದು ಹೇಳಲಾಗಿದೆ.

ಅಟ್ಲಾಂಟಿಕಿನಲ್ಲಿ ಯು-ಬೋಟು ಕದನದಿಂದ ಮಿತ್ರರ ಮೂರು ನೌಕಾ ಹಡಗುಗಳು ಮುಳುಗಿದುವೆಂದು ಹೇಳಲಾಗಿದೆ.

ಬಡೋಗ್ಲಿಯೋ ಸರ್ಕಾರವನ್ನು ಮಿತ್ರರು ಒಪ್ಪುವರೆ ?

ಬಡೋಗ್ಲಿಯೋ ಸರ್ಕಾರವನ್ನು ಮಿತ್ರರು ಅಧಿಕಾರಯುತವಾಗಿ ಒಪ್ಪಬಹುದೆಂದೂ, ಇದಕ್ಕಾಗಿ ಮಾರ್ಷಲ್ ಬಡೋಗ್ಲಿಯೋ, ವಿಕ್ಟರ್ ಜನರಲ್ ... ಮಾತುಕತೆ ನಡೆಸುತ್ತಿರುವರೆಂದು ಹೇಳಲಾಗಿದೆ.

ಕ್ಷುದ್ಬಾಧಾ ಪೀಡಿತರಿಗೆ ಸಹಾಯ ಮಾಡಿ

ದಸರಾ ವೇಳೆಯಲ್ಲಿ ಅನ್ನವಿಲ್ಲದೆ ... ಯಲ್ಲಿ ಬಳಲುವ ಭಿಕ್ಷುಕರು ... ರನ್ನು ಸಾರ್ವಜನಿಕರು ... ಬೇಕೆಂದು ಜಿಲ್ಲಾ ... ಸಾರ್ವಜನಿಕರಲ್ಲಿ ವಿನಂತಿ ಮಾಡಿರುವರು.

ಬಂಗಾಳದಲ್ಲಿ ಭೀಕರ ಕ್ಷಾಮ

ಕಲ್ಕತ್ತಾ ಮತ್ತು ಇತರ ನಗರಗಳಲ್ಲಿ ಹೊಟ್ಟೆಗಿಲ್ಲದೆ ಸಾಯುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಆಹಾರವಿಲ್ಲದೆ ಅನೇಕರು ದುರ್ಘಟನೆಗಳಿಗೆ ... ರುತ್ತಾರೆ. ಹೊಟ್ಟೆಗಿಲ್ಲದ ಒಬ್ಬ ... ನು ... ಬಳಿ ಒಂದು ಮರಕ್ಕೆ ಹಗ್ಗದಿಂದ ನೇಣುಹಾಕಿಕೊಂಡಿದ್ದನು. ಮತ್ತೊಬ್ಬ ತಂದೆಯು ಆಹಾರದ ಅಭಾವದಿಂದ ಮೂರು ವರ್ಷ ವಯಸ್ಸಿನ ತನ್ನ ಏಕ ಮಾತ್ರ ಪುತ್ರನನ್ನು ಕೊಂದ ಅಪಾದನೆಗಾಗಿ ವಿಚಾರಣೆ ನಡೆದು, ದೀರ್ಘಾವಧಿ ಶಿಕ್ಷೆಗೆ ಗುರಿಯಾದನು. ಈ ಮೊಕದ್ದಮೆಯಲ್ಲಿ ಆತನ ಹೆಣ್ಣು ಮಗಳೊಂದು ಸರ್ಕಾರದ ಪರವಾಗಿ ಸಾಕ್ಷಿ ಹೇಳಿತ್ತು.

ಕಾಡಿನಲ್ಲಿ ಬಡಿವ ಗಂಟು

ಮದರಾಸ್ ಪ್ರಾಂತ್ಯದ ... ರೈಲ್ವೆ ಸ್ಟೇಷನ್ ಹತ್ತಿರವಿರುವ ... ಕಾಡಿನಲ್ಲಿ ... ಸಾವಿರ ರೂ, ... ಒಡವೆಗಳನ್ನು ಕಟ್ಟಿದ್ದ ... ಗಂಟು ... ದನ ಕಾಯುವ ಹುಡುಗನಿಗೆ ಸಿಕ್ಕಿದೆಂದೂ, ಪೋಲೀಸರು ಅದನ್ನು ವಶಪಡಿಸಿಕೊಂಡಿದ್ದಾರೆಂದು ವರದಿಯಾಗಿದೆ.

ಸರ್ಕಾರದ ನೀತಿಯಲ್ಲಿ ಬದಲಾವಣೆ ಇಲ್ಲ ?

ಮದರಾಸ್, ಬೊಂಬಾಯಿ ಮತ್ತು ಇತರ ಪ್ರದೇಶಗಳಲ್ಲಿ ... ಬಂಧಿಸಿಟ್ಟಿರುವ ಕಾಂಗ್ರೆಸ್ ಬಗ್ಗೆ ... ಸರ್ಕಾರದ ಮನೋಭಾವನೆಯಲ್ಲಿ ಏನೂ ಬದಲಾವಣೆ ಇಲ್ಲವೆಂದು ದೆಹಲಿಯಲ್ಲಿ ಭಾವಿಸಲಾಗಿದೆ. ಹೊಸ ವೈಸರಾಯರು ... ಇದೇ ನೀತಿಯು ... ದೆಂದು ನಂಬಲಾಗಿದೆ

೧೮೦೦ ಮೈಲಿ ವಿಮಾನ ಸಂಚಾರ

ಮಿತ್ರ ವಿಮಾನಗಳು ... ಆಸ್ಟ್ರಿಯಾ ಮೇಲೆ ಉಗ್ರ ಧಾಳಿ ... ೧೮೦೦ ಮೈಲಿಗಳನ್ನು ... ರವು

ಕ್ರೊಯೇಷಿಯಾ ... ಗಂಡಾಂತರ

... ಆಸ್ಟ್ರೇಲಿಯನ್ ...

ಜರ್ಮನಿಗೆ ಎಚ್ಚರಿಕೆ

ಜರ್ಮನಿಗೆ ... ಯುದ್ಧ ...

ಪೌರಸಭೆಯಲ್ಲಿ ಗಾಂಧಿಜಿ ವರ್ಧಂತಿಯ ನಿರ್ಣಯ

ಬೆಂಗಳೂರು ೨

ಮಹಾತ್ಮರ ೭೫ ನೇ ಜಯಂತ್ಯುತ್ಸವದ ಪ್ರಯುಕ್ತ, ಅವರಿಗೆ ದೇವರು ದೀರ್ಘಾಯು ರಾರೋಗ್ಯ ನೀಡಲೆಂದು ಪ್ರಾರ್ಥಿಸುವ ನಿರ್ಣಯವು ಪೌರಸಭೆಯಲ್ಲಿ ಅಂಗೀಕೃತವಾಯಿತು. ಬಡಬಗ್ಗರಿಗೆ ಅನ್ನದಾನ ಮಾಡಲು ೩೦೦ ರೂ ಗಳನ್ನು ಕೊಡಲಾಯಿತು

ಛಾರಿ ಕೇದಿಗೆ ಶಿಕ್ಷೆ

೧೫ ಸಲ ಶಿಕ್ಷೆಯಾಗಿದ್ದ ಛಾರಿ ಕೇದಿಯಾದ ಮಹಮದ್ ಹಯಾತ್ ಎಂಬುವನು ಪೆಟ್ರೋಮ್ಯಾಕ್ಸ್ ದೀಪ ಮತ್ತು ೫೦೦ ಸಿಗರೇಟುಗಳನ್ನು ಸಿಕಂದರ್ ಖಾನ್ ಎಂಬುವರ ಅಂಗಡಿಯಿಂದ ಕದ್ದುದಕ್ಕೆ ಆತನಿಗೆ ೩ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ

ಹಿಂದೂ ಮಹಾಸಭಾ ಅಧಿವೇಶನ

ಅಖಿಲ ಭಾರತ ಸಂಸ್ಥಾನಗಳ ಹಿಂದೂ ಮಹಾ ಸಭಾಧಿವೇಶನವು ನವೆಂಬರ್ ೨೭, ೨೮ ರಲ್ಲಿ ಶಿವಮೊಗ್ಗೆಯಲ್ಲಿ ನಡೆಯುವುದು. ಡಾ|| ಸಾವರ್ಕರರು ಆರಂಭೋತ್ಸವ ನಡೆಸುವರು. ಇಂದೂರಿನ ಮಾಜಿ ದಿವಾನರಾದ ಶ್ರೀ ಎಸ್. ಎಂ. ಬಾಪ್ನಾರವರು ಅಧ್ಯಕ್ಷತೆ ವಹಿಸುವರು ಡಾ|| ಮೂಂಜೆ, ಶ್ರೀ ವಂದೇಮಾತರಂ ನಾಯ್ಡು ರವರು ಭಾಗವಹಿಸುವ ನಿರೀಕ್ಷೆ ಇದೆ

EXPERT IN WORLD MEDICINES

ನೀವು ಬಹುಕಾಲ ನಮ್ಮಲ್ಲಿಗೆ ಬಂದರೆ ನವಚೈತನ್ಯವನ್ನು ಹೊಂದುವಿರಿ.

ಸರ್ಕಾರ ಮೆರದ ಚಕ್ರವರ್ತಿಗಳಿಂದಲೂ ರಾಜಮಹಾರಾಜರುಗಳಿಂದಲೂ ಸನ್ಮಾನ ಪಡೆದು ಪ್ರಸಿದ್ಧರಾಗಿರುವ ವೈದ್ಯನಿಪುಣರು ಈಗ ನಿಮ್ಮ ಊರಿನಲ್ಲಿ ನಿಮ್ಮ ಸೇವೆಗಾಗಿ ಸಿದ್ಧರಾಗಿದ್ದಾರೆ

ನರಶಕ್ತಿ, ಮೇಹ, ಮೂಲವ್ಯಾಧಿ, ಸಾರ್ವ ವಾಯು, ವಾತರೋಗ, ಕವಸ್ಫೂಲೆ, ಗರಲು, ಮೂತ್ರ ಮತ್ತು ವೀರ್ಯ ದೋಷಗಳು, ಅಲ್ಲದೆ ಹೊಟ್ಟೆಯ ಯಕೃತ್ ಮತ್ತು ರಕ್ತ ಸಂಬಂಧವಾದ ಎಲ್ಲಾ ವ್ಯಾಧಿಗಳಗೂ ಖಾತರಿಯಾದ ಚಿಕಿತ್ಸೆ ಮಾಡುವ ನಿಪುಣರು

ನಷ್ಟವಾದ ವೀರ್ಯವನ್ನು ಪುನಃ ಪಡೆಯಲು ಅಪೂರ್ವ ಸಮಯ

ಚಿಕಿತ್ಸೆಯ ಕಾಲ—

ಬೆಳಗ್ಗೆ 9 ರಿಂದ 12½ ಘಂಟೆಯವರೆಗೆ
ಸಂಜೆ 5 ರಿಂದ 9 ಘಂಟೆಯವರೆಗೆ

ನ್ಯೂ ರಾಯಲ್ ಡಿಸ್ಪೆನ್ಸರಿ

ಅಶೋಕ ರೋಡ್ (ದೊಡ್ಡ ಗಡಿಯಾರದ ಬಳಿ), ಮೈಸೂರು

ಛಾರಿ ಗಾಂಜಾ ಪತ್ತೆ

ಅರಸೀಕೆರೆ ಪೇಟೆ ಪೋಲೀಸ್ ಸ್ಟೇಷನ್ನಿನ ಸುಮಾರು ೭ ಸಾವಿರ ರೂ. ಬೆಲೆ ಬಾಳುವ ೬೦ ಸೇರು ಗಾಂಜಾವನ್ನು ಅಬ್ಕಾರಿ ಅಧಿಕಾರಿಗಳು ಪತ್ತೆ ಹಚ್ಚಿ, ರಾಮಯ್ಯಶೆಟ್ಟಿ, ಅಬ್ಬಯ್ಯಶೆಟ್ಟಿ ಎಂಬುವರನ್ನು ದಸ್ತಗಿರಿ ಮಾಡಿ ಮೊಕದ್ದಮೆ ಹೂಡಿದ್ದರು. ನ್ಯಾಯಾಧೀಶರು ರಾಮಯ್ಯಶೆಟ್ಟಿಗೆ ೫೦೦ ರೂ. ಜುಲ್ಮಾನೆ ವಿಧಿಸಿ, ಅಬ್ಬಯ್ಯಶೆಟ್ಟಿಯನ್ನು ಬಿಡುಗಡೆ ಮಾಡಿದರು. ಇದನ್ನು ಹೈದರಾಬಾದು ಸಂಸ್ಥಾನದಿಂದ ಕಳ್ಳತನದಲ್ಲಿ ಸಾಗಿಸಿಕೊಂಡು ಬರಲಾಗಿತ್ತೆಂದು ಹೇಳಲಾಗಿದೆ.

— —

ಶ್ರೀ ಚಟರ್ಜಿಯವರ ನಿಧನ

"ಮಾಡರ್ನ್ ರಿವ್ಯೂ" ಪತ್ರಿಕೆಯ ಸಂಪಾದಕರೂ, ಪ್ರಮುಖ ಪತ್ರಿಕೋದ್ಯೋಗಿಗಳಾದ ಶ್ರೀ ರಮಾನಂದ ಚಟರ್ಜಿಯವರು ಮೊನ್ನೆಯದಿನ ಕಲ್ಕತ್ತದಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ

— —

ಫ್ರಾನ್ಸಿನಲ್ಲಿ ೨೧ ಮಂದಿಗೆ ಮರಣದಂಡನೆ

ಆಹಾರ ಸರಬರಾಜನ್ನೂ ಮತ್ತು ರಸ್ತೆಗಳನ್ನೂ ನಾಶಪಡಿಸಿದರೆಂದು ಸ್ವಿಟ್ಜರ್ಲೆಂಡಿನ ಗಡಿಯಲ್ಲಿ ಫ್ರಾನ್ಸಿ ಪಟ್ಟಣವೊಂದರಲ್ಲಿ ೧೭ ಮಂದಿ "ಟೆರರಿಸ್ಟ್"ಗಳನ್ನು ಜರ್ಮನರು ಮರಣದಂಡನೆಗೆ ಗುರಿಪಡಿಸಲಾಯಿತೆಂದೂ, ಒಬ್ಬ ಕಮ್ಯೂನಿಸ್ಟ್ ಅಧಿಕಾರಿಯೊಬ್ಬನನ್ನು, ಒಬ್ಬ ಜರ್ಮನ್ ಸೈನಿಕನನ್ನೂ ಆ ಪಟ್ಟಣದ ಮೇಯರನ್ನೂ ಈ "ಟೆರರಿಸ್ಟ್"ಗಳು ಸಾಯಿಸಿದರೆಂದು ಅವರ ಮೇಲೆ ಆಪಾದಿಸಲಾಗಿದೆ ಮತ್ತು ೪ ಜನ ಯಹೂದ್ಯರುಗಳು ಗೊರಿಲ್ಲಾ ಯುದ್ಧದಲ್ಲಿ ಪಾತ್ರ ವಹಿಸಿದ್ದರೆಂದು, ಮರಣದಂಡನೆಗೆ ಗುರಿಪಡಿಸಲ್ಪಟ್ಟರೆಂದು ವಿಚಿ ವಾರ್ತೆ ತಿಳಿಸುತ್ತದು

ನ್ಯಾಷನಲ್ ಎಂಪೋರಿಯಂ
(ಮದರಾಸ್ ಅಂಗಡಿ,)
ಮೈ ಸೂ ರು

— —

ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ 'ಬಿ' ಬ್ಲಾಕಿನ 1 ಮತ್ತು 2 ನೇ ಸ್ಟಾಲುಗಳಲ್ಲಿನ ನಮ್ಮ ಅಂಗಡಿಗೆ ಭೇಟಿ ಕೊಡಲು ತಪ್ಪಬೇಡಿ.

Edited, printed and published by A. R. Nagarajan, at the Sadhvi Press, D Subbiah Road, Mysore.

ನೇಪಲ್ಸ್ ಮಿತ್ರವಶವಾಯಿತು

ಬ್ರಿಟಿಷ್ ೫ ನೇ ಸೈನ್ಯವು ನೇಪಲ್ಸ್ ನಗರವನ್ನು ಆಕ್ರಮಿಸಿಕೊಂಡಿದೆ ನಗರದಲ್ಲಿ ಯಾವ ಜರ್ಮನರೂ ಇಲ್ಲವೆಂದು ಹೇಳಲಾಗಿದೆ.

ದಕ್ಷಿಣ ಇಟಲಿಯಲ್ಲಿಯೇ ಅತಿ ದೊಡ್ಡ ನಗರವೂ ಮತ್ತು ಅತಿ ರಮಣೀಯ ನಗರವೆನಿಸಿದ ನೇಪಲ್ಸ್ ಈಗ ಜರ್ಮನರಿಂದ ಧ್ವಂಸವಾಗಿ, ಅತಿ ಹಾಳಾದ ನಗರವಾಗಿದೆ. ಎಲ್ಲಿ ನೋಡಿದರೂ ಬೆಂಕಿ ಜ್ವಾಲೆಯಿಂದ ಉರಿಯುತ್ತಿರುವ ಕಟ್ಟಡಗಳು ಕಾಣಬರುತ್ತಿವೆ ಬಂದರಿನಲ್ಲಿದ್ದ ಹಡಗುಗಳನ್ನೆಲ್ಲಾ ಜರ್ಮನರು ಮುಳುಗಿಸಿ, ನಗರದ ಮಿಲಿಟರಿ ಸ್ಥಾನಗಳನ್ನೆಲ್ಲಾ ನಾಶಪಡಿಸಿದ್ದಾರೆ ಪ್ರಖ್ಯಾತವಾದ ಅರಮನೆ ಮೊದಲಾದವುಗಳೆಲ್ಲಾ ಮಣ್ಣಾಗಿವೆ.

ನೇಪಲ್ಸ್‌ಗೆ ೩೦ ಮೈಲಿ ದೂರದಲ್ಲಿರುವ ಆ ವೆಲಿನೊ ಪಟ್ಟಣವನ್ನು ಹಿಡಿಯಲಾಗಿದೆ

ರೋಂ ರಸ್ತೆಯಲ್ಲಿ ಮಿತ್ರರ ಮುನ್ನಡೆ

ಜರ್ಮನರನ್ನು ಅಟ್ಟಿಸಿಕೊಂಡು ಮಿತ್ರ ಪಡೆಗಳು ರೋಂ ಕಡೆಗೆ ಮುನ್ನುಗ್ಗುತ್ತಿವೆ. ರೋಂ ರಸ್ತೆಗಳಲ್ಲಿ ಓಡುತ್ತಿರುವ ಜರ್ಮನ್ ಸೈನ್ಯ ದಳಗಳ ಮೇಲೆ ಮಿತ್ರ ವಿಮಾನಗಳು ತೀವ್ರ ಧಾಳಿಯನ್ನು ಮಾಡುತ್ತಿವೆ. ರಷ್ಯಾಗೆ ಈ ಪ್ರದೇಶದಲ್ಲಿ ಅಪಾರ ನಷ್ಟ ಸಂಭವಿಸುತ್ತಿದೆ.

ಜಪಾನ್ ಹಡಗುಗಳ ನಾಶ

ಉತ್ತರ ಸಾಲೋಮನ್ಸ್‌ನಲ್ಲಿ ಮಿತ್ರ ಪಕ್ಷಗಳಿಂದ ವಿಮಾನಗಳು ಹೊರಟಿದ್ದ (ಜಪಾನಿ ಹಡಗುಗಳನ್ನು ಚದುರಿಸಿ, ೩ ಹಡಗುಗಳನ್ನು ಮುಳುಗಿಸಲಾಯಿತೆಂದೂ, ತೆಸ್ತ್ರಂದಕ್ಕೆ ಪೆಟ್ಟು ತಗಲಿದೆಯೆಂದೂ ವರದಿಯಾಗಿದೆ.

ತ್ರಿರಾಷ್ಟ್ರ ಸಮ್ಮೇಳನ

ತ್ರಿರಾಷ್ಟ್ರ ಸಮ್ಮೇಳನವು ಮಾಸ್ಕೋನಲ್ಲಿ ನಡೆಯುವ ಮೊದಲು ಲಂಡನ್ನಿನಲ್ಲಿ ನಡೆಯುವುದಕ್ಕೆ ರಷ್ಯ ಒಪ್ಪುವ ಸಂಭವವಿದೆಯೆಂದು ಹೇಳಲಾಗಿದೆ.

೨ ಶತ್ರು ಸಬ್ ಮೆರೀನ್ ನಾಶ

ಮಿತ್ರ ಪಡೆಗಳು ಅಟ್ಲಾಂಟಿಕ್‌ನಲ್ಲಿ ಶತ್ರುವಿನ ಎರಡು ಸಬ್‌ಮೆರೀನ್‌ಗಳನ್ನು ಮುಳುಗಿಸಿ, ಎರಡು ಗಂಟೆಗಳ ಕಾಲ ರಣ ನಡೆದುದೆಂದೂ, ಮಿತ್ರರ ಎರಡು ಹಡಗುಗಳು ಮುಳುಗಿಸಲ್ಪಟ್ಟವೆಂದು ಹೇಳಲಾಗಿದೆ.

ಜಲಸಮಾಧಿ

ಅಟ್ಲಾಂಟಿಕ್‌ನಲ್ಲಿ ಕೆನಡಿಯನ್ ಡಿಸ್ಟ್ರಾಯರ್ ಹಡಗೊಂದು ಮುಳುಗಿತೆಂದೂ ೧೪೨ ಮಂದಿ ನಾವಿಕರು ಜಲಸಮಾಧಿ ಹೊಂದಿದರೆಂದು ಪ್ರಕಟವಾಗಿದೆ.

ಆ ಕಾ ಶ ವಾ ಣಿ

೩ ನೇ ಭಾನುವಾರ

...೬-೩೦ ಗಾಯಕರು : ಶ್ರೀಮತಿ ವಸುಂಧರಾದೇವಿ

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಸಯ್ಯಾಜಿರಾವ್ ರೋಡು, ಮೈಸೂರು

	ರೂ. ಆ.
ಲಾಲ್ ಮಿಲ್ಸ್ ಚೀಟ್ಸ್ ಗಜ೧ಕ್ಕೆ	0—9
ವಿಕ್ರಮ ಮಿಲ್ಸ್ ,, ,,	0-8½
ಜೋರ್ಜಿಯಾ ವಾಯಿಲ್ ,,	0—13
ಡಬಲ್ ಕಲರ್ ವಾಯಿಲ್ 45"	1—0
ಹುಡುಗರಿಗಾಗಿ ಶುದ್ಧ ಉಣ್ಣೆ ಸ್ವೆಟರ್ 1 ಕ್ಕೆ	2—0
ಕರ್ನಾಟಿಕ್ ಮಿಲ್ಸ್ ಪ್ಯಾಟಿ ಗಜ 1 ಕ್ಕೆ	0-14
,, 72" ಷೀಟಿಂಗ್ 1 ಗಜ	2-0
ಬಕಿಂಗ್ಹ್ಯಾಂ ಮಿಲ್ಸ್ ಟ್ವಿಲ್ ,,	0-14
ಕಾಬ್ಲೇಜ್ ಲಾಂಗ್ ಕ್ಲಾತ್ 45"	0-11
,, 50" ಮಲ್	0—9
ಗೀರಿನ ಬಿಪ್ಲರ್ ಚೆಕ್ ಷರ್ಟಿಂಗ್	0—6
ಹತ್ತಿ ನೂಲಿನ ರಗ್ 1 ಕ್ಕೆ	3—8
ಇಟಾಲಿಯನ್ ಫಿನಿಶಿಂಗ್ 48" 1ಗಜ	1—8
ಮೇರಿ ಕಾರ್ಡ್ ಸ್ಟಿಫ್ ಕ್ಲಾತ್ ,,	1—0
ರ್‍ಯಾಲಿ ಬ್ರದರ್ಸ್ ಡ್ರಿಲ್	0—12
ಕೃ. ರಾ. ಮಿಲ್ ಡ್ರಿಲ್	0—10
ಮಿನರ್ವಾ ಮಿಲ್ ಡ್ರಿಲ್	1—0

ಲಾಂಗ್ ಕ್ಲಾತ್ಸ್ :—	ರೂ. ಆ.
ಡಬಲ್ ಸ್ಟೈಕಲ್ ಮಾರ್ಕ್	0—8
ನಂ. 3640	0—7
ಹಿಂದೂ ಮಾತ	0—1
ಮಿನರ್ವ ಮಿಲ್ಸ್	0—
ಬಕಿಂಗ್ಹ್ಯಾಂ ಮಿಲ್ಸ್	0—1
ಕರ್ನಾಟಿಕ್ ಮಿಲ್ಸ್ 45"	0—1
ನಟ್ರ ಮಿಲ್ಸ್	0-10
ರಾಷ್ಟ್ರ ಅರಂ ಷರ್ಟುಗಳು 1 ಕ್ಕೆ	1—
ಪೈಜಾಮಾ ,,	1-1
ಸ್ಪೋರ್ಟ್ ಷರ್ಟಿಂಗ್	
1 ನೇ ದರ್ಜೆ 1 ಗಜಕ್ಕೆ	0—1
,, ರಾಷ್ಟ್ರ ಅರಂ ಷರ್ಟ್ 1 ಕ್ಕೆ	2—
ಸೋಲಾಪುರ ಗೆರೆ ಕೋಟಿಂಗ್	0—1
ಸೂರತ್ ಕೋಟಿಂಗ್ 1 ಗಜಕ್ಕೆ	1—
ಚೆಕ್ ಕೋಟಿಂಗ್ ,,	0—1
ಕೃಷ್ಣಾ ಮಿಲ್ಸ್ ಕೋಟಿಂಗ್	1—
ಮಿಲ್ ಷರ್ಟಿಂಗ್	0—1
ಕೃ ರಾ ಮಿಲ್ ಧೋತಿ 2-8 ಗಜ	6—
ಫಿನ್ಲೆ ಮಾದಂ ,,	8—
ಮರ್ಸರೈಸ್ಡ್ ಪಂಚೆ ,,	9—
ಬ್ಯಾಂಕರ್ಸ್ ಮೇಲ್	9—1

ಇವಲ್ಲದೆ ಸೊಳ್ಳೆ ಪರದೆಗಳು, ಪದ್ಮವಾದ ಪ್ಲೈನ್ ರಗ್ಗುಗಳು, ಫ್ರಾಕ್ಸ್, ಸ್ಕಾರ್ಫ್ಸ್, ಟವಲ್ಸ್, ಆಯಿಲ್ ಕ್ಲಾತ್, ಬೆಂಗಳೂರು, ಕಾಶ್ಮೀರ, ಬಂಗಾಳಾ, ಬರೋಡಾಗಳ ಶಿಲ್ಕು ಸೀರೆಗಳು ಮತ್ತು ಜೇಕಾರ್ಡುಗಳು ಇವೆ

ದಯವಿಟ್ಟು ಪ್ರಿಂಟೆಡ್ ಸೀರೆಗಳ ನಾನಾ ರಕಮುಗಳು ಮತ್ತು ಬಳೆಗಳ ವಿನ್ಯಾಸಗಳನ್ನು ನೋಡಲು ತಪ್ಪಬೇಡಿ

ಸ್ತ್ರೀಯರ ಸೌಕರ್ಯಕ್ಕಾಗಿ

ಈ|| ೧-೧೧-೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಪರೀಕ್ಷೆ ಉಪಯೋಗಿಸಿ.

ಡಿ. ಸುಬ್ಬಯ್ಯ ಬಿನ್ ಸಿ. ಮುಂಡಿ, ದೇವರಾಜ ಮಾರ್ಕೆಟ್, ಮೈಸೂರು

ಶುದ್ಧವಾಗಿ ಸಂಸ್ಕರಿಸಿದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ ಇಲ್ಲಿ ಮತ್ತು ಸೆಂಟ್ರಲ್ ಅಧಿಕೃತ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ದೊರೆಯುತ್ತೆ

WEEKLY EDITION

ಸಂಪುಟ ೭]   ಸೋಮವಾರ ೪—೧೦—೪೬   [ಸಂಚಿಕೆ ೫೦

ರಾಜಕೀಯ ಬಂದಿಗಳ ಬಿಡುಗಡೆ

೨೦೬ ಜನರ ಖುಲಾಸೆ; ೩೯ ಜನರ ಬಂಧನ

ಮೈಸೂರು ಸಂಸ್ಥಾನದ ವಿವಿಧ ಜಿಲ್ಲೆಗಳಿಂದ ನಿರ್ಬಂಧಿತರಾಗಿರುವ ೨೪೫ ಜನ ರಾಜಕೀಯ ಬಂದಿಗಳ (ಡೆಟೆನ್ಯೂಗಳ) ಪೈಕಿ ೨೦೬ ಜನರನ್ನು ಖುಲಾಸೆ ಮಾಡಲು ಸರ್ಕಾರದವರು ನಿರ್ಧರಿಸಿರುವುದಾಗಿ ಈದಿನ ದಿವಾನರು ಪ್ರತಿನಿಧಿ ಸಭೆಯಲ್ಲಿ ತಿಳಿಸಿದರು. ರಾಜಕೀಯ ವಾತಾವರಣವು ಈಗ ತಿಳಿಯಾಗಿರುವುದೇ ಇದಕ್ಕೆ ಕಾರಣವೆಂದು ಹೇಳಿದರು

ರಾಜಕೀಯ ಬಂದಿಗಳ ಬಿಡುಗಡೆ

ಪ್ರತಿನಿಧಿಯ ಸಭೆಯಲ್ಲಿ ದಿವಾನರ ಭಾಷಣ

ಮೈಸೂರು ೪

ಈ ದಿನ ಮಧ್ಯಾಹ್ನ ಆರಂಭಿಸಿದ ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾಷಣಮಾಡುತ್ತಾ, ದಿವಾನರು ಹೀಗೆ ತಿಳಿಸಿದರು :—

ಕಳೆದ ವರ್ಷ ನಡೆದ ರಾಜಕೀಯ ಗಲಭೆಗಳ ಸಂಬಂಧದಲ್ಲಿ ಕೆಲವರನ್ನು ಬಂಧನದಲ್ಲಿಡುವುದು ಅವಶ್ಯಕವೆಂದು ಸರ್ಕಾರದವರಿಗೆ ಕಂಡುಬಂದಿತು ಅದು ಈ ಸಭೆಯ ಸದಸ್ಯರಾದ ತಮಗೆ ತಿಳಿದೇ ಇದೆ. ಪ್ರಜೆಗಳ ನೆಮ್ಮದಿಯನ್ನು ಕಾಪಾಡುವ ಸಲುವಾಗಿ ಎಷ್ಟು ಕಾಲ ಬಂಧನದಲ್ಲಿಡುವುದು ಅತ್ಯವಶ್ಯಕವೋ ಅಷ್ಟಕ್ಕಿಂತಲೂ ಹೆಚ್ಚು ಕಾಲ ಯಾರನ್ನೂ ಬಂಧನದಲ್ಲಿಡಕೂಡದೆಂದು ಸರ್ಕಾರದವರು ಆಗಿನಿಂದಲೂ ಅಭಿಪ್ರಾಯಪಟ್ಟುಕೊಂಡು ಬಂದಿದ್ದಾರೆ ಈ ಕಾರ್ಯನೀತಿಗನುಸಾರವಾಗಿ ಆಗಿಂದಾಗ್ಗೆ ರಾಜಕೀಯ ಬಂದಿಗಳನ್ನು, [ಎಂದರೆ "ಡೆಟೆನ್ಯೂ"ಗಳನ್ನು] ಅವರು ಹಿಂದೆ ರಾಜಕೀಯ ಸಂಬಂಧವಾಗಿ ಹೇಗೆ ವರ್ತಿಸಿದ್ದಾರೆಂಬುದನ್ನೂ ಅವರ ಸ್ವಭಾವವನ್ನೂ ಮತ್ತು ಮನೋವೃತ್ತಿಯನ್ನೂ ಗಮನಿಸಿ, ಷರತ್ತುಗಳಿಗೊಳಪಡಿಸಿಯೋ ಅಥವಾ ಯಾವ ಷರತ್ತೂ ಇಲ್ಲದೆಯೋ ಸರ್ಕಾರದವರು ಬಿಡುಗಡೆಮಾಡುತ್ತಾ ಬಂದಿದ್ದಾರೆ. ಹಿಂದೆ ೨೪೫ ಮಂದಿ ರಾಜಕೀಯ ಬಂದಿಗಳಿದ್ದರು. ಈಚೆಗೆ ಅವರಲ್ಲಿ ಅನೇಕರಿಗೆ ಬಿಡುಗಡೆಯಾಗಿರುವುದರಿಂದ, ಈಗ ಅವರ ಸಂಖ್ಯೆ ಬಹಳ ಕಡಿಮೆಯಾಗಿದೆ. ರಾಜಕೀಯ ಬಂದಿಗಳ ಬಿಡುಗಡೆಮಾಡಬೇಕೆಂದು ಈ ಸಭೆಯ ಸದಸ್ಯರೂ, ನ್ಯಾಯವಿಧಾಯಕ ಸಭೆಯಲ್ಲಿ ... ಅರಿಕೆಗಳು ಬಂದುದನ್ನೂ ಮತ್ತು ರಾಜಕೀಯ ಪರಿಸ್ಥಿತಿಯು ಮೊದಲಿನಂತೆ ಇರದೆ ವ್ಯತ್ಯಾಸಹೊಂದಿರುವುದನ್ನೂ ಸರ್ಕಾರದವರು ಗಮನಿಸಿ ನೋಡಿ, ಈಗ ಬಂಧನದಲ್ಲಿರುವ ೨೪೫ ರಾಜಕೀಯ ಬಂದಿಗಳಲ್ಲಿ ೨೦೬ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನಿಸಿದ್ದಾರೆ.

ಆಹಾರ ಪದಾರ್ಥಗಳ ಸರಬರಾಯಿ

ಈಗ ಅತ್ಯಂತ ಜರೂರಾಗಿ ಬಗೆಹರಿಯಬೇಕಾದ ಸಮಸ್ಯೆಯೆಂದರೆ, ಆಹಾರ ಪದಾರ್ಥಗಳ ಸರಬರಾಯಿ ಸಮಸ್ಯೆ. ಅದು ಅತ್ಯಂತ ಕ್ಲೇಶದಾಯಕವಾದ ಸಮಸ್ಯೆಯೂ ಹೌದು. ಅದನ್ನು ಬಗೆಹರಿಸಲು ಸರ್ಕಾರದವರು ಆಗಿಂದಾಗ್ಗೆ ಕೈಕೊಂಡ ಕಾರ್ಯಕ್ರಮಗಳನ್ನು ಹಿಂದಿನ ಅಧಿವೇಶನಗಳಲ್ಲಿ ಈ ಸಭೆಯ ಸದಸ್ಯರಿಗೆ ವಿವರಿಸಿ ಹೇಳಲಾಗಿದೆ

ಸಂಸ್ಥಾನದಲ್ಲಿ ಆಹಾರ ಧಾನ್ಯಗಳ ಬೆಳೆಯನ್ನು ಹೆಚ್ಚಿಸುವುದಕ್ಕೆ ಪ್ರಾಮುಖ್ಯತೆ ನೀಡಿ ಸರ್ಕಾರದವರು ಅವಕಾಶವಿರುವಷ್ಟು ಕಾರ್ಯಕ್ರಮವನ್ನು ಕೈಕೊಂಡಿದ್ದಾರೆ. ಆಹಾರ ಧಾನ್ಯಗಳ ಬೆಳೆಯನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಸರ್ಕಾರದವರು ನಾನಾ ಏರ್ಪಾಟುಗಳನ್ನು ಕೈ...

...ರ್ಕಾರದವರು ಮೂರು ವಿಚಾರಗಳಲ್ಲಿ ಇನ್ನೂ ಕಟ್ಟುನಿಟ್ಟಿನ ಕಾರ್ಯಕ್ರಮಗಳನ್ನು ಕೈಗೊಂಡರು

ಮೊದಲನೆಯದಾಗಿ, ಗಡಿ ಸಂಪರ್ಕಗಳ ಕಾವಲು ಪ್ರದೇಶಗಳನ್ನು ಹೆಚ್ಚಿಸಿ, ಅಕ್ರಮವಾಗಿ ಆಹಾರ ಪದಾರ್ಥಗಳು ಸಂಸ್ಥಾನದಿಂದ ಹೊರಗೆ ರಫ್ತಾಗುವುದನ್ನು ತಪ್ಪಿಸುವುದು. ಎರಡನೆಯದಾಗಿ ಜಮೀನು ಮಾಲೀಕರೂ ಸೇರಿ ಕ್ಲುಪ್ತಪ್ರಮಾಣಗಳಿಗಿಂತಲೂ ಹೆಚ್ಚಾಗಿ ಆಹಾರ ಧಾನ್ಯಗಳನ್ನಿಟ್ಟುಕೊಂಡಿರತಕ್ಕವರಿಲ್ಲರು. ತಮ್ಮಲ್ಲಿರುವ ಹೆಚ್ಚಿಗೆ ಪದಾರ್ಥಗಳನ್ನು ತಿಳಿಸಿ ಸರ್ಕಾರಿ ಡಿಪೋಗಳಿಗೆ ಕ್ಲುಪ್ತವಾದ ಅವಧಿಯೊಳಗಾಗಿ ಮಾರಬೇಕೆಂದೂ, ಆ ಅವಧಿಯೊಳಗಾಗಿ ಮಾರದವರು, ಪೆಟ್ಟಿನ ದರದಲ್ಲಿ ಕ್ರಯವನ್ನು ಪಡೆಯಬಹುದೆಂದೂ, ಆ ಬಳಿಕ ಜನರಿಗೆ ಮೊದಲಿನ ದರಗಳು ಕಡಿಮೆಯಾಗಿ ಪ್ರವೇಶ, ವಿಧಾಯಕವಾಗಿ ಪ್ರಕಟಿಸುವ ... ಮೂರನೆಯದಾಗಿ ಅದಷ್ಟು ಹೆಚ್ಚು ಸಂಖ್ಯೆಯ ಪಟ್ಟಣಗಳಲ್ಲಿಯೂ ಮತ್ತು ಇತರ ಸ್ಥಳಗಳಲ್ಲಿಯೂ "ರೇಷನಿಂಗ್" ಪಂಚಿಕೆ ಕ್ರಮವನ್ನು ಆಚರಣೆಗೆ ತಂದು, ಇದರ ಸಂಬಂಧದಲ್ಲಿ ಆಹಾರ ಪದಾರ್ಥಗಳು ಅಕ್ರಮವಾಗಿ ವಿಲೆಯಾಗಲು ಸ್ವಲ್ಪಮಾತ್ರವೂ ಅವಕಾಶವಿಲ್ಲದಂತೆ ವ್ಯವಸ್ಥೆ ಮಾಡುವುದು. ಇವು ಮೂರು ವಿಚಾರಗಳಲ್ಲಿಯೂ ಸರ್ಕಾರದವರು ಈ ರೀತಿ ಮೊದಲಿಗಿಂತಲೂ ಇನ್ನೂ ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ಕೈಕೊಂಡರು.

ಕೆಲವು ತರಗತಿಗಳ ಸರ್ಕಾರಿ ನೌಕರರಿಗೆ ಕೊಡುತ್ತಿದ್ದ ತುಟ್ಟಿ ಭತ್ಯೆಗಳ ದರಗಳನ್ನು ೧೯೪೬ನೇ ಇಸವಿಯ ಸೆಪ್ಟೆಂಬರು ೧ನೇ ತಾರೀಕಿನಿಂದ ಹೆಚ್ಚಿಸಬೇಕೆಂದಿದ್ದ ಸಂಗತಿಯನ್ನೂ, ಅದರಿಂದ ವರ್ಷಕ್ಕೆ ಸುಮಾರು ೧೯ ಲಕ್ಷ ರೂಪಾಯಿಗಳನ್ನು ಹೆಚ್ಚು ವೆಚ್ಚ ಬೀಳುವಂತಿದ್ದ ಸಂಗತಿಯನ್ನೂ, ಕಳೆದ ಅಕ್ಟೋಬರು ತಿಂಗಳಲ್ಲಿ ತಮಗೆ ಪ್ರಕಟಪಡಿಸಿದ್ದುದೆ. ಸಂಪತ್ಸ್ಥಿ... ಅಗಿಂದೀಚೆಗೆ ಮುಖ್ಯವಾದ ಆಹಾರ ಪದಾರ್ಥಗಳ ಧಾರಣೆಗಳು ಇನ್ನೂ ಹೆಚ್ಚಾಗಿವೆ. ಈಗಿನ ಸನ್ನಿವೇಶಗಳನ್ನು ಗಮನಕ್ಕೆ ತಂದುಕೊಂಡು ಸರ್ಕಾರದವರು ಈವಿಚಾರವನ್ನು ಮತ್ತೊಂದು ಸಾರಿ ಪರಿಶೀಲಿಸಿ ನೋಡಿ ೧೯೪೬ನೆಯ ಇಸವಿ ಸೆಪ್ಟೆಂಬರು ತಿಂಗಳ ೧ನೆಯ ತಾರೀಕಿನಿಂದ ಈ ಕೆಳಗೆ ಕಂಡ ದರಗಳಲ್ಲಿ ತುಟ್ಟಿ ಭತ್ಯೆ ಸಲ್ಲುವಂತೆ ಅಪ್ಪಣೆ ಮಾಡಿದ್ದಾರೆ ಆ ದರಗಳು ಯಾವುವೆಂದರೆ,

ಬೆಂಗಳೂರು ಸಿಟಿಯಲ್ಲಿ ಕೆಲಸ ಮಾಡುತ್ತಿರುವ ನೌಕರರಲ್ಲಿ ೩೦ ರೂ. ಗಳ ಮತ್ತು ಇನ್ನೂ ಕಡಿಮೆಯ ಸಂಬಳಗಳು ಬರುವವರಿಗೆ ತಿಂಗಳಿಗೆ ೯ ರೂಪಾಯಿಗಳಿಗೆ ಬದಲಾಗಿ ೭ ರೂಪಾಯಿಗಳಂತೆ ತುಟ್ಟಿ ಭತ್ಯೆವನ್ನು ಕೊಡಲಾಗುವುದು. ಇತರ ಕಡೆಗಳಲ್ಲಿ ಇದೇ ಸಂಬಳಗಳು ಬರುವವರಿಗೆ ರೂ. ೬॥ ಗಳಿಗೆ ಬದಲಾಗಿ ೫ ರೂ ಗಳಂತೆ ತುಟ್ಟಿ ಭತ್ಯವನ್ನು ಕೊಡಲಾಗುವುದು ಬೆಂಗಳೂರು ನಗರದಲ್ಲಿ ೩೦ ರೂ. ಗಳಿಗೆ ಮೇಲ್ಪಟ್ಟು ೮೦ ರೂ ಗಳಿಗೆ ಹೆಚ್ಚಾಗಿಲ್ಲದ ಸಂಬಳಗಳು ಬರುವವರಿಗೆ ೭ ರೂ ಗಳಿಗೆ ಬದಲಾಗಿ ರೂ ೯॥ ಯಂತೆ ತುಟ್ಟಿ ಭತ್ಯವನ್ನು ಕೊಡಲಾಗುವುದು ಇತರ ಕಡೆಗಳಲ್ಲಿ ಇದೇ ಸಂಬಳಗಳು ಬರುವವರಿಗೆ ೫॥ ಗೆ ಬದಲಾಗಿ ೬॥ ಯಂತೆ ತುಟ್ಟಿ ಭತ್ಯವನ್ನು ಕೊಡಲಾಗುವುದು ಹೀಗೆ ಹೆಚ್ಚು ಮಾಡಿರುವ ತುಟ್ಟಿ ಭತ್ಯಗಳ ದರಗಳು, ರೈಲ್ವೆ ಇಲಾಖೆಯ ಆಫೀಸ್ ಸಿಬ್ಬಂದಿಯ ನೌಕರರೂ ಸೇರಿ ಸಿವಿಲ್ ಇಲಾಖೆಗಳ ಎಲ್ಲ ನೌಕರರಿಗೂ ಅನ್ವಯಿಸುವುವು.

ರೈಲ್ವೆ ಇಲಾಖೆಯಲ್ಲಿ ಆಫೀಸು ಸಿಬ್ಬಂದಿಯನ್ನು ಬಿಟ್ಟು ಉಳಿದವರಲ್ಲಿ ತಿಂಗಳಿಗೆ ೧೨೦ ರೂ. ಗಳ ಮತ್ತು ಇನ್ನೂ ಕಡಿಮೆಯ ಸಂಬಳಗಳು ಬರುತ್ತಿರುವವರಿಗೆ, ತುಟ್ಟಿ ಭತ್ಯವನ್ನು ಬೆಂಗಳೂರು ನಗರದಲ್ಲಿ ರೂ ೬॥ ಗಳಿಂದ ರೂ ೧೧॥ ಗೂ ಮತ್ತು ಮೈಸೂರು ನಗರದಲ್ಲಿ ರೂ. ೬॥ ಯಿಂದ ೧೦ ರೂ ಗಳಿಗೂ ಹೆಚ್ಚಿಸಲಾಗಿದೆ. ಇತರ ಸ್ಥಳಗಳಲ್ಲಿ ತಿಂಗಳಿಗೆ ೧೦೦ ರೂ. ಗಳ ಮತ್ತು ಇನ್ನೂ ಕಡಿಮೆಯ ಸಂಬಳ ಬರುತ್ತಿರುವವರಿಗೆ ತುಟ್ಟಿ ಭತ್ಯವನ್ನು ೫ ರೂ ಗಳಿಂದ ೭॥ ರೂ ಗಳಿಗೆ ಹೆಚ್ಚಿಸಲಾಗಿದೆ

ಹೀಗೆ ಹೆಚ್ಚಿಸಿರುವ ತುಟ್ಟಿ ಭತ್ಯೆಗಳ ದರಗಳು ೧೯೪೭ನೇ ಇಸವಿ ಮಾರ್ಚಿ ತಿಂಗಳು ಕೊನೆಯವರೆಗೂ ಜಾರಿಯಲ್ಲಿರುವಂತೆ ಸರ್ಕಾರದವರು ಅಪ್ಪಣೆ ಮಾಡಿದ್ದಾರೆ ಈ ಸಂಬಂಧವಾಗಿ ಜಾರಿಯಲ್ಲಿ ಸಾಲಿಸಿದ್ದ ಸುಮಾರು

[೪ ನೇ ಪುಟ ನೋಡಿ]

ಪ್ರ. ಪ್ರ. ಸಭೆಯಲ್ಲಿ ಸಭಾ ಪರಿತ್ಯಾಗ

ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಈ ದಿನ ಮಧ್ಯಾಹ್ನ ೧೨ ಗಂಟೆಗೆ ದಿವಾನರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ದಿವಾನರು ಪ್ರಾರಂಭ ಭಾಷಣ ಮಾಡಲು ಎದ್ದಾಗ ಕಾಂಗ್ರೆಸ್ ಪಾರ್ಟಿ ನಾಯಕರಾದ ಶ್ರೀ॥ ವೆಂಕಟಪ್ಪನವರು ಕಾಂಗ್ರೆಸ್ ಸದಸ್ಯರ ಬಗ್ಗೆ ಸರ್ಕಾರದವರು ನಡೆಸುತ್ತಿರುವ ರೀತಿಯ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಅನುವು ಕೊಡಬೇಕೆಂದು ಕೋರಿದರು. ಅದಕ್ಕೆ ಅಧ್ಯಕ್ಷರು ಅನುಮತಿ ಕೊಡಲಿಲ್ಲವಾದ್ದರಿಂದ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು.

ಅನಂತರ ದಿವಾನರು ತಮ್ಮ ಭಾಷಣವನ್ನು ಮಾಡಿದರು.

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ॥ ವೆಂಕಟಪ್ಪನವರು "ಬಂಧನದಲ್ಲಿರುವ ಕಾಂಗ್ರೆಸ್ ಪಕ್ಷದ ಸದಸ್ಯರುಗಳಿಗೆ ಸಭೆಗೆ ಆಗಮಿಸಲು ಸರ್ಕಾರದವರು ಕಳುಹಿಸಿ ಅವರು ಭಾಗ ವಹಿಸಲು ಅನುಕೂಲಗಳನ್ನು ಕಲ್ಪಿಸದಿರುವುದನ್ನು ಚರ್ಚಿಸುವ ಬಗ್ಗೆ" ಒಂದು ಅವಸರದ ರಾವನ್ನು ಕಳುಹಿಸಿದ್ದಾರೆ.

* * *

ಪ್ರಜಾಪ್ರತಿನಿಧಿ ಸಭೆ

ಮೈಸೂರು ೪

ಪ್ರಜಾ ಪ್ರತಿನಿಧಿ ಸಭೆಯಲ್ಲಿ ದಿವಾನರ ಭಾಷಣವಾದನಂತರ ಕಾಂಗ್ರೆಸ್ ಸದಸ್ಯರು ಸಭೆಗೆ ಹಾಜರಾದರು. ದಿವಾನರ ಭಾಷಣದ ಕನ್ನಡ ತರ್ಜುಮೆಯನ್ನು ಶ್ರೀ॥ ಸಿ. ಕೆ. ವೆಂಕಟರಾಮಯ್ಯನವರು ಓದಿದನಂತರ ೬ ಮಿ॥ ಎಸ್. ಎ. ಎಂ ಅಜ್ಜಯ್ಯನವರು ಅಭಿನಂದನೆಗಳನ್ನು ಅರ್ಪಿಸಿ, ಶ್ರೀಮನ್ಮಹಾರಾಜರವರು ಬಡ ಜನಗಳ ಊಟಕ್ಕೋಸ್ಕರ ೫ ಸಾವಿರ ರೂ ಗಳನ್ನು ದಯಪಾಲಿಸಿರುವುದಕ್ಕಾಗಿ ಅವರನ್ನು ಅಭಿನಂದಿಸಲಾಯಿತು ನಂತರ ಪ್ರಶ್ನೆಗಳನ್ನು ತೆಗೆದುಕೊಳ್ಳಲಾಯಿತು.

ಸಿವಿಲ್ ಸರ್ವೀಸ್ ಪರೀಕ್ಷೆ

ಶ್ರೀ॥ ಸೇಠ್ ... ಅವರ ಪ್ರಶ್ನೆಗೆ ಚೀಫ್ ಸೆಕ್ರೆಟರಿಯವರಾದ ಶ್ರೀ॥ ವೇದವ್ಯಾಸಾಚಾರ್ಯರವರು ಉತ್ತರ ಕೊಡುತ್ತಾ, ೧೯೪೭ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಜಾರಿಗೆ ತರಲಾಗುತ್ತದೆಂದೂ, ಸರ್ಕಾರೀ ಕೆಲಸಗಳ ಅನುಕೂಲಕ್ಕೆ ಎಷ್ಟು ಜನರು ಬೇಕೋ ಅಷ್ಟು ಜನರನ್ನು ಹೆಚ್ಚು ಸಂಬಳಗಳನ್ನು ಪಡೆದಿರುವ ... ಆರಿಸಲಾಗುವುದು ಮತ್ತು ಇವರ ... ಯಾಗಿ ... ಅವರಿಗೆ ... ಮೇಲಿನ ದರ್ಜೆಯ ... ದವರನ್ನು ಆರಿಸಿ ... ಗೊಳಿಸಲಾಗುವುದೆಂದು ತಿಳಿಸಿದ.

ಶ್ರೀ॥ ... ವರ ... ದ ಕೊಡುತ್ತಾ, ... ನೇವೆ ಪಡೆ ... ಕೊಡಲು ... ವಾರು ಬಗ್ಗೆ ಅವಶ್ಯ ... ಕೊಡುವುದಕ್ಕೂ ಇದ್ದ ... ನಿದೆಯೆಂದು ತಿಳಿಸಿದ.

[೪ ನೇ ಪುಟ ನೋಡಿ]

ರಾಷ್ಟ್ರೀಯ ರಕ್ಷಣಾ ಬಲ

ಅನ್ನಾಜಿಗೌಡರ ಭಾಷಣ

ಮೈಸೂರು ೪

ವಿದ್ಯಾ ಸಚಿವರಾದ ಶ್ರೀ ಅನ್ನಾಜಿ ಗೌಡರು ದಸರಾ ಮಹೋತ್ಸವದ ರಾಷ್ಟ್ರೀಯ ರಕ್ಷಣಾ ಬಲ ಭಾಷಣ ಮಾಲೆಯ ಪ್ರಾರಂಭೋತ್ಸವವನ್ನು ಮೊನ್ನೆ ದಿವಸ "ಆಕಾಶವಾಣಿ" ಮೂಲಕ ನೆರವೇರಿಸಿದರು. ಅವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು:—

ಯುದ್ಧದಲ್ಲಿ ಮಿತ್ರ ರಾಷ್ಟ್ರಗಳಿಗೆ ಸ್ವಲ್ಪಕಾಲ ಜಯವಾಗದೆ ಜಪಾನರು ಭರತಖಂಡವನ್ನು ಮುತ್ತುವುದರಲ್ಲಿದ್ದರೆಂಬ ಕಳವಳ ಕ್ಕೆಂಟಾಗಿದ್ದಾಗ ನಮ್ಮ ಸಂಸ್ಥಾನದಲ್ಲಿ ರಾಷ್ಟ್ರೀಯ ರಕ್ಷಣಾ ಬಲದ ಏರ್ಪಾಡು ನಡೆಯಿತು, ಈ ಏರ್ಪಾಡಿನಿಂದ ಜನರ ಭೀತಿಯು ಪರಿಹಾರವಾಗುವುದಕ್ಕೆ ವಿಶೇಷ ಸಹಾಯವಾಯಿತು. ಅಷ್ಟೇ ಅಲ್ಲ, ಶತ್ರುಗಳು ಎಂದು ವೇಳೆ ಮುತ್ತಿದರೆ ಅವರನ್ನು ಎದುರಿಸುವ ಮಟ್ಟಿನ ಧೈರ್ಯವನ್ನು ಜನರ ಮನಸ್ಸಿನಲ್ಲಿ ನೆಲೆಗೊಳಿಸುವುದಕ್ಕೂ ಮತ್ತು ಯುದ್ಧ ಸಂಬಂಧವಾದ ಪ್ರಯತ್ನಕ್ಕೆ ಉತ್ತೇಜನ ದೊರೆಯುವ ಸನ್ನಿವೇಶಗಳು ಉಂಟಾಗುವುದಕ್ಕೂ ಸಹ, ಈ ಏರ್ಪಾಡು ಬಹಳವಾಗಿ ಕಾರಣವಾಯಿತು.

ಪ್ರಕೃತ ಪರಿಸ್ಥಿತಿಯಲ್ಲಿ, ದೇಶದ ಅನ್ನಾಂಬರದ ಆಹಾರ ಸಮಸ್ಯೆಯು ಜನರ ಮನಸ್ಸನ್ನು ಕಲಕಿದೆ. ತಪ್ಪು ಅಭಿಪ್ರಾಯಗಳು ಅನಾವಶ್ಯಕವಾಗಿ ನಾಗರಿಕರಲ್ಲಿಯೂ ಮತ್ತು ಗ್ರಾಮಾಂತರ ವಾಸಿಗಳಲ್ಲಿಯೂ ನಿರುತ್ಸಾಹದ ಭಾವಗಳನ್ನೂ, ನಿರಾಶಾಜನಕವಾದ ಮನೋಭಾವನೆಗಳನ್ನೂ ಉಂಟು ಮಾಡಿವೆ. ಸರ್ಕಾರದವರು ಸರ್ವಪ್ರಯತ್ನಗಳಿಂದಲೂ, ಸರ್ವಸಮಭಾವನೆಯಿಂದಲೂ, ಆಹಾರ ಸಾಮಗ್ರಿಗಳ ಸಂಬಂಧಪಟ್ಟ ವಿಷಯದಲ್ಲಿ ಸಮರ್ಪಕವಾದ ಏರ್ಪಾಡನ್ನೂ ಮಾಡಲು ಬದ್ಧ ಕಂಕಣರಾಗಿದ್ದಾರೆ. ಈ ಸಂಬಂಧವಾಗಿ ಈಗಾಗಲೇ ಪರಿಣಾಮಕಾರಿಯಾದ ವ್ಯವಸ್ಥೆಗಳು ಏರ್ಪಟ್ಟಿರುವುದು ಸಾರ್ವಜನಿಕರ ಸಹಕಾರದಿಂದ ಸರ್ಕಾರದ ಪ್ರಯತ್ನಗಳು ಫಲಿಸಬೇಕಾಗಿದೆ. ಇದಕ್ಕೆ ಸೂಕ್ತವಾದ ವಾತಾವರಣವನ್ನು ಕಲ್ಪಿಸುವುದು ಪ್ರಜಾಹಿತ ದೃಷ್ಟಿಯಿಂದ ಅಗತ್ಯವಾಗಿದೆ ಎಂದು ನಾನು ಬೇರೆ ಒತ್ತಿ ಹೇಳಬೇಕಾಗಿಲ್ಲ.

ಆಹಾರ ಸಮಸ್ಯೆಯ ನಿವಾರಣೋಪಾಯಗಳು ದಿನೇ ದಿನೇ ಹೊಸ ರೂಪವನ್ನು ಹೊಂದಬೇಕಾದುದು ಸಹಜವೇ ಆಗಿದೆ. ಸರ್ಕಾರದವರು ಆಗಿಂದಾಗ್ಗೆ ಜಾರಿಗೆ ತರುವ ಯೋಜನೆಗಳಿಗೆ ಪ್ರಜೆಗಳ ಸಂಪೂರ್ಣ ಸಹಾನುಭೂತಿ ಮತ್ತು ಉದ್ದೇಶಪೂರ್ವಕವಾದ ಬೆಂಬಲ ದೊರೆತರೇನೇ ಅವು ಫಲಕಾರಿಯಾಗಿ ಪರಿಣಮಿಸುವುದು ಸಾಧ್ಯ.

ಒಟ್ಟಿನಮೇಲೆ ನೋಡಿದರೆ, ರಾಷ್ಟ್ರೀಯ ರಕ್ಷಣಾ ಬಲ ವ್ಯವಸ್ಥೆ ಪ್ರಜೆಗಳ ಹಿತಸಾಧನೆಗಾಗಿ ಸ್ಥಾಪಿತವಾಗಿ ಪ್ರಜೆಗಳಿಗೋಸ್ಕರವೇ ದುಡಿಯುತ್ತಿರುವ ಸಂಸ್ಥೆ. ಪ್ರಜೆಗಳ ಪ್ರೀತಿ ವಿಶ್ವಾಸಗಳಿರುವ ಮುಖಂಡರು ಇದಕ್ಕೆ ಸೇರಿದ್ದಾರೆ. ಆದಕಾರಣ, ರಾಷ್ಟ್ರೀಯ ರಕ್ಷಣಾ ಬಲ ವ್ಯವಸ್ಥೆಗೆ ಸೇರಿದವರು ಸರ್ಕಾರದವರ ಸಂಗಡ ಸಹಕರಿಸಿ ವರ್ತಿಸಿದರೆ, ಅನೇಕ ರೀತಿಗಳಲ್ಲಿ ದೇಶೋದ್ಧಾರ ಸಾಧನೆ ಮಾಡುವುದು ಸಾಧ್ಯವಿದೆ. ಯುದ್ಧಕಾಲದಲ್ಲಿ, ಯುದ್ಧ ಸಂಬಂಧವಾಗಿ ಕೆಲಸ ನಡೆಸುವಂತೆಯೇ, ಯುದ್ಧ ಮುಗಿದ ಬಳಿಕ ಸಂಸ್ಥಾನದ ಪುನರುಜ್ಜೀವನ ಕಾರ್ಯಗಳಲ್ಲಿ ಕೂಡ ಇವರಿಂದ ಬಹಳ ಸಹಾಯವಾಗುವುದು ಸಾಧ್ಯವಿದೆ.

ಮಂಡ್ಯ ಜಿಲ್ಲೆಯಲ್ಲಿ ಆಹಾರ ಧಾನ್ಯಗಳನ್ನು ಕೊಂಡುಕೊಂಡು ಮಾರಾಟ ಮಾಡುವುದಕ್ಕಾಗಿ ೨೫ ಲಕ್ಷ ರೂ. ಗಳನ್ನು ಮಂಜೂರು ಮಾಡಲಾಗಿದೆ. ರೇಷನ್ ಡಿಪೋಗಳನ್ನು ಮತ್ತು ದಿನಸಿಗಳನ್ನು ಕೊಳ್ಳತಕ್ಕ ಪರ್ಚೇಸಿಂಗ್ ಡಿಪೋಗಳನ್ನು ಆಗಸ್ಟ್ ೧೯ ನೇ ತಾರೀಖು ಏರ್ಪಡಿಸಲಾಯಿತೆಂದು ಶ್ರೀ ಎಚ್. ಎಲ್. ನಂಜಪ್ಪನವರ ಪ್ರಶ್ನೆಗೆ ಸಂಬಂಧಪಟ್ಟ ಇಲಾಖೆಯ ಸೆಕ್ರೆಟರಿಗಳು ಉತ್ತರ ಕೊಟ್ಟರು.

ಒಂದೊಂದು ತಾಲ್ಲೂಕಿಗೆ ಮೂರು ನಾಲ್ಕು ಡಿಪೋಗಳನ್ನು ಮಾತ್ರ ತೆರೆದರೆ ಅದು ಪ್ರಜಾ ಸಂಖ್ಯೆಗೆ ಅನಾನುಕೂಲವಲ್ಲವೆ ಎಂಬ ಉಪಪ್ರಶ್ನೆಗೆ ಆಯಾ ತಾಲ್ಲೂಕಿನಲ್ಲಿ ಬೇಕಾದಷ್ಟು, ಕನಿಷ್ಠ ಪಕ್ಷ ಹೋಬಳಿಗೊಂದು ಡಿಪೋವನ್ನು ತೆರೆಯಲು ಜಿಲ್ಲಾಧಿಕಾರಿಗಳಿಗೆ ಅನುಮತಿ ಕೊಡಲಾಗಿದೆಯೆಂದು ಉತ್ತರ ಬಂತು. ಮಂಡ್ಯ ಜಿಲ್ಲೆಯಲ್ಲಿ ೬೭ ಕೊಳ್ಳುವ ಡಿಪೋ, ೩೬ ಮಾರಾಟದ ಡಿಪೋಗಳನ್ನು ತೆರೆಯಲಾಗಿದೆ. [illegible] ರೂ. ಸಿಬ್ಬಂದಿ ಖರ್ಚು ಆಗುವುದು.

ಶ್ರೀ ರಾಜಗೋಪಾಲಯ್ಯಂಗಾರ್ : ಹೆಂಗಸರಿಗೆ ಬೇರೆ ಡಿಪೋ ಏರ್ಪಡಿಸಿದೆಯೇ?

ಉ: ಗೊತ್ತಿಲ್ಲ, ಆವಶ್ಯಕ ಬಂದರೆ ಮಾಡಲಾಗುವುದು.

ಪ್ರ: ಮುನಿಸಿಪಾಲಿಟಿ, ಪಂಚಾಯಿತಿಗಳ ಡಿಪೋಗಳನ್ನು ತೆಗೆಸಬಾರದೆ?

ಉ. ಸಾಧ್ಯವಾದಷ್ಟು ಮಾಡಲಾಗುತ್ತದೆ.

ಶ್ರೀ॥ ಕೆ. ಕೆಂಚಪ್ಪನವರ ಪ್ರಶ್ನೆಗೆ ಮೈಸೂರು ಸಂಸ್ಥಾನದ ಪೌರ ಪ್ರದೇಶಗಳ ಜನಸಂಖ್ಯೆ ೧೩,೪೭,೩೩೭ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ೫೯,೯೩,೭೩೭ ರಷ್ಟು ಸಂಖ್ಯೆಯಿದೆಯೆಂದು ಸರ್ಕಾರದವರು ಉತ್ತರವಿತ್ತರು. ೧೯೪೨-೪೩ ನೇ ಸಾಲಿನಲ್ಲಿ ಆದ ಭತ್ತದ ಫಸಲು ೮೫,೨೧,೦೦೦ ವೆಂದೂ, ಸಂಸ್ಥಾನದಲ್ಲಿ ಬೆಳೆಯುತಕ್ಕ ಭತ್ತದಿಂದ ದೊರೆಯುವ ಅಕ್ಕಿಯ ಪರಿಮಾಣ ಜನಗಳ ಬಳಕೆಗೆ ಬೇಕಾಗುವುದಕ್ಕಿಂತ ಸುಮಾರು ೫೦,೦೦೦ ಟನ್ನುಗಳಷ್ಟು ಕಡಮೆ ಬೀಳುತ್ತದೆ. ಈ ಸಲದ ಅಕ್ಕಿಯ ಬಹುಭಾಗವನ್ನು ಮದ್ರಾಸ್ ಪ್ರಾಂತದಿಂದ ತರಿಸಲಾಗುತ್ತಿದ್ದಿತು. ೧೯೪೩ ನೇ ಸಾಲಿನ ಪ್ರಾರಂಭದಲ್ಲಿ ಆಹಾರ ಪದಾರ್ಥಗಳನ್ನು ಸಾಗಿಸುವ ವಿಚಾರದಲ್ಲಿ [illegible]ಯನ್ನು ಜಾರಿಗೆ ತಂದ ಮೇಲೆ, ಮದ್ರಾಸ್ ಸರ್ಕಾರದವರು ೪೦ ಸಾವಿರ ಟನ್ನು ರೇಷನ್ ಅಕ್ಕಿಯನ್ನು ಸರಬರಾಜು ಮಾಡಲು ಒಪ್ಪಿದರು. ಆದರೆ ಅದನ್ನು [illegible] ಸಾವಿರ ಟನ್ನುಗಳಿಗೆ ಇಳಿಸಿದರು. ಮದ್ರಾಸ್ ಸರ್ಕಾರದವರು ೧೯೪೩ ನೇ [illegible] ತಿಂಗಳಲ್ಲಿ ಕೈಕೊಂಡ [illegible] ಗಳ ವ್ಯವಸ್ಥೆಯ [illegible] ಈ ಪರಿಮಾಣವು ಮತ್ತೆ ೧೦ ಸಾವಿರ ಟನ್ನುಗಳಿಗೆ ಇಳಿಸಲ್ಪಟ್ಟಿತು. ಹೆಚ್ಚು [illegible]ವನ್ನು ಕೊಡಬೇಕೆಂದು [illegible]ಯಾ ಸರ್ಕಾರದವರನ್ನು ಕೇಳಿದ ಮೇಲೆ ಸಿಂಧ್ ಪ್ರಾಂತದಿಂದ ೧ ಸಾವಿರ ಟನ್ನು ಹೆಚ್ಚಿಗೆ ಅಕ್ಕಿಯನ್ನು ಆಗಸ್ಟ್ ತಿಂಗಳಿನಿಂದ ನವೆಂಬರ್ ತಿಂಗಳ ವರೆಗೆ ಒದಗಿಸುವುದಾಗಿ ತಿಳಿಸಿದ್ದಾರೆ. ಸಂಸ್ಥಾನದ ಹೊರಗಡೆಯ ಸ್ಥಳಗಳಿಂದ ಆಮದು ಮಾಡುವ ಗೋಧಿ ಮುಂತಾದುವುಗಳನ್ನು ಅಕ್ಕಿಯ ಒಂದು ಭಾಗಕ್ಕೆ ಬದಲಾಗಿ ಉಪಯೋಗಿಸಬೇಕೆಂದು ಉದ್ದೇಶಿಸಲಾಗಿದೆ ಎಂದು ಉತ್ತರ ಕೊಟ್ಟರು.

೫೦ ಸಾವಿರ ಟನ್ನು ಅಕ್ಕಿ ಕಡಮೆ ಬೀಳುವುದರಿಂದ ಇದಕ್ಕೆ ಯಾವ ಏರ್ಪಾಡು ಮಾಡಲಾಗಿದೆಯೆಂಬ ಶ್ರೀ॥ ಎಂ. ರಾಮಸ್ವಾಮಿಯವರ ಉಪಪ್ರಶ್ನೆಗೆ, ಈ ವರ್ಷ ಬೆಳೆಯಾದದ್ದರಿಂದ ೨೫ ಸಾವಿರ ಟನ್ ಅಕ್ಕಿ ಬಂದಿದೆಯೆಂದೂ, ಅಕ್ಕಿಗೆ ಬದಲು ಜನಗಳು ಇತರ ಧಾನ್ಯಗಳನ್ನು ಜೊತೆಗೆ ಸೇರಿಸಿಕೊಂಡು ಉಪಯೋಗಿಸಬೇಕೆಂದೂ ಶ್ರೀ ಎಸ್. ನಾರಾಯಣ ರಾಯರು ಉತ್ತರವಿತ್ತರು.

ಬೆಂಗಳೂರು ನಗರದಲ್ಲಿ ಜನಸಂಖ್ಯೆ, ಸೆನ್ಸಸ್ ಪ್ರಕಾರ ೨॥ ಲಕ್ಷವೆಂದೂ, ಆದರೆ ರೇಷನಿಂಗ್ ಸೆನ್ಸಸ್ ಪ್ರಕಾರ ೪॥ ಲಕ್ಷವೆಂದೂ, ಹೊರಗಿನಿಂದ ಜನಗಳು ಹೆಚ್ಚಾಗಿ ಬಂದಿರುವುದರಿಂದಲೋ ಅಥವಾ ಸುಳ್ಳು ಲೆಕ್ಕವನ್ನು ಕೊಟ್ಟಿರುವುದರಿಂದಲೋ ಈ ಪ್ರಜಾ ಸಂಖ್ಯೆ ಹೆಚ್ಚಾಗಿದೆಯೆಂದೂ ಉಪಪ್ರಶ್ನೆಗೆ ಶ್ರೀ॥ ಎಸ್. ನಾರಾಯಣರಾಯರು ಉತ್ತರವಿತ್ತರು

ಪ್ರ: ಕಳೆದ ಬಾರಿ [illegible] ಲಕ್ಷ ಪಲ್ಲ ಭತ್ತದಲ್ಲಿ "ಹೆಚ್ಚು ಬೆಳೆ ಬೆಳೆಯುವ ಚಳುವಳಿ"ಯಿಂದ ಎಷ್ಟು ಸೇರ್ಪಡೆ ಮಾಡಲಾಗಿದೆ

ಉ. ಹೇಳಲು ಸಾಧ್ಯವಿಲ್ಲ

ಆಹಾರ ಧಾನ್ಯಗಳು ಸಂಸ್ಥಾನದಿಂದ ಹೊರಕ್ಕೆ ಹೋಗುತ್ತಿಲ್ಲವೆಂದೂ ಹೊರಗಿನಿಂದಲೇ ತರಿಸಲಾಗುತ್ತಿದೆಯೆಂದೂ ಸರ್ಕಾರದವರು ತಿಳಿಸಿದರು.

ಆಹಾರ ಸಮಸ್ಯೆ

ನಂತರ ಆಹಾರ ಸಮಸ್ಯೆ ಮೇಲೆ ಚರ್ಚೆಯನ್ನು ಮುಂದುವರಿಸಲಾಯಿತು

ಶ್ರೀ ವೆಂಕಟಸ್ವಾಮಿಯವರು [illegible] 'ಡಾಬಿನ' [illegible] ಸೂಚಿಸಿದ ಆಹಾರ [illegible] ಇನ್ನು ನಮ್ಮ ಸರ್ಕಾರದವರ [illegible] ಜಾರಿಗೆ ತರುವುದು [illegible] ಸಂಗತಿ

ಶ್ರೀ ಪಾತ್ರಗಳದ ನಂಜುಂಡಯ್ಯನವರು: ಹೆಚ್ಚು ಬೆಳೆ ಬೆಳೆಯಲು ಭೂಮಿಗಳನ್ನು ಧಾರಾಳವಾಗಿ ಕೊಡಬೇಕು. ಬಡಜನರಿಗೆ ರಾಗಿ ದರ ಹೆಚ್ಚಾಗಿರುವುದರಿಂದ ರೂ ಗೆ ೮ ಸೇರಿನಂತೆ ಮಾರಬೇಕು. ರೇಷನಿಂಗ್ ಪ್ರಮಾಣವನ್ನು ಹೆಚ್ಚಿಸಬೇಕು. ಕಂದಾಯವನ್ನು ದವಸದ ರೂಪವಾಗಿ ತೆಗೆದುಕೊಳ್ಳಲು ಏರ್ಪಾಡು ಮಾಡಬೇಕು

ಶ್ರೀಗಳಾದ ಕೃಷ್ಣಮಾಚಾರ್, ಶೇಕ್ ಅಹಮದ್, ಸಿ. ಟಿ. ಹನುಮಂತಯ್ಯ, ಅಬ್ದುಲ್ ಅಜೀಜ, ರಾಮ ಅಯ್ಯರ್, ಕಡಿದಾಳ್ ಮಂಜಪ್ಪ ಮತ್ತು ಇತರ ಸದಸ್ಯರು ತಮ್ಮ ಪ್ರದೇಶಗಳಲ್ಲಿನ ಕುಂದುಕೊರತೆಗಳನ್ನು ವರ್ಣಿಸಿದರು.

ಸರ್ಕಾರದವರ ಉತ್ತರ

ಸಿವಿಲ್ ಸಪ್ಲೈ ಡೈರೆಕ್ಟರಾದ ಶ್ರೀ॥ ನಾರಾಯಣರಾಯರು ಈ ಆಹಾರ ಸಮಸ್ಯೆಗೆ ಉತ್ತರ ಕೊಡುತ್ತಾ, ಈ ವಿಚಾರದಲ್ಲಿ ಸದಸ್ಯರ ಸಲಹೆಗಳಂತೆ ಕಾರ್ಯಕ್ರಮವನ್ನು ಈಗಾಗಲೇ ಸರ್ಕಾರದವರು ಕೈಗೊಂಡಿದ್ದಾರೆ. ನಮ್ಮ ದೇಶಕ್ಕೆ ಎಷ್ಟು ಬೆಳೆ ಬೆಳೆದರೂ ಕೂಡ ನಮಗೇ ಸಾಲದು. ೫೦ ಸಾವಿರ ಟನ್ನು ಹೊರಗಿನಿಂದ ಬರಬೇಕಾಗಿದೆ. ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಹಿಂದಿನ ವರ್ಷ ಬೆಳೆಯಾಗದೇ ಬೇರೆ ಜಿಲ್ಲೆಗಳಿಂದ ಕಳುಹಿಸಬೇಕಾಯಿತು. ಸರ್ಕಾರದವರು ಎಷ್ಟು ನಷ್ಟವಾದರೂ ಸಹ ತಮಗೆ ಸಾಲದೇ ಬರುವ ಆಹಾರ ಧಾನ್ಯಗಳನ್ನು ಹೊರಗಿನಿಂದ ತರಲು ಕಾರ್ಯಕ್ರಮ ತೆಗೆದುಕೊಳ್ಳುವರು

ವರ್ತಕರನ್ನೇ ಸರ್ಕಾರದವರು ದೂರ ಮಾಡುತ್ತಿಲ್ಲ. ಯಾವ ವ್ಯಾಪಾರದಿಂದ ಪ್ರಜೆಗಳಿಗೆ ಉಪಯೋಗವಾಗುವುದೋ ಅವನ್ನೇ [illegible] ಕೊಡಲಾಗುತ್ತಿದೆ. ವರ್ತಕರಿಗೆ ಸರಬರಾಜು ಮಾಡಲು ಅನುಮತಿ ಕೊಡಲಾಗುತ್ತಿತ್ತು. ಆದರೆ [illegible] ದಿಂದ ಇದನ್ನು ನಿಲ್ಲಿಸಬೇಕಾಯಿತು. ಹಳ್ಳಿಯಿಂದ ಎಲ್ಲಾ ಪದಾರ್ಥಗಳನ್ನೂ ಪಟ್ಟಣಕ್ಕೆ ಸಾಗಿಸುತ್ತಿಲ್ಲ. [illegible] ಬೇಕಾದಷ್ಟನ್ನು [illegible] ಇಟ್ಟು, ಕಮ್ಮಿಯಾದ ಪ್ರದೇಶಗಳಿಗೆ ಕಳುಹಿಸಲಾಗುತ್ತಿದೆ. ಹೆಚ್ಚಾಗಿ [illegible] ಅನುಮತಿ ಕೊಡ [illegible] ಗೆ ಅಧಿಕಾರ ಕೊಡ [illegible] ಪ್ರತಿ [illegible] ಬೇಕೆಂಬುದನ್ನು [illegible] ತೆಗೆದುಕೊಂಡು [illegible]

ಗಾಂಧೀಜಿ ಉತ್ಸವ

ಮೈಸೂರು ೧೧

ರಾಜಧಾನಿಯ ರಾಷ್ಟ್ರೀಯ ವಿದ್ಯಾರ್ಥಿ ಯುವಕರು ನಿನ್ನೆ ಸಾಯಂಕಾಲ ಮಹಾತ್ಮ ಗಾಂಧಿಯವರ ಭಾವ ಚಿತ್ರವನ್ನು ಸುಂದರವಾಗಿ ಅಲಂಕರಿಸಿದ ರಥದಲ್ಲಿಟ್ಟು ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಿದರು. ಆ ನಂತರ ಶ್ರೀ॥ ಟಿ. ಸಿದ್ದಲಿಂಗಯ್ಯನವರು ಒಂದು ಭಾಷಣ ಮಾಡಿ ಮಹಾತ್ಮರ ಸಂದೇಶವನ್ನು ವಿವರಿಸಿದರು. ಬಂದಿದ್ದವರೆಲ್ಲರಿಗೂ ಪ್ರಸಾದ ವಿನಿಯೋಗವಾಯಿತು.

ಇನ್ನು ಕೆಲವರ ಬಿಡುಗಡೆ

ಮೈಸೂರು ಜಿಲ್ಲೆಯಿಂದ ಇದುವರೆಗೆ ಬಿಡುಗಡೆಯಾಗಿರುವವರಲ್ಲದೆ ಇನ್ನೂ ಆರು ಜನ ಡಿಟೆನ್ಯೂಗಳ ಬಿಡುಗಡೆಗೆ ಆಜ್ಞೆ ಹೊರಟಿರುವುದಾಗಿ ಗೊತ್ತಾಗಿದೆ.

ವಾಲಿಬಾಲ್ ಪಂದ್ಯ

ದಸರಾ ವಾಲಿಬಾಲ್ ಫೈನಲ್ಸ್ ಪಂದ್ಯವು ಬನುಮಯ್ಯ ಹೈಸ್ಕೂಲ್ ಮೈದಾನದಲ್ಲಿ ಈ ದಿನ ಬೆಳಗ್ಗೆ ಸೋಷಿಯಲ್ಸ್ ಮತ್ತು [illegible] ಮೆಮೋರಿಯಲ್ ಕ್ಲಬ್ಬಿಗೂ ನಡೆದು ಸೋಷಿಯಲ್ಸ್ ನವರು ಒಂದೇ ಸಮನೆ ಎರಡು ಗೇಮುಗಳಿಂದ ವಿಜಯಿಗಳಾದರು.

ಶಾಂತಿ ಮಾರ್ಗದಿಂದಲೇ ಸಮಾಜಕ್ಕೆ ಹೆಚ್ಚು ಹಿತ

ಚರ್ಚಾ ಕೂಟ

"ಕ್ರಾಂತಿ ಮಾರ್ಗಕ್ಕಿಂತ ರಾಜಕೀಯ ಭಂಗವಾಗದ ಶಾಂತಿ ಮಾರ್ಗವೇ ಸಮಾಜಕ್ಕೆ ಹೆಚ್ಚು ಹಿತಕರವಾದುದು' ಎಂಬ ವಿಷಯದ ಮೇಲೆ ಚರ್ಚೆಯು, ನಿನ್ನೆ ಸಂಜೆ ವಿಶ್ವವಿದ್ಯಾನಿಲಯ ಸಂಘದ ಆಶ್ರಯದಲ್ಲಿ, ಮಹಾರಾಜಾ ಕಾಲೇಜಿನ ಒಳ ಆವರಣದಲ್ಲಿ ಶ್ರೀ॥ ಡಿ. ಸಿ. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಭೂಪಾಲಂ ಚಂದ್ರಶೇಖರಯ್ಯ, ಎಸ್. ಎಂ. ಎಂ [illegible], ನೀರ ಕೇಸರಿ ಸೀತಾರಾಮ ಶೆಟ್ಟಿ, [illegible] ವಿಷಯದ ಪರವಾಗಿಯೂ, ಶ್ರೀಗಳಾದ ಟಿ. ಎಸ್. ರಾಜಗೋಪಾಲಯ್ಯಂಗಾರ್, ಎ. ವೆಂಕಟಪ್ಪ, ಬಿ. ನಂಜುಂಡಸ್ವಾಮಿ ಮತ್ತು ಬಿ. ಆರ್. ಪುಟ್ಟನಂಜಪ್ಪನವರು ವಿರೋಧಿಸಿಯೂ ಮಾತನಾಡಿದರು. ವಿಷಯವು ಓಟಿಗೆ ಹಾಕಿದಾಗ ಬಿದ್ದುಹೋಯಿತು.

[illegible] ಅಳತೆಯಲ್ಲಿ ಸರ್ಕಾರದ್ದು ಹೆಚ್ಚು ಲಾಭ ಹೊಂದುತ್ತಿದೆಯೆಂದು ಹೇಳಲಾಗ [illegible] ದಿಲ್ಲ

ವಿಶೇಷ ಅರಿಕೆ

[illegible] ಸರ್ಕಾರದವರು [illegible] ಪ್ರಜಾ ಪ್ರತಿನಿಧಿ ಸಭೆ [illegible] ಸಭೆಗಳ ಸದಸ್ಯರ [illegible] ಬೇಕೆಂದೂ [illegible] ಅಧಿಕಾರವಿರಬೇಕೆಂದೂ [illegible]

ಪ್ರಜಾಪ್ರತಿನಿಧಿ ಸಭೆ

ಪ್ರಜೆಗಳ ಸಹಕಾರ ಪಡೆಯದಿದ್ದರೆ ಆಹಾರ ಸಮಸ್ಯೆ ಬಗೆಹರಿಯುವುದಿಲ್ಲ

ಮೈಸೂರು ೧೧

ಪ್ರಜಾಪ್ರತಿನಿಧಿ ಸಭೆಯಲ್ಲಿ ಫಲಾಹಾರದ ನಂತರ ಶ್ರೀ ಎ ಜಿ ರಾಮಚಂದ್ರರಾಯರು ಆಹಾರ ಸಮಸ್ಯೆ ಬಗ್ಗೆ ಮಾತನಾಡುತ್ತಾ, ಬೆಂಗಳೂರು ನಗರದಲ್ಲಿ ರೇಷನಿಂಗ್ ಜಾರಿಯಿಂದ, ಒಬ್ಬರಿಗೆ ೧ ಪಾವು ಅಕ್ಕಿ ಕೊಡುತ್ತಿರುವುದು ಸ್ವಲ್ಪವೂ ಸಾಲದು. ಸರಿಯಾದ ಕೋಟಾ ಕೊಡದ್ದರಿಂದ ಬ್ಲಾಕ್ ಮಾರ್ಕೆಟ್ ನಿರ್ಮಾಣ ಮಾಡಲಾಗಿದೆ. ಈಗ ಹಾಲಿ ಇರುವ ಡಿಪೋಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೆಲವು ಡಿಪೋಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಲಂಚ ರುಷುವತ್ತುಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ತಡೆಯಲು ಉಗ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಶ್ರೀ ಬೂದಾಳಂ ಪುಟ್ಟನಂಜಪ್ಪನವರು : ಜನರ ಸ್ಥಿತಿಯನ್ನು ನೋಡಿದರೆ ಬಹಳ ಶೋಚನೀಯವಾಗಿದೆ. ನಮ್ಮ ಸಂಸ್ಥಾನದಲ್ಲಿ ಇಂತಹ ಸ್ಥಿತಿ ಬಂದಿರುವುದು ಆಶ್ಚರ್ಯವಾಗಿದೆ. ನಮ್ಮ ದೇಶದಲ್ಲಿ ೮ ಲಕ್ಷ ಪಲ್ಲ ಬತ್ತ ಬೆಳೆಯುತ್ತದೆ. ಹಿಂದೆ ಆಮದು ರಫ್ತಿನಿಂದ ೩ ಅಥವಾ ೪ ಕೋಟಿ ರೂ ಗಳ ಆಹಾರ ಧಾನ್ಯ ಹೊರಕ್ಕೆ ಹೋಗುತ್ತಿತ್ತು. ಈಗ ಅದು ತಪ್ಪಿ, ೧ ಕೋಟಿ ರೂ. ಗಳ ದವಸ ಹೊರಗಿನಿಂದ ತರಬೇಕಾದ ಪರಿಸ್ಥಿತಿ ಬಂದಿದೆ. ಎರಡನೇ ಮಳೆ ಬೆಳೆಯಲಿಕ್ಕೆ ತಕ್ಕ ಸೌಕರ್ಯ ಏರ್ಪಡಿಸಿಲ್ಲ. ಕೆಲವು ಆಹಾರ ಪದಾರ್ಥಗಳು ಹೊರಕ್ಕೆ ಹೋಗಲು ಅವಕಾಶ ಕೊಡಬಾರದು. ಮುಂದಿನ ವರ್ಷದ ಫಸಲು ಬರುವವರೆಗೂ ರೈತರು ದವಸಗಳನ್ನು ಇಡುವುದು ನಮ್ಮ ದೇಶದ ಹಿಂದಿನ ಪದ್ಧತಿ. ಬಲಾತ್ಕಾರದಿಂದ ದವಸಗಳನ್ನು ಅವರುಗಳಿಂದ ತೆಗೆದುಕೊಂಡು ಬಂದಿರುವುದು ತುಂಬಾ ಶೋಚನೀಯವಾದುದು. ಜನಗಳನ್ನು ಉದಾಸೀನ ಮಾಡಿದ್ದಾರೆ. ಅವರ ಸಹಕಾರವನ್ನು ಪಡೆಯಬೇಕು. ಸರ್ಕಾರದ ನೀತಿ ಸರಿಯಾಗಿಲ್ಲ. ಇತರ ಕಡೆ ರಾಜಕೀಯ ಪಂಗಡಗಳನ್ನು ಬಿಟ್ಟು ಜನರ ಸಹಕಾರವನ್ನೂ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ನಮ್ಮ ಸಂಸ್ಥಾನದಲ್ಲಿನ ನೀತಿಯೇ ಬೇರೆ. ಈಗಾಗಲೇ ಸಂಸ್ಥಾನದ ಕಷ್ಟಕಾಲದಲ್ಲಿ ಪ್ರಜೆಗಳ ಸಹಕಾರವನ್ನು ತೆಗೆದುಕೊಂಡು ಸಮಾಲೋಚನೆಯಿಂದ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀಮತಿ ಸುನಂದಮ್ಮನವರು : ೭೩ ಲಕ್ಷ ಪ್ರಜೆಗಳ ಪ್ರತಿನಿಧಿಗಳಾಗಿ ನಾವು ಇಲ್ಲಿ ಕೊಟ್ಟ ಸಲಹೆಗಳನ್ನು ತೆಗೆದುಕೊಳ್ಳಲು ಸರಬರಾಜು ಸಚಿವರು ಇಲ್ಲದಿರುವುದು ವಿಷಾದಕರವಾದ ಸಂಗತಿ.

ಅಧ್ಯಕ್ಷರು : ದೆಹಲಿಗೆ ಸಚಿವರು ಹೋಗಿರುವುದು ಆಹಾರ ತರಲಿಕ್ಕೆ.

ಶ್ರೀ॥ ಸು : ಸಾರ್ವಜನಿಕರ ಅಭಿಪ್ರಾಯವನ್ನೂ ಮತ್ತು ಸಲಹೆಗಳನ್ನೂ ಸರ್ಕಾರದವರು ಸಂಪೂರ್ಣವಾಗಿ ತಿರಸ್ಕಾರ ಮಾಡಿದ್ದಾರೆ. ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಿ, ಅವರ ಸಹಕಾರವನ್ನು ತೆಗೆದುಕೊಂಡರೆ, ಅದರಿಂದ ಆಹಾರ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಇಂಗ್ಲೆಂಡ್ ಮತ್ತು ಇತರ ದೇಶಗಳಲ್ಲಿ, ಸ್ವಾತಂತ್ರ್ಯವಿರುವುದರಿಂದ, ಕೇವಲ ೮೦ ರಷ್ಟು ಆಹಾರ ಪದಾರ್ಥಗಳನ್ನು ಆಮದು ಮಾಡುತ್ತಿದ್ದರೂ ಕೂಡ, ಜನರು ಒಗ್ಗಟ್ಟಾಗಿ ನಿಂತು, ಇಂತಹ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಆದ್ದರಿಂದ ನಮಗೆ ಸಂಪೂರ್ಣ ಸ್ವಾತಂತ್ರ್ಯ ಇದ್ದರೇ ಈ ಸಮಸ್ಯೆಗಳು ಬಗೆಹರಿಯಬಲ್ಲವು.

ಈ ಆಹಾರ ಸರಬರಾಜು ವ್ಯವಸ್ಥೆಯ ಏರ್ಪಾಡಿನಲ್ಲಿ ಸರ್ಕಾರದವರಿಗೆ ಸರಿಯಾದ ಅನುಭವ ಇಲ್ಲದಿದ್ದರಿಂದ, ಅಭ್ಯಾಸವಿಲ್ಲದ ಬ್ರಾಹ್ಮಣ ಹೋಮ ಮಾಡುವುದಕ್ಕೆ ಹೋಗಿ ಗಡ್ಡ ಸುಟ್ಟುಕೊಂಡ ಹಾಗೆ ಆಗಿದೆ. ದವಸಗಳನ್ನು ಕೊಂಡು ಮಾರುವುದರಿಂದ ೧೩ ಲಕ್ಷ ರೂ. ಗಳು ಸರ್ಕಾರಕ್ಕೆ ನಷ್ಟವಾಗಿದ್ದರೆ, ಈ ಕೆಲಸವನ್ನು ವರ್ತಕರಿಗಾಗಲಿ ಅಥವಾ ರೈತರಿಗಾಗಲಿ ಬಿಟ್ಟುಬಿಡುವುದು ಒಳ್ಳೆಯದು.

ದಿವಾನರು : ಸದಸ್ಯರೆಲ್ಲರ ಅಭಿಪ್ರಾಯ ಅದೇ ಆದರೆ, ನಾವು ಹಾಗೆಯೇ ಮಾಡುವೆವು.

ಶ್ರೀ ಚಂದ್ರಶೇಖರಯ್ಯನವರು : ೧೩ ಲಕ್ಷ ರೂ. ಸರ್ಕಾರಕ್ಕೆ ನಷ್ಟವಾಗಿರುವುದೆಂದು ಸಚಿವರು ತಿಳಿಸಿದ್ದಾರೆ. ಇದರ ಬಗ್ಗೆ ವಿವರಗಳನ್ನು ಕೊಡಬೇಕೆಂದು ಕೋರಿದರು.

ಸರ್ಕಾರದವರ ಸಮಾಧಾನ

ಸಿವಿಲ್ ಸಪ್ಲೈಸ್ ಡೈರೆಕ್ಟರಾದ ಶ್ರೀ ನಾರಾಯಣರಾಯರು ವಿವರಣೆಗಳನ್ನು ಕೊಡುತ್ತಾ, ಇಲ್ಲಿಯವರೆಗೆ ಬೊಂಬಾಯಿ ಪ್ರಾಂತ್ಯದ ಕಡೆ ೧೪ ಸಾವಿರ ಪಲ್ಲ ಜೋಳವನ್ನು ಕಳುಹಿಸಿ, ಅವರಿಂದ ತೊಗರಿಬೇಳೆ ಮತ್ತು ೧೯೪೭ ನೇ ಡಿಸೆಂಬರ್ ಅಂತ್ಯದವರೆಗೆ ೯ ಸಾವಿರ ಪಲ್ಲ ಜೋಳ ಹೊರಕ್ಕೆ ಕಳುಹಿಸಲಾಗಿದೆ. ನೀಲಗಿರಿ ಪ್ರದೇಶಕ್ಕೆ ೧೩೩೦ ಪಲ್ಲ ರಾಗಿಯನ್ನು ಕಳುಹಿಸಿ, ಅವರಿಂದ ಅಕ್ಕಿಯನ್ನು ಪಡೆಯಲಾಗಿದೆ. ಆದರೆ ಬಿಹಾರದಿಂದ ಅಕ್ಕಿ ಕಳುಹಿಸುವುದನ್ನು ನಿಲ್ಲಿಸಿಬಿಟ್ಟಿದ್ದರಿಂದ ನಾವುಗಳು ರಾಗಿ ಕಳುಹಿಸುವುದನ್ನು ಈಗ ನಿಲ್ಲಿಸಿಬಿಟ್ಟಿದ್ದೇವೆ. ನಾವು ಕಳಿಸಿದ ಧಾನ್ಯಗಳ ಬದಲು ಮೂರನೇ ಒಂದು ಭಾಗ ಇತರ ಧಾನ್ಯಗಳು ಹೊರಗಿನಿಂದ ಬಂದಿವೆಯೆಂದು ತಿಳಿಸಿದರು.

ಟಿ. ಸಿ. ನಟರಾಜ್
ಔಷಧಾಲಯ
ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ
ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜೆಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಫೀಜಿನಿಂದ ಮಾಡಲ್ಪಡುತ್ತದೆ
ಝಂಡೂರವರ ಆಯುರ್ವೇದೀಯ ಔಷಧಿಗಳೆಲ್ಲವೂ ಸದಾ ದೊರೆಯುತ್ತವೆ

ಧಾತುಪುಷ್ಟಿ ಮತ್ತು ಶಕ್ತಿವರ್ಧಕ
ಮದನಮಂಜರಿ ಮಾತ್ರೆಗಳು
ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.
ಮದನಮಂಜರಿ ಫಾರ್ಮಸಿ,
184, ಚೈನಾ ಬಜಾರು ರಸ್ತೆ, ಮದರಾಸು.
ಏಜೆಂಟರು : ಅಶೋಕಾ ಫಾರ್ಮಸಿ
ಹಳೇ ಮೈಸೂರು ಬ್ಯಾಂಕು ರಸ್ತೆ, ಮೈಸೂರು

Edited, printed and published by A R Nagarajan at the Sadhvi Press, D Subbiah Road, Mysore.

ಪ್ರಕಟಣೆ

ಇಂಡಿಯಾ ಸರ್ಕಾರದ ಕಾರ್ಮಿಕ ಶಾಖೆಯು ಟೆಕ್ನಿಕಲ್ ಟ್ರೈನಿಂಗ್ ಸ್ಕೀಮಿನ ಪ್ರಕಾರ ಮೈಸೂರು ರೈಲ್ವೆ ವರ್ಕ್‌ಷಾಪ್, ಮೈಸೂರು, ಮೈಸೂರು ಕಬ್ಬಿಣದ ಕಾರ್ಖಾನೆ, ಭದ್ರಾವತಿ. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್, ಯೂನಿವರ್ಸಲ್ ಕಂಪೆನಿ, ಬೆಂಗಳೂರು, ಈ ಸ್ಥಳಗಳಲ್ಲಿ ಫಿಟ್ಟರ್, ಮೆಷಿನಿಸ್ಟ್, ಟರ್ನರ್, ಎಲೆಕ್ಟ್ರೀಷಿಯನ್, ಬಡಗಿ, ಕಮ್ಮಾರ, ಸರ್ವೇಯರ್, ಮುಂತಾದ ಉದ್ಯೋಗಗಳಲ್ಲಿ ಶಿಕ್ಷಣ ಕೊಡಲಾಗುವುದು. ಈ ಶಿಕ್ಷಣ ಪಡೆಯಲಪೇಕ್ಷಿಸುವವರು ಮೈಸೂರು ರೈಲ್ವೆ ಏಜೆಂಟರ ಆಫೀಸಿನಲ್ಲಿ ಇದೇ ೧೭ ನೇ ಅಕ್ಟೋಬರ್ ೧೯೪೮ ಭಾನುವಾರ ೯ ಗಂಟೆಗೆ ಮತ್ತು ಬೆಂಗಳೂರು ಇಂಜನಿಯರಿಂಗ್ ಕಾಲೇಜಿನಲ್ಲಿ ಇದೇ ೧೯ ನೇ ಅಕ್ಟೋಬರ್ ೧೯೪೮ ಮಂಗಳವಾರ ೧೧ ಗಂಟೆಗೆ ನಡೆಯುವ ಸೆಲೆಕ್ಷನ್ ಸಮಿತಿಯ ಮುಂದೆ ಹಾಜರಾಗಬೇಕು. ಶಿಕ್ಷಣಕ್ಕೆ ಆರಿಸಲ್ಪಟ್ಟವರು ತಕ್ಷಣವೇ ಮೈಸೂರು ದೇಶದ ನಾನಾ ಟ್ರೈನಿಂಗ್ ಕೇಂದ್ರಗಳಿಗೆ ಹೋಗಿ ಸೇರಬೇಕು. ಟ್ರೈನಿಂಗ್ ಕಾಲದಲ್ಲಿ ಶಿಕ್ಷಣ ಪಡೆಯುವವರಲ್ಲಿ ಆಯಾ ಊರುಗಳಿಗೆ ತಕ್ಕಂತೆ ಮೆಟ್ರಿಕ್ಯುಲೇಷನ್ ಆದವರಿಗೆ ತಿಂಗಳಿಗೆ ರೂ ೩೦-೩೫ ಮೆಟ್ರಿಕ್ಯುಲೇಷನ್ ಆಗದವರಿಗೆ ರೂ ೨೫-೩೦ ವರೆಗೆ ಶಿಕ್ಷಣ ವೇತನವು ಕೊಡಲ್ಪಡುವುದು. ಇದು ಎನ್‌ರೋಲ್ ಆಗದವರಿಗೆ ಅನ್ವಯಿಸುವುದು. ಎನ್‌ರೋಲ್ ಆದವರಲ್ಲಿ ಮೆಟ್ರಿಕ್ಯುಲೇಷನ್ ಆದವರಿಗೆ ತಿಂಗಳಿಗೆ ರೂ ೪೮-೧೦-೦, ಮೆಟ್ರಿಕ್ಯುಲೇಷನ್ ಆಗದವರಿಗೆ ತಿಂಗಳಿಗೆ ರೂ. ೩೩-೧೦-೦ ವೇತನವು ಕೊಡಲ್ಪಡುವುದು.

(ಸಹಿ) ಡಿ. ಕೆ. ರಾಮಸ್ವಾಮಿ,
ಪ್ರಿನ್ಸಿಪಾಲ್, ಇಂಜನಿಯರಿಂಗ್ ಕಾಲೇಜು, ಬೆಂಗಳೂರು

ಸ್ತ್ರೀಯರ ಸೌಂದರ್ಯಕ್ಕಾಗಿ
೧೯೧೯ ನೇ ಇಸವಿಯಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ವಿಚಾರ ಮಾಡುತ್ತಿದ್ದೇವೆ.
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರ್ಯಾಂಡ್ ಕಾಫಿಪುಡಿ
ಉಪಯೋಗಿಸಿ
ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು
ಸೂ — ಚಿಲ್ಲರೆಯಾಗಿ ಸಣ್ಣ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ ಇಲ್ಲಿ ಮತ್ತು ಸಂತೇಪೇಟೆ ಪೋಸ್ಟ್ ಆಫೀಸಿನಲ್ಲಿ ರಕ್ಷಾ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ

॥ ವಂದೇ ಮಾತರಂ ॥

ಕಾಂಗ್ರೆಸ್
—: ರಜಸ್ವರ್ಣ :—
ಮಂಗಳಕರ ಬೀಡಿಗಳನ್ನು ಕೊಳ್ಳುವುದರಿಂದ ನಿಮ್ಮ ದುಡ್ಡು ನಿಮ್ಮ ದೇಶದಲ್ಲೇ ಉಳಿಯುತ್ತದೆ.

ಸಂಪುಟ ೨] ಬುಧವಾರ ೧೩—೧೦—೪೩ [ಸಂಚಿಕೆ ೭೩

ಮದರಾಸ್, ಸಿಲೋನ್ ಗಳಲ್ಲಿ ಶತ್ರು ವಿಮಾನ

"ಮಾನಸಿಕ, ಜಡತೆಗೆ ವಿಜ್ಞಾನವೇ ಮುಖ್ಯ ಮದ್ದು"

ವಿಶ್ವವಿದ್ಯಾಲಯದ ಘಟಿಕೋತ್ಸವ

ಪ್ರಶಸ್ತಿ ಪಡೆದವರು

ಮೈಸೂರು ೧೩

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವವು ಈದಿನ ಬೆಳಗ್ಗೆ ೧೦ ಗಂಟೆಗೆ ಜಗನ್‌ಮೋಹನ್ ಬಂಗಲೆಯಲ್ಲಿ ನಡೆಯಿತು. ಛಾನ್ಸಲರಾದ ಶ್ರೀಮನ್ಮಹಾರಾಜರವರು ನಾಲ್ಕು ಕುದುರೆ ಸಾರೋಟಿನಲ್ಲಿ ದಯಮಾಡಿಸಿದ ಕೂಡಲೆ, ಮಹಾಪ್ರಭುಗಳನ್ನು ವೈಸ್ ಛಾನ್ಸಲರು ಮತ್ತು ಇತರ ಸೆನೆಟ್ ಸದಸ್ಯರುಗಳು ಎದುರುಗೊಂಡು ಸಭೆಗೆ ಕರೆದೊಯ್ದರು. ನಂತರ ೧೦ ಗಂಟೆಗೆ ಹೊತ್ತಿಗೆ ಸರಿಯಾಗಿ ಛಾನ್ಸಲರು ಘಟಿಕೋತ್ಸವವನ್ನು ಆರಂಭಿಸಿ ಪದವೀ ಪ್ರದಾನ ಮಾಡಿದರು. ಎಂ ಎ. ೧೬, ಬಿ ಟಿ ೨೭, ಬಿ. ಎ. (ಆನರ್ಸ್) ೫೦, ಬಿ ಎ ೧೨೮, ಎಂ ಎಸ್. ಸಿ ೨೧, ಬಿ. ಎಸ್. ಸಿ (ಆನರ್ಸ್) ೬೯, ಬಿ ಎಸ್ ಸಿ ೧೬೦, ಬಿ. ಇ. ೪೦, ಎಂ. ಬಿ. ಬಿ ಎಸ್. ೧೫

ಒಟ್ಟು ೫೭೭ ಪದವೀಧರರಿಗೆ ಪದಕಗಳನ್ನೂ, ೨೧ ಮಂದಿಗೆ ಬಹುಮಾನಗಳನ್ನೂ ಕೊಡಲಾಯಿತು. ಅವರ ಪೈಕಿ, ಎಂ ಎ ೪ ಮಂದಿ, ಬಿ. ಎ (ಆನರ್ಸ್) ೮, ಬಿ. ಎ ೭, ಎಂ ಎಸ್ ಸಿ ೧, ಬಿ ಎಸ್. ಸಿ (ಆನರ್ಸ್) ೩, ಬಿ. ಎಸ್. ಸಿ. ೩, ಬಿ. ಇ ೨, ಎಂ. ಬಿ ಬಿ. ಎಸ್. ೫

ಒಟ್ಟು ೪೮೦ ಪದವೀಧರರು ಹಾಜರಿದ್ದರು ೯೭ ಮಂದಿ ಹಾಜರಿರಲಿಲ್ಲ ೪೬ ಮಹಿಳೆಯರು.

ಪದಕಗಳನ್ನು ಪಡೆದವರ ಹೆಸರುಗಳನ್ನು ಇಲ್ಲಿ ಕೊಡಲಾಗಿದೆ:—

ಎಂ. ಎ. ಪರೀಕ್ಷೆ—ಚರಿತ್ರೆ. [ಮೈ ಸೂ] ಎಂ ಶ್ರೀರಂಗರಾಜು, ಶ್ರೀಮನ್ಮಹಾರಾಜರವರ ಚಿನ್ನದ ಪದಕ ಎಕನಾಮಿಕ್ಸ್ ಬಿ. ಎನ್. ಕೃಷ್ಣಮೂರ್ತಿ, ಸರ್ ಮ್ಯಾಡ್ಯಾಲಿ ಮೆಮೋರಿಯಲ್ ಚಿನ್ನದ ಪದಕ. ಸಂಸ್ಕೃತ ಕೆ ಕೃಷ್ಣಮೂರ್ತಿ, ಪಂಡಿತ ದಿವಾನ್ ರಾಮಾನುಜಾಚಾರ್ಯರ ಚಿನ್ನದ ಪದಕ. ಕನ್ನಡ ಜಿ ವರದರಾಜ ರಾವ್, ಕೆ. ಸಿ ಸಿಗ್ಗಪ್ಪನವರ ಚಿನ್ನದ ಪದಕ.

ಬಿ. ಎ. ಆನರ್ಸ್—[ಮೈ. ಸೂ] ಟಿ ಎಸ್. ಗೋಪಾಲನ್, ಸಂಸ್ಕೃತ ಸಂ. ನ ರಸಿಂ ರಾಮಾನುಜಾಚಾರ್ಯರ ಚಿನ್ನದ ಪದಕ. ಎ. ಪಿ ಸೋಮಯಾಜುಲು ಜನರಲ್ ಪ್ರೊಫೆಸೆನ್ಸಿ, ಪ್ರಥಮವೈಸ್‌ಛಾನ್ಸಲರಾಗಿದ್ದ ಹೆಚ್ ವಿ ನಂಜುಂಡಯ್ಯನವರ ಚಿನ್ನದ ಪದಕ. ಜಿ ಆರ್ ಕುಪ್ಪುಸ್ವಾಮಿಯ್ಯಂಗಾರ್ ಚರಿತ್ರೆ, ಕ್ಯಾಂಡಿ ಚಿನ್ನದ ಪದಕ ಮತ್ತು ಹಿಂದೂಚರಿತ್ರೆಗಾಗಿ ಪ್ರಸ ಶಿರೋಮಣಿ ೨ಟ ಆನಂದರಾಯರ ಪದಕ್. ಹೆಚ್. ವೀರಭದ್ರಯ್ಯ, ಎಕನಾಮಿಕ್ಸ್, ಪಾಲಿಟಿಕ್ಸ್ ಸರ್. ಕಾಂತರಾಜ ಅರಸಿನವರ ಚಿನ್ನದ ಪದಕ ಮತ್ತು ಜನರಲ್ ಎಕನಾಮಿಕ್ಸ್, ಬಾಲಾಮಣಿಯವರ ಚಿನ್ನದ ಪದಕ ವೆಂಕಟರಮಣನ್, ಫಿಲಾಸಫಿ ಬಿ ಬಿ ಮೆಮೋರಿಯಲ್ ಚಿನ್ನದ ಪದಕ ಮತ್ತು ಇಂಡಿಯನ್ ಫಿಲಾಸಫಿಗಾಗಿ ಎಂ ಹಿರಿಯಣ್ಣನವರ ಚಿನ್ನದ ಪದಕ.

ಬಿ. ಎ. ಪರೀಕ್ಷೆ—[ಮೈ ಸೂ] ಸಿ ಸ್ಪೆ. ಸಂಸ್ಕೃತ ಸರ್ ಸಿ. ಎಸ್. ಕೃಷ್ಣಮೂರ್ತಿಯವರ ಚಿನ್ನದ ಪದಕ ಮತ್ತು ಇಂಗ್ಲೀಷ್ (ಆನರ್ಸ್) ವಿಯರ್ ಮೆಮೋರಿಯಲ್ ಚಿನ್ನದ ಪದಕ

[ಸೆಂ. ಕಾ] ಎಸ್. ಪಾಂಡುರಂಗ ವಿಠಲ್, ಜನರಲ್ ಪ್ರೊಫೆಸೆನ್ಸಿ, ಅಲಮೇಲು ಮ್ಯಾಳ್ ಹೆಚ್. ರಾಮಾನುಜಯ್ಯಂಗಾರ್ಯರ ಚಿನ್ನದ ಪದಕ ಮತ್ತು ಸಕಲೇಶಪುರದ ಸಾಹುಕಾರ ಸಿದ್ದೇಗೌಡರ ಮೆಡಲ್.

[ಮ. ಕಾ.] ಎ ಹಮೀದ್ ಅಲಿ, ಪರ್ಷಿಯನ್, ಶ್ರೀಮದ್ಯುವರಾಜರವರ ಚಿನ್ನದ ಪದಕ.

[ಮ ಕಾ] ಇ ಎಸ್ ವೆಂಕಟರಾಮಯ್ಯ, ಎಕನಾಮಿಕ್ಸ್ ಸರ್ ಶೇಷಾದ್ರಿ ಮೆಡಲ್ ಮತ್ತು ಸಾ. ಚರ್ಮುಲ್ ಡಂಗಾಜ ಮೆಡಲ್.

ಎಂ. ಎಸ್. ಸಿ.—[ಸೆಂ ಕಾ] ಕೆ. ನಾಗರಾಜರಾವ್, ರಸಾಯನಶಾಸ್ತ್ರ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಚಿನ್ನದ ಪದಕ

ಬಿ. ಎಸ್. ಸಿ. (ಆನರ್ಸ್) —[ಸೆಂ. ಕಾ] ಎಂ ವಿ ನಾರಾಯಣಮೂರ್ತಿ, ಜೀಯಾಲಜಿ, ಹೆಚ ಮುಪ್ಪಣ್ಣನವರ ಚಿನ್ನದ ಪದಕ ಬಿ. ಆರ್. ಚನ್ನಯ್ಯಾನಂದಮ್, ರಸಾಯನಶಾಸ್ತ್ರ, ಫರ್ಸ್ಟ್‌ಪ್ರವರ್ತ ಎ ಎಸ್ ರಂಗಸ್ವಾಮಿಯ್ಯಂಗಾರ್ಯರ ಚಿನ್ನದ ಪದಕ. ಕೆ. ಎಸ್. ಸತ್ಯೇಂದ್ರ, ಜನರಲ್ ಪ್ರೊಫೆಸೆನ್ಸಿ, ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಚಿನ್ನದ ಪದಕ.

ಬಿ. ಎಸ್. ಸಿ.—[ಸೆಂ ಕಾ] ಆರ್ ರಾಜಗೋಪಾಲ್—ಜನರಲ್ ಪ್ರೊಫೆಸೆನ್ಸಿ, ಹೆಚ್. ರಾಮಾನುಜಯ್ಯಂಗಾರ್ ಚಿನ್ನದ ಪದಕ, ಕೆಮಿಸ್ಟ್ರಿಗೆ ಶ್ರೀ॥ ಲಕ್ಷ್ಮೀದೇವಮ್ಮನವರ ಚಿನ್ನದ ಪದಕ, ಮತ್ತು ಮ್ಯಾಥಮ್ಯಾಟಿಕ್ಸ್, ಬಿ ಕೆ. ಶ್ರೀನಿವಾಸಯ್ಯಂಗಾರ್ ಸ್ಮಾರಕದ ಚಿನ್ನದ ಪದಕ

ಬಿ. ಇ.—[ಇಂ ಕಾ] ಎ ಕೃಷ್ಣಮೂರ್ತಿ, ಜನರಲ್ ಪ್ರೊಫೆಸೆನ್ಸಿ [ಸಿವಿಲ್] ಬಿ ಎ ಕೃಷ್ಣಯ್ಯಂಗಾರ್ ಚಿನ್ನದ ಪದಕ, ಡಿ ಬಿ ನರಸಿಂಹಯ್ಯ ಸಿವಿಲ್ [ಗ್ರೂಪ್] ಬಿ ಬಿ. ಗರುಡಾಚಾರ್ಯರ ಮೆಡಲ್

ಎಂ. ಬಿ. ಬಿ. ಎಸ್.—ಶ್ರೀಮತಿ ಎ ಮನೋಹರಬಾಯಿ, ಶ್ರೀಮತಿ ಸರೋಜಿನಿ ಕೆಂಪುಚಲುವಾಜಮ್ಮಣ್ಣಿ ಯವರ ಚಿನ್ನದ ಪದಕ ಮತ್ತು ಮಿಡ್‌ವೈಫರಿಗಾಗಿ ಶ್ರೀಮತಿ ಎ. ಆರ್ ಸೀತಮ್ಮನವರ ಚಿನ್ನದ ಪದಕ

ಎಸ್ ಪಿ ಆನಿಸ್ ಜನರಲ್ ಪ್ರೊಫೆಸೆನ್ಸಿ, ಶ್ರೀ ಅರಮನೆ ಚಿನ್ನದ ಪದಕ ಮತ್ತು ಸರ್ಜರಿಗಾಗಿ ಟಿ ಆರ್. ಎ. ತಂಬೂಚೆಟ್ಟಿಯವರ ಚಿನ್ನದ ಪದಕ.

ವಿ ರಾವ ಚಂದ್ರಶೇಖರ, ಶ್ರೀ ಬೇಲಿ [illegible] ಚಿನ್ನದ ಪದಕ [illegible] ಕ್ಲಾಸ್‌ಗಳಲ್ಲಿ ಉತ್ತಮ [illegible] ಇಪ್ಪತ್ತೈದು [illegible] ಸ್ಮಾರಕ ಪ್ರಶಸ್ತಿ [illegible] ಪತ್ರ.

ಮದ್ರಾಸ್‌ಮೇಲೆ ಶತ್ರು ವಿಮಾನ

ಮದ್ರಾಸ್ ನಗರದ ಮೇಲೆ ಮೊನ್ನೆ ರಾತ್ರಿ ಶತ್ರು ವಿಮಾನಗಳು ಬಂದು, ಕೆಲವು ಬಾಂಬುಗಳನ್ನು ಹಾಕಲಾಯಿತೆಂದೂ ಮಿಲಿಟರಿ ಸ್ಥಾನಗಳಲ್ಲಿ ಯಾವ ನಷ್ಟವೂ ಆಗಲಿಲ್ಲವೆಂದೂ, ನಾಗರಿಕರಿಗೆ ಸ್ವಲ್ಪ ಸಾವುನೋವುಗಳುಂಟಾಯಿತೆಂದೂ ಅಧಿಕೃತವಾದ ಪ್ರಕಟನೆ ತಿಳಿಸುತ್ತದೆ

ಸಿಲೋನ್ ಪೂರ್ವತೀರದಲ್ಲಿಯೂ ಒಂದು ಶತ್ರುವಿಮಾನವು ಬಂದಿತ್ತೆಂದೂ, ಅದರಿಂದ ಬಾಂಬು ಹಾಕುವ ಮೊದಲೇ ಅದನ್ನು ನಾಶಮಾಡಲಾಯಿತೆಂದೂ ಹೇಳಲಾಗಿದೆ.

ಮಹಾರಾಜ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಭೆ

ಮೈಸೂರು ೧೩

ಮೈಸೂರು ಮಹಾರಾಜಾ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಭೆಯೊಂದು ನಿನ್ನೆ ಸಂಜೆ ಶ್ರೀ॥ ಹೆಚ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆದು, ಹಳೇ ವಿದ್ಯಾರ್ಥಿಗಳ ಸಂಘವೊಂದನ್ನು ಸ್ಥಾಪಿಸಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಒಂದು ಉಪಸಮಿತಿಯನ್ನು ರಚಿಸಲಾಯಿತು. ಡಾ॥ ನಾರಾಯಣಶಾಸ್ತ್ರಿಗಳನ್ನು ಆ ಸಮಿತಿಯ ಕನ್ವೀನರ್ ಆಗಿ ನೇಮಿಸಲಾಯಿತು.

ರೇಷನಿಂಗ್ ಅಧಿಕಾರಿಗಳು

ಬೆಂಗಳೂರು ನಗರದ ರೇಷನಿಂಗ್ ಆಫೀಸರಾಗಿ ಶ್ರೀ ಸಿ. ಬಿ ಮಾಚಯ್ಯನವರನ್ನು ನೇಮಿಸಲಾಗಿದೆ.

ಸ್ಟ್ಯಾಂಡರ್ಡ್ ಬಟ್ಟೆ ಸಮ್ಮೇಳನ

ಮುಂದಿನ ವಾರ ಮದರಾಸಿನಲ್ಲಿ ನಡೆಯಲಿರುವ ಸ್ಟ್ಯಾಂಡರ್ಡ್ ಬಟ್ಟೆ ಸಮ್ಮೇಳನದಲ್ಲಿ ಸಿವಿಲ್ ಸಪ್ಲೈಸ್ ಡೈರೆಕ್ಟರಾದ ಶ್ರೀ ಎಸ್. ನಾರಾಯಣರಾಯರು ಭಾಗವಹಿಸುವರೆಂದು ಹೇಳಲಾಗಿದೆ.

ಪ್ರಜಾಪ್ರತಿನಿಧಿ ಸಭೆ

ಮೈಸೂರು ೧೩

ಪ್ರಜಾಪ್ರತಿನಿಧಿಸಭೆಯ ಐದನೇ ದಿವಸದ ಕಾರ್ಯಕಲಾಪಗಳು ಈದಿನ ಮಧ್ಯಾಹ್ನ ೩ ಗಂಟೆಗೆ ದಿವಾನರ ಅಧ್ಯಕ್ಷತೆಯಲ್ಲಿ ಆರಂಭವಾದುವು

ಪ್ರಶ್ನೋತ್ತರಗಳು

ಶ್ರೀ॥ ಯಜಮಾನ್ ಬಂಡಪ್ಪನವರ ಪ್ರಶ್ನೆಗೆ ಸಿವಿಲ್ ಸಪ್ಲೈಸ್ ಡೈರೆಕ್ಟರಾದ ಶ್ರೀ॥ ಎಸ್. ನಾರಾಯಣರಾಯರು, ಇಂಡಿಯಾ ಸರ್ಕಾರದವರ ಬೇಸಿಕ್ ಪ್ಲಾನಿನ ಪ್ರಕಾರ ದಿನ ಮೇರೆಗೆ, ನಮಗೆ ದೊರೆಯುವ ಗೋಧಿ ಮತ್ತು ಗೋಧಿಯಿಂದ ತಯಾರಾದ ಪದಾರ್ಥಗಳ ಪರಿಮಾಣಗಳನ್ನು ಇತ್ಯರ್ಥ ಮಾಡಿ, ಅವುಗಳನ್ನು ವ್ಯಾಪಾರಿಗಳಿಗೆ ಕಳುಹಿಸದೆ ಸಿವಿಲ್ ಸರಬರಾಯಿ ಇಲಾಖೆಗೆ ಮಾತ್ರ ಕಳುಹಿಸಲಾಗುತ್ತಿದೆ. ಇವುಗಳನ್ನು ಮಿಲ್ಲಿನವರಿಗೆ ಸ್ವಾಧೀನವಾದಷ್ಟು ಒಟ್ಟು ಮಾಡಲು ಹಂಚಿಕೆ ಮಾಡಲಾಗುತ್ತಿದೆ ಪ್ರತಿ ಒಂದು ಪೈಲ್ಟ್ ಮಣ ಹೂಕದ ಆಸ್ಟ್ರೇಲಿಯಾ ಗೋಧಿಯ ಕೊಂಡ ಬೆಲೆ ರೂ ೧೩-೦ ೦, ಮಾರಾಟದ ಬೆಲೆ ರೂ ೧೫-೧೨-೮ ಮತ್ತು ಪಂಜಾಬು ಗೋಧಿ ಕೊಂಡ ಬೆಲೆ ರೂ ೧೪-೩-೯, ಮಾರಾಟದ ಬೆಲೆ ರೂ ೧೮ ೧೫ ೫ ಈ ವ್ಯತ್ಯಾಸದ ಮೊಬಲಗಿನಿಂದ ಮಂಡಿ ಖರ್ಚುಗಳು, ಗೋಧಿ ಸಾಗಿ ಬರುವಾಗ್ಗೆ ಆಗುವ ನಷ್ಟ ಪೋಲಾಗುವುದು ಮತ್ತು ಲೆಕ್ಕಕ್ಕೆ ಸಿಗದು ಹೋಗುವುದೇ ಇರುವ ಇತರ ಬಾಬುಗಳು ಇವುಗಳಿಗೆ ಹಣವನ್ನೊದಗಿಸಲಾಗುತ್ತದೆ ಆದ್ದರಿಂದ ಯಾವ ವಿಧವಾದ ಲಾಭವನ್ನೂ ಪಡೆದಿಲ್ಲ. ಅಥವ ಪಡೆಯುವ ಉದ್ದೇಶವೂ ಇಲ್ಲವೆಂದು ಉತ್ತರವಿತ್ತರು

ಅರಿಕೆಗಳು

ರೇಷ್ಮೆ ಗೂಡುಗಳ ಮೇಲೆ ಅಜ್ಞೆಯನ್ನು ಜಾರಿಗೆ ತಂದುದರಿಂದ ರೇಷ್ಮೆ ಕೈಗಾರಿಕೆಗೂ ಮತ್ತು ಉತ್ಪಾದಕರಿಗೆ ಬೇಸಾಯಗಾರರಿಗೂ ನಷ್ಟವಾಗಿರುವುದರಿಂದಲೂ ಮತ್ತು ರೈತರು ಕಷ್ಟಗಳಿಗೆ ಗುರಿಯಾಗಿರುವುದರಿಂದಲೂ ಆ ಆಜ್ಞೆಯನ್ನು ವಜಾಮಾಡಬೇಕೆಂದು ಶ್ರೀ॥ ಎಸ್ ಎ ಪ ಪುಟ್ಟಣ್ಣರವರು ಪ್ರಾರ್ಥಿಸಿದರು.

ದಸರಾ ಕ್ರಿಕೆಟ್ ಟೋರ್ನಮೆಂಟ್ ಪಂದ್ಯ

ಮೈಸೂರು ೧೩

ಮೈಸೂರು ದಸರಾ ಕ್ರಿಕೆಟ್ ಟೋರ್ನಮೆಂಟ್ ಫೈನಲ್ಸ್ ಪಂದ್ಯದಲ್ಲಿ ನಿನ್ನೆ ದಿವಸ ಬೆಂಗಳೂರಿನ ಆಚಾರ್ಯ ಪಾಠಶಾಲೆಯವರು ಬೆಂಗಳೂರು ಮಲ್ಲೇಶ್ವರಂ ಸ್ಪೋರ್ಟ್ಸ್ ಕ್ಲಬ್ಬಿನವರನ್ನು ೪ ವಿಕೆಟ್ಟುಗಳಿಂದ ಸೋಲಿಸಿದರು

ಮಲ್ಲೇಶ್ವರಂ. ೭೦ (ಮಾಧವರಾವ್, ಜಗದೀಶ್ ೧೮ ರನ್ನುಗಳಿಗೆ ೭ ವಿಕೆಟ್ಟುಗಳು) ೧೭೭ (ನಾರಾಯಣ ೩೭, ರಾಮಯ್ಯ ೩೨, ಜಗದೀಶ್ ೬೦ ರನ್ನುಗಳಿಗೆ ೬ ವಿಕೆಟ್ಟುಗಳು ಮತ್ತು ಎಸ್. ಟಿ. ಗೌಡ ೩೭ ರನ್ನುಗಳಿಗೆ ೬ ವಿಕೆಟ್ಟುಗಳು)

ಪಾಠಶಾಲೆ: ೧೭೭ (ಜಗದೀಶ್ [illegible], ಕೆ. ಸಿ [illegible] ರನ್ನುಗಳಿಗೆ [illegible] ವಿಕೆಟ್ಟುಗಳು) ೮೦ (ರನ್ನುಗಳಿಗೆ ೬ ವಿಕೆಟ್ಟುಗಳು (ಜಗದೀಶ್ [illegible] [illegible] ರನ್ನುಗಳಿಗೆ [illegible] ವಿಕೆಟ್ಟುಗಳು)

ಮಾನಸಿಕ ಜಡತೆಗೆ ವಿಜ್ಞಾನವೇ ಮದ್ದು

ಪದವೀದಾನ ಸಮಾರಂಭದಲ್ಲಿ ಸರ್ ಜೆ. ಸಿ. ಘೋಷರ ಭಾಷಣ

ಮೈಸೂರು ೧೨

ಬೆಂಗಳೂರು ಭಾರತ ವಿಜ್ಞಾನ ಮಂದಿರದ ಡೈರೆಕ್ಟರಾದ ಸರ್ ಜೆ ಸಿ ಘೋಷ್ ರವರು ನಮ್ಮ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಈ ದಿನ ಭಾಷಣ ಮಾಡುತ್ತಾ ಹೀಗೆ ಹೇಳಿದರು —

ಈ ವಿಶ್ವವಿದ್ಯಾನಿಲಯವು ಇನ್ನೂ ತರುಣ ವಯಸ್ಸಿನದು. ಇದರ ರಜತೋತ್ಸವವು ಎರಡು ವರ್ಷಗಳ ಹಿಂದೆ ತಾನೆ ನಡೆಯಿತು. ಅನೇಕ ಮೇಧಾವಿಗಳಾದ ತರುಣರು ಇಲ್ಲಿಂದ ಶಿಕ್ಷಣ ಪಡೆದು ಪ್ರಪಂಚದ ನಾನಾ ಭಾಗಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸ್ತ್ರೀಯರ ಪ್ರೌಢವಿದ್ಯಾಭ್ಯಾಸಕ್ಕೆ ಈ ವಿದ್ಯಾಲಯವು ಕೊಟ್ಟಿರುವ ಉತ್ತೇಜನವು ಸ್ತೋತ್ರಾರ್ಹವಾಗಿದೆ.

ನಮ್ಮ ದೇಶದಲ್ಲಿ ಆಗುತ್ತಿರುವ ಅಭಿವೃದ್ಧಿ ಕಾರ್ಯಗಳ ಗತಿಯು ಬಹಳ ನಿಧಾನವಾಗಿದೆ. ಹತ್ತು ಸಾವಿರ ವರ್ಷಗಳಿಂದ ಆಗದ ಪ್ರಗತಿಯು ಇತರ ರಾಷ್ಟ್ರಗಳಲ್ಲಿ ಕಳೆದ ೧೫೦ ವರ್ಷಗಳಿಂದ ಆಗಿರುವುದಾಗಿ ಕಂಡುಬರುತ್ತದೆ. ಇದಕ್ಕೆ ವಿಜ್ಞಾನದ ಬೆಳವಣಿಗೆಯೇ ಕಾರಣ.

ನಾಗರಿಕರು ನೈಸರ್ಗಿಕ ಸಂಪತ್ತಿಯನ್ನೂ ಜನರಲ್ಲಿ ಅದನ್ನು ಸದುಪಯೋಗಪಡಿಸುವ ನೈಪುಣ್ಯವೂ ಇದ್ದರೆ ಎಲ್ಲಾ ದೇಶಗಳ ಜನರೂ ಇನ್ನೂ ಹೆಚ್ಚು ಸುಖಸಂಪತ್ತಿನಿಂದ ಜೀವಿಸಬಹುದು. ಆದರೆ ವಿಜ್ಞಾನದ ಪ್ರಭಾವವು ನಮ್ಮ ಜನರ ಮೇಲೆ ಇನ್ನೂ ಚೆನ್ನಾಗಿ ಆಗಿಲ್ಲ. ಸಾವಿರಕ್ಕೆ ಒಬ್ಬರು ಮಾತ್ರ ಅದರ ಸಂಪೂರ್ಣ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ಬಂಗಾಳದ ಸ್ಥಿತಿ

ಕಲ್ಕತ್ತೆಯ ಇಂದಿನ ದೃಶ್ಯವು ನಮ್ಮ ಕಣ್ಣನ್ನು ತೆರೆಯುತ್ತಿದೆ. ಅರಮನೆಗಳ ಊರೆಂದು ಪ್ರಸಿದ್ಧವಾದ ಆ ಪಟ್ಟಣದ ಸಂಸಾರ. ಬೀದಿಗಳಲ್ಲಿ ಒಂದು ದೊಡ್ಡ ನಾಟಕವೇ ಗೋಚರವಾಗುತ್ತಿದೆ. ಎಲ್ಲಾ ಅಂತಸ್ತಿನ ಜನರೂ ಅದರಲ್ಲಿ ಪಾತ್ರಧಾರಿಗಳು—ಹೊಸದಾಗಿ ಧನಿಕರಾದವರು, ಚೆನ್ನಾಗಿ ತಿಂದು ತೇಗುವ ಕೆಲಸಗಾರರು, ಹಸಿವಿನಿಂದ ಸಾಯುತ್ತಿರುವ ದರಿದ್ರರು ಒಂದು ಕಡೆ; ಪರೋಪಕಾರಿಗಳೂ, ಸ್ವಯಂಸೇವಕರೂ ಉಚಿತ ಭೋಜನಶಾಲೆಗಳಲ್ಲಿ ಕೆಲಸಮಾಡುತ್ತಿರುವ ದೃಶ್ಯವೊಂದು ಕಡೆ, ಕೆರೆಯ ಮರೆಯಲ್ಲಿ ಸಣ್ಣಪುಟ್ಟ ನೌಕರರ ಮನೆಗಳಲ್ಲಿ ಹೆಂಗಸರೂ ಮಕ್ಕಳೂ ಅತಿ ಕೊಟ್ಟಿಗೂ ಇಲ್ಲದೆ ಬೀದಿಗೆ ಬರಲು ಸಂಕೋಚಪಡುತ್ತಾ ಉಪವಾಸವಿರುವುದು ಇನ್ನೊಂದು ಕಡೆ,—ಇದೊಂದು ಘೋರದ ಕ! ಇದರ ಒಳಗಿನ ತತ್ವವನ್ನು ಪರೀಕ್ಷಿಸುವವರಿಗೆ ಭಾರತೀಯರ ಸಂಸ್ಕೃತಿಯ ಪ್ರಭಾವವು ಒಡೆದು ಕಾಣುವುದು. ಈ ಕಷ್ಟದಿಂದ ನಾವು ನರಳಬೇಕೆಂಬುದು ದೈವೇಚ್ಛೆಯೆಂದು ಆ ಬಡಜನರು ಹೇಳುವರು.

ಇಂದು ಐವತ್ತು ಲಕ್ಷ ಜನರು ಬಂಗಾಳದಲ್ಲಿ ಉಪವಾಸ ಮಾಡುತ್ತಿದ್ದಾರೆ. ಆದರೂ ಸಹ ಅಲ್ಲಿ ಆಹಾರದ ದೊಂಬಿ ಅಥವ ಕಳ್ಳತನಗಳ ಪ್ರಸಂಗಗಳು ನಡೆದಿಲ್ಲ. ಮೈಮೇಲೆ ಹೊದೆಯಲು ಬಟ್ಟೆಯಿಲ್ಲದೆ ಅನೇಕರು ಬೀದಿಗಳಲ್ಲ ಅಲೆಯುತ್ತಿದ್ದಾರೆ. ಆದರೂ ಭಾರಿ ಭಾರಿ ಜವಳಿ ಅಂಗಡಿಗಳು ಸುಂದರವಾಗಿ ಅಲಂಕರಿಸಲ್ಪಟ್ಟು ಪ್ರಕಾಶಿಸುತ್ತಿವೆ. ಒಂದು ಚೂರು ಬಟ್ಟೆಯೂ ಲೂಟಿಯಾಗಿಲ್ಲ. ಮೂರುದಿನಗಳ ಉಪವಾಸಾನಂತರ ಒಬ್ಬ ಸ್ತ್ರೀಗೆ ಒಬ್ಬ ಸ್ವಯಂಸೇವಕನು ಚಿಕಿತ್ಸೋಪಚಾರ ಮಾಡಿದರೂ ಆಕೆ ಬದುಕಲಿಲ್ಲ. ಸಾಯುವಾಗ ಆಕೆಯ ಬಾಯಿಗೆ ಸ್ವಲ್ಪ ಗಂಗಾಜಲವನ್ನು ಹಾಕಲಾಯಿತು. ಆಹಾರಕ್ಕಿಂತಲೂ ಗಂಗಾಜಲಕ್ಕಾಗಿ ಆಕೆಯು ತನ್ನ ಅತ್ಯಂತವಾದ ಕೃತಜ್ಞತೆಯನ್ನು ಸೂಚಿಸಿದಳು.

ಮೈಸೂರಿನಲ್ಲಿ ಸಮೃದ್ಧಿ

ಮೈಸೂರಿನ ಸ್ಥಿತಿಯು ಹರ್ಷವನ್ನುಂಟುಮಾಡುತ್ತಿದೆ. ಕಲ್ಕತ್ತೆಯ ಅವಸ್ಥೆಯು ಇಲ್ಲಿ ಬಂದಂತೆ ಇಲ್ಲಿನ ಸರ್ಕಾರವು ಮುಂಜಾಗ್ರತೆಯ ಕ್ರಮಗಳನ್ನು ಕೈಗೊಂಡಿದೆ. ಬ್ರಿಟಿಷ್ ಇಂಡಿಯದಲ್ಲಿ ಸರ್ಕಾರವು ಪ್ರಜೆಗಳಿಗೆ ಅತ್ಯಲ್ಪ ಸಹಾಯ ಮಾಡುತ್ತಿರುವಲ್ಲಿ ಮೈಸೂರು ಸರ್ಕಾರವು ಅತಿ ಹೆಚ್ಚಾಗಿ ಸಹಾಯ ಮಾಡುತ್ತಿದೆಯೆಂದು ಹೇಳಲಾಗಿದೆ. ಜನಗಳಿಗೆ ತಮ್ಮ ಯೋಗಕ್ಷೇಮವನ್ನು ತಾವೇ ನೋಡಿಕೊಳ್ಳಬೇಕಾದ ಪ್ರಮೇಯವು ಅತ್ಯಲ್ಪ.

ಭೂಮಿಯಿಂದ ಉತ್ಪನ್ನವನ್ನು ಎಲ್ಲಾ ವಿಧದಲ್ಲೂ ಹೆಚ್ಚಿಸಬೇಕು. ಸುಲಭವಾಗಿ ಗೊಬ್ಬರಗಳು ಸಿಗುವಂತೆ ಸರ್ಕಾರದವರು ಏರ್ಪಡಿಸಬೇಕು.

ಹಣೆಬರಹವೆನ್ನಲಾಗದು

ನಮ್ಮ ಜನರಲ್ಲಿ ಅನೇಕ ಸುಗುಣಗಳಿವೆ. ಆದರೆ ಈ ಪ್ರಪಂಚದಲ್ಲಿ ಬದುಕಿರಲು ಅವುಗಳು ಸಾಧಕವಲ್ಲ. ಬಂದುದಕ್ಕೆಲ್ಲಾ ತಲೆಯನ್ನು ತಗ್ಗಿಸಿ ಅಲ್ಪತೃಪ್ತಿಯಲ್ಲಿ ಕಾಲಹರಣಮಾಡುತ್ತಾ ಅದೃಷ್ಟದಮೇಲೆ ಎಲ್ಲಾ ಭಾರವನ್ನೂ ಹಾಕುವುದಕ್ಕಿಂತ ಆಧುನಿಕ ವಿಜ್ಞಾನದ ಬೆಳವಣಿಗೆಯಿಂದ ಪ್ರಪಂಚವನ್ನು ಸುಖಮಯವಾಗಿ ಮಾಡುವ ಪ್ರಯತ್ನವು ಈಗ ಬೇಕಾಗಿದೆ.

ಮೈಸೂರಿನ ಮಾದರಿ

ವ್ಯವಸ್ಥಾಪಕ ರಚನಾಕಾರ್ಯವು ಮೈಸೂರಿನಲ್ಲಿ ಯಶಸ್ವಿಯಾಗಿರುವಂತೆ ಇನ್ನೆಲ್ಲಿಯೂ ಆಗಿಲ್ಲ. ಮೈಸೂರಿನ ಆದರ್ಶವು ನಮಗೆ ನವಚೈತನ್ಯವನ್ನುಂಟುಮಾಡಿದೆ.

ವಿಜ್ಞಾನವೇ ಮದ್ದು

ಮಾನಸಿಕ ಜಡತ್ವಕ್ಕೆ ವಿಜ್ಞಾನದ ಶಿಕ್ಷಣವೇ ಮುಖ್ಯ ಮದ್ದು. ಈಗಿನ ಕಾಲದ ಸಂಶೋಧನೆಗಳ ಸಂಪೂರ್ಣ ಪ್ರಯೋಜನವನ್ನು ನಾವು ಪಡೆದುಕೊಳ್ಳಬೇಕು. ಇದು ಟಿಸ್ಸ್ಯವೇ ವೈಶ್ಯ

ವಿದ್ಯೆಯು ಸಮಾಜ ಸೇವೆಯ ಪೂರ್ವಪೀಠಿಕೆ. ವ್ಯಕ್ತಿಯ ಪ್ರಭಾವವನ್ನು ಬೆಳೆಸುವುದು ಅದರ ಉದ್ದೇಶವಲ್ಲ.

ಆಕ್ಸಿಸ್ ರಾಷ್ಟ್ರಗಳ ಪರಾಜಯವು ಕಾಣಬರುತ್ತಿದೆ. ಆದರೆ ಯುದ್ಧಾನಂತರವೂ ಈ ದೇಶದಲ್ಲಿ ದಾರಿದ್ರ್ಯ, ಅಜ್ಞಾನ, ಅನಾರೋಗ್ಯಗಳೆಂಬ ಆಕ್ಸಿಸ್ ಶತ್ರುಗಳು ಉಳಿಯುವಂತೆ ಕಾಣುತ್ತದೆ. ಇವುಗಳನ್ನು ನಿರ್ಮೂಲಮಾಡುವುದು ನಮ್ಮೆಲ್ಲರ ಕೆಲಸ. ನಿಮ್ಮ ಸಂಸ್ಥಾನದ ಮತ್ತು ಭಾರತಮಾತೆಯ ಭವಿಷ್ಯತ್ತು ನಿಮ್ಮ ಭವಿಷ್ಯದೊಡನೆ ಸಮ್ಮಿಳಿತವಾಗಿದೆ. ಉದಾತ್ತ ಧ್ಯೇಯಗಳಿಂದಲೂ ಉತ್ತಮ ಧೈರ್ಯದಿಂದಲೂ ಮುಂದುವರಿದು ಜಯವನ್ನು ಪಡೆಯಿರಿ!

ಪ್ರಸಿದ್ಧ ಪತ್ರಿಕೆ

ಕೃಷ್ಣರಾಜನಗರದಲ್ಲಿರುವ ಮಾಜಿ [illegible] ಫ್ರೆಬಂಬ್ ಶಂಗಿರಿರಾಯನು ಅರಿಕೆಮಾ[illegible] ಕೊಳ್ಳುವುದೇನೆಂದರೆ,

ನನಗೆ ಸುಮಾರು ಐದು ವರ್ಷಗಳಿಂ[illegible] ಕಣ್ಣಿನ ದೃಷ್ಟಿಯು ತಪ್ಪಿಹೋಗಿರುತ್ತದೆ. ನನ್ನ ಕುಟುಂಬವೂ ಸಹ ಮೃತಳಾಗಿ [illegible] ಮಾರು ೫ ವರ್ಷಗಳಾಗಿವೆ. ತಾಯಿ [illegible]ಲ್ಲದ ೬ ವರ್ಷದ ನನ್ನ ಹೆಣ್ಣುಮಗ[illegible]ದನ್ನು ನನ್ನ ಬಂಧುಗಳ ಮನೆಯಲ್ಲಿ ಪೋಷಣೆಗಾಗಿ ಬಿಟ್ಟಿರುತ್ತೇನೆ. ಆದರೆ ಅವ[illegible]ಗೂ ಅದನ್ನು ಪೋಷಿಸಲು ಅನಾನುಕೂ[illegible]ವಾಗಿರುತ್ತದೆ. ಆದ್ದರಿಂದ ವೈಷ್ಣವ ಬ್ರಾಹ್ಮಣ ಪಂಗಡಕ್ಕೆ ಸೇರಿದ ಯಾರಾದರೂ ಮಹನೀಯರು ನನ್ನ ಮಗುವನ್ನು ಪೋಷಿಸಿ ಅದರ ಮುಂದಿನ ಯೋಗಕ್ಷೇಮವನ್ನು ನೋಡಿಕೊಳ್ಳುವುದಾದರೆ ಬಹಳ ಕೃತಜ್ಞತೆಯಿಂದ ಮಗುವನ್ನು ಅವರಿಗೆ ಒಪ್ಪಿಸುತ್ತೇನೆ.

ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕಾಗಿ ಕೋರುತ್ತೇನೆ.

ವಿಳಾಸ:—

ಸಿ. ಗೋಪಾಲರಾವ್

ಟೈಪಿಕಲ್ ವ್ಯಾಪಾರಿ,

ಚಾಮರಾಜನಗರ

ಸ್ತ್ರೀಯರ ಸೌಕರ್ಯಕ್ಕಾಗಿ

ಈ॥ ೧೧ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಬಿ ಸೂ — ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುವುದಿಲ್ಲ. ಮತ್ತು ಸಂಕೆಸೆಟ್ ಪೇಟೆ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಪ್ರಭಾವಶಾಲಿ **ಜೀವನಿ** ಔಷಧ

ಗರ್ಭಾಶಯಕ್ಕೆ ಶಕ್ತಿವರ್ಧಕ.

ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಮುಟ್ಟು ದೋಷಕ್ಕೆ ಗಂಡೌಷಧ

ಮುಟ್ಟು ಕಾಲದಲ್ಲಿ ಅಥವಾ ಅನಂತರ ತೋರುವ ಅಧಿಕ ರಕ್ತಸ್ರಾವ, ಬಿಳಿ ಹೋಗುವುದು, ಅಕ್ರಮ ಬಹಿಷ್ಟೆ ಮುಂತಾದುವುಗಳನ್ನು "ಜೀವನಿ" ಜಾಗ್ರತೆ ಗುಣಪಡಿಸುತ್ತದೆ.

ಅತ್ಯುತ್ತಮ ಉಷ್ಣಶಾಮಕ.

ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೂ 'ಜೀವನಿ' ಪ್ರಶಸ್ತವಾದುದು.

ರಕ್ತಹೀನತೆ, ನರಗಳ ದೌರ್ಬಲ್ಯ, ಬೆನ್ನುನೋವು, ತಲೆನೋವು, ಗರ್ಭಸ್ರಾವ, ಬಂಜೆತನಗಳಿಗೆ "ಜೀವನಿ" ಅತ್ಯುಪಯುಕ್ತವಾದುದು.

Edited, printed and published by A. R. Nagarajan at the Sadhvi Press, D Subbian Road, Mysore

॥ ವಂದೇಮಾತರಂ ॥

—: ರಿಜಿಸ್ಟರ್ಡ್ :—

ಮಂಗಳಕರ ಸೀರೆಗಳನ್ನು ಕೊಳ್ಳುವುದರಿಂದ ನಿಮ್ಮ ದುಡ್ಡು ನಿಮ್ಮ ದೇಶದಲ್ಲೇ ಉಳಿಯುತ್ತದೆ.

ಸಂಪುಟ ೨] ಗುರುವಾರ ೧೪—೧೦—೪೩ [ಸಂಚಿಕೆ ೭೪

ಪೋರ್ಚುಗಲ್-ಜಪಾನ್ ಬಾಂಧವ್ಯ ಒಡೆಯಲಿದೆ

ಕೊಚ್ಚಿ ಮಹಾರಾಜರವರ ನಿಧನ

೭ ಮಂದಿ ಡೆಟಿನ್ಯೂಗಳ ಬಿಡುಗಡೆ

ಮೈಸೂರು ೧೪

ಡೆಟಿನ್ಯೂಗಳಾದ ಶ್ರೀಗಳಾದ ನಂಜರಾಜ ಅರಸ್, ಸುಬ್ಬರಾವ್ ಉಪಾಧ್ಯಾಯ, ಕಲಕಾಡ್ ರಾಮರಾವ್, ಎ ರಾಮಣ್ಣ, ಸುಖತೀರ್ಥ, ಸಿ. ಗೋಪಾಲರಾವ್ ಮತ್ತು ಸೂರ್ಯನಾರಾಯಣಪಂಡಿತ್ ಇವರುಗಳನ್ನು ಬಿಡುಗಡೆ ಮಾಡಲಾಗಿದೆ

ಆಂಧ್ರ ಅತಿಕ್ರಮಣ ನಿಷೇಧದಿನವನ್ನು ಭಾನುವಾರ ಆಚರಿಸಬೇಕು

ಬಳ್ಳಾರಿ, ಅನಂತಪುರ, ಕರ್ನೂಲ್ ಜಿಲ್ಲೆಗಳ ಕನ್ನಡ ಭಾಗವನ್ನು ಆಂಧ್ರದೇಶಕ್ಕೆ ಸೇರಿಸಿಕೊಳ್ಳಬೇಕೆಂಬ ಉದ್ದೇಶವನ್ನು ಪ್ರತಿಭಟಿಸುವುದಕ್ಕಾಗಿ ೧೭-೧೦-೪೩ ನೇ ಭಾನುವಾರ "ಆಂಧ್ರ ಅತಿಕ್ರಮಣ ನಿಷೇಧ ದಿನ"ವನ್ನು ಆಚರಿಸಬೇಕೆಂದು ಕನ್ನಡ ನಾಡಿನ ಶ್ರೀಗಳಾದ ಬಳವಂತರಾವ್, ಆಲೂರ್ ವೆಂಕಟರಾವ್, ಮುದವೀಡು ಕೃಷ್ಣರಾವ್, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟಿ. ಆರ್ ರಾಮಯ್ಯ, ಟಿ. ಟಿ. ಶರ್ಮ, ಶಿವರಾಂ ಕಾರಂತ ಮೊದಲಾದವರು ಒಂದು ಬಿನ್ನಹವನ್ನು ಹೊರಡಿಸಿದ್ದಾರೆ

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನ

ಉತ್ತರ ಕನ್ನಡ ವೃತ್ತಪತ್ರಿಕೋದ್ಯೋಗಿಗಳ ಸಂಘವು, ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಪ್ರಥಮ ಸಮ್ಮೇಳನವನ್ನು ಬರಲಿರುವ ಡಿಸೆಂಬರ್ ಕಡೇ ಅಥವಾ ಜನವರಿ ಮೊದಲನೇ ವಾರ ಮಂಗಳೂರಿನಲ್ಲಿ ನಡೆಸಲು ನಿಶ್ಚಯಿಸಿರುತ್ತದೆ. ಈ ಸಮ್ಮೇಳನದ ಕಾರ್ಯದರ್ಶಿಯವರಾದ ಶ್ರೀ ತಿರುಮಲೇಶ್ವರ ಭಟ್ಟರವರು ರಾಜಧಾನಿಗೆ ಬಂದು ಸ್ಥಳೀಯ ಪತ್ರಿಕಾಸಂಘದ ಸದಸ್ಯರುಗಳೊಡನೆ ಮಾತುಕತೆ ನಡೆಸಿ, ಇಲ್ಲಿ ಪತ್ರಿಕೋದ್ಯೋಗಿಗಳ ಸಹಕಾರವನ್ನು ಕೋರಿದರು.

ಜೈಲಿನಿಂದ ದರೋಡೆಗಾರರ ಪರಾರಿ

ಕಾಠೆವಾರ್ ಸಂಸ್ಥಾನಕ್ಕೆಸೇರಿದ ಜಟ್‌ಪುರದ ಜೈಲಿನಿಂದ ೭ ಮಂದಿ ದರೋಡೆಗಾರ, ಕಾವಲುಗಾರನನ್ನು ನಿಶಸ್ತ್ರನನ್ನಾಗಿ ಮಾಡಿ, ಶಸ್ತ್ರಗಳನ್ನು ಹೊಡೆದುಕೊಂಡು, ಇಲ್ಲಿಂದ ಪರಾರಿಯಾದ ವರ್ತಮಾನ ವರದಿಯಾಗಿದೆ. ಜೈಲಿನಿಂದ ಪೋಲೀಸರು ಅವರನ್ನು ಹಿಂಬಾಲಿಸಲು, ಗುಂಡಿನ ಕದನ ನಡೆದು, ಇಬ್ಬರು ಪೋಲೀಸರಿಗೆ ಪೆಟ್ಟು ಬಿದ್ದು, ಅವರು ತಪ್ಪಿಸಿಕೊಂಡು ಓಡಿಹೋದರೆಂದು ಹೇಳಲಾಗಿದೆ

ಚಿತ್ತಗಾಂಗಿನ ದುಸ್ಥಿತಿ

ಚಿತ್ತಗಾಂಗಿನಲ್ಲಿ ಕ್ಷುದ್ಬಾಧೆಯಿಂದ ಸರುತ್ತಿರುವವರ ಸಂಖ್ಯೆದಿನದಿನಕ್ಕೆಹೆಚ್ಚುತ್ತಿರುವುದೆಂದೂ ಜೂಲೈ ೧ರಿಂದ ಸೆಪ್ಟೆಂಬರ್ ೧೫ರವರೆಗೆ ವಾರಕ್ಕೆ ೧೫೩ ಮಂದಿ ಸಾಯುತ್ತಿರುವರೆಂದೂ ವರದಿಯಾಗಿದೆ.

ಗ್ರಾಮಾಂತರಗಳಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಕುಬ್ದಿಯಾ ದ್ವೀಪದಲ್ಲಿ ಜ್ವರ, ಜುಲೈಗಳಲ್ಲಿ ೩೦೦ ಜನಕ್ಕಿಂತ ಹೆಚ್ಚಾಗಿ ಸತ್ತವರು ... ಲ್ಲಿ ಅಕ್ಕಿಯ ಬೆಲೆ ... ವೆಂಬುದಾಗಿ ವರದಿಯಾಗಿದೆ

ಬಂಗಾಳ ಕ್ಷಾಮಕ್ಕೆ ಕಾರಣರಾರು ?

"ಭಾರತದಲ್ಲಿ ಹಿಂದಿನಿಂದ ಬಂದೇತ ಯುದ್ಧ, ಪ್ಲೇಗು ಮತ್ತು ಕ್ಷಾಮ ಇವುಗಳನ್ನು ನಿವಾರಣೆ ಮಾಡಲು ಬ್ರಿಟಿಷರು ಕೈಗೊಂಡ ಕಾಲದಿಂದಲೂ ಬಂಗಾಳವು ಕ್ಷಾಮದಿಂದ ಅತಿ ಹೆಚ್ಚಾಗಿ ನರಳುತ್ತಿದೆ" ಎಂಬುದಾಗಿ ಅಮೇರಿಕ ನ್ಯಾಷನಲ್ ಜಿಯೋಗ್ರಾಫಿಕಲ್ ಸೊಸೈಟಿಯವರು ತಿಳಿಸಿದ್ದಾರೆ "೬೦ ವರ್ಷಗಳಲ್ಲಿ ೧೬ ದೊಡ್ಡ ಕ್ಷಾಮ ಬಂದು, ಒಂದು ವರ್ಷದಲ್ಲೇ ಬಂಗಾಳದಲ್ಲಿ ಸಾವಿರಾರು ಮಂದಿ ಸತ್ತರು. ಬ್ರಿಟಿಷರು ಕೈಗೊಂಡ ಅನೇಕ ನಿವಾರಣಾಕಾರ್ಯಗಳು ನಿರ್ಮೂಲವಾಗಿ, ೧೯ ಮತ್ತು ೨೦ನೇ ಶತಮಾನದಲ್ಲಿ ಕ್ಷಾಮವು ನಿಲ್ಲಲೇ ಇಲ್ಲ ಬ್ರಿಟಿಷರ ಆಡಳಿತದಿಂದ ಭಾರತದಲ್ಲಿ ಪ್ರಜಾಸಂಖ್ಯೆ ಹೆಚ್ಚಾದರೂ ಹೊಟ್ಟೆಗಿಲ್ಲದ ಮತ್ತು ಅಶಕ್ತರ ಮನುಷ್ಯರು ದಿನದಿನಕ್ಕೆ ಹೆಚ್ಚಾಯಿತು" ಎಂಬುದಾಗಿ ಬರೆದಿದ್ದಾರೆ

೧೦,೦೦೦ ಮಕ್ಕಳಿಗೆ ಹಾಲು ಸರಬರಾಜು

ಕಲ್ಕತ್ತೆ ಮತ್ತು ಅದರ ಜಿಲ್ಲೆಯಲ್ಲಿ ೧೦ ಸಾವಿರಕ್ಕೆ ಮೇಲ್ಪಟ್ಟು, ತಾಯಂದಿರಿಗೂ ಮತ್ತು ಮಕ್ಕಳಿಗೂ ಹಾಲನ್ನು ಇಂಡಿಯ ರೆಡ್‌ಕ್ರಾಸ್ ಸಂಸ್ಥೆಯವರು ಸರಬರಾಯಿ ಮಾಡುತ್ತಿದ್ದಾರೆ. ಈ ವಿನಿಯೋಗವನ್ನು ಇನ್ನುಮುಂದೆ ಇತರ ಹಲವು ಜಿಲ್ಲೆಗಳಿಗೂ ವಿಶಾಲಗೊಳಿಸಿ, ಪ್ರತಿದಿನವೂ ೫೦ ಸಾವಿರ ಮಕ್ಕಳಿಗೆ ಹಾಲನ್ನು ಕೊಡುವ ಯೋಚನೆ ಮಾಡಲಾಗುತ್ತಿದೆ

ಹಣೆಗೆ ಗುಂಡು ಬಡಿದು ಮತ್ತೊಬ್ಬರಿಗೆ ಘಾಯ

ಮದ್ರಾಸಿನ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ|| ಸಿ. ಹೇಲದಾಸ್ ಗುಪ್ತ ಎಂಬುವರು ರಾತ್ರಿ ಸಮಯದಲ್ಲಿ ಸರ್ಕಸ್ ನೋಡಲು ಪ್ರವೇಶಿಸುತ್ತಿದ್ದಾಗ ಅವರ ಮೇಲೆ ಯಾರೋ ಗುಂಡು ಹಾರಿಸಿದರೆಂದು ವರದಿಯಾಗಿದೆ ... ಬಡಿದರೂ ತಲೆಬುರುಡೆ ... ಗುಂಡು ಹಿಂದಕ್ಕೆ ... ದ್ದ ಒಬ್ಬ ನಾಗರಿಕ ರಕ್ಷಕನನ್ನು ... ಬ್ಬನನ್ನೂ ಗಾಯಗೊಳಿಸಿದ ಆಶ್ಚರ್ಯಸಂಗತಿ ನಡೆಯಿತು

ಭಾರತಕ್ಕೆ ಹೊರಗಿನಿಂದ ಆಹಾರತರಿಸಲು ಏರ್ಪಾಡು.

ದೆಹಲಿಯಲ್ಲಿ ನಿನ್ನೆದಿನ ನಡೆದ ಆಹಾರ ಸಮ್ಮೇಳನದಲ್ಲಿ ಆಹಾರ ಪದಾರ್ಥಗಳನ್ನು ಭಾರತದಿಂದ ಹೊರಕ್ಕೆ ರಫ್ತುಮಾಡುತ್ತಿಲ್ಲವೆಂದೂ, ಅವುಗಳನ್ನು ಭಾರತಕ್ಕೆತರಿಸಲು ಬೇಕಾದ ಹಡಗುಗಳ ಸೌಲಭ್ಯಗಳನ್ನು ದೊರೆಕಿಸಿಕೊಡಲಾಗುವುದೆಂದೂ ಸರ್ ಜೆ. ಪಿ ಶ್ರೀವತ್ಸರವರು ತಿಳಿಸಿದರು ಆಹಾರ ಸಮಸ್ಯೆಯ ವಿಷಯ ವಾಗಿ ಸಲಹೆಕೊಡಲು ಎಲ್ಲಾ ಪಕ್ಷಗಳ ಪ್ರಾತಿನಿಧ್ಯವೂ ಇರುವ ಸಮಿತಿಯೊಂದನ್ನು ರಚಿಸಲಾಗುವುದೆಂದೂ ತಿಳಿಸಿದರು

ಬಂಗಾಳದಲ್ಲಿ ೧೫ ಲಕ್ಷ ಜನರಿಗೆ ಊಟ ಏರ್ಪಾಡು ಮಾಡಲಾಗಿದೆ

ಭಾರತದ ಆಹಾರ ಸಮಸ್ಯೆಯ ವಿಷಯವಾಗಿ ಮಿ|| ಅಮೇರಿಯವರು ಒಂದು ಹೇಳಿಕೆಯನ್ನು ಇತ್ತಿದ್ದಾರೆ. ಭಾರತದಲ್ಲಿ ವಿಷಮ ಪರಿಸ್ಥಿತಿಯಾಗಿರುವುದರಿಂದ ಹೊರಗಿನಿಂದ ಹೆಚ್ಚು ಹೆಚ್ಚಾಗಿ ಆಹಾರಪದಾರ್ಥಗಳನ್ನು ಕಳುಹಿಸುವ ಪ್ರಯತ್ನ ನಡೆಸಲಾಗುತ್ತಿದೆಯೆಂದೂ, ಅದರೆ ಇನ್ನೂ ಹೆಚ್ಚಾಗಿ ಮಾಡಲು ಹಡಗುಗಳ ಸೌಲಭ್ಯ ಸಾಲದೆಂದು ತಿಳಿಸಿದರು.

ಬಂಗಾಳಕ್ಕೆ ಕಳೆದ ಆರು ತಿಂಗಳಲ್ಲಿ ೩,೭೫,೦೦೦ ಟನ್ನುಗಳಷ್ಟು ದವಸಧಾನ್ಯಗಳನ್ನು ಕಳುಹಿಸಲಾಗಿದೆಯೆಂದೂ, ಸೆಪ್ಟೆಂಬರ್ ತಿಂಗಳೊಂದರಲ್ಲಿಯೇ ಎರಡು ಸಾವಿರ ಟನ್ನುಗಳಷ್ಟು ಕಳುಹಿಸಿಕೊಡಲಾಯಿತೆಂದು ನುಡಿದರು ಬಂಗಾಳದಲ್ಲಿ ಈಗ ೨,೩೦೦ ಉಚಿತ ಭೋಜನಶಾಲೆಗಳನ್ನು ತೆರೆಯಲಾಗಿದೆಯೆಂದೂ, ಸರ್ಕಾರದ ಆಶ್ರಯದಲ್ಲಿ ೧೫ ಲಕ್ಷ ಜನರಿಗೆ ಊಟ ಹಾಕುತ್ತಿರಲಾಗಿದೆಯೆಂದು ತಿಳಿಸಿದರು.

ಬೆಲ್ಜಿಯಂನಲ್ಲಿ ಜಪಾನ್ ಸೈನ್ಯ

ಬೆಲ್ಜಿಯಂಗೆ ಸೇರಿದ ಬ್ರಸೆಲ್ಸ್, ಆಂಟ್‌ವರ್ಪ್‌ಗಳಲ್ಲಿ ವಿಶೇಷವಾಗಿ ಅನೇಕ ಜಪಾನ್ ಸೈನಿಕರು ಕಂಡುಬರುತ್ತಿರುವರೆಂದು ಹೇಳಲಾಗಿದೆ

ಫಾರೆಸ್ಟ್ ಇಲಾಖೆಯಿಂದ ೪೫ ಲಕ್ಷ ರೂ. ವರಮಾನ

... ವರ್ಷ ... ಫಾರೆಸ್ಟ್ ಇಲಾಖೆಯಿಂದ ... ಲಕ್ಷ ... ರೂ. ವರಮಾನಬಂದಿದೆಯೆಂದು ಪ್ರಕಟಣೆಯಾಗಿದೆ.

ಕೊಚ್ಚಿ ಮಹಾರಾಜರವರ ನಿಧನ !

ಮೈಸೂರು ೧೪

ಕೊಚ್ಚಿ ಮಹಾರಾಜರವರಾದ ಸರ್ ಶ್ರೀ|| ರಾಮವರ್ಮ, ಜಿ ಸಿ ಐ ಇ ಅವರು ನಿನ್ನೆಯದಿನ ರಾತ್ರಿ ತಮ್ಮ ... ಅರಮನೆಯ ... ಯಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಇವರು ೧೮೭೬ನೇ ಇಸವಿ ಡಿಸೆಂಬರ್ ೩೦ರಲ್ಲಿ ಜನ್ಮ ತಾಳಿದರು. ೧೯೩೨ನೇ ಇಸವಿ ಮಾರ್ಚಿ ತಿಂಗಳಲ್ಲಿ ಕೊಚ್ಚಿ ಸಂಸ್ಥಾನದ ಸಿಂಹಾಸನವನ್ನು ಹತ್ತಿದರು

ಈ ಸಂತಾಪಸೂಚನೆಗಾಗಿ ಈದಿನ ನಡೆಯ ಬೇಕಾಗಿದ್ದ ಪ್ರಜಾಪ್ರತಿನಿಧಿಸಭೆಯನ್ನು ನಾಳೆಗೆ ಮುಂದೆ ಹಾಕಲಾಯಿತು

ಸಂಸ್ಥಾನದ ಕೋರ್ಟ್ ಕಛೇರಿಗಳು, ಪಾಠಶಾಲೆಗಳು ಮುಚ್ಚಲು ಸರ್ಕಾರದ ಆಜ್ಞೆಯಾಗಿದೆ

ದಿವಂಗತರು ಕೆಲವು ವರ್ಷಗಳ ಹಿಂದೆ ಒಂದು ರೀತಿಯ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ತಮ್ಮ ಸಂಸ್ಥಾನದಲ್ಲಿ ಜಾರಿಗೆ ತಂದರು. ಅದರಂತೆ ಸ್ಥಳೀಯ ಸಂಸ್ಥೆಗಳು, ಆರೋಗ್ಯ, ವ್ಯವಸಾಯ ಈ ಬಾಬುಗಳು ಒಬ್ಬ ಚುನಾಯಿತ ಪ್ರಜಾಸಚಿವ ಮಂತ್ರಿಯ ಆಡಳಿತಕ್ಕೆ ಒಳಪಟ್ಟಿದ್ದುವು ಇವರು ಸ್ವತಃ ಆಯುರ್ವೇದ ವೈದ್ಯಾನುಭವಿಗಳಾಗಿಯೂ, ಸನಾತನ ಧರ್ಮಾವಲಂಬಿಗಳಾಗಿಯೂ ಆಗಿದ್ದರು

ಪೋರ್ಚುಗಲ್ ಜಪಾನಿನ ಸಂಬಂಧ ಬಿಡುವುದೇ ?

ಪೋರ್ಚುಗಲ್ ದೇಶವು ಜಪಾನಿನೊಡನೆ ಸಂಬಂಧವನ್ನು ತ್ಯಜಿಸಬೇಕಾಗುವುದೆಂದೂ ಈಗಾಗಲೇ ಜಪಾನಿ ಮಂತ್ರಿಗಳೊಡನೆ ಡಾ|| ಸಾಲಜಾರ್‌ರವರು ಮಾತುಕತೆ ನಡೆಸಿ, ಒಂದು 'ಅಲ್ಟಿಮೇಟಮ್'ಅನ್ನು ಕಳುಹಿಸಿರುವರೆಂದೂ ಹೇಳಲಾಗಿದೆ. ಪೋರ್ಚುಗಲ್ಲಿನ ನ್ಯಾಷನಲ್ ಅಸೆಂಬ್ಲಿಯು ಈ ವಾರದೊಳಗಾಗಿ ಸೇರಿ, ಯುದ್ಧಸಿದ್ಧತೆ ನಡೆಸಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದೆಂದೂ ಹೇಳಲಾಗಿದೆ

ಜಪಾನಿಗೆ ಅಗಾಧ ನೌಕಾನಷ್ಟ

ಪೆಸಿಫಿಕ್ ಸಮುದ್ರದಲ್ಲಿ ಕಳೆದ ಆರು ತಿಂಗಳಲ್ಲಿ ಸರಾಸರಿಯಾಗಿ ತಿಂಗಳಿಗೆ ೩೦ ಸಾವಿರ ಟನ್ನಿನಷ್ಟು ಜಪಾನಿ ನೌಕೆಗಳನ್ನು ಮಿತ್ರರು ಮುಳುಗಿಸುತ್ತಿರುವರೆಂದೂ, ಇಷ್ಟು ನಷ್ಟವನ್ನು ಜಪಾನ್ ಹೊಸ ನೌಕೆಗಳನ್ನು ಕಟ್ಟಿ ತುಂಬಿಕೊಳ್ಳಲು ಸಾಧ್ಯವಾಗಿಲ್ಲವೆಂದೂ ... ತಿಳಿಸಿದ್ದಾರೆ

ಜಪಾನಿ ಮುಖ್ಯ ಕೇಂದ್ರ ಮಿತ್ರರ ವಶ

ಮಧ್ಯ ... ಲೊಮನ್ಸ್ ... ಗಿಂದ ... (ಜಪಾನ್) ... ಕೇಂದ್ರವಾದ ವಿಲಾ ... ಮಿತ್ರರು ವಶಪಡಿಸಿಕೊಂಡಿರುವರು. ಇದಲ್ಲದ ... ಇನ್ನೂ ... ದ್ವೀಪವನ್ನು ಹಿಡಿಯಲಾಗಿದೆ.

ಜಾವ ಜನಗಳಿಗೆ ... ಯ

ಮಿತ್ರರ ... ಜಾವ ದ್ವೀಪಗಳಲ್ಲಿರುವ ಜನರೆಲ್ಲರನ್ನು ... ಲಕ್ಷ್ಯಾಗಿ ... ಮಾಡಿರುವರೆಂದು ಹೇಳಲಾಗಿದೆ.

ಪ್ರಜಾಪ್ರತಿನಿಧಿ ಸಭೆ

ಆಹಾರ ಸಮಿತಿಗಳಿಗೆ ಹೆಚ್ಚು ಪ್ರಾತಿನಿಧ್ಯ ಇರಬೇಕು.

ಮೈಸೂರು ೧೩

ಪ್ರಜಾಪ್ರತಿನಿಧಿ ಸಭೆಯಲ್ಲಿ ಈದಿನ ರೇಷ್ಮೆ ಗೂಡಿನ ಹತೋಟಿ ಆಜ್ಞೆಯನ್ನು ವಜಾಮಾಡಬೇಕೆಂಬ ಶ್ರೀ॥ ಮಹಮ್ಮದ್ ರವರ ಠರಾವಿನ ಮೇಲೆ ಚರ್ಚೆ ನಡೆಯಿತು.

ಸರ್ಕಾರದ ಪರವಾಗಿ ಶ್ರೀ॥ ಹೆಚ್. ಎಸ್. ಗೋವಿಂದರಾಯರು ಉತ್ತರಕೊಡುತ್ತಾ—ರೇಷ್ಮೆಯ ಧಾರಣೆಯನ್ನು ಇಂಡಿಯಾ ದೇಶಕ್ಕೆಲ್ಲಾ ಅನ್ವಯವಾಗುವಂತೆ ಗೊತ್ತು ಮಾಡಲಾಗಿದೆ. ರೇಷ್ಮೆ ತಯಾರಾಗುವ ಪ್ರದೇಶಗಳವರೆಲ್ಲರೂ ದೆಹಲಿಯಲ್ಲಿ ಸಮ್ಮೇಳನ ಸೇರಿ, ಬೆಲೆಯನ್ನು ನಿಷ್ಕರ್ಷಿಸಲಾಯಿತು. ನಮ್ಮ ದೇಶದ ಮಗ್ಗಗಳಿಗೆ ರೇಷ್ಮೆಯ ಕೊರತೆಯಿಲ್ಲದಂತೆ ಮಾಡಿದೆ. ಇದರಿಂದ ಕಷ್ಟವಾಗುವುದೆಂದು ಹೇಳಲಾಗುವುದಿಲ್ಲ ಹತೋಟಿ ಆಜ್ಞೆಯನ್ನೇ ವಜಾಮಾಡಲು ಆಗುವುದಿಲ್ಲವೆಂದು ತಿಳಿಸಿದರು.

ಆಹಾರ ಸಮಿತಿ

ಆಹಾರ ಸರಬರಾಯಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸರಿಯಾದ ಯೋಜನೆಗಳನ್ನು ತಯಾರಿಸಿ ಸಲಹೆ ಮಾಡುವುದಕ್ಕಾಗಿ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ಚುನಾಯಿತ ಸದಸ್ಯರುಗಳಿಂದಲೂ, ಸಿಟಿಗಳಲ್ಲಿ ಮತ್ತು ಇತರ ಪ್ರದೇಶಗಳಲ್ಲಿರತಕ್ಕ ವ್ಯಾಪಾರಿಗಳಿಂದಲೂ, ಇತರ ಪ್ರತಿನಿಧಿಗಳಿಂದಲೂ ಕೂಡಿದ ಆಹಾರ ವ್ಯವಸ್ಥೆ ಸಮಿತಿಯನ್ನು ನೇಮಕ ಮಾಡಬೇಕೆಂದು ಶ್ರೀ॥ ರಾಮಲಾಲ್ ತಿವಾರಿಯವರು ಪ್ರಾರ್ಥಿಸಿದರು.

ಶ್ರೀ॥ ಭೂಪಾಳಂ ಚಂದ್ರಶೇಖರಯ್ಯನವರು ಮಾತನಾಡುತ್ತಾ—೭೩ ಲಕ್ಷ ಪ್ರಜೆಗಳ ಪ್ರತಿನಿಧಿಗಳಾದ ಈ ಸಭೆಗಳಿಗೆ ತಕ್ಕ ಪ್ರಾತಿನಿಧ್ಯ ಕೊಡದಿರುವುದು ವಿಷಾದ ಸಂಗತಿ. ಚುನಾಯಿತ ಸದಸ್ಯರಂತೆ ಬಹುಮತ ಸದಸ್ಯರನ್ನೂ ಸಮಿತಿಗೆ ನೇಮಿಸಬೇಕೆಂದೂ, ಬಂತ ದಿವಸತ್ತುಗಳ ವಿಚಾರದಲ್ಲಿ ಮತ್ತು ಇತರ ಕುಂದುಕೊರತೆಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶವಿರಬೇಕೆಂದು ತಿಳಿಸಿದರು.

ಶ್ರೀ॥ ವಿ. ವೆಂಕಟಪ್ಪನವರು ರೈತರಿಂದ ಆಹಾರ ಧಾನ್ಯಗಳನ್ನು ತೆಗೆದುಕೊಳ್ಳುವಾಗಲಿ, ಬೆಲೆ ನಿರ್ಧರಿಸಬೇಕಾಗಲಿ, ಪ್ರಜಾಪ್ರಾತಿನಿಧ್ಯವಿದ್ದ ಸಮಿತಿ ಇರಬೇಕು. ಸರ್ಕಾರದವರು ಯಾವ ವಿಧದಿಂದ ನಿಷ್ಕರ್ಷಿಸುವರೆಂದು ನಮಗೆ ಗೊತ್ತಿಲ್ಲ. ಪ್ರಜಾಪ್ರಾತಿನಿಧ್ಯ ಸಮಿತಿ ಇದ್ದ ಪಕ್ಷದಲ್ಲಿ ಅಂತಹ ಟೀಕೆ ಬರುವುದಿಲ್ಲ. ಸರ್ಕಾರದ ಅಧಿಕಾರಿಗಳು ತಪ್ಪು ಮಾಡುತ್ತಿರುವ ಕೊರತೆಯು ನಿಲ್ಲುವುದು. ಸಾರ್ವಜನಿಕರ ಸಹಕಾರದಿಂದಲೇ ಈ ಆಹಾರ ಸಮಸ್ಯೆಯು ಬಗೆಹರಿಯಬಲ್ಲದು.

ಶ್ರೀ॥ ಎ. ಎಂ. ರಾಮರಾಯರು: ಸಹಕಾರ ಸಂಘಗಳ ಸದಸ್ಯರೂ ಇರಬೇಕು.

ಶ್ರೀಗಳಾದ ರಷ್ಟ್ವಾ, ಮಲ್ಲಯ್ಯ, ಮತ್ತು ಇತರರು ಠರಾವನ್ನು ಸಮರ್ಥಿಸಿದರು.

ಸರ್ಕಾರದ ಭರವಸೆ

ದಿವಾನರು ಉತ್ತರಕೊಡುತ್ತಾ—ಈ ಸಮಿತಿಗಳನ್ನು ನೇಮಿಸಿರುವುದು, ಜನಗಳ ಸಹಕಾರ ಪಡೆಯಬೇಕೆಂಬ ಉದ್ದೇಶದಿಂದಲೇ. ಈಗ ಕೆಲವು ಜಿಲ್ಲೆಗಳಲ್ಲಿ ಅನೇಕ ಪ್ರತಿನಿಧಿಗಳು ಇದ್ದಾರೆ. ರೈತರ ಪರವಾಗಿಯೂ, ವರ್ತಕರ ಪರವಾಗಿಯೂ, ಜನಗಳ ಪರವಾಗಿಯೂ ಸದಸ್ಯರುಗಳು ಇರಬೇಕೆಂದೇ ಸರ್ಕಾರದ ಅಭಿಲಾಷೆ. ಸಮಿತಿಗಳಿಂದಲೇ ಈ ವ್ಯವಸ್ಥೆಯು ಸರಿಯಾಗುವುದೆಂದು ಹೇಳಲಾಗುವುದಿಲ್ಲ ಚೆನ್ನಾಗಿ ಸುಶಿಕ್ಷಿತ ಮತ್ತು ಅನುಭವಸ್ಥರಾದ ಪ್ರತಿನಿಧಿಗಳನ್ನು ನೇಮಿಸುವುದರಿಂದ ತುಂಬಾ ಅನುಕೂಲವಾಗುವುದು.

ಅತಿಮೊತ್ತದಾಗಿ ಸಮಿತಿಯನ್ನು ರಚಿಸಿದರೆ, ಅಲ್ಲಿ ಕೆಲಸ ನಡೆಯುವುದಿಲ್ಲ. ಪ್ರಜಾಪ್ರತಿನಿಧಿ ಮತ್ತು ಶಾಸನ ಸಭೆ ಸದಸ್ಯರುಗಳ ಪ್ರತಿನಿಧಿಗಳನ್ನು ನೇಮಿಸುವ ಬಗ್ಗೆ ಸರ್ಕಾರದವರು ಈಗಿನ ಸಮಿತಿಗಳನ್ನು ಪುನರ್ವಿಮರ್ಶಿಸಿ ಎಲ್ಲಿ ಪ್ರತಿನಿಧಿಗಳಿಲ್ಲವೋ ಅಂತಹ ಕಡೆಗಳಲ್ಲಿ ನೇಮಿಸಲಾಗುವುದೆಂದು ಭರವಸೆ ಕೊಟ್ಟರು

ರೈತರಿಗೆ ಹೆಚ್ಚು ಸೌಕರ್ಯ ಕಲ್ಪಿಸಬೇಕು

ಹಳ್ಳಿಗಾಡಿನ ಬಡ ಜನಗಳಿಗೆ ಬಟ್ಟೆ, ಕಬ್ಬಿಣ, ಸೀಮೆ ಎಣ್ಣೆ ಮುಂತಾದ ಸಾಮಾನುಗಳು ಸುಲಭವಾಗಿಯೂ ಮತ್ತು ಕಡಿಮೆ ದರಗಳಲ್ಲಿಯೂ ಸಿಕ್ಕುವಂತೆ ಕೂಡಲೇ ಸರ್ಕಾರದವರು ತಕ್ಕ ಏರ್ಪಾಟು ಮಾಡಬೇಕೆಂದು ಶ್ರೀ ಬಿ. ಚೌಡೇಗೌಡರು ಪ್ರಾರ್ಥಿಸಿದರು

ಈ ವಿಚಾರದಲ್ಲಿ ಸರ್ಕಾರದವರು ಆಲೋಚಿಸುತ್ತಿರುವರೆಂದೂ, ಈಗಾಗಲೇ ೨ ಸಾವಿರ ಗಾಡಿಯನ್ನು ತಯಾರುಮಾಡಲು ಕೆಲಸಗಾರರಿಗೆ ಉತ್ತೇಜನಕೊಟ್ಟು ಏರ್ಪಾಡುಮಾಡಲಾಗುತ್ತಿದೆಯೆಂದೂ ದಿವಾನರು ಭರವಸೆಯಿತ್ತರು.

ಬೆಲ್ಲದ ದರ ಹೆಚ್ಚಿಸಬೇಕು

ಗೋರೂರಿನವರು ಹಳ್ಳಿಗಾಡಿನಲ್ಲಿ ತಯಾರಿಸುವ ಬೆಲ್ಲವನ್ನು ಇತರ ಕಡೆಗಳಿಗೆ ಸಾಗಿಸಲು ನಿರ್ಬಂಧವನ್ನು ತೆಗೆದು ಹಾಕಿ ಕೋಲಾರ ಜಿಲ್ಲೆಯಲ್ಲಿ ಬೆಲ್ಲದ ದರವನ್ನು ಹೆಚ್ಚಿಸಬೇಕೆಂದು ಶ್ರೀ ಪುಟ್ಟನರಸೇಗೌಡರು ಪ್ರಾರ್ಥಿಸಿದರು.

ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಮಾತನಾಡುತ್ತಾ, ಸಂಸ್ಥಾನದಲ್ಲಿ ೮೦ ಲಕ್ಷ ಬೆಲ್ಲ ನಮಗೆ ಬೇಕಾಗಿರುವುದಕ್ಕಿಂತ ಹೆಚ್ಚಾಗಿ ತಯಾರಾಗುತ್ತಿದೆ ಮತ್ತು ೧೯೪೨-೪೩ರಲ್ಲಿ ೩ ಲಕ್ಷ ಬೆಲ್ಲ ಹೊರಕ್ಕೆ ಕಳುಹಿಸಲಾಗಿದೆ ಆದ್ದರಿಂದ ಒಳದೇಶದ ನಿರ್ಬಂಧವನ್ನು ತೆಗೆದು ಹಾಕಿ, ಹೊರಗಿನ ನಿರ್ಬಂಧವನ್ನು ಇಟ್ಟುಕೊಳ್ಳುವುದರಿಂದ, ರೈತರ ತೊಂದರೆ ಕಮ್ಮಿಯಾಗುವುದೆಂದು ತಿಳಿಸಿದರು

ಸರ್ಕಾರದ ಪರವಾಗಿ ಶ್ರೀ ನಾರಾಯಣರಾಯರು ಉತ್ತರ ಕೊಡುತ್ತಾ, ಸರ್ಕಾರದವರು ಎಲ್ಲಾ ಬೆಲ್ಲವನ್ನೂ ಕೊಂಡುಕೊಳ್ಳಲು ಸಿದ್ಧರಾಗಿದ್ದಾರೆ ಒಳದೇಶದ ನಿರ್ಬಂಧವನ್ನು ತೆಗೆದು ಹಾಕುವ ವಿಚಾರದಲ್ಲಿ ಸರ್ಕಾರದವರು ಸಧ್ಯದಲ್ಲೇ ಆಜ್ಞೆ ಮಾಡಲಾಗುವುದೆಂದೂ, ಆದರೆ ಬ್ಲಾಕ್ ಮಾರ್ಕೆಟನ್ನು ತಡೆಯಲು, ಹೊರಗಿನ ನಿರ್ಬಂಧ ಮತ್ತು ಬೆಲೆ ಹತೋಟಿ ತೆಗೆಯುವುದಕ್ಕೆ ಆಗುವುದಿಲ್ಲವೆಂದರು

ನಂತರ ಇಂದಿನ ಸಭೆಯು ಮುಕ್ತಾಯವಾಯಿತು

ನವರಾತ್ರಿ ಮೆರವಣಿಗೆಗೆ ಅಡ್ಡಿ

ಸಿಂಧು ಪ್ರಾಂತದ ಹೈದರಾಬಾದಿನ ಜಿಲ್ಲಾ ಮ್ಯಾಜಿಸ್ಟ್ರೇಟರು ಆರ್ಯಸಮಾಜದವರ ಧಾರ್ಮಿಕ ಉತ್ಸವವನ್ನೂ ಹಿಂದೂ ಮಹಾಸಭೆಯವರ ನವರಾತ್ರಿ ಉತ್ಸವವನ್ನೂ ನಡೆಸದಂತೆ ನಿಷೇಧಿಸಿದ್ದಾರೆ. ೫೦ ವರ್ಷಗಳಿಂದ ಈ ಉತ್ಸವ ನಡೆಯುತ್ತಿದೆ

ರೋಂ ಬೀದಿಗಳಲ್ಲಿ ಕದನ

ಜರ್ಮನ್ ಪೋಲೀಸರಿಗೂ ಸಾರ್ವಜನಿಕರಿಗೂ ರೋಂ ಪಟ್ಟಣದ ಬೀದಿಗಳಲ್ಲಿ ಕದನಗಳು ನಡೆದವು. ೧೯ ಜನರನ್ನು ದಸ್ತಗಿರಿ ಮಾಡಿ ಆರು ಜನ ಇಟಲಿಯವರನ್ನು ಜರ್ಮನರು ಗಲ್ಲಿಗೇರಿಸಿದರು.

ಅಮೃತ ಬಜಾರ್ ಪತ್ರಿಕೆಯ ಮೇಲೆ ಆಜ್ಞೆ

ಕಲ್ಕತ್ತಾದ "ಅಮೃತ ಬಜಾರ್" ಪತ್ರಿಕೆಯ ಮೇಲೆ ಬಂಗಾಳ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ, ಪತ್ರಿಕೆಯಲ್ಲಿ ಪ್ರಕಟಿಸುವ ಬಂಗಾಳದ ಆಹಾರ ಪರಿಸ್ಥಿತಿ ಮುಂತಾದ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ವರ್ತಮಾನಗಳನ್ನು ಸರ್ಕಾರದ ಪೂರ್ವ ಪರಿಶೀಲನೆಗೆ ಒಪ್ಪಿಸಬೇಕೆಂದು ಕೇಳಿದ್ದಾರೆ.

ಮದರಾಸಿನಲ್ಲಿ ಮಳೆ ಅನಾಹುತ

ಈಚೆಗೆ ಉಂಟಾದ ವಿಪರೀತ ಮಳೆಯ ದೆಸೆಯಿಂದ ಮದರಾಸಿನಲ್ಲಿ ಬಹಳ ಅನರ್ಥಗಳು ಸಂಭವಿಸಿವೆ ಅನೇಕ ಮನೆಗಳೂ ಗುಡಿಸಲುಗಳೂ ಬಿದ್ದುಹೋಗಿವೆ. ವಾಹನಸಂಚಾರಕ್ಕೆ ಇದರಿಂದ ಅಡಚಣೆಯಾಯಿತು ಪರಶುವಾಕಂ ಎಂಬಲ್ಲಿ ಒಂದು ಮನೆ ಕುಸಿದು ಒಳಗಿದ್ದ ಒಂಭತ್ತು ಜನರು ಮಡಿದರು.

ಆ ಕಾ ಶ ವಾ ಣಿ

೧೫ ನೇ ಶುಕ್ರವಾರ

...೮-೩೦ ಹಾಡುಗಾರಿಕೆ : ಸಂಗೀತ ಭೂಷಣ ವಿದ್ವಾನ್ ಎಸ್. ವಿ. ಪಾರ್ಥಸಾರಥಿ

Edited, printed and published by A. R. Nagarajan, at the Sadhvi-Press, D. Subbiah Road, Mysore.

ಏಜಂಟರು ಬೇಕು

ಮೈಸೂರು ನಗರದಲ್ಲಿ ಸಾಧ್ವಿ ಪತ್ರಿಕೆಗೆ ಅನುಭವಸ್ಥರಾದ ಮತ್ತು ಡಿಪಾಜಿಟ್ ಕೊಡಬಲ್ಲ ಏಜಂಟರು ಬೇಕಾಗಿದೆ.

ಕೂಡಲೇ ನಮ್ಮ ಆಫೀಸಿಗೆ ಬಂದು ಹೆಚ್ಚಿನ ವಿವರಗಳನ್ನು ತಿಳಿಯಬಹುದು.

ವ್ಯವಸ್ಥಾಪಕ.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

॥ ವಂದೇ ಮಾತರಂ ॥

—: ರಿಜಿಸ್ಟರ್ಡ್ :—

ಮಂಗಳೂರು ಬೀಡಿಗಳನ್ನು ಕೊಳ್ಳುವುದರಿಂದ ನಿಮ್ಮ ದುಡ್ಡು ನಿಮ್ಮ ದೇಶದಲ್ಲೇ ಉಳಿಯುತ್ತದೆ.

ಸಂಪುಟ ೨] ಶುಕ್ರವಾರ ೧೫--೧೦--೪೩ [ಸಂಚಿಕೆ ೭೫

ಮಿತ್ರರಿಗೆ ಪೋರ್ಚುಗೀಸ್ ದ್ವೀಪಗಳ ಉಪಯೋಗ

ಹಿಟ್ಲರನಿಗೆ ಯುದ್ಧದಲ್ಲಿ ಜಯಿಸುವೆನೆಂಬ ಭರವಸೆ

ರಷ್ಯಾದೊಡನೆ ಜರ್ಮನಿ ಹೇಗಾದರೂ ಸಂಧಾನ ಮಾಡಿಕೊಳ್ಳಬೇಕು

ಪ್ರಜಾಪ್ರತಿನಿಧಿ ಸಭೆ

ಕಳ್ಳತನದಿಂದ ಹೊರಕ್ಕೆ ಸಾಗಿಸುತ್ತಿರುವುದನ್ನು ನಿಲ್ಲಿಸಿ

ಮೈಸೂರು ೧೫

ಪ್ರ|| ಪ್ರ|| ಸಭೆಯ ೮ ನೇ ದಿನದ ಕಾರ್ಯಕಲಾಪಗಳು ೧೨ ಘಂಟೆಗೆ ದಿವಾನರಾದ ಪ್ರಧಾನ ಶಿರೋಮಣಿ ಎ. ಮಾಧವರಾಯರ ಅಧ್ಯಕ್ಷತೆಯಲ್ಲಿ ಆರಂಭವಾದುವು.

ಪ್ರಶ್ನೋತ್ತರಗಳು

ಶ್ರೀ ವೆಂಕಟಸುಬ್ಬಯ್ಯನವರ ಪ್ರಶ್ನೆಗೆ, ಸಂಸ್ಥಾನದಲ್ಲಿ ಒಟ್ಟು [illegible] ಪ್ರಥಮ ಸ್ಕೂಲುಗಳು ಇವೆಯೆಂದೂ, ಅದರ ಪೈಕಿ [illegible] ಬಾಲಕರ ಮತ್ತು [illegible] ಬಾಲಕೀಯರ ಸ್ಕೂಲುಗಳು ಇವೆಯೆಂದೂ, ಒಟ್ಟು ಸಾಲಿಯಾನ [illegible] ರೂ ಖರ್ಚಾಗುತ್ತಿದೆಯೆಂದೂ, ಉಪಾಧ್ಯಾಯರಿಗೆ ಸಾಲಿಯಾನ [illegible] ರೂ. ಸಂಬಳವಾಗಿ ಪಾವತಿಯಾಗುತ್ತಿದೆಯೆಂದೂ ಜನರಲ್ ಸೆಕ್ರೆಟರಿಯವರು ಉತ್ತರವಿತ್ತರು.

ಉಪಪ್ರಶ್ನೆಗೆ, ೮ ವರ್ಷಗಳ ಯೋಜನೆ ಪ್ರಕಾರ ೩ ವರ್ಷಗಳಲ್ಲೇ ೧ ಸಾವಿರ ಪ್ರೈಮರಿ ಸ್ಕೂಲುಗಳನ್ನು ತೆರೆಯಲಾಯಿತೆಂದೂ, ಮುಂದೆ ಹಣ ಒದಗಿಸಿದಾಗ ಇನ್ನೂ ಹೆಚ್ಚಾಗಿ ಸ್ಕೂಲುಗಳನ್ನು ತೆರೆಯಲಾಗುತ್ತೆಂದೂ ಉತ್ತರವಿತ್ತರು.

ಪ್ರ—ಉಪಾಧ್ಯಾಯರ ಸಂಬಳ ಹೆಚ್ಚು ಮಾಡಲಾಗುತ್ತದೆಯೇ ?

ಉ—ಸದ್ಯಕ್ಕೆ ಸಾಧ್ಯವಿಲ್ಲ

ಪಟೇಲ್ ಸಿದ್ದೇಗೌಡರ ಪ್ರಶ್ನೆಗೆ, ಕೃಷಿಗೋಸ್ಕರ ಒದಗಿಸಿದ ಕಬ್ಬಿಣದ ಸಾಮಾನುಗಳು ಸರ್ಕಾರದ ಹುಕುಮಿನ ವಿರುದ್ಧವಾಗಿ ವಿನಿಯೋಗವಾಗಿರುವುದಾಗಿ ಒಂದೇ ಒಂದು ಸಂದರ್ಭದಲ್ಲಿ ಇಲಾಖೆಯವರ ಗಮನಕ್ಕೆ ದೂರು ಬಂದಿದೆಯೆಂದೂ, ಆ ವಿಷಯವನ್ನು ತನಿಖೆ ಮಾಡಲಾಗುತ್ತಿದೆಯೆಂದೂ, ನೇಗಿಲು, ಗುಳ, ಪಿಕಾಸಿ ಮುಂತಾದ ಇತರ ವ್ಯವಸಾಯಕ್ಕೆ ಮುಖ್ಯವಾದ ಕಬ್ಬಿಣದ ಸಾಮಾನುಗಳನ್ನು ರಿಯಾಯಿತಿ ದರದಲ್ಲಿ ಕೊಡಲಾಗುತ್ತಿಲ್ಲವೆಂಬುದು ನಿಜವಲ್ಲವೆಂದೂ ಸರ್ಕಾರದವರು ಉತ್ತರವಿತ್ತರು.

ಪ್ರ—ರೈತರಲ್ಲದೇ, ಕೂಲಿಗಾರರಿಗೆ ಈ ರಿಯಾಯಿತಿಗಳನ್ನು ಕೊಡಬಾರದೆಂಬ ನಿರ್ಬಂಧವಿದೆಯೇ ?

ಉ—ಸಾಧ್ಯವಾದಮಟ್ಟಿಗೂ ರಿಯಾಯಿತಿ ಕೊಡಲಾಗುವುದು.

ಅವಸರದ ಠರಾವು

ನಂತರ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು: ಹಿರೇಭಾಸ್ಕರ ಅಣೆಕಟ್ಟಿನಿಂದ ೧೦ ಸಾವಿರ ಎಕರೆ ಮುಳುಗದಂತೆ ಕಾರ್ಯವು ತೆಗೆದುಕೊಳ್ಳಬೇಕೆಂಬ ವಿಚಾರದ ಮೇಲೆ ಒಂದು ಅವಸರದ ಠರಾವನ್ನು ಸೂಚಿಸಿದರು. ಅಧ್ಯಕ್ಷರು ಈ ವರ್ಷದಲ್ಲಿ ಜಮೀನುಗಳು ಮುಳುಗುವುದಿಲ್ಲವಾದ್ದರಿಂದ ಠರಾವು ಅಷ್ಟು ಮುಖ್ಯವಲ್ಲವೆಂದೂ, ಮುಂದಿನ ವರ್ಷ ಈ ವಿಚಾರದಲ್ಲಿ ಸರ್ಕಾರದವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವರೆಂದೂ ತಿಳಿಸಿ, ಠರಾವನ್ನು ತಳ್ಳಿಹಾಕಿದರು.

ವಿಶೇಷ ಅರಿಕೆಗಳು

ಶ್ರೀ ಚೆಕ್ಕಲಿಂಗಯ್ಯನವರು ಒಂದು ವಿಶೇಷ ಅರಿಕೆಯನ್ನು ಸೂಚಿಸಿ, ಆರ್ಕಾವತಿ ಕಟ್ಟೆ [illegible] ಒಡೆದು [illegible] ಬಂದಿದೆಯೆಂದೂ, ಇದರ ವಿಷಯವಾಗಿ ಯಾವ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದೆಂಬ ಬಗ್ಗೆ ಚರ್ಚಿಸಬೇಕೆಂದೂ ತಿಳಿಸಿದರು. ಆದರೆ ಅಧ್ಯಕ್ಷರು ಇದು ಮುಖ್ಯವಾದ ಸಂಗತಿಯಾದರೂ, ಸರ್ಕಾರಕ್ಕೂ ಇದರ ಸಂಬಂಧವಾಗಿ ರಿಪೋರ್ಟು ಬಂದಿಲ್ಲವಾದ್ದರಿಂದ, ಸರ್ಕಾರದವರು ವಿಚಾರ ಮಾಡಿದ ನಂತರ ಚರ್ಚಿಸಬಹುದೆಂದೂ, ಈಗ ಇದಕ್ಕೆ ಅವಕಾಶವಿಲ್ಲವೆಂದೂ ತಿಳಿಸಿದರು. ಈ ಸಭೆಯ ಸದಸ್ಯರುಗಳಿಗೆ ಈಗ ಕೊಡುತ್ತಿರುವ [illegible] ರೂ ಗಳ ಭತ್ಯವನ್ನು ೧೦ ರೂ ಗಳಿಗೆ [illegible] ಒಂದು ವಿಶೇಷ ಅರಿಕೆ [illegible] ಚರ್ಚಿಸಲು ಅಧ್ಯಕ್ಷರು ಅನುಮತಿ [illegible].

ನಂತರ ಸದಸ್ಯರುಗಳ [illegible], ಸೋಮವಾರವೂ ಸಭೆಯನ್ನು ನಡೆಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

ಮದರಾಸಿನ ಮೇಲೆ ಧಾಳಿ

ಇಂಡಿಯಾ ಕಮ್ಯಾಂಡ್ ಪ್ರಕಟಣೆ

ನವದೆಹಲಿ ೫. ೧೨

ಮದರಾಸಿನ ಮೇಲೆ ನಡೆದ ಧಾಳಿಯ ವಿಷಯವಾಗಿ ಇಂಡಿಯಾ ಕಮ್ಯಾಂಡ್ ಜಂಟಿ ಯುದ್ಧ ಪ್ರಕಟಣೆಯು ಹೀಗೆ ತಿಳಿಸುತ್ತದೆ:— ನಿನ್ನೆ ರಾತ್ರಿ (೫||೧೧) ಒಂದು ಶತ್ರು ಪರಿಶೀಲನಾ ವಿಮಾನವು ಮದರಾಸನ್ನು ಸಮೀಪಿಸಿತು. ಕೆಲವು ಬಾಂಬುಗಳು ಸುರಿಸಲ್ಪಟ್ಟವು ಏನಿಟರು ನಷ್ಟವೇನೂ ವರದಿಯಾಗಿಲ್ಲ. ನಾಗರಿಕರಲ್ಲಿ ಕೆಲವರು ಮಡಿದರು.

ನಿನ್ನೆ ರಾತ್ರಿ ಒಂದು ಶತ್ರು ವಿಮಾನವು ಸಿಲೋನಿನ ಪೂರ್ವ ತೀರವನ್ನೂ ಸಮೀಪಿಸಿತು ಆದರೆ ಬಾಂಬುಗಳನ್ನು ಹಾಕುವುದಕ್ಕೆ ಮುಂಚೆಯೇ ನಾಶ ಮಾಡಲ್ಪಟ್ಟಿತು

ನವದೆಹಲಿ [illegible] ಈ ರೀತಿ ತಿಳಿಸುತ್ತದೆ— ಒಂದೇ ಒಂದು ಜಪಾನೀ ಪರಿಶೀಲನಾ ವಿಮಾನದಿಂದ ಮದರಾಸ್ ಪಟ್ಟಣವು ಬಾಂಬು ಮಾಡಲ್ಪಟ್ಟಿತೆಂದು ಈ ದಿನ ಸಮ ರಾತ್ರಿಯಲ್ಲಿ ಸುದ್ದಿ ಬಂದಿತು ನಾಗರಿಕರಲ್ಲಿ ಅತ್ಯಲ್ಪ ಸಾವು ನೋವುಗಳಾದುವು. ಜನರ ಧೈರ್ಯ ಸ್ಥೈರ್ಯಗಳು ಸ್ವಲ್ಪವೂ ಕೆಳಗುಂದಿರಲಿಲ್ಲ ವ್ಯಾಪಾರವು ಎಂದಿನಂತೆ ನಡೆಯುತ್ತಿದೆ. ಊರನ್ನು ಖಾಲಿ ಮಾಡಲು ಪಟ್ಟಣದ ಯಾವ ಭಾಗದ ಜನರೂ ಉದ್ಯುಕ್ತರಾಗಿಲ್ಲ

ಅಜೋರ್ಸ್ ದ್ವೀಪಗಳು ಮಿತ್ರ ಉಪಯೋಗಕ್ಕೆ

ವ್ಯಾಪಾರದ ಹಡಗುಗಳಿಗೆ ಹೆಚ್ಚಿನ ರಕ್ಷಣೆಯನ್ನು ಕೊಡಲು ಪೋರ್ಚುಗಲ್ ದೇಶವು ಅಜೋರ್ಸ್ ದ್ವೀಪಗಳಲ್ಲಿ ಬ್ರಿಟನ್ನಿಗೆ ಕೆಲವು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ ಯೂರೋಪಿನ ಭೂಖಂಡದಲ್ಲಿ ತನ್ನ ತಾಟಸ್ಥ್ಯ ನೀತಿಯನ್ನು ಮುಂದುವರಿಸಲು ಈ ಒಪ್ಪಂದದಿಂದ ಯಾವ ಅಡ್ಡಿಯೂ ಆಗುವುದಿಲ್ಲವೆಂದು ಹೇಳಲಾಗಿದೆ ಪೋರ್ಚುಗಲ್ ಯುದ್ಧಕ್ಕೆ ಇಳಿಯಲೇಬೇಕೆಂದು ಇದರಿಂದ ಅರ್ಥವಾಗುವುದಿಲ್ಲ.

ಹಂಗೇರಿ-ಜರ್ಮನಿ ಘರ್ಷಣೆ

ಒಂದು ವಿಧವಾದ ಕಿರುಕುಳದ ಮನೋಭಾವನೆಯು ಹಂಗೇರಿ-ಜರ್ಮನಿಗಳಿಗೆ ಉತ್ಪನ್ನವಾಗಿದೆ. ಹಂಗೇರಿಯು ಯುದ್ಧದಿಂದ ಹೊರಗಾಗಿರುವುದಾಗಿಯೂ ಬಡೋಗ್ಲಿಯೋ ಸರ್ಕಾರಕ್ಕೆ ಸಹಾಯ ಮಾಡುವುದಾಗಿಯೂ ಸೂಚಿಸುವ ಒಂದು ಪತ್ರವು ರೋಂ ವಿದೇಶಾಂಗ ಕಛೇರಿಯಲ್ಲಿದ್ದುದು ಜರ್ಮನಿಗೆ ಆಕಸ್ಮಾತ್ತಾಗಿ ಸಿಕ್ಕಿದೆ.

ಪೋರ್ಚುಗಲ್ಲಿಗೆ ಜಪಾನ್ ಎಚ್ಚರಿಕೆಯಿಲ್ಲ

ಜಪಾನು ಪೋರ್ಚುಗಲ್ಲಿಗೆ ಒಂದು ಅಂತಿಮ ಎಚ್ಚರಿಕೆಯನ್ನು ಕೊಟ್ಟಿತ್ತೆಂಬ ವದಂತಿಯು ಸುಳ್ಳೆಂದು ಜಪಾನಿನ ವಿದೇಶಾಂಗ ಕಛೇರಿಯು ತಿಳಿಸಿದೆ. ಈ ಎರಡು ರಾಷ್ಟ್ರಗಳ ರಾಯಭಾರಿಗಳೂ ಲಿಸ್ಬನ್ನಿನಲ್ಲಿ ಕಲೆತು ಮಾತನಾಡಿದರು. ನಿಜ ಎರಡು ಸರ್ಕಾರಗಳಿಗೂ ವ್ಯವಹಾರ ನಡೆಯುತ್ತಿರುವ ಕೆಲವು ಅಂಶಗಳನ್ನು ಮಾತ್ರ ಅವರು ವಿಮರ್ಶಿಸಿದರು ರಾಜ ತಾಂತ್ರಿಕದ ಎಲ್ಲೆ ಕಟ್ಟಿನೊಳಗೇ ಅವರ ಸಂಭಾಷಣೆಗಳು ಜರುಗಿದವು ಎಂದು ಹೇಳಲಾಗಿದೆ

ಅನೇಕ ದಿನ ಉಪವಾಸ

[illegible] ಸ್ಥಿತಿಯು [illegible] ಟವಾಗಿದೆ [illegible] ಸಾವಿರಾರು [illegible] ಉಪವಾಸದ [illegible] ದಿನಗಳನ್ನು [illegible] ಕೆಲವು ಕಡೆ [illegible] ಎಲ್ಲಾ [illegible]

ಪ್ರಜಾಪ್ರತಿನಿಧಿ ಸಭೆಯ ಹೌಸ್ ಕಮಿಟಿಯ ಸದಸ್ಯರು

ಮೈಸೂರು ೧೫

ಪ್ರಜಾಪ್ರತಿನಿಧಿ ಸಭೆಯ ಹೌಸ್ ಕಮಿಟಿಯ ಚುನಾವಣೆಯು ನಿನ್ನೆ ಸಂಜೆ ನಡೆದು, ಶ್ರೀಗಳಾದ ಕೆ ಚಕ್ಕಲಿಂಗಯ್ಯ, ಎಂ ಅಬ್ದುಲ್ ಅಜೀಜ, [illegible], [illegible] ರಾಯ, ಕೆ ನಂಜುಂಡರಾವ್, ಎಸ್. [illegible], ಕೆ. ಸಿದ್ದಯ್ಯ ಮತ್ತು ಎಸ್ ದೇವಪ್ಪಗೌಡ—ಇವರುಗಳು ಚುನಾಯಿತರಾದರು.

ಗೋವಧೆ ನಿಲ್ಲಿಸುವ ಮಸೂದೆಗೆ ಅವಕಾಶವಿಲ್ಲ

ಸಂಸ್ಥಾನದಲ್ಲಿ ಗೋವಧೆಯನ್ನು ನಿಲ್ಲಿಸಬೇಕೆಂಬ ಒಂದು ಮಸೂದೆಯನ್ನು ಪ್ರಜಾಪ್ರತಿನಿಧಿ ಸಭೆಯ ಮುಂದೆ ಇಡಲು ಶ್ರೀ ಭೂಪಾಳಂ ಚಂದ್ರಶೇಖರಯ್ಯನವರಿಗೆ ಅಧ್ಯಕ್ಷರು ಅನುಮತಿ ಕೊಡಲಿಲ್ಲ.

ಸನ್ಮಾನ

ಆಸ್ಥಾನ ವಿದ್ವಾನ್ ಟಿ. ಚೌಡಯ್ಯನವರನ್ನು ಸನ್ಮಾನಿಸಲು ನಿನ್ನೆ [illegible] ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಶ್ರೀರಾಮಮಂದಿರದಲ್ಲಿ ಒಂದು ಸಭೆ ನಡೆಯಿತು. ಮಂತ್ರಿಗಳಾದ [illegible] ಕೆ. ವಿ. ಅನಂತರಾಮನ್‌ರವರು ಅಗ್ರಾಸನವನ್ನು ವಹಿಸಿದ್ದರು. ಪ್ರಾರ್ಥನೆ, ಸ್ವಾಗತ, ಅಧ್ಯಕ್ಷರ ಭಾಷಣ ಮುಂತಾದವು ನಡೆದುವು. ಶ್ರೀ ಚೌಡಯ್ಯನವರು ಮಾಡಿರುವ ಸೇವೆಯನ್ನು ಕೊಂಡಾಡಿ ಒಂದು ಬಿನ್ನವತ್ತಳೆಯನ್ನು [illegible] ಅವರಿಗೆ ಅರ್ಪಿಸಲಾಯಿತು ಶ್ರೀ ಚೌಡಯ್ಯನವರ ಪಿಟೀಲು ಕಛೇರಿಯೂ, ವಿದ್ವಾನ್ ಚಂಬೆ ವೈದ್ಯನಾಥ ಭಾಗವತರ ಗಾನವೂ ನಡೆದುವು

ಜಪಾನನ್ನು ನಾಶ ಮಾಡಬಾರದು

ಜರ್ಮನಿ ಅಥವ ಜಪಾನಿ ಜನರನ್ನು ನಾಶಮಾಡಬೇಕೆ? ಇಲ್ಲ, ಕೂಡದು ಎಂದು ಅಮೆರಿಕದ ಸುಪ್ರಸಿದ್ಧ ಲೇಖಕರಾದ ಶ್ರೀಮತಿ ಪರ್ಲ್‌ಬಕ್‌ರವರು ತಿಳಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ—

ಒಂದು ರಾಷ್ಟ್ರ ಅಥವ ಜನಾಂಗವನ್ನು ನಾಶಮಾಡುವುದೆಂಬುದು ಸಲ್ಲದ ಮಾತು. ಅಂತಹ ಪ್ರಯತ್ನ ಮಾಡುವವರು ತಾವೇ ನಾಶವಾಗುವರು ಇದಕ್ಕೆ ಹಿಟ್ಲರೇ ಸಾಕ್ಷಿ

ಜಪಾನಿನ ಮಿಲಿಟರಿ ಶಕ್ತಿಯನ್ನು ನಾಶಮಾಡಬೇಕು ಜಪಾನು ಗೆದ್ದಿರುವ ರಾಜ್ಯಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಆದರೆ ಜಪಾನಿನ ರಾಜ್ಯಭಾರ ಪದ್ಧತಿಯನ್ನು ಬದಲಾಯಿಸಬೇಕಿಲ್ಲ ಅಲ್ಲಿನ ಚಕ್ರವರ್ತಿಯನ್ನು ತೆಗೆದುಹಾಕುವಂತೆ ನಾವು ಒತ್ತಾಯ ಪಡಿಸುವಂತಿಲ್ಲ ಬ್ರಿಟಿಷ ಚಕ್ರವರ್ತಿಗಳು ಸಿಂಹಾಸನವನ್ನು ಬಿಟ್ಟು [illegible] ನಾವು ಹೇಳುತ್ತಿಲ್ಲ [illegible] ಪ್ರಾಬಲ್ಯವಿರುವವರೆಗೆ, ಜಪಾನ್ ಚಕ್ರವರ್ತಿ ಕೇವಲ ಒಂದು [illegible] ಯಾಗಿರುವರು. ಒಮ್ಮೆ ನಿಜವಾದ ಪ್ರಜಾಪ್ರಭುತ್ವ ನೆಲೆಸಲು ನಾವು [illegible] ಕಾರ್ಯಕ್ರಮ [illegible]

[illegible]

ಕಾನ್‌ಸ್ಟೇಬಲ್‌ಗೆ ಶಿಕ್ಷೆ

ರಿಜರ್ವ್ ಪೋಲೀಸ್ ಕಾನ್‌ಸ್ಟೇಬಲ್ ಜಮ್ಸು ಲ್ ಲತೀಫ್ ಎಂಬುವನು ಅನುಮತಿ ಇಲ್ಲದೆ ಕೆಲಸಕ್ಕೆ ಬರಲಿಲ್ಲವೆಂದು ಬೆಂಗಳೂರು ನ್ಯಾಯಾಧೀಶರು ಅವನಿಗೆ ಒಂದು ತಿಂಗಳು ಕಠಿಣ ಸಜಾ ವಿಧಿಸಿದ್ದಾರೆ.

ಉದಾರ ದಾನ

ಬೆಂಗಳೂರು ಮರ್ಚೆಂಟ್ಸ್ ಸ್ಪಿನ್ನಿಂಗ್ ಮತ್ತು ವೀವಿಂಗ್ ಮಿಲ್ಸ್ ಮಾಲೀಕರಾದ ಶ್ರೀ ಜಯರಾಮಯ್ಯನವರು ೫೦ ಸಾವಿರ ರೂ. ದಾನ ಮಾಡಿದ್ದಾರೆ. ಒಂದು ಆಸ್ಪತ್ರೆಗಾಗಿ ೭೦,೦೦೦ ರೂ. ಮಹಿಳಾ ಮಕ್ಕಳ ಆಸ್ಪತ್ರೆಗೆ ೧೦,೦೦೦ ರೂ. ಮತ್ತು ಬಡವರಿಗೆ ೫೦ ಮನೆಗಳನ್ನು ಕಟ್ಟಿಕೊಡಲು ೨೦,೦೦೦ ರೂ. ಗಳನ್ನು ವಿನಿಯೋಗಮಾಡುವರು.

ಹೋಟೆಲು ದರ ಹೆಚ್ಚಿಸಕೂಡದು

ಬೆಂಗಳೂರು, ನಗರದ ಊಟದ ಮತ್ತು ತಿಂಡಿ ಹೋಟೆಲುಗಳಲ್ಲಿ ಮಾಲೀಕರು ದರಗಳನ್ನು ತಮಗೆ ತೋಚಿದಂತೆ ಹೆಚ್ಚಿಸಕೂಡದು. ದರಗಳ ಬೋರ್ಡ್ ಒಂದನ್ನು ಹಾಕಬೇಕು. ಇದರ ಒಂದು ಪಟ್ಟಿಯನ್ನು ಲೈಸೆನ್ಸಿಂಗ್ ಅಧಿಕಾರಿಗಳಿಗೆ ಕಳುಹಿಸಬೇಕು. ತಮ್ಮ ಅನುಮತಿ ಇಲ್ಲದೆ ಬೆಲೆಗಳನ್ನು ಏರಿಸಕೂಡದು—ಎಂಬುದಾಗಿ ಬೆಂಗಳೂರು ಜಿಲ್ಲಾಧಿಕಾರಿಗಳು ಒಂದು ಆಜ್ಞೆ ಹೊರಡಿಸಿದ್ದಾರೆ.

ಗಡೀಪಾರು

ಭದ್ರಾವತಿ ಕೆಲಸಗಾರರಾದ ಈ ಕೆಳಗೆ ಕಂಡವರಗಳು, ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಡಿಟೆನ್ಯೂಗಳಾಗಿದ್ದು ಮೊನ್ನೆ ಬಿಡುಗಡೆಯಾಗಿ, ಭದ್ರಾವತಿಗೆ ಹೋದರು. ಅವರು ಭದ್ರಾವತಿಯನ್ನು ಬಿಟ್ಟು ಹೊರಡಬೇಕೆಂದು ಆಜ್ಞೆ ಜಾರಿ ಮಾಡಲ್ಪಟ್ಟಿತು. ಅವರು ಶಿವಮೊಗ್ಗಕ್ಕೆ ಹೊರಟರು.

ಅವರುಗಳು ಯಾರೆಂದರೆ: ಶ್ರೀಗಳಾದ ಕೆ. ವೆಂಕಟಗಿರಿಶಾಸ್ತ್ರಿ, ಗುರುಮೂರ್ತಿಸೆಟ್ಟಿ, ಸುಬ್ರಹ್ಮಣ್ಯಸೆಟ್ಟಿ, ಆರ್. ವಿ ರಂಗಣ್ಣ, ಎಸ್. ವಿ. ಎಸ್ ಐಯ್ಯರ್, ಎಂ. ಶ್ರೀನಿವಾಸರಾವ್, ಕೆ. ನಂಜಪ್ಪ, ಮುನಿಸ್ವಾಮಿ

ಬಾವಿಯಲ್ಲಿ ಮಗು

ಬೆಂಗಳೂರು ೧೩

ಬಸವನಗುಡಿಯ ಒಂದು ಬಾವಿಯಲ್ಲಿ ಮೊನ್ನೆ ರಾತ್ರಿ ೧೦ ತಿಂಗಳ ಹೆಣ್ಣು ಕೂಸೊಂದು ಸಿಕ್ಕಿತು. ಪೋಲೀಸಿನವರು ಅದರ ಮಹಜರು ಮಾಡಿ, ವೈದ್ಯ ಪರೀಕ್ಷೆಗೆ ಕಳುಹಿದರು. ಮುಂದಿನ ತನಿಖೆಮಾಡುತ್ತಿರುವರು

ಮೈದಾಹಿಟ್ಟಿಗೆ ಅಪ್ಪಣೆ

ಮೈದಾಹಿಟ್ಟಿನಿಂದ ಸಾ (ಸೇವ್) ನ್ನು ತಯಾರುಮಾಡುವವರಿಗೆ ಹಿಟ್ಟನ್ನು ಮಾರಕೂಡದೆಂದು ಬೆಂಗಳೂರು ಜಿಲ್ಲೆಯ ಕಲೆಕ್ಟರು ಕೊಟ್ಟ ಅಂಗಡಿಗಳವರಿಗೆ ಆಜ್ಞೆ ಮಾಡಿದ್ದಾರೆ

ಕ್ಲೋಸ್ಪೇಟೆಯಲ್ಲಿ ಪ್ರವಾಹದ ಹಾವಳಿ

ನಲವತ್ತು ವರ್ಷಗಳಿಂದ ಇಲ್ಲದಷ್ಟು ಪ್ರವಾಹವು ಅರ್ಕಾವತಿ ನದಿಯಲ್ಲಿ ಬಂದುದರಿಂದ ಕ್ಲೋಸ್ಪೇಟೆಯಲ್ಲಿ ಅನೇಕ ಮನೆಗಳೂ, ಇತರ ಕಟ್ಟಡಗಳೂ, ಮಳಿಗೆಗಳೂ ಬಿದ್ದು ಲಕ್ಷಾಂತರ ರೂ. ಗಳ ನಷ್ಟವಾಗಿದೆ. ನದಿಯ ಪ್ರವಾಹದಲ್ಲಿ ಒಂದು ಬೈಸಿಕಲ್ ಸಹ ಕೊಚ್ಚಿಕೊಂಡು ಬಂದಿದೆ. ಸೇತುವೆ ಮೇಲೆ ಆರು ಅಡಿ ನೀರು ಹರಿಯಿತು. ಅನೇಕ ಮನೆಗಳಿಗೆ ನೀರು ನುಗ್ಗಿತ್ತು.

ಸ್ಪೇನಿನ ಪ್ರಶಾಂತತೆ

ಎಲ್ಲೆಲ್ಲೂ ಅಶಾಂತಿಯು ತುಂಬಿ ತುಳುಕುತ್ತಿರುವ ಈ ಕಾಲದಲ್ಲಿ, ಯೂರೋಪಿನಲ್ಲೆಲ್ಲಾ ಸ್ಪೇನು ನಾಗರೀಕತೆಯ ಒಂದು ಪ್ರಶಾಂತ ರಕ್ಷಣಾ ಸ್ಥಾನವಾಗಿದೆ. ಇದಕ್ಕೆ ಯಾವ ಭೀತಿಯೂ ಇಲ್ಲವೆಂದು ಜನರಲ್ ಫ್ರಾಂಕೊರವರು ಹೇಳಿದ್ದಾರೆ

ಇಂಗ್ಲೆಂಡಿನಲ್ಲಿ ಹೆಚ್ಚು ಮಕ್ಕಳ ಜನನ

ಈಚೆಗೆ ಇಂಗ್ಲೆಂಡಿನಲ್ಲಿ ಮಕ್ಕಳ ಜನನ ಸಂಖ್ಯೆ ಹೆಚ್ಚಾಗಿದೆ. ಕಳೆದ ವರ್ಷಕ್ಕಿಂತ ಹೆಚ್ಚಿದೆ. ಯುದ್ಧಕ್ಕೆ ಮುಂಚೆ ಇದ್ದುದಕ್ಕಿಂತ ಅಧಿಕವಾಗಿದೆ. ಹಿಂದಿನ ಯುದ್ಧದಲ್ಲಿ ಇದಕ್ಕೆ ವ್ಯತಿರಿಕ್ತವಾಗಿತ್ತು.

ಮದರಾಸಿನಲ್ಲಿ ಗಾಬರಿ ಯೇನೂ ಇಲ್ಲ

ಶತ್ರುಧಾಳಿಯನ್ನು ನಂಬಲೇ ಇಲ್ಲ

ಮದರಾಸಿನ ಪೌರಸಭಾಧ್ಯಕ್ಷರಾಗಿದ್ದ ರಾ|| ಬ|| ಶಿವರಾಜ್‌ರವರು ದೆಹಲಿಗೆ ಪ್ರಯಾಣ ಮಾಡುತ್ತಾ, ದಾರಿಯಲ್ಲಿ ಬೊಂಬಾಯಿನಲ್ಲಿ ಹೀಗೆ ತಿಳಿಸಿದ್ದಾರೆ:—

ಸೋಮವಾರ ರಾತ್ರಿ ಜಪಾನಿ ವಿಮಾನವು ಬಂದಿದ್ದುದು ಮದರಾಸಿನ ಅನೇಕ ಜನರಿಗೆ ಗೊತ್ತೇ ಇರಲಿಲ್ಲ. ಮಾರನೇ ದಿನ ಹೇಳಿದರೆ ನಂಬಲೂ ಇಲ್ಲ. ಪಟ್ಟಣದಲ್ಲಿ ಯಾವ ಗಾಬರಿಯೂ ಇಲ್ಲ. ಫಿರಂಗಿಯಿಂದ ನನ್ನ ಮಾತ್ರ ನನ್ನ ಕಿವಿಗೆ ಬಿತ್ತು. ಅಭ್ಯಾಸಕ್ಕಾಗಿ ಮಾಡಿದುದೆಂದು ನಾನು ತಿಳಿದೆ. ಸ್ಫೋಟನ ಸಹ ಕೆಲವರಿಗೆ ಕೇಳಿಸಲೇ ಇಲ್ಲ. ಊರಿನಿಂದ ಜನರು ಗಾಬರಿಗೊಂಡು ವಿಶೇಷವಾಗಿ ಓಡುತ್ತಿಲ್ಲ.

ಏನೇ ಆಗಲಿ ರಷ್ಯದೊಡನೆ ಶಾಂತಿ

ಗೋಬಲ್ಸ್, ಹಿಮ್ಲರ್ ಪ್ರಯತ್ನ

ಜರ್ಮನಿಯ ಮೇಲೆ ಮಿತ್ರ ವಿಮಾನ ಧಾಳಿಯು ಬಲವಾಗುತ್ತಿರುವುದನ್ನೂ ಇದರಿಂದ ಅಲ್ಲಿನ ಪ್ರಜೆಗಳಿಗೆ ಬಹಳ ಅಸಮಾಧಾನವುಂಟಾಗಿದೆ. ಹಿಟ್ಲರನ ಮೇಲೆ ಅವರು ರೇಗುತ್ತಿದ್ದಾರೆ. ಆದ್ದರಿಂದ ರಷ್ಯದ ಮೇಲೆ ನಡೆಸುವ ಧಾಳಿಯು ಹುಚ್ಚೆಂಬುದನ್ನು ಹಿಟ್ಲರನಿಗೆ ಬಿಡಿಸಿ, ರಷ್ಯದೊಡನೆ ಯಾವ ಷರತ್ತಿನಮೇಲಾದರೂ ಸಂಧಾನ ಮಾಡಿ ಒಪ್ಪಂದಕ್ಕೆ ಬರಲು ಹೆರ್ ಹಿಮ್ಲರ್ ಮತ್ತು ಡಾ|| ಗೋಬೆಲ್ಸರು ಪ್ರಯತ್ನಿಸುತ್ತಿರುವರೆಂದು ವರದಿಯಾಗಿದೆ.

ಕಡಿಮೆಯಾಗಿ ಉಳಿಯುವ ಜರ್ಮನಿಯ ಶಕ್ತಿಯನ್ನು ಇಂಗ್ಲೆಂಡಿನ ಮೇಲೆ ಪ್ರಯೋಗಿಸಲು ಅವರು ಉದ್ದೇಶಹೊಂದಿರುತ್ತಾರೆ. ಇಂಗ್ಲೆಂಡಿನ ಮೇಲೆ ಬೀಳದಿದ್ದರೆ ಜರ್ಮನ್ ಸೈನ್ಯಗಳಲ್ಲಿ ಸೈನಿಕ ಪತನವುಂಟಾಗಬಹುದೆಂದು ಭೀತಿಯಿದೆ.

ಫಿನ್ಲೆಂಡಿನ ಶಾಂತಿ ಪ್ರಯ...

ಸ್ವೀಡನ್ನಿನ ಸೋಷಲ್ ಡೆಮೋಕ್ರಾಟಿಕ್ ಪಂಗಡದವರೊಡನೆ ಸಮಾಲೋಚನೆ ನಡೆಸಲು ಫಿನ್ಲೆಂಡಿನ ಮಂತ್ರಿಗಳು ... ಕ್ಹೋಂಗೆ ಬರಲಿದ್ದಾರೆ. ಶಾಂತಿ ಸಂ... ನದ ಪ್ರಯತ್ನವನ್ನು ಮಾಡಲು ಎಷ್ಟು ... ವಕಾಶವಿದೆಯೆಂಬುದನ್ನು ತಿಳಿಯಲು ... ಲೆಂಡ್ ಸರ್ಕಾರವು ಪ್ರಯತ್ನಿಸುತ್ತದೆ. ... ದೇ ಸಂದರ್ಭದಲ್ಲಿ 'ಫಿನ್ಲೆಂಡಿನ ಅನಾ... ಣ' ಎಂಬ ಪುಸ್ತಕವು ಪ್ರಕಟವಾಗಿದೆ. ... ಜಯಿಸುವುದಾಗಿ ಹಿಟ್ಲರನ ಭರ...

ಜರ್ಮನರು ತಮ್ಮ ಧೈರ್ಯಸ್ಥೈರ್ಯ... ಗಳನ್ನು ಕಾಪಾಡಿಕೊಳ್ಳುತ್ತಿದ್ದಾದರೆ ... ದ್ಧದಲ್ಲಿ ಅವರಿಗೆ ಎಂದಿಗೂ ಸೋಲಾಗ... ದಿಲ್ಲ-ಎಂದು ಹಿಟ್ಲರನು ನಾಜಿ ಪಂಗ... ಸಭೆಯಲ್ಲಿ ಹೇಳಿರುವನು. ಬರೀ ... ಸಂಗ್ರಹವೇ ಅಲ್ಲದೆ ಇಚ್ಛಾಶಕ್ತಿಯೂ ... ರಮನಸ್ಸೂ ಅವಶ್ಯಗತ್ಯ. ಬರೀ ಶಸ್ತ್ರ... ಗೇನೂ ಬೆಲೆಯಿಲ್ಲ. ಮಾನವ ಪ್ರಯ... ಹಿನ್ನೆಲೆಯು ಬೇಕು. ಎಲ್ಲೆಲ್ಲೂ ಹೊ... ಡಿ ನಮ್ಮ ಗುರಿ ಮುಟ್ಟುವವರೆಗೆ ವಿಶ್ರಾಂತಿ... ಯನ್ನು ಪಡೆಯೆವು – ಎಂದು ಹಿಟ್ಲ... ತಿಳಿಸಿದನು.

ಗೆಸ್ಟಪೋ ನಾಯಕನಾದ ಹೆರ್ ಹಿ... ರನು ಹೇಳಿದ್ದೇನೆಂದರೆ — ಜರ್ಮ... ಸೋಲಿನ ಭಾವನೆಗೆ ಸ್ಥಾನವಿಲ್ಲ. ಸೋ... ನ ಭಾವನೆಯನ್ನು ಹರಡುವವರನ್ನು ... ಧ್ವಂಸಮಾಡುತ್ತೇವೆ.

ಕಾಶ್ಮೀರ್ ಆಯುರ್ವೇದಿ... ವರ್ಕ್ಸ್, ಅಮೃತಸರ

ಇವರ ಅತ್ಯುತ್ತಮವಾದ 'ದಿಲಾ...

ಹಿಂಗು

ತೊಲ 4 ಆಣೆ, 1 ರೂ. ಗೆ 5 ...

ದೊರೆಯುವ ಸ್ಥಳ:—

ಗೋಪಾಲ್ ಅಂಡ್ ಕ...

ಚಿಕ್ಕಪೇಟೆ, ಬೆಂಗಳೂರು ಸಿ...

ಬ್ರಾಂಚು :—

ತ್ಯಾಗರಾಜ ರೋಡು, ಮೈಸೂ...

ಏಜಂಟರು ಬೇಕ...

ಮೈಸೂರು ನಗರದಲ್ಲಿ ಸಾ... ಪತ್ರಿಕೆಗೆ ಅನುಭವಸ್ಥ... ಮತ್ತು ಡಿಪಾಜಿಟ್ ಕೊಡ... ಏಜಂಟರು ಬೇಕಾಗಿದೆ.

ಕೂಡಲೇ ನಮ್ಮ ಆಫೀ... ಬಂದು ಹೆಚ್ಚಿನ ವಿವರಗ... ತಿಳಿಯಬಹುದು.

ವ್ಯವಸ್ಥಾ...

ನ್ಯೂ ಅಪೇರಾ ಟಾಕೀಸ್

ತಾ|| ೧೪-೧೦-೪೩ ರಿಂದ

ಶಾರದ

ಅಮೋಘವಾದ 3 ನೇ ವಾರ

ಮುಂದಿನ ವಿನೋದ:

ಜೈರಾಜ್, ಲಲಿತಾ ಪವಾರ್, ಜಗದೀಶ್ ನಟಿಸಿರುವ "ಕೀರ್ತಿ"

ಶ್ರೀಯುತರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಬಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ. – ಚಿಲ್ಲರೆಯಾಗಿ ಮುಂತಾದ ಸಕ್ಕರೆ, ಬೆಲ್ಲ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

Edited, printed and published by A. R. Nagarajan, at the Sadhvi Press, D.Subbiah Road, Mysore.

|| ವಂದೇ ಮಾತರಂ ||



—: ರಿಜಿಸ್ಟರ್ಡ್ :—

ಮಂಗಳಸೂರು ... ಗಳನ್ನು ಕೊಳ್ಳುವುದರಿಂದ ನಿಮ್ಮ ದುಡ್ಡು ನಿಮ್ಮ ದೇಶದಲ್ಲೇ ಉಳಿಯುತ್ತದೆ.

ಸಂಪುಟ ೨]   ಶನಿವಾರ ೧೬--೧೦--೪೩   [ಸಂಚಿಕೆ ೭೬

ಪ್ರಜಾಪ್ರತಿನಿಧಿ ಸಭೆ

ಒಳದೇಶದ ಓಡಾಟದ ನಿರ್ಬಂಧ ತೆಗೆಯಬೇಕು

ಪ್ರಜಾಪ್ರತಿನಿಧಿ ಸಭೆಯ ೯ ನೇ ದಿನದ ಕಾರ್ಯಕಲಾಪಗಳು ಈ ದಿನ ೧೨ ಘಂಟೆಗೆ ದಿವಾನರ ಅಧ್ಯಕ್ಷತೆಯಲ್ಲಿ ಆರಂಭವಾದುವು.

ಪ್ರಶ್ನೋತ್ತರಗಳು

ಬೆಂಗಳೂರಿನಲ್ಲಿ ಶ್ರೀ ಜಯಚಾಮರಾಜೇಂದ್ರ ಟೆಕ್ನಲಾಜಿಕಲ್ ಇನ್ಸ್ಟಿಟ್ಯೂಟ್" ೧೯೪೩ ನೇ ಆಗಸ್ಟ್ ೩ ರಲ್ಲಿ ಪ್ರಾರಂಭವಾಯಿತು ಮತ್ತು ಅದಕ್ಕೆ ೫ ಲಕ್ಷ ರೂ ವಿನಿಯೋಗಿಸಲಾಗಿದೆ. ವಿವಿಧ ಶಿಕ್ಷಣ ಶಾಖೆಗಳಿಗೆ ಈ ವರ್ಷ ಒಟ್ಟು ೧೩೯ ಬ್ರಾಹ್ಮಣ ವಿದ್ಯಾರ್ಥಿಗಳನ್ನು ಮತ್ತು ೬೭ ಬ್ರಾಹ್ಮಣೇತರನ್ನು ಸೇರಿಸಲಾಗಿದೆಯೆಂದು ಶ್ರೀ ಹೆಚ್ ಕೊಣ್ಣಯ್ಯನವರ ಪ್ರಶ್ನೆಗೆ, ಶ್ರೇಷ್ಠ ಕಾರ್ಯದರ್ಶಿಗಳು ಉತ್ತರವಿತ್ತರು.

ಪ್ರ—ಬ್ರಾಹ್ಮಣೇತರು ಕಮ್ಮಿಬಂದಿರುವುದು, ಹೆಚ್ಚಾದ ವಿದ್ಯಾಯೋಗ್ಯತೆ ಇಟ್ಟಿರುವುದೇ ಕಾರಣವಲ್ಲವೇ ಮತ್ತು ಅದನ್ನು ಕಮ್ಮಿಮಾಡಲಾಗುತ್ತದೆಯೇ ?

ಉ—ಇಲ್ಲ. ವಿದ್ಯಾಯೋಗ್ಯತೆಯನ್ನು ಕಮ್ಮಿಮಾಡುವುದಕ್ಕೆ ಆಗುವುದಿಲ್ಲ.

ಪ್ರ—ಶಿಕ್ಷಣವನ್ನು ಕೊಡುವುದು ಇಂಗ್ಲಿಷಿನಲ್ಲಿಯೋ, ಮಾತೃಭಾಷೆಯಲ್ಲೋ ?

ಉ—ಇಂಗ್ಲೀಷಿನಲ್ಲಿ

ಪ್ರ—ಎಸ್.ಎಸ್.ಎಲ್.ಸಿ ತರಗತಿಯು ಕನ್ನಡದಲ್ಲಿ ಶಿಕ್ಷಣಕೊಡುವುದರಿಂದ ಇಲ್ಲೂ ಕನ್ನಡದಲ್ಲಿ ಶಿಕ್ಷಣ ಕೊಡಲು ಏರ್ಪಾಡುಮಾಡಲಾಗುವುದೆ ?

ಪ್ರ—ಆದರಿಂದ ಈ ಪ್ರಶ್ನೆ ಏಳುವುದಿಲ್ಲ

ಪ್ರ—ಚುನಾವಣೆ ಸಮಿತಿಗೆ ಆದಿಕರ್ನಾಟಕರ ಪರವಾಗಿ ಸದಸ್ಯರನ್ನು ನೇಮಿಸಲಾಗುವುದೆ ?

ಉ—ಕೋಮುವಾರು ಪ್ರಕಾರ ಸದಸ್ಯರನ್ನು ನೇಮಿಸಲಾಗುವುದಿಲ್ಲ

ಶ್ರೀ ಚಿಕ್ಕಲಿಂಗಯ್ಯ : ಆಕ್ಯುಪೇಷನಲ್ ಎಂದರೆ ನಿಮ್ಮ ಅರ್ಥವೇನು?

ಉ—ಡಿಕ್ಷನರಿಯನ್ನು ನೋಡಿ.

ದಿವಾನರು—ನೀವು ಅನಾವಶ್ಯಕವಾದ ಪ್ರಶ್ನೆಗಳನ್ನು ಹಾಕುತ್ತಿದ್ದೀರಿ

ಶ್ರೀ ಭೂಮಾಲಿಂ ಚಂದ್ರಶೇಖರಯ್ಯನವರು : ಚಮ್ಮಾರನ ಮತ್ತು ಬೂಟ್ಸ್ ಸೂಟ್ಸ್ ತಯಾರಿಸುವರ ಶಾಖೆಗೆ ಎಸ್.ಎಸ್.ಎಲ್.ಸಿ ವಿದ್ಯಾಯೋಗ್ಯತೆಯು ಹೆಚ್ಚಾಗಿರುವುದರಿಂದ, ಕಮ್ಮಿ ಮಾಡಲಾಗುವುದೆ ?

ಉ—ಸಾಧ್ಯವಿಲ್ಲ.

ಶ್ರೀ ಅಪ್ಪಾದೊರೆಮೊದಲಿಯಾರ್ ಉತ್ತರ ಕೊಡುತ್ತಾ, ಈ ಆಕ್ಯುಪೇಷನಲ್ ಇನ್ಸ್ಟಿಟ್ಯೂಟ್ ವಿಚಾರವಾಗಿ ಪ್ರಕಟವಾಗಿದ್ದ ಪ್ರಕಟಣೆ, ಜನಗಳಿಗೆ ಇದರ ಪ್ರಾಮುಖ್ಯ ವಿಚಾರವಾಗಿ ತಿಳಿಯದೆ ಇದ್ದುದರಿಂದ ಬ್ರಾಹ್ಮಣೇತರ ಸಂಖ್ಯೆ ಕಡಿಮೆಯಾಗಿರಬಹುದು. ಇನ್ನುಮುಂದೆಯಾದರೂ ಹೆಚ್ಚಿನ ಸಂಖ್ಯೆಬಂದರೆ ಪರಿಶೀಲಿಸಲಾಗುವುದೆಂದರು.

ಕಾಗದ ತಯಾರಿಕೆ

ಶ್ರೀ ಎಂ ಸೀತಾರಾಮಶಾಸ್ತ್ರಿಗಳ ಪ್ರಶ್ನೆಗೆ, ಮೈಸೂರು ಕಾಗದ ಕಾರ್ಖಾನೆಯಲ್ಲಿ ದಿನಕ್ಕೆ ೩೦೦ ಟನ್ ಕಾಗದ ತಯಾರಾಗುತ್ತದೆ ಮತ್ತು ಕೆಲವು ಬೇಸಿಕ್ ತರಗತಿಗಳ ಗುನವು ತಯಾರಾದರೂ, ಪ್ರತಿಯೊಂದು ಕಾರ್ಖಾನೆಯಲ್ಲಿಯೂ ಅವರದೇ ಒಂದು ವಿಶೇಷ ತರಗತಿಯ ಕಾಗದವು ತಯಾರಾಗುತ್ತದೆ ಅದಕ್ಕೆ ತಗಲುವ ವೆಚ್ಚ, ಬೆಲೆಗಳು ವ್ಯತ್ಯಾಸವಾಗುವುದರಿಂದ, ಕಾಗದದ ಬೆಲೆಯ ಮೇಲಿನ ಕಂಟ್ರೋಲು ಮುದ್ರಣದ ಮತ್ತು ಬರೆಯುವ ಕಾಗದಗಳಿಗೆ ಮಾತ್ರವೇ ಅನ್ವಯಿಸುತ್ತದೆ ಇಂಡಿಯ ಸರ್ಕಾರಕ್ಕೆ ೩ ಸಾವಿರ ಟನ್ ಕಾಗದವನ್ನು ಒಪ್ಪಿಸಲಾಗುತ್ತಿದೆ ಜನಗಳ ಉಪಯೋಗಕ್ಕಾಗಿ ೧,೭೦೦ ಟನ್ನುಗಳನ್ನೂ, ಸರ್ಕಾರಕ್ಕೆ ೪೦೦ ಟನ್ನುಗಳನ್ನೂ ಕೊಡಲಾಗುತ್ತಿದೆ ಎಂದು ಸರ್ಕಾರದವರು ಉತ್ತರವಿತ್ತರು.

ಉಪ ಪ್ರಶ್ನೆಗೆ, ಜನಗಳಿಗಾಗಿ ಕೊಡುತ್ತಿರುವ ೧೨೦೦ ಟನ್ನುಗಳ ಕಾಗದ, ಹೊರಕ್ಕೆ ಸರಬರಾಜು ಮಾಡುತ್ತಿಲ್ಲವೆಂದೂ, ಮೈಸೂರಿಗೆ ಮಾತ್ರ ಕೊಡಲಾಗುತ್ತಿದೆಯೆಂದೂ, ಕಂಟ್ರೋಲಿಲ್ಲದ ಕಾಗದ ಮಾತ್ರಹೊರಕ್ಕೆ ಹೋಗುತ್ತಿದೆಯೆಂದೂ, ಉತ್ತರ ಕೊಟ್ಟರು

"ಹಿಂದೂ" ಪತ್ರಿಕೆಗೆ ೬೭ ಟನ್ ಮತ್ತು "ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕೆಗೆ ೭೫ ಟನ್ನುಗಳ ಕಾಗದವನ್ನು ಸರಬರಾಜು ಮಾಡಲಾಯಿತೆಂದೂ, ಮೈಸೂರು ಸಂಸ್ಥಾನದ ೭೩ ಪತ್ರಿಕೆಗಳಿಗೆ ಸರಾಸರಿ ತಿಂಗಳು ೧ ಕ್ಕೆ ಒಟ್ಟು ೭೫ ಟನ್ನುಗಳನ್ನು ಸರಬರಾಜು ಮಾಡಲಾಗುತ್ತಿದೆಯೆಂದೂ ತಿಳಿಸಲಾಯಿತು.

ಎಲ್ಲಾ ತರದ ಕಾಗದ ಕಂಟ್ರೋಲಿಗೆ ತರಲು ಸರ್ಕಾರದವರು ಆಲೋಚಿಸುತ್ತಿರುವರೆಂದೂ, ೧೯ ನೇ ತಾರೀಖು ನಡೆಯಲಿರುವ ಸಮ್ಮೇಳನದಲ್ಲಿ ಈ ವಿಚಾರವನ್ನು ಪರಿಶೀಲಿಸಲಾಗುವುದೆಂದೂ ಉಪ ಪ್ರಶ್ನೆಗೆ ಶ್ರೀ॥ ನರೋನ್ಹಾರವರು ಉತ್ತರ ಕೊಟ್ಟರು.

ನಿರ್ಣಯಗಳು

ನಂತರ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಒಳದೇಶದ ನಿರ್ಬಂಧ ಹೋಗಬೇಕು

ಸಂಸ್ಥಾನದಿಂದ ಹೊರಗೆ ಆಹಾರ ಪದಾರ್ಥಗಳು ಹೋಗದಂತೆ ತಡೆದು, ಒಳ ದೇಶದಲ್ಲಿನ ಆಹಾರ ಪದಾರ್ಥಗಳ ಮೇಲಿನ ಧಾರಣೆ ಮತ್ತು ಓಡಾಟದ ನಿರ್ಬಂಧಗಳನ್ನು ತೆಗೆಯಬೇಕೆಂದೂ, ವಸ್ತ್ರ ಬೆಲ್ಲ ಮತ್ತು ನೆಲಗಡಲೆ ಮೇಲಿನ ಕಂಟ್ರೋಲ್ ನಿರ್ಬಂಧ ಕ್ರಮಗಳನ್ನು ತೆಗೆದುಹಾಕಬೇಕೆಂಬ ನಿರ್ಣಯವನ್ನೂ ಹೊಸ್ಕೋಟೆ ತಾಲ್ಲೂಕು ಶ್ರೀ॥ ದೊಡ್ಡಮನೆ ಗೌಡರು ಶಂಕರಪ್ಪನವರು ಮಂಡಿಸಿದರು.

ಸರ್ಕಾರದ ಉತ್ತರ

ಸಿವಿಲ್ ಸಪ್ಲೈ ಡೈರೆಕ್ಟರವರು ಉತ್ತರ ಕೊಡುತ್ತಾ, ಆಗಸ್ಟ್ ತಿಂಗಳಿನಿಂದ ಧಾನ್ಯ...ಯ ಮೇಲೆ ಇದ್ದ ಕಂಟ್ರೋಲು ತೆಗೆಯಲಾಗಿದೆ ... ಕಂಟ್ರೋಲಿನಿಂದ, ಈ ವಿಷಯ ... ಇನ್ನೂ ಪರಿಶೀಲಿಸಿ ಕಂಟ್ರೋಲು ... ತೆಂದೂ. ಕಂಟ್ರೋಲು ಇಲ್ಲದಿದ್ದರೆ ಗಡಿಯಂದ ದೇಶಕ್ಕೆ ಆಹಾರ ಪದಾರ್ಥಗಳು ಹೋಗಿಬಿಡುತ್ತವೆ ಧಾರವಾಡ ಜಿಲ್ಲೆಗಳಲ್ಲಿ ಕಣ ಸೇರು ಹಣ್ಣು ೪ ರೂಪಾಯಿ ಇದ್ದು ಒಂದು ವಾರದೊಳಗೆ ೧೧ ರೂಪಾಯಿಗಳಿಗೆ ನಿಂದ್ದರಿಂದ ಅದರ ಮೇಲೆ ಕಂಟ್ರೋಲು ನಿರ್ಬಂಧ ತರಲಾಯಿತು. ಹೈದರಾಬಾದಿಗೆ ೪೫ ಸಾವಿರ ಮಣ ಬೆಲ್ಲವನ್ನು ಕಳುಹಿಸಿ, ೧೫ ಸಾವಿರ ಪಲ್ಲ ತೊಗರಿ ಬೇಳೆಯನ್ನು ತರಿಸಲು ಏರ್ಪಾಡು ಮಾಡಿದ್ದರಿಂದ ಅದರ ಮೇಲೂ ಕಂಟ್ರೋಲು ತರಲಾಯಿತು ಎಲ್ಲಿ ಕಂಟ್ರೋಲು ನಿರ್ಬಂಧ ಬೇಕೋ ಅಲ್ಲಿ ಮಾತ್ರ ಹಾಕಲಾಗಿದೆ ತೆಗೆದುಬಿಟ್ಟರೆ ಅನಾಹುತಗಳಾಗುವುದು ಖಂಡಿತವೆಂದು ತಿಳಿಸಿದರು.

ಬಲಾತ್ಕಾರ ವಿದ್ಯಾಭ್ಯಾಸ

"ದೇಶದ ಎಲ್ಲಾ ತಾಲ್ಲೂಕುಗಳಲ್ಲಿಯೂ ಮುಖ್ಯವಾಗಿ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ, ಬಲಾತ್ಕಾರ ವಿದ್ಯಾಭ್ಯಾಸವನ್ನು ಏರ್ಪಡಿಸಬೇಕು. ಆದುದರಿಂದ ವಿದ್ಯಾಭ್ಯಾಸದ ಖರ್ಚನ್ನು ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳ ಉಪಾಧ್ಯಾಯರುಗಳ ಸಂಬಳಗಳನ್ನು ಸಾಧ್ಯವಾದಷ್ಟು ಹೆಚ್ಚಿಸಬೇಕೆಂಬ ನಿರ್ಣಯ' ವನ್ನು ಕೃಷ್ಣರಾಜಪೇಟೆ ತಾ॥ ಶ್ರೀ ಕೆ. ಎಸ್. ಸಾಬ್ಬೇಗೌಡರು (ಕಾಂಗ್ರೆಸ್) ಮಂಡಿಸಿದರು.

ಕಾಂಗ್ರೆಸ್ ಪಕ್ಷದವರಾದರೂ, ಆಹಾರ ಮತ್ತು ರಾಜಕೀಯ ವಿಷಯಗಳನ್ನು ತಿಳಿಯಬೇಕಾದರೆ ವಿದ್ಯಾಭ್ಯಾಸ ಮುಖ್ಯವಾದ್ದರಿಂದ ಈ ನಿರ್ಣಯವನ್ನು ಸಭೆಯ ಮುಂದಿಡಬೇಕಾಯಿತೆಂದು ಅವರು ತಿಳಿಸಿದರು.

ಸಚಿವರ ಭರವಸೆಯ ಮೇರೆ ನಿರ್ಣಯವನ್ನು ವಾಪಸು ತೆಗೆದು ಕೊಂಡರು.

ನಾರಕ್ಕೆ ಸಾವಿರ ಮರಣ

ಇಂಡಿಯಾ ಸೆಕ್ರೆಟರಿಯವರಾದ ಮಿ॥ ಎಲ್. ಎಸ್. ಅಮೆರಿಯವರು ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ, ಬಂಗಾಳದಲ್ಲಿ ಪ್ರತಿ ವಾರವೂ ಸಾವಿರಕ್ಕಿಂತ ಹೆಚ್ಚು ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವರೆಂದು ಹೇಳಿದ್ದಾರೆ.

ಇಟಲಿ ಯುದ್ಧ ಘೋಷಿಸಿತು

ಜರ್ಮನಿಯ ಮೇಲೆ ಇಟಲಿ ಯುದ್ಧ ಹೂಡಿರುವುದಾಗಿ ಮಾರ್ಷಲ್ ಬಡೊಗ್ಲಿಯೋರವರು ಘೋಷಣೆ ಹೊರಡಿಸಿದ್ದಾರೆ ಇಂಗ್ಲೆಂಡ್ ಅಮೆರಿಕ ರಷ್ಯಾ ದೇಶಗಳು ಇಟಲಿಯನ್ನು ತಮ್ಮ ಸಮಾನ ಸಹೋದ್ಯೋಗಿಯಾಗಿ ಅಂಗೀಕರಿಸಿವೆ.

ಪ್ರಭುತ್ವ ಸುದ್ದಿ

... ... ನವರಾತ್ರಿ ನೀಸನಿಂಗ್ ಸೆ... ... ... ನೇ ದಿ... ... ... ಕಚೇರಿಗಳು, ... ಕೊಡಲಾಗಿದೆ. ... ನೇ ತಾರೀಖು ... ರಜಾ ಕೊಡಲಾಗಿದೆ

೧೩ ಸಾವಿರ ರೂ. ಗಳ ಕಳವು

ಮೈಸೂರು, ೧೬

ಮಂಡಿ ಮೊಹಲ್ಲಾದಲ್ಲಿರುವ ಶ್ರೀ ... ಬೀಡಿ ಫ್ಯಾಕ್ಟರಿಯಲ್ಲಿ ಮೊನ್ನೆ ದಿನ ರಾತ್ರಿ ಯಾರೋ ಒಳಕ್ಕೆ ನುಗ್ಗಿ, ಕಬ್ಬಿಣದ ಪೆಟ್ಟಿಗೆಯಲ್ಲಿದ್ದ ೧೩ ಸಾವಿರ ರೂ. ಗಳನ್ನು ... ಅಪಹರಿಸಿರುವರೆಂದು ಪೋಲೀಸರಿಗೆ ... ಯಾಗಿದೆ.

ಉದಾರ ದಾನ

ಮೈಸೂರಿನಲ್ಲಿರುವ ಸಾಹುಕಾರ್ ಶ್ರೀ ಕಂಠೀರವಪ್ಪಣ್ಣನವರು, ಬ್ರಾಹ್ಮಣ ಧರ್ಮ ಸಹಾಯ ಸಭೆಗೆ ಮೂಲಧನಕ್ಕಾಗಿ ೫೦ ರೂ. ಉದಾರವಾಗಿ ದಯಪಾಲಿಸಿರುವರು

ಪಟ್ಟಾಭಿಷೇಕ ದಿನಾಚರಣೆ

ಧರ್ಮ ಪ್ರವರ್ತಕ ಶ್ರೀ ಎ ಎಸ್. ರಂಗಸ್ವಾಮಿ ಅಯ್ಯಂಗಾರ್ಯರು, ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ರವರ ಪಟ್ಟಾಭಿಷೇಕ ಮಹೋತ್ಸವ ದಿನಾಚರಣೆಯನ್ನು ಮೊನ್ನೆ ದಿನ ತಮ್ಮ ಗೃಹದಲ್ಲಿ ವೈಭವದಿಂದ ನೆರವೇರಿಸಿದರು

ದಸರಾ ವಸ್ತುಪ್ರದರ್ಶನ ಬಹುಮಾನ ವಿನಿಯೋಗ

ಮೈಸೂರು ೧೫

ಮೈಸೂರು ದಸರಾ ವಸ್ತುಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭವು ಈ ದಿನ ಸಂಜೆ ದಿವಾನರಾದ ಪ್ರಧಾನ ಶಿರೋಮಣಿ ಎನ್ ಮಾಧವರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರದರ್ಶನ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಬಿ.ಜಿ ಅಪ್ಪಾದೊರೆ ಮೊದಲಿಯಾರ್ ರವರು ಸ್ವಾಗತ ಭಾಷಣಮಾಡಿ, ಈ ವರ್ಷದ ವಿಷಮಪರಿಸ್ಥಿತಿಯಲ್ಲೂ ಪ್ರದರ್ಶನವು ಉತ್ತಮ ರೀತಿಯಲ್ಲಿ ನಡೆಯಲು ಸಹಕರಿಸಿದ ಎಲ್ಲಾ ವಸ್ತುಪ್ರದರ್ಶನ ಕಾರರನ್ನೂ ಮತ್ತು ಅಧಿಕಾರ ವರ್ಗದವರನ್ನೂ ಅಭಿನಂದಿಸಿದರು. ಯುದ್ಧೋದ್ಯಮದ ಬಗ್ಗೆ ಪ್ರದರ್ಶಿಸಲ್ಪಟ್ಟಿರುವ ಪ್ರತಿಯೊಂದು ಭಾಗವನ್ನೂ ಆಕರ್ಷಣೀಯವಾಗಿಯೂ, ಬೋಧಕವಾಗಿಯೂ ಜನರ ಮನಸ್ಸಿಗೆ ಹಿಡಿಯುವಂತೆ ಮಾಡಿದೆ ಎಂಬುದಾಗಿ ಹೇಳಿದರು.

ಅನಂತರ ಅಧ್ಯಕ್ಷರು ಪ್ರದರ್ಶನಕಾರರಿಗೆ ಬಹುಮಾನಗಳನ್ನು ಹಂಚಿ, ಈ ಸಲದ ಪ್ರದರ್ಶನವು ಯಾವ ರೀತಿಯಲ್ಲಿಯೂ ಕಡಿಮೆಯಾಗಿಲ್ಲದಿರುವುದು ಸಂತೋಷ ಸಂಗತಿಯಾಗಿದೆ ಯುದ್ಧೋದ್ಯಮ, ಗ್ರಾಮೋದ್ಯೋಗ ಮತ್ತು ಇತರ ಕೈಗಾರಿಕೆಗಳು ಚೆನ್ನಾಗಿ ಪ್ರದರ್ಶಿಸಲ್ಪಟ್ಟಿವೆಯೆಂದು ಹೇಳಿದರು

ಕಳೆದ ೧೫ ದಿನಗಳಿಂದ ನಡೆಯುತ್ತಿದ್ದ ದಸರಾ ವಸ್ತುಪ್ರದರ್ಶನವು ಇಂದಿಗೆ ಮುಕ್ತಾಯವಾಯಿತು

ಗಾಂಧಿಜಿ ಮೆರವಣಿಗೆ ನಡೆಸಿದ್ದಕ್ಕೆ ಮೊಕದ್ದಮೆ

ಮೈಸೂರು, ೧೬

ಗಾಂಧೀಜಿ ಜಯಂತಿ ಉತ್ಸವ ಸಂಬಂಧದಲ್ಲಿ ಲೈಸೆನ್ಸ್ ಇಲ್ಲದೆ ಮೆರವಣಿಗೆಯನ್ನು ನಡೆಸಿದರೆಂಬ ಆಪಾದನೆಯ ಮೇಲೆ ಶ್ರೀ ಹೆಚ್. ವೈ. ಶಾರದಾಪ್ರಸಾದ್ ಮತ್ತು ಇತರ ೫ ವಿದ್ಯಾರ್ಥಿಗಳ ಮೇಲೆ ಪೋಲೀಸರು ದ್ವಿತೀಯ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರೆ

ಪ್ರಜಾಪ್ರತಿನಿಧಿ ಸಭೆ

ಗೋವಧೆ ನಿಲ್ಲಿಸಬೇಕು; ಒಂದೇ ನಿಧವಾದ ಧಾರಣೆ ಇರಬೇಕು.

ಮೈಸೂರು ೧೫

ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ದಿನ ಪ್ರೋಕ್ಷೆ ನಡೆಯುತ್ತಿರುವ ಆಹಾರ ಪದಾರ್ಥಗಳನ್ನು ತರಿಸಬಾರದು ಒಂದೇ ಧಾರಣೆ ಇರಬೇಕೆಂದು ಮತ್ತು ಗೋವಧೆ ನಿಲ್ಲಿಸಬೇಕೆಂಬ ನಿರ್ಣಯಗಳ ಮೇಲೆ ದೀರ್ಘ ಚರ್ಚೆ ನಡೆಯಿತು.

ಬಟ್ಟೆ ಸರಬರಾಯಿ

ಶ್ರೀ॥ ಕೆ. ಸೀಬಾಚಂದಪ್ಪನವರು ಸಂಸ್ಥಾನದ ಪ್ರಜೆಗಳಿಗೆ ಬಟ್ಟೆಗಳು ಸರಬರಾಯಿ ಆಗುವಂತೆ ತಕ್ಕ ಏರ್ಪಾಡು ಮಾಡಬೇಕೆಂದು ನಿರ್ಣಯವೊಂದನ್ನು ಸೂಚಿಸಿದರು.

ಸಿವಿಲ್ ಸಪ್ಲೈ ಡೈರೆಕ್ಟರಾದ ಶ್ರೀ॥ ನಾರಾಯಣರಾಯರು, ಭಾರತ ಸರ್ಕಾರದ ಏರ್ಪಾಡಿನ ಮೇಲೆ, ನಮ್ಮ ಸಂಸ್ಥಾನದಲ್ಲೂ ಸ್ಟ್ಯಾಂಡರ್ಡ್ ಬಟ್ಟೆಗಳ ಸರಬರಾಯಿ ಏರ್ಪಾಡು ಮಾಡಲಾಗಿದೆ. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಹೆಚ್ಚಾಗಿ ಡಿಪೋಗಳನ್ನು ತೆರೆದು ಬಟ್ಟೆಗಳನ್ನು ಮಾರಾಟ ಮಾಡಲಾಗುವುದೆಂದೂ, ಮುಂದಿನ ವರ್ಷಕ್ಕೆ ಬೇಕಾಗುವ ೧ ಕೋಟಿ ರೂ. ಬಟ್ಟೆಗಳನ್ನು ಕೊಳ್ಳಲು ಆರ್ಡರು ಮಾಡಲಾಗಿದೆಯೆಂದೂ, ಹಳ್ಳಿಗಳಲ್ಲೂ ಮತ್ತು ತಾಲ್ಲೂಕುಗಳಲ್ಲೂ ಮಾರಾಟದ ಏರ್ಪಾಡು ಮಾಡಲಾಗುವುದೆಂದೂ, ಈ ಬಟ್ಟೆಗಳು ಕೇವಲ ಜನರಿಗೆ ಸಿಕ್ಕಬೇಕೆಂಬುದೇ ಸರ್ಕಾರದ ಅಭಿಲಾಷೆಯೆಂದೂ ಉತ್ತರವಿತ್ತರು. ಈ ಭರವಸೆಯ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಒಂದೇ ವಿಧವಾದ ಧಾರಣೆಯಿರಬೇಕು

ಹತೋಟಿಗೆ ಒಳಪಟ್ಟಿರುವ ಆಹಾರ ಪದಾರ್ಥಗಳನ್ನು ನಮ್ಮ ಸಂಸ್ಥಾನದಿಂದ ಅಕ್ಕಪಕ್ಕದಲ್ಲಿರುವ ಇತರ ಬ್ರಿಟಿಷ್ ಪ್ರಾಂತ್ಯಗಳಿಗೆ ಸಾಗಿಸುವುದು ಅಪರಾಧವಾದರೂ ಸಹ, ಅವು ಹೊರಗೆ ಹೋಗುತ್ತಿವೆ. ನಮ್ಮ ದೇಶದಲ್ಲಿ ಹೊರಗಿನ ಪ್ರಾಂತ್ಯಗಳಿಗಿಂತಲೂ ಧರಗಳು ಕಡಿಮೆಯಾಗಿರುವುದರಿಂದಲೇ ಈ ಅನರ್ಥಗಳಿಗೆ ಕಾರಣವಾಗಿದೆ. ನಮ್ಮ ಸರ್ಕಾರದವರೂ ಮತ್ತು ಭಾರತ ಸರ್ಕಾರದವರೂ ಸಹಕರಿಸಿ ಒಂದೇ ವಿಧವಾದ ಧಾರಣೆ ನಿಗದಿ ಮಾಡಬೇಕೆಂದು ಶ್ರೀ॥ ಪಟೇಲ್ ಪುಟ್ಟೆ ಗೌಡರು ಒಂದು ನಿರ್ಣಯವನ್ನು ಮಂಡಿಸಿದರು.

ಸಿವಿಲ್ ಸಪ್ಲೈ ಡೈರೆಕ್ಟರವರು—ಕಳ್ಳತನದಿಂದ ಸಾಗಿಸುತ್ತಿರುವವನ್ನು ನಿಲ್ಲಿಸಲು ಸರ್ಕಾರದವರು ಉಗ್ರ ಕಾರ್ಯಕ್ರಮ ತೆಗೆದು ಕೊಳ್ಳುತ್ತಿರುವರೆಂದೂ, ಹೊರಗೆ ಇರುವ ಕೆಲವು ಹೆಚ್ಚು ಬೆಲೆಯನ್ನು ಸಂಸ್ಥಾನದಲ್ಲಿ ನಿಗದಿ ಮಾಡಿದರೆ ಜನರಿಗೆ ಬಹಳ ಕಷ್ಟವಾಗುತ್ತದೆಂದೂ, ಹೊರಗಿರುವ ಹೆಚ್ಚಿನ ಬೆಲೆಗೆ ಬೇರೆ ಕಾರಣಗಳಿವೆಯೆಂದೂ, ಸಾಧ್ಯವಾದ ಮಟ್ಟಿಗೆ ಉತ್ತಮ ಬೆಲೆಯನ್ನು ನಿರ್ಧರಿಸಲಾಗುತ್ತಿದೆಯೆಂದೂ ತಿಳಿಸಿದರು.

ಶ್ರೀ ಭಂಡಾರಿ ಪುಟ್ಟನಂಜಪ್ಪನವರು ಮಾತನಾಡುತ್ತಾ, ಸುಗ್ಗಿಯ ಕಾಲದಲ್ಲಿ ರೈತರಿಗೆ ಹೆಚ್ಚು ಧಾರಣೆಯನ್ನು ಕೊಡಬೇಕು. ಜಿಲ್ಲೆಯಿಂದ ಹೊರಕ್ಕೆ ಹೋಗುವುದನ್ನು ಸಂಪೂರ್ಣವಾಗಿ ನಿಲ್ಲಿಸಲು ಸಾಧ್ಯವಿಲ್ಲ. ಅದ್ದರಿಂದ ರೈತರಲ್ಲಿರುವ ಧಾನ್ಯಗಳಿಗೆ ಹೆಚ್ಚು ಬೆಲೆ ಕೊಡುವುದರಿಂದ ಹೊರಕ್ಕೆ ಹೋಗುವ ಧಾನ್ಯಗಳು ನಮ್ಮಲ್ಲಿಯೇ ಇರುವುವೆಂದು ತಿಳಿಸಿದರು.

ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು ಬೆಳೆಯುವವರ ಹಿತದ ದೃಷ್ಟಿಯಿಂದ ಬೆಲೆಯನ್ನು ಹೆಚ್ಚು ಮಾಡುವುದರಿಂದ ಕೊಳ್ಳುವ ಜನಗಳಿಗೆ ಕಷ್ಟವಾಗುವುದರಿಂದ, ಕಮ್ಮಿ ಬೆಲೆಗೆ ಆಹಾರ ಪದಾರ್ಥಗಳನ್ನು ಮಾರಬೇಕೆಂದೂ ಹೇಳಿ ನಿರ್ಣಯವನ್ನು ವಿರೋಧಿಸಿದರು.

ಶ್ರೀ ವೆಂಕಟಪ್ಪನವರು ಮಾತನಾಡುತ್ತಾ, ಹಳ್ಳಿಯವರಿಗೆ ಸರಿಯಾದ ಬೆಲೆ ದೊರೆಯದೆ ಇರುವುದರಿಂದ ಧಾನ್ಯಗಳು ಹೊರಕ್ಕೆ ಬರತಕ್ಕದ್ದಿಲ್ಲ. ಇದರಿಂದ ಆಹಾರ ಪರಿಸ್ಥಿತಿ ಒದಗಿದೆ. ಸುಗ್ಗಿಯ ಕಾಲದಲ್ಲಿ ರೈತರಿಗೆ ಹೆಚ್ಚು ಬೆಲೆಯನ್ನು ಕೊಡಬೇಕು.

ದಿವಾನರು ಮಾತನಾಡುತ್ತಾ, ಗುಟ್ಟಾಗಿ ಹೊರಕ್ಕೆ ಹೋಗುತ್ತಿರುವುದನ್ನು ನಿಲ್ಲಿಸುವುದು ಸರ್ಕಾರದವರ ಕರ್ತವ್ಯವಾದರೂ, ಅವರೊಂದಿಗೆ ಜನಗಳು ಸಹಕರಿಸಬೇಕು. ಅಕ್ಕಪಕ್ಕದ ಪ್ರದೇಶದ ಮತ್ತು ಸಂಸ್ಥಾನದ ಬೆಲೆ ಒಂದೇ ರೀತಿ ಇರಬೇಕೆಂಬುದು ಒಳ್ಳೆಯದು. ಆದರೆ ಅಯಾ ದೇಶದ ಪರಿಸ್ಥಿತಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು. ಅದ್ದರಿಂದ ಒಂದೇ ಬೆಲೆಯನ್ನು ಎಲ್ಲಾ ಪ್ರದೇಶಗಳಲ್ಲೂ ನಿಗದಿ ಮಾಡತಕ್ಕದ್ದಾಗುವುದಿಲ್ಲ. ಈ ನಿರ್ಣಯದ ಚರ್ಚೆಯಲ್ಲಿ ಎರಡು ತಕ್ಕ ಬಂದಿವೆ. ಒಂದು ರೈತರ ಮತ್ತು ಜನಗಳು ದಾರಿ ಸಂಪಾದಿ ಮತ್ತು ಎರಡನೆಯದು ಕೊಳ್ಳುವವರ ಪರವಾಗಿ. ಅದ್ದರಿಂದ ಒಂದೇ ಅಭಿಪ್ರಾಯದ ಮೇಲೆ ನಿಶ್ಚಯಿಸುವ ತಕ್ಕದ್ದಾಗುವುದಿಲ್ಲವೆಂದರು.

ನಿರ್ಣಯವನ್ನು ಓಟಿಗೆ ಹಾಕಿದಾಗ, ಬಹುಮತದಿಂದ ಅಂಗೀಕೃತವಾಯಿತು.

ಹಿಂದುಳಿದ ಪಂಗಡದವರಿಗೆ ಹೆಚ್ಚಿನ ಸೌಕರ್ಯ

ಶ್ರೀ ಅಬ್ದುಲ್ ಬಾಸಿದ್‌ರವರು ವಿಶ್ವವಿದ್ಯಾನಿಲಯದ ನಾನಾ ಸಂಸ್ಥೆಗಳಲ್ಲಿ ಹಿಂದುಳಿದ ಪಂಗಡಗಳವರಿಗೆ ಕೊಡುತ್ತಿರುವ ವಿದ್ಯಾರ್ಥಿವೇತನಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ನಿರ್ಣಯವನ್ನು ಮಂಡಿಸಿದರು.

ಸಚಿವರಾದ ಶ್ರೀ ಅಪ್ಪಾಜಿಗೌಡರು ಮಾತನಾಡುತ್ತಾ, ಸರ್ಕಾರದವರು ಹಿಂದುಳಿದ ಪಂಗಡದವರಿಗೆ ಸಾಧ್ಯವಾದಷ್ಟು ಉತ್ತೇಜನ ಕೊಡುತ್ತಿದ್ದಾರೆ. ಈ ವರ್ಷ ವಿದ್ಯಾರ್ಥಿವೇತನಕ್ಕಾಗಿ ೧೫೦೦೦ ರೂ ಗಳನ್ನು ಕೊಡಲಾಗಿದೆ ಮತ್ತು ಇದನ್ನು ಹೆಚ್ಚಿಸುವ ವಿಚಾರವನ್ನು ಮುಂದೆ ಬಜೆಟ್ ಕಾಲದಲ್ಲಿ ಪರಿಶೀಲಿಸಲಾಗುವುದೆಂದು ಭರವಸೆ ಇತ್ತರು.

ಓಟಿಗೆ ಹಾಕಿದಾಗ ಮುಸ್ಲಿಂ ಮತ್ತು ಹಿಂದುಳಿದ ಪಂಗಡದ ಪ್ರತಿನಿಧಿಗಳು ಮಾತ್ರ ಪರವಾಗಿ ವೋಟು ಕೊಟ್ಟರು. ಉಳಿದ ಸಭಿಕರೆಲ್ಲರೂ ತಟಸ್ಥರಾಗಿದ್ದರು ಯಾರೂ ವಿರೋಧಿಸಲಿಲ್ಲ.

ಗೋವಧೆ ನಿಲ್ಲಿಸಬೇಕು.

ಸಂಸ್ಥಾನದಲ್ಲಿ ಗೋವಧೆ ನಡೆಯದಂತೆ ನಿರೋಧಿಸಿ ಒಂದು ಕಾನೂನನ್ನು ಶೀಘ್ರವಾಗಿ ಜಾರಿಗೆ ತರಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯವೊಂದನ್ನು ಶ್ರೀ ಕೆ. ಜಿ. ಬಸಪ್ಪನವರು ತಂದರು.

ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಮಾತನಾಡುತ್ತಾ, ಅನೇಕ ಮುಸ್ಲಿಂರು ಹಿಂದೂಗಳಿಗಿಂತಲೂ ಚೆನ್ನಾಗಿ ಗೋವುಗಳನ್ನು ಸಾಕುತ್ತಿದ್ದಾರೆ. ದಿವಾನರಾದ ಶ್ರೀ ಮಾಧವರಾಯರ ಕಾಲದಲ್ಲಿ ಈ ಗೋವಧೆ ನಿಂತಿದ್ದರೆ, ಕೊನೆಯವರೆಗೂ ಅವರಿಗೆ ಸಂಸ್ಥಾನದವರು ಚಿರ ಋಣಿಗಳಾಗಿರುತ್ತಾರೆಂದರು.

ಇದು ಮುಸ್ಲಿಂ ಮತಕ್ಕೆ ವಿರೋಧವೆಂದು ಅನೇಕ ಮುಸ್ಲಿಂ ಸದಸ್ಯರುಗಳು ವಿರೋಧಿಸಿದರು.

ಸಚಿವರಾದ ಗುಂಡಪ್ಪಗೌಡರು ಉತ್ತರ ಕೊಡುತ್ತಾ, ಗೋ ಸಂತತಿ ದೇಶಕ್ಕೆ ಅಗತ್ಯವೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಸಂಪೂರ್ಣವಾಗಿ ಗೋವಧೆಯನ್ನು ನಿಲ್ಲಿಸಲು ಕಷ್ಟವಾಗಬಹುದು. ಆದರೆ ಈ ವಧೆಯನ್ನು ಯಾವ ರೀತಿಯಿಂದ ನಿಲ್ಲಿಸಬಹುದೆಂಬ ಅಂಶವನ್ನೂ ಆರ್ಥಿಕ ದೃಷ್ಟಿ

ನಂಜನಗೂಡು ಸುದ್ದಿ

ಉದಾರ ಸಹಾಯ: ದೇವನೂರು ಪಟ್ಟಣ್ಣ ಎಂಬ ಧರ್ಮಾತ್ಮರು ಇಲ್ಲಿನ ಆಸ್ಪತ್ರೆಗೆ ೧೮ ಹಾಸಿಗೆಗಳನ್ನು ಧರ್ಮಾರ್ಥವಾಗಿ ಮಾಡಿಸಿಕೊಟ್ಟಿರುತ್ತಾರೆ. ಹಾಸಿಗೆಗಳಿಲ್ಲದೆ ಬಹಳ ತೊಂದರೆಯಾಗಿದ್ದಿತು. ಪುರಸಭೆಯವರು ತಮ್ಮ ನಿಗದಿಯಾದ ಮೊಬಲಗನ್ನು ಕೊಟ್ಟಿದ್ದರೂ ಸರ್ಕಾರವು ತಡ ಮಾಡುತ್ತಿದ್ದಿತು.

ಶ್ರೀ ಶಾರದಾಟಾಕೀಸ್: ಈ ಕಟ್ಟಡದ ಮುಂಭಾಗವು ಸ್ವಲ್ಪ ದಿನಗಳ ಹಿಂದೆ ಬಿದ್ದುಹೋಗಿದ್ದಿತು. ಈಗ ಹಿಂಭಾಗವೂ ಬಿದ್ದು ಹೋಯಿತೆಂದು ಸುದ್ದಿ. ಸಂತತವಾದ ಯಾತ್ರಿಕರಿಗಾಗಿ ಶ್ರೀನಿವಾಸರನ್ನು ಅಭಿನಂದಿಸಬೇಕಾದುದೇ ಆದರೂ ಸಾರ್ವಜನಿಕರಿಗೆ ಅಪಾಯವಾಗದ ರೀತಿಯಲ್ಲಿ ಕಟ್ಟಡವನ್ನು ಭದ್ರವಾಗಿ ಕಟ್ಟಬೇಕಾಗಿದೆ. ಸರ್ಕಾರದ ಅಧಿಕಾರಿಗಳು ಇದಕ್ಕೆ ಗಮನ ಕೊಡಬೇಕು.

ಅಭಿನಂದನೆ: ಸ್ವಸ್ಥದ ಬಂಗಾಳ ಓಟ ಪಟ ಮುಂತಾದ ಗದ್ದಲವು ಅತಿ ವಿಕೋಪವಾಗಿಯೇ ಇದ್ದರೂ, ಒಂದಾದರೂ ತಪ್ಪು ತಕ್ಕ ಎಡೆಗೊಡದಂತೆ ನೋಡಿಕೊಳ್ಳುತ್ತಿರುವ ಪೋಲೀಸ್ ಇನ್ಸ್‌ಪೆಕ್ಟರ್ ಸಬ್ ಡಿವಿಜನ್ ಅಧಿಕಾರಿಗಳಿಗೆ ನೆಚ್ಚಿಗೆ ಸಲ್ಲಬೇಕಾಗಿದೆ. ಸೈನಿಕರು ಸಭ್ಯರೀತಿಯಿಂದ ವರ್ತಿಸುತ್ತಿರುತ್ತಾರೆ.

ಆಹಾರ: ಇಲ್ಲಿನ ಡಿಪೋಗಳ ಮಾರಾಟವು ಸಾಲದು. ನೌಕರರು ನಿಷ್ಪಕ್ಷಪಾತ ವಾಗಿಯೇ ವರ್ತಿಸುತ್ತಿದ್ದಾರೆಂದು ಹೇಳಬಹುದು. ಸಾರ್ವಜನಿಕರ ಸಹಕಾರ ಸಂಘದ ಉಗ್ರಾಣವು ಪ್ರಾರಂಭವಾಗಿದೆ.

ಯಿಂದ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನೂ ಸರ್ಕಾರದವರು ಆಲೋಚಿಸುತ್ತಿರುವರೆಂದು, ತಿಳಿಸಿ, ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೋರಿದರು.

ನಿರ್ಣಯವನ್ನು ವೋಟಿಗೆ ಹಾಕಿದಾಗ, ಮುಸ್ಲಿಂ ಪಂಗಡದವರೆಲ್ಲರೂ ವಿರೋಧಿಸಿದರು. ಮಿಕ್ಕ ಸದಸ್ಯರೆಲ್ಲರೂ ಪರವಾಗಿ ವೋಟು ಮಾಡಿದರು. ನಿರ್ಣಯವು ಬಹುಮತದಿಂದ ಅಂಗೀಕೃತವಾಯಿತು. ಮಿ॥ ರಜ್ವಿಯವರು "ಪೋಲ್" ಕೇಳಿದ್ದರಿಂದ ಪೋಲ್‌ಗಳ ಎಣಿಕೆಯಾಗಿ ೬೮ ವೋಟುಗಳು ಪರವಾಗಿಯೂ, ಮುಸ್ಲಿಂರ ೩೭ ರಿಂದ ೨೭ ವೋಟುಗಳು ವಿರೋಧವಾಗಿಯೂ ಬಂದುವು.

ನಂತರ ಸಭೆಯು ಮುಕ್ತಾಯವಾಯಿತು.

ಶ್ರೀಯುತ ಸಾಕಯರ್ನ ಕ್ಕಾಗಿ

ಶ್ರೀ ೧-೧-೧೯೪೮ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟೆಸ್ವಾಮಿ ಬನಸಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಚಿಲ್ಲರೆಯಾಗಿ ಮುಂತಾದ ಪದಾರ್ಥ, ಕಾಫಿ, ಸಕ್ಕರೆ ಸಿಕ್ಕುತ್ತವೆ ಮತ್ತು ಸಂಕೇತಿ ವೆಗ್ ಪಾಳೇಗಳಲ್ಲೂ ಸಿಕ್ಕುತ್ತದೆ ಮತ್ತು ಗಿರಾಕಿ ಬನ್ನಿ ಸೇವೆ ಸಲ್ಲಿಸುತ್ತೇವೆ.

ಕಾಶ್ಮೀರ್ ಆಯುರ್ವೇದಿಕ್ ವರ್ಕ್ಸ್, ಅಮೃತಸರ

ಇವರ ಸತ್ಯಯುತ್ತವಾದ 'ದಿಲಾವರ'

ಹಿಂಗು

ತೊಲ 4 ಆಣೆ, 1 ರೂ. ಗೆ 5 ತೊಲ

ದೊರೆಯುವ ಸ್ಥಳ—

ಗೋಪಿನಾಥ್ ಅಂಡ್ ಕೋ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬ್ರಾಂಚ್.

ತ್ಯಾಗರಾಜ ರೋಡು, ಮೈಸೂರು.

ಏಜಂಟರು ಬೇಕು

ಮೈಸೂರು ನಗರದಲ್ಲಿ ಸಾಧ್ವಿ ಪತ್ರಿಕೆಗೆ ಅನುಭವಸ್ಥರಾ ಮತ್ತು ಡಿಪಾಜಿಟ್ ಕೊಡಬಲ್ಲ ಏಜಂಟರು ಬೇಕಾಗಿದೆ.

ಕೂಡಲೇ ನಮ್ಮ ಆಫೀಸಿಗೆ ಬಂದು ಹೆಚ್ಚಿನ ವಿವರಗಳನ್ನು ತಿಳಿಯಬಹುದು.

ವ್ಯವಸ್ಥಾಪಕ

Edited, printed and published by A. R. Nagaraja at the Sadhvi Press, D Subbiah Road, Mysore.

ಸಂಪುಟ ೨] ಭಾನುವಾರ ೧೭--೧೦--೪೩ [ಸಂಚಿಕೆ ೭೭

ಹೆಚ್ಚು ಆಹಾರ ಶೇಖರಿಸಕೂಡದು

ಸಂಸ್ಥಾನವೊಂದರಲ್ಲಿ ಶತ್ರು ಗೂಢಚಾರರು ಬಂದಿಳಿದರು

ಪೋರ್ಚುಗಲ್ಲಿನ ಮೇಲೆ ಜರ್ಮನಿ, ಜಪಾನುಗಳ ಕೋಪ

ರೇಷನಿಂಗ್ ಸೆನ್ಸಸ್ ಅಧಿಕಾರಿಗಳು

ಮೈಸೂರು ೧೬

ರಾಜಧಾನಿಯಲ್ಲಿ ರೇಷನಿಂಗ್ ವ್ಯವಸ್ಥೆಯನ್ನು ಬರುವ ನವೆಂಬರ್ ತಿಂಗಳಿಂದ ಜಾರಿಗೆ ತರಲು ಏರ್ಪಾಡಾಗುತ್ತಿರುವುದಾಗಿಯೂ, ಈ ಬಗ್ಗೆ ಸೆನ್ಸಸ್ ಪಡೆಯಲು ಶ್ರೀ|| ಎಸ್. ನಾಗಪ್ಪನವರನ್ನು ಸೆನ್ಸಸ್ ಅಧಿಕಾರಿಗಳಾಗಿ ನೇಮಿಸುವ ಸಂಭವವಿದೆಯೆಂದೂ ತಿಳಿಯಬರುತ್ತೆ.

ಅಪಹರಿಸಲ್ಪಟ್ಟಿದ್ದ ೨೫ ಜೊತೆ ಬೇಲು ಬಟ್ಟೆ ಪತ್ತೆ

ಬೆಂಗಳೂರು ೧೬

ಬೆಂಗಳೂರಿನ ಮಾಮೂಲು ಪೇಟೆಯಲ್ಲಿರುವ ಜವಳಿ ವ್ಯಾಪಾರಿಗಳಾದ ಶ್ರೀ ಕುಂದನಮಲ್ ಎಂಬುವರು ಇಟ್ಟುಕೊಂಡಿದ್ದ ಗುರ್ತುಗಾಡಿದ ವಸ್ತು ಕಳೆಯದೆ ಇದ್ದ ೨೫ ಬೇಲು ಬಟ್ಟೆಯನ್ನು ಎಮರ್ಜನ್ಸಿ ಇನ್ಸ್‌ಪೆಕ್ಟರ್ ಶ್ರೀ ನಾರಣಯ್ಯರ್ ಮತ್ತು ಸೂಲು ಇನ್ಸ್‌ಪೆಕ್ಟರ್ ಶಿವಪ್ಪಯ್ಯನವರು ಪತ್ತೆ ಮಾಡಿ ಮುಂದಿನ ತನಿಖೆ ಕ್ರಮ ಜರುಗಿಸುತ್ತಿದ್ದಾರೆ.

ಸೀಮೆಎಣ್ಣೆಯನ್ನು ಮೋಸದಿಂದ ಮಾರುತ್ತಿದ್ದ ಆಪಾದನೆ

ಮಾರ್ಕೆಟ್ ಹಿಂಭಾಗದಲ್ಲಿರುವ ಶ್ರೀ ಜಿ. ಆರ್. ಸೀತಾರಾಮಯ್ಯ ಶೆಟ್ಟಿ ಎಂಬುವರು ಸೀಮೆ ಎಣ್ಣೆಯನ್ನು ಕಪ್ಪು ಪೇಟೆಯಲ್ಲಿ ಕೊಡುತ್ತಾ ದ್ವಿಗುಣವಾಗಿ ಲಾಭ ಪಡೆಯುತ್ತಿದ್ದರೆಂದು ಪೋಲೀಸರು ಅವರಿಂದ ಒಂದೂಕಾಲು ಡಬ್ಬ ಸೀಮೆ ಎಣ್ಣೆಯನ್ನು ವಶಪಡಿಸಿಕೊಂಡು ಮುಂದಿನ ತನಿಖೆ ಕ್ರಮ ಜರುಗಿಸುತ್ತಿದ್ದಾರೆ.

ಕೆಂಗೇರಿಯಲ್ಲಿ ಮಳೆಯಿಂದ ನಷ್ಟ

ಕೆಂಗೇರಿಯಲ್ಲಿ ಕಳೆದ ಬುಧವಾರ ಬಂದ ಮಳೆಯಿಂದ ಅನೇಕ ಮನೆಗಳು ಕುಸಿದು ಬಿದ್ದುವೆಂದೂ ಅಲ್ಲದೆ ಅಲ್ಲಿನ ಪರ್ಣಕುಟೀರದ ಭಾವಿಯೊಂದು ಕುಸಿದು ಬಿದ್ದಿತೆಂದೂ ವರದಿಯಾಗಿದೆ.

ಸಂಸ್ಥಾನವೊಂದರಲ್ಲಿ ಶತ್ರು ಗೂಢಚಾರರು

ಶತ್ರು ಸಬ್‌ಮೆರೀನಲ್ಲಿ ಬಂದಿಳಿದರು

ಹಿಂದೂಸ್ಥಾನದ ಒಂದು ದೇಶೀಯ ಸಂಸ್ಥಾನದಲ್ಲಿ ಶತ್ರುವಿನ ಕಡೆಯ ಪ್ರತಿನಿಧಿಗಳ ಗುಂಪೊಂದು ಒಂದು ಸಬ್‌ಮೆರೀನಿನಲ್ಲಿ ಬಂದಿಳಿದರೆಂದೂ ಅವರನ್ನು ಬಹಳ ಚಮತ್ಕಾರವಾಗಿ ದಸ್ತಗಿರಿ ಮಾಡಲಾಯಿತೆಂದೂ ವೈಸ್‌ರಾಯರು ಮೊನ್ನೆ ರಾಜರ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

ರಾಜಕೀಯ ಕೈದಿಗಳ ವಿಚಾರ ವಿಮರ್ಶೆ

ಬೊಂಬಾಯಿ ಸರ್ಕಾರದವರು ರಾಜಕೀಯ ಕೈದಿಗಳ ಶಿಕ್ಷೆಯ ವಿಚಾರವನ್ನು ಪುನರ್ವಿಮರ್ಶೆ ಮಾಡಲು ನಿರ್ಧರಿಸಿರುವರು. ವಿನಾಶಕಾರಕ ಚಳುವಳಿಗೆ ಸಂಬಂಧಪಡದೆ ದೀರ್ಘಕಾಲದ ಶಿಕ್ಷೆಗೆ ಗುರಿಯಾಗಿರುವವರ ವಿಷಯವನ್ನು ಪರಿಶೀಲಿಸಲಾಗುವುದು. ಇಂಥವರು ೧೫೦೦ ಜನರಿರುವರು. ಇದುವರೆಗೆ ಡೆಟಿನ್ಯೂಗಳ ವಿಷಯವನ್ನು ಮಾತ್ರ ಪರಿಶೀಲಿಸಲಾಗುತ್ತಿತ್ತು.

ಪೋರ್ಚುಗಲ್ ಮೇಲೆ ಆಕ್ಸಿಸ್ ಆಗ್ರಹ

ಇಂಗ್ಲೆಂಡಿನ ಉಪಯೋಗಕ್ಕಾಗಿ ಅಜೋರ್ಸ್ ದ್ವೀಪಗಳನ್ನು ಪೋರ್ಚುಗಲ್ ಬಿಟ್ಟುಕೊಟ್ಟಿದೆಯಷ್ಟೆ. ಇದು ಜಪಾನ್-ಜರ್ಮನಿಗಳಿಗೆ ಅಸಮಾಧಾನವುಂಟುಮಾಡಿದೆ. ಈ ರಾಷ್ಟ್ರಗಳು ಪೋರ್ಚುಗಲ್ಲನ್ನು ಖಂಡಿಸಿವೆ. ಪೋರ್ಚುಗಲ್ಲು ತನ್ನ ತಾಟಸ್ಥ್ಯವನ್ನು ಭಂಗಪಡಿಸಿದೆಯೆಂದು ಹೇಳಲಾಗಿದೆ. ಇದಕ್ಕೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು.

ಜಪಾನ್ ರಾಜಕುಮಾರಿ ವಿವಾಹ

ಜಪಾನ್ ಚಕ್ರವರ್ತಿಯವರ ಜ್ಯೇಷ್ಠ ಕುಮಾರಿ ಹದಿನೇಳು ವರ್ಷ ವಯಸ್ಸಿನ ಸಿಗೆಟೋ ಟೆರುಕೊರವರು ಈಗ ಬುಧವಾರ ರಾಜಕುಮಾರ ಕ್ಯಾಪ್ಟನ್ ಕೊರಿ ಹಿರೊ ಹಿಗೊಶಿಕ್ಕು ಎಂಬುವರನ್ನು ಮದುವೆಯಾದರು

ಇಟಲಿ-ಜರ್ಮನಿ ಯುದ್ಧ

ಜರ್ಮನಿಯ ಮೇಲೆ ಇಟಲಿ ಯುದ್ಧ ಘೋಷಿಸಿದೆಯಷ್ಟೆ. ಆದು ಜಪಾನಿನ ಮೇಲೂ ಯುದ್ಧ ಘೋಷಣೆಯನ್ನು ಹೊರಡಿಸಬಹುದೆಂದು ನಿರೀಕ್ಷಿಸಲಾಗಿದೆ.

ಇಂಡಿಯಾ ಸರ್ಕಾರದ ೨೫ ಕೋಟಿ ಸಾಲ

೧೯೬೬-೬೮ರಲ್ಲಿ ವಾಪಸು ಮಾಡುವ ಶೇಕಡ ಮೂರು ರೂಪಾಯಿ ಬಡ್ಡಿಯ ೨೫ ಕೋಟಿ ರೂಪಾಯಿನ ಸಾಲವನ್ನು ಇಂಡಿಯಾ ಸರ್ಕಾರದವರು ತೆಗೆಯುವವರಾಗಿದ್ದಾರೆ ೯೮ ರೂ ಗೆ ೧೦೦ ರೂ.ನ ಪತ್ರವನ್ನು ಕೊಡುವರು ಆರು ತಿಂಗಳಿಗೊಂದು ಸಾರಿ ಬಡ್ಡಿ ಕೊಡಲಾಗುವುದು. ಸ್ಟರ್ಲಿಂಗ್ ಸಾಲವನ್ನು ತೀರಿಸಲು ಇದನ್ನು ಉಪಯೋಗಿಸುವರು

ರೊಮೆಲ್-ಮುಸೋಲಿನಿ ಭೇಟಿ

ಮುಸೋಲಿನಿಯು ಜನ ... ರನ್ನು ಅವರ ಕ್ಷೇತ್ರ ಕಚೇರಿಯಲ್ಲಿ ಭೇಟಿ ಮಾಡಿದನೆಂದು ಗೊತ್ತಾಗಿದೆ.

೩ ತಿಂಗಳ ಧಾನ್ಯಕ್ಕಿಂತ ಹೆಚ್ಚು ಇಡಕೂಡದು

ಇಂಡಿಯ ಸರ್ಕಾರದ ಆರ್ಡಿನೆನ್ಸ್

ಇಂಡಿಯಾ ಸರ್ಕಾರದವರು ಒಂದು ಹೊಸ ಆರ್ಡಿನೆನ್ಸ್ ಕಾನೂನನ್ನು ಪ್ರಕಟಿಸಿರುವರು. ಅದು ನಿನ್ನೆಯಿಂದ ಜಾರಿಗೆ ಬಂದಿದೆ. ಹಣದ ಚಲಾವಣೆ ಮತ್ತು ಬೆಲೆಗಳ ಹತೋಟಿಗಾಗಿ ಇದನ್ನು ಮಾಡಿರುವುದಾಗಿ ಹೇಳಲಾಗಿದೆ ಪ್ರತಿ ಕುಟುಂಬದವರೂ ಮೂರು ತಿಂಗಳಿಗೆ ಬೇಕಾದಷ್ಟು ದವಸವನ್ನು ಮಾತ್ರ ಇಟ್ಟುಕೊಳ್ಳಬಹುದು. ವರ್ತಕರು ಶೇಕಡ ೨೦ಕ್ಕಿಂತ ಹೆಚ್ಚು ಲಾಭವನ್ನು ಪಡೆಯಕೂಡದು. ತಪ್ಪಿದವರಿಗೆ ಶಿಕ್ಷೆಯನ್ನು ವಿಧಿಸಲಾಗುವುದು ಇದಕ್ಕೆ ಸಂಸ್ಥಾನಗಳೂ ಬೆಂಬಲ ಕೊಟ್ಟಿವೆ

ಜಿಲ್ಲಾಧಿಕಾರಿಗಳು ವೇಷಾಂತರದಲ್ಲಿ

ಬಹಾರಾಂಪುರದ ಜಿಲ್ಲಾ ಮ್ಯಾಜಿಸ್ಟ್ರೇಟರು ವೇಷಾಂತರದಿಂದ ಇಲ್ಲಿನ ಹೋಟೆಲೊಂದಕ್ಕೆ ಹೋಗಿ ತಿಂಡಿ ತಿಂದು ಒಂದು ರೂಪಾಯಿ ನೋಟು ಕೊಟ್ಟರು. ಯಜಮಾನನು ಚಿಲ್ಲರೆ ಇಲ್ಲವೆಂದು ಹೇಳಿ ನೋಟನ್ನು ನಿರಾಕರಿಸಿದನು. ಮ್ಯಾಜಿಸ್ಟ್ರೇಟರು ಪೋಲೀಸ್ ಪಡೆಯ ಸಮೇತ ಶೋಧಿಸಲಾಗಿ ೧೫೦ ರೂಪಾಯಿಗಳ ಚಿಲ್ಲರೆ ನಾಣ್ಯ ಸಿಕ್ಕಿತು ಮಾಲೀಕನನ್ನು ದಸ್ತಗಿರಿ ಮಾಡಲಾಗಿದೆ.

ಬಂಗಾಳದ ನೂತನ ಗವರ್ನರರು

ಬಂಗಾಳದ ಗವರ್ನರರಾಗಿ ಸರ್ ಜಾನ್ ಹರ್ಬರ್ಟರ ಸ್ಥಾನಕ್ಕೆ ಅರ್ಲ್ ಆಫ್ ಡಲ್ಲಿಯವರು ನೇಮಕವಾಗುವ ಸಂಭವವಿರುವುದಾಗಿ ಲಂಡನ್ನಿನ ರಾಜಕೀಯ ವರ್ತುಳದ ವಾರ್ತೆಯೆಂದು ಲಂಡನ್ನಿನ ಪತ್ರಿಕೆಯೊಂದು ತಿಳಿಸುತ್ತೆ.

ಬಡೋಗ್ಲಿಯೊ ಸರ್ಕಾರಕ್ಕೆ ರಾಜಭಕ್ತಿ

ಅಲ್ಜಿಯರ್ಸ್ ರೇಡಿಯೋ ಸುದ್ದಿಯ ಪ್ರಕಾರ ... ಇಟಲಿ ರಾಯಭಾರಿ ... ಇಟಲಿ ರಾ ... ಬಡೋಗ್ಲಿಯೊ ಸರ್ಕಾರಕ್ಕೆ ... ರಾಜಭಕ್ತಿಯನ್ನು ಸಲ್ಲಿಸಿರುವರೆಂದು ತಿಳಿಯಬರುತ್ತೆ.

ಯಾದವ ಸಂಘ

ಮೈಸೂರು ೧೬

ಈ ದಿನ ೪ ಗಂಟೆಯಲ್ಲಿ ಮೈಸೂರು ಹೊಸ ಸಂತೇಪೇಟೆಯಲ್ಲಿ ಶ್ರೀ ವಾಸ ಸಿ. ಹುಕಾಲ್ ಡಿ ಪುಟ್ಟಯ್ಯನವರು ಕಟ್ಟಿಸಿರುವ ಶ್ರೀನಿವಾಸ ಮಂದಿರದಲ್ಲಿ ಡಾ|| ಬಿ. ಜಯರಾಂ ನಾಯುಡುರವರ ಅಧ್ಯಕ್ಷತೆಯಲ್ಲಿ ಈ ಸಂಘದ ೧೯೪೩ ನೇ ಇಸವಿಯ ವಾರ್ಷಿಕೋತ್ಸವವು ನಡೆಯಿತು.

ಹೊಸ ವೈಸರಾಯರೂ ಬಿಕ್ಕಟ್ಟೂ

ಭಾರತ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸುವ ವಿಷಯದಲ್ಲಿ ಇಂಡಿಯಾ ಸೆಕ್ರೆಟರಿಯವರು ಪಾರ್ಲಿಮೆಂಟ್ ಸಭೆಯಲ್ಲಿ ಹೀಗೆ ಹೇಳಿರುವರು- ಹಿಂದೂಸ್ಥಾನದ ವಿವಿಧ ಕೋಮುಗಳ ಸೌಹಾರ್ದವನ್ನು ಸರ್ವ ವಿಧದಲ್ಲಿಯೂ ಹೆಚ್ಚಿಸಲು ಹೊಸ ವೈಸರಾಯರು ತಮ್ಮ ಕೈಲಾದುದನ್ನೆಲ್ಲಾ ಮಾಡುವರು. ಆದರೆ ರಾಜಕೀಯ ಸಮಸ್ಯೆಯನ್ನು ಬಗೆಹರಿಸುವ ವಿಷಯವು ಭಾರತ ರಾಜಕೀಯ ಮುಖಂಡರ ಸ್ಥಿತಿಯನ್ನೇ ಅವಲಂಬಿಸಿದೆ.

ಭಾರತಕ್ಕೆ ಜಪಾನೀ ಆಹಾರ

ಹಿಂದೂಸ್ಥಾನಕ್ಕೆ ಆಹಾರವನ್ನು ಕಳುಹಿಸಿಕೊಡುವುದಾಗಿ ಜಪಾನರು ಹೇಳುತ್ತಿರುವ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂತು. ಆದರೆ ಕೇವಲ ಪ್ರಚಾರಕ್ಕಾಗಿ ಜಪಾನರು ಹೀಗೆ ಹೇಳುತ್ತಿರುವರೆಂದೂ ಆದ್ದರಿಂದ ಅವುಗಳ ವಿವರಗಳನ್ನು ತಾವು ಪ್ರಕಟಿಸುವುದಿಲ್ಲವೆಂದೂ ಇಂಡಿಯಾ ಸೆಕ್ರೆಟರಿಯವರು ಹೇಳಿದರು.

ಕಲ್ಕತ್ತದಲ್ಲಿ ೧೨೫ ಮರಣ

ಕಳೆದ ಗುರುವಾರ ಕಲ್ಕತ್ತದಲ್ಲಿ ಹೊಟ್ಟೆಗಿಲ್ಲದೆ ೧೨೫ ಜನರು ಮರಣ ಹೊಂದಿದರು. ಇವರ ಪೈಕಿ ೭೦ ಜನರ ಹೆಣಗಳನ್ನು ಪೋಲೀಸರು ತಂದರು. ಹಿಂದೂ ಮುಸ್ಲಿಂ ಸಂಸ್ಕಾರ ಸಮಿತಿಗಳು ಈ ಹೆಣಗಳ ಸಂಸ್ಕಾರವನ್ನು ನಡೆಸಿದರು

ಹೊಸ ನಾಣ್ಯ

ಬೆಂಗಳೂರು ಎರಡಾಣೆ ಕಛೇರಿಯಲ್ಲಿ ಕೆಲಸ ಕಡಿಮೆಯಾಗಿರುವುದರಿಂದ ಸೆಕ್ರೆಟೇರಿಯಟ್ಟಿನಲ್ಲಿ ಒಂದು ಹೊಸ ನಾಣ್ಯವನ್ನು ತರಿಯಲಾಗಿದೆ

ಆಕಾಶದಲ್ಲಿ ಅದ್ಭುತ ಪ್ರಕಾಶ

ಈಜಿಪ್ಟಿನ ಕೈರೋ ನಗರದಲ್ಲಿ ಕಳೆದ ಶನಿವಾರ ರಾತ್ರಿ ನೂರಾರು ಜನರು ಉತ್ತರ ದಿಕ್ಕಿನಲ್ಲಿ ಅದ್ಭುತವಾದ ಒಂದು ಪ್ರಕಾಶವನ್ನು ಕಂಡರು. ಬೆಳ್ಳಿಯ ಬಣ್ಣದಂತೆ ಅದು ಹೊಳೆಯುತ್ತಿತ್ತು. ವಿಜ್ಞಾನಿಗಳು ಇದರ ಕಾರಣವನ್ನು ಪರಿಶೋಧಿಸುತ್ತಿದ್ದಾರೆ.

ಪೋರ್ಚುಗಲ್ಲಿನಲ್ಲಿ ಚಲನವಲನ

ಮೂರು ಡಿವಿಜನ್ನು ... ಈಗ ಪೋರ್ಚುಗಲ್ಲಿನಲ್ಲಿ ... ಯಲ್ಲಿವೆ ... ಸಂಗ್ರಹಿಸ ... ಎಲ್ಲಾ ... ಯುತ್ತಿವೆ ... ನಾಗಿದೆ

ಪ್ರಜಾಪ್ರತಿನಿಧಿ ಸಭೆ

ಬಲಾತ್ಕಾರ ವಿದ್ಯಾಭ್ಯಾಸ ತರಬೇಕು

ಮೈಸೂರು ೧೬.

ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ದಿನ ಬಲಾತ್ಕಾರ ವಿದ್ಯಾಭ್ಯಾಸವನ್ನು ಜಾರಿಗೊಳಿಸುವ ನಿರ್ಣಯದ ಬಗ್ಗೆ ವಿಶೇಷ ಚರ್ಚೆ ನಡೆಯಿತು

ಕೃಷ್ಣರಾಜಪೇಟೆ ೨ ನೆ ಶ್ರೀ ಕೆ ಎಸ್. ಸುಬ್ಬೇಗೌಡರು "ಸಂಸ್ಥಾನದ ಎಲ್ಲಾ ತಾಲ್ಲೂಕುಗಳಲ್ಲಿಯೂ, ಮುಖ್ಯವಾಗಿ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಬಲಾತ್ಕಾರ ವಿದ್ಯಾಭ್ಯಾಸವನ್ನು ಜಾರಿಗೊಳಿಸಬೇಕು. ಈ ದಿವಸದಿಂದ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳ ಉಪಾಧ್ಯಾಯರುಗಳ ಸಂಬಳಗಳನ್ನು ಸಾಧ್ಯವಾದಷ್ಟು ಹೆಚ್ಚಿಸಬೇಕು" ಎಂಬ ನಿರ್ಣಯವೊಂದನ್ನು ತಂದರು.

ವಿದ್ಯಾ ಸಚಿವರು, ಸರ್ಕಾರದ ಅಭಿಪ್ರಾಯವನ್ನು ತಿಳಿಸುತ್ತಾ—ಇದರ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಸರ್ಕಾರದವರು ಹೆಚ್ಚು ಆಸಕ್ತಿಯುಳ್ಳವರಾಗಿದ್ದಾರೆ. ಆವರು ಇದನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಏರ್ಪಡಿಸಿದ್ದರು. ಅದರ ಶಿಫಾರಸಿನ ಮೇಲೆ ಸರ್ಕಾರದವರೇ ಇದನ್ನು ವಹಿಸಿಕೊಂಡು, ೪ ವರ್ಷದ ಯೋಜನೆಯನ್ನು ಏರ್ಪಡಿಸಿ, ೧ ಸಾವಿರ ಪ್ರೈಮರಿ ಸ್ಕೂಲುಗಳನ್ನು ತೆರೆದರು. ೧೫ ಲಕ್ಷ ರೂಪಾಯಿ ಪರವಾನ ತೆರಿಗೆಯಿಂದ ಬರದಿದ್ದರೂ, ಸರ್ಕಾರದವರೇ ಇದನ್ನು ವಹಿಸಿಕೊಂಡು ೩ ವರ್ಷಗಳಲ್ಲೇ ೧ ಸಾವಿರ ಸ್ಕೂಲುಗಳನ್ನು ತೆರೆದರು. ಈಗ ೮೦ ಸಾವಿರ ವಿದ್ಯಾರ್ಥಿಗಳು ಮಾತ್ರ ಇದ್ದಾರೆ ಇದು, ಜಾರಿಯನ್ನು ಕಷ್ಟವಾದರೂ ಸರ್ಕಾರದವರು ಸಾಧ್ಯವಾದ ಮಟ್ಟಿಗೆ ನಡೆಸುತ್ತಿರುವರು ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ೬೫ ಲಕ್ಷ ರೂ. ಗಳು ವೆಚ್ಚವಾಗುತ್ತಿದ್ದರೂ ೩ ಲಕ್ಷ ಜನರು ಮಾತ್ರ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಎಲ್ಲರಿಗೂ ವಿದ್ಯಾಭ್ಯಾಸ ಕೊಡಬೇಕಾದರೆ ೧ ಕೋಟಿ ರೂ ಗಳು ವೆಚ್ಚವಾಗುವುದು. ಇಂತಹ ಕಾಲದಲ್ಲಿ ಹಣ ಒದಗುವುದು ಕಷ್ಟವಾದ್ದರಿಂದ ಎಲ್ಲಾ ಕಡೆಗಳಲ್ಲೂ ಬಲಾತ್ಕಾರ ವಿದ್ಯಾಭ್ಯಾಸ ಏರ್ಪಡಿಸಲು ಸಾಧ್ಯವಿಲ್ಲ. ಎಲ್ಲಾ ಕಡೆಗಳಲ್ಲೂ ವಿದ್ಯಾಭ್ಯಾಸದ ಅವಕಾಶಗಳನ್ನು ಮೊದಲು ಏರ್ಪಡಿಸಿದ ನಂತರ, ಬಲಾತ್ಕಾರ ವಿದ್ಯಾಭ್ಯಾಸ [illegible] ಮಾಡಬೇಕು. [illegible] ಹೋಗುತ್ತಿರುವ [illegible] ವಿದ್ಯಾಭ್ಯಾಸ [illegible] ಸರ್ಕಾರದವರು [illegible] ಚಿಂತಿಸುತ್ತಿರುವರು. ಹೆಚ್ಚು ಸಂಬಳ ಕೊಡುವ ವಿಚಾರದಲ್ಲಿ, ಸರ್ಕಾರದವರು ಹಿಂದಿನ ವರ್ಷ ಇದಕ್ಕಾಗಿ ೩ ಲಕ್ಷ ರೂ ಗಳನ್ನು ಹೆಚ್ಚಾಗಿ ಕೊಟ್ಟಿರುವರು. ೫ ರೂ. ಗಳನ್ನು ಹೆಚ್ಚಿಸಿದರೆ, ೫ ಲಕ್ಷ ರೂ ಗಳು ಬೇಕಾಗುವುದು. ಆರ್ಥಿಕ ಮುಗ್ಗಟ್ಟಿನಿಂದ ಸದ್ಯಕ್ಕೆ ಸಾಧ್ಯವಿಲ್ಲವೆಂದು ತಿಳಿಸಿ, ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿದರು

ಸರ್ಕಾರದವರ ಭರವಸೆ ಮೇಲೆ, ನಿರ್ಣಯವನ್ನು ಸೂಚಕರಾದವರು ವಾಪಸು ತೆಗೆದುಕೊಂಡರು

ವಿದ್ಯಾರ್ಥಿವೇತನ ಹೆಚ್ಚಬೇಕು

ಹಿಂದುಳಿದ ಮತ್ತು ಮುಸಲ್ಮಾನ ಪಂಗಡದವರಿಗೆ ಸಂಸ್ಥಾನದ ಮಿಡ್ಲ್ ಮತ್ತು ಹೈಸ್ಕೂಲುಗಳಲ್ಲಿ ಕೊಡುವ ವಿದ್ಯಾರ್ಥಿ ವೇತನಗಳನ್ನು ಈಗ ಕೊಡುತ್ತಿರುವುದಕ್ಕೆ ಎರಡರಷ್ಟು ಕೊಡಬೇಕೆಂದು ತುಮಕೂರಿನ ಶ್ರೀ ಟಿ ಎಂ ಚಾರಿಯವರು ಒಂದು ನಿರ್ಣಯವನ್ನು ಸೂಚಿಸಿದರು.

ಸಚಿವರಾದ ಶ್ರೀ ಅಪ್ಪಾಜಿಗೌಡರು ಉತ್ತರ ಕೊಡುತ್ತಾ—ಸರ್ಕಾರದವರು ಇದಕ್ಕಾಗಿ ೧,೩೨,೦೦೦ ರೂ. ಗಳನ್ನು ವೆಚ್ಚ ಮಾಡುತ್ತಿರುವರೆಂದೂ, ಹಿಂದಿನ ವರ್ಷ ಮತ್ತು ಈ ವರ್ಷ ಒಟ್ಟು ೪೦ ಸಾವಿರ ರೂ ಹೆಚ್ಚು ಹಣ ಕೊಡಲಾಗಿದೆಯೆಂದೂ, ಮತ್ತು ಹೆಚ್ಚು ಉತ್ತೇಜನ ಕೊಡಬೇಕೆಂಬುದೇ ಸರ್ಕಾರದ ಉದ್ದೇಶವೆಂದು ತಿಳಿಸಿದರು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದಷ್ಟು ವೇತನಗಳನ್ನೂ ಹೆಚ್ಚುಮಾಡಲಾಗುವುದೆಂದು ಭರವಸೆ ಕೊಟ್ಟರು.

ಸಚಿವರ ಭರವಸೆ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಂಡರು

ರೈತನಿಗೆ ಸಾಕಷ್ಟು ದವಸ ಕೊಡಬೇಕು

ಶ್ರೀ॥ ಡಿ. ಸಿ ರುದ್ರಪ್ಪನವರು "ರೈತರು ತಾವು ಬೆಳೆದ ಭತ್ತ, ರಾಗಿ, ಜೋಳಗಳನ್ನು ಎಕರೆ ಒಂದಕ್ಕೆ ಒಂದು ಪಲ್ಲದಂತೆ ಕೆಲಸಗಾರರ ಕೂಲಿಗಾಗಿಯೂ ಮತ್ತು ಕುಟುಂಬದ ಜೀವನಕ್ಕೂ ತಕ್ಕಷ್ಟನ್ನು ಇಟ್ಟುಕೊಂಡು ಉಳಿದುದನ್ನು ಮಾತ್ರ ಸರ್ಕಾರಕ್ಕೆ ಕೊಡುವಂತೆ ಏರ್ಪಡಿಸಬೇಕು" ಎಂದು ಒಂದು ನಿರ್ಣಯವನ್ನು ಮಂಡಿಸಿದರು.

ಸಿವಿಲ್ ಸಪ್ಲೈ ಸ್ವರಕ್ಷಣಾದ ಶ್ರೀ॥ ನಾರಾಯಣರಾಯರು ಉತ್ತರ ಕೊಡುತ್ತಾ, ಆಗಸ್ಟ್ ೯ ನೇ ತಾರೀಕು ತಂದಿರುವ ಹಂಚಿಕೆಯು ಮೂರು ತಿಂಗಳಿಗೆ ಮಾತ್ರ ಅನ್ವಯಿಸುವುದೇ ವಿನಃ ಒಂದು ವರ್ಷಕ್ಕಲ್ಲ ಮುಂದಿನ ಸುಗ್ಗಿ ಕಾಲದಲ್ಲಿ ಸಂಸಾರದವರಿಗೆ, ಬಿತ್ತನೆ ಬೀಜ ಮತ್ತು ಇತರ ಅಂಶಗಳಿಗೆ ಬೇಕಾಗುವಷ್ಟನ್ನು ಮುಂದೆ ನಿಷ್ಕರ್ಷೆ ಮಾಡಲಾಗುವುದು ರೈತನಿಗೆ ಸಾಧ್ಯವಾದ ಮಟ್ಟಿಗೂ ಸಹಾಯ ಮಾಡಬೇಕೆಂಬುದೇ ಸರ್ಕಾರದ ಅಭಿಲಾಷೆ ಎಂದು ತಿಳಿಸಿದರು

ದಿವಾನರು: ಎಕರೆಗೆ ಇಷ್ಟೇ ಎಂದು ನಿಗದಿ ಮಾಡುವುದಕ್ಕಾಗುವುದಿಲ್ಲ. ರೈತನಿಗೆ ಎಷ್ಟು ಬೇಕೋ ಅಷ್ಟನ್ನು ಬಿಟ್ಟು ಮಿಕ್ಕುದನ್ನು ತೆಗೆದುಕೊಳ್ಳಬೇಕೆಂಬುದು ಸರ್ಕಾರದವರ ಮತ್ತು ಸದಸ್ಯರ ಅಭಿಪ್ರಾಯವಾಗಿದೆ.

ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಮದರಾಸ್ ಧಾಳಿಯಲ್ಲಿ ನೊಂದವರಿಗೆ ರಕ್ತದಾನ

ಕಳೆದ ೧೧ ನೇ ತಾ॥ ಮದರಾಸಿನಲ್ಲಿ ವಿಮಾನ ಧಾಳಿಯಾಯಿತಷ್ಟೆ. ಆಗ ಕೆಲವು ಸಾವುನೋವುಗಳೂ ಆದುವು. ನೊಂದವರಿಗೆ ರಕ್ತದ ಇಂಜಕ್ಷನ್ ಕೊಡಲಾಯಿತು ಮುಂದೆ ಇಂತಹ ಸಂದರ್ಭಗಳಲ್ಲಿ ರಕ್ತದ ಇಂಜಕ್ಷನ್ ಕೊಡಲು ಸಹಾಯವಾಗುವಂತೆ ದಾನಿಗಳು ತಮ್ಮ ಶರೀರದಿಂದ ರಕ್ತವನ್ನು ಕೊಡಬೇಕೆಂದು ಮದರಾಸಿನ ಜನರಲ್ ಆಸ್ಪತ್ರೆಯವರು ಬೇಡಿದ್ದಾರೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಪ್ರಭಾವಶಾಲಿ **ಜೀವನಿ** ಔಷಧ

ಗರ್ಭಾಶಯಕ್ಕೆ ಶಕ್ತಿವರ್ಧಕ.

ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಋತು ದೋಷಕ್ಕೆ ಗಂಡೌಷಧ

ಋತು ಕಾಲದಲ್ಲಿ ಅಥವಾ ಆಮೇಲೆ ತೋರುವ ಅಧಿಕ ರಕ್ತಸ್ರಾವ, ಬಿಳುಪು ಹೋಗುವುದು, ಅಕ್ರಮ ಋತು, ಮುಂತಾದುವುಗಳನ್ನು "ಜೀವನಿ" ಜಾಗ್ರತೆ ಶಮನಗೊಳಿಸುತ್ತದೆ.

ಅತ್ಯುತ್ತಮ ಉಷ್ಣ ಶಾಮಕ.

ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೂ 'ಜೀವನಿ' ಪ್ರಶಸ್ತವಾದುದು.

ರಕ್ತ ಹೀನತೆ, ನರಗಳ ದೌರ್ಬಲ್ಯ, ಸೊಂಟನೋವು, ನರುನೋವು, ಗರ್ಭಸ್ರಾವ, ಬಂಜೆತನಗಳಿಗೆ "ಜೀವನಿ" ಅತ್ಯುಪಯುಕ್ತವಾದುದು.

ಟಿ. ಸಿ. ನಟರಾಜ್ ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಔಷಧಿಗಳೆಲ್ಲವೂ ಸದಾ ದೊರೆಯುತ್ತವೆ.

ಕಾಂಗ್ರೆಸ್ಸಿನ ವಿಜಯ

ಬಂಧನದಲ್ಲಿರುವ ಬೊಂಬಾಯಿ ಕಾಂಗ್ರೆಸ್ ಮುಖಂಡರು ಶ್ರೀ॥ ಗಳಾದ ನಾಗಿನ್‌ದಾಸ್ ಮಾಸ್ಟರ್, ಎಸ್. ಕೆ. ಪಾಟೀಲ್, ಮೆಹರಾಲಿ ಇವರುಗಳ ಸ್ಥಾನದಲ್ಲಿ ಬೊಂಬಾಯಿ ಪೌರ ಸಭೆಗೆ ಉಪ ಚುನಾವಣೆ ನಡೆಯಿತು. ಕಾಂಗ್ರೆಸ್ಸಿನವರು ಅವರನ್ನೇ ಪುನಃ ನಿಲ್ಲಿಸಿದರು ಅವರಿಗೇ ಬಹು ಮತಗಳು ಬಂದು ಅವರೇ ಚುನಾಯಿತರಾಗಿದ್ದಾರೆ. ಹಾಗೆಯೇ ಬಂಧನದಲ್ಲಿರುವ ಇತರ ಏಳು ಮಂದಿ ಮುಖಂಡರೂ ಸಹ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾಗಿದ್ದಾರೆ.

ಐಸ್‌ಕ್ರೀಂ ನಿರೋಧ

ಹಾಲು, ಮೊಸರು, ಬೆಣ್ಣೆಗಳ ಸರಬರಾಜನ್ನು ಅಧಿಕಪಡಿಸಲು ಯತ್ನದ ಸಲುವಾಗಿ ಬೊಂಬಾಯಿ ಸರ್ಕಾರದವರು ಬೊಂಬಾಯಿ ನಗರದಲ್ಲೂ ಸುತ್ತಮುತ್ತಲೂ ಐಸ್‌ಕ್ರೀಮನ್ನು ಯಾರೂ ಮಾರಕೂಡದೆಂದು ನಿಷೇಧಿಸಿದ್ದಾರೆ.

ಎ. ಆರ್. ಪಿ. ಸಿಬ್ಬಂದಿ ಸದ್ಯಕ್ಕೆ ಕಡಿಮೆ ಮಾಡುವುದಿಲ್ಲ

ಬೆಂಗಳೂರಲ್ಲಿ ಎ. ಆರ್. ಪಿ ಸಿಬ್ಬಂದಿಯನ್ನು ಕಡಿಮೆ ಮಾಡುವರೆಂಬುದಾಗಿ ವರ್ತಮಾನ ಹೊರಟಿತ್ತಷ್ಟೆ. ಸದ್ಯಕ್ಕೆ ಆ ಯೋಚನೆಯನ್ನು ನಿಲ್ಲಿಸಲಾಗಿದೆಯೆಂದು ತಿಳಿದುಬಂದಿದೆ.

ಆಕಾಶವಾಣಿ

೧೮ ನೇ ಸೋಮವಾರ

...೮-೩೦ ಪಿಟೀಲುವಾದನ: ವಿದ್ವಾನ್ ಎಂ ವಿ. ರಾಮಯ್ಯನವರಿಂದ.

ಏಜಂಟರು ಬೇಕು

ಮೈಸೂರು ನಗರದಲ್ಲಿ ಸಾಧ್ವಿ ಪತ್ರಿಕೆಗೆ ಅನುಭವಸ್ಥರಾದ ಮತ್ತು ಡಿಪಾಜಿಟ್ ಕೊಡಬಲ್ಲ ಏಜಂಟರು ಬೇಕಾಗಿದೆ.

ಕೂಡಲೇ ನಮ್ಮ ಆಫೀಸಿಗೆ ಬಂದು ಹೆಚ್ಚಿನ ವಿವರಗಳನ್ನು ತಿಳಿಯಬಹುದು.

ವ್ಯವಸ್ಥಾಪಕ.

ಕಾಶ್ಮೀರ್ ಆಯುರ್ವೇದಿಕ್ ವರ್ಕ್ಸ್, ಅಮೃತಸರ

ಇವರ ಅತ್ಯುತ್ತಮವಾದ 'ದಿಲಾವರ್'

ಹಿಂಗು

ತೊಲ 4 ಆಣೆ, 1 ರೂ. ಗೆ 5 ತೊಲ

ದೊರೆಯುವ ಸ್ಥಳ:—

ಗೋಪಾಲ್ ಅಂಡ್ ಕೋ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬ್ರಾಂಚು:—

ತ್ಯಾಗರಾಜ ರೋಡು, ಮೈಸೂರು.

ಶ್ರೀ ರಾಮ ಸೌಕರ್ಯ ಕ್ಕಾಗಿ

[illegible] ವ್ಯಾಪಾರ ಕೇಂದ್ರವ ನಿರ್ಮಾಣ ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಫ್ಲೋ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿರಿ.

ಡಿ. ಪುಟ್ಟಣ್ಣ ಬಸಪ್ಪಂಡ್‌ಕೋ, ದೇವರಾಜ ಮಾರ್ಕೆಟ್, ಮೈಸೂರು

ಎ ಸೂ. — [illegible] ಪೆಪ್ಪರ್‌ಮಿಂಟ್, [illegible] ಮತ್ತು [illegible] ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

Edited, printed and published by A. R. Nagarajan at the Sadhvi Press, D. Subbiah Road, Mysore.

WEEKLY EDITION

ಸಂಪುಟ ೭] ಸೋಮವಾರ ೧೮—೧೦—೪೩ [ಸಂಚಿಕೆ ೫೨

ಬುಡಮೋಲು ಚಳವಳಿಗೆ ಜೀವಾವಧಿ ಸಜಾ

ಗೋರಖಪುರದಲ್ಲಿ ಆಹಾರವಿಲ್ಲದೆ ಮಕ್ಕಳ ಕೊಲೆ

೧೦ ವರ್ಷದೊಳಗಿನ ದನಗಳನ್ನು ವಧಿಸಕೂಡದು

ಎಲ್ಲಾ ಡೆಟಿನ್ಯೂಗಳನ್ನೂ ಬಿಡಬೇಕು

ಪ್ರ. ಪ್ರ. ಸಭೆಯಲ್ಲಿ ಚರ್ಚೆ

ಮೈಸೂರು ೧೫

ಪ್ರಜಾಪ್ರತಿನಿಧಿ ಸಭೆಯ ಕೊನೆಯ ದಿನದ ಕಾರ್ಯಕಲಾಪಗಳು ಈ ದಿನ ಬೆಳಗ್ಗೆ ೮-೩೦ ಗಂಟೆಗೆ ದಿವಾನರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದವು

ಪ್ರಶ್ನೋತ್ತರಗಳು

ಶ್ರೀ॥ ಬಿ ನಾರಾಯಣಸ್ವಾಮಿಯವರ ಪ್ರಶ್ನೆಗೆ, ಸಂಸ್ಥಾನದ ನಾನಾ ಜೈಲುಗಳಲ್ಲಿ ರಕ್ಷಣೆ ಡೆಟಿನ್ಯೂಗಳ ಪೈಕಿ ಅನೇಕರು ತಮ್ಮ ಸಂಸಾರದವರ ಪೋಷಣೆಗಾಗಿ ಗ್ರಾಂಟುಗಳನ್ನು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಅವರ ಪೈಕಿ ೧೩ ಮಂದಿ ಅರ್ಜಿಗಳನ್ನು ಹಾಕಿಕೊಂಡಿದ್ದರು. ಆ ರೀತಿ ಬರೆದುಕೊಂಡ ಅರ್ಜಿ ಪೈಕಿ ಸರ್ಕಾರಕ್ಕೆ ಮೊಟ್ಟ ಮೊದಲನೆಯದು ೧೯೪೩ ನೇ ಸೆಪ್ಟೆಂಬರ್ ೩ ನೇ ತಾರೀಕಿನಲ್ಲಿ ಬಂತು. ಈ ಕೋರಿಕೆಗಳನ್ನು ಎಲ್ಲ ಸಂದರ್ಭದಲ್ಲಿಯೂ ನಿರಾಕರಿಸಿ ಅವರುಗಳಿಗೆ ಎಂಡಾರ್ಸ್‌ಮೆಂಟುಗಳನ್ನು ಕಳುಹಿಸಲಾಗಿದೆ. ಈ ವಿಚಾರವಾಗಿ ಪತ್ರಿಕೆಗಳಲ್ಲಿ ಪದೇ ಪದೇ ಅರಿಕೆಗಳು ಬಂದಿರುವುವು. ಬ್ರಿಟಿಷ್ ಇಂಡಿಯಾಕ್ಕೆ ಸೇರಿದ ಪ್ರಾಂತಗಳ ಡೆಟಿನ್ಯೂಗಳಿಗೆ ಆ ರೀತಿ ಗ್ರಾಂಟುಗಳನ್ನು ಕೊಡಲಾಗುತ್ತಿದೆ ಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಚೀಫ್ ಸೆಕ್ರೆಟರಿಗಳು ಉತ್ತರವಿತ್ತರು.

ಉಪ ಪ್ರಶ್ನೆಗೆ, ೧೯೧ ಜಾಯಿಂಟ್ ಅರ್ಜಿಗಳು ಮತ್ತು ೧೧ ಪ್ರತ್ಯೇಕ ಅರ್ಜಿಗಳು ಬಂದಿವೆಯೆಂದು ತಿಳಿಸಲಾಯಿತು

ಪ್ರ : ಈ ವಿಚಾರದಲ್ಲಿ ಸರ್ಕಾರದವರು ಏನು ತೀರ್ಮಾನಿಸಿದ್ದಾರೆ?

ಉ : ಗ್ರಾಂಟುಗಳು ಅವಶ್ಯಕವಿಲ್ಲವೆಂದು ತೀರ್ಮಾನಿಸಿದ್ದಾರೆ.

ಪ್ರ : ಬ್ರಿಟಿಷ್ ಪ್ರಾಂತ್ಯಗಳಲ್ಲಿ ಈ ತರದ ಗ್ರಾಂಟುಗಳನ್ನು ಕೊಡಲಾಗುತ್ತಿದೆಯೆ ಮತ್ತು ಅಲ್ಲಿರುವ ರೂಲ್ಸಿನ ಪ್ರಕಾರ ಇಲ್ಲೂ ಮಾಡಲಾಗುತ್ತಿದೆಯೆ?

ಉ : ಹೌದು ಯಾವ ರೂಲ್ಸುಗಳನ್ನೂ ಮಾಡಿಲ್ಲ.

ಪ್ರ : ಆ ರೀತಿ ರೂಲ್ಸು ಮಾಡಲು ಸರ್ಕಾರಕ್ಕೆ ಯಾವುದಾದರೂ ಅಡ್ಡಿ ಇದೆಯೆ?

ಉ : ಯಾವ ಆಕ್ಷೇಪಣೆಯೂ ಇಲ್ಲ.

ಪ್ರ : ಗ್ರಾಂಟುಗಳನ್ನು ಕೊಡುವ ವಿಚಾರವಾಗಿ ಮುಂದೆ ಆಲೋಚನೆ ಮಾಡಲಾಗುವುದೆ?

ಉ : ಇಲ್ಲ.

ಪ್ರ . ಪುನಃ ಪರಿಶೀಲನೆ ಮಾಡಲಾಗುವುದೆ?

ಉ; ವಿಚಾರ ಹೇಳಲು ಸಾಧ್ಯವಿಲ್ಲ.

ಭೂಪಾಳಂ : ಕೂಲಿಗಾರರನೇಕರನ್ನು ಡೆಟಿನ್ಯೂಗಳಾಗಿ ಇಟ್ಟಿದ್ದರಿಂದ ಅವರ ಸಂಸಾರದವರಿಗೆ ಪರಿಹಾರ ಕೊಡಲಾಗುವುದೆ?

ಉ : ಆಗುವುದಿಲ್ಲ.

ಶ್ರೀ॥ ನಂಜುಂಡರಾಮಯ್ಯ : ಭಾರತ ರಕ್ಷಣಾ ಶಾಸನದ ಪ್ರಕಾರ ಬ್ರಿಟಿಷ್ ಇಂಡಿಯದಲ್ಲಿಯೇ ಈ ಬಂಧನವಾದುದು

ಉ : ಆ ಪ್ರಶ್ನೆ ಇಲ್ಲಿಗೆ ಸಂಬಂಧಿಸುತ್ತದೆ.

ಶ್ರೀ॥ ಕಡಿದಾಳ್ ಮಂಜಪ್ಪ : ಅಲೋಯನ್ಸ್ ಕೊಡದಿರಲು ಕಾರಣವೇನು?

ಉ : ಕೊಡಬೇಕೆಂಬುದಕ್ಕೆ ಕಾರಣವೇನು?

ಪ್ರ : ಅರ್ಜಿ ಬರೆದುಕೊಂಡರೆ ಜೈಲ್ ಅಧಿಕಾರಿಗಳು ಮೇಲ್ಪಟ್ಟ ಅಧಿಕಾರಿಗಳಿಗೆ ಕಳುಹಿಸಬೇಡವೇ?

ಉ : ಅಗತ್ಯವಾದದ್ದು ಕಳುಹಿಸುತ್ತಾರೆ. ಕಳುಹಿಸಕೂಡದು, ಕಳುಹಿಸಬೇಕೆಂಬ ರೂಲ್ಸಿಲ್ಲ.

ಶ್ರೀ ಚಂದ್ರಶೇಖರರಾವ್ : ನಿರಪರಾಧಿ ಸಂಸಾರಿಗಳಿಗೆ ತೊಂದರೆಪಡಿಸಬೇಕೆಂಬುದು ಕಾನೂನು ಬದ್ಧವೆ?

ಉ . ಉತ್ತರ ಹೇಳಿದೆ

ಪ್ರ : ಅವರನ್ನು ಕೋರ್ಟಿನ ವಿಚಾರಣೆಗೇಕೆ ಗುರಿಪಡಿಸಲಿಲ್ಲ?

ಉ : ಸಾರ್ವಜನಿಕ ಹಿತಕ್ಕಾಗಿ

ಪ್ರ : ಎಷ್ಟು ಸಂಸಾರಗಳಿಗೆ ಎಷ್ಟು ತೊಂದರೆಯಾಗಿರುವುದು ಗೊತ್ತೆ?

ಪ್ರ : ಅಂಥ ಪ್ರಶ್ನೆಯೇ ಬಂದಿಲ್ಲ

ಇತರೆ ಪ್ರಶ್ನೆಗಳಿಗೆ, ಮಾಡಬೇಕಾದ ಬಗೆ ಹೇಳಿ ದಿವಾನರು ಚರ್ಚೆಯನ್ನು ನಿಲ್ಲಿಸಿದರು

ಅರಿಕೆಗಳು

ವಿಮಾನ ಪಡೆ ಏರ್ಪಾಡು:

ಸಂಸ್ಥಾನದ ರಕ್ಷಣೆಗಾಗಿ ಶ್ರೀಮನ್ಮಹಾರಾಜರವರ ದಿವ್ಯ ನಾಮಾಂಕಿತದಲ್ಲಿ ಒಂದು ವಿಮಾನ ಪಡೆಯನ್ನು ಏರ್ಪಡಿಸಬೇಕೆಂದು ಶ್ರೀ॥ ಭೂಪಾಳಂ ಚಂದ್ರಶೇಖರಯ್ಯನವರು ಪ್ರಾರ್ಥಿಸಿದರು.

ನಾಲ್ಕು ವರ್ಷಗಳ ಹಿಂದೆ ಇದೇ ವಿಚಾರದಲ್ಲಿ ಚರ್ಚೆ ಬಂದಿತ್ತು. ಸರ್ಕಾರದವರು ಇದರ ಬಗ್ಗೆ ಆಲೋಚಿಸಲಾಗುತ್ತಿದೆಯೆಂದು ಉತ್ತರವಿತ್ತರು. ಆದರೆ ಇಲ್ಲಿಯವರೆಗೆ ಯಾವುದೂ ಆಗಿಲ್ಲ. ಇಡೀ ಭಾಗದಲ್ಲೇ ಇಲ್ಲದ ವಿಮಾನ ಕಾರ್ಖಾನೆ ಇಲ್ಲಿದೆ. ವಿಮಾನ ಪಡೆಯೂ ಅತ್ಯಾವಶ್ಯಕ. ಭಾರತ ಸರ್ಕಾರದವರು ಇದಕ್ಕೆ ಅಡಚಣೆ ಮಾಡುವುದಿಲ್ಲವೆಂದು ಭೂಪಾಳಂರವರು ತಿಳಿಸಿದರು

ಶ್ರೀ॥ ಅಪ್ಪಾಜಿಗೌಡರು ಉತ್ತರ ಕೊಡುತ್ತಾ, ವಿಶೇಷ ಖರ್ಚು ಮಾಡುವುದಾಗಲೀ ಈಗ ಸಾಧ್ಯವಿಲ್ಲ. ತಕ್ಕಷ್ಟು ಸೌಕರ್ಯವಿಲ್ಲ. ಯುದ್ಧ ಮುಗಿದನಂತರ ಆಲೋಚಿಸಬಹುದು ಎಂದರು.

ಹೊರಗಿನವರಿಗೆ [illegible] ಕೊಡಕೂಡದು

ಸಂಸ್ಥಾನಕ್ಕೆ ಸಂಬಂಧಿಸ್ಟ [illegible] ವಸ್ತುಗಳ ಮಾರಾಟವನ್ನು ಮತ್ತು ಕೊಳ್ಳುವ ಏಜನ್ಸಿಗಳನ್ನು ಮೈಸೂರಿನವರಲ್ಲದವರಿಗೆ ಕೊಡಕೂಡದೆಂದೂ, ಅಂಥಾ ಏಜನ್ಸಿಗಳಿದ್ದರೆ ಅವುಗಳನ್ನು ವಜಾ ಮಾಡಬೇಕೆಂದೂ ಶ್ರೀ ವೆಂಕಟೇಶ ಸೀತಾರಾಮಶಾಸ್ತ್ರಿಗಳು ಪ್ರಾರ್ಥಿಸಿದರು

ದಿವಾನರು ಉತ್ತರಕೊಡುತ್ತಾ, ಇದರ ತತ್ವದ ಬಗ್ಗೆ ಸರ್ಕಾರದವರು ಗಮನ ಕೊಟ್ಟೇ ಇದ್ದಾರೆ. ಎಲ್ಲಾ ಸಂದರ್ಭದಲ್ಲೂ ಸಾಧ್ಯವಿಲ್ಲ. ಸಾಧ್ಯವಾದಮಟ್ಟಿಗೆ ಹಾಗೇ ಮಾಡಲಾಗುತ್ತೆ ಎಂದರು

ಜೀವನದ ಅಂಕಿ ತಯಾರಾಗಬೇಕು

ಭದ್ರಾವತಿ, ಕೋಲಾರದ ಚಿನ್ನದ ಗಣಿ ಪ್ರದೇಶ ಮತ್ತು ಇತರ ಕೈಗಾರಿಕೆ ಪ್ರದೇಶಗಳಲ್ಲಿ ಜೀವನದ ಖರ್ಚಿನ ವಿಷಯದಲ್ಲಿ ಇಂಡೆಕ್ಸ್ ಅಂಕಿ ಅಂಶಗಳನ್ನು ಶೇಖರಿಸಲು ಏರ್ಪಾಡು ಮಾಡಬೇಕೆಂದು ಶ್ರೀ ಶಾಮಯ್ಯಂಗಾರರವರು ಪ್ರಾರ್ಥಿಸಿದರು

ಶ್ರೀ ಕೆ. ವಿ ಅನಂತರಾಮರಾವರು ಉತ್ತರ ಕೊಡುತ್ತಾ, ಸಾಧಾರಣ ಜೀವನದ ಖರ್ಚು ತಿಳಿಸಲು ಪಟ್ಟಿ ಮಾಡಲಾಗಿದೆ. ಇತರ ಕೈಗಾರಿಕೆ ಕಡೆಗಳಲ್ಲೂ ತಯಾರಿಸಲು ಯೋಚಿಸಲಾಗುತ್ತೆ ಎಂದರು.

ರಾಜಕೀಯ ಬಂದಿಗಳ ಬಿಡುಗಡೆಯಾಗಬೇಕು

ರಾಜಕೀಯ ಬಂದಿಗಳನ್ನು ಯಾವ ಕಾರಣಗಳ ಮೇಲೆ ಬಂಧನದಲ್ಲಿಡಲಾಗಿದೆಯೆಂಬುದನ್ನು ತಿಳಿಸದೆ ಅಥವಾ ಅವರು ತಮ್ಮನ್ನು ಬಂಧನದಲ್ಲಿಡಕೂಡದೆಂಬುದಕ್ಕೆ ಕಾರಣವನ್ನು ತೋರಿಸಲು ಅವರಿಗೆ ಅವಕಾಶ ಕೊಡದೆ, ಅವರನ್ನು ಬಂಧನದಲ್ಲಿಟ್ಟಿರುವುದು ಮೂಲ ನ್ಯಾಯ ತತ್ವವನ್ನು ಉಲ್ಲಂಘಿಸಿದಂತಾಗಿದೆ. ಆದಕಾರಣ ರಾಜಕೀಯ ಬಂದಿಗಳನ್ನು ಬಿಟ್ಟುಬಿಡಬೇಕೆಂದೂ, ಇಲ್ಲವೇ ಅವರನ್ನು ನ್ಯಾಯಸಮ್ಮತವಾದ ವಿಚಾರಣೆಗೆ ಗುರಿಪಡಿಸಬೇಕೆಂದೂ ಶ್ರೀ ಟಿ ಎಸ್. ರಾಜಗೋಪಾಲಯ್ಯಂಗಾರ್ಯರು ಪ್ರಾರ್ಥಿಸಿದರು.

ಶ್ರೀಗಳಾದ ಭೂಪಾಳಂ ಚಂದ್ರಶೇಖರಯ್ಯ, ಪಾವಗಡ ನಂಜುಂಡರಾಯರು, ವೀರಭದ್ರ ಸೀತಾರಾಮಶಾಸ್ತ್ರಿಗಳು, [illegible] [illegible] ಮಾತನಾಡಿದರು

ಶ್ರೀ [illegible] ಶ್ರೀ ನಾರಾಯಣಸ್ವಾಮಿ ನಾಯ್ಡುರವರು ಉತ್ತರ ಕೊಡುತ್ತಾ, ಫೆಡರಲ್ ಕೋರ್ಟಿನ ತೀರ್ಪಿಗೂ ಇಲ್ಲಿಗೂ ಸಂಬಂಧವಿಲ್ಲ. ಸರ್ಕಾರದವರು ಸಮರ್ಪಕವಾಗಿ ಕಂಡಂತೆ ಮಾಡಿದ [illegible] ಅಧಿಕಾರಿಗಳಿಗೆ ಅಧಿಕಾರ ಕೊಟ್ಟು ಅವರ ವರದಿಗಳನ್ನು ಪರಿಶೀಲಿಸಿ ಸರ್ಕಾರದವರು ನಿಶ್ಚಯಿಸಿದ್ದಾರೆ. ವಿಚಾರಣೆ ನಡೆಸಬೇಕೆಂಬ ವಿಚಾರದಲ್ಲಿ ಕಾಲಕ್ರಮೇಣ ಕಾನೂನು ಬದಲಾಯಿಸಿದೆ. ಅದರಂತೆ ಮಾಡಲಾಗುತ್ತಿದೆಯೆಂದರು.

ಸಚಿವರಾದ ಶ್ರೀ ಅನಂತರಾಮರಾಯರವರು ಬಂಧನದಲ್ಲಿಟ್ಟಿರುವುದು ಕಾನೂನು ವಿರೋಧ ಎಂಬುದು ಸರಿಯಲ್ಲ. ಕಾರಣವಿಲ್ಲದೆ ಬಂಧಿಸಿದೆ ಎಂಬುದು ಸರಿಯಲ್ಲ. ಹೋದ ವರ್ಷ ಅವರು ಕೈಕೊಂಡ ವಿನಾಶಕಾರ್ಯಕ್ರಮವನ್ನು ನೋಡಿದರೆ ಸರ್ಕಾರವು ಮಾಡಿದ್ದೇ ನ್ಯಾಯವಾಗಿದೆಯೆಂದು ತಿಳಿಯುತ್ತೆ. ಬಂಧನದಲ್ಲಿರುವ ಕೇವಲ ೩೯ ಮಂದಿಗಳನ್ನು ಬಿಟ್ಟರೆ ಏನೂ ಅನಾಹುತವಾಗುವುದಿಲ್ಲವೆಂಬ ವಿಚಾರ ಇನ್ನೂ ಸರ್ಕಾರಕ್ಕೆ ನಂಬಿಕೆ ಬಂದಿಲ್ಲ. ಅವರನ್ನು ಈಗ ಬಿಡಲಾಗುವುದಿಲ್ಲ. ಎಲ್ಲಾ ಕಡೆ ಶಾಂತವಾಗಿರಲಿ ಎಂಬುದೇ ಸರ್ಕಾರದ ಆಶೆ. ಆದರೆ ಅವರಿಗೆ ಒಂದು ಭರವಸೆ ಬರುವವರೆಗೂ ಅವರನ್ನು ಬಿಡಲಾಗುವುದಿಲ್ಲ. ಭರವಸೆ ಬಂದರೆ ಬಿಡಲಾಗುತ್ತದೆ ಎಂದರು.

ಶ್ರೀ ವೆಂಕಟಪ್ಪನವರು, ಸರ್ಕಾರದ ಅಭಿಪ್ರಾಯ ಸರಿಯಾದುದಲ್ಲವೆಂದು ತಿಳಿಸಿದರು

ದಿವಾನರ ಮುಕ್ತಾಯ ಭಾಷಣ

ಅನಂತರ ದಿವಾನರು ಮುಕ್ತಾಯ ಭಾಷಣ ಮಾಡಿದರು. ಸರ್ಕಾರದ ಎಲ್ಲಾ ಉದ್ಯಮಗಳಲ್ಲೂ ಪ್ರಜೆಗಳ ಸಹಕಾರವನ್ನು ಕೋರಿದರು. ಆಹಾರ ಪದಾರ್ಥಗಳು ಹೊರಗೆ ಹೋಗದಂತೆ ನೋಡಿಕೊಳ್ಳುವುದಾಗಿ ತಿಳಿಸಿದರು. ಈ ವರ್ಷದ ಬೆಳೆಯನ್ನು ನೋಡಿ ರೈತರಿಗೆ ರಿಯಾಯಿತಿಯನ್ನು ಕೊಡಲಾಗುವುದು. ಎಲ್ಲಾ ಅಂಶಗಳನ್ನೂ ಪರಿಶೀಲಿಸಿ ಬೆಲೆ ನಿಷ್ಕರ್ಷಿಸಲಾಗುವುದು. ರೇಷನಿಂಗ್ ಜಾರಿಗೆ ತಂದು ಜನರಿಗೆ ಸೌಕರ್ಯವನ್ನು ಒದಗಿಸಲಾಗುತ್ತದೆ. ಎರಡು ವರ್ಷಗಳ ಕಾಲ ರಿಜಿಸ್ಟ್ರಾರ್ ಆಫ್ ಕ್ರೆಡಿಟ್ಸ್ ಬಗ್ಗೆ ರುಸುಮನ್ನು ಮೂರು ರೂ. ಗಳ ವರೆಗೆ ಇಳಿಸಲಾಗುವುದು ಎಂದು ತಿಳಿಸಿದರು.

ಗೋರಕ್ಷಣೆಯ ವಿಷಯವನ್ನು ಸರ್ಕಾರದವರು ಆರ್ಥಿಕ ದೃಷ್ಟಿಯಿಂದ ಮಾತ್ರ ಪರಿಶೀಲಿಸುತ್ತಿದ್ದಾರೆ. ಹತ್ತು ವರ್ಷಗಳಿಗಿಂತ ಕಡಿಮೆ ಇರುವ ಎತ್ತುಗಳನ್ನು, ದನಗಳನ್ನು ಯಾರೂ ಕೊಲ್ಲಬಾರದೆಂದು ಸರ್ಕಾರದ ಓ. ಆಜ್ಞೆ ಮಾಡಲಿದ್ದಾರೆಂದು ತಿಳಿಸಿದರು

ಅನಂತರ ಸಭೆಯ ಅಧಿವೇಶನವು ಮುಕ್ತಾಯವಾಯಿತು

ಕೊಚ್ಚಿ ಮಹಾರಾಜರವರು ಯುವರಾಜ ನಿಧನರಾದರು

[illegible] ಶ್ರೀ [illegible] ಕೇರಳ [illegible] ವರ್ಮರವರು [illegible] ಗಳ ಕಾಲದಲ್ಲಿ [illegible] ಪಿ. ಕೆ. ಶಿಕ್ಷೆ [illegible] ಮೈಸೂರಿನ ನೆನ್ನೆ ದಿನ ಬೆಳಗ್ಗೆ [illegible] ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು [illegible] ವರ್ತಮಾನ ಬಂದಿದೆ

ವಾರ ಭವಿಷ್ಯ

(ಶ್ರೀ ವಿದ್ಯಾನಂದ ಸ್ವಾಮಿಗಳಿಂದ)

ತಾ|| ೧೭-೧೦ ರಿಂದ ೨೩-೧೦ ರ ವರೆಗೆ

ಮೇಷ ಈ ವಾರ ನಿಮಗೆ ಶುಭಫಲವುಂಟು ಆರೋಗ್ಯ ಚೆನ್ನಾಗಿರುತ್ತೆ, ದವ್ಯಬಾಧೆ ತಪ್ಪುವುದು, ವ್ಯವಹಾರದಲ್ಲಿ ಜಯ, ಉದ್ಯೋಗಾದಿಗಳಲ್ಲಿ ಲಾಭ ವಸ್ತು ಎಂಗೆ, ಸಾಂಪತ್ತಿಕ ಸ್ಥಿತಿ ಚೆನ್ನಾಗಿದೆ, ಖರ್ಚ ಹೆಚ್ಚು. ಪ್ರವಾಸಾದಿಗಳು ನಿರ್ವಿಘ್ನವಾಗಿ ನೆರವೇರುವವು ತಾ|| ೨೧, ೨೨ ಸ್ವಲ್ಪ ಕಲಹ

ವೃಷಭ ಈ ವಾರ ನಿಮ್ಮ ಆರೋಗ್ಯ ಕೆಡುವ ಸಂಭವವಿದೆ. ಕೈಕೊಂಡ ಕಾರ್ಯದಲ್ಲಿ ಅಡಚಣೆ, ಹೆಚ್ಚು ಖರ್ಚಾದರೂ ಅಪಮಾನ, ವ್ಯಾಪಾರಾದಿಗಳಲ್ಲಿ ವಿರೋಧದ ಸಂಭವ, ಆಕಸ್ಮಿಕ ಆರ್ಥಿಕ ಸಹಾಯವಾಗುವುದರಿಂದ ಸ್ವಲ್ಪ ಉತ್ತಮ ತಾ|| ೨೨ ಯೋಜನೆಯಿಂದ ಬಿಡುಗಡೆ.

ಮಿಥುನ .. ಪಾಪಗ್ರಹಗಳಿಂದಿದಿರಿ. ಆರೋಗ್ಯ ಸಾಧಾರಣವಾಗಿರುವುದು, ಮಾನಸಿಕ ಚಿಂತೆ, ಆರ್ಥಿಕ ಸ್ಥಿತಿ ಚೆನ್ನಾಗಿದ್ದರೂ ಖರ್ಚ ಜಾಸ್ತಿ, ಉದ್ಯೋಗಾದಿಗಳಲ್ಲಿ ಸ್ವಲ್ಪ ತೊಂದರೆಯಾದರೂ ಮಿತ್ರರ ಸಹಾಯದಿಂದ ಅದರ ನಿವಾರಣೆ, ಪ್ರವಾಸದ ಯೋಗವಿದೆ ತಾ|| ೨೨ ದ್ರವ್ಯಾಭಾವ ತಪ್ಪುವುದು.

ಕರ್ಕ ..ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿರಬಹುದು ಯೋಚನೆಯಿಂದ ಪಾರಾಗುವಿರಿ. ವ್ಯಾಪಾರ, ನೌಕರಿಗಳಲ್ಲಿ ಲಾಭ, ಖರ್ಚ ಜಾಸ್ತಿ. ಹಣಕಾಸಿನ ಪ್ರಸಂಗ ಬಂದರೂ ದೇವರ ದಯದಿಂದ ಪಾರಾಗುವಿರಿ ತಾ|| ೧೯, ೨೦ ದುರ್ಜನ ಸಹವಾಸ, ಮಿತ್ರರಿಂದ ನಿಂದೆ

ಸಿಂಹ . ಈ ವಾರ ಆರೋಗ್ಯ ಚೆನ್ನಾಗಿರುವುದು, ಮಾನಸಿಕ ಸ್ಥಿತಿ ಚೆನ್ನಾಗಿದೆ, ಆರ್ಥಿಕ ದೃಷ್ಟಿಯಿಂದ ಸಾಧಾರಣವಾಗಿದ್ದರೂ ತೊಂದರೆಯಾಗಲಾರದು, ಸರಕಾರಿ ಕೆಲಸಗಳಲ್ಲಿ ಜಯ, ವ್ಯಾಪಾರಾದಿಗಳಲ್ಲಿ ಅನುಕೂಲ, ಶತ್ರುನಾಶ ತಾ|| ೧೯, ೨೦ ಮಿತ್ರರ ಭೇಟಿ, ಯಶಸ್ಸು.

ಕನ್ಯಾ....ಆರೋಗ್ಯ ಚೆನ್ನಾಗಿರುವದು, ಆರ್ಥಿಕ ಸ್ಥಿತಿ ಉತ್ತಮಗೊಳ್ಳುವದು, ಕೈಕೊಂಡ ಕಾರ್ಯದಲ್ಲಿ ಉದಾಸೀನತೆ, ವ್ಯಾಪಾರಾದಿಗಳಲ್ಲಿ ಉತ್ತಮ ಫಲ, ತೊಂದರೆ ತಾ|| ೨೧, ೨೨ ಸ್ತ್ರೀಯವಸ್ತು ವಿನ ಲಾಭ.

ತುಲಾ...ಸ್ವಜನರ ಹಿತಶತ್ರುಗಳನ್ನು ಗಮನಿಸಿ, ಆರೋಗ್ಯ ಒಳ್ಳೇದಾಗಿರುವುದಿಲ್ಲ, ಆರ್ಥಿಕ ಸ್ಥಿತಿ ಸಾಧಾರಣವಾಗಿರುವುದು, ಪ್ರವಾಸದಲ್ಲಿ ಅಪಘಾತ ಮತ್ತು ಅಗ್ನಿಯಿಂದ ಹಾನಿ, ಉದ್ಯೋಗಾದಿಗಳಲ್ಲಿ ತೊಂದರೆ, ಶುಭ ಕೆಲಸಗಳು ಕಷ್ಟದಿಂದ ನೆರವೇರುವವು. ತಾ|| ೧೭ ಹಾನಿ.

ವೃಶ್ಚಿಕ . ಈ ವಾರ ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಸ್ವಸ್ಥತೆ ಕೆಡುವುದು, ಆರ್ಥಿಕ ಸ್ಥಿತಿ ಚೆನ್ನಾಗಿರದೆ, ಖರ್ಚು ಹೆಚ್ಚು. ಆಕಸ್ಮಿಕ ಪ್ರವಾಸ, ವ್ಯಾಪಾರಾದಿಗಳಲ್ಲಿ ಶತ್ರುಪೀಡೆ, ಸ್ತ್ರೀಯರನ್ನು ನಂಬಬೇಡಿ ತಾ|| ೧೯, ೨೦ ಮಾನಸಿಕ ಚಿಂತೆ.

ಧನುಸ್ಸು ಈ ವಾರ ಆರೋಗ್ಯ ದೃಷ್ಟಿಯಿಂದಲೂ, ಆರ್ಥಿಕ ದೃಷ್ಟಿಯಿಂದಲೂ ಉತ್ತಮವಾಗಿದೆ. ಗೌರವ ಪ್ರಾಪ್ತಿ, ಉದ್ಯೋಗ, ನೌಕರಿಗಳಲ್ಲಿ ದ್ರವ್ಯಲಾಭ, ಮನೆಗೆ ಆಪ್ತೇಷ್ಟರ ಆಗಮನ, ವ್ಯವಹಾರದಲ್ಲಿ ಅನುಕೂಲ, ತೀರ್ಥ ಕ್ಷೇತ್ರಗಳ ದರ್ಶನ ಲಾಭ ತಾ|| ೨೨ ಧರ್ಮಕಾರ್ಯಗಳಿಗಾಗಿ ಖರ್ಚ, ಮಾನಸಿಕ ಚಿಂತೆ.

ಮಕರ . ಈ ವಾರ ಆರೋಗ್ಯ ಚೆನ್ನಾಗಿರುವದು. ಉದ್ಯೋಗ, ವ್ಯಾಪಾರಗಳಲ್ಲಿ ಸನ್ಮಾನ ಪ್ರಾಪ್ತಿ, ಶತ್ರುಪೀಡೆ ಜಾಸ್ತಿ, ಕೈಹಾಕಿದವರನ್ನು ಕೆಣಕುವುದರಿಂದ ಅನರ್ಥವಾಗುತ್ತದೆ ವೈದ್ಯರಿಗಾಗಿ ಜಾಸ್ತಿ ಖರ್ಚ ತಾ|| ೧೯ ಆಕಸ್ಮಿಕ ಖರ್ಚ.

ಕುಂಭ...ಈ ವಾರ ನಿಮ್ಮ ಆರೋಗ್ಯ ದೃಷ್ಟಿಯಿಂದ ಚೆನ್ನಾಗಿದ್ದರೂ ಮಾನಸಿಕ ತೊಂದರೆ ಹೆಚ್ಚು, ಆರ್ಥಿಕ ಸ್ಥಿತಿ ಚೆನ್ನಾಗಿರುವುದು ಉದ್ಯೋಗಾದಿಗಳಲ್ಲಿ ಶತ್ರುಪೀಡೆ, ಪ್ರವಾಸದಲ್ಲಿ ವಿಘ್ನ, ಶುಭಕಾರ್ಯಗಳು ಕಷ್ಟದಿಂದ ನೆರವೇರುವವು.

ಮೀನ . ಈ ವಾರ ಸರ್ವ ದೃಷ್ಟಿಯಿಂದಲೂ ಉತ್ತಮವಾಗಿದೆ ವ್ಯಾಪಾರಾದಿಗಳಲ್ಲೂ, ಆರ್ಥಿಕ, ಮಾನಸಿಕ, ಆರೋಗ್ಯಾದಿ ದೃಷ್ಟಿಯಿಂದಲೂ ಚೆನ್ನಾಗಿದೆ. ಶುಭ ಕೆಲಸಗಳು ನಿರ್ವಿಘ್ನವಾಗಿ ನೆರವೇರುವುವು ತಾ|| ೧೯, ೨೦ ಪರೋಪಕಾರಕ್ಕಾಗಿ ಖರ್ಚ, ೨೧, ೨೨ ಧನಪ್ರಾಪ್ತಿ.

ಪಾರಿವಾಳಗಳ ಮೂಲಕ ಸಂದೇಶ

ಅಮೆರಿಕದ ಪಶ್ಚಿಮ ಭಾಗದಲ್ಲಿ ನಡೆಸಿರುವ ಸಂಶೋಧನೆಗಳಿಂದ ತಿಳಿಯಬರುವುದೇನೆಂದರೆ ,ಪಾರಿವಾಳಗಳು ಪ್ಯಾರಾಷೂಟುಗಳಿಗೆ ಬಹಳ ಸಹಕಾರಿಯಾಗುವುವು ಪರೀಕ್ಷೆಗಳನ್ನು ನಡೆಸುವುದಕ್ಕೂ ಸಂದೇಶಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯುವುದಕ್ಕೂ ಅವು ಉಪಯೋಗಿಸಲ್ಪಡುವುವು ೧೪,೦೦೦ ಅಡಿ ಎತ್ತರದಲ್ಲಿ ಗಂಟೆಗೆ ೨೦೦ ಮೈಲಿ ವೇಗದಲ್ಲಿ ಓಡುತ್ತಿರುವ ವಿಮಾನದಿಂದ ಅವುಗಳನ್ನು ಜಾರಿಸುವರು ಯಾವ ಅಪಾಯವೂ ಇಲ್ಲದೆ ಅವು ಪ್ಯಾರಾಷೂಟುಗಳಿಗೆ ನೇರವಾಗಿ ಹೋಗಿ ಸೇರುವವು. ಹೀಗೆ ಈ ಪಾರಿವಾಳಗಳು ೬೦೦ ಮೈಲಿ ಸಂಚರಿಸುವುವೆಂದು ಹೇಳಲಾಗಿದೆ ಗುರಿಯನ್ನು ತಪ್ಪದೆ ಅವು ಕೆಲಸವಾಡುವುವು

ನಾಗಪುರದಲ್ಲಿ ಹೊಸ ನಕ್ಷತ್ರ

ಒಂದು ರೂಪಾಯಿಯ ಆಕಾರದ ಒಂದು ಪ್ರಕಾಶಮಾನವಾದ ನಕ್ಷತ್ರವು ಕಳೆದ ಗುರುವಾರ ರಾತ್ರಿ ೭-೩೦ ಗಂಟೆಗೆ ಸುಮಾರು ಅರ್ಧ ಗಂಟೆ ಕಾಲ ನಾಗಪುರ ನಗರದಲ್ಲಿ ಅಂತರಿಕ್ಷದ ಪಶ್ಚಿಮ ದಿಕ್ಕಿನಲ್ಲಿ ಕಾಣಿಸಿಕೊಂಡಿತೆಂದು ತಿಳಿದುಬಂದಿದೆ ಬಹಳ ಜನರ ಗುಂಪು ಅದನ್ನು ನೋಡಿತು.

ಹೊಸ ಶೋಧನೆಗಳು

ಅಮೆರಿಕದ ಪ್ರಯೋಗಶಾಲೆಗಳಲ್ಲಿ ಅನೇಕ ಹೊಸ ಹೊಸ ಶೋಧನೆಗಳು ಆಗುತ್ತಿವೆ ಯುದ್ಧದ ನಿಮಿತ್ತ ಅವುಗಳನ್ನು ಗೋಪ್ಯವಾಗಿಡಲಾಗಿದೆ ಯುದ್ಧಾನಂತರ ಈ ಶೋಧನೆಯನ್ನು ನೋಡಿ ಪ್ರಪಂಚವು ಮುಗ್ಧವಾಗುವುದು

ಪೋಲೀಸ್ ಅಧಿಕಾರಿಯ ಕೊಲೆ

ಜೆಕೊಸ್ಲೊವಾಕಿಯಾದಲ್ಲಿ ಯುಗೋಸ್ಲಾವಿಯಾದ ಕ್ವಿಸ್ಲಿಂಗ್ ಪೋಲೀಸ್ ಮುಖ್ಯಾಧಿಕಾರಿಯನ್ನು ಗುಂಡಿನಿಂದ ಹೊಡೆದು ಕೊಂದರೆಂದು ವರದಿಯಾಗಿದೆ

ನಾಶವಾಗದ ವಿನಿಯೋಗಗಳು

ಭಂಗಾರ, ಬೆಳ್ಳಿ, ಆಭರಣಗಳು ಅಥವಾ ಕೋಟಿ ಹಾಕಿದ ಸಾಮಾನುಗಳನ್ನು ಯಾವ ಕುಟುಂಬವು ಇಟ್ಟುಕೊಂಡಿರುತ್ತದೋ ಅದಕ್ಕೆ ಸದಾ ಭೀತಿಯಿರುತ್ತದೆ. ಕಳ್ಳರು ಮತ್ತು ಬೆಂಕಿಯ ಭಯ ಈ ಐಶ್ವರ್ಯವನ್ನು ಬಾಧಿಸುತ್ತವೆ. ಬಳಕೆಯಿಂದ ಭಂಗಾರ ಮತ್ತು ಬೆಳ್ಳಿ ಸವೆದುಹೋಗುತ್ತವೆ. ಇವೆಲ್ಲಕ್ಕೂ ಹೆಚ್ಚಾಗಿ ಸಾಮಾನುಗಳ ಬೆಲೆ ಅನೂಹ್ಯ ಕ್ರೋಢಗಳು, ಅನೂಹ್ಯ ಹರಳು ಕಲ್ಲುಗಳು, ಆಸ್ತಿ ಪಾಸ್ತಿ ಮತ್ತು ತಯಾರಾದ ಸಾಮಾನುಗಳು - ಇವುಗಳ ಬೆಲೆ ಈಗ ಮಿತಿಮೀರಿ ಹೆಚ್ಚಾಗಿದ್ದು ಯಾವ ಕ್ಷಣದಲ್ಲಿ ಯಾಗಲೀ ನೀವು ಹಾಕಿದ ಹಣದ ಬಹು ಭಾಗವು ಅನಿರೀಕ್ಷಿತವಾಗಿ ಮಾಯವಾಗಬಹುದು.

ಮುಂಬರುವ ದಿನಗಳಿಗಾಗಿ ಕೂಡಿಡಿ

ಯುದ್ಧಸಮಯದಲ್ಲಿ ಅತಿ ಸುರಕ್ಷಿತವಾದ ಕೂಡಿಡುವಿಕೆಯು ಹಣದ ವಿನಿಯೋಗದಲ್ಲಿದ — ಈ ವಿನಿಯೋಗಗಳು ಮುಂದೆ ನೀವು ಹಾಕಿದಷ್ಟೇ ರೂಪಾಯಿಗಳನ್ನಾದರೂ ಹಿಂತಿರುಗಿ ಕೊಡುವುದಲ್ಲದೆ, ವಿಜಯ ಲಭಿಸಿದೊಡನೆ ಧಾರಣಗಳು ಹಳೋಟಿಗೆ ಬಂದು ನೀವು ಆಗ ವೆಚ್ಚ ಮಾಡುವ ಹಣಕ್ಕೆ ಪೂರ್ಣ ಮೌಲ್ಯವು ದೊರಕುವಂತೆ ಮಾಡುವುವು.

ಈ ವಿನಿಯೋಗಗಳು ಸುರಕ್ಷಿತ.

★ ಸಹಕಾರ ಸಂಸ್ಥೆ
★ ವಿಮಾ ಪಾಲಿಸಿ
★ ಬ್ಯಾಂಕ್ ಸೇವಿಂಗ್ಸ್ ಠೇವು
★ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್

ಅಥವಾ ಇವೆಲ್ಲಕ್ಕೂ ಉತ್ತಮವಾದುದು ಸರಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳು



ರಾಷ್ಟ್ರೀಯ ಯುದ್ಧ ಮುಂಬರುವರು ... ಜಯಶೀಲರಿಗೆ ಸಹಾಯದ ಮಾರ್ಗ

(ಬಿ) ೧೬ ೫೧

ಹುಕ್ಕೇರಿಕರರ ಖುಲಾಸೆ

ಕರ್ನಾಟಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ ಆರ್. ಎಸ್. ಹುಕ್ಕೇರಿಕರ್ ರವರನ್ನು ದಸ್ತಗಿರಿ ಮಾಡಲು ಧಾರವಾಡ ಜಿಲ್ಲಾ ಮ್ಯಾಜಿಸ್ಟ್ರೇಟರು ಕಳೆದ ಆಗಸ್ಟಿನಲ್ಲೇ ವಾರೆಂಟನ್ನು ಹೊರಡಿಸಿದ್ದರು. ಆವರು ಅನೇಕ ತಿಂಗಳ ಕಾಲ ಸಿಕ್ಕದೇ ಇದ್ದರು. ಅದಕ್ಕಾಗಿ ಒಂದು ಪ್ರಕಟಣೆಯನ್ನು ಹೊರಡಿಸಲಾಯಿತು. ಆದರೂ ಸಿಗಲಿಲ್ಲ. ಅವರನ್ನು ಹಿಡಿದುಕೊಟ್ಟವರಿಗೆ ಸಾವಿರ ರೂಪಾಯಿ ಬಹುಮಾನ ಕೊಡುವುದಾಗಿಯೂ ಪ್ರಕಟಿಸಲಾಗಿತ್ತು. ಅನಂತರ ಸ್ವಲ್ಪ ದಿನಗಳ ಮೇಲೆ ಅವರು ಬೊಂಬಾಯಿಯಲ್ಲಿ ಪೋಲೀಸರ ಕೈಗೆ ಸಿಕ್ಕಿದರು.

ತಪ್ಪಿಸಿಕೊಂಡಿದ್ದ ಬಗ್ಗೆ ಅವರ ಮೇಲೆ ಮೊಕದ್ದಮೆ ಜರುಗಿತು. ಧಾರವಾಡದ ಜಿಲ್ಲಾ ಸೆಷನ್ ನ್ಯಾಯಾಧೀಶರು ಅವರನ್ನು ಖುಲಾಸೆ ಮಾಡಿದ್ದಾರೆ.

ರಕ್ಷಣಾ ಶಾಸನದ ೨೬ ನೇ ವಿಧಿಯು ಅಕ್ರಮವಾದುದೆಂದು ಫೆಡರಲ್ ನ್ಯಾಯಾಸ್ಥಾನವು ತೀರ್ಪು ಕೊಟ್ಟಿರುವುದರಿಂದಲೂ ಈ ಕಾನೂನಿಗೆ ವಿರೋಧವಾಗಿ ತಪ್ಪಿಸಿಕೊಂಡಿರುವವರು ಅಪರಾಧಿಗಳೆಂದು ಆ ಕಾನೂನಿನಲ್ಲಾಗಲೀ ಅದನ್ನು ಊರ್ಜಿತಪಡಿಸಿದ್ದ ಹೊಸ ಕಾನೂನಿನಲ್ಲಾಗಲೀ ವ್ಯವಸ್ಥೆ ಮಾಡಿಲ್ಲವಾದುದರಿಂದಲೂ ಶ್ರೀ ಹುಕ್ಕೇರಿಕರ್ ರವರು ನಿರಪರಾಧಿಗಳೆಂದು ನ್ಯಾಯಾಧೀಶರು ತಿಳಿಸಿರುವರು.

ಬರ್ಮಾ ಗಡಿಯಲ್ಲಿ ಶತ್ರುವಿನೊಡನೆ ಕದನ

ಬರ್ಮಾ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಸಂಕೀರ್ಣ ಕಾರ್ಯಾಚರಣೆ ನಡೆದುದರಿಂದ ಹಲವು ಬಾರಿ ಶತ್ರುವಿನೊಡನೆ ಘರ್ಷಣೆ ಮಾಡಬೇಕಾಯಿತೆಂದು ವರದಿಯಾಗಿದೆ. ಮಾಂಗ್ಡಾ ಬಳಿ ಬ್ರಿಟಿಷ್ ಪೆಟ್ರೋಲನ್ನು ಸುತ್ತುಗಟ್ಟಿಕೊಂಡಿದ್ದ ಜಪಾನೀಯರನ್ನು ಆರಿಕಾ ಬಳಿ ಓಡಿಸಲಾಯಿತು. ವಿಮಾನದಳದ ವಿಮಾನಗಳು ಮುಖ್ಯ ಗುರಿಗಳನ್ನು ನಾಶ ಮಾಡಿದುವು.

ಪುಸ್ತಕಕ್ಕೆ ನಿರ್ಬಂಧ

ಸುಬ್ರಹ್ಮಣ್ಯ ಭಾರತಿ ಎಂಬ ಸುಪ್ರಸಿದ್ಧ ತಮಿಳು ದೇಶಭಕ್ತ ಕವಿಗಳು ರಚಿಸಿರುವ 'ದೇಶೀಯ ಗೀತಗಳು' ಎಂಬ ಪುಸ್ತಕವನ್ನು ಮದರಾಸ್ ಆದಿಪತ್ಯದ ಶಾಲೆಗಳಲ್ಲಿ ಉಪಯೋಗಿಸಲು ಕೊಟ್ಟಿದ್ದ ಅನುಮತಿಯನ್ನು ಸರ್ಕಾರದವರು ವಾಪಸು ತೆಗೆದುಕೊಂಡಿದ್ದಾರೆ.

ಪ್ರಾಥಮಿಕ ವಿದ್ಯಾ ಪ್ರಗತಿ

ಡಾಕ್ಟರ್ ಶಿನಿಯವರ ಭಾಷಣ

(ಓ. ಬಾ.) ನಂಜನಗೂಡು ೧೬

ತಾ|| ೧೩-೧೦-೪೩ನೇ ಬುಧವಾರ ಸಾಯಂಕಾಲ ನಂಜನಗೂಡು ಪೋಷಕ ಬೋಧಕರ ಸಮ್ಮೇಳನವನ್ನು ದೇವಾಲಯ ಕಟ್ಟಡದಲ್ಲಿ ಏರ್ಪಡಿಸಲಾಗಿತ್ತು. ಸಭಾಂಗಣವು ಊರ ಪ್ರಮುಖರಿಂದಲೂ, ಪೋಷಕರಿಂದಲೂ, ಬೋಧಕರಿಂದಲೂ ಮಾನ್ಯ ಮಹಿಳೆಯರಿಂದಲೂ ಕಿಕ್ಕಿರಿದು ತುಂಬಿತ್ತು. ವಿವಿಧ ಶಾಲೆಗಳ ಮಕ್ಕಳ ನರ್ತನ, ಅಭಿನಯ ಮುಂತಾದ ಆಟಪಾಟಗಳನ್ನು ಏರ್ಪಡಿಸಲಾಗಿತ್ತು. ಊರಿನ ವಕೀಲರೂ, ಪೋಷಕರಲ್ಲೊಬ್ಬರೂ ಆದ ಶ್ರೀ ನಾಗಪ್ಪನವರು ಪೋಷಕರ ಪರವಾಗಿ ಮಾತನಾಡುತ್ತಾ ಇಂಥಾ ಸಂಘಗಳು ಸಂಸ್ಥಾನದಲ್ಲಿ ಈಚೆಗೆ ನಡೆಸುತ್ತಿರುವ ಕಾರ್ಯವನ್ನೂ, ಅದರಿಂದ ಪ್ರಾಥಮಿಕ ವಿದ್ಯಾಪ್ರಗತಿಗಾಗಿರುವ ಸಹಾಯವನ್ನೂ ವಿವರಿಸಿ ಭಾಷಣಮಾಡಿದರು. ಶ್ರೀ ಮಹೇಶ್ವರಯ್ಯನವರು ಪ್ರಾಥಮಿಕ ಶಾಲೆಯ ಬಾಲಕರಿಗೆ ಸ್ವದೇಶೀಯ ಶಿಕ್ಷಣವನ್ನು ಕೊಡುವ ಏರ್ಪಾಡನ್ನು ಮಾಡುವುದು ನಮ್ಮ ನಾಡಿನ ಹಿತ ದೃಷ್ಟಿಯಿಂದ ತುಂಬ ಅವಶ್ಯಕವೆಂಬ ಅಂಶವನ್ನು ವಿವರಿಸಿ ಭಾಷಣಮಾಡಿದರು.

ಅಧ್ಯಕ್ಷರ ಭಾಷಣ

ಸಮ್ಮೇಳನದ ಅಧ್ಯಕ್ಷರಾದ ಡಾಕ್ಟರ್ ಶಿನಿಯವರು ಪಾಶ್ಚಾತ್ಯದೇಶಗಳಲ್ಲಿ ಇಂಥ ಸಂಘಗಳು ಸಾಧಿಸುತ್ತಿರುವ ಕಾರ್ಯವನ್ನು ವಿವರಿಸಿ, ಮೈಸೂರು ಸಂಸ್ಥಾನದಲ್ಲೂ ಅವುಗಳ ಅವಶ್ಯಕತೆಯನ್ನೂ ಜನತೆಯ ಶಿಕ್ಷಣ ಕ್ಷೇತ್ರದಲ್ಲಿ ಅವುಗಳ ಕಾರ್ಯದ ಮಹೋನ್ನತಿಯನ್ನೂ ವಿವರಿಸಿ ಹೇಳಿದರು. ಸರ್ಕಾರದವರು ಜನತೆಯಲ್ಲಿ ಹೆಚ್ಚು ವಿದ್ಯಾ ಪ್ರಸಾರ ಕಾರ್ಯಕ್ಕಾಗಿ ಬಾಹುಬಲಯುತ ಯೋಜನೆಯನ್ನು ಸ್ವೀಕರಿಸಿ ಏಳುನೂರು ೧೧,೦೦೦ ಶಾಲೆಗಳನ್ನು ಹೊಸದಾಗಿ ಆರಂಭಿಸಿರುವರೆಂದು ವಿವರಿಸಿ ಇಲಾಖೆಯವರು ಪ್ರಾಥಮಿಕ ಶಿಕ್ಷಣ ಕಾರ್ಯವನ್ನು ವಹಿಸಿಕೊಂಡ ಮೇಲೆ ಒಂದು ಲಕ್ಷಕ್ಕಿಂತ ಹೆಚ್ಚು ಮಂದಿ ಬಾಲಕ ಬಾಲಕಿಯರು ವಿದ್ಯಾಭ್ಯಾಸ ಮಾಡುವಂತಾಯಿತೆಂಬುದನ್ನು ತಿಳಿಸಿ, ಅದು ನಮ್ಮ ಮೈಸೂರಿಗೆ ಹೆಮ್ಮೆಯನ್ನುಂಟು ಮಾಡತಕ್ಕದ್ದೆಂದು ಹೇಳಿದರು.

ನಿಮ್ನವರ್ಗದವರ ವಿದ್ಯಾಪ್ರಗತಿ

ಸಂಸ್ಥಾನದ ನಿಮ್ನವರ್ಗದ ಸೋದರರ ಸಂಖ್ಯೆಯನ್ನೂ ಅವರಲ್ಲಿ ಕಂಡುಬರುವ ವಿದ್ಯಾಭಿರುಚಿಯನ್ನೂ ವಿವರಿಸಿ ಹಿಂದುಳಿದ ನಮ್ಮ ಆ ಸೋದರರನ್ನು ಸಹಕ್ಷೇತ್ರದವರನ್ನಾಗಿ ಮಾಡಿ ಅವರ ಜೀವನದ ಮಟ್ಟವನ್ನು ಉನ್ನತ [illegible] ಪಾರ್ಲಿಮೆಂಟಿನ ಸದಸ್ಯರ ನಮ್ಮಲ್ಲಿಗೆ ಸೇರಿದ ನಡವಳಿಕೆಯನ್ನು ಒತ್ತಿ ಹೇಳಿ ಅಂಥ ಹಿಂದುಳಿದ ಬಾಲಕ ಬಾಲಕಿಯರು ಹೆಚ್ಚು ಸಂಖ್ಯೆಯಲ್ಲಿ ಶಾಲೆಗೆ ಸೇರಿ ಶಿಕ್ಷಣ ಪಡೆಯುವಂತೆ ಅವರಿಗೆ ಪ್ರೋತ್ಸಾಹವನ್ನು ಕೊಡಬೇಕೆಂದೂ ಕೋರಿದರು.

ಹೆಣ್ಣುಮಕ್ಕಳ ವಿದ್ಯಾಭ್ಯಾಸ

ಗ್ರಾಮಾಂತರಗಳಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸವು ತೀರ ಕಡಿಮೆಯೆಂದೂ, ಪಟ್ಟಣಗಳಲ್ಲಿ ಕೂಡ ಅಪೇಕ್ಷೆಯಂತೆ ತೃಪ್ತಿಕರವಾದ ಸಂಖ್ಯೆಯಲ್ಲಿ ಇಲ್ಲವೆಂದೂ, ವಿದ್ಯಾರ್ಥಿನಿಯರ ಸಂಖ್ಯೆಯು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಸೇರಿದ ಐದನೆಯ ಒಂದರಷ್ಟು ಹೆಚ್ಚಬೇಕೆಂದೂ ಹೇಳಿದರು. ನಮ್ಮ ನಾಡಿನ ಹೆಣ್ಣುಮಕ್ಕಳು ಎಲ್ಲಿಯವರೆಗೆ ವಿದ್ಯಾಭ್ಯಾಸದಲ್ಲಿ ಹಿಂದುಳಿಯುವರೋ, ಆ ದಿನದವರೆಗೂ ನಮ್ಮ ಭವಿಷ್ಯ ಕೆಟ್ಟದು. ಅದಾದ್ದರಿಂದ ಕಡ್ಡಾಯವಾಗಲಾರದೆಂದು ತಿಳಿಸಿ ಪ್ರತಿಯೊಬ್ಬ ಬಾಲಕಿಯೂ ಕಟ್ಟಕಡೆಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಲೇಬೇಕೆಂದು ಹೇಳಿ, ಆ ಮೂಲಕವೇ ಅವರ ಜೀವನವನ್ನು ಉತ್ತಮಗೊಳಿಸಬೇಕೆಂದು ವಿವರಿಸಿದರು.

ಉಪಸಂಹಾರ

ಮುಂದುವರಿದ ನಾಡಿನ ಜನಾಂಗಗಳಂತೆ ನಮ್ಮವರ ಜೀವನದ ಮಟ್ಟವೂ ಹೆಚ್ಚಬೇಕು. ನಮ್ಮ ನಾಡಿನ ಕೋಟಿ ಜನರು ಸ್ವತಂತ್ರರಾಗಬೇಕು. ಇವಕ್ಕೆಲ್ಲಾ ವಿದ್ಯಾಪ್ರಸಾರವೇ ಅವಶ್ಯಕ. ನಮ್ಮ ಬಾಲಕ ಬಾಲಕಿಯರು ಪ್ರಾಥಮಿಕ ಶಿಕ್ಷಣವನ್ನು ಪಡೆದು, ಮಾಧ್ಯಮಿಕ ಶಾಲೆ, ಹಂತವನ್ನು ದಾಟಿ ಹತ್ತಲೇಬೇಕು. ಇದಕ್ಕಾಗಿ ಹೆಚ್ಚು ಮಾಧ್ಯಮಿಕ ಶಾಲೆಗಳು ಸ್ಥಾಪಿತವಾಗಿವೆ. ನಮ್ಮ ನಾಡು ಹೆಚ್ಚು ಮಂದಿ ವಿದ್ಯಾಸಂಪನ್ನರಿಂದಲೂ, ಸುಸಂಸ್ಕೃತರಿಂದಲೂ ಕೂಡಿ ಜನತೆಯ ಜೀವನದ ಮಟ್ಟವು ಉತ್ತಮೋತ್ತಮ ಸ್ಥಿತಿಗೆ ಏರುವ ಕಾಲವನ್ನು ಕಾತರದಿಂದ ಎಲ್ಲರೂ ನಿರೀಕ್ಷಿಸುವ — ಎಂದು ನುಡಿದು, ತಮ್ಮ ಭಾಷಣವನ್ನು ಮುಗಿಸಿದರು.

ವಂದನೆಗಳೊಡನೆಯೂ, ರಾಷ್ಟ್ರಗೀತೆಯೊಡನೆಯೂ ಸಮ್ಮೇಳನವು ಮುಗಿಯಿತು.

ಬೊಂಬಾಯಿ ಗೌರ್ನರರೂ ಕರ್ನಾಟಕ ಏಕೀಕರಣವೂ

ಧಾರವಾಡದ ಪೌರಸಭೆಯವರು ಬೊಂಬಾಯಿ ಗೌರ್ನರರಿಗೆ ಒಂದು ಮಾನಪತ್ರವನ್ನಿತ್ತರು. ಅದರಲ್ಲಿ ಕರ್ನಾಟಕ ಏಕೀಕರಣದ ವಿಚಾರವನ್ನೆತ್ತಿದರು. ಗೌರ್ನರರು ತಮ್ಮ ಉತ್ತರದಲ್ಲಿ ವ್ಯಂಗ್ಯವಾದ ಕೆಲವು ಮಾತುಗಳನ್ನಾಡಿದ್ದಾರೆ. ಅವರು ಹೇಳಿರುವುದೇನೆಂದರೆ:—

ನಾನು ಸ್ವತಃ ಯಾವ ಅಭಿಪ್ರಾಯವನ್ನೂ ಹೇಳಲಾರೆ. ಪ್ರಾಂತ ಸರ್ಕಾರದವರಿಗೂ ಈ ಪ್ರಶ್ನೆಗೂ ಪ್ರತ್ಯಕ್ಷ ಸಂಬಂಧವಿಲ್ಲ. ತೃಪ್ತಿಕರ ಸಂಧಾನ ಯೋಜನೆಯಲ್ಲಿ ಈ ಪ್ರಾಂತ ರಚನೆಯ ಬೇಡಿಕೆಯನ್ನು ಇತ್ತು ಅದನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಬೆಳೆಸಿದ್ದರೆ ಕಾಲಕ್ರಮದಲ್ಲಿ ಕರ್ನಾಟಕ ಪ್ರಾಂತವೆಂಬ ಫಲಪುಷ್ಪ ಭರಿತ ಸ್ವಾಂತವೆಂಬ ಗಿಡವು ನಿರ್ಮಾಣವಾಗುತ್ತಿತ್ತು. ಆದರೆ ಈ ದೇಶದಲ್ಲಿ ಬೆಳೆಯುತ್ತಿರುವ ಪ್ರತ್ಯೇಕತೆಯ ಭಾವನೆಯನ್ನು ಮಿಶಾಲ ದೃಷ್ಟಿಯಿಂದ ನೋಡುವವರೂ ಅನೇಕರಿದ್ದಾರೆ. ಎರಡು ಕಡೆಯ ವಾದಗಳನ್ನೂ ತೂಕ ಮಾಡುವುದು ನನ್ನ ಕೆಲಸವಲ್ಲ. ಆದರೂ ಯಾವ ಸ್ಥಳೀಯ ಅಧಿಕಾರವು ಈ ಪ್ರಶ್ನೆಯನ್ನು ಪ್ರತಿಪಾದಿಸುತ್ತಿವೆಯೆಂಬುದನ್ನು ನಾನು ಹೇಳಬಲ್ಲೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಪ್ರಭಾವಶಾಲಿ **ಜೀವನಿ** ಔಷಧ

ಗರ್ಭಾಶಯದ ಬಲಹೀನತೆ.
ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.
ಇದು ಮೋಹಕ್ಕೆ ಗಂಡೌಷಧ.
ಇದು ಅಲ್ಪದಲ್ಲಿ ಆಗುವ ಅಮೇಲೆ ಹೋಗುವ ಅಧಿಕ ರಕ್ತಸ್ರಾವ, ಬಿಳಿ ಸ್ರಾವ, ಹೋಗುವುದು, ಅಶಕ್ತಿ ಇವನ್ನೆಲ್ಲ ನಿವಾರಿಸುವುದನ್ನು "ಜೀವನಿ" ಜಾಗ್ರತೆ ಪರಿಹರಿಸುತ್ತದೆ.
ಜೀವನ್ನವು ಉಪಯೋಗಿಸುವ ಸ್ತ್ರೀಯರ ಎಲ್ಲಾ ಬಗೆಯ ರೋಗಗಳಿಗೂ 'ಜೀವನಿ'ಪ್ರಸಿದ್ಧವಾದುದು.
ರಕ್ತಹೀನತೆ, ಬಿಳಿ ಸೆರಗು, ಮುಟ್ಟಿನ ನೋವು, ಬೆನ್ನು ನೋವು, ಸೊಂಟ ನೋವು, ಗರ್ಭಸ್ರಾವ, ಬಂಜೆತನಗಳಿಗೆ "ಜೀವನಿ" ಅಮೃತದಂತಿರುವುದು.

[illegible]

ಟಿ. ಸಿ. ಪಟೇಲರಾಜ್

ಔಷಧಾಲಯ

ಅವರಲ್ಲಿ ಸ್ತ್ರೀಯರ ವೈದ್ಯಕೀಯ ಉಚಿತವಾಗಿ ಮಾಡಲ್ಪಡುವುದು.

ಪತ್ರ ಮುಖಾಂತರ ಬೇಕಾದ ಎಲ್ಲಾ ಬಗೆಯ ಔಷಧಿಗಳೂ ಸಹಾಯ [illegible] ಚಿಕಿತ್ಸೆ ಒದಗಿಸಲ್ಪಡುವುದು [illegible] ವಿವರಗಳಿಗೆ ಬರೆಯಿರಿ.

[illegible]

ನರ್ವ ನ್ಯೂಟ್ರೈನ್

ನರಗಳ ಶಕ್ತಿಗೆ; ವೀರ್ಯವೃದ್ಧಿಗೆ

ಉಪಯೋಗಿಸುವ ವಿಧಾನ –
ಮಲಗುವ ವೇಳೆ ಒಂದು ಟೀಸ್ಪೂನಿನಷ್ಟು ಹಾಲಿನೊಂದಿಗೆ ಸೇವಿಸಬೇಕು

ದೊಡ್ಡ ಬಾಟಲ್ ರೂ 3-1-0 ಮಾತ್ರ
ಸಣ್ಣ ಬಾಟಲ್ ರೂ 1-4-0 „

ಪ್ಯಾಕಿಂಗ್ ಮತ್ತು ಪಾರ್ಸಲ್ ಛಾರ್ಜು ಪ್ರತ್ಯೇಕ

ಈ ನಮ್ಮ ಔಷಧಕ್ಕೆ ಎಲ್ಲಾ ಪ್ರದರ್ಶನದಲ್ಲೂ ಮೆಡಲು ದೊರೆತಿದ್ದವೆ

ಸಿಗುವ ಸ್ಥಳ:—

ಸಿ. ಜಿ. ಓ. ಪ್ರಾಡಕ್ಟ್ಸ್

[illegible]

ಮೈಸೂರು

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧೦-೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ

ತಿ. ಪುಟ್ಟಯ್ಯ ದಿನಸಿಮುಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ — ಚಿಲ್ಲರೆಯಾಗಿ ಸುಂಕ್ಕದ ಸಕ್ಕರೆ, ಅಚ್ಚುಕಟ್ಟಿ, ಒರಿಸಾ [illegible] ಹಲ್ಲೂ ಮತ್ತು ಸಂತೆಪೇಟೆ ಪೋಸ್ಟ್ ಆಫೀಸಿನಲ್ಲೂ ಅಕ್ಕಿ, ರವೆ ಮುಂತಾದ [illegible] ದೊರೆಯುತ್ತವೆ

ಬುಡಸೋಲು ಚಳುವಳಿ ಆರ್ಡಿನೆನ್ಸ್

ಬುಡಸೋಲು ಆಪಾದನೆಗೆ ಜೀವಾವಧಿ ಶಿಕ್ಷೆ

ಇಂಡಿಯಾ ಸರ್ಕಾರದವರು "ಬುಡಸೋಲು ಚಳುವಳಿ ಆರ್ಡಿನೆನ್ಸ್" ಎಂಬುದಾಗಿ ಒಂದು ಹೊಸ ಕಾನೂನನ್ನು ಜಾರಿಗೆ ತಂದಿದ್ದಾರೆ. ಯಾರಾದರೂ ಬುಡಸೋಲು ಕಾರ್ಯದಲ್ಲಿ ತೊಡಗಿದರೆ ಅಥವ ಬುಡಸೋಲು ಕಾರ್ಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಹರಡಿದರೆ ಅವರಿಗೆ ಜೀವಾವಧಿ ಶಿಕ್ಷೆ ಮತ್ತು ಜುಲ್ಮಾನೆ ವಿಧಿಸಲ್ಪಡುವುದು. ಬುಡಸೋಲು ಪ್ರಕಟಣೆಗಳನ್ನು ಇಟ್ಟುಕೊಂಡಿದ್ದರೂ ಸಹ ಇದೇ ಶಿಕ್ಷೆ ವಿಧಿಸಲಾಗುವುದು.

ಶತ್ರು ಸಹಾಯಕ್ಕೆ ಶಿಕ್ಷೆ

ಇಂಡಿಯ ಸರ್ಕಾರದ ಹೊಸ ಶಾಸನ

ಇಂಡಿಯಾ ಸರ್ಕಾರದವರು ಒಂದು ಹೊಸ ಆರ್ಡಿನೆನ್ಸ್ ಜಾರಿ ಮಾಡಿದ್ದಾರೆ. ಭಾರತ ಸೈನ್ಯದ ಒಬ್ಬ ಅಧಿಕಾರಿಯು ಶತ್ರು ಕಡೆ ಸೇರಿದುದಾಗಿಯೂ ಅಥವ ಅವರ ಆಜ್ಞೆಯನ್ನು ಪಾಲಿಸಿದುದಾಗಿಯೂ ಅಥವ ಅವರಿಗೆ ಸಹಾಯ ಮಾಡಿದುದಾಗಿಯೂ ಬೇಕು ಬೇಕೆಂತಲೇ ಅವರ ಕೈ ಸೆರೆಯಾಗಿಯೂ ಅಥವ ಶತ್ರು ವಶದಲ್ಲಿ ಇದ್ದರೂ ಮಿತ್ರ ಸೈನ್ಯಕ್ಕೆ ಬಂದು ಸೇರಲು ಅವಕಾಶವಿದ್ದಾಗ ಅದನ್ನು ಉಪಯೋಗಿಸಿಕೊಳ್ಳದೆಯೂ ಇದ್ದರೆ ಅಂತಹ ಅಧಿಕಾರಿಯ ಸಂಬಳ ಮತ್ತು ಇತರ ಹಣಗಳನ್ನು ಈ ಶಾಸನ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಆಹಾರವಿಲ್ಲದೆ ಮಕ್ಕಳ ಕೊಲೆ

ಗೋರಖಪುರದ ಬಳಿ ರಾಸಿಯಾ ಎಂಬಲ್ಲಿ ರಾಂಪ್ಯಾರಿ ಎಂಬೊಬ್ಬಳು ತನ್ನ ಒಂದು ಹೆಣ್ಣು ಮತ್ತು ಒಂದು ಗಂಡು ಮಗುವನ್ನು ನೀರಿನೊಳಗೆ ತಳ್ಳಿದು ಕೊಂದು ಹಾಕಿದಳೆಂದು ವರದಿಯಾಗಿದೆ. ಮಕ್ಕಳಿಗೆ ಆಹಾರವನ್ನು ತಾನು ಕೊಡಲಾಗದಿದ್ದುದೇ ಇದಕ್ಕೆ ಕಾರಣ.

ರೈಲ್ವೆ ಸ್ಟೇಷನ್ ಬಳಿ ನೂರಾರು ಮರಣ

ಬಂಗಾಳದ ಚಾಂದಪುರ ಎಂಬಲ್ಲಿ ಅನ್ನಕ್ಷಾಮವು ಘೋರವಾಗಿದೆ. ಸೆಪ್ಟೆಂಬರಿನಲ್ಲಿ ಅಲ್ಲಿನ ರೈಲ್ವೆ ಸ್ಟೇಷನ್ ಆವರಣದಲ್ಲಿ ಹೊಟ್ಟೆಗಿಲ್ಲದೆ ೧೨೭ ಜನರು ಮಡಿದರೆಂದು ತಿಳಿದುಬಂದಿದೆ. ಹೆಂಗಸರೂ ಮಕ್ಕಳೂ ಆಹಾರಕ್ಕಾಗಿ ಬೀದಿ ಬೀದಿ ಅಲೆಯುತ್ತಿದ್ದಾರೆ.

ಸ್ಟೇಟ್ ಲೀಗ್ ಕ್ರಿಕೆಟ್

ಮೈಸೂರು ಜಿಂಖಾನಾ ಟೀಮಿಗೂ ಪಾರ್ಸಿ ಜಿಂಖಾನಾ ಟೀಮಿಗೂ ನಿನ್ನೆ ದಿನ ಪಂದ್ಯ ನಡೆದು ಮೈಸೂರಿನವರಿಗೆ ವಿಜಯವಾಯಿತು ೧೨೦-೬೫ ಶ್ರೀ ವೆಂಕೋಬರಾಯರು ೨೦ ರನ್ನುಗಳಿಗೆ ೭ ವಿಕೆಟ್ಟುಗಳನ್ನು ತೆಗೆದುಕೊಂಡರು. ಭಗವಾನರವರು ೩೨ ರನ್ನು ಪಡೆದರು.

ಕಲ್ಕತ್ತಾವಿಗೆ ಬ್ರೆಜಿಲ್ ಅಕ್ಕಿ

ನ್ಯೂಯಾರ್ಕ್ ನಗರದ ಎಂಪೈರ್ ಉಕ್ಕಿನ ಕಾರ್ಖಾನೆಯವರು ಹೇರಳವಾಗಿ ಬ್ರೆಜಿಲ್ ಅಕ್ಕಿಯನ್ನು ಕಳುಹಿಸಿಕೊಡುವುದಾಗಿ ಕಲ್ಕತ್ತಾ ಮೇಯರ್‌ರಿಗೆ ತಂತಿ ಮೂಲಕ ತಿಳಿಸಿದ್ದಾರೆ. ಕಲ್ಕತ್ತಾ ಮೇಯರರು ಇದನ್ನು ಕೃತಜ್ಞತೆಯಿಂದ ಅಂಗೀಕರಿಸಿ ಅಕ್ಕಿಯನ್ನು ಕೂಡಲೇ ಕಳುಹಿಸುವಂತೆ ಕೋರಿದ್ದಾರೆ.

ಕಾಶ್ಮೀರ್ ಆಯುರ್ವೇದಿಕ್ ವರ್ಕ್ಸ್, ಅಮೃತಸರ

ಇವರ ಅತ್ಯುತ್ತಮವಾದ "ದಿಲಾವರ"

ಹಿಂಗು

ತೊಲ 4 ಆಣೆ, 1 ರೂ. ಗೆ 5 ತೊಲ

ದೊರೆಯುವ ಸ್ಥಳ:—

ಗೋಪಾಲ್ ಅಂಡ್ ಕೋ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬ್ರಾಂಚ್:—

ತ್ಯಾಗರಾಜ ರೋಡು, ಮೈಸೂರು.

ಶ್ರೀ॥ ಎ. ಎನ್. ರಾಘವಾಚಾರ್ಯರು ಎಕ್ಸೈಜ್ ಕಮೀಷನರು

ಮೈಸೂರು ೧೭

ಫೈನಾನ್ಷಿಯಲ್ ಸೆಕ್ರಟರಿಗಳಾಗಿದ್ದು ರಜದ ಮೇಲಿದ್ದ ಶ್ರೀ॥ ಎ. ಎನ್. ರಾಘವಾಚಾರ್ಯರನ್ನು ಎಕ್ಸೈಜ್ ಕಮಿಷನರನ್ನಾಗಿ ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ಎಕ್ಸೈಜ್ ಕಮೀಷನರಾಗಿರುವ ಶ್ರೀ॥ ನವನೀತಂ ನಾಯುಡುರವರನ್ನು ಸರ್ವೆ ಸೂಪರಿಂಟೆಂಡೆಂಟರಾಗಿಯೂ, ಮಿ॥ ಇಸ್ಮಾಯಿಲ್ ಷರೀಫರನ್ನು ಬೆಂಗಳೂರು ಜಿಲ್ಲಾಧಿಕಾರಿಗಳಾಗಿಯೂ, ಶ್ರೀ॥ ಆರ್. ಸಿ. ಮಲ್ಲಪ್ಪನವರನ್ನು ಜನರಲ್ ಸೆಕ್ರಟರಿಯವರಾಗಿಯೂ ನೇಮಿಸಲಾಗುವುದೆಂದು ಹೇಳಲಾಗಿದೆ.

ಜನರಲ್ ಸೆಕ್ರೆಟರಿಗಳಾದ ಶ್ರೀ॥ ಸಫಿ ದಾರಾಪುರಾರವರಿಗೆ ಒಂದು ತಿಂಗಳು ರಜಾ ಕೊಡಲಾಗಿದೆ.

ಬಂಗಾಳ ಮತ್ತು ಇತರ ನಿಧಿಗೆ ಸಹಾಯ

ಬಂಗಾಳ ಕ್ಷಾಮ ಪರಿಹಾರ ನಿಧಿಗೆ ೧೦ ಸಾವಿರ ರೂಪಾಯಿಗಳನ್ನೂ, ಬಿಜಾಪುರ ಮತ್ತು ರಾಯಲಸೀಮಾ ಜಿಲ್ಲೆಗಳ ಪರಿಹಾರ ನಿಧಿಗೆ ತಲಾ ೧೦ ಸಾವಿರ ರೂಪಾಯಿಗಳನ್ನೂ ಸರ್ಕಾರದವರು ಕೊಟ್ಟಿರುವರು.

ಮೈಸೂರು ನಗರದಲ್ಲಿ ಸಾಧ್ವಿ ಪತ್ರಿಕೆಗೆ ಅನುಭವಸ್ಥರಾ ಮತ್ತು ಡಿಪಾಜಿಟ್ ಕೊಡಬ ಏಜಂಟರು ಬೇಕಾಗಿದೆ.

ಕೂಡಲೇ ನಮ್ಮ ಆಫೀಸಿ ಬಂದು ಹೆಚ್ಚಿನ ವಿವರಗಳನ್ನು ತಿಳಿಯಬಹುದು.

ವ್ಯವಸ್ಥಾಪಕ

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ವೃದ್ಧಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ, 184, ಚೈನಾ ಬಜಾರು ರಸ್ತೆ, ಮದರಾಸು,

ಏಜೆಂಟರು : ಅಶೋಕಾ ಫಾರ್ಮಸಿ ಹಳೇ ಮೈಸೂರು ಬ್ಯಾಂಕು ರಸ್ತೆ, ಮೈಸೂರು

Edited, printed and published by A. R. Nagarajan, at the Sadhvi Press, D. Subbiah Road, Mysore.

ಸುರಕ್ಷಿತವಾದ ನಿಧಿ

ಬೆಂಗಳೂರಿನಲ್ಲಿ ಭವ್ಯವಾದ ಬಂಗಲೆ

೧೫ ನೇ ಕ್ರಾಸ್ ರೋಡ್, :: ಮಲ್ಲೇಶ್ವರಂ.

ಒಟ್ಟು ವಿಸ್ತೀರ್ಣ ೨೩೦೦೦ ಚದರಡಿ; ಕಟ್ಟಡ ೪೦೦೦ ಚದರಡಿ.

ಜಮಿನ್ದಾರರು, ಅಧಿಕಾರಿಗಳು, ವರ್ತಕರುಗಳಿಗೆ ಈ ಕಟ್ಟಡವು ಅತ್ಯಂತ ಅನುಕೂಲವಾಗಿದೆ. ಮೋಟಾರು ಗ್ಯಾರೇಜು, ಟೆಲಿಫೋನ್, ಎಲೆಕ್ಟ್ರಿಕ್ ದೀಪ, ನಲ್ಲಿಗಳು, ಮುಂಭಾಗದ ಕೊಠಡಿಗಳಿಗೆ ಸೇರಿದಂತೆ ಹಿಂದಿನ ಮನೆಗಳು ಇವೆ. ಮದರಾಸಿನ ಒಬ್ಬರು ಬಲವಾದ ಪಟ್ಟಿನ ೨೦೦೦೦ ರೂಪಾಯಿಗೆ ಕಮ್ಮಿ ಸವಾಲುಗಳನ್ನು ಪರ್ಯಾಲೋಚಿಸುವುದಿಲ್ಲ

ಬೆಲೆ ರೂ. ೨೫೦೦೦

ಬಿ. ಎಸ್. ಸುಬ್ಬರಾವ್, ಮೈಸೂರು.

(ಜಗನ್ಮೋಹನ ಅರಮನೆ ಬಳಿ) ಅಥವಾ

ಎಂ. ಎ. ಕೆ. ಆಚಾರ್ಯರ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪ್ರಕಟಣೆ

ದಿ ಬೆಂಗಳೂರು ಪ್ರಾವಿಡೆಂಟ್ ಇನ್ಷೂರೆನ್ಸ್ ಕಾರ್ಪೊರೇಷನ್, ಲಿಮಿಟೆಡ್

(ಸ್ಥಾಪನೆ : ೧೯೩೯)

ಮುಖ್ಯ ಕಚೇರಿ : "ವಿಷ್ಣಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ನಗರ

ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ಉದಾರ ಕರಾರುಗಳ ಮೇಲೆ ಮತ್ತು ಅನುವಂಶಿಕ ಕಮಿಷನ್ನಿನ ಮೇಲೆ ಏಜಂಟರನ್ನು ನೇಮಿಸಿಕೊಳ್ಳುವವರಿದ್ದೇವೆಂದು ಪ್ರಕಟಿಸಲು ಆತ್ಮಾನಂದವಾಗುತ್ತದೆ. ಏಜಂಟರು ಪ್ರತಿ ತಿಂಗಳು ಸುಲಭವಾಗಿ ೧೦೦ ರೂ. ಸಂಪಾದಿಸಬಹುದು.

ಶ್ರೀ ಪಿಂಗಳಿ ವೆಂಕಟರಾಮರೆಡ್ಡಿ ಡೈರೆಕ್ಟರು : ೧) ವಿಷ್ಣಾಟಿಕ್ ಗೌವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ. ಲಿ, ಬೆಂಗಳೂರು ಸಿಟಿ. ೨) ಬಾಂಬೆ ಲೈಫ್ ಅಷ್ಯೂರೆನ್ಸ್ ಕಂ. ಲಿ., ಬೊಂಬಾಯಿ. ೩) ದಿ ಯೂನಿವರ್ಸ್ ಲೈಫ್ ಲಿ. ಬೊಂಬಾಯಿ. ೪) ಮಿನರ್ವಾ ಮಿಲ್ಸ್ ಲಿ., ಬೆಂಗಳೂರು ೫) ಮಾಡರ್ನ್ ಮಿಲ್ಸ್ ಲಿ., ಬೊಂಬಾಯಿ. ೬) ಹಿಂದ್ ಷುಗರ್ ಕಂ ಲಿ, ಬೊಂಬಾಯಿ. ೭) ಸಿಂಧ್ಯ ಸ್ಟೀಮ್ ನ್ಯಾವಿಗೇಷನ್ ಕಂ ಲಿ., ಬೊಂಬಾಯಿ. ೮) ಈಸ್ಟರ್ನ್ ಶುಗರ್‌ರಿಫೈನರೀಸ್ [ಇಂಡಿಯಾ] ಲಿ, ಬೊಂಬಾಯಿ. ೯) ಈಸ್ಟರ್ನ್ ಬಂಕರರ್ಸ್ [ಬರ್ಮಾ] ಲಿ., ಬೊಂಬಾಯಿ. ೧೦) ನರೋತ್ತಮ ಲಿ., ಬೊಂಬಾಯಿ. ೧೧) ಕೋ-ಆಪರೇಟಿವ್ ಡೊಮಿನಿಯನ್ ಬ್ಯಾಂಕ್ ಲಿ, ಹೈದರಾಬಾದ್, [ಡೆಕ್ಕನ್]. ೧೨) ಸದಸ್ಯರು, ಅಡ್ವೈಸರಿ ಬೋರ್ಡ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಲಿ ಮತ್ತು ದೇಶಮುಖ, ಜಮೀನ್ದಾರ್, ಬ್ಯಾಂಕರ್, ಅನರರಿ ಸೆಷನ್ಸ್ ಜಡ್ಜ್, ಹೈದರಾಬಾದ್ [ಡೆಕ್ಕನ್]. **ಚೇರ್ಮನ್.**

ಶ್ರೀ ಎಚ್. ವೆಂಕಟರಾಮಯ್ಯ, ಡಿವಿಜನಲ್ ಸೂಪರಿಂಟೆಂಡೆಂಟ್, ವಿಷ್ಣಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ. ಲಿ, ಬೆಂಗಳೂರು ಸಿಟಿ ಮ್ಯಾನೇಜಿಂಗ್ ಡೈರಕ್ಟರ್.

ಕಾರ್ಪೊರೇಷನ್ನಿನ ಬಗ್ಗೆ ಮಹತ್ವದ ಸಂಗತಿಗಳು

೧) ಇನ್ಷೂರೆನ್ಸ್ ಕಾಯಿದೆಯನ್ವಯ ಮೈಸೂರು ಮತ್ತು ಬ್ರಿಟಿಷ್ ಸರ್ಕಾರಗಳಲ್ಲಿ ಠೇವುಗಳನ್ನು ಇಡಲಾಗಿದೆ.

೨) ೧೫ ವರ್ಷ ಅನುಭವದ ಡೈರೆಕ್ಟರ ಅಧೀನದಲ್ಲಿ ಭದ್ರವಾದ ಮತ್ತು ಪ್ರಭಾವಶಾಲಿಗಳಾದ ಡೈರೆಕ್ಟರುಗಳ ಮತ್ತು ವ್ಯವಸ್ಥಾಪಕರ ಮಂಡಳಿ.

೩) ಈಗ ದೊರೆತ ಉದ್ಯಮ ೭ ಲಕ್ಷಕ್ಕಿಂತ ಹೆಚ್ಚಿಗೆ ಮತ್ತು ಕಾರ್ಯಕರ್ತರ ಸಂಖ್ಯೆ ೪೦೦

೪) ಜೀವನಿಧಿ ೧೫% ಹೆಚ್ಚಿಗೆ

೫) ಡಾಕ್ಟರ್ ಪರೀಕ್ಷೆಯಿಲ್ಲದೆ ರೂ ೨೦೦, ರೂ. ೩೦೦, ರೂ. ೪೦೦, ರೂ ೫೦೦ ಗಳಿಗೆ ಹೋಲ್ ಲೈಫ್, ಜಾಯಿಂಟ್ ಲೈಫ್ ಮತ್ತು ಎಂಡೋಮೆಂಟ್ ಪಾಲಿಸಿಗಳನ್ನು ಕೊಡಲಾಗುವುದು ರೂ. ೨೫ ಕ್ಕೆ ಸಹ ಪಾಲಿಸಿಗಳನ್ನು ಕೊಡಲಾಗುವುದು. ದಯವಿಟ್ಟು ವಿವರಗಳಿಗೆ ಬರೆಯಿರಿ.

ಸಂಪುಟ ೨]   ಮಂಗಳವಾರ ೧೯--೧೦--೪೧   [ಸಂಚಿಕೆ ೭೮

ಬಾಲ್ಕನ್‌ನಲ್ಲಿ ಜರ್ಮನ್ ಸೈನ್ಯ ಶೇಖರಣೆ

೫ ವರ್ಷ ಕಾಲ ಯುದ್ಧ ನಡೆಸಲು ಜಪಾನಿನ ಸಿದ್ಧತೆ

ಪೌರಸಭೆಯ ೨೪ ಸ್ಥಾನಗಳಿಗೂ ಕಾಂ|| ಉಮೇದುವಾರರು

ಮೈಸೂರು ಪೌರ ಸಭಾ ಚುನಾವಣೆ

ಎಲ್ಲಾ ಸ್ಥಾನಗಳಿಗೂ ಕಾಂಗ್ರೆಸ್ ಉಮೇದುವಾರರು

ಮೈಸೂರು ೧೮

ಮುಂದಿನ ತಿಂಗಳು ೮ ನೆಯ ತಾ|| ನಡೆಯಲಿರುವ ಮೈಸೂರು ಪೌರಸಭಾ ಚುನಾವಣೆಗೆ ಕಾಂಗ್ರೆಸ್ ಪಾರ್ಟಿಯವರು ೨೪ ಸ್ಥಾನಗಳಿಗೂ ಉಮೇದುವಾರರನ್ನು ನಿಲ್ಲಿಸುವವರಾಗಿದ್ದಾರೆ. ಈಗ ಹಾಲಿ ಕಾಂಗ್ರೆಸ್ ಪಾರ್ಟಿ ಸದಸ್ಯರ ಪೈಕಿ, ಶ್ರೀಗಳಾದ ಟಿ. ಎಸ್. ರಾಜಗೋಪಾಲಯ್ಯಂಗಾರ್, ಎಂ. ಸಿ. ಮಲ್ಲಪ್ಪ, ಎಸ್. ರಾಜಗೋಪಾಲಯ್ಯಂಗಾರ್, ಎ ಜಿ ರಾಂ, ಎಂ ಕೆ ಲಿಂಗಣ್ಣ, ಎಸ್. ಲಿಂಗಣ್ಣ ಮತ್ತು ಶ್ರೀಮತಿ ...ಮೇಶ್ವರಮ್ಮ ಇವರುಗಳನ್ನು ಉಪಾರಿ ಸ್ಸಿಸಿಲ್ಲ.

ಈ ಕೆಳಗೆ ಕಂಡವರನ್ನು ಕಾಂಗ್ರೆಸ್ಸಿನವರಾಗಿ ಉಮೇದುವಾರರಾಗಿ ನಿಲ್ಲಿಸಲಾಗಿದೆ.

ಚಾಮರಾಜಮೊಹಲ್ಲ— ಶ್ರೀಮತಿ ಯಶೋಧರಮ್ಮ ದಾಸಪ್ಪ, ಶ್ರೀಗಳಾದ ಬಿ. ನಾರಾಯಣ ಸ್ವಾಮಿ, ಆಗರಂ ರಂಗಯ್ಯ, ಎಸ್. ಸತ್ಯನಾರಾಯಣರಾವ್.

ಕೃಷ್ಣರಾಜ— ಶ್ರೀಗಳಾದ ಪಿ. ಸೀತಾರಾಮಯ್ಯ, ಎ. ಎಸ್. ಸೂರ್ಯನಾರಾಯಣರಾವ್, ಎಂ. ಎಸ್. ಜೋಯಿಸ್, ಟಿ. ನರಸಿಂಹಯ್ಯಂಗಾರ್.

ಲಷ್ಕರ್— ಶ್ರೀಗಳಾದ ಇ. ಪಿ. ನಂಜಪ್ಪ, ಎಂ. ಆರ್ ಸಿ. ಬಸಪ್ಪ, ಜಿ. ಜನಾರ್ದನನಾಯ್ಡು, ವಿ. ಎಸ್ ದಾಸಪ್ಪ, ಚಂದ್ರಶೇಖರ ಗೌಡ

ಮಂಡಿ— ಶ್ರೀಗಳಾದ ಎಂ. ಎಸ್. ನಂಜಪ್ಪ, ಎಂ. ವಿ. ವೆಂಕಟರಾಮಯ್ಯ, ಹೆಚ್ ನಂಜಯ್ಯ, ಟಿ. ಮರಿಯಪ್ಪ, ರಂಗಸ್ವಾಮಯ್ಯ.

ದೇವರಾಜ— ಶ್ರೀಗಳಾದ ಯು. ಎಲ್. ರಾಮಚಂದ್ರರಾವ್, ಎ ವಿ. ರಂಗರಾವ್, ...ಡಯ್ಯ, ಪಟ್ಟಣಂ ಶ್ರೀನಿವಾಸ ಶೆಟ್ಟಿ.

ಕಿಲ್ಲೆ— ಶ್ರೀ. ಎ. ಕೃಷ್ಣಮೂರ್ತಿ.

ನಜರ್‌ಬಾದ್— ಶ್ರೀ ಟಿ. ವೆಂಕಟರಮಣಪ್ಪ.

ಸ್ವತಂತ್ರ ಉಮೇದುವಾರರು

ಲಷ್ಕರ್ : ಶ್ರೀ|| ಗಳಾದ ಮಹಮದ್ ...ರ್, ರಾಮಚಂದ್ರ, ಸಿ ಪೆರುಮಾಳ್ ಶೆಟ್ಟಿ, ಜಿ ಆರ್. ನಾಯ್ಡು ಮತ್ತು ಡಾ|| ...ನ್.

ಮಂಡಿ : ಶ್ರೀ|| ಗಳಾದ ಎಂ. ಎಸ್. ...ಜಪ್ಪ, ಮಹಮದ್ ಖಲಿಯುಲ್ಲಾ, ಜಿ. ...ಮುದ್ ಖಾನ್

ಫೋರ್ಟ್ : ಶ್ರೀ|| ಎಂ. ಎಸ್ ರಾಮಯ್ಯ.

ಕೃಷ್ಣರಾಜ : ಶ್ರೀ|| ಗಳಾದ ಟಿ ಎಸ್. ರಾಜಗೋಪಾಲಯ್ಯಂಗಾರ್, ಡಿ. ಸಿ ಬಸಪ್ಪ.

ಚಾಮರಾಜ : ಶ್ರೀ|| ಎ ವೆಂಕಟೇಶ...

ದೇವರಾಜ : ಶ್ರೀ|| ಜಿ ವಿ ಸೂರ್ಯನಾರಾಯಣಶೆಟ್ಟಿ

ನಜರ್‌ಬಾದ್ : ಶ್ರೀ|| ಪಿ ಜಿ. ರಾಮಚಂದ್ರರಾವ್.

ಪ್ರ. ಪ್ರ. ಸಭೆಯ ಕಾಂಗ್ರೆಸ್ ಪಾರ್ಟಿ ಅಧಿಕಾರಿ ವರ್ಗ

ಮೈಸೂರು ೧೯

ಶ್ರೀಗಳಾದ ವಿ ವೆಂಕಟಪ್ಪ (ನಾಯಕರು), ಭೂಪಾಳಂ ಪುಟ್ಟನಂಜಪ್ಪ (ಉಪನಾಯಕರು), ಬಿ. ನಾರಾಯಣಸ್ವಾಮಿ ಮತ್ತು ಎಚ್ ಕರಿಯಪ್ಪ (ಜಂಟಿ ಕಾರ್ಯದರ್ಶಿಗಳು), ಡಿ. ದೇವರಾಜ ಅರಸ್ (ಚೀಫ್ ವಿಪ್), ಯು. ಎಲ್ ರಾಮಚಂದ್ರರಾವ್ (ಖಜಾಂಚಿ), ಶ್ರೀಮತಿ ಸುನಂದಮ್ಮ (ಮೈಸೂರು ಜಿಲ್ಲೆ ವಿಪ್), ಶ್ರೀಮತಿ ರಾಮಮ್ಮ ವೀರಣ್ಣಗೌಡ (ಮಂಡ್ಯ ಜಿಲ್ಲೆ), ಶ್ರೀ||ಗಳಾದ ತಿಮ್ಮರಾಯಪ್ಪ (ಬೆಂಗಳೂರು ಜಿಲ್ಲೆ), ಕೆ. ಆರ್ ಶ್ರೀನಿವಾಸ (ಕೋಲಾರ ಜಿಲ್ಲೆ), ಸಿ ಟಿ ಹನುಮಂತಯ್ಯ (ತುಮಕೂರುಜಿಲ್ಲೆ), ವಿ ವೃಷಭೇಂದ್ರಪ್ಪ (ಚಿತ್ರದುರ್ಗ ಜಿಲ್ಲೆ), ಸಿರಿಗೆರೆ ರುದ್ರಪ್ಪ (ಶಿವಮೊಗ್ಗಾ ಜಿಲ್ಲೆ), ಎಸ್ ಚನ್ನಪ್ಪಶೆಟ್ಟಿ (ಕಡೂರು ಜಿಲ್ಲೆ), ಬಿ ಕೇಶವಮೂರ್ತಿ (ಹಾಸನ ಜಿಲ್ಲೆ)

ಎಕ್ಸಿಕ್ಯುಟಿವ್ ಕಮಿಟಿ ಸದಸ್ಯರುಗಳು —ಶ್ರೀಗಳಾದ ಟಿ ಎಸ್. ಚಂದ್ರಶೇಖರರಾವ್ (ಬೆಂಗಳೂರು), ಮೂಡಲಗಿರಿಗೌಡ (ತುಮಕೂರು), ಜಿ ನಾರಾಯಣಗೌಡ [ಕೋಲಾರ]

ಕಾಂಗ್ರೆಸ್ ಸಂಸ್ಥೆಗೆ ರಾಜೀನಾಮೆ

ಮೈಸೂರು ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯ ಸದಸ್ಯರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಕಾಂಗ್ರೆಸ್ ಸಂಸ್ಥೆಗೆ ರಾಜೀನಾಮೆ ಇತ್ತಿದ್ದಾರೆಂದು ತಿಳಿಯಬರುತ್ತದೆ.

ಶ್ರೀ ಎಂ ಸಿ ಮಲ್ಲಪ್ಪನವರು ಕಾಂಗ್ರೆಸ್ ಮುನಿಸಿಪಲ್ ಪಾರ್ಟಿ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟಿರುವರೆಂದು ತಿಳಿಯಬರುತ್ತದೆ

ಕಾಂಗ್ರೆಸ್‌ನಿಂದ ವಜಾ

ಪ್ರಜಾ ಪ್ರತಿನಿಧಿ ಸಭೆಯ ಕಾಂಗ್ರೆಸ್ ಪಾರ್ಟಿ ಸದಸ್ಯರಾದ ಕೃಷ್ಣರಾಜಪೇಟೆಯ ಶ್ರೀ ಬೆಟ್ಟೇಗೌಡರು ಕಾಂಗ್ರೆಸ್ ಪಾರ್ಟಿಯ ಶಿಸ್ತಿಗೆ ವಿರುದ್ಧವಾಗಿ ನಡೆದುಕೊಂಡುದರಿಂದ ಅವರನ್ನು ಕಾಂಗ್ರೆಸ್ ಸಂಸ್ಥೆಯಿಂದ ವಜಾ ಮಾಡಲಾಗಿದೆ

೫ ವರ್ಷಕಾಲ ಯುದ್ಧ ನಡೆಸಲು ಜಪಾನ್ ಸಿದ್ಧತೆ

ಜರ್ಮನರಿಗೆ ಯುರೋಪಿನಲ್ಲಿ ಆಗುತ್ತಿರುವ ಸೋಲಿನ ವಿಚಾರದಲ್ಲಿ ಜಪಾನರು ಸ್ವಲ್ಪವೂ ಘಾಬರಿಗೊಂಡಿಲ್ಲವೆಂದೂ, ಪೂರ್ವ ರಣಕ್ಷೇತ್ರದಲ್ಲಿ ತ ಪ್ಪೊಬ್ಬರೇ ಯುದ್ಧ ನಡೆಸಲು ಶಕ್ತರಾಗಿದ್ದಾರೆಂದೂ ಪೂರ್ವದಲ್ಲಿ ಇನ್ನು ೫ ವರ್ಷ ಕಾಲವಾದರೂ ಯುದ್ಧ ನಡೆಸಬಹುದೆಂದು ತಿಳಿದು ಅವಶ್ಯಕತಕ್ಕ ಸಿದ್ಧತೆಯನ್ನು ಜಪಾನ್ ನಡೆಸುತ್ತಿದೆಯೆಂದು ಟೋಕಿಯೋದಲ್ಲಿದ್ದ ಬರ್ಲಿನ್ ಪತ್ರಿಕಾ ವರದಿಗಾರರೊಬ್ಬರು ತಿಳಿಸಿದ್ದಾರೆ

ಯುಗೋಸ್ಲಾವಿಯಾ ಸೈನಿಕರ ಚಟುವಟಿಕೆ

ಆಸ್ಟ್ರಿಯಾ, ಹಂಗೇರಿ, ರುಮೆನಿಯಾ, ಇಟಲಿಗಳನ್ನು ಸಂಬಂಧಿಸುವ ಪ್ರಮುಖ ರೈಲ್ವೆ ಮಾರ್ಗವನ್ನು ಯುಗೋಸ್ಲಾವ್ ದೇಶಭಕ್ತರು ಅನೇಕ ಕಡೆಗಳಲ್ಲಿ ಕತ್ತರಿಸಿದ್ದಾರೆ ಗೋರಿಲ್ಲಾ ಕದನದಲ್ಲಿ ಸುಮಾರು ೧ ಸಾವಿರ ಜರ್ಮನರು ಮಡಿದರೆಂದು ಹೇಳಲಾಗಿದೆ

ಬಾಲ್ಕನ್‌ನಲ್ಲಿ ಜರ್ಮನ್ ಸಿದ್ಧತೆ

ಬಾಲ್ಕನ್ ಪ್ರದೇಶದಲ್ಲಿ ಉಗ್ರ ಧಾಳಿ ಕ್ರಮ ನಡೆಸಲು ೭ ಜರ್ಮನ್ ಡಿವಿಜನ್ ಸೈನ್ಯವನ್ನು ತ್ವರಿತವಾಗಿ ಕಳಿಸಲಾಗಿದೆಯೆಂದು ಇಟಾಲಿಯನ್ ಬ್ಯಾರಿ ರೇಡಿಯೋ ತಿಳಿಸುತ್ತದೆ

ಗುಪ್ತವಾಗಿದ್ದ ಪೆಟ್ರೋಲ್ ಸೀಮೆಯೆಣ್ಣೆ ಶೋಧನೆ

ಮುಜಾಫರ್‌ಪೂರ್ ಜಿಲ್ಲೆಯ ಪಟೇಲ್ ಪುರದ ಮಹಾಂತರವರ ಭವನದ ಒಂದು ನೆಲಮಾಳಿಗೆಯಲ್ಲಿ ಶೇಖರಿಸಿದ್ದ ೩೩೩ ಗ್ಯಾಲನ್‌ಗಳ ಪೆಟ್ರೋಲ್, ೯೬ ಗ್ಯಾಲನ್‌ಗಳ ಸೀಮೆಯೆಣ್ಣೆ ಮತ್ತು ೧೯ ಮಣ ಸಕ್ಕರೆಯನ್ನೂ ಪೊಲೀಸರು ಕಂಡು ಹಿಡಿದಿದ್ದಾರೆ ಆ ಭವನವನ್ನು ಪೊಲೀಸರು ಶೋಧಿಸ... ... ... ಅವರಿಗೆ ... ... ಇವನ್ನು ... ... ಶೋಧಿಸಿದರೆಂದೂ ವರದಿಯಾಗಿದೆ.

ಓರಿಸ್ಸಾ ಪ್ರಾಂತ್ಯದ ಮಾಜಿ ಪ್ರಧಾನಿಗೆ ಬಹಿಷ್ಕಾರ

ಓರಿಸ್ಸಾ ಪ್ರಾಂತದ ಮಾಜಿ ಪ್ರಧಾನಿ ಮತ್ತು ಅಸೆಂಬ್ಲಿ ಕಾಂಗ್ರೆಸ್ ಪಾರ್ಟಿ ನಾಯಕರೂ ಆದ ಶ್ರೀ ಬಿಶ್ವನಾಥದಾಸರವರನ್ನು ಸರ್ಕಾರದವರು ಅಸೆಂಬ್ಲಿ ಸದಸ್ಯತನಕ್ಕೂ ಮತ್ತು ಚುನಾವಣೆಗೂ ೬ ವರ್ಷಗಳ ಕಾಲ ಅನರ್ಹರೆಂದು ಆಜ್ಞೆ ಮಾಡಿದ್ದಾರೆ

ಉತ್ತರ ಇಟಲಿಯಲ್ಲಿ ಅಶಾಂತಿ

ಉತ್ತರ ಇಟಲಿಯಲ್ಲಿ ವಿನಾಶ ಕೃತ್ಯ, ಅಶಾಂತಿ ಹೆಚ್ಚಾಗುತ್ತಿರುವುದರಿಂದ, ಆ ಪ್ರದೇಶವನ್ನೆಲ್ಲಾ ಜರ್ಮನಿಯು ಶತ್ರು ಪ್ರದೇಶವಾಗಿ ಘೋಷಿಸಲಾಗುವುದೆಂದು ಸ್ವೀಡಿಷ್ ಪತ್ರಿಕೆಯೊಂದು ವರದಿಮಾಡಿದೆ ಈಗಾಗಲೆ ಜರ್ಮನರು ಅನೇಕ ಇಟಲಿಯ ಸ್ತ್ರೀಯರನ್ನೂ ಮತ್ತು ನಾಯಕರನ್ನೂ ದಸ್ತಗಿರಿ ಮಾಡಿ ಶಿಬಿರಕ್ಕೆ ಕಳಿಸುತ್ತಿದ್ದಾರೆ

ಪ್ರಮುಖ ಕೈಗಾರಿಕೋದ್ಯಮಿಗಳನ್ನು ಫ್ಯಾಸಿಸ್ಟ್ ಅಧಿಕಾರಿಗಳು ದಸ್ತಗಿರಿ ಮಾಡಿದ್ದಾರೆ ಮಿಲಾನ್, ಟ್ಯೂರಿನ್ ಮೊದಲಾದ ನಗರಗಳಲ್ಲಿರುವ ೧೦ ಸಾವಿರ ಉದ್ಯೋಗಸ್ಥರ ಮೇಲೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತಿದೆ

ರಾಜಕೀಯ ಕೈದಿಗಳ ಬಿಡುಗಡೆ

ಅನಾರೋಗ್ಯದಿಂದ ನರಳುತ್ತಿರುವ ರಾಜಕೀಯ ಬಂದಿಗಳನ್ನೆಲ್ಲಾ ಬಿಡುಗಡೆಮಾಡಲು ಬಿಹಾರ್ ಸರ್ಕಾರದವರು ನಿರ್ಧರಿಸಿದ್ದಾರೆ ಮಾಜಿಪ್ರಧಾನಿ ಶ್ರೀ ಕೃಷ್ಣಸಿನ್ಹ ಮತ್ತು ಇನ್ನೂ ಅನೇಕರನ್ನು ಈಗಾಗಲೇ ಬಿಡುಗಡೆಮಾಡಿದ್ದಾರೆ.

ಕೋರ್ಟು ಫೀಜನ್ನು ಹೆಚ್ಚಿಸಲಾಗುವುದು

ಬಿಹಾರ್ ಸರ್ಕಾರದವರು ಕೋರ್ಟು ಫೀಜನ್ನು ಶೇಕಡ ೩೦ ರಷ್ಟು ಮತ್ತು ಎಂಟಿ ಟೇಮೆಂಟ್ ತೆರಿಗೆಯನ್ನು ಶೇಕಡ ೫೦ ರಷ್ಟು ಹೆಚ್ಚಿಸಲು ನಿರ್ಧರಿಸಿದ್ದಾರೆ ಈ ಹೆಚ್ಚಿಗೆ ಹಣವನ್ನು ಯುದ್ಧಾನಂತರ ಕೈಕೊಳ್ಳುವ ಪುನರ್ರಚನಾ ಕಾರ್ಯಗಳಿಗೆ ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ಕಪ್ಪಿನ ವ್ಯಾಪಾರಿಗೆ ಶಿಕ್ಷೆ

ಕಾನ್ಪುರದ ೬ ಮಂದಿ ಕಪ್ಪಿನ ವ್ಯಾಪಾರಿಗಳು ಕಪ್ಪಿನ ವಸ್ತ್ರ ಬುಕ್ಕು ... ಆಜ್ಞೆಗೆ ವಿರುದ್ಧವಾಗಿ ನಡೆದರೆಂಬ ಆಪಾದನೆ ಮೇಲೆ ೩ ಮಂದಿಗೆ ... ... ಶಿಕ್ಷೆ ಮತ್ತು ೧ ಸಾವಿರ ರೂ ದಂಡ ಮತ್ತು ಇತರ ನಾಲ್ಕು ಮಂದಿಗೆ ... ಶಿಕ್ಷೆ ಮತ್ತು ೧ ಸಾವಿರ ... ... ನೆ ವಿಧಿಸಲಾಗಿದೆ

ಪತ್ರಿಕೆ ರೇಷನಿಂಗ್ ಹೊರಬಿದ್ದು

ಕರಾಚಿಯ 'ಸಿಂಧ್ ...' ... ಪತ್ರಿಕೆಯ ... ... ಆರ್ ... ... ರೂ. ಸಾವಿರ ... ... ರದು ಪತ್ರಿಕೆ ೩ ಸಾವಿರ ರೂ ... ... ಕೊಡಬೇಕೆಂದು ಸರ್ಕಾರದವರು ಕೇಳಿದ್ದಾರೆ.

ಶ್ರೀ ಶಂಕರಪ್ಪ ಸ್ಮಾರಕ

ಮೈಸೂರು ೧೮

ಕಳೆದ ವರ್ಷ ಚಳುವಳಿ ಕಾಲವನ್ನು ಮುಂಚಿನಂತೆ ಚೇತನಗೊಳಿಸಿದ ವಿದ್ಯಾರ್ಥಿಗಳ ಚಳುವಳಿಯಲ್ಲಿ ಸೇವಾಸೇನೆ ನಾಯಕನಾಗಿ ಬಲಿದಾನ ಅರ್ಪಿಸಿದ ವೀರ ಸತ್ಯಾಗ್ರಹಿ ಶ್ರೀ ಶಂಕರಪ್ಪನವರು ಮೈಸೂರು ಸೆರೆಮನೆಯಲ್ಲಿ ಆತ್ಮಾಹುತಿ ಕೊಟ್ಟು ಇಲ್ಲಿಗೆ ಒಂದು ವರ್ಷವಾಗಿದೆ. ಪ್ರಥಮ ವಾರ್ಷಿಕ ಸ್ಮಾರಕವನ್ನು ಬರುವ ನವೆಂಬರ್ ಮೊದಲನೆ ವಾರದಲ್ಲಿ ಆಚರಿಸಲು ನಿರ್ಧರಿಸಿದ್ದೇವೆ. ಆ ಸಂದರ್ಭದಲ್ಲಿ ಕುಸ್ತಿ ಪಂದ್ಯ, ಗ್ರಾಮ ಪುನರ್ನಿರ್ಮಾಣಕ್ಕಾಗಿ ಪುಸ್ತಕ ಪ್ರದರ್ಶನ, ಹೈಸ್ಕೂಲುಗಳ ಚರ್ಚಾಸ್ಪರ್ಧೆ, ಸೂಲುವ ಸ್ಪರ್ಧೆ, ಮಕ್ಕಳ ಆಟದ ಪಂದ್ಯ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಈ ಪವಿತ್ರ ಸ್ಮಾರಕೋತ್ಸವವನ್ನು ಮೈಸೂರಿನಲ್ಲಿ ವಿದ್ಯಾರ್ಥಿಗಳು, ಪ್ರಜೆಗಳೂ ಸೇರಿಗೊಂಡು ಪುಸ್ತಕ ದಾನ, ದ್ರವ್ಯಸಹಾಯ ಮಾಡಿ, ಉತ್ಸವ ಸಂಪೂರ್ಣ ಯಶಸ್ವಿಯಾಗುವಂತೆ ನಡೆಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ ಎಂಬುದಾಗಿ ಶ್ರೀ ಶಂಕರಪ್ಪ ಸ್ಮಾರಕ ಉಪಸಮಿತಿಯವರು ಬರೆದಿದ್ದಾರೆ.

ಬಹುಮಾನಕ್ಕಾಗಿ ದಾನ

ಬರುವ ನವೆಂಬರ್ ಮೊದಲನೇ ವಾರದಲ್ಲಿ ಜರುಗುವ ಶ್ರೀ ಶಂಕರಪ್ಪ ಸ್ಮಾರಕೋತ್ಸವದ ಸಮಾರಂಭದಲ್ಲಿ ಕುಸ್ತಿ ಪಂದ್ಯಗಳಿಗಾಗಿ, ಶ್ರೀ ಎಂ. ಆರ್. ಸಿ. ಬಸಪ್ಪನವರು ೧೦೦ ರೂ. ನ ಬೆಳ್ಳಿ ಸಂಭಾವನೆಯನ್ನು [ಟ್ರೋಫಿ], ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಪ್ರತಿವರ್ಷವೂ ಸ್ಮಾರಕ ಕುಸ್ತಿ ಪಂದ್ಯಕ್ಕಾಗಿ, ೨೦ ರೂ. ನ ಒಂದು ಬೆಳ್ಳಿ ಬಹುಮಾನವನ್ನೂ, ಶ್ರೀ ವಿ. ವೆಂಕಟಪ್ಪನವರು ೧೫ ರೂ. ನ ಬೆಳ್ಳಿ ಬಹುಮಾನವನ್ನೂ, ಶ್ರೀ ಕೆ. ಎಸ್. ಸತ್ಯನಾರಾಯಣರಾಯರು ೧೦ ರೂ. ನ ಬೆಳ್ಳಿ ಬಹುಮಾನವನ್ನೂ ಮತ್ತು ಅನೇಕರು ಉದಾರತೆಯಿಂದ ದ್ರವ್ಯಸಹಾಯವನ್ನೂ ಪುಸ್ತಕದಾನವನ್ನೂ ಮಾಡಿರುತ್ತಾರೆ.

ಸಹಾಯಾರ್ಥ ನಾಟಕ

ದಂಪ್ಪರ ಮತ್ತು ದಿಕ್ಕಿಲ್ಲದವರ ಉತ್ತರ ಕ್ರಿಯೆಗಳಿಗಾಗಿ ರಾಜಧಾನಿಯಲ್ಲಿ [illegible]

ಮಳೆಯಿಂದ ಅನೇಕ ಪ್ರಾಣಿಗಳು ಸತ್ತುಹೋದವು.

[illegible]

ಶ್ರೀ ಸಂಜೀವರಾಯರ ನಿಧನ

ಬೆಂಗಳೂರು ೧೮

ವೃದ್ಧ ಪತ್ರಿಕೋದ್ಯೋಗಿಗಳಾಗಿದ್ದ ವಿದ್ಯಾಭೂಷಣ ಸಂಜೀವರಾಯರು ಈ ದಿನ ಬೆಳಗ್ಗೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತಮ್ಮ ೬೪ ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕಳೆದ ೩೫ ವರ್ಷಗಳಿಂದಲೂ ದಿನಂಗಳವರು ಸಂಸ್ಥಾನದ ಮತ್ತು ದಕ್ಷಿಣ ಭಾರತದ ಪತ್ರಿಕೆಗಳ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸಿದ್ದರು.

ಅಸೆಂಬ್ಲಿ ಹೌಸ್ ಕಮಿಟಿ

ಪ್ರಜಾಪ್ರತಿನಿಧಿ ಸಭೆಯ ಹೌಸ್ ಕಮಿಟಿಗೆ ಶ್ರೀ ಎಫ್. ಸಿ. ದೇವರಾಜೇ ಅರಸ್ ಮತ್ತು ಶ್ರೀ ಗುರುನಾಥ ಕೃಷ್ಣ ನಾಡಿಗೇರ್ ರವರನ್ನು ಸರ್ಕಾರದವರು ನಾಮಿನೇಟ್ ಮಾಡಿದ್ದಾರೆ.

೬ ಬೇಲ್ ಬಟ್ಟೆಗಳ ವಶ

ಬೆಂಗಳೂರು ಯುನೈಟೆಡ್ ಟ್ರೇಡಿಂಗ್ ಏಜನ್ಸಿ ಕಂಪೆನಿಯ ಮಾಲೀಕರಾದ ಶ್ರೀ ಯಜಮಾನ ಕೆಂಚಪ್ಪನವರಿಗೆ ಸೇರಿದ ೬ ಬೇಲ್ ಬಟ್ಟೆಗಳನ್ನು ಕಂಟ್ರೋಲ್ ಆಜ್ಞೆಗೆ ವಿರುದ್ಧವಾಗಿ ಇಟ್ಟುಕೊಂಡಿದ್ದರೆಂದು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ.

ಸರ್ಕಾರಿ ವೈದ್ಯಾಧಿಕಾರಿಗಳು ಖಾಸಗಿ ವೃತ್ತಿ ನಡೆಸಕೂಡದು

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆ, ಬೆಂಗಳೂರು ವಿಕ್ಟೋರಿಯಾ, ವಾಣೀವಿಲಾಸ ಮತ್ತು ಸೆಂಟ್ರಲ್ ಆಸ್ಪತ್ರೆಗಳು ಮತ್ತು ಎಲ್ಲಾ ಜಿಲ್ಲಾ ಪ್ರಧಾನ ಆಸ್ಪತ್ರೆಗಳಲ್ಲಿರುವ ವೈದ್ಯಾಧಿಕಾರಿಗಳು ಖಾಸಗಿಯಾಗಿ ವೃತ್ತಿ ನಡೆಸಿ, ಹಣ ಸಂಪಾದಿಸಕೂಡದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಮುಖ್ಯ ಧಾನ್ಯಗಳ ಬೆಲೆ ನಿಗದಿಯ ಕಾನೂನು

ದೆಹಲಿಯಲ್ಲಿ ನಡೆದ ಆಹಾರ ಸಮ್ಮೇಳನದಲ್ಲಿ ಮುಖ್ಯವಾದ ಎಲ್ಲಾ ಧಾನ್ಯಗಳ ಧಾರಣೆಯನ್ನು ನಿಗದಿಮಾಡುವ ಶಾಸನ ಮಾಡಬೇಕೆಂದೂ, ಒಂದು ಸಲ ನಿಗದಿಮಾಡಿದ ಧಾರಣೆಯನ್ನು ಮುಂದಿನ ಸುಗ್ಗಿಯವರೆಗೆ ಬದಲಾಯಿಸಕೂಡದೆಂದೂ ತೀರ್ಮಾನಿಸಲಾಯಿತು. ೫೦ ಸಾವಿರಕ್ಕಿಂತ ಹೆಚ್ಚು ಪ್ರಜಾ ಸಂಖ್ಯೆಯುಳ್ಳ ನಗರಗಳಲ್ಲಿ ರೇಷನಿಂಗ್ ಜಾರಿಗೆ ತರಬೇಕೆಂದೂ, ಹಲವು ಸರ್ಕಾರಿ ಡಿಪೋಗಳನ್ನು ತೆರೆಯಲು ಪ್ರಾಂತ ಮತ್ತು ಸಂಸ್ಥಾನಗಳಲ್ಲಿ ಏರ್ಪಾಡು ಮಾಡಬೇಕೆಂದು ಸೂಚಿಸಲಾಯಿತು.

ಬಂಗಾಳದಲ್ಲಿ ವಾರಕ್ಕೆ ೧೧ ಸಾವಿರ ಮಂದಿ ಸಾಯುತ್ತಿದ್ದಾರೆ

[illegible]

ಪ್ರಾಥಮಿಕ ವಿದ್ಯಾಭ್ಯಾಸ ಅಭಿವೃದ್ಧಿ ಯೋಜನೆ

ಯುದ್ಧಾನಂತರ ಭಾರತದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಅಭಿವೃದ್ಧಿಗೊಳಿಸಲು ಜಾರ್ಜ್ ಸಾರ್ಜೆಂಟರು ಒಂದು ಯೋಜನೆಮಾಡಿರುವುದಾಗಿಯೂ, ಅದಕ್ಕೆ ವರ್ಷಕ್ಕೆ ೩೦೦ ಕೋಟಿ ರೂ. ವೆಚ್ಚವಾಗುತ್ತೆಂದೂ ತಿಳಿಸಿದ್ದಾರೆ. ವಿಶ್ವವಿದ್ಯಾಲಯಗಳ ಪರಸ್ಪರ ಸಮನ್ವಯ, ೨೦ ವರ್ಷಗಳಲ್ಲಿ ಎಲ್ಲದನ್ನೂ ಅಸ್ತಿತ್ವಕ್ಕಾಗಿ ಮಾಡುವುದು ಮತ್ತು ಈ ಯೋಜನೆ ಸಂಪೂರ್ಣ ಫಲಕಾರಿಯಾಗಲು ೪೦-೫೦ ವರ್ಷಗಳಾಗುವುದೆಂದೂ ತಿಳಿಸಿದ್ದಾರೆ. ಒಟ್ಟು ೩೩೩ ಕೋಟಿ ರೂ ಗಳ ವೆಚ್ಚವಾಗುವುದೆಂದೂ, ಇದರ ಪೈಕಿ ೨೭೭ ಕೋಟಿ ರೂ ಸಾರ್ವಜನಿಕ ನಿಧಿಯಿಂದ ಕೊಡಬೇಕೆಂದು ಸೂಚಿಸಿದ್ದಾರೆ.

ಒಂದೇ ದಿನದಲ್ಲಿ ೧೦೪ ಜಪಾನಿ ವಿಮಾನಗಳ ನಾಶ

ನೈರುತ್ಯ ಪೆಸಿಫಿಕ್ಕಿನಲ್ಲಿ ಮಿತ್ರವಿಮಾನ ಧಾಳಿ ನಡೆದು, ೧೦೪ ಜಪಾನಿ ವಿಮಾನಗಳನ್ನು ಒಂದೇ ದಿನದಲ್ಲಿ ನಾಶ ಮಾಡಲಾಯಿತೆಂದೂ, ೩ ಮಿತ್ರ ವಿಮಾನಗಳು ಮಾತ್ರ ನಷ್ಟವಾದವೆಂದೂ ವರದಿಯಾಗಿದೆ.

ಹೊಸ ಬಾಂಬರ್

ಅಮೆರಿಕದಲ್ಲಿ ಉತ್ತಮಪಡಿಸಿದ ಹೊಸ ಬಾಂಬರ್ ವಿಮಾನವೊಂದು ತಯಾರಾಗುತ್ತಿದೆ. ಇದುವರೆಗೆ ಇರುವ ಎಲ್ಲಾ ವಿಮಾನಗಳಿಗಿಂತಲೂ ಹೆಚ್ಚು ದೂರ ಸಂಚರಿಸುವ ಶಕ್ತಿ ಇದಕ್ಕಿದೆ. ಹೆಚ್ಚು ಅಧಿಕ ಭಾರದ ಮದ್ದು ಗುಂಡುಗಳನ್ನು ಸಾಗಿಸಬಲ್ಲದು. ಈಗಾಗಲೇ ಹಲವನ್ನು ಸೈನ್ಯಗಳ ಉಪಯೋಗಕ್ಕೆ ಕೊಡಲಾಗಿದೆ. ಈ ತಿಂಗಳಲ್ಲಿ ಇನ್ನೂ ಹೆಚ್ಚಾಗಿ ತಯಾರಾಗಲಿವೆ.

ಜರ್ಮನ್ ರೈಲು ಉರುಳಿಸಲ್ಪಟ್ಟಿತು

ಉತ್ತರ ಇಟಲಿಯಲ್ಲಿ ಯುಗೋಸ್ಲಾವಿಯಾದ ದೇಶೀಯ ಗೊರಿಲ್ಲಾ ಸೈನಿಕರು ಒಂದು ಜರ್ಮನ್ ರೈಲನ್ನು ಫಿರಂಗಿ ಹೊಡೆತದಿಂದ ಕೆಡವಿದುದರಿಂದ, ೪೦೦ ಮಂದಿ ಜರ್ಮನರು ಸತ್ತರೆಂದೂ, ೩೦೦ ಮಂದಿಗೆ ಗಾಯವಾಗಿದೆಯೆಂದೂ ವರದಿಯಾಗಿದೆ.

೧೦ ಸಾವಿರ ಶತ್ರು ವಿಮಾನ ನಾಶ

ಯುದ್ಧಾರಂಭವಾದಂದಿನಿಂದ ಯುರೋಪ್ ಒಂದರಲ್ಲೇ ೧೦ ಸಾವಿರ ಶತ್ರು ವಿಮಾನಗಳನ್ನು ನಾಶಮಾಡಲಾಗಿದೆಯೆಂದೂ, ಅವುಗಳ ಪೈಕಿ ೫ ಸಾವಿರ ಜರ್ಮನ್ ವಿಮಾನಗಳು ಸೇರಿದ್ದುವೆಂದೂ ಹೇಳಲಾಗಿದೆ.

ಲಾರ್ಡ್ ವೇವಲ್‌ರ ಆಗಮನ

ಭಾರತದ ಭಾವೀ ವೈಸ್‌ರಾಯರಾದ ಲಾರ್ಡ್ ವೇವಲ್‌ರವರು ಪತ್ನೀ ಪುತ್ರ ಸಮೇತರಾಗಿ ಭಾರತಕ್ಕೆ ಮೊನ್ನೆ ದಿನ ಆಗಮಿಸಿದರು

ಮಲೇರಿಯಾ ಹಾವಳಿ

ಒರಿಸ್ಸಾ ಪ್ರಾಂತ್ಯಕ್ಕೆ ಸೇರಿದ ಬರ್ಹಾಂಪುರ ನಗರದಲ್ಲಿ ೪ ಸಾವಿರ ಮಂದಿ ಮಲೇರಿಯಾ ರೋಗದಿಂದ ನರಳುತ್ತಿರುವರೆಂದು ಹೇಳಲಾಗಿದೆ. ಕ್ವಿನೈನ್ ಸರಬರಾಜು ಮಾಡಲು ನಗರದ ೯ ಸ್ಥಳಗಳಲ್ಲಿ ಏರ್ಪಾಡು ಮಾಡಲಾಗಿದೆ.

ಟಿ. ಸಿ. ನಟರಾಜ್
ಔಷಧಾಲಯ
ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಖರ್ಚಿನಿಂದ ಮಾಡಲ್ಪಡುತ್ತದೆ
ಝಂಡೂರವರ ಆಯುರ್ವೇದೀಯ ಔಷಧಿಗಳೆಲ್ಲವೂ ಸದಾ ದೊರೆಯುತ್ತವೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಪ್ರಭಾವಶಾಲಿ ಜೀವನಿ ಔಷಧ
ಗರ್ಭಾಶಯಕ್ಕೆ ಶಕ್ತಿವರ್ಧಕ.
ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.
ಋತು ದೋಷಕ್ಕೆ ಗಂಡೌಷಧ.
ಋತು ಕಾಲದಲ್ಲಿ ಅಥವಾ ಆಮೇಲೆ ತೋರುವ ಅಧಿಕ ರಕ್ತಸ್ರಾವ, ಬಿಳುಪು ಹೋಗುವುದು, ಅಕ್ರಮ ಬಹಿಷ್ಠೆ, ಮುಂತಾದುವುಗಳನ್ನು "ಜೀವನಿ" ಜಾಗ್ರತೆ ಪರಿಹರಿಸುತ್ತದೆ.
ಅತ್ಯುತ್ತಮ ಉಷ್ಣಶಾಮಕ.
ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೂ 'ಜೀವನಿ' ಪ್ರಶಸ್ತವಾದುದು.
ರಕ್ತ ಹೀನತೆ, ನರಗಳ ದೌರ್ಬಲ್ಯ, ಬೆನ್ನುನೋವು, ಸೊಂಟನೋವು, ಗರ್ಭ... ಬಂಜೆತನಗಳಿಗೆ "ಜೀವನಿ" ಅತ್ಯುಪಯುಕ್ತವಾದುದು.

Edited, printed and published by A. R. Nagaraja at the Sadhvi Press, D. Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ
ತಾ|| ೧-೧-೧೯೪೫ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿ ಪುಡಿ
ಯನ್ನೇ ಉಪಯೋಗಿಸಿ.
ಡಿ. ಪುಟ್ಟಯ್ಯ ಬನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು
ವಿ. ಸೂ — [illegible]

ಸಂಪುಟ ೧]   ಬುಧವಾರ ೨೦--೧೦--೪೩   [ಸಂಚಿಕೆ ೭೯

ಬರ್ಮಾ ದಂಡಯಾತ್ರೆ ಹಂಚಿಕೆ

ಬಾಲ್ಕನ್‌ನಲ್ಲಿ ನಾಲ್ಕನೇ ರಣಕ್ಷೇತ್ರದ ಸೂಚನೆ

ಪೋರ್ಚುಗಲ್ ದಾರಿಯನ್ನು ತುರ್ಕಿ ಹಿಡಿಯುವುದೇ ?

ಸರ್ಕಾರದವರು ಸಾರ್ವಜನಿಕ ಸಹಾಯ ಪಡೆಯಬೇಕು

ಆಹಾರ ಪರಿಸ್ಥಿತಿ ಬಗ್ಗೆ ಬಹಿರಂಗ ಸಭೆ

ಮೈಸೂರು ೨೦

ಮೈಸೂರು ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯ ಆಶ್ರಯದಲ್ಲಿ ನಿನ್ನೆ ಸಂಜೆ ರಂಗಾಚಾರ್ಲು ಪುರಭವನದಲ್ಲಿ ಸಾರ್ವಜನಿಕ ಸಭೆಯೊಂದು ನಡೆಯಿತು. ಶ್ರೀ ಪೇಟೆ ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು 'ಇಂದಿನ ಆಹಾರ ಪರಿಸ್ಥಿತಿ" ಬಗ್ಗೆ ಭಾಷಣಗಳಾದುವು.

ಶ್ರೀ. ವೆಂಕಟಪ್ಪನವರ ಭಾಷಣ

ಶ್ರೀ ವಿ ವೆಂಕಟಪ್ಪನವರು ಮಾತನಾಡುತ್ತಾ, ಈ ಸಲದ ಅಸೆಂಬ್ಲಿಯಲ್ಲಿ ಈಗಿನ ಆಹಾರ ಪರಿಸ್ಥಿತಿ ವಿಚಾರವಾಗಿ ಸರಿಯಾದ ವ್ಯವಸ್ಥೆಯನ್ನು ಮಾಡಲು ಯಾವುದೇ ವಿಧವಾದ ಏರ್ಪಾಡುಗಳಿಗೂ ಸರ್ಕಾರದವರು ನಿರ್ಣಯ ನಡೆಸಲು ಸದಸ್ಯರುಗಳಿಗೆ ಅವಕಾಶಕೊಡಲಿಲ್ಲ. ಕೇವಲ ಸದಸ್ಯರುಗಳು ಅವರವರ ಇಷ್ಟ ಬಂದಂತೆ ಹೇಳಿಕೊಳ್ಳುವ ಮತ್ತು ಸರ್ಕಾರದವರು ಅವರ ಇಷ್ಟಬಂದಂತೆ ಮಾಡುವ ಒಂದು " ಅರ್ಜಿದಾರರ ಕೂಟವೆ" ದೊರಕು, ಹೆಚ್ಚಿನದೇನೂ ಆ ಸಭೆಯಿಂದ ನಡೆಸಲು ಅವಕಾಶವಾಗಲಿಲ್ಲ. ಆದ್ದರಿಂದ ಕುಂದುಕೊರತೆಗಳನ್ನು ಒಟ್ಟಾಗಿ ಬಹಿರಂಗ ಪಡಿಸಿದ ಹೊರತು, ಪರಿಸ್ಥಿತಿ ಉತ್ತಮಗೊಳ್ಳುವುದಿಲ್ಲವೆಂದರು.

ಶ್ರೀ ಕೃಷ್ಣಕರ್ಮರವರ ಭಾಷಣ

ಅನಂತರ ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರವರು ಮಾತನಾಡುತ್ತಾ, ಆಹಾರದ ಸಚಿವರು ಮೊನ್ನೆ ಪ್ರಜಾ ಪ್ರತಿನಿಧಿ ಸಭೆಯಲ್ಲೂ, 'ಆಕಾಶವಾಣಿ'ಯಲ್ಲೂ ಆಹಾರದ ವಿಚಾರವಾಗಿ ಪತ್ರಿಕೆಗಳಲ್ಲಿ ಬಂದ ವರದಿಯನ್ನು ಟೀಕೆಮಾಡಿದ ಅಂಶಗಳನ್ನು ಎತ್ತಿಕೊಂಡು, ದೇಶದಲ್ಲಿ ಒಂದು ಪತ್ರಿಕೆಯಲ್ಲಿ ಸಮಸ್ತ ಪತ್ರಿಕೆಗಳೂ ಅಂಕಿ, ಅಂಶ, ವಿವರಗಳೊಡನೆ ಜನರ ಕಷ್ಟಸುಖಗಳನ್ನು ತಿಳಿಸಿದರೆ, ಆಹಾರ ಸಚಿವರು ಅವರನ್ನು ಈರೀತಿ ಮೂದಲಿಸಿ ಮಾತನಾಡಿರುವುದು ಸರಿಯಲ್ಲ. ಸರ್ಕಾರದವರು ಏನೇ ಹೇಳಿಕೊಳ್ಳಲಿ, ನಿಜ ಸಂಗತಿಗಳೆಲ್ಲವೂ ಯಾರೂ ಬಚ್ಚಿಡುವಂತಿಲ್ಲ. ದೇಶದ ಜನರಿಗೆಲ್ಲ ತಿಳಿಯ ತಕ್ಕ ವಿಚಾರ ಎಂಬುದಾಗಿ ಅನೇಕ ಉದಾಹರಣೆಗಳೊಡನೆ ಇಂದಿನ ಪರಿಸ್ಥಿತಿಯನ್ನು ವಿವರಿಸಿದರು.

ದೇಶದಲ್ಲಿ ಇಷ್ಟು ಕೂಗೆದ್ದಿರುವಾಗ ಮಂತ್ರಿಮಂಡಳದಲ್ಲಿರುವ ಸಾರ್ವಜನಿಕ ಸಚಿವರು ಒಬ್ಬರಾದರೂ ಈ ವಿಷಯದಲ್ಲಿ ಏಂದು ಮಾತೂ ಆಡದೆ ತಮಗೆ ಸಂಬಂಧವೇ ಇಲ್ಲವೆಂದು ಸುಮ್ಮನಿರುವುದು, ಅವರು ಈ ಸಮಯದಲ್ಲಿ ದೇಶಕ್ಕೆ ಸಲ್ಲಿಸಬಹುದಾದಂತಹ ಮಹಾ ಸೇವೆಯ ಸುಸಮಯವನ್ನು ಕಳೆದುಕೊಂಡರೆಂದು ವಿಷಾದದಿಂದ ಹೇಳಬೇಕಾಗಿದೆ. ಇದರಿಂದ ಸಾರ್ವಜನಿಕರಿಗೆ ಸರ್ಕಾರದ ಕಾರ್ಯಕ್ರಮದಲ್ಲಿ ನಂಬಿಕೆಯು ಕಡಿಮೆಯಾಗಲು ಅವಕಾಶವಾಗಿದೆ.

ಆಗಸ್ಟ್ ೯ ನೇ ತಾ|| ಆಜ್ಞೆಯಂತೆ ಪೇಟೆಗಳಲ್ಲಿ ಆದ ಅನರ್ಥಗಳಿಂತೂ ಆಗಿಹೋಯಿತು. ಅದಕ್ಕಾಗಿ ಟೀಕಿಸುತ್ತಾ ಕೂತರೆ ಫಲವಿಲ್ಲ. ಇನ್ನಾದರೂ ಸರ್ಕಾರದವರು ಸಾರ್ವಜನಿಕರೆಲ್ಲರ ಪೂರ್ಣ ಸಹಕಾರವನ್ನು ಪಡೆದು ಸರಿಯಾಗಿಯೂ ಅನುಕೂಲವಾಗುವಂತಹ ಸುವ್ಯವಸ್ಥೆಯನ್ನು ಮಾಡುವ

ಪೋರ್ಚುಗಲ್ ದಾರಿಯನ್ನು ತುರ್ಕಿ ಹಿಡಿಯುವುದೆ

ಅಜೋರ್ಸ್ ನೆಲೆಗಳನ್ನು ಪೋರ್ಚುಗಲ್ ಬ್ರಿಟನ್ನಿಗೆ ಬಿಟ್ಟುಕೊಟ್ಟಿದೆಯಷ್ಟೆ ಇದರಿಂದ ತಟಸ್ಥ ರಾಜ್ಯಗಳು ಯೋಚನಾಪರರಾಗಿವೆ ತಮ್ಮ ತಮ್ಮ ಸ್ಥಾನಗಳನ್ನು ಮಿತ್ರ ರಾಜ್ಯಗಳು ಪುನರ್ವಿಮರ್ಶೆ ಮಾಡುತ್ತಿವೆ. ತುರ್ಕಿಯು ಪೋರ್ಚುಗಲ್ ದಾರಿಯನ್ನೇ ಹಿಡಿದು ಬಾಲ್ಕನ್ ಮೇಲೆ ದಂಡಯಾತ್ರೆಮಾಡಲು ಮಿತ್ರರಿಗೆ ನೆಲೆಗಳನ್ನು ಬಿಟ್ಟುಕೊಡಬಹುದೆಂದು ಜರ್ಮನಿಯು ಹೆದರಿದೆ.

ವಾನ್‌ಪೇಪರ್ ಅಂಕಾರ ತ್ಯಜಿಸುವನೆ ?

ಯುದ್ಧವು ಜರ್ಮನಿಗೆ ಪ್ರತಿಕೂಲವಾಗಿ ತಿರುಗುತ್ತಿರುವುದರಿಂದ ವಾನ್ ಪೇಪರ್ ಅಕ್ಸಿಸ್ ಸಂಗಡವನ್ನು ತ್ಯಜಿಸುವರೆ, ಎಂಬ ಸಂಶಯ ಬಂದಿದೆ ನಾಜಿ ಜಗಳ ಗೊಂದಲದಲ್ಲಿ ಇನ್ನು ಮುಂದೆಯೂ ಸಿಕ್ಕಿ ನರಳಲು ಅವರಿಗೆ ಇಷ್ಟವಿಲ್ಲ ಆದ್ದರಿಂದಲೇ ರಿಬ್ಬೆಂಟ್ರಾಪರ ಸ್ಥಾನದಲ್ಲಿ ವಿದೇಶಾಂಗ ಮಂತ್ರಿಸ್ಥಾನದ ಆಹ್ವಾನವನ್ನು ನಿರಾಕರಿಸಿದರೆಂದೂ ಹೇಳಲಾಗಿದೆ

ದೆಹಲಿಯಲ್ಲಿ ಕಾಂ|| ನವರ ಸಭೆ

ಕಾರಾಗೃಹದ ಹೊರಗಿರುವ ಪ್ರಮುಖ ಕಾಂಗ್ರೆಸ್ ಮುಂದಾಳುಗಳು ದೆಹಲಿಯಲ್ಲಿ ಸೇರಿ ರಾಜಕೀಯ ಆರ್ಥಿಕ ಮತ್ತು ಆಹಾರಪರಿಸ್ಥಿತಿಗಳನ್ನು ಪುನರ್ವಿಮರ್ಶಿಸಲು ಗೊತ್ತುಮಾಡಿದ್ದಾರೆ. ನವಂಬರ್ ೬ ನೇ ತಾ|| ಒಂದು ಸಭೆ ನಡೆಯುತ್ತದೆ. ದಿ' ಕಟ್ಟು, ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಡಾ|| ಸುಬ್ಬರಾಯನ್ ಮತ್ತು ಶ್ರೀ ಗೋಪಿನಾಥ ಶ್ರೀವಾಸ್ತವರೂ ಸೇರಿ ಪೂರ್ವಭಾವಿ ಮಾತುಕತೆ ನಡೆಸುವರು.

ರಿಂದಾ ಇದಕ್ಕಾಗಿಯೇ ದೇವರ ಕೃಪೆಯಿಂದ ಸರ್ಕಾರದವರು ಮುಂದಿನ ಸುಗ್ಗಿಯ ಏರ್ಪಾಡುಗಳನ್ನು ಇನ್ನೂ ನಿಶ್ಚಯ ಮಾಡದೆ ಒಂದು ಸದವಕಾಶವನ್ನು ಕಲ್ಪಿಸಿಕೊಂಡಿದ್ದಾರೆಂದೂ ತಿಳಿಸಿ ... ಆ ವರನ್ನು ಅಭಿನಂದಿಸಬೇಕಾ ... ಸಿದರು.

ಅಧ್ಯಕ್ಷರು ಈ ವಿಚಾರದಲ್ಲ ... ರು ಯಾವ ರೀತಿ ಭಾಗವಹಿಸಬೇಕೆಂಬುದನ್ನು ತಿಳಿಸಿದರು.

'ಹಿಟ್ಲರ'ನ ಕೈಸೆರೆ

ಆದರೆ ನಿಜವಾದ ಹಿಟ್ಲರನಲ್ಲ

ಇಟಲಿಯಲ್ಲಿ ೮ ನೇ ಸೈನ್ಯವು ಹಿಟ್ಲರನನ್ನು ಕೈಸೆರೆ ಹಿಡಿದಿದೆ. ಆದರೆ ನಿಜವಾದ ಹಿಟ್ಲರನನ್ನಲ್ಲ ಹಿಟ್ಲರನೆಂಬ ಹೆಸರಿನ ಒಬ್ಬ ಜರ್ಮನ್ ಸಿಪಾಯಿಯು ಈ ಯುದ್ಧದಿಂದ ಭೀಕರತ್ವವನಾಗಿ ವಾಲ್ಟರ್ನೋ ನದಿಯನ್ನು ದಾಟಿಕೊಂಡು ಮಿತ್ರ ಸೈನ್ಯಗಳ ಕಡೆ ಬರುತ್ತಿದ್ದನು. ತನ್ನ ಬಟ್ಟೆ ಬರೆಗಳನ್ನು ಆಚೆ ದಡದಲ್ಲೇ ಬಿಟ್ಟು ಅವನು ಬರುತ್ತಿದ್ದುದನ್ನು ನೋಡಿ ಸೈನಿಕರು ಬೆರಗಾದರು. ಈಗ ಅವನನ್ನು ಯುದ್ಧ ಕೈದಿಗಳ ಶಿಬಿರದಲ್ಲಿಡಲಾಗಿದೆ.

ಬಾಲ್ಕನ್‌ನಲ್ಲಿ ನಾಲ್ಕನೇ ರಣಕ್ಷೇತ್ರ

ಬಾಲ್ಕನ್‌ನಲ್ಲಿ ನಾಲ್ಕನೇ ರಣಕ್ಷೇತ್ರ ಪ್ರಾರಂಭವಾಗುವ ಸಂಭವವಿದೆಯೆಂದು ಅಮೆರಿಕದ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ತಿಳಿಸುತ್ತದೆ. ಫೀಲ್ಡ್ ಮಾರ್ಷಲ್ ರೋಮೆಲ್‌ನ್ನು ಬಾಲ್ಕನ್ ಗ್ರೀಸಿಗೆ ಕಳುಹಿಸಿರುವುದನ್ನು ನೋಡಿದರೆ ಯುಗೋಸ್ಲೇವಿಯಾದಲ್ಲಿ ನಾಜಿಗಳ ಸ್ಥಿತಿ ಬಹಳ ಮಟ್ಟಿಗೆ ಕೆಟ್ಟಿದೆಯೆಂದು ಹೇಳಬಹುದು. ದೇಶಭಕ್ತರ ಗೆರಿಲ್ಲಾ ಚಟುವಟಿಕೆಯಿಂದ ನೂತನ ಘಾಳಿ ಹಂಚಿಕೆ ಸಹಾಯವಾಗಬಹುದು. ಆದರೆ ದಂಡಯಾತ್ರೆ ನಡೆಯದೆ, ದಂಡಯಾತ್ರೆ ವ್ಯೂಹವನ್ನು ಮಾಡುವುದರಿಂದ ಪ್ರಯೋಜನವಿಲ್ಲ. ಅದೂ ಅಲ್ಲದೆ, ಹಿಟ್ಲರನು ಹೆಚ್ಚು ಹೆಚ್ಚಾಗಿ ಸೈನ್ಯವನ್ನು ಬಾಲ್ಕನ್ ಕ್ಷೇತ್ರಕ್ಕೆ ಕಳುಹಿಸುತ್ತಿರುವನೆಂದು ಅಮೆರಿಕ ಪತ್ರಿಕೆಯು ತಿಳಿಸುತ್ತದೆ

ಬರ್ಮಾ ದಂಡಯಾತ್ರೆ ಹಂಚಿಕೆ

ಮುಂದಿನ ಬರ್ಮಾ ದಂಡಯಾತ್ರೆ ಹಂಚಿಕೆ ಪ್ರಕಾರ, ಮೊದಲು ಮಿತ್ರರು ರಂಗೂನನ್ನು ವಶಪಡಿಸಿಕೊಂಡು ನಂತರ ಬರ್ಮಾದಲ್ಲಿರುವ ಎಲ್ಲಾ ನೆಲೆಗಳನ್ನೂ ಗೆದ್ದು ಕೊಂಡು, ಅಲ್ಲಿಂದ ಮುಂದಕ್ಕೆ ಚೈನಾಕ್ಕೆ ಹೋಗಲು, ಬರ್ಮಾ ರಸ್ತೆಯನ್ನು ಪುನಃ ಉಪಯೋಗಿಸುವುದೆಂದು ಹೇಳಲಾಗಿದೆ.

ರಂಗೂನಿನಲ್ಲಿ ನೂತನ ಘಾಳಿ ಪ್ರಾರಂಭ ... ಫಿಲಿಪ್ಪೈನ್ಸ್ ದ್ವೀಪವನ್ನು ಮತ್ತು ಕೇ... ... ವನ್ನು ಉಪಯೋಗಿಸುವುದೆಂದು ಹೇಳಲಾಗಿದೆ.

ಉಮೇದುವಾರಿಕೆ ವಾಪಸು

ದೇವರಾಜ ಮೊಹಲ್ಲಾ ಚುನಾವಣೆಯಲ್ಲಿ

ಮೈಸೂರು ೨೦

ಮೈಸೂರು ಪೌರಸಭೆಯ ಚುನಾವಣೆಗೆ ದೇವರಾಜ ಮೊಹಲ್ಲಾದಿಂದ ಉಮೇದುವಾರರಾಗಿ ನಿಂತಿದ್ದ ಶ್ರೀ ಜಿ. ಸಿ. ಸೂರ್ಯನಾರಾಯಣಶೆಟ್ಟರೂ, ಕೃಷ್ಣರಾಜ ಮೊಹಲ್ಲಾದಿಂದ ನಿಂತಿದ್ದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರೂ ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿರುವರು.

ಇದರಿಂದ ದೇವರಾಜ ಮೊಹಲ್ಲಾದಲ್ಲಿ ಪ್ರತಿಸ್ಪರ್ಧಿಯಿಲ್ಲದೆ ಎಲ್ಲಾ ಕಾಂಗ್ರೆಸ್ಸಿನವರೂ ಚುನಾಯಿತರಾದಂತಾಯಿತು

ಹೆಚ್ಚಿನ ಬೆಲೆಗೆ ಸೀಮೆಯೆಣ್ಣೆ ಮಾರಿದ ಆಪಾದನೆ

ಚಿಕ್ಕಾರಂ ಕೃಷ್ಣಪ್ಪನವರ ಬೀದಿಯಲ್ಲಿ ಚಿಲ್ಲರೆ ಅಂಗಡಿ ವ್ಯಾಪಾರಿಯಾದ ಮಹಮದ್‌ಗೌಸ್ ಎಂಬ ಪನ ಲೈಸೆನ್ಸ್ ಇಲ್ಲದೆ ಮತ್ತು ಸೀಸೆ ಒಂದಕ್ಕೆ ಅರು ನಿಗದಿಯಂತೆ ಹೆಚ್ಚಿನ ಬೆಲೆಗೆ ಸೀಮೆಯೆಣ್ಣೆಯನ್ನು ಮಾರುತ್ತಿದ್ದುದನ್ನು, ಸ್ಪೆಷಲ್ ರೇಷನಿಂಗ್ ಇನ್ಸ್‌ಪೆಕ್ಟರ್ ಶ್ರೀಗಳಾದ ಟಿ. ಕೆ ಮ ನ ಮತ್ತು ಟಿ. ಆನಂದಸಿಂಗ್‌ರವರು ನಿನ್ನೆ ದಿವಸ ಕಂಡುಹಿಡಿದು, ಆ ಅಂಗಡಿಯ ... ಸೀಮೆಯೆಣ್ಣೆ ಸೀಸೆಗಳನ್ನು ವಶಪಡಿಸಿಕೊಂಡು ಆತನ ಮೇಲೆ ಭಾರತ ರಕ್ಷಣಾ ನಿಬಂಧನೆಯ ಮೊಕದ್ದಮೆಯನ್ನು ಹೂಡಿದ್ದಾರೆ

ಕಳವುಮಾಡಿದ ಹೆಂಗಸಿಗೆ ಶಿಕ್ಷೆ

ಮೈಸೂರು ೨೦

ಹಿಂಬಾಲಿಯ ಎಂಟು ವರ್ಷದ ರಜಪೂತ್ ಹೆಂಗಸು ೧೯೪೩-೮-೩ ನೇ ದಿನ ನರಸಿಂಹರಾಜ ಮೊಹಲ್ಲಾ ಪಡ್ಡೆಯ ಶ್ರೀ ವೆಂಕಟರಾಮಯ್ಯರ ಮನೆಗೆ ನುಗ್ಗಿ ಸುಮಾರು ರೂ. ಬೆಲೆಬಾಳುವ ಸಾಮಾನುಗಳನ್ನು ಕದ್ದುಕೊಂಡು ಸಿಟಿ ಮಾರ್ಕೆಟ್ಟಿನಲ್ಲಿ ಪೋಲೀಸರು ಮೊಕದ್ದಮೆ ಹೂಡಿದ್ದರು. ಆಕೆಯು ಸಣ್ಣ ವಯಸ್ಸಿನವಳೂ ಮತ್ತು ಇದೇ ಪ್ರಥಮ ಅಪರಾಧವಾದ್ದರಿಂದ, ಆಕೆಯು ೧ ವರ್ಷ ಒಳ್ಳೆ ನಡತೆಗೆ ಜಾಮೀನು ಒದಗಿಸಬೇಕೆಂದು ನ್ಯಾಯಾಧೀಶರು ಆಜ್ಞೆ ಮಾಡಿದರು.

ಶಿಕ್ಷೆ

ಸರಸೋಜಿರಾವ್ ಎಂಬುವನು ೧೯೪೩-೬-೧೩ ನೇ ದಿನ ಅವನ ... ಅವರ ದಲ್ಲಿ ... ಕಾರಣವೂ ಇಲ್ಲದೆ ... ವೃದ್ಧನೆಂಬ ಆಪಾದನೆಯ ಮೇಲೆ ... ಟಿ ನ್ಯಾಯಾಧೀಶರು ೧ ವರ್ಷ ... ತೆಗೆ ಜಾಮೀನು ಒದಗಿಸಬೇಕೆಂದು ವಿಧಿಸಿದ ಆಜ್ಞೆ ... ೧ ವರ್ಷ ಕಠಿಣ ಶಿಕ್ಷೆ ವಿಧಿಸಿದರು.

ಜರ್ಮನಿ ಮೇಲೆ ದಾಳಿ

ಮಿತ್ರರು ಜರ್ಮನಿ ಮತ್ತು ... ಲಿ ಮಿತ್ರ ವಿಮಾನಗಳು ... ನಿನ್ನೆ ... ... ದ ಮತ್ತು ... ನಡೆಸಿ, ಫ್ರಾನ್ಸ್ ... ಬಾಂಬು ಹಾಕಿದ್ದವು ...

ಗಾಂಧೀಜಿಯವರ ಬಿಡುಗಡೆಯಾಗಬೇಕು

ಶ್ರೀ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು ಭಾರತದ ರಾಜಕೀಯ ಪರಿಸ್ಥಿತಿಯ ಬಗ್ಗೆ ಹೀಗೆ ಹೇಳಿಕೆ ಕಳಿಸಿದ್ದಾರೆ:- "ಭಾರತದಲ್ಲಿ ಸ್ವರಾಜ್ಯ ಸರ್ಕಾರವು ಸಂಪೂರ್ಣವಾಗಿ ತನ್ನ ಅಭ್ಯಾಸದ ನಡೆಯುತ್ತಿದ್ದ ಈ ಕಷ್ಟ ಪರಿಸ್ಥಿತಿಯಲ್ಲಿ [illegible] ಯನ್ನು ತೋರಿಸುತ್ತಿದ್ದಾರೆ. ಇದಕ್ಕೆ ದೂರ ನಾವು ಯಾರು? ಒಬ್ಬರೇ ಸಂಪೂರ್ಣ ದೋಷಭಾಗಿಗಳಾದರು ಅವರ ಇದಕ್ಕೆಲ್ಲ ಕಾಂಗ್ರೆಸ್ಸಿನದೇ ಹೊಣೆಯೆಂದರೆ, ಅದಕ್ಕೆ ಉಪಾಯವೂ ಅವರ ಕೈಯಲ್ಲಿಯೇ ಇದೆ ಎಂದೂ ಬ್ರಿಟಿಷ್ ಸರ್ಕಾರವು ಪ್ರಚಾರ ಮಾಡುತ್ತಲಿದೆ. ಬ್ರಿಟನ್ನು ಸಂಪೂರ್ಣ ಅಧಿಕಾರ ವಹಿಸುವುದರಿಂದ ದೋಷದ ಬಹು ಭಾಗವು ಅವರ ಪಾಲಿಗೇ ಎಂಬುದು ಒಬ್ಬರಲ್ಲಿ ಗೋಚರವಾಗಿದೆ.

ಈ ಪರಿಸ್ಥಿತಿಯಲ್ಲಿ ಜಗತ್ತಿನ ಅಭಿಪ್ರಾಯ ಗಳಿಸಬೇಕಾದರೆ ಭಾರತದ ಸ್ವರಾಜ್ಯವನ್ನು ಬಿಡುಗಡೆ ಮಾಡಿ, ಅವರ ಅಭಿಪ್ರಾಯ [illegible] ಪರಿಸ್ಥಿತಿಯ ವಿಚಾರದ ಸ್ವರೂಪವನ್ನು ಭಾರತೀಯ ಪ್ರತಿನಿಧಿಗಳನ್ನು ಒಪ್ಪಿಕೊಂಡು ಅದಕ್ಕಾಗಿ ರಾಜಕೀಯ ನಿರ್ಬಂಧಿತರನ್ನು ಬಿಡುಗಡೆ ಮಾಡಿ ಹೊಸ ಅಧ್ಯಾಯ ಆರಂಭಿಸಬೇಕು".

ಬಂಗಾಳದ ನಿರ್ಗತಿಕರು

[illegible] ನಿರ್ಗತಿಕರು [illegible] ಕಲ್ಕತ್ತ [illegible] ಎಂದು ಪಟ್ಟಣಕ್ಕೆ ಬಂದಿದ್ದಾರೆ.

ಕಲ್ಕತ್ತಾ ನಗರದಲ್ಲಿ ಬಿಡಲ್ಪಟ್ಟಿದ್ದ [illegible] ಒಂದಿಗೆ ಸಿಕ್ಕ ದಿವಸ ಆಸ್ಪತ್ರೆಗೆ ಸೇರಿಸಲಾಯಿತು. ಅವರ [illegible] ಮಂದಿ ಸತ್ತರು.

ಅಂತರ್ರಾಷ್ಟ್ರೀಯ ಪರಿಹಾರಕ್ಕೆ ಸಹಾಯ

ಅಂತರ್ರಾಷ್ಟ್ರೀಯ ಪರಿಹಾರ ಕೆಲಸಕ್ಕಾಗಿ [illegible] ಲಕ್ಷ ಪೌಂಡುಗಳನ್ನು ಕೊಡಬೇಕೆಂದು ಬ್ರಿಟನ್ನಿನ ಪಾರ್ಲಿಮೆಂಟನ್ನು ಅಲ್ಲಿನ ಸರ್ಕಾರದವರು ಕೇಳಿದ್ದಾರೆ.

ಬಂಗಾಳ ಕ್ಷಾಮ ಪರಿಹಾರ ನಿಧಿಗೆ ಸಹಾಯ

ಬಂಗಾಳ ಕ್ಷಾಮ ಪರಿಹಾರ ನಿಧಿಗೆ [illegible] ವಾರ ಜನ [illegible] ಸಾವಿರ ರೂ. ಮತ್ತು ರಾಜಪುತಾನ, ಅಜ್ಮೀರ್, [illegible] ನಿಧಿಗೆ [illegible] ರೂ. ಗಳನ್ನು ಕೊಟ್ಟಿದ್ದಾರೆ.

ಸುಳಿ ಗಾಳಿಯಿಂದ ನೊಂದವರಿಗೆ ಸಹಾಯ

ಬೆಂಗಳೂರು, ೧೯

[illegible] ಬಂಗಾಳದ [illegible] ಗಳನ್ನು [illegible] ಸಹಾಯ [illegible] ಗಳನ್ನು ಕೊಟ್ಟಿರುವರು.

ಹೆಚ್ಚಿನ ಬೆಲೆಗೆ ಮಾರಿದ್ದಕ್ಕೆ ಶಿಕ್ಷೆ

[illegible] ಶ್ರೀ ಬಿ. ಸಿ. [illegible] ಎಂಬ ವ್ಯಾಪಾರಿಗಾರರು ಕಂಟ್ರೋಲ್ ದರಕ್ಕಿಂತ ಹೆಚ್ಚಿನ ದರದಲ್ಲಿ [illegible] ಮಾರಿದ್ದಕ್ಕಾಗಿ [illegible] ತಿಂಗಳು [illegible] ಶಿಕ್ಷೆ ವಿಧಿಸಲಾಗಿದೆ.

ಭರತಪುರದ ಅಸೆಂಬ್ಲಿ

ಭರತಪುರ ಸಂಸ್ಥಾನದಲ್ಲಿ ಸ್ಥಾಪಿಸಲಾಗಿರುವ ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರನ್ನಾಗಿ [illegible] ರವರು [illegible]

ಭಾರತದ ಆರೋಗ್ಯ ಪರಿಶೀಲನಾ ಸಮಿತಿ

ಭಾರತದ ಆರೋಗ್ಯಗಳನ್ನು ಪರಿಶೀಲಿಸುವ [illegible] ನಡೆಯಬೇಕಾದ ಪುನರ್ವ್ಯವಸ್ಥೆಯ ಕಾರ್ಯಕ್ರಮ [illegible] ಭಾರತದ ಆರೋಗ್ಯ ಸರ್ವೆ [illegible] ಭಾರತ ಸರ್ಕಾರ [illegible]

ಲೇಡಿ ಲಿನ್‌ಲಿತ್‌ಗೋರವರ ಉದಾರ ದಾನ

ಲೇಡಿ ಲಿನ್‌ಲಿತ್‌ಗೋರವರು ತಾವು ಭಾರತವನ್ನು ಬಿಡುವ ಮುನ್ನ, [illegible] ಸೈನಿಕರ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ [illegible] ಲಕ್ಷ ರೂ. ಉದಾರ ದಾನವನ್ನಿತ್ತಿದ್ದಾರೆ. [illegible] ಕೇಂದ್ರ [illegible]

ಬ್ರಿಟಿಷ್ ಮಿಲಿಟರಿ ಮಂಡಲಿ

[illegible] ಪರಿಸ್ಥಿತಿಯನ್ನು ಪರಿಶೀಲಿಸುವ ಬ್ರಿಟಿಷ್ ಮಿಲಿಟರಿ ಮಂಡಲಿ [illegible] ವಿಮಾನ, [illegible] ಕುರಿತು ಚರ್ಚೆ [illegible]

ಕಾಂಗ್ರೆಸ್ಸಿಗೇ ವಿಜಯವನ್ನು ದೊರಕಿಸಿರಿ

ಶ್ರೀ ಹೆಚ್. ಸಿ. ದಾಸಪ್ಪನವರ ವಿನಂತಿ

ಮೈಸೂರು ಕಾಂಗ್ರೆಸ್ಸಿನ [illegible] ಶ್ರೀ ಹೆಚ್. ಸಿ. ದಾಸಪ್ಪನವರು ಈ ಕೆಳಗಿನ ಹೇಳಿಕೆಯನ್ನು ಕೊಟ್ಟಿದ್ದಾರೆ:-

ಮೈಸೂರು ಪೌರಸಭೆಯ [illegible] ಕಾಂಗ್ರೆಸ್ [illegible] ಚುನಾವಣೆ [illegible] ಕಾಂಗ್ರೆಸ್ [illegible] ಕಾಂಗ್ರೆಸ್ಸಿಗೆ ವಿಜಯವನ್ನು ದೊರಕಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಮಾಸ್ಕೋದಲ್ಲಿ ಕ್ರಿಪ್ಸ್ ಸಮ್ಮೇಳನ

[illegible] ಕ್ರಿಪ್ಸ್ [illegible] ಸಮ್ಮೇಳನ [illegible] ಆಂಥನಿ [illegible] ಮಾಸ್ಕೋಗೆ ಆಗಮಿಸಿದ್ದಾರೆ.

೩೦ ಸಾವಿರ ರೂ. ಚಿನ್ನ ಕಳವು

[illegible] ಸ್ಟೇಷನ್ನಿಗೆ [illegible] ಬಂದ [illegible] ಸಾವಿರ ರೂ. ಬೆಲೆಬಾಳುವ ಚಿನ್ನದ [illegible] ಕಳವಾಗಿದೆ [illegible]

[illegible] ಬಿಡುಗಡೆ

[illegible]

ಹಾವು ಕಡಿದ ಮಗು ಬದುಕಿದೆ

ಹಾವಿನಿಂದ ಕಡಿಯಲ್ಪಟ್ಟ ಹನ್ನೊಂದು ವರ್ಷದ ಕೆಳಗೆ ಸ್ಮಶಾನದಲ್ಲಿ ಹೂಳಲ್ಪಟ್ಟಿದ್ದ ಒಂದು ಮಗು ಜೀವಸಹಿತ ಪತ್ತೆ ಹಾಗಿರುವ ವಿಚಿತ್ರ ಕಥೆಯಿದು:-

ಸಿಲ್ಹಟ್ಟಿನಲ್ಲಿ ಹನ್ನೊಂದು ವರ್ಷದ ಹಿಂದೆ ಇವನನ್ನು ಹಾವು ಕಚ್ಚಿತು. ಒಂದು ದೋಣಿಯಲ್ಲಿ ಮಗುವನ್ನು ಹಾಕಿ [illegible] ಹಿಂದೆ [illegible] ಮಗು ನದಿಯಲ್ಲಿ ಬಿಡಲಾಯಿತು. ಮಗು ಸತ್ತುಹೋಯಿತೆಂದು ಎಲ್ಲರೂ ತಿಳಿದರು. ಕಳೆದ [illegible] ದಿನಗಳಲ್ಲಿ [illegible] ಒಂದು ದೋಣಿಯಲ್ಲಿ ಈ ಮಗುವನ್ನು ಕಂಡರು. ಒಬ್ಬ ಮಂತ್ರವಾದಿಯು [illegible] ಈ ಮಗುವಿಗೆ ಪ್ರಜ್ಞೆ ಬಂದಿತು.

ಇನ್ನೊಂದು ಧೂಮಕೇತು

[illegible] ಧೂಮಕೇತುವನ್ನು [illegible] ಕಾಣಬಹುದೆಂದು [illegible] ದೂರದರ್ಶಕ [illegible] ನೋಡಬಹುದೆಂದು [illegible]

ಮುಸೋಲಿನಿ ಆಸ್ಪತ್ರೆಯಲ್ಲಿ

[illegible] ಮುಸೋಲಿನಿ [illegible] ಉತ್ತರ [illegible] ಒಂದು ಪಟ್ಟಣದ ಆಸ್ಪತ್ರೆಯಲ್ಲಿ [illegible]

[illegible]

ನ್ಯೂ ಅಪೇರಾ ಟಾಕೀಸ್

ತಾ|| ೨೦-೧೦-೪೩ ರಿಂದ

ಶಾರದ

ಅಮೋಘವಾದ ೪ ನೇ ವಾರ

ಮುಂದಿನ ಪ್ರದರ್ಶನ:

ಪೈರಾಜ್, ಲಲಿತಾ ಪವಾರ್,

ಜಗದೀಶ್ ನಟಿಸಿರುವ "ಕೀರ್ತಿ"

[illegible]

Edited, printed and published by A. R. Nagaraja at the Sadhvi Press, D.Subbaiah Road, Mysore

[illegible]

ಸ್ತ್ರೀಯರ [illegible] ಗಳಿಗೆ

[illegible]

ನಮ್ಮಲ್ಲಿ ದೊರೆಯುವ ಸುಪ್ರಸಿದ್ಧ

[illegible]

[illegible] ಮೈಸೂರು

[illegible]

ಜರ ಪೂಗಳು | ಬನಾರಸ್ ಸೀರೆಗಳು | [illegible] ಸೀರೆಗಳು

[illegible] | ನವೀನ ಮಾದರಿಗಳಲ್ಲಿ | [illegible] ನಗ

ನಿಮ್ಮ ಮನಸ್ಸೊಪ್ಪುವಂತೆ! ಕಣ್ಣಿಗಾನಂದವಾಗುವಂತೆ!

[illegible] ಕಾಮರಾಜ್ [illegible] ತಯಾರಿಸಲ್ಪಟ್ಟ

ಜರ ಪೂಗಳು ಬನಾರಸ್‌ವಾಲಾರವರೇ ಇಲ್ಲಿ ಬಂದು ತರಿಸಿ ಜರಿಗೆ

ಪೂರ ಸೀರೆಗಳು, ಕಣಗಳು, ಇತ್ಯಾದಿ ಇತ್ಯಾದಿ

ಗ್ಯಾರಂಟಿಯಾದ ಚಿನ್ನ ಬೆಳ್ಳಿ ನಗಗಳು

[illegible] ಜಿ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್

ಜವಾಹಿರಿ ಮತ್ತು ಬಟ್ಟೆ ವ್ಯಾಪಾರಿಗಳು

ಸಯ್ಯಾಜಿರಾವ್ ರೋಡ್, ಮೈಸೂರು.

ಸಂಪುಟ ೨] ಗುರುವಾರ ೨೧-೧೦-೪೩ [ಸಂಚಿಕೆ ೮೦

ಜರ್ಮನರು ರೋಂ ತ್ಯಜಿಸುವರೇ ?

ರಷ್ಯಾ ಭೂಮಿಗೆ ಹಿಟ್ಲರ್ ಸೈನ್ಯವು ಗೊಬ್ಬರವಾಗುತ್ತಿದೆ

ಭಾರತದ ರಾಜಕೀಯ ಬಂದಿಗಳು ಬಿಡುಗಡೆಯಾಗುವರೆ ?

ಅ. ನ. ಕೃಷ್ಣರಾಯರ ಭಾಷಣ

ಮೈಸೂರು ೨೦

ಮಹಾರಾಜ ಕಾಲೇಜು ಕರ್ನಾಟಕ ಸಂಘದ ಆಶ್ರಯದಲ್ಲಿ ತಾ॥ ೨೨-೧೦-೪೩ ನೇ ಶುಕ್ರವಾರ ಸಂಜೆ ೬ ಘಂಟೆಗೆ ಶ್ರೀ ಅ. ನ. ಕೃಷ್ಣರಾಯರು " ಕನ್ನಡದಲ್ಲಿ ಕಾದಂಬರಿಗಳು " ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಪೌರ ಸಭೆ

ಮೈಸೂರು ಪೌರ ಸಭೆಯ ವಿಶೇಷ ಸಭೆಯು ೨೫ ನೆಯ ತಾ॥ ಸೋಮವಾರ ೪ ೩೦ ಗಂಟೆಗೆ ನಡೆಯಲಿದೆ. ನಗರದ ಬಡ ಜನರ ಊಟದ ಏರ್ಪಾಡಿಗಾಗಿ ಒಬ್ಬ ಮಹನೀಯರು ೧೨೦೦ ರೂ. ಕೊಟ್ಟು, ಪ್ರತಿ ತಿಂಗಳು ೧೦೦ ರೂ. ಖರ್ಚುಮಾಡಬೇಕೆಂದು ಮತ್ತು ಇದಕ್ಕಾಗಿಯೇ ಶ್ರೀ ವೈ. ಮಲ್ಲಿಕಾರ್ಜುನಪ್ಪನವರು ಕೊಟ್ಟಿರುವ ೧೫೦ ರೂ. ಯಾವ ರೀತಿ ವ್ಯವಸ್ಥೆ ಮಾಡಬೇಕೆಂಬುದನ್ನು ಪರಿಶೀಲಿಸಲಾಗುವುದು.

ಸಾಂಕ್ರಾಮಿಕ ರೋಗಗಳಿಂದ ನರಳುತ್ತಿದ್ದು ಭಿಕ್ಷಾಟನೆಮಾಡುತ್ತಿರುವ ಅನೇಕ ಜನರು ನಗರದ ಅನೇಕ ರಸ್ತೆಗಳಲ್ಲಿ ಬಿದ್ದುಕೊಂಡಿರುವುದು ನಗರದ ಆರೋಗ್ಯ ಕೆಡುವುದರಿಂದ ಅವರುಗಳನ್ನು ತಕ್ಷಣ ಆಸ್ಪತ್ರೆಗೆ ಸಾಗಿಸುವ ಏರ್ಪಾಡನ್ನು ಮುನಿಸಿಪಲ್ ಸಭೆಯವರು ಮಾಡಬೇಕೆಂದು ಶ್ರೀ ಎಂ. ಆರ್. ಸಿ. ಬಸಪ್ಪನವರು ಕಳುಹಿಸಿದ ನಿರ್ಣಯವನ್ನು ಪರಿಶೀಲಿಸಲಾಗುವುದು.

ಲಾರ್ಡ್ ವೇವೆಲ್‌ರು ಅಧಿಕಾರ ವಹಿಸಿಕೊಂಡರು

ಫೀಲ್ಡ್ 'ಮಾರ್ಷಲ್' ಲಾರ್ಡ್ ವೇವೆಲ್‌ರವರು ನಿನ್ನೆ ದಿನ ವೈಸರಾಯರ ಪದವಿಯನ್ನು ವಹಿಸಿಕೊಂಡರು. ಮಾಜಿ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಪತ್ನಿ ಸಮೇತರಾಗಿ ನವದೆಹಲಿಯಿಂದ ಪ್ರಯಾಣಮಾಡಿದರು

ಫ್ರೆಂಚ್ ಗೊರಿಲ್ಲಾ ಸೈನಿಕರ ಮೇಲೆ ಜರ್ಮನರ ಧಾಳಿ

ಸವಾಯ್ ಗುಡ್ಡ ಪ್ರದೇಶಗಳಿಂದ ಜರ್ಮನರಿಗೆ ಹಿಂಸೆ ಕೊಡುತ್ತಿದ್ದ ಫ್ರೆಂಚ್ ಗೊರಿಲ್ಲಾ ಸೈನಿಕರ ಮೇಲೆ ೮೦೦೦ ಜರ್ಮನ್ ಸೈನಿಕರು ಧಾಳಿ ಪ್ರಾರಂಭಿಸಿದ್ದಾರೆಂದೂ, ಫ್ರಾನ್ಸ್ ಆಕ್ರಮಣವಾದಾಗಲಿನಿಂದೀಚೆಗೆ ಜರ್ಮನ್ ಸೈನಿಕರು ಕದನ ಪ್ರಾರಂಭಿಸಿರುವುದು ಇದೇ ಪ್ರಥಮಬಾರಿಯೆಂದು ಹೇಳಲಾಗಿದೆ. ಈ ಕದನದಲ್ಲಿ ಫ್ರೆಂಚ್ ಸೈನಿಕರನೇಕ ಮಂದಿ ಸಾವಿದರೆಂದೂ, ಆದರೆ ೭ ಮಂದಿ ಮಾತ್ರ ಸೆರೆಸಿಕ್ಕಿರುವರೆಂದೂ ಜರ್ಮನರಿಗೂ ಅಪಾರ ನಷ್ಟವುಂಟಾಯಿತೆಂದೂ ವರದಿಯಾಗಿದೆ

ಸವಾಯ್ ಪ್ರದೇಶದಲ್ಲಿ ಪರಿಸ್ಥಿತಿಯು ವಿಷಮಗೊಂಡಿದೆಯೆಂದೂ, ೧೦ ಸಾವಿರ ಜನ ಫ್ರೆಂಚರು ಜರ್ಮನಿಗೆ ಬಲಾತ್ಕಾರದಿಂದ ಕಳುಹಿಸುವುದನ್ನು ತಪ್ಪಿಸಿಕೊಳ್ಳಲು ಪರ್ವತಾಶ್ರಿತರಾಗಿದ್ದಾರೆಂದೂ, ಹೇಳಲಾಗಿದೆ. ೧೬ ಸಾವಿರ ವಿಚಿ ಪೋಲೀಸರು ಈ ಗೊರಿಲ್ಲಾ ಪಡೆಗಳನ್ನು ಹಿಡಿಯುವುದಕ್ಕಾಗಿ ಸರ್ವ ಪ್ರಯತ್ನ ನಡೆಸುತ್ತಿದ್ದಾರೆಂದೂ ವರದಿಯಾಗಿದೆ

ಹಿಟ್ಲರ್‌ಸೈನ್ಯ ರಷ್ಯ ಭೂಮಿಗೆ ಗೊಬ್ಬರವಾಗುತ್ತಿದೆ

ಜರ್ಮನರಿಗೆ ರಷ್ಯಾದಲ್ಲಿ ಆಗುತ್ತಿರುವ ಸೈನಿಕರ ನಷ್ಟವು ಹಿಂದೆ ಯಾವ ಯುದ್ಧದ ಚರಿತ್ರೆಯಲ್ಲೂ ನಡೆಯದಂತಹ ಘಟನೆಯಾಗಿದೆ. ಸ್ಟಾಲಿನ್‌ಗ್ರಾಡಿನಂತೆಯೇ ಮೆಲಿಟೋಪೋಲ್ ನಗರದಲ್ಲಿರುವ ಸೈನ್ಯಕ್ಕೆ ಕೊನೆಯವರೆಗೂ ಕದನ ನಡೆಸಿ ಎಂದು ಹಿಟ್ಲರನು ಆಜ್ಞಾಪಿಸಿ, ಮೆಲಿಟೋಪೋಲ್ ನಗರವನ್ನು ಜರ್ಮನರ ಗೋರಿಯನ್ನಾಗಿ ಪರಿವರ್ತಿಸುತ್ತಿದ್ದಾನೆ. ೨೦-೩೦ ಚದುರ ಮೈಲಿ ಪ್ರದೇಶದಲ್ಲಿ ಜರ್ಮನ್ ಸೈನ್ಯವನ್ನು ರಷ್ಯನರು ಸುತ್ತುಗಟ್ಟಿರುವುದರಿಂದ ಅಲ್ಲಿಂದ ತಪ್ಪಿಸಿಕೊಂಡುಹೋಗಲಾಗದೆ ಅಲ್ಲೇ ಸಾಯುತ್ತಿರುವರು. ಗರ್ವಪಡುತ್ತಿದ್ದ ಹಿಟ್ಲರನ ಪ್ರಸಿದ್ಧ ಸೈನ್ಯವೀಗ ದಕ್ಷಿಣ ರಷ್ಯಾದ ಭೂಮಿಗೆ ಗೊಬ್ಬರವಾಗುತ್ತಿದೆಯೆಂದು ಹೇಳಲಾಗಿದೆ

ನಾಜಿಗಳು ರೋಂ ತ್ಯಜಿಸುವರೇ ?

ನಾಜಿಗಳು ಸ್ವಲ್ಪ ದಿನಗಳಲ್ಲೇ ರೋಂ ಪಟ್ಟಣವನ್ನು ತ್ಯಜಿಸಬೇಕಾಗಿ ಬರುವುದು ಖಂಡಿತ ಎಂದು ಇಟಲಿ ಸರಹದ್ದಿನಲ್ಲಿರುವ ಸುದ್ದಿಗಾರರು ತಿಳಿಸುತ್ತಾರೆ. ನಗರದಿಂದ ಸರ್ಕಾರಿ ಅಧಿಕಾರಿಗಳು ತ್ವರಿತವಾಗಿ ಹೊರಗೆ ಬರುತ್ತಿದ್ದಾರೆ. ಕೇವಲ ಅಗತ್ಯವಾದ ಸೈನ್ಯಬಲವು ಮಾತ್ರ ಉಳಿದಿದೆ. ಉತ್ತರ ಇಟಲಿಗೆ ಟ್ಯಾಂಕುಗಳೂ, ಸೈನ್ಯಗಳೂ ಬಹಳವಾಗಿ ಬಂದಿವೆ. ಅಲ್ಲಿ ೩೦ ಜರ್ಮನ್ ಡಿವಿಜನ್ನುಗಳಿವೆ. ಎಲ್ಲಾ ರಾಜ್ಯಭಾರಿಗಳೂ ರೋಂ ನಗರವನ್ನು ಬಿಟ್ಟು ಉತ್ತರ ಇಟಲಿಗೆ ತೆರಳಬೇಕೆಂತ ಜರ್ಮನರ ಆಜ್ಞೆ ಮಾಡಿರುವಂತಿದೆ

ಭಾರತ ಆಹಾರ ಪರಿಸ್ಥಿತಿಬಗ್ಗೆ ಲಾರ್ಡ್ಸ್ ಸಭೆಯಲ್ಲಿ ಚರ್ಚೆ

ಭಾರತದ ಆಹಾರಪರಿಸ್ಥಿತಿ ಬಗ್ಗೆ ಲಾರ್ಡ್ಸ್ ಸಭೆಯಲ್ಲಿ ಚರ್ಚೆ ನಡೆಯುತ್ತಿರುವಾಗ, ಭಾರತದ ಕೆಲವು ಪ್ರಾಂತ್ಯ ... ಕ್ಷಾಮದ ... ಗಳ ... ನಿರ್ವಹಿಸಲು ... ಸ್ಥಾನಗಳಲ್ಲಿ ಕ್ಷಾಮದ ಬಗ್ಗೆ ... ಕ್ರಮ ತೆಗೆದುಕೊಳ್ಳಲಾಗಿದೆ... ಲಾರ್ಡ್ ಪೆಂಟ್‌ಲ್ಯಾಂಡ್‌ರವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ.

ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಲಾಗುವುದೆ

ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ನೂತನ ವೈಸರಾಯರಾದ ಲಾರ್ಡ್ ವೇವೆಲ್ಲರು ಪ್ರಯತ್ನ ನಡೆಸಬಹುದೆಂದೂ, ಇದರ ಪೂರ್ವಭಾವಿಯಾಗಿ ಬಂಧನದಲ್ಲಿರುವ ಎಲ್ಲಾ ರಾಜಕೀಯ ಮುಖಂಡರುಗಳು ಹಿಂದಿನ ವಿನಾಶ ಕೃತ್ಯಗಳ ಹೊಣೆಯನ್ನು ಬಿಡುವುದಾದರೆ, ಅವರನ್ನು ಬಿಡುಗಡೆ ಮಾಡುವ ಸೂಚನೆಯಿದೆಯೆಂದು "ಸ್ಟೇಟ್ಸ್‌ಮನ್" ಪತ್ರಿಕೆಯು ತಿಳಿಸುತ್ತದೆ.

ಶ್ರೀ ಕರ್ಮಾರ್‌ಕರರ ಖುಲಾಸೆ

ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಡಿ. ಪಿ. ಕರ್ಮಾರ್‌ಕರರು ದಸ್ತಗಿರಿ ವಾರಂಟಿಗೆ ಸಿಗದೆ ತಪ್ಪಿಸಿಕೊಂಡು ಅಲೆಯುತ್ತಿದ್ದರೆಂಬ ಆಪಾದನೆ ಮೇಲೆ ಬಂದಿದ್ದ ಮೊಕದ್ದಮೆಯಲ್ಲಿ ಧಾರವಾಡದ ಸೆಷನ್ಸ್ ನ್ಯಾಯಾಧೀಶರು ಅವರನ್ನು ನಿರ್ದೋಷಿಗಳೆಂದು ಹೇಳಿ ಖುಲಾಸೆ ಮಾಡಿದರು. ಶ್ರೀಯುತರನ್ನು ಕಳೆದ ಮಾರ್ಚಿ ತಿಂಗಳಲ್ಲಿ ಜೋಬಾಯಿಯಲ್ಲಿ ದಸ್ತಗಿರಿ ಮಾಡಲಾಗಿತ್ತು. ಅವರು ಬಹಳ ಕಾಲ ಸಿಗದೆ ಇದ್ದುದರಿಂದ ಅವರನ್ನು ಪತ್ತೆಮಾಡಿಕೊಟ್ಟವರಿಗೆ ಐದು ಸಾವಿರ ರೂ. ಬಹುಮಾನ ಕೊಡುವುದಾಗಿ ಸರ್ಕಾರದವರು ಪ್ರಕಟಿಸಿದ್ದರು

ಪ್ರೊ॥ ಭನ್ಸಾಲಿಯವರ ದಸ್ತಗಿರಿ; ಬಿಡುಗಡೆ

ರಾಷ್ಟ್ರಧ್ವಜವನ್ನು ಹಾರಿಸಿದ್ದಕ್ಕಾಗಿ ವಾರ್ಧಾ ಆಶ್ರಮದ ಪ್ರೊ॥ ಭನ್ಸಾಲಿ ಮತ್ತು ಮೋಹನಸಿಂಗರನ್ನು ಚಾಂದಾ ಜಿಲ್ಲೆಯ ಸಿಂದೇವಾಹಿ ಎಂಬಲ್ಲಿ ೧೮ ನೇ ತಾ॥ ದಸ್ತಗಿರಿ ಮಾಡಲಾಯಿತು. ಆದರೆ ಅವರನ್ನು ಚಾಂದಾ ಎಂಬಲ್ಲಿಗೆ ಕರೆತಂದು ನಾಲ್ಕನೇ ದಿನ ಪೋಲೀಸರು ಬಿಟ್ಟುಬಿಟ್ಟರು.

ಮಳೆಯಿಂದ ೨೦೦ ಕೆರೆಗಳು ಒಡೆದುವು

ಮಳೆ ಹಾವಳಿಯಿಂದ ಮದ್ರಾಸ್ ಪ್ರಾಂತ್ಯದ ... ಜಿಲ್ಲೆಯಲ್ಲಿ ೨೦೦ ಕೆರೆಗಳು ... ಒಡೆದುಹೋಗಿದೆ ... ಪ್ರದೇಶದಲ್ಲಿ ೨೦ ಹಾನಿ ... ಸಂಭವಿಸಿದೆಯೆಂದೂ ವರದಿಯಾಗಿದೆ.

ಬಂಗಾಳ ಕ್ಷಾಮನಿವಾರಣೆಗೆ ೪೮೦ ಲಕ್ಷ ರೂ. ಗಳು

ಬಂಗಾಳಾ ಕ್ಷಾಮ ನಿವಾರಣೆಗಾಗಿ ೮ ಟ್ಟು ೪,೮೦,೮೭,೦೦೦ ರೂ ಗಳನ್ನು ಸರ್ಕಾರದವರು ಕೊಟ್ಟಿರುವರೆಂದೂ, ಇದರಲ್ಲಿ ೩೦೬ ಲಕ್ಷ ರೂ ಗಳು ಪರಿಹಾರ ಕಾರ್ಯಕ್ಕೂ, ೧೭೦ ಲಕ್ಷ ರೂ. ಗಳು ವ್ಯವಸಾಯಗಾರರಿಗೆ ಸಾಲದ ರೂಪವಾಗಿಯೂ ಕೊಡಲಾಗಿದೆ.

ನಿರ್ಗತಿಕರಿಗೆ ಊಟ, ವಸತಿ ವಿಚಾರ ಮಾಡಲು ಸರ್ಕಾರದವರು ೩ ಬಡವರ ಮನೆಗಳನ್ನೂ ಮತ್ತು ಹೌರಾ ಬಳಿಯಲ್ಲೂ ಇಂತಹ ಏರ್ಪಾಡುಗಳನ್ನು ಮಾಡುತ್ತಿರುವರು.

೩೦ ಕೋಟಿ ಜನರು ತಮ್ಮ ದೇಶವನ್ನೇ ಬಿಡಬೇಕಾಯಿತು

೧೯೩೯ ನೇ ವರ್ಷದಿಂದೀಚೆಗೆ ಯುರೋಪಿನಲ್ಲಿ ಒಟ್ಟು ೩೦ ಕೋಟಿ ಪ್ರಜೆಗಳ ತಮ್ಮ ಮನೆ ಮಠಗಳನ್ನು ಬಿಟ್ಟು ತಮ್ಮ ದೇಶದಿಂದಲೇ ಓಡಬೇಕಾದ ಪ್ರಸಂಗ ಒದಗಿದೆ, ಎಂದು ಪ್ರೊ॥ ಯೂಜೀನ್‌ರವರ "ವಾಷಿಂಗ್‌ಟನ್ ಪೋಸ್ಟ್" ಪತ್ರಿಕೆಯಲ್ಲಿ ಬರೆದಿದ್ದಾರೆ. ಇವರ ಪ್ರಕಾರ ಜರ್ಮನಿಗೆ ೬-೭ ಕೋಟಿ ಜನಗಳನ್ನು ಕಳುಹಿಸಿರುವುದು ಮತ್ತು ಕೋಟ್ಯಂತರ ಯೆಹೂದ್ಯರನ್ನು ಅನೇಕ ಯುರೋಪಿಯನ್ ದೇಶಗಳಿಂದ ಓಡಿಸಿರುವುದು ಮತ್ತು ೧೬ ಕೋಟಿ ಜನರು ಪೂರ್ವ ಪೋಲೆಂಡ್ ಮತ್ತು ಬಾಲ್ಟಿಕ್ ಪ್ರದೇಶದಿಂದ ತಪ್ಪಿಸಿಕೊಂಡುಹೋಗಿರುವ ಅಂಶವನ್ನು ತಿಳಿಸಿದ್ದಾರೆ.

ರೊಮೇನ್ ರೋಲಂಡರ ಮರಣ

ಸುಪ್ರಸಿದ್ಧ ಫ್ರೆಂಚ್ ಗ್ರಂಥಕರ್ತರಾದ ರೊಮೇನ್ ರೋಲಂಡರು ಸ್ವರ್ಗಸ್ಥರಾದರೆಂದು ತಿಳಿದುಬಂದಿದೆ. ಅವರಿಗೆ ೭೭ ವರ್ಷ ವಯಸ್ಸಾಗಿತ್ತು. ಅವರನ್ನು ಒಂದು ಬಂಧನಶಿಬಿರದಲ್ಲಿಡಲಾಗಿತ್ತೆಂದು ಹೇಳಲಾಗಿದೆ. ಇವರಿಗೆ ೧೯೧೫ನೇ ಇಸವಿಯಲ್ಲಿ ನೋಬೆಲ್ ಬಹುಮಾನವು ದೊರೆತಿತ್ತು. ಇವರ ಗಾಂಧಿ, ಟಾಗೋರರುಗಳ ಜೀವನ ಚರಿತ್ರೆ, ಭಾರತ ಸಂಸ್ಕೃತಿಯ ... ಗಳೂ ಆಗಿದ್ದರು

ಜರ್ಮನಿ ಮೇಲೆ ಧಾಳಿ

ಜರ್ಮನಿಯ ಮುಖ್ಯ ಎಣ್ಣೆ ಮತ್ತು ರಬ್ಬರ್ ಕೈಗಾರಿಕೆ ಕೇಂದ್ರವಾದ ಮ್ಯಾನೊವರ್ ಮೇಲೆ ಬ್ರಿ॥ ವಿಮಾನಗಳು ಧಾಳಿ ನಡೆಸಿದವು. ಇದಲ್ಲದೆ ಬರ್ಲಿನ್ ಮುಖ್ಯ ... ಜರ್ಮನಿಯ ... ಧಾಳಿ ನಡೆಯಿತು. ೧೭ ಮಿತ್ರ ವಿಮಾನಗಳು ವಾಪಸು ಬರಲಿಲ್ಲ

ಬಿಡುಗಡೆ

ಸಿಂಧ್, ಹೈದರಾಬಾದಿನಲ್ಲಿ ... ದಸ್ತಗಿರಿ ಮಾಡಿ ... ೧೪ ದಿನಗಳು ಬಂಧನದಲ್ಲಿಟ್ಟಿದ್ದ ... ಮಂದಿಗಳನ್ನು ಬಿಡುಗಡೆ ಮಾಡಲಾಗಿದೆ

ಪ್ರಜಾಪ್ರಭುತ್ವ ಸರ್ಕಾರ ಸ್ಥಾಪನೆ

ಇಟಲಿ, ಫ್ರಾನ್ಸ್ ಮತ್ತು ... ದೇಶಗಳಲ್ಲಿ ಪ್ರಜಾಪ್ರಭುತ್ವ ಸರ್ಕಾರ ... ಸ್ಥಾಪಿಸಬೇಕೆಂದು ... ವಿರುದ್ಧ ... ಪ್ರಕಟವಾಗಿದೆ.

ಕಣ್ವಾ ನದಿ ಪ್ರವಾಹದಿಂದ ಲಕ್ಷಾಂತರ ರೂ. ನಷ್ಟ

ಬೆಂಗಳೂರು ೨೦

ಇತ್ತೀಚಿನ ಮಳೆಯ ಹಾವಳಿಯಿಂದ ಕಣ್ವಾ ನದಿ ಪ್ರವಾಹವು ಹೆಚ್ಚಿ ಲಕ್ಷಾಂತರ ರೂ. ಗಳ ನಷ್ಟವಾಗಿದೆಯೆಂದು ಹೇಳಲಾಗಿದೆ. ಕಣ್ವಾ ಅಣೆಕಟ್ಟಿನ ಕೆರೆಯಿಂದಲೂ, ಇನ್ನೆರಡು ಕೆರೆಗಳ ಕೋಡಿ ನೀರಿನಿಂದಲೂ ಪ್ರವಾಹವು ಹೆಚ್ಚಾಗಿ, ಕೋಂಡಾಪುರ, ಕೂಡ್ಲೂರು, ಹೊಣಕನ ಹಳ್ಳಿ ಮೊದಲಾದ ನದಿ ಎಡದಲ್ಲಿರುವ ಹಳ್ಳಿಗಳಲ್ಲಿ ಪ್ರವಾಹಕ್ಕೆ ಸಿಕ್ಕಿ, ಜನರು ಬಹಳ ತೊಂದರೆಪಡುತ್ತಿದ್ದಾರೆ ತೋಟದಲ್ಲಿ ಲಕ್ಷಾಂತರ ತೆಂಗಿನ ಮರಗಳು ನಾಶವಾಗಿ, ಮರಳಿನ ರಾಶಿ ಬಿದ್ದು, ವ್ಯವಸಾಯಕ್ಕೆ ಅನರ್ಹವಾಗಿರುತ್ತವೆ.

ಹೋಬಳಿ ಕೆಲಸಗಾರರ ದಸ್ತಗಿರಿ

ಬೆಂಗಳೂರು ದಕ್ಷಿಣ ತಾ|| ಹೋಬಳಿ ಕೆಲಸಗಾರರಾದ ಶ್ರೀ ಎಲ್. ಭೀಮಕುಮಾರರನ್ನು ಬೊಂಬಾಯಿ ಸರ್ಕಾರದ ಅಪೇಕ್ಷೆಯಂತೆ ನಗರದ ಪೋಲೀಸರು ದಸ್ತಗಿರಿ ಮಾಡಿ, ಬೊಂಬಾಯಿ ನಿಂದ ಎಕ್ಸ್ಟ್ರಡಿಷನ್ ವಾರಂಟು ಬರುವವರೆಗೂ ಜೈಲಿನಲ್ಲಿ ರಿಮ್ಯಾಂಡ್ ಮಾಡಲಾಗಿದೆ

ಬಲ್ಗೇರಿಯಾ ಮೇಲೆ ಮಿತ್ರ ಧಾಳಿಯೆ ?

ಬಲ್ಗೇರಿಯಾದ ಮೇಲೆ ಮಿತ್ರ ವಿಮಾನಗಳು ಧಾಳಿ ನಡೆಸಿದವೆಂದು ಜರ್ಮನ್ [illegible]ಸ್ ವಾರ್ತಾಸಂಸ್ಥೆ ವರದಿಮಾಡಿದೆ ಮಿತ್ರರಿಂದ ಈ ಸುದ್ದಿ ದೃಢಪಟ್ಟಿಲ್ಲ ಆದರೆ ಮಿತ್ರರು ದಕ್ಷಿಣ ಯುಗೋಸ್ಲಾವಿಯದ ನಿಸ್ಸಾದಲ್ಲಿ ಪಟ್ಟಣದ ಮೇಲೆ ಧಾಳಿ ನಡೆಸಿದುದು, ಈ ಪಟ್ಟಣವು ಹಿಂದೆ ಬಲ್ಗೇರಿಯನ್ನರು ಆಕ್ರಮಿಸಿದ್ದು, ಈ ಸುದ್ದಿಗೆ ಕಾರಣವಿರಬಹುದೆಂದು ಹೇಳಲಾಗಿದೆ.

ಮಿಲಿಟರಿಯವರೊಡನೆ ಹಿಟ್ಲರನ ಮಾತುಕತೆ

ಯುದ್ಧದ ಮತ್ತು ಜರ್ಮನಿಯ ಒಳ ಪರಿಸ್ಥಿತಿಯನ್ನು ಪರಿಶೀಲಿಸಲು ಹಿಟ್ಲರನು ಮಿಲಿಟರಿ ಮುಖಂಡರುಗಳೊಡನೆ ಮಾತುಕತೆ ನಡೆಸಿದನೆಂದು ಬರ್ಲಿನ್ ರೇಡಿಯೋ ತಿಳಿಸುತ್ತದೆ

ನೂತನ ಟ್ಯಾಂಕ್ ವಿನಾಶಕ ಮೈನುಗಳು

ರಷ್ಯನರು ಲೋಹಾಕರ್ಷಣ ಶಕ್ತಿಯುಳ್ಳ ನೂತನ ಟ್ಯಾಂಕ್ ವಿನಾಶಕ ಮೈನುಗಳನ್ನು ಉಪಯೋಗಿಸುತ್ತಿದ್ದಾರೆಂದು ಜರ್ಮನ್ ಮಿಲಿಟರಿ ಅಧಿಕಾರಿಯಾದ ಡಾ|| ಹೋರ್ಡ್ ಜರ್ ತಿಳಿಸಿದ್ದಾರೆ

೩ ಸಾವಿರ ಜರ್ಮನ್ ಸೈನಿಕರ ಕೈಸೆರೆ

ರಷ್ಯಾದ ಮುಖ್ಯ ಕೈಗಾರಿಕಾ ಕೇಂದ್ರವಾದ ಯುಕ್ರೇನಿನಲ್ಲಿ ರಷ್ಯನರು ಮುಂದೆ ನುಗ್ಗುತ್ತಾ ಕ್ರೆಮೆನ್ ಚುಗ್ ನಗರದ ಹತ್ತಿರವಿರುವ ರೈಲ್ವೆ ಜಂಕ್ಷನ್ ನಗರವೊಂದನ್ನು ವಶಪಡಿಸಿಕೊಂಡಿದ್ದಾರೆ. ಈ ಪ್ರದೇಶದಲ್ಲಿ ರಷ್ಯನರು ಹಿಡಿದಿರುವ ೧೦೦ ನಗರ ಗ್ರಾಮಗಳ ಪೈಕಿ ೬ ಸಣ್ಣ ರೈಲ್ವೆ ನಗರಗಳು ಸೇರಿಕೊಂಡಿವೆ. ೩ ಸಾವಿರ ಜರ್ಮನ್ ಸೈನಿಕರನ್ನೂ, ಅಪಾರ ಯುದ್ಧ ಸಾಮಗ್ರಿಗಳನ್ನೂ ವಶಪಡಿಸಿಕೊಂಡಿದ್ದಾರೆ.

೬೬ ಜಪಾನಿ ವಿಮಾನಗಳ ನಾಶ

ಸಾಲೊಮನ್ನಿನಲ್ಲಿರುವ ಜಪಾನಿ ಮುಖ್ಯ ವೈಮಾನಿಕ ನಿಲ್ದಾಣವಾದ ರಾಬೂಲ್ ಮೇಲೆ ಮಿತ್ರವಿಮಾನಗಳು ಉಗ್ರ ಧಾಳಿ ನಡೆಸಿ, ೬೬ ಜಪಾನಿ ವಿಮಾನಗಳನ್ನೂ ಮತ್ತು ೩ ಹಡಗುಗಳನ್ನೂ ನಾಶಮಾಡಲಾಯಿತೆಂದು ಹೇಳಲಾಗಿದೆ.

೪೩೬ ಜಪಾನಿ ಹಡಗುಗಳ ನಾಶ

ಪರ್ಲ್ ಹಾರ್ಬರ್ ಆಕ್ರಮಣ ನಡೆದಂದಿನಿಂದೀಚೆಗೆ ಮಿತ್ರರು ೬೫೫ ಜಪಾನಿ ಹಡಗುಗಳನ್ನು ನಾಶಪಡಿಸಿರುವುದಾಗಿಯೂ ೧೦೫ ಹಡಗುಗಳಿಗೆ ನಷ್ಟವುಂಟುಮಾಡಿರುವುದಾಗಿಯೂ ಅಮೆರಿಕ ನೌಕಾ ಶಾಖೆಯವರು ಪ್ರಕಟಿಸಿದ್ದಾರೆ.

ವಾಲ್ಟರ್ನೋ ಕ್ಷೇತ್ರದಲ್ಲಿ ಜರ್ಮನರ ಓಟ

ದಕ್ಷಿಣ ಇಟಲಿಯಲ್ಲಿ ಮಿತ್ರರು ವಾಲ್ಟರ್ನೋ ಪ್ರದೇಶದಿಂದ ಜರ್ಮನ್ ಸೈನಿಕರನ್ನೆಲ್ಲಾ ಓಡಿಸಿದ್ದಾರೆ. ವಾಲ್ಟರ್ನೋವಿನ ೨೫ ಮೈಲಿಗಳ ಪ್ರದೇಶದಲ್ಲಿ ಜರ್ಮನ್ ಸೈನಿಕರ ಸುಳಿವೇ ಇಲ್ಲವಾಗಿದೆ. ಜರ್ಮನರು ಗುಡ್ಡಗಾಡು ಪ್ರದೇಶಗಳಿಗೆ ಓಡುತ್ತಿದ್ದಾರೆ

ವೆಂಟಯುಟುರೋ ಉತ್ತರದಲ್ಲಿ ಭೀಕರ ಕದನ ನಡೆಯುತ್ತಿದೆ

ಕೌಂಟ್ ಗ್ರಾಂಡಿಯವರು ತಪ್ಪಿಸಿಕೊಂಡರು

ಲಂಡನ್ನಿನ ಮಾಜಿ ಇಟಲಿ ರಾಯಭಾರಿಯಾಗಿದ್ದ ಕೌಂಟ್ ಗ್ರಾಂಡಿಯವರು ಪೋರ್ಚುಗಲ್ಲಿಗೆ ತಪ್ಪಿಸಿಕೊಂಡುಹೋಗಿದ್ದಾರೆಂದೂ, ಅವರು ಲಂಡನ್ ಮತ್ತು ವಾಷಿಂಗ್ಟನ್ನಿಗೆ ಶೀಘ್ರದಲ್ಲಿಯೇ ಹೋಗುವರಿದ್ದಾರೆಂದು ಜರ್ಮನ್ ವಶದಲ್ಲಿರುವ ರೋಂ ರೇಡಿಯೊ ತಿಳಿಸುತ್ತದೆ

ಸೈನಿಕರ ನಿಷ್ಠೆಯನ್ನು ಭಂಗಪಡಿಸದಿರಲು ಆರ್ಡಿನೆನ್ಸ್

ಭಾರತದಲ್ಲಿರುವ ಸೈನಿಕರಲ್ಲಿ ಜಪಾನಿ ಚಟುವಟಿಕೆಯನ್ನು ಬೆಳೆಸುವುದಕ್ಕಾಗಿ ಶತ್ರು ಏಜಂಟರುಗಳು ಮಾಡಬಹುದಾದ ಪ್ರಯತ್ನವನ್ನು ತಡೆಯಲು ಭಾರತ ಸರ್ಕಾರದವರು ಎರಡು ಹೊಸ ಆರ್ಡಿನೆನ್ಸ್ ಜಾರಿಗೆ ತಂದಿದ್ದಾರೆ. ಭಾರತದಲ್ಲಿರುವ ಸೈನಿಕರ ನಿಷ್ಠೆಯನ್ನು ಭಂಗಪಡಿಸುವವರಿಗೆ ಮರಣದಂಡನೆಯನ್ನು ಕೋರ್ಟುಗಳು ಕೊಡುವ ಅಧಿಕಾರವನ್ನು ಕೊಡಲಾಗಿದೆ. ಮತ್ತೊಂದು ಆರ್ಡಿನೆನ್ಸ್ ಹಿಂದೂಸ್ಥಾನದ ಕೆಲವು ಪ್ರದೇಶಗಳಲ್ಲಿ ಅಂದರೆ, ಅಸ್ಸಾಂ, ಬಂಗಾಳ, ಚಿತ್ತಗಾಂಗ್ ಗುಡ್ಡಗಾಡು ಪ್ರದೇಶಗಳಲ್ಲಿ ಶತ್ರುವಿಗೆ ಸಹಾಯಮಾಡಿದವರನ್ನು ಮಿಲಿಟರಿ ಕೋರ್ಟುಗಳು ವಿಚಾರಣೆ ಮಾಡಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗುವುದು.

ವಿಚಿ ರಾಯಭಾರಿಯನ್ನು ಕೊಲ್ಲಲು ಯತ್ನ

ಪ್ಯಾರಿಸ್ ನಗರದಲ್ಲಿನ ವಿಚಿ ರಾಯಭಾರಿಯಾದ ಫರ್ಡಿನೆಂಡ್ ಡಿ ಬ್ರಿನೋ ಎಂಬುವರನ್ನು ಕೊಲ್ಲಲು ಪ್ರಯತ್ನ ನಡೆಯಿತೆಂದೂ, ಆದರೆ ಸ್ವಲ್ಪ ಗಾಯಗೊಂಡು ತಪ್ಪಿಸಿಕೊಂಡರೆಂದೂ ವರದಿಯಾಗಿದೆ ಅವರು ವಾಸಿಸುವ ಕೊಠಡಿಯ ಮುಂಭಾಗದಲ್ಲಿ ಎರಡು ಬಾಂಬುಗಳ ಆಸ್ಫೋಟನೆಯಾಗಿ, ಭವನಕ್ಕೆ ತುಂಬಾ ನಷ್ಟವುಂಟಾಯಿತೆಂದೂ ಆದರೆ ಅವರಿಗೆ ಮಾತ್ರ ಮುಖದ ಮೇಲೆ ಸ್ವಲ್ಪ ಗಾಯವಾಯಿತೆಂದು ಹೇಳಲಾಗಿದೆ.

ತ್ರಿರಾಷ್ಟ್ರ ಸಮ್ಮೇಳನ ಉದ್ದೇಶ

ಶತ್ರುವನ್ನು ಸಂಪೂರ್ಣವಾಗಿ ಸೋಲಿಸಿ ಮುಂದೆ ಯುದ್ಧ ಭೀತಿಇಲ್ಲದೆ, ಎಲ್ಲಾ ಜನಾಂಗಗಳೂ ಸೌಖ್ಯವಾಗಿರುವಂತೆ ಕಾರ್ಯ ಸಾಧಿಸುವುದೇ ಮಾಸ್ಕೋ ಸಮ್ಮೇಳನದ ಉದ್ದೇಶವೆಂದು ಅಮೆರಿಕ ಸೆಕ್ರೆಟರಿ ಎಡ್ವರ್ಡ್ ಸ್ಟೆಟಿನಿಯಸ್‌ರವರು ತಿಳಿಸಿದ್ದಾರೆ.

ಮಿಲಿಟರಿ ಕೂಲಿಗಳಿಗೆ ಭೋಜನ ವ್ಯವಸ್ಥೆ

ಮಿಲಿಟರಿಗಾಗಿ ಕೆಲಸ ಮಾಡುತ್ತಿರುವ ಕೂಲಿಗಾರರ ಭೋಜನ ವ್ಯವಸ್ಥೆಯನ್ನು ಬಂಗಾಳ ಸರ್ಕಾರದವರಿಂದ ಮಿಲಿಟರಿಯವರು ತಾವೇ ವಹಿಸಿಕೊಂಡಿರುವರು

ಅಲ್ಲಾಬಕ್ಷರ ಕೊಲೆ ಬಗ್ಗೆ ಇಬ್ಬರ ದಸ್ತಗಿರಿ

ಸಿಂಧಿನ ಮಾಜಿ ಮಂತ್ರಿಗಳಾಗಿದ್ದ ಅಲ್ಲಾಬಕ್ಷರನ್ನು ಕೊಲೆ ಮಾಡಿದ ಪ್ರಸಂಗದಲ್ಲಿ ಈಗ ಜಾಕೊಬಾಬಾದ್‌ನಲ್ಲಿ ಇಬ್ಬರನ್ನು ದಸ್ತಗಿರಿ ಮಾಡಲಾಗಿದೆ

ಪತ್ರ ವ್ಯವಹಾರ

ಅಕ್ಕಿ ಅಭಾವ

ಮೈಸೂರು ನಗರದಲ್ಲಿ ರೇಷನಿಂಗ್ ಬ[illegible]ರುವುದಕ್ಕ ಮುಂಚೆಯೇ ಸರ್ಕಾರಿ ಡಿಪೋ[illegible]ಗಳಲ್ಲಿಯೂ ಲೈಸನ್ಸ್ ಪಡೆದಿರುವ ವರ್ತಕರುಗಳಲ್ಲಿಯೂ ಸುಮಾರು ೧೦ ದಿವಸ[illegible]ಳಿಂದಲೂ ಅಕ್ಕಿ ದೊರೆಯದೆ ತುಂಬಾ ತೊಂದರೆಯಾಗಿರುವುದಲ್ಲದೆ ಜನಗಳು ಕ[illegible]ಕೈಗಳನ್ನು ಹಿಡಿದುಕೊಂಡು ಬೀದಿಬೀದಿಗಳಲ್ಲಿ ಅಲೆಯುತ್ತಿರುತ್ತಾರೆ ಮೈಸೂರ[illegible] ನಗರಕ್ಕೆ ದಿನ ೧ ಕ್ಕೆ ೮೦೦ ಪಲ್ಲ, ಬೆಂಗಳೂರು ನಗರಕ್ಕೆ ೧೬೦೦ ಪಲ್ಲ ಅಕ್ಕಿಯನ್ನು ಒದಗಿಸುತ್ತಾರೆಂದು ಪತ್ರಿಕೆಯಲ್ಲಿ ಬರೆದಿರುವುದು ಕೇವಲ ಪತ್ರಿಕೆಯ ಪ್ರಚಾರಕ್ಕೋ[illegible]ಸ್ಕರವೇ ಹೊರತು, ಖಂಡಿತವಾಗಿಯೂ[illegible] ಮೇಲ್ಕಂಡ ಅಂಕಿಯಂತೆ ಒದಗಿಸಿದಲ್ಲಿ ಜನಗಳಲ್ಲಿ ಇಷ್ಟು ಹಾಹಾಕಾರವು ಮಾಯವಾ[illegible] ಜನಗಳಿಗೆ ಯಾವ ತರವಾದ ತೊಂದರೆಯೂ ಬರದೆ ಸರ್ಕಾರದವರು ಪ್ರಜೆಗಳ[illegible] ಸುಲಭ ಜೀವನವನ್ನು ಕಲ್ಪಿಸಿಕೊಟ್ಟಂ[illegible] ಆಗುತ್ತದೆ ಮೈಸೂರು ನಗರಕ್ಕೆ ೫೦೦ ಪಲ್ಲ ಅಕ್ಕಿ, ೩೦೦ ಪಲ್ಲ ರಾಗಿ ಮತ್ತೆ ೫[illegible] ಪಲ್ಲ ಜೋಳವನ್ನು ಒದಗಿಸಿಕೊಟ್ಟಲ್ಲಿ ಯಾವ ತರಹವಾದ ಅಲೆದಾಟವಾಗಲೀ ನುಗ್ಗು[illegible] ನೂಕಲುಗಳಲ್ಲಿ ಸಿಕ್ಕಿ ಹಿಂಸೆ ಪಡುವುದಾಗಲೀ ಆಗದೇ ಪ್ರಜೆಗಳಿಗೆ ಸುಲಭವಾಗಿ ದೊರೆಯುತ್ತದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಸರ್ಕಾರಿ ಡಿಪೋಗಳಿಗೂ, ಲೈಸೆನ್ಸ್ ಪಡೆದಿರುವ ವರ್ತಕರುಗಳಿಗೂ ಅಕ್ಕಿ, ರಾಗಿ ಮತ್ತು ಜೋಳವನ್ನು ಒದಗಿಸಬೇಕು

ಎಂ. ಆರ್. ಸಿ. ಬಸಪ್ಪ

ಕ್ಷಾಮವು ನಿವಾರಿಸಿ ಎಂದು ವೈಸರಾಯರಿಗೆ ಮನ[illegible]

ಬಂಗಾಳದ ಕ್ಷಾಮವು ನಿವಾರಣೆಮಾಡಲು ಸರ್ವ ಪ್ರಯತ್ನ ಮಾಡಬೇಕೆಂದು ಲಾರ್ಡ್ ವೇವಲ್‌ರಿಗೆ ಅಮೆರಿಕ ಇಂಡಿಯಾ ಲೀಗ್ ಸಂಸ್ಥೆಯವರು ಒಂದು ಮನವಿ ಕಳಿಸಿದ್ದಾರೆ

ಮದ್ರಾಸ್ ಪರಿಹಾರ ನಿಧಿ[illegible] ೩೦,೦೦೦ ರೂ. ಸಹಾಯ

ಇತ್ತೀಚಿನ ಮಳೆಯ ಪ್ರವಾಹದಿಂ[illegible] ಮನೆಮಠಗಳನ್ನು ಕಳೆದುಕೊಂಡವರ ಪ[illegible]ರ ನಿಧಿಗೆ ಮದ್ರಾಸ್ ಪೌರ ಸಭೆಯ[illegible]ರು ೩೦ ಸಾವಿರ ರೂ. ಕೊಡಲು ತೀರ್ಮಾನಿಸಿರುವರು.

Edited, printed and publi[illegible]shed by A. R. Nagaraja[illegible] at the Sadhvi Press, D.Subbiah Road, Mysore.

[illegible]

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಪರೀಕ್ಷೆ ಬಯಸೋಣ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂಚನೆ - ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ [illegible] ಇಲ್ಲಿ [illegible] ಕಂಟ್ರೋಲ್ ದರ್ ಶಾಪುಗಳಲ್ಲಿ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ

[illegible]

ಉಡುಪುಗಳು ! ಬೆನಾರಸ್ ಸೀರೆಗಳು ಮಾಯಿಲ್ ಸೀರೆಗಳು

ಬಹುಮಾನಕ್ಕೆ ನವೀನ ಮಾದರಿಗಳಲ್ಲಿ ಬೇಕಾದ ನಗಗ[illegible]

ನಿಮ್ಮ ಮನವೊಪ್ಪುವಂತೆ ! ಕಣ್ಣಿಗಾನಂದವಾಗುವಂತೆ !

ಬೆಂಗಳೂರು ಕೆ ಎಚ್. ರಾಮರಾವ್ ಅಂಡ್ ಸನ್ಸ್‌ರವರಿಂದ ತಯಾರಿಸಲ್ಪಟ್ಟ ಉಡುಪುಗಳು ಬೆನಾರಿಸ್ [illegible] ಇಲ್ಲಿ ಬಂದು ಕಡಿಮೆ ಬೆಲೆಗೆ ಮಾರುವ ಸೀರೆಗಳು, ಕಣಗಳ, ಇತ್ಯಾದಿ ಇತ್ಯಾದಿ

ಗ್ಯಾರಂಟಿಯಾದ ಚಿನ್ನ ಬೆಳ್ಳಿ ನಗಗಳು

ಸ್ಥಳ —ಜಿ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್[illegible]

ಜವಾಹಿರಿ ಮತ್ತು ಜವಳಿ ವ್ಯಾಪಾರಿಗಳು,

ಸಯ್ಯಾಜಿರಾವ್ ರೋಡ್, ಮೈಸೂರು.

[illegible]

ಸಂಪುಟ ೨]   ಶುಕ್ರವಾರ ೨೨--೧೦—೪೩   [ಸಂಚಿಕೆ ೮೧

ಗಾಂಧೀಜಿ ಜೈಲಿನಲ್ಲೇ ಇರಲು ಬಯಸುವರೇ ?

ಚಿತ್ತಗಾಂಗ್ ಮೇಲೆ ವಿಮಾನ ಕದನ

ಜರ್ಮನಿಗೆ ಪೋರ್ಚುಗಲ್ ಮುಖ್ಯ ಮಂತ್ರಿಯ ಎಚ್ಚರಿಕೆ

ಡಿಸೆಂಬರಿನಿಂದ ರೇಷನಿಂಗ್

ಮೈಸೂರು ೨೨

ರಾಜಧಾನಿಯಲ್ಲಿ ಡಿಸೆಂಬರ್ ಒಂದನೇ ತಾ|| ನಿಂದ ರೇಷನಿಂಗ್ ಜಾರಿಗೆ ಬರುವಂತೆ ತಾತ್ಕಾಲಿಕವಾಗಿ ನಿರ್ಧರಿಸಲಾಗಿದೆಯೆಂದು ಗೊತ್ತಾಗಿದೆ. ಪೌರಸಭಾಧ್ಯಕ್ಷರಾದ ಶ್ರೀ ಬಿ ಎಸ್. ರಾಘವೇಂದ್ರರಾಯರು ಈ ಬಗ್ಗೆ ಹಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮೊನ್ನೆ ದಿನ ದಿವಾನರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಈ ವಿಷಯವು ಚರ್ಚಿಸಲ್ಪಟ್ಟಿತೆಂದು ಗೊತ್ತಾಗಿದೆ.

ಸ್ವಸ್ತಿಕ ಸಾಹಿತ್ಯ ಸಂಘ, ಮೈಸೂರು

ಮೇಲ್ಕಂಡ ಸಂಘದ ಎರಡನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಇದೇ ಮಾಹೆ ೨೪ ನೇ ತಾ|| ಭಾನುವಾರ ಬೆಳಗ್ಗೆ ೯-೩೦ ಘಂಟೆಗೆ ಮಹಾರಾಜಾ ಕಾಲೇಜು ಜೂನಿಯರ್ ಬಿ. ಎ ಉಪನ್ಯಾಸ ಮಂದಿರದಲ್ಲಿ "ಕವಿ ಸಮ್ಮೇಳನ" ವು ನಡೆಯುವುದು. ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್, ಎಂ ಎ, ರವರು ಅಧ್ಯಕ್ಷತೆ ವಹಿಸುವರು. ಇದರಲ್ಲಿ ಭಾಗವಹಿಸಿ ಕವಿಗಳು ಒಂದೆರಡು ಕವನಗಳನ್ನೋದಲಿಚ್ಛಿಸುವ ಸಾಹಿತ್ಯ ಪ್ರೇಮಿಗಳಿಗೆ ಈ ಸಮಾರಂಭದಲ್ಲಿ ಸುಸ್ವಾಗತವುಂಟು.

ರೈಲಿಗೆ ಸಿಕ್ಕಿ ಆತ್ಮಹತ್ಯ ಯತ್ನ

ಮೊನ್ನೆ ರಾತ್ರಿ ಬೆಂಗಳೂರು ಕೆಂಗೇರಿಗಳ ಮಧ್ಯೆ ರೈಲು ಕಂಬಿ ಮೇಲೆ ಮಲಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ [illegible] ಪಾಳ್ಯದ [illegible] ಎಂಬುವನ ಮೇಲೆ ರೈಲ್ವೆ ಪೋಲೀಸರು ಮೊಖದ್ದಮೆ ಹೂಡಿದ್ದರು. ಬೆಂಗಳೂರು ನಗರದ ನ್ಯಾಯಾಧೀಶರು ಅವನಿಗೆ ಕೋರ್ಟು ಏಳುವವರೆಗೆ ಸಜ ವಿಧಿಸಿದರು.

ದಿವಾನರ ದಾನ

ಮೈಸೂರು ಸ್ಕೌಟ್ ಸಂಸ್ಥೆಯವರು ದಿವಂಗತ ಶ್ರೀ ಶಂಕರನಾರಾಯಣರಾಯರ ಹೆಸರಿನಲ್ಲಿ ಏರ್ಪಡಿಸಿರುವ ಸ್ಮಾರಕ ನಿಧಿಗೆ, ದಿವಾನರು ೧೦೦ ರೂ. ಸಹಾಯ ಮಾಡಿದ್ದಾರೆ.

ಇಂಗ್ಲೆಂಡಿನಿಂದ ವಾಪಸು

ಇಂಗ್ಲೆಂಡಿನಲ್ಲಿ ಜೋಗ್ ವಿದ್ಯುಚ್ಛಕ್ತಿಗೆ ಬೇಕಾಗುವ ಯಂತ್ರಗಳನ್ನು ಸ್ವತಃ ಪರೀಕ್ಷಿಸಲು ಸರ್ಕಾರದ ಪರವಾಗಿ ೩ ತಿಂಗಳ ಹಿಂದೆ ತೆರಳಿದ್ದ ಡಾ|| ಬಿ. ಕೆ. ರಾಮಪ್ರಸಾದರವರು ತಮ್ಮ ಕೆಲಸವನ್ನು ಮುಗಿಸಿ[illegible] ಬೆಂಗಳೂರಿಗೆ ವಾಪಸು ಬಂದರು.

ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಸಮ್ಮೇಳನದ ೨೭ ನೇ ಅಧಿವೇಶನವನ್ನು ಡಿಸೆಂಬರ್ ತಾ|| ೨೬, ೨೭ ಮತ್ತು ೨೮ ರಲ್ಲಿ ಶಿವಮೊಗ್ಗದಲ್ಲಿ ನಡೆಸಲು ಏರ್ಪಾಡುಗಳಾಗುತ್ತಿರುವುದಾಗಿ ಗೊತ್ತಾಗಿದೆ.

ಭಾರತದಲ್ಲಿ ಆಸ್ಟ್ರೇಲಿಯಾ ಪ್ರತಿನಿಧಿ

ಇಂಡಿಯಾ ಗೌರ್ನಮೆಂಟ ಗಳಲ್ಲಿ ಹೈಕಮೀಷನರಾಗಿ [illegible] ಆಸ್ಟ್ರೇಲಿಯಾ ಮಂತ್ರಿ ಮಂಡಲವು ನಿರ್ಧರಿಸಿದೆ [illegible] ಇದರ ಉದ್ದೇಶ

ಬಂಧನದಲ್ಲೇ ಇರಲು ಗಾಂಧಿಯವರ ಅಪೇಕ್ಷೆ

ದೆಹಲಿಯಲ್ಲಿ ಊಹಾಪೋಹಗಳು

ಹೊಸ ವೈಸರಾಯರು ಅಧಿಕಾರ ವಹಿಸಿಕೊಂಡನಂತರ ದೆಹಲಿಯಲ್ಲಿ ಅನೇಕ ಊಹಾಪೋಹಗಳು ಎದ್ದಿವೆ. ಕಾಂಗ್ರೆಸ್ ಆಗಸ್ಟ್ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಾದರೆ ಕ್ರಿಪ್ಸ್ ಸಲಹೆಗಳನ್ನು ಪುನಃ ಮುಂದಿಡಲಾಗುವುದೆಂದೂ ಅದನ್ನು ಮುಖಂಡರು ಅಂಗೀಕರಿಸ ಬೇಕಾದರೆ ವೈಸರಾಯರ ಕೌನ್ಸಿಲ್ಲಿಗೆ ಇನ್ನು ಕೆಲವು ಭಾರತ ಪ್ರತಿನಿಧಿಗಳನ್ನು ತೆಗೆದುಕೊಳ್ಳುವುದಾಗಿಯೂ ಹೇಳಲಾಗಿದೆ.

ಆದರೆ, ಕಾಂಗ್ರೆಸ್ಸಿನ ನೀತಿಯ ವಿಷಯದಲ್ಲಿ ಯಾರಿಗೂ ಸಂದೇಹವೇ ಇಲ್ಲ. ತಾವಿದ್ದ ಕಡೆಯೇ ಇರಲು ಬಯಸುವುದಾಗಿಯೂ ಬಿಕ್ಕಟ್ಟಿನ ಪರಿಹಾರಕ್ಕೆ ಅದೇ ಸನ್ಮಾರ್ಗವೆಂದೂ, ಗಾಂಧೀಜಿಯವರು, ಇಂಡಿಯಾ ಸರ್ಕಾರಕ್ಕೆ ತಿಳಿಸಿರುವುದಾಗಿ ವದಂತಿಯಾಗಿದೆ.

ಹೊಸ ವೈಸರಾಯರು ತಮ್ಮ ನೀತಿಯನ್ನು ಹೊರಗೆಡಹಿದಾಗ ಕಾಂಗ್ರೆಸ್ ನಾಯಕರು ತಮ್ಮ ಆಗಸ್ಟ್ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವಂತೆಯೂ ಕ್ರಿಪ್ಸ್ ಸಲಹೆಗಳನ್ನು ಅಂಗೀಕರಿಸಿ ಕಾರ್ಯರೂಪಕ್ಕೆ ತರಲು ಎಲ್ಲರೂ ಐಕಮತ್ಯವನ್ನು ತೋರಬೇಕೆಂದು ಹೇಳುವರೆಂದೂ ರಾಜಕೀಯ ಆವರಣಗಳು ಅಭಿಪ್ರಾಯಪಡುತ್ತವೆ.

ಭಾರತಕ್ಕೆ ದ|| ಆಫ್ರಿಕಾದಿಂದ ಆಹಾರ

ದಕ್ಷಿಣ ಆಫ್ರಿಕದ ಸರ್ಕಾರದ ಪರವಾಗಿ ಜನರಲ್ ಸ್ಮಟ್ಸ್ ರವರು ಭಾರತ ದೇಶಕ್ಕೆ ಬೇಕಾದ ಆಹಾರ ಧಾನ್ಯಗಳನ್ನೂ, ಹಾಲು ಮತ್ತು ಇತರ ಪದಾರ್ಥಗಳನ್ನೂ ಕಳುಹಿಸಿ ಕೊಡುವುದಾಗಿ ತಿಳಿಸಿದ್ದಾರೆ. ಇದನ್ನು ಇಂಡಿಯಾ ಸರ್ಕಾರದವರು ಕೃತಜ್ಞತೆಯಿಂದ ಸ್ವೀಕರಿಸಿದ್ದಾರೆ.

ಕಲ್ಕತ್ತಾದಲ್ಲಿ ಕಾಲರಾ

[illegible] ಜನ [illegible] ಕಾಲರಾ [illegible] ಈ ರೋಗವನ್ನು ತಡೆಯಲು [illegible] ಜನರಿಗೆ ಇನಾಕ್ಯುಲೇಷನ್ ಮಾಡಬೇಕೆಂದು ಹೇಳಲಾಗಿದೆ.

ಚಿತ್ತಗಾಂಗ್ ಮೇಲೆ ವಿಮಾನ ಕದನ

ಫೈಟರ್ ವಿಮಾನಗಳೊಡಗೂಡಿದ ಶತ್ರು ಬಾಂಬರ್ ವಿಮಾನಗಳ ದಳವೊಂದು ಮೊನ್ನೆ ದಿನ ಚಿತ್ತಗಾಂಗಿನ ಮೇಲೆ ಧಾಳಿ ನಡೆಸಲು ಪ್ರಯತ್ನಿಸಿತು ಎಂದು ಇಂಡಿಯಾ ಕಮ್ಯಾಂಡ್ ಜಂಟಿ ಪ್ರಕಟಣೆಯೊಂದು ತಿಳಿಸುತ್ತದೆ.

ಪೂರ್ವಭಾಗದ ವರದಿಯಂತೆ, ನಮ್ಮ ಫೈಟರುಗಳು ಹೋಗಿ ಅವುಗಳನ್ನು ಎದುರಿಸಿದವು. ಉಭಯ ದಳಗಳಿಗೂ ಕದನವು ನಡೆಯಿತು. ಈಗ ಇನ್ನೂ ಹೆಚ್ಚಿನ ವಿವರಗಳು ದೊರೆತಿಲ್ಲ.

ನಾಜಿಗಳು ಕ್ರಿಮಿಯಾ ತ್ಯಜಿಸುತ್ತಿರುವರು

ಕ್ರಿಮಿಯಾದಿಂದ ಬಿಳಿ [illegible] ಜರ್ಮನ್ ಸೈನ್ಯಗಳು [illegible] ಮೂಲಕ ರಷ್ಯದ ಸೈನ್ಯಗಳು ಒಳನುಗ್ಗುತ್ತಿವೆ. ಕ್ರಿಮಿಯಾವನ್ನು ಬಿಡದ ನಾಜಿಗಳು ಆಗಲೇ ಸಿದ್ಧತೆಗಳಾಗುತ್ತಿವೆ. ಅಜೋವ್ ಸಮುದ್ರದ ಉತ್ತರಕ್ಕೆ ರಷ್ಯನರು ತಮ್ಮ ಧಾಳಿಯನ್ನು ಮುಂದುವರಿಸಿದರು. ಕೀವಿನ ಮೇಲೆ ಅಂತ್ಯ ಪ್ರಹಾರವು ಆರಂಭವಾದಂತಿದೆ.

ಯುದ್ಧ ಮುಗಿಯುವವರೆಗೆ ಬಂಧನ

ವಾಯುವ್ಯ ಸರಹದ್ದು ಪ್ರಾಂತ್ಯದಲ್ಲಿ ೬೫ ಜನರನ್ನು (ಅವರ ಪೈಕಿ ೫ ಜನ ಶಾಸನ ಸಭಾ ಸದಸ್ಯರು) ಯುದ್ಧ ಮುಗಿಯುವವರೆಗೆ ಬಂಧನದಲ್ಲಿಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಪಂಜಾಬ್ ಡಿಟೆನ್ಯೂಗಳು

ಪಂಜಾಬಿನಲ್ಲಿ ಕಳೆದ ತಿಂಗಳಿಂದ ನೂರಕ್ಕಿಂತ ಹೆಚ್ಚು ಡಿಟೆನ್ಯೂಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನೂ ೩೦೦ ಜನರಿದ್ದಾರೆ. ಕಾಂಗ್ರೆಸ್ ಆಗಸ್ಟ್ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕು [illegible] ಬಿಡುಗಡೆ ಮಾಡು[illegible] ಗಿದೆ. ಜಿಲ್ಲಾಧಿಕಾರಿಗಳ [illegible] ಕೇಸುಗಳನ್ನು ಪರಿಶೀಲಿಸಲಾಗುತ್ತಿದೆ.

ದೇವರ ಉತ್ಸವಕ್ಕೆ ಅಡ್ಡಿ

ಚನ್ನಪಟ್ಟಣದಲ್ಲಿ [illegible] ಶ್ರೀಕಂಠೇಶ್ವರಸ್ವಾಮಿ ಉತ್ಸವವು [illegible] ಬಳಿ [illegible] ಕೆಲವು ಜನರು [illegible] ಉತ್ಸವವು ಬರಕೂಡದೆಂದೂ, [illegible] ನ್ನು ನಿಲ್ಲಿಸಲಾಗಿದೆಯೆಂದೂ, [illegible] ಸ್ವಾಮಿಯವರ ಉತ್ಸವವು [illegible] ಹೋಗುವವರೆಗೆ ಈ ಉತ್ಸವವು [illegible] ಬರಬಾರದೆಂದೂ, ಉತ್ಸವವು [illegible] ಆಗುವುದರಿಂದ ದೇವರಿಗೆ [illegible] ಕರ್ತವ್ಯವೆಂದೂ [illegible] ಇದರಿಂದ ಆಸ್ತಿಕ ಮಹಾಶಯರಲ್ಲಿ ಅಸಮಾಧಾನವಾಗಿದೆಯೆಂದು ಗೊತ್ತಾಗಿದೆ.

ರೋಂ ಅರಕ್ಷಿತ ನಗರ

ನಿನ್ನೆ ಬರ್ಲಿನ್ ಲಂಡನ್ ಮೇಲೆ ಕ್ರಮವಾದ ಐದನೇ ದಿನದ ಧಾಳಿ ನಡೆಯಿತು. ಕೆಲವು ವಿಮಾನಗಳು ಬಂದಿದ್ದುವು. ಬಾಂಬುಗಳಿಂದ ಕೆಲವು ನಷ್ಟಗಳಾದುವು. ಒಂದು ದೇವಸ್ಥಾನವು ಹೋಯಿತು. ಇತರ ದೂರದೂರದ ಪ್ರದೇಶಗಳಲ್ಲೂ ಕೆಲವು ಬಾಂಬುಗಳು ಬಿದ್ದು ಅಲ್ಪ ಸ್ವಲ್ಪ ನಷ್ಟಗಳಾದುವು.

ಜರ್ಮನಿಗೆ ಪೋರ್ಚುಗಲ್ ಎಚ್ಚರಿಕೆ

[illegible] ನಲ್ಲಿರುವ ನಾಜಿ ರಾಜತಾಂತ್ರಿಕ ಪ್ರತಿನಿಧಿಗಳು ತಮ್ಮ ಅಧಿಕಾರಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಬಿಡದಿದ್ದರೆ [illegible] ಲಿಸ್ಬನ್ನಿನ ಮೂಲಕ ಜರ್ಮನಿಯು [illegible] ಸಂಬಂಧವು ಕಡಿದುಹೋಗಬಹುದೆಂದು ಪೋರ್ಚುಗೀಸ್ ಮುಖ್ಯ ಮಂತ್ರಿ ಡಾ|| ಸಾಲಜಾರರವರು ಜರ್ಮನಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

ರೊಮೇಲ್ ರೋಲೆಂಡರು ಸತ್ತಿಲ್ಲ ?

ಫ್ರೆಂಚ್ ಕವಿಗಳಾದ ರೊಮೇ[illegible] ರೋಲೆಂಡರ ವಿಷಯವು ವಿಶ್ವಾಸಕರವಾಗಿದೆ. ಅವರನ್ನು ಬಂಧನ ಶಿಬಿರದಲ್ಲಿಡಲಾಗಿದೆಯೆಂದು ಮೊನ್ನೆ [illegible] ಹೇಳಲಾಗಿತ್ತು. ಅವರು ಮೃತರಾದರೆಂದು ಜರ್ಮನ್ ರೇಡಿಯೋ ಹೇಳಿತು. ಅವರ [illegible] ಸುಳ್ಳೆಂದು ಪ್ಯಾರಿಸ್ ರೇಡಿಯೋ [illegible] ರೋಲೆಂಡರಿಗೆ ಸ್ವಲ್ಪ ಅಸ್ವಸ್ಥರಾಗಿದೆಯೆಂದೂ, ಪ್ಯಾರಿಸ್ಸಿನ [illegible] ವಿಶ್ರಾಂತಿ ತೊಗೊಳ್ಳುತ್ತಿರುವರೆಂದೂ ಹೇಳಲಾಗಿದೆ.

ಲಂಡನ್ ಮೇಲೆ ಧಾಳಿ

ರೋಂ ಅರಕ್ಷಿತ ನಗರವೆಂದು [illegible] ಮಾಡಲು ಪೋಪ್ [illegible] ಜರ್ಮನಿಯೊಡನೆ [illegible] ಸಮಾಲೋಚನೆ [illegible] ಹೇಳಲಾಗಿದೆ

ಸ್ಮಶಾನಕ್ಕೆ ಹೆಣಗಳ ಪಂಕ್ತಿ

[illegible] ಮಾನಗಳನ್ನು [illegible] ಶ್ಮಶಾನ [illegible] ಲ್ಲಿ [illegible] ಜನ ಮಡಿದರು.

ಕೆರೆ ಒಡೆಯಿತೆಂಬ ಭೀತಿ

ತುರುವೇಕೆರೆ ಪ್ರಾಂತ್ಯದಲ್ಲಿ ಬಹಳ ಮಳೆಯಾಗಿ ಕೆರೆಗಳೆಲ್ಲ ಕೋಡಿ ಬಿದ್ದಿವೆ. ಕಳೆದ ಸೋಮವಾರ ಸಂತೆ ಪ್ರಯುಕ್ತ ಅನೇಕ ಜನರು ಸೇರಿದ್ದಾಗ ಮೇಲಿನ ಕೆರೆಗಳು ಒಡೆದುಹೋಗಿ ಊರಿಗೆ ನೀರು ನುಗ್ಗುತ್ತಿದೆಯೆಂದು ಕೆಲವರು ಗುಲ್ಲೆಬ್ಬಿಸಿದರು. ಮನೆಯಲ್ಲಿದ್ದವರು ಕೈಗೆ ಸಿಕ್ಕಿದುದನ್ನು ಎತ್ತಿಕೊಂಡು ಊರ ಹೊರಗೆ ಹೋದರು. ಆನಂತರ ಕೆರೆಗಳು ಒಡೆಯಲಿಲ್ಲವೆಂದು ಕೇಳಿ ರಾತ್ರಿ ಹನ್ನೊಂದು ಘಂಟೆಗೆ ಹಿಂತಿರುಗಿದರು.

ತುಮಕೂರು ಕೆರೆ ಬಿರುಕು

ನಿನ್ನೆ ಬೆಳಗ್ಗೆ ತುಮಕೂರು ಕೆರೆಯ ಗ್ರಾಡ್ 10 ಮತ್ತು 11 ರ ಮಧ್ಯೆ ಬಿರುಕು ಬಿಟ್ಟಿತೆಂದೂ, ಸಣ್ಣದಾಗಿ ಕೋಡಿ ಹೊಂಟಿರುವುದಾಗಿಯೂ ತಿಳಿದುಬಂದಿದೆ. ಈಗ ನೀರು ಇಳಿಯುತ್ತಿದೆ. ಅಧಿಕಾರಿಗಳು ಬಂದು ಅವಶ್ಯಕವಾದ ಕೆಲಸಗಳನ್ನು ಕೈಗೊಂಡಿರುವರು.

ಕಣ್ವಾ ಅಣೆಕಟ್ಟೆಗೆ 10 ಸಾವಿರ ರೂ. ನಷ್ಟ

ವಿಪರೀತ ಮಳೆಯ ದೆಸೆಯಿಂದ ಕಣ್ವಾ ಅಣೆಕಟ್ಟಿನ ಕೋಡಿಯು ಸುಮಾರು ಒಂದು ಫರ್ಲಾಂಗ್ ದೂರ ಕೊಚ್ಚಿ ಹೋಗಿರುವುದರಿಂದ ಇದರಿಂದ ಸುಮಾರು ಹತ್ತು ಸಾವಿರ ರೂ. ನಷ್ಟವಾಗಬಹುದೆಂದೂ ಹೇಳಲಾಗಿದೆ. ಅಣೆಕಟ್ಟು ಮೇಲೂ ಹತ್ತು ಅಡಿ ನೀರು ಹರಿಯಿತು. ಇಂಥಾ ಪ್ರವಾಹವನ್ನು ಕಂಡವರೇ ಇಲ್ಲ. ಬೆಳೆಗಳ ನಷ್ಟ ಅಪಾರವಾಗಿದೆ. ಇನ್ನೆರಡು ತಿಂಗಳಲ್ಲಿ ದುರಸ್ತಾಗಬಹುದೆಂಬ ನಿರೀಕ್ಷಣೆ ಇದೆ.

2,211 ರೂ. ನೋಟು ದರೋಡೆ

ಎತ್ತಿನ ವ್ಯಾಪಾರಕ್ಕಾಗಿ ದೆಲ್ಲೂರಿನಿಂದ ಬಂದಿದ್ದ ಪುಲ್ಲಯ್ಯ ಎಂಬಾತನನ್ನು ಎತ್ತು ಕೊಡಿಸುವುದಾಗಿ ಹೇಳಿ ಕೆಲವರು ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ಪಕ್ಕದ ಬಳಿ ಕರೆದುಕೊಂಡುಹೋಗಿ, ಚಾಕುವನ್ನು ತೋರಿಸಿ ಬೆದರಿಸಿ, ಆತನಲ್ಲಿದ್ದ 2,211 ರೂ. ನೋಟು ಕಿತ್ತುಕೊಂಡು ಓಡಿಹೋದರು. ಒಬ್ಬನನ್ನು ಪೋಲೀಸರು ವಶ್ತಗೆದುಕೊಂಡಿದ್ದಾರೆ.

ತಿರುವಾಂಕೂರಿಗೆ ಬೆಲೂಚಿಸ್ಥಾನದ ಅಕ್ಕಿ

ಬೆಲೂಚಿಸ್ಥಾನದಿಂದ 14000 ಟನ್ ಭತ್ತವು ಹೊರಕ್ಕೆ ರಫ್ತಾಗುವುದಿದ್ದಿದೆ. ಇದರಲ್ಲಿ ಬಹುಭಾಗವ ಕೊಚ್ಚಿ, ತಿರುವಾಂಕೂರುಗಳಿಗೆ ಹೋಗುವುದು.

ಪತ್ರ ವ್ಯವಹಾರ

ಮೈಸೂರು ಮುನಿಸಿಪಲ್ ಚುನಾವಣೆ

ನಾನು ಉಮೇದುವಾರನಾಗಿ ನಿಂತು ವಾಪಸ್ ತೆಗೆದುಕೊಂಡಿದ್ದಕ್ಕೆ, ನನ್ನ ಮಿತ್ರರಿಗೆ ನಾನು ಒಂದು ಸಮಾಧಾನವನ್ನು ಕೊಡತಕ್ಕದ್ದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ.

ನನ್ನ ಕೆಲವು ಮಾನ್ಯ ಮಿತ್ರರು ಬಂದು "ನೀವು ದೇವರಾಜ ಮೊಹಲ್ಲಾಕ್ಕೆ ಒಬ್ಬರೇ ಸ್ವತಂತ್ರರು ನಿಂತಿರುವುದರಿಂದಲೂ, ನಿಮ್ಮನ್ನು ತಿಳಿಯದೇ ಇರತಕ್ಕ ಓಟರು ಇಲ್ಲದೇ ಇರುವುದರಿಂದಲೂ ನೀವು ಖಂಡಿತವಾಗಿ ಜಯಶೀಲರಾಗುತ್ತೀರಿ. ಆದರೆ ಈ ಸಂದರ್ಭದಲ್ಲಿ ನೀವು "ಕಾಂಗ್ರೆಸ್" ಸಂಸ್ಥೆಗೆ ವಿರೋಧವಾಗಿ ನಿಲ್ಲದೆ ವಾಪಸ್ ತೆಗೆದುಕೊಂಡರೆ, ನೀವು ಕಾಂಗ್ರೆಸ್ಸಿಗೆ ಎರಡು ವಿಧದಲ್ಲಿ ಸಹಾಯಮಾಡಿದಂತೆ ಆಗುತ್ತೆ. ಒಂದು, ನಾವುಗಳು ಬೇರೆ ಕಡೆ ಕೆಲಸ ಮಾಡಲು ಉಪಕಾರ ಮಾಡಿದಂತಾಗುತ್ತೆ; ಇನ್ನೊಂದು ಚುನಾವಣೆಯಿಂದಾಗಬಹುದಾದ ಆರ್ಥಿಕ, ಮಾನಸಿಕ ಮೊದಲಾದವುಗಳು ಕಾಂಗ್ರೆಸ್ಸಿಗೆ ನಿಮ್ಮಿಂದ ವಿಶ್ರಾಂತಿಯಾಗಿ ಬೇರೆ ಕಡೆಗೆ ಉಪಯೋಗವಾಗುವಂತೆ ಮಾಡುವುದಲ್ಲದೆ, ನಿಮ್ಮಿಂದ ಬೇರೆ ಕಡೆಯೂ ವಿಜಯವನ್ನು ಸಂಪಾದಿಸಿದಂತಾಗುತ್ತದೆ." ಎಂಬಿವೇ ರೀತಿಯಿಂದ ಹೇಳಲಾಗಿ "ಕಾಂಗ್ರೆಸ್" ಎಂಬ ಸಂಸ್ಥೆಗೆ ಮರ್ಯಾದೆ ಕೊಟ್ಟು ನನ್ನ ಉಮೇದುವಾರಿಕೆಯನ್ನು ವಾಪಸ್ ತೆಗೆದುಕೊಳ್ಳಲಾಯ್ತು.

ಆದರೆ ಇತ್ತೀಚಿನ ನಡೆವಳಿಕೆಗಳಿಂದ ಕಾಂಗ್ರೆಸ್ಸಿನಲ್ಲಿ ಪಡಕು ಬಂದಿರುವಂತೆ ತೋರುತ್ತದೆ. ಯಾವ ಸಂಸ್ಥೆಯೇ ಆಗಲಿ ಬರಿ ಕೆಲ ಜನಗಳ ನಿರಂಕುಶಾಧಿಕಾರದಿಂದ ನಡೆದರೆ ಅದು ಪ್ರಜಾಪ್ರಭುತ್ವವಾಗಿಯೇ ಪರಿಣಮಿಸುತ್ತದೆ(?) ಕಾಂಗ್ರೆಸ್ಸಿನ ಹೆಸರಿನಿಂದ ಜೈಲಿಗೆ ಹೋಗಿ ಬಂದು, ಖಾದಿ ಧರಿಸುವ ಏನೂ ಅರಿಯದ ಜನಗಳನ್ನು ಹಿಂಬದಿಯಲ್ಲಿಟ್ಟುಕೊಂಡು ಕೆಲ ಜನಗಳು ಆ ಸಂಸ್ಥೆಯನ್ನಾಳಿದರೆ, ಅದು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಸಂಬಂಧವೆಂದರೆ ಕಿವಿಗಿಂಪಾಗಿರುವುದಿಲ್ಲ. ಕಾಂಗ್ರೆಸ್ ಹುಟ್ಟಿದಾಗಿನಿಂದ ಅದಕ್ಕಾಗಿ ದುಡಿದು ಈಗಿರುವ ಸುಪ್ರಸಿದ್ಧರಿಗೆ ತಂದೆಂಥಾವರೊಬ್ಬರೂ, ನೇತಾರರುಗಳಾದ ಶ್ರೀಮಾನ್ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರಂಥವರನ್ನೂ, ಉತ್ಸಾಹಶಾಲಿಗಳೂ, ನಿಸ್ವಾರ್ಥವಾಗಿ ದುಡಿಯುವವರಾದ ಶ್ರೀ ಎಂ. ಸಿ. ಮಲ್ಲಪ್ಪನವರಂಥವರನ್ನೂ ಬಿಟ್ಟು, ಜನತಾಸೇವೆಮಾಡಲು ಉತ್ಸಾಹದಿಂದ ಬಂದ ನನ್ನಂಥವರಿಗೆ ಕಾವು

ದೊಡ್ಡರೋಗಕ್ಕೆ ಔಷಧ

ಶಿವಮೊಗ್ಗೆಯ ಅಗಸ್ತ್ಯ ಆಯುರ್ವೇದ ಔಷಧಾಲಯದ ಶ್ರೀ ಟಿ. ಮುತ್ತುಸ್ವಾಮಿ ಪಿಳ್ಳೆಯವರು ಹೀಗೆ ಬರೆಯುತ್ತಾರೆ.

ಸಂಸ್ಥಾನದ ಹಲವು ಕಡೆ ದನಗಳು 'ದೊಡ್ಡರೋಗ'ದಿಂದ ಸಾಯುತ್ತಿವೆಯಷ್ಟೆ. ಈ ರೋಗಕ್ಕೆ ಮುಂದೆ ಹೇಳುವ ಚಿಕಿತ್ಸೆ ಮಾಡಬಹುದು: ರೋಗದ ದನಕ್ಕೆ ಆರೋಗ್ಯದಿಂದಿರುವ ದನದ ಒಂದು ಔನ್ಸ್ ಮೂತ್ರ ಕುಡಿಸಬೇಕು. ದನಕ್ಕೆ ದನದ ಮೂತ್ರ, ಎಮ್ಮೆಗೆ ಎಮ್ಮೆಯ ಮೂತ್ರ ಕುಡಿಸಬೇಕು. ರೋಗದ ದನಗಳನ್ನು ಆರಯೊಟ್ಟಿಯಲ್ಲಿಡುವುದೆ ಮೇಲು. ಹೆಸರು ಕಾಳನ್ನು ಹುಟ್ಟು ಮತ್ತು ರಾಗಿ ಹುಟ್ಟಿನ ಅಂಬಲಿ ಕೊಡಬಹುದು. ಹಸಿಯ ಹುಲ್ಲಿಗಿಂತ ಒಣಗಿದ ಹುಲ್ಲು ಕೊಡುವುದು ಉತ್ತಮ. ಬಿಸಿನೀರನ್ನೂ ಆರಿಸಿ ಕುಡಿಸಬೇಕು.

ಉತ್ತೇಜನ ಕೊಡದೆ, ಬೇರೆ ವಿಧದಿಂದ ಸೇವೆಮಾಡೋಣವೆಂದರೆ ಅದಕ್ಕೂ ಅವಕಾಶ ಕೊಡದೆ ಇಲ್ಲದ ಸಲ್ಲದ ನೆಪದಿಂದ ಕಾಂಗ್ರೆಸ್ಸನ್ನು ಎದುರಿಸಲು ಬೇರೆ ಪಾರ್ಟಿಗಳನ್ನು ಮಾಡಲು ಅವಕಾಶ ಕೊಟ್ಟು, ಇಂಥ ಸಂಸ್ಥೆಗೆ ಧಕ್ಕೆ ತರುವುದು ಖಂಡಿತವಾಗಿಯೂ ಒಳ್ಳೆಯದಲ್ಲ.

ಈಗಲೂ ತನ್ನದೇ ಆಗಬೇಕೆಂಬ ದರ್ಪವನ್ನು ಬಿಟ್ಟು "ಒಂದೇ ಸಂಸಾರ" ದ ಜನಗಳವನ್ನು ತಮ್ಮೊಳಗೇ ಫೈಸಲ್ಮಾಡಿಕೊಂಡು ಸಂಸ್ಥೆಯನ್ನು ಮುಂದಕ್ಕೆ ತರುವುದು ಪ್ರತಿ ವ್ಯಕ್ತಿಯ ಕರ್ತವ್ಯವಾಗಿದೆ. ಏಂದರೆ ನಾನು ಪಾರ್ಟಿ ಕಟ್ಟುತ್ತೇನೆಂದು ಭಾವಿಸಬಾರದು. ಅಂಥವರಿಗೆ ಬಲಾತ್ಕಾರದಿಂದ ಆಗುಮಾಡಬಾರದೆಂಬುದೇ ನನ್ನ ಬಯಕೆ. ಕಾಂಗ್ರೆಸ್ ಜಯಿಸಲಿ. ಎದುರಾಳಿಗಳು ಬಂದರೆ ಅಸೂಯೆಪಡದಿರಲಿ, ಧೈರ್ಯದಿಂದ ಎದುರಿಸಲಿ. ಬಿರುಕನ್ನು ಸರಿಮಾಡಿ ಚಿರಾಯುವಾಗಲಿ!

ಜಿ. ವಿ. ಸೂರ್ಯನಾರಾಯಣಶೆಟ್ಟಿ

ಆಂಧ್ರರ ಆಕ್ರಮಣ ಪ್ರತಿಭಟನೆ

ಆಂಧ್ರ ಮಹಾ ಸಭೆಯವರು ಬಳ್ಳಾರಿ, ಅನಂತಪುರ ಜಿಲ್ಲೆಗಳ ಕೆಲವು ಭಾಗಗಳನ್ನು ತಮ್ಮ ಪ್ರಾಂತ್ಯಕ್ಕೆ ಸೇರಿಸಬೇಕೆಂದು ಮಾಡುತ್ತಿರುವ ಚಳುವಳಿಯನ್ನು ಈಗಾಗಲೇ ಎಲ್ಲರೂ ಪ್ರತಿಭಟಿಸುತ್ತಿರುವರಷ್ಟೆ. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರವರು ಮದ್ರಾಸ್ ಗೌರ್ನರ್‌ರವರಿಗೂ ಸರ್ ರಾಧಾಕೃಷ್ಣನ್‌ರವರಿಗೂ, ವಿಜಯನಗರದ ರಾಜಕುಮಾರರಾದ ಸರ್ ವಿಜಯರವರಿಗೂ ಪತ್ರಗಳನ್ನು ಬರೆದು, ಈ ಪ್ರಯತ್ನವನ್ನು ಪ್ರತಿಭಟಿಸಿದ್ದಾರೆ.

ಆಯುರ್ವೇದಕ್ಕೆ ಸಹಾಯ

ಬೆಂಗಳೂರಿನಲ್ಲಿ ಸ್ಥಾಪಿತವಾಗಲಿರುವ ಆಯುರ್ವೇದ ಆಸ್ಪತ್ರೆಗೆ ಇದುವರೆಗೆ 3 ಲಕ್ಷ ರೂ. ಸೇರಿರುವುದಾಗಿ ಗೊತ್ತಾಗಿದೆ. ಈಚೆಗೆ ಮೈಸೂರು ಒಂಟಿಕೊಪ್ಪಲಿನಲ್ಲಿರುವ ರಾವ್ ಸಾಹೇಬ್ ಪಾಪಯ್ಯ ಶೆಟ್ಟರು 13,000 ರೂ. ಮತ್ತು ಶ್ರೀ ಸಿ. ಪೆರುಮಾಳ್ ಶೆಟ್ಟರು 5,000 ರೂ. ಕೊಟ್ಟಿರುವುದಾಗಿ ತಿಳಿದುಬಂದಿದೆ.

ಹುಲಿ ಶಿಕಾರಿ

ಶ್ರೀ ಮನ್ಮಹಾರಾಜರವರು ಗುಂಡ್ಲುಪೇಟೆ ತಾಲ್ಲೂಕು ಓಂಕಾರಪುರದ ಕಾಡಿನಲ್ಲಿ ಒಂದು ಭಾರಿ ಹುಲಿಯನ್ನು ಶಿಕಾರಿಮಾಡಿದರೆಂದು ತಿಳಿದುಬಂದಿದೆ.

"ವಿದ್ಯಾಭೂಷಣ"

ಅಯೋಧ್ಯೆಯ ಸಂಸ್ಕೃತ ವಿಶ್ವ ವಿದ್ಯಾಲಯದವರು ಚಿತ್ರದುರ್ಗದ ಹೈಸ್ಕೂಲು ಸಂಸ್ಕೃತ ಪಂಡಿತರಾದ ಶ್ರೀ ವೇದತೀರ್ಥ ಕಾಶೀನಾಥ ಶಾಸ್ತ್ರಿಗಳಿಗೆ 'ವಿದ್ಯಾಭೂಷಣ' ಎಂಬ ಬಿರುದನ್ನು ಕೊಟ್ಟಿರುವರು.

Edited, printed and published by A R. Nagarajan, at the Sadhvi Press, D.Subbiah Road, Mysore.

ನಂಜನಗೂಡು ಟೌನ್ ಮುನಿಸಿಪಾಲಿಟಿ

ಪ್ರಕಟನೆ

ನಂಜನಗೂಡು ಟೌನ್ ಎಕ್ಸ್‌ಟೆನ್‌ಷನ್‌ನಲ್ಲಿರುವ 91 ಖಾಲಿ ನಿವೇಶನಗಳನ್ನು ಬಹಿರಂಗವಾಗಿ 8-11-1943 ನೇ ತಾರೀಖು ಆರಾಭ್ಯ ಪ್ರತಿದಿನವೂ ದಿವ 12 ಗಂಟೆ ಆರಂಭಿಸಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಹರಾಜು ವೇಳೆ ಬಿಡ್ ಮಾಡಿ ಪಡೆಯಬಹುದು. ಇನ್ನುಳಿದ ವಿಷಯಗಳನ್ನು ಮುನಿಸಿಪಲ್ ಆಫೀಸಿನಲ್ಲಿ ತಿಳಿಯಬಹುದು.

ನಂಜನಗೂಡು
5-10-1943

ಕೆ. ವಿಶ್ವೇಶ್ವರಗೌಡ,
ಪ್ರೆಸಿಡೆಂಟ್

ಸ್ತ್ರೀಯರ ಸೌಕರ್ಯಕ್ಕಾಗಿ

ಈಗ ಕೆಲವು ದಿನಗಳಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲಿ ಸಗಟಾಗಿ ಮೊತ್ತದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ ಮತ್ತು ಕಂಟ್ರೋಲ್ ರೇಟ್ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಿಕ್ಕುವುದು

ಉಡುಪುಗಳು! ಬೆನಾರಸ್ ಸೀರೆಗಳು ವಾಯಿಲ್ ಸೀರೆಗಳು!

ಬಹುಮಾನಕ್ಕೆ ನವೀನ ಮಾದರಿಗಳಲ್ಲಿ ಬೇಕಾದ ನಗಗಳು

ನಿಮ್ಮ ಮನವೊಪ್ಪುವಂತೆ! ಕಣ್ಣಿಗಾನಂದವಾಗುವಂತೆ!

ಬೆಂಗಳೂರು ಕೆ. ಎಚ್. ಶಾಮರಾವ್ ಅಂಡ್ ಸನ್ಸ್‌ರವರಿಂದ ತಯಾರಿಸಲ್ಪಟ್ಟ ಉಡುಪುಗಳು ಬೆನಾರಿಸ್‌ವಾಲಾಗಳೇ ಇಲ್ಲಿ ಬಂದು ಕಡಿಮೆ ಬೆಲೆಗೆ ಮಾರುವ ಸೀರೆಗಳು, ಕಣಗಳು, ಇತ್ಯಾದಿ ಇತ್ಯಾದಿ

ಗ್ಯಾರಂಟಿಯಾದ ಚಿನ್ನ ಬೆಳ್ಳಿ ನಗಗಳು

ಸ್ಥಳ - ಜಿ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್ಸ್

ಜವಾಹಿರಿ ಮತ್ತು ಬಟ್ಟೆವ್ಯಾಪಾರಿಗಳು,

ಸಯ್ಯಾಜಿರಾವ್ ರೋಡ್, ಮೈಸೂರು.

ಸಂಪುಟ ೨] ಶನಿವಾರ ೨೩—೧೦—೪೩ [ಸಂಚಿಕೆ ೮೨

‘ಅಮೆರಿಯವರನ್ನು ತೆಗೆದುಹಾಕಬೇಕು’

ಪಾರ್ಲಿಮೆಂಟ್ ಸಭೆಯಲ್ಲಿ ಪ್ರಶ್ನೋತ್ತರಗಳು

ಗಾಂಧೀಜಿ ಮತ್ತು ಮುಖಂಡರ ಭೇಟಿಗೆ ಅವಕಾಶವೇ ?

ಮೈಸೂರು ಮಹಿಳಾ ಸಮ್ಮೇಳನ

ಲಕ್ಷ್ಮೀವಿಲಾಸ ಸನ್ನಿಧಾನದವರಿಂದ ಪ್ರಾರಂಭ

ಮೈಸೂರು ೨೩

ಮೈಸೂರು ಸಂಸ್ಥಾನದ ಮಹಿಳಾ ಸಮ್ಮೇಳನದ ೧೮ ನೇ ಅಧಿವೇಶನವು ನಿನ್ನೆ ಸಾಯಂಕಾಲ ಮೈಸೂರು ಜಗನ್ಮೋಹನ ಅರಮನೆಯಲ್ಲಿ ಆರಂಭವಾಯಿತು.

ಬಾಲಕೀಯರಿಂದ ಪ್ರಾರ್ಥನೆ ಆದನಂತರ ಸಭೆ ಪ್ರಾರಂಭವಾಯಿತು.

ಸ್ವಾಗತ ಸಮಿತಿ ಅಧ್ಯಕ್ಷಿಣಿಯರಾದ ರಾಜಕುಮಾರಿ ಲೀಲಾವತಿಯವರು ಭಾಷಣ ಮಾಡಿ ಡವೇಜರ್ ಮಹಾರಾಣಿಯವರನ್ನು ಸ್ವಾಗತಿಸಿದರು. ಸಂಸ್ಥಾನದಲ್ಲಿ ಸ್ತ್ರೀ ವಿದ್ಯಾಭ್ಯಾಸವು ಮುಂದುವರಿಯುತ್ತಿರುವುದರಿಂದ ಮಹಿಳೆಯರ ಏಳಿಗೆಯು ಖಂಡಿತವಾಗಿಯೂ ಆಗುವುದೆಂದು ಹೇಳಿದರು. ಬಾಲ್ಯ ವಿವಾಹ ನಿರೋಧ ಕಾನೂನು ಜಾರಿಗೆ ಬಾರದಿದ್ದರೂ ತಾನಾಗಿಯೇ ಬಾಲ್ಯವಿವಾಹ ಪದ್ಧತಿಯು ಮಾಯವಾಗುತ್ತಿದೆ. ಇದರಿಂದ ವಿದ್ಯಾರ್ಥಿನಿಯರ ಸಂಖ್ಯೆಯು ತಾನಾಗಿಯೇ ಹೆಚ್ಚುತ್ತಿದೆ. ಸಾಮಾಜಿಕ ಆರ್ಥಿಕ ತೊಡರುಗಳಿಗೆ ವಿದ್ಯಾಭ್ಯಾಸವೇ ಸಂಜೀವನ ಎಂದು ಎಲ್ಲರನ್ನೂ ಸ್ವಾಗತಿಸಿದರು.

ಡವೇಜರ್ ಮಹಾರಾಣಿಯವರಾದ ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ ಭಾಷಣಮಾಡಿದರು (ಅವರ ಭಾಷಣವನ್ನು ಬೇರೆ ಕಡೆ ಕೊಟ್ಟಿದೆ)

ದಿವಾನರ ಪತ್ನಿಯವರಾದ ಶ್ರೀಮತಿ ನರಸಮ್ಮ ಮಾಧವರಾಯರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಭಾಷಣ ಮಾಡಿದರು

ಸಂದೇಶಗಳು

ಶ್ರೀಮತಿ ಸರೋಜಿನೀದೇವಿಯವರು ಮೈಸೂರು ಮಹಿಳಾ ಸಮ್ಮೇಳನಕ್ಕೆ ಒಂದು ಸಂದೇಶವನ್ನು ಕಳುಹಿಸಿ ಅನೇಕ ಪ್ರಗತಿ ಕಾರ್ಯಗಳಲ್ಲಿ ಮೊದಲನೇ ಸ್ಥಾನವನ್ನು ಪಡೆದಿರುವ ಮೈಸೂರು ಸಂಸ್ಥಾನವು ಮಹಿಳಾ ಚಳುವಳಿಯಲ್ಲೂ ಪ್ರಥಮ ಸ್ಥಾನವನ್ನು ಪಡೆಯಬೇಕು ಮಹಿಳಾ ಚಳುವಳಿಯು ರಾಷ್ಟ್ರೀಯ ಜಾಗೃತಿಯನ್ನುಂಟುಮಾಡುತ್ತಿದೆ. ಇಂದು ಪ್ರಪಂಚವು ಘೋರ ಮಹಾಯುದ್ಧದ ಸುಳಿಯಲ್ಲಿ ಸಿಕ್ಕಿಕೊಂಡಿದೆ ಭಾರತದಲ್ಲಿಯೂ ಕೂಡ ಕ್ಷಾಮ, ಪ್ರಾಕೃತಿಕ ವಿಪತ್ತುಗಳಿಂದ ತುಂಬಾ ಸಂಕಟ ಉಂಟಾಗಿದೆ. ಮಹಿಳೆಯರು ಬಂಗಾಳ ಮತ್ತು ಇತರ ಪ್ರಾಂತಗಳಲ್ಲಿ ವ್ಯಾಪ್ತವಾಗಿರುವ ಮಹಾ ಸಂಕಟವನ್ನು ನಿವಾರಿಸಲು ಉದಾರವಾದ ಸಹಾಯ ಕಾರ್ಯವನ್ನು ಜಾಗ್ರತೆಯಾಗಿ ಕೈಗೊಳ್ಳುವರೆಂದು ಆಶಿಸುತ್ತೇನೆ. ಮುಖ್ಯವಾಗಿ ಮಕ್ಕಳಿಗೆ ನಿಮ್ಮ ಪ್ರೇಮ ಮತ್ತು ಸಹಾಯವು ಅತ್ಯಾವಶ್ಯಕವಾಗಿ ಬೇಕಾಗಿದೆ ಎಂದು ಹೇಳಿದ್ದಾರೆ.

ಅಖಿಲ ಭಾರತ ಮಹಿಳಾ ಸಮ್ಮೇಳನದ ಕಾರ್ಯದರ್ಶಿ ಶ್ರೀಮತಿ [illegible] ಅವರು ತಮ್ಮ ಸಂದೇಶದಲ್ಲಿ ಮೈಸೂರು ಮಹಿಳಾ ಸಮ್ಮೇಳನವು ಡವೇಜರ್ ಮಹಾರಾಣಿಯವರ ಪ್ರೋತ್ಸಾಹದಿಂದ ಯಶಸ್ವಿಯಾಗಿ ನಡೆಯುವುದೆಂದು ಆಶಿಸಿ ಇಂದು ಬಂಗಾಳ, ಮಲಬಾರ್ ಮುಂ

ಗೂಡ್ಸ್ ಗಾಡಿಗಳು ಬಿದ್ದವು

ಕಳೆದ ಸೋಮವಾರ ಬೆಳಿಗ್ಗೆ ಬೆಂಗಳೂರಿನಿಂದ ಕೋಲಾರಕ್ಕೆ ಹೋಗುವ ರೈಲು ಶ್ರೀನಿವಾಸಪುರಕ್ಕೂ, ದೊಡ್ಡನತ್ತಕ್ಕೂ ಮಧ್ಯೆ ಕಂಬಿ ತಪ್ಪಿದುದರಿಂದ ೬ ಗೂಡ್ಸ್ ವ್ಯಾಗನುಗಳು ಕೆಳಕ್ಕೆ ಬಿದ್ದುವೆಂದೂ ಪ್ರಯಾಣಿಕರಿಗೇನೂ ನಷ್ಟವಾಗಿಲ್ಲವೆಂದೂ ತಿಳಿದುಬಂದಿದೆ ಆದ್ದರಿಂದ ರೈಲು ೯ ಘಂಟೆಯ ಕಾಲ ತಡವಾಗಿ ಬಂದು ಸೇರಿತು.

ಮಾಜಿ ಅಧ್ಯಕ್ಷರ ಸಭಾತ್ಯಾಗ

ಬೆಂಗಳೂರು ಪೌರಸಭಾ ಮೀಟಿಂಗಿನಲ್ಲಿ, ಕೃಷ್ಣಯ್ಯಂಗಾರ್ ರಸ್ತೆಯನ್ನು ೬೦ ಸಾ. ಲಕ್ಷ ರೂ. ವೆಚ್ಚದಿಂದ ತೆರೆಯುವ ವಿಷಯವು ಚರ್ಚೆಗೆ ಬಂದಾಗ ಮಾಜಿ ಅಧ್ಯಕ್ಷರಾದ ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು ಸಭಾತ್ಯಾಗಮಾಡಿದರು. ಈ ಕೆಲಸವನ್ನು ಯುದ್ಧ ಮುಗಿಯುವವರೆಗೆ ಮುಂದಕ್ಕೆ ಹಾಕಬೇಕೆಂದು ಕೆಲವು ಸದಸ್ಯರು ಹೇಳಿದರು. ಹನುಮಂತಪ್ಪನವರು ಬಹಳ ಹೊತ್ತು ಮಾತಾಡಿದ್ದರಿಂದ ಬೇಗನೆ ಮುಗಿಸುವಂತೆ ಅಧ್ಯಕ್ಷರು ತಿಳಿಸಿದರು ಅದಕ್ಕೆ ಅಸಮಾಧಾನ ಸೂಚಿಸಲು ಶ್ರೀಯುತರು ಹೊರಗೆ ಹೋದರು.

ಮಹಮ್ಮದೀಯ ಕನ್ನಡ ಕವಿ

ನಾಗಮಂಗಲ ತಾ|| ಬೆಳ್ಳೂರಿನ ಮಿ|| ಅಬ್ದುಲ್ ಖಾದರ್‌ರವರು “ ಭಕ್ತಿ ಪ್ರಭಾವಳಿ ” ಎಂಬ ಕನ್ನಡ ಪದ್ಯ ಪುಸ್ತಕವನ್ನು ಬರೆದು ಶ್ರೀಮನ್ಮಹಾರಾಜರಿಗೆ ಒಪ್ಪಿಸಿದ್ದರು ಇವರಿಗೆ ಉತ್ತೇಜನ ಕೊಡಲು ಸರ್ಕಾರದವರು ೫೦ ರೂ ಕೊಟ್ಟಿರುತ್ತಾರೆ

ತಾದ ಪ್ರಾಂತ್ಯಗಳಲ್ಲಿ ಜನರಿಗುಂಟಾಗಿರುವ ತೊಂದರೆಗಳನ್ನು ಪರಿಹರಿಸಲು ಮೈಸೂರು ಮಹಿಳೆಯರು ಮುಂದೆಬರುವರೆಂದು ತಾವು ನಂಬಿರುವುದಾಗಿ ತಿಳಿಸಿರುತ್ತಾರೆ

ಶ್ರೀಮತಿ ರಾಜೇಶ್ವರಿ ನೆಹರು, ಲೇಡಿ ಮಿರ್ಜಾ, ಲೇಡಿ [illegible], ಸರ್ ಸಿ. ವಿ. ರಾಮನ್, [illegible] ಮೊದಲಾದ ಸಚಿವರುಗಳೂ ಇವರೆ [illegible] ಮಹಿಳೆಯರುಗಳೂ ಸಂದೇಶವನ್ನು ಕಳುಹಿಸಿರುವರು.

ಅಮೆರಿಯವರನ್ನು ತೆಗೆಯಿರಿ

ಕಮ್ಯೂನಿಸ್ಟ್ ಪ್ರತಿನಿಧಿಯಾದ ಮಿ|| ಗಲ್ಲಾಚರ್ ಎಂಬುವರು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಹಾಕಿ ಇಂಡಿಯಾ ಸೆಕ್ರೆಟರಿಯವರಾದ ಮಿ|| ಎಲ್ ಎಸ್. ಅಮೆರಿಯವರನ್ನು ಕೆಲಸದಿಂದ ತೆಗೆದುಹಾಕಬೇಕೆಂದೂ ಭಾರತ ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಬೇಕೆಂದೂ ಒಂದು ಗಿರಣಿಯವರು ಕಳಿಸಿದ್ದ ನಿರ್ಣಯದ ವಿಷಯವನ್ನು ಪ್ರಸ್ತಾಪಿಸಿದರು

ಗಿರಣಿಯವರಿಗೆ ಈ ವಿಷಯ ಸಂಬಂಧಪಟ್ಟದ್ದಲ್ಲವಾದ್ದರಿಂದ ಅವರಿಗೆ ಉತ್ತರಕೊಟ್ಟಿಲ್ಲವೆಂದು ಮಿ|| ಚರ್ಚಿಲ್ಲರು ಹೇಳಿದರು.

ರಾಜಕೀಯ ರಂಗದಿಂದ ಮಾಯವಾಗುವಂತೆ ಅಮೆರಿಯವರಿಗೆ ಹೇಳಿದರೆ ಅನೇಕರಿಗೆ ಸಂತೋಷವಾಗುವುದೆಂದು ಹೇಳಲಾಗಿ ‘ಇಲ್ಲ, ಇಲ್ಲ’ ಎಂಬ ಕೂಗು ಎದ್ದಿತು

ಸರ್ಕಾರದ ಒಬ್ಬ ಅಧಿಕಾರಿಯನ್ನು ವಜಾಮಾಡಬೇಕೆಂದು ಕೇಳುವುದು ಒಂದು ಅಮೂಲ್ಯ ಪ್ರಜಾ ಹಕ್ಕು ಎಂದು ಮಿ|| ಷಿನ್‌ವೆಲ್‌ರು ಹೇಳಿದರು

ಎಲ್ಲರಿಗೂ ಆ ಹಕ್ಕಿದೆ. ಆದರೆ ಉತ್ತರವನ್ನು ನೀಡಲು ಈ ಸಭೆಯಲ್ಲಿ ಕೊಡಲಾಗುವುದು ಎಂದು ಚರ್ಚಿಲರು ಹೇಳಿದರು

ಗಾಂಧೀಜಿ ಮತ್ತು ಮುಖಂಡರ ಭೇಟಿಗೆ ಅವಕಾಶ ?

ಹೊಸ ವೈಸ್‌ರಾಯರು ಗಾಂಧೀಜಿಯವರಿಗೂ ಕಾಂಗ್ರೆಸ್ ಮುಖಂಡರಿಗೂ ಭೇಟಿ ನಡೆಯಿಸಲು ಅವಕಾಶ ಕೊಡುವರೇ ? ಎಂಬ ಪ್ರಶ್ನೆಯು ದೆಹಲಿಯಲ್ಲಿ ಎಲ್ಲೆಲ್ಲೂ ಕೇಳಬರುತ್ತಿದೆ ಈ ಬಗ್ಗೆ ಮುಂದಿನ ತಿಂಗಳಲ್ಲಿ ದೆಹಲಿಯಲ್ಲಿ ಸೇರುವ ರಾಜಕೀಯ ಮುಂದಾಳುಗಳು ವೈಸರಾಯರನ್ನು ಭೇಟಿಮಾಡುವಂತೆ ಕಾಣುತ್ತದೆ.

ಗಾಂಧೀಜಿಯವರೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಕಲೆತು ಇಂದಿನ ಪರಿಸ್ಥಿತಿಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಲು ಲಾರ್ಡ್ ವೇವೆಲ್ಲರು ಅವಕಾಶ ಕಲ್ಪಿಸುವರೆಂದು ದೆಹಲಿಯ ರಾಜಕೀಯ [illegible]

— —

[illegible] ರಾಜರು ಬಂಗಾಳ ಪರಿಹಾರ [illegible] ಸಾವಿರ ರೂ ದಾನ ಮಾಡಿರುತ್ತಾರೆ

ಜಪಾನುಗಳೆಲ್ಲ ನದೀಪಾಲು

ಚಿತ್ತಗಾಂಗ್ ಧಾಳಿ ವಿವರ

ಜಪಾನ್ ವಿಮಾನಗಳು ಚಿತ್ತಗಾಂಗ್ ಮೇಲೆ ಧಾಳಿ ನಡೆಸಿದ ವಿಷಯವಾಗಿ ಈ ವಿವರಗಳು ತಿಳಿದುಬಂದಿವೆ.

ಈ ವಿಮಾನ ಪಡೆಗಳು ಒಟ್ಟುಗೂಡಿದುದು ತಿಳಿದೊಡನೆಯೇ, ಅವು ತಮ್ಮ ಗುರಿಯನ್ನು ಮುಟ್ಟುವುದಕ್ಕೆ ಮುಂಚೆಯೇ ಮಿತ್ರ ವಿಮಾನಗಳು ಅವುಗಳನ್ನು ಎದುರಿಸಿ ಕಡೆದುವು ಇದರಿಂದ ಅವರು ಹಾಕಿದ ಬಾಂಬುಗಳೆಲ್ಲಾ ಅಪಾಯವಿಲ್ಲದೆ ನದೀಪಾಲಾದುವು.

ಅಂತರಿಕ್ಷದಲ್ಲಿ ಎರಡು ಕಡೆಯ ವಿಮಾನಗಳಿಗೂ ಹೋರಾಟವಾಯಿತು ಅನೇಕ ಶತ್ರುವಿಮಾನಗಳು ಬಹುಶಃ ನಾಶವಾಗಿವೆ. ಇನ್ನು ಕೆಲವಕ್ಕೆ ನಷ್ಟವುಂಟಾಯಿತು ವಿಮಾನ ನಿರೋಧಕ ಫಿರಂಗಿಗಳು ಉಪಯೋಗಿಸಲ್ಪಟ್ಟವು. ಹೆಚ್ಚಿನ ವಿವರಗಳೇನೂ ತಿಳಿದಿಲ್ಲ

ವಿ ಲಿಟರಿ ಗುರಿಗಳಿಗೇನೂ ಅಪಾಯವಾಗಿಲ್ಲ ಮಹಾಜನರ ಸ್ವತ್ತಿಗೆ ನಷ್ಟವು ಅಲ್ಪ. ಮಿತ್ರ ವಿಮಾನಗಳಲ್ಲಿ ೬ ಹಾನಿಯಾದುವು ಒಬ್ಬ ವೈಮಾನಿಕನು ಬದುಕಿದನು.

ಗೋಪುರ ಬಿದ್ದು ಹೋಗಿದೆ

ಈಚೆಗೆ ಬಿದ್ದ ಮಳೆಯ ದೆಸೆಯಿಂದ ಮಾಗಡಿ ಶ್ರೀರಂಗನಾಥಸ್ವಾಮಿ ದೇವಾಲಯದ ಗೋಪುರವು ಬಿದ್ದು ಹೋಗಿರುವುದಾಗಿ ತಿಳಿದು ಬಂದಿದೆ. ಇದು ಕೆಂಪೇಗೌಡರ ಕಾಲದ್ದು

ಖೂನಿಯಾಗಲು ಹೆಂಡತಿ ಸಮ್ಮತಿ

ಗಂಡನ ಅಪ್ಪಣೆಯಂತೆ ತನ್ನ ಕೊಲೆಗೆ ತಾನೇ ಸಮ್ಮತಿಸಿದ ಒಬ್ಬ ಮಹಿಳೆಯ ವಿಚಿತ್ರ ಕಥೆಯು ಚಿತ್ತೂರು ಸೆಷನ್ಸ್ ಕೋರ್ಟಿನಲ್ಲಿ ವರದಿಯಾಗಿದೆ ಸುಬ್ಬರಾಯುಲು ಎಂಬೊಬ್ಬ ವೃದ್ಧ ಬ್ರಾಹ್ಮಣ. ಆತನು ತನ್ನ ಹೆಂಡತಿಯನ್ನು ಕೊಲೆಮಾಡಿದ. ಆಕೆಯು ಆತನಲ್ಲಿಟ್ಟಿದ್ದ ಪ್ರೇಮದಿಂದ ಆತನು ತನ್ನನ್ನು ಕೊಲ್ಲಲು ಆಕೆ ಒಪ್ಪಿದಳೆಂದು ಹೇಳಲಾಗಿದೆ. ಸೆಷನ್ಸ್ ನ್ಯಾಯಾಧೀಶರು ಜೀವಾವಧಿ ಶಿಕ್ಷೆಯನ್ನು ವಿಧಿಸಿದರು.

ಡವೇಜರ್ ಮಹಾರಾಣಿಯವರ ಭಾಷಣ

(ಹಿಂದಿನ ಪುಟದಿಂದ)

ದ ಸ್ತ್ರೀದ್ವಾರ. ಆದರೆ ಅವರ ಸಹಾಯ [illegible] ತಮ್ಮ ತಮ್ಮ [illegible] ಕೆಲಸವನ್ನಾಡಬೇಕು [illegible] ಆಸ್ಪತ್ರೆ ಕೇಂದ್ರಗಳಲ್ಲಿ ಸ್ವಯಂಸೇವಕಿಯರಾಗಿ ವಿಶೇಷವಾಗಿ ತಮ್ಮ ಸೇವೆಯನ್ನು ದೇಶ ಸೇವೆಗೆ ಅರ್ಪಿಸಿ, ಸ್ವಯಂ ಇಚ್ಛೆಯಿಂದ ಕೆಲಸ ಮಾಡುವವರ ಸಂಖ್ಯೆ ಕಡಿಮೆಯಾಗಿದೆ. ಇದರಂತೆ ನಮ್ಮ ದೇಶದಲ್ಲಿ [illegible] “ [illegible] ಸೇವೆ, [illegible] ಗಾಗಿಯೇ [illegible] ದೇಶಸೇವಕರ [illegible] ಸಂಸ್ಥೆಗಳನ್ನು [illegible] ಸುವುದು. ಅತ್ಯವಶ್ಯಕವಾಗಿದೆ

ಸ್ತ್ರೀ ಸ್ವಾತಂತ್ರ್ಯದ ಅರ್ಥವೇನು?

ಮಹಿಳಾ ಸಮ್ಮೇಳನದಲ್ಲಿ ದವೇಜರ್ ಮಹಾರಾಣಿಯವರ ಭಾಷಣ

ಆರಂಭ ಭಾಷಣ

ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದವರು ಸಮ್ಮೇಳನದ ಆರಂಭೋತ್ಸವವನ್ನು ಮಾಡಿ ಹೇಳಿದ್ದೇನೆಂದರೆ:—

ಸ್ತ್ರೀಯರಿಗೆ ಸಂಬಂಧಪಟ್ಟ ಸಮಸ್ಯೆಗಳು ಅನೇಕವಿರುವವು. ಬಾಲಿಕೆಯರಿಗೆ ಕೊಡುವ ವಿದ್ಯಾಭ್ಯಾಸವು ಅವರು ಸದ್ಗೃಹಿಣಿಯರಾಗಿಯೂ, ಸನ್ಮಾತೆಯರಾಗಿಯೂ, ದೇಶಸೇವೆಯನ್ನು ಪುರುಷರಿಗೆ ಸಮಾನರಾಗಿಯೂ ಮಾಡುವಂತೆ ಇರಬೇಕು. ನಮ್ಮ ದೇಶದ ಪುರಾಣಗಳಲ್ಲಿಯೂ, ಇತಿಹಾಸಗಳಲ್ಲಿಯೂ, ಇಂತಹ ರಮಣಿಯರು ನಮ್ಮ ದೇಶದಲ್ಲಿ ವಿರಾಜಿಸುತ್ತಿದ್ದರೆಂದು ಕೇಳಿದ್ದೇವೆ. ಸೀತಾ, ಸಾವಿತ್ರಿಯರಂತಹ ಪತಿವ್ರತಾ ಶಿರೋಮಣಿಗಳೂ, ಧಾರಿಣೀ, ಮದಾಲಸಾ, ಗಾರ್ಗಿ, ಮೈತ್ರೇಯಿಯರಂತಹ ಜ್ಞಾನಯೋಗಿಗಳೂ, ಸಮಯದಲ್ಲಿ ಪುರುಷರಿಗೆ ಯುದ್ಧರಂಗಗಳಲ್ಲಿಯೂ ಸಹಾಯಕರಾಗಿದ್ದ ಕೈಕೇಯಿ, ಸುಭದ್ರೆಯರಂಥ ವೀರ ರಮಣಿಯರೂ ಇವರ ವಿಷಯವನ್ನು ನಾವು ಓದಿರುತ್ತೇವೆ. ನಮ್ಮ ದೇಶದ ಚರಿತ್ರೆಯಲ್ಲಿಯೂ ಇಂತಹ ಅನೇಕ ನಾರೀಮಣಿಯರು ವಿರಾಜಿಸುತ್ತಿದ್ದರು. ಇದರಿಂದ ನಮ್ಮ ಸ್ತ್ರೀಯರು ಪೂರ್ವಕಾಲದಲ್ಲಿ ಎಲ್ಲಾ ವಿಷಯಗಳಲ್ಲಿಯೂ ಪುರುಷರಿಗೆ ಸಮಾನರಾಗಿದ್ದರೆಂಬುದು ವ್ಯಕ್ತವಾಗುತ್ತದೆ. ನಮ್ಮ ವಿವಾಹಮಂತ್ರಗಳಲ್ಲಿ ವಧುವು ಗೃಹಸ್ಥಾಶ್ರಮಕ್ಕೆ ಬಂದಾಗ ಹೀಗೆ ಹೇಳಿದೆ:—

ಇಹ ಪ್ರಿಯಂ ಪ್ರಜಯಾ ತೇ ಸಮೃಧ್ಯತಾಂ।
ಅಸ್ಮಿನ್ ಗೃಹೇ ಗಾರ್ಹಪತ್ಯಾಯ ಜಾಗೃಹಿ॥

ಎಂದರೆ "ಎಲೈ ವಧುವೇ! ನಿನಗೆ ಇಲ್ಲಿ ನಿನ್ನ ಸಂತಾನದೊಡನೆ ಸುಖಕರವಾದ ಸಮೃದ್ಧಿಯಾಗಲಿ! (ಹೊಂದು ಕಲ್ಯಾಣ) ಈ ಮನೆಯಲ್ಲಿ ನೀನು ಮನೆಯ ಯಜಮಾನಿಯ ವಿಷಯದಲ್ಲಿ ಜಾಗರೂಕಳಾಗಿರು" ಎಂದು ಹೇಳುತ್ತದೆ. ಮತ್ತು ಇದರಂತೆ ವಿವಾಹ ಹೋಮದಲ್ಲಿ ಹೇಳುವ ಮಂತ್ರಗಳೂ ಬಹು ಸ್ವಾರಸ್ಯವಾಗಿವೆ. ವಧುವನ್ನು ವರನು ಹೀಗೆ ಆಶೀರ್ವದಿಸುತ್ತಾನೆ:—

ಸಮ್ರಾಜ್ಞೀ ಶ್ವಶುರೇ ಭವ ಸಮ್ರಾಜ್ಞೀ ಶ್ವಶ್ರ್ವಾಂ ಭವ। ನನಾಂದರಿ ಸಮ್ರಾಜ್ಞೀ ಭವ ಸಮ್ರಾಜ್ಞೀ ಅಧಿದೇವೃಷು॥

"ಸ್ತ್ರೀಯೇ! ಮನೆಯಲ್ಲಿ ಮಾವನವರಿಗೂ, ಅತ್ತೆಯವರಿಗೂ, ಅತ್ತಿಗೆ ನಾದಿನಿಯರಿಗೂ, ಭಾವಮೈದುನರಿಗೂ ಸಂರಕ್ಷಕಳಾಗಿರಬೇಕು. ಇವಳೇ ಸಾಮ್ರಾಜ್ಞಿಯಾಗಿರಬೇಕೆಂದು" ಹೇಳಿದೆ. ಆದ್ದರಿಂದ ಸ್ತ್ರೀಯರು ಪೂರ್ವಕಾಲದಲ್ಲಿ ಬಹಳ ಗೌರವ ಸ್ಥಾನವನ್ನು ಹೊಂದಿದ್ದರೆಂದು ತಿಳಿಯಬರುತ್ತೆ.

ಅನಂತರ ಕಾಲಬದಲಾವಣೆಗಳಿಂದ ನಮ್ಮ ದೇಶದ ಅನೇಕ ಉತ್ತಮವಾದ ಪದ್ಧತಿಗಳು ಬಿಟ್ಟುಹೋಗಿವೆ. ಭಗವಂತನು ಪುರುಷರಿಗೂ, ಸ್ತ್ರೀಯರಿಗೂ ಅವರವರ ಧರ್ಮಗಳನ್ನು ನಿಯಮಿಸಿರುತ್ತಾನೆ. ಅದಕ್ಕೆ ಸರಿಯಾಗಿ ಅವರವರ ಧರ್ಮಗಳನ್ನು ಸ್ತ್ರೀಪುರುಷರಿಬ್ಬರೂ ನಡೆಸಿಕೊಂಡು ಬಂದರೆ ಈ ಪ್ರಪಂಚದ ಅನೇಕ ಭೇದಗಳು ಬಹಳ ಮಟ್ಟಿಗೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲವೆಂದು ಹೇಳುತ್ತಿರುವ—

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ। ಪುತ್ರೋ ರಕ್ಷತಿ ವಾರ್ಧಕ್ಯೇ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ॥

ಎಂಬ ಸ್ಮೃತಿ ವಚನವು ಪ್ರಕೃತಿಯ ಪರ್ಯಾಲೋಚನೆಯಿಂದ ಸ್ತ್ರೀಯು ಯಾವ ಕಾಲದಲ್ಲಿಯೂ ಸಿಕ್ಷಿತೆ, ಸಂರಕ್ಷಿತೆ, ಸುರಕ್ಷಿತೆಯಾಗಿರಬೇಕೆಂದು ಸೂಚಿಸುವುದರ ಮೂಲಕ ಸ್ವೇಚ್ಛಾ ವಿಹಾರವನ್ನು ನಿಷೇಧಿಸುವುದಕ್ಕಾಗಿಯೇ ಹೊರತು ಸ್ತ್ರೀಯು ಯಾವಾಗಲೂ ಸಕಲ ವಿಧದಲ್ಲಿಯೂ ಪರತಂತ್ರಳಾಗಿಯೇ ಇಂಬೇಕೆಂಬ ಅಭಿಪ್ರಾಯದಿಂದ ಅಲ್ಲ.

ಈಗ ಬಾಲಿಕೆಯರ ವಿದ್ಯಾಭ್ಯಾಸದಲ್ಲಿ ಬದಲಾವಣೆಯಾಗಬೇಕಾಗಿರುವುದು ಅವಶ್ಯಕವಾಗಿ ತೋರಬರುತ್ತದೆ. ಈ ವಿಷಯದಲ್ಲಿ ಈ ಸಮ್ಮೇಳನವು ನಮ್ಮ ಬಾಲಕಿಯರಿಗೆ ಸಾಮಾನ್ಯವಾಗಿ ಅವರ ಸಂಸಾರವನ್ನು ತೃಪ್ತಿಯಾಗಿ ನಡೆಯಿಸಲು ಮತ್ತು ದೇಶೋಪಕಾರ ಕೆಲಸವನ್ನು ಮಾಡಲು ಸಮರ್ಥರಾಗುವಂತಹ ವಿದ್ಯಾಕ್ರಮವನ್ನು ವಿಚಾರಮಾಡಿ ಏರ್ಪಡಿಸುವುದೆಂದು ನಂಬಿದ್ದೇನೆ.

ಸುಧಾರಣೆಯ ಆವಶ್ಯಕತೆ

ಈಗಿನ ನ್ಯಾಯ ನಿಬಂಧನೆಗಳಲ್ಲಿ ಪುರುಷರಿಗೂ ಸ್ತ್ರೀಯರಿಗೂ ಹಕ್ಕು ಬಾಧ್ಯತೆಗಳಲ್ಲಿ ಬಹಳ ವ್ಯತ್ಯಾಸವಿರುವುದಾಗಿದೆ. ಇದರಿಂದ ನಮ್ಮ ಮಹಿಳೆಯರು ಎಷ್ಟು ಧನವಂತರಾದ ಪತಿಯನ್ನು ಪಡೆದಿದ್ದರೂ ಪತಿಯ ಕಾಲಾನಂತರ ಬಹಳ ಕಷ್ಟಕ್ಕೆ ಗುರಿಯಾಗುತ್ತಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ಕೆಲವು ವರ್ಷಗಳ ಹಿಂದೆಯೇ ಇದರ ಸುಧಾರಣೆಯು ನಡೆದು, ನಮ್ಮ ಸಂಸ್ಥಾನದ ಸ್ತ್ರೀಯರಿಗೆ ಬಹಳ ಅನುಕೂಲವಾಗಿರುವುದು ನಿಮಗೆಲ್ಲಾ ತಿಳಿದ ವಿಷಯವಾಗಿದೆ. ಇದರಂತೆಯೇ ಹೊರಗಡೆಯೂ ಹಿಂದೂ ನ್ಯಾಯಶಾಸ್ತ್ರ ಸುಧಾರಣೆಯಾಗಬೇಕೆಂಬ ಚಳುವಳಿ ನಡೆಯುತ್ತಿದೆ. ಇದರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಸದಸ್ಯರುಗಳು ಬಹಳ ಮುತುವರ್ಜಿ ವಹಿಸಿ, ಕೆಲಸ ಮಾಡುತ್ತಿದ್ದಾರೆ. ಅವರು ಕೈಗೊಂಡಿರುವ ಈ ಕಾರ್ಯದಲ್ಲಿ ಅವರು ಜಯಶಾಲಿಗಳಾಗಲೆಂದು ಹಾರೈಸುತ್ತೇನೆ.

ಈಗ ನಡೆಯುತ್ತಿರುವ ಘೋರ ಯುದ್ಧವು ಪ್ರಪಂಚವನ್ನೆಲ್ಲಾ ನಾನಾ ವಿಧವಾದ ಕಷ್ಟಗಳಿಗೆ ಗುರಿಮಾಡಿರುತ್ತದೆ. ಯುದ್ಧರಂಗಕ್ಕೆ ನಮ್ಮ ಸೈನಿಕರು ಹೋಗಿರುವುದು ನಿಮಗೆ ತಿಳಿದೇ ಇದೆ. ಅವರ ಕ್ಷೇಮಕ್ಕಾಗಿ ನಮ್ಮ ಸ್ತ್ರೀಯರು ತಮ್ಮಿಂದ ಆಗಬಹುದಾದ ಸಹಾಯವನ್ನು ಮಾಡುವುದು ಅವರ ಕರ್ತವ್ಯವಾಗಿದೆ. ಈ ಸಮ್ಮೇಳನವು ಯುದ್ಧ ಸಹಾಯಕ ಸಂಘಗಳಲ್ಲಿ ಸೇರಿ ಕೆಲಸ ಮಾಡುತ್ತಿರುವರೆಂದು ಕೇಳುತ್ತೇನೆ. ಪತಿಸುತರು ರಣರಂಗಕ್ಕೆ ಹೋಗಿರುವ ಮನೆಗಳಲ್ಲಿ ಸತಿಯರು ಏಕಾಂಗಿಯಾಗಿ ಕೆಲವು ಚಿಂತೆ ಪಡುತ್ತಿರುವುದು ಸಹಜ. ಈ ಸಮ್ಮೇಳನದ ಸದಸ್ಯರುಗಳು ಅವರುಗಳ ಮನೆಗೆ ಆಗಿಂದಾಗ್ಗೆ ಹೋಗಿ ಅವರ ಕಷ್ಟಸುಖಗಳನ್ನು ವಿಚಾರಿಸಿ ಅವರಿಗೆ ಧೈರ್ಯವನ್ನುಂಟುಮಾಡುವಂತೆ ಹಿತವಚನಗಳನ್ನಾಡಿ ಕೈಲಾದ ಸಹಾಯವನ್ನು ಮಾಡುವುದು ಬಹಳ ಆವಶ್ಯಕವಾಗಿದೆ.

ಗೋ ಸಂಪತ್ತು ಹೆಚ್ಚಬೇಕು

ಹಿಂದೂಸ್ಥಾನದ ಇತರ ಪ್ರಾಂತ್ಯಗಳಲ್ಲಿ ಆಹಾರ ಸಾಮಗ್ರಿಗಳ ಅಭಾವದಿಂದ ಪ್ರಜೆಗಳು ಕಷ್ಟಪಡುತ್ತಿರುವವನ್ನು ಕೇಳುತ್ತಿದ್ದೇವೆ. ನಮ್ಮ ನೆರೆಯವರು ಕಷ್ಟಪಡುತ್ತಿದ್ದರೆ ನಾವು ಅವರಿಗೆ ಸಹಾಯಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಈ ಮಹಿಳಾ ಸಮ್ಮೇಳನದ ಆಶ್ರಯದಲ್ಲಿ ಬಂಗಾಳ ಸಂಕಷ್ಟ ನಿಧಿಯೊಂದನ್ನು ಶೇಖರಿಸಲು ಒಂದು ಸಮಿತಿಯನ್ನು ಏರ್ಪಡಿಸಿರುವುದು ಪ್ರೋತ್ಸಾಹಕರವಾಗಿದೆ. ಮನುಷ್ಯರಲ್ಲದೆ ಪ್ರಾಣಿವರ್ಗಕ್ಕೂ ಸಹ ನಾವು ದಯಾದಂತರಾಗಿರಬೇಕೆಂಬ ಅಂಶವನ್ನು ಇಲ್ಲಿ ಒತ್ತಿ ಹೇಳಬೇಕಾಗಿಲ್ಲ. ಮುಖ್ಯವಾಗಿ ದೇಶದಲ್ಲಿ ಗೋ ಸಂಪತ್ತು ಹೆಚ್ಚಬೇಕು. ಮನುಷ್ಯರಿಗೂ, ದೇಶಕ್ಕೂ ಗೋವುಗಳಿಂದ ಆಗುವಷ್ಟು ಪ್ರಯೋಜನವು ಇನ್ನಾವ ಪ್ರಾಣಿಗಳಿಂದಲೂ ಇಲ್ಲವೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಇಂತಹ ಗೋವುಗಳನ್ನು ಮಹಿಳೆಯರು ತಮ್ಮ ಮನೆಯಲ್ಲೇ ಸಾಕಬಹುದು. ಹೀಗೆ ಗೋವುಗಳನ್ನು ಸಾಕಿದರೆ ನಮ್ಮ ದೇಶದ ಸಂಪತ್ತುಗಳು ಹೆಚ್ಚುವುವು. ಅಲ್ಲದೇ ನಮ್ಮ ಮಕ್ಕಳಿಗೆ ಪುಷ್ಟಿಯಾದ ಆಹಾರ ದೊರೆತು ನಮ್ಮ ಜನಾಂಗವು ದೃಢಕಾಯವಾಗಿ ಬೆಳೆಯುವುದು.

ದೇಶ ಸೇವೆಯೇ ಈಶ ಸೇವೆ

ನಮ್ಮ ಭರತಖಂಡದಲ್ಲಿ ಧನವಂತರು ಪರೋಪಕಾರಕ್ಕಾಗಿ ಉದಾರರಾದಾಯಮಾ

(ಮೊದಲನೇ ಪುಟವನ್ನು ನೋಡಿ)

ಕಾಶ್ಮೀರ್ ಆಯುರ್ವೇದಿಕ್ ವರ್ಕ್ಸ್, ಅಮೃತಸರ

ಇವರ ಅತ್ಯುತ್ತಮವಾದ 'ದಿಲಾವರ' ಹಿಂಗು

ತೊಲ 4 ಆಣೆ, 1 ರೂ. ಗೆ 5 ತೊಲ

ದೊರೆಯುವ ಸ್ಥಳ:—

ಗೋಪಾಲ್ ಅಂಡ್ ಕೋ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬ್ರಾಂಚು:—

ತ್ಯಾಗರಾಜ ರೋಡು, ಮೈಸೂರು.

Edited, printed and published by A. R. Nagarajan, at the Sadhvi Press, D. Subbiah Road, Mysore.

ಸ್ತ್ರೀಯರ ಶ್ರಾಕರಯರ ಕ್ಕಾಗಿ

[illegible] ದಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಕ್ಷ್ಮೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಣ್ಣ, [illegible], ದೇವರಾಜ ಮಾರ್ಕೆಟ್, ಮೈಸೂರು

[illegible] ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ [illegible] ಸಂಶೋಧಿಸಿ ಶೇರ್ [illegible] ಹಕ್ಕಿ, ಶವ ಮತ್ತು ಗೋಧಿ ಹಿಟ್ಟು [illegible]

ಪ್ರತಿ ಶನಿವಾರ ಮತ್ತು ಭಾನುವಾರ 3-30 ಕ್ಕೆ ಮ್ಯಾಟಿನಿ ಇರುತ್ತೆ.

ನ್ಯೂ ಆಪೇರಾ ಟಾಕೀಸ್

ತಾ|| ೨೩—೧೦—೪೮ ರಿಂದ

ಜೈರಾಜ್, ಲಲಿತಾ ಪವಾರ್, ಜಗದೀಶ್ ನಟಿಸಿರುವ

ಹಿಂದಿ ಕೀರ್ತಿ ಹಿಂದಿ

ಮುಂದಿನ ವಿನೋದ: "ಕೃಷ್ಣಪ್ರೇಮ"

ಉಡುಪ್ಪುಗಳು! ಬನಾರಸ್ ಸೀರೆಗಳು ನಾಯಲ್ ಸೀರೆಗಳು!

ಬಹುಮಾನಕ್ಕೆ ನವೀನ ಮಾದರಿಗಳಲ್ಲಿ ಬೇಕಾದ ನಗಗಳು

ನಿಮ್ಮ ಮನಸ್ಸೊಪ್ಪುವಂತೆ! ಕಣ್ಣಿಗಾನಂದವಾಗುವಂತೆ!

ಬೆಂಗಳೂರು ಕೆ. ಎಚ್. ಶಾಮರಾವ್ ಅಂಡ್ ಸನ್ಸ್‌ರವರಿಂದ ತಯಾರಿಸಲ್ಪಟ್ಟ ಉಡುಪ್ಪುಗಳು ಬನಾರಸ್‌ವಾಲಾರವರ ಇಲ್ಲಿ ಬಂದು ಕಡಿಮೆ ಬೆಲೆಗೆ ಮಾರುವ ಸೀರೆಗಳು, ಕಣಗಳು, ಇತ್ಯಾದಿ ಇತ್ಯಾದಿ

ಗ್ಯಾರಂಟಿಯಾದ ಚಿನ್ನ ಬೆಳ್ಳಿ ನಗಗಳು

ಸ್ಥಳ: ಜಿ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್ಸ್

ಜವಾಹಿರಿ ಮತ್ತು ಬಟ್ಟೆವ್ಯಾಪಾರಿಗಳು,

ಸಯ್ಯಾಜಿರಾವ್ ರೋಡ್, ಮೈಸೂರು.

ಸಂಪುಟ ೨] ಭಾನುವಾರ ೨೪--೧೦--೪೩ [ಸಂಚಿಕೆ ೮೩

ನೀಪರ್‌ನಲ್ಲಿ ಜರ್ಮನರಿಗೆ ಗಂಡಾಂತರ

ನೂಲಿನ ಬಟ್ಟೆ ರಫ್ತಿಗೆ ಪ್ರತಿಬಂಧಕ

ಕ್ರಿಮಿಯಾದಿಂದ ನಾಜಿಗಳ ಪರಾರಿ

ಕಣ್ವಾ ಅಣೆಕಟ್ಟೆಗೆ ದಿವಾನರ ಭೇಟಿ.

ಮೈಸೂರು, ೨೪

ದಿವಾನರಾದ ಪ್ರಧಾನಶಿರೋಮಣಿ ಎನ್. ಮಾಧವರಾಯರು ನಿನ್ನೆ ಮಧ್ಯಾಹ್ನ ರಾಜಧಾನಿಗೆ ಆಗಮಿಸಿದರು.

ದಿವಾನರು ಪಬ್ಲಿಕ್ ವರ್ಕ್ಸ್ ಸಚಿವರಾದ ಶ್ರೀ ಇಮಾಂ ಮತ್ತು ಚೀಫ್ ಇಂಜನಿಯರವರೊಡನೆ ಕಣ್ವಾ ಅಣೆಕಟ್ಟೆಗೆ ಭೇಟಿ ಕೊಟ್ಟು ಇತ್ತೀಚಿನ ಮಳೆಯಿಂದ ಆದ ನಷ್ಟವನ್ನು ಪರಿಶೀಲಿಸಿದರೆಂದು ತಿಳಿದು ಬಂದಿದೆ.

ರಾಜಕೀಯ ಖೈದಿಗಳ ಮೊರೆ

ಬೆಂಗಳೂರಿನಿಂದ ಮೈಸೂರು ಜೈಲಿಗೆ ಇತ್ತೀಚೆಗೆ ವರ್ಗಾಯಿಸಲ್ಪಟ್ಟಿರುವ ರಾಜಕೀಯ ಖೈದಿಗಳು ಇತರ ಇಲ್ಲಿನ ರಾಜಕೀಯ ಖೈದಿಗಳಿಗೆ ಕೊಡುತ್ತಿರುವಂತೆಯೇ ತಮಗೂ ಸೌಲಭ್ಯಗಳನ್ನು ಕೊಡಬೇಕೆಂದು ಕೇಳಿಕೊಂಡರೆಂದೂ, ಈ ಬಗ್ಗೆ ಒಂದೆರಡು ದಿವಸ ಅವರು ಉಪವಾಸ ಮಾಡಿ ಇತರರೂ ಹಾಗೆಯೇ ಮಾಡುವ ಪ್ರಸಂಗವುಂಟಾದ್ದರಿಂದ ಅಷ್ಟರಲ್ಲಿ ಅಧಿಕಾರಿಗಳು ಅವರ ಕೋರಿಕೆಯಂತೆ ನಡೆಸಲು ವ್ಯವಸ್ಥೆಯನ್ನು ಏರ್ಪಡಿಸಿದುದರಿಂದ ಈಗ ಎಲ್ಲವೂ ಸಮಾಧಾನವಾಗಿರುವುದಾಗಿಯೂ ತಿಳಿಯಬರುತ್ತದೆ.

ಆಯುರ್ವೇದ ಆಸ್ಪತ್ರೆಗೆ ಉದಾರ ದಾನ

ಬೆಂಗಳೂರಿನಲ್ಲಿ ಕಟ್ಟಲಾಗುವ ಆಯುರ್ವೇದಿಕ್ ಮತ್ತು ಯುನಾನಿ ಆಸ್ಪತ್ರೆಗೆ ಈ ಕೆಳಗೆ ಕಂಡ ರಾಜಧಾನಿಯ ಮಹನೀಯರು ದ್ರವ್ಯಸಹಾಯ ಮಾಡಿದ್ದಾರೆ. ರಾವ್ ಬಹದ್ದೂರ್ ಕೆ. ಪಾಪಯ್ಯನಾಯುಡರವರು ೧೧,೦೦೦ ರೂ, ಶ್ರೀ ಸಿ. ಪೆರುಮಾಳ್ ಚೆಟ್ಟಿಯವರು ೫ ಸಾವಿರ ರೂ, ಶ್ರೀಗಳಾದ ನಂದಿಬಸಪ್ಪ ಮತ್ತು ಸಂಗಪ್ಪ ಅವರು ತಲಾ ೧ ಸಾವಿರ ರೂಪಾಯಿಗಳು.

ಮೋಟಾರ್-ಟಾಂಗಾ ಢಿಕ್ಕಿ

ಶ್ರೀ ಪುಟ್ಟರಾಜೇಅರಸಿನವರ ಮೋಟಾರಿಗೂ ಗಾರ್ಡನ್ ಹೋಟಲಿನ ಮಾಲೀಕರಾದ ಶ್ರೀ ಗುರುರಾಯಾಚಾರ್ಯರ ಟಾಂಗಾ ಗಾಡಿಗೂ ನಿನ್ನೆ ಮಧ್ಯಾಹ್ನ ದೊಡ್ಡಗಡಿಯಾರ ಚೌಕದಲ್ಲಿ ಢಿಕ್ಕಿ ಹೊಡೆದು ಟಾಂಗಾ ಗಾಡಿಗೆ ಸ್ವಲ್ಪ ಏಟು ಬಿತ್ತೆಂದು ಹೇಳಲಾಗಿದೆ.

ಎಲ್ಗಿನ್ ಫೌಂಟನ್ ಬಳಿ ಮತ್ತೊಂದು ಟಾಂಗಾ ಗಾಡಿಗೂ ಮೋಟಾರಿಗೂ ನಿನ್ನೆ ಢಿಕ್ಕಿ ಹೊಡೆದು ಕುದುರೆಗೆ ಸ್ವಲ್ಪ ಗಾಯವಾಗಿದೆಯೆಂದು ವರದಿಯಾಗಿದೆ.

ಕ್ರಿಕೆಟ್ ಪಂದ್ಯ

ಮೈಸೂರು ಲೀಗ್ ಕ್ರಿಕೆಟ್ ಪಂದ್ಯದಲ್ಲಿ ನಿನ್ನೆ ದಿವಸ ಬೆಂಗಳೂರು ಫ್ರೆಂಡ್ಸ್ ಯೂನಿಯನ್ ರವರು ಮೈಸೂರು ಮಹಾರಾಜಾ ಕಾಲೇಜಿನವರನ್ನು ೭ ವಿಕೆಟ್ಟುಗಳಿಂದ ಸೋಲಿಸಿದರು. ಮಹಾರಾಜಾ ಕಾಲೇಜಿನವರು ೧೪೧ ರನ್ನುಗಳನ್ನು ಮಾಡಿದರು (ನಾರಾಯಣಸ್ವಾಮಿ ೬೭, ರಾಜಗೋಪಾಲ್ ೨೯, ಅಳಸಿಂಗಾಚಾರ್ ೨೨, ಜಗದೀಶ್ ೪೫ ರನ್ನುಗಳಿಗೆ ೫ ವಿಕೆಟ್ಟುಗಳು). ಬೆಂಗಳೂರಿನವರು ೩ ವಿಕೆಟ್ [illegible]

ಚುನಾವಣಾ ತಕರಾರು ಅರ್ಜಿಗಳು

ಪೌರಸಭಾಧ್ಯಕ್ಷರು ನಿರಾಕರಿಸಿದರು

ಮೈಸೂರು ಪೌರ ಸಭಾ ಚುನಾವಣೆಗೆ ಚಾಮರಾಜ ಮೊಹಲ್ಲಾದಿಂದ ಸ್ವತಂತ್ರ ಉಮೇದವಾರರಾಗಿದ್ದ ಶ್ರೀ ಎ. ವೆಂಕಟೇಶಯ್ಯನವರು ಕಾಂಗ್ರೆಸ್ ಉಮೇದುವಾರರಾದ ಶ್ರೀ ಕೆ. ಎಸ್. ಸತ್ಯನಾರಾಯಣರಾಯರ ಮೇಲೆ ಒಂದು ತಕರಾರು ಅರ್ಜಿಯನ್ನು ಹೂಡಿದ್ದರು. ರಾಯರು ಮುನಿಸಿಪಾಲಿಟಿಗೆ ಕೊಡುತ್ತಿರುವುದು ತೆರಿಗೆಯಲ್ಲ ಕೇವಲ ಲೈಸೆನ್ಸ್ ಫೀ, ಆದುದರಿಂದ ಅವರ ಚುನಾವಣೆಗೆ ಅರ್ಹತೆಯನ್ನು ಹೊಂದಿಲ್ಲ ಎಂದು ಸಮರ್ಥಿಸಿದ್ದರು. ಫೀಯು ಕಾನೂನಿನಂತೆ ತೆರಿಗೆಯೇ ಆಗಿರುವುದರಿಂದ ತಕರಾರು ಅರ್ಜಿಯನ್ನು ಅಧ್ಯಕ್ಷರು ತಳ್ಳಿಹಾಕಿ ತೀರ್ಪಿತ್ತರು. ಇದಕ್ಕಾಗಿ ಸ್ವಲ್ಪ ನಿರಾಶೆಯೂ ಆಯಿತು.

ಮಂಡಿಮೊಹಲ್ಲಾದಿಂದ ಸ್ವತಂತ್ರವಾಗಿ ನಿಂತಿರುವ ಶ್ರೀ ಎಂ. ಎಸ್. ಸಂಜಪ್ಪನವರ ಮೇಲೆ ಕಾಂಗ್ರೆಸ್ ಉಮೇದವಾರರಾದ ಶ್ರೀ ಎಂ. ವಿ. ವೆಂಕಟರಾಮಯ್ಯನವರು ಒಂದು ತಕರಾರು ಅರ್ಜಿ ಹಾಕಿ ಶ್ರೀ ಸಂಜಪ್ಪನವರು ಅರು ತಿಂಗಳಿಂದೀಚೆಗೆ ಓಟಿನ ಅರ್ಹತೆ ಪಡೆದಿರುವರೆಂದೂ ಆದ್ದರಿಂದ ಅವರು ಚುನಾವಣೆಗೆ ನಿಲ್ಲ ಬಾರದೆಂದೂ ಸೂಚಿಸಿದ್ದರು. ಇದನ್ನೂ ಸಹ ನಿನ್ನೆ ದಿನ ತಿರಸ್ಕರಿಸಲಾಯಿತು.

ವಾರ್ಷಿಕೋತ್ಸವ

ರಾಜಧಾನಿಯ ಸ್ವಸ್ತಿಕ ಸಾಹಿತ್ಯ ಸಂಘದ ಎರಡನೇ ವಾರ್ಷಿಕೋತ್ಸವದ ಸಂಬಂಧದಲ್ಲಿ ನಿನ್ನೆ ಸಂಜೆ ಮಹಾರಾಜಾ ಕಾಲೇಜಿನಲ್ಲಿ ಶ್ರೀ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ, "ಕನ್ನಡದ ಸಂಸ್ಕೃತಿ" ಎಂಬ ವಿಷಯದ ಮೇಲೆ ಶ್ರೀ ದೇವುಡು ನರಸಿಂಹಶಾಸ್ತ್ರಿಗಳವರ ಭಾಷಣವೂ ಆಯಿತು.

ಈ ದಿನ ಬೆಳಗ್ಗೆ ಶ್ರೀ ಡಿ. ಎಲ್. ನರಸಿಂಹಾಚಾರ್‌ರವರ ಅಧ್ಯಕ್ಷತೆಯಲ್ಲಿ 'ಕವಿಸಮ್ಮೇಳನ' ನಡೆಯಿತು.

ಆರೋಗ್ಯದ ನಿಮಿತ್ತ [illegible] ಗೌಡ್ರರಾದ ಸರ್ ಚಾರ್ ಲೆ [illegible] ರಾಜೀನಾಮೆ ಇತ್ತಿದ್ದಾರೆ [illegible]

ನೀಪರ್ ಕ್ಷೇತ್ರದಲ್ಲಿ ಜರ್ಮನರಿಗೆ ಗಂಡಾಂತರ

ನೀಪರ್ ಕ್ಷೇತ್ರದಲ್ಲಿ ಜರ್ಮನರಿಗೆ ಗಂಡಾಂತರ ಒದಗಿದೆ. ನೀಪರ್ ತಿರುಗಣಿಯಲ್ಲಿ ರಷ್ಯನರು ೫೦ ಮೈಲಿ ಮುನ್ನುಗ್ಗಿ ಶತ್ರುವನ್ನು ಸುತ್ತುವರಿದಿದ್ದಾರೆ. ಬರ್ಲಿನ್ ವ್ಯೂಹವನ್ನು ಈಗಾಗಲೇ ರಷ್ಯನರು ೫೦ ಮೈಲಿ ಅಗಲ ಮತ್ತು ಉದ್ದವನ್ನು ಛಿದ್ರಿಸಿದ್ದಾರೆ. ಕ್ರಿವೋಯ್‌ರಾಗ್ ೫ ಮೈಲಿ ದೂರದಲ್ಲಿರುವ [illegible] ಕ್ರಿವಾ ಯ್‌ರಾಗಿಗೆ ೧೫ ಮೈಲಿ ದೂರದಲ್ಲಿರುವ ೨ ಪಟ್ಟಣಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಕ್ಷೇತ್ರಕ್ಕೆ ಹೆಚ್ಚಾಗಿ ಸೈನ್ಯವನ್ನು ಕಳುಹಿಸಬೇಕೆ ಅಥವ ಅಲ್ಲಿರುವ ಸೇನೆಗಳು ವಾಪಸಾಗಬೇಕೆ ಎಂಬ [illegible] ಹಿಟ್ಲರ್ ಆಲೋಚಿಸುತ್ತಿದ್ದಾರೆ.

ಕ್ರಿಮಿಯಾದಿಂದ ಜರ್ಮನರ ಓಟ

ಕ್ರಿಮಿಯಾವನ್ನು ಜರ್ಮನರು ತ್ವರೆಯಿಂದ ಬಿಡುತ್ತಿರುವರೆಂದೂ, ಕಪ್ಪು ಸಮುದ್ರದ ಆರೋಗ್ಯ ಕೇಂದ್ರಗಳನ್ನು ಖಾಲಿಮಾಡುತ್ತಿದ್ದು ಅನೇಕ ಜರ್ಮನ್ ಅಧಿಕಾರಿಗಳು ಆ ಪ್ರದೇಶಗಳಿಂದ ಪಲಾಯನ ಮಾಡುತ್ತಿರುವರೆಂದೂ [illegible] ವರದಿಯಾಗಿದೆ.

ಬಟ್ಟೆ ಸಾಗಿಸುವುದಕ್ಕೆ ಪ್ರತಿಬಂಧಕ

ನೂಲಿನ ಬಟ್ಟೆಯನ್ನು [illegible] ಯಂತ್ರದ ಕಾನೂನಿನಂತೆ [illegible] ಕಾರಣದಿಂದ [illegible] ಜನರಲ್ ಪರ್ಮಿಟ್ ಇಲ್ಲದೆ [illegible] ಟೆಕ್ಸ್‌ಟೈಲ್ ಕಮಿಷನರು ಸ್ಪೆಷಲ್ [illegible] ಇದಕ್ಕೆ [illegible] [illegible] ಮಾಡಿದ್ದಾರೆ.

[illegible]

ಶ್ರೀ ಇಮಾಂರವರಿಗೆ ಬಳ್ಳಾರಿ ಪೌರಸಭೆಯ ಮಾನಪತ್ರ

[illegible] ಪಬ್ಲಿಕ್ ವರ್ಕ್ಸ್ ಸಚಿವರಾದ ಶ್ರೀ ಇಮಾಂರವರಿಗೆ ಬಳ್ಳಾರಿ ಮುನಿಸಿಪಲ್ ಕಮಿಷನರು ಮಾನಪತ್ರ ಅರ್ಪಿಸಲು ನಿರ್ಧರಿಸಿದ್ದಾರೆ.

ಬಳ್ಳಾರಿಯಲ್ಲಿ ಸೇರಿದ [illegible] ಸಭೆಯ ಅಧ್ಯಕ್ಷರಾದ ಸರ್ [illegible] ರವರಿಗೆ ಮಾನಪತ್ರ ಕೊಡಬೇಕೆಂಬ ಪ್ರಯತ್ನ ನಿಷ್ಫಲವಾಯಿತು.

ವರ್ತಕರು ತಮ್ಮ ಸ್ಟಾಕ್ ತಿಳಿಸಬೇಕು

ಭಾರತ ಸರ್ಕಾರದವರು ಸಿವಿಲ್ ಸಪ್ಲೈಸ್ ಕಂಟ್ರೋಲರ್ ಜನರಲ್‌ರವರು ಪ್ರಕಟಣೆಗಳನ್ನು ಹೊರಡಿಸಿ, ನೂತನ ಆರ್ಡಿನೆನ್ಸ್ ಪ್ರಕಾರ ವಸ್ತುಗಳ ಅನ್ಯಾಯ ಸಂಗ್ರಹ ಮತ್ತು ಅಧಿಕ ಲಾಭ ಸಂಪಾದನೆಗಳನ್ನು ಪ್ರತಿಬಂಧಿಸಿದ್ದಾರೆ. ಅಕ್ಟೋಬರ್ ೩೧ ಅಥವಾ ನವೆಂಬರ್ ೧ನೇ ತಾರೀಖಿನೊಳಗೆ ವರ್ತಕರು ತಮ್ಮಲ್ಲಿರುವ ಸ್ಟಾಕ್ (ಸ್ಟೀಲ್‌ಗಳು, ವೈದ್ಯಕೀಯ ಶಸ್ತ್ರ ಅಸ್ತ್ರಗಳು, ಪೇಪರ್, ಜೋಡುಗಳೂ ಬೂಟ್ಸ್ [illegible] ವಿದೇಶ ಆಹಾರ ವಸ್ತುಗಳು ಮತ್ತು ಸಸ್ಯ [illegible] ಮತ್ತು ಇತರ ವಸ್ತುಗಳ) ಅಂಕಿ ಅಂಶಗಳನ್ನು ಕೊಡಬೇಕೆಂದು ತಿಳಿಸಿದ್ದಾರೆ.

ಢಕ್ಕಾದಲ್ಲಿ ಅನ್ನದ ಗೋಳು

ಢಕ್ಕಾನಗರದಲ್ಲಿ [illegible] [illegible] ಗೋಳು, [illegible] [illegible] ನಗರದ ಪೊಲೀಸರು [illegible] ಒಂದು [illegible] ಹಿಡಿದಿದ್ದಾರೆ.

ಪೆಸಿಫಿಕ್ ಯುದ್ಧಕ್ಕೆ ವಿಶೇಷ ಅಸ್ತ್ರಗಳು

ಪೆಸಿಫಿಕ್ ಯುದ್ಧ ಕ್ಷೇತ್ರಕ್ಕೆ ವಿಶೇಷ [illegible] ಅಸ್ತ್ರಗಳನ್ನು ಬ್ರಿಟಿಷ್ [illegible] [illegible] ಉಪಯೋಗಿಸಲಿರುವ [illegible] ತಿಳಿಸಿದ್ದಾರೆ.

ಚೀನಾ ಭಾರತಗಳ ಸಾಂಸ್ಕೃತ ಬಾಂಧವ್ಯ

[illegible] ಸಾಂಸ್ಕೃತಿಕ [illegible] [illegible] [illegible] ವಿದ್ಯಾರ್ಥಿಗಳಿಗೆ [illegible] [illegible] [illegible] ವಿದ್ಯಾರ್ಥಿ [illegible] ನಿರ್ಧರಿಸಿದ್ದಾರೆ.

ಸಂಯುಕ್ತ ಪ್ರಾಂತದಲ್ಲಿ [illegible]

[illegible]

ಪತ್ರ ವ್ಯವಹಾರ

ನೀರು ಸರಬರಾಜಿನ ಬಗ್ಗೆ ಅನಾದರಣೆ

ಸ್ವಾಮಿ,

ಈ ದಿನ ಬೆಳಗಿನಿಂದ ಸಂಜೆವರೆಗೆ ರಾಜಧಾನಿಯ ನಲ್ಲಿಗಳಲ್ಲಿ ನೀರಿಲ್ಲದೆ ಜನರಿಗೆ ಸ್ನಾನಪಾನಾದಿಗಳಿಗೆ ನೀರು ದೊರೆಯದೆ ಉಂಟಾದ ತೊಂದರೆಯು ಅಷ್ಟಿಷ್ಟಲ್ಲ. ನಗರವಾಸಿಗಳಿಗೆ ಎಲ್ಲಾ ಕೆಲಸಗಳಿಗೂ ನಲ್ಲಿಯ ನೀರೇ ಆಧಾರವಾಗಿರುವುದರಿಂದ ಇದರ ಸರಬರಾಜಿನ ವ್ಯವಸ್ಥೆ ವಿಷಯದಲ್ಲಿ ಪೌರಸಭೆಯವರು ಎಷ್ಟು ಮುತುವರ್ಜಿ ವಹಿಸಬೇಕೋ ಅಷ್ಟನ್ನು ವಹಿಸುತ್ತಿಲ್ಲ. ಸುಮಾರು ಎರಡು ಲಕ್ಷ ಪ್ರಜೆಗಳಿರುವ ಈ ರಾಜಧಾನಿಯಲ್ಲಿ ಬೆಳಗಿನಿಂದ ಸಂಜೆವರೆಗೆ ಇಡೀ ಅರ್ಧ ದಿವಸವೆಲ್ಲಾ ನೀರು ನಿಂತು ಹೋದರೆ ಉಂಟಾಗುವ ಅನಾನುಕೂಲವನ್ನು ಅಧಿಕಾರಿಗಳು ಗಮನಿಸಿರುವಂತೆ ಕಾಣುವುದಿಲ್ಲ.

ವಿದ್ಯುಚ್ಛಕ್ತಿಯ ಸಂಬಂಧವು ನಿಂತು ಹೋಗುವುದರಿಂದಲೂ ನೀರಿನ ಯಂತ್ರಗಳನ್ನು ಆಗಾಗ ಶುದ್ಧಿಮಾಡಬೇಕಾಗಬಹುದಾದುದರಿಂದಲೂ ನೀರು ಸರಬರಾಜು ನಿಲ್ಲಬೇಕಾಗಿ ಬರಬಹುದು. ಆದರೆ ಈ ಕಾರ್ಯಕ್ರಮವನ್ನು ಅನೇಕ ದಿನಗಳ ಮುಂಚೆಯೇ ಗೊತ್ತುಮಾಡಿ ಮಹಾಜನರಿಗೆ ಸಾಕಷ್ಟು ತಿಳುವಳಿಕೆ ಕೊಟ್ಟು ಆ ನಂತರ ನೀರು ನಿಲ್ಲಿಸುವ ವಾಡಿಕೆ ಇತ್ತು. ಆದರೆ ಈಚೆಗೆ ಆ ಪದ್ಧತಿಯನ್ನು ಅನುಸರಿಸುತ್ತಿಲ್ಲ. ವಿದ್ಯುಚ್ಛಕ್ತಿ ಇಲಾಖೆಯವರು ತಮ್ಮ ಯಂತ್ರೋಪಕರಣಗಳ ದುರಸ್ತಿ ವಗೈರೆಗಳಿಗಾಗಿ ವಿದ್ಯುಚ್ಛಕ್ತಿಯನ್ನು ನಿಲ್ಲಿಸುವಾಗ ಕೆಲವು ದಿನಗಳ ಮುಂಚೆಯೇ ಸಾರ್ವತ್ರಿಕವಾದ ಪ್ರಕಟಣೆಯನ್ನು ಹೊರಡಿಸುತ್ತಾರೆ. ಇಲ್ಲದೆ ವಿದ್ಯುಚ್ಛಕ್ತಿಯಿಂದ ಯಂತ್ರಗಳನ್ನು ನಡೆಸುವವರೇ ಮುಂತಾದವರಿಗೆ ಒದಗಬಹುದಾದ ನಷ್ಟಕ್ಕಾಗಿ ಪೂರ್ವಭಾವಿಯಾದ ತಿಳುವಳಿಕೆಯನ್ನು ಕೊಡುತ್ತಾರೆ. ಆದರೆ ಮುನಿಸಿಪಾಲಿಟಿಯವರು ಜೀವನಕ್ಕೆ ಅತ್ಯಗತ್ಯವಾದ ನೀರಿನ ವಿಷಯದಲ್ಲಿ ಪೌರಸಭೆಯವರು ಜನರಿಗೆ ತಕ್ಕ ತಿಳುವಳಿಕೆ ಕೊಡದೆ ಹೀಗೆ ತೊಂದರೆಗೆ ಗುರಿಪಡಿಸುವುದು ಅಕ್ಷಮ್ಯವಾದ ಅಪರಾಧವಾಗಿದೆ.

ಕೆಲವು ದಿನಪತ್ರಿಕೆಗಳಲ್ಲಿ ಇಷ್ಟು ಹೊತ್ತಿನಿಂದ ಇಲ್ಲಿಂದ ಇಲ್ಲಿಂದ ನಿಲ್ಲಿಸುವರೆಂದು ಕೇಳಬಂದಿದೆ. ಆದರೆ ಪುರಸಭಾ ಸಂಸ್ಥೆಯಿಂದ ಈ ವಿಷಯದಲ್ಲಿ ಸರಿಯಾದ ತಿಳುವಳಿಕೆ ಇಲ್ಲ. ಕೆಲವು ದಿನಪತ್ರಿಕೆಗಳನ್ನು ಕೊಂಡುಕೊಳ್ಳದೆ ಎಲ್ಲರಿಗೂ ತಿಳಿಯುವುದಿಲ್ಲ. ಆದ್ದರಿಂದ ಅನೇಕರು ತೊಂದರೆಗೆ ಗುರಿಯಾಗಬೇಕಾಯಿತು.

ಇನ್ನು ಮುಂದೆ ಇಂತಹ ಸಂದರ್ಭಗಳಲ್ಲಿ ಪೌರಸಭೆಯವರು ನಾಲ್ಕು ದಿನಗಳ ಮುಂಚಿತವಾಗಿಯೇ ಸರಿಯಾದ ಪ್ರಕಟಣೆಯನ್ನು ಹೊರಡಿಸಿ ಎಲ್ಲರಿಗೂ ತಿಳುವಳಿಕೆಯನ್ನು ಕೊಟ್ಟು ಜನರ ತೊಂದರೆ ತಪ್ಪಿಸುವರೆಂದು ನಂಬಿದ್ದೇನೆ. ಪ್ರಜೆಗಳ ಚುನಾಯಿತ ಪೌರಸಭಾಸದಸ್ಯರುಗಳೂ ಈ ವಿಷಯದ ಕಡೆ ಗಮನ ಕೊಡಬೇಕಾಗಿದೆ.

ಪುರನಿವಾಸಿ.

ಒಂದೇ ವಠಾರದಲ್ಲಿ ೩೧ ಸಂಸಾರಗಳು

ಬೆಂಗಳೂರು ೨೩

ಬೆಂಗಳೂರು ನಗರದಲ್ಲಿ ರೇಷನ್ ಸೆನ್ಸಸ್ ನಡೆಸಿದಾಗ ಹಳೇಪಟ್ಟಣದ ಒಂದು ವಠಾರದಲ್ಲಿ ೩೧ ಸಂಸಾರಗಳು ಇದ್ದುದು ಕಂಡುಬಂದಿದೆ.

ಕಾಲರಾದಿಂದ ಮರಣ

ಕೈಗಾರಿಕೆ ಇಲಾಖೆಯ ಶ್ರೀ ನಾಥನ ಮೂರ್ತಿರಾಯರು ತಿರುಪತಿಗೆ ಸರ್ಕಾರಿ ಕೆಲಸದ ಮೇಲೆ ಹೋಗಿದ್ದಾಗ ಕಾಲರಾದಿಂದ ಮೃತಿಹೊಂದಿದರೆಂದು ವರದಿಯಾಗಿದೆ.

ಶತ್ರುಪ್ರಜೆಗಳ ಆಸ್ತಿಪಾಸ್ತಿ

ಸಂಸ್ಥಾನದಲ್ಲಿ ಶತ್ರು ಪ್ರಜೆಗಳಾಗಿದ್ದವರು ಮರಣಹೊಂದಿದರೆ ಅವರಿಗೆ ಸೇರಿದ [illegible] ಆಸ್ತಿಪಾಸ್ತಿಯು ಕೂಡ, ತನಂತರವೂ ಶತ್ರುಗಳಿಗೆ ಸೇರಿದ ಆಸ್ತಿಪಾಸ್ತಿಗಳೆಂದೇ ಪರಿಗಣಿಸಲಾಗುವುದೆಂದು ಭಾರತ ರಕ್ಷಣಾ ಶಾಸನ ರೀತ್ಯಾ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಕಡೂರು ಜಿಲ್ಲೆಯಿಂದ ಗಡೀಪಾರ್

ಹೋದವರ್ಷದ ಗಲಭೆಗಳ ಸಂಬಂಧವಾಗಿ ವಿಚಾರಣೆಗೆ ಗುರಿಯಾಗಿ ಶಿಕ್ಷೆ ಹೊಂದಿ ವಾಪಸು ಬಂದ ಮೂವರ ಮೇಲೆ ಗಡೀಪಾರು ಆಜ್ಞೆಯನ್ನು ಜಾರಿಮಾಡಿ ಅವರು ಜಿಲ್ಲೆಗೆ ಪ್ರವೇಶಿಸಕೂಡದೆಂದು ಹೇಳಲಾಗಿತ್ತು. ಶ್ರೀಗಳಾದ ಆರ್. ವೆಂಕಟೇಶರಾವ್, ಶೀನಾ ನಾಯಕ್ ಮತ್ತು ರಾಮಕೃಷ್ಣಪ್ಪ ಎಂಬುವರೇ ಅವರು. ರಾಜಕೀಯ ವಿಷಯದಲ್ಲಿ ಭಾಗವಹಿಸುವುದಿಲ್ಲವೆಂದು ಬರೆದುಕೊಟ್ಟರೆ ಪರ್ಯಾಲೋಚಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಈ ನಿರ್ಬಂಧವನ್ನು ಸರ್ಕಾರದವರು ರದ್ದುಗೊಳಿಸಬೇಕೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಊಟದ ತಟ್ಟೆಯಲ್ಲಿ ಮರಣ

ಮೊನ್ನೆದಿನ ಬೆಳಗ್ಗೆ ಮಂಡ್ಯದ ಜುಬಿಲಿ ಪಾರ್ಕಿನಲ್ಲಿ ಒಂದು ಮರದ ಹತ್ತಿರ ಊಟದ ತಟ್ಟೆಯನ್ನು ತಲೆಯ ಕೆಳಗೆ ಹಾಕಿಕೊಂಡು ಬೋರಲಾಗಿ ಮಲಗಿದ್ದ ಒಬ್ಬ ಹಿಂದೂ ತರುಣನ ಮೃತ ಶರೀರವು ದೊರಕಿತು. ಪೋಲೀಸರು ಮಹಜರು ಕ್ರಮ ಜರುಗಿಸಿದರು.

ಸೇತುವೆ ನಷ್ಟ

ಚಳ್ಳಕೆರೆಗೂ ಹಿರಿಯೂರಿಗೂ ಮಧ್ಯೆ ೧೩ನೇ ಮೈಲಿಕಲ್ಲಿನ ಬಳಿಯಲ್ಲಿ ಆರ್ಚ್ ಸೇತುವೆಯು ಮಳೆಯ ದೆಸೆಯಿಂದ ಬಿದ್ದುಹೋಗಿರುವುದರಿಂದ ಬೇರೆ ರಸ್ತೆಯನ್ನು ಮಾಡುವವರೆಗೆ ಈ ರಸ್ತೆಯು ಸಂಚಾರಕ್ಕೆ ಅರ್ಹವಾಗಿಲ್ಲವೆಂದು ಪ್ರಕಟಿಸಲಾಗಿದೆ.

ಆಂಧ್ರಮಹಾಸಭಾ ಅಧ್ಯಕ್ಷರಿಗೆ ಕರೀ ಬಾವುಟ ಪ್ರದರ್ಶನ

ಬಳ್ಳಾರಿಯಲ್ಲಿ ನಡೆಯಲಿರುವ ಆಂಧ್ರ ಮಹಾಸಭೆಯ ಅಧ್ಯಕ್ಷತೆ ವಹಿಸಲು ಮಹಾರಾಜಕುಮಾರ್ ಸರ್ ವಿಜಯನಗರರವರು ಅದಕ್ಕಾಗಿ ಬಂದಿಳಿದಾಗ ಕನ್ನಡ ಸ್ವಯಂಸೇವಕರು ರೈಲ್ವೆ ಸ್ಟೇಷನ್ನಿನಲ್ಲಿ ಕರೀ ಬಾವುಟಗಳನ್ನು ಹಿಡಿದುಕೊಂಡು ವಿರೋಧ ಪ್ರದರ್ಶನ ನಡೆಸಿದರು.

ಕೇಂದ್ರಶಾಸನ ಸಭೆಗೆ ಕಾಂಗ್ರೆಸ್

ಮುಂದಿನ ೨ನೇ ತಾರೀಖಿನಿಂದ ದೆಹಲಿಯಲ್ಲಿ ನಡೆಯುವ ಕೇಂದ್ರ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದವರು ಭಾಗವಹಿಸಬೇಕೇ, ಬೇಡವೇ ಎಂಬುದನ್ನು ನಿರ್ಧರಿಸಲು ಆ ದಿನ ಕಾಂ॥ ಪಕ್ಷದ ಸದಸ್ಯರು ದೆಹಲಿಯಲ್ಲಿ ಸೇರುವ ಸಂಭವವಿದೆ. ಡಾ॥ ದೇಶಮುಖರೇ ಮುಂತಾದವರು ಭಾಗವಹಿಸಬೇಕೆಂದು ಹೇಳುತ್ತಿದ್ದಾರೆ.

ಕಾಂಗ್ರೆಸ್ ನಾಯಕರ ಸಭೆ

ಜೈಲಿನಿಂದ ಹೊರಗಡೆ ಇರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸದಸ್ಯರ ಸಭೆಯನ್ನು ಮುಂದಿನ ತಿಂಗಳಲ್ಲಿ ಸೇರಿಸಲು ಶ್ರೀಗಳಾದ ಕೆ. ಎಂ. ಮುನ್ಷಿ ಮತ್ತು ಗೋಪೀನಾಥ ಶ್ರೀವಾಸ್ತವರವರು ಪ್ರಯತ್ನಪಡುತ್ತಿದ್ದಾರೆ. ಈ ಸಭೆಯನ್ನು ಮೊನ್ನೆಯೇ ನಡೆಸಬೇಕಾಗಿತ್ತು. ಸಾಕಾದಷ್ಟು ಉತ್ತೇಜನವು ದೊರೆತರೆ ಕೇಂದ್ರ ಶಾಸನ ಸಭೆ ನಡೆಯುವಾಗ ಮುಂದಿನ ತಿಂಗಳಲ್ಲಿ ನಡೆಸುವರು.

ಭಾರತ ಸ್ವಾತಂತ್ರ್ಯಕ್ಕೆ ಆಸ್ಟ್ರೇಲಿಯಾ ಸಹಾನುಭೂತಿ

ಬ್ರಿಟನ್ ಸರ್ಕಾರದವರು ಸಂಧಾನವನ್ನು ಆರಂಭಿಸಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡುವ ಪ್ರಯತ್ನ ಮಾಡಬೇಕೆಂದು ಆಸ್ಟ್ರೇಲಿಯಾದ ಟ್ರೇಡ್ ಯೂನಿಯನ್ನಿನವರು ಅಪೇಕ್ಷಿಸುತ್ತಾರೆ. ಈ ಬಗ್ಗೆ ನಿರ್ಣಯವನ್ನು ಮಾಡಿ ಬ್ರಿಟನ್ ಮತ್ತು ಇಂಡಿಯಾ ಸರ್ಕಾರಗಳಿಗೆ ಕಳಿಸಿದ್ದಾರೆ. ಕ್ಷಾಮಪೀಡಿತ ಜನರಿಗೆ ಸಹಾಯ ಮಾಡುವುದಕ್ಕೂ ತೊಡಗಿದ್ದಾರೆ.

ಪರೀಕ್ಷೆ ತಕರಾರಿಗಾಗಿ ಮುಷ್ಕರ

ತಿಂಗಳ ಗಟ್ಟಲೆ ಟೆಸ್ಟ್ ಪರೀಕ್ಷೆಯನ್ನು ನಡೆಸುವ ವಿಷಯದಲ್ಲಿ ಜಗಳವುಂಟಾಗಿ ರಾವಲ್ಪಿಂಡಿಯ ಗಾರ್ಡನ್ ಕಾಲೇಜಿನ ೩೫೦ ವಿದ್ಯಾರ್ಥಿಗಳು ಮುಷ್ಕರ ಹಿಡಿದಿರುವುದಾಗಿ ತಿಳಿದುಬಂದಿದೆ.

ಗಣಿ ಅಪಘಾತ

ಹೊಳೆನರಸೀಪುರ ತಾ॥ ಕಬ್ಬೂರು ಗ್ರಾಮದ ಚಾಮುಂಡೇಶ್ವರಿ ಅಭ್ರಕ ಗಣಿಯ ಗೋಡೆಯು ಅಕಸ್ಮಾತ್ ೩ ದಿವಸಗಳ ಹಿಂದೆ ಕುಸಿದು ಬಿದ್ದು, ಮಲ್ಲಣ್ಣ ಎಂಬ ಕೆಲಸಗಾರನು ಅಲ್ಲೇ ಮೃತಪಟ್ಟನೆಂದೂ, ಸಿಂಗಣ್ಣ ಮತ್ತು ಮಲ್ಲಣ್ಣ ಎಂಬುವರಿಗೆ ತೀವ್ರಘಾಯಗಳಾಗಿವೆಯೆಂದೂ ಪೋಲೀಸರಿಗೆ ವರದಿಯಾಗಿದೆ.

ಯೋಗಶಾಲಾ

ಮೈಸೂರು ೨೪

ಮೈಸೂರು ಯೋಗಶಾಲೆಯ ಹನ್ನೊಂದನೇ ವಾರ್ಷಿಕೋತ್ಸವವು ಜಗನ್ಮೋಹನ ಭವನದಲ್ಲಿ ೨೫ನೇ ತಾ॥ ಸೋಮವಾರ ಸಂಜೆ ೬-೩೦ ಘಂಟೆಗೆ ಶ್ರೀಮನ್ಮಹಾರಾಜರವರ ಸೆಕ್ರೆಟರಿಗಳಾದ ಶ್ರೀ ಕೆ. ಗುರುದತ್ ರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಯೋಗಾಸನ ಪ್ರದರ್ಶನ, ಪ್ರಶಸ್ತಿ ಪ್ರದಾನಗಳು ನಡೆಯುವುವು.

ಕಿರಿಯರ ವಿಶ್ವಭಾರತಿ

ಶ್ರೀ ರಾಮರಾವ್ ಜಿ ನವರತ್ನರವರ ಸಂಪಾದಕತ್ವದಲ್ಲಿ ಹೊರಡುವ ವಿಶ್ವಭಾರತಿ ಪತ್ರಿಕೆಯ ನವರಾತ್ರಿ ಸಂಚಿಕೆಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಇದರಲ್ಲಿ ಬಲು ಪ್ರಾಚೀನ ಸಮಾಜಗಳು, ತ್ಯಾಗ, ರೂಪಾಯಿಗೆ ರೂಪಾಯಿ, ಛಾಯಾಪ್ರಕಾಶ ಎಂಬ ಉಪಯುಕ್ತ ಲೇಖನಗಳಿವೆ. ಬೆಲೆ ಎರಡೂವರೆ ಆಣೆ. ಸರ್ವರಿಗೂ ಗ್ರಾಹ್ಯವಾಗಿದೆ.

ನಿಧನ

ರಾಜಧಾನಿಯ ಅಶೋಕಾ ರೋಡಿನಲ್ಲಿ ಭಾರಿ ಪಾತ್ರೆ ವ್ಯಾಪಾರಿಗಳಾದ ಪೀಟರ್ ಫರ್ನಾಂಡಿಸ್‌ರವರು ನಿನ್ನೆ ದಿನ ಬೆಳಗ್ಗೆ ೩॥ ಘಂಟೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಪಡುತ್ತೇವೆ. ದಿವಂಗತರಿಗೆ ೫೫ ವಯಸ್ಸು. ಇವರಿಗೆ ಪತ್ನಿ, ಒಬ್ಬ ಹೆಣ್ಣುಮಗಳು, ಇಬ್ಬರು ಗಂಡುಮಕ್ಕಳು ಇರುತ್ತಾರೆ. ಇವರ ಶೋಕಪ್ರದರ್ಶನಕ್ಕಾಗಿ ದೊಡ್ಡಪೇಟೆಯ ಎಲ್ಲಾ ಪಾತ್ರೆ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು. ದಿವಂಗತರ ಆತ್ಮಕ್ಕೂ ಮತ್ತು ಕುಟುಂಬವರ್ಗದವರಿಗೂ ಭಗವಂತನು ಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಕಾಶ್ಮೀರ್ ಆಯುರ್ವೇದಿಕ್ ವರ್ಕ್ಸ್, ಅಮೃತಸರ
ಇವರ ಅತ್ಯುತ್ತಮವಾದ "ದಿಲಾವರ"
ಹಿಂಗು
ತೊಲ 4 ಆಣೆ, 1 ರೂ. ಗೆ 5 ತೊಲ
ದೊರೆಯುವ ಸ್ಥಳ:—
ಗೋಪಾಲ್ ಅಂಡ್ ಕೋ
ಚಿಕ್ಕಪೇಟೆ, ಬೆಂಗಳೂರು ಸಿಟಿ.
ಬ್ರಾಂಚು:—
ತ್ಯಾಗರಾಜ ರೋಡು, ಮೈಸೂರು.

Edited, printed and published by A. R. Nagarajan, at the Sadhvi Press, D. Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ
ತಾ॥ ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿ ಪುಡಿ
ಯನ್ನೇ ಉಪಯೋಗಿಸಿ.
ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು
ವಿ ಸೂ:- ಹೋಲ್‌ಸೇಲಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ ಇಲ್ಲೂ ಮತ್ತು ಸಂತೇಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

WEEKLY EDITION

ಸಂಪುಟ ೮]   ಸೋಮವಾರ ೨೫-೧೦-೪೩   [ಸಂಚಿಕೆ ೧

ಹಿಟ್ಲರನ ಆಡಳಿತವನ್ನು ಕಿತ್ತೆಸೆಯುವ ಹಂಚಿಕೆ

ಬಟ್ಟೆ ನೂಲಿನ ಮಾರಾಟ ಅವಧಿ ಹೆಚ್ಚಿಸಲಾಯಿತು

ಹಿಟ್ಲರನನ್ನು ಮಿತ್ರರಿಗೆ ವಶಪಡಿಸಲು ನಡೆಸಿದ ಉಪಾಯ

ದಿವಾನರ ಭೇಟಿ

ಮೈಸೂರು ೨೩

ದಿವಾನರಾದ ಪ್ರಧಾನಶಿರೋಮಣಿ ಎನ್. ಮಾಧವರಾಯರು ನಿನ್ನೆ ದಿವಸ ಸಂಚಾರ ಹೊರಟು, ಚಾಮರಾಜನಗರ, ಟಿ. ನರಸೀಪುರ ಮತ್ತು ಬನ್ನೂರು- ಈ ಪ್ರದೇಶಗಳಿಗೆ ಭೇಟಿ ಕೊಟ್ಟು, ಅಲ್ಲಿನ ಆಹಾರ ಪರಿಸ್ಥಿತಿ ಮತ್ತು ಸರಬರಾಜು ವ್ಯವಸ್ಥೆ ಬಗ್ಗೆ ಜನರ ಕುಂದು ಕೊರತೆಗಳನ್ನು ಖುದ್ದು ಪರಿಶೀಲಿಸಿದರು. ನಾಳೆ ದಿನ ಅವರು ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

ಸರಬರಾಜು ಸಚಿವರ ಆಗಮನ

ಸರಬರಾಜು ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ಈ ದಿನ ಮಧ್ಯಾಹ್ನ ರಾಜಧಾನಿಗೆ ಆಗಮಿಸಿದರು.

ಉದಾರ ದಾನ

ಬೆಂಗಳೂರು ಇಂಟರ್‌ಕಾಲೇಜಿನ ಅಧ್ಯಾಪಕ ಪ್ರೊ|| ರಾವ್ ಶ್ರೀ ಕೆ ನಂ. ಶ್ರೀಕಂಠಯ್ಯನವರು ತಮ್ಮ ಮಗಳ ಜ್ಞಾಪಕಾರ್ಥವಾಗಿ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಕನ್ನಡ ಕಾವ್ಯ ರಚನಾಶಕ್ತಿಗೆ ಪ್ರೋತ್ಸಾಹವಾಗುವಂತೆ ಪ್ರತಿವರ್ಷವೂ ಸ್ಪರ್ಧೆಯೊಂದನ್ನು ನಡೆಸಬೇಕೆಂದು ೨೫೦ ರೂ ಗಳ ನಿಧಿಯೊಂದನ್ನು ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘಕ್ಕೆ ಕೊಟ್ಟಿದ್ದಾರೆ.

ಮೈಸೂರಿಗೆ ಸಿಂಧ್ ದೇಶದ ಅಕ್ಕಿ

ಧಾನ್ಯಗಳನ್ನು ಕೊಳ್ಳಲು ಮೈಸೂರು ಸರ್ಕಾರದ ಪರವಾಗಿ ಸಿಂಧ್ ಪ್ರಾಂತ್ಯಕ್ಕೆ ಹೋಗಿರುವ ಮಿ|| ಅಬಾ ಬೇಕರ್‌ರವರಿಗೆ ಕರಾಚಿಯ ಗೋಧಿ ಮತ್ತು ಅಕ್ಕಿಯ ಸರಬರಾಜು ಸಮಿತಿಯವರು ೩ ಸಾವಿರ ಟನ್ ಅಕ್ಕಿ ಮತ್ತು ಜೋಳವನ್ನೂ, ೧,೫೦೦ ಟನ್ ಗೋಧಿಯನ್ನೂ ಕೊಟ್ಟಿರುವರು. ಸದ್ಯದಲ್ಲೇ ಈ ಧಾನ್ಯಗಳು ಮೈಸೂರಿಗೆ ಬರಲಿರುವುವು.

ಹಸು ತಿವಿದು ಮರಣ

ಮೈಸೂರು ತಾ|| ಮಾಧವಗೆರೆ ಗ್ರಾಮದ ಹುಚ್ಚಯ್ಯ ಎಂಬುವನು ನಿನ್ನೆ ದಿವಸ ತನ್ನ ಹೊಲದಲ್ಲಿ ಕಡಲೆಕಾಯಿ ಮೇಯುತ್ತಿದ್ದ ಹಸುವನ್ನು ಓಡಿಸಲು ಹೋದಾಗ, ಅತನನ್ನು ಹಸು ತಿವಿದು ಅಲ್ಲೇ ಮೃತಿಹೊಂದಿದನೆಂದು ಪೋಲೀಸರಿಗೆ ವರದಿಯಾಗಿದೆ.

ಸ್ವಸ್ತಿಕ ಸಂಘ

ದ್ವಿತೀಯ ವಾರ್ಷಿಕೋತ್ಸವವು ನಿನ್ನೆ ಸಂಜೆ ಶ್ರೀಮಾನ್ ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಸಂಗೀತ, ಬಹುಮಾನ ವಿನಿಯೋಗಗಳಾದ ಮೇಲೆ ಅಧ್ಯಕ್ಷರು ಬಹಳ ಸ್ಫೂರ್ತಿದಾಯಕ ಭಾಷಣವನ್ನು ಮಾಡಿ, ಸಂಘದ ವೈಶಿಷ್ಟ್ಯವನ್ನು ಕೊಂಡಾಡಿದ್ದಲ್ಲದೆ, ಕೆಲವು ಸಾಮಾಜಿಕ ಮತ್ತು ಸಾಹಿತ್ಯ ವಿಷಯಗಳನ್ನು ವಿವರಿಸಿದರು. ಅಧ್ಯಕ್ಷ ಭಾಷಣಾನಂತರ ಸೌಭಾಗ್ಯ ಎಂಬ ಪ್ರಹಸನ ಪ್ರದರ್ಶನವು ನಡೆಯಿತು.

ಆ ಕಾ ಶ ವಾ ಣಿ

೨೬ ನೇ ಮಂಗಳವಾರ

... ಆಕಾಶವಾಣಿ ನಾಗಸ್ವರವಾದನ ವಿದ್ವಾ|

ಅಮೆರಿ-ವೇವೆಲ್-ಗಾಂಧೀಜಿಗಳಿಗೆ ಬಹಿರಂಗ ಪತ್ರ

ಬಿಕ್ಕಟ್ಟಿನ ಪರಿಹಾರಕ್ಕೆ ಶಾಸ್ತ್ರಿಯವರ ಬೇಡಿಕೆ

ರೈ|| ಆ|| ವಿ. ಎಸ್. ಶ್ರೀನಿವಾಸ ಶಾಸ್ತ್ರಿಯವರು ಇಂಡಿಯಾ ಸೆಕ್ರೆಟರಿಗಳಾದ ಮಿ|| ಅಮೆರಿ, ವೈಸ್ರಾಯ್ ರಾದ ಲಾರ್ಡ್ ವೇವೆಲ್ ಮತ್ತು ಮಹಾತ್ಮಾ ಗಾಂಧಿಜಿಯವರಿಗೆ ಬಹಿರಂಗ ಪತ್ರವನ್ನು ಬರೆದು ಭಾರತದ ಬಿಕ್ಕಟ್ಟನ್ನು ಬಿಡಿಸಬೇಕೆಂದು ಕೋರಿದ್ದಾರೆ. ನಾಯಕರುಗಳನ್ನು ಬಿಡುಗಡೆ ಮಾಡುವಂತೆ ಮಾಡಿದ ವೈದ್ಯನ ಹಾಗೆ ರಾಜನೀತಿ ನೈಪುಣ್ಯದಿಂದ ವರ್ತಿಸಬೇಕೆಂದು ಅಮೆರಿಯವರಿಗೆ ಹೇಳಿದ್ದಾರೆ. ಹಿಂದೂಸ್ಥಾನದಲ್ಲಿ ರಾಷ್ಟ್ರೀಯ ಸರ್ಕಾರವನ್ನು ರಚಿಸುವುದೇ ಇಂದಿನ ಕೊರತೆಗೆ ಪರಿಹಾರೋಪಾಯವೆಂದು ವೈಸ್ರಾಯರಿಗೆ ಹೇಳಿದ್ದಾರೆ. ಚತುರನಾದ ಸೇನಾಪತಿಯು ತನ್ನ ತಂತ್ರವನ್ನು ಸಮಯಾನುಸಾರ ಬದಲಾಯಿಸಬೇಕೆಂದು ಮಹಾತ್ಮರಿಗೆ ಸೂಚಿಸಿದ್ದಾರೆ.

ಕೌಂಟ್ ಸಿಯಾನೊ ಬಂಧನ

ಮುಸೋಲಿನಿ ಅಳಿಯನಾದ ಕೌಂಟ್ ಸಿಯಾನೋ ಫ್ಯಾಸಿಸ್ಟ್ ವಿರುದ್ಧ ಗುಂಪುಗಳ ಯುದ್ಧ ಪ್ರೈದಿಯಾಗಿ ಸಿಕ್ಕಿಬಿದ್ದಿರುವನೆಂದು ವರದಿಯಾಗಿದೆ. ಸೆರೆ ಸಿಕ್ಕುವುದಕ್ಕೆ ಮೊದಲು ಬಟ್ಟೆ ವೈಕನಂತೆ ವೇಷ ಹಾಕಿಕೊಂಡು ಅತನು ಓಡಾಡುತ್ತಿದ್ದನು. ಅವನ ಕೈ ಉಂಗುರದಿಂದ ಪತ್ತೆ ಮಾಡಲ್ಪಟ್ಟನು. ತನ್ನ ನೌಕರ ಕಾವಲಿದ್ದ ಪೋಲೀಸರನ್ನು ಬೆರಗು ಮಾಡಿ ಎರಡು ತಿಂಗಳ ಹಿಂದೆ ಅವನು ಸೆರೆ ತಪ್ಪಿಸಿಕೊಂಡು ಹೋಗಿದ್ದನು.

ಹಿಟ್ಲರನನ್ನು ಹಿಡಿಯುವ ಹಂಚಿಕೆ

ಜರ್ಮನಿಯಲ್ಲಿ ಹಿಟ್ಲರನ ಆಡಳಿತವನ್ನು ಕಿತ್ತೆಸೆಯಬೇಕೆಂದು ಬಡರೋಗ್ಲಿಯೋ ... ವಿ ಲಟಿಂ ಡಿಕ್ಟೇಟರ್ ... ಹೆನ್ನ ... ಹಿಟ್ಲರನ ಗುಪ್ತ ಹಂಚಿಕೆಗಳ್ನ ... ಹಸ್ತ ಪತ್ರಿಕೆಗಳ ಮೂಲಕ ಹಂಚ ... ರಿಕ ಕೊಡಲಾಗುತ್ತಿದೆಯೆಂದು ಜರ್ಮನ್ ...

ಕಲ್ಕತ್ತೆಯಲ್ಲಿ ೧೪೨ ಜನರ ಮರಣ

ಶುಕ್ರವಾರದ ದಿನ ಕಲ್ಕತ್ತೆಯಲ್ಲಿ ಹೊಟ್ಟೆಗಿಲ್ಲದೆ ಸತ್ತವರ ೧೪೨ ಶವಗಳಿಗೆ ಸಂಸ್ಕಾರವನ್ನು ಮಾಡಲಾಯಿತು. ಹಿಂದೂ ಮತ್ತು ಮುಸಲ್ಮಾನ್ ಸಂಸ್ಕಾರ ಸಮಿತಿಯವರು ಇವನ್ನು ನಡೆಸಿದರು. ಆಸ್ಪತ್ರೆಯಿಂದಲೂ, ಪೋಲೀಸರಿಂದ ೨೪ ಮತ್ತು ಇತರ ಕಡೆಗಳಿಂದ ಉಳಿದ ಶವಗಳು ಬಂದಿದ್ದವು.

ಕಲ್ಕತ್ತಾದಲ್ಲಿ ಭೂಕಂಪ

ಶನಿವಾರ ರಾತ್ರಿ ಕಲ್ಕತ್ತೆಯಲ್ಲಿ ಸಾಮಾನ್ಯವಾದ ಭೂಕಂಪವು ಆಯಿತು. ಕೆಲವು ಗಳಿಗೆಗಳ ಕಾಲ ಭೂಮಿಯು ಅಲ್ಲಾಡುತ್ತಿತ್ತು. ನಿಸ್ಸಹ ಜನರು ಇನ್ನೂ ಏನೂ ಅರಿಯದೆ ಹಾಸಿಗೆಯಲ್ಲಿ ಮಲಗಿದ್ದ ಜನರು ಎದ್ದು ಹೊರಗೆ ಓಡಿ ಬಂದರು. ಅನ್ಯ ಸ್ಥಳಗಳ ಜೊತೆಗೆ ಕಲ್ಕತ್ತೆಯಲ್ಲಿ ಭೂಕಂಪವೂ ಪ್ರಾಪ್ತವಾಗಿರುವುದು ಶೋಚನೀಯವಾಗಿದೆ.

ಮಗುವಿನ ಮೈ ನಾಯಿಗಳಿಗೆ ಆಹುತಿ

ಕಲ್ಕತ್ತೆಯ ಕಾರ್ನವಾಲೀಸ್ ಬೀದಿಯಲ್ಲಿ ಒಂದು ಮಗುವಿನ ಶವವು ಪೋಲೀಸರ ಕೈಗೆ ಸಿಕ್ಕಿತು. ಅದರ ಬಹುಭಾಗವು ನಾಯಿಗಳ ಪಾಲಾಗಿತ್ತು. ನಾಯಿಗಳು ಅದನ್ನು ಕಿತ್ತು ತಿಂದಿರಬೇಕೆಂದು ಹೇಳಲಾಗಿದೆ. ಆ ಶರೀರವನ್ನು ಪೋಲೀಸರು ಪರೀಕ್ಷೆಗಾಗಿ ಕಳುಹಿಸಿದರು.

ಬಟ್ಟೆ ಮಾರಾಟಗಾರರು ಡಿಸೆಂಬರ್ ೩೧ ರವರೆಗೆ ಹೆಚ್ಚಿಸಲಾಗಿದೆ

ನೂಲಿನ ಮತ್ತು ಬಟ್ಟೆ ಸಪ್ಲೈ ಕಂಟ್ರೋಲ್ ಶಾಸನದ ಪ್ರಕಾರ ಅಕ್ಟೋಬರ್ ೩೧ ನೇ ತಾರೀಖಿನೊಳಗಾಗಿ ಮಾರ್ಕೆಟಿನಲ್ಲಿ ಇದ್ದ ಎಲ್ಲಾ ಸ್ಟಾಕನ್ನು ಮಾರಬೇಕು ಅಥವಾ ಸರ್ಕಾರದ ವಶಕ್ಕೆ ಕೊಡಬೇಕಾಗಿತ್ತು. ಅವಧಿ ಡಿಸೆಂಬರ್ ೩೧ ನೇ ತಾರೀಖಿನ ಹಿಂದೆ ತಿಮಾರಾದ ಬಟ್ಟೆಗಳು ... ಕೋಟಿ ಗಜದಷ್ಟು ... ಎರಡು ತಿಂಗಳು ಅವಧಿಯ ... ಮಾಡಲು ಪ್ರಯೋ... ... ನಗರ ಸರ್ಕಾರದವ...

ಅಕ್ಕಿಗಾಗಿ ಹೋಗಿ ಮರಣ

ಒರಿಸ್ಸಾ ಪ್ರಾಂತದಲ್ಲಿಯೂ ಅಕ್ಕಿ ... ಮತ್ತು ತಲೆದೋರಿದೆ. ... ಬಾಲಸೂರಿನಲ್ಲಿ ಬಹಳ ತೊಂದರೆಯಾಗಿದೆ. ... ದ್ದನ ಒಬ್ಬಾತನು ಅರ್ಧಸೇರು ಧಾನ್ಯವನ್ನು ಸಂಪಾದಿಸುವುದಕ್ಕಾಗಿ ಹೊರಗೆ ಹೋಗಿ ... ಪ್ರಯೋಜನವಾಗಿ ಬಂದನು. ಇತ್ತ ... ಅತನ ಹೆಂಡತಿಯು ಸಂಪಾದಿಸಿದ್ದ ಅರ್ಧಸೇರು ಧಾನ್ಯವನ್ನು ಅಡಿಗೆಮಾಡಿ ತನ್ನ ಮಕ್ಕಳಿಗೂ, ತನಗೂ ಉಪಯೋಗಿಸಿದ್ದ ದ್ದರಿಂದ ಗಂಡನು ರೋಷಿಸಿಕೊಂಡು ಹೆಂಡತಿಯನ್ನು ಓಡಿಸಿಬಿಟ್ಟನು. ಮಾರನೆ ದಿನ ಅಕ್ಕಿ ಪಡಿಯನ್ನು ಸರ್ಕಾರದವರು ಕೊಡ ಬರೆಂದು ಹೇಳಿ, ಹೋಗುತ್ತಿರುವಾಗ ಹೊಟ್ಟೆಗಿಲ್ಲದೆ ಅನೇಕ ದಿನಗಳಿಂದ ಬಳಲುತ್ತಿದ್ದ ಅತನು, ದಾರಿಯಲ್ಲಿಯೇ ಸತ್ತಾಗಿ ಬಿದ್ದು ಮರಣಹೊಂದಿದನು.

ಹಿಟ್ಲರನನ್ನು ಮಿತ್ರರ ವಶಪಡಿಸಲು ಹಂಚಿಕೆ

ಇಟಲಿ ವಶಪಡಿಸಿಕೊಳ್ಳುವಕ್ಕೆ ಮುಂಚೆ ಹಿಟ್ಲರನನ್ನು ರೋಂ ನಗರಕ್ಕೆ ಕರೆಸಿ, ಅತನನ್ನೂ ಮತ್ತು ಮುಸೋಲಿನಿಯವನ್ನೂ ಮಿತ್ರ ವರವಾದಲು ಹಂಚಿಕೆ ನಡೆಯಿತೆಂದು ಜರ್ಮನ್ ವಾರ್ತಾ ಸಂಸ್ಥೆ ತಿಳಿಸುತ್ತದೆ. ಬಡೋಗ್ಲಿಯೋ ಸರ್ಕಾರದವರು ನಡೆಸುತ್ತಿದ್ದ ವಿಶ್ವಾಸಘಾತುಕವಾದ ಹಂಚಿಕೆ ಗೊತ್ತಿದ್ದುದರಿಂದ ರೋಂ ನಗರಕ್ಕೆ ಬರುವಂತೆ ಕೊಟ್ಟ ಆಹ್ವಾನವನ್ನು ನಿರಾಕರಿಸಲಾಯಿತೆಂದು ಜರ್ಮನ್ ಅಧಿಕಾರಿಗಳು ತಿಳಿಸಿದ್ದಾರೆ.

ಫ್ಯಾಸಿಸ್ಟ್ ಅಧಿಕಾರಿಗಳ ಕೊಲೆ

ಮುಸೋಲಿನಿಯ ಫ್ಯಾಸಿಸ್ಟ್ ವಾಲಂಟಿರಿ ದಳದ ಮುಖ್ಯ ದಂಡನಾಯಕನಾಗಿದ್ದ ಜೆ|| ಜ|| ರೇನಿಟೋರಿಕಾ ಎಂಬವನನ್ನು ಮಿಲಾನಿನಲ್ಲಿ ಫಾಸಿಸ್ಟ್ ಪಕ್ಷದ ವಿರೋಧ್ಧ ವಿದ್ಯಾರ್ಥಿಗಳು ಗುಂಡಿನಿಂದ ಹೊಡೆದು ಕೊಲೆ ಮಾಡಿದರೆಂದು ವರದಿಯಾಗಿದೆ. ನೊತ್ತನ ನಗರದಲ್ಲಿ ... ಮುಸೋಲಿನಿ ಫ್ಯಾಸಿಸ್ಟ್ ಸರ್ಕಾರದ ಮುಖ್ಯಸ್ಥನಾದ ಆ|| ಅಂಟೋನಿಯೋ ಲೆಗ್ನಾಸಿ ಎಂಬುವನನ್ನೂ ಕೊಲೆ ಮಾಡಲಾಗಿದೆ ಎಂದು ವರದಿಯಾಗಿದೆ.

ಕೀವ್ ನಗರ ನಾಶಮಾಡಲು ಹಿಟ್ಲರನ ಆಜ್ಞೆ

ಕೀವ್ ಉತ್ತರ ಭಾಗದಲ್ಲಿ ಭೀಕರವಾದ ಕಾಳಗ ನಡೆಯುತ್ತಿದೆ.

ಕೀವ್ ನಗರವನ್ನು ಜರ್ಮನರು ಸ್ಥಳಬಿಡಬೇಕಾದರೆ ಅದನ್ನು ಸಂಪೂರ್ಣ ನೆಲಸಮ ಮಾಡಬೇಕೆಂದು ಹಿಟ್ಲರನ ಅಜ್ಞೆಯಾಗಿದೆ.

—

ಜುಲ್ಮಾನೆ ವಸೂಲಾಯಿತು

ಮಧ್ಯಪ್ರಾಂತ್ಯದ ಅಷ್ಟಿ ... ನಾಯಕರಾದ ಶ್ರೀ ಜಿ. ಎಸ್. ಗುಪ್ತರವರ ... ಕಾರಾಗೃಹ ವಾಸ ... ಜುಲ್ಮಾನೆಯನ್ನು ... ದಿನ ... ವನ್ನು ... ಆದರೆ ... ತಿದ್ದು ಬಂಧನದಿಂದ ... ತಯ ತೆಂಡಾ, ಅತನಿಗೆ ... ದಸ್ತು ಮೊದಲು ... ನಡ ವೇಲೆ ... ಕೆ.

ಸಮುದ್ರದಾಚೆಯ ಬ್ರಾಹ್ಮಣರು

ಹಿಂದೂ ಧರ್ಮವು ಭಾರತದಲ್ಲೇ ಹುಟ್ಟಿ ಇಲ್ಲಿಯೇ ಬೆಳೆದು ನಿಂತಿರುವುದೆಂದು ತಿಳಿಯುವವರಿಗೆ ಸಮುದ್ರದಾಚೆ ಬ್ರಾಹ್ಮಣರಿದ್ದಾರೆಂದರೆ ಆಶ್ಚರ್ಯವಾಗಬಹುದು. ಅಥವಾ ಪಾಶ್ಚಿಮಾತ್ಯ ಸಂಸರ್ಗದಿಂದ ಇಲ್ಲಿಂದ ವಲಸೆ ಹೋದವರಿರಬಹುದು ಸಮುದ್ರದಾಚೆಯ ದೇಶಗಳಲ್ಲಿ ನೆಲೆಸಿರುವರೆಂದು ಭಾವಿಸಿದರೂ ಭಾವಿಸಬಹುದು. ಆದರೆ ಕೆಲವು ದೇಶಗಳಲ್ಲಿ ಅನೇಕ ಸಾವಿರ ವರ್ಷಗಳ ಹಿಂದಿನಿಂದ ವಾಸವಾಗಿದ್ದ ಬ್ರಾಹ್ಮಣರ ಸಂತತಿಯವರಿರುವರೆಂದು ಕೇಳಿದರೆ ಆಶ್ಚರ್ಯವಾಗುವುದು ಸಹಜ.

ಕ್ರಿ. ಪೂ ನಾಲ್ಕು, ಐದನೇ ಶತಮಾನಗಳಿಂದಲೂ ಹಿಂದೂಗಳು ಈಗಿನ ಪಾಶ್ಚಿಮಾತ್ಯ ರಾಷ್ಟ್ರಗಳಂತೆಯೇ ಸಮುದ್ರಯಾನ ಮಾಡಿ ಅನೇಕ ರಾಷ್ಟ್ರಗಳನ್ನು ಜಯಿಸಿ ಅಲ್ಲಿ ರಾಜ್ಯಗಳನ್ನು ಕಟ್ಟಿದರೆಂಬುದು ಸರ್ವವಿದಿತವಾದ ವಿಷಯ. ಈಗಿನ ಮಲಯ ಪರ್ಯಾಯದ್ವೀಪದ ಉತ್ತರ ಭಾಗ, ಸಯಾಂ, ಇಂಡೋ-ಚೀಣ, ಜಾವಾ, ಬೋರ್ನಿಯೋ ಮುಂತಾದ ಸ್ಥಳಗಳಲ್ಲೆಲ್ಲಾ ಪ್ರಾಚೀನ ಭಾರತೀಯ ಸಂಸ್ಕೃತಿಯ ಅವಶೇಷಗಳೂ, ನಿವೇಶನಗಳೂ ಹೇರಳವಾಗಿ ಸಿಕ್ಕಿವೆ. ಆಗ ಇಲ್ಲಿಂದ ವಲಸೆ ಹೋದ ಹಿಂದೂಗಳನೇಕರು ಅಲ್ಲಿಯ ಜನಗಳೊಡನೆಯೇ ಬೆರೆದು ಒಂದು ಜನಾಂಗವಾಗಿ ರಾಜ್ಯಗಳನ್ನು ಕಟ್ಟಿ ಆಳಿದರು. ಈಗ ಆ ಜನಾಂಗಗಳ ಕುರುಹೂ ಇಲ್ಲ. ಆದರೂ ಅಲ್ಲಿ ವಲಸೆ ಹೋಗಿದ್ದ ಕೆಲವು ಬ್ರಾಹ್ಮಣ ಸಂತತಿಯವರು ಆಗಿನಿಂದ ಈವರೆಗೂ ಅಲ್ಲಿ ವಾಸಿಸುತ್ತಿರುವುದು ಆಶ್ಚರ್ಯವೇ ಸರಿ.

ಇವರು ಮುಖ್ಯವಾಗಿ ಸಯಾಂ ರಾಜ್ಯದ ಬ್ಯಾಂಕಾಕ್ ಕೊಲ್ಲಿಯ ಕೆಳಭಾಗಕ್ಕಿರುವ ನಾಕೋನ್ ಶ್ರೀ ತಮ್ಮರಾಟ್ ಎಂಬಲ್ಲಿಯೂ ಸಯಾಂ ದೇಶದ ರಾಜಧಾನಿಯಾದ ಬ್ಯಾಂಕಾಕ್ ನಗರದಲ್ಲಿಯೂ ಇರುವರು. ನಾಕೋನ್ ಶ್ರೀ ತಮ್ಮರಾಟ್ ಎಂಬಲ್ಲಿಯ ೩ ದೇವಾಲಯಗಳಲ್ಲಿ ಈಗಲೂ ಇವರು ಪೂಜೆ ನಡೆಸುತ್ತಿರುವರು.

ಸಯಾಂ ದೇಶೀಯರು ಬೌದ್ಧರಾದರೂ ಅರಮನೆಯ ನಾನಾ ಧಾರ್ಮಿಕ ಕರ್ಮಗಳಿಗೆ ಈ ಬ್ರಾಹ್ಮಣರನ್ನೇ ಕರೆಸುತ್ತಿರುವರು. ಈ ಬ್ರಾಹ್ಮಣರು [illegible] ತಮ್ಮ [illegible]ಗಳನ್ನು [illegible] ೧೫೦ ವರ್ಷಗಳ ಹಿಂದೆ ಸಯಾಂ ದೊರೆ [illegible] ಆಸ್ಥಾನದಲ್ಲಿ ಇವರ [illegible] ದೇಶವಾಗಿದ್ದಿತು. [illegible] ಪೂಜೆಯಲ್ಲಿ ಈ ಬ್ರಾಹ್ಮಣರ ಸಹಾಯವು ವಿಶೇಷವಾಗಿದ್ದಿತು.

ಬ್ಯಾಂಕಾಕ್ ನಗರದಲ್ಲಿ ಈ ಬ್ರಾಹ್ಮಣರಿಗೆ ಸೇರಿದ ಎರಡು ಮೂರು ದೇವಸ್ಥಾನಗಳಿವೆ. ಇವುಗಳಲ್ಲಿ ಶಿವ, ಗಣಪತಿ ಮತ್ತು ವಿಷ್ಣು ದೇವಸ್ಥಾನಗಳು ಮುಖ್ಯವಾದುವು. ಇಲ್ಲಿ ಆಯಾ ಪವಿತ್ರ ಸಂದರ್ಭದಲ್ಲಿ ವಿಶೇಷವಾದ ಉತ್ಸವಗಳು ನಡೆಯುವುವು. ಹೇಮಂತ ಋತುವಿನಲ್ಲಿ ಇಲ್ಲಿಗೆಲ್ಲಾ ಪ್ರಸಿದ್ಧವಾದ "ಜೋಕಾಲೋತ್ಸವ"ವು ನಡೆಯುವುದು. ಆಗ ೨ ಎತ್ತರವಾದ ಸ್ತಂಭಗಳ ಮಧ್ಯೆ ಕಟ್ಟಿದ ಉಯ್ಯಾಲೆಯಲ್ಲಿ ನಾನಾ ವೇಷಗಳನ್ನು ಧರಿಸಿದ ಜನರು ತೂಗಾಡುವರು. ದೇವರುಗಳಿಗೆ ವಿಶೇಷ ಸೇವೆ ಇತ್ಯಾದಿಗಳು ನಡೆಯುವುವು.

ಇದನ್ನು ಬಿಟ್ಟರೆ, ವರ್ಷಾರಂಭದಲ್ಲಿ ಏರು ಕಟ್ಟುವ ಹಬ್ಬ. ಆಗ ದೊರೆಗೆ ಸೇರಿದ ಜಮೀನಿನಲ್ಲಿ ಸಯಾಂ ದೇಶದ ವ್ಯವಸಾಯ ಖಾತೆಯ ಮಂತ್ರಿಯು ವಿಶೇಷ ವೇಷಭೂಷಣಗಳಿಂದ ಬಂದು ಉತ್ತು ಬೀಜಗಳನ್ನು ಚೆಲ್ಲುತ್ತಾನೆ. ಅವನ್ನು ಸುತ್ತಮುತ್ತಲಿರುವ ಜನರು ವಿಶೇಷ ಆದರದಿಂದ ಆರಿಸಿಕೊಂಡು ಹೋಗುತ್ತಾರೆ.

ದೊರೆಯ ಪಟ್ಟಾಭಿಷೇಕ ಕಾಲದಲ್ಲಿ ಈ ಬ್ರಾಹ್ಮಣರು ದೇವಸ್ಥಾನಗಳಿಂದ ತೀರ್ಥಗಳನ್ನು ತೆಗೆದುಕೊಂಡು ಹೋಗಿ, ದೊರೆಗೆ ಅಭಿಷೇಕಮಾಡಿಸಬೇಕು. ಅವನ ಕಿರೀಟ, ಕತ್ತಿ ಮುಂತಾದುವನ್ನು ಆಶೀರ್ವದಿಸಿ, ಅವನಿಗೆ ಕೊಡಬೇಕು. ಇಂತಹ ನಾನಾ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ.

ಹಿಂದೂ ಧರ್ಮವು ಅತಿ ಉಚ್ಚ ಸ್ಥಿತಿಯಲ್ಲಿದ್ದು, ಈಗ ಅದರ ತಾಯಿನಾಡಿನಲ್ಲಿಯೇ ನಾನಾ ಪರಾಘಾತಗಳಿಗೆ ಸಿಲುಕಿ, ತತ್ತರಿಸುತ್ತಿರುವಾಗ ಸಾವಿರಾರು ವರ್ಷಗಳ ಹಿಂದೆ ಅದರ ಪ್ರಭಾವವಿದ್ದ ರಾಜ್ಯಗಳಲ್ಲಿ ಇನ್ನೂ ಅದು ಜೀವಂತವಾಗಿರುವುದು ವಿಚಿತ್ರವೇ ಸರಿ.

—

ರೋಂ ಕಡೆಗೆ ಮಿತ್ರರ ಮುಂದೋಟ

ದಕ್ಷಿಣ ಇಟಲಿಯಲ್ಲಿ ಮಿತ್ರರ ಐದನೇ ಸೈನ್ಯವು ವಾಲ್ಟರ್ನೊ ನದಿಯ ಉತ್ತರ ಭಾಗದಲ್ಲಿ ಮುಂದೆ ನುಗ್ಗುತ್ತ ಆಲಿಫ್ ನಗರವನ್ನು ವಶಪಡಿಸಿಕೊಂಡಿದೆ, ಇದರಿಂದ ರೋಂ ನಗರದ ಕಡೆಗೆ ನುಗ್ಗಲು ಅನುಕೂಲವಾಗಿದೆ.

ಅಭಿನಂದನೆ

ಈಗಿನ ಆಹಾರ ಬಿಕ್ಕಟ್ಟಿನ ಸಮಯದಲ್ಲಿ ಸಾರ್ವಜನಿಕರಿಗೆ ರೈಲ್ವೆ ಕೆಲಸಗಾರರು ಸಲ್ಲಿಸುತ್ತಿರುವ ಸೇವೆ ಚಿರಸ್ಮರಣೀಯವಾದುದು. ಅಷ್ಟೇಕೆ! ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದ್ದು. ಇದನ್ನು ಪ್ರಭುತ್ವದವರು ಮನಗಂಡು ಕೆಲಸಗಾರರಿಗೆ ತುಟ್ಟಿ ಭತ್ಯವನ್ನು ಹೆಚ್ಚಿಸಿರುವುದು ಪ್ರಸಂಶನೀಯವಾಗಿದೆ. ಕೆಲಸಗಾರರು ಇಂಥಾ ವಿಷಮ ಸ್ಥಿತಿಯಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ನಿರೀಕ್ಷಿಸುವುದು ಸಹಜವೇ. ಆಗಿಯೂ ಇದನ್ನು ಸ್ವಲ್ಪ ಗಮನಿಸಬೇಕಾದ ವಿಷಯ. ಈಗ ತುಟ್ಟೀ ಭತ್ಯವನ್ನು ಹೆಚ್ಚಿಸಿದ್ದಕ್ಕಾಗಿ ಮೈಸೂರು ಸರ್ಕಾರದವರಿಗೂ, ಅದರಲ್ಲೂ ಈ ವಿಷಯದಲ್ಲಿ ವಿಶೇಷ ಶ್ರದ್ಧೆ ವಹಿಸಿದ ಉದಾರ ಹೃದಯರುಗಳಾದ ರೈಲ್ವೆ ಅಧಿಕಾರಿಗಳಿಗೂ ರೈಲ್ವೆ ಕೆಲಸಗಾರರ ಪರವಾಗಿ ನಾನು ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಟಿ ಎಸ್. ಬೈರೋಜಿರಾವ್.

—

ಎಣ್ಣೆಬೀಜ ರಫ್ತಿಗೆ ಪ್ರತಿಬಂಧಕ

ಮದರಾಸ್ ಪ್ರಾಂತ್ಯದಿಂದ ಲೈಸೆನ್ಸ್ ಇಲ್ಲದೆ ಹೊರಗಡೆಗೆ ಎಣ್ಣೆ ಬೀಜಗಳನ್ನು ಸಾಗಿಸಕೂಡದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಚಾಂದ್ ಪುರದಲ್ಲಿ ಭೀಕರ ಕ್ಷಾಮ

ಚಾಂದ್‌ಪುರದ ಸುತ್ತಮುತ್ತಿನ ಪ್ರದೇಶಗಳಲ್ಲಿನ ಜನರು ಹೊಟ್ಟೆಗಿಲ್ಲದೆ ಸೊಪ್ಪುಸೆದೆ ತಿಂದು ಜೀವಿಸುತ್ತಿರುವ ಭೀಕರ ಪರಿಸ್ಥಿತಿಯನ್ನು ಪಂಡಿತ್ ಹೃದಯನಾಥ ಕುಂಜ್ರುರವರು ಕ್ಷಾಮ ಪರಿಸ್ಥಿತಿ ಬಗ್ಗೆ ಪರಿಶೀಲನೆ ಮಾಡಿ ತಿಳಿಸಿದ್ದಾರೆ. ಅನ್ನವಿಲ್ಲದೆ ಸಾವಿರಾರು ಮಂದಿ ಸಾವಿಗೆ ತುತ್ತಾಗಿದ್ದಾರೆ. ಅಕ್ಕಿ ಅಭಾವ ಉತ್ಕಟಾವಸ್ಥೆಯಲ್ಲಿದೆ. ಅನಾಥ ಪೋಷಣೆ ಮಂದಿರದವರು ೨ ಸಾವಿರ ಮಂದಿಗೆ ಅನ್ನ ಕೊಡುತ್ತಿರುವರು.

—

ಜಪಾನಿ ಸೈನಿಕರ ನಾಶ

ನ್ಯೂಗಿನಿಯಾದ ಫಿಂಷಾಫೆನ್ನಿಗೆ ಉತ್ತರದಲ್ಲಿರುವ ಜಪಾನಿ ಸೈನ್ಯ ಸ್ಥಾನಗಳ ಮೇಲೆ ಮಿತ್ರ ವಿಮಾನಗಳು ಉಗ್ರ ಧಾಳಿ ನಡೆಸಿ ೨೨೦ ಟನ್ ಬಾಂಬುಗಳನ್ನು ಸುರಿಸಿದವು. ಶತ್ರು ಸೈನಿಕರಿಗೆ ಅಪಾರ ನಷ್ಟವುಂಟಾಯಿತು.

—

ಕಲ್ಕತ್ತಾಕ್ಕೆ ವೈಸರಾಯರ ಭೇಟಿ

ಬಂಗಾಳ ಕ್ಷಾಮ ಪರಿಸ್ಥಿತಿಯನ್ನು ಪರಿಶೀಲಿಸಲು ನೂತನ ವೈಸರಾಯರು ಕಲ್ಕತ್ತಾಗೆ ಭೇಟಿ ಕೊಡುವರೆಂದು ತಿಳಿಸಲಾಗಿ

ಪ್ರಕಟಣೆ

ದಿ ಬೆಂಗಳೂರು ಪ್ರಾವಿಡೆಂಟ್ ಇನ್ಷೂರೆನ್ಸ್ ಕಾರ್ಪೊರೇಷನ್, ಲಿಮಿಟೆಡ್

(ಸ್ಥಾಪನೆ : ೧೯೩೯)

ಮುಖ್ಯ ಕಚೇರಿ : "ವಿಶ್ವಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ನಗರ

ಹಿಂದೂಸ್ಥಾನದ ಎಲ್ಲ ಭಾಗಗಳಲ್ಲಿ ಉದಾರ ಕರಾರುಗಳ ಮೇಲೆ ಮತ್ತು ಅನುಮತಿ ಕಮೀಷನ್ನಿನ ಮೇಲೆ ಏಜಂಟರನ್ನು ನೇಮಿಸಿಕೊಳ್ಳುವವರಿದ್ದೇವೆಂದು ಪ್ರಕಟಿಸಲು ಅತ್ಯಾನಂದವಾಗುತ್ತದೆ. ಏಜಂಟರು ಪ್ರತಿ ತಿಂಗಳು ಸುಲಭವಾಗಿ ೧೦೦ ರೂ. ಸಂಪಾದಿಸಬಹುದು.

ಶ್ರೀ ಪಿಂಗಳಿ ವೆಂಕಟರಾಮರೆಡ್ಡಿ ಡೈರೆಕ್ಟರು : ೧) ವಿಶ್ವಾಟಿಕ್ ಗೌನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ. ಲಿ, ಬೆಂಗಳೂರು ಸಿಟಿ. ೨) ಬಾಂಬೆ ಲೈಫ್ ಅಷ್ಯೂರೆನ್ಸ್ ಕಂ. ಲಿ., ಬೊಂಬಾಯಿ. ೩) ದಿ ಯೂನಿಯನ್ ಲೈಫ್ ಲಿ ಬೊಂಬಾಯಿ. ೪) ಮಿನರ್ವಾ ಮಿಲ್ಸ್ ಲಿ., ಬೆಂಗಳೂರು ೫) ಮಾಡರ್ನ್ ಮಿಲ್ಸ್ ಲಿ., ಬೊಂಬಾಯಿ. ೬) ಹಿಂದ್ ಶುಗರ್ ಕಂ. ಲಿ, ಬೊಂಬಾಯಿ ೭) ಸಿಂಧಿಯ ಸ್ಟೀಮ್ ನ್ಯಾವಿಗೇಷನ್ ಕಂ ಲಿ., ಬೊಂಬಾಯಿ. ೮) ಈಸ್ಟರ್ನ್ ಬಂಕರರ್ಸ್ [ಇಂಡಿಯಾ] ಲಿ, ಬೊಂಬಾಯಿ. ೯) ಈಸ್ಟರ್ನ್ ಬಂಕರರ್ಸ್ [ಬರ್ಮಾ] ಲಿ., ಬೊಂಬಾಯಿ ೧೦) ನರೋತ್ತಮ ಲಿ., ಬೊಂಬಾಯಿ. ೧೧) ಕೋ-ಆಪರೇಟಿವ್ [illegible] ಬ್ಯಾಂಕ್ ಲಿ, ಹೈದರಾಬಾದ್, [ಡೆಕ]. ೧೨) ಸದಸ್ಯರು, ಅಡ್ವೈಸರಿ ಬೋರ್ಡ್ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಲಿ. ಮತ್ತು ದೇಶಮುಖಿ, ಜಮೀನ್ದಾರ ಬ್ಯಾಂಕರ್, ಆನರರಿ ಸೆಷನ್ಸ್ ಜಡ್ಜ್, ಹೈದರಾಬಾದ್ [ಡೆಕ]. ಚೇರ್ಮನ್.

ಶ್ರೀ ಎಚ್. ವೆಂಕಟರಾಮಯ್ಯ, ಡಿವಿಜನಲ್ ಸೂಪರಿಂಟೆಂಡೆಂಟ್, ವಿಶ್ವಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ. ಲಿ, ಬೆಂಗಳೂರು ಸಿಟಿ ಮ್ಯಾನೇಜಿಂಗ್ ಡೈರೆಕ್ಟರ್.

ಕಾರ್ಪೊರೇಷನ್ನಿನ ಬಗ್ಗೆ ಮಹತ್ವದ ಸಂಗತಿಗಳು

೧) ಇನ್ಷೂರೆನ್ಸ್ ಕಾಯಿದೆಯನ್ವಯ ಮೈಸೂರು ಮತ್ತು ಬ್ರಿಟಿಷ್ ಸರ್ಕಾರಗಳ ಠೇವುಗಳನ್ನು ಇಡಲಾಗಿದೆ.

೨) ೧೫ ವರ್ಷ ಅನುಭವದ ಡೈರೆಕ್ಟರ ಅಧೀನದಲ್ಲಿ ಭದ್ರವಾದ ಮತ್ತು ಪ್ರಭಾವಶಾಲಿಗಳಾದ ಡೈರೆಕ್ಟರುಗಳ ಮತ್ತು ವ್ಯವಸ್ಥಾಪಕ ಮಂಡಳಿ.

೩) ಈಗ ದೊರೆತ ಉದ್ಯಮ ೩ ಲಕ್ಷಕ್ಕಿಂತ ಹೆಚ್ಚಿಗೆ ಮತ್ತು ಕಾರ್ಯಕರ್ತರ ಸಂಖ್ಯೆ ೪೦

೪) ಜೀವನಿಧಿ ೯೫% ಹೆಚ್ಚಿಗೆ.

೫) ಡಾಕ್ಟರ್ ಪರೀಕ್ಷೆಗೊಳಪಟ್ಟು ರೂ ೨೦೦, ರೂ. ೩೦೦, ರೂ. ೪೦೦, ರೂ. ೫೦೦ ರ 'ಹೋಲ್ ಲೈಫ್', ಜಾಯಿಂಟ್ ಲೈಫ್ ಮತ್ತು ಎಂಡೋಮೆಂಟ್ ಪಾಲಿಸಿಗಳನ್ನು ಕೊಡಲಾಗುವುದು. ರೂ. ೨೫ ಫೀ ಸಹ ಪಾಲಿಸಿಗಳನ್ನು ಕೊಡಲಾಗುವುದು. ದಯಮಾಡಿ ವಿವರಗಳಿಗೆ ಬರೆಯಿರಿ.

[illegible] ! ಬನಾರಸ್ ಸೀರೆಗಳು ಮೈಸೂರ್ ಸೀರೆಗಳು !

[illegible] ನವೀನ ಮಾದರಿಗಳಲ್ಲಿ [illegible]

ನಿಮ್ಮ ಮನಸ್ಸೊಪ್ಪುವಂತೆ ! ಕಣ್ಣಿಗಾನಂದವಾಗುವಂತೆ !

ಬೆಂಗಳೂರು. ಕೆ ಎಚ್. [illegible] ಅಂಡ್ ಸನ್ಸ್‌ರವರಿಂದ ತಯಾರಿಸಲ್ಪಟ್ಟ [illegible] ಇಲ್ಲಿ ಬಂದು [illegible] ಬೆಲೆಗೆ [illegible] ಸೀರೆಗಳು, ಶಾಲುಗಳು, ಇತ್ಯಾದಿ ಇತ್ಯಾದಿ

ಗ್ಯಾರಂಟಿಯಾದ ಚಿನ್ನ ಬೆಳ್ಳಿ ನಗಗಳು

ಜಿ. ಪಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್ಸ್

ಜವಾಹಿರಿ ಮತ್ತು ಬಟ್ಟೆವ್ಯಾಪಾರಿಗಳು,

ಸಯ್ಯಾಜಿರಾವ್ ರೋಡ್, ಮೈಸೂರು.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ|| ೨೫-೧೦-೪೫ರಿಂದ ೩೧-೧೦-೪೫ರವರೆಗೆ

ಮೇಷ ..ಈ ವಾರ ನಿಮಗೆ ಯಶದಾಯಕವಾಗಿದೆ ನಿಮ್ಮ ಆರೋಗ್ಯ ಚೆನ್ನಾಗಿದ್ದರೂ ಕಣ್ಣುಬಾವೆ ಸಂಭವಿಸುವುದು. ವ್ಯಾಪಾರಾದಿಗಳಲ್ಲಿ ಪ್ರಗತಿ, ಪ್ರವಾಸಯೋಗ, ಹೆಚ್ಚು ಖರ್ಚು, ಸಾಂಪತ್ತಿಕ ಮಾನಸಿಕ ದೃಷ್ಟಿಯಿಂದ ಸಾಧಾರಣ ಸ್ಥಿತಿ. ತಾ|| ೨೬, ೨೭ ಅತಿಥಿ ಆಗಮನ, ಖರ್ಚು.

ವೃಷಭ..ಈ ವಾರ ನಿಮ್ಮ ಮೇಲೆ ಜವಾಬ್ದಾರಿ ಕೆಲಸಗಳು ಬೀಳುವವು, ಚಿಂತೆ, ಅಪಘಾತ ಸಂಭವಿಸಬಹುದು, ಪ್ರವಾಸದಲ್ಲಿ ತೊಂದರೆ, ಬಂಧುಗಳ ವಿಯೋಗ, ವ್ಯಾಪಾರ, ನೌಕರಿಗಳಲ್ಲಿ ವಿಘ್ನ ಮತ್ತು ಹಾನಿ, ಅಂತೂ ಈ ವಾರ ತೊಂದರೆಯದಾದ್ದರಿಂದ ಜಾಗರೂಕರಾಗಿರಿ. ತಾ|| ೨೮, ೨೯ ದುಃಖ, ಮಾನಸಿಕ ಚಿಂತೆ

ಮಿಥುನ....ಈ ವಾರ ನಿಮಗೆ ಹಾನಿಪ್ರದವಾಗಿದೆ. ನಿಮ್ಮ ಪ್ರಿಯವಸ್ತುವಿನ ವಿಯೋಗ, ಕೆಲಸಕಾರ್ಯಗಳಲ್ಲಿ ವಿಘ್ನ, ಹಣದ ಚಿಂತೆ, ಹೆಚ್ಚು ಖರ್ಚು, ವ್ಯಾಪಾರಾದಿಗಳ ಹಾನಿ, ಪ್ರವಾಸ ಯೋಗ, ಆರೋಗ್ಯದೃಷ್ಟಿಯಿಂದಲೂ ಉತ್ತಮವಿಲ್ಲ, ತಗಾದೆ ತಾ|| ೨೬, ೨೭, ನಿದ್ರಾನಾಶ, ಹೆಚ್ಚು ಖರ್ಚು

ಕರ್ಕ .. ದುರ್ಜನರ ಸಹವಾಸದಿಂದ ಜನಾಪವಾದ ಸಂಭವಿಸುತ್ತದೆ. ಆರೋಗ್ಯ ಚೆನ್ನಾಗಿರುತ್ತದೆ ಮಾನಸಿಕ ಚಿಂತೆ, ಶುಭಕಾರ್ಯಗಳು ಸುಗಮವಾಗಿ ನಡೆಯುವವು. ಉದ್ಯೋಗಾದಿಗಳಲ್ಲಿ ಪ್ರತಿಸ್ಪರ್ಧಿಗಳು ಬಲವಾಗುವರು ಅಕಸ್ಮಾತ್ ಪ್ರವಾಸ. ತಾ|| ೨೮, ೨೯ ಅನಪೇಕ್ಷಿತ ವೆಚ್ಚ

ಸಿಂಹ ..ಜಾಗರೂಕರಾಗಿರಿ! ಆರೋಗ್ಯ ಚೆನ್ನಾಗಿರುವುದು ವ್ಯವಹಾರದಲ್ಲಿ ಜಯ, ವ್ಯಾಪಾರಾದಿಗಳಲ್ಲಿ ಲಾಭ ಪ್ರವಾಸದಲ್ಲಿ ಸಿದ್ಧಿ, ಧನಪ್ರಾಪ್ತಿ. ತಾ|| ೨೭, ೨೮ ಮಿತ್ರ ದರ್ಶನ, ಮೃಷ್ಟಾನ್ನ ಭೋಜನ

ಕನ್ಯಾ ...ಈ ವಾರ ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಚಿಂತೆ ಬಹಳ, ಆದಾಯದಷ್ಟೇ ಖರ್ಚು, ಆಪ್ತೇಷ್ಟರ ಭೇಟಿ, ವ್ಯಾಪಾರಾದಿಗಳಲ್ಲಿ ಲಾಭ, ಗೌರವಪ್ರಾಪ್ತಿ, ಸತ್ಪುರುಷರ ಸಹವಾಸ ತಾ|| ೨೭ ಉತ್ಸಾಹ, ಹೆಚ್ಚು ಖರ್ಚು.

ತುಲಾ.. ಈ ವಾರ ನಿಮಗೆ ಕ್ಲೇಶದಾಯಕವಾಗಿದೆ. ವೃಥಾ ಕಲಹ, ವ್ಯಾಪಾರಾದಿಗಳಲ್ಲಿ ಹಾನಿ, ಅಗ್ನಿಭಯ, ಪ್ರವಾಸದಲ್ಲಿ ತೊಂದರೆ, ಆದಾಯ ಕಡಿಮೆ, ಖರ್ಚು ಜಾಸ್ತಿ, ಆರೋಗ್ಯ ಮತ್ತು ಮಾನಸಿಕ ಸ್ಥಿತಿಗಳು ಸಾಧಾರಣವಾಗಿರುವವು. ತಾ|| ೨೭, ೨೮ ಗುಪ್ತಚಿಂತೆ, ಉದಾಸೀನತೆ.

ವೃಶ್ಚಿಕ ಈ ವಾರ ನಿಮಗೆ ಉತ್ಕರ್ಷವಾಗಿದೆ. ಆರೋಗ್ಯ ಉತ್ತಮವಾಗಿರುವುದು, ಧನಾದಾಯ, ಉದ್ಯೋಗಾದಿಗಳಲ್ಲಿ ಪ್ರಗತಿ ಮತ್ತು ಲಾಭ, ಪ್ರವಾಸದಲ್ಲಿ ಯಶಸ್ಸು ಮತ್ತು ಕಾರ್ಯಸಿದ್ಧಿ ತಾ|| ೩೦, ೩೧ ಚಿಂತೆ, ಪ್ರಿಯಜನ ವಿರಹ

ಧನುಸ್ಸು..ಎಚ್ಚರಿಕೆಯಿಂದಿರಿ, ವಿಸ್ತ್ರೀ ಮೋಹವಾಗುವರು ಆರೋಗ್ಯ ಮತ್ತು ಮಾನಸಿಕ ಸ್ಥಿತಿಗಳು ಉತ್ತಮವಾಗಿವೆ ಆರ್ಥಿಕ ಪ್ರಾಪ್ತಿ ಚೆನ್ನಾಗಿದೆ ವ್ಯಾಪಾರಾದಿಗಳಲ್ಲಿ ಶತ್ರುಗಳ ಕಾಟ ಹೆಚ್ಚಾದರೂ ಲಾಭ ಮತ್ತು ಪ್ರಗತಿ. ಪ್ರವಾಸದಲ್ಲಿ ಜಯ. ತಾ|| ೨೮, ೨೯ ಅತ್ಯಲ್ಪಕ್ಷೇಮ.

ಮಕರ..ಆರೋಗ್ಯ ಮತ್ತು ಮಾನಸಿಕ ಸ್ಥಿತಿ ಚೆನ್ನಾಗಿದೆ ವ್ಯಾಪಾರಾದಿಗಳಲ್ಲಿ ಲಾಭ, ಆಪ್ತೇಷ್ಟರ ಭೇಟಿ ಪ್ರವಾಸದಲ್ಲಿ ಜಯ, ಅಂತೂ ಈ ವಾರ ಸಾಧಾರಣ ಫಲ, ೨೮, ಮನೋವ್ಯಥೆ, ಖರ್ಚು

ಕುಂಭ.... ಸಾಂಸಾರಿಕ ದೃಷ್ಟಿಯಿಂದ ಈ ವಾರ ನಿಮಗೆ ನಿರಾಶಾಜನಕವಾಗಿದೆ ಕೈಗೊಂಡ ಕಾರ್ಯದಲ್ಲಿ ವಿಘ್ನ, ಮಾನಹಾನಿ ಹೆಚ್ಚು ಖರ್ಚು, ಅನಾರೋಗ್ಯದಿಂದ ಚಿಂತೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ವ್ಯವಹಾರದಲ್ಲಿ ಹಾನಿ, ಪ್ರವಾಸಕ್ಕೆ ಈ ವಾರ ಚೆನ್ನಾಗಿಲ್ಲ ತಾ|| ೨೭ ಕಲಹ

ಮೀನ ..ಈ ವಾರ ಆರೋಗ್ಯ ಚೆನ್ನಾಗಿರತ್ತದೆ ಆರ್ಥಿಕ ಮಾನಸಿಕ ದೃಷ್ಟಿಯಿಂದಲೂ ಉತ್ತಮವಾಗಿದೆ ಉದ್ಯೋಗಾದಿಗಳಲ್ಲಿ ಪ್ರಗತಿ ಮತ್ತು ಲಾಭ, ಪ್ರವಾಸದಲ್ಲಿ ಜಯ ತಾ|| ೨೦ ಮಿತ್ರ ದರ್ಶನ, ಹೆಚ್ಚು ಖರ್ಚು.

ಶ್ರೀ ಕನ್ಯಕಾ ಪರಮೇಶ್ವರೀ ಸೊಸೈಟಿ

ಮೇಲ್ಕಂಡ ಸೊಸೈಟಿಯ ಉಪಾಧ್ಯಕ್ಷರಾದ ಶ್ರೀ ಜಿ. ವಿ. ಸೂರ್ಯನಾರಾಯಣ ಶೆಟ್ಟಿಯವರು ಹೀಗೆ ಬರೆಯುತ್ತಾರೆ:—

ನಮ್ಮ ಶ್ರೀ ಕನ್ಯಕಾಪರಮೇಶ್ವರೀ ಕೋ-ಆಪರೇಟೀವ್ ಸೊಸೈಟಿಯು ಅಂಗವಾಗಿ ಸ್ಟೋರ್ಸ್ ಶಾಖೆಯನ್ನು ಅಶೋಕ ರೋಡು (ದೊಡ್ಡಪೇಟೆ) ಯಲ್ಲಿ ತೆರೆದಿರುವುದು ಎಲ್ಲರಿಗೂ ತಿಳಿದ ಅಂಶವಾಗಿದೆ. ಅಲ್ಲಿ ನಾವು ಅಕ್ಕಿ, ಸಕ್ಕರೆ, ಕಾಗದ ಮುಂತಾದ ಕಂಟ್ರೋಲ್ ಸಾಮಾನುಗಳಲ್ಲದೆ ಎಲ್ಲಾ ವಿಧವಾದ ಸಾಮಾನುಗಳನ್ನೂ, ಬಟ್ಟೆ ವಗೈರೆಗಳನ್ನೂ ಮಾರುತ್ತಲಿದ್ದೇವೆ. ಆದರೆ ಅನೇಕ ಜನಗಳು "ಆ ಸ್ಟೋರ್ಸ್" ವೈಶ್ಯರಿಗೆ ಮಾತ್ರವೇ ಎಂಬ ಅಭಿಪ್ರಾಯವನ್ನು ಇಟ್ಟುಕೊಂಡಿರುವಹಾಗಿದೆ ಆದರೆ, ಆ ಸ್ಟೋರ್ಸ್‌ನಲ್ಲಿರುವ ಎಲ್ಲಾ ಸಾಮಾನುಗಳೂ, ನಮ್ಮವರು ಮತ್ತು ನಮ್ಮವರಲ್ಲದವರು ಎಂಬ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಕೊಡುತ್ತೇವೆ. ಆದ್ದರಿಂದ, ಅಕ್ಕಿ ವಗೈರೆಗಳಿಗೆ ತೊಂದರೆಯಾಗಿರುವ ಈ ಕಾಲದಲ್ಲಿ ಎಲ್ಲರೂ ಇದರ ಉಪಯೋಗವನ್ನು ಪಡೆಯಬೇಕಾಗಿ ಈ ಮೂಲಕ ಪ್ರಾರ್ಥಿಸಿಕೊಳ್ಳಲಾಗಿದೆ.

ಶ್ರೀ ದೇಸಾಯಿಯವರ ದಸ್ತಗಿರಿ

ಕಲ್ಕತ್ತಾ ಇಂಡಿಯನ್ ಛೇಂಬರ್ ಆಫ್ ಕಾಮರ್ಸ್ ಸೆಕ್ರೆಟರಿಗಳಾದ ಶ್ರೀ ಎಸ್. ತೆ ದೇಸಾಯಿಯವರನ್ನು ಭಾರತ ರಕ್ಷಣಾ ಶಾಸನದ ರೀತ್ಯಾ ದಸ್ತಗಿರಿ ಮಾಡಲಾಗಿದೆ. ಸಂಸ್ಥೆಯ ಆಫೀಸಿನ ಮತ್ತು ಇತರ ಮೂವರು ಅಧಿಕಾರಿಗಳ ಮನೆಯನ್ನು ಪೋಲೀಸರು ಶೋಧಿಸಿ, ಕೆಲವು ಪತ್ರಗಳನ್ನು ವಶಪಡಿಸಿಕೊಂಡರು

ಹಿಟ್ಲರ್ ಚಲನ ಚಿತ್ರ

ಹಿಟ್ಲರನು ಬರೆದಿರುವ 'ಮೇನ್‌ಕಾಂಫ್' ಎಂಬ ತನ್ನ ಜೀವನ ಚರಿತ್ರೆ ಪುಸ್ತಕದ ಆಧಾರವಾಗಿ ಅಮೇರಿಕದ ಹಾಲಿವುಡ್‌ನಲ್ಲಿ ಒಂದು ಚಲನ ಚಿತ್ರವನ್ನು ತಯಾರಿಸಲಾಗುವುದೆಂದೂ, ಚಾರ್ಲಿ ಚಾಪ್ಲಿನ್ ಹಿಟ್ಲರನ ಪಾತ್ರ ವಹಿಸುವರೆಂದೂ ವರದಿಯಾಗಿದೆ. ಈ ಯುದ್ಧದ ಬಿಕ್ಕಟ್ಟು ಉಂಟಾಗಲು ಹಿಟ್ಲರನ ಜವಾಬ್ದಾರಿಯನ್ನು ಚಿತ್ರಿಸಲಾಗುವುದು. ಈಗಿನ ದೃಷ್ಟಿಯಲ್ಲಿ ಈ ಚಲನ ಚಿತ್ರವನ್ನು ತಯಾರಿಸುವುದು ... ಎಂಬುದನ್ನು ... ಆಲೋಚಿಸುತ್ತಿದ್ದಾರೆಂದು ...

ಯುದ್ಧಾನಂತರ ಮುಂದೇನು

ಯುದ್ಧ ಕೊನೆಗೊಂಡನಂತರ ನೀವೇನು ಮಾಡಬೇಕೆಂದಿರುವಿರಿ? ಹಣ ಕೂಡಿಟ್ಟಿರುವವರಿಗೆ ಸದವಕಾಶಗಳು ಕಾದಿರುತ್ತವೆ. ಒಳ್ಳೆಯ ನೌಕರಿಗಳಿಗಾಗಿ ಬದಲಾವಣೆ ಹೊಂದುವುದು, ಲಾಭದಾಯಕವಾಗಿ ಕೊಳ್ಳುವುದು, ಅಗ್ಗವಾಗಿ ಒಂದು ಮನೆ ಕಟ್ಟುವುದು, ಯೋಗ್ಯವಾಗಿ ಸಂಪಾದಿಸಿದ ವಿಶ್ರಾಂತಿಯನ್ನನುಭವಿಸುವುದು ಧಾರಣೆಗಳು ಈಗ ಹೆಚ್ಚಿರುವುದನ್ನು ನೋಡಿದಲ್ಲಿ ನಿಮಗೆ ಅತ್ಯವಶ್ಯಕವಾದುವುಗಳನ್ನು ಮಾತ್ರವೇ ಕೊಳ್ಳುವುದು ಮತ್ತು ನಿಮ್ಮಿಂದ ಸಾಧ್ಯವಾದಷ್ಟು ಹಣವನ್ನು ಬೆಳೆಗಳು ಇಳಿದು ಹೋಗುವ ಮುಂಬರುವ ದಿನಗಳಿಗೆ ಕೂಡಿಡುವುದು ಪೂರ್ಣ ವ್ಯವಹಾರಜ್ಞಾನವೇ ಸರಿ. ಈಗಲೇ ಆರಂಭಿಸಿರಿ!

ಮುಂಬರುವ ದಿನಗಳಿಗಾಗಿ ಕೂಡಿಡಿ

ನೀವು ಕೂಡಿಟ್ಟ ಹಣವು ಸುರಕ್ಷಿತವಾಗಿ ವಿನಿಯೋಗಿಸಲ್ಪಟ್ಟಿದೆಯೆಂಬುದರ ಬಗ್ಗೆ ಖಾತ್ರಿ ಮಾಡಿಕೊಳ್ಳಿ. ಬಂಗಾರ, ಬೆಳ್ಳಿ, ಆಭರಣಗಳು, ಭೂಮಿ, ಕಟ್ಟಡ, ಇಂಥಾ ಸಾಮಾನುಗಳಮೇಲೆ ವಿನಿಯೋಗಿಸುವುದರಿಂದ ಅನುಕೂಲವಾಗುವುದಿಲ್ಲ; ಏಕೆಂದರೆ ವಸ್ತುಗಳ ಬೆಲೆ ಈಗ ಮಿತಿಮೀರಿ ಹೆಚ್ಚಿದೆ ಮತ್ತು ಎಂದಾದರೊಂದು ದಿನ ಅನಿರೀಕ್ಷಿತವಾಗಿ ನಿಮ್ಮ ಗಳಿಕೆಯ ಅರ್ಧ ಭಾಗದಷ್ಟು ಹಣದ ಮೌಲ್ಯವು ಮಾಯವಾಗಿ ಹೋಗಬಹುದು.
ಭದ್ರತೆಗೆ ಮತ್ತು ಶಾಶ್ವತ ಮೌಲ್ಯಕ್ಕೆ ಸಹಕಾರ ಸಂಸ್ಥೆಗಳು, ಬ್ಯಾಂಕ್ ಸೇವಿಂಗ್ಸ್ ಅಕೌಂಟ್, ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ಇವುಗಳಂತೆಯೇ ಉತ್ತಮವಾದ ಸರ್ಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳು ಇವುಗಳಲ್ಲಿ ನಿಮ್ಮ ಹಣವನ್ನು ...



... ಮುಂದಿನವರನ್ನು ... ಯಾವುದೇ ...

C... ...

ಪತ್ರ ವ್ಯವಹಾರ

ಸಕ್ಕರೆ ಸರಬರಾಜು

ಮೈಸೂರು ನಗರದಲ್ಲಿ ನವಂಬರ್ ೧ ನೆಯ ತಾ|| ನಿಂದ ವರ್ತಕರಿಗೆ ಸಕ್ಕರೆಯನ್ನು ಹಂಚುವುದಿಲ್ಲ. ಸರ್ಕಾರಿ, ಸಹಕಾರಿ ಸಂಘ ಮತ್ತು ಫೇರ್ ಪ್ರೈಸ್ ಡಿಪೋಗಳಲ್ಲಿ ಮಾತ್ರ ಸಕ್ಕರೆಯನ್ನು ಮಾರುತ್ತೇವೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ. ವರ್ತಕರ ಹಿತವನ್ನು ಸರ್ಕಾರದವರು ಬಯಸಬೇಕು. ಸರ್ಕಾರದವರ ಹಿತವನ್ನು ವರ್ತಕರು ಬಯಸಬೇಕು. ಕೆಲವು ಸರ್ಕಾರಿ ಸಹಕಾರಿ ಸಂಘ ಮತ್ತು ಫೇರ್ ಪ್ರೈಸ್ ಡಿಪೋಗಳಿಂದ ಮೂಟೆಗಟ್ಟಲೆ ಸಕ್ಕರೆ ಬ್ಲಾಕ್ ಮಾರ್ಕೆಟ್ಟಿಗೆ ಸಾಗುತ್ತಿಲ್ಲವೇನು? ಸಾಗಿಸಿದವರಿಗೆ ಇಲ್ಲಿಯವರೆವಿಗೆ ಯಾವ ತರಹದ ಶಿಕ್ಷೆಯನ್ನು ವಿಧಿಸಿದ್ದಾರೆ? ಅಥವಾ ವರ್ತಕರ ಪೈಕಿ ಒಬ್ಬೊಬ್ಬರು ಸಕ್ಕರೆಯನ್ನು ಬ್ಲಾಕ್ ಮಾರ್ಕೆಟ್ಟಿಗೆ ಕೊಟ್ಟವರಿಗೆ ಶಿಕ್ಷೆಯನ್ನು ವಿಧಿಸಿದ್ದಾರೆಯೇ? ಮೈಸೂರು ನಗರದಲ್ಲಿ ದಿನದಿನಕ್ಕೂ ಹೊಸದಾಗಿ ನಾಲ್ಕೈದು ಹೋಟೆಲುಗಳು ಹೆಚ್ಚಾಗುತ್ತಿರುತ್ತವೆ. ಹೋಟೆಲುಗಳ ತಿಂಡಿ ದರದ ಕಾಲವು ಎಷ್ಟೆಂಬುದನ್ನು ಸರ್ಕಾರದವರು ನಿರ್ಧರಿಸುವುದಿಲ್ಲ. ಹೋಟೆಲುಗಳಿಗೆ ಸಾಕಾದಷ್ಟು ಸಕ್ಕರೆಯನ್ನು ಸಹ ಕೊಡುತ್ತಿಲ್ಲ. ಇದರಿಂದ ಕೆಲವು ಹೋಟೆಲ್ ಮಾಲೀಕರುಗಳು ಬ್ಲಾಕ್ ಮಾರ್ಕೆಟ್ಟಿನಲ್ಲಿ ಒಂದಕ್ಕೆರಡು ಬೆಲೆಯನ್ನು ಕೊಟ್ಟು ಸಕ್ಕರೆಯನ್ನು ಕೊಳ್ಳಬೇಕಾಗಿರುತ್ತದೆ. ಇವೂ ಅಲ್ಲದೆ ಮೈಸೂರು ನಗರದಿಂದ ಹೊರಗಡೆಗೆ ಪಾರ್ಸಲುಗಳಲ್ಲೂ, ಟ್ರಂಕುಗಳಲ್ಲೂ ಮತ್ತು ಚೀಲಗಳಲ್ಲೂ ನಾನಾ ವಿಧದಲ್ಲಿ ಸಕ್ಕರೆ ಸಾಗಿಸುತ್ತಿಲ್ಲವೇನು? ವರ್ತಕರು ಕಳ್ಳರೆಂದು ಹೇಳುವುದು ನ್ಯಾಯವಲ್ಲ. ಸಾಕಾದಷ್ಟು ಆಹಾರ ಪದಾರ್ಥಗಳನ್ನು ಒದಗಿಸಿ ಸರಿಯಾದ ಬೆಲೆಗೆ ಮಾರಬೇಕೆಂದು ವರ್ತಕರಿಗೆ ಕೊಟ್ಟಲ್ಲಿ ಪ್ರಜೆಗಳಿಗೆ ಸುಲಭವಾಗಿ ದೊರೆಯುವುದಲ್ಲದೆ, ಸರ್ಕಾರಕ್ಕೆ ಬರುವ ಕಷ್ಟವೂ ತಪ್ಪಿ, ಜನಗಳಲ್ಲಿರುವ ಆಹಾರ ಪದಾರ್ಥಗಳ ಹಾಹಾಕಾರವು ಹೋಗಿ ಸರ್ಕಾರದವರು ದೇಶದ ಹಿತವನ್ನು ಬಯಸಿದಂತಾಗುತ್ತದೆ.

ಎಂ. ಆರ್. ಸಿ. ಬಸಪ್ಪ

ಜಪಾನರ ತಂತ್ರ

ನ್ಯೂಗಿನಿಯಲ್ಲಿ ಜಪಾನರು ಸ್ವಲ್ಪ ಮುಂದುವರಿಯುತ್ತಿರುವುದಾಗಿ ಜ|| ಮೆಕ್ ಆರ್ಥರ್‌ರವರ ಪ್ರತಿನಿಧಿ ಹೇಳಿದ್ದಾರೆ. ಜಪಾನರು ರಾತ್ರಿ ವೇಳೆಯಲ್ಲಿ ಅಲ್ಲಲ್ಲೇ ಟುಕಡಿಗಳನ್ನು ಸಂದಿಯಲ್ಲಿ ಕಳುಹಿಸುವುದೇ ಇದಕ್ಕೆ ಕಾರಣ.

ಗಾಂಧೀಜಿ ವೈಸ್ರಾಯರಾಗಲಿ

"ಮಹಾತ್ಮಾ ಗಾಂಧೀಜಿಯನ್ನು ಬ್ರಿಟಿಷರು ಭಾರತದ ವೈಸ್ರಾಯರನ್ನಾಗಿ ನೇಮಿಸಿದ್ದರೆ ಹಿಂದೂಸ್ಥಾನದ ಜನರ ಹೃದಯಕ್ಕೆ ಸಂತೋಷವಾಗುತ್ತಿತ್ತು. ಆದರೀಗ ಭಾರತದ ವೈಸ್ರಾಯರಾಗಿ ವೇವಲ್ಲರನ್ನು ನೇಮಿಸಿರುವುದರಿಂದ ಭಾರತೀಯರಿಗೆ ಹೆಚ್ಚೇನೂ ಸಂತೋಷವಾಗಿಲ್ಲ. ಹೊಸ ಆಶಾಕಿರಣವಾವುದೂ ಅವರ ಪಾಲಿಗೆ ಮೂಡಿಲ್ಲ. ಲಾರ್ಡ್ ವೇವಲ್ಲರು ಭಾರತದ ೧೯ನೇ ವೈಸ್ರಾಯಿ. ಬಹುಶಃ ಇವರೇ ಕಡೇ ವೈಸರಾಯರಾಗಬಹುದು" ಎಂಬುದಾಗಿ ಇಂಗ್ಲೆಂಡಿನ ನ್ಯೂಸ್ ರಿವ್ಯೂ ಪತ್ರಿಕೆ ಬರೆದಿದೆ.

ಹಗಲುಹೊತ್ತಿನಲ್ಲಿ ನಕ್ಷತ್ರ

ನಾಗಪುರ್, ವಿಶಾಖಪಟ್ಟಣ ಮತ್ತು ತಿರುಚನಾಪಳ್ಳಿಗಳಿಂದ ಹಗಲು ಹೊತ್ತಿನಲ್ಲಿ ಒಂದು ಪ್ರಕಾಶಮಾನವಾದ ನಕ್ಷತ್ರವು ಕಾಣುತ್ತಿದೆಯೆಂದು ವರದಿಗಳು ಬರುತ್ತಿವೆ. ನಾಗಪುರದಲ್ಲಿ ಪೂರ್ವದಿಕ್ಕಿನಲ್ಲಿ ಈ ನಕ್ಷತ್ರವು ಕಾಣಿಸಿಕೊಂಡು ಕ್ರಮವಾಗಿ ಪಶ್ಚಿಮ ದಿಕ್ಕಿಗೆ ಹೋಗುತ್ತಿದೆಯೆಂದು ಹೇಳಲಾಗಿದೆ. ಇದು ಒಂದು ಗ್ರಹವೋ ನಕ್ಷತ್ರವೋ ಯಾರಿಗೂ ಗೊತ್ತಾಗಿಲ್ಲ. ಇದರಿಂದ ಅನೇಕ ಜನರು ಆಕರ್ಷಿಸಲ್ಪಟ್ಟು ರಸ್ತೆಯುದ್ದಕ್ಕೂ ಇದನ್ನೇ ನೋಡುತ್ತಾ ತಂಡತಂಡವಾಗಿ ನಿಲ್ಲುತ್ತಾರೆ. ವಿಶಾಖಪಟ್ಟಣದಲ್ಲಿ ಈ ನಕ್ಷತ್ರವು ದಕ್ಷಿಣದಿಗ್ಭಾಗದಲ್ಲಿ ಹಗಲು ಹೊತ್ತಿನಲ್ಲಿ ಕಾಣುತ್ತಿದೆ. ನಡು ಹಗಲಿನಲ್ಲಿ ಬರಿಗಣ್ಣಿನಿಂದಲೂ ನೋಡಬಹುದಾಗಿದೆ. ತಿರುಚನಾಪಳ್ಳಿಯಲ್ಲೂ ನಡು ಆಕಾಶ ಮಧ್ಯದಲ್ಲಿ ಒಂದು ದೇದೀಪ್ಯಮಾನವಾದ ನಕ್ಷತ್ರವನ್ನು ನಡುಹಗಲಿನಲ್ಲೇ ಜನರು ನೋಡಿದರು.

ಭಾರತಕ್ಕೆ ಬ್ರಿ|| ಮಹಿಳೆಯರ ಸಹಾನುಭೂತಿ

ಪಾರ್ಲಿಮೆಂಟ್ ಸಭೆಗೆ ಸುಮಾರು ೩೦ ಮಂದಿ ಇಂಗ್ಲೆಂಡಿನ ಟ್ರೇಡ್ ಯೂನಿಯನ್ ಮತ್ತು ಸಹಕಾರ ಸಂಸ್ಥೆಗಳ ಮಹಿಳಾ ಸದಸ್ಯರು ಬಂದು ಬಂಗಾಳದ ಪರಿಹಾರಕ್ಕೆ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರಿದರು. ಅವರೆಲ್ಲಾ ಜನ ಪಾರ್ಲಿಮೆಂಟ್ ಸದಸ್ಯರನ್ನು ಭೇಟಿಮಾಡಿದರು. ಆಹಾರ ಸಾಮಗ್ರಿಗಳನ್ನೂ ಔಷಧಿಗಳನ್ನೂ ಹಿಂದೂಸ್ಥಾನಕ್ಕೆ ಕಳುಹಿಸುವುದಲ್ಲದೆ ಮುಖಂಡರನ್ನು ಬಿಡುಗಡೆ ಮಾಡಬೇಕೆಂದೂ ಒತ್ತಾಯಮಾಡಿದರು. ಸದ್ಯದಲ್ಲಿಯೇ ಈ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯುವುದು.

ಮಲಬಾರಿನಲ್ಲೂ ಹೊಟ್ಟೆಗಿಲ್ಲದೆ ಮರಣ

ಗುರುವಾಯೂರು ರಸ್ತೆಯೊಂದರಲ್ಲಿ ಕೆಲವು ದಿನಗಳ ಹಿಂದೆ ಒಬ್ಬ ಬಡ ಮುಸಲ್ಮಾನ ಹೆಂಗಸು ಹೊಟ್ಟೆಗಿಲ್ಲದೆ ಸತ್ತುಹೋದಳೆಂದು ವರದಿಯಾಗಿದೆ. ಆಕೆಗೆ ಮೂರು ಮಕ್ಕಳಿವೆ. ಮಲಬಾರಿನಲ್ಲಿ ವರದಿಯಾಗಿರುವ ಹೊಟ್ಟೆಗಿಲ್ಲದ ಮರಣವು ಇದೇ ಮೊದಲನೆಯದು.

ಪಾರ್ಲಿಮೆಂಟ್ ಕಟ್ಟಡದ ಪುನರ್ರಚನೆ

ವಿಮಾನ ಧಾಳಿಯಿಂದ ನಷ್ಟ ಹೊಂದಿರುವ ಹೌಸ್ ಆಫ್ ಕಾಮನ್ಸ್ ಸಭೆಯ ಕಟ್ಟಡವನ್ನು ಸರಿಯಾಗಿ ಕಟ್ಟಲು, ಸಲಹೆ ಕೊಡುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸುವುದಾಗಿ ಮಿ|| ಚರ್ಚಿಲರು ತಿಳಿಸಿರುವರು. ಈಗಿನ ಕಟ್ಟಡದ ಪ್ರಮುಖ ಸ್ವರೂಪಗಳನ್ನೆಲ್ಲಾ ಉಳಿಸಿಕೊಂಡು ಅತ್ಯಗತ್ಯವಾದ ಮಾರ್ಪಾಡುಗಳನ್ನು ಮಾತ್ರ ಮಾಡಲಾಗುವುದು.

ಉತ್ತರ ಇಟಲಿಯಲ್ಲಿ ಗುರುಗಳ ದಸ್ತಗಿರಿ

ಉತ್ತರ ಇಟಲಿಯಲ್ಲಿರುವ ಕ್ರೈಸ್ತ ಗುರುಗಳನ್ನೆಲ್ಲಾ ನಾಜಿಗಳು ಬಂಧಿಸುತ್ತಿದ್ದಾರೆ. ಇಟಲಿಯನ್ನು ಜರ್ಮನರು ಲೂಟಿಮಾಡಿದರೆಂದು ಅವರು ಕಳೆದ ಭಾನುವಾರ ಬೋಧಿಸಿದ್ದರು. ಈ ಗುರುಗಳನ್ನು ಸಹ ಮಿಲಿಟರಿ ವಿಚಾರಣೆ, ಗಡೀಪಾರು ಅಥವಾ ಗುಂಡಿನ ಬಾಯಿಗಳಿಗೆ ಗುರಿಮಾಡಲು ಶಾಸನವನ್ನು ಮಾಡಲಾಗಿದೆ.

ವಿಮಾನ ಉರುಳಿ ೧೩ ಮಂದಿ ಮರಣ

ಬ್ರಿಟನ್ನಿಂದ ಸ್ಟಾಕ್‌ಹೋಮ್‌ಗೆ ಬರುತ್ತಿದ್ದ ಒಂದು ಸ್ವೀಡಿಷ್ ವಿಮಾನವು ಉರುಳಿ, ೧೩ ಪ್ರಯಾಣಿಕರು ಸತ್ತರೆಂದೂ, ಅದನ್ನು ಜರ್ಮನ್ ವಿಮಾನವು ಹೊಡೆದುಹಾಕಿರಬೇಕೆಂದೂ ಹೇಳಲಾಗಿದೆ.

ಸ್ವೀಡನ್ ಮತ್ತು ಬ್ರಿಟನ್ ವಿಮಾನ ಸಂಚಾರವನ್ನು ಸದ್ಯಕ್ಕೆ ನಿಲ್ಲಿಸಿ, ಈ ಅಪಘಾತದ ಬಗ್ಗೆ ಮಾತುಕತೆ ನಡೆಯುತ್ತಿದೆ.

ಲಾಯಿಡ್ ಜಾರ್ಜರಿಗೆ ಮದುವೆ

ಇಂಗ್ಲೆಂಡಿನ ಮಾಜಿ ಪ್ರಧಾನ ಮಂತ್ರಿ ಲಾಯಿಡ್ ಜಾರ್ಜರು ತಮ್ಮ ಪ್ರೈವೇಟ್ ಸೆಕ್ರೆಟರಿ ಮಿಸ್ ಫ್ರಾನ್ಸಿಸ್ ಸ್ಟೀವನ್ಸ್ ಎಂಬಾಕೆಯನ್ನು ಮೊನ್ನೆ ಮದುವೆಯಾದರು. ಲಾಯಿಡ್ ಜಾರ್ಜರಿಗೆ ಈಗ ೮೦ ವರ್ಷ ವಯಸ್ಸು. ವಧುವಿಗೆ ೫೫ ವರ್ಷ. ಕಳೆದ ಶಾಂತಿ ಸಮ್ಮೇಳನದಲ್ಲಿ ಆಕೆ ತನ್ನ ರೂಪ ಲಾವಣ್ಯಗಳಿಂದಲೂ ಕಾರ್ಯ ಚಟುವಟಿಕೆಯಿಂದಲೂ ಎಲ್ಲರ ಮನವನ್ನೂ ಆಕರ್ಷಿಸಿದ್ದಳು. ಲಾಯಿಡ್ ಜಾರ್ಜರು ಆಕೆಯನ್ನು ತಮ್ಮ ಪ್ರೈವೇಟ್ ಸೆಕ್ರೆಟರಿಯನ್ನಾಗಿ ಸ್ವೀಕರಿಸಿದ್ದರು. ಅವರ ಮೊದಲನೆ ಪತ್ನಿ ಮೂರು ವರ್ಷದ ಹಿಂದೆ ಸ್ವರ್ಗಸ್ಥಳಾಗಿದ್ದಳು.

ಆಗಸ್ಟ್ ತೀರ್ಮಾನವನ್ನು ವಾಪಸು ತೆಗೆದುಕೊಳ್ಳುವುದಾದರೆ ಭೇಟಿ

ಕಳೆದ ವರ್ಷ ಬೊಂಬಾಯಿಯಲ್ಲಿ ಅ|| ಭಾ|| ಕಾಂಗ್ರೆಸ್ ಸಮಿತಿಯು ಮಾಡಿದ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವ ವಿಷಯವನ್ನು ಪರಿಶೀಲಿಸುವುದಾಗಿ ತಿಳಿಸಿದರೆ ಆಗ ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ ನಾಯಕರು ಪರಸ್ಪರ ಭೇಟಿ ಮಾಡಿ ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸಲು ಅವಕಾಶ ಕೊಡಬಹುದೆಂದು ನವದೆಹಲಿಯಲ್ಲಿ ಸರ್ಕಾರದ ಮನೋಭಿಪ್ರಾಯವನ್ನು ಅರಿತವರು ಹೇಳುತ್ತಾರೆ.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ
ಮದನಮಂಜರಿ ಮಾತ್ರೆಗಳು
ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ. ಕ್ರಯ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.
ಮದನಮಂಜರಿ ಫಾರ್ಮಸಿ,
184, ಚೈನಾ ಬಜಾರು ರಸ್ತೆ, ಮದರಾಸು
ಏಜೆಂಟರು : ಅಶೋಕಾ ಫಾರ್ಮಸಿ
ಹಳೇಮೈಸೂರುಬ್ಯಾಂಕು ರಸ್ತೆ, ಮೈಸೂರು

ಕಾಶ್ಮೀರ್ ಆಯುರ್ವೇದಿಕ್ ವರ್ಕ್ಸ್, ಅಮೃತಸರ
ಇವರ ಅತ್ಯುತ್ತಮವಾದ [illegible] ದಿಲಾವರ
ಹಿಂಗು
ತೊಲ 4 ಆಣೆ, 1 ರೂ. ಗೆ 5 ತೊ
ದೊರೆಯುವ ಸ್ಥಳ:—
ಗೋಪಾಲ್ ಅಂಡ್ ಕೋ
ಚಿಕ್ಕಪೇಟೆ, ಬೆಂಗಳೂರು ಸಿಟಿ.
ಬ್ರಾಂಚು:—
ತ್ಯಾಗರಾಜ ರೋಡು, ಮೈಸೂರು.

ನರ್ವನ್‌ಟೈನ್
ನರಗಳ ಶಕ್ತಿಗೆ; ವೀರ್ಯವೃದ್ಧಿಗೆ
ಉಪಯೋಗಿಸುವ ವಿಧಾನ.—
ಮಲಗುವ ವೇಳೆ ಕಾಲು ಔನ್ಸ್ ಒಂದು ಬಟ್ಟಲು ಹಾಲಿನೊಡನೆ
ದೊಡ್ಡ ಬಾಟಲ್ ರೂ. 2-4-0 ಮಾತ್ರ
ಸಣ್ಣ ಬಾಟಲ್ ರೂ 1-4-0 ,,
ಪ್ಯಾಕಿಂಗ್ ಮತ್ತು ಪಾರ್ಸಲ್ ಛಾರ್ಜು ಪ್ರತ್ಯೇಕ.
ಈ ನಮ್ಮ ಔಷಧಕ್ಕೆ ದಸರಾ ವಸ್ತು ಪ್ರದರ್ಶನದಲ್ಲಿ ಮೆಡಲು ದೊರಕಿರುತ್ತದೆ.
ವಿಳಾಸ:—
ಕೆ. ಇ. ಏ. [illegible]
ಹಳೆ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು.

ಸ್ವೀಯರ ಸೌಕರ್ಯಕ್ಕಾಗಿ
[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿ ಪುಡಿ
ಇನ್ನೇ ಉಪಯೋಗಿಸಿ.
ಟಿ. ಕೃಷ್ಣಯ್ಯ [illegible], ದೇವರಾಜ ಮಾರ್ಕೆಟ್, ಮೈಸೂರು
ಸೂ:— ಮುಖ್ಯವಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ [illegible] ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

Edited, printed and published by A. R. Nagarajan at the Sadhvi Press, D.Subbiah Road, Mysore.

ಸಂಪುಟ ೨] ಮಂಗಳವಾರ ೨೬--೧೦--೪೩ [ಸಂಚಿಕೆ ೮೪

ಬಾಲ್ಕನ್‌ನಲ್ಲಿ ಜರ್ಮನರ ರಕ್ಷಣಾ ಕೋಟೆ

ಮುಂದಿನ ಪೂರ್ವ ಏಷ್ಯದ ನಾಯಕತ್ವ ಭಾರತಕ್ಕೇ ಸೇರಿದ್ದು

ಜಪಾನಿನ ಮೇಲೆ ಘೋರ ಯುದ್ಧ ಮಾಡಬೇಕಾಗುವುದು

ಮೈ ಸುಟ್ಟುಕೊಂಡ ಮಗುವಿನ ಮರಣ

ಮೈಸೂರು, ೨೬

ಕೃಷ್ಣರಾಜ ಮೊಹಲ್ಲಾದ ಹೊಸಕೇರಿ ನಿವಾಸಿ ಶ್ರೀ ನಾಗರಾಜರಾವ್ ಎಂಬುವರ ಕಮಲಮ್ಮ ಎಂಬ ೬ ವರ್ಷದ ಮಗುವು, ೨೨ ನೇ ತಾ|| ಅಡಿಗೆ ಮನೆಯಲ್ಲಿ ಆಟವಾಡುತ್ತಿದ್ದಾಗ ಮೈಸುಟ್ಟು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ನಿನ್ನೆ ರಾತ್ರಿ ಮೃತಿಹೊಂದಿತೆಂದು ವರದಿಯಾಗಿದೆ.

ರೇಷನಿಂಗ್ ಆಫೀಸು

ಮೈಸೂರು ನಗರದ ರೇಷನಿಂಗ್ ಅಧಿಕಾರಿಗಳ ಆಫೀಸನ್ನು ಎಗ್ಸಿಬಿಷನ್ ಭವನದಲ್ಲಿ ತೆರೆಯಲಾಗುವುದು

ಆಯುರ್ವೇದ ವೈದ್ಯ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ಈ ದಿನ ಸಾಯಂಕಾಲ ೬ ಘಂಟೆಗೆ ರಾಜಧಾನಿಯ ಶ್ರೀಮನ್ಮಹಾರಾಜಾ ಸಂಸ್ಕೃತ ವೇದ ಮಹಾ ಪಾಠಶಾಲೆಯಲ್ಲಿ ಶ್ರೀ ಧನ್ವಂತರೀ ಜಯಂತ್ಯುತ್ಸವವನ್ನು ಆಚರಿಸಲು ಏರ್ಪಾಡಾಗಿದೆ

ಈ ಸಂದರ್ಭದಲ್ಲಿ ವೈಣಿಕ ವಿದ್ವಾನ್ ಶ್ರೀ ನಾರಣಯ್ಯರ್‌ರವರ ವೀಣಾವಾದನವೂ ಮತ್ತು ಆಯುರ್ವೇದ ವಿದ್ವಾನ್ ಡಾ|| ಎ. ಎಸ್ ಸುಬ್ರಹ್ಮಣ್ಯ ಶಾಸ್ತ್ರಿ, ಎಲ್ ಎಂ ಪಿ ರವರ ಭಾಷಣವೂ ನಡೆಯುವುವು.

ಮದ್ರಾಸಿನಲ್ಲಿ ಪಾನನಿರೋಧ ರದ್ದಾಗುವುದೆ?

ಮದರಾಸ್ ಪ್ರಾಂತ್ಯದ ಕೆಲವು ಜಿಲ್ಲೆಗಳಲ್ಲಿರುವ ಪಾನನಿರೋಧ ಕಾನೂನನ್ನು ರದ್ದುಮಾಡಲು ಸರ್ಕಾರದವರು ಆಲೋಚಿಸುತ್ತಿರುವರೆಂದು ತಿಳಿಯಬರುತ್ತದೆ. ಈ ಯೋಜನೆಯ ಬಗ್ಗೆ ಸಾರ್ವಜನಿಕರಲ್ಲಿ ಉದಾಸೀನತೆ ಮತ್ತು ಬೆಂಬಲ ಕಡಿಮೆಯಾಗುತ್ತಿರುವುದು, ಮತ್ತು ಕಳ್ಳತನದಿಂದ ಹೆಂಡ ತೆಗೆಯುವುದು ಹೆಚ್ಚಾಗುತ್ತಿರುವುದು ಈ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಕಾರಣವೆಂದು ಹೇಳಲಾಗಿದೆ

ಪೋಸ್ಟಾಫೀಸಿನಲ್ಲಿ ೩ ಸಾವಿರ ರೂಪಾಯಿಗಳ ಕಳವು

ಮದರಾಸಿನ ಮೌಂಟ್ ರೋಡ್ ಪೋಸ್ಟಾಫೀಸಿನಲ್ಲಿ ೩ ಸಾವಿರ ರೂ ಗಳ ಇನ್ಷೂರೆನ್ಸ್ ಕವರು ಕಳುವಾಗಿದೆಯೆಂದು ವರದಿಯಾಗಿದೆ. ಶ್ರೀ ಪಟೇಲ್ ಎಂಬ ಗುಮಾಸ್ತರು ಇನ್ಷೂರೆನ್ಸ್ ಕವರನ್ನು ಕೌಂಟರಿನ ಮೇಲಿಟ್ಟು ಸ್ಟಾಂಪುಗಳನ್ನು ಹಾಕುತ್ತಿದ್ದಾಗ ೧೬ ವರ್ಷದ ಒಬ್ಬ ಯುವಕನು ಅವರ ಹತ್ತಿರ ಬಂದು ಕೆಲವು ಸ್ಟಾಂಪುಗಳು ಬೇಕಾಗಿವೆಯೆಂದು ಹೇಳಿ, ಅವರಿಂದ ಅವರು ಅತ್ತ ತಿರುಗಿದಾಗ, ಆ ಕವರನ್ನು ಅಪಹರಿಸಿಕೊಂಡು ಹೋದನೆಂದು ಹೇಳಲಾಗಿದೆ

ಭೂಕಂಪ

ಪಿಲಿಪೈನ್, ಮಲಯ ಸರ್ವಾಂಗ, ಜಾವಾ, ಸುಮಾತ್ರಾ, ಬೋರ್ನಿಯೋ ಮತ್ತು ಇತರ ಪ್ರದೇಶಗಳಲ್ಲಿ ತೀವ್ರವಾದ ಭೂಕಂಪ ಆಯಿತೆಂದು ಹೇಳಲಾಗಿದೆ. ಫಿಲಿಪ್ಪೈನ್ಸ್ ದ್ವೀಪದಲ್ಲಿ [illegible] ನಷ್ಟ [illegible] ಸಾವು ನೋವುಗಳಾದುದರ ವರದಿ ಬಂದಿದೆ

ಗಾಂಧೀಜಿ ಪ್ರಪಂಚದ ಮಹಾಪುರುಷರು

ಮುಂದಿನ ಪೂರ್ವ ಏಷ್ಯದ ನಾಯಕನು ಭಾರತವೇ ಹೊರತು, ಜಪಾನ್ ಅಥವ ಚೈನ ಅಲ್ಲವೆಂದು ಅಮೆರಿಕದ ಸುಪ್ರಸಿದ್ಧ ಹರ್‌ಸ್ಟ್ ಪತ್ರಿಕೆಗಳ ಬಾತ್ಮಿದಾರರಾದ ಮಿ|| ಕಾರ್ಲ್ ವಾನ್ ವೀಗಂಡ್‌ರವರು ಪೋರ್ಚುಗಲ್‌ನಲ್ಲಿ ತಿಳಿಸಿದ್ದಾರೆ. ಗಾಂಧೀಜಿಯವರು ಪ್ರಪಂಚದ ಮಹಾಪುರುಷರಲ್ಲಿ ಒಬ್ಬರೆಂದು ಅವರನ್ನು ಪ್ರಶಂಸಿಸಿದ್ದಾರೆ.

ಹೊಟ್ಟೆಗಿಲ್ಲದ ಮನುಷ್ಯನನ್ನು ನರಿಗಳು ತಿಂದ ದೃಶ್ಯ

ಹೊಟ್ಟೆಗಿಲ್ಲದೆ ರಸ್ತೆಯಲ್ಲಿ ಬಿದ್ದಿದ್ದ ಒಬ್ಬ ಮನುಷ್ಯನನ್ನು ಜೀವಸಹಿತ ನರಿಗಳು ತಿಂದ ಘೋರ ದೃಶ್ಯ ಬಂಗಾಳದ [illegible] ವರದಿಯಾಗಿದೆ. [illegible] ಹೊಟ್ಟೆಗಿಲ್ಲದೆ ನಿಶ್ಶಕ್ತನಾಗಿ ಬಿದ್ದಿದ್ದ ಆ ಮನುಷ್ಯನ ಬಳಿ [illegible] ಅವನ ಹತ್ತಿರ ನರಿಗಳು ಬಂದಾಗ, ನರಿಗಳು ಅವನ ಸ್ವಲ್ಪ ದೇಹವನ್ನು ತಿಂದುಹಾಕಿದುವು. ಆ ತರುವಾಯ ಅವನು ಸ್ವಲ್ಪ ಕಾಲ ಬದುಕಿದ್ದು ನಂತರ ಮರಣಹೊಂದಿದನಂತೆ

ರೈಲ್ವೇ ಸ್ಟೇಷನ್ ಕುಸಿದುಬಿದ್ದು ೩ ಮಂದಿ ಮರಣ

ಹೈದರಾಬಾದ್ ರೈಲ್ವೇ ಸ್ಟೇಷನ್ನಿನ ಛಾವಣಿಯನ್ನು ರಿಪೇರಿಮಾಡುತ್ತಿದ್ದಾಗ, ಛಾವಣಿಯು ಒಂದು ಕಡೆಯಿಂದ ಕುಸಿದುಬಿದ್ದು ೩ ಮಂದಿ ಕೆಲಸಗಾರರು ಸತ್ತರೆಂದೂ ಇತರ ೩ ಮಂದಿಗೆ ಪೆಟ್ಟಾಯಿತೆಂದೂ ವರದಿಯಾಗಿದೆ

---

೫ ನಿಮಿಷಕ್ಕೊಂದು ವಿಮಾನ ತಯಾರಿಕೆ

ಅಮೆರಿಕದ ನೌಕಾ ಇಲಾಖೆಯವರು [illegible] ಈಗ ದಿನ [illegible] ೧೯೪೨ ರಲ್ಲಿ [illegible] ವಿಮಾನ ತಯಾರಿಕೆ [illegible] ಸರಾಸರಿ ಐದು ನಿಮಿಷಕ್ಕೊಂದು ವಿಮಾನ [illegible] ಯೆಂದೂ ಅಮೆರಿಕಾ [illegible] ವಿ ತಯಾರಿಸಲಾಯಿತೆಂದು [illegible]

ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ಕೊಡಿ

ಬ್ರಿಟಿಷ್ ಲಿಬರಲ್ ಪಂಗಡಕ್ಕೆ ಸೇರಿದ ಮಿ|| ಹೆನ್ರಿ ನೋಯೆಲ್ ಬ್ರೇಲ್ಸ್‌ಫರ್ಡ್‌ರವರು "ಸಬ್ಜೆಕ್ಟ್ ಇಂಡಿಯಾ" ಎಂಬ ತಮ್ಮ ಪುಸ್ತಕದಲ್ಲಿ ಭಾರತದ ಬಿಕ್ಕಟ್ಟನ್ನು ಬಗೆಹರಿಸಲು ಸಲಹೆಗಳನ್ನು ಕೊಟ್ಟು, ಬಂಧನದಲ್ಲಿರುವ ಎಲ್ಲಾ ನಾಯಕರನ್ನೂ ಬಿಡುಗಡೆ ಮಾಡಿ, ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕೆಂದೂ ಅಮೆರಿಕವು ಇದಕ್ಕೆ [illegible] ಮಾಡಬೇಕೆಂದೂ ತಿಳಿಸಿದ್ದಾರೆ

ಐರಿಷ್ ಹಡಗಿನ ಮೇಲೆ ಧಾಳಿ

ಐರಿಷ್ ತೀರ ಪ್ರದೇಶಕ್ಕೆ ೧೦೦ ಮೈಲಿ ದೂರದಲ್ಲಿ ಅಪರಿಚಿತ ವಿಮಾನವೊಂದು ಐರಿಷ್ ಹಡಗಿನ ಮೇಲೆ ಧಾಳಿ ನಡೆಸಿತೆಂದೂ ಕ್ಯಾಪ್ಟನ್ ಮತ್ತು ಏಳು ಮಂದಿಗೆ ಗಾಯವಾಗಿದೆಯೆಂದೂ ವರದಿಯಾಗಿದೆ.

ಬಾಲ್ಕನ್‌ನಲ್ಲಿ ಜರ್ಮನರ ಸಿದ್ಧತೆ

ಬಾಲ್ಕನ್ ಪ್ರದೇಶದಲ್ಲಿ ರಕ್ಷಣೆಗಾಗಿ ಸರ್ವ ಸಿದ್ಧತೆ ನಡೆಯುತ್ತಿದೆಯೆಂದು ಜರ್ಮನ್ ವಾರ್ತಾ ಸಂಸ್ಥೆ ತಿಳಿಸಿದೆ. ಸಾಲೋನಿಕ, ಕೊರಿಂತ್ ಕಾಲುವೆ, ಟ್ರೀಸ್, ಬಲ್ಗೇರಿಯಾ ಪ್ರದೇಶ ಮತ್ತು ಪ್ರದೇಶಗಳಲ್ಲಿ ರಕ್ಷಣಾ ಕೋಟೆಗಳನ್ನು ಕಟ್ಟಿ ಅವುಗಳಲ್ಲಿ ತುಪಾಕಿಗಳನ್ನು ಇಟ್ಟಿರುವರೆಂದು ವರದಿಯಾಗಿದೆ

ಬೆಹಲಿ ಕಾಂಗ್ರೆಸ್ ನಾಯಕರ ದಸ್ತಗಿರಿ

ಬೆಹಲಿ ಪ್ರಾಂತದ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾದ ಶ್ರೀ ಜಗದೀಶ್‌ರವರನ್ನು ರಾಷ್ಟ್ರವ್ಯಾಪ್ತಿಯ ಪ್ರತಿಬಂಧಕಾಜ್ಞೆ ಪ್ರಕಾರ ದಸ್ತಗಿರಿ ಮಾಡಲಾಯಿತೆಂದೂ, ೧೯೪೨ ನೇ ಆಗಸ್ಟ್ ತಿಂಗಳಿಂದಲೂ ಅವರು ತಲೆತಪ್ಪಿಸಿಕೊಂಡಿದ್ದರೆಂದೂ ಹೇಳಲಾಗಿದೆ. ಅವರನ್ನು ಹಿಡಿದುಕೊಟ್ಟ [illegible] ಬಹುಮಾನ [illegible]

[illegible] ಸರಾಸರಿ [illegible] ಕೊಟ್ಟಿದ್ದಾರೆ

ಜರ್ಮನಿ ಮೇಲಿನ ಅಂತ್ಯ ಧಾಳಿ ಆರಂಭವಾಗಬೇಕು

ಜರ್ಮನಿ ಮೇಲಿನ ಅಂತ್ಯ ಧಾಳಿಯನ್ನು ಕಡವಣಾಡಲೆ ಆರಂಭಿಸಬೇಕೆಂದೂ, ಬ್ರಿ|| ಲೇಬರ್ ನಾಯಕರಾದ ಮಿ|| ಶಿನ್‌ವೆಲ್‌ರವರು ತಿಳಿಸಿದ್ದಾರೆ. ಮುಂದಿನ ವರ್ಷ ಶತ್ರುವಿಗೆ ಬಲವಾದ ಏಟು ಕೊಡದ ಹೊರತು ಫೀಲ್ಡ್ ಮಾರ್ಷಲ್ ಸ್ಮಟ್ಸ್‌ರವರು ತಿಳಿಸಿರುವುದು ರಕ್ಷಣೆಗೆ ಯಾವ ಪ್ರಯೋಜನವೂ ಇಲ್ಲವೆಂದು ಹೇಳಿದ್ದಾರೆ

೪೦ ಜರ್ಮನ್ ಡಿವಿಜನ್ ಸೈನ್ಯ ಕಟ್ಟಿಹಾಕಿದೆ

ಇಟಲಿ ಮತ್ತು ಬಾಲ್ಕನ್ ಕ್ಷೇತ್ರದಲ್ಲಿ ೪೦ ಡಿವಿಜನ್ ಜರ್ಮನ್ ಸೈನ್ಯವಿರುವುದೆಂದೂ, ಮಿತ್ರ ೫ ನೇ ಮತ್ತು ೮ ನೇ ಸೈನ್ಯದ ಕಾರ್ಯಾಚರಣೆಯಿಂದ ಇಷ್ಟು ಜರ್ಮನ್ ಸೈನ್ಯವು ಕಟ್ಟಿಹಾಕಲ್ಪಟ್ಟು, ರಷ್ಯಕ್ಕೆ ಇವನ್ನು ಕಳಿಸಲು ಸಾಧ್ಯವಿಲ್ಲವಾಗಿರುವುದೆಂದು ಜನರಲ್ ಸರ್ ಹೆರಾಲ್ಡ್ ಅಲೆಗ್ಸಾಂಡರ್‌ರವರು ತಿಳಿಸಿದ್ದಾರೆ

ವಿಮಾನ ಧಾಳಿ ಬಗ್ಗೆ ಜನರಿಗೆ ಎಚ್ಚರಿಕೆ

ಮದರಾಸಿನಲ್ಲಿ ೧೧-೧೨ ನೇ ತಾ|| ರಲ್ಲಿ ನಡೆದ ವಿಮಾನ ಧಾಳಿಯಲ್ಲಿ ಜನರಿಗೆ ಎಚ್ಚರಿಕೆ ಕೊಡಲಿಲ್ಲವೆಂಬ ಆಕ್ಷೇಪಣೆ ಬಗ್ಗೆ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿ, ವಿದ್ಯುಚ್ಛಕ್ತಿಯು ಇಲ್ಲದಿದ್ದುದರಿಂದ ಸೈರನ್ನುಗಳನ್ನು ಕೂಗಿಸಲು ಆಗಲಿಲ್ಲವೆಂದು ತಿಳಿಸಿ, ಇನ್ನು ಮುಂದೆ ವಿಮಾನ ಧಾಳಿ ನಡೆದು ಬಾಂಬುಗಳು ಬೀಳುತ್ತಿದ್ದಾಗ, ಎಚ್ಚರಿಕೆ ಕೊಡುವುದು ಸೂಕ್ತವಲ್ಲವೆಂದೂ, ಮತ್ತು ಸೈರನ್ನುಗಳನ್ನು ಯಾವಾಗಲೂ ಕೂಗಿಸಲಾಗುವುದೆಂದೇ ಹೇಳಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಬಾಂಬುಗಳು ಬೀಳುವುದನ್ನು ಕಂಡ ತಕ್ಷಣವೇ ಜನಗಳು ಆಶ್ರಯಸ್ಥಾನಗಳಿಗೆ ಹೋಗಬೇಕೆಂದು ಎಚ್ಚರಿಸಿದ್ದಾರೆ.

ಜಪಾನಿನ ಮೇಲೆ ದೀರ್ಘ ಯುದ್ಧವೇ?

ಪೆಸಿಫಿಕ್‌ನಲ್ಲಿ ಅಮೆರಿಕವು ಜಪಾನ್ ಮೇಲೆ ದೀರ್ಘ ಮತ್ತು ಭೀಕರವಾದ ಯುದ್ಧ ನಡೆಸಬೇಕಾಗುವುದೆಂದು ಅಮೆರಿಕದ ಜನರಲ್ [illegible] ಯವರು ಎಚ್ಚರಿಕೆ ಕೊಟ್ಟಿದ್ದಾರೆ. ನಾವು ಜಪಾನರನ್ನು ಇನ್ನೂ ಸ್ವಲ್ಪವಾದರೂ ಬೆದರಿಸಿಲ್ಲವೆಂದೂ, ಜಪಾನಿನ ಹತ್ತಿರ ಹೋಗದಾಗಲೆಲ್ಲಾ ಅವರು ಕಠಿಣವಾಗುವರೆಂದೂ ಅವರನ್ನು ಹಿಂದಕ್ಕೆ ತಳ್ಳುವ ಕೆಲಸವೇ ತಮ್ಮ ಪ್ರಥಮ ಕರ್ತವ್ಯವೆಂದೂ ತಿಳಿಸಿದ್ದಾರೆ

ಪ್ರವಾಹದಿಂದ ನೊಂದವರಿಗೆ ೫೦,೦೦೦ ರೂ. ಸಹಾಯ

ಮದರಾಸಿನಲ್ಲಿ ಪ್ರವಾಹದಿಂದ ನೊಂದವರ ಪರಿಹಾರಕ್ಕಾಗಿ ಸರ್ಕಾರದವರು ೫೦ ಸಾವಿರ ರೂ ಕೊಟ್ಟಿರುವರು. ಇದಲ್ಲದೆ ಟಿ. ಡಿ. ೫೦ ಸಾವಿರ ರೂ ಕೊಟ್ಟಿದ್ದಾರೆ.

ಮೈಸ್ವಾಮಿಯವರು ಪರಿಹಾರ ನಿಧಿ ತೆರೆದಿದ್ದಾರೆ

ಬಂಗಾಳ ಮತ್ತು ಇತರ ಪ್ರಾಂತ್ಯಗಳಲ್ಲಿ ಕ್ಷಾಮದಿಂದ ನರಳುತ್ತಿರುವವರಿಗೆ ಸಹಾಯ ಮಾಡಲು [illegible] ಪರಿಹಾರ ನಿಧಿ [illegible] ಬಳಿ, ಒಂದು ನಿಧಿಯನ್ನು [illegible]

ಪೌರಸಭೆಯ ಬಡ ನೌಕರರಿಗೆ ಕ್ಯಾಂಟೀನ್

ಮೈಸೂರು ಪೌರಸಭೆಯಲ್ಲಿ ತೀರ್ಮಾನ

ಮೈಸೂರು ೨೬

ಮೈಸೂರು ಮುನಿಸಿಪಲ್ ಮೀಟಿಂಗ್ ನಿನ್ನೆ ಸಂಜೆ ನಡೆಯಿತು

ಸಂತಾಪ ಸೂಚನೆ

ಕಾರ್ಯ ಕಲಾಪಗಳು ಪ್ರಾರಂಭವಾಗುವುದಕ್ಕೆ ಮುಂಚೆ, ಕೊಚ್ಚಿ ಮಹಾರಾಜರವರ ನಿಧನದ ಬಗ್ಗೆ ಒಂದು ಸಂತಾಪ ಸೂಚನಾ ನಿರ್ಣಯವನ್ನು ಶ್ರೀ ಡಿ. ಸಿ. ನಂಜಪ್ಪನವರು ಸೂಚಿಸಿದರು. ಅದು ಸರ್ವಾನುಮತದಿಂದ ಅಂಗೀಕಾರವಾಯಿತು.

ನಲ್ಲಿಗಳ ಕಳವು

ರಾಜಧಾನಿಯ ಹಲವು ಮೊಹಲ್ಲಾಗಳಲ್ಲಿ ಜನರು ನೀರಿಲ್ಲದೆ ತೊಂದರೆ ಪಡುತ್ತಿರುವುದರಿಂದ ಹೆಚ್ಚಾಗಿ ಪಬ್ಲಿಕ್ ನಲ್ಲಿಗಳನ್ನು ಹಾಕಬೇಕೆಂದು ಶ್ರೀ ಬಸಪ್ಪನವರು ಸೂಚಿಸಿದರು. ಸಾರ್ವಜನಿಕರುಗೋಸ್ಕರ ಇಟ್ಟಿರುವ ನಲ್ಲಿಗಳನ್ನು ಒಡೆದು ಅವುಗಳನ್ನು ತೆಗೆದುಕೊಂಡು ಹೋಗುವುದನ್ನು ನಿಲ್ಲಿಸಲು ತಕ್ಕ ಕ್ರಮ ಏರ್ಪಡಿಸಬೇಕೆಂದು ಹಲವು ಸದಸ್ಯರು ಅಧ್ಯಕ್ಷರ ಗಮನಕ್ಕೆ ತಂದರು.

ಬಡ ಸಂಸಾರಿಗಳಿಗೆ ಮನೆಗಳು

ರಾಜಾರಾಂ ಅಗ್ರಹಾರದಲ್ಲಿ ಬಡಸಂಸಾರಿಗಳಿಗೆ ಮಾತ್ರ ಮನೆಗಳನ್ನು ಕೊಡಬೇಕೆಂದು ಶ್ರೀಮನ್ಮಹಾರಾಜರು ಆರಂಭೋತ್ಸವ ನಡೆಸಿದಾಗ ತಿಳಿಸಿದ್ದರೂ ಕೂಡ, ಮಾಹೆಯಾನ ೫೦-೬೦ ರೂ ಸಂಬಳ ಬರುವವರಿಗೂ ಕೊಡಲಾಗುತ್ತಿದೆಯಲ್ಲ ಇದಕ್ಕೆ ಕಾರಣವೇನು ಎಂದು ಶ್ರೀ ಎಂ ಆರ್. ಸಿ. ಬಸಪ್ಪನವರು ಪ್ರಶ್ನೆ ಕೇಳಿದರು.

ಬಡವರಿಗೇನೇ ಮಾತ್ರ ಈಗ ಕೊಡಲಾಗುತ್ತಿದೆ. ಮುಂದೆ ಕಮ್ಮಿ ಸಂಬಳದವರಿಗೆ ಮಾತ್ರ ಕೊಡುವ ಏರ್ಪಾಡು ಮಾಡಲಾಗುತ್ತದೆಂದು ಅಧ್ಯಕ್ಷರು ಉತ್ತರವಿತ್ತರು.

ನಿರ್ಗತಿಕರಿಗೆ ಸೌಕರ್ಯ

ನಂತರ ಶ್ರೀ ಎಂ. ಆರ್. ಸಿ. ಬಸಪ್ಪನವರು ಒಂದು ನಿರ್ಣಯವನ್ನು ಮಂಡಿಸಿ, "ರಾಜಧಾನಿಯಲ್ಲಿ ಸಾಂಕ್ರಾಮಿಕ ರೋಗಗಳಿಂದ ನರಳುತ್ತಿದ್ದು ಭಿಕ್ಷಾಟನೆಮಾಡಿ ರಸ್ತೆಗಳಲ್ಲಿ ಬಿದ್ದುಕೊಂಡಿರುವವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸುವ ಏರ್ಪಾಡನ್ನು ಪೌರ ಸಭೆಯವರು ಮಾಡಬೇಕೆಂದು" ಸೂಚಿಸಿ, ಆಸ್ಪತ್ರೆಯಲ್ಲಿ ಇಂತಹವರನ್ನು ಸೇರಿಸುತ್ತಿಲ್ಲವೆಂದು ತಿಳಿಸಿದರು.

ಅಧ್ಯಕ್ಷರು: ಜಿಲ್ಲಾಧಿಕಾರಿಗಳು ಈ ವಿಚಾರದಲ್ಲಿ ಒಂದು ಪತ್ರವನ್ನು ಕೊಟ್ಟಿದ್ದು ರಸ್ತೆಗಳಲ್ಲಿ ನಿರ್ಗತಿಕರು ನರಳುತ್ತಾ ಬಿದ್ದಿದ್ದರೆ ಅಂತಹವರನ್ನು ತಕ್ಷಣ ಆಸ್ಪತ್ರೆಗೆ ಸೇರಿಸಬೇಕೆಂದು ತಿಳಿಸಿದ್ದಾರೆಂದೂ, ಆದ್ದರಿಂದ ಆಸ್ಪತ್ರೆಯಲ್ಲಿ ಇವರುಗಳನ್ನು ಸೇರಿಸುತ್ತಿಲ್ಲವೆಂಬುದು ನಿಜಾಂಶವಲ್ಲವೆಂದೂ ತಿಳಿಸಿ, ಕೈಲಾದ ಮಟ್ಟಿಗೆ ಈ ಕೆಲಸ ನಡೆಯುತ್ತಿದೆಯೆಂದೂ ಹೇಳಿದರು.

ಶ್ರೀ ಪಾಲಳ್ಳಿ ಸೀತಾರಾಮಯ್ಯನವರು ಮಾತನಾಡುತ್ತಾ, ಅನೇಕ ರೋಗಿಗಳು ಭಿಕ್ಷಾಟನೆಯನ್ನೇ ಒಂದು ವೃತ್ತಿಯಾಗಿ ಮಾಡಿಕೊಂಡು ರಸ್ತೆಗಳಲ್ಲಿ ಬಿದ್ದುಕೊಂಡಿರುತ್ತಾರೆ. ಇಂತಹವರು ರೋಗಗಳನ್ನು ನಗರದಲ್ಲಿ ಹರಡದಂತೆ ನೋಡಿಕೊಳ್ಳಬೇಕು. ಮುನಿಸಿಪಲ್ ಕಾನೂನಿನ ಪ್ರಕಾರವೇ ಇಂತಹವರನ್ನು ನಿರ್ಬಂಧದಿಂದ ಹಿಡಿದು ಹೊರಗೆ ಕಳಿಸುವ ಅಧಿಕಾರವಿದೆ. ಅದಕ್ಕೆ ತಕ್ಕ ಏರ್ಪಾಟು ಮಾಡಬೇಕೆಂದು ತಿಳಿಸಿದರು.

ಸರ್ಕಾರದವರು ಸಹ ಭಿಕ್ಷಾಟನೆ ಬಗ್ಗೆ ಒಂದು ಮಸೂದೆಯನ್ನು ತರಲಿರುವುದರಿಂದ ಈ ನಿರ್ಣಯವನ್ನು ಮುಂದೆ ಹಾಕಲಾಯಿತು.

ನಾಯಿಗಳ ಕಾಟ

ರೋಗದ ಮತ್ತು ಇತರ ನಾಯಿಗಳ ಕಾಟವು ಹೆಚ್ಚಾಗಿರುವುದರಿಂದ ಅವುಗಳನ್ನು ಹಿಡಿದು ಕೊಂದುಹಾಕಬೇಕೆಂದು ಶ್ರೀ ವೆಂಕಟರಾಮಯ್ಯನವರು ಸೂಚಿಸಿದರು. ಪೌರಸಭೆಯಲ್ಲಿ ನಾಯಿ ಕೊಲ್ಲುವ ಯಂತ್ರವಿದ್ದರೂ, ನಾಯಿಗಳನ್ನು ಹಿಡಿದುಕೊಂಡು ಬರುವ ಜನರಿಲ್ಲವೆಂದೂ ಸಾಧ್ಯವಾದ ಮಟ್ಟಿಗೂ ಕ್ರಮ ಜರುಗಿಸಲಾಗುವುದೆಂದೂ ಅಧ್ಯಕ್ಷರ ಭರವಸೆ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ರಸ್ತೆಗಳ ರಿಪೇರಿ

ರಾಜಧಾನಿಯ ಕಾಳಮ್ಮನ ದೇವಸ್ಥಾನದ ರಸ್ತೆ, ಕಾಳಿದಾಸ ಮತ್ತು ಇತರ ರಸ್ತೆಗಳನ್ನು ರಿಪೇರಿಮಾಡದೆ ಹಾಗೆಯೇ ಬಿಟ್ಟಿರುವುದನ್ನು ಸರಿಪಡಿಸಬೇಕೆಂದು ಶ್ರೀ ಎ. ಕೃಷ್ಣದಾಸಯ್ಯನವರು ನಿರ್ಣಯವೊಂದನ್ನು ಸೂಚಿಸಿದರು.

ಈಗಿನ ಯುದ್ಧದ ಪರಿಯಿಂದ, ಸಾಮಗ್ರಿಗಳು ಸಿಕ್ಕದೆ, ಕೆಲಸಗಳು ನಿಂತುಹೋಗಿವೆಯೆಂದೂ, ಆದರೂ ಎಲ್ಲಾ ವರ್ಷಕ್ಕಿಂತ ಈ ವರ್ಷ ೮೦ ಸಾವಿರ ರೂ. ಖರ್ಚುಮಾಡಲಾಗಿದೆಯೆಂದೂ ರಾಸ್ತೆಗಳನ್ನು ರಿಪೇರಿಮಾಡಲಾಗಿದೆಯೆಂದೂ, ಇನ್ನು ಮುಂದೂ ಕೆಲಸ ನಡೆಸಲಾಗುತ್ತೆಂದೂ ಅಧ್ಯಕ್ಷರು ತಿಳಿಸಿದ್ದರಿಂದ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಅಧ್ಯಕ್ಷರ ಕೆಲಸ ಕಮ್ಮಿಮಾಡಬೇಕು

ಪೌರ ಸಭೆ ಅಧ್ಯಕ್ಷರಿಗೆ ಇತರ ಸಂಸ್ಥೆಗಳ ಮೇಲೂ ವಿಚಾರಣೆ ಅಧಿಕಾರ ಕೊಟ್ಟಿರುವುದರಿಂದ ಪೌರ ಸಭೆಯ ಕೆಲಸಗಳಿಗೆ ಅಡಚಣೆ ವುಂಟಾಗಿರುವುದರಿಂದ, ಅದನ್ನು ತೆಗೆದುಹಾಕಬೇಕೆಂದು ಸರ್ಕಾರದಲ್ಲಿ ಪ್ರಾರ್ಥಿಸುವ ಶ್ರೀ ಜನಾರ್ಧನಯ್ಯನವರ ನಿರ್ಣಯವನ್ನು ಅನುಮೋದಿಸಲಾಯಿತು.

ಬಡ ನೌಕರರಿಗೆ ಊಟದ ಏರ್ಪಾಟು

ರಾಜಧಾನಿಯಲ್ಲಿ ಬಡವರಿಗೆ ಅನ್ನದಾನ ಮಾಡಲು ಒಬ್ಬ ಮಹಿಳೆಯರು ೧೨೦೦ ರೂ. ಗಳನ್ನು ಕೊಟ್ಟು, ತಿಂಗಳಿಗೆ ೧೦೦ ರೂ. ಗಳನ್ನು ಉಪಯೋಗಿಸಬೇಕೆಂದೂ ಮತ್ತು ಇದಲ್ಲದೆಯೇ ಶ್ರೀ ವೈ. ಮಲ್ಲಿಕಾರ್ಜುನಪ್ಪಗೌಡರು ೧೧೦ ರೂ. ಗಳನ್ನು ಕೊಟ್ಟಿರುವ ವಿಷಯವನ್ನೂ ಅಧ್ಯಕ್ಷರು ತಿಳಿಸಿ, ಈ ವಿಚಾರದಲ್ಲಿ ಒಂದು ಯೋಜನೆಯನ್ನು ಸಭೆಯ ಮುಂದಿಟ್ಟರು.

ಮುನಿಸಿಪಲ್ ಬಡ ನೌಕರರಲ್ಲಿ ೨೫ ರೂ ಗಳಿಂತ (ಕಮ್ಮಿ) ಸಂಬಳ ಬರುವವರಿಗೆ ಸಿದ್ಧಪಡಿಸಿದ ಆಹಾರವನ್ನು 2/3 ದರದಿಂದ ಕೊಡಲು ಒಂದು ಕ್ಯಾಂಟೀನ್ ಏರ್ಪಡಿಸಬೇಕೆಂದೂ, ಅದಕ್ಕಾಗಿ ಪೌರಸಭೆಯವರು ೨೦೦ ರೂ. ಗಳನ್ನು ಕೊಡಬೇಕೆಂದೂ ಸಾರ್ವಜನಿಕರಿಂದ ಬಂದ ಹಣವನ್ನು ಒಂದು ನಿಧಿಯಾಗಿ ಏರ್ಪಡಿಸಬಹುದೆಂದೂ ತಿಳಿಸಿದರು. ಸಭಿಕರು ಇದನ್ನು ಅನುಮೋದಿಸಿದರು.

ಈ ಸಂಬಂಧದಲ್ಲಿ ಶ್ರೀಮನ್ಮಹಾರಾಜರವರ ಔದಾರ್ಯದಿಂದ ದಿನಕ್ಕೆ ೧೪೦೦ ಮಂದಿ ಬಡ ಜನರಿಗೆ ಉಚಿತ ಊಟವನ್ನು ಏರ್ಪಡಿಸಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು.

ರೇಷನಿಂಗ್ ಅಧಿಕಾರಿಗಳು

ಮೈಸೂರು ಪೌರಸಭಾಧ್ಯಕ್ಷರನ್ನು ನಗರದ ಚೀಫ್ ರೇಷನಿಂಗ್ ಅಧಿಕಾರಿಗಳಾಗಿಯೂ, ಶ್ರೀ ವೆಂಕಟಶಿವರೆಡ್ಡಿಯವರನ್ನು ಚೀಫ್ ರೇಷನಿಂಗ್ ಸರ್ಕಲ್ ಅಧಿಕಾರಿಗಳಾಗಿಯೂ ಮತ್ತು ರೆವಿನ್ಯೂ ಆಫೀಸರಾದ ಶ್ರೀ ಹೆಚ್. ಸಿ. ಜಂಬುಕೇಶ್ವರಯ್ಯನವರನ್ನು ಅಸಿ ರೇಷನಿಂಗ್ ಸರ್ಕಲ್ ಅಧಿಕಾರಿಗಳಾಗಿಯೂ ನೇಮಿಸಿರುವ ಸರ್ಕಾರಿ ಆಜ್ಞೆಯನ್ನು ರಿಕಾರ್ಡು ಮಾಡಲಾಯಿತು.

Edited, printed and published by A R. Nagarajan, at the Sadhvi Press, D.Subbiah Road, Mysore.

ಹೊರಗಿನಿಂದ ಮೈಸೂರಿಗೆ ೬ ಸಾವಿರ ಟನ್ ಅಕ್ಕಿ

ಬೆಂಗಳೂರು ೨೫

ಮೈಸೂರು ಸಂಸ್ಥಾನಕ್ಕೆ ಇತರ ಪ್ರಾಂತ್ಯಗಳಿಂದ ಕೊಡಲಾಗುವ ದವಸಗಳ ಕೋಟಾದಲ್ಲಿ ಈ ಸಾರಿ ೬೦೦೦ ಟನ್ನುಗಳಷ್ಟು ಅಕ್ಕಿಯನ್ನು ದೆಹಲಿಯ ಆಹಾರ ಸಮ್ಮೇಳನದಲ್ಲಿ ಗೊತ್ತುಮಾಡಲಾಯಿತೆಂದು ಆಹಾರ ಸಚಿವರಾದ ಶ್ರೀ ಎಂ. ಎ ಶ್ರೀನಿವಾಸರವರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ತಿಳಿಸಿದರು.

ಬೆಂಗಳೂರು ನಗರದಲ್ಲಿ ಹಿಂದಿನ ರೇಷನ್ ಕಾರ್ಡುಗಳ ಪ್ರಕಾರ ೪,೬೫,೦೦೦ ಜನರಿದ್ದರೆಂದೂ, ಆದರೆ ಈಗಿನ ರೇಷನ್ ಸೆನ್ಸಸ್‌ನಿಂದ ಆ ಸಂಖ್ಯೆಯು ಒಂದು ಲಕ್ಷದಷ್ಟು ಕಡಿಮೆಯಾಗುವ ನಿರೀಕ್ಷಣೆಯಿದೆಯೆಂದೂ ಡಿಸೆಂಬರ್ ೧ನೇ ತಾ|| ಹೊಸ ರೇಷನ್ ಕಾರ್ಡುಗಳನ್ನು ಬೆಂಗಳೂರಿನಲ್ಲಿ ಕೊಡಲಾಗುವುದೆಂದೂ ತಿಳಿಸಿದರು.

ಕ್ಷಾಮಪೀಡಿತ ಪ್ರಾಂತಗಳಿಗೆ ಪಂಜಾಬಿನ ಸಹಾಯ

ಕ್ಷಾಮಪೀಡಿತ ಪ್ರಾಂತ್ಯಗಳಿಗೆ ಪಂಜಾಬಿನಿಂದ ಬೇಕಾದಷ್ಟು ಧಾನ್ಯ ಸಹಾಯ ಮಾಡಲಾಗಿದೆಯೆಂದೂ, ೧೯೪೩-೪೪ ರಲ್ಲಿ ಇಂಡಿಯಾ ಸರ್ಕಾರಕ್ಕೆ ೯ ಲಕ್ಷ ಟನ್ನುಗಳಷ್ಟು ಗೋಧಿಯನ್ನು ಸರಬರಾಜು ಮಾಡುವುದಾಗಿ ಒಪ್ಪಿಕೊಂಡು, ಈಗಾಗಲೇ ೯೫ ಟನ್ನುಗಳಷ್ಟು ಗೋಧಿ ಕಳುಹಿಸಲಾಗಿದೆಯೆಂದೂ, ಅಕ್ಕಿ, ಬಾರ್ಲಿ, ಜೋಳ ಮುಂತಾದ ೩,೨೪,೧೪೪ ಟನ್ನುಗಳಷ್ಟು ಆಹಾರ ಪದಾರ್ಥಗಳನ್ನು ಈಗಾಗಲೇ ಒದಗಿಸಲಾಗಿದೆಯೆಂದೂ ಪಂಜಾಬಿನ ಆಹಾರ ಸಚಿವರಾದ ಸರ್ದಾರ್ ಬಲದೇವಸಿಂಗ್‌ರವರು ತಿಳಿಸಿದ್ದಾರೆ.

ಸಂಯುಕ್ತಪ್ರಾಂತ್ಯ, ಬಂಗಾಳ, ಸಿಂಧ್ ಪ್ರಾಂತ್ಯಗಳು ಹೆಚ್ಚು ಲಾಭ ಗಳಿಸಿದುವೆಂದೂ, ಇದರಿಂದ ತಮಗೆ ಬರಬೇಕಾದ ೧೫ ಲಕ್ಷ ರೂ. ಲಾಭ ಹೋಯಿತೆಂದೂ, ಆದ್ದರಿಂದ ಪಂಜಾಬು ಲಾಭ ಸಂಪಾದಿಸಿಲ್ಲವೆಂದೂ ಅವರು ತಿಳಿಸಿದ್ದಾರೆ.

ಪಂಜಾಬಿನಲ್ಲಿ ರೈತರು ಮತ್ತು ಇತರರು ದವಸವನ್ನು ದಾಸ್ತಾನು ಮಾಡಿರುವರೆಂಬ ಆಪಾದನೆಯನ್ನು ಪ್ರತಿಭಟಿಸಿದರು.

ಆ ಕಾ ಶ ವಾ ಣಿ

೨೭ ನೇ ಬುಧವಾರ

...೮-೩೦ ಹಾಡುಗಾರಿಕೆ : ವಿದ್ವಾನ್ ಟಿ ಪುಟ್ಟಸ್ವಾಮಯ್ಯ

ಬನಾರಸ್ ಸೀರೆಗಳು — ವಾಯಿಲ್ ಸೀರೆಗಳು !

ಉಪಯುಕ್ತ — ನವೀನ ಮಾದರಿಗಳಲ್ಲಿ — ಬೇಕಾದ ನಗಗಳು

ನಿಮ್ಮ ಮನಸ್ಸೊಪ್ಪುವಂತೆ ! ಕಣ್ಣಿಗಾನಂದವಾಗುವಂತೆ !

ಬೆಂಗಳೂರು ಕೆ ಎಚ್. ರಾಮಯ್ಯ ಅಂಡ್ ಸನ್ಸ್‌ರವರಿಂದ ತಯಾರಿಸಲ್ಪಟ್ಟ

ಉಡುಪುಗಳು. ಬೆನಾರಸ್‌ನಿಂದ ಇಲ್ಲಿ ಬಂದ, ಕಡಿಮೆ ಬೆಲೆಗೆ

ಮಾರುವ ಸೀರೆಗಳು, ಕಣಗಳು, ಇತ್ಯಾದಿ ಇತ್ಯಾದಿ

ಗ್ಯಾರಂಟಿಯಾದ ಚಿನ್ನ ಬೆಳ್ಳಿ ನಗಗಳು

ಜಿ. ಸಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್ಸ್

ಜವಾಹಿರಿ ಮತ್ತು ಬಟ್ಟೆ ವ್ಯಾಪಾರಿಗಳು,

ಸಯ್ಯಾಜಿರಾವ್ ರೋಡ್, ಮೈಸೂರು.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಏ ಸೂ - ಶಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆಪೇಟೆ ಕಿಡ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟುಗಳು ದೊರೆಯುತ್ತೆ.

ಸಂಪುಟ ೨] ಬುಧವಾರ ೨೭—೧೦—೪೩ [ಸಂಚಿಕೆ ೮೫

ಬರುವ ಕ್ರಿಸ್‌ಮಸ್‌ನಲ್ಲಿ ನಾಜಿಗಳ ಸೋಲೆ ?

ಡಾಕಾದಲ್ಲಿ ಎಲೆ ಸೊಪ್ಪು ತಿಂದು ಜೀವಿಸುವ ಗತಿ ಬಂದಿದೆ

ರಾಜಕೀಯ ವಿಷಯಗಳನ್ನು ಚರ್ಚಿಸಲು. ವೈಸರಾಯ್-ಗೌರ್ನರುಗಳ ಭೇಟಿ.

ರೂಪಾಯಿಗೆ ೨ ಸೇರು ಬೆಣ್ಣೆ ಮಾರಬೇಕು

ಮೈಸೂರು ೨೭

ಬರುವ ನವೆಂಬರ್ ೧ ನೇ ತಾರೀಖಿನಿಂದ ರೂಪಾಯಿಗೆ ೨ ಸೇರಿನಂತೆ ಬೆಣ್ಣೆ ಮಾರಬೇಕೆಂದು ಮೈಸೂರು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದಾರೆ.

ಪೆರೋಲ್

ಶ್ರೀ ಟಿ. ಮರಿಯಪ್ಪನವರನ್ನು ೧೫ ದಿನಗಳು ಪೆರೋಲ್ ಮೇಲೆ ಬಿಡಲು ಆಜ್ಞೆಯಾಗಿದೆ

ಸರ್ ಕ್ಲಾರ್ಕ್ ಮೈಕರ್ಜಿ

ಡೆಹರಾಡೂನ್‌ನಲ್ಲಿರುವ ಸೆಂಟ್ ಡನ್‌ಸ್ಟನ್ಸ್ (ಕುರುಡ ಕಿವುಡರ) ಸಂಸ್ಥೆಯ ಡೈರೆಕ್ಟರಾದ ಸರ್ ಕ್ಲಾರ್ಕ್ ಮೈಕರ್ಜಿಯವರು ರಾಜಧಾನಿಯ ಕುರುಡ ಕಿವುಡರ ಶಾಲೆಗೆ ಮೊನ್ನೆ ದಿನ ಭೇಟಿಕೊಟ್ಟರು.

ಶಂಕರಪ್ಪ ಸ್ಮಾರಕ ಯಾತ್ರೆ

ಕಳೆದ ವರ್ಷ ಮೈಸೂರು ವಿದ್ಯಾರ್ಥಿ ಚಳುವಳಿಯಲ್ಲಿ ಕಾರಾಗೃಹವನ್ನು ಸೇರಿ ಹಿಂದಿರುಗದೆ ತನ್ನ ಪ್ರಾಣವನ್ನು ಬಲಿದಾನಮಾಡಿದ ವೀರ ಸತ್ಯಾಗ್ರಹಿ ಶ್ರೀ ಶಂಕರಪ್ಪನವರು ವೀರ ಸ್ವರ್ಗವನ್ನು ಸೇರಿ, ತಾ|| ೩೦-೧೦-೪೩ನೇ ಶನಿವಾರಕ್ಕೆ ಒಂದು ವರ್ಷವಾಗುತ್ತದೆ. ಅವರ ಪವಿತ್ರ ಸ್ಮರಣೆಗಾಗಿ ಪ್ರಾರ್ಥನಾ ದಿನವನ್ನು ಶ್ರೀ ಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಆಚರಿಸಲು ಏರ್ಪಾಡಾಗಿದೆ. ಆ ದಿವಸ ಮಧ್ಯಾಹ್ನ ೩ ಗಂಟೆಗೆ ಮಹಾರಾಜ ಕಾಲೇಜಿನಿಂದ ಚಾಮುಂಡಿ ಬೆಟ್ಟಕ್ಕೆ ವಿದ್ಯಾರ್ಥಿಗಳ ಯಾತ್ರೆ ಹೊರಡುತ್ತದೆ ವಿದ್ಯಾರ್ಥಿಗಳೆಲ್ಲರೂ ಭಾಗವಹಿಸಬೇಕೆಂದೂ, ೫ ವರ್ಷದೊಳಗಿನ ಮಕ್ಕಳು ಬರಬಾರದೆಂದೂ ವಿದ್ಯಾರ್ಥಿ ಸಂಘದವರು ಪ್ರಾರ್ಥಿಸಿದ್ದಾರೆ.

—

ನಕಲಿ ಕೇಂಬ್ರಿಡ್ಜ್ ಪದವೀಧರನ ದಸ್ತಗಿರಿ

ಕೊಯಮತ್ತೂರಿಗೆ ಸೇರಿದ ರಾಜ ಅಲಿಯಾಸ್ ರಂಗಾಚಾರಿ ಅಲಿಯಾಸ್ ಶ್ರೀನಿವಾಸಾಚಾರಿ ಎಂಬುವನು ತಾನು ಕೇಂಬ್ರಿಡ್ಜ್ ಪದವೀಧರನೆಂದೂ ಮತ್ತು ಕೊಯಮತ್ತೂರಿನ ಪ್ರೊ|| [illegible] ಸಂಬಂಧಿಯೆಂದೂ ಮೋಸದಿಂದ ತಿರುಗುತ್ತಿದ್ದವನನ್ನು ಕರ್ನೂಲಿನಲ್ಲಿ ಪೋಲೀಸರು ದಸ್ತಗಿರಿ ಮಾಡಿ, ಮೊಕದ್ದಮೆಯನ್ನು ಹೂಡಿದ್ದಾರೆ.

—

ಉಕ್ರೇನಿನ ಮುಖ್ಯ ಪಟ್ಟಣದಿಂದ ಜರ್ಮನರ ಓಟ

ರಷ್ಯದಲ್ಲಿ ನೀಪರ್ ನದಿ ತಿರುಗಣೆಯಲ್ಲಿ [illegible] ಮುಖ್ಯ ನಗರವಾದ ನೀಪ್ರೊಪೆಟ್ರೋವಸ್ಕನ್ನು ರಷ್ಯನರು ಪುನಃ ವಶಪಡಿಸಿಕೊಂಡರು. ನಗರದ ಸುತ್ತಲೂ ಇದ್ದ ಜರ್ಮನ್ ಪ್ರಧಾನ ಸ್ಥಾನಗಳನ್ನು ಧ್ವಂಸಮಾಡಿ ರಷ್ಯನರು ನಗರವನ್ನು ಪ್ರವೇಶಿಸಿದರು.

ಈ ನಗರದಿಂದ ಹಿಮ್ಮೆಟ್ಟುತ್ತಿರುವ ಜರ್ಮನ್ ಸೈನಿಕರು ತಪ್ಪಿಸಿಕೊಳ್ಳುವ ದಕ್ಷಿಣದ ಮಾರ್ಗದಲ್ಲಿ ಪ್ರಮುಖ ನಗರವೆನಿಸಿದ ಕ್ರಿವಿಯೊರಾಗ್ ನಗರದ ಹೊರಭಾಗದಲ್ಲಿ ಈಗ ರಷ್ಯ ಸೈನಿಕರು [illegible] ನಗರದ [illegible] ಹೋರಾಡುತ್ತಿದ್ದಾರೆ

ಕ್ರಿಸ್‌ಮಸ್‌ನೊಳಗಾಗಿ ನಾಜಿಗಳು ಸೋಲುವರೆ ?

ಬರುವ ಕ್ರಿಸ್‌ಮಸ್‌ನೊಳಗಾಗಿ ಜರ್ಮನಿಯನ್ನು ಬ್ರಿಟನ್ ಮತ್ತು ಅಮೆರಿಕ ಸೋಲಿಸಬಹುದೆಂದು ಅನೇಕ ಜರ್ಮನರು ನಂಬಿದ್ದಾರೆಂದು ಬಿಡುಗಡೆಯಾದ ಬ್ರಿ|| ಸೈನಿಕರು ತಿಳಿಸಿದ್ದಾರೆ. ಈ ವರ್ಷದಿಂದೀಚೆಗೆ ನಡೆದ ವಿಮಾನದ ಉಗ್ರ ಕಾರ್ಯಾಚರಣೆಯಿಂದ ಜರ್ಮನಿಯಲ್ಲಿ ನಿರಾಶೆ ತಲೆದೋರಿ ಜನಗಳು ಒಪ್ಪದವರೇದರೆ ಬೇರೆ, ರಷ್ಯನ್ ಸೈನ್ಯ ಬರ್ಲಿನ್‌ಗೆ ಬರುವುದಕ್ಕಿಂತ ಮುಂಚೆಯೇ ಬ್ರಿ|| ಮತ್ತು ಅಮೆರಿಕ ಸೈನ್ಯ ಬರಲೆಂದು ಹಾರೈಸುತ್ತಿದ್ದಾರೆ.

ಜರ್ಮನ್-ಬಾಲ್ಕನ್ ಸಂಧಾನ ಹಂಚಿಕೆ

ಜರ್ಮನ್-ಬಾಲ್ಕನ್ ಸಂಧಾನ ಹಂಚಿಕೆ ವಿಚಾರದಲ್ಲಿ ಮಾತುಕತೆ ನಡೆಯುತ್ತಿರುವುದೆಂದೂ, ಈ ಹಂಚಿಕೆ ಪ್ರಕಾರ, ನೂತನವಾಗಿ ಸರ್ಬಿಯಾ-ಮಾಂಟಿನಿಗ್ರೋ ಸಂಸ್ಥಾನವನ್ನು ಸ್ಥಾಪಿಸಲು ಬಲ್ಗೇರಿಯಾ ದೇಶವು ತನ್ನ ಆಕ್ರಮಣ ಗಡಿ ಪ್ರದೇಶದಲ್ಲಿ ಸ್ವಲ್ಪ ಬದಲಾವಣೆಗೆ ಒಪ್ಪಬೇಕೆಂದು ತಿಳಿಸಲಾಗಿದೆಯೆಂದು ಸೋಫಿಯಾ ಬಾತ್ಮೀದಾರರೊಬ್ಬರು ತಿಳಿಸುತ್ತಾರೆ.

ರಾಜಕೀಯ ಬಿಕ್ಕಟ್ಟು ಬಗೆಹರಿಸಬೇಕು

ಬಳ್ಳಾರಿಯಲ್ಲಿ ಸೇರಿದ್ದ ಆಂಧ್ರ ಮಹಾಸಭಾ ಸಮ್ಮೇಳನವು ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಬೇಕೆಂದೂ, ಅದಕ್ಕಾಗಿ ಬಂಧನದಲ್ಲಿರುವ ಕಾಂಗ್ರೆಸ್ ನಾಯಕರನ್ನು ಬಿಡುಗಡೆಮಾಡಿ, ಒಪ್ಪಂದ ನಡೆಸಲು ಮಾತುಕತೆ ಪ್ರಾರಂಭಿಸಬೇಕೆಂದು ಒತ್ತಾಯ ಪಡಿಸುವ ನಿರ್ಣಯವೊಂದನ್ನು ಅನುಮೋದಿಸಲಾಗಿದೆ

ರಾಜಕೀಯ ವಿಷಯಗಳನ್ನು ಚರ್ಚಿಸಲು ವೈಸರಾಯ್-ಗೌರ್ನರ್‌ಗಳ ಭೇಟಿ?

ಪ್ರಾಂತ್ಯಗಳ ಗೌರ್ನರ್‌ಗಳೆಲ್ಲರೂ ವೈಸರಾಯರ ಭೇಟಿಗೋಸ್ಕರ ಡೆಲ್ಲಿಗೆ ಹೋಗಲಿರುವರೆಂದೂ, [illegible] ಆಗ ರಾಜಕೀಯ [illegible] ಮಾತುಕತೆ ನಡೆಯಲಿದೆಯೆಂದು ಹೇಳಲಾಗಿದೆ.

ಜಪಾನಿನ ಕಾರ್ಯಕ್ರಮ

ಜಪಾನಿನ ಇಂಪೀರಿಯಲ್ ಡಯಟ್ ಅಧಿವೇಶನವು ನಿನ್ನೆ ಪ್ರಾರಂಭವಾಗಿ, ಮುಂದೆ ಕೈಗೊಳ್ಳಬೇಕಾದ ಮೂರು ಕಾರ್ಯಕ್ರಮಗಳನ್ನು ವಿವರಿಸಲಾಗಿದೆ

೧) ಯುದ್ಧದ ರೀತಿಯ ಮೇಲೆ ಒಳದೇಶದ ರಚನಾಕ್ರಮವನ್ನು ಬದಲಾಯಿಸುವುದು;

೨) ಆಡಳಿತ ಮತ್ತು ಅಧಿಕಾರ ವಿಚಾರದಲ್ಲಿ ಏಕೀಭಾವವಿರುವುದು;

೩) ವಿದೇಶಾಂಗ ನೀತಿಯಲ್ಲಿ ಬಿಡುಗಡೆಯ ಕಾರ್ಯಕ್ರಮ ತೆಗೆದುಕೊಳ್ಳುವುದು.

ಕಾಕ್ಸ್‌ಬಜಾರಿನಲ್ಲಿ ಮೇಲೆ ಶತ್ರು ವಿಮಾನ ಧಾಳಿ

ರಂಗೂನ್ ರೈಲ್ವೆ ಸ್ಟೇಷನ್ ಮತ್ತು ಅಕ್ಯಾಬ್ ಮೇಲೆ ಬ್ರಿ|| ವಿಮಾನಗಳು ಉಗ್ರ ಧಾಳಿ ನಡೆಸಿ ಬಾಂಬುಗಳನ್ನು ಸುರಿಸಿ ಬೆಂಕಿ ಜ್ವಾಲೆ ಉಂಟುಮಾಡಿವೆ

ಕಾಕ್ಸ್‌ಬಜಾರ್ ಮೇಲೆ ಜಪಾನ್ ವಿಮಾನಗಳು ಧಾಳಿನಡೆಸಿ ಬಾಂಬುಗಳನ್ನು ಹಾಕಿದುವೆಂದೂ ಮಿಲಿಟರಿ ಸ್ಥಾನಗಳಿಗೇನೂ ನಷ್ಟವಾಗಿಲ್ಲವೆಂದೂ, ಆದರೆ ನಾಗರೀಕರಿಗೆ ಸ್ವಲ್ಪ ಸಾವು-ನೋವು ಉಂಟಾಗಿದೆಯೆಂದೂ ಪ್ರಕಟವಾಗಿದೆ.

ಎಲೆಗಳನ್ನು ತಿಂದು ಜೀವಿಸುತ್ತಿದ್ದಾರೆ

ಢಕ್ಕಾ ಜಿಲ್ಲೆಯ ಗ್ರಾಮಾಂತರಗಳಲ್ಲಿ ಆಹಾರ ಅಭಾವ ಅತಿ ಹೆಚ್ಚಿದ್ದು ಬ್ಲಾಕ್ ಮಾರ್ಕೆಟ್ಟಿನಲ್ಲಿ ದೊರೆಯುವ ಅಲ್ಪ ಸ್ವಲ್ಪ ಅಕ್ಕಿಯನ್ನು ಮಣಕ್ಕೆ ೬೦ ರೂಪಾಯಿಯಂತೆ ಮಾರುತ್ತಿರುವರು. ಅನೇಕ ಹಳ್ಳಿಯಲ್ಲಿ ಜನರು ಕ್ಷಾಮಕ್ಕೆ ತುತ್ತಾಗಿ ಎಲೆಗಳನ್ನು ತಿಂದು ಜೀವಿಸುತ್ತಿರುವರು

೧ ವಾರದಲ್ಲಿ ೨,೧೫೫ ಮಂದಿ ಮರಣ

[illegible] ಕಳೆದ ವಾರ [illegible] ಮಂದಿ ಮರಣ ಹೊಂದಿದರೆಂದೂ ಹೇಳಲಾಗಿದೆ.

ಬಂಗಾಳದಲ್ಲಿ ಅನ್ನಾಭಾವದ ಜೊತೆಗೆ ವ್ಯಾಧಿ ಪೀಡೆ

ಬಂಗಾಳದಲ್ಲಿ ಅನ್ನದ ಕ್ಷಾಮದ ಜೊತೆಗೆ ಕಾಲರಾ, ಮಲೇರಿಯಾ, ಆಮಶಂಕೆ ವ್ಯಾಧಿಗಳು ತಲೆದೋರಿ ಪರಿಸ್ಥಿತಿಯು ತುಂಬಾ ಕೆಟ್ಟಿದೆಯೆಂದು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ೨ ವಾರ [illegible] ಕ್ಷಾಮಪೀಡಿತ ಪ್ರದೇಶಗಳಲ್ಲಿ ಸಂಚರಿಸಿ ಹೇಳಿಕೆಯನ್ನು ಇತ್ತಿದ್ದಾರೆ.

"ಆಹಾರ ಅಭಾವ ಸ್ಥಿತಿ ದಿನದಿನಕ್ಕೆ ಕೆಡುತ್ತಿದೆ ಕಾಮನ್ಸ್ ಸಭೆಯಲ್ಲಿ ಅಮೆರಿಯವರು ಹೇಳಿರುವ ವಿರೋಧ ಪರಿಸ್ಥಿತಿಯೇ ಅಲ್ಲದೆ, ಈ ಕ್ಷಾಮದ ಜೊತೆಗೆ ಸಾಂಕ್ರಾಮಿಕ ರೋಗಗಳು ಕಾಡ್ಗಿಚ್ಚಿನಂತೆ ಹರಡುತ್ತಿವೆ. ನಗರಗಳ ಮತ್ತು ಹಳ್ಳಿಗಳ ಆರೋಗ್ಯ ರಕ್ಷಣೆ ಅಲಕ್ಷಿಸಲ್ಪಟ್ಟಿದೆ. ವೈದ್ಯ ಸಹಾಯ ದೊರೆಯುತ್ತಲೇ ಇಲ್ಲ. ಎಷ್ಟೋ ಎಮರ್ಜನ್ಸಿ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲದ್ದರಿಂದ ಏನನ್ನೂ ಮಾಡಲೂ ಅಶಕ್ತರಾಗಿವೆಯೆಂದು ತಿಳಿಸಿದ್ದಾರೆ

ಅನ್ನವಿಲ್ಲದ ಸತಿಪತಿಗಳ ಘೋರ ಮರಣ

ಡಕ್ಕಾದಲ್ಲಿ ಅನ್ನ ಸಿಕ್ಕದೆ ಒಬ್ಬ ಬೆಸ್ತರವನು ತನ್ನ ಮಗು ಮತ್ತು ಹೆಂಡತಿಯೊಂದಿಗೆ ಓಡುತ್ತಿರುವ ರೈಲ್ವೆಗಾಡಿಯ ಮುಂದೆ ಬಿದ್ದು ಪ್ರಾಣಬಿಟ್ಟ ಘೋರ ಮರಣದ ಸಂಗತಿ ವರದಿಯಾಗಿದೆ. ಸತಿಪತಿಗಳು ತುಂಡಾಗಿ ಕೊಲ್ಲಲ್ಪಟ್ಟರು. ಆದರೆ, ಮಗುವು ಮಾತ್ರ ಬದುಕಿಕೊಂಡಿದೆ

ಆಹಾರಕ್ಕಿಂತ ಶಸ್ತ್ರಾಸ್ತ್ರವೇ ಮುಖ್ಯ

ಭಾರತಕ್ಕೆ ಆಹಾರ ಧಾನ್ಯಗಳನ್ನು ಕಳುಹಿಸಲು ಹಡಗುಗಳ ಸೌಕರ್ಯವನ್ನು ಕಲ್ಪಿಸಲು ಇಂಡಿಯಾ ಆಫೀಸು ಆಲೋಚಿಸುತ್ತಿದ್ದರೂ, ಮೊದಲು ಸೈನ್ಯಕ್ಕೆ ಶಸ್ತ್ರಾಸ್ತ್ರಗಳನ್ನು ಕಳಿಸಲು ಸರ್ಕಾರದ ನೀತಿ ಎಂದು ಬ್ರಿ|| ಇಂಡಿಯಾ ಸೆಕ್ರೆಟರಿಯವರಾದ ಮಿ|| ಅಮೆರಿಯವರು ಟ್ರೇಡ್ ಯೂನಿಯನ್ ಸಂಘದ ಸದಸ್ಯರ ನಿಯೋಗಕ್ಕೆ ತಿಳಿಸಿದ್ದಾರೆ

ಜರ್ಮನರ ವಿಪತ್ತು

ರಷ್ಯದ ಮುಖ್ಯ ಸೈನ್ಯಾಧಿಕಾರಿ ಕೇಂದ್ರವಾದ [illegible] ಮತ್ತು ನಿಕೊಪೋಲ್ ಪ್ರದೇಶವು ಕೈಬಿಡುವವರೆಗೂ ಜರ್ಮನರಿಗೆ [illegible] ಹೇಳಲಾಗಿದೆ [illegible] ಕೋಟೆಗಳನ್ನು ಕಟ್ಟಿದ [illegible] ಹೇಳಲಾಗಿದೆ.

ಜಪಾನರ ನೌಕಾ ಅಭಾವ

ಜಪಾನಿಗೆ ನೌಕಾ ಅಭಾವವು [illegible] ಹೇಳಲಾಗಿದೆ.

—

[illegible]

ಟಿ. ಜಿ. ರಾಮಯ್ಯರ್‌ರಿಗೆ ಬಿಕನೀರ್ ಮಂತ್ರಿಪದವಿ

ಬೆಂಗಳೂರು ೨೬

ರಾಜಸೇವಾ ಪ್ರಸಕ್ತ ಟಿ. ಜಿ. ರಾಮಯ್ಯರ್‌ರವರು ಬಿಕನೀರ್ ಸಂಸ್ಥಾನದ ಡೆವಲಪ್‌ಮೆಂಟ್ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರೆಂದು ವರದಿಯಾಗಿದೆ.

ಶಿಕ್ಷಣ ಸಮ್ಮೇಳನ

ಮೈಸೂರು ಸಂಸ್ಥಾನದ ಎಜುಕೇಷನ್ ಲೀಗ್ ಸಮ್ಮೇಳನವು ಜನವರಿ ೧೫, ೧೬ ಮತ್ತು ೧೭ ನೇ ತಾ॥ ಬೆಂಗಳೂರಿನಲ್ಲಿ ನಡೆಯುವುದು.

ಫುಡ್ ಇನ್ಸ್‌ಪೆಕ್ಟರೆಂದು ಮೋಸಮಾಡಿದ ಪ್ರಸಂಗ

ರಣಾಸಿಂಗ್ ಪೇಟೆಯ ಶೀನಗಿರಿ ಎಂಬುವನು ತಾನು ಫುಡ್ ಇನ್ಸ್‌ಪೆಕ್ಟರೆಂದು ಅರಳೀಪೇಟೆಯ ಕೃಷ್ಣ ಹೋಟೆಲಿಗೆ ಹೋಗಿ ಅಧಿಕಾರಿಗಳು ವಶಪಡಿಸಿಕೊಂಡಿರುವ ಪದಾರ್ಥಗಳನ್ನು ವಾಪಸು ಕೊಡಿಸುವುದಾಗಿಯೂ, ೧೦೦ ರೂ. ಕೊಡಬೇಕೆಂದೂ ತಿಳಿಸಿ, ಮಾಲೀಕರಾದ ಶ್ರೀ ಹಿರಣ್ಣಯ್ಯ ಎಂಬುವರಿಂದ ೩೦ ರೂ. ತೆಗೆದುಕೊಂಡು ಮೋಸ ಪಡಿಸಿ ಹೋದನೆಂದು ಪೋಲೀಸರಿಗೆ ದೂರು ಬಂದಿದೆ.

—

೧೫೩ ಜಪಾನಿ ವಿಮಾನ ನಾಶ

ಜಪಾನರ ಮುಖ್ಯ ವಿಮಾನ ಮತ್ತು ನೌಕಾ ಕೇಂದ್ರವಾದ ರಾಬೂಲ್ ಮೇಲೆ ೩೦೦ ಮಿತ್ರ ವಿಮಾನಗಳು ಆಕ್ರಮಣ ನಡೆಸಿ, ೧೫೩ ಶತ್ರು ವಿಮಾನಗಳನ್ನು ನಾಶ ಮಾಡಿದುವು.

ಪತ್ರ ವ್ಯವಹಾರ

ರಾಜಧಾನಿಯಲ್ಲಿ ಬಡವರಿಗೆ ಬದುಕಲು ದಾರಿಯಿಲ್ಲ

ಇತ್ತೀಚೆಗೆ ರಾಜಧಾನಿಯಲ್ಲಿ ಅಕ್ಕಿಯ ಅಭಾವ ವಿಪರೀತವಾಗಿದೆ. ಅಧಿಕಾರಿಗಳಿಗೆ ಹೇಳಿದರೆ "ಎಲ್ಲಾ ಸರಿಯಾಗಿದೆ" ಎನ್ನುತ್ತಾರೆ. ನಾಲ್ಕಾರು ಮೇಲೆ ಡಿಪೋಗಳಲ್ಲಿ ಅಕ್ಕಿ ಸಿಕ್ಕುವುದಿಲ್ಲ. ಅದೂ ಎಲ್ಲರಿಗೂ ಇಲ್ಲ. ಈಗ ಡಿಪೋಗಳಿಗೆ ಸಪ್ಲೈ ಸಹಾ ಕಮ್ಮಿಯಂತೆ. ಮೈಸೂರು ಜಿಲ್ಲೆಯಲ್ಲೇ ಲಕ್ಷಾಂತರ ಪಲ್ಲಾ ಕಮ್ಯಾಂಡಿಯರಿಂಗ್ ಮಾಡಿದ ದವಸ ಎಲ್ಲಿ ಹೋಯಿತೋ ಗೊತ್ತಿಲ್ಲ.

ಯಾರೋ ಸಂಗ್ರಹಿಸುತ್ತಿದ್ದಾರಂತೆ! ರೇಷನಿಂಗ್ ಶುರುವಾಗುತ್ತದಂತೆ. ಅದ್ದರಿಂದ ದಿನಗೂಲಿಯ ಬಡವರಿಗೆ ತಿನ್ನಲು ಅಕ್ಕಿಯಿಲ್ಲ! ಬದುಕಲು ಬೇರೆ ದಾರಿಯಿಲ್ಲ! ನಾನಾ ವಿಧವಾದ ದೇಶಸೇವೆ ಮಾಡಿದ ಮಹಾ ಮಹಾ ಮಹನೀಯರುಗಳು ಈ ನಗರದಲ್ಲುಂಟು. ಆದರೆ ಈ ಕಷ್ಟವನ್ನು ಪರಿಹಾರ ಮಾಡುವಂಥ ಮಹನೀಯರು ಮೈಸೂರಿನಲ್ಲಿದ್ದಾರೆಯೇ?

ಎ. ಎಸ್.

—

ನ್ಯೂಗಿನಿಯಾ ಪ್ರದೇಶದಲ್ಲಿ ಆಸ್ಟ್ರೇಲಿಯಾ ಸೈನ್ಯ ವ್ಯೂಹಗಳನ್ನು ಭೇದಿಸಿಕೊಂಡು ಫಿನ್‌ಷ್‌ಹೇಫನ್ ತೀರಪ್ರದೇಶದಿಂದ ತಪ್ಪಿಸಿಕೊಂಡುಹೋಗಲು ನಡೆಸಿದ ಜಪಾನಿಗಳ ಯತ್ನ ವಿಫಲವಾಯಿತು.

ವಿವಾಕ್ ಬಳಿ, ೧೬ ಜಪಾನಿ ದೋಣಿಗಳನ್ನು ಮುಳುಗಿಸಲಾಯಿತು.

ಕಾಫಿ ಪತೋಟಿ

ಸಂಸ್ಥಾನದಲ್ಲಿ ಬೆಳೆಯುವ ೧೫ ಸಾವಿರ ಟನ್‌ಗಳಷ್ಟು ಕಾಫಿಯನ್ನು ಕಾಫಿ ಬೋರ್ಡ್‌ನವರೇ ಕೊಂಡು ಲೈಸೆನ್ಸ್ ಪಡೆದ ವ್ಯಾಪಾರಿಗಾರರಿಗೆ ೫ ಟನ್‌ಗಳಷ್ಟು ಕೊಡಲು ನಿರ್ಧರಿಸಿದ್ದಾರೆ. ಸಟ್ಟಾ ವ್ಯಾಪಾರಕ್ಕೆ ಅವಕಾಶವಿಲ್ಲದಂತೆ ಮಾಡಬೇಕೆಂದೂ ಮತ್ತು ಚಿಲ್ಲರೆ ಬೆಲೆಯನ್ನು ಇಂಡಿಯಾ ಸರ್ಕಾರದವರು ನಿರ್ಧರಿಸಬೇಕೆಂದೂ ಕೋರಿದ್ದಾರೆ.

ವಿಯನ್ನಾ ಮೇಲೆ ಬಾಂಬುಗಳು

ವಿಯನ್ನಾ ನಗರದ ಮೇಲೆ ಅಮೆರಿಕ ವಿಮಾನಗಳು ಧಾಳಿ ನಡೆಸಿ, ಬಾಂಬು ಸುರಿಸಿದುವೆಂದು ಜರ್ಮನ್ ವಾರ್ತಾ ಸಂಸ್ಥೆ ತಿಳಿಸಿದೆ.

ಪಶ್ಚಿಮ ಸ್ಮೋಲೆನೆಸ್ಕ್ ಬಳಿ ರಷ್ಯನರ ಮುಂದೋಟ

ಪಶ್ಚಿಮ ಸ್ಮೋಲೆನೆಸ್ಕ್‌ಗೆ ಸೇರಿದ ವಿಭಾಗದಲ್ಲಿ ರಷ್ಯನರು ನೂತನ ಪ್ರತಿಭಟನೆ ಆರಂಭಿಸಿ, ಅನೇಕ ಪ್ರದೇಶಗಳನ್ನು ಆಕ್ರಮಿಸಿದ್ದಾರೆಂದು ವರದಿಯಾಗಿದೆ.

೬ ಜಪಾನಿ ನೌಕೆಗಳ ನಾಶ

ನ್ಯೂ ಬ್ರಿಟನ್ನಿನ ಗ್ಲೌಸ್ಟರ್ ಕೊಲ್ಲಿಯ ಬಳಿ ೬ ಜಪಾನಿ ನೌಕೆಗಳನ್ನು ಮುಳುಗಿಸಲಾಯಿತೆಂದು ಪ್ರಕಟವಾಗಿದೆ.

ವಿಮಾನಶಾಖೆಯ ಅಧಿಕಾರಿಗಳು

ಇಂಡಿಯಾ ಸರ್ಕಾರದ ಸರಬರಾಯಿ ಶಾಖೆಯ ವಿಮಾನ ವಿಭಾಗದ ಡೈರೆಕ್ಟರ್ ಜನರಲ್ ಎಂಬ ಹೊಸ ಹುದ್ದೆಯನ್ನು ವೈಸರಾಯರು ಏರ್ಪಡಿಸಿದ್ದಾರೆ. ವಿಮಾನಗಳ ಉತ್ಪತ್ತಿ, ರಿಪೇರಿ ಮೊದಲಾದ ಕೆಲಸಗಳನ್ನು ಈ ಅಧಿಕಾರಿಗಳು ನೋಡಿಕೊಳ್ಳುವರು. ಬ್ರಿಟನ್ನಿನ ವಿಮಾನ ಶಾಖೆಯ ಅಧಿಕಾರಿಗಳೊಬ್ಬರು ಈ ಹುದ್ದೆಗೆ ಬರಲಿದ್ದಾರೆ.

ಅಮೆರಿ ನಿವೃತ್ತರಾಗುವರೆ?

ಬ್ರಿ॥ ಮಂಡಲದಲ್ಲಿ ಮಹತ್ತರ ಬದಲಾವಣೆಗಳಾಗುವ ಕಾಲ ಬಂದಿದೆಯೆಂದು ಹೇಳಲಾಗಿದೆ. ಅಮೆರಿಯವರು ಭಾರತದ ಇಂದಿನ ದುಸ್ಥಿತಿಗೆ ಅವಕಾಶಮಾಡಿಕೊಟ್ಟರೆಂಬ ಟೀಕೆಗಳು ಹೆಚ್ಚಾಗಿ ಬರುತ್ತಿವೆ. ಅವರು ನಿವೃತ್ತರಾಗಬೇಕೆಂದು ಅನೇಕಸಾರಿ ಸೂಚಿಸಲ್ಪಟ್ಟಿದೆ. ರಾಜಕೀಯ ಸಂಪ್ರದಾಯಗಳನ್ನು ಅವರು ಗೌರವಿಸುವುದಾದರೆ ಅವರೇ ತಮ್ಮ ಹುದ್ದೆಗೆ ರಾಜೀನಾಮೆ ಕೊಡಬೇಕಾಗಿದೆ. ಅವರ ಭವಿಷ್ಯ ಅನಿಶ್ಚಿತವಾಗಿದೆಯೆಂದು ಹೇಳಲಾಗಿದೆ.

ಫ್ಯಾಸಿಸಂ ಅಳಿಸಲು ಬಡೋಗ್ಲಿ ಸಂಕಲ್ಪ

ಫ್ಯಾಸಿಸಂ ಅಳಿಸಿ, ಮಿತ್ರ ರಾಷ್ಟ್ರಗಳೊಡನೆ ಸಹಕರಿಸಲು ತಾವು ಸಂಕಲ್ಪಮಾಡಿರುವುದಾಗಿ ಬಡೋಗ್ಲಿಯವರು ತಿಳಿಸಿದ್ದಾರೆ. ಯುದ್ಧ ಮುಗಿದ ಕೂಡಲೆ ತಾವು ಪ್ರಧಾನಮಾತ್ಯಗಿರಿಗೆ ರಾಜೀನಾಮೆಕೊಟ್ಟು, ರಾಜಕೀಯ ಪ್ರಮುಖರ ಮಂತ್ರಿ ವರ್ಗದ ವಶಕ್ಕೆ ಇಟಲಿ ಭವಿಷ್ಯವನ್ನು ಒಪ್ಪಿಸುವುದಾಗಿ ಹೇಳಿದ್ದಾರೆ.

ಮುಸ್ಲಿಂ ಲೀಗಿಗೆ ರಾಜೀನಾಮೆ

ಸಿಂದ್ ಪ್ರಾಂತ್ಯದ ಮುಸ್ಲಿಂ ಲೀಗಿನ ಕಾರ್ಯದರ್ಶಿಗಳಾದ ಷೇಕ್ ಅಬ್ದುಲ್ ಮಜೀದ್‌ರವರು ಮುಸ್ಲಿಂ ಲೀಗಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

ಸೂಚನೆ

ನರಕಚತುರ್ದಶಿ ಪ್ರಯುಕ್ತ ನಾಳೆ ದಿನ ನಮ್ಮ ಪತ್ರಿಕೆ ಪ್ರಕಟವಾಗುವುದಿಲ್ಲ.

ವ್ಯವಸ್ಥಾಪಕ, ಸಾಧ್ವಿ.

Edited, printed and published by A. R. Nagarajan, at the Sadhvi Press, D. Subbiah Road, Mysore.

ಪ್ರತಿ ದಿನ 4 ಘಂಟೆಗೆ ಮ್ಯಾಟಿನಿ ಇದೆ

ನ್ಯೂ ಅಪೇರಾ ಟಾಕೀಸ್

ತಾ॥ ೨೮—೧೦—೪೩ ರಿಂದ

ಭಾನುಮತಿ, ಸೂರ್ಯಕುಮಾರಿ, ಶಾಂತಕುಮಾರಿ, ಅದ್ದಂಕಿ ಮತ್ತು ಮೈಸೂರು ಹಿರಣ್ಣಯ್ಯ ನಟಿಸಿರುವ

ತೆಲುಗು **ಕೃಷ್ಣಪ್ರೇಮ** ತೆಲುಗು

ನೋಡಿದಿರಾ? ದೀಪಾವಳಿ ಹಬ್ಬಕ್ಕೆ ಅರ್ಜೆಂಟಾಗಿ!

ಸೀರೆ ಮತ್ತು ಹೊಸ ಉಡುಪುಗಳಿಗೆ

ಏನು ಮಾಡೋಣ ಎಂದು ಯೋಚಿಸಬೇಡಿ.

ಹೊಸ ಮಾದರಿಯಲ್ಲಿ, ನಯ ನಾಜೂಕಾಗಿ, ಎಲ್ಲರಿಗೂ ಆಗುವಂತೆ ಎಲ್ಲಾ ಸೈಜಿನಲ್ಲೂ ಹೊಲಿದು ಸಿದ್ಧಪಡಿಸಿದ

ರೆಡಿ-ಮೇಡ್ (READY-MADE)

ಉಡುಪುಗಳನ್ನು ತೆಗೆದುಕೊಳ್ಳಿ. ನೀವು ಹೊಲಿಸುವುದಕ್ಕಿಂತ ಶೇ॥ ೨೦ ರಷ್ಟು ಕಡಿಮೆ ಬೆಲೆಗೆ ಸಿಕ್ಕುತ್ತೆ.

ಬನಾರಸ್‌ನಾಗಾರದಿಂದ ಬಂದು 'ಸೀರೆ ಕಣ' ಪನ್ನಿರೆಗಳನ್ನು ಬನಾರಸ್ ಬೆಲೆಗೇ ಕೊಡುತ್ತೇವೆ. ನಮ್ಮ ಅಂಗಡಿಯ ಶೋ ರೂಮ್ ಇದ್ದಾರೆ. ಬಂದು ನೋಡಿ ಕಣ್ಣಿಗಾನಂದವಾದುದನ್ನು ಕೊಂಡುಕೊಳ್ಳಿ.

ಸ್ಥಳ — ಜಿ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್ಸ್

ಜನಾಹಿರಿ ಮತ್ತು ಬಟ್ಟೆವ್ಯಾಪಾರಿಗಳು,

ಸಯ್ಯಾಜಿರಾವ್ ರೋಡ್, ಮೈಸೂರು.

Grand Music Performance

Under the auspices of

Ganavisharada Bidaram Krishnappa's

Sree Prasanna Seetarama Mandir, Mysore

on Thursday the 28th Oct, 1943.

Commencing at 6-30 p. m.

Sangithakalanidhi M. R. RY. TIGER VARADACHAR—Vocal

Astana Vidwan Sangitaratnam Mr. T. CHOWDIAH—Violin

M. R. RY. Vidwan T. M. PUTTASWAMIAH—Mrudangam

Admission to Non Members By Tickets

Ladies and Gentlemen 1—2—0, 0—9—0

Public patronage earnestly solicited.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೧೯೪೩ ರಿಂದ ಪ್ರತ್ಯೇಕವಾಗಿ ಸ್ತ್ರೀಯರಿಗೆ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮುಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ. ಸೂ. — ಚಿಲ್ಲರೆಯಾಗಿ ಪಾಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲೂ ರೇಷನ್ ಸಂಕ್ಷೇಪ ಆರ್ಡರ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ದೊರೆಯುತ್ತೆ.

ಸಂಪುಟ ೨] ಶುಕ್ರವಾರ ೨೯—೧೦—೪೩ [ಸಂಚಿಕೆ ೮೬

ಜರ್ಮನಿಗೆ ಕೊನೆಗಾಲ ಬಂದಿತೆ ?

ಫ್ರಾನ್ಸಿನಲ್ಲಿ ದಂಗೆಯು ಹೊಗೆಯಾಡುತ್ತಿದೆ

ಒಂದೂವರೆಸಾವು ಅವಲಕ್ಕಿ ಸಾಗಿಸಿದ್ದಕ್ಕೆ ೩೦೦ ರೂ. ದಂಡ

ದಿವಾನರಿಗೆ ೫ ಸಾವಿರ ರೂ. ಸಂಬಳ

ಮೈಸೂರು ೨೮

ಶ್ರೀಮನ್ಮಹಾರಾಜರವರು ದಿವಾನರಾದ ಪ್ರಧಾನ ಶಿರೋಮಣಿ ಎ. ಮಾಧವರಾಯರ ಸಂಬಳವನ್ನು ಅಕ್ಟೋಬರ್ ೨೮ ರಿಂದ ೫ ಸಹಸ್ರ ರೂಪಾಯಿಗಳೆಂದು ಗೊತ್ತುಮಾಡಿ ಅಪ್ಪಣೆ ದಯಪಾಲಿಸಲು ಸುಪ್ರೀತರಾಗಿದ್ದಾರೆ.

ಶ್ರೀ ರಾಘವೇಂದ್ರರಾಯರು ಸಿವಿಲ್ ಸಪ್ಲೈಸ್ ಡೈರೆಕ್ಟರಾದರು

ಮೈಸೂರು ಪೌರ ಸಭಾಧ್ಯಕ್ಷರಾದ ಶ್ರೀ ರಾಘವೇಂದ್ರರಾಯರನ್ನು ಸಿವಿಲ್ ಸಪ್ಲೈ ಡೈರೆಕ್ಟರಾಗಿ ಸರ್ಕಾರದವರು ನೇಮಿಸಿದ್ದಾರೆ. ಶ್ರೀ ಎಸ್. ನಾರಾಯಣರಾಯರಿಗೆ ನವಂಬರ್ ೧ ರಿಂದ ೧೫ ದಿನಗಳ ರಜಾ ಮಂಜೂರಾಗಿದೆ.

ಶ್ರೀ ಆರ್. ರಾಮಚಂದ್ರರಾವ್ ಪೊಂಬೆರೆಯವರನ್ನು ಮೈಸೂರು ಪೌರ ಸಭಾಧ್ಯಕ್ಷರಾಗಿ ನೇಮಿಸಲಾಗಿದೆ.

ರಜದಮೇಲಿರುವ ಶ್ರೀ ಸಫಿದಾರಾಕರವರನ್ನು ನ್ಯಾಷನಲ್ ವಾರ್ ಫ್ರಂಟ್ ಆರ್ಗನೈಜರಾಗಿ ನೇಮಿಸಲಾವುದೆಂದು ಹೇಳಲಾಗಿ.

ಶ್ರೀ ಖಾರರವರಿಗೆ ಒಂದು ವರ್ಷ ಜೀವದಾನವೆ ?

ಪೋಲೀಸ್ ಶಾಖಾ ಮುಖ್ಯಾಧಿಕಾರಿಗಳಾದ ಮಿ॥ ಎಂ. ಎ. ಖಾರರವರಿಗೆ ನವಂಬರ್ ೩೦॥೧೦ ರಿಂದ ೧ ವರ್ಷ ಕಾಲ ಜೀವದಾನ ಕೊಡಲಾಗುವುದೆಂದು ತಿಳಿಯಬರುತ್ತದೆ.

ನವಂಬರ್ ೧೨, ೧೩, ೧೪ ರಲ್ಲಿ ಸೆನ್ಸಸ್ ತೆಗೆದುಕೊಳ್ಳಲಾಗುವುದು

ರಾಜಧಾನಿಯಲ್ಲಿ ಮುಂದಿನ ಡಿಸೆಂಬರ್ ತಿಂಗಳಲ್ಲಿ ರೇಷನಿಂಗ್ ಜಾರಿಗೆ ತರುವ ಪ್ರಯುಕ್ತ, ನವಂಬರ್ ೧೨, ೧೩, ೧೪ ನೆಯ ತಾರೀಖುಗಳಲ್ಲಿ ಸೆನ್ಸಸ್ ತೆಗೆದುಕೊಳ್ಳಲಾಗುವುದು.

ದಿವಾನರ ಪ್ರವಾಸ

ನವಂಬರ್ ೧ ರಿಂದ ೩ ದಿನಗಳವರೆಗೆ ದಿವಾನರು ಹಾಸನ ಜಿಲ್ಲೆಯಲ್ಲಿ ಪ್ರವಾಸ ಮಾಡಿ, ಬೇಲೂರು, ಚನ್ನರಾಯಪಟ್ಟಣ, ಅರಸೀಕೆರೆ ಮತ್ತು ಹಾಸನಗಳಿಗೆ ಭೇಟಿ ಕೊಡುವರು.

ಧನ್ವಂತರಿ ಜಯಂತಿ

ಮೈಸೂರು ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜಿನ ಸಂಘದವರು ಶ್ರೀ ಧನ್ವಂತರಿ ಜಯಂತಿ ಪ್ರಯುಕ್ತ ನಿನ್ನೆ ಸಂಜೆ ಶ್ರೀ ತ್ಯಾಗರಾಜ ಸಂಗೀತ ಸಾಹಿತ್ಯ ಮಂಡಳಿಯವರ ಸಂಗೀತ ಕಛೇರಿಯನ್ನು ಏರ್ಪಡಿಸಿದ್ದರು. ಈ ದಿನ ಸಂಜೆ ೬ ಘಂಟೆಗೆ ಡಾ॥ ಎ. ಎಲ್. ಭಟ್ಟಾಚಾರ್ಯರ ಅಧ್ಯಕ್ಷತೆಯಲ್ಲಿ ಕವಿರಾಜ್ ಶ್ರೀ ಕೃಷ್ಣಶಾಸ್ತ್ರಿಗಳು 'ಜ್ವರ' ಎಂಬುದರ ಮೇಲೆ ಭಾಷಣ ಮಾಡುವರು.

ವಿದ್ಯಾರ್ಥಿಗಳಿಗೆ ಔತಣ

ಮೈಸೂರು ಶಾರದಾ ಮತ್ತು ವನಿತಾ ಶಾಲೆಯ ಸ್ಥಾಪಕರಾದ ದಿವಂಗತ ಶ್ರೀ ಎಂ. ಶ್ರೀನಿವಾಸರಾಯರ ವಾರ್ಷಿಕ ಶ್ರಾದ್ಧದ ಜ್ಞಾಪಕಾರ್ಥವಾಗಿ ಅವರ ಮಕ್ಕಳಾದ ಶ್ರೀ ಎಂ. ಪುಟ್ಟಣ್ಣರಾಯರು ೨೬ ನೇ ತಾ॥ ಆ ಶಾಲೆಯ ವಿದ್ಯಾರ್ಥಿಗಳಿಗೆ ಔತಣ ವನ್ನೇರ್ಪಡಿಸಿದ್ದರು.

೧॥ ಸಾವು ಅವಲಕ್ಕಿ ಸಾಗಿಸಿದ್ದಕ್ಕೆ ೩೦೦ ರೂ. ದಂಡ

ಮೈಸೂರು ೨೮

ಕೊಳ್ಳೇಗಾಲದ ತಾ॥ ಮಾಲೂರು ಗ್ರಾಮದ ಪಟೇಲ್ ಮತ್ತು ವಿಲೇಜ್ ಮುನ್ಸೀಫ್‌ರಾದ ಪಿ. ಸಾಂಬಮೂರ್ತಿಯವರು ಕೆ. ವಿ. ಮೋಟಾರ್ ಬಸ್ಸಿನಲ್ಲಿ ಸಂಸ್ಥಾನದ ಹೊರಕ್ಕೆ ಕಳ್ಳತನದಿಂದ ೩ ಸಾವು ತೊಗರಿಬೇಳೆಯನ್ನೂ, ೧॥ ಅವಲಕ್ಕಿಯನ್ನೂ ಮತ್ತು ಅರ್ಧ ಸೇರು ಸಕ್ಕರೆಯನ್ನೂ ಸಾಗಿಸುತ್ತಿದ್ದ ಕೇಸು ವಿಚಾರಣೆ ನಡೆಸಿ ಕೊಳ್ಳೇಗಾಲ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಮ್ಯಾ॥ ಶ್ರೀ ನರಸಿಂಹ ಅಯ್ಯಂಗಾರ್ಯರು ಆಪಾದಿತನಿಗೆ ೩೦೦ ರೂ. ದಂಡವನ್ನು ಕೊಡಬೇಕೆಂದೂ ತಪ್ಪಿದರೆ ೩ ತಿಂಗಳು ಶಿಕ್ಷೆ ಅನುಭವಿಸಬೇಕೆಂದೂ ಆಜ್ಞೆ ಮಾಡಿದ್ದಾರೆ.

ಕಳ್ಳತನದಿಂದ ಸಾಗಿಸುತ್ತಿದ್ದವರ ದಸ್ತಗಿರಿ

ಪೆಂಡ್ಯಾ ಪಟ್ಟಣ ತಾ॥ ಮಾವಕಲ್ ಹಾಡಿಗೆ ೫ ಮೈಲಿ ದೂರದಲ್ಲಿರುವ ಅನೆಟ ಕೂರ್ ಗೇಟಿನ ಹತ್ತಿರ ಜಫೀರ್ ಖಾನ್ ಮತ್ತು ಇತರ ೪ ಮಂದಿಗಳು ರಹದಾರಿಯಿಲ್ಲದೆ ಮೆಣಸಿನಕಾಯಿ ಚೀಲವನ್ನು ಕಳ್ಳತನದಿಂದ ಸಾಗಿಸುತ್ತಿದ್ದುದನ್ನು ಹುಣಸೂರ್ ತಾ॥ ಇನ್‌ಸ್ಪೆಕ್ಟರಾದ ಶ್ರೀ ಎಸ್. ನೀಲಕಂಠಾರಾಧ್ಯರು ಪತ್ತೆ ಹಚ್ಚಿ, ಅವರುಗಳನ್ನು ದಸ್ತಗಿರಿ ಮಾಡಿರುವರು.

ಜರ್ಮನಿಗೆ ವಿಪತ್ತು ಸಮೀಪಿಸಿದೆ

ರಷ್ಯದಲ್ಲಿ ಜರ್ಮನರಿಗೆ ಅಪಾರ ನಷ್ಟ ಉಂಟಾಗುತ್ತಿರುವುದರಿಂದ ಜರ್ಮನಿಯಲ್ಲಿ ಬಹು ಮುಖ್ಯ ಬದಲಾವಣೆಗಳಾಗಬಹುದೆಂದು ಊಹಿಸಲಾಗಿದೆ.

ಇಟಲಿಯಲ್ಲಿ ಫ್ಯಾಸಿಸ್ಟ್ ಆಡಳಿತ ಹೇಗೆ ಮುರಿದುಬಿದ್ದಿತೋ ಹಾಗೆಯೇ ಜರ್ಮನಿಯಲ್ಲಿ ಒಂದು ಭಾರಿ ವಿಪತ್ತು ಸಮೀಪಿಸುತ್ತಿದೆಯೆಂದು ಬರ್ಲಿನ್ನಿಂದ ಬಂದ ಜಾಕ್ಸ್ ಲೇಡಿಯೊಬ್ಬರು ತಿಳಿಸಿದ್ದಾರೆ. ಹಿಂದಿನ ಚಳಿಗಾಲದಿಂದ ಜರ್ಮನ್ ಸೈನಿಕರ ಸಂಖ್ಯೆ ಮತ್ತು ಶಕ್ತಿ ಅದೃಶ್ಯವಾಗುತ್ತಿದೆ. ... ಗಳ ಆಕ್ರಮಣದಿಂದ ಯುದ್ಧ ಕೈಗಾರಿಕೆಗೆ ಅಡಚಣೆ ಉಂಟಾಗಿದೆ.

ಗ್ರಾಮೋದ್ಧಾರ ಪ್ರಚಾರಕ್ಕೆ ಕನ್ನಡ ವಾರ ಪತ್ರಿಕೆ

ಬೆಂಗಳೂರು ೨೮

ಸಂಸ್ಥಾನದ ಗ್ರಾಮೋದ್ಧಾರ ಕೇಂದ್ರ ಸಲಹಾ ಸಮಿತಿ ಸಭೆಯು ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಸೇರಿ, ಗ್ರಾಮೋದ್ಧಾರ ಯೋಜನೆ ಪ್ರಚಾರಕ್ಕಾಗಿ ಒಂದು ವಾರ ಪತ್ರಿಕೆಯನ್ನು ಹೊರಡಿಸಬೇಕೆಂದು ತೀರ್ಮಾನಿಸಲಾಯಿತು. ಡಿಸೆಂಬರ್ ತಿಂಗಳ ಅಂತ್ಯದಲ್ಲಿ ಹೋಬಳಿ ಕೆಲಸಗಾರರ ಗ್ಯಾದರಿಂಗನ್ನು ಹಾಸನದಲ್ಲಿ ನಡೆಸಬೇಕೆಂದು ನಿರ್ಧರಿಸಲಾಯಿತು.

ಯಲಹಂಕ ಹೋಬಳಿಯ ಕೆಲವು ಹಳ್ಳಿಗಳಿಗೆ ೧ ಸಾವಿರ ಸಿಮೆಂಟ್ ಚೀಲಗಳನ್ನು ನಾಲ್ಕು ಮರದ ಬಾಗಿಲುಗಳನ್ನು ಕೊಡುವುದಾಗಿ ಧರ್ಮಪ್ರಕಾಶ ಶ್ರೀ ದೇವರಾವ್ ಶಿವರಾಂರವರು ತಿಳಿಸಿದರು.

ಅಧ್ಯಕ್ಷರ ಉಡುಪಿಗಾಗಿ ೧೦೦೦ ರೂ.

ಬೆಂಗಳೂರು ನಗರದ ಬಡವರಿಗೆ ಉಚಿತ ಆಹಾರವನ್ನು ಒದಗಿಸಲು ಕ್ಯಾಂಟೀನ್ ಏರ್ಪಡಿಸಲು ೫ ಸಾವಿರ ರೂ. ಪೌರ ಸಭೆಯವರು ಮಂಜೂರು ಮಾಡಿದರು.

ಅಧ್ಯಕ್ಷರು ಸಭಾಧ್ಯಕ್ಷತೆಯ ಕಾಲದಲ್ಲಿ ಧರಿಸಲು ವಿಶೇಷ ರೀತಿಯ ಉಡುಪಿ [ರೋಬ್ಸ್] ಗಾಗಿ ೧೦೦೦ ರೂ. ಕೊಡಬೇಕೆಂದು ನಿರ್ಧರಿಸಲಾಯಿತು.

ಸೌದೆ ರೇಷನಿಂಗ್

ಮದರಾಸಿನಲ್ಲಿ ಸೌದೆ ಅಭಾವವು ಹೆಚ್ಚುತ್ತಿರುವುದರಿಂದ ಸೌದೆ ರೇಷನಿಂಗ್ ತರಲು ಆಲೋಚಿಸುತ್ತಿರುವರೆಂದು ಹೇಳಲಾಗಿದೆ.

ಕೋತಿಯ ಕುಚೇಷ್ಟೆಯಿಂದ ಒಬ್ಬನ ಮರಣ

ಕಾಶಿ ನಗರದಲ್ಲಿ ಒಂದು ಕೋತಿಯ ಕುಚೇಷ್ಟೆಯಿಂದ ಒಬ್ಬನು ಮರಣ ಹೊಂದಿದ ಸಂಗತಿ ವರದಿಯಾಗಿದೆ. ... ಮನದ ಮೇಲೆ ಕುಳಿತಿದ್ದ ಮಂಗವು, ... ಭಾರಿ ಇಟ್ಟಿಗೆ ಒಂದು ತುಂಡನ್ನು ... ದಿಂದ ರಸ್ತೆಯಲ್ಲಿ ... ಹೋಗುತ್ತಿದ್ದ ... ಯನ ತಲೆಯ ಮೇಲೆ ಬಿದ್ದು ಅವನು ಅಲ್ಲೇ ಮರಣ ಹೊಂದಿದನು.

ಎಂ. ಜಿ. ಎಸ್. ಪಂದ್ಯಗಳು

ಮೈಸೂರು ೨೮

ಮೇಲ್ಕಂಡ ಪಂದ್ಯಗಳ ಆಶ್ರಯದಲ್ಲಿ, ನಿನ್ನೆ ಬೆಳಗ್ಗೆ ಸೆಂಟ್ರಲ್ ಕಾಲೇಜಿನವರು ಮೆಡಿಕಲ್ ಕಾಲೇಜಿನವರನ್ನು ... ಪಾಯಿಂಟುಗಳಿಂದಲೂ, ಮಹಾರಾಜಾ ಕಾಲೇಜಿನವರು ಇಂಜನಿಯರಿಂಗ್ ಕಾಲೇಜಿನವರನ್ನು ೩೪-೨೩ ಪಾಯಿಂಟುಗಳಿಂದಲೂ ಬ್ಯಾಸ್ಕೆಟ್‌ಬಾಲ್‌ನಲ್ಲಿ ಸೋಲಿಸಿದರು.

ಇದಿನ ಬೆಳಗ್ಗೆ ಬ್ಯಾಸ್ಕೆಟ್ ಬಾಲ್ ಪಂದ್ಯದಲ್ಲಿ ಮಹಾರಾಜಾ ಕಾಲೇಜಿನವರು ಸೆಂಟ್ರಲ್ ಕಾಲೇಜಿನವರನ್ನು ೨೯-೨೪ ಪಾಯಿಂಟುಗಳಿಂದ ಸೋಲಿಸಿದರು. ಇಂಜಿನಿಯರಿಂಗ್‌ರವರು, ಮೆಡಿಕಲ್ ಕಾಲೇಜಿನವರನ್ನು ೫೫-೨೪ ಪಾಯಿಂಟುಗಳಿಂದ ಸೋಲಿಸಿದರು.

ಫುಟ್‌ಬಾಲ್ ಪಂದ್ಯದಲ್ಲಿ ನಿನ್ನೆ ಸಂಜೆ ಮಹಾರಾಜಾ ಕಾಲೇಜಿನವರು ಇಂಜನಿಯರಿಂಗ್‌ರವರನ್ನು ೨ ಗೋಲಿನಿಂದ ಸೋಲಿಸಿದರು.

ಫ್ರಾನ್ಸಿನಲ್ಲಿ ದಂಗೆಯ ಸೂಚನೆ

ಫ್ರಾನ್ಸಿನಲ್ಲಿ ಎಲ್ಲೆಲ್ಲೂ ಅಶಾಂತಿ ತಲೆದೋರಿ, ವಿನಾಶ ಕೃತ್ಯಗಳಿಗೆ ಪ್ರಾರಂಭವಾಗಿದೆಯೆಂದೂ, ಇಷ್ಟರಲ್ಲೇ ಅನಾಯಾಸವಾಗಿ ತಲೆದೋರಿ ಒಂದು ದಂಗೆ ಏಳುವ ಸಂಭವವಿದೆಯೆಂದೂ ವಿಚಿ ರೇಡಿಯೋ ಬ್ರಾಡ್‌ಕ್ಯಾಸ್ಟ್ ಮಾಡಿದೆ. ಫ್ರಾನ್ಸಿನ ವಾತಾವರಣವು ದುಷ್ಪ್ರವೃತ್ತಿಗೆ ಸಿದ್ಧವಾಗಿದೆಯೆಂದು ಹೇಳಲಾಗಿದೆ.

ಮಾಸೋ ದ್ವೀಪದಲ್ಲಿ ಮಿತ್ರ ಸೈನ್ಯ

ಸಾಲೊಮನ್ಸ್‌ಗೆ ನೈಋತ್ಯ ದಿಕ್ಕಿನಲ್ಲಿರುವ ಮಾಸೋ ದ್ವೀಪದಲ್ಲಿ ಮಿತ್ರ ಸೈನ್ಯ ಬಂದಿಳಿದಿದೆಯೆಂದು ವರದಿಯಾಗಿದೆ.

ಹೆಚ್ಚು ಬೆಳೆ ಬೆಳೆಯಲು ೨ ಕೋಟಿ ರೂ.

ಹೆಚ್ಚು ಬೆಳೆ ಬೆಳೆಯುವ ಕಾರ್ಯಕ್ಕಾಗಿ ಭಾರತ ಸರ್ಕಾರದವರು ಪ್ರಾಂತಗಳಿಗೆ ಈ ವರ್ಷ ೨ ಕೋಟಿ ರೂ., ಕೊಟ್ಟಿರುವರು. ಇದರ ಪೈಕಿ, ಸುಮಾರು ಅರ್ಧಭಾಗ ಬಂಗಾಳ ಪ್ರಾಂತ್ಯಕ್ಕೇ ಕೊಡಲಾಗಿದೆ.

ಬಂಗಾಳಕ್ಕೆ ಕಾಲು ಕೋಟಿ ಟನ್ ಧಾನ್ಯ

ಬಂಗಾಳ ಪ್ರಾಂತ್ಯದಲ್ಲಿ ಆಹಾರ ಕೊರತೆಯನ್ನು ನಿವಾರಿಸಲು ಮುಂದಿನ ೩ ತಿಂಗಳಿಗೆ ಬೇಕಾದ ಕಾಲು ಕೋಟಿ ಟನ್ ಧಾನ್ಯಗಳನ್ನು ಈಗಾಗಲೇ ಕಳಿಸಲಾಗಿದೆಯೆಂದು ಹೇಳಲಾಗಿದೆ.

[ಹಿಂದಿನ ಪುಟದಿಂದ ಮುಂದುವರಿದದ್ದು]

ಲು ಆವಕಾಶವಿಲ್ಲದಾಗ ಇವರು ಜಗಳವಾಡಿರುವುದು ಬಹು ಶೋಚನೀಯಕರವಾಗಿದೆ. ಈ ಬಗೆಯ ಹೀನವಾದ ಭಾವನೆಗಳಿಂದ ಸಂತಸಗೊಳ್ಳುವವರಿಗಿಂತ, ... ಸಾವಿರ ಪಾಲು ನೊಂದ ಕೋಟಿ ಜನರು ... ದ್ದಾರೆ. ... ದೇಶದ ... ನಾಳೆ ... ಅವರಿಗೆ ಜ್ಞಾನೋದಯದ ಅವಶ್ಯಕತೆ ... ಆ ... ದ ... ಸೆಳೆದು ... ಕೆ ...

ಆಧಾರವಿಲ್ಲದ ಆಪಾದನೆ

ಕಾಂಗ್ರೆಸ್ ದೃಷ್ಟಿಯಲ್ಲಿ ಕೋಮುವಾರು ಭೇದವಿಲ್ಲ

ಮೈಸೂರು ಪೌರಸಭಾ ಸದಸ್ಯರಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರವರು ಹೀಗೆ ಬರೆಯುತ್ತಾರೆ:—

ಮೈಸೂರು ಕಾಂಗ್ರೆಸ್ಸಿನ ವಿಷಯದಲ್ಲಿ ಅನೇಕ ಬಗೆಯ ದೋಷಗಳನ್ನು ಆರೋಪಿಸಿ ಮೈಸೂರು ನಗರದ ಕೆಲವು ಪತ್ರಿಕೆಯಲ್ಲಿ ಬರೆದ ಲೇಖನಗಳು ಈಗಾಗಲೇ ಪ್ರಚಾರಕ್ಕೆ ಬಂದಿವೆ. ಈ ಮಹನೀಯರು ದೇಶಕ್ಕಾಗಿ, ಜನತೆಗಾಗಿ ಮಾಡಿರುವ ತ್ಯಾಗ, ಸೇವೆಗಳ ದೃಷ್ಟಿಯಿಂದ ಈ ಲೇಖನಗಳಿಗೆ ಎಷ್ಟು ಬೆಲೆ ಕೊಡಬೇಕೆಂಬುದು ಜನರಿಗೆ ಗೊತ್ತು. ಈ ಮಹನೀಯರು ಪೌರಸಭಾ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರಾಗಿ [illegible] ದಿಂದ [illegible] ಫಲಿತಾಂಶವಾಗಿದೆ. ಆ ಲೇಖನಗಳು ಹೊರಬಿದ್ದುವೆಂದು ತಿಳಿದರೆ ವಾಚಕರಿಗೆ ಆಶ್ಚರ್ಯವೇನ ಆಗಲಾರದು. ಶ್ರೀಮಾನ್‌ರವರ ಟಿ. ಎನ್. ರಾಜಗೋಪಾಲ ಅಯ್ಯಂಗಾರ್, ಎಂ. ಸಿ. ಪುಟ್ಟಸ್ವಾಮಿ ಮತ್ತು ಜಿ. ವಿ. ಸೂರ್ಯನಾರಾಯಣಶೆಟ್ಟಿ ಇವರು, ಮುಂದಿನ ತಿಂಗಳಲ್ಲಿ ನಡೆಯಲಿರುವ ನಗರಸಭೆಯ ಚುನಾವಣೆಯಲ್ಲಿ ತಮ್ಮನ್ನು ಕಾಂಗ್ರೆಸ್ ಉಮೇದುವಾರರನ್ನಾಗಿ ನಿಲ್ಲಿಸಬೇಕೆಂದು ಕಾಂಗ್ರೆಸ್ ಪ್ರಮಾಣ ಪತ್ರದಲ್ಲಿ ಸಹಿ ಮಾಡಿ ಕಾಂಗ್ರೆಸ್ ಚುನಾವಣಾ ಸಮಿತಿಗೆ [illegible] ತಮ್ಮ ಲೇಖನಗಳಲ್ಲಿ ಉದ್ದೇಶಪೂರ್ವಕವಾಗಿ ಜಾಣ್ಮೆಯಿಂದ ಬಿಟ್ಟುಬಿಟ್ಟಿದ್ದಾರೆ. ಆ ವಿಷಯವನ್ನು ತಿಳಿಸಿ, ತಮ್ಮ ಅರ್ಜಿಗಳು ಸಫಲವಾಗಲಿಲ್ಲವೆಂಬುದನ್ನು ಹೇಳಿದ್ದರೆ ಇವರ ಲೇಖನಗಳ ಅರ್ಥವು ವಾಚಕರಿಗೆ ಸುಲಭವಾಗಿಯೇ ಆಗುತ್ತಿತ್ತು. ಈ ವಿಚಾರ ಲೇಖಕರ ಮನಸ್ಸಿನಲ್ಲಿ ಇದ್ದಿದ್ದರೆ ಅವರಿಗೆ ಅಂತಹ ಲೇಖನಗಳನ್ನು ಪ್ರಕಟಿಸುವ ಎದೆಗಾರಿಕೆ ಬರುತ್ತಿರಲಿಲ್ಲವೋ ಏನೋ.

ಈ ಸಂದರ್ಭದಲ್ಲಿ ಸಹಜವಾದ ಮೊದಲ ಪ್ರಶ್ನೆ ಇದು: ಇವರು ಹೇಳುವಂತೆ ಕಾಂಗ್ರೆಸ್ ಸಂಸ್ಥೆ ಅಷ್ಟೊಂದು ದೋಷಪೂರಿತವಾಗಿದ್ದರೆ ಆ ಮಹನೀಯರು ಕಾಂಗ್ರೆಸ್ ಪ್ರಮಾಣ ಪತ್ರಕ್ಕೆ ರುಜು ಹಾಕಿ ತಮ್ಮ ಅರ್ಜಿಗಳನ್ನು ಕಾಂಗ್ರೆಸ್ ಚುನಾವಣಾ ಸಮಿತಿಗೆ ಕಳುಹಿಸಿಕೊಡಲು ಕಾರಣವೇನು? ತಮ್ಮ ಉಮೇದುವಾರಿಕೆಯ ಅರ್ಜಿಗಳು ತಿರಸ್ಕಾರವಾಗುವುವೆಂದು ತಿಳಿದ ಮೇಲೆ ಮಾತ್ರ ಕಾಂಗ್ರೆಸ್ಸಿನ ದೋಷಗಳು ಅವರಿಗೆ ದೃಷ್ಟಿಗೋಚರವಾದುವೆ?

ಈ ಚಿಕ್ಕ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡರೆ ಆ ಲೇಖನಗಳಲ್ಲಿನ ಅನೇಕ ಆಪಾದನೆಗಳಿಗೆ ಉತ್ತರ ಕೊಡುವುದು ಅನಾವಶ್ಯಕವಾಗುತ್ತದೆ. ಶ್ರೀ ರಾಜಗೋಪಾಲ ಅಯ್ಯಂಗಾರ್ಯರು ತಮ್ಮ ಗತ ವೈಭವವನ್ನು ಉಚಿತವಾಗಿಯೇ ವಿವರಿಸಿದ್ದಾರೆ. ಹಿಂದಿನ ಮಹಾಸಭೆಯಂತಹ ಕೋಮುವಾರು ಸಂಸ್ಥೆಯಲ್ಲಿ ಸಿಕ್ಕಿ ಸಂಬಂಧವನ್ನಿಟ್ಟುಕೊಂಡಿರುವ ಮಹನೀಯರು ಮೈಸೂರು ಕಾಂಗ್ರೆಸ್ಸಿನಲ್ಲಿ ಕೋಮುವಾರು ಭಾವನೆಯಿರುವುದನ್ನು ಆರೋಪಿಸುತ್ತಿರುವುದು ಸೋಜಿಗವಾಗಿದೆ.

"ಮೈಸೂರು ಕಾಂಗ್ರೆಸ್ಸು ಒಕ್ಕಲಿಗರ ಕೂಟ" ಎಂಬ ನೂತನ ಧ್ವನಿ ಕೃತ್ರಿಮವೂ ಹಾಗೂ ಮಿಥ್ಯಾವಾದವೂ. ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಸುಬ್ಬೇಗೌಡರು—ಇವರು ಒಕ್ಕಲಿಗರು—ಕಾಂಗ್ರೆಸ್ ಪಕ್ಷದಿಂದ ಇತ್ತೀಚೆಗೆ ಬಹಿಷ್ಕೃತರಾಗಿದ್ದಾರೆ. ನನ್ನ ಮುಂದಾಳುಗಳು ನೆರೆದಾಗ [illegible] ಬಹಿಷ್ಕೃತ [illegible] ಶ್ರೀ [illegible] ಒಕ್ಕಲಿಗರಾದವರು — ಇವರೂ ಒಕ್ಕಲಿಗರೇ! — ಕಾಂಗ್ರೆಸ್ ಸಂಸ್ಥೆಯಿಂದ ಬಹಿಷ್ಕಾರ ಪಡೆದರು. ಸ್ಥಾನಮಾನಗಳಿಗಾಗಿಯೇ ಬಣ್ಣ ಬದಲಾಯಿಸಿಕೊಳ್ಳುವವರಿಗೆ ಕಾಂಗ್ರೆಸ್ಸಿನಲ್ಲಿ ಸ್ಥಾನವಿಲ್ಲ. ಹೇಗೋ ತಾತ್ಕಾಲಿಕವಾಗಿ ಸ್ಥಾನ ದೊರಕಿಸಿಕೊಂಡರೂ ಅಂತಹವರು ಬಹುಕಾಲ ಉಳಿಯಲಾರರು. ಕಾಂಗ್ರೆಸ್ಸು ಯೋಗ್ಯತೆಯ ಆಧಾರದ ಮೇಲೆ ತನ್ನ ಸದಸ್ಯರನ್ನಾಗಿ ಮಾಡಿಕೊಳ್ಳಬಲ್ಲುದು. ಅವರು ಯಾರೇ ಆಗಲಿ, ಯಾವ ಕೋಮೇ ಆಗಲಿ ಅದನ್ನು ತನ್ನದೇ ಆಗಿ ಮಾಡಿಕೊಳ್ಳಲು ಶಕ್ಯವಿಲ್ಲ.

ಕಾಂಗ್ರೆಸ್ ಉಮೇದುವಾರರನ್ನು ಆರಿಸುವ ಚುನಾವಣಾ ಸಮಿತಿಯನ್ನು ನಿರ್ಮಿಸಿದವರು ಮೈಸೂರು ಕಾಂಗ್ರೆಸ್ ಪಾರ್ಲಿಮೆಂಟರಿ ಉಪಸಮಿತಿಯ ಅಧ್ಯಕ್ಷ ಮತ್ತು ಸದಸ್ಯರು. ಅಲ್ಲಿ ಎಲ್ಲರೂ ಒಕ್ಕಲಿಗರೇ ಇಲ್ಲ. ಉಮೇದುವಾರರನ್ನು ಆರಿಸುದು ಕೋಮುವಾರು ದೃಷ್ಟಿಯಿಂದಲ್ಲ. ಸಮಿತಿಯು ನಾಲಿಗೆ ಆಯ್ಕೆಯ ಆಧಾರವಾಗಿ ಬಳ ದೊಡ್ಡದು: ಒಂದು ಕಡೆ ಸಾರ್ವಜನಿಕ ಅಭಿಪ್ರಾಯಕ್ಕೆ ಲಕ್ಷ್ಯ ಕೊಡಬೇಕು, ಎಂದರೆ ಜನತೆಯ ಮನ್ನಣೆಯನ್ನು ಪಡೆದವರನ್ನೇ ಆರಿಸಬೇಕು; ಇನ್ನೊಂದು ಕಡೆ ಕಾಂಗ್ರೆಸ್ ಸಂಸ್ಥೆಯ ಕೀರ್ತಿ ಗೌರವಗಳನ್ನು ಕಾಪಾಡಬೇಕು. ಕಾಂಗ್ರೆಸ್ ಸದಸ್ಯರಾಗಿ ಆಯ್ಕೆ ಇಷ್ಟರ್ವರನ್ನು ಸಂಭವಿಸಿರುವಲ್ಲಿ [illegible] ಮಾತ್ರ ಒಕ್ಕಲಿಗರು, ೯ ಜನ ಬ್ರಾಹ್ಮಣರು ಮತ್ತು ಇತರರೂ ಇದ್ದಾರೆ. ಹೀಗೆ ಕೋಮುವಾರು ಲೆಕ್ಕವನ್ನು ತೆಗೆದು ನೋಡುವ ಹೇಳಬೇಕಾಗಿದೆ. ಕಾಂಗ್ರೆಸ್ ದೃಷ್ಟಿಯಲ್ಲಿ ಕೋಮುವಾರು ಲೆಕ್ಕವಿಲ್ಲ; ಆ ಲೇಖನಗಳು ಬಂದ ಮೇಲೆ ಈ ಲೆಕ್ಕ ನೋಡ ಬೇಕಾಯಿತು.

ಕಾಂಗ್ರೆಸ್ ಮಾತ್ರ ದೇಶಕ್ಕೆ ಸೇವೆ ಸಲ್ಲಿಸಲು ಅರ್ಹವೆಂದು ಹೇಳುತ್ತಾರೆಂದೂ ಇತರ ಸಂಸ್ಥೆಗಳಿಗೆ ಸೇವಾವಕಾಶ ಕೊಡುವುದಿಲ್ಲವೆಂದೂ ಆಪಾದನೆ ಮಾಡಲಾಗಿದೆ. ಕಾಂಗ್ರೆಸ್ ಹಾಗೆ ಎಲ್ಲಿಯೂ ಹೇಳಿಲ್ಲ. ಅದು ಹೇಳುವುದಿಷ್ಟು:— ಕಾಂಗ್ರೆಸ್‌ನಷ್ಟು ರಾಷ್ಟ್ರೀಯ ಮನೋಭಾವವುಳ್ಳ, ಸುವ್ಯವಸ್ಥಿತ ಸಂಸ್ಥೆ ಬೇರೆ ಇಲ್ಲ; ಜನತೆಯು ಟೀಕಾ ದೃಷ್ಟಿಯಲ್ಲಿ ಸೇವೆ ತ್ಯಾಗಗಳನ್ನೇ ತನ್ನ ಶಸ್ತ್ರದಿಂದ ಬಹಿರಂಗವಾಗಿ ಸ್ವೀಕರಿಸಿ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡುತ್ತಿರುವುದು ಕಾಂಗ್ರೆಸ್ ಒಂದೇ. ಕಾಂಗ್ರೆಸ್ ಸಂಸ್ಥೆಯಲ್ಲಿ ಶಿಸ್ತು ಇರುವುದು ನಿಜ; ಅದು ಇನ್ನೂ ಇನ್ನು ಕಠಿಣವಾಗುತ್ತಿರುವುದೂ ನಿಜ. ಕಾಂಗ್ರೆಸ್ಸಿನ ಧ್ಯೇಯವನ್ನು ಮುಂದಿಟ್ಟುಕೊಂಡು ಅದರ ದಾರಿಯಲ್ಲೇ ನಡೆಯುವಂತೆ ನೋಡಿಕೊಳ್ಳುವುದು, ಕಾಂಗ್ರೆಸ್ ಹೆಸರಿನಲ್ಲಿ ವ್ಯಕ್ತಿಗಳು ಸ್ವಪ್ರತಿಷ್ಠೆಯನ್ನು ಸ್ಥಾಪಿಸಿಕೊಳ್ಳದಂತೆ ನೋಡಿಕೊಳ್ಳುವುದು, ಸ್ವಾತಂತ್ರ್ಯ ಸ್ವೀಕೃತಿಯಾಗಿ ಗಣನೆಯಾಗದಂತೆ ನೋಡಿಕೊಳ್ಳುವುದು, ಇವೇ ಕಾಂಗ್ರೆಸ್ಸಿನ ಶಿಸ್ತು. ಕಾಂಗ್ರೆಸ್ಸಿನಲ್ಲಿ ಸರ್ವಾಧಿಕಾರತ್ವ ಭಾವನೆ ಇದೆ ಎನ್ನುವುದಕ್ಕೆ ಏನೂ ಆಧಾರವಿಲ್ಲ. ಅನಾಯಕತ್ವ ಅವ್ಯವಸ್ಥೆಗಳಿಂದ ತಪ್ಪಿಸಬೇಕಾದರೆ ಯಾವ ಸಂಸ್ಥೆಯಲ್ಲಾದರೂ ಶಿಸ್ತು ಅವಶ್ಯ, ಅನಿವಾರ್ಯ; ಬೇರೆ ದಾರಿ ಇಲ್ಲ.

ಜನನಾಯಕರು ಸೆರೆಯ ಮರೆಯಲ್ಲಿದ್ದು ಇವರ ಮಿಥ್ಯಾರೋಪಣೆಗಳನ್ನು ಪ್ರತಿಭಟಿಸ

(ಮೊದಲನೆ ಪುಟ ನೋಡಿ)

ವಂದೇಮಾತರಂ.

ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಿ!

ಮಹಾಶಯರೇ,

ಕಳೆದ ಸಾರಿ ಪೌರಸಭಾ ಚುನಾವಣೆಯಲ್ಲಿ ಎಲ್ಲಾ ಕಾಂಗ್ರೆಸ್ ಉಮೇದುವಾರರಿಗೂ ನೂರಕ್ಕೆ ನೂರರಷ್ಟು ವಿಜಯವನ್ನು ಗಳಿಸಿಕೊಟ್ಟು ಮೈಸೂರಿನ ಕೀರ್ತಿಯು ದಿಗಂತವಿಶ್ರಾಂತವಾಗುವಂತೆ ಮಾಡಿರುವಿರಿ.

ಕಾಂಗ್ರೆಸ್ಸಿಗೆ ತಾವು ಕೊಟ್ಟಿರುವ ಬೆಂಬಲದಿಂದ ಇಡೀ ಜಗತ್ತನ್ನೇ ಮುಗ್ಧಗೊಳಿಸಿರುವಿರಿ.

ಈ ಸಾರಿಯೂ ತಮ್ಮ ದೇಶಾಭಿಮಾನವನ್ನು ಪ್ರಕಟಗೊಳಿಸಿರಿ! ಮೈಸೂರಿನ ಮಹಾನುಭಾವರು ಸಂಪೂರ್ಣವಾಗಿ ಕಾಂಗ್ರೆಸ್ಸಿನ ಕಡೆ ಇರುವರೆಂಬುದನ್ನು ವ್ಯಕ್ತಪಡಿಸಿರಿ! ಸಂದೇಹರಹಿತವಾಗಿ ಒಂದು ಕಾಂಗ್ರೆಸ್ ಉಮೇದುವಾರರಿಗೇ ಓಟು ಕೊಡಿ!

ಎಚ್. ಸಿ. ದಾಸಪ್ಪ,
ಚುನಾವಣಾ ಸಮಿತಿ ಅಧ್ಯಕ್ಷ

Edited, printed and published by A. R. Nagarajan, at the Sadhvi Press, D. Subbiah Road, Mysore.

ನೋಡಿದಿರಾ? ದೀಪಾವಳಿ ಹಬ್ಬಕ್ಕೆ ಅರ್ಜೆಂಟಾಗಿ!

ಸೀರೆ ಮತ್ತು ಹೊಸ ಉಡುಪುಗಳಿಗೆ

[illegible]

ಹೊಸ ಮಾದರಿಯಲ್ಲಿ, ಶ್ರಮ ರಹಿತವಾಗಿ, ಎಲ್ಲರಿಗೂ ಆಗುವಂತೆ ಎಲ್ಲಾ ಸೈಜುಗಳೂ ಹೊಲಿದ, ಸಿದ್ಧಪಡಿಸಿದ

ರೆಡಿ-ಮೇಡ್ (READY-MADE)

ಉಡುಪುಗಳನ್ನು ಕೊಂಡುಕೊಳ್ಳಿ, ನೀವು ಹೊಲಿಸುವುದಕ್ಕಿಂತ [illegible] ಕಡಿಮೆ ಬೆಲೆಗೆ ಸಿಗುತ್ತವೆ.

[illegible] 'ಸೀರೆ ಕಟ್' [illegible] ಬನಾರಸ್ ಜರಿಗೆ ಸೀರೆ [illegible] ಇದ್ದಾವೆ. ಬಂದು ನೋಡಿ [illegible] ಕೊಂಡುಕೊಳ್ಳಿ.

ಬಿ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್ಸ್
ಜವಳಿ ಮತ್ತು ಬಟ್ಟೆ ವ್ಯಾಪಾರಿಗಳು,
ಸಯ್ಯಾಜಿರಾವ್ ರೋಡ್, ಮೈಸೂರು.

ಪ್ರತಿ ದಿನ 4 ಘಂಟೆಗೆ ಮ್ಯಾಟನಿ ಇದೆ

ನ್ಯೂ ಅಪೇರಾ ಟಾಕೀಸ್

ತಾ|| ೨೮—೧೦—೪೩ ರಿಂದ

ಭಾನುಮತಿ, ಸೂರ್ಯಕುಮಾರಿ, ಕಾಂತಕುಮಾರಿ, ಅದ್ದಂಕಿ ಮತ್ತು ಮೈಸೂರು ಹಿರಣ್ಣಯ್ಯ ನಟಿಸಿರುವ

ತೆಲುಗು **ಕೃಷ್ಣಪ್ರೇಮ** ತೆಲುಗು

ಶ್ರೀ ಯುರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಸಿ. ಸ್ವಾಮಿಯಪ್ಪ ಟಿನೆಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು.

[illegible] ಸಕ್ಕರೆ, ಬೆಲ್ಲ, ಬೂರಾ ಸಕ್ಕರೆ [illegible] ಮತ್ತು [illegible] ಆಫೀಸಿನಲ್ಲಿ [illegible] ಮತ್ತು ಗೋಧಿ [illegible] ದೊರೆಯುತ್ತೆ.

ಪ್ರಚಾರ ಭಾಷಣ

ಮೈಸೂರು ೩೧

ಪೌರ ಸಭಾ ಚುನಾವಣಾ ಪ್ರಚಾರ ಸಂಬಂಧವಾಗಿ ನಾಡಿದ್ದು ಮಂಗಳವಾರ ಸಂಜೆ ಸುಬ್ಬರಾಯನ ಕೆರೆ ಅಂಗಳದಲ್ಲಿ ಶ್ರೀ ಟಿ. ಟಿ. ಶರ್ಮರವರು, ಚುನಾವಣಾ ಭಾಷಣಮಾಲೆ ಆರಂಭ ಭಾಷಣವನ್ನು ಮಾಡುವರು.

ಬೆಂಗಳೂರು ಜೈಲಲ್ಲಿ ಉಪವಾಸ

ಬೆಂಗಳೂರು ೩೧

ಸೆಂಟ್ರಲ್ ಜೈಲಿನಲ್ಲಿರುವ ಶ್ರೀ ಭೀಮಕುಮಾರ್‌ರವರು ಅಲ್ಲಿನ ಅಧಿಕಾರಿಗಳು ತಮ್ಮ ಬಗ್ಗೆ ನ್ಯಾಯವಾಗಿ ವರ್ತಿಸಲಿಲ್ಲವೆಂದು ಉಪವಾಸ ಆರಂಭಿಸಿರುವರೆಂದೂ, ಅವರಿಗೆ ಸಹಾನುಭೂತಿ ತೋರಲು ಶ್ರೀ ಪ್ರಭುದೇವ್ ಮತ್ತು ಕೆಲವರು ಸಹ ಉಪವಾಸ ಮಾಡುತ್ತಿರುವರೆಂದೂ ತಿಳಿದುಬಂದಿದೆ.

ದಿವಾನರ ಕಾರ್ಯಕ್ರಮ

ದಿವಾನರು ೧ ನೇ ತಾರೀಖಿನಿಂದ ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು. ೧ ನೇ ತಾ॥ ಹಾಸನ, ೨ ನೇ ತಾ॥ ಬೇಲೂರು, ಹಳೇಬೀಡು, ೩ ನೇ ತಾ॥ ಅರಸೀಕೆರೆ ಈ ಊರುಗಳಿಗೆ ಭೇಟಿಕೊಡುವರು.

ಟೆಲಿಗ್ರಾಂ ಫಾರಂ ಮಾರಾಟ

ಬೆಂಗಳೂರು ರಂಗಸ್ವಾಮಿ ಗುಡಿ ರಸ್ತೆಯಲ್ಲಿ ಟೆಲಿಗ್ರಾಫ್ ಷೀಟುಗಳನ್ನು ಮಾರಿದ ಪ್ರಸಂಗ ಒಂದು ಪೋ॥ ಗಮನಕ್ಕೆ ಬಂದುದರ ಸಂಬಂಧವಾಗಿ ವೆಂಕಟನಾರಾಯಣ್ ಎಂಬ ಯುವಕನನ್ನು ಸೆರೆಹಿಡಿಯಲಾಗಿದೆ.

ಸೇವಕನಿಂದ ಹಣಾಪಹಾರ

ಬೆಂಗಳೂರು ಬಸವನಗುಡಿಯಲ್ಲಿ ವಾಸವಾಗಿರುವ ಮದರಾಸಿನ ನಿವೃತ್ತ ಕಲೆಕ್ಟರ್ ಬಹದೂರ್ ನವಾಜ್ ಖಾನರಿಗೆ ೨೦೦೦ ರೂ. ಗಳ ಕರೆನ್ಸಿ ನೋಟಿದ್ದ ಇನ್ಷೂರ್ಡ್ ಕವರೊಂದು ಬಂತು. ಅವರು ಇದನ್ನು ತಮ್ಮ ಮಲಗುವ ಕೋಣೆಯಲ್ಲಿ ಇಟ್ಟಿದ್ದರು. ಅವರ ಸೇವಕ ಅಪ್ಪೂ ಎಂಬುವನು ಕೆಲವು ದಿನಗಳ ಹಿಂದೆ ಅದನ್ನು ಅಪಹರಿಸಿದನು. ತನಿಖೆ ನಡೆದು, ಅಪರಾಧಿಯು ಈಗ ಹಣದ ಸಮೇತ ಸಿಕ್ಕಿಬಿದ್ದಿದ್ದಾನೆ. ಮುಂದಿನ ಕ್ರಮ ಜರುಗುತ್ತಿದೆ.

ಮಿಲಿಟರಿಯವರಿಗೆ ಮನೆಗಳು

ಮಿಲಿಟರಿಯವರಿಗಾಗಿ ಹೆಚ್ಚಿಗೆ ಮನೆಗಳನ್ನು ತೆಗೆದುಕೊಳ್ಳಲು ಇಂಡಿಯಾ ಸರ್ಕಾರವು ಅಭಿಪ್ರಾಯ ಪಟ್ಟಿಲ್ಲವೆಂದೂ, ವಿಶೇಷ ಪರಿಸ್ಥಿತಿ ಕಾಲಕ್ಕೆ ಮಾತ್ರ ಹಾಗೆ ಅಪೇಕ್ಷಿಸಬಹುದೆಂದೂ, ಲಾರ್ಡ್ ಮೇನೆಲ್ಲರು ದೆಹಲಿ ಪೌರಸಭೆಯವರು ಬಿನ್ನವತ್ತಳೆ ಅರ್ಪಿಸಿದಾಗ ಕೇಳಿದ ಪ್ರಶ್ನೆಗೆ ಉತ್ತರರೂಪವಾಗಿ ಹೇಳಿದರು.

ಮೂಗು ಮುರಿದ ಕಳ್ಳ

ಚಿತ್ರದುರ್ಗದಲ್ಲಿ ತಿಮ್ಮ ಎಂಬ ಕಳ್ಳನು ಬೋಗಿ ಎಂಬುವನ ಮನೆಗೆ ನುಗ್ಗಿ, ಕಳ್ಳತನ ಮಾಡುತ್ತಿದ್ದಾಗ ಬೋಗಿಯು ತಿಮ್ಮನನ್ನು ಎದುರಿಸಲಾಗಿ ತಿಮ್ಮನು ಬೋಗಿ ಮೂಗನ್ನು ಬಲವಾಗಿ ಕಚ್ಚಿದನು. ಮೂಗು ತುಂಡಾಗಿ ಕೆಳಗೆಬಿತ್ತು. ಆ ಮೂಗಿನ ತುಂಡನ್ನು ಕೋರ್ಟಿಗೆ ಹಾಜರ್ ಪಡಿಸಲಾಯಿತು. ತಿಮ್ಮನ ಮೇಲಿನ ಅಪರಾಧಗಳು ರುಜುವಾತಾಗಿ ಶಿವಮೊಗ್ಗ ಸೆಷನ್ಸ್ ನ್ಯಾಯಾಧೀಶರು ಅವನಿಗೆ ನಾಲ್ಕು ವರ್ಷ ಕಠಿಣ ಸಜಾ ವಿಧಿಸಿದ್ದಾರೆ.

ಸಂಪುಟ ೨] ಭಾನುವಾರ ೩೧--೧೦--೪೩ [ಸಂಚಿಕೆ ೮೮

ಬಲ್ಗೇರಿಯಾ ದೇಶಕ್ಕೆ — — ಆಕ್ರಮಣ ಭೀತಿ!

ಜರ್ಮನಿಯಲ್ಲಿ ಬಿ.ಬಿ.ಸಿ. ಕೇಳಿದ ಮೋಯರರಿಗೆ ಗಲ್ಲು ಶಿಕ್ಷೆ!

ಅಮೆರಿಕಾ ಗಣಿಗಳಲ್ಲಿ ಮತ್ತೆ ಭಾರಿ ಮುಷ್ಕರ

ಜರ್ಮನರಿಗೆ ಗಾಭರಿ

ರಷ್ಯನರು ಬಲ್ಗೇರಿಯಾ ದೇಶದೊಳಕ್ಕೆ ನುಗ್ಗಿ ಆಕ್ರಮಣ ಆರಂಭಿಸಬಹುದೆಂದು ಜರ್ಮನರು ಭೀತಿಗೊಂಡಿರುವುದಾಗಿ ಸ್ವೀಡನ್ ರಾಜಧಾನಿಯಿಂದ ಸುದ್ದಿ ಹೊರಹೊರಟಿದೆ.

ಮೋಯರರಿಗೆ ಮರಣದಂಡನೆ

ಜರ್ಮನಿಯ ಪ್ರಸ್ಯ ನಗರದ ನಗರಸಭಾಧ್ಯಕ್ಷರು, ತಮ್ಮ ಕಛೇರಿಯಲ್ಲಿ ಕುಳಿತು ರೇಡಿಯೋ ಕಿವಿಗಿಟ್ಟುಕೊಂಡು ಲಂಡನ್ ಸುದ್ದಿ ಕೇಳಿದ ತಪ್ಪಿಗಾಗಿ ಜರ್ಮನ್ ಸರ್ಕಾರ ಶುಕ್ರವಾರ ಅವರನ್ನು ಗಲ್ಲಿಗೇರಿಸಿತೆಂದು ವಾರ್ತೆ ಬಂದಿದೆ.

ಅಮೆರಿಕದಲ್ಲಿ ಗಣಿ ಮುಷ್ಕರ

ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿನ ಕಲ್ಲಿದ್ದಲು ಗಣಿಗಳ ೭೫,೦೦೦ ಕೆಲಸಗಾರರು ಹೆಚ್ಚು ಕೂಲಿ ಕೊಡಬೇಕೆಂದು ಮುಷ್ಕರ ಹಿಡಿದಿದ್ದಾರೆ. ಗಣಿ ಕೆಲಸಗಾರರ ನಿಶ್ಚಿತ ಸಮಿತಿ ಶಿಫಾರಸಿನ ಮೇರೆಗೆ ರೂಸ್‌ವೆಲ್ಟರು ಮಧ್ಯಸ್ಥಿಕೆ ವಹಿಸಿ ಕ್ರಮ ಜರುಗಿಸುವುದಿಲ್ಲವಂತೆ. ಯುದ್ಧ ಕಾಲದ ಕೂಲಿ ನಿರ್ಧಾರ ಸಮಿತಿಯ ಷರತ್ತನ್ನು ಗಣಿ ಕೆಲಸಗಾರರ ಮುಖಂಡ ಮಿ॥ ಲೂಯಿಸ್‌ರು ತಿರಸ್ಕರಿಸಿದರೆಂದು ವಾರ್ತೆ ಬಂದಿದೆ.

ಫ್ರಾಂಕೊ ರಾಜತ್ವ ನಿಂತೀತೆ?

ಯುದ್ಧದಿಂದ ಬೇಸತ್ತ ಸ್ಪೈನ್ ದೇಶದ ಜನ ಅಲ್ಲಿನ ರಾಜ್ಯಾಡಳಿತ ಬದಲಾಗಬೇಕೆಂದು ಒತ್ತಾಯ ಪಡಿಸುತ್ತಿರುವರೆಂದೂ ಫ್ರಾಂಕೊ ರಾಜತ್ವ ಸಾಕೆಂದೂ ಹಿಂದಿನ ರಾಜಮನೆತನದವರು ಪಟ್ಟಕ್ಕೆ ಬರಬೇಕೆಂಬ ಚಳವಳಿ ಹುಟ್ಟಿದೆಯೆಂದೂ ನ್ಯೂಸ್ ಕ್ರಾನಿಕಲ್ ಪತ್ರಿಕೆಯು ವರದಿ.

ಕಾಂಗ್ರೆಸ್ ಬಾವುಟಕ್ಕೆ ಆಡ್ಡಿ

ಬಂಗಾಳದ ಮಿಡ್ನಾಪುರ್ ಜಿಲ್ಲಾಧಿಕಾರಿಗಳು ಆ ಜಿಲ್ಲೆಯಲ್ಲೆಲ್ಲೂ ಕಾಂಗ್ರೆಸ್ ಧ್ವಜ ಹಾರಿಸಕೂಡದೆಂದು ಪ್ರತಿಬಂಧಿಸುವ ಆಜ್ಞೆ ಹೊರಡಿಸಿದ್ದಾರೆ.

ಕ್ರಿಮಿಯಾ ಕಡೆಗೆ ರಷ್ಯನರು

ರಷ್ಯನರು ಕ್ರಿಮಿಯಾದ ಕಡೆಗೆ ವೇಗದಿಂದ ನುಗ್ಗಿ ಬರುತ್ತಿದ್ದಾರೆ. ರಷ್ಯನರು ಈ ವಿಭಾಗದಿಂದ ಜರ್ಮನ್ ಸೈನ್ಯ ಪಡೆಗಳನ್ನು ತುಂಡುತುಂಡು ಮಾಡಿ, ಕ್ರಿಮಿಯಾ ಭಾಗದ ಪ್ರವೇಶಕ್ಕೆ ರೈಲ್ವೆ ಸಂಪರ್ಕ ಕಡಿದುಹಾಕಿದೆಯಂತೆ.

ಶಾಂತಿ ಸಾಧನೆಯೇ ಗುರಿ

ಮಾಸ್ಕೋ ಸಮ್ಮೇಳನದಲ್ಲಿ ಒಪ್ಪಂದ ಆಗಿದೆ. ಶಾಂತಿ ಸಾಧನೆಯೇ ಅದರ ಮುಖ್ಯ ಗುರಿ. ಯುದ್ಧಾನಂತರವೂ ರಷ್ಯಾ ಮಿತ್ರರಾಷ್ಟ್ರಗಳೊಡನೆ ಸಹಕರಿಸುವುದೆಂದು ನನ್ನ ನಂಬಿಕೆ ಎಂಬುದಾಗಿ ರೂಸ್‌ವೆಲ್ಟರು ಮಾಸ್ಕೋವಿನಲ್ಲಿ ನಡೆದ ತ್ರಿರಾಷ್ಟ್ರ ಸಮ್ಮೇಳನವನ್ನು ಕುರಿತು ಹೇಳಿದ್ದಾರೆ.

ಬಂಗಾಳದ ಕಷ್ಟ ನಿವಾರಣೆ ಎಂದು?

ಇನ್ನೂ ಎರಡು ಮೂರು ತಿಂಗಳು ಬಂಗಾಳ ಸ್ಥಿತಿ ಕಷ್ಟ ... ಮಧ್ಯಭಾಗಕ್ಕೆ ಹೊಸ ಬೆಳೆ ಬರುವುದು. ಈಗ ಕಷ್ಟ ತೋರುವುದಕ್ಕೆ ಮೂಲಗಳು ಬರ್ಮಾ ಪತನವೇ ಕಾರಣ. ಕಲ್ಕತ್ತಾ ಮೇಲಿನ ದಾಳಿ, ಪ್ರವಾಹಗಳ ಅನಾಹುತ ಇವೂ ಸ್ವಲ್ಪಮಟ್ಟಿಗೆ ಕಾರಣಗಳಾದುವು. ಬಂಗಾಳ ಸರ್ಕಾರದ ಆಹಾರ ನೀತಿ ಬಹಳ ಭದ್ರವಾಗಿರಲಿಲ್ಲ ಎಂಬುದಾಗಿ ಬಂಗಾಳ ಕ್ಷಾಮವನ್ನು ಕುರಿತು ಹೊಂಟ ಬ್ರಿಟಿಷ್ ಸರ್ಕಾರದ ವ್ಯಕ್ತಿ ಸೋಮರ್‌ರವರು ... ನಮೂದಿಸಲಾಗಿದೆ.

ಬಂಗಾಳಕ್ಕೆ ಚೀನಾ ಸಹಾಯ

ಆಹಾರ ದುಸ್ಥಿತಿ ಭಾರತದಲ್ಲಿ ಪ್ರಬಲಿಸಿರುವುದರಿಂದ ಚುಂಕಿಂಗ್‌ನ ಭಾರತ-ಚೈನಾ ಸಾಂಸ್ಕೃತಿಕ ಸಂಘದವರು ಬಂಗಾಳ ಕ್ಷಾಮ ನಿವಾರಣೆಗೆ ನಿಧಿ ಒದಗಿಸುವ ಪ್ರಯತ್ನ ಕೈಗೊಂಡಿರುವರು. ಇದಕ್ಕಾಗಿ ಚುಂಕಿಂಗ್‌ನಲ್ಲಿ ಚೀನೀ ಧರ್ಮಸ್ಥರ ಸಭೆಯೊಂದು ಇತ್ತೀಚೆಗೆ ಸೇರಿತು.

ಸರ್ವರಾಷ್ಟ್ರ ಸಮ್ಮೇಳನ

ಮಾಸ್ಕೋವಿನ ತ್ರಿರಾಷ್ಟ್ರ ಸಮ್ಮೇಳನವನ್ನು ಪ್ರಶಂಸಿಸುತ್ತಾ ಬ್ರಿಟನ್ನಿನ ಅನೇಕ ಪತ್ರಿಕೆಗಳು, ಎಲ್ಲ ಮಿತ್ರರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಸಮ್ಮೇಳನ ಒಂದು ಅತ್ಯಗತ್ಯವೆಂದು ಸಾರಿವೆ.

ಹಕರಿಗೆ ಆಕಸ್ಮಿಕ ತಪ್ಪಿತು

ಬಂಗಾಳ ಪ್ರಾಂತ ಪ್ರಧಾನಿ ಮಿ॥ ಫಜುಲುಲ್ ಹಕ್ ರು ಬಾರಿಸಾಲ್ ಜಿಲ್ಲೆಯಲ್ಲಿ ಆಪತ್ತಿಗೊಳಗಾದ ಪ್ರದೇಶ ನೋಡಲು ಹೋಗಿ ... ದೋಣಿ ... ಶಾಂಪಾನ್ ... ದೋಣಿ ಸಂಘಕ್ಕೆ ... ಅವರಾಗ್ ಅಲ್ಲಿ ... ಅಪಾಯದಿಂದ ಪಾರಾದರು.

ನೀರಿಗೂ ರೇಷನ್ನೇ?

ಕರಾಚಿನಗರಕ್ಕೆ ನೀರನ್ನು ಒದಗಿಸುತ್ತಿರುವ ಸಂಸ್ಥೆಯವರನ್ನು ಮುಸ್ಲಿಂ ಲೀಗ್ ಸ್ವಾಗತ ಸಮಿತಿಯವರು ಲೀಗಿನ ಅಧಿವೇಶನ ಕಾಲಕ್ಕೆ ನೀರಿನ ಅನುಕೂಲತೆ ಕಲ್ಪಿಸಿಕೊಡಿರೆಂದು ಕೇಳಲಾಗಿ, ಅಧಿವೇಶನವನ್ನು ನೀವು ಇಲ್ಲೇ ನಡೆಸುವುದಾದರೆ ನೀರನ್ನು ರೇಷನಿಂಗ್ ಕ್ರಮದಲ್ಲಿ ಒದಗಿಸಬೇಕಾಗುವುದು ಮತ್ತು ಅದಕ್ಕಾಗಿ ನೀವು ಹಣ ಕೊಡಬೇಕು ಎಂದು ಹೇಳಿರುವರು.

ಅಧಿಕಾರಿಗಳ ನೇಮಕ ಚರ್ಚೆ

ಮೊನ್ನೆ ಸಂಸ್ಥಾನದ ಮಂತ್ರಿಮಂಡಲದವರ ಸಭೆನಡೆದು, ರಾಷ್ಟ್ರೀಯ ರಕ್ಷಣಾ ಬಲ, ಗ್ರಾಮ ಪುನರುದ್ಧಾರ, ಶಿಕ್ಷಣ ಇಲಾಖೆ ಮುಂತಾದ ಇಲಾಖೆಗಳಿಗೆ ಅಧಿಕಾರಿಗಳನ್ನು ನೇಮಿಸುವ ವಿಷಯ ಚರ್ಚೆಯಾಯಿತೆಂದು ಗೊತ್ತಾಗಿದೆ.

೧೦ ಜಪಾನೀ ಹಡಗುಗಳ ನಾಶ

ಶಾಂತಿಸಾಗರದಲ್ಲಿ ಸಂಚರಿಸುತ್ತಿದ್ದ ೧೦ ಜಪಾನೀ ಹಡಗುಗಳನ್ನು ಅಮೇರಿಕನ್ ಜಲಾಂತರ್ಗಾಮಿ ಹಡಗುಗಳು ನಿನ್ನೆ ನಾಶ ಮಾಡಿವೆಯೆಂದು ನೌಕಾಖಾತೆಯ ಶ್ರೀ॥ ನಾಕ್ಸ್‌ರವರು ಪ್ರಕಟಿಸಿದ್ದಾರೆ.

ಸ್ತ್ರೀ ಪೋಲೀಸರು

ಭೂಪಾಲ್ ಸಂಸ್ಥಾನದಲ್ಲಿ ಹೊಸದೊಂದು ಪದ್ಧತಿಯೊಂದು ಜಾರಿಗೆ ಬಂದಿದೆ. ಅದರಂತೆ ಈಗಾಗಲೇ ಅನೇಕ ಸ್ತ್ರೀಯರನ್ನು ಪೋಲೀಸ್ ಪಡೆಗೆ ಸೇರಿಸಿಕೊಳ್ಳಲಾಗಿದೆ.

ಶವದ ಬಗ್ಗೆ ವ್ಯಾಜ್ಯ!

ಶಿವಮೊಗ್ಗೆಯಲ್ಲಿ ಮೊನ್ನೆ ಮಹಮ್ಮದೀಯರಿಗೂ, ಕ್ರಿಶ್ಚಿಯನ್ನರಿಗೂ ಶವವೊಂದರ ಅಂತ್ಯಕ್ರಿಯೆ ಸಂಬಂಧದಲ್ಲಿ ಜಗಳವು ಪ್ರಾಪ್ತವಾಗುವ ಸನ್ನಿವೇಶ ಒದಗಿತ್ತು. ಅಷ್ಟರಲ್ಲೇ ಪೋ॥ ಪರಿಸ್ಥಿತಿಯನ್ನು ಹತೋಟಿಗೆ ತಂದರು.

ಪೋಲೀಸ್ ಪೇದೆಗೆ ಸಜಾ

ಕೋಲಾರದ ರಿಜರ್ವ್ ಪೋ॥ ಪೇದೆ ಮುನಿಸ್ವಾಮಿ ಎಂಬುವನು ಕನ್ಯಾಪಹಾರ ಮತ್ತು ಅತ್ಯಾಚಾರದ ಆಪಾದನೆಗಳಿಗೆ ಒಳಗಾಗಿದ್ದನು. ಈ ತಪ್ಪಿಗಾಗಿ ಬೆಂಗಳೂರಿನ ಮುಖ್ಯ ನ್ಯಾಯಾಧೀಶರು ಅವನಿಗೆ ೩ ವರ್ಷ ಕಠಿಣ ಸಜಾ ವಿಧಿಸಿದ್ದಾರೆ.

ಬರ್ಮಾ ಮೇಲೆ ದಾಳಿ

ಮಾಂಡಲೆಯಿಂದ ಪೂರ್ವದಿಕ್ಕಿಗೂ, ಪಶ್ಚಿಮಕ್ಕೂ ಹೋಗುತ್ತಿದ್ದ ರೈಲುಗಳ ಮೇಲೆ ಗುರಿ ಇಟ್ಟು ಮಿತ್ರ ವಿಮಾನಗಳು ಬಾಂಬು ಹಾಕಿದವು. ಶತ್ರುವಿನ ... ವ್ಯಾಗನ್ನುಗಳೂ ... ನಾಶವಾಗಿವೆ. ಇರಾವದಿ ನದಿಯಲ್ಲಿನ ... ಸ್ಟೀಮರುಗಳೂ ನಷ್ಟ ... ಆಗಿದೆ.

ಪೋಪರಿಗೆ ಟಪಾಲಿಲ್ಲ

ಪೋಪರು ವಾಸವಾಗಿರುವ ವ್ಯಾಟಿಕನ್ ನಗರಕ್ಕಿನ್ನು ಟಪಾಲು ಸೌಕರ್ಯವನ್ನು ನಿಲ್ಲಿಸಲಾಗಿದೆಯೆಂದು ಬರ್ಲಿನ್ನಿನ ಅಧಿಕೃತ ಪ್ರಕಟಣೆ ತಿಳಿಸುತ್ತದೆ.

ನೊಬೆಲ್ ಪ್ರೈಜರಿಗೆ ರಜ?

ವಿಶ್ವವಿದ್ಯಾನಿಲಯದ ವಿಜ್ಞಾನ ... ಮಿ॥ ಮೊಕಾರ್ಲ್ಸನ್‌ರವರು ... ದ ಮೇಲೆ ಹೋಗುವರೆಂದು ...

ಮೈಸೂರಿನಲ್ಲಿ ಶ್ರೀ ಅರಿಯಾ ಕ್ಕುಡಿಯವರ ಸಂಗೀತ

ಗಾನವಿನೋದದ ವಿಚಾರಂ ಕೃಷ್ಣಸ್ವಾಮಿ ಯವರ ನೇತೃತ್ವದವರು ಕಲಾಭಿಮಾನಿಗಳಿಗೆ ಒದಗಿಸುತ್ತಿರುವ ಸಂಗೀತ ರಸಾನುಭವ ರಿಗೆ ವ್ಯವಸ್ಥೆ ಮಾಡುತ್ತಿದೆ.

ಶ್ರೀಮಾನ್ ಟಿ. ಎಸ್. ಬಾಲಸುಬ್ರಹ್ಮಣ್ಯಂರವರ ಸಂಗೀತವು ಕಲಾಭಿಮಾನಿಗಳಿಗೆ ದೊಡ್ಡ ಹಬ್ಬದೂಟವನ್ನು ನೀಡಿತು. ಮೊನ್ನೆ ರಾತ್ರಿ ನಡೆದ ಘಟಾನುಘಟಿ ವಿದ್ವಾಂಸರ ಸಂಗೀತವು ಪಂಡಿತ ಪಾಮರ ರೆಲ್ಲರ ಮನಸ್ಸನ್ನು ಸೂರೆಗೊಂಡಿತು. ಶ್ರೀಮಾನ್ ಅರಿಯಕ್ಕುಡಿಯವರಿಗೆ ದಕ್ಷಿಣಾದಿ ದೇಶಕ್ಕೆ ಮೈಸೂರಿನವರಿಂದ ದೊರೆತ ಒಂದು ದೊಡ್ಡ ನಿಧಿ ಎಂಬುದನ್ನು ಅವರಿಗೆ ಇತ್ತಿರುವ ಸಂಗೀತ ಕಲಾನಿಧಿ ಎಂಬ ಬಿರುದಿನಿಂದಲೇ ವ್ಯಕ್ತವಾಗುತ್ತೆ. ಇವರೊಡನೆ ಪಕ್ಕವಾದ್ಯ ಬಾರಿಸುವುದರಲ್ಲಿ ಹುಲಿಯು ಕೂಡ ಆಟವಾಡಿದ ಹಾಗೆ ಎಂದು ಎಲ್ಲರೂ ಬಲ್ಲರು.

೩-೧೧-೧೯೪೩ನೇ ಬುಧವಾರ ಸಾಯಂಕಾಲ ೬-೩೦ ಘಂಟೆಗೆ ಏರ್ಪಡಿಸಿರುವ ಸಂಗೀತರತ್ನಾಕರ, ಸಂಗೀತ ಕಲಾನಿಧಿ ವಿದ್ವಾನ್ ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರ ಸಂಗೀತವು ಪಂಡಿತ ಪಾಮರರಿಬ್ಬರನ್ನೂ ಮೆಚ್ಚಿಸುವುದು. ಅರಿಯಕ್ಕುಡಿಯವರ ಶೈಲಿಯೂ ಸಾಹಿತ್ಯ ಮತ್ತು ಸ್ವರವಿನ್ಯಾಸವು ಸಂಗೀತ ಪ್ರಪಂಚಕ್ಕೆ ಅಚ್ಚುಮೆಚ್ಚಿನ ಮೇಲ್ಪಂಕ್ತಿಗಳು.

ಇವರ ಕಾಂಬೋಜಿ, ಪೂರ್ವಿಕಲ್ಯಾಣಿ, ಯದುಕುಲಕಾಂಬೋಧಿ ಕೇದಾರಗೌಳ ರಾಗಗಳು ಕೇಳದ ಸಂಗೀತ ಪ್ರೇಮಿಗಳಿಗೆ ಮತ್ತೆ ಯಾರಾದರೂ ಹಾಡಿದರೆ ಇವರ ಸಂಗತಿಗಳು ಬಂದಲ್ಲಿ ಮಾತ್ರ ಕಛೇರಿಯು ಚೆನ್ನಾಗಿವೆ ಎಂದು ಹೇಳಬಹುದಷ್ಟೆ.

ಇವರೊಡನೆ ನಮ್ಮ ಆಸ್ಥಾನ ವಿದ್ವಾನ್ ಸಂಗೀತರತ್ನ ಟಿ. ಚೌಡಯ್ಯನವರು ಫಿಡಲ್ ವಾದನವನ್ನೂ ವಿದ್ವಾನ್ ಟಿ. ಎಂ. ಪುಟ್ಟಸ್ವಾಮಯ್ಯನವರು ಮೃದಂಗವನ್ನೂ ನುಡಿಸುತ್ತಾರೆ. ದಕ್ಷಿಣಾದಿ ಪ್ರಖ್ಯಾತ ವಿದ್ವಾಂಸರುಗಳೆಲ್ಲರಲ್ಲೂ ಶ್ರೀ ಚೌಡಯ್ಯನವರ ಫಿಡಲ್ ನೊಡನೆಯೇ ಮಾತು. ಆ ಮೇಳಿ ಸಂಗೀತದ ವಿಚಾರ ಎಂಬುದಾಗಿ ಹೇಳುವುದು ನಮ್ಮ ಅನುಭವವೇ ಆಗಿದೆ. ಗುರುಭಕ್ತ ತಿಲಕರೆನಿಸಿಕೊಂಡು ಶ್ರೀರಾಮ ಮಂದಿರದಲ್ಲಿ ನುಡಿಸುತ್ತಿರುವ ಇಂತಹ ಮಹಾ ವಿದ್ವಾಂಸರುಗಳಿಂದಲೇ ಘನವಾದ ಕಛೇರಿಗಳನ್ನು ಕೇಳಲು ಮೈಸೂರಿನವರಿಗೆ ದೊಡ್ಡ ಪುಣ್ಯ.

ಮೃದಂಗ ವಾದನದ ಸ್ವಾರಸ್ಯವನ್ನು, ಸಂಪೂರ್ಣ ಲಕ್ಷ್ಯಾಚಾರ ಜ್ಞಾನವನ್ನೂ ತಿಳಿದ ವಿದ್ವಾನ್ ಟಿ. ಎಂ. ಪುಟ್ಟಸ್ವಾಮಯ್ಯನವರ ವಾದನವು ಕಛೇರಿಗೆ ಮತ್ತಷ್ಟು ಹೊಳಪು ಕೊಡುತ್ತದೆ. ಈ ಘನ ಕಛೇರಿಯನ್ನು ಸರ್ವರೂ ತಪ್ಪದೆ ಕೇಳಿ ಆನಂದಿಸಬೇಕೆಂದು ನನ್ನ ಭರವಸೆ.

ಎಂ. ಎಸ್. ರಾಮಸ್ವಾಮಿ.

ಬಂಗಾಳ ಕ್ಷಾಮ - ಬ್ರಿಟಿಷರ ಹೊಣೆ

ಬಂಗಾಳ ಕ್ಷಾಮಕ್ಕೆ ಕಾರಣವಾದ ಅಂಶಗಳನ್ನು ಬ್ರಿಟಿಷ್ ಜನರಿಗೆ ಸರಿಯಾಗಿ ತಿಳಿಸಲಾಗುತ್ತಿಲ್ಲವೆಂದೂ, ಭಾರತೀಯರ ರಕ್ಷಣೆ ಹೊಣೆ ಇನ್ನೂ ಬ್ರಿಟನಿಗೆ ತಪ್ಪಿಲ್ಲ ವೆಂದೂ ನಿವೃತ್ತ ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿಗಳಾದ ಮಾಲ್‌ಕಂ ಡಾರ್ಲಿಂಗ್ ಮತ್ತು ಆರ್. ಪಿ. ವಿಲ್ಸನರವರು ತಿಳಿಸಿದ್ದಾರೆ. ಸಾವಿರಾರು ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವಾಗ, ನಾಕಸ್ಕು ದವಸ ಧಾನ್ಯಗಳು ಭಾರತಕ್ಕೆ ರಫ್ತಾಗಬೇಕಾದುದು ಅತ್ಯವಶ್ಯಕವೆಂದು ತಿಳಿಸಿದ್ದಾರೆ.

ಗೂಡ್ಸ್ ಗಾಡಿಗೆ ಕಳ್ಳರ ಮುತ್ತಿಗೆ

ಮದರಾಸ್ ಬಳಿ ಗೂಡ್ಸ್ ರೈಲೊಂದು ಬರುತ್ತಿದ್ದಾಗ ಗಾರ್ಡ್ ಗಾಡಿಗೆ ಮೂವರು ದರೋಡೆಕಾರರು ಹಾರಿ ಹತ್ತಿಕೊಂಡು, ಚಾಕು ತೋರಿಸಿ, ಗಾರ್ಡ್ ಬಳಿ ಇದ್ದ ೪೭ ರೂ. ಕಿತ್ತುಕೊಂಡು ಹೋಗಿರುವುದಾಗಿ ವರ್ತಮಾನ.

ಕಲ್ಕತ್ತಾದಲ್ಲಿ ದುರ್ಮರಣ

ಮೊನ್ನೆ ಬುಧವಾರ ಕಲ್ಕತ್ತಾ ನಗರದಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿದ್ದ ೧೫೦ ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಆಸ್ಪತ್ರೆಯಲ್ಲಿ ೪೮ ಜನ ಅಂದೇ ಮೃತರಾದರು.

ಇರಾಕ್ ಯುವರಾಜ ಪಟ್ಟ

ಇರಾಕ್ ದೇಶದ ಯುವರಾಜ ಪಟ್ಟಕ್ಕೆ ಅಲ್ಲಿನ ರೀಜೆಂಟ್ ಅಮೀರ್ ಅಬ್ದುಲ್‌ರವರೇ ಏರಬಹುದೆಂದು ಇರಾಕ್ ಪಾರ್ಲಿಮೆಂಟ್ ಒಪ್ಪಿದೆ.

ಬಾಲ್ಕನ್ ಫೆಡರೇಷನ್ ಇಲ್ಲ

ನಾಜಿಗಳು ಕೂಡಿಸಬೇಕೆಂದು ಪ್ರಯತ್ನಿಸಿದ ಬಾಲ್ಕನ್ ರಾಷ್ಟ್ರಗಳ ಸಂಯುಕ್ತ ರಾಜ್ಯಾಂಗವು ಕೂಡಲಾರದೆಂದು ಬರ್ಲಿನ್ ರೇಡಿಯೋ ಒಪ್ಪಿಕೊಂಡಿದೆ.

Edited, printed and published by A. R. Nagarajan, at the Sadhvi Press, D.Subbiah Road, Mysore.

ಯುದ್ಧಕಾಲದಲ್ಲಿ ಹಣಕ್ಕೆ ಬೆಲೆಯಿಲ್ಲ

ಅಂಗಡಿಗಳ ಅನೇಕ ಪದಾರ್ಥಗಳ ಬೆಲೆಗಳು ಇಂದಿಗೆ ಕಂಡಾಬಟ್ಟೆ ಹೆಚ್ಚಿವೆ. ಯುದ್ಧಕಾಲದಲ್ಲಿ ಅತ್ಯವಶ್ಯಕವಾದ ಪದಾರ್ಥಗಳ ವಿನಹಾ ಇತರ ಪದಾರ್ಥಗಳನ್ನು ಕೊಂಡರೆ ಗಿಟ್ಟುವುದೇ ಇಲ್ಲ. ಇದಕ್ಕೆ ಪ್ರತಿಯಾಗಿ ನೀವು ಕೂಡಿಡಬಹುದಾದ ಪ್ರತಿಯೊಂದು ಆಣೆಗೂ ಪೂರ್ಣ ಬೆಲೆಯು ದೊರೆಯಬೇಕೆಂದರೆ ಅದು ಸಾಧಾರಣ ಕಾಲ ಪುನಃ ಬಂದಾಗಲೇ ಸಾಧ್ಯ. ಶಾಂತಸಮಯದಲ್ಲಿ ವೆಚ್ಚಮಾಡಲು ಈಗಲೇ ಹಣವನ್ನು ಕೂಡಿಡಿ.

ಮುಂಬರುವ ದಿನಗಳಿಗಾಗಿ ಕ್ಷೇಮಕರವಾಗಿ ಕೂಡಿಡಿ

ಬಂಗಾರ, ಬೆಳ್ಳಿ, ಆಭರಣಗಳು, ಭೂಮಿ, ಕಟ್ಟಡಗಳು ಅಥವಾ ಸಾಮಾನುಗಳ ಮೇಲೆ ವಿನಿಯೋಗಿಸಿ ಶೇಖರಿಸಿದ ಹಣದ ಮೌಲ್ಯವು, ಬೆಲೆಗಳು ಸಾಧಾರಣ ಸ್ಥಿತಿಗೆ ಬಂದ ಕೂಡಲೇ ತಗ್ಗಿಹೋಗುತ್ತದೆ.

ಭದ್ರತೆಗೆ ಮತ್ತು ಶಾಶ್ವತ ಮೌಲ್ಯಕ್ಕೆ ಗೊತ್ತಾಗಿರುವ ನಿಮ್ಮ ಹಣವನ್ನು ಸರಕಾರದ ಸಂಸ್ಥೆ ಇನ್ನೂ ಇತರ ಬ್ಯಾಂಕ್ ಸೇವಿಂಗ್ಸ್ ಅಕೌಂಟನಲ್ಲಿ ಅಥವಾ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ಇಡಿ. ಇನ್ನೆಲ್ಲವುಗಳಿಗಿಂತ ಉತ್ತಮವಾದುದೇನೆಂದರೆ ಸರ್ಕಾರದ ಸಾಲಗಳಲ್ಲಿ ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ವಿನಿಯೋಗಿಸುವುದು.

ದಿನವೂ ನಾಲ್ಕು ಆಣೆ ಕೂಡಿಡಿ!

ಚಿಲ್ಲರೆ ಹಣವನ್ನು ಒಂದೆಡೆ ತಪ್ಪದೆ ಕೂಡಿಡುತ್ತ ಬಂದಲ್ಲಿ ಎಷ್ಟು ಹಣ ಶೇಖರವಾಗುತ್ತದೆಯೆಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಒಂದು ಹಣದ ಪೆಟ್ಟಿಗೆಯನ್ನು ಈಗಲೇ ಆರಂಭಿಸಿ! ದಿನವೂ ನಾಲ್ಕು ಆಣೆ ಕೂಡಿಸಿ ಅಥವಾ ಸಾಧ್ಯವಾದರೆ ಹೆಚ್ಚಿನದನ್ನು ಕೂಡಿಸಿ, ಅನಂತರ ಕೂಡಿಟ್ಟ ಹಣವನ್ನು ಸುರಕ್ಷಿತವಾಗಿ ಬೆಳೆಯುವ ಕಡೆಗೆ ಕಂಡ ವಿನಿಯೋಗಗಳಲ್ಲಿ ಕ್ರಮವಾಗಿ ಹಾಕುತ್ತ ಬನ್ನಿ.

ಭಾರತೀಯ ಯುದ್ಧಸಾಲದವರು ದೇಶರಕ್ಷಣೆಗೆ ಸಹಾಯ ಮಾಡಿ

WEEKLY EDITION

ಸಂಪುಟ ೮]   ಸೋಮವಾರ ೧--೧೧--೪೩   [ಸಂಚಿಕೆ ೨

ಜರ್ಮನಿಯು ಮಿಲಿಟರಿ ಅಧೀನವಾಗಬೇಕು

ನೂತನ ಜೈನಾ ಸರ್ಕಾರದ ಬಗ್ಗೆ ನ್ಯಾಂಕಿಂಗ್-ಜಪಾನ್ ಒಪ್ಪಂದ

ಬಂಗಾಳ ಕ್ಷಾಮ ನಿವಾರಿಸಲು ಗಾಂಧೀಜಿಯನ್ನು ಬಿಡಲಾಗುವುದೇ ?

ಬೇಲೂರಿಗೆ ಪ್ರಭುಗಳ ಭೇಟಿ

ಮೈಸೂರು ೧

ಶ್ರೀ ಮನ್ಮಹಾರಾಜರವರು ಇದೇ ನವೆಂಬರ್ ೧೧ ನೇ ತಾರೀಖಿನಲ್ಲಿ ಬೇಲೂರಿಗೆ ದಯಮಾಡಿ, ಅಲ್ಲಿ ಮಹಾಪ್ರಭುಗಳಾದ ಶ್ರೀ ಕೃಷ್ಣರಾಜ ಒಡೆಯರ ಪ್ರತಿಮೆಯ ಪ್ರತಿಷ್ಠಾ ಮಹೋತ್ಸವ ಸಮಾರಂಭವನ್ನು ಜರುಗಿಸುವರೆಂದು ತಿಳಿಯಬರುತ್ತದೆ.

ಸಿ. ಜಿ. ರಾಮಚಂದ್ರರಾಯರ ಉಮೇದುವಾರಿಕೆ ವಾಪಸ್ಸು

ನಜರ್‌ಬಾದ್ ನಿವಾಸಿಗಳ ಸಭೆ ನೆರೆ ಸೀರ್ದ್ಯಾಸಿಸಿ ಸ್ವತಂತ್ರ ಉಮೇದುವಾರರಾಗಿ ಮುನಿಸಿಪಲ್ ಚುನಾವಣೆಗೆ ನಿಂತಿದ್ದ ಶ್ರೀ ಸಿ. ಜಿ. ರಾಮಚಂದ್ರರಾಯರನ್ನು ಚುನಾವಣೆಗೆ ನಿಲ್ಲದಂತೆ ಪ್ರಾರ್ಥಿಸಿಕೊಂಡ ವೇಳೆ ಅವರ ಮಾತಿಗೆ ಗೌರವವನ್ನು ಕೊಟ್ಟು ರಾಯರು ತಮ್ಮ ಉಮೇದುವಾರಿಕೆಯನ್ನು ವಾಪಸ್ಸು ತೆಗೆದು ಕೊಂಡಿರುವುದಾಗಿ ಈ ದಿನ ಪೌರಸಭಾಧ್ಯಕ್ಷರಿಗೆ ತಿಳಿಸಿದ್ದಾರೆಂದು ಗೊತ್ತಾಗಿದೆ. ಇವರು ಈ ರೀತಿ ಉಮೇದುವಾರಿಕೆಯನ್ನು ವಾಪಸ್ಸು ಪಡೆದಿರುವುದರಿಂದ ನಜರ್‌ಬಾದ್ ನಾಪಲ್ಲಿಯ ಕಾಂಗ್ರೆಸ್ ಉಮೇದುವಾರರಾದ ಶ್ರೀ ಜಿ. ವೆಂಕಟರಮಣಯ್ಯನವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾದಂತಾಯಿತು.

ಗೌ|| ಕಾರ್ಯದರ್ಶಿ

ಮೈಸೂರು ಸಿಟಿ ಮುನಿಸಿಪಲ್ ಮತ್ತು ಟ್ರಸ್ಟ್ ಬೋರ್ಡ್ ಆಫೀಸುಗಳ ಕೋಆಪರೇಟಿವ್ ಸೊಸೈಟಿಯ ಆನರರಿ ಸೆಕ್ರೆಟರಿಯವರ ಚುನಾವಣೆಯು ಸದರಿ ಸಂಘದ ಅಧ್ಯಕ್ಷರಾದ ಮ|| ಬಿ. ಎಸ್. ಶೇಷಗಿರಿರಾಯರ ಅಧ್ಯಕ್ಷತೆಯಲ್ಲಿ ನಡೆದು ಮುನಿಸಿಪಲ್ ಆಫೀಸಿನಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿರುವ ಮ|| ಜೆ. ಪಿ. ಸುಬ್ಬರಾಯರು ಆನರರಿ ಸೆಕ್ರೆಟರಿಯಾಗಿ ಚುನಾಯಿತರಾದರು.

ಪೆರೋಲ್

ಶ್ರೀ ಎಂ. ಎನ್. ಜೋಯಿಸರವರಿಗೆ ಬಂಧುವೊಬ್ಬರ ಕಾಯಿಲೆ ನಿಮಿತ್ತ ಪೆರೋಲ್ ಮೇಲೆ ಬಿಡುಗಡೆಮಾಡಲು ಆಜ್ಞೆಯಾಗಿರುವುದಾಗಿ ತಿಳಿದು ಬಂದಿದೆ.

ರಾಜಧಾನಿಯಲ್ಲಿ ನೀರಿನ ತೊಂದರೆ

ಕೆಲವು ದಿವಸಗಳಿಂದ ನಗರದ ಹಲವು ಭಾಗಗಳಲ್ಲಿ ನೀರಿನ ಸರಬರಾಜು ಕ್ರಮವಾಗಿ ನಡೆಯುತ್ತಿಲ್ಲ. ನೀರು ನಲ್ಲಿಯ ಮೇಲೆಯಾಗಲಿ ಅಥವ ಬರುವ ವೇಳೆಯಾಗಲಿ ಒಂದೂ ನಿಯಮಕ್ಕೆ ಗೊತ್ತಿಲ್ಲದೆ ನಿವಾಸಿಗಳು ನೀರು ತುಂಬಿಟ್ಟುಕೊಳ್ಳಲು ಬಹಳ ತೊಂದರೆ ಪಡುತ್ತಾರೆ. ಬೆಳಿಗ್ಗೆ ೬ ರಿಂದ ೧೦ ರವರೆಗೆ ಸಂಜೆ ೬ ರಿಂದ ೧೦ ರವರೆಗೆ ನೀರು ಬರುತ್ತದೆಂದು ಹೇಳಲಾಗಿದೆ. ಈ ವಿಷಯ ವಾಗಿ ಅಧಿಕಾರಿಗಳು ಗಮನಕೊಡುವುದು ಅವಶ್ಯಕವೆಂದು ಜನರ ಅಭಿಪ್ರಾಯ.

ಹಗಲಲ್ಲಿ ಕಂಡ ನಕ್ಷತ್ರ

ಮೊನ್ನೆ ದಿನ ಹಗಲಿನಲ್ಲಿ ಕಂಡ ನಕ್ಷತ್ರವು ವೀನಸ್ ಎಂಬ ಗ್ರಹವೆಂದು ಕೊಡೈಕೆನಾಲ್ ವೀಕ್ಷಣಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಬಂಗಾಳ ಬಿಜಾಪುರದ ಕ್ಷಾಮ ನಿವಾರಣೆಗೆ ಸಹಾಯ

ಬೊಂಬಾಯಿಯಲ್ಲಿ ನಡೆದ ಪ್ರೀತಿ ಕ್ರಿಕೆಟ್ ಪಂದ್ಯದಲ್ಲಿ ಬಂದಿರುವ ಹಣದ ನಿವ್ವಳ ಲಾಭವನ್ನು ಬಂಗಾಳ ಮತ್ತು ಬಿಜಾಪುರದ ಕ್ಷಾಮ ನಿವಾರಣಾ ನಿಧಿಗೆ ಕೊಡಲು ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾ, ಮುಸ್ಲಿಂ ಮತ್ತು ಪಾರ್ಸಿ ಜಿಮ್‌ಖಾನಾಗಳು ನಿರ್ಧರಿಸಿದ್ದಾರೆ. ಇದಲ್ಲದೆ ಜಿಮ್‌ಖಾನಾಗಳು ತಾವುಗಳೇ ಆರಿಸಿದ ಹಣವನ್ನೂ ಕೊಡಲು ಒಪ್ಪಿರುವರು.

ಮಹಾರಾಜರವರಿಗೆ ವಿಶೇಷ ಗೌರವ

ಲಕ್ನೋ ವಿಶ್ವವಿದ್ಯಾನಿಲಯದ ಸ್ನಾತಕ ಸಭೆಯ ಶ್ರೀ ಮನ್ಮಹಾರಾಜರವರಿಗೆ ಡಾಕ್ಟರ್ ಆಫ್ ಲಾಸ್ ಪದವಿಯನ್ನು ಕೊಡಲು ನಿರ್ಧರಿಸಿದೆ. ಸ್ನಾತಕೋತ್ಸವ ಸಮಾರಂಭದಲ್ಲಿ ಈ ಗೌರವ ಪದವಿಯನ್ನು ಮಹಾರಾಜರವರಿಗೆ ಕೊಡಲಾಗುವುದೆಂದು ಗೌರವಿಸಲಾಗಿದೆ.

ಪಿತೂರಿ ಕೇಸಿನ ಪ್ರತಿಧ್ವನಿ

ಭಗತ್ ಸಿಂಗ್ ಅವರೊಡನೆ ಸಂಬಂಧ ಪಟ್ಟಿದ್ದ ಲಾಹೋರ್ ಪಿತೂರಿ ಕೇಸಿನಲ್ಲಿ ಒಬ್ಬರಾಗಿದ್ದ ಶ್ರೀ ಕಿಶೋರಿಲಾಲ್ ಎಂಬುವರನ್ನು ಬಿಡುಗಡೆ ಮಾಡಬೇಕೆಂದು ಅನೇಕರು ಸರ್ಕಾರಕ್ಕೆ ಅರ್ಜಿಗಳನ್ನು ಕಳುಹಿಸಿದ್ದರು. ಈ ಬಗ್ಗೆ ಜೈಲ್ ಇಲಾಖೆಯಿಂದ ಉತ್ತರ ಬಂದಿಲ್ಲವೆಂದೂ, ಅವರ ಬಿಡುಗಡೆಯ ಪ್ರಶ್ನೆ ಪರಿಶೀಲನೆಯಲ್ಲಿದೆ ಎಂದೂ ವರ್ತಮಾನ.

ಖಂಡು ಸೇಟ್ ಚೇತನಂ ಸಮುಸ್ಕರ

ಹೈದರಾಬಾದ್ ಬಂದಿಖಾನೆಯಲ್ಲಿ ಜ ಬಂದಿಗಳಾಗಿದ್ದ ಶ್ರೀ ಖಂಡು ಸೇಟ್ ... ಬಂದಿಗಳನ್ನು ಹರಿಜನ ಸೇವೆಗೆ ... ಗೊಳಿಸಲು ... ಉಪವಾಸ ... ಮಾಡಿದರು ... ಶುಕ್ರವಾರ ... ಸಂಜೆ ... ಸತ್ಯಾಗ್ರಹ ... ಹಾಗೆ ... ಮುಗಿಸಿದರು.

ರೂಸ್ವೆಲ್ಟ್-ಸ್ಟಾಲಿನ್ ಭೇಟಿ

ಈ ವರ್ಷದೊಳಗಾಗಿ ಮಾರ್ಷಲ್ ಸ್ಟಾಲಿನರಿಗೂ ಮತ್ತು ಪ್ರೆ|| ರೂಸ್ವೆಲ್ಟರಿಗೂ ಭೇಟಿ ಆಗುವುದೆಂದು ಹೇಳಲಾಗಿದೆ. ಮಾಸ್ಕೋ ದಲ್ಲಿ ತ್ರಿರಾಷ್ಟ್ರ ಸಮ್ಮೇಳನದಲ್ಲಿ ಜರ್ಮನಿಯ ಸಕಲ ಅಥವಾ ಸೋಲಿಸಿದ ನಂತರ ಜರ್ಮನಿಯನ್ನು ಹೇಗೆ ನಡೆಸಿಕೊಳ್ಳಬೇಕೆಂಬ ವಿಷಯದಲ್ಲಿ ಒಪ್ಪಂದಕ್ಕೆ ಬರಲಾಗಿದೆಯೆಂದು ವರದಿಯಾಗಿದೆ.

ಮುಳುಗಿದ ಹಡಗನ್ನೆತ್ತುವ ಪ್ರಯತ್ನ

೧೯೪೧ನೇ ಡಿಸೆಂಬರ್‌ನಲ್ಲಿ ಮಲಯಾ ತೀರದಲ್ಲಿ ಜಪಾನೀಯರು ಮುಳುಗಿಸಿದ 'ಪ್ರಿನ್ಸ್ ಆಫ್ ವೇಲ್ಸ್' ಎಂಬ ಬ್ರಿ|| ಯುದ್ಧ ನೌಕೆಯನ್ನು ಮೇಲಕ್ಕೆತ್ತಲು ಜಪಾನರು ಯತ್ನಿಸುತ್ತಿರುವರೆಂದು ವರದಿಯಾಗಿದೆ. ಜಪಾನೀಯರು ಹೆಚ್ಚು ನೌಕೆಗಳಿಲ್ಲದೆ ತೊಂದರೆಗೊಳಗಾಗಿರುವುದೇ ಈ ಪ್ರಯತ್ನಕ್ಕೆ ಕಾರಣ.

ದಕ್ಷಿಣ ಇಟಲಿಯಲ್ಲಿ ಜರ್ಮನರ ದುಸ್ಥಿತಿ

ಇಟಲಿಯ ಟ್ರಿಗ್ನೋ ನದೀ ಕ್ಷೇತ್ರದಲ್ಲಿ ಜರ್ಮನ್ ಸೈನ್ಯದ ಮುಸ್ಥಿತಿಯು ಬಹಳ ಕಷ್ಟಕ್ಕೆ ಈಡಾಗಿರುವುದರಿಂದ ಉತ್ತರ ಇಟಲಿಯಿಂದ ೨೦ ಸಾವಿರ ಸೈನಿಕರನ್ನು ನೇಪಲ್ಸ್ ಕಡೆ ಕಳುಹಿಸಲಾಗಿದೆಯೆಂದು ಅಲ್ಜಿಯರ್ಸ್ ರೇಡಿಯೋ ತಿಳಿಸುತ್ತದೆ.

ಗೋಬೆಲ್ ಕೆನಾಲ್‌ಗೆ ಪೆಟ್ಟು ಹೊಡೆತ

ಗೋಬೆಲ್ ಕೆನಾಲಿನಲ್ಲಿದ್ದ ಜರ್ಮನರ ಹಡಗುಗಳ ಮೇಲೆ ಗುರುವಾರ ಜಪಾನೀ ವಿಮಾನಗಳು ಧಾಳಿಮಾಡಿದವೆಂದೂ ಅನೇಕ ನೌಕೆಗಳು ಹಾನಿಹೊಂದಿದುವೆಂದು ವರದಿ ಮಾಡಿದ್ದಾರೆ.

ಮುಷ್ಕರಗಾರರ ಸಂಖ್ಯೆ ಹೆಚ್ಚಿತು.

ಅಮೆರಿಕಾದಲ್ಲಿ ಗಣಿ ಮುಷ್ಕರಗಾರರ ಸಂಖ್ಯೆ ... ಇಂದು ಅಧ್ಯಕ್ಷ ... ಮ. ಸ್ವಗೆಲ್ಲಬೇಕೆಂದು ... ವಾದವೇನೆಂಬುದನ್ನು ... ಕೆಲಸ ಹೋದ ಇವರ ... ಕೇಳುತ್ತಿದೆ.

ಜರ್ಮನಿಯನ್ನು ಮಿಲಿಟರಿ ಆಕ್ರಮಣಮಾಡಬೇಕು

ಮಾಸ್ಕೋ ಸಮ್ಮೇಳನದಲ್ಲಿ ಜರ್ಮನಿ ಶರಣಾಗತನವಾಗಿ ಆರ್ಮಿಸ್ಟಿಸ್ ಕಾಲದಲ್ಲಿ ಜರ್ಮನಿಯನ್ನು ಮಿಲಿಟರಿ ಆಕ್ರಮಣ ಮಾಡಬೇಕೆಂಬ ವಿಷಯದಲ್ಲಿ ಒಪ್ಪಂದಕ್ಕೆ ಬರಲಾಯಿತೆಂದು ಹೇಳಲಾಗಿದೆ.

ಗಾಂಧೀಜಿಯನ್ನು ಬಿಡುಗಡೆ ಮಾಡಲಾಗುವುದೆ ?

ಭಾರತದ ಪ್ರಜೆಗಳ ಸಹಕಾರವಿಲ್ಲದೆ ಕ್ಷಾಮ ನಿವಾರಣೆ ಆಗುತ್ತದಿಲ್ಲ. ಇದನ್ನು ಪರಿಹರಿಸಲು ಗಾಂಧಿಜಿಯವರನ್ನು ಬಿಡುಗಡೆಮಾಡಿದರೆ ಅವರು ಇದಕ್ಕೆ ಸಹಾಯಕರಾಗುವುದರಲ್ಲಿ ಸಂದೇಹವಿಲ್ಲ. ಲಾರ್ಡ್ ವೇವೆಲ್‌ರವರು ಧೈರ್ಯಶಾಲಿಗಳು. ಅವರು ಗಾಂಧಿಜಿ ಮತ್ತು ಇತರ ನಾಯಕರನ್ನು ಬಿಡುಗಡೆಮಾಡಲು ತಮ್ಮ ಶಕ್ತಿಯನ್ನು ಉಪಯೋಗಿಸುವರೇ ಎಂಬುದಾಗಿ ಲಂಡನ್ನಿನ "ನ್ಯೂ ಸ್ಟೇಟ್ಸ್‌ಮನ್ ಮತ್ತು ನೇಷನ್" ಪತ್ರಿಕೆಯು ಕೇಳಿದೆ.

ನ್ಯಾಂಕಿಂಗ್ ಜಪಾನ್ ಒಪ್ಪಂದ

ಜಪಾನಿಗೂ ಚೀನಾದ ನ್ಯಾಂಕಿಂಗ್ ಸರ್ಕಾರಕ್ಕೂ ಸಖ್ಯ ಸಂಬಂಧದ ಒಪ್ಪಂದವಾಯಿತೆಂದು ಜಪಾನ್ ವಾರ್ತಾ ಸಂಸ್ಥೆ ಪ್ರಕಟಿಸಿದೆ. ಈ ಒಪ್ಪಂದದಲ್ಲಿ ಜಪಾನಿಗೂ, ಚೀನಾದ ಸ್ವತಂತ್ರ ನಾನ್ಕಿಂಗ್ ನಗರಗಳೂ, ಆಕ್ರಮಿತ ಜಪಾನಿನೂ ಫಿಲಿಪೈನ್ ಸಿನ ಸ್ವಾತಂತ್ರ್ಯ ಸರ್ಕಾರಕ್ಕೂ, ಸಖ್ಯ ಮೇಲ್ಪಟ್ಟಿರುವುದಾಗಿ ನವ ಸಂಘಟಿತ ನೂತನ ಚೀನಾ ಸರ್ಕಾರ ಸ್ಥಾಪಿಸಲು ಇದರ ಉದ್ದೇಶವೆಂದು ಹೇಳಲಾಗಿದೆ.

ವಿದ್ಯಾರ್ಥಿಗಳಿಗೂ ಪೋಲೀಸರಿಗೂ ಘರ್ಷಣೆ

ಅರ್ಜೆಂಟೈನಾದ ರಾಜಧಾನಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ನಾಜಿ ಆದೇಶವನ್ನು ವಿರೋಧಿಸುವ ಬಲವಾಗಿ ಹೋರಾಟ ಹೂಡಿದ್ದಾರೆ. ಪೋಲೀಸರವರಿಗೂ ವಿದ್ಯಾರ್ಥಿಗಳಿಗೂ ಹೋರಾಟ ನಡೆಯುತ್ತಿದೆ. ವಿದ್ಯಾರ್ಥಿಗಳು ಕಲ್ಲು ಇಟ್ಟಿಗೆಗಳನ್ನೇ ತಮ್ಮ ಆಯುಧವನ್ನಾಗಿ ಉಪಯೋಗಿಸಿಕೊಂಡು ಪೋಲೀಸರನ್ನು ಎದುರಿಸಿದರೆಂದು ಕೇಳಲ್ಪಟ್ಟಿದ್ದಾರೆ.

ಪೋ|| ಇನ್ಸ್‌ಪೆಕ್ಟರಿಗೆ ಬಾಕುವಿನಿಂದ ತಿವಿತ

ಹುಬ್ಬಳ್ಳಿಯಲ್ಲಿ ಪೋ|| ಇನ್ಸ್‌ಪೆಕ್ಟರರಾದ ಮಿ|| ಎ. ಡಿ. ನಸೀರರವರ ಮನೆಯ ಬಳಿ ಭಿಕ್ಷುಕನು ರಾತ್ರಿ ಹೊಡೆದದ್ದನ್ನು, ಇನ್ಸ್‌ಪೆಕ್ಟರಿಗೂ ಮತ್ತು ಅವರ ಪತ್ನಿಯವರಿಗೂ, ಬಾಕುವಿನಿಂದ ಹೊಡೆದು, ತೀವ್ರ ಗಾಯ ಪಡಿಸಿದನೆಂದೂ, ಆತನ ಆರೋಗ್ಯ ಹಿಡಿದು ಪೋಲೀಸರಿಗೆ ಒಪ್ಪಿಸಲಾಯಿತೆಂದೂ ವರದಿಯಾಗಿದೆ.

ವಿಕ್ಟರ್ ಎಮಾನ್ಯುಯೆಲ್ ಪಟ್ಟಕ್ಕೆ ಮುಖ್ಯಸ್ಥಿತಿ

ಇಟಲಿಯ ವಿಕ್ಟರ್ ದೊರೆಗಳಿಗೆ ಸಿಂಹಾಸನ ವಿಲಿಯರ ಪೋರ್ಟ್‌ಗಳ ಜೊತೆ ತ್ಯಜಿಸಿ ಅಧಿಕಾರವನ್ನು ವಹಿಸಿಕೊಳ್ಳಬೇಕೆಂದು ಸ್ಪೋರ್ಜಾ ಮಂತ್ರಿಮಂಡಲವು ನಿರ್ಧರಿಸಿದೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ॥ ೧-೧೧-೪೬ರಿಂದ ೭-೧೧-೪೬ರ ವರೆಗೆ

ಮೇಷ ... ಈ ವಾರದಲ್ಲಿ ನಿಮ್ಮ ಆರೋಗ್ಯ ಚೆನ್ನಾಗಿದೆ. ಆರ್ಥಿಕ ಮಾನಸಿಕ ಸ್ಥಿತಿಗಳು ಉತ್ತಮವಾಗಿವೆ. ಹಿಡಿದ ಕಾರ್ಯದಲ್ಲಿ ಸಿದ್ಧಿ. ವ್ಯಾಪಾರ, ಉದ್ಯೋಗಾದಿಗಳಲ್ಲಿ ಪ್ರಗತಿ, ಗೌರವ ಪ್ರಾಪ್ತಿ. ಪ್ರವಾಸದಲ್ಲಿ ಕಾರ್ಯಸಿದ್ಧಿ. ತಾ॥ ೩, ೪ ಪ್ರಗತಿ.

ವೃಷಭ... ಈ ವಾರ ನಿಮಗೆ ಪ್ರಗತಿ ದಾಯಕವಾಗಿದೆ. ನಿಂತ ಕೆಲಸಗಳೆಲ್ಲಾ ಈ ವಾರ ಕೈಗೂಡುವುವು. ಆರೋಗ್ಯ ಉತ್ತಮವಾಗಿದೆ. ಸಾಂಪತ್ತಿಕ ಮಾನಸಿಕ ಸ್ಥಿತಿಗಳೂ ಚೆನ್ನಾಗಿರುತ್ತವೆ ಉದ್ಯೋಗಾದಿಗಳಲ್ಲಿ ಪ್ರಗತಿ. ತಾ॥ ೪, ೫ ಉನ್ನತಿ

ಮಿಥುನ... ಹಣ ಬಂದಷ್ಟೂ ಖರ್ಚಾಗುತ್ತದೆ. ಈ ವಾರ ನಿಮ್ಮ ಆರೋಗ್ಯಾದಿಗಳೆಲ್ಲವೂ ಉತ್ತಮವಾಗಿವೆ. ಉದ್ಯೋಗಾದಿಗಳಲ್ಲಿ ಪ್ರಗತಿ ಮತ್ತು ಲಾಭ. ತಾ॥ ೩ ಚಿಂತೆ.

ಕರ್ಕ.... ಈಗ ನಿಮ್ಮ ಗ್ರಹಗಳು ಉಚ್ಚ ಸ್ಥಾನದಲ್ಲಿವೆ. ನಿಮಗೆ ಈ ವಾರ ಪ್ರಗತಿ ದಾಯಕವಾಗಿದೆ ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿದೆ ಭಕ್ಷಿಕರ ಮತ್ತು ಮಿತ್ರರ ಸಹಾಯ ದೊರೆಯುವುದು. ಈ ವಾರ ನೀವು ಸಂತೋಷವಾಗಿರುವಿರಿ ತಾ॥ ೩ ಪ್ರಗತಿ.

ಸಿಂಹ.... ಈ ವಾರ ನಿಮ್ಮ ಕಾರ್ಯಗಳಿಂದ ತೊಂದರೆಯಾಗುವ ಪ್ರಸಂಗ ಬಂದರೂ ನಿಮ್ಮ ಬುದ್ಧಿವಂತಿಕೆಯು ಅದರಿಂದ ಪಾರು ಮಾಡುವುದು. ಆರೋಗ್ಯ ಮಾನಸಿಕ ಸ್ಥಿತಿಗಳು ಚೆನ್ನಾಗಿರುವುವು. ಸ್ತ್ರೀಯರಿಂದ ತೊಂದರೆ. ತಾ॥ ೩, ೪, ೫ ಖರ್ಚು.

ಕನ್ಯಾ ... ಈ ವಾರ ನಿಮಗೆ ಕಿರುಕುಳ, ಅನಾರೋಗ್ಯ ಒದಗುವುವು. ದ್ರವ್ಯಲಾಭವಾದರೂ ಅಷ್ಟೇ ಖರ್ಚಾಗುವುದು. ಚಿಂತೆ ಜಾಸ್ತಿಯಾಗುವುದು. ತಾ॥ ೩, ೪, ನಷ್ಟ, ಬಂಧುಗಳ ಆಗಮನ

ತುಲಾ ... ನಿಮ್ಮ ಆರೋಗ್ಯ, ಮಾನಸಿಕ ಮತ್ತು ಆರ್ಥಿಕ ಸ್ಥಿತಿಗಳು ಸಾಧಾರಣವಾಗಿರುವುವು ವ್ಯಾಪಾರ, ಉದ್ಯೋಗಾದಿಗಳಲ್ಲಿ ಅಷ್ಟು ಪ್ರಗತಿಯಿಲ್ಲ ಚಿಂತೆ. ಪ್ರವಾಸದಲ್ಲಿ ವಿಘ್ನ. ಅಂತೂ ಈ ವಾರ ನಿಮಗೆ ಪ್ರಗತಿದಾಯಕವಲ್ಲ. ತಾ॥ ೨, ೩, ೪ ಹೆಚ್ಚು ಖರ್ಚು, ಚಿಂತೆ

ವೃಶ್ಚಿಕ.... ಈ ವಾರ ನಿಮಗೆ ಕೊಂಚ ತೊಂದರೆಯುಂಟಾಗಿದೆ. ನಿಮ್ಮ ಆರೋಗ್ಯ ಅಷ್ಟು ಚೆನ್ನಾಗಿರುವುದಿಲ್ಲ. ಹಣದ ತಗಾದೆ ಹೆಚ್ಚು. ನೌಕರಿಯಲ್ಲಿ ಅಧಿಕಾರಿಗಳು ದಂಡಿಸಿ ತೊಂದರೆ ಕೊಡುವರು. ಪ್ರವಾಸಕ್ಕೆ ಯೋಗ್ಯವಿಲ್ಲ. ತಾ॥ ೨, ೫ ಕಲಹ, ಕಲಹ.

ಧನುಸ್ಸು... ಈ ವಾರ ನಿಮಗೆ ಉತ್ತಮವಾಗಿದೆ ನಿಮ್ಮ ಶರೀರಾರೋಗ್ಯವು ಚೆನ್ನಾಗಿರವುದು. ವ್ಯಾಪಾರ, ಉದ್ಯೋಗಾದಿಗಳಲ್ಲಿ ಪ್ರಗತಿ. ಪ್ರವಾಸ, ಮಂಗಳ ಕಾರ್ಯಗಳಲ್ಲಿ ಅನುಕೂಲ. ತಾ॥ ೩, ೫ ಸನ್ಮಾನ.

ವೈದ್ಯನಾಥರಿಗೆ ಹೊಸ ಹುದ್ದೆ

ಬೆಂಗಳೂರು ಓರಿಯಂಟಲ್ ವಿಮಾ ಕಂಪನಿಯ ಅಧಿಕಾರ ವರ್ಗದಲ್ಲಿರುವ ಶ್ರೀ ಎಲ್. ಎಸ್. ವೈದ್ಯನಾಥರವರನ್ನು ಇಂಡಿಯಾ ಸರ್ಕಾರದ ವಿಮಾ ಶಾಖೆಯ ಸೂಪರಿಂಟೆಂಡೆಂಟರನ್ನಾಗಿ ನೇಮಿಸಲಾಗಿದೆ

'ಸಾವರ್ಕರ್' ಪುಸ್ತಕ ಮುಟ್ಟುಗೋಲು

"ಸಾವರ್ಕರ್ ಜೀವನ ಚರಿತ್ರೆ" ಎಂಬ ಪುಸ್ತಕದ ಪ್ರತಿಗಳನ್ನು ಬೊಂಬಾಯಿ ಪ್ರಾಂತ್ಯದಲ್ಲಿ ಎಲ್ಲಿ ಕಂಡುಬಂದರೂ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಬೊಂಬಾಯಿ ಸರ್ಕಾರ ಆಜ್ಞಾಪಿಸಿದೆ

ಒಂದು ತಿಂಗಳು ಹೆಚ್ಚಿತು

ವರ್ತಕರು ತಮ್ಮಲ್ಲಿರುವ ದಾಸ್ತಾನನ್ನು ನವೆಂಬರ್ ತಿಂಗಳಲ್ಲೇ ಸರ್ಕಾರಕ್ಕೆ ತಿಳಿಸಬೇಕೆಂದು ಹೊರಡಿಸಿದ್ದ ಆಜ್ಞೆಯನ್ನು ಒಂದು ತಿಂಗಳು ಮುಂದೆ ಹಾಕಿರುವುದಾಗಿ ಡೆಲ್ಲಿ ಪ್ರಕಟಣೆ ತಿಳಿಸುತ್ತದೆ.

ಯು. ಪಿ. ಯಲ್ಲಿ ಖುಲಾಸೆ

ಘೋರಕಪುರ್ ಜಿಲ್ಲಾ ಸೆರೆಮನೆಯಿಂದ ೧೭ ಮಂದಿ ಕಾಂಗ್ರೆಸ್ ಸೆರೆಯಾಳುಗಳನ್ನು ಮೊನ್ನೆ ಖುಲಾಸೆಮಾಡಲಾಯಿತು.

ಪಾನನಿರೋಧ ತೆಗೆಯುವ ನಿರ್ಧಾರ

೧೯೩೭ರ ಪಾನನಿರೋಧ ಕಾನೂನನ್ನು ತಿದ್ದುಪಾಟು ಮಾಡಲು ಮದರಾಸ್ ಸರ್ಕಾರ ನಿಶ್ಚಯಿಸಿರುವುದಾಗಿ ಗೊತ್ತಾಗುತ್ತದೆ. ಹಿಂದಿನ ಸೇವನೆಗೆ ಪ್ರತಿಬಂಧಕವಿರಬಾರದೆಂದು ಸರ್ಕಾರ ಅಭಿಪ್ರಾಯಪಟ್ಟಿರುತ್ತದೆ.

ಭಾರತೀಯ ಯುದ್ಧ ಖೈದಿಗಳು

ಬ್ಯಾಂಕಾಕ್‌ನಲ್ಲಿ ನಡೆದ ಖೈದಿಗಳ ಅದಲುಬದಲು ವ್ಯವಹಾರದ ದೆಸೆಯಿಂದ ಹಲವು ಭಾರತೀಯ ಯುದ್ಧ ಖೈದಿಗಳು ಬಂಧವಿಮುಕ್ತರಾಗಿದ್ದಾರೆ

ಮಕರ... ಯಾವ ಕೆಲಸ ಮಾಡಬೇಕಾದರೂ ಜಾಗರೂಕತೆಯಿಂದ ಮಾಡಿ. ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿರಲಾರದು. ಅನಿರೀಕ್ಷಿತ ಖರ್ಚು, ಬೇಸರ, ಪ್ರವಾಸದಲ್ಲಿ ನಷ್ಟ. ತಾ॥ ೩, ೫ ಖರ್ಚು ಹೆಚ್ಚು, ಕಿರುಕುಳ.

ಕುಂಭ... ಈ ವಾರ ನೀವು ತೊಂದರೆ ಅನುಭವಿಸಿದರೂ ಮುಂದೆ ನಿಮಗೆ ಅನುಕೂಲವಾಗುವುದು ನಿಮ್ಮ ಆರೋಗ್ಯ ಚೆನ್ನಾಗಿರುವುದಿಲ್ಲ. ಮಧ್ಯಾನ ತೊಂದರೆ ಹೆಚ್ಚು. ತಾ॥ ೨, ೩, ೫ ಕ್ಲೇಶ, ಕಲಹ.

ಮೀನ... ಮಾನಸಿಕ ಚಿಂತೆ ಬಹಳ ಕಾರ್ಯದಲ್ಲಿ, ದುಡುಕಿದರೆ ಫಲವಿಲ್ಲ. ಒಳ್ಳೆಯ ದಿನಗಳು ಬರಲಿವೆ. ನಿಮ್ಮ ಆರೋಗ್ಯ ಚೆನ್ನಾಗಿದೆ. ಆದಾಯದಷ್ಟೇ ಖರ್ಚು. ವ್ಯಾಪಾರಾದಿಗಳಲ್ಲಿ ಸಾಧಾರಣ ಫಲ. ತಾ॥ ೨, ೪ ಆಪಾದ, ಚಿಂತೆ

ಪತ್ರ ವ್ಯವಹಾರ

"ಆಧಾರವಿಲ್ಲದ ಆಪಾದನೆ"

ನಮ್ಮ ತರುಣ ಸ್ನೇಹಿತರಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರು ಒಂದು ಹೇಳಿಕೆಯನ್ನು ಹೊರಡಿಸಿದ್ದಾರೆ ಅದಕ್ಕೆ ಜವಾಬು ಹೇಳುವ ಆಗತ್ಯವಿಲ್ಲದಿದ್ದರೂ ತಪ್ಪಂಶವನ್ನು ತಿದ್ದುವುದು ನನ್ನ ಕರ್ತವ್ಯ.

ನನ್ನನ್ನು ಮುನಿಸಿಪಲ್ ಚುನಾವಣೆಗೆ ನಿಲ್ಲಿಸದಿದ್ದ ಕಾರಣ ನಾನು ಈ ರೀತಿ ನಡವಳಿಕೆಯನ್ನು ನಡೆಸಿದೆನೆಂದು ಹೇಳುವುದು ಸತ್ಯಾಂಶದಿಂದ ದೂರವಾದ ಮಾತು. ಯಾರೂ ಹಾಗೂ ಕಾಂಗ್ರೆಸ್ಸಿನವರು, ಸತ್ಯಾಂಶವನ್ನು ಬಿಡಬಾರದು. ಶ್ರೀಯುತ ದಾಸಪ್ಪನವರು "ನೀವು ಚುನಾವಣೆಗೆ ನಿಲ್ಲುವುದಿಲ್ಲವೆಂತ ಬರೆದಿರುವುದರಿಂದ ನಿಮ್ಮ ಹಣ ಹಿಂದಕ್ಕೆ ಕಳುಹಿಸಿದೆ" ಎಂತ ನನಗೆ ಬರೆದಿದ್ದಾರೆ ಅದು ಶ್ರೀ ಅಯ್ಯಂಗಾರ್ಯರಿಗೆ ಗೊತ್ತೋ ಇಲ್ಲವೋ ಕಾಣೆ. ಹಾಗೂ ಸ್ವತಂತ್ರವಾಗಿ ನಾನು ನಿಲ್ಲಬಾರದೆಂತ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ ಮತ್ತು ಇತರ ಕಾಂಗ್ರೆಸ್ ಸ್ನೇಹಿತರು ಬಂದು ಕೇಳಿದಾಗ ನಾನು ಅವರ ಕೈಲೇ ಹಿಂದಕ್ಕೆ ತೆಗೆದುಕೊಂಡಿದ್ದೇನೆಂದು ಬರೆದುಕೊಟ್ಟ ಅಂಶ ಶ್ರೀ॥ರಿಗೆ ಗೊತ್ತಿದ್ದೂ ಈ ತರಹ ಪಾಪ ಏಕೋ ಗೊತ್ತಿಲ್ಲ ನಾನು ರಾಜೀನಾಮೆ ಕೊಡುವಾಗ ಕೊಟ್ಟಿರುವ ಕಾರಣಗಳು ಶ್ರೀ॥ರಿಗೆ ಅರ್ಥವಾಗುವುದಾಗಿಲ್ಲ. ನನ್ನ ತ್ಯಾಗ ಸೇವೆಗಳ ವಿಷಯವನ್ನೂ ಹೇಳಿದ್ದಾರೆ. ಮುನಿಸಿಪಲ್ ಚುನಾವಣೆಗೆ ನಿಂತು ಇರುವವರ ಕೆಲಸ ಮಾಡುವ ಬಗ್ಗೆ ಹೇಳಿದ್ದಾರೆ ಒಂದು ಪತ್ರಿಕೆಯಲ್ಲಿ ಹೇಳುವುದಾದರೆ ಹಾಗೆ ನಿಂತಿರುವವರು, ಮುಖ್ಯವೇ ಅಥವಾ ನೀತಿ ಕಲಿಸುವವರನ್ನು ಆಡಿಸುವವರು ಮುಖ್ಯವೇ ಅದನ್ನು ಶ್ರೀಯುತರು ಯೋಚಿಸಲಿ.

ಟಿ ಎಸ್. ರಾಜಗೋಪಾಲಯ್ಯಂಗಾರ್

ವೆಲ್ಸ್‌ರಿಗೆ ಪ್ರಶಸ್ತಿ

ಲಂಡನ್ ವಿಶ್ವವಿದ್ಯಾನಿಲಯದವರು ವಿ॥ ಹೆಚ್. ಜಿ. ವೆಲ್ಸ್‌ರಿಗೆ ಡಿ. ಎಸ್. ಸಿ ಪ್ರಶಸ್ತಿಯನ್ನು ದಯಪಾಲಿಸಿದ್ದಾರೆ.

ಜರ್ಮನಿ ಮೇಲೆ ಬಾಂಬಿನ ಸುರಿಮಳೆ

ಜರ್ಮನಿಯ ಮೇಲೆ ಕಳೆದ ನಾಲ್ಕು ವಾರಗಳಲ್ಲಿ ೧೭ ಸಾವಿರ ಟನ್ ಬಾಂಬುಗಳನ್ನು ಸುರಿಸಲಾಗಿದೆಯೆಂದು ಪ್ರಕಟವಾಗಿದೆ

ವಿದ್ಯಾರ್ಥಿಗಳ ಸಭೆಗೆ ಅಡ್ಡಿ

ನಿನ್ನೆ ಮತ್ತು ಮೊನ್ನೆ ನಡೆಯಲೇಬೇಕಾಗಿದ್ದ ವಿದ್ಯಾರ್ಥಿಗಳ ಸಮ್ಮೇಳನವ ನಡೆಯಕೂಡದೆಂದು ಕೃಷ್ಣ ಜಿಲ್ಲಾ ನ್ಯಾಯಾಧೀಶರು ಪ್ರತಿಬಂಧಿಸಿರುವುದಾಗಿ ಸುದ್ದಿ ಬಂದಿದೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಪ್ರಭಾವಶಾಲಿ ಜೀವನಿ ಔಷಧ

ಗರ್ಭಾಶಯಕ್ಕೆ ಶಕ್ತಿವರ್ಧಕ.

ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಋತು ದೋಷಕ್ಕೆ ಗಂಡೌಷಧ.

ಋತು ಕಾಲದಲ್ಲಿ ಅಥವಾ ಆಮೇಲೆ ತೋರುವ ಅಧಿಕ ರಕ್ತಸ್ರಾವ, ಬಿಳುಪು ಹೋಗುವುದು, ಅಕ್ರಮ ಬಹಿಷ್ಠೆ, ಮುಂತಾದುವುಗಳನ್ನು "ಜೀವನಿ" ಜಾಗ್ರತೆ ಪರಿಹರಿಸುತ್ತದೆ.

ಅತ್ಯುತ್ತಮ ಉಷ್ಣಶಾಮಕ.

ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೂ 'ಜೀವನಿ' ಪ್ರಶಸ್ತವಾದುದು.

ರಕ್ತಹೀನತೆ, ನರಗಳ ದೌರ್ಬಲ್ಯ ಬೆನ್ನುನೋವು, ನಡುನೋವು, ಗರ್ಭಸ್ರಾವ ಬಂಜೆತನಗಳಿಗೆ "ಜೀವನಿ" ಅತ್ಯುಪಯುಕ್ತವಾದುದು.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ, 184, ಚೈನಾ ಬಜಾರು ರಸ್ತೆ, ಮದರಾಸು

ಏಜೆಂಟರು: ಅಶೋಕಾ ಫಾರ್ಮಸಿ ಹಳೇ ಮೈಸೂರು ಬ್ಯಾಂಕು ರಸ್ತೆ, ಮೈಸೂರು

ನೋಡಿದಿರಾ ? ಅರ್ಜೆಂಟಾಗಿ

ಸೀರೆ ಮತ್ತು ಹೊಸ ಉಡುಪುಗಳಿಗೆ

ಏನು ಮಾಡೋಣ ಎಂದು ಯೋಚಿಸಬೇಡಿ.

ಹೊಸ ಮಾದರಿಯಲ್ಲಿ, ನಯ ನಾಜೂಕಾಗಿ, ಎಲ್ಲರಿಗೂ ಆಗುವಂತೆ ಎಲ್ಲಾ ಸೈಜಿನಲ್ಲೂ ಹೊಲಿದು ಸಿದ್ಧಪಡಿಸಿದ

ರೆಡಿ-ಮೇಡ್ (READY-MADE)

ಉಡುಪುಗಳನ್ನು ತೆಗೆದುಕೊಳ್ಳಿ. ನೀವು ಹೊಲಿಸುವುದಕ್ಕಿಂತ ಶೇ॥ ೨೦ ರಷ್ಟು ಕಡಿಮೆ ಬೆಲೆಗೆ ಸಿಕ್ಕುತ್ತೆ.

ಬನಾರಸ್‌ವಾಲಾರವರೇ ಬಂದು 'ಸೀರೆ ಕಣ' ಮಸ್ಲಿನುಗಳನ್ನು ಬನಾರಸ್ ಬೆಲೆಗೆ ಕೊಡುತ್ತಾರೆ. ನಮ್ಮ ಅಂಗಡಿಯಲ್ಲೇ ಇದ್ದಾರೆ. ಬಂದು ನೋಡಿ ಕಣ್ಣಿಗಾನಂದವಾದುದನ್ನು ಕೊಂಡುಕೊಳ್ಳಿ.

ಸ್ಥಳ—ಜಿ. ವಿ. ಸೂರ್ಯನಾರಾಯಣಶೆಟ್ಟಿ ಅಂಡ್ ಸನ್ಸ್ ಜವಾಹಿರಿ ಮತ್ತು ಬಟ್ಟೆ ವ್ಯಾಪಾರಿಗಳು, ಸಯ್ಯಾಜಿರಾವ್ ರೋಡ್, ಮೈಸೂರು.

ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನ

ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿ ಸಂಪತ್ಕ್ರಾಂತಿಯನ್ನು, ಬರುವ ಡಿಸೆಂಬರದ ಕೊನೆಯ ವಾರದೊಳಗೆ ಅಥವಾ ೧೯೪೪ ಜನವರಿಯ ಪ್ರಥಮದ ವಾರದಲ್ಲಿ ಮಂಗಳೂರಲ್ಲಿ ಜರುಗಿಸಲು ದ. ಕ. ಪತ್ರಿಕೋದ್ಯೋಗಿ ಸಂಘವು ನಿರ್ಧರಿಸಿದೆ.

ಅಖಿಲ ಕರ್ಣಾಟಕದ ಪತ್ರಿಕೋದ್ಯೋಗಿಗಳೊಳಗೆ ಪರಸ್ಪರ ಸಂಪರ್ಕವಿರುವಂತೆ ಮಾಡುವುದು; ಅವರೊಳಗೆ ಪರಸ್ಪರ ಐಕ್ಯ, ಅನ್ಯೋನ್ಯ, ಸಹಕಾರ, ಸೌಹಾರ್ದಗಳನ್ನು ಹುಟ್ಟಿಸಿ, ಪತ್ರಿಕೋದ್ಯಮದ ಅನುದಿನದ ಪ್ರಶ್ನೆಗಳನ್ನು ಅವರು ಸಾಮೂಹಿಕವಾಗಿ ಎದುರಿಸಿ, ಕನ್ನಡ ಪತ್ರಿಕೋದ್ಯಮದ ಶೀಘ್ರ ಮತ್ತು ಪೂರ್ಣ ಅಭಿವೃದ್ಧಿಗೆ ಪ್ರಯತ್ನಿಸುವಂತೆ ಮಾಡುವುದು. ಅದಕ್ಕಾಗಿ, ಸಾಧ್ಯವಿದ್ದರೆ, ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿ ಸಂಘವನ್ನು ರಚಿಸುವುದು—ಇವು ಸಮ್ಮೇಳನದ ಉದ್ದೇಶಗಳು.

ಕರ್ಣಾಟಕದಲ್ಲಿರುವ ಎಲ್ಲಾ ಪತ್ರಿಕೋದ್ಯೋಗಿ ಸಂಘಗಳೂ (ಮೈಸೂರು ಸಂಸ್ಥಾನವೂ ಸೇರಿ) ದೈನಿಕ, ಸಾಪ್ತಾಹಿಕ, ಮಾಸಿಕ ಮತ್ತಿತರ ಕನ್ನಡ ಪತ್ರಿಕೆಗಳೂ ತಮ್ಮ ಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಕಳುಹಬೇಕು. ಪ್ರಾತಿನಿಧ್ಯದ ಹಣವಾಗಿ ಒಂದು ರೂಪಾಯಿಯನ್ನು ಪ್ರತಿನಿಧಿಗಳು ತೆರಬೇಕು; ಅವರ ವಸತಿ ಮತ್ತು ಊಟದ ಏರ್ಪಾಡನ್ನು ಉಚಿತವಾಗಿ ಮಾಡಲಾಗುವುದು.

ಸಮ್ಮೇಳನವನ್ನು ಜರುಗಿಸುವ ಮತ್ತು ಪ್ರತಿನಿಧಿಗಳನ್ನು ಸ್ವಾಗತಿಸುವ ವ್ಯವಸ್ಥೆಯನ್ನು ಮಾಡುವುದಕ್ಕಾಗಿ ಒಂದು ಸ್ವಾಗತ ಸಮಿತಿಯನ್ನು ಜಿಲ್ಲಾ ಪತ್ರಿಕೋದ್ಯೋಗಿ ಸಂಘವು ರಚಿಸಿದೆ.

ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿಗಳ ಸಂಘವು ಇಲ್ಲದ ಕಾರಣ, ಸಮ್ಮೇಳನದ ಅಧ್ಯಕ್ಷರನ್ನು ಆರಿಸುವ ಭಾರವು ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಮೇಲೆಯೇ ಬಿದ್ದಿದೆ. ಸ್ವಾಗತ ಸಮಿತಿಯ ಕಾರ್ಯನಿರ್ವಾಹಕ ಮಂಡಲದವರೂ ಜಿಲ್ಲಾ ಪತ್ರಿಕೋದ್ಯೋಗಿ ಸಂಘದವರೂ ಜತೆಯಾಗಿಯೇ ಅಧ್ಯಕ್ಷರನ್ನು ಗೊತ್ತುಪಡಿಸುವರು. ಅಧ್ಯಕ್ಷರು ಒಬ್ಬ ಪ್ರಖ್ಯಾತ ಪತ್ರಿಕೋದ್ಯೋಗಿಯಿದ್ದು, ಕನ್ನಡನಾಡಿನ ಎಲ್ಲಾ ಪತ್ರಿಕೋದ್ಯೋಗಿಗಳಿಗೂ ಮೆಚ್ಚಿಗೆಯಾಗುವಂತೆ, ಅವಶ್ಯವಿರುವ ಎಚ್ಚರಿಕೆಯನ್ನು ಆಯ್ಕೆಯ ಸಮಯದಲ್ಲಿ ತೆಗೆದುಕೊಳ್ಳಲಾಗುವುದು.

ಸಮ್ಮೇಳನವು ಜರಗುವ ದಿನ ಮತ್ತು ಅಧ್ಯಕ್ಷರ ಆಯ್ಕೆ ಈ ಬಗ್ಗೆ ಇಷ್ಟರಲ್ಲೇ ಪ್ರಕಟಣೆಗಳು ಹೊರಬೀಳುವುವು.

ಸಿವಿಲ್ ಸರ್ವಿಸಿಗೆ ಸೇರುವಂತಿಲ್ಲ

ಇಂಡಿಯಾ ಸಿವಿಲ್ ಸರ್ವಿಸಿಗೆ ಇನ್ನು ಮುಂದೆ ಯುದ್ಧ ಮುಗಿಯುವ ತನಕ ಯಾರನ್ನೂ ತೆಗೆದುಕೊಳ್ಳುವುದಿಲ್ಲವೆಂದು ಸರ್ಕಾರ ನಿರ್ಧರಿಸಿರುವಂತಿದೆ.

ಮುಳುಗಿಸಲಾದ ಶತ್ರು ನೌಕಾ ಸಂಖ್ಯೆ

ನಾರ್ತ್ ಕೇಪ ಪ್ರದೇಶದ ಬಳಿ ಆಗಸ್ಟ್ ೫ ರಿಂದೀಚೆಗೆ ೧೭ ಜರ್ಮನ್ ನೌಕೆಗಳನ್ನು ಮುಳುಗಿಸಲಾಗಿದೆಯೆಂದು ಪ್ರಕಟವಾಗಿದೆ.

ಪತ್ರವ್ಯವಹಾರ

ಪ್ರಜಾ ಪ್ರಭುತ್ವ ಮತ್ತು ಪಾರ್ಟಿ ಶಿಸ್ತು

ಸ್ವಾಮಿ,

ಮುಂಬರುವ ಪೌರಸಭಾ ಚುನಾವಣೆಗೆ ಲಷ್ಕರ್ ಮೊಹಲ್ಲಾದಿಂದ ಸ್ವತಂತ್ರ ಉಮೇದುವಾರರಾಗಿ ನಿಂತಿರುವ ಮಿ॥ ಮಹಮುದ್ ಸೇಟರವರು ಜನರ ಓಟನ್ನು ಪಡೆಯುವುದಕ್ಕಾಗಿ ಪ್ರಪಂಚಕ್ಕೇನೇ ಅಪರಿಚಿತವಾದ ಹೊಸ ತತ್ವವನ್ನು ಬೋಧಿಸಲಾರಂಭಿಸಿರುವುದು ನಿಜವಾಗಿಯೂ ಆಶ್ಚರ್ಯವಾಗಿದೆ. ಶ್ರೀಯುತರು ಮೈಸೂರು ಕಾಂಗ್ರೆಸ್ಸಿನ ಮೇಲೆ ಟೀಕಾ ಟಿಪ್ಪಣಿಗಳನ್ನು ಆರಂಭಿಸಿದ್ದಾರೆ. "ವ್ಯಕ್ತಿಯಲ್ಲಿ ಶಕ್ತಿಯಿರದಿದ್ದರೆ ಸಂಸ್ಥೆಯೇನು ಮಾಡೀತು? ಎಂದು ಪ್ರಶ್ನಿಸುತ್ತಲಿದ್ದಾರೆ. ಕಾಂಗ್ರೆಸ್ಸಿನ ಉಮೇದುವಾರರೆಲ್ಲಾ ನಿಶ್ಶಕ್ತರು ತಾವೊಬ್ಬರೇ ಶಕ್ತಿಶಾಲಿಗಳೆಂದು ಸಾರಲಾರಂಭಿಸಿದ್ದಾರೆ. ಅಂತಹ ಶಕ್ತಿಶಾಲಿಗಳು ೧೯೪೦ರ ಚುನಾವಣೆಯಲ್ಲಿ ನಿಶ್ಶಕ್ತರಾದ ಕಾಂಗ್ರೆಸ್ಸಿನ ಉಮೇದುವಾರರನ್ನು ಸ್ಪರ್ಧಿಸಿ ಅದೇ ಮೊಹಲ್ಲಾದಲ್ಲಿ ಸೋತಿರುವುದನ್ನು ಮರೆತಿದ್ದಾರೆ.

ಇನ್ನು ಹೊಸ ತತ್ವದ ವಿಚಾರ: "ಪೌರಸಭೆಯಲ್ಲಿ ಕುಳಿತು ಕೆಲಸ ಮಾಡುವವರು ಪ್ರಜಾಪ್ರತಿನಿಧಿಗಳು, ಕಾಂಗ್ರೆಸ್ ಪ್ರತಿನಿಧಿಗಳಲ್ಲ" ಎಂದಿದ್ದಾರೆ. ಎಷ್ಟೆಯಾದರೂ ಕಾಂಗ್ರೆಸ್ಸಿನ ನಾಲ್ವತ್ತು ಸದಸ್ಯರು ಪೌರಸಭೆಯಲ್ಲಿ ಕೂತುಕೊಳ್ಳುತ್ತಿಲ್ಲವೇ? ಕಾಂಗ್ರೆಸ್ಸಿನ ಸದಸ್ಯರು ಚುನಾವಣೆಗೆ ನಿಂತು ಮಿ॥ ಸೇಟರಂತಹವರನ್ನು ಸೋಲಿಸಿ ಪ್ರಜೆಗಳ ಸಂಪೂರ್ಣ ಬೆಂಬಲವನ್ನು ಪಡೆದು ಪೌರಸಭೆಯಲ್ಲಿ ಕೂತುಕೊಳ್ಳುತ್ತಾರೆ. ಹಾಗೆ ಚುನಾಯಿತರಾದವರು ಕಾಂಗ್ರೆಸ್ಸಿನ ಶಿಸ್ತಿಗೆ ಕಟ್ಟುಬಿದ್ದು ಸಾಮೂಹಿಕವಾಗಿ ಕೆಲಸ ಮಾಡುತ್ತಾರೆ. ಅಂದಮಾತ್ರಕ್ಕೆ ಅವರು ಪ್ರಜಾಪ್ರತಿನಿಧಿಗಳಾಗಿರಲ್ಲವೇ?

"ಕಾಂಗ್ರೆಸ್ ಸದಸ್ಯರು ಕಾಂಗ್ರೆಸ್ ಸಂಸ್ಥೆಗೆ ಜವಾಬ್ದಾರರಾಗುತ್ತಾರೆಯೇ ವಿನಾ ಪ್ರಜೆಗಳಿಗೆ ಎಂದಿಗೂ ಆಗುವುದಿಲ್ಲ" ಎಂದಿದ್ದಾರೆ. ಇದು ವಿಚಿತ್ರವಾದ ವಾದ. ಈ ವಾದದ ಪ್ರಕಾರ ಪ್ರಪಂಚದಲ್ಲಿ ಯಾವ ಪಕ್ಷವೂ ಇರಬಾರದೆಂದಾಯಿತು. ಪ್ರಜಾಪ್ರಭುತ್ವವೇ ಬೇಡವೆಂದಾಯಿತು.

ಪ್ರಜಾಪ್ರಭುತ್ವ ರಾಷ್ಟ್ರಗಳೆಲ್ಲಾ ಪಾರ್ಟಿ ಶಿಸ್ತಿನಂತೆ ನಡೆಯುತ್ತಿವೆಯೆಂಬುದನ್ನು ಶ್ರೀಯುತರು ಮರೆತಿರುವಂತೆ ತೋರುತ್ತದೆ ಅಥವಾ ಅದನ್ನು ತಿಳಿದೇ ಇರಲಾರರು. ತಿಳಿದಿದ್ದರೆ ಈ ರೀತಿ ವಾದಕ್ಕೆ ಕೈಹಾಕುತ್ತಿರಲಿಲ್ಲ.

ಎ. ರಾಮಣ್ಣ.

೩ ಕೋಟಿ ಕೋಣೆ ನೆಲಸಮ

ರಾಯಲ್ ವಿಮಾನ ದಳ ಜರ್ಮನಿಯ ಮೇಲೆ ನಡೆಸಿದ ಧಾಳಿ ಫಲವಾಗಿ ೩ ಕೋಟಿ ಕೊಠಡಿಗಳು ಹಾಳಾಗಿವೆಯೆಂದು ಜರ್ಮನರು ಲೆಕ್ಕ ಪ್ರಕಟಿಸಿದ್ದಾರೆ.

ರಷ್ಯಾದಲ್ಲಿರುವ ಸ್ಪೈನ್ ದಳ

ಜ॥ ಫ್ರಾಂಕೋರವರು ರಷ್ಯಾದಿಂದ ಸ್ಪೈನ್ ದಳಗಳನ್ನೆಲ್ಲಾ ಕ್ರಿಸ್‌ಮಸ್ ಹೊತ್ತಿಗೆ ಹಿಂದಕ್ಕೆ ಕರೆಸಿಕೊಳ್ಳುವಂತೆ ವಾಗ್ದಾನ ಮಾಡಿರುವುದಾಗಿ ಜರ್ಮನರ ಹೇಳಿಕೆ.

ಭಾರತಕ್ಕೋಸ್ಕರ ಪ್ರಾರ್ಥನೆ

ಕೆಂಟರ್‌ಬರಿ ಆರ್ಚ್‌ಬಿಷಪ್‌ರವರೂ ಸ್ಕಾಟ್ಲೆಂಡ್ ಚರ್ಚ್ ಗುರುಗಳೂ ಸೇರಿ ಒಂದು ಮನವಿ ಹೊರಡಿಸಿ, ಭಾರತಕ್ಕಾಗಿಯೂ, ಮತ್ತು ಭಾರತ ಕ್ಷಾಮದಿಂದ ಪೆಟ್ಟು ತಿಂದವರಿಗಾಗಿಯೂ ವಿಶೇಷ ಪ್ರಾರ್ಥನೆಗಳು ನಡೆಯಬೇಕೆಂದು ಕೇಳಿಕೊಂಡಿದ್ದಾರೆ. ಭಾರತ ಕ್ಷಾಮ ನಿವಾರಣೆಗಾಗಿ ಧನ ಸಹಾಯ ಮಾಡಿರೆಂದೂ ಕೇಳಿಕೊಂಡಿದ್ದಾರೆ.

ಅಮೆರಿಕನ್ನರ ಸಹಾಯ

ಭಾರತದ ಕ್ಷಾಮನಿವಾರಣೆಗೆ ತನ್ನ ಕೈಲಾದ ಸಹಾಯ ಮಾಡಲು ಅಮೆರಿಕಾ ಸಂಯುಕ್ತ ಸಂಸ್ಥಾನವು ಆಗಲೇ ಕಾರ್ಯಕ್ಕೆ ಗೊಂಡಿದೆಯೆಂದೂ ಇನ್ನು ಮುಂದೆಯೂ ಅಧಿಕ ಪ್ರಮಾಣದಲ್ಲಿ ಸಹಕರಿಸುವುದೆಂದೂ ವರ್ತಮಾನ ಬಂದಿದೆ.

ಸ್ಮಟ್ಸರ ಮತಕ್ಕೆ ಬೆಲೆ

ದಕ್ಷಿಣ ಆಫ್ರಿಕಾ ಚುನಾವಣೆ ಕಾಲಕ್ಕೆ ಜ॥ ಸ್ಮಟ್ಸರೂ ತಮ್ಮ ಓಟು ಕೊಟ್ಟಿದ್ದರು. ಅವರ ಓಟು ಕ್ರಮವಾಗಿ ಕೊಡಲ್ಪಟ್ಟಿಲ್ಲ, ಅದಕ್ಕೆ ಬೆಲೆ ಇಲ್ಲವೆಂದು ನ್ಯಾಷನಲಿಸ್ಟ್ ಪಕ್ಷದವರು ವಾದಿಸಿದರೂ ಚುನಾವಣಾಧಿಕಾರಿಗಳು ಅವರ ಓಟಿಗೆ ಮಾನ್ಯತೆ ಕೊಟ್ಟಿದ್ದಾರೆ.

ಜ॥ ಮೆಕಾರ್ಥರ್‌ರ ಅಧಿಕಾರ ಅವಧಿ

ಜ॥ ಮೆಕಾರ್ಥರ್‌ರವರು ಕೆಲಸದಿಂದ ನಿವೃತ್ತರಾಗುವರೆಂಬ ಊಹೆಗೆ ಆಧಾರವಿಲ್ಲವೆಂದು ಅಮೆರಿಕಾ ಯುದ್ಧಕಾರ್ಯದರ್ಶಿಗಳು ತಿಳಿಸುತ್ತಾರೆ.

ನರ್ವನ್ಟೈನ್

ನರಗಳ ಶಕ್ತಿಗೆ; ವೀರ್ಯವೃದ್ಧಿಗೆ

ಉಪಯೋಗಿಸುವ ವಿಧಾನ.—

ಮಲಗುವ ವೇಳೆ ಕಾಲು ಔನ್ಸ್ ಒಂದು ಬಟ್ಟಲು ಹಾಲಿನೊಡನೆ

ದೊಡ್ಡ ಬಾಟಲ್ ರೂ. 2-4-0 ಮಾತ್ರ

ಸಣ್ಣ ಬಾಟಲ್ ರೂ. 1-4-0 „

ಪ್ಯಾಕಿಂಗ್ ಮತ್ತು ಪಾರ್ಸಲ್ ಛಾರ್ಜು ಪ್ರತ್ಯೇಕ.

ಈ ನಮ್ಮ ಔಷಧಕ್ಕೆ ದಸರಾ ವಸ್ತು ಪ್ರದರ್ಶನದಲ್ಲಿ ಮೆಡಲು ದೊರಕಿರುತ್ತದೆ.

ವಿಳಾಸ:—

ಕೆ. ಇ. ಐ. ಪ್ರೊಡಕ್ಟ್ಸ್,

ಹಳೆ ಮೈಸೂರು ಬ್ಯಾಂಕ್ ರಸ್ತೆ,

ಮೈಸೂರು.

ವಂದೇಮಾತರಂ.

ಕಾಂಗ್ರೆಸ್ಸಿಗೇ ಓಟು ಕೊಡಿ!

ಚುನಾವಣೆ ತಾ॥ 8-11-1943

ಈ ಕೆಳಗೆ ಕಂಡವರನ್ನು ಕಾಂಗ್ರೆಸ್‌ನ ಪರವಾಗಿ ಉಮೇದುವಾರರಾಗಿ ನಿಲ್ಲಿಸಲಾಗಿದೆ.

ಚಾಮರಾಜಮೊಹಲ್ಲಾ—ಶ್ರೀಮತಿ ಯಶೋಧರಮ್ಮ ದಾಸಪ್ಪ, ಶ್ರೀಗಳಾದ ಬಿ. ನಾರಾಯಣ ಸ್ವಾಮಿ, ಅಗರಂ ರಂಗಯ್ಯ, ಕೆ. ಎಸ್. ಸತ್ಯನಾರಾಯಣರಾವ್.

ಕೃಷ್ಣರಾಜ—ಶ್ರೀಗಳಾದ ಸಿ. ಸೀತಾರಾಮಯ್ಯ, ಎ. ಎನ್. ಸೂರ್ಯನಾರಾಯಣರಾವ್, ಎಂ. ಎ. ಜೋಯಿಸ್, ಟಿ. ನರಸಿಂಹಯ್ಯಂಗಾರ್.

ಲಷ್ಕರ್—ಶ್ರೀಗಳಾದ ಇ. ಪಿ. ನಂಜಪ್ಪ, ಎಂ. ಆರ್. ಸಿ. ಬಸಪ್ಪ, ಜಿ. ಜನಾರ್ಧನಯ್ಯ, ವಿ. ಎನ್. ದಾಸಪ್ಪ, ಚಂದ್ರಶೇಖರಗೌಡ.

ಮಂಡಿ—ಶ್ರೀಗಳಾದ ಎಂ. ಎಸ್. ನಂಜಪ್ಪ, ಎಂ. ವಿ. ವೆಂಕಟರಾಮಯ್ಯ, ಹೆಚ್. ಶಿವಣ್ಣಯ್ಯ, ಟಿ. ಮರಿಯಪ್ಪ, ರಂಗಸ್ವಾಮಯ್ಯ.

ದೇವರಾಜ—ಶ್ರೀಗಳಾದ ಯು. ಎಲ್. ರಾಮಚಂದ್ರರಾವ್, ಎ. ವಿ. ರಂಗರಾವ್, ಚೌಡಯ್ಯ, ಪಟ್ಟಣಂ ಶ್ರೀನಿವಾಸ ಶೆಟ್ಟಿ.

ಕಿಲ್ಲೆ—ಶ್ರೀ ಎ. ಕೃಷ್ಣಮೂರ್ತಿ.

ನಜರ್‌ಬಾದ್—ಶ್ರೀ ಟಿ. ವೆಂಕಟರಮಣಯ್ಯ.

ಎಚ್. ಸಿ. ದಾಸಪ್ಪ,

ಚುನಾವಣಾ ಸಮಿತಿ ಅಧ್ಯಕ್ಷ.

ಮೆಣಸಿನಕಾಯಿ ರವಾನೆ ಪತ್ತೆ

೯ ಜನ ಮನುಷ್ಯರು ಪಿರಿಯಾಪಟ್ಟಣದ ಸಮೀಪದ ಕಾಡಿನಲ್ಲಿ ಕಳ್ಳ ಹಾದಿಯಲ್ಲಿ ಮೆಣಸಿನಕಾಯಿಯನ್ನು ಸಾಗಿಸುತ್ತಿದ್ದು ಪೊಲೀಸರು ಕೈಗೆ ಸಿಕ್ಕಿಬಿದ್ದಿದ್ದಾರೆ.

ಟಿ. ಸಿ. ನಟರಾಜ್ ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಧಾರಣೆಯಲ್ಲಿ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಿಗಳೆಲ್ಲವೂ ಸದಾ ದೊರೆಯುತ್ತವೆ.

ಶ್ರೀಯುತರ ಸೌಕರ್ಯಕ್ಕಾಗಿ

ತಾ॥ ೧-೧೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟೆಯಮ್ಮ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ. ಎಸ್.— ಬೆಲ್ಲ ವಿಗೈರಾ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿದ್ಧವಾದ ಪಲ್ಲೆಗಳು ಮತ್ತು ಸಂಕೀರ್ಣ ಸಾಮಾನುಗಳು ಹಾಗೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸದಾ ದೊರೆಯುತ್ತವೆ.

Regd No M. 4312 SADHVI, MYSORE 1-11-43 ಇಂದಿನ ಪತ್ರಿಕೆ 6 ಕಾಸು

ಮೈಸೂರು ಪತ್ರಿಕೋದ್ಯೋಗಿಗಳ ಸಂಘ

ನಂಜನಗೂಡಿನಲ್ಲಿ ವಾರ್ಷಿಕೋತ್ಸವ ಸಮಾರಂಭ

ಮೈಸೂರು ೧

ಮೈಸೂರು ಪತ್ರಿಕೋದ್ಯೋಗಿ ಸಂಘದ ವಾರ್ಷಿಕ ಸಭೆಯು ನಿನ್ನೆ ದಿವಸ ನಂಜನಗೂಡಿನ ರಾಣಪ್ಪನವರ ಛತ್ರದಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು. ಸ್ಥಳೀಯ ಪತ್ರಿಕಾ ಸಂಪಾದಕರೂ, ಬಾತ್ಮೀದಾರರುಗಳೂ ಭಾಗವಹಿಸಿದ್ದರು.

ಫಲಹಾರ, ಚಹ, ಭೋಜನವಾದನಂತರ, ಸಂಜೆ ೪ ಗಂಟೆಗೆ ಶ್ರೀ ಜಿ. ಆರ್. ಜೋಸ್ಯರ್‌ರವರ ಅಧ್ಯಕ್ಷತೆಯಲ್ಲಿ ಸಭೆಯು ಆರಂಭವಾಯಿತು.

ಸಂತಾಪ ಸೂಚನೆ

ಕಾರ್ಯಕಲಾಪಗಳು ಪ್ರಾರಂಭವಾಗುವ ಪಕ್ಕೆ ಮುಂಚೆ, ಭಾರತದ ಸುಪ್ರಸಿದ್ಧ ಪತ್ರಿಕೋದ್ಯೋಗಿಯಾಗಿದ್ದ ಕೀರ್ತಿಶೇಷರಾದ ಶ್ರೀ ರಾಮಾನಂದ ಚಟರ್ಜಿಯವರ ಮತ್ತು ನಮ್ಮ ಸಂಸ್ಥಾನದಲ್ಲಿ ಅನೇಕ ವರ್ಷಗಳಿಂದ ಪತ್ರಿಕೋದ್ಯೋಗಿಯಾಗಿದ್ದು ಇತ್ತೀಚೆಗೆ ದಿವಂಗತರಾದ ಶ್ರೀ ವಿ. ಎಸ್. ಸಂಜೀವರಾಯರವರ ಸ್ಮರಣಾರ್ಥವಾಗಿ ಸಭೆಯು ಸ್ವಲ್ಪಕಾಲ ಮೌನದಿಂದಿದ್ದು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿತು.

ಅಧ್ಯಕ್ಷರವರು ಪತ್ರಿಕಾ ವ್ಯವಸಾಯದಲ್ಲಿ ಮುಖ್ಯವಾಗಿರಬೇಕಾದ ಸಂಪಾದಕೀಯ ಆದರ್ಶ, ಪತ್ರಿಕಾ ಚಾಲಕತ್ವದಲ್ಲಿರಬಹುದಾದ ಹಲವಾರು ಎಡರು ತೊಡರುಗಳನ್ನು ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ದೇಶಗಳಲ್ಲಿ ಚಾಲ್ತಿಯಲ್ಲಿರುವ ಪತ್ರಿಕೆಗಳ ವೃತ್ತಿಯ ಉದಾತ್ತ ತತ್ವಗಳನ್ನು ತಿಳಿಸಿದರು.

ವಾರ್ಷಿಕ ವರದಿ

ಕಾರ್ಯದರ್ಶಿಯವರಾದ ಶ್ರೀ ಎ. ನಂಜುಂಡಶಾಸ್ತ್ರಿಗಳವರು ಸಂಘದ ವಾರ್ಷಿಕ ವರದಿಯನ್ನೊಪ್ಪಿಸಿದರು.

"ಮೈಸೂರು ಪತ್ರಿಕೋದ್ಯಮಿಗಳ ಸಂಘದ ಇತಿಹಾಸದಲ್ಲಿ ಇಂದು ಅತ್ಯಂತ ಹರ್ಷಪ್ರದವಾದ ದಿನ. ಮೈಸೂರು ನಗರದ ಪತ್ರಿಕೋದ್ಯಮಿಗಳ ಸಂಘ ಸ್ಥಾಪಿತವಾಗಿ ಹಲವಾರು ವರ್ಷಗಳಾದರೂ, ಪತ್ರಿಕೋ ಸಂಘದ ಸದಸ್ಯರೆಲ್ಲರೂ ಒಟ್ಟಾಗಿ ವಿಹಾರಾರ್ಥವಾಗಿ ಮೈಸೂರು ನಗರದಿಂದ ಹೊರ ಹೊರಟಿರುವುದೂ ಅಲ್ಲದೆ ತನ್ನ ಸಂಘದ ವಾರ್ಷಿಕ ಸಭೆಯನ್ನು ನಗರದಿಂದ ಹೊರಗಡೆ ನಡೆಸಿರುವುದೂ ಸಹ ಇದೇ ಮೊದಲೆಂದು ನನಗೆ ತೋರುತ್ತದೆ. ಇಂಥಾ ಸುಸಮಯ ಕಲ್ಪನೆಗೆ ಸದಸ್ಯರೆಲ್ಲರೂ ಸಹಕರಿಸಿರುವುದು ಸಂತೋಷದ ಸಮಾಚಾರ ನಮ್ಮ ಸಂಘವು ದಿನೇ ದಿನೇ ಬಲಿತು, ಸಂಘದ ಸದಸ್ಯರಲ್ಲಿ ಅನ್ಯೋನ್ಯ ಐಕಮತ್ಯವೂ ಸ್ನೇಹಭಾವವೂ ಬೆಳೆದು ಬರುತ್ತಿರುವುದಕ್ಕೆ ಇದೊಂದು ಮುಖ್ಯ ಗುರುತಾಗಿದೆ.

ಸಂಘದ ಪೂಜ್ಯ ಸದಸ್ಯರು ಕೆಲವು ಮಂದಿ ಸಂಘದ ನಿಧಿಗಾಗಿ ಉದಾರ ದ್ರವ್ಯವನ್ನು ನೀಡುವವರಾಗಿ ವಾಗ್ದಾನ ಮಾಡಿದ್ದಾರೆ. ಈ ಮಹನೀಯರೆಲ್ಲರಿಗೂ ಸಂಘದ ಪರವಾಗಿ ನಾನು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ. ಈ ರೀತಿ ವಾಗ್ದಾನವಾಗಿರುವ ಒಟ್ಟು 451 ರೂಪಾಯಿಗಳ ಪೈಕಿ 50 ರೂಪಾಯಿಗಳು ಸಂದಾಯವಾಗಿರುತ್ತದೆ.

ಮೈಸೂರು ಪತ್ರಿಕೋದ್ಯಮಿಗಳ ಸಂಘ 1934 ನೇ ಇಸವಿ ಮಾರ್ಚಿ ತಾ|| 10ರಲ್ಲಿ ಅಂದರೆ ಸುಮಾರು ಒಂಬತ್ತು ವರ್ಷಗಳ ಹಿಂದೆ ಪ್ರಾರಂಭವಾಯಿತು. ನಮ್ಮ ಸಂಘ ಸಾಧಿಸಬೇಕಾಗಿರುವ ಕಾರ್ಯ ಅನೇಕವಾಗಿರುತ್ತದೆ. ಸಂಘದ ಶಕ್ತಿ ಪ್ರತಿಷ್ಠೆಯನ್ನು ಮತ್ತಷ್ಟು ವೃದ್ಧಿಗೊಳಿಸಲು ನಾವು ಮತ್ತಷ್ಟು ಹುರುಪಿನಿಂದ ಕಾರ್ಯ ಕೈಗೊಳ್ಳಬೇಕಾಗಿದೆ. ಪತ್ರಿಕೋದ್ಯಮಿಗಳ ಮತ್ತು ಪತ್ರಿಕಾಕರ್ತರ ಸ್ವಾತಂತ್ರ್ಯವನ್ನು ಹಿಂತಕ್ಕೆ ಸಿಕ್ಕಿಸಲು ಹಲವು ನಿರ್ಬಂಧ ಶಾಸನಗಳಾಗಿಹೋಗಿವೆ. ಇವಕ್ಕೆಲ್ಲಾ ನಿಂದಿನ ಅಂತರಾಷ್ಟ್ರೀಯ ಪರಿಸ್ಥಿತಿಯೇ ಮುಖ್ಯ ಕಾರಣಗಳಾಗಿರಬಹುದು. ಪ್ರಪಂಚದ ಪ್ರಕೃತ ಪರಿಸ್ಥಿತಿಯಲ್ಲಿ ಪತ್ರಿಕೋದ್ಯಮಿಗಳು ರಾಷ್ಟ್ರದ ಬೆಳವಣಿಗೆಗೂ, ರಕ್ಷಣೆಗಾಗಿಯೂ ಯಾವರೀತಿ ಪ್ರಯತ್ನಪಡುತ್ತಿದ್ದಾರೆಂಬುದು ತಮ್ಮೆಲ್ಲರಿಗೂ ತಿಳಿದುದೇ ಆಗಿದೆ. ನಮ್ಮ ವೃತ್ತಿಗೂ ಅದನ್ನು ಕೈಹಿಡಿದಿರುವವರಿಗೂ ಇದಿಗಿಂತಲೂ ಹೆಚ್ಚಿನ ಸ್ಥಾನಮಾನಗಳು ದೊರೆಯಬೇಕಾದುದು ಅತ್ಯಗತ್ಯ. ಅಂಥಾ ಗೌರವ ಸ್ಥಾನವನ್ನು ಗಳಿಸಲು ಈ ಸಂಘದ ಸದಸ್ಯರಾದ ನಾವೆಲ್ಲರೂ ಮತ್ತೂ ನಿಸ್ವಾರ್ಥತೆಯಿಂದ ದುಡಿಯಬೇಕಾಗಿದೆ.

ನಮ್ಮ ಸಂಘದಿಂದ ಅದರ ಸದಸ್ಯರಿಗೂ ಅಲ್ಲದೆ ಮಹಾಜನರಿಗೂ ಸಹ ಎಷ್ಟು ಪ್ರಯೋಜನವನ್ನು ಕಲ್ಪಿಸಿಕೊಡಬಹುದಾಗಿದೆ ಎಂಬುವನ್ನು ನಾವಿನ್ನೂ ಯೋಚಿಸಿನೋಡಬೇಕಾಗಿದೆ. ಮೈಸೂರಿನಲ್ಲಿ ಈ ಸಂಘದ ಪ್ರಭಾವ ಎಲ್ಲಾ ವರ್ಗದ ಪ್ರಜೆಗಳ ಮೇಲೂ ಬೀರುವಂತೆ ನಾವು ಕಾರ್ಯಕ್ರಮವನ್ನು ರಚಿಸಬೇಕಾದದು ಅತ್ಯಗತ್ಯವೆಂದು ನನಗೆ ತೋರುತ್ತದೆ. ಈ ಅಂಶವನ್ನು ಸದಸ್ಯರೆಲ್ಲರೂ ಅನುಮೋದಿಸುವರೆಂದೇ ನಾನು ದೃಢವಾಗಿ ನಂಬಿದ್ದೇನೆ. ನಮ್ಮ ಸಂಘದ ಆಶ್ರಯದಲ್ಲಿ ಮೈಸೂರಿನಲ್ಲಿ ತಿಂಗಳಿಗೊಂದು ಬಾರಿಯಾದರೂ ಒಂದು ಭಾಷಣ, ವಾಚನ, ಪಠನ, ಚರ್ಚೆ ಅಥವಾ ಮತ್ತಾವುದಾದರೂ ಕೂಟ ನಡೆಯುತ್ತಲೇ ಇರಬೇಕೆಂಬುದು ನನ್ನ ಆಶೆ. ಅದೇ ಸದಸ್ಯರ ಇಚ್ಛೆಯೂ ಆಗಿರಬಹುದೆಂದು ನಾನು ನೆನಸುತ್ತೇನೆ. ಈ ವಿಷಯದಲ್ಲಿ ಸಂಘದ ಸದಸ್ಯರೆಲ್ಲರ ಸಹಕಾರ ಅತ್ಯವಶ್ಯಕವಾಗಿದೆ.

ನಮ್ಮ ಸಂಘಕ್ಕೆ ಸ್ವತಂತ್ರವಾದ ಒಂದು ಕಟ್ಟಡವನ್ನು ಸಂಪಾದಿಸಿಕೊಳ್ಳಬೇಕೆಂಬುದು ನನ್ನ ಹಿರಿಯ ಬಯಕೆ. ನಮ್ಮ ಸಂಘದ ಸದಸ್ಯರು ಸಂಘದ ನಿಧಿಯನ್ನು ಬೆಳೆಸಲು ಈಗಾಗಲೇ ದ್ರವ್ಯ ಸಹಾಯವನ್ನು ನೀಡಿರುತ್ತಾರೆ. ಸಂಘಕ್ಕೆ ಕಟ್ಟಡವನ್ನು ಕಲ್ಪಿಸಿಕೊಳ್ಳಲು ನಾವು ಪ್ರಯತ್ನಪಡಬೇಕಾದವೇ ಎಂಬುವನ್ನು ತಾವೆಲ್ಲರೂ ನಿರ್ಧರಿಸಬಹುದಾಗಿದೆ."

ನಂತರ ಮುಂದಿನ ಸಾಲಿನ ಚುನಾವಣೆ ನಡೆಯಿತು. ಶ್ರೀ|| ಗಳಾದ ಜಿ. ಆರ್. ಜೋಸ್ಯರ್, (ಅಧ್ಯಕ್ಷರು.) ಟಿ. ನಾರಾಯಣ ಮತ್ತು ಅಗರಂ ರಂಗಯ್ಯ (ಉಪಾಧ್ಯಕ್ಷರುಗಳು.) ಎ. ನಂಜುಂಡಶಾಸ್ತ್ರಿ, (ಕಾರ್ಯದರ್ಶಿ) ಎಸ್. ಕೃಷ್ಣಸ್ವಾಮಿ (ಖಜಾಂಚಿ)

ಮಂಗಳೂರಿನಲ್ಲಿ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನವನ್ನು ನಡೆಸಲು ನಡೆಸಿರುವ ಪ್ರಯತ್ನಕ್ಕೆ ಈ ಸಭೆಯು ತನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟಿತು.

ವಾರ್ಷಿಕ ಸಮಾರಂಭವು ಯಶಸ್ವಿಯಾಗಿ ನಡೆಯಲು ಸ್ಥಳೀಯ ಪೌರಸಭಾಧ್ಯಕ್ಷರಾದ ಶ್ರೀ|| ಕೆ. ವಿಶ್ವೇಶ್ವರಗೌಡರವರೂ ಮತ್ತು ಇತರರೂ ಸಹಾಯಕರಾಗಿದ್ದರು.

ಉಮೇದುವಾರಿಕೆ ವಾಪಸು

ನಜರ್‌ಬಾದ್ ಮೊಹಲ್ಲಾದ ರೇಟುಪೇಯರು ಅಸೋಸಿಯೇಷನ್ನಿನ ವೈಸ್ ಪ್ರೆಸಿಡೆಂಟರಾದ ಯಾ. ಸಿದ್ದಯ್ಯನವರು ಹೀಗೆ ಬರೆಯುತ್ತಾರೆ.

೧೯೪೩ ನೇ ಇಸ್ವಿ ನವಂಬರು ತಾರೀಕು ೮ ನೇ ಸೋಮವಾರದ ದಿನ ನಡೆಯಲಿರುವ ಮುನಿಸಿಪಲ್ ಚುನಾವಣೆಗೆ ನಜರುಬಾದು ಮೊಹಲ್ಲಾದಿಂದ ಸ್ವತಂತ್ರವಾಗಿ ಮ|| ಪಿ. ಜಿ. ರಾಮಚಂದ್ರರಾಯರು, ಕಾಂಗ್ರೆಸ್ ಪರವಾಗಿ ಮ|| ಪಿ. ವೆಂಕಟರಮಣಯ್ಯನವರು ಸಹ ಉಮೇದುವಾರರಾಗಿ ನಿಂತಿರುವುದು ಸರಿಯಷ್ಟೆ. ನಜರುಬಾದು ಮೊಹಲ್ಲಾ ವಿಶೇಷವಾಗಿ ಕೂಲಿಕಾರರಿಂದಲೂ ಮತ್ತು ಕೆಲಸಗಾರರಿಂದಲೂ ತುಂಬಿದ ಸ್ಥಳವಾಗಿದೆ. ಈ ಕ್ಷಾಮಕಾಲದಲ್ಲಿ ಸ್ಪರ್ಧೆ ಪ್ರತಿಸ್ಪರ್ಧೆಗೆ ಅವಕಾಶ ಕೊಟ್ಟು ಬಡಜನಗಳ ಜನಜೀವನ ಕಲಕುವುದು ನಮಗೆ ಇಷ್ಟವಿಲ್ಲದ್ದರಿಂದ ಮ|| ರಾಮಚಂದ್ರರಾಯರನ್ನು ದಯವಿಟ್ಟು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಮೊಹಲ್ಲಾದ ರೇಟುಪೇಯರುಗಳು ಕೇಳಿಕೊಂಡ ಮೇಲೆ ಆಗರ್ಭ ಶ್ರೀಮಂತರಾದ ಮ|| ಪಿ. ಜಿ. ರಾಮಚಂದ್ರರಾಯರು ನಮ್ಮ ಕೋರಿಕೆಯನ್ನು ಮನ್ನಿಸಿ ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿರುತ್ತಾರೆ. ಇದಕ್ಕಾಗಿ ಮೊಹಲ್ಲಾ ರೇಟುಪೇಯರುಗಳಾದ ನಾವು ಅವರಿಗೆ ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇವೆ.

ಸಾಲೊಮನ್ಸ್‌ನಲ್ಲಿ ಶತ್ರು ಸೋಲು

ಸಾಲೊಮನ್ಸ್ ದ್ವೀಪ ಸಮುದಾಯ ದಕ್ಷಿಣ ತೆಸೂರಿ ಎಂಬ ದ್ವೀಪದಲ್ಲಿ ಮಿತ್ರರು ಪ್ರಭಾವಶಾಲಿಗಳಾಗಿ, ಮುನ್ನುಗ್ಗುತ್ತಿರುವ ಪ್ರಯುಕ್ತ ಅಲ್ಲಿರುವ ಜಪಾನೀಯರು ಹಿಮ್ಮೆಟ್ಟುತ್ತಿರುವರೆಂದು ಶಾಂತಿಸಾಗರದ ಮಿತ್ರ ಯುದ್ಧವಾರ್ತಾ ಕಛೇರಿಯಿಂದ ಅಧಿಕಾರೀ ಪ್ರಕಟಣೆ ಹೊರಬಿದ್ದಿದೆ.

ಇಟಾಲಿಯನ್ನರ ಸೆರೆ

ಇಟಲಿಯು ಮಿತ್ರಪಕ್ಷಕ್ಕೆ ಸೇರಿದಮೇಲೆ ಚೀಣಾದಲ್ಲಿ ತಾವು ಆಕ್ರಮಿಸಿದ ಭಾಗದಲ್ಲಿದ್ದ ಇಟಾಲಿಯನ್ ಚರ್ಚ್ ಪ್ರಜಾದಿಗಳನ್ನು ಜಪಾನೀಯರು ಬಂಧಿಸಿದ್ದಾರೆ. ಮತ್ತು ಅಲ್ಲಿನ ಕ್ಯಾಥಲಿಕ್ ಚರ್ಚಿನ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಸೇನಾನಾಯಕರಿಗೆ ಸ್ಥಾನಚ್ಯುತಿ

ದಕ್ಷಿಣ ಇಟಲಿಯಲ್ಲಿ ಸೇನೆ ನಡೆಸುತ್ತಿದ್ದ ಮಾರ್ಷಲ್ ಕೆಸಲ್‌ರಿಂಗ್‌ರನ್ನು ಹಿಂದಕ್ಕೆ ಕರೆಸಿಕೊಂಡು ಆ ಸ್ಥಾನಕ್ಕೆ ಜ|| ವಾನ್ ವಿಟ್ಟಿಂಗಾಫ್‌ರನ್ನು ನೇಮಿಸಲಾಯಿತೆಂದು ವಿಚಿ ರೇಡಿಯೊ ಜರ್ಮನ್ ವಾರ್ತೆ ತಿಳಿಸಿತೆಂದು ಹೇಳಿದೆ.

ರಷ್ಯಾ ಸಖ್ಯದ ಆವಶ್ಯಕತೆ

ಇಂಗ್ಲೆಂಡ್ ಪಾರ್ಲಿಮೆಂಟ್ ಸದಸ್ಯರಲ್ಲೊಬ್ಬರಾದ ಲಾರ್ಡ್ ಕೇಸಿಲ್‌ರೀಗರವರು 'ಸ್ಪೆಕ್‌ಟೇಟರ್' ಎಂಬ ಪತ್ರಿಕೆಯಲ್ಲಿ ಒಂದು ಲೇಖನ ಬರೆದು, ನಮ್ಮ ಜನ ಹಿಂದೆ ರಷ್ಯಾಬಗ್ಗೆ ಅನುಸರಿಸುತ್ತಿದ್ದ ಮನೋಭಾವ ದುರದೃಷ್ಟಕರವಾಗಿ ತಪ್ಪೆಂಬುದನ್ನು ಈಗ ಅರ್ಥಕ್ಕೆ ತಂದು ಕೊಳ್ಳಬೇಕು. ಹಿಂದೆಯೇ ರಷ್ಯಾದೊಡನೆ ಬ್ರಿಟನರು ಸಂಪೂರ್ಣ ಹೊಂದಿಕೆಯಿಂದ ನಡೆದುಕೊಂಡಿದ್ದಿದ್ದರೆ ಈ ಯುದ್ಧವೇ ತಲೆದೋರುತ್ತಿರಲಿಲ್ಲ. ರಷ್ಯಾಬಗ್ಗೆ ನಾವು ಯಾವುದೇ ವೈಯಕ್ತಿ ಭಾವತೊಂದಿದ್ದರೂ, ರಾಜಕೀಯ ವ್ಯವಹಾರಗಳಲ್ಲಿ ಅದರೊಡನೆ ಇನ್ನೂ ಹೆಚ್ಚು ನಿಕಟ ಸಂಬಂಧ ಬೆಳೆಸಬೇಕು. ಈ ಯುದ್ಧದಲ್ಲಿ ಮಿತ್ರಪಕ್ಷದವರಿಗೆ ಆಗಿರುವ ಜಯಗಳಲ್ಲಿ ಹೆಚ್ಚುಭಾಗ ರಷ್ಯನರುಗಳಿಂದಾಗಿರುವುದೆಂಬುದನ್ನು ಯಾರೂ ಮರೆಯಬಾರದೆಂದೂ ಶಾಂತಿಸ್ಥಾಪನೆಗೆ ರಷ್ಯನರ ಸಖ್ಯ ಅತ್ಯಗತ್ಯವೆಂದೂ ತಿಳಿಸಿದ್ದಾರೆ.

ಫ್ರಾಂಕೊ ಬುರುಡೆ

ರಷ್ಯಾ ಕ್ಷೇತ್ರಗಳಲ್ಲಿ ಸ್ಪೈನ್ ಪಡೆಗಳೂ ಭಾಗವಹಿಸುತ್ತಿವೆಯೆಂದು, ಅಲ್ಲಿಂದ ಆ ಸೈನ್ಯಗಳನ್ನು ತಾನು ವಾಪಸ್ಸು ಕರೆಸಿಕೊಳ್ಳುತ್ತಿರುವೆನೆಂದು ಕೊಟ್ಟಿರುವ ಫ್ರಾಂಕೊ ಹೇಳಿಕೆ ಬರೀ ಬುರುಡೆ ಮಾತೆಂದೂ ನ್ಯೂಯಾರ್ಕ್ ಪತ್ರಿಕೆ ಟೀಕಿಸಿದೆ.

ಯುವಕರಿಗೆ ಹಿಟ್ಲರನ ಸಂದೇಶ

ಜರ್ಮನಿ ಯುವಕರನ್ನು ಹಿಟ್ಲರ್ ಯುವಕರೆನ್ನುವರು ನಾಡಿಕೆ. ಹಿಟ್ಲರನು ಯುವಕರಿಗಾಗಿ ಒಂದು ಸಂದೇಶವನ್ನು ಕೊಟ್ಟು, ಈ ಕಷ್ಟಕರವಾಗಿರುವ ಅದೃಷ್ಟವನ್ನು ನೆಚ್ಚಿಕೊಂಡಿರುವ ಯುದ್ಧಕ್ಕೆ ಯುವಕರು ಇನ್ನೂ ಹೆಚ್ಚು ಹೆಚ್ಚಾಗಿ ಸೇರಿ ರಣಮುಖಗಳಿಗೆ ನುಗ್ಗಬೇಕೆಂದು ತಿಳಿಸಿದ್ದಾನೆ.

ಆಕಾಶವಾಣಿ

ಸೋಮವಾರ, ನವಂಬರ್ ೧

೮-೦೦ : ಗೀತಗೋವಿಂದ. ೮-೩೦ : ವಿದ್ವಾನ್ ಬಿ. ಟಿ. ರಾಜಪ್ಪನವರಿಂದ ಪಿಟೀಲು ವಾದನ. ೧೦-೦೦ : ವೃತ್ತಾಂತ.

ಮಂಗಳವಾರ, ನವಂಬರ್ ೨

೭-೦೦ : ಆಕಾಶವಾಣಿ ಗಾನ ಬಾಲಮಂಡಲಿಯವರಿಂದ ಮೇಳವಾದ್ಯಗಾನ. ೭-೪೫ : ಹಳ್ಳಿಯವರಿಗಾಗಿ. ೮-೦೫ : ಕವಿವಾಣಿ. ೮-೩೦ : ವಿದ್ವಾನ್ ಜಿ. ಆರ್. ದಾಸಪ್ಪನವರಿಂದ ಹಾಡುಗಾರಿಕೆ. ೧೦-೦೦ : ವೃತ್ತಾಂತ.

ಜಯ ಅಂಡ್ ಕಂಪೆನಿ
ಸ್ಟಾಕ್ ಮತ್ತು ಷೇರ್ ಬ್ರೋಕರ್ಸ್,
ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್,
ಸಯ್ಯಾಜಿರಾವ್ ರೋಡ್, ಮೈಸೂರು.

Edited, printed and published by A. R. Nagarajan, at the Sadhvi Press, D. Subbiah Road, Mysore.

ಸಂಪುಟ ೨] ಮಂಗಳವಾರ ೨—೧೧—೪೩ [ಸಂಚಿಕೆ ೮೯

ಕ್ರಿಮಿಯಾದಲ್ಲಿ ಜರ್ಮನರ ದುರವಸ್ಥೆ

ಫ್ರಾಂಕೋರವರನ್ನು ಓಡಿಸಲು ಸ್ಪೇನಿನಲ್ಲಿ ಪಿತೂರಿ

ನೂತನ ಪೌರ ಸಭಾಧ್ಯಕ್ಷರು

ಮೈಸೂರು ೨

ಶ್ರೀ ರಾಮಚಂದ್ರ ಬೋಂಬೆರೆಯವರು ನಿನ್ನೆ ಮಧ್ಯಾಹ್ನ ಪೌರ ಸಭಾಧ್ಯಕ್ಷ ಪದವಿಯನ್ನು ಶ್ರೀ ರಾಘವೇಂದ್ರರಾಯರಿಂದ ವಹಿಸಿಕೊಂಡರು.

ಜಿಲ್ಲಾಧಿಕಾರಿಗಳ ಸಮ್ಮೇಳನ

ಸಂಸ್ಥಾನದ ಆಹಾರ ಪರಿಸ್ಥಿತಿ ಬಗ್ಗೆ ಎಲ್ಲ ಜಿಲ್ಲಾಧಿಕಾರಿಗಳ ಸಮ್ಮೇಳನವು ಬೆಂಗಳೂರಿನಲ್ಲಿ ನಾಳೆ ಮಧ್ಯಾಹ್ನ ದಿವಾನರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ದಯಾನಂದರ ದಿನಾಚರಣೆ

ನಾಳೆ ೩ ನೇ ತಾರೀಖು ಬುಧವಾರ ಮೈಸೂರು ಬನುಮಯ್ಯನವರ ಹೈಸ್ಕೂಲ್ ಸಭಾಂಗಣದಲ್ಲಿ ವಿದ್ವಾನ್ ವೀರ ರಾಘವಚಾರ್ಯರವರ ಅಧ್ಯಕ್ಷತೆಯಲ್ಲಿ ಸಭೆನಡೆಯುವುದು. ಅಖಿಲ ಭಾರತ ಆಹಾರ ಮತ್ತು ಕ್ಷೀರ ಸಮ್ಮೇಳನದ ಪ್ರಚಾರ ಕಾರ್ಯದರ್ಶಿಗಳಾದ ಮದರಾಸಿನ ಶ್ರೀ ವಿ. ಮಹಾಲಿಂಗ ಐಯ್ಯರ್‌ರವರು ಸ್ವಾಮಿ ದಯಾನಂದ ಸರಸ್ವತಿಯವರ ವಿಚಾರವಾಗಿ ಭಾಷಣಮಾಡುವರು

ತಾಯಿತಿ ನಂಬಿ ಇಬ್ಬರ ಕೊಲೆ ಮಾಡಿದ ಪ್ರಸಂಗ

ಕೊಲೊಂಬೊನಗರ ಸಿನಾಸಿಯೊಬ್ಬನು ಸೆಂಟ್ ಫಿಲೋಮಿನಾ ಪುಸ್ತಕವನ್ನು ಓದಿ ಅದರಂತೆ ಒಂದು ಮಂತ್ರಕ್ಕಾಗಿ ಇಬ್ಬರನ್ನು ಕೊಲೆಮಾಡಿದ ಆಶ್ಚರ್ಯ ಪ್ರಸಂಗ ವರದಿಯಾಗಿದೆ

ಆತನು ಸೆಂಟ್ ಫಿಲೋಮಿನಾ ಪುಸ್ತಕವನ್ನು ಓದುತ್ತಿದ್ದಾಗ, ತನಗೆ ಒಂದು ಯಂತ್ರವು (ಟ್ಯಾಲಿಸ್‌ಮನ್) ಸಿಕ್ಕುವದೆಂದೂ, ಸಿಕ್ಕಿದ ತಕ್ಷಣ ಒಬ್ಬ ಮನುಷ್ಯ ಮತ್ತು ಹೆಂಗಸಿನ ತಲೆಯನ್ನು ಕತ್ತರಿಸಬೇಕೆಂದು ತಿಳಿಸಿದ್ದನ್ನು ನಿಜವೆಂದು ತಿಳಿದು, ತಾಯಿತಿ ಸಿಕ್ಕಿದ ದಿವಸ ೧೧ ವರ್ಷದ ನ್ಯಾಡ್ಸನ್ ಎಂಬ ಹುಡುಗನನ್ನು ಮತ್ತು ೪೦ ವರ್ಷದ ರೋಸಲಿನ್ ಎಂಬಾಕೆಯನ್ನೂ ಕೊಲೆಮಾಡಿ, ಅವರ ತಲೆಗಳನ್ನು ಬೇರೆಕಡೆಗೆ ಎಸೆದನೆಂದು ಕೋರ್ಟಿನಮುಂದೆ ತಿಳಿಸಿದನು.

ಆತನಿಗೆ ಬುದ್ಧಿ ಭ್ರಮಣೆಯಿರಬಹುದೆಂದು ಅದನ್ನು ಪರೀಕ್ಷಿಸಲು ನ್ಯಾಯಾಧೀಶರು ಆತನನ್ನು ಆಸ್ಪತ್ರೆಗೆ ಕಳಿಸಿದರು.

ಪುದುಕೋಟೆ ದೊರೆಗಳಿಗೆ ಮಾನ್ಯತೆ

ಚಕ್ರವರ್ತಿಗಳು ಪುದುಕೋಟೆ ಮಹಾರಾಜರಿಗೆ ರಾಜ್ಯಾಡಳಿತ ಹಕ್ಕನ್ನು ಶೀಘ್ರದಲ್ಲೇ ದಯಪಾಲಿಸಲು ಸುಪ್ರೀತರಾಗಿರುವರೆಂದು ಪುದುಕೋಟೆಯ ವಿಶೇಷ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಬಂಗಾಳಕ್ಕೆ ಕೇಂದ್ರ ಸರ್ಕಾರ ಸಹಾಯ

ಬಂಗಾಳಕ್ಕೆ ೨,೯೧,೦೦೦ ಟನ್ ಆಹಾರ ಪದಾರ್ಥಗಳನ್ನು ಕಳಿಸಿ ಕೊಡಬೇಕೆಂದು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದರ ಪೈಕಿ ೬೧ ಸಾವಿರ ಟನ್ ಅಕ್ಕಿ, ೭೦ ಸಾವಿರ ಟನ್ ಗೋಧಿ, ಇದಲ್ಲದೆ ಪಂಜಾಬಿನಿಂದ ೫೦ ಸಾವಿರ ಟನ್ ಗೋಧಿ ಕಳಿಸಲಾಗುವುದು. ಕಲ್ಕತ್ತದಲ್ಲಿ ರೇಷನಿಂಗ್ ತರುವುದರಿಂದ ೧,೧೨,೦೦೦ ಟನ್ ದವಸ ಧಾನ್ಯಗಳನ್ನು ಇದರಲ್ಲಿ ಉಪಯೋಗಿಸಿ, ಉಳಿದುದನ್ನು ಬಂಗಾಳ ಜಿಲ್ಲೆಗಳಿಗೆ ಕಳಿಸುವ ವ್ಯವಸ್ಥೆ ಮಾಡಲಾಗಿದೆ.

ಹೊಟ್ಟೆಗಿಲ್ಲದೆ ಸಾಯುವ ಸಂಖ್ಯೆ ಹೆಚ್ಚಾಗುತ್ತಿದೆ

ಬಂಗಾಳ ಜಿಲ್ಲೆಯ ಚಾಂದ್‌ಪುರದಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಿರುವ ಸಂಖ್ಯೆ ಹೆಚ್ಚುತ್ತಿದೆ. ಅಂತ್ಯಕ್ರಿಯೆ ನಡೆಸಲು ಸಾಕಷ್ಟು ಸೌದೆ ದೊರೆಯದೆ ಹಾಗೆ ಸತ್ತವರನ್ನೆಲ್ಲಾ ಒಟ್ಟುಗಟ್ಟಲೆ ಹೂಳಲಾಗುತ್ತಿದೆ. ಕೆಲವು ಸಾರಿ ಹೆಣಗಳನ್ನು ಹೂಳುವುದು ಕೂಡಾ ಆಗದೆ, ನದಿಯಲ್ಲಿ ಎಸೆಯಲಾಗುತ್ತಿದೆ.

೪೦ ಸಾವಿರ ನಿರ್ಗತಿಕರಿಗೆ ಆಶ್ರಯ

ಕಲ್ಕತ್ತಾ ನಗರದಲ್ಲಿ ಸರ್ಕಾರದವರು ೪ ನಿರ್ಗತಿಕರ ಶಿಬಿರಗಳನ್ನು ತೆರೆದು ೩,೫೦೦ ನಿರ್ಗತಿಕರಿಗೆ ಆಶ್ರಯ ಕೊಟ್ಟಿದ್ದಾರೆ. ೩೦ ಮೈಲಿ ಒಳಗಿನ ಶಿಬಿರಗಳನ್ನು ಏರ್ಪಡಿಸಿ, ಒಟ್ಟು ೪೦ ಸಾವಿರ ಅನಾಥರಿಗೆ ಆಶ್ರಯ ಕಲ್ಪಿಸಿದ್ದಾರೆ.

ಕಲ್ಕತ್ತಾದಲ್ಲಿನ ಬಲಿ

ಕಲ್ಕತ್ತಾದ ಆಸ್ಪತ್ರೆಗಳಿಗೆ ಅಕ್ಟೋಬರ್ ೨೯ ರಲ್ಲಿ ೧೩೯ ಜನ ಹೊಟ್ಟೆಗಿಲ್ಲದವರನ್ನು ದಾಖಲ್ಮಾಡಲಾಯಿತು. ೮೩ ಮಂದಿ ಮಡಿದರು. ೩೦ ನೇ ತಾರೀಖಿನ ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಯಿತು. ಅವರ ಪೈಕಿ ೫೧ ಮಂದಿ ಮೃತರಾದರು. ಒಟ್ಟು ೧೮೧ ಮಂದಿ ಗುಣಹೊಂದಿದರು.

ಚೀಣಾದ ೧೨ ಲಕ್ಷ ಡಾಲರ್ ದಾನ

ಬಂಗಾಳ ದುರ್ಭಿಕ್ಷ ನಿರ್ಮೂಲಕ್ಕಾಗಿ ಚೀಣಾದೇಶದವರು ಒಂದು ತಿಂಗಳೊಳಗೆ ೧೨ ಲಕ್ಷ ಡಾಲರುಗಳನ್ನು ಶೇಖರಿಸಿ ಕಳುಹಿಸಿ ಕೊಡುವ ಪ್ರಯತ್ನದಲ್ಲಿರುವುದಾಗಿ ಸಮಾಚಾರ ಬಂದಿದೆ

ದೀರ್ಘಯುದ್ಧಕ್ಕೆ ಸಿದ್ಧವಾಗಿರಬೇಕು

ಯುದ್ಧವು ಈಗ ತೀವ್ರ ಸ್ಥಿತಿಗೆ ಬಂದಿದೆ. ದೀರ್ಘಕಾಲದ ಯುದ್ಧಕ್ಕೆ ಸಿದ್ಧವಾಗಿರಬೇಕು. ಜರ್ಮನಿಯು ತನ್ನ ಮುಷ್ಟಿಯಿಂದ ಪಾರಾಗಲು ಏನು ಬೇಕಾದರೂ ಮಾಡಬಹುದು ಎಂದು ಜಾರ್ಜ್ ಮ್ಯಾಕಿ ಫಾರ್ಸ್ಟರವರು ಎಚ್ಚರಿಸಿದ್ದಾರೆ. [illegible] ರಲ್ಲಿ ಸೋಲುಂಟಾದರೆಂದು ಇದರ ಅರ್ಥಕ್ಕೆ ಬರಲಿದೆ ಎಂದು ತಿಳಿಸಿದ್ದಾರೆ.

"ಇಂಟರ್"ನಲ್ಲಿ ತಮಿಳು ಭಾಷೆಯಲ್ಲಿ ಶಿಕ್ಷಣ

ಅಣ್ಣಾಮಲೆ ವಿಶ್ವವಿದ್ಯಾನಿಲಯದ ಇಂಟರ್‌ಮೀಡಿಯೇಟ್ ಪರೀಕ್ಷೆಗೆ ೧೯೪೬ ರಿಂದ ತಮಿಳು ಭಾಷೆಯಲ್ಲಿಯೇ ಶಿಕ್ಷಣ ಕೊಡಲು ವಿಶ್ವವಿದ್ಯಾಲಯದ ಸಿಂಡಿಕೇಟ್‌ನವರು ನಿರ್ಧರಿಸಿದ್ದಾರೆ.

೩ ಸಾವಿರ ರೂ. ಗಳ ಅಫೀಮ್ ಸಾಗಿಸುತ್ತಿದ್ದವನ ದಸ್ತಗಿರಿ

ಕಲ್ಕತ್ತದಿಂದ ಬೊಂಬಾಯಿಗೆ ಸೆಕೆಂಡ್ ಕ್ಲಾಸ್ ತರಗತಿಯಲ್ಲಿ ಬಂದ ಒಬ್ಬ ಪ್ರಯಾಣಿಕನ ಎರಡು ಟ್ರಂಕಿನಲ್ಲಿ ೩ ಸಾವಿರ ರೂ. ಬೆಲೆ ಬಾಳುವ ಅಫೀಮನ್ನು ಪೋಲೀಸರು ಪತ್ತೆಹಚ್ಚಿ, ಆತನನ್ನು ದಸ್ತಗಿರಿ ಮಾಡಿದ್ದಾರೆ.

ನೆಲ್ಲೂರಿನಲ್ಲಿ ಪೋಲೀಸ್ ಶಿಕ್ಷಣ

ಮೈಸೂರು ಸರ್ಕಾರದವರು ಪ್ರೊಬೇಷನರಿ ಎ ಎಸ್ ಪಿ ಗಳಾದ ಶ್ರೀ ಎಲ್. ಸುಬ್ರಹ್ಮಣ್ಯಂ ಮತ್ತು ಆಲ್ಬರ್ಟ್ ಮನೋರಂಜನ್‌ರವರನ್ನು ಆರು ತಿಂಗಳು ಪೋಲೀಸ್ ಶಿಕ್ಷಣ ಪಡೆಯಲು ನೆನ್ನೆ ನೆಲ್ಲೂರಿಗೆ ಕಳುಹಿಸಿದರು.

ರಾಜಕೀಯಕ್ಕಾಗಿ ಪ್ರೇಮ ತಪ್ಪಿಸಿದೆ

ಮುಸ್ಲಿಂ ಪಕ್ಷದವರು ಗವರ್ನರನಲ್ಲಿ ಮಂತ್ರಿ ಪದವಿಗೆ ಬಂದಂದಿನಿಂದೀಚೆಗೆ ಆ ಪ್ರಾಂತ್ಯದಲ್ಲಿ ರಾಜಕೀಯ ಕಾರಣಕ್ಕಾಗಿ ಯಾರ ಪ್ರೇಮವೂ ಆಗಲಿಲ್ಲ ಎಂದು ಗವರ್ನರು ಹಣ ಕಾಸಿನ ಮಂತ್ರಿಗಳು ತಿಳಿಸಿದ್ದಾರೆ

ನೇವಲ್ಲರ ಮುಂದಿನ ಗುರಿ

"ನೇವಲ್ಲರ ಮುಂದಿನ ಗುರಿ" ಎಂಬ ಶಿರೋನಾಮೆಯಲ್ಲಿ ದೆಹಲಿಯ 'ನ್ಯಾಷನಲ್ ಕಾಲ್' ಪತ್ರಿಕೆಯು ಬರೆಯುತ್ತಾ, ತಮ್ಮ ಅನುಯಾಯಿಗಳ ಗುಂಪನ್ನು ಹೆಚ್ಚಿಸಲು, ವೈಸರಾಯರು ಪ್ರಯತ್ನಿಸುತ್ತಿರುವರೆಂದು ಪ್ರಕಟಿಸಿದೆ. ಕಾಂಗ್ರೆಸ್ ಮತ್ತು ಲೀಗ್‌ಗಳನ್ನು ಅಲಕ್ಷಿಸಿ, ಕೆಲಸಗಾರರ ಮತ್ತು ವ್ಯವಸಾಯಗಾರರ ಬೆಂಬಲವನ್ನು ಗಳಿಸಲು [illegible] ಕಲ್ಪಿಸ [illegible], ಇಂದಿನ ಬಿಕ್ಕಟ್ಟಿನ [illegible] ಕಾಂಗ್ರೆಸ್ಸನ್ನು [illegible] ಎಲ್ಲವೂ ಬೇರೆ ಇಲ್ಲವೆಂದೂ ತಿಳಿಸಿದೆ.

ಕ್ರಿಮಿಯಾದಲ್ಲಿ ಜರ್ಮನರಿಗೆ ವಿಪತ್ತು

ಜರ್ಮನರು ಕ್ರಿಮಿಯಾವನ್ನು [illegible] ಬಿಡುತ್ತಿರುವರೆಂದು ಹೇಳಲಾದ [illegible] ಕ್ರಿಮಿಯಾದಲ್ಲಿ ನಾಜಿಗಳು ಕಟ್ಟಿದ್ದ ಆಸ್ಪತ್ರೆಗಳಿಂದ ಘಾಯಗೊಂಡವರನ್ನು ಆಗಾಗಲೇ ಸಾಗಿಸಲಾಗಿದೆ.

ಕ್ರಿಮಿಯಾ ಕ್ಷೇತ್ರದಲ್ಲಿ ಜರ್ಮನರನ್ನು ಸುತ್ತುಗಟ್ಟಿ ಅವರನ್ನು ಸಂಪೂರ್ಣ ನಾಶ ಮಾಡಲು ರಷ್ಯನರು ಯತ್ನಿಸುತ್ತಿದ್ದಾರೆ. ಇದರಿಂದ ಆಗ್ನೇಯ ಯೂರೋಪಿಗೆ ನುಗ್ಗಲು ದಾರಿಯಾಗುವುದಂತೆ.

ಫ್ರಾಂಕೋವನ್ನು ಓಡಿಸಲು ಪಿತೂರಿ

ಸ್ಪೇನಿನಲ್ಲಿ ಜನರಲ್ ಫ್ರಾಂಕೋರವರನ್ನು ಓಡಿಸಿ, ಅಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಸ್ಪೇನಿನ ಫ್ರೀ ಮೇಸನ್‌ರವರು ಒಂದು ಪಿತೂರಿ ನಡೆಸುತ್ತಿರುವರೆಂದು ಜರ್ಮನ್ ವಾರ್ತಾ ಸಂಸ್ಥೆ ತಿಳಿಸಿದೆ.

ಅಂಡಮಾನ್ಸ್‌ಗೆ ಹೊಡೆತ

ಅಮೆರಿಕನ್ ವೈಮಾನಿಕರು ಅಂಡಮಾನ್ ದ್ವೀಪಗಳ ಮೇಲೆ ನೆನ್ನೆ ಧಾಳಿನಡೆಸಿ ಶತ್ರು ಬಿಡಾರಗಳಿಗೆ ಬೆಂಕಿಯ ಹೊಡೆತ ಕೊಟ್ಟರೆಂದು ವರದಿಯಾಗಿದೆ.

ಫ್ರೆಂಚರಿಗೆ ಎಚ್ಚರಿಕೆ

ಅಲ್ಜಿಯರ್ಸಿನ ಫ್ರೆಂಚ್ ರೇಡಿಯೋ ಫ್ರಾನ್ಸಿನ ಮೇಲೆ ದಂಡಯಾತ್ರೆಯು ನಡೆಯಬಹುದೆಂದು ನಿರೀಕ್ಷಿಸಿ ಫ್ರಾನ್ಸಿನವರು ಎದುರಿಸಲು ಸಿದ್ಧರಾಗಬೇಕೆಂದು ಎಚ್ಚರಗೊಳಿಸಿದೆ.

ರಷ್ಯಾಕ್ಕೆ ಹೆಚ್ಚಿನ ಜರ್ಮನ್ ಸೈನ್ಯ

ರಷ್ಯನರು ಈಚಿನ ಬೇಸಿಗೆ ಮತ್ತು ಛಳಿಗಾಲದಲ್ಲಿ ಜರ್ಮನರಿಂದ ಬಹುಪಟ್ಟಿನ ಪ್ರದೇಶವನ್ನು ಹಿಂದಕ್ಕೆ ಕಿತ್ತು ಕೊಂಡಿರುವುದಲ್ಲದೆ, ೯೦೦ ಸಹಸ್ರ ಜರ್ಮನರನ್ನು ಕೊಂದಿರುವರು ಮತ್ತು ೯೮ ಸಾವಿರ ಜರ್ಮನರನ್ನು ಸೆರೆ ಹಿಡಿದಿರುವರು ಎಂದು ಮಾಸ್ಕೋದಿಂದ ಹೊರಟ ಅಧಿಕಾರಿ ಪ್ರಕಟಣೆ ತಿಳಿಸುತ್ತದೆ

ಕೆಳ ನೀಪರ್ ಸಂಪೂರ್ಣ ವಶ

೭೫೦ ಮೈಲಿ ವಿಶಾಲವಾದ ಕೆಳ ನೀಪರ್ ಪೂರ್ವತೀರ ಪ್ರದೇಶವನ್ನೆಲ್ಲಾ ರಷ್ಯನರು ಆಕ್ರಮಿಸಿಬಿಟ್ಟಿದ್ದಾರೆ.

ಗಾಯಗೊಂಡವರ ಕೊಲೆ

ಕ್ರಿಮಿಯಾದಲ್ಲಿ ೨೫೦ ಸಾವಿರ ಮಂದಿ ಗಾಯಗೊಂಡ ಜರ್ಮನ್ ಸೈನಿಕರುವರೆಂದೂ ಅವರುಗಳನ್ನು ಅಲ್ಲಿಂದ ಕಳುಹಿಸಲು ಅವಕಾಶವಿಲ್ಲದೆ, ತುಂಬಾ ಗಾಯಗೊಂಡವರನ್ನು ಜರ್ಮನರು ಗುಂಡಿನಿಂದ ಹೊಡೆದು ಸಾಯಿಸುತ್ತಿರುವರೆಂದೂ ಹೇಳಲಾಗಿದೆ.

ಶಾಲಾ ಮಕ್ಕಳಿಗೆ ಊಟದ ಏರ್ಪಾಡು

ಕೊಚ್ಚಿನ್ ಸರ್ಕಾರದವರು ತಮ್ಮ ಸಂಸ್ಥಾನದ ಬಾಲಿಕಾ ಪಾಠಶಾಲೆಗಳಲ್ಲಿ ಓದುವ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸಲು ನಿಧಿಯೊಂದನ್ನು ತೆರೆಯುವವರಾಗಿದ್ದಾರೆ ಸಂಸ್ಥಾನದ ದೇವಸ್ವ ಪದ್ಧತಿಯಿಂದ ಮಕ್ಕಳ ಹೊಟ್ಟೆಗೆ ಸಾಲದೇ ಬಂದೀತೆ ಎಂಬೀ ಯೋಚನೆ ಈ ಕಾರ್ಯಕ್ಕೆ ಸಹಾಯವಾಗಿದೆ ಕೊಚ್ಚಿನ್ ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಆರ್. ಎಂ ಅಲಿಗಪ್ಪ ಚೆಟ್ಟಿಯಾರ್‌ರವರು ಈಗಾಗಲೇ ಆ ನಿಧಿಗೆ ೧,೫೦,೦೦೧ ರೂ ಗಳನ್ನು ಕೊಟ್ಟಿರುವರು

ಕಾಮನ್ಸ್‌ನಲ್ಲಿ ಕ್ಷಾಮದ ಬಗ್ಗೆ ಚರ್ಚೆ

ಮೊನ್ನೆ ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಸಭೆಯವರು, ಬಂಗಾಳಾ ಕ್ಷಾಮದಿಂದ ಉಂಟಾದ ವಿಪರೀತ ಪರಿಸ್ಥಿತಿಯನ್ನು ಚರ್ಚಿಸಿದರು. ಅನೇಕ ಸದಸ್ಯರು ಭಾಷಣ ಮಾಡಿದರು. ಕಾರ್ಮಿಕರ ಪಕ್ಷದ ಮಿ|| ಪೆಥಿಕ್ ಲಾರೆನ್ಸ್‌ರವರು ಚರ್ಚೆಯನ್ನು ಆರಂಭಿಸಿ, ಸರ್ಕಾರದ ನೀತಿಯನ್ನು ಬಹುವಾಗಿ ಖಂಡಿಸಿದರು ಈ ಕ್ಷಾಮದಿಂದ ಉಂಟಾಗುವ ಅನರ್ಥವು ಒಂದು ವಿಲಿಟರಿ ಪರಾಜಯಕ್ಕೆ ಸಮಾನವಾಗುವುದೆಂದು ಅಭಿಪ್ರಾಯಪಟ್ಟರು. ಇಂಡಿಯಾ ಸರ್ಕಾರವು ಟೀಕೆಯನ್ನು ವಿಪರೀತವಾಗಿ ಸಹಿಸಿರುವುದೇ ಇದಕ್ಕೆ ಕಾರಣವೆಂದೂ, ಈ ಕ್ಷಾಮಕ್ಕೆ ಇಂಡಿಯಾ ಸರ್ಕಾರದವರೇ ಜವಾಬ್ದಾರರೆಂದೂ ತಿಳಿಸಲಾಯಿತು ಇಂಡಿಯಾ ಕಾರ್ಯದರ್ಶಿಗಳಾದ ಮಿ|| ಅಮೆರಿಯವರು ಶಾಸನ ಸಂಬಂಧವಾದ ತೊಡಕುಗಳನ್ನು ಮುಂದಿಟ್ಟರು ಪ್ರಾಂತಿಕ ಆಡಳಿತದಲ್ಲಿ ಕೇಂದ್ರ ಸರ್ಕಾರವು ಕೈಹಾಕುವುದು ಉಚಿತವಾಗಿ ಕಂಡ ಬರಲಿಲ್ಲವೆಂದು ಅವರು ತಿಳಿಸಿದರು ಮತ್ತು ಅನುಭವಸ್ಥರಾದ ನೌಕರರೂ, ಆವಶ್ಯ ಸೈನ್ಯವೂ ಇಲ್ಲದಿರುವುದಕ್ಕಾಗಿ ವಿಷಾದಿಸಿದರು

ಚೆಕ್-ಸೋವಿಯಟ್ ಸಖ್ಯ

ಚೆಕೊಸ್ಲೊವೇಕಿಯಾ ಮತ್ತು ರಷ್ಯಗಳಿಗೆ ೨೦ ವರ್ಷಗಳ ಸಖ್ಯದ ಕರಾರನ್ನು ಮಾಡಿಕೊಳ್ಳಲು ಡಾ|| ಬೆನೆಷ್‌ರವರು ಮಾಸ್ಕೋವಿಗೆ ಹೊರಡಲಿರುವರೆಂದು ತಿಳಿದಿದೆ ... ಕಳೆದ ಬೇಸಿಗೆಯಲ್ಲಿ ಇದು ನಿರ್ಧಾರವಾಗಬೇಕಾಗಿತ್ತು ಆದರೆ ಸಣ್ಣ ಮತ್ತು ದೊಡ್ಡ ರಾಷ್ಟ್ರಗಳಿಗೆ ಆಗಬಹುದಾದ ಪ್ರತ್ಯೇಕವಾದ ಒಪ್ಪಂದಗಳ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದುದರಿಂದ ಇದು ತಾವಕಾಶವಾಯಿತು

ಅಮೆರಿಯವರನ್ನು ತೆಗೆಯಿರಿ

ಬರ್ಮಿಂಗ್‌ಹ್ಯಾಂನಲ್ಲಿ ಮಿ|| ಅಮೆರಿಯವರ ಚುನಾವಣಾ ಕ್ಷೇತ್ರದಲ್ಲಿಯೇ ಭಾಷಣ ಮಾಡುತ್ತ ಶ್ರೀ ಪಾಮೆದತ್‌ರವರು ಇಂಡಿಯಾ ಕಾರ್ಯದರ್ಶಿಗಳಾದ ಮಿ|| ಎಲ್. ಎಸ್. ಅಮೆರಿಯವರನ್ನು ತೆಗೆದು ಅವರ ಸ್ಥಾನದಲ್ಲಿ ಪ್ರಜೆಗಳ ನಿಜವಾದ ಪ್ರತಿನಿಧಿಯಾದ ಇನ್ನೊಬ್ಬರನ್ನು ನೇಮಿಸಬೇಕೆಂದು ತಿಳಿಸಿದರು ಇಂಡಿಯಾ ಲೀಗಿನ ಅಧ್ಯಕ್ಷರಾದ ... ಕಾಂಗ್ರೆಸ್ ಸದಸ್ಯರಾದ ಶ್ರೀ ಜೆ. ಎಸ್. ಹೋಲ್ ... ಆ ಸಭೆಗೆ ನಿರ್ಣಯಗಳನ್ನು ... ಅವರನ್ನು ತೆಗೆದುಹಾಕಬೇಕೆಂದೂ ... ರಾಜಕೀಯ ಖೈದಿಗಳ ಬಿಡುಗಡೆ ಯೋಗ್ಯವಾದ ... ಸಂಧಾನ ... ನಡೆಸಬೇಕೆಂದೂ ಸೂಚಿಸಿದ್ದಾರೆ

ಕೊಡಗು ಕಾಂ|| ಅಧ್ಯಕ್ಷರ ಬಿಡುಗಡೆ

ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ... ಅವರನ್ನು ಮೊನ್ನೆ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲಾಯಿತು.

ತಿರುಪತಿಯಲ್ಲಿ ಗುಂಪು ಕೇಂದ್ರಗಳು

ಶಾಲಾ ವಿದ್ಯಾರ್ಥಿಗಳು ಹರಡುವ ... ನಿಮಿತ್ತವಾಗಿ ... ತಿರುಪತಿಯಲ್ಲಿ ೨೦ ಕ್ಷೇತ್ರ ... ಗುಂಪು ಸೇರಕೂಡದೆಂದು ಆಜ್ಞೆಯಾಗಿದೆ

ವೈದ್ಯ ಪರಿಶೀಲನೆಗೆ ಸಮಿತಿ

ಸ್ವಾಸ್ಥ್ಯಾಂಗ ಶಾಖಾ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ೧೩ ಸದಸ್ಯರುಳ್ಳ ಸಮಿತಿಯೊಂದನ್ನು ವೈದ್ಯರು ಆಯುರ್ವೇದ ಮತ್ತು ಯುನಾನಿ ಪದ್ಧತಿಯನ್ನು ಉತ್ತಮಗೊಳಿಸುವ ವಿಚಾರ ಪರಿಶೀಲಿಸುವ ಸಲುವಾಗಿ ರಚಿಸಲಾಗುವುದೆಂದು ಗೊತ್ತಾಗಿದೆ.

ದಂಡಿನಲ್ಲಿ ಮುಟ್ಟುಗೋಲು

"ಇಂಬಲ್ ಸ ಪೈಟರ್ ಬಾಜೀ ಯಾನೆ ಕುಸ್ತೀ ಕಲೆ ಕಾವ್ಯ" ಎಂಬ ಪುಸ್ತಕವನ್ನು ಬೆಂಗಳೂರು ದಂಡಿನಲ್ಲಿ ಎಲ್ಲಿ ಕಂಡು ಬಂದರೂ ಮುಟ್ಟುಗೋಲು ಹಾಕಿಕೊಳ್ಳಲು ರೆಸಿಡೆಂಟರು ಆಜ್ಞಾಪಿಸಿದ್ದಾರೆ. ೧೦ ಪುಟಗಳ ಈ ಪುಸ್ತಕವನ್ನು ವಿ.ಡ.ಣ.ಪುರದ ಶ್ರೀ ಸೂರ್ಯನಾರಾಯಣ ಸಿಂಗ್‌ರವರು ಹಿಂದೀ ಭಾಷೆಯಲ್ಲಿ ಬರೆದಿದ್ದಾರೆ.

ಬಸ್ ಅಕಸ್ಮಿಕ

ಶಿವಮೊಗ್ಗಾ ಜಿಲ್ಲೆಯ ಮಾಳಬಾಗಿಲ ಬಳಿ ಮೊನ್ನೆ ಬೆಳಗ್ಗೆ ಎಸ್. ಟಿ. ಎ. ಬಸ್ ಮಗುಚಿಕೊಂಡಿತು. ೮ ಜನರಿಗೆ ಗಾಯಗಳಾಗಿವೆ. ಅವರಿಗೆ ತೀರ್ಥಹಳ್ಳಿಯಲ್ಲಿ ಚಿಕಿತ್ಸೆಯಾಗುತ್ತಿದೆ. ಡೇನಿಯಲ್ ಡಿಸೋಜ ಎಂಬುವನಿಗೆ ತೀವ್ರ ಗಾಯಗಳಾಗಿವೆ.

ಲಾರಿ ಢಿಕ್ಕಿಯಿಂದ ಮರಣ

ನಿನ್ನೆ ಶಿವಮೊಗ್ಗಾದ ಬೀರೂರು ಹತ್ತಿರ ಹೋಗುತ್ತಿದ್ದ ಲಾರಿಯೊಂದು ಮರಕ್ಕೆ ಢಿಕ್ಕಿ ಹೊಡೆದು ಗೋಪಾಲನಾಯರ್ ಮತ್ತು ಪರಮೇಶ್ವರನಾಯರ್ ಎಂಬಿಬ್ಬರು ಮರಣಹೊಂದಿದ್ದಾರೆ.

ಹಾಲು ಮೊಸರಿನ ಕೊರತೆ

ಶಿವಮೊಗ್ಗದಲ್ಲಿ ಹಾಲು ಮೊಸರಿನ ಧಾರಣೆ ಏರಿದೆ. ಹೋಟೆಲಿನವರು ಸಾಕಷ್ಟು ಹಾಲಿಲ್ಲದೆ ೧ ಅಂಶ ಹಾಲಿಗೆ, ೮ ಅಂಶ ಡಿಕಾಕ್ಷನ್ ಹಾಕಿ ಕೊಡುತ್ತಿರುವುದಾಗಿ ವರ್ತಮಾನ

ಹಿಂದೂ-ಮುಸ್ಲಿಂ ಐಕ್ಯಸಾಧನೆ

ಬೆಂಗಳೂರಿನ ಕಮ್ಯೂನಿಸ್ಟರು ಇದೇ ೭ ನೇ ತಾ|| ನಿಂದ ೧೪ ರ ವರೆಗೆ ಹಿಂದೂ-ಮುಸ್ಲಿಂ ಐಕ್ಯಸಾಧನೆಗಾಗಿ ಮನೆಮನೆಯಲ್ಲೂ ಪ್ರಚಾರ ನಡೆಸುವರು. ೭ ನೇ ತಾ|| ರಷ್ಯಾದ ಕ್ರಾಂತಿ ದಿನಾಚರಣೆ ಸಂಬಂಧವಾಗಿ ಮೆರವಣಿಗೆ, ಧ್ವಜಾರೋಹಣ ಮತ್ತು ಸಾರ್ವಜನಿಕ ಸಭೆ ಮುಂತಾದುವನ್ನು ಏರ್ಪಡಿಸಿದ್ದಾರೆ

ಮೈಸೂರು ರೇಷನ್ ಸೆನ್ಸಸ್

ಮೈಸೂರು ನಗರ ನಿವಾಸಿಗಳೇ,

೧೯೪೩ ನೇ ನವಂಬರ್ ೧೩ ನೇ ಶನಿವಾರ, ೧೪ ನೇ ಭಾನುವಾರ ಮತ್ತು ೧೫ ನೇ ಸೋಮವಾರದವರೆಗೆ ಸಂಜಾವಗಳಿ ಸೆನ್ಸಸ್ ತೆಗೆದುಕೊಳ್ಳಲ್ಪಡುತ್ತದೆ. ದಯವಿಟ್ಟು ವಾಸ್ತವಾಂಶವನ್ನು ನಮೂದಿಸಿ ಹಂಚುವ ನಮೂನೆಯನ್ನು ಭರ್ತಿ ಮಾಡಿ ಕೊಡಿ.

ಜಪಾನರಿಗೆ ಭಾರಿ ನಷ್ಟ

ರಾಬೂಲ್ ಮೇಲೆ ಧಾಳಿ ನಡೆಸಿದ ಕಾಲದಲ್ಲಿ ಮಿತ್ರಪಕ್ಷದ ವಿಮಾನಗಳು, ಜಪಾನರ ೩ ಡಿಸ್ಟ್ರಾಯರ್ ಹಡಗುಗಳ ಮತ್ತು ೮ ವ್ಯಾಪಾರ ಹಡಗುಗಳ ಮೇಲೆ ಬಾಂಬು ಹಾಕಿ ಮುಳುಗಿಸಿದುದಾಗಿ ಅಧಿಕಾರಿಯುತ ಪ್ರಕಟಣೆ ಹೊರಬಿದ್ದಿದೆ.

ಅಲ್ಲದೆ ಇದೇ ಕ್ಷೇತ್ರದಲ್ಲಿ ೭೭ ಶತ್ರು ವಿಮಾನಗಳನ್ನೂ ೫೦ ಸಹಸ್ರ ಟನ್ ನಷ್ಟು ಶತ್ರು ನೌಕೆಗಳನ್ನೂ ಮಿತ್ರ ಪಕ್ಷದವರು ನಾಶಗೊಳಿಸಿರುವರೆಂದು ಪ್ರಕಟವಾಗಿದೆ.

Edited, printed and published by A. R. Nagarajan, at the Sadhvi Press, D.Subbiah Road, Mysore.

ಹೊಟ್ಟೆಗಾಗಿ ಮನೆ ದಿವಾಳಿ

ಬಂಗಾಳದ ಸಿರಾಜ್‌ಗಂಜ್ ಮತ್ತು ಸಲಟ್ ನಗರಗಳ ಸುತ್ತಲಿನ ಜನರು ತಾವು ವಾಸಿಸುತ್ತಿದ್ದ ತಗಡಿನ ಗುಡಿಸಲು, ಮನೆ ಇವುಗಳನ್ನು ಮಾರಿ ಬಂದ ಹಣದಿಂದ ಹೊಟ್ಟೆ ಹೊರೆದುಕೊಳ್ಳುವ ಸಲುವಾಗಿ ಅಸ್ಸಾಂ ಪ್ರಾಂತ್ಯಕ್ಕೆ ಪ್ರಯಾಣಮಾಡುತ್ತಿರುವರು

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ — ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಎಲ್ಲವೂ ಬಹುಕಾಲ ಬಾಳಿಕೆ ಬರುವಂತೆ ಮಾಡಿ ಮತ್ತು

ಮುಂಬರುವ ದಿನಗಳಿಗೋಸ್ಕರ

ಕೂಡಿಡಿ

ಯುದ್ಧಸಮಯದಲ್ಲಿ ಕೊಂಡ ಪದಾರ್ಥಗಳು ನಿಮ್ಮ ಹಣಕ್ಕೆ ಸರಿಯಾದ ಮೌಲ್ಯವನ್ನು ಕೊಡುವುದಿಲ್ಲ. ನಿಮ್ಮಲ್ಲಿರುವ ಬಟ್ಟೆ ಮತ್ತು ಪ್ರತಿಯೊಂದು ಪದಾರ್ಥವೂ ಬಹುಕಾಲ ಬಾಳಿಕೆ ಬರುವಂತೆ ಮಾಡಿಕೊಳ್ಳಿ, ಏಕೆಂದರೆ ನೀವು ಇಂದು ಕೊಳ್ಳುವ ಪ್ರತಿಯೊಂದು ಹೊಸ ಪದಾರ್ಥದ ಬೆಲೆಯೂ ಅದರ ಯೋಗ್ಯತೆಗೆ ಮೀರಿ ಅಧಿಕವಾಗಿದೆ. ಮೋಜಿನ ತಂಟೆಗೇ ಹೋಗಬೇಡಿ. ಅತ್ಯಾವಶ್ಯಕವಾದುವುಗಳಿಗೆಮಾತ್ರವೇ ವೆಚ್ಚಮಾಡಿ, ಮತ್ತು ಮೊದಲಿನ ಧಾರಣೆಗಳು ಬರುವವರೆಗೂ ನೀವು ಕೂಡಿಡಬಹುದಾದ ಪ್ರತಿಯೊಂದು ಆಣೆಯನ್ನು ಶೇಖರಿಸಿ.

ಸುರಕ್ಷಿತವಾಗಿ ಕೂಡಿಡಿ.

ನೀವು ಕೂಡಿಡುವ ಹಣದ ರಕ್ಷಣೆ ಬಗ್ಗೆ ಜಾಗ್ರತೆವಹಿಸಿರಿ. ನಿಮ್ಮ ಹಣವನ್ನು, ಬಂಗಾರ, ಬೆಳ್ಳಿ, ಆಭರಣಗಳು, ಭೂಮಿ, ಕಟ್ಟಡಗಳು ಅಥವಾ ಸಾಮಾನುಗಳನ್ನಾಗಿ ಮಾರ್ಪಡಿಸಿದರೆ, ಮೊದಲಿನ ಧಾರಣೆಗಳು ಬಂದಾಗ ಶೇಖರಿಸಿದ ನಿಮ್ಮ ಹಣದ ಹೆಚ್ಚಿನ ಮೌಲ್ಯವು ಮಾಯವಾಗುತ್ತದೆ. ಬುದ್ಧಿವಂತರಾಗಿ ನಿಮ್ಮ ಹಣವನ್ನು ಸರಕಾರಿ ಸಂಸ್ಥೆ, ಇನ್ಷೂರೆನ್ಸು, ಬ್ಯಾಂಕ್ ಅಥವಾ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ವಿನಿಯೋಗಿಸಿ.



ರಾಷ್ಟ್ರೀಯ ಯುದ್ಧ ಮುಖಂಡರು ದೇಶೀಯರಿಗೆ ಮಾಡುವ ಮನವಿ

CIU—393-KN.

ಸಹಕಾರ ದಿನೋತ್ಸವ

ಮೈಸೂರು: ೭

ಚಾಮರಾಜ ರೋಡಿನಲ್ಲಿರುವ ಮೈಸೂರು ಸಹಕಾರ ಭವನದಲ್ಲಿ ನಿನ್ನೆ ಸಂಜೆ ಮೈಸೂರು ಸ್ಟೇಟ್ ಕೈಲ್ಸ್ ಆಡಿಟರವರಾದ ಶ್ರೀ ಹೆಚ್. ಎ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಅಖಿಲ ರಾಷ್ಟ್ರೀಯ ಸಹಕಾರ ದಿನೋತ್ಸವವು ತುಂಬಾ ಯಶಸ್ವಿಯಾಗಿ ನೆರವೇರಿತು. ಬಹುಮಂದಿ ಗಂಡಸರು, ಹೆಂಗಸರು ನೆರೆದಿದ್ದರು. ವೀಣಾವಾದನವನ್ನು ಕೂಡ ಏರ್ಪಡಿಸಲಾಗಿತ್ತು. ಅಧ್ಯಕ್ಷರು ಸ್ವಾರಸ್ಯವಾಗಿ ಭಾಷಣ ಮಾಡಿದರು.

ರಾಷ್ಟ್ರೀಯ ಐಕ್ಯತ ವಾರ

ಮೈಸೂರು ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ರಾಷ್ಟ್ರೀಯ ಐಕ್ಯತಾ ವಾರ ಇಂದಿನಿಂದ ಆಚರಿಸುವ ಏರ್ಪಾಡಾಗಿದೆ. ಪ್ರತಿದಿನವೂ ಬೆಳಗ್ಗೆ ಮತ್ತು ಸಾಯಂಕಾಲ ಬಹಿರಂಗ ಸಭೆಗಳು, ಪುಸ್ತಕಗಳ ಮಾರಾಟ ಮನೆಯಿಂದ ಮನೆಗೆ ಹೋಗಿ ಐಕ್ಯತಾ ಪ್ರಚಾರವನ್ನು ಮಾಡಲಾಗುವುದು.

ವಾರದ ಕೊನೆ ದಿನವಾದ ೧೪ ನೇ ತಾ|| ಆಹಾರದ ಸಭೆಯನ್ನು ಆಚರಿಸಲಾಗುವುದರಿಂದ ಮಹಾಜನರು ಸಹಕರಿಸಬೇಕಾಗಿ ಪಕ್ಷದ ಕಾರ್ಯದರ್ಶಿಗಳು ಕೋರುತ್ತಾರೆ.

ಧರ್ಮೋಪನ್ಯಾಸಗಳು

ಮೈಸೂರು ಶ್ರೀರಾಮಪೇಟೆ ರಾಮಾಭ್ಯುದಯಸಭಾ ಶ್ರೀರಾಮಮಂದಿರದಲ್ಲಿ ಇದೇ ಮಾಹೆ ತಾ|| ೪ ರಿಂದ ಧರ್ಮೋಪನ್ಯಾಸಗಳು ನಡೆಯುತ್ತಿವೆ. ಇಂದು ಸಂ|| ವೇ|| ಸಿ. ಚಂದ್ರಶೇಖರ ಭಟ್ಟರು ಬ್ರಹ್ಮಸೂತ್ರಸಾರ ಎಂಬ ವಿಷಯವಾಗಿಯೂ ನಾಳೆ ಸಂಜೆ ವೇ|| ವಿಠಲಶಾಸ್ತ್ರಿಗಳು ಜ್ಞಾನಯೋಗದ ವಿಷಯವಾಗಿಯೂ ೧೧ನೇ ತಾ|| ಶ್ರೀ ಡಿ. ರಂಗಾಚಾರ್ಯರು 'ಧರ್ಮೋ ಸರ್ವಂ ಪ್ರತಿಷ್ಠಿತಂ' ಎಂಬ ವಿಷಯವಾಗಿಯೂ ೧೨ನೇ ತಾ|| ಶ್ರೀ ಬಿ. ಸುಬ್ರಹ್ಮಣ್ಯಯ್ಯನವರು 'ವಿಜ್ಞಾನಶಕ್ತಿಯೂ ಉಪನಿಷತ್ತುಗಳೂ' ಎಂಬ ವಿಷಯವಾಗಿಯೂ ಉಪನ್ಯಾಸಗಳನ್ನು ಮಾಡುವರು.

ವೇತನ ಸಲ್ಲುತ್ತಿಲ್ಲ

ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳಿಗೆ ಮಂಜೂರಾಗಿರುವ ವೇತನದ ಮೊಬಲಗನ್ನು ಕಾಲೇಜು ಮುಂಚಾಗಿ ೫, ೬ ತಿಂಗಳಿಂದಲೂ ಸಹ ವಿದ್ಯಾರ್ಥಿಗಳಿಗೆ ಕೊಡದೆ ಇರುವುದಾಗಿ ತಿಳಿದುಬಂದಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಗಮನಿಸಿ ದಯವಿಟ್ಟು ಆ ಹಣವನ್ನು ಕೊಡಬೇಕಾಗಿ ಹಿತೈಷಿಗಳೊಬ್ಬರು ತಿಳಿಸುತ್ತಾರೆ.

ಪಾರ್ಲಿಮೆಂಟಿನಲ್ಲಿ ಅಶ್ರದ್ಧೆ

ಭಾರತದಲ್ಲಿನ ಕ್ಷಾಮವಿಚಾರವಾಗಿ ಚರ್ಚೆ ನಡೆದ ಪಾರ್ಲಿಮೆಂಟಿನ ೬೦೦ ಸದಸ್ಯರ ಪೈಕಿ ೫೦ ಮಂದಿ ಮಾತ್ರ ಸಭೆಗೆ ಹಾಜರಾಗಿದ್ದ ಸಂಗತಿಯನ್ನು ಪ್ರಸ್ತಾಪಿಸುತ್ತಾ ಲಂಡನ್ನಿನ ಡೈಲಿ ವರ್ಕರ್ ಪತ್ರಿಕೆಯು ಸದಸ್ಯರ ಅಶ್ರದ್ಧೆ ಬಗ್ಗೆ ಸಂತಾಪಪಟ್ಟಿದೆ. ಅಲ್ಲದೆ ಇಂಥ ವಿಷಯಗಳ ಮೇಲಿನ ಚರ್ಚೆಯನ್ನು ಎಲ್ಲ ಸದಸ್ಯರೂ ಇರುವ ವೇಳೆಗಳಲ್ಲಿ ನಡೆಸುವಂತೆ ಚರ್ಚಿಗಳ ವೇಳಾಪಟ್ಟಿ ಬದಲಾವಣೆ ಅಗತ್ಯವೆಂದೂ ಸೂಚಿಸಿದೆ.

ಸಂಪುಟ ೨] ಭಾನುವಾರ ೭-೧೧-೪೩ [ಸಂಚಿಕೆ ೯೪

ಶೀಘ್ರದಲ್ಲೇ ಮಿತ್ರರು ಫ್ರಾನ್ಸಿನಲ್ಲಿಳಿಯುವರು

ಭಾರತ ಕ್ಷಾಮ ಚರ್ಚೆಕಾಲಕ್ಕೆ ಪಾರ್ಲಿಮೆಂಟ್ ಸಭೆಯಲ್ಲಿ ಹಾಜರಿದ್ದವರು ಕೇವಲ ೫೦ ಮಂದಿಮಾತ್ರ

ಮಿತ್ರ ಸೇನೆ ಫ್ರಾನ್ಸಿನಲ್ಲಿ ಇಳಿಯುವುದು

ಮೊನ್ನೆ ಸಂಜೆ ಇಂಗ್ಲೆಂಡ್ ತೀರಗಳಿಂದ ಬಹು ಸಂಖ್ಯೆಯ ಕ್ಷಿಪ್ರ ನೌಕೆಗಳು ಫ್ರಾನ್ಸಿನ ಕಡೆಗೆ ಹೊರಟವು. ಆದಾಗಿಯೂ ಶೀಘ್ರದಲ್ಲಿ ಮಿತ್ರ ಪಕ್ಷ ಸೈನಿಕರು ಫ್ರಾನ್ಸ್ ದೇಶಕ್ಕೆ ಬಂದಿಳಿಯುವರೆಂದೂ ಫ್ರಾನ್ಸ್ ಪ್ರಸಾರ ನಿಲಯದ ಸೈನ್ಯಗಳ ಚಲನವಲನ ವರದಿಗಾರರು ಹೇಳುತ್ತಾರೆ.

ವಾಸ್ತವಾಂಶ ತಿಳಿಸಲಾಸಾಧ್ಯ

"ಬಂಗಾಳದಲ್ಲಿನ ಸ್ಥಿತಿಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುವುದು ಅಸಾಧ್ಯ. ಅಲ್ಲಿ ಭಯಂಕರ ಕ್ಷಾಮ ತಾಂಡವವಾಡುತ್ತಿದೆ. ಉಪವಾಸ ದೇವತೆ, ಮೃತ್ಯು ದೇವತೆ ಇಬ್ಬರೂ ಒಬ್ಬರನ್ನೊಬ್ಬರು ಕೈ ಹಿಡಿದುಕೊಂಡು ತಡೆಯಿಲ್ಲದೆ ನರ್ತಿಸುತ್ತಿರುವರು" ಹೀಗೆಂಬುದಾಗಿ ಅಖಿಲ ಭಾರತ ಮಹಿಳಾ ಸಮ್ಮೇಳನದಲ್ಲಿ ಅಧ್ಯಕ್ಷರಾದ ಶ್ರೀ ಮತಿ ವಿಜಯಲಕ್ಷ್ಮಿ ಪಂಡಿತರು, ಬಂಗಾಳದಲ್ಲಿ ತಾವು ಕೈಗೊಂಡಿದ್ದ ಪ್ರವಾಸದ ಅನುಭವಗಳನ್ನು ಪತ್ರಿಕಾ ಪ್ರತಿನಿಧಿಗಳಿಗೆ ವಿವರಿಸುತ್ತಾ ನುಡಿದರು.

ಕೀಲೆಣ್ಣೆಗೆ ಕಾನೂನು ಅನ್ವಯಿಸುವುದಿಲ್ಲ

ಲಾಭ ಮತ್ತು ದಾಸ್ತಾನು ತಡೆಗಟ್ಟುವ ಕಾನೂನು, ವಿವಾಹ, ಮೋಟಾರು ಮಂತಾದವುಗಳಿಗೆ ಉಪಯೋಗಿಸುವ ಕೀಲೆಣ್ಣೆ, ಸೀಮೆ ಎಣ್ಣೆ ಮುಂತಾದುವುಗಳಿಗೆ ಅನ್ವಯಿಸುವುದಿಲ್ಲವೆಂದು ಸರ್ಕಾರದಿಂದ ಪ್ರಕಟವಾಗಿದೆ.

ಗಿಟಕು ತೆಂಗು ಸಾಗಲು ತಡೆ ಇಲ್ಲ

ಪ್ರಾಂತ್ಯದಿಂದ ಹೊರಕ್ಕೆ ಎಣ್ಣೆ ಬೀಜಗಳು ಅಪ್ಪಣೆ ಇಲ್ಲದೆ ಸಾಗಕೂಡದೆಂದು ಮದರಾಸ್ ಸರ್ಕಾರದವರು ಇತ್ತೀಚಿಗೆ ಒಂದು ಆಜ್ಞೆ ಹೊರಡಿಸಿದ್ದರು. ಇದರಿಂದ ಮಲಬಾರಿನ ತೆಂಗು ವ್ಯಾಪಾರಿಗಳಿಗೆ ಬಹಳ ತೊಂದರೆಯಾಗಿತ್ತು. ಈಗ, ಗಿಟುಕು ಮತ್ತು ತೆಂಗು ಸಾಗಿಸಲು ಅಪ್ಪಣೆ ಬೇಕಾಗಿಲ್ಲವೆಂದು ಸರ್ಕಾರ ತಿಳಿಸಿರುವ ವಿಷಯ ಪ್ರಕಟವಾಗಿದೆ.

ಕ್ಷಾಮನಿವಾರಣೆಗೆ ಕಾಮನ್ಸಿನಲ್ಲಿ ಸಲಹೆ

ಪಾರ್ಲಿಮೆಂಟಿನಲ್ಲಿ ಭಾರತ ಕ್ಷಾಮದ ಬಗ್ಗೆ ತೀವ್ರವಾಗಿ ಚರ್ಚೆ ಜರುಗಿತು. ಭಾರತ ಕಾರ್ಯದರ್ಶಿ ಮಿ|| ಅಮೇರಿಯವರು ಸದಸ್ಯರುಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ಸಮಾಧಾನವು ತೃಪ್ತಿಕರವಾಗಿರಲಿಲ್ಲ. ಭಾರತದ ಕ್ಷಾಮನಿವಾರಣೆಗೆ ಇತರ ದೇಶಗಳಿಂದ ಹೆಚ್ಚು ಆಹಾರ ಸಾಗಿಸಲಾಗಬೇಕು. ಸರಬರಾಜು ಸಾಲಬದಲ್ಲಾಗಬೇಕಾದರೆ ನೌಕಾ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಸರ್ಕಾರವು ಕೂಡಲೆ ಕಾರ್ಯ ಕೈಗೊಳ್ಳಬೇಕೆಂದು ಸದಸ್ಯರೊಬ್ಬರು ಒತ್ತಾಯ ಪಡಿಸಿರುವರು. ರಾಜಕೀಯ ಬಿಕ್ಕಟ್ಟನ್ನು ಪರಿಹರಿಸದ ಹೊರತು ಭಾರತದ ಸ್ಥಿತಿಯನ್ನು ಒಂದು ಹದಕ್ಕೆ ತರುವುದು ಸಾಧ್ಯವಿಲ್ಲವೆಂದು ಮಿ|| ಕೋವ್‌ರವರು ಹೇಳಿದ್ದಾರೆ.

ನಡುಹಗಲಲ್ಲಿ ಸ್ತ್ರೀ ಕೊಲೆ

ಮೊನ್ನೆ ಮಧ್ಯಾಹ್ನ ಪಟ್ಟಣದ ಟ್ರಿಪ್ಲಿಕೇನ್ ವಿಭಾಗದ ಮನೆಯೊಂದರಲ್ಲಿ ಧನಿಕ ಮುಸ್ಲಿಂ ಸ್ತ್ರೀಯೊಬ್ಬಳ ಕೊಲೆ ನಡೆದಿರುತ್ತದೆ. ನಡುಹಗಲು ೨ ಗಂಟೆಯಲ್ಲಿ ಯಾರೋ ದುಷ್ಕರ್ಮಿಗಳು ಆಕೆಯ ಮನೆಗೆ ನುಗ್ಗಿ ಕತ್ತು ಕೊಯ್ದು ಕೊಂದು ಮೈಮೇಲಿದ್ದ ಒಡವೆಗಳನ್ನೆಲ್ಲ ಕಿತ್ತುಕೊಂಡು, ಸಾವಿರಾರು ರೂಪಾಯಿಗಳ ಒಡವೆಗಳನ್ನು ಅಪಹರಿಸಿ ಪರಾರಿಯಾಗಿರುವರು. ಆಕೆಯ ಮಗ ಇಂಪೀರಿಯಲ್ ಬ್ಯಾಂಕಿನಲ್ಲಿ ಕೆಲಸದಲ್ಲಿರುವನು. ಆತನು ಆಫೀಸಿಗೆ ಹೋದ ಸಮಯದಲ್ಲಿ ಈ ಕೊಲೆ ನಡೆದಿದ್ದು ಆರೋಪಿಯ ಸುಳಿವು ಇನ್ನೂ ತಿಳಿದುಬಂದಿಲ್ಲ. ಸಾಯಂಕಾಲ ೬ ಗಂಟೆಗೆ ಬಂದಾಗ ಆತನು ತಾಯಿ ರಕ್ತಮಡುವಿನಲ್ಲಿ ಬಿದ್ದಿದ್ದುದನ್ನು ಕಂಡನು. ಪೋಲೀಸರು ತನಿಖೆ ನಡೆಸುತ್ತಿರುವರು.

ಜಪಾನರು ಚೀಣಿ ಪಟ್ಟಣ ಹಿಡಿದರು

[illegible] ಚೀಣಾ [illegible] ಪ್ರಾಂತ್ಯದ [illegible] ಜಪಾನರು ಹಿಡಿದಿರುವರೆಂದು [illegible] ಚೀಣಾ ಯುದ್ಧ ವಾರ್ತಾ ವರದಿಯಲ್ಲಿ ತಿಳಿಸಲಾಗಿದೆ.

ನ್ಯೂಸ್ ಪ್ರಿಂಟ್ ವ್ಯಾಪಾರ

ಭಾರತ ಕೇಂದ್ರ ಸರ್ಕಾರದವರು ನ್ಯೂಸ್ ಪ್ರಿಂಟ್ ಕಾಗದ ಮಾರಾಟ [illegible] ನಿಗದಿ ಮಾಡಿರುವ ಬೆಲೆ ನಡೆಸ [illegible] ಇಚ್ಛೈಸುತ್ತಾರೆ. ಪೌಂಡ್ [illegible] (ರೀಲು) ೦-೬-೬ ಕಾಸು. ಪೌಂಡ್ [illegible] ಡಕ್ಕೆ (ಗಜಗಳು) ೦-೮-೦. [illegible] ದರುಗಳಲ್ಲಿ ೬ ಕಾಸು ಹೆಚ್ಚಿಗೆ [illegible] ಮಾಗಲು ಅವಕಾಶವಿದೆ.

ರಕ್ಷಣಾ ಶಾಸನದ ತಪ್ಪು ಉಪಯೋಗ

ಭಾರತ ರಕ್ಷಣಾಶಾಸನದ ೨೬ನೇ ಕಲಂ ಪ್ರಕಾರ ಲಾಹೋರ್ ಹೈ ಕೋರ್ಟಿನ ಅಡ್ವೊಕೇಟ್ ಶ್ರೀ ದುರ್ಗಾದಾಸರನ್ನು ಬಂಧಿಸಿರುವುದು ಸರಿಯಲ್ಲ, ಅವರ ಬಿಡುಗಡೆಯಾಗಬೇಕು ಎಂದು ಲಾಹೋರ್ ಹೈ ಕೋರ್ಟಿನ ನ್ಯಾಯಾಧೀಶರು ತೀರ್ಪು ಕೊಟ್ಟಿದ್ದಾರೆ.

ಪಾಸಿಸ್ಟ್ರೈಕ್ಟ್ ವಿನಾಶ ಶಾಸನಬದ್ಧವಾಗಲಿ

ದಕ್ಷಿಣ ಆಫ್ರಿಕದ ಹಿಂದೂ ಮಹಾಸಭೆಯವರು ಪೆಗಿಂಗ್ ಆಕ್ಟ್ ಹಿಂದೂ ವಿವಾಹವನ್ನು ಶಾಸನಬದ್ಧವನ್ನಾಗಿ ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸಿರೊ [illegible] ವಿಷಯವು ಸಮ್ಮೇಳನದ [illegible] ಮೂಲಕ [illegible] ಬಂದಿದೆ.

ಪತ್ರಿಕಾಕರ್ತರ ಮುಂದಿನ ಸಮ್ಮೇಳನ

ಅಖಿಲಭಾರತ ಸಂಪಾದಕರ ಸಂಘದ ಸ್ಥಾಯಿ ಸಮಿತಿಯವರು ತಮ್ಮ ಮುಂದಿನ ವಾರ್ಷಿಕ ಅಧಿವೇಶನವನ್ನು ನವೆಂಬರ್ ೨೦, ೨೧ನೇ ತಾ|| ಗಳಲ್ಲಿ ಮದರಾಸಿನಲ್ಲಿ ನಡೆಸತಕ್ಕದ್ದೆಂದು ತೀರ್ಮಾನಿಸಿರುವರು.

ಅಮೇರಿಕನರ ಔದಾರ್ಯ

ಭಾರತದಲ್ಲಿ ತಲೆದೋರಿರುವ ಕ್ಷಾಮವನ್ನು ಹೋಗಲಾಡಿಸುವ ಸಲುವಾಗಿ ಅಮೇರಿಕ ನ್ಯಾಷನಲ್ ಕಾಂಗ್ರೆಸ್ಸಿನ ಯಹೂದ್ಯ ಸಮಿತಿಯವರು ಒಂದು ಲಕ್ಷ ಡಾಲರುಗಳನ್ನು ಕೊಡಲು ಒಪ್ಪಿರುತ್ತಾರೆ.

ಮಾಜಿ ಮಂತ್ರಿಗಳಿಗೆ ಕಣ್ಣುಬೇನೆ

ಅಸ್ಸಾಮಿನ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಗೋಪಿನಾಥ ಬರ್ಡೋಲಿಯವರು ಈಗ ಜೋರ್‌ಹಟ್ ಜೈಲಿನಲ್ಲಿರುವರು. ಅವರಿಗೆ ಕಣ್ಣು ಬೇನೆ [illegible] ಚಿಕಿತ್ಸೆಗಾಗಿ [illegible] ಬಿಡುಗಡೆಯಾಗಿ [illegible] ತಿಳಿದುಬಂದಿದೆ.

ಪ್ರೋರ್ಟರ ಕಾರ್ಖಾನೆಯಲ್ಲಿ ಮುಷ್ಕರ

ಪ್ರೋರ್ಟ್ [illegible] ನೋಟಿಸ್ [illegible] ಅನೇಕ ಮಂದಿ ಕೆಲಸಗಾರರು [illegible] ಮುಷ್ಕರ ಹೂಡಿರುವುದಾಗಿ [illegible] ಸುದ್ದಿ ಬಂದಿದೆ.

ಮಿಂಟೆರಿ ಹಾಜಿನ ಮೈಸೂರು ಸ್ತ್ರೀ

ಮೈಸೂರು [illegible]
[illegible] ಶ್ರೀಮತಿ [illegible]
ಎಂಬುವರು [illegible]
ನಲ್ಲಿ ಕಮೀಷನ್ [illegible]
ಮೈಸೂರು [illegible]
ರುವ ಪ್ರಥಮ ಮಹಿಳೆ

ಅಮಲ್ದಾರರ ಘೋರಣೆ

ಹಾಸನದ ಅಮಲ್ದಾರರ ಬಳಿ ಹೋಗಿ ಗೌಣವನ್ನ ಕೈಕೊಟ್ಟರು ನಮಗೆ ಅಕ್ಕಿ ದೊರೆಯುತ್ತಿಲ್ಲ ಕೊಡಿಸಿ ಕೊಡಿ ಎಂದು ಕೇಳಲಾಗಿ, "ಪ್ರಾಣಬಿಡಿ, ನನಗೇನು ಹೇಳುತ್ತೀರಿ" ಎಂದುದಲ್ಲದೆ ನಾನಿತ್ತರ ನನ್ನ ಸಂಸಾರದ ಗತಿ ಏನು ಎಂದುದಕ್ಕೆ, ಅವರೂ ಸಾಯಲಿ ಹೋಗಯ್ಯ, ಎಂದರಂತೆ ಸರ್ಕಾರಿ ಅಧಿಕಾರಿಗಳ ಈ ಘೋರಣೆಯನ್ನು ಕಂಡು ರೈತರು ನೊಂದಿರುವುದಾಗಿ ತಿಳಿದುಬಂದಿದೆ.

ಸಕ್ಕರೆ ತಯಾರಿ ಪತ್ತೆ

ಹಾಸನದ ಸಂತೇಪೇಟೆಯಲ್ಲಿ ಅಜೀಜ್ ಬಾಂಟೆವಾಲ್ ಅಂಗಡಿಯವರು ಹಿಂಭಾಗದ ರಸ್ತೆ ಮನೆಯೊಂದರಲ್ಲಿ, ಬೂರಾ, ಸೋರಿನ್ ಮತ್ತು ಕಲ್ಲುಸಕ್ಕರೆಯನ್ನು ತಯಾರು ಮಾಡುತ್ತಿದ್ದು ಕೆಲವು ದಿನಗಳ ಕೆಳಗೆ ಪೊಲೀಸರಿಗೆ ಸಿಕ್ಕಿಬಿದ್ದಿರುತ್ತಾರೆ. ಇವರ ಮೇಲೆ ಕ್ರಮ ಕೈಗೊಳ್ಳಲಾಗಿದೆ

ಪಠಾಣರ ಕಿರುಕುಳ

ಮಿ|| ಟವಾಲ್ಸ್ ಖಾನ್ ಎಂಬ ಪಠಾಣ ಲೇವಾದೇವಿಗಾರನು ಒಬ್ಬ ಸರ್ಕಾರಿ ನೌಕರನಿಗೆ ಕಿರುಕುಳ ಕೊಟ್ಟನೆಂಬ ಆಪಾದನೆಯ ಮೇಲೆ ನಿನ್ನೆ ಬೆಂಗಳೂರು ಪೊಲೀಸರು ಸಿಟಿ ನ್ಯಾಯಾಧೀಶರ ಬಳಿಗೆ ಕೇಸೊಂದನ್ನು ತಂದಿರುತ್ತಾರೆ.

ಅಲಾಸ್ಕಾದಲ್ಲಿ ಭೂಕಂಪ

ಕಲ್ಕತ್ತಾಕ್ಕೆ ೫ ಸಾವಿರ ಮೈಲಿ ಆಚೆ ಭೂಕಂಪವಾಗಿದೆಯೆಂದು ಕಲ್ಕತ್ತಾ ಭೂಕಂಪಗ್ರಾಹಕ ಯಂತ್ರವು ಸೂಚಿಸಿದೆ. ಭೂಕಂಪವು ಪ್ರಾಯಶಃ ಅಲಾಸ್ಕಾದಲ್ಲಿ ಆಗಿರಬೇಕೆಂದು ನಿರ್ಧರಿಸಲಾಗಿದೆ.

ಕೊಚ್ಚಿಯಲ್ಲಿ ಸುಧಾರಣೆ

ತಮ್ಮ ಸಂಸ್ಥಾನದಲ್ಲಿ ಹೆಚ್ಚಿನ ರಾಜಕೀಯ ಸುಧಾರಣೆಗಳನ್ನು ಕೊಡುವಂತೆ ಹೊಸ ಮಹಾರಾಜರವರನ್ನು ಪ್ರಾರ್ಥಿಸಬೇಕೆಂದು ಕೊಚ್ಚಿ ಸಂಸ್ಥಾನದ ಶಾಸನ ಸಭೆಯ ಮಂತ್ರಿವರ್ಗದ ಗುಂಪಿನವರು ನಿರ್ಣಯಿಸಿದ್ದಾರೆ.

೨ ತಿಂಗಳಲ್ಲಿ ಕ್ಷಾಮ ನೀಗುವುದು

ಭಾರತ ಕೇಂದ್ರ ಸರ್ಕಾರದ ವಿದ್ಯಾಮಂತ್ರಿಗಳಾದ ಸರ್ ಜೋಗೇಂದ್ರಸಿಂಗ್ ರವರು ಮೊನ್ನೆ ಡಕ್ಕಾ ಪ್ರಸಾರನಿಲಯದಿಂದ ಭಾಷಣ ಮಾಡುತ್ತಾ, ಬಂಗಾಳದಲ್ಲಿ ದವಸಧಾನ್ಯಕ್ಕೇನು ಕಮ್ಮಿ ಇಲ್ಲ, ವಿಚಕ್ಷಣೆಯಿಂದ ಉಪಯೋಗವಾಗುತ್ತಿಲ್ಲ ಅಷ್ಟೆ ಇನ್ನೆರಡು ತಿಂಗಳಲ್ಲಿ ಬಂಗಾಳದಲ್ಲಿ ಹೇರಳವಾಗಿ ಅಕ್ಕಿ ಲಭಿಸುತ್ತದೆ. ಈಗ ಒಟ್ಟು ೩ ಕೋಟಿ, ೬೫ ಲಕ್ಷ ಎಕರೆ ಜಮೀನಿನಲ್ಲಿ ಭತ್ತ ಬೆಳೆಯುತ್ತಿರಲಾಗಿದೆ ಎಂದು ಹೇಳಿದ್ದಾರೆ

ಹೊಸ ಕಾರ್ಯದರ್ಶಿ

ಈ ತಿಂಗಳು ಮೂರನೇ ವಾರದ ಹೊತ್ತಿಗೆ ರಜ ಅನುಭವಿಸಿಕೊಂಡು ವಾಪಸ್ಸು ಬರಲಿರುವ ಮಿ|| ಸಫೀ ದಾವೂದರವರನ್ನು ಸರ್ಕಾರಕ್ಕೆ ವಿಶೇಷ ಕಾರ್ಯದರ್ಶಿಗಳನ್ನಾಗಿ ನೇಮಿಸಿಕೊಳ್ಳಬಹುದೆಂದು ವದಂತಿ ಇದೆ. ಈಗ ಸರ್ಕಾರದಲ್ಲಿ ೬ ಕಾರ್ಯದರ್ಶಿಗಳ ಸ್ಥಾನವಿದೆ. ಈಗಿನ ಸಂಧರ್ಭಗಳಲ್ಲಿ ಸರ್ಕಾರದ ಕೆಲಸಕಾರ್ಯಗಳು ಹೆಚ್ಚುವುದರಿಂದ ಇನ್ನೂ ಒಂದು ಕಾರ್ಯದರ್ಶಿಗಳ ಸ್ಥಾನವನ್ನು ಕಲ್ಪಿಸುವ ಯೋಚನೆ ಇದೆಯಂತೆ.

ನಿಮ್ನವರ್ಗದವರ ಅಹವಾಲು

ಸಂಯುಕ್ತ ಪ್ರಾಂತ್ಯದ ಗೌರ್ನರ್ ಬಳಿಗೆ ಆ ಪ್ರಾಂತ್ಯದ ನಿಮ್ನವರ್ಗದ ನಾಯಕರು ನಿಯೋಗ ಬಂದು, ಕಾಂಗ್ರೆಸ್ಸಿನಲ್ಲಿ ತಮ್ಮ ಅಪನಂಬಿಕೆಯನ್ನು ವ್ಯಕ್ತಪಡಿಸಿ, ತಮಗೇ ಪ್ರತ್ಯೇಕ ಚುನಾವಣೆ ನಡೆಸಿ ಆಡಳಿತ ಮಂಡಲಿಗೆ ತಮ್ಮ ಪ್ರತಿನಿಧಿಗಳು ಕೂರಲು ಅವಕಾಶ ಕೊಡಬೇಕೆಂದು ಪ್ರಾರ್ಥಿಸಿ, ಆ ಸುದ್ದಿಯನ್ನು ವೈಸರಾಯರಿಗೆ ತಿಳಿಸಬೇಕೆಂದು ಕೇಳಿಕೊಂಡಿರುವರು.

ಪುಸ್ತಕಗಳ ಬೆಲೆ ಹತೋಟಿ

ಲಾಭ ತಡೆಗಟ್ಟುವ ಕಾನೂನಿನಂತೆ ಪುಸ್ತಕ ವ್ಯಾಪಾರಿಗಳು ಬೆಲೆಯನ್ನು ಇಳಿಸಬೇಕೆಂದು ಕೇಂದ್ರ ಸರ್ಕಾರದ ಸರಬರಾಜು ಅಧಿಕಾರಿಗಳು ವ್ಯಾಪಾರಿಗಳನ್ನು ಎಚ್ಚರಿಸಿದ್ದಾರೆ.

ಸದ್ಗೃಹಸ್ಥರೊಬ್ಬರಿಗೆ

ಮನೆ ಬೇಕಾಗಿದೆ

ಚಾಮರಾಜಪುರಂ, ಕೃಷ್ಣಮೂರ್ತಿಪುರಂಗಳಲ್ಲಿ.

ಬೆಲೆ ರೂ. ೫೦೦೦ ದಿಂದ ೮೦೦೦ ವರೆಗೆ

ಕೊಡಲು ಸಿದ್ಧರಿದ್ದಾರೆ.

ನೋಡಲು ಇಷ್ಟವುಳ್ಳವರು ನಮ್ಮಲ್ಲಿ ದಯಮಾಡಿ.

ಬಿ. ಎಸ್. ಸುಬ್ಬರಾವ್

ಸಿಟಿ ಇಂಜಿನಿಯರಿಂಗ್ ಕೋ., (ಜಗನ್ಮೋಹನ ಬಂಗ್ಲೆ ಎದುರು)

ಮೈಸೂರು.

ಭಾರತಕ್ಕೆ ಕೆನಡಾ ಗೋಧಿ

ಕೆನಡಾವು ಒಂದು ಲಕ್ಷ ಟನ್ ಗೋಧಿ ಭಾರತಕ್ಕೆ ರವಾನಿಸಲು ತಯಾರಾಗಿದೆಯೆಂದು ತಿಳಿದುಬಂದಿದೆ. ಇದಕ್ಕಾಗಿ ವೈಸರಾಯರು ಕೆನಡಾ ಪ್ರಧಾನಿಯನ್ನು ಅಭಿನಂದಿಸಿದ್ದಾರೆ.

ಪುರಸ್ಕಾರ ದೊರೆಯಲಿಲ್ಲ

ಲಾರ್ಡ್ಸ್ ಸಭೆಯಲ್ಲಿ ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡಬೇಕೆಂದು ಸೂಚಿಸುವ ಕಾನೂನೊಂದನ್ನು ಮಿ|| ಸ್ಟಬೊಲ್ಗಿಯವರು ಮಂಡಿಸಲಾಗಿ ಸರ್ಕಾರದವರು ಅದನ್ನು ಒಪ್ಪಲು ಸಾಧ್ಯವಿಲ್ಲವೆಂದು ತಿಳಿಸಿದರು. ಸಭೆಯು ಮಸೂದೆಯನ್ನು ತಳ್ಳಿಹಾಕಿತು.

ಜರ್ಮನಿಗೆ ಹೊಡೆತ

ಜರ್ಮನಿಯ ಪರ್ಸ್ಟರ್ ಮತ್ತು ಗೀಲ್‌ಸೇ ಕ್ರಿಸ್ಟೀ ಮೇಲೆ ಮಿತ್ರವಿಮಾನಗಳು ನಿನ್ನೆ ಬಾಂಬಿನ ಮಳೆ ಸುರಿಸಿ ಹಿಂತಿರುಗಿರುತ್ತವೆ.

ಗೃಹಕೃತ್ಯದ ನೋಟೀಸ್

ನಂಜನಗೂಡು ತಾಲ್ಲೂಕು ಹದಿನಾರು ಗ್ರಾಮದ ಬಸವಲಿಂಗಯ್ಯನ ಮಗ ಚಿಕ್ಕಮಲ್ಲಪ್ಪನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಈ ಕೆಳಗೆ ಷೆಡ್ಯೂಲಿನಲ್ಲಿ ಕಂಡ ನನ್ನ ಬಾಬ್ತು ಸ್ವಯಾರ್ಜಿತವಾದ ಸ್ಥಿರಸ್ವತ್ತುಗಳನ್ನು ನನ್ನ ಮಗ ಮಾದಯ್ಯ ಎಂಬುವನು ತನಗೆ ಯಾವ ಹಕ್ಕು ಇಲ್ಲದಾಗ್ಯೂ ದುರ್ಜನರ ಸಹವಾಸದಿಂದ ಈ ಆಸ್ತಿಪಾಸ್ತಿಗಳನ್ನು ಪರಭಾರೆಮಾಡುವ ತರದೂದಿನಲ್ಲಿ ಇರುವಹಾಗೆ ವದಂತಿ ಇದೆ. ಹಾಗೆ ಯಾರೇ ಆಗಲಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವ ವಿಧವಾದ ಲೇವಾದೇವಿ ಮಾಡಿದರೂ ಷೆಡ್ಯೂಲ್ ಸ್ವತ್ತುಗಳನ್ನು ಬದ್ಧಪಡಿಸುವುದಿಲ್ಲ. ಷೆಡ್ಯೂಲ್ ಸ್ವತ್ತುಗಳಲ್ಲಿ ಆತನಿಗೆ ಯಾವ ವಿಧವಾದ ಹಕ್ಕಾಗಲೀ, ಬಾಧ್ಯತೆಯಾಗಲೀ ಇರುವುದಿಲ್ಲವೆಂಬ ಅಂಶವನ್ನು ಈ ಮೂಲಕ ಖಚಿತವಾಗಿ ತಿಳಿಯಪಡಿಸಿರುತ್ತೇನೆ, ತಿಳಿಯುವುದು. ಷೆಡ್ಯೂಲ್ ಹದಿನಾರು ಗ್ರಾಮದ್ದು. ಪೂರ್ವಕ್ಕೆ ನಂಜುಂಡಯ್ಯನ ಮನೆ, ಪಶ್ಚಿಮಕ್ಕೆ ಗಿರಿಮಲ್ಲಯ್ಯನ ಮನೆ, ಉತ್ತರಕ್ಕೆ ಪ|| ಲಿಂಗಯ್ಯನ ನಿವೇಶನ, ದಕ್ಷಿಣಕ್ಕೆ ರಸ್ತೆ, ಈ ಮಧ್ಯೆ ಇರುವ ಹೆಂಚಿನ ಮನೆ, ಒಂಭತ್ತು ಅಂಕಣ ಇದೇ ಗ್ರಾಮದ್ದು ಸರ್ವೆ 868, 857, 1681/2, 1026 ಈ ಸರ್ವೆ ನಂಬರುಗಳು. ಇವುಗಳು ನನ್ನ ಸ್ವಯಾರ್ಜಿತವಾಗಿರುತ್ತದೆಂತ ಈ ಮೂಲಕ ಎಚ್ಚರಿಸಿದೆ.

○ ಚಿಕ್ಕಮಲ್ಲಪ್ಪನ ರುಜು.

ಸಿಂಧ್‌ನಲ್ಲಿ ಲೂಟಿ

ಸಾಮಾಸಿಂಗ್ ತಾಲ್ಲೂಕಿನ ಸಿಜೆರೋ ಗ್ರಾಮಕ್ಕೆ ೮ ಮಂದಿ ಚೋರರು ನುಗ್ಗಿ ಸಾವಿರಾರು ರೂಪಾಯಿಗಳ ಸಾಮಾನುಗಳನ್ನೂ ಕುದುರೆಗಳನ್ನೂ ಅಪಹರಿಸಿಕೊಂಡು ಪಲಾಯನ ಮಾಡಿರುವರು.

ಜಪಾನರು ತಡೆಯಲಾರರು

ರಾಬೂಲ್‌ನಲ್ಲಿ ಎಷ್ಟೇ ರಕ್ಷಣೆ ಇರಲಿ ಅಮೇರಿಕನ್ನರು ಅದಕ್ಕೆ ಕೊಡುತ್ತಿರುವ ಹೊಡೆತವನ್ನು ನೋಡಿದರೆ ಅಲ್ಲಿರುವ ಜಪಾನೀಯರು ಏಟುಸಹಿಸಿಕೊಂಡಿರಲು ಸಾಧ್ಯವಿಲ್ಲ ಎಂದು ಕ|| ನಾಕ್ಸರು ಹೇಳಿದ್ದಾರೆ.

ಜಪಾನ್ ನೌಕೆಗಳು ನೀರುಪಾಲು

ಗ್ಲಾಸ್ಟರ್ ಭೂಶಿರಕ್ಕೆ ಕೊಂಚ ದೂರದಲ್ಲಿ ಹೋಗುತ್ತಿದ್ದ ಜಪಾನರ ಸರಬರಾಜು ನೌಕೆಗಳನ್ನು ನಿನ್ನೆ ಮಿತ್ರಪಕ್ಷದವರು ಮುಳುಗಿಸಿರುವುದಾಗಿ ವರ್ತಮಾನ ಬಂದಿದೆ.

ವಂದೇಮಾತರಂ

ಕಾಂಗ್ರೆಸ್ಸಿಗೇ ಓಟು ಕೊಡಿ!

ಚುನಾವಣೆ ತಾ|| 8-11-1943

ಈ ಕೆಳಗೆ ಕಂಡವರನ್ನು ಕಾಂಗ್ರೆಸ್‌ನ ಪರವಾಗಿ ಉಮೇದುವಾರರಾಗಿ ನಿಲ್ಲಿಸಲಾಗಿದೆ.

ಚಾಮರಾಜಮೊಹಲ್ಲಾ—ಶ್ರೀಮತಿ ಯಶೋಧರಮ್ಮ ದಾಸಪ್ಪ, ಶ್ರೀಗಳಾದ ಬಿ. ನಾರಾಯಣ ಸ್ವಾಮಿ, ಆಗರಂ ರಂಗಯ್ಯ, ಕೆ. ಎಸ್. ಸತ್ಯನಾರಾಯಣರಾವ್.

ಕೃಷ್ಣರಾಜ—ಶ್ರೀಗಳಾದ ಪಿ. ಸೀತಾರಾಮಯ್ಯ, ಎ. ಎಸ್. ಸೂರ್ಯನಾರಾಯಣರಾವ್, ಎಂ. ಎಸ್. ಜೋಯಿಸ್, ಟಿ. ನರಸಿಂಹಯ್ಯಂಗಾರ್.

ಲಷ್ಕರ್—ಶ್ರೀಗಳಾದ ಕೆ. ಪಿ. ನಂಜಪ್ಪ, ಎಂ. ಆರ್. ಸಿ ಬಸಪ್ಪ, ಜಿ. ಜನಾರ್ಧನಯ್ಯ, ವಿ. ಎಸ್. ದಾಸಪ್ಪ, ಚಂದ್ರಶೇಖರಗೌಡ.

ಮಂಡಿ—ಶ್ರೀಗಳಾದ ಎಂ. ಎಸ್. ನಂಜಪ್ಪ, ಎಂ.ವಿ. ವೆಂಕಟರಾಮಯ್ಯ, ಹೆಚ್. ತಮ್ಮಯ್ಯ, ಟಿ ಮರಿಯಪ್ಪ, ರಂಗಸ್ವಾಮಯ್ಯ,

ಕಿಲ್ಲೆ—ಶ್ರೀ ಎ. ಕೃಷ್ಣಮೂರ್ತಿ.

ಎಚ್. ಸಿ. ದಾಸಪ್ಪ,
ಚುನಾವಣಾ ಸಮಿತಿ ಅಧ್ಯಕ್ಷ

Edited, printed and published by A. R. Nagarajan, at the Sadhvi Press, D.Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೌಂಟರ್ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

WEEKLY EDITION

ಸಂಪುಟ ೮] ಸೋಮವಾರ ೮—೧೧—೪೩ [ಸಂಚಿಕೆ ೩

ಕೀವ್ ನಗರವನ್ನು ರಷ್ಯನರು ಹಿಡಿದರು

ರಾಜಧಾನಿಯಲ್ಲಿ ಪೌರಸಭೆ ಚುನಾವಣೆಯ ಉತ್ಸಾಹ

ಅಕ್ರಮ ಬಂಧನಕ್ಕಾಗಿ ಸಿಂಧ್ ಸರ್ಕಾರದ ಮೇಲೆ ದಾವ

ರಾಜಕೀಯ ಮುಸುಕನ್ನು ಪರಿಹರಿಸಿ

ವೈಸರಾಯರಿಗೆ ಮೋದಿ-ಸರ್ಕಾರ್ ಸಲಹೆ

ಹಿಂದೆ ವೈಸರಾಯರ ಮಂತ್ರಿ ಮಂಡಲದ ಸದಸ್ಯರುಗಳಾಗಿದ್ದ ಶ್ರೀ ಹೆಚ್. ಪಿ. ಮೋದಿ ಮತ್ತು ಶ್ರೀ ನಳಿನಿರಂಜನಸರ್ಕಾರರವರು ಒಂದು ಹೇಳಿಕೆಯನ್ನು ಹೊರಡಿಸಿ, ಭಾರತ ನೂತನ ವೈಸರಾಯ್‌ರವರಾದ ವೇವೆಲ್‌ರವರು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ಆರಂಭಿಸುವರೆಂದು ತಿಳಿಸಿದ್ದಾರೆ. ಆಹಾರ ಸಮಸ್ಯೆಯನ್ನು ಬಿಡಿಸಲು ವೈಸರಾಯರು ಮಾಡುವ ಪ್ರಯತ್ನವು ಎಲ್ಲರ ಗಮನವನ್ನೂ ಆಕರ್ಷಿಸಿದೆ. ಇಂತಹವರಿಂದ ಭಾರತ ಸಮಸ್ಯೆಯು ಕೂಡಲೆ ಬಗೆಹರಿಯಬೇಕೆಂದು ನಾವು ಬಯಸುವುದು ಸಹಜವೇ ಆಗಿದೆ. ರಾಜಕೀಯ ಅಂಧಕಾರದಲ್ಲಿ ತೊಳಲುತ್ತಾ ಹಿಂದೂಸ್ಥಾನವು ಎಷ್ಟುಕಾಲ ಕೊಳೆಯುತ್ತಿರಬೇಕು. ಬಿಕ್ಕಟ್ಟಿನ ಪರಿಹಾರಕ್ಕೆ ಅನುಸರಿಸುವ ಎಲ್ಲಾ ಮಾರ್ಗಗಳಿಗಿಂತಲೂ ಕಾಂಗ್ರೆಸ್ ಮುಖಂಡರುಗಳ ಬಿಡುಗಡೆಯು ಅತ್ಯಂತ ಮುಖ್ಯವಾದದ್ದು. ಇದನ್ನು ಮಾಡಿದನಂತರ ವೈಸರಾಯರು ಕ್ರಿಪ್ಸ್ ಸಲಹೆಗಳ ಆಧಾರದ ಮೇಲೆ ಒಂದು ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸುವುದಾಗಿ ಬಹಿರಂಗವಾಗಿ ತಿಳಿಸಬೇಕು. ಸುಮ್ಮನೆ ಕೂತಿರಲು ಇದು ಕಾಲವಲ್ಲ. ಸಮಯ ಸಮಸ್ಯೆಯು ಸಂದಿಗ್ಧವಾಗಿಲ್ಲ. ಯುದ್ಧಾನಂತರವೇ ಭಾರತ ಬಿಕ್ಕಟ್ಟಿನ ಪರಿಹಾರದ ವಿಷಯವನ್ನು ಪರಿಶೀಲಿಸುವುದಾಗಿ ಹೇಳುವುದು ಅಕ್ಷಮ್ಯವಾದ ಮೂರ್ಖತನ ಎಂದು ಅವರು ತಿಳಿಸಿದರು.

ವೈಸರಾಯರಿಗೆ ಔತಣ ಬೇಕಿಲ್ಲ

ಸರ್ ಕವಾಸ್ಜಿ ಜಹಂಗೀರ್‌ರವರು ವೈಸರಾಯರನ್ನು ಗೌರವಿಸುವ ಸಲುವಾಗಿ ಒಂದು ಔತಣವನ್ನೇರ್ಪಡಿಸಿ ಅವರಿಗೆ ಆಹ್ವಾನ ಕಳುಹಿಸಿದರು. ದೇಶದಲ್ಲಿ ಆಹಾರ ಪರಿಸ್ಥಿತಿ ಹದಗೆಟ್ಟಿರುವ ಇಂಥ ಸಂದರ್ಭಗಳಲ್ಲಿ ಔತಣಗಳಲ್ಲಿ ಭಾಗಿಯಾಗಲು ತಾವು ಇಷ್ಟಪಡುವುದಿಲ್ಲವೆಂದು ವೈಸರಾಯರು ಉತ್ತರ ಬರೆದಿದ್ದಾರೆ.

ಚೀಣಪಟ್ಟಣಗಳು ಜಪಾನರ ವಶ

ಮಧ್ಯ ಚೀಣಾದ ಮುಖ್ಯವಾದ ೨ ಪಟ್ಟಣಗಳನ್ನು ಜಪಾನೀಯರು ಹಿಡಿದಿರುವ ಸಂಗತಿಯನ್ನು ಚೀಣೀಯರೇ ಒಪ್ಪಿಕೊಂಡಿದ್ದಾರೆ

ಮಿತ್ರ ವಿಮಾನ ಚಟುವಟಿಕೆ

ಅಮೆರಿಕನ್ ವಿಮಾನಗಳು ಗ್ರೀಸ್‌ನಲ್ಲಿ ವಿಮಾನ ನಿಲ್ದಾಣಗಳ ಮೇಲೆಯೂ, ಯುಗೋಸ್ಲಾವಿಯದ ಜಾರಾ ನಗರದ ಮೇಲೆಯೂ ಮತ್ತು ಈಜಿಯನ್ ಸಮುದ್ರದಲ್ಲಿ ಶತ್ರು ದ್ವೀಪಗಳ ವಿಮಾನ ನಿಲ್ದಾಣಗಳ ಮೇಲೂ ಧಾಳಿ ಮಾಡಿದವು

ದಿಲ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ಸಭೆ

ನಿನ್ನೆ ದಿಲ್ಲಿಯಲ್ಲಿ ಕೇಂದ್ರ ಶಾಸನ ಸಭಾ ಕಾಂಗ್ರೆಸ್ ಪಕ್ಷದವರು ಸಭೆ ಸೇರಿ ಶಾಸನ ಸಭಾ ಕಾರ್ಯ ಕಲಾಪಗಳಲ್ಲಿ ಭಾಗ ವಹಿಸಬೇಕೇ, ಕೂಡದೇ ಎಂಬುದನ್ನು ಚರ್ಚಿಸಿದರು. ಹೆಚ್ಚಿನ ವಿವರಗಳು ಇನ್ನೂ ತಿಳಿದುಬಂದಿಲ್ಲ

ಚುನಾವಣೆಯ ಉತ್ಸಾಹ

ರಾಜಧಾನಿಯ ವಿವಿಧ ಮೊಹಲ್ಲಾಗಳಲ್ಲಿ ಚುನಾವಣೆಯ ಕಾರ್ಯಕ್ರಮಗಳು ಈ ದಿನ ಬಹಳ ಉತ್ಸಾಹದಿಂದ ನಡೆದವು. ರಾಷ್ಟ್ರೀಯ ಧ್ವಜವನ್ನು ಹಿಡಿದುಕೊಂಡು ಸಣ್ಣ ಬಾಲಕರು ಜಯಕಾರಗಳನ್ನು ಹಾಕುತ್ತಾ ಕಾಂಗ್ರೆಸ್ಸಿಗೆ ಓಟುಗಳನ್ನು ಬೇಡುತ್ತಾ ಗುಂಪುಗುಂಪಾಗಿ ಎಲ್ಲಾ ಬೀದಿಗಳಲ್ಲೂ ಸುತ್ತುತ್ತಿದ್ದರು. ಸೈಕಲ್‌ಗಳ ಮೇಲೆ ಸ್ವಯಂ ಸೇವಕರುಗಳು ತಂಡ ತಂಡವಾಗಿ ಹೊರಟು, ಓಟರುಗಳನ್ನು ಆಹ್ವಾನಿಸುತ್ತಿದ್ದರು. ಚುನಾವಣಾ ಕೇಂದ್ರಗಳಲ್ಲಿಯೂ ಸಹ ಸ್ವಯಂ ಸೇವಕರುಗಳು ಕಾಂಗ್ರೆಸ್ಸಿಗಾಗಿ ಓಟು ಕೊಡುವಂತೆ ಪ್ರಾರ್ಥಿಸುತ್ತಿದ್ದರು. ಸ್ವತಂತ್ರ ಉಮೇದುವಾರರುಗಳೂ ಆವರಣದ ಸಮೀಪದಲ್ಲಿಯೂ ಸಹ ತಮ್ಮ ಶಕ್ತ್ಯನುಸಾರ ಕೆಲಸ ಮಾಡುತ್ತಿದ್ದರು. ಎಲ್ಲ ಕಡೆಯಲ್ಲಿಯೂ ಶಾಂತವಾಗಿ ಚುನಾವಣೆ ಕೆಲಸವು ನಡೆಯುತ್ತಿದೆ

ರೇಷನಿಂಗ್ ಬಗ್ಗೆ ಬಹಿರಂಗ ಸಭೆ

ರಾಜಧಾನಿಯಲ್ಲಿ ರೇಷನಿಂಗ್ ಸಿಸ್ಟಮ್ ತೆಗೆದುಕೊಳ್ಳುವ ಬಗ್ಗೆ ೯ ನೇ ತಾ|| ಮಂಗಳವಾರ ಸಂಜೆ ೭ ಗಂಟೆಗೆ ಟೌನ್‌ಹಾಲಿನಲ್ಲಿ ಬಹಿರಂಗ ಸಭೆ ನಡೆಯುವುದು. ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬಂಥೊರೆಯವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಇಟಲಿ ದೊರೆಗಳ ವಿರುದ್ಧ ಪ್ರದರ್ಶನ

ಸಾವಿರಾರು ಜನ ಇಟಲಿಯ ವಿದ್ಯಾರ್ಥಿಗಳು ನೇಪಲ್ಸ್ ವಿಶ್ವವಿದ್ಯಾಲಯದ ರಂಗದಲ್ಲಿ ಸೇರಿ ನೋಟಲಿನ ಇಟಲಿಯ ಸ್ವತಂತ್ರ ಮಹಾ ಸಭೆ ಜರುಗಿಸಿದರು. ದೊರೆಯನ್ನು ಉರುಳಿಸಬೇಕು ಎಂಬುದಾಗಿ ಘೋಷಣೆಗಳಾದುವು.

ಜಪಾನೀ ಕ್ರೂಯಿಸರ್ ಮುಳುಗಿತು.

ನಿನ್ನೆ ಶಾಂತಸಾಗರದಲ್ಲಿ ಶೆಟ್ಲಾಂಡ್ ದ್ವೀಪದ ಬಳಿ ಜಪಾನಿ ಕ್ರೂಯಿಸರ್ ಹಡಗುಗಳನ್ನು ಮಿತ್ರ ಪಕ್ಷದ ವಿಮಾನಗಳು [illegible] ಮುಳುಗಿಸಿದುದಾಗಿ [illegible] ಮಿತ್ರ ಯುದ್ಧ ಕಛೇರಿಯಿಂದ ಪ್ರಕಟವಾಗಿದೆ.

ರಷ್ಯನರ ಅದ್ಭುತ ಜಯ

ಉಕ್ರೇನ್ ಪ್ರಾಂತ್ಯದ ರಾಜಧಾನಿಯಾದ ಕೀವ್ ನಗರವನ್ನು ನೆನ್ನೆ ರಷ್ಯನರು ಆಕ್ರಮಿಸಿಕೊಂಡರೆಂದು ಮಾಸ್ಕೋದಿಂದ ಹೊರಟ ಅಧಿಕಾರ ಪ್ರಕಟಣೆ ತಿಳಿಸುತ್ತದೆ. ಕೀವ್ ನಗರವನ್ನು ಶತ್ರು ಖಾಲಿ ಮಾಡಿದುದಾಗಿ ಜರ್ಮನರೂ ಒಪ್ಪಿಕೊಂಡಿದ್ದಾರೆ. ಈ ಪಟ್ಟಣವನ್ನು ೧೯೪೧ ನೇ ಸೆಪ್ಟಂಬರ್ ೨೧ ರಲ್ಲಿ ಜರ್ಮನರು ಹಿಡಿದು ಇದುವರೆಗೆ ಉಳಿಸಿಕೊಂಡಿದ್ದರು. ರಷ್ಯದ ದೊಡ್ಡ ಪಟ್ಟಣಗಳ ಪೈಕಿ ಇದು ಮೂರನೆಯದು. ಇಲ್ಲಿ ಅನೇಕ ರೈಲ್ವೆ ಮಾರ್ಗಗಳು ಸಂಧಿಸುವುವು. ಇದನ್ನು ವಶಪಡಿಸಿಕೊಂಡಿದ್ದರಿಂದ ರಷ್ಯನರಿಗೆ ಬಹುಮಟ್ಟಿನ ಅನುಕೂಲತೆ ದೊರೆತಂತಾಗಿದೆ.

ಸ್ಟಾಲಿನ್‌ರಿಗೆ ಗೌರವ

ರಷ್ಯದ ರಾಜ್ಯಾಂಗ ಸಮಿತಿಯವರು, ರಷ್ಯಾ ಕೆಂಪು ಸೈನ್ಯವು ಯುದ್ಧದಲ್ಲಿ ಯಶಸ್ವಿಯಾಗಲು ಸೂಚನೆಗಳನ್ನು ಕೊಟ್ಟ ನಾಯಕ ಸ್ಟಾಲಿನ್‌ರಿಗೆ ವಿಶೇಷ ಬಿರುದುಗಳನ್ನು ಕೊಟ್ಟು ಸನ್ಮಾನಮಾಡಿದ್ದಾರೆ

ಭಾರತೀಯ ಯುದ್ಧ ಖೈದಿಗಳು.

ಇಟಲಿಯಲ್ಲಿದ್ದ ಬ್ರಿಟಿಷ್ ಮತ್ತು ಭಾರತೀಯ ಯುದ್ಧ ಖೈದಿಗಳಲ್ಲಿ ಬಹು ಮಂದಿಯನ್ನು ಜರ್ಮನಿಗೆ ಸಾಗಿಸಿದುದಾಗಿ ಗೊತ್ತಾಗಿದೆ

ಮಿತ್ರ ರಾಷ್ಟ್ರಗಳ ಕರ್ತವ್ಯ

ಯುದ್ಧದ ಪರಿಸ್ಥಿತಿಯನ್ನು ವಿಮರ್ಶಿಸುತ್ತಾ ಮಾರ್ಷಲ್ ಸ್ಟಾಲಿನ್‌ರು ಒಂದು ಹೇಳಿಕೆಯಲ್ಲಿ ಹೀಗೆ ರಷ್ಯವು ಜರ್ಮನಿಗೆ ಕ್ರಮಕ್ರಮವಾಗಿ ಪ್ರತಿಭಟನೆಯನ್ನು ತೋರಿಸುತ್ತಿದೆಯೆಂದು ವಿವರಿಸಿದ್ದಾರೆ. ದ್ವಿತೀಯ ರಣರಂಗವನ್ನು ಇನ್ನೂ ತೆರೆಯಲಿಲ್ಲವೆಂದು ಹೇಳುತ್ತಾರೆ. ಯೂರೋಪ್ [illegible] ಬಂಧವಿಮುಕ್ತ [illegible] ಆಕ್ರಮಣಕ್ಕೀಗ ಕಾತ್ರಗಳಂತೆ [illegible] ಮಿತ್ರ ರಾಷ್ಟ್ರಗಳ ಮುಂದಿರುವ ಕೆಲಸವೆಂದು ಅವರು ಹೇಳುತ್ತಾರೆ.

ಇನ್ನೊಂದು ಬಳ್ಳಾರಿಯಲ್ಲಿ

ಬಳ್ಳಾರಿ ಪೌರ ಸಭೆಯವರು [illegible] ಸಂಸ್ಥಾನದ ಮಂತ್ರಿಗಳಾದ [illegible] ಹಮದ್ ಇವರಿಗೆ [illegible] ನ್ನು ಅರ್ಪಿಸಿದರು. [illegible] ಪತ್ರಕ್ಕೆ ಉತ್ತರಕೊಡುತ್ತಾ, [illegible] ಸಂಸ್ಥೆಗಳ ಆಡಳಿತದಲ್ಲಿ [illegible] ಲಿ, ಮತಗಳಾಗಲೀ [illegible] ಬಳ್ಳಾರಿ ಪೌರ ಸಭೆಯು ಯಾವ ತೊಂದರೆಯಿಲ್ಲದ ತುಂಬಾ ಯಶಸ್ವಿಯಾಗಿ ಆಡಳಿತ ನಡೆಸಿಕೊಂಡ. ಹೋಗಲ್ಲಿ [illegible] ಘನೀಯವಾದ ವಿಚಾರ. ಬಳ್ಳಾರಿ ಪ್ರಾಂತ್ಯದ ಆಹಾರ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ತುಂಗಭದ್ರಾ ನದಿಗೆ ಅಣೆಕಟ್ಟು ಕಟ್ಟಿ ನೀರು ಒದಗಿಸಿಕೊಂಡು ಬೆಳೆಬೆಳೆಸಬೇಕು. [illegible] ಸಾಗರ ಕಟ್ಟೆಯಿಂದ ಫಲಪಡೆಯುತ್ತಿರುವುದೇ ಇದಕ್ಕೆ ಉದಾಹರಣೆ. ಮುಂದಾಲೋಚನೆಯ ನಂಟರ್ಸ್ಟು ಅಣೆಕಟ್ಟಿನ ಬಹುಸಹಕಾರಿಯಾಗಿದೆ. ಶೀಘ್ರದಲ್ಲೇ ತುಂಗಭದ್ರ ಅಣೆಕಟ್ಟು ಕಟ್ಟಲ್ಪಟ್ಟು ಬಳ್ಳಾರಿ ಪ್ರಾಂತ್ಯದವರಿಗೆ ಬಹಳ ಪಟ್ಟಿನ ಉಪಯೋಗವಾಗುವುದೆಂದು ನಾನು ಭಾವಿಸಿದ್ದೇನೆ ಎಂದು ಹೇಳಿದರು

ಸಾಧುವಿಗೆ ಪ್ರಸಾದ

ಬಂಗಾಳ ಶೇರ್‌ಪುರದ ಬಸ್ ಸ್ಟಾಂಡಿನ ಹತ್ತಿರ ಬಹಳ ಆದರಣೀಯರಾದ ಒಬ್ಬ ಸಾಧು ಹೊಟ್ಟೆಗಿಲ್ಲದ ಜನರಿಗೆ ಪ್ರಸಾದ ಹಂಚುವಾಗ ಅವರನ್ನು ಕೊಂದ [illegible] ಬೀದಿ ಕೋಪ [illegible] ಸುತ್ತಿದ್ದಾಗ ಕೆಲವು ಪುಂಡರು [illegible] ಅವರನ್ನು, ಅವರ ಶಿಷ್ಯರನ್ನು [illegible] ಹೊಡೆದರು. ಸಾಧುವಿನ ಸ್ಥಿತಿ ಚಿಂತಾಜನಕವಾಗಿದೆ.

ಹೆಣ ಸುಡಲು ಸೌದೆಯಿಲ್ಲ

ಬಂಗಾಳದ ಚಾಂದ್‌ಪುರದಲ್ಲಿ ಸೌದೆ ಸಿಗದಿಲ್ಲದವರ ಮರಣ ಸಂಖ್ಯೆಯು ಹೆಚ್ಚುತ್ತಿದೆ. ಅಕ್ಟೋಬರ್ [illegible] [illegible] ಹೆಣಗಳು [illegible] [illegible] ಹೆಣಗಳಲ್ಲಿ ಹಿಂದೂಗಳ [illegible] ಸುಡಲು ಹಣ ಮತ್ತು ಸೌದೆ [illegible] ದ ಸಾಧ್ಯವಾಗಲಿಲ್ಲವೆಂದು ಹೇಳಲಾಗಿದೆ. [illegible] [illegible] ಹೆಣಗಳನ್ನು ನದಿ ಮತ್ತು [illegible] ಗಳಿಗೂ ಎಸೆಯಲಾಗುತ್ತಿದೆ.

ಫಜಲುಲ್ ಹಕ್‌ರ ಪ್ರಚಾರ

ಬಂಗಾಳದ [illegible] ಗಳನ್ನು [illegible] [illegible] ಮಂತ್ರಿಗಳಾದ [illegible] [illegible] [illegible] ಬಲಾತ್ಕಾರದಿಂದ [illegible] [illegible] [illegible] ಯತ್ನಿಸಿದರು [illegible]

[illegible]
[illegible]
[illegible]
ತಿಳಿಸಿದ್ದಾರೆ

ವೈಸರಾಯ್ - ಗೌರ್ನರ್‌ಗಳ ಭೇಟಿಯ ಮಹತ್ವ

ನವೆಂಬರ್ ೨೦ ನೇ ತಾ॥ ವೈಸರಾಯರು ಗೌರ್ನರುಗಳೂ ಕೂಡಿ ನಡೆಸುವ ಸಭೆಯಲ್ಲಿ ಆಹಾರ ಸಮಸ್ಯೆ ಚರ್ಚೆ ನಡೆಯುವುದೆಂದು ಮಾತ್ರ ಅಧಿಕಾರಿ ಪ್ರಕಟಣೆ ಹೊರಟಿದೆ ವಾದಾಗ್ಯೂ, ರಾಜಕೀಯ ಅ ಭಿಪ್ರಾಯ ಭಿನ್ನತೆಗಳನ್ನು ತಾತ್ಕಾಲಿಕ ಸಮಸ್ಯೆಗಳನ್ನು ಪರಿಶೀಲಿಸುವ ಮಾತುಕತೆ ನಡೆಯ ಬಹುದೆಂದು ಹಲವು ರಾಜಕೀಯ ಪಂಡಿತರು ಊಹಿಸುತ್ತಿದ್ದಾರೆ. ಈ ರೀತಿ ಗೌರ್ನರುಗಳೂ ವೈಸರಾಯರೂ ಸಮಾಲೋಚನೆ ನಡೆಸುವುದು ಬ್ರಿಟಿಷರ ಆಡಳಿತ ಕಾಲದಲ್ಲಿ ಮೊದಲನೇ ಬಾರಿ. ಜಪಾನಿನ ಹೊಡೆತದ ಭಯ ಎರಡು ವರ್ಷಗಳಿಂದ ಸಾಮ್ರಾಜ್ಯಕ್ಕೆ ಬಂದಿರುವ ಈ ಭಾರತದ ಪರಿಸ್ಥಿತಿ ಹೀಗಾಗಬೇಕಾದರೆ ಅಗತ್ಯವನ್ನು ಇವಾರೂ ಹೇಳಲಾರರು. ಆದ್ದರಿಂದ ಅದರ ಬಗ್ಗೆ ಸಮಾಲೋಚನೆಯ ಇಲ್ಲದೆ ಹೋಗುವುದಿಲ್ಲ. ವೈಸರಾಯರು ಭಾರತ ವಾತಾವರಣವನ್ನು ಶುದ್ಧ ಮಾಡುವ ಪಕ್ಷದಲ್ಲಿ ಮಾರ್ಮೂಲಾದ ಅಧಿಕಾರಿ ಮನೋವೃತ್ತಿಯ ಮಟ್ಟದಿಂದ ಮೇಲಕ್ಕೇರಿ ಸಂಕುಚಿತ ಮನೋಭಾವವನ್ನು ಸಂಪೂರ್ಣವಾಗಿ ತ್ಯಜಿಸಿ ಅಂತರ್ರಾಷ್ಟ್ರೀಯ ದೃಷ್ಟಿಯಿಂದ ಭಾರತ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿದರೆ ಆಗ ಭಾರತ ಸಮಸ್ಯೆ ಪರಿಹಾರವಾಗುವುದೆಂದು ಹಲವು ರಾಜಕೀಯ ಪಟುಗಳ ಅಭಿಪ್ರಾಯ.

ಹೆಂಡತಿಯರಿಗೆ ಸೋತ ಗಂಡಂದಿರು

ಕೇಂದ್ರ ಶಾಸನ ಸಭೆ ಮುಂದೆ ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನ ಸಿಗಬೇಕೆಂಬ ಬಿಲ್ಲು ಬಂದಿತು. ಆಯೋಧ್ಯಾನಗರದ ಪುರವರು ಶಾಸ್ತ್ರಿಗಳು ಅದನ್ನು ಪ್ರತಿಭಟಿಸಲು ಸಭೆ ಮಾಡಿ ಉಪವಾಸ ಕೈಗೊಳ್ಳಬೇಕೆಂದು ಹೊರಟರು. ಆದರೆ ಹೆಂಡತಿಯರು ತಮ್ಮ ಗಂಡಂದಿರ ಮೂರ್ಖತನವನ್ನು ಪ್ರತಿಭಟಿಸಲು ಉಪವಾಸ ಮಾಡ ಪ್ರಾರಂಭಿಸಿದರು. ಕಡೆಗೆ ಶಾಸ್ತ್ರಿಗಳು ಶಾಸನದ ಪರವಾಗಿ ಚಳುವಳಿ ಹೂಡುವುದಾಗಿ ಪತ್ನಿಗಳಿಗೆ ವಚನವಿತ್ತರು.

ಸಮರ ವಾರ್ತೆ

ಇಟಲಿ

ಇಟಲಿಯಲ್ಲಿನ ವೆನಸ್ರೊ ಎಂಬುದನ್ನು ತ್ಯಜಿಸಿರುವುದಾಗಿ ಜರ್ಮನರೇ ಒಪ್ಪಿಕೊಂಡಿದ್ದಾರೆ. ಗ್ಯಾರಿಬಿಯಾನಿ ನದಿಯ ಉತ್ತರ ದಡ ಇನ್ನೂ ಜರ್ಮನರ ವಶದಲ್ಲೇ ಇದೆ. ಬ್ರಿಟಿಷ್ ೮ ನೇ ಸೇನೆ ಎಡ್ರಿಯಾಟಿಕ್ ಸಮುದ್ರತೀರದ ಸ್ಯಾನ್ ಸಾಲ್ವೆಸೋವನ್ನು ಹಿಡಿದು ಮುಂದೆ ಸಾಗಿದೆ ಅಲ್ಲದೆ ಬಾಸ್ಸಿಯ ದಕ್ಷಿಣಕ್ಕಿರುವ ಮತ್ತೊಂದು ಸ್ಥಾನವನ್ನೂ ಹಿಡಿದಿವೆ. ಅಮೇರಿಕಾ ಪಡೆಗಳು ವಾಲ್ಟರ್ನೊ ಮೇಲ್ಭಾಗದ ಕಣಿವೆಯನು ಸಂಪೂರ್ಣವಾಗಿ ತನ್ನ ಕೈವಶಮಾಡಿಕೊಂಡಿದೆ. ಅಮೆರಿಕ ವೈಮಾನಿಕರು ರೋಂ ನಗರಕ್ಕೆ ಉತ್ತರದಲ್ಲಿ ಪ್ರಬಲ ಧಾಳಿ ನಡೆಸುತ್ತಿರುವರ

ರಷ್ಯಾ

ಮಧ್ಯ ನೀಪರ್ ಪ್ರದೇಶದಲ್ಲಿದ್ದ ಶತ್ರುಗಳ ೩ ಪ್ರಬಲ ವ್ಯೂಹಗಳನ್ನು ಭೇದಿಸಿಕೊಂಡ ರಷ್ಯನರು ಮುನ್ನುಗ್ಗಿದ್ದಾರೆ. ಅಲ್ಲದೆ ಉಕ್ರೇನಿನ ರಾಜಧಾನಿ ಕೀವ್ ನಗರವನ್ನು ೩ ದಿಕ್ಕುಗಳಿಂದಲೂ ಮುತ್ತಿದ್ದಾರೆ. ನ ಲ್ಯಾನೇ ದಿಕ್ಕಿನಲ್ಲಿ ನದಿ ಇದೆ. ಇಲ್ಲಿನ ನದಿಯ ಅಡ್ಡ ಪಥವನ್ನು ಬಂದುಮಾಡಿದ್ದಾರೆ. ಪಶ್ಚಿಮಕ್ಕೆ ೨೫ ಮೈಲಿ ದೂರದಲ್ಲಿರುವ ವೈಸಾರ್ ಎಂಬ ಊರನ್ನು ಜರ್ಮನರು ಕಳೆದುಕೊಳ್ಳಲಾಯಿತು. ಕೀವ್ ನಗರಕ್ಕಿದ್ದ ರೈಲುಮಾರ್ಗಗಳನ್ನು ಕತ್ತರಿಸಿಹಾಕಲಾಗಿದೆ. ರಷ್ಯನರು ಕೀವ್ ನಗರದ ಹೊರವಲಯವನ್ನು ಪ್ರವೇಶಿಸಿರುವರು. ಕಪ್ಪು ಸಮುದ್ರ ತೀರದಲ್ಲಿನ ಒಡೆಸ್ಸ ಬಂದರಿಗೆ ಕೇವಲ ೪೦ ಮೈಲಿ ಸಮೀಪಕ್ಕೆ ರಷ್ಯಾ ಸೇನೆ ಬಂದಿದೆ

ಜರ್ಮನರ ಪಾಡು

ಪಿಸ್ತ್ರ ಬಂದರನ್ನು ಜರ್ಮನರು ಬಿಟ್ಟುಕೊಟ್ಟು ಓಡಬೇಕಾದ ಪರಿಸ್ಥಿತಿ ಒದಗಿದೆಯೆಂದು ಸಮಾಚಾರಬಂದಿದೆ

ಜನಯ ಅಂಡ್ ಕಂಪೆನಿ

ಸ್ಟಾಕ್ ಮತ್ತು ಷೇರ್ ಬ್ರೋಕರ್ಸ್,

ವೈ ಸೂರು ಬ್ಯಾಂಕ್ ಬಿಲ್ಡಿಂಗ್ಸ್,

ನರ್ಸಿಂಹರಾಜ ರೋಡ್, ಮೈಸೂರು.

ಭಾರತಕ್ಕೆ ೧ ಲಕ್ಷ ಟನ್ ಗೋಧಿ

೧ ಲಕ್ಷ ಟನ್ ಗೋಧಿಯನ್ನು ಭಾರತಕ್ಕೆ ಒದಗಿಸಲು ತಾವು ತಯಾರಾಗಿರುವುದಾಗಿ ಕೆನಡಾ ಸರ್ಕಾರವು ಭಾರತಕ್ಕೆ ತಿಳಿಸಿದೆ ಭಾರತ ವೈಸರಾಯರು ತಾವು ತುಂಬಾ ಸಂತೋಷದಿಂದ ಕೆನಡಾ ನೆರವನ್ನು ಸ್ವೀಕರಿಸುವುದಾಗಿ ಕೆನಡಾ ಅಧಿಕಾರಿಗಳಿಗೆ ತಂತಿ ಕಳಿಸಿದ್ದಾರೆ.

ಲೀಗ್ ಮುಖಂಡರ ದಸ್ತಗಿರಿ

ಸಿಂಧ್‌ನ ಮುಸ್ಲಿಂ ಲೀಗ್ ಮುಖಂಡರೊಬ್ಬರಾದ ಪೀರ್ ಅಲ್ಲಾ ದಿನ್ ಶಾಹರವರನ್ನು ಸಿಂಧ್ ಗವರ್ನರು ಶಾಸನ ರೀತ್ಯಾ ಬಂಧಿಸಲಾಯಿತೆಂದೂ, ಅನಂತರ ಬೇಲ್ ಮೇಲೆ ಬಿಡಲಾಯಿತೆಂದೂ ಕರಾಚಿಯಿಂದ ಸುದ್ದಿ ಬಂದಿದೆ

ಸ್ವೀಡನ್ನಿನ ಪಾತ್ರವಿಲ್ಲವಂತೆ

ಫಿನ್‌ಲೆಂಡ್ ಮತ್ತು ಮಿತ್ರರಾಷ್ಟ್ರಗಳವರ ಶಾಂತಿಸಂಧಾನ ಪ್ರಯತ್ನಗಳಲ್ಲಿ ತಾವು ಯಾವ ವಿಧದಲ್ಲೂ ಭಾಗವಹಿಸುವುದಿಲ್ಲವೆಂದು ಸ್ವೀಡ್ ವಿದೇಶಾಂಗ ಮಂತ್ರಿಗಳ ಕಛೇರಿಯಿಂದ ಪ್ರಕಟವಾಗಿದೆ

ಮುಸೋಲಿನಿ ಅಳಿಯನ ಖುಲಾಸೆ?

ಮುಸೋಲಿನಿಯನ್ನು ವಿರೋಧಿಸಿ ಬಂಧಕ್ಕೊಳಗಾಗಿದ್ದ ಮುಸೋಲಿನಿ ಅಳಿಯ ಕೌಂಟ್ ಸಿಯಾನೋ ವೆನ್ನಿಸ್‌ನಲ್ಲಿ ಓಡುತ್ತಿದ್ದನೆಂದು ವರದಿಯಾಗಿದೆ.

ಫಿನ್‌ಲೆಂಡಿನ ಶಾಂತಿಸಂಧಾನ ಸುಳ್ಳು

ಫಿನ್‌ಲೆಂಡ್ ದೇಶವು ಶಾಂತಿ ಸಂಧಾನಕ್ಕಾಗಿ ಪ್ರಯತ್ನಿಸುತ್ತಿದೆಯೆಂಬ ವಾರ್ತೆಗೆ ಆಧಾರವಿಲ್ಲವೆಂದು ಡಾ॥ ಜುನೊಪಾಸ್ಕಿರವರು ತಿಳಿಸಿದ್ದಾರೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಪ್ರಭಾವಶಾಲಿ ಜೀವನಿ ಔಷಧ

ಗರ್ಭಾಶಯಕ್ಕೆ ಶಕ್ತಿ ವರ್ಧಕ.

ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಋತು ದೋಷಕ್ಕೆ ಗಂಡೌಷಧ.

ಋತು ಕಾಲದಲ್ಲಿ ಅಥವಾ ಅದೇಲ್ಲ ತೋರುವ ಅಧಿಕ ರಕ್ತಸ್ರಾವ, ಬಿಳ ಪು ಹೋಗುವುದು, ಅಕ್ರಮ ಋತುಸ್ರಾವ ಮುಂತಾದುವುಗಳನ್ನು "ಜೀವನಿ" ಜಾಗ್ರತೆ ಪರಿಹರಿಸುತ್ತದೆ.

ಅತ್ಯುತ್ತಮ ಉಷ್ಣ ಶಾಮಕ.

ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೂ 'ಜೀವನಿ' ಪ್ರಶಸ್ತವಾದುದು.

ರಕ್ತ ಹೀನತೆ, ನರಗಳ ದೌರ್ಬಲ್ಯ, ಬೆನ್ನುನೋವು, ಸೊಂಟನೋವು, ಗರ್ಭಸ್ರಾವ, ಬಂಜೆತನಗಳಿಗೆ "ಜೀವನಿ" ಅತ್ಯಂತ ಯುಕ್ತವಾದುದು

ಈರ್ಜರು ಇರಾಕಿನಲ್ಲಿ

ಮಾಸ್ಕೋದಿಂದ ವಾಪಸ್ಸಾಗುತ್ತಾ ಮಾರ್ಗದಲ್ಲಿ ಈರ್ಜರು ಹಬ್ಬಾನಿಯದಲ್ಲಿಳಿದು ಇರಾಕಿನ ಪ್ರಧಾನಿ ಜನರಲ್ ಸೈಯದ್ ನೂರಿಯವರನ್ನು ಕಂಡು ಮಾತನಾಡಿದರೆಂದು ಗೊತ್ತಾಗಿದೆ.

ಹೆಚ್ಚು ಪಾಲಿಷ್‌ಗೆ ಶಿಕ್ಷೆ

ಸರ್ಕಾರದವರು ಹೆಚ್ಚುಪಾಲಿಷ್ ಕೂಡದೆಂದು ಹೊರಡಿಸಿರುವ ಆಜ್ಞೆಯನ್ನು ಉಲ್ಲಂಘಿಸಿದರೆಂದು ಪಾಲಘಾಟ್ ತಾಲ್ಲೂಕಿನ ಎರಡು ಅಕ್ಕಿಮಿಲ್‌ಗಳನ್ನು ಮುಚ್ಚಿಸಿಬಿಟ್ಟಿದ್ದಾರೆ.

ಹೋಟೆಲ್ ಮಾಣಿಗೆ ೪೫ ತುಂಬಿರಬೇಕು

ಆಸ್ಟ್ರೇಲಿಯಾ ಖಂಡದ ಸಿಡ್ನಿ ನಗರದಲ್ಲಿನ ಹೋಟೆಲುಗಳಲ್ಲಿ ಮಾಣಿಗಳಾಗಿ ಸೇರಿಕೊಳ್ಳುವವರ. ೪೫ ವರ್ಷ ತುಂಬಿದವರಾಗಿರಬೇಕೆಂದು ಅಲ್ಲಿನ ಹೋಟೆಲ್ ಮಾಲೀಕರು ಆಶಿಸಿದ್ದಾರೆ

ವಿಶಾಖ ಪಟ್ಟಣದಲ್ಲಿ ಬಿರುಗಾಳಿಗೆ ಆಹುತಿ

ಅಕ್ಟೋಬರ್ ಅಂತ್ಯಭಾಗದಲ್ಲಿ ವಿಶಾಖಪಟ್ಟಣ ಜಿಲ್ಲೆಯಲ್ಲಿ ಭೀಕರ ಬಿರುಗಾಳಿ ಅನಾಹುತ ಸಂಭವಿಸಿತ್ತು. ತತ್ಫಲವಾಗಿ ೮ ಮಂದಿ ಮರಣ ಹೊಂದಿರುವುದಾಗಿಯೂ, ಬಹುಮಟ್ಟಿಗೆ ಬೆಳೆ,ಆಸ್ತಿ,ಮನೆ,ಮರಗಳು ಹಾಳಾದುದಾಗಿಯೂ, ನೊಂದವರಿಗೆ ಪರಿಹಾರ ಕೊಡುವ ಕಾರ್ಯಕ್ರಮ ತುರುತಿನಿಂದನಡೆಯುತ್ತಿರುವುದಾಗಿಯೂ ಗೊತ್ತಾಗಿದೆ.

ಟಿ. ಸಿ. ನಟರಾಜ್ ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಯುನಾನಿ ಆಯುರ್ವೇದೀಯ ಔಷಧಿಗಳಲ್ಲವೂ ಸದಾ ದೊರೆಯುತ್ತವೆ.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ

ಮಾತ್ರೆಗಳು

ಬಲಹೀನತೆ, ಮುಪ್ಪು, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,

154, ಜೈನಾ ಬಜಾರುರಸ್ತೆ, ಮದರಾಸು.

ಏಜೆಂಟರು : ಅಶೋಕಾ ಫಾರ್ಮಸಿ

ಹಳೇಪೇಟೆ, ಶುಬ್ರಮಣ್ಯರಸ್ತೆ, ಮೈಸೂರು

ಯುದ್ಧ ಕಾಲವಾಗಲಿ — — ಕ್ಷೇಮ ಕಾಲವಾಗಲಿ

ನಿಮಗೆ ಬೇಕಾದುದೇನು?

ಗುಣ :: ಆರೋಗ್ಯ :: ಶಕ್ತಿ

ಬನ್ನಿರಿ; ಪರೀಕ್ಷಿಸಿರಿ!

ಶ್ರೀ ಕೃಷ್ಣಭವನ್

ರೆಸ್ಟೋರೆಂಟ್, ಮೈಸೂರು.

(... ಸರ್ಕಾರದ ಕಂಟ್ರೋಲ್‌ಗೆ ಒಳಪಟ್ಟಿದೆ.)

ಪರಿಶುದ್ಧವಾದ ತುಪ್ಪದಿಂದ ಮಾಡಿದ ರುಚಿಕರವಾದ ತಿಂಡಿಗಳು!

ಅನುಕೂಲಕರ! ಆರೋಗ್ಯದಾಯಕ!!

... ಕಾಫಿಯು ನಮ್ಮಲ್ಲಿನ ವಿಶೇಷ!

ವಾರ ಭವಿಷ್ಯ

(ಶ್ರೀ ಸಚ್ಚಿದಾನಂದ ಸ್ವಾಮಿಗಳಿಂದ)

ತಾ॥ ೮-೧೧-೪೨ರಿಂದ ೧೪-೧೧-೪೨ರವರೆಗೆ

ಮೇಷ : ಈವಾರ ನಿಮಗೆ ಖರ್ಚು ಜಾಸ್ತಿ. ಸಾಂಸತ್ತಿಕ ದೃಷ್ಟಿ ಚೆನ್ನಾಗಿದೆ. ಆದಾಯದ ಮಾರ್ಗ ಸ್ವಲ್ಪ ಚಿಕ್ಕದು. ಆರೋಗ್ಯ, ಉದ್ಯೋಗ, ಪ್ರವಾಸ, ಶುಭದಾಯಕವಾಗಿವೆ. ಕಂಡು ಅನೇಕ ದಿನಗಳಿಂದ ನಿಮ್ಮ ಇಷ್ಟ ಸ್ನೇಹಿತರನ್ನು ಈ ವಾರ ನೀವು ಭೇಟಿಯಾಗುವ ಸಂಭವವಿದೆ. ತಾ॥ ೬, ೧೧, ಸಂತಸ

ವೃಷಭ : ಈ ವಾರ ನಿಮ್ಮ ಆರೋಗ್ಯ ಸ್ವಲ್ಪ ಕೆಟ್ಟೀತು. ದುಡ್ಡು ಕಾಸಿಗೂ ತಾಪತ್ರಯ. ಇವುಗಳಿಂದ ಮನಸ್ಸಿಗೆ ನೆಮ್ಮದಿ ಇಲ್ಲ. ಪ್ರಯಾಣದಲ್ಲಿ ನಷ್ಟ. ನಾಲ್ಕು ಜನ ಸೇರಿದೆಡೆ ಹಸನ್ಮುಖಿಗಳಾಗಿ. ಈವಾರ ನಿಮಗೆ ಅಪಮಾನವಾಗುವ ಚಿಹ್ನೆ ತೋರಿದೆ. ಸ್ವಜನರಲ್ಲಿ ವಿರೋಧ ಕಟ್ಟಿಕೊಳ್ಳಬೇಡಿ. ವ್ಯಾಪಾರ, ನೌಕರಿಗಳಲ್ಲಿ ಶತ್ರುಪೀಡೆ. ತಾ॥ ೯, ೧೩ ಆಕಸ್ಮಿಕ

ಮಿಥುನ : ಆರೋಗ್ಯ, ಮಾನಸಿಕ ಸ್ಥಿತಿಗಳು ಸಾಧಾರಣವಾಗಿರುವುದು. ಆರ್ಥಿಕ ಸ್ಥಿತಿ ಉತ್ತಮಗೊಳ್ಳಲು ಅಡಚಣೆಗಳು ತೋರಿದ್ದಿವೆ. ನೌಕರಿಗಳಲ್ಲಿ ಬಹಳ ವಿಚಾರದಿಂದ ವರ್ತಿಸಿರಿ. ತಾ॥ ೭, ೯ ಅತಿಥಿಗಳ ಆಗಮನ

ಕರ್ಕ : ಈ ವಾರ ಕಷ್ಟಗಳು ತಗ್ಗುವವು. ವ್ಯಾಪಾರದಲ್ಲಿ ಲಾಭ. ಸ್ತ್ರೀವರ್ಗದಿಂದ ಬಹುಮಾನ ಸಿಕ್ಕುವುದು. ಮಾನಸಿಕಸ್ಥಿತಿ ಉತ್ತಮವಾಗುವುದು. ನೀವು ಕಷ್ಟ ಸಹಿಸಲ್ಲವರು. ದೇವರು ನಿಮ್ಮ ಕೈಬಿಡುವುದಿಲ್ಲ. ತಾ॥ ೮, ೧೩ ವಿಶ್ರಾಂತಿ, ವಿನೋದ.

ಸಿಂಹ : ದುಃಸ್ವಪ್ನ ಕಂಡರೆ ದೂರ ಹೋಯಿತು ಎಂಬ ಗಾದೆ ನಿಮ್ಮ ನೆನಪಿನಲ್ಲಿರಲಿ. ಅಂಥ ಸ್ವಪ್ನವನ್ನು ಈ ವಾರ ನೀವು ಕಾಣಬೇಕಾದೀತು. ಯೋಚಿಸಿದ ಕಾರ್ಯ ಜಯ. ಉದ್ಯೋಗದಲ್ಲಿ ವ್ಯಾಪಾರದಲ್ಲಿ ಲಾಭ ಬರುವ ಸೂಚನೆ ಇದೆ. ವೈರಿಗಳು ಬಲವನ್ನು ಈ ವಾರ ನೀವು ಮುರಿಯಬಲ್ಲಿರಿ. ತಾ॥ ೧೦, ೧೧, ಮನೆಯಲ್ಲಿ ಭೇಟಿ

ಕನ್ಯಾ : ಪ್ರವಾಸ ದಾನಧರ್ಮಾದಿ ಕೆಲಸಗಳು ನಿರ್ವಿಘ್ನವಾಗಿ ನಡೆಯುವುವು. ಆರ್ಥಿಕಸ್ಥಿತಿ ಕೊಂಚ ಚಿಂತಾಜನಕವಾಗಿದೆ. ಈವಾರ ಯಾರಾದರೂ ನಿಮಗೆ ಮೋಸ ಮಾಡಿಯಾರು, ಜೋಪಾನ. ವ್ಯಾಪಾರ ನೌಕರಿಗಳಲ್ಲಿ ಮೋಸ. ತಾ॥ ೧೨, ೯, ಮನೋವ್ಯಥೆ ಭೀತಿ

ತುಲಾ : ಈ ವಾರದ ನಿಮ್ಮ ಗ್ರಹಗಳ ಬಲ ನೋಡಿದರೆ ಈ ವಾರ ಹೋದವಾರಕ್ಕಿಂತ ಆರೋಗ್ಯವು ಸುಧಾರಿಸುವುದು. ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದು. ವ್ಯಾಪಾರ ಉದ್ಯೋಗ, ನೌಕರಿಗಳ ಸ್ಥಿತಿಯು ದಿನದಿನಕ್ಕೂ ಉಜ್ಜ್ವಲ ಸ್ಥಿತಿಗೇರಿ ಮನಸ್ಸು ತೃಪ್ತಿಗೊಳ್ಳುವುದು. ಮಾನಧರ್ಮಾದಿ ಕಾರ್ಯಗಳು ಜರುಗುವುವು. ತಾ॥ ೧೨, ೧೩, ಸ್ತ್ರೀಲಾಭ, ಬಂಧು ಮಿತ್ರರ ಸಂತೋಷದಿಂದ ಸಂತೃಪ್ತಿ

ವೃಶ್ಚಿಕ : ಅಂಸವರ್ಗಗಳ ಹೆಸರಿನಲ್ಲಿ ಮೊದಲು ಯಾರು ಸ್ಥಾನವು ಹಾಕಬೇಕಾದೀತು? ಅವನ್ನು ತೋರಿಸಿ ಒಳ್ಳೆಯವರಾಗುವುದು. ಈವಾರ ನಿಮ್ಮ ಮಿತ್ರರೇ ನಿಮ ಗೆಮೋಸವನ್ನು ಮಾಡುವರು. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಶತ್ರುಪೀಡೆ, ಪತ್ನಿಗೆ ಕ್ಲೇಶ, ಸ್ತ್ರೀಯನ್ನು ಸಂತೋಷಪಡಿಸುವುದಕ್ಕಾಗಿ ಜೇಬೆಲ್ಲಾ ಖಾಲಿ. ಆರೋಗ್ಯಸ್ಥಿತಿ ಅಷ್ಟೇನೂ ಸರಿಯಾಗಿರಲಾರದು. ತಾ॥ ೧೦, ೧೧ ಸ್ವಸ್ಥ

ಧನು : ಈ ವಾರ ಸರ್ವ ದೃಷ್ಟಿಯಿಂದಲೂ ನಿಮಗೆ ಉತ್ತಮವಿರುವುದು. ಆರೋಗ್ಯವು ಉತ್ತಮಗೊಳ್ಳುವುದು. ಆರ್ಥಿಕ ಸ್ಥಿತಿಯು ಚೆನ್ನಾಗಿರುವುದು. ಮಾನಸಿಕ ಸ್ಥಿತಿಯು ತೃಪ್ತಿಗೊಳ್ಳುವುದು. ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿದ್ದ ಶತ್ರುಗಳು ನಿರ್ನಾಮವಾಗುವರು. ತಾ॥ ೮, ೯ ಖರ್ಚು, ಚಿಂತೆ.

ಮಕರ : ಆರೋಗ್ಯವು ಸಾಧಾರಣವಿರುವುದು. ಆರ್ಥಿಕಸ್ಥಿತಿ ಮಾನಸಿಕ ಸ್ಥಿತಿಗಳೂ ಅಷ್ಟೇ. ವ್ಯಾಪಾರ ಉದ್ಯೋಗ ನೌಕರಿಗಳು ಬೇರದಾಯಕ. ಪ್ರವಾಸದಲ್ಲಿ ಕಷ್ಟ. ಸ್ತ್ರೀಸುಖ ದಿ ದೃಷ್ಟಿಯಿಂದ ಉತ್ತಮ. ತಾ॥ ೧೦, ೧೧ ಆಕಸ್ಮಿಕ ವ್ಯಸನ.

ಕುಂಭ : ಆರೋಗ್ಯ ಮಾನಸಿಕಗಳು ಹೋದವಾರದಷ್ಟು ತಾಪದಾಯಕವಿರಲಾರವು. ವ್ಯಾಪಾರ, ಉದ್ಯೋಗ, ನೌಕರಿ ಪ್ರವಾಸಗಳಲ್ಲಿ ಅನುಕೂಲ ಪರಿಸ್ಥಿತಿಗಳು ಏರ್ಪಡುವವು. ಸಾಂಪತ್ತಿಕ ಸ್ಥಿತಿ ಉತ್ತಮಗೊಂಡು, ಸಮಯಕ್ಕೆ ಸರಿಯಾಗಿ ಮಾತ್ರ ಸಹಾಯ ದೊರೆಯಬಹುದು. ತಾ॥ ೧೨, ೧೩, ಆರೋಗ್ಯಕ್ಕೆ ಕ್ಲೇಶ.

ಮೀನ : ಈ ವಾರ ತಮಗೆ ಮಾನಸಿಕ ಅಸ್ವಸ್ಥತೆ ಹೆಚ್ಚಾಗಿ ಸಂಭವಿಸಬಹುದು. ವಿಚಾರದ ಮೇಲೆ ಸಿಟ್ಟು ಒಂದು ಬೇಜಾರುಪಡಿಸಬಹುದು. ದುಃಖವನ್ನು ಸಹಿಸದೆ ಕೃತ್ಯ ಸಂಭವಿಸಿ ಪಶ್ಚಾತ್ತಾಪ ಪಡಬೇಕಾಗಬಹುದು. ಆತಿ ಪರಿಚಯಸ್ಥರಲ್ಲಿ ಅಪಮಾನವಾಗಬಹುದು. ಆರೋಗ್ಯ, ಆರ್ಥಿಕ ಸ್ಥಿತಿಗಳು ಚೆನ್ನಾಗಿರುವವು. ವ್ಯಾಪಾರ ಉದ್ಯೋಗ, ನೌಕರಿ ದಾನಧರ್ಮ ಪ್ರವಾಸಾದಿಗಳಲ್ಲಿ ಹಸ್ತ್ಯಜನರಿಂದ ತೊಂದರೆ. ತಾ॥ ೧೧, ೧೩ ದ್ರವ್ಯಪ್ರಾಪ್ತಿ, ಶಾಂತಿ

ನರ್ವನಾಟ್ರಿನ್

ನರಗಳ ಶಕ್ತಿಗೆ; ವೀರ್ಯವೃದ್ಧಿಗೆ

ಉಪಯೋಗಿಸುವ ವಿಧಾನ.—

ಮಲಗುವ ವೇಳೆ ಕಾಲು ಟೀಸ್ಪೂನು ಬಿಸ್ಸಿಲು ಹಾಲಿನೊಡನೆ.

ದೊಡ್ಡ ಬಾಟಲ್ ರೂ 2-1-0 ಮಾತ್ರ

ಸಣ್ಣ ಬಾಟಲ್ ರೂ 1-4-0 „

ಪ್ಯಾಕಿಂಗ್ ಮತ್ತು ಪಾರ್ಸಲ್ ಛಾರ್ಜು ಪ್ರತ್ಯೇಕ

ಈ ನಮ್ಮ ಔಷಧಕ್ಕೆ ಮೈಸೂರು ವಸ್ತು ಪ್ರದರ್ಶನದಲ್ಲಿ ಮೆಡಲು ದೊರಕಿರುತ್ತದೆ

ವಿಳಾಸ. —

ಕೆ. ಇ. ವಿ. ಪ್ರೊಡಕ್ಟ್ಸ್,

ಹೊಸ ಮೈಸೂರು ಬ್ಯಾಂಕ್ ರಸ್ತೆ,

ಮೈಸೂರು.

ಹಾರಬಲ್ಲ ಮೋಟಾರ್

ಹೊಸ ರೀತಿಯ ಮೋಟಾರ್ ಕಾರುಗಳನ್ನು ಅಮೆರಿಕದ ಪ್ರಸಿದ್ಧ ವಿಮಾನ ತಜ್ಞ ... ವಿಲಿಯಂ ಸ್ಟೌಟ್‌ರವರು ತಯಾರಿಸುತ್ತಿದ್ದಾರೆ. ಹೇಳಿರುವರು. ಅಂಥ ಕಾರುಗಳ ತೂಕ ೧೫೦೦ ಪೌಂಡ್ ಮಾತ್ರವಿದ್ದು, ಗಂಟೆಗೆ ೩೦ ಮೈಲಿ ವೇಗದಲ್ಲಿ ಭೂಮಿಯ ಮೇಲೆ ಓಡ ಬಲ್ಲುದಲ್ಲದೆ ತಕ್ಷಣವೇ ಆಕಾಶಕ್ಕೆ ಏರಿಸಿ ಹಾರಾಡಿಸಲು ಅನುಕೂಲಿಸುವಂತೆ ಆಕಾರವನ್ನು ನಿರ್ಮಿಸಲಾಗುವುದೆಂದು ಗೊತ್ತಾಗಿದೆ.

ವಿಧವೆಯನ್ನು ಲಗ್ನವಾಗುವವನು

ಯುದ್ಧದಲ್ಲಿ ಗಂಡನನ್ನು ಕಳೆದುಕೊಂಡ ವಿಧವೆಯನ್ನು ಲಗ್ನವಾಗಿ ಅಂಥವರ ಕಷ್ಟನೀಗಲು ಆಸ್ಟ್ರೇಲಿಯದ ೪೦ ವರ್ಷ ವಯಸ್ಸಿನ ಅವಿವಾಹಿತನೊಬ್ಬನು ಮುಂದೆ ಬಂದಿದ್ದಾರೆ. ವಿಧವೆಗೆ ಮಕ್ಕಳಿದ್ದ ಪಕ್ಷಕ್ಕೆ ಅವರ ವಿದ್ಯಾಭ್ಯಾಸ ಭಾರವನ್ನು ಪೂರ್ತಿ ಹಿಂದಿನ ತಂದೆಗಿಂತ ತಾನು ಮುತುವರ್ಜಿಯಿಂದ ನೋಡಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದ್ದಾನೆ. ನಾಮುಂದು, ತಾಮುಂದು ಎಂದು ಅವನನ್ನು ಲಗ್ನವಾಗಲು ಈಗಾಗಲೇ ೨೪ ವಿಧವೆಯರು ಅರ್ಜಿಗಳನ್ನು ಗುಜರಾಯಿಸಿಕೊಂಡಿರುವರು

ಬೆಟ್ಟಗಳು ಬೆಳೆಯುವುವು

ಆಲ್ಪ್ಸ್ ಬೆಟ್ಟಗಳು ಉತ್ತರಕ್ಕೆ ... ಬೆಳೆಯನ್ನು ಚಾಚುತ್ತಾ ಮುಂದೆ ಸಾಗುತ್ತಿರುವುದೆಂದೂ, ಹಿಮಾಲಯವು ದಕ್ಷಿಣಕ್ಕೆ ಗುಡ್ಡಗಳನ್ನು ಬೆಳೆಸುತ್ತಾ ... ಯನ್ನು ದಾಟುತ್ತಿರುವುದಾಗಿಯೂ ... ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ

ನಿರಾಶ್ರಿತರ ಲಿಪಿ

ಏಷ್ಯಾ ಖಂಡದ ನಾನಾ ಭಾಗಗಳಿಂದ ಬಂದಿರುವ ನಿರಾಶ್ರಿತರು ಸಂಸ್ಥಾನದ ... ನ ಭಾಗದಲ್ಲಿದ್ದರೂ ಸರಿ, ಅಲ್ಲಿನ ಅಧಿಕಾರಿಗಳ ಬಳಿಗೆ ಈ ತಿಂಗಳಲ್ಲಿ ಎರಡಾವರ್ತಿಯಾದರೂ ದಿನ ಹೋಗಿ ತಮ್ಮ ಕೇಳಿದ ಪ್ರಶ್ನೆಗಳಿಗೆ ಜವಾಬು ಕೊಡಬೇಕೆಂದು ... ಸರ್ಕಾರದವರು ಒಂದು ಹೊಸ ಆಜ್ಞೆಯನ್ನು ಹೊರಡಿಸಿದ್ದಾರೆ. "ಏಷ್ಯಾಟಿಕ್ ಪ್ರಿಟೆಸ್ಟ್ ಇನ್‌ಕ್ವೈರಿ ಸೆನ್ಸಸ್" ಎಂದು ಆ ಆಜ್ಞೆಯ ಹೆಸರು.

ಅಸ್ಸಾಂನಲ್ಲಿ ಕಾಲರಾ ಹಾವಳಿ

ಅಸ್ಸಾಂ ಪ್ರಾಂತ್ಯದಲ್ಲಿ ಅಕ್ಟೋಬರ್ ೨೩ರ ಹೊತ್ತಿಗೆ ೬೫೦ ಜನರಿಗೆ ಕಾಲರಾ ವ್ಯಾಧಿ ತಗಲಿತೆಂದೂ, ಅವರಲ್ಲಿ ೩೭೩ ಜನ ವ್ಯಾಧಿಗೆ ತುತ್ತಾದರೆಂದೂ ವರದಿಯಾಗಿದೆ

ಪ್ರಕಟಣೆ

ದಿ ಬೆಂಗಳೂರು ಪ್ರಾವಿಡೆಂಟ್ ಇನ್‌ಷೂರೆನ್ಸ್ ಕಾರ್ಪೊರೇಷನ್, ಲಿಮಿಟೆಡ್

(ಸ್ಥಾಪನೆ : ೧೯೩೯)

ಮುಖ್ಯ ಕಚೇರಿ : "ಏಷ್ಯಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ನಗರ

ಹಿಂದೂಸ್ಥಾನದ ಎಲ್ಲ ಭಾಗಗಳಲ್ಲಿ ಉದಾರ ಕರಾರುಗಳ ಮೇಲೆ ಮತ್ತು ಆಕರ್ಷಕ ಕಮಿಷನ್ನಿನ ಮೇಲೆ ಏಜಂಟರನ್ನು ನೇಮಿಸಿಕೊಳ್ಳುವವರಿದ್ದೇವೆಂದು ಪ್ರಕಟಿಸಲು ಆತ್ಯಾನಂದವಾಗುತ್ತದೆ. ಏಜಂಟರು ಪ್ರತಿ ತಿಂಗಳು ಸುಲಭವಾಗಿ ೧೦೦ ರೂ. ಸಂಪಾದಿಸಬಹುದು.

ಶ್ರೀ ಹಿಂಗಳೆ ವೆಂಕಟರಾಮರೆಡ್ಡಿ ಡೈರೆಕ್ಟರು : ೧) ಏಷ್ಯಾಟಿಕ್ ಗೌರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಸ್ಸೂರೆನ್ಸ್ ಕಂ ಲಿ, ಬೆಂಗಳೂರು ಸಿಟಿ ೨) ಬಾಂಬೆ ಲೈಫ್ ಅಸ್ಸೂರೆನ್ಸ್ ಕಂ ಲಿ., ಬೊಂಬಾಯಿ ೩) ದಿ ಮೂನಿಸಿಪಲ್ ಬ್ರಿಡ್ಜ್ ಲಿ., ಬೊಂಬಾಯಿ ೪) ಮಿನರ್ವಾ ಮಿಲ್ಸ್ ಲಿ, ಬೆಂಗಳೂರು ೫) ಮಾಡರ್ನ್ ಮಿಲ್ಸ್ ಲಿ., ಬೊಂಬಾಯಿ. ೬) ಹಿಂದ್ ಶುಗರ್ ಕಂ ಲಿ, ಬೊಂಬಾಯಿ ೭) ಸಿಂಧ್ಯ ಸ್ಟೀಮ್ ನ್ಯಾವಿಗೇಷನ್ ಕಂ ಲಿ, ಬೊಂಬಾಯಿ ೮) ಈಸ್ಟರ್ನ್ ಬ್ಯಾಂಕರ್ಸ್ [ಇಂಡಿಯಾ] ಲಿ, ಬೊಂಬಾಯಿ. ೯) ಈಸ್ಟರ್ನ್ ಬ್ಯಾಂಕರ್ಸ್ [ಬರ್ಮಾ] ಲಿ, ಬೊಂಬಾಯಿ. ೧೦) ನರೋತ್ತಮ ಲಿ., ಬೊಂಬಾಯಿ ೧೧) ಕೋ-ಆಪರೇಟಿವ್ ಡೊಮಿನಿಯನ್ ಬ್ಯಾಂಕ್ ಲಿ, ಹೈದರಾಬಾದ್, [ಡೆಕ್ಕನ್] ೧೨) ಸದಸ್ಯರು, ಅಡ್ವೈಸರಿ ಬೋರ್ಡ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಲಿ ಮತ್ತು ಡೀಲರ್, ಬುಲಿಯನ್, ಬ್ಯಾಂಕರ್, ಅನರೆಬಲ್ ಸನ್ಸ್ ... ಹೈದರಾಬಾದ್ [ಡೆಕ್ಕನ್] ಚೇರ್ಮನ್.

ಶ್ರೀ ಎಚ್. ವೆಂಕಟರಾಮಯ್ಯ, ರಿಟೈರ್ಡ್ ಸೂಪರಿಂಟೆಂಡೆಂಟ್, ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಸ್ಸೂರೆನ್ಸ್ ಕಂ. ಲಿ, ಬೆಂಗಳೂರು ಸಿಟಿ ಮ್ಯಾನೇಜಿಂಗ್ ಡೈರೆಕ್ಟರ್.

ಕಾರ್ಪೊರೇಷನ್ನಿನ ಬಗ್ಗೆ ಮಹತ್ವದ ಸಂಗತಿಗಳು

೧) ಇನ್‌ಷೂರೆನ್ಸ್ ಕಾಯಿದೆಯನ್ವಯ ಮೈಸೂರು ಮತ್ತು ಬ್ರಿಟಿಷ್ ಸರ್ಕಾರಗಳಲ್ಲಿ ಠೇವುಗಳನ್ನು ಇಡಲಾಗಿವೆ.

೨) ೧೫ ವರ್ಷ ಅನುಭವದ ಡೈರೆಕ್ಟರ ಅಧೀನದಲ್ಲಿ ಭದ್ರವಾದ ಮತ್ತು ಶುಭ ಪದ್ಧತಿಗಳಿಂದ ಡೈರೆಕ್ಟರುಗಳ ಮತ್ತು ವ್ಯವಸ್ಥಾಪಕ ಮಂಡಳಿ

೩) ಈಗ ದೊರೆತ ಉದ್ಯಮ ೩ ಲಕ್ಷಕ್ಕಿಂತ ಹೆಚ್ಚಿಗೆ ಮತ್ತು ಕಾರ್ಯಕರ್ತರ ...

೪) ಜೀವನಿಧಿ ... ಹೆಚ್ಚಿಗೆ

೫) ಡಿ ಸ್ಟಡಿ ಸರ್ಟಿಫಿಕೇಟು, ರೂ ... ... ಗಳಿಗೆ ಹೋಲ್ ಲೈಫ್, ಎಂಡೋಮೆಂಟ್ ಲೈಫ್ ಮತ್ತು ... ಪಾಲಿಸಿಗಳನ್ನು ಕೊಡಲಾಗುವುದು. ... ... ದಯವಿಟ್ಟು ವಿವರಗಳಿಗೆ ಬರೆಯಿರಿ.

ಉದಾರ ಸಮುಸ್ಯೆಯೂ ಮಹಿಳೆಯರೂ

ಮೈಸೂರು

[illegible] ಉದಾರ ಸಮಸ್ಯೆ [illegible] ಯಾವ [illegible] ವನ್ನು ಪರಿಶೀಲಿಸಲು [illegible] ೭ ಗಂಟೆಗೆ ಒಂದು ಸಭೆಯನ್ನು ಏರ್ಪಡಿಸಿದೆ. ಸಭೆಯು ನಡೆಯುವ ಸ್ಥಳವನ್ನು ಇನ್ನೊಮ್ಮೆ ಪ್ರಕಟಿಸಲಾಗುವುದು. ಚರ್ಚೆಯಲ್ಲಿ ಪಾಲುಗೊಳ್ಳಲಿಚ್ಛಿಸುವವರು [illegible] ದೊಳಗೆ ತಮ್ಮ ಹೆಸರುಗಳನ್ನು ಶ್ರೀಮತಿ [illegible], ದಿವಾನ ರಸ್ತೆ, ಇವರಿಗೆ [illegible] ನಗರದ ಬೇರೆ ಬೇರೆ ಮಹಿಳಾ ಸಂಘಗಳಿಗೆ ತಿಳಿಸಲು [illegible] ತ್ತದೆ.

ಚರ್ಚೆಗಿರುವ ವಿಷಯಗಳು

೧ ಆಹಾರ ರಾಜ್ಯದಲ್ಲಿ ಮಹಿಳೆಯರು ಭಾಗವಹಿಸುವ ಆವಶ್ಯಕತೆ.

೨ ಈ ಪರಿಸ್ಥಿತಿಯಲ್ಲಿ ಸಹಾಯಕಾರಿ ಯಾಗಬೇಕಾದ ಕಾರ್ಯಕ್ರಮ, ಕಾನೂನು, ಕ್ರಮಗಳನ್ನು [illegible] ಸಂಬಂಧಿಸಿದ ಅಂಶಗಳನ್ನು ಕೊಡಬೇಕಾದ ಅಗತ್ಯ.

೩ ನಮ್ಮ ಸ್ವಯಂ ಸೇವಿಕೆಯರ [illegible] ಗಳನ್ನು [illegible] ಸಿದ್ಧಗೊಳಿಸಲು [illegible] ವೀಸುವಂತೆ ಮಹಿಳೆಯರಿಗಾಗಿ [illegible] ಡಿಪೋಗಳನ್ನು ತೆರೆಯಬೇಕೆಂದು ಸರ್ಕಾರವನ್ನು ಕೇಳುವುದು.

ಸ್ವಾತಂತ್ರ್ಯ ಲಭಿಸುವವರೆಗೆ ವಿಶ್ರಾಂತಿ ಇಲ್ಲ

ಹೊರಾವಿನ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ವಾಯುವ್ಯ ಪ್ರಾಂತ್ಯದ ಮಾಜಿ ಮುಖ್ಯ ಮಂತ್ರಿ ಡಾ|| ಖಾನ್ ಸಾಹೇಬರು ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ನಿರ್ಮೂಲವಾಗುವವರೆಗೆ ತಾವು ಸುಮ್ಮನೆ ಕೂರುವುದಿಲ್ಲವೆಂದು ತಿಳಿಸಿದರು. ದೇಶದ ಸ್ವಾತಂತ್ರ್ಯವನ್ನು ಗಳಿಸಲು ಸರ್ಕಾರದೊಡನೆ ನಾವು ಹೋರಾಟವನ್ನು ಹೂಡಿದ್ದೇವೆ ನಮ್ಮ ಸ್ವಾತಂತ್ರ್ಯಕ್ಕೆ ಅಡ್ಡಲಾಗಿ ಬರುವವರೆಲ್ಲರೂ ನಮ್ಮ ಶತ್ರುಗಳೇ ಆಗಿದ್ದಾರೆ ಎಂದು ಹೇಳಿದರು.

ಪೂರಿಯಲ್ಲಿ ಅನ್ನ ಕ್ಷಾಮ

ಕಳೆದ ಕೆಲವು ದಿನಗಳಲ್ಲಿ ಪೂರಿ ಪಟ್ಟಣದ ಬೀದಿಗಳಲ್ಲಿ ೧೯ ನಿರಾಶ್ರಿತರು ಮರಣ ಹೊಂದಿರುವುದಾಗಿ ಗೊತ್ತಾಗಿದೆ.

ಬ್ರಿಟನ್-ಟರ್ಕಿ ಸಮಾಲೋಚನೆ

ಬ್ರಿಟನ್ನಿನ ವಿದೇಶಾಂಗ ಮಂತ್ರಿಗಳಾದ ಮಿ|| ಈಡನ್ನರು ಮೊನ್ನೆ ಟರ್ಕಿ ವಿದೇಶಾಂಗ ಸಚಿವರನ್ನು ಕೈರೋದಲ್ಲಿ ಕಂಡು ಮಾತುಕತೆ ನಡೆಸಿದರೆಂದು ಗೊತ್ತಾಗಿದೆ.

ಗ್ರಿಗರಿಯವರಿಗೆ ಅನುಭವ ಸಾಲದು

[illegible]

ಪರಸ್ಥಳೀಕರ ಲೆಕ್ಕಾಚಾರ

ಬೇರೆ ಪ್ರಾಂತ್ಯಗಳಿಂದ ಬೆಂಗಳೂರು ಪಟ್ಟಣಕ್ಕೆ ಬಂದು ನೆಲೆಸಿರುವವರ ಜನ ಗಣತಿಯನ್ನು ಇದೇ ತಿಂಗಳು ೧ನೇ ತಾರೀಖಿನಿಂದ ಒತ್ತಾಯವಾಗಿ ತೆಗೆದುಕೊಳ್ಳಲಾಗುತ್ತಿದೆ.

ದಿವೇಜರ್ ಮಹಾರಾಣಿಯವರು ಬೇಲೂರಿನಲ್ಲಿ

ಇದೇ ತಿಂಗಳು ೪ ನೇ ತಾರೀಖು ಮಹಾಮಾತೃಶ್ರೀ ದಿವೇಜರ್ ಮಹಾರಾಣಿಯವರು ಶ್ರೀ ಲಕ್ಷ್ಮೀ ವಿಲಾಸ ಸನ್ನಿಧಾನದವರ ಬೇಲೂರಿಗೆ ದಯಮಾಡಿಸಿ ಪುಷ್ಪಾಂಜಲಿ ಎಂದು, ದೇವರ ದರ್ಶನ ಮಾಡಿಕೊಂಡು ವಾಪಸಾಗಿ [illegible].

ಚಿತ್ರದುರ್ಗದಲ್ಲಿ ರೇಷನ್ ಕ್ರಮ

ಕಳೆದ ದಿನಗಳಿಂದಲೂ ಅಕ್ಕಿ ರೇಷನ್ ಪ್ರಕಾರ ಪ್ರತಿಯೊಬ್ಬರಿಗೆ ಒಂದು ಪಡಿಯಂತೆ ಆಗುವಷ್ಟು ಧವಸವನ್ನು ಬಿಟ್ಟು ಉಳಿದುದನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು ಚಿತ್ರದುರ್ಗ ಜಿಲ್ಲಾ ಅಧಿಕಾರಿಗಳು ಆಜ್ಞಾಪಿಸಿದ್ದಾರೆ. ೫ ವರ್ಷಕ್ಕೆ ಮೇಲ್ಪಟ್ಟ ಮಕ್ಕಳಿಗೆ ದಿನಕ್ಕೆ ಒಂದು ಪಾವು ಅಕ್ಕಿ ಪ್ರಕಾರ ಉಳಿಸಿಕೊಳ್ಳಲು ಅವಕಾಶ ಕೊಡಲಾಗಿದೆ.

ಪೆಟ್ರೋಲ್ ಕಳುವಿಗೆ ಶಿಕ್ಷೆ

ಹೋಟೆಲ್ ಮಾಲೀಕರಾದ ಶ್ರೀ|| [illegible] ರಾಜಾಚಾರ್ಯರು ಬೆಂಗಳೂರು ಅಣ್ಣಮ್ಮನ ಗುಡಿ ಬಳಿಯ ತಮ್ಮ ಗೃಹದಲ್ಲಿ ಸರ್ಕಾರದ ಅಪ್ಪಣೆ ಪಡೆಯದೆ ೫೧ ಗ್ಯಾಲನ್ ಪೆಟ್ರೋಲ್ ಇಟ್ಟುಕೊಂಡಿದ್ದರೆಂದು ಅವರ ಮೇಲೆ ಮೊಕದ್ದಮೆ ಹೂಡಲಾಯಿತು. ೧೩ ನೇ ತಾರೀಖು ವಿಚಾರಣೆ ನಡೆಯುವುದು.

ಬಂಧನಕ್ಕಾಗಿ ಸರ್ಕಾರದ ಮೇಲೆ ದಾವಾ

೩ ದಿನಗಳ ಕಾಲ ತಮ್ಮನ್ನು ಅಕ್ರಮದಿಂದ ಬಂಧಿಸಿಟ್ಟಿದ್ದಕ್ಕಾಗಿ ಕರಾಚಿಯ ಮಾಜಿ ಮೇಯರ್ ಶ್ರೀ ಶಾಂತಿದಾಸ್ ಇರ್ದವಲ್ ಎಂಬುವರು ೫ ಸಾವಿರ ರೂ. ಪರಿಹಾರಕ್ಕಾಗಿ ಸಿಂಧ್ ಪ್ರಾಂತ್ಯದ ಸರ್ಕಾರದ ಮೇಲೆ ದಾವಾ ಹೂಡಿದ್ದಾರೆ. ಆಗಸ್ಟ್ ೨೫ ನೇ ತಾ|| ಅವರನ್ನು ಭಾರತ ರಕ್ಷಣಾ ಶಾಸನದ ಪ್ರಕಾರ ಬಂಧಿಸಲಾಯಿತು. ಅವರನ್ನು ೧೫ ದಿನಗಳು ಬಂಧನದಲ್ಲಿಡಬೇಕೆಂದು ಆಜ್ಞೆಯಾಗಿತ್ತು. ೧೫ ದಿವಸದನಂತರ ತಮ್ಮನ್ನು ಅವರು ಕೇಳಿದರು. ಆದರೆ ಬಿಡಲಿಲ್ಲ. ಸೆಪ್ಟೆಂಬರ್ ೫ ನೇ ತಾ|| ಅವರ ಮೇಲೆ ಮತ್ತೊಂದು ಬಂಧನ ಆಜ್ಞೆ ಜಾರಿ ಮಾಡಿತು. ಈ ೨ ಆಜ್ಞೆಗಳ ಮಧ್ಯ ಕಾಲದಲ್ಲಿ ೩ ದಿನ ತಮ್ಮನ್ನು ಅಕ್ರಮವಾಗಿ ಬಂಧಿಸಿದ್ದುದರಿಂದ ಅವರು ಈ ಪರಿಹಾರವನ್ನು ಕೇಳಿದ್ದಾರೆ.

ಜಪಾನನ್ನು ಸೋಲಿಸಲು ನಿರ್ಧಾರ

ಬೀಜಿಂಗ್ ರಾಜಧಾನಿಗೆ ಹರ್ಲಿ ಅವರ ಭೇಟಿ [illegible] ಬ್ರಿಟನ್ ಮತ್ತು ಚೈನಾದೊಂದಿಗೆ ಅಮೆರಿಕ ಮೇಲೆ ದಂಡಯಾತ್ರೆ ನಡೆಸುವ ಒಪ್ಪಂದ ನಿರ್ಧಾರಕ್ಕೆ ಬರಲಾಗಿದೆ ಎಂದು [illegible] ಅಧ್ಯಕ್ಷ ರೂಸ್‌ವೆಲ್ಟರು ತಿಳಿಸಿದ್ದಾರೆ.

ಓಸ್ಲೋವಲ್ಲಿ ಬೀದಿ ಕದನ

ಜರ್ಮನರು ಓಸ್ಲೋ ನಗರದಲ್ಲಿ ಬೀದಿ ಕದನಕ್ಕೆ ಸಿದ್ಧವಾಗುತ್ತಿದ್ದಾರೆ. ತಮ್ಮ ಕಟ್ಟಡಗಳನ್ನು ಭದ್ರಪಡಿಸುತ್ತಿದ್ದಾರೆ. ನಗರಕ್ಕೆ ಬರತಕ್ಕ ಎಲ್ಲಾ ಮಾರ್ಗಗಳನ್ನೂ ಅಡ್ಡಕಟ್ಟಿದ್ದಾರೆ. ಮಿಷನ್ ಗನ್ನುಗಳನ್ನೂ, ಟ್ಯಾಂಕುಗಳನ್ನೂ ಎಲ್ಲರೆಗಾಗಿ ಸಜ್ಜುಗೊಳಿಸಿದ್ದಾರೆ. ಮುಖ್ಯವಾದ ಕಟ್ಟಡಗಳ ಕಿಟಕಿಗಳಿಗೆ ಕೂಡ ಮುಚ್ಚಳಗಳನ್ನು ಹಾಕಿರುತ್ತಾರೆ.

ಇಟಲಿ ದೊರೆಗಳು ರಾಜ್ಯತ್ಯಾಗಕ್ಕೆ ಸಿದ್ಧ

ತಮ್ಮ ಸಿಂಹಾಸನವನ್ನು ಬಿಟ್ಟುಬಿಡಲು ಸಿದ್ಧರಾಗಿರುವುದಾಗಿ ಇಟಲಿ ದೊರೆಗಳಾದ ವಿಕ್ಟರ್ ಇಮ್ಯಾನ್ಯುಯಲ್ ರವರು ತಾವಾಗಿಯೇ ಸೂಚನೆ ಕೊಡುವರೆಂದು ಹೇಳಲಾಗಿದೆ. ಮಾರ್ಷಲ್ ಬಡೋಗ್ಲಿಯೊ ಮತ್ತು ತರುಣ ರಾಜಕುಮಾರನ ತಾಯಿಯಾದ ಪ್ರಿನ್ಸೆಸ್ ಮೇರಿ ಜೋಸೆ ರವರುಗಳ ರೀಜೆನ್ಸಿಯು ಇರಬೇಕೆಂದು ಹಲವರು ಅಭಿಪ್ರಾಯಪಡುತ್ತಿದ್ದಾರೆ. ಕ್ರೌನ್ ಪ್ರಿನ್ಸ್ ಉಂಬರ್ಟೋ ರವರಿಗೆ ರಾಜ್ಯವನ್ನು ಬಿಟ್ಟುಕೊಟ್ಟರೆ ಪರಸ್ಪರ ರಾಜಿಯಾಗುವ ಸಂಭವವಿದೆ. ನೇಪಲ್ಸ್‌ನಲ್ಲಿ ಮುಖ್ಯವಾದ ಸಮಾಲೋಚನೆಗಳು ನಡೆಯುತ್ತಿವೆ. ಫ್ಯಾಸಿಸ್ಟ್ ವಿರುದ್ಧ ಅಭಿಪ್ರಾಯವುಳ್ಳವರನ್ನು ಬಡೋಗ್ಲಿಯೋ ಮಂತ್ರಿಮಂಡಲಕ್ಕೆ ಹೆಚ್ಚಾಗಿ ಸೇರಿಸುವ ಪ್ರಯತ್ನವು ನಡೆಯುತ್ತಿದೆ.

ಲಂಡನ್ನಿನ ಮೇಲೆ ಶತ್ರು ವಿಮಾನ

ಮೊನ್ನೆ ರಾತ್ರಿ ಶತ್ರು ವಿಮಾನಗಳು ಲಂಡನ್ನನ್ನು ಧಾಳಿಮಾಡಲು ಹೋಗಿದ್ದುವು. ೨ ಶತ್ರು ವಿಮಾನಗಳು ನಾಶವಾದುವು. ಒಂದು ವಿಮಾನವು ೨ ಬಾಂಬುಗಳನ್ನು ಕೆಡವಿತು. ಇದರಿಂದ ಐವರ ಮರಣ ಸಂಭವಿಸಿದೆ.

ರೈಲ್ವೆ ಕಂಬಿ ಮೇಲೆ ರಂಜಕ

ಮದರಾಸು ಪಾರ್ಕ್ ನಿಲ್ದಾಣದ ಬಳಿ ಒಂದು ಬಟ್ಟೆಯಲ್ಲಿ ಒಂದೊಂದು ಅಂಗುಲ ಉದ್ದದ ೪ ರಂಜಕದ ತುಂಡುಗಳು ಬಿದ್ದಿದ್ದುದನ್ನು ಅಲ್ಲಿ ಗುಡಿಸುತ್ತಿದ್ದ ಒಬ್ಬ ಜಾಡಮಾಲಿಯು ನೋಡಿ ಅವು ಏನೆಂದು ತಿಳಿಯದೆ ಹಾದುಹೋಗುತ್ತಿದ್ದ ರೈಲು ಕಂಬಿ ಮೇಲೆ ಬಿಸಾಡಿದನು. ರೈಲ್ವೆ ಇನ್ಸ್‌ಪೆಕ್ಟರು ಅದನ್ನು ಕಾಲು ಮುಟ್ಟಿದಾಗ ಅವರ ಕೈಸುಟ್ಟು ಹೋಯಿತು. ಪೋಲೀಸರು ರಂಜಕದ ತುಂಡುಗಳನ್ನು ವಶಪಡಿಸಿಕೊಂಡು ವಿಚಾರಣೆ ನಡೆಸುತ್ತಿರುವರು.

ವಿಮಾನ ಉರುಳಿತು

ಹಾರುತ್ತಿದ್ದ ಒಂದು ವಿಮಾನ ಒಂದು ಕುಣಿಗಲ್ಲಿನ ಬಳಿ ಕೆಳಕ್ಕೆ ಬಿದ್ದು ಬಿಟ್ಟಿತೆಂದೂ ಯಾರಿಗೂ ಹೆಚ್ಚು ಅಪಾಯ ವಾಗಿಲ್ಲವೆಂದೂ ವರದಿಯಾಗಿದೆ.

ಗಂಡನ ವ್ಯಾಧಿಗಾಗಿ ಮಕ್ಕಳೊಡನೆ ಆತ್ಮಹತ್ಯ

ಪಳನಿ ನಿವಾಸಿ ಗುರುನಾಥ ಚೆಟ್ಟಿಯವರು ಕ್ಷಯ ಖಾಯಿಲೆಯಿಂದ ಬಿದ್ದಿರಲಾಗಿ ಒಂದುವೇಳೆ ಬದುಕದೇ ಹೋದಲ್ಲಿ ತನ್ನ ಮತ್ತು ೭ ಮಕ್ಕಳ ಗತಿ ಏನು ಎಂಬ ಭೀತಿಯಿಂದ ಅವರ ಪತ್ನಿ ತನ್ನ ಮಕ್ಕಳೆಲ್ಲರ ಸಮೇತ ಒಂದು ಕೊಳಕ್ಕೆ ಧುಮುಕಿ ಪ್ರಾಣಬಿಟ್ಟಳು. ಈ ಸುದ್ದಿ ಕೇಳಿ ಗುರುನಾಥ ಚೆಟ್ಟಿಯವರೂ ಕೂಡಲೆ ನಿಧನರಾದರು.

ಗೃಹಕೃತ್ಯದ ನೋಟೀಸ್

ನಂಜನಗೂಡು ತಾಲ್ಲೂಕು ಹದಿನಾರು ಗ್ರಾಮದ ಬಸವಲಿಂಗಯ್ಯನ ಮಗ ಚಿಕ್ಕಮಲ್ಲಪ್ಪನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಈ ಕೆಳಗೆ ಷೆಡ್ಯೂಲಿನಲ್ಲಿ ಕಂಡ ನನ್ನ ಪಾಲಿನ ಸ್ವಸಂಪಾದಿತವಾದ ಸ್ಥಿರಸ್ವತ್ತುಗಳನ್ನು ನನ್ನ ಮಗ ಮಾದಯ್ಯ ಎಂಬುವನು ತನಗೆ ಯಾವ ಹಕ್ಕೂ ಇಲ್ಲದಾಗ್ಯೂ ದುರ್ಜನರ ಸಹವಾಸದಿಂದ ಈ ಆಸ್ತಿಗಳನ್ನು ಪರಭಾರೆ ಮಾಡುವ ತರದೂದಿನಲ್ಲಿ ಇರುವಹಾಗೆ ವರ್ತಮಾನ ಇದೆ. ಹಾಗೆ ಯಾರೇ ಆಗಲಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವ ವಿಧವಾದ ಲೇವಾದೇವಿ ಮಾಡಿದರೂ ಷೆಡ್ಯೂಲ್ ಸ್ವತ್ತುಗಳನ್ನು ಭದ್ರಪಡಿಸುತ್ತಿಲ್ಲ. ಷೆಡ್ಯೂಲ್ ಸ್ವತ್ತುಗಳಲ್ಲಿ ಆತನಿಗೆ ಯಾವ ವಿಧವಾದ ಹಕ್ಕಾಗಲಿ, ಬಾಧ್ಯತೆಯಾಗಲಿ ಇರುವುದಿಲ್ಲವೆಂಬ ಅಂಶವನ್ನು ಈ ಮೂಲಕ ಖಚಿತವಾಗಿ ತಿಳಿಯಪಡಿಸಿರುತ್ತೇ, ತಿಳಿಯುವುದು. ಷೆಡ್ಯೂಲ್ ಹದಿನಾರು ಗ್ರಾಮದಲ್ಲಿ ಪೂರ್ವಕ್ಕೆ ನಂಜುಂಡಯ್ಯನ ಮನೆ, ಪಶ್ಚಿಮಕ್ಕೆ ಗಿಂಡಪ್ಪಯ್ಯನ ಮನೆ, ಉತ್ತರಕ್ಕೆ ಪ|| ಲಿಂಗಯ್ಯನ ನಿವೇಶನ, ದಕ್ಷಿಣಕ್ಕೆ ರಸ್ತೆ, ಈ ಮಧ್ಯೆ ಇರುವ ಹೆಂಚಿನ ಮನೆ, ಒಂಭತ್ತು ಅಂಕಣ ಇದೇ ಗ್ರಾಮದ ಸರ್ವೆ 863, 857, 1681/2, 1026 ಈ ಸರ್ವೆ ನಂಬರುಗಳು ಇವುಗಳು ನನ್ನ ಸ್ವಯಾರ್ಜಿತವಾಗಿರುತ್ತವೆಂತ ಈ ಮೂಲಕ ಎಚ್ಚರಿಸಿದೆ.

೦ ಚಿಕ್ಕಮಲ್ಲಪ್ಪನ ರುಜು.

Edited, printed and published by A. R. Nagarajan, at the Sadhvi Press, D. Subbiah Road, Mysore

[illegible]

ಶ್ರೀಯುರ ಸೌಕರ್ಯಕ್ಕಾಗಿ

ಡಜನ್ [illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಣ್ಣಯ್ಯ ದಿನಸಿ ಮಂಡಿ. ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ — ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲು ಸಕ್ಕರೆ, ಬೂರಾ ಸಕ್ಕರೆ ಸಿಗುತ್ತವೆ. ಕಾಫಿಬೀಜ ಮತ್ತು ಸಂಕೇಶ್ವರ ಬೇಳೆ ಅಪ್ಪಟವಾಗಿ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಿಗುತ್ತವೆ.

[illegible]

ಸಂಪುಟ ೨]   ಮಂಗಳವಾರ ೯--೧೧--೪೬   [ಸಂಚಿಕೆ ೯೫

ಮೈಸೂರಿನಲ್ಲಿ ಕಾಂಗ್ರೆಸ್ಸಿನ ಅಖಂಡ ವಿಜಯ

ಸ್ವತಂತ್ರ ಉಮೇದುವಾರರೊಬ್ಬರ ಹಣ ಮುಟ್ಟುಗೋಲು

ಅಪಮೊರಿಯುವರನ್ನು ಬೇರೆ ಹುದ್ದೆಗೆ ಬದಲಾಯಿಸುವ ಸಂಭವ

ಎಲ್ಲಾ ಸ್ಥಾನಗಳೂ ಕಾಂಗ್ರೆಸ್ಸಿಗೇ ದೊರೆತವು

ಸ್ವತಂತ್ರ ಉಮೇದುವಾರರ ಹಣ ಹೋಯಿತು

ಮೈಸೂರು ೯

ನಿನ್ನೆ ದಿನ ನಡೆದ ಮೈಸೂರು ಪೌರ ಸಭಾ ಚುನಾವಣೆಯ ಓಟುಗಳ ಎಣಿಕೆಯು ಈ ದಿನ ಮಧ್ಯಾಹ್ನ ನಡೆಯಿತು. ಎಲ್ಲಾ ಸ್ಥಾನಗಳೂ ಕಾಂಗ್ರೆಸ್ ಉಮೇದುವಾರರಿಗೇ ದೊರೆತವು. ಸ್ವತಂತ್ರ ಉಮೇದುವಾರರೆಲ್ಲರೂ ಪರಾಜಯ ಹೊಂದಿದರು. ಮಂಡಿ ಮೊಹಲ್ಲೆಯ ಸ್ವತಂತ್ರ ಉಮೇದುವಾರರಾದ ಶ್ರೀ|| ಎಂ. ಎಸ್. ನಂಜಪ್ಪನವರಿಗೆ ಎಂಟನೇ ಒಂದು ಭಾಗಕ್ಕಿಂತ ಕಡಿಮೆ ಓಟುಗಳು ಬಂದುದರಿಂದ ಅವರ ಡಿಪಾಜಿಟ್ಟು ಹಣ ಮುಟ್ಟುಗೋಲಾಗುವುದು.

ಈ ಚುನಾವಣೆಯಲ್ಲಿ ಮೈಸೂರು ನಗರವು ಕಾಂಗ್ರೆಸ್ಸಿಗೇ ಸಂಪೂರ್ಣವಾಗಿ ಬೆಂಬಲವಾಗಿದೆಯೆಂಬುದನ್ನು ಮತ್ತೊಮ್ಮೆ ತೋರ್ಪಡಿಸಿರುತ್ತದೆ. ಕಳೆದ ಸಾರಿ ೨೩ ಸ್ಥಾನಗಳಿಗೆ ಕಾಂಗ್ರೆಸ್ಸು ತನ್ನ ಪ್ರತಿನಿಧಿಗಳನ್ನು ನಿಲ್ಲಿಸಿತ್ತು. ಮುಸ್ಲಿಮ ಸದಸ್ಯರೊಬ್ಬರಿಗೆ ತನ್ನ ಸಹಾನುಭೂತಿಯನ್ನು ತೋರಿಸಿತ್ತು. ಎಲ್ಲರಿಗೂ ವಿಜಯವಾಯಿತು. ಈ ಸಾರಿ ೨೪ ಜನರೂ ಕಾಂಗ್ರೆಸ್ಸಿನವರೇ ಚುನಾಯಿತರಾಗಿದ್ದಾರೆ. ಈ ವಿಜಯವು ಕಾಂಗ್ರೆಸ್ಸಿನ ವಿಜಯವೇ ಸರಿ. ಇದಕ್ಕಾಗಿ ಕಾಂಗ್ರೆಸ್ ಸಂಸ್ಥೆಗೂ ಮಹಾಜನರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಓಟಿನ ವಿವರಗಳು

ಕಿಲ್ಲೆ ಮೊಹಲ್ಲಾ : ಚುನಾಯಿತರಾದವರು - ಶ್ರೀ|| ಎ. ಕೃಷ್ಣಮೂರ್ತಿರಾವ್, ೨೫೪, ಕಾಂಗ್ರೆಸ್.

ಶ್ರೀ|| ಎಂ. ಎ. ರಾಮಸ್ವಾಮಿಯವರು ಸ್ವತಂತ್ರರು, ೨೩೭. ಒಟ್ಟು ಓಟುಗಳು ೫೦೫ ನಿಷ್ಪ್ರಯೋಜಕ ೧೫.

ಚಾಮರಾಜ ಮೊಹಲ್ಲಾ : ಶ್ರೀ|| ಗಳಾದ ಬಿ ನಾರಾಯಣಸ್ವಾಮಿ ೭೦೫, ಅಗರಂ ರಂಗಯ್ಯ ೫೫೯, ಶ್ರೀಮತಿ ಯಶೋಧರ ದಾಸಪ್ಪ ೫೪೪, ಕೆ. ಎಸ್. ಸತ್ಯನಾರಾಯಣರಾವ್ ೪೬೪ [ಕಾಂಗ್ರೆಸ್], ಎ. ವೆಂಕಟೇಶಯ್ಯ ೪೧೭ [ಸ್ವತಂತ್ರರು]

ಒಟ್ಟು ಓಟುಗಳು ೭೩೭, ನಿಷ್ಪ್ರಯೋಜಕವಾದದ್ದು ೧೧.

ಕೃಷ್ಣರಾಜ ಮೊಹಲ್ಲಾ : ಶ್ರೀಗಳಾದ ಸಿ. ಸೀತಾರಾಮಯ್ಯ ೭೪೦, ಎ. ಎ. ಮೋಯಿಸ್ ೬೯೧, ಎ. ವಿ. ಸೂರ್ಯನಾರಾಯಣರಾವ್ ೭೭೭, ಟಿ. ನರಸಿಂಹಯ್ಯಂಗಾರ್ ೭೪೭ [ಕಾಂಗ್ರೆಸ್], ಡಾ|| ಅಣ್ಣಾಜಪ್ಪ ೩೯೨ [ಸ್ವತಂತ್ರರು]

ಒಟ್ಟು ಓಟುಗಳು ೯೮೭, ನಿಷ್ಪ್ರಯೋಜಕ ೧೫

ಮಂಡಿ ಮೊಹಲ್ಲಾ : ಶ್ರೀಗಳಾದ ಟಿ. ಮರಿಯಪ್ಪ ೭೭೫, ರಂಗನಾಮಯ್ಯ ೭೫೧, ಎಂ. ಪಿ. ವೆಂಕಟರಾಮಯ್ಯ ೭೩೨, ಎಂ. ಎಸ್. ನಂಜಪ್ಪ ೭೧೯, ಶೇಖ್ ತಮ್ಮಯ್ಯ ೭೫೧ [ಕಾಂಗ್ರೆಸ್], ಎ.|| ಸುಬ್ಬಲಕ್ಷ್ಮಿ ೫೩೧, ಎ.|| ಅಹಮದ್ ಖಾನ್ ೪೫೭, ಎಂ. ಎಸ್. ನಂಜಪ್ಪ ೧೭೪ [ಸ್ವತಂತ್ರರು]

ಒಟ್ಟು ಓಟುಗಳು ೧೫೪೭, ನಿಷ್ಪ್ರಯೋಜಕವಾದುದು ೩೬

ಲಷ್ಕರ್ ಮೊಹಲ್ಲಾ : ಶ್ರೀಗಳಾದ ಜಿ. ಜಿ. ನಾರ್ಥನನಾಯ್ಡು ೭೭೪, ಎಂ. ೮೮. ಸಿ. ಬಸಪ್ಪ ೭೭೫, ಇ. ಸಿ. ನಂಜಪ್ಪ ೫೭೭, ಚೆಂ

ದ್ರಶೇಖರಗೌಡ ೬೬೧, ವಿ. ಎ. ದಾಸಪ್ಪ ೫೭೫ [ಕಾಂಗ್ರೆಸ್], ಕು|| ಎ. ಮಹಮದ್ ಸೇಟ್ ೬೭೯, ಶ್ರೀ|| ಸಿ. ವೆಂಕಟನಾರಾಯಣಶೆಟ್ಟಿ ೩೪೪, ಡಾ|| ದೇವರಾಜ ೩೧೬, ಎಂ. ಬಿ. ಜೆಂಪ್ರ್ ೨೬೬, ಎ. ಆರ್. ಜಿ. ನಾಯ್ಡು ೨೪೦ [ಸ್ವತಂತ್ರರು].

ಒಟ್ಟು ಓಟುಗಳು ೯೦೫, ನಿಷ್ಪ್ರಯೋಜಕವಾದುದು ೨೬

ವಿಜಯೋತ್ಸವ ಸಭೆ

ರಾಜಧಾನಿಯ ಪೌರ ಸಭಾ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳೂ ಕಾಂಗ್ರೆಸ್ಸಿಗೆ ದೊರಕುವಂತೆ ನಗರ ನಿವಾಸಿಗಳು ಸಹಕರಿಸಿದುದಕ್ಕಾಗಿ ಅವರನ್ನು ಅಭಿನಂದಿಸಲು ಈ ಸಂಜೆ ೭ ಘಂಟೆಗೆ ಸುಬ್ಬರಾಯನ ಕೆರೆಯಲ್ಲಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ. ಶ್ರೀಮಾನ್ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸುವರು. ಶ್ರೀಮಾನ್ ಸಿದ್ದಪ್ಪನಹಳ್ಳಿ ಕೃಷ್ಣಶರ್ಮರೇ ಮೊದಲಾದ ಮುಖಂಡರುಗಳು ಭಾಷಣ ಮಾಡುವವರಾಗಿದ್ದಾರೆ.

ಅರಸು ಶಾಲೆಯ ಸುವರ್ಣೋತ್ಸವ

ಮೈಸೂರು ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಶಾಲೆಯ ಸುವರ್ಣೋತ್ಸವವು ಈ ತಿಂಗಳು [illegible] ನಡೆಯಲು ಏರ್ಪಾಡುಗಳಾಗುತ್ತಿವೆ. ಶ್ರೀಮನ್ಮಹಾರಾಜರವರು ಈ ಉತ್ಸವವನ್ನು ಆಗಮಿಸಿ ಉದ್ಘಾಟಿಸುವರೆಂದು ಗೊತ್ತಾಗಿದೆ.

ಹಿಂದೂ ಸಭೆಯ ಪುನರ್ರಚನೆ

ನಿನ್ನೆ ಸಂಜೆ ರಾಜಧಾನಿಯ ಹಿಂದೂ ಮಹಾಸಭೆಯವರು ತಮ್ಮ ಕಛೇರಿಯಲ್ಲಿ ಸಭೆ ಸೇರಿ ಮುಂದಿನ ಸಾಲಿಗೆ ಶ್ರೀ ವಿ. ವೆಂಕಟಸುಬ್ಬಾ ಪಂಡಿತರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಯುತರುಗಳಾದ ಎಂ. ಚನ್ನರಾಜೆ ಅರಸ್ ಮತ್ತು ಎಂ. ವಿಶ್ವನಾಥ್ ರವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಿರುತ್ತಾರೆ.

ಪೋಲೆಂಡ್ ದಂಡನಾಯಕ

ಪೋಲೆಂಡಿನ ಮಹಾ ದಂಡನಾಯಕರು ಮಧ್ಯ ಪೂರ್ವಕ್ಕೆ ಪ್ರಯಾಣ ಹೊರಟು, ಈಗ ಜಿಬ್ರಾಲ್ಟರಿಗೆ ಬಂದಿರುವುದಾಗಿ ಸುದ್ದಿ.

ಕೇಂದ್ರ ಶಾಸನ ಸಭೆ ಆರಂಭ

ನಿನ್ನೆ ಬೆಳಗ್ಗೆ ದೆಹಲಿಯಲ್ಲಿ ಕೇಂದ್ರ ಶಾಸನ ಸಭೆ ಪ್ರಾರಂಭವಾಯಿತು. ವೈಸರಾಯರು ಸಭೆಗೆ ಹಾಜರಾಗದೆ, ಸಂದೇಶ ಕಳಿಸಿದ್ದರು. ಶಾಂತಿ ನಡೆದದ್ದು ಇದೇ ಮೊದಲನೇ ಬಾರಿ.

ಈಗಲೆ ಭಾಷಣ ಬೇಡ

ಅವರು ತಮ್ಮ ಸಂದೇಶದಲ್ಲಿ ತಾವು ಅಧಿಕಾರಕ್ಕೆ ಬಂದು ಸ್ವಲ್ಪದಿನವಾಗಿರುವುದರಿಂದಲೂ, ದೇಶದ ಆಹಾರ ಪರಿಸ್ಥಿತಿ ಬಗ್ಗೆ ಗಮನ ಕೊಡಬೇಕಾದುದೇ ಈಗ ಮುಖ್ಯವಾದುದರಿಂದಲೂ, ಎಲ್ಲ ವಿಷಯಗಳನ್ನೂ ಕೂಲಂಕುಷವಾಗಿ ಅರಿತುಕೊಂಡಹೊರತು ಈಗಲೇ ತಾವು ಭಾಷಣಕ್ಕೆ ಕೈಹಾಕುವುದಿಲ್ಲವೆಂದೂ, ಬರಲಿರುವ ನಡೆಯುವ ಬಜೆಟ್ ಅಧಿವೇಶನದಲ್ಲಿ ಭಾಷಣ ಮಾಡಲು ಸಾಧ್ಯವಾದೀತೆಂದೂ ತಿಳಿಸಿರುತ್ತಾರೆ.

ಕಾಂಗ್ರೆಸ್ ಪಕ್ಷ ಹಾಜರಾಯಿತು

ಕಾಂಗ್ರೆಸ್ ಪಕ್ಷದವರು ಮೊನ್ನೆ ಸಭೆಯ ಚರ್ಚೆ ಆಹಾರ ಸಮಸ್ಯೆ ಚರ್ಚೆಗಳ ಕಾಲಕ್ಕೆ ಅಧಿವೇಶನಕ್ಕೆ ಹಾಜರಾಗತಕ್ಕದ್ದೆಂದು ನಿರ್ಧರಿಸಿದಂತೆ ನಿನ್ನೆ ೧೦ ಮಂದಿ ಕಾಂಗ್ರೆಸ್ ಸದಸ್ಯರು ಸಭೆಗೆ ಹಾಜರಾಗಿದ್ದರು.

ಸ್ವತಂತ್ರ ಪಕ್ಷದ ಮೆಚ್ಚುಗೆ

ಕಾಂಗ್ರೆಸ್ ಪಕ್ಷದವರು ಅಧಿವೇಶನಕ್ಕೆ ಹಾಜರಾಗಬೇಕೆಂದು ನಿರ್ಧರಿಸಿರುವುದರ ಬಗ್ಗೆ ಸ್ವತಂತ್ರಪಕ್ಷದವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವರು.

ವೇವೆಲ್ಲರ ಹೊಸ ಮಾರ್ಗ

ಭಾರತದ ರಾಜಕೀಯ ಪರಿಸ್ಥಿತಿಯ ಬಿಕ್ಕಟ್ಟನ್ನು ಬಗೆಹರಿಸಲು ವೇವೆಲ್ಲರು ದೇಶದ ರಾಜಕೀಯ ಪಕ್ಷಗಳ ಮುಖಂಡರೊಡನೆ ಕಲೆತು ಸಮಾಲೋಚನೆ ನಡೆಸುವ ಮಾರ್ಗವನ್ನು ಬಿಟ್ಟು, ದೇಶದ ಪ್ರಧಾನ ಪ್ರಜೆಗಳೊಡನೆಯೇ ನೇರವಾಗಿ ಸಂಬಂಧ ಬೆಳೆಸಿಕೊಂಡು ಬಿಕ್ಕಟ್ಟನ್ನು ಪರಿಹರಿಸಲು ಪ್ರಯತ್ನಿಸುತ್ತಿರುವ ಹಾಗಿದೆ. ಈಚೆಗೆ ಅವರು ಕಲ್ಕತ್ತೆಗೆ ಹೋಗಿದ್ದಾಗ ಸಾರ್ವಜನಿಕರೊಡನೆ ಕಲೆತು, ಚರ್ಚಿಸಿದರೆ, ಅದನ್ನು ಉದಾಹರಣೆಯೆಂದು ಅಭಿಪ್ರಾಯಪಡಲಾಗಿದೆ.

ಕಾಂಗ್ರೆಸ್ಸಿನೊಡನೆ ಸಂಧಾನ ಇಲ್ಲ

ಬ್ರಿಟಿಸ್ಸಿನ ಅಧಿಕಾರಿಗಳು [illegible] ಟ್ಟನ್ನು ಬಗೆಹರಿಸಲು [illegible] ಲ್ಲಿ ಕಾಂಗ್ರೆಸ್ಸಿನೊಡನೆ ಸಂಧಾನ ನಡೆಸಿ ಗೋಜಿಗೆ ಕೈಹಚ್ಚುವಂತೆ ಕಂಡು ಬರುತ್ತಿಲ್ಲವಲ್ಲದೆ ಮುಸ್ಲಿಂ ಲೀಗನ್ನು ಎತ್ತಿ ಹಿಡಿಯುವ ತಂಟೆಗೂ ಹೋಗುವುದಿಲ್ಲವೆಂದು ಸರಕಾರಿಯ ಅಧಿಕಾರಿ ಆವರಣದಲ್ಲಿ ವದಂತಿ ಇದೆ.

ಅಪಮೊರಿಯುವರಿಗೆ ಬೇರೆ ಕೆಲಸ?

ಈಗ ಭಾರತ ಕಾರ್ಯದರ್ಶಿಗಳಾಗಿರುವ ಎ|| ಅಪಮೊರಿಯುವರನ್ನು ಆ ಅಧಿಕಾರದಿಂದ ತಪ್ಪಿಸಿ ಬೇರೆ ಅಧಿಕಾರಕೊಡುವಂತೆ [illegible] ಹುಟ್ಟುತ್ತಿದೆಯೆಂದು ಲಂಡನ್ನಿನ ಸ್ಟಾರ್ ಪತ್ರಿಕೆ ಬರೆದಿದೆ.

ಲೀಗ್ ಪಕ್ಷದ ನಿರ್ಣಯ

ಮೊನ್ನೆ ನವಾಬ್ ಜಾದಾ ಲಿಯಾಕತ್ ಆಲಿ ಖಾನರವರ ಅಧ್ಯಕ್ಷತೆಯಲ್ಲಿ ಶಾಸನ ಸಭಾ ಮುಸ್ಲಿಂ ಲೀಗ್ ಪಕ್ಷದವರು ಸಭೆ ಸೇರಿ ತಮ್ಮ ಕಡೆಯಿಂದ ಬಂಗಾಳ ಕ್ಷಾಮ ನಿವಾರಣೆ ಸಾವಿರ ರೂ. ಕೊಡಲು ನಿರ್ಧರಿಸಿದರು. ಅಲ್ಲದೆ ಭಾರತ ಕ್ಷಾಮ ಪರಿಸ್ಥಿತಿ ಚರ್ಚೆಗೆ ಈ ಸಾರಿ ಶಾಸನ ಸಭಾಧಿವೇಶನದಲ್ಲಿ ಹೆಚ್ಚು ಅವಕಾಶ ಕೊಡಬೇಕೆಂದೂ, ಕ್ಷಾಮದ ಬಗ್ಗೆ ಸರ್ಕಾರದ ಶ್ವೇತಪತ್ರವನ್ನು ಹೊರಡಿಸಬೇಕೆಂದೂ ನಿರ್ಧರಿಸಿರುತ್ತಾರೆ.

ತುರ್ಕಿ ಬೇಲಿ ಕಡಿಯುವ ಪ್ರಯತ್ನ

ಕಳೆದ ವಾರ ತುರ್ಕಿ ಮಿಲಿಟರಿ ಅಧಿಕಾರಿಯೊಬ್ಬನು ಬಲ್ಗೇರಿಯಿಂದ ಇಸ್ತಾಂಬೂಲ್‌ಗೆ ರೈಲಿನಲ್ಲಿ ಬರುತ್ತಿದ್ದಾಗ ಸಾಫಿಯಾ ಸ್ಟೇಷನ್ನಿನಲ್ಲಿ ಇಳಿದವರೊಬ್ಬರು ಆ ಮಿಲಿಟರಿ ಅಧಿಕಾರಿಯು ತುರ್ಕಿ ಸರ್ಕಾರಕ್ಕೆ ತಲುಪಿಸಲು ತನ್ನೊಡನೆ ಸಾಗಿಸುತ್ತಿದ್ದ ಚೀಲವನ್ನು ಕದ್ದು ಎತ್ತಿಕೊಂಡು ಹೋಗುತ್ತಿದ್ದನೆಂದೂ ಚೀಲ ಹೋಯಿತೆಂದು ಕೂಗಿಕೊಂಡಾಗ ಕಳ್ಳನು ಅದನ್ನು ಕೆಡವಿ ಕಣ್ಮರೆಯಾದನೆಂದೂ ಅಂಕಾರಾದಿಂದ ವಾರ್ತೆ ಬಂದಿದೆ.

ಪೋಪರು ಕದಲುವುದಿಲ್ಲ

ಜರ್ಮನಿ ಸರ್ಕಾರದ ಪೋಪರಿಗೆ ತಮ್ಮ ದೇಶದ ಗಡಿಗೆ ಬಂದು ರಕ್ಷಣೆ ಪಡೆಯಬೇಕೆಂದು ಆಹ್ವಾನ ಕಳಿಸಿದ್ದಾಗಿಯೂ, ಅದಕ್ಕೆ ಪೋಪರು 'ತಾವು ಎಂಥ ಸಂದರ್ಭ ಒದಗಿದರೂ ರೋಂ ನಗರವನ್ನು ಬಿಡುವುದಿಲ್ಲ' ಎಂದು ಜವಾಬುಕೊಟ್ಟುದಾಗಿಯೂ ವರದಿಯಾಗಿದೆ.

ಲಂಡನ್ನಿನ [illegible] ಟಿಟಿಷ್ನ ಮಂತ್ರಿ [illegible] ಗಳಾಗುವಂತೆ [illegible] ವರ್ಷ [illegible] ಕೆ ಅಧಿಕಾರ [illegible] ಲಾಗುವುದು

[illegible] ನ ನಾಗಪುರ [illegible] ಭಿಕಾರಿಗಳನ್ನು [illegible] ನ ಕೆಗೆ [illegible] ನರು [illegible] ತ್ತಾಗುವುದು.

ದಿಪಾವಳಿಯಿಂದ ಆರಂಭೋತ್ಸವ

ಬೆಂಗಳೂರು ೮

ಇದೇ ತಿಂಗಳು ೨೮ ಮತ್ತು ೨೯ ನೇ ತಾ॥ ಬೆಂಗಳೂರಿನಲ್ಲಿ ನಡೆಯಲಿರುವ ಸಂಸ್ಥಾನದ ವರ್ತಕರ ಸಮ್ಮೇಳನದ ಆರಂಭೋತ್ಸವವನ್ನು ದಿವಾನರಾದ ಪ್ರಧಾನ ಶಿರೋಮಣಿ ಎನ್ ಮಾಧವರಾಯರು ನೆರವೇರಿಸುವರು

ಗಣಿಯಲ್ಲಿ ಅನಾಹುತ

ನಿನ್ನೆ ಬೆಳಗ್ಗೆ ಚಾಂಪಿಯನ್ ರೀಫ್ ಗಣಿಯಲ್ಲಿ ಬಂಡೆಯೊಂದು ಸಿಡಿದು ೬ ಮಂದಿ ಹೊತು ಹೋಗಿರುವರೆಂದು ತಿಳಿದುಬಂದಿದೆ

ಕೋರ್ಟಿಗೆ ಬರಬೇಕಿಲ್ಲ

ಹೊಳೆನರಸೀಪುರದ ಉತ್ತರಾದಿವ ರದ ಸತ್ಯಪ್ರಕಾಶತೀರ್ಥಸ್ವಾಮಿಗಳು ಕೋರ್ಟಿಗೆ ಹಾಜರಾಗಬೇಕೆಂದು ಸರ್ಕಾರದ ಅಜ್ಞೆಯಾಗಿತ್ತು. ಈಗ ಅವರು ಕೋರ್ಟಿಗೆ ಹಾಜರಾಗಬೇಕಾಗಿಲ್ಲ ಎಂಬ ವರಿಷ್ಠರಿಂದ ಅಜ್ಞೆ ಹೊರಟಿದೆ

ರೈಲ್ವೆ ಅನಾಹುತವಾದೆಡೆಗೆ ದಿವಾನರು

ದಿವಾನರು ಭದ್ರಾವತಿಗೆ ಭೇಟಿಕೊಡುವ ಕಾರ್ಯಕ್ರಮವಿರ ಪ್ರವಾಗಿಯೂ, ಅಗ ಇಷ್ಟು ಮುಂದೆ ಆನಂದಪುರಕ್ಕೆ ಹೋಗಿ, ರೈಲ್ವೆ ಅನಾಹುತ ನಡೆದ ಜಾಗವನ್ನು ಪರಿಶೀಲಿಸಿ ಬರುವರೆಂದೂ ಹೇಳಲಾಗಿದೆ

ಕಾಫಿ ಪ್ಲಾಂಟರರ ನಿಯೋಗ

ಕಡೂರು ಮತ್ತು ಸಕಲೇಶಪುರದ ಎಲ್ಲ ಕಾಫಿ ಪ್ಲಾಂಟರುಗಳೂ ನಿನ್ನೆ ಮಧ್ಯಾಹ್ನ ಸಂಸ್ಥಾನದ ಆಹಾರ ಸಚಿವರ ಬಳಿಗೆ ನಿಯೋಗ ತಂದಿದ್ದರು ಕೃಷಿಕ ವೃತ್ತಿಯವರಿಗೆ ಪಡಿತರ ಕೊಟ್ಟು, ಹೊರಡಿಸಲಾಗಿದ್ದ ಅಜ್ಞೆ ಬದಲಾವಣೆಯಾಗಲೀ, ವಾಪಸ್ಸಾಗಲೀ ಆಗಕೂಡದೆಂದು ಪ್ರಾರ್ಥಿಸಿಕೊಂಡರು ಸಚಿವರು ಹಾಗೇನೂ ಆಗಲಾರದೆಂದು ಭರವಸೆಯಿತ್ತರಂತೆ

ಕಾಮರ್ಸ್ ಕ್ಷೇತ್ರದಲ್ಲಿ ನಡೆದ ಚುನಾವಣೆ

ಬೆಂಗಳೂರು ನಗರ ಸಭೆಗೆ ಮೈಸೂರು ಛೇಂಬರ್ ಆಫ್ ಕಾಮರ್ಸ್ ಕ್ಷೇತ್ರದಿಂದ ೬ ನೇ ತಾ॥ ಚುನಾವಣೆ ನಡೆದು ಶ್ರೀ ಕೆ ಎಂ ನಾಗಣ್ಣನವರು ಜಯಶಾಲಿಗಳಾಗಿದ್ದಾರೆ ಇವರೊಡನೆ ಸ್ಪರ್ಧಿಸಿದ್ದ ಶ್ರೀ ಜಿ ವಿ ರುದ್ರಪ್ಪನವರಿಗೂ ಇವರಷ್ಟೆ ಓಟ್ಟು ಬಂದಿದ್ದರೂ ಇಬ್ಬರ ಸಮ್ಮತಿ ಮೇರೆ ಲಾಟರಿ ಹಾಕಿದಾಗ ಶ್ರೀ ನಾಗಣ್ಣನವರಿಗೆ ವಿಜಯ ಲಭಿಸಿತು

ಬ್ಲೇಡ್ ಕಳ್ಳರಿಗೆ ಶಿಕ್ಷೆ ಕಮ್ಮಿ ಬಿತ್ತು

ಬೆಂಗಳೂರು ಎರಡನೆ ನ್ಯಾಯಾಧೀಶರ ದಫೇದಾರರಾದ ಚನ್ನಯ್ಯ ಮತ್ತು ನಂಜಯ್ಯ ಎಂಬುವರು ಕೋರ್ಟಿನ ಸ್ವಾಧೀನದಲ್ಲಿದ್ದ ಬ್ಲೇಡುಗಳನ್ನು ಕದ್ದು ಮಾರಿದ ತಪ್ಪಿಗಾಗಿ ಸಿಟಿ ಮ್ಯಾಜಿಸ್ಟ್ರೇಟರು ಕಲಾ ೬ ತಿಂಗಳು ಕಠಿಣಶಿಕ್ಷೆ ಮತ್ತು ನೂರಲನೆಯುವ ನಿಗೆ ೫೦ ರೂ ಜುಲ್ಮಾನೆ ವಿಧಿಸಿದ್ದರು ತಪ್ಪಿತಸ್ಥರು ಅಪೀಲುಮಾಡಿಕೊಳ್ಳಲಾಗಿ, ಸಷನ್ಸ್ ನ್ಯಾಯಾಧೀಶರು ಮೊದನೆಯವನಿಗೆ ಜುಲ್ಮಾನೆ ವಜಾ ಮಾಡಿದ್ದಲ್ಲದೆ, ಎಂಡನೆಯವನಿಗೆ ೩ ತಿಂಗಳು ಶಿಕ್ಷೆ ಕಡಿಮೆಮಾಡಿದರು

ಬಾಕು ಹೊಡೆತದಿಂದ ಸಾವು

ಬೆಂಗಳೂರು ಗೋರಿ ಪಾಳ್ಯದ ಕದರ ಎಂಬುವನನ್ನು ೩ ದಿನದ ಕೆಳಗೆ ಯಾರೊ ದುರಾತ್ಮರು ಬಾಕುವಿನಿಂದ ತಿವಿದು, ತೀವ್ರ ಘಾಯಪಡಿಸಿದರು. ಅತನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದನು ಸ್ಥಿತಿ ಚಿಂತಾಜನಕವಾದಾಗ ಅತನಿಂದ ಸಿಟಿ ಮ್ಯಾಜಿಸ್ಟ್ರೇಟರು ಹೇಳಿಕೆತೆಗೆದುಕೊಂಡರು ಮೊನ್ನೆಯ ರಾತ್ರಿ ಅವನು ಮರಣಹೊಂದಿದನು ಮುಂದಿನ ತನಿಖೆ ಜರುಗುತ್ತಿದೆ.

ಮಲೇರಿಯಾ ನಿವಾರಣೆಗೆ ನಿಧಿ

ಹಾಸನ ಜಿಲ್ಲೆಯ ಸಕಲೇಶಪುರ ಮತ್ತು ಕೆಂಚಮ್ಮನ ಹೊಸಕೋಟೆ ತಾಲ್ಲೂಕುಗಳಲ್ಲಿನ ಮಲೇರಿಯಾ ನಿವಾರಣೆಗಾಗಿ ೯,೯೩೦ ರೂ ನಿಧಿ ತಯಾರಾಗಿದೆ

ಸಚಿವರ ಪ್ರವಾಸ

ಬಳ್ಳಾರಿಗೆ ತೆರಳಿದ್ದ ಪಬ್ಲಿಕ್ ವರ್ಕ್ಸ್ ಸಚಿವರಾದ ಎ॥ ಟಿ. ಎಂ. ಇವಾಂಸರು ನಿನ್ನೆ ಬೆಳಗ್ಗೆ ಬೆಂಗಳೂರಿಗೆ ವಾಪಸ್ಸು ಬಂದರು.

ಘಾಯದಿಂದ ನೊಂದವರು ಚೇತರಿಸಿಕೊಂಡರು

ಆನಂದಪುರ ರೈಲ್ವೆಯ ಅಪಘಾತದಲ್ಲಿ ಘಾಯಗೊಂಡು ಚಿಕಿತ್ಸೆ ಪಡೆಯುತ್ತಿರುವವರು ಈಗ ಗುಣಮುಖರಾಗುತ್ತಿರುವರೆಂದು ವರದಿಯಾಗಿದೆ.

ರೋಂಗೆ ಬಾಂಬಿನ ಹೊಡೆತ

ಶುಕ್ರವಾರ ರಾತ್ರಿ ಒಂದು ವಿಮಾನವು ರೋಂ ನಗರದ ಮೇಲೆ ೪ ಬಾಂಬುಗಳನ್ನು ಹಾಕಿತು ರೈಲ್ವೆ ನಿಲ್ದಾಣದ ಮೇಲೆ ೧ ಬಾಂಬು ಬಿತ್ತು, ಗೌರ್ನರರ ಅರಮನೆಗೂ ಸಹ ವಿಶೇಷ ನಷ್ಟವುಂಟಾಗಿದೆ

ರಷ್ಯನರು ಕೀವ್ ದಾಟಿದರು

ಮೊನ್ನೆ ಜರ್ಮನರಿಂದ ಕೀವ್ ನಗರವನ್ನು ಕಿತ್ತುಕೊಂಡ ರಷ್ಯನರು ಈಗ ಅಲ್ಲಿಂದ ಮುಂದೆ ೩೦ ಮೈಲಿ ದೂರ ಹೋಗಿದ್ದಾರೆ. ಫೋಸ್ಟೋವ್ ಎಂಬ ಮುಖ್ಯ ರೈಲ್ವೆ ಜಂಕ್ಷನ್ ಇವರ ವಶವಾಗಿದೆ ಈ ರೈಲ್ವೆ ಜಂಕ್ಷನ್ ಹಿಡಿದಿದ್ದರಿಂದ ಜರ್ಮನರ ಪ್ರತಿಭಟನೆಗೆ ದೊಡ್ಡ ಅಡಚಣೆ ಉಂಟಾಗಿದೆಯೆಂದು ಸ್ಟಾಲಿನ್ನರು ವಿವರಿಸಿದ್ದಾರೆ

ಜರ್ಮನರ ಪಲಾಯನ

ಇಟಲಿ ಮಧ್ಯಭಾಗದ ಅಪ್ಪೆನೈನ್ಸ್‌ನಲ್ಲಿ ಇನ್ನೂ ಮೂರು ಪಟ್ಟಣಗಳಿಂದ ಜರ್ಮನರು ಪಲಾಯನ ಮಾಡಿರುವರು ಇಸರ್ನಿಯಾ ಪಟ್ಟಣದಿಂದ ಆಚೆ ೯ ಮೈಲಿ ದೂರಕ್ಕೆ ಮಿತ್ರಸೈನ್ಯಗಳು ಹೋಗಿವೆ

ರೋಂನಲ್ಲಿ ನೀರಿಲ್ಲ

ನೀರಿನ ಗಣಿಗಳಿಗೆ ಬಾಂಬಿನ ಹೊಡೆತ ಬಿತ್ತಾಗಿ ರೋಂನಲ್ಲಿ ನೀರೇ ಸಿಗುತ್ತಿಲ್ಲ. ಪೋಪರ ಅಜ್ಞೆಯಂತೆ ಸ್ಥಾಪನೆಯಾದ ಕೊಳಾಯಿಗಳು ರೋಂಗೆ ಈಗ ನೀರನ್ನು ಒದಗಿಸುತ್ತವೆ

ಪೋಪರ ಅಜ್ಞೆ

ರೋಂ ಸರ್ಕಾರದವರು ರೋಂಗೆ ಬಾಂಬಿನ ಹೊಡೆತ ಕೊಟ್ಟವರ ಬಗ್ಗೆ ತಕ್ಕ ವಿಚಾರಣೆಯನ್ನು ನಡೆಸತಕ್ಕದ್ದೆಂದು ಪೋಪರು ಅಜ್ಞಾಪಿಸಿದ್ದಾರೆ

ಈಜಿಪ್ಟ್ ಪಾರ್ಲಿಮೆಂಟ್

ಈಜಿಪ್ಟ್ ಪಾರ್ಲಿಮೆಂಟ್ ಸಭೆಯು ಇದೇ ತಿಂಗಳು ೧೮ ನೇ ತಾ॥ ಸೇರತಕ್ಕದ್ದೆಂದು ಫರೂಕ್ ದೊರೆಗಳು ಅಜ್ಞಾಪಿಸಿರುವರು

ಬಿಡುಗಡೆ ಮತ್ತು ಪ್ರತಿಬಂಧಕ

ಪಂಜಾಬ್ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಮಾಜಿ ಮುಖಂಡರಾದ ಡಾ॥ ಗೋಪೀಚಂದ್ ಭಾರ್ಗವರನ್ನು ಲಾಹೋರಿನ ಸೆರೆಮನೆಯಿಂದ ಅನಾರೋಗ್ಯ ಕಾರಣವಾಗಿ ಮೂರು ತಿಂಗಳು ಪೆರೋಲ್ ಮೇಲೆ ಬಿಡುಗಡೆ ಮಾಡಲಾಗಿದೆ ಜೊತೆಯಲ್ಲೇ ಇವರು ಹಿಸ್ಸಾರ್ ಊರನ್ನು ಬಿಟ್ಟು ತೆರಳಕೂಡದೆಂಬ ಪ್ರತಿಬಂಧಕಾಜ್ಞೆಯೂ ಜಾರಿಯಾಗಿದೆ

ಕೇಂದ್ರ ಸರ್ಕಾರದ ನೀತಿ ಖಂಡನೆ

ನಿನ್ನೆ ಕೇಂದ್ರ ಶಾಸನ ಸಭೆಯ ಮುಂದೆ ಡಾ॥ ದೇಶ್‌ಮುಖ್‌ರವರು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದರು ಭಾರತ ಯುದ್ಧ ಪ್ರಯತ್ನದ ಬಗ್ಗೆ ಬ್ರಿಟನ್ ಮತ್ತು ಅಮೇರಿಕಾಗಳಲ್ಲಿ ಸಂಭಾಷಿಸಲು ಖಾಸಗೀ ಮಂಡಲಿಯನ್ನು ಭಾರತ ಸರ್ಕಾರವು ಅರಿಸಿ ಕಳುಹಿಸಿರುವ ನೀತಿಯನ್ನು ಖಂಡಿಸುವುದೇ ಆ ನಿಲುವಳಿ ಸೂಚನೆಯ ಉದ್ದೇಶವಾಗಿತ್ತು. ಸೂಚನೆಯು ಬಹುಮತದಿಂದ ಅನುಮೋದಿಸಲ್ಪಟ್ಟಿತು

ತಿರುವಾಂಕೂರು-ಕೊಚ್ಚಿಗೆ ಅಕ್ಕಿ

ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳ ಅಕ್ಕಿ ಅಭಾವವನ್ನು ನೀಗಲು ದೆಹಲಿಯಿಂದಲೇ ಸಾವಿರ ಟನ್ ಅಕ್ಕಿ ರವಾನಿಸಲು ಏರ್ಪಾಡುಗಳು ನಡೆದಿರುವುದಾಗಿ ಸಮಾಚಾರ

Edited, printed and published by A. R. Nagarajan, at the Sadhvi Press, D Subbiah Road, Mysore.

ಓಟಿಂಗ್ ಲಿಸ್ಟಿನಲ್ಲಿ ಕಡೇ ನಂಬರು ! ಹುಡುಕಬೇಕಾಗಿಲ್ಲ !!

ಚುನಾವಣೆ ; ಯಾವುದು ಗೊತ್ತೆ ?

೧೯೪೩ ನೇ ನವಂಬರ್ ೧೪ ನೇ ಭಾನುವಾರ

ಮೈಸೂರು ಕೋ-ಆಪರೇಟಿವ್ ಸೊಸೈಟಿ ಡೈರೆಕ್ಟರುಗಳ ಚುನಾವಣೆಗೆ

ನಾನೂ ಒಬ್ಬ ಉಮೇದವಾರನಾಗಿದ್ದೇನೆ.

S K P ಸೊಸೈಟಿಯ ವೈಸ್ ಪ್ರೆಸಿಡೆಂಟ್ ಆಗಿಯೂ, ಈ ಸೊಸೈಟಿಯ ಡೈರೆಕ್ಟರಾಗಿಯೂ ತಮ್ಮ ಸೇವೆಯನ್ನು ನಿಷ್ಪಕ್ಷಪಾತತೆಯಿಂದಲೂ ನಿರ್ದಾಕ್ಷಿಣ್ಯದಿಂದಲೂ ಸಲ್ಲಿಸುತ್ತಿರುವುದು ನಿಮಗೆ ತಿಳಿದೇ ಇದೆ.

ಚುನಾವಣೆ ದಿನ ಬಂದು ತಮ್ಮ ಓಟನ್ನು ನನಗೆ ಕೊಡಬೇಕಾಗಿ ಕೋರುತ್ತೇನೆ.

ಜಿ. ವಿ. ಸೂರ್ಯನಾರಾಯಣಶೆಟ್ಟಿ

ಜುಯಲರ್, ರೆಡಿಮೇಡ್ ಡ್ರೆಸ್ & ಬನಾರಸ್ ಸಾರಿ ಎಂಪೋರಿಯಂ, ಸಯ್ಯಾಜಿರಾವ್ ರೋಡ್, ಮೈಸೂರು.

ಯಾವ ನಂಬರೆಂದು ಹುಡುಕಬೇಡಿ—ಓಟಿಂಗ್ ಲಿಸ್ಟಿನಲ್ಲಿ ಕಡೇ ನಂಬರು.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧೧-೧೧-೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟೆಂಪ್ಪ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಶಿ ಸೂ ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ ಇಲ್ಲಿ ಮತ್ತು ಸಂತೆಪೇಟೆ ಬ್ರಾಂಚ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ

C. R. ANANTHACHARYA only authorised agent for INDIAN EXPRESS, DINAMANI AND ANDHRA PRABHA, 2912, Saraswathipuram, Mysore, requests the subscribers to have direct dealings with him for prompt and regular supply of these papers and to demand his own receipt when subscriptions are paid

Any other information can be had at THE MYSORE ELECTRICAL ENGINEERING COMPANY, Lansdowne Buildings, MYSORE.

ಸಂಪುಟ ೨] ಬುಧವಾರ ೧೦--೧೧--೪೩ [ಸಂಚಿಕೆ ೯೬

‘ಆಮೆರಿಯುವರ ಪ್ರತಾಪ ಸಾಕು’

ಅಭಿನಂದನಾ ಸಭೆ

ಮೈಸೂರು ೧೦

ಕೌನ್ಸಿಲ್ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಉಮೇದುವಾರರಿಗೆ ವಿಜಯವನ್ನು ಗಳಿಸಿಕೊಟ್ಟಿದ್ದಕ್ಕಾಗಿ ಅಭಿನಂದನೆಯನ್ನರ್ಪಿಸಲು ನಿನ್ನೆ ಸಾಯಂಕಾಲ ಸುಬ್ಬರಾಯನ ಕೆರೆ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಶ್ರೀ ಎಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ನಗರವು ಕಳೆದ ಸಾರಿಯಂತೆಯೇ ಈ ಸಲವೂ ಎಲ್ಲಾ ಕಾಂಗ್ರೆಸ್ ಉಮೇದುವಾರರಿಗೇ ಬೆಂಬಲ ಕೊಟ್ಟು ತನ್ನ ಕಾಂಗ್ರೆಸ್ ಪ್ರೇಮವನ್ನು ತೋರ್ಪಡಿಸಿರುವಾಗ ಕಾಂಗ್ರೆಸ್ ವಿರೋಧಿಗಳಿಗೆ ಬೇರೆ ಉತ್ತರವನ್ನು ಕೊಡುವ ಅಗತ್ಯವೇ ಇಲ್ಲ—ಎಂದು ಅವರು ಹೇಳಿದರು.

ಶ್ರೀ ಸಿದ್ದಪ್ಪನಹಳ್ಳಿ ಕೃಷ್ಣಶರ್ಮರವರು ಭಾಷಣ ಮಾಡಿ, ಇದು ಅನ್ಯಾಯವಾದ ವಿಜಯವೆಂದೂ ಹದಿನೈದು ತಿಂಗಳಿಂದ ಬಂಧನದಲ್ಲಿರುವ ಮುಖಂಡರಿಗೆ ಮೈಸೂರಿನವರು ತೋರಿಸಿರುವ ಕಾಂಗ್ರೆಸ್ ಪ್ರೇಮವು ಬಹಳ ಸಂತೋಷವನ್ನುಂಟುಮಾಡುವುದೆಂದೂ ಹೇಳಿದರು.

ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಕಾಂಗ್ರೆಸ್ಸಿನ ಮೇಲೆ ಬಂದಿರುವ ಟೀಕೆಗಳಿಗೆ ಸೂಕ್ತವಾದ ಉತ್ತರವಿತ್ತರು.

ಕಾಂಗ್ರೆಸ್ಸಿನಲ್ಲಿ ಎಷ್ಟೋ ಜನರು ಬಂದರು, ಎಷ್ಟೋ ಜನರು ಹೋದರು, ಆದರೂ ಆ ಸಂಸ್ಥೆಯು ಅಚ್ಚಳಿಯದೇ ಪ್ರಕಾಶಿಸುತ್ತಿದೆಯೆಂದು ಶ್ರೀ ಪಿ. ಸ್ವಾಮಿದಾಸರು ತಿಳಿಸಿದರು.

ಜಯಕಾರದೊಡನೆ ಸಭೆ ಮುಗಿಯಿತು.

ರೇಷನ್ ಸೆನ್ಸಸ್‌ನಲ್ಲಿ ಸಾರ್ವಜನಿಕರ ಕರ್ತವ್ಯ

ರಾಜಧಾನಿಯಲ್ಲಿ ಇದೇ ಮಾಹೆ ೧೩, ೧೪ ಮತ್ತು ೧೫ ನೇ ತಾರೀಖುಗಳಲ್ಲಿ ನಡೆಯುವ ರೇಷನ್ ಸೆನ್ಸಸ್ ವಿಚಾರವಾಗಿ ಜನಗಳಿಗೆ ತಿಳುವಳಿಕೆ ಮಾಡುವ ಸಲುವಾಗಿ ನಿನ್ನೆ ಸಂಜೆ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಪೌರಸಭಾಧ್ಯಕ್ಷರಾದ ಶ್ರೀ [illegible] ಚಂದ್ರಶೇಖರ್ ಜೋಯಿಸರವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು.

ಅಧ್ಯಕ್ಷರು ರೇಷನಿಂಗ್ ಉದ್ದೇಶವನ್ನು ವಿವರಿಸಿ, ಪ್ರತಿಯೊಂದು ಸಂಸಾರದವರು ಉಪಯೋಗಿಸುವ ಆವಶ್ಯಕ ವಸ್ತು [illegible] ಪದಾರ್ಥಗಳು ಸಿಕ್ಕಲೆಂದು, ಈ ವಿಷಯದಲ್ಲಿ ಯಾವ ತೊಂದರೆಯೂ ಉಂಟಾಗದಿರಲೆಂದೇ ಉದ್ದೇಶವೆಂದು ತಿಳಿಸಿ, ಈಗಿನ ಆಹಾರ ಪದಾರ್ಥಗಳ ಉತ್ಪತ್ತಿ [illegible] ಯಾಗಿ ಬೇಕಾದಷ್ಟು ಇಲ್ಲದಿರುವುದರಿಂದ, ಸರ್ಕಾರದವರು ಎಲ್ಲಾ ಧಾನ್ಯಗಳನ್ನು ಒಂದು ವಿಧಾನದಲ್ಲಿ ಜನರಿಗೆ ಹಂಚಬೇಕೆಂದು ಮಾಡಿರುವ ವ್ಯವಸ್ಥೆಗೆ ಸಾರ್ವಜನಿಕರೆಲ್ಲರೂ ಸಹಕರಿಸಿ, ಆದಕಾರಣ ಸರಿಯಾದ ವಿವರಗಳನ್ನು ಕೊಡಬೇಕೆಂದು ಕೋರಿದರು. ಜನಗಳು ತಮ್ಮಲ್ಲಿರುವ ಧಾನ್ಯದ ಬಗ್ಗೆ ವಿವರಗಳನ್ನು ಕೊಡಬೇಕೆಂದು ಪ್ರಾರ್ಥಿಸಿದರು.

ನಂತರ ಬೆಂಗಳೂರು ನಗರ [illegible] ರೇಷನ್ ಸೆನ್ಸಸ್ ಆಫೀಸರ್ ಶ್ರೀ ಅನಂತರಾಮಯ್ಯನವರು [illegible] ರೇಷನಿಂಗ್ ವ್ಯವಸ್ಥೆಯನ್ನು ವಿವರಿಸಿ [illegible] ಇದರಲ್ಲಿ [illegible] ರೇಷನಿಂಗ್ ಸಲುವಾಗಿ [illegible] ತಿಳಿಸಿದರು.

ವಂದನಾರ್ಪಣೆ

ಕಾಂಗ್ರೆಸ್ ಚುನಾವಣಾ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಹೀಗೆ ಬರೆಯುತ್ತಾರೆ: ತಾರೀಖು ೬ ೧೧-೪೩ ರಲ್ಲಿ ನಡೆದ ಪೌರಸಭೆಯ ಚುನಾವಣೆಗಳಲ್ಲಿ ಮೈಸೂರು ಕಾಂಗ್ರೆಸ್ಸಿನ ಪರವಾಗಿ [illegible] ಜನ ಉಮೇದುವಾರರೂ ಉತ್ತೀರ್ಣರಾಗುವಂತೆ ಮಾಡಿ, ಮೈಸೂರು ಕಾಂಗ್ರೆಸ್ಸಿಗೆ ಪೂರ್ಣ ಬೆಂಬಲ ಮತ್ತು ವಿಶ್ವಾಸವನ್ನು ತೋರಿಸಿದ್ದಕ್ಕಾಗಿ ಮೈಸೂರು ನಗರದ ಪುರಜನರಿಗೆ ನಮ್ಮ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ.

ಅನಾವರಣೋತ್ಸವ

ಮೈಸೂರು ವಿಶ್ವವಿದ್ಯಾಲಯದ ಫಿಲಾಸಫಿ ಅಸೋಸಿಯೇಷನ್ ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಮಹಾರಾಜ ಕಾಲೇಜಿನ ಆವರಣದಲ್ಲಿ ಡಾ|| ಬಿ. ಎ. [illegible] ರವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಮಹಾರಾಜ ಕಾಲೇಜಿನ ಫಿಲಾಸಫಿ [illegible] ದಿವಂಗತ ಶ್ರೀ ಆರ್. [illegible] ಭಾವಚಿತ್ರ ಅನಾವರಣೋತ್ಸವವನ್ನು ಪ್ರೊ|| ಎ. ಆರ್. ವಾಡಿಯಾರವರು ನೆರವೇರಿಸಿದರು.

೧೩, ೧೫ ತಾ|| ಸಾರ್ವಜನಿಕ ರಜ

ಇದೇ ಮಾಹೆ ೧೩ ಮತ್ತು ೧೫ ನೆಯ ತಾ|| ರೇಷನ್ ಸೆನ್ಸಸ್ ತೆಗೆದುಕೊಳ್ಳುವ ಪ್ರಯುಕ್ತ ಆ ದಿವಸಗಳು ಸಾರ್ವಜನಿಕ ರಜವೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಫುಟ್ ಬಾಲ್ ಪಂದ್ಯ

ನಿನ್ನೆ ಸಂಜೆ ಒಂದು ಪ್ರದರ್ಶನ ಫುಟ್‌ಬಾಲ್ ಪಂದ್ಯ ನಡೆದು, ಮೈಸೂರು ಟೀಮಿನವರು ರಾಯಲ್ ಸಿಗ್ನಲ್ಸ್ ಆರ್ಮಿ ಟೀಮಿನವರನ್ನು ಒಂದು ಗೋಲಿನಿಂದ ಸೋಲಿಸಿದರು.

ಬೆಂಗಳೂರಿನ ಅಭಿನಂದನೆ

ಬೆಂಗಳೂರು ನಗರ [illegible] ಅಧ್ಯಕ್ಷರಾದ ಶ್ರೀ ವಿ. ಕೆ. ಗೋವಿಂದರಾಜುಲುರವರು ಮೈಸೂರಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಸಂಪೂರ್ಣ ಜಯ ಲಭಿಸಿಕೊಟ್ಟಿದ್ದಕ್ಕಾಗಿ ಅವರನ್ನು ಅಭಿನಂದಿಸಿರುವರು.

ಆರ್ಮಿಸ್ಟಿಸ್ ದಿನಾಚರಣೆ

ಈ ತಿಂಗಳು ೧೧ ನೆ [illegible] ಗೆ ಸರಿಯಾಗಿ ಎಲ್ಲರೂ [illegible] ಗಳಲ್ಲೇ ಎರಡು ನಿಮಿಷ [illegible] ಬೇಕೆಂದು ಸರ್ಕಾರದವರು ಸೂಚನೆ ಕೊಟ್ಟಿದೆ.

ಸೀಮೆಎಣ್ಣೆ ಕೊರತೆ

ಕನ್ನೇಗೌಡನ ಕೊಪ್ಪಲಿನಲ್ಲಿ ಸೀಮೆಎಣ್ಣೆ ಡಿಪೋ ಇಲ್ಲದೆ ಅಲ್ಲಿನ ಜನರು ಕತ್ತಲೆ ಮನೆಯಲ್ಲಿ ವಾಸಮಾಡುವ ಸ್ಥಿತಿ ಬಂದಿದೆ. ಆದಕಾರಣ ಸರ್ಕಾರದ ಡಿಪೋವಿನವರು ಅಲ್ಲಿ ಒಂದು ಡಿಪೋವನ್ನು ಕೂಡಲೇ ಇಡಿಸಬೇಕೆಂದು ಪೌರಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ಸೂಚಿಸಿದ್ದಾರೆ.

ಶಿಸ್ತಿನ ವ್ಯಾಪ್ತಿ ಪರಿಶೀಲನೆ

ಮೈಸೂರು ವಿಶ್ವವಿದ್ಯಾನಿಲಯದ ಕೌನ್ಸಿಲ್ ಸಭೆಯು ೧೧ ನೆಯ ತಾರೀಖು ಎ. ಜೆ. ಕಾಲ್ವರ್ಟ್‌ರವರ ಅಧ್ಯಕ್ಷತೆಯಲ್ಲಿ ಸೇರಿ ವಿಶ್ವವಿದ್ಯಾನಿಲಯದ ರೂಲ್ಸು ಮತ್ತು ರೆಗ್ಯುಲೇಷನ್ನುಗಳನ್ನು ಎಷ್ಟರ ಮಟ್ಟಿಗೆ ಪಾಲಿಸಬೇಕೆಂಬ ವಿಷಯ. ಚರ್ಚೆ ನಡೆಯುವುದೆಂದು ಗೊತ್ತಾಗಿದೆ.

ದಾಸ್ತಾನು ಲೆಕ್ಕಕೊಡದವರಿಗೆ ವ್ಯಾಪಾರಕ್ಕೆ ಅವಕಾಶವಿಲ್ಲ

ಮೈಸೂರು ಸರ್ಕಾರದವರು ಮೊನ್ನೆಯ ದಿನ ಒಂದು ಆಜ್ಞೆ ಹೊರಡಿಸಿ, ಅದರಲ್ಲಿ ಯಾರ್ಯಾರು ಸರಿಯಾಗಿ ಲೆಕ್ಕ ಕೊಡದೆ ಹೆಚ್ಚು ದಾಸ್ತಾನು ಇಟ್ಟುಕೊಂಡಿರುವರೋ ಅವರು ತಮ್ಮ ಬಳಿ ಇರುವ ದವಸ ಧಾನ್ಯಗಳನ್ನು ಮಾರಾಟ ಮಾಡಕೂಡದೆಂದೂ, ಆ ಮಾಲನ್ನು ಹೊರಗಿನವರು ಕೊಳ್ಳಲೂ ಕೂಡದೆಂದೂ ಪ್ರಕಟಿಸಿದೆ.

—

ಹಿಂದೂ-ಮುಸ್ಲಿಂ ಗಲಭೆ

ಬುಧವಾರ ರಾತ್ರಿ ಕಾಡನಾನಹಳ್ಳಿ ಪೇಟೆಯ ಚೌಕದ ಬಳಿ ಹಿಂದೂಗಳಿಗೂ, ಮುಸ್ಲಿಂರಿಗೂ ಹೊಡೆದಾಟವಾಯಿತು. ದಾರಿಯಲ್ಲಿ ಬರುತ್ತಿದ್ದ ಹಿಂದೂ ಭಜನೆ ಗುಂಪೊಂದನ್ನು ನಿಷ್ಕಾರಣವಾಗಿ ಮುಸ್ಲಿಮರು ತಡೆದುದೇ ಗಲಭೆಗೆ ಕಾರಣವೆಂದು ಹೇಳಲಾಗಿದೆ. ಅನೇಕ ಹಿಂದೂಗಳಿಗೆ ಘಾಯಗಳಾಗಿವೆ. ಪ್ರಾಣಹಾನಿ ನಷ್ಟ ಮುಟ್ಟುವಷ್ಟರಲ್ಲಿ ಪೋಲೀಸರು ಸ್ಥಳಕ್ಕೆ ಹಾಜರಾಗಿ ಶಾಂತಿ ಸ್ಥಾಪಿಸಿದರು.

ಹೆಚ್ಚು ಜನರನ್ನು ಕರೆದಿದ್ದಕ್ಕೆ ದಂಡ

ತನ್ನ ಮಗಳ ಮದುವೆಗಾಗಿ ಬೆಂಗಳೂರು [illegible] ಕಂಟ್ರೋಲ್ ಆರ್ಡರ್ [illegible] ಜನಕ್ಕೆ ಮೇಲ್ಪಟ್ಟು ಊಟಕ್ಕೆ ಕರೆದುದಕ್ಕಾಗಿ ಬೆಂಗಳೂರಿನ ನ್ಯಾಯಾಧೀಶರು [illegible] ದಂಡ ವಿಧಿಸಿದ್ದಾರೆ.

ಸಂಯುಕ್ತ ದೇಶಗಳ ಪರಿಹಾರ ಕರಾರು

ಶತ್ರುವಿನಿಂದ ಬಿಡುಗಡೆ ಹೊಂದಿದ ದೇಶಗಳ ಪರಿಹಾರ ಮತ್ತು ಪುನರ್ರಚನೆ ಕಾರ್ಯಕ್ಕಾಗಿ ಒಂದು ಒಪ್ಪಂದಕ್ಕೆ [illegible] ಸಂಯುಕ್ತ ಸಂಸ್ಥಾನಗಳ ಪರಿಹಾರ ಕರಾರಿಗೆ ಎಲ್ಲ ಮಿತ್ರ ದೇಶಗಳು ಅಂಗೀಕರಿಸಿ ಸಹಿ ಹಾಕಿದೆಯೆಂದು, ಭಾರತವೂ ಇದರಲ್ಲಿ ಭಾಗ ವಹಿಸಿದೆಯೆಂದು ಪ್ರಕಟವಾಗಿದೆ. ಆದರೆ ಭಾರತದ ಶಾಸನಸಭೆಯು ಅನುಮತಿ ಕೊಡುವವರೆಗೂ ಈ ಕರಾರು ಭಾರತಕ್ಕೆ ಅನ್ವಯಿಸುವುದಿಲ್ಲವೆಂದು ಹೇಳಲಾಗಿದೆ.

ವಿಮಾನ ಗ್ರಾಮದ ಮೇಲೆ ಬಿತ್ತು

ಸೈನ್ಯ ಶಾಖೆಗೆ ಸೇರಿದ ವಿಮಾನ ಒಂದು ಶನಿವಾರ ಮಧ್ಯರಾತ್ರಿ ಪೂನಾ ಬಳಿ ಗ್ರಾಮ ಒಂದರ ಮನೆಗಳ ಮೇಲೆ ಅಕಸ್ಮಾತ್ ಬಿದ್ದು ಅನಾಹುತಕ್ಕೆ ಕಾರಣವಾಯಿತು. ಈ ಅನಾಹುತದಲ್ಲಿ ಹಲವರಿಗೆ ಪ್ರಾಣ ಹೋಗಿದೆ. ಇತರರಿಗೆ ತೀವ್ರ ಗಾಯಗಳಾಗಿವೆ. ಕೆಲವರನ್ನು ಪೂನಾ ಆಸ್ಪತ್ರೆಗೆ ಕಳಿಸಲಾಗಿದೆ.

ಈಗಿನ ಪಾರ್ಲಿಮೆಂಟ್ ಅಪ್ರಯೋಜಕ

ಲಂಡನ್ನಿನ ಸಭೆಯೊಂದರಲ್ಲಿ ಮಾತನಾಡುತ್ತಾ, ಮಿ|| ಕ್ಲೆಮೆಂಟ್ ಡೇವಿಸ್‌ರವರು “ಆಮೆರಿಯುವರ ಭಾರತಕ್ಕೆ ಬಿಟ್ಟರೆ [illegible] ಎಂದು ಹೇಳಿದರು. ಭಾರತ ಪ್ರಜೆಗಳಿಗೆ ಸಮಾಧಾನವಾಗುವಂತೆ ಸಾಧಾರಣ ಆಸ್ [illegible] ಈಗಿನ ಪಾರ್ಲಿಮೆಂಟ್ [illegible] ಭಾರತದ ಪ್ರಶ್ನೆ ಬಂತೆಂದರೆ ಅಕ್ಕಪಕ್ಕ ನೋಡುವಂತೆ ಮಾಡುತ್ತಾರೆ. ಅವರು ಹೋಗಿ, ಭಾರತ ಪ್ರಶ್ನೆಗಳನ್ನು ಶ್ರದ್ಧೆಯಿಂದ ಚೆನ್ನಾಗಿ ಚರ್ಚಿಸಬಲ್ಲ ಹೊಂದಿ ಪಾರ್ಲಿಮೆಂಟಿಗೆ ಸೇರಲೆಂದು ನನ್ನ ಆಶಯ” ಎಂದು ಹೇಳಿದ್ದಾರೆ.

ಹಿಟ್ಲರ್ ಘೋಷಣೆ

ಜರ್ಮನಿಯ ಮ್ಯೂನಿಚ್ ನಗರದಲ್ಲಿ ಮೊನ್ನೆ ಮ್ಯೂನಿಚ್ ಪಿತೂರಿಯ ೨೦ ನೇ ವಾರ್ಷಿಕೋತ್ಸವ ನಡೆಯಿತು. [illegible] ನಾಜಿ ಪ್ರಮುಖರನ್ನು ಸಂಬೋಧಿಸಿ ಹಿಟ್ಲರ್ ಭಾಷಣ ಮಾಡಿದನು.

“೧೯೧೮ ರಲ್ಲಿ ಮಾಡಿದ ತಪ್ಪನ್ನು [illegible] ಅದು ಹಿಂದಿನ ಸಂಗತಿ [illegible] ಎಂದೆಂದಿಗೂ ಜರ್ಮನಿಗೆ ಸೋಲಿಲ್ಲ [illegible] ನಮಗೆ [illegible] ಗಳನ್ನು ತಡೆಯುತ್ತೇವೆ. [illegible] ಮುಂದಿಡುವನೇ [illegible] ಯುದ್ಧ ಮಾಡಿ [illegible] ನೋಯಿಸುವ [illegible] ಮಿತ್ರರಾಷ್ಟ್ರ [illegible] ನಾವು ಎಲ್ಲರೂ [illegible] ಕೈಗೆ ಎಟುಕದೇ [illegible] ಮಗೆ ಸಮಾಧಾನ [illegible] ಅವನ್ನು ಬೇರೆ [illegible] ದಿಲ್ಲ.” ಇವೇ ಹಿಟ್ಲರನ [illegible] ಮಾತುಗಳು.

— —

ಭಾರತದಲ್ಲಿನ [illegible] ಭಾರತ ಸರ್ಕಾರ [illegible] ಗಿದೆ.

ವೈಸರಾಯರು ಜೈಲಿನಲ್ಲಿ ಮುಖಂಡರನ್ನು ಕಾಣಬೇಕು

ಲಂಡನ್ನಿನ "ರೇನಾಲ್ಡ್ಸ್ ನ್ಯೂಸ್" ಎಂಬ ಪತ್ರಿಕೆಯು ನೆನ್ನೆ ತನ್ನ ಸಂಪಾದಕೀಯ ಲೇಖನದಲ್ಲಿ ಭಾರತದ ವಿಷಯವಾಗಿ ಬರೆಯುತ್ತಾ, ವೇವೆಲ್ಲರು ಭಾರತದ ಆಹಾರಕ್ಕೆ ಕಡೆ ಹೆಚ್ಚು ಗಮನವೀಯುತ್ತಿರುವುದು ಬ್ರಿಟನ್ನಿಗೆ ಒಂದು ಒಳ್ಳೇ ಹೆಸರು ತರುವಂಥಾ ಕಾರ್ಯ [illegible]. [illegible] ಹದಗೆಡಿಸಿಬಿಟ್ಟಿದ್ದಾರೆ. ವೇವೆಲ್ಲರಿಂದ ಪರಿಸ್ಥಿತಿ ಉತ್ತಮಗೊಳ್ಳಬೇಕಾದಲ್ಲಿ ಸೆರೆಯ [illegible] ನಿಜವಾದ ನಾಯಕರೊಡನೆ ಅವರು ಸಂಧಾನವನ್ನು ಮೊದಲಿಗೆ ಪ್ರಾರಂಭಿಸಲು ಅವರಿಗೆ ಅಧಿಕಾರ ಕೊಡಬೇಕು. ಇದು ಬ್ರಿಟಿಷ ಸಕ್ಕರದಿ [illegible] ಸನ್ನಿವೇಶದಲ್ಲಿ ಬ್ರಿಟಿಷ್ ಸರ್ಕಾರವು [illegible] ಬರೆದಿದೆ.

ಅಮೆರಿಕಾದವರ ಪ್ರತಾಪ ಸಾಕು

ಕಳೆದ ೨೦ ವರ್ಷಗಳು ಬ್ರಿಟಿಷ್ ಆಳಿಕೆಯಲ್ಲಿ ಭಾರತದ ಆಹಾರ ಸ್ಥಿತಿ ಬಯಲಿಗೆ ಬಿಟ್ಟಿಗೆ ಹೀನವಾಗಿರುವುದನ್ನು ಭಾರತ ಪರ್ಯಟನೆ ಮಾಡಿ ಅಮೆರಿಕೆಯವರೇ ನೋಡಿಗಿರುವುದನ್ನು ನೋಡಿದರೆ ಹಿಂದೆಂದೂ ಬ್ರಿಟನ್ನು ಇಂತಹ ಅಪಖ್ಯಾತಿ [illegible] ಈಗ ಆ ಸ್ಥಿತಿಗೆ ಬಂದಿರುವುದು ವ್ಯಕ್ತವಾ[illegible] [illegible] ಬ್ರಿಟನ್ನಿಗೂ [illegible] ಕರುವ [illegible] ಅಮೆರಿಕಾದವರನ್ನು ಹಿಂದಕ್ಕೆ ತಳ್ಳಿ, ತಾವೇ ಬಿಕ್ಕಟ್ಟನ್ನು ಪರಿಹರಿಸುವ ಜವಾಬ್ದಾರಿ ಹೊತ್ತು ಈಗಿರುವ ಸ್ಥಿತಿಯನ್ನು ಬದಲಾಯಿಸಿಕೊಳ್ಳತಕ್ಕದ್ದು ಬ್ರಿಟನ್ನಿನ ಕರ್ತವ್ಯ—ಎಂಬುದಾಗಿ 'ಡೈಲಿ ವರ್ಕರ್' ಎಂಬ ಲಂಡನ್ ಪತ್ರಿಕೆಯು ತನ್ನ ಅಗ್ರಲೇಖನದಲ್ಲಿ ಬರೆದಿದೆ.

ಮೀರತ್ತಿನಲ್ಲಿ ದರೋಡೆ

ಮೀರತ್ತಿನ ನಾಗರಿಕರೊಬ್ಬರ ಹತ್ತಿರ ಕತ್ತಿ ಕಠಾರಿಗಳನ್ನು ಹಿಡಿದ ಕೆಲವು ಮಂದಿ ದರೋಡೆಕಾರರು ನುಗ್ಗಿ ಲೂಟಿಮಾಡಿದರೆಂದೂ, ಹಳ್ಳಿಯವರು ಓಡಿಹೋಗುತ್ತಿದ್ದ ದರೋಡೆಕಾರರಲ್ಲಿ ಒಬ್ಬನನ್ನು ಹಿಡಿದಿರುವರೆಂದೂ ಸಮಾಚಾರ ಬಂದಿದೆ.

NATIONAL WAR FRONT,
Mysore District

Applications are hereby invited from intending candidates for the posts of two Itinerant Lecturers on War Propaganda in the Mysore District on a salary of Rs. 35, and a Fixed Travelling Allowance of Rs. 20 per mensem plus the usual Dearness Allowance. The duration of the posts is provisionally till the end of June 1944. Applicants with higher educational qualifications and previous experience in lecturing work will be given preference. The selected candidates will be on probation for a period of two months.

Last date for receiving applications is Saturday, the 20th November 1943.

R. C. SUBBAIAH,
Dt. Organiser & Chairman.
Mysore, 5-11-1943

Edited, printed and published by A. R. Nagarajan, at the Sadhvi Press, D. Subbiah Road, Mysore.

ಸಂಗೀತ ಸಮ್ಮೇಳನ

ಅಖಿಲ ಭಾರತ ಸಂಗೀತ ಸಮ್ಮೇಳನವು ಡಿಸೆಂಬರ್ ತಿಂಗಳು ತಾ|| ೨೦ ರಿಂದ ೨೭ ರ ವರೆಗೆ ಗಯಾದಲ್ಲಿ ನಡೆಯಲು ನಿರ್ಧರವಾಗಿದೆ. ಆಗ ಬಂಗಾಳ ಪರಿಹಾರಕ್ಕಾಗಿ ನಿಧಿ ಸಂಗ್ರಹಿಸಲಾಗುವುದು.

ರೈಲ್ವೆಗಳು ಸರ್ಕಾರಕ್ಕೆ

ಸೌತ್ ಇಂಡಿಯನ್ ರೈಲ್ವೆ, ಮದ್ರಾಸ್ ಮತ್ತು ದಕ್ಷಿಣ ಮರಾಠ ರೈಲ್ವೆಗಳನ್ನು ಭಾರತ ಸರ್ಕಾರವು ಕೊಂಡುಕೊಳ್ಳಲು ನಿರ್ಧರಿಸಿ, ಆ ಬಗ್ಗೆ ವ್ಯವಹಾರ ನಡೆಸಿ [illegible] ಪಕ್ಕೆ ಬಂದಿರುವುದಾಗಿ ಗೊತ್ತಾಗಿದೆ.

ಯುದ್ಧಾನಂತರದ ನಿಮ್ಮ ಧ್ಯೇಯಗಳೇನು?

ಯುದ್ಧಾನಂತರ ಅಂಗಡಿಗಳಲ್ಲಿ ಸಾಮಾನುಗಳು ಭರ್ತಿಯಾಗಿ ತುಂಬಿರುತ್ತವೆ, ಮತ್ತು ಅವು ನ್ಯಾಯವಾದ ಬೆಲೆಗೆ ದೊರೆಯುತ್ತವೆ. ಯುದ್ಧಕಾಲದಲ್ಲಿ ಮುಂದುವರಿಸಿ ಮಾಡಿದವರು ಪಶ್ಚಾತ್ತಾಪ ಪಡಬೇಕಾಗುವುದು; ಏಕೆಂದರೆ ಯುದ್ಧಸಮಯದ ಸ್ಥಿತಿಗಳು ಮುಕ್ತಾಯವೇ ಸರಿ. ಯುದ್ಧಾನಂತರದ ನಿಮ್ಮ ಖಾಸಗೀ ಯೋಜನೆಗಳನ್ನು ಪೂರೈಸಲು ಈಗಿನಿಂದಲೇ ಉಳಿಸಲು ಆರಂಭಿಸಿ. ಅತ್ಯಾವಶ್ಯಕವಾದವುಗಳಿಗೆ ವಿನಹಾ ಉಳಿದ ಎಲ್ಲಾ ಖರ್ಚು ಬಾಬುಗಳನ್ನೂ ಮುಂದಕ್ಕೆ ಹಾಕಿ. ನಿಮ್ಮ ಧಾರಣೆಗಳು ಬರುವ ದಿನಕ್ಕಾಗಿ ಕೂಡಿಡಿ.

ಮುಂಬರುವ ದಿನಗಳಿಗಾಗಿ ಕೂಡಿಡಿ

ನಿಮ್ಮ ಹಣವನ್ನು ಲಾಭ ತರುವಂತೆ ಕೂಡಬೇಕು. ಯುದ್ಧ ಮುಗಿಯುವವರೆಗೆ ನಿಮ್ಮ ಹಣವನ್ನು ಸುರಕ್ಷಿತವಾದ ಸಹಕಾರ ಸಂಘ, ಪೋಸ್ಟ್ ಆಫೀಸು, ಬ್ಯಾಂಕ್ ಮತ್ತು ಪೋಸ್ಟಾಫೀಸುಗಳಲ್ಲಿ ಅಥವಾ ಇನ್ನಿತರ ಗಳಲ್ಲೂ ಉತ್ತಮವಾದ ಸರ್ಕಾರೀ ಸಾಲ ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ವಿನಿಯೋಗಿಸಿ. ಬೆಳ್ಳಿ, ಬಂಗಾರ, ಆಭರಣಗಳು ಅಥವಾ ಸಾಮಾನುಗಳ ಮೇಲೆ ಹಣ ಹಾಕಬೇಡಿ, ಏಕೆಂದರೆ ವಿಜಯ ಸೂಚನೆಗಳು ತೋರಿದಂತೆಲ್ಲಾ ಈಗಿನ ಧಾರಣೆಗಳು ಬಿದ್ದು ಹೋಗುತ್ತವೆ.



ರಾಷ್ಟ್ರೀಯ ಯುದ್ಧ ಮುಖದವರು ಜೊತೆಗೂಡುವಿಕೆಗಾಗಿ ಮನವಿ

CPU—299. KN

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೊಸದಾಗುವುದಲ್ಲದೆ ಅದರ ಚೈತನ್ಯವು ಬರುವುದು. ರೋಮ ರಂಧ್ರಗಳಲ್ಲೆಲ್ಲಾ ಹೊಕ್ಕು ಮೈಮೇಲಿನ ಕೊಳೆಯನ್ನೆಲ್ಲಾ ತೆಗೆದು ಹಾಕುವುದು. ಇದರ ಮೆತ್ತನೆಯ ಗುಣವೂ, ಸುಗಂಧವೂ ಚಿತ್ತಾಕರ್ಷಕವಾಗಿರುವುದು.

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೨] ಗುರುವಾರ ೧೧—೧೧—೪೩ [ಸಂಚಿಕೆ ೯೭

ಬಾಲ್ಟಿಕ್‌ನಲ್ಲಿ ರಷ್ಯನರ ಪ್ರಬಲ ಧಾಳಿ

ಮಣಕ್ಕೆ ೧೩ ಆಣೆಯಂತೆ ಸಕ್ಕರೆ ಬೆಲೆ ಹೆಚ್ಚಿಸಲಾಗಿದೆ

ಅನಂತಪುರದಲ್ಲಿ ಪುರಿ ತಯಾರಿಸಲು ಲೈಸೆನ್ಸ್ ಪಡೆಯಬೇಕು

ಹೆಂಗಸಿನ ಕೊಲೆಮಾಡಿದ್ದಕ್ಕೆ ಜೀವಾವಧಿ ಶಿಕ್ಷೆ

ಮೈಸೂರು, ೧೧

ರಾಜಧಾನಿಯ ೧೧೦ ಕಳೆ ರಸ್ತೆಯ ಹಿಂಭಾಗದಲ್ಲಿರುವ ಬೆಸ್ತರಕೇರಿಯಲ್ಲಿ ೪-೮-೪೩ ರ ರಾತ್ರಿ ಮ್ಯಾಜಿಸ್ಟ್ರೇಟ್ ಕೋರ್ಟಿನ ನೌಕರರಾದ ಶ್ರೀ ಸುಂದರರಾಜ್ ಎಂಬವರ ಮನೆಗೆ ನುಗ್ಗಿ ಅವರ ಪತ್ನಿ ಎನಿಲಿಗೇರಿ ಎಂಬುವರನ್ನು ಕೊಲೆಮಾಡಿದನೆಂಬ ಆಪಾದನೆ ಮೇಲೆ ಸೆಷನ್ಸ್ ಗೆ ರವಾನಿಸಲಾಗಿದ್ದ ಲಾಡಿಸ್ವಾಮಿ ಎಂಬುವನಿಗೆ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಟಿ. ವಿ. ನಾರಾಯಣರಾಯರು ಜೀವಾವಧಿ ಶಿಕ್ಷೆಯನ್ನು ಅನುಭವಿಸಬೇಕೆಂದು ನಿನ್ನೆ ದಿನ ತೀರ್ಪಿತ್ತರು.

ಆಪಾದಿತನು ಶ್ರೀ ಸುಂದರರಾಜ್‌ರವರು ಹಿಂದೆ ಒಂದು ಕಳ್ಳತನದ ಬಗ್ಗೆ ಅವನ ಮೇಲೆ ಫಿರ್ಯಾದು ಕೊಟ್ಟಿದ್ದಕ್ಕೆ ಸೇಡು ತೀರಿಸಿಕೊಳ್ಳಲು ಆ ದಿನ ರಾತ್ರಿ ಮನೆ ಮಾಳಿಗೆ ಮೇಲೆ ಅವಿತುಕೊಂಡಿದ್ದು, ನಂತರ ಕಳ್ಳನಾಗಲು, ಸುಂದರರಾಜ್‌ರವರ ಮೇಲೆ ಬಿದ್ದು ಅವನನ್ನು ಹಿಡಿಯಲು ಯತ್ನಿಸಿದಾಗ, ಅವರನ್ನು ತಳ್ಳಿ, ಹಿತ್ತಲಬಾಗಿಲಿನ ಕಡೆ ಓಡಿ ಹೋಗುತ್ತಿರುವಾಗ ದಾರಿಯಲ್ಲಿ ಬಂದಂತ ಸುಂದರರಾಜ್‌ರವರ ಪತ್ನಿಯನ್ನು ಬಾಗಿಲಿನ ಹತ್ತಿರ ಕೊಲೆಮಾಡಿದನೆಂದು ಮೊಕದ್ದಮೆ ಹೂಡಲಾಗಿತ್ತು.

ಶ್ರೀಯುತರು ಧಾರವಾಡದ ಕಾಲೇಜ್ ಪ್ರಿನ್ಸಿಪಾಲ್

ಬರುವ ಜೂನ್ ತಿಂಗಳಿಂದ ಧಾರವಾಡ ಜಿಲ್ಲೆ ಎರಡನೇ ದರ್ಜೆಯ ಆರ್ಟ್ಸ್ ಕಾಲೇಜೊಂದು ಆರಂಭವಾಗತ್ತದೆ. ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯು ಅದನ್ನು ಏರ್ಪಡಿಸಿದೆ. ರಾಜಶಿಕ್ಷಣ ಬಿ. ಎಂ. ಶ್ರೀಕಂಠಯ್ಯನವರು ಅದರ ಪ್ರಿನ್ಸಿಪಾಲರಾಗಲು ಒಪ್ಪಿರುವರು.

ಮಹಿಳೆಯರ ಸಭೆ

ನಾಳೆ ಸಂಜೆ ೬ ಗಂಟೆಗೆ ೮ ಬಸವನಗುಡಿ ವಿಶ್ವನಾಥ ಸ್ಕೂಲಿನಲ್ಲಿ ಮೈಸೂರು ಮಹಿಳೆಯರ ಸಭೆಯೊಂದನ್ನು ಏರ್ಪಡಿಸಲಾಗಿದೆ. ಸಭೆಯಲ್ಲಿ ಮಹಿಳೆಯರು ಆಹಾರ ಸಮಸ್ಯೆಯನ್ನು ಹೇಗೆ ಬಗೆಹರಿಸಬಹುದು ಎಂಬ ವಿಚಾರದಲ್ಲಿ ಚರ್ಚೆನಡೆಯುವುದು. ಶ್ರೀಮತಿ ಕಮಲಮ್ಮ ರಾಮಚಂದ್ರರಾವ್‌ರವರು ಅಧ್ಯಕ್ಷತೆ ವಹಿಸಲು ದಯವಿಟ್ಟು ಒಪ್ಪಿರುತ್ತಾರೆ.

ಹೋಟೆಲಿನ ಕೂಟಗಳಿಗೂ ಮಿತಿ

ಅಕ್ಕಿಯಿಂದ ಮಾಡಿದ ಆಹಾರವನ್ನು ಮಿತವ್ಯಯವಾಗಿ ಉಪಯೋಗಿಸುವ ಸಲುವಾಗಿ ಹೋಟೆಲಿನ ಕೂಟಗಳಲ್ಲಿ ೨೦ ಜನರಿಗಿಂತ ಹೆಚ್ಚಾಗಿ ಭಾಗವಹಿಸಬಾರದೆಂದು ಸರ್ಕಾರದ ಆಜ್ಞೆಯಾಗಿದೆ. ನವೆಂಬರ್ ತಿಂಗಳಿನಿಂದ ವಿವಾಹಗಳಲ್ಲಿ ಕೂಟಗಳ ಮಿತಿ ಇದೇ ರೀತಿ ಆಜ್ಞೆ ಮಾಡಿದೆ.

ಹೊಟ್ಟೆಗಿಲ್ಲದೆ ರೈಲಿನಿಂದ ಬಿದ್ದ

ಬೆಂಗಳೂರಿನ ಬಳಿ ೫೦ ಜನ ಬಿಕ್ಷುಕರು ಗಾಡಿ ಮೇಲೆ ಬೀಳುತ್ತಿದ್ದು, ರೈಲು ಹೋಗುತ್ತಿದ್ದಾಗ ಒಬ್ಬ ಮನುಷ್ಯನು ರೈಲಿನಿಂದ ಬಿದ್ದು ಸತ್ತನು. ಹೊಟ್ಟೆಗಿಲ್ಲದೆ ಆತನು ಕೆಲವು ದಿನಗಳಿಂದ ಉಪವಾಸವಿದ್ದನೆಂದು ಹೇಳಲಾಗಿದೆ.

ಇಂಗ್ಲೆಂಡ್ ಮೇಲೆ ಹೊಸ ಧಾಳಿಯ ಭೀತಿ

ಲಂಡನ್ ಲಾರ್ಡ್ ಮೇಯರರ ಔತಣದಲ್ಲಿ ಭಾಷಣಮಾಡುತ್ತಾ, ಪ್ರಧಾನ ಮಂತ್ರಿ ಮಿ॥ ಚರ್ಚಿಲರು ಹೀಗೆ ಹೇಳಿದರು. ಯೂರೋಪಿನ ಯುದ್ಧವು ಮುಂದಿನ ವರ್ಷ ತೀವ್ರವಾಗಿ ತಲುಪಬಹುದು. ಶತ್ರುವು ಹೊಸ ರೀತಿ ಧಾಳಿಗಳ ತೊಂದರೆಯು ಇನ್ನೂ ಮುಂದೆ ಇದ್ದೇ ಇವೆ. ರಾಕೆಟ್ ಬಾಂಬುಗಳಿಂದ ಬ್ರಿಟನ್ನಿನ ಮೇಲೆ ಧಾಳಿಯಾಗುವ ಸಂಭವವನ್ನು ಇಲ್ಲವೆನ್ನಲಾಗುವುದಿಲ್ಲ. ತುಳಿಯಲ್ಪಟ್ಟ ರಾಷ್ಟ್ರಗಳಿಗೆ ನಾವು ಕೊಟ್ಟಿರುವ ಭರವಸೆಗಳನ್ನು ಖಂಡಿತವಾಗಿಯೂ ಪಾಲಿಸುತ್ತೇವೆ. ಫ್ರಾನ್ಸ್ ಪುನಃ ತಲೆಯೆತ್ತಿ ಮೇಲೇಳುತ್ತದೆ.

ರಷ್ಯದೊಡನೆ ಫಿನ್‌ಲೆಂಡಿನ ಶಾಂತಿ ಸಂಧಾನ?

ಫಿನ್‌ಲೆಂಡ್ ದೇಶವು ರಷ್ಯದೊಡನೆ ಪ್ರತ್ಯೇಕ ಸಂಧಿಮಾಡಿಕೊಳ್ಳಲು ಗುಪ್ತ ಸಭೆಗಳು ನಡೆದು, ಹಾಲಿ ಇರುವ ಸರ್ಕಾರದಲ್ಲಿ ಬದಲಾವಣೆ ಆಗಿ, ಸಂಧಿ ನಡೆಸಲು ಪ್ರಮುಖ ನಾಯಕರನ್ನು ನೇಮಿಸುವ ವಿಚಾರದಲ್ಲಿ ಮಾತುಕತೆ ನಡೆಯುತ್ತಿದೆ ಎಂದು ವರದಿಯಾಗಿದೆ.

ಹಿಟ್ಲರನ ಉತ್ತರಾಧಿಕಾರಿ?

ಹಿಟ್ಲರನ ಪ್ರಧಾನ ಕೇಂದ್ರದಲ್ಲಿ ಗಲಭೆಯುಂಟಾಗಿ ಹಿಟ್ಲರನ ನಂತರ ಯಾರು ಅವನ ಸ್ಥಾನಕ್ಕೆ ಬರಬೇಕೆಂಬುದನ್ನು ತೀರ್ಮಾನಿಸಲಾಗಿದೆಯೆಂದು ಒಂದು ವರದಿ ತಿಳಿಸುತ್ತದೆ. ಹಿಟ್ಲರನಿಗೆ ಯುದ್ಧ ಚಿಂತೆಯು ಹೆಚ್ಚಾಗಿದೆ. ಅವರ ಆರೋಗ್ಯವು ಅಸ್ವಸ್ಥವಾಗಿದ್ದು ಹಿಟ್ಲರನು ಸತ್ತರೆ ಅವನ ಅಧಿಕಾರವನ್ನು ವಹಿಸಿಕೊಳ್ಳಲು ಗೋಬಲ್ಸನ ಅಧ್ಯಕ್ಷತೆಯಲ್ಲಿ ಒಂದು ಮಂಡಳಿ ಸ್ಥಾಪಿಸಲು ನಿರ್ಧರಿಸಿದ್ದು, ಬೆರಿಸಿಲಾಯಿತು. ಅದಕ್ಕೆ ಗೋರಿಂಗ್, ಹಿಮ್ಲರ್, ಗೋಬೆಲ್ಸ್ ಮತ್ತು ಬೋರ್ಮನ್ನರು ಸದಸ್ಯರು. ಹಿಟ್ಲರನ ಮಕ್ಕಳು ಇಲ್ಲದಿರುವುದರಿಂದ, ಸಾಜಿಸ್ಟ್ ಪಕ್ಷದ ನಾಯಕರೂ ಈ ಮಂಡಳಿಯನ್ನು ಹಿಟ್ಲರನ ಉತ್ತರಾಧಿಕಾರಿಯೆಂದು ಪರಿಗಣಿಸಬೇಕೆಂದು ಹೇಳಲಾಗಿದೆ. ಅವರ ಪ್ರಾಬಲ್ಯವು ದಿನೇ ದಿನೇ ಹೆಚ್ಚುತ್ತಿದೆ.

ಸಕ್ಕರೆ ಬೆಲೆ ಹೆಚ್ಚಿತು

ಮಣಕ್ಕೆ ಹದಿಮೂರಾಣೆಯಂತೆ ಸಕ್ಕರೆ ಬೆಲೆಯನ್ನು ಹೆಚ್ಚಿಸಲು ಇಂಡಿಯಾ ಸರ್ಕಾರದವರು ತೀರ್ಮಾನಿಸಿರುತ್ತಾರೆ. ಇದರಿಂದ ಕಬ್ಬನ್ನು ಬೆಳೆಯುವವರಿಗೆ ಕೊಡುವ ಕನಿಷ್ಠ ಬೆಲೆಯನ್ನು ನಿರ್ಧರಿಸಬಹುದೆಂದು ಹೇಳಲಾಗಿದೆ. ವೈಸರಾಯರು ಒಂದು ಆರ್ಡಿನೆನ್ಸ್ ಹೊರಡಿಸಿ, ಹೆಚ್ಚಿನ ಬೆಲೆಯಿಂದ ಬರ ನಷ್ಟ ಮೊಬಲಗನ್ನು ಹಳೆಯ ಸಕ್ಕರೆಯ ಮೇಲೆ ತೆರಿಗೆಯ ರೂಪದಲ್ಲಿ ಹೊರಿಸಿರುತ್ತಾರೆ.

ಅಸ್ಸಾಂ ಮೇಲೆ ಜಪಾನ್ ಧಾಳಿ

ಇಂಫಾಲ್ ಪ್ರದೇಶದ ಮಧ್ಯಭಾಗದ ವಿಮಾನ ನಿಲ್ದಾಣಗಳ ಮೇಲೆ ಮೊನ್ನೆ ದಿನ ಜಪಾನ್ ಬಾಂಬರುಗಳು ಫೈಟರುಗಳೊಡನೆ ಬಂದು ಧಾಳಿ ಮಾಡಿದವು. ಮಿತ್ರ ಫೈಟರ್ ವಿಮಾನಗಳು ಅವನ್ನು ಎದುರಿಸಿ ಒಂದು ವಿಮಾನವನ್ನು ಉರುಳಿಸಿದವು. ಬಹುಶಃ ಇನ್ನೊಂದನ್ನು ನಾಶಪಡಿಸಿದವು. ಆದರೆ ನಮಗೆ ಮಾತ್ರ ಏನೂ ನಷ್ಟಹೊಂದಲಿಲ್ಲ.

ಅಲ್ಲದೆ ಆರ್. ಏ. ಎಫ್. ಫ್ಲೈಯಿಂಗ್ ಕಾರ್ಯಾಚರಣೆಯಂಥ ಇನ್ನೊಂದು ಶತ್ರು ವಿಮಾನವನ್ನು ಹೊಡೆದು ಉರುಳಿಸಲಾಯಿತು. ಇನ್ನೊಂದಕ್ಕೆ ಜಖಂ ಆಯಿತು. ನಷ್ಟವಾದುದು ಅಲ್ಪ. ಆದರೆ ಕೆಲವು ಜನ ನಾಗರಿಕರು ಮಾತ್ರ ಸತ್ತಿರುವರು.

ಮೈಸೂರ್ ಮಂಡಲಿಯ ವಿಶೇಷ ಸಭೆ

ಕಳೆದ ಸೋಮವಾರ ಮೈಸೂರಿನಲ್ಲಿ ಶ್ರೀ ಮಂತ್ರಿಮಂಡಲದ ವಿಶೇಷ ಸಭೆಯೊಂದನ್ನು ನಡೆಸಿದರೆಂದೂ, ಆಹಾರ ಸಮಸ್ಯೆಯನ್ನು ಪರಿಶೀಲಿಸಿದರೆಂದೂ ಗೊತ್ತಾಗಿದೆ. ಕ್ಷಾಮ ಪರಿಸ್ಥಿತಿಯನ್ನು ಪರಿಶೀಲಿಸಲು ಒಂದು ರಾಯಲ್ ಕಮಿಷನನ್ನು ಕಳುಹಿಸಬೇಕೆಂದು ಶಾಸನ ಸಭೆಯು ಮಾಡಿದ ನಿರ್ಣಯವನ್ನು ಸರ್ಕಾರವನ್ನು ವಿರೋಧಿಸಿ ಆ ರೀತಿಯ ಧಾಳಿ ಆಗಿದೆ.

ಜಿರೋನಿಮರ ರಾಜೀನಾಮೆ

ಮೈ. ಜ. ೧೧ ಪ್ರತಿನಿಧಿಗಳ ಸಮಿತಿಯ ಅಧ್ಯಕ್ಷರಾದ ಜನರಲ್ ಜಿರೋನಿಮರವರು ರಾಜೀನಾಮೆ ಯತ್ನಿಸಿರುವರೆಂದು ತಿಳಿದು ಬಂದಿದೆ.

ಬಾಲ್ಟಿಕ್ ಕಡೆ ರಷ್ಯನರ ನೂತನ ಧಾಳಿ

ರಷ್ಯದ ಪಶ್ಚಿಮ ನೋವೆಲ್ ಕ್ರೈಸ್ತ ಭೀಕರ ಕದನ ನಡೆಯುತ್ತಿದೆಯೆಂದು ಆ ಭಾಗದಿಂದ ಬಾಲ್ಟಿಕ್ ಕಡೆ ರಷ್ಯನರು ನೂತನ ಧಾಳಿ ಪ್ರಾರಂಭಿಸಿದ್ದಾರೆ ದಿನ ಪಟ್ಟಿಯಾಗಿದೆ. ಅತಿ ಕಟುತರ ಟ್ಯಾಂಕ್ ಕದನ ನಡೆಯುತ್ತಿದೆಯೆಂದೂ ಅದರಲ್ಲಿ ರಷ್ಯನರು ನೂತನ ಯಂತ್ರಗಳನ್ನು ಉಪಯೋಗಿಸುತ್ತಿದ್ದಾರೆಂದೂ ಹೇಳಲಾಗಿದೆ.

ಲಂಡನ್ನಿಗೆ ವೈರಿ ಹೊಡೆತ

ಕಳೆದ ದಿನಗಳಿಂದ ಪ್ರತಿ ದಿನ ಜರ್ಮನರು ಲಂಡನ್ನಿನ ಮೇಲೆ ಧಾಳಿಮಾಡುತ್ತಿರುವರು. ಶನಿವಾರ ರಾತ್ರಿ ನಡೆದ ಧಾಳಿಯಿಂದ ಹೆಚ್ಚು ಜನ ಸಾವಿಗೂ, ನೋವಿಗೂ ತುತ್ತಾಗಿರುವರು. ಪ್ರತ್ಯೇಕ ಮಂದಿರ ಒಂದಕ್ಕೆ ಸಿಡಿ ಬಿದ್ದು ತಾರೆ ತಾಗಿ ನಲಿದಾಡುತ್ತಿದ್ದವರು ಕಷ್ಟಕ್ಕೊಳಗಾದರು. ಕ್ಷೀರ ಕೇಂದ್ರ ಭವನ ಒಂದರಮೇಲೆ ಬಾಂಬು ಬಿದ್ದು ಭಾರಿ ನಷ್ಟ ಸಂಭವಿಸಿದೆ.

೧೦೦ ಮಂದಿ ನೀರುಪಾಲು

ಬಂಗಾಳಾ ಕೊಲ್ಲಿಯ ಮೇಲ್ಗಡೆ ನದಿ ಸಮುದ್ರವನ್ನು ಸೇರುವ ಭಾಗದಲ್ಲಿ ಸೌಸ್ ದ್ವೀಪದಿಂದ ಡಾಕೆಯ ಕಡೆ ಹೋಗುತ್ತಿದ್ದ ದೋಣಿ ಸೋಮವಾರ ಮಧ್ಯಾಹ್ನ ಬಿರುಗಾಳಿ ಹೊಡೆತಕ್ಕೆ ಸಿಕ್ಕಿ ಮುಳುಗಿತು. ಅದರಲ್ಲಿದ್ದ ಹೆಂಗಸರು ಮಕ್ಕಳು ಸೇರಿ ನೂರಾರು ಮಂದಿ ನೀರು ಪಾಲಾಗಿರುವರ ಇದುವರೆಗೆ ೩ ಶವ ಮಾತ್ರ ದೊರೆತಿವೆ.

ಪುರಿ ತಯಾರಿಸಕೂಡದು

ಅನುಮತಿಯಿಲ್ಲದೆ ಭಕ್ಷ್ಯ ಮತ್ತು ಪುರಿಯನ್ನು ತಯಾರಿಸಕೂಡದೆಂದು ಅನಂತಪುರದ ಕಲೆಕ್ಟರ್ ಒಂದು ಆಜ್ಞೆ ಹೊರಡಿಸಿದ್ದಾರೆ.

ಆಹಾರ ಕ್ಷಾಮದ ಬಗ್ಗೆ ರಾಯಲ್ ಕಮೀಷನ್

ಬಂಗಾಳ ಕ್ಷಾಮ ವಿಚಾರದ ಬಗ್ಗೆ ರಾಯಲ್ ಕಮಿಷನ್ ನೇಮಿಸಬೇಕೆಂದು ಕೇಂದ್ರ ಶಾಸನ ಸಭೆಯಲ್ಲಿ ಅಂಗೀಕರಿಸಲಾದ ನಿರ್ಣಯದ ಬಗ್ಗೆ ಎಲ್ಲ ಪಾರ್ಟಿಯವರು ಒಪ್ಪಿರುವರೆಂದೂ, ಆಹಾರ ಸ್ಥಿತಿಯ ವಿಚಾರವಾಗಿ ವಿಧಾನಸಭೆ ಚರ್ಚೆ ನಡೆಯಲು ಸರ್ಕಾರದವರು ಒಪ್ಪಿರುವರೆಂದೂ ಹೇಳಲಾಗಿದೆ. ಕಾಂಗ್ರೆಸ್ ಪಕ್ಷದವರು ಇದರಲ್ಲಿ ಭಾಗವಹಿಸುವರು.

ಬಲ್ಗೇರಿಯಾದಲ್ಲಿ ದಂಗೆ

ಬಲ್ಗೇರಿಯಾದ ಸ್ಟ್ರುಮ ನದಿ ಪ್ರದೇಶದಲ್ಲಿ ದಂಗೆಯಾಗಿ ೫೦೦ ಜನರು [ದೇಶಭಕ್ತರು] ಸೆರೆಸಿಕ್ಕಿರುವರು ಗುಂಡಿಗೆ ಬಲಿಯಾದರೆಂದು ಗೊತ್ತಾಗಿದೆ.

ದಕ್ಷಿಣ ಸ್ಥಿತಿ ಉತ್ತಮವಾಗುತ್ತಿದೆ

ದಕ್ಷಿಣದಲ್ಲಿ ಈಗಲೇ ಎಷ್ಟೋ ಸ್ಥಳಗಳಲ್ಲಿ ಸಿಗುವಂತಾಗಿದೆಯೆಂದೂ ಇಲ್ಲಿ ಹೆಚ್ಚು ಜನ ಸಾಯುವ ಸಂಭವವಿಲ್ಲವೆಂದೂ ಹೊಸ ಬೆಳೆ ಬರುವುದರಿಂದ ಲಂಡನ್ ಪತ್ರಿಕೆ ಬರೆಯುತ್ತಿದೆ. ಉತ್ತಮ ಸ್ಥಿತಿಯನ್ನು ತರುವ ಕಾರ್ಯದಲ್ಲಿ ಸರ್ಕಾರವು ಮಾಡಿದ್ದಾರೆ.

ಶ್ರೀಮನ್ಮಹಾರಾಜವರ ಶ್ರೇಯಃ ಪ್ರಾರ್ಥನಾ ಸಂಘ

ಮೈಸೂರು ಅವರ [illegible] ಸಂಘದವರು [illegible] ರಲ್ಲಿ, ಶ್ರೀ ಕೃಷ್ಣರಾಜ ಒಡೆಯರ್ ಸ್ವಾಮಿಯವರಿಗೆ [illegible] ಪೂಜಾ, [illegible] ಮತ್ತು [illegible] ಮತ್ತು [illegible] ಶ್ರೀ ಟಿ. ಎಲ್. ದೇವರಾಜೇ ಅರಸಿನವರ ಸಮ್ಮುಖದಲ್ಲಿ ನೆರವೇರಿಸಿರುತ್ತಾರೆ

ತಾ॥ [illegible] ಮತ್ತು [illegible] ಫುಟ್‌ಬಾಲ್ ಪಂದ್ಯಗಳು [illegible] ಗಂಟೆಗೆ [illegible] ನೌಕರ [illegible] ಶ್ರೀ ಟಿ. ಎಲ್. ದೇವರಾಜೇ ಅರಸಿನವರ [illegible] ವಿನೋದಗಳನ್ನು ನಡೆಸಿದರು. [illegible] ಸ್ಪಿನ್ನಿಂಗ್ ರೇಸ್, ವಯಸ್ಸಾದವರಿಗೆ [illegible] ಸ್ಪೂನ್ ರೇಸ್, ಮಕ್ಕಳಿಗೆ [illegible] ರೇಸ್, [illegible] ಫಲ್ಲಾಂಗ್ ರನ್ನಿಂಗ್ ರೇಸ್, ಆಫೀಸಿಯಲ್ಸ್ ಮತ್ತು ಇತರ [illegible] ಜೊತೆಗೆ, ಲಾಂಗ್ ಜಂಪ್, ಪಟ್ಟಿಂಗ್ ದಿ ಷೈಟ್, ಬ್ರೇಕಿಂಗ್ ದಿ ಬಟ್ಸ್ [illegible] ಆಟಗಳು ದನಂತರ [illegible] ಜನರಿಗೆ [illegible] ನಡೆಯಿತು ಮಧ್ಯಾಹ್ನ ಟಗ್ ಆಫ್ ವಾರ್, ಫ್ಯಾನ್ಸಿ ಡ್ರೆಸ್ ಪ್ರದರ್ಶನ [illegible]

[illegible] ನಂತರ [illegible] ಶ್ರೀ ಟಿ. ಎಲ್. ದೇವರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಶ್ರೀಮನ್ಮಹಾರಾಜವರ ಶ್ರೇಯಃ ಪ್ರಾರ್ಥನಾ ಸಂಘದಲ್ಲಿ [illegible] ಆಟಗಳಲ್ಲಿ ಗೆದ್ದವರಿಗೆಲ್ಲ ಬಹುಮಾನ ವಿನಿಯೋಗವಾಯಿತು. ಬಹುಮಾನಗಳಲ್ಲ ಅಮೂಲ್ಯವಾದ ಅನೇಕ ಬಹುಮಾನಗಳನ್ನು ಟಿ. ಎಲ್. ದೇವರಾಜೇ ಅರಸಿನವರು [illegible] ವಿನಿಯೋಗಿಸಿದ್ದಾರೆ. ಸಂಘದ [illegible] ಇವರ ಕಾರ್ಯದರ್ಶಿ [illegible]

ಕೊಚ್ಚಿ ರಾಜ್ಯ ಪಟ್ಟ

ಕೊಚ್ಚಿ [illegible] ಮಹಾರಾಜರ [illegible] ಶ್ರೀ [illegible] ಪಟ್ಟಾಭಿಷೇಕ ಮಹೋತ್ಸವದ ಸಂಬಂಧವಾಗಿ ಕೊಚ್ಚಿಯಲ್ಲಿ ಅನೇಕ ಪೂಜೆ ಪುನಸ್ಕಾರಗಳು ತುಂಬ ವಿಜೃಂಭಣೆಯಿಂದ ನಡೆಯುತ್ತಿವೆ. ಅಲ್ಲಿನ ಪ್ರಜೆಗಳು ತುಂಬಾ ಉತ್ಸಾಹದಿಂದ ಉತ್ಸವಗಳಲ್ಲಿ ಭಾಗವಹಿಸುತ್ತಿದ್ದಾರೆ.

[illegible] ಸಂಘದವರ ಪರವಾಗಿ ಅನೇಕ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು [illegible] ದನಂತರ ಎಲ್ಲರೂ ಎದ್ದು ನಿಂತು ಶ್ರೀಮನ್ಮಹಾರಾಜರವರಿಗೆ, ಶ್ರೀ [illegible] ಶ್ರೇಯಃ ಪ್ರಾರ್ಥನೆಯನ್ನು ಸಲ್ಲಿಸಿದರು. [illegible] ದಿಂದ ಸಭೆಯು ಮುಕ್ತಾಯವಾಯಿತು

ಶ್ರೀ ಶ್ರೀಕಂಠೇಶ್ವರ ಸ್ಪರ್ಧೆ

ನಂ. ೨೪ ರ ಸರಿಯಾದ ಉತ್ತರ

ಎಡದಿಂದ ಬಲಕ್ಕೆ: 1 [illegible] 3 ಭವನ, 6 [illegible], 8. [illegible], 10. ಪೂಜಾರಿ (ಪೂಜಾರಿ), 11 [illegible], 13 [illegible], 14. [illegible], 16 ರೋಹಿಣಿ 17. [illegible], 18 [illegible], 19. [illegible].

ಮೇಲಿಂದ ಕೆಳಕ್ಕೆ:- 1. [illegible], 2. [illegible], 3. ಭವ, 4 [illegible], 5. [illegible], 7. [illegible], 8 [illegible], 9 [illegible], 10. [illegible] ([illegible]), 12 [illegible], 13. ರುಕ್ಮಿಣಿ, 15 [illegible], 17. [illegible].

ಬಹುಮಾನಿತರ ಪಟ್ಟಿಯನ್ನು ಮುಂದಿನ ವಾರ ಪ್ರಕಟಿಸಲಾಗುತ್ತೆ

NATIONAL WAR FRONT.

Mysore District

Applications are hereby invited from intending candidates for the posts of two Itinerant Lecturers on War Propaganda in the Mysore District on a salary of Rs. 35, and a Fixed Travelling Allowance of Rs.20 per mensem plus the usual Dearness Allowance. The duration of the posts is provisionally till the end of June 1944. Applicants with higher educational qualifications and previous experience in lecturing work will be given preference. The selected candidates will be on probation for a period of two months.

Last date for receiving applications is Saturday, the 20th November 1943.

K. C. SUBBANNAH,
Dt Organiser & Chairman.
Mysore, 5-11-1943

Edited, printed and published by K. Nagarajan, at [illegible] Press, D Subbaiah Road, Mysore.

ಬೆನಿಫಿಟ್ ನಾಟಕ ! ಬೆನಿಫಿಟ್ ನಾಟಕ !

ಶ್ರೀ ಉಮಾಮಹೇಶ್ವರಿ ಕಂಪೆನಿಯ ಪ್ರೊಪ್ರೈಟ್ರೆಸ್ಸರವರಾದ

ಶ್ರೀಮತಿ ಎಂ. ಕೆ. ಬಿ. ದೇವಿ ಕೃಷ್ಣಕುಮಾರಿಯವರು

ಬಂಗಾಳ ಕ್ಷಾಮ ಪರಿಹಾರ ನಿಧಿಯ ಸಹಾಯಾರ್ಥವಾಗಿ

ಶ್ರೀ ಜಿ. ಕೆ. ಡಿ. ಭರಮಯ್ಯನವರ ರತ್ನಾವಳಿ ಥಿಯೇಟರಿನಲ್ಲಿ

ಶ್ರೀ ಚಾಮುಂಡೇಶ್ವರಿ ನಾಟಕ ಸಭಾದವರಿಂದ

ಇದೇ ನವೆಂಬರ್ ೧೪ ನೇ ತಾ॥ ಸಂಜೆ ೭ ಗಂಟೆಗೆ

ವೀರ ಅಭಿಮನ್ಯು

ಎಂಬ ನಾಟಕವನ್ನು ಪ್ರದರ್ಶಿಸಲೇರ್ಪಡಿಸಿರುವರು

ಮೈಸೂರು ಡೆಪ್ಯುಟಿ ಕಮಿಷನರಾದ

ಶ್ರೀ ಸಿ. ಎಂ. ಜೆಚ್. ರಣಜೋಧ ಸಿಂಗ್‌ರವರು

ಅಧ್ಯಕ್ಷತೆ ವಹಿಸುವರು

ಮಹಾಜನರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಟಿಕೀಟು ದರಗಳು:— ರೂ 3-0-0, 2-0-0, 1-8-0, 1-0-0 ಮತ್ತು 0-8-0.

ಸೀಟುಗಳನ್ನು ರಿಜರ್ವ್ ಮಾಡಿಸಲಪೇಕ್ಷಿಸುವವರು ರಾಮಾನುಜ ರಸ್ತೆಯಲ್ಲಿರುವ ಶ್ರೀ ಉಮಾಮಹೇಶ್ವರಿ ಕಂಪೆನಿಯಲ್ಲಿ ಬೆಳಗ್ಗೆ 11 ರಿಂದ ಸಂಜೆ 5 ರ ವರೆಗೆ ಟಿಕೀಟು ಕೊಡೆದು ರಿಜರ್ವ್ ಮಾಡಿಸಬಹುದು

ಟಿಕೀಟುಗಳು ಶ್ರೀ ಉಮಾಮಹೇಶ್ವರೀ ಕಂಪೆನಿಯಲ್ಲೂ ಮತ್ತು ಪ್ರಿಮಿಯರ್ ಲೈಫ್ ಇನ್ಷೂರೆನ್ಸ್ ಕಂಪೆನಿಯಲ್ಲೂ ದೊರೆಯುತ್ತವೆ.

57 ಚುನಾವಣೆ ; ಯಾವುದು ಗೊತ್ತೆ ? 57

೧೯೪೩ ನೇ ನವಂಬರ್ ೧೪ ನೇ ಭಾನುವಾರ

ಮೈಸೂರು ಕೋ-ಆಪರೇಟಿವ್ ಸೊಸೈಟಿ

ಡೈರೆಕ್ಟರುಗಳ ಚುನಾವಣೆಗೆ

[illegible]

S. K. P. ಸೊಸೈಟಿಯ [illegible] ಈ ಸೊಸೈಟಿಯ [illegible]

[illegible]

57 ಜಿ. ಪಿ. ಸೂರ್ಯನಾರಾಯಣಶೆಟ್ಟಿ 57

ಜುಯಲರ್, ರೆಡಿಮೇಡ್ ಡ್ರೆಸ್ & ಬನಾರಸ್ ಸಾರಿ ಎಂಪೋರಿಯಂ, ಸಯ್ಯಾಜಿರಾವ್ ರೋಡ್, ಮೈಸೂರು.

ಶ್ರೀ ಚತುರ ಸೌಶರ್ಯ ಚಕ್ರಾಗಿ

೧೯೪೧ [illegible] ರಿಂದ ಪ್ರತ್ಯೇಕವಾಗಿ [illegible] ತಯಾರು ಮಾಡುತ್ತಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಸ್ವಾಮಿ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] ಸಕ್ಕರೆ, ಬೆಲ್ಲ, [illegible] ಚಹಾ [illegible] ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು [illegible] ದೊರೆಯುತ್ತೆ

ಅಪೂರ್ವ ಸಮಯ!

ಸುಪ್ರಸಿದ್ಧವಾದ

ಅಲಿಗ್ಯಾರ್ ಬೀಗಗಳು

ಅತ್ಯುತ್ತಮ ಮಾದರಿ ! ಸಂಪೂರ್ಣ ಭರವಸೆ !

ಸರ್ಕಾರಿ ಇಲಾಖೆಗಳು, ಪೌರಸಭೆಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಿಗೆ ಸರಬರಾಜು ಮಾಡುತ್ತೇವೆ.

ಒಂದಾವರ್ತಿ ಭೇಟಿ ಕೊಟ್ಟು ಕೊಂಡುಕೊಳ್ಳಿರಿ !

ಶ್ರೀ ಕೃಷ್ಣಭವನ ರೆಸ್ಟೋರೆಂಟ್

ಮಾರ್ಕೆಟ್ ಚೌಕ, : : ಮೈಸೂರು.

([illegible])

ಸಂಪುಟ ೨] ಶುಕ್ರವಾರ ೧೨--೧೧--೪೪ [ಸಂಚಿಕೆ ೯೮

ಲಾಟ್ವಿಯಾ ಗಡಿ ಬಳಿಗೆ ರಷ್ಯನ್ ಸೈನಿಕರು

ನೊನ್ನೆ ತಾನೇ ಜನಿಸಿದ ಶಿಶು ಸೊಗಸಾಗಿ ಮಾತನಾಡುತ್ತಿದೆ!

ದಿನವೆಲ್ಲಾ ನೆಳತಕ್ಕೆ ಸಿಕ್ಕಿದ ಮುದುಕ ಬದುಕಿದ

ಪುರಿ ಸಾಗಿಸಿದ್ದಕ್ಕೆ ದಂಡ

ಮೈಸೂರು ೧೧

ರಾಜಧಾನಿಯಿಂದ ಪಂಡ್ರಕ್ಕೆ ಕಳೆದ ಸೆಪ್ಟೆಂಬರ್ ೧೫ ನೇ ತಾ॥ ೨೫ ಚೀಲ ಪುರಿಯನ್ನು ಲಸದಾರಿಯಿಲ್ಲದೆ ಸಾಗಿಸುತ್ತಿದ್ದನೆಂಬ ಅಪಾದನೆಯ ಮೇಲೆ ಗೆಂಡಣ್ಣ ಅಲಿಯಾಸ್ ಮಸ್ತಯ್ಯ ಎಂಬುವನಿಗೆ ಪ್ರಥಮ ನ್ಯಾಯಾಧೀಶರು ೧೫ ರೂ ದಂಡ ತಪ್ಪಿದರೆ ೧೫ ದಿನ ಶಿಕ್ಷೆ ಅನುಭವಿಸಬೇಕೆಂದು ಆಜ್ಞೆ ಮಾಡಿದ್ದಾರೆ

ಮಾದಪ್ಪ ಎಂಬುಕೆಯು ೫ ಚೀಲ ಪುರಿ ಸಾಗಿಸುತ್ತಿದ್ದಳೆಂದು ೫ ರೂ ದಂಡವನ್ನೂ, ಚಿಕ್ಕಪುಟ್ಟಯ್ಯ ಎಂಬುವನು ೧೧ ಚೀಲ ಪುರಿ ಸಾಗಿಸುತ್ತಿದ್ದನೆಂದು ೧೦ ರೂ ದಂಡವನ್ನೂ ಈ ದಿನ ವಿಧಿಸಿದರು.

ರೊಟ್ಟಿ ಶ್ರೀನಿವಾಸಮೂರ್ತಿಯವರ ಉದಾರ ದಾನ

ಮೈಸೂರು ಮುನಿಸಿಪಲ್ ಕೌನ್ಸಿಲರ್ ರಾಗಿದ್ದ ಶಿವಂಗದ ಶ್ರೀ ರೊಟ್ಟಿ ಶ್ರೀನಿವಾಸಮೂರ್ತಿಯವರು ಅಪೇಕ್ಷೆಯಂತೆ ಬೋಳ ಒಡ್ಡಿನ ತಾಲ್ಲೂಕಿನ ಕೆರೆ ಬಸವಂಜ ಅರಸಿನವರು ಬ್ರಾಹ್ಮಣ ಧರ್ಮ ಸಹಾಯ ನಿಧಿಗೆ ೧,೦೦೦ ರೂ ಮತ್ತು ಬ್ರಾಹ್ಮಣರ ಅನಾಥಾಲಯಕ್ಕೆ ೩,೪೦೦ ರೂ. ಕೊಟ್ಟಿದ್ದಾರೆ

ಸಂತೇಪೇಟೆ ಸುಪ್ರಸಿದ್ಧ ವರ್ತಕರಾದ ಶ್ರೀ ಸುಂದರರಾಮಯ್ಯರ್‌ರವರು ತಮ್ಮ ಮಾತೋಶ್ರೀಯವರ ಜ್ಞಾಪಕಾರ್ಥವಾಗಿ ದೊಡ್ಡಕೆರೆ ಕೇರಿಯ ಬ್ರಾಹ್ಮಣ ಧರ್ಮ ಸಹಾಯ ಸಭೆಯು ಕರ್ಮಾಂತರ ತೋಟದಲ್ಲಿ ಜನಗಳಿಗೆ ಕಟ್ಟುವ ಅನುಕೂಲವಾಗುವಂತೆ ಸ್ನಾನದ ಮನೆಯನ್ನು ಕಟ್ಟಿಸಲು ಒಪ್ಪಿರುತ್ತಾರೆ.

ವಿದ್ಯಾರ್ಥಿಗಳ ತೊಂದರೆ

ರಾಜಧಾನಿ ಶಾರದಾವಿಲಾಸ್ ಹೈಸ್ಕೂಲಿನಲ್ಲಿ ಈ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಫೀಜು ಮುಂದಿಯನ್ನು ಕಟ್ಟಿಸಲು ಬಿಡಲಿಲ್ಲವೆಂದೂ, ಮೊದಲನೇ ಟರ್ಮಿನ ಪರೀಕ್ಷೆ ನಡೆಯುವ ಸಮಯಕ್ಕೆ ಮುಗಿದ ಕಾರಣದಲ್ಲೇ ಸೆಲೆಕ್ಷನ್ ಪರೀಕ್ಷೆ ನಡೆದುದರಿಂದಲೂ ಅನೇಕ ವಿದ್ಯಾರ್ಥಿಗಳಿಗೆ ತೊಂದರೆಯಾದುದರಿಂದ, ಪಬ್ಲಿಕ್ ಪರೀಕ್ಷೆಗೆ ಕೂರಲು ಹುಡುಗರನ್ನು ಆರಿಸುವ ಈ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟ ಅಧ್ಯಾಪಕ ವರ್ಗದವರು ಉದಾರ ಮನೋಭಾವದಿಂದ ವರ್ತಿಸಿ ಪಬ್ಲಿಕ್ ಪರೀಕ್ಷೆಗೆ ಕೂರಲು ಅವಕಾಶ ಕಲ್ಪಿಸಿಕೊಡಬೇಕೆಂದು ವಿದ್ಯಾರ್ಥಿ ಹಿತೈಷಿಗಳೊಬ್ಬರು ಬರೆಯುತ್ತಾರೆ

ಪೋಲೀಸ್ ಅ॥ ಸೂಪರಿಂಟೆಂಡೆಂಟರ ವರ್ಗ

ಮೈಸೂರು ನಗರದಲ್ಲಿರುವ ಪ್ರೊಬೆಷನರಿ ಪೋಲೀಸ್ ಅ॥ ಸೂ॥ ರಾದ ಶ್ರೀ ಎ ಡಿ ಆನಂದರಾವ್‌ರನ್ನು ಕೋಲಾರ ಜಿಲ್ಲೆಗೂ, ಶ್ರೀ ಎಂ ಅನಂತಸ್ವಾಮಯ್ಯರ್‌ರವರನ್ನು ಚಿಕ್ಕಮಗಳೂರಿನಿಂದ ಬೆಂಗಳೂರು ಟ್ರೈನಿಂಗ್ ಕಾಲೇಜು ಪ್ರಿನ್ಸಿಪಾಲರನ್ನಾಗಿಯೂ, ಶ್ರೀ ಟಿ ಎನ್ ಚಂದ್ರಶೇಖರಯ್ಯನವರನ್ನು ಪ್ರೊ॥ ಸೂಪರಿಂಟೆಂಡೆಂಟ್ ಚಿಕ್ಕಮಗಳೂರಿಗೂ, ಶ್ರೀ ಟಿ. ವಿ ಕೃಷ್ಣಮೂರ್ತಿಯವರನ್ನು ಚನ್ನಪಟ್ಟಣದಿಂದ ಚಿಕ್ಕಮಗಳೂರಿನ ಪ್ರದೇಶ ಕಂಟ್ರೋಲ್‌ನಿಂದ ಚನ್ನಪಟ್ಟಣಕ್ಕೂ ಶ್ರೀ ಎಂ ನರಸಿಂಹಯ್ಯನವರನ್ನು ಶಿವಮೊಗ್ಗದಿಂದ ಬೆಂಗಳೂರು ಸ್ಪೆಷಲ್ ಬ್ರಾಂಚ್ ಆಫೀಸಿಗೂ ವರ್ಗಾಯಿಸಲಾಗಿದೆ

ಪೋಲೆಂಡ್ ಗಡಿಯ ಬಳಿಗೆ ರಷ್ಯನರು

ಕೀವ್ ರಣಾಂಗಣದಲ್ಲಿ ಮುನ್ನುಗ್ಗುತ್ತಿರುವ ರಷ್ಯನ್ ಸೈನ್ಯ ಪೋಲೆಂಡ್ ಗಡಿಯ ೬೦ ಮೈಲಿ ಸಮೀಪಕ್ಕೆ ಬಂದಿದೆ. ನೈರುತ್ಯ ಸೆಕ್ಟರ್ ಕ್ಷೇತ್ರದಲ್ಲೂ ಅವರು ಲಾಟ್ವಿಯಾ ಗಡಿಗೆ ೭೦ ಮೈಲಿ ದೂರದಲ್ಲಿದ್ದಾರೆ

ಚರ್ಚಿಲರೂ ಹಾಜರಿರಲಿಲ್ಲ

ಹಿಂದೂಸ್ತಾನದ ಕ್ಷಾಮದ ವಿಷಯವಾಗಿ ಚರ್ಚೆಯಾದಾಗ ೬೦೦ ಜನ ಸದಸ್ಯರ ಪೈಕಿ ಪಾರ್ಲಿಮೆಂಟಿನಲ್ಲಿ ೫೦ ಜನರು ಮಾತ್ರ ಇದ್ದರಷ್ಟೆ. ಆಗ ಪ್ರಧಾನ ಮಂತ್ರಿ ಮಿ॥ ಚರ್ಚಿಲರೂ ಇರಲಿಲ್ಲ ಯೂರೋಪಿನ ಅತ್ಯಲ್ಪ ರಾಷ್ಟ್ರದ ಪ್ರಶ್ನೆ ಬಂದಾಗಲೂ ಹಾತೊರೆಯುವ ರಾಜಕಾರಣ ಚರ್ಚಿಲರು ೪೦ ಕೋಟಿ ಜನ ವಿಶಾಲವಾದ ಪ್ರಜೆಗಳ ಉದರ ಸಂಬಂಧವಾದ ವಿಷಯಗಳಲ್ಲಿ ಅವಕಾಶ ಮಾಡಿಕೊಳ್ಳಲಿಲ್ಲ ೭ ಸಾವಿರ ಮೈಲಿಯಿಂದ ಈ ೬೦೦ ಜನರು ಹಿಂದೂಸ್ತಾನವನ್ನು ಆಳುತ್ತಿರುವ ನಾಡಕ್ಕೆ ತಮ್ಮ ಕರ್ತವ್ಯವೆ ಹಾಗಿದೆ ಈ ಘಟನಾ ಚಕ್ರವನ್ನು ಕೊನೆಗಾಣಿಸುವ ಕಾಲ ಬಂದಿಲ್ಲವೆ ಎಂದು ಶ್ರೀ ಎಂ ಆರ್ ಜಯಕರರು ಕೇಳಿದ್ದಾರೆ.

ಜೈಪ್ರಕಾಶರ ಹಾಜರಿಗೆ ಅರ್ಜಿ

ಭಾರತ ರಕ್ಷಣಾ ಶಾಸನ ಪ್ರಕಾರ ಬಂಧಿತರಾಗಿರುವ ಕಾಂಗ್ರೆಸ್ ಸೋಷಲಿಸ್ಟ್ ನಾಯಕರಾದ ಶ್ರೀ ಜೈಪ್ರಕಾಶ ನಾರಾಯಣ್‌ರನ್ನು ಕೋರ್ಟಿನ ಮುಂದೆ ಹಾಜರುಪಡಿಸಬೇಕೆಂದು ಲಾಹೋರಿನ ಶ್ರೀ ಎ.ಕೆ ಪೂರ್ಣರೂ ಬ್ಯಾನರ್ಜಿಯವರು ಲಾಹೋರ್ ಹೈ ಕೋರ್ಟಿನಲ್ಲಿ ಅರ್ಜಿ ಹಾಕಿದರು. ಕೋರ್ಟಿನವರು ಸರ್ಕಾರದವರಿಗೆ ನೋಟೀಸು ಕಳುಹಿದ್ದಾರೆ ಈ ಮೊಕದ್ದಮೆಯಲ್ಲಿ ಅರ್ಜಿದಾರರ ಪರವಾದ ಬ್ಯಾರಿಸ್ಟರ್ ... ಪೋಲೀಸರು ಬಂಧನಕ್ಕಿಡಲ್ಪಟ್ಟಿರುವ ... ಸರ್ಕಾರ ... ರಾವ ... ಕಾರಣದಿಂದ ... ಕೋರ್ಟಿನವರು ... ಮಾಡಿದರು.

ಸಾರ್ವಭೌಮರ ಭಾಷಣದ ಸೂಚನೆ

ಪಾರ್ಲಿಮೆಂಟ್ ಸಭೆಯ ಅಧಿವೇಶನವು ಮುಗಿಯುತ್ತಾ ಬರುತ್ತಿರುವುದರಿಂದ ಚಕ್ರವರ್ತಿಗಳು ಮುಂದೆ ಮಾಡುವ ಭಾಷಣದ ಮೇಲೆ ಊಹಾಪೋಹಗಳಿವೆ. ಬ್ರಿಟಿಷ್ ಮಂತ್ರಿ ಮಂಡಲದಲ್ಲಿಯೂ ಬಹಳ ಬದಲಾವಣೆಗಳಾಗುವ ಸೂಚನೆ ಇದೆ ಭಾರತದ ಬಿಕ್ಕಟ್ಟಿನ ಪರಿಹಾರದ ಬಗ್ಗೆ ಮೈಸರಾಯರಿಗೆ ಸ್ವಷ್ಟವಾದ ಸಲಹೆಗಳು ಬರಬಹುದೆಂದೂ ನಿರೀಕ್ಷಿಸಲಾಗಿದೆ ಇಂಡಿಯಾ ಸೆಕ್ರೆಟರಿಯ ಪದವಿ ಅಮೆರಿಯವರು ಹೋಗುವುದು ಖಂಡಿತವೆಂದೂ ಹೇಳಲಾಗಿದೆ.

ಎರವು ಸಾಲದ ಒಪ್ಪಂದವಿಲ್ಲ

ಅಮೆರಿಕಾ, ಇಂಡಿಯಾಕ್ಕೆ ಎರವು ಸಾಲದ ಬಗ್ಗೆ ಒಪ್ಪಂದಕ್ಕಾಗಿ ಮಾತುಕತೆ ನಡೆಯುತ್ತಿದ್ದು, ಸದ್ಯಕ್ಕೆ ಯಾವ ಒಪ್ಪಂದವೂ ಆಗದೆ ಹಾಗೇ ಉಳಿದಿದೆಯೆಂದು ಕೇಂದ್ರ ಸರ್ಕಾರದ ಅರ್ಥ ಸಚಿವರು ನೊನ್ನೆ ಶಾಸನ ಸಭೆಯಲ್ಲಿ ಕೇಳಲಾದ ಪ್ರಶ್ನೆಯೊಂದಕ್ಕೆ ಜವಾಬು ಕೊಡುತ್ತಾ ಹೇಳಿದ್ದಾರೆ

ಕೈರೋದಲ್ಲಿ ಭಾರತೀಯ ಸೈನಿಕರು

ಕೈರೋದಲ್ಲಿ ನೊನ್ನೆ ಒಂದು ಸತ್ಕಾರ ಕೂಟವನ್ನೇರ್ಪಡಿಸಲಾಗಿತ್ತು. ಅದರಲ್ಲಿ ಜರ್ಮನಿಯವರು ವಶದಿಂದ ಬಿಡುಗಡೆ ಹೊಂದಿದ ಅನೇಕ ಭಾರತೀಯ ಸೈನಿಕರೂ ಭಾಗವಹಿಸಿದ್ದರು.

ಫ್ರಾಂಕೋವಿಗೆ ಒತ್ತಾಯ

ಸ್ಪೈನ್ ರಾಜಕೀಯ ಪಕ್ಷಗಳು ಜ॥ ಫ್ರಾಂಕೋವಿಗೆ ಪತ್ರ ಬರೆದು ಕೂಡಲೆ ಹಿಂದಿನ ರಾಜವಂಶದವರಿಗೆ ಪಟ್ಟ ಕಟ್ಟಬೇಕೆಂದು ಒತ್ತಾಯ ಪಡಿಸಿರುವರು.

ಬಂಗಾಳಕ್ಕೆ ದೊರೆತ ಆಹಾರ

ಇದೇ ತಿಂಗಳ ೬ನೇ ತಾ॥ಗೆ ಅಂತ್ಯವಾದ ವಾರದಲ್ಲಿ ... ಬಂಗಾಳ ... ಈ ದರ ಜೊತೆಗೆ ... ಸರ್ಕಾರದ ... ಕಳುಹಿಸಿದೆ..

ನಗರ್‌ ವರ್ಗ

ಮೈಸೂರು ೧೧

ಮೈಸೂರು ಜಿಲ್ಲಾ ಪೋಲೀಸ್ ಆಫೀಸಿನ ಮ್ಯಾನೇಜರಾಗಿರುವ ಶ್ರೀ ಎ. ವಿ ಕೃಷ್ಣಾಚಲಯ್ಯನವರನ್ನು ಬೆಂಗಳೂರು ಸಿ ಎಸ್.ಪಿ. ಆಫೀಸಿಗೂ, ಬೆಂಗಳೂರು ಸೆಂಟ್ರಲ್ ಪೋಲೀಸ್ ಆಫೀಸಿನ ಶ್ರೀ ಎಚ್. ಎಲ್. ರಾಮಸ್ವಾಮಿಯವರನ್ನು ಮೈಸೂರು ಆಫೀಸಿಗೂ ವರ್ಗಾಯಿಸಲಾಗಿದೆ

ಊಹಾಪೋಹಗಳಿಗೆ ಆಧಾರವಿಲ್ಲ

ಮೈಸೂರು ಸರ್ಕಾರದ ಪ್ರಕಟಣಾಧಿಕಾರಿಗಳು ಒಂದು ಪ್ರಕಟನೆ ಹೊರಡಿಸಿ, ಸಂಸ್ಥಾನದಲ್ಲಿ ತಾತ್ಕಾಲಿಕವಾಗಿ ನೆಲಸಿರುವ ಮಿಲಿಟರಿಯವರಿಗೆ ದೇಶದ ಆಹಾರ ಸಾಮಗ್ರಿ ವಿನಿಯೋಗವಾಗುತ್ತಿದೆ ಎಂಬ ಸುದ್ದಿ ಶುದ್ಧ ಸುಳ್ಳು ಸಂಸ್ಥಾನದ ಜನಗಳಿಗೆ ಮಾತ್ರ ಆಹಾರ ಸಲ್ಲುತ್ತಿದೆಯೇ ವಿನಃ ಹೊರಗಿನವರಿಗೆ ಕೊಡಲಾಗುತ್ತಿಲ್ಲ. ಹೊರಗಿನಿಂದ ಬಂದಿರುವ ಮಿಲಿಟರಿಯವರು ನಮ್ಮ ದವಸ ಧಾನ್ಯಗಳನ್ನು ವಿವಿಧ ಎಡೆಗಳಿಗೆ ಸಾಗಿಸಲು ಸಹಕರಿಸುತ್ತಿರುವುದರಿಂದ ನಮಗೆ ಉಪಕಾರವೇ ಆಗುತ್ತಿದೆ ಎಂದು ತಿಳಿಸಿದ್ದಾರೆ

ಉಪಕರಣಗಳಿಗೆ ೩೦ ಲಕ್ಷ ರೂ.

ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳ ತಯಾರಿಕೆಗೆಂದು ... ವರು ... ಲಕ್ಷ ರೂ ... ತ್ತಾರೆ.

ಮೈಸೂರಿಗೆ ಗೌರವ ತಂದ ಕುಮಾರಿ

ದಕ್ಷಿಣ ಭಾರತದ ಹಿಂದೀ ಪರೀಕ್ಷೆಯಲ್ಲಿ ದಕ್ಷಿಣ ಭಾರತಕ್ಕೆ ಪ್ರಥಮ ಸ್ಥಾನವು ಬೆಂಗಳೂರಿನ ಕುಮಾರಿ ಎಸ್ ... ನವರಿಗೆ ದೊರೆತಿದೆ

ಹುಟ್ಟಿದ ೭ ದಿನಕ್ಕೇ ಮಾತು!

ಹುಟ್ಟಿದ ಕೇವಲ ೭ ದಿನ ಮಾತ್ರ ಆದ ಹುಡುಗನೊಂದು ... ಮಾತಿಗೆ ಆರಂಭಿಸಿರುವ ... ಸುದ್ದಿ ಬಂದಿದೆ. ಬೆಂಗಳೂರು ... ಟಿ ಸ್ಟ್ರೀಟ್ ... ಇದನ್ನು ನೋಡಿಕೊಂಡು ... ವರು

ಬೆಸ್ತರ ಪರಾಕ್ರಮ

... ಜೀವದಿಂದ ... ಕೊಟ್ಟಿಕೊಂಡ ... ಅದನ್ನು ಕಂಡ ... ದರು. ಬಿಡದೆ ... ತಂದು ಬಿಡಿಸಿದರು. ... ಮೈಲಿದೂರ ... ನೋಡಲು ... ಪ್ರಮದ ಸುದ್ದಿ ಬಂದಿದೆ.

ಜಿನ್ನಾ ದೆಹಲಿ ತಲುಪಿದರು

... ಜಿನ್ನಾರವರು ... ಲುಪಿದರು.

ಪತ್ರವ್ಯವಹಾರ

ಸಾರ್ವಜನಿಕರ ಸಹಕಾರ ತೆಗೆದುಕೊಳ್ಳಬೇಕು

ತಾ|| ೯-೧೧-೪೩ ನೇ ಸಂಜೆ ೭ ಗಂಟೆಯಲ್ಲಿ ಮೈಸೂರು ಟೌನ್‌ಹಾಲಿನಲ್ಲಿ ಪೌರಸಭಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮೈಸೂರು ರೇಷನಿಂಗ್ ಸರ್ವಿಸ್ ವಿಚಾರವಾಗಿ ಬಹಿರಂಗ ಸಭೆ ನಡೆದುದು ಸಂತೋಷ. ಅಧ್ಯಕ್ಷರು ಸದರಿ ಸರ್ವಿಸ್ ವಿಚಾರದಲ್ಲಿ ಪುರಜನಗಳ ಸಹಾಯವನ್ನು ಕೋರಿರುತ್ತಾರೆ. ಆದರೆ ಪುರಜನಗಳಿಂದ ಚುನಾಯಿತರಾದ ೨೪ ಜನ ಪೌರಸಭಾ ಸದಸ್ಯರನ್ನೂ ಮತ್ತು ನಾಮಿನೇಟ್ ಆದ ೭ ಜನ ಪೌರಸಭಾ ಸದಸ್ಯರನ್ನೂ ಬಿಟ್ಟು ಸರ್ಕಾರದವರೇ ಎಲ್ಲಾ ಕೆಲಸಗಳನ್ನೂ ತಾವೇ ಕೈಗೊಂಡಿರುವುದು ಸರಿಯಾದುದಲ್ಲ. ಆದಕಾರಣ ಈಗಿನ ಪರಿಸ್ಥಿತಿಯಲ್ಲಿ ಸರ್ಕಾರದವರೂ, ಪೌರಸಭಾ ಸದಸ್ಯರುಗಳೂ ಮೈಸೂರು ನಗರದಲ್ಲಿರುವ ದೊಡ್ಡ ಮನುಷ್ಯರೂ ಸಹ ಸೇರಿ ಸಹಕರಿಸುವುದು ಯೋಗ್ಯವೆಂದು ಕಾಣುತ್ತದೆ. ಈ ವಿಷಯವನ್ನು ಸರ್ಕಾರದವರು ತಮ್ಮ ಗಮನಕ್ಕೆ ತಂದುಕೊಂಡು, ಮೈಸೂರು ಪೌರಸಭಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಏರ್ಪಡಿಸಿ, ಪುರಜನಗಳ ಸೇವೆಯನ್ನು ಸಲ್ಲಿಸಲು ಅನುಕೂಲಿಸುವಂತೆ ಏರ್ಪಡಿಸಬೇಕೆಂದು ಕೋರುತ್ತೇನೆ.

ಚೌಡಯ್ಯ
ಪೌರಸಭಾ ಸದಸ್ಯ.

Edited, printed and published by A. R. Nagarajan, at the Sadhvi Press, D.Subbiah Road, Mysore

ವಿಶ್ವವಿದ್ಯಾನಿಲಯ ಮತ್ತು ಮಾತೃಭಾಷೆ

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮೆಂಬರಾದ ಮಂಡ್ಯದ ಶ್ರೀ ಜಿ. ಮಲ್ಲಾರಾಧ್ಯರು ಈ ರೀತಿ ಬರೆಯುತ್ತಾರೆ—

ನಮ್ಮ ಸೋದರ ವಿಶ್ವವಿದ್ಯಾನಿಲಯಗಳಲ್ಲೊಂದಾದ ಅಣ್ಣಾಮಲೈ ವಿಶ್ವವಿದ್ಯಾಲಯದವರು ಕಳೆದ ತಿಂಗಳ ಕೊನೆಯಲ್ಲಿ ತಮ್ಮ ಅಧೀನದಲ್ಲಿರುವ ಎಲ್ಲ ಇಂಟರ್‌ಮೀಡಿಯೆಟ್ ಕಾಲೇಜುಗಳಲ್ಲಿಯೂ ತಮಿಳನ್ನು ಶಿಕ್ಷಣ ಭಾಷೆಯಾಗಿ ಮಾಡಲು ತೀರ್ಮಾನಿಸಿರುವುದು ಅವರು ತಮ್ಮ ಭಾಷೆಯ ಮೇಲಿಟ್ಟುಕೊಂಡಿರುವ ವಿಶ್ವಾಸವನ್ನು ತೋರಿಸುತ್ತದೆ. ಇದು ಎಲ್ಲ ವಿಶ್ವವಿದ್ಯಾಲಯಗಳಿಗೂ ಮೇಲ್ಪಂಕ್ತಿಯಾಗಿ ಕೊಟ್ಟಂತಾಗಿದೆ.

ನಮ್ಮ ನಾಡು ಕನ್ನಡದ ಉನ್ನತಿಗಾಗಿ ದುಡಿದಿರುವ ಪ್ರತಿಯೊಬ್ಬ ವ್ಯಕ್ತಿಯು, ಸಂಘ ಸಂಸ್ಥೆಗಳ ಮನೆ ಮಾತು ಕನ್ನಡ. ನಮ್ಮನ್ನಾಳುವ ಮಹಾಸ್ವಾಮಿಯವರು ಕನ್ನಡಪ್ರಭುಗಳು. ಇಂತಿದ್ದೂ ಸಾಧನೆಗಳು ಇದ್ದೂ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಭಾಷೆಯು ಕನ್ನಡವಾಗಿಲ್ಲದಿರುವುದು ಶೋಚನೀಯ ಹಾಗೂ ನಮ್ಮ ದುರದೃಷ್ಟ. ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಭಾಷೆ ಕನ್ನಡವೇ ಆಗಿರಬೇಕೆಂಬ ವಿಷಯದಲ್ಲಿ ಪ್ರಜಾಪ್ರತಿನಿಧಿಗಳು ಒಮ್ಮತದ ಅಭಿಪ್ರಾಯದ ನಿರ್ಣಯ ಮಾಡಿರುತ್ತಾರೆ. ಈಗಲೂ ಪ್ರತಿಯೊಂದು ಪ್ರಜಾ ಸಂಸ್ಥೆಯವರೂ ಪ್ರಜಾಪ್ರಮುಖರೂ ಇದನ್ನೇ ಪ್ರತಿಧ್ವನಿ ಮಾಡುತ್ತಿದ್ದಾರೆ.

ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಹಲವು ವರ್ಷಗಳ ಹಿಂದೆ ಪ್ರೌಢಶಾಲೆಗಳಲ್ಲಿ ಪ್ರಯೋಗರೂಪವಾಗಿ ತಂದ ಕನ್ನಡ ಮಾಧ್ಯಮವು ಯಶಸ್ವಿಯಾಗಿ ಇಂದಿನ ತರುಣರೆಲ್ಲರ ಮೆಚ್ಚುಗೆಯನ್ನು ಪಡೆದಿದೆ. ಈ ಪ್ರಗತಿಪಾಯಕವಾದ ವಿಚಾರವನ್ನು ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಬಳಕೆಗೆ ತಂದು ಯಶಸ್ವಿಗೊಳಿಸುವುದು ಕನ್ನಡಿಗರಾದ ನಮ್ಮೆಲ್ಲರ ಕರ್ತವ್ಯ. ಮುಂದಿನ ಉದಾತ್ತ ಫಲಗಳನ್ನು ಸದ್ಯದ ಸಂಕುಚಿತ ಫಲಗಳಿಂದ ಮರೆಮಾಚಲಾಗದು. ಕನ್ನಡ ಮಾಧ್ಯಮದಿಂದಾಗಬಹುದಾದ ಅಪಾರ ಲಾಭವನ್ನು ಸಕಾಲದಲ್ಲಿ ಪಡೆಯದೆ ಕುಳಿತುಕೊಂಡಿರುವುದು ಸಲ್ಲದ ಕಾರ್ಯ. ಕನ್ನಡಿಗರೆಲ್ಲರ ಬಹು ಕಾಲದ ಅಪೇಕ್ಷೆಯಾದ ಈ ಕನ್ನಡ ಮಾಧ್ಯಮಕ್ಕೆ ವಿಶ್ವವಿದ್ಯಾನಿಲಯದವರು ಇಂಬುಗೊಟ್ಟು ಕನ್ನಡದ ಸಂಸ್ಕೃತಿಗೆ ನೆರವಾಗುವರೆಂದು ನಾವೆಲ್ಲ ನಂಬಿದ್ದೇವೆ.

[ಈ ವಿಚಾರದಲ್ಲಿ ಈ ತಿಂಗಳು ೨೬ ನೇ ತಾ|| ನಲ್ಲಿ ನಡೆಯಲಿರುವ ಸೆನೆಟ್ಟಿನಲ್ಲಿ "ಕನ್ನಡವನ್ನು ಶಿಕ್ಷಣ ಭಾಷೆಯನ್ನಾಗಿ ವಿಶ್ವವಿದ್ಯಾನಿಲಯದ ತರಗತಿಗಳಲ್ಲೇ ೧೯೪೪ ರಿಂದ ಜಾರಿಗೆ ತರಬೇಕು" ಎಂಬ ಒಂದು ನಿರ್ಣಯವನ್ನು ಶ್ರೀ ಮಲ್ಲಾರಾಧ್ಯರು ಕಳುಹಿಸಿದ್ದಾರೆ]

ಜಪಾನರ ಹೊಸ ಬಾಂಬು

ರಂಜಕಮಿಶ್ರವಾದ ಹೊಸ ಬಾಂಬನ್ನು ಜಪಾನಿಯರು ತಮ್ಮ ಶತ್ರುಗಳ ಮೇಲೆ ಈಗ ಪ್ರಯೋಗಿಸುತ್ತಿದ್ದಾರೆ. ರಾಬೂಲ್ ಮೇಲೆ ಮಿತ್ರವಿಮಾನಗಳು ಮಾಡುವ ದಾಳಿಯನ್ನು ತಡೆಯುವುದೇ ಇದರ ಉದ್ದೇಶ. ಈ ಬಾಂಬುಗಳು ಯಾವ ವಿಮಾನಗಳ ಮೇಲೆ ಬಿದ್ದರೂ ಬೆಂಕಿ ಕಿಡಿಗಳು ಎದ್ದು ಅವುಗಳನ್ನು ಸುಟ್ಟುಹಾಕುತ್ತವೆ.

ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಬರುವ ತಿಂಗಳು ತಾ|| ೨೬ ರಿಂದ ೨೮ ರವರೆಗೆ ಶಿವಮೊಗ್ಗದಲ್ಲಿ ನಡೆಯಲಿರುವುದಾಗಿರುವ ಕರ್ಣಾಟಕ ಸಾಹಿತ್ಯ ಸಮ್ಮೇಳನದ ೨೭ ನೆಯ ಅಧಿವೇಶನಕ್ಕೆ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಅಧ್ಯಕ್ಷರಾಗಿ ಚುನಾಯಿತರಾಗಿರುವುದನ್ನು ತಿಳಿಸಲು ತುಂಬಾ ಸಂತೋಷಿಸುತ್ತೇವೆ. ಶ್ರೀಯುತರುಗಳಾದ ಟಿ. ಟಿ. ಶರ್ಮ, ಎಸ್. ಎಸ್. ಬಸವನಾಳ್ ಮತ್ತು ಸಿ. ಕೆ. ವೆಂಕಟರಾಮಯ್ಯ ಇವರುಗಳ ಹೆಸರನ್ನೂ ಅಧ್ಯಕ್ಷಸ್ಥಾನಕ್ಕೆ ಸೂಚಿಸಲಾಗಿತ್ತು. ಬಹುಮತ ಬೇಂದ್ರೆಯವರಿಗೇ ದೊರೆತಿದೆ.

ಮುಸ್ಲಿಂ ಲೀಗಿನ ವಿಜಯ

ಸಿಂಧ್ ಅಸೆಂಬ್ಲಿಗೆ ದಿವಂಗತ ಅಲ್ಲಾಭಕ್ಷರ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಮುಸ್ಲಿಂ ಲೀಗ್ ಉಮೇದುವಾರರಾದ ಖಾನ್ ಬಹದ್ದೂರ್ ಅಹಮದ್ ಖಾನರಿಗೆ ಜಯ ದೊರೆತಿದೆ. ಸ್ವತಂತ್ರವಾಗಿ ನಿಂತಿದ್ದ ಅಲ್ಲಾಭಕ್ಷರ ಸಹೋದರರಿಗೆ ಅಪಜಯವಾಯಿತು.

NATIONAL WAR FRONT,
Mysore District

Applications are hereby invited from intending candidates for the posts of two Itinerant Lecturers on War Propaganda in the Mysore District on a salary of Rs. 35, and a Fixed Travelling Allowance of Rs. 20 per mensem plus the usual Dearness Allowance. The duration of the posts is provisionally till the end of June 1944. Applicants with higher educational qualifications and previous experience in lecturing work will be given preference. The selected candidates will be on probation for a period of two months.

Last date for receiving applications is Saturday, the 20th November 1943.

K. C. SUBBANNIAH,
Dt. Organiser & Chairman.
Mysore, 5-11-1943

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಪ್ಪ ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ — ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುವುದಲ್ಲದೆ ಮತ್ತು ಸಂತೇಪೇಟೆ ರೇಷನ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ನಂ. 26

ಮೈಸೂರು ಕೊ-ಆಪರೇಟಿವ್ ಸೊಸೈಟಿ ಲಿಮಿಟೆಡ್

ಡೈರೆಕ್ಟರುಗಳ ಚುನಾವಣೆ

ತಾರೀಖು ೧೪—೧೧—೧೯೪೩

ದಯವಿಟ್ಟು ತಮ್ಮ ಘನವಾದ ಓಟನ್ನು ಮ|| ರಾ||

ಜೆ. ಪಿ. ನರಸಿಂಗರಾವ್

ರವರಿಗೆ ಕೊಡಬೇಕಾಗಿ ಪ್ರಾರ್ಥನೆ.

ಜಯ ಅಂಡ್ ಕಂಪನಿ

ಸ್ಟಾಕ್ ಮತ್ತು ಷೇರ್ ಬ್ರೋಕರ್ಸ್,

ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು.

ನಂ. 57 ನಂ. 57

ಮೈಸೂರು ಗಾಂಧೀ ಸ್ಕ್ವೇರಿನಲ್ಲಿರುವ ಮೈಸೂರು ಕೋ-ಆಪರೇಟಿವ್ ಸೊಸೈಟಿ ಷೇರುದಾರರಲ್ಲಿ ವಿಜ್ಞಾಪನೆ:—

ನಾನು ಅನೇಕ ವರ್ಷಗಳಿಂದ ಮೇಲ್ಕಂಡ ಸೊಸೈಟಿಯಲ್ಲಿ ಡೈರೆಕ್ಟರಾಗಿಯೂ ಮತ್ತು ಶ್ರೀ ಚೆನ್ನಕಾಮೇಶ್ವರಿ ಸೊಸೈಟಿಯಲ್ಲಿ ವೈಸ್ ಪ್ರೆಸಿಡೆಂಟಾಗಿಯೂ ತಮ್ಮ ಸೇವೆಯನ್ನು ನಿಷ್ಪಕ್ಷಪಾತದಿಂದಲೂ ಪ್ರಾಮಾಣಿಕನಾಗಿಯೂ ಮಾಡುತ್ತಿರುವುದು ನಿಮಗೆ ತಿಳಿದೇ ಇರುತ್ತದೆ. ಈಗಲೂ ಇದೇ ತಿಂಗಳು 14 ನೇ ತಾ|| ಭಾನುವಾರ ಸಾ|| ೧. ಬಸಮ್ಮನವರ ಸ್ಕೂಲಿನಲ್ಲಿ ನಡೆಯುವ ಡೈರೆಕ್ಟರುಗಳ ಚುನಾವಣೆಯಲ್ಲಿ ತಮ್ಮ ಓಟನ್ನು ನನಗೆ ಕೊಟ್ಟು ತಮ್ಮ ಸೇವೆಯನ್ನು ಇನ್ನೂ ಮಾಡಲು ಅವಕಾಶ ಕೊಡಬೇಕಾಗಿ ಕೋರುತ್ತೇನೆ. ತಮ್ಮ ವಿಧೇಯ,

57 ಜಿ. ವಿ. ಸೂರ್ಯನಾರಾಯಣ ಶೆಟ್ಟಿ 57

ಜುಯೆಲರ್, ರೆಡಿಮೇಡ್ ಡ್ರೆಸ್ & ಬನಾರಸ್ ಸಾರಿ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

ಮರೆಯದಿರಿ !!! ಮರೆಯದಿರಿ !!!!

ಮನೆ ಬಿಟ್ಟು ಕದಲದಿರಿ

೧೩, ೧೪, ೧೫ ನೇ ನವೆಂಬರ್

ಕದಲಿದರೆ ಊಟಕ್ಕೆ ಪೇಚಾಡುವಿರಿ !!

ಮೈಸೂರು ಸಿಟಿ ರೇಷನ್ ಸೆನ್ಸಸ್

ಸಂಪುಟ ೨] ಶನಿವಾರ ೧೩--೧೧--೪೩ [ಸಂಚಿಕೆ ೯೯

ಮಿ|| ಅಮೆರಿಯವರ ಪಟ್ಟ ಸ್ಥಿರವಾಯಿತು

ಬ್ರಾಹ್ಮಣ ಸ್ತ್ರೀಯೋರ್ವಳ ಹೆಣ ಹದ್ದುಗಳ ಪಾಲು !

ಕಾಂಗ್ರೆಸ್-ಸರ್ಕಾರ ಸಂಧಿಗಾಗಿ ಮುನ್ಷಿಯವರ ಪ್ರಯತ್ನ ?

ಸರ್ಕಾರ ರಾಜೀನಾಮೆ ಕೊಡಬೇಕು

ಈಸಾರಿಯ ಕೇಂದ್ರ ಶಾಸನ ಸಭೆ ಪ್ರಾರಂಭವಾದ ತರುಣದಲ್ಲೇ ಸರ್ಕಾರಕ್ಕೆ ಸೋಲಾಯಿತು. ಸರ್ಕಾರದ ನೀತಿಯನ್ನು ಖಂಡಿಸುವ ನಿಲುವಳಿ ಸೂಚನೆ ಸಭೆಯಲ್ಲಿ ಬಹುಮತದಿಂದ ಅನುಮೋದಿತವಾಯಿತು. ಈ ಸೋಲನ್ನು ಒಪ್ಪಿಕೊಂಡು ಭಾರತ ಸರ್ಕಾರಕ್ಕೆ ರಾಜೀನಾಮೆ ಕೊಡುವುದೊಂದೇ ಉಳಿದಿರುವ ಮಾರ್ಗ ಎಂಬುದಾಗಿ ಲಂಡನ್ನಿನ ರಾಜಕಾರಣ ಪಟುಗಳು ಅಭಿಪ್ರಾಯಪಟ್ಟಿದ್ದಾರೆ.

ಭಾರತದ ಕ್ಷಾಮವು ಗಣನೀಯವಲ್ಲವಂತೆ

ಸಂಯುಕ್ತ ರಾಷ್ಟ್ರಗಳ ಕಷ್ಟ ಪರಿಹಾರ ಆಡಳಿತ ಸಮ್ಮೇಳನದಲ್ಲಿ ಭಾರತ ಕ್ಷಾಮದ ಪ್ರಶ್ನೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದು ಅಟ್ಲಾಂಟಿಕ್ ಸಿಟಿಯಿಂದ ಖಚಿತವಾದ ಸುದ್ದಿ ಹೊರಬಿದ್ದಿದೆ. ಭಾರತಕ್ಕೆ ಹೊರಗಿನಿಂದ ಬರುತ್ತಿದ್ದ ಅಕ್ಕಿಗೆ ಜಪಾನರು ಅಡ್ಡಿ ಬಂದರು. ಹೊಸ ಬೆಳೆ ಬಂದರೆ ಕ್ಷಾಮವು ನೀಗುವದು. ಆದುದರಿಂದ ಅದನ್ನು ಗಣನೀಯವಾದುದಲ್ಲ ಎಂದು ಆ ಸಮ್ಮೇಳನಾಧಿಕಾರಿಗಳು ಸಮಾಧಾನವಿತ್ತಿರುವರು.

ಬ್ರಿಟಿಷ್ ಮಂತ್ರಿ ಮಂಡಲದ ಬದಲಾವಣೆಗಳು

ಬ್ರಿಟಿಷ್ ಮಂತ್ರಿ ಮಂಡಲದ ಬದಲಾವಣೆಗಳು ಈಗ ಪ್ರಕಟವಾಗಿವೆ. ಇಂಡಿಯಾ ಆಫೀಸಿನಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲವೆಂದು ಮಿ|| ಚರ್ಚಿಲ್‌ರು ನಿರ್ಧರಿಸಿದ್ದಾರೆ. ಆದುದರಿಂದ ಅಮೆರಿಯವರ ಸ್ಥಾನಕ್ಕೆ ಚ್ಯುತಿ ಇಲ್ಲ. ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಲಾರ್ಡ್ ವುಲ್ಟನ್ನರ ಸ್ಥಾನದಲ್ಲಿ, ಜೆ. ಜಾಸ್ಲೀ ಲ್ಯೂಲೀನರವರನ್ನು ಆಹಾರ ಮಂತ್ರಿಗಳಾಗಿ ನೇಮಿಸಿ, ವುಲ್ಟನ್ನರವರನ್ನು ಪುನರ್ರಚನಾ ಮಂತ್ರಿಗಳಾಗಿ ತೆಗೆದುಕೊಳ್ಳಲಾಗಿದೆ.

ಮದರಾಸ್-ಸಿಲೋನ್‌ಗಳ ಬಳಿ ಜಪಾನ್ ವಿಮಾನ

ಮೊನ್ನೆ ರಾತ್ರಿ ಮದರಾಸಿನಲ್ಲಿ ವಿಮಾನ ಧಾಳಿ ಎಚ್ಚರಿಕೆ ಧ್ವನಿ ಕೊಡಲಾಯಿತು. ಆದರೆ ಎಲ್ಲಿಯೂ ಬಾಂಬು ಬೀಳಲಿಲ್ಲವೆಂದು ಸುದ್ದಿ ಬಂದಿದೆ.

ನಿನ್ನೆ ದಿವಸ ಬೆಳಗ್ಗೆ ಸಿಲೋನ್ ಮತ್ತು ಮದರಾಸ್ ಪ್ರದೇಶಗಳ ಬಳಿ ಶತ್ರು ವಿಮಾನ ಕಂಡುಬಂದಿತ್ತು. ಆ ವಿಮಾನ ನಾಶ ಮಾಡಲಾಯಿತು. ಬಾಂಬುಗಳನ್ನೇನೂ ಹಾಕಲಿಲ್ಲ ಎಂಬುದಾಗಿ ನಿನ್ನೆ ದಿವಸ ದೆಹಲಿಯ ಪ್ರಕಟಣೆ ತಿಳಿಸುತ್ತದೆ. ಸದರಿ ಪ್ರಕಟಣೆ ಮತ್ತೂ ತಿಳಿಸುವುದೇನೆಂದರೆ:- ಜಪಾನೀ ಬಾಂಬರುಗಳು ಮೊನ್ನೆ ದಿವಸ [illegible] ಮುಂಭಾಗದ ವಿಮಾನ ಪ್ರದೇಶದಲ್ಲಿ ಧಾಳಿ ಮಾಡಿದವು. ಇದರಿಂದ ಆದ ನಷ್ಟವು ಅಲ್ಪ. ಸಾರ್ವಜನಿಕರಲ್ಲಿ ಕೆಲವರು ಮರಣಹೊಂದಿದರು. ನಿನ್ನೆ ಬೆಳಗ್ಗೆ [illegible] ವಿಮಾನ [illegible] ಬಂದಿತೆಂದೂ, ಆ ವಿಮಾನ ನಾಶಗೊಳಿಸಲಾಯಿತೆಂದೂ, ಬಾಂಬುಗಳನ್ನೇನೂ ಹಾಕಲಿಲ್ಲವೆಂದೂ ಕೊಲಂಬೋದಿಂದ ಅಧಿಕಾರ ಪ್ರಕಟಣೆ ಹೊರಟಿದೆ.

ಮುನ್ಷಿ-ವೈಸರಾಯರ ಮಾತುಕತೆ

ಬೊಂಬಾಯಿಯ ಶ್ರೀಯುತ ಕೆ. ಎಂ. ಮುನ್ಷಿಯವರು ೧೦ ನೇ ತಾ|| ದೆಹಲಿಯಲ್ಲಿ ವೈಸರಾಯರ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಬೊಂಬಾಯಿ ಗೌರ್ನರ ಮೂಲಕ ಈ ಭೇಟಿ ಏರ್ಪಾಡಾಯಿತೆಂದು ವರದಿಯಾಗಿದೆ. ವೈಸ್ರಾಯರ ರಾಜಕೀಯ ಅಭಿಪ್ರಾಯಗಳನ್ನು ತಿಳಿಯುವುದು; ಇಂಡಿಯ ಕ್ಷಾಮ ಮತ್ತು ಪರಿಸ್ಥಿತಿಯ ಬಗ್ಗೆ ಅಭಿಪ್ರಾಯವನ್ನು ಅರಿತುಕೊಳ್ಳುವುದು; ಮಹಾತ್ಮರ ಭೇಟಿಗೆ ತಮಗೆ ಅವಕಾಶ ದೊರೆಯುವುದೇ ಎಂದು ತಿಳಿಯುವದು; ಮತ್ತು, ಸಾಧ್ಯವಾದರೆ ಲಾರ್ಡ್ ವೇವಲ್-ಗಾಂಧೀಜಿ ಅಥವಾ ಸರ್ಕಾರ ಮತ್ತು ಕಾಂಗ್ರೆಸ್‌ಗಳಿಗೆ ಸಂಧಾನ ಮಾಡುವ ಪ್ರಯತ್ನ ಮಾಡುವುದು ಇವೇ ಈ ಭೇಟಿಯ ಉದ್ದೇಶವೆಂದು ಊಹಿಸಲಾಗಿದೆ. ಆದರೆ ಶ್ರೀ ಮುನ್ಷಿಯವರೂ ಸಹ ಇದರ ಭಾವನೆ ವ್ಯಕ್ತವಾಗಿಲ್ಲವೆಂದು ಕೇಳಲಾಗಿದೆ.

ಸ್ವರಾಜ್ಯ ಮತ್ತು ವಿಶ್ವಶಾಂತಿಗಾಗಿ ಯಜ್ಞ

ಕುಂಭಕೋಣದ ಬಳಿ ಮೇಲತ್ತೂರ್ ಎಂಬಲ್ಲಿ ವಾಜಪೇಯ ಮಹಾಯಜ್ಞವೊಂದನ್ನು ಪಂಡಿತೋತ್ತಮರು ನಡೆಸುತ್ತಿದ್ದಾರೆ. ಕಂಚಿ ಕಾಮಕೋಟಿ ಪೀಠದ ಶ್ರೀ ಶಂಕರಾಚಾರ್ಯ ಸ್ವಾಮಿಗಳವರು ಇದಕ್ಕೆ ಪ್ರೋತ್ಸಾಹವಿತ್ತಿದ್ದಾರೆ. ದೇಶದ ಕ್ಷಾಮವು, ಬಡತನ ಮತ್ತು ರೋಗಗಳನ್ನು ನಿವಾರಿಸಿ ಸ್ವರಾಜ್ಯ ಸಾಧನೆಯನ್ನು ತ್ವರಿತಗೊಳಿಸುವುದೇ ಇದರ ಉದ್ದೇಶ.

ಸ್ವರಾಜ್ಯ ಸಿಕ್ಕಿದರೆ ಕ್ಷಾಮವು ಹೋಗುವುದು

ಲಂಡನ್ನಿನ ಡೈಲಿ ವರ್ಕರ್ ಪತ್ರಿಕೆ ಭಾರತ ಕ್ಷಾಮವನ್ನು ಕುರಿತು, ಆಹಾರ ನೌಕೆಗಳು ಇತರ ರಾಷ್ಟ್ರಗಳಿಂದ ಒಂದೇ ಸಮನೆ ಹೊರಟು, ಸಾಲದುದಕ್ಕೆ, ಭಾರತ ಜೀಲರನ್ನು ಮುಕ್ತಗೊಳಿಸಬೇಕು [illegible] ಭಾರತಕ್ಕೆ ಸ್ವರಾಜ್ಯ ಕೊಟ್ಟು [illegible] ಇವೇ [illegible] ಎಂದು ಬರೆದಿದೆ.

ವ್ಯಾಪಾರೋದ್ಯಮ

ಮೈಸೂರು ೧೩.

ಶ್ರೀ ಎಂ. ಎಸ್. ರಾಜಾರಾಯರು ಸಯ್ಯಾಜಿರಾವ್ ರಸ್ತೆಯ ೩೨ ನೇ ನಂಬರ್ ಅಂಗಡಿಯಲ್ಲಿ ಹೊಸದಾಗಿ ವ್ಯಾಪಾರೋದ್ಯಮ ಸಂಸ್ಥೆಯೊಂದನ್ನು ಆರಂಭಿಸಿದ್ದಾರೆ. ಮನೆ, ಜಮೀನು ವ್ಯಾಪಾರ ಮಾಡಿಸುವುದು, ಸಾಲ ಕೊಡಿಸುವುದು, ಸ್ಟಾಕ್ ಮತ್ತು ಷೇರುಗಳನ್ನು ಕೊಳ್ಳುವುದು, ವ್ಯಾಪಾರ ಮಾಡುವುದು ಇವೇ ಮುಂತಾದ ವಿಷಯಗಳನ್ನು ಮಾಡುವರು. ಮಹಾಜನರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಕೋರಲಾಗಿದೆ.

ತರುಣ ಹಿಂದೂ ಮಹಾಸಭೆ

ಕಳೆದ ಬುಧವಾರ ಮೈಸೂರು ತರುಣ ಹಿಂದೂ ಮಹಾಸಭೆಯ ಕಾರ್ಯಕಾರಿ ಮಂಡಲಿಯು ಸೇರಿ ರಚನಾತ್ಮಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಿತು. ಕಾನೇಕಾನಹಳ್ಳಿಯಲ್ಲಿ ಹಿಂದೂ ಮಹಮ್ಮದೀಯರ ಕಲಹದಿಂದ ಹಿಂದೂಗಳಿಗೆ ಉಂಟಾದ ಕಷ್ಟನಷ್ಟಗಳಿಗಾಗಿ ವಿಷಾದವನ್ನು ಸೂಚಿಸಿತು. ಸರ್ಕಾರದವರು ಶಾಂತಿ ಸ್ಥಾಪನೆ ಮಾಡಿ, ಹಿಂದೂಗಳ ಹಕ್ಕುಬಾಧ್ಯತೆಗಳನ್ನು ಕಾಪಾಡಬೇಕೆಂದೂ ಮಹಾಜನರೂ ಸಹ ಸಹಾಯ ಮಾಡಬೇಕೆಂದೂ ಪ್ರಾರ್ಥಿಸಲಾಯಿತು.

ಕೈ ಕೂಸಿನ ಭವಿಷ್ಯ ನುಡಿ

ಬೆಂಗಳೂರು. ಮಂಡ್ಯದಲ್ಲಿ ಜನಿಸಿದ ೭ ದಿನಕ್ಕೇ ಶಿಶುವೊಂದು ಮಾತಿಗೆ ಆರಂಭಿಸಿದ ಸುದ್ದಿಯನ್ನು ನಿನ್ನೆಯೇ ತಿಳಿಸಲಾಯಿತಷ್ಟೆ. ಆ ಬಗ್ಗೆ ಹೆಚ್ಚಿನ ವಿವರಗಳು:- ಅದರ ತಂದೆ ತಾಯಿಗಳು ಮಹಮ್ಮದೀಯರು, ಅದು ಉರ್ದು ಭಾಷೆಯಲ್ಲಿ ಮಾತನಾಡುತ್ತಿದೆ. ನನ್ನ ಮುಖ ನೋಡಬೇಡ, ಕೇಡು ಬೀಳುವುದು ಎಂದು [illegible] ಎಚ್ಚರದ ನುಡಿ ಹೇಳಿದೆ. ನಾನು ಬದುಕುವುದು ಒಂಭತ್ತೇ ದಿನವೆಂದೂ ಭವಿಷ್ಯ ನುಡಿದಿದೆಯಂತೆ!

ರಾಗಿ ಚೀಲ ಕಳುವು

[illegible] ತಾಲ್ಲೂಕು. ಐವತ್ತು [illegible] ಯಾರೋ [illegible] ರಾಗಿ ಮೂಟೆಗಳಿಗೆ [illegible] ಕದ್ದಿರುವರೆಂದು [illegible] ವರದಿಯಾಗಿದೆ.

ಹೆಂಗಸಿನ ಹೆಣ ಹದ್ದುಗಳಿಗೆ ಆಹಾರ

೩೫ ವರ್ಷ ವಯಸ್ಸಿನ ಒಬ್ಬ ಬ್ರಾಹ್ಮಣ ಸ್ತ್ರೀಯು ಮೃತ ಶರೀರದ ಕೆಲವು ಭಾಗಗಳನ್ನು ಹದ್ದುಗಳು ತಿಂದ ಸ್ಥಿತಿಯಲ್ಲಿ ಬೊಂಬಾಯಿಯ [illegible] ಅದನ್ನು ಪೋಲೀಸಿನವರು [illegible] ಸಾಗಿಸಿದ ವರದಿ ಬಂದಿರುತ್ತದೆ. ಆಕೆಯನ್ನೂ, ಮಕ್ಕಳನ್ನೂ ಪೋಷಿಸಲಾರದೆ, ಗಂಡನು ಓಡಿಹೋಗಿದ್ದನು. ಆಕೆಯ ಹಸಿದ ೨ ಮಕ್ಕಳನ್ನೂ ಅರ್ಭಕ ಸಮಾಜಕ್ಕೆ ಒಪ್ಪಿಸಲಾಯಿತು. ೬೫ ವರ್ಷದ ಆಕೆಯ ಮಾವನೂ ಸಹ ಅನೇಕ ದಿನದಿಂದ ರೊಟ್ಟಿಗಿಲ್ಲದೆ, ಅರಜೀವದಿಂದ ಬಿದ್ದಿದ್ದನು. ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಈ ಸಂಸಾರವು [illegible] ಬೊಂಬಾಯಿಗೆ ಬಂದಿತೆಂದೂ, ಅಲ್ಲಿ ಯಾಚನೆ ಮಾಡುತ್ತಿತ್ತೆಂದೂ ಹೇಳಲಾಗಿದೆ. ಅವರ ಬಳಿ ರೇಷನ್ ಕಾರ್ಡುಗಳಿದ್ದರೂ ದವಸವನ್ನು ಕೊಳ್ಳಲು ಹಣವಿರಲಿಲ್ಲ.

೪೧ ಸಾವಿರ ಟನ್ ದವಸ ಭಾರತಕ್ಕೆ

ನಿನ್ನೆ ಕೇಂದ್ರ ಶಾಸನ ಸಭೆ ಮುಂದೆ ಆಹಾರ ಸಚಿವರಾದ ಸರ್ ಶ್ರೀವಾತ್ಸವರವರು ಭಾರತಕ್ಕೆ ಹೊರಗಿನಿಂದ ಇದುವರೆಗೆ ಒಟ್ಟು ೪೧ ಸಾವಿರ ಟನ್ ದವಸಧಾನ್ಯಗಳು ಬಂದಿವೆಯೆಂದು ತಿಳಿಸಿರುವರು.

ಲೆಬನಾನಿನಲ್ಲಿ ಅಲ್ಲಕಲ್ಲೋಲ

ಸಿರಿಯಾದ ಲೆಬನಾನ್ ಪ್ರಾಂತ್ಯದಲ್ಲಿ ಕ್ರಾಂತಿ ಸಂಭವಿಸಿದೆ. ಅಲ್ಲಿನ ಅಧ್ಯಕ್ಷರನ್ನೂ ಇಬ್ಬರು ಮಂತ್ರಿಗಳನ್ನೂ ಬಂಧನ ಮಾಡಲಾಗಿದೆ. ಫ್ರೆಂಚ್ [illegible] ಲೆಬನಾನಿನಲ್ಲಿ ಮಾರ್ಷಲ್ ಲಾ ಶಾಸನವನ್ನು ಜಾರಿಗೆ ತಂದಿರುವರು. ದೇಶ ಅಲ್ಲಕಲ್ಲೋಲವಾಗಿದೆ.

ಸೈರನ್‌ಗಳು ಕೂಗುವುವು

ವಿಮಾನ ಧಾಳಿಯ [illegible] ಸಂದರ್ಭಗಳಲ್ಲೆಲ್ಲಾ ಎಚ್ಚರಿಕೆ ಧ್ವನಿಯನ್ನು ಕೊಟ್ಟುಕೊಡುವ [illegible] ಮದರಾಸ್ ಸರ್ಕಾರದವರು ಪ್ರಕಟಿಸಿರುವರು. ಆದರೆ ಇಂಡಿಯಾ ಸರ್ಕಾರದ [illegible] ಧ್ವನಿ [illegible] ವೆಂದು ತಿಳಿಸಿದ್ದಾರೆ.

ಲಿನ್‌ಲಿತ್‌ಗೋ ವಿಚಾರಣೆ ಆಗಬೇಕು

ಕೇಂದ್ರ ಶಾಸನ ಸಭೆಗೆ [illegible] ಕಾಂಗ್ರೆಸ್ ಪಕ್ಷದವರ [illegible] ಲಿನ್‌ಲಿತ್‌ಗೋ, ಬಂಗಾಳದ ಮಾಜಿ [illegible] ವಿಚಾರಣೆ ಮಾಡಬೇಕೆಂದು [illegible] ತಿಳಿಸಿದ್ದಾರೆ.

ಇವರುಗಳು [illegible] ಯಾರೇ [illegible] ಹೇಳಲಾಗಿದೆ.

ಭಾರತೀಯರಿಗೆ ಅಪಾಯ ಬೇಡ

"ಈಗ ಇಲ್ಲಿ ಆಗುತ್ತಿರುವುದು ಭಾರತ ಸರ್ಕಾರದ ನೀತಿಯಾಗಿರುವುದು ಭಾರತೀಯರ ಹಿತಕ್ಕೆ ವಿರುದ್ಧವಾಗಿದೆ. ಇದನ್ನು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿ" ಎಂಬ ಖಾಸಗಿ ನಿರ್ಣಯವನ್ನು ಕೌನ್ಸಿಲ್ ಆಫ್ ಸ್ಟೇಟ್ಸ್‌ನಲ್ಲಿ ಇತ್ತೀಚೆಗೆ ಶ್ರೀ ಜಿ. ಎಸ್. ಮೋತಿಲಾಲ್ ರವರು ಸೂಚಿಸಿರುವರು.

ಬೊಂಬಾಯಿ ನಗರಸಭೆ ಪಟ್ಟ

ಬೊಂಬಾಯಿ ಪೌರಸಭಾಧ್ಯಕ್ಷತ್ವಕ್ಕೆ ನಡೆಸಿದ ಚುನಾವಣೆಯಲ್ಲಿ ... ರವರು ವರ್ಷವನ್ನೆಲ್ಲಾ ಸೇವೆ ಸಲ್ಲಿಸಿದ ... ಕಾಂಗ್ರೆಸ್ ಪಕ್ಷದ ಶ್ರೀಯುತ ... ರವರು ಸ್ಪರ್ಧಿಸಿದ್ದು ... ಹೆಚ್ಚು ಓಟು ಪಡೆದು ಚುನಾಯಿತರಾಗಿದ್ದಾರೆ.

ಐರ್ಲೆಂಡಿನಿಂದ ಸಹಾಯ

ಐರ್ಲೆಂಡಿನ ಶಾಸನ ಸಭೆಯು ಭಾರತ ಕ್ಷಾಮ ನಿವಾರಣೆಗಾಗಿ ಯೂರೋಪ್ ಶಸ್ತ್ರ ... ೨ ಲಕ್ಷ ಪೌಂಡು ಹಣ ಕೊಡುವ ನಿರ್ಧಾರ ಮಾಡಲಿದೆ.

ನಂ. 26

ಮೈಸೂರು ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ಡೈರೆಕ್ಟರುಗಳ ಚುನಾವಣೆ
ತಾರೀಖು ೧೪-೧೧-೧೯೪೩
ದಯವಿಟ್ಟು ತಮ್ಮ ಅಮೂಲ್ಯವಾದ
ಓಟನ್ನು ಮ|| ರಾ||
ಜೆ. ಪಿ. ನರಸಿಂಗರಾವ್
ರವರಿಗೆ ಕೊಡಬೇಕಾಗಿ ಪ್ರಾರ್ಥನೆ.

Edited, printed and published by A. R. Nagarajan, at the Sadhvi Press, D.Subbaiah Road, Mysore.

ಕ್ಷಾಮಕ್ಕೆ ಯೂರೋಪಿಯನ್ನರು ತುತ್ತಾಗಿಲ್ಲ

ಭಾರತದಲ್ಲಿರುವ ಯಾವ ಯೂರೋಪಿಯನ್ ಸಂಗಡಿಗರೂ ಕ್ಷಾಮ ಬಾಧೆಯಿಂದ ಸತ್ತಿಲ್ಲವೆಂದು ಮೊನ್ನೆ ಪಾರ್ಲಿಮೆಂಟಿನಲ್ಲಿ ಮಿ|| ಅಮೆರಿಯವರು ತಿಳಿಸಿದ್ದಾರೆ.

ನಾಯಕರ ನಿಧನ

ಬಾಗಲಕೋಟೆಯ ಕಾಂಗ್ರೆಸ್ ಮುಖಂಡರಾದ ಶ್ರೀ ಜಯರಾವ್ ನರಗುಂದರವರು ೯ ನೇ ತಾ|| ಹೊಟ್ಟೆನೋವಿನಿಂದ ಮರಣ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಮರೆಯದಿರಿ !!! ಮರೆಯದಿರಿ !!!!

ಮನೆ ಬಿಟ್ಟು ಕದಲದಿರಿ

೧೩, ೧೪, ೧೫ ನೇ ನವೆಂಬರ್

ಕದಲಿದರೆ ಊಟಕ್ಕೆ ಪೇಚಾಡುವಿರಿ !!

ಮೈಸೂರು ಸಿಟಿ ರೇಷನ್ ಸೆನ್ಸಸ್

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧೧-೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರ್ಯಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಬಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.— ಚಿಲ್ಲರೆಯಾಗಿ ಸಂಪಿಗೆ ಪದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲದೆ ಮತ್ತು ಸಂತೆಪೇಟೆ ಬ್ರಾಂಚ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ನಂ. 57 ನಂ. 57

ಮೈಸೂರು ಗಾಂಧೀ ಸ್ಕ್ವೇರಿನಲ್ಲಿರುವ ಮೈಸೂರು ಕೋ-ಆಪರೇಟಿವ್ ಸೊಸೈಟಿ ಷೇರುದಾರರಲ್ಲಿ ವಿಜ್ಞಾಪನೆ:—

... ಡೈರೆಕ್ಟರಾಗಿಯೂ ಮತ್ತು ಶ್ರೀ ಚಾಮರಾಜೇಶ್ವರಿ ಸೊಸೈಟಿಯಲ್ಲಿ ವೈಸ್ ಪ್ರೆಸಿಡೆಂಟಾಗಿಯೂ ... ಇದೇ ತಿಂಗಳು 14 ನೇ ತಾ|| ಭಾನುವಾರ ರಾ|| ಬಿ. ಬಸಪ್ಪನವರ ಹೈಸ್ಕೂಲಿನಲ್ಲಿ ನಡೆಯುವ ಡೈರೆಕ್ಟರುಗಳ ಚುನಾವಣೆಯಲ್ಲಿ ... ಓಟನ್ನು ... ಕೊಡಬೇಕೆಂದು ... ವಿನಂತಿ.

57 57

ಜಿ. ವಿ. ಸತ್ಯನಾರಾಯಣ ಶೆಟ್ಟಿ
ಜ್ಯುಯೆಲರ್, ರೆಡಿಮೇಡ್ ಡ್ರೆಸ್ & ಬನಾರಸ್ ಸಾರಿ ಎಂಪೋರಿಯಂ,
ಸಯ್ಯಾಜಿರಾವ್ ರೋಡ್, ಮೈಸೂರು.

ನಿಮ್ಮ ಗಳಿಕೆಗಳನ್ನು ಕಾಪಾಡಿರಿ

ಅಮೂಲ್ಯ ಖನಿಜಗಳು, ಅಮೂಲ್ಯ ಹರಳು ಕಲ್ಲುಗಳು, ಭೂಮಿ, ಕಟ್ಟಡಗಳು ಅಥವಾ ತಯಾರಿಸಲ್ಪಟ್ಟ ಸಾಮಾನುಗಳ ಮೇಲೆ ಯುದ್ಧಕಾಲದಲ್ಲಿ ಕೂಡಿಟ್ಟ ಹಣವನ್ನು ವಿನಿಯೋಗಿಸಬೇಕೆಂಬುದು ಸ್ವಾಭಾವಿಕವಾದದ್ದು. ಆದರೆ ಇಂಥ ಇದು ಬಹು ಅಪಾಯಕರವಾದ ದೀರ್ಘ ಅವಧಿಯ ಕೂಡಿಡುವ ವಿಧಾನವಾಗಿದೆ. ಬಂಗಾರ, ಬೆಳ್ಳಿ ಆಭರಣಗಳು, ಆಸ್ತಿ ಪಾಸ್ತಿ ಮತ್ತು ಸಾಮಾನುಗಳ ಬೆಲೆಯು ಇತರ ಧಾರಣೆಗಳ ಜೊತೆಗೆ ಮಿತಿಮೀರಿ ಏರಿವೆ; ಯುದ್ಧದಲ್ಲಿ ದೊರೆಯುತ್ತಿರುವ ವಿಜಯಗಳ ಫಲಿತವಾಗಿ ಈ ಬೆಲೆಗಳು ಒಂದು ದಿನ ಬಿದ್ದು ಹೋಗುತ್ತವೆ– ಹಠಾತ್ತಾಗಿ ಬೀಳಬಹುದು– ಮತ್ತು ನಿಮ್ಮ ಹಣದ ಹೆಚ್ಚಿನ ಭಾಗವು ನಾಶವಾಗಬಹುದು. ನಿಮ್ಮ ವ್ಯವಹಾರ ಜ್ಞಾನವನ್ನು ಬಳಸಿ ನೀವು ಪರಿಪಾಟವಿಟ್ಟು ಕೂಡಿಟ್ಟ ಹಣವನ್ನು ಕಾಪಾಡಿಕೊಳ್ಳಿ.

ಮುಂಬರುವ ದಿನಗಳಿಗೋಸ್ಕರ ಸುರಕ್ಷಿತವಾಗಿ ಕೂಡಿಡಿ

ಕೆಳಗೆ ಕಂಡವುಗಳಲ್ಲಿ ನಿಮ್ಮ ಕೂಡಿಟ್ಟ ಹಣವು ಸುರಕ್ಷಿತವಾಗಿರುತ್ತದೆ ಮತ್ತು ಶಾಶ್ವತ ಮೌಲ್ಯವುಳ್ಳದ್ದಾಗಿರುತ್ತದೆ.

- ★ ಸಹಕಾರ ಸಂಘ.
- ★ ವಿಮೆ ಪಾಲಿಸಿ.
- ★ ಬ್ಯಾಂಕ್.
- ★ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್

ಅಥವಾ ಇವೆಲ್ಲಕ್ಕಿಂತಲೂ ಉತ್ತಮವಾದ ಸರ್ಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳು.



ರಾಷ್ಟ್ರೀಯ ಯುದ್ಧ ಮುಖಂಡರು ! ದೇಶೀಯರಿಗೆ ಮಾಡುವ ಮನವಿ

ಸಂಪುಟ ೨] ಭಾನುವಾರ ೧೪--೧೧--೪೩ [ಸಂಚಿಕೆ ೧೦೦

ಲೆರಾಸ್ ಜರ್ಮನ್ ವಶ

ಬಂಗಾಳ ಕೊಲ್ಲಿಯಲ್ಲಿ ಭಾರಿ ನೌಕಾ ಕದನ ನಿರೀಕ್ಷೆ

ಕಲ್ಕತ್ತಾದಲ್ಲಿ ಬ್ರಿಟಿಷರ ಆಳ್ವಿಕೆಗೆ ಹಿಗ್ಗಿ ಸಾಯುತ್ತಿರುವರೇ ?

ಜೈಪ್ರಕಾಶ್ ನಾರಾಯಣರಿಗೆ ಕಿರುಕುಳ

ಕೇಂದ್ರ ಶಾಸನ ಸಭೆಯಲ್ಲಿ ಡಾ|| ದೇಶಮುಖ್‌ರವರು ಶ್ರೀ ಜಯಪ್ರಕಾಶ ನಾರಾಯಣರವರಿಗೆ ಕಾರಾಗೃಹದಲ್ಲಿ ಅವಮಾನಕರವಾದ ರೀತಿಯಲ್ಲಿ ಕಿರುಕುಳ ಕೊಡಲಾಗುತ್ತಿದೆಯೆಂದು ಹೇಳಿದರು. ಮಂಜಿನ ಪೀಠದ ಮೇಲೆ ಕೂರಿಸುವುದು, ನಿದ್ರೆಗೆ ಅಡ್ಡಿಪಡಿಸುವುದು, ಬೆನ್ನಿಲ್ಲದ ಕುರ್ಚಿ ಮೇಲೆ ಕೂರಿಸುವುದು, ಸರಿಯಾದ ಆಹಾರ ಕೊಡದಿರುವುದು ಇವೇ ಮೊದಲಾದ ರೀತಿಯಲ್ಲಿ ತೊಂದರೆಗೊಳಿಸಲಾಗುತ್ತಿದೆಯೆಂದು ಹೇಳಿದರು.

ಸಿಪಾಯಿಗೆ ಮರಣ ದಂಡನೆ

ಕಾಟಿಯ ಬಳಿ ಸೆಂಗಡುಚೇರಿಯ ಪಟ್ಟಿಪೊಟ್ಟಿಗನ್ ಎಂಬುವನನ್ನು ಕೊಲೆ ಮಾಡಿದುದಕ್ಕಾಗಿ ಮತ್ತೊಬ್ಬನನ್ನು ಘಾಸಿಪಡಿಸಿದುದಕ್ಕಾಗಿ ಸರ್ಫ್‌ರಾಜ್ ಆಲಿ ಎಂಬ ಸಿಪಾಯಿಯೊಬ್ಬನಿಗೆ ಚೆಂಗಲ್‌ಪಟ್ ಜಿಲ್ಲಾ ನ್ಯಾಯಾಧೀಶರು ಮರಣ ದಂಡನೆ ವಿಧಿಸಿದ್ದಾರೆ. ಮೃತಪಟ್ಟವನ ಮಗನನ್ನು ಕುಂಟ ಸಿಪಾಯಿಯು ವೇಶ್ಯೆಯ ಮನೆಯನ್ನು ತೋರಿಸುವಂತೆ ಕೇಳಿದನು. ತೋರಿಸದಿರಲು ಲಾಠಿಯಿಂದ ಅವನನ್ನು ಹೊಡೆದನು. ಹುಡುಗನು ಅಳುತ್ತಿರಲು ಅವನ ತಂದೆಯು ಇತರರೊಡನೆ ಹೋಗಿ ಸಿಪಾಯಿಯನ್ನು ಹಿಡಿದು ಗ್ರಾಮ ಮುನಸೀಫರ ಬಳಿಗೆ ಕರೆದೊಯ್ಯಲು ಪ್ರಯತ್ನಿಸಿದನು. ಆಗ ಸಿಪಾಯಿಯು ತನ್ನಲ್ಲಿದ್ದ ಚೂರಿಯಿಂದ ಹುಡುಗನ ತಂದೆಯ ಹೊಟ್ಟೆಯನ್ನು ಇರಿದು ಸಾಯಿಸಿದನು.

ಮದರಾಸ್ ಧಾಳಿ ಪ್ರಯತ್ನ ವಿಫಲ

ಒಂದು ತಿಂಗಳ ಹಿಂದೆ ಪ್ರಯತ್ನಿಸಿದಂತೆಯೇ ಈ ಸಾರಿಯೂ ೧೧ ನೇ ತಾ|| ಶತ್ರುಗಳು ಮದರಾಸಿನ ಮೇಲೆ ಧಾಳಿ ನಡೆಸಲು ಮಾಡಿದ ಪ್ರಯತ್ನವು ಸಂಪೂರ್ಣವಾಗಿ ವಿಫಲವಾಯಿತೆಂದು ವರದಿಯಾಗಿದೆ. ಎಚ್ಚರಿಕೆ ಧ್ವನಿ ಕೊಡಲಾಯಿತು. ನಿದ್ದೆ ಮಾಡುತ್ತಿದ್ದವರು ಎದ್ದು ಬಂದು ನೋಡಲಾಗಿ ಪ್ರಕಾಶಮಾನವಾದ ಬೆಳದಿಂಗಳಲ್ಲಿ ಏನೂ ಗೋಚರವಾಗಲಿಲ್ಲ. ಎಚ್ಚರಿಕೆಯ ಮುಕ್ತಾಯ ಧ್ವನಿಯನ್ನು ಕೊಡುವಷ್ಟರಲ್ಲೇ ಅನೇಕರು ನಿರ್ಭೀತರಾಗಿ ಮಲಗಿದ್ದರು.

ಸಿಗರೇಟು ವ್ಯಾಪಾರಕ್ಕೂ ಮಿತಿ

ಇಂಡಿಯಾ ಸರ್ಕಾರದವರು ಸಿಗರೇಟಿನ ದರ ಹತೋಟಿಗೆ ತರುವವರಾಗಿದ್ದಾರೆ. ಸಿಗರೇಟ್ ವ್ಯಾಪಾರಿಗಳು ಈ ತಿಂಗಳು [illegible]ನವರೆಗೆ ತಮ್ಮ ದಾಸ್ತಾನೆಷ್ಟಿದೆ ಎಂಬ ಬಗ್ಗೆ ಬರುವ ತಿಂಗಳು ೧೫ ನೇ ತಾ|| ಯೊಳಗೆ ಸರಬರಾಜು ಅಧಿಕಾರಿಗಳಲ್ಲಿ ವರದಿ ಒಪ್ಪಿಸಬೇಕೆಂದು ಆಜ್ಞೆ ಹೊರಡಿಸಿದ್ದಾರೆ.

ಸೈರನ್ ಕೂಗಿಗೆ ಪ್ರಾಣ ಹೋಯಿತು

೧೧ ನೇ ತಾ|| ರಾತ್ರಿ ಮದರಾಸ್ ನಗರದಲ್ಲಿ ಎಚ್ಚರಿಕೆ ಧ್ವನಿಯಾದಾಗ, ಜಾರ್ಜ್ ಟೌನಿನ ಮುಂದಾಸ್ಪತ್ರೆಗೆ ಸೇರಿದ ಶ್ರೀ ಜನಾರ್ಧನರವರ ಕೆಲಸಕ್ಕೆ ಹಾಜರಾಗಲು ಹೊರಟಿದ್ದು, ಸೈರನ್ ಕೂಗು ಕೇಳಿ ಹೃದಯ ಸ್ತಂಭನದಿಂದ ತತ್‌ಕ್ಷಣ ಮೃತಿಹೊಂದಿದರು.

ಲೆರಾಸ್ ಜರ್ಮನರ ವಶ

ಡೊಡೆಕನೀಸ್ ದ್ವೀಪ ಸಮುದಾಯದಲ್ಲಿರುವ ಲೆರಾಸ್ ದ್ವೀಪವು ತಮ್ಮ ವಶವಾಗಿದೆಯೆಂದು ಜರ್ಮನರು ಹೇಳುತ್ತಿರುವುದಾಗಿ ವರದಿಯಾಗಿದೆ. ಆದರೂ ಕೆಲ ಒಳಪ್ರದೇಶದಲ್ಲಿ ಇನ್ನೂ ಕದನವು ನಡೆಯುತ್ತಲೇ ಇದೆ. ಬ್ರಿಟಿಷರಿಂದ ಸೆಪ್ಟೆಂಬರ್ ೨೧ ನೇ ತಾ|| ಆಕ್ರಮಿಸಲ್ಪಟ್ಟ ಲೆರಾಸ್ ದ್ವೀಪಕ್ಕೆ ಜರ್ಮನರು ಮೊನ್ನೆ ದಿನ ಬಂದಿಳಿದರು. ಡೊಡೆಕನೀಸ್ ದ್ವೀಪಸಮೂಹದ ಉತ್ತರ ಭಾಗದಲ್ಲಿ ಈ ದ್ವೀಪವಿದೆ.

ಬರ್ಲಿನ್‌ಗೆ ಹೊಡೆತ

ಮಿತ್ರಪಕ್ಷದ ವಿಮಾನಗಳು ಮೊನ್ನೆ ಬರ್ಲಿನ್ ಹ್ಯಾನೋವರ್ ನಗರಗಳ ಮೇಲೆ ಬಲವಾಗಿ ಧಾಳಿ ಮಾಡಿದವು. ಫ್ರಾನ್ಸ್ ಇಟಲಿ ಗಡಿಯಲ್ಲಿನ ಶತ್ರು ರೈಲ್ವೆ ಮಾರ್ಗಕ್ಕೂ ಜೋರಾಗಿ ಬಾಂಬು ಹೊಡೆತ ಕೊಡಲಾಗಿದೆ.

ಬೋಸರಿಗೆ ಅನುಯಾಯಿಗಳಿಲ್ಲ

ಭಾರತೀಯ ರಾಜಕಾರಣದಲ್ಲಿ ಏನೇ ವ್ಯತ್ಯಾಸ ಕಂಡುಬರಲಿ, ಜಪಾನ್ ತಮ್ಮ ಶತ್ರುವೆಂದು ಭಾರತೀಯರೆಲ್ಲರೂ ತಿಳಿದಿದ್ದಾರೆ. ಬಾಬು ಸುಭಾಸ್ ಚಂದ್ರ ಬೋಸರಿಗೆ ಮೊದಲೂ ಸಾಕಷ್ಟು ಅನುಯಾಯಿಗಳಿರಲಿಲ್ಲ. ಈಗಂತೂ ಭಾರತೀಯರ್ಯಾರೂ ಅವರ ಅನುಯಾಯಿಗಳಾಗಿಲ್ಲವೇ ಇಲ್ಲವೆಂದು ಸರ್ ಎಸ್. ರಂಗನಾಥರವರು ಲಂಡನ್ನಿನಲ್ಲಿ ಭಾಷಣಮಾಡುತ್ತಾ ಹೇಳಿದರು.

ಸ್ವತಂತ್ರ ಭಾರತದಲ್ಲಿ ಮತಕಲಹ ಇರುವುದಿಲ್ಲ

ಭಾರತದಲ್ಲಿ ಜಾತಿ ಭೇದಗಳು ಹೆಚ್ಚು; ಸ್ವಾತಂತ್ರ್ಯ ಸಿಕ್ಕಿದರೆ ಒಬ್ಬರೊಬ್ಬರು ಬಡಿದಾಡಿ ದೇಶ ನಾಶವಾಗುವುದು ಎಂಬ ಬ್ರಿಟಿಷರ ವಾದ, ಹುರುಳಿಲ್ಲದ್ದೆಂದು ಅಮೆರಿಕದ ಮಿಷನರಿ ಡಾ|| ಹೆನ್ರಿ ಗ್ರಾಫ್ಟೆಂಟರ್‌ರವರು [illegible] ಎಂಬ ಪತ್ರಿಕೆಯಲ್ಲಿ ಬರೆಯುತ್ತಾ, ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಆರ್ಥಿಕ ಸ್ಥಿತಿ ಉತ್ತಮಗೊಳ್ಳಲು ಕೊಡಿ. ಮತ ಸಂಬಂಧವಾದ ಸಮಸ್ಯೆ ತಾನೇ ನಾಶವಾಗುವುದು. [illegible] ಭಾರತದಲ್ಲಿ [illegible] ಪ್ರಾಮುಖ್ಯತೆ ಇರುವುದಿಲ್ಲ. [illegible] ಅದನ್ನು ದಿನೇ ದಿನೇ [illegible] ಎಂದು ತಿಳಿಸಿದ್ದಾರೆ.

ಮಹಾಸ್ವಾಮಿಯವರ ಪ್ರವಾಸ

ಮೈಸೂರು ೧೩

ಶ್ರೀಮನ್ಮಹಾರಾಜರವರು ೧೯೪೪ ನೆಯ ಫೆಬ್ರವರಿಯಲ್ಲಿ ಕೊಡಚಾದ್ರಿಗೆ ಹೋಗಿ ಬರುವರೆಂದು ಗೊತ್ತಾಗಿರುವುದು.

ಬಡವರಿಗೆ ಊಟ

ನಾಳಿದ್ದು ಮಂಗಳವಾರ ರಾಜಧಾನಿಯ ನಾಮದೇವ ಸಮಾಜದವರು, ದೇವರಾಜಾ ಮಾರ್ಕೆಟ್ ಬಳಿ ಬಡವರಿಗೆ ಅನ್ನ ದಾನ ಮಾಡುವರು.

ಮಹಮದ್ ಸೇಠರು ಮುಸ್ಲಿಂ ಲೀಗಿಗೆ

ಮೈಸೂರು ಮುಸ್ಲಿಂ ಲೀಗಿನವರು ಮೊನ್ನೆ ಮಿ|| ಮಹಮದ್ ಅಬ್ಬಾಸ್ ಸೇಠರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಪೌರ ಸಭೆಗಾಗಿ ಮುಸ್ಲಿಂರಿಗೇ ಪ್ರತ್ಯೇಕ ಚುನಾವಣೆ ನಡೆಯಬೇಕಾದುದರ ಆವಶ್ಯಕತೆ ವಿಷಯ ಒತ್ತಾಯಪಡಿಸಲು, ಸ್ಥಳೀಯ ಸಂಸ್ಥೆಗಳ ಬಳಿಗೂ ಮತ್ತು ದಿವಾನರ ಬಳಿಗೂ ನಿಯೋಗ ಹೋಗತಕ್ಕದ್ದೆಂದು ಸಭೆಯಲ್ಲಿ ನಿರ್ಣಯವಾಯಿತು.

ಸೇಠರು ಮುಸ್ಲಿಂ ಲೀಗ್ ಸದಸ್ಯರಾಗಿ ಸೇರಿದ್ದಾರೆ. ೧೫ ದಿನದಲ್ಲಿ ೬,೦೦೦ ಜನರನ್ನು ಸೇರಿಸುವುದಾಗಿಯೂ ಭರವಸೆಯಿತ್ತಿದ್ದಾರೆ.

ಪೋಲೀಸ್‌ನವನಿಗೆ ಇರಿತ

ಮೊನ್ನೆ ದಿನ ಸುಮಾರು ೩ ಗಂಟೆ ಸಮಯ ರಾತ್ರಿಯಲ್ಲಿ ಫೋರ್ಟ್ ವರ್ಕ್ ಶಾಪ್ ಪೋ|| ಔಟ್ ಪೋಸ್ಟಿನಿಂದ ಡ್ಯೂಟಿಯಾಗಿ ಬರುತ್ತಿದ್ದ ನಾರಾಯಣ ಶೆಟ್ಟಿ ಎಂಬ ಪೋ|| ಕಾನ್ಸ್‌ಟೇಬಲನನ್ನು ಮಾರ್ಗದಲ್ಲಿ ಹಳೇ ಕಬ್ಬಿಣದ ಚೂರುಗಳನ್ನು ಅನುಮಾನಾಸ್ಪದ ರೀತಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದವರು ಸಂಧಿಸಿದರು. ಪೋಲೀಸಿನವನು ಅವರನ್ನು ಸ್ಟೇಷನ್ನಿಗೆ ಕರೆತರುತ್ತಿದ್ದಾಗ ಅವರು ಚಾಕುವಿನಿಂದ ಪೋಲೀಸರನ್ನು ಇರಿದು ಗಾಯಪಡಿಸಿ ಪರಾರಿಯಾದರೆಂದೂ ಗಾಯಗೊಂಡಿದವನನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ತಿಳಿದುಬಂದಿದೆ.

ಪರೋಲ್

ಶ್ರೀ [illegible] ದೇಶಪಾಂಡೆಯವರಿಗೆ [illegible] ಅವಧಿ ಮತ್ತೆ [illegible] ವಾರ ಕಾಲ ವಿಸ್ತರಿಸಲ್ಪಟ್ಟಿದೆ.

ಬಂಗಾಳದಲ್ಲಿ ಮರಣಾನಂದವೆ ?

ಕಲ್ಕತ್ತೆಯ ಘೋರ ಮರಣಗಳ [illegible] ಶ್ರೀ ಕೆ. ಸಿ. ನಿಯೋಗಿಯವರು [illegible] ರೀತಿ ವಿನೋದವಾಗಿ ಕೇಂದ್ರ ಶಾಸನ ಸಭೆಯಲ್ಲಿ ಪ್ರಶ್ನೆ ಕೇಳಿದರು: ಬ್ರಿಟಿಷ್ ಆಳ್ವಿಕೆಯಿಂದುಂಟಾಗಿರುವ ಮಹೋಪಕಾರಗಳನ್ನು ಸ್ಮರಿಸಿಕೊಳ್ಳುತ್ತಾ ಆನಂದಾತಿಶಯದ ಮಹದಾನಂದದಿಂದ ಎದೆಯೊಡೆದು [ಹೃದಯಸ್ತಂಭನ] ಬಂಗಾಳದಲ್ಲಿ ಜನರು ಸಾಯುತ್ತಿರುವರೇ ಹೊರತು ಆಹಾರ ಕ್ಷಾಮದಿಂದಲ್ಲ ಎಂಬುದು ನಿಜವೆ? ಉತ್ತರ: ಈ ವಿಷಯವು ಬಂಗಾಳ ಪ್ರಾಂತಿಕ ಸರ್ಕಾರಕ್ಕೆ ಸೇರಿದ್ದು.

ಕಲ್ಕತ್ತಾದಲ್ಲಿ ೩೭,೮೦೦ ಸಾವು

ಈ ವರ್ಷದ ಪ್ರಾರಂಭದಿಂದ ಅಕ್ಟೋಬರ್ ಅಂತ್ಯದವರೆಗೆ ಕಲ್ಕತ್ತೆಯಲ್ಲಿ ೩೭,೮೦೦ ಮರಣಗಳಾಗಿವೆಯೆಂದು ಕೇಂದ್ರ ಶಾಸನ ಸಭೆಯಲ್ಲಿ ಆಹಾರ ಮಂತ್ರಿಗಳು ತಿಳಿಸಿದರು. ಅದೇ ಕಾಲದಲ್ಲಿ ಕಳೆದ ೫ ವರ್ಷಗಳ ಸರಾಸರಿ ಮರಣ ಸಂಖ್ಯೆ ೨೮ ಸಾವಿರವೆಂದೂ ಅವರು ಹೇಳಿದರು. ಆದರೆ ಹೊಟ್ಟೆಗಿಲ್ಲದೆ ಸತ್ತವರೆಷ್ಟೆಂದು ನಿಖರವಾಗಿ ಹೇಳಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ.

ಬಂಗಾಳಾ ಕೊಲ್ಲಿ -- ಮುಂದಿನ ರಣರಂಗ

ಸಿಲೋನ್ ಅಬ್‌ಸರ್ವರ್ ಪತ್ರಿಕೆಯ ೮ ನೇ ತಾ|| ಸಂಚಿಕೆಯಲ್ಲಿ ಈ ಕೆಳಗಿನ ರಾಯಿಟರ್ ಸುದ್ದಿ ಪ್ರಕಟವಾಗಿದೆ.

ಜಪಾನಿ ಸೇನಾನಾಯಕರಾದ ಲೆ|| ಜ|| ಕೋರೂಟಾ ಕಿಡಾರವರು ಹೀಗೆ ಹೇಳಿದರೆಂದು ಜರ್ಮನ್ ರೇಡಿಯೋ ತಿಳಿಸುತ್ತದೆ. "ಹಿಂದೂ ಸಾಗರದಲ್ಲಿ ಬ್ರಿ|| ಪ್ರಧಾನ ಕೇಂದ್ರಸ್ಥಾನ ಟ್ರಿಂಕಾಮಲಿಯಲ್ಲಿ [ಸಿಂಹಳ], ಬ್ರಿಟಿಷರು ಬಲವಾದ ಸೈನ್ಯಗಳನ್ನು ಕೇಂದ್ರೀಕರಿಸಿರುವುದರಿಂದ, ಬ್ರಿಟಿಷ್ ನೌಕಾದಳಪತಿಯು ಜಪಾನಿರೊಡನೆ ಬಂಗಾಳಾ ಕೊಲ್ಲಿಯ ಒಂದು ಭಾಗದಲ್ಲಿ ಭಾರಿ ಕದನವನ್ನು ಹೂಡಲಿರುವನೆಂದು ಭಾವಿಸಲಾಗುತ್ತದೆ.

ಲೆಬನಾನ್ ಪ್ರಕರಣದ ಖಂಡನೆ

ಲೆಬನಾನ್ ಪ್ರಕರಣವನ್ನು ಕುರಿತು ಬ್ರಿಟಿಷ್ ಸರ್ಕಾರದವರು, ಅಮೆರಿಕಾದಲ್ಲಿರುವ ಫ್ರೆಂಚ್ ಸರ್ಕಾರದವರು [illegible] ಸಮಾಲೋಚನೆ ನಡೆಸುವೆ; ಅನೇಕರ ಬಂಧನ, ದಂಗೆ ಆದಾಗಿನ [illegible] ಗಳನ್ನು ನಡೆಸಿರುವುದರಿಂದ [illegible] ಕ್ರಮವನ್ನು ಖಂಡಿಸಿದೆ. [illegible] ಫ್ರೆಂಚ್ [illegible] ಕಮಿಟಿ [illegible] ಫ್ರೆಂಚ್ ಜನರಲ್ [illegible] ದಿಂದ ಹಿಂತೆಗೆದುಕೊಳ್ಳ [illegible] ಕ್ರಮ ಕೈಗೊಳ್ಳ [illegible] ಸಂಭವಿಸಿರುವಂತೆ [illegible] ಬಂದಿದೆ.

ಒಂದು ಸ್ಥಳದಲ್ಲಿ [illegible] ಹೋದರೆ ಸಿಕ್ಕಿ ಹೋಗುತ್ತ [illegible] ಸಂಭವಿಸಬಹುದೆಂದು [illegible] ರಾಜನ [illegible] ಹುಕೂಮ್‌ ನಾಮೆ ಹೇ[illegible]

ಪ್ರಭುಗಳಿಂದ ಶಂಕುಸ್ಥಾಪನೆ

ಬೆಂಗಳೂರು ೧೩

ಶ್ರೀಮನ್ಮಹಾರಾಜರು ಬರುವ ತಿಂಗಳು ೧೧ ನೇ ತಾ|| ಬೆಳಗ್ಗೆ ಬೆಂಗಳೂರಿನಲ್ಲಿ ಯುವರಾಜೇಂದ್ರ ಉದ್ಯೋಗ ಶಾಲಾ ಶಂಕುಸ್ಥಾಪನೆ ನೆರವೇರಿಸುವರು. ಅಲ್ಲದೆ ಅದೇ ದಿನ ಸಂಜೆ ೫ ಗಂಟೆಗೆ ಆಯುರ್ವೇದ ಆಸ್ಪತ್ರೆ ಶಂಕುಸ್ಥಾಪನೆಯನ್ನೂ ನಡೆಸುವವರಾಗಿದ್ದಾರೆ. ಪ್ರಭುಗಳು ೧೨ ನೇ ತಾ|| ಬೇಲೂರನ್ನು ತಲುಪಿ ಅಲ್ಲಿನ ದೇವಾಲಯದಲ್ಲಿ ಆಗದ ನಾಟ್ಯ ಕೃಷ್ಣಭೂಪರ ಭಕ್ತ ವಿಗ್ರಹ ಸ್ಥಾಪನೆಮಾಡುವರು.

ಸಿ. ಕೆ. ವೆಂಕಟರಾಮಯ್ಯ ನವರಿಗೆ ರಜ

ಸರ್ಕಾರದ ಕನ್ನಡ ಭಾಷಾಂತರಕಾರರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರಿಗೆ ನವೆಂಬರ್ ೨ ನೇ ತಾ|| ವರೆಗೆ ರಜ ಮಂಜೂರಾಗಿದೆ. ಇವರ ಗೈರುಹಾಜರಿಯಲ್ಲಿ, ಸಹಾಯಕ ಭಾಷಾಂತರಕಾರರಾದ ಶ್ರೀ ಎ. ಎನ್. ರಾಮರಾಯರು ಮುಖ್ಯ ಭಾಷಾಂತರ ಕೆಲಸವನ್ನು ನಿರ್ವಹಿಸುವರು.

ವಿದ್ಯಾಧಿಕಾರಿಗಳ ನಿವೃತ್ತಿ

ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎ. ವಾಸುದೇವರಾಮಯ್ಯನವರಿಗೆ ಕಳೆದ ತಿಂಗಳು ೨೧ ನೇ ತಾ|| ನಿಂದ ೬ ತಿಂಗಳ ಕಾಲ ಫರ್ಲೋ ರಜ ಕೊಡಲಾಗಿ ೧೯೪೪ ಏಪ್ರಿಲ್ ೨೧ ಕ್ಕೆ ಅವರು ಅಧಿಕಾರದಿಂದ ನಿವೃತ್ತರಾಗುವರು.

ಸೆನೆಟ್ ಮೀಟಿಂಗ್

ವಿಶ್ವವಿದ್ಯಾನಿಲಯದ ಸೆನೆಟ್ ಮೀಟಿಂಗು ಇದೇ ೨೬ ನೇ ತಾ|| ಶುಕ್ರವಾರ ಬೆಂಗಳೂರಿನಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಮಾಸ್ಕೋ ಸಮ್ಮೇಳನದಲ್ಲಿ ಆದುದೇನು

ಮಾಸ್ಕೋ ಸಮ್ಮೇಳನದಲ್ಲಿ ಭಾಗವಹಿಸಿದ್ದ ಬ್ರಿಟಿಷ್ ವಿದೇಶಾಂಗ ಮಂತ್ರಿ ಮಿ|| ಈಡನ್‌ರವರು ಪಾರ್ಲಿಮೆಂಟ್ ಮುಂದೆ ಹೇಳಿಕೆ ಕೊಡುತ್ತಾ, ಯುರೋಪಿನ ಪರಿಸ್ಥಿತಿ ಬಗ್ಗೆ ರಷ್ಯಾ, ಅಮೆರಿಕ, ಬ್ರಿಟನ್ ರಾಷ್ಟ್ರಗಳ ಪ್ರತಿನಿಧಿಗಳೂ ಮುಚ್ಚುಮರೆ ಇಲ್ಲದೆ ಮಾತುಕತೆ ನಡೆಸಿದರು. ಯುದ್ಧಾನಂತರದ ಸುರಕ್ಷಿತ ಯೋಜನೆಗೆ ಬೇಕಾದ ಏಟು ಬಿದ್ದಿದೆಯೇ ಎಂಬುದು ಅಲ್ಲಿ ನನಗೆ ತಿಳಿಯಿತು. ಈ ಮಿತ್ರರಾಷ್ಟ್ರಗಳ ಅಭಿಪ್ರಾಯಗಳನ್ನು ಯಾವ ರೀತಿಯಲ್ಲೂ ಒತ್ತಾಯದಿಂದ ಹೇರಲಾಗುವುದಿಲ್ಲ. ಆ ಸಮ್ಮೇಳನದಲ್ಲಿ ಆರ್ಥಿಕ ಸಮಸ್ಯೆ ವಿಷಯವಾಗಿಯೂ ಚರ್ಚೆ ನಡೆಯಿತು ಎಂದು ತಿಳಿಸಿದ್ದಾರೆ.

ಲೆಬನಾನಿನಲ್ಲಿ ಗುಂಡಿನ ಪ್ರಕರಣ

ಲೆಬನಾನ್ ಪ್ರಜೆಗಳು ತಮ್ಮ ಸ್ವಾತಂತ್ರ್ಯ ಮತ್ತು ಮಂತ್ರಿಗಳ ಬಂಧನವನ್ನು ವಿರೋಧಿಸಿ ಪ್ರದರ್ಶನ ನಡೆಸಿದರು. ಆ ಪ್ರದರ್ಶಕರನ್ನು ತಡೆಗಟ್ಟುವ ಸಲುವಾಗಿ ಫ್ರೆಂಚ್ ಅಧಿಕಾರಿಗಳು ಜನರ ಮೇಲೆ ಗುಂಡು ಹಾರಿಸಿ ಅನೇಕರನ್ನು ಕೊಂದಿದ್ದಾರೆ. ಜನರೂ ಗುಂಡು ಹಾರಿಸುತ್ತಿದ್ದ ಟ್ಯಾಂಕ್ ಒಂದನ್ನು ಸುಟ್ಟುಹಾಕಿದ್ದಾರೆ.

ಲೀಗ್ ಕಾರ್ಯ ಸಮಿತಿ ಸಭೆ

ಅಖಿಲ ಭಾರತ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯವರು ನಿನ್ನೆ ಬೆಳಗ್ಗೆಯಿಂದ ದೆಹಲಿಯಲ್ಲಿ ಜಿನ್ನಾರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ನಿನ್ನೆ ಆಹಾರ ಸಮಸ್ಯೆ ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳು ನಡೆದವು.

ಸರ್ಕಾರದ ಮೂಲಕವಲ್ಲ

ಬೆಂಗಳೂರು

ಜನಸೇವಾ ಕಾರ್ಯಕ್ರಮಗಳನ್ನು ಕೈಗೊಂಡಿರುವ ಕಾಂಗ್ರೆಸ್ ಉಪಸಮಿತಿಗೆ, ಕಾಂಗ್ರೆಸ್ ಅಧ್ಯಕ್ಷರು ಸರ್ಕಾರದ ಮೂಲಕ ಪತ್ರ ಬರೆದು ಅಧಿಕಾರ ಕೊಟ್ಟಿಲ್ಲವೆಂದು ಸರ್ಕಾರದ ಕಾರ್ಯದರ್ಶಿಗಳು, ಶ್ರೀ ಎಲ್. ಎಸ್. ರಾಜುರವರಿಗೆ ತಿಳಿಸಿರುವರು.

ನೊಂದವರಿಗೆ ದಿವಾನರ ಸಹಾಯ

ಆನಂದಾಪುರದ ರೈಲ್ವೆ ಅಪಘಾತದಲ್ಲಿ ನೊಂದು ಆಸ್ಪತ್ರೆಗೆ ದಾಖಲಾಗಿದ್ದವರನ್ನು ದಿವಾನರು ಮೊನ್ನೆ ಕಂಡು ಆ ಜನರಿಗೂ ತಲಾ ೧೫ ರೂಪಾಯಿನಂತೆ ತಮ್ಮ ಸ್ವಂತ ಹಣದಿಂದ ಸಹಾಯ ಮಾಡಿದ್ದಾರೆ.

ಸೀಗೆಪುಡಿ ಮಧ್ಯೆ ಆಹಾರ

ಬೆಂಗಳೂರು, ಬರುವ ಸೀಗೆ ಪುಡಿ ಚೀಲಗಳಿಗೆ ಗುಮಾಸ್ತಿ ಪೇಟೆ ಪೊಲೀಸರು ನಗ್ನ ತನಿಖೆ ನಡೆಸಲಾಗಿ ಸೀಗೆ ಮೂಟೆಗಳ ಜೊತೆಯಲ್ಲಿ ೬ ಅಕ್ಕಿ ಮೂಟೆ, ೪|| ರಾಗಿ ಮೂಟೆ, ೧ ಮೂಟೆ ಸಕ್ಕರೆ ಇದ್ದುದು ಪತ್ತೆಯಾಗಿದೆ. ಮುಂದಿನ ತನಿಖೆ ನಡೆಯುತ್ತಿದೆ.

ಪುಸ್ತಕ ಮುಟ್ಟುಗೋಲು

ಹಿಂದೆ ಬೆಂಗಳೂರು ಜಿಲ್ಲೆಯಲ್ಲಿ ಮಾತ್ರ ನಿಷೇಧಿಸಲ್ಪಟ್ಟಿದ್ದ ಹಿಂದೀ ಪುಸ್ತಕವೊಂದನ್ನು ಈಗ ಸಂಸ್ಥಾನದಲ್ಲೆಲ್ಲಾ ಕಂಡು ಬಂದರೂ ಅದನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು ಸರ್ಕಾರದ ಆಜ್ಞೆ ಹೊರಟಿದೆ. ಆ ಪುಸ್ತಕದ ಹೆಸರು "ಕಾಂಗ್ರೆಸ್ ಕ್ವಿಟ್ ಇಂಡಿಯಾ ... ನೀತಿ ಸಹಿತ."

ಸೂಚನೆ

ದೀಪಾವಳಿ ಹಬ್ಬದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಯು ಪ್ರಕಟವಾಗುವುದಿಲ್ಲ.

ವ್ಯವಸ್ಥಾಪಕ, ಸಾಧ್ವಿ.

ಮನೆ ಕಟ್ಟಲು ನಿರ್ಬಂಧ

ಬೆಂಗಳೂರು ಜಿಲ್ಲಾಧಿಕಾರಿಗಳ ಅನುಮತಿ ಇಲ್ಲದೆ ಬೆಂಗಳೂರಿಗೆ ಸೇರಿದ ವರ್ತೂರು ಮತ್ತು ಕೃಷ್ಣರಾಜಪುರ ಹೋಬಳಿಗಳ ಗ್ರಾಮಸ್ಥರು ಗೃಹ ನಿರ್ಮಾಣ ಮಾಡಕೂಡದೆಂದು ಆಜ್ಞೆಯಾಗಿದೆ.

ಭೂತಾಕಾರದ ಯು-ಬೋಟ್

ಅಟ್ಲಾಂಟಿಕ್‌ನಲ್ಲಿ ಜರ್ಮನರು ಒಂದು ಹೊಸ ಭೂತಾಕಾರದ ಯು-ಬೋಟನ್ನು ಉಪಯೋಗಿಸುತ್ತಿದ್ದಾರೆ. ಅದು ಕ್ರೂಸರುಗಳಂತೆ ಇದೆ. ಇದುವರೆಗೆ ಅಷ್ಟು ದೊಡ್ಡ ಯು-ಬೋಟುಗಳನ್ನು ನೋಡಿರಲಿಲ್ಲ ಎಂದು ಅಮೆರಿಕದ ವಿಮಾನಾಧಿಕಾರಿ ಕ್ಯಾ|| ಅರ್ನಾಲ್ಡ್ 'ಇಸ್ಟೆಲ್'ರವರು ಹೇಳಿದ್ದಾರೆ.

ನರ್ವನಾಟೆನ್ ೧

ನರಗಳ ಶಕ್ತಿಗೆ; ವೀರ್ಯವೃದ್ಧಿಗೆ

ಉಪಯೋಗಿಸುವ ವಿಧಾನ.—

ಮಲಗುವ ವೇಳೆ ಹಾಲು ಔನ್ಸ್ ಒಂದು ಬಟ್ಟಲು ಹಾಲಿನೊಡನೆ

ದೊಡ್ಡ ಬಾಟಲ್ ರೂ. 2-4-0 ಮಾತ್ರ

ಸಣ್ಣ ಬಾಟಲ್ ರೂ. 1-4-0 ,,

ಪ್ಯಾಕಿಂಗ್ ಮತ್ತು ಪಾರ್ಸಲ್ ಛಾರ್ಜು ಪ್ರತ್ಯೇಕ

ಈ ನಮ್ಮ ಔಷಧಕ್ಕೆ ದಸರಾ ವಸ್ತು ಪ್ರದರ್ಶನದಲ್ಲಿ ಮೆಡಲು ದೊರಕಿರುತ್ತದೆ.

ವಿಳಾಸ:—

ಕೆ. ಇ. ಐ. ಪ್ರೊಡಕ್ಟ್ಸ್,

ಹಳೆ ಮೈಸೂರು ಬ್ಯಾಂಕ್ ರಸ್ತೆ,

ಮೈಸೂರು

Edited, printed and published by A. R. Nagarajan, at the Sadhvi Press, D. Subbiah Road, Mysore.

ಶ್ರೀಯುತರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ. ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ ಇಲ್ಲೂ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಪುಷ್ಪಮಂಟಪೋತ್ಸವ

ತಾ|| ೧೫-೧೧-೪೩ ನೇ ಸೋಮವಾರ ರಾತ್ರಿ ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಪುಷ್ಪಮಂಟಪೋತ್ಸವವನ್ನು, ಬೆಂಗಳೂರು ಸಿಟಿ ಎಲೆಕ್ಟ್ರಿಕ್ ಕಂಟ್ರಾಕ್ಟರ್ ಜಿ. ಎಸ್. ಶಿವರುದ್ರಪ್ಪನವರು ಬೆಂಗಳೂರಿಂದ ಮಂಟಪವನ್ನು ತರಿಸಿ ಮತ್ತು ನಿಪುಣರಾದ ಮಾಲಾಕಾರರನ್ನು ಕರೆಸಿ. ಪುಷ್ಪಮಂಟಪೋತ್ಸವವನ್ನು ಮಹಾ ವೈಭವದೊಡನೆ ನೆರವೇರಿಸುತ್ತಾರೆ.

ಸರ್ವರೂ ಬಂದು ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಅಪೇಕ್ಷಿಸಿದೆ.

ಆರ್ಗನೈಜರ್.

ಶಿವಾನಂದ ಎಲೆಕ್ಟ್ರಿಕ್ ಸ್ಟೋರ್ಸ್, ಮೈಸೂರು.

ಈ ದಿನ

ನಿಮ್ಮ ಕೆಲಸಗಳನ್ನೆಲ್ಲಾ ಬದಿಗಿಡಿರಿ;

ಕಾಫಿಗೆ (ಉಪಾಹಾರಕ್ಕೆ) ಬನ್ನಿರಿ !

ಮೈಸೂರು ನಗರದಲ್ಲಿ ಅತ್ಯಂತ ಆಕರ್ಷಣೀಯ, ಜನ ಪ್ರಿಯ ಮತ್ತು ಅಚ್ಚು ಮೆಚ್ಚಿನ

ಫಲಾಹಾರ ಮಂದಿರ

ಉತ್ತಮ ಅಂತಸ್ತಿನ ರಕ್ಷಣೆಗಾಗಿ ಎಲ್ಲಾ ವ್ಯವಸ್ಥೆಗಳು !

ಕಾಫಿ ಮತ್ತು ರುಚಿಕರವಾದ ತಿಂಡಿಗಳು !!

ಅಚ್ಚುಕಟ್ಟಾದುದು ಕಂಡು ಕೇಳದಷ್ಟು ದೊರೆಯುವುದು.

ನಿಮ್ಮ ಮಿತ್ರರೊಡಗೂಡಿ ಬರಲು ಮರೆಯಬೇಡಿ.

ಶ್ರೀ ಕೃಷ್ಣಭವನ

ಮಾರ್ಕೆಟ್ ಚೌಕ, : : ಮೈಸೂರು.

(ಶ್ರೀ ಮನ್ಮಹಾರಾಜರವರ ಸ್ಟಾಚ್ಯೂ ಎದುರಿಗೆ ...)

ಸಂಪುಟ ೨] ಮಂಗಳವಾರ ೧೬—೧೧—೪೩ [ಸಂಚಿಕೆ ೧೦೧

ಡಾಲ್ಮೇಷಿಯಾ ತೀರದಲ್ಲಿ ನಾಜಿ ಸೈನ್ಯ ಶೇಖರಣೆ

ಲಂಚಕ್ಕಾಗಿ ಸಬ್ ಡಿವಿಜನ್ ಆಫೀಸರಿಗೆ ೨ ವರ್ಷ ಸಜ

ಹೊಟ್ಟೆಗಿಲ್ಲದ ಅರೆ ಜೀವಿಯನ್ನು ನರಿಗಳು ಕಿತ್ತು ತಿಂದವು

ರೇಷನಿಂಗ್ ವ್ಯವಸ್ಥೆ

ಮೈಸೂರು ೧೬

ರಾಜಧಾನಿಯಲ್ಲಿ ಕಳೆದ ೬ ದಿವಸದಿಂದ ನಡೆದ ಆಹಾರ ಸೆನ್ಸಸ್ ಸನ್ನೆಗೆ ಮುಕ್ತಾಯವಾಯಿತು. ಸೆನ್ಸಸ್ ಅಧಿಕಾರಿಗಳೊಡನೆ ಪುರಜನರು ಸಂಪೂರ್ಣ ಸಹಕರಿಸಿ ಫಲಕಾರಿಯಾಗುವಂತೆ ಮಾಡಿದರು. ಆದರೆ ಕೆಲವು ಮನೆಯವರು ತಮ್ಮ ಹೊಸ್ತಾದ ದಾಸ್ತಾನು ಬಗ್ಗೆ ಸರಿಯಾದ ಲೆಕ್ಕವನ್ನು ಕೊಡದೆ, ಮರೆಮಾಚಿಕೊಂಡು ದಾಸ್ತಾನು ಸಿಕ್ಕಿಬಿದ್ದಾಗ ಕಷ್ಟಕ್ಕೆ ಈಡಾದರೆಂದು ತಿಳಿಯಬರುತ್ತದೆ.

ಛೀಫ್ ರೇಷನಿಂಗ್ ಆಫೀಸರಾದ ಶ್ರೀ ರಾಮಚಂದ್ರ ಬೋಂಥಿರಿಯವರನ್ನು ಕೆಲವು ಪತ್ರಿಕಾ ಪ್ರತಿನಿಧಿಗಳು ಈ ದಿವಸ ಬೆಳಿಗ್ಗೆ ಸಂದರ್ಶಿಸಿದಾಗ, ರೇಷನಿಂಗ್‌ನ್ನು ಡಿಸೆಂಬರ್ ತಾ|| ೧ ರಿಂದ ಜಾರಿಗೆ ತರಲಾಗುವುದೆಂದೂ ಅದರೊಳಗಾಗಿ ರೇಷನಿಂಗ್ ಕಾರ್ಡುಗಳನ್ನು ಜನರಿಗೆ ಹಂಚಲು ಏರ್ಪಾಡು ಮಾಡಲಾಗುವುದೆಂದು ತಿಳಿಸಿದರು. ಆಹಾರ ಧಾನ್ಯಗಳ ಸರಬರಾಜು ಸುವ್ಯವಸ್ಥೆಯಾಗಿ ನಡೆಯಲು ನಗರದ ಕೆಲವು ಕಡೆ ಒಟ್ಟು ೬೦ ಸರ್ಕಾರಿ ಡಿಪೋಗಳನ್ನು ತೆರೆಯಲಾಗುವುದೆಂದೂ, ಆಯಾ ಮೊಹಲ್ಲಾದವರು ಆ ಡಿಪೋಗಳಲ್ಲೇ ಪದಾರ್ಥಗಳನ್ನು ತೆಗೆದುಕೊಳ್ಳಬೇಕೆಂದೂ ಜನಗಳ ನೂಕು ನುಗ್ಗಲಾಟವಿಲ್ಲವಂತೆ, ಒಬ್ಬೊಂದವರೆ ಕೊಳ್ಳುವಂತೆ "ಕ್ಯೂ" ಪದ್ಧತಿಯನ್ನು ಅನುಸರಿಸಲಾಗುವುದೆಂದು ತಿಳಿಸಿದರು. ಎರಡು ಕಾಂಗ್ರೆಸ್‌ಗಳಿಗೆ ಆಹಾರ ಪದಾರ್ಥಗಳನ್ನು ಸ್ಟಾಕುದಿಂದ ಸಂಸಾರದವರೂ ಇಟ್ಟುಕೊಳ್ಳಬಹುದೆಂದೂ, ಅದಕ್ಕೆ ಹೆಚ್ಚಿನ ದಾಸ್ತಾನು ಇದ್ದರೆ ಅಂಥವರಿಗೆ ಅದು ಮುಗಿಯುವವರೆಗೂ ರೇಷನ್ ಆರ್ಡರ್ ಕೊಡುವುದಿಲ್ಲವೆಂದು ತಿಳಿಸಿದರು.

ಈ ರೇಷನಿಂಗ್ ವ್ಯವಸ್ಥೆಯಿಂದ ಪ್ರತಿಯೊಬ್ಬರಿಗೂ ಸಮಾನವಾದ ಆಹಾರ ಸಿಕ್ಕುವುದಾದರೂ, ನಿರ್ಗತಿಕರಿಗೆ ಇದರಿಂದ ಕಷ್ಟವಾಗುವುದರಿಂದ ಅಂಥವರಿಗೆ ಪ್ರತ್ಯೇಕ ಭೋಜನ ಶಾಲೆಗಳನ್ನು ಏರ್ಪಡಿಸಲು ಪುರಪ್ರಮುಖರು ಮತ್ತು ವರ್ತಕರು ಮುಂದೆಬಂದು ಹಣ ಸಹಾಯ ಮಾಡಬೇಕೆಂದು ಕೋರಿದರು.

ಸೊಸೈಟಿ ಡೈರೆಕ್ಟರುಗಳು

ಮೊನ್ನೆ ನಡೆದ ಮೈಸೂರು ಕೋ-ಆಪರೇಟಿವ್ ಸೊಸೈಟಿ ಡೈರೆಕ್ಟರುಗಳ ಚುನಾವಣೆಯಲ್ಲಿ ಶ್ರೀಯುತರುಗಳಾದ ಪಾಲಳ್ಳಿ, ಸೀತಾರಾಮಯ್ಯ, ಎಂ ಆರ್. ಸಿಟಪ್ಪ, ಬಿ. ವಿ ನಂಜುಂಡಯ್ಯ, ಎಂ ಎಸ್. ಜೋಯಿಸ್, ಟಿ ಎಸ್ ರಾಜಗೋಪಾಲಯ್ಯಂಗಾರ್, ಎ ಕೃಷ್ಣಮೂರ್ತಿ ರಾವ್, ವಿ ಲಿಂಗಪ್ಪಯ್ಯ, ಜಿ ಆರ್. ಜೋಸ್ಯರ್, ಚಿನ್ನಸ್ವಾಮಿ ಶೆಟ್ಟಿ, ಬಿ. ಆರ್ ಲಕ್ಷ್ಮಣಶೆಟ್ಟಿ, ಜಿ. ವಿ ವೆಂಕಟಾಚಾರ್, ಟಿ ಕೃಷ್ಣರಾವ್, ಬಿ ಎಸ್. ರುದ್ರಪ್ಪ, ಹರಿಹರ ಮತ್ತು ಶ್ರೀಮತಿ ಸುನಂದಾದೇವಿ ಇವರುಗಳು ಚುನಾಯಿಸಲ್ಪಟ್ಟಿದ್ದಾರೆ.

ಹಳೇ ವಿದ್ಯಾರ್ಥಿಗಳ ಸಭೆ

ಇರುವ ೨೦ ನೇ ತಾ|| ಶನಿವಾರ ಸಂಜೆ ೫ ಗಂಟೆಗೆ ಮೈಸೂರು ಮಹಾರಾಜ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಭೆಯೊಂದು ನಡೆಯಲು ಏರ್ಪಾಟಾಗಿದೆ. ಅಮೃತೋತ್ಸವ ಸಂಘ ಸ್ಥಾಪಿಸಬೇಕೆಂಬುದೇ ಅದರ ಉದ್ದೇಶ. ಎಲ್ಲಾ ಹಳೇ ವಿದ್ಯಾರ್ಥಿಗಳಿಗೂ ಆಹ್ವಾನವಿತ್ತಿದೆ.

ಸರ್ಕಾರದ ಸುದ್ದಿ

ಮೈಸೂರು ತಾಲ್ಲೂಕ್ ಅಮಲ್ದಾರರಾದ ಶ್ರೀ ವೆಂಕಟರಂಗಶೆಟ್ಟಿಯವರನ್ನು ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಿ, ಕಡೂರು ಜಿಲ್ಲಾ ಟ್ರೆಜರಿ ಆಫೀಸರಾಗಿ ವರ್ಗಾಯಿಸಲಾಗಿದೆ.

ಪಡಗೇರ ಹಳ್ಳಿಯಲ್ಲಿ ಲೈಸೆನ್ಸ್ ಆಫೀಸರಾಗಿರುವ ಶ್ರೀ ಜಿ ಎನ್ ಪುಟ್ಟಣ್ಣನವರನ್ನು ಲೇಬರ್ ಆಫೀಸರಾಗಿ ಭದ್ರಾವತಿಗೆ ವರ್ಗಾಯಿಸಲಾಗಿದೆ.

ಬೆಂಗಳೂರು ಜಿಲ್ಲಾಧಿಕಾರಿಗಳ ಫಸ್ಟ್ ಅಸಿಸ್ಟೆಂಟರಾದ ಮಿ|| ಅಬ್ದುಲ್ ಗನಿಯವರಿಗೆ ೩ ತಿಂಗಳ ರಜ ಮಂಜೂರಾಗಿದೆ.

ಬೆಂಗಳೂರು ಡಿವಿಜನ್ನಿನ ಸೆಕ್ರಟೇರಿಯಟ್‌ನಲ್ಲಿ ಕ್ಲರ್ಕಾಗಿರುವ ಶ್ರೀ ಟಿ ಚನ್ನಯ್ಯನವರನ್ನು ಕಡೂರಿಗೂ, ಮೈಸೂರು ಜಿಲ್ಲಾ ಆಫೀಸಿನ ಶ್ರೀ ಎಂ ಪುಟ್ಟಸ್ವಾಮಯ್ಯನವರನ್ನು ಮಂಡ್ಯಕ್ಕೂ, ಶ್ರೀ ಎಂ ಕೆ ಸುಬ್ರಹ್ಮಣ್ಯರವರನ್ನು ಹಾಸನಕ್ಕೂ, ಸ್ಪೆಷಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಫೀಸರಾಗಿ ನೇಮಿಸಲಾಗಿದೆ.

ನೆಹರು ಜಯಂತಿ

ರಾಜಧಾನಿಯ ಕೃಷ್ಣನ ಪುರಂದರಪುರದ ಶ್ರೀರಾಮ ದೇವಾಲಯದಲ್ಲಿ ನೆಹರು ಜಯಂತಿಯು, ಶ್ರೀ ಎಂ. ಎಲ್ ನಂಜರಾಜೇ ಅರಸ್‌ರವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆಯಿತು. ಶ್ರೀಗಳಾದ ಹೆಚ್. ವೈ ಶಾರದಾ ಪ್ರಸಾದ್, ಎಂ. ವಿ ಕೃಷ್ಣಪ್ಪ ಮುಂತಾದವರುಗಳ ಭಾಷಣಗಳಾದ ಮೇಲೆ ಸ್ಪರ್ಧೆಗಳಲ್ಲಿ ಜಯಶಾಲಿಗಳಾದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು.

ಅಭಿನಂದನೆ

ಸರ್ ಮಿರ್ಜಾ ಎಂ ಇಸ್ಮಾಯಿಲರಿಗೆ ೬೦ ವರ್ಷವಾದ ಪ್ರಯುಕ್ತ ಧರ್ಮಪ್ರವರ್ತಕ ಎ. ಎಸ್. ರಂಗಸ್ವಾಮಿ ಅಯ್ಯಂಗಾರ್ಯರು ಅಭಿನಂದನೆಗಳನ್ನು ಕಳಿಸಿದ್ದಾರೆ. ಸರ್ ಮಿರ್ಜಾರವರು ಅದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

ಸುಗ್ಗಿಯ ಆಚ್ಚೆ

ಈಸಾರಿ ಫಸಲು ಬರುವ ಹೊತ್ತಿಗೆ ಮೈಸೂರು ಸರ್ಕಾರದವರು ಒಂದು ಹೊಸ ಯೋಜನೆಯನ್ನು ಮೊರೆಡಿಸಿ ದಿನಸಿ ಧಾನ್ಯಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲಿರುವರೆಂದು ತಿಳಿದುಬರುತ್ತದೆ.

ಎಸ್. ಜಿ. ಶಾಸ್ತ್ರಿಗಳು ಸಾಂಡೂರಿಗೆ

ನಿವೃತ್ತ ಶೈಕ್ಷಣಿಕ ಮತ್ತು ಸಾಹಿತ್ಯ ಇಲಾಖೆಯ ಡೈರೆಕ್ಟರಾದ ಶ್ರೀ ಎಸ್. ಜಿ ಶಾಸ್ತ್ರಿಯವರು ಸಾಂಡೂರ್ ಸಂಸ್ಥಾನದ ಶೈಕ್ಷಣಿಕ ಸಲಹೆಗಾರರಾಗಿ ನೇಮಿಸಲ್ಪಟ್ಟಿದ್ದಾರೆ.

ತುಲಾಮಾಸ ಸಂತರ್ಪಣೆ.

ರಾಜಧಾನಿಯ ವಕೀಲರಾದ ಶ್ರೀ|| ಎಂ. ಎಸ್. ರಂಗಾಚಾರ್ಯರವರು ಪಶ್ಚಿಮ ವಾಹಿನಿಯಲ್ಲಿ ಕಾವೇರಿ ನದೀತೀರದಲ್ಲಿ ತುಲಾಮಾಸ ಸಂತರ್ಪಣೆಯು ಅತ್ಯಮಿತವಾಗಿ ಕ್ಷೇತ್ರದ ದಿನ ಸಮಾರಾಧನೆ ನಡೆಸಿದರು. ಅಂಗವಾಗಿ ಶ್ರೀ|| ಹರಿ ಸರ್ವೋತ್ತಮ ದಾಸರ ಹರಿಕಥೆಯೂ ನಡೆಯಿತು.

ಕ್ರಿಕೆಟ್ ಪಂದ್ಯ

ಸರ್ ಮಿರ್ಜಾ ಶೀಲ್ಡ್ ಕ್ರಿಕೆಟ್ ಪಂದ್ಯದಲ್ಲಿ ಮೈಸೂರು ಯುನಿವರ್ಸಿಟಿಯವರು ಮಹಾರಾಜಾ ಕಾಲೇಜಿನವರನ್ನು ೩೮ ರನ್ನುಗಳಿಂದ ಸೋಲಿಸಿದರು. ಕಾಲೇಜು ೧೩೦ ರನ್ನುಗಳು. ಯುನಿವರ್ಸಿಟಿಯವರು ೯ ವಿಕೆಟ್ಟುಗಳಿಗೆ ೧೬೮ ರನ್ನುಗಳು.

ಶಾಸ್ತ್ರನೇತ್ರರೊಬ್ಬರ ನಿಧನ

ವೇ|| ಬ್ರ|| ಹಾನಗಲ್ ರಾಮಾದೀಕ್ಷಿತ್‌ರವರು ಇದೇ ಮಾಹೆ ೬ ನೇ ತಾ|| ಕಾಶಿಕ್ಷೇತ್ರದಲ್ಲಿ ನಿಧನರಾದರು. ಇವರು ಮೈಸೂರು, ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿ ನಡೆದ ಮಹಾ ಯಜ್ಞಗಳಲ್ಲಿ ಭಾಗವಹಿಸಿದ್ದರು. ಪ್ರೊಫೆಸರ್ ಮಹಾಮಹೋಪಾಧ್ಯಾಯ ವಿದ್ವಾಂಸರು "ವೇದಮೂರ್ತಿ ಜೀವಂತ ಮೂರ್ತಿ" ಎಂಬ ಪ್ರಶಸ್ತಿಯನ್ನು ಇವರಿಗೆ ಕೊಟ್ಟಿದ್ದರು. ಮೈಸೂರು, ಬನಾರಸ್, ಜಮಖಂಡಿ ಸಾಂಗಲಿ, ಕೊಲ್ಹಾಪುರ ಮುಂತಾದ ಕಡೆಗಳಲ್ಲಿ ಸನ್ಮಾನಿತರಾಗಿದ್ದರು. ಈ ಪಂಡಿತವರ್ಯರ ಮರಣದಿಂದ ವೈದಿಕ ಮಂಡಲಿಗೆ ಒಂದು ಅಪಾರವಾದ ನಷ್ಟವಾದಂತಾಗಿದೆ. ಮೃತರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಕೋರುತ್ತೇವೆ.

ಜಿನ್ನಾರಿಗೆ ಅಧ್ಯಕ್ಷ ಪದವಿ

ಅಖಿಲ ಭಾರತ ಮುಸ್ಲಿಂ ಲೀಗಿನ ಮುಂದಿನ ಸಮ್ಮೇಳನದ ಅಧ್ಯಕ್ಷತೆಗೆ ಶ್ರೀ ಜಿನ್ನಾರವರ ಹೆಸರು ಸೂಚಿಸಲ್ಪಟ್ಟಿದೆ ಎಂದು ತಿಳಿದುಬಂದಿದೆ.

ಸಬ್ ಡಿವಿಜನ್ ಆಫೀಸರಿಗೆ ಸಜ

ಒಬ್ಬ ಕಂಟ್ರಾಕ್ಟರಿಂದ ೧೫೦೦ ರೂ. ಲಂಚವನ್ನು ತೆಗೆದುಕೊಂಡಿದ್ದಕ್ಕಾಗಿ ಬೆಂಗಳೂರಿನ ಆರ್. ಎಸ್. ವಿರ್ಣ ಎಂಬ ಸಬ್ ಡಿವಿಜನ್ ಆಫೀಸರೊಬ್ಬರಿಗೆ ವಿಶೇಷ ನ್ಯಾಯಾಧೀಶರು ೨ ವರ್ಷ ಕಠಿಣ ಸಜ ಮತ್ತು ೨ ಸಾವಿರ ರೂ. ಜುಲ್ಮಾನೆ, ತಪ್ಪಿದರೆ ಇನ್ನೂ ೬ ತಿಂಗಳು ಸಜ ವಿಧಿಸಿದ್ದಾರೆ.

ಮನುಷ್ಯನನ್ನು ನರಿಗಳು ತಿಂದವು

ಹೊಟ್ಟೆಗಿಲ್ಲದೆ ಅರೆ ಜೀವದಿಂದ ನರಳುತ್ತಿದ್ದವನೊಬ್ಬನನ್ನು ಸಾಯುವುದಕ್ಕೆ ಮೊದಲೇ ನರಿಗಳ ಗುಂಪೊಂದು ಮುತ್ತಿ ಕಚ್ಚಿ ತಿಂದ ವಿಷಾದ ವಾರ್ತೆಯು ಬಂದಿರುತ್ತದೆ. ಸಿರಾಜಗಂಜ್ ಪಟ್ಟಣದ ಹೊರಭಾಗದಲ್ಲಿ ಒಬ್ಬ ಹಳ್ಳಿಯವನ ಶರೀರ ಮೋಟ್ಟಿಂದಂತೆ ನರಿಗಳ ಬಾಯಿಗೆ ತುತ್ತಾಯಿತು. ಹೊಟ್ಟೆಗಿಲ್ಲದೆ ಆತನು ನರಳುತ್ತಿದ್ದನು. ಸತ್ತ ಸ್ಥಳದಲ್ಲೂ ಮೂರು ಒಂದು. ಕೋಣೆಯಲ್ಲಿ ಮಾಡಿಸುತ್ತಿದ್ದನು. ಇನ್ನೂ ಪ್ರಾಣವಿರುವಾಗಲೇ ನರಿಗಳು ಅವನನ್ನು ಕಚ್ಚಿ ತಿಂದವು.

ಡಾಲ್ಮೇಷಿಯಾ ತೀರದಲ್ಲಿ ಜರ್ಮನರು

ಹೊಸ ಧಾಳಿಗಾಗಿ ಡಾಲ್ಮೇಷಿಯಾ ತೀರಪ್ರದೇಶಗಳಲ್ಲಿ ನಾಜಿಗಳು ಬಹುಮಾಡ ಸೈನ್ಯಗಳನ್ನು ಶೇಖರ ಮಾಡುತ್ತಿದ್ದಾರೆಂದು ಸ್ವತಂತ್ರ ಯುಗೋಸ್ಲೇವಿಯಾ ರೇಡಿಯೋವು ವರದಿ ಮಾಡಿದೆ. ಸ್ಪಿಯರ ಮ್ ಕೋಲ್ಲಿಯ, ಪೆಗ್‌ಲಿಯಾ, ಬ್ಲಾಕ್‌ಸಿಸ ಮತ್ತು ಇಸ್ಟ್ರಿಯ ದ್ವೀಪಗಳನ್ನು ಹಿಡಿದಿದ್ದರಿಂದ ಏಡ್ರಿಯಾಟಿಕ್‌ನಲ್ಲಿ ತಮ್ಮ ಹಿಡಿತ ಬಲಗೊಂಡಂತಾಗಿದೆಯೆಂದು ಜರ್ಮನರು ಹೇಳಿಕೊಳ್ಳುತ್ತಿರುವರು.

ಪುಷ್ಪಮಂಟಪೋತ್ಸವ

ಮೊನ್ನೆ ಪ್ರಯುರಮಣಿಸಿದಂತೆ ನೆನ್ನೆ ರಾತ್ರಿ ನಂಜನಗೂಡಿನಲ್ಲಿ ಬೆಂಗಳೂರಿನ ಕಂಟ್ರಾಕ್ಟರ್ ಶ್ರೀ|| ಡಿ ಎಸ್. ಶಿವರುದ್ರಪ್ಪನವರಿಂದ ಏರ್ಪಡಿಸಲಾಗಿದ್ದ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಪುಷ್ಪಮಂಟಪೋತ್ಸವವು ಬಹಳ ವೈಭವದಿಂದ ನೆರವೇರಿತು.

ಉತ್ಸವಕ್ಕೆ ಸ್ಥಳ ಪರಸ್ಥಳಗಳಿಂದ ಸಾವಿರಾರು ಭಕ್ತಾದಿಗಳು ಬಂದಿದ್ದರು. ವಂಟಪವನ್ನು ಬೆಂಗಳೂರಿನ ಒಬ್ಬರು ಕರಕುಶಲರಿಂದ ಹೂವಾಡಿಗರು ಹೂವಿನಿಂದ ಅತಿ ರಮ್ಯವಾಗಿ ಅಲಂಕರಿಸಿದ್ದರು. ಅಲ್ಲದೆ ವಂಟಪವು ವಿದ್ಯುದ್ದೀಪಗಳಿಂದ ಪ್ರಕಾಶಿಸಲ್ಪಡುತ್ತಿತ್ತು. ಸ್ಥಳೀಯ ನಾಗಸ್ವರದ ಕಚೇರಿಯವರಿಂದ ಇಂಪಾದ ವಾದ್ಯವಾದನ ಮತ್ತು ವಾದ್ಯ ಬಹಳ ಹೊತ್ತು ನಡೆಯಿತು. ರಾತ್ರಿ ೩ ಗಂಟೆ ಹೊತ್ತಿಗೆ ಮುಕ್ತಾಯಗೊಂಡಿತು.

ಮುಂದಿನ ಸೋಮವಾರ ... ಕಾರ್ತೀಕ ಸೋಮವಾರದ ... ಯ. ಸಾಹುಕಾರರಿಂದ ಶ್ರೀ ... ಸ್ವಾಮಿಯವರ ಉತ್ಸವ ನಡೆಯಬೇಕಾಗಿದೆ. ಆ ದಿನ ಕಡವೆ ... ಕಾಪ್ಪಸಿದ್ದ ... ಸಾರ್ವಜನಿಕ ... ವಾಗಿ ತಿಳಿಯಬರುತ್ತದೆ.

ಆಹಾರ ಸಮಸ್ಯೆಯಲ್ಲಿ ಮಹಿಳೆಯರ ಪಾತ್ರ

ರಾಜಧಾನಿಯಲ್ಲಿ ಮಹಿಳೆಯರ ಮಹಾ ಸಭೆ

ಮೈಸೂರು ೧೩.

ಇದೇ ೧೨-೧೧ ಆ. ೪ ಕ್ಕೆ ಶ್ರೀರಾಂ ಸಂತೆ ನಗರದ ಮಹಿಳೆಯರು ಇಂದಿನ ಆಹಾರ ಪರಿಸ್ಥಿತಿಯನ್ನು ಚರ್ಚಿಸಲು ಬನುಮಯ್ಯ ನವರ ಹೈಸ್ಕೂಲಿನಲ್ಲಿ ಶ್ರೀ ಕಮಲಮ್ಮ ರಾಮಚಂದ್ರರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ನೂರಾರು ಮಂದಿ ಉತ್ಸಾಹಶಾಲಿಗಳೂ ಸೇವಾಕಾಂಕ್ಷಿಗಳೂ ವಿದ್ಯಾವಂತರೂ ಆದ ವಿದ್ಯಾರ್ಥಿನಿಯರೂ ಮಹಿಳೆಯರು ಬಂದಿದ್ದರು. ಸಭೆಯಲ್ಲಿ ಚರ್ಚಿತವಾದ ಮುಖ್ಯ ವಿಷಯಗಳು ಏನೆಂದರೆ: ೧ ಇಂದಿನ ಆಹಾರ ಸಮಸ್ಯೆ ೨ ಸಮಸ್ಯಾಪರಿಹಾರದಲ್ಲಿ ಸ್ತ್ರೀಯರ ಕರ್ತವ್ಯ

ಶ್ರೀಮತಿಗಳಾದ ಎಚ್. ಮೈ ಸರಸ್ವತಮ್ಮ, ಕೇಸರಿ ಕೇಶವನ್, ತಿಮ್ಮಮ್ಮ, ರಂಗನಾಯಕಮ್ಮ, ಮೀನಾಕ್ಷಮ್ಮ, ಕಾಮೇಶ್ವರಮ್ಮ, ಲಲಿತಮ್ಮ ರಾಮಸ್ವಾಮಿ, ಜಾನಕಮ್ಮ ಕೃಷ್ಣಸ್ವಾಮಿ, ಸುಂದರಬಾಯಿ, ಸಿ ಆರ್. ಭಾಗೀರಥಿ ಗೌರಮ್ಮ ಮತ್ತಿತರರು ಮಾತನಾಡಿದರು. ಸಭೆಯಲ್ಲಿ ಸರ್ವಾನುಮತದಿಂದ ಕೆಳ ಕಂಡ ನಿರ್ಣಯಗಳು ಅಂಗೀಕೃತವಾದುವು.

೧. ಆಹಾರದ ಬಿಕ್ಕಟ್ಟಿನ ನಿವಾರಣೆಯ ಕೆಲಸಗಳಲ್ಲಿ ರೇಷನಿಂಗ್ ಡಿಪೋ ಮುಂದೆ ನೂಕು ನುಗ್ಗಲಾಟವಾಗದಂತೆ ಕ್ಯೂಗಳನ್ನೇರ್ಪಡಿಸುವುದೇ ಮುಂತಾದ ಕೆಲಸಗಳಲ್ಲಿ ಆಸಕ್ತಿಯುಳ್ಳವರನ್ನೆಲ್ಲಾ ಸೇರಿಸಲು ಮೈಸೂರಿನ ಮಹಿಳೆಯರು ಪ್ರಮುಖ ಪಾತ್ರ ವಹಿಸಬೇಕೆಂದು ಈ ಸಭೆ ನಿರ್ಣಯಿಸುತ್ತದೆ.

೨. ಕ್ಯೂಗಳನ್ನು ಶಿಸ್ತಿನಿಂದ ನಡೆಸಿಕೊಂಡು ಹೋಗುವ ಮತ್ತು ಡಿಪೋಗಳಲ್ಲಿ ಆಹಾರ ಪದಾರ್ಥಗಳು ಮೋಸವಿಲ್ಲದೆ ನ್ಯಾಯವಾದ ರೀತಿಯಲ್ಲಿ ಹಂಚಿಕೆಯಾಗುವಂತೆ ನೋಡಿಕೊಳ್ಳಲು ಒಂದು ಮೈಸೂರು ಮಹಿಳಾ ಆಹಾರ ಸಮಿತಿಯನ್ನು ಚುನಾಯಿಸುತ್ತದೆ. ಅದಕ್ಕಾಗಿ ಸ್ವಯಂ ಸೇವಕಿಯರ ದಳವೊಂದನ್ನೇರ್ಪಡಿಸಬೇಕೆಂದು ನಿರ್ಣಯಿಸುತ್ತದೆ.

೩ ಎ) ಮೈಸೂರು ನಗರದಲ್ಲಿ ಇಷ್ಟರಲ್ಲೇ ಬರಲಿರುವ ರೇಷನಿಂಗ್ ಪದ್ಧತಿಯು ಎಲ್ಲರಿಗೂ ತೃಪ್ತಿಕರವಾಗಿರಬೇಕೆಂದೂ, ಆಹಾರದ ಹಂಚಿಕೆಯಲ್ಲಿ ಬಡವರು ಭಾಗ್ಯವಂತರೆಂಬ ಭೇದವಿಲ್ಲದೆ ಎಲ್ಲರಿಗೂ ಸಮರ್ಪಕವಾಗಿ ಆಹಾರ ದೊರೆಯಬೇಕೆಂದೂ ಈ ಸಭೆಯು ನಿರ್ಣಯಿಸುತ್ತದೆ. ಪಡಿತರ ಪದ್ಧತಿಯ ಪೂರ್ಣಾರ್ಥ ತಿಳಿಯದುದರಿಂದ ಜನರು ಸರಿಯಾದ ಅಂಕಿ ಅಂಶಗಳನ್ನು ಕೊಡದೆ ಅನೇಕ ಕಷ್ಟಗಳಿಗೆ ಈಡಾಗುತ್ತಾರೆ. ಈ ಕಷ್ಟ ನಿವಾರಣೆಗಾಗಿ ಸ್ವಯಂ ಸೇವಕಿಯರೂ ಸ್ಥಾಯಿ ಸಮಿತಿಯವರೂ ಕೆಲಸ ಕೈಗೊಳ್ಳುತ್ತಾರೆ. ಸರ್ಕಾರದವರು ಇವರೆಲ್ಲರನ್ನೂ ಅಂಗೀಕರಿಸಿ ಅವುಗಳೊಂದಿಗೆ ಸಹಕರಿಸಿ. ಅವುಗಳ ಸಲಹೆಗಳಿಗೆ ಮನ್ನಣೆ ಕೊಡಬೇಕೆಂದು ಈ ಸಭೆಯು ಸರ್ಕಾರದವರನ್ನು ಕೋರುತ್ತದೆ.

ಬಿ) ರೇಷನಿಂಗ್ ವ್ಯವಸ್ಥೆಯನ್ನು ಜನರಿಗೆ ವಿವರಿಸುವ ಮತ್ತು ಕ್ಯೂಗಳನ್ನೇರ್ಪಡಿಸುವ ಭಾರವನ್ನು ಹೊತ್ತಿರುವ ಮೈಸೂರು ಮಹಿಳಾ ಆಹಾರ ಸಮಿತಿಗೆ ಆಹಾರ ಸರಬರಾಯಿ ಅಧಿಕಾರಿಗಳಿಂದ ಮನ್ನಣೆ ದೊರೆಯಬೇಕೆಂದೂ, ರೇಷನಿಂಗ್ ಅಧಿಕಾರಿಗಳು ವಾರಕ್ಕೊಂದು ದಿನವಾದರೂ ಸ್ತ್ರೀಯರಿಗೆ ಮಾತ್ರವೇ ಡಿಪೋಗಳನ್ನು ಮಾಡಿ ಅವರಿಗೆ ಪ್ರತ್ಯೇಕ ಹಂಚಿಕೆಯನ್ನೇರ್ಪಡಿಸಬೇಕೆಂದೂ ಇಚ್ಛಿಸುತ್ತದೆ.

೪. ಬಟ್ಟೆಗೆ ಮತ್ತು ಇದ್ದಿಲು ಸಿಗುವುದೇ ಬಹಳ ಕಷ್ಟವಾಗಿರುವುದರಿಂದ ಈ ಪದಾರ್ಥಗಳ ಧಾರಣೆ ಮತ್ತು ಸರಬರಾಯಿ ಹತೋಟಿ ಮಾಡಿ, ರೇಷನ್ ತರಬೇಕೆಂದು ಸರ್ಕಾರವನ್ನು ಈ ಸಭೆಯು ಒತ್ತಾಯಪಡಿಸುತ್ತದೆ. ಮದರಾಸಿನ ಮಾದರಿಯನ್ನು ಈ ವಿಷಯದಲ್ಲಿ ಅನುಸರಿಸಬೇಕೆಂದು ಸೂಚಿಸುತ್ತದೆ

೫ ಪ್ರಜೆಗಳಿಗೆ ಶುದ್ಧವಾದ ಹಾಲು ಮತ್ತು ಬೆಣ್ಣೆ ಹತೋಟಿ ದರದಲ್ಲಿ ದೊರೆಯುವಂತೆ ಮೈಸೂರು ಪೌರಸಭೆಯು ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಅಲ್ಲದೆ ಪ್ರತಿಯೊಂದು ಮೊಹಲ್ಲಾದಲ್ಲಿಯೂ ಪೌರಸಭೆಯವರು ಹಾಲಿನ ಡಿಪೋಗಳನ್ನು ತೆರೆದು ಬಡ ಜನರಿಗೆ ಸುಲಭ ಬೆಲೆಗೆ ಹಾಲು ಕೊಡಬೇಕೆಂದೂ ಕೋರುತ್ತದೆ.

"ಮೈಸೂರು ಮಹಿಳಾ ಆಹಾರ ಸಮಿತಿ" ಯು ಸ್ಥಾಯಿ ಸಮಿತಿಯನ್ನು ರಚಿಸಲಾಯಿತು ಸೆನ್ಸಸ್ ಕೆಲಸದಲ್ಲಿ ಸಹಾಯ ಮಾಡಲು ೫೫ ಮಂದಿ ಸ್ವಯಂ ಸೇವಕಿಯರು ಮುಂದೆ ಬಂದರು. ಇವರು ಸೋಮವಾರ ಪ್ರಾತಃಕಾಲ ಸೆನ್ಸಸ್ ಮತ್ತು ರೇಷನಿಂಗ್ ವಿವರಣೆಗಾಗಿ ಹೋಗಿದ್ದರು. ಸ್ಥಾಯಿ ಸಮಿತಿಗೆ ಎಲ್ಲ ಮೊಹಲ್ಲಾಗಳಿಂದಲೂ ಪ್ರತಿನಿಧಿಗಳು ಬೇಕು. ಈಗಾಗಲೇ ಪ್ರತಿನಿಧಿಗಳು ಬಂದಿರುವ ಮೊಹಲ್ಲಾಗಳನ್ನುಳಿದು ಉಳಿದ ಮೊಹಲ್ಲಾಗಳಲ್ಲಿ ಕೆಲಸ ಮಾಡಲು ಸಿದ್ಧರಿರುವವರು ಶ್ರೀ ಕೇಸರಿ ಕೇಶವನ್, ನಂ. ೫೩೭, ದಿವಾನ್ಸ್ ರಸ್ತೆ, ಮೈಸೂರು ಇವರಿಗೆ ತಿಳಿಸಬೇಕು. ಸ್ವಯಂ ಸೇವಕಿಯರಾಗಬಯಸುವವರು ತಮ್ಮ ಹೆಸರು, ವಿಳಾಸಗಳನ್ನು ಕೊಡಬೇಕು. ಸದ್ಯದಲ್ಲಿಯೇ ಕಾರ್ಯಕ್ರಮವನ್ನು ಚರ್ಚಿಸಲು ಸ್ವಯಂ ಸೇವಕಿಯರ ಸಭೆಯನ್ನು ಏರ್ಪಡಿಸಲಾಗುವುದು.

ದವಸ ಧಾನ್ಯಗಳ ಅಭಾವ

ಸ್ವಾಮಿ,

ಕೃಷ್ಣರಾಜನಗರದ ತಾಲ್ಲೂಕು ರೈತರುಗಳ ಮತ್ತು ಕೂಲಿಮಾಡುವ ಬಡಜನರ ಕಷ್ಟ ಹೇಳತೀರದು. ಕೊಂಡುತಿನ್ನುವುದಕ್ಕೇ ದವಸ ಸಿಗುತ್ತಿಲ್ಲ.

ಈ ತಾಲ್ಲೂಕಿನಲ್ಲಿ ೧೪೭ ಹಳ್ಳಿಗಳಿವೆ. ಕೆಲವು ಹಳ್ಳಿಗಳಿಂದ ನಗರಕ್ಕೆ ೧೫ ಅಥವ ೧೮ ಮೈಲಿಗಳಾಗುತ್ತೆ. ಈಗ ಹಾಲಿ ಕೃಷ್ಣರಾಜ ನಗರದಲ್ಲಿ ಮತ್ತು ಸಾಲಿಗ್ರಾಮದಲ್ಲೂ ಡಿಪೋ ಇಟ್ಟಿದ್ದಾರೆ

ನಮ್ಮ ಆಹಾರ ಸಚಿವರು ಡೆಲ್ಲಿಯಿಂದ ಬಂದ ಮೇಲೆ, ಇನ್ನು ಕಷ್ಟವಾಗುವುದಿಲ್ಲ ನಮಗೆ ಹೊರಗಡೆಯಿಂದ ಬೇರೆ 'ಕೋಟ' ಬರುತ್ತದೆ ಎಂದು ಹೇಳಿದರು. ಆದರೆ, ಹಳ್ಳಿಗಾಡುಗಳಲ್ಲಿ ಎಷ್ಟೋ ಜನ ೨-೩ ದಿನ ಊಟವಿಲ್ಲದೆ ಹಸಿದು ಮಲಗಿದ್ದಾರೆ. ಹಳ್ಳಿಗಳಲ್ಲಿ ಕಾಳು ಸಿಗುವುದಾಗಿಲ್ಲ, ಸಂತೆಗಳಲ್ಲಿ ದವಸ ನೋಡುವ ಹಾಗೇ ಇಲ್ಲ. ಎಲ್ಲಾ ವ್ಯವಸ್ಥೆಯು ಸರಿಯಾಗಿದೆಯೆಂದು ಹೇಳಿಕೊಂಡು ೩-೪ ಪಟ್ಟಣಗಳ ಕಡೆ ಕೈತೋರಿಸಿ, ಭುಜ ತಟ್ಟಿಕೊಂಡರೆ ಹಳ್ಳಿಯ ಜನರಿಗೆ ಆಹಾರ ಕೊಟ್ಟಂತಾಗುವುದಿಲ್ಲ. ಹಳ್ಳಿ ಜನಗಳ ಕಷ್ಟನಿವಾರಣೆಯಾಗಬೇಕಾದರೆ ಸರ್ಕಾರದವರು ಪ್ರತಿ ಹೋಬಳಿವಾರು ನಾಲ್ಕಾರು ಕಡೆಗಳಿಗೆ ಕಡಿಮೆಯಿಲ್ಲದಂತೆ ಗ್ರಾಮಗಳಲ್ಲಿ ಪಂಚಾಯಿತಿ ಮೂಲಕ ಡಿಪೋಗಳನ್ನೇರ್ಪಡಿಸಿ, ಅಕ್ಕಪಕ್ಕದಲ್ಲಿರುವ ಸಣ್ಣ ಗ್ರಾಮಗಳ ರೈತರುಗಳಿಗೂ ರೈತರಿಗೆ ಸಹಾಯವಾಗಿರುವ ಬಡ ಕೂಲಿ ಜನಗಳಿಗೂ ಸಹ ಆಯಾಯ ದಿವಸಕ್ಕೆ ಬೇಕಾಗುವಷ್ಟು ದಿನಸಿಯನ್ನಾದರೂ ತೊಂದರೆ ಇಲ್ಲದೆ ಸಿಗುವಂತೆ ಮಾಡುವುದು ಸರ್ಕಾರದವರ ಕರ್ತವ್ಯವಾಗಿದೆ

ಸೀಮೆ ಎಣ್ಣೆಯ ಅಭಾವವನ್ನಂತೂ ಹೇಳತೀರದು. ಜನಗಳು ಸೀಮೆಯೆಣ್ಣೆ ದೀಪಗಳನ್ನು ಹಚ್ಚಿ ಎಷ್ಟೋ ತಿಂಗಳಾಗಿದೆ. ಕೃಷ್ಣರಾಜ ನಗರದಲ್ಲಿ ಪ್ರತಿ ಶುಕ್ರವಾರ ಸೀಮೆಯೆಣ್ಣೆಯನ್ನು ಹಂಚುತ್ತಾರೆ. ಆ ನೂಕುನುಗ್ಗಲು ಹೇಳತೀರದು. ದೇವರಿಗೇ ಪ್ರೀತಿ.

ಈ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಂತೂ ಮುಂಗಾರಿನಲ್ಲಿ ಮಳೆ ಇಲ್ಲದೆ ರಾಗಿ ಮತ್ತು ಜೋಳ ಸಂಪೂರ್ಣ ಕೆಟ್ಟು ಹೋಗಿ ಜನರು ಸುಗ್ಗಿಯನ್ನೇ ನೋಡುವಹಾಗಿಲ್ಲ. ಈ ಹಳ್ಳಿಗಳು ನಾಲೆ ಬೈಲಿಗೆ ಸೇರಿಲ್ಲವಾದ್ದರಿಂದ ರೈತರಿಗೆ ಊಹಿಸಲಸಾಧ್ಯವಾದ ಬರಗಾಲ ಬಂದುಕೊಂಡಿದೆ, ತಕ್ಷಣ ಸರ್ಕಾರದವರು ಈ ಕಷ್ಟ ಹಳ್ಳಿಗಳಿಗೆ ದಿನಸಿ ಡಿಪೋಗಳನ್ನು ಕೊಡದಿದ್ದಲ್ಲಿ ಅನ್ನವಿಲ್ಲದೆ ಜನರು ಸಾಯಬೇಕಾಗುತ್ತದೆ.

ಎಂ ಎಸ್. ನಂಜರಾಜ ಅರಸ್.

ಅಜ್ಜಂಪುರದಲ್ಲಿ ಕಾಂಗ್ರೆಸ್ಸಿಗೆ ಜಯ

ಅಜ್ಜಂಪುರದ ಪೌರ ಸಭೆಗೆ ೧೨ ನೆಯ ತಾ|| ಚುನಾವಣೆ ನಡೆಯಿತು. ಕಾಂಗ್ರೆಸ್ ಪರವಾಗಿ ೧೦ ಜನರೂ, ಸ್ವತಂತ್ರವಾಗಿ ೧೦ ಜನರೂ ಸ್ಪರ್ಧಿಸಿದರು. ಪೌರ ಸಭೆ ೧೦ ಸ್ಥಾನಗಳೂ ಕಾಂಗ್ರೆಸ್ಸಿಗೇ ದೊರಕಿವೆ.

ಹಾಸನ ಜಿಲ್ಲೆಯ ಆಹಾರ ಸಭೆ

ಹಾಸನ ಜಿಲ್ಲಾ ಆಹಾರ ಸಮ್ಮೇಳನವು ೨೧ ನೇ ತಾ|| ಮಧ್ಯಾಹ್ನ ೨ ಗಂಟೆಗೆ ಹೊಳೇನರಸೀಪುರದಲ್ಲಿ ಬೆಂಗಳೂರಿನ ಶ್ರೀ ಪಿ. ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಬೇಕಾಗಿದೆ

ಅಸೆಂಬ್ಲಿ ಕಾಂಗ್ರೆಸ್ ಪಕ್ಷ

ಮೇಲ್ಕಂಡ ಪಕ್ಷದ ಕಾರ್ಯಕಾರಿ ಮಂಡಲಿಯ ಸಭೆಯು ೨೬ ನೇ ತಾ|| ಶುಕ್ರವಾರ ೪ ಗಂಟೆಗೆ ಬೆಂಗಳೂರಿನಲ್ಲಿ ನಡೆಯಲೇರ್ಪಾಡಾಗಿದೆ

ಯುದ್ಧ ಕಾಲವಾಗಲಿ — — ರೇಷನ್ ಕಾಲವಾಗಲಿ

ನಿಮಗೆ ಬೇಕಾದುದೇನು ?

ಗುಣ :: ಆರೋಗ್ಯ :: ಶಕ್ತಿ

ಬನ್ನಿರಿ; ಪರೀಕ್ಷಿಸಿರಿ !

ಶ್ರೀ ಕೃಷ್ಣಭವನ್

ರೆಸ್ಟೋರೆಂಟ್, ಮೈಸೂರು.

(ಶ್ರೀಮನ್ಮಹಾರಾಜರವರ ಕೃಪಾಪೋಷಣೆಗೆ ಒಳಪಟ್ಟಿದೆ.)

ಪರಿಶುದ್ಧವಾದ ತುಪ್ಪದಿಂದ ಮಾಡಿದ ರುಚಿಕರವಾದ ತಿಂಡಿಗಳು !

ಅನುಪಮ ! ಆರೋಗ್ಯದಾಯಕ !!

[illegible] ಕಾಫಿಯು ನಮ್ಮಲ್ಲಿನ ವಿಶೇಷ !

ಜಯ ಅಂಡ್ ಕಂಪೆನಿ

ಸ್ಟಾಕ್ ಮತ್ತು ಷೇರ್ ಬ್ರೋಕರ್ಸ್,

ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು.

Edited, printed and published by A. R. Nagarajan, at the Sadhvi Press, D Subbiah Road, Mysore.

ಸ್ತ್ರೀಯರ ಶೌಕರ್ಯಕ್ಕಾಗಿ

ತಾ|| ೧-೧೧-೪೩ ರಿಂದ ಪ್ರತ್ಯೇಕವಾಗಿ [illegible] ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಪರೀಕ್ಷೆ ಬಯಸುತ್ತೇವೆ.

ಟಿ. ಪುಟ್ಟಯ್ಯ ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ ಸೂ — [illegible] ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ [illegible] ಇಲ್ಲಿ ಮತ್ತು [illegible] ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುವುದು.

ಸಂಪುಟ ೨] ಬುಧವಾರ ೧೭--೧೧--೪೩ [ಸಂಚಿಕೆ ೧೦೨

ಮಿತ್ರ ರಾಷ್ಟ್ರಗಳೊಡನೆ ತುರ್ಕಿ ಸೇರುವುದೇ?

ಮದರಾಸ್ ಪಾನನಿರೋಧ ಶಾಸನದ ಮಾರ್ಪಾಡು

"ಮುಡಿಪು ದಣಿವಾರಿಸಿಕೊಳ್ಳಲು ಹೊಸ ಹೆಂಡ ಅಗತ್ಯ"

ಅರಮನೆಯಲ್ಲಿ ಅಜಪಾ ಜಪ

ಮೈಸೂರು ೧೭

ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯ ಫಲವಾಗಿ ಶ್ರೀ ತ್ರಿನಯನೇಶ್ವರಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ೧ ಮಂಡಲಕಾಲ (೪೮ ದಿನ) ಅಜಪಾಜಪವು ನಡೆಯಲೇರ್ಪಾಡಾಗಿದೆ.

ಇದೇ ಮಾಹೆ ೪ನೇ ತಾ|| ನಿಂದ ಸಪ್ತಶತೀಪಾರಾಯಣ, ಸಹಸ್ರನಾಮ ಪುರಶ್ಚರಣ, ಏಕಾದಶವಾರ ರುದ್ರಾಭಿಷೇಕ ಇವು ಅರಮನೆಯ ಚಾಮುಂಡಿತೊಟ್ಟಿಯಲ್ಲೂ ಮತ್ತು ಶ್ರೀ ತ್ರಿನಯನೇಶ್ವರಸ್ವಾಮಿ ದೇವಸ್ಥಾನದಲ್ಲೂ ನಡೆಯುತ್ತಿವೆ. ಈ ಕ್ರಮವು ೧೦೮ ದಿನ ನಡೆಯುವುವು.

ಸಹಾಯಾರ್ಥ ಪ್ರದರ್ಶನ

ಇದೇ ೧೯ನೇ ತಾರೀಖು ಶುಕ್ರವಾರ ಸಂಜೆ ೬-೩೦ ಗಂಟೆಗೆ ರಂಗಾಚಾರ್ಲು ಸ್ಮಾರಕ ಭವನದಲ್ಲಿ ವಿಶ್ವವಿದ್ಯಾನಿಲಯ ಸಂಘದವರು ಕಾಲೇಜಿನ ಬಡ ಹುಡುಗರ ಸಹಾಯಾರ್ಥವಾಗಿ ವಿವಿಧ ವಿನೋದಾವಳಿಯನ್ನು ಏರ್ಪಡಿಸಿರುತ್ತಾರೆ. ಟಿಕೇಟುಗಳ ಮೂಲಕ ಪ್ರವೇಶ. ಎಲ್ಲರೂ ಸಹಕರಿಸಬೇಕೆಂದು ಕೋರಲಾಗಿದೆ.

ಸಂತಾಪ ಸೂಚನೆ

ಮೈಸೂರು ಕಿಲ್ಲೆ ಮೊಹಲ್ಲಾದಲ್ಲಿರುವ ಶ್ರೀ ಶ್ರೀನಿವಾಸ ಗಾಂಧರ್ವ ವಿದ್ಯಾಲಯದ ಶ್ರೀ ರಾಮ ಮಂದಿರದವರು, ದಿವಂಗತ ಎಂ. ಎಸ್. ಸಿದ್ಧಪ್ಪನವರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆ ನಡೆಸಿ, ಅವರ ಆತ್ಮಕ್ಕೆ ಶಾಂತಿ ಕೋರಿದರು. ದಿವಂಗತರು ಮಂದಿರದ ಮುಖಂಡರಾಗಿ ಸೇವೆ ಸಲ್ಲಿಸಿದ್ದರು.

ಮರದಿಂದ ಬಿದ್ದು ಮರಣ

ಕೃಷ್ಣರಾಜನಗರದ ಮಾದೇಗೌಡ ಎಂಬಾತನನ್ನು ೩ ದಿನಗಳ ಹಿಂದೆ ಮರದಿಂದ ಬಿದ್ದು ಗಾಯಗೊಂಡು ಕೃಷ್ಣರಾಜ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲುಮಾಡಲಾಗಿತ್ತು. ಆದರೆ ನಿನ್ನೆ ದಿನ ಆತನು ಮೃತಿ ಹೊಂದಿದನು.

ಅಮೆರಿಯವರಿಗೆ ಬಹಿರಂಗ ಪತ್ರ

ಲಂಡನ್ನಿನ 'ನ್ಯೂಲೀಡರ್' ಪತ್ರಿಕೆಯಲ್ಲಿ ಮಿ|| ಫೆನ್ನರ್ ಬ್ರಾಕ್‌ವೇರವರು ಮಿ|| ಅಮೆರಿಯವರಿಗೆ ಒಂದು ಬಹಿರಂಗ ಪತ್ರವನ್ನು ಬರೆದು ಅವರು [illegible] ತಮ್ಮ ಸ್ಥಾನವನ್ನು ಬಿಟ್ಟು ಹೋಗಬೇಕೆಂದು ಕೇಳಿದ್ದಾರೆ. ಅವರ ಮೇಲೆ ಹಲವು ಆಪಾದನೆಗಳನ್ನು ಹೊರಿಸಿದ್ದಾರೆ. [illegible] ಅವರು ತಮ್ಮ ಕಾರ್ಯಕ್ರಮಗಳನ್ನು ತಿಳಿದುಕೊಳ್ಳಲಿಲ್ಲವೆಂದು ಹೇಳಿದ್ದಾರೆ. ಅಮೆರಿಯವರು ಒಳ್ಳೆ [illegible] ಸ್ಥಾನದಲ್ಲಿರುವರೆಂದೂ [illegible] ಕೊಡಬೇಕೆಂದೂ ತಿಳಿಸಿದ್ದಾರೆ.

ಶತಾಯುಷ್ಯವಂತನ ಮರಣ

ಇರಾಕಿನ [illegible] ಎಂಬಲ್ಲಿ ಆಗಾ [illegible] ಅಬ್ದುಲ್ ಅತೀಫ್ ಎಂಬಾತನು ತನ್ನ ೧೧೦ನೇ ವಯಸ್ಸಿನಲ್ಲಿ ಮೃತಪಟ್ಟನೆಂದು ತಿಳಿದುಬಂದಿದೆ. [illegible] ಸ್ಥಾನದಲ್ಲಿ [illegible] ೬೦ ವರ್ಷಗಳ ಹಿಂದೆ ಪ್ರಕಟವಾಗುತ್ತಿದ್ದ [illegible] ಪತ್ರಿಕೆ "[illegible]" ಎಂಬುದರ ಸಂಪಾದಕನಾಗಿದ್ದನು.

ತಾತಾ ಮಂದಿರಕ್ಕೆ ಸರ್ಕಾರದ ಪ್ರತಿನಿಧಿ

ಸಂಸ್ಥಾನದ ವಿದ್ಯಾ ಮಂತ್ರಿಗಳಾದ ಶ್ರೀ ಶ್ರೀ ಬಿ. ಅಪ್ಪಾಜಿಗೌಡರನ್ನು ಬರುವ ೧ನೇ ತಾ|| ನಿಂದ ತಾತಾ ವಿದ್ಯಾಸಂಸ್ಥೆಯ ಆಡಳಿತ ಸಮಿತಿಯಲ್ಲಿ ಸರ್ಕಾರದ ಪ್ರತಿನಿಧಿಗಳಾಗಿರಲು ನಾಮಕರಣ ಮಾಡಲಾಗಿದೆ.

ಗೋವಧೆ ತಡೆಯುವ ಆಜ್ಞೆ

ಗರ್ಭದ ಹಸು, ಹಾಲು ಕರೆಯುವ ಹಸು, ಆರೋಗ್ಯವಾದ ಎತ್ತು, ಕರು, ಕೃಷಿಯ ಹಸು ಇವುಗಳನ್ನು ೧೦ ವರ್ಷ ವಯಸ್ಸಿನೊಳಗಿನ ಪಕ್ಷಕ್ಕೆ ಕೊಲೆಗಾಗಿ ಅವುಗಳ ವ್ಯಾಪಾರ ನಡೆಸಕೂಡದೆಂದು ಮತ್ತು ಅಂಥವುಗಳ ಕೊಲೆ ಆಗಕೂಡದು ಎಂದು ಮೈಸೂರು ಸರ್ಕಾರದವರು [illegible] ಆಜ್ಞೆ ಮಾಡಿದ್ದಾರೆ.

ಸಾವರ್ಕರ್ ಬೆಂಗಳೂರಿಗೆ

ಅಖಿಲ ಭಾರತ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಶ್ರೀ|| ಸಾವರ್ಕರ್‌ರವರು ಶಿವಮೊಗ್ಗ ಹಿಂದೂ ಮಹಾ ಸಭೆ ಅಧಿವೇಶನವನ್ನು ಮುಗಿಸಿಕೊಂಡು ಇದೇ ೨೯ ಮತ್ತು ೩೦ನೇ ತಾ|| ಗಳಲ್ಲಿ ಬೆಂಗಳೂರಿಗೆ ಭೇಟಿ ಕೊಡುವರೆಂದು ಗೊತ್ತಾಗಿದೆ.

ಹಿಂದೂ ಮಹಾ ಸಭೆಯ ಅಧಿವೇಶನ

ಶಿವಮೊಗ್ಗೆಯಲ್ಲಿ ೨೭ ಮತ್ತು ೨೮ನೇ ತಾ|| ಗಳಲ್ಲಿ ಅಖಿಲ ಭಾರತ ಸಂಸ್ಥಾನಗಳ ಹಿಂದೂ ಮಹಾ ಸಭಾಧಿವೇಶನವು ಮಧ್ಯಪ್ರಾಂತದ ಮಾಜಿಮಂತ್ರಿಗಳಾದ ಶ್ರೀ ಡಿ. ಜಿ. ಖರೆಯವರ ಅಧ್ಯಕ್ಷತೆಯ ನಡೆಯುವುದು.

ಬಾಲಕಿಯ ಮೇಲೆ ಅತ್ಯಾಚಾರ

ಲಕ್ಷ್ಮಿ ಎಂಬ ೭ ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿದನೆಂಬ ಕಾರಣಕ್ಕಾಗಿ [illegible]ಗಳೂರಿನ ಶ್ರೀರಾಮುಲು ಎಂಬುವನನ್ನು [illegible] ಪೋಲೀಸರು ಬಂಧಿಸಿದ್ದಾರೆ.

ಫರೂಕ್ ದೊರೆಗೆ ಗಾಯ

ಈಜಿಪ್ಟ್ ದೊರೆಯಾದ ಫರೂಕ್ [illegible] ಅಪಘಾತದಿಂದ [illegible] ಎಡದ ಮಂಡಿಗೆ ಕೊಂಚ ಪೆಟ್ಟುಬಿದ್ದಿದೆ.

ಡೆಟಿನ್ಯೂಗಳ ವಿಚಾರಣೆ

ಇಂಡಿಯಾ ಸರ್ಕಾರದವರು ಡೆಟಿನ್ಯೂಗಳ ನಿರ್ಬಂಧದ ಬಗ್ಗೆ ನಿಯಮಗಳನ್ನು ಸಡಿಲಗೊಳಿಸಲು ಪರ್ಯಾಲೋಚಿಸುತ್ತಿರುವರು. ನಿರ್ಬಂಧದ ಅವಧಿಯನ್ನು ೬ ತಿಂಗಳಿಗೆ ಮಾತ್ರ ಮಿತಿ ಇಟ್ಟು ಅವಶ್ಯಕವಾದರೆ ಅನಂತರ ಇನ್ನೂ ೬ ತಿಂಗಳು ವಿಸ್ತರಿಸುವ ಯೋಚನೆಯಲ್ಲಿರುವರು. ಪ್ರತಿ ಪ್ರಾಂತ್ಯದಲ್ಲಿಯೂ ನ್ಯಾಯ ವಿಚಾರಣಾ ಸಮಿತಿಯನ್ನು ನೇಮಿಸಿ ಅಗತ್ಯ ತೀರ್ಮಾನಮಾಡಲು ಗೊತ್ತು ಮಾಡುವರು. ಆಪಾದನೆಗಳನ್ನು ಖಂಡಿಸಲು ಡೆಟಿನ್ಯೂಗಳಿಗೆ ಅವಕಾಶ ಕಲ್ಪಿಸಲಾಗುವುದು. ವಕೀಲರ ಸಹಾಯವನ್ನು ಇಟ್ಟುಕೊಳ್ಳಲು ಸಹ ಡೆಟಿನ್ಯೂಗಳಿಗೆ ಅವಕಾಶಕೊಡಲಾಗುವುದು.

ಕೂಸುಗಳ ಸಮೇತ ಸ್ತ್ರೀ ಆತ್ಮಹತ್ಯೆ

ದೇವನಹಳ್ಳಿ, ಬಳಿಯ ಮಡಿಗೇನಹಳ್ಳಿ ನಿವಾಸಿ ನಾಗಮ್ಮ ಎಂಬುವಳು ನಾಲ್ಕು ವರ್ಷದ ಮತ್ತು ೫ ತಿಂಗಳ ತನ್ನ ಎರಡು ಹೆಣ್ಣು ಕೂಸುಗಳನ್ನೂ ಸೊಂಟಕ್ಕೆ ಕಟ್ಟಿಕೊಂಡು ಸಮೀಪದಲ್ಲೇ ಇದ್ದ ಕುಂಟೆಯೊಂದಕ್ಕೆ ಧುಮಿಕಿ ಪ್ರಾಣ ಕಳೆದುಕೊಂಡಿರುವಳೆಂದು ವರದಿಯಾಗಿದೆ. ಕಾರಣ ಗೊತ್ತಿಲ್ಲ.

ಮದರಾಸಿನಲ್ಲಿ ಸಿಗರೇಟ್ ಅಭಾವ

ಮದರಾಸು ಅಂಗಡಿಗಳಲ್ಲಿ ಸಿಗರೇಟುಗಳ ಅಭಾವವಾಗಿದೆಯೆಂದೂ, ಯಾರಿಗೂ ೫ ಸಿಗರೇಟುಗಳಿಗಿಂತ ಹೆಚ್ಚಾಗಿ ಕೊಡಲಾಗುವುದಿಲ್ಲವೆಂದೂ ಹೇಳಲಾಗಿದೆ.

ಹೆಣ ಸುಡಲು ಸೌದೆ ಇಲ್ಲ

ಸೌದೆ ಅಭಾವದಿಂದ ಹೆಣಗಳನ್ನು ಸುಡಲು ತೊಂದರೆಯಾಗಿದೆ. ಅವುಗಳನ್ನು ಯಮುನಾ ನದಿಗೆ [illegible] ವಾರ್ತೆ ಬಂದಿದೆ.

ಕ್ರಿಮಿಯಾದಲ್ಲಿನ ಶತ್ರು ಸ್ಥಿತಿ

[illegible] ನದಿ [illegible] ಶತ್ರು [illegible] ಕ್ರಿಮಿಯಾ [illegible] ಈಗ [illegible] ಸ್ಥಿತಿ [illegible]

ಮದ್ಯಪಾನಕ್ಕೆ ಅವಕಾಶ

ಮದರಾಸ್ ಪ್ರಾಂತ್ಯದ ೪ ಜಿಲ್ಲೆಗಳಲ್ಲಿ ಕಾಂಗ್ರೆಸ್ ಸರ್ಕಾರವು ಪ್ರತಿಬಂಧಿಸಿದ್ದ ಮದ್ಯಪಾನ ಸಂಬಂಧವಾದ [illegible] ಈಗ ಮಾರ್ಪಡಿಸಲಾಗಿದೆ. [illegible] ಎಲ್ಲಾ ಮದ್ಯಗಳನ್ನು [illegible] ವಿಸಲು ಅವಕಾಶ ಕಲ್ಪಿಸಲಾಗಿದೆ. ಪಾನನಿರೋಧ ಪ್ರಯತ್ನವು ಯಶಸ್ವಿಯಾಗಿಲ್ಲವೆಂದೂ, ಮಹಾಜನರು ಸಹಕರಿಸಿಲ್ಲವೆಂದೂ, ಕಳ್ಳಬಟ್ಟಿ [illegible] ಸರ್ಕಾರದವರು ತಿಳಿಸಿರುತ್ತಾರೆ. ಹೊಸ ಹೇಳಿಕೆಯ [illegible] ಆಹಾರದಲ್ಲೇ [illegible] ರುವುದೆಂದೂ, [illegible] ಕಾಲದಲ್ಲಿ ಬಡ ಕೆಲಸಗಾರರುಗಳಿಗೆ ಅವನ್ನು ಅಲ್ಲಗಳೆಯಲಾಗದೆಂದೂ ಹೇಳುವರು. ಇನ್ನು ಮುಂದೆ [illegible] ಜಿಲ್ಲೆಗಳಲ್ಲಿ ಹೆಂಡದಂಗಡಿಗಳು ಆರಂಭವಾಗುವುವು. ಅವುಗಳಿಂದ ಬಂದ ಹಣವನ್ನು [illegible] ಮತ್ತು ದೇಶದ ಕಾರ್ಯಗಳಿಗೆ ವಿನಿಯೋಗಿಸಲಾಗುವುದು.

ಕೇಂದ್ರ ಶಾಸನ ಸಭೆಯ ಉಪನಾಯಕರು

ಶ್ರೀ ಸತ್ಯಮೂರ್ತಿಯವರ ಸ್ಥಾನದಲ್ಲಿ ಮಧ್ಯಪ್ರಾಂತ್ಯದ ಮಿ|| ಅಬ್ದುಲ್ ಖಯೂಮರವರನ್ನು ಉಪ ನಾಯಕರನ್ನಾಗಿ ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಚುನಾಯಿಸಿದ್ದಾರೆ.

ಲೆಬನಾನ್ ಸ್ವಾತಂತ್ರ್ಯ ಮತ್ತು ಇಂಡಿಯಾ ಸರ್ಕಾರ

ಕೇಂದ್ರ ಶಾಸನ ಸಭೆಯಲ್ಲಿ ಸರ್ [illegible]ಲ್ ಹಲೀಂಘಸ್ನವಿಯವರು [illegible] ಲೆಬನಾನ್ ಸ್ವಾತಂತ್ರ್ಯದ ಬಗ್ಗೆ ಬ್ರಿಟಿಷ್ ಸರ್ಕಾರದವರು ಕೊಟ್ಟಿದ್ದ ಭರವಸೆಯನ್ನು ಈಡೇರಿಸುವಂತೆ ಇಂಡಿಯಾ ಸರ್ಕಾರದವರು ಒತ್ತಾಯಪಡಿಸದೇ ಇದ್ದುದನ್ನು ಖಂಡಿಸಲು ಪ್ರಯತ್ನಿಸಿದರು. ಈ ವಿಷಯವು ಇಂಡಿಯಾ ಸರ್ಕಾರದ ಜವಾಬ್ದಾರಿಗೆ ಸೇರಿದ್ದಲ್ಲವೆಂದು ಸಭೆಯ ಅಧ್ಯಕ್ಷರು [illegible] ನಿರಾಕರಿಸಿದರು.

ತುರ್ಕಿ ಮಿತ್ರರಾಷ್ಟ್ರಗಳ ಕಡೆ ಸೇರುವುದೇ?

ಅತ್ಯಂತ ಪ್ರಮುಖವಾದ ರಾಜಕೀಯ ಮತ್ತು ಸೈನಿಕ ಚರ್ಚೆಗಳು ನಡೆಯುತ್ತಿವೆಯೆಂದೂ [illegible] ಮಿತ್ರರಾಷ್ಟ್ರಗಳೊಡನೆ [illegible] ಅಧಿಕಾರಯುತ [illegible] ಪ್ರಕಟಿಸಿದೆ.

ಹಿಟ್ಲರ್ ಬಗೆಗೆ [illegible]

[illegible] ಹಿಟ್ಲರ್ [illegible] ನಡೆದಿದೆ.

ಹಿಟ್ಲರನ ನಂತರ

[illegible] ಹಿಟ್ಲರನ ನಂತರ [illegible]

ಮೈಸೂರು ನಗರಕ್ಕೆ ರೇಷನಿಂಗ್ ಅವಶ್ಯಕವೇ ?

ಮೈಸೂರು ನಗರದಲ್ಲಿ ಮುಂಬರುವ ಮಾಹೆ ನವೆಂಬರ್ ತಿಂಗಳಿನಿಂದ ರೇಷನಿಂಗ್ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು, ಬಹಳ ಜೋರಿನಿಂದ ಜನಗಣತಿ ಮಾಡಿದ್ದು ಸರಿಯಷ್ಟೆ. ಈ ಸಂದರ್ಭದಲ್ಲಿ ಒಂದೆರಡು ವಿಷಯಗಳು ವಿಚಾರಾರ್ಹವಾಗಿವೆ.

ಮೊದಲನೆಯದಾಗಿ ನಮ್ಮ ಮೆಚ್ಚಿನ ಮಹಾಸ್ವಾಮಿಯವರ ಪ್ರತ್ಯಕ್ಷವಾದ ಸನ್ನಿಧಾನದಲ್ಲಿ ಆಶ್ರಯ ಹೊಂದಿರುವ ನಮಗೆ ಈಗಿರುವ ಪದ್ಧತಿಯೇ ಸರಿಯೊಂದಿಕೊಂಡಿದೆ. ಹಿಂದೂಸ್ಥಾನದ ಹಲವು ನಗರಗಳಲ್ಲಿ ಇನ್ನೂ ಈ ಪದ್ಧತಿಯು ಜಾರಿಯಲ್ಲಿಲ್ಲ ಹೀಗಿರುವಲ್ಲಿ ನಮ್ಮ ರಾಜಧಾನಿಗೇಕೆ ಈ ಅವಸರ ?

ಒಂದು ವೇಳೆ ಈ ರೇಷನಿಂಗ್ ವ್ಯವಸ್ಥೆಯನ್ನು ತಂದೇ ತರಬೇಕೆಂದು ಅಧಿಕಾರವರ್ಗದವರು ಆಗ್ರಹಪಟ್ಟರೆ, ಮಹಾಸ್ವಾಮಿಯವರ ಸಕಲ ಪ್ರಜೆಗಳಿಗೆ ಎಳ್ಳಷ್ಟು ಕೊರತೆಯಿಲ್ಲದಂತೆಯೂ, ರಾಮರಾಜ್ಯವೆಂಬ ಹೆಸರಿಗೆ ಅನ್ವರ್ಥವಾಗುವಂತೆಯೂ ಪಡಿಯನ್ನು ಕೊಡುವುದು ಸರ್ಕಾರದವರ ಕರ್ತವ್ಯವಾಗಿರುತ್ತದೆ ಮೈಸೂರು ಬಡವರ ಬೀಡು, ಶ್ರಮಜೀವಿಗಳ ನಗರ.

ಸರ್ಕಾರದವರು ಇತ್ತೀಚೆಗೆ ಮೈಸೂರು ನಗರದ ಕೃಷಿಕರಿಗೆ ಮಾತ್ರ ದಿನಕ್ಕೆ ಮೂರು ಪಾವನ್ನು ಕೊಡಬೇಕೆಂದು ಆಲೋಚಿಸಿರುವುದು ಅಭಿನಂದನೀಯ ವಾದುದೇ ಸರಿ ಆದರೆ ಕೂಲಿಯವರೂ, ಕಾರ್ಖಾನೆ ಕೆಲಸಗಾರರೂ ಕೃಷಿಕರಷ್ಟೇ ಕಷ್ಟಪಡುವುದಿಲ್ಲವೇ ? ಕೃಷಿಕರಿಗೆ ಕರುಣೆ ತೋರಿಸಿದ ಅಧಿಕಾರಿಗಳು ಕೂಲಿಯವರಿಗೂ, ಕಾರ್ಮಿಕರಿಗೂ ಕರುಣೆ ತೋರಿಸುವುದು ಧರ್ಮವೂ ನ್ಯಾಯವೂ ಆದ ಅಂಶವಾಗಿದೆ.

ಮತ್ತೊಂದು ವಿಷಯ. ಮೈಸೂರು ನಗರ ನಿವಾಸಿಗಳಿಗೆ ಪಡಿಕ್ಕೆ ೧ ಪಾವು ಅಕ್ಕಿಯನ್ನು ಮಾತ್ರ ಕೊಡಬೇಕೆಂದು ಸರ್ಕಾರದವರು ನಿರ್ಧರ ಮಾಡಿರುವುದು ಬಹಳ ಶೋಚನೀಯವಾದುದು ಅವರು ಒಬ್ಬೊಬ್ಬರಿಗೆ ಮತ್ತೊ ಪಾವಿಗಿಲ್ಲದೆ ಸಂತಸಪಡಬೇಕಾಗುತ್ತದೆ ಸರ್ಕಾರದವರು ಇಂಥಾ ಪರಿಸ್ಥಿತಿಗವಕಾಶ ಕೊಡದೆ ಈ ವಿಷಯವನ್ನು ಸಹಾನುಭೂತಿಯಿಂದ ಆಲೋಚಿಸಿ ಕನಿಷ್ಟ 'ಎ' ವರ್ಗದ ದೊಡ್ಡವರಿಗೆ ಅರ್ಧ ಸೇರು, ಚಿಕ್ಕವರಿಗೆ ೧ ಪಾವು ಮತ್ತು 'ಬಿ' ವರ್ಗದ ಹಿರಿಯರಿಗೆ ಒಂದು ಪಾವು ಅಕ್ಕಿ, ಅರ್ಧ ಸೇರು ರಾಗಿ, ಕಿರಿಯರಿಗೆ ಅದರಲ್ಲಿ ಅರ್ಧವನ್ನಾದರೂ ಕೊಟ್ಟರೆ ರೇಷನಿಂಗ್ ವ್ಯವಸ್ಥೆಯು ಜನಾದರಣೆಯನ್ನು ಪಡೆದು, ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ ನಮ್ಮ ಅಧಿಕಾರಿಗಳು ಈ ವಿಷಯಕ್ಕೆ ತಕ್ಕ ಗಮನವನ್ನು ಕೊಡ ಬಹುದೆಂದು ನಂಬಿರುವ,

ಪುರಜನ ಹಿತೈಷಿ,

ಎಂ. ವಿ. ವೆಂಕಟರಾಮಯ್ಯ

ಮುನಿಸಿಪಲ್ ಕೌನ್ಸಿಲರ್

ಇದಕ್ಕೆ ಕಾಂಗ್ರೆಸ್ ಶಿಸ್ತಿನಲ್ಲಿ ಅವಕಾಶ ಉಂಟೇ?

ಸ್ವಾಮಿ,

ನಿನ್ನೆ ದಿವಸ ಪ್ರಾತಃಕಾಲ ದೇವರಾಜ ಮಾರ್ಕೆಟ್ಟಿನಲ್ಲಿ ನಾಮದೇವ ಸಂಘದ ಪ್ರಾರಂಭೋತ್ಸವ ನಡೆಯಿತು. ವ್ಯವಸ್ಥಾಪಕರು ಈ ಸಂಬಂಧವಾಗಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಪೌರ ಸಭಾಧ್ಯಕ್ಷರೂ, ಇತರ ಗಣ್ಯರೂ ಭಾಗವಹಿಸಿದ್ದರು. ಅಂತೆಯೇ ನಮ್ಮ ಕಾಂಗ್ರೆಸ್ ಕೌನ್ಸಿಲರೊಬ್ಬರು ಭಾಗವಹಿಸಿದ್ದರೆಂದೂ ತಿಳಿಯಬರುತ್ತದೆ. ಇದು ನಿಜವೇ? ಹಾಗಿದ್ದಲ್ಲಿ ಕಾಂಗ್ರೆಸ್ ಶಿಸ್ತಿನಲ್ಲಿ ಇದಕ್ಕೆ ಅವಕಾಶ ಉಂಟೇ? ಇದರ ಸತ್ಯಾಂಶವನ್ನು ಕಾಂ|| ಪ್ರತಿನಿಧಿ ಸಭೆಯವರು ಪರಿಶೀಲಿಸಿ, ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವರೆ ?

ಓರ್ವ ಸದಸ್ಯಭಿಲಾಷಿ

Edited, printed and published by A. R. Nagarajan, at the Sadhvi Press, D Subbiah Road, Mysore

ಭದ್ರಾವತಿ ಸುದ್ದಿ

ತಾ|| ೧೪-೧೧-೪೩ ರಲ್ಲಿ ನಡೆದ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್ ಕೋ-ಆಪರೇಟಿವ್ ಸೊಸೈಟಿಯ ಜನರಲ್ ಬಾಡಿ ಮೀಟಿಂಗಿನಲ್ಲಿ ೧೦ ಜನ ಚ ನಾಯಕರಾಗಿ ದ್ದಾರೆ ಆವಲ್ಲಿ ಶ್ರೀ ಜೆ. ವಿ. ದತ್ತಾತ್ರೇಯರವರು ಅಧ್ಯಕ್ಷರಾಗಿ ಚ ನಾಯಕರಾಗಿ ದ್ದಾರೆ.

ಅದೇ ದಿನ ಮೈಸೂರು ಐರ್ನ್ ವರ್ಕ್ಸಿನ ಕಾರ್ಖಾನೆಯ ಕೂಲಿಗಾರರ ಸಭೆಯ ಮೀಟಿಂಗ್ ನಡೆಯಿತು ಇದರಲ್ಲಿ ಸರ್ಕಾರದವರು ಒಂದು ಆರ್ಬಿಟ್ರೇಷನ್ ಕೊಟ್ಟು ಕೊಡಬೇಕೆಂದೂ, ಇದರ ಖರ್ಚುಗಾಗಿ ಪ್ರತಿಯೊಬ್ಬ ಕೂಲಿಗಾರನೂ ತನ್ನ ಒಂದು ದಿನದ ಸಂಬಳ ಕೊಡಬೇಕೆಂದೂ ತೀರ್ಮಾನವಾಯಿತು

ಶಾಂತಿಸಮಯದ ಯೋಜನೆಗಳಿಗೆ ಹಣಬೇಕು ಯೋಜನೆಯೇಕೆ

ಶಾಂತಿಸಮಯದಲ್ಲಿ ನಿಮ್ಮ ಹಣವನ್ನು ಲಾಭದಾಯಕವಾಗಿ ವೆಚ್ಚಮಾಡಲು ಜಗತ್ತಿನಲ್ಲಿ ನಿಮಗೆ ನೂರಾರು ಅವಕಾಶಗಳಿರುತ್ತವೆ. ಆಗ ಬೇಕಾದಷ್ಟು ಪದಾರ್ಥಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಈಗ ಹಣವನ್ನು ಕೂಡಿ ಹಾಕಿ ಧಾರಣೆಗಳು ಸ್ವಾಮಿತಕ್ಕೆ ಬಂದಾಗ ವೆಚ್ಚಮಾಡುವುದು ಪೂರ್ಣ ವ್ಯವಹಾರ ಜ್ಞಾನವೇ ಸರಿ. ಹೇಗೆಂದರೆ, ನಿಮಗೆ ನಿಜವಾಗಿಯೂ ಬೇಕಾದ ಸಾಮಾನುಗಳನ್ನು ಕೊಳ್ಳಬಹುದು ..ಹೊಸ ಬಟ್ಟೆಗಳು ಗೊಜಿಗೆ ಹೋಗಬಹುದು .. ಪ್ರಯಾಣ ಮತ್ತು ಸೋಜಿನ ಬಾಬುಗಳನ್ನು ಯೋಜನೆಮಾಡುವುದು. ಯುದ್ಧಕಾಲದ ಧಾರಣೆಗಳು ನಿಮ್ಮ ಹಣವನ್ನು ದುರ್ವ್ಯಯಮಾಡುವುದೆಂಬುದನ್ನು ಗ್ರಹಿಸಿದಲ್ಲಿ, ಹಣವನ್ನು ಕೂಡಿಡುವುದು ಒಂದು ಸಂತೋಷ ಸಂಭವವಾಗಿ ಪರಿಣಮಿಸುವುದು.

ಮುಂಬರುವ ದಿನಗಳಿಗಾಗಿ ಕೂಡಿಡಿ

ಕುಗ್ಗುವ ಕಡೆ ನಿಮ್ಮ ಗಳಿಕೆಗಳನ್ನು ಹಾಕಬೇಡಿ!

ಭಂಗಾರ, ಬೆಳ್ಳಿ, ಆಭರಣಗಳು, ಭೂಮಿ, ಕಟ್ಟಡಗಳು ಮತ್ತು ಅನೇಕ ಸಾಮಾನುಗಳ ಬೆಲೆಯು ಇಂದು ಮಿತಿಮೀರಿ ಹೆಚ್ಚಿದೆ ಧಾರಣೆಮಾಸಗಳು 'ಕುಸಿದು ಬಿದ್ದಾಗಲೇ ನೀವು ಹಾಕಿದ ಹಣದ ಎಷ್ಟೋ ಭಾಗವು ನಾಶವಾಗಿ ಹೋಗುವುದು

ಈ ವಿನಿಯೋಗಗಳು ಲಾಭದಾಯಕವಾಗಿಲ್ಲ ಖಂಡಿತ

ಭದ್ರತೆಗೆ ಮತ್ತು ಶಾಶ್ವತ ಮೌಲ್ಯಕ್ಕೆ ನಿಮ್ಮ ಹಣವನ್ನು ನಂಬಿಕಸ್ತ ಸಂಸ್ಥೆಗಳಲ್ಲಿ, ಬ್ಯಾಂಕ್ ಅಥವಾ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ನಲ್ಲಿ ಅಥವಾ ಇವೆ ಲ್ಲಕ್ಕೂ ಉತ್ತಮವಾದ ಸರ್ಕಾರಿ ಸಾಲ ಅಥವಾ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ವಿನಿಯೋಗಿಸಿ



ರಾಷ್ಟ್ರೀಯ ಯುದ್ಧಸಾಲ ಕೊಡುವವರು ! ದೇಶೀಯರಿಗೆ ಮಾಡುವ ಮನವಿ

. ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ — ಚಿಲ್ಲರೆಯಾಗಿ ಕಳ್ಳೆಕಾಯಿ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆ ಪೇಟೆ ಹೆಡ್ ಪೋಸ್ಟಾಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಪುಷ್ಪಮಂಟಪೋತ್ಸವ

ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಕಾಳಿಕಾಂಬಾ ದೇವಿಯವರಿಗೆ ತಾ|| 17-11-43 ನೇ ಬುಧವಾರ ರಾತ್ರಿ 8 ಗಂಟೆಗೆ ಬೆಂಗಳೂರಿನಿಂದ ತರಿಸಿರುವ ದಿವ್ಯ ಪುಷ್ಪಮಂಟಪೋತ್ಸವವನ್ನು ನಡೆಸುವುದಾಗಿ ಕಂಟ್ರ್ಯಾಕ್ಟರ್ ಟಿ. ಚಿಕ್ಕ ಚಲುವಾಚಾರ್ ಮತ್ತು ಕಂಟ್ರ್ಯಾಕ್ಟರ್ ಟಿ. ದೊಡ್ಡ ಚಲುವಾಚಾರ್‌ರವರುಗಳು ನಿಶ್ಚಯಿಸಿರುತ್ತಾರೆ. ಉತ್ಸವವು ದೇವಸ್ಥಾನದಿಂದ ದೊಡ್ಡಪೇಟೆ, ಮಾರ್ಕೆಟ್ ಚೌಕ, ಸಯ್ಯಾಜಿರಾವ್ ರಸ್ತೆ ಮೂಲಕ ಹಾಯ್ದು ದೇವಸ್ಥಾನವನ್ನು ತಲಪುತ್ತದೆ. ಸರ್ವರೂ ಶ್ರೀ ದೇವಿಯವರ ದರ್ಶನ ಹೊಂದಿ ಕೃತಾರ್ಥರಾಗಬೇಕೆಂದು ಕೋರಿರುತ್ತೇನೆ.

ಆರ್ಗನೈಜರ್ಸ್,

ಶಿವಾನಂದ ಎಲೆಕ್ಟ್ರಿಕ್ ಸ್ಟೋರ್ಸ್, ಮೈಸೂರು

ಸಂಪುಟ ೨] ಗುರುವಾರ ೧೮—೧೧—೪೩ [ಸಂಚಿಕೆ ೧೦೩

ರಾಜಧಾನಿ ಪ್ರಜಾಸಂಖ್ಯೆ ೨ ಲಕ್ಷಕ್ಕೆ ಮೀರಿತು

" ಮಿಲಿಟರಿ ಆವರಣದಲ್ಲಿ ಆಹಾರ ಪದಾರ್ಥಗಳ ಪೋಲು "

ಲಂಚ ತಿಂದ ಸ್ಟೇಷನ್ ಮಾಸ್ಟರಿಗೆ ಹದಿನೆಂಟು ತಿಂಗಳ ಸಜ

ಮೈಸೂರಿನ ಪ್ರಜಾ ಸಂಖ್ಯೆ ೨ ಲಕ್ಷಕ್ಕಿಂತ ಹೆಚ್ಚಾಗಿದೆ

ಮೈಸೂರು ೧೭

ರೇಷನಿಂಗ್ ಸರ್ವೆ ಪ್ರಕಾರ, ರಾಜಧಾನಿಯ ಪ್ರಜಾ ಸಂಖ್ಯೆಯು ೨,೦೧,೪೨೬ ಇದರ ಪೈಕಿ ೧,೫೯,೯೩೮ ದೊಡ್ಡವರೆಂದೂ ಅಧಿಕಾರಯುತವಾಗಿ ತಿಳಿಸಲಾಗಿದೆ [೧೯೪೧ ನೇ ಸೆನ್ಸಸ್ ಪ್ರಕಾರ ೧,೫೪,೮೦೦ ಪ್ರಜಾಸಂಖ್ಯೆ ಇತ್ತು] ಒಟ್ಟು ೩೭,೪೦೫ ಸಂಸಾರಗಳು ಇವೆಯೆಂದೂ ಹೇಳಲಾಗಿದೆ.

ನಗರ ಪರಿಶೀಲನೆ

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಮೆಂಬರುಗಳು ಮೊಹಲ್ಲಾದಲ್ಲಿನ ರೇಟುಪೇಯರುಗಳ ಕುಂದು ಕೊರತೆಗಳನ್ನು ತಿಳಿದುಕೊಳ್ಳಲು ತಾ॥ ೨೦-೧೧-೪೩ ನೇ ಶನಿವಾರ ಬೆಳಿಗ್ಗೆ ೯ ಗಂಟೆಯಿಂದ ೧೧ ಗಂಟೆಯವರೆಗೆ ಚಾಮರಾಜ ಮೊಹಲ್ಲಾದ [illegible] ಮತ್ತು ಕೃಷ್ಣವಿಲಾಸ [illegible] ಪುರಂಗಳಲ್ಲಿ ಸಂಚರಿಸುತ್ತಾರೆ ರೇಟುಪೇಯರುಗಳು ತಮ್ಮ ಮೊಹಲ್ಲಾ ಕುಂದು ಕೊರತೆಗಳನ್ನು ತಿಳಿಸಬೇಕಾಗಿ ಕೋರಿದೆ

ಸಂಸ್ಕೃತ ಶಾಲಾ ಆಡಳಿತ ಸಮಿತಿ

ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿನ ಆಡಳಿತ ಸಮಿತಿ ಪುನರ್ರಚಿತವಾಗಿದೆ ಶ್ರೀ ಕೆ. ಗುರುದತ್ತರು ಅಧ್ಯಕ್ಷರಾಗಿದ್ದಾರೆ.

ಶ್ರೀಮನ್ ಮಹಾರಾಜರವರು

ನಮ್ಮ ಶ್ರೀಮನ್ ಮಹಾರಾಜರವರು ನಿನ್ನೆ ಮಧ್ಯಾಹ್ನ ಶಿಕಾರಿಗಾಗಿ ಕಾರಾಪುರಕ್ಕೆ ದಯಮಾಡಿಸಿದರು.

ರುದ್ರಾಕ್ಷಿ ಮಂಟಪೋತ್ಸವ

ಇದೇ ಮಾಹೆ ೨೨ ನೇ ಸೋಮವಾರ ಶ್ರೀ ತ್ರಿನಯನೇಶ್ವರಸ್ವಾಮಿಯವರಿಗೆ ರುದ್ರಾಕ್ಷಿ ಮಂಟಪೋತ್ಸವವು ನಡೆಯುತ್ತದೆ

ಕಾಂಗ್ರೆಸ್ ಪಕ್ಷದ ಮೊಹನತ್ತು

ರಾಜಧಾನಿ ಪೌರಸಭಾ ಕಾಂಗ್ರೆಸ್ ಪಕ್ಷದವರು ಶೀಘ್ರದಲ್ಲೇ ಒಂದು ವಿಶೇಷ ಸಭೆ ಕರೆದು ಮುಂದೆ ಬರಲಿರುವ ರೇಷನಿಂಗ್ ವ್ಯವಸ್ಥೆ ಬಗ್ಗೆ ಪೂರ್ವಾಪರ ವಿಮರ್ಶೆ ಮಾಡುವವರಾಗಿದ್ದಾರೆ

ರೇಷನಿಂಗ್‌ನಲ್ಲಿ ತಾರತಮ್ಯ ಉಂಟೆ ?

ಬೆಂಗಳೂರಿನಲ್ಲಿ ಕೆಲವು ಮಿಲಿಟರಿ ಅಧಿಕಾರಿಗಳ ಸಂಸಾರಕ್ಕೆ ಸಾರ್ವಜನಿಕರಿಗೆ ಕೊಡಲಾಗುತ್ತಿರುವ ಪಡಿಗಿಂತ ಹನ್ನೆರಡರಷ್ಟು ಹೆಚ್ಚು ಪಡಿ ಕೊಡಲಾಗುತ್ತಿರುವ [illegible] ನಡೆಯುತ್ತಿರುವ [illegible] ಸಭೆಯಲ್ಲಿ ಹೊರಬಿದ್ದಿದೆ ರೇಷನಿಂಗ್ ಕ್ರಮದಲ್ಲಿ ಎಲ್ಲರಿಗೂ ಒಂದೇ ನಿಯಮವಿಲ್ಲವೇ? ಅಥವಾ [illegible] ತಾರತಮ್ಯ ಉಂಟೋ? ಎಂಬುದಾಗಿ ಸರ್ ಮಿರ್ಜಾ ಇಸ್ಮಾಯಿಲ್‌ರವರ [illegible] ಬೆಂಗಳೂರು [illegible] ಉದಹರಿಸಿದ್ದಾರೆ

[illegible] ಮಿಲಿಟರಿ ಆವರಣದಲ್ಲಿ ಈ ಅಭಾವ ಕಾಲದಲ್ಲಿ ಅನೇಕ ಪದಾರ್ಥಗಳು ಬಹು ಮಟ್ಟಿಗೆ ಪೋಲಾಗುತ್ತಿರುವ ಸಂಗತಿಯನ್ನು [illegible] ಕಂಡಿರುವರು.

ಸರ್ಕಾರಿ ಸುದ್ದಿಗಳು

ಮೈಸೂರು ಡಿವಿಜನ್ ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಟಿ. ಸಿ. [illegible] ರವರನ್ನು ಬೆಂಗಳೂರು ಎಕ್ಸಿಕ್ಯೂಟಿವ್ ಇಂಜಿನಿಯರಾಗಿ ನೇಮಿಸಲಾಗಿದೆ

ಮೈಸೂರು ಚೆಲುವಾಂಬಾ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಎಸ್ ಕೆ ಎಸ್ [illegible] ರವರನ್ನು ಕೆ ಜಿ ಎಫ್ ಹೆಂಗಸರ ಆಸ್ಪತ್ರೆಗೂ, ಕೆ.ಜಿ ಎಫ್. [illegible] ಬೆಂಗಳೂರು ವಾಣಿವಿಲಾಸ ಆಸ್ಪತ್ರೆಗೂ, ವಿಕ್ಟೋರಿಯಾ ಆಸ್ಪತ್ರೆಯ ಎಸ್ ಎಂ ಜಿ [illegible] ರವರನ್ನು ಮೈಸೂರು ಚೆಲುವಾಂಬಾ ಆಸ್ಪತ್ರೆಗೆ ವರ್ಗಾಯಿಸಲಾಗಿದೆ.

ಮೈಸೂರಿನಲ್ಲಿರುವ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಡಿ ಎಸ್. [illegible] ರವರನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯಟ್ [illegible] ರಾಗಿ ವರ್ಗಾಯಿಸಲಾಗಿದೆ

ರೈಲ್ವೆ ಅಸಿಸ್ಟೆಂಟ್ ಸೆಕ್ರೆಟರಿ ಶ್ರೀ [illegible] ಎಚ್. ಎಸ್. [illegible] ರವರನ್ನು ಸರಬರಾಯಿ ಇಲಾಖೆಗೂ, ಸರ್ಕಾರದ ಅರ್ಥ ಶಾಖೆಯ ಡೆ॥ ಸೆಕ್ರೆಟರಿ ಶ್ರೀ ಎನ್ ವಿ [illegible] ರವರನ್ನು ರೈಲ್ವೆ ಡೆ॥ ಸೆಕ್ರೆಟರಿಯಾಗಿ ನೇಮಿಸಲಾಗಿದೆ.

ದಾವಣಗೆರೆ ಸ್ಪೆ॥ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ ಡಿ. ಕೆ. ಶ್ರೀನಿವಾಸಾಚಾರ್ಯರನ್ನು ಡೆ॥ ಸೆಕ್ರೆಟರಿಯಾಗಿ ವರ್ಗಾಯಿಸಲಾಗಿದೆ

ಬೆಂಗಳೂರು ವಿಭಾಗದ ಎಕ್ಸಿಕ್ಯೂಟಿವ್ ಎಂಜಿನಿಯರಾದ ಶ್ರೀ॥ ಡಿ [illegible] ರವರು ಬರುವ ತಿಂಗಳು ೩೦ ರಿಂದ ಅಧಿಕಾರದಿಂದ ನಿವೃತ್ತರಾಗುವರು. ಕಳೆದ ತಿಂಗಳು ೩೦ ನೇ ತಾರೀಖಿನಿಂದ ಮುಂದಿನ ತಿಂಗಳು ೩೦ ರ ವರೆಗೆ ಅವರಿಗೆ ರಜ ಮಂಜೂರಾಗಿದೆ

ಬ್ಯಾಂಕ್ ಆಡಳಿತಗಾರರ ಖೈದು

ಬೆಂಗಳೂರು [illegible] ಬ್ಯಾಂಕಿನ ಆಡಳಿತವನ್ನು [illegible] ಬ್ಯಾಂಕಿಗೆ ಸೇರಿದ [illegible] ಹಣ [illegible] ಶ್ರೀ॥ ಎಸ್. ಪಿ. [illegible] ಮಧ್ಯಪ್ರಾಂತದ ಪೋಲೀಸರು [illegible] ಮಾಡಿಕೊಂಡು ಬಂದಿದೆ.

ರೈಲ್ವೆ ಆಕಸ್ಮಿಕದ ತನಿಖೆ

ಅನೇಪಾಪುರದ ಬಳಿ ಆದ ರೈಲ್ವೆ ಅಪಘಾತಕ್ಕೆ ಕಾರಣವೇನೆಂಬುದನ್ನು ಪತ್ತೆ ಹಚ್ಚುವ ಸಲುವಾಗಿ, ಭಾರತದ ಸರ್ಕಾರದ ವಿಚಾರಣಾಧಿಕಾರಿಗಳೂ, ರೈಲ್ವೆ ಮುಖ್ಯಾಧಿಕಾರಿಗಳೂ ಸಾಗರಕ್ಕೆ ಹೊರಟಿದ್ದಾರೆ. ಸಾಗರದಲ್ಲಿ ವಿಚಾರಣೆ ನಡೆಯುವುದು

ಎ. ಎ. ಖಾನರಿಗೆ ಹೊಸ ಹುದ್ದೆ

ಇದೇ ಮಾಹೆ ೨೩ ರಲ್ಲಿ ನಿವೃತ್ತರಾಗಲಿರುವ ಪೋಲೀಸ್ ಅಧಿಕಾರಿಗಳಾದ ಮಿ॥ ಎ. ಎ ಖಾನರವರನ್ನು ಮೈಸೂರು ಸರ್ವೀಸ್ ಕಮಿಷನ್ ಅಧ್ಯಕ್ಷರಾಗಿ ನೇಮಿಸಲಾಗಿದೆ.

ವಿದ್ಯಾರ್ಥಿಗಳ ಪರಿಸಾಗ್ರನೆ

[illegible] ಪ್ರೌಢ ವಿದ್ಯಾಶಾಲೆಯಲ್ಲಿ ಪ್ರಥಮ ವರ್ಗದ ಬಾಲಕರನ್ನು ಬಿಸಿಲಿಗೆ ಮಾಡಿರುವಾಗ ತರಗತಿ ನಡೆಯುತ್ತಿದ್ದಾಗ ಚಡಿಯಿಂದ ಗಾಯ, ಬೇಕು ಸರಿಯಾಗಿ ಬರದ, ಅಲ್ಲದೆ ಮೇಲಿಗೆ ಮಾಸಿಕ ಹೆಚ್ಚು ಬರುತ್ತಿದ್ದ ಬೇರೊಂದು ಕೊಠಡಿಗೆ ಬದಲಾಯಿಸಿದರು. ಅದನ್ನು ಪ್ರತಿಭಟಿಸಲು ವಿದ್ಯಾರ್ಥಿಗಳು ಸತ್ಯಾಗ್ರಹ ಹೂಡಿದರು. ಶೀಘ್ರದಲ್ಲೇ ಉತ್ತಮ ಕೊಠಡಿಯಲ್ಲಿ ತರಗತಿ ನಡೆಸುವ ಭರವಸೆಯನ್ನು ಅಧಿಕಾರಿಗಳು ಕೊಡಲು ಮುಷ್ಕರ ಮುಕ್ತಾಯಗೊಂಡಿತು

ಸ್ಟೇಟ್ಸ್ ಕಾಂಗ್ರೆಸ್ ಅಧಿವೇಶನ

ಮುಂದಿನ ಜನವರಿ ತಿಂಗಳಲ್ಲಿ ತಿರುವಾಂಕೂರಿನಲ್ಲಿ ನಡೆಯಲಿರುವ ಇಂಡಿಯನ್ ಸ್ಟೇಟ್ಸ್ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು [illegible] ಶ್ರೀ ಎಸ್. [illegible] ರವರನ್ನು ಆಹ್ವಾನಿಸಲಾಗಿದೆ

ಹಿಟ್ಲರ್ ಬಳಿಗೆ ಮುಸೋಲಿನಿ

ಮುಸೋಲಿನಿಯು ಹಿಟ್ಲರನನ್ನು ಕಂಡು ಮಾತನಾಡಲು ಜರ್ಮನಿಗೆ ತೆರಳಿರುವನೆಂದು ಹೇಳಲಾಗಿದೆ. ಜರ್ಮನರ ಇಟಲಿ ನಾಶವಾದೇವೆಯೇ ಎಂದು ಭಾವಿಸಿರುವರು. ಫ್ಯಾಸಿಸ್ಟ್ ಪಕ್ಷವನ್ನು ಇಟಲಿ ರಾಜ್ಯವನ್ನು [illegible] ಪ್ರಯತ್ನಕ್ಕೆ [illegible] ಮುಸೋಲಿನಿ [illegible] ಕಾಣಿಸಿಕೊಳ್ಳುತ್ತಿಲ್ಲ [illegible] ತ್ತಾಗಿದೆ

ಕ್ರೋಸ್ ಬಳಿ ನಾಜಿ ಆಕ್ರಮಣ

ಪೆಸಿಫಿಕ್‌ನ ಉತ್ತರಕ್ಕೆ [illegible] ಯ ಬಳಿ ಜರ್ಮನರು ಕೆಲವು ಸೈನ್ಯವನ್ನು ಮಿತ್ರರಿಂದ [illegible] ಉತ್ತರ ಆಫ್ರಿಕಾದಲ್ಲಿರುವ ಮಿತ್ರರ ಕೇಂದ್ರ ಕಚೇರಿಯಿಂದ ಪ್ರಕಟಿಸಲಾಗಿದೆ. ತುಂಬಾ ದುಸ್ತರವಾದ [illegible] ಜ॥ ಅಲೆಕ್ಸಾಂಡರ್‌ರವರು ತಮ್ಮ ಸೇನಾ ಸಮೇತ ಕದನ ನಡೆಯುತ್ತಿರುವುದಾಗಿಯೂ ಮಿತ್ರರಿಗೆ ಇಟಲಿಯವರಿಗೆ ಸೇರಿದ ಆ ರಣರಂಗದಲ್ಲಿ ಘೋರವಾಗಿ ಮಳೆ ಸುರಿಯುತ್ತಿರುವುದಲ್ಲದೆ, ಚಳಿಗಾಳಿ ಹೊಡೆತ ಅತಿಯಾಗಿರುವುದೆಂದೂ, ಶತ್ರುಗಳು ಅಧಿಕ ಸಂಖ್ಯೆಯಲ್ಲಿ ರಣಾಂಗಣಕ್ಕೆ ಬಂದು ತೀವ್ರವಾಗಿ ಪ್ರತಿಭಟಿಸುತ್ತಿರುವರೆಂದೂ ಗೊತ್ತಾಗಿದೆ

ಪೋಲಿಷ್ ಗಡಿ ಬಗ್ಗೆ ಗುಪ್ತ ಒಪ್ಪಂದವಿಲ್ಲ

ಪೋಲೆಂಡಿನ ಗಡಿ ಬಗ್ಗೆ ರಷ್ಯನರೊಡನೆ ಮಿತ್ರರಾಷ್ಟ್ರ ಸಮ್ಮೇಳನದಲ್ಲಿ ಯಾವ ಗುಪ್ತ ಒಪ್ಪಂದವೂ ಬರಲಿಲ್ಲವೆಂದೂ, ಅಮೆರಿಕ ಸಂಯುಕ್ತ ಸಂಸ್ಥಾನದ ಸ್ಟೇಟ್ ಸೆಕ್ರೆಟರಿಗಳಾದ ಮಿ॥ ಹಲ್‌ರವರು ತಿಳಿಸಿದ್ದಾರೆ

ಪೋಲಿಷ್ ಗಡಿಯನ್ನು ಮಿತ್ರರು ರಷ್ಯನ್ ಸ್ವಾಧೀನಕ್ಕೆ ಇನ್ನೂ ಎಂಟು ಮೈಲಿ ದೂರದಲ್ಲಿದ್ದಾರೆ.

ರಷ್ಯನರ ತೀವ್ರನಡೆ

ಲೆನಿನ್‌ಗ್ರಾಡ್-ಒಡೆಸ್ಸಾ, [illegible] — ವಾರ್ಸಾ ರೈಲ್ವೆ ಮಾರ್ಗಗಳು ಕೂಡುವ ಅತ್ಯಂತ ಮುಖ್ಯ ರೈಲ್ವೆ ಸಿಲ್ದಾಣವಾದ [illegible] ಎಂಬಲ್ಲಿಗೆ [illegible] ಮೈಲಿ ಸಮೀಪಕ್ಕೆ ರಷ್ಯನರು ಆಗಲೇ ಬಂದಿರುವರೆಂದು ವರದಿಯಾಗಿದೆ.

ಆಸ್ಟ್ರೇಲಿಯಾದ ಗವರ್ನರ್ ಜನರಲ್

ಆಸ್ಟ್ರೇಲಿಯಾ ಅವಾಶ್ಯವಾದ [illegible] ಸಾಮ್ರಾಟರಲ್ಲಿ ಖುದ್ದಾಗಿ ಪ್ರಾರ್ಥಿಸಿಕೊಂಡ ನಿಮಿತ್ತ ಚಕ್ರವರ್ತಿ ಸಹೋದರರಾದ ಡ್ಯೂಕ್ ಆಫ್ ಗ್ಲಾಸ್ಟರರನ್ನು ಆಸ್ಟ್ರೇಲಿಯಾದ ಗವರ್ನರ್ ಜನರಲರನ್ನಾಗಿ ನೇಮಿಸಲಾಗಿದೆ

ಸ್ಟೇಷನ್ ಮಾಸ್ಟರಿಗೆ ಶಿಕ್ಷೆ

[illegible] ವರ್ತಕರ ಬಳಿಯಿಂದ ೨೦೦ ರೂ ಲಂಚ ತೆಗೆದುಕೊಂಡುದಕ್ಕಾಗಿ ಜವಾಲ್‌ಪುರದ ಸ್ಟೇಷನ್ ಮಾಸ್ಟರ್ ಮಿ॥ ಜೆ. ಟಿ [illegible] ರವರಿಗೆ ೧೮ ತಿಂಗಳು ಕಠಿಣ ಸಜ, ೫೦೦ ರೂ ದಂಡ, ದಂಡ ತಪ್ಪಿದರೆ ಮತ್ತೆ ೬ ತಿಂಗಳು ಶಿಕ್ಷೆ ವಿಧಿಸಲಾಗಿದೆ

ಮಂತ್ರಿ ಮಂಡಲದಲ್ಲಿ ಬಡೋಗ್ಲಿಯೊ ಸ್ಥಾನ

ಹೊಸದಾಗಿ ರಚಿತವಾದ ಇಟಲಿ ಮಂತ್ರಿ ಮಂಡಲದಲ್ಲಿ ಮಾರ್ಷಲ್ ಬಡೋಗ್ಲಿಯೊರವರು ಪ್ರಧಾನ ಮಂತ್ರಿ [illegible] ಮಂತ್ರಿಗಳಾಗಿರುವರೆಂದು ಪ್ರಕಟಿಸಲಾಗಿದೆ

ಅಪೂರ್ವರು ಮೈಸೂರಿನ ಬಳಿಗೆ

[illegible]

ಜನಾರ್ಪಣಾ ಸಮಿತಿಗೆ ಬಹಿಷ್ಕಾರವಿದೆ

[illegible]

ಬ್ಯಾರಿಸ್ಟರ ದಸ್ತಗಿರಿ ಮತ್ತು ಬಿಡುಗಡೆ.

[illegible] ನಾರಾಯಣರ ಮೊಕ ದ್ದಮ್ಮೆಯಲ್ಲಿ ವಕಾಲತ್ತು ವಹಿಸಿದ್ದ ಬ್ಯಾರಿಸ್ಟರ್, [illegible] ಅವರಣದಲ್ಲೇ ದಸ್ತಗಿರಿ ಮಾಡಿ ಬಂಧಿಸಲಾಗಿತ್ತು. ಅವರನ್ನು ಕೋರ್ಟಿನ ಮುಂದೆ ಹಾಜರ್ ಪಡಿಸಲು ಒಂದು ಅರ್ಜಿಯನ್ನು [illegible] ವಕಾಲತ್ತು ನಡೆಸಲು ಬಂದ ನ್ಯಾಯವಾದಿಗಳಿಗೆ ಸಂರಕ್ಷಣೆ ಇದೆಯೇ ಎಂದು ಲಾಹೋರ್ ಹೈಕೋರ್ಟಿನ ಮುಂದೆ [illegible] ಈ ಮೊಕದ್ದಮೆಯಲ್ಲಿ ವಕಾಲತ್ತು ವಹಿಸಿದ್ದಕ್ಕಾಗಿ ಅವರನ್ನು ದಸ್ತಗಿರಿ ಮಾಡಿದ್ದರೆ ಅದನ್ನು [illegible] ನ್ಯಾಯಾಧೀಶರು [illegible] ಇಷ್ಟರಲ್ಲಿ [illegible] ಮಾಡಿರುವ [illegible]

ಕಾಂಗ್ರೆಸ್ ಸದಸ್ಯರಾಗಿಯೂ [illegible] ಸ್ವಾತಂತ್ರ್ಯ [illegible] ಕಾಂಗ್ರೆಸ್ಸಿನ [illegible] ಪ್ರಾರ್ಥಿಸುತ್ತೇನೆ

Edited, printed and published by [illegible] R. Nagarajan at the Sadhvi Press, D[illegible] [illegible] Road, Mysore

ಈಜಿಪ್ಟ್ ತಪ್ಪಾಗಾಗುವುದಿಲ್ಲ.

ಲೆಬ್ಬನಿನಲ್ಲಿ [illegible] ಸಂಬಂಧ [illegible] ಸಲಿಗೆಯಿಂದ ದೊರತು ಈಜಿಪ್ಟ್ ದೇಶವು [illegible] ಕೂಗುವುದಿಲ್ಲವೆಂದು ಅಲ್ಲಿನ ಪ್ರಧಾನಿಗಳಾದ ನಹಸ್ ಪಾಷಾರವರು ಒಂದು ಘೋಷಣೆ ಹೊರಡಿಸಿರುವರು.

ಮಾರಾರಾಂ ಮೇಲೆ ಧಾಳಿ

ಅಮೆರಿಕ ವಿಮಾನಗಳು ಶನಿವಾರ ಮತ್ತೆ ಗಿಲ್ಬರ್ಟ್ ದ್ವೀಪಗಳಲ್ಲಿನ ಜಪಾನರ ಬಿಡಾರಗಳ ಮೇಲೆ ಬಾಂಬು ಗಳನ್ನು ಸುರಿಸಿ ಬಂದಿವೆ

ಮೈಮೆನಸಿಂಗ್ ಜಿಲ್ಲೆ ಸ್ಥಿತಿ

ಮೈಮೆನಸಿಂಗ್ ಜಿಲ್ಲೆಯ [illegible] ಪ್ರದೇಶಗಳು [illegible] ಮುತ್ತಿರುವುದಲ್ಲದೆ ಹೊಟ್ಟೆಗೆ ಸಿಗದ ಸಂಕಟವೂ ಸೇರಿ ಭೀಕರ ಪರಿಸ್ಥಿತಿ ಉಂಟಾಗಿದೆ

ಮಂತ್ರಿಗಳ ಮೇಲೆ ಆರೋಪಣೆ

ದೆಹಲಿಯಲ್ಲಿ ಈಗ ಕೇಂದ್ರಶಾಸನ ಸಭಾ ಅಧಿವೇಶನ ನಡೆಯುತ್ತಿದೆಯಷ್ಟೆ. ಆ ಸಭೆಯ [illegible] ಸದಸ್ಯರೊಬ್ಬರು ಸರ್ಕಾರವನ್ನು [illegible] ಸಭೆಯಲ್ಲಿ ಮಾತನಾಡುತ್ತಾ, ಯುದ್ಧವನ್ನು ಪೋಷಿಸಲು ಜವಾಬ್ದಾರಿ ವಹಿಸಿ ಸರ್ಕಾರ ಆಹಾರ ಒದಗಿಸುವ ಜವಾಬ್ದಾರಿಯನ್ನೂ ಅಷ್ಟೇ ಬಗೆಯಿಂದ ನಿರ್ವಹಿಸಬೇಕು. ಪ್ರಜೆಗಳು ಅನ್ನ ಕೇಳಿದರೆ [illegible] ಇಡಬಾರದು. ಮಂತ್ರಿಗಳು ಪರಿಸ್ಥಿತಿಯನ್ನು ಉತ್ತಮಗೊಳಿಸಲು ದುಡಿಯುವುದನ್ನು ಬಿಟ್ಟು [illegible] ಎಂದು ಕೇಂದ್ರ ಸರ್ಕಾರದ ಮಂತ್ರಿಗಳ ಮೇಲೆ ಆರೋಪಣೆ ಹೊರಿಸಿದ್ದಾರೆ

ಆಕಾಶವಾಣಿ, ತಾ॥ ೧೯ ಶುಕ್ರವಾರ ೮-೩೦ ಹಿಂದುಸ್ತಾನಿ ಹಾಡುಗಾರಿಕೆ

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೊಸದಾಗುವುದಲ್ಲದೆ ಅದರ ಬೆಳ್ನೊರೆಯು ಚರ್ಮದ ರೋಮ ರಂಧ್ರಗಳನ್ನೆಲ್ಲಾ ಹೊಕ್ಕು ಮೈಲಿಗೆಗಳಿಂದ ತಗುಲಿರುವುದನ್ನೆಲ್ಲಾ ತೊಳೆದುಹಾಕುವುದು. ಅದರ ಮೆತ್ತನೆಯ ಗುಣವೂ, ಸುಗಂಧವೂ ಚರ್ಮ ಕ್ಕೆ ಹಿತವೆನಿಸುವುದು

ಮೈಸೂರು ಸ್ಯಾಂಡಲ್ ಸೋಪ್

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ

ಡಿ. ಪುಟ್ಟೆಂಟಪ್ಪ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] — ಚಿಲ್ಲರೆ [illegible] ಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆ ಪೇಟೆ [illegible] ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ

ನ್ಯೂ ಅಪೇರಾ ಟಾಕೀಸ್‌ನಲ್ಲಿ

ಮುಂದಿನ ವಿನೋದ:—

ನಯಿ ಜಿಂದಗಿ

ನಟರು:— (ಹಿಂದಿ)

- ಷೇಕ್ ಮುಕ್ತಾರ್
- ಅನೀಸ್ ಖಾತೂನ್
- ಯಾಕೂಬ್
- ಗೋಪ್
- ಶಕೀಲ್
- ನಜ್ಮ

4 ನೇ ವಾರ

ತೆಲುಗು **ಕೃಷ್ಣಪ್ರೇಮ** ತೆಲುಗು

ಪಾತ್ರವರ್ಗ:— ಶಾಂತಕುಮಾರಿ, ಭಾನುಮತಿ, ಸೂರ್ಯಕುಮಾರಿ, ಅದ್ದಂಕಿ, ಮೈಸೂರು ಹಿರಣ್ಣಯ್ಯ.

ತಾ॥ ೧೮—೧೧—೪೩ ರಿಂದ

Distributors.—

THE MYSORE FILM CORPORATION

BANGALORE CITY

ಸಂಪುಟ ೩] ಶುಕ್ರವಾರ ೧೯—೧೧—೩೩ [ಸಂಚಿಕೆ ೧೦೪

ಬ್ಯಾಂಕಿನಲ್ಲಿ ಬಿಸ್ಕತ್ತು ತಲೆದೋರುವ ನಿರೀಕ್ಷೆ

ಪರೋಕ್ಷ ಸಿಪಾಯಿ ನ್ಯಾಯಾಧೀಶರ ಮೇಲೆ ಕೈ ಎತ್ತಿದ

ನಗದ ಆಸೆಗಾಗಿ ನಡು ಹಗಲಲ್ಲೇ ನಾರಿಯ ಕೊಲೆ

ರಂಗ ಹೊಡೆಯಲು ತಲೆ ಒಡೆದರು

ಯಲಹಂಕದ ಪೌರ ಸಭಾ ಸದಸ್ಯರಾದ ... ನಂಜಪ್ಪನವರ ಪತ್ನಿ ನಂಜಮ್ಮ ... ಮೊನ್ನೆ ಮಧ್ಯಾಹ್ನ ಹೊಲದಲ್ಲಿ ಹುಲ್ಲು ಕೊಯ್ಯುತ್ತಿದ್ದಾಗ ದುರಾತ್ಮರಾರೋ ... ತಲೆಕತ್ತರಿಸಿ ಹಾಕಿರುವರು. ಆಕೆ ... ತುಂಬ ನಗನಗಳಿದ್ದುವು. ಆ ಪೈಕಿ ಸುಮಾರು ೨ ಸಾವಿರರೂ ಬೆಲೆ ಬಾಳುವ ... ಚೈನು, ಮತ್ತು ಗುಂಡಿನ ಸರ, ಅಪಹರಣವಾಗಿದೆ. ... ಚಿನ್ನದ ಬಳೆ, ... ಜುಮಕಿಗಳು ಹಾಗೆ ಇವೆ ... ಫರ್ಲಾಂಗ್ ದೂರದಲ್ಲಿ ಮನೆಗಳಿದ್ದರೂ, ನಟ್ಟನಡು ಮಧ್ಯಾಹ್ನ ಇಂಥ ಘೋರ ಕೊಲೆ ಜರುಗಿದೆ.

ಉಮೇದುವಾರಿಕೆ ವಾಪಸು

ಇದೇ ೨೮ ನೇ ತಾ|| ನಡೆಯಲಿರುವ ಮಂಡ್ಯ ಪೌರಸಭೆ ಚುನಾವಣೆಗೆ ಸ್ವತಂತ್ರ ಉಮೇದುವಾರರಾಗಿ ನಿಂತಿದ್ದ ಶ್ರೀ ಎಂ. ಬಸವಯ್ಯ, ಶ್ರೀ ಎ. ಸಿ. ಚನ್ನಪ್ಪ ಇವರು ಕಾಂಗ್ರೆಸ್ ಸ್ಪರ್ಧಿಗಳಿಗೆ ಅವಕಾಶ ಮಾಡುವ ನಿಮಿತ್ತ ತಮ್ಮ ಉಮೇದುವಾರಿಕೆ ಅರ್ಜಿಯನ್ನು ವಾಪಸ್ಸು ತೆಗೆದುಕೊಂಡಿರುವರು. ಮಂಡ್ಯದ ವರ್ತಕ ಸಂಘದ ಸದಸ್ಯರೊಬ್ಬರು ಸಹ ತಮ್ಮ ಉಮೇದುವಾರಿಕೆ ಅರ್ಜಿಯನ್ನು ವಾಪಸ್ಸು ತೆಗೆದುಕೊಳ್ಳುವರೆಂದು ಹೇಳಲಾಗಿದೆ.

ಬೆಂಗಳೂರಿನ ಚುನಾವಣೆ

ಬೆಂಗಳೂರಿನಲ್ಲಿ ಬರುವ ೪ ತಾ|| ಪೌರಸಭಾ ಚುನಾವಣೆ ನಡೆಯುವುದು. ಆ ಚುನಾವಣೆಯ ಎಲ್ಲಾ ಸ್ಥಾನಗಳಿಗೂ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ತಮ್ಮ ಪಕ್ಷದ ಪರವಾಗಿ ಉಮೇದುವಾರರನ್ನು ನಿಲ್ಲಿಸಿದ್ದಾರೆ. ೪ ನೇ ತಾ|| ಬೆಂಗಳೂರಿನ ಎಲ್ಲಾ ಕಛೇರಿಗಳಿಗೂ ರಜ ಕೊಡಲಾಗಿದೆ.

ಗುರುತಿಲ್ಲದ ಬಟ್ಟೆ ಹೊಂದಿದ್ದಕ್ಕೆ ಜುಲ್ಮಾನೆ

ಬೆಂಗಳೂರಿನ ಬಟ್ಟೆ ವ್ಯಾಪಾರಿ ಶ್ರೀ ... ಎಂಬುವವರು ಗುರುತಿಲ್ಲದ ವಸ್ತ್ರ ಬಿಚ್ಚಿದಿರುವ ೬೬ ಬಟ್ಟೆಗಳನ್ನು ಹೊಂದಿದ್ದರೆಂಬ ಆಪಾದನೆ ರುಜುವಾಗಲಾಗಿ ನಗರದ ನ್ಯಾಯಾಧೀಶರು ಆತನಿಗೆ ೧೦೦ ರೂ. ದಂಡ ವಿಧಿಸಿದರು.

ಜಿಲ್ಲಾಧಿಕಾರಿಗಳು-ಪತ್ರಿಕೆಯವರು

ಮೈಸೂರು ಜಿಲ್ಲೆಯಲ್ಲಿ ಇದೇ ಮೊದಲನೆಯ ಬಾರಿ, ಜಿಲ್ಲಾಧಿಕಾರಿಗಳು ಪತ್ರಿಕಾ ಪ್ರತಿನಿಧಿಗಳ ಸಭೆಯನ್ನು ಕರೆದಿದ್ದಾರೆ ... ಇದು ನಡೆಯಲಿದೆ.

ಪೋಲೀಸ್‌ನವನ ಬಂಧನ

ಬೆಂಗಳೂರು ... ಎಂಬ ಪೋಲೀಸ್ ಕಾನ್‌ಸ್ಟೇಬಲ್, ... ವಿಭಾಗದಲ್ಲಿ ... ಸಹಿತ ಸಿಕ್ಕಿಬಿದ್ದಿದ್ದಾನೆ ... ಬಂಧಿಸಲಾಗಿದೆ.

ನಿಧನ

... ಪ್ರಸಿದ್ಧ ... ರಾದ ಶ್ರೀ ... ನವರು ಇದೇ ... ನೇ ತಾ|| ... ನಿಧನರಾದರೆಂದು ತಿಳಿಯಬರುತ್ತಿದೆ.

ಕಾಂಗ್ರೆಸ್ ನ್ಯಾಯವಿರುದ್ಧ ಸಂಸ್ಥೆಯಲ್ಲ

ಪಾಟ್ನಾ ಸೈಕ್ರೆಟರಿ ... ಶ್ರೀ ... ಗನ್ನಾಡ್ ... ಎಂಬುವರು ಕಾಂಗ್ರೆಸ್ ಸಭೆ ನಡೆಸಿ, ... ನ್ಯಾಯಾಧೀಶರು ಕಾಂಗ್ರೆಸ್ ... ನ್ಯಾಯ ವಿರುದ್ಧವಾದ ಸಂಸ್ಥೆ ... ಕಾಂಗ್ರೆಸ್ ... ಎಂದು ... ಮಾಡಿದ್ದಾರೆ.

ಐರ್ಲೆಂಡಿನ ತಾಟಸ್ಥ್ಯ

ಐರ್ಲೆಂಡ್ ... ರವರು ... ನಮ್ಮ ... ಧೈರ್ಯದಿಂದ ನಡೆಸಿಕೊಂಡು ಬರುತ್ತಿದ್ದೇವೆ. ಇದಕ್ಕಾಗಿ ... ಯಾರ ನೆರವನ್ನೂ ಹೋಗಬೇಕಾಗಿಲ್ಲ ... ಆಕ್ರಮಣ ... ಸೂಕ್ತವಾಗಿದೆ. ನಮ್ಮ ... ನಮ್ಮ ... ನಂತರ ಯಾರಾದರೂ ನಮ್ಮ ಮೇಲೆ ... ಮಾಡುವುದಾದರೆ ... ನಿಶ್ಚಯ ... ಎಂದು ... ತಿಳಿಸಿದರು.

ಕಾಂಗ್ರೆಸ್ ಮುಖಂಡರನ್ನು ಇಟ್ಟಿರುವುದೆಲ್ಲಿ ?

... ಕಾಂಗ್ರೆಸ್ ಕಾರ್ಯಕರ್ತರ ... ಶ್ರೀ ಕೆ. ಸಿ. ... ವಿಚಾರಿಸಲು, ... ಬೆಂಗಳೂರು ... ಸಂಪೂರ್ಣ ... ಕೊಡಲಿಲ್ಲ.

ರಷ್ಯದಿಂದ ಭಾರತಕ್ಕೆ ...

ಭಾರತದ ... ಬಗ್ಗೆ ... ಭಾರತಕ್ಕೆ ... ಕಳುಹಿಸಲು ... ಕರ್ಡಕ್ಕೆ ತಿಳಿಸಿದೆ.

ಮೈಸೂರು ಮಂತ್ರಿಗಳ ರಾಜೀನಾಮೆ

ಮೈಸೂರು ... ಎಲ್ಲಾ ... ರಾಜೀನಾಮೆ ... ನಂಬಲಾಗಿದೆ.

ಟೆರಾನ್ ... ಪಟ್ಟ ನಿಂತಿತು

... ಸ್ಥಾಪಿತವಾದ ... ತೀವ್ರವಾಗಿ ... ಪಕ್ಷಗಳ ... ಕೊಂಡರೆ ...

ರಷ್ಯನರು ಹಿಂದಕ್ಕೆ ಸರಿದರು

... ಜರ್ಮನ್ ... ಪಡೆ ...

ಗ್ರಾಮ ಪರಿಷತ್ತಿಗೆ ... ವಿರೋಧ

... ದೇಶದ ...

ಉಪವಾಸ ...

... ವಿದ್ಯಾರ್ಥಿ ...

ಬಹಿರಂಗ ಸಭೆ

'ವಿದ್ಯಾರ್ಥಿ ...' ... ಘಂಟೆಗೆ ... ಬಹಿರಂಗ ಸಭೆ ... ವಿದ್ಯಾರ್ಥಿ ... ಶ್ರೀ ... ಎಂ. ... ದಯವಿಟ್ಟು ... ಸ್ವಾಮಿ ... ಇವರುಗಳು ... ಭಾಷಣ ಮಾಡುವರು.

ರಜಪೋತ್ಸವ

...

ಬ್ಯಾಂಕಿನಲ್ಲಿ ಬಿಸ್ಕತ್ತು

...

ನ್ಯಾಯಾಧೀಶರ ಮೇಲೆ ಯಾರೋ ... ಕೈ ಮಾಡಿದ ...

...

ರಾಜಧಾನಿಯಲ್ಲಿ ರೇಷನಿಂಗ್ ವ್ಯವಸ್ಥೆ

೪೫೦ ಜನಗಳಿಗೆ ಒಂದು ಡಿಪೋವಿನಂತೆ ೮೦ ಡಿಪೋಗಳು

ಮೈಸೂರು, ೧೫

ಮೈಸೂರು ನಗರದ ಚೀಫ್ ರೇಷನಿಂಗ್ ಆಫೀಸರವರಾದ ಶ್ರೀ ರಾಮಚಂದ್ರರಾವ್ ಬೊಂಬೋರೆಯವರು ನಿನ್ನೆ ಸಂಜೆ ಎಸ್ಪ್ಲನೇಡ್ ಭವನದಲ್ಲಿ ರಾಜಧಾನಿಯ ಪತ್ರಿಕಾ ಪ್ರತಿನಿಧಿಗಳೆಲ್ಲರನ್ನೂ ಕರೆಸಿ, ರೇಷನಿಂಗ್ ವ್ಯವಸ್ಥೆಯನ್ನು ವಿವರಿಸಿದರು. ಬಂದಿದ್ದ ಪತ್ರಿಕಾ ಪ್ರತಿನಿಧಿಗಳೆಲ್ಲರಿಗೂ ಶ್ರೀ ಬೊಂಬೋರೆಯವರು ಫಲಹಾರವನ್ನೇರ್ಪಡಿಸಿದ್ದರು.

ಮೊನ್ನೆ ನಡೆಸಿದ ರೇಷನಿಂಗ್ ಸೆನ್ಸಸ್ ಪ್ರಕಾರ ರಾಜಧಾನಿಯ ಒಟ್ಟು ಪ್ರಜಾ ಸಂಖ್ಯೆಯು ೨,೧೦,೪೭೬. ಇದರ ಪೈಕಿ ದೊಡ್ಡವರು ೧,೫೮,೧೫೪, ಮಕ್ಕಳು [೧೦ ವರ್ಷಕ್ಕಿಂತ ಕಡಿಮೆ ವಯಸ್ಸು] ೪೧,೪೭೮. ಇದರಲ್ಲಿ ೧ ದಿನದ ಮಗುವನ್ನೂ ಸೇರಿಸಲಾಗಿದೆ. ಎಲ್ಲಾ ಮೊಹಲ್ಲಾಗಳಿಂದಲೂ ೮ ಸ್ಪಾಟ್ ಮೊಹಲ್ಲಾದಲ್ಲಿ ಹೆಚ್ಚು ಜನ [ಜನ ಸಂಖ್ಯೆ ೪೪,೬೬೦, ಸಂಸಾರಗಳು ೪೫೫೯] ೧೯೪೧ ನೇ ಸೆನ್ಸಸ್ ಪ್ರಕಾರ ೧,೫೩,೦೦೦ ೧೯೪೨ ರಲ್ಲಿ ೧,೮೦,೦೦೦ ಪ್ರಜಾ ಸಂಖ್ಯೆ ಇತ್ತು. ಈ ವರ್ಷ ಜನ ಸಂಖ್ಯೆ ಹೆಚ್ಚಾಗಿರುವುದು ಪಡೆಗಳಲ್ಲಿ, ಶ್ರೀಕೃಷ್ಣರಾಜೇಂದ್ರ ಮಿಲ್ಸ್, ಮೈಸೂರು ಸಿಲ್ಕ್ ಮಿಲಿಟರಿ, ಈ ಪ್ರದೇಶಗಳನ್ನು ಸೇರಿಸಿದ್ದರಿಂದ ಎಂದು ತಿಳಿಸಲಾಯಿತು.

ರಾಜಧಾನಿಯಲ್ಲಿ ಒಟ್ಟು ೩೭,೪೫೫ ಸಂಸಾರಗಳಿವೆಯೆಂದೂ, ಮುಂದಿ ಮೊಹಲ್ಲಾದ ಒಂದೇ ಸಂಸಾರದಲ್ಲಿ ಒಟ್ಟು ೫೦ ಜನರಿರುವರೆಂದೂ [ದೊಡ್ಡವರು ೩೯, ಚಿಕ್ಕವರು ೧೧] ತಿಳಿದು ಬಂತು.

ಅಕ್ಕಿ: ಚಿಕ್ಕವ ಪ್ರತಿಯೊಬ್ಬ ಸಂಸಾರಿಗೂ ದಿನಕ್ಕೆ ೧ ಪಾವು ಮತ್ತು ಚಿಕ್ಕವರಿಗೆ ಅರ್ಧ ಪಾವು ಪಡಿತ ಕೊಡಲಾಗುವುದು. ಅಕ್ಕಿ ಮತ್ತು ರಾಗಿ ಎರಡನ್ನೂ ತೆಗೆದುಕೊಳ್ಳುವವರಿಗೆ, ದೊಡ್ಡವರಿಗೆ ರಾಗಿ ೧ ಪಾವು ಮತ್ತು ಅಕ್ಕಿ ಅರ್ಧ ಪಾವು. ಚಿಕ್ಕವರಿಗೆ ಇದರಲ್ಲಿ ಅರ್ಧ ಭಾಗ.

ಸಕ್ಕರೆ - ಒಂದು ವಾರಕ್ಕೆ ಒಬ್ಬರಿಗೆ ೮ಂ ಟೋಲೆಯೆಂದು ಹೇಳಿದೆ.

ಸೀಮೆಯೆಣ್ಣೆ - ಎಲೆಕ್ಟ್ರಿಕ್ ದೀಪ ಇರುವವರಿಗೆ ತಿಂಗಳಿಗೆ ಅರ್ಧ ಸೀಸೆ. ಎಲೆಕ್ಟ್ರಿಕ್ ದೀಪವಿಲ್ಲದವರಿಗೆ, ೫ ಜನಗಳಿಗಿಂತ ಕಡಿಮೆ ಇರುವವರಿಗೆ ವಾರಕ್ಕೆ ಮೂರರಲ್ಲೊಂದು ಸೀಸೆ ೫ ಜನರಿಗಿಂತ ಹೆಚ್ಚಾಗಿರುವವರಿಗೆ ವಾರಕ್ಕೆ ಅರ್ಧ ಸೀಸೆ

ಮದುವೆ ಮತ್ತು ಇತರ ವಿಶೇಷ ಸನ್ನಿವೇಶಗಳಲ್ಲಿ ಸಪ್ಲಿಮೆಂಟರಿ ರೇಷನ್ ಕಾರ್ಡು ಕೊಡಲಾಗುವುದು ೫ ದಿನಗಳಿಗಿಂತ ಹೆಚ್ಚಾಗಿ ೧೫ ವಾರಕ್ಕೆ ಮೀರದೆ ಮನೆಗಳಲ್ಲಿ ಇರುವಂತ ಅತಿಥಿಗಳಿಗೆ ಸಪ್ಲಿಮೆಂಟರಿ ಕಾರ್ಡುಗಳನ್ನು ಕೊಡಲಾಗುವುದು. ೫ ದಿನಗಳಿಗಿಂತ ಕಡಿಮೆ ಇರುವ ಅತಿಥಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ

ಸರಾಸರಿ ೪೫೦ ಜನಗಳಿಗೆ ಒಂದು ಡಿಪೋವಿನಂತೆ ಒಟ್ಟು ೮೦ ಡಿಪೋಗಳನ್ನು ತೆರೆಯಲಾಗುವುದು ಅದರ ಪೈಕಿ ಸಹಕಾರ ಮತ್ತು ಸರ್ಕಾರಿ ಸ್ಟೋರ್ಸ್‌ಗಳು ೨೦, ಡಿ ಸ್ಟ ೩೦ ಸರ್ಕಾರಿ ಡಿಪೋಗಳು ಆವ್ವ ನಿಯ ಬೆಳಿಗ್ಗೆ ೯ ರಿಂದ ೧೧ ರ ವರೆಗೂ, ಮಧ್ಯಾಹ್ನ ೪ ರಿಂದ ೭ ರ ವರೆಗೂ ತೆರೆದಿರುವುವು. ಮೇಲ್ಕಂಡ ಡಿಪೋಗಳಲ್ಲಲ್ಲದೆ ಇನ್ನೆಲ್ಲೂ ರೇಷನಿಂಗ್ ಪದಾರ್ಥಗಳನ್ನು ಮಾರಲಾಗುವುದಿಲ್ಲ ಸದ್ಯಕ್ಕೆ ಗೋಧಿಯನ್ನು ರೇಷನ್ ಮಾಡುವುದಿಲ್ಲ

ಪ್ರತಿಯೊಂದು ಮೊಹಲ್ಲಾದಲ್ಲಿ ರೇಷನಿಂಗ್ ವ್ಯವಸ್ಥೆ ವಿಚಾರವಾಗಿ ಮೇಲ್ವಿಚಾರಣೆ ನೋಡಿಕೊಳ್ಳಲು ೩ ಜನಗಳಿಗಿಂತಲೂ ಕಡಿಮೆಯಿಲ್ಲದೆ ಪುರಪ್ರಮುಖರನ್ನು ನೇಮಿಸಲಾಗುವುದು.'

ಡಿಪೋಗಳಲ್ಲಿ ನುಗ್ಗಾಟವಿರದಂತೆ ಕ್ಯೂ ವ್ಯವಸ್ಥೆಯನ್ನು ಏರ್ಪಡಿಸಲಾಗುವುದು. ಮೊದಲು ಬಂದವರಿಗೆ ಮೊದಲೇ ಪದಾರ್ಥಗಳು ಸಿಕ್ಕುವಂತೆ ಈ ಚಿಟ್ಟಿಗಳನ್ನು ಕೊಡಲಾಗುವುದು.

ಅವಶ್ಯಕ ಬಿದ್ದರೆ ಹೆಂಗಸರಿಗೆ ಪ್ರತ್ಯೇಕ ಡಿಪೋಗಳನ್ನು ತೆರೆಯಲಾಗುವುದು.

ಜಯ ಅಂಡ್ ಕಂಪೆನಿ

ಸ್ಟಾಕ್ ಮತ್ತು ಷೇರ್ ಬ್ರೋಕರ್ಸ್,

ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು.

ಜಿರೋರವರು ರಾಜೀನಾಮೆ ಕೊಡುವರೆ ?

ಫ್ರೆಂಚ್ ದಳಗಳ ನಾಯಕತ್ವಕ್ಕೆ ಜಿರೋರವರು ರಾಜೀನಾಮೆ ಸಲ್ಲಿಸುವ ಸಂಭವವಿರುವುದರಿಂದ ಈ ಸುದ್ದಿಯು ಫ್ರೆಂಚರ ಸ್ವಾತಂತ್ರ್ಯ ಸಮಿತಿಯವರನ್ನು ತೊಡಕಿಗೆ ಸಿಲುಕಿಸಿದೆ. ಜಿರೋರವರು ರಾಜೀನಾಮೆ ಸಲ್ಲಿಸ ಹೊರಟು ವಾಪಸ್ಸು ತೆಗೆದುಕೊಂಡ ನಿದರ್ಶನಗಳಿಷ್ಟೋ ಇವೆ. ಈಗ ಅವರು ಕೆಲಸ ಬಿಡುವ ಪಕ್ಷಕ್ಕೆ ಮುಂದೇನೆಂಬ ಬಗ್ಗೆ ಚಿಂತೆ ವ್ಯಾಪಕವಾಗಿದೆ. ಅನೇಕ ಮುಖಂಡರು ಅವರನ್ನು ರಾಜೀನಾಮೆ ಕೊಡಬೇಡವೆಂದು ಒತ್ತಾಯಪಡಿಸುತ್ತಿರುವರು

— —

ಫಿಲಿಪ್ಪೈನ್ಸ್ ಪುನರಾಕ್ರಮಣ

ಜನರಲ್ ಮೆಕಾರ್ಥರ್‌ರವರು ಫಿಲಿಪ್ಪೈನ್ ದ್ವೀಪಗಳಿಂದ ಶತ್ರುಗಳನ್ನು ಓಡಿಸಲು ಒಂದು ದಾರಿ ಸ್ಪಷ್ಟವನ್ನು ಕಟ್ಟುತ್ತಿರುವುದಾಗಿ ಫಿಲಿಪ್ಪೈನ್ಸ್ ಮಾಜಿ ಅಧ್ಯಕ್ಷರು ತಮ್ಮ ಪ್ರಜೆಗಳಿಗೆ ತಿಳಿಸಿದ್ದಾರೆ.

ವಾರಕ್ಕೆ ಒಂದಾವರ್ತಿ ಮಾತ್ರ ಎರಡಾವರ್ತಿ ಪದಾರ್ಥಗಳನ್ನು ಕೊಳ್ಳಲು ರೇಷನ್ ಕಾರ್ಡು ಕೊಡಲಾಗುವುದು

ಅನಾಥಾಲಯ ಮುಂತಾದ ಬಡ ವಿದ್ಯಾರ್ಥಿ ನಿಲಯಗಳಿಗೆ ಜನಗಳು ಇನ್ನು ಮುಂದೆ ರೇಷನಿಂಗ್ ಪದಾರ್ಥಗಳನ್ನು ಕೊಡಲು ಅವಕಾಶವಿಲ್ಲವೆಂದೂ ಅವುಗಳಿಗೆ ಪ್ರತ್ಯೇಕ ರೇಷನ್ ಕಾರ್ಡುಗಳನ್ನು ಕೊಡಲಾಗುವುದೆಂದೂ, ಆದ್ದರಿಂದ ಹಣ ಕೊಡಬೇಕಾಗುವುದೆಂದೂ ತಿಳಿಸಲಾಯಿತು. ಛತ್ರಾಟಿನ ಮಾಡುವವರಿಗೂ ಕಾರ್ಡುಗಳನ್ನು ಕೊಡಲಾಗುವುದು. ವಾರದ ಹಿಂದೆ ಗರಿಗೆ ಪ್ರತ್ಯೇಕ ಏರ್ಪಾಡು ಮಾಡಲಾಗುವುದೆಂದು ಶ್ರೀ ಬೊಂಬೋರೆಯವರು ಭರವಸೆಯಿತ್ತರು.

ಶ್ರೀಮನ್ಮಹಾರಾಜರವರ ಔದಾರ್ಯದಿಂದ ಪ್ರತಿದಿನವೂ ೧ ಸಾವಿರಕ್ಕಿಂತ ಹೆಚ್ಚಾಗಿ ನಿರ್ಗತಿಕರಿಗೆ ಅನ್ನ ಹಾಕಲಾಗುತ್ತಿದೆ. ಆದರೆ ರೇಷನಿಂಗ್ ಜಾರಿಗೆ ಬಂದನಂತರ ಹಣವಿಲ್ಲದ ನಿರ್ಗತಿಕರಿಗೆ ಆಹಾರ ಒದಗಿಸಬೇಕಾದುದು ಪ್ರಜೆಗಳ ಕರ್ತವ್ಯವಾಗಿದೆ. ಅಂಥವರಿಗೆ ಪ್ರತ್ಯೇಕ ಅನ್ನ ಛತ್ರಗಳನ್ನು ಏರ್ಪಡಿಸಬೇಕಾದುದರಿಂದ ಪುರಪ್ರಮುಖರು ಮತ್ತು ಪರೋಪಕಾರಿಗಳು ಮುಂದೆ ಬಂದು ಸಹಾಯ ಮಾಡಬೇಕೆಂದು ಶ್ರೀ ಬೊಂಬೋರೆಯವರು ಕೋರಿದರು.

ನಂತರ ಶ್ರೀ ಬೊಂಬೋರೆಯವರನ್ನು ರೇಷನ್ ಸೆನ್ಸಸ್ ಅಧಿಕಾರಿಗಳಾದ ಶ್ರೀ ರೆಡ್ಡಿ ಮತ್ತು ಇತರ ಅಧಿಕಾರಿಗಳನ್ನೂ ಪತ್ರಿಕಾ ಪ್ರತಿನಿಧಿಗಳ ಪರವಾಗಿ ಶ್ರೀ ಎನ್. ಎಸ್. ರಾ[illegible] ವಂದಿಸಿದರು

ಬರ್ಟ್ರೆಂಡ್ ರಸೆಲ್‌ರಿಗೆ ಪರಿಹಾರ

ಒಪ್ಪಂದಕ್ಕೆ ವಿರುದ್ಧವಾಗಿ ತಮ್ಮನ್ನು ಮುಂಚಿತವಾಗಿಯೇ ಕೆಲಸದಿಂದ ವಜಮಾಡಿದುದಕ್ಕಾಗಿ ಪ್ರಿಟನ್ನಿನ ತತ್ವಶಾಸ್ತ್ರ ಪಂಡಿತರಾದ ಪ್ರೊ|| ಬರ್ಟ್ರೆಂಡ್ ರಸೆಲ್‌ರವರು ಪೆನ್ಸಿಲ್ವೇನಿಯದ ಬಾರ್ನೆಸ್ ವಿದ್ಯಾಪೀಠದ ಅಧ್ಯಕ್ಷರ ಮೇಲೆ ಪರಿಹಾರಕ್ಕಾಗಿ ದಾವೆ ಹೂಡಿದ್ದರು. ೨೦ ಸಾವಿರ ಡಾಲರು ಅವರಿಗೆ ಕೊಡಬೇಕೆಂದು ಕೋರ್ಟು ತೀರ್ಮಾನಿಸಿದೆ.

— —

ಬರ್ಮಾ ಮೇಲೆ ಧಾಳಿ

ಚಿಂಡ್ವಿನ್ ನದಿಯಲ್ಲಿದ್ದ ಶತ್ರು ಸ್ಟೀಮರುಗಳ ಮೇಲೆ ರಾಯಲ್ ವಿಮಾನ ದಳದವರು ನಿನ್ನೆ ಸತತವಾಗಿ ಹಿಡಿದು ಧ್ವಂಸ ಮಾಡಿದ್ದಾರೆ.

ನೋಟೀಸು

" ಸಂಸಾರ ನೌಕ "

" ಸಂಸಾರ ನೌಕ " ನಾಟಕ ಕರ್ತೃಗಳಾದ ಶ್ರೀಮಾನ್ ಹೆಚ್. ಎಲ್. ಎನ್. ಸಿಂಹರವರ ಅಪ್ಪಣೆ ಮೇರೆ ಈ ನೋಟೀಸನ್ನು ಜಾಹೀರ್ ಪಡಿಸಿದೆ—

ಮೇಲ್ಕಂಡ " ಸಂಸಾರ ನೌಕ " ಎಂಬ ನಾಟಕದ ಸಂಪೂರ್ಣ ಸ್ವಾತಂತ್ರ್ಯವನ್ನು ನಾಟಕ ಕರ್ತೃಗಳು ಕಾಯ್ದಿಟ್ಟುಕೊಂಡಿದ್ದಾರೆ. ನಾಟಕ ಕರ್ತೃಗಳಿಂದ ನ್ಯಾಯಬದ್ಧವಾದ ಅಪ್ಪಣೆಯನ್ನು ಲಿಖಿತ ಮೂಲಕ ಪಡೆಯದೆ, ಯಾರೂ ಮೇಲ್ಕಂಡ 'ಸಂಸಾರ ನೌಕ' ಎಂಬ ನಾಟಕವನ್ನಾಗಲೀ ಅಥವಾ ಆ ನಾಟಕದ ಕೆಲವು ದೃಶ್ಯಗಳನ್ನಾಗಲೀ ಪ್ರದರ್ಶಿಸಕೂಡದು. ನ್ಯಾಯಬದ್ಧವಾದ ಅಪ್ಪಣೆಯನ್ನು ಪಡೆಯದೆ, ಮೇಲ್ಕಂಡ 'ಸಂಸಾರನೌಕ' ಎಂಬ ನಾಟಕವನ್ನು ಪ್ರದರ್ಶಿಸ ಪುವಾಗಲಿ, ಅಥವಾ ಬೇರೆ ಬದಲಾವಣೆಯಿಂದಾಗಲಿ, ದೃಶ್ಯ ಸಂದರ್ಭನೆಯಿಂದಾಗಲಿ, ಯಾರಾದರೂ ಈ ನಾಟಕವನ್ನು ಪ್ರದರ್ಶಿಸಿದರೆ ಅದರಿಂದ ನಾಟಕ ಕರ್ತೃಗಳಿಗಾಗುವ ಸಮಸ್ತ ನಷ್ಟಕ್ಕೂ, ಪ್ರದರ್ಶಕರೂ, ಪ್ರದರ್ಶಿಸಲ್ಪಟ್ಟ ಸಂಘವೂ ಜವಾಬ್ದಾರರಾಗಬೇಕಾಗುತ್ತದೆ—ಎಚ್ಚರಿಕೆ.

ಶ್ರೀ ಸಿಂಹರ ಅಪ್ಪಣೆ ಮೇರೆಗೆ

ಕಾರ್ಯದರ್ಶಿ,

" ಸಿಂಹರ ಸೆಲೆಕ್ಟ್ ಆರ್ಟಿಸ್ಟ್ಸ್ "

Edited, printed and published by A. R. Nagarajan, at the Sadhvi Press, D.Subbiah Road, Mysore.

ಅಪೂರ್ವ ಸಮಯ !

ಸುಪ್ರಸಿದ್ಧವಾದ

ಅಲಿಪ್ಪೂರ್ ಬೀಗಗಳು

ಅತ್ಯುತ್ತಮ ಮಾದರಿ ! ಸಂಪೂರ್ಣ ಭರವಸೆ !

ಸರ್ಕಾರಿ ಇಲಾಖೆಗಳು, ಪೌರಸಭೆಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಿಗೆ ಸರಬರಾಜು ಮಾಡುತ್ತೇವೆ.

ಒಂದಾವರ್ತಿ ಭೇಟಿ ಕೊಟ್ಟು ಕೊಂಡುಕೊಳ್ಳಿರಿ !

ಶ್ರೀ ಕೃಷ್ಣಭವನ್ ರೆಸ್ಟೋರೆಂಟ್

ಮಾರ್ಕೆಟ್ ಚೌಕ, : : ಮೈಸೂರು.

(ಶ್ರೀ [illegible] ರಾಜಕೀಯ ವ್ಯವಹಾರಗಳಿಗೆ ಪಾತ್ರರಾದುದ)

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ರಿಂದ ಪ್ರತ್ಯೇಕವಾಗಿ [illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಟಿ. ಪುಟ್ಟಯ್ಯ, ವಿನಾಯಕ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ.— ಚಿಲ್ಲರೆಯಾಗಿ ಅಕ್ಕಿ, ಸಕ್ಕರೆ, ಬೆಲ್ಲ, ಸಕ್ಕರೆ, ಒಣ್ಣಕ್ಕಿ ಪ್ ಹಿಟ್ಟು ಮತ್ತು ಸಂಪೆಟಿ ಷೀರ್ ಆಫೀಸಿನಲ್ಲಿ ಅಕ್ಕಿ, ರವೆ ಮಾತ್ರ ಗೋಧಿ ಹಿಟ್ಟು ಸಹ ದೊರೆಯುತ್ತೆ

ಸಂಪುಟ ೨] ಶನಿವಾರ ೨೦--೧೧--೪೩ [ಸಂಚಿಕೆ ೧೦೫

ಬರುವ ಡಿಸೆಂಬರಿನಲ್ಲಿ ಜರ್ಮನಿ ಶರಣಾಗತಿ ?

ವೈಸರಾಯರ ಬಳಿಗೆ ವಿಮಾನದಲ್ಲಿ ಗೌರ್ನರುಗಳ ಪ್ರಯಾಣ

ರಾಜಧಾನಿಯಲ್ಲಿ ವಿಚಿತ್ರವಾದ ಎಮ್ಮೆ ಕರು ಜನನ

ಡಿಸೆಂಬರ್ ೧ರಿಂದ ರೇಷನ್

ಮೈಸೂರು ೨೦

ಡಿಸೆಂಬರ್ ೧ ರಿಂದ ಮೈಸೂರು ನಗರದಲ್ಲಿ ರೇಷನಿಂಗ್ ಆಚರಣೆಗೆ ಬರುವುದೆಂದು ಸರ್ಕಾರದವರು ಪ್ರಕಟಣೆ ಹೊರಡಿಸಿದ್ದಾರೆ

ತೆರಿಗೆ ಹೆಚ್ಚುವುದು

ವಿನೋದ, ಬಾಜಿ ಮತ್ತು ಹಲವು ಬಗೆಯ ಉಪಕರಣಗಳ ಮೇಲೆ ಇರುವ ತೆರಿಗೆಯನ್ನು ಶೇ. ೫೦ ರಷ್ಟು ಹೆಚ್ಚಿಸಲು ಅಧಿಕಾರ ಕೊಟ್ಟು, ಮೈಸೂರು ಸರ್ಕಾರದವರು ವಿಶೇಷ ಶಾಸನವನ್ನು ಹೊರಡಿಸಿರುವರು

ಮೊಹಲ್ಲಾ ಪರಿಶೀಲನೆ

ಈ ದಿನ ಬೆಳಗ್ಗೆ ಪೌರ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಚಾಮರಾಜ ಮೊಹಲ್ಲೆಯ ಕೆಲವು ಪ್ರದೇಶಗಳಲ್ಲಿ ಸಂಚರಿಸಿ ಪರಿಶೀಲನೆ ನಡೆಸಿದರು. ರೇಷನಿಂಗ್ ನಲ್ಲಿ ತಲೆ ಒಂದಕ್ಕೆ ಒಂದು ಪಾವು ಧಾನ್ಯ ಮಾತ್ರ ಕೊಡುವ ವಿಷಯದಲ್ಲಿ ಪುರ ನಿವಾಸಿಗಳು ಬಹಳವಾಗಿ ಆತಂಕವನ್ನು ಸೂಚಿಸಿದರು. ರಸ್ತೆ ರಿಪೇರಿಗಾಗಿ ಶೇಖರಿಸಿಟ್ಟಿದ್ದ ಕಲ್ಲುಗುಡ್ಡೆಗಳು ಅನೇಕ ದಿನಗಳಿಂದ ಹಾಗೆಯೇ ಬಿದ್ದು ರಸ್ತೆಗಳು ಮುರುಕಾಗಿದ್ದುದು ಕಂಡು ಬಂತೆಂದು ಹೇಳಲಾಗಿದೆ

ಪೌರ ಸಭಾ ಮೀಟಿಂಗು

ಮುಂದಿನ ಶನಿವಾರ ರಾಜಧಾನಿ ಪೌರ ಸಭಾ ಮೀಟಿಂಗು ನಡೆಯುವುದು. ಶ್ರೀ ಎಂ. ವಿ. ವೆಂಕಟರಾಮಯ್ಯನವರು, ಮಾಜಿ ವಿಶೇಷ ವಾಟರ್ ವರ್ಕ್ಸ್ ಸೂಪರಿಂಟೆಂಡೆಂಟರು ಮೈಸೂರಲ್ಲಿ ೩ ವರ್ಷ ಕಳೆದ ಸವಿತ್ರ ಅವರನ್ನು ಪರ್ಮನೆಂಟ್ ಮಾಡಬೇಕೆಂಬ ಠರಾವನ್ನು ಕಳಿಸಿರುವರು. ಶ್ರೀ ಬಿ. ನಾರಾಯಣಸ್ವಾಮಿಯವರು, ನಗರದ ಆಹಾರ ವ್ಯವಸ್ಥೆ ಮೇಲ್ವಿಚಾರಣೆಗಾಗಿ ಪೌರ ಸಭಾ ಸದಸ್ಯರಿಗೆ ಅಧಿಕಾರ ಕೊಡಬೇಕೆಂಬ ಠರಾವನ್ನು ತಂದಿರುವರು.

ಪರೀಕ್ಷೆಗೆ ಕಳಿಸಲು ಅವಕಾಶ

ಈ ಸಾರಿ ಸ್ಕೂಲ್ ಫೈನಲ್ ಪರೀಕ್ಷೆಗೆ ಅನೇಕ ವಿದ್ಯಾರ್ಥಿಗಳನ್ನು ಕಳುಹಿಸದೆ ಇರುವ ವಿಷಯದಲ್ಲಿ ಶ್ರೀ ಎಂ. ವಿ. ಕೃಷ್ಣಪ್ಪನವರು ಸರ್ಕಾರಕ್ಕೆ ತಂತಿ ಕಳುಹಿಸಿದ್ದರೆಂದೂ ಈ ತಿಂಗಳು ಅಂತ್ಯದ ವರೆಗೆ ಅವಕಾಶವನ್ನು ಕೊಟ್ಟಲಾಗಿದೆಯೆಂದೂ ತಿಳಿದು ಬರುತ್ತದೆ. ಈ ವಿಷಯದಲ್ಲಿ ಸರ್ಕಾರದ ಅಧಿಕಾರಿಗಳು ಉದಾರತೆಯಿಂದ ವರ್ತಿಸುವರೆಂದು ನಿರೀಕ್ಷಿಸಲಾಗಿದೆ.

ಮೈಸೂರು ರೈಲ್ವೆಗೆ ಹಚ್ಚಿನ ಅಧಿಕಾರ

ಬೆಂಗಳೂರು ಹಿಂದೂಪುರ ರೈಲ್ವೆ ಲೈನಿನ ಅಧಿಕಾರ, ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದ ಅಧಿಕಾರ ಎಂ. ಆಂಡ್ ಎಸ್. ಎಂ. ರೈಲ್ವೆಯವರಿಗೆ ಸೇರಿದ್ದು, ಅವು ಪೂರ್ಣವಾಗಿ ಮೈಸೂರು ಸರ್ಕಾರಕ್ಕೆ ವರ್ಗಾಯಿಸಲ್ಪಡುವುವೆಂದು ಹೇಳಲಾಗಿದೆ

ಮಾಜಿ ದಿವಾನರ ತೋಟದಲ್ಲಿ ಕಳುವು

ಬೆಂಗಳೂರಿನಲ್ಲಿರುವ ಮಾಜಿ ದಿವಾನರಾದ ಸರ್ ಎಂ. ಎನ್. ಕೃಷ್ಣರಾಯರ ತೋಟದಲ್ಲಿ ಸಪೋಟ ಹಣ್ಣುಗಳನ್ನು ಕದ್ದ ಸಾಬಣ್ಣ ಎಂಬುವನಿಗೆ ನಗರದ ನ್ಯಾಯಾಧೀಶರು ೧ ವಾರ ಕಠಿಣ ಶಿಕ್ಷೆ ವಿಧಿಸಿದ್ದಾರೆ.

ವಿಚಿತ್ರವಾದ ಎಮ್ಮೆ ಕರು

ರಾಜಧಾನಿಯ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ಅಂದ್ರೆಯವರ ಪೌಜಿ ಅಂಗಡಿಯಲ್ಲಿ ಒಂದು ಎಮ್ಮೆಯು ವಿಚಿತ್ರವಾದ ಒಂದು ಕರುವನ್ನು ಈಗ್ಗೆ ನಾಲ್ಕು ದಿವಸದ ಹಿಂದೆ ಹಾಕಿದೆ. ಕರುವಿನ ಮೂತಿಯು ಮುರುಟಿಕೊಂಡಿರುವುದು. ಕಣ್ಣುಗಳಿದ್ದರೂ ಕಾಣುವುದಿಲ್ಲ. ಮಲಮೂತ್ರ ದ್ವಾರಗಳಿಲ್ಲ ಮತ್ತು ಬಾಲವಿಲ್ಲ. ಮುಂದಿನ ಎಡ ಕಾಲುಗಳ ಪೈಕಿ ಒಂದು ಮೋಟಾಗಿದೆ. ಕರುವು ಇನ್ನೂ ಜೀವಂತವಾಗಿದೆ. ಅದಕ್ಕೆ ಹಾಲನ್ನು ಗೊಟ್ಟದಿಂದ ಹಾಕುತ್ತಿದ್ದಾರೆ. ಈ ವಿಚಿತ್ರವನ್ನು ಅನೇಕರು ಬಂದು ನೋಡಿಕೊಂಡು ಹೋಗುತ್ತಿದ್ದಾರೆ

ಕಳ್ಳತನ ಪತ್ತೆ

ಕಳೆದ ನವರಾತ್ರಿಯಲ್ಲಿ ರಾಜಧಾನಿಯ ಸೋಪ್ ಫ್ಯಾಕ್ಟರಿ ಬಳಿಯ ಕೆಲವು ಮನೆಗಳಲ್ಲಿ ಕಳ್ಳತನ ನಡೆದು ಪೋಲೀಸಿಗೆ ದೂರು ಕೊಡಲಾಗಿತ್ತು. ಈ ಸಂದರ್ಭದಲ್ಲಿ ಬಾಲಾಜಿ ಎಂಬುವವನನ್ನು ಮತ್ತು ಇತರ ಮೂವರನ್ನು ಲಕ್ಷ್ಮೀಪುರಂ ಪೋಲೀಸ್ ಸ್ಟೇಷನ್ನಿನವರು ಈಗ್ಗೆ ಮೂರು ದಿವಸಗಳ ಕೆಳಗೆ ದಸ್ತಗಿರಿ ಮಾಡಿ ತನಿಖೆ ಕ್ರಮಗಳನ್ನು ನಡೆಸುತ್ತಿರುವರು. ಕಳುವಾದ ಮಾಲುಗಳ ಪೈಕಿ ಅನೇಕ ಮಾಲುಗಳು ಸಿಕ್ಕಿರುವುದಾಗಿ ಗೊತ್ತಾಗಿದೆ

ಶಾಲಾ ಶಂಕುಸ್ಥಾಪನೆ

ಮೈಸೂರು ತಾಲ್ಲೂಕು ಕಸಬಾ ಹೋಬಳಿ ಕಾಮನಕೆರೆಹುಂಡಿ ಗ್ರಾಮದ ಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನೂ ಮತ್ತು ಕಾಮನಕೆರೆ ಹುಂಡಿಯ ನೂತನ ರಸ್ತೆಯ ಉದ್ಘಾಟನೋತ್ಸವವನ್ನೂ ಜಿಲ್ಲಾಧಿಕಾರಿಗಳಾದ ಶ್ರೀ ರಣಜೋಧ್ ಸಿಂಗ್ ರವರು ನಾಳೆ ಬೆಳಗ್ಗೆ ೧೦ ಗಂಟೆಗೆ ನೆರವೇರಿಸುವರು

ಹಿಂದೂ ಸಮ್ಮೇಳನ ಮುಂದೆ ಬಿತ್ತು

ಶಿವಮೊಗ್ಗೆಯಲ್ಲಿ ಇಷ್ಟರಲ್ಲೇ ನಡೆಯಲಿದ್ದ ಅಖಿಲ ಭಾರತ ದೇಶೀಯ ಸಂಸ್ಥಾನಗಳ ಹಿಂದೂ ಮಹಾ ಸಭೆಯ ಸಮ್ಮೇಳನವನ್ನು ಆಹಾರ ಅಭಾವದ ಈ ಕಾಲದಲ್ಲಿ ನಡೆಸುವ ಬದಲು ಸುಗ್ಗಿಯಾದ ಮೇಲೆ ಜನವರಿಯಲ್ಲಿ ನಡೆಸುವುದು ಉಚಿತವೆಂದು ಅಲ್ಲಿನ ಜಿಲ್ಲಾಧಿಕಾರಿಗಳು ತಿಳಿಸಿದ ಪ್ರಯುಕ್ತ ಅದನ್ನು ಮುಂದೆ ಹಾಕಲಾಗಿದೆ.

ಉಮೇದುವಾರಿಕೆ ವಾಪಸು

ಬೆಂಗಳೂರು ಪೌರ ಸಭೆಗೆ ಸ್ವತಂತ್ರ ಉಮೇದುವಾರರಾಗಿ ನಿಂತಿದ್ದವರ ಪೈಕಿ ಒಬ್ಬರು ತಮ್ಮ ಉಮೇದುವಾರಿಕೆಯನ್ನು ವಾಪಸ್ಸು ಪಡೆದಿದ್ದಾರೆ. ಶ್ರೀ ಎಸ್. ಕೆ. ವೆಂಕಟರಂಗಯ್ಯಂಗಾರ್ ರವರು ೩ ವಿಭಾಗಗಳಿಂದ ಚುನಾವಣೆಗೆ ನಿಂತಿದ್ದರು. ಅವರು ಈಗ ಒಂದೇ ವಿಭಾಗದಿಂದ ನಿಲ್ಲುವರು

ಧನ್ವಂತರಿ ಜಯಂತಿ

ಬರುವ ಗುರುವಾರ ಸಂಜನಗೂಡಿನಲ್ಲಿ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರವರು ತಮ್ಮ ಗೃಹದಲ್ಲಿ ಧನ್ವಂತರಿ ಜಯಂತಿ ಮಹೋತ್ಸವವನ್ನೇರ್ಪಡಿಸಿರುವರು. ಆ ದಿನ ಸಂಜೆ ಶ್ರೀ ಚನ್ನಕೇಶವಯ್ಯಂಗಾರ್ ರವರ ಉಪನ್ಯಾಸವೂ ವಿದ್ವಾನ್ ಟಿ. ಚೌಡಯ್ಯನವರ ಪಿಟೀಲು ವಾದನವೂ ನಡೆಯಲೇರ್ಪಾಟಾಗಿದೆ

ಬಟ್ಟೆ ಮಾರಲು ಲೈಸನ್ಸ್

ಲೈಸನ್ಸ್ ಹೊಂದದೆ ಯಾರೂ ಬಟ್ಟೆಗಳನ್ನು ಮಾರಾಟ ಮಾಡಕೂಡದು ಎಂಬುದಾಗಿ ಮೈಸೂರು ಸರ್ಕಾರದ ಆಜ್ಞೆ ಹೊರಟಿದೆ. ಬಟ್ಟೆ ಗಿರಣಿಗಳಿಗೆ ರಿಯಾಯಿತಿ ಉಂಟು. ಆಜ್ಞೆ ಇಂದಿನಿಂದ ಜಾರಿಯಲ್ಲಿರುವುದು.

ಟೀ ರಫ್ತಿಗೆ ನಿರ್ಬಂಧ

ಲೈಸೆನ್ಸ್ ಇಲ್ಲದೆ ಮೈಸೂರು ಸಂಸ್ಥಾನದಿಂದ ಟೀಯನ್ನು ರಫ್ತು ಮಾಡಲಾಗದೆಂದು ನಿಷೇಧಿಸಿ ಮೈಸೂರು ಸರ್ಕಾರದವರು ಒಂದು ವಿಶೇಷ ಶಾಸನವನ್ನು ಹೊರಡಿಸಿದ್ದಾರೆ. ಅನುಮತಿ ಇಲ್ಲದೆ ಟೀ ಗಿಡಗಳನ್ನೂ ನೆಡಕೂಡದು

ವೈಸ್ ರಾಯರಲ್ಲಿಗೆ ಗೌರ್ನರುಗಳು

ಬೊಂಬಾಯಿ, ಮದರಾಸ್ ಮತ್ತು ಸಂಯುಕ್ತ ಪ್ರಾಂತ್ಯಗಳ ಗೌರ್ನರುಗಳು ವೈಸರಾಯರನ್ನು ನೋಡಲು ವಿಮಾನಗಳಲ್ಲಿ ಹೊರಟಿರುವರೆಂದು ತಿಳಿದು ಬಂದಿದೆ

ಬರ್ಲಿನ್ ಗೆ ಬಲವಾದ ಪೆಟ್ಟು

ಬ್ರಿಟಿಷ್ ರಾಯಲ್ ವಿಮಾನದಳದವರು ಬರ್ಲಿನ್ ಮೇಲೆ ಬಾಂಬುಗಳ ಮಳೆ ಕರೆದು ಹಿಂತಿರುಗಿದರು. ಬರ್ಲಿನ್ ಸ್ವೀಡನ್ನುಗಳ ಫೋನ್ ಸಂಬಂಧ ಕತ್ತರಿಸಿ ಹೋಗಿದೆ

ಜರ್ಮನಿ ಶರಣಾಗತ ವಾಗುವುದು

ಅನೇಕ ಜನರು ತಿಳಿದಿರುವ ಹಾಗೆ ಮಹಾಯುದ್ಧವು ಮುಗಿಯುವುದಕ್ಕೆ ಯುದ್ಧವು ಅಂತ್ಯವನ್ನು ... ಜರ್ಮನಿಯು ಬಂದು ಶರಣಾಗತವಾಗುವುದೇ ಯಾರೂ ಏನೇ ಹೇಳಿದರೂ ಅದು ನಿಜವಾಗುವುದು. ಮುಂದಿನ ಡಿಸೆಂಬರಿನಲ್ಲಿ ಅದು ಶರಣಾಗತವಾಗುವುದೆಂಬುದೇ ನನ್ನ ಅಭಿಪ್ರಾಯ ಎಂಬುದಾಗಿ ಒಬ್ಬ ಡೊಮಿನಿಯನ್ ಪ್ರಧಾನಿಯರು ಹೇಳಿದ್ದಾರೆ

ರುಮೇನಿಯಾ ಆಡಳಿತ ಬದಲಾವಣೆ

ವಿರೋಧ ಪಕ್ಷದ ನಾಯಕರಾದ ಜೂಲಿಯಸ್ ಮಾನಿಯುರವರಿಗೂ, ರುಮೇನಿಯಾ ದೊರೆಗಳಿಗೂ ಸಂಭಾಷಣೆ ನಡೆದು ಅಲ್ಲಿ ಪ್ರಜಾಪ್ರಭುತ್ವ ಸರ್ಕಾರವನ್ನು ರಚಿಸಲು ದೊರೆಗಳು ಮೈಕೇಲ್ ಅಂಟೊನೆಸ್ಕೂರವರಿಗೆ ತಿಳಿಸಿದ್ದಾರೆ. ಇವರು ಈಗಿನ ಪ್ರಧಾನ ಮಂತ್ರಿಯ ಬಂಧುಗಳು.

ತುರ್ಕಿಯ ನೀತಿ

ತುರ್ಕಿಯು ತನ್ನ ಕರ್ತವ್ಯದಿಂದ ಒಪ್ಪಂದವನ್ನು ತಪ್ಪಲಿಲ್ಲವೆಂದೂ, ಆದರೆ ಉಚಿತವಾದ ಕಾರ್ಯಕ್ರಮವನ್ನು ಕೈಕೊಳ್ಳುವ ಕಾಲವು ಬಂದಿಲ್ಲವೆಂದು ಭಾವಿಸಿರುವುದಾಗಿಯೂ ಹೇಳಲಾಗಿದೆ. ಆದರೂ ಯುದ್ಧದಲ್ಲಿ ಪ್ರತ್ಯಕ್ಷ ಪಾತ್ರವನ್ನು ವಹಿಸದೆ ಅದು ಕೆಲವು ಸಹಾಯ ಕರ್ತವ್ಯಗಳನ್ನು ನಿರ್ವಹಿಸುವುದೆಂದು ಹೇಳಲಾಗಿದೆ

ರಾಯಲ್ ಕಮೀಷನ್ ಸಲಹೆ ನಿರಾಕರಣೆ

ಬಂಗಾಳ ಕ್ಷಾಮದ ಕಾರಣಗಳ ಬಗ್ಗೆ ವಿಚಾರಣೆ ನಡೆಸಲು ಒಂದು ರಾಯಲ್ ಕಮೀಷನ್ನನ್ನು ನೇಮಿಸಬೇಕೆಂದ ಮುಸ್ಲಿಂ ಲೀಗಿನವರು ಕೇಂದ್ರ ಶಾಸನ ಸಭೆಯಲ್ಲಿ ತಂದ ನಿರ್ಣಯವು ಬಹುಮತವಿಲ್ಲದೆ ಬಿದ್ದು ಹೋಯಿತು. ವಿಚಾರಣೆಗೆ ಇನ್ನೂ ಕಾಲವಲ್ಲವೆಂದು ಆಹಾರ ಮಂತ್ರಿಗಳು ತಿಳಿಸಿದರು. ಸರ್ಕಾರದವರ ಸೂಚನೆಯ ಪರವಾಗಿ ಮಾನ್ಯರು, ಡಾ. ಬ್ಯಾನರ್ಜಿ ಮುಂತಾದವರು ಬೆಂಬಲಿಸಿದರು

ರೈಲ್ವೆ ಅನಾಹುತ ಆಹುತಿ ೪೦

ನಾರ್ತ್ ವೆಸ್ಟರ್ನ್ ರೈಲ್ವೆಯಲ್ಲಿ ... ಬಳಿ ... ರೈಲು ... ದುರಂತ ಉಂಟಾಗಿ ... ೪೦ ಜನರು ... ನಷ್ಟವುಂಟಾಗಿದೆ

ಸೋಫಿಯಾ ಬರಿದಾಗುತ್ತಿದೆ

ಬಲ್ಗೇರಿಯಾ ರಾಜಧಾನಿ ಸೋಫಿಯಾ ನಗರವನ್ನು ... ಊರಿನಿಂದ ... ಆಪೇಕ್ಷಿಸುವವರಾಗಿಲ್ಲ ... ವಾಗಿ ... ದೆ

ಚೀನಾ ಸೈನ್ಯ ಮುನ್ನುಗ್ಗಿದ ಯಶಸ್ಸು

ಪ್ರ... ಯಾ ... ಬರ್ಮಾ ... ೨೦ ಸ್ಥಳ ದೂರ ...

ರೇಷನ್ ಹೆಚ್ಚಬೇಕು

ಮೈಸೂರು ನಗರದಲ್ಲಿ ಮುಂದಿನ ತಿಂಗಳು ೧ ನೇ ತಾರೀಖಿನಿಂದ ರೇಷನ್ ಜಾರಿಗೆ ಬರುತ್ತೆ. ಇದಕ್ಕೆ ಸಂಬಂಧಪಟ್ಟ ನೋಟೀಸ್ ಕೂಡ ಪ್ರಕಟವಾಯಿತು. ಆದರೆ ಎಲ್ಲರೂ ಹಾರೈಸುತ್ತಾರೆ. ರೇಷನ್ ಬರುತ್ತದೆ ಎಂಬ ಸಂತೋಷ ಯಾರಿಗೂ ಇಲ್ಲ. ಕಾರಣ ದಿನಕ್ಕೆ ೧ ಪಾವು, ಹೊತ್ತಿಗೆ ಅರ್ಧ ಪಾವು ಅಕ್ಕಿ ಎಂದರೆ ಯಾರಿಗೆ ಸಂತೋಷವಾಗುತ್ತೆ? ಮೈಸೂರಿನಲ್ಲಿ ಇಷ್ಟೇ ಅಕ್ಕಿ ಕೊಡಬೇಕೆಂದು ಇನ್ನೂ ತೀರ್ಮಾನವಾಗಿಲ್ಲ ಆದರೂ ಜನರಿಗೆ ಹೆದರಿಕೆ. ಕಾರಣ ಬೆಂಗಳೂರಿನಲ್ಲಿ ೧ ಪಾವು ಅಕ್ಕಿ. ೧ ಪಾವು ಅಕ್ಕಿ ಯಾರಿಗೂ ಸಾಲದೆಂಬುದು ಸರ್ಕಾರಕ್ಕೆ ಗೊತ್ತಿಲ್ಲದ ಮಾತಲ್ಲ. ಬೆಳಗಿನಿಂದ ಸಾಯಂಕಾಲದವರೆಗೆ ದುಡಿದವರು ಹಸಿದ ಹೊಟ್ಟೆ ತುಂಬ ಅನ್ನವಿಲ್ಲದಿದ್ದರೆ ಅವರು ಮಾರನೇ ದಿನ ಹೇಗೆ ಕೆಲಸ ಮಾಡಿಯಾರು?

ಆದ್ದರಿಂದ ಸರ್ಕಾರದವರು ಒಂದು ತೀರ್ಮಾನಕ್ಕೆ ಬರುವ ಮೊದಲು ಜನರಲ್ಲಿ ಈಗಿರುವ ಹೆದರಿಕೆಗಳಿಗೆ ಅವಕಾಶವಿಲ್ಲದಂತೆ ಪ್ರತಿಯೊಬ್ಬರಿಗೆ ೧ ಪಾವು ಅಕ್ಕಿ ೧ ಪಾವು ರಾಗಿ ಅಥವಾ ೧½ ಪಾವು ಅಕ್ಕಿಯನ್ನಾದರೂ ಕೊಡುವಂತೆ ತೀರ್ಮಾನ ಮಾಡಬೇಕು. ಈ ವಿಚಾರದಲ್ಲಿ ಸರ್ಕಾರದವರು ದೂರಾಲೋಚನೆಯಿಂದ ವರ್ತಿಸಿದರೆ ಸರ್ಕಾರಕ್ಕೂ ಕ್ಷೇಮ, ಪ್ರಜೆಗಳಿಗೂ ಕ್ಷೇಮ. ರೇಷನಿಂಗ್ ಅಧಿಕಾರಿಗಳು ಈ ಸಲಹೆಯನ್ನು ಅಂಗೀಕರಿಸುವರೆಂದು ನಂಬುತ್ತೇನೆ.

ಚೌಡಯ್ಯ,
ಪೌರಸಭಾ ಸದಸ್ಯ.

ನಾಯಕರ ಸಮಾಲೋಚನೆಗೆ ಅವಕಾಶ

ಮೊನ್ನೆ ಕೇಂದ್ರ ಶಾಸನ ಸಭೆಯಲ್ಲಿ ಶ್ರೀ ಎನ್. ವಿ. ಚೆಟ್ಟಿಯವರು, ದೇಶದ ನಾಯಕರೆಲ್ಲ ಕಲೆತು ಸಮಾಲೋಚನೆ ನಡೆಸಲು ಅವಕಾಶ ಕಲ್ಪಿಸಬೇಕಾಗಿರುವ ವಿಷಯವನ್ನು ಸರ್ಕಾರವು ಪರಿಶೀಲಿಸಬೇಕೆಂದು ಸೂಚಿಸಲಾಗಿ, ಈ ಸೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಿದರು.

ಭಾರತದಲ್ಲಿ ಹಡಗುಗಳ ತಯಾರಿ

ಮುಂದಿನ ವರ್ಷ ಭಾರತದಲ್ಲಿ ಅನೇಕ ಹಡಗುಗಳನ್ನು ತಯಾರಿಸಲಾಗುವುದೆಂದು ಸರ್ ಮಹಮದ್ ಅಜೀಜುಲ್ ಹಕ್‌ರವರು ಕೇಂದ್ರ ಶಾಸನ ಸಭೆಯಲ್ಲಿ ತಿಳಿಸಿದ್ದಾರೆ

Edited, printed and published by A R Nagarajan, at the Sadhvi Press, D.Subbaiah Road, Mysore

ಪಟ್ಟಾಭಿಷೇಕ ಮಂಟಪ ವರ್ಧಂತ್ಯುತ್ಸವ

ಶ್ರೀಮನ್ಮಹಾರಾಜ ಜಯ ಚಾಮರಾಜೇಂದ್ರ ಒಡೆಯರವರು ವಿಷ್ಣು ಸಂವತ್ಸರ ಕಾರ್ತೀಕ ಶುದ್ಧ ೭ ರಲ್ಲಿ ಕಲಲೆಗೆ ಚಿತ್ತೈಸಿ ಅವರ ಸೋದರಮಾವಂದಿರ ಪೂರ್ವಿಕರು ೧೨ ಜನ ಪಟ್ಟವಾಳಿದ ಮಂಟಪದ ಜೀರ್ಣೋದ್ಧಾರ ಪ್ರಾರಂಭೋತ್ಸವ ಬೆಳೆಸಿದರು. ಶ್ರೀ ಲಕ್ಷ್ಮೀಕಾಂತ ಸ್ವಾಮಿಯವರಿಗೆ ವಸ್ತ್ರಾಭರಣ ಸಮರ್ಪಿಸಿದರು. ತಾ|| ೧೩-೧೧-೪೩ ರಲ್ಲಿ ದಳವಾಯಿ ಎ. ಡಿ. ಸಿ. ದೇವರಾಜೇ ಅರಸಿನವರು, ಮದನ ಗೋಪಾಲರಾಜೇ ಅರಸಿನವರು, ರಾಜಬಂಧುಗಳ್ ಕಲಲೆಗೆ ಚಿತ್ತೈಸಿ, ಲಕ್ಷ್ಮೀಕಾಂತ ಸ್ವಾಮಿಯವರಿಗೆ ೨ ನೇ ವರ್ಷ ವಸ್ತ್ರಾಭರಣ ಸೇವೆ ಬೆಳೆಸಿದರು. ಶ್ರೀಮನ್ಮಹಾರಾಜರವರಿಗೂ, ಕಲಲೆ ಮನೆತನದವರಿಗೂ ವೇದೋಕ್ತ ಆಶೀರ್ವಾದ ಮಾಡಲಾಯಿತು. ಭಗವಂತನು ಇವರುಗಳಿಗೆಲ್ಲಾ ಆಯುರಾರೋಗ್ಯ ಮಂಗಳ ಕರುಣಿಸಿ ಇತೋಪ್ಯಧಿಕವಾಗಿ ಸೇವೆ ಬೆಳೆಯಲೆಂಬುದಾಗಿ ಕಲಲೆ ಶ್ರೀ ರಂಗಸ್ವಾಮಯ್ಯಂಗಾರ್ಯರು ಪ್ರಾರ್ಥಿಸುತ್ತಾರೆ.

ಅ|| ಭಾ|| ಸಂಪಾದಕರ ಸಮ್ಮೇಳನ

ಮದರಾಸಿನಲ್ಲಿ ಮುಂದಿನ ತಿಂಗಳು ೨೦, ೨೧ ನೇ ತಾ|| ಗಳಲ್ಲಿ ನಡೆಯಲಿರುವ ಅಖಿಲ ಭಾರತ ಪತ್ರಿಕಾ ಸಂಪಾದಕರ ಮೂರನೇ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ "ಬಾಂಬೆ ಕ್ರಾನಿಕಲ್" ಪತ್ರಿಕಾ ಸಂಪಾದಕರಾದ ಶ್ರೀ ಎಸ್. ಎ. ಬ್ರೆಲ್ವಿಯವರನ್ನು ಚುನಾಯಿಸಲಾಗಿದೆ.

ಮುಂಬಯಿಯಲ್ಲಿ ಕಾಂಗ್ರೆಸ್ ವಿಜಯ

ಬೊಂಬಾಯಿನ ಪೌರ ಸಭೆಯ ೬ ಸದಸ್ಯರು ಜೈಲಿನಲ್ಲೇ ಉಳಿದು ಅನೇಕ ಸಭೆಗಳಿಗೆ ಹಾಜರಾಗದೇ ಹೋದುದರಿಂದ ಆ ಸ್ಥಾನಗಳಿಗೆ ಉಪಚುನಾವಣೆ ನಡೆಯಿತು. ಈ ಚುನಾವಣೆಗೆ ನಿಂತ ಅದೇ ೬ ಮಂದಿ ಕಾಂಗ್ರೆಸ್ ಉಮೇದುವಾರರೂ ಜಯಶಾಲಿಗಳಾಗಿದ್ದಾರೆ.

ಭಾರತ ೩೫ ಕೋಟಿ ಡಾಲರ್ ಕೊಡಬೇಕೆ?

ಯೂರೋಪ್ ಮತ್ತು ಏಷ್ಯಾ ಖಂಡಗಳಲ್ಲಿನ ದುಸ್ಥಿತಿ ಪರಿಹಾರಕ್ಕಾಗಿ ಅಂತರ್ರಾಷ್ಟ್ರೀಯ ಕಷ್ಟಪರಿಹಾರ ಸಮಿತಿಯವರು ಧನ ಶೇಖರಿಸುವರು. ಅಗ್ಗಿ ಭಾರತವನ್ನು ೩೫ ಕೋಟಿ ಡಾಲರ್ ಹಣ ಕೊಡವಂತೆ ಆ ಸಮಿತಿಯವರು ಕೇಳುವರೆಂದು ಹೇಳಲಾಗಿದೆ

ಲೀಗ್ ಅಧಿವೇಶನ

ಕರಾಚಿಯಲ್ಲಿ ಸಿಂಧ್ ಪ್ರಾಂತ್ಯದ ಚೀಫ್ ಕೋರ್ಟಿನ ಬಳಿಯ ಮೈದಾನದಲ್ಲಿ ಅಖಿಲ ಭಾರತ ಮುಸ್ಲಿಂ ಲೀಗಿನ ಮುಂದಿನ ಅಧಿವೇಶನ ನಡೆಯಲೇರ್ಪಾಡುಗಳಾಗುತ್ತಿವೆ.

ಸ್ವಯಂ ಸೇವಕ ಸಮಿತಿ ೨೦೦೦ ಸೇವಕರನ್ನು ಸೇರಿಸಲು ನಿರ್ಧರಿಸಿ ಕಾರ್ಯಕೈಗೊಂಡಿದೆ.

ಚೀಣೀ ವ್ಯವಸಾಯ ಮಂಡಳಿ

ಚೀಣಾದೇಶದ ವ್ಯವಸಾಯಗಾರರ ಪ್ರತಿನಿಧಿಗಳನ್ನೊಳಗೊಂಡ ಮಂಡಲಿಯೊಂದು ಈಗ ದೆಹಲಿಗೆ ಆಗಮಿಸಿದೆ. ಈ ಮಂಡಲಿಯವರು ೨ ತಿಂಗಳು ಇಂಡಿಯಾದಲ್ಲಿ ಸಂಚರಿಸುವರು. ಇವರು ಮೊನ್ನೆ ಭಾರತ ಶಿಕ್ಷಣ ಸಚಿವರೊಡನೆ ಕಲೆತು ಮಾತುಕತೆ ನಡೆಸಿರುತ್ತಾರೆ.

ನಾಶವಾಗದ ವಿನಿಯೋಗಗಳು

ಬಂಗಾರ, ಬೆಳ್ಳಿ, ಆಭರಣಗಳು ಅಥವಾ ಕೂಡಿ ಹಾಕಿದ ಸಾಮಾನುಗಳನ್ನು ಯಾವ ಕುಟುಂಬವು ಇಟ್ಟುಕೊಂಡಿರುತ್ತದೋ ಅದಕ್ಕೆ ಸದಾ ಭೀತಿಯಿರುತ್ತದೆ. ಕಳ್ಳರು ಮತ್ತು ಬೆಂಕಿಯ ಭಯ ಈ ಐಶ್ವರ್ಯವನ್ನು ಬಾಧಿಸುತ್ತವೆ. ಬಳಕೆಯಿಂದ ಬಂಗಾರ ಮತ್ತು ಬೆಳ್ಳಿ ಸವೆದುಹೋಗುತ್ತವೆ. ಇವೆಲ್ಲಕ್ಕೂ ಹೆಚ್ಚಾಗಿ ಸಾಮಾನುಗಳ ಬೆಲೆ ಅಮೂಲ್ಯ ಲೋಹಗಳು, ಅಮೂಲ್ಯ ಹರಳು ಕಲ್ಲುಗಳು, ಆಸ್ತಿಪಾಸ್ತಿ ಮತ್ತು ತಯಾರಾದ ಸಾಮಾನುಗಳು - ಇವುಗಳ ಬೆಲೆ ಈಗ ಮಿತಿಮೀರಿ ಹೆಚ್ಚಾಗಿದ್ದು ಯಾವ ಕ್ಷಣದಲ್ಲಿಯಾಗಲೀ ನೀವು ಹಾಕಿದ ಹಣದ ಬಹು ಭಾಗವು ಅನಿರೀಕ್ಷಿತವಾಗಿ ಮಾಯವಾಗಬಹುದು.

ಮುಂಬರುವ ದಿನಗಳಿಗಾಗಿ ಕೂಡಿಡಿ

ಯುದ್ಧಸಮಯದಲ್ಲಿ ಅತಿ ಸುರಕ್ಷಿತವಾದ ಕೂಡಿಡುವಿಕೆಯು ಹಣದ ವಿನಿಯೋಗಗಳಲ್ಲಿದೆ — ಈ ವಿನಿಯೋಗಗಳು ಮುಂದೆ ನೀವು ಹಾಕಿದಷ್ಟೇ ರೂಪಾಯಿಗಳನ್ನಾದರೂ ಹಿಂತಿರುಗಿ ಕೊಡುವುವಲ್ಲದೆ, ವಿಜಯ ಲಭಿಸಿದೊಡನೆ ಧಾರಣೆಗಳು ಸಹಕೋಟಿಗೆ ಬಂದು ನೀವು ಆಗ ವೆಚ್ಚ ಮಾಡುವ ಹಣಕ್ಕೆ ಪೂರ್ಣ ಮೌಲ್ಯವು ದೊರಕುವಂತೆ ಮಾಡುವುವು.

ಈ ವಿನಿಯೋಗಗಳು ಸುರಕ್ಷಿತ.

★ ಸಹಕಾರ ಸಂಸ್ಥೆ.
★ ವಿಮಾ ಪಾಲಿಸಿ.
★ ಬ್ಯಾಂಕ್ ಸೇವಿಂಗ್ಸ್ ಲೆಖ್ಖ
★ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್

ಅಥವಾ ಇವೆಲ್ಲಕ್ಕೂ ಉತ್ತಮವಾದುದು ಸರ್ಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳು



ರಾಷ್ಟ್ರೀಯ ಯುದ್ಧ ಮುಖದವರು ದೇಶೀಯರಿಗೆ ಮಾಡುವ ಮನವಿ

CPI 12 KN

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧೧-೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಮನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ಬಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂಚನೆ - ಚಿಲ್ಲರೆ ವ್ಯಾಪಾರಕ್ಕೆ, ಬೂರಾ ಸಕ್ಕರೆ ಸಿಕ್ಕುತ್ತದೆ ಇಲ್ಲೂ ಮತ್ತು ಸಂತೆಪೇಟೆ ರೋಡ್ ಅಂಗಡಿಯಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಸಂಪುಟ ೨] ಭಾನುವಾರ ೨೧—೧೧—೪೩ [ಸಂಚಿಕೆ ೧೦೬

ಲೆಬ್ನಾನ್ ಸ್ವಾತಂತ್ರ್ಯಕ್ಕೆ ಅಮೆರಿಕದ ಒತ್ತಾಯ

ಕುಮಾರಮಂಗಲಂ ಶತ್ರು ಬಂಧನದಿಂದ ತಪ್ಪಿಸಿ ಬಂದರು

ಕೂಳೆ ಬಟ್ಟೆ ಮೇಲಿನ ತೆರಿಗೆಗಾಗಿ ಅಗಸರ ಮುಷ್ಕರ

ಎಲ್ಲಾ ವಿದ್ಯಾರ್ಥಿಗಳನ್ನೂ ಪರೀಕ್ಷೆಗೆ ಕೂರಿಸಬೇಕು

ಸುಬ್ಬರಾಯನ ಕೆರೆಯಲ್ಲಿ ವಿದ್ಯಾರ್ಥಿಗಳ ಸಭೆ

ನಿನ್ನೆ ಸಂಜೆ ಸುಬ್ಬರಾಯನ ಕೆರೆಯಲ್ಲಿ ಮೈಸೂರು ನಗರದ ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘದ ಪ್ರಯುದ ಸಭೆ ಸೇರಿ ಫೈನಲ್ ಪರೀಕ್ಷೆಗಳಿಗೆ ಶಾಲಾ ವಿದ್ಯಾರ್ಥಿಗಳನ್ನು ಆರಿಸುವುದರಲ್ಲಿ ವಿದ್ಯಾಧಿಕಾರಿಗಳು ಅನುಸರಿಸುವ ನೀತಿಯನ್ನು ಪರಿಶೀಲಿಸಿ, ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿದರು. ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ಎಂ. ವಿ. ಕೃಷ್ಣಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಯುತರುಗಳಾದ ಹೆಚ್. ಕೆ. ರಾಮಸ್ವಾಮಿ, ಬಿ. ದ್ವಿ. ರಾಮಣ್ಣ, ಹೆಚ್. ಜೆ. ಗ. ರಂಗಲಿಂಗಪ್ಪ ಮತ್ತು ರುದ್ರಪ್ಪ ಮುಂತಾದ ವಿದ್ಯಾರ್ಥಿಗಳು ಭಾಷಣ ಮಾಡಿದರು.

ನಿರ್ಣಯಗಳು

೧ ಇಡೀ ಭಾರತವನ್ನೇ ಕಳವಳಕ್ಕೀಡು ಮಾಡಿರುವ ಅನ್ನಾಭಾವದ ಉಲ್ಬಣ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಬೇರೆಯಾಗಿಲ್ಲ ತಪ್ಪಲಾಗದವರಾಗಿಯೂ, ವಿದ್ಯಾರ್ಥಿಗಳಿಗೆ ಬೇಕಾದ ಶಿಕ್ಷಣ ಸೌಲಭ್ಯಗಳ ಅಭಾವದಿಂದಲೂ ಮತ್ತು ಕಾಲೇಜುಗಳ ಶಾಲೆಗಳ ವಿದ್ಯಾಭ್ಯಾಸದಲ್ಲಿ ಅವರು ಭಾಗವಹಿಸದಿರುವುದು ಅರ್ಥವಾಗದ ವಿಷಯವಲ್ಲ. ಇಲ್ಲಿನ ದಸರಾ ಮುಂಚೆಯ ಪ್ರಥಮ ಪರೀಕ್ಷೆ ನಡೆದುದರಿಂದ, ವಿದ್ಯಾರ್ಥಿಗಳಿಗೆ, ಪ್ರೋಫೆಸರ್‌ಗಳಿಗೆ, ಪ್ರವಚನ ಪುಸ್ತಕಗಳನ್ನು ತಿದ್ದಿಕೊಳ್ಳಲು ಅಥವ ತಿದ್ದಲು ಅವಕಾಶವಿಲ್ಲದೆ ಸಂಸ್ಥಾನದ ಶಾಲಾ ವಿದ್ಯಾರ್ಥಿಗಳು ಫೈನಲ್ ಪರೀಕ್ಷೆಗೆ ಅಂಟಿಕೊಂಡಿಲ್ಲ. ಇದರಿಂದ ಮುಂದು ಗುಣದ ಅನೇಕ ವಿದ್ಯಾರ್ಥಿಗಳು ಕಷ್ಟಪಡಲ್ಪಟ್ಟಿದ್ದಾರೆ. ಆದ್ದರಿಂದ ಸರ್ಕಾರದವರೂ, ವಿದ್ಯಾಧಿಕಾರಿಗಳೂ ವಿದ್ಯಾರ್ಥಿಗಳ ಮೇಲೆ ಕರುಣೆ ಇಟ್ಟು, ಮೇಲ್ಕಂಡ ಉತ್ತರದ ದಂಡನೆಯೇ ಸಾಕು ಎಲ್ಲಾ ವಿದ್ಯಾರ್ಥಿಗಳಿಗೂ ಫೈನಲ್ ಪರೀಕ್ಷೆಗಳಿಗೆ ಕೂಡಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಈ ಸಭೆ ಸರ್ಕಾರವನ್ನು ಆಗ್ರಹಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತದೆ.

ಮೈಸೂರು ವಿದ್ಯಾರ್ಥಿ ವೃಂದದ ಈ ಪ್ರಾರ್ಥನೆಗೆ ಇದೇ ತಿಂಗಳು ೨೬ನೇ ತಾರೀಖಿನೊಳಗೆ ವಿದ್ಯಾಧಿಕಾರಿಗಳು ಕಿವಿಗೊಟ್ಟು ತಕ್ಕ ಕಾರ್ಯಕ್ರಮ ಕೈಗೊಳ್ಳದಿದ್ದರೆ ವಿದ್ಯಾ ಸಚಿವರಲ್ಲಿಗೆ ಮೈಸೂರು ನಗರದಿಂದ ನಿಯೋಗ ಹೋಗಬೇಕೆಂದು ಈ ಸಭೆ ನಿರ್ಧರಿಸುತ್ತದೆ.

ತಂದೆತಾಯಿಗಳೂ, ಪ್ರೋಫೆಸರರೂ, ವಿದ್ಯಾರ್ಥಿಗಳೂ ಸರ್ಕಾರದಲ್ಲಿ ಮಾಡಿರುವ ಮನವಿಯನ್ನು ಗಮನಿಸಿ ವಿದ್ಯಾ ಮಂತ್ರಿಗಳಲ್ಲಿಗೆ, ನಿಯೋಗ ಪತ್ರವನ್ನು ಕಳುಹಿಸಬೇಕೆಂದು ಈ ಸಭೆ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತದೆ.

ಸೊಸೈಟಿ ಸಂಚಾಲಕರು

ಮೈಸೂರು ಬೋ-ಆಪರೇಟಿವ್ ಸೊಸೈಟಿ ಮ್ಯಾನೇಜಿಂಗ್ ಕಮಿಟಿ ಸಭೆಯು ಈ ದಿನ ಬೆಳಿಗ್ಗೆ ನಡೆಯಿತು. ಕಾಲದ ವರ್ಷಕ್ಕೆ ಕೆ. ಸಿ. ರೆಡ್ಡಿ, ಶ್ರೀ ಜಿ. ಆರ್. ಚಂದ್ರಶೇಖರ, ಶ್ರೀ ಎನ್. ಚಿಕ್ಕಸ್ವಾಮಿ ಉಪಾಧ್ಯಕ್ಷರಾಗಿಯೂ, ಶ್ರೀ ಓ. ಎಲ್. ವಾಟರ್ಸ್ ಉಪ್ಪಾರ ಅವರು ಕಾರ್ಯದರ್ಶಿಗಳಾಗಿಯೂ, ಚಿನ್ನಸ್ವಾಮಿ ಶ್ರೀ ಎನ್. ನಾಗರಾಜರು ಲೀಗಲ್ ಅಡ್ವೈಸರಾಗಿರುವರು.

ಮಿಲಿಟರಿ ಲಾರಿ ಹೊಡೆದು ಮರಣ

ಮೈಸೂರು ೨೧

ನಿನ್ನೆ ಮಧ್ಯಾಹ್ನ ೧೨-೩೦ ಗಂಟೆ ಸಮಯದಲ್ಲಿ ಗೌರ್ನಮೆಂಟ್ ಭವನದ ಉತ್ತರ ಗೇಟಿನ ಫುಟ್-ಪಾತಿನಲ್ಲಿ ಹೋಗುತ್ತಿದ್ದ ಜಲಪುರಿಯ ೫೦ ವರ್ಷದ ಆದಿಕರ್ನಾಟಕ ಜಾತಿಯ ಚಿಕ್ಕ ಪುಟ್ಟಯ್ಯ ಎಂಬುವನ ಮೇಲೆ ಒಂದು ಮಿಲಿಟರಿ ಲಾರಿಯು ಹೊಡೆದು ಗಾಯವಾಗಿ ತಕ್ಷಣ ಆತನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಆತನು ಮೃತಪಟ್ಟನೆಂದು ವರದಿಯಾಗಿದೆ.

ಕಾಲೇಜಿನ ಹಳೇ ವಿದ್ಯಾರ್ಥಿ ಸಂಘ

ಮಹಾರಾಜ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಪ್ರಥಮ ಸಭೆಯು ನಿನ್ನೆ ಸಂಜೆ ಮಹಾರಾಜಾ ಕಾಲೇಜಿನಲ್ಲಿ ಮಿ॥ ಎ. ಬಿ. ವಿ. ತಿಂಟ ಶಾಸ್ತ್ರಿ ಅವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದು, ಈ ಕೆಳಗೆ ಕಂಡ ಅಧಿಕಾರಿಗಳನ್ನು ನೇಮಿಸಲಾಯಿತು — ಅಧ್ಯಕ್ಷರು—ವಿದ್ಯಾ ಸಚಿವರಾದ ಶ್ರೀ ಅಪ್ಪಾಜಿಗೌಡರು. ಉಪಾಧ್ಯಕ್ಷರು—ಪ್ರೊ॥ ಡಿಸೋಜ. ಕಾರ್ಯದರ್ಶಿಗಳು— ಶ್ರೀಗಳಾದ ಎಸ್. ಶ್ರೀನಿವಾಸಾಚಾರ್, ವಿ. ಕೆ. ಶ್ರೀನಿವಾಸನ್ ಮತ್ತು ನಾರಾಯಣಶಾಸ್ತ್ರಿಗಳು.

ಸಮಿತಿ ಸದಸ್ಯರು - ಶ್ರೀಗಳಾದ ವಿ. ಲಿಂಗಪ್ಪ, ಹೆಚ್. ಸುಬ್ಬರಾವ್, ಡಿ. ಜೋಸೆಫ್ ಗ್, ರಾಮಚಂದ್ರರಾವ್ ಜೋಯಿಸ್, ಹೆಚ್. ಕೃಷ್ಣರಾವ್, ಬಿ. ವಿ. ನಂಜುಂಡಯ್ಯ, ಎಂ. ಎಸ್. ಪಾರ್ಥಸಾರಥಿ, ಮತ್ತು ಶ್ರೀಮತಿ ಸುಂದರಂ ಕೃಷ್ಣಸ್ವಾಮಿ.

ಬಿಕಾನೀರ್ ಮಹಾರಾಜರು

ಪರ್ಷಿಯಾ ಮತ್ತು ಇರಾಕುಗಳಲ್ಲಿ ಸಂಚರಿಸಿ ಬಿಕಾನೀರ್ ಮಹಾರಾಜರು ಈಗ ಮಧ್ಯಪ್ರಾಚ್ಯದಲ್ಲಿ ಪ್ರವಾಸ ಮಾಡುತ್ತಿರುವರೆಂದು ವರದಿಯಾಗಿದೆ.

ಕೇಂದ್ರ ಅಸೆಂಬ್ಲಿ ಮುಕ್ತಾಯ

ಭಾರತ ಕೇಂದ್ರ ಅಸೆಂಬ್ಲಿಯ ಅಧಿವೇಶನ ನಿನ್ನೆ ಮಧ್ಯಾಹ್ನದ ಮುಕ್ತಾಯಗೊಂಡಿತು.

ಕುಮಾರಮಂಗಲಂ ಸಾಹಸ

ಮದರಾಸಿನ ಮಾಜಿ ಮಂತ್ರಿಗಳಾದ ಡಾ॥ ಪಿ. ಸುಬ್ಬರಾಯನ್‌ರವರ ಪುತ್ರ ಮೇಜರ್ ಕುಮಾರಮಂಗಲಂರವರು ಇಟಲಿ ರಣರಂಗದಲ್ಲಿ ಕಾದಾಡುತ್ತಿದ್ದಾಗ ಶತ್ರು ಸೆರೆಗೆ ಒಳಗಾಗಬೇಕಾಯಿತು. ಈಗ ಅವರು ಶತ್ರು ಬಂಧನದಿಂದ ತಪ್ಪಿಸಿಕೊಂಡು ಇಟಲಿಯ ಮಿತ್ರ ಸೇನೆಗಳ ಬಳಿಸೇರಿರುವರೆಂದು ಸುದ್ದಿ ಬಂದಿದೆ.

ಅಗಸರ ಅಸಮಾಧಾನ

ಒಬ್ಬರ ಪೌರ ಸಭೆಯವರು ಕೊಳೆ ಬಟ್ಟೆಗಳನ್ನು ಒಗೆಯುವ ಅಗಸರು ತೆರಿಗೆ ಕೊಡಬೇಕೆಂದು ಮಾಡಿದ ನಿಯಮವನ್ನು ವಿರೋಧಿಸಿ ಮುಂಬಯಿಯಲ್ಲಿನ ಅಗಸರೆಲ್ಲಾ ತಮ್ಮ ವೃತ್ತಿಯನ್ನು ನಿಲ್ಲಿಸಿ ಮುಷ್ಕರ ಹೂಡಿರುವರು. ತೆರಿಗೆಯನ್ನು ತೆಗೆದುಹಾಕುವ ತನಕ ಮುಷ್ಕರ ನಡೆಸಲು ತೀರ್ಮಾನಿಸಿರುವರು.

ಅಮೆರಿಕದಿಂದ ದವಸ ಬರಲಾರದು

ನೌಕಾ ಮತ್ತು ಸರಬರಾಜು ವ್ಯವಸ್ಥೆ ಅನಾನುಕೂಲಗಳಿಂದ ಅನೆರಿಕದಿಂದ ಭಾರತಕ್ಕೆ ದವಸ ಧಾನ್ಯಗಳನ್ನು ತರಿಸಿಕೊಳ್ಳಲು ಸಾಧ್ಯವಿಲ್ಲವೆಂದು ಮಿ॥ ಬಿ. ಆರ್. ಸೇನರು ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ತಿಳಿಸಿದರು.

ಜಿನ್ನಾರಿಂದ ಸರ್ಕಾರದ ಉಗ್ರಖಂಡನೆ

ಮೊನ್ನಿನ ಕೇಂದ್ರ ಶಾಸನ ಸಭೆಯಲ್ಲಿ ಮಿ॥ ಜಿನ್ನಾರವರು ಆಹಾರ ಸಮಸ್ಯೆ ಒಗ್ಗೆ ಮಾತನಾಡುತ್ತಾ, ಸರ್ಕಾರದ ಬೆಂಚುಗಳ ಕಡೆಗೆ ಬೆರಳು ತೋರಿಸಿ, ನೀವು ಅಪ್ರತಿಷ್ಠರೆಂಬ ವಿಷಯ ನಿಮಗೇ ಗೊತ್ತಿದೆ. ಒಂದು ವೇಳೆ ಗೊತ್ತಿಲ್ಲದಿದ್ದಲ್ಲಿ ನಿಮ್ಮ ಸ್ಥಾನದ ಬೇರೆ ಬೇರೆ ಕಡೆಯಿಂದ ಎಂದರು. ಇಂಗ್ಲೆಂಡಿನಲ್ಲಿ ಹೀಗೆ ಸಂಭವಿಸಿದ್ದರೆ ನಿಮ್ಮ ಪ್ರಾಣ ಉಳಿಯುತ್ತಿರಲಿಲ್ಲ. ಎಷ್ಟು ಗಂಟೆಗಳ ಕಾಲ ಬದುಕುತ್ತಿದ್ದಿರಿ. ನೀವು ಮಿತ್ರರು ಸಹಕಾರ ಅನ್ನ ಕರ್ತವ್ಯವನ್ನು ನಿರ್ವಹಿಸದೆ ದೇಶವನ್ನೇ ಹಾಳುಮಾಡುತ್ತಿದ್ದೀರಿ ಎಂದು ಸರ್ಕಾರದ ಆಹಾರ ನೀತಿಯನ್ನು ಉಗ್ರವಾಗಿ ಖಂಡಿಸಿದರು.

ಶಾಲಾ ಸಂಸ್ಥಾಪನೆ

ವಸ್ತ್ರ ಆರಂಭೋತ್ಸವ

ಮೈಸೂರು ಜಿಲ್ಲೆಯ ಕಸಬಾ ಕಾರ್ಯಾನಗಳ ಹೋಬಳಿ ಗ್ರಾಮದ ಶಾಲಾ ಕಟ್ಟಡದ ಅಸ್ತಿಭಾರ ಶಿಲೆ ಸ್ಥಾಪನೆಯನ್ನು ಮತ್ತು ಕಾರ್ಯಾನಗಳ ನೂತನ ರಸ್ತೆಯ ಪ್ರಾರಂಭೋತ್ಸವವನ್ನು ಜಿಲ್ಲಾಧಿಕಾರಿಗಳಾದ ಶ್ರೀ ರಾಜಗೋಪಾಲ ಸಿಂಗರವರು ನೆರವೇರಿಸಿದರು. ಸಮಾರಂಭಕ್ಕೆ ಆರೋಗ್ಯಾಧಿಕಾರಿಗಳಾದ ಡಾ॥ ನರಸಿಂಹಯ್ಯ, ಅಸಿಸ್ಟೆಂಟ್ ಶ್ರೀ ವೆಂಕಟಸುಬ್ಬಯ್ಯ ಮತ್ತು ಇತರರು ಬಂದಿದ್ದರು.

ಗ್ರಾಮ ಪಂಚಾಯಿತಿ ಪರವಾಗಿ ಜಿಲ್ಲಾಧಿಕಾರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಲಾಯಿತು.

ಸರ್ಕಾರಿ ಪ್ರಾಥಮಿಕ ಶಾಲೆಗೆ ಸರಿಯಾದ ವಸತಿ ಇಲ್ಲದ್ದರಿಂದ ಸಗುಣಸನಹಳ್ಳಿ ಶ್ರೀ ಚಿಕ್ಕಪಟ್ಟಿ ಬೋರೇಗೌಡರು ನಿವೇಶನವನ್ನು ಉಚಿತವಾಗಿ ಕೊಡಲು ಮತ್ತು ಶ್ರೀ ನೆಲವನೆ ವೆಂಕಟೇಗೌಡ ಉರ್ಫ್ ಮರಿಯಪ್ಪ ಎಂಬುವರು ಕಟ್ಟಡವನ್ನು ಕಟ್ಟಿಸಲು ಒಪ್ಪಿದ್ದಾರೆ. ಇದಲ್ಲದೆ ಗ್ರಾಮದಿಂದ ರಾಜಬೀದಿಗೆ ಸರಿಯಾದ ಮಾರ್ಗವಿಲ್ಲದೆ ಇದ್ದುದರಿಂದ ಬಹಳ ಕಷ್ಟವಾಗುತ್ತಿದ್ದು, ಈಗ ರೈತರು ಜನರ ಒಗ್ಗಟ್ಟಿನಿಂದಲೇ ರಸ್ತೆ ನಿರ್ಮಾಣವಾಗಿರುವುದರಿಂದ ಮತ್ತು ಜಮೀನುಗಳಲ್ಲಿ ಹೋಗುವ ರಸ್ತೆ ಹೊಂದಿಕೊಳ್ಳಲು ಒಪ್ಪಿದವರೂ ಆದವರು ಸ್ಥಳದಾನ ಕೊಟ್ಟಿರುವುದು ಸಂತೋಷದ ವಿಷಯವೆಂದು ತಿಳಿಸಲಾಯಿತು.

ನಂತರ ಜಿಲ್ಲಾಧಿಕಾರಿಗಳು ಅಸ್ತಿಭಾರ ಶಿಲೆ ಸ್ಥಾಪನೆ ನಡೆಸಿ ಗ್ರಾಮಸ್ಥರ ಈ ನೂತನ ಕಾರ್ಯವು ಬಹಳ ಸಂತೋಷಕರವಾದ ಸಂಗತಿ. ಹಳ್ಳಿಯ ಜನರು ಇಂಥ ಕೆಲಸಗಳಲ್ಲಿ ಮುಂದಾದವರು ಸಹಾಯ ಕೊಡುವುದು ಒಳ್ಳೆಯದು. ಇದೇ ಪ್ರಕಾರ ಗ್ರಾಮೋದ್ಧಾರ ಕೆಲಸಗಳನ್ನು ಮಾಡುವುದರಿಂದ ಬಹಳ ಪ್ರಯೋಜನವಾಗುವುದೆಂದು ತಿಳಿಸಿ, ರಸ್ತೆ ಇತರ ಗ್ರಾಮ ಕೆಲಸಗಳಿಗೆ ಹಣ ದ್ರವ್ಯ ಸಹಾಯ ಮಾಡುವುದಾಗಿ ಭರವಸೆ ಇತ್ತರು. ಮತ್ತು ಶಾಲೆ ಕಟ್ಟಡವನ್ನು ಕಟ್ಟಿಸಲು ಒಪ್ಪಿರುವ ಮಹನೀಯರನ್ನು ವಂದಿಸಿದರು.

ನಂತರ ಅಧ್ಯಕ್ಷರಿಗೆ ಪಾನ ಸುಪಾರಿ ನಡೆಯಿತು.

ಮೆರವಣಿಗೆಗೆ ಪ್ರತಿಬಂಧಕ

ಬೆಂಗಳೂರು ನಗರದಲ್ಲಿ ಮೆರವಣಿಗೆ ನಡೆಸಕೂಡದೆಂದು ಒಂದು ತಿಂಗಳವರೆಗೆ ಪ್ರತಿಬಂಧಕಾಜ್ಞೆ ಹೊರಡಿಸಿದ್ದಾರೆ.

ಲೆಬನಾನಿಗೆ ಅಮೆರಿಕಾ ಸಹಾನುಭೂತಿ

ವಾಷಿಂಗ್‌ಟನ್ನಿನ ನಿನ್ನೆ ಸುದ್ದಿ ಲೆಬನಾನಿನ ಸ್ವಾತಂತ್ರ್ಯಕ್ಕೆ ಅಮೆರಿಕಾ ಸರ್ಕಾರವು ಸಹಾನುಭೂತಿ ತೋರಿದೆ. ಲೆಬನಾನ್ ಸಂಸ್ಥಾನದ ವಿಷಯದಲ್ಲಿ ಫ್ರೆಂಚ್ ಸರ್ಕಾರ ಒತ್ತಾಯ ಮಾಡುವುದು ಸರಿಯಲ್ಲ ಎಂದು ತಿಳಿದು ಬಂದಿದೆ.

ನಾಯಿಗಳಿಗೆ ರೇಷನ್

ರಾಜಧಾನಿ ಪೌರ ಸಭಾಧ್ಯಕ್ಷರು ಸನ್ನ ನೋರನಲ್ಲಿ ಜಾರಿಗೆ ಬರಲಿರುವ ರೇಷನಿಂಗ್ ನಿಯಮವನ್ನು ಪತ್ರಿಕೋದ್ಯೋಗಿಗಳಿಗೆ ವಿವರಿಸಿ ಮೈಸೂರಿನ ಮಹಾಜನರಿಗೆ ಮಹೋಪಕಾರವನ್ನೆಸಗಿದ್ದಾರೆ. ಅವರ ದೀರ್ಘವಾದ ಹೇಳಿಕೆಯಲ್ಲಿ ಒಂದು ಅಂಶವು ಬಿಟ್ಟುಹೋಗಿರುವಂತಿದೆ. ಅದು ನಾಯಿಗಳ ವಿಷಯ. ಮಾನವನಿಗೆ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿ, ಮಾನವನನ್ನೇ ಸಂಪೂರ್ಣವಾಗಿ ನಂಬಿರುವ ಇಂಥಾ ಪ್ರಾಣಿಗೆ ರಾಜಧಾನಿಯ ರೇಷನಿಂಗ್‌ನಲ್ಲಿ ವ್ಯವಸ್ಥೆ ಇಲ್ಲದಿರುವುದು ವಿಷಾದಕರವಾಗಿದೆ. ರೇಷನಿಂಗ್ ಫಲಪ್ರದವಾಗಬೇಕಾದರೆ ಇಂಥ ವಿಷಯಗಳು ಮೊದಲೇ ವ್ಯವಸ್ಥೆಗೊಳ್ಳಬೇಕಾದುದು ಅತ್ಯಾವಶ್ಯಕವಲ್ಲವೆ? ಈ ವಿಷಯಗಳನ್ನು ಮುಂದು ಹಾಕುವುದರಿಂದ ಜನರು ಬಹಳ ಕಷ್ಟನಷ್ಟಗಳಿಗೀಡಾಗಬೇಕಾಗುತ್ತದೆ. ಜನರ ಸಹಕಾರ ಸೌಹಾರ್ದಗಳನ್ನು ಅಪೇಕ್ಷಿಸುವ ಸರ್ಕಾರದವರು ಈ ವಿಷಯಕ್ಕೆ ಶೀಘ್ರವಾಗಿ ತಕ್ಕ ಗಮನವನ್ನು ಕೊಡುವರೆಂದು ನಂಬಿರುವ,

ಒಬ್ಬ ನಗರ ನಿವಾಸಿ.

ಸಕ್ಕರೆ ತೊಂದರೆ

ಸರ್ಕಾರದ ಅಂಗಡಿಗಳಲ್ಲಿ ಸಕ್ಕರೆ ವ್ಯಾಪಾರವನ್ನು ನಿಲ್ಲಿಸಿರುವುದರಿಂದ ಪ್ರಜೆಗಳಿಗೆ ಸಕ್ಕರೆ ಸಿಗುವುದು ಬಹಳ ಕಷ್ಟವಾಗಿದೆ. ಅವರಲ್ಲೂ ಹೆಂಗಸರು ಡಿಪೋಗಳ ಮತ್ತು ಸೊಸೈಟಿಗಳ ಬಳಿ ಗಂಟೆಗಟ್ಟಲೆ ನುಗ್ಗಿ ತರಲು ಬಹಳ ತೊಂದರೆಯಾಗಿದೆ. ಶ್ರೀ ಪುಟ್ಟಯ್ಯನವರು ತಮ್ಮ ದೇವರಾಜ ಮಾರ್ಕೆಟ್ ಅಂಗಡಿಯಲ್ಲಿ ಹೆಂಗಸರಿಗೆ ಪ್ರತ್ಯೇಕವಾಗಿ ವ್ಯಾಪಾರ ಕೊಡಲು ಏರ್ಪಾಡುಮಾಡಿರುವುದು ಒಳ್ಳೇ ಅನುಕೂಲವಾಗಿದೆ. ಅಲ್ಲೂ ಸಹಾ ಸಕ್ಕರೆ ತಪ್ಪದೆ ಇರುವುದು ಬಹಳ ತೊಂದರೆಯಾಗಿದೆ.

ಪ್ರಜಾ ಹಿತೈಷಿ.

ಲಂಚ ತಿಂದರೆ ತೀವ್ರ ಶಿಕ್ಷೆ

ಬಂಗಾಳ ಪ್ರಾಂತ್ಯದ ಸರಬರಾಜು ಇಲಾಖೆಯಲ್ಲಿ ಅನೇಕ ನೌಕರರೂ, ಅಧಿಕಾರಿಗಳೂ ಲಂಚ ಪಡೆಯುತ್ತಿರುವರೆಂದು ಅಲ್ಲಿನ ಸರ್ಕಾರಕ್ಕೆ ಗೊತ್ತಾಗಿದೆ. ಯಾವ ಅಧಿಕಾರಿಯೇ ಆಗಲಿ ಲಂಚ ತಿಂದನೆಂಬ ಅಪಾದನೆ ಅವನ ಮೇಲೆ ಬಂದರೆ ಅಂಥವನನ್ನು ಕಠಿಣವಾಗಿ ಶಿಕ್ಷಿಸಲಾಗುವುದೆಂದು ಬಂಗಾಳ ಸರ್ಕಾರದ ಪ್ರಕಟನೆ ಹೊರಟಿದೆ.

ರೇಷನಿಂಗ್ ವಿರೋಧ

ಕರಾಚಿ ನಗರ ಸಭೆಯವರು ಅಲ್ಲಿ ಜಾರಿಗೆ ಬರಲಿರುವ ರೇಷನಿಂಗ್ ವ್ಯವಸ್ಥೆಯನ್ನು ವಿರೋಧಿಸಿ ಠರಾವು ಮಾಡಿದ್ದಾರೆ.

ದಾಸ್ತಾನಿದ್ದರೆ ರೇಷನ್ ಬರಲಿ

ಮೈಸೂರು ನಗರದಲ್ಲಿ ರೇಷನಿಂಗ್ ಶ್ರಮಷ ಡಿಸೆಂಬರ್ 1 ರಿಂದ ಜಾರಿಗೆ ಬರಲಿದೆ. ನಗರದ ಪ್ರತಿಯೊಬ್ಬ ಪ್ರಜೆಗೂ ನಿಗದಿಯಾದ ಕನಿಷ್ಠ ಪರಿಮಿತಿಯ ಆಹಾರವನ್ನಾದರೂ ಒದಗಿಸತಕ್ಕ ಜವಾಬ್ದಾರಿ ಹೊರೆಯನ್ನು ಸರ್ಕಾರವು ಹೊರುವುದು. ಕಡೇಪಕ್ಷ 2 ತಿಂಗಳಿಗೆ ಸಾಕಾಗುವಷ್ಟು ಆಹಾರವನ್ನಾದರೂ ಕೈಯಲ್ಲಿ ಸಿದ್ಧವಾಗಿಟ್ಟುಕೊಳ್ಳದೆ ರೇಷನಿಂಗ್ ಜಾರಿಗೆ ತರುವುದು ಬಹು ಸಾಹಸದ ಕೆಲಸ. ಕಳೆದ ವರ್ಷ ನವೆಂಬರ್ ಮಾಹೆಯಲ್ಲಿ ನಗರದ ಎಲ್ಲಾ ಮಿಲ್‌ಗಳಲ್ಲೂ ಭತ್ತ ತುಂಬಿ ತುಳುಕುತ್ತಿತ್ತು. ವರ್ತಕ ಸಂಘದವರು ದಿನಂಪ್ರತಿ ಸುಮಾರು 300 ಮೂಟೆಯನ್ನು ನಗರಕ್ಕೆ ಹಂಚುತ್ತಿದ್ದರು. ಸುಮಾರು 3 ಸಾವಿರ ಮೂಟೆಗಳನ್ನು ಲಕ್ಕಿಯ. ದಾಸ್ತಾನು ಇಡ್ಡೇಯುತ್ತಿತ್ತು. ಈಗ ಡಿಸ್ಟ್ರಿಕ್ಟಿನಲ್ಲಿರುವ ಮಿಲ್‌ಗಳೆಲ್ಲಾ ಖಾಲಿಯಾಗಿವೆ. ಜನಗಣತಿಯ 2 ದಿನದಲ್ಲಿಯಾದರೂ ಪ್ರಜೆಗಳಿಗೆ ಒಟ್ಟಾಗಿ 2 ದಿನದ ಆಹಾರವನ್ನು ಮುಂಚಿತವಾಗಿ ಒದಗಿಸಲಿಲ್ಲ. ಭಿಕ್ಷೆ ಬೇಡಿ ತಂದಾಗಲಿ, ಸಾಲ ಮಾಡಿ ತಂದಾಗಲಿ ಬ್ಲಾಕ್ ಮಾರ್ಕೆಟ್ಟಿನಲ್ಲಿ ಕೊಂಡಾಗಲಿ ತಿನ್ನುವುದು ನಿಂತುಹೋಗುವ ಈ ರೇಷನಿಂಗ್ ಕಾಲದಲ್ಲಿ ಸಾಕಾದಷ್ಟು ಆಹಾರವನ್ನು ಕೈಯಲ್ಲಿಟ್ಟುಕೊಳ್ಳದೆಹೋದರೆ ಜನಗಳಿಗೆ ಬಹಳ ತೊಂದರೆಯಾಗುವುದು.

ಕೆ. ಎಸ್. ಎಂ.

ಚನ್ನರಾಯಪಟ್ಟಣದ ಪೌರಸಭೆ

ಚನ್ನರಾಯಪಟ್ಟಣದ ನಗರ ಸಭೆಗೆ ಚುನಾವಣೆ ನಡೆದು ನಾಲ್ವರು ಕಾಂಗ್ರೆಸ್ ಉಮೇದುವಾರರೂ 6 ಮಂದಿ ಸ್ವತಂತ್ರರೂ ಜಯಶಾಲಿಗಳಾಗಿರುವರು.

ವೀಣೆ ವಿದ್ವಾಂಸರ ನಿಧನ

ಬುದ್ರಪಟ್ಟಣದ ಸುಪ್ರಸಿದ್ಧ ವೀಣೆ ವಿದ್ವಾಂಸರಾದ ಶ್ರೀ ಆರ್. ಸಿ ರಂಗನಾಥ ಶಾಸ್ತ್ರಿಗಳು ಅಸಂಪ್ರೂರಿಸ ಕಾಲವೆ ಬಳ ಅಕಸ್ಮಾತ್ ಜ್ಞಾನ ತಪ್ಪಿ ಬಿದ್ದು, ಕಾಲು ನೆಗ ಮುರುಟಿಕೊಂಡು ದುರ್ಮರಣಕ್ಕೀಡಾದರೆಂದು ವರದಿಯಾಗಿದೆ.

ಅರಸೀಕೆರೆಯಲ್ಲಿ ಚುನಾವಣೆ

ಅರಸೀಕೆರೆ ಮುನಿಸಿಪಾಲಿಟಿಯ 13 ಸ್ಥಾನಗಳಿಗೆ 13 ಮಂದಿ ಕಾಂಗ್ರೆಸ್ ಪಕ್ಷದವರೂ 4 ಮಂದಿ ಸ್ವತಂತ್ರರೂ ಚುನಾವಣೆಗೆ ನಿಂತಿರುವರು.

Editen, printed and published by A. R. Nagarajan, at the Sadhvi Press, D Subbiah Road, Mysore.

ಪತಿಯ ಮೇಲಿನ ಕೋಪಕ್ಕೆ ಪ್ರಾಣತ್ಯಾಗ

ಬೆಂಗಳೂರು ಸಿದ್ದಣ್ಣ ಛತ್ರಕ್ಕೆ ಸೇರಿದ ತೋಟದ ಬಾವಿಯಲ್ಲಿ ನಿನ್ನೆ 19 ವರ್ಷ ವಯಸ್ಸಿನ ಸರಸ್ವತಮ್ಮ ಎಂಬ ಯುವತಿಯ ದೇಹ ತೇಲುತ್ತಿತ್ತು. ಆಕೆಯು ಗಂಡನ ಮೇಲೆ ಮುನಿಸಿಕೊಂಡು ಪ್ರಾಣತ್ಯಾಗ ಮಾಡಿದಳೆಂದು ಹೇಳಲಾಗಿದೆ.

ಡಿಪೋ ನೌಕರರ ಮುಷ್ಕರ

ಬೆಂಗಳೂರು ನಗರದ ಸರ್ಕಾರಿ ಡಿಪೋಗಳಲ್ಲಿ ದುಡಿಯುತ್ತಿರುವ ನೌಕರರಿಗೆ ಸಂಬಳ ಸುಮಾರ್ಗವಾಗಿ ಸಂದಾಯವಾಗದೇ ಇರುವ ನಿಮಿತ್ತ, ಅವರು ವ್ಯಾಪಾರ ನಿಲ್ಲಿಸಿ ಮುಷ್ಕರವಾರಂಭಿಸುವುದಾಗಿ ವರ್ತಮಾನ ಬಂದಿದೆ.

ಡೆಪ್ಯುಟಿ ಕಾರ್ಯದರ್ಶಿ ಸ್ಥಾನ ರದ್ದು

ಸರ್ಕಾರದವರು ಈಗಿರುವ ಡೆಪ್ಯುಟಿ ಸೆಕ್ರಟರಿ ಸ್ಥಾನದ ಬದಲು ಅಡಿಷನಲ್ ಸೆಕ್ರಟರಿ ಸ್ಥಾನವನ್ನು ನಿರ್ಮಿಸಿ, ಆ ಸ್ಥಾನಕ್ಕೆ ಮಿ|| ಸಫಿ ದಾರಾಷಾ ರವರನ್ನು ನೇಮಿಸುವರೆಂದು ಗೊತ್ತಾಗಿದೆ.

ತುರುವೇಕೆರೆಯಲ್ಲಿ ಸ್ವತಂತ್ರರ ಜಯ

ತುರುವೇಕೆರೆ ಪೌರ ಸಭೆ ಚುನಾವಣೆಯಲ್ಲಿ 10 ಸ್ಥಾನಗಳಿಗೆ 20 ಸ್ವತಂತ್ರರೂ 6 ಮಂದಿ ಕಾಂಗ್ರೆಸ್ ಪಕ್ಷದವರೂ ಸ್ಪರ್ಧಿಸಿದ್ದರು. ಆ ಪೈಕಿ 10 ಮಂದಿ ಸ್ವತಂತ್ರರು ಜಯಶಾಲಿಗಳಾಗಿರುವರು.

ತೀರ್ಥಹಳ್ಳಿ ಪೌರ ಸಭೆಗೆ ರಾಜೀನಾಮೆ

ನೆನ್ನೆ ತೀರ್ಥಹಳ್ಳಿ ಪೌರ ಸಭೆಯಲ್ಲಿ ಆಹಾರ ವ್ಯವಸ್ಥೆ ವಿಷಯದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಯಿತಾಗಿ 6 ಮಂದಿ ಪೌರ ಸಭಾ ಸದಸ್ಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಲೆಬನಾನ್ ಗಲಭೆ - ಬ್ರಿಟಿಷರ ಆತಂಕ

ಲೆಬನಾನ್ ಪರಿಸ್ಥಿತಿಯ ಯೋಗಕ್ಷೇಮದ ಕುರಿತು ಬ್ರಿಟಿಷ್ ಸರ್ಕಾರದವ್ರಾಗಿನ್ನು ನೈತಿಕವಾಗಿ ಬ್ರಿಟಿಷ್-ಫ್ರೆಂಚ್ ಸಂಘಟನೆಯಾಗಬೇಕೆಂದು ಅನೇಕರ ಅಪೇಕ್ಷೆ. ಅಲ್ಲಿನ ಗಲಭೆ ನಿಲ್ಲುವ ತನಕ ಬ್ರಿಟಿಷ್ ಸರ್ಕಾರಕ್ಕೆ ಆತಂಕ ತಪ್ಪುವಂತಿಲ್ಲ. ಫ್ರೆಂಚರು ಲೆಬನಾನ್ ಪರಿಸ್ಥಿತಿ ಶಾಂತವಾಯಿತೆಂದು ವರದಿ ಮಾಡಿದ್ದರೂ ಬಿಕ್ಕಟ್ಟು ಇನ್ನೂ ಇಳಿಮುಖವಾಗಿಲ್ಲವೆಂದು ಲಂಡನ್ನಿನಲ್ಲಿ ಪರಿಗಣಿಸಲಾಗಿದೆ.

ಶತ್ರು ಮೇಲೆ ಧಾಳಿ

ಮಧ್ಯ ಮತ್ತು ನೈರುತ್ಯ ಶಾಂತಿ ಸಾಗರಗಳಲ್ಲಿನ ಶತ್ರು ಆಕ್ರಮಿತ ದ್ವೀಪಗಳ ಮೇಲೆ ನೆನ್ನೆ ಮಿತ್ರ ವಿಮಾನಗಳು ಹಾರಾಡಿ ಬಾಂಬುಗಳನ್ನು ಸುರಿಸಿ ಶತ್ರುವಿಗೆ ಅಗಾಧ ನಷ್ಟ ಉಂಟುಮಾಡಿರುವುವು.

ಶತ್ರು ಗೋಮೆಲ್ ಆಸೆ ಬಿಟ್ಟಿರು

ಜರ್ಮನರು ರಷ್ಯ ರಂಗದಲ್ಲಿ ಭಲವಾಗಿ ಹಿಡಿದಿದ್ದ ಗೋಮೆಲ್ ಕ್ಷೇತ್ರವನ್ನು ಇದಲ್ಲೇ ರಷ್ಯನರಿಗೆ ಬಿಟ್ಟು ಕೊಡಬೇಕಾಗಬಹುದೆಂದು ಸಿದ್ಧತೆ ನಡೆಸಿಕೊಂಡಿರುವರೆಂದು ಸುದ್ದಿ ಬಂದಿದೆ.

ಮಿತ್ರರ ಮುನ್ನಡೆ

ಆಸ್ಟ್ರೇಲಿಯಾ ಸೈನಿಕರು ಫಿನ್‌ಶೇವನ್ ರಂಗದಲ್ಲಿ ಒಂದು ಸಾವಿರ ಗಜ ಮುನ್ನುಗ್ಗಿರುವರು. ಬೋಗನ್‌ವಿಲ್ ರಂಗದಲ್ಲಿ ಅಮೆರಿಕನ್ನರು ಸಹಸ್ರ ಶತ್ರು ಯೋಧರನ್ನು ಕೊಂದಿರುವರು. ಮಿತ್ರರ 100 ಮಂದಿ ಮಡಿದಿರುವರು.

ಇಟಲಿಯಲ್ಲಿ ಅಸಾಧ್ಯ ಮಳೆ-ಗಾಳಿ

ಈಗ ಇಟಲಿ ರಣಕ್ಷೇತ್ರದಲ್ಲೆಲ್ಲಾ ಧಾರಾಕಾರವಾಗಿ ಮಳೆ ಹುಯ್ಯುತ್ತಿದೆ. ಮುನ್ನುಗ್ಗುವುದು ಮೋಟಾರ್ ಸೈನಿಕರಿಗೆ ಅಸಾಧ್ಯವಾಗಿದೆ. ಹಿಮ ದಟ್ಟವಾಗಿ ಸುರಿಯುತ್ತಿರುವುದರಿಂದ ಸೈನ್ಯಗಳ ಚಲನವಲನ ನಿಂತಿರುತ್ತದೆ.

ಸ್ತ್ರೀಯರ ಸೌಕರ್ಯಕ್ಕಾಗಿ

ಹೆಂಗಸರಿಗೆ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಕ್ಷ್ಮೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಟಿ. ಪುಟ್ಟಯ್ಯ ಬ್ರದರ್ಸ್, ಧೇವರಾಜ ಮಾರ್ಕೆಟ್, ಮೈಸೂರು

ಸಕ್ಕರೆ ಕಡ್ಲೆಕಾಯಿ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲಿ ಮತ್ತು ಸಂತೆ ಪೇಟೆ ಬ್ರಾಂಚಿನಲ್ಲಿ ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ

ಈ ದಿನ

ನಿಮ್ಮ ಕೆಲಸಗಳನ್ನೆಲ್ಲಾ ಬದಿಗಿಡಿರಿ;

ಕಾಫಿಗೆ (ಉಪಾಹಾರಕ್ಕೆ) ಬನ್ನಿರಿ !

ಮೈಸೂರು ನಗರದಲ್ಲಿ ಅತ್ಯಂತ ಆಕರ್ಷಣೀಯ, ಜನ ಪ್ರಿಯ ಮತ್ತು ಅಚ್ಚು ಮೆಚ್ಚಿನ

ಫಲಾಹಾರ ಮಂದಿರ

ಉತ್ತಮ ಆರೋಗ್ಯದ ರಕ್ಷಣೆಗಾಗಿ ಎಲ್ಲಾ ವ್ಯವಸ್ಥೆಗಳು !

ಕಾಫಿ ಮತ್ತು ರುಚಿಕರವಾದ ತಿಂಡಿಗಳು !!

ಅತ್ಯುತ್ತಮವೆಂದು ಕಂಡು ಕೇಳದುದಲ್ಲಾ ದೊರೆಯುವುದು.

ನಿಮ್ಮ ಮಿತ್ರರೊಡಗೂಡಿ ಬರಲು ಮರೆಯಬೇಡಿ.

ಶ್ರೀ ಕೃಷ್ಣಭವನ

ಮಾರ್ಕೆಟ್ ಚೌಕ, : : ಮೈಸೂರು.

(ಶ್ರೀಮನ್ಮಹಾರಾಜರವರ ಕೃಪಾಪೋಷಿತಗಳ ಪಾತ್ರವಾದುದು)

WEEKLY EDITION

ಸಂಪುಟ ೮] ಸೋಮವಾರ ೨೨--೧೧--೪೪ [ಸಂಚಿಕೆ ೪

ಜಪಾನ್ ಮೇಲೆ ರಷ್ಯ ಯುದ್ಧ ಹೂಡುವುದೇ ?

ಮಾ॥ ಸಿಪೋಸರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು

ಇಂದೂರು ಸಂಸ್ಥಾನದಲ್ಲಿ ರಾಜಕೀಯ ಬಂದಿಗಳ ಬಿಡುಗಡೆ

ಇಂದೂರಿನಲ್ಲಿ ರಾಜಕೀಯ ಬಂದಿಗಳ ಬಿಡುಗಡೆ

ಇಂದೂರು ಸಂಸ್ಥಾನದಲ್ಲಿರುವ ರಾಜಕೀಯ ಬಂಧಿಗಳನ್ನೆಲ್ಲಾ ಯಾವ ನಿಬಂಧನೆಯೂ ಇಲ್ಲದೆ ಬಿಡುಗಡೆ ಮಾಡಬೇಕೆಂದು ಇಂದೂರು ಮಹಾರಾಜರವರು ಆಜ್ಞೆ ಮಾಡಿದ್ದಾರೆ. ಇನ್ನು ಒಂದೆರಡು ದಿನಗಳಲ್ಲಿ ಅವರೆಲ್ಲರೂ ಬಿಡುಗಡೆಯಾಗಲಿರುವರು. ಈ ಬಗ್ಗೆ ಇಂದೂರ, ಶಾಸನ ಸಭಾ ಸದಸ್ಯರೊಬ್ಬರು ಇಂದೂರು ಮಹಾರಾಜರನ್ನು ಭೇಟಿಮಾಡಿ, ಅಲ್ಲಿಯ ರಾಜಕೀಯ ಬಿಕ್ಕಟ್ಟನ್ನು ಸಹ ಪರಿಹರಿಸಬೇಕೆಂದು ಕೋರಿದಾಗ, ಮಹಾರಾಜರವರು ಎಲ್ಲವನ್ನೂ ಸಾವಧಾನವಾಗಿ ಕೇಳಿ, ಬಿಕ್ಕಟ್ಟನ್ನು ಪರಿಹರಿಸುವುದಾಗಿ ಭರವಸೆಯಿತ್ತರು.

ಬಿಹಾರ್ ಪರಿಸ್ಥಿತಿ ಹದಕ್ಕೆ ಬಂದಿಲ್ಲ

ಬಿಹಾರ್ ಪ್ರಾಂತ್ಯದಲ್ಲಿ ಸರ್ಕಾರವನ್ನು ಬುಡಮೇಲು ಮಾಡುವ ಚಳುವಳಿ ಇನ್ನೂ ಅಡಗಿಲ್ಲವೆಂದೂ ಕಳೆದ ವರ್ಷ ಹದಗೆಟ್ಟ ಪರಿಸ್ಥಿತಿ ಇನ್ನೂ ಸಾಧಾರಣ ಸ್ಥಿತಿಗೆ ಬಂದಿಲ್ಲವೆಂದೂ, ಕೇಂದ್ರ ಸರ್ಕಾರಕ್ಕೆ ದೂರುಗಳು ಬರುತ್ತಿವೆ ಎಂಬುದಾಗಿ ಕೇಂದ್ರ ಶಾಸನ ಸಭೆಯಲ್ಲಿ ಸರ್ ರೆಜಿನಾಲ್ಡ್ ಮ್ಯಾಕ್ಸ್‌ವೆಲ್‌ರವರು ಹೇಳಿರುವರು.

ಸರ್ಕಾರದ ಮುಚ್ಚುಮರೆ

ಬಂಗಾಳ ಮತ್ತು ಒರಿಸ್ಸಾ ಪ್ರಾಂತ್ಯಗಳಲ್ಲಿ ತಲೆದೋರಿರುವ ಕ್ಷಾಮ ಪರಿಸ್ಥಿತಿ ಸಂಗತಿಯನ್ನು ಇದ್ದದ್ದು ಇದ್ದ ಹಾಗೆ ಹೇಳದೆ ಭಾರತ ಸರ್ಕಾರದವರು ಮುಚ್ಚುಮರೆ ಮಾಡುತ್ತಿರುವರೆಂದು, ಪಂಡಿತ ಹೃದಯನಾಥ ಕುಂಜ್ರುರವರು ಒಂದೂವರೆ ಗಂಟೆಕಾಲ ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ತಾವು ಕಣ್ಣಾರೆ ಕಂಡು ಬಂದ ದಾರುಣ ಪರಿಸ್ಥಿತಿಯನ್ನು ವಿವರಿಸಿದರು.

ಕೂಡಲೆ ನಾಯಕರನ್ನು ಬಿಡಿ

ಈ ಕೂಡಲೆ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸೆರೆಯಿಂದ ಹೊರಕ್ಕೆ ಬಿಟ್ಟು ಅವರ ರೀತಿಯನ್ನು ಕಾದುನೋಡಿ ಅನಂತರ ಎಲ್ಲ ಮುಂದಾಳುಗಳನ್ನೂ ಬಿಡುಗಡೆ ಮಾಡಿ ದೇಶದ ವಿಶ್ವಾಸ ಗಳಿಸಬೇಕಾದುದು ಸರ್ಕಾರದ ಕರ್ತವ್ಯವೆಂದು ರಾಯ್ ಬಹದ್ದೂರ್ ಆರ್. ಬಿ. ಶ್ರೀ ನಾರಾಯಣ್ ಮಹಾಶಯರವರು ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ನುಡಿದಿರುವರು.

ರಷ್ಯನರು ಖಾಲಿಮಾಡಿದರು

ಕ್ರೀಟ್ ಪರಿಸ್ಥಿತಿ ಅಷ್ಟು ಉತ್ತಮವಾಗಿರಲಿಲ್ಲವಾದ ನಿಮಿತ್ತ ಕೆಂಪು ಸೈನ್ಯಗಳನ್ನು ರಷ್ಯದ ಸರ್ಕಾರವು ಜಿಟೋಮಿರ್‌ನಿಂದ ವಾಪಸು ಕರೆಸಿಕೊಂಡಿದೆ. ಆ ಸ್ಥಳವನ್ನು ಕೆಂಪು ಸೈನ್ಯ ಕೆಲವು ದಿನಗಳ ಹಿಂದೆ ಆಕ್ರಮಿಸಿತ್ತು.

ಸಿಪೋಸರ ರಾಜೀನಾಮೆ

ಇಷ್ಟು ಕಾಲಾನಂತರ ರಾಜ್ಯ ಸೂತ್ರಗಳು ಜರ್ಮನರ ವಶವಾಗಿರುವ ಬಲ್ಗೇರಿಯ [illegible] ರಾಜ್ಯಾಡಳಿತ [illegible] ಕ್ರಮದಲ್ಲಿ [illegible] ಘಟನೆಗಳನ್ನು [illegible] ಭಾಷಣಕ್ಕೆ [illegible] ನಾಯಕರಾದ [illegible] ಸಿಪೋಸರಿಗೆ [illegible] ಸಿಗದಿದ್ದುದರಿಂದ, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಇವರು [illegible] [illegible] ತಿಳಿದುಬಂದಿದೆ.

ಶತ್ರುವಿನ ಮೇಲೆ ಅಂತ್ಯ ಧಾಳಿ

ರಾಯಲ್ ವಿಮಾನ ದಳಗಳು ಜರ್ಮನಿಯ ಮೇಲೆ ಆರಂಭಿಸಿರುವ ಧಾಳಿಯು ಈಗ ಉಗ್ರ ರೂಪವನ್ನು ತಾಳಿದೆ. ಹಿಂದೆ ಚರ್ಚಿಲ್ ಮತ್ತು ರೂಸ್‌ವೆಲ್ಟರು ಭವಿಷ್ಯ ನುಡಿದಿದ್ದ ಭಾರಿ ವಿಮಾನ ದಳಗಳು ಗುರುವಾರ ಜರ್ಮನಿಯ ಮೇಲೆ ತೋರಿಕೆ ಉಗ್ರವಾಗಿ ಧಾಳಿ ನಡೆಸಿದವು. ಈಗ ನಡೆಯುತ್ತಿರುವ ಈ ಧಾಳಿಯೇ ಶತ್ರುವಿನ ಮೇಲಿನ ಅಂತ್ಯದ ಧಾಳಿ. ಇದರಿಂದಲೇ ಜರ್ಮನಿಯನ್ನು ನುಚ್ಚುನೂರು ಮಾಡುವ ಪ್ರಯತ್ನ ನಡೆಸಲಾಗಿದೆ.

ಜಪಾನಿನ ಮೇಲೆ ರಷ್ಯಾ ಯುದ್ಧ ಮಾಡುವುದೆ?

ರಷ್ಯಾದಿಂದ ಜರ್ಮನಿಯನ್ನು ಹೊಡೆದಟ್ಟಿದ, ಓಡಿಸಿದ ನಂತರ, ರಷ್ಯಾವು ಮಿತ್ರರೊಡನೆ ಸೇರಿ ಜಪಾನಿನ ಮೇಲೆ ಯುದ್ಧ ಮಾಡಬಹುದೆಂದು ಊಹಿಸಲಾಗಿದೆ. ಜಪಾನಿನ ಮೇಲೆ ನಡೆಸಲು ಈ ದ್ವಿತೀಯ ರಂಗಕ್ಕೆ ಮಿತ್ರರು ಸಕಲ ಸಿದ್ಧತೆಗಳನ್ನು ಮಾಡುತ್ತಿದ್ದಾರೆಂದೂ, ಈ ದೃಷ್ಟಿ ಭಾರತವು ಬಹು ಮುಖ್ಯ ರಣಕ್ಷೇತ್ರವಾಗಬಹುದೆಂದೂ ಹೇಳಲಾಗಿದೆ.

ಆಗ್ನೇಯ ಏಷ್ಯಾ ಕಮ್ಯಾಂಡಿನ ಖರ್ಚು

ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಸಿಲೋನಿನಿಂದ ವೆಚ್ಚದ ವಿಷಯವಾಗಿ ಬಂದ ಪ್ರಶ್ನೆಗೆ ಪ್ರಧಾನ ಸೇನಾ ನಾಯಕರು ಹೀಗೆ ಹೇಳಿದರು. ಖರ್ಚಿನ ಪಟ್ಟಿಯನ್ನು ಕೊಡಲು ಇಂಡಿಯಾ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಹಿಂದೂಸ್ಥಾನದ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಇಂಡಿಯಾ ಸರ್ಕಾರವು ಈ ವೆಚ್ಚವನ್ನು ತಾನೇ ವಹಿಸಬೇಕೆ ಅಥವಾ ಇತರರಿಗೆ ಜೊತೆ ಸೇರಿ ಎಂಬುದನ್ನು ನಿರ್ಧರಿಸ ಬೇಕು.

ದೂರ ಪ್ರಾಚ್ಯಕ್ಕೆ ಆಫ್ರಿಕಾ ದಳ

ದೂರ ಪ್ರಾಚ್ಯದ ಯುದ್ಧರಂಗಗಳಲ್ಲಿ ಪೂರ್ವ ಆಫ್ರಿಕಾ ದಳಗಳ [illegible] ಜಪಾನಿನ ಸಂಗ್ರಾಮದಲ್ಲಿ ಭಾಗವಹಿಸುವ ಆಫ್ರಿಕಾ ಸೇನಾ [illegible] ಹೇಳುವರು

ಭಾರತ ಸ್ವಾತಂತ್ರ್ಯಕ್ಕೆ ಅಮೆರಿಕ ಹೊಣೆ

ರೋಚೆಸ್ಟರ್ ವಿಶ್ವ ವಿದ್ಯಾನಿಲಯದಲ್ಲಿ ಮಿಸೆಸ್ ಕ್ಲೇರ್ ಬೂತ್ ಲೂಸ್ ಎಂಬುವರು ಹೀಗೆ ಭಾಷಣ ಮಾಡಿದರು:

ಶಾಂತಿ ಸೌಹಾರ್ದಗಳಿಂದ ಹಿಂದೂಸ್ಥಾನದ ಸ್ವಾತಂತ್ರ್ಯವನ್ನು ಸಾಧಿಸುವುದಾದರೆ, ಅಮೆರಿಕದ ಪ್ರಜಾ ಪ್ರಭುತ್ವ ಸ್ಥಾಪನೆಗಾಗಿ ಅತ್ಯಂತ ಹೋರಾಟದಲ್ಲಿ ವಿಜಯ ಹೊಂದಿದಂತೆಯೇ ಸರಿ. ಅಷ್ಟಕ್ಕೇ ಅಮೆರಿಕದ ಜವಾಬ್ದಾರಿಯು ತಪ್ಪುವುದಿಲ್ಲ. ಹಿಂದೂಸ್ಥಾನವು ಸ್ವತಂತ್ರವಾಗಿಯೇ ಉಳಿಯಲು [illegible] ವುದಾಗಿಯೂ ಅದು ಭರವಸೆ ಕೊಡಬೇಕು. ಮತ್ತು ಇದರಿಂದ ಬ್ರಿಟನ್ನಿಗೆ ವಿನಾಶ ಹಾನಿಯಾಗದಂತೆಯೂ ನೋಡಿಕೊಳ್ಳಬೇಕು. ಭಾರತ ಸ್ವಾತಂತ್ರ್ಯಕ್ಕಾಗಿ ಅಮೆರಿಕವು ಮೂರು ಕೆಲಸಗಳನ್ನು ಮಾಡಬೇಕು. ಮೊದಲನೆಯದಾಗಿ ಬ್ರಿಟನ್ನಿನ ವ್ಯಾಪಾರಕ್ಕೂ ಮತ್ತು ದ್ರವ್ಯಾರ್ಜನೆಗೂ ಧಕ್ಕೆ ತಗಲದಂತೆ ಹೊಸ ಹೊಸ ವ್ಯಾಪಾರ ಕೇಂದ್ರಗಳನ್ನು ಕಲ್ಪಿಸಿಕೊಡಬೇಕು. ಹಿಂದೂಸ್ಥಾನದಲ್ಲಿ ಆತ್ಮೀಯ ಶಾಂತ ಸೌಹಾರ್ದದ ಮಾರ್ಗದಿಂದ ಸ್ವಾತಂತ್ರ್ಯ ಸ್ಥಾಪನೆಯು ಆಗುವಂತೆ ಸಹಾಯ ಮಾಡಬೇಕು. ಮತ್ತು ಸ್ವತಂತ್ರ ಭಾರತದ ರಾಜಕೀಯ ಸ್ವಾತಂತ್ರ್ಯವು ಶಾಶ್ವತವಾಗಿ ಉಳಿಯುವಂತೆ ಅಮೆರಿಕವೂ ಬ್ರಿಟಿಷ್ ಸಾಮ್ರಾಜ್ಯವೂ ಜಂಟಿಯಾಗಿ ಭರವಸೆ ಕೊಡಬೇಕು. ದುರಾಸೆ [illegible] ನೆರೆಹೊರೆಯವರಿಗೆ ಬಡ ಭಾರತವು ಬಲಿ ಬೀಳದಂತೆ ನೆರವಾಗಬೇಕು.

ಮುಸೋಲಿನಿ ಸ್ಥಾನಕ್ಕೆ ಮತ್ತಾರು

ಜರ್ಮನರು ಮುಸೋಲಿನಿ ಅರೋಗ್ಯವಾಗಿರುವನೆಂದು [illegible] ಆತನ [illegible] ಕ್ಷೀಣಿಸಿದೆಯೆಂದು [illegible] ಮುಸೋಲಿನಿ [illegible] ಸರ್ಕಾರದ ನಾಯಕನಾಗ [illegible] ಮುಸೋಲಿನಿ [illegible] ಜರ್ಮನರು ಯಾರಿಗೂ [illegible]

ಪೌರಸಭೆಯ ವಿಶೇಷ ಸಭೆ

[illegible]

[illegible] ದಿನಗಳಿಂದ ಜಾರಿಗೆ [illegible] ರೇಷನಿಂಗ್ ವ್ಯವಸ್ಥೆ [illegible] ನ್ಯೂನತೆಗಳನ್ನು [illegible] ನಿವಾರಿಸಲು [illegible] ರಾಜಕೀಯ [illegible] ವಿಚಾರಗಳಲ್ಲಿ ಚರ್ಚಿಸಲು [illegible] ವೆಂಕಟರಮಣಯ್ಯ ಮತ್ತು [illegible] ಸದಸ್ಯರು ಒಂದು ನಿರ್ಣಯವನ್ನು [illegible]. ಇದನ್ನು ಚರ್ಚಿಸಲು [illegible] ಗುರುವಾರ [illegible] ಸಭೆಯು ನಡೆಯಲಿದೆ

ಆರಂಭ ಭಾಷಣ

[illegible] ಭಾಷಣ [illegible] ವಿದ್ಯಾರ್ಥಿ ಆರಂಭ ಭಾಷಣವನ್ನು [illegible] ಸದಸ್ಯರಾದ ಶ್ರೀಮಾನ್ ಯು. ಎಲ್. [illegible] ರವರು [illegible] ಮಂದಿರದಲ್ಲಿ [illegible] ಗಂಟೆಗೆ [illegible] ದಯೆಯಿಟ್ಟು ಒಪ್ಪಿರುತ್ತಾರೆ. ಶ್ರೀ ಎಂ. ವಿ. [illegible] ರವರು ಅಧ್ಯಕ್ಷತೆ ವಹಿಸುವರು.

ಕನ್ನಡ ಸಾಹಿತ್ಯ ಸಮ್ಮೇಳನ

ಇದೇ ಡಿಸೆಂಬರ್ [illegible] ಗಳಲ್ಲಿ ಸಮ್ಮೇಳನವು [illegible] ಯಲ್ಲಿ ನಡೆಯುವುದು [illegible] ಕನ್ನಡ [illegible] ಸಮ್ಮೇಳನವು [illegible] ಪ್ರಾಂತ್ಯದಲ್ಲಿ ನಡೆಯಲಿದೆ. [illegible] ಪ್ರದರ್ಶನ, ಮಹಿಳಾ ಸಮ್ಮೇಳನ, ಅಖಿಲ ಕರ್ನಾಟಕ [illegible] ಸಮ್ಮೇಳನ, [illegible] ಕೂಟ, ವಿವಿಧ ಮನರಂಜನೆ [illegible] ಏರ್ಪಾಟುಗಳನ್ನು [illegible] ಸ್ವಾಗತ ಸಮಿತಿಯು ನಿರ್ಧರಿಸಿದೆ.

ಕೇಂದ್ರ ಶಾಸನ ಸಭೆಯ ಚುನಾವಣೆಯೆ ?

ಕೇಂದ್ರ ಶಾಸನ ಸಭೆಯ [illegible] ಚುನಾವಣೆ [illegible] "[illegible]" ಪತ್ರಿಕೆಯು [illegible] [illegible] ಕಾಂಗ್ರೆಸ್ [illegible] ಸಮ್ಮೇಳನದಲ್ಲಿ [illegible] [illegible] [illegible]

ಜರ್ಮನರು ಲಕ್ಷ ರಷ್ಯನ್ ಶವಗಳನ್ನು ಸುಟ್ಟರು

[illegible]

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ|| ೨೨-೧೧-೪೩ರಿಂದ ೨೮-೧೧-೪೩ರವರೆಗೆ

ಮೇಷ — ಈ ವಾರ ನಿಮ್ಮ ಆರೋಗ್ಯ ಉತ್ತಮವಾಗಿದೆ. ಆರ್ಥಿಕ ಸ್ಥಿತಿ ಸಾಧಾರಣವಾಗಿರುತ್ತೆ. ಮಾನಸಿಕ ಸ್ಥಿತಿ ಉತ್ತಮವಾಗಿದೆ. ವ್ಯಾಪಾರ, ನೌಕರಿಗಳಲ್ಲಿ ಗುಪ್ತ ಶತ್ರುಗಳ ಪೀಡೆ, ಪ್ರವಾಸದಲ್ಲಿ ಹೆಚ್ಚು ಖರ್ಚು, ಶುಭಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು. ತಾ|| ೨೩, ೨೪ ಚಿಂತೆ, ಅನಾರೋಗ್ಯ.

ವೃಷಭ — ಈ ವಾರ ಆರೋಗ್ಯ ಕೆಡುವ ಸಂಭವವಿದೆ. ಮಾನಸಿಕ ಚಿಂತೆ, ಸಾಂಪತ್ತಿಕ ದೃಷ್ಟಿಯಿಂದಲೂ ಅಷ್ಟು ಉತ್ತಮವಿಲ್ಲ. ಉದ್ಯೋಗ, ನೌಕರಿಗಳಲ್ಲಿ ವೃಥಾ ದೂರು ಕೇಳಬೇಕಾಗುತ್ತೆ, ಪ್ರವಾಸದಲ್ಲಿ ವಿಘ್ನ. ತಾ|| ೨೪, ೨೫ ಅಪ್ರಿಯವಾರ್ತೆ, ಸಂಕಟ.

ಮಿಥುನ — ನಿಮಗೆ ಈ ವಾರ ಕೊಂಚ ತೊಂದರೆಯಾದರೂ ಉತ್ತಮ ಭವಿಷ್ಯವಿದೆ, ಆರೋಗ್ಯ ಚೆನ್ನಾಗಿದೆ, ಆರ್ಥಿಕ ತೊಂದರೆ, ಮಾನಸಿಕ ಚಿಂತೆ, ಉದ್ಯೋಗಾದಿಗಳಲ್ಲಿ ಶತ್ರುಪೀಡೆ, ಪ್ರವಾಸ ಮತ್ತು ಶುಭ ಕಾರ್ಯಗಳಲ್ಲಿ ವಿಘ್ನ. ತಾ|| ೨೨, ೨೩ ಖರ್ಚು, ಕಲಹ.

ಕರ್ಕ — ಈ ವಾರ ನಿಮಗೆ ಮಾನ ಸನ್ಮಾನವು ದೊರಕುವವು. ನೌಕರಿ ಮುಂತಾದುವುಗಳಲ್ಲಿ ಮನೋರಥ ಸಫಲ, ಸಹೋದರರ ಭೇಟಿ, ಪ್ರವಾಸದಲ್ಲಿ ಜಯ, ಬರಹಗಾರರಿಗೆ ಯಶಸ್ಸು ಲಭಿಸುವುದು. ತಾ|| ೨೬ ಮೃಷ್ಟಾನ್ನ ಭೋಜನ, ಸುವಾರ್ತೆ.

ಸಿಂಹ — ಈ ವಾರ ಎಲ್ಲಾ ವಿಧದಲ್ಲೂ ನಿಮಗೆ ಉತ್ತಮವಾಗಿದೆ. ಕೈಗೊಂಡ ಕೆಲಸಗಳು ನಿರ್ವಿಘ್ನವಾಗಿ ನೆರವೇರುವುವು. ವ್ಯಾಪಾರದಲ್ಲಿ ಲಾಭ, ಉದ್ಯೋಗದಲ್ಲಿ ಪ್ರಗತಿ, ಪ್ರವಾಸದಲ್ಲಿ ಲಾಭ, ಸಜ್ಜನರ ದರ್ಶನ ಪ್ರಾಪ್ತಿ, ಗೌರವ ಲಾಭ, ಬಂಧುಗಳ ಭೇಟಿ. ತಾ|| ೨೬, ೨೭ ಲಾಭ.

ಕನ್ಯಾ — ಈ ವಾರ ಆರೋಗ್ಯ ಸಾಂಪತ್ತಿಕ ಸ್ಥಿತಿಗಳು ಚೆನ್ನಾಗಿರುವುವು. ವ್ಯಾಪಾರ ಉದ್ಯೋಗಗಳಲ್ಲಿ ಪ್ರಗತಿ ಮತ್ತು ಲಾಭ, ಧನಿಕ ಮಿತ್ರರ ಸಹಾಯದಿಂದ ಸಂಕಟದಿಂದ ಪಾರಾಗುವಿರಿ. ಮಾನಸಿಕ ಚಿಂತೆ, ಪ್ರವಾಸದಲ್ಲಿ ಸಿದ್ಧಿ. ತಾ|| ೨೨ ಗಲಾಟೆ, ಖರ್ಚು.

ತುಲಾ — ಆರೋಗ್ಯ ಕೆಡುವ ಸಂಭವವಿರುವುದರಿಂದ ಆಹಾರ ವಿಷಯದಲ್ಲಿ ಜಾಗರೂಕತೆಯಿಂದಿರಿ. ಸಾಂಪತ್ತಿಕ ಸ್ಥಿತಿ ಉತ್ತಮಗೊಳ್ಳುವುದು. ವ್ಯಾಪಾರಾದಿಗಳಲ್ಲಿ ಲಾಭ, ಶುಭಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು. ತಾ|| ೨೬, ೨೭ ಖರ್ಚು.

ವೃಶ್ಚಿಕ — ಈ ವಾರ ಆರೋಗ್ಯ ಚೆನ್ನಾಗಿರುವುದು. ಉತ್ಸಾಹದಿಂದ ಉದ್ಯೋಗಾದಿಗಳಲ್ಲಿ ಪ್ರಗತಿ, ಹೆಚ್ಚು ಖರ್ಚು, ವ್ಯವಹಾರದಲ್ಲಿ ಕಾರ್ಯ ಹಾನಿ. ತಾ|| ೨೪, ೨೫, ೨೬ ಚಿಂತೆ, ಕಲಹ.

ಧನುಸ್ಸು — ಈ ವಾರ ಆರ್ಥಿಕ ಮಾನಸಿಕ ಮತ್ತು ಆರೋಗ್ಯ ದೃಷ್ಟಿಯಿಂದ ಉತ್ತಮವಾಗಿದೆ. ವ್ಯಾಪಾರ, ಉದ್ಯೋಗಾದಿಗಳಲ್ಲಿ ಪ್ರಗತಿ ಮತ್ತು ಲಾಭ, ಪ್ರವಾಸ ಮತ್ತು ಶುಭ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು. ತಾ|| ೨೪, ೨೫ ಮಿತ್ರರಿಂದ ಲಾಭ.

ಮಕರ — ಆರೋಗ್ಯದ ಕಡೆ ಹೆಚ್ಚು ಗಮನವಿಡಿರಿ, ಮಾನಸಿಕ ತೊಂದರೆ, ವ್ಯಾಪಾರಾದಿಗಳಲ್ಲಿ ಶತ್ರುಪೀಡೆ, ಆದಾಯ ಹೆಚ್ಚಾಗಿದ್ದರೂ ಖರ್ಚು ಹೆಚ್ಚು. ತಾ|| ೨೬ ಮಿತ್ರರ ಪ್ರೋತ್ಸಾಹ, ಅಲ್ಪ ಲಾಭ.

ಕುಂಭ — ಈ ವಾರ ಆರೋಗ್ಯ ಆರ್ಥಿಕ ಮಾನಸಿಕ ಸ್ಥಿತಿಗಳು ಸಾಧಾರಣವಾಗಿವೆ. ಉದ್ಯೋಗಾದಿಗಳಲ್ಲೂ ಸಮ ಫಲ. ಪ್ರವಾಸ ಅಷ್ಟೇನೂ ಹಿತಕರವಲ್ಲ. ತಾ|| ೨೬ ವಿಶ್ರಾಂತಿ ಕಡಿಮೆ.

ಮೀನ — ಮಿತ್ರರನ್ನು ಕಳೆದುಕೊಳ್ಳಬೇಡಿ, ಆಪತ್ತಿನ ಸಮಯದಲ್ಲಿ ಸಹಾಯವಾಗುತ್ತದೆ. ಉದ್ಯೋಗಾದಿಗಳಲ್ಲಿ ಎಚ್ಚರಿಕೆಯಿಂದಿರಿ. ಮಾನಸಿಕ ಚಿಂತೆ. ತಾ|| ೨೪, ೨೬, ಹೆಚ್ಚು ಖರ್ಚು, ಅಪ್ರಿಯವಾರ್ತೆ

ಜೋಳಿಗೆ

"ಸ್ವಾಮಿ, ಲಕ್ಷ್ಮೀಪತಿಗಳೇ! ನಿಮ್ಮ ಅಟ್ಟಿಕೆಯ ತುಂಬಾ ಅಷ್ಟೊಂದು ಚಿಲ್ಲರೆ ಇಟ್ಟುಕೊಂಡಿದೀರಲ್ಲಾ, ಈ ದರಿದ್ರನಾರಾಯಣನಿಗೆ ಕೊಂಚ ದಯಪಾಲಿಸೀಪ್ಪಾ. ಚಿಲ್ಲರೆ ಸಿಕ್ಕದೆ ಪೇಚಾಡುತಿದೀನಿ"

"ನಾನು ಧನಲಕ್ಷ್ಮೀ ಪೂಜೆಗೋಸ್ಕರ ನಾಣ್ಯ ಶೇಖರಿಸಿದೀನಿ. ನಿನಗೆ ಅದರಲ್ಲಿ ಒಂದು ಹುಡಿಕಾಸು ಕೂಡ ಕೊಡುವುದಿಲ್ಲ. ಇಲ್ಲಿಂದ"

* * * *

ಭಾರಿ ರೈಲ್ವೆ ನಿಲ್ದಾಣ. ಹಾಲು, ಹೊಸರುಗಳ ಡಬ್ಬಗಳನ್ನು ಜೋಗಿಗಳ ಕೊಳಕ್ಕೆ ಭರದಿಂದ ಸಾಗಿಸಲಾಗುತ್ತಿದೆ. ದಾರಿಯುದ್ದಕ್ಕೂ ತುಳುಕಿ ಚೆಲ್ಲಾಡುತ್ತಿದೆ.

"ಅಯ್ಯಾ, ನೀವು ಚೆಲ್ಲಾಡುವುದರ ಬದಲು, ನಾಲ್ಕು ಸೀಸೆ ಹಾಲನ್ನು ದಯಪಾಲಿಸಿ, ಹೊಟ್ಟೆಗಿಲ್ಲದೆ ಸಾಯುತ್ತಿರುವ ಕೂಸುಗಳ ಪ್ರಾಣ ಉಳಿಸಿರಯ್ಯ"

"ತಪ್ಪಿದರೆ ಕಳ್ಳರೇ. ಎಲೆಲ್ಲಾ, ಯಾರಿ ಮಕ್ಕಳೂ ಸಕ್ಕರೆ ಸಿಗುವುದಿಲ್ಲ. ನನ್ನ ದಾರಿಗೆ ಅಡ್ಡ ಬಂದರೆ ಒದಿಯುವೆ, ಪಕ್ಕಕ್ಕೆ ಸರಿ"

* * * *

ಸಮುದ್ರದ ತೀರ. ಒಂದು ಹಡಗು ತುಂಬಿದ ಲಾರಿ ಬಂತು. ಹಿಟ್ಟನ್ನು ನೀರಿಗೆ ಸುರಿಯಲಾಗುತ್ತಿತ್ತು.

ಅಪ್ಪಾ! ಕೆಲವು ಚೀಲ ಹಿಟ್ಟುಕೊಟ್ಟು ನಮ್ಮ ಗ್ರಾಮದ ಹಸಿವು ಇಂಗಿಸಿ ಪುಣ್ಯ ಕಟ್ಟಿಕೊಳ್ಳಿರಯ್ಯ"

"ಸಮುದ್ರಕ್ಕೆ ಸುರಿಯಬೇಕೆಂದು ನನ್ನ ಮೇಲ್ಪಟ್ಟವರ ಅಪ್ಪಣೆಯಾಗಿದೆ. ಹಿಟ್ಟಿಗೆ ಕೈಹಾಕಿದರೆ ಪೆಟ್ಟು ಬಿದ್ದೀತು. ದೂರದಿಂದ"

"ಭೀಮ"

ನರ್ವಾನ್ಟೈನ್

ನರಗಳ ಶಕ್ತಿಗೆ; ವೀರ್ಯವೃದ್ಧಿಗೆ

ಉಪಯೋಗಿಸುವ ವಿಧಾನ.—

ಮಲಗುವ ವೇಳೆ ಹಾಲು ಟೀನ್ಸ್‌ಫೂನ್ ಬಟ್ಟಲು ಹಾಲಿನೊಡನೆ

ದೊಡ್ಡ ಬಾಟಲ್ ರೂ. 3-4-0 ಮಾತ್ರ

ಸಣ್ಣ ಬಾಟಲ್ ರೂ 1-4-0 „

ಪ್ಯಾಕಿಂಗ್ ಮತ್ತು ಪಾರ್ಸಲ್ ಛಾರ್ಜು ಪ್ರತ್ಯೇಕ

ಈ ನಮ್ಮ ಔಷಧಕ್ಕೆ ದಸರಾ ವಸ್ತು ಪ್ರದರ್ಶನದಲ್ಲಿ ಪದಕ ದೊರೆತಿರುತ್ತದೆ.

ವಿಳಾಸ:—

ಕೆ. ಇ. ಎ. ಪ್ರೊಡಕ್ಟ್ಸ್

ಹಳೆ ಮೈಸೂರು ಬ್ಯಾಂಕ್ ರಸ್ತೆ,

ಮೈಸೂರು

ಮಗು ಬದುಕಿಸಲು ಹೋಗಿ ಸುಳಿಗೆ ಸಿಕ್ಕಿದಳು

ಕೆನ್‌ಟಾಸಿ ಬಳಿ ನದಿಯಲ್ಲಿ ತನ್ನ ಮಗು ಮುಳುಗಿಕೊಂಡ ಪ್ರಯುಕ್ತ ಅದನ್ನು ಬದುಕಿಸಲು ಒಬ್ಬ ಹೆಂಗಸು ನೀರಿಗೆ ಧುಮುಕಿ ಎದುರು ದಡ ಸೇರುವ ಸಾಹಸ ಮಾಡಿದ್ದಳು. ಆದರೆ ನಡುವೆ ಸುಳಿಗೆ ಸಿಕ್ಕಿ ಆಕೆ ಮೃತ್ಯುವಿಗೆ ಆಹುತಿಯಾಗಬೇಕಾಯಿತೆಂದು ತಿಳಿದು ಬಂದಿದೆ.

ತುರ್ಕಿ ತಾಟಸ್ಥ್ಯ ವಹಿಸಿಲ್ಲ

ಹಿಂದೆ ನಡೆದ ಬ್ರಿಟಿಷ್-ತುರ್ಕಿ ಸಂಧಿ ನಿಯಮಗಳಂತೆ ತುರ್ಕಿದೇಶವು ಬ್ರಿಟಿಷರಿಗೆ ಬೆಂಬಲವಾಗಿ ನಿಂತೇ ನಿಂತಿರುವುದು. ಬ್ರಿಟಿಷರಿಗೂ ಜರ್ಮನರಿಗೂ ನಡೆಯುತ್ತಿರುವ ಈ ಯುದ್ಧದಲ್ಲಿ ತುರ್ಕಿಯು ತಟಸ್ಥವಾಗಿ ಕುಳಿತಿಲ್ಲ. ಎಂಬುದಾಗಿ ಹುಸೇನ್‌ಸಾಲ್ ಟಿ... ಎಂಬುವರು ಪತ್ರಿಕೆಗಳಲ್ಲಿ ಬರೆದಿರುವರು.

ಭಾರತೀಯ ಯುದ್ಧ ಖೈದಿಗಳು

ಇಟಲಿಯಲ್ಲಿದ್ದ ೫ ಸಾವಿರ ಮಂದಿ ಭಾರತೀಯ ಖೈದಿಗಳನ್ನು ಶತ್ರುಗಳು ಜರ್ಮನಿಗೆ ಸಾಗಿಸಿರುವರೆಂದೂ, ೨೦೦ ಕ್ಕೆ ಮೇಲ್ಪಟ್ಟು ಭಾರತೀಯ ಖೈದಿಗಳು ಮುಂದುವರಿಯುತ್ತಿರುವ ಮಿತ್ರಪಡೆ ಜೊತೆಗೆ ಶತ್ರುಗಳಿಂದ ತಪ್ಪಿಸಿಕೊಂಡು ಬಂದು ಸೇರಿರುವರೆಂದೂ ಸರ್ ಫಿರೋಜ್ ಖಾನ್‌ನೂನ್ ರವರು ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಹೇಳಿದ್ದಾರೆ

ಗೃಹಕೃತ್ಯದ ನೋಟೀಸ್

ಮೈಸೂರು ಮಂಡಿ ಮೊಹಲ್ಲಾ ಬೆಂಕಿನವಾಬರ ಬೀದಿ 1408 ನೇ ನಂ ಮನೆಯಲ್ಲಿರುವ ದೇವಾಂಗದ ಸಂಜೀವಯ್ಯನು ಸರ್ವರಿಗೂ ತಿಳಿಸುವುದೇನೆಂದರೆ:— ನನ್ನ ತಂದೆ ಭೀಮಯ್ಯ, ಸಹೋದರರಾದ ಅರ್ಜುನಪ್ಪ, ಕೃಷ್ಣಪ್ಪ ಉರುಫ್ ಸುಬ್ಬಯ್ಯ ಇವರು ನನ್ನ ಮಹಿಮಾಟಿನಲ್ಲಿ ಅಭಿವೃದ್ಧಿ ಹೊಂದುತ್ತಿದ್ದ ನಮ್ಮ ಕುಟುಂಬದ ಆಸ್ತಿಗಳನ್ನೆಲ್ಲಾ ಬಲಾತ್ಕಾರದಿಂದ ತಮ್ಮ ಸ್ವಾಧೀನಪಡಿಸಿಕೊಂಡು ಅನ್ಯಾಯವಾಗಿ ನನಗೆ ನಷ್ಟಪಡಿಸುತ್ತಲೂ, ಪುನಃ ಸಾಲ ಸದೆಯುವ ಪ್ರಯತ್ನದಲ್ಲೂ ಇದ್ದಾರೆ. ಆವರ ಕ್ರಮಗಳೂ ಪೋಷಕಗಳೂ ಸಲ್ಲತಕ್ಕದ್ದಲ್ಲ ಮತ್ತು ನನ್ನನ್ನು ಬದ್ಧಪಡಿಸುವುದಿಲ್ಲ. ಅವರಿಗೆ ಯಾರೂ ಸಾಲ ಕೊಡಲಾಗದೆಂದು ಮುಂದಾಗಿ ಎಚ್ಚರಿಕೆಯಾಗಿ ತಿಳಿಯಪಡಿಸಿದೆ.

ಬಿ. ಸಂಜೀವಯ್ಯ

ಯುದ್ಧಕಾಲವಾಗಲಿ — — ರೇಷನ್ ಕಾಲವಾಗಲಿ

ನಿಮಗೆ ಬೇಕಾದುದೇನು ?

ಗುಣ :: ಆರೋಗ್ಯ :: ಶಕ್ತಿ

ಬನ್ನಿರಿ; ಪರೀಕ್ಷಿಸಿರಿ !

ಶ್ರೀ ಕೃಷ್ಣಭವನ್

ರೆಸ್ಟೊರೆಂಟ್, ಮೈಸೂರು.

(ಶ್ರೀಮನ್ಮಹಾರಾಜರವರ ಕೃಪಾಪೋಷಣೆಗೆ ಒಳಪಟ್ಟಿದೆ.)

ಪರಿಶುದ್ಧವಾದ ತುಪ್ಪದಿಂದ ಮಾಡಿದ ರುಚಿಕರವಾದ ತಿಂಡಿಗಳು !

ಆನಂದಕರ ! ಆರೋಗ್ಯದಾಯಕ ! !

ಸ್ವಾದಿಷ್ಟಕರವಾದ ಕಾಫಿಯು ನಮ್ಮಲ್ಲಿನ ವಿಶೇಷ !

ಶ್ರೀಯರ ಸೌಕರ್ಯಕ್ಕಾಗಿ

ತಾ|| ೧-೧೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿರಿ.

ಡಿ. ಪುಟ್ಟೈಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.— ಚಿಲ್ಲರೆಯಾಗಿ ಕಲ್ಲುಸಕ್ಕರೆ, ಖಾರಕಸ್ಕಲೆ ಸಿಕ್ಕುತ್ತದೆ ಇಲ್ಲೂ ಮತ್ತು ಸಂತೆಪೇಟೆ ಪೇಟೆ ಅಂಗಡಿಯಲ್ಲೂ ಸಿಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ

ದ್ವೈತ ಪ್ರದೀಪ - ಅದರ ವಿಮರ್ಶೆ

'ದ್ವೈತ ಪ್ರದೀಪ ಮತ್ತು ತತ್ವ ಶಿಕ್ಷೆ' ಎಂಬ ನೂರು ಪುಟದ ಪುಸ್ತಕವು ನಮ್ಮ ಹಸ್ತಗತವಾಗಿದೆ. ಈ ವೇದಾಂತ ಗ್ರಂಥವನ್ನು ರಚಿಸಿದವರು ಮಹಾ ವಿದ್ವಾನ್, ವಿದ್ವನ್ಮಣಿ ಡಿ ವಾಸುದೇವಾಚಾರ್ಯರು. ಶ್ರೀ ಆಚಾರ್ಯರು ಮಹಾರಾಜ ಸಂಸ್ಕೃತ ಕಾಲೇಜಿನ ದ್ವೈತ ವೇದಾಂತದ ಮಹಾ ಮಹೋಪಾಧ್ಯಾಯರು.

ಗ್ರಂಥವು ದ್ವೈತ ಪ್ರದೀಪ, ಇದಕ್ಕೆ ಅನ್ವಯಿಸುವ ಆಂಗ್ಲ ಮೊನೋಗ್ರಾಫ್ (ಅಪೆಂಡಿಕ್ಸ್) ಮತ್ತು ತತ್ವಶಿಕ್ಷೆ ಎಂದು ಮೂರು ಭಾಗವಾಗಿ ವಿಂಗಡಿಸಲ್ಪಟ್ಟು, ಪ್ರಾರಂಭದಲ್ಲಿ ಶ್ರೀ ರಾಘವೇಂದ್ರ ಗುರುಗಳ ಚಿತ್ರದಿಂದೊಡಗೂಡಿದೆ. ಗ್ರಂಥ ಕರ್ತರು ಹೇಳುವಂತೆ, ಈ ಗ್ರಂಥವು ಅಮಲಾಗ್ರನಾಗಿ ಮಹಾರಾಜಾ ಕಾಲೇಜಿನ ವಿದ್ವಾನ್ ಎಚ್. ಎನ್. ರಾಘವೇಂದ್ರಚಾರ್ಯರ 'ದ್ವೈತ ದರ್ಶನ ಮತ್ತು ವೇದಾಂತದಲ್ಲಿ ಅದರ ಸ್ಥಾನ' ವೆಂಬ ನೂತನ ಗ್ರಂಥಕ್ಕೆ 'ಸಮಗ್ರವಾಗಿ ಖಂಡನೆಯನ್ನೇ ರಚಿಸಿ ಅದ ಪ್ರಚಾರವನ್ನು ತಡೆದು, ಶ್ರೀಮದಾಚಾರ್ಯರ ಸೇವೆಯನ್ನು ಸಲ್ಲಿಸದಿದ್ದರೆ ಕರ್ತವ್ಯ ಲೋಪವಾದೀತೆಂಬ' ಭಾವನೆಯಿಂದ ರಚಿತವಾದುದಾಗಿದೆ. ಶ್ರೀಯುತರ ದೃಷ್ಟಿಯಲ್ಲಿ ಆ ಗ್ರಂಥವು 'ದ್ವೈತ ಸಿದ್ಧಾಂತಕ್ಕೆ ಅತ್ಯಂತ ವಿರುದ್ಧ' ವಿಷಯಗಳಿಂದೊಡಗೂಡಿ 'ದ್ವೈತ ಸರ್ವಸ್ವ' ವೆಂದು ಅಭಿದಾನ ಮಾಡಲ್ಪಟ್ಟು 'ವಿಂದ್ಯ ಪ್ರಚಾರದಲ್ಲಿ ತೊಡಗಿರುವಂತೆ' ಇದೆ. ಆದುದರಿಂದಲೇ ಇವರು ದ್ವೈತ ವೇದಾಂತಾಚಾರ್ಯರುಗಳಾದ ಮಹನೀಯರ ಪ್ರೇರಣೆಯ ಅನುಸಾರವಾಗಿ ಈ ಖಂಡನೆ ಗ್ರಂಥವನ್ನು ರಚಿಸಿದ್ದಾರೆ.

ಈ ಗ್ರಂಥವನ್ನು ವಿಮರ್ಶೆಮಾಡಬೇಕಾದ ಪ್ರಮೇಯ ಅಷ್ಟು ಕಂಡುಬರುವುದಿಲ್ಲ. ಮೇಲೆ ಹೇಳುವಂತೆ ಇದು ಮತ್ತೊಂದು ಗ್ರಂಥದ ಖಂಡನಾತ್ಮಕವಾಗಿದೆ. ಶ್ರೀ ರಾಘವೇಂದ್ರಾಚಾರ್ಯರು ತಮ್ಮ ಗ್ರಂಥದಲ್ಲಿ ಪ್ರಕಟವಾಗಿಂತ ತಪ್ಪುಗಳನ್ನು ಬರೆದಿರುವುದನ್ನು ಎತ್ತಿ ತೋರಿಸಿದ್ದಾರೆ. ಆ ಗ್ರಂಥವು ನಮ್ಮ ಮುಂದೆ ವಿಮರ್ಶೆಗೆ ಬಂದಿಲ್ಲವಾದ್ದರಿಂದ ಅದರ ವಿಮರ್ಶೆಯ ಗೊಡವೆಗೆ ನಾವು ಹೋಗುವುದಿಲ್ಲ. ನಮಗೆ ಕಾಣುವ ಹಾಗೆ ಈ ಪುಸ್ತಕದಲ್ಲಿ ಹಲವು ಪಟ್ಟಗಳ ಮೇಲೆ ವ್ಯಾಖ್ಯಾನವಾಗಿ ಅವುಗಳಲ್ಲಿ ಭಿನ್ನಾಭಿಪ್ರಾಯವುಂಟಾಗಿದೆ. ಶ್ರೀ ರಾಘವೇಂದ್ರಾಚಾರ್ಯರು ಹೊಸದೊಂದು "ಬ್ರಹ್ಮಾದ್ವೈತ" ಎಂಬ ಸಮಾಸವನ್ನು ಸೃಷ್ಟಿಸಿ ಅದು ಶ್ರೀ ಮಧ್ವಾಚಾರ್ಯರ ಅಭಿಮತವಾದ ದ್ವೈತ ತತ್ವವು ಇದರಲ್ಲಿ ಅಡಕವಾಗಿದೆಯೆಂದು ಹೇಳಿರುವಂತೆ ಉಲ್ಲೇಖಿತವಾಗಿದೆ. ಅಲ್ಲದೆ ಪ್ರಪಂಚಕ್ಕೆ ಔಪಾಧಿಕ ಸತ್ಯತೆಯುಂಟೇ ಹೊರತು, ನೈಜ ಸತ್ಯತೆಯನ್ನು ಹೊಂದಿಲ್ಲವೆಂಬ ವಿಷಯವಾಗಿ ಮೂವರು ಆಚಾರ್ಯರೂ ಒಪ್ಪಿದ್ದಾರೆಂದು ಹೇಳಿದ್ದಾರೆ. ಪ್ರಪಂಚವು ಬ್ರಹ್ಮನಿಂದ ಭಿನ್ನವಾಗಿಲ್ಲ, ಬ್ರಹ್ಮನೇ ಸಕಲಭೂತಾಧಾರ, ಪ್ರಪಂಚವು ಬ್ರಹ್ಮನ ಸತ್ಯತ್ವಕ್ಕಿಂದಲೂ ಅಸ್ಪೃಷ್ಟ ಸತ್ಯತ್ವ [ಕಡಿಮೆ] ಉಳ್ಳದೆಂದು ಶ್ರೀ ರಾಘವೇಂದ್ರಾಚಾರ್ಯರು ಹೇಳಿ ಪುದನ್ನು ವಿಮರ್ಶಿಸಲಾಗಿದೆ. ಶ್ರೀ ರಾಘವೇಂದ್ರಾಚಾರ್ಯರು ಈರೀತಿ ಪ್ರಪಂಚದ ಸತ್ಯತ್ವದಲ್ಲಿ ಭಿನ್ನಾಭಿಪ್ರಾಯ ತಕ್ಕೆ ಸಂಸವಾದ ಅಭಿಪ್ರಾಯದನ್ನು ಹೇಳಿ, ತನ್ನ ಮತ ಪ್ರಚಾರವಾದಂತಾಗುವುದಿಲ್ಲವೆಂದು ಈ ಗ್ರಂಥ ಕರ್ತರ ಆಕ್ಷೇಪಣೆ. ಹಾಗೆ ಹೇಗೆ ಆಗಬೇಕೊ ನಮಗೆ ತಿಳಿಯದು. ದ್ವೈತ ಸಿದ್ಧಾಂತದ ಬುಡಕ್ಕೆ ಇದರಿಂದ ಕೊಡಲಿ ಇಟ್ಟಂತಾಗುವುದಿಲ್ಲ. ತತ್ವ ವಿಮರ್ಶೆಯಲ್ಲಿ ಹೊಸ ಹೊಸದಾಗಿ ಹಲವು ಪಕ್ಷಗಳು ಗೋಚರಿಸಬಹುದು ಎಂಬಮಾತ್ರಕ್ಕೆ ತಮ್ಮ ಮತಕ್ಕೆ ವ್ಯಾಘಾತವುಂಟಾಯಿತೆನ್ನುವುದು ಸರಿಯಲ್ಲವೆಂದು ಹೇಳಬೇಕಾಗುವುದಿಲ್ಲ.

ಇದೂ ಅಲ್ಲದೆ ಈ ಗ್ರಂಥದಲ್ಲಿ ಶ್ರೀ ರಾಘವೇಂದ್ರಾಚಾರ್ಯರ ೧೨ ವರ್ಷಗಳ ಹಿಂದೆ ಪ್ರಕಟಿಸಿರುವ ಭಾರತೀಯ ತತ್ವ ಶಾಸ್ತ್ರ ಸಂಗ್ರಹದ ಮೇಲೆಯೂ ಟೀಕೆ ಇದೆ. ನ್ಯಾಯ, ವೈಶೇಷಿಕ ದರ್ಶನ ಭಾಗಗಳಲ್ಲಿ ಪೌರ್ವಾಪರ್ಯ ಕ್ರಮವನ್ನು ಲಕ್ಷಿಸದೆ ಆಗಿರುವ ಅಪಪ್ರಚಾರ ಸಂದರ್ಭಗಳನ್ನು ಈಗ ಎತ್ತಿ ತೋರಿಸಿದ್ದಾರೆ. ಇವೆಲ್ಲವನ್ನೂ ವಿಮರ್ಶೆ ಮಾಡಲು ಸಾಧ್ಯವಿಲ್ಲ.

ಒಂದು ಮಾತು ಮಾತ್ರ ಹೇಳಬೇಕಾಗಿದೆ. ಮುನ್ನುಡಿಯಲ್ಲಿ ೨೨ ಮತ್ತು ಪುಸ್ತಕದ ಮಧ್ಯದಲ್ಲಿಯೂ ಶ್ರೀ ಆಚಾರ್ಯರ ಅಭಿಪ್ರಾಯ ಖಂಡನೆಯು ಮಾತ್ರವಲ್ಲದೇ ಇತರ ಲೌಕಿಕವಲ್ಲದ ಪದ ಪ್ರಯೋಗವಾಗಿದೆ. ಅಲ್ಲ ಪ್ರಪಂಚದಲ್ಲಿ ವ್ಯಕ್ತಿ ಸಾಕಿದ. ಶ್ರೀ ರಾಘವೇಂದ್ರಾಚಾರ್ಯರು ಬರಿ ದಿಕ್ಕಾರೆಂಬುದು ಸರಿಯಲ್ಲ. ಇವೆಲ್ಲ ವ್ಯಕ್ತಿಯನ್ನು ಕುರಿತ ಟೀಕೆ. ಅಭಿಪ್ರಾಯ ಭಿನ್ನವಾದಲ್ಲಿ ಗ್ರಂಥಕರ್ತರನ್ನು ಟೀಕಿಸುವುದು ನಮಗೆ ನ್ಯಾಯವಾಗಿ ತೋರಲಿಲ್ಲ. ಇದರಿಂದ ಶ್ರೀ ಮಧ್ವಾಚಾರ್ಯರ ದ್ವೈತ ಸಿದ್ಧಾಂತವನ್ನು ವರ್ಣಿಸಿರೂಪ ಮಾಡು

ವಾದದಂತಾಗಲಿಲ್ಲ. ಅದನ್ನು ಬಿಟ್ಟು, ಕೇವಲ ಶ್ರೀ ಮಧ್ವಾಚಾರ್ಯರು ಹಾಡಿರುವ ವಾಕ್ಯಗಳನ್ನು ಉದಹರಿಸಿ ಶ್ರೀಯುತರ ಅಪಪ್ರಚಾರವನ್ನು ತಡೆಗಟ್ಟಬಹುದಾಗಿತ್ತು.

ಒಟ್ಟಿನಲ್ಲಿ ಈ ಗ್ರಂಥವನ್ನು ನೋಡಿದರೆ ದ್ವೈತ ಸಂಪ್ರದಾಯಸ್ಥರಲ್ಲಿ ಶ್ರೀಯುತರ 'ದ್ವೈತ ದರ್ಶನ' ವಿಷಯವಾಗಿ ಅಂದೋಳನವಾದಂತೆ ಕಾಣುತ್ತದೆ. ತತ್ವ ಶಾಸ್ತ್ರ ವೇತ್ತರಿಗೂ, ಜಿಜ್ಞಾಸುಗಳಿಗೂ ಇದರಿಂದ ವಾಕ್ಯಾರ್ಥ ವಿಚಾರಕ್ಕೆ ಒಂದು ಉಪಯುಕ್ತವಾದ ಪೆಟ್ಟಿಗೆಯನ್ನು ಈ ಗ್ರಂಥವು ಉಂಟುಮಾಡಿಕೊಟ್ಟಿದೆ. ಜಗದ್ಗುರು ಶ್ರೀ ರಾಘವೇಂದ್ರ ಸ್ವಾಮಿಗಳು ಈ ಗ್ರಂಥ ಪ್ರಕಾಶಕ್ಕಾಗಿ ಒಂದು ನೂರು ರೂಪಾಯಿಗಳನ್ನು ದಯಪಾಲಿಸಿದ್ದಾರೆ.

ಬಿ. ಸುಬ್ಬರಾವ್ ಉಪಾಧ್ಯ.

ಸ್ತ್ರೀಯರೇ ನೌಕೆ ನಿರ್ಮಿಸಿದರು

೧೫ ೨೦ ೨೬ ವರ್ಷಗಳೊಳಗಿರುವ ಅಮೆರಿಕ ಸ್ತ್ರೀಯರು ಕೆಲವರು ಸೇರಿ ಒಂದು ನೌಕೆಯನ್ನು ಕಟ್ಟಿ ಮುಗಿಸಿ ನೌಕಾಪಡೆಗೆ ಒಪ್ಪಿಸಿದರು. ಇವರು ನೌಕೆಗಳನ್ನು ಕಟ್ಟುತ್ತಿದ್ದಾಗ ಶತ್ರುಗಳು ಬಾಂಬುಗಳನ್ನು ಕೆಡವುತ್ತಿದ್ದರು. ಬಾಂಬುಗಳು ತಮ್ಮ ಬಳಿ ಬಿದ್ದರೂ ಲೆಕ್ಕಿಸದೆ ಸ್ತ್ರೀಯರು ಧೈರ್ಯದಿಂದ ಹಿಡಿದ ಕೆಲಸ ಬಿಡದೆ ಸಾಧಿಸಿದರು.

ಡೆನ್ಮಾರ್ಕಿನಲ್ಲಿ ದಾಂಧಲೆ

ಜರ್ಮನ್ ಆಕ್ರಮಿತ ಡೆನ್ಮಾರ್ಕಿನಲ್ಲಿ ಕ್ರಾಂತಿಯಾಗುತ್ತಿದೆ. ಬೆಟ್ಟದಿಂದ ಬಂದ ರೋಡನ್ನು ಡೇನಿಷ್ ಪ್ರಜೆಗಳು ಸರ್ವನಾಶ ಗೊಳಿಸಿರುವರು. ಎರಡು ರೈಲ್ವೆ ಸ್ಟೇಷನುಗಳನ್ನೂ ನಿರ್ಮೂಲ ಮಾಡಿರುವರು.

ಪಿಟೇನರ ಅಸ್ವಸ್ಥತೆ

ವಿಚಿ-ಫ್ರಾನ್ಸಿನ ಮಾರ್ಷಲ್ ಪಿಟೇನರು ಹೃದಯವೇದನೆಯಿಂದ ಹಾಸಿಗೆ ಹಿಡಿದಿರುವರೆಂದು ಜರ್ಮನ್ ವಾರ್ತೆಗಳು ಸಾರಿವೆ.

ಜರ್ಮನಿ ಯು-ಬೋಟ್ ಬಲ ಕುಗ್ಗಿಲ್ಲ

ಜರ್ಮನರು ಇನ್ನೂ ಅಧಿಕ ಸಂಖ್ಯೆಯ 'ಯು-ಬೋಟ್'ಗಳನ್ನು ಹೊಂದಿರುವರು. ಅವುಗಳನ್ನು ಚತುರತೆಯಿಂದ ಉಪಯೋಗಿಸಿಕೊಂಡು ನಮ್ಮ ಮೇಲೆ ಆಕ್ರಮಿಸುತ್ತಿರುವರು. ನಾವು ಆ ಯು-ಬೋಟ್ಗಳಿಗೆ ಪೆಟ್ಟು ಕೊಡುತ್ತಿದ್ದರೂ ಅವರ ಯು-ಬೋಟುಗಳ ಶಕ್ತಿ ಕುಗ್ಗಿಲ್ಲ ಎಂಬುದಾಗಿ ಬ್ರಿಟಿಷ್ ನೌಕಾಧಿಕಾರಿ ಅಡ್ಮಿರಲ್ ಫ್ರಾನ್ಸಿಸ್ ಗ್ಲೇಡ್ ಎಂಬುವರು ಹೇಳುತ್ತಾರೆ.

ಬಲ್ಗೇರಿಯಾ ಹಿಡಿಯುವ ಆಲೋಚನೆ

ಮಿತ್ರರು ಬಲ್ಗೇರಿಯಾ ಆಕ್ರಮಣ ಕಾರ್ಯವನ್ನು ಕೈಗೊಳ್ಳಲು ಪರ್ಯಾಲೋಚಿಸುತ್ತಿರುವುದಾಗಿ ಅನೇಕಾ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಚರ್ಚಿಲ್-ರೂಸ್‌ವೆಲ್ಟ್-ಸ್ಟಾಲಿನ್ ಭೇಟಿ ಕಾಲಕ್ಕೆ ಈ ವಿಷಯ ಪ್ರಸ್ತಾಪಿಸಲಾಗುವುದೆಂದು ನಂಬಲಾಗಿದೆ.

ಚರ್ಚಿಲ್-ರೂಸ್‌ವೆಲ್ಟ್-ಸ್ಟಾಲಿನ್ ಭೇಟಿ

ಬಹಳ ದಿನಗಳಿಂದ ಪ್ರಸ್ತಾಪಿಸಲಾಗುತ್ತಿರುವ ಮೂವರಿಂದ ಭೇಟಿಯು ಪರ್ಷಿಯದಲ್ಲಿಯೇ ನಡೆಯುತ್ತದೆಂಬ ಸೂಚನೆ ಇದೆ. ಅಮೆರಿಕಾ, ಇಂಗ್ಲೆಂಡುಗಳ ಸೈನ್ಯದವರೇ ಸಮುದ್ರ ಮಾರ್ಗವಾಗಿ ಬಂದಿರುವ ಜರ್ಮನರ ಮೇಲೆ ದಂಡೆಯಾತ್ರೆ ನಡೆಸಬಹುದೆಂಬ ನಿರೀಕ್ಷೆಗೆ ಇದೆ.

ಜರ್ಮನಿಯ ಯುದ್ಧ ವೆಚ್ಚ

ಮೊದಲನೇ ೪ ವರ್ಷಗಳಲ್ಲಿ ಜರ್ಮನಿ ಯುದ್ಧದ ವೆಚ್ಚ ೯೩,೭೦೦ ಕೋಟಿ ಮಾರ್ಕುಗಳಾಗಿರುವದೆಂದು ಗೊತ್ತಾಗಿದೆ.

ಜಯ ಅಂಡ್ ಕಂಪೆನಿ

ಸ್ಟಾಕ್ ಮತ್ತು ಷೇರ್ ಬ್ರೋಕರ್ಸ್,

ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್,

ಸರ್ಕಾರ್ ಪೇಟೆ, ಬೆಂಗಳೂರು.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ನೀಗಿ, ದೇಹದಲ್ಲೇ ಪರಿಶುದ್ಧ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ. ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮೆಸಿ, 184, ಚಿಕ್ಕಪೇಟೆ ಬಜಾರ್ ರಸ್ತೆ, ಬೆಂಗಳೂರು

ಏಜೆಂಟರು: ಅಶೋಕಾ ಫಾರ್ಮೆಸಿ ಹಳೇ (ಮೈಸೂರು ಬ್ಯಾಂಕು ರಸ್ತೆ, ಮೈಸೂರು

ಟಿ. ಸಿ. ನಟರಾಜ್

ಔಷಧ ವ್ಯಾಪಾರಿಯು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಸದಾ ಡಿ ಟಿ ಸಿ ಫಾರ್ಮಸಿಯ ಮಾಡಿಸಲ್ಪಡುತ್ತದೆ

ಪ್ಯೂರಿಟಿ ಆಯುರ್ವೇದೀಯ ಔಷಧಿಗಳೂ ಸದಾ ದೊರೆಯುತ್ತವೆ

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ವೃದ್ಧಿಯಾಗುತ್ತದೆ. ಅದರ ಸುವಾಸನೆಯು ಬಹಳ ಕಾಲ ಇರುತ್ತದೆ. ಇದರ ಜನಪ್ರಿಯತೆಗೆ ಅದರ ಸುಗುಣಗಳೇ ಸಾಕ್ಷಿ. ಅದರ ಶುದ್ಧತೆಯು ಪ್ರಖ್ಯಾತವಾಗಿರುವುದು.

ಮೈಸೂರು ಸ್ಯಾಂಡಲ್ ಸೋಪು

ಕಾಂಗ್ರೆಸ್ಸಿಗೆ ಅಪಕಾರವಿತ್ತದ್ದು ಯಾರ ಕಾರ್ಯ

ರಾಜಾಜಿಯವರ ಟೀಕೆ

ಬಂದ ಜನವರಿ ೬ನೆಯ ತಾ॥ ಯಿಂದ ಮದರಾಸು ಪ್ರಾಂತ್ಯದ ಕೆಲವು ಜಿಲ್ಲೆಗಳಲ್ಲಿ [illegible] ಪ್ರಾರಂಭವಾಗಲಿದೆ. ಕಾಂಗ್ರೆಸ್ ಮಂತ್ರಿಗಳ ಅಧಿಕಾರ ಕಾಲದಲ್ಲಿ ಅಲ್ಲಿ ಪಾನ ನಿರೋಧ ಶಾಸನ ಜಾರಿಯಾಯಿತು. ಆದರಿಂದ ಎಷ್ಟೋ ಬಡ ಸಂಸಾರಗಳು ತಲೆ ಎತ್ತಿಕೊಂಡವು. [illegible] ಮಂತ್ರಿಮಂಡಲ [illegible] ಗೌರ್ನರರ ಆಡಳಿತ [illegible] ಪಾನ ನಿರೋಧ ಶಾಸನವನ್ನು [illegible] ಪ್ರಕಟಣೆಯನ್ನು ಮೊನ್ನೆ ಮೊನ್ನೆ ಹೊರಡಿಸಿದರು.

[illegible] ಆಹಾರ [illegible] ಕೂಲಿಗಳು ಅದನ್ನು [illegible] ಹೇಳುವುದು ಸುಳ್ಳು. [illegible] ಕಾಲದಲ್ಲಿ ಹೆಂಡಕ್ಕೂ [illegible] ವಿರೋಧ ಶಾಸನ ಈ ಪ್ರಾಂತ್ಯದಲ್ಲಿ [illegible] ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ — ಇವೇ ಮುಂತಾದ ಕಾರಣಗಳಿಗಾಗಿ ಈ ಶಾಸನವನ್ನು ರದ್ದುಗೊಳಿಸಬೇಕಾಗಿದೆ ಎಂದು ಗೌರ್ನರರು ಕಾರಣಗಳನ್ನು ಕೊಟ್ಟಿರುವರು.

ಆಗಾಗಲೇ ಮದರಾಸ್ ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಈ ಆಜ್ಞೆಗೆ ವಿರುದ್ಧವಾಗಿ ಚಳವಳಿ ಆರಂಭವಾಗಿದೆ. ಮೊನ್ನೆ ಮದರಾಸಿನಲ್ಲಿ ಈ ಸಂಬಂಧವಾಗಿ ಒಂದು ಪ್ರಚಂಡ ಸಭೆ ನಡೆಯಿತು. ಮಾಜಿ ಅಮಾತ್ಯರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಆ ಸಭೆಯಲ್ಲಿ ಮಾತನಾಡುತ್ತಾ ಈ ರೀತಿ ಹೇಳಿದರು:— ಕಾಂಗ್ರೆಸ್ ಮಂತ್ರಿ ಮಂಡಲವೇ ಇರಲಿ, ಮುಸ್ಲಿಂ ಪಕ್ಷದ ಮಂತ್ರಿ ಮಂಡಲವಿದ್ದರೂ ಈ ಶಾಸನವನ್ನು ರದ್ದುಗೊಳಿಸುತ್ತಿರಲಿಲ್ಲ. ಹಿಂದೆ ಜಾರಿಗೆ ತಂದ ಇಂತಾ ಉಪಯುಕ್ತ ಶಾಸನವನ್ನು ಜನರ ಅಭಿಪ್ರಾಯವನ್ನೂ ಕೇಳದೆ ರದ್ದುಗೊಳಿಸಿದ್ದು ಅನ್ಯಾಯವಿದ್ದಂತಾಗಿದೆ. ಆ ಶಾಸನದ [illegible] ಸ್ವಾತಂತ್ರ್ಯವಾಗಿದೆ [illegible] ಪಕ್ಷಗಳಲ್ಲಿ [illegible] ಜನಗಳ [illegible] ಆ ಶಾಸನವನ್ನು ರದ್ದುಗೊಳಿಸಬಾರದಾಗಿತ್ತು!

[illegible] ಒಬ್ಬ [illegible] ಎಂದು [illegible]

ಈ [illegible]

ಸಂಸ್ಥಾನದ ಧಾನ್ಯ ವರ್ತಕರ ದ್ವಿತೀಯ ಸಮ್ಮೇಳನ

ಸ್ವಾಗತ ಸಮಿತಿ ಅಧ್ಯಕ್ಷರ ಪ್ರಕಟಣೆ

ಮೈಸೂರು ಸಂಸ್ಥಾನದ ಧಾನ್ಯ ವರ್ತಕರ ದ್ವಿತೀಯ ಸಮ್ಮೇಳನವನ್ನು ಬೆಂಗಳೂರು ನಗರದಲ್ಲಿರುವ ಗ್ರೈನ್ ಮರ್ಚೆಂಟ್ಸ್ ಅಸೋಸಿಯೇಷನ್ನಿನ ಆಶ್ರಯದಲ್ಲಿ ಬೆಂಗಳೂರು ನಗರದಲ್ಲಿ ಈ ತಿಂಗಳು ೨೮ ಮತ್ತು ೨೯ ನೇ ತಾರೀಖುಗಳಲ್ಲಿ ನಡೆಸಬೇಕೆಂದು ನಿರ್ಧರಿಸಲಾಗಿದೆ. ಈ ಸಮ್ಮೇಳನದ ಪ್ರಾರಂಭೋತ್ಸವವನ್ನು ಸಂಸ್ಥಾನದ ದಿವಾನರಾದ ಪ್ರಧಾನ ಶಿರೋಮಣಿ ಎನ್. ಮಾಧವರಾವ್‌ರವರು ನೆರವೇರಿಸಲು ಕೃಪೆಮಾಡಿ ಒಪ್ಪಿಕೊಂಡಿರುತ್ತಾರೆ. ಬೆಂಗಳೂರಿನ ವರ್ತಕರೂ, ಪ್ರಜಾ ಮುಖಂಡರೂ, ಪೌರಸಭೆಯ ಮಾಜಿ ಅಧ್ಯಕ್ಷರೂ ಆದ ಲೋಕಸೇವಾಸಕ್ತ ರಾವ್ ಬಹದ್ದೂರ್ ಬಿ. ಕೆ. ಗರುಡಾಚಾರ್ಯರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿಕೊಂಡಿರುತ್ತಾರೆ.

ಈ ಸಂದಿಗ್ಧ ಸಮಯದಲ್ಲಿ ಇಂತಹ ಸಮ್ಮೇಳನವನ್ನು ನೆರೆಯಿಸುವ ಔಚಿತ್ಯವನ್ನು ವಿವರಿಸಿ ಹೇಳಬೇಕಾಗಿಲ್ಲ. ಯುದ್ಧದ ದೆಸೆಯಿಂದ ನಾನಾ ಸಮಸ್ಯೆಗಳು ಉದ್ಭವಿಸುತ್ತಿರುವುದರ ಜೊತೆಗೆ, ಆಹಾರ ಸಮಸ್ಯೆಯೂ ತಲೆದೋರಿ, ಭಾರತದ ಕೆಲವು ಪ್ರಾಂತ್ಯಗಳಲ್ಲಿ ಉತ್ಕಟಾವಸ್ಥೆಗೆ ಬಂದಿರುವ ವಿಚಾರವು ಎಲ್ಲರಿಗೂ ತಿಳಿದ ಅಂಶವೇ ಆಗಿದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಆಹಾರ ಸಮಸ್ಯೆಯು ಅಷ್ಟು ಉಲ್ಬಣಸ್ಥಿತಿಗೆ ಬರದೆ ಹೋದರೂ, ಈ ಸಮಸ್ಯೆಯು ತಲೆದೋರಿರುವುದರಿಂದ ಧಾನ್ಯವನ್ನು ಬೆಳೆಯುವ ರೈತರಿಗೂ, ಮಾರಾಟಮಾಡುವ ವರ್ತಕರಿಗೂ, ಕೊಂಡುಕೊಳ್ಳುವ ಜನರಿಗೂ ನಾನಾ ತರಹದ ತೊಂದರೆಗಳುಂಟಾಗಿವೆ. ಸರ್ಕಾರದವರು ಕೂಡ ಈ ಸಮಸ್ಯೆಯನ್ನು ಹೋಗಲಾಡಿಸಲು ನಾನಾಬಗೆಯ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ವರ್ತಕರಿಗೆ ಒದಗಿರುವ ಕಷ್ಟಗಳನ್ನೂ, ಅವರ ಕುಂದುಕೊರತೆಗಳನ್ನೂ ಸರ್ಕಾರದ ಮುಂದಿಟ್ಟು ತಕ್ಕ ನಿವಾರಣೋಪಾಯವನ್ನು ಕೈಗೊಳ್ಳುವಂತೆ ಪ್ರೇರೇಪಿಸುವುದಕ್ಕೆ ಈ ಸಮ್ಮೇಳನ ಕೂಡುವುದು. ವರ್ತಕರು ನಿರ್ವಹಿಸಬೇಕಾಗಿರುವ ಕೆಲಸ ಕಾರ್ಯಗಳನ್ನು ಚರ್ಚಿಸಿ, ನಿರ್ಧರಿಸಿ ಮತ್ತು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆಸಿ, ಉಚಿತವೆಂದು ಕಂಡುಬರುವ ನಿರ್ಧಾರಗಳನ್ನು ತೆಗೆದುಕೊಂಡು ಐಕಮತ್ಯದಿಂದ ಕೆಲಸ ಮಾಡಬೇಕಾಗಿದೆ.

ಸಮ್ಮೇಳನಕ್ಕೆ ಸಂಸ್ಥಾನದ ನಾನಾ ಕಡೆಗಳಿಂದ ಬರುವ ಪ್ರತಿನಿಧಿಗಳಿಗೆ ತಲಾ ೩ ರೂಪಾಯಿಯಂತೆ ಚಂದಾ ಹಣವನ್ನು ವಿಧಿಸಲಾಗಿದೆ. ಪರಸ್ಥಳಗಳಿಂದ ಬರುವ ಪ್ರತಿನಿಧಿಗಳ ಊಟಕ್ಕೂ, ವಸತಿಗೂ ಉಚಿತ ವ್ಯವಸ್ಥೆ ಮಾಡಲಾಗುವುದು. ಪ್ರತಿನಿಧಿಗಳು ಸಮ್ಮೇಳನಕ್ಕೆ ಬರುವಾಗ, ತಮ್ಮ ಹಾಸಿಗೆ, ಹೊದ್ದಿಕೆಗಳನ್ನು ತೆಗೆದುಕೊಂಡು ಬರಬೇಕಾಗಿ ಪ್ರಾರ್ಥನೆ. ಸ್ವಾಗತ ಸಮಿತಿಯ ಸದಸ್ಯರಾಗುವವರು ೧೦ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಚಂದಾ ಹಣ ಕೊಡಬೇಕೆಂದು ಸ್ವಾಗತ ಸಮಿತಿಯವರು ನಿರ್ಧರಿಸಿದ್ದಾರೆ. ಪ್ರತಿನಿಧಿಗಳು ಮತ್ತು ಸ್ವಾಗತ ಸಮಿತಿ ಸದಸ್ಯರೂ ಈ ತಿಂಗಳು ೨೫ ನೇ ತಾರೀಖಿನೊಳಗಾಗಿ ತಮ್ಮ ಹೆಸರು, ವಿಳಾಸಗಳನ್ನು ಸ್ವಾಗತ ಸಮಿತಿಯ ಕಾರ್ಯದರ್ಶಿಗಳಿಗೆ ಚಂದಾ ಹಣ ಸಮೇತ ಕಳಿಸಬೇಕು. ಜಿಲ್ಲಾ [illegible] ಗಳನ್ನು ಕೂಡ ಅಂದೇ ಕಾರ್ಯದರ್ಶಿಗಳಿಗೆ ಕಳಿಸಿಕೊಡಬೇಕು. ಸಮ್ಮೇಳನಕ್ಕೆ ಸಂಬಂಧಪಟ್ಟ ಇತರ ವಿವರಗಳು, ಕ್ರಮೇಣ ಪತ್ರಿಕೆಗಳಲ್ಲಿ ಪ್ರಕಟವಾಗುವುವು.

ವಾದಿಸಬಂದವರನ್ನೇ ಬಂಧಿಸಿದ್ದೇಕೆ ?

ಶ್ರೀ ಜೈ ಪ್ರಕಾಶ ನಾರಾಯಣ್‌ರ ಪರ, ವಕಾಲತ್ತು ವಹಿಸಿ ಕೋರ್ಟಿನಲ್ಲಿ ವಾದ ಮಾಡಲು ಮುಂಬಯಿಯಿಂದ ಲಾಹೋರಿಗೆ ಬಂದ ಶ್ರೀ ಪಾದ್ರಿವಾಲಾರವರನ್ನು ಪಂಜಾಬು ಪೋಲೀಸರು ಬಂಧಿಸಿದ್ದನ್ನು ಮುಂಬಯಿ ಲಾಯರ್ ಸಂಘದವರು ತೀವ್ರವಾಗಿ ಖಂಡಿಸಿದ್ದಾರೆ. ಪಾದ್ರಿವಾಲಾರವರು ಬೊಂಬಾಯಿ ಲಾಯರ್ ಸಂಘದ ಸದಸ್ಯರು. "ನಾನು ಲಾಹೋರ್ ಕೋರ್ಟಿನಲ್ಲಿ ಜೈಪ್ರಕಾಶ್ ನಾರಾಯಣ್‌ರವರೊಡನೆ ಮಾತನಾಡಲು, ಬೇಕಾದ ಕಾಲಕ್ಕೆ ಅವರ ಪರ ವಾದಿಸಲು, ಅಲ್ಲಿಗೆ ಹೋದಾಗ ಯಾವ ಕಾರಣವನ್ನೂ ಕೊಡದೆ ಪೋಲೀಸರು ನನ್ನ ಸ್ಥಳ ಶೋಧನೆ ಮಾಡಿ ಬಂಧಿಯಾಗಿಸಿದರು. ಅಲ್ಲಿ ಎರಡು ಗಂಟೆಗಳ ಕಾಲ ನನ್ನ [illegible] ರಾಜಕೀಯ ವ್ಯಕ್ತಿಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ಪೀಡಿಸಿದರು. ಎರಡು ದಿನಗಳ ನಂತರ ಅಕಸ್ಮಾತ್ ನಾನಿದ್ದ ಜೈಲ್ ಕೋಣೆ ಬಳಿಗೆ ಸಿ. ಐ. ಡಿ. ಇನ್ಸ್‌ಪೆಕ್ಟರ್ ಒಬ್ಬ ಬರಲಾಗಿ, ನಿಷ್ಕಾರಣವಾಗಿ ನನ್ನನ್ನು ಬಂಧಿಸಿದ ಬಗ್ಗೆ ಅರ್ಜಿ ಬರೆದು ಅದನ್ನು ಲಾಹೋರ್ ಕೋರ್ಟಿಗೆ ಮುಟ್ಟಿಸುವಂತೆ ಆತನ ಕೈಗೆ ಕೊಟ್ಟೆನು. ಅದು ಕೋರ್ಟಿನ ತನಕ ಹೋಗೇ ಇಲ್ಲ" ಎಂಬದಾಗಿ ಲಾಹೋರ್ ಲಾಯರ್ ಸಂಘದವರ ಒತ್ತಾಯದಿಂದ ಬಿಡುಗಡೆ ಹೊಂದಿ ಬೊಂಬಾಯಿಗೆ ವಾಪಸ್ ಬಂದಿರುವ ಶ್ರೀ ಪಾದ್ರಿವಾಲಾರವರು ಅಲ್ಲಿನ ಬಾರ್ ಮುಂದೆ ವಿವರಿಸಿದ್ದಾರೆ.

ಬಟ್ಟೆ ಮಾರಾಟದ ಲೈಸೆನ್ಸ್ ವಿವರ

ಸರ್ಕಾರದವರು, ಬಟ್ಟೆ ವ್ಯಾಪಾರಗಾರರು ಲೈಸೆನ್ಸ್ ಪಡೆದು ಮಾರಾಟ ನಡೆಸಬೇಕೆಂಬ ಆಜ್ಞೆಯನ್ನು ಇದೇ ೨೦ ನೇ ತಾರೀಖಿನಿಂದ ಜಾರಿಗೆ ತಂದಿರುವರಷ್ಟೆ. ಆ ದಿನದಿಂದ ಜವಳಿ ಮಾರಾಟ ಕಸಬಿನಲ್ಲೇ ಇರುವ ವರ್ತಕರು ಲೈಸೆನ್ಸ್ ಅರ್ಜಿ ಸಲ್ಲಿಸಲು ೧ ತಿಂಗಳು ಅವಕಾಶಕೊಡಲಾಗಿದೆ. ಹತ್ತಿಬಟ್ಟೆ ಮಾರಾಟಕ್ಕೆ ಮಾತ್ರ ಲೈಸೆನ್ಸ್ ಪಡೆಯಬೇಕಾದುದು. ಬೀದಿಗಳಲ್ಲಿ ಓಡಾಡಿ ವ್ಯಾಪಾರ ಮಾಡುವವರೂ ಲೈಸೆನ್ಸ್ ಪಡೆಯಬೇಕು. ಬೀದಿ ಮಾರಾಟಗಾರರು ೧ ರೂ. ಲೈಸೆನ್ಸ್ ಫೀಜನ್ನು ಕೊಡಬೇಕು. ಬಟ್ಟೆ ವರ್ತಕರಿಗೆ ಲೈಸೆನ್ಸ್ ಫೀಜು ೫ ರೂ. ಲೈಸೆನ್ಸನ್ನು ಒಂದು ವರ್ಷ ಗೊತ್ತಾದ ಕಾಲದವರೆಗೆ ಕೊಡಲಾಗುವುದು. ಅದನ್ನು ಅಂಗಡಿಯಲ್ಲಿ ಪ್ರದರ್ಶಿಸುತ್ತಿರಬೇಕು. ಲೈಸೆನ್ಸ್ ಅರ್ಜಿಯಲ್ಲಿ ಸುಳ್ಳು ಸಮಾಚಾರ ನಮೂದಿಸಿದ್ದು ತಿಳಿದುಬಂದರೆ ಅಂಥವರ ಲೈಸೆನ್ಸನ್ನು ರದ್ದುಗೊಳಿಸಲಾಗುವುದು.

ಬಿಕ್ಕಟ್ಟಿನ ಪರಿಹಾರ

ಶ್ರೀ ಸಿ. ಆರ್. ರೆಡ್ಡಿಯವರು ಒಂದು ದೀರ್ಘವಾದ ಲೇಖನವನ್ನು ಬರೆದು, ಪ್ರಸ್ತುತದ ಭಾರತದ ಬಿಕ್ಕಟ್ಟನ್ನು ಕೂಡಲೇ ಪರಿಹರಿಸಬೇಕೆಂದು ಸೂಚಿಸಿದ್ದಾರೆ. ಸ್ವಾವಲಂಬನ, ಪರಾವಲಂಬನೆಗಳಿಗಿಂತಲೂ ಅಂತರಾವಲಂಬನವೇ ಸರ್ವೋತ್ತಮವಾದುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಭರತಖಂಡದ ನಾನಾ ಸಮಸ್ಯೆಗಳನ್ನು ಬಗೆಹರಿಸಲು ಬ್ರಿಟಿಷ್ ಸಾಮ್ರಾಜ್ಯದ ಸಂಬಂಧವು ಅಗತ್ಯವೆಂದು ಅವರು ಹೇಳುತ್ತಾರೆ. ಆದರೆ ಕಾಂಗ್ರೆಸ್ಸಿನ ಪ್ರತಿನಿಧಿಗಳಿಲ್ಲದೆ ಯಾವ ತೀರ್ಮಾನವೂ ಆಗಲು ಸಾಧ್ಯವಿಲ್ಲವೆಂದು ಹೇಳಿ ಎಲ್ಲಾ ಪಂಗಡಗಳೂ ಒಟ್ಟಿಗೆ ಕಲೆತು ಕಾಂಗ್ರೆಸ್ ಮುಖಂಡರುಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿ ಒತ್ತಾಯಪಡಿಸಿದರೆ ಸರ್ಕಾರದವರು ಅದನ್ನು ನಿರಾಕರಿಸಲಾಗುವುದಿಲ್ಲವೆಂದು ಅವರು ಹೇಳಿದರು.

ವೈಸರಾಯರನ್ನು ಕಂಡರು

೧೯ ನೇ ತಾ॥ ದೆಹಲಿಯ ವೈಸರಾಯ್ ಭವನದಲ್ಲಿ ೧೧ ಪ್ರಾಂತ್ಯಗಳ ಗೌರ್ನರುಗಳೂ ವೈಸರಾಯರೊಡನೆ ಕಲೆತು ೩॥ ಗಂಟೆ ಕಾಲ ದೇಶದ ಆಹಾರ ಸಮಸ್ಯೆಯನ್ನು ನಾನಾ ಮುಖಗಳಿಂದಲೂ ಚರ್ಚಿಸಿದರು.

ಭೀಕರ ನೌಕಾ ಕದನ ನಿರೀಕ್ಷೆ

ಹಿಂದೆ ಎಂದೂ [illegible] ಭಯಂಕರ ರೀತಿಯಲ್ಲಿ ಶೀಘ್ರದಲ್ಲೇ ಶಾಂತ ಸಾಗರದಲ್ಲಿ ಒಂದು ಭಾರೀ ನೌಕಾ ಕದನ ಜರುಗುವ ಸಂಭವವಿರುವುದಾಗಿ ಶಾಂತ ಸಾಗರದಲ್ಲಿನ ಮಿತ್ರ ಪಕ್ಷ ನೌಕಾ ನಾಯಕರಾದ ಸರ್ ವಿಲಿಯಂ ಜೇಮ್ಸ್‌ರು ಹೇಳಿರುವರು.

ಹೆಚ್ಚು ದಳಗಳು ಸೇರುತ್ತಿ[ವೆ]

ಇಟಲಿಯಲ್ಲಿ ಹೋರಾಡುತ್ತಿರುವ ಮಿತ್ರಸೇನಾ ಪಡೆಗೆ ಮಿತ್ರ ರಾಷ್ಟ್ರಗಳಿಂದ [illegible] ದಳದಳಗಳು ಬಂದು ಅಧಿಕ ಸಂಖ್ಯೆಯಲ್ಲಿ ಸೇರುತ್ತಿರುವುದಾಗಿ ಅಲ್ಜಿಯರ್ಸ್ ರೇಡಿಯೋ ವರದಿಮಾಡಿದೆ.

ಇಂಗ್ಲೆಂಡ್‌ಮೇಲೆ ಶತ್ರುಧಾಳಿ

೧೮-ನೇ ತಾ॥ ರಾತ್ರಿ [illegible] ಶತ್ರು ವಿಮಾನಗಳು ದಕ್ಷಿಣ ಇಂಗ್ಲೆಂಡ್ ಭಾಗಗಳ ಮೇಲೆ ಹಾರಾಡಿ ಬಾಂಬುಗಳನ್ನು ಕೆಡವಿರುತ್ತವೆಯೆಂದೂ, ಸ್ವಲ್ಪ ಪ್ರಾಣಹಾನಿಯೂ, ಆಸ್ತಿ ನಷ್ಟವೂ ಸಂಭವಿಸಿತೆಂದೂ ಅಧಿಕಾರಿ ಪ್ರಕಟಣೆ ಹೊರಟಿದೆ.

ಆದರ ಸ್ವೀಕಾರ

ಮೈಸೂರು ವಾಣೀವಿಲಾಸ ರಸ್ತೆಯ [illegible] ಮಂದಿರದವರು [illegible] ಗ್ರಂಥ ಮಾಲೆಯ ಪ್ರಥಮ ಪುಷ್ಪವಾದ "[illegible] ಆಹಾರ ಸುಧಾರಣೆ", "[illegible] ಯಲ್ಲಿ ವಿಜ್ಞಾನ [illegible]" ಎಂಬ ಪುಸ್ತಕವನ್ನು ನಮಗೆ ಕಳಿಸಿರುವರು. ಇದನ್ನು [illegible] ದವರು ಶ್ರೀ ಎಂ. ಎಲ್. ನಾಗಣ್ಣನವರು. ಪುಸ್ತಕದ ಬೆಲೆ ೮ ಆಣೆ. [illegible] ನಾವು ಇದನ್ನು ಆದರದಿಂದ ಸ್ವೀಕರಿಸಿದ್ದೇವೆ.

Edited, printed and pul[illegible]shed by A R. Nagaraj, at the Sadhvi Press, D.S[illegible]biah Road, Mysore

ಸಂಪುಟ ೨] ಮಂಗಳವಾರ ೨೩--೧೧--೪೩ [ಸಂಚಿಕೆ ೧೦೭

೧೯೪೪ರಲ್ಲಿ ರಾಜಕೀಯ ಬಂದಿಗಳ ಬಿಡುಗಡೆ

ಬಂಗಾಳದಲ್ಲಿ ವಾರಕ್ಕೆ ಲಕ್ಷ ಮಂದಿ ಸಾಯುತ್ತಿರುವರು

ಮಂಚ್ಚದ ಬಳಿ ಬೇವಿನ ಮರದಲ್ಲಿ ಹಾಲು ಸುರಿಯುತ್ತಿದೆ.

ಪ್ರಭುಗಳ ಆಡಳಿತವು ಹೆಚ್ಚಬೇಕು

ಬೆಂಗಳೂರು ವೆಂಕಟಪ್ಪನವರ ಶ್ರೀ [illegible] ಯವರ ವಿದ್ಯಾರ್ಥಿ ನಿಲಯದ ೩೩ ನೇ ವಾರ್ಷಿಕೋತ್ಸವ ನಡೆದ ಸಂದರ್ಭದಲ್ಲಿ ಪ್ರಭುಗಳ ಭಾವ ಚಿತ್ರ ಅನಾವರಣೋತ್ಸವವನ್ನು ನೆರವೇರಿಸುತ್ತಾ ಸ್ಥಳೀಯ ಸಂಸ್ಥೆ ಸದಸ್ಯರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡರವರು, ಶ್ರೀ ಜಯ ಚಾಮರಾಜ ಒಡೆಯರ್ ಬಹದ್ದೂರ್‌ರವರು ಕರ್ನಾಟಕ ಸಿಂಹಾಸನದ ಚಕ್ರವರ್ತಿಗಳಾಗಬೇಕು. ಅದಕ್ಕಾಗಿ ಸರ್ವರೂ ಶ್ರಮಿಸಬೇಕು, ಎಂದು ನುಡಿದಿರುವರು.

ಮೈಸೂರು ಕಾಂಗ್ರೆಸ್ಸಿನ ನೀತಿ

"ಕಾಂಗ್ರೆಸ್ಸು ಯಾವ ರೀತಿಯ ಕಾನೂನು ಭಂಗ ಕಾರ್ಯವನ್ನೂ ಪ್ರಾರಂಭಿಸಿ ಮಾಡಿಲ್ಲ. ಮುಖಂಡರನ್ನು ಹೊರಕ್ಕೆ ಬಿಟ್ಟರೆ ಅವರು ಕಾನೂನುಗಳನ್ನು ಮುರಿಯಲು ಹೊರಡುವ ಸೂಚನೆಗಳಿಲ್ಲ; ಅದರ ಬದಲು ಸದ್ಯದ ಆಹಾರ ಸಮಸ್ಯೆ ಪರಿಹಾರಕ್ಕೆ ಅವರು ಕೈ ಹಚ್ಚುವುದೇ ಹೆಚ್ಚಿನ ಸಂಭವ. ಹೊರಗಿರುವ ಕಾಂಗ್ರೆಸ್ಸಿನವರು ಈಗಾಗಲೇ ಆಹಾರ ಸಮಸ್ಯೆ ಬಗ್ಗೆ ದುಡಿಯುತ್ತಿರುವುದೇ ಅದಕ್ಕೆ ಸಾಕ್ಷಿ. ಯುದ್ಧ ಪ್ರಯತ್ನಕ್ಕೆ ಅಡಚಣೆ ಒಡ್ಡದಿರುವುದೇ ಕಾಂಗ್ರೆಸ್ಸಿನ ಈಗಿನ ನೀತಿ ಎಂಬುದರಲ್ಲಿ ಏನೂ ಸಂಶಯವಿಲ್ಲ"—ಎಂಬೀ ಅಂಶಗಳನ್ನು ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಪತ್ರಿಕಾ ಪ್ರತಿನಿಧಿಗಳೊಬ್ಬರಿಗೆ ತಿಳಿಸಿದ್ದಾರೆ.

ಕನ್ಯಾಪಹಾರ ಸ್ಥಿರ ಪಡಲಿಲ್ಲ.

ಹಾಸನ ಜಿಲ್ಲಾ ಸೀಗೂರು ಗ್ರಾಮದ ಗೌರಮ್ಮನೆಂಬ ಕನ್ಯೆಯನ್ನು ಆಕೆಯ ಸೋದರಮಾವನ ಮಕ್ಕಳು ಅಪಹರಿಸಿದರೆಂಬುದಾಗಿ ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಕನ್ಯೆಗೆ ಮದುವೆ ಜರಗುವುದು ಒಂದೆರಡು ದಿನ ಮಾತ್ರವಿದ್ದಾಗ ಆಕೆ ಕಣದಲ್ಲಿದ್ದುದನ್ನು ನೋಡಿಕೊಂಡು ಅಪಹರಿಸಿದರೆಂದು ಹೇಳಲಾಗಿತ್ತು. ಆಪಾದಿತರ ಮೇಲಿನ ಆರೋಪಗಳು ಋಜುವಾತಾಗಲಿಲ್ಲವಾಗಿ ಮೈಸೂರು ಸೆಷನ್ಸ್ ಜಡ್ಜರು ಎಲ್ಲರನ್ನೂ ಬಿಡುಗಡೆ ಮಾಡಿದರು.

ನೀರು ಪಾಲಾಗುತ್ತಿದ್ದವರು ಬದುಕಿದರು

ಶಿವಮೊಗ್ಗೆಯಿಂದ ಪಾಶ್ಚ್ಯಕ್ಕೆ ತುಂಗಾ ನದಿಯನ್ನು ದೋಣಿಯಲ್ಲಿ ಕುಳಿತು ರಾತ್ರಿ ವೇಳೆಯಲ್ಲಿ ದಾಟುತ್ತಿದ್ದಾಗ ತಳ ಭಾಗದಲ್ಲಿ ರಂಧ್ರವಿದ್ದ ಕಾರಣ ನೀರು ತುಂಬಿ ಮುಳುಗುವ ಸನ್ನಿವೇಶ ಬಂತು. ೫ ಸ್ತ್ರೀಯರೂ ೬ ಮಂದಿ ಪುರುಷರೂ ಅಪಾಯಕ್ಕೀಡಾಗಿದ್ದರು. [illegible] ದಡ ಸೇರಿದರು. [illegible] ಸರ್ವ ನಾಶ ಲಾಯಿತು.

ರೇಷನ್ ಟಿಕೆಟ್ ಸಿಕ್ಕಿದೆ

ದೇವರಾಜ ಮೊಹಲ್ಲಾ 1178/1 ನೇ ಮುನಿಸಿಪಲ್ ಡೋರ್ ನಂಬರಿಗೆ ಸಂಬಂಧಪಟ್ಟ 10218 ನೇ ನಂಬರ್ ರೇಷನಿಂಗ್ ಪ್ರೊಟೆಕ್ಟ್ ಸಿಕ್ಕಿದೆ. [illegible] ಸಂಬಂಧಪಟ್ಟವರು ಅದನ್ನು [illegible] ಎನ್ಕ್ವೈರಿ ನಂಬರು 01068

ರೇಡಿಯೋ ಸೆಟ್ಟುಗಳ ಕಳುವು

ಮೈಸೂರು ೨೨

ಮೈಸೂರು [illegible] ರಸ್ತೆಯಲ್ಲಿರುವ ("[illegible]") ರೇಡಿಯೋ [illegible] ಅಂಗಡಿಯಲ್ಲಿ ಮೊನ್ನೆ ಏನ ರಾತ್ರಿ [illegible] ರೇಡಿಯೋ ಸೆಟ್ಟುಗಳು ಮತ್ತು ಒಂದು ಟೈಪ್‌ರೈಟರ್ [illegible] ಕಳುವಾಗಿದೆಯೆಂದು ಪೋಲೀಸರಿಗೆ ವರದಿಯಾಗಿದೆ.

ಹಳ್ಳಿಗರಿಗಾಗಿ ಡಿಸ್ಪೋಗಳು

ಹಳ್ಳಿಗಳಿಂದ ಮೈಸೂರು ನಗರಕ್ಕೆ ಬಂದು ದವಸ ಧಾನ್ಯಗಳನ್ನು ಕೊಂಡೊಯ್ಯುತ್ತಿದ್ದ ಗ್ರಾಮಾಂತರ [illegible] ಮುಂದೆ [illegible] ಮೈಸೂರು ಅಂಗಡಿಗಳಲ್ಲಿ [illegible] ದೊರೆಯುತ್ತಿಲ್ಲವಾದ್ದರಿಂದ [illegible] ಅವರ ಅನುಕೂಲಕ್ಕಾಗಿ [illegible] ಡಿಪೋಗಳನ್ನು ತೆರೆಯಲು [illegible] ಬಂದಿದೆ.

ಮೈಸೂರು ಆಟಗಾರರಿಗೆ ಬೊಂಬಾಯಿ ಆಹ್ವಾನ

ಈ ವರ್ಷ ಬೊಂಬಾಯಿ ನಗರದಲ್ಲಿ ನಡೆಯುವ ಪೆಂಟಾಂಗ್ಯುಲರ್ ಪಂದ್ಯದಲ್ಲಿ ಭಾಗವಹಿಸಲು ಮೈಸೂರು ಸಂಸ್ಥಾನದ ಕ್ರಿಕೆಟ್ ಆಟಗಾರರಾದ [illegible] ರವರನ್ನು ಬೊಂಬಾಯಿ ಕೆಥೋಲಿಕ್ ಜಿಂಖಾನದವರು ಆಹ್ವಾನಿಸಿರುವರು.

ಮೈಸೂರು ಸೋಲಿಂದ ತಪ್ಪಿತು

ಮೈಸೂರು ಸಂಸ್ಥಾನದ [illegible] ಕೆಟ್ ಬೋಲರ್ ಶ್ರೀ [illegible] ಸ್ವಾಮಿಯವರು ಬೊಂಬಾಯಿನ [illegible] ಕ್ರಿಕೆಟ್ [illegible] ಆಹ್ವಾನವನ್ನು [illegible] ಬೊಂಬಾಯಿಗೆ [illegible] ತೆರಳುತ್ತಿರುವರು.

ಭಾರಿ ಕೇಡಿಗೆ ಶಿಕ್ಷೆ

[illegible] ಎಂಬ ಭಾರಿ [illegible] ಶಿಕ್ಷೆ ವಿಧಿಸಿದರು.

ಮಹಿಳಾ ಸಮಾಜದ ವಾರ್ಷಿಕೋತ್ಸವ

ಸ್ವ. ವ.) ನಂಜನಗೂಡು ೨೨

ನಂಜನಗೂಡಿನ ಮಹಿಳಾ ಸಮಾಜದ ಹತ್ತನೆಯ ವಾರ್ಷಿಕೋತ್ಸವವು [illegible] ಸಂಜೆ ಶ್ರೀಮತಿ [illegible] ರವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಸಮಾಜದ ಅಧ್ಯಕ್ಷಿಣಿ ಶ್ರೀಮತಿ [illegible] ರವರ ಸ್ವಾಗತ ಭಾಷಣವಾದ ನಂತರ, [illegible] ಶ್ರೀಮತಿ [illegible] ರವರ [illegible] ವರದಿಯನ್ನು ಒಪ್ಪಿಸಿ, ಸಮಾಜದ ಕೆಲಸ ಕಾರ್ಯಗಳನ್ನು ವಿವರಿಸಿದರು. [illegible] ಕಾಲದಲ್ಲಿ [illegible] ಕಳೆಯುದಕ್ಕೆ [illegible] ಕರ್ತವ್ಯದೊಂದಿಗೆ ಬುದ್ಧಿ [illegible] ವಾಗ್ಭಿವೃದ್ಧಿಗೂ [illegible] ಅವಕಾಶವನ್ನು ಕಲ್ಪಿಸಿಕೊಡುವುದೇ ಸಮಾಜದ ಉದ್ದೇಶವಾಗಿದೆ. ಆದರಿಂದ ಮಹಿಳೆಯರು ಹೆಚ್ಚಾಗಿ ಸದಸ್ಯರಾಗಿ ಸೇರಿ ಸಮಾಜದ ಅಭಿವೃದ್ಧಿಗೆ ಕಾರಣರಾಗಬೇಕೆಂದು ಕೋರಿದರು.

[illegible] ಶ್ರೀಮತಿ [illegible] ಸಮಾಜವು ಈ ಹತ್ತು ವರ್ಷಗಳಿಂದ ಉಪಯುಕ್ತವಾದ ಕೆಲಸಗಳನ್ನು ಮಾಡುತ್ತಿರುವುದನ್ನು ಅಭಿನಂದಿಸಿದರು. [illegible] ಹೆಣ್ಣು ಮಕ್ಕಳಿಗೆ [illegible] ಶಿಕ್ಷಣ ಕೊಡಿಸುವ ವಿಚಾರದಲ್ಲಿ [illegible] [illegible] ಶ್ರೀಮತಿ [illegible]

[illegible] ಸಮಾಜಕ್ಕೆ [illegible] ಭಾವನೆ [illegible] ಮಂತ್ರವೇ

ಮುಂದಿನವರ್ಷ ರಾಜಕೀಯ ಬಂದಿಗಳ ಬಿಡುಗಡೆಯೇ?

ಬಂಧನದಲ್ಲಿರುವ ರಾಜಕೀಯ [illegible] ರನ್ನು ಮುಂದಿನ ವರ್ಷದಲ್ಲಿ [illegible] ಮಾಡಬಹುದೆಂದು ದೆಹಲಿಯಲ್ಲಿ [illegible] ಕಳಿಸಲಾಗಿದೆ. ವೈಸರಾಯರು [illegible] ಬಿಕ್ಕಟ್ಟನ್ನು ಬಗೆಹರಿಸಲು [illegible] ನಡೆಸುವವರೆಗೂ ಪ್ರಮುಖ ಕಾಂಗ್ರೆಸ್ ನಾಯಕರನ್ನು ಮಾತ್ರ ಬಿಡುಗಡೆ ಮಾಡಲಾಗುವುದಿಲ್ಲವೆಂದೂ ಹೇಳಲಾಗಿದೆ

ಸರ್ದಾರ್ ಪಟೇಲರಿಗೆ ಖಾಯಿಲೆಯೆ?

ಕೇಂದ್ರ ಶಾಸನ ಸಭೆಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ [illegible] ಬಗ್ಗೆ ಪ್ರಶ್ನೆಗಳೆದ್ದಾಗ ಶ್ರೀ ಜೋಷಿಯವರು ಸರ್ಕಾರದವರನ್ನು ಕುರಿತು, ಸರ್ದಾರ್ ವಲ್ಲಭಾಯಿ ಪಟೇಲರು [illegible] ವುದು ನಿಜವೆ? ಎಂದು ಕೇಳಲಾಗಿ [illegible] ಯವರು, ಆ ಸಮಾಚಾರ [illegible] ದ ಬಗೆ ಎಂತು ಎಂದು ವಿಚಾರಿಸಿದರು. ಜೈಲಿನಲ್ಲಿರುವ ಕಾರ್ಯಕಾರಿ ಸಮಿತಿ ಸದಸ್ಯರು ಹೊರಕ್ಕೆ ಬರಗದ [illegible] ಸರಕಾರವು [illegible] ಸಮಾಚಾರ [illegible] ಕಾರಣ [illegible] ಹೆಚ್ಚಾಗಿ [illegible] ಹೇಳಿದರು

ದೇವರುಗಳ ಕಳುವು

[illegible] ಎಂಬಲ್ಲಿನ [illegible] ದೇವಸ್ಥಾನಕ್ಕೆ ಪೂಜಾರಿಯು ಮೊನ್ನೆ ಬೆಳಗ್ಗೆ [illegible] ಬಾಗಿಲು ತೆರೆಯುತ್ತಲೂ, [illegible] ಸ್ವಾಮಿ ಮತ್ತು ಗಣೇಶನ ವಿಗ್ರಹಗಳು ಕಾಣದಿದ್ದುದನ್ನು ಕಂಡು ಚಕಿತನಾಗಿ ಅಂಬಾಸಮುದ್ರಂ ಪೋಲೀಸರಿಗೆ ಫಿರ್ಯಾದು ಮಾಡಿರುವನು. ಆ ವಿಗ್ರಹಗಳ ಬೆಲೆ ೧ ಸಹಸ್ರ ರೂ. ಎಂದು ಹೇಳಲಾಗಿದೆ

ಬಂಗಾಳದಲ್ಲಿ ವಾರಕ್ಕೆ ಒಂದು ಲಕ್ಷ ಮರಣ

ಬಂಗಾಳದಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಿರುವವರ ಸಂಖ್ಯೆಯು ವಾರಕ್ಕೆ ೧ ಲಕ್ಷವೆಂದು ಪಂಡಿತ್ [illegible] ದಿನಪತ್ರಿಕೆ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ. ಮೈಸೂರಿನಲ್ಲಿ [illegible] ಸಂಚಾರವಾಗಿರುತ್ತಿದೆಯೇ, ಆ [illegible] ಬಂಗಾಳದಲ್ಲಿ [illegible] ದಿವಸ ಸಂಚಾರವಾದ [illegible] ಪರಿಶೀಲಿಸಬಹುದೆಂದು ಅವರಿಗೆ [illegible] ಕೊಟ್ಟಿರುವುದಾಗಿ ತಿಳಿಸಿದರು.

ಅ|| ಭಾ|| ಗೋ ರಕ್ಷಣಾ ಸಮ್ಮೇಳನ

ಮುಂದಿನ ತಿಂಗಳು [illegible] ೨೦ ನೆ [illegible] ಸಮ್ಮೇಳನಕ್ಕೆ [illegible] ಶ್ರೀ [illegible]

[illegible] ಸೇರಿದ [illegible] ಹಾಗೆ ಆದವರಿಗಳ [illegible] ಪ್ರತಿ [illegible] ೩೪೨.ದವು.

ಹಾಲುಕ್ಕಿಸುವ ಬೇವಿನ ಮರ

ಮಂಡ್ಯದ ಬಳಿಯ ಹುಲಿವಾನದ ಗ್ರಾಮದ ಬೇವಿನಮರವೊಂದರಲ್ಲಿ ಹಾಲು ದ್ರವಿಸುತ್ತಿದೆ. ಈ ವಿಚಿತ್ರವನ್ನು ನೋಡಲು ಒಂದೇಸಮನೆ ಹೋಗುತ್ತಿರುವುದು ಜನಸಂದಣಿ ಹೆಚ್ಚಿದಂತೆಲ್ಲಾ ಹಾಲು ಹೆಚ್ಚು ಧಾರಾಕಾರವಾಗಿ ಉಕ್ಕಲಾರಂಭವಾಗುತ್ತಿರುವುದಾಗಿ ವರ್ತಮಾನ

ರೇಷ್ಮೆ ರವಾನೆ ಪತ್ತೆ

ಬೆಂಗಳೂರು ಮಲ್ಲೇಶ್ವರದ ಅಂಚೆ ಶಾಖೆಯ ಮೂಲಕ ಶ್ರೀನಿವಾಸ ಕಂಪೆನಿಗೆ ಸಂಬಂಧಿಸಿದವರು ೧೬೦೦ ತೊಲ ರೇಷ್ಮೆಯನ್ನು ಹಾಸಿಗೆ ರವಾನಿಸುತ್ತಿದ್ದುದನ್ನು ಪತ್ತೆಹಚ್ಚಿ ಪೋಲೀಸು ವಶಕ್ಕೆ ಒಪ್ಪಿಸಲಾಗಿದೆ

ಪೋಲೀಸಿನವನಿಗೆ ಸಜ

ಬೆಂಗಳೂರು ಚಾಮರಾಜಪೇಟೆ ಪೋಲೀಸ್ ಠಾಣೆಯಲ್ಲಿ ಸ್ಪೆಷಲ್ ಸಾಮಾನುಗಳನ್ನು ಕದ್ದ ಅಪವಾದಕ್ಕಾಗಿ ಶಿವಣ್ಣ ಎಂಬ ಕಾನ್ಸ್‌ಟೇಬಲ್ ಮೇಲೆ ಮೊಕದ್ದಮೆ ಹೂಡಲಾಗಿತ್ತು. ನಗರದ ನ್ಯಾಯಾಧೀಶರು ಅವನಿಗೆ ೧೫ ದಿನಗಳ ಕಠಿಣ ಶಿಕ್ಷೆ ವಿಧಿಸಿದರು

ನೂತನ ಐ. ಜಿ. ಪಿ.

ಮಿ|| ಎ. ಎ. ಖಾದರರವರು ನಿನ್ನೆ ತಮ್ಮ ಐ. ಜಿ. ಪಿ. ಅಧಿಕಾರವನ್ನು ಶ್ರೀ ಎಸ್. ನಾರಾಯಣರಾಯರಿಗೆ ವಹಿಸಿದರು.

ಕುಂಬಿಲು ಮಾಡುವವರಿಗೆ ರಿಯಾಯಿತಿ

ಕುಂಬಿಲು ಕಾಲಗಳಲ್ಲಿ ಗ್ರಾಮಾಂತರಗಳಲ್ಲಿ ಆಲೆಮನೆ ರೈತಾಪಿ ಕೂಲಿಗಳಿಗೆ ಕಬ್ಬಿನ ಬೆಳೆ ಕೊಟ್ಟ ಪಾಡಿಗೆ ದವಸ ಸಾಗಿಸಲೂ ಮತ್ತು ಕೂಲಿ ರೂಪದಲ್ಲಿ ಬರುವ ದವಸವನ್ನು ಮನೆಗೆ ಸಾಗಿಸಲೂ ಈಗಿರುವ ಸಂಚಾರದ ನಿರ್ಬಂಧಗಳಿಂದ ಅಡಚಣೆಗಳುಂಟಾಗಿರುವ ಅಂಶಗಳನ್ನು ಮೈಸೂರು ತಾಲ್ಲೂಕಿನ ಬಹು ಮಂದಿ ರೈತರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿರಲಾಗಿ ಅಂಥ ಸನ್ನಿವೇಶಗಳಲ್ಲಿ ಯಾರಿಗೂ ತೊಂದರೆಯಾಗದಂತೆ ರಿಯಾಯಿತಿ ಕೊಡಲಾಗುವುದೆಂದು ತಿಳಿಸಲಾಗಿದೆ

ಟ್ರೆಜರಿ ಅಧಿಕಾರಿಗಳು

ಮಿ|| ಸೈಯದ್ ಅಬ್ದುಲ್ ಗಫೂರವರನ್ನು ಬೆಂಗಳೂರು ಸ್ಟೇಟ್ ಹುಜೂರ್ ಟ್ರೆಜರಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಇವರು ಇದುವರೆಗೆ ಅಸಿಸ್ಟೆಂಟ್ ಕಮಿಷನರ್ ಕೆಲಸ ನೋಡಿಕೊಳ್ಳುತ್ತಿದ್ದರು

ಸರ್ಕಾರದವರೇ ಕೊಳ್ಳುವರು

ಮುಂದಿನ ಸಾಲಿನಿಂದ ಆಹಾರ ಪದಾರ್ಥಗಳನ್ನು ಕೊಂಡು ಪ್ರಜೆಗಳಿಗೆ ಒದಗಿಸುವ ಸಂಪೂರ್ಣ ಕಾರ್ಯಭಾರವನ್ನು ಸರ್ಕಾರದವರೇ ವಹಿಸುವರೆಂದು ತಿಳಿಯುತ್ತದೆ. ಕಂಟ್ರೋಲ್ ಪದಾರ್ಥಗಳ ವ್ಯಾಪಾರಕ್ಕೆ ಮತ್ತಾರಿಗೂ ಅವಕಾಶ ಸಿಗುವುದಿಲ್ಲವೆಂದೂ ಹೇಳಲಾಗಿದೆ.

ರೇಷನ್ ವಿಸ್ತರಣೆ

ಮೈಸೂರು ಜಿಲ್ಲೆಗೆ ಸೇರಿದಂತೆ ಮೈನರ್ ಮುನಿಸಿಪಾಲಿಟಿ ಇರುವೆಡೆಗಳಲ್ಲೂ ತಾಲ್ಲೂಕು ಕೇಂದ್ರಗಳಲ್ಲೂ ರೇಷನ್ ಪದ್ಧತಿ ಜಾರಿಗೆ ತರಲು ಪೂರ್ವ ಸಿದ್ಧತೆಗಳು ನಡೆಯುತ್ತಿವೆ

ಸುಂಕದ ಮೊಹರು ಕಳುವು

ತುಮಕೂರು ಪೌರ ಸಭೆಯ ಸುಂಕದ ಮೊಹರನ್ನು ಯಾರೋ ಕದ್ದು ಹಾಕಿರುವುದಾಗಿ ಅಲ್ಲಿನ ಪೋಲೀಸರಿಗೆ ಫಿರ್ಯಾದು ಹೋಗಿದೆ.

ವಿದ್ಯಾ ಸಂಸ್ಥೆಗೆ ಸಹಾಯ

ಬೆಂಗಳೂರು ಒಬ್ಬ ಮಹಾಶಯರಾದ ಶ್ರೀ ಜಿ. ಎ. ಆಚಾರ್ಯರವರು ಗೋರೆಯಬೆದ ನೂತನ ಹೈಸ್ಕೂಲು ಸ್ಥಾಪನೆಗೆ ಇದುವರೆಗೆ ಒಟ್ಟು ೨೦ ಸಾವಿರ ರೂಪಾಯಿಗಳ ಉದಾರ ಸಹಾಯ ನೀಡಿರುವರು.

ಅರಸೀಕೆರೆಯಲ್ಲಿ ಕಾಂಗ್ರೆಸ್ ವಿಜಯ

ಅರಸೀಕೆರೆ ಪೌರ ಸಭಾ ಚುನಾವಣೆಗೆ ಕಾಂಗ್ರೆಸಿನವರನ್ನು ಬಿಟ್ಟರೆ ಸ್ವತಂತ್ರರಾಗಿ ನಿಂತಿದ್ದವರು ೪ ಮಂದಿ ಮಾತ್ರ. ಅವರುಗಳೂ ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದಿರುವರು. ಆದಕಾರಣ ಅಲ್ಲಿನ ಪೌರ ಸಭೆಯ ೧೫ ಸ್ಥಾನಗಳಿಗೂ ಕಾಂಗ್ರೆಸ್ಸಿನವರೇ ಪ್ರತಿ ಸ್ಪರ್ಧೆ ಇಲ್ಲದೆ ಚುನಾಯಿತರಾಗಿರುತ್ತಾರೆ

ಓಟಿಗೆ ಬಂಧುತ್ವವಿಲ್ಲ

ಮೊನ್ನೆ ನಾಗಮಂಗಲ ಮಂಡ್ಯದ ಸಿಂಧೀರು ಕೋಟದ ಮೈದಾನದಲ್ಲಿ ನೆರೆದಿದ್ದ ಸಭೆಯಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರು ಚುನಾವಣಾ ಆರಂಭ ಭಾಷಣ ಮಾಡಿದರು "ಉಣೋಕುಡೋಕೆ ಉಪಚಾರ, ಕೊಡೋಕೆ ಬಿಡೋಕೆ ಬೇರ್ಪ್ಯಚಾರ" ಎಂಬಂತೆ ನಿಮ್ಮ ಬಂಧುಗಳೇ ಕಾಂಗ್ರೆಸ್ಸಿಗೆ ಎದುರಾಗಿ ನಿಂತರೂ ಅವರಿಗೆ ನಿಮ್ಮ ಓಟು ಹೋಗಕೂಡದು ಎಂಬ ಅಂಶವನ್ನು ಒತ್ತಿ ಹೇಳಿದರು

ಸರ್ಕಾರಿ ಡಿಪೋನಲ್ಲಿ ಕಳವು

ಬೆಂಗಳೂರಿನ ಸರ್ಕಾರಿ ಡಿಪೊ ಒಂದಕ್ಕೆ ಪಂಚು ಕಳಚಿ, ಒಳಕ್ಕೆ ಇಳಿದು ಜಕ್ಕೆ, ಗಾಗಿ, ಸಕ್ಕರೆ ಭರ್ತಿ ಮೂಟೆಗಳನ್ನು ಕದ್ದಿರುವುದಾಗಿ ವರ್ತಮಾನ ಬಂದಿದೆ.

ಅಕ್ಕಿದಾಸ್ತಾನು ಹೇಳಲಾರೆವು

ಬೆಂಗಳೂರು ನಗರದಲ್ಲಿನ ಅಕ್ಕಿ ದಾಸ್ತಾನು ಮತ್ತು ವ್ಯಾಪಾರವ್ಯವಸ್ಥೆ ವಿಷಯವಾಗಿ ಕೆಲವು ಅಂಶಗಳನ್ನು ಅಲ್ಲಿನ ವರ್ತಕ ಸಮ್ಮೇಳನದವರು ಸಿವಿಲ್ ಸಪ್ಲೈಸ್ ಡೈರೆಕ್ಟರವರಲ್ಲಿ ವಿಚಾರಮಾಡಲಾಗಿ ಅವರು ಅದನ್ನು ತಿಳಿಸಲು ಸಾಧ್ಯವಿಲ್ಲವೆಂದು ಹೇಳಿರುವರು.

ಅರಗು ಇಟ್ಟಿದ್ದುದಕ್ಕೆ ಮೊಕದ್ದಮೆ

ಅಕ್ರಮವಾಗಿ ಅರಗನ್ನು ಹೊಂದಿದ್ದುದಕ್ಕಾಗಿ ಶಾಲಿಗ್ರಾಮದ ೫ ಜನ ವರ್ತಕರ ಮೇಲೆ ಮೊಕದ್ದಮೆ ಹೂಡಲಾಗಿದೆ ಎಂದು ತಿಳಿದುಬಂದಿದೆ

ಗೋಧಿ ಸರಬರಾಯಿ

ಕಳೆದ ೩ ವಾರಗಳಲ್ಲಿ ಭಾರತಕ್ಕೆ ಹೊರಗಿನಿಂದ ೫ ಹಡಗುಗಳನ್ನು ಗೋಧಿಯು ಬಂದಿರುವುದೆಂದು ಹೇಳಲಾಗಿದೆ.

ಕೂದಲು ಬೇಸಿಗೆಯಲ್ಲಿ ಜಾಸ್ತಿ ಬೆಳೆಯುವುದು

ಛಳಿಗಾಲಕ್ಕಿಂತಲೂ ಬೇಸಿಗೆಯಲ್ಲಿ ಕೂದಲು ಹೆಚ್ಚು ಬೆಳೆಯುವುದೆಂದು ಅನೇಕರ ಅಭಿಪ್ರಾಯ. ನಾಯಿಂದರಿಗೂ ಬೇಸಿಗೆಯಲ್ಲೇ ಹೆಚ್ಚು ಕೆಲಸ ಹೆಚ್ಚು ಎಂದಿದ್ದಾರೆ. ಬೇಸಿಗೆಯಲ್ಲಿ ಕ್ಷೌರ ಹೆಚ್ಚು ಅವಶ್ಯಕವಾಗಿ ಕಂಡು ಬರುವುದು. ಆ ಕಾಲದಲ್ಲಿ ಬ್ಲೇಡುಗಳೂ ಕತ್ತಿಗಳೂ ಬೇಗ ಸವೆದು ಹೋಗುವುವು

Edited, printed and published by A R. Nagarajan, at the Sadhvi Press, D.Subbiah Road, Mysore

ಸ್ತ್ರೀಯರ ಸೌಕರ್ಯಕ್ಕಾಗಿ

ಶನಿ ದಿನಗಳಲ್ಲಿ ಅವರ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.— ಚೆನ್ನಾಗಿರುವ ಅಕ್ಕಿ, ಬೂರಾಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆಪೇಟೆ ಬ್ರಾಂಚ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಖರೀದಿಗೆ ಇವೆ

ಚಾಮರಾಜ ಮೊಹಲ್ಲಾ ನ್ಯೂ ಲಕ್ಷ್ಮೀಪುರಂ ಎಕ್ಸ್‌ಟೆನ್ಷನ್ (ಮೈಸೂರು-ನಂಜನಗೂಡು ರಸ್ತೆ)—ಕಾಂಪೌಂಡ್, ನಲ್ಲಿಗಳು, ದೀಪ, ಫ್ಲಷ್, ಗ್ಯಾರೇಜ್ ಇರುವ, ಶ್ರೀಮಂತರಿಗೆ ಅನುಕೂಲವಾದ ಬಂಗ್ಲೆ

ಬೆಲೆ ರೂ. ೧೭,೫೦೦

ನಾರಾಯಣಶಾಸ್ತ್ರಿ ಪುರದಲ್ಲಿ ಹೋಟೆಲ್ ಇರುವ ಗ್ಯಾರೇಜ್, ನಲ್ಲಿ, ಕಾಂಪೌಂಡ್ ದೀಪ ಇರುವ, ಒಳ್ಳೇ ಬಾಡಿಗೆ ಬರುವ ಮನೆ

ಬೆಲೆ ರೂ. ೬೫೦೦.

ಚಾಮುಂಡಿ ಪುರದಲ್ಲಿ ಶ್ರೀ ಶಂಕರನಾರಾಯಣಸ್ವಾಮಿ ದೇವಸ್ಥಾನದ ಹತ್ತಿರ ಅಚ್ಚುಕಟ್ಟಾದ ೧೧ ರೂ. ಬಾಡಿಗೆ ಬರುವ ನಲ್ಲಿ, ದೀಪ, ಫ್ಲಷ್ ಇರುವ ಮನೆ

ಬೆಲೆ ರೂ. ೫೫೫೦.

ನಾರಾಯಣಪುರಂ ೬ ನೇ ಬ್ಲಾಕಿನಲ್ಲಿ ಸಂಸಾರಕ್ಕೆ ಯೋಗ್ಯವಾದ ಸಣ್ಣ ಮನೆ

ಬೆಲೆ ರೂ. ೨೫೫೦.

ವಿಚಾರಿಸಬೇಕಾದ ವಿಳಾಸ:

ಜಿ. ಎಸ್. ಸುಬ್ಬರಾವ್,

(ಎಂಜಿನಿಯರಿಂಗ್ ಕಂಪೆನಿ) ಜಗನ್ಮೋಹನ ಬಂಗ್ಲೆ ಎದುರು, ಮೈಸೂರು

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಉಜ್ಜಿಕೊಂಡರೆ ಉಂಟಾಗುವ ನೊರೆಯು ಚರ್ಮದ ರಂಧ್ರಗಳನ್ನೆಲ್ಲಾ ಹೊಕ್ಕು ಮೈಯೊಳಗಿನ ಕೊಳೆಯನ್ನೆಲ್ಲಾ ತೆಗೆದುಹಾಕುವುದು. ಇದರ ಮೃದುತ್ವ, ಸುಗಂಧತ್ವ ಬಹಳ ಹಿತಕರ

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೨] ಬುಧವಾರ ೨೪--೧೧--೪೩ [ಸಂಚಿಕೆ ೧೦೮

ಮುಸೋಲಿನಿ ಆತ್ಮಹತ್ಯೆ?

ಸಾಮೋಸ್ ದ್ವೀಪ ವಶವಾಯಿತೆಂದು ಜರ್ಮನರ ಹೇಳಿಕೆ

ರಾಜಕುಮಾರ ಬಿಸ್ಮಾರ್ಕರಿಂದ ಶಾಂತಿ ಸಂಧಾನ ಪ್ರಯತ್ನ

ಸಿ. ವಿ. ಧ್ರುವರ ದಸ್ತಗಿರಿ

ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾಜಿ ಕಾರ್ಯದರ್ಶಿಗಳಾದ ಶ್ರೀ ಸಿ. ವಿ. ಧ್ರುವರವರನ್ನು ಭಾರತ ರಕ್ಷಣಾ ಶಾಸನದ ೨೬ ನೇ ನಿಯಮದಂತೆ ೨೨ ನೇ ತಾ॥ ಚಿಕ್ಕಮಗಳೂರಿನಲ್ಲಿ ಸೆರೆ ಹಿಡಿದು ಅದೇ ಊರಿನ ಲಾಕಪ್ಪಿನಲ್ಲಿಡಲಾಗಿದೆ.

ಸಿದ್ದಯ್ಯನವರ ಬಿಡುಗಡೆ

ನಿರ್ಬಂಧದಲ್ಲಿರುವ ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್. ಸಿದ್ದಯ್ಯನವರು ಈಗ ಅನಾರೋಗ್ಯವಾಗಿ ಜಯ ಚಾಮರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಇವರನ್ನು ಬಿಡುಗಡೆ ಮಾಡಲು ಸರ್ಕಾರದ ಆಜ್ಞೆಯಾಗಿದೆ.

ಅನಾಥರಿಗೆ ಪಾಕಶಾಲೆ

ಸಂಸ್ಥಾನದ ವಿವಿಧ ಪ್ರದೇಶಗಳಲ್ಲಿ ಅನಾಥರಿಗೂ ಮತ್ತು ಬಡವರಿಗೂ ಉಪಯುಕ್ತವಾಗಲೆಂದು ಉಚಿತ ಪಾಕಶಾಲೆಗಳನ್ನು ಸರ್ಕಾರದವರು ಏರ್ಪಡಿಸಿರುವರು. ಸ್ಥಿತಿ ಹೆಚ್ಚಿರುವ ಇತರ ಎಡೆಗಳಲ್ಲೂ ಪಾಕಶಾಲೆಗಳನ್ನು ತೆರೆಯುವ ಉದ್ದೇಶವಿರುವುದರಿಂದ ಆ ವಿಷಯವಾಗಿ ಎಲ್ಲಾ ಜಿಲ್ಲಾಧಿಕಾರಿಗಳೂ ಕಾರ್ಯ ಕೈಗೊಳ್ಳತಕ್ಕದ್ದೆಂದು ಸರ್ಕಾರದ ಸೂಚನೆಯಾಗಿದೆ. ಜಿಲ್ಲೆಗೆ ಒಂದರಂತೆ ಧರ್ಮಾರ್ಥ ಭೋಜನ ಶಾಲೆ ಏರ್ಪಡುವುದು. ಪ್ರಭುಗಳು ಒಂದೊಂದಕ್ಕೂ ನೂರು ರೂಪಾಯಿಗಳ ಖರ್ಚಿಗೆ ಅನುಮತಿ ಇತ್ತಿರುವರು.

ಜಿಲ್ಲಾ ಆಹಾರ ಸಮ್ಮೇಳನ

ಬೆಂಗಳೂರು ಜಿಲ್ಲಾ ಆಹಾರ ಸಮ್ಮೇಳನವು ಬರುವ ತಿಂಗಳು ೫ ನೇ ತಾ॥ ಮಿ॥ ಜಿ. ಅಬ್ದುಲ್ ರಹಮಾನರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸೇರುವುದು. ಸರಬರಾಜು ಸಚಿವರಾದ ಶ್ರೀ ಎಚ್. ಎ. ಶ್ರೀನಿವಾಸರವರನ್ನು ಸಮ್ಮೇಳನದ ಆರಂಭೋತ್ಸವವನ್ನು ನಡೆಸಲು ಕರೆಯಬೇಕೆಂದು ನಿರ್ಧರಿಸಲಾಗಿದೆ.

ಪರರ ಪತ್ನಿಯನ್ನು ಬಚ್ಚಿಟ್ಟಿದ್ದ ಪ್ರಸಂಗ

ತೀರ್ಥಹಳ್ಳಿ ರಾಮಪ್ಪ ಎಂಬುವರು ರಂಗಪ್ಪಶೆಟ್ಟಿ ಮಹದೇವ ಎಂಬುವರ ಪತ್ನಿಯನ್ನು ಪುಸಲಾಯಿಸಿ ಕರೆತಂದು ತಮ್ಮ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದರೆಂದು ಮಹದೇವರವರು ಶಿವಮೊಗ್ಗ ನ್ಯಾಯಾಧೀಶರಿಗೆ ಅರ್ಜಿ ಹಾಕಿಕೊಳ್ಳಲಾಗಿ ಹೆಂಗಸನ್ನು ಕೋರ್ಟಿಗೆ ಹಾಜರ್ ಮಾಡಬೇಕೆಂದು ವಾರಂಟ್ ಹುಟ್ಟಿತು. ತೀರ್ಥಹಳ್ಳಿ ಪೋಲೀಸರು ಬಹಳ ಶ್ರಮದಿಂದ ಬಚ್ಚಿಟ್ಟಿದ್ದ ಹೆಂಗಸನ್ನು ಹೊರತಂದು ಕೋರ್ಟಿಗೆ ಹಾಜರ್ ಪಡಿಸಿರುವರು. ತನಿಖೆ ನಡೆಯುತ್ತಿದೆ.

ಕಳ್ಳನನ್ನು ಹುಡುಗಿ ಹಿಡಿದಳು

ಚಿಕ್ಕಮಗಳೂರು ಬಳಿ ಬಂಡಿಹಳ್ಳಿಯ ಮನೆಯೊಂದಕ್ಕೆ ಕಳ್ಳನೊಬ್ಬನು ನುಗ್ಗಿ ಅಟ್ಟವನ್ನು ಸೇರಿ ಕಳ್ಳತನಕ್ಕೆ ಹೊಂಚು ಹಾಕುತ್ತಿರಲು ಆ ಮನೆಯಲ್ಲಿದ್ದ ಹುಡುಗಿಯೊಬ್ಬಳು ಅವನನ್ನು ಕಂಡು ಧೈರ್ಯದಿಂದ ಗ್ರಾಮಸ್ಥರನ್ನು ಕರೆತಂದು ಕಳ್ಳನು ಸಿಕ್ಕಿಬೀಳಲು ಕಾರಣಳಾಗಿದ್ದಾಳೆ.

ವಿಚಿ ಅಧಿಕಾರಿಗಳ ಕೊಲೆ

ಫ್ರಾನ್ಸಿನ ದೇಶಭಕ್ತರು ವಿಚಿ ಅಧಿಕಾರಿಗಳನ್ನು ಮಾರ್ಸೇಲ್ಸ್‌ನಲ್ಲಿ ಗುಂಡು ಹಾರಿಸಿ ಕೊಂದರೆಂದು ವಿಚಿ ರೇಡಿಯೋ ಪ್ರಕಟಿಸಿದೆ.

ಪ್ರಭುಗಳ ಪ್ರವಾಸ

ಮೈಸೂರು ೨೨

ಡಿಸೆಂಬರ್ ತಿಂಗಳು ನಡುಭಾಗದಲ್ಲಿ ಶ್ರೀಮನ್ಮಹಾರಾಜರು ಕೃಷ್ಣರಾಜನಗರ, ಚಾಮರಾಜನಗರ, ನಂಜನಗೂಡುಗಳಿಗೆ ಭೇಟಿಯೀಯುವರೆಂದು ತಿಳಿದು ಬಂದಿದೆ.

ಭಾವಸಾರ ಕ್ಷತ್ರಿಯ ವಿದ್ಯಾರ್ಥಿ ಸಂಘ

ನೋಳ್ಯಾಂಡ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ಶ್ರೀಯುತ ಯು. ಎಲ್. ರಾಮಚಂದ್ರರಾಯರು ನಿನ್ನೆಯ ದಿವಸ ಸಾಯಂಕಾಲ ಭಾವಸಾರ ಕ್ಷತ್ರಿಯ ಮಂಡಳಿಯ ಸಭಾಂಗಣದಲ್ಲಿ ನೆರವೇರಿಸಿದರು. ಶ್ರೀಯುತ ಎ. ಪಿ. ಅಂಬರ್‌ಕರ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಆ ಸಮಯದಲ್ಲಿ ಶ್ರೀಯುತ ಯು. ಎಲ್. ರಾಮಚಂದ್ರರಾಯರು ಸಂಘದ ಉನ್ನತಿಗಾಗಿ ೧೦೧ ರೂ. ಗಳ ಉದಾರ ದಾನವನ್ನು ಮಾಡಿದರು. ಇದೇ ರೀತಿ ಬಾಕಿ ಬಾಂಧವರೂ ಮುಂದೆ ಬಂದು ಸಹಾಯ ಮಾಡಬೇಕಾಗಿ ಸಂಘವು ಕೋರುತ್ತದೆ. ಎಸ್. ಕೆ. ಮಹೋದಯರ ಎಸ್. ವಿ. ಎಲ್. ಪಿ. ಮೆಟ್ ಬಹುಮಾನವನ್ನು ಶ್ರೀಯುತ ಕೆ. ಎಂ. ಸತ್ಯನಾರಾಯಣರಾವ್‌ರಿಗೆ ಕೊಡಲಾಯಿತು. ಎಂ. ... ಕಾರ್ಯದರ್ಶಿಗಳು ಬರೆಯುತ್ತಾರೆ.

ವಿವಾಹ ಮಹೋತ್ಸವ

ಸರ್ಕಾರದ ಸಿವಿಲ್ ಸಪ್ಲೈಸ್ ಡೈರೆಕ್ಟರಾದ ಶ್ರೀ ಟಿ. ಎಸ್. ರಾಘವೇಂದ್ರರಾಯರ ಕುಮಾರಿ ಚಿ॥ ಸೌ॥ ಅನಸೂಯಾಬಾಯಿಯವರನ್ನು ಹಿಂದೂಸ್ಥಾನ್ ಏರ್ ಕ್ರಾಫ್ಟ್‌ನಲ್ಲಿ ಡ್ರೈವರ್ ಇಂಜನಿಯರಾಗಿರುವ ಚಿ॥ ಜಿ. ಕೃಷ್ಣಸ್ವಾಮಿರಾವ್‌ರವರಿಗೆ ಕೊಟ್ಟು ೨೨ ನೇ ತಾ॥ ಮೈಸೂರಿನಲ್ಲಿ ವಿವಾಹ ನಡೆಯಿತು. ಆ ಸಂಬಂಧವಾಗಿ ಈ ದಿನ ಶ್ರೀ ಟಿ. ಎಸ್. ರಾಘವೇಂದ್ರರಾಯರು ಅನೇಕ ಮಾನ್ಯ ಜನರನ್ನು [illegible] ಗಳನ್ನು ಆಹ್ವಾನಿಸಿ ಪ್ರೀತಿಭೋಜನದಿಂದ ತೃಪ್ತಿಪಡಿಸಿದರು.

ಪಲ್ಲದಲ್ಲಿ ೧೦ ಸೇರು ಸರ್ಕಾರಕ್ಕೆ?

ಬೇಲೂರು ಭತ್ತದ ಮಿಲ್‌ಗಳಿಗೆ ಭತ್ತವನ್ನು ಅಕ್ಕಿ ಮಾಡಿಸಲು, ಕೊಡುವ ರೈತರುಗಳಿಂದ ಪಲ್ಲಕ್ಕೆ ೧೦ ಸೇರು ಅಕ್ಕಿಯನ್ನು ಸರ್ಕಾರಕ್ಕೆ ಕೊಡಬೇಕೆಂದು ಮಿಲ್‌ನವರು ಹಿಡಿಯುತ್ತಿರುವರಂತೆ. [illegible] ನ್ಯಾಯವನ್ನು ಅಧಿಕಾರಿಗಳು ಪರಿಶೀಲಿಸಬೇಕೆಂದು ಕೇಳಲಾಗಿರುವುದು.

ಮುಸೋಲಿನಿ ಪ್ರಾಣತ್ಯಾಗ?

ಅಧ್ಯಕ್ಷ ರೂಸ್‌ವೆಲ್ಟರೂ ಜನರಲ್ ಚಾಂಗ್ ಕೈಷೇಕರೂ, ಪ್ರಧಾನಿ ಚರ್ಚಿಲರೂ ಕೈರೋವಿನಲ್ಲಿ ಮಿಲಿಟರಿ ಸಿಬ್ಬಂದಿಗಳೊಡನೆ ಕಲೆತು ತಮ್ಮ ಉತ್ತರ ಆಫ್ರಿಕಾ ಸಮ್ಮೇಳನವನ್ನು ಪೂರೈಸಿರುವರು. ಬ್ರಿಟನ್, ಚೀನಾ, ಅಮೆರಿಕಾ ಈ ಮೂರು ರಾಷ್ಟ್ರಗಳೂ ಜಪಾನಿನ ಮೇಲೆ ಅಪ್ರತಿಹತವಾಗಿ ಸಮುದ್ರ, ಆಕಾಶ, ಭೂಮಿ ಎಲ್ಲ ರಂಗಗಳಿಂದಲೂ ಧಾಳಿ ಮಾಡತಕ್ಕದ್ದೆಂದು ತೀರ್ಮಾನವಾಯಿತು. ಈಗಾಗಲೇ ಇಂಥ ಧಾಳಿಗಳು ದಿನೇ ದಿನೇ ಜೋರಾಗುತ್ತಿವೆ ಜಪಾನಿನ ಆಕ್ರಮಣ ನೀತಿಯನ್ನು ತಡೆಗಟ್ಟಿ ಶಿಕ್ಷಿಸಲೂ ಈ ಹೋರಾಟ ನಡೆಸಲಾಗುತ್ತಿದೆ ೧೯೧೪ರ ಮೊದಲನೆ ಪ್ರಪಂಚ ಯುದ್ಧದಿಂದ ಈಚೆಗೆ ಈ ಯುದ್ಧದ ವರೆಗೆ ಜಪಾನು ಶಾಂತ ಸಾಗರದಲ್ಲಿ ಆಕ್ರಮಿಸಿದ ದ್ವೀಪಗಳಿಂದ ಸಹಾ ಅವರನ್ನು ಹೊಡೆದಟ್ಟತಕ್ಕದ್ದು ಚೀನಾದಲ್ಲಿ ಜಪಾನರು ಹಿಡಿದ ಮಂಚೂರಿಯಾ ಫಾರ್ಮೋಸ ಪೆಸ್ಕಡೋರ್ಸ್ ಮುಂತಾದವುಗಳಿಂದ ಆ ಜಪಾನರನ್ನು ಹೊಡೆದೋಡಿಸಿ ಚೀನಾಗೆ ಆ ಪ್ರದೇಶಗಳನ್ನು ವಾಪಸ್ಸು ಕೊಡತಕ್ಕದ್ದು ಜಪಾನರು ಹಿಂಸೆಯಿಂದಲೂ ಮತ್ತು ದುರಾಸೆಯಿಂದಲೂ ಹಿಡಿದ ಎಲ್ಲ ಪ್ರದೇಶಗಳಿಂದಲೂ ಅವರನ್ನು ಹೊರಡಿಸತಕ್ಕದ್ದು ಕೊರಿಯಾ ಸ್ವಾತಂತ್ರ್ಯವನ್ನು ಗಳಿಸಿಕೊಡತಕ್ಕದ್ದು ಅದೇ ರೀತಿ ಜಪಾನಿನ ತಮ್ಮ ಧಾಳಿಗಳನ್ನು ಎದೆಬಿಡದ ಮುಂದ ವರಿಸಿ, ಜಪಾನು [illegible] ಎಂದು ಕೈರೋ ಸಮ್ಮೇಳನದಲ್ಲಿ ತೀರ್ಮಾನವಾಗಿರುತ್ತದೆ

ಜಪಾನಿನ ಸಂಧಾನ ಪ್ರಯತ್ನ

ಮಾಜಿ ವಿದೇಶಾಂಗ ಮಂತ್ರಿ ಮ. ಬಿಂ ದತ್ತದಲ್ಲಿ ಜಪಾನೀ ಸರ್ಕಾರದವರು ಒಂದು ಹೊಸ ರಾಜತಂತ್ರೀಯ ಸಮಿತಿಯೊಂದನ್ನು ರಚಿಸಿರುವರು ಸಮಯ ಒದಗಿದಾಗ ಶಾಂತಿ ಸಂಧಾನವನ್ನು ನಿತ್ರರ ಮುಂದೊಡ್ಡುವ ಕಾರ್ಯಭಾರವನ್ನು ಆ ಸಮಿತಿಗೆ ವಹಿಸಲಾಗಿದೆ. ಇಟಲಿ ಪತನವನ್ನು ಕಂಡ ಮೇಲೆ ಜಪಾನೀಯರು ಈ ಪ್ರಯತ್ನಕ್ಕೆ ಕೈಹಾಕಿರುವರು. ಜರ್ಮನಿಯು ಪತನದ ಕಡೆಗೆ ಪರಾಜಯ ಹೊಂದುತ್ತಿದೆಯಾಗಿ ಜಪಾನಿಗೆ ಅದರ ಬೆಂಬಲದ ಬಗ್ಗೆಯೂ ಸಂದೇಹ ಬಂದಿರುವುದೊಂದು ಈ ಪ್ರಯತ್ನಗಳಿಗೆ ಕಾರಣವಾಗಿದೆ.

ಜರ್ಮನಿಯ ಶಾಂತಿ ಸಂಧಾನ

ಜರ್ಮನರು ಶಾಂತಿ ಸಂಧಾನಕ್ಕಾಗಿ ಪ್ರಯತ್ನಿಸುತ್ತಿರುವರೆಂಬ ಗಾಳಿಸುದ್ದಿಗಳಿಗೆ ಸಮರ್ಥನ ದೊರಕದ ಇದ್ದರೂ ವದಂತಿಗಳಿಗೇನೂ ತಾನೇ ತಾನಾಗಿ ಎಲ್ಲೆಲ್ಲೂ ಹಬ್ಬುತ್ತಿವೆ ಜರ್ಮನರು ತಮ್ಮ ಸೋಲನ್ನು ಒಪ್ಪಿಕೊಳ್ಳಲು ಹಿಂತೆಗೆಯುತ್ತಿರುವುದರಿಂದ ಈ ಊಹಾಪೋಹಗಳನ್ನು ಸಮರ್ಥಿಸಲಿಲ್ಲ ಶಾಂತಿ ಸಂಧಾನವಿಲ್ಲದಿದ್ದಲ್ಲಿ ಜರ್ಮನ್ ಅಧಿಕಾರಿಗಳು ಕೆಲವರು ಲೋಕ ನಾಯಕರಾದೆಡೆಗಳಿಗೆ ಸಂಚರಿಸಲು ಕಾರಣಗಳೇನಿದ್ದಿತೆಂದು ಬರ್ನ್ ನಗರದಲ್ಲಿ ಹಲವರ ಪ್ರಶ್ನೆ.

ಜಪಾನ್ ಮೇಲಿನ ಯುದ್ಧಕ್ಕೆ ರಷ್ಯಾ ಬೆಂಬಲ

ಜಪಾನನ್ನು ಸದೆಬಡಿಯಲು ರಷ್ಯನರೂ ಸಹಕರಿಸಬೇಕೆಂಬ ಬಗ್ಗೆಯೂ ಚರ್ಚಿಲ್ ರೂಸ್‌ವೆಲ್ಟರು ಸ್ಟ್ಯಾಲಿನರೊಡನೆ ಕಲೆತು ಮಾತನಾಡುವಾಗ ಸ್ಟ್ಯಾಲಿನರಿಂದ ಭರವಸೆ ಕೇಳಬಹುದೆಂದು ಹೇಳಲಾಗಿದೆ

ಪೂರ್ವ ಬಂಗಾಳಾ ಮೇಲೆ ಜಪಾನ್ ಧಾಳಿ

ಜಪಾನೀ ವಿಮಾನಗಳು ಪೂರ್ವ ಬಂಗಾಳದ ಒಂದು ವಿಮಾನ ನಿಲ್ದಾಣದ ಮೇಲೆ ಧಾಳಿ ನಡೆಸಿವೆ [illegible] ವಿಮಾನವನ್ನು ಉರುಳಿಸಲಾಯಿತು. [illegible] ಕಡೆ ಯಾವ ನಷ್ಟವೂ ಆಗಿಲ್ಲ [illegible] ಹಿಂದೆ [illegible] ಹೊರಟ ದೇಶದ [illegible] ಯಲ್ಲಿ ನಡೆದಿದೆ

ಚೈನಾದ ಒತ್ತಾಯ

ರೂಸ್‌ವೆಲ್ಟರೂ ಚರ್ಚಿಲ್‌ರೂ ಚಿಯಾಂಕೈಷೆಕ್‌ರೂ ಇದೇ ಮೊದಲನೇ ಬಾರಿ ಕಲೆತು ಮಾತುಕತೆ ನಡೆಸಿದ್ದು. ಸಮ್ಮೇಳನದಲ್ಲಿ ಚಿಯಾಂಕೈಷೆಕ್‌ರು, ಮೂರು ರಾಷ್ಟ್ರಗಳವರೂ ಕಲೆತ, ಶಾಂತಿಸಾಗರ ಆಗ್ನೇಯ ಏಷ್ಯಾ ಮತ್ತು ಚೀನಾ ರಂಗಗಳಲ್ಲಿ ಮುಂದುವರಿಯಬೇಕೆಂತಲೂ ಭಾರತದಿಂದ ಧಾಳಿ ಆರಂಭಿಸಿ ಬರ್ಮಾ ರಸ್ತೆಯನ್ನು ತೆರೆಯಬೇಕೆಂತಲೂ ಚೀನಾ ವಿಗೆ ಹೆಚ್ಚು ಸಲಕರಣೆ ದೊರೆಯಬೇಕೆಂತಲೂ ಮತ್ತು ಯುದ್ಧಾನಂತರದ ಚೀನಾ ಪುನರ್ನಿರ್ಮಾಣಕ್ಕೆ ಬ್ರಿಟನ್ ಮತ್ತು ಅಮೆರಿಕಾ ಸಹಕರಿಸಬೇಕೆಂತಲೂ ಒತ್ತಾಯ ಪಡಿಸಿದರು.

ರಸ್ತೆ ಸಾಲು ಛಿದ್ರವಾಯಿತು

ಸಾಟಿ ಮರಿಯಾ ಮತ್ತು ರೋಮ್‌ಗೆ ಹೋಗುವ ರಸ್ತೆಯನ್ನು ಮಿತ್ರರು ಹಿಡಿದಿರುವುದಲ್ಲದೆ ರಸ್ತೆ ಸಾಲುಗಳನ್ನು ಛಿದ್ರ ಛಿದ್ರ ಮಾಡಿ ಗುಸ್ತಗೊಳಿಸಲಾಗಿದೆ ಎಂಬುದಾಗಿ ಉತ್ತರ ಆಫ್ರಿಕಾ ಮಿತ್ರ ಕಛೇರಿಯಿಂದ ಹೊರಟಿರುವ ಪ್ರಕಟನೆ ತಿಳಿಸುವುದು.

ಯುದ್ಧಾಂತ್ಯ ದೂರವಿಲ್ಲ

ಈ ಯುದ್ಧದ ಕೊನೆಯಾಗಲು ಬಹುದೂರವೇನಿಲ್ಲ ಈ ಸಮರವು ೧೯೪೪ನೇ ಇಸವಿಯಲ್ಲಿ ಎದುರಿಸಿ ಕೊನೆಗೊಳ್ಳುವುದು. ಆದರೆ ಎಲ್ಲರೂ ಆ ಹೊತ್ತಿಗೆ ಸಮರ ಬೆಂಕಿ [illegible] ತ್ವವ್ವ ಉಜ್ವಲ ರೂಪಕ್ಕೆ ತರಬೇಕು ಎಂದು [illegible] ನಿಚ್ [illegible] ಪತ್ರಿಕೆಯೆಂದು ಬರೆಯುತ್ತದೆ

೧೩೩ ವರ್ಷದ ಮುದುಕಿ

[illegible] ೧೩೩ ವರ್ಷ ವಯಸ್ಸಿನ [illegible] ಎಂಬ ಮುದುಕಿ ಮೊನ್ನೆ [illegible] ವಯಸ್ಸಿನಲ್ಲಿ ೭೬ ವಯಸ್ಸಿನ ಮಗನೊಡನೆ [illegible] ಯಾತ್ರೆ ಹೋಗಿ ಬಂದಿದ್ದಾಳೆ [illegible] ವಯಸ್ಸಿನ ತಮ್ಮನೊಬ್ಬನಿದ್ದಾನೆ. ಆಕೆಯ [illegible] ತನ್ನ [illegible] ವಯಸ್ಸಿನಲ್ಲಿ [illegible] ನೋಡಿರುವಳಲ್ಲ [illegible] ಎಂದು ಹೇಳುವ [illegible] ಕಣ್ಣು ಚೆನ್ನಾಗಿ ಕಾಣುತ್ತವೆ

ಸಗಾರ ಸರ್ಗ

[illegible]

ನಂಜನಗೂಡಿನ [illegible] ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ [illegible] ಸದಾಶಿವಯ್ಯನವರಿಗೆ [illegible] ನಿಂದ ೨೨ ದಿವಸ ರಜವನ್ನು [illegible] ವರು ಹಿಂಜರಾಗು [illegible] ಸ್ಥಾನಕ್ಕೆ ತುಮಕೂರಿನ [illegible] ಯಿಂದ ಶ್ರೀ ಎಂ. ಎಸ್ [illegible] ನೇಮಿಸಲಾಗಿದೆ.

ಮೈಸೂರು ನಗರದ [illegible] ಶ್ರೀ ಬಿ ಶಿವಪ್ಪನವರು [illegible] ಕೂರಿನ ದ್ವಿತೀಯ [illegible] ನೇಮಿಸಲಾಗಿದೆ

ಸಚಿವರ ಪ್ರವಾಸ

ಪಬ್ಲಿಕ್ ವರ್ಕ್ಸ್ ಸಚಿವರಾದ ಮಿ॥ ಶಮಾಂರವರು ಡಿಸೆಂಬರ್ ೩ ನೇ ಆ॥ ನಿಂದ ೮ ರ ವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಮಾಡುವರು ಭದ್ರಾವತಿ, ಲಕ್ಕವಳ್ಳಿ ಆಣೆಕಟ್ಟು, ಭದ್ರಾ ಆಣೆಕಟ್ಟು, ಸೂಳೆಕೆರೆ, ಸಕ್ಕರೆ ಫ್ಯಾಕ್ಟರಿ ಮತ್ತು ಜೋಗಿಗೆ ಭೇಟಿ ಕೊಡುವರು

ಕೊಕ್ಕೊ ಸಂಧ್ಯ

[illegible] ಗಳ [illegible] ಗಳಿಂದ [illegible]

ಬೆಂಗಳೂರು ಚುನಾವಣೆಗೆ ಪ್ರಯಾಣ

ನಾಳೆ [illegible] ಬೆಂಗಳೂರಿನಲ್ಲಿ ನಡೆಯುವ ಪೌರ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬೆಂಬಲ ಕೊಡಲು ರಾಜಧಾನಿಯಿಂದ ಈ ದಿನ ಶ್ರೀ ಗಳಾದ ಎಂ. [illegible], ಆ ಪಿ ನಂಜಪ್ಪ, ಟಿ ವೆಂಕಟರಮಣಯ್ಯ, ಎಂ. ಎಲ್. ನಂಜರಾಜ ಅರಸ್, ಕೆ ಎಸ್ ಸತ್ಯನಾರಾಯಣರಾವ್, ಎಂ. [illegible] ಪ್ಪ, ನಾ. ಭದ್ರಯ್ಯ, ಮುಂತಾದವರು ಬೆಂಗಳೂರಿಗೆ ಪ್ರಯಾಣ ಮಾಡಿದರು.

ಪೇಷ್ವರು ಬುಕಾರೆಸ್ಟ್‌ನಲ್ಲಿ

[illegible] ಬುಕಾರೆಸ್ಟ್‌ನಲ್ಲಿ [illegible] ಅವರು ಈ ವೇಳೆಗೆ [illegible] ಅಂಕಾರದಿಂದ ಹೊರಟಿ [illegible]

ಆತ್ಮ ರಕ್ಷಣೆಯೇ ಜಪಾನರ ನೀತಿ

[illegible] ಜಪಾನರು [illegible] ಕೊಟ್ಟಿದ್ದಾರೆ [illegible] ಆ ಸ್ಥಿತಿ [illegible] ಆತ್ಮರಕ್ಷಣೆ [illegible] ಗಾಗಿದೆ

ಮಲೇರಿಯಾದಿಂದ ೩೧ ಸಾವಿರ ಸಾವು

[illegible] ಹಂಡೀ [illegible] ಜನರು [illegible] ಮಂದಿ ಸತ್ತು [illegible]

೨೦ಕ್ಕೆ ರೇಷನ್ ಆರಂಭ

ಬೆಂಗಳೂರು ೧

೧ ನೇ ತಾ॥ ಪ್ಯಾರಂಭವಾಗಲಿದ್ದ ರೇಷನ್ ಸರ್ಕಾರದು ೨೦ ನೇ ತಾ॥ ನಿಂದ ರಾಜಧಾನಿಯಲ್ಲಿ ಜಾರಿಗೆ ಬರ ಘದಾಗಿ ಪ್ರಕಟಿಸಿನಿಂಬಿವೆ

ಮುಖಂಡರ ಖುಲಾಸೆ

ಸೆರೆಯಲ್ಲಿರುವ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಪ್ಪ ಮತ್ತು ಶ್ರೀ ಚೆಂಗಲರಾಯರೆಡ್ಡಿ ಇವರನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರದ ಆಜ್ಞೆ ಜಾರಿಗೆ ಬಂದಾಗಿ ಗೊತ್ತಾಗಿದೆ

ಮೈಸೂರು-ಹೈದರಬಾದ್ ಒಪ್ಪಂದ

ಹೈದರಾಬಾದ್ ಮತ್ತು ಮೈಸೂರು ಸರ್ಕಾರಗಳಿಗೆ ನಡುವೆ ಬಿತ್ತನೆ ನೀರಿನ ಸಂಬಂಧವಾಗಿ ಒಂದು ಒಪ್ಪಂದವಾಗಿದೆ. ಹೈದರಾ ಬಾದು ನಮು. ಬರುವ ಆಗಸ್ಟ್ ದಿಂದ ಮೂರು ವರ್ಷ ಒಪ್ಪಂದವನ್ನು ಪಾಲಿಸಬೇಕಾಗುವುದು

ಮೈಸೂರು ಇಂಜಿನಿಯರು ಇಂದೂರಿಗೆ

ಜೋಗ್ ಜಲಪಾತದಲ್ಲಿ ಎಕ್ಸಿಕ್ಯುಟಿವ್ ಇಂಜನಿಯರಾಗಿ ಕೆಲಸ ಮಾಡುತ್ತಿರುವ ಶ್ರೀ ಬಿ ಎಸ್ ನರಸಿಂಗರಾಯರನ್ನು ಇಂದೂರು ಸಂಸ್ಥಾನದವರು ತಮ್ಮ ಚೀಫ್ ಇಂಜನೀಯರಾಗಿ ಕೆಲಸಕ್ಕೆ ಬೇಡಿದ್ದಾರೆ. ಅವ್ರು ಹೊರಡುವುದು ಇದೇ ಜನವರಿ ೧ ಕ್ಕೆ ಇಂದಿನಿಂದ ಸರ್ಕಾರಕ್ಕೆ

ನಾಗೇಶ್ವರಯ್ಯರ್ ಹೈಕೋರ್ಟಿಗೆ

ಮೈಸೂರು ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಎ ಆರ್ ನಾಗೇಶ್ವರಯ್ಯರ್ ರವರನ್ನು ಮುಂದೆ ಹೈಕೋರ್ಟ್ ಚೀಫ್ ನ್ಯಾಯ ಪೀಠಕ್ಕೆ ಆಹ್ವಾನಿಸಿರುವುದಾಗಿ ತಿಳಿದಿದೆ. ಬೆಂಗಳೂರಿನ ಪ್ರಮುಖ ಜಿಲ್ಲಾ ನ್ಯಾಯಾಧೀಶರೊಬ್ಬರನ್ನು ಜಯ ಸ್ಥಾನದ ಹೈಕೋರ್ಟ್ ಸ್ಥಾನಕ್ಕೆ ಕರೆದಿರು ವುದಾಗಿಯೂ ಸಮಾಚಾರ.

ಕೂಲಿಕಾರರ ಸಮ್ಮೇಳನ

ಕೋಲಾರದ ಚಿನ್ನದ ಗಣಿಯ ಕೂಲಿಕಾರರ ಸಮ್ಮೇಳನ ನಡೆಯಿತು. ನೆರೆದವರೆಲ್ಲರೂ ಇರುವ ಎಲ್ಲ ಡಿಬೆನ್ಯೂಗಳನ್ನೂ ಖಾಲಿ ಮಾಡಬೇಕೆಂದೂ, ಚಿನ್ನದ ಗಣಿ ಪ್ರದೇಶಕ್ಕೆ ಕೆಲವರು ಬರಲೂಡದೆಂದು ಹಾಕಿರುವ ಪ್ರತಿಬಂಧಗಳನ್ನು ತೆಗೆದುಕೊಳ್ಳಬೇಕೆಂದೂ ರಣವಾದವು

ಮಂತ್ರಿಗಳೂ ದಿವಾನರೂ ಖಾಸಗಿಯವರಾಗಬೇಕು

ಕೂಲಿಕಾರರ ಸಮ್ಮೇಳನದಲ್ಲಿ ಗಣಿ ಪ್ರದೇಶದ ಎಲ್ಲ ಸೇಂದಿ ಅಂಗಡಿಗಳನ್ನೂ ಸಂಬಳದ ದಿನ ಮುಚ್ಚಬೇಕೆಂಬ ನಿರ್ಣಯ ವು. ಮುಖ್ಯವಾಗಿ ಸಂಸ್ಥಾನದ ದಿವಾನ್ ಮತ್ತು ಮಂತ್ರಿ ಪದವಿಗಳಿಗೆ ಖಾಸಗಿ ಜನರಿಂದಲೇ ನೇಮಿಸಬೇಕೆಂದು ಪ್ರಜೆಗಳನ್ನು ಪ್ರಾರ್ಥಿಸಲಾಯಿತು

ಭಿಕ್ಷುಕರಿಗಾಗಿ ದಾನ

ಬೆಂಗಳೂರಿನ ಶ್ರೀ ದೇವರಾಜ್ ಶಿವರಾಂರವರು ಭಿಕ್ಷುಕರ ಪರಿಹಾರ ನಿಧಿಗೆ ೫೦ ಸಾವಿರ ರೂ. ದಾನಮಾಡಿರುವರು.

ಮಂಡ್ಯದ ಚುನಾವಣೆ

ಮಂಡ್ಯದ ಪೌರ ಸಭಾ ಚುನಾವಣೆಯಲ್ಲಿ ೧೫ ಸ್ಥಾನಗಳಿಗೆ ೫ ಜನ ಕಾಂಗ್ರೆಸ್ಸಿನವರೂ ೧೦ ಜನ ಸ್ವತಂತ್ರರೂ ಚುನಾಯಿತರಾಗಿರುವರು

ಹರಿಜನ ಪ್ರವೇಶವಾದ ಗುಡಿಯ ಶುದ್ಧೀಕರಣ

ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ಅಧ್ಯಕ್ಷರಾದ ರಾವ್ ಸಾಹೇಬ್ ಎಂ. ನಟೇಶ ಅಯ್ಯರ್‌ರವರು ಮಧ್ರಾಸ್ ದೇವಸ್ಥಾನದ ಅಧಿಕಾರಿಗಳಿಗೆ ರಿಜಿಸ್ಟರ್ಡ್ ನೋಟೀಸೊಂದನ್ನು ಕೊಟ್ಟು ಅದರಲ್ಲಿ, ದೇವಸ್ಥಾನಕ್ಕೆ ಹರಿಜನ ಪ್ರವೇಶವಾಗುವ ದರಿಂದ ಉಂಟಾಗುವ ಅಪವಿತ್ರತೆಯನ್ನು ಹೋಗಲಾಡಿಸಲು ಹಾಗೆ ಪ್ರವೇಶವಾಗುವ ಪ್ರತಿಸಾರಿಯೂ, ಶುದ್ಧೀಕರಣ ಕಾರ್ಯವನು ಕೈಗೊಳ್ಳಬೇಕೆಂತಲೂ, ಅದಕ್ಕೆ ತಗಲುವ ಖರ್ಚನ್ನು ಪ್ರವೇಶಿಸುವವರಿಂದ ವಸೂಲಿ ಅಥವ ತಮ್ಮ ಸ್ವಂತ ಕೈಯಿಂದ ಹಾಕಿ ನಡೆಸತಕ್ಕದ್ದೆಂದೂ ಪ್ರಾರ್ಥಿಸಿದ್ದಾರೆ.

೮೫ ದಿನ ಸಮುದ್ರದಲ್ಲಿ

ಪೋಲಿಷ್ ನೌಕಾ ಪಡೆಗೆ ಸೇರಿದ ಮುಸ್ಲಿಂ ನಾವಿಕನೊಬ್ಬನು ತನ್ನ ನೌಕೆ ಟಾರ್ಪಿಡೋ ಹೊಡೆತಕ್ಕೆ ಸಿಕ್ಕಿ ಹಾಳಾದಾಗ ನೀರು ಹಾಳಾದವನು ೮೫ ದಿನಗಳು ಸಮುದ್ರದ ಮೇಲೆ ಪ್ರಾಣ ಉಳಿಸಿಕೊಂಡು ತೇಲಾಡಿ ಕೊನೆಗೆ ಮಿತ್ರ ಹಡಗಿನ ಸಹಾಯದಿಂದ ಕಷ್ಟದಿಂದ ಪಾರಾಗಿದ್ದಾನೆ.

ಜರ್ಮನ್ ಮಕ್ಕಳ ರವಾನೆ

ಜರ್ಮನರು ಫ್ರೆಂಚ್ ಮೆಡಿಟರೇನಿಯನ್ ತೀರಗಳ ಪಟ್ಟಣಗಳಿಂದ ಜನರನ್ನು ಖಾಲಿ ಮಾಡುತ್ತಿರುವರು. ಶನಿವಾರ ಒಂದನ್ನು ಸಾವಿರ ಮಕ್ಕಳನ್ನು ನೈಸ್ ಎಂಬಲ್ಲಿಂದ ಬೇರೆ ಕಡೆಗಳಿಗೆ ಸಾಗಿಸಲಾಯಿತು

ಚೀಣಾದಲ್ಲಿ ಜಪಾನ್ ಹಿನ್ನಡೆ

ಮಧ್ಯ ಚೀಣಾದ ಚಾಂಗ್‌ಟೆ ಪ್ರದೇಶಗಳಲ್ಲಿ ಚೀಣೀಯರು ಅಧಿಕ ಜಯಗೊಳಿಸಿದ್ದಾರೆ. ಅಲ್ಲಿದ್ದ ಜಪಾನ್ ಸೈನಿಕರನ್ನು ಸುತ್ತುಗಟ್ಟಿ ಸದೆಬಡಿಯಲಾಯಿತು. ಈಗ ಚೀಣೀಯರ ಉತ್ತರ ಕಡೆ ನಿಂದ ಮೇಲೆ ಹೊಸ ಧಾಳಿ ಆರಂಭಿಸಿದ್ದಾರೆ

೮ ಜರ್ಮನ್ ದಳಗಳ ನಾಶ

ರಷ್ಯಾದ ಜೋಟೋಮಿರ್ ಕ್ಷೇತ್ರ ಜಂಕ್ಷನ್ ಬಳಿ ಜರ್ಮನ್ ಸೇನೆಗಳು ಹಿಮ್ಮೆಟ್ಟಿವೆ. ಬಾಸಿಲೋವ್ ಮತ್ತು ಇತರ ಪ್ರದೇಶಗಳಲ್ಲಿ ಹೋರಾಡುತ್ತಿದ್ದ ೮ ಜರ್ಮನ್ ಡಿವಿಜನ್‌ಗಳು ನಿರ್ನಾಮವಾಗಿವೆಯೆಂದು ವರದಿಯಾಗಿದೆ

ಚಾಂಗ್‌ಟೆಗೆ ಶತ್ರು ಪ್ರವೇಶ

ಜಪಾನರು ಚಾಂಗ್‌ಟೆ ನಗರವನ್ನು ಪ್ರವೇಶಿಸಿರುವುದಾಗಿ ಚುಂಕಿಂಗ್ ಪ್ರಕಟಣೆ ಹೇಳುತ್ತದೆ.

ಕಪೂರ್ತಲಾದಲ್ಲಿ ಸುಧಾರಣೆ

ಕಪೂರ್ತಲಾ ಸಂಸ್ಥಾನದಲ್ಲಿ ಯುದ್ಧಾನಂತರ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುವುದಾಗಿ ಅಲ್ಲಿನ ಅರಸರು ತಿಳಿಸಿರುವರು. ಆಡಳಿತದಲ್ಲಿ ಹೆಚ್ಚು ಹೆಚ್ಚಾಗಿ ಜನರ ಸದಸ್ಯರನ್ನು ನೇಮಿಸುವುದೇ ಆ ಸುಧಾರಣೆಯಲ್ಲಿನ ಪ್ರಧಾನವಾಗಿ.

ಅಸ್ಸಾಮು ಸೇನೆ ಮುಂದೋಟ

ಶತ್ರುವಿನ ರಕ್ಷಣಾ ಸ್ಥಾನಗಳಿಗೆ ಹತ್ತಿರದ ಸಮೀಪ ಪ್ರದೇಶಗಳಿಗೆ ಬ್ರಿಟಿಷ್ ಎಂಟನೇ ದಳ ಬಂದುಬಿಟ್ಟಿರುವುದಾಗಿ ಅಲ್ಜಿಯರ್ಸಿನಿಂದ ಸುದ್ದಿ ಬಂದಿದೆ.

ರಷ್ಯನರಿಂದ ಕ್ರೋಸ್ಟೀನ್ ತ್ಯಾಗ

ರಷ್ಯಾಯೋಧರು ಕ್ರೋಸ್ಟೀನ್ ನಗರವನ್ನು ಖಾಲಿ ಮಾಡಿ ಹಿಂದಕ್ಕೆ ಬಂದಿರುವರೆಂದು ಮೊನ್ನಿನ ಮಾಸ್ಕೋ ಪ್ರಕಟಣೆ ತಿಳಿಸುವುದು

ಸ್ಯಾಂಗ್ರೋ ಪ್ರದೇಶ ಮಿತ್ರವಶ

ಸ್ಯಾಂಗ್ರೋ ನದಿ ಪ್ರದೇಶವನ್ನೆಲ್ಲ ಈಗ ಮಿತ್ರ ಪಕ್ಷದವರು ಶತ್ರುಗಳಿಂದ ಕಿತ್ತುಕೊಂಡಿರುವರೆಂದು ಹೇಳಲಾಗಿದೆ.

ಸಾವಿರ ಪೋಲರ ಕೊಲೆ

ಪೋಲೆಂಡಿನ ಒಂದು ಪ್ರಾಂತ್ಯದಲ್ಲಿ ಕೆಲವು ಜರ್ಮನ್ ಯೋಧರ ಕೊಲೆಯಾದ ಕಾರಣಕ್ಕಾಗಿ ಜರ್ಮನ್ ಅಧಿಕಾರಿಗಳು ಒಂದು ಸಾವಿರ ಪೋಲಿಷ್ ಜನರನ್ನು ಗುಂಡಿನಿಂದ ಹೊಡೆದು ಹಾಕಿರುವುದಾಗಿ ಸಮಾಚಾರ ಬಂದಿದೆ.

Edited, printed and published by A. R. Nagarajan, at the Sadhvi Press, D. Subbaiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ — ಚೊಕ್ಕಟವಾಗಿ ಬೆಲ್ಲ, ಸಕ್ಕರೆ, ಬೂರಾಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಕಂಠೀ ಪೇಟೆ ಪೋಸ್ಟ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

2nd Week

OPERA TALKIES

FROM 2-12-43

Nai Zindagi

Starring SHEIK MUKHTAR, ASIS KHATOON, GOPE, YAKUB, SATISH & NAJAMA.

ನ್ಯೂ ಒಪೇರಾ ಟಾಕೀಸ್

ನಯಿ ಜಿಂದಗಿ

ಪಾತ್ರಧಾರಿಗಳು: ಶೇಕ್ ಮುಖ್ತಾರ್, ಅಸಿಸ್ ಖಾಟೂನ್, ಯಾಕೂಬ್, ಸತೀಷ್, ಗೋಪ್ ಮತ್ತು ನಜ್ಮ

೨ ನೇ ವಾರ ೨—೧೨—೧೯೪೩ ರಿಂದ

Distributors:—

Mysore Film Corporation, Bangalore City.

ಮೈಸೂರು ದೊಡ್ಡಕೆರೆ ಮೈದಾನದಲ್ಲಿ ನಡೆಯುವ

ಭಾರಿ ಕುಸ್ತಿಗಳು

ತಾರೀಖು

5-12-43

ಭಾನುವಾರ



ಬೆಳ್ಳಿ ಕಪ್ಪು ಚಿನ್ನದ ಕೋಡಾವನ್ನು ಪಡೆದಿರುವ ಚನ್ನೇಗೌಡನ ಕುಸ್ತಿಯು ಪೈ॥ ದೊಡ್ಡ ಬಸವಯ್ಯನಿಗೂ ಮತ್ತು ಲಾಹೋರಿನ ಪೈ॥ ನಂಜಪ್ಪನಿಗೂ

ಫಾರಿನ್ ಪಕ್ಕ ಚಿನ್ನದ ಗದೆ ಪಡೆದಿರುವ ಪಂಜಾಬಿನ ಪೈ॥ ಧರ್ಮಸಿಂಗ್ ಮತ್ತು ಕೊಲ್ಲಾಪುರದ ಪೈ॥ ಭೀಮಪ್ಪನಿಗೂ

ಟಿಕೇಟುಗಳು ಕುಸ್ತಿ ನಾಲ್ಕು ದಿವಸ ಮುಂಚಿತವಾಗಿ ದೊರೆಯುತ್ತವೆ.

ಟಿಕೇಟು ದರ:- ಕುರ್ಚಿ 2-4-0. ಗ್ಯಾಲರಿ 1-2-0, ನೆಲ 0-7-11

ಕಂಟ್ರಾಕ್ಟರ್-ತೋರಯ್ಯ, ಬಿ. ಸಿ. ಚಲುವಯ್ಯ, ಸೋಲ್ ಪ್ರೊಪ್ರೈಟರ್.

ಸಂಪುಟ ೨] ಶುಕ್ರವಾರ ೩--೧೨--೪೩ [ಸಂಚಿಕೆ ೧೧೬

ಪೆಸಿಫಿಕ್ ನೌಕಾ ಕದನ ಕೂಡಲೇ ಸಂಭವ

ಜರ್ಮನ್ ಯುದ್ಧ ಬೇಗ ಮುಗಿಸಿ ಜಪಾನ್ ಕಡೆ ತಿರುಗುವರು

ಶಾಂತಿ ಸ್ಥಾಪನೆಗಾಗಿ ಬರ್ಲಿನ್‌ನಲ್ಲಿ 'ಸರಪಣಿ ಪತ್ರ'

ತೆಬಾರ್ ಕೂಟ

ಮೈಸೂರು ೩

ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನ ಅಂಗಳದಲ್ಲಿ ಮೈಸೂರು ವಿಶ್ವ ವಿದ್ಯಾನಿಲಯ ಸಂಘದ ಆಶ್ರಯದಲ್ಲಿ ಅಖಿಲ ಭಾರತ ಅಂತರ ವಿದ್ಯಾಲಯಗಳ ಟೆಬಾರ್ ಕೂಟವು ನಡೆಯುವುದು.

ಮಿಲಿಟರಿ ಲಾರಿ ಸೈಕಲ್ ಢಿಕ್ಕಿ

ನೆನ್ನೆ ರಾತ್ರಿ ೮ ಗಂಟೆ ಸಮಯದಲ್ಲಿ, ಕ್ಲಾಕ್ ಟವರ್ ಚೌಕದ ಬಳಿ ಒಂದು ಮಿಲಿಟರಿ ಲಾರಿಗೂ ಮತ್ತು ಒಬ್ಬ ಸೈಕಲ್ ಸವಾರನಿಗೂ ಢಿಕ್ಕಿ ಹೊಡೆದುದರ ಪರಿಣಾಮವಾಗಿ, ಸೈಕಲ್ ಸವಾರನಿಗೆ ಕಾಲಿನಲ್ಲಿ ಸ್ವಲ್ಪ ಗಾಯವಾಯಿತು. ಕೂಡಲೇ ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಹೆಚ್ಚು ಅಪಾಯವೇನೂ ಸಂಭವಿಸಿಲ್ಲವೆಂದು ತಿಳಿದು ಬರುತ್ತೆ. ಗಾಯಗೊಂಡವನು ಮೈಸೂರು ಸೈನ್ಯದ ಕುದುರೆದಳದವನೆಂದು ಗೊತ್ತಾಗಿದೆ.

ನಗರ ನಿವಾಸಿಗಳ ತೊಂದರೆ

ರಾಜಧಾನಿಯ ಅನೇಕ ಅಂಗಡಿಗಳವರಿಗೆ ಮಾರುಟೆಯಾಗಿ ಸರ್ಕಾರದವರು ಒದಗಿಸುತ್ತಿದ್ದ ಅಕ್ಕಿ, ಸಕ್ಕರೆ ಮುಂತಾದುವು ಈಗ ದೊರಕದೇ ಇದರಿಂದಾಗಿ ಅಕ್ಕಿ, ಸಕ್ಕರೆಗಳಿಗೆ ತೊಂದರೆಯಾಗಿ ನಗರ ನಿವಾಸಿಗಳು ಬಳಲುತ್ತಿರುವುದಾಗಿಯೂ, ಮತ್ತು ಸೌದೆ ವ್ಯಾಪಾರದಲ್ಲಿ ದಳ್ಳಾಳಿಗಳ ಹಾವಳಿ ಹೆಚ್ಚಿ ಸಾರ್ವಜನಿಕರಿಗೆ ಸುಸೂತ್ರವಾಗಿ ಸೌದೆ ದೊರಕದಂತಾಗಿದೆಯೆಂದೂ ನಗರ ಹಿತೈಷಿಗಳೊಬ್ಬರು ಬರೆಯುತ್ತಾರೆ.

ಮೊಡಾಂಗ್‌ಗೆ ಷೆಲ್ ಹೊಡೆತ

ಮೊಡಾಂಗಿಗೂ ಗಸ್ಮಟಾ ತೀರದಲ್ಲಿನ ಅಕ್ರಾಸೀ ವಿಮಾನ ಕ್ಷೇತ್ರಕ್ಕೂ ಮಿತ್ರರ ಯುದ್ಧ ನೌಕೆಗಳು ಷೆಲ್ ಹಾರಿಸಿ ಹೊಡೆತ ಕೊಟ್ಟವು. ಹಲಾ ಸಮುದ್ರದ ಬಳಿ ಇದ್ದ ಜಪಾನೀ ವಿನಾಶಕವೊಂದಕ್ಕೆ ಪೆಟ್ಟು ತಗಲಿದೆ.

ರಂಗೂನಿಗೆ ಹೊಡೆತ

ಕಳೆದ ಹಲವು ದಿವಸಗಳಿಂದ ಮಿತ್ರ ವಿಮಾನಗಳು ರಂಗೂನಿನ ಮೇಲೆ ತೀವ್ರವಾದ ಧಾಳಿ ನಡೆಸುತ್ತಿವೆ. ಆಕ್ರಮಿತ ಬರ್ಮಾದ ಅನೇಕ ಪಟ್ಟಣಗಳ ಮೇಲೂ ಮಿತ್ರ ಧಾಳಿಗಳು ಪ್ರಬಲವಾಗಿವೆ.

ಚೀಣರ ಪುನರಾಕ್ರಮಣ

[illegible]ಂಗ ಪಟ್ಟಣದ ಉತ್ತರ ಭಾಗವನ್ನು ಚೀಣಿಯರು ಪುನರಾಕ್ರಮಿಸಿರುವರು. [illegible]ಯಿಂದ ಚೀಣಿ ಸೇನೆ ದಕ್ಷಿಣದ ಕಡೆ [illegible]ನ ಇದೇ ಪಟ್ಟಣವನ್ನು ಪ್ರವೇಶಿಸಿ.

[illegible]ರಲ್ ಕೋರ್ಟಿನ ತೀರ್ಪು

[illegible]ವಾರ್, ಸಂಯುಕ್ತ ಪ್ರಾಂತ್ಯ ಮತ್ತು [illegible]ಗಳಲ್ಲಿ ಕೋಮ ಪರ್ವ ಗಲಭೆಗೆ [illegible] ಮರಣ ಶಿಕ್ಷೆ ವಿಧಿಸಲಾ[illegible]. ಆ ಬಗ್ಗೆ ಫೆಡರಲ್ ಕೋರ್ಟಿಗೆ [illegible] ಮಾಡಿದಾಗ ಕ್ರಿಮಿನಲ್ ಕೋರ್ಟಿನ [illegible] ಶಿಕ್ಷೆಯನ್ನು ಸಕ್ರಮಗೊಳಿಸುವ [illegible] ನ್ಯಾಯ ವಾದವೇ ಎಂಬ ಸಂಶಯ [illegible]ಕಲೆದೋರಿತ್ತು. ಫೆಡರಲ್ ಕೋರ್ಟು [illegible] ಆದ. ನ್ಯಾಯಬದ್ಧವಾದುದೆಂದು [illegible] ಸಂಶಯವನ್ನು ಹೋಗಲಾಡಿಸಿ[illegible].

೪೦ ಸಾವಿರ ಎಕರೆ ಹೆಚ್ಚು ಬೆಳೆ

ತಂಜಾವೂರು ಜಿಲ್ಲೆಯ ಪಟ್ಟುಕೋಟೆ ತಾಲ್ಲೂಕಿನಲ್ಲಿ ಒಂದೇ ಕಡೆ ೪೦ ಸಾವಿರ ಎಕರೆ ಹೆಚ್ಚು ಭೂಮಿಯಲ್ಲಿ ಬತ್ತದ ಬೆಳೆ ತೆಗೆಯುವ ಏಪಾ-ಡನ್ನು ಮದ್ರಾಸ್ ಸರ್ಕಾರದವರು ಮಾಡುತ್ತಿರುವರು.

ಚಕ್ರವರ್ತಿಗಳ ಭೇಟಿ

ಇರಾಕಿನ ರೀಜೆಂಟರಿಗೆ ಮೊನ್ನೆ ಚಕ್ರವರ್ತಿಗಳು ಲಂಡನ್ನಿನಲ್ಲಿ ಸ್ವಾಗತ ಬಯಸಿ ದೀರ್ಘಕಾಲ ಮಾತುಕತೆ ನಡೆಸಿದರು. ಲಾರ್ಡ್ ಲಿಲಿತ್‌ಗೋವರಿಗೂ ಅದೇ ರೀತಿ ಸ್ವಾಗತ ನೀಡಲಾಯಿತು.

ಸೈಕಲ್ ಧಾರಣೆ ಕಮ್ಮಿ

ಅಮೃತಸರದ ಬೈಸಿಕಲ್ ವ್ಯಾಪಾರ ಸಂಘದವರು ಸೈಕಲ್‌ಗಳ ಮತ್ತು ಅದರ ಬಿಡಿ ಪದಾರ್ಥಗಳ ಧಾರಣೆಯನ್ನು ಶೇಕಡ ೩೦ ರಷ್ಟು ಇಳಿಸಲು ನಿರ್ಧರಿಸಿರುವರು.

ರೈತರಿಗೆ ರಿಯಾಯಿತಿ

ಮದರಾಸ್ ಪ್ರಾಂತ್ಯದಲ್ಲಿ ೫ ಎಕರೆ ಮತ್ತು ಅದಕ್ಕಿಂತ ಕಮ್ಮಿ ಭೂಮಿ ಹೊಂದಿರುವ ರೈತರಿಗೆ ಬತ್ತದ ಕಮ್ಯಾಂಡಿಯರಿಂಗ್ ಆಜ್ಞೆ ಅನ್ವಯಿಸುವುದಿಲ್ಲವೆಂದು ಪ್ರಾಂತ್ಯದ ಅಧಿಕಾರಿಗಳು ತಿಳಿಸಿದ್ದಾರೆ.

ಮಠಾಧಿಪನ ಕೊಲೆ

ಪೂರಿಯ ಮಹಂತ ನಂದರ ಏಳನೇ ಮಠಾಧಿಪತಿಯನ್ನು ಯಾರೋ ಮರಾತ್ಕರು ಕೊಲೆ ಮಾಡಿರುವರೆಂದು ತಿಳಿದುಬಂದಿದೆ.

ಸ್ತ್ರೀ ಖೈದಿಗಳ ಉಪವಾಸ

ಬೆಲ್‌ಫಾಸ್ಟಿನ ಅರ್ಮಾಗ್ ಜೈಲಿನಲ್ಲಿ ೨೧ ಮಂದಿ ಸ್ತ್ರೀ ಬಂದಿಗಳು ತಮ್ಮ [illegible] ಪತ್ರಿಕೆಗಳನ್ನು ಜೈಲಧಿಕಾರಿಗಳು ತಡೆಹಿಡಿದಿರುವುದರಿಂದ ಉಪವಾಸ ವ್ರತ ಆರಂಭಿಸಿದ್ದಾರೆ.

ಸ್ವೀಡನ್ ವಿದ್ಯಾರ್ಥಿಗಳ ದಸ್ತಗಿರಿ

ಓಸ್ಲೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಜರ್ಮನ್ ಆಕ್ರಮಣವನ್ನು ಎದುರಿಸಿದರೆಂದು ಜರ್ಮನ್ ಪೋಲೀಸರು [illegible] ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿ [illegible] ವಿಸ್ತಾರವಾದ ಶಿಬಿರಕ್ಕೆ [illegible]. ಸ್ವೀಡಿಷ್ ಸರ್ಕಾರದವರು ಇದನ್ನು ಪ್ರತಿಭಟಿಸಿದ್ದಾರೆ.

ಬರ್ಲಿನ್ನಲ್ಲಿ ಶಾಂತಿ ದಾಹ

ಬರ್ಲಿನ್ನಲ್ಲಿ ಒಂದು ಕಾಗದವು ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಹೋಗುತ್ತಾ ನಗರವನ್ನೆಲ್ಲಾ ಸುತ್ತು ಹಾಕುತ್ತಿದೆ. ಅದರಲ್ಲಿ ಶಾಂತಿ ಸ್ಥಾಪನೆಗಾಗಿ ಸರ್ಕಾರವನ್ನು ಒತ್ತಾಯ ಪಡಿಸಬೇಕೆಂದು ಬರೆಯಲಾಗಿದೆ. ಬರ್ಲಿನ್ನಿನ ಕೂಲಿಕಾರರೂ ಮಧ್ಯಮ ದರ್ಜೆ ಪುರನಿವಾಸಿಗಳೂ ಗುಪ್ತ ಸಭೆಯೊಂದನ್ನು ನಡೆಸಿ ಜರ್ಮನಿಯ ಬಲ್ಲಾ ಯುದ್ಧ ವಿರೋಧ ಚಳವಳಿ ಹೂಡಲು ಆಲೋಚಿಸಿದರು ಎಂಬ ನಾಗಿ ಸ್ಟಾಕ್‌ಹೋಮಿನಲ್ಲಿ ಹೇಳಲಾಗುತ್ತಿದೆ.

ಪೆಸಿಫಿಕ್ಕಿನಲ್ಲಿ ಕೂಡಲೆ ಸ್ಪರ್ಧಣೆ

ಎಂದೂ ಕೇಳರಿಯದೇ ಇದ್ದಷ್ಟು ಸಂಖ್ಯೆಯಲ್ಲಿ ತಮ್ಮ ನೌಕ ಬಲವನ್ನು ಮಿತ್ರರು ಈಗ ಶಾಂತ ಸಾಗರದಲ್ಲಿ ಕೂಡಿಸಿರುವರು. ಇದು ಚಂದ್ರಾಕಾರವಾದ ಜಪಾನಿಗೆ ಈಗ ಆ ನೌಕೆಗಳು ನೀಡಿರುವ ಉಪ್ಪಿಗಾಗಿ ಮಾತ್ರ ಕಾದಿವೆ ಅನುಬಿಟ್ಟೊಡನೆಯೇ ಶಾಂತ ಸಾಗರ ಸಮರಾಂಗಣಗಳಲ್ಲೆಲ್ಲಾ ಅತ್ಯಂತ ಭೀಕರ ಕದನವನ್ನು ಪ್ರಾರಂಭಿಸ ಪುವು.

ಮಲಯಾ ಭವಿಷ್ಯ

ಮಲಯಾವನ್ನು ಸ್ವತಂತ್ರಗೊಳಿಸಿದ ಮೇಲೆ ಅಲ್ಲಿ ದೊಡ್ಡ ಸೈನ್ಯ ಸರ್ಕಾರವನ್ನು ಸ್ಥಾಪಿಸಲು ಬ್ರಿಟನ್ನಿನ ಶಕ್ತಿಯನ್ನು ಬಲಗೊಳಿಸುವುದಾಗಿ ಕಲೋನಿಯಲ್ ಇನ್ಸ್‌ಪೆಕ್ಟರ್ ಆಲಿವರ್ ಸ್ಟಾನ್ಲಿಯವರು ಹೌಸ್ ಆಫ್ ಕಾಮನ್ಸ್‌ನಲ್ಲಿ ಹೇಳಿದರು.

ಮಾಜಿ ಗೌರ್ನರುಗಳ ಬಂಧನ

ಅಲ್ಜೀರಿಯಾ ಮೂಲದ ಒಳ ಪ್ರಾಂತ್ಯದ ಪ್ಲೇಟೋ ಬಂದರೆ ಫ್ರಾನ್ಸಿನ ಮೂವರು ಮಾಜಿ ಗೌರ್ನರುಗಳನ್ನು ಬಂಧಿಸಲಾಗಿದೆ. ಅವರ ದಸ್ತಗಿರಿ ಬಗ್ಗೆ ಆಜ್ಞೆ ಮುಂದಿನ ವಾರ ಹೊರಡುವುದಾಗಿ ಹೇಳಲಾಗಿದೆ.

ನಾಜಿಗಳಿಗೆ ನಂಬಿಕೆ ಮುಟ್ಟಿಲ್ಲ

ಜರ್ಮನರನ್ನು [illegible] ಕಡೇ [illegible]. [illegible] ಬಂದಿತ [illegible] ನಂಬಿಕೆಯೇ [illegible] ಬಾರ್ನ್ ಪ್ಯಾಲಿಸ್ಟ್‌ರ್ ಹೇಳುವರು.

ಬೇಗ ಜರ್ಮನ್ ಯುದ್ಧದ ಮುಕ್ತಾಯ

ಕೈರೋ ಸಮ್ಮೇಳನದಲ್ಲಿ [illegible] ಮಿತ್ರ ಮುಖಂಡರು ಮೊದಲು [illegible] ಲಿನ ಯುದ್ಧವನ್ನು ಮುಗಿಸಿ [illegible] ಶಾಂತಿ ಸಾಗರ ಸಮರದ ಕಡೆ [illegible] ಬೇಕೆಂಬ ನಿರ್ಧಾರವನ್ನಾಗಿಸಿ ಬಾರದೆಂದೂ ಜರ್ಮನಿ ಯುದ್ಧ ಕಾಲಾವಧಿಯನ್ನು ಆದಷ್ಟು ಕಡಿಮೆ ಮಾಡಬೇಕೆಂದೂ ತಮ್ಮ ಗಮನವನ್ನೆಲ್ಲಾ ಜಪಾನಿನ ಮೇಲೆಯೇ ಕೇಂದ್ರೀಕರಿಸಬೇಕೆಂದೂ ಇತ್ಯರ್ಥಿಸಿರುವುದಾಗಿ ತಿಳಿದುಬಂದಿದೆ.

ಚರ್ಚಿಲ್ ಪೀಠದಲ್ಲಿ ಸ್ಮಟ್ಸರು

ಚರ್ಚಿಲ್ ಇಡನ್ನರೂ ಯುದ್ಧ ಸಮಿತಿ ಸಭೆಗೆ ಹಾಜರಾಗಲು ಆಗದೆ ಹೋಗುವಾಗ ಅಧ್ಯಕ್ಷ ಪೀಠವನ್ನೇರಲು ಜನರಲ್ ಸ್ಮಟ್ಸರನ್ನು ನೇಮಿಸಿರುವರೆಂದು ಹೇಳಲಾಗಿದೆ. ಯುದ್ಧ ಸಮಿತಿ ಅಧ್ಯಕ್ಷತೆಯನ್ನು ಚರ್ಚಿಲರೂ, ಅವರಿಲ್ಲದಾಗ ಇಡನ್ನರೂ ವಹಿಸುತ್ತಿದ್ದರು. ಸ್ಮಟ್ಸರು ಪಾರ್ಲಿಮೆಂಟಿನ ಸದಸ್ಯರು ಸಹ ಅಲ್ಲ. ಇದರಿಂದ ಇವರ ಬಗ್ಗೆ ಚರ್ಚಿಲರಿಗೆ ಹೆಚ್ಚು ಭರವಸ [illegible].

ಲಂಚ ತಿಂದ ಅಧಿಕಾರಿಗಳ ಮೇಲೆ ಕ್ರಮ

ಕೊಯಮತ್ತೂರಿನ [illegible] ತರಿಗೆ ಅಧಿಕಾರಿ [illegible] ಎಸ್. [illegible] ಅಕ್ಕಿ ಮಾರಾಟ ಮಾಡ [illegible] ಯನ್ನು ಕೊಡಲು [illegible] ಲಂಚ ಪಡೆದ [illegible] ಜಿಲ್ಲಾ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ. [illegible] ತಾಶೀಲ್ದಾರರಾದ ಶ್ರೀ [illegible] ರಂಪಿಳ್ಳೆಯವರು ಆಹಾರ ಇನ್ಸ್‌ಪೆಕ್ಟರ್ ದಲ್ಲಿ ಲಂಚ ಪಡೆದರೆಂದು ಅವರ ಮೇಲೂ ಮೊಕದ್ದಮೆ [illegible].

ಪೋಲೀಸ್ ಅಧಿಕಾರಿಗಳಿಗೆ ಶಿಕ್ಷೆ

ಕಟಕ್ ಜಿಲ್ಲೆಯ [illegible] ಪೋಲೀಸ್ ಸಬ್ ಇನ್ಸ್‌ಪೆಕ್ಟರ್ [illegible] ಜೋಯಿ ಮತ್ತು [illegible] ಎಂಬುವರು [illegible] ದನ್ನು [illegible] ೧೦ ವರ್ಷ [illegible] ಶಿಕ್ಷೆ ವಿಧಿಸಲಾಗಿದೆ.

ಕೈತಕ ವಿರು

[illegible]

ಯಾಗಿದೆ. [illegible]

[illegible]

ಬಿದೆ

ಬಡೋಗ್ಲಿಯೋ [illegible]

[illegible]

ಡಿಟೆನ್ಯೂಗಳೆಲ್ಲರ ಬಿಡುಗಡೆ?

ಬೆಂಗಳೂರು, ೩

ಸಂಸ್ಥಾನದ ಸೆರೆಮನೆಗಳಲ್ಲಿ ಇನ್ನೂ ಉಳಿದಿರುವ ಎಲ್ಲ ಡಿಟೆನ್ಯೂಗಳನ್ನೂ ಸರ್ಕಾರದವರು ಈ ವಾರದ ದಿನಗಳೊಳಗಾಗಿ ಬಿಡುಗಡೆ ಮಾಡಲು ನಿರ್ಧರಿಸಿರುವರೆಂದು ಹೇಳಲಾಗಿದೆ.

ಖುಲಾಸೆ

ನಿನ್ನೆ ಬೆಳಗ್ಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರುಗಳಾದ ಶ್ರೀ ನಿಜಲಿಂಗಪ್ಪ ಮತ್ತು ಶ್ರೀ ಕೆ. ಚಂಗಲರಾಯ ರೆಡ್ಡಿ ಇವರುಗಳನ್ನು ಬೆಂಗಳೂರು ಬಂದೀಖಾನೆಯಿಂದ ಖುಲಾಸೆ ಮಾಡಲಾಯಿತು. ಅವರ ಆರೋಗ್ಯ ಸಮಾಧಾನವಾಗಿಲ್ಲದಿರುವುದೇ ಖುಲಾಸೆಗೆ ಕಾರಣವೆಂದು ಹೇಳಲಾಗಿದೆ.

ಕೆ. ಸಿ. ರೆಡ್ಡಿ-ನಿಜಲಿಂಗಪ್ಪ ಇವರ ಹೇಳಿಕೆ

ಸೆರೆಯಿಂದ ಬಿಡುಗಡೆ ಹೊಂದಿದ ಶ್ರೀ ಚಂಗಲರಾಯ ರೆಡ್ಡಿ ಮತ್ತು ಶ್ರೀ ನಿಜಲಿಂಗಪ್ಪನವರು ಒಂದು ಹೇಳಿಕೆ ಹೊರಡಿಸಿ ಕಾಂಗ್ರೆಸ್ಸಿಗೆಕೊಟ್ಟ ಒಂದೊಂದು ಪೈಸೆಯೂ ಸ್ವಾತಂತ್ರ್ಯ ಹೋರಾಟಕ್ಕೆ ಒಂದೊಂದು ಪೆಟ್ಟೆಂದು ತಿಳಿಸಿದ್ದಾರೆ.

ಸಿದ್ದಯ್ಯನವರ ಆರೋಗ್ಯ

ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್. ಸಿದ್ದಯ್ಯನವರು ತಿಪಟೂರಿನಲ್ಲಿ ಅಸ್ವಸ್ಥರಾಗಿದ್ದಾರೆ. ಅವರು ಬಿಡುಗಡೆಯಾದಾಗ ಅನಾರೋಗ್ಯದಿಂದಿದ್ದರು. ಈಗ ಚೇತರಿಸಿಕೊಳ್ಳುತ್ತಿರುವರು.

ಬೆಲೆ ಹತೋಟಿಗೆ ತೆಗೆದುಕೊಳ್ಳುವರು

೧ ನೇ ತಾ॥ ಸಂಸ್ಥಾನದ ಮಂತ್ರಿಮಂಡಲ ಸಭೆಯು ಬೆಂಗಳೂರಿನಲ್ಲಿ ನಡೆಯಿತು. ಆಹಾರ ಸಂಬಂಧ ವಿಷಯವೇ ಅಂದಿನ ಮುಖ್ಯ ಚರ್ಚೆಯಾಗಿತ್ತು. ಜನರು ದಾರಿದ್ರ್ಯ ಮತ್ತು ಕೃತಕವಾದ ಅಭಾವಕ್ಕಾಗಿ ಆಹಾರ ಪ್ರಮಾಣದಲ್ಲಿ ದವಸವನ್ನು ಬಿಟ್ಟು, ಮಿಕ್ಕಿದ್ದನ್ನೆಲ್ಲಾ ಸರ್ಕಾರದವರೇ ನಿಗದಿಯಾದ ಬೆಲೆಗೆ ಕೊಂಡುಕೊಳ್ಳತಕ್ಕದ್ದೆಂದು ತೀರ್ಮಾನವಾಗಿ ಆ ಬಗ್ಗೆ ಆಜ್ಞೆ ಹೊರಡಿಸಲಾಗುವುದು.

ತುಮಕೂರು ಪೌರ ಸಭೆ

ತುಮಕೂರು ಪೌರಸಭೆಯ ೧೫ ಸದಸ್ಯ ಸ್ಥಾನಗಳಿಗೆ ಇದೇ ೧೭ ನೇ ತಾ॥ ಚುನಾವಣೆ ನಡೆಯುವುದು. ಕಾಂಗ್ರೆಸ್‌ನವರ ೧೬ ಸ್ಥಾನಗಳಿಗೆ ಮಾತ್ರ ಸ್ಪರ್ಧಿಸಿದ್ದಾರೆ. ಶ್ರೀ ವಿ. ಪಿ. ಸ್ವತಂತ್ರವಾಗಿ ಚುನಾವಣೆಗೆ ನಿಂತಿರುವರು.

Edited, printed and published by A. R. Nagaraja at the Sadhvi Press, D Subbaiah Road, Mysore.

ಪ್ರಭುಗಳಿಂದ ಶಂಕುಸ್ಥಾಪನೆ

ಮಂಡ್ಯದಲ್ಲಿ ಜಿಲ್ಲಾ ಬೋರ್ಡಿನವರು ತಮ್ಮ ಕಚೇರಿಗಾಗಿ ಒಂದು ಕಟ್ಟಡವನ್ನು ಕಟ್ಟಿಸಲಿರುವರು. ಅದರ ಶಂಕುಸ್ಥಾಪನೆಯನ್ನು ಶ್ರೀಮನ್ಮಹಾರಾಜರವರು ನೆರವೇರಿಸಿಕೊಡುವಂತೆ ಪ್ರಾರ್ಥಿಸಬೇಕೆಂದು ಜಿಲ್ಲಾ ಬೋರ್ಡ್ ವಿಶೇಷ ಸಭೆಯಲ್ಲಿ ನಿರ್ಣಯ ಮಾಡಲಾಗಿದೆ.

ಉಪನ್ಯಾಸ ಮಾಲೆ

ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘದ ೪೫ ನೇ ಉಪನ್ಯಾಸ ಮಾಲೆ ಮೇಲುಕೋಟೆಯ ಕರ್ಣಾಟಕ ಸಂಘದ ಆಶ್ರಯದಲ್ಲಿ ಇದೇ ತಿಂಗಳು ೪, ೫, ೧೧ ಮತ್ತು ೧೨ ನೇ ತಾ॥ ಗಳಲ್ಲಿ ಮೇಲುಕೋಟೆ ಪಾಠಶಾಲೆಯಲ್ಲಿ ನಡೆಯುವುದು. ಶ್ರೀಯುತರುಗಳಾದ ಎಂ. ವಿ. ಜಂಬುನಾಥನ್, ಆರ್. ಅನಂತಕೃಷ್ಣಶರ್ಮ, ಎನ್. ಎಸ್. ನಾರಾಯಣಶಾಸ್ತ್ರಿ, ಎನ್. ವೆಂಕಟೇಶ ಅಯ್ಯಂಗಾರ್, ಡಿ. ವಿ. ವೆಂಕಟಸುಬ್ಬಯ್ಯ, ಬಿ. ಕೆ. ಚಕ್ರಪಾಣಿ ಅಯ್ಯಂಗಾರ್, ಸಿ. ರಂಗಾಚಾರ್ ಇವರುಗಳು ಕನ್ನಡ ಮತ್ತು ತೆಲುಗು ಕಾವ್ಯಗಳ ಬಗ್ಗೆಯೂ, ಮನಶ್ಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಚರಿತ್ರ ಸ್ಥಳಗಳ ವಿಷಯವಾಗಿಯೂ ಭಾಷಣಗಳನ್ನು ಮಾಡುವರು.

ಜಿನ್ನಾರವರಿಗೆ ವೈಭವದ ಮೆರವಣಿಗೆ

ಇನ್ನೊಂದೆರಡು ತಿಂಗಳಲ್ಲಿ ಸೇರಲಿರುವ ಅಖಿಲ ಭಾರತ ಮುಸ್ಲಿಂ ಲೀಗ್ ಅಧಿವೇಶನಕ್ಕೆ ಅಧ್ಯಕ್ಷರಾಗಿ ಚುನಾಯಿಸಲಾಗಿರುವ ಮಹಮದಾಲಿ ಜಿನ್ನಾರವರ ಮೆರವಣಿಗೆಯನ್ನು ಅತ್ಯಂತ ವೈಭವದಿಂದ ನಡೆಸಲು ಏರ್ಪಾಡುಗಳಾಗುತ್ತಿವೆ. ಅಧ್ಯಕ್ಷರನ್ನು ಒಂದು ಅತ್ಯಂತ ಸುಂದರವಾದ ರಥದಲ್ಲಿ ಕೂರಿಸಲಾಗುವುದು. ಆ ರಥವನ್ನು ಎಳೆಯಲು ೨೫ ಒಂಟೆಗಳನ್ನು ಕಟ್ಟಲಾಗುವುದು. ಒಂದೊಂದು ಒಂಟೆಯ ಮೇಲೂ ಒಬ್ಬೊಬ್ಬ ಹಾಜಿ ಯಾತ್ರಿಕನನ್ನು ಕೂರಿಸಲಾಗುವುದು. ಮೆರವಣಿಗೆಯೊಡನೆ ಪಾಕಿಸ್ಥಾನದ ನಕ್ಷೆಯನ್ನೂ ಪ್ರದರ್ಶಿಸುವ ಆಲೋಚನೆ ಇದೆ.

ರತ್ರು ಲಾಂಚಿಯಾನೋ ಬಿಟ್ಟಿತು

ಸ್ಯಾಂಗ್ರೋ ನದಿ ಉತ್ತರಕ್ಕೆ ೫ ಮೈಲಿ ದೂರದಲ್ಲಿ ರೋಂ ನಗರವನ್ನು ಸಂಧಿಸುವ ರೈಲು ಮಾರ್ಗ ಮಧ್ಯೆ ಇರುವ ಲಾಂಚಿಯಾನೋ ನಗರವನ್ನು ಬ್ರಿಟಿಷ್ ಸೇನೆ ತನ್ನ ವಶಪಡಿಸಿಕೊಂಡಿದೆ. ಅಲ್ಲಿದ್ದ ಶತ್ರುಗಳು ಪಟ್ಟಣವನ್ನು ಖಾಲಿಮಾಡಿ ಓಡಿ ಹೋದರು.

ರಷ್ಯಾದಲ್ಲಿ ಜರ್ಮನರು ಕಳೆಯುತ್ತಿರುವರು

ಸೋವಿಯಟ್ ಸೇನೆಯೊಳಗೆ ರಷ್ಯನರ ಒತ್ತಡ ಹೆಚ್ಚಿದ ಪರಿಣಾಮವಾಗಿ ಜರ್ಮನರು ತಮ್ಮ ಸ್ಥಾನಗಳನ್ನು ಒಂದೊಂದನ್ನಾಗಿ ಬಿಟ್ಟು ಹೋಗುತ್ತಿರುವರು. ಬಿಳಿ ರಷ್ಯದ ಮುಖ್ಯ ಸ್ಥಳಗಳಾದ ರತ್ಸ ಚಕ್ಕ ವಿತ ಮೋಜಿರ್ ಮತ್ತು ಜ್ಲೋಬಿನ್ ನಗರಗಳನ್ನು ರಷ್ಯನರು ಸಮೀಪಿಸುತ್ತಿದ್ದಾರೆ. ಅವುಗಳನ್ನು ಮುತ್ತುವುದೇ ರಷ್ಯನರ ಹವಣಿಕೆ. ಅವರ ಕಾರ್ಯ ಬಹು ಮಟ್ಟಿಗೆ ಕೈಗೂಡುತ್ತಿದೆ.

ಕೈರೋ ಸಮ್ಮೇಳನದಲ್ಲಿದ್ದವರ ಸಂಖ್ಯೆ

ಕೈರೋನಲ್ಲಿ ನಡೆದ ತ್ರಿಮೂರ್ತಿಗಳ ಸಮ್ಮೇಳನಕ್ಕೆ ೨೦೦ ಕ್ಕೆ ಮೇಲ್ಪಟ್ಟು ರಾಜಕೀಯ ನೇತಾರರೂ, ವಿಲಿಟರಿ ಅಧಿಕಾರಿಗಳೂ ಹಾಜರಾಗಿದ್ದರೆಂದು ಹೇಳಲಾಗಿದೆ.

ಸಮ್ಮೇಳದಲ್ಲಿ ಸತಿ ಚಿಯಾಂಗರ ಪಾತ್ರ

ಕೈರೋ ಸಮ್ಮೇಳನಕ್ಕೆ ಸತಿ ಚಿಯಾಂಗ್ ಕೈಷೇಕ್‌ರೂ ಹಾಜರಾಗಿ ತಮ್ಮ ಪತಿ ಪರವಾಗಿ ಭಾಷಾಂತರಿಸುತ್ತಿದ್ದರೆಂದು ಸುದ್ದಿ ಬಂದಿದೆ.

ಹಂಪಾಪುರದ ಸೊಸೈಟಿ

ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಕೋ-ಆಪರೇಟಿವ್ ಸ್ಟೋರ್ಸ್ ಸೊಸೈಟಿಯ ಜನರಲ್ ಮೀಟಿಂಗ್ ಕಳೆದ ತಿಂಗಳು ೨೪ ನೇ ತಾ॥ ಅಲ್ಲಿನ ಸರ್ಕಲ್ ಇನ್ಸ್‌ಪೆಕ್ಟರ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಲೂಟಿಗಾರರ ಕೊಲೆ

ಬರ್ಲಿನ್ ನಗರದ ಮೇಲೆ ರಾಯಲ್ ವಿಮಾನ ದಳದವರು ಬಾಂಬು ಹಾಕುತ್ತಿದ್ದಾಗ ನಾಲ್ಕು ಮಂದಿ ಜರ್ಮನ್ ದರೋಡೆಕೋರರು ನಗರದಲ್ಲಿ ಲೂಟಿ ನಡೆಸುತ್ತಿದ್ದು ಸಿಕ್ಕಿಬಿದ್ದುದರಿಂದ ಅವರ ತಲೆಗಳನ್ನು ಕಡಿದು ಹಾಕಲಾಯಿತೆಂದು ತಿಳಿದುಬಂದಿದೆ.

ಕಲ್ಕತ್ತಾ ಮರಣ

ನವೆಂಬರ್ ೨೭ ರ ವಾರದಲ್ಲಿ ಕಲ್ಕತ್ತೆಯಲ್ಲಿ ೧೧೦ ಮರಣ ಸಂಭವಿಸಿದುದಾಗಿ ವರದಿಯಾಗಿದೆ.

ಹೋಬಳಿ ಮೀಟಿಂಗ್

ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಹೋಬಳಿ ಕೊಹಳ್ಳಿ ಎಂಬ ಗ್ರಾಮದಲ್ಲಿ ಕಳೆದ ತಿಂಗಳು ೨೩ ನೇ ತಾ. ಮೈಸೂರು ಸಬ್ ಡಿವಿಜನ್ ಸಾಹೇಬರ ಅಧ್ಯಕ್ಷತೆಯಲ್ಲಿ ಹೋಬಳಿ ಮೀಟಿಂಗ್ ನಡೆಯಿತು. ಶ್ರೀ ಆರ್. ಕುಮಾರಾರಾಧ್ಯರು ಸ್ವಾರಸ್ಯವಾದ ಭಾಷಣ ಮಾಡಿದರು. ಸಭೆಗೆ ದಯಮಾಡಿಸಿದ್ದ ಸರ್ಕಾರಿ ಅಧಿಕಾರಿಗಳಿಗೂ ಅಧ್ಯಕ್ಷರಿಗೂ ಪಟೇಲ್ ಎಲ್. ಪುಟ್ಟಸ್ವಾಮಪ್ಪನವರು ಫಲಹಾರವನ್ನೇರ್ಪಡಿಸಿದ್ದರು. ಶ್ರೀಮನ್ಮಹಾರಾಜರವರ ಜಯ ಘೋಷದೊಡನೆ ಸಭೆ ಮುಕ್ತಾಯಗೊಂಡಿತು.

ಸೋಲಿಂಜೆನ್ ಮೇಲೆ ಧಾಳಿ

ಅಮೆರಿಕಾ ವಿಮಾನಗಳು ಜರ್ಮನರ ರೈನ್‌ಲೆಂಡ್ ಕೈಗಾರಿಕಾ ಕೇಂದ್ರವಾದ ಸೋಲಿಂಜನ್ ಮೇಲೆ ಇದೇ ೩ ನೆಯ ಬಾರಿ ಮೊನ್ನೆ ಹೋಗಿ ತೀವ್ರವಾಗಿ ಧಾಳಿ ನಡೆಸಿ ಬಂದಿವೆ.

೧೧॥ ಗಂಟೆಯಲ್ಲಿ ೩೧೦೦ ಮೈಲಿ ಹಾರಿದ

ರಾಯಲ್ ವಿಮಾನ ದಳಕ್ಕೆ ಸೇರಿದ ಕ್ಯಾಪ್ಟನ್ ಗಾರ್ಡ್ ಎಂಬ ವೈಮಾನಿಕನು ಮಾಂಟ್ರಿಯಲ್ ಬಿಟ್ಟು ಬ್ರಿಟನ್ನಿನ ಪಶ್ಚಿಮ ತೀರಕ್ಕೆ ೧೧ ಗಂಟೆ ೫೫ ನಿಮಿಷದಲ್ಲಿ ಬಂದು ಸೇರಿದ್ದಾನೆ. ಅಂದರೆ ೩,೧೦೦ ಮೈಲಿ ಪ್ರಯಾಣವಾದ ಹಾಗಾಯಿತು.

ಪಿಟೇನರ ಷರತ್ತು

ಜರ್ಮನರು ಪಿಟೇನರ ರೇಡಿಯೋ ಭಾಷಣವೊಂದನ್ನು ನಿರ್ಬಂಧಿಸಿದ್ದರಷ್ಟೆ. ಆ ನಿರ್ಬಂಧವನ್ನು ತೆಗೆದುಹಾಕುವ ತನಕ ತಾವು ಅಧಿಕಾರ ಸ್ವೀಕಾರ ಮಾಡುವುದಿಲ್ಲವೆಂದು ಅವರು ಷರತ್ತು ಹಾಕಿರುವರೆಂದು ತಿಳಿದುಬಂದಿದೆ.

ಲೀಗಿಗೆ ರಾಜೀನಾಮೆ

ಬಂಗಾಳ ಮುಸ್ಲಿಂ ಲೀಗಿನ ಉಪಾಧ್ಯಕ್ಷರಾದ ಮೌಲಾನ ಮಹಮದ್ ಅಹಮದ್ ಅಕ್ರಮ್‌ಖಾನ್‌ರವರು ಲೀಗಿನೊಡನಿದ್ದ ತಮ್ಮ ಸಂಬಂಧವನ್ನು ಸಂಪೂರ್ಣವಾಗಿ ಬಿಟ್ಟಿದ್ದಾರೆ. ವರ್ಕಿಂಗ್ ಕಮಿಟಿಗೆ ರಾಜೀನಾಮೆ ಕೊಟ್ಟಿದ್ದಾರೆ.

ಮೈಸೂರು ದೊಡ್ಡಕೆರೆ ಮೈದಾನದಲ್ಲಿ ನಡೆಯುವ

ಭಾರಿ ಕುಸ್ತಿಗಳು

ತಾರೀಕು

5-12-43

ಭಾನುವಾರ



ಬೆಳ್ಳಿ ಕಪ್ಪು, ಚಿನ್ನದ ಮೆಡಾಲನ್ನು ಪಡೆದಿರುವ ಕನ್ನೇಗೌಡನ ಕೊಪ್ಪಲು ಪೈ॥ ದೊಡ್ಡ ಬಸವಯ್ಯನಿಗೂ ಮತ್ತು ರಾಣಿಬೆನ್ನೂರಿನ ಪೈ॥ ನಂಜಪ್ಪನಿಗೂ

ಭಾರಿಬೆಳ್ಳಿ ಮತ್ತು ಚಿನ್ನದ ಗದೆ ಪಡೆದಿರುವ ಪಂಜಾಬಿನ ಪೈ॥ ದರ್ಮಾಸಿಂಗ್ ಮತ್ತು ಕೊಲ್ಲಾಪುರದ ಪೈ॥ ಭೀಮಪ್ಪನಿಗೂ

ಟಿಕೆಟುಗಳು ಕುಸ್ತಿ ದಿವಸಕ್ಕೆ ನಾಲ್ಕು ದಿವಸ ಮುಂಚಿತವಾಗಿ ದೊರೆಯುತ್ತವೆ.

ಟಿಕೆಟು ದರ:- ಕುರ್ಚಿ 2-4-0, ಗ್ಯಾಲರಿ 1-2-0, ನೆಲ 0-7-11

ಕಂಟ್ರಾಕ್ಟರ್:- ಬೋರಯ್ಯ, ಬಿ. ಸಿ. ಚಲುವಯ್ಯ, ಸ್ಪೋರ್ಟ್ ಪ್ರೊಪ್ರೈಟರ್.

ಸ್ತ್ರೀಯರ ಸೌಕರ್ಯಕ್ಕಾಗಿ

ಈ ತಿಂಗಳು ೧೧ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರ್ಯಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂಚನೆ — ಚಿಲ್ಲರೆಯಾಗಿ ಚಕ್ಕರೆ, ಬೂರಾಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆ ಪೇಟೆ ಬ್ರಾಂಚ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಸಂಪುಟ ೨] ಶನಿವಾರ ೪--೧೨--೪೩ [ಸಂಚಿಕೆ ೧೧೭

ಜರ್ಮನರು ಹಿಟ್ಲರ್‌ಮೇಲೆ ದಂಗೆ ಏಳಬೇಕು

ಮಂಡ್ಯದಲ್ಲಿ ಒಂದು ರೂಪಾಯಿಗೆ ಮಗುವಿನ ಮಾರಾಟ

ಶರಣಾಗತರಾಗಬೇಡಿರೆಂದು ಗೋಬೆಲ್ಸ್‌ನ ಪ್ರಾರ್ಥನೆ

ಮಹಾಪ್ರಭುಗಳಿಗೆ ಬಿನ್ನವತ್ತಳೆ

ಮೈಸೂರು ೪

ಮೈಸೂರು ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ಈ ದಿನ ಉಪಾಧ್ಯಕ್ಷ ಶ್ರೀ ಕೆ. ಸಿ. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆದು. ಚಾಮರಾಜನಗರದ ತಾ|| ಚಂದಕವಾಡಿ ಹತ್ತಿರ ಸುವರ್ಣಾವತಿ ನದಿಯ ಸೇತುವೆ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ಇದೇ ಮಾಹೆ ೧೫ ರಲ್ಲಿ ನೆರವೇರಿಸುವ ಸಂದರ್ಭದಲ್ಲಿ ಮಹಾಪ್ರಭುಗಳಿಗೆ ಬಿನ್ನವತ್ತಳೆಯನ್ನೂ ಮತ್ತು ರಜತ ಕರಂಡವನ್ನೂ ಅರ್ಪಿಸಬೇಕೆಂದೂ, ಅದಕ್ಕಾಗಿ ೨,೫೦೦ ರೂ ವೆಚ್ಚವನ್ನು ಮಾಡಬೇಕೆಂದೂ ನಿರ್ಣಯಿಸಲಾಯಿತು.

ಸರ್ಕಾರದವರಲ್ಲಿ ನಿಯೋಗ

ಸರ್ಕಾರದಿಂದ ಮಂಜೂರಾಗಿ ಬಂದಿರತಕ್ಕ ೧೯೪೩-೪೪ ನೇ ಬೋರ್ಡಿನ ಬಡ್ಜೆಟ್ ವಿಚಾರ ಚರ್ಚೆಗೆ ಬಂದು, ಕೃಷ್ಣರಾಜ ನಗರದ ಹೈಸ್ಕೂಲಿಗೆ ಬೋರ್ಡಿನವರು ಕೊಡುತ್ತಿರುವ ಸಾಲಿಯಾನಾ ೧೫೦೦ ರೂ. ಮತ್ತು ಕೃಷ್ಣರಾಜ ನಗರದ ಡಿಸ್ಪೆನ್ಸರಿ ಮತ್ತು ಅತ್ತಿ ಹೆಬ್ಬಾಳು ರಸ್ತೆಗಳ ವೆಚ್ಚದ ೩೦೦೦ ರೂ. ಗಳ ವಿಚಾರದಲ್ಲೂ ಇವು ಬೋರ್ಡಿನವರ ಜವಾಬ್ದಾರಿಯಲ್ಲವಾದ್ದರಿಂದ ಅದನ್ನು ವಜಾ ಮಾಡಿಸಲು ಸರ್ಕಾರದವರಲ್ಲಿ ಅಧ್ಯಕ್ಷರೊಳಗೊಂಡ ೮ ಸದಸ್ಯರೊಡನೆ ನಿಯೋಗ ಹೋಗಬೇಕೆಂದು ತೀರ್ಮಾನಿಸಲಾಯಿತು.

ಸಹಾಯಾರ್ಥ ನಾಟಕ

೫-೧೨-೪೩ ನೆಯ ಭಾನುವಾರ ಸಂಜೆ ೬-೩೦ ಕ್ಕೆ ಟೌನ್ ಹಾಲ್‌ನಲ್ಲಿ, ದೊಡ್ಡಪೇಟೆಯಲ್ಲಿ ಶ್ರೀ ಶ್ರೀರಂಗಮ್ಮನವರಿಂದ ಸ್ಥಾಪಿಸಲ್ಪಟ್ಟಿರುವ ಶ್ರೀ ಗೋಪಾಲ ಕೃಷ್ಣ ಶಿಶುವಿಹಾರದ ಬಾಲಕಿಯರು 'ಭಾಕ್ತಪ್ರೇಮ' ಅಥವ 'ಶ್ರೀರಾಮ ಪಾದುಕಾಪಟ್ಟಾಭಿಷೇಕ' ಎಂಬ ನಾಟಕವನ್ನು ಶಿಶುವಿಹಾರದ ಸಹಾಯಾರ್ಥವಾಗಿ ಅಭಿನಯಿಸುತ್ತಾರೆ. ಮಹಾಜನರು ಉದಾರಾಶ್ರಯವನ್ನು ಕೊಡಬೇಕೆಂದು ಕೋರಲಾಗಿದೆ.

ಫುಟ್ ಬಾಲ್

ದಸರಾ ಸೀನಿಯರ್ ಫುಟ್ ಬಾಲ್ ಪಂದ್ಯಗಳ ಆಶ್ರಯದಲ್ಲಿ ನಿನ್ನೆ ಸಂಜೆ ನಡೆದ ಡ್ರಾ ಸೆಮಿಫೈನಲ್ಸ್ ಪಂದ್ಯದಲ್ಲಿ ಸ್ಟೇಟ್ ರೈಲ್ವೆ ಕ್ಲಬ್ಬಿನವರು ಮೈಸೂರು ಮುಸ್ಲಿಂ ಕ್ಲಬ್ಬನ್ನು ೩-೧ ಗೋಲುಗಳಿಂದ ಸೋಲಿಸಿದರು. ಆಟದಲ್ಲಿ ಕೈಕೈಮಿಲಾವಣೆಯಾದ್ದರಿಂದ ಮುಸ್ಲಿಂ ಕ್ಲಬ್ಬಿನ ಸೀನ್‌ಪಾಷಾ ಮತ್ತು ರೈಲ್ವೆ ಕ್ಲಬ್ಬಿನ ಬುರ್ಹಾನ್ ಅವರುಗಳನ್ನು ರೆಫ್ರಿಯವರು ಮೈದಾನದಿಂದ ಹೊರಕ್ಕೆ ಕಳಿಸಿದರು.

ಹಿಂದೂ ಸಭಾ ರಜತೋತ್ಸವ

ಈ ಉತ್ಸವವು [illegible] ನಡೆಯುವುದು. ಈ ತಿಂಗಳು ೨೬ನೇ ತಾ|| ಅಧ್ಯಕ್ಷರ ಮೆರವಣಿಗೆಯು ಆನೆಯಮೇಲೆ ಅಂಬಾರಿಯಲ್ಲಿ ನಡೆಯಲ್ಪಡುವುದು. ಇದಕ್ಕಾಗಿ ವಿಶೇಷ ಮಂಟಪಗಳು ಹಾಕಲ್ಪಡುತ್ತವೆ.

ಅಮೆರಿಕದಲ್ಲಿ ಜನಾಭಾವ

ಅಮೇರಿಕದಲ್ಲಿ ಯುದ್ಧ ಕಾರ್ಯಕ್ಕೆ ಜನಗಳು ಇನ್ನೂ ತೀರಾ ಸಾಲದು ಎಂದು ಹೇಳಿದ್ದಾರೆ. ಕೆಲವು ಕಂಪೆನಿಗಳನ್ನು ರದ್ದು ಗೊಳಿಸಲಾಗಿದೆ. ಇದರಿಂದ ಜನಬಲವು ಕಷ್ಟನಷ್ಟಗೆ ಭರ್ತಿಯಾಗಬಹುದು

ಶರಣಾಗತರಾಗಬೇಡಿ

ಜರ್ಮನ್ ಪ್ರಚಾರ ಮಂತ್ರಿ ಡಾ|| ಗೋಬೆಲ್ಸ್‌ರವರು ತಮ್ಮ ಈ ವಾರದ ಸಂದೇಶದಲ್ಲಿ ಜರ್ಮನರಿಗೆ ಹೀಗೆ ಹೇಳಿದ್ದಾರೆ— ಎಲ್ಲಾ ಯುದ್ಧಗಳಲ್ಲಿಯೂ ಎಲ್ಲಾ ಜನಗಳಿಗೂ ಒಂದೊಂದು ಸಮಯದಲ್ಲಿ ಮೇಲು ಕೀಳುಗಳು ಆಗಿಯೇ ಆಗುತ್ತವೆ. ನಾವು ಸೋತೆವೆಂದು ಎಂದಿಗೂ ಒಪ್ಪಿಕೊಳ್ಳಬಾರದು. ಶರಣಾಗತಿಯಿಂದುಂಟಾದದ್ದೇ ಕಳೆದ ಯುದ್ಧದ ತಪ್ಪು. ಅಪಾಯ ಒದಗಿದ ಸಮಯದಲ್ಲಿ ಪರಿಣಾಮ ಆದೀತೆಂದು ಹೇಳಲಾಗುವುದಿಲ್ಲ. ಆದ್ದರಿಂದ ಎಂದಿಗೂ ವೈರಿಗೆ ತಲೆ ಬಗ್ಗಿಸಬೇಡಿ ಎಂಬುದೇ ಇಂದಿನ ಕಟ್ಟಾಜ್ಞೆ.

ಕೀವ್ ಬಳಿ ಜರ್ಮನ್ ಒತ್ತಾಯ

ಜರ್ಮನರು ಹೊಸ ಟ್ಯಾಂಕು ಪಡೆಗಳನ್ನು ತಂದೊಡ್ಡಿ ಕೀವ್‌ನಗರವನ್ನು ರಕ್ಷಿಸುತ್ತಿರುವ ರಷ್ಯದ ಸೇನೆಗಳನ್ನು ಛೇದಿಸಲು ಒತ್ತಾಯ ಪ್ರಯತ್ನ ಪಡುತ್ತಿದ್ದಾರೆ. ಕದನವು ಬಹಳ ಉಗ್ರವಾಗಿದೆ. ಬ್ರೂಸಿಲಾವ್ ಮತ್ತು ಕೋರೊಸ್ಟೆನ್‌ಗಳ ನಡುವೆ ಜರ್ಮನರು ೨೦೦೦ ಟ್ಯಾಂಕುಗಳನ್ನು ತಂದೊಡ್ಡಿರುವರು. ಮುಂದೆ ಘೋರ ಕದನವು ಕಾದಿದೆ.

ಚಿನ್ನದ ಮಾರಾಟದಿಂದ ಸರ್ಕಾರಕ್ಕೆ ಲಾಭ

ಬ್ರಿಟಿಷ್ ಸರ್ಕಾರದವರು ಚಿನ್ನ ಗಟ್ಟಿಗಳ ಬೆಲೆಗಳ ಮೇಲೆ ಇಂಗ್ಲೆಂಡಿನಲ್ಲಿ ಯಾವ ಹತೋಟಿಯನ್ನೂ ಇಟ್ಟುಕೊಳ್ಳದೆ ಹಿಂದೂಸ್ಥಾನದಲ್ಲಿ ಹೆಚ್ಚಿನ ಲಾಭಕ್ಕೆ ಅದನ್ನು ಮಾರತಕ್ಕರುವ ವಿಷಯವಾಗಿ ಬಹಳ ಟೀಕೆಗಳು ಉದ್ಭವಿಸಿವೆ. ರಿಜರ್ವ್ ಬ್ಯಾಂಕ್ ಮೂಲಕ ಇಂಡಿಯಾ ಸರ್ಕಾರದವರು ತೊಲಕ್ಕೆ ರೂ ೭೬ ಗಳಂತೆ ಇದುವರೆಗೆ ಚಿನ್ನವನ್ನು ಮಾರುತ್ತಿದ್ದಾರೆ. ಇಂಗ್ಲೆಂಡಿನಲ್ಲಿ ಇದರ ಬೆಲೆ ತೊಲಕ್ಕೆ ೪೫ ರೂ. ಗಳು ಮಾತ್ರ ನಿಗದಿ ಆಗಿದೆ.

ಮಿಲಾಪಿ ಪ್ರಸ್ತಾಪವಿಲ್ಲ

ವೈಸ್ರಾಯರು ಗೌರ್ನರುಗಳು ಮೊನ್ನೆ ಕಲೆತು ಮಾತನಾಡಿದರಲ್ಲಿ ಆಹಾರ ಮತ್ತು ಯುದ್ಧ ಸಂಕಟದ ವಿಚಾರಗಳು ಮಾತ್ರ ಚರ್ಚಿಸಲ್ಪಟ್ಟುವೆಂದೂ ರಾಜಕೀಯ ಬಂದಿಗಳ ಮಿಲಾಪಿ ಪ್ರಸ್ತಾಪ ಮಾಡಲಿಲ್ಲವೆಂದೂ ಇಂಡಿಯಾ ಸೆಕ್ರಟರಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಮುಖಂಡರಿಗೆ ರಕ್ಷಣೆ

ಕೈರೋದಲ್ಲಿ ನಡೆದ ತ್ರಿರಾಷ್ಟ್ರ ಸಮ್ಮೇಳನದ ಕಾಲದಲ್ಲಿ ನಾಯಕರ ರಕ್ಷಣೆಗಾಗಿ ಜೆನರಲ್ ಸಂಸ್ಥೆಯವರು ಬಲವಾದ ರಕ್ಷಣಾ ವ್ಯವಸ್ಥೆಯನ್ನು ಮಾಡಿದ್ದರು. ಪ್ರತಿ ಎರಡು ಮೈಲಿಗಳ ಸೆಂಟ್ರಿಗಳನ್ನಿಟ್ಟಿದ್ದರು. ನಾಯಕರ ಶಿಬಿರವನ್ನು ತಲುಪುವುದಕ್ಕೆ ಮುಂಚೆ ಪ್ರತಿಯೊಬ್ಬರನ್ನೂ ವಿಶದವಾಗಿ ಶೋಧಿಸಲಾಗುತ್ತಿತ್ತು. ನಾಯಕರು ಇಳಿದಿದ್ದ ಕಟ್ಟಡದ ಸುತ್ತಲೂ ಮುಳ್ಳು ತಂತಿಯ ಪರದೆಯನ್ನು ಹೂಡಲಾಗಿತ್ತು. ಸುತ್ತಮುತ್ತಲಿನ ಅನೇಕ ಚ. ಮೈಲಿ ಪ್ರದೇಶಗಳಲ್ಲಿ ವಿಮಾನ ನಾಶಕ ಫಿರಂಗಿಗಳೂ ಸರ್ಚ್ ಲೈಟುಗಳೂ ಮಿಲಿಟರಿ ಸೇನೆಗಳೂ ರಕ್ಷಣಾ ದಳಗಳೂ ತುಂಬಿದ್ದುವು. ವಿಮಾನ ಧಾಳಿಯಾದರೆ ರಕ್ಷಣಾ ಸ್ಥಾನವನ್ನು ಏರ್ಪಡಿಸಲಾಗಿತ್ತು. ಮುಖಂಡರು ಹೋದೆಡೆಗಳಲ್ಲೆಲ್ಲಾ ರಕ್ಷಕ ದಳಗಳು ಅವರನ್ನು ಹಿಂಬಾಲಿಸುತ್ತಿದ್ದುವು. ಅತ್ಯಂತ ಆಧುನಿಕ ರಕ್ಷಣಾ ಅಸ್ತ್ರಗಳು ಉಪಯೋಗಿಸಲ್ಪಟ್ಟಿದ್ದುವು.

ತ್ರಿಮೂರ್ತಿಗಳ ಸಮ್ಮೇಳನ

ವಾಯುವ್ಯ ಇರಾನಿನ ಟಬ್ರಿಜ್ ಎಂಬಲ್ಲಿ ಚರ್ಚಿಲ್, ಸ್ಟಾಲಿನ್ ಮತ್ತು ರೂಸ್ವೆಲ್ಟರುಗಳ ಸಮ್ಮೇಳನವು ಈಗಾಗಲೇ ಆರಂಭವಾಗಿದೆಯೆಂದು ತಿಳಿದುಬಂದಿದೆ. ಅಲ್ಲಿ ಸ್ಟಾಲಿನ್ನರು ಚರ್ಚಿಲ್ ಮತ್ತು ರೂಸ್ವೆಲ್ಟರಿಗಾಗಿ ಕಾದಿದ್ದರು

ಜರ್ಮನಿಗೆ ಮಿತ್ರರ ಸೂಚನೆ

ಪ್ರೆಸಿಡೆಂಟ್ ವಿಲ್ಸನ್ನರು ೧೯೧೮ ರಲ್ಲಿ ಕೊಟ್ಟಂತಹ ಸೂಚನೆಯನ್ನೇ ಈಗಲೂ ಮಿತ್ರರಾಷ್ಟ್ರಗಳು ಕೊಡುವುವೆಂದು ಜರ್ಮನರು ನಿರೀಕ್ಷಿಸಿರುವರೆಂದು ಹೇಳಲಾಗಿದೆ. ನಾಜಿ ಆಡಳಿತವನ್ನು ತ್ಯಜಿಸಿದರೆ ಜರ್ಮನಿಗೆ ಶಾಂತಿಪ್ರದಾನ ಮಾಡುವ ಭರವಸೆಯನ್ನು ಆ ಸೂಚನೆಯಲ್ಲಿ ಕೊಡಲಾಗುವುದು. ಜರ್ಮನರು ಶರಣಾಗತರಾಗಲು ಅಥವಾ ಈಗಿನ ತಮ್ಮ ನಾಯಕರ ಮೇಲೆ ದಂಗೆ ಏಳಲು ಸಿದ್ಧರಾದರೆ ಆಗ ಮಿತ್ರರಾಷ್ಟ್ರಗಳು ಅವರಿಗೆ ಉತ್ತಮ ಸ್ಥಿತಿಗಳ ಭರವಸೆಯನ್ನು ಕೊಡಲು ಇಚ್ಛಿಸುವರು. ಇಲ್ಲದಿದ್ದರೆ ನಾಲ್ಕು ಇಂಜಿನ್ನುಗಳ ಬಾಂಬರುಗಳು ಜರ್ಮನಿಯ ನಗರಗಳ ಮೇಲೆ ಧಾಳಿ ಮಾಡಿ ಅವುಗಳನ್ನು ಧೂಳೀಪಟ ಮಾಡುವುವು.

ದೀರ್ಘ ಪೆಸಿಫಿಕ್ ಯುದ್ಧ

ಜಪಾನಿನ ಮೇಲೆ ನಡೆಯುವ [illegible] ಯುದ್ಧವು ಅತ್ಯಂತ ದೀರ್ಘವಾಗಿರಬಹುದು [illegible] ದರೆ ಪೆಸಿಫಿಕ್ ಪ್ರದೇಶಗಳನ್ನು [illegible] ತ್ತುಕೊಳ್ಳಲು ಮಿತ್ರರಾಷ್ಟ್ರಗಳಿಗೆ [illegible] ಬಹಳ ಹಣವೂ ವೆಚ್ಚವಾಗುವುದೆಂದು ಅಮೇರಿಕದ ಯುದ್ಧ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಚಿಯಾಂಗರಿಗೆ ಗೌರವ ಸ್ಥಾನ

ಮಿತ್ರರಾಷ್ಟ್ರಗಳ ನಾಯಕರ ಸಮ್ಮೇಳನಾನಂತರ ಮುಖಂಡರುಗಳ ಭಾವಚಿತ್ರವನ್ನು ತೆಗೆದುಕೊಂಡಾಗ ಅಧ್ಯಕ್ಷ ರೂಸ್‌ವೆಲ್ಟರು ಮಾ| ಚಿಯಾಂಗ್ ಕೈಷೇಕರನ್ನು ಕರೆದು ಅಗ್ರಸ್ಥಾನದಲ್ಲಿ ಕುಳಿತುಕೊಳ್ಳಬೇಕೆಂದು ಹೇಳಿದರು. ಚಿಯಾಂಗರು ಇಂತಹ ಸಮ್ಮೇಳನಕ್ಕೆ ಬಂದಿದ್ದು ಇದೇ ಮೊದಲು. ಆದರೆ ಚಿಯಾಂಗರು ಸಂಕೋಚದಿಂದ ಅದನ್ನು ಒಪ್ಪದೆ ಬೇರೆ ಒಂದು ಪಕ್ಕದಲ್ಲಿ ಕುಳಿತರು.

ಭಾರತ ವಿಷಯದಲ್ಲಿ ಸಾರ್ವಭೌಮರ ಸಹಾನ

ಪಾರ್ಲಿಮೆಂಟ್ ಸಭೆಯನ್ನು ಮುಕ್ತಾಯ ಮಾಡುವಾಗ ಚಕ್ರವರ್ತಿಗಳು ಮಾಡಿದ ಭಾಷಣದಲ್ಲಿ ಹಿಂದೂಸ್ಥಾನದ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪವನ್ನೇ ಮಾಡದಿದ್ದುದಕ್ಕಾಗಿ ವಿಷಾದವನ್ನು ಸೂಚಿಸಿ ಸೋಷಲಿಸ್ಟ್ ಸದಸ್ಯರಾದ ಮಿ|| ಅಲೆಗ್ಸಾಂಡರ್ ಸೋರೆನ್ಸರು ಒಂದು ತಿದ್ದುಪಡಿ ಸೂಚಿಸಿದ್ದಾರೆ.

ಕಾಲರಾದಿಂದ ವಾರಕ್ಕೆ ೪೬೬೮ ಮರಣ

ಕಲ್ಕತ್ತೆಯಲ್ಲಿ ಅಕ್ಟೋಬರ್ ತಿಂಗಳ ೩೦ನೇ ತಾ|| ಮುಕ್ತಾಯವಾದ ೧೯ ದಿನಗಳಲ್ಲಿ ಹೊಸ್ಪಿಟಲ್ಲಿನ [illegible] ಬಿಟ್ಟಿರೆಂದು ಕಾಮನ್ಸ್ ಸಭೆಯಲ್ಲಿ ಮಿ|| ಅಮೆರಿಯವರು ತಿಳಿಸಿದ್ದಾರೆ. ಬಂಗಾಳದಲ್ಲಿ ಕಾಲರಾ ರೋಗದಿಂದಲೇ ಅಕ್ಟೋಬರ್ ತಿಂಗಳಲ್ಲಿ ವಾರಕ್ಕೆ ೫೫೦ ಮಂದಿ ಸತ್ತರೆಂದೂ ನವೆಂಬರ್ ಮೊದಲನೆಯ ವಾರದಲ್ಲಿ ೪೬೬೮ ಮಂದಿ ಸತ್ತರೆಂದೂ ತಿಳಿಸಿದ್ದಾರೆ.

೩ ಹುಡುಗರಿಗೆ ಕಠಿಣ ಶಿಕ್ಷೆ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಮೂವರು ಬಾಲಕರು ಸರ್ಕಾರ ಕಟ್ಟಡ ಮತ್ತು ಶಾಲೆಗಳಿಗೆ ಬೆಂಕಿ ಹಚ್ಚಲು ಪ್ರಯತ್ನಿಸಿದರೆಂಬ ಅಪಾದನೆಯ ಮೇಲೆ ಅವರಿಗೆ ೭ ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು. ಹೈಕೋರ್ಟಿನವರನ್ನು [illegible] ಎಂಬ [illegible] ಮೇಲೆ ಬಂದಿದ್ದ [illegible] ಆಗಬೇಕೆಂದು [illegible] ವಿನಾಶಕಾರಕ [illegible]

ಎಸ್. ಎ. ಬ್ರೆಲ್ವಿ ಸರ್ಕಾರಕ್ಕೆ

ಇಂಡಿಯಾ ಸರ್ಕಾರದವರು [illegible] ಡಿಯಾ ಪ್ರೆಸ್ಸ್ [illegible] ಮುಂದಿನ [illegible] ಯು ಅವರ ಸ್ವಾಧೀನದಲ್ಲಿ [illegible] ದಕ್ಕಾಗಿ ಕಂಪನಿಗೆ [illegible] ಪರಿಹಾರದ್ರವ್ಯವನ್ನು [illegible] ಲಿನ ಒತ್ತಾಯವನ್ನು [illegible]

ಹೋಬಳಿ ಸುಧಾರಕರ ಸಮ್ಮೇಳನ

ಸ್ವಂ ಸು] ಬೆಂಗಳೂರ ೩

ಮೈಸೂರು ಸಂಸ್ಥಾನದ "ಅಖಿಲ ಮೈಸೂರು ಹೋಬಳಿ ಸುಧಾರಕರ" ಸಮ್ಮೇಳನವು ೧೯೪೪ ೧೧ ಜನವರಿ ತಿಂಗಳಲ್ಲಿ ಹಾಸನದಲ್ಲಿ ನಡೆಯಲಿದೆ.

ರಾಜುರವರ ಶಿಸ್ತು ಭಂಗ

ಬೆಂಗಳೂರು ಪೌರ ಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದುವಾರರುಗಳನ್ನು ವಿರೋಧಿಸಿ ಶ್ರೀ ಎಲ್. ಎಸ್. ರಾಜುರವರು ಶಿಸ್ತು ಭಂಗಪಡಿಸಿದ್ದರಿಂದ ಅವರನ್ನು ಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿ ಮುಂದಾಳನ್ನು ಚುನಾಯಿಸುವ ವಿಷಯವನ್ನು ಪರ್ಯಾಲೋಚಿಸಲು ಇದೇ ತಾರೀ ೧೧ ನೇ ತಾ॥ ದಿನ ರೇಸ್‌ವ್ಯೂ ಭವನದಲ್ಲಿ ಕಾಂಗ್ರೆಸ್ ಪಕ್ಷ ಸದಸ್ಯರೆಲ್ಲರೂ ಹಾಜರಿರಬೇಕೆಂದು ಶ್ರೀ ಛೇಂಪಣ್ಣ ನಾಯಕರು ಪ್ರಾರ್ಥಿಸಿರುತ್ತಾರೆ.

ಬೆಣ್ಣೆ ರಫ್ತಿಗೆ ಅಡ್ಡಿ

ಬೆಂಗಳೂರು, ಸಂಸ್ಥಾನದ ಸಂಸ್ಥಾನದ ಹೊರಗೆ ಬೆಣ್ಣೆ ಮತ್ತು ತುಪ್ಪ ಇವುಗಳನ್ನು ಜಿಲ್ಲಾಧಿಕಾರಿಗಳ ಅಪ್ಪಣೆ ಇಲ್ಲದೆ ಸಾಗಿಸಕೂಡದೆಂದೂ, ತಪ್ಪಿದಲ್ಲಿ ೬ ತಿಂಗಳು ಶಿಕ್ಷೆಗೆ ಒಳಗಾಗುವರೆಂದೂ ಆಜ್ಞೆಯಾಗಿದೆ

ಖೈದಿ ಪರಾರಿ

ಕೊಲೆಯ ಅಪಾದನೆ ಮೇಲೆ ಬೆಂಗಳೂರು ಸಬ್ ಜೈಲಿನಲ್ಲಿರಿಸಿದ್ದ ಗೋವಿಂದ ಎಂಬುವನು ಕಳವು ಮಾಲುಗಳನ್ನು ತೋರಿಸುವ ನೆಪದಿಂದ ಪೋಲೀಸರೊಡನೆ ಒಂದು ಮನೆಗೆ ಹೋಗಿ ಅಲ್ಲಿಂದ ತಪ್ಪಿಸಿಕೊಂಡು ಪರಾರಿಯಾಗಿರುವನೆಂದು ತಿಳಿದುಬಂದಿದೆ

ಕಾಂ॥ ಅಧ್ಯಕ್ಷರ ಒಪ್ಪಿಗೆ

ಶ್ರೀಯುತರಾದ ಪೆಚ್. ಸಿ. ದಾಸಪ್ಪ, ಟಿ ಸಿದ್ದಲಿಂಗಯ್ಯ ಮತ್ತು ಎ. ಜಿ ಬಂದೀಗೌಡ- ಇವರಿಗೆ ಪೈಲಿನಲ್ಲಿ ಪ್ರ ಕಾಂಗ್ರೆಸ್ ಅಧ್ಯಕ್ಷರು ಚುನಾವಣಾ ಉಪಸಮಿತಿಯನ್ನು ರಚಿಸಿಕೊಂಡು ಚುನಾವಣಾ ಕಾರ್ಯಕ್ರಮವನ್ನು ಜರುಗಿಸುವ ಬಗ್ಗೆ ಅಧಿಕಾರ ಕೊಟ್ಟಿದ್ದ ವಿಷಯದಲ್ಲಿ ಉಂಟಾಗಿದ್ದ ಸಂದೇಹಗಳನ್ನು ಪರಿಹರಿಸಿ ನೋಡೆ ಬಿಡುಗಡೆಯಾದ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಪಿ ಜಲಿಂಗಪ್ಪನವರು ಪವರ್ ಪತ್ರವನ್ನೇ ಪ್ರಕಟಿಸಿದ್ದಾರೆ.

ಒಂದು ರೂಪಾಯಿಗೆ ಮಗು ಮಾರಾಟ

ಮಂಡ್ಯ ೪

ಅನ್ನಕ್ಕೋಸ್ಕರ ತನ್ನ ಶಿಶುವನ್ನೇ ಮಾರಿದ ಆಶ್ಚರ್ಯ ಪ್ರಸಂಗ ತಿಳಿದುಬಂದಿದೆ. ಕೊಯಮುತ್ತೂರಿನ ರಾಮಯ್ಯ ಎಂಬುವನು ಮಂಡ್ಯದ ಕಾರ್ಖಾನೆಯ ಮಾಧ್ಯಮಿಕ ಶಾಲೆಯ ಹತ್ತಿರ ಅಹಾರಕ್ಕಾಗಿಯೂ, ಕೈಲು ಏನೇನಾಗಿಯೂ ತನ್ನ ೩ ವರ್ಷದ ಹೆಣ್ಣು ಶಿಶುವನ್ನು ೧ ರೂಪಾಯಿಗೆ ಕಾರ್ಖಾನೆಯಲ್ಲಿರತಕ್ಕ ಓರ್ವ ಸ್ತ್ರೀಗೆ ಮಾರಿದನೆಂದು ಹೇಳಲಾಗಿದೆ

ಆಕ್ಷೇಪಕರ ಪತ್ರಗಳನ್ನು ಇಟ್ಟುಕೊಂಡಿದ್ದುದಕ್ಕೆ ಶಿಕ್ಷೆ

ಚಿತ್ರದುರ್ಗ ಜಿಲ್ಲೆಯ ಶ್ರೀ ಬರಗೂರು ರಾಮೇಗೌಡರು ಆಕ್ಷೇಪಕರವಾದ ಕಾಗದಗಳನ್ನು ಇಟ್ಟುಕೊಂಡಿದ್ದರೆಂದು ಅವರಿಗೆ ಚಿತ್ರದುರ್ಗದ ಪ್ರಥಮ ನ್ಯಾಯಾಧೀಶರು ೬ ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿದ್ದಾರೆ ಶ್ರೀ ಗೌಡರು ಒಂದು ವರ್ಷದಿಂದ ಬಂಧನದಲ್ಲಿದ್ದರು.

ಭೂಕಂಪದಿಂದ ೫೦ ಸಾವಿರ ಅನಾಥರು

ತುರ್ಕಿಯಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪದಿಂದ ಒಟ್ಟು ೪,೩೦೦ ಮಂದಿ ಮರಣ ಹೊಂದಿದರೆಂದೂ, ೩ ಸಾವಿರ ಜನರಿಗೆ ತೀವ್ರ ಗಾಯವಾಯಿತೆಂದೂ ವರದಿಯಾಗಿದೆ. ೧೭೦ ಗ್ರಾಮಗಳು ನಾಶವಾಗಿ ೫೦ ಸಾವಿರ ಜನಗಳು ಮನೆಮಠಗಳಿಲ್ಲದೆ ಅನಾಥರಾಗಿದ್ದಾರೆ.

ಐರ್ಲೆಂಡಿನ ಸಹಾಯ

ಐರಿಷ್ ಸರ್ಕಾರದವರು ಬಂಗಾಳಾ ಕ್ಷಾಮ ನಿವಾರಣಾರ್ಥವಾಗಿ ೧ ಸಾವಿರ ಪೌಂಡುಗಳ ಸಹಾಯ ಮಾಡಿದ್ದಾರೆ

ಸಿಲೋನ್ ಗೌರ್ನರ ಖಂಡನೆ

ಸಿಲೋನ್ ಶಾಸನ ಸಭೆಯಲ್ಲಿ ಬಂಧಿತರಾಗಿರುವವರನ್ನು ಬಿಡುಗಡೆಮಾಡಬೇಕೆಂದು ನಿರ್ಣಯವು ಅಂಗೀಕೃತವಾಗಿದ್ದರೂ ಅವರನ್ನು ಬಿಡುಗಡೆಮಾಡದಿದ್ದ ಗೌರ್ನರ ನಡತೆಯ ವಿಚಾರದಲ್ಲಿ ತೀವ್ರ ಖಂಡನೆಯಾಗಿ ಸದಸ್ಯರ ಅಸಮ್ಮತಿಯನ್ನು ವ್ಯಕ್ತಪಡಿಸುವ ನಿರ್ಣಯವೊಂದು ಅಂಗೀಕೃತವಾಯಿತು.

ಬರ್ಲಿನ್ ಮೇಲೆ ಪುನಃ ಧಾಳಿ

ಬರ್ಲಿನ್ ನಗರದ ಮೇಲೆ ಪುನಃ ಗುರುವಾರ ರಾತ್ರಿ ಮಿತ್ರ ವಿಮಾನಗಳು ಧಾಳಿ ನಡೆಸಿ ಬಾಂಬುಗಳ ಮಳೆಯನ್ನು ಸುರಿಸಿದವು. ರಾತ್ರಿ ೮ ಗಂಟೆಯಲ್ಲಿ ಜರ್ಮನಿಯ ಅನೇಕ ರೇಡಿಯೋ ಸ್ಟೇಷನ್‌ಗಳು ನಿಂತುಹೋದವು. ಬರ್ಲಿನ್ ಮತ್ತು ಸ್ಟಾರ್ಕ್‌ಹೋಂ ನಗರಗಳ ಟೆಲಿಫೋನ್ ಕೂಡ ತೊಂದರೆಗೊಳಗಾಗಿತ್ತೆಂದು ಜರ್ಮನರೇ ಹೇಳಿದ್ದಾರೆ

ಜಪಾನಿ ಹಡಗುಗಳಿಗೆ ಪೆಟ್ಟು

ನ್ಯೂ ಐರ್ಲೆಂಡಿನ ಹತ್ತಿರ ಜಪಾನಿನ ಎರಡು ಹಡಗುಗಳ ಮೇಲೆ ಮಿತ್ರರು ಧಾಳಿ ನಡೆಸಿ, ೧೦ ಸಾವಿರ ಟನ್ ತೂಕದ ಒಂದು ವ್ಯಾಪಾರದ ಹಡಗಿಗೂ ಇನ್ನೊಂದು ಟ್ಯಾಂಕರ್‌ಗೂ ನಷ್ಟ ಉಂಟುಮಾಡಿದರು. ಜಪಾನಿಯರು ಎರಡನ್ನೂ ತ್ಯಜಿಸಿದರೆಂದೂ ಆದು ಮುಳುಗಿತೆಂದೂ ವರದಿಯಾಗಿದೆ.

ಮುಸೋಲಿನಿ ಮೂರ್ಖ

ಸ್ವತಂತ್ರ ಇಟಲಿ ಚಳುವಳಿಯ ನಾಯಕರಾದ ಕೌಂಟ್ ಕಾರ್ಲೊ ಸ್ಪಾರ್ಜಾರವರು ಒಂದು ಹೇಳಿಕೆಯನ್ನಿತ್ತು ಹಿಟ್ಲರ್ ದೊರೆಗಳನ್ನೂ, ಅವರನ್ನು ಸುತ್ತಿಕೊಂಡಿರುವ ಲಂಚಕೋರ ಮಂಡಲನಾಯಕರನ್ನೂ ಉಗ್ರವಾಗಿ ಖಂಡಿಸಿದ್ದಾರೆ ಅವರೆಲ್ಲರೂ ಇಟಲಿಯ ವೈರಿಗಳೆಂದೂ ಇಟಲಿಯಲ್ಲಿ ಇನ್ನೊಂದು ಹೊಸ ಬಗೆ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನ ನಡೆಯುತ್ತಿದೆಯೆಂದೂ ತಿಳಿಸಿದ್ದಾರೆ ಮುಸೋಲಿನಿಯು ಮೂರ್ಖನೆಂದೂ ಅದರಿಂದ ಕ್ರೂರಕಲ್ಪನೆಯುಳ್ಳವನೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ

ಇಟಲಿಯಲ್ಲಿ ಜರ್ಮನರ ಓಟ

ಇಟಲಿಯ ಸ್ಯಾಂಗ್ರೋ ನದಿಗೆ ಉತ್ತರದಲ್ಲಿ ಮಿತ್ರಸೈನ್ಯಗಳು ಮುನ್ನುಗ್ಗುತ್ತಿರುವುದರಿಂದ ಪೆಸ್ಕಾರಾ ಮತ್ತು ರೋಂ ನಗರಗಳ ನಡುವೆ ಇರುವ ರಸ್ತೆಯಲ್ಲಿ ಜರ್ಮನ್ ಸೈನ್ಯವು ಹಿಮ್ಮೆಟ್ಟುತ್ತಿದೆ. ಹೀಗೆ ಓಡುತ್ತಿರುವ ಸೈನ್ಯಕ್ಕೆ ಕೈಗೆ ಸಿಕ್ಕಿದುದನ್ನೆಲ್ಲಾ ನಾಶಮಾಡಿ ಹೋಗುತ್ತಿದೆ ಈ ಕದನದಲ್ಲಿ ಭಾರತ ಸೈನಿಕರು ಬಹು ಮುಖ್ಯ ಪಾತ್ರವನ್ನು ವಹಿಸಿದ್ದರು.

Edited, printed and published by A. R. Nagarajan, at the Sadhvi Press, D.Subbiah Road, Mysore.

ಮಕ್ಕಳ ಒಡವೆ ಕಳುವು

ಈಚಿಗೆ ರಾಜಧಾನಿಯಾದ ಮೈಸೂರು ನಗರದಲ್ಲಿ ಚಿಕ್ಕಮಕ್ಕಳ ಶಾಲೆಗಳಿಗೆ ಹೋಗುವವರ ಆಭರಣಗಳನ್ನು ಕಳವು ಮಾಡುವುದು ಎಲ್ಲಾ ಮೊಹಲ್ಲಾಗಳಲ್ಲಿಯೂ ಹುಟ್ಟಾ ಹೆಚ್ಚಿದೆ. ಮಧ್ಯಾಹ್ನ ೧೨ ಘಂಟೆಯಲ್ಲಿ ಜನಸಂಚಾರವಿರದ ಸ್ಥಳದಲ್ಲೇ ಕಳವು ಮಾಡುವರು. ಕೆಲವು ಕಿಡಿಗೇಡಿಗಳನ್ನು ಪೋಲೀಸಿನವರು ಪತ್ತೆ ಹಚ್ಚಿರುತ್ತಾರೆ. ನೇಕರು ಇನ್ನೂ ಬಯಲಿಗೆ ಬಂದಿಲ್ಲ. ಪೋಲೀಸಿನವರು ಹೆಚ್ಚು ಗಮನ ಕೊಟ್ಟು ಗ್ಯಾಂಗ್‌ನವರನ್ನು ಹಿಡಿದು ಶಿಕ್ಷಿಸಬೇಕೆಂದು ನಂಬಲಾಗಿದೆ. ಈಚೆಗೆ ಹುಡುಗ ಸಿ. ದೊಡ್ಡ ಜವರಪ್ಪನವರ ಮಕ್ಕಳು ಶಾಲೆಗೆ ಹೋಗುತ್ತಿದ್ದಾಗ ಅಂಬಳೆ ಅಣ್ಣಯ್ಯಪಂಡಿತರ ಮನೆ ಬಳಿ ೧೨ ಘಂಟೆಯಲ್ಲೇ ಕಿವಿಯ ಆಭರಣಗಳನ್ನು ಅಪಹರಿಸಿರುವರು. ಪೋಲೀಸಿನವರು ಈಗ ಹೆಚ್ಚು ಆಸಕ್ತಿಯಿಂದ ಕಳ್ಳರನ್ನು ಪತ್ತೆಹಚ್ಚದಿದ್ದರೆ ಮುಂದೆ ಬಹಳ ಅನಾಹುತವಾಗಬಹುದು

ಪುರಸಿವಾಸಿ

ಶತ್ರು ನಿಲ್ದಾಣ ನಾಶ

ಜರ್ಮನಿ ಸಬ್‌ಮೆರೀನ್ ನಿಲ್ದಾಣವಾದ ವಿಲ್‌ಹೆಲ್ಮ್‌ಸ್‌ಹೇವನ್ ಮೇಲೆ ಮಿತ್ರ ವಿಮಾನಗಳು ಧಾಳಿ ನಡೆಸಿ ಅಪಾರ ನಷ್ಟವುಂಟುಮಾಡಿವೆ.

ಮಿಲಿಟರಿ ಸೌದೆ ದುರುಪಯೋಗ

ಶಿವಮೊಗ್ಗದ ಬಳಿ ಮಿಲಿಟರಿಗೆ ಸರಬರಾಜಾಗುತ್ತಿದ್ದ ಒಂದು ಸೌದೆ ಡಿಪೋದಿಂದ ೧೭೦ ಟನ್ ಸೌದೆಯನ್ನು ದುರುಪಯೋಗಪಡಿಸಿದನೆಂಬ ಅಪಾದನೆಯ ಮೇಲೆ ಕೋರ್ಟ್ ಮಾರ್ಷಲ್‌ನವರು ಹವಲ್ದಾರ್ ವೆಂಕಟರಾಜು ಎಂಬವನಿಗೆ ೩ ವರ್ಷ ಕಠಿಣ ಶಿಕ್ಷೆ ವಿಧಿಸಿರುವರು.

ರಾಜಬಂದಿಗಳಿಗೆ ಸೌಕರ್ಯ

ಬಟ್ಟೆ, ಊಟ, ಪತ್ರಿಕೆಗಳು, ಭತ್ಯ ಸ್ವಂತ ಹಣ ಇಟ್ಟುಕೊಳ್ಳುವುದು — ಬಗ್ಗೆ ಸೆಕ್ಯೂರಿಟಿ ಬಂದಿಗಳಿಗೆ ಬಿಹಾರ್ ಸರ್ಕಾರವು ಹಲವು ಸೌಲಭ್ಯಗಳನ್ನು ಕಲ್ಪಿಸುತ್ತಿದೆ

ಹರಾಜು

5-12-43ನೇ ಭಾನುವಾರ ಬೆಳಿಗ್ಗೆ 10 ಕ್ಕೆ

ಸಿಟಿ ಅಕ್ಷನೀರಿಂಗ್ ಕಂಪೆನಿ, ಮೈಸೂರು.

Auction

SUNDAY 5-12-43

10 A. M.

CITY AUCTIONEERING Co, MYSORE.

ಸ್ತ್ರೀಯರ ಸೌಕರ್ಯಕ್ಕಾಗಿ

ಅವರ ಹೆಸರಿನಲ್ಲಿ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಪಿ. ಪುಟ್ಟಯ್ಯ ಬಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ - ಚಿಲ್ಲರೆಯಾಗಿ ಕಲ್ಲಕ್ಕಿಸೈಜ ಬೀಡಾರ್‌ಮ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆ ಪೇಟೆ ಸೆಡ್ ಅಕ್ಕಿ ನೆಲ್ಲಿನ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಮೈಸೂರು ದೊಡ್ಡಕೆರೆ ಮೈದಾನದಲ್ಲಿ ನಡೆಯುವ

ಭಾರಿ ಕುಸ್ತಿಗಳು

ತಾರೀಕು

5-12-43

ಭಾನುವಾರ



ಪೆಲ್ಪಿ ಕಪ್ಪು, ಚಿನ್ನದ ತೋಡಾವನ್ನು ಪಡೆದಿರುವ ಕನ್ನೇಗೌಡನ ಶಿಷ್ಯರು ಪೈ॥ ದೊಡ್ಡ ಬಸವಯ್ಯನಿಗೂ ಮತ್ತು ರಾಣಿಬೆನ್ನೂರಿನ ಪೈ॥ ಸಂಜಪ್ಪನಿಗೂ

ಭಾರಿಬೆಳ್ಳಿ ಮತ್ತು ಚಿನ್ನದ ಗದೆ ಪಡೆದಿರುವ ಪಂಜಾಬಿನ ಪೈ॥ ಧರ್ಮಸಿಂಗ್ ಮತ್ತು ಕೋಲಾರದ ಪೈ॥ ಛೇಮಪ್ಪನಿಗೂ

ಟಿಕೆಟುಗಳು ಕುಸ್ತಿ ಜರುಗುವ ನಾಲ್ಕು ದಿವಸ ಮುಂಚಿತವಾಗಿ ದೊರೆಯುತ್ತವೆ.

ಟಿಕೆಟು ದರ:- ಕುರ್ಚಿ 2-4-0, ಗ್ಯಾಲರಿ 1-2-0, ನೆಲ 0-7-11

ಕಂಟ್ರಾಕ್ಟರ್-ಬೋರಯ್ಯ, ಬಿ. ಸಿ. ಚಲುವಯ್ಯ, ಪ್ರೊಪ್ರೈಟರ್

ಸಂಪುಟ ೨] . ಭಾನುವಾರ ೫--೧೨--೪೩ [ಸಂಚಿಕೆ ೧೧೮

ದ್ವಿತೀಯ ರಣರಂಗ ಬಾಲ್ಕನಲ್ಲಿಯೋ?

ಕಸ್ತೂರಿಬಾಯ್ ಗಾಂಧಿಯವರಿಗೆ ಹೃದಯರೋಗ
ವೈಸರಾಯ್ ಮಂತ್ರಿ ಮಂಡಲವು ಪುನರ್ರಚನೆಯಾಗಲಿದೆ

ದೇಸಾಯಿ ದಿನಾಚರಣೆ

ಮೈಸೂರು ೫

ಮೈಸೂರು ವಿಶ್ವ ವಿದ್ಯಾನಿಲಯದ ಸಂಘದವರು ನಾಳೆ ಸಂಜೆ ದಿವಂಗತ ಮಹಾದೇವ ದೇಸಾಯಿಯವರ ದಿನಾಚರಣೆಯನ್ನು ನಡೆಸುತ್ತಾರೆ. ಈ ಸಂಬಂಧವಾಗಿ ಸಂಜೆ ೫ ೧/೨ ಗಂಟೆಗೆ ಮಹಾರಾಜಾ ಕಾಲೇಜಿನ ಒಳಾಂಗಣದಲ್ಲಿ ಶ್ರೀಮಾನ್ ಸಿದ್ಧವನಹಳ್ಳಿ ಕೃಷ್ಣಶರ್ಮರು ಮಹದೇವ ದೇಸಾಯಿಯವರ ಛಾಯಾಚಿತ್ರವನ್ನು ಅನಾವರಣಮಾಡಿ ಭಾಷಣಮಾಡುವರು.

ಚರ್ಚಾಸ್ಪರ್ಧೆ ಫಲಿತಾಂಶ

ಮೈಸೂರು ವಿಶ್ವ ವಿದ್ಯಾನಿಲಯ ಸಂಘದ ಆಶ್ರಯದಲ್ಲಿ ನೆನ್ನೆ ಸಂಜೆ ನಡೆದ ಅಂತರ ವಿಶ್ವ ವಿದ್ಯಾನಿಲಯ ಚರ್ಚಾಸ್ಪರ್ಧೆಯಲ್ಲಿ ಎರ್ನಾಕುಲಂ ಮಹಾರಾಜಾ ಕಾಲೇಜಿನ ಪರವಾಗಿ ಚರ್ಚಿಸಿದ ಶ್ರೀ ಮಹದೇವನ್ ಮತ್ತು ಶ್ರೀಧರನ್‌ರವರುಗಳಿಗೆ ರಾಜ್ಯಪಾರಿತೋಷಕವೂ, ಹೈದರಾಬಾದಿನ ನಿಜಾಂ ಕಾಲೇಜಿನ ಶ್ರೀ ಅಬ್ದುಲ್ ಹಾದಿಯವರಿಗೆ ಪ್ರಥಮ ಬಹುಮಾನವೂ, ತ್ರಿವೆಂಡ್ರಮ್ ಮಹಾರಾಜಾ ಕಾಲೇಜಿನ ಶ್ರೀ ಜಾರ್ಜ್ ಪಣಿಕ್ಕರ್‌ರವರಿಗೆ ದ್ವಿತೀಯ ಬಹುಮಾನವೂ, ತೃತೀಯ ಬಹುಮಾನವು ಮೈಸೂರು ಮಹಾರಾಣಿ ಕಾಲೇಜಿನ ಶ್ರೀಮತಿ ಎಂ. ಎಲ್. ಸುಂದರರವರಿಗೂ ಕೊಡಲ್ಪಟ್ಟವು. ಮೈಸೂರು ಶಿಕ್ಷಣ ಸಂಘದ ಉಪಾಧ್ಯಕ್ಷರಾದ ಶ್ರೀ ಎ. ಎಸ್. ಪರ್ಸೀವಾಲ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ವಿಷಯ: "ಪ್ರಗತಿ ಮಾರ್ಗಕ್ಕೆ ವ್ಯಕ್ತಿಗಿಂತ ತತ್ವವೇ ಮೇಲು".

ಮಹಾತ್ಮರ ಪತ್ನಿಗೆ ಖಾಯಿಲೆ

ಶ್ರೀಮತಿ ಕಸ್ತೂರಿಬಾಯ್ ಗಾಂಧಿಯವರಿಗೆ ಈ ವಾರ ಎರಡು ಬಾರಿ ಹೃದಯ ವೇದನೆ ಪ್ರಾಪ್ತವಾಗಿತ್ತು. ಈಗ ಅವರು ಉತ್ತಮವಾಗಿದ್ದಾರೆ. ಮಕ್ಕಳು ಹತ್ತಿರ ಸಂಬಂಧಿಕರು ಅವರನ್ನು ನೋಡಿ ಬರಲು ಅವಕಾಶ ಕೊಡಲಾಗಿದೆ, ಎಂಬುದಾಗಿ ಬೊಂಬಾಯಿ ಸರ್ಕಾರದವರು ಪ್ರಕಟಿಸಿರುವರು.

ನಾಯಿ ಕೊಳೆಗೆ ಮೊಕದ್ದಮೆ

ಬಿಹಾರ್ ಸರ್ಕಾರದ ನ್ಯಾಯ ಇಲಾಖೆ ಉಪಕಾರ್ಯದರ್ಶಿ ಶ್ರೀ ಎಸ್. ಕೆ. ದಾಸ್ ಎಂಬುವರು, ಆಸ್ಪತ್ರೆಯ ಸಂಸ್ಥಾಪಕರು ಕಾರ್ಯದರ್ಶಿಗಳಾದ ಮಿ॥ ಇ. ಟಿ. ಬಿಡ್ಸ್ ಎಂಬುವರ ಮೇಲೆ ಅವರು ತನ್ನ ನಾಯಿಯನ್ನು ಕೊಂದರೆಂದು ಒಂದು ಮೊಕದ್ದಮೆ ಹೂಡಿರುವರು.

ಬರ್ಮಾ ಭವಿಷ್ಯ

ಜಪಾನರ ಪ್ರಚಾರ ನೀತಿಯನ್ನು ಎದುರಿಸಿ ಬರ್ಮಾವನ್ನು ಪುನಃ ಜಯಿಸಿದನಂತರ ಬ್ರಿಟಿಷರ ಕಾರ್ಯಕ್ರಮವೇನೆಂದು ವಿಚಾರಿಸುವವರನ್ನು ಕೇಳಲಾಗಿ, ವಿಶ್ವರ ವಿಜಯವೇ ಅವರ ಪ್ರಚಾರಕ್ಕೆ ಸವಾಲು; ಅದಕ್ಕಿಂತ ಹೆಚ್ಚಿನದೇನನ್ನೂ ಹೇಳಲಾರೆ ಎಂದಿರುವರು.

ನಾಜಿಗಳ ಅಳಿವು

ನಾಜಿಗಳ ಸೇನಾ ಒಲಿಕ್ಕಾ ಮಾನಸಿಕ ಬಲವನ್ನು ಹೆಚ್ಚಿಸ ಹೊಡೆತ ಕೊಟ್ಟು ಅವರನ್ನು ನಾಶ ಮಾಡುವ ಬಗ್ಗೆ ಟೆಹರಾನಿನಲ್ಲಿ ನಡೆದ ತ್ರಿಮೂರ್ತಿಗಳ ತೀರ್ಮಾನಿಸಿರುವರು.

ಮದರಾಸ್ ರಾಜಕೀಯ ಸಮ್ಮೇಳನ : ದಸ್ತಗಿರಿಗಳು

೨ ನೇ ತಾ॥ ಸಂಜೆ ಮದರಾಸಿನ ಟ್ರಿಪ್ಲಿಕೇನಿನ ತಿಲಕ್ ಘಾಟಿನಲ್ಲಿ ಮದರಾಸು ಪ್ರಾಂತ್ಯದ ರಾಜಕೀಯ ಸಮ್ಮೇಳನ ಎಂಬ ಹೆಸರಿನಿಂದ ಅದಿವೇಶನ ಒಂದು ಆರಂಭವಾಯಿತು. ಬಾದಿಭಾಗಗಳಿಂದ ಜನರ ಗುಂಪು ತ್ರಿವರ್ಣಧ್ವಜಗಳೊಡನೆ ಅಲ್ಲಿ ಸೇರಿತು. ತಿರುವಣ್ಣಾಮಲೆಯ ಶ್ರೀ ಬಿ. ವರದರಾಜನ್‌ರವರು ಅಧ್ಯಕ್ಷತೆ ವಹಿಸುವರೆಂದೂ ಮಧುರಾ, ರಾಮನಾಡ್, ಉತ್ತರ ಆರ್ಕಾಟ್, ದಕ್ಷಿಣ ಆರ್ಕಾಟ್, ಸೇಲಂ ಚೆಂಗಲ್‌ಪೆಟ್, ನೆಲ್ಲೂರು ಜಿಲ್ಲೆಗಳಿಂದ ಪ್ರತಿನಿಧಿಗಳು ಬಂದಿರುವರೆಂದೂ ಹೇಳಲಾಯಿತು. ರಾಷ್ಟ್ರೀಯ ಧ್ವಜಾರೋಹಣವನ್ನು ಶ್ರೀಮತಿ ಟಿ. ಎಸ್. ತನ್ನು ಅಮ್ಮಾಳ್ ಎಂಬಾಕೆ ನಡೆಸಿದರು. ಅಧ್ಯಕ್ಷರು ಭಾಷಣ ಮಾಡುತ್ತಿದ್ದಾಗ ಪೋಲೀಸರು ಸ್ಥಳಕ್ಕೆ ಬಂದು ೩೦ ಗಂಡಸರನ್ನೂ ೬ ಮಂದಿ ಹೆಂಗಸರನ್ನೂ ಸೆರೆ ಹಿಡಿದರು. ಅನುಮತಿ ಇಲ್ಲದೆ ಸಭೆ ನಡೆಸಿದ್ದಕ್ಕಾಗಿ ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ.

ರಾಜೇಂದ್ರ ಪ್ರಸಾದರ ವರ್ಧಂತಿ

ಪಾಟ್ನಾ ನಗರ ನಿವಾಸಿಗಳು ಮೊನ್ನೆ ಡಾ॥ ರಾಜೇಂದ್ರ ಪ್ರಸಾದರ ೫೯ ನೇ ಹುಟ್ಟಿದ ಹಬ್ಬದ ಸಂಬಂಧವಾಗಿ ಉತ್ಸವಗಳನ್ನು ನಡೆಸಿದರು. ಬಹಿರಂಗ ಸಭೆಯೊಂದು ನಡೆಯಿತು. ಭಾಷಣಗಳಾದುವು. ಇದೇ ಸಂಬಂಧವಾಗಿ ಸರ್ಕಾರದ ಅನುಮತಿ ಇಲ್ಲದೆ ಮೆರವಣಿಗೆ ನಡೆಸಿದ ೫ ಹೆಂಗಸರನ್ನೂ ೨೨ ಗಂಡಸರನ್ನೂ ಪಾಟ್ನಾ ಪೋಲೀಸರು ಬಂಧಿಸಿರುವರು.

ಸ್ಟಾಲಿನರ ಪ್ರಥಮ ಯಾತ್ರೆ

ಯುದ್ಧ ಪ್ರಾರಂಭವಾದ ನಂತರ ಸ್ಟಾಲಿನರು ವಿದೇಶಕ್ಕೆ ಪ್ರಥಮತಃ ಹೊರಟದ್ದು ಇದೇ. ಮೊನ್ನೆ ಸಭೆಯಾದ ಟೆಹರಾನಿನಲ್ಲಿ ವಿಚಾರದಾಗಿದ್ದ ಸಮ್ಮೇಳನಕ್ಕೆ ಹೋದುದೇ ಎಂಬ ದಾಗಿ ಗೊತ್ತಾಗಿದೆ.

ಜರ್ಮನಿ ಮೇಲೆ ಮುತ್ತಿಗೆ

ಮೊನ್ನೆ ಮತ್ತೆ ಮಿತ್ರ ವಿಮಾನಗಳು ಜರ್ಮನಿಯನ್ನು ಮುತ್ತಿ ಧ್ವಂಸ ಮಾಡಿಬಂದಿವೆ.

ಸರ್ಕಾರ್‌ರಿಗೆ ಮತ್ತೆ ಮಂತ್ರಿಪಟ್ಟ

ಮೊನ್ನೆ ದೆಹಲಿಯಲ್ಲಿ ಶ್ರೀ ಎನ್. ಆರ್. ಸರ್ಕಾರ್–ವೈಸರಾಯ್ ಭೇಟಿ ನಡೆಯಿತು. ಸರ್ಕಾರ್‌ರವರು ವೈಸರಾಯರ ಮಂತ್ರಿಮಂಡಲಕ್ಕೆ ಮತ್ತೆ ಸೇರುವ ಸೂಚನೆಗಳಿರುವುದಾಗಿ ಒಂದು ವರದಿ ತಿಳಿಸುತ್ತದೆ. ವೈಸರಾಯರ ಮಂತ್ರಿ ಮಂಡಲವು ಇಷ್ಟರಲ್ಲೇ ಪುನರ್ರಚಿತವಾಗಬಹುದೆಂದೂ ಆಹಾರ ಸಚಿವರಾದ ಶ್ರೀ ಶ್ರೀವಾಸ್ತವರವರನ್ನು ಆ ಖಾತೆ ತಪ್ಪಿಸಿ ಬೇರೆ ಖಾತೆಗೆ ಬದಲಾಯಿಸುವ ಸಂಭವವಿರುವುದಾಗಿಯೂ ದೆಹಲಿಯಲ್ಲಿ ಹೇಳಲಾಗುತ್ತಿದೆ.

ಹರ್‌ವರ್ಡ್ ಹಾಳಾಯಿತು

ಬ್ರಿಟಿಷರಿಗೆ ಸೇರಿದ ಹರ್‌ವರ್ಡ್ ಎಂಬ ವಿನಾಶಿಕೆಯೊಂದು ಕಳೆದುಹೋಯಿತೆಂದು ನೌಕಾ ಖಾತೆಯವರು ಪ್ರಕಟಿಸಿದ್ದಾರೆ.

'ಪೀಪಲ್ಸ್ ವಾರ್' ರೇವಣಿ

ಬೊಂಬಾಯಿ ಸರ್ಕಾರದವರು. ಭಾರತ ಕಮ್ಯೂನಿಸ್ಟರ ಪತ್ರಿಕೆಯಾದ "ಪೀಪಲ್ಸ್ ವಾರ್" ಪ್ರಕಟಗಾರರನ್ನು ೧,೫೦೦ ರೂ ರೇವಣಿ ಕೇಳಿದ್ದರು. ಆ ಪತ್ರಿಕೆಯವರು ಹೈಕೋರ್ಟಿಗೆ ಅರ್ಜಿ ಹಾಕಿಕೊಂಡಿದ್ದರು. ಹೈಕೋರ್ಟಿನವರು ಅರ್ಜಿಯನ್ನು ತಳ್ಳಿಹಾಕಿದ್ದಾರೆ.

ಸಾಬಿಯೋ ಮುತ್ತಿಗೆ

ನ್ಯೂಗಿನಿಯ ಹಾನ್ ಪ್ರಸ್ಥಭೂಮಿಯ ಶ್ಲೇಸ ವ ರಿಯೊ ಎಂಬ ಊರನ್ನು ಆಸ್ಟ್ರೇಲಿಯಾ ದಳವು ಮುತ್ತಿಗೆ ಹಾಕಿದೆ. ನ್ಯೂಬ್ರಿಟನ್ನಿನಲ್ಲಿರುವ ರಬಾಲ್ ಎಂಬ ಊರಿನ ಮೇಲೆ ಉಗ್ರರೀತಿಯಲ್ಲಿ ವಿಮಾನ ಧಾಳಿ ನಡೆಸಲಾಗುತ್ತಿದೆ.

ಮುದ್ರೆ ಇಲ್ಲದ ಬಟ್ಟೆ ವಶ

ಕೇಂದ್ರ ಸರ್ಕಾರದ ಸರಬರಾಜು ಖಾತೆಯವರು, ಬಟ್ಟೆ ವ್ಯಾಪಾರಿಗಳ ಬಳಿ ಮುದ್ರೆ ಇಲ್ಲದೆ ಮಾರಾಟವಾಗದೆ ಉಳಿಯುವ ಬಟ್ಟೆಗಳನ್ನು ಡಿಸೆಂಬರ್ ೨೧ ನೇ ತಾ॥ ನಂತರ ವಶ ಪಡಿಸಿಕೊಳ್ಳುವುದಾಗಿ ಪ್ರಕಟಿಸಿರುವರು.

ಆಫ್ರಿಕಾದಿಂದ ಸಹಾಯ

ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರು ಬಂಗಾಳ ಕಷ್ಟ ಪರಿಹಾರಕ್ಕಾಗಿ ಇದುವರೆಗೆ ಒಂದು ಲಕ್ಷ ರೂಪಾಯಿಗಳನ್ನು ಕಳುಹಿಸಿಕೊಟ್ಟಿರುವರು.

ರೂಸ್ವೆಲ್ಟ್ ಪ್ರಾಣ ತೆಗೆವ ಯತ್ನ

೩೮ ವರ್ಷ ವಯಸ್ಸಿನ ಮಾ... ಎಂಬುವನು ವಾಷಿಂಗ್‌ಟನ್ನಿನಲ್ಲಿ ... ರೂಸ್‌ವೆಲ್ಟರ ಭವನಕ್ಕೆ ನುಗ್ಗಿ ಅವರ ಪ್ರಾಣ ತೆಗೆಯಲು ಹೊಂಚು ಹಾಕಿದ್ದರಿಂದ ಅವನನ್ನು ಬಂಧಿಸಲಾಗಿದೆ. ಅವನು ಹುಚ್ಚನೆಂದು ಕಂಡುಬಂದಿರುವುದರಿಂದ ಅವನನ್ನು ಹುಚ್ಚಾಸ್ಪತ್ರೆಗೆ ಸಾಗಿಸುವ ಏರ್ಪಾಡಾಗುತ್ತಿದೆ. ಅವನು ರೂಸ್ವೆಲ್ಟರನ್ನು ಕೊಲ್ಲಬೇಕೆಂಬ ತನ್ನ ಆಕಾಂಕ್ಷೆಯನ್ನು ತನ್ನ ಹೆಂಡತಿಗೆ ಬರೆದ ಕಾಗದದಲ್ಲಿ ಸೂಚಿಸಿದ್ದನೆಂದು ಹೇಳಲಾಗಿದೆ.

ಐರಿಷ್ ನೌಕೆ ಮೇಲಿನ ಧಾಳಿ

ಐರ್ಲೆಂಡಿಗೆ ಸೇರಿದ ನೌಕೆಯೊಂದಕ್ಕೆ ಬಾಂಬಿನ ಹೊಡೆತ ಬಿದ್ದಿತ್ತು. ಅದರ ಸಿಡಿಮದ್ದನ್ನು ಪರೀಕ್ಷಿಸಲಾಗಿ ಅದು ಬ್ರಿಟನ್ನಿನಲ್ಲಿ ತಯಾರಾಗುವಂಥದ್ದೆಂದೂ ಆ ವಿಷಯವನ್ನು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಲಾಗಿ ಅವರು ಗುರುತು ಕಾಣಲಾರದೆ ಆಕಸ್ಮಾತ್ ಬಾಂಬು ಬೀಳಿಸಿದ್ದನ್ನು ತಿಳಿಸಿ ಆ ಬಗ್ಗೆ ತಮ್ಮ ಜವಾಬ್ದಾರಿ ಏನಿಲ್ಲವೆಂದು ಹೇಳಿ ಹೊಡೆತದಿಂದ ನಷ್ಟವಾದವರಿಗೆ ಪರಿಹಾರ ಕೊಡಲಿಚ್ಛಿಸುವರೆಂದೂ ಐರಿಷ್ ಸರ್ಕಾರದವರು ತಿಳಿಸಿದ್ದಾರೆ.

ಬಾಲ್ಕನ್ ಧಾಳಿ ಪ್ರಶ್ನೆ

ಬಾಲ್ಕನಿನಲ್ಲಿ ಧಾಳಿ ಆರಂಭಿಸುವ ಬಗ್ಗೆ ಟೆಹರಾನಿನಲ್ಲಿ ಸೇರಿರುವ ತ್ರಿಮೂರ್ತಿಗಳು ತೀರ್ಮಾನಿಸಿರುವರೆಂದು ತಿಳಿದುಬಂದಿದೆ. ಜರ್ಮನಿ ಮೇಲೆ ನಡೆಯುವ ಪ್ರತಿಕ್ರಮಗಳೂ ಗೊತ್ತುಮಾಡಲ್ಪಟ್ಟಿವೆ.

೪೧ ಮಿತ್ರ ವಿಮಾನ ಪತ್ತೆ ಇಲ್ಲ

ಮೊನ್ನೆ ಬರ್ಲಿನ್ ಮೇಲೆ ಧಾಳಿ ಮಾಡಲು ರಾಯಲ್ ವಿಮಾನ ದಳಗಳು ತಂಡೋಪತಂಡವಾಗಿ ಹೋಗಿದ್ದವು. ಆ ಪೈಕಿ ೪೧ ವಿಮಾನಗಳು ಹಿಂತಿರುಗಿಲ್ಲ.

ಜೆಕ್-ರಷ್ಯಾ ಒಪ್ಪಂದ

ಜೆಕೋಗೂ ರಷ್ಯನರಿಗೂ ನಡೆದ ಸ್ನೇಹ ಬಾಂಧವ್ಯ ಒಪ್ಪಂದದ ಸಾರಾಂಶವನ್ನು ಜೆಕ್ ಸರ್ಕಾರದವರು ಈಗ ಪ್ರಕಟಿಸಿರುವರು. ಅದರಲ್ಲಿ ಎರಡು ರಾಷ್ಟ್ರಗಳೂ ಪರಸ್ಪರ ರಾಜಕೀಯದ ಗೋಜಿಗೆ ಹೋಗದೆ ಸಾರ್ವಭೌಮತ್ವಕ್ಕೆ ಶತ್ರುವಾದ ಜರ್ಮನಿಯೊಡನೆ ಹೋರಾಡಲು ಕಲಿತ ... ತಕ್ಕದೆಂದು ನಮೂದಾಗಿದೆ. ಒಪ್ಪಂದಕ್ಕೆ ಇಪ್ಪತ್ತರಲ್ಲಿ ರುಜು ಆಗಬೇಕಾಗಿದೆ.

ಯೂರೋಪ್ ಯುದ್ಧ-ಕೊನೆಘಟ್ಟ

ಯೂರೋಪ್ ಯುದ್ಧವು ಮುಗಿಯುವ ಘಟ್ಟಕ್ಕೆ ಬಂದಿದೆ ಎಂಬುದಾಗಿ ಅಮೇರಿಕಾ ನೌಕಾ ಖಾತೆ ಸಚಿವ ... ಹೇಳಿದ್ದಾರೆ.

ಕೊಲಂಬಿಯಾದ ನಿರ್ಧಾರ

ಸಂಯುಕ್ತ ರಾಷ್ಟ್ರಗಳ ಒಪ್ಪಂದಕ್ಕೆ ಅಮೇರಿಕದ ಕೊಲಂಬಿಯಾ ಸರ್ಕಾರವೂ ಸಹಿ ಹಾಕ ಬಯಸಿ ಪ್ರಕಟಿಸಿದೆ.

ಧೂಮಕೇತು ದರ್ಶನ

ಜೊಹಾನ್ಸ್‌ಬರ್ಗ್ ... ವರೊಸ್ಟ್ರೊಂ ... ಧೂಮಕೇತುವನ್ನು ಆಕಾಶದಲ್ಲಿ ಕಂಡು ... ಬಂದಿದೆ. ಅದರ ವೇಗ ಮತ್ತು ಪ್ರಕಾಶ ಹೆಚ್ಚುತ್ತಿದೆಯೆಂದೂ ... ನ್ನು ಹೋಲುತ್ತಿಲ್ಲವೆಂದೂ ಹೇಳಲಾಗಿದೆ.

ಹೊಸ ಬೆಳೆ ಮೇಲಿನ ಆಜ್ಞೆ

ರೈತನ ಆವಶ್ಯಕತೆಗೆ ಬೇಕಾದಷ್ಟು ಬಿಟ್ಟು ಉಳಿದದ್ದು ಸರ್ಕಾರಕ್ಕೆ

ಸುಗ್ಗಿಯಲ್ಲಿನ ಆಹಾರ ಶೇಖರಣೆಯನ್ನು ಕುರಿತು ಮೈಸೂರು ಸರ್ಕಾರದ ಪ್ರಕಟಿತ ಅಧಿಕಾರಿಗಳ ಪ್ರಕಟಣೆಯೊಂದು ಈ ರೀತಿ ತಿಳಿಸುತ್ತದೆ –

ರೈತನು ಬೆಳೆಯುವ ಬೆಳೆಯಲ್ಲಿ ಆವನ ಕುಟುಂಬ, ಕೈಕೆಳಗಿನ ಕೆಲಸಗಾರರು, ಕೂಲಿಗಳು ಇವರುಗಳ ಬಗ್ಗೆ ಎಲ್ಲಾ ಖರ್ಚನ್ನೂ ಗಮನಕ್ಕೆ ತೆಗೆದುಕೊಂಡು ೩ ವರ್ಷಕ್ಕೆ ಕಡಿಮೆ ವಯಸ್ಸಿನ ಮಕ್ಕಳು ಹಾಗೂ ಉಳಿದವರಿಗೆ ತಲೆ ಒಂದಕ್ಕೆ ದಿನಕ್ಕೆ ಅರ್ಧ ಸೇರಿನಂತೆ ದವಸವನ್ನು ರೈತನಿಗೆ ಉಳಿಸಿ ಮಿಗುವ ಧಾನ್ಯವನ್ನು ರೈತನಿಗೆ ಅನುಕೂಲವಾದ ದರದಲ್ಲಿ ಸರ್ಕಾರವೇ ಕೊಂಡುಕೊಳ್ಳುವುದು. ಆ ದರವು ಒಂದು ವರ್ಷ ಪೂರ್ತಿ ಜಾರಿಯಲ್ಲಿರುವುದು.

೬ ಎಕರೆ ನೀರಿನ ಅಥವಾ ಬಾವಿ, ಕೆರೆ, ನಾಲೆಗಳಿಂದ ನೀರಾಗುವ ೩ ಎಕರೆ ತರಿ ಜಮೀನುಗಳಿಗಿಂತ ಹೆಚ್ಚಾಗಿರುವವರನ್ನೆಲ್ಲಾ "ದಾಸ್ತಾನು ಇಟ್ಟಿರುವವರು" ಎಂದು ಕರೆಯಲಾಗುವುದು. ಅವರಿಗೆ ಮಾತ್ರವೇ ಈ ಶಾಸನವು ಅನ್ವಯಿಸುವುದು.

ಈ ರೀತಿ ದಾಸ್ತಾನುಗಾರರಿಂದ, ಹೇಳಿಕೆ ಕೊಟ್ಟಿರುವವರು, ಸಂಬಂಧಪಟ್ಟ ಅಧಿಕಾರಿಗಳ ಅಪ್ಪಣೆ ಪಡೆಯದ ಹೊರತು ತಮ್ಮ ಬಳಿಯಿರುವ ಧಾನ್ಯವನ್ನು ಮಾರುವುದನ್ನು ನಿಷೇಧಿಸಲಾಗಿದೆ.

ಹೇಳಿಕೆ ಕೊಡದ ರೈತರೂ ಸಹ ತಾವು ಬೆಳೆದ ದವಸವನ್ನು ನೂರಲು ಅಪೇಕ್ಷಿಸಿದರೆ ಸರ್ಕಾರಕ್ಕಲ್ಲದೆ ಬೇರೆಯವರಿಗೆ ಮಾರಕೂಡದು.

ಸಂಸ್ಥಾನದ ಎಲ್ಲಾ ದವಸವನ್ನೂ ಕೊಳ್ಳುವ ಅಧಿಕಾರ ಸರ್ಕಾರಕ್ಕೆ ಮಾತ್ರವೇ ಇರುತ್ತದೆ. ಸರ್ಕಾರದ ಅಪ್ಪಣೆ ಇಲ್ಲದೆ ಈ ಕೆಲಸಕ್ಕೆ ಕೈಹಾಕುವುದಕ್ಕೆ ಯಾರಿಗೂ ಅವಕಾಶವಿರುವುದಿಲ್ಲ. ಆ ರೀತಿ ವ್ಯಾಪಾರ ಮಾಡುವುದು ಅಕ್ರಮವೆನಿಸುವುದು.

ಹಳ್ಳಿಯ ಡಿಪೋಗಳಲ್ಲಿ ಅಲ್ಲಿಗೆ ಬೇಕಾಗುವಷ್ಟು ಕಾಳನ್ನು ಶೇಖರಿಸಿಡಲಾಗುವುದು. ಉಳಿದ ಕಾಳನ್ನು ಮಾತ್ರ ಬೇರೆಡೆಗೆ ಅವಶ್ಯಕ ಬಿದ್ದಾಗ ಕಂತು ಕಂತುಗಳಲ್ಲಿ ಸಾಗಿಸಲಾಗುವುದು.

ಸರ್ಕಾರದವರು ದವಸವನ್ನು ನಗದು ಹಣ ಕೊಟ್ಟು ಕೊಳ್ಳುವರು. ಈ ನಿಗದಿ ಡಿಸೆಂಬರ್ ೭ ನೇ ತಾ|| ಯಿಂದ ಜಾರಿಗೆ ಬಂದಿರುವುದು.

ಬೀಜಕ್ಕಾಗಿ ಬೇಕಾದ ಪ್ರಕೃತಿಗಳನ್ನು ತಕ್ಕ ಪ್ರಮಾಣದಲ್ಲಿ ಇಟ್ಟುಕೊಳ್ಳಬೇಕೆಂದು ರೈತರಿಗೆ ಅಧಿಕಾರಿಗಳು ಸಲಹೆ ಮಾಡುತ್ತಾರೆ.

ಸೌದೆ ಚೌಕದಲ್ಲಿ ದಳ್ಳಾಳಿಗಳ ಕಾಟ

ದೇವರಾಜ ಮಾರ್ಕೆಟ್ ಬಳಿ ಇರುವ ಸೌದೆ ಚೌಕದಲ್ಲಿ ಲೈಸೆನ್ಸ್ ಇಲ್ಲದ ದಳ್ಳಾಳಿಗಳು ಹಳ್ಳಿಯಿಂದ ನೇರವಾಗಿ ವ್ಯಾಪಾರಕ್ಕೆಂದು ಬಂದ ಗಾಡಿಯವರನ್ನು ತಡೆದು, ಮಧ್ಯಸ್ಥಿಕೆಯಿಂದ ವ್ಯಾಪಾರಮಾಡುತ್ತ ಜನರಿಗೆ ತುಂಬಾ ಮೋಸಮಾಡುತ್ತಲಿದ್ದಾರೆ. ಅದೂ ಅಲ್ಲದೆ ವ್ಯಾಪಾರಕ್ಕೆಂದು ಬಂದ ಜನರನ್ನು ಈ ಲಂಗುಲಗಾಮಿಲ್ಲದ ದಳ್ಳಾಳಿಗಳು ಕೀಳುಮಾತಿನಿಂದ ಬೈದು ಬಹಳ ತುಚ್ಛ ರೀತಿಯಿಂದ ವರ್ತಿಸುವುದನ್ನು ದಿನವೂ ಬೆಳಗಿನ ಹೊತ್ತು ನೋಡಬಹುದು.

ನಿನ್ನೆ ದಿವಸ ಬೆಳಗ್ಗೆ ಒಬ್ಬ ದಳ್ಳಾಳಿಯು ವ್ಯಾಪಾರಕ್ಕೆಂದು ಬಂದವರೊಬ್ಬರನ್ನು ಚೆನ್ನಾಗಿ ಹೊಡೆದುದರಿಂದ ರಕ್ತ ಸುರಿಯುತ್ತಿದ್ದುದನ್ನು ನೋಡಿದೆನು. ಇದರಿಂದ ಜನಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಸ್ವಲ್ಪ ಈ ಕಡೆ ಗಮನ ಕೊಟ್ಟು ತಕ್ಕ ಬಂದೋಬಸ್ತು ಮಾಡುತ್ತಾರೆಂದು ನಂಬಿದ್ದೇನೆ.

ಪಡರೆ ಕೃಷ್ಣಮೂರ್ತಿ

ಸಿಂಧ್‌ನಲ್ಲಿ ದೀಪ ನಿರ್ಬಂಧವಿಲ್ಲ

ಸಿಂಧ್ ಪ್ರಾಂತ್ಯದ ಮನೆ ದೀಪಗಳ ಮೇಲಿನ ನಿರ್ಬಂಧಗಳನ್ನು ಸಡಿಲಿಸಲಾಯಿತು. ಅಲ್ಲಿನ ಎ ಆರ್. ಪಿ. ರಾಯ್ ಮಲ್ಲಿಕ್ಯ ಹೆಚ್ಚು ಸಿಬ್ಬಂದಿಯನ್ನು ತೆಗೆದುಹಾಕಿರುವರು. ಯುದ್ಧ ಸಂಸ್ಥಿತಿ ಉತ್ತಮವಾಗಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಇಂಡಿಯಾ ತೊಂದರೆಗೆ ಯುದ್ಧವೇ ಕಾರಣ

ಆಹಾರದ ಅಭಾವದಿಂದ ಹಿಂದೂಸ್ಥಾನವು ಅತ್ಯಂತವಾಗಿ ತೊಂದರೆಗೊಳಗಾಗಿದೆ. ಯುದ್ಧದಿಂದುಂಟಾದ ಆಹಾರದ ಅಭಾವವೇ ಇದಕ್ಕೆ ಕಾರಣ. ನಾವೆಲ್ಲರೂ ಭಾರತಕ್ಕೆ ಸಹಾಯಭೂತರನ್ನು ನೀಡಬೇಕು ಎಂಬುದಾಗಿ ಮಿತ್ರ ಪುನರ್ರಚನಾ ಸಮಿತಿಯ ಉಪಕಾರ್ಯದರ್ಶಿಗಳಾದ ಮಿ|| ಅಕ್ಸಿಸ್ಕರವರು ಆ ಸಮಿತಿಯ ಅಂತ್ಯದಲ್ಲಿ ಹೇಳಿದರು.

ಗಿಗೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಈ ರೀತಿ ಕಾರ್ಯಕ್ರಮಗಳನ್ನು ಕೈಗೊಂಡಿರುವುದರಿಂದ ಬ್ಲಾಕ್ ಮಾರ್ಕೆಟ್‌ಗೂ ಪದಾರ್ಥಗಳು ಹೊರಗಡೆ ಕಳ್ಳತನದಿಂದ ಸಾಗಿ ಹೋಗುವುದಕ್ಕೂ ಅವಕಾಶವಿರುವುದು ತೀರ ಕಡಿಮೆಯಾಗುವುದು. ಅಲ್ಲದೆ ಸರ್ಕಾರದವರ ಬಳಿಯಲ್ಲಿ ಬೇಕಾದಷ್ಟು ದವಸಧಾನ್ಯಗಳು ಇರುವುದರಿಂದ ಸಂಸ್ಥಾನದಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆಯು ಒಂದು ಮಿತಿಯಲ್ಲಿರುವುದಕ್ಕೆ ಅನುಕೂಲವಾಗಿರುವುದೆಂದು ಸರ್ಕಾರದವರು ಭಾವಿಸಿದ್ದಾರೆ.

ರೇಷನಿಂಗಿನಲ್ಲಿ ಮುಂದಾಲೋಚನೆ

ರೇಷನಿಂಗ್ ಕ್ರಮವು ಬಡವರಿಗೆ ಆಹಾರ ದೊರಕುವುದಕ್ಕೇ ಹೊರತು ಅನನುಕೂಲ ಸೃಷ್ಟಿಗೋಸ್ಕರ ಅಲ್ಲ. ಆದ್ದರಿಂದ ಮೈಸೂರು ನಗರದಲ್ಲಿ ರೇಷನಿಂಗ್ ಜಾರಿಗೆ ತರುವ ಮುಂಚೆ ಕೆಲವು ವಿಷಯಗಳಿಗೆ ದಯವಿಟ್ಟು ಗಮನ ಕೊಡಬೇಕಾಗಿದೆ.

1. ಅಕ್ಕಿಯನ್ನು ಇಸಂ 1ಕ್ಕೆ ದಿನಕ್ಕೆ 1½ ಪಾವಿಗಿಂತ ಕಡಿಮೆ ಇಲ್ಲದೆ ಕೊಡಬೇಕು. ಅಥವಾ 1 ಪಾವು ಅಕ್ಕಿ ಮತ್ತು 1 ಪಾವು ರಾಗಿ ಆದರೂ ಕೊಡಬೇಕು. ಇಲ್ಲವಾದರೆ ಬ್ಲಾಕ್ ಮಾರ್ಕೆಟ್ ತಪ್ಪುವುದಿಲ್ಲ ಮತ್ತು ಬಡವರಿಗೆ ಬಹು ಕಷ್ಟ.

2. ಈಗ ಸರ್ಕಾರ ಡಿಪೋಗಳಲ್ಲಿ ಬಡವರಿಗೂ ಮಧ್ಯಮ ತರಗತಿಯವರಿಗೂ ಕೊಡುತ್ತಿರುವ ಅಕ್ಕಿ ಸುಗ್ರಾಹ್ಯ ತೃಪ್ತಿಕರವಾಗಿಲ್ಲ. ೬ ಸೇರು ಅಕ್ಕಿಯನ್ನು ತಿನ್ನುವುದಕ್ಕೆ ಅರ್ಹವಾಗುವಷ್ಟು ಮಟ್ಟಿಗೆ ತಟ್ಟಿದರೆ 1½ ಪಾವು ತಪ್ಪುವುದು, 1 ಪಾವು ನುಚ್ಚು ¼ ಪಾವು ಧೂಳು ಬರುತ್ತವೆ. ಕಟ್ಟಿದರೆ ಉಪಯೋಗಿಸುವುದಕ್ಕಾಗುವುದಿಲ್ಲ. ಬಾಯಿಯಲ್ಲಿ ಹಾಕಿಕೊಳ್ಳುವ ಪ್ರತಿ ತುತ್ತಿಗೂ ಒಂದಾದರೂ ಭತ್ತ ಸಿಗುತ್ತದೆ. ರೇಷನಿಂಗ್ ಇಲಾಖೆಯವರು ಇನ್ನು ಮುಂದೆ ಕೊಡುವ ಕೊಡುವ ಅಕ್ಕಿಯನ್ನು ತಿನ್ನುವುದಕ್ಕೆ ಅರ್ಹವಾಗಿರುವಷ್ಟು ಪಾಲಿಷ್ ಮಾಡದೆ ಕೊಟ್ಟರೆ, ಜನಸ್ತೋಮಕ್ಕೆ ಊಟವು ಅಂದವಾಗುತ್ತದೆ.

3. ಬಡವರ ಮನೆಗಳಲ್ಲಿ ಅಡಿಗೆಯವರಿರುವುದಿಲ್ಲ. ಗಂಡಸರಿಗೂ ಮಕ್ಕಳಿಗೂ ಹೊಟ್ಟೆತುಂಬ ಊಟಕೊಟ್ಟರೆ, ಅಡಿಗೆ ಮಾಡಿದ ಹೆಂಗಸರಿಗೆ ಮುಸುರೆ ಪಾತ್ರೆ ಮಾತ್ರ ಉಳಿಯುತ್ತದೆ. ಅನೇಕ ಪತಿವ್ರತೆಯರ ಆತ್ಮಹತ್ಯೆಯಾಗುತ್ತದೆ.

4. ಹೋಟೆಲುಗಳಲ್ಲಿ ವ್ಯಾಪಾರ ಹೆಚ್ಚುತ್ತದೆ. ದುಡ್ಡಿರುವವರು ಹೊಟ್ಟೆ ತುಂಬ ತಿಂಡಿಯನ್ನಾದರೂ ತಿನ್ನಲು ಅವಕಾಶವಿದೆ.

5. ಹಿಂದೆ ಬಹುಷ್ಟು ಹಗ್ಗ ಗದೇವನ ಕೋಟೆ ಯಾಗಿಯಲ್ಲಿ ಕೇಜಿಂಗ್ 1 ಪಾವನ್ನು ಮಣ್ಣಾ ಬರುತ್ತಿತ್ತು. ಬಂದುಕೊಂಡದ್ದು ಮತ್ತೆ ಕಡಿಯುತ್ತಿತ್ತು. ಇಂಥ ರಾಗಿಯನ್ನು ಕೊಡಬಾರದು.

6. ಸರ್ಕಾರದವರು ಬೆಲ್ಲವನ್ನು ಹತೋಟಿ ದರಕ್ಕೆ ಎಲ್ಲಾ ಕಡೆಗಳಲ್ಲಿಯೂ ಸಿಕ್ಕುವಂತೆ ಏರ್ಪಾಡು ಮಾಡಬೇಕು. ಅಗಸ್ತ್ಯರಿಗೆ ಹೆಚ್ಚು ಕಾಫಿಯಿರುವುದಿಲ್ಲ. ಬೆಲ್ಲವನ್ನು ಕರಿಸಲು ಧಾರಾಳವಾಗಿ ಅಪ್ಪಣೆ ಕೊಡಬೇಕು.

7. ವಿದ್ಯಾರ್ಥಿಗಳಿಗೆ ಪರೀಕ್ಷಾ ಕಾಲ ಸಮೀಪಿಸುತ್ತಿದೆ. ಓದಲು ದೀಪಕ್ಕೆ ಎಣ್ಣೆ ಸಾಲದೆ ಎಲೆಕ್ಟ್ರಿಕ್ ದೀಪವಿಲ್ಲದ ಮನೆಗಳ ಪ್ರತಿಭಾವಂತ ವಿದ್ಯಾರ್ಥಿಗಳ ಸಲುವಾಗಿ ಅಂಥ ಮನೆಗಳಿಗೆ ಕಡೇ ಪಕ್ಷ ತಿಂಗಳಿಗೆ ನಾಲ್ಕು ಬಾಟಲ್‌ಗಳ ವರೆಗಾದರೂ ಸೀಮೆಯೆಣ್ಣೆಯನ್ನು ಹೆಚ್ಚಾಗಿ ಕೊಡಬೇಕು. ಇಲ್ಲವಾದರೆ ಬಹು ಕಷ್ಟವಾಗುತ್ತದೆ.

ಕೆ. ಎಸ್. ಎಂ.

ಸ್ಟಾಲಿನೊ ಆಕ್ರಮಣ

ಡಟಲಿ ರಣಕ್ಷೇತ್ರದಲ್ಲಿ ಸ್ಟಾಲಿನೊ ಎಂಬುದನ್ನು ಬ್ರಿಟಿಷ್ ೮ ನೇ ಸೇನೆ ಆಕ್ರಮಿಸಿಕೊಂಡಿತೆಂದು ಸುದ್ದಿ ಬಂದಿದೆ.

ಓಟಿಂಗ್ ನಿಂತ ಪ್ರಸಂಗ

ನಿನ್ನೆ ಬೆಂಗಳೂರು ಪೌರ ಸಭಾ ಚುನಾವಣೆ ಓಟಿಂಗ್ ನಡೆಯುತ್ತಿದ್ದಾಗ ನಗರದ ೫ ನೇ ವಿಭಾಗದಲ್ಲಿ ಪೋಲಿಂಗ್ ಭವನದ ಹತ್ತಿರ ಜನರ ನುಗ್ಗಾಟ ಹೆಚ್ಚಾಗಿ ಗಲಭೆ ಸಂಭವಿಸುವ ಸೂಚನೆಗಳಿದ್ದುದರಿಂದ ಜಿಲ್ಲಾ ಮ್ಯಾಜಿಸ್ಟ್ರೇಟರು ಓಟುತೆಗೆದುಕೊಳ್ಳುವುದನ್ನು ನಿಲ್ಲಿಸಿ ನ್ಯಾಯಾಂಗ ಸಚಿವರಿಗೆ ಸುದ್ದಿ ಕಳುಹಿದರೆಂದು ಒಂದು ವರದಿ ತಿಳಿಸುತ್ತದೆ.

೪|| ಸಾವಿರ ರೂ. ಚಿಲ್ಲರೆ

ಚಿತ್ರದುರ್ಗದಿಂದ ದಾವಣಗೆರೆಗೆ ಕಳೆದ ತಿಂಗಳು ೨೮ ನೇ ತಾ|| ಶ್ರೀ ಸಣಕೆರೆ ಚನ್ನಬಸಪ್ಪನವರು ನಾಲ್ಕೂವರೆ ಸಾವಿರ ರೂಪಾಯಿಗಳ ಚಿಲ್ಲರೆ ನಾಣ್ಯವನ್ನು ಮೋಟಾರಿನಲ್ಲಿಟ್ಟುಕೊಂಡು ಸಾಗಿಸುತ್ತಿದ್ದಾಗ ಪೋಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

ಶವವನ್ನು ನದಿಗೆ ಬಿಸಾಡಬೇಡಿ

ನಾಗಮಂಗಲ ತಾಲ್ಲೂಕು ನಾಗಲ್ಲಪುರ ದಿಕ್ಕೆ ಹೋಬಳಿಗೆ ಸೇರಿದ ಅನೇಕ ಗ್ರಾಮಗಳಲ್ಲಿ ಕಾಲರಾ ಉಪದ್ರವವಿರುವುದರಿಂದ ಸಮೀಪವಾಗಿರುವ ಹೇಮಾವತಿ ನದಿಗೆ ಹೆಣಗಳನ್ನು ಎಸೆಯಬಾರದೆಂದೂ, ಆ ನದಿಯಲ್ಲಿ ಬಟ್ಟೆ ಒಗೆಯಬಾರದೆಂದೂ ತುಮಕೂರು ಜಿಲ್ಲಾ ನ್ಯಾಯಾಧೀಶರು ಆಜ್ಞೆ ಹೊರಡಿಸಿದ್ದಾರೆ.

ನಿಮ್ಮನ್ನು ನೀವು ತಿದ್ದಿಕೊಳ್ಳಿ

ಹಿಂದೂಸ್ಥಾನದಲ್ಲಿ ಕ್ರೈಸ್ತ ಧರ್ಮವನ್ನು ಪ್ರಚಾರ ಮಾಡಬೇಕೆಂದು ವ್ಯಾಟಿಕನ್ ಪತ್ರಿಕೆಯು ಬರೆದಿರುವುದನ್ನು ಶ್ರೀ ಸಾವರ್ಕರರು ಟೀಕಿಸಿ, ವ್ಯಾಟಿಕನ್ ಮುಖಂಡರು ಕ್ರೈಸ್ತ ಧರ್ಮ ಜ್ಯೋತಿಗೆ ಯೂರೋಪಿನಲ್ಲಿ ಪುರಸ್ಕಾರ ದೊರೆಯುವಂತೆ ಮೊದಲು ಏರ್ಪಡಿಸಲಿ ಎಂದು ಹೇಳಿರುವರು.

ಕೇಂದ್ರ ಶಾಸನ ಸಭೆ

ಕೇಂದ್ರ ಶಾಸನ ಸಭೆಯು ಮುಂದಿನ ಅಧಿವೇಶನವು ಗಣಿಗಳ ನೇ ಫೆಬ್ರವರಿ ೭ ನೇ ತಾ|| ಪ್ರಾರಂಭವಾಗುವುದೆಂದು ಪ್ರಕಟಣೆ ಹೊರಟಿದೆ.

ಹಿಂದೂ ಸಭಾಧ್ಯಕ್ಷತೆ

ಅಖಿಲ ಭಾರತ ಹಿಂದೂ ಮಹಾಸಭಾ ಧ್ಯಕ್ಷ ಪೀಠಕ್ಕೆ ಮುಂದಿನ ವರ್ಷವೂ ಶ್ರೀ ಸಾವರ್ಕರ್‌ರವರೇ ಬರಬೇಕೆಂದು ಇದುವರೆಗೆ ೧೧ ಪ್ರಾಂತ್ಯಗಳ ಹಿಂದೂ ಪ್ರತಿನಿಧಿಗಳು ಸೂಚನೆ ಕೊಟ್ಟಿರುವರು.

ನೌಕಾ ಬಗ್ಗೆ ಪ್ರಚಾರ

ಭಾರತ ನೌಕಾ ಪಡೆ ಬಗ್ಗೆ ಪ್ರಚಾರ ನಡೆಸಲು ಶ್ರೀ ಚೌಧುರಿಯವರ ಮುಖಂಡತ್ವದಲ್ಲಿ ಭಾರತ ನೌಕಾ ಸೌಹಾರ್ದ ಗೋಷ್ಠಿಯೊಂದು ಅಮೆರಿಕಾ ದೇಶವನ್ನು ತಲುಪಿ ಅಲ್ಲಿ ಸಂಚಾರ ಮಾಡುತ್ತಿದೆ.

೫ ನಿಮಿಷಕ್ಕೊಂದು ವಿಮಾನ

ಕಳೆದ ತಿಂಗಳು ಅಮೆರಿಕದಲ್ಲಿ ವಿಮಾನ ನಿರ್ಮಾಣ ಕಾರ್ಯದ ಉನ್ನತ ಶಿಖರವನ್ನು ಮುಟ್ಟಿತು. ೫ ನಿಮಿಷಕ್ಕೊಂದರಂತೆ ೧ ಸಾವಿರ ಬಾಂಬರ್ ವಿಮಾನಗಳನ್ನೂ ೫೭೫೫ ಇತರ ಬಗೆ ವಿಮಾನಗಳನ್ನೂ ಆ ತಿಂಗಳಲ್ಲಿ ತಯಾರು ಮಾಡಲಾಯಿತೆಂದು ತಿಳಿದುಬಂದಿದೆ.

ಸ್ತ್ರೀಯರ ಸೌಕರ್ಯಕ್ಕಾಗಿ

ನಂ ೧ ಗಂಗಾಧರ ರಾವ್ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ.

ಬನ್ನೀ ಉಪಯೋಗಿಸಿ.

ಡಿ. ಪುಟ್ಟೆಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂಚನೆ:— ಬೆಲ್ಲ, ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆಪೇಟೆ ಪೋಸ್ಟ್ ಆಫೀಸಿನಲ್ಲಿ ಅಸ್ಸಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತದೆ.

Edited, printed and published by A. K. Nagarajan, at the Sadhvi Press, D.Subbiah Road, Mysore.

WEEKLY EDITION

ಸಂಪುಟ ೮] ಸೋಮವಾರ ೬--೧೨--೪೩ [ಸಂಚಿಕೆ ೬

ಕಲ್ಕತ್ತಾ ಮೇಲೆ ಹಗಲಿನಲ್ಲಿ ಶತ್ರು ಧಾಳಿ

ಪಶ್ಚಿಮ ಯೂರೋಪಿನಲ್ಲಿ ದ್ವಿತೀಯ ರಣರಂಗದ ಆರಂಭ

ಅಭಿನಯ ಸ್ಪರ್ಧೆ

ಸ್ವ ಸು] ಬೆಂಗಳೂರು ೬

ಕನ್ನಡ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ್ದ ಅಭಿನಯ ಮತ್ತು ಆಶುಭಾಷಣ ಸ್ಪರ್ಧೆಗಳು ನೆನ್ನೆ ಬೆಳಗ್ಗೆ ಮತ್ತು ಸಂಜೆ ಪರಿಷನ್ಮಂದಿರದಲ್ಲಿ ಡಾ|| ಟಿ. ಎ. ನಟೇಶ ಮೊದಲಿಯಾರ್ ಮತ್ತು ಶ್ರೀನಿವಾಸ್ ಎ ವೆಂಕೋಟರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಅಭಿನಯ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನವು ಬೆಂಗಳೂರು ಇಂಟರ್‌ಮೀಡಿಯಟ್ ಕಾಲೇಜ್ ಅಸೋಸಿಯೇಷನ್ನಿಗೂ, ದ್ವಿತೀಯ ಬಹುಮಾನವು ಸೆಂಟ್ರಲ್ ಕಾಲೇಜಿಗೂ, ತೃತೀಯ ಬಹುಮಾನ ಮೈಸೂರು ವಿ ವಿ ಸಂಘದವರಿಗೂ ಮತ್ತು ಮಹಾರಾಣೀಸ್ ಇಂಟರ್ ಕಾಲೇಜಿಗೂ ಕೊಡಲಾಯಿತು. ಆಶು ಭಾಷಣ ಸ್ಪರ್ಧೆಯಲ್ಲಿ ಮೊದಲನೇ ಬಹುಮಾನವು ವಿ ವಿ. ಸಂಘ ಮೈಸೂರು, ಎರಡನೇ ಬಹುಮಾನ ಇಂಟರ್‌ಮೀಡಿಯೆಟ್ ಕಾಲೇಜ್, ಬೆಂಗಳೂರು, ತೃತೀಯ ಬಹುಮಾನ ಸೆಂಟ್ರಲ್ ಕಾಲೇಜಿಗೂ ದೊರಲಾಯಿತು.

ಕಲ್ಕತ್ತಾ ಮೇಲೆ ಬಾಂಬು

ನಿನ್ನೆ ಭಾನುವಾರ ಜಪಾನಿ ವಿಮಾನಗಳ ತಂಡವೊಂದು ಕಲ್ಕತ್ತಾ ನಗರವನ್ನು ಮುತ್ತಿ ಅನೇಕ ಬಾಂಬುಗಳನ್ನು ನಗರದ ಮೇಲೆ ಕೆಡವಿತು. ಸಾಧಾರಣ ನಷ್ಟ ಸಂಭವಿಸಿದೆ ಜಲ ತಿಳಿವರು ಸೂಚಿತಕ್ಕೆ ತುತ್ತಾಗಿರುವರು. ಕಳೆದ ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಕಲ್ಕತ್ತಾ ಮೇಲೆ ಜಪಾನರು ಧಾಳಿ ಪ್ರಯತ್ನ ನಡೆಸಿದ್ದರು ಆದರೆ ಅಗೆಲ್ಲಾ ಅವರು ರಾತ್ರಿ ವೇಳೆಮಾತ್ರ ಬಂದು ಹೋಗುತ್ತಿದ್ದರು. ನಿನ್ನೆ ಜಪರು ಹಗಲುಹೊತ್ತಿನಲ್ಲೇ ಧಾಳಿನಡೆಸಿದರು ಶತ್ರುಗಳು ಕಲ್ಕತ್ತಾ ನಗರದ ಮೇಲೆ ಈ ರೀತಿ ಹಗಲಿನಲ್ಲಿ ಧಾಳಿನಡೆಸಿರುವುದು ಇದೆ ಪ್ರಥಮ.

ಕ್ಷಾಮದಿಂದ ೫೦ ಸಾವಿರ ಮಂದಿ ಮರಣ

ಬಂಗಾಳದ ಮುನ್ಸಿಗಂಜ್ ಸಬ್ ಡಿವಿಜನ್ನಿನಲ್ಲಿ ಹುಟ್ಟಿಕೊಳ್ಳದೆ ಮತ್ತು ವ್ಯಾಧಿಯಾ ರೋಗದಿಂದ ಇದುವರೆಗೆ ೫೦ ಸಾವಿರ ಮಂದಿ ಪ್ರಾಣ ಬಿಟ್ಟಿರುವರೆಂದು ಹೇಳಲಾಗಿದೆ

ಮಂತ್ರಿ ಮಂಡಲಕ್ಕೆ-ಮುನ್ಷಿ

ಶ್ರೀ ಕೆ. ಎಂ. ಮುನ್ಷಿ ಮತ್ತು ಶ್ರೀ ಎನ್ ಆರ್ ಸರ್ಕಾರ್ ಇವರುಗಳನ್ನು ವೈಸರಾಯರ ಮಂತ್ರಿಮಂಡಲಕ್ಕೆ ರಾಣಿ ಸಂಸ್ಥಾನ ನಡೆಯುತ್ತದಾದ ಕಾಲಕ್ಕೆ ಇವರಿಬ್ಬರನ್ನು ಉಪಯೋಗಿಸಿಕೊಳ್ಳುವ ಉದ್ದೇಶವಿರುವುದಾಗಿಯೂ ಬಿಹಾರಿ ರಾಜಕೀಯ ಆವರಣದಲ್ಲಿ ಹೇಳಲಾಗಿದೆ.

ಪಶ್ಚಿಮ ಯೂರೋಪಿನಲ್ಲಿ ದ್ವಿತೀಯ ರಣರಂಗ

ಟೆಹರಾನ್‌ನಲ್ಲಿ ನಡೆದ ರೂಸ್ವೆಲ್ಟ್, ಚರ್ಚಿಲ್ ಮತ್ತು ಸ್ಟಾಲಿನ್‌ರವರ ಪರಿಷತ್ತಿನಲ್ಲಿ ದ್ವಿತೀಯ ಮತ್ತು ತೃತೀಯ ರಣರಂಗಗಳನ್ನು ತೆರೆಯಲು ತಕ್ಕ ಹಂಚಿಕೆಯ ಬಗ್ಗೆ ನಿರ್ಧಾರಕ್ಕೆ ಬರಲಾಯಿತೆಂದು ಹೇಳಲಾಗಿದೆ.

ಬೇಸಿಗೆ ಕಾಲ ಪ್ರಾರಂಭವಾಗುವವರೆಗೆ ಯೂರೋಪಿನ ಮೇಲೆ ಮಿತ್ರರು ಭೂ ಮತ್ತು ಆಕಾಶದಿಂದ ತಮ್ಮ ಬಲವಾದ ಶಕ್ತಿಯನ್ನು ಪ್ರಾರಂಭಿಸುವರು. ಅಮೇರಿಕನ ಸೈನ್ಯವು ದ್ವಿತೀಯ ರಣರಂಗವನ್ನು ಪಶ್ಚಿಮ ಯೂರೋಪಿನಲ್ಲಿ ಆರಂಭಿಸುವರು. ಇದಲ್ಲದೆ ಮಧ್ಯ ಪ್ರಾಚ್ಯದಲ್ಲೂ ಮತ್ತೊಂದು ಆರಂಭಿಸಲು ಹಂಚಿಕೆ ನಡೆಸಲಾಗಿದೆ. ಬಾಲ್ಕನ್‌ನಿಂದ ಬ್ರಿಟಿಷ್ ಮತ್ತು ಅಮೇರಿಕನ್ ಸೈನ್ಯಗಳು ರಷ್ಯನ್ನರೊಡನೆ ಸಹಕರಿಸುವರು. ರಷ್ಯನ್ನರು ಪೂರ್ವದ ಕಡೆ ನುಗ್ಗುವಾಗ ಪಶ್ಚಿಮ ಸೈನ್ಯವು ಯೂರೋಪಿನ ಮೇಲೆ ಬೀಳುವರು. ಇದರಿಂದ ಜರ್ಮನಿಯ ಉಭಯ ಸಂಕಟಕ್ಕೆ ಈಡಾಗುವುದು

ಲೇಪ್‌ಜಿಕ್ ಮೇಲೆ ಬಾಂಬುಗಳ ಸುರಿಮಳೆ

ಜರ್ಮನಿಯ ಅತ್ಯಂತ ಕೈಗಾರಿಕೆ ಕೇಂದ್ರವಾದ ಲೇಪ್‌ಜಿಗ್ ಮೇಲೆ ಬ್ರಿಟಿಷ್ ವಿಮಾನಗಳು ಉಗ್ರ ಧಾಳಿ ನಡೆಸಿ ೧,೫೦೦ ಟನ್ ಬಾಂಬುಗಳನ್ನು ಸುರಿಸಿದುವು. ೨೪ ಮಿತ್ರ ವಿಮಾನಗಳು ವಾಪಸು ಬರಲಿಲ್ಲ

ರಷ್ಯನರ ಮುಂದೋಟ

ಬೀಲ ರಷ್ಯಾದಿಂದ ಜರ್ಮನರನ್ನು ಸಂಪೂರ್ಣವಾಗಿ ಓಡಿಸಲು ರಷ್ಯ ಸೈನ್ಯವು ಮುನ್ನುಗ್ಗುತ್ತಿದೆ. ಜೋಲೋಬಿನ್ ಪ್ರದೇಶದಲ್ಲಿ ಜರ್ಮನರ ಪ್ರತಿಭಟನೆಯು ಸಂಪೂರ್ಣವಾಗಿ ನಿಂತಿದೆ

ಶಾಂತಿ ಯತ್ನ

ಲಿಸ್ಬನ್ ಪಟ್ಟಣಕ್ಕೆ ವಾನ್‌ಪ್ಯಾಪೆನ್ ಶಾಂತಿ ಸಂಧಾನ ಪ್ರಯತ್ನಗಳಿಗಾಗಿ ಬಂದು ಸೇರಿದರೆಂದು ವರದಿಯಾಗಿದೆ. ಈಗಿನ ಯುದ್ಧಗತಿಯನ್ನು ಗಮನಿಸಿ ಶೀಘ್ರದಲ್ಲೇ ಯೂರೋಪಿನ ಭವಿಷ್ಯತ್ತಿನ ಬಗೆಗಳನ್ನು ನಿರ್ಧರಿಸಲು ಸಂಧಾನ ನಡೆಯುವುದಾಗಿ ಲಿಸ್ಬನ್ ಪಟ್ಟಣದಲ್ಲಿ ಅಭಿಪ್ರಾಯಪಡಲಾಗಿದೆ

ಟರ್ಕಿ ಅಧ್ಯಕ್ಷರ ಮತ್ತು ರೂಸ್ವೆಲ್ಟರ ಭೇಟಿ

ಟರ್ಕಿ ಅಧ್ಯಕ್ಷರಾದ ಇಸ್ಮೆಟ್ ಇನ್ನೊನೂರವರು ಪ್ರೆ|| ರೂಸ್‌ವೆಲ್ಟ್ ಮತ್ತು ಚರ್ಚಿಲ್‌ರವರನ್ನು ಭೇಟಿ ಮಾಡಲು ಕೈರೋವಿಗೆ ಪ್ರಯಾಣ ಮಾಡಿದ್ದಾರೆಂದು ಜರ್ಮನ್ ವಾರ್ತಾ ಸಂಸ್ಥೆ ವರದಿ ಮಾಡಿದೆ. ಆದರೆ ಈ ಸುದ್ದಿಯು ಸ್ಥಿರಪಟ್ಟಿಲ್ಲವೆಂದು ರಾಯಿಟರ್ ಸಂಸ್ಥೆ ತಿಳಿಸಿದೆ.

ಮಾನವ ಬಲ ಕುಗ್ಗಿತೆ ?

ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಸರ್ಕಾರಗಳು ರಣವಲಯಗಳಲ್ಲಿ ಹೋರಾಡುತ್ತಿರುವ ತಮ್ಮ ದಳಗಳಿಂದ ಮನುಷ್ಯರನ್ನು ವಾಪಸ್ಸು ಕರೆಸಿಕೊಳ್ಳುವಂಥಾ ಪ್ರಸಂಗ ಒದಗಬಹುದು. ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ಗಳಲ್ಲಿ ಮಾನವ ಬಲ ಕುಗ್ಗಿ ಹೋದಿತೆಂಬಂತೆ ತೋರುತ್ತಿರುವುದೇ ಅದಕ್ಕೆ ಕಾರಣ ಎಂದು ಆ ದೇಶಗಳನ್ನು ಸುತ್ತಿಬಂದ ಸರ್ ವಾಲ್ಟರ್ ಲೈಟನ್ ಹೇಳಿರುವರು

ಬ್ರಿಟನ್ನಿಗೆ ಕಿತ್ತಲೆಹಣ್ಣು

ಇಟಲಿ ಸಮರಕ್ಕೆ ಪ್ರವೇಶಿಸಿದಂದಿನಿಂದೀಚೆಗೆ ಪ್ಯಾಲೆಸ್ಟೈನ್‌ನಿಂದ ಕಿತ್ತಲೆ ಹಣ್ಣುಗಳು ಬ್ರಿಟನ್ನಿಗೆ ಹೋಗುವುದು ನಿಂತು ಹೋಗಿತ್ತು. ಈಗ ಆ ಸರಬರಾಜು ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ.

ಜರ್ಮನ್ ನೋಟಿನ ಪತ್ತೆ

ಪಾಟ್ನಾದ ರೈಲ್ವೆ ಗಾಡಿಯವನೊಬ್ಬನ ಬಳಿ ನೂರು ಮಾರ್ಕಿನ ಜರ್ಮನ್ ನೋಟೊಂದು ಇದ್ದುದನ್ನು ಪತ್ತೆ ಹಚ್ಚಿ ವಶಪಡಿಸಿಕೊಳ್ಳಲಾಗಿದೆ. ಅವನನ್ನು ದಸ್ತಗಿರಿ ಮಾಡಲಾಗಿ ಕೆಲವು ಪೋಲೀಸ್ ನ್ಯಾಯಗಳೂ ಪತ್ತೆಯಾದವು.

ಕಸ್ತೂರಿ ಬಾಯಿಯವರ ಸ್ಥಿತಿ ಕಳವಳ

ಶ್ರೀಮತಿ ಕಸ್ತೂರಿ ಬಾಯ್ ಗಾಂಧಿಯವರ ಶಾರೀರಿಕ ಕಳವಳಕ್ಕೆ ಕಾರಣ ವಾಗಿದೆಯೆಂದೂ, ಅದಕಾರಣ ದೇವದಾಸರವರು ಅವರ ಮಕ್ಕಳಾದ ಶ್ರೀ ದೇವದಾಸ್ ಗಾಂಧಿಯವರಿಗೆ ಪೂನಾದ ಆಗಾಖಾನ್ ಬಂಗಲೆಯಲ್ಲಿ ಭೇಟಿಕೊಡಲು ಅನುಮತಿ ಕೊಟ್ಟಿರುವರೆಂದೂ ತಿಳಿದುಬಂದಿದೆ.

ಬಿಸಿ ಬಿಸಿ ಸುದ್ದಿ

ಬೆಂಗಳೂರು ೬

ಬೆಂಗಳೂರು ಪೌರಸಭಾ ಚುನಾವಣೆ

ಮೊನ್ನೆ ನಡೆದ ಬೆಂಗಳೂರು ಪೌರಸಭಾ ಚುನಾವಣೆಯ ಫಲಿತಾಂಶ ಎಣಿಕೆಯು ಈ ದಿನ ನಡೆಯುತ್ತಿದೆ ಸಂಜೆ ೭ ಗಂಟೆಗೆ ನಲಿತಾಂಶ ಹೊರಬೀಳುವುದು ನೋಡಲು ನೇರ ಸಿಕ್ಕಿರುವ ಸ್ವತಂತ್ರ ಪಕ್ಷದವರಾದ ಶ್ರೀ|| ಎಂ. ವಿ. ವಿಶ್ವೇಶ್ವರಯ್ಯನವರು ಚುನಾವಣೆಯಲ್ಲಿ ಜಯಶೀಲರಾಗುತ್ತಿದ್ದಾರೆ (ಸ್ವ ಸು)

ಪ್ರಭುಗಳ ಪ್ರವಾಸದಲ್ಲಿ ಬದಲಾವಣೆ

ಮೈಸೂರು ೬

ಶ್ರೀಮನ್ ಮಹಾರಾಜರವರು ಈ ತಿಂಗಳು ೧೫ನೇ ತಾರೀಖು ವೈಸೂರು ಜಿಲ್ಲೆಗಳಲ್ಲಿ ಕೈಗೊಂಡಿರುವ ಪ್ರವಾಸ ಕಾರ್ಯಕ್ರಮದಲ್ಲಿ ಸ್ವಲ್ಪ ವ್ಯತ್ಯಾಸ ವಾಗಿರುವುದೆಂದು ತಿಳಿದುಬಂದಿದೆ

ಕೃಷ್ಣರಾಜಪೇಟೆ, ನಾಗಮಂಗಲಗಳ ಕಾರ್ಯಕ್ರಮವು ರದ್ದುಮಾಡಲ್ಪಟ್ಟಿದೆ. ೧೫ ನೇ ತಾ|| ಕೃಷ್ಣರಾಜನಗರಕ್ಕೆ ಭೇಟಿಯೀಯುವರು. ೧೬ ನೇ ತಾ|| ಬದಲಾಗಿ ೧೭ ನೇ ತಾ|| ಪ್ರಭುಗಳವರು ಚಾಮರಾಜನಗರಕ್ಕೆ ದಯಮಾಡಿಸಿ ಆ ದಿನವೇ ಸುವರ್ಣಾವತಿ ನದಿ ನಾಲೆಯ ಆರಂಭೋತ್ಸವವನ್ನು ನೆರವೇರಿಸುವರು

ವಾರ್ಷಿಕೋತ್ಸವ

ಮೈಸೂರು ಬ್ರಾಹ್ಮಣ ಧರ್ಮ ಸಭೆಯ ೩೫ನೆಯ ವಾರ್ಷಿಕಾಧಿವೇಶನವು ನಿನ್ನೆಯ ಸಂಜೆ ಇಲ್ಲಿನ ಸಹೃದಯ ಭವನದಲ್ಲಿ ನಡೆಯಿತು ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷತೆ ವಹಿಸಿದ್ದರು. ಮಾಮೂಲಿನಂತೆ ಕಾರ್ಯಕಲಾಪಗಳು ನಡೆದು ಕಳೆದ ಸಾಲಿನ ಕಾರ್ಯನಿರ್ವಾಹಕ ಮಂಡಲಿಯೇ ಮುಂದಿನ ವರ್ಷವೂ ಸಭೆಯ ಕಾರ್ಯ ಕಲಾಪಗಳನ್ನು ನಡೆಸಬೇಕೆಂದು ತೀರ್ಮಾನವಾಯಿತು.

ರಜತೋತ್ಸವ

ಮೈಸೂರು ಬ್ರಾಹ್ಮಣ ವಿದ್ಯಾರ್ಥಿ ನಿಲಯ ಸಭೆ ರಜತೋತ್ಸವವನ್ನು ಈ ತಿಂಗಳು ೨೬ ನೇ ತಾ|| ಭಾನುವಾರ ಸಹೃದಯ ಭವನದಲ್ಲಿ ನಡೆಸುವುದು. ಜೋಧಪುರದ ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿಯವರು ಅಗ್ರಾಸನವನ್ನು ವಹಿಸುವರು ಸಂಘದ ಕಾರ್ಯದರ್ಶಿಗಳಾದ ಅಯ್ಯಾ ಸ್ವಾಮಿ ನಂಜನಗೂಡು ಶ್ರೀಕಂಠಯ್ಯನವರ ಭಾವಚಿತ್ರವನ್ನು ಅನಾವರಣಮಾಡಲಾಗುವುದು

ಆಹಾರ ಸಮ್ಮೇಳನ

ಸಂಜನಗೂಡು ತಾ|| ಆಹಾರ ಸಮ್ಮೇಳನದ ಆರಂಭೋತ್ಸವವನ್ನು ಸಿದ್ದವ್ವನಹುಂಡಿ ಕೃಷ್ಣರವರು ನೆರವೇರಿಸಿದರು

ಕುಸ್ತಿ ಪಂದ್ಯ

ನಿನ್ನೆ ನೊಡೆದ ಕೆರೆ ಅಂಗಳದಲ್ಲಿ ನಡೆದ ಭಾರಿ ಕುಸ್ತಿಗಳಲ್ಲಿ ಹಾಸನದ ಪೈಲ್ವಾನ್ ಧರ್ಮಸಿಂಗ್‌ರವರು ಕೊಲ್ಲಾಪುರದ ಪೈಲ್ವಾನ್ ಭೀಮ ಪ್ಪನವರನ್ನು ಸೋಲಿಸಿದರು. ಪೈಲ್ವಾನ್ ಕೆಂಪಣ್ಣ ಬಸಪ್ಪ ಮತ್ತು ರಾಮೇಶ್ವರ ನಂಜಪ್ಪ ಇವರ ಕುಸ್ತಿ ಸಮವಾಯಿತು

ವೈದ್ಯ ವಿಜ್ಞಾನ

ಇಲ್ಲಿನ ಶಾಸ್ತ್ರೀಸ್ ಫಾರ್ಮಸಿಯ ಮಾಲೀಕರಾದ ವಾ. ಟಿ. ಕೆ. ಶಾಸ್ತ್ರಿಯವರು ಇದೇ ತಿಂಗಳ ೮ ರಿಂದ 'ವೈದ್ಯ ವಿಜ್ಞಾನ' ವೆಂಬ ಮಾಸಪತ್ರಿಕೆಯನ್ನು ಹೊರಡಿಸಲಿರುವರು.

ಬರ್ಲಿನ್ ಪತ್ರಿಕೆಗಳು ನಿಂತುವು

ಮೊನ್ನೆಯ ರಾಯಲ್ ಏರ್‌ಫೋರ್ಸಿನ ಭಾರಿ ಧಾಳಿ ಪರಿಣಾಮವಾಗಿ ಬರ್ಲಿನ್ನಲ್ಲಿ ಅನೇಕ ಪತ್ರಿಕಾ ಕಛೇರಿಗಳು ಹಾಳಾದುದರಿಂದ ಅಲ್ಲಿನ ಪತ್ರಿಕೆಗಳ ಪ್ರಕಟಣೆ ನಿಲ್ಲಿಸಲಾಯಿತು.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ॥ ೬-೧೨-೪೩ರಿಂದ ೧೨-೧೨-೪೩ರ ವರೆಗೆ

ಮೇಷ . ಈ ವಾರ ನಿಮಗೆ ತೊಂದರೆ ತಪ್ಪದಿರುವುದೆಂದು ತಿಳಿಸಲು ಸಂಕೋಚವಾಗುತ್ತದೆ. ಆರ್ಥಿಕ ಸ್ಥಿತಿ ಚೆನ್ನಾಗಿದ್ದರೂ ಖರ್ಚು ಹೆಚ್ಚು. ವ್ಯಾಪಾರಾದಿಗಳಲ್ಲಿ ತೊಂದರೆ, ಆರೋಗ್ಯ ಮಾನಸಿಕ ಸ್ಥಿತಿ ಅಷ್ಟು ಚೆನ್ನಾಗಿಲ್ಲವಾದರೂ ಶತ್ರುಗಳ ಸಹಾಯದಿಂದ ಬಂದ ತೊಂದರೆಗಳು ದೂರವಾಗುವುವು. ತಾ॥ ೬, ೭ ದ್ರವ್ಯ ಚಿಂತೆ, ನೇತ್ರಪೀಡೆ, ಅಪಮಾನ.

ವೃಷಭ . ಈ ವಾರ ಮೊದಲಿಂದ ಕೊನೆವರೆಗಿನ ದಿನಗಳಂದ ಮನಸ್ಸಿಗೆ ತುಂಬಾ ಬೇಸರದ ಅವಧಿ. ವ್ಯಾಪಾರ, ನೌಕರಿಗಳ ಸ್ಥಿತಿ ವಿಚಿತ್ರವಾಗಬಹುದು. ಆರೋಗ್ಯ ಆರ್ಥಿಕ ಸ್ಥಿತಿ ಸಾಧಾರಣವಾಗಿರುವುವು. ಪ್ರವಾಸದಲ್ಲಿ ಅಕಸ್ಮಾತ ಸಂಭವಿಸಿದ ವ್ಯಾಪಾರದಲ್ಲಿ ಕೈ ಹಾಕಬೇಡಿ. ತಾ॥ ೭, ೮, ೯ ಖರ್ಚು ಹೆಚ್ಚು, ಕಾರ್ಯ ವಿಘ್ನ.

ಮಿಥುನ . ಸಾಂಪತ್ತಿಕ ದೃಷ್ಟಿಯಿಂದ ಈ ವಾರ ತೊಂದರೆ ಹೆಚ್ಚಿದರೂ ದೇವರ ಕೃಪೆಯಿಂದ ಬಂದ ಕಷ್ಟಗಳು ದೂರವಾಗುವುವು. ಆರೋಗ್ಯ ಸ್ವಲ್ಪ ಚಿಂತಾದಾಯಕ. ವ್ಯಾಪಾರ, ಉದ್ಯೋಗಾದಿಗಳಲ್ಲಿ ತೊಂದರೆ, ಪ್ರವಾಸದಲ್ಲಿ ವಿಘ್ನ, ಭಯ. ತಾ॥ ೯, ೧೦, ೧೧ ಸ್ತ್ರೀಯರ ದ್ರವ್ಯಹಾನಿ.

ಕರ್ಕ . ಈಗ ನಿಮಗೆ ಸಂಕಟಕಾಲವಿದ್ದರೂ ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಬದಲಾವಣೆ ಲಾಭವಾಗುವುದು. ಪ್ರವಾಸದಲ್ಲಿ ಸಿದ್ಧಿ. ಆರೋಗ್ಯ, ಸಾಂಪತ್ತಿಕ, ಮಾನಸಿಕ ದೃಷ್ಟಿಯಿಂದ ಉತ್ತಮವಾಗಿದೆ. ಇಷ್ಟದ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು. ತಾ॥ ೬, ೮, ೯ ಅಪ್ರಿಯ ವಾರ್ತೆ, ಹೆಚ್ಚು ವೆಚ್ಚ.

ಸಿಂಹ . ಈ ವಾರ ಆರೋಗ್ಯ ದೃಷ್ಟಿಯಿಂದ ಚೆನ್ನಾಗಿದ್ದರೂ ಆರ್ಥಿಕ, ಮಾನಸಿಕ ಸ್ಥಿತಿಗಳು ಚಿಂತಾಜನಕವಾಗಿರುವುವು. ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಎಚ್ಚರಿಕೆ. ಕೈಕೆಳಗಿನವರನ್ನು ನಂಬಬೇಡಿ. ಪ್ರವಾಸ, ದಾನ ಧರ್ಮಾದಿ ಶುಭಕಾರ್ಯಗಳಲ್ಲಿ ವಿಘ್ನ. ತಾ॥ ೬, ೭ ಖರ್ಚು ಜಾಸ್ತಿ. ಬನ್ಧುಗಳಿಂದ ಕಾರ್ಯದಲ್ಲಿ ವಿಘ್ನ.

ಕನ್ಯಾ . ಕೆಲಸವನ್ನು ಬಿಟ್ಟು ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ನಿಮ್ಮ ಧೈರ್ಯದಿಂದ ಕಾರ್ಯಸಿದ್ಧಿ. ಆರೋಗ್ಯ ಸಾಂಪತ್ತಿಕ ದೃಷ್ಟಿಯಿಂದ ಉತ್ತಮವಾಗಿದೆ. ಮಾನಸಿಕ ತೊಂದರೆ, ಶುಭ ಕಾರ್ಯಗಳಲ್ಲಿ ವಿಘ್ನ. ತಾ॥ ೮, ೯ ವಿನಾ ಕಲಹ.

ತುಲಾ . ಈ ವಾರ ನಿಮ್ಮ ಆರೋಗ್ಯದ ಕಡೆ ಗಮನ ಕೊಡಬೇಕು. ಮಾನಸಿಕ ಸ್ಥಿತಿ ಸರಿಯಾಗಿರಲಾರದು. ಕೆಲಸದ ಭಾರ ಅಧಿಕ. ಅಪವಾದಗಳು ಸಹಿಸಬೇಕು. ಬಂಧುಗಳಿಂದ ಚಿಂತೆ. ಪ್ರವಾಸ, ವ್ಯಾಪಾರ, ಉದ್ಯೋಗ, ನೌಕರಿ ಮತ್ತು ಪ್ರವಾಸಾದಿಗಳಲ್ಲಿ ಉದಾಸೀನತೆ. ಮನೆಯಲ್ಲಿ ಕಲಹ. ತಾ॥ ೯, ೧೦ ಅಪ್ರಿಯ ವಾರ್ತೆ.

ವೃಶ್ಚಿಕ . ಸುಖ್ಯದಿಂದ ದೂರವಾಗಿ ದಾರಿದ್ರ್ಯದಲ್ಲಿರುವಿರಿ. ವ್ಯಾಪಾರ, ಉದ್ಯೋಗ, ನೌಕರಿ ಮತ್ತು ಪ್ರವಾಸಾದಿಗಳಲ್ಲಿ ನಿಮ್ಮ ಸ್ನೇಹಿತರಿಂದ ಮೋಸಹೋಗುವಿರಿ ಎಚ್ಚರಿಕೆ. ಆರೋಗ್ಯ ಆರ್ಥಿಕ ದೃಷ್ಟಿಯಿಂದ ಚೆನ್ನಾಗಿದ್ದರೂ ಖರ್ಚಿನ ಬಾಬು ಹೆಚ್ಚುವುದು. ಮಾನಸಿಕ ಸ್ಥಿತಿ ಕೊಂಚ ಕಷ್ಟದಾಯಕವಾಗಿ ಇರುವುದು. ಶುಭ ಕಾರ್ಯಗಳಲ್ಲಿ ಉದಾಸೀನತೆ. ತಾ॥ ೮, ೯ ಪ್ರಿಯ ಜನರ ವಿಯೋಗ, ಮನೋ ವ್ಯಥೆ.

ಧನುಸ್ಸು . ಈ ವಾರ ನಿಮಗೆ ಬಹಳ ಉತ್ತಮವಾಗಿದೆ. ಆರೋಗ್ಯ ಸಾಂಪತ್ತಿಕ ಸ್ಥಿತಿಗಳು ತುಂಬಾ ಅನುಕೂಲವಾಗಿವೆ. ಯೋಚಿಸಿದ ಕೆಲಸದಲ್ಲಿ ಜಯ. ಮಾನಸಿಕ ಸ್ಥಿತಿ ಚೆನ್ನಾಗಿರುವುದರಿಂದ ಯಾವಾಗಲೂ ಹಸನ್ಮುಖಿಗಳಾಗಿರುವಿರಿ. ವ್ಯಾಪಾರಾದಿಗಳಲ್ಲಿಯೂ, ಪ್ರವಾಸ, ಸ್ತ್ರೀ ಸುಖ ಮುಂತಾದವುಗಳಲ್ಲಿಯೂ ಜಯ. ತಾ॥ ೬, ೧೦ ಖರ್ಚು, ನಿರಾಶಾದಿ.

ಮಕರ . ಮೋಸಹೋಗುವ ಸಂಭವವಿರುವುದರಿಂದ ಎಚ್ಚರಿಕೆಯಾಗಿರಿ. ಎಲ್ಲ ಕೆಲಸದಲ್ಲೂ ಜಾಗರೂಕರಾಗಿರಿ, ಯಾರನ್ನೂ ನಂಬಬೇಡಿ. ವ್ಯಾಪಾರ, ನೌಕರಿ, ದಾನ, ಪ್ರವಾಸ, ಆರೋಗ್ಯ, ಸಾಂಪತ್ತಿಕ, ಮಾನಸಿಕ ಮುಂತಾದ ಎಲ್ಲ ದೃಷ್ಟಿಯಿಂದಲೂ ಈ ವಾರ ಅತ್ಯುತ್ತಮವಾಗಿದೆ. ತಾ॥ ೬, ೯ ಮಾನಸಿಕ ವ್ಯಥೆ.

ಕುಂಭ . ಈ ವಾರ ತಾವು ಅನ್ಯರಿಗೆ ಬಲಿ ಬೀಳದಿರುವುದು ಒಳ್ಳೆಯದು. ಆರೋಗ್ಯ, ಆರ್ಥಿಕ ದೃಷ್ಟಿಯಿಂದ ಉತ್ತಮವಾಗಿದೆ. ಪ್ರವಾಸದಿಂದ ಮಾನಸಿಕ ಚಿಂತೆ, ವ್ಯಾಪಾರ, ಉದ್ಯೋಗಗಳಲ್ಲಿಯೂ ದಾನ ಧರ್ಮಾದಿ ಶುಭ ಕಾರ್ಯಗಳಲ್ಲಿಯೂ ಉದಾಸೀನತೆ. ತಾ॥ ೧೦, ೧೧ ಕಲಹ.

ಮೀನ . ಮನಸ್ಸು ಶಾಂತವಾಗಿಲ್ಲ. ಆರೋಗ್ಯ, ಆರ್ಥಿಕ ಸ್ಥಿತಿಗಳು ಚೆನ್ನಾಗಿರುವುವು. ಮಾನಸಿಕ ತೊಂದರೆ, ವ್ಯಾಪಾರ ಮತ್ತು ಪ್ರವಾಸಾದಿಗಳಲ್ಲಿ ನಿಮ್ಮ ಆಧಿಕ್ಯದಿಂದ ಹಾನಿ. ತಾ॥ ೬, ೧೦ ದ್ರವ್ಯ ಲಾಭ, ಚಿಂತೆ.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮುಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ. ೪೦ ಮಾತ್ರೆಗಳ ಪೆಟ್ಟಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ, 184, ಚೈನಾ ಬಜಾರುರಸ್ತೆ, ಮದರಾಸು

ಏಜೆಂಟರು : ಅಶೋಕಾ ಫಾರ್ಮಸಿ ಚಿಕ್ಕಪೇಟೆ ಸರ್ಕಲ್ ರಸ್ತೆ, ಮೈಸೂರು

ಕಾಗದದ ಚೂರುಗಳೇ ಅಜ್ಞಾತ ಸಂಪತ್ತು !

ಆಧುನಿಕ ಯಂತ್ರಗಳು ಮಾಯಾಜಾಲವನ್ನು ಬೀರುತ್ತಿವೆ. ಕಸವನ್ನೆಲ್ಲಾ ರಸ ಮಾಡಲು ಸಜ್ಜಾಗಿವೆ. ನಿರುಪಯೋಗವಾದ ಕಾಗದವನ್ನು ತೆಗೆದುಕೊಂಡು ಗೋಜಿನ ಎಳೆಗಳನ್ನೆಲ್ಲಾ ತೆಗೆದುಹಾಕಿ ಹೊಸದಾಗಿ ರಟ್ಟನ್ನಾಗಲೀ, ಪುನಃ ಕಾಗದವನ್ನಾಗಲೀ ತಯಾರಿಸುವುದು ಇದು ಕೇವಲ ೬೦ ನಿಮಿಷಗಳಲ್ಲಾಗುವ ವಿಷಯ.

ಈ ವಿಧವಾಗಿ ಪುನರುಜ್ಜೀವನಗೊಳಿಸಿದ ಕಾಗದದ ಒಂದು ಟನ್ನಿನಲ್ಲಿ ಆಗುವ ಪದಾರ್ಥಗಳಾವುವು ?

೧. ೧೦೦ ಆಂಟಿ ಏರ್‌ಕ್ರಾಫ್ಟ್ ೪.೫ರ ಷೆಲ್ ಕಂಟೇನರ್‌ಗಳು

೨. ೬೦೩ ಮಾರ್ಟರ್ ಷೆಲ್ ಕ್ಯಾರಿಯರ್‌ಗಳು.

೩. ೪೨೦ ೬' ಮಾರ್ಟರ್ ಬಾಂಬು ಕ್ಯಾರಿಯರ್‌ಗಳು.

೪. ೫೨೦ ೪೦ ಎಂ ಎಂ. ಗಳ ಷೆಲ್ ಕೇಸುಗಳು.

೫. ೬೦೦ ಬ್ಲಾಂಟ್ ಕಂಟೇನರ್‌ಗಳು

೬. ೧,೬೦೦ ಸಣ್ಣ ಕೊಳವೆಯಾಕಾರದ ಕಂಟೇನರ್‌ಗಳು.

೭. ೨,೫೦೦ ಏರೋ ಕ್ಯಾನ್‌ಗಳ ಪೆಟ್ಟಿಗೆಗಳು.

೮. ೭,೬೦೦ ಗ್ರೆ ಫ್ಯೂಸ್‌ಗಳು

೯. ೯,೦೦೦ ಗಣೆಯೊಳಗೆ ಹಾಕುವ ವಸ್ತು.

೧೦. ೨,೬೦೦ ಟಿ ಎನ್.ಟಿ ವಸ್ತುವನ್ನಿರಿಸುವ ಪೆಟ್ಟಿಗೆಗಳು

೧೧. ೬೦,೦೦೦ ಕತ್ತರಿಸಿದ ಟಾರ್ಜೆಟ್‌ಗಳು.

೧೨. ೪೦,೦೦೦ ೬೦.೩ ಕಾಟ್ರಿಜ್ಜಿನ ಪೆಟ್ಟಿಗೆಗಳು.

೧೩. ೧೧೦,೦೦೦ ಷೆಲ್ ವಾಷರ್‌ಗಳು

೧೪. ೧೬೦,೦೦೦ ಗ್ರೆ ರಾಡ್ ಇಡುವ ಕಾಗದದ ಕೊಳವೆಗಳು

೧೫. ೬೨೨,೦೦೦ ಸಣ್ಣ ಷೆಲ್‌ಗಳಿಗೆ ಹಾಕುವ ಕಾಟ್ರಿಡ್ಜ್ ಕ್ಯಾಪ್ ಗೂಟಗಳು.

೧೬. ೪೮೪,೦೦೦ ಮಾರ್ಟರ್ ಮುಂತಾದ ಬಾಂಬುಗಳಿಗೆ ಹಾಕುವ ವಾಷರ್‌ಗಳು.

ಇದರ ಜೊತೆಗೆ ಪ್ರತಿಯೊಬ್ಬ ಮನೆಯವರೂ ಯುದ್ಧೋದ್ಯಮಕ್ಕಾಗಿ ತಾವು ಬಿಸಾಡುವ ಅನುಪಯೋಗದ ಕಾಗದದ ಚೂರುಗಳನ್ನು ಕೂಡಿಟ್ಟು ಯಥಾಶಕ್ತಿಯಾಗಿ ಸಹಾಯಮಾಡಬಹುದು. ಅದರಂತೆ ಈ ಕೆಳಗಿನ ಪಟ್ಟಿಯನ್ನು ನೋಡಿ :—

ಒಂದು ಕವರಿನಲ್ಲಿ ೫೦ ಕಾಟ್ರಿಡ್ಜ್ ವಾಡ್‌ಗಳಾಗುವುವು.

ಒಂದು ದಿನ ಪತ್ರಿಕೆಯಲ್ಲಿ ೩ ಇನ್ಸೆಂಡಿಯರಿ ಬಾಂಬ್ ಷೆಲ್‌ಗಳ ಕವಚಗಳಾಗುವುವು.

೬ ವಾರ ಪತ್ರಿಕೆಗಳು ೨ ಗ್ರೆ ಫ್ಯೂಸ್‌ಗಳನ್ನು ಮಾಡಲು ಸಹಾಯವಾಗುವುವು.

೬ ಹಳೆಯ ಪುಸ್ತಕಗಳು ಒಂದು ಮಾರ್ಟರ್ ಷೆಲ್ ಕ್ಯಾರಿಯರನ್ನು ಮಾಡಲು ಸಹಾಯವಾಗುವುದು.

೬೦ ದೊಡ್ಡ ಕಾಗದದ ಸಿಗರೇಟ್ ಪೆಟ್ಟಿಗೆಗಳಿಂದ ಒಂದು ಮಿಲಿಟರಿ ಷೆಲ್ ಕಂಟೇನರ್ ತಯಾರಾಗುವುದು

೬ ಹಳೆಯ ಪಲ್ಲಗಳು ಒಂದು ಷೆಲ್ ವಾಷರ್ ಮಾಡಲು ಸಹಾಯವಾಗುವುದು

೧೨ ಹಳೆ ಕಾಗದಗಳು ರೈಫಲ್ ಕಾಟ್ರಿಡ್ಜ್‌ಗಳನ್ನು ಹಾಕುವ ಪೆಟ್ಟಿಗೆಯಾಗುವುದು

ಒಂದು ಬ್ರೆಡ್ ಬಾಕ್ಸ್ ತುಂಬುವ ಪೆಟ್ಟಿಗೆ ೨ ಕತ್ತರಿಸಿದ ಟಾರ್ಗೆಟ್‌ಗಳಾಗುವುದು

೧ ಇನ್ನೂರು ಪೇಜಿನ ಷಾರ್ಟ್ ಹ್ಯಾಂಡ್ ನೋಟ್ ಬುಕ್ಕಿನಿಂದ ಒಂದು ಏರೋ ಕ್ಯಾನಲ್ ಷೆಲ್ ಕಂಟೇನರ್ ತಯಾರಿಸಬಹುದು.

ಮೊಹರಾಲಿ ಹುಷಾರಿಲ್ಲ

ಬೊಂಬಾಯಿನ ನಗರಪತಿ ಶ್ರೀ ಮಹಮ್ಮದಲಿಯವರು ನಾಡಿ ದುರ್ಬಲತೆ ಮತ್ತು ಹೃದಯ ವೇದನೆಯಿಂದ ನರಳುತ್ತಿರುವರು ಉತ್ತಮಗೊಂಡಿದ್ದ ಅವರಿಗೆ ಮತ್ತೆ ಮರುಕಳಿಸಿರುತ್ತದೆ.

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೊಸದಾಗುವುದಲ್ಲದೆ ಅದರ ಚೆಳ್ಳನೆಯ ಬುರುಗು ರೋಮ ರಂಧ್ರಗಳನ್ನೆಲ್ಲಾ ಕೊಳ್ಳು ಮೈಯೊಳಗಿನ ಅಶುದ್ಧಿಯನ್ನೆಲ್ಲಾ ತೆಗೆದುಹಾಕುವುದು. ಇದರ ಮೆತ್ತನೆಯ ಗುಣವೂ, ಸುಗಂಧವೂ ಚರ್ಮವನ್ನು ಕೋಮಲವಾಗಿಸುವುದು.

ಮೈಸೂರು ಸ್ಯಾಂಡಲ್ ಸೋಪ್

ಇಂದಿನ ಕನ್ನಡ ಕವಿತೆ

ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರಿಂದ

ಕವಿ ಸ್ಫೂರ್ತಿ

ಈಗ್ಗೆ ಸುಮಾರು ಮೂವತ್ತು ವರ್ಷಗಳ ಹಿಂದೆ ಮೊದಲಾದ ಕನ್ನಡ ಕವಿತೆ ಈಗ ಗರಿ ಮೂಡಿ ಹಾರಾಡುತ್ತ ತನ್ನ ನೋಟವನ್ನು ವಿಶಾಲಪಡಿಸಿಕೊಳ್ಳುತ್ತ ಒಂದು ನೆಲೆಗೆ ಬಂದು ನಿಂತಿದೆ. ಬೇಕಾದಷ್ಟು ಬಂದಿದೆ. ಓದುವವರೂ ಹೆಚ್ಚುತ್ತಿದ್ದಾರೆ. 'ನೂತನ ಕವಿತೆಯೆಂದು ಕುಂದಿಟ್ಟು ಜರಿಯುವವರು' ಕಡಿಮೆಯಾಗಿದ್ದಾರೆ. ಹತ್ತಾರು ಮಂದಿ ಉತ್ತಮ ಕವಿಗಳಿಂದ ನಮ್ಮ ಬಾಳ್ವೆಗೆ ಹೊಳಪು ಬಂದಿದೆ. ಸಣ್ಣ ಪುಟ್ಟ ಕವಿಗಳಂತೂ ಲೆಕ್ಕವಿಲ್ಲದಷ್ಟು ಮಂದಿ. ಸಂತತವಾದ ಸ್ಫೂರ್ತಿಯಿಂದ ಹಾಡುವವರು ಕೆಲವರು. ಸಮಯ ಸ್ಫೂರ್ತಿಯಿಂದ ಬರೆಯುವವರು ಹಲವರು. ಹೇಗೋ ಒಂದೆರಡು ಪದ್ಯಗಳನ್ನು ಬರೆದು ತೆಪ್ಪಗಿರುವವರು ಬಹು ಮಂದಿ. ಇಂದಿನ ಕವಿತೆಯಲ್ಲಿ ಉತ್ಕೃಷ್ಟವಾದುವು ಕಡಿಮೆಯಾಗಿಯೂ ಎರಡನೆಯ ವರ್ಗದವು ಹೇರಳವಾಗಿಯೂ ಇದ್ದರೆ ಅದು ಸಹಜವೇ. ಇದರಿಂದ ಕವಿತೆಯ ಬೆಳಸು ಒಬ್ಬನ ಅಭ್ಯಾಸಕ್ಕೆ ಅಳವಡದಷ್ಟು ವಿಪುಲವಾಗಿ ಬಿಟ್ಟಿದೆ. ಇಂದು ನಮ್ಮ ಜೀವನದ ಆಶೆ ಆದರ್ಶಗಳೂ ಭಯ ಸಂದೇಹಗಳೂ ನಮ್ಮ ಕವಿಗಳನ್ನು ಹಾಡಿಸುತ್ತಿವೆ. ಇವು ಅತಿ ರಮ್ಯವಾದ ರೀತಿಯಲ್ಲಿ ರೂಪುಗೊಂಡಿವೆ.

ಕವಿಗೆ ಸ್ಫೂರ್ತಿ ಎರಡು ರೀತಿಯಾಗಿ ಬರಬಹುದು: ತನ್ನೊಳಗೆ ಉದಿಸಿ ವಿಕಾಸಗೊಳ್ಳುವ ಭಾವಾವೇಗಗಳೂ, ಆಲೋಚನೆಗಳೂ, ಚಿತ್ರಗಳೂ ಅವನ ನಾಲಿಗೆಯನ್ನು ಕುಣಿಸುತ್ತವೆ. ಸುತ್ತಲಿನ ಪರಿಸ್ಥಿತಿಗಳು ಅವನ ಮನಸ್ಸನ್ನು ಸೆರೆಹಿಡಿದು ಉದ್ರೇಕಗೊಳಿಸಿ ಅವನನ್ನು ನುಡಿಸುತ್ತವೆ. ಇವು ಒಂದರೊಡನೆ ಒಂದು ಬೆರೆತು ಇರುವುದೇ ಹೆಚ್ಚು. ಇದನ್ನು ಗಮನಿಸಿದರೆ ಇಂದು ನಮ್ಮ ಕವಿಗಳು ಮನಸ್ಸಿನಲ್ಲಿ ತುಂಬಿಕೊಂಡಿರುವ ಆವೇಶಗಳು ಅವರಿಗೆ ಹೇಗೆ ಬಂದುವೆಂಬುದನ್ನು ತಿಳಿಯಲು ಸುಲಭವಾಗುತ್ತದೆ. ಸ್ವಯಂ ಸ್ಫೂರ್ತಿಯಿಂದ ಅವರು ಕಂಡಿರುವ ಕನಸುಗಳು ವ್ಯಕ್ತವಾಗುತ್ತವೆ.

ಇಂಗ್ಲೀಷ್‌ನ ನೆರ

ಇಂಗ್ಲೀಷು ಭಾಷಾ ಸಾಹಿತ್ಯಗಳ ಅಭ್ಯಾಸ ನಮಗುಂಟಾದದ್ದು ನಮ್ಮ ನಾಡಿನ ಎಲ್ಲ ಪುನರುಜ್ಜೀವನಕ್ಕೂ ಕಾರಣ. ಅದು ಕತ್ತಲೆಯ ಮನೆಗೆ ಬೆಳಕನ್ನು ತುಂಬಿಸುವ ಕಿಟಕಿಯಾಯಿತು. ಅದರ ಮೂಲಕ ಆ ಸಾಹಿತ್ಯದ ಪರಿಚಯವೊಂದೇ ಅಲ್ಲದೆ ಇತರ ಪಾಶ್ಚಾತ್ಯ ದೇಶಗಳ ಸಾಹಿತ್ಯಗಳೂ ನಮ್ಮ ಕೈಗೆ ಸಿಕ್ಕಿದುವು. ವಿಜ್ಞಾನ ಶಾಸ್ತ್ರಗಳೂ ರಾಜ್ಯತಂತ್ರವೂ ಅರ್ಥಶಾಸ್ತ್ರವೂ ನಮಗೆ ಹೊಸಕಣ್ಣನ್ನು ಕೊಟ್ಟವು. ನಮ್ಮ ದೃಷ್ಟಿ ವಿಶಾಲವಾಯಿತು; ವಿಚಾರಶಕ್ತಿ ಬೆಳೆಯಿತು; ಯಾವುದನ್ನೂ ವಿಮರ್ಶಿಸಿ ಒಳಹೊಕ್ಕು ತಿರುಳನ್ನು ಗ್ರಹಿಸುವ ಸಾಮರ್ಥ್ಯ ಬಲಿಯಿತು. ಚರಿತ್ರೆಯ ವ್ಯಾಸಂಗದಿಂದ ನಮ್ಮಲ್ಲಿ ಚಾರಿತ್ರಕ ದೃಷ್ಟಿ ಉಂಟಾಯಿತು. ನಮ್ಮ ಬದುಕಿಗೂ ಸಾಹಿತ್ಯಕ್ಕೂ ತೀರ ಬೇರೆಯಾದ ಈ ಇಂಗ್ಲೀಷು ಸಂಸ್ಕೃತಿಯ ಸಂಘರ್ಷ ನಮ್ಮ ಏಳಿಗೆಯ ದಾರಿಯನ್ನು ಕಾಣಿಸಿತು. ಅದರ ಪ್ರಭಾವ ನಮ್ಮ ಬದುಕಿನ ಪ್ರತಿಯೊಂದು ನಡವಳಿಕೆಯಲ್ಲಿಯೂ ತುಂಬಿಕೊಂಡಿದೆ. ನಮ್ಮಲ್ಲಿರುವ ಕೊರತೆಗಳನ್ನು ನೀಗಿ ನಮ್ಮ ದೇಶದ ಬಯಕೆಗಳನ್ನು ಈಡೇರಿಸಿಕೊಳ್ಳುವ ಹಂಬಲ ನಮಗೆ ಉಂಟಾದದ್ದು ಅದರಿಂದ. ಇಂಗ್ಲೀಷು ಸಾಹಿತ್ಯವನ್ನು ಚೆನ್ನಾಗಿ ಓದಿ ಅದರ ಅಂದಕ್ಕೆ ಸೋತು ನಮ್ಮ ನಾಡಭಾಷೆಗಳಲ್ಲಿಯೂ ಅದನ್ನು ರೂಪಿಸುವ ಪ್ರೇರಣೆ ಹಿರಿಗರಿಗೆ ಬಂತು. 'ಇಂಗ್ಲೀಷ್ ಗೀತಗಳು' ಎಂಬ ಇಂಗ್ಲೀಷು ಕವಿತೆಗಳ ಅನುವಾದ ಸಂಗ್ರಹ "ಇಂಗ್ಲೀಷು ಸಾಹಿತ್ಯ ಸಮುದ್ರದ ತಡಿಯಲ್ಲಿ ತೆರೆಯೆಸೆದ ಕೆಲವು ಕಣ್ಣ ಚಿಪ್ಪುಗಳಿಂದ ಆ ದಿವ್ಯ ರತ್ನಾಕರದ ಲಾವಣ್ಯವೂ ವಾಸನೆಯೂ ಘೋಷವೂ ರುಚಿಯೂ ಸಹೃದಯರ ಅನುಭವಕ್ಕೆ" ಬರುವಂತೆ ಮಾಡಿತು. ಕನ್ನಡವನ್ನೂ ಇಂಗ್ಲೀಷನ್ನೂ ಕಲಿತ ಸಹೃದಯರಾದ 'ಶ್ರೀ' ಅವರು ಕನ್ನಡದ ಹೊಸ ಕಾವ್ಯಕ್ಕೆ ಪ್ರೇರಕರಾದರು. ಅವರು ರಚಿಸಿದ 'ಇಂಗ್ಲೀಷು ಗೀತೆಗಳು' ಇಂಗ್ಲೀಷು ಕಾವ್ಯಮಾರ್ಗವನ್ನು ತೋರಿಸಿದೊಂದೇ ಅಲ್ಲದೆ ಹೊಸ ಕನ್ನಡದ ಛಂದಸ್ಸನ್ನೂ ಧಾಟಿಯನ್ನೂ ಕಾಣಿಸಿದುವು. ಹೊಸ ಚೈತನ್ಯ ಹರಿಯುವುದಕ್ಕೆ ಹೊಸ ಪಾತ್ರವನ್ನು ನಿರ್ಮಿಸಿತು. ಹೊಸ ಕನ್ನಡದ ಬಗೆಬಗೆಯ ಮಟ್ಟುಗಳಿಗೆ ಅವರು ನಿರ್ಮಾಪಕರಾಗಿದ್ದಾರೆ. ಅವರು ತೋಡಿದ ಕಾಲುವೆ ಇಂದು ತುಂಬಿ ಹೊನಲಾಗಿದೆ. ಹೀಗೆ ಹೊಸಕನ್ನಡ ಕವಿತೆಗೆ ಬೇಕಾದ ವಿಷಯ ಸಂಗ್ರಹ ಇಂಗ್ಲೀಷು ವಿದ್ಯೆಯ ಪ್ರಸಾರದಿಂದ ಬಂದು ಕನ್ನಡ ಕಾಲುವೆಯಲ್ಲಿ ಹರಿಯತೊಡಗಿತು. ಇದರ ಫಲವಾಗಿ ಕವಿಗಳ ದೃಷ್ಟಿ ನೂತನವಾಯಿತು.

ಕಾವ್ಯದ ಬೆಳವಣಿಗೆ

ಹಿಂದೆ ನಮ್ಮ ಸಾಹಿತ್ಯ ಬೆಳೆದದ್ದು ಬಹುಮಟ್ಟಿಗೆ ಮತ ಪ್ರಚಾರಕ್ಕಾಗಿ. ಈಗ ಮತವು ನಮ್ಮ ಕಾವ್ಯರಥವನ್ನು ಮುಂದಕ್ಕೆ ಎಳೆಯಲಾರದಾಗಿದೆ. ಎಲ್ಲ ಧರ್ಮಗಳ ತಿರುಳೂ ಒಂದೇ ಎಂದು ಅರಿತು ಅದನ್ನು ಕಾವ್ಯದ ಮೂಲಕ ಹಬ್ಬಿಸುವುದಕ್ಕೆ ಇಂದಿನ ಕವಿತೆ ತೊಡಗಿದೆ. ಇಲ್ಲ ಸೃಷ್ಟಿಯ ಮರ್ಮವನ್ನರಿಯದೆ ವಿಸ್ಮಯ ಪಡುವುದು, ಕಣ್ಣಲ್ಲಿ ಚಿತ್ತಶಾಂತಿಯನ್ನು ಕೊಡುವುದು, ಪೌರುಷ ಪ್ರಯತ್ನಕ್ಕೆ ನಾನಾ ಮಾರ್ಗಗಳನ್ನು ತೋರಿಸುವುದು, ಇವು ಎಲ್ಲ ಮತಗಳ ಸಾರ. ಈಗ ಮತಕ್ಕೆ ಪ್ರತೀಕವಾಗಿ ನಾನಾ ಭಕ್ತಿಗಳು ಬಂದು ನಿಂತಿವೆ. ದೇಶಪ್ರೇಮ, ಭಾಷಾ ಪ್ರೇಮ ಮುಂತಾದವು ನಮ್ಮ ಮನಸ್ಸನ್ನು ಈಗ ಆಕ್ರಮಿಸಿಕೊಂಡಿವೆ. ಪ್ರಗತಿಮಾರ್ಗವನ್ನು ಹಿಡಿದು ಏಳಿಗೆಗಾಗಿ ದುಡಿಯಬೇಕೆಂಬ ಹಂಬಲ ನಮ್ಮ ಜನರಿಗೆ ಹುಟ್ಟಿದೆ. ಇವೆಲ್ಲ ಇಂದಿನ ಕವಿತೆಯಲ್ಲಿ ಬೆಳಗುತ್ತಿವೆ. ನಮ್ಮ ನಾಡು ನುಡಿಗಳ ಹಿಂದಿನ ವೈಭವವನ್ನೂ ಇಂದಿನ ಬೀಳನ್ನೂ ಹೋಲಿಸಿ ತೋರಿಸುವ ಕವಿತೆಗಳು ಹಲವಿವೆ. ಇವು ಬರಿಯ ತೋರಿಕೆಯಲ್ಲಿಯೇ ನಿಲ್ಲದೆ ಹಿಂದಿನಂಥ ವೈಭವವನ್ನು ನಮ್ಮ ಸ್ವಪ್ರಯತ್ನದಿಂದ ಪಡೆಯಬೇಕೆಂಬ ಉತ್ಸಾಹದಿಂದ ಕೂಡಿವೆ. ಐರೋಪ್ಯರು ನಮ್ಮ ನಾಡಿಗೆ ಬಂದು ನಮ್ಮ ಹಿಂದಿನ ಚರಿತ್ರೆಯನ್ನು, ಸಂಸ್ಕೃತಿಯನ್ನೂ ಶೋಧಿಸಿ ಹೊರಗೆಡಹಿದರು. ಅವರ ದಾರಿಯಲ್ಲೇ ನಮ್ಮವರೂ ನಡೆದು ನಮ್ಮ ಬಾಳು ಹಿಂದೆ ಮುಟ್ಟಿದ್ದ ಉನ್ನತಿಯ ಶಿಖರವನ್ನು ಎಲ್ಲರಿಗೂ ಕಾಣಿಸಿದರು. ಕವಿಗಳ ಮನಸ್ಸನ್ನು ಇದು ಸೂರೆಗೊಂಡಿತು. ಈ ವೈಭವದಿಂದ ಪುಲಕಿತವಾದ ಕವಿತೆಗಳು ಹೇರಳವಾಗಿವೆ. "ಕನ್ನಡಿಗರ ತಾಯಿ", "ಕನ್ನಡಿಗರ ಕೊರಗು", "ಕನ್ನಡನಾಡಿನ ಸ್ಮೃತಿಯನ್ನು ನೆನೆದು", "ಎಂಥ ನಾಡಿದು ಎಂಥ ಕಾಡಾಯಿತೋ" ಎಂಬಿವೇ ಮುಂತಾದ ಕವನಗಳು ನಮ್ಮ ಇಂದಿನ ಅವನತಿಗೆ ಮರುಗುತ್ತಿವೆ. ಇಂದು ನಮ್ಮ ಜನ ಮಂಕರಂತಿದ್ದಾರೆ. ನೆರೆ ನಾಡವರು ಮುಂದುವರಿಯುತ್ತಿದ್ದರೆ ನಾವು ಹಿಂದುಳಿದಿದ್ದೇವೆ. ಕೈಯಲ್ಲಿ ಹಣವಿಲ್ಲ, ಮೈಯಲ್ಲಿ ಹುರುಪಿಲ್ಲ. ಹಿಂದೆ ದೊಡ್ಡವರಾಗಿದ್ದೆವು ಎಂಬ ಹೆಮ್ಮೆಯೊಂದರಿಂದಲೇ ನಾವು ಏನನ್ನೂ ಸಾಧಿಸಲಾರೆವು. ಸೊರಗಿರುವ ನಮ್ಮ ತಾಯನ್ನು ಸಪ್ರಾಣಿಸಬೇಕು. ಹಿರಿಯ ಹೆಸರನ್ನು ಗಳಿಸುವುದೆಂತು? ನೆಮ್ಮದಿಯಾಗಿ ಬಾಳುವುದು ಎಂದು? ಇವತ್ತು ಕನ್ನಡ ನಾಡು ಒಡೆದು ಹೋಳಾಗಿದೆ; ಪರಸ್ಪರ ಭಾವನೆಯಿಲ್ಲ. ನಾವೆಲ್ಲ ಒಬ್ಬ ತಾಯ ಮಕ್ಕಳು, ಅಣ್ಣ ತಮ್ಮಂದಿರು. ನಾವು ಒಂದಾದರೆ ನಮಗೆ ಎದುರು ಯಾರು? ಹಿಂದೆ ನಮ್ಮ ದೇಶದಲ್ಲಿ ಚಾಳುಕ್ಯ, ರಾಷ್ಟ್ರಕೂಟರೇ ಮುಂತಾದ ಹಿರಿಯ ರಾಜ ಮನೆತನಗಳು ಆಳಿ ನಮ್ಮ ನಾಡವರ ಐಶ್ವರ್ಯವನ್ನು ಮೆರೆಯಿಸಿದುವು. ಇಂದು ನಾವು ಹೇಡಿತನದಿಂದ ಬೊಗಳುತ್ತಿದ್ದೇವೆ; ಒಳಗೊಳಗೆ ಜಗಳವಾಡುತ್ತಿದ್ದೇವೆ; ಕೈಲಾಗದವರಂತೆ ಗೋಳಿಡುತ್ತಿದ್ದೇವೆ. ಹಿಂದಿನವರಂತೆ ನಾವೂ ಧೀರರಾಗಬೇಕು.

(ತರಂಗದಿಂದ)

ಆಸ್ಟ್ರೇಲಿಯಾ ಗೋಧಿ

ಇದುವರೆಗೆ ಭಾರತವು ೧೭,೦೦,೦೦೦ ಟನ್ ಗೋಧಿಯನ್ನು ಆಸ್ಟ್ರೇಲಿಯಾದಿಂದ ಪಡೆದುದಾಗಿ ಆಸ್ಟ್ರೇಲಿಯಾ ಕಾಮನ್ಸ್ ಮಂತ್ರಿಗಳು ಹೇಳಿರುವರು.

ರಾಜಕುಮಾರಿ ಆಸಕ್ತಿ

ಇಂಗ್ಲೆಂಡ್ ರಾಜಕುಮಾರಿ ಎಲಿಜಬೆತ್ ಇಂಡಿಯಾ ಕಚೇರಿಗೆ ಭೇಟಿಯಿತ್ತು ಭಾರತೀಯ ಸೌಕರ್ಯಕ್ಕಾಗಿ ಏರ್ಪಡಿಸಿರುವ ನಿಧಿಸಮಿತಿ ಕಾರ್ಯಕಲಾಪಗಳನ್ನು ಪರಿಶೀಲಿಸಿದರು. ಅಮೆರಿ, ರಂಗನಾಥ್, ಲಾಲ್ ದಂಪತಿಗಳು ಸ್ವಾಗತವಿತ್ತರು. ಜರ್ಮನ್ ಇಟಲಿಗಳಲ್ಲಿ ೧೫,೦೦೦ ಭಾರತೀಯ ಯೋಧಬಂದಿಗಳಿದ್ದರೆಂದು ಕಳೆದ ನವೆಂಬರ್ ತಿಂಗಳಲ್ಲಿ ಗೊತ್ತಾದಾಗ ಅವರಿಗೆ ಪ್ರತಿ ವಾರವೂ ಆಹಾರ ಮತ್ತು ಬಟ್ಟೆ ಭಾಂಗಿಗಳನ್ನು ಕಳಿಸಲೇರ್ಪಾಡು ಮಾಡಲಾಯಿತು ಎಂದು ಅಮೆರಿಯವರು ರಾಜಕುಮಾರಿಗೆ ತಿಳಿಸಿದರು.

ಹಿರಿಯ ದೇವಾಸ್ ರಾಜರ ಮರಣ

ದೇವಾಸ್ ಸಂಸ್ಥಾನದ ಹಿರಿ ಅರಸರಾದ ಶ್ರೀ ಸದಾಶಿವರಾವ್ ಖಾಸೇ ಸಾಹೇಬ್ ಪವಾರ ಮಹಾರಾಜ ಸಾಹೇಬರವರು ಗುರುವಾರ ದೇವಾಸ್‌ನಲ್ಲಿ ಮೃತಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ.

ನರ್ವನ್‌ಟೈನ್

ನರಗಳ ಶಕ್ತಿಗೆ; ವೀರ್ಯವೃದ್ಧಿಗೆ

ಉಪಯೋಗಿಸುವ ವಿಧಾನ.—

ಮಲಗುವ ವೇಳೆ ಕಾಲು ಔನ್ಸಿನಂತೆ ಬಟ್ಟಲು ಹಾಲಿನೊಡನೆ

ದೊಡ್ಡ ಬಾಟಲ್ ರೂ. 2-4-0 ಮಾತ್ರ

ಸಣ್ಣ ಬಾಟಲ್ ರೂ 1-4-0 ,,

ಪ್ಯಾಕಿಂಗ್ ಮತ್ತು ಪಾರ್ಸಲ್ ಚಾರ್ಜು ಪ್ರತ್ಯೇಕ

ಈ ನಮ್ಮ ಔಷಧಕ್ಕೆ ದಸರಾ ವಸ್ತು ಪ್ರದರ್ಶನದಲ್ಲಿ ಪದಕವು ದೊರಕಿರುತ್ತದೆ.

ವಿಳಾಸ:—

ಕೆ. ಇ. ಐ. ಪ್ರಾಡಕ್ಟ್ಸ್

ಹಳೆ ಮೈಸೂರು ಬ್ಯಾಂಕ್ ರಸ್ತೆ,

ಮೈಸೂರು

ಟಿ. ಸಿ. ನಟರಾಜನ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜೆಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಶ್ರದ್ಧೆಯಿಂದ ಮಾಡಲ್ಪಡುತ್ತದೆ.

ಧನ್ವಂತರಿ [illegible] ಸಿದ್ಧೌಷಧಿಗಳೆಲ್ಲವೂ [illegible] ದೊರೆಯುತ್ತವೆ.

ಕನ್ನಡ ಪುಸ್ತಕಾಲಯ

ಮತ್ತು

ಸಂಚಾಲನಾ ಪುಸ್ತಕ ಭಂಡಾರ

(Circulating Library)

AT

ಸ್ಟೂಡೆಂಟ್ಸ್ ಹಾಲ್,

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

9-12-1943 ರ [illegible]

ತೆರೆಯಲ್ಪಡುತ್ತದೆ

"A" Class ಚಂದಾ [illegible] ತಿಂಗಳು 1 ಕ್ಕೆ 1-8-0

"B" Class ಚಂದಾ [illegible] ತಿಂಗಳು 1 ಕ್ಕೆ 0-12-0

ಹೆಚ್ಚಿನ ವಿವರಗಳನ್ನು [illegible] ತಿಳಿಯಬೇಕಾಗಿ ವಿನಂತಿ.

ನಮ್ಮಲ್ಲಿ ಉತ್ತಮೋತ್ತಮ ಕನ್ನಡ [illegible], ಕಾದಂಬರಿಗಳು ಮತ್ತು ನಾಟಕಗಳು ಮಾರಾಟಕ್ಕೆ [illegible]

ಕನ್ನಡ ಬಾಂಧವರು [illegible] ಪ್ರೋತ್ಸಾಹಿಸಬೇಕಾಗಿ [illegible]

[illegible] C. S. R. [illegible]

ಸ್ಟೂಡೆಂಟ್ಸ್ ಹಾಲ್, [illegible]

ಸಮರ ವಾರ್ತೆ

ರಷ್ಯಾ

ಪೂರ್ವ ರಷ್ಯದಲ್ಲಿ ಕೆಂಪು ಸೈನ್ಯ ಗಡಿಯು ಜ್ಲೋಬಿನ್ ಮತ್ತು ರಚಿಟ್ಸಾ ಎಂಬ ಎರಡು ನಗರಗಳ ಕಡೆಗೆ ಸಾಗುತ್ತಿದೆ.

ಕೆಂಪು ಸೈನ್ಯ ಪಡೆಯು ಶತ್ರುಗಳ ರಕ್ಷಣಾ ವ್ಯೂಹದೊಳಗೆ ಬಹಳ ದೂರ ಮುಂದೆ ನುಗ್ಗಿ 300 ಹಳ್ಳಿಗಳಿಂದಲೂ ಊರುಗಳಿಂದಲೂ ಶತ್ರುಗಳನ್ನು ಹೊಡೆದೋಡಿಸಿದೆ.

ರಚಿಟ್ಸಾ ಆಚೆಗೆ ಇರುವ ನೀಪರ್ ನದಿಗೆ ರಷ್ಯ ಸೈನ್ಯ ಪಡೆಗಳು ಕೇವಲ ಕೆಲವು ಮೈಲಿಗಳ ದೂರದಲ್ಲಿವೆ. ಸ್ಮೋಕ್ ಮತ್ತು ನೀಪರ್ ನದಿಗಳಿಗೆ ಮಧ್ಯೆ ಪ್ರದೇಶವನ್ನು ರಷ್ಯನರು ಆಕ್ರಮಿಸಿಕೊಳ್ಳಲಾಯಿತು. ಪೂರ್ವ ರಷ್ಯದಲ್ಲಿ ಜರ್ಮನಿಯ ವ್ಯೂಹ ರಕ್ಷಣೆಗೆ ಈ ಊರು ಬಹಳ ಮುಖ್ಯ ಕೇಂದ್ರವಾಗಿತ್ತು. ಇಲ್ಲಿಂದ ರಸ್ತೆಗಳು ಗೋಮೆಲ್, ಮತ್ತು ರೆಚಿಟ್ಸಾ ಕಡೆಗಳಿಗೆ ಹೋಗುತ್ತವೆ. ಜ್ಲೋಬಿನ್‌ಗೆ ರಷ್ಯನರು ಕೇವಲ 12 ಮೈಲಿಗಳ ದೂರದಲ್ಲಿದ್ದಾರೆ. ನೀಪರ್ ನದಿ ತಿರುವಿನಲ್ಲಿ ಚರ್ಕಾಸಿ ಎಂಬುದರ ಬಳಿ ಈಗ ಭಯಂಕರ ಕದನವು ನಡೆಯುತ್ತಿದೆ. ಜರ್ಮನರು ಟ್ಯಾಂಕುಗಳ ಬಲದಿಂದ ಉಗ್ರವಾಗಿ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ.

ಇನ್ನೂ ದಕ್ಷಿಣದಲ್ಲಿ ಕ್ರಿವಾಯ್ ರೋಗ್ ಪ್ರದೇಶದಲ್ಲಿ ರಷ್ಯನರಿಗೆ ಜಯವು ಲಭಿಸಿದೆ. ಜ್ನಾಮೆನ್ಕಾ ನಗರದ ಮೇಲೆ ರಷ್ಯನರು ಈಗ ದಾಳಿಗಳನ್ನು ಹಾಕುತ್ತಿದ್ದಾರೆ.

ಇಟಲಿ

ಇಟಲಿಯಲ್ಲಿ ಬ್ರಿಟನ್ನಿನ 8 ನೇ ಸೈನ್ಯ ಪಡೆಯು ಆಡ್ರಿಯಾಟಿಕ್ ತೀರಪ್ರದೇಶದಲ್ಲಿ ಮುಂದೆ ಮುಂದೆ ನುಗ್ಗುತ್ತಿದೆ. ಶತ್ರುಗಳು ಬಹಳವಾಗಿ ಮೈನ್‌ಗಳನ್ನು ಹಾಕಿರುವ ಪ್ರದೇಶದಲ್ಲಿ ಮಿತ್ರ ಸೈನಿಕರು ನಿಧಾನವಾಗಿ ಸಾಗಬೇಕಾಗಿದೆ. ಸಾಂಗ್ರೊ ಎಂಬುದನ್ನು 8 ನೇ ಸೈನ್ಯ ಪಡೆಯು ಪೂರ್ತಿ ಆಕ್ರಮಿಸಿಕೊಂಡಿದೆ. ಇಟಲಿಯಲ್ಲಿರುವ ಪ್ರಮುಖ ಮಾರ್ಗದಲ್ಲಿರುವ ಕ್ಯಾಸ್ಟಲ್ ಫ್ರೆಂಟಾನೊ ಎಂಬ ಇನ್ನೊಂದು ಊರು ಕೂಡ 8 ನೇ ಸೈನ್ಯ ಪಡೆಯ ವಶವಾಗಿದೆ.

ಮಿತ್ರ ಸೈನಿಕರ ಮುಂದೋಟವನ್ನು ತಡೆಯ ಸಿಲ್ಲಿಸಲು ಜರ್ಮನರು ಉತ್ತರ ಇಟಲಿಯಿಂದ ಸಹಾಯವನ್ನು ಬೇಗಬೇಗನೆ ಕಳುಹಿಸುತ್ತಿದ್ದಾರೆ.

ಪಶ್ಚಿಮದ ಕಡೆಯಿಂದ ಅಮೇರಿಕದ 5 ನೇ ಸೈನ್ಯ ಪಡೆಯು ರೋಂ ನಗರದ ಕಡೆಗೆ ಮುಂದುವರಿಯುತ್ತಿದೆ.

ಮೆಡಿಟರೇನಿಯನ್ ಪ್ರದೇಶದಲ್ಲಿ ಅಮೇರಿಕ ಸೈನಿಕರು ಮತ್ತಷ್ಟು ದೂರ ಮುಂದೆ ನುಗ್ಗಿದ್ದಾರೆ.

ದಿನಸಿ ಡಿಪೋ

ಒ ಬಾ] ನಂಜನಗೂಡು,

ನಂಜನಗೂಡು ತಾಲ್ಲೂಕು ಹಾರಂಪುರ ಗ್ರಾಮದಲ್ಲಿ ತಾ|| 24—11—43 ರಲ್ಲಿ ಸರ್ಕಾರಿ ದಿನಸಿ ಡಿಪೋ ಪ್ರಾರಂಭೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಸುತ್ತಮುತ್ತಲ ಗ್ರಾಮದ ನೂರಾರು ಪ್ರಜೆಗಳು ಭಾಗವಹಿಸಿದ್ದರು. ತಾಲ್ಲೂಕು ಅಮಲ್ದಾರರಾದ ಶ್ರೀ ಸಿ. ಕೃಷ್ಣರಾವ್‌ರವರು ಭಾಷಣ ಮಾಡಿದರು. ಈ ಉತ್ಸವವು ಯಶಸ್ವಿಯಾಗಿ ನೆರವೇರಲು ಗ್ರಾಮದ ಪಟೇಲರಾದ ಶ್ರೀ ಆರ್. ಬಾಲಾಜಿ ಸಿಂಗ್‌ರವರು ತುಂಬ ಪ್ರಯತ್ನ ವಹಿಸಿ, ಕೆಲಸಮಾಡಿದ್ದರು. ಈ ಸರ್ಕಾರಿ ಡಿಪೋವಿನಿಂದ ಸುತ್ತಮುತ್ತಿನ ಅನೇಕ ಹಳ್ಳಿಯವರಿಗೆ ಈಗಾಗಲೇ ಸೌಕರ್ಯ ಏರ್ಪಟ್ಟಿರುವುದಾಗಿ ತಿಳಿದುಬಂದಿದೆ. ಸರ್ಕಾರದವರು ಇನ್ನೂ ನೂರಾರು ಡಿಪೋಗಳನ್ನು ಹಳ್ಳಿಗಳಲ್ಲಿ ತೆರೆಯುವುದರಿಂದ ಪ್ರಜೆಗಳಿಗೆ ಅನುಕೂಲವಾಗಲು ಸಂದೇಹವಿಲ್ಲ.

ಶತ್ರು ಸೈನ್ಯ ನೀರಿನ ಪಾಲು

ಸೈನಿಕರಿಂದ ಕೂಡಿದ್ದ 10 ಸಾವಿರ ಟನ್ನಿನ ಜಪಾನಿನ ನೌಕೆಯೊಂದಕ್ಕೆ ಮಿತ್ರ ವಿಮಾನಗಳು ಪೆಟ್ಟುಕೊಟ್ಟು ಮುಳುಗಿಸಿಬಿಟ್ಟವು. ಅದರಲ್ಲಿದ್ದ ಸರಿ ಸುಮಾರು 300 ಯೋಧರು ನೀರಿನ ಪಾಲಾದರು.

ಎಂಪ್ರೆಸ್ ಆಗಸ್ಟಾ ಕೊಲ್ಲಿಯಲ್ಲಿ ಅಮೇರಿಕ ವಿಮಾನಗಳು ದಾಳಿ ನಡೆಸಿ ಅನೇಕ ಜಪಾನ್ ಹಡಗುಗಳನ್ನು ಸಂಹರಿಸಿ, ಉಗ್ರಾಣಗಳನ್ನು ನಾಶ ಪಡಿಸಿದವು.

ನ್ಯೂಬ್ರಿಟನ್ನಿನ ರಬಾಲ್ ಎಂಬ ಸ್ಥಳದ ಮೇಲೂ ಮಿತ್ರ ಬಾಂಬರುಗಳು ದಾಳಿ ಮಾಡಿದವು.

ದೂರ ಪೂರ್ವ

ನ್ಯೂಗಿನಿಯದಲ್ಲಿ ಹ್ಯಾನ್‌ಪ್ರೆಸ್ ಭೂಮಿಯಲ್ಲಿರುವ ವಾರಿಯೊ ಎಂಬುದನ್ನು ಆಸ್ಟ್ರೇಲಿಯದ ಸೈನಿಕರು ವಶಪಡಿಸಿದ್ದಾರೆಂದು ನೈರುತ್ಯ ಪೆಸಿಫಿಕ್ ಕೇಂದ್ರ ಕಛೇರಿಯಿಂದ ಒಂದು ಪ್ರಕಟಣೆ ಹೊರಟಿದೆ. ಆಸ್ಟ್ರೇಲಿಯ ಸೈನಿಕರಿಗೆ ಅಮೇರಿಕದ ಬೆಂಬಲ ಬೇಕಾದಷ್ಟು ದೊರೆಯುತ್ತಿದೆ.

ನ್ಯೂ ಬ್ರಿಟನ್ನಿನಲ್ಲಿರುವ ಕಾರ್ಲೈಲ್ ಎಂಬೂರಿನ ಮೇಲೆ ಉಗ್ರ ವಿಮಾನ ಮುತ್ತಿಗೆಯನ್ನು ನಡೆಸಲಾಯಿತು.

ಚೀನಾ

ಚೀನಾ ರಣರಂಗದಲ್ಲಿ ಚಂಗ್‌ಟೆ ಎಂಬ ಊರಿಗಾಗಿ ಕದನವು ನಡೆಯುತ್ತಿದೆ. ಆ ನಗರದ ಪಶ್ಚಿಮ ದ್ವಾರದ ಬಳಿ ಜಪಾನೀಯರು ಆಕ್ರಮಣ ಕಾರ್ಯವನ್ನು ನಡೆಸಿದರು. ಉಗ್ರ ಕದನವಾಗಿ ಕಡೆಗೆ ಉತ್ತರ ಭಾಗದಲ್ಲಿ ಜಪಾನೀಯರನ್ನು ಹಿಮ್ಮೆಟ್ಟಿಸಲಾಗಿದೆ.

ಸಿಗರೇಟಿಲ್ಲ—ಚಾಕಲೇಟ್

ಜಾರ್ಜ್ ಬರ್ನಾರ್ಡ್ ಷಾರವರ 'ಪಿಗ್ಮಾಲಿಯನ್' ಎಂಬ ಗ್ರಂಥದ ನಾಟಕವನ್ನು ಅಮೇರಿಕಾ ಪ್ರಸಾರ ನಿಲಯವು ಒಂದರಿಂದ ಪಠಣ ಮಾಡಿದರು. ಹೀಗೆ ನಿಲಯದ ಸಂಯುಕ್ತಗಳೊಡನೆ ಸಹಕರಿಸುವವರಿಗೆ ಪಾರಿತೋಷಕ ಹಣ ಕೊಡುವುದು ವಾಡಿಕೆ. ಆದರೆ ಬರ್ನಾರ್ಡ್ ಷಾರವರು ಹಣಕ್ಕೆ ಬದಲು ಚಾಕಲೇಟ್ ಮತ್ತು ಜಾಮ್ ಪಡೆದು ಖಂಡಿತ ತೇಗಿದರು.

ಭಾರತೀಯ ನಾವಿಕರ ಸ್ಥಿತಿ

ಭಾರತೀಯ ನಾವಿಕರ ಸೌಕರ್ಯದ ಸ್ಥಿತಿಗಳನ್ನು ಉತ್ತಮ ಪಡಿಸುವ ವಿಚಾರವನ್ನು ಇಂಡಿಯಾ ಸರ್ಕಾರ ಗಮನಿಸುತ್ತಿದೆ ಎಂದು ವಾಣಿಜ್ಯ ಸದಸ್ಯರಾದ ಸರ್ ಅಜೀಜುಲ್ ಹಕ್‌ರವರು ಕೇಂದ್ರ ಶಾಸನಸಭೆಯಲ್ಲಿ ಭಾರತೀಯ ನಾವಿಕರ ಕೇಂದ್ರದ ಬಗ್ಗೆ ಬಂದ ಆಕ್ಷೇಪಣೆಗಳನ್ನು ಅವರ ತಕ್ಷಣದ ಪರಿಸ್ಥಿತಿಯನ್ನು ಕುರಿತು ಕೇಳಲಾದ ಪ್ರಶ್ನೆಗೆ ತಿಳಿಸಿದರು. ಈ ಉತ್ತರದಿಂದ — ಭಾರತದಲ್ಲಿ ಇಂಡಿಯನ್ ಸಿವಿಲ್ ಸರ್ವೀಸಿನಲ್ಲಿರತಕ್ಕ ತಮ್ಮ ಗಂಡಂದಿರೊಡನೆ ಹೊರಗೆ ಇರಲು ಇಚ್ಛಿಸುವ ಹೆಂಗಸರಿಗೆ ಹಡಗಿನ ಸ್ಥಳಗಳ ವಿಚಾರವನ್ನು ಇಂಡಿಯಾ ಸರ್ಕಾರದ ಪರಿಶೀಲಿಸುತ್ತಿರುವುದಾಗಿ ತಿಳಿಸಿದರು.

ನೆಪೋಲಿಯನ್ನರ ಸ್ಮರಣ ಶಕ್ತಿ

ಐದು ವರ್ಷಗಳ ಹಿಂದೆ ಒಬ್ಬ ಸೇನಾ ಪ್ರಧಾನಿಯೊಡನೆ ಮಿಲಿಟರಿ ಆಫೀಸರ್ ಆಗಿ ಕೆಲಸಮಾಡುತ್ತಿದ್ದಾಗ ನೆಪೋಲಿಯನ್ ಎಂಬೊಬ್ಬ ಸೇವಕನು ಅವರ ಬಳಿ ಸೇವಾವೃತ್ತಿಯಲ್ಲಿದ್ದನು. ಕಳೆದ ವಾರ ನೇಪಲ್ಸ್ ಗಡಿನಾಡು ಪ್ರಾಂತ್ಯದಲ್ಲಿ ಪ್ರವಾಸ ಮಾಡುತ್ತಿದ್ದಾಗ ಆ ಸೇವಕನು ಅವರ ಭೇಟಿ ಪಡೆದು ಕೂಡಲೇ ಅವರು ತಮ್ಮ ಹಳೆ ಸೇವಕನನ್ನು ಗುರುತಿಸಿ ಅಭಿಮಾನದಿಂದ ಆತನಿಗೆ ಜೀವಾವಧಿ ತಿಂಗಳಿಗೆ 20 ರೂ. ಜೀವನ ವೃತ್ತಿ ಹಣದಿಂದ ಕೊಡುವ ನಿರ್ಧಾರ ಮಾಡಿದರು.

ಸ್ಥಾನಬದ್ಧರ ಬಿಡುಗಡೆ

ಗಣೇಶ ಚಳುವಳಿ ಸಂಬಂಧವಾಗಿ ಸೆರೆಯಲ್ಲಿದ್ದ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ಬಸಪ್ಪ ಪಟೇಲ, ಗುರುನಾಥರಾವ್, ದ|| ಕದಂ ದೇಶಪಾಂಡೆ ಮತ್ತು ಜೋಶಿ ಇವರುಗಳನ್ನು ಬಿಡುಗಡೆ ಮಾಡಲಾಗಿದೆ. ನಾಸಿಕ್ ಜೈಲಿನಲ್ಲಿದ್ದ ಜೋಶಿಯವರನ್ನೂ ಬಿಡುಗಡೆ ಮಾಡಲಾಗಿದೆ.

ಚಿತ್ರ ವಿಮರ್ಶೆ

ನಿರ್ದೋಷಿ

ಈ ಚಿತ್ರ ನ್ಯಾಷನಲ್ ಸ್ಟುಡಿಯೋಸ್‌ರವರ ತಯಾರಿ. ಇವರು 'ಔರತ್' ಚಿತ್ರವನ್ನು ಜನತೆಯ ಮುಂದೆ ಬೆಳಗಿದಾಗ ಈ ಸಂಸ್ಥೆ ಇನ್ನು ಮುಂದೆ ಇನ್ನೂ ಉತ್ತಮ ಚಿತ್ರಗಳನ್ನು ಕೊಡಬಹುದೆಂಬ ಆಶಾ ಕಿರಣ ಚಿತ್ರ ಪ್ರಿಯರ ಮನ ಹೊಕ್ಕಿತ್ತು. ಆದರೆ ಇವರ ಮತ್ತೆರಡು ಚಿತ್ರಗಳು ನೋಡಿ ಬೇಸರವಾಯಿತು. ನಿರ್ದೋಷಿ ಇವರ ಇತ್ತೀಚಿನ ಚಿತ್ರ. ಜೋಗ್ ಮಿಸ್ತ್ರಿ ಮತ್ತು ಕೃಷ್ಣ ಕುಮಾರಿ ಇವರ ಪಾತ್ರಗಳು ಒಂದು ಕಡೆ ಮತ್ತೊಂದು ಕಡೆ ಒಂದು ಸಂಸಾರ ಎರಡನೇ ಹೆಂಡತಿ. ಅವಳ ಇಬ್ಬರು ಮಕ್ಕಳು. ಮೊದಲನೆ ಹೆಂಡತಿ ಸತ್ತುಹೋಗಿದೊಂದು ಹೀಗೆ ಹೆಂಡತಿಯ ಬಗ್ಗೆ ಕಿರುಕುಳವನ್ನು ತೋರುವ ಅವಳು ಮತ್ತು ಎರಡನೇ ಬಾರಿ ಮದುವೆಯಾದ ಆತನ ಪೇಚಾಟ ಇವುಗಳ ಚಿತ್ರ. ಮಧ್ಯೆ ನಾಯಕ ನಾಯಕಿಯರ ಪ್ರಣಯ ಪ್ರಸಂಗ. ಇದೇ ಕಥೆಯ ಸ್ವರೂಪ. ನೋಡಿದ ಜೋಡಣೆ ಸರಳವಾಗಿಯೂ ರಸಭರಿತವಾಗಿಯೂ ಇದೆ. ಪಾತ್ರಗಳ ನಿರ್ವಹಣೆ ಚಿತ್ತಾಕರ್ಷಕವಾಗಿದೆ. ಕಥೆಯ ಧಾಟಿ ಲೋಪದೊಂದಿಲ್ಲ ನಿರ್ದೇಶನ ಪ್ರಭಾವ ಶಾಲಿಯಾದುದು ಒಟ್ಟಿನಲ್ಲಿ ಹೇಳುವುದಾದರೆ ಚಿತ್ರ ನೋಟ್ಟಕ್ಕೆ ಏನು ಕುಂದಿಲ್ಲವಾದರೂ ಮುಖ್ಯಗೀತ ಪಾತ್ರಧಾರಿಯು ಸಂಗೀತ ಒಂದೇ ಈ ಚಿತ್ರದಲ್ಲಿ ಕಲೆಸೋಲು ತರುವ ನೀರಸವಸ್ತು.

ಸ್ಥಳೀಯ ಸಂಸ್ಥೆ ಅವಧಿ

ಸ್ಥಳೀಯ ಸಂಸ್ಥೆಗಳನ್ನು 3 ವರ್ಷಕ್ಕೊಮ್ಮೆ ಪುನರ್ರಚಿಸುತ್ತಿದ್ದರೆ ಅದು ಅವುಗಳ ನವಶಕ್ತಿ ದಾರಿಯಾಗುವುದು. ಅದಕ್ಕಾಗಿ 3 ವರ್ಷಕ್ಕೊಮ್ಮೆ ಎಂಬ ಕಾಲಾವಧಿಯನ್ನು 5 ವರ್ಷಗಳಿಗೊಂದಾವರ್ತಿ ಎಂದು ಗೊತ್ತುಪಡಿಸಿದಲ್ಲಿ ಉತ್ತಮ ಎಂಬುದಾಗಿ ಸಂಯುಕ್ತ ಪ್ರಾಂತ್ಯದ ಸ್ಥಳೀಯ ಸಂಸ್ಥೆಗಳವರು ಸಿಂಧ್ ಸರ್ಕಾರದಲ್ಲಿ ಮನ್ನಣೆ ಕೊಟ್ಟಿದ್ದರು. ಅವರ ಪ್ರಾರ್ಥನೆಗೆ ಸರ್ಕಾರದ ಮನ್ನಣೆ ಸಿಗಲಿಲ್ಲ.

ಜನನ ಸಂಖ್ಯೆ ಪರಿಶೀಲನೆ

ಬ್ರಿಟನ್ನಿನ ಜನನ ಸಂಖ್ಯೆಯನ್ನೂ ಮತ್ತು ಪ್ರಜೆಗಳ ನೀತಿ ನಿಯಮಗಳನ್ನೂ ಪರಿಶೀಲಿಸಲು ರಾಯಲ್ ಕಮಿಷನ್ ಒಂದನ್ನು ಬ್ರಿಟಿಷ್ ಸರ್ಕಾರ ನೇಮಿಸಿರುವುದು.

Edited, printed and published by A. R. Nagarajan at the Sadhvi Press, D. Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| 1-12-43 ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಪ್ಪ ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ — ಪ್ರತಿ ದಿನ ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ ... ರವರೆಗೆ ಸ್ತ್ರೀಯರಿಗೆ ಮಾತ್ರ ...

ಪ್ರತಿ ದಿನ ಮೂರು ಆಟಗಳು

ನ್ಯೂ ಅಪೇರಾ ಟಾಕೀಸ್

ತಾ|| 4—12—43 ರಿಂದ

ಸ್ಟಾನ್ ಲಾರೆಲ್ ಮತ್ತು ಆಲಿವರ್ ಹಾರ್ಡಿ ಪಾತ್ರವಹಿಸಿರುವ

"ಗ್ರೇಟ್ ಗನ್ಸ್"

ಸಂಪುಟ ೨] ಮಂಗಳವಾರ ೭--೧೨--೪೩ [ಸಂಚಿಕೆ ೧೧೯

ವಿಶ್ವ ವಿಜಯಕ್ಕೆ ಮಿತ್ರರ ಆಲೋಚನೆ

ಪುನಃ ಜಗತ್ತಿನಲ್ಲಿ ಯುದ್ಧವೇ ತಲೆದೋರದಂತೆ ತಡೆಗಟ್ಟಿ-ಅಚ್ಚಳಿಯದ ಶಾಂತಿ ಸ್ಥಾಪಿಸಲು ಪ್ರಯತ್ನ

ವಿದ್ಯಾರ್ಥಿಗಳ ನಿಯೋಗ

ಮೈಸೂರು ೭

ಕಳೆದ ವಾರ ತೀರ್ಮಾನಿಸಿದಂತೆ ನಿನ್ನೆ ೨ ದಿನ ಅಂದರೆ ಬುಧವಾರ ಸಂಜೆ ೫-೩೦ ಗಂಟೆಯ ಹೊತ್ತಿಗೆ ನಗರದ ಭಿಕ್ಷಾನ್ನ ಪಾ ಸ್ಟನ ವಿದ್ಯಾರ್ಥಿಗಳೆಲ್ಲರೂ ಸುಬ್ಬರಾಯ ಕೆರೆಯಲ್ಲಿ ಸೇರಬೇಕಾಗಿ ಪ್ರಾರ್ಥನೆ ಆ ಂದ ಪೌರಸಭಾಧ್ಯಕ್ಷರೂ ಮತ್ತು ರೇಷ್ಮೆ ಕಾರ್ಖಾನೆಗಳೂ ಆದ ಶ್ರೀ ಬೊಂಬೋರೆ ಅವರನ್ನು ಸಂದರ್ಶಿಸಿ ಪಾಟಶಾಲೆಯ ಭಿಕ್ಷಾ ದ ಹುಡುಗರ ಕುಂದುಕೊರತೆಗಳನ್ನು ವರಿಗೆ ಸರಿಯಾಗಿ ತಿಳಿಸಿ ತಕ್ಕ ವ್ಯವಸ್ಥೆ ಮಾಡಲು ಕೇಳಬೇಕಾಗಿದೆ. ಪಾಠಶಾಲೆ ಕ್ಷಾನ್ನದ ವಿದ್ಯಾರ್ಥಿಗಳು ತಪ್ಪದೆ ಸಕಾಲ ಸೇರಬೇಕಾಗಿ ವಿದ್ಯಾರ್ಥಿಸಂಘದ ಕಾರ್ಯ ಕರ್ತರುಗಳು ಪ್ರಾರ್ಥಿಸುತ್ತಾರೆ

ಸೆಲೆಕ್ಷನ್‌ಗೆ ಅವಕಾಶ

ಮೈಸೂರು ವಿದ್ಯಾರ್ಥಿಗಳು [illegible] ಂಗಳೂರು ವಿದ್ಯಾರ್ಥಿ ಮುಖಂಡರೊಡ ನೆ ವಿದ್ಯಾ ಸಚಿವರನ್ನು ಭೇಟಿ ಮಾಡಿ ದರು. ವಿಲ್ಸನ್ ಹೈಸ್ಕೂಲಿನ ಸೆಲೆಕ್ಷನ್ ವಿಷಯವನ್ನು ಹೇಳಿಕೊಂಡರು. ಇವರ ಎದಿ ಮುಖಾಂತರದಲ್ಲಿ ಸೆಲೆಕ್ಷನ್ ದುಡ್ಡು ಕಟ್ಟಲು ಕಾಲಾವಕಾಶವನ್ನು ಕೊಡಿ.ವುದಾ ಗಿ ಮಂತ್ರಿಗಳು ಭರವಸೆ ಕೊಟ್ಟಿರುವುದಾಗಿ ತಿಳಿದುಬಂದಿದೆ

ಮಹದೇವ ದೇಸಾಯಿಯವರ ಭಾವಚಿತ್ರ

ನಿನ್ನೆ ದಿನ ಸಾಯಂಕಾಲ ಮೈಸೂರು ಶ್ವವಿದ್ಯಾನಿಲಯ ಸಂಘದ ಆಶ್ರಯದಲ್ಲಿ ಮಹಾರಾಜ ಕಾಲೇಜು ಒಳಾಂಗಣದಲ್ಲಿ ಮಹದೇವ ದೇಸಾಯಿಯವರ ದಿನಾಚರಣೆ ನಡೆಸಲ್ಪಟ್ಟಿತು. ಶ್ರೀಮಾನ್ ನಿಟ್ಟೂರ್ ಕೃಷ್ಣರಾಯರವರು ದೇಸಾಯಿಯವರ ಭಾವಚಿತ್ರವನ್ನು ಅನಾವರಣಮಾಡಿ, ಆ ಂದರ್ಭವಾದ ಭಾಷಣಮಾಡಿದರು. ಮಹದೇವ ದೇಸಾಯಿಯವರಿಗೂ, ಮ ಹಾತ್ಮಾ ಗಾಂಧಿಯವರಿಗೂ ಇದ್ದ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ವಿವರಿಸಿದರು. ಮ ಹಾತ್ಮರ ಕಣ್ಣೆದುರಿಗೆ ತಾವು ಸಾಯಬೇಕೆಂ ದು ದೇಸಾಯರು ಹಂಬಲಿಸುತ್ತಿದ್ದರು; ದರಂತೆಯೇ ನಡೆದಿರುತ್ತದೆಯೆಂದು ಹೇಳಿ ದೇಸಾಯಿಯವರ ಅನೇಕ ಗುಣಗಳ ನ್ನು ಕೊಂಡಾಡಿದರು

ಭಾಷಣಗಳು

ಮೈಸೂರು ದಯಾನಂದ ಆಶ್ರಮದ ಆ ಯದಲ್ಲಿ ಶ್ರೀ ಎ ಮಹಲಿಂಗ ಅಯ್ಯರ್ ವರು ಬನುಮಯ್ಯ ಹೈಸ್ಕೂಲಿನಲ್ಲಿ ತಾ|| ೧೨-೪೩ ನೇ ಗುರುವಾರ ೬-೩೦ ಗಂಟೆಗೆ ಹಿಂದೂ ಸಂಘಟನೆ" ಮೇಲೂ, ತಾ|| ೧೨-೪೩ ನೇ ಶನಿವಾರ ೬-೩೦ ಗಂಟೆಗೆ ಆಹಾರ ಮತ್ತು ಹಾಲಿನ ಮಹಿಮಸ್ವಿಕೆ" ಲೂ ಭಾಷಣಮಾಡುವರು. ಶ್ರೀ ಟಿ. ಸ್. ರಾಜಗೋಪಾಲಯ್ಯಂಗಾರ್ಯರು ಅ ಧ್ಯಕ್ಷತೆ ವಹಿಸುವರು.

ಮಹಡಿಯಿಂದ ಬಿದ್ದು ಸಾವು

ಹಲವಾರು ತಿಂಗಳ ಆಸ್ಪತ್ರೆಯಲ್ಲಿ ಈ ನ ದೇಹಕ್ಕೆ [illegible] ಬೀಗಮ ಎಂಬಾಕೆಯು ಆಸ್ಪತ್ರೆಯ ಮಹಡಿಯಿಂದ ಕೆಳಕ್ಕೆ ಬಿದ್ದು ತನ್ನ ಗಾಯಗಳಾಗಿ ಕೃಷ್ಣರಾಜೇಂದ್ರ ಆ ಸ್ಪತ್ರೆಗೆ ಸಾಗಿಸಲಾಯಿತು. ಅತ [illegible] ಮೃತಳಾದಳೆಂದು ತಿಳಿದುಬಂದಿದೆ

ಪ್ರಬಂಧ ಸ್ಪರ್ಧೆ

ಮೈಸೂರು ಸ. ರಿ ಮಲ್ಲಪ್ಪನವರ ಪ್ರೌಢ ವಿದ್ಯಾಲಯದ ಭಾರತ ಸಂಘದವರು ಭಾರ ತದ ಮಹಾ ಪುರುಷರ ಜ್ಞಾಪಕಾರ್ಥವಾಗಿ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಿರು ವರು. ಅಖಿಲ ಕರ್ನಾಟಕದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಬಹುದು 'ನಿಮ್ಮ ಜೀವನದ ಗುರಿ', 'ನಿಮ್ಮ ಮನವ ನ್ನು ಸೂರೆಗೊಂಡ ಮಹಾತ್ಮ' 'ನಿಮ್ಮ ತಾಯ್ನಾಡಿನ ಉನ್ನತಿಯ ಮಾರ್ಗ' 'ನಿ ಮ್ಮ ಮನವನ್ನು ಸೂರೆಗೊಂಡ ಪುಸ್ತಕ', ಎಂಬುವುಗಳ ಪೈಕಿ ಯಾವುದಾದರೊಂದು ವಿಷಯವನ್ನು ಕುರಿತು ಪ್ರಬಂಧ ಬರೆದು ಕಾರ್ಯದರ್ಶಿ, ಮಲ್ಲಪ್ಪನವರ ಪ್ರೌಢ ವಿದ್ಯಾಲಯ, ಮೈಸೂರು, ಎಂಬ ವಿಳಾಸ ಕ್ಕೆ ಕಳುಹಬೇಕು

ಮಾಧ್ವ ಸಂಘ

ರಾಜಧಾನಿಯ ಮಾಧ್ವ ಸಂಘದ ಮೊ ದಲನೇ ವಾರ್ಷಿಕ ಸಭೆಯು [illegible] ದ್ಯಾರ್ ಬಿ ವೆಂಕಟರಾಜರಾಯರ ಅಧ್ಯಕ್ಷ ತೆಯಲ್ಲಿ ಈ ತಿಂಗಳ ೨೬ ನೇ ತಾ|| ಭಾನು ವಾರ ನಡೆಯುವುದಾಗಿದೆ.

ಪತ್ರಿಗಳ ರವಾನೆ

ಭಾರತದಲ್ಲಿರುವ ಬ್ರಿಟಿಷ್ ಆಫೀಸರು ಗಳ ಬಳಿಗೆ ಬರಲು ಇಂಗ್ಲೆಂಡಿನಲ್ಲಿರುವ ಅ ವರ ಪತ್ನಿಯರು ಪ್ರಯತ್ನಿಸುತ್ತಿರುವರು ಅವರ ರವಾನೆ ಬಗ್ಗೆ ಪರಿಶೀಲಿಸುತ್ತಿರುವು ದಾಗಿ ವಿ|| ಆನೆ ಎಂ.ವರು ಹೇಳಿರುವರು.

ಟಿರಾವಾಗೆ ಹೊಡೆತ

ಶುಕ್ರವಾರ ಜಪಾನೀ ಬಾಂಬರ್ ವಿಮಾ ನಗಳು ಹಾರಿ ಬಂದು ಟಿರಾವ್ ವಿಮಾನ ಕ್ಷೇತ್ರದ ಮೇಲೆ ಬಾಂಬು ಕೆಡವಿದವು. ರ ಸಿಯಾರ ಪ್ಲೇಸ್ ಮೇಲೆ ಶತ್ರು ವಿಮಾನ ಹ ಲವು ಬಾಂಬುಗಳನ್ನು ಕೆಡವಿದವು

೬ ಶತ್ರು ಯು-ಬೋಟುಗಳ ನಾಶ

ದಕ್ಷಿಣ ಐರ್ಲೆಂಡ್ ಬಳಿ ಜರ್ಮನ್ ಯು- ಬೋಟುಗಳು ಮಿತ್ರ ರಕ್ಷಣಾ ನೌಕಾಗುಂಪಿನ ಮೇಲೆ ಧಾಳಿ ನಡೆಸಲು [illegible] ಗೊಂಡವು. ಬ್ರಿಟಿಷ್ ನೌ [illegible] ಅನೇಕ ವಿಮಾನಗಳು ೬ ಶತ್ರು [illegible] ಗಳನ್ನು ನಾಶಮಾಡಿದವೆಂದು ವರದಿಯಾ ಗಿದೆ

ಜರ್ಮನಿ ಧ್ವಂಸ ಸಿದ್ಧ

ಟೆಹರಾನಿನಲ್ಲಿ ಸೇರಿ ಸಮಾಲೋಚನೆ ನಡೆಸಿದ ಚರ್ಚಿಲ್-ರೂಸ್‌ವೆಲ್ಟ್-ಸ್ಟಾಲಿ ನ್‌ಗಳು ಯುದ್ಧಗತಿಯನ್ನು ಬದಲಾಯಿಸು ವ ಬಗ್ಗೆ ಒಂದು ತೀರ್ಮಾನಕ್ಕೆ ಬಂದಿದ್ದಾ ರೆ ಜರ್ಮನಿಯ ಸರ್ವನಾಶಕ್ಕಾಗಿ ಒಂದು ಅಗಾಧ ದ್ವಿತೀಯ ರಣರಂಗವನ್ನು ತೆರೆದು ಪೂರ್ವ ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗ ಳಿಂದ ಮುತ್ತಿಗೆ ಹಾಕಿ ಅದರ ಮೇಲೆ ತೀ ವ್ರ ಕಾರ್ಯಾಚರಣೆ ನಡೆಸುವ ವಿಧಾನ, ಗೊ ತ್ತಾದ ವೇಳೆ, ದೊರಕಿಸಿಕೊಳ್ಳಬೇಕಾದ ಫಲ ಇವುಗಳ ಬಗ್ಗೆ ನಿರ್ಧಾರಕ್ಕೆ ಬರಲಾ ಗಿದೆ.

ಅವೆ ರಿಕಾ ರಷ್ಯಾ ಮತ್ತು ಬ್ರಿಟನ್ ಮೂ ರು ರಾಷ್ಟ್ರಗಳೂ ಯುದ್ಧ ಯುಗದಲ್ಲೂ ಮ ತ್ತು ಶಾಂತಿ ಕಾಲದಲ್ಲೂ ಒಟ್ಟಿಗೆ ಸೇರಿ ಜಗ ತ್ತಿನ ಕ್ಷೇಮಕ್ಕಾಗಿ ದುಡಿಯತಕ್ಕದ್ದು.

ಇಲ್ಲದೆ ಈ ಮೂರು ರಾಷ್ಟ್ರಗಳೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತುಕೊಂ ಡು ಪ್ರಜಾಕೋಟಿಯ ವಿಶ್ವಾಸಕ್ಕೆ ಪಾತ್ರ ವಾಗುವಂಥ ಶಾಂತಿಸ್ಥಾಪನೆಗಾಗಿ ಶ್ರಮಿಸ ಬೇಕು ಮತ್ತೂ ಪ್ರಜಾವರ್ಗದ ಅನೇಕ ತಲೆಮಾರುಗಳು ಉರುಳಿಹೋಗುವವರೆಗೂ ಮತ್ತೆ ಪ್ರಪಂಚದಲ್ಲಿ ಯುದ್ಧವೇ ಸಂಭವ ವಾಗದ ರೀತಿಯಲ್ಲಿ ಸ್ನೇಹಶಾಂತಿಯನ್ನು ಸ್ಥಾ ಪಿಸಬೇಕು ಎಂಬ ಪಾಗಿ ಅವರು ತೀರ್ಮಾ ನಿಸಿದ್ದಾರೆ

ಹಂಗೇರಿ ಸೈನ್ಯ ವಾಪಸು

ರಷ್ಯಾ ರಣಕ್ಷೇತ್ರದಲ್ಲಿ ಜರ್ಮನರೊಡನೆ ಕೂಡಿಕೊಂಡು ಕದನ ನಡೆಸುತ್ತಿದ್ದ ಹಂ ಗೇರಿ ಸೈನ್ಯವನ್ನು ಹಂಗೇರಿ ಸರ್ಕಾರ ವಾ ಪಸು ಕರೆಸಿದೆಯೆಂದು ಟಾಬಾವೆನ್ಸ್ ರೇಡಿ ಯೋ ವರದಿಮಾಡಿದೆ

ಪೆಸ್ಕಾರಾ ಬಳಿಗೆ ಮಿತ್ರರು

ಇಟಲಿ ರಣರಂಗದ ಆಡ್ರಿಯಾಟಿಕ್ ಮಾ ರ್ಗದಲ್ಲಿ ಮುನ್ನಡೆ ಇಡುತ್ತಿರುವ ಬ್ರಿಟಿಷ್ ೮ ನೇ ಸೇನೆ ಪೆಸ್ಕಾರ್ಕ್ಕೆ ಕೇವಲ ೧೫ ಮೈ ಲಿ ದೂರದೊಳಗಿರುವುದು ವರದಿ ಬಂ ದಿದೆ.

ಮೋಸ್ಲೆ ಮೇಲೆ ನಿರ್ಬಂಧ

ಫ್ಯಾಸಿಸ್ಟ್ ನಾಯಕ ಮೋಸ್ಲೆಯನ್ನು ಮೊಂಟ್ಗೊಮರಿಯವರೂ ಆಕೆಯು ರಾಜ [illegible] ಎಲ್ಲವನ್ನೂ ಅವ [illegible] ಬ್ರಿಟನ್ನಿನ ಗೃಹ ಸಚಿವರು ತಿಳಿಸಿರುವರು.

ಇಂದೂರಿನ ಬಿಕ್ಕಟ್ಟು

ಇಂದೂರು ಸಂಸ್ಥಾನದ [illegible] ಬಂದಿಗಳ ಮೇಲೆ [illegible] ಗಳ ಮೇಲೆ ಕೆಲವು ನಿರ್ಬಂಧಗಳನ್ನು [illegible] ಕಳುಗುಪ್ಪದೆಂದು ಒಪ್ಪಿದ ಸರ್ಕಾರ ಈ ಬಂಧಿಗಳ ಬಿಡುಗಡೆಯಾದ [illegible] ದಿನವೇ ಪ್ರಜಾಮಂಡಲದ [illegible] ನೆಂದು ಕಂಡುಬಂದ ಯುವಕೋರ್ವನ ನ್ನು ಸರ್ಕಾರ ಬಂಧಿಸಿತು ಪ್ರಜಾಮಂಡ ಲದ ಬಗ್ಗೆ ಸರ್ಕಾರದ ಮನೋಭಾವ ಬದ ಲಾಗಿಲ್ಲ. ಸಭೆಗಳು ಕೂಡದೆಂಬ ಆಜ್ಞೆ ಇನ್ನೂ ಜಾರಿಯಲ್ಲಿ ಇದೆ. ಸರ್ಕಾರದವರು ಅದನ್ನು ತೆಗೆದುಹಾಕುವಂತೆ ಕಾಣು ಒರು ವುದಿಲ್ಲವೆಂದು ತಿಳಿದು ಬರುತ್ತದೆ.

ಕಲ್ಕತ್ತಾ ಧಾಳಿಯಲ್ಲಿ ೬ ಜಪಾನಿ ವಿಮಾನಗಳ ನಾಶ

ಕಲ್ಕತ್ತಾ ನಗರದ ಮೇಲೆ ಭಾನುವಾರ ಜಪಾನಿ ವಿಮಾನಗಳು ಹಗಲಿನಲ್ಲಿ ಧಾಳಿ ಮಾಡಿದವು. ಈಗ ಅದರ ವಿವರಗಳನ್ನು ಕೊಡಲಾಗಿದೆ. ಶತ್ರುಗಳ ಬಾಂಬರ್ ವಿಮಾನಗಳು ಫೈಟರ್ ವಿಮಾ ನಗಳ ಬೆಂಬಲದೊಡನೆ ಎರಡು ಅಲೆಗಳಲ್ಲಿ ಬಂದು ಧಾಳಿ ಮಾಡಿದವು. ಬ್ರಿಟಿಷ್ ಫೈ ಟರ್ ವಿಮಾನಗಳು ಅವುಗಳನ್ನು ಎದುರಿ ಸಿ ೬ ವಿಮಾನಗಳನ್ನು ನಾಶಮಾಡಿ ಮತ್ತೆ ನಾಲ್ಕನ್ನು ಸ್ವಾಯತ್ತ ನಾಶಗೊಳಿಸಲಾಯಿ ತೆಂದು ಹೇಳಲಾಗಿದೆ. ಅನೇಕ ಬಾಂಬು ಗಳು ಬಿದ್ದವು. ಆದರೆ ಅನ್ನಪಾನ್ಯಗಳ ಹಾನಿ ಸ್ವಲ್ಪವಾದರೂ ಅನೇಕರು ಗಾಯ ಗೊಂಡು ವರದಿಯಾಗಿದೆ. ಶತ್ರುಧಾಳಿ ಆ ದಾಗ ರಸ್ತೆಗಳಲ್ಲಿ ಜನ ಸಂದಣಿ ಇದ್ದಿಲ್ಲ ವೆಂದೂ, ಇದರಿಂದ ಹೆಚ್ಚು ಗಾಬರಿಯೂ ಉಂಟಾಗಲಿಲ್ಲವೆಂದೂ ಹೇಳಲಾಗಿದೆ.

ಭಾರತ ಸ್ವಾತಂತ್ರ್ಯ-ಬ್ರಿಟನ್ನಿಗೆ ಲಾಭ

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾ ಡುತ್ತಿರುವ ಅಮೇರಿಕಾ ನಿವಾಸಿ ವಿ|| ಲೂಯಿ ಫಿಶರ್‌ರವರು ಕಳೆದವರ್ಷ ಭಾರತ ದಲ್ಲಿ ಪ್ರವಾಸ ಮಾಡಿ ಹಿಂದಿರುಗಿದ ಮೇಲೆ "ಅಂತಾರಾಷ್ಟ್ರೀಯ" ಎಂಬ ಪುಸ್ತಕ ಬರೆದಿರು ವರು. ಅದರಲ್ಲಿ ಭಾರತಕ್ಕೆ ಸ್ವಾತಂತ್ರ್ಯಕೊ ಟ್ಟಲ್ಲಿ ಆರ್ಥಿಕ ದೃಷ್ಟಿಯಿಂದ ಬ್ರಿಟನ್ನಿಗೆ ಲಾಭ ಉಂಟು ಎಂದು ಬರೆದಿರುವರು. ಈ ಮಾತ ಚರ್ಚಿಲ್‌ರಿಗೆ ಹಿಡಿಸಿರುವುದಿಲ್ಲ ವೆಂಬುದನ್ನು ನಾವು ಬಲ್ಲೆವು ಎನ್ನುತ್ತಾರೆ ಲೂಯಿ ಫಿಶರ್. ಒಪ್ಪಿಕೊಂಡಿದ್ದಾರೆ.

ಪರಲ್ ಬಂದರಲ್ಲಿ ಜಪಾನರು

ಪರಲ್ ಹಾರ್ಬರ್‌ನಲ್ಲಿ ತನ್ನ ಧಾಳಿ ಯಾಗಿ ಜಪಾನೀಯರು [illegible] ವರೆ ಅಲ್ಲಿ ೧೫೦೦೦೦ ಜಪಾನ್ [illegible] ಯರಿರುವರೆಂದು ಗೊತ್ತಾಗಿದೆ. ಅಲ್ಲಿಂದ ಅವರು ಮತ್ತೆ ತಮ್ಮ ಕಾರ್ಯಾಚರಣೆ ನ್ನು ಉಗ್ರರೂಪದಲ್ಲಿ ಆರಂಭಿಸಬಹುದೆಂದು ಹೇ ಳಲಾಗಿದೆ

ಫ್ರೆಂಚರು ಸೋತರೇಕೆ ?

ಸಂಯುಕ್ತ ಪ್ರಾಂತ್ಯದ ಮಾಜಿ ಗವರ್ನ ರ್‌ರಾಗಿದ್ದ ದಿವಂಗತ ಶ್ರೀ ಹ. [illegible] ವ್ರಾಲ್‌ರವರು ಭಾಷಣವನ್ನು ಮಾಡಿದಾ ಗಿನಲ್ಲಿ [illegible] ಜರ್ಮನರ್‌ರಿಗೆ ಫ್ರೆಂಚ್ [illegible] ದು ಹೇಳಲು [illegible] ಆದರೆ ಪ್ರಾನ್ಸಿನ [illegible] ನಗಳ [illegible] ದ [illegible] ಹೇಳಿದ್ದಾರೆ.

ಬೆಂಗಳೂರು ಚುನಾವಣೆ

ಸ್ವರು] ಬೆಂಗಳೂರು ೬

ಬೆಂಗಳೂರ ಪೌರಸಭೆಯ ೩೩ ಸ್ಥಾನಗಳಿಗೆ ೧೫ ಮಂದಿ ಕಾಂಗ್ರೆಸ್ಸಿನವರೂ ೮ ಮಂದಿ ಸ್ವತಂತ್ರರೂ ಚುನಾಯಿತರಾಗಿರುವರು. ಚುನಾಯಿತರಾದವರ ಹೆಸರುಗಳು:—

ಕಾಂಗ್ರೆಸ್ಸಿನವರು — ಶ್ರೀಯುತರುಗಳಾದ ಹಲ್ಲ್ಯ, ಹೆಚ್. ಹನುಮಂತಪ್ಪ, ಎಸ್. ಕೇಶವಯ್ಯಂಗಾರ್, ಜಿ. ಆರ್. ಯತಿರಾಜುಲುನಾಯ್ಡು, ರಾಮಲಾಲ್ ತಿವಾರಿ, ಗುಂಡೇನಹಳ್ಳಿ ನಂಜಪ್ಪ, ಎಸ್. ವಿಶ್ವನಾಥ್, ಪಿ ಬಿ ರಾಮಚಂದ್ರಗುಪ್ತ, ಹೆಚ್. ಬಿ ಶಂಕರಪ್ಪ, ಬಿ ಎಸ್. ಗುಪ್ತ, ಕೆ. ಎಸ್ ರಾಮಸ್ವಾಮಿ, ಟಿ ಟಿ. ಶರ್ಮ, ಎಂ ಎ ಗೋಪಾಲಸ್ವಾಮಿಅಯ್ಯಂಗಾರ್, ಎ. ಟಿ ನಾರಾಯಣಅಯ್ಯಂಗಾರ್, ಎಚ್ ಸಿ ಸೂರ್ಯನಾರಾಯಣರಾವ್ ಮತ್ತು ಶ್ರೀಮತಿ ದ್ವಾರಕಾಬಾಯಿ ಆಡಾಂಬಿ.

ಸ್ವತಂತ್ರರು:— ಶ್ರೀಯುತರುಗಳಾದ ಎಂ. ಎ ಸೀತಪ್ಪ, ಸಿ ಬನ್ನಯ್ಯ, ಟಿ. ಗಂಗಸ್ವಾಮಪ್ಪ, ಟಿ ವೆಂಕಟರಮಣಪ್ಪ, ಸಿ ಶಿವಶಂಕರ್, ಸಿ. ಎಸ್ ನರಸಿಂಗರಾವ್, ಪಿ. ಆರ್. ರಾಮಯ್ಯ, ಎಲ್. ಎಸ್. ರಾಜ

ಚುನಾವಣೆ ರದ್ದಾಗಬೇಕು

ಚಿಕ್ಕಬಳ್ಳಾಪುರದ ಪೌರಸಭಾ ಚುನಾವಣೆಯಲ್ಲಿ ಪರಾಜಿತರಾದ ಶ್ರೀ ಪೋಕ್ಕಾಲಿ ವರದಪ್ಪನವರು ಚುನಾವಣೆಗೆ ನಿಂತಿದ್ದ ಶ್ರೀ ಮಲ್ಲಿಕಾರ್ಜುನಯ್ಯ ಮತ್ತು ಇತರ ನಾಲ್ಕು ಮಂದಿ ಮೇಲೆ ಜಿಲ್ಲಾ ನ್ಯಾಯಾಧೀಶರ ಮುಂದೆ ಅವರು ಚುನಾವಣೆಗೆ ಅರ್ಹರಲ್ಲವೆಂದು ಅರ್ಜಿ ಸಲ್ಲಿಸಿ ಈ ಚುನಾವಣೆ ರದ್ದಾಗಬೇಕೆಂದು ಸೂಚಿಸಿದ್ದಾರೆ

ಉಮೇದುವಾರಿಕೆ ವಾಪಸು

ತುಮಕೂರಿನ ಪೌರಸಭೆಗೆ ಸ್ವತಂತ್ರರಾಗಿ ನಿಂತಿದ್ದ ಶ್ರೀಯುತರುಗಳಾದ ಜಿ. ಸಿ. ಬಸವಣ್ಣ ಮತ್ತು ಟಿ. ಎಸ್. ಶಿವಗಂಗಯ್ಯನವರು ತಮ್ಮ ಉಮೇದುವಾರಿಕೆಯನ್ನು ವಾಪಸ್ಸು ಪಡೆದಿರುವರು ತತ್ಫಲವಾಗಿ ನಗರದ ೫ ವಿಭಾಗಗಳಿಂದ ಸ್ಪರ್ಧೆ ಇಲ್ಲದೆ ಕಾಂಗ್ರೆಸ್ ಉಮೇದುವಾರರೇ ಚುನಾಯಿತರಾದಂತಾಗಿದೆ.

ಅಧಿಕಾರಿಗಳ ಕ್ರಮಲೋಪ

ಒಡ್ಡಂಪುರದಲ್ಲಿ ಪೌರಸಭಾ ಚುನಾವಣೆ ನಡೆದಾಗ ರಿಟರ್ನಿಂಗ್ ಆಫೀಸರುಗಳು ಕ್ರಮಲೋಪ ಮಾಡಿರುವರೆಂದೂ ಮರು ಚುನಾವಣೆ ನಡೆಯಬೇಕೆಂದು ಸೋತ ಸ್ವತಂತ್ರ ಉಮೇದುವಾರರು ಪರ್ಜ ಪ್ರಯುಕ್ತ ಮಾಡಿ ಪ್ರಿಫರೆಂಡೂ ತಿಳಿದುಬಂದಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇ ಸಂಪೂರ್ಣ ಜಯವಾಗಿದೆ

ಸೇ|| ೭೦ ಕಾಂಗ್ರೆಸ್ಸಿಗೆ

ಕೋಲಾರದ ಪೌರಸಭೆಯ ೧೦ ಸ್ಥಾನಗಳಿಗೆ ೭ ಮಂದಿ ಕಾಂಗ್ರೆಸ್ ಪ್ರತಿನಿಧಿಗಳು ಚುನಾಯಿತರಾಗಿರುವರು. ಕಾಂಗ್ರೆಸ್ಸಿನವರು ೧೦ ಮಂದಿಯೂ ಸ್ವತಂತ್ರರು ೧೦ ಮಂದಿಯೂ ಚುನಾವಣೆಗೆ ನಿಂತಿದ್ದರು

ಲಾರಿ ಇಂಜಿನ್ ಢಿಕ್ಕಿ

ಶನಿವಾರ ಮಧ್ಯಾಹ್ನ ಮಂಡ್ಯದ ಹತ್ತಿರವಿರುವ ರೈಲ್ವೆ ಕ್ರಾಸಿಂಗ್‌ನಲ್ಲಿ ಸಕ್ಕರೆ ಕಂಪನಿ ಲಾರಿ ಮತ್ತು ಗೂಡ್ಸ್ ರೈಲ್ ಢಿಕ್ಕಿ ಸಂಭವಿಸಿತು. ಕ್ರಾಸಿಂಗ್ ಬಾಗಿಲು ಮುಚ್ಚಿಲ್ಲದಿದ್ದುದೇ ಈ ಅಪಘಾತಕ್ಕೆ ಕಾರಣವಾಗಿದೆ. ಲಾರಿ ನಾಶವಾಗಿದೆ. ಡ್ರೈವರ್ ಅನಾಹುತದಿಂದ ಪಾರಾಗಿರುವನು. ಲಾರಿಯಲ್ಲಿದ್ದ ಕೂಲಿಯೊಬ್ಬನು ಅನಾಹುತಕ್ಕೆ ತುತ್ತಾಗಿದ್ದಾನೆ ಮತ್ತೊಬ್ಬನಿಗೆ ತೀವ್ರ ಗಾಯವಾಗಿದೆ ರೈಲಿಗೆ ಹೆಚ್ಚು ನಷ್ಟವಾಗಿಲ್ಲ

ಗೋವಧಾ ಯತ್ನಕ್ಕೆ ಶಿಕ್ಷೆ

ಚಿತ್ರದುರ್ಗ ಜಿಲ್ಲೆಯಿಂದ ಬೆಂಗಳೂರಿಗೆ ೨೯ ರಾಸುಗಳನ್ನು ವಾಗಡಿಯ ರಸೂಲ್ ಖಾನ್ ಮತ್ತು ಆತನ ಅನುಯಾಯಿಗಳು ವಧೆ ಮಾಡುವ ಸಲುವಾಗಿ ಸಾಗಿಸುತ್ತಿದ್ದರು. ೧೦ ವರ್ಷಕ್ಕೂ ಕಡಿಮೆ ವಯಸ್ಸಿನ ೨೭ ರಾಸುಗಳು ಆ ಗುಂಪಿನಲ್ಲಿ ಇದ್ದುವು. ಸರ್ಕಾರದವರ ಇತ್ತೀಚಿನ ಆಜ್ಞೆಗೆ ಇದು ವಿರುದ್ಧವಾಗಿದ್ದುದರಿಂದ ಚಿತ್ರದುರ್ಗ ನ್ಯಾಯಾಧೀಶರು ಅವರಿಗೆ ತಲಾ ೭೫ ರೂ. ದಂಡ ವಿಧಿಸಿದರು

ನರಕ ದ್ವಾರ ತೆರೆಯಲು ಸಿದ್ಧತೆ

ಚಿತ್ತೂರು ಜಿಲ್ಲೆಯಲ್ಲಿದ್ದ ಪಾನನಿರ್ಬಂಧ ಕಾನೂನು ಬರುವ ಜನವರಿಯಿಂದ ತಪ್ಪಿಹೋಗುವುದು ಈಗಾಗಲೇ ಆ ಜಿಲ್ಲೆಯಲ್ಲಿ ತೆರೆಯಲಾಗುವ ಹೆಂಡದಂಗಡಿಗಳಿಗಾಗಿ ಕಂಟ್ರಾಕ್ಟರುಗಳು ಸ್ಪರ್ಧೆಯಿಂದ ಮುಂದೆ ಬರುತ್ತಿದ್ದಾರೆ. ತೆರೆಯಲಿರುವ ೫೦ ಅಂಗಡಿಗಳಿಗೆ ಆರ್ ಜನ ನಾನು ತಾನೆಂದು ಹೆಚ್ಚು ಹೆಚ್ಚಾಗಿ ಹಣ ಕಟ್ಟುತ್ತಿದ್ದಾರೆ.

ಲೀಗಿನ ಖಂಡನೆ

ಮದರಾಸು ಪ್ರಾಂತ್ಯದ ಮುಸ್ಲಿಂ ಲೀಗಿನವರು ಪಾನ ನಿರೋಧ ಕಾನೂನನ್ನು ಸರ್ಕಾರವು ರದ್ದುಪಡಿಸಿದ್ದನ್ನು ತೀವ್ರವಾಗಿ ಖಂಡಿಸಿದ್ದಾರೆ

೧,೫೦೦ ವಿದ್ಯಾರ್ಥಿಗಳ ಸೆರೆ

ಅಸ್ಲೋ ವಿಶ್ವವಿದ್ಯಾನಿಲಯದ ೧೫೦೦ ವಿದ್ಯಾರ್ಥಿಗಳನ್ನು ಜರ್ಮನರು ಬಂಧಿಸಿ, ಸ್ವಾಗತವುಳ್ಳ ಮಾಡಿದಬಗ್ಗೆ ಸ್ವೀಡನ್ ಮತ್ತು ಸ್ವಿಟ್ಜರ್ಲೆಂಡ್ ಪತ್ರಿಕೆಗಳು ಕ್ರೋಧಗೊಂಡಿವೆ.

ಹಿಂದೂ ಮಹಾಸಭಾ ರಜತೋತ್ಸವ

ಅಮೃತಸರದಲ್ಲಿ ನಡೆಯುವ ಹಿಂದೂ ಮಹಾಸಭಾ ಅಧಿವೇಶನದ ಸಮಯದಲ್ಲಿ, ಪಂಡಿತ ಮದನ ಮೋಹನ ಮಾಳವಿಯರ ಅಧ್ಯಕ್ಷತೆಯಲ್ಲಿ ಒಂದು ದಿವಸ ರಜತೋತ್ಸವದ ವಿಶೇಷ ದಿನಾಚರಣೆಯನ್ನು ನಡೆಸುವಂತೆ ನಿರ್ಧರಿಸಲಾಗಿದೆ ಮಾಳವಿಯವರು ನಿಶ್ಶಕ್ತಿಯಿಂದ ಬರಲಾಗದಿದ್ದರೆ ಅವರ ಭಾವ ಚಿತ್ರವನ್ನು ಅಗ್ರಸ್ಥಾನದಲ್ಲಿಟ್ಟು ಉತ್ಸವವನ್ನು ನೆರವೇರಿಸಲಾಗುವುದು.

ಎತ್ತಿನ ರವಾನೆಗೆ ಜುಲ್ಮಾನೆ

ಸೇಲಂ ಜಿಲ್ಲೆಯ ಕಾವೇರಿ ಗೌಂಡರ್ ಮತ್ತು ಇತರ ಕೆಲವರು ಪರವಾನಿಗೆ ಇಲ್ಲದೆ ೧೫ ಜೊತೆ ಎತ್ತುಗಳನ್ನು ಸಂಸ್ಥಾನದ ಗಡಿಯಿಂದ ಹೊರಕ್ಕೆ ಸಾಗಿಸಿದರೆಂಬ ಆಪಾದನೆ ಮೇಲೆ ಕೊಳ್ಳೇಗಾಲದ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ಎತ್ತಿಗೆ ೨೦ ರೂ ನಂತೆ ಒಟ್ಟು ೩೦೦ ರೂ. ಜುಲ್ಮಾನೆ ವಿಧಿಸಿದರು

ಡಕಾಯಿತ ಬಂದಿ ಪರಾರಿ

ಡಕ್ಕಾದಲ್ಲಿ ನಡೆದ ಕೊಲೆಯೊಂದಕ್ಕೆ ಸಂಬಂಧಿಸಿದ ೪ ಬಂದಿಗಳನ್ನು ವಿಚಾರಣೆಗಾಗಿ ನ್ಯಾಯಾಸ್ಥಾನಕ್ಕೆ ಕರೆತಂದು ವಾಪಸ್ಸು ಬಂದಿಖಾನೆಗೆ ಕೊಂಡೊಯ್ಯುತ್ತಿರಾಗ ಆ ಪೈಕಿ ಒಬ್ಬ ಖೈದಿಯು ತಪ್ಪಿಸಿಕೊಂಡು ಓಡಿಹೋಗಿರುವನು. ಇನ್ನೂ ನಾಲ್ವರ ಮೇಲೆ ಕೊಲೆ ಆಪಾದನೆ ಹೊರಿಸಲಾಗಿತ್ತು ಅವರಲ್ಲಿ ಡಕ್ಕಾ ಎ ಆರ್.ಪಿ ವಾರ್ಡನರೊಬ್ಬರಿರುವರು. ನ್ಯಾಯ ಸಮಿತಿಯವರು ಈ ನಾಲ್ವರೂ ತಪ್ಪಿತಸ್ಥರಲ್ಲವೆಂದು ತೀರ್ಮಾನಿಸಿದ್ದರಿಂದ ಅವರ ಬಿಡುಗಡೆಯಾಯಿತು. ಆದರೆ ಬಿಡುಗಡೆ ಹೊಂದಿ ಹೊರಕ್ಕೆ ಬಂದವರ ಪೈಕಿ ಜತೆಗೋಪಾಲ್ ಎಂಬಾತನನ್ನು ಭಾರತ ರಕ್ಷಣಾ ಕಾನೂನಿನಂತೆ ಮತ್ತೆ ದಸ್ತಗಿರಿಮಾಡಿ ಸೆರೆಮನೆಗೆ ಕೊಂಡೊಯ್ದರು.

ಮೊಹಿಲ್ ಕಡೆಗೆ ರಷ್ಯನರು

ಬಿಳಿ ರಷ್ಯಾ ಕ್ಷೇತ್ರದಲ್ಲಿ ರಷ್ಯ ಯೋಧರು ಮೊಹಿಲ್ ಕಡೆಗೆ ನುಗ್ಗುತ್ತಿದ್ದಾರೆ. ಜ್ಲೋಬಿನ್ ರೈಲ್ವೆ ಜಂಕ್ಷನ್ ಕಡೆಗೂ ಕ್ರಮೇಣ ಬೆಳೆಯೂ ರಷ್ಯನರ ಮುಂದೋಟ ತಡೆ ಇಲ್ಲದೆ ಭರದಿಂದ ಸಾಗಿದೆ ನೀಪರ್ ನದಿ ಪ್ರದೇಶದಲ್ಲಿ ಬಿಡಾರ ಮಾಡಿದ್ದ ೫೦೦ ಮಂದಿ ಜರ್ಮನರನ್ನು ರಷ್ಯನರು ಬಂಧಿಸಿದ್ದಾರೆ

ಬೊಲಿವಿಯಾ ಯುದ್ಧ ಘೋಷಣೆ

ಬೊಲಿವಿಯಾ ರಿಪಬ್ಲಿಕ್‌ನ ಅಧ್ಯಕ್ಷರೂ ಮಂತ್ರಿಗಳೂ ಸೇರಿ ಗೋಪ್ಯವಾಗಿ ಸಮಾಲೋಚನೆ ನಡೆಸಿ ಒಂದು ಇಧ್ಯರ್ಥಕ್ಕೆ ಬಂದ ಮೇಲೆ ಮೊನ್ನೆ ಬೊಲಿವಿಯಾ ಸರ್ಕಾರವು ಪ್ರಕಟಣೆಯೊಂದನ್ನು ಹೊರಡಿಸಿ ತಾನೂ ಮಿತ್ರಪಕ್ಷದೊಡಗೂಡಿ ಆಕ್ಸಿಸ್ ರಾಷ್ಟ್ರಗಳ ಮೇಲೆ ಯುದ್ಧ ಘೋಷಿಸಿರುತ್ತದೆ

ನಾಳೆ ಪೋಸ್ಟಾಫೀಸು ರಜ

ಬಕ್ರೀದ್ ಹಬ್ಬದ ಪ್ರಯುಕ್ತ ನಾಳೆ ದಿನ ಟಪಾಲು ಮತ್ತು ತಂತಿ ಇಲಾಖೆಯ ಕಚೇರಿಗಳಿಗೆ ರಜ ಕೊಡಲಾಗಿದೆ.

Edited, printed and published by A. R Nagarajan, at the Sadhvi Press, D Subbaiah Road, Mysore.

ಹಿಂದೂ ಅಂಗಡಿಗಳ ಬಹಿಷ್ಕಾರ

ಸಿಂಧ್ ಪ್ರಾಂತ್ಯದಲ್ಲಿ ಹಿಂದೂ ಅಂಗಡಿಗಳ ಬಹಿಷ್ಕಾರ ರೂಪವಾದ ಕೋಮುವಾರು ದ್ವೇಷವನ್ನುಂಟುಮಾಡುವ ಚಳುವಳಿಗೆ ಅಲ್ಲಿನ ಸರ್ಕಾರದವರು ಅವಕಾಶ ಕೊಟ್ಟು ಪ್ರೋತ್ಸಾಹಿಸುತ್ತಿರುವ ನೀತಿಯನ್ನು ಖಂಡಿಸಿ ಅಲ್ಲಿನ ಹಿಂದೂ ಮಹಾ ಸಭೆಯ ಕಾರ್ಯಕಾರಿ ಸಮಿತಿಯು ನಿರ್ಣಯ ಮಾಡಿರುತ್ತದೆ. ಮುಸ್ಲಿಮರು ಈ ಚಳುವಳಿಯನ್ನು ಇನ್ನೂ ಮುಂದೆಯೂ ಬೆಳೆಸಿದರೆ ಮಧ್ಯ ಪ್ರಾಂತ ಮತ್ತು ಬೀರಾರಿನ ಹಿಂದೂಗಳು ತಮ್ಮ ಪ್ರಾಂತಗಳಲ್ಲಿ ಹಿಂದೂ ಸ್ವದೇಶಿ ಚಳುವಳಿಯನ್ನು ಹೂಡಬೇಕಾಗುವುದೆಂದು ಎಚ್ಚರಿಸಲಾಗಿದೆ.

ವಕೀಲರಿಗೆ ಒದಗಿದ ಅಡ್ಡಿ

ನವಂಬರ್ ೨೯ ರಲ್ಲಿ ಮದರಾಸ್ ಗವರ್ನರು ಕುಂಭಕೋಣಂಗೆ ಭೇಟಿ ಇತ್ತಾಗ ಅಲ್ಲಿನ ವಕೀಲರು ಬಾರ್ ಅಸೋಸಿಯೇಷನ್ ಕೊಠಡಿಗೆ ಹೋಗಲೂ ಮತ್ತು ಕೋರ್ಟು ಪ್ರವೇಶಿಸಲು ಸಹ ಮುಂಚಿತವಾಗಿ ತಿಳಿವಳಿಕೆ ಕೊಡದೆ ಏಕಾಏಕಿ ಹಗಲು ೧೧ ರಿಂದ ಮಧ್ಯಾಹ್ನ ೧ ಗಂಟೆ ವರೆಗೆ ತಡೆದುದನ್ನು ಕುಂಭಕೋಣದ ಬಾರ್ ಅಸೋಸಿಯೇಷನವರು ಖಂಡಿಸಿದ್ದಾರೆ

ವಿದ್ಯಾರ್ಥಿಗಳು ಯುದ್ಧ ಸೇವೆಗೆ

ಸೈನ್ಯದಲ್ಲಿ ಕಮೀಷನ್ಡ್ ಹುದ್ದೆಗಳಿಗೆ ಸೇರಲು ಅರ್ಹರಾದ ತಮ್ಮ ಕೈ ಕೆಳಗಿನ ವಿದ್ಯಾರ್ಥಿಗಳನ್ನು ಶಿಫಾರಸು ಮಾಡಿ ಕಳುಹಿಸುವ ಅಧಿಕಾರವನ್ನು ಮದರಾಸ್ ಸರ್ಕಾರದವರು ಅಲ್ಲಿನ ಕಾಲೇಜ್ ಪ್ರಿನ್ಸಿಪಾಲರುಗಳಿಗೆ ಕೊಟ್ಟಿರುತ್ತಾರೆ ಹಾಗೆ ಚುನಾಯಿಸಲ್ಪಟ್ಟ ವಿದ್ಯಾರ್ಥಿಗಳು ನೇರವಾಗಿ ಪ್ರಾಂತಿಕ ಚುನಾವಣೆ ಬೋರ್ಡಿನ ಮುಂದೆ ಹಾಜರಾಗಬಹುದು

ಕನ್ನಡ ಪುಸ್ತಕಾಲಯ

ಮತ್ತು

ಸಂಚಾಲನಾ ಪುಸ್ತಕ ಭಂಡಾರ

(Circulating Library)

AT

ಸ್ಟೂಡೆಂಟ್ಸ್ ಹಾಲ್,

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

9—12—1943 ನೇ ತಾರೀಖು ತೆರೆಯಲ್ಪಡುತ್ತದೆ.

"A" Class ಚಂದಾ ಮೊಬಲಗು ತಿಂಗಳು 1 ಕ್ಕೆ 1—8—

"B" Class ಚಂದಾ ಮೊಬಲಗು ತಿಂಗಳು 1 ಕ್ಕೆ 0—12—

ಹೆಚ್ಚಿನ ವಿಚಾರವನ್ನು ಸಂಸ್ಥೆಯಲ್ಲಿ ತಿಳಿಯಬೇಕಾಗಿ ವಿನಂತಿ

ನಮ್ಮಲ್ಲಿ ಉತ್ತಮವಾದ ಕನ್ನಡ ಕಥೆಗಳು ಕಾದಂಬರಿಗಳು ಮತ್ತು ನಾಟಕಗಳು ಮಾರಾಟಕ್ಕೆ ಇಡಲ್ಪಟ್ಟಿವೆ ಕನ್ನಡ ಬಾಂಧವರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಏಜೆಂಟ್ಸ್:- C. S Rao, ಸ್ಟೂಡೆಂಟ್ಸ್ ಹಾಲ್. ವ್ಯವಸ್ಥಾಪಕ

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧—೧—೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ

ಬಿ. ಪುಟ್ಟಣ್ಣ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ — ಚಿಲ್ಲರೆಯಾಗಿ ಕೊಳ್ಳುವವರಿಗೆ, ಬೂರಾಸಕ್ಕರೆ ಸಿಕ್ಕುತ್ತದೆ ಇಲ್ಲಿಯ ಮತ್ತು ಸಂತೆ ಪೇಟೆ ಬ್ರಾಂಚ್ ಅಂಗಡಿಗಳಲ್ಲಿ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಸಂಪುಟ ೨] ಬುಧವಾರ ೮--೧೧--೪೪ [ಸಂಚಿಕೆ ೧೧೦

ಮೈಸೂರು ರಾಜಕೀಯ ಬಂದಿಗಳೆಲ್ಲರ ಬಿಡುಗಡೆ

ಮುಸೋಲಿನಿ ಅಳಿಯ ಕೌಂಟ್ ಚಿಯಾನೋವಿಗೆ ಫಾಶಿ ಶಿಕ್ಷೆ

ಚಕ್ರವರ್ತಿ ಸಾರ್ವಭೌಮರಿಗೆ ಇನ್‌ಫ್ಲುಯೆನ್ಜಾ

ರಾಜಕೀಯ ಬಂದಿಗಳ ಬಿಡುಗಡೆ

ಸ್ವಂ. ಸು.] ಬೆಂಗಳೂರು ೮.

ಸಂಸ್ಥಾನದ ಎಲ್ಲ ರಾಜಕೀಯ ಬಂದಿಗಳನ್ನೂ ಮತ್ತು ಡಿಟೆನ್ಯೂಗಳನ್ನೂ ಯಾವ ಷರತ್ತೂ ಇಲ್ಲದೆ ಬಿಡುಗಡೆ ಮಾಡಲು ಸರ್ಕಾರದವರು ನಿನ್ನೆ ರಾತ್ರಿ ಆಜ್ಞೆ ಮಾಡಿದ್ದಾರೆ.

ಮಿಲಿಟರಿ ಲಾರಿ ಹೊಡೆದು ಮರಣ

ಮೈಸೂರು, ೮

ನಿನ್ನೆ ರಾತ್ರಿ ೭-೧೫ ಗಂಟೆ ಸಮಯದ ದೊಡ್ಡಪೇಟೆ ಸ್ವಾಮಿ ಚೌಕದ ಹತ್ತಿರ ಒಂದು ಮಿಲಿಟರಿ ಲಾರಿಯು ಆಂಜನೇಯ ದೇವಸ್ಥಾನದ ಕಡೆಗೆ ಹೋಗುತ್ತಿದ್ದ ಚನ್ನ ವೆಂಕಟರಮಣ ಶೆಟ್ಟಿ ಎಂಬುವರಿಗೆ ಹೊಡೆದು, ಅವರು ಅಲ್ಲೇ ಮರಣ ಹೊಂದಿದರೆಂದು ವರದಿಯಾಗಿದೆ.

ಗಾಂಧಿ ಜಯಂತಿ ಪ್ರತಿಧ್ವನಿ

ಗಾಂಧಿ ಜಯಂತಿ ದಿನ ಲೈಸೆನ್ಸ್ ಇಲ್ಲದೆ ಮೆರವಣಿಗೆ ನಡೆಸಿದ ಶ್ರೀ ಹೆಚ್. ವೈ. ಶಾರದಾಪ್ರಸಾದ್ ಮತ್ತು ಇತರರು ಮಂದಿ ಮೇಲೆ ಹೂಡಲಾಗಿದ್ದ ಮೊಕದ್ದಮೆ ಈ ದಿನ ವಿಚಾರಣೆಗಿತ್ತು. ಎರಡನೇ ಮ್ಯಾಜಿಸ್ಟ್ರೇಟರು ಈ ದಿನ ವಿಚಾರಣೆ ನಡೆಸದೆ ಮೊಕದ್ದಮೆಯನ್ನು ಇದೇ ತಿಂಗಳು ೧೮ನೇ ತಾರೀಖಿಗೆ ಮುಂದೂಡಿರುವರು.

ಉದಾರ ದಾನ

೫೦ ಕರೀಷನರಿಂದ ದಿವಂಗತ ಶ್ರೀ ಸಿ. ಸುಬ್ರಹ್ಮಣ್ಯರಾಯರ ಮಕ್ಕಳಾದ ಮೆಡಿಕಲ್ ಕಾಲೇಜ್ ವಿದ್ಯಾರ್ಥಿ ಶ್ರೀ ಸಿ ಆರ್. ಕೃಷ್ಣಸ್ವಾಮಿಯವರು ತಮ್ಮ ತಂದೆಯ ಹೆಸರಿನಲ್ಲಿ ರಾಜಧಾನಿಯ ಹೊಯ್ಸಳ ಕರ್ನಾಟಕ ಬಡ ವಿದ್ಯಾರ್ಥಿಗಳ ಹಾಸ್ಟಲಿಗೆ ೧೦೧ ರೂ. ಗಳನ್ನು ಕೊಟ್ಟಿದ್ದಾರೆ.

ನಿರ್ಬಂಧ ತೊಲಗುವ ಸಂಭವ

ಶ್ರೀ ಎಚ್. ಬಿ. ದಾಸಪ್ಪನವರ ಮೈಸೂರು ಬಿಟ್ಟು ಹೊರಹೋಗದಂತೆ ಸರ್ಕಾರದವರ ನಿರ್ಬಂಧಾಜ್ಞೆಯು ಶೀಘ್ರದಲ್ಲೇ ರದ್ದಾಗುವ ಸಂಭವವಿದೆಯೆಂದು ತಿಳಿದು ಬಂದಿದೆ.

ಫುಟ್‌ಬಾಲ್

ಮರ್ಕೆಂಟೈಲ್ ಫುಟ್‌ಬಾಲ್ ಪಂದ್ಯದಲ್ಲಿ ನಿನ್ನೆ ನಡೆದ ಪಂದ್ಯದಲ್ಲಿ ವಿ. ಸ್ಪೋರ್ಟಿಂಗ್ ಮತ್ತು ಮಹಾರಾಜಾ ಕಾಲೇಜಿನವರೂ ಮೈಸೂರು ಬ್ಯಾಂಕ್ ಕ್ಲಬ್ಬಿನವರ ನಡುವೆ ನಡೆದ ಪಂದ್ಯದಲ್ಲಿ ಬ್ಯಾಂಕಿನವರು ೩ ಗೋಲುಗಳನ್ನು ಹೊಡೆದರು. ಕಾಲೇಜಿನವರು ಹೊಡೆದ ೨ ನೇ ಗೋಲನ್ನು ರೆಫ್ರಿಯವರು ಗೋಲ್ ಎಂದು ಒಪ್ಪದ ಕಾರಣದಿಂದ ಪ್ರೇಕ್ಷಕರಲ್ಲಿ ಅಸಮಾಧಾನ ಹುಟ್ಟಿಕೊಂಡು ಆಟ ನಿಂತು ಹೋಯಿತು. ಪಂದ್ಯದ ಫಲಿತಾಂಶ ಮುಂದಿನ ಸಭೆಯಲ್ಲಿ ತೀರ್ಮಾನ ಮಾಡಲು ಬಿಡಲ್ಪಟ್ಟಿದೆ.

ಆಸ್ಪತ್ರೆ ಪ್ರಾರಂಭೋತ್ಸವ

ಹೆಗ್ಗಡದೇವನಕೋಟೆ ತಾ॥ ಸರಗೂರು ಹೋಬಳಿ ಹಂಪಾಪುರ ಗ್ರಾಮದಲ್ಲಿ ಬಡಗಲಪುರದಲ್ಲಿ ಸಾಹುಕಾರ್ ಶ್ರೀ ಲಿಂಗೇಗೌಡರು ಕಟ್ಟಿಸಿರುವ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ಈ ದಿನ ಮಧ್ಯಾಹ್ನ ಜಿಲ್ಲಾಧಿಕಾರಿಗಳಾದ ಶ್ರೀ ಸಿ. ಎಂ. ಹೆಚ್ ರಣದೋಳೆಸಿಂಗ್‌ರವರು ನೆರವೇರಿಸಿದರು.

ಕವಿಗಳೇ ಗತಿ

ನಿನ್ನೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜು ಬಿ. ಟಿ ಹಾಲಿನಲ್ಲಿ ಸಂಘದ ಆಶ್ರಯದಲ್ಲಿ ಶ್ರೀಮಾನ್ ರಂ ಶ್ರೀ ಚಕ್ರವರ್ತಿ ಅವರ ಅಧ್ಯಕ್ಷತೆಯಲ್ಲಿ ಚರ್ಚಾಕೂಟವೊಂದು ನಡೆಯಿತು. "ನವೀನ ಜಗತ್ ನಿರ್ಮಾಣ ಕಾರ್ಯದಲ್ಲಿ ಜಗತ್ತು ಮುಂದುವರೆಯಬೇಕಾದರೆ ರಾಜಕಾರಣ ಪಟುಗಳಿಂದಲ್ಲ; ಕವಿಗಳಿಂದ " ಎಂಬ ಚರ್ಚೆಯ ವಿಷಯವನ್ನು ಶ್ರೀ ವಿ ಕೃ ಗೋಕಾಕರವರು ಸೂಚಿಸಿದರು. ಶ್ರೀಮಾನ್ ಎಚ್. ಕೆ. ಕೃಷ್ಣಸ್ವಾಮಿಯವರು ಪ್ರತಿಪಕ್ಷ ವಿರೋಧಿಗಳಾಗಿದ್ದರು. ಕೊನೆಯಲ್ಲಿ ಮತ ತೆಗೆದುಕೊಂಡಾಗ ಸಭೆಯಿಂದ ಅಂಗೀಕೃತವಾಯಿತು ಎಂಬುದಾಗಿ ಪ್ರಸ್ತುತ ಸಾಹಿತ್ಯ ಸಂಘದ ಕಾರ್ಯದರ್ಶಿಗಳು ಬರೆಯುತ್ತಾರೆ.

ಕಾಂಗ್ರೆಸ್ ಹಾರಕ್ಕೆ ೧೦೧ ರೂ. ಸಿಕ್ಕಿತು

ಶ್ರೀ ಸಿದ್ದಲಿಂಗಪ್ಪನವರು ಮೊನ್ನೆ ಚಿತ್ರದುರ್ಗವನ್ನು ಕಳುಹಿಸೋದನೆಯಿ ಅಲ್ಲಿನ ನಿವಾಸಿಗಳು ಅವರಿಗೆ ಅಭೂತ ಪೂರ್ವವಾದ ಸ್ವಾಗತ ನೀಡಿ ಮೆರವಣಿಗೆಯಲ್ಲಿ ಅವರ ಮನೆ ಬಳಿಗೆ ಕರೆದುಕೊಂಡು ಹೋದರು. ಅಲ್ಲಿ ಅವರಿಗೆ ಹಾಕಿದ ಹಾರ ಹರಾಜಿನಲ್ಲಿ ಆ ಹಾರವನ್ನು ಅಲ್ಲೇ ಹರಾಜು ಹಾಕಲಾಗಿ ಶ್ರೀ ದುಮ್ಮಿ ಮುರಿಘಪ್ಪನವರು ೧೦೧ ರೂಪಾಯಿಗೆ ಕೊಂಡರು.

ಕಲ್ಕತ್ತಾ ಛಾಟಿ ನಷ್ಟ

ಛಾಮರಾಜ ಕಲ್ಕತ್ತಾದ ಮೇಲೆ ಶತ್ರುಗಳ ದಾಳಿಯಾದಾಗ ಕೆಡವಿದ ಬಾಂಬುಗಳ ಫಲವಾಗಿ ಮಿಲಿಟರಿಗೆ ಸಂಬಂಧಪಟ್ಟ ಕಟ್ಟಡ ಒಬ್ಬರು ಸತ್ತಿರುವರು. ನಗರಕ್ಕೆ ಆದ ನಷ್ಟ ಸ್ವಲ್ಪ ಸಾಧಾರಣವಾದುದಾಗಿದೆ. ಶತ್ರು ವಿಮಾನಗಳಲ್ಲಿ ಕೆಲವನ್ನು ಹೊಡೆದು ಉರುಳಿಸಲಾಗಿದೆ ಎಂದು ಇನ್ನೊಂದು ವರದಿ ತಿಳಿಸುತ್ತದೆ. ಇದರಲ್ಲಿ ಮೂರನೇ ಒಂದು ಭಾಗ ಸ್ತ್ರೀಯರೇ ಇದ್ದು ಬಹಳ ನಷ್ಟವಾದಂತೆ ಗೊತ್ತಾಗಿದೆ.

ಆಹಾರ ಸಮ್ಮೇಳನ

ಸ್ವಂ ಸು.] ನಂಜನಗೂಡು ತಾ॥ ೭

ನಂಜನಗೂಡು ತಾಲ್ಲೂಕು ಆಹಾರ ಸಮ್ಮೇಳನ ನಿನ್ನೆ ಮಧ್ಯಾಹ್ನ ೩ ಗಂಟೆಗೆ ಮಲ್ಲನಮೂಲೆ ಕ್ಷೇತ್ರದಲ್ಲಿ ಶ್ರೀ ಸಿದ್ದನಹಳ್ಳಿ ಕೃಷ್ಣಶರ್ಮರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಹೆಚ್. ಸಿ ದಾಸಪ್ಪನವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು. ಶ್ರೀ ಕೆ. ಪುಟ್ಟೇಗೌಡರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣ ನಂತರ ಶ್ರೀ ರುದ್ರಪ್ಪನವರೂ, ಶೇಕ್ ಹುಸೇನ್‌ರವರೂ ನಾಗರಾಜರವರೂ ಆಹಾರ ಸಮಸ್ಯೆಯನ್ನು ಕುರಿತು ಮಾತನಾಡಿದರು. ಸಮ್ಮೇಳನಕ್ಕೆ ಹದಿನಾರು ಬಸವನಪುರ, ಬದನವಾಳು ಹುಂಡವಪುರ ಅಲ್ಲದೆ ಗುಂಡ್ಲುಪೇಟೆ ತಾಲ್ಲೂಕು ಮತ್ತು ನಂಜನಗೂಡು ತಾಲ್ಲೂಕಿನ ಇತರೇ ಗ್ರಾಮಗಳಿಂದ ರೈತಾಪಿ ಜನರು ಬಂದಿದ್ದರು.

ರೈತನಲ್ಲಿ ಈಗ ಬಿಡುವ ಧಾನ್ಯಕ್ಕೆ ತಕ್ಕಷ್ಟನ್ನು ಬಿಡಬೇಕೆಂದೂ ತಲೆ ಒಂದಕ್ಕೆ ೧ ಸೇರಿನಂತೆ ಪಡಿ ನಿರ್ಧರಿಸಬೇಕೆಂದೂ ಒಂದೊಂದು ಗ್ರಾಮಕ್ಕೆ ಆಗುವಷ್ಟು ಧಾನ್ಯವನ್ನು ಆಯಾ ಗ್ರಾಮಗಳಲ್ಲೇ ಇಡಬೇಕೆಂದೂ ಧಾನ್ಯಗಳ ಧಾರಣೆ ಎಲ್ಲೆಲ್ಲೂ ಒಂದೇ ರೀತಿ ಇರುವಂತೆ ಮಾಡಬೇಕೆಂದೂ ಹೊಸ ಆಕ್ಟ್ ಉಪಯೋಗ ತಪ್ಪಿಸಲಿಕ್ಕಾಗಿ ಐಗಾರು ದಿವಸಗಳಿಗೂ ದಾಸ್ತಾನಿಗೆ ಸರ್ಕಾರ ಕೊಡಬೇಕೆಂದೂ ರೂಪುಗಳಾದುವು.

ಕೌಲಿನಾಯಕರ ಗಡೀಪಾರು

ಕೊಲಂಬಿದ ಶ್ರೀಗಳವ ರಾಬರ್ಟ್ ಪ್ರೆಘೊಡ್ ಫಿಲಿಪ್ಸ್, ಮತ್ತು ನಂಕಟೇಶ ಇವರುಗಳ ಮಾಡುವ ಚಳುವಳಿಯ ಹೊಣೆಯನ್ನು ಸಂಸ್ಥಾನದಿಂದ ಗಡೀಪಾರು ಮಾಡಬಹುದೆಂದು ಹೇಳಲಾಗುತ್ತಿದೆ.

ಕೌಂಟ್ ಚಿಯಾನೋಗೆ ಫಾಶಿ

ಮುಸೋಲಿನಿ ಅಳಿಯನೂ ಇಟಲಿ ಮಾಜಿ ವಿದೇಶಾಂಗ ಮಂತ್ರಿಯೂ ಆದ ಕೌಂಟ್ ಚಿಯಾನೋವನ್ನು ಮರಣ ದಂಡನೆಗೆ ಗುರಿಪಡಿಸಲಾಯಿತೆಂದು ಇಟಲಿಯಿಂದ ಸಮಾಚಾರ ಬಂದಿದೆ.

ಮರಣದಂಡನೆಗೆ ಗುರಿಪಡಿಸಲಾದ ಇತರರಲ್ಲಿ ಮಾರ್ಷಲ್ ಡಿ ಬೋನೋ ಅವರು ಸಹ ಇದ್ದಾರೆಂದು ಹೇಳಲಾಗಿದೆ.

ಸರ್ಕಾರದವರು ಕಾಂಗ್ರೆಸ್ ಅಧ್ಯಕ್ಷರನ್ನು ಆಹ್ವಾನಿಸಲಿ

ಶ್ರೀ ದಾಸಪ್ಪನವರ ಸಲಹೆ

ಪತ್ರಿಕೋದ್ಯೋಗಿಗಳ ಸಂಘದ ಈ ದಿನ ಬೆಳಗ್ಗೆ ಶ್ರೀ ಹೆಚ್. ಸಿ. ದಾಸಪ್ಪನವರು ಒಂದು ಪತ್ರಿಕಾ ಸಮ್ಮೇಳನವನ್ನು ನಡೆಸಿ ಪ್ರಚಲಿತ ವಿಷಯಗಳ ಮೇಲೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ರಾಜಕೀಯ ಬಂದಿಗಳನ್ನೂ ಡಿಟೆನ್ಯೂಗಳನ್ನೂ ಬಿಡುಗಡೆ ಮಾಡಲು ಸರ್ಕಾರದವರು ಈಗ ಹೊರಡಿಸಿರುವ ಆಜ್ಞೆಯಲ್ಲಿ ಯಾವ ಹೆಗ್ಗಳಿಕೆಯೂ ಇಲ್ಲ; ಇದು ಬಹಳ ಹಿಂದೆಯೇ ಆಗಬೇಕಾಗಿತ್ತು. ಮಹಾ ಜನರು ಒತ್ತಾಯ ಪಡಿಸುವುದಕ್ಕೇ ಬಿಡುಗಡೆ ಮಾಡಬೇಕಾಗಿತ್ತು. ಕಳೆದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದ ಕಾಲದಲ್ಲಿ ಯಾದರೂ ಬಿಡಬಹುದಾಗಿತ್ತು. ಕಡೇ ಪಕ್ಷ ಬೆಂಗಳೂರು ಮೈಸೂರುಗಳ ಚುನಾವಣೆಗಳಿಗೆ ಮುಂಚೆಯಾದರೂ ಬಿಡಬಹುದಾಗಿತ್ತು. ಹೀಗೆ ಮಾಡದೆ ಇಷ್ಟು ತಡವಾಗಿ ಬಿಡುಗಡೆ ಮಾಡಿರುವುದರಲ್ಲಿ ಏನೂ ಹೆಚ್ಚುಗಾರಿಕೆ ಯಿಲ್ಲ ಎಂದು ಶ್ರೀ ದಾಸಪ್ಪನವರು ತಿಳಿಸಿದರು.

ಮುಂದೆ ಕಾಂಗ್ರೆಸ್ಸಿನ ಕಾರ್ಯಕ್ರಮವೇನೆಂದು ಕೇಳಲಾಗಿ ಅದನ್ನು ಕಾಂಗ್ರೆಸ್ ಅಧ್ಯಕ್ಷರಿಂದಲೇ ತಿಳಿಯಬೇಕೆಂದು ಅವರು ಹೇಳಿದರು. ಸರ್ಕಾರದವರಿಗೆ ಕಾಂಗ್ರೆಸ್ಸಿನ ಸಹಕಾರವು ಬೇಕಾಗಿದ್ದರೆ ಅವರು ಕಾಂಗ್ರೆಸ್ ಅಧ್ಯಕ್ಷರನ್ನು ಕರೆ ಕಳುಹಿಸುವುದು ಒಳ್ಳೆಯದು ಎಂದರು.

ಕಾಂಗ್ರೆಸ್ಸಿನ ರಾಜಕೀಯ ಧ್ಯೇಯ ಏನೆಂದು ಕೇಳಲಾಗಿ, ಹೋರಾಟದಲ್ಲಿ ಜವಾಬ್ದಾರಿ ಸರ್ಕಾರದ ವಿಷಯವನ್ನು ಯುದ್ಧಕಾಲದಲ್ಲಿ ಒತ್ತಾಯ ಮಾಡುವ ಅಂಶವನ್ನು ಹಿಂದೆಗೆದುಕೊಳ್ಳಲಾಗಿದ್ದರೂ ಈ ಸ್ವಾತಂತ್ರ್ಯವಾದ ನಂತರ ನಗರದ ಅಧಿವೇಶನದಲ್ಲಿ ಕಾಂಗ್ರೆಸ್ ಬಹಿರಂಗ ಸಭೆಯು ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಒತ್ತಾಯ ಪಡಿಸುವ ನಿರ್ಣಯವನ್ನು ಅಂಗೀಕರಿಸಿದೆ ಎಂದು ತಿಳಿಸಿದರು.

ಆಹಾರ ಸಮಸ್ಯೆ ವಿಷಯದಲ್ಲಿ ಅವರು ಹೀಗೆ ಹೇಳಿದರು:--ಸರ್ಕಾರದವರು ಆಹಾರ ಸಾಮಗ್ರಿಗಳ ಕಣ್ಣೊಟೆ ಬಗ್ಗೆ ಆಗಿಂದಾಗ್ಗೆ ಹೊರಡಿಸಿರುವ ಅನೇಕ ಆಜ್ಞೆಗಳಲ್ಲಿ ಇರುವ ಲೋಪದೋಷಗಳನ್ನು ನಮ್ಮ ಆಹಾರ ಸಮ್ಮೇಳನಗಳು ಎತ್ತಿತೋರಿಸಿರುವ ರೀತಿ ಅವುಗಳಲ್ಲಿ ಕೆಲವನ್ನು ಕ್ರಮ ನಡೆಸಿ ದುಃಖಕರ ಅನ್ನವು ಪರಿಣಾಮಕಾರಿ ಅಂಶಗಳು ಅನೇಕವಿವೆ. ಪ್ರತಿ ಹಳ್ಳಿಗೂ ಒಂದು ವರ್ಷಕ್ಕೆ ಬೇಕಾಗುವಷ್ಟು ಆಹಾರವನ್ನು ಕಡ್ಡಾಯವಾಗಿ ಅಲ್ಲಿಯೇ ಕಟ್ಟಿರಿಸಿ ಡುವುದು; ವ್ಯವಸಾಯದಲ್ಲಿ ತೊಡಗಿರುವ ರೈತರಿಗೂ ಅವರಿಗೆ ಬೇಕಾದಷ್ಟು ದೊಡ್ಡ ಕುಟುಂಬಗಳಿಗೂ, ಹಸುಕರುಗಳಿಗೂ ದಾಸ್ತಾನಿಗೆ ಬೇಕಾದಷ್ಟು ಧಾನ್ಯವನ್ನು ರೈತರಿಗೆ ಬಿಟ್ಟು ಕೊಡಲು ಸರ್ಕಾರವು ನಿರ್ಧರಿಸಬೇಕು--ಎಂಬಿವೇ ಮುಂತಾದ ಸಲಹೆಗಳನ್ನಿತ್ತರು.

ಸಾರ್ವಭೌಮರಿಗೆ ಇನ್‌ಫ್ಲುಯೆನ್ಜಾ

ಚಕ್ರವರ್ತಿ ಸಾರ್ವಭೌಮರು ಇನ್‌ಫ್ಲುಯೆನ್ಜಾದಿಂದ ನರಳುತ್ತಿದ್ದಾರೆ ... ಗಾಬರಿ ಪಡುವಂತಹ ಸ್ಥಿತಿಯೇನೂ ಇಲ್ಲವೆಂದು

ವಿದ್ಯಾರ್ಥಿ ಸಂಘ ಆರಂಭ

[ಸ್ವಂ. ವ.] ಹೊಳೆನರಸೀಪುರ ೬

ನಿನ್ನೆ ಸಾಯಂಕಾಲ ಗಾಂಧಿ ಮೈದಾನದಲ್ಲಿ ಶ್ರೀ ಹೆಚ್. ಬಿ. ಸಿಕ್ಕನಾರಾಯಣ ಶೆಟ್ಟರವರ ಅಧ್ಯಕ್ಷತೆಯಲ್ಲಿ ಹೊಳೆನರಸೀಪುರದ ವಿದ್ಯಾರ್ಥಿಸಂಘದ ಆರಂಭೋತ್ಸವವನ್ನು ಶ್ರೀ ಎಂ. ವಿ. ಕೃಷ್ಣಪ್ಪನವರು ನೆರವೇರಿಸಿದರು. ವಿದ್ಯಾರ್ಥಿ ಮುಖಂಡರಾದ ಶ್ರೀಗಳಾದ ಹೆಚ್ ವೈ ಶಾರದಾಪ್ರಸಾದ್, ಕೆ. ವಿ. ವಸಂತಪ್ಪ, ಜಿ. ಸಿ. ಕೃಷ್ಣರಾವ್ ಮತ್ತು ಬಿ. ಕೆ. ಭಾಗರೂಡ, ಸೀತಾರಾಮಯ್ಯನವರು ವಿದ್ಯಾರ್ಥಿ ಸಂಘದ ಅವಶ್ಯಕತೆ ಮತ್ತು ವಿದ್ಯಾರ್ಥಿಗಳು ರಾಜಕೀಯದಲ್ಲಿ ವಹಿಸಬೇಕಾದ ಪಾತ್ರ ಎಂಬ ವಿಷಯಗಳ ಮೇಲೆ ಭಾಷಣಮಾಡಿದರು. ನೂರಾರು ವಿದ್ಯಾರ್ಥಿಗಳು ಪುರಜನರು ಸಭೆಗೆ ಬಂದಿದ್ದರು.

ನಮ್ಮ ನೆ[ಲ]ಸೂರು ದೇಶದಲ್ಲಿ ಸಮರ್ಪಕವಾದ ಶಾಂತಿ ವಾತಾವರಣ ಕಲ್ಪಿಸಲು ಜನನಾಯಕರನ್ನು ಕೂಡಲೇ ಸರಕಾರದವರು ಬಿಡುಗಡೆ ಮಾಡಬೇಕೆಂದೂ ವಿದ್ಯಾರ್ಥಿಗಳ ಮುಂದಿರುವ ಆಹಾರ ಸಮಸ್ಯೆಯೇ ಮೊದಲಾದ ಅನೇಕ ಘೋರ ಸಮಸ್ಯೆಗಳ ಪರಂಪರೆಯನ್ನು ಗಣನೆಗೆ ತೆಗೆದುಕೊಂಡು ಸರ್ಕಾರದವರು ಹೋದ ವರ್ಷದಂತೆಯೇ ಈ ವರ್ಷವೂ ಯಾವ ವಿದ್ಯಾರ್ಥಿಯನ್ನೂ ಸೆಲೆಕ್ಷನ್ ಪರೀಕ್ಷೆಯಲ್ಲಿ ನಿಲ್ಲಿಸದೆ ಎಲ್ಲರಿಗೂ ಪರೀಕ್ಷೆಗೆ ಕಟ್ಟುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ವಿದ್ಯಾಮಂತ್ರಿಗಳನ್ನು ಪ್ರಾರ್ಥಿಸಬೇಕೆಂದೂ ರಿಸಲ್ಯೂಷನುಗಳಾದವು.

— —

೮ ನೇ ಸೇನೆ ವಿಜಯ

ಬ್ರಿಟಿಷ್ ೮ ನೇ ಸೇನೆಯು ಮೌಂಟ್ ಕ್ಯಾಮಿನೊ ಮತ್ತು ಮೌಂಟ್ ಕಮಿನೊ ಬಳಿ ಇದ್ದ ಜರ್ಮನ್ ಸಾಲುಗಳನ್ನು ಛೇದಿಸಿಕೊಂಡು ಮುನ್ನುಗ್ಗುತ್ತಿರುವುದಾಗಿ ಗೊತ್ತಾಗಿದೆ

ಆರ್ಸೋನಾಗ್ನಾ ಶತ್ರು ವಶ

ಇಟಲಿ ರಂಗದಲ್ಲಿ ಬ್ರಿಟಿಷ್ ೮ ನೇ ಸೇನೆ ಆಕ್ರಮಿಸಿಕೊಂಡಿದ್ದ ಆರ್ಸೋನಾಗ್ನಾವನ್ನು ಜರ್ಮನರು ವಾಪಸ್ಸು ಕಿತ್ತುಕೊಂಡಿರುವ ರೆಂದು ವರದಿಯಾಗಿದೆ. ಇಟಲಿ ಸಮರಕ್ಕೆ ಒಂದಿರುವ ೯ ಜರ್ಮನ್ ಪಡೆಗಳ ಪೈಕಿ ೪ ಪಡೆಗಳು ಬ್ರಿಟಿಷ್ ೮ ನೇ ಸೇನೆಯನ್ನು ಎದುರಿಸುತ್ತಿವೆ

Edited, printed and published by A. R. Nagarajan, at the Sadhvi Press, D.Subbiah Road, Mysore.

ಸಂಸ್ಥಾನದ ಅಕ್ಕಿ ಗಿರಣಿ ಮಾಲೀಕರ ಸಭೆ

ಮೈಸೂರು ಸಂಸ್ಥಾನದ ಸಿವಿಲ್ ಸಪ್ಲೈ ಅಧಿಕಾರಿಗಳು ಸಂಸ್ಥಾನದ ಅಕ್ಕಿ ಗಿರಣಿ ಮಾಲೀಕರುಗಳ ಸಭೆಯನ್ನು ಈ ದಿನ ಕರೆದಿದ್ದಾರೆ. ಇವರುಗಳು ತಮ್ಮ ತಮ್ಮ ಕಷ್ಟಸುಖಗಳನ್ನು ಅಧಿಕಾರಿಗಳ ಮುಂದಿಟ್ಟು ತಕ್ಕ ಪರಿಹಾರ ಹೊಂದಬಹುದು. ಪ್ರಜಾಸೇವೆಯನ್ನು ಮುಖ್ಯ ಧ್ಯೇಯವಾಗಿಟ್ಟುಕೊಂಡು ಸರ್ಕಾರದವರೊಡನೆ ಸಹಕರಿಸಿ ನಿಷ್ಪ್ರಯೋಜಕವಾದ ಸಲಹೆಗಳನ್ನು ಕೊಡಬೇಕು ಮತ್ತು ಸ್ವಂತ ವ್ಯಾಪಾರ ಮಾಡತಕ್ಕ ಬಂಡವಾಳಗಾರನೆ ಧಾರಿ ಮಿಲ್ ಮಾಲೀಕರು ತಮ್ಮ ಮಿಲ್‌ಗಳಲ್ಲಿ ದಾಸ್ತಾನು ಇರುತ್ತಿದ್ದ ಭತ್ತದ ಮೂಟೆಗಳ ಮತ್ತು ಅಕ್ಕಿ ವ್ಯಾಪಾರದ ಹಿತಚಿಂತನೆಯನ್ನು ಮರೆಯಬಾರದು. ಮಿಲ್ ಮಾಲೀಕರುಗಳೂ ಮತ್ತು ಈ ಒಟ್ಟು ವ್ಯಾಪಾರಸ್ಥರೂ ಒಮ್ಮನಸ್ಸಿನಿಂದ ಸರ್ಕಾರದವರೊಡನೆ ಸಹಕರಿಸಿದರೆ ಮೈಸೂರು ಸಂಸ್ಥಾನದಲ್ಲಿ ಅಕ್ಕಿ ಅಭಾವವನ್ನು ತಪ್ಪಿಸಬಹುದು.

ಕೆ. ಎಸ್. ಎಂ.

ಚಾತಕ ಪಕ್ಷಿಗಳು

ಕಳೆದ ತಿಂಗಳ ಅಂತ್ಯದಲ್ಲಿ ಬೆಂಗಳೂರಿನಲ್ಲಿ ನಡೆದ ಸಂಸ್ಥಾನದ ಧಾನ್ಯದ ವರ್ತಕರ ಸಮ್ಮೇಳನದಲ್ಲಿ ಚಿಕ್ಕಪುಟ್ಟ ವ್ಯಾಪಾರಸ್ಥರ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುವುದಾಗಿ ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದರು. ಆದರೆ ಈ ಸಂಬಂಧವಾಗಿ ಇವತ್ತಿನವರೆಗೂ ನಿರ್ದಿಷ್ಟವಾದ ಅಪ್ಪಣೆ ಸರ್ಕಾರದಿಂದ ಹೊರಬಿದ್ದಿರುವುದಿಲ್ಲ. ಮೇಲಿನ ಅಧಿಕಾರಿಗಳ ಹುಕುಂ ಇಲ್ಲದೆ ಸ್ಥಳೀಯ ಅಧಿಕಾರಿಗಳು ಯಾವ ಮಾರ್ಪಾಟನ್ನೂ ಮಾಡುವಂತಿಲ್ಲ. ಮೈಸೂರು ನಗರದಲ್ಲಿ ರೇಷನಿಂಗ್ ಜಾರಿಗೆ ಬರಲಿರುವ ಈ ಸಂದರ್ಭದಲ್ಲಿ ಈ ಹುಕುಮಿನ ಆವಶ್ಯಕತೆ ಜರೂರಾಗಿದೆ. ಇದರಿಂದ ಸರ್ಕಾರಕ್ಕೆ ತೊಂದರೆಯೂ, ವರ್ತಕರಿಗೆ ಅಸಂತುಷ್ಟಿಯೂ, ಪ್ರಜೆಗಳಿಗೆ ಅನಾನುಕೂಲವೂ ತಪ್ಪುವುದು.

ಹಿತೈಷಿ.

— —

ಆಕ್ರಮಿತ ಫ್ರಾನ್ಸ್ ಮೇಲೆ ಧಾಳಿ

ಆಕ್ರಮಿತ ಫ್ರಾನ್ಸಿನ ಮೇಲೆ ಅಮೆರಿಕನ್ ವಿಮಾನಗಳು ಧಾಳಿ ನಡೆಸಿ, ೧೯ ಜರ್ಮನ್ ವಿಮಾನಗಳನ್ನು ನಾಶಮಾಡಿದವು. ೧೨ ಮಿತ್ರ ವಿಮಾನಗಳು ವಾಪಸು ಬರಲಿಲ್ಲ. ಪಶ್ಚಿಮ ಜರ್ಮನಿಯ ಮೇಲೂ ಧಾಳಿ ಮಾಡಲಾಯಿತು.

ಬಕ್ರೀದ್ ಹಬ್ಬದ ಪ್ರಯುಕ್ತ ಸ್ಪೆಷಲ್ಲಾಗಿ ತರಿಸಲ್ಪಟ್ಟಿದೆ.

ಪ್ರತಿ ದಿನ ಮೂರು ಆಟಗಳು

ನ್ಯೂ ಅಪೇರಾ ಟಾಕೀಸ್

ತಾ|| ೮—೧೨—೧೯೪೩ರಿಂದ

ಸ್ಟಾನ್ ಲಾರೆಲ್ ಮತ್ತು ಆಲಿವರ್ ಹಾರ್ಡಿ ಪಾತ್ರವಹಿಸಿರುವ

'ಗ್ರೇಟ್ ಗನ್ಸ್'

ಪಕ್ಕರ ಸ್ಥಿತಿ ಉತ್ತಮ

— —

ಬಂಗಾಳಾ ಮಾಜಿ ಪ್ರಧಾನಿ ಫಜಲುಲ್ ಹಕ್ಕರು ಕೆಲವು ದಿನಗಳಿಂದ ಹಾಸಿಗೆ ಹಿಡಿದು ಮಲಗಿರುವರಷ್ಟೆ. ಅವರ ಸ್ಥಿತಿ ಚಿಂತಾಜನಕವಾಗಿತ್ತು. ಈಗ ಸ್ವಲ್ಪ ಗುಣಮುಖರಾಗಿದ್ದಾರೆ.

ರೈಲ್ವೆ ರಸ್ತೆ ಛಿದ್ರ

— —

ರಷ್ಯಾ ಸಮರದಲ್ಲಿ ಕೆಂಪು ಸೈನ್ಯವು ಪ್ರಭಾವಶಾಲಿಯಾಗಿ ಜಯ ಗಳಿಸುತ್ತಿದೆ. ಜರ್ಮನರ ಅಧೀನದಲ್ಲಿದ್ದ ಜ್ನಮೆನ್ಕ–ಸ್ಮೆಲ ರೈಲ್ವೇ ರಸ್ತೆಯನ್ನು ಕೆಂಪು ಸೈನ್ಯ ಕತ್ತರಿಸಿ ಹಾಕಿದೆಯೆಂದು ತಿಳಿದುಬಂದಿದೆ.

ಶಾಂತಿಸಮಯದ ಭೋಜನಗಳಿಗೆ ಹಣ ಕೂಡಿಸಿಡಿ

ಶಾಂತಿಸಮಯದಲ್ಲಿ ನಿಮ್ಮ ಹಣವನ್ನು ಲಾಭದಾಯಕವಾಗಿ ವೆಚ್ಚಮಾಡಲು ಜಗತ್ತಿನಲ್ಲಿ ನಿಮಗೆ ನೂರಾರು ಅವಕಾಶಗಳಿರುತ್ತವೆ. ಆಗ ಬೇಕಾದಷ್ಟು ಪದಾರ್ಥಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಈಗ ಹಣವನ್ನು ಕೂಡಿ ಹಾಕಿ ಧಾರಣೆಗಳು ಸ್ಥಿಮಿತಕ್ಕೆ ಬಂದಾಗ ವೆಚ್ಚಮಾಡುವುದು ಪೂರ್ಣ ವ್ಯವಹಾರ ಜ್ಞಾನವೇ ಸರಿ. ಹೀಗೆಂದರೆ, ನಿಮಗೆ ನಿಜವಾಗಿಯೂ ಬೇಕಾದ ಸಾಮಾನುಗಳನ್ನು ಕೊಳ್ಳುವಿಕೆ.... ಹೊಸ ಬಟ್ಟೆಗಳು ಗೋಡೆಗೆ ಹೋಗದಿರುವುದು.... ಪ್ರಯಾಣ ಮತ್ತು ಭೋಜನ ಬಾಬುಗಳನ್ನು ಪೂರೈಸುವುದು. ಯುದ್ಧಕಾಲದ ಧಾರಣೆಗಳು ನಿಮ್ಮ ಹಣವನ್ನು ದುರ್ವ್ಯಯವನ್ನಾಗಿ ಮಾಡುವುವೆಂಬುದನ್ನು ಗ್ರಹಿಸಿದಲ್ಲಿ, ಹಣವನ್ನು ಕೂಡಿಡುವುದು ಒಂದು ಸಂತೋಷದ ಸಂಭವವಾಗಿ ಪರಿಣಮಿಸುವುದು.

ಮುಂಬರುವ ದಿನಗಳಿಗಾಗಿ ಕೂಡಿಡಿ

ಬಗ್ಗಿದ ಕಡೆ ನಿಮ್ಮ ಗಳಿಕೆಗಳನ್ನು ಹಾಕಬೇಡಿ!

ಭಂಗಾರ, ಬೆಳ್ಳಿ, ಆಭರಣಗಳು, ಭೂಮಿ, ಕಟ್ಟಡಗಳು ಮತ್ತು ಅನೇಕ ಸಾಮಾನುಗಳ ಬೆಲೆಯು ಇಂದು ಮಿತಿಮೀರಿದೆ. ಧಾರಣೆಗಳು ಕುಸಿದು ಬಿದ್ದಾಗ ಇವುಗಳ ಮೇಲೆ ಹಾಕಿದ ಹಣದ ನಷ್ಟವು ಮಾಯವಾಗಿ ಹೋಗುವುದು

ಈ ಭದ್ರತೆಗಳು ಲಾಭದಾಯಕ ಹಾಗೂ ಸುರಕ್ಷಿತ.

ಬಡ್ಡಿ ಮತ್ತು ಶಾಶ್ವತ ಮೌಲ್ಯಕ್ಕೆ ನಿಮ್ಮ ಹಣವನ್ನು ಸರ್ಕಾರದ ಸಾಲಪತ್ರಗಳಲ್ಲಿ ಅಥವಾ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ಅಥವಾ ಇವೆರಡರಲ್ಲಿ ಅತ್ಯುತ್ತಮವಾದ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ತೊಡಗಿಸಿ.



ರಾಷ್ಟ್ರೀಯ ಉಳಿತಾಯ ಬಡಿವಾರ | ನೇ(ಕ)ಕೆಯಿಗೆ ಮಾಡುವ ಮನವಿ

CPU-301

ಸ್ವರ್ಣೋತ್ಸವ

ಮೈಸೂರು ೯

ಈ ಮಾಸೆ ೨೨ ನೇ ತಾ|| ಬುಧವಾರ ಸಂಜೆ ನಡೆಯಲಿರುವ ರಾಜಧಾನಿಯ ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲಿನ ಸ್ವರ್ಣೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮನ್ಮಹಾರಾಜರವರು ವಹಿಸಲಿರುವರೆಂದು ತಿಳಿಯಬರುತ್ತದೆ.

ಖಾಸಗಿ ಅಧ್ಯಕ್ಷರು ಬೇಕು

ಮೈಸೂರು ಪೌರಸಭೆಗೆ ಖಾಸಗಿ ಅಧ್ಯಕ್ಷರನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕೆಂದು ಸರ್ಕಾರವನ್ನು ಕೇಳಲು ಪೌರಸಭೆಯ ಒಂದು ವಿಶೇಷ ಮೀಟಿಂಗನ್ನು ಏರ್ಪಡಿಸುವಂತೆ ಕಾಂಗ್ರೆಸ್ ಮುನಿಸಿಪಲ್ ಪಕ್ಷದವರು ಪೌರಸಭಾಧ್ಯಕ್ಷರನ್ನು ಕೋರಿದ್ದಾರೆ

ನಗರ ಆಹಾರ ಸಮ್ಮೇಳನ

ಮೈಸೂರು ಪೌರಸಭೆಯ ಕಾಂಗ್ರೆಸ್ ಪಕ್ಷದ ಆಶ್ರಯದಲ್ಲಿ ಈ ತಿಂಗಳು ೧೫ ನೇ ತಾ|| ಬುಧವಾರ ಮಧ್ಯಾಹ್ನ ಮೈಸೂರು ಟೌನ್ ಹಾಲಿನಲ್ಲಿ ನಗರದ ಆಹಾರ ಸಮ್ಮೇಳನವು ನಡೆಯಲು ಏರ್ಪಾಡುಗಳಾಗುತ್ತಿವೆ. ಬಂಧನದಿಂದ ಮುಕ್ತರಾಗಿ ಬರುವ ಕಾಂಗ್ರೆಸ್ ಮುಖಂಡರೊಬ್ಬರು ಅಗ್ರಸ್ಥಾನವನ್ನು ವಹಿಸಬಹುದೆಂದು ನಿರೀಕ್ಷಿಸಲಾಗಿದೆ. ರಾಜಧಾನಿಯ ಎಲ್ಲಾ ಸಂಸ್ಥೆಗಳ ಮತ್ತು ಪ್ರಮುಖ ವ್ಯಕ್ತಿಗಳ ಸಹಕಾರವನ್ನು ತೆಗೆದುಕೊಳ್ಳಲಾಗುವುದು.

ಸಹಾಯ

ದಿವಂಗತ ಸಾ|| ಬಸವಯ್ಯನವರ ತಮ್ಮಂದಿರಾದ ಶ್ರೀ ಚೌಡಯ್ಯನವರು ತಮ್ಮ ದಿವಂಗತ ಪತ್ನಿ ಹಾಲಮ್ಮನವರ ಹೆಸರಿನಲ್ಲಿ ರಾಜಧಾನಿಯ ಹೊಯ್ಸಳ ಕರ್ನಾಟಕ ಸಂಘದ ಹಾಸ್ಟಲ್ ಕಟ್ಟಡದ ನಿಧಿಗಾಗಿ ೦೦ ರೂ ಗಳ ಸಹಾಯ ನೀಡಿದ್ದಾರೆ

ಹರಿಕಥೆ

ಈ ದಿನ ರಾತ್ರಿ ೧೦ ಗಂಟೆಗೆ ಕೀರ್ತನ ಕೇಸರಿ ಶ್ರೀ ಹರಿಸರ್ವೋತ್ತಮದಾಸರಿಂದ "ಭಕ್ತ ಮಾರ್ಕಂಡೇಯ ಚರಿತ್ರೆ" ಎಂಬ ಕಥೆಯು ಸಂತೇಪೇಟೆ ಗಡಿಯಾರದ ಬಳಿ ನಡೆಯುತ್ತ ಸರ್ವರೂ ದಯಮಾಡಬೇಕು ವಿನಂತಿ ಇದೆ

ಉಪಾಧ್ಯಕ್ಷರು

ಟಿ. ನರಸೀಪುರದ ತಾ|| ತಲಕಾಡು ಪೌರಸಭೆಗೆ ಶ್ರೀ ಕೆ ಎಸ್. ಸುಂದರ ತಾತಾಚಾರ್ಯರವರು ಉಪಾಧ್ಯಕ್ಷರಾಗಿ ನಿಯಮಿಸಲ್ಪಟ್ಟಿದ್ದಾರೆ

ವರ್ಷದಲ್ಲಿ ಜಪಾನ್ ನಾಶ

ಮಿತ್ರರು ಶಾಘೈ ಗೊತ್ತುಪಡಿಸಿಕೊಂಡಿರುವಂತೆ ಚಾಚೂ ತಪ್ಪದೆ ತ್ವರಿತವಾಗಿ ಕಾರ್ಯ ನಡೆಸಿದಲ್ಲಿ ಬಹಳ ಕಾಲ ಒಂದೇ ವರ್ಷದೊಳಗೆ ಜಪಾನನ್ನು ಭೂಗತವಾಡಿಬಿಡಬಹುದೆಂದು ಚೀಣೀ ವಿದ್ಯಾ ಸಚಿವರು ನುಡಿದಿರುವರು

ನಾಜಿ ಗೂಢಚಾರನ ದಸ್ತಗಿರಿ

ಅಮೇರಿಕದ ಫೆಡರಲ್ ಪತ್ತೇದಾರಿ ಸಂಸ್ಥೆಯವರು ಒಬ್ಬ ಜರ್ಮನ್ ಗೂಢಚಾರನನ್ನು ದಸ್ತಗಿರಿ ಮಾಡಿದ್ದಾರೆ ೧೯೪೦ ರಲ್ಲಿ ಅಮೇರಿಕದ ವಿದೇಶಾಂಗನೀತಿಯನ್ನು ತಿಳಿಯಲು ಜರ್ಮನಿಯು ಗೂಢಚಾರನನ್ನು ಕಳುಹಿಸಿತ್ತೆಂದು ಹೇಳಲಾಗಿದೆ.

ಸಂಪುಟ ೨] ಗುರುವಾರ ೯--೧೨--೪೩ [ಸಂಚಿಕೆ ೧೨೧

ತುರ್ಕಿ ಯುದ್ಧಕ್ಕೆ ಇಳಿಯುವುದೆ?

ತುರ್ಕಿ ಗಡಿಯಲ್ಲಿ ಜರ್ಮನ್ ಸೈನ್ಯ ಕೇಂದ್ರೀಕರಣ

ರೇಷನ್ ನಿಯಮೋಲ್ಲಂಘನೆಗೆ ಕಾಮನ್ಸ್ ಸದಸ್ಯಗೆ ಜುಲ್ಮಾನೆ

ತುರ್ಕಿ ಯುದ್ಧಕ್ಕೆ ಸೇರುವುದೇ?

ರೂಸ್ವೆಲ್ಟ್-ಚರ್ಚಿಲ್-ಇನಾನು ಸಮ್ಮೇಳನದಿಂದ ತುರ್ಕಿಯು ತನ್ನ ತಟಸ್ಥತೆಯನ್ನು ಬಿಟ್ಟು ಬ್ರಿಟನ್ನಿಗೆ ಸಹಾಯಕವಾಗಬಹುದೆಂದು ರಾಯಿಟರ್ ಬಾತ್ಮೀದಾರರು ವರದಿಮಾಡಿದ್ದಾರೆ. ಯುದ್ಧದಲ್ಲಿ ಇತ್ತೀಚಿನ ಬದಲಾವಣೆಯೂ ಮತ್ತು ಟೆಹರಾನಿನ ತ್ರಿರಾಷ್ಟ್ರ ಒಪ್ಪಂದವೂ ತುರ್ಕಿಯ ಮನೋಭಾವವನ್ನು ಬದಲಾಯಿಸಬಹುದೆಂದು ಹೇಳಲಾಗಿದೆ

ತುರ್ಕಿ ಗಡಿಯಲ್ಲಿ ಜರ್ಮನ್ ಸೈನ್ಯವೇ?

ಬಲ್ಗೇರಿಯಾ ಮತ್ತು ತುರ್ಕಿ ಗಡಿಯಲ್ಲಿ ಜರ್ಮನ್ ಮತ್ತು ಹಂಗೇರಿಯಾ ಸೈನ್ಯಗಳನ್ನು ಕೇಂದ್ರೀಕರಿಸಲಾಗಿದೆಯೆಂಬ ವರ್ತಮಾನವು ದೃಢಪಟ್ಟಿಲ್ಲವೆಂದು ಒಬ್ಬ ಬ್ರಿಟಿಷ್ ಮಿಲಿಟರಿ ಅಧಿಕಾರಿಗಳು ಕೈರೋವಿನಲ್ಲಿ ತಿಳಿಸಿದ್ದಾರೆ. ಜರ್ಮನಿಯು ಬಲ್ಗೇರಿಯಾದಲ್ಲಿ ತಕ್ಕ ಸಲಕರಣೆಗಳನ್ನು ಮಾಡುತ್ತಿರುವರೇ ಹೊರತು ಪರಿಸ್ಥಿತಿಯು ಹದಗೆಡುವಷ್ಟು ಕಾರ್ಯವನ್ನು ನಡೆಸಲಾರರೆಂದು ರಾಯಿಟರ್ ಬಾತ್ಮೀದಾರರು ತಿಳಿಸುತ್ತಾರೆ. ಇದೂ ಅಲ್ಲದೆ ತುರ್ಕಿಯು ಯುದ್ಧಕ್ಕೆ ಸೇರುವುದಾದರೆ, ಬಲ್ಗೇರಿಯಾ ಗಡಿಯಲ್ಲಿ ಪರಿಸ್ಥಿತಿಯು ವಿಷಮಗೊಳ್ಳಬಹುದೆಂದೂ ಹೇಳಲಾಗಿದೆ

ತುರ್ಕಿಯಲ್ಲಿ ನಾಜಿ ರಾಯಭಾರಿ

ತುರ್ಕಿಯಲ್ಲಿರುವ ಜರ್ಮನ್ ರಾಯಭಾರಿಯಾದ ವಾನ್ ಪೇಪನರು ತುರ್ಕಿ ಪ್ರಧಾನ ಮಂತ್ರಿಗಳೊಡನೆ ಮಾತುಕತೆ ನಡೆಸಿದರೆಂದು ವರದಿಯಾಗಿದೆ

ಸಾವರ್ಕರರು ಅಧ್ಯಕ್ಷರು

ಈ ತಿಂಗಳು ೨೬, ೨೭ ರಲ್ಲಿ ಅಮೃತಸರದಲ್ಲಿ ಸೇರಲಿರುವ ಅಖಿಲ ಭಾರತ ಹಿಂದೂ ಮಹಾ ಸಭಾಧಿವೇಶನದ ಅಧ್ಯಕ್ಷಪದವಿಗೆ ಶ್ರೀ ಸಾವರ್ಕರರು ಚುನಾಯಿತರಾಗಿದ್ದಾರೆ

ಘಟಿಕೋತ್ಸವ ಭಾಷಣ

ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣಕ್ಕೆ ಸುದರ್ಶನ [illegible] ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಆಹ್ವಾನ [illegible] ಸಿ ಆರ್ ರವರು ಆಹ್ವಾನವನ್ನು ಅಂಗೀಕರಿಸಿರುವರು

ಸ್ವೀಡನ್ನಿಗೆ ಪರಿಹಾರ

ಸ್ವೀಡನ್ ರಾಜ್ಯಾಡಳಿತಕ್ಕೆ ಒಳಪಟ್ಟ ಪ್ರದೇಶದ ಮೇಲೆ ಬ್ರಿಟಿಷ್ ವಿಮಾನ ಧಾಳಿ ಆದುದರಿಂದ ಆದ ಬಾಂಬು ದಾಳಿಯ ನಷ್ಟವನ್ನು ಕಟ್ಟಿಕೊಡಬೇಕೆಂದು ಸ್ವೀಡಿಷ್ ಸರ್ಕಾರ ಬ್ರಿಟನ್ನಿಗೆ ತಿಳಿಸಿತ್ತು. ಬ್ರಿಟನ್ ಒಪ್ಪಿಕೊಂಡಿದೆ

ಹಲಗೆ ಪಾದರಕ್ಷೆ

ಪಾದರಕ್ಷೆಗಳ ತಯಾರಿಗೆ ಚರ್ಮದ ಅಭಾವವಾಗಿರುವುದರಿಂದ ಬ್ರಿಟನ್ನಿನಲ್ಲಿ ಇಷ್ಟರಲ್ಲೇ ಹಲಗೆ ಪಾದರಕ್ಷೆಗಳ ಉಪಯೋಗ ಹೆಚ್ಚುವ ಸಂಭವವಿದೆ. ಪಾದರಕ್ಷಾ ತಯಾರಕರು ಸೇ ೩೦ ರಷ್ಟಾದರೂ ಹಲಗೆ ಪಾದರಕ್ಷೆಗಳನ್ನು ತಯಾರಿಸಬೇಕೆಂದು ಸೂಚನೆ ಕೊಡಲಾಗಿದೆ.

ಬಂದಿಗಳ ವಿಚಾರಣೆ ಸಮಿತಿ

ಲಂಡನ್ನಿನಲ್ಲಿರುವ ಭಾರತ ಸ್ವಾತಂತ್ರ್ಯ ಚಳುವಳಿ ಸಮಿತಿಯವರ ವಾರ್ಷಿಕ ಸಭೆಯಲ್ಲಿ ಭಾರತ ರಾಜಕೀಯ ಬಂದಿಗಳ ವಿಚಾರಣೆಗೆ ನ್ಯಾಯ ಸಮಿತಿಯೊಂದು ಕಡ್ಡಾಯವಾಗಿ ಏರ್ಪಡಬೇಕೆಂದು ಮಿ|| ರೆಜಿನಾಲ್ಡ್ ರೈನಾಲ್ಡ್ಸರು ತಿಳಿಸಿರುತ್ತಾರೆ

ಚಿಯಾಂಗ್ ಇಂಡಿಯಾದಲ್ಲಿ

ಕೈರೊ ಮಾತುಕತೆಗಳನ್ನು ಮುಗಿಸಿಕೊಂಡು ಚೀಣಾಕ್ಕೆ ವಿಮಾನದಲ್ಲಿ ಮರಳುತ್ತಿದ್ದ ಚಿಯಾಂಗ್ ಕೈಷೇಕರು ಭಾರತದಲ್ಲಿಳಿದು ಲಾರ್ಡ್ ಲೂಯಿ ಮೌಂಟ್ ಬ್ಯಾಟನ್ನರನ್ನೂ ಭಾರತದಲ್ಲಿರುವ ಚೀಣ ದಳಗಳನ್ನೂ ಕಂಡು ಮುಂದೆ ಹೊರಟರೆಂದು ತಿಳಿದುಬಂದಿದೆ

ತಿಂಡಿ ತುಂಬಿದ ಬಾಂಬು

ನಿನ್ನೆ ಮುಸ್ಲಿಂರ ಹಬ್ಬ ಆರಂಭವಾಯಿತು. ಆದರ ಜ್ಞಾಪಕಾರ್ಥವಾಗಿ ಕೈರೊ ಪಟ್ಟಣದ ಮೇಲೆ ಈಜಿಪ್ಟ್ ವಿಮಾನ ಪಡೆಯವರು ತಗ್ಗಿನಲ್ಲಿ ಹಾರಾಡಿ ಸಿಹಿ ತಿಂಡಿಗಳು ತುಂಬಿದ ಪೊಟ್ಟಣಗಳನ್ನು ಕೆಡವಿದರೆಂದು ಹೇಳಲಾಗಿದೆ

ಪ್ರಾಂತ್ಯ ಮಂತ್ರಿಗಳ ಸಭೆ

೭ ಪ್ರಾಂತ್ಯಗಳ ಮಂತ್ರಿಗಳನ್ನೂ ಸಿಂಧ್ ಜನಾಬ್ [illegible] ಕರಾಚಿಗೆ ಆಹ್ವಾನಿಸಿರುವರು. ಇವರೆಲ್ಲರು ೨೨ ನೇ ತಾ|| ಕಲೆತು, ಎಲ್ಲ ಪ್ರಾಂತ್ಯಗಳಲ್ಲಿ ತಲೆದೋರಿರುವ ಸಾರ್ವಜನಿಕ ತೊಂದರೆಗಳ ಬಗ್ಗೆ ಚರ್ಚೆ ನಡೆಸುವರು.

ತುರ್ಕಿ ಅಧ್ಯಕ್ಷರೊಡನೆ ಮಿತ್ರ ನಾಯಕರ ಮಾತುಕತೆ

ತುರ್ಕಿ ಅಧ್ಯಕ್ಷರಾದ ಇನಾನುರವರು, ಚರ್ಚಿಲ್ ಮತ್ತು ರೂಸ್ವೆಲ್ಟರೊಡನೆ ಕೈರೋವಿನಲ್ಲಿ ಇದೇ ಮಾಸೆ ೪, ೫, ೬ ರಂದು ಮಾತುಕತೆ ನಡೆಸಿದರೆಂದು ವರದಿಯಾಗಿದೆ. ಬ್ರಿಟನ್, ಅಮೇರಿಕಾ ಮತ್ತು ರಷ್ಯಾಗಳ ವಿಶ್ವಾಸಪೂರ್ವಕವಾಗಿ ಇತ್ತ ಆಹ್ವಾನದಂತೆ ತುರ್ಕಿಯ ಅಧ್ಯಕ್ಷರು ಈ ಸಮ್ಮೇಳನದಲ್ಲಿ ಭಾಗವಹಿಸಿ, ರಾಜಕೀಯ ಸ್ಥಿತಿಗಳನ್ನು ವಿಮರ್ಶಿಸಿದರು

ಈ ಸಮ್ಮೇಳನದಲ್ಲಿ ಮುಖ್ಯವಾಗಿ ನಾಲ್ಕು ವಿಚಾರಗಳು ಚರ್ಚಿಸಲ್ಪಟ್ಟಿವೆಂದು ಹೇಳಲಾಗಿದೆ

೧ ಯುದ್ಧದಲ್ಲಿ ತುರ್ಕಿಯು ಹೆಚ್ಚು ಪಾತ್ರ ವಹಿಸುವುದು ಮತ್ತು ಮಿತ್ರಪಕ್ಷದ ಒಗ್ಗಟ್ಟು ಹಾಗೂ ಶಕ್ತಿ [illegible] ಕಾರ್ಯರಂಗಕ್ಕೆ ಇಳಿಸುವುದು ೨. ಬಾಲ್ಕನ್ ರಾಷ್ಟ್ರಗಳಲ್ಲಿ ತುರ್ಕಿಯ ಸ್ಥಾನ ೩. ಸೋವಿಯಟ್ ರಷ್ಯಾದೊಡನೆ ವ್ಯವಹಾರ, ೩ ಜೆಟ್ಟಿ ಒಪ್ಪಂದದಂತೆ ತುರ್ಕಿಯಲ್ಲಿನ ನೆಲೆಗಳನ್ನು ಸ್ವಾಧೀನಪಡಿಸಿಕೊಳ್ಳುವುದು. ೪ ಯುದ್ಧಾನಂತರ ತುರ್ಕಿ-ರಷ್ಯಾಗಳ ಗಡಿಗಳ ಪರಸ್ಪರ ಹಂಚಿಕೆ

ಭಾಂಗಿಗಳ ತೂಕ ಕಡಿಮೆಯಾಯಿತು

ಟಪಾಲು ಇಲಾಖೆಯವರು ಒಂದು ಪ್ರಕಟಣೆ ಹೊರಡಿಸಿ, ಇನ್ನು ಮುಂದೆ ೧೦ ತೊಲಕ್ಕಿಂತ ಹೆಚ್ಚಾದ ಭಾಂಗಿಗಳನ್ನು ಕಳುಹಿಸಬಾರದೆಂದು ತಿಳಿಸಿದ್ದಾರೆ. ಇದುವರೆಗೆ ೧ ಸಾವಿರ ತೊಲದವರೆಗೆ ಕಳುಹಿಸಬಹುದಾಗಿತ್ತು. ಅಲ್ಲದೆ ಬಂಗಾಳ, ಅಸ್ಸಾಂ ಪ್ರಾಂತ್ಯಗಳಿಗೆ ಭಾಂಗಿಗಳನ್ನು ತೆಗೆದುಕೊಳ್ಳುವುದೇ ಇಲ್ಲವೆಂದು ತಿಳಿಸಲಾಗಿದೆ.

ಹಿಟ್ಲರನ ಹೊಸ ತಲೆನೋವು

ತುರ್ಕಿಯು ತನ್ನ ತಟಸ್ಥತೆಯನ್ನು ಬಿಡುವುದಾದರೆ ಬಾಲ್ಕನ್ನಿನಲ್ಲಿ ಮಿತ್ರರಾಷ್ಟ್ರಗಳು ಗಲಭೆ ಎಬ್ಬಿಸಲು ಅನುಕೂಲವಾಗುವುದೆಂದೂ ಮತ್ತು ಬ್ರಿಟಿಷ್ ಬಾಂಬರ್ ಸೈನ್ಯಕ್ಕೆ ಭೂ ನೌಕಾ ನೆಲೆಗಳ ಅನುಕೂಲತೆ ದೊರಕುವುದೆಂದೂ ಹೇಳಲಾಗಿದೆ. ಇದರಿಂದ ಹಿಟ್ಲರನಿಗೆ ಒಂದು ದೊಡ್ಡ ತಲೆನೋವು ಉಂಟಾಗಿ ವ್ಯಾಕುಲತೆಗೆ ಕಾರಣವಾಗಬಹುದೆಂದು ಹೇಳಲಾಗಿದೆ.

ಲಂಡನ್ನಿಗೆ ಮರೋಷಿಲೋವ್

ಸ್ಟಾಲಿನ್‌ಗ್ರಾಡ್ ಗೆಲಿದ ಮಾರ್ಷಲ್ ವರೋಷಿಲೋವ್‌ರವರು ಯೂರೋಪ್ ದಂಡಯಾತ್ರೆ ಯೋಜನೆ ತಯಾರಿಗೆ ಸಹಕರಿಸಲು ರಷ್ಯಾದಿಂದ ಲಂಡನ್ನಿಗೆ ಹೋಗುವರೆಂದು ಹೇಳಲಾಗಿದೆ. ಪಶ್ಚಿಮ ರಂಗದ ಮೇಲೆ ಮುಂದಿನ ಆಕ್ರಮಣಾರಂಭದ ಬಗ್ಗೆ ಕಲೆತು ನಡೆಸಬೇಕಾದ ಕಾರ್ಯಕ್ರಮವನ್ನು ಲಂಡನ್ನಿನಲ್ಲಿ ಚರ್ಚಿಸುವರೆಂದು ತಿಳಿದುಬಂದಿದೆ

ಕಬ್ಬಿನ ಲಾರಿಗೆ ತುತ್ತು

ನಿನ್ನೆ ಮಂಡ್ಯದ ರಸ್ತೆಯಲ್ಲಿ ಕಬ್ಬು ತುಂಬಿದ ಲಾರಿಯೊಂದು ೧೨ ವರ್ಷದ ಬಾಲಕನೊಬ್ಬನ ಮೇಲೆ ಹರಿಯಿತು. ಹುಡುಗನು ಕೂಡಲೇ ಮೃತಪಟ್ಟನು.

ಕತ್ತಿಗೆ ಸ್ಟಾಲಿನರ ಮುತ್ತು

ಟೆಹರಾನ್ ಸಮ್ಮೇಳನದಲ್ಲಿ [illegible] ಸ್ಟಾಲಿನ್‌ಗ್ರಾಡ್ ವೀರರಿಗೆ ಕಾಣಿಕೆಯಾಗಿ ಬ್ರಿಟನ್‌ರು ಕೊಟ್ಟ ಕತ್ತಿಯನ್ನು [illegible] ಚರ್ಚಿಲರು ಮಾ|| ಸ್ಟಾಲಿನ್ನರಿಗೆ [illegible] ದರು. ಸ್ಟಾಲಿನ್ನರು [illegible] ಅದಕ್ಕೆ ಒಂದು ಮುತ್ತು ಕೊಟ್ಟರು.

ರಾಜು ರಾಜೀನಾಮೆ

ಸ್ವ. ಸು.] . ಬೆಂಗಳೂರು

ಮೈಸೂರು ನ್ಯಾಯವಿಧಾಯಕ ಸಭಾ ಕಾಂಗ್ರೆಸ್ ಪಕ್ಷದ ಡೆಪ್ಯುಟಿ ಲೀಡರ್ ಸ್ಥಾನಕ್ಕೆ ಶ್ರೀ ಎಲ್. ಎಸ್. ರಾಜುರವರು ರಾಜೀನಾಮೆ ಕೊಟ್ಟಿರುವರು.

ದಾಸಪ್ಪನವರಿಗೆ ಪಕ್ಕಿತ್ತು

ಬೆಂಗಳೂರು ಮತ್ತು ಸಂಸ್ಥಾನದ ಇತರ ಊರುಗಳಲ್ಲಿ ಪೌರಸಭಾ ಚುನಾವಣೆಗಳಿಗೆ ಕಾಂಗ್ರೆಸ್ ಪರ ಉಮೇದುವಾರರನ್ನು ನಿಲ್ಲಿಸುವ ಸಕಲ ಸರ್ವಾಧಿಕಾರಗಳನ್ನೂ ಶ್ರೀ ಹೆಚ್. ಸಿ. ದಾಸಪ್ಪ ಸಮಿತಿಯವರು ಪಡೆದರೂ, ಕಾಂಗ್ರೆಸ್ ಚುನಾವಣೆಗೆ ನಿಲ್ಲಲೂ ನಾಸು ಶ್ರೀ ದಾಸಪ್ಪನವರಿಗೆ ಅಧಿಕಾರ ಕೊಟ್ಟಿದ್ದ ಎಂಬುದಾಗಿ ತಿಳಿಸಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಒಂದು ಹೇಳಿಕೆಯನ್ನು ನಿನ್ನೆ ಹೊರಡಿಸಿದರು.

ಖುಲಾಸೆ ಆಜ್ಞೆ

ಸರ್ಕಾರದವರ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದು ಕಳುಹಿಕೊಡುವ ಆಜ್ಞೆ ಪ್ರಕಾರ ನಿನ್ನೆ ಮಧ್ಯಾಹ್ನ ಬೆಂಗಳೂರು ಸೆಂಟ್ರಲ್ ಜೈಲಿನಿಂದ ಕಾಂಗ್ರೆಸ್ ಅಧ್ಯಕ್ಷರನ್ನೂ ಇತರ ಬಂದಿಗಳನ್ನೂ ಖುಲಾಸೆ ಮಾಡಲಾಯಿತು. [ಇವರು ಬೆಂಗಳೂರಿನಲ್ಲಿ ದಸ್ತಗಿರಿಯಾಗಿದ್ದರು] ಇತರ ಜಿಲ್ಲೆಗಳ ನ್ಯಾಯಾಧೀಶರುಗಳಿಂದ ಸೂಚನೆ ಬಂದ ನಂತರ ಉಳಿದವರನ್ನು ಖುಲಾಸೆ ಮಾಡಲಾಗುವುದು.

ಮೈಸೂರು ಜಿಲ್ಲೆಯ ಬಂದಿಗಳನ್ನು ಬಿಡುಗಡೆ ಮಾಡಲು ನಿನ್ನೆ ದಿನ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಬೆಂಗಳೂರು ಸೆಂಟ್ರಲ್ ಜೈಲಿಗೆ ಖುಲಾಸೆ ಆಜ್ಞೆ ಹೋಗಿರುತ್ತದೆ.

ಭಾರಿ ಕಳ್ಳತನ

ಬೆಂಗಳೂರಿನ ಗಡಿಯಾರವ್ಯಾಪಾರಿ ಎ. ಆರ್. ವಿಲಿಯಮ್ಸ್‌ರವರ ಅಂಗಡಿಯಲ್ಲಿ [illegible] ಸಾವಿರ ರೂಪಾಯಿಗಳ ಗಡಿಯಾರಗಳ ಕಳುವಾಗಿರುವುದಾಗಿ ಪೋಲೀಸರಿಗೆ ದೂರು ಹೋಗಿದೆ.

ನಿರಾಶ್ರಿತರ ವರದಿ

ಮೈಸೂರು ಸಂಸ್ಥಾನಕ್ಕೆ ಹೊರಗಿನಿಂದ ಬಂದಿರುವ ಬ್ರಿಟಿಷ್ ಇಂಡಿಯಾ ದೇಶದ ನಿರಾಶ್ರಿತರು ತಾವು ನೆಲೆಸಿರುವ ಜಿಲ್ಲೆಯ ಅಮಲ್ದಾರರ ಬಳಿಗೆ ಹೋಗಿ ತಮ್ಮ ಸ್ಥಳೀಯ ವೃತ್ತಾಂತದ ವಿವರಗಳನ್ನು ವರದಿ ಮಾಡಿಕೊಳ್ಳಬೇಕೆಂದು ಸರ್ಕಾರದ ಆಜ್ಞೆಯಾಗಿತ್ತು. ಈರೀತಿ ವರದಿಮಾಡಿಕೊಳ್ಳಲು ಇದೇ [illegible] ತಾ|| ಕೊನೆಯ ದಿನವೆಂದು ಸರ್ಕಾರ ಪ್ರಕಟಿಸಿಕೊಟ್ಟಿದೆ.

ಪತ್ರಿಕೋದ್ಯೋಗಿ ಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲಾ ಪತ್ರಿಕೋದ್ಯೋಗಿ ಸಂಘವು ಕರೆದಿರುವ ಚತುರ್ಥ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನವು [illegible] ನೇ ಜನವರಿ ಕೊನೆಯ ವಾರದಲ್ಲಿ [illegible] ಪ್ರಥಮ ವಾರದಲ್ಲಿ [illegible] ಸಲು ನಿಶ್ಚಯಿಸಲಾಗಿದೆ.

ಮಿಲಿ ಮುತ್ತಿಗೆ

[illegible] ನಗರದ ಮೇಲೆ [illegible] ಧಾಳಿ [illegible]

ಶಾಂತಿಸಾಗರದ ಸಮರ ವಿಧಾನ

"ನಮ್ಮೆಲ್ಲರಿಗೂ ಟೋಕಿಯೋದಲ್ಲಿ ಉದ್ಯೋಗವಿದೆ. ಶಾಂತಿಸಾಗರದಲ್ಲಿರುವ ನಮ್ಮ ನೌಕಾ ದಳದಗಳು ಜಪಾನಿಗಳ ನೆಲೆಯನ್ನು ಹಿಡಿದು ಅಲ್ಲಿಂದಲೇ ಜಪಾನಿಗಳ ಮೇಲೆ ಬೀಳಲು ಏರ್ಪಾಡುಗಳನ್ನು ನಡೆಸುತ್ತಿವೆ. ಶತ್ರುಗಳು ನಮ್ಮ ಜಾಗಗಳನ್ನು ಆಕ್ರಮಿಸುವಾಗ ನಾವು ತೆಪ್ಪಗಿರುವುದು ಅಸ್ವಾಭಾವಿಕ. ನೈರುತ್ಯ ಶಾಂತಿ ಸಾಗರದ ಸಮರದಲ್ಲೇ ಒಂದು ಹೊಸ ವಿಧಾನವು ಈಗಾಗಲೇ ಆರಂಭವಾಗಿದೆ" ಎಂದು ಮಿತ್ರ ನೌಕಾ ಪಡೆ ಸೇನಾನಿ ಅಡ್ಮಿರಲ್ ಹ್ಯಾಲ್ಸಿಯವರು ಹೇಳಿರುವರು.

ಜರ್ಮನರಿಗೆ ಕಿರುಕುಳ

ಡೆನ್ಮಾರ್ಕ್ ರಾಜಧಾನಿ ಕೋಪನ್‌ಹೇಗನ್ನಿನ ರಸ್ತೆಯಲ್ಲಿ ಹೋಗುತ್ತಿದ್ದ ಜರ್ಮನ್ ಸಿಪಾಯಿಯೊಬ್ಬನನ್ನು ಗುಂಡಿನಿಂದ ಹೊಡೆದಿರುವರು. ಅದಕ್ಕಾಗಿ ಜರ್ಮನರು ಅಲ್ಲಿನವರ ಮೇಲೆ ೫೦ ಮಿಲಿಯನ್ ಪೌಂಡು ದಂಡ ಕಂದಾಯವನ್ನು ವಿಧಿಸಿದ್ದಾರೆ.

ಇಷ್ಟಾದರೂ ಜರ್ಮನರಿಗೆ ಕಿರುಕುಳ ತಪ್ಪಲಿಲ್ಲ. ಅಲ್ಲಿನ ಕಾರ್ಖಾನೆಯೊಂದಕ್ಕೆ ಬೆಂಕಿ ಇಡಲಾಯಿತು. ಡೆನ್ಮಾರ್ಕಿನವರೇ ಒಂದು ಕಡೆಯ ಯಂತ್ರಾಗಾರವನ್ನು ಬಹುಮಟ್ಟಿಗೆ ನಾಶಗೊಳಿಸಿರುವರು. ಜರ್ಮನ್ ಸಿಪಾಯಿಗಳು ಇಳಿದಿದ್ದ ಹೋಟೆಲೊಂದಕ್ಕೆ ಬೆಂಕಿ ಇಟ್ಟು ಉರಿಸಲಾಗಿದೆ. ಡೆನ್ಮಾರ್ಕಿನಲ್ಲೆಲ್ಲೂ ಜರ್ಮನರಿಗೆ ದಿನೇದಿನೆ ಕಿರುಕುಳ ಹೆಚ್ಚುತ್ತಿದೆ.

ಟೆಹರಾನಿನಿಂದ ಪ್ರಯಾಣ

ಸಮಾಲೋಚನೆಗೆ ಸೇರಿದ್ದ ಮಿತ್ರ ತ್ರಿಮೂರ್ತಿಗಳೂ ಮಾತುಕತೆ ಮುಗಿಸಿ ಈಗ ಟೆಹರಾನನ್ನು ಬಿಟ್ಟಿರುತ್ತಾರೆ. ಅಧ್ಯಕ್ಷ ರೂಸ್‌ವೆಲ್ಟರೂ ಮಿ|| ಚರ್ಚಿಲರೂ ಉತ್ತರ ಆಫ್ರಿಕಕ್ಕೆ ವಾಪಸಾಗಿದ್ದಾರೆ. ಮಾ|| ಸ್ಟಾಲಿನ್ನರು ಭಾನುವಾರ ಮಾಸ್ಕೋವಿಗೆ ವಾಪಸಾದರು. ಇವರು ನಗರ ಪ್ರವೇಶಿಸಿದಾಗ ಸಾವಿರಾರು ಮಂದಿ ಉತ್ಸಾಹಪೂರಿತರಾಗಿ ಸ್ವಾಗತ ನೀಡಿದರು.

ಸರ್ಬಿಯಾದಲ್ಲಿ ನಾಜಿಗಳು

ಸರ್ಬಿಯಾದ ಐನೂರು ಅರಿಯದ ಗ್ರಾಮ ನಿವಾಸಿಗಳನ್ನು ಎತ್ತಿಕಟ್ಟಿ ಟೆಹರಾನಿನ ಸಮ್ಮೇಳನಕ್ಕೆ ಅಡ್ಡಿಪಡಿಸಲುವಾಗಿ ಜರ್ಮನರು ವ್ಯಾರಚೂಟುಗಳಲ್ಲಿ ಸರ್ಬಿಯಾಕ್ಕೆ ಇಳಿದರೆಂದು ವರದಿಯಾಗಿದೆ. ಅಂಥವರನೇಕರನ್ನು ಹಿಡಿದುಹಾಕಲಾಯಿತು. ಅವರಲ್ಲಿ ಹಲಕೆಲವರು ಅಡಗಿಕೊಂಡಿರುವರೆಂದು ತಿಳಿದುಬಂದಿದೆ.

ಜರ್ಮನ್ ಬಗ್ಗೆ ಪ್ರತಿಭಟನೆ

ನಾರ್ವೆಯ ಓಸ್ಲೋ ವಿಶ್ವವಿದ್ಯಾನಿಲಯದ ೧೨೦೦ ಮಂದಿ ವಿದ್ಯಾರ್ಥಿಗಳನ್ನು ಜರ್ಮನರು ದಸ್ತಗಿರಿ ಮಾಡಿ ಗಡೀಪಾರು ಮಾಡಿರುವುದನ್ನು ಸ್ವೀಡನ್ನು ಪ್ರತಿಭಟಿಸಿದೆ. ಈ ಬಗ್ಗೆ ಸ್ವೀಡಿಷ ಸರ್ಕಾರವು ಸುಮ್ಮನೆ ಕುಳಿತು ಕೊಂಡಿರುವುದರ ಕ್ಕಾಗುವುದಿಲ್ಲವೆಂದು ಸ್ವೀಡಿಷ್ ಪತ್ರಿಕೆಗಳು ಉಗ್ರವಾಗಿ ಟೀಕಿಸಿವೆ.

ಪುನಃ ತುರ್ಕಿಯಲ್ಲಿ ಭೂಕಂಪ

ಮತ್ತೆ ತುರ್ಕಿಯಲ್ಲಿ ಭೂಕಂಪವಾಗಿ ೨ ಹಳ್ಳಿಗಳೂ ೨೫೦ ಜನರೂ ನಾಶವಾಗಿರುವುದಾಗಿ ಜರ್ಮನರ ವರದಿ ಹೇಳುವುದು.

ನಿರ್ಬಂಧನವನ್ನು ತೆಗೆಯಿರಿ

ಇಂಡಿಯಾ ಕಮ್ಯೂನಿಸ್ಟ್ ಪಾರ್ಟಿ ಮೈಸೂರು ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ಓ. ಮಾಧ್ಯೂರವರು ಹೀಗೆ ತಿಳಿಸುತ್ತಾರೆ—

ಈಗಲಾದರೂ ಸರ್ಕಾರದವರು ದೇಶದ ಬಿಕ್ಕಟ್ಟನ್ನು ಪರಿಹರಿಸುವುದಕ್ಕೆ ಜನನಾಯಕರ ಸಹಾಯ ಅತ್ಯವಶ್ಯಕವೆಂಬುದನ್ನು ತಿಳಿದು ಇದುವರೆಗೂ ಬಂಧನದಲ್ಲಿದ್ದ ಜನನಾಯಕರನ್ನು ಬಿಡುಗಡೆ ಮಾಡಲಾರಂಭಿಸಿರುವರು. ತಿರುವಾಂಕೂರು, ಕೊಚ್ಚಿ, ಇಂದೂರು ಮುಂತಾದ ಹಲವಾರು ಸಂಸ್ಥಾನಗಳಲ್ಲಿ ಈಗ ಅನೇಕ ತಿಂಗಳುಗಳಿಂದ ಎಲ್ಲಾ ರಾಜಕೀಯ ಕೈದಿಗಳನ್ನೂ ಖುಲಾಸೆಮಾಡುತ್ತಿರುವರು. ಹಾಗೆಯೇ ಮೈಸೂರಿನಲ್ಲೂ ಎಲ್ಲಾ ಕಾಂಗ್ರೆಸ್ ನಾಯಕರನ್ನು ಬಿಡುಗಡೆ ಮಾಡಿರುವುದು ಸಂತೋಷದ ಸಂಗತಿ.

ಆದರೆ ಬರೀ ಖುಲಾಸೆಯಿಂದ ಕೆಲಸ ನಡೆಯುವುದಿಲ್ಲ. ಪೂರ್ಣ ಸಹಕಾರ ಪಡೆಯಬೇಕಿದ್ದರೆ ಕಾಂಗ್ರೆಸ್ ಸಂಸ್ಥೆ ಮೇಲಿರುವ ನಿರ್ಬಂಧಗಳನ್ನು ತೆಗೆಯಬೇಕು. ಎಲ್ಲಾ ರಾಜಕೀಯ ಪಕ್ಷಗಳೂ ಒಟ್ಟಿಗೆ ಕಲೆತು ಜನತೆಯಲ್ಲಿ ಆಹಾರದಸ್ಸಾಗಿ ಕೆಲಸ ಮಾಡಲು ಅನುಕೂಲವಾಗುವಂತೆ ಸಭೆ, ಮೆರವಣಿಗೆ ಮುಂತಾದವುಗಳ ಮೇಲಿರುವ ಎಲ್ಲಾ ನಿರ್ಬಂಧಗಳನ್ನೂ ಕೂಡಲೇ ತೆಗೆದುಹಾಕಬೇಕು. ಇದಕ್ಕಾಗಿ ದೇಶದ ಎಲ್ಲಾ ಸಂಸ್ಥೆಗಳೂ ಸಾರ್ವಜನಿಕ ಸಭೆಗಳನ್ನು ಸೇರಿಸಿ ಠರಾವುಗಳ ಮೂಲಕ ಸರ್ಕಾರವನ್ನು ಒತ್ತಾಯಪಡಿಸುವುದು ಅವುಗಳ ಕರ್ತವ್ಯ.

ಕಮ್ಯೂನಿಸ್ಟ್ ಪಾರ್ಟಿಯ ಮೈಸೂರು ಸಮಿತಿಯು ಈ ವಿಚಾರವನ್ನು ಚರ್ಚಿಸಲು ಇದೇ ಮಾಹೆ [illegible] ನೇ ತಾ|| ಭಾನುವಾರ ಸಾಯಂಕಾಲ ೬-೩೦ ಕ್ಕೆ ಒಂದು ಬಹಿರಂಗ ಸಭೆಯನ್ನು ಏರ್ಪಡಿಸಿದೆ. ಕಾಂಗ್ರೆಸ್ ನಾಯಕರೂ, ಎಲ್ಲಾ ದೇಶಭಕ್ತರೂ ಸಹಕರಿಸಬೇಕಾಗಿ ಪ್ರಾರ್ಥನೆ.

ಸಿಂಧ್‌ನಲ್ಲಿ ಖುಲಾಸೆ

ಕಾಂಗ್ರೆಸ್ ಕಾರ್ಯಗಳಿಗೆ ಸಂಬಂಧಿಸಿದ ಸಿಂಧ್ ಸೆಕ್ಯೂರಿಟಿ ಬಂದಿಗಳನ್ನು ಬಿಟ್ಟುಬಿಡಲು ಕೇಂದ್ರ ಸರ್ಕಾರದಿಂದ ಸಿಂಧ್ ಸರ್ಕಾರಕ್ಕೆ ಸೂಚನೆ ಬಂದಿರುತ್ತದೆ. ಸಿಂಧ್ ಸರ್ಕಾರದವರು ತಾವು ಹಿಡಿದಿರುವ ೨೦ ಸೆಕ್ಯೂರಿಟಿ ಬಂದಿಗಳ ಪ್ರಕರಣಗಳನ್ನು ಬಿಡುಗಡೆ ಮಾಡಬಹುದೆಂಬ ಬಗ್ಗೆ ಪರಿಶೀಲಿಸುತ್ತಿರುವರು.

Edited, printed and publi-shed by A R Nagarajan, at the Sadhvi Press. D.Subbiah Road, Mysore.

ಛಳಿಯಲ್ಲಿ ಅದ್ಭುತ ನೌಕಾ ಕದನ

ಮಿತ್ರರು ಜಪಾನ್ ದಂಡಯಾತ್ರೆಗಾಗಿ ಎಲ್ಲ ದಿಕ್ಕುಗಳಲ್ಲೂ ನೌಕೆಗಳನ್ನು ಶಾಂತಿ ಸಾಗರದಲ್ಲಿ ಶೇಖರಿಸಿರುವರು. ಅಲ್ಲಿ ಈ ಯುದ್ಧದಲ್ಲಿ ಎಂದೂ ನಡೆಯದಂಥ ಭಯಂಕರ ನೌಕಾ ಕದನವು [illegible] ರಲ್ಲಿ ನಡೆಯುವುದು ಖಂಡಿತ ಎಂಬುದಾಗಿ ನೌಕಾ ಕಾರ್ಯದರ್ಶಿ ಫ್ರಾಂಕ್ ನಾಕ್ಸರು ಹೇಳಿರುವರು.

ರಕ್ಷಣೆ ಸಾಲದು

ಸ್ಟೇಟ್ಸ್‌ಮನ್ ಪತ್ರಿಕೆಯು ಕಲ್ಕತ್ತಾ ಧಾಳಿಯಿಂದಾದ ನಷ್ಟವನ್ನು ಪ್ರಸ್ತಾಪಿಸುತ್ತಾ, ಸರ್ಕಾರವು ಮಾಡುತ್ತಿರುವ ದೇಶರಕ್ಷಣೆ ಕಾರ್ಯ ತೃಪ್ತಿಕರವಾಗಿಲ್ಲವೆಂಬುದನ್ನು ಅಲ್ಲಿ ಉಂಟಾಗಿರುವ ನಷ್ಟಗಳೇ ತೋರಿಸುತ್ತವೆ ಎಂದು ಟೀಕಿಸಿದೆ.

ಪಂಜಾಬ್‌ನಲ್ಲಿ ಧಾನ್ಯ ಹತೋಟಿ ಇಲ್ಲ

ಪಂಜಾಬ್ ಪ್ರಾಂತ್ಯದಲ್ಲಿ ದವಸ ಧಾನ್ಯಗಳ ಮೇಲಿನ ಹತೋಟಿ ಕಾರ್ಯವನ್ನೂ, ಗ್ರಾಮಾಂತರಗಳಿಂದ ದವಸವನ್ನು ಬಲಾತ್ಕಾರವಾಗಿ ಸಂಗ್ರಹಿಸುವ ಕಾರ್ಯವನ್ನೂ ಸರ್ಕಾರದವರು ತತ್ಕಾಲಕ್ಕೆ ನಡೆಸುವುದಿಲ್ಲವೆಂದು ತಿಳಿದುಬಂದಿದೆ.

ಕನ್ನಡ ಪುಸ್ತಕಾಲಯ
ಮತ್ತು
ಸಂಚಾಲನಾ ಪುಸ್ತಕ ಭಂಡಾರ
(Circulating Library)
AT
ಸ್ಟೂಡೆಂಟ್ಸ್ ಹಾಲ್,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
9—12—1943 ನೇ ತಾರೀಖು
ತೆರೆಯಲ್ಪಡುತ್ತದೆ
"A" Class ಚಂದಾ ಹೊಬಲಗು
ತಿಂಗಳು 1 ಕ್ಕೆ 1-8-0
"B" Class ಚಂದಾ ಹೊಬಲಗು
ತಿಂಗಳು 1 ಕ್ಕೆ 0-12-0
ಪೂರ್ಣ ವಿಚಾರವನ್ನು ಸಂಸ್ಥೆಯಲ್ಲಿ ತಿಳಿಯಬೇಕಾಗಿ ವಿನಂತಿ.
ನಮ್ಮಲ್ಲಿ ಉತ್ತಮವಾದ ಕನ್ನಡ ಕಥೆಗಳು ಕಾದಂಬರಿಗಳು ಮತ್ತು ನಾಟಕಗಳು ಮಾರಾಟಕ್ಕೆ ಇಡಲ್ಪಟ್ಟಿವೆ.
ಕನ್ನಡ ಬಾಂಧವರು ಪ್ರೋತ್ಸಾಹಿಸಬೇಕಾಗಿ ವಿನಂತಿ.
ಏಜೆಂಟ್ಸ್:- C. S. RAO,
ಸ್ಟೂಡೆಂಟ್ಸ್ ಹಾಲ್, ಮೈಸೂರು

ಸ್ವೀಯರ ಶೌಕೀನರಿಗಾಗಿ
[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ತೊಡುವ ಏರ್ಪಾಡು ಮಾಡಿರುತ್ತೆ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿ ಪುಡಿ
ಯನ್ನೇ ಉಪಯೋಗಿಸಿ.
ಡಿ. ಪುಟ್ಟಯ್ಯ ದಿನಸಿಮುಂಡಿ, ದೇವರಾಜ ಮಾರ್ಕೆಟ್, ಮೈಸೂರು
ವಿ ಸೂ.— ಚಿಲ್ಲರೆಯಾಗಿ ಕಲ್ಲುಸಕ್ಕರೆ, ಬೂರಾಸಕ್ಕರೆ ನಿಸ್ಸತ್ತ್ವ ಹಲ್ಲಿ ಮತ್ತು ಸಂಪಿಟಿ ಹಿಟ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ

ಸಂಪುಟ ೨] ಶುಕ್ರವಾರ ೧೦-೧೨-೪೩ [ಸಂಚಿಕೆ ೧೨೨

ಬಾಲ್ಕನ್ ದಂಡಯಾತ್ರೆ ಹಂಚಿಕೆ ಸಿದ್ಧ

ಶತ್ರು ನಿರ್ನಾಮಮಾಡುವುದಾಗಿ ಟೋಜೋರವರ ಬಡಾಯಿ

ಜರ್ಮನರು ಬಾಲ್ಟಿಕ್ ತೀರವನ್ನು ಬರಿದುಮಾಡುತ್ತಿದ್ದಾರೆ

ಸರ್ಕಾರವು ಕೊಳ್ಳುವ ಧಾನ್ಯಗಳ ದರ

ಮೈಸೂರು ೧೦

ಮೈಸೂರು ಜಿಲ್ಲಾಧಿಕಾರಿಗಳು ಒಂದು ಪ್ರಕಟಣೆಯನ್ನು ಹೊರಡಿಸಿ, ತಾ|| ೫ ರಿಂದ ಮೈಸೂರು ಜಿಲ್ಲೆಯಲ್ಲಿ ಧಾನ್ಯಗಳನ್ನು ಕೆಳಗಿನಂತೆ ಕೊಳ್ಳುವ ದರಗಳು ಜಾರಿಯಲ್ಲಿ ಇರಲಿವೆಯೆಂದು ಆಜ್ಞೆ ಮಾಡಿದ್ದಾರೆ.

ಭತ್ತದ ದರ

ಕೋಯಮುತ್ತೂರು ಸಣ್ಣ, ನಾಗಪುರಿ, ರಾಜಭೋಗ, ಆಲೂರು ಸಣ್ಣ, ಬೈಸ್ಕ ಸಾಲ, ಬಂಗಾರಕಡ್ಡಿ, ರಕ್ತಚೂಡಿ, ಸಕಲಾತಿ ಸಣ್ಣ, ೧೧-೮-೦ ರೂ. (ರಾಜಧಾನಿಯಲ್ಲಿ). ೧೧ ರೂ. (ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಡಿಪೋಗಳಲ್ಲಿ) ೧೦-೧೨-೦ ರೂ. (ಇತರೇ ಸ್ಥಳಗಳಲ್ಲಿ).

ಮೈಸೂರು ಕಡ್ಡಿ, ಮರಲುಕಾಂತಿ, ದೇವಮಲ್ಲಿಗೆ, ಜಾಬುಟ್ಟಲು, ರಾಮಸಾಗರ, ಹಾಸನ ದಪ್ಪ, ದಬ್ಬಣಸಾಲೆ, ಘಾಟಂ ಕಡ್ಡಿ, ೯-೧೨-೦, ೯-೪-೦, ೯-೦-೦, ರೂ. ಗಳು.

ಕಾರು, ಮಲೆನಾಡು ಗಿಡ್ಡ, ಬಗಡೆ, ಚಿಪ್ಪಿಗ, ಕೆಂಬೂತಿ, ೮-೧೨-೦, ೮-೪-೦, ೮-೦-೦ ರೂ. ಗಳು.

ರಾಗಿ, ೧೧-೮-೦, ೧೧-೦-೦, ೧೦-೧೨-೦ ರೂ. ಗಳು.

ಜೋಳ, ೧೨-೦-೦, ೧೧-೮-೦, ೧೧-೪-೦ ರೂ. ಗಳು.

ನವಣೆ ಮತ್ತು ಬಸ್ಟು, ೧೨-೦-೦, ರೂ. ೧೧-೮-೦, ೧೧-೪-೦ ರೂ. ಗಳು

ಹಾರಕ ಮತ್ತು ಸಾವೆ, ೯-೦-೦ ರೂ. ೮-೮-೦, ೮-೪-೦ ರೂ. ಗಳು.

ಬೆಲ್ಲದ ದರ

ಮೈಸೂರು ಜಿಲ್ಲಾಧಿಕಾರಿಗಳು ಕೆಳಗಿನ ಬೆಲ್ಲದ ದರವನ್ನು ಜಿಲ್ಲೆಯಲ್ಲಿ ನಿರ್ಧರಿಸಿದ್ದಾರೆ—

ಮೈಸೂರು ನಗರ ಮತ್ತು ಟಿ. ನರಸೀಪುರ ತಾಲ್ಲೂಕುಗಳ ಸ್ಥಳಗಳಲ್ಲಿ, ೧ ನೆಯ ರಕಂ ಮಣಕ್ಕೆ ೪-೮-೦, ವೀಸೆಗೆ ೦-೯-೦. ೨ ನೇ ರಕಂ ೪-೦-೦, ೦-೮-೬.

ಬನ್ನೂರು—1] ೪-೦-೦, ೦-೮-೬.
2] ೩-೮-೦, ೦-೭-೬.

ಜಿಲ್ಲೆಯ ಇತರ ಎಲ್ಲಾ ಕಡೆಗಳಲ್ಲಿ—
ಮಣಕ್ಕೆ 1] ೪-೧೨-೦, ೦-೧೦-೦
2] ೪-೪-೦, ೦-೯-೦

ಪುನಃ ತ್ರಿರಾಷ್ಟ್ರ ಸಮ್ಮೇಳನವೆ

ಜರ್ಮನರನ್ನು ಸದೆಬಡೆಯಲು ದ್ವಿತೀಯ ರಣರಂಗ ಪ್ರಾರಂಭವಾಗಿ, ಹಿಟ್ಲರನು ಶಾಂತಿ ಭಿಕ್ಷೆಗೆ ಬರುವ ಕಾಲಕ್ಕೆ, ಮುಂಚೆಯೇ, ಚರ್ಚಿಲ್-ರೂಸ್ವೆಲ್ಟ್ ಮತ್ತು ಸ್ಟಾಲಿನ್‌ರವರ ಸಮ್ಮೇಳನವು ಪುನಃ ನಡೆಯಬಹುದೆಂದು ರಾಜಕೀಯಜ್ಞರು ಊಹಿಸಿದ್ದಾರೆ ಈಗಾಗಲೇ ಸ್ಟಾಲಿನ್‌ರವರು ಮಾಸ್ಕೋಕ್ಕೆ ಹಿಂತಿರುಗಿ, ಮುಂದಿನ ಚಳಿಗಾಲದ ದಂಡಯಾತ್ರೆ, ಹಂಚಿಕೆಗೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿರುವರೆಂದೂ, ಇದು ಮಿತ್ರರ ಪಶ್ಚಿಮ ಮುತ್ತಿಗೆ ಆರಂಭದ ಜೊತೆಗೆ ನಡೆಯುವುದೆಂದೂ ಹೇಳಲಾಗಿದೆ.

ಟೋಜೋರವರ ಬಡಾಯಿ

ಜಪಾನಿ ಪ್ರಧಾನಿ ಜ|| ಟೋಜೋರವರು ಒಂದು ಬ್ರಾಡ್‌ಕ್ಯಾಸ್ಟ್ ಭಾಷಣದಲ್ಲಿ "ನಮ್ಮ ಮಿತ್ರ ರಾಷ್ಟ್ರಗಳು ಕಡೆಯವರೆಗೆ ಕದನ ನಡೆಸಲು ಬದ್ಧ ಕಂಕಣರಾಗಿ ಅನೇಕ ಕಷ್ಟಗಳಿಂದ ಪಾರಾಗಿದ್ದಾರೆ. ಇತರ ಮಿತ್ರ ರಾಷ್ಟ್ರಗಳೊಡನೆ ನಮ್ಮ ಸಹಾಯವು ದಿನ ದಿನಕ್ಕೆ ಹೆಚ್ಚುತ್ತಿದೆ. ಮಿತ್ರ ರಾಷ್ಟ್ರಗಳೊಡನೆ ನಾವು ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಅಮೇರಿಕಾ ಮತ್ತು ಬ್ರಿಟನ್‌ಗೆ ಬಲವಾದ ಏಟು ಕೊಡುತ್ತಿದ್ದೇವೆ. ಶತ್ರು ಪ್ರತಿಭಟನೆ ಎಷ್ಟು ಹೆಚ್ಚಿದ್ದರೂ ಕೂಡ, ನಾವು ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಅವರನ್ನು ನಾವು ಸಂಪೂರ್ಣ ನಿರ್ನಾಮ ಮಾಡುವೆವು" ಎಂಬುದಾಗಿ ಬಡಾಯಿಕೊಚ್ಚಿದ್ದಾರೆ

ಸಿನಿಮಾಗಳ ಬಂದು

ಲಾಹೋರಿನಲ್ಲಿ ಇರುವ ೨೦ ಸಿನಿಮಾ ಮಂದಿರಗಳು ತಮ್ಮ ಪ್ರದರ್ಶನವನ್ನು ಬಂದು ಮಾಡಿವೆ. ಯಾವ ಗಳಿಗೆಯಲ್ಲಾಗಲೀ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿಬಿಡುವಂ ಸರ್ಕಾರದವರು ಹೊರಡಿಸಿರುವ ಆಜ್ಞೆಯೇ ಇದಕ್ಕೆ ಕಾರಣ.

ಚಾಂಗ್ಟೆ ವಾಪಸು

ಜಪಾನರು ಆಕ್ರಮಿಸಿದ್ದ ಚಾಂಗ್ಟೆ ನಗರವನ್ನು ಒಂದು ವಾರದೊಳಗೆ ಚೀನರು ಪುನಃ ಹಿಡಿದುಕೊಂಡಿದ್ದಾರೆ. ಅಲ್ಲಿ ಗೋಧಿಯು ವಿಶೇಷವಾಗಿ ಬೆಳೆಯುತ್ತಿದೆ ಮತ್ತು ಹೂನಾನ್ ಪ್ರಾಂತ್ಯದ ಮುಖ್ಯ ಜಪಾನಿ ನಿಲ್ದಾಣವಾದ ಸಿನ್ಸೀ ಎಂಬುದನ್ನು ಚೀನೀ ಸೇನೆಗಳು ಆಕ್ರಮಿಸಿವೆ.

ಬಾಲ್ಕನ್ನಿನ ಮೇಲೆ ಮುತ್ತಿಗೆ

ಯೂರೋಪಿನ ಮೇಲೆ ಮುತ್ತಿಗೆ ನಡೆಸಲು ತಕ್ಕ ಹಂಚಿಕೆಯನ್ನು ಕೈರೋನಲ್ಲಿ ನಡೆದ ತ್ರಿರಾಷ್ಟ್ರ ಸಮ್ಮೇಳನದಲ್ಲಿ ಹಿಡಿದ [illegible] ಹೇಳಲಾಗಿದೆ ಬಾಲ್ಕನ್ ದಂಡಯಾತ್ರೆಯು ಸಮ್ಮೇಳನದ [illegible] ವಾಗುವುದೆಂದೂ ಈಗಾಗಲೇ [illegible] ಸಮುದ್ರದಲ್ಲಿ ಬ್ರಿಟಿಷ್ ನೌಕಾ ಸಂಚಾರ ಪ್ರಾರಂಭವಾಗಿದೆಯೆಂದು ವರದಿಯಾಗಿದೆ

ಮಹಾ ಪ್ರಭುಗಳ ಪ್ರವಾಸ

ಮೈಸೂರು ೧೦.

ಹಿಂದೆಯೇ ಪ್ರಕಟಿಸಿದಂತೆ ಶ್ರೀಮನ್ಮಹಾರಾಜರವರು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಇದೇ ೧೫ ರಿಂದ ಪ್ರವಾಸ ಮಾಡುವರು. ಅವರ ಕಾರ್ಯಕ್ರಮವು ಹೀಗಿದೆ.

೧೫ ನೇ ತಾ|| ಬೆಳಗ್ಗೆ ೯ ಗಂಟೆಗೆ ಕೃಷ್ಣರಾಜನಗರಕ್ಕೆ ಪ್ರಯಾಣ ಅಲ್ಲಿನ ಪೌರಸಭೆಯ ಮತ್ತು ಮುನಿಸಿಪಾಲಿಟಿಯ ಮಾನಪತ್ರಿಕೆಗಳ ಸ್ವೀಕಾರ ಮತ್ತು ಉತ್ತರ ೧೧-೧೫ ಗಂಟೆಗೆ ರಾಜಧಾನಿಗೆ ವಾಪಸು. ೧೬-೯ ಗಂಟೆಗೆ ಟಿ. ನರಸೀಪುರಕ್ಕೆ ಪ್ರಯಾಣ ಪೌರಸಭೆಯ ಮಾನ ಪತ್ರ ಮತ್ತು ಉತ್ತರ. ಮೈಸೂರು ಸಿಲ್ಕ್ ಫಿಲೇಚರಿಗೆ ಭೇಟಿ ನಂತರ ಮೂಗೂರು, ಸಂತೆ ಮರಹಳ್ಳಿ ಮತ್ತು ಕೊಳ್ಳೇಗಾಲಕ್ಕೆ ಭೇಟಿ ಕೊಟ್ಟು ರಾಜಧಾನಿಗೆ ವಾಪಸು. ೧೭-೯ ಗಂಟೆಗೆ ಟಿ. ನರಸೀಪುರದ ಮಾರ್ಗವಾಗಿ ಶಿವನಸಮುದ್ರಕ್ಕೆ ಪ್ರಯಾಣ. ಮಧ್ಯಾಹ್ನ ಪವರ್ ಸ್ಟೇಷನ್ನಿಗೆ ಮತ್ತು ಶಿಂಷಾಪುರಕ್ಕೆ ಭೇಟಿ ೧೮-೯ ಗಂಟೆಗೆ ಶಿವನಸಮುದ್ರದಿಂದ ಮಳವಳ್ಳಿಗೆ ಪ್ರಯಾಣ. ಅಲ್ಲಿ ಪೌರಸಭೆಯವರ ಮಾನ ಪತ್ರದ ಸ್ವೀಕಾರ ನಂತರ ಸೋಸಲೆ ಮಾರ್ಗವಾಗಿ ಮೈಸೂರಿಗೆ ವಾಪಸು.

೨೦-೯ ಗಂಟೆಗೆ ಮಂಡ್ಯಕ್ಕೆ ಪ್ರಯಾಣ ಪೌರಸಭೆಯ ಮಾನಪತ್ರ ಮತ್ತು ಉತ್ತರ, ಸಕ್ಕರೆ ಕಾರ್ಖಾನೆ ಮತ್ತು ಜಿಲ್ಲಾ ಆಸ್ಪತ್ರೆಗೆ ಭೇಟಿ

೨೧-೯ ಗಂಟೆಗೆ ನಾಗಮಂಗಲಕ್ಕೆ ಪ್ರಯಾಣ. ಬೆಳ್ಳೂರು ಮಾದರಿ ಕೇಂದ್ರಕ್ಕೆ ಭೇಟಿ ೧೧ ಗಂಟೆಗೆ ಸುವರ್ಣ ಮಹೋತ್ಸವ ಪ್ರಾರಂಭೋತ್ಸವ ಮತ್ತು ಪೌರಸಭೆ ಮತ್ತು ಜಿಲ್ಲಾ ಬೋರ್ಡು ಮಾನ ಪತ್ರ ಸ್ವೀಕಾರ. ಮಧ್ಯಾಹ್ನ ಮೈಸೂರಿಗೆ ಪ್ರಯಾಣ

ಬಾಲ್ಟಿಕ್ ತೀರ ಖಾಲಿ

ಜರ್ಮನ್ ಪ್ರಾಂತದ [illegible] ೨೦ ಮೈಲಿ ಅಗಲದ ಪ್ರದೇಶವನ್ನು ಬಾಲ್ಟಿಕ್ ಸಮುದ್ರ ತೀರದಲ್ಲಿ ಖಾಲಿಮಾಡ [illegible] ಜನರನ್ನು ಆಚ್ಛೆ ಮಾಡುತ್ತಿ [illegible] ಮುತ್ತಿಗೆಯನ್ನು [illegible] ಹೀಗೆ ಮಾಡಿದೆಯೆಂದು ಹೇಳಲಾಗಿದೆ.

ಅಸ್ಸಾಂಗಡಿಯಲ್ಲಿ ಜಪಾನರು

ಉತ್ತರ ಬರ್ಮಾದ ಅಸ್ಸಾಂ ಗಡಿಯಲ್ಲಿ, ಮಹಾಕಾಂಗ್ ಕಣಿವೆಯಲ್ಲಿ [illegible] ವ ಭೂಕದನಗಳಿಂದ [illegible] ದರೆ—ಯುಬಾಂಗ ನಂಬನ್ನ [illegible] ಗಳ ಮೇಲೆ ಜಪಾನರು ನಡೆಸಿದ ಧಾಳಿ [illegible] ಫಲಕಾರಿಯಾಗಲಿಲ್ಲ [illegible] ಮೂಡಿದ ಧಾಳಿಗಳನ್ನು ಪ್ರತಿಭಟಿಸಲಾಯಿ [illegible] ಯುಬಾಂಗ ಎರಬಲ್ಲಿ ಜಪಾನರು [illegible] ಕಮೇಂಗನ ಉತ್ತರದಲ್ಲಿ [illegible] ಉತ್ತರ ಬರ್ಮಾದಲ್ಲಿ [illegible] ಬಾಂಬರುಗಳು [illegible] ಸೈನ್ಯಗಳೊಡನೆ [illegible]

ಎಂ. ಎಸ್. ಎಂ. ರೈಲ್ವೆ ಸರ್ಕಾರಕ್ಕೆ

ಬರುವ ಏಪ್ರೈಲ್ ೧ ನೇ ತಾ|| ನಿಂದ ಎಂ. ಎಸ್. ಎಂ. ರೈಲ್ವೆ ಕಂಪೆನಿಯನ್ನು ಇಂಡಿಯಾ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಲು ಏರ್ಪಾಡುಗಳು ಗೊತ್ತಾಗಿದೆ. ಬಿ. ಎಸ್ ರೈಲ್ವೆಯು ಒಪ್ಪಂದವು [illegible] ರಲ್ಲಿ ಮುಕ್ತಾಯವಾಗುತ್ತದೆ.

ರಷಿಯಾದೊಡನೆ ಬಲ್ಗೇರಿಯಾ ಕೂಡುವುದೆ?

ಬಲ್ಗೇರಿಯಾ [illegible] ದೊಡ್ಡ [illegible] ರಷ್ಯಾ ದೇಶದೊಡನೆ ಸೇರಿಕೊಳ್ಳುವರೇ ಎಂದು ಕೈರೋನಲ್ಲಿ [illegible] ಪ್ರೋಹಗಳು [illegible] ಇದಕ್ಕೆ ಕಾರಣ, ಹಿಂದಿನ ಎರಡು ಯುದ್ಧಗಳಲ್ಲೂ ರಷಿಯಾವು ಬಲ್ಗೇರಿಯಾ ಮೇಲೆ ತನ್ನ ಹಕ್ಕನ್ನು ಬಿಟ್ಟುಕೊಡಲೇ ಇಲ್ಲ.

ಬಾಲ್ಕನ್ ದೇಶಗಳು ರಷಿಯಾಕ್ಕೆ?

ಜರ್ಮನಿ [illegible] ಕೂಡಲೆ, ಮಿತ್ರ ಸೈನ್ಯಗಳು [illegible] ಯಾವ ಭಾಗಗಳನ್ನು [illegible] ಸ್ವಾಧೀನಪಡಿಸಿಕೊಳ್ಳಬೇಕೆಂಬ [illegible] ತ್ರಿರಾಷ್ಟ್ರ ಸಮ್ಮೇಳನದಲ್ಲಿ [illegible] ರುಮೇನಿಯಾ, ಬಲ್ಗೇರಿಯಾ, ಹಂಗೇರಿ ಮತ್ತು ಯುಗೋಸ್ಲೇವಿಯಾ ದೇಶಗಳನ್ನು [illegible] ಅಮೇರಿಕಾ ಯೂರೋಪಿನ [illegible] ಸೈನ್ಯಗಳನ್ನು [illegible] ಜರ್ಮನಿಯು [illegible] ಸಿದ್ಧವೆಂದೂ [illegible] ಹೇಳಲಾಗಿದೆ.

[illegible]

ಸ್ವಂ. ವ.] ಬೆಂಗಳೂರು ೧೦

ಮೈಸೂರು [illegible] ಬಿ. ಪಿ. [illegible] ಪ್ರಾರಂಭ [illegible]

[illegible]

ಡಿಟೆನ್ಯೂಗಳ ಬಿಡುಗಡೆ

ಸ್ವ. ಸ.] ಬೆಂಗಳೂರು, ೯.

ಮೈಸೂರು ಜಿಲ್ಲೆಯ ಶ್ರೀರಂಗಪಟ್ಟಣದ ಎಸ್. ಬಸವಯ್ಯ, ಎನ್. ರಂಗರಾಮಯ್ಯ, ಸಿದ್ದೇಗೌಡ, ಟಿ. ಎಸ್. ಸುಬ್ಬಣ್ಣ, ಪಡೋಲಿ ಗೇಟಿನ ಇರುವ ಶ್ರೀನಿವಾಸ ಅಗರಂ ರಂಗಯ್ಯ, ಎಂ. ಎಸ್. ಶ್ರೀನಿವಾಸ್, ಟಿ. ಮರಿಯಪ್ಪ, ನಗರೂರು ರಾಮಚಂದ್ರ ರಾವ್, ಶಿವಮೊಗ್ಗ ಜಿಲ್ಲೆಯ ಶ್ರೀ ಸಿ. ಫಣಿ ಬಂಡಿ... ಮೊದಲಾದ ಆರು ಜನ ಡಿಟೆನ್ಯೂಗಳನ್ನು ಈ ದಿನ ಬಿಡುಗಡೆ ಮಾಡಲಾಯಿತು.

ಬಟ್ಟೆ ನ ರಾಶಿ ಇಟ್ಟಿದ್ದಕ್ಕೆ ಜುಲ್ಮಾನೆ

ಸರ್ಕಾರದ ಆಜ್ಞೆಯಲ್ಲಿ ತಿಳಿಸಿದ ಪ್ರಮಾಣಕ್ಕಿಂತ ಹೆಚ್ಚಾಗಿ ರಾಶಿಯನ್ನು ಇಟ್ಟುಕೊಂಡಿದ್ದರೆಂಬ ಆಪಾದನೆಯ ಮೇಲೆ ಶ್ರೀರಾಮಪುರದ ದೊಡ್ಡ ವ್ಯಾಪಾರಿಯವರಿಗೆ ೧೫೦ ರೂ. ದಂಡವನ್ನು ಸಿಟಿ ಮ್ಯಾಜಿಸ್ಟ್ರೇಟರು ವಿಧಿಸಿದರು.

ಶ್ರೇಷ್ಠ ಕಾವ್ಯವರ್ತಿಗಳಿಗೆ ರಜಾ

ಸರ್ಕಾರದ ಶ್ರೇಷ್ಠ ಕಾವ್ಯವರ್ತಿಗಳಿಗೆ ... ಮಹಾರಾಜರವರಿಗೆ ... ಡಿಸೆಂಬರ್ ... ವರೆಗೆ ರಜಾ ಕೊಡಲಾಗಿದೆ.

ಜರ್ಮನಿಯು ಶರಣಾಗತವಾಗುವುದಿಲ್ಲ

ಶತ್ರು ಜರ್ಮನಿಗೆ ನಷ್ಟ ವಿಷಯದಲ್ಲಿ ನಮಗೆ ಇರುವ ಅಚಲವಾದ ಭರವಸೆಯೇ ನಮ್ಮ ಉತ್ತರ. ಶಕ್ತಿಯಿಂದಾಗಲಿ ಇನ್ನಾವರೀತಿಯಾಗಲಿ ನಾವು ಶರಣಾಗತರಾಗುವುದಿಲ್ಲ. ನಮಗೆ ಜಯ ನಿಶ್ಚಯ. ೧೯೧೮ರ ಘಟನೆಗಳು ಪುನಃ ಸಂಭವಿಸುವುದಿಲ್ಲ ಜರ್ಮನರು ಹಿಟ್ಲರನ ಸುತ್ತಲೂ ಬಿಕ್ಕಿನ ಕೋಟೆಯಂತೆ ಬಲವಾಗಿ ಲಗ್ನರಾಗಿದ್ದಾರೆ ಎಂಬುದಾಗಿ ಜರ್ಮನ ಪ್ರಚಾರ ಮಂತ್ರಿ ಡಾ॥ ಗೋಬೆಲ್ಸ್‌ರವರು ಭಾಷಣ ಮಾಡಿದ್ದಾರೆ.

ದೊಡ್ಡ ರೋಗದಿಂದ ೧೫ ಸಾವಿರ ಜಾನುವಾರು ನಷ್ಟ

ಸ್ವ. ಸು.] ಶಿವಮೊಗ್ಗ, ೯

ಶಿವಮೊಗ್ಗ ಜಿಲ್ಲೆಯಲ್ಲಿ ದನಗಳ ದೊಡ್ಡ ರೋಗದ ಉಪದ್ರವವು ಪ್ರಾರಂಭವಾಗಿ ಜುಲೈ ನಿಂದ ನವೆಂಬರ್ ೩೦ ನೇ ತಾ॥ ವರೆಗೆ ಒಟ್ಟು ೭೯೪೦ ಜಾನುವಾರುಗಳು ಸತ್ತು ಹೋಗಿವೆ. ಇವುಗಳ ಪೈಕಿ ... ಎತ್ತುಗಳು, ... ಹಸುಗಳು ಮತ್ತು ... ಎಮ್ಮೆಗಳು. ಜಿಲ್ಲೆಯ ... ಗ್ರಾಮಗಳಲ್ಲಿ ಈ ರೋಗವು ತಲೆ ದೋರಿತು. ಹೊನ್ನಾಳಿ, ಹಿರೇಪುರ, ... ತಾಲ್ಲೂಕುಗಳಲ್ಲಿ ರೋಗವು ವಿಪರೀತವಾಗಿತ್ತು. ಇದಲ್ಲದೆ ಗಣತಿಗೆ ಸಿಕ್ಕದೆ ಸಂಭವಿಸಿರುವ ನಷ್ಟವು ತುಂಬಾ ವಿಶೇಷವಾಗಿ ರುವುದಾಗಿ ಗೊತ್ತಾಗಿದೆ.

ಅಜ್ಜಂಪುರ, ಶಿವಮೊಗ್ಗ, ಸೊರಬ, ... ತಾಲ್ಲೂಕುಗಳಲ್ಲೂ ಹೆಚ್ಚಾಗುತ್ತಿದೆ. ಈ ರೋಗದಿಂದ ಇಲ್ಲಿಯ ವರೆಗೆ ಒಟ್ಟು ... ಸಾವಿರ ಜಾನುವಾರುಗಳ ನಷ್ಟ ಸಂಭವಿಸಿರುವುದೆಂದೂ ... ಲಕ್ಷ ರೂ. ನಷ್ಟವಾಗಿರಬಹುದೆಂದೂ ಊಹಿಸಲಾಗಿದೆ. ಶಿವಮೊಗ್ಗ ..., ಹೊನ್ನಾಳಿ ..., ಶಿಕಾರಿಪುರ ..., ... ಹಳ್ಳಿ ..., ಹೊಸನಗರ ..., ಸಾಗರ ..., ಚನ್ನಗಿರಿ, ... ಮತ್ತು ಸೊರಬ ... ನಷ್ಟ ಆಗಿರಬಹುದೆಂದು ಹೇಳಲಾಗಿದೆ.

ಮಧ್ಯ ಪ್ರಾಚ್ಯದಲ್ಲಿ ಚರ್ಚಿಲರು

ಚರ್ಚಿಲರು ಕೈರೋ ಸಮ್ಮೇಳನವನ್ನು ಮುಗಿಸಿಕೊಂಡು, ಮಧ್ಯ ಪ್ರಾಂತ್ಯದಲ್ಲಿ ರುವ ಮಿತ್ರರಾಷ್ಟ್ರಗಳ ನಾಯಕರನ್ನು ಭೇಟಿಮಾಡಿ, ಮಾತುಕತೆ ನಡೆಸುತ್ತಿದ್ದಾರೆ. ಸಿರಿಯಾದಲ್ಲಿರುವ ಬ್ರಿಟಿಷ್ ರಾಯಭಾರಿಯನ್ನೂ, ಇರಾಕ್ ರೀಜೆಂಟರಾದ ಅಮೀರ್ ಅಬ್ದುಲ್ಲಾರವರನ್ನೂ ಭೇಟಿ ಮಾಡಿದರು. ಮಿ॥ ಈಡನ್‌ರವರು ಟರ್ಕಿಯ ... ಮಂತ್ರಿಯನ್ನು, ಪ್ರಧಾನಿಯನ್ನೂ ಕಂಡು ಮಾತುಕತೆ ನಡೆಸಿದರು.

ಅರಕಾನಿನಲ್ಲಿ ಭೀಕರ ಕದನ

ಅರಕಾನಿನಲ್ಲಿ ಬ್ರಿಟಿಷ್ ಮತ್ತು ಅಮೇರಿಕನ್ ವಿಮಾನಗಳು ಭೂ ಸೇನೆಗೆ ನೆರವಾಗಿ ಶತ್ರು ಗ್ರಾಮಗಳ ಮೇಲೆ ಧಾಳಿ ನಡೆಸುತ್ತಿವೆ. ಅಲ್ಲಿ ಉಭಯ ಸೈನ್ಯಗಳೂ ಒಂದೇ ಸಮನಾಗಿ ಕದನ ನಡೆಯುತ್ತಿದೆ. ಕಳೆದ ವಾರ ಭೀಕರ ವೈಮಾನಿಕ ಯುದ್ಧ ನಡೆದು ಶತ್ರುಗಳಿಗೆ ಅಪಾರ ನಷ್ಟ ಉಂಟಾಯಿತು ... ಅಂಡಮಾನ್ ದ್ವೀಪಗಳು ... ರಂಗೂನ್, ಮತ್ತು ದಕ್ಷಿಣ ಬರ್ಮದಲ್ಲಿರುವ ಶತ್ರು ರೇವುಗಳ ಮೇಲೆ ಮಿತ್ರ ವಿಮಾನಗಳು ಹಗಲಿರುಳೂ ಧಾಳಿ ನಡೆಸಿ, ... ಗಳನ್ನು ಮುಳುಗಿಸಿವೆ.

ಜಪಾನಿನ ಕಳವಳ

ಮಿತ್ರ ರಾಷ್ಟ್ರಗಳ ರಾಜ್ಯಾಚರಣೆಯಿಂದ ಜಪಾನು ಬಹಳ ಕಳವಳಗೊಂಡಿದೆ. ಯುದ್ಧದ ಪರಿಸ್ಥಿತಿಯನ್ನು ಪರಿಶೀಲಿಸಲು ಜಪಾನಿನ ಮುಖ್ಯ ಮಂತ್ರಿ ಜನರಲ್ ಟೋಜೋರವರು ಟೋಕಿಯೋದಲ್ಲಿ ಒಂದು ವಿಶೇಷ ಸಭೆ ಕರೆದಿರುವರೆಂದು ಟೋಕಿಯೋ ರೇಡಿಯೋ ತಿಳಿಸಿದೆ. ಈ ಸಮ್ಮೇಳನಕ್ಕೆ ಜಪಾನಿನ ಎಲ್ಲ ಮಂತ್ರಿಗಳೂ, ಪ್ರಾಂತಗಳ ಗವರ್ನರುಗಳೂ, ಕೊರಿಯಾ ಮತ್ತು ಫಾರ್ಮೋಸಾಗಳ ಗವರ್ನರ್ ಜನರಲ್‌ಗಳೂ ಬರಲಿರುವರೆಂದು ಹೇಳಲಾಗಿದೆ.

ಜಪಾನಿ ನೌಕಾ ನಷ್ಟ

ಜಪಾನಿ ವಶದಲ್ಲಿರುವ ಮಾರ್ಷಲ್ ದ್ವೀಪದ ಮೇಲೆ ಅಮೇರಿಕನ್ ವಿಮಾನಗಳೂ ಧಾಳಿ ನಡೆಸಿ, ... ಶತ್ರು ನೌಕೆಗಳನ್ನು ಮುಳುಗಿಸಿ, ... ವಿಮಾನಗಳನ್ನು ನಾಶ ಮಾಡಿದವು.

ಮತಾಂತರ ಮಾಡುತ್ತಿಲ್ಲ

ಬಂಗಾಳದಲ್ಲಿ ಹೊಟ್ಟೆಗಿಲ್ಲದ ಹಿಂದೂ ಹೆಂಗಸರು ಮಕ್ಕಳಿಗೆ ಆಹಾರ ಕೊಡಬೇಕಾದರೆ ಅವರನ್ನು ಮುಸ್ಲಿಂ ಜಾತಿಗೆ ಬಲಾತ್ಕಾರವಾಗಿ ಸೇರಿಸಲಾಗುತ್ತಿದೆಯೆಂದು ಶ್ರೀ ಸಾವರ್ಕರ್‌ರವರು ಹೇಳಿರುವುದು ಶುದ್ಧ ಸುಳ್ಳೆಂದು ಕೇಂದ್ರ ಶಾಸನ ಸಭಾ ಸದಸ್ಯರಾದ ಮಿ॥ ಎಂ. ಎ. ಎಚ್. ಇಸ್ಫಹಾನಿಯವರು ತಿಳಿಸಿದ್ದಾರೆ.

ದಂಡಯಾತ್ರೆ ನೌಕೆಗಳ ರಚನೆ

೧೯೪೪ ನೇ ವರ್ಷದಲ್ಲಿ ೮೦ ಸಾವಿರ ದಂಡ ಯಾತ್ರೆ ನೌಕೆಗಳನ್ನು ರಚಿಸಲು ಅಮೇರಿಕದಲ್ಲಿ ಏರ್ಪಾಡಾಗಿದೆ. ಈ ವರ್ಷ ... ಸಾವಿರ ದೋಣಿಗಳ ಕಟ್ಟಲ್ಪಟ್ಟಿವೆ.

ಆಕ್ರಮಣ ನೌಕೆಗಳು

ಸಮುದ್ರಮಾರ್ಗವಾಗಿಬಂದು ಭೂಪ್ರದೇಶವನ್ನು ಆಕ್ರಮಿಸಲು ಸಹಾಯಕವಾದ ಹಡಗುಗಳನ್ನು ವಿಶೇಷವಾಗಿ ತಯಾರಿಸಲು ಅಮೇರಿಕವು ತೊಡಗಿದೆ. ೪,೦೦೦ ಕಟ್ಟಾಣಗಳೂ ... ೦೦೦ ಸಂಸ್ಥೆಗಳೂ ಈ ಕೆಲಸಕ್ಕೆ ಕೈ ಹಚ್ಚಿವೆ.

ಇಂಡಿಯಾ-ಅಮೇರಿಕಾ ವಿಮಾನ

ಅಮೇರಿಕಾಕ್ಕೂ ಹಿಂದೂಸ್ಥಾನಕ್ಕೂ ಸಂಚಾರವನ್ನು ಕಲ್ಪಿಸಲು ಸಧ್ಯದಲ್ಲಿಯೇ ವಿಮಾನ ವ್ಯವಸ್ಥೆಯು ಏರ್ಪಾಡಾಗುವುದೆಂದು ಪ್ರಕಟವಾಗಿದೆ. ಇದು ಪ್ರಪಂಚದ ಎಲ್ಲಾ ವಿಮಾನ ಮಾರ್ಗಗಳಿಗಿಂತಲು ದೊಡ್ಡದಾಗುವುದು.

ರೆಸಿಡೆಂಟರುಗಳ ಸಭೆ

ಸ್ವದೇಶ ಸಂಸ್ಥಾನಗಳ ಬ್ರಿಟಿಷ್ ರೆಸಿಡೆಂಟರುಗಳು ಇಂಡಿಯಾ ಸರ್ಕಾರದವರೊಡನೆ ಸಮ್ಮೇಳನ ನಡೆಸಲು ಈಗ ದೆಹಲಿಯಲ್ಲಿ ಸೇರಿದ್ದಾರೆ.

ಇಂಡೋ ಚೀನಾ ಭವಿಷ್ಯ

ಜಪಾನರ ಹಿಡಿತದಿಂದ ಇಂಡೋ ಚೀನಾವನ್ನು ಬಿಡಿಸಲಾಗುತ್ತದೆ. ಅಲ್ಲಿನ ಜನರ ರಾಜಕೀಯ ಮತ್ತು ಆರ್ಥಿಕ ವಿಚಾರಗಳಲ್ಲಿ ದೊಡ್ಡ ಸುಧಾರಣೆಗಳನ್ನು ಮಾಡಲಾಗುತ್ತದೆ. ಇಂಡೋ ಚೀನಾಕ್ಕೆ ಒಂದು ಸ್ವಯಂ ಆಡಳಿತವನ್ನು ಕೊಡಲಾಗುವುದು ಎಂಬುದಾಗಿ ಫ್ರೆಂಚ್ ನ್ಯಾಷನಲ್ ಕಮಿಟಿಯ ಕಾಲನಿಯ ಸೆಕ್ರೆಟರಿಯವರು ತಿಳಿಸಿದ್ದಾರೆ.

Edited, printed and published by A R. Nagarajan at the Sadhvi Press, D.Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ಮಧ್ಯಾಹ್ನ ... ಗಂಟೆಯಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರ್ಯಾಂಡ್ ಕಾಫಿಪುಡಿ

ಮತ್ತೇ ಉಪಯೋಗಿಸಿ.

ಡಿ. ಪುಟ್ಟಣ್ಣಯ್ಯ ದನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ. ... ಚಿಲ್ಲರೆಯಾಗಿ ಕಲ್ಲುಸಕ್ಕರೆ, ಬೂರಾಸಕ್ಕರೆ ಸಿಕ್ಕುತ್ತವೆ ಇಲ್ಲೂ ಮತ್ತು ಸಂತೆ ಪೇಟೆ ಪೋಸ್ಟ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಪ್ರತಿ ದಿನ ಮೂರು ಆಟಗಳು

ನ್ಯೂ ಅಪೇರಾ ಟಾಕೀಸ್

ತಾ॥ ೮—೧೨—೧೯೪೩ರಿಂದ

ಸ್ಟಾನ್ ಲಾರೆಲ್ ಮತ್ತು ಆಲಿವರ್ ಹಾರ್ಡಿ ಪಾತ್ರವಹಿಸಿರುವ

'ಗ್ರೇಟ್ ಗನ್ಸ್'

ಖರೀದಿಗಿದೆ

1 ಮೈಸೂರು ಜಗನ್ಮೋಹನ ಬಂಗ್ಲಾ ಬಳಿ ನಲ್ಲಿ, ದೀಪ, ಫ್ಲಷ್, ಕಾಂಪೌಂಡ್, ಮಹಡಿ ಇರುವ 110'×15' ಜಾಗದಲ್ಲಿ ಒಂದು ಮನೆ. ಕಾಲೇಜು, ಅಂಚೆ ಕಛೇರಿ, ಮಾರ್ಕೆಟ್, ಸ್ಟೇಷನ್, ಎಲ್ಲಕ್ಕೂ ಹತ್ತಿರವಿದೆ. ಬೆಲೆ 8500—0—0.

2. ದೊಡ್ಡಪೇಟೆ, ಕಂಚಿ ... ಚರ್ಚ್ ಎದುರು, ಮಹಡಿ ಮನೆ, ನಲ್ಲಿ, ದೀಪ, ಫ್ಲಷ್ ಇದೆ ಬೆಲೆ 4500—0—0.

3. ಚಾಮುಂಡಿಪುರಂ, 6 ನೇ ಬ್ಲಾಕ್ ಫ್ಲೋರ್ ಮಿಲ್ಲಿನ ಮನೆ. ನಲ್ಲಿ, ಫ್ಲಷ್ ಇದೆ ಹಿಂದೆ ವಿಶಾಲವಾದ ಜಾಗವಿದೆ. ಬೆಲೆ 2350—0—0.

4 ನಾರಾಯಣಶಾಸ್ತ್ರಿಪುರಂನಲ್ಲಿ ಟೂರಿಸ್ಟ್ ಇರುವ ನಲ್ಲಿ, ಕಾಂಪೌಂಡ್, ಗ್ಯಾರೇಜ್, ದೀಪ ಇರುವ ಮನೆ ಬೆಲೆ 6500—0—0.

5 ಅಗ್ರಹಾರದಲ್ಲಿ ಮಿಷನ್ ಆಸ್ಪತ್ರೆ ಹಿಂದೆ, ಚರ್ಚ್ ಹಿಂಭಾಗದಲ್ಲಿ ಒಂದು ಖಾಲಿ ಸೈಟು ಬೆಲೆ 2500—0—0

6 ಹೊಸ ಅಗ್ರಹಾರದಲ್ಲಿ 1150 ಚದರ ಗಜ ಜಾಗದಲ್ಲಿ ಕಟ್ಟಿರುವ ಮಹಡಿ ಗ್ಯಾರೇಜ್, ಔಟ್‌ಹೌಸ್, ... ಫ್ಲಷ್, ವಿಶಾಲವಾದ ಕಾಂಪೌಂಡ್ ಇರುವ ಬಂಗ್ಲೆ ಬೆಲೆ 17,500—0—0

ಬಿ. ಎಸ್. ಸುಬ್ಬರಾವ್, ಸಿಟಿ ಅಕ್ಷನೀಯರಿಂಗ್ ಕೋ.,

(ಜಗನ್ಮೋಹನ ಬಂಗ್ಲೆ ಹತ್ತಿರ) ಮೈಸೂರು

ಸಂಪುಟ ೨] ಶನಿವಾರ ೧೧--೩--೩೯ [ಸಂಚಿಕೆ ೧೬೩

ಹಿಟ್ಲರ್-ಮುಸೋಲಿನಿ ನೇಣುಹಾಕಿಕೊಳ್ಳಲಿ

ಹಡಗಿನಲ್ಲಿ ವ್ಹಿಸ್ಕಿಗೆ ಜಾಗ; ಔಷಧಿಗೆ ಇಲ್ಲ

ಸರ್ಕಾರದವರು ಕಸ್ತೂರಿಬಾಯಿಯವರನ್ನು ಬಿಡುವರೆ ?

ಮುಖಂಡರ ಆಗಮನ

ಮೈಸೂರು, ೧೧

ಬೆಂಗಳೂರು ಸೆಂಟ್ರಲ್ ಜೈಲಿನಿಂದ ಬಿಡುಗಡೆಯಾದ ಶ್ರೀಗಳಾದ ಎಸ್. ರಂಗನಾಮಯ್ಯ ಮತ್ತು ಸಾಹುಕಾರ್ ಚನ್ನಯ್ಯನವರು ಈ ದಿನ ಮಧ್ಯಾಹ್ನ ಮೇಲ್ ಟ್ರೈನಿನಲ್ಲಿ ಬೆಂಗಳೂರಿನಿಂದ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಅನೇಕ ಜನ ಕಾಂಗ್ರೆಸ್ ಕೆಲಸಗಾರರೂ ಇತರರೂ ಹಾಜರಿದ್ದು ಅವರಿಗೆ ಸ್ವಾಗತವನ್ನಿತ್ತು ಪುಷ್ಪ ಹಾರಗಳನ್ನರ್ಪಿಸಿದರು. ಅನಂತರ ಅಲ್ಲಿಂದ ರಾಷ್ಟ್ರಧ್ವಜದೊಡನೆ ಎಲ್ಲರೂ ಹೊರಟು ಕಾಂಗ್ರೆಸ್ ಕಛೇರಿಯನ್ನು ಸೇರಿದರು. ದಾರಿಯುದ್ದಕ್ಕೂ ಅಲ್ಲಲ್ಲಿ ಅವರಿಗೆ ಪುಷ್ಪಹಾರಗಳು ಅರ್ಪಿಸಲ್ಪಟ್ಟವು. ಕಾಂಗ್ರೆಸ್ ಕಛೇರಿಯಲ್ಲಿ ಶ್ರೀಗಳಾದ ಟಿ. ವೆಂಕಟರಮಣಯ್ಯ, ಎಂ. ವಿ. ಕೃಷ್ಣಪ್ಪ, ಯು ಎಲ್. ರಾಮಚಂದ್ರರಾವ್ ಮತ್ತು ಎ. ಕೃಷ್ಣಮೂರ್ತಿ ಇವರುಗಳು ಭಾಷಣ ಮಾಡಿ ಅತಿಥಿಗಳಿಗೆ ಸುಸ್ವಾಗತವನ್ನು ಬಯಸಿದರು.

ಶ್ರೀ ಎಸ್. ರಂಗನಾಮಯ್ಯನವರು ಮಾತನಾಡಿ, ಮಹಾತ್ಮ ಗಾಂಧಿಯವರೇ ಮೊದಲಾದ ರಾಷ್ಟ್ರನಾಯಕರೂ ಸಂಸ್ಥಾನದಲ್ಲಿ ಶಿಕ್ಷೆಗೆ ಗುರಿಯಾದ ಮೈಸೂರು, ಶ್ರವಣಬೆಳಗೊಳ ಮತ್ತು ಇತರ ಕಡೆಗಳ ಮಹನೀಯರೂ ಮತ್ತು ಮಹಿಳೆಯರೂ ಇನ್ನೂ ಬಂಧನದಲ್ಲಿ ಕೊಳೆಯುತ್ತಿರುವಾಗ ತಮಗೆ ಬಿಡುಗಡೆಯಿಂದ ಯಾವ ಸಂತೋಷವೂ ಉಂಟಾಗಿಲ್ಲವೆಂದು ಹೇಳಿದರು. ಮೈಸೂರಿನ ನಿವಾಸಿಗಳು ಕಾಂಗ್ರೆಸ್ಸಿಗೆ ಕೊಟ್ಟಿರುವ ಬೆಂಬಲಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು.

ಶ್ರೀ ಚನ್ನಯ್ಯನವರು ತಮ್ಮ ಭಾಷಣದಲ್ಲಿ ತಾವು ಮುಂದೆಯೂ ಕಾಂಗ್ರೆಸ್ಸಿನ ಒಬ್ಬ ಸೈನಿಕನಂತೆ ಕೆಲಸಮಾಡಲು ಸಿದ್ಧರಿರುವದಾಗಿ ತಿಳಿಸಿದರು.

ಜಯಕಾರದೊಡನೆ ಸಭೆಯು ಮುಕ್ತಾಯವಾಯಿತು.

ಫುಟ್‌ಬಾಲ್

ದಸರಾ ಸೀನಿಯರ್ ಟ್ರೋಫಿಯ ಫೈನಲ್ಸ್ ಪಂದ್ಯದಲ್ಲಿ ಮೈಸೂರು ಸ್ಟೇಟ್ ರೈಲ್ವೆ ಟೀಮಿನವರು ಮೈಸೂರು ಬ್ಲೂಸ್ ಕ್ಲಬ್ಬನ್ನು ೧ ಗೋಲಿನಿಂದ ಸೋಲಿಸಿದರು. ಗೆದ್ದವರ ಕಡೆಯಿಂದ ಶ್ರೀ ನೌಲಕ್‌ರವರು ಗೋಲು ಹೊಡೆದರು. ದಿವಾನ್ ಸಾಹೇಬರವರು ಗೆದ್ದವರಿಗೆ ಬೆಳ್ಳಿ ಕಪ್ಪುಗಳನ್ನೂ ಪ್ಲೇಯರ್ಸ್‌ಗೆ ಬೆಳ್ಳಿ ಪದಕಗಳನ್ನೂ ಹಂಚಿದರು.

ಸಹಕಾರ ಭಾಷಣ

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ರವರ ಸಹಕಾರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ತಾ|| ೧೩-೩-೩೯ನೇ ಸೋಮವಾರ ಸಾಯಂಕಾಲ ೬ ಗಂಟೆಗೆ ಫೋರ್ಟ್‌ಕೊಪ್ಪಲು ವ ಸಹಜನ ಸ್ಕೂಲಿನಲ್ಲಿ ಮೈಸೂರು ಮಹಾರಾಜಾ ಕಾಲೇಜ್ ಪ್ರೊಫೆಸರ್ ಅಧ್ಯಾಪಕರಾದ ಡಾ|| ಎಲ್. ಎಸ್. ನಾರಾಯಣಶಾಸ್ತ್ರಿಯವರಿಂದ "ಸ್ಕೋಪ್ ಆಫ್ ಕೋ ಆಪರೇಷನ್" ಎಂಬ ವಿಚಾರದಲ್ಲಿ ಉಪನ್ಯಾಸವು ನಡೆಯಲಾಗುತ್ತದೆ.

ಕಸ್ತೂರಿಬಾಯಿಯವರನ್ನು ಬಿಡುವರೆ ?

ಮಹಾತ್ಮ ಗಾಂಧಿಯವರ ಪತ್ನಿ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರಿಗೆ ದೇಹಾಲಸ್ಯವಾಗಿರುವುದಷ್ಟೆ. ಈಗ ಅವರ ಆರೋಗ್ಯ ಹೇಗಿದೆ? ಸರ್ಕಾರದವರು ಅವರನ್ನು ಬಿಡುಗಡೆ ಮಾಡಲು ಉದ್ದೇಶವುಳ್ಳವರಾಗಿದ್ದಾರೆಯೇ? ಎಂಬುದಾಗಿ ತಾವು ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಹಾಕುವುದಾಗಿ ಲಾರ್ಡ್ ಸ್ಟ್ಯಾಬೊಲಿಯವರು ಹೇಳಿರುವರು.

ಹಡಗಿನಲ್ಲಿ ವ್ಹಿಸ್ಕಿಗೆ ಸ್ಥಳ ; ಕ್ವಿನೈನಿಗೆ ಇಲ್ಲ

ಹಡಗುಗಳಲ್ಲಿ ಸಾಮಾನನ್ನು ಕಳುಹಿಸಲು ಸ್ಥಳದ ಅಭಾವವು ಬಹಳವಾಗಿರುವುದಷ್ಟೆ. ಹೀಗಿದ್ದರೂ ಬೊಂಬಾಯಿಗೆ ವ್ಹಿಸ್ಕಿ ಡಬ್ಬಿಗಳನ್ನು ಮೂಟೆಗಟ್ಟಲೆಯಾಗಿ ಕಳುಹಿಸಲು ಏರ್ಪಾಟು ಕಲ್ಪಿಸಿ, ಅತ್ಯಗತ್ಯವಾದ ಕ್ವಿನೈನನ್ನು ಕಳುಹಿಸಲು ಸ್ಥಳವನ್ನು ದೊರಕಿಸದೆ ಇದ್ದ ವಿಷಯವಲ್ಲಿ ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಬಂದಿತು. ಉತ್ತರವಾಗಿ ಮಿ|| ಅಮೆರಿಯವರು ಹೇಳಿದ್ದೇನೆಂದರೆ— ಹಿಂದೂಸ್ಥಾನಕ್ಕೆ ಮಾದಕ ಪದಾರ್ಥಗಳನ್ನು ಕಳುಹಿಸಲು ಹಿಂದೆ ಹಾಕಿದ್ದ ಪ್ರತಿಬಂಧಕಗಳನ್ನು ಸೆಪ್ಟೆಂಬರ್ ತಿಂಗಳಲ್ಲಿ ತೆಗೆಯಲಾಗಿದೆ. ಇದರಿಂದ ಕ್ವಿನೈನಿಗೆ ಯಾವ ಅಡ್ಡಿಯನ್ನೂ ಉಂಟುಮಾಡಿಲ್ಲ. ಕ್ವಿನೈನು ಹಿಂದೂಸ್ಥಾನದಲ್ಲಿಯೇ ಸಾಕಾದಷ್ಟು ತಯಾರಾಗುತ್ತಿದೆ.

ನೇಣುಹಾಕಿಕೊಳ್ಳಲಿ

ಹಿಟ್ಲರ್ ಮತ್ತು ಮುಸೋಲಿನಿಗಳು ತಮ್ಮನ್ನು ತಾವೇ ನೇಣುಹಾಕಿಕೊಳ್ಳಬೇಕು. ಇದು ಸುಪ್ರಸಿದ್ಧ ಕವಿಗಳಾದ ಲಾರ್ಡ್ ವ್ಯಾನ್‌ಸಿಟಾರ್ಟ್‌ರವರ ಅಭಿಪ್ರಾಯ. ಯುದ್ಧಕ್ಕೆ ಕಾರಣರಾದ ಪಾಪಿಗಳಲ್ಲರನ್ನೂ ಕೊಂದುಹಾಕುವುದು, ಅಥವಾ ಬೇರೆ ರೀತಿ ಶಿಕ್ಷಿಸುವುದು; ಆದರೆ ಜರ್ಮನಿಯ ಸಾಮಾನ್ಯ ಜನರನ್ನು ಒಟ್ಟುಗಟ್ಟಲೆ ಶಿಕ್ಷಿಸುವುದಲ್ಲ ಇದೇ ನಮ್ಮ ರಾಜ್ಯನೀತಿಯಾಗಿರಬೇಕೆಂದು ಅವರು ತಿಳಿಸಿರುವರು.

ಬಂಗಾಳಕ್ಕೆ ಗೌರ್‍ನರ್

ಮಿ|| ರಿಚರ್ಡ್ ಕೇಸಿ ರವರನ್ನು ಬಂಗಾಳಕ್ಕೆ ಗೌರ್ನರಾಗಿ ನೇಮಿಸಲಾಗುವದೆಂದು ನಂಬಲರ್ಹವಾದ ಕಡೆಗಳಿಂದ ತಿಳಿದು ಬರುತ್ತದೆ.

ಸ್ಪೇನಿನ ಮನ್ನಣೆ

ಸ್ಪೇನಿನ ಸಾಗೋಸಾವಿಯಲ್ಲಿರುವ ಬ್ರಿಟಿಷ್ ವೈಸ್ ಕೌನ್ಸಲ್ಲರ ನಿವಾಸಕ್ಕೆ ಅತಿಕ್ರಮ ಪ್ರವೇಶ ಮಾಡಿ ಅವರಿಗೂ ಅವರ ಕುಟುಂಬದವರಿಗೂ ಅಪಚಾರ ಮಾಡಿದುದಕ್ಕಾಗಿ ಸ್ಪೇನ್ ಸರ್ಕಾರವು ಕ್ಷಮಾಪಣೆಯನ್ನು ಸೂಚಿಸಿ ಬ್ರಿಟಿಷ್ ಸರ್ಕಾರಕ್ಕೆ ಪತ್ರ ಬರೆದಿದೆ.

ಸಾಮೂಹಿಕ ಜುಲ್ಮಾನೆ

ಕಳೆದ ಆಗಸ್ಟ್ ತಿಂಗಳ ಅಂತ್ಯದವರೆಗೆ ಹಿಂದೂಸ್ಥಾನದ ನಾನಾ ಊರುಗಳು ಮೇಲೆ ಸಾಮೂಹಿಕ ಜುಲ್ಮಾನೆಯನ್ನು ಹೊರಿಸಲಾಗಿತ್ತು. ಅದರ ಮೊತ್ತ ೯೦ ಲಕ್ಷ ರೂ.ಗಳು. ಅದರ ಪೈಕಿ ೭೮|| ಲಕ್ಷ ರೂ. ವಸೂಲಾಯಿತು.— ಎಂಬುದಾಗಿ ಇಂಡಿಯಾ ಸೆಕ್ರೆಟರಿಯವರಾದ ಮಿ|| ಅಮೆರಿಯವರು ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಕಂಕಳಿನಲ್ಲಿ ದೊಣ್ಣೆ - - ಕೈಯಲ್ಲಿ ಶರಣಾರ್ಥಿ

ತುರ್ಕಿಯ ವಿಷಯದಲ್ಲಿ ಜರ್ಮನರು ದ್ವಿಮುಖ ನೀತಿಯನ್ನು ಅನುಸರಿಸುತ್ತಿರುವರು. ತುರ್ಕಿಯು ತಟಸ್ಥವಾಗಿದ್ದರೂ ಅದು ಮಿತ್ರರಾಷ್ಟ್ರಗಳಿಗೆ ಸಹಾನುಭೂತಿಯುತವಾಗಿದೆಯೆಂದು ಹೇಳಲಾಗಿದೆ. ಆದ್ದರಿಂದ ಜರ್ಮನಿಯು ಹೀಗೆ ವರ್ತಿಸುತ್ತಿದೆಯೆಂದು ಗೊತ್ತಾಗಿದೆ. ತುರ್ಕಿ ಗಡಿಯಲ್ಲಿ ಒಂದು ಕಡೆ ಸೈನ್ಯಗಳನ್ನು ಕೇಂದ್ರೀಕರಣ ಮಾಡುತ್ತಿದೆ. ಇನ್ನೊಂದು ಕಡೆ ತುರ್ಕಿಯನ್ನೂ ಅದರ ಅಧ್ಯಕ್ಷರನ್ನೂ ಸ್ತೋತ್ರ ಮಾಡುತ್ತಿದೆ. ತುರ್ಕಿಯು ಎಂದಿಗೂ ಯುದ್ಧಕ್ಕಿಳಿಯುವುದಿಲ್ಲವೆಂದು ಹೇಳುತ್ತಿದೆ. ಅವರೂ ಜರ್ಮನಿ ಯುದ್ಧ ಸಿದ್ಧತೆಯನ್ನೇ ಮಾಡುತ್ತಿದೆ.

ಸಾರ್ವಜನಿಕ ಆರೋಗ್ಯ ಸಮಿತಿಯು ಚರ್ಚಿಸಲ್ಪಟ್ಟಿತು. ಆರೋಗ್ಯಾಧಿಕಾರಿಗಳು ಹೊಸದಾಗಿ ಕಟ್ಟಿರುವ ಮನೆಗಳನ್ನು ನೋಡಿ ಅಪ್ಪಣೆ ಕೊಟ್ಟ ಮೇಲೆ ವಾಸಕ್ಕೆ ಕೊಡಬೇಕೆಂದೂ ಮನೆಗಳಿಗೆ ಅಪಾಯವಿಲ್ಲದ ನಂತರ ಎಂದಿನಂತೆ ನಮ್ಮ ತೆಗೆದುಬಿಡಬೇಕೆಂದು ತಿದ್ದುಪಡಿ ಬಂತು.

ಮೇಲೆ ಹೇಳಿದಂತೆ ತಿದ್ದುಪಡಿ ಬಿದ್ದು ಹೋಯಿತು. ಮೂಲ ಸಮ್ಮತಿಯು ಮಾತ್ರ ಪಾಸಾಯಿತು. ಈ ದಿನ ಮಧ್ಯಾಹ್ನ ೩ ಗಂಟೆಗೆ ಸಭೆ ಮುಗಿಯಿತು.

ಕೆನಡಾ ಗೋಧಿಯ ನಿರುಪಯೋಗ

ಭಾರತದ ಕ್ಷಾಮ ಪರಿಹಾರಕ್ಕಾಗಿ ಕೆನಡಾ ಸರ್ಕಾರದವರು ಒಂದು ಮಿಲಿಯನ್ ಗೋಧಿಯನ್ನು ಕೊಡುವುದಾಗಿ ಹೇಳಿದರೆಂದೂ ಇಂಡಿಯಾ ಸೆಕ್ರೆಟರಿಯವರಾದ ಮಿ|| ಅಮೆರಿಯವರು ಅದನ್ನು ನಿರಾಕರಿಸಿದರೆಂದೂ ದೊಡ್ಡ ದೊಡ್ಡ ಅಕ್ಷರಗಳಲ್ಲಿ ವರದಿಗಳು ಅಮೆರಿಕದ ಒಂದು ಪತ್ರಿಕೆಯ ವಿರುದ್ಧ ಟೀಕೆಗಳು ಪ್ರಕಟವಾಗಿವೆ. ಮಾಹಿತಿಗಾರ ಅಧಿಕಾರಿಗಳೊಡನೆ ಚರ್ಚಿಸಿ ಈ ಟೀಕೆಯನ್ನು ಖಂಡಿಸಲಾಗಿದೆಯೆಂದು ತಿಳಿಸಲಾಗಿದೆ. ಈ ಟೀಕೆಗೆ ಉತ್ತರ ಇಂಡಿಯಾ ಆಫೀಸಿನ ಹೊಣೆಗಾರರೆಂದರೆ ಹಡಗಿನ ಮೂಲಕ ರವಾನೆಯ ತೊಂದರೆ. ಕೆನಡಾದಿಂದ ಗೋಧಿಯನ್ನು ಸಾಗಿಸುವುದಕ್ಕಿಂತ ಆಸ್ಟ್ರೇಲಿಯಾದಿಂದ ಸಾಗಿಸಬಹುದು.

ಬಂಗಾಳಾ ಕ್ಷಾಮವು ದೇವರು ಮಾಡಿದ್ದು

ಇಂಡಿಯಾ ಸೆಕ್ರೆಟರಿಯವರಾದ ಮಿ|| ಅಮೆರಿಯವರು ಕೊಟ್ಟ ಭೇಟಿಯೊಂದರಲ್ಲಿ ಹೀಗೆ ಹೇಳಿರುವರು —ಹಿಂದಿನ ಸಮುದಾಯ ಮತ್ತು ಈಗಲೂ ಬ್ರಿಟಿಷ್ ನೀತಿಯು ಭಾರತದಲ್ಲಿ ಪಾರ್ಲಿಮೆಂಟರಿ ಸ್ವರಾಜ್ಯ ಸ್ಥಾಪನೆಯನ್ನೇ ಅನುಸರಿಸುತ್ತಿದೆ. ಕ್ರಿಪ್ಸ್‌ರ ಸಂಧಾನದಲ್ಲಿಯೂ ಇದು ಒಳಗೊಂಡಿತ್ತು. ಬಂಗಾಳಾ ಕ್ಷಾಮವು ಮನುಷ್ಯ ಕೃತವಲ್ಲ. ಅದು ದೇವರು ಮಾಡಿದ್ದು. ಹಿಂದೂಸ್ಥಾನವು ಬ್ರಿಟನ್ನಿನಷ್ಟೇ ಸ್ವತಂತ್ರವಾಗಬೇಕೆಂಬುದೇ ನಮ್ಮ ಇಷ್ಟ. ಸ್ವರಾಜ್ಯಕ್ಕೆ ಇಲ್ಲಿನ ಜನ ಕೊಡುವುದೇ ನಮ್ಮ ಬಯಕೆ.

ಕಟ್ಟ ಕಡೇ ಸುದ್ದಿ

ಸ್ವಂ ವ] ಬೆಂಗಳೂರು ೧೧

ಈ ದಿನ ಪ್ರಾತಃಕಾಲ ೯-೩೦ ಗಂಟೆಗೆ ಶ್ರೀಮನ್ಮಹಾರಾಜರವರು ಜಯಚಾಮರಾಜೇಂದ್ರ ಆಕ್ಯುಪೇಷನಲ್ ಇನ್ಸ್ಟಿಟ್ಯೂಟಿನ ಶಂಕುಸ್ಥಾಪನೆ ನೆರವೇರಿಸಿದರು.

ಈ ದಿನ ಸಂಜೆ ೫-೩೦ ಗಂಟೆಯಲ್ಲಿ ಮಹಾಪ್ರಭುಗಳವರು, ಬೆಂಗಳೂರು ನಗರದ ರೈಲ್ವೆ ಸ್ಟೇಷನ್ ಬಳಿಯಲ್ಲಿ ನಿರ್ಮಾಣವಾಗುವ ಶ್ರೀ ಜಯಚಾಮರಾಜೇಂದ್ರ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಮತ್ತು ಸಂಸ್ಥೆಯ ಶಂಕುಸ್ಥಾಪನೆ ಕಾರ್ಯವನ್ನು ನೆರವೇರಿಸಿದರು.

ಬಿಸಿ ಬಿಸಿ ಸುದ್ದಿ

ಸ್ವ. ವ. ಪ್ರ] ಬೆಂಗಳೂರು ೧೧

ನ್ಯಾಯ ವಿಧಾಯಕ ಸಭೆ

ಶ್ರೀಮತಿ ಯಶೋಧರಾ ದಾಸಪ್ಪನವರು ಬಂಧನದಲ್ಲಿದ್ದ ಕಾಲದಲ್ಲಿ ಸಾಮಾನ್ಯ ಬ್ರಿಟಿಷ್ ಇಂಡಿಯಾದಲ್ಲಿ ಕೊಡುತ್ತಿರುವಂತೆ ಇಲ್ಲಿಯೂ ಅಲೋಯನ್ಸ್ ಕೊಡಬೇಕೆಂದು ಕೇಳಿದರು. ... ಅವಶ್ಯಕತೆಯಿಲ್ಲವೆಂದು ತಿಳಿಸಿದರು.

ಶ್ರೀ ಬದರಿನಾರಾಯಣರವರು ಇಂದಿನ ಸಭೆಯಲ್ಲಿ ... ಕೊಡಬೇಕೆಂದು ... ಸಚಿವರಾದ ಶ್ರೀ ... ವರಗಳನ್ನು ಕೇಳಲಾಗುವುದಿಲ್ಲ ... ಸಿದರು ... ತಿಳಿಸಿ

(ಹಿಂದಿನ ೮ ನೇ ಪುಟ)

ಪ್ರತಿಬಂಧಕಗಳನ್ನೆಲ್ಲಾ ತೆಗೆಯಬೇಕು

ಕಾಂ|| ಅಧ್ಯಕ್ಷರ ವಿವರಣೆ

ಸ್ವ. ಸು.] ಬೆಂಗಳೂರು ೧೦

ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರೂ, ಶ್ರೀ ಕೆ. ಟಿ. ಭಾಷ್ಯಂರವರೂ ನಿನ್ನೆ ದಿನ ಬೆಂಗಳೂರು ಪತ್ರಿಕೋದ್ಯೋಗಿಗಳ ಸಂಘಕ್ಕೆ ಭೇಟಿ ಕೊಟ್ಟು ಅವರ ಸತ್ಕಾರವನ್ನು ಪಡೆದರು. ಆಗ ಕಾಂ|| ಅಧ್ಯಕ್ಷರು ಈರೀತಿ ತಿಳಿಸಿದರು:

ನಮ್ಮನ್ನು ಈಗ ಬಿಡುಗಡೆಮಾಡಿದ್ದಾರೆ. ಇನ್ನೂ ಹಿಂದೆಯೇ ಮಾಡಬಹುದಾಗಿತ್ತು. ಸಂಸ್ಥಾನದ ರಾಜಕೀಯ ಪರಿಸ್ಥಿತಿಯ ಬಗ್ಗೆ ಸಮಯವನ್ನೆಲ್ಲಾ ಮಾಡುತ್ತೇನೆ. ಸರ್ಕಾರದವರೂ ಹಾಗೆಯೇ ಮಾಡುವರೆಂದು ನಂಬಿದ್ದೇನೆ.

ಶಿಕ್ಷೆಗೆ ಒಳಗಾದ ಕಾಂಗ್ರೆಸ್ಸಿನವರನ್ನು ಬಿಡುಗಡೆ ಮಾಡಿಲ್ಲ. ಅನೇಕರ ಮೇಲೆ ಹಾಕಿರುವ ನಿರ್ಬಂಧವನ್ನು ತೆಗೆದಿಲ್ಲ. ಕಾಂಗ್ರೆಸ್ ಸಂಸ್ಥೆಯ ಮೇಲಿನ ಪ್ರತಿಬಂಧಕಾಜ್ಞೆಯನ್ನು ತೆಗೆದಿಲ್ಲ. ಇವನ್ನೆಲ್ಲಾ ರದ್ದು ಮಾಡಬೇಕು. ಸ್ಪೆಷಲ್ ಕ್ರಿಮಿನಲ್ ಕೋರ್ಟು ರಚನೆಯು ಕ್ರಮಬದ್ಧವಲ್ಲವೆಂದು ಫೆಡರಲ್ ಕೋರ್ಟಿನವರು ತೀರ್ಪು ಕೊಟ್ಟಿದ್ದಾರೆ. ಅದರಿಂದ ಈ ಕೋರ್ಟು ಪ್ರಮಾಣ ಶಿಕ್ಷೆಗೊಳಗಾದ ಅಪರಾಧಿಗಳನ್ನೂ ಬಿಡುಗಡೆ ಮಾಡಬೇಕು. ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಸುಗೂರಿನ ಮಹಿಳೆಯರನ್ನೂ ಬಿಡುಗಡೆ ಮಾಡಬೇಕು.

ಮೈಸೂರು ಕಾಂಗ್ರೆಸ್ಸು ಅಹಿಂಸೆಯನ್ನೇ ತನ್ನ ಕಾರ್ಯನೀತಿಯನ್ನಾಗಿಟ್ಟುಕೊಂಡಿದೆ. ಕನಸಿನಲ್ಲಿಯೂ ಹಿಂಸಾ ತತ್ವವನ್ನು ಒಪ್ಪುವುದಿಲ್ಲ. ಸಹೋದ್ಯೋಗಿಗಳೊಡನೆ ಸಮಾಲೋಚನೆ ನಡೆಸಿ ಕಾಂಗ್ರೆಸ್ಸಿನ ಮುಂದಿನ ಮಾರ್ಗವನ್ನು ನಿರ್ಣಯಿಸಲಾಗುವುದು.

ಅಮೆರಿಕಾದಿಂದ ಹಾಲು

ಆವಿಯನ್ನು ತೆಗೆದು ಗಟ್ಟಿಯಾಗಿ ಮಾಡಿದಂತೆ ಮಾಡಲ್ಪಟ್ಟ ಹಾಲಿನ ೩೦ ಸಾವಿರ ಡಬ್ಬಗಳು ಅಮೆರಿಕಾದಿಂದ ಹಿಂದೂಸ್ಥಾನಕ್ಕೆ ಸಧ್ಯದಲ್ಲೇ ಬರಲಿವೆ. ಬಂಗಾಳದ ಮಕ್ಕಳಿಗೆ ಇದನ್ನು ಹಂಚಲಾಗುವುದು. ಇದಕ್ಕಾಗಿ ಅಮೇರಿಕದವರು ೧ ಲಕ್ಷ ಡಾಲರು ದಾನ ಮಾಡಿದ್ದಾರೆ

ಇನ್ನೂ ಬಿಟ್ಟಿಲ್ಲ

ಬೆಂಗಳೂರು ಸೆಂಟ್ರಲ್ ಜೈಲಿನಿಂದ ಎಲ್ಲಾ ಬಂದಿಗಳಿಗೂ ಬಿಡುಗಡೆ ಆಗಿದೆ. ಆದರೆ ಚಿತ್ರದುರ್ಗ ವಿದ್ಯಾರ್ಥಿ ಶ್ರೀ ಓಬಳಪ್ಪ ಎಂಬುವರಿಗೆ ಇನ್ನೂ ಬಿಡುಗಡೆ ಆಗಿಲ್ಲ.

ರೇಷನ್ ಡಿಪೋಗಳು

ರೇಷನ್ ಸಾಮಾನುಗಳನ್ನು ಮಾರಲು ದಿವಾನರು ಪತ್ರಿಕಾ ಸಮ್ಮೇಳನದಲ್ಲಿ ವ್ಯಾಖ್ಯಾನಮಾಡಿದ್ದಂತೆ ಬೆಂಗಳೂರಿನ ೫೦ ಜನ ಚಿಲ್ಲರೆ ವ್ಯಾಪಾರಿಗಳಿಗೆ ಸರ್ಕಾರದವರು ಲೈಸನ್ಸ್ ಕೊಡುವರೆಂದು ತಿಳಿದುಬಂದಿದೆ.

ಲ್ಯಾಬರೇಟರಿ

ಎಕ್ಸೈಸ್ ಸರ್ವಿಸ್ ಕಾನೂನಿನ ಪರಿಮಿತಿಯೊಳಕ್ಕೆ ಬೆಂಗಳೂರಿನಲ್ಲಿರುವ ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್ ಲ್ಯಾಬರೇಟರಿಯನ್ನು ಸೇರಿಸಲಾಗಿದೆ.

ಆಕ್ಟಿಂಗ್ ಡಿ|| ಕಮಿಷನರು

ಮೈಸೂರು ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಬೋರೆಯವರಿಗೆ ಆಕ್ಟಿಂಗ್ ಡೆಪ್ಯುಟಿ ಕಮಿಷನರ ಗ್ರೇಡಿನ ಬಡ್ತಿ ಕೊಡಲ್ಪಟ್ಟಿದೆ.

ವೈದ್ಯರ ನಿಧನ

ಬೆಂಗಳೂರು ಸೆಂಟ್ರಲ್ ಜೈಲಿನ ವೈದ್ಯಾಧಿಕಾರಿಗಳೂ, ವೈದ್ಯ ಇಲಾಖೆಯ ಸ್ಪೆಷಲ್ ಸೆಕ್ರೆಟರಿಯವರೂ ಆದ ಡಾ|| ಮುಲಿಂದಯ್ಯರು ಈ ದಿನ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಆಹಾರ ಸಮ್ಮೇಳನ

ನಾಳೆ ಭಾನುವಾರ ಬೆಂಗಳೂರು ಜಿಲ್ಲಾ ಆಹಾರ ಸಮ್ಮೇಳನವು ನಡೆಯಲು ಜಿಲ್ಲಾ ಬೋರ್ಡಿನವರು ಏರ್ಪಡಿಸಿರುತ್ತಾರೆ. ಸರ್ ಪುಟ್ಟಣ್ಣಶೆಟ್ಟರ ಪುರಭವನದಲ್ಲಿ ಇದು ನಡೆಯುವುದು.

ಬಟ್ಟೆ ದಾಸ್ತಾನು ಲೆಖ್ಖ

ಪ್ರತಿಯೊಬ್ಬ ಬಟ್ಟೆ ವ್ಯಾಪಾರಿಯೂ ೧೯೪೩ ನೇ ಡಿಸೆಂಬರ್ ೧೦ ನೇ ತಾ|| ದಿವಸ, ತನ್ನಲ್ಲಿರತಕ್ಕ ಮುದ್ರೆ ಇಲ್ಲದ ಬಟ್ಟೆ ಮತ್ತು ನೂಲಿನ ದಾಸ್ತಾನು ಲೆಖ್ಖವನ್ನು ಅಡಿಷನಲ್ ಟೆಕ್ಸ್ಟೈಲ್ ಕಮಿಷನರರವರಿಗೆ ಈ ಮಾಹೆ ೨೦ ನೇ ತಾ|| ಒಳಗಾಗಿ ನಿಯಮಿತ ಫಾರಂನಲ್ಲಿ ಕಳುಹಿಸಿಕೊಡಬೇಕೆಂದು ಪ್ರಭುತ್ವಾಜ್ಞೆಯಾಗಿದೆ.

DAILY MATINEE AT 4 P.M.

NEW OPERA TALKIES

1st show 7 P. M. 2nd show 10 P. M.

FROM 8—12—43

Great Guns

With LAUREL & HARDY

NEXT CHANGE:—

Son of Fury

Starring. —

TYRONE POWER. GENE TIERNEY

ನ್ಯಾಯಾಂಗ ಸಚಿವರು ಕಾಂ|| ಅಧ್ಯಕ್ಷರಿಗೆ ಬರೆಯಲಿಲ್ಲ

ಸ್ವ. ಸು.] ಬೆಂಗಳೂರು ೧೦

ಕಳೆದ ವರ್ಷ ಆಗಸ್ಟ್ ತಿಂಗಳಿನ ಮೊದಲನೆ ವಾರದಲ್ಲಿ ತಮ್ಮನ್ನು ಕಾಣುವಂತೆ ನ್ಯಾಯಾಂಗ ಸಚಿವರು ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೆ ಬರೆಯಲಿಲ್ಲ. ಬೊಂಬಾಯಿನಿಂದ ಬಂದ ಮೇಲೆ ದಿವಾನರನ್ನು ಭೇಟಿಮಾಡಿ ಚರ್ಚಿಸುವಂತೆಯೂ ತಿಳಿಸಲಿಲ್ಲ. ಆದರೆ ವಾರ್ಧಾದಲ್ಲಿ ಮಾಡಲ್ಪಟ್ಟ ನಿರ್ಣಯವನ್ನು ಬೊಂಬಾಯಿನಲ್ಲಿ ಸಮರ್ಥಿಸಿದುದರಿಂದ ಅವರೊಡನೆ ತಮ್ಮ ಸಂಬಂಧವನ್ನು ತ್ಯಜಿಸುವುದಾಗಿ ಕಾಂಗ್ರೆಸ್ ಅಧ್ಯಕ್ಷರೂ ಅವರ ಸ್ನೇಹಿತರೂ ಭೇಟಿಯನ್ನು ಕೊಡದೆ ಇದ್ದುದು ಪ್ರಯುಕ್ತ ಅವರನ್ನು ಪತ್ತೆಗಾಗಿ ಮಾಡಲಾಯಿತು ಎಂದು ಚೀಫ್ ಸೆಕ್ರೆಟರಿಯವರು ಶ್ರೀಮತಿ ಯಶೋಧರಾ ದಾಸಪ್ಪನವರ ಪ್ರಶ್ನೆಗೆ ಉತ್ತರವಾಗಿ ಶಾಸನ ಸಭೆಯಲ್ಲಿ ತಿಳಿಸಿದರು.

ಬಿಡುಗಡೆಯಾದ ಕಾಂಗ್ರೆಸ್ ಸದಸ್ಯರುಗಳೂ ಮತ್ತು ಇತರ ಕಾಂಗ್ರೆಸ್ ಸದಸ್ಯರುಗಳೂ ಸಭೆಯಲ್ಲಿ ಹಾಜರಿದ್ದರು.

ಮೈಸೂರು ಬಸ್ಸುಗಳು ಮೈಸೂರಿನವರಿಗೆ

ಸ್ವ. ಸು.] ಶಿವಮೊಗ್ಗ ೧೦

ಸಂಸ್ಥಾನದ ಹೊರಗಿರುವ ಕೆಲವು ಕಂಪೆನಿಗಳು ಶಿವಮೊಗ್ಗ ಜಿಲ್ಲೆಯ ಬಸ್ ಸರ್ವೀಸುಗಳನ್ನು ಕೊಂಡುಕೊಳ್ಳಲು ಏರ್ಪಾಡು ಮಾಡುತ್ತಿವೆ ಎಂಬ ಬಗ್ಗೆ ಜನರಲ್ಲಿ ಬಹಳ ಅಸಮಾಧಾನ ಹುಟ್ಟಿ, ಈ ಬಗ್ಗೆ ಸಾರ್ವಜನಿಕ ಸಭೆಯು ಆಗಿತ್ತು. ಮೈಸೂರು ಸಂಸ್ಥಾನದ ಬಸ್ ಸರ್ವೀಸುಗಳು ಮೈಸೂರಿನವರ ಕೈಯಲ್ಲೇ ಇರಬೇಕೆಂದೂ, ಅಥವಾ ಬೆಂಗಳೂರು ನಗರದಂತೆ ಒಂದು ಕಂಪೆನಿಯನ್ನು ಏರ್ಪಡಿಸಬೇಕೆಂದೂ, ಅದೂ ಆಗದಿದ್ದರೆ ಜಿಲ್ಲಾ ಬೋರ್ಡು ಇವನ್ನು ವಹಿಸಿಕೊಂಡು ನಡೆಸಲು ಸಿದ್ಧವಾಗಬೇಕೆಂದೂ ಸರ್ಕಾರಕ್ಕೆ ಸೂಚಿಸುವ ನಿರ್ಣಯವು ಶಿವಮೊಗ್ಗದ ಜಿಲ್ಲಾ ಬೋರ್ಡಿನ ಕಳೆದ ಸಭೆಯಲ್ಲಿ ನಿರ್ಣಯವಾಯಿತು.

ಚೀನಾ ಆಹ್ವಾನ

ಸುಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞರಾದ ಸರ್. ಸಿ. ವಿ. ರಾಮನ್ ಮತ್ತು ಸರ್ ಎಸ್. ಎಸ್. ಭಟ್ನಾಗರ್ ಇವರುಗಳು ಚೀನಾಕ್ಕೆ ಭೇಟಿಕೊಡಲು ಆಹ್ವಾನ ಬಂದಿದೆ. ವಸಂತಕಾಲದಲ್ಲಿ ಇವರುಗಳು ಅಲ್ಲಿಗೆ ಹೋಗಬಹುದಾಗಿ ಗೊತ್ತಾಗಿದೆ.

Edited, printed and published by A. R. Nagarajan, at the Sadhvi Press. D.Subbiah Road, Mysore

ರೇಷನ್ ಪಾರಾಯಣ

ಬಂದಿತು ಬಂದಿತು ರೇಷನ್ನು !
ಕಾಯಿರಿ ಊಟದ ಧ್ಯಾನನ್ನು ||
ಮಾದರಿ ನಾಡಿನ ಮಾದರಿ ಜನಗಳೆ
ಬರುವುದು ಮಾದರಿಯೂಟ
ಕಲಿಯಿರಿ ಎಲ್ಲರು ರೇಷನ್ ಕಾಲದ
ಧ್ಯಾನ ಊಟದ ಪಾಟ
'ಎ' ಕ್ಲಾಸ್ ಧನಿಕರೆ ಸೇವ್ಗಳು ತಿನ್ನಿರಿ
ಹೊಟ್ಟೆಗೆ ಅರಪಾವಕ್ಕಿ
ಹೊಟ್ಟೆಯು ಹಸಿದರೆ ಮನೆಯೊಳು ಕುಳಿತ
ನೋಟಿನ ಕಂತೆಯ ನೆಕ್ಕಿ
'ಬಿ' ಕ್ಲಾಸ್ ಬಡವರೆ ತನ್ನಿರಿ ರಾಗಿಯ
ಮಾಡಿರಿ ತೂತದ ರೊಟ್ಟಿ
ಸಾಲದೆ ಹೋದರೆ ಗಂಜಿಯ ಕಾಯಿಸಿ
ಏರಿಸಿ ಒಂದೊಂದ್ಗೊಟ್ಟೆ
ನಮಗೆ ರಾಕ್ಷಸ ಸೇನೇ ಕಾಣ
ರೇಷನ್ ಮೂರಿಗೆ ಇಂದು
ಮಾದರಿ ನಾಡಿನ ವೈದಿಕರೆಲ್ಲರು
ಆ ಶರತಿನನ ಕರೆಸುವರೆಂದು

— ಬಡ ಬೋರಣ್ಣ

ಕೆಮ್ಮಣ್ಣುಗುಂಡಿ ಭೇಟಿಯಿಲ್ಲ

ಚಿಕ್ಕಮಗಳೂರಿನಲ್ಲಿ ಇಲಿಗಳು ಬೀಳುತ್ತಿರುವುದರಿಂದ ಶ್ರೀಮನ್ಮಹಾರಾಜರವರು ಅಲ್ಲಿಗೂ ಕೆಮ್ಮಣ್ಣುಗುಂಡಿಗೂ ಪ್ರಯಾಣ ಮಾಡುವುದಿಲ್ಲವೆಂದು ತಿಳಿದುಬಂದಿದೆ. ಊರಿನಲ್ಲಿ ಹಾಕುತ್ತಿದ್ದ ಚಪ್ಪರಗಳ ಕೆಲಸವನ್ನು ಮುಂದುವರಿಸುತ್ತಿಲ್ಲ. ಜನರಿಗೆ ಇನಾಕ್ಯುಲೇಷನ್ ಮಾಡಲಾಗುತ್ತಿದೆ.

ಧ್ರುವರ ಬಿಡುಗಡೆ

ಚಿಕ್ಕಮಗಳೂರು ಕಾಂಗ್ರೆಸ್ ಮುಖಂಡರಾದ ಶ್ರೀ ಸಿ. ವಿ. ಧ್ರುವರವರನ್ನು ಕೆಲವು ದಿನಗಳ ಹಿಂದೆ ರಕ್ಷಣಾ ಶಾಸನದ ರೀತ್ಯಾ ಬಂಧಿಸಿ ಚಿಕ್ಕಮಗಳೂರು ಲಾಕಪ್ಪಿನಲ್ಲಿಡಲಾಗಿತ್ತು. ಅವರನ್ನು ಈಗ ಬಿಡುಗಡೆ ಮಾಡಲಾಗಿದೆ.

ಛತ್ರದ ಕುಯಿಲಿನ ತೊಂದರೆ

ಮೈಸೂರು ತಾಲ್ಲೂಕು ಕುಂಬಾರಕೊಪ್ಪಲು ಗ್ರಾಮದಲ್ಲಿ ಪಟೇಲರು ಮತ್ತು ಶ್ಯಾನುಭೋಗರು, ಈಗ ಬಂದಿರುವ ಛತ್ರದ ಕೊಯ್ಲನ್ನು ಕೊಯ್ಯುವುದಕ್ಕೆ ಮುಂಚೆ ಲೈಸನ್ಸ್ ಪಡೆಯಬೇಕೆಂಬುದಾಗಿ ಟಾಂ ಟಾಂ ಸಾರುತ್ತಾರೆ. ಹೀಗೆ ಕೊಯ್ಲನ್ನು ಅಡ್ಡಿಪಡಿಸುವ ಯಾವುದೊಂದು ಸರ್ಕಾರಿ ಹುಕುಂ ಇಲ್ಲ. "ಲಿಖಿತವಾದ ಸರ್ಕಾರಿ ಹುಕುಂ ಯಾವುದೂ ಇಲ್ಲವೆಂದೂ ಮತ್ತು ಕೇವಲ ಸ್ಥಳೀಯ ಅಮಲ್ದಾರರು ಬಾಯಿಮಾತಿನ ಅಪ್ಪಣೆಮಾಡಿರುವುದಾಗಿಯೂ" ಪಟೇಲರು ಹೇಳುತ್ತಿದ್ದಾರೆ. ಇದು ಗ್ರಾಮದಲ್ಲಿ ತೊಂದರೆಗೆ ಅವಕಾಶಕೊಟ್ಟಿದೆ. ಸಂಬಂಧಪಟ್ಟ ಮೇಲಧಿಕಾರಿಗಳು ಇದಕ್ಕೆ ಗಮನಕೊಡಬೇಕಾಗಿ ಪ್ರಾರ್ಥನೆ.

ಗ್ರಾಮ ನಿವಾಸಿ, ಕೆ. ಸಣ್ಣೇಗೌಡ

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಮತ್ತೇ ಉಪಯೋಗಿಸಿ.

ಡಿ. ಪುಟ್ಟೆಂಪ್ಪ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.— ಚಿಲ್ಲರೆಯಾಗಿ ಕಲ್ಲುಸಕ್ಕರೆ, ಬೂರಾಸಕ್ಕರೆ ಸಿಕ್ಕುತ್ತವೆ ಇಲ್ಲೂ ಮತ್ತು ಸಂತೆಪೇಟೆ ಲೇಕ್ ಬಿಲ್ಡಿಂಗಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಸಂಪುಟ ೨] ಭಾನುವಾರ ೧೨--೧೨--೪೩ [ಸಂಚಿಕೆ ೧೨೪

ಬಲ್ಗೇರಿಯಾದಲ್ಲಿ ಮಂತ್ರಿ ಮಂಡಲದ ಬಿಕ್ಕಟ್ಟು

ಅಮೆರಿಯವರ ಭಾಷಣದಲ್ಲಿ ಪೋಲೀಸರ ಬಂದೋಬಸ್ತು

ತಿರುಪತಿ ಬೆಟ್ಟಕ್ಕೆ ೧೪ ಮೈಲಿ ಮೋಟಾರು ರಸ್ತೆ

ಭಕ್ತ ವಿಗ್ರಹಗಳ ಸ್ಥಾಪನೆ

ಪ್ರಭುಗಳಿಂದ ಬೇಲೂರಿನಲ್ಲಿ ನೆರವೇರಿಸಲಾಯಿತು

ಈ ದಿನ ಬೆಳಗ್ಗೆ ಶ್ರೀಮನ್ಮಹಾರಾಜರವರು, ಬೇಲೂರು ಶ್ರೀ ಚೆನ್ನಕೇಶವಸ್ವಾಮಿ ದೇವಾಲಯದಲ್ಲಿ ಎರಡು ಭಕ್ತ ವಿಗ್ರಹಗಳ ಸ್ಮಾರಕದ ಸ್ಥಾಪನೆಯ ಸಮಾರಂಭವನ್ನು ನೆರವೇರಿಸಿದರು

ಒಂದನೇ ವಿಗ್ರಹವು ೧೧೧೭ ರಲ್ಲಿ ರಾಜ್ಯಭಾರ ಮಾಡುತ್ತಿದ್ದು ಬೇಲೂರು ದೇವಾಲಯವನ್ನು ಕಟ್ಟಿದ ಎರಡನೆ ವಿಷ್ಣುವರ್ಧನನ ವಿಗ್ರಹವು ಭಕ್ತನಾಕಾರದಲ್ಲಿ ಪ್ರತಿಷ್ಠಾಪಿತವಾಗಿದೆ. ಎರಡನೆಯ ವಿಗ್ರಹವು ಕೂಡ ಭಕ್ತನೋಪಾದಿಯಲ್ಲಿದೆ. ಅದು ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ದಿವಂಗತ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ವಿಗ್ರಹ. ಮಧ್ಯೆ ಒಂದು ಕಿಲೆಯಲ್ಲಿ ಆ ರಾಜರೀರ್ವರ ಚರಿತ್ರೆಯನ್ನು ಬರೆಯಲಾಗಿದೆ. ಆ ಕಿಲೆಯ ಮೇಲೆ ಸರಸ್ವತಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಮೇಲ್ಭಾಗದಲ್ಲಿ ಗಂಡಭೇರುಂಡ ಪಕ್ಷಿಯನ್ನು ಕೆತ್ತಲಾಗಿದೆ.

ಹೊಟ್ಟೆಗಿಲ್ಲದ ಹೆಂಗಸು ಆಸ್ಪತ್ರೆಗೆ

ಸ್ವಂ ಸು] ಬೆಂಗಳೂರು ೧೧

ಮೂರು ನಾಲ್ಕು ದಿನಗಳಿಂದ ಹೊಟ್ಟೆಗೆ ಅನ್ನವಿಲ್ಲದೆ ಮಲ್ಲೇಶ್ವರದ ನಾಲ್ಕನೇ ರಸ್ತೆಯಲ್ಲಿ ಬಿದ್ದಿದ್ದ ಹೆಂಗಸೊಬ್ಬಳನ್ನು ಎ. ಆರ್. ಪಿ ವಾರ್ಡನ್ನರಾದ ಡಾ|| ಮಾಧವರಾಯರೂ ಮತ್ತು ಶ್ರೀ ನಾರಾಯಣರಾಯರೂ ಮೋಟಾರು ವ್ಯಾನಿನಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಕೊಂಡೊಯ್ದು ದಾಖಲು ಮಾಡಿದರು

ಎ. ಆರ್. ಪಿ. ರದ್ದು

ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಎ ಆರ್ ಪಿ ಏರ್ಪಾಡುಗಳನ್ನು ಜನವರಿ ೧ ನೇ ತಾ|| ನಿಂದ ಪೂರ್ತಿಯಾಗಿ ರದ್ದು ಮಾಡುವಂತೆ ಸರ್ಕಾರದ ಆಜ್ಞೆಯಾಗಿದೆ.

ಅನ್ನದಾನ

ಸ್ವಂ ಸು.] [ನಂಜನಗೂಡು ೧೧

ಇಲ್ಲಿನ ಅಯೋಧ್ಯಾ ನಗರದ ವೈಶ್ಯರು ಶ್ರೀ ಕಂಪಂಗಿ ವೆಂಕಟಪ್ಪಶೆಟ್ಟರು ಪ್ರತಿ ದಿನವೂ ಅಂಗಹೀನರಿಗೆ ಯಾವ ಜಾತಿಯವರಾದರೂ ಸರಿಯೆ-ಅನ್ನದಾನ ಮಾಡಲು ನಿರ್ಧರಿಸಿರುವರು. ಇದಕ್ಕಾಗಿ ತಮ್ಮ ಆಸ್ತಿಯಲ್ಲಿ ಒಂದು ನೂರು ಮೂವತ್ತು ಸಲ್ಲ ಛತ್ರವನ್ನು ವಿನಾಸಲಾಗಿಟ್ಟಿರುವರು. ಆಳಿದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಪಟ್ಟಾಭಿಷೇಕೋತ್ಸವದ ದಿನವೇ ಈ ಧರ್ಮವು ಇಲ್ಲಿನ ಪೂರ್ಣಯ್ಯನವರ ಛತ್ರದಲ್ಲಿ ಪ್ರಾರಂಭವಾಗಲಿದೆ.

ಸಮಾನ ಹಂಚಿಕೆ

ಆಗ್ನೇಯ ಏಷ್ಯಾ ಕಮ್ಯಾಂಡಿಗೂ ಮತ್ತು ನೈರುತ್ಯ ಪೆಸಿಫಿಕ್ ಕಮ್ಯಾಂಡಿಗೂ ಸಮಾನ ಸ್ಥಪ್ಲೈಗಳನ್ನು ಮಾಡಲು ಹೊಸ ದೆಹಲಿಯಲ್ಲಿ ಏರ್ಪಾಡುಗಳಾಗುತ್ತಿವೆ ಜಪಾನಿನ ಮೇಲೆ ಸಧ್ಯದಲ್ಲಿಯೇ ನಡೆಸಬೇಕಾದ ಜಂಟಿ ಪ್ರಯತ್ನಗಳಿಗೆ ಇದು ಪೂರ್ವ ಸಿದ್ಧತೆಯಾಗಿದೆ.

ಬಹಿರಂಗ ಸಭೆಯಲ್ಲಿ ಅಮೆರಿಯವರ ಪರದಾಟ

ಬರ್ಮಿಂಗ್‌ಹ್ಯಾಮಿನ ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಇಂಡಿಯಾ ಸೆಕ್ರೆಟರಿ ಮಿ|| ಅಮೆರಿಯವರು ಬಂಗಾಳದ ಆಹಾರ ಪರಿಸ್ಥಿತಿಯು ದಿನೇ ದಿನೇ ಉತ್ತಮಗೊಳ್ಳುತ್ತಿದೆಯೆಂದು ಹೇಳಿದರು. ಸಭೆಯಲ್ಲಿದ್ದವರು ಅವರ ಮೇಲೆ ಪ್ರಶ್ನೆಗಳ ಸುರಿಮಳೆಯನ್ನು ಕರೆದರು. ಒಬ್ಬರು ಕುಳಿತಲ್ಲಿಂದಲೇ ಒಂದು ರಾಗವನ್ನು ಎಬ್ಬಿಸಲು ಪ್ರಯತ್ನಿಸಿದಾಗ ಹೊರಕ್ಕೆ ಕಳುಹಿಸಲ್ಪಟ್ಟರು. ಗಲಭೆಯಾಗಲು ಇನ್ನೊಬ್ಬರು ವೇದಿಕೆಯನ್ನೇರಿ ಮಾತನಾಡಲು ಪ್ರಯತ್ನಿಸಿದರು. ಡಿಟೆಕ್ಟಿವ್ ಪೋಲೀಸರನ್ನು ಕರೆ ಮಾಡಲಾಯಿತು. ಕೆಲವರು ರಾಷ್ಟ್ರಗೀತೆಯನ್ನೂ ಇನ್ನು ಕೆಲವರು ಸ್ವಾತಂತ್ರ್ಯಗೀತೆಯನ್ನೂ ಹಾಡುತ್ತಿರುವಾಗ ಸಭೆ ಮುಗಿಯಿತು

ಬಲ್ಗೇರಿಯಾದಲ್ಲಿ ಬಿಕ್ಕಟ್ಟು

ಕೈರೋ ಸಮ್ಮೇಳನದ ಪರಿಣಾಮವಾಗಿ ಬಲ್ಗೇರಿಯಾ ಮಂತ್ರಿ ಮಂಡಲದಲ್ಲಿ ಬಿಕ್ಕಟ್ಟುಂಟಾಗಿರುವುದಾಗಿ ತಿಳಿದು ಬಂದಿದೆ ಮಂತ್ರಿ ಮಂಡಲದ ಮೇಲೆ ಅನೇಕ ಪ್ರತಿಭಟನೆಗಳು ಆಗುತ್ತಿವೆ

ಯುದ್ಧ ಸೇವೆಗೆ ರಿಯಾಯಿತಿ

ಯುದ್ಧಾರಂಭಕ್ಕೆ ಮುಂಚೆ ಪಕ್ಕಾನ್ನು ಪಡೆದಿದ್ದವರು ಸೈನ್ಯದ ಕೆಲಸಕ್ಕೆ ಬರಲು ಸ್ವಲ್ಪ ಕಾಲಾವಕಾಶವನ್ನು ಕೊಡತಕ್ಕ ಕಾನೂನಿಗೆ ಅಮೆರಿಕ ಅಧ್ಯಕ್ಷರು ಅನುಮತಿ ಇತ್ತಿದ್ದಾರೆ

ಡೆನ್‌ಮಾರ್ಕಿನಲ್ಲಿ ರೊಮೆಲ್

ಹಿಟ್ಲರನ ಆಜ್ಞಾನುಸಾರ ರೊಮೆಲ್ಲರು ಡೆನ್‌ಮಾರ್ಕಿಗೆ ಹೋಗಿದ್ದಾರೆ ರಕ್ಷಣಾ ವ್ಯವಸ್ಥೆಯ ನಿಪುಣರೂ ಅಲ್ಲಿದ್ದಾರೆ. ಜಟ್ಲೆಂಡಿನಲ್ಲಿ ರಕ್ಷಣಾ ಪರಿಸ್ಥಿತಿಯನ್ನು ಅವರು ಪರಿಶೀಲಿಸುತ್ತಿದ್ದಾರೆ.

ಮಾಜಿ ಮಂತ್ರಿ ಬಿಡುಗಡೆ

ತಂಜಾವೂರು ವಿಶೇಷ ಬಂಧೀಖಾನೆಯಲ್ಲಿ ಸ್ಥಾನ ಬದ್ಧರಾಗಿದ್ದ ಮದರಾಸಿನ ಮಾಜಿ ಕಾಂಗ್ರೆಸ್ ಮಂತ್ರಿಗಳಾದ ಶ್ರೀ ಬಿ ಗೋಪಾಲ ರೆಡ್ಡಿಯವರೂ ಮಾತ್ರ ತರನ ಊ ಮತ್ತಿತರ ಜನ ಡೆಟಿನ್ಯೂಗಳೂ ಯಾವ ಷರತ್ತೂ ಇಲ್ಲದೆ ಬಿಡುಗಡೆ ಹೊಂದಿದ್ದಾರೆ

ತಿರುಪತಿಗೆ ಮೋಟಾರ್ ರಸ್ತೆ

ಕಣಿವೆ ದಾರಿಯಲ್ಲಿ ಏಳು ಬೆಟ್ಟಗಳನ್ನು ದಾಟಿ ಸಮುದ್ರ ಮಟ್ಟಕ್ಕಿಂತ ಮೂರು ಸಾವಿರ ಅಡಿ ಎತ್ತರದಲ್ಲಿ ನೆಲೆಸಿರುವ ತಿರುಪತಿ ಶ್ರೀ ಶ್ರೀನಿವಾಸದೇವರ ಸಂದರ್ಶನಕ್ಕೆ ಅನಾದಿ ಕಾಲದಿಂದಲೂ ಬರಿಯ ಕಾಲ್ನಡಿಯಲ್ಲದೆ ಭಕ್ತಾದಿಗಳಿಗೆ ಬೇರೆ ಮಾರ್ಗವೇ ಇರಲಿಲ್ಲ. ೭ ಮೈಲಿ ದೂರ ಬೆಟ್ಟವನ್ನು ಪ್ರಯಾಸದಿಂದ ಹತ್ತುತ್ತಿದ್ದುದಕ್ಕೆ ಬದಲಾಗಿ ಹದಿನಾಲ್ಕು ಮೈಲಿ ದೂರದ ಮೋಟಾರ್ ರಸ್ತೆಯಲ್ಲಿ ಬಹು ಆನಂದವಾಗಿ ಆಬಾಲವೃದ್ಧರೊಂದಿಗೆ ಜಾಗ್ರತೆಯಲ್ಲಿ ಏನೂ ಆಯಾಸವಿಲ್ಲದೆ ಹೀಗೆ ತಿರುಪತಿ ವೆಂಕಟೇಶನ ಸಂದರ್ಶನ ಪಡೆಯಬಹುದು ಇಂಥ ಅಮೋಘವೂ ಸರ್ವ ಜನೋಪಕಾರವೂ ಆದ ಕಾರ್ಯವು ಈಗತಾನೆ ಮುಗಿದಿದೆ

ರೂಸ್ವೆಲ್ಟರು ಇಂಗ್ಲೆಂಡಿಗೆ

ಪ್ರೆಸಿಡೆಂಟ್ ರೂಸ್‌ವೆಲ್ಟರು ಸಧ್ಯದಲ್ಲಿಯೇ ಇಂಗ್ಲೆಂಡಿಗೆ ಭೇಟಿ ಕೊಡುವುದು ಸಾಧ್ಯ, ಆದರೆ ಅಸಂಭವ ಎಂದು ಹೇಳಲಾಗಿದೆ

ಊಜೋ ಮೇಲೆ ಜಪಾನಿ ಬಾಂಬು

ಎರಡು ವಿಮಾನ ತಂಡಗಳು ನೆನ್ನೆ ಊಜೋವನ್ನು ಮುತ್ತಿದವು. ಹೊರಪ್ರಾಂತ್ಯದ ಹಳ್ಳಿಗಳ ಮೇಲೆ ಬಾಂಬುಗಳನ್ನು ಹಾಕಿ ಫಿರಂಗಿಯಿಂದ ಹೊಡೆದವು ಕೆಲವು ಮನೆಗಳಿಗೆ ನಷ್ಟವಾಯಿತು. ಅನೇಕ ದನಕರುಗಳು ಸತ್ತವು

ಜಪಾನ್ ಬಜೆಟ್

ಹೊಸ ವರ್ಷಕ್ಕೆ ಜಪಾನ್ ಮಂತ್ರಿ ಮಂಡಲವು ೭೬,೨೫,೦೦೦,೦೦೦ ಪೌಂಡುಗಳ ಲೆಕ್ಕವನ್ನು ಸಿದ್ಧಪಡಿಸಿದೆ. ಈ ವರ್ಷದ ಬಜೆಟ್ಟು ಒಂದು ಸಾವಿರ ಮಿಲಿಯನುಗಳಷ್ಟು ಹೆಚ್ಚಾಗಿದೆ. ಇನ್ನು ಭಾರಿ ತೆರಿಗೆಗಳನ್ನು ಹಿಂದೆ ಅವರು ಯಾವಾಗಲೂ ಮುಂದಾಗಿ ಮಾಡಿಲ್ಲ

ಸಾವರ್ಕರರಿಗೆ ಅಲಸ್ಯ

ಹಿಂದೂ ಮಹಾಸಭಾ ಅಧ್ಯಕ್ಷರಾದ ಶ್ರೀ ಸಾವರ್ಕರ್‌ರವರಿಗೆ ಕೆಮ್ಮಲು ಮತ್ತು ಜ್ವರ ಬಂದು ಹಾಸಿಗೆ ಹಿಡಿದಿದ್ದಾರೆಂದು ತಿಳಿದುಬಂದಿದೆ

ನೌಕರಿಯಲ್ಲಿ ಕೋಮುವಾರು

ಶಾಸನ ಸಭೆಯಲ್ಲಿ ಉತ್ತರ

ಸ್ವಂ ಸು] ಬೆಂಗಳೂರು ೧೧

ಶ್ರೀ ಗಿರಿಮಾಜಿರಾಯರ [illegible] ಉತ್ತರ ಕೊಡುತ್ತಾ ವಿದ್ಯಾಮಂತ್ರಿ ಶ್ರೀ ಜಿ ಅಪ್ಪಾಜಿಗೌಡರು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಪರೀಕ್ಷೆಗೆ ೧೯೪೨ ನೇ ದಿಗಳು, ಪಬ್ಲಿಕ್ ಸರ್ವಿಸ್ ಕಮಿಷನರ ಮುಂದೆ ಒಂದಿದ್ದರೆಂದೂ, ಅವರಲ್ಲಿ ಸಂದರ್ಶನಕ್ಕೆ ಕರೆಸಿದ್ದರೆಂದೂ ಆ ಪೈಕಿ ತೇರ್ಗಡೆಯಾದವರ ಮತ್ತು ಅಗದವರ ಸಂಖ್ಯೆಯನ್ನು ಮುಂದೆ ಕೋಮುವಾರಾಗಿ ಕೊಟ್ಟಿದೆಯೆಂದೂ ತಿಳಿಸಿದರು —

ಕೋಮು	ತೇರ್ಗಡೆಯಾದವರು	ಅಗದವರು
ಬ್ರಾಹ್ಮಣರು	೨೧೭	೬೪೩
ಯಾದವರು	೧	೨
ಕ್ಷತ್ರಿಯರು	೩	೧೫
ಕುರುಬರು	೧	೭
ಲಿಂಗಾಯತರು	೧೭	೯೫
ಮೊದಲಿಯಾರರು	೩	೬
ನಾಯುಡು	೧	೧
ವೈಶ್ಯ	೨	೧೩
ತೆ ಬಣಜಿಗರು	೬	೧೮
ಒಕ್ಕಲಿಗರು	೮	೬೭
ಇತರ ಹಿಂದೂಗಳು	೧೪	೭೧
ಜೈನರು	.	೭
ಮುಸ್ಲಿಂ	೨	೪೮
ಕ್ರಿಶ್ಚಿಯನ್	೨	೯
ಹಿನ್ನ ಕರಗತಿ	೨	೧೯
ಜುಂಪ್ಲಾ	೨೬೪	೯೯೧

ಈ ಪೈಕಿ ೧೯೪ ಮಂದಿ ಬ್ರಾಹ್ಮಣರಿಗೂ ಬ್ರಾಹ್ಮಣೇತರರೆಲ್ಲರಿಗೂ ಕೆಲಸಗಳನ್ನು ಕೊಡಲಾಯಿತು ೧೨೪ ಮಂದಿ ಬ್ರಾಹ್ಮಣರಿಗೆ ಮುಂದೆ ಕೆಲಸಕೊಡಬೇಕಾಗಿದೆ. ಒಂದು ಗೊತ್ತಾದ ಉತ್ಪನ್ನ ಪ್ರಕಾರ ಉಮೇದುವಾರರನ್ನು ಆರಿಸುವುದರಿಂದ ಪಬ್ಲಿಕ್ ಸರ್ವಿಸ್ ಕಮಿಷನರಿಗೆ ಸಹಾಯವಾದ ಲು ಸಮಿತಿಯ ಅಗತ್ಯವಿದೆಯೆಂದು ಸರ್ಕಾರವು ಭಾವಿಸುವುದಿಲ್ಲ.

ಮುಂದಿನ ಬೇಸಿಗೆಯಲ್ಲಿ ವಿಜಯ

ಯೂರೋಪಿನ ಯುದ್ಧದಲ್ಲಿ ಮುಂದಿನ ಬೇಸಿಗೆಯಲ್ಲಿ ಮಿತ್ರರಾಷ್ಟ್ರಗಳು ವಿಜಯವನ್ನು ಹೊಂದುತ್ತವೆ ಅದರಿಂದ ಆಗಲ್ಲಾಗಿ ಅಪಾರವಾದ ಮಿತ್ರ ಆಗುತ್ತದೆ. ಜಪಾನನ್ನು ಮುತ್ತಿ ಅವರ ಪಟ್ಟಣಗಳನ್ನು ಪುಡಿ ಪುಡಿ ಮಾಡಿದ್ದಲ್ಲದೆ ಪೆಸಿಫಿಕ್ಕಿನಲ್ಲಿ ಜಯವು ದೊರೆಯುವುದಿಲ್ಲವೆಂದು ಅಮೆರಿಕಾ ನೌಕಾಧಿಕಾರಿಗಳಾದ ಅಡ್ಮಿರಲ್ ಹಾಲ್ಸೆಯವರು ಹೇಳಿರುವರು.

ಶತ್ರು ಮುತ್ತಿಗೆ ಭೀತಿ ಇಲ್ಲ

ವಿಜಯನಗರದಲ್ಲಿ ಮಹಾರಾಜ ಗೌಡರವರು ಭಾಷಣ ಮಾಡುತ್ತಾ ಹಿಂದೂಸ್ಥಾನಕ್ಕೆ ಜಪಾನರ ಮುತ್ತಿಗೆ ಹಾಕಲು ಸಾಧ್ಯವಿಲ್ಲವೆಂದು ಹೇಳಿರುವರು

ಮುಸ್ಲಿಂ ನೌಕರರಿಗೆ

ರಿಯಾಯಿತಿ

ಕರಾಚಿಯಲ್ಲಿ [illegible] ಭಾರತ ಮುಸ್ಲಿಂ ಲೀಗ [illegible] ಸೇರಿಕ್ಕೆ ಹೋಗ [illegible] ಸರ್ಕಾರಿ ನೌಕರರನ್ನ [illegible] ಸಿಸುವುದಿಲ್ಲವೆಂದು ತಿಳಿದು ಬಂದಿದೆ.

ವೈದ್ಯ ಪರಿಶೀಲನೆ ಮತ್ತು ಪ್ರಯೋಗಗಳು ಆಗಬೇಕು

ಶ್ರೀಮನ್ಮಹಾರಾಜರ ಭಾಷಣ

ಸ್ವಂ ಸು.] ಬೆಂಗಳೂರು ೧೧

ಈ ದಿನ ಸಂಜೆ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸುವಾಗ ಶ್ರೀಮನ್ಮಹಾರಾಜರವರು ಹೀಗೆ ಅಪ್ಪಣೆ ಕೊಡಿಸಿದರು–

ನಮ್ಮ ದೇಶದ ಪ್ರಾಚೀನ ವೈದ್ಯಪದ್ಧತಿಗಳಾದ ಆಯುರ್ವೇದ ಮತ್ತು ಯುನಾನಿ ಪದ್ಧತಿಗಳಲ್ಲಿ ಜನರಿಗೆ ಈಚೆಗೆ ಅನಾದರ ಹುಟ್ಟಿತ್ತು. ಜನರಲ್ಲಿ ವಿದ್ಯಾಭ್ಯಾಸವು ಶೀಘ್ರವಾಗಿ ಹರಡಿ, ಹೊಸ ರೀತಿಯಲ್ಲಿ ವಿಜ್ಞಾನಸಮ್ಮತವಾದ ಮತ್ತು ಕ್ರಮಬದ್ಧ ಪಾಶ್ಚಿಮಾತ್ಯ ವೈದ್ಯ ವಿಧಾನಗಳು ಬಳಕೆಗೆ ಬಂದುದರ ಪರಿಣಾಮವೇ ಇದಕ್ಕೆ ಕಾರಣ. ನಮ್ಮ ದೇಶದ ಅನೇಕ ಮೂಲಿಕೆಗಳೂ ಮತ್ತು ಔಷಧಗಳೂ ರೋಗ ಪರಿಹಾರಕವಾಗಿಯೂ, ಅನುಕೂಲವಾಗಿಯೂ ಇರುವುದನ್ನು ಯಾರೂ ಇಲ್ಲವೆನ್ನುವಂತಿಲ್ಲ. ಆದರೆ ಪುಸ್ತಕದ ಸಂಸ್ಕೃತಿಯನ್ನು ಮಾತ್ರವೇ ಪ್ರಮಾಣವಾಗಿಟ್ಟುಕೊಂಡು ಕುರುಡು ನಂಬಿಕೆಯಿಂದ ವರ್ತಿಸುವ ಕಾಲವು ಕಳೆದುಹೋಯಿತು. ಯಾವ ವೈದ್ಯ ಪದ್ಧತಿಗೇ ಆಗಲಿ ಈಗ ಪ್ರಾಶಸ್ತ್ಯ ಬರಬೇಕಾದರೆ ವಿಚಕ್ಷಣವಾದ ಮತ್ತು ಕ್ರಮವಾದ ಪರಿಶೀಲನೆ ಮತ್ತು ಪ್ರಯೋಗಗಳ ಸೂಕ್ಷ್ಮ ಪರೀಕ್ಷೆ ನಡೆದ ಮೇಲೆ ಕೂಡ ಅದು ಪ್ರಯೋಜನಕರವೆಂದು ವ್ಯಕ್ತಪಡುವಂತಿರಬೇಕು. ನಮ್ಮ ದೇಶದ ಔಷಧ ಸಾಮಗ್ರಿಗಳಿಂದ ವ್ಯಾಧಿಗಳ ಮೇಲಾಗತಕ್ಕ ಪರಿಣಾಮದ ಮತ್ತು ಅವುಗಳ ಉಪಯೋಗ ಕ್ರಮಗಳ ವಿಷಯದಲ್ಲಿ ರಸಾಯನ ಶಾಸ್ತ್ರಸಂಬಂಧವಾದ ಮತ್ತು ಜೀವ ವಿಜ್ಞಾನ ರಸಾಯನ ಶಾಸ್ತ್ರಸಂಬಂಧವಾದ ಈಗಿನ ಕಾಲದ ನವೀನ ಸಂಶೋಧನ ಕ್ರಮಗಳಲ್ಲಿ ಜಾಗರೂಕತೆಯಿಂದ ಪ್ರಯೋಗ ಪರೀಕ್ಷೆಗಳನ್ನು ನಡೆಯಿಸಿ ಅವುಗಳ ಗುಣವನ್ನು ತೋರಿಸಿಕೊಡಬೇಕು

ಆಯುರ್ವೇದ ಮತ್ತು ಯುನಾನಿ ಪದ್ಧತಿಗಳ ಪ್ರಕಾರ ವೈದ್ಯವೃತ್ತಿಯನ್ನು ನಡೆಸುವವರೂ ಮತ್ತು ಪಾಶ್ಚಿಮಾತ್ಯ ವೈದ್ಯ ಪದ್ಧತಿಯ ಪ್ರಕಾರ ವೈದ್ಯವೃತ್ತಿಯನ್ನು ನಡೆಸುವವರೂ ಪರಸ್ಪರ ಸೌಹಾರ್ದದಿಂದಲೂ, ಸಹಕಾರದಿಂದಲೂ ವರ್ತಿಸಿ ಅನ್ಯೋನ್ಯವಾಗಿ ಒಬ್ಬರ ಚಿಕಿತ್ಸಾ ವಿಧಾನದಿಂದ ಮತ್ತೊಬ್ಬರು ಪ್ರಯೋಜನ ಪಡೆಯಲು ಉತ್ಸಾಹ ತೋರಿಸುವಂತಾಗಬೇಕೆಂಬುದು ನನ್ನ ಹಾರ್ದಿಕೆಯಾಗಿದೆ. ಎಲ್ಲಕ್ಕೂ ಮಿಗಿಲಾಗಿ ರೋಗಗಳು ಶೀಘ್ರವಾಗಿ ಗುಣವಾಗುವುದು ಮುಖ್ಯವೇ ಹೊರತು, ಯಾವ ವೈದ್ಯ ಪದ್ಧತಿಯ ಪ್ರಕಾರ ರೋಗಿಗಳಿಗೆ ಚಿಕಿತ್ಸೆ ನಡೆಯಿತೆಂಬುದು ಅಷ್ಟು ಪ್ರಾಮುಖ್ಯವಲ್ಲ. ಅಲ್ಲದೆ, ರೋಗವು ಗುಣವಾಗುವುದಕ್ಕೆ ವೈದ್ಯರಲ್ಲಿ ರೋಗಿಗೆ ಇರುವ ನಂಬಿಕೆಯಿಂದಲೂ ಬಹಳ ಸಹಾಯವಾಗುತ್ತದೆ.

ಇಲ್ಲಿ ನಿರ್ಮಿತವಾಗತಕ್ಕ ವೈದ್ಯ ಸಂಸ್ಥೆಯು ಆಯುರ್ವೇದದ ಪಂಡಿತರುಗಳೂ, ಯುನಾನಿ ಹಕೀಮರುಗಳು ಮತ್ತು ಪಾಶ್ಚಿಮಾತ್ಯ ವೈದ್ಯ ಪದ್ಧತಿಯನ್ನನುಸರಿಸುವ ವೈದ್ಯರುಗಳೂ ಒಟ್ಟಿಗೆ ಕಲೆತು ಕೆಲಸ ಮಾಡುವ ವಿಚಾರ ವಿನಿಮಯ ಸ್ಥಾನವಾಗಿ ಪರಿಣಮಿಸಬೇಕೆಂದು ನಾನು ಹಾರೈಸುತ್ತೇನೆ

ಯಂತ್ರ ಯುಗದಲ್ಲಿ ವೃತ್ತಿ ಶಿಕ್ಷಣದ ಆವಶ್ಯಕತೆ

ಹೊಸ ಶಾಲೆಯ ಶಂಕು ಸ್ಥಾಪನೆ

ಸ್ವಂ ಸು] ಬೆಂಗಳೂರು ೧೧

ಶ್ರೀ ಜಯಚಾಮರಾಜೇಂದ್ರ ಉದ್ಯೋಗಿಕ ಶಿಕ್ಷಣಾಲಯದ ಶಂಕು ಸ್ಥಾಪನೆಯನ್ನು ಶ್ರೀಮನ್ಮಹಾರಾಜರವರು ಈ ದಿನ ನೆರವೇರಿಸಿದರು. ಅವರು ಮಾಡಿದ ಭಾಷಣದ ಸಾರಾಂಶವಿದು :—

ಹೊಸ ಹೊಸ ಕೈಗಾರಿಕೆಗಳನ್ನು ಏರ್ಪಡಿಸುವ ಕಾರ್ಯವು ಮೈಸೂರು ಸಂಸ್ಥಾನದಲ್ಲಿ ಗಣನೀಯವಾಗಿ ಮುಂದುವರಿದಿದೆ. ಅವುಗಳು ದಕ್ಷತೆಯಿಂದ ನಡೆಯುವುದಕ್ಕಾಗಿ ಕೌಶಲ್ಯವುಳ್ಳ ಕೆಲಸಗಾರರು ಸರ್ವದಾ ಬೇಕಾಗುತ್ತಾರೆ.

ಒಗೆಬಗೆಯ ಯಂತ್ರೋಪಕರಣಗಳನ್ನು ಕಲ್ಪಿಸಿ ಅವುಗಳನ್ನು ತಯಾರಿಸುವುದೂ ಸಹ ಈ ಸಂಸ್ಥೆಯ ಶಿಕ್ಷಣಕ್ರಮದಲ್ಲಿ ಸೇರಿರುವುದನ್ನು ಕಂಡು ನಾವು ಹರ್ಷಿಸುತ್ತೇವೆ. ಈಗಿನ ಯಂತ್ರ ಯುಗದಲ್ಲಿ ಈ ಬಗೆಯ ಶಿಕ್ಷಣ ಕಾರ್ಯವು ಬಹಳ ಪ್ರಾಮುಖ್ಯವಾದುದೆಂಬುದನ್ನು ಎಷ್ಟು ಹೇಳಿದರೂ ಸಾಲದು ನಮ್ಮ ದೇಶದ ಜನರ ಬಳಕೆಗೆ ಬೇಕಾದ ಹಸನಾದ ಸಾಮಾನುಗಳನ್ನು ತಯಾರಿಸಿ ನಮ್ಮ ಜನಗಳ ವರಮಾನವನ್ನೂ ಜೀವನದ ಮಟ್ಟವನ್ನೂ ಹೆಚ್ಚಿಸುವುದಕ್ಕೆ ಇದರಿಂದ ವಿಶೇಷ ಸಹಾಯವಾಗುತ್ತದೆ.

ಈ ವೃತ್ತಿ ಶಿಕ್ಷಣ ಶಾಲೆಯು ಏರ್ಪಡಲು ಸರ್. ವಿಶ್ವೇಶ್ವರಯ್ಯನವರ ಸಲಹೆ ಮತ್ತು ಔದಾರ್ಯ ಇವು ಮೂಲಕಾರಣಗಳಾಗಿವೆ. ಆ ಮಹನೀಯರು ಸಂಸ್ಥಾನದ ಮತ್ತು ಒಟ್ಟು ದೇಶದ ಮೇಲ್ಮೆಗಾಗಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಿ ಸೇವೆ ಸಲ್ಲಿಸಿದ್ದಾರೆ. ಈ ಶಿಕ್ಷಣಶಾಲೆಯು ಸರಿಯಾದ ರೀತಿಯಲ್ಲಿ ಅಭಿವೃದ್ಧಿಗೊಳ್ಳುವಂತೆ ಅದನ್ನು ರೂಪಗೊಳಿಸಲು ಅವರು ತೀವ್ರಾಸಕ್ತಿಯಿಂದ ಶ್ರಮಿಸುತ್ತಿದ್ದಾರೆ ಈ ವಿಷಯದಲ್ಲಿ ನಮಗೆ ಉಂಟಾಗಿರತಕ್ಕ ಸಂತೋಷವನ್ನು ಈ ಸಂದರ್ಭದಲ್ಲಿ ವ್ಯಕ್ತಗೊಳಿಸಬಿಚ್ಛಿಸುತ್ತೇನೆ.

ಬಂಧನ ದಿನಾಚರಣೆ

ಈ ತಿಂಗಳು ೯ ನೇ ತಾ|| ಬೆಳಗಾಂ ಅಹಮದಾಬಾದ್ ಬೊಂಬಾಯಿ ಮುಂತಾದ ಕಡೆಗಳಲ್ಲಿ ಮುಖಂಡರ ಬಂಧನ ದಿನಾಚರಣೆ ಪ್ರಯುಕ್ತ ಮೆರವಣಿಗೆಗಳು ಹೊರಟವು ಸ್ತ್ರೀಯರೂ, ಪುರುಷರೂ ರಾಷ್ಟ್ರೀಯ ಧ್ವಜವನ್ನು ಹಿಡಿದು ಜಯಕಾರ ಮಾಡುತ್ತಾ ಹೊರಟರು. ಬೆಳಗಾಂನಲ್ಲಿ ೨೩ ಜನರನ್ನೂ ಬೊಂಬಾಯಿನಲ್ಲಿ ೭ ಜನರನ್ನೂ ಅಹಮದಾಬಾದಿನಲ್ಲಿ ಒಬ್ಬನನ್ನೂ ದಸ್ತಗಿರಿ ಮಾಡಲಾಯಿತು

" ವೈದ್ಯ ವಿಜ್ಞಾನ "

ರಾಜಧಾನಿಯ ಮೆಸರ್ಸ್ ಪ್ರಿನ್ಸ್ ಫಾರ್ಮಸಿಯ ಡಾ|| ಟಿ. ಕೆ. ಲಕ್ಷ್ಮೀನರಸಿಂಹಯ್ಯನವರು " ವೈದ್ಯ ವಿಜ್ಞಾನ " ಎಂಬ ಇಂಗ್ಲಿಷ್ ಕನ್ನಡ ಮಾಸಪತ್ರಿಕೆಯೊಂದನ್ನು ಮೊನ್ನೆ ೯ ನೇ ತಾ|| ನ ದಿನ ಪ್ರಕಟಪಡಿಸಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಆದರದಿಂದ ಸ್ವೀಕರಿಸಿದ್ದೇವೆ. ಈ ಪತ್ರಿಕೆಯ ಸಂಪಾದಕರು ಮೈಸೂರಿನವರಿಗೆಲ್ಲಾ ಪರಿಚಿತರಾಗಿ ಆಯುರ್ವೇದ ವೈದ್ಯದಲ್ಲಿ ಪೂರ್ಣ ಪರಿಶ್ರಮ ಹೊಂದಿರುವ ಕವಿರಾಜ್ ಟಿ. ಕೆ. ಶಾಸ್ತ್ರಿಯವರ ಮಕ್ಕಳು ಮೇಲಾಗಿ ಇವರೂ ಸಹ ಇಂಗ್ಲಿಷ್ ಮತ್ತು ಆಯುರ್ವೇದ ವೈದ್ಯಾನುಭವಿಗಳಾಗಿ ಈ ವೃತ್ತಿಯಲ್ಲಿ ಕೇವಲ ಜನಾನುರಾಗಿಗಳಾಗಿದ್ದಾರೆ ಈಗಲೀಗ ಸಾರ್ವಜನಿಕರ ಹೆಚ್ಚು ಮನ್ನಣೆಗೆ ಪಾತ್ರವಾಗುತ್ತಲಿರುವ ಆಯುರ್ವೇದ ವೈದ್ಯಾವಲಂಬಿಗಳಲ್ಲಿ ಏಕಮತ್ಯವನ್ನುಂಟುಮಾಡಿ ಒಟ್ಟು ಜನಸಾಮಾನ್ಯದಲ್ಲಿ ಆರೋಗ್ಯ ಸಂಬಂಧದ ಜ್ಞಾನಪ್ರಸಾರಣೆಯನ್ನುಂಟುಮಾಡಬೇಕೆಂಬುದೇ ಈ ಪತ್ರಿಕೆಯ ಧ್ಯೇಯ. ಇದು ಎಲ್ಲ ವಿಷಯದಲ್ಲೂ ಜ್ಞಾನಭಂಡಾರವಾಗಿ ತನ್ನ ಹೆಸರನ್ನು ಅನ್ವರ್ಥಮಾಡಿಕೊಳ್ಳುವಂತಾಗಲೆಂದು ಆಶಿಸಿ, ಇದಕ್ಕೆ ಸಕಲ ಅಭ್ಯುದಯವನ್ನೂ ಕೋರುತ್ತೇವೆ.

ಕೋಲಾರ ಜಿಲ್ಲಾ ಆಹಾರ ಸಮ್ಮೇಳನ

ಕಳೆದ ಬುಧವಾರ ಕೋಲಾರದಲ್ಲಿ ಜಿಲ್ಲಾ ಆಹಾರ ಸಮ್ಮೇಳನವು ಅತ್ಯಂತ ವೈಭವದಿಂದ ಜರುಗಿತು. ಆಗಾಗನೆ ಬಿಡುಗಡೆಯಾಗಿ ಬಂದಿದ್ದ ಮುಖಂಡರಿಗೂ, ಮತ್ತು ಇತರ ಮಹನೀಯರಿಗೂ ಅದ್ಭುತವಾದ ಸ್ವಾಗತವನಿತ್ತು ಮೆರವಣಿಗೆ ಮಾಡಲಾಯಿತು ದಾರಿಯುದ್ದಕ್ಕೂ ಅವರಿಗೆ ಆರತಿಯೂ ಪುಷ್ಪಮಾಲೆಯೂ ಸಲ್ಲಿಸಲ್ಪಟ್ಟವು. ಸಮ್ಮೇಳನದ ಆರಂಭೋತ್ಸವವನ್ನು ಶ್ರೀ ಬಿ. ಎಸ್. ಗುಪ್ತರು ನೆರವೇರಿಸಿದರು. ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರು ಅಧ್ಯಕ್ಷತೆ ವಹಿಸಿ ಸ್ವಾರಸ್ಯವಾದ ಭಾಷಣ ಮಾಡಿದರು. ಈಗ ಸರ್ಕಾರದವರು ಆಹಾರ ಸರಬರಾಜಿನ ಬಗ್ಗೆ ಕೈಗೊಂಡಿರುವ ಆಕ್ಷೇಪಣೀಯ ಯೋಜನೆಗಳನ್ನು ವಿಮರ್ಶಿಸಿ ರೈತರ ಶ್ರೇಯಸ್ಸಿಗೆ ಸಹಕಾರಿಯಾದ ನಿರ್ಣಯಗಳನ್ನು ಮಾಡಲಾಯಿತು

Edited, printed and published by A R. Nagarajan, at the Sadhvi Press, D.Subbiah Road, Mysore.

ಪತ್ರ ವ್ಯವಹಾರ

ಸಂಬಳ ಕೊಟ್ಟಿಲ್ಲ

ರೇಷನ್ ಸೆನ್ಸಸ್ ಕಚೇರಿಯಲ್ಲಿ ಕಳೆದ ತಿಂಗಳು ೧೭ ನೇ ತಾ|| ನಿಂದ ೨೭ ನೇ ತಾ|| ಪೂರ್ತಿ ಮೂವತ್ತು ಜನರು ಅಡಿಷನಲ್ ಕ್ಲಾರ್ಕುಗಳಾಗಿ ಕೆಲಸ ಮಾಡಿದರು. ಇವರಿಗೆಲ್ಲಾ ಆ ಕೆಲಸ ಮಾಡಿದ ಬಗ್ಗೆ ಬರಬೇಕಾದ ಸಂಬಳದ ಬಟವಾಡೆಯು ತಾ|| ೧೨ ಆದರೂ ಇನ್ನೂ ಆಗಿಲ್ಲ. ಈ ಪೈಕಿ ಪರಸ್ಥಳದವರೂ ಇದ್ದಾರೆ. ರೇಷನ್ ಡಿಪೋಗಳಲ್ಲಿ ಖಾಯಂ ಕೆಲಸಗಳು ಸಿಕ್ಕಬಹುದೆಂಬ ಭರವಸೆಯ ಮೇಲೆ ಇವರೆಲ್ಲರೂ ತುಂಬಾ ಶ್ರದ್ಧೆಯಿಂದ ಕೆಲಸ ಮಾಡಿದರು ಕೆಲಸವಿಲ್ಲವೆಂದು ವಾಪಸು ಕಳುಹಿಸಲ್ಪಟ್ಟರೂ ಬರಬೇಕಾದ ಅಲ್ಪವೇತನಕ್ಕಾಗಿ ಹಲವಾರು ಸಲ ರೇಷನ್ ಕಛೇರಿಗೆ ಹೋಗಿ ಸಿರಾಶರಾಗಿ ಹಿಂತಿರುಗಬೇಕಾಗಿದೆ. ಮೇಲಧಿಕಾರಿಗಳು ಈಗಲಾದರೂ ಕಣ್ತೆರೆದು ಜಾಗ್ರತೆ ಸಂಬಳ ಕೊಡಿಸುವರೇ ?

ಓರ್ವ ನೊಂದವ.

ಸ್ಥಳ ಸೌಕರ್ಯ ಬೇಕು

ಮೈಸೂರು ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ವಿಶ್ವೇಶ್ವರ ದೇವಾಲಯವು ಹಳೆಯ ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಸ್ಥಾಪಿತವಾದದ್ದಾದರೂ ದೇವರನ್ನು ಭಕ್ತಾದಿಗಳು ಪ್ರದಕ್ಷಣೆ ಮಾಡಿಕೊಂಡು ಬರುವ ಸೌಲಭ್ಯವಿಲ್ಲದಂತಾಗಿತ್ತು. ಇತ್ತೀಚಿನ ಟ್ರಸ್ಟಬೋರ್ಡ್ ಮಾರ್ಪಾಟುಗಳಿಂದ ದೇವಾಲಯದ ಪಶ್ಚಿಮದಲ್ಲಿ ರಾಜಮಾರ್ಗವು ತಯಾರಾಗುತ್ತಿದೆ. ದೇವಸ್ಥಾನಕ್ಕೆ ಅನಾದಿಯಾಗಿ ಕನಕನ ಕಿಂಡಿಯಂತೆ ಉತ್ತರ ದಿಕ್ಕಿನಲ್ಲಿರುವಷ್ಟು ಸಣ್ಣ ಗಲ್ಲಿಯನ್ನು ದಕ್ಷಿಣ ದಿಕ್ಕಿನಲ್ಲೂ ಮಾಡಿಸಲು ಪೌರಸಭೆಯವರು ಏರ್ಪಡಿಸುವುದಾದರೆ ಭಕ್ತಾದಿಗಳು ಪ್ರದಕ್ಷಿಣಾ ಸೌಲಭ್ಯವನ್ನು ಹೊಂದುವುದಲ್ಲದೆ ದೇವಾಲಯದ ಅಭಿವೃದ್ಧಿಯೂ ಚೆನ್ನಾಗಿ ಆಗುವುದಕ್ಕೆ ಅವಕಾಶವಾಗುತ್ತದೆ ಇದಕ್ಕೆ ಪೌರಸಭೆಯು ಗಮನವೀಯುವುದೇ ?

ಓರ್ವ ಅಭಿಮಾನಿ.

ದಿವಂಗತ ಲಕ್ಷ್ಮಯ್ಯ ರೆಡ್ಡಿ

ಬೆಂಗಳೂರಿನ ಪ್ರಸಿದ್ಧ ವರ್ತಕರೂ, ಬಡವರ ಬಂಧುಗಳೂ, ಕಾಂಗ್ರೆಸ್ ಪ್ರೇಮಿಗಳೂ, ಆಗಿದ್ದ ಶ್ರೀ ಎಸ್. ಲಕ್ಷ್ಮಯ್ಯರೆಡ್ಡಿಯವರ ಮರಣವಾರ್ತೆಯನ್ನು ಅತ್ಯಂತ ವಿಷಾದದಿಂದ ಪತ್ರಿಕೆಗಳಲ್ಲಿ ಓದಿದೆ ಶ್ರೀಯುತರು ಮೊನ್ನೆ ನಡೆದ ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಾಗಿದ್ದು ಪರಾಜಿತರಾದವರು ಚುನಾವಣೆ ನಡೆದು ಒಂದು ವಾರದೊಳಗಾಗಿ ಶ್ರೀ ರೆಡ್ಡಿಯವರಂತಹ ಪ್ರಜಾ ಸೇವಕರನ್ನು ಕಳೆದುಕೊಳ್ಳುತ್ತೇವೆಂದು ಯಾರೂ ಯೋಚಿಸಿರಲಿಲ್ಲ. ಶ್ರೀಯುತರ ಆತ್ಮಕ್ಕೆ ಶಾಂತಿಯನ್ನೂ, ಮೃತರ ಬಂಧುಗಳಿಗೆ ದುಃಖವನ್ನು ಸಹಿಸಲು ಶಕ್ತಿಯನ್ನೂ ಕೊಡಲೆಂದು ದೇವರನ್ನು ಪ್ರಾರ್ಥಿಸುತ್ತೇನೆ.

ಎ. ರಾಮಣ್ಣ.

ಸ್ವಿಸ್ ಎಲ್ಲೆ ಬಂದು

ರೋಮಾನಾದಿಂದ ಇಟಲಿ-ಸ್ವಿಟ್ಜರ್ಲೆಂಡುಗಳ ಗಡಿಯು ಸಂಪೂರ್ಣವಾಗಿ ಬಂದು ಮಾಡಲ್ಪಡುವುದೆಂದು ಜರ್ಮನರು ತಿಳಿಸಿದ್ದಾರೆ.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ — ಚಿಲ್ಲರೆಯಾಗಿ ಕಲ್ಲಸಕ್ಕರೆ, ಬೂರಾಸಕ್ಕರೆ ಸಿಕ್ಕುತ್ತವೆ ಇಲ್ಲೂ ಮತ್ತು ಸಂತೆಪೇಟೆ ಕೆರ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

WEEKLY EDITION

ಸಂಪುಟ ೮] ಸೋಮವಾರ ೧೩--೧೨--೪೩ [ಸಂಚಿಕೆ ೭

ಗಾಂಧಿಜಿ ಮತ್ತು ಮುಖಂಡರ ಖುಲಾಸೆ?

ರಷ್ಯಾದ ಮೇಲೆ ಜರ್ಮನರ ಪರಿಪೂರ್ಣ ಧಾಳಿ ಸಿದ್ಧತೆ

ಬಲ್ಗೇರಿಯಾ ಗಡಿಯಲ್ಲಿ ಜರ್ಮನ್-ತುರ್ಕಿ ಸೈನ್ಯಗಳ ಘರ್ಷಣೆ

ಬೇಲೂರಿಗೆ ಪ್ರಭುಗಳ ಭೇಟಿ

ಭಕ್ತವಿಗ್ರಹಗಳ ಅನಾವರಣೋತ್ಸವ

ಸ್ವಂ ವಿ.ಸು.] ಬೇಲೂರು ೧೨

ಶ್ರೀಮನ್ಮಹಾರಾಜರವರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಪ್ರಸಿದ್ಧವೂ ಪುರಾತನವೂ ಆದ ಬೇಲೂರಿಗೆ ಭೇಟಿಯೀಯಲು ಈ ದಿನ ಬೆಳಗ್ಗೆ ಹಾಸನಕ್ಕೆ ಸ್ಪೆಷಲ್ ರೈಲಿನಲ್ಲಿ ತಮ್ಮ ಪರಿವಾರದೊಡನೆ ದಯಮಾಡಿಸಿದರು. ಹಾಸನದ ರೈಲ್ವೆ ನಿಲ್ದಾಣದಲ್ಲಿ ಮಹಾಪ್ರಭುಗಳನ್ನು ಜಿಲ್ಲಾಧಿಕಾರಿಗಳಾದ ಶ್ರೀ ಎಸ್. ಎಸ್. ಬಿದಣ್ಣಯ್ಯನವರೂ, ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ವೈ. ಧರ್ಮಪ್ಪನವರೂ, ಪೌರಸಭಾಧ್ಯಕ್ಷರೂ, ಸದಸ್ಯರೂ ಸ್ವಾಗತಿಸಿ ಪುಷ್ಪಹಾರಗಳನ್ನು ಒಪ್ಪಿಸಿದರು. ನಂತರ ಮಹಾಪ್ರಭುಗಳು ಮಂತ್ರಿವರ್ಯರಾದ ಪ್ರಧಾನ ಶಿರೋಮಣಿ ಶ್ರೀ ಎನ್. ಮಾಧವರಾಯರೊಡನೆ ಬೇಲೂರಿಗೆ ಮೋಟಾರಿನಲ್ಲಿ ಪ್ರಯಾಣ ಬೆಳಸಿದರು.

ಊರ ಬಾಗಿಲಿನಿಂದ ಮೆರವಣಿಗೆ ಹೊರಟಿತು. ನಗರದ ಬೀದಿಗಳನ್ನು ತೋರಣಗಳಿಂದಲಂಕರಿಸಿದ್ದರು. ಭವ್ಯವಾದ ಮಂಟಪಗಳನ್ನು ನಿರ್ಮಿಸಿದ್ದರು. ರಸ್ತೆಗಳ ಇಕ್ಕೆಲಗಳಲ್ಲಿ ಜನಸ್ತೋಮವು ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಲು ಕಿಕ್ಕಿರಿದು ನಿಂತಿದ್ದರು. ಮಂಗಳವಾದ್ಯಗಳು ಮೊಳಗುತ್ತಿರಲು ಮಹಾಸ್ವಾಮಿಯವರ ಮೆರವಣಿಗೆಯು ನಗರವನ್ನು ಪ್ರವೇಶಿಸಿತು.

ಪೌರಸಭಾ ಮಂಟಪದಲ್ಲಿ ಪೌರಸಭಾ ಉಪಾಧ್ಯಕ್ಷರಾದ ಶ್ರೀ ಎಂ. ನಾರಾಯಣಾಚಾರ್ಯರು ಬೇಲೂರಿನ ಶ್ರೀ ಚನ್ನಕೇಶವ ಸ್ವಾಮಿಯ ದೇವಸ್ಥಾನವನ್ನು ಕೆತ್ತಿದ ಬೆಳ್ಳಿಯ ಕರಂಡದಲ್ಲಿ ಮಹಾಪ್ರಭುಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು.

(ಪ್ರಭುಗಳ ಉತ್ತರವು ಹಿಂದಿನ ಪುಟದಲ್ಲಿ ಪ್ರಕಟಿಸಿದೆ)

ದೇವಸ್ಥಾನಕ್ಕೆ ಭೇಟಿ

ದೇವಸ್ಥಾನದ ಮುಂಭಾಗದ ಮಂಟಪದಲ್ಲಿ ಡಾ॥ ಎಂ. ಹೆಚ್. ಕೃಷ್ಣರವರು ರಾ॥ ಹ॥ ರಾವ್, ಶ್ರೀ ರಾಜಯ್ಯಂಗಾರ್‌ರವರೂ ಶ್ರೀ ಕೃಷ್ಣಮೂರ್ತಿ ಮತ್ತು ಪ್ರದರ್ಶಕರುಗಳೂ ಸ್ವಾಗತಿಸಿದರು. ಡಾ॥ ಕೃಷ್ಣರವರು ದೇವಸ್ಥಾನದ ಸ್ಮಾರಕವನ್ನು ಶ್ರೀಮನ್ಮಹಾರಾಜರಿಗೆ ಒಪ್ಪಿಸಿದರು.

ನಂತರ ದೇವಸ್ಥಾನದಲ್ಲಿ ಮಹಾಪ್ರಭುಗಳು ಪ್ರದಕ್ಷಿಣೆ ಬಂದು ಶ್ರೀ ಚನ್ನಕೇಶವ ಸ್ವಾಮಿಯವರ ದರ್ಶನ, ಪೂಜೆ, ಮಂಗಳಾರತಿ, ಫಲಪ್ರಸಾದ ಸ್ವೀಕರಿಸಿದರು

ಭಕ್ತವಿಗ್ರಹಗಳ ಅನಾವರಣ

ಪ್ರಭುಗಳು ಅನಂತರ ದೇವಸ್ಥಾನವನ್ನು ಕಟ್ಟಿಸಿದ ಹೊಯ್ಸಳ ರಾಜ ವಿಷ್ಣುವರ್ಧನನ ಮತ್ತು ಶ್ರೀಮನ್ಮುಮ್ಮಡಿ ಕೃಷ್ಣರಾಜ ಒಡೆಯರವರ ಪಂಚಲೋಹಗಳಿಂದ ನಿರ್ಮಿಸಿದ ಭಕ್ತವಿಗ್ರಹಗಳ ಅನಾವರಣೋತ್ಸವವನ್ನು ನೆರವೇರಿಸಿದರು

ಮಹಾಸ್ವಾಮಿಯವರು ದಿವಾನರೊಡನೆ [illegible] ದೇವಸ್ಥಾನಕ್ಕೆ ಭೇಟಿಯಿತ್ತು [illegible] ರಾತ್ರಿ [illegible] ಸ್ಪೆಷಲ್ ರೈಲಿನಲ್ಲಿ ಮೈಸೂರಿಗೆ ತೆರಳಿದರು.

ಪಾರ್ಥನಾರಾಯಣ ಪಂಡಿತರಿಗೆ ಹುದ್ದೆಯೆ ?

ಮೈಸೂರು ೧೨

ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಮುಂದಾಳುಗಳಾದ ಡಾ॥ ವೈ. ಪಾರ್ಥನಾರಾಯಣ ಪಂಡಿತರಿಗೆ, ಮೊನ್ನೆಯ ದಿನ ಶ್ರೀ ವ್ಯಾಸ್ ಮಹಾರಾಜರವರು ಅಸ್ತಿಭಾರ ಹಾಕಿದ ಶ್ರೀ ಠಾಕೂರ್ ಶ್ರೀನಿವಾಸರಾವ್ ಕಾವೇರಿಬಾಯಿ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿ ಕೆಲಸ ಮಾಡಲು ಆಹ್ವಾನ ಬಂದಿದೆಯೆಂದು ತಿಳಿಯ ಬಂದಿದೆ

ಕಮ್ಯೂನಿಸ್ಟ್ ಸಭೆ

ನೆನ್ನೆ ಸಂಜೆ ಸುಬ್ಬರಾಯನ ಕೆರೆ ಮೈದಾನದಲ್ಲಿ ಮೈಸೂರು ಕಮ್ಯೂನಿಸ್ಟ್ ಸಮಿತಿಯ ಆಶ್ರಯದಲ್ಲಿ ಕಾಮ್ರೇಡ್ ಶ್ರೀಧರ್‌ರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. [illegible] ಈ ಕೆಳಗೆ ಕಂಡ ನಿರ್ಣಯಗಳಾದುವು—

ಸರ್ಕಾರದವರು ಮೈಸೂರು ಕಾಂಗ್ರೆಸ್ ಸಂಸ್ಥೆಯ ಮೇಲಿನ ಪ್ರತಿಬಂಧಗಳನ್ನೂ, ಹಲವು ಕೂಲಿಗಾರರ ನಾಯಕರನ್ನು ಗಡೀಪಾರು ಮಾಡಿರುವ ಆಜ್ಞೆಯನ್ನೂ, ಕಳೆದ ವರ್ಷದ ಆಗಸ್ಟ್ ತಿಂಗಳಲ್ಲಿ ನಡೆದ ದುರ್ಘಟನೆಗಳಲ್ಲಿ ಶಿಕ್ಷೆಗೊಳಗಾದ ಮತ್ತು ಇನ್ನೂ ಬಿಡುಗಡೆಯಾಗದಿರುವ ಬಂದಿಗಳ ಮತ್ತು ಸಭೆ, ಮೆರವಣಿಗೆ ಮುಂತಾದುವುಗಳ ಮೇಲಿರುವ ಪ್ರತಿಬಂಧಕವನ್ನು ಕೂಡಲೇ ತೆಗೆದುಹಾಕಬೇಕು. ಮದರಾಸ್ ಸರ್ಕಾರದವರು ಮಧ್ಯಪಾನ ನಿಷೇಧ ಕಾನೂನನ್ನು ರದ್ದು ಮಾಡಿರುವುದನ್ನು ಖಂಡಿಸಿ, ಅದನ್ನು ತಕ್ಷಣ ವಾಪಸು ತೆಗೆದುಕೊಳ್ಳಬೇಕೆಂದು ಕೋರುತ್ತದೆ

ಮೈಸೂರು ವಿದ್ಯಾರ್ಥಿ ಸಂಘ

ಮೈಸೂರು ವಿದ್ಯಾರ್ಥಿ ಸಂಘದ ಸಾಮಾನ್ಯ ಸದಸ್ಯರ ಸಭೆ ಇದೇ ೧೫-೧೨-೪೩ನೆಯ ಬುಧವಾರ ಸಂಜೆ ೬ ಗಂಟೆಗೆ ಮೈಸೂರು ಕಾಂಗ್ರೆಸ್ ಕಛೇರಿಯಲ್ಲಿ ಸೇರಲಿದೆ

ಖಾದಿ ರಿಯಾಯಿತಿ

ಮೈಸೂರು ಖದ್ದರ್ ಸೊಸೈಟಿಯಲ್ಲಿ [illegible] ರ ವರೆಗೆ ಮಾರಲಾಗುವುದು

ಬಿಸಿ ಬಿಸಿ ಸುದ್ದಿ

ನ್ಯಾಯವಿಧಾಯಕ ಸಭೆ

ಸ್ವಂ ವಾ ಪ್ರೇ.] ಬೆಂಗಳೂರು ೧೨

ಇಂದಿನ ಸಭೆಯ ಪ್ರಾರಂಭದಲ್ಲಿ ಶ್ರೀ ಟಿ. ಮರಿಯಪ್ಪನವರು, ಈ ತಿಂಗಳು ೧೦ನೆಯ ತಾ॥ ವಾರ್ತಾ ಪತ್ರಿಕೆಯಲ್ಲಿ ರಾಜ್ಯಸಭಾ ಸದಸ್ಯರ ಗೌರವಕ್ಕೆ ಕುಂದನ್ನು ತರುವಂತಹ ಆಕ್ಷೇಪಣೆ ಪ್ರಕಟವಾಗಿರುವುದೆಂದು ಅದನ್ನು ಸಭೆಯ ಗಮನಕ್ಕೆ ತರಬೇಕೆನ್ನುವ ಪತ್ರವನ್ನು ಸಭಾಧ್ಯಕ್ಷರಿಗೆ ಕಳುಹಿಸಿದ್ದರು. ಅದಕ್ಕೆ ಅಧ್ಯಕ್ಷರು ರೂಲಿಂಗ್ ಇನ್ನೂ ಕೊಟ್ಟಿಲ್ಲ.

ಶ್ರೀ ಎ. ಭೀಮಪ್ಪನಾಯಕರವರು ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ಮಿಲಿಟರಿ ಅಧಿಕಾರಿಗಳು ಪ್ರಯಾಣಿಕರ ವಿಷಯದಲ್ಲಿ ತೋರಿಸಿದ ವರ್ತನೆ ಕುರಿತು ಅವಸರದ ಠರಾವು ತಂದರು. ಶ್ರೀ ಎ. ಜಿ. ರಾಮಚಂದ್ರರಾಯರವರು, ಮೈಸೂರಿನಲ್ಲಿ ಈಚೆಗೆ ನಡೆಯುತ್ತಿರುವ ಮಿಲಿಟರಿ ಲಾರಿ ಅನಾಹುತಗಳ ವಿಷಯದ ಬಗ್ಗೆ ಅವಸರದ ಠರಾವೊಂದನ್ನು ತಂದರು. ಈ ಸಚಿವರು ಸಭೆಗೆ ಈ ಬಗ್ಗೆ ವಿವರಗಳು ಇನ್ನೂ ಬಂದಿಲ್ಲ. ಇನ್ನು ಮೇಲೆ ಈ ರೀತಿ ಆಗದಂತೆ ನೋಡಿಕೊಳ್ಳುವುದಾಗಿ ತಿಳಿಸಿದ್ದರಿಂದ ಅಧ್ಯಕ್ಷರು ಠರಾವನ್ನು ತಳ್ಳಿ ಹಾಕಲಾಗುವುದಾಗಿ ತಿಳಿಸಿದರು.

ಮಧ್ಯಾಹ್ನ ೩ ಗಂಟೆಯಲ್ಲಿ ಶ್ರೀ ಟಿ. ಮರಿಯಪ್ಪನವರು ಕೌನ್ಸಿಲ್ ಸಭೆಯ ಕಾಲವನ್ನು ೧೨ರಿಂದ ೫ರವರೆಗೆ ಇರುವ ಬದಲು ೧೧ರಿಂದ ೬ರವರೆಗೆ ನಡೆಯುವಂತೆ ಬದಲಾಯಿಸಬೇಕೆಂದು ಸೂಚಿಸಿದರು. ಶ್ರೀ ಎಲ್. ಎಸ್. ರಾಜುರವರು ೧೦-೩೦ರಿಂದ ೫-೩೦ರವರೆಗೆ ನಡೆಯಬೇಕೆಂಬ ಅಭಿಪ್ರಾಯವನ್ನು ಸೂಚಿಸಿದರು.

ಅಧ್ಯಕ್ಷರು, ರಾಜುರವರ ಅಭಿಪ್ರಾಯವನ್ನೇ ಅನುಮೋದಿಸಿದರು. ಆರೋಗ್ಯ ಮಸೂದೆ ಪಾಸಾಯಿತು.

[illegible] ಶ್ರೀ ಎಂ. ಎ. [illegible] ಮೈಸೂರು [illegible] ಸಭೆಯಲ್ಲಿ [illegible] ಯಾಗುತ್ತಿದೆ

ಕೂಡಲೆ ನಾಯಕರ ಬಿಡುಗಡೆ

ಗಾಂಧೀಜಿ ಮತ್ತು ಇತರ [illegible] ನಾಯಕರನ್ನು ಸಧ್ಯದಲ್ಲಿಯೇ [illegible] ಮಾಡುವ ಸೂಚನ ಇದೆಯೆಂದು [illegible] ಯ "ನ್ಯಾಷನಲ್ ಕಾಲ್" [illegible] ತಿಳಿಸುತ್ತದೆ. ಅದಕ್ಕೆ ಪೂರ್ವ[illegible]ಗಿ ವೈಸ್‌ರಾಯರು ದೇಶ[illegible] ಸ್ಥಿತಿಯನ್ನು ಕಲ್ಕತ್ತೆಯಲ್ಲಿ [illegible] ಸೂಚಿಸುವರೆಂದು ಹೇಳಲಾಗಿದೆ. ಕೇಂದ್ರ ಸರ್ಕಾರದ ಪುನರ್ರಚನೆ ಮತ್ತು ಕ್ರಿಪ್ಸ್ ಸಂಧಾನವನ್ನು ಮುಂದುವರಿಸುವುದು ಮತ್ತು ಪ್ರಾಂತಿಕ ಮಿಶ್ರ ಮಂತ್ರಿ ಮಂಡಲಗಳ ರಚನೆ— ಇವುಗಳನ್ನು ಅವರು [illegible] ಹೇಳಲಾಗಿದೆ

ಕಾಂಗ್ರೆಸ್ಸಿನ ಮುಖ್ಯ ಮುಖಂಡರುಗಳ ಅಭಿಪ್ರಾಯಗಳನ್ನು ವೈಸ್‌ರಾಯರು ಈಗಾಗಲೇ ತೆಗೆದುಕೊಂಡಿರುವರೆಂದೂ, ಹೇಳಲಾಗಿದೆ

ದಕ್ಷಿಣ ಇಟಲಿಯಲ್ಲಿ ರೂಸ್ವೆಲ್ಟರು

ಪ್ರೆ॥ ರೂಸ್ವೆಲ್ಟರು ಮಾಲ್ಟಾಕ್ಕೆ ಭೇಟಿ ಕೊಟ್ಟು ಅಲ್ಲಿಂದ ದಕ್ಷಿಣ ಇಟಲಿ ರಂಗಕ್ಕೆ ಹೋಗಿರುವರೆಂದು ಜರ್ಮನ್ ವಾರ್ತಾ ಸಂಸ್ಥೆ ತಿಳಿಸುತ್ತದೆ.

ತುರ್ಕಿ-ಜರ್ಮನ್ ಘರ್ಷಣೆ

ತುರ್ಕಿ ಮತ್ತು ಬಲ್ಗೇರಿಯಾ ಗಡಿಯನ್ನು ಮುಚ್ಚಲಾಗಿದೆಯೆಂದು ಸ್ಟಾಕ್‌ಹೋಮಿನಿಂದ ಸುದ್ದಿ ಹೊರಟಿದೆ. ಈ ಸಂದರ್ಭದಲ್ಲಿ ಜರ್ಮನ್ ಮತ್ತು ತುರ್ಕಿ ಸೈನ್ಯಗಳಿಗೆ ಘರ್ಷಣೆಯುಂಟಾಗಿ, ಎರಡು ಕಡೆಗಳಿಗೂ ನಷ್ಟ ಸಂಭವಿಸಿತೆಂದು [illegible] ವರದಿಯಾಗಿದೆ

ರಷಿಯಾದಲ್ಲಿ ನಾಜಿ ಅಗಾಧ ಧಾಳಿ

ಜರ್ಮನಿಯು ಅಸಂಖ್ಯಾತ ಸೈನ್ಯವನ್ನು ಕೂಡಿಸಿಕೊಂಡು ಈ ಹಿಂದಿನ ಕೆಲವು ದಿನಗಳಿಂದ ರಷಿಯಾಕ್ಕೆ ತಳ್ಳಿಕೊಳ್ಳುತ್ತಿದೆಯೆಂದು ಲಂಡನ್ ವರದಿಯಾಗಿದೆ. ರಷಿಯನ್ನರ ಚಳಿಗಾಲದ ಮುತ್ತಿಗೆ ಆರಂಭವಾಗುವುದಕ್ಕೆ ಮುಂಚೆಯೇ ಜರ್ಮನಿಯು ಅತಿ ಅಗಾಧ [illegible] ಆರಂಭಿಸುವರೆಂದು ಹೇಳಲಾಗಿದೆ

ಮಾಜಿ ಬಂಗಾಳ ಗೌವರ್ನರ್ ನಿಧನ

ಬಂಗಾಳದ ಮಾಜಿ ಗೌವರ್ನರಾದ ಸರ್ ಜಾನ್ ಹರ್ಬರ್ಟರವರು ನಿನ್ನೆ ರಾತ್ರಿ ನಿಧನರಾದರು

ಲಾರಿ ಹರಿದು ಮರಣ

ಮೈಸೂರು ೧೨

ಈ ದಿನ ಬೆಳಗ್ಗೆ [illegible] ಈ ಬಗ್ಗೆ ಪೋಲೀಸರ ತನಿಖೆ ನಡೆಯುತ್ತಿದೆ.

ಪೌರಸಭೆಗೆ ನಾಮಕರಣ

ಸ್ವಂ ವಾ ಪ್ರೇ.] [illegible] ೧೨

[illegible]

ಶಿಲ್ಪಕಲಾ ಸಂರಕ್ಷಣೆಯ ಆವಶ್ಯಕತೆ

ಬೇಲೂರಿನಲ್ಲಿ ಶ್ರೀ ಯುವರಾಜರವರ ಭಾಷಣ

[ಸ್ವಂ.ವ.ಸು.] ಬೇಲೂರು, ೧೩

ಬೇಲೂರು ಚನ್ನಕೇಶವ ದೇವಾಲಯದಲ್ಲಿ ಎರಡು ಭಕ್ತ ವಿಗ್ರಹಗಳ ಸ್ಮಾರಕ ಸ್ಥಾಪನಾ ಸಮಾರಂಭ ಕಾಲದಲ್ಲಿ ಪೌರಸಭೆಯ ಪರ ಶ್ರೀಮನ್ಮಹಾರಾಜರವರಿಗೆ ಅರ್ಪಿಸಿದ ಬಿನ್ನವತ್ತಳೆಗೆ ಪ್ರತ್ಯುತ್ತರವಾಗಿ ಮಹಾಸ್ವಾಮಿಗಳವರು ಈ ರೀತಿ ಪ್ರತ್ಯುತ್ತರವನ್ನು ಅಪ್ಪಣೆಕೊಡಿಸಿದರು:—

ಬೇಲೂರು ಪೌರಸಭೆಯ ಸದಸ್ಯರೇ,—

ನಿಮ್ಮ ಊರಿಗೆ ಮತ್ತೊಮ್ಮೆ ಬಂದು ನಿಮ್ಮನ್ನು ನಮಗೆ [illegible] ಮಾತ್ರದಿಂದ ನಮ್ಮ ಪ್ರಜೆಗಳನ್ನು ನೋಡುವುದು ನಮ್ಮ ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡಿದೆ ನಿಮ್ಮ ಬಿನ್ನವತ್ತಳೆಯಲ್ಲಿ ಸೂಚಿತವಾಗಿರುವ ಭಕ್ತಿ ವಿಶ್ವಾಸಗಳಿಗಾಗಿ ನಿಮ್ಮನ್ನು ನಾವು ವಂದಿಸುತ್ತೇವೆ

ಬೇಲೂರಿನ ಶ್ರೀ ಚನ್ನಕೇಶವಸ್ವಾಮಿ ದೇವಾಲಯವು ನಮ್ಮ ಸಂಸ್ಥಾನದ ಅತ್ಯಂತ ಶ್ರೇಷ್ಠವಾದ ಶಿಲ್ಪಕಲಾ ಸಂಪತ್ತಿನ ವಸ್ತುಗಳಲ್ಲೊಂದಾಗಿದೆ ಇದು ಪೂರ್ವಿಕರಿಂದ ನಮಗೆ ಲಭಿಸಿರುವ ಅನರ್ಘ್ಯವಾದ ಒಂದು ಭಾಗ್ಯವೆಂದು ನಾವು ಭಾವಿಸಬೇಕು. ಆದಕಾರಣ, ಇದಕ್ಕೆ ಹೆಚ್ಚಿನ ಗಮನಕೊಟ್ಟು ಅತ್ಯಂತ ಜಾಗರೂಕತೆಯಿಂದ ಇದನ್ನು ರಕ್ಷಿಸಿಕೊಂಡು ಬರಬೇಕಾದುದು ಅವಶ್ಯಕ. ತೀರಿಹೋದ ನಮ್ಮ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರವರಲ್ಲಿ ನೀವು ಸ್ವಾಭಾವಿಕವಾದ ಭಕ್ತಿಯನ್ನಿಟ್ಟುಕೊಂಡಿದ್ದೀರಿ. ಪ್ರೀತ್ಯರಾದ ಅವರು ಶ್ರೀ ಚನ್ನಕೇಶವಸ್ವಾಮಿ ದೇವಾಲಯದ ಜೀರ್ಣೋದ್ಧಾರದ ವಿಷಯದಲ್ಲಿಯೂ ಮತ್ತು ಹಳೇಬೀಡಿನಲ್ಲಿರತಕ್ಕ ಹೊಯ್ಸಳರ ಕಾಲದ ಶಿಲ್ಪಕಲೆಯ ಇತರ ಶ್ರೇಷ್ಠ ಸ್ಮಾರಕಗಳ ಜೀರ್ಣೋದ್ಧಾರದ ವಿಷಯದಲ್ಲಿಯೂ ವಿಶೇಷವಾಗಿ ಆಸಕ್ತಿ ವಹಿಸಿದ್ದರು ಅವರ ಭಕ್ತ ವಿಗ್ರಹವು ದೇವಾಲಯದ ಆವರಣದಲ್ಲಿ ಪ್ರತಿಷ್ಠಿತವಾಗಿರುವುದು, ಪ್ರಾಚೀನ ಕಲೆಯಲ್ಲಿಯೂ ಮತ್ತು ಸನಾತನ ಧರ್ಮದಲ್ಲಿಯೂ ಅವರಿಗಿದ್ದ ಶ್ರದ್ಧಾಸಕ್ತಿಗಳಿಗೆ ಉಚಿತವಾದ ಲಾಂಛನವಾಗಿದೆ ಅಲ್ಲದೆ ಈ ಕಲಾ ಸಂಪತ್ತು ಅಚ್ಚಳಿಯದೆ ಚಿರಕಾಲ ಶೋಭಿಸುವಂತೆ ಅದನ್ನು ಜೀರ್ಣೋದ್ಧಾರ ಮಾಡಿಸಿದ ಉಪಕಾರಕ್ಕಾಗಿ ಅವರಿಗೆ ನಾವು ಸಲ್ಲಿಸಬೇಕಾದ ಕೃತಜ್ಞತೆಯ ಚಿಹ್ನೆಯೂ ಆಗಿದೆ ಪ್ರಾಚೀನ ಸ್ಮಾರಕ ವಸ್ತುಗಳು ಶಿಥಿಲವಾಗಿ ಹೋಸ್ಥಿತಿಗೆ ಬರುವುದಕ್ಕೆ ಬಹುಕಾಲದಿಂದಲೂ ಮಳೆ ಗಾಳಿ, ಬಿಸಿಲುಗಳ ಹೊಡೆತಕ್ಕೆ ಸಿಕ್ಕಿರುವುದು ಮಾತ್ರವೇ ಕಾರಣವಲ್ಲ. ಅವುಗಳನ್ನು ಕಾಪಾಡುವ ಸ್ಥಿತಿಯಲ್ಲಿದ್ದ ಜನರು ಗಮನಕೊಡದೆ ಉಪೇಕ್ಷೆಯಿಂದಿರುವುದೂ ಇದಕ್ಕೆ ಕಾರಣ ಇಲ್ಲಿನ ಬಹಳ ವಿಗ್ರಹಗಳನ್ನು [illegible] ಕಾರಣವೆಂದರೆ. ಮೂರ್ತಿಭಂಜಕರು [illegible] ಸ್ಥಿತಿಗೆ ಬರುವುದಕ್ಕೆ [illegible] ಮಾಡಿರುವುದು [illegible] ಇದುವರೆಗೆ [illegible]

ಈ ದೇವಾಲಯದ ಪ್ರಖ್ಯಾತ ಶಿಲ್ಪಕೌಶಲ್ಯವೂ ಮತ್ತು ಚಿತ್ರಕೆಲಸದ ವೈಖರಿಯೂ ಈಗ ಮೊದಲಿಗಿಂತ ಸ್ಪಷ್ಟವಾಗಿ ಎದ್ದು ಕಾಣುವಂತಾಗಿದೆ. ಇದರ ಜೊತೆಗೆ, ಈ ದೇವಸ್ಥಾನದ ಆವರಣವನ್ನೂ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನೂ ಜೀರ್ಣೋದ್ಧಾರಗೊಳಿಸಲಾಗಿದೆ. ಇತಿಹಾಸ ಪ್ರಸಿದ್ಧವಾದ ಕಟ್ಟಡಗಳನ್ನು ರಕ್ಷಿಸಿಕೊಂಡುಬರಬೇಕಾದರೆ, ಜನರು ತಿಳುವಳಿಕೆಯುಳ್ಳವರಾಗಿ ಅವುಗಳನ್ನು ಜಾಗರೂಕತೆಯಿಂದ ನೋಡಿಕೊಳ್ಳುವ ಮನೋಧರ್ಮವುಳ್ಳವರಾಗಬೇಕು. ಇಂಥ ಪ್ರಾಚೀನ ಸ್ಮಾರಕ ವಸ್ತುಗಳನ್ನು ರಕ್ಷಿಸಿಕೊಂಡುಬರುವುದು ತಮ್ಮ ಕರ್ತವ್ಯವೆಂಬ ಭಾವನೆಯೂ ಮತ್ತು ಆ ವಿಷಯದಲ್ಲಿ ಅಭಿಮಾನವೂ ಜನರಲ್ಲಿ ಉಂಟಾಗುವಂತೆ ಮಾಡಲು ನಿಮ್ಮ ಪೌರಸಭೆಯಂಥ ಸ್ಥಳೀಯ ಸಂಸ್ಥೆಗಳು ನೆರವಾಗಬೇಕೆಂದು ಬಯಸುವುದು ಸಹಜವಾಗಿದೆ ಈಗ ಏರ್ಪಟ್ಟಿರುವ ಕಾರ್ಯಕ್ರಮದ ಮೇರೆಗೆ, ದೇವಾಲಯದ ಜೀರ್ಣೋದ್ಧಾರ ಕೆಲಸವು ಆದಷ್ಟು ಶೀಘ್ರವಾಗಿ ಪೂರೈಸಿ, ಇದರ ಶಿಲ್ಪಕಲಾ ವೈಭವವು ಅಚ್ಚಳಿಯದೆ ಚಿರಕಾಲ ಶೋಭಿಸುವಂತಾಗಲೆಂಬುದು ನಮ್ಮ ಅಭಿಲಾಷೆಯಾಗಿದೆ.

ನಿಮ್ಮ ಬಿನ್ನವತ್ತಳೆಯಲ್ಲಿ ಸೂಚಿತವಾಗಿರುವ ಅಂಶಗಳ ವಿಚಾರ. ಪ್ರಪಂಚದ ಎಲ್ಲಾ ಭಾಗಗಳಿಂದಲೂ ಪ್ರವಾಸಿಗಳನ್ನು ಆಕರ್ಷಿಸುವ ಈ ಊರಿನ ಸೌಕರ್ಯಗಳನ್ನು ಹೆಚ್ಚಿಸಬೇಕೆಂದು ನೀವು ಬಯಸುತ್ತಿರುವುದು ಸಹಜವೇ ಆಗಿದೆ. ಈ ಊರಿಗೆ ನೀರು ಸರಬರಾಯಿ, ವಿದ್ಯುಚ್ಛಕ್ತಿಯ ದೀಪ ಮುಂತಾದ ಸೌಕರ್ಯಗಳನ್ನು ಒದಗಿಸುವ ವಿಚಾರದಲ್ಲಿ ನಮ್ಮ ಸರ್ಕಾರದವರು ಉದಾರವಾಗಿ ಸಹಾಯ ಮಾಡಿದ್ದಾರೆ. ಈ ಅಂಶವು ನಿಮ್ಮ ಬಿನ್ನವತ್ತಳೆಯಲ್ಲಿಯೇ ಸೂಚಿತವಾಗಿದೆ. ಉತ್ತಮವಾದ ಚರಂಡಿಯ ಸೌಕರ್ಯವನ್ನೊದಗಿಸುವ ವಿಚಾರವನ್ನು ನಮ್ಮ ಸರ್ಕಾರದವರು ಸಹಾನುಭೂತಿಯಿಂದ ಪರ್ಯಾಲೋಚಿಸುವುದರಲ್ಲಿ ಸಂದೇಹವಿಲ್ಲ. ಈ ಊರಿನಲ್ಲಿ ಮಲೇರಿಯಾ ರೋಗನಿವಾರಣೆಯ ಕಾರ್ಯಗಳಿಗಾಗಿ ಕಳೆದ ವರ್ಷಗಳಲ್ಲಿ ಸರ್ಕಾರದವರು ವಿಶೇಷವಾಗಿ ಹಣವನ್ನು ಒದಗಿಸಿರುತ್ತಾರೆ ಮಲೇರಿಯಾ ರೋಗವನ್ನು ತಡೆಗಟ್ಟುವ ಕಾರ್ಯಕಲಾಪಗಳು ಪ್ರಯೋಜನಕರವಾಗಿ ಪರಿಣಮಿಸುವಂತೆ ಪೌರಸಭೆಯವರೂ ಮತ್ತು ಈ ಊರಿನ ಜನಗಳೂ ಸಹ ತಮ್ಮ ಕೈಯಲ್ಲಾದ ಮಟ್ಟಿಗೂ ಪ್ರಯತ್ನಿಸಬೇಕೆಂದು ನಿರೀಕ್ಷಿಸುವುದು ಯುಕ್ತವಾಗಿದೆ

ಈ ಊರಿನ ನಿವಾಸಿಗಳ ಸೌಕರ್ಯಕ್ಕೂ, ಆರೋಗ್ಯಕ್ಕೂ ಮತ್ತು ನೆಮ್ಮದಿಗೂ ಸಾಧಕವಾದ ಸಮಸ್ತ ರೀತಿಗಳಲ್ಲಿಯೂ ಈ ಊರು ಅಭಿವೃದ್ಧಿ ಹೊಂದುತ್ತಾ ಬರಲೆಂದು ನಾವು ಹಾರೈಸುತ್ತೇವೆ.

Edited, printed and published by A. R. Nagarajan, at the Sadhvi Press, D.Sub. [illegible] Road, Mysore.

ವಾರ ಭವಿಷ್ಯ

ತಾ|| ೧೩-೧೨-೪೩ರಿಂದ ೧೯-೧೨-೪೩ರವರೆಗೆ

ಮೇಷ — ಈ ವಾರ ಆರೋಗ್ಯ ಚೆನ್ನಾಗಿದೆ ಮಾನಸಿಕ ಚಿಂತೆ. ವ್ಯಾಪಾರಾದಿಗಳಲ್ಲಿ ಉದಾಸೀನತೆ ಆರ್ಥಿಕ ತೊಂದರೆ. ಶುಭಕಾರ್ಯಗಳಿಗೆ ವಿಘ್ನ. ತಾ|| ೧೪, ೧೫ ಅನಿಷ್ಟಕರ ಖರ್ಚು, ಚಿಂತೆ.

ವೃಷಭ - ಆರೋಗ್ಯ ಕೆಡಬಹುದು. ಆರ್ಥಿಕ ಸ್ಥಿತಿ ಸಾಧಾರಣ ಮಾನಸಿಕ ತೊಂದರೆ, ವ್ಯಾಪಾರಾದಿಗಳಲ್ಲಿ ಅಪಮಾನ. ಅಪಘಾತ. ಮಿತ್ರರಲ್ಲಿ ಶತ್ರುತ್ವ. ತಾ|| ೧೪, ೧೫ ಚಿಂತಾನಾಶ

ಮಿಥುನ — ಈ ವಾರ ಆರೋಗ್ಯ, ಮಾನಸಿಕ ಮತ್ತು ಆರ್ಥಿಕ ಸ್ಥಿತಿಗಳು ತೃಪ್ತಿದಾಯಕವಾಗಿವೆ. ವ್ಯಾಪಾರಾದಿಗಳಲ್ಲಿ ಶತ್ರುಗಳ ಕಾಟ, ಪ್ರವಾಸದಲ್ಲಿ ವಿಘ್ನ. ತಾ|| ೧೩ ದುಸ್ವಪ್ನ, ಕಷ್ಟ, ಸಹವಾಸ.

ಕರ್ಕ — ಸಾಧಾರಣವಾಗಿ ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿಗಳು ಉತ್ತಮವಾಗಿವೆ. ಉದ್ಯೋಗ, ನೌಕರಿಗಳಲ್ಲಿ ಕಷ್ಟನಾಶ. ಪ್ರವಾಸದಲ್ಲಿ ಜಯ. ತಾ|| ೧೩ ಅತಿಥಿ ಆಗಮನ, ಗಲಾಟೆ

ಸಿಂಹ — ಆರ್ಥಿಕ ಸ್ಥಿತಿ ಸಾಧಾರಣ ಮಿತ್ರರ ವಿಯೋಗ, ಮಾನಸಿಕ ಚಿಂತೆ, ಉದ್ಯೋಗಾದಿಗಳಲ್ಲಿ ಪರಿವರ್ತನೆ. ಅನಪೇಕ್ಷಿತ ಪ್ರವಾಸ, ಮಿತ್ರರಿಂದ ಅಪಮಾನ. ತಾ|| ೧೪, ೧೭ ಅಪ್ರಿಯವಾರ್ತೆ, ಮನೋವ್ಯಥೆ

ಕನ್ಯಾ — ಅನಾರೋಗ್ಯ ಸಂಭವ, ಆದಾಯಕ್ಕಿಂತ ಹೆಚ್ಚು ಖರ್ಚು. ವ್ಯಾಪಾರ, [illegible] ಶುಭಕಾರ್ಯಗಳು, ಪ್ರವಾಸ ಮುಂತಾದುವುಗಳಲ್ಲಿ ಉದಾಸೀನತೆ ಮತ್ತು ವಿಘ್ನ. ತಾ|| ೧೪, ೧೫ ೧೭ ದ್ರವ್ಯಲಾಭ, ಹರ್ಷ.

ತುಲಾ — ಮಿತ್ರರಿಂದ ಹಾನಿಯಾಗುವ ಸಂಭವವಿದೆ ಆರೋಗ್ಯಕ್ಕೆ ಹೆಚ್ಚು ಗಮನವಿಡಿ ಪ್ರವಾಸದಲ್ಲಿ ತೊಂದರೆ. ವ್ಯಾಪಾರಾದಿಗಳಲ್ಲೂ ಎಚ್ಚರಿಕೆಯಿಂದಿರಿ. ಮಾನಸಿಕ ಚಿಂತೆ ತಾ|| ೧೭, ೧೮ ಮಿತ್ರರಿಂದ ಸಹಾಯ, ಶಾಂತಿ

ವೃಶ್ಚಿಕ ...ಆರೋಗ್ಯ ಕೆಡುವ ಸಂಭವವಿದೆ. ಆರ್ಥಿಕ ತೊಂದರೆ, ವ್ಯಾಪಾರಾದಿಗಳಲ್ಲಿ ತೊಂದರೆ ಸಂಭವಿಸಿ, ಮನಸ್ಸಿಗೆ ಚಿಂತೆ ಸಂಭವಿಸುವುದು. ಶುಭಕಾರ್ಯ ಮತ್ತು ಪ್ರವಾಸದಲ್ಲಿ ವಿಘ್ನ. ತಾ|| ೧೩ ಮಿತ್ರರಿಂದ ವಿಶ್ವಾಸಘಾತ, ಅಪಮಾನ.

ಧನುಸ್ಸು ...ಈ ವಾರ ಯೋಚಿಸಿದ ಕೆಲಸದಲ್ಲಿ ಸಿದ್ಧಿ. ವ್ಯವಹಾರದಲ್ಲಿ ಜಯ. ಪ್ರವಾಸ ನಿರ್ವಿಘ್ನವಾಗಿ ನೆರವೇರುವುದು. ಸತ್ಪುರುಷರ ಸಹವಾಸ, ಸಾಂಪತ್ತಿಕ ಸ್ಥಿತಿ ಉತ್ತಮ ಮಹತ್ವದ ಪತ್ರಾಗಮನ ತಾ|| ೧೪, ೧೫ ಖರ್ಚು ಮತ್ತು ವಿಶ್ರಾಂತಿ

ಮಕರ....ನೌಕರಿಯಲ್ಲಿ ವರಿಷ್ಠರಿಂದ ಅಪಮಾನವಾಗುವ ಸಂಭವವಿದೆ. ಆರ್ಥಿಕ ಸ್ಥಿತಿ ಸಾಧಾರಣವಾಗಿದೆ. ವ್ಯಾಪಾರದಲ್ಲಿ ನಷ್ಟ. ಪ್ರವಾಸದಲ್ಲಿ ವಿಘ್ನ. ತಾ|| ೧೩, ೧೭ ಮಾನಸಿಕ ಚಿಂತೆ.

ಕುಂಭ — ಮಾನಸಿಕ ಅವ್ಯವಸ್ಥೆಯಿಂದ ವ್ಯಾಪಾರ, ಉದ್ಯೋಗಾದಿಗಳಲ್ಲಿ ಹಾನಿ, ಕಲಹದಿಂದ ಮಾನಸಿಕ ಚಿಂತೆ. ತಾ|| ೧೫ ೧೭ ಎದೆ ನೋವು, ಸಂತೋಷ.

ಮೀನ - ಆರೋಗ್ಯ, ಆರ್ಥಿಕ ಸ್ಥಿತಿಗಳು ಉತ್ತಮವಿದ್ದರೂ ಮನಶ್ಶಾಂತಿಯಿಲ್ಲ. ವ್ಯಾಪಾರಾದಿಗಳಲ್ಲಿ ಹಾನಿ, ಶತ್ರು ಪೀಡೆ. ತಾ|| ೧೩ ಖರ್ಚು ಹೆಚ್ಚು.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಬಲಹೀನತೆ, ಮಲಬದ್ಧತೆ, ವೀರ್ಯನಷ್ಟ, ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ, 184 ಚೈನಾ ಬಜಾರು ರಸ್ತೆ, ಮದರಾಸು

ಏಜೆಂಟರು : ಅಶೋಕಾ ಫಾರ್ಮಸಿ ಹಳೇ ಮೈಸೂರು ಬ್ಯಾಂಕು ರಸ್ತೆ, ಮೈಸೂರು

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ [illegible] ಹೊಸದಾಗುವುದಲ್ಲದೆ ಅದರ ಬೆಳ್ಳನೆಯ ಬುರುಗು ರೋಮ ರಂಧ್ರಗಳನ್ನೆಲ್ಲ ಹೊಕ್ಕು ಮೈಮೂಗಲಿನ ಕೊಳಕನ್ನೆಲ್ಲಾ ತೆಗೆದುಹಾಕುವುದು. ಇದರ ಮೆತ್ತನೆಯ ಗುಣವೂ, ಸುಗಂಧವೂ ಚರ್ಮಕ್ಕೆ ಕಾಂತಿನೀಡುವುದು.

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೨] - ಮಂಗಳವಾರ ೧೪--೧೨--೪೩ [ಸಂಚಿಕೆ ೧೨೬

ಬಲ್ಗೇರಿಯಾದಲ್ಲಿ ನಾಜೀ ಸಿದ್ಧತೆ

ಇಂಡಿಯಾಕ್ಕೆ ಜಪಾನಿನ ಮುತ್ತಿಗೆ ಭಯವಿಲ್ಲ

ಮಿಲಿಟರಿ ಲಾರಿ ಹರಿದು ಮರಣ

ಮೈಸೂರು ೧೪

ನಿನ್ನೆ ಬೆಳಗ್ಗೆ ೧೧ ಗಂಟೆಯ ಸಮಯದಲ್ಲಿ ಅರಮನೆ ಪೂರ್ವ ಕೋಟೆ ಬಾಗಿಲು ಮುಂಭಾಗದ ರಸ್ತೆಯಲ್ಲಿ ಮಿಲಿಟರಿ ಲಾರಿಯೊಂದು ಮೈಸೂರು ಅಶೋಕ ಪಾಜಮಂಗಲದ ೩೦ ವರ್ಷದ ಸಿದ್ದಯ್ಯ ಎಂಬುವನ ಮೇಲೆ ಹರಿದು ಕೂಡಲೆ ಅತನು ಮೃತನಾದನು

ನಗರದ ಆಹಾರ ಸಮ್ಮೇಳನ

ಈ ಸಭೆಯು ಶ್ರೀ ಎಸ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳು ೧೫ ನೆಯ ತಾರೀಖು ಬುಧವಾರ ಮಧ್ಯಾಹ್ನ ಮೂರು ಗಂಟೆಗೆ ಟೌನ್‌ಹಾಲಿನಲ್ಲಿ ನಡೆಯಲಿದೆ. ಶ್ರೀ ಎ. ಜಿ. ಬಂದೀಗೌಡರ, ಸಮಾರಂಭದ ಪ್ರಾರಂಭೋತ್ಸವ ನೆರವೇರಿಸುತ್ತಾರೆ ಸರ್ವರೂ ದಯಮಾಡಿ ಸಹಕರಿಸಬೇಕಾಗಿ ಕೋರಲಾಗಿದೆ.

ಸಂಗೀತ

ಮೈಸೂರು ಕುರುಡರ ಮತ್ತು ಮೂಕರ ಪಾಠಶಾಲೆಯಲ್ಲಿ ನಿನ್ನೆ ಭಾನುವಾರ ಕುರುಡ ವಿದ್ಯಾರ್ಥಿಗಳಿಗೆ ವಿದ್ವಾಂಸ ಬಿ. ಕೇಶವ ಮೂರ್ತಿಗಳು ಸುಶ್ರಾವ್ಯವಾದ ಪಿಟೀಲು ವಾದನದಿಂದ ಸಂಗೀತ [illegible]ವನ್ನು ಒದಗಿಸಿದರು. ಶ್ರೀಮಾನ್ ಎಫ್. ಸಿ. ದೇವರಾಜ ಅರಸಿನವರು ಉಪನ್ಯಾಸವನ್ನು ಮಾಡಿದುದಲ್ಲದೆ, ವಿದ್ಯಾರ್ಥಿಗಳಿಗೆ ತಿಂಡಿಯನ್ನು ಹಂಚಲು ೧೦ ರೂ ಉದಾರ ದಾನ ಮಾಡಿದರು ಸಾಹುಕಾರ್ ಎಂ. ಕೆ. ಮಾದವರಾವ್ ಪವಾರ್‌ರವರೂ ಸಹ ೧೦ ರೂ ಹಾಸ್ಟಲಿಗಾಗಿ ದಾನಮಾಡಿದರು.

ಸತ್ಕಾರ ಕೂಟ

ರಾಜಧಾನಿಯ ಸುಪ್ರಸಿದ್ಧ ವರ್ತಕರಾದ ಶ್ರೀ ಕೆ. ಚಾಮುಂಡಯ್ಯನವರು ಮೊನ್ನೆ ದಿನ ಸಂಜೆ ಕಾಂಗ್ರೆಸ್ ಕಚೇರಿಯಲ್ಲಿ ಮೊನ್ನೆ ತಾನೆ ಬಿಡುಗಡೆಯಾಗಿ ಬಂದ ಶ್ರೀಗಳಾದ ಎಸ್. ಚನ್ನಯ್ಯ, ಎಸ್. ರಂಗರಾಮಯ್ಯ, ಆಗರಂ ರಂಗಯ್ಯ, ಎಂ. ಎನ್. ಜೋಯಿಸ್ ರವರ ಗೌರವಾರ್ಥವಾಗಿ ಕಾಂಗ್ರೆಸ್ ಅನುಯಾಯಿಗಳನ್ನೂ ಇಷ್ಟ ಮಿತ್ರರನ್ನೂ ಬರಮಾಡಿಕೊಂಡು ಸತ್ಕರಿಸಿದರು ಅಧಿಕಾರಿಗಳು ಸಮಯೋಚಿತ ಭಾಷಣ ಮಾಡಿದರು

ಬಲ್ಗೇರಿಯಾದಲ್ಲಿ ನಾಜಿ ಸಿದ್ಧತೆ

ಬಲ್ಗೇರಿಯಾಕ್ಕೆ ಜರ್ಮನಿಯು ಅನೇಕ ಫೈಟರ್ ವಿಮಾನಗಳನ್ನು ಕಳುಹಿಸಿದೆಯೆಂದೂ, ಬಲ್ಗೇರಿಯಾ ರಾಜಧಾನಿಯಾದ ಸೋಫಿಯಾ ಹತ್ತಿರ ಅನೇಕ ವಿಮಾನ ನಿಲ್ದಾಣಗಳನ್ನು ನಾಜಿಗಳು ಕಟ್ಟಿರುವರೆಂದೂ ಅಂಕಾರಾದಿಂದ ವರದಿಯಾಗಿದೆ.

ಸೋಫಿಯಾದ ಮೇಲೆ ಪುನಃ ಮಿತ್ರ ವಿಮಾನ ಧಾಳಿ ಆಯಿತೆಂದು ಹೇಳಲಾಗಿದೆ

ಬರ್ಮಾಕ್ಕೆ ಜಪಾನಿ ಸಲಹೆಗಾರರು

ಜಪಾನಿನ ವಶದಲ್ಲಿರುವ ಬರ್ಮಾ ಸರ್ಕಾರಕ್ಕೆ ಪ್ರಧಾನ ಸಲಹೆಗಾರರಾಗಿ [illegible] ಎಂಬುವರನ್ನು ಜಪಾನ್ ಸರ್ಕಾರವು ನೇಮಿಸಿದೆಯೆಂದು ವರದಿಯಾಗಿದೆ ಬರ್ಮಾ ಸ್ವಾತಂತ್ರ್ಯವನ್ನು ಅಂಗೀಕರಿಸಿರುವುದಾಗಿಯೂ ಮತ್ತು ಈ ಸರ್ಕಾರಕ್ಕೆ ಯಾವ ಜಪಾನಿ ಅಧಿಕಾರಿಯನ್ನು ಹೊಂದಿಸಿಲ್ಲವೆಂದೂ ಹೇಳಿಕೊಟ್ಟ ಘೋಷಣೆಗೆ ಇದು ವಿರುದ್ಧವಾಗಿದೆ.

ಬಂಗಾಳ ಪರಿಹಾರ ನಿಧಿಗೆ ಸಹಾಯ

ಸ್ವಂ ಸು.] ಬೆಂಗಳೂರು ೧೩

ಬೆಂಗಳೂರು ಜಿಲ್ಲಾ ಬೋರ್ಡ್ ಸಭೆಯವರು ಬಂಗಾಳಾ ಕ್ಷಾಮ ನಿವಾರಣೆ ನಿಧಿಗೆ ೧ ಸಾವಿರ ರೂ ಗಳ ದ್ರವ್ಯ ಸಹಾಯ ಮಾಡಬೇಕೆಂದು ತೀರ್ಮಾನಿಸಿರುವರು. ಇದಲ್ಲದೆ ಮಾಗಡಿಯಲ್ಲಿ ಸ್ಥಾಪಿಸಲಾಗುವ ಹೈಸ್ಕೂಲಿಗೆ ೧ ಸಾವಿರ ರೂ ಮತ್ತು ಆಯುರ್ವೇದ ಸಮ್ಮೇಳನಕ್ಕೆ ೧೦೦ ರೂ. ಕೊಡಲಾಯಿತು.

ಗಾಯನ ಸಮಾಜಕ್ಕೆ

ಧರ್ಮ ಪ್ರಕಾಶ ರಾವ್ ಬಹದ್ದೂರ್ ಸಜ್ಜನರಾಯರ ಮೊಮ್ಮಕ್ಕಳಾದ ಶ್ರೀ ರಾಮಕೃಷ್ಣ ರಾಯರವರು ಬೆಂಗಳೂರು ಗಾಯನ ಸಮಾಜದ ಕಟ್ಟಡದ ಸಹಾಯಾರ್ಥವಾಗಿ ೨೦೦೧ ರೂ ಗಳ ಉದಾರ ದಾನ ಮಾಡಿದ್ದಾರೆ

ಪತ್ರಿಕೋದ್ಯೋಗ ಡಿಪ್ಲೊಮ

ಮೈಸೂರು ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯೋಗದ ವ್ಯಾಸಂಗವನ್ನೇರ್ಪಡಿಸುವ ಸಲುವಾಗಿ ಸಿಲಬಸ್ ತಯಾರಿಸಲು ಶ್ರೀಗಳಾದ ಪಿಹೆಚ್. ಶ್ರೀಕಂಠಯ್ಯ, ಬಿ. ಪುಟ್ಟಯ್ಯ, ಡಿ. ವಿ. ಗುಂಡಪ್ಪ ಮತ್ತು ಬಿ. ಎಂ. ಶ್ರೀಕಂಠಯ್ಯ ಇವರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಗಿದೆ

ಜಪಾನ್ ಮೇಲೆ ಧಾಳಿ ನಡೆಸಲು ಸಿದ್ಧತೆ

ಇಂಡಿಯಾ ಪ್ರಧಾನ ದಳಪತಿಯಾದ ಜನರಲ್ ಸರ್ ಕ್ಲಾಡ್ ಅಚಿನ್‌ಲೆಕ್ ರವರು ತಮ್ಮ ಕ್ರಿಸ್‌ಮಸ್ ಭಾಷಣದಲ್ಲಿ "ಭಾರತದ ಗಡಿಯಲ್ಲೆಲ್ಲಾ ನಮ್ಮ ಸ್ಥಾನಗಳನ್ನು ಬಲಪಡಿಸಿಕೊಂಡು, ಮುತ್ತಿಗೆಗೆ ಆರಂಭಿಸಲು ತಕ್ಕ ಸಿದ್ಧತೆ ನಡೆಸುತ್ತಿದ್ದೇವೆ" ಎಂದು ತಿಳಿಸಿದ್ದಾರೆ. ಕ್ಷಾಮ, ಪ್ರವಾಹ ಮತ್ತು ಇತರ ತೊಂದರೆಗಳಿಂದ ಕಷ್ಟಪಟ್ಟರೂ, ಅದನ್ನು ಲೆಕ್ಕಿಸದೆ, ನಾವು ಮುಂದುವರಿಯುತ್ತಿದ್ದೇವೆ ದೇಶದ ಅನೇಕ ಭಾಗಗಳಲ್ಲಿ ವಿಮಾನ ನಿಲ್ದಾಣಗಳನ್ನು ರಚಿಸಲಾಗಿದೆ ಜಪಾನಿನ ಮೇಲೆ ಮುತ್ತಿಗೆ ಆರಂಭಿಸಲು, ಇಂಡಿಯಾ ದೇಶವೇ ಒಂದು ಮುಖ್ಯ ಕೇಂದ್ರವಾಗಿ ಪರಿಗಣಿಸಲಾಗಿದೆ ಜಪಾನ್ ಇಂಡಿಯಾ ದೇಶವನ್ನು ಮುತ್ತಲು ಅವರಿಗೆ ಶಕ್ತಿ ಇಲ್ಲ ಅವರು ಅನೇಕ ದಾಳಿಗಳನ್ನು ನಡೆಸಿ ನಷ್ಟವುಂಟುಮಾಡಬಹುದು. ಆದರೆ ನಾವು ಅದನ್ನು ಎದುರಿಸಲು ಸಿದ್ಧರಾಗಿದ್ದೇವೆ ಎಂದು ತಿಳಿಸಿದ್ದಾರೆ

ಪೌರಸಭಾ ಚುನಾವಣೆ ಕ್ರಮಬದ್ಧವಾಗಿಲ್ಲ

ಸ್ವಂ. ಸು] ಮಂಡ್ಯ ೧೩

ಮಂಡ್ಯದಲ್ಲಿ ಕಳೆದ ೨೮ ನೇ ತಾ॥ ನಡೆದ ಪೌರಸಭಾ ಚುನಾವಣೆಯು ಕ್ರಮಬದ್ಧವಾಗಿಲ್ಲವೆಂದೂ, ಆದ್ದರಿಂದ ಪುನಃ ಚುನಾವಣೆ ನಡೆಯಬೇಕೆಂದೂ ಮೈಸೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಶ್ರೀಗಳಾದ ಬಿ. ಎಂ. ಕೃಷ್ಣಸ್ವಾಮಿ, ಜಿ. ವೆಂಕಟಕೃಷ್ಣಯ್ಯ, ಎನ್. ರಾಘವೇಂದ್ರರಾವ್, ಬಿ. ಕೇಶವ ಅಲ್ ಮುಂತಾದ ಹತ್ತು ಜನಗಳು ಅರ್ಜಿ ಸಲ್ಲಿಸಿರುತ್ತಾರೆ ಈ ಬಗ್ಗೆ ಸರ್ಕಾರದವರಿಂದ ಬಂದಿದ್ದ ಹೆಸರನ್ನು ಪೌರಸಭಾಧ್ಯಕ್ಷರು ತಪ್ಪಾಗಿ ಗ್ರಹಿಸಿದ್ದರೆಂದೂ, ಅಧ್ಯಕ್ಷರು ಆ ತಪ್ಪು ಅಭಿಪ್ರಾಯದ ಮೇಲೆ ಪೌರಸಭೆಯ ಸದಸ್ಯರಲ್ಲಿ ಆಯೋಜಿಸದೆ ಮುನಿಸಿಪಲ್ ಓಟರ್ಸ್ ಪಟ್ಟಿಯಲ್ಲಿದ್ದ [illegible] ಜನ ಎಂಡಸ್ ಓಟುದಾರರ ಹೆಸರನ್ನು ಚುನಾವಣೆಗೆ ಮುಂಚೆಯೇ ಹೊಡೆದು ಹಾಕಿದ್ದರಿಂದಲೂ ಕೆಲವು ಸಂಸ್ಥೆಗಳಿಗೆ ಕೊಟ್ಟಿದ್ದ ಓಟುಗಳನ್ನು ಕಿತ್ತು ಹಾಕಿದರೆಂತಲೂ ಕೆಟ್ಟು ಹೋಗಿರುವ ಓಟುಗಳನ್ನು ಪುನಃ ಎಣಿಸಬೇಕೆಂದೂ ಅರ್ಜಿಯಲ್ಲಿ ನಮೂದಿಸಿದೆ ಅರ್ಜಿಯು ಜನವರಿ ೨೮ಕ್ಕೆ ಎದುರು ಪಕ್ಷದವರಿಗೆ ನೋಟೀಸಿಗಿದೆ

ಇಟಲಿ ಅಪಮಾನ ಅಳಿಸಲಾಗುವುದು

ಬರ್ಲಿನ್ ತ್ರಿರಾಷ್ಟ್ರ ಒಪ್ಪಂದದ ವಾರ್ಷಿಕೋತ್ಸವದ ಸಮಯದಲ್ಲಿ ಭಾಷಣ ಮಾಡುತ್ತಾ ಮುಸೋಲಿನಿಯವರು ಇಟಾಲಿಯನ್ ರಿಪಬ್ಲಿಕ್ ಸೈನ್ಯಗಳು ತಮ್ಮ ರಕ್ತವನ್ನು ಚೆಲ್ಲಿ ಇಟಲಿಯು ಶರಣಾಗತಿಯ ಅಪಮಾನವನ್ನು ಅಳಿಸುವುದಾಗಿ ತಿಳಿಸಿರುವರು

ರೋಂ ನಗರಕ್ಕೆ ಗಂಡಾಂತರ

ಇಟಲಿ ರಣಕ್ಷೇತ್ರದಲ್ಲಿ ಮಿತ್ರರು ಅತಿ ಭೀಕರ ಧಾಳಿ ಪ್ರಾರಂಭಿಸಿ ಮಾಂಟೆನ್ ಮಾರ್ಕನ್ ಕಡೆ ನುಗ್ಗುತ್ತಿರುವುದು ರೋಂ ನಗರಕ್ಕೆ ಗಂಡಾಂತರ ಒದಗಿದೆಯೆಂದು ಜರ್ಮನ್ ವರದಿಗಳು ತಿಳಿಸುವುದೇನೆಂದರೆ [illegible] ಮಿತ್ರರು ಈ ಕ್ಷೇತ್ರದಲ್ಲಿ ಕೇಂದ್ರಿಸಿರುವ ಸೈನಿಕರು ಅತಿ ಅಗಾಧವಾದವೆಂದೂ, ಆದ್ದರಿಂದ ರೋಂ ನಗರದ ಅತಿ ದೊಡ್ಡ ಕದನ ಆರಂಭವಾಗಿದೆಯೆಂದು ಹೇಳಲಾಗಿದೆ

ಅಮೆರಿಕಯವರು ಹೋಗಬೇಕು

ಮಿ॥ ಎಲ್. ಎಸ್. [illegible] ಇಂಡಿಯಾ ಸ್ಟೇಟ್ ಸೆಕ್ರೆಟರಿ [illegible] [illegible] ಹೋಗಬೇಕೆಂದು [illegible] ಬಗ್ಗೆ ಬ್ರಿಟಿಷ್ ಸರ್ಕಾರವು ತನ್ನ [illegible] ಸಂಪೂರ್ಣವಾಗಿ [illegible] ಇದು ಮೊದಲನೆಯ ಹಂತವಾಗಬೇಕೆಂದೂ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಲಂಡನ್ನಿನ ಟ್ರೇಡ್ ಯೂನಿಯನ್ ಸಂಸ್ಥೆಯಾದ ಟ್ರಾನ್ಸ್‌ಪೋರ್ಟ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್ನಿನ ಎಕ್ಸಿಕ್ಯೂಟಿವ್ ಕಮಿಟಿಯ ಸರ್ವಾನುಮತದಿಂದ ಒಪ್ಪಿ [illegible] ಆ ಟ್ರೇಡ್ ಯೂನಿಯನ್ನಿನ ಠರಾವನ್ನು ಬ್ರಿಟಿಷ್ ಮಂತ್ರಿಗೆ ಕಳುಹಿಸಿದೆ

ಬಂಗಾಳದ ಮರಣಗಳು

ಕಲ್ಕತ್ತಾ ಪೌರಸಭಾ ಅಧ್ಯಕ್ಷರಾದ ಮಿ॥ ಸಯ್ಯದ್ ಬದ್ರುದ್ದೋಜಾರವರು ಒಂದು ಹೇಳಿಕೆ ಹೊರಡಿಸಿ ಬಂಗಾಳದ ವಿವಿಧ ಹಳ್ಳಿಗಳಲ್ಲಿ ಉಂಟಾಗುತ್ತಿರುವ ಸಾವಿರಾರು ಜನರ ಘೋರ ಮರಣವನ್ನು ವಿವರಿಸಿ ಸರ್ಕಾರದವರು ಕೂಡಲೇ ತಕ್ಕ ಪರಿಹಾರವನ್ನು ಮಾಡಬೇಕೆಂದು ತಿಳಿಸಿದ್ದಾರೆ ಮಿಡ್ನಾಪುರ್ ಜಿಲ್ಲೆಯ ಕಾಂತಿ ಸಬ್ ಡಿವಿಜನ್ನಿನಲ್ಲಿ ಒಟ್ಟು ನಾಲ್ಕು ಲಕ್ಷ ಜನ ಸಂಖ್ಯೆಯಲ್ಲಿ ೫೦,೦೦೦ ಜನರು ಮಲೇರಿಯಾ, ಕಾಲರಾ ಮತ್ತು ಇತರ ರೋಗಗಳಿಂದ ಮಡಿದಿದ್ದಾರೆ ಸಿಲ್ಹೆಟ್ ಜಿಲ್ಲೆಯಲ್ಲೂ ಸಹ ೫೦,೦೦೦ ಜನರು ಮರಣ ಹೊಂದಿರುವರು ಚಿತ್ತಗಾಂಗ್ ಜಿಲ್ಲೆಯ [illegible] ೬೦,೦೦೦ ಪ್ರಜಾ ಸಂಖ್ಯೆಯು [illegible],೦೦೦ ಜನರು ಸತ್ತಿದ್ದಾರೆ [illegible] ಹೀಗೇ ಇದೆಯೆಂದು ಅವರು ತಿಳಿಸಿದ್ದಾರೆ.

ಪೋಲೀಸರು ಗುಂಡು ಹಾರಿಸಿದರು

ಸಂಯುಕ್ತ ಪ್ರಾಂತದ ಬಸ್ತಿ ಜಿಲ್ಲೆಯ ಗ್ರಾಮವೊಂದರಲ್ಲಿ ರೋಮಾಂಚನಕಾರಿ ವ್ಯಾಜ್ಯ ನಡೆದು ಒಟ್ಟು ಮಡಿದ ೧೨ ಜನರಿಗೆ ಗಾಯವಾಗಿ ಅನೇಕ ಮನೆಗಳು ನೆಲಸಮವಾದವು ಪೋಲೀಸರು ಗಲಭೆಯನ್ನು ನಿಲ್ಲಿಸಲು ಗುಂಡು ಹಾರಿಸಬೇಕಾಯಿತು. ಇದರಿಂದ ೫ ಜನರು ಸತ್ತರು

ತುರ್ಕಿ ಸ್ವಾತಂತ್ರ್ಯವನ್ನು ಕಾಪಾಡಬೇಕು

ತುರ್ಕಿಯ ಸ್ವಾತಂತ್ರ್ಯವನ್ನು ಕಾಪಾಡಲು ನಮ್ಮ ರಕ್ತವನ್ನು ಚೆಲ್ಲಲು ಸಿದ್ಧರಾಗಿರಬೇಕೆಂದು ತುರ್ಕಿ ಪ್ರಧಾನಿಯವರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ತುರ್ಕಿಯು ತನ್ನ ಅಪಾಯ [illegible] [illegible] ತುರ್ಕಿ [illegible] [illegible] ತತ್ವಕ್ಕೆ ವಿರೋಧವಾಗಿ [illegible] ಮೇಲೆ ಬಗ್ಗ [illegible] ತಗಿದುಕೊಳ್ಳಬೇಕೆಂದು ತಿಳಿಸಿದ್ದಾರೆ

ಜಪಾನ್ ಮೇಲೆ ದಂಡ ಯಾತ್ರೆಗೆ ಬಂಗಾಳ ನೆಲೆ

ಜಪಾನಿನ ಮೇಲೆ ದಂಡಯಾತ್ರೆ [illegible] ಬಂಗಾಳವೇ ನೆಲೆಯಾಗುವುದು [illegible] [illegible] [illegible] [illegible] ಕೇಂದ್ರ [illegible] ತಿಳಿಸಿದ್ದಾರೆ

ಕಾಂ|| ಅಧ್ಯಕ್ಷರಿಗೆ ಆ ಸಚಿವರು ಪತ್ರ ಬರೆದದ್ದು ನಿಜ

ಸ್ಪೇಸು] ಬೆಂಗಳೂರು ೧೩

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಒಂದು ಹೇಳಿಕೆ ಹೊರಡಿಸಿ ಹೇಳುವುದೇನೆಂದರೆ :—

ನ್ಯಾಯವಿಧಾಯಕ ಸಭೆಯಲ್ಲಿ ಸರಕಾರದವರು ೧೯೪೨ ನೇ ಆಗಸ್ಟ್ ಮೊದಲನೇ ವಾರದಲ್ಲಿ ಆಗಿನ ನ್ಯಾಯ ಸಚಿವರು ನನಗೆ ಯಾವ ಕಾಗದವನ್ನೂ ಬರೆಯಲಿಲ್ಲವೆಂದೂ, ಬೊಂಬಾಯಿಯಿಂದ ನಾನು ವಾಪಸು ಬಂದಮೇಲೆ ರಾಜಕೀಯ ವಿಷಯಗಳನ್ನು ಚರ್ಚಿಸಬಹುದೆಂಬುದಾಗಿ ನನಗೆ ಸಲಹೆ ಕೊಟ್ಟಿರಲಿಲ್ಲವೆಂದೂ ತಿಳಿಸಿದ್ದಾರೆ. ೧೯೪೨ ನೇ ಆಗಸ್ಟ್‌ನಲ್ಲಿ ಬೊಂಬಾಯಿಗೆ ಹೋಗುವ ಮೊದಲು ಆಗಿನ ನ್ಯಾಯ ಸಚಿವರು ನನಗೆ ಒಂದು ಕಾಗದವನ್ನು ಸ್ವಹಸ್ತದಲ್ಲಿ ಬರೆದು, ನನ್ನನ್ನು ಬರಮಾಡಿಕೊಂಡು ನನ್ನ ಸಂಗಡ ಕೆಲವು ರಾಜಕೀಯ ಸಮಸ್ಯೆಗಳ ತೊಡಕನ್ನು ಬಿಡಿಸುವ ವಿಷಯವನ್ನು ಚರ್ಚಿಸಿ ಬೊಂಬಾಯಿನಿಂದ ನಾನು ವಾಪಸು ಬಂದಮೇಲೆ ದಿವಾನರನ್ನು ನನ್ನನ್ನು ಕಳಿಸಿಕೊಂಡು ಮಾತನಾಡುವರೆಂದು ತಿಳಿಸಿದರು. ಆ ಕಾಗದದ ತಾರೀಖು ೨೮-೭-೪೨. ಅದನ್ನು ಸೂಕ್ತವಾದ ಕಾಲದಲ್ಲಿ ಪ್ರಕಟಿಸುವೆನು. ನಾನು ಬೊಂಬಾಯಿನಿಂದ ಬಂದಮೇಲೆ ಪ್ರಜಾ ರಾಜಕೀಯ ವಿಷಯಗಳನ್ನು ಚರ್ಚಿಸೋಣವೆಂದು ಸಲಹೆ ಕೊಡಲಿಲ್ಲವೆಂಬ ಉತ್ತರದಿಂದ ಆ ಸಚಿವರ ಕಾಗದ ಬರೆದಿದ್ದುದು ಆಗ ಸ್ಪಷ್ಟ ನೋಟಕ್ಕೆ ಬರಲಿಲ್ಲವಾದ್ದರಿಂದ ಬಹುಶಃ ಸರ್ಕಾರದವರು ಆ ರೀತಿ ಉತ್ತರ ಕೊಟ್ಟಿರಬಹುದಲ್ಲದೆ ಸಿಬ್ಬಂದಿಯನ್ನು ಮರೆಮಾಚುವುದಕ್ಕೆ ಅಲ್ಲವೆಂಬ ಆಶಯ ವ್ಯಕ್ತವಾಯಿತು. ಯಾವ ಅಂಶವನ್ನು ಸಾರ್ವಜನಿಕರ ಗಮನಕ್ಕೆ ತರಬೇಕು ಎನ್ನುವ ಪಕ್ಷ ಅವನ್ನು ಮರೆಮಾಚಲು ಮಾಡಿರುವ ಸರ್ಕಾರದ ಈ ಯತ್ನವು ಸತ್ಯದ್ರೋಹವಾಗಿದೆ. ಸರ್ಕಾರದ ಈ ವರ್ತನೆ ನನ್ನ ಮನಸ್ಸಿಗೆ ಬಹಳ ಬೇಸರವನ್ನುಂಟುಮಾಡಿದೆ. ನಡೆದುದನ್ನು ಒಪ್ಪಿಕೊಂಡು ಮುಂದುವರಿದರೆ ಎಲ್ಲರಿಗೂ ಕ್ಷೇಮ.

ನರ್ವ ಸ್ಟ್ರಿಕ್ಸ್

ನರಗಳ ಶಕ್ತಿಗೆ ವೀರ್ಯವೃದ್ಧಿಗೆ

ಉಪಯೋಗಿಸುವ ವಿಧಾನ.—

ಮಲಗುವ ವೇಳೆ ಹಾಲು ಅಥವಾ ಒಂದು ಬಟ್ಟಲು ಹಾಲಿನೊಡನೆ.

ದೊಡ್ಡ ಬಾಟಲ್ ರೂ. 2-4-0 ಮಾತ್ರ
ಸಣ್ಣ ಬಾಟಲ್ ರೂ 1-4-0 ,,

ಪ್ಯಾಕಿಂಗ್ ಮತ್ತು ಪಾರ್ಸಲ್ ಚಾರ್ಜು ಪ್ರತ್ಯೇಕ

ಈ ನಮ್ಮ ಔಷಧಕ್ಕೆ ದವಾಖಾನೆ ನಮ್ಮ ಪ್ರಕಟಣದಲ್ಲಿ ಮೊದಲು ನೋಡಬಹುದು.

ವಿಳಾಸ —

ಕೆ. ಇ. ಐ. ಪ್ರೊಪ್ರೈಟರ್
ಸಿಟಿ ಮೈಸೂರು, ಪ್ಯಾಲೇಸ್ ರಸ್ತೆ,
ಮೈಸೂರು

Printed, published and edited by A. R. Nagaraja, at the Sadhvi Press, D. Subbiah Road, Mysore.

ಪತ್ರ ವ್ಯವಹಾರ

ರೇಷನ್ ಕಾರ್ಡಿನ ಹಂಚಿಕೆ

ರಾಜಧಾನಿಯಲ್ಲಿ ಈ ಮಾಹೆ ೨೦ ನೇ ತಾ|| ನಿಂದ ಜಾರಿಗೆ ಬರಲಿರುವ ರೇಷನ್ ಸಂಬಂಧವಾಗಿ ನಿನ್ನೆಯಿಂದ ಆಯಾ ಮನೆಗಳಿಗೆ ಪರಿಶೀಲನಾ ಚೀಟಿಗಳು ಹಂಚಿಕೆಯಾಗುತ್ತಿವೆ. ಆ ಕಾರ್ಡುಗಳಲ್ಲಿರುವ ವಿವರಗಳ ಅವ್ಯವಸ್ಥೆಯನ್ನು ಎಷ್ಟು ವರ್ಣಿಸಿದರೂ ಕೇವಲ ಕಮ್ಮಿಯೇ ಆಗಿದೆ.

೧ ನಮ್ಮ ನಗರದ ಪೌರರು ನೂರಕ್ಕೆ ತೊಂಬತ್ತು ಕನ್ನಡಿಗರೇ ಆಗಿದ್ದಾರೆ. ಕಾರ್ಡಿನಲ್ಲಿ ಶಿರೋನಾಮೆಗಳು ಮಾತ್ರ ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿವೆಯೇ ಹೊರತು ಉಳಿದ ಮುಖ್ಯ ವಿವರಗಳೆಲ್ಲಾ ಇಂಗ್ಲೀಷಿನಲ್ಲೇ ಇವೆ. ಅದು ಜನಸಾಮಾನ್ಯರಿಗೆ ಅರ್ಥವಾಗುವ ಕನ್ನಡದಲ್ಲಿಯೇ ಇರಬೇಕಾಗಿತ್ತು.

೨ ಬ್ಲಾಕ್ ಇನ್ಸ್‌ಪೆಕ್ಟರ ಮುಂದೆ ಒಂದು, ಎರಡು ಎಂಬ ಸಂಖ್ಯೆ ಗುರುತಿಸಿದೆಯೇ ಹೊರತು 'ರಿಜಿಸ್ಟರ್ಡ್ ಟ್ರೇಡರ್' ನ ಹೆಸರು ಮುಂದೆ ಯಾವ ಅಂಗಡಿಯಲ್ಲಿ ತೆಗೆದುಕೊಳ್ಳಬೇಕೆಂಬುದನ್ನೇ ನಮೂದಿಸಿಲ್ಲ.

೩ ರೇಷನ್ ಪದಾರ್ಥಗಳ ಕೆಳಗಿನ ರೂಲಿನಲ್ಲಿ ಎಂ ಎಂಬ ಅಕ್ಷರಗಳ 2½, 10½ ಮುಂತಾಗಿ ಸಂಖ್ಯೆಗಳಿವೆ. ಇದರಿಂದ ಸಂಖ್ಯೆಗಳು ಸೇರು, ಪಾವು, ವೀಸೆಯೇ ಅಥವಾ ಮಣವೇ ಎಂಬುದು ಅರ್ಥವಾಗುವುದಿಲ್ಲ.

೪ ಹಾಗೆ ರೇಷನಿನಂತೆ ನಾಲ್ಕು ವಾರಕ್ಕೆ ಮಾತ್ರ ಟಿಕ್ಕು ಹಾಕಿ ತೋರಿಸಿದ್ದಾರೆ. ಈ ಕಾರ್ಡಿನಂತೆ ಆದರೆ ಡಿಸೆಂಬರ್ ಬಾರದೇ ಇದ್ದ ಮರುಹದ ಫೆಬ್ರವರಿ ತಿಂಗಳಿಗೆ ಮಾತ್ರ ಸಾಕು. ೩೦ ಮತ್ತು ೩೧ ತಾ|| ಗಳು ಬರುವ ತಿಂಗಳಲ್ಲಿ ರೇಷನ್ ಇಲ್ಲದೆ ಉಳಿದ ಎರಡು ಮೂರು ದಿನಗಳು ಜನರೆಲ್ಲ ನಿರಾಹಾರ ನಿರ್ಜಲ ವ್ರತ ಮಾಡೇ ಇರಬೇಕೆ ?

೫ ಕಾರ್ಡಿನ ಹಿಂಭಾಗದಲ್ಲಿ ವಾಸ್ತವ ಬಗ್ಗೆ ವಿವರಗಳನ್ನು ಬರೆದಿರುವುದರಲ್ಲಿಯೂ ಸಹ ಅನೇಕ ನ್ಯೂನತೆಗಳಿವೆ. ೫ ಗಲ್ಲಗಳ ಬಾಲಂಸ ಮುಂದೆ ಬರೆಗೆರೆ ಎಳೆದಿದ್ದಾರೆ ಅದಕ್ಕೇನೂ ಅರ್ಥವಿಲ್ಲ. ನಿತ್ಯ ಕೀಪರನ್ನು ಕೊಡದು ಇಲ್ಲವೋ ಎಂದು ಬರೆದಿದ್ದಾರೆ ಅದಕ್ಕೆ ಸಹ ಇಲ್ಲ. ದಾಸ್ತಾನು ವಿವರಗಳನ್ನೂ ಯಾವ ತಿಂಗಳವರೆಗೆ ಎಷ್ಟನ್ನು ರೇಷನ್ ಕೊಡುವುದಿಲ್ಲವೆಂಬುದನ್ನು ವಿವರವಾಗಿ ಎಲ್ಲರಿಗೂ ತಿಳಿಯುವಂತೆ ಕನ್ನಡದಲ್ಲಿ ಬರೆದಿರಬೇಕಾಗಿತ್ತು.

೬ ಒಂದು ವೇಳೆ ಕೈಲಿ ಮಡಿಸಿದ್ದರೆ ಯೋ ಅಥವಾ ಡಿಪೋಗಳಲ್ಲಿ ವ್ಯಾಪಾರಿಗಳು ದೊರಕುವವರೋ ಹೋದಲ್ಲಿ ಪದಾರ್ಥ ರೇಷನ್ ಕೊಂಡಲು ಆಗದಿದ್ದರೆ ಯಾವ ರೀತಿಯಾಗಿ ಎಂಬುದೆಂದೂ ಇಲ್ಲವೇ ಇಲ್ಲ ಆದ್ದರಿಂದ ಬಹು ತೊಂದರೆಯಾಗುತ್ತದೆ.

೭ ಬರೀ ಗೆರೆ ಎಳೆದು ಬಿಟ್ಟಿರುವುದರಿಂದ ಏನೂ ತಿಳಿಯುವವರೇ ಗೆರೆಯೊಂದನ್ನು ಹಾಕಿಬಿಟ್ಟು ಆಹಾರಕ್ಕೆ ನೊಂದ ಸನ್ನಿವೇಶ ಬರುವುದು. ಇಂಥ ಸಂದರ್ಭಗಳಲ್ಲಿ ಅದನ್ನು ಅನ್ವಯಿಸದೆ ರೇಷನ್ ಕಾರ್ಡು ಹಸ್ತಾಂತರ ಬಹು ಜೋಪಾನವಾಗಬೇಕಾಗುವುದು.

೮ ರೇಷನ್ ನನ್ನಷ್ಟು ಆಯತು ಕಾರ್ಡುಗಳನ್ನು ಬರೆದಾಯಿತು. ಅದರ ಹಂಚಿಕೆಯಾದ ಬಳಿಕ ಅದರ ಡಿಪೋ

ಹಿಂದೂ-ಮುಸ್ಲಿಂ ಗಲಭೆ

ಸ್ವ ಸು] ಕೃಷ್ಣರಾಜನಹಳ್ಳಿ ೧೩

ಕೃಷ್ಣರಾಜನಹಳ್ಳಿಯಲ್ಲಿ ಶನಿವಾರ ರಾತ್ರಿ ಮುತ್ತುರಾಯದೇವರ ಉತ್ಸವ ಸಂಬಂಧದಲ್ಲಿ ಹಿಂದೂ-ಮುಸಲ್ಮಾನರ ಗಲಭೆಯೊಂದು ನಡೆಯಿತು. ಉತ್ಸವವು ಪೇಟೆ ಚೌಕಕ್ಕೆ ಬಂದಾಗ ಮಸೀದಿಗೆ ದೂರವಿರುವಾಗಲೇ ಕೆಲವು ಮುಸಲ್ಮಾನರು ಅದನ್ನು ತಡೆದು ವಾದ್ಯ ನಿಲ್ಲಿಸಬೇಕೆಂದು ಹೇಳಿದುದಕ್ಕೆ ಹಿಂದೂಗಳು ಮಾಮೂಲಿನಂತೆ ಮಸೀದಿಯ ಹತ್ತಿರ ಬಂದಾಗ ನಿಲ್ಲಿಸುತ್ತೇವೆ ಎಂದು ಹೇಳಲು, ಆಗ ಮಸೀದಿ ಅಂಗಡಿಗಳ ಕಡೆಯಿಂದ ಕಲ್ಲೂ ಇಟ್ಟಿಗೆಗಳೂ ಬೀಳಲಾರಂಭವಾಗಿ ಗಲಭೆ ನಡೆಯಿತು. ಹಿಂದೂಗಳು ರಥವನ್ನು ಅಲ್ಲೇ ಬಿಟ್ಟು ಓಡಿದರು. ಜೊತೆಯಲ್ಲಿದ್ದ ಪೋಲೀಸರಿಗೂ ಪೆಟ್ಟುಗಳು ಬಿದ್ದವು. ಬೀದಿಯಲ್ಲಿ ಬರುತ್ತಿದ್ದ ತಿಮ್ಮಯ್ಯ ಮತ್ತು ಸೋಮಶೇಖರಪ್ಪ ಎಂಬವರಿಗೆ ಮುಸಲ್ಮಾನರು ಚಾಕುವಿನಿಂದ ಇರಿದು ಗಾಯಗೊಳಿಸಿದರು. ಅವರನ್ನು ಕೂಡಲೇ ಆಸ್ಪತ್ರೆಗೆ ಸೇರಿಸಲಾಯಿತು.

ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಬಂದು ಗಲಭೆ ನಿಲ್ಲಿಸಿ, ಉತ್ಸವವನ್ನು ಮುಂದೆ ಸಾಗಿಸಿದರು. ರಿ|| ಪೋಲೀಸ್ ಕಾವಲನ್ನು ಈಗ ಇಡಲಾಗಿದೆ.

ನಾಜಿ ಗುಪ್ತ ಅಸ್ತ್ರ

ಲೆನಿನ್‌ಗ್ರಾಡ್ ಭಾಗದಲ್ಲಿ ಇತ್ತೀಚೆಗೆ ಜರ್ಮನರು ಒಂದು ಗುಪ್ತ ಹೊಸ ಅಸ್ತ್ರ ಉಪಯೋಗಿಸಿದರೆಂದು ಗೊತ್ತಾಗಿದೆ. ಅದರ ವಿವರಗಳು ಗೊತ್ತಾಗಿಲ್ಲವಾದರೂ, ಅದು ಒಂದು ರಾಕೆಟ್ ಸೆಲ್ ಬಂದೂಕವೆಂದು ಹೇಳಲಾಗಿದೆ.

ಗಳ ಮನಸ್ಸೆಯು ಮಾತ್ರ ಅಗಿಲ್ಲ ಕಾರ್ಡುಗಳಲ್ಲಿನ ಹೊಲಸು ಸಂಪಾದಿಸುವುದು ಯಾವಾಗ ? ಈ ಕಾರ್ಡಿನ ಹಂಚಿಕೆ ವಿಷಯ ಸಂಬಂಧವಾಗಿರುವುದಾದ ಲೋಪದೋಷಗಳನ್ನು ಮಾರ್ಪಡಿಸಿ ಎಷ್ಟು ಕಾಲದೊಳಗೆ ತಿಳಿಸಿ ಸರಿಪಡಿಸಿಕೊಳ್ಳಬೇಕೆಂಬ ಬಗ್ಗೆ ಮಹಾಜನರಿಗೆ ಯಾವ ಸೂಚನೆಯನ್ನೂ ಕೊಟ್ಟಿಲ್ಲ ಇಷ್ಟೇ ತಾ|| ನಿಂದಲೇ ರೇಷನ್ ಜಾರಿಗೆ ಬರುತ್ತಿಂದುವೂ ಸೂಚಿತವಾಗಿಲ್ಲ. ಇದರಿಂದ ಸಾರ್ವಜನಿಕರಿಗೆ ಅನಾವಶ್ಯಕವಾದ ಗಾಬರಿ, ಆತಂಕಗಳಿಗೆ ಕಾರಣವಾಗುತ್ತದೆ.

ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ನ್ಯೂನತೆಗಳನ್ನೆಲ್ಲಾ ತಕ್ಷಣ ಪರಿಹಾರವನ್ನು ಏರ್ಪಡಿಸಿ ನಂತರವೇ ರೇಷನ್ ಜಾರಿಗೆ ಕೊಡುವಂತೆ ನೋಡುವರೆಂದು ನಂಬಲಾಗಿದೆ.

ಪುರನಿವಾಸಿ.

ಆಹಾರ ಸಭೆ

ಒ ಬಾ] [ನಂಜನಗೂಡು ೧೩

ನಂಜನಗೂಡಿನ ಶ್ರೀ ಶಾರದ ಟಾಕೀಸ್ ಮಂದಿರದಲ್ಲಿ ಈದಿನ ಸಂಜೆ ಕಾಮ್ರೇಡ್ ಸೋಮಸುಂದರ ಶರ್ಮರವರ ಅಧ್ಯಕ್ಷತೆಯಲ್ಲಿ ಒಂದು ಆಹಾರ ಸಭೆ ನಡೆಯಿತು. ಯುವಕ ನಾಯಕರಾದ, ಶ್ರೀ ಎಂ. ನಾಗರಾಜರವರೂ, ಪ್ರೊಫೆಸರ್ ಉಮರ್ ಖಾನ್, ಶ್ರೀಮತಿ ಶಾರದಮ್ಮ ಮತ್ತು ಶ್ರೀ ರಾಮಾಚಾರ್ಯರೂ ಇಲ್ಲಿನ ಆಹಾರ ಪರಿಸ್ಥಿತಿ ವಿಷಯದ ಬಗ್ಗೆ ಮಾತಾಡಿದರು. ಅನಂತರ ಕಾಮ್ರೇಡ್ ಎಸ್. ನಂತನಾರಾಯಣರವರು ಹಿಂದೂದೇಶದ ಇತರ ಪ್ರಾಂತ್ಯಗಳಲ್ಲೂ ಸಂಸ್ಥಾನಗಳಲ್ಲೂ ಈ ಆಹಾರ ಸಮಸ್ಯೆಯನ್ನು ಪರಿಹರಿಸಲು ಜನರು ನಡೆಸುತ್ತಿರುವ ಪ್ರಯತ್ನವನ್ನು ವಿವರಿಸಿದರು. ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಬೆರೆತು, ಆಹಾರಕ್ಕಾಗಿ ಕೆಲಸಮಾಡಬೇಕು. ಆಹಾರವನ್ನು ಹೆಚ್ಚು ಹೆಚ್ಚು ಬೆಳೆಯಲು ಅನುಕೂಲ ಮಾಡಿಕೊಟ್ಟು, ಇರುವ ಆಹಾರವನ್ನು ಸರಿಯಾದ ಪ್ರಮಾಣದಲ್ಲಿ ಮತ್ತು ಶಾಂತರೀತಿಯಿಂದ ಹಂಚಲು ಸಹಾಯಮಾಡಬೇಕು; ಅಲ್ಲದೆ ವಿದ್ಯಾರ್ಥಿಗಳೂ, ಯುವಕರೂ ಆಹಾರ ಸ್ವಯಂಸೇವಕರಾಗಿ ಕೆಲಸ ಮಾಡಬೇಕೆಂದೂ, ಊರಿನ ಶ್ರೀಮಂತರು ಯುವಕ ಸಂಘಕ್ಕೆ ತಮ್ಮ ಹೊರಗುಗಳನ್ನು ಕೊಡಬೇಕೆಂದೂ ಕೋರಿದರು.

ಸಭೆಯಲ್ಲಿ ಕೆಳಗೆ ಕಂಡ ನಿರ್ಣಯಗಳು ಸರ್ವಾನುಮತದಿಂದ ಅಂಗೀಕೃತವಾದುವು.

೧. ಡಿಪೋಗಳ ಮುಂದೆ ಆಹಾರ ಪದಾರ್ಥಗಳಿಗಾಗಿ ಆಗುತ್ತಿರುವ ನೂಕಾಟವನ್ನು ತಡೆದು ಎಲ್ಲರಿಗೂ ಸರಿಯಾಗಿ ಆಹಾರ ಸಿಕ್ಕುವಂತಾಗಲು ಹೆಚ್ಚು ಹೆಚ್ಚು ಡಿಪೋಗಳನ್ನು ತೆರೆಯಬೇಕು. ಈಗಿರುವ ರೇಷನ್ ಪ್ರಮಾಣವನ್ನು ಹೆಚ್ಚಿಸಬೇಕು.

೨ ಜನತೆಯ ಪ್ರತಿನಿಧಿಗಳನ್ನೊಳಗೊಂಡ ಎಲ್ಲ ಪಂಗಡಗಳ ಜನತೆಯ ಆಹಾರದ ಸಮಿತಿಗಳನ್ನು ಸ್ಥಾಪಿಸಿ, ಆಹಾರ ಸ್ವಯಂಸೇವಕ ಪಡೆಯ ಮೂಲಕ ಡಿಪೋಗಳ ಮುಂದೆ 'ಕ್ಯೂ' ಏರ್ಪಡಿಸಿ ವ್ಯವಸ್ಥಿತವಾದ ಹಂಚಿಕೆಯಾಗುವಂತೆ ನೋಡಿಕೊಳ್ಳುವುದಕ್ಕೂ ಕೂಡಲೇ ನಂಜನಗೂಡು ನಾಗರಿಕರೆಲ್ಲರೂ ಒಗ್ಗಟ್ಟಾಗಬೇಕೆಂದು ಕೋರುತ್ತದೆ.

ಸಾಮೂಹಿಕ ಜುಲ್ಮಾನೆ ರದ್ದು

ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಗ್ರಾಮದ ಮೇಲೆ ಹಾಕಿದ್ದ ೫೦೦ ರೂ ಸಾಮೂಹಿಕ ಜುಲ್ಮಾನೆಯನ್ನು ಈಗ ರದ್ದು ಮಾಡಿದೆ. ಈ ಬಗ್ಗೆ ವಸೂಲಾಗಿರುವ ಹಣವನ್ನು ಗ್ರಾಮಸ್ಥರಿಗೆ ವಾಪಸು ಕೊಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ.

ಸ್ತ್ರೀಯರ ಸೌಕರ್ಯಕ್ಕಾಗಿ

೧೯೪೩ ನೇ ಡಿಸೆಂಬರ್ ೧೫ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಣ್ಣ ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂಚನೆ — ಚಿಲ್ಲರೆಯಾಗಿ ಕಲ್ಲಕ್ಕಿ, ಬೂರಾಸಕ್ಕರೆ ಸಿಕ್ಕುವ ಇಲ್ಲಿನ ಮತ್ತು ಸಂಕ್ರಾಂತಿ ಸಾಮಾನುಗಳೆಲ್ಲವೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಸಂಪುಟ ೨] ಬುಧವಾರ ೧೫--೧೨--೪೩ [ಸಂಚಿಕೆ ೧೨೭

ಜರ್ಮನಿಗೆ ಮಿತ್ರ ನೌಕೆ ಸವಾಲು

"ಸ್ಥಳೀಯ ಸಂಸ್ಥೆಗಳು ವೆಚ್ಚ ವಹಿಸದಿರಲು ಅವಕಾಶ ಕೊಡುವುದು ಸರ್ಕಾರದ ನೀತಿಯಲ್ಲ"

ಕೃಷ್ಣರಾಜನಗರಕ್ಕೆ ಪ್ರಭುಗಳ ಭೇಟಿ

ಹೈಸ್ಕೂಲಿನ ಆಡಳಿತವನ್ನು ಸರ್ಕಾರವು ವಹಿಸಲಾಗುವುದಿಲ್ಲ

ಸ್ವಂ ವ] ಮೈಸೂರು ೧೫

ಶ್ರೀಮನ್ಮಹಾರಾಜರವರಾದ ಶ್ರೀ ಜಯಚಾಮರಾಜ ಒಡೆಯರವರು ಈ ದಿನ ಬೆಳಗ್ಗೆ ಕೃಷ್ಣರಾಜನಗರಕ್ಕೆ ಭೇಟಿಯಿತ್ತರು. ಮಹಾಪ್ರಭುಗಳು ದಿವಾನರಾದ ಪ್ರಧಾನಶಿರೋಮಣಿ ಎನ್. ಮಾಧವರಾಯರ, ಮತ್ತು ಜಿಲ್ಲಾಧಿಕಾರಿಗಳಾದ ಶ್ರೀ ರಣಜೋಧಸಿಂಗ್‌ರವರೊಡನೆ ರಾಜಧಾನಿಯನ್ನು ೯ ಗಂಟೆಗೆ ಬಿಟ್ಟು ಮೋಟಾರಿನಲ್ಲಿ ೧೦-೧೫ ಗಂಟೆಗೆ ಕೃಷ್ಣರಾಜನಗರವನ್ನು ತಲುಪಿದರು. ಊರ ಬಾಗಿಲಿನಿಂದಲೇ ಶ್ರೀಮನ್ಮಹಾರಾಜರವರು ಮೋಟಾರಿನಲ್ಲಿ ಮೆರವಣಿಗೆ ಹೊರಟು ಪೌರಸಭಾ ಮಂಟಪದಲ್ಲಿ ಬಿನ್ನವತ್ತಳೆಯನ್ನು ಸ್ವೀಕರಿಸಿದರು.

ಬಿನ್ನವತ್ತಳೆ

ಶ್ರೀ ಟಿ ಮಾಯಿಗೌಡರ ಸ್ವಾಗತಗೀತೆಗಳಾದ ನಂತರ ಪೌರಸಭಾ ಉಪಾಧ್ಯಕ್ಷರಾದ ಲೋಕಸೇವಾನಿರತ ಶ್ರೀ ಬಳೇ ಸಿದ್ಧಲಿಂಗಶೆಟ್ಟರು ಪೌರಸಭೆಯ ಬಿನ್ನವತ್ತಳೆಯನ್ನು, ಅರ್ಕೇಶ್ವರ ದೇವಸ್ಥಾನ, ಆಸ್ಪತ್ರೆ, ಪಯೊನೀರ್ ಮತ್ತು ಹೈಸ್ಕೂಲು, ಇವುಗಳನ್ನು ಕೆತ್ತಿದ ಬೆಳ್ಳಿಯ ಕರಂಡದಲ್ಲಿ ಮಹಾಪ್ರಭುಗಳಿಗೆ ಅರ್ಪಿಸಿದರು. ನಂತರ ಶ್ರೀ ಕೃಷ್ಣರಾಜೇಂದ್ರ ಹೈಸ್ಕೂಲಿನ ದರ್ಮಕರ್ತರುಗಳ ಪರವಾಗಿ ಶ್ರೀ ಬಿ ಜಪ್ಪಣ್ಣನವರು ಬೆಳ್ಳಿಯ ಕರಂಡದಲ್ಲಿ ಬಿನ್ನವತ್ತಳೆಯನ್ನು ಅರ್ಪಿಸಿದರು.

ಪ್ರಭುಗಳ ಮೆಚ್ಚಿಗೆ

ಅನಂತರ ಮಹಾಪ್ರಭುಗಳು ಕೆಳಕಂಡ ಉತ್ತರವಿತ್ತರು:—

ಪೂಜ್ಯರಾದ ನಮ್ಮ ಪೂಜ್ಯ ಪಿತಾಮಹರಿಂದ ಈಗ್ಗೆ ಒಂಭತ್ತು ವರ್ಷಗಳ ಹಿಂದೆ ಆರಂಭೋತ್ಸವ ನಡೆದ, ಅವರ ಸ್ಮಾರಕವನ್ನು ಪಡೆದಿರುವ ಈ ಊರಿಗೆ ಬಂದಿರುವುದು ನಮಗೆ ಬಹಳ ಸಂತೋಷವನ್ನುಂಟುಮಾಡಿದೆ. ಈ ಒಂಭತ್ತು ವರ್ಷಗಳಲ್ಲಿ ಇಲ್ಲಿ ನಾನಾ ಮುಖವಾಗಿ ನಡೆದಿರತಕ್ಕ ಅಭಿವೃದ್ಧಿ ಕಾರ್ಯಗಳ ವಿಚಾರವಾಗಿ ನೀವು ಸೂಚಿಸಿರುವ ವಿವರವನ್ನು ಕೇಳಿ ನಮ್ಮ ಮನಸ್ಸಿಗೆ ಹರ್ಷವುಂಟಾಗಿದೆ. ನಿಮ್ಮ ವಸತಿ ಮತ್ತು ದೀಪಗಳ ಅನುಕೂಲವನ್ನು ಉತ್ತಮಪಡಿಸಿರುವುದೂ ವಿದ್ಯಾಭ್ಯಾಸದ ಸೌಕರ್ಯಗಳನ್ನು ಹೆಚ್ಚಿಸಿರುವುದೂ ಅವುಗಳಲ್ಲೆಲ್ಲ ಮುಖ್ಯವಾಗಿವೆ.

ನಿಮ್ಮ ಬಿನ್ನವತ್ತಳೆಯಲ್ಲಿ ಅನೇಕ ಬೇಡಿಕೆಗಳು ಸೂಚಿತವಾಗಿವೆ. ಜನರ ಆರೋಗ್ಯದೃಷ್ಟಿಯಿಂದ ಚರಂಡಿ ವಿಧಾನವನ್ನು ಉತ್ತಮಗೊಳಿಸಬೇಕೆಂಬುದೇ ಅವುಗಳಲ್ಲೆಲ್ಲ ಪ್ರಮುಖವಾಗಿದೆ. ಈ ಬೇಡಿಕೆಯನ್ನು ನಮ್ಮ ಸರ್ಕಾರದವರು ಸದ್ಯಕ್ಕೆ ಅದಮ್ಯ ಸಹಾನುಭೂತಿಯಿಂದ ಪರಿಶೀಲಿಸುವರು.

ಸರ್ಕಾರದವರ ಸಹಾಯವನ್ನು ಪಡೆದು ಪೌರಸಭೆಯವರು ನಡೆಸಿದ ಪ್ರಯತ್ನಗಳ ಫಲವಾಗಿ ನಿಮ್ಮ ಊರಿನಲ್ಲಿ ಒಂದು ಹೈಸ್ಕೂಲು ಸ್ಥಾಪಿತವಾಗಿದೆ. ಇಲ್ಲಿನ ಹೈಸ್ಕೂಲು ಕಟ್ಟಡದ ಹೆಚ್ಚಿನ ಭಾಗವು ಊರಿನವರ ಧನಸಹಾಯದಿಂದ ಆಗಿರುವುದು ಸಾರ್ವಜನಿಕ ಸೇವಾ ಮನೋಭಾವಕ್ಕೆ ನಿಮ್ಮಲ್ಲಿ ಸೂಕ್ತರೀತಿಯಲ್ಲಿ ವ್ಯಕ್ತಿ[illegible]ದ್ದಿ ಕೊಂಡಿರುವುದನ್ನು ತೋರಿಸುತ್ತದೆ. ಈಗ ಪೌರಸಭೆಯವರು ನಡೆಸುತ್ತಿರುವ ಹೈಸ್ಕೂಲಿನ ಆಡಳಿತವನ್ನು ಸರ್ಕಾರಕ್ಕೆ ವಹಿಸಿಕೊಳ್ಳಬೇಕೆಂದು ನೀವು ಅರಿಕೆ ಮಾಡಿಕೊಂಡಿರಿ. ಈ ಅರಿಕೆಯನ್ನು ನೆರವೇರಿಸಿಕೊಡದಿರುವುದಕ್ಕೆ ಸ್ವಲ್ಪ ಕೊಂಚವರೆಯಿದೆ. ಸ್ಥಳೀಯ ಸಂಸ್ಥೆಗಳು ತಮ್ಮ ಭಾಗದ ಹಣ ಸ್ವೋದ್ಯಮ ಒದಗಿಸಿ ಭರವಸೆ ನೀಡಿದ್ದ ಆಧಾರದ ಮೇಲೆ ಹೈಸ್ಕೂಲುಗಳು ಏರ್ಪಟ್ಟ ಮೇಲೆ, ಆ ಭರವಸೆಯಂತೆ ನಡೆಯಬೇಕಾದುದು ಯುಕ್ತವಾಗಿರುತ್ತದೆ. ಆದಕಾರಣ, ಸ್ಥಳೀಯ ಸಂಸ್ಥೆಗಳು ತಮ್ಮ ಭಾಗದ ವೆಚ್ಚವನ್ನು ವಹಿಸದಿರುವುದಕ್ಕೆ ಅವಕಾಶ ಕೊಡುವುದು ಸರ್ಕಾರದ ಸಾಧಾರಣ ನೀತಿಗೆ ವಿರೋಧವಾದುದೆಂದು ನಾವು ಸೂಚಿಸಬೇಕಾಗಿದೆ.

ಕೃಷ್ಣರಾಜನಗರದಲ್ಲಿ ಮೋಟಾರ್ ಸರ್ವಿಸ್ ಜಂಕ್ಷನ್ ಸ್ಟೇಷನ್ನನ್ನು ಸ್ಥಾಪಿಸುವುದು ಅಗತ್ಯವೆಂಬುದ[illegible] ನೀವು ಮಾಡಿರುವ ಮತ್ತೊಂದು ಅರಿಕೆಯಾಗಿದೆ. ಹಿಂದೆ ಅನೇಕ ಸಲ ಈ ಅರಿಕೆಯು ಬಂದು ಅದರ ವಿಷಯವಾಗಿ ಸರ್ಕಾರದವರ ಹೈಕೋರ್ಟ್‌ನವರ ಅಭಿಪ್ರಾಯವನ್ನು ಕೇಳಿ ಪರಿಶೀಲಿಸಿ ನೋಡಿದ್ದಾರೆ. ಮುಖ್ಯವಾಗಿ ಖರ್ಚಿನ ದೃಷ್ಟಿಯಿಂದ ಆ ಅರಿಕೆಯನ್ನು ನೆರವೇರಿಸಲು ಸಾಧ್ಯವಾಗಲಿಲ್ಲವೆಂದು ತಿಳಿಸಬಹುದು. ರೈಲು ಪ್ರಯಾಣದ ಸಂಬಂಧದಲ್ಲಿ ಹೆಚ್ಚಿಗೆ ಸೌಕರ್ಯಗಳನ್ನು ಒದಗಿಸಬೇಕೆಂದೂ ನೀವು ಅರಿಕೆ ಮಾಡಿದ್ದೀರಿ. ಆ ಸಂಬಂಧವಾಗಿ ನೀವು ಸೂಚಿಸಿರತಕ್ಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆ ವಿಚಾರವನ್ನು ನಮ್ಮ ಸರ್ಕಾರದವರು ಸೂಕ್ತರೀತಿಯಲ್ಲಿ ಪರಿಶೀಲಿಸಿ ನೋಡುತ್ತಾರೆ.

ಶ್ರೀಮನ್ಮಹಾರಾಜರವರ ಉತ್ತರವಿತ್ತ ನಂತರ ಶ್ರೀ ಸಂಪತ್ಕುಮಾರ ಅಯ್ಯಂಗಾರ್‌ರವರಿಂದ ಮಂಗಳಾರತಿಯಾಯಿತು.

ಮೆರವಣಿಗೆ

ಅನಂತರ ಮಹಾಪ್ರಭುಗಳು ನಗರದಲ್ಲಿ ಮೆರವಣಿಗೆ ಹೊರಟು ನಗರದ ಬೀದಿಗಳನ್ನು ಬಹಳ ತೋರಣಗಳಿಂದ ಅಲಂಕರಿಸಿ ಭವ್ಯವಾದ ಮಂಟಪಗಳನ್ನು ನಿರ್ಮಿಸಿದ್ದರು. [illegible] ಬರಿದಾಗಿದ್ದ ಜನರು ತಮ್ಮ [illegible] ನ್ನು ಪ್ರದರ್ಶಿಸಲು ಕಿಕ್ಕಿರಿದು ನಿಂತಿದ್ದರು. ಪ್ರತಿಯೊಂದು ಮಂಟಪದಲ್ಲೂ ಮಹಾಪ್ರಭುಗಳು ಹಾರ, ಹಣ್ಣುಗಳನ್ನು ಸ್ವೀಕ[illegible]

ಆಹಾರ ಸಮ್ಮೇಳನ

ಮೈಸೂರು ೧೫

ಮೈಸೂರು ನಗರದ ಆಹಾರ ಸಮ್ಮೇಳನವು ಈ ದಿನ ಮಧ್ಯಾಹ್ನ ಟೌನ್‌ಹಾಲಿನಲ್ಲಿ ಆರಂಭವಾಯಿತು. ಅನೇಕ ಜನ ಪುರ ನಿವಾಸಿಗಳು ಬಂದಿದ್ದರು.

ಪ್ರಾರ್ಥನೆಯಾದ ನಂತರ ಸ್ವಾಗತಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಭಾಷಣಮಾಡಿ ಎಲ್ಲರಿಗೂ ಸುಸ್ವಾಗತವನ್ನು ಬಯಸಿದರು.

ಶ್ರೀರಂಗಪಟ್ಟಣದ ಶ್ರೀ ಎ. ಜಿ ಬಂದಿಗೌಡರು ಸಭೆಯ ಆರಂಭೋತ್ಸವವನ್ನು ನೆರವೇರಿಸಿ, ನಗರದ ಆಹಾರ ಸಮಸ್ಯೆಯನ್ನು ಬಗೆಹರಿಸಲು ತಮ್ಮ ಯುಕ್ತಿಯಾದ ಕಾರ್ಯಕ್ರಮವನ್ನು ಕೈಗೊಳ್ಳಲೆಂದು ಹಾರೈಸಿದರು.

ಅಧ್ಯಕ್ಷರಾದ ಶ್ರೀ ಎಸ್ ರಂಗರಾಮಯ್ಯನವರು ಈಗಿನ ಆಹಾರ ಕಷ್ಟಕೋಟಲೆಯ ಕಾರಣಗಳನ್ನೂ, ರೇಷನಿಂಗ್ ವ್ಯವಸ್ಥೆಯಲ್ಲಿಯೂ ಇರುವ ಲೋಪದೋಷಗಳನ್ನು ತೋರಿಸಿ, ಸರ್ಕಾರದವರೂ ಸಾರ್ವಜನಿಕರೂ ಸಹಕರಿಸಿ ಇವುಗಳನ್ನು ಕ್ರಮಪಡಿಸಬೇಕೆಂದು ತಿಳಿಸಿದರು.

ಪುರನಿವಾಸಿಗಳಿಂದಲೂ ಸ್ವಾಗತಸಮಿತಿಯವರಿಂದಲೂ ಮಂಡಿಸಲ್ಪಟ್ಟಿರುವ ನಿರ್ಣಯಗಳು ಚರ್ಚೆಯಾಗುತ್ತಿವೆ.

ಉದಾರ ದಾನ

ಮಹಾಪ್ರಭುಗಳು ಈ ದಿನ ಕೃಷ್ಣರಾಜನಗರಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಆ ಸ್ಥಳದ ಶ್ರೀ ಬಸವರಾಜಪ್ಪನವರು ಹೈಸ್ಕೂಲ್ ಹಾಸ್ಟೆಲಿನ ಕಟ್ಟಡಕ್ಕಾಗಿ ೧೦ ಸಾವಿರ ರೂಗಳನ್ನೂ ಮತ್ತು ಶ್ರೀ ಬಳೇ ಸಿದ್ದಲಿಂಗಶೆಟ್ಟರು ಹೈಸ್ಕೂಲಿನ ಇನ್ನೊಂದು ಬ್ಲಾಕನ್ನು ಕಟ್ಟಲು ೫ ಸಾವಿರ ರೂ. ಉದಾರದಾನ ಮಾಡಿರುವುದನ್ನು ಜಿಲ್ಲಾಧಿಕಾರಿಗಳು ತಿಳಿಸಿ ದಾನಿಗಳನ್ನು ಮಹಾಪ್ರಭುಗಳಿಗೆ ಪರಿಚಯಮಾಡಿಕೊಟ್ಟರು.

[illegible]ದಿ, ನಗರದ ಬೀದಿಗಳಲ್ಲಿ ವಿಜಯಮಾಡಿ ಜನಸ್ತೋಮಕ್ಕೆ ಆನಂದವನ್ನುಂಟುಮಾಡಿದರು.

ನಂತರ ಶ್ರೀಮನ್ಮಹಾರಾಜರವರು ಕೃಷ್ಣರಾಜನಗರವನ್ನು ಬಿಟ್ಟು [illegible] ರಾಜಧಾನಿಗೆ ವಾಪಸು ಬಂದರು.

ಜರ್ಮನ್ ನೌಕೆಗೆ ಮಿತ್ರ ನೌಕಾ ಸವಾಲು

ಉತ್ತರ ಸಮುದ್ರದಲ್ಲಿ ಹೊಸ [illegible]ಗೂ ಲೇಪಿಸಲಾಗಿದ್ದ ಭಾರಿ [illegible] ನೌಕಾ ಪಡೆಯು ಸುಮಾರು ೨೦೦ ಮೈಲಿಗಳ ಸುತ್ತಳತೆಗೆ ಹೋಗಿ ಜರ್ಮನರಿಗೆ ಕದನ ನಡೆಸಲು ಸವಾಲು ನೀಡಿದವೆಂದೂ, ಆದರೆ ಜರ್ಮನ್ ನೌಕೆಗಳು ಕದನ ನಡೆಸಲು ನಿರಾಕರಿಸಿ, ಸ್ಥಳ ಬಿಟ್ಟು ಬರಲಿಲ್ಲವೆಂದೂ ರಾಯಿಟರ್ ಪ್ರತಿನಿಧಿಯವರು ವರದಿ ಮಾಡಿದ್ದಾರೆ.

ಆಸ್ಸಾಂ ಮೇಲೆ ಜಪಾನಿ ಧಾಳಿ

ಈಶಾನ್ಯ ಅಸ್ಸಾಂನಲ್ಲಿರುವ ಒಂದು ಅಮೆರಿಕಾ ವಿಮಾನ ನಿಲ್ದಾಣದ ಮೇಲೆ ಜಪಾನೀ ಬಾಂಬರುಗಳು ಧಾಳಿ ಮಾಡಿದವೆಂದು ನಿನ್ನೆ ಪೂರ್ವ ವಿಮಾನ ಕಮ್ಯಾಂಡ್ ಪ್ರಕಟಣೆ ತಿಳಿಸುತ್ತದೆ. ನಷ್ಟವೂ ಸಾವುನೋವುಗಳೂ ಅತ್ಯಲ್ಪವೆಂದು ವರದಿಯಾಗಿದೆ. ಶತ್ರು ವಿಮಾನಗಳು ಖಚಿತವಾಗಿಯೂ ನಾಶಮಾಡಲ್ಪಟ್ಟಿವೆ.

ಜರ್ಮನರು ಚೆರ್ಕಾಸಿ ಬಿಟ್ಟರು

ರಷ್ಯಾದಲ್ಲಿ ಮಧ್ಯ ನೀಪರ್ ಮುಖ್ಯ ನಿಲ್ದಾಣವಾದ ಚೆರ್ಕಾಸಿ ನಗರವನ್ನು ಬಿಡುಮಾಡಿರುವುದಾಗಿ ಜರ್ಮನರು ಹೇಳಿದ್ದಾರೆ. ರಷ್ಯನರು ಎಲ್ಲಾ ಕಡೆಗಳಿಂದಲೂ ಆ ಊರಿನ ಮೇಲೆ ಧಾಳಿಮಾಡಿದರು.

ವೈಶ್ಯ ಯುವಜನ ಸಭೆ

ಮೈಸೂರು ೧೫

ಮೇಲ್ಕಂಡ ಸಭೆಯ [illegible]ನೇ ಅಧಿವೇಶನವು ಈ ವಾರ ಅಖೈರಿನಲ್ಲಿ ಅವರ ಮುಂದಿನ ವಾರದ ಮೊದಲಿನ ದಿನದಲ್ಲಿ ಚಿಂತಾಮಣಿಯಲ್ಲಿ ನಡೆಯುವುದು. ಈ ಅಧಿವೇಶನದ ಅಧ್ಯಕ್ಷರು ಬೆಂಗಳೂರಿನ [illegible] ೧೯೪೪ನೇ ಸಾಲಿನ ಕೇಂದ್ರ ಸಂಘದ ಸಮ್ಮೇಳನ ಆಗಸ್ಟ್ ೧೯೪೪ರಲ್ಲಿ ಮೈಸೂರು ನಗರದಲ್ಲಿ ನಡೆಯುವುದು. ಉಪಯುಕ್ತವಾದ ಸೂಚನೆಗಳು ತಾ|| ೧೮-೧೨-೪೩ ಒಳಗಾಗಿ ಕಳುಹಬೇಕು ಎಂದು ಅಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿಯವರು ತಿಳಿಸುತ್ತಾರೆ.

ಸಾರ್ವಜನಿಕ ರಜ

ಮಹಾಪ್ರಭುಗಳವರು ನಾಳೆ ತಮ್ಮ ಹುಟ್ಟಿದ ಹಬ್ಬವನ್ನು ಆಚರಿಸುವರಾದ್ದರಿಂದ ೧೬ನೇ ತಾ|| ಗುರುವಾರ ಮತ್ತು ೧೭ನೇ ತಾ|| ಶುಕ್ರವಾರ ಸಾರ್ವಜನಿಕ ರಜಾದಿನಗಳೆಂದು ಘೋಷಿಸಲಾಗಿದೆ. ಆ ದಿನಗಳು ವಿದ್ಯಾಶಾಲೆಗಳಿಗೂ ಸಾರ್ವಜನಿಕ ಸಂಸ್ಥೆಗಳಿಗೂ ರಜ ಕೊಡಲಾಗಿದೆ.

ಬಿಸಿ ಬಿಸಿ ಸುದ್ದಿ

ಸ್ವಂ ವ.ಪ್ರ.] ಬೆಂಗಳೂರು ೧೫

ನಿನ್ನೆ ನಡೆದ [illegible] ಸಭೆಯ, [illegible] ಶ್ರೀ ಮಹಾರಾಜ [illegible] ರಾಮಯ್ಯನವರು [illegible] ಶ್ರೀ ಕೃಷ್ಣಮೂರ್ತಿ, ಶ್ರೀ [illegible] ರಾಜ [illegible]

ಅಶಕ್ತರಾದರೆ ರಾಜೀನಾಮೆ ಕೊಡಿ

ಶಾಸನ ಸಭೆಯಲ್ಲಿ ಬೇಲೂರರ ಸಾಹಸ

ಸ್ವ ಸು.] ಬೆಂಗಳೂರು ೧೪

ಇಂದು ೧೧-೩೦ ಘಂಟೆಗೆ ಶಾಸನ ಸಭೆ ಆರಂಭವಾಯಿತು. ಪ್ರಶ್ನೋತ್ತರ ಕಾಲದಲ್ಲಿ ದೇಶದ ಹೊಸ ಕರೆಗಳ ವಿಚಾರವಾಗಿ ಚರ್ಚೆ ನಡೆಯಿತು ಮತ್ತು ಕೋಲಾರದ ಟ್ರಾವೆಲರ್ಸ್ ಬಂಗಲೆಯಲ್ಲಿ ಮಿಲಿಟರಿ ಅಧಿಕಾರಿಯೊಬ್ಬನ ಅಕ್ರಮ ವರ್ತನೆ ವಿಚಾರವಾಗಿ ಶ್ರೀ ಎಲ್. ಎಸ್. ರಾಜುರವರು ಒಂದು ಪ್ರಶ್ನೆ ಎತ್ತಿದರು. ಅದಕ್ಕೆ ಸರ್ಕಾರದವರು ಅಂಥ ವರ್ತನೆಗಳು ಇನ್ನು ಮುಂದಾಗದಂತೆ ತಕ್ಕ ಬಂದೋಬಸ್ತನ್ನು ಮಾಡುವುದಾಗಿ ಭರವಸೆಕೊಟ್ಟರು. ವಾರ್ತಾ ಪತ್ರಿಕೆ ಅಗ್ರಲೇಖನದ ಬಗ್ಗೆ ಅಧ್ಯಕ್ಷರು ಈ ದಿನ ತಮ್ಮ ರೂಲಿಂಗನ್ನು ಕೊಟ್ಟು, ಆ ಲೇಖನದಲ್ಲಿ ಶಾಸನ ಸಭಾ ಸದಸ್ಯರ ಗೌರವಕ್ಕೆ ವ್ಯತಿರಿಕ್ತವಾದಂಥಾ ಸಂಗತಿ ಇರತಕ್ಕದ್ದೆಂದು ತೀರ್ಮಾನವಾಯಿತು; ಈ ಪ್ರಸ್ತಾಪ ಸಭೆ ಮುಂದೆ ಬಂದದ್ದೆ ಸಾಕು; ಇನ್ನುಮೇಲೆ ವಾರ್ತಾಪತ್ರಿಕೆಯವರು ತಮ್ಮ ನಡವಳಿಯನ್ನು ತಿದ್ದಿಕೊಳ್ಳುವರೆಂದು ತಿಳಿಯಬಹುದು. ಈ ವಿಷಯ ಇಲ್ಲಿಗೇ ಬಿಡೋಣ ಎಂದು ತಿಳಿಸಿದರು.

ಸರ್ಕಾರದ ವಿವಿಧ ಇಲಾಖೆಗಳಿಗೆ ಕೊಡಬೇಕಾಗಿರುವ ಗ್ರ್ಯಾಂಟುಗಳ ಬಗ್ಗೆಯೂ ಇಂದು ಚರ್ಚೆ ನಡೆಯಿತು. … ಸಾವಿರದ ಗ್ರ್ಯಾಂಟ್ ಕೊಡಲು ಸಭೆ ಒಪ್ಪಿಗೆ ಕೊಟ್ಟಿತು. ಮುಜರಾಯಿ ಇಲಾಖೆಗೂ ಸಹ … ಗ್ರ್ಯಾಂಟ್ ಕೊಡಲು ಸಭೆ ಒಪ್ಪಿಗೆ ಕೊಟ್ಟಿತು. ರಸ್ತೆಗಳ ದುರಸ್ತು ಬಗ್ಗೆ ಸರ್ಕಾರದವರು ಕೇಳಿದ ಗ್ರ್ಯಾಂಟ್ ವಿಷಯವಾಗಿ ಚರ್ಚೆ ನಡೆಯಿತು. ಮಿಲಿಟರಿ ವಾಹನಗಳು ರಸ್ತೆಗಳನ್ನು ಉಪಯೋಗಿಸುವುದರಿಂದ ಭಾರತ ಸರ್ಕಾರದವರು ರಸ್ತೆ ದುರಸ್ತಿಗೆ ಹಣ ಕೊಡಬೇಕೆಂದು ಸರ್ಕಾರದವರು ಕೇಳಿಕೊಂಡಿರುವುದಾಗಿ ಭರವಸೆ ಇತ್ತರು.

ಮಂತ್ರಿಗಳು ರಾಜೀನಾಮೆ ಕೊಡಲಿ

ಬೆಂಗಳೂರಿನಿಂದ ಹೊಸ ಕೋಟೆಗೆ ಹೋಗುವ ರಸ್ತೆ ವಾಹನಗಳ ಓಡಾಟಕ್ಕೆ ಬಹು ದಿನಗಳಿಂದ ತುಂಬಾ ಅನಾನುಕೂಲವಾಗಿದೆಯೆಂದೂ, ಸರ್ಕಾರದವರು ಅದನ್ನು ಸರಿಪಡಿಸುವುದಾಗಿ ಭರವಸೆ ಕೊಟ್ಟು ಬಹು ದಿನಗಳಾದರೂ ಇನ್ನೂ ಆ ಕೆಲಸ ಮಾಡಿಕೊಟ್ಟಿಲ್ಲವೆಂದೂ ಮಂತ್ರಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸದೆ ತುಂಬಾ ಬೇಜವಾಬ್ದಾರಿಯಲ್ಲಿ ನಡೆಯುತ್ತಿರುವರೆಂದೂ ಶ್ರೀ ಬೇಲೂರು ಶ್ರೀನಿವಾಸಯ್ಯಂಗಾರ್ಯರವರು ಮಂತ್ರಿಗಳು ಅಸಮರ್ಥರಾಗಿರುವುದನ್ನು ತೋರಿದರು. ಹೀಗೆ ಬೇಸರಗೊಂಡವರು ಸಭೆಯಿಂದ ಹೊರಟು ಹೋಗಬೇಕು ಎಂದು ಬೇಲೂರರವರು ಸಮರ್ಥನೆಯಲ್ಲಿ ಕೂಗಿ ಹೇಳಿ, ನಾವು ಹೇಳಿದ ಕೆಲಸಗಳನ್ನು ಮಾಡುವಷ್ಟು ನಿಮ್ಮ ಕೈಲಾಗದಿದ್ದರೆ ನಿರ್ವಹಿಸಲು ಅಶಕ್ತರಾದಲ್ಲಿ ನೀವು ರಾಜೀನಾಮೆ ಕೊಡಿ ಎಂದು ಹೇಳಿದರು.

ಶಾಸನ ಸಭೆಯ ಒಂದು ಸೆಷನ್ನಿನ ಪತ್ರಿಕೆಗಳನ್ನು … ಉದ್ದೇಶಿಸಿದ ವಿಷಯಗಳನ್ನು ಚರ್ಚಿಸುವ ನಿಮಿತ್ತ ಸೇರ ಬೇಕಾಗಿದೆ.

ಚೀಫ್ ಸೆಕ್ರೆಟರಿಯವರ ಆಲಸ್ಯ

ಸರ್ಕಾರದ ಚೀಫ್ ಸೆಕ್ರೆಟರಿಗಳು ಈಗ ರಜಾ ಪಡೆದಿರುವರು. ಅವರಿಗೆ ನ್ಯೂಮೋನಿಯಾ ತಗುಲಿರುವುದರಿಂದ ಈಗ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವರು ಎಂದು ಗೊತ್ತಾಗಿದೆ.

ನಿರ್ಬಂಧ ವಜಾ

ಬಂಧನದಲ್ಲಿದ್ದು ಕಳೆದ ಎರಡು ತಿಂಗಳ ಹಿಂದೆ ಬಿಡುಗಡೆ ಹೊಂದಿ ಅನಂತರ ತಮ್ಮ ಎಸ್ಟೇಟಿನಲ್ಲೇ ಇರಬೇಕೆಂಬ ಪ್ರತಿಬಂಧಕಕ್ಕೆ ಒಳಗಾಗಿದ್ದ ಚಿಕ್ಕಮಗಳೂರಿನ ಶ್ರೀ ಅಣ್ಣಾಸ್ವಾಮಿಗೌಡರ ಮೇಲಿನ ನಿರ್ಬಂಧವು ವಜಾ ಆಗಿದೆ. ಅವರು ಈಗ ಚಿಕ್ಕಮಗಳೂರಿಗೆ ಬಂದಿದ್ದಾರೆ.

ರಾಜುರವರ ರಾಜೀನಾಮೆ ಅಂಗೀಕಾರ

ನ್ಯಾಯ ವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ಡೆಪ್ಯುಟಿ ಲೀಡರ್ ಪದವಿಗೆ ಶ್ರೀ ಎಲ್. ಎಸ್. ರಾಜುರವರು ಕೊಟ್ಟ ರಾಜೀನಾಮೆಯನ್ನು, ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ನಿನ್ನೆ ದಿವಸ ಅಂಗೀಕರಿಸಲಾಯಿತು.

ರೇಷ್ಮೆ ಲಾಭ ವಿನಿಯೋಗ

ಕಚ್ಚಾ ರೇಷ್ಮೆ ವ್ಯಾಪಾರದಿಂದ ಬರುವ ಲಾಭವನ್ನು ಸರ್ಕಾರದವರು ತೆಗೆದುಕೊಳ್ಳುವುದಿಲ್ಲವೆಂದೂ, ಮೈಸೂರು ಜಾತಿ ಹುಳದ ದನ್ನು ರೇಷ್ಮೆ ಹುಳ ಸಾಕುವವರಿಗೂ, ರಾಟೆ ಕೆಲಸಗಾರರಿಗೂ, ರೇಷ್ಮೆ ಅಭಿವೃದ್ಧಿ ನಿಧಿಗೂ ಸಮವಾಗಿ ಹಂಚಲಾಗುವುದೆಂದೂ ಸರ್ಕಾರದವರು ಪ್ರಕಟಿಸಿದ್ದಾರೆ.

ಇಟಲಿಯಲ್ಲಿ ಮಿತ್ರರ ಮುನ್ನಡೆ

ಇಟಲಿ ರಣರಂಗದಲ್ಲಿ ಜನರಲ್ ಮಾಂಟಿಗಮರಿಯವರ ಸೇನೆಯು ಪೆಸ್ಕಾರ ಮತ್ತು ಚೀಟಿ ಕಡೆಯಲ್ಲಿ ಒಂದು ಹೊಸ ಧಾಳಿ ನಡೆಸಲು ಸನ್ನದ್ಧವಾಗಿದೆ.

ಇಟಲಿ ರಣಕ್ಷೇತ್ರದಲ್ಲಿ ಮಿತ್ರರು ಒಂದು ಪ್ರದೇಶವನ್ನು ಜರ್ಮನರು ಖಾಲಿ ಮಾಡಿರುವುದಾಗಿ ಜರ್ಮನ್ ವಾರ್ತಾ ಸಂಸ್ಥೆಯು ತಿಳಿಸಿದೆ.

ಚಿಲ್ಲರೆ ಅಭಾವವಿಲ್ಲ

ಇಂಡಿಯಾ ಸರ್ಕಾರದವರು ಆರೋಪವನ್ನು ಇಲ್ಲವೆಂದು ಟಂಕಸಾಲೆಯನ್ನು ವಿಸ್ತರಿಸಿದ್ದಾರೆ. ಈಗ ಇರುವ ನಾಲ್ಕು ಟಂಕಸಾಲೆಗಳಲ್ಲಿ ಕಳೆದ ಅಕ್ಟೋಬರ್ ತಿಂಗಳಿಂದ ತಿಂಗಳಿಗೆ ೧೭ ಕೋಟಿ ರೂ. ನ ಚಿಲ್ಲರೆ ನಾಣ್ಯಗಳು ತಯಾರಾಗುತ್ತಿವೆ. ಆದ್ದರಿಂದ ಇನ್ನು ಮುಂದೆ ಚಿಲ್ಲರೆ ಅಭಾವವು ತಪ್ಪಬಹುದೆಂದು ಹೇಳಲಾಗಿದೆ.

ಇಂದು ೧೧-೩೦ ಕ್ಕೆ ಮೊದಲಾದ ಬೆಂಗಳೂರಿನ ಅಷ್ಟ ಸಭೆಯು ೫ ಗಂಟೆಗೆ ಮುಕ್ತಾಯವಾಯಿತು. ೧೯೪೩ ನೇ ಜುಲೈ ೨ ನೇ ತಾ|| ೩-೩೦ ಸಾಹುಕಾರ್ ಡಿ. ಎಸ್. ಮಲ್ಲಪ್ಪನವರ ಮೇಲೆ ಅಗ್ರಲೇಖನ ಬರೆದಿದ್ದ ವಿಚಾರ ಪ್ರಿವಿಲೇಜಸ್ ಕಮಿಟಿ ತೀರ್ಮಾನಕ್ಕೆ ಹೋಗಿತ್ತು. ಅವರು ಆ ಬಗ್ಗೆ ಒಂದು ವರದಿ ಒಪ್ಪಿಸಿದರು. ಆ ವರದಿ ಸಭೆಯಲ್ಲಿ ಚರ್ಚೆ ಇಲ್ಲದೆ ಅಂಗೀಕೃತವಾಯಿತು.

Edited, printed and published by A. R. Nagarajan, at the Sadhvi Press, D Subbiah Road, Mysore.

ಸಾವರ್ಕರ್ ಆಲಸ್ಯ

ಹಿಂದೂ ಮಹಾಸಭೆಯ ಅಧಿವೇಶನಕ್ಕೆ ಅಧ್ಯಕ್ಷರಾಗಿರುವ ಶ್ರೀ ವಿ. ಡಿ. ಸಾವರ್ಕರ್‌ರವರು ಆಲಸ್ಯದಿಂದ ಇನ್ನೂ ಹಾಸಿಗೆ ಹಿಡಿದಿರುವ ಪ್ರಯುಕ್ತ ಅಮೃತಸರಕ್ಕೆ ದಯಮಾಡಿಸುವುದಿಲ್ಲವೆಂದು ಹೇಳಲಾಗಿದೆ.

ತುರ್ಕಿ ಯುದ್ಧಕ್ಕಿಳಿಯುತ್ತದೆ

ಬರುವ ವಸಂತಕಾಲದಲ್ಲಿ ತುರ್ಕಿಯು ಯುದ್ಧ ಘೋಷಣೆಯನ್ನು ಮಾಡಲು ಸನ್ನಾಹಗಳಾಗಿವೆ ಎಂಬುದಾಗಿ ತುರ್ಕಿಯಲ್ಲಿ ಸಂಚರಿಸಿದ ದೇವ್‌ರಾಕ್ ಎಂಬ ಅಮೇರಿಕನ್ ಪತ್ರಿಕೋದ್ಯೋಗಿಗಳು ತಿಳಿಸಿದರು.

ನಾಶವಾಗದ ವಿನಿಯೋಗಗಳು

ಭಂಗಾರ, ಬೆಳ್ಳಿ, ಆಭರಣಗಳು ಅಥವಾ ಕೂಡಿ ಹಾಕಿದ ಸಾಮಾನುಗಳನ್ನು ಯಾವ ಕುಟುಂಬವು ಇಟ್ಟುಕೊಂಡಿರುತ್ತದೋ ಅದಕ್ಕೆ ಸದಾ ಭೀತಿಯಿರುತ್ತದೆ. ಕಳ್ಳರು ಮತ್ತು ಬೆಂಕಿಯ ಭಯ ಈ ಐಶ್ವರ್ಯವನ್ನು ಬಾಧಿಸುತ್ತವೆ. ಬಳಕೆಯಿಂದ ಭಂಗಾರ ಮತ್ತು ಬೆಳ್ಳಿ ಸವೆದುಹೋಗುತ್ತವೆ. ಇವೆಲ್ಲಕ್ಕೂ ಹೆಚ್ಚಾಗಿ ಸಾಮಾನುಗಳ ಬೆಲೆ ಅನೂಹ್ಯ. ಲೋಹಗಳು, ಅಮೂಲ್ಯ ಹರಳು ಕಲ್ಲುಗಳು, ಲಕ್ಕಿ, ಪಾಸ್ತಿ ಮತ್ತು ತಯಾರಾದ ಸಾಮಾನುಗಳು — ಇವುಗಳ ಬೆಲೆ ಈಗ ಮಿತಿಮೀರಿ ಹೆಚ್ಚಾಗಿದ್ದು ಯಾವ ಕ್ಷಣದಲ್ಲಿ ಯಾದರೂ ನೀವು ಹಾಕಿದ ಹಣದ ಬಹು ಭಾಗವು ಅನಿರೀಕ್ಷಿತವಾಗಿ ಮಾಯವಾಗಬಹುದು.

ಮುಂಬರುವ ದಿನಗಳಿಗಾಗಿ ಕೂಡಿಡಿ

ಯುದ್ಧ ಸಮಯದಲ್ಲಿ ಅತಿ ಸುರಕ್ಷಿತವಾದ ಕೂಡಿಡುವಿಕೆಯು ಹಣದ ವಿನಿಯೋಗಗಳಲ್ಲಿದೆ — ಈ ವಿನಿಯೋಗಗಳು ಮುಂದೆ ನೀವು ಹಾಕಿದಷ್ಟೇ ರೂಪಾಯಿಗಳನ್ನಾದರೂ ಹಿಂತಿರುಗಿ ಕೊಡುವುವಲ್ಲದೆ, ವಿಜಯ ಲಭಿಸಿದೊಡನೆ ಧಾರಣೆಗಳು ಹತೋಟಿಗೆ ಬಂದು ನೀವು ಆಗ ವೆಚ್ಚ ಮಾಡುವ ಹಣಕ್ಕೆ ಪೂರ್ಣ ಮೌಲ್ಯವು ದೊರಕುವಂತೆ ಮಾಡುವುವು.

ಈ ವಿನಿಯೋಗಗಳು ಸುರಕ್ಷಿತ.

- ★ ಸರಕಾರ ಸಾಲ
- ★ ವಿಮಾ ಪಾಲಿಸಿ
- ★ ಬ್ಯಾಂಕ್ ಸೇವಿಂಗ್ಸ್ ಲೆಖ್ಖ
- ★ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್

ಅಥವಾ ಇವೆಲ್ಲಕ್ಕೂ ಉತ್ತಮವಾದುವು ಸರಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳು



ರಾಷ್ಟ್ರೀಯ ಉಳಿತಾಯ ಸಮಿತಿಯವರು … ಮೈಸೂರು ಸರ್ಕಾರದ

ಸಂಪುಟ ೨] ಗುರುವಾರ ೧೮--೧೨--೪೧ [ಸಂಚಿಕೆ ೧೨೮

ಬಾಲ್ಕನ್ ದಂಡಯಾತ್ರೆಗೆ ನಾಜಿ ಸೈನ್ಯ ರವಾನೆ

ಪೆಸಿಫಿಕ್ ಯುದ್ಧದ ಪೂರ್ವ ಸಿದ್ಧತೆಗಳು ಸಾಂಗವಾಗಿವೆ
ಕೂಡಲೇ ತುರ್ಕಿ-ರಷ್ಯಾಗಳ ಒಪ್ಪಂದ ಸಂಭವ

ಮಹಾಪ್ರಭುಗಳ ಪ್ರವಾಸ

ಕುದೇರು ಮಾದರಿ ಬಡಾವಣೆ ಶಂಕುಸ್ಥಾಪನೆ

ಸ್ವಂ ವ.] ಮೈಸೂರು ೧೭.

ಶ್ರೀಮನ್ಮಹಾರಾಜರವರು ದಿವಾನರು ಮತ್ತು ಜಿಲ್ಲಾಧಿಕಾರಿಗಳೊಡನೆ ರಾಜಧಾನಿಯನ್ನು ಈ ದಿನ ಬೆಳಿಗ್ಗೆ ೯ ಗಂಟೆಗೆ ಬಿಟ್ಟು ಟಿ. ನರಸೀಪುರ, ಮೂಗೂರು, ಸಂತೇಮರಹಳ್ಳಿ ಮತ್ತು ಕುದೇರುಗಳಿಗೆ ಭೇಟಿ ಕೊಟ್ಟು, ೧೭-೩೦ ಗಂಟೆಗೆ ವಾಪಸು ರಾಜಧಾನಿಗೆ ಬಂದರು.

ಮಹಾಪ್ರಭುಗಳು ಟಿ. ನರಸೀಪುರದ ಗಡಿಯನ್ನು ಮುಟ್ಟಿದ ಕೂಡಲೆ, ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ನರಸಿಂಹ ಅಯ್ಯಂಗಾರ್ಯರು ಹಾರವನ್ನು ಅರ್ಪಿಸಿದರು. ನಂತರ ಹೊಸ ಕೋಟೆ ಮಂಟಪದಲ್ಲಿ ಅರಮನೆ ಪುರೋಹಿತರಾದ ಶ್ರೀ ನಂಜುಂಡ ಶಾಸ್ತ್ರಿಗಳು ಹಾರವನ್ನು ಅರ್ಪಿಸಿದರು. ಗರ್ಗೇಶ್ವರಿಯಲ್ಲಿ ಮುಸಲ್ಮಾನ್ ಪ್ರಜೆಗಳು ತಮ್ಮ ರಾಜಭಕ್ತಿಯನ್ನು ಸಮರ್ಪಿಸಿದರು.

ಟಿ. ನರಸೀಪುರವನ್ನು ಪ್ರಭುಗಳು ತಲುಪಿದೊಡನೆಯೇ ಶ್ರೀ ಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನದವರು ಮಂಗಳವಾದ್ಯಗಳೊಡನೆ, ಪೂರ್ಣಕುಂಭ ಮತ್ತು ಫಲಮಂತ್ರಾಕ್ಷತೆಗಳನ್ನು ಅರ್ಪಿಸಿದರು.

೯-೩೦ ಗಂಟೆಗೆ ಶ್ರೀಮನ್ಮಹಾರಾಜರವರು ಸಿಲ್ಕ್ ಫಿಲೇಚರ್ ಕಾರ್ಖಾನೆಗೆ ದಯಮಾಡಿಸಿದರು. ಕಂಪನಿಯ ಚೇರ್ಮನ್ ರಾವ್ ರಾಜಸೇವಾ ಪ್ರಸಕ್ತ ಶ್ರೀ ಎನ್. ರಾಮರಾಯರು ಹಾರತುರಾಯಿಗಳನ್ನು ಅರ್ಪಿಸಿ, ಕಂಪನಿಯ ಡೈರೆಕ್ಟರುಗಳಾದ ಧರ್ಮ ಪ್ರಕಾಶ ವೆಂಕಟಾಚಲಯ್ಯರು, ಶ್ರೀ ಕೃಷ್ಣಸ್ವಾಮಿ ಮತ್ತು ಶ್ರೀ ಬಸವಣ್ಣದೇವರುಗಳನ್ನು ಪರಿಚಯ ಮಾಡಿಕೊಟ್ಟರು. ಅನಂತರ ಪ್ರಭುಗಳು ೧೦ ನಿಮಿಷಗಳ ಕಾಲ ಕಾರ್ಖಾನೆಗಳ ಕೆಲಸಕಾರ್ಯಗಳನ್ನು ಪರಿಶೀಲಿಸಿದರು.

ತಳಿರು ತೋರಣಗಳು ಮತ್ತು ಭವ್ಯವಾದ ಅನೇಕ ಮಂಟಪಗಳಿಂದ ಅಲಂಕೃತವಾಗಿದ್ದ ನಗರದೊಳಗೆ ಮಹಾಪ್ರಭುಗಳು ಪ್ರವೇಶಿಸಿದರು. ರಸ್ತೆಯ ಅಕ್ಕಪಕ್ಕದಲ್ಲಿ ಸಹಸ್ರಾರು ಜನಗಳು ಕಿಕ್ಕಿರಿದು ತುಂಬಿದ್ದರು. ತಾಲ್ಲೂಕಿನ ಪ್ರಜಾಪ್ರತಿನಿಧಿ ಸಭೆ ಸದಸ್ಯರುಗಳ ಪರವಾಗಿ ರಾಜಧಾನಿಯ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಮಂಟಪದಲ್ಲಿ, ಹಾರವನ್ನು ಅರ್ಪಿಸಿದರು. ಪೌರಸಭೆಯ ಮಂಟಪದಲ್ಲಿ, ಪೌರಸಭಾ ಉಪಾಧ್ಯಕ್ಷರಾದ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ಯರು ಬಿನ್ನವತ್ತಳೆಯನ್ನು ಬೆಳ್ಳಿಯ ಕರಂಡದಲ್ಲಿ ಅರ್ಪಿಸಿದರು. ಮಹಾಪ್ರಭುಗಳು ಈರೀತಿ ಉತ್ತರವಿತ್ತರು:-

ಪ್ರಭುಗಳ ಉತ್ತರ

ನಿಮ್ಮ ಊರಿಗೆ ಬಂದಿರುವುದು ನಮ್ಮ ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡಿದೆ. ರಾಜಭಕ್ತಿಯುಳ್ಳವರಾದ ಮತ್ತು ನಮಗೆ ಪ್ರೀತಿಪಾತ್ರರಾದ ನಮ್ಮ ಪ್ರಜೆಗಳೆಲ್ಲ ಇಷ್ಟುಮಂದಿ ಇಲ್ಲಿ ನೆರೆದಿರುವುದನ್ನು ನೋಡಿ ನಮ್ಮ ಸಂತೋಷವು ಮತ್ತಷ್ಟು ಅಧಿಕವಾಗಿದೆ.

ಕಾವೇರಿ ಮತ್ತು ಕಪಿಲಾ ನದಿಗಳ ಸಂಗಮದಲ್ಲಿರುವ ಈ ಕ್ಷೇತ್ರವು ಬಹಳ ಪವಿತ್ರವಾದುದೆಂದು ನೆನೆವಲಿನಿಂದಲೂ ಭಾವನೆ ಇದೆ. ಕಾವೇರಿ ನಾಲೆಗಳ ಅನುಕೂಲದಿಂದ ಈ ತಾಲ್ಲೂಕು ನಮ್ಮ ಸಂಸ್ಥಾನದಲ್ಲಿ ಹೆಚ್ಚಾಗಿ ಬತ್ತ ಬೆಳೆಯುವ ಪ್ರದೇಶಗಳಲ್ಲೊಂದಾಗಿದೆ. ಉಪ್ಪುನೀರಾವರಿ ವ್ಯವಸಾಯವೂ ಹೆಚ್ಚಾಗಿ ಅಭಿವೃದ್ಧಿಯಾಗಿರುವುದರಿಂದ ಈ ತಾಲ್ಲೂಕಿನ ವ್ಯವಸಾಯದ ವರಮಾನ ಸಾಧನಗಳು ಹೆಚ್ಚಿದಂತಾಗಿದೆ. ಇತ್ತೀಚಿನ ವರೆಗೂ ಮಾರ್ಗದ ಸೌಕರ್ಯಗಳು ಸಾಕಾದಷ್ಟಿರಲಿಲ್ಲ. ಈಚೆಗೆ ಕಾವೇರಿ ಮತ್ತು ಕಪಿಲಾ ನದಿಗಳಿಗೆ ಸೇತುವೆಗಳನ್ನು ಕಟ್ಟಿಸಿರುವುದರಿಂದ ಆ ಕೊರತೆಯು ಪರಿಹಾರವಾಗಿ, ಈಗ ಮೈಸೂರು ಡಿಸ್ಟ್ರಿಕ್ಟಿನ ಇತರ ಸ್ಥಳಗಳಿಗೂ ಮತ್ತು ಪಕ್ಕದ ಮದರಾಸು ಪ್ರಾಂತಕ್ಕೂ ಸಂಚಾರದ ಸೌಕರ್ಯವೇರ್ಪಟ್ಟಿರುತ್ತದೆ. ನಾವು ಈಗತಾನೇ ನೋಡಿಬಂದ "ಫಿಲೇಚರ್" ಕಾರ್ಖಾನೆಯು ಈ ಪ್ರದೇಶದಲ್ಲಿ ಹೆಚ್ಚಾಗಿ ನಡೆಯುತ್ತಿರುವ ರೇಷ್ಮೆ ಕೈಗಾರಿಕೆಗೆ ಬಹಳ ಸಹಾಯವಾಗಿದೆ.

ಕಳೆದ ಕೆಲವು ವರ್ಷಗಳಲ್ಲಿ ಈ ಊರಿಗೆ ದೊರೆತಿರುವ ಆ ರೋಗ್ಯ ಸೌಕರ್ಯಗಳಿಂದಲೂ ಮತ್ತು ಇತರ ಕೆಲವು ಸೌಕರ್ಯಗಳಿಂದಲೂ ಪ್ರಯೋಜನವಾಗಿರುವುದನ್ನು ತಿಳಿದು ಗ್ರಹಿಸಿರುವುದು ನಮ್ಮ ಮನಸ್ಸಿಗೆ ಸಂತೋಷವನ್ನುಂಟುಮಾಡಿದೆ. ಈ ಊರಿನಲ್ಲಿ ಕೈಗಾರಿಕೆಯ ಕಾರ್ಯಕಲಾಪಗಳು ಹೆಚ್ಚಿರುವುದರಿಂದ, ನೀರು ಸರಬರಾಯಿ, ಮತ್ತು ಚರಂಡಿ ಏರ್ಪಾಡು, ವೈದ್ಯ ಸಹಾಯ ಮತ್ತು ವಿದ್ಯಾಭ್ಯಾಸ—ಈ ವಿಚಾರಗಳಲ್ಲಿ ಈ ಊರಿನ ಸೌಕರ್ಯಗಳನ್ನು ಹೆಚ್ಚಿಸಬೇಕೆಂದು ಪೌರಸಭೆಯವರು ಅಭಿಲಾಷೆಪಡುತ್ತಿರುವುದು ಸಹಜವಾಗಿಯೇ ಇದೆ. ಚರಂಡಿ ಏರ್ಪಾಡಿನ ಸಂಬಂಧದಲ್ಲಿ ಅಂದಾಜುಗಳು ತಯಾರಾಗುತ್ತಿವೆಯೆಂದು ತಿಳಿದು ಬಂದಿದೆ. ನೀರು ಸರಬರಾಯಿ ವಿಷಯವನ್ನು ಅಂತ್ಯಗೊಳಿಸುವುದಕ್ಕೆ ಹಣವನ್ನೊದಗಿಸುವುದರ ಸಂಬಂಧವಾಗಿ, ಸೂಕ್ತವಾದ ಸಲಹೆಗಳನ್ನು ಪೌರಸಭೆಯವರು ಒಪ್ಪಿಸುವವರೆಗೂ, ಮುನ್ನ ಮುಗಿಯುವವರೆಗೂ ಆ ವಿಚಾರವನ್ನು ಕೈಗೊಳ್ಳಲು ಸಾಧ್ಯವಿಲ್ಲವೆಂದು ತೋರುತ್ತದೆ. ನಿಮ್ಮ ಬಿನ್ನವತ್ತಳೆಯಲ್ಲಿ ಸೂಚಿಸಿರುವ ರಾಜಭಕ್ತಿ ವಿಶ್ವಾಸಗಳಿಗಾಗಿ ನಿಮ್ಮನ್ನು ವಂದಿಸಲಿಚ್ಛಿಸುತ್ತೇವೆ. ಈ ಊರು ದಿನದಿನವೂ ಅಭಿವೃದ್ಧಿಹೊಂದಿ, ಜನರ ಸುಖ ಸಂತೋಷಗಳು ಹೆಚ್ಚುತ್ತ ಬರಲೆಂದು ನಾವು ಹಾರೈಸುತ್ತೇವೆ.

ಅನಂತರ ಮಹಾಪ್ರಭುಗಳು ಮೂಗೂರು ಮತ್ತು ಸಂತೇಮರಹಳ್ಳಿಗೆ ಭೇಟಿ ಕೊಟ್ಟು ಸಹಸ್ರಾರು ಜನಗಳಿಗೆ ದರ್ಶನವಿತ್ತು ಅಲ್ಲಿಂದ ಕುದೇರಿಗೆ ಪ್ರಯಾಣ ಬೆಳೆಸಿದರು.

ಕುದೇರಿನಲ್ಲಿ ಶಂಕುಸ್ಥಾಪನೆ

ಕುದೇರಿನಲ್ಲಿ ಅಲ್ಲಿನ ಕರ್ಮಾಂತರ ಸಂಘದವರು ಮತ್ತು ಮೈಸೂರು ಜಿಲ್ಲಾ ರಿಜಿಸ್ಟ್ರೇಷನ್ ರಕ್ಷಣಾ ದಳದ ಸಂಸ್ಥೆಯವರು ತಮ್ಮ ಮಂಟಪಗಳಲ್ಲಿ ಹಾರವನ್ನು ಅರ್ಪಿಸಿದರು. ಅಲ್ಲಿಂದ ಕುದೇರು ಬಡಾವಣೆಯ ಜಯಸ್ತಂಭದ ಹತ್ತಿರ ನಿರ್ಮಿಸಿದ್ದ ಮಂಟಪಕ್ಕೆ ದಯಮಾಡಿಸಿ, ಪ್ರಭುಗಳು ಊರಿನ ಹೊಸ ಬಡಾವಣೆಯ ಶಂಕುಸ್ಥಾಪನೆಯನ್ನು ನೆರವೇರಿಸಿ [illegible] ಶ್ರೀ [illegible] ನವರು ಬಿನ್ನವತ್ತಳೆಯನ್ನು [illegible] ಕರಂಡದಲ್ಲಿ ಅರ್ಪಿಸಿದರು.

[illegible], ಸಂತೇಮರಹಳ್ಳಿ, [illegible] ಕೊಂಡು, ರಾಜಧಾನಿಗೆ ವಾಪಸು ಬಂದರು.

ಬಾಲ್ಕನ್ನಿಗೆ ನಾಜಿ ಸೈನ್ಯ ರವಾನೆ

ಪ್ರಾಮುಖ್ಯವಾದ ಜರ್ಮನ್ ಸೇನಾ ದಳಗಳು ಬಾಲ್ಕನ್ನಿಗೆ ಹೋಗಿವೆ. ಕೂಡಲೇ ಅವು ಕಾರ್ಯಾಚರಣೆ ನಡೆಸತೊಡಗುತ್ತವೆ. ಬಾಲ್ಕನ್ಸನ್ನು ಸಂಪೂರ್ಣವಾಗಿ ನಾಶ ಮಾಡಲು ಘೋರ ಕಾರ್ಯಕ್ರಮಗಳು ಕೈಗೊಳ್ಳಲ್ಪಡುತ್ತವೆಂದು ಜರ್ಮನ್ ವಾರ್ತಾ ಸಂಸ್ಥೆಯು ತಿಳಿಸುತ್ತದೆ.

ಯುದ್ಧ ಎಷ್ಟು ದಿವಸ?

ಅಮೇರಿಕದ ಒಂದು ನೂರು ಬ್ಯಾಂಕುಗಳ ಅಧ್ಯಕ್ಷರುಗಳಿಗೆ 'ಫೈನಾನ್ಸ್' ಎಂಬ ಪತ್ರಿಕೆಯು ಪ್ರಶ್ನೆಯಾಕಿ, "ಈ ಯುದ್ಧವು ಎಷ್ಟು ದಿವಸ ನಡೆಯುತ್ತದೆ" ಎಂದು ಕೇಳಿತ್ತು. ೧೯೪೩ ನೇ ಇಸವಿಯೊಳಗೆ ಜರ್ಮನಿ ಪರಾಜಯ ಹೊಂದುತ್ತದೆ. ಜಪಾನು ೬ ತಿಂಗಳಿಂದ ಹಿಡಿದು ೩ ವರ್ಷ ಕಾಲ ತಳ್ಳುತ್ತದೆ ಎಂಬುದಾಗಿ ಉತ್ತರ ಬಂದಿದೆ.

ಜರ್ಮನಿ ರಷ್ಯಾಗೆ ಅಡ್ಡಿ

ಜರ್ಮನಿಯ ಕ್ರಿಸ್ಸ್ ಕಾರ್ಖಾನೆಯವರು ಈಚೆಗೆ ಉಂಟಾದ ಆಪತ್ತುಗಳಿಂದ ತುರ್ತಾಗಿ ಯುದ್ಧ ಸಾಮಗ್ರಿಗಳನ್ನು ಕಳುಹಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಮುಕ್ತ ವಾಯು ಸೋಫಿಯಾದ ಮೇಲೆ ನಾತ್ಸಿ ವಿಮಾನಗಳು ಧಾಳಿ ನಡೆಸಿ ೩೦ ಇಂಜಿನುಗಳನ್ನೂ, ೩೦೦ ಟ್ಯಾಂಕುಗಳನ್ನೂ ನಾಶಮಾಡಿದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಪೌರಸಭೆ ವಿಶೇಷ ಮೀಟಿಂಗ್

ಮೈಸೂರು ೧೭.

ಮೈಸೂರು ಪೌರಸಭೆಗೆ ಹೊಸ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ವಿಷಯವು ಬಹಳ ದಿನಗಳಿಂದ ಬಾಕಿ ಇರುವುದರಿಂದ ಮುಂದಿನ ವರ್ಷದಿಂದ ಅದನ್ನು ಕೊಡ ಬೇಕೆಂತೆ ಸರ್ಕಾರದವರನ್ನು ಕೋರಲು ಈ ತಿಂಗಳು ೨೩ ನೇ ತಾ|| ೧೧ ಕ್ಕೆ ಮೈಸೂರು ಪೌರಸಭೆಯ ವಿಶೇಷ ಮೀಟಿಂಗನ್ನು ಏರ್ಪಡಿಸಲಾಗಿದೆ.

ವಿಚಕ್ಷಣೆ ಇಲ್ಲ

ದೊಡ್ಡವರು ಬೇಗನಾಗುತ್ತಲು ಕೆಲಸಗಳಿಗೆ ಹೋಗುತ್ತಾರೆ. ಹುಡುಗರನ್ನು ಡಿಪೋಕ್ಕೆ ಕಳುಹಿಸಿದರೆ ಕೊಡುವುದಿಲ್ಲ ತಳ್ಳುತ್ತಾರೆ. ಜನಗಳಿಗೆ ಸರಿಯಾಗಿ ದೊರೆತರೆ ಸಾಕೆಂಬ ಆತುರವಾಗಿದೆ. ಸೀಮೆಯೆಣ್ಣೆ ಕೊಡುವವರು ಮನಸ್ಸಿಗೆ ಬಂದಂತೆ. ಈ ಭಾಗದಲ್ಲಿ ಡೆಪ್ಯುಟಿ ಕಮೀಷನರ್‌ರವರು ಅನುಕೂಲಪಡಿಸಬೇಕೆಂದು, ಶ್ರೀ [illegible] ರಂಗಸ್ವಾಮಯ್ಯಂಗಾರ್ಯರು ಬರೆಯುತ್ತಾರೆ.

ವಿವಿಧ ವಿನೋದಾವಳಿ

ಮೈಸೂರು ದೇಶೀಯ ವಿದ್ಯಾಶಾಲೆ ಸಹಾಯಾರ್ಥವಾಗಿ ಇದೇ ಡಿಸೆಂಬರ್ ೧೭ನೇ ತಾ|| ಬುಧವಾರ ಸಾಯಂಕಾಲ ೬ ಘಂಟೆಗೆ ಟೌನ್‌ಹಾಲಿನಲ್ಲಿ ಮೈಸೂರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ವಿವಿಧ ವಿನೋದಾವಳಿಯನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮ:-ಪ್ರಾರ್ಥನೆ, ಸಂಗೀತ: ಆಸ್ಥಾನ ಸಂಗೀತರತ್ನ ಟಿ ಚೌಡಯ್ಯನವರ ಪಿಟೀಲು, ನಾಟಕ : 'ಬೇಗನ್ನತ್ತಾರೆ': ಪ್ರಭಾತ್ ಆಸೋಸಿಯೇಷನ್‌ರವರಿಂದ, ನೃತ್ಯ: ನಾಟ್ಯಾಚಾರ್ಯ ಶ್ರೀ ಮಹಾದೇವನ್ ಮತ್ತು ಶ್ರೀಮತಿ ಶಾಂತಾರವರು, ಚಿತ್ರ ಗೀತಗಳು, ಅಧ್ಯಕ್ಷರ ಭಾಷಣ ಮತ್ತು ಮಂಗಳ. ಸರ್ವರೂ ಉದಾರ ಪ್ರಯಮಿಂದ ಸಹಾಯಮಾಡಬೇಕಾಗಿ ಪ್ರಾರ್ಥಿಸಲಾಗಿದೆ.

ಟರ್ಕಿ ರಷ್ಯಾ ಒಪ್ಪಂದ

ರಷ್ಯಾ—ಟರ್ಕಿಯ ಮೈತ್ರಿಯುತ ಒಪ್ಪಂದವು ಸದ್ಯದಲ್ಲೇ ಆಗಬಹುದೆಂದು ಟರ್ಕಿಯಲ್ಲಿ ಹೇಳಲಾಗಿದೆ. ಈ ಬಗ್ಗೆ ಪ್ರೂರ್ವೋತ್ತರಗಳನ್ನು ಕೈರೋವಿನಲ್ಲಿ ಚರ್ಚಿಸಲಾಯಿತು.

ಪೆಸಿಫಿಕ್ ಯುದ್ಧಕ್ಕೆ ಸಿದ್ಧ

ಪೆಸಿಫಿಕ್ ಸಾಗರದಲ್ಲಿ ಘೋರ ದಂಡಯಾತ್ರೆಯನ್ನು ನಡೆಸುವುದಕ್ಕೆ ಪೂರ್ವಸಿದ್ಧತೆಗಳೆಲ್ಲವೂ ಆಗಿದೆ. ಕೆಲವು ಬಲವಾದ ಪೆಟ್ಟುಗಳನ್ನು ಕೊಡಲು ಸಿದ್ಧರಾಗುತ್ತಿದ್ದೇವೆ ಎಂದು ಅಮೇರಿಕಾ ನೌಕಾ ಕಾರ್ಯದರ್ಶಿ ಶ್ರೀ ನಾಕ್ಸರು ಹೇಳಿದ್ದಾರೆ.

ಬಿಸಿ ಬಿಸಿ ಸುದ್ದಿ

ನ್ಯಾಯವಿಧಾಯಕ ಸಭೆ

ಸ್ವಂ ವ. ಫೋ] ಬೆಂಗಳೂರು ೧೭

ಈ ದಿನ ನ್ಯಾಯವಿಧಾಯಕ ಸಭೆಯು ಕಾರ್ಯಕಲಾಪಗಳನ್ನು ಪರಿಶೀಲಿಸಲು ಬ್ರಿಟಿಷ್ [illegible] ವರಾನ್ನ [illegible] ದಿನ.

[illegible] ಸಭೆಯ [illegible] ದೇಶ ಲೀಡರ್ ಆಗಿದ್ದ ಶ್ರೀ [illegible] ರಾಜ್ಯ [illegible] ಸ್ಥಾನದಲ್ಲಿ [illegible] ಶ್ರೀ ಹೆಚ್. ಎಸ್. [illegible] ಬಹುಮತದಿಂದ [illegible] ಆರಿಸಲ್ಪಟ್ಟಿದ್ದಾರೆ. (ಹಿಂದಿನ ಪುಟ ನೋಡಿ)

ಮಿಲಿಟರಿ ಲಾರಿಗಳ ಹಾವಳಿ

ರಾಜಧಾನಿಯ ರಸ್ತೆಗಳಲ್ಲಿ ಮಿಲಿಟರಿ ಲಾರಿಗಳ ಸಂಚಾರದಿಂದ ಅನೇಕ ಅಪಘಾತಗಳು ಸಂಭವಿಸುತ್ತಿರುವುದರಿಂದ ಈ ಲಾರಿಗಳು ಊರಿನ ಹೊರಗಡೆಯಲ್ಲಿಯೇ ಹೋಗುವಂತೆಯೂ ಮೃತಪಟ್ಟವರ ಕುಟುಂಬಗಳಿಗೆ ಸೂಕ್ತವಾದ ಪರಿಹಾರ ದ್ರವ್ಯವನ್ನು ಕೊಡುವಂತೆಯೂ ಸರ್ಕಾರದವರು ಏರ್ಪಡಿಸಬೇಕೆಂಬ ನಿರ್ಣಯವನ್ನು ಶ್ರೀ ಜಿ ಜಿ ನಾಯ್ಡುರವರು ಈ ತಿಂಗಳು ೨೩ ನೇ ತಾ॥ ನಡೆಯುವ ಪೌರ ಸಭೆಯ ಮೀಟಿಂಗಿಗೆ ಕಳುಹಿಸಿದ್ದಾರೆ

ವಿದ್ಯಾಭ್ಯಾಸದ ತಿಂಗಳನ್ನು ನಗರ ನಿವಾಸಿಗಳ ಮೇಲೆ ಹಾಕದೆ ಇರಬೇಕೆಂಬ ವಿಷಯದಲ್ಲಿ ಪೌರಸಭೆಯು ೬ ತಿಂಗಳ ಹಿಂದೆ ಮಾಡಿದ ನಿರ್ಣಯದ ಮೇಲೆ ಸರ್ಕಾರದವರು ಯಾವ ಹುಕುಮನ್ನೂ ಮಾಡಿಲ್ಲವಾದ್ದರಿಂದ ಅದನ್ನು ವಸೂಲು ಮಾಡಕೂಡದೆಂದು ಶ್ರೀ ಎಂ ಆರ್. ಸಿ ಬಸಪ್ಪನವರು ಮತ್ತೊಂದು ರೆಸಲ್ಯೂಷನ್ನನ್ನು ಸೂಚಿಸಿದ್ದಾರೆ.

ಆಕ್ಷ್ಯೂಪ್ ಮಾಡಿಕೊಂಡ ಮನೆಗಳ ಮಾಲೀಕರಿಗೆ, ಬೇರೆ ಮನೆಯಿಲ್ಲದಿದ್ದರೆ, ಮನೆ ಕಟ್ಟಿಕೊಳ್ಳಲು ಆಕ್ಷ್ಯೂಪ್ ಮಾಡುವ ಮೊದಲು ಉಚಿತ ನಿವೇಶನಗಳನ್ನು ಟ್ರಸ್ಟ್‌ಬೋರ್ಡಿನವರು ಕೊಡಬೇಕೆಂಬ ನಿರ್ಣಯವನ್ನು ಶ್ರೀ ಇ ಪಿ ನಂಜಪ್ಪನವರು ತಂದಿದ್ದಾರೆ

ಆಕಾರದಂತೆಯೇ ನೌಕರ ಲೀವನ್ನು ಜಾರಿಗೆ ತರಬೇಕೆಂಬ ನಿರ್ಣಯವನ್ನು ಶ್ರೀ ಜನಾರ್ದನ ನಾಯ್ಡುರವರು ಕಳಿಸಿದ್ದಾರೆ

Edited, printed and published by A. R. Nagarajan, at the Sadhvi Press, D Subbiah Road, Mysore.

ದಿವಾನರ ಪರ್ಸನಲ್ ಅಸಿಸ್ಟೆಂಟ್

ಸ್ವಂ ವ.] ಬೆಂಗಳೂರು ೧೫

ಮೈಸೂರು ಶ್ರೀಮನ್ಮಹಾರಾಜರವರ ಸ್ವಂತ ಕಾಲಾಳು ಬಲದಲ್ಲಿರುವ ಲೆಫ್ಟಿನೆಂಟ್ ಎಸ್. ನರಸಿಂಹರಾವ್‌ರವರನ್ನು ದಿವಾನರವರ ಪರ್ಸನಲ್ ಅಸಿಸ್ಟೆಂಟರನ್ನಾಗಿ ನೇಮಿಸಿದೆ ಇವರು ದಿವಾನರವರ ಪುತ್ರರು

ಸ್ಥಳೀಯ ಸಚಿವರ ಸಂಚಾರ.

ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಹೆಚ್ ಬಿ ಗುಂಡಪ್ಪ ಗೌಡರವರು ಈ ತಿಂಗಳು ೨೨ ಮತ್ತು ೨೩ ನೇ ತಾ॥ ಗಳಲ್ಲಿ ಬೆಂಗಳೂರು ಜಿಲ್ಲಾ ಆನೇಕಲ್ ತಾಲ್ಲೂಕು ಸರ್ಜಾಪುರದಲ್ಲಿ ಕಟ್ಟಲಾಗುವ ಪಶು ವೈದ್ಯಶಾಲೆಯ ಕಟ್ಟಡದ ಶಂಕು ಸ್ಥಾಪನೆ ಮಾಡುವರು.

ನ್ಯೂಸ್ ಪ್ರಿಂಟ್ ದುರುಪಯೋಗ

ಬೆಂಗಳೂರಿನ ಪತ್ರಿಕೆಯ ಮಾಜಿ ಸಂಪಾದಕರಾದ ಶ್ರೀ ಟಿ ಪಿ. ರಾಮಣ್ಣಶೆಟ್ಟಿ ಎಂಬುವರು ನ್ಯೂಸ್ ಪ್ರಿಂಟ್ ಬಗ್ಗೆ ತಪ್ಪು ವರದಿಯನ್ನು ಕೊಟ್ಟು ನ್ಯೂಸ್ ಪ್ರಿಂಟ್ ದುರುಪಯೋಗ ಪಡಿಸಿದ್ದರೆಂಬುದಕ್ಕಾಗಿ, ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವರಿಗೆ ಮೂರು ಆಪಾದನೆಗಳಲ್ಲಿ ತಲಾ ೫೦ ರೂ ನಂತೆ ಒಟ್ಟು ೧೫೦ ರೂ. ಜುಲ್ಮಾನೆ ವಿಧಿಸಲಾಯಿತು.

ಕೃಷ್ಣರಾಜೇಂದ್ರ ಮಿಲ್

ಕೆಲಸಗಾರರ ಪಾಲೆಯ ಸಚಿವರನ್ನು ಮೈಸೂರು ಕೃಷ್ಣರಾಜೇಂದ್ರ ಗಿರಣಿಕೆಲಸಗಾರರ ಸಂಘದ ಉಪಾಧ್ಯಕ್ಷರಾದ ಶ್ರೀ ಮುದ್ದೇಗೌಡರು ಭೇಟಿಮಾಡಿ ತಮ್ಮ ಕುಂದುಕೊರತೆಗಳನ್ನು ತಿಳಿಸಿದರು. ಶ್ರೀ ಎಲ್ ಎಸ್ ರಾಜುರವರು ಸಂಘದ ಅಧ್ಯಕ್ಷತೆಗೆ ರಾಜೀನಾಮೆ ಇತ್ತಿರುವರು.

ಆಯುರ್ವೇದ ಆಸ್ಪತ್ರೆಗೆ ಸಹಾಯ

ಬೆಂಗಳೂರು ನಗರದಲ್ಲಿ ಕಟ್ಟಲ್ಪಡುತ್ತಿರುವ ಆಯುರ್ವೇದ ಆಸ್ಪತ್ರೆಗೆ ಇದುವರೆಗೆ ಮಹಾಜನಗಳಿಂದ ಒಟ್ಟು ೩,೨೫,೦೦೦ ರೂ. ಗಳು ದ್ರವ್ಯ ಸಹಾಯ ಬಂದಿರುವುದಾಗಿ ಗೊತ್ತಾಗಿದೆ.

ಭದ್ರಾವತಿ ಸುದ್ದಿ

ಭದ್ರಾವತಿ ಕೂಲಿಗಾರರ ಸಭೆ ೧೩ ನೇ ತಾ॥ ಶ್ರೀ ಮುದ್ದುಸ್ವಾಮಿ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೂಲಿಗಾರರಿಗೋಸ್ಕರ ಪ್ರತ್ಯೇಕ ಆಹಾರ ಡಿಪೋವನ್ನು ತೆರೆಯುವಂತೆ ಪ್ರಾರ್ಥಿಸುವ ಮತ್ತು ಹಿಂದೆ ಜಾರಿ ಮಾಡಲಾಗಿದ್ದ ಭಾ ರ. ಕಾ ೨೬ ನೇ ವಿಧಿಯನ್ನು, ಶಾಂತಿಸ್ಥಿತಿಯಿರುವುದರಿಂದ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯಗಳಾದವು.

ಮಿಲಿಟರಿಯವರಿಗೆ ಘಾಯ

ಶಿವಮೊಗ್ಗ ಜಿಲ್ಲೆಯ ಸಾಗರದ ಬಳಿ ಕಳೆದ ೧೩ ನೇ ತಾ॥ ಮಿಲಿಟರಿ ಲಾರಿಯೊಂದು ಆಕಸ್ಮಿಕಕ್ಕೆ ತುತ್ತಾಗಿ ೧೪ ಜನ ಮಿಲಿಟರಿಯವರು ಘಾಯಗೊಂಡರು. ಕೂಡಲೇ ಅವರುಗಳನ್ನು ಶಿವಮೊಗ್ಗಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸಾಗಿಸಲಾಯಿತು. ಅವರ ಪೈಕಿ ೪ ೫ ಜನರ ಸ್ಥಿತಿಯು ಚಿಂತಾಜನಕವಾಗಿದೆ.

ಯಾವಾಗಲೂ ಕೊಳ್ಳಿರಿ!

ಏನನ್ನು ? :: ಎಲ್ಲಿ ?

ಆಶ್ಚರ್ಯಜನಕ ಬಗೆಯ, ಮನನೊಪ್ಪುವ ಉಡಿಗೆ ತೊಡಿಗೆಗಳು

ಸ್ಟಾನ್ಲಿ ಸ್ಟೋರ್ಸ್

ನಾಗಪ್ರಕಾಶ ಬಿಲ್ಡಿಂಗ್ಸ್, ಷಾಪ್ ನಂ ೯ ಮಾರ್ಕೆಟ್ ಬಳಿ, ಮೈಸೂರು.

ಬಿಸಿ ಬಿಸಿ ಸುದ್ದಿ

(ಹಿಂದಿನ ಪುಟದಿಂದ)

ಶಿಸಿಡೆಂಟರು ನ್ಯಾಯವಿಧಾಯಕ ಸಭೆಗೆ ಭೇಟಿಕೊಟ್ಟದ್ದು ಇದೇ ಮೊಟ್ಟಮೊದಲು

ಆಹಾರ ಪ್ರಶ್ನೆ.

ಆಹಾರ ಸಚಿವರು ಈರೀತಿ ಭಾಷಣ ಮಾಡಿದರು— ಆಹಾರವನ್ನು ತಲಾ ಅರ್ಧ ಸೇರಿನಿಂದ ಒಂದು ಸೇರಿಗೆ ಹೆಚ್ಚಿಸಬೇಕೆಂದು ಕೋರುತ್ತಾರೆ. ಹಳ್ಳಿಕಡೆ ಹೆಚ್ಚಿನ ಬೆಳೆ ಆಗುತ್ತೆ. ಇನ್ನೊಂದು ತಿಂಗಳನಂತರ ಹೊಟ್ಟೆತುಂಬ ಆಹಾರದ ತೊಂದರೆ ಇರುವುದಿಲ್ಲವೆಂಬ ಅಭಿಪ್ರಾಯ ಹುಟ್ಟಿದೆ ಆಗುವ ಬೆಳೆ, ಜನಸಂಖ್ಯೆ ನೋಡಿ ಹಂಚಿದರೆ ಅರ್ಧ ಸೇರಿಗಿಂತ ಹೆಚ್ಚು ಕೊಡಲಾಗುವುದಿಲ್ಲ ಅರ್ಧ್ಯಕ್ಕರ್ಧ ಜನರನ್ನು ಉಪವಾಸ ಮಾಡಿಸಬೇಕಾಗುತ್ತೆ ಅಥವಾ ಭೂಕಂಪವಾಗುವಾಗ ಮನೆಬಿಟ್ಟು ಹೊರಗೆ ಓಡಿಹೋಗುವಂತೆ ಆಗುತ್ತೆ ಅಥವಾ ಕೋಲಾರದ ಚಿನ್ನದಲ್ಲಿ ಪ್ರತಿಯೊಬ್ಬರೂ ಒಂದೊಂದು ಉಂಗುರ ಮಾಡಿಸಿಕೊಳ್ಳುತ್ತೀನೆಂದು ಹೇಳಿದ ಹಾಗಾಗುತ್ತೆ ಎಂದರು

ಹೆಚ್ಚು ಬೆಳೆಯಿರಿ ಎಂದು ಹೇಳುತ್ತ ಸರ್ಕಾರದವರು ಕಪ್ಪು ಊಟ ಮಾಡಿರೆಂದು ಹೇಳುವುದು ಆಶ್ಚರ್ಯವಾಗಿದೆಯೆಂದು ಶ್ರೀ ಕೆ. ಮರಿಯಪ್ಪ ಮುನಿಯಾದವರು ಹೇಳಿದರು. ಧಾನ್ಯಗಳನ್ನು ಸಂಗ್ರಹಿಸಿ ಉಚಿತವಾಗಿ ಜನರಿಗೆ ಹಂಚಲು ಯೋಚನೆಯನ್ನು ತಯಾರಿಸಲು ಪ್ರಜಾಪ್ರತಿನಿಧಿಗಳುಳ್ಳ ಸಮಿತಿಯನ್ನು ರಚಿಸಬೇಕೆಂದು ಹೇಳಿದರು.

ವರ್ತಕರ ಸಹಕಾರ ಪಡೆದು ಹಂಚಿಕೆ ನಡಿಸಲು ಸರ್ಕಾರವು ನಿರ್ಧರಿಸಿದೆ

ಚರ್ಚೆ ನಡೆಯುತ್ತಿದೆ

ಕಲ್ಕತ್ತಾ ಧಾಳಿ ಪರಿಣಾಮ

ಕಳೆದ ೫ ನೇ ತಾ॥ ಕಲ್ಕತ್ತಾದ ಮೇಲೆ ನಡೆದ ದಾಳಿ, ಧಾಳಿಯ ಪರಿಣಾಮವಾಗಿ ಬಾಂಬು ಬಿದ್ದ ಸ್ಥಳಗಳಲ್ಲಿಯೂ ಆಸ್ಪತ್ರೆಗಳಲ್ಲಿಯೂ ಒಟ್ಟು ೩೩೪ ಮಂದಿ ಸತ್ತರೆಂಬುದಾಗಿ ಕಲ್ಕತ್ತಾ ಪೌರ ಸಭೆಯವರು ಪ್ರಕಟಿಸಿದ್ದಾರೆ

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧೧-೧೨-೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಓ. ಸೂ — ಚಿಲ್ಲರೆಯಾಗಿ ಕಲ್ಲುಸಕ್ಕರೆ, ಬೂರಾಸಕ್ಕರೆ ಸಿಕ್ಕುತ್ತವೆ ಇಲ್ಲೂ ಮತ್ತು ಸಂತೆಪೇಟೆ ಬ್ರಾಂಚ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

DAILY MATINEE AT 4-15 P.M.

NEW OPERA TALKIES

FROM 16—12—43

With TYRONE POWER & GENE TIERNEY

SON of FURY

The Story of "SON OF FURY" has all the exciting elements of "THE COUNT OF MONTE CRISTO"

NEXT CHANGE :— FROM 23-12-43

BHAKTARAJ (HINDI)

Starring —Vishnu Panth Pagnis, Vasanti, Dixit, Mubarak, E Billimoria, Kantilal etc.

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ನೋಡುವುದಲ್ಲದೆ ಅವರ ಚೆಳ್ಳನೆಯ ಬುರುಗು ರೋಮ ರಂಧ್ರಗಳನ್ನೆಲ್ಲಾ ಹೊಕ್ಕು ಮೈಮೇಲಿನ ಅಶುದ್ಧಿಯನ್ನೆಲ್ಲಾ ತೆಗೆದುಹಾಕುವುದು ಇದರ ಮೆತ್ತನೆಯ ಗುಣವೂ, ಸುಗಂಧವೂ ಚಿತ್ತಾಕರ್ಷಕವಾಗಿರುವುವು.

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೨] ಶುಕ್ರವಾರ ೧೭--೧೨--೪೩ [ಸಂಚಿಕೆ ೧೨೯

ರಷ್ಯನರ ಚಳಿಗಾಲದ ಧಾಳಿ ಆರಂಭ

ಕಸ್ತೂರಿಬಾಯಿಯವರನ್ನು ಬಿಡದಿರುವುದು ಅವರಿಗೇ ಕ್ಷೇಮ

ಕಾಶಿಯಲ್ಲಿ ಎರಡು ತಲೆ, ನಾಲ್ಕು ಕೈಗಳ ಶಿಶು ಜನನ

ಪ್ರಭುಗಳ ಪ್ರಯಾಣ

ಮೈಸೂರು ೧೭

ಈ ದಿನ ಬೆಳಗ್ಗೆ ೯ ಗಂಟೆಗೆ ಶ್ರೀಮನ್ಮಹಾರಾಜರವರು ತಿರುಮಕೂಡಲು ಮಾರ್ಗವಾಗಿ ಶಿವನ ಸಮುದ್ರಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ಅಥವಾ ಶಿಂಷಾಪುರದಲ್ಲಿ ವಿದ್ಯುಚ್ಛಕ್ತಿ ಕಾರ್ಯಾಲಯವನ್ನು ಪರಿಶೀಲಿಸುವರು. ಈ ದಿನ ಅಲ್ಲಿಯೇ ತಂಗಿದ್ದು ನಾಳೆ ರಾಜಧಾನಿಗೆ ಹಿಂದಿರುಗುವರು.

ನಗರ ಪರಿಶೀಲನೆ

ಮೈಸೂರು ಸಿಟಿ ಮುನ್ಸಿಪಲ್ ಕೌನ್ಸಿಲರುಗಳು ಮಂಡಿ ಮೊಹಲ್ಲಾ, ಸೊಪ್ಪಿನ ಕೇರಿ, ಉಪ್ಪಿನಕೇರಿ, ಕಾಮಾಟಗೇರಿ, ದೊಡ್ಡ ಮಸ್ಜಲಗೇರಿಗಳಲ್ಲಿ ಡಿಸೆಂಬರ್ ೧೮ನೇ ಶನಿವಾರ ಬೆಳಗ್ಗೆ ೯ ಗಂಟೆಯಿಂದ ೧೨ ಗಂಟೆಯ ವರೆಗೆ ಸಂಚರಿಸುತ್ತಾರೆ. ಅಲ್ಲಿನ ನಿವಾಸಿಗಳಿಗೆ ಕಂಡು ಬರುವ ಕುಂದು ಕೊರತೆಗಳನ್ನು ತಿಳಿಸಬೇಕಾಗಿ ಪ್ರಾರ್ಥಿಸಲಾಗಿದೆ.

ಚೀಣಾಕ್ಕೆ ಬಹುಮಾನ

ಹಿಂದೂಸ್ಥಾನದ ಶಿಲ್ಪ ಕಲೆಯ ನೂರು ಚಿತ್ರಗಳನ್ನು ಚೀಣಾಕ್ಕೆ ಕಳುಹಿಸುವ ಸಂಬಂಧದಲ್ಲಿ ಮೈಸೂರಿನಿಂದ ಸೋಮನಾಥಪುರ, ಹಳೇಬೀಡು, ಬೇಲೂರುಗಳ ದೇವಸ್ಥಾನಗಳ ಮತ್ತು ಶ್ರವಣಬೆಳಗೊಳದ ಗೋಮಟೇಶ್ವರ ಇವುಗಳ ಚಿತ್ರಗಳನ್ನು ಕಳುಹಿಸಿಕೊಡುವಂತೆ ಇಂಡಿಯಾ ಸರ್ಕಾರದ ಸಂಸ್ಥಾನ ಇಲಾಖಾಧಿಕಾರಿಗಳು ಮೈಸೂರಿನ ಇಲಾಖಾಧಿಕಾರಿಗಳಿಗೆ ಬರೆದಿದ್ದಾರೆ.

ನಾಜಿ ಫಿತೂರಿಗಾರರ ಭೇದನ

ರಯೋಡಿಜನೈರೋ ಎಂಬಲ್ಲಿಯ ಪೋಲೀಸರು ಜರ್ಮನಿಗೆ ಸಹಕಾರಿಗಳಾಗಿದ್ದ ಗೂಢಚಾರರ ಗುಂಪೊಂದನ್ನು ಭೇದಿಸಿದ್ದಾರೆ. ಎಂಟು ಜನ ಗಂಡಸರನ್ನೂ ನಾಲ್ವರು ಹೆಂಗಸರನ್ನೂ ದಸ್ತಗಿರಿ ಮಾಡಿದ್ದಾರೆ. ಯುದ್ಧ ಮುಖ್ಯಸ್ಥಾನಗಳ ಚಿತ್ರಗಳನ್ನು ಇವರು ದುರುಪಯೋಗಪಡಿಸುತ್ತಿದ್ದರೆಂದು ಹೇಳಲಾಗಿದೆ

ಅಮೆರಿ ಹೋಗಬೇಕು

ಇಂಡಿಯಾ ಸೆಕ್ರೆಟರಿ ಮಿ॥ ಅಮೆರಿಯವರನ್ನು ವಜಾ ಮಾಡಬೇಕೆಂದು ಇಂಗ್ಲೆಂಡಿನ ಅನೇಕ ಸಂಸ್ಥೆಗಳು ಕೇಳುತ್ತಿವೆ. ಇಂಡಿಯಾ ನೀತಿ ಮತ್ತು ಕ್ಷಾಮದ ಪ್ರಶ್ನೆಯಲ್ಲಿ ಅವರ ವರ್ತನೆಯೇ ಇದಕ್ಕೆ ಕಾರಣ.

ಮುಂದಿನ ನೂರು ಮುಖ್ಯ ದಿನಗಳು

ಪ್ರಪಂಚದ ಇತಿಹಾಸದಲ್ಲಿ ಇನ್ನು ಮುಂದ ಬರಲಿರುವ ೧೦೦ ದಿನಗಳು ಅತ್ಯಂತ ಮುಖ್ಯವಾಗಿರುತ್ತವೆ. ವಾಟರ್‌ಲೂ ಯುದ್ಧಕ್ಕೆ ಮುಂಚಿನ ನೂರು ದಿನಗಳಂತೆಯೇ ಇವು ಇವೆ. ಆಗ ನೆಪೋಲಿಯನ್ನನು ಪತನಹೊಂದಿದನು. ಈಗ ಹಿಟ್ಲರನ ಪತನವಾಗುವುದು. ನಾವು ಧೈರ್ಯದಿಂದಲೂ ಜಾಗ್ರತೆಯಿಂದಲೂ ಕೆಲಸ ಮಾಡಬೇಕು ಎಂದು ಆರ್ಚ್ [illegible]ಯವರು ಹೇಳಿದ್ದಾರೆ

ಚರ್ಚಿಲರಿಗೆ ನ್ಯುಮೋನಿಯಾ

ಬ್ರಿಟಿಷ್ ಪ್ರಧಾನ ಮಂತ್ರಿ ಮಿ॥ ಚರ್ಚಿಲರು ಚಳಿಯಿಂದ [illegible] ಹಿಡಿದಿರುವರೆಂದೂ, ಅವರ ಎಡ ಶ್ವಾಸಕೋಶದಲ್ಲಿ ನ್ಯುಮೋನಿಯಾ ಕಾಣಿಸಿಕೊಂಡಿದೆಯೆಂದೂ ಅವರ ಒಟ್ಟು ಆರೋಗ್ಯ [illegible] ಕರವಾಗಿದೆಯೆಂದೂ ತಿಳಿದುಬಂದಿದೆ

ಕಸ್ತೂರಿಬಾಯಿಯವರನ್ನು ಬಿಡುವುದಿಲ್ಲ

ಲಾರ್ಡ್ಸ್ ಸಭೆಯಲ್ಲಿ ನೆನ್ನೆ ದಿನ ಸ್ಟ್ರಾಬೋಲ್ಗಿಯವರು ಹಾಕಿದ ಪ್ರಶ್ನೆಗೆ ಉತ್ತರವಾಗಿ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರನ್ನು ಬಿಡುಗಡೆ ಮಾಡುವುದು ಸರ್ಕಾರದ ಉದ್ದೇಶವಲ್ಲವೆಂದೂ, ಅವರು ಈಗ ಇರುವ ಕಡೆಯೇ ಇದ್ದರೆ ಅವರಿಗೇ ಕ್ಷೇಮವೆಂದೂ ಉತ್ತರ ಕೊಡಲಾಯಿತು. ಇಂಡಿಯಾ ಸರ್ಕಾರದವರು ಈ ವಿಷಯವನ್ನು ಪರಿಶೀಲಿಸಿರೆಂದೂ ಬಹಳ ಅನುಭವಸ್ಥರಾದ ವೈದ್ಯರ ಸಹಾಯವು ಶ್ರೀಮತಿಯವರಿಗೆ ಕೊಡಲ್ಪಟ್ಟಿರುವುದರಿಂದ ಅವರು ಆ ಸ್ಥಳದಲ್ಲಿಯೇ ಇರುವುದು ಒಳ್ಳೆಯದೆಂದೂ ತಿಳಿಸಲಾಯಿತು.

೨ ತಲೆ ೪ ಕೈಗಳ ಮಗು

ಕಳೆದ ಸೋಮವಾರ ಕಾಶಿಯ ಒಳಿ [illegible]ಪುರದಲ್ಲಿ ಒಬ್ಬ ತರುಣಿಯು ಎರಡು ತಲೆ ನಾಲ್ಕು ಕೈಗಳುಳ್ಳ ಒಂದು ಮಗುವನ್ನು ಹೆತ್ತಳು. ದೇಹದ ಒಳಭಾಗಗಳೆಲ್ಲವೂ ಸಮವಾಗಿ, ರೀತಿಯಲ್ಲಿಯೇ ಇದ್ದುವು. ಮಗುವು ಸ್ವಲ್ಪ ಕಾಲ ಮಾತ್ರ ಬದುಕಿತ್ತು. ಈ ವಿಚಿತ್ರವನ್ನು ನೋಡಲು ಪ್ರೇಕ್ಷಕರು ತಂಡೋಪತಂಡವಾಗಿ ಹೋಗಿ ಬಂದರು

ಮದ್ರಾಸಿನಲ್ಲಿ ಪ್ರತಿಬಂಧಕಾಜ್ಞೆ

ಮದ್ರಾಸಿನಲ್ಲಿ ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯ ಅಂಗವಾಗಿ ಏರ್ಪಡಿಸುವ ಸಾರ್ವಜನಿಕ ಮೆರವಣಿಗೆ ಮತ್ತು ಸಭೆಗಳಿಗೆ ಮುಂದೆ ತಿಳಿಸುವ ವರೆಗೂ ಅವಕಾಶವಿಲ್ಲವೆಂದು ಮದ್ರಾಸ್ ಪೋಲಿಸ್ ಕಮೀಷನರು ಪ್ರತಿಬಂಧಿಸಿದ್ದಾರೆ

ಜಪಾನ್ ಸೋಲಿಸುವುದು ಸುಲಭವಲ್ಲ

ಜರ್ಮನಿಯನ್ನು ಸೋಲಿಸಿದ ನಂತರ ಜಪಾನನ್ನು ಸೋಲಿಸುವುದು ಒಂದು ಕಠಿಣತರವಾದ ಕೆಲಸ. [illegible] ಚುಂಕಿಂಗಿನಲ್ಲಿ [illegible] ಇದ್ದು [illegible] ಪಾನೀ ಸೈನಿಕರಿಂದ [illegible] ಜಪಾನಿನ ಕೆಲಸಗಾರರಿಗೆ [illegible] ಸೈನಿಕರ [illegible] ನೆ ಎಂದು ಹೇಳಲಾಗಿದೆ.

ರಷ್ಯನರ ಚಳಿಗಾಲದ ಧಾಳಿ ಆರಂಭ

ರಷ್ಯನರು ನೀವಲ್ ಮತ್ತು ಲೆನಿನ್‌ಗ್ರಾಡ್ ಪ್ರದೇಶದ ಮಧ್ಯ ಭಾಗದಲ್ಲಿ ತಮ್ಮ ಚಳಿಗಾಲದ ಪ್ರಬಲ ಧಾಳಿಯನ್ನಾರಂಭಿಸಿದ್ದಾರೆಂದೂ ಗಂಟೆ ಗಂಟೆಗೂ ಕಾರ್ಯಾಚರಣೆಯು ತೀವ್ರವಾಗುತ್ತಿದೆಯೆಂದೂ ಜರ್ಮನರ ವರದಿ ತಿಳಿಸುತ್ತದೆ

ಹಂಗೇರಿಗೆ ಜರ್ಮನಿಯ ಒತ್ತಾಯ

ರಷ್ಯ ರಣರಂಗಕ್ಕೆ ಹೆಚ್ಚು ಸೈನ್ಯವನ್ನು ಕಳುಹಿಸುವಂತೆ ಹಂಗೇರಿ ಸರ್ಕಾರವನ್ನು ಜರ್ಮನರು ಒತ್ತಾಯಪಡಿಸುತ್ತಿರುವುದಾಗಿ ತಿಳಿದುಬಂದಿದೆ. ಟ್ರಾನ್ಸಿಲ್‌ವೇನಿಯಾದಲ್ಲಿ ರುಮೇನಿಯಾದ ಧಾಳಿಯನ್ನು ತಡೆಗಟ್ಟಲು ಹಂಗೇರಿಗೆ ಸಹಾಯ ಮಾಡುವುದಾಗಿಯೂ ರಿಬ್ಬೆನ್‌ಟ್ರಾಪರು ಭರವಸೆಯಿತ್ತಿದ್ದಾರೆ.

೧೯೪೪ರಲ್ಲಿ ಜಪಾನಿಗೆ ಜಯ

ನಾವೇ ಯುದ್ಧದಲ್ಲಿ ಜಯಿಸುತ್ತೇವೆಯೋ ಎಂಬುದನ್ನು ೧೯೪೪ನೇ ಇಸವಿಯು ನಿರ್ಧರಿಸುತ್ತದೆ. ಯುದ್ಧದ ಮುಂದಿನ ಪ್ರಕರಣದಲ್ಲಿ ನಮ್ಮ ಕಷ್ಟಗಳು ಇನ್ನೂ ಹೆಚ್ಚುತ್ತವೆ. ಆದರೆ ಜನರೊಡನೆ ಕಲೆತು ಹೋರಾಡಿ ಆ ವರ್ಷವನ್ನೇ ವಿಜಯದ ಸಂವತ್ಸರವನ್ನಾಗಿ ಮಾಡಲು ಸರ್ಕಾರವು ದೃಢ ಸಂಕಲ್ಪ ಮಾಡಿದೆ ಎಂದು ಜಪಾನಿ ಮುಖ್ಯ ಮಂತ್ರಿ ಟೋಜೋರವರು ಹೇಳಿದ್ದಾರೆ

ಬಲ್ಗೇರಿಯಾ ಶಾಂತಿ ಸೂಚನೆ

ಬಲ್ಗೇರಿಯಾವು ರಷ್ಯದೊಡನೆ ಯುದ್ಧ ಮಾಡುತ್ತಿಲ್ಲವಾದುದರಿಂದ ಅದರ ಮೂಲಕ ಬ್ರಿಟನ್ನಿಗೂ ಅಮೆರಿಕಾಗೂ ಶಾಂತಿ ಸೂಚನೆಗಳನ್ನು ಕಳುಹಿಸಿಕೊಡ [illegible] ಅವರ [illegible] ಬ್ರಿಟನ್ ಮತ್ತು ಅಮೆರಿಕಾಗಳು ತಿರಸ್ಕರಿಸಿದುವೆಂದೂ ಹೇಳಲಾಗಿದೆ.

ಅಮೆರಿಕದಲ್ಲಿ ರೈಲ್ವೆ ಮುಷ್ಕರ

ಅವರಿಗೆ ದೊರೆಯುವ ಕೂಲಿ ಸಾಲದೆಂದು ಅಮೆರಿಕದ [illegible] ಲಕ್ಷ ಜನ ರೈಲ್ವೆ ಕೆಲಸಗಾರರು ಈ ತಿಂಗಳು ೩೦ ನೇ ತಾ॥ ನಿಂದ ಮುಷ್ಕರ ಹೂಡಲು ನಿರ್ಧರಿಸಿರುವರು. [illegible] ಮಾಡಿದರೆ ಸರ್ಕಾರದವರು ರೈಲ್ವೆ [illegible]ಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದೆಂಬುದಾಗಿ ತಿಳಿದಿದೆ.

ಅಮೆರಿ ನಂತರ ಷೂಸ್ಟರ್

ಸರ್ ಜಾರ್ಜ್ ಷೂಸ್ಟರವರು ಮಿ॥ ಅಮೆರಿಯವರ ನಂತರ ಇಂಡಿಯಾ ಸೆಕ್ರೆಟರಿಯಾಗಿ ನೇಮಿಸಲ್ಪಡುವರೆಂದು ಹೇಳಲಾಗುತ್ತಿದೆ. ಇವರನ್ನು ಲಾರ್ಡ್ ಲಿನ್‌ಲಿತ್‌ಗೋರವರ ನಂತರ ವೈಸ್ರಾಯರಾಗಿ ನೇಮಿಸುವ ವದಂತಿಯೂ ಇತ್ತು.

ಥೈಲೆಂಡಿನ ಭವಿಷ್ಯ

ಥೈಲೆಂಡ್ ಜನರು ಎಳೆಯ ಮಕ್ಕಳಂಥವರು. ರಾಜಕೀಯ ಜ್ಞಾನದ ಗಂಧವೇ ಇಲ್ಲದವರು. ಜಪಾನರ ಅಧೀನದಲ್ಲಿ ಈಗ ಅಧಿಕಾರ ನಡೆಸುತ್ತಿರುವ ಗುಂಪಿನವರಿಗೆ ಅವರ ಸಹಾನುಭೂತಿ ಇಲ್ಲ. ಹಿಂದೆ ಅವರು ತಪ್ಪು ಮಾಡಿದರೂ ಯುದ್ಧಾನಂತರ ನಿಜವಾದ ಪ್ರಜಾಪ್ರಭುತ್ವ ಸರ್ಕಾರವನ್ನು ಅವರು ಸ್ವಾಗತಿಸುತ್ತಾರೆ—ಎಂಬುದಾಗಿ ಕಾಮನ್ಸ್ ಸಭೆಯಲ್ಲಿ ಮಿ॥ [illegible]ರವರು ಹೇಳಿದರು

ನೂರು ದಿನಗಳಲ್ಲಿ ಟರ್ಕಿ ಯುದ್ಧಕ್ಕೆ

ಇನ್ನು ನೂರು ದಿನಗಳಲ್ಲಿ ಟರ್ಕಿಯು ಜರ್ಮನಿಯ ಮೇಲೆ ಯುದ್ಧ ಘೋಷಿಸುವುದು—ಎಂಬುದಾಗಿ ಟರ್ಕಿಯಲ್ಲಿ ಸಂಚರಿಸಿದ ಅಮೆರಿಕಾ ಪತ್ರಿಕೋದ್ಯೋಗಿ [illegible]ರವರು ವ್ಯಕ್ತಪಡಿಸಿದ್ದಾರೆ.

ಜಪಾನರು ಬಚ್ಚಿಟ್ಟಿದ್ದಾರೆ

ತಮ್ಮ ಎರಡನೆ ದರ್ಜೆಯ ಸೈನಿಕರನ್ನು ಜಪಾನರು ಯುದ್ಧ ರಂಗಕ್ಕೆ ಕಳುಹಿಸುತ್ತಿದ್ದಾರೆ. ಮೊದಲನೆ ದರ್ಜೆಯವರನ್ನು ಎಲ್ಲಿಯೋ ಭದ್ರವಾಗಿ ಬಚ್ಚಿಟ್ಟಿದ್ದಾರೆ—ಎಂಬುದಾಗಿ ಅಮೆರಿಕದ ಸೈನ್ಯಾಧಿಕಾರಿ ಜ॥ ಆರ್ನಾಲ್ಡರು ತಿಳಿಸಿರುವರು

ಮಾಳವೀಯರ ವರ್ಧಂತಿ

ಕಾಶಿ ವಿಶ್ವವಿದ್ಯಾನಿಲಯದ ಸ್ಥಾಪಕರಾದ ಪಂಡಿತ ಮದನಮೋಹನ ಮಾಳವೀಯರವರ ೮೩ನೇ ವರ್ಷ ವರ್ಧಂತಿಯನ್ನು ಇದೇ ಮಾಹೆ ೨೫ ನೇ ತಾ॥ ಅಲ್ಲಿಯ ಹಿಂದೂ ಮಹಾ ಸಭೆಯವರು ನೆರವೇರಿಸುತ್ತಾರೆ.

ಹೈದರಾಬಾದಿನಲ್ಲಿ ಬಿಡುಗಡೆ

ಹೈದರಾಬಾದ್ ಸಂಸ್ಥಾನದಲ್ಲಿ ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ರಕ್ಷಣಾ ಶಾಸನದ ಮೇರೆಗೆ ದಸ್ತಗಿರಿ ಮಾಡಲ್ಪಟ್ಟಿದ್ದ ಶ್ರೀಗಳಾದ ಪದ್ಮಜಾ ನಾಯಡು, ಗೋಪಾಲರಾವ್ ಏಕ್ಬೋಟೆ, ಗುಲಾಮ್ ಹೈದರ್, ಜಿ. ರಾಮಾಚಾರಿ, ಆರ್. ಜಿ. ಪರಾಂಜಪೆ ಮತ್ತು ಸ್ವಾಮಿ ರಾಮಾನಂದ್ ಇವರುಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನು ಮೂವರನ್ನು ಮಾತ್ರ ಬಿಡುಗಡೆ ಮಾಡಿಲ್ಲ

ಪಿಕೆಟಿಂಗ್ ಅಕ್ರಮ

ಮದ್ರಾಸ್ ಸರ್ಕಾರದವರು ಹೆಂಡದ ಅಂಗಡಿಗಳಲ್ಲಿ ಪಾನ ನಿಷೇಧದ ಶಾಸನವನ್ನು ರದ್ದು ಮಾಡಿರುವುದರಿಂದ ಅಲ್ಲಿ ಪಿಕೆಟಿಂಗ್ ಮಾಡಬೇಕೆಂದು ಒಂದು ಪತ್ರಿಕೆಯು ಬರೆದಿರುವುದನ್ನು ನೋಡಿ ಮದ್ರಾಸ್ ಸರ್ಕಾರದವರು ಪಿಕೆಟಿಂಗ್ ಕಾನೂನಿಗೆ ವಿರುದ್ಧವಾದ ಕಾರ್ಯಕ್ರಮವೆಂದೂ ಅದಕ್ಕೆ ಶಿಕ್ಷೆ ಇದೆಯೆಂದೂ ತಿಳಿಸಿದ್ದಾರೆ.

ಬೂಜಿನ ಕೆರೆಗೆ [illegible]

ಬೆಂಗಳೂರು ಸರ್ಕಾರ[illegible] [illegible] ಜಿನ ಸಂಬಂಧ [illegible] [illegible] [illegible] [illegible] ನ ಕೆರೆಗಳನ್ನು [illegible] ಶೀಘ್ರವಾಗಿ [illegible] ಯೋಜಿಸಲಾಗಿದೆ

ಕಲ್ಕತ್ತಾದಲ್ಲಿ ಪುನಃ ಎಚ್ಚರಿಕೆ

ನಿನ್ನೆ ಬೆಳಗ್ಗೆ ೧೧-೪೫ ಗಂಟೆಗೆ ಕಲ್ಕತ್ತೆಯಲ್ಲಿ ವಿಮಾನದಾಳಿ ಎಚ್ಚರಿಕೆಯ ಧ್ವನಿಯನ್ನು ಕೊಡಲಾಗಿತ್ತು. ಮುಕ್ಕಾಲು ಗಂಟೆಯ ನಂತರ "ಎಲ್ಲವೂ ಶಾಂತವಾಗಿದೆ" ಎಂಬ ಸೂಚನೆ ಕೊಡಲ್ಪಟ್ಟಿತು. ಯಾವ ನಷ್ಟವೂ ಸಂಭವಿಸಿದಂತೆ ವರದಿಯಾಗಿಲ್ಲ

ಕಲ್ಕತ್ತಾಕ್ಕೆ ಧಾಳಿ ಭೀತಿ

ಇನ್ನೂ ಶತ್ರು ಧಾಳಿಗಳು ಕಲ್ಕತ್ತಾ ಮೇಲೆ ನಡೆಯಬಹುದು. ವಿಮಾನ ಧಾಳಿಯ ಹೆದರಿಕೆಯು ತಪ್ಪಿಲ್ಲ ಈಚೆಗೆ ಜಪಾನ್ ವಿಮಾನಗಳು ಕಲ್ಕತ್ತೆಗಾಗಿ ಬಂದಿದ್ದರೂ ಅಲ್ಪಸ್ವಲ್ಪ ನಷ್ಟವಾಯಿತು. ಮುಂದೆ ತೊಂದರೆಯಿಲ್ಲವೆಂದು ನಾವು ಸುಮ್ಮನೆ ಕೂರಬಾರದು. ಪೂರ್ವಭಾವಿ ಸಿದ್ಧತೆಗಳನ್ನೂ ರಕ್ಷಣಾ ವ್ಯವಸ್ಥೆಗಳನ್ನೂ ಮಾಡಿಕೊಳ್ಳಬೇಕು—ಎಂದು ಬಂಗಾಳಾ ಮುಖ್ಯಮಂತ್ರಿ ಸರ್ ನಾಜಿಮುದ್ದೀನರು ತಿಳಿಸಿರುವರು

ರಾಜರುಗಳ ಸಭೆ

೩೯ ಸಣ್ಣ ಸಂಸ್ಥಾನಗಳ ರಾಜರೂ, ಪ್ರತಿನಿಧಿಗಳೂ ಕಳೆದ ೧೦ ನೇ ತಾ॥ ದೊಂಬಾಯಿ ತಾಜಮಹಲ್ ಹೋಟೆಲಿನಲ್ಲಿ ಸೇರಿ ಸಂಸ್ಥಾನಗಳಿಗೂ, ಪ್ರಜೆಗಳಿಗೂ ಅನ್ವಯಿಸುವ ಉಚಿತ ಹಲವು ಯೋಜನೆಗಳನ್ನು ಪಂರ್ಯಾಲೋಚಿಸಿದರು.

ಮಾತೃಭಾಷೆಯಲ್ಲಿ ಶಿಕ್ಷಣ

ಹೈಸ್ಕೂಲುಗಳಲ್ಲಿ ಮಾತೃ ಭಾಷೆಯ ಮೂಲಕವೇ ಶಿಕ್ಷಣವನ್ನು ಕೊಡಬೇಕು. ಕಾಲೇಜು ತರಗತಿಗಳಲ್ಲಿ ಕ್ರಮಕ್ರಮವಾಗಿ ಮಾತೃಭಾಷೆಯಲ್ಲಿ ಪಾಠವನ್ನು ಹೇಳಬೇಕು ಎಂಬ ನಿರ್ಣಯವು ಸರ್. ರಾಧಾಕೃಷ್ಣರವರ ಅಧ್ಯಕ್ಷತೆಯಲ್ಲಿ ಹೈದರಾಬಾದಿನಲ್ಲಿ ನಡೆದ ಅಂತರ ವಿಶ್ವವಿದ್ಯಾಲಯದ ಸಮಿತಿಯಲ್ಲಿ ಮಂಜೂರಾಯಿತು.

ಮಿಲಿಟರಿಗಾಗಿ ರಸ್ತೆ ರಿಪೇರಿ

ಮಿಲಿಟರಿ ವಾಹನ ಸಂಚಾರದಿಂದ ಸವೆದುಹೋಗುವ ಮದ್ರಾಸ್ ನಗರದ ರಸ್ತೆಗಳ ದುರಸ್ತಿಗಾಗಿ ಸೂಕ್ತವಾದ ಪರಿಹಾರ ದ್ರವ್ಯವನ್ನು ಕೊಡಲು ಮದ್ರಾಸ್ ಸರ್ಕಾರದವರು ಒಪ್ಪಿದ್ದಾರೆ.

ಪೆನ್ಷನ್‌ದಾರರಿಗೆ ತುಟ್ಟಿಭತ್ಯ

೩೦ ರೂ ಒಳಗಿರುವ ಪೆನ್ಷನ್‌ದಾರರಿಗೆ ೩. ರೂ. ಸಂತೆಯೂ, ೩೦ ರಿಂದ ೪೦ ರೂ ವರೆಗಿರುವವರಿಗೆ ೪ ರೂ. ಸಂತೆಯೂ ಒಂದು ವರ್ಷ ಕಾಲ ತುಟ್ಟಿಭತ್ಯವನ್ನು ಕೊಡಲು ಮದ್ರಾಸ್ ಸರ್ಕಾರದವರು ಗೊತ್ತು ಮಾಡಿರುವುದಾಗಿ ತಿಳಿದುಬಂದಿದೆ.

ಜಮಖಂಡಿಯಲ್ಲಿ ಸುಧಾರಣೆ

ಜಮಖಂಡಿ ಸಂಸ್ಥಾನದಲ್ಲಿ ರಾಜ್ಯಾಂಗ ಸುಧಾರಣೆಗಳು ಸದ್ಯದಲ್ಲೇ ಜಾರಿಗೆ ಬರುವುದೆಂದು ತಿಳಿದುಬಂದಿದೆ. ಅಲ್ಲಿನ್ನ ಸೂಚು ಸಂಸ್ಥಾನದಂತೆಯೇ ಶಾಸನ ಸಭೆಯನ್ನು ಜಾರಿಗೆ ತರುವ ಪ್ರಸ್ತಾಪವು ಸರ್ಕಾರದ ಗಮನದಲ್ಲಿದೆ

ಸಂಚಿಕೆ ತಡೆಸ್ಥವಾಗಿಲ್ಲ

ಬ್ರಿಟಿಷರ ಉದ್ದೇಶ ಹಿಂದೂ ಸ್ವರಾಜ್ಯವನ್ನು ಒತ್ತಿ ಹಿಡಿಯುವುದೇ ಆಗಿದೆ ಎಂದೂ ಒಂದು ವಿವರಣೆಯನ್ನು ಕೊಟ್ಟಿವೆ. ಈ ಕಾರಣದಲ್ಲಿ ತುರ್ತು ಭಾರ ವಹಿಸಿ ಪ್ರತಿಜ್ಞೆ ಒದು ವಿವರಣೆ ತಿಳಿಸಿದ್ದಾರೆ ಎಂದು ಹೇಳಲಾಗಿದೆ. ತಿಳಿಸಲಾಗಿದೆ

ಸೈಕಲ್ ಬೆಲೆ ನಿಗದಿ

ಇಂಡಿಯಾಸರ್ಕಾರದವರು ಸೈಕಲ್ ಪ್ಯಾಕ್ಟರ್ಸ್‌ರ ಸಲಹೆ ಮೇರೆಗೆ ಸೈಕಲ್ ಮತ್ತು ಅದರ ಮುಖ್ಯ ಭಾಗಗಳ ಚಿಲ್ಲರೆ ಮಾರಾಟದ ಬೆಲೆಯನ್ನು ನಿಗದಿ ಮಾಡಿರುತ್ತಾರೆ. ಚಿಲ್ಲರೆಯಾಗಿ ಸೈಕಲ್ ಮಾರಾಟ ಮಾಡುವವರು, ಬಿ ಎಸ್. ಎ. ರ್‍ಯಾಲಿ, ರಡ್ಜ್ ಮತ್ತು ಬೀಸ್ಟ್ ಹಂಬರ್ ಸೈಕಲ್‌ಗಳಿಗೆ ತಲಾ ೧೩೦ ರೂ. ಸಂತೆಯೂ, ಹರ್ಕ್ಯುಲೀಸ್, ಡೇಟ್ಸ್, ಫಿಲಿಪ್ಸ್, ಫೋನಿಕ್ಸ್, ವೇಲ್ಸ್ ಮತ್ತು ಇತರ ಸೈಕಲ್‌ಗಳಿಗೆ ತಲಾ ೧೨೫ ರೂ ಸಂತೆಯೂ ಲೇಡಿ ಸೈಕಲ್‌ಗಳಿಗೆ ಸಾಧಾರಣ ಸೈಕಲ್‌ಗಿಂತ ೫ ರೂ. ಜಾಸ್ತಿಯಾಗಿಯೂ ಬೆಲೆ ನಿಗದಿ ಮಾಡಿದ್ದಾರೆ

ಸೈಕಲ್‌ನ ಮುಖ್ಯ ಭಾಗಗಳಿಗೆ ಬೆಲೆ ಹೀಗಿದೆ;—ಲ್ಯಾಂಪು ೪ ರೂ. ಬೆಲ್ ೩ ವರೆ ರೂ ಪಂಪ್ ೩ ರೂ. ಫ್ರೀವ್ಹೀಲ್ ೪ ವರೆ ರೂ ಚೈನ್ ೧ ಜೊತೆಗೆ ೧೪ ರೂ. ಟೈರ್ ೩ ವರೆ ರೂ ಸ್ಪೋಕ್ಸ್ ಗ್ರೋಸಿಗೆ ೧೬ ರೂ

ಹಿಟ್ಲರನಿಗೆ ಹೊಸ ಅಸ್ತ್ರಗಳು ಬೇಕು

ಮಿತ್ರ ರಾಷ್ಟ್ರಗಳ ವೈಜ್ಞಾನಿಕರು ರಾತ್ರಿ ಹಗಲು ದುಡಿದು ಯುದ್ಧ ಸೇವೆಗಾಗಿ ಹೊಸ ಅಸ್ತ್ರಗಳನ್ನು ಕಂಡು ಹಿಡಿದಿದ್ದಾರೆ ಜರ್ಮನಿಯು ಹಿಂದೆ ಬಿದ್ದರೆ ಅದು ಶಾಶ್ವತವಾದ ಅಧಃಪಾತಾಳಕ್ಕೆ ಹೋಗುವುದು. ಆದುದರಿಂದ ಜರ್ಮನಿಯ ವೈಜ್ಞಾನಿಕರೂ ಹೊಸ ಅದ್ಭುತ ಅಸ್ತ್ರಗಳನ್ನು ನಿರ್ಮಿಸಬೇಕು—ಎಂಬುದಾಗಿ ಜರ್ಮನಿಯ ಡಾ॥ ಸ್ಪ್ಯಾರ್ ಬೋರ್ಮನ್‌ರು ಎಚ್ಚರಿಕೆ ಕೊಟ್ಟಿದ್ದಾರೆ

ಮುಂದೆ ಭಾರಿ ಕದನವಿದೆ

ಘೋರ ಕದನವು ಇನ್ನೂ ಬಾಕಿದೆ. ಮಿತ್ರ ರಾಷ್ಟ್ರಗಳು ನಷ್ಟಹೊಂದಿದ ನೌಕೆಗಳನ್ನೆಲ್ಲಾ ಭರ್ತಿಮಾಡಿದ್ದಾರೆ. ಯುದ್ಧವು ನಿರ್ದಿಷ್ಟವಾದ ಸ್ಥಿತಿಯನ್ನು ಮುಟ್ಟಿರುತ್ತದೆ ಎಂಬುದಾಗಿ ಜಪಾನಿನ ನೌಕಾಮಂತ್ರಿ ಷಿಮದಾರವರು ತಿಳಿಸಿದ್ದಾರೆ. ಮಿತ್ರರ ಸಾಧನ ಸಂಪತ್ತುಗಳು ಅಗಾಧವಾಗಿವೆ ಯುದ್ಧ ಪರಿಸ್ಥಿತಿಯು ಸಂಪೂರ್ಣವಾಗಿ ಜಪಾನರ ಹತೋಟಿಯಲ್ಲಿದೆಯೆಂದು ಹೇಳಲಾಗುವುದಿಲ್ಲ ಎಂಬುದಾಗಿ ಟೋಕಿಯೋ ರೇಡಿಯೋ ತಿಳಿಸಿತು.

ಜಪಾನಿನ ಸಮಾಲೋಚನೆ

ಮುಂದಿನ ಯುದ್ಧ ಪರಿಸ್ಥಿತಿಯಲ್ಲಿ ಬಿಕ್ಕಟ್ಟಿನಂತಹ ಕಷ್ಟಗಳು ಒದಗುವುವೆಂದೂ ಮುಂದಿನ ವರ್ಷ ಜಪಾನೀಯರೆಲ್ಲರೂ ಏಕಮತ್ಯದಿಂದ ಸಹಕರಿಸುವುದು ಅತ್ಯಗತ್ಯವೆಂದೂ ಜಪಾನಿ ಮುಖ್ಯ ಮಂತ್ರಿ ಟೋಜೋರವರು ಹೇಳಿದ್ದಾರೆ

ಹಿಂದೂಸಾಗರದಲ್ಲಿ ರಷ್ಯದ ಪ್ರಾಧಾನ್ಯತೆ

ಪರ್ಷಿಯಾ ಕೊಲ್ಲಿ, ಕೆಂಪು ಸಮುದ್ರ ಮತ್ತು ಹಿಂದೂಸಾಗರಗಳಲ್ಲಿ ರಷ್ಯದ ಪ್ರಾಧಾನ್ಯತೆಯು ಉಂಟಾಗುತ್ತದೆಯೆಂದು ನ್ಯೂಯಾರ್ಕ್ ಪಿ.ಎಂ. ಪತ್ರಿಕೆಯ ಬಾತ್ಮೀದಾರರು ಹೇಳಿರುತ್ತಾರೆ

ಇರಾಕ್ ಸರ್ಕಾರದ ರಾಜೀನಾಮೆ

ಇರಾಕಿನ ದೊರೆಗಳಿಗೆ ಅಲ್ಲಿನ ಮುಖ್ಯ ಮಂತ್ರಿಗಳು ತಮ್ಮ ಮತ್ತು ತಮ್ಮ ಸಹೋದ್ಯೋಗಿಗಳ ರಾಜೀನಾಮೆಯನ್ನು ಒಪ್ಪಿಸಿರುತ್ತಾರೆ

ರೈಲಿಗೆ ಸಿಕ್ಕಿ ಕೈ ಕತ್ತರಿಸಿತು

ಕಳೆದ ಭಾನುವಾರ ಮಧ್ಯಾಹ್ನ ಬೆಂಗಳೂರಿನಿಂದ ಹೊರಟ ಎಕ್ಸ್‌ಪ್ರೆಸ್ ಗಾಡಿಯ ಇಂಜನ್ನಿಗೆ ಕ್ಲೋಸ್‌ಪೇಟೆ ಬಳಿ ದನ ಕಾಯುತ್ತಿದ್ದ ಆದಿಕರ್ನಾಟಕ ಹುಡುಗ ನೊಬ್ಬನು ಸಿಕ್ಕಿದುದರಿಂದ ಅವನ ಎಡಗೈ ಮೇಲೆ ಚಕ್ರವು ಉರುಳಿ ಅದು ಕತ್ತರಿಸಿತೆಂದೂ, ಕೂಡಲೇ ರೈಲನ್ನು ನಿಲ್ಲಿಸಿ ಗಾರ್ಡು ಉಪಚರಿಸಿದರೆಂದೂ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದ ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಡಾಕ್ಟರ್ ಆದಿಶೇಷಯ್ಯರವರು ಸ್ವಲ್ಪ ಉಳಿದಿದ್ದ ಕೈಯನ್ನು ಕತ್ತರಿಸಿ ಚಿಕಿತ್ಸೆ ಮಾಡಿದನಂತರ ಕ್ಲೋಸ್‌ಪೇಟೆ ಆಸ್ಪತ್ರೆಗೆ ಹುಡುಗನನ್ನು ಸೇರಿಸಲಾಯಿತೆಂದೂ ವರದಿಯಾಗಿದೆ.

ಮೂರು ಮಕ್ಕಳ ಜನನ

ತೀರ್ಥಹಳ್ಳಿ ತಾಲ್ಲೂಕು ಬೇಗುವಳ್ಳಿ ಗ್ರಾಮದಲ್ಲಿ ಶ್ರೀ ಲೋಕೈಕಪ್ಪರ ಹೆಂಡತಿ ಬಾಗಮ್ಮನವರು ಎಂಬುವರು ಕಳೆದಗುರುವಾರ ತಾ॥ ಏಕಕಾಲದಲ್ಲಿ ಮೂರು ಮಕ್ಕಳನ್ನು ಪ್ರಸವಿಸಿದರು. ಅದರಲ್ಲಿ ಒಂದು ಹೆಣ್ಣು ಎರಡು ಗಂಡು ಮಕ್ಕಳು ಆಪ ಮೂರು ದಿನ ಬದುಕಿದ್ದು ನಂತರ ಸತ್ತವು. ಬಾಣಂತಿಯು ಆರೋಗ್ಯವಾಗಿರುತ್ತಾಳೆ.

ಅಕ್ಕಿಗೆ ಬದಲು ಹುರಿಗಡಲೆ

ಬೆಂಗಳೂರಿನಲ್ಲಿ ಅಕ್ಕಿ ಮತ್ತು ರಾಗಿಯ ಅಭಾವವಿರುವುದರಿಂದ ಅದಕ್ಕೆ ಬದಲು ಹುರಿಗಡಲೆ ಮತ್ತು ಗೋಧಿಯನ್ನು ಸಾರ್ವಜನಿಕರು ಉಪಯೋಗಿಸಬೇಕೆಂದೂ ಅದಕ್ಕಾಗಿ ಹುರಿಗಡಲೆಯನ್ನು ರೂ. ಗೆ ಮೂರು ಸೇರಿನಂತೆ ಮಾರಬೇಕೆಂದೂ ಸರ್ಕಾರದವರು ವಿಧಾಯಕ ಮಾಡಿರುವರು. ಇದು ೧೯೪೪ ನೇ ಫೆಬ್ರವರಿ ಅಂತ್ಯದ ವರೆಗೂ ಜಾರಿಯಲ್ಲಿರುವುದು

ದಂಡಿನವರ ಬಿಡುಗಡೆ

ಕಳೆದ ಆಗಸ್ಟ್ ತಿಂಗಳಿನಲ್ಲಿ ಆಜ್ಞೋಲ್ಲಂಘನೆಗಾಗಿ ದಸ್ತಗಿರಿ ಮಾಡಲ್ಪಟ್ಟು ಶಿಕ್ಷೆ ಹೊಂದಿದ ರಾಜಕೀಯ ಖೈದಿಗಳೆಲ್ಲರನ್ನೂ ಈಗ ಬೆಂಗಳೂರು ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲಾಗಿದೆ. ಶ್ರೀ ಚೆಂಗಲರಾಯ ರೆಡ್ಡಿಯವರೊಬ್ಬರನ್ನು ಮಾತ್ರ ಬಿಟ್ಟಿಲ್ಲ

ಮನೆ ಮಾಲೀಕರಲ್ಲಿ ವಿನಂತಿ

ಕಲ್ಕತ್ತಾ ಕಾರ್ಮಿಕರ ವಸತಿಗಳ ಸಮಿತಿಯವರು ಮನೆಗಳವರು, ತಮ್ಮ ಮನೆಗಳನ್ನಾಗಲಿ ಅಥವಾ ಕೊಠಡಿಗಳನ್ನಾಗಲೀ ವಿಮಾನಧಾಳಿ ರಕ್ಷಣಾ ಆಶ್ರಯಗಳಿಗಾಗಿ ಉದಾರವಾಗಿ ಕೊಡಬೇಕೆಂದೂ ರಕ್ಷಣಾ ಗಂಡಿಗಳನ್ನು ತೋಡಿಸಬೇಕೆಂದೂ ಬಂಗಾಳ ಸರ್ಕಾರವು ಪ್ರಾರ್ಥಿಸಿದೆ

ಪತ್ರವ್ಯವಹಾರ

ರೇಷನ್ ಕೊಡುವುದೆಲ್ಲಿ ?

ಮೈಸೂರಿನಲ್ಲಿ ರೇಷನ್ ಕಾರ್ಡು ಹಂಚುವುದಕ್ಕೆ ಅತುರ ಆತುರವಾಗಿ ಸೆನ್ಸಸ್ ತೆಗೆದುಕೊಂಡಿರುವುದು ಸರಿಯಷ್ಟೆ. ಸರ್ಕಾರದಿಂದ ಗೊತ್ತಾಗಿರುವ ರೇಷನ್ ದಿನಸಿಗಳನ್ನು ಪಡೆಯಲು ಪ್ರತಿಯೊಂದು ಸಂಸಾರದ ಯಜಮಾನನೂ, ತಾನು ಇರುವ ಮೊಹಲ್ಲೆಯಲ್ಲಿ ತನ್ನ ಮನೆ ಸಮೀಪದಲ್ಲಿರುವ ಸೊಸೈಟಿಯಲ್ಲೋ ಅಥವಾ ಡಿಪೋಗಳಲ್ಲೋ ಸಾಮಾನುಗಳನ್ನ ತೆಗೆದುಕೊಳ್ಳುವುದಕ್ಕೆ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿರುತ್ತಾರೆ

ಈಗ ರೇಷನ್ ಕಾರ್ಡುಗಳನ್ನು ಎಲ್ಲಾ ಕಡೆಯಲ್ಲಿಯೂ ಹಂಚುತ್ತಿದ್ದಾರೆ ಅದರಲ್ಲಿ ಯಾವ ಡಿಪೋಗಳಲ್ಲಿ ತೆಗೆದುಕೊಳ್ಳಬೇಕೆಂಬುದು ಸರಿಯಾಗಿ ಗೊತ್ತಾಗುವುದಿಲ್ಲ. ಉದಾಹರಣೆಗೆ ಚಾಮರಾಜಪುರಂ ಕೋ-ಆಪರೇಟಿವ್ ಸ್ಟೋರ್ಸ್‌ನಲ್ಲಿ ಮೆಂಬರಾಗಿರುವವರು ತಮ್ಮ ಹೆಸರನ್ನು ಸದರಿ ಸ್ಟೋರಿನಲ್ಲಿ ರಿಜಿಸ್ಟರ್ ಮಾಡಿರುತ್ತಾರೆ. ಕೆಲವರಿಗೆ ಸ್ಟೋರ್ಸ್‌ನ ಮೆಂಬರಾಗಿದ್ದರೂ ಕಾರ್ಡುಗಳು ನೇರ ಮನೆಗಳಲ್ಲಿ ಬಂದಿರುವುದರಿಂದ ಸ್ಟೋರ್ಸಿನ ಕಾರ್ಯದರ್ಶಿಗಳು ತಮ್ಮ ಮೂಲಕ ಬರಲಿಲ್ಲವೆಂದು, ಸದರಿ ಕಾರ್ಡುಗಳನ್ನು ತೆಗೆದುಕೊಳ್ಳಲು ನಿರಾಕರಿಸುತ್ತಿದ್ದಾರೆ ಈಗ ಮನೆಯ ಹತ್ತಿರವಿರುವ ಡಿಪೋಗಳಲ್ಲಿ ತೆಗೆದುಕೊಳ್ಳಬೇಕೋ ಅಥವಾ ಇತರ ಯಾವ ಡಿಪೋದಲ್ಲಿ ತೆಗೆದುಕೊಳ್ಳಬೇಕೋ ತಿಳಿಯುವುದಿಲ್ಲ.

ಈ ರೀತಿಯಾದ ತೊಂದರೆಗಳನ್ನು ತಪ್ಪಿಸುವುದಕ್ಕೆ ಅಧಿಕಾರಿಗಳೂ ಮತ್ತು ಪ್ರತಿನಿಧಿಗಳಾದ ಪೌರಸಭಾ ಸದಸ್ಯರೂ ಮುತುವರ್ಜಿ ವಹಿಸಿ ಸರಿಪಡಿಸುತ್ತಾರೆಂದು ನಂಬಿದ್ದೇನೆ. ಬಿ. ಆರ್. ಸ್ವಾಮಿ.

ಜರ್ಮನಿಗೆ ಭಾರಿ ಪೆಟ್ಟು

ಈ ಚಳಿಗಾಲದಲ್ಲಿ ಜರ್ಮನರಿಗೆ ಬಲವಾದ ಪೆಟ್ಟು ಕೊಡಲು ನಾವು ಸಿದ್ಧರಾಗಿದ್ದೇವೆ ಕಳೆದ ವರ್ಷ ಕನಸಿನಲ್ಲಿಯೂ ಕಾಣದಂತಹ ಬಾಂಬರುಗಳು ತಯಾರಾಗಿ ಬರುತ್ತಿವೆ ಹಗಲು ಹೊತ್ತಿನಲ್ಲಿ ಅಮೇರಿಕನರೂ ರಾತ್ರಿಯಲ್ಲಿ ಬ್ರಿಟಿಷ್ ಆರ್. ಎ. ಎಫ್. ದಳದವರೂ ಜರ್ಮನಿಯ ಪ್ರತಿಯೊಂದು ಊರಿನ ಮೇಲೆ ಬಾಂಬುಗಳನ್ನು ಹಾಕುತ್ತವೆ ಎಂಬುದಾಗಿ— ಅಮೆರಿಕಾ ಸೈನ್ಯಾಧಿಕಾರಿ ಜ॥ ಆರ್ನಾಲ್ಡರು ಹೇಳಿದವರು.

Edited, printed and published by A. R. Nagarajan at the Sadhvi Press, D. Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ — ಚಿಲ್ಲರೆಯಾಗಿ ಕಲ್ಲುಸಕ್ಕರೆ, ಬೂರಾಸಕ್ಕರೆ ಸಿಕ್ಕುತ್ತವೆ. ಇಲ್ಲೂ ಮತ್ತು ಸಂತೆಪೇಟೆ ಪರ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

ಸಂಪುಟ ೨] ಶನಿವಾರ ೧೮--೧೨--೪೩ [ಸಂಚಿಕೆ ೧೩೦

ಬಾರಿಯಲ್ಲಿ ಹಲವು ಮಿತ್ರ ನೌಕೆಗಳ ನಾಶ

ಆಕ್ಸಿಸ್ ಯೂರೋಪಿನಲ್ಲಿ ಮುಖ್ಯ ಘಟನೆಗಳ ಸಂಭವ

ನಾಗಪುರದಲ್ಲೂ ಹೆಂಡದಂಗಡಿಗಳು ಹೆಚ್ಚುವುವು

ನದಿಯಲ್ಲಿ ಬಿದ್ದು ಮರಣ

ಸ್ವಂ ವ.] ಮೈಸೂರು ೧೮

ಈ ದಿನ ಬೆಳಗ್ಗೆ ಮೈಸೂರಿನ ನಿವಾಸಿ, ಶ್ರೀ ಎಂ. ರಾಮಶೇಷಯ್ಯ ಎಂಬುವರು ಯಾತ್ರಾರ್ಥವಾಗಿ ಟಿ. ನರಸೀಪುರಕ್ಕೆ ಹೋದ್ದಾಗ ಸ್ನಾನವಮಾಡಲು ನದಿಗೆ ಇಳಿದಿದ್ದಂದೂ ಅಕಸ್ಮಾತ್ತಾಗಿ ಕಾಲು ಜಾರಿ ನದಿಗೆ ಸಿಗುಬಿಕೊಂಡು ಮೃತಪಟ್ಟರೆಂದೂ ತಿಳಿಬಂದಿಯತ್ತೆ.

ದೇಶೀ ವಿಧಾನ ವಿಮರ್ಶೆ

ಈ ದಿನ ಸಂಜೆ ಮೈಸೂರು ಎಗ್ಜಿಬಿಷನ್ ಗ್ರೌಂಡಿನಲ್ಲಿ ಮೈಸೂರು ನಗರದ ದೇಶೀ ಅಧಿಕಾರಿಗಳು ಪತ್ರಿಕೋದ್ಯೋಗಿಗಳ ಸಮ್ಮೇಳನವೊಂದನ್ನು ಕರೆದಿದ್ದಾರೆ ಇದೇ ಮಾಹೆ ೨೦ ನೇ ತಾ|| ಮೈಸೂರು ನಗರದಲ್ಲಿ ದೇಶಸೇವಿಂಗ್ ಜಾರಿಗೆ ಬರುವ ಪ್ರಯುಕ್ತ ದೇಶೀ ಪದ್ಧತಿಯ ವಿವರಗಳನ್ನು ವಿಮರ್ಶಿಸುವ ಸಲುವಾಗಿ ಈ ಸಮ್ಮೇಳನವನ್ನು ಕರೆಸಲಾಗಿದೆ

ಚರ್ಚಾ ಸ್ಪರ್ಧೆ

ಮೈಸೂರು ವೀರಶೈವ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕೈ|| ಎಂ. ಎಸ್. ಬಸವಲಿಂಗಯ್ಯನವರ ಸ್ಮಾರಕ ಅಂತರ ವಿದ್ಯಾಸಂಸ್ಥೆಗಳ ಚರ್ಚಾಕೂಟವು ನಾಳೆ ದಿನ ಬೆಳಗ್ಗೆ ೯½ ಗಂಟೆಗೆ ಟೌನ್‌ಹಾಲಿನಲ್ಲಿ ನಡೆಯುತ್ತದೆ ನಗರದ ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಶ್ರೀ ಬಿ ಎಸ್. ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

೪೦,೦೦೦ ರೂ.ಗೆ ದಾವಾ

ಆರ್ಟಿಸ್ಟ್ ಶ್ರೀ ಕೆ. ವೆಂಕಟಪ್ಪನವರು ಮೈಸೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ೪೦ ಸಾವಿರ ರೂ ಗಾಗಿ ಹೂಡಿರುವ ಒಂದು ದಾವಾ ಮೊಖದ್ದಮೆಯಲ್ಲಿ ವಾದವಿವಾದಗಳು ನಡೆಯುತ್ತಿವೆ

ದಿವಂಗತರಾದ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರವರು ಹಲವು ಚಿತ್ರಗಳನ್ನು ಬರೆಯಲು ತಮಗೆ ಆಜ್ಞೆಮಾಡಿದ್ದರೆಂದೂ ಅವುಗಳ ಮುಗಿಯುವುದರೊಳಗೆ ಅವರು ಸ್ವರ್ಗಸ್ಥರಾದರೆಂದೂ ಆ ಒಟ್ಟು ಕೆಲಸಕ್ಕೆ ೪೦ ಸಾವಿರ ರೂ ಬರಬೇಕೆಂದೂ ವ್ಯಾಜ್ಯ ಹೂಡಿರುವರು. ಅನುಮತಿಯ ವೇಳೆ ದಾವಾ ಹೂಡಲು ಮತ್ತು ಅದನ್ನು ಪರಿಶೀಲಿಸಲು ಕೋರ್ಟುಗಳಿಗೆ ಅಧಿಕಾರವಿದೆಯೇ ಎಂಬುದರ ಬಗ್ಗೆ ವಾದ ನಡೆಯುತ್ತಿದೆ ಅಡ್ವೋಕೇಟ್ ಎಂ. ಎ. ದೊರೆಸ್ವಾಮಿಯ್ಯಂಗಾರ್ಯರು ಶ್ರೀ ವೆಂಕಟಪ್ಪನವರ ಪರವಾಗಿಯೂ ಶ್ರೀ ವಿ.ಎಲ್. ಲಕ್ಷ್ಮೀನಾರಣಪ್ಪನವರು ಅರಮನೆಯ ಪರವಾಗಿಯೂ ವಾದಿಸುತ್ತಿರುವರು

ಕಟ್ಟ ಕಡೇ ಸುದ್ದಿ

ನ್ಯಾಯವಿಧಾಯಕ ಸಭೆ

ಸ್ವಂ.ವ ಪ್ರೋ] ಬೆಂಗಳೂರು ೧೮

ಇದಿನದ ಸಭೆಯಲ್ಲಿ ಶ್ರೀಮತಿ ಯಶೋಧರಾ ದಾಸಪ್ಪನವರು ಭದ್ರಾವತಿ, ಕೋಲಾರ, ಬೆಂಗಳೂರುಗಳಲ್ಲಿ ನಡೆದಿರುವ ಆ ಗಿನ್ನೆ ಕೂಲಿಗಾರರ ಸಂಸಾರಕ್ಕೆ ಅಲೋಯನ್ಸ್ ಕೊಡಬೇಕೆಂದು ಕೇಳಿದರು.

ನ್ಯಾಯಾಂಗ ಸಚಿವರು :- ಕೂಲಿಗಾರರು ಸಾರ್ವಜನಿಕ ಶಾಂತಿಗೆ ಭಂಗತರುವ ರೀತಿಯಲ್ಲಿ ವರ್ತಿಸಿದ್ದರಿಂದ ಅವರಿಗೆ ಸಹಾ

ಮಿತ್ರ ವ್ಯಾಪಾರಿ ಹಡಗುಗಳ ನಷ್ಟ

ಡಿಸೆಂಬರ್ ೩ನೇ ತಾ|| ಇಟಲಿಯ ಬಾರಿ ಎಂಬಲ್ಲಿ ಜರ್ಮನ್ ಬಾಂಬುಗಳು ಅನೇಕ ಹಲವು ವ್ಯಾಪಾರಿ ಹಡಗುಗಳನ್ನು ಮುಳುಗಿಸಿದವು. ಅದರ ವಿವರಗಳು ಈಗ ಹೊರಬಿದ್ದಿವೆ. ಜರ್ಮನರು ತಮ್ಮ ವಿಮಾನಶಕ್ತಿಯನ್ನು ಹೆಚ್ಚಿಸಿಕೊಂಡಿದ್ದಾರೆ. ಎರಡು ಶಸ್ತ್ರ ಸಜ್ಜಿತವಾದ ಹಡಗುಗಳಿಗೆ ಏಟು ಬಿದ್ದಿದೆ. ಐದು ವ್ಯಾಪಾರಿ ಹಡಗುಗಳು ನಾಶವಾದವು ಬಂದರಿಗೆ ಸ್ವಲ್ಪಮಟ್ಟಿಗೆ ನಷ್ಟವಾಯಿತು ಸಾಮಗ್ರಿಗಳ ನಾಶವೇನೂ ಆಗಲಿಲ್ಲ. ಸುಮಾರು ಸಾವಿರ ಜನರು ಮಡಿದರು. ಒಟ್ಟು ಎಷ್ಟು ಹಡಗುಗಳಿಗೆ ನಷ್ಟವಾಯಿತು ಎಂಬುದು ಗೊತ್ತಿಲ್ಲ—ಎಂಬದಾಗಿ ಅಮೇರಿಕದ ಯುದ್ಧಕಾರ್ಯದರ್ಶಿಗಳಾದ ಮಿ|| ಸ್ಟಿಂಸನ್‌ರವರು ಹೇಳಿದ್ದಾರೆ.

ಆಕ್ಸಿಸ್ ಯೂರೋಪಿನಲ್ಲಿ ಪ್ರಮುಖ ಘಟನೆಗಳು

ಹಿಟ್ಲರನ ಸಾಮ್ರಾಜ್ಯದಲ್ಲಿ ಅನೇಕ ರಾಜಕೀಯ ವಿಪ್ಲವಗಳು ಸಂಭವಿಸಬಹುದೆಂದ ಹಿನ್ನೆಲೆಯಲ್ಲಿ ಯೂರೋಪಿಯನ್ ಸಲಹಾ ಸಮಿತಿಯ ಸಮಾಲೋಚನೆಗೆ ಕುಳಿತಿದೆ. ಆಕ್ಸಿಸ್ ಯೂರೋಪಿನಲ್ಲಿ ಪ್ರಾಮುಖ್ಯವಾದ ಘಟನಾವಳಿಗಳು ಉದ್ಭವಿಸುವ ನಿರೀಕ್ಷಣೆಯಿದೆ. ಆದರೂ ಜರ್ಮನಿಯ ಒಳಗಿನ ಸ್ಥಿತಿಗತಿಗಳಲ್ಲಿ ಕೂಡಲೇ ಅಲ್ಲೋಲಕಲ್ಲೋಲವಾಗುವುದಿಲ್ಲವೆಂದು ರಾಜನೀತಿಜ್ಞರು ನಂಬುತ್ತಾರೆ. ಏಕೆಂದರೆ ಜರ್ಮನ್ ಸೈನ್ಯವು ಇನ್ನೂ ಬಹಳ ಬಲಿಷ್ಠವಾಗಿದೆ. ಅದಕ್ಕೆ ಸಾಕಾದಷ್ಟು ಪೆಟ್ಟು ಇನ್ನೂ ಬಿದ್ದಿಲ್ಲ

ಯ ಮಾಡಲಾಗುವುದಿಲ್ಲವೆಂದು ಉತ್ತರವಿತ್ತರು.

ಶ್ರೀ ಯಶೋಧರಾ ದಾಸಪ್ಪನವರು.— ಆಹಾರ ಪಂಚಿಕೆ ವಿಷಯದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಡಿಪೋಗಳನ್ನು ತೆರೆಯಬೇಕೆಂದೂ, ಇಲ್ಲವಾದರೆ ಡಿಪೋಗಳಲ್ಲಿ ಹೆಂಗಸರಿಗಾಗಿ ಪ್ರತ್ಯೇಕ ದಾರಿ ಏರ್ಪಡಿಸಬೇಕೆಂದೂ ಸೂಚಿಸಿದರು. ಆಹಾರ ಸಚಿವರು :- ಪ್ರತ್ಯೇಕ ಡಿಪೋಗಳ ಸಾಧ್ಯವಿಲ್ಲ ಎಂದು ಹೇಳಿ ೨ನೆಯ ಏರ್ಪಾಡಿನ ಬಗ್ಗೆ [illegible] ವನ್ನು ಸಮ್ಮತಿಸಿದರು

ಮದರಾಸಿನ ಚಾಳಿ ನಾಗಪುರಕ್ಕೆ

ಮದ್ರಾಸ್ ಸರ್ಕಾರವು ಪಾನ ನಿರೋಧ ಶಾಸನವನ್ನು ರದ್ದುಮಾಡಿ ನಾಲ್ಕು ಜಿಲ್ಲೆಗಳಲ್ಲಿ ಮದ್ಯದ ಅಂಗಡಿಗಳ ಹರಾಜನ್ನು ನಡೆಸುತ್ತಿರುವಂತೆ, ಮಧ್ಯಪ್ರಾಂತ್ಯವು ಇದೇ ಮೇಲ್ಪಂಕ್ತಿಯನ್ನೇ ಅನುಸರಿಸುವಂತಿದೆ ನಾಗಪುರ ನಗರದಲ್ಲಿ ಎರಡು ಹೊಸ ಹೆಂಡದಂಗಡಿಗಳನ್ನು ತೆರೆಯಲು ಸರ್ಕಾರವು ನಿರ್ಧರಿಸಿರುವುದರಿಂದ ಜನರಲ್ಲಿ ಹಾಹಾಕಾರವೆದ್ದಿದೆ. ಊರಿನ ಜನಸಂಖ್ಯೆ ಹೆಚ್ಚಿದೆಯೆಂದೂ ಜನರ ಆರ್ಥಿಕ ಸ್ಥಿತಿ ಉತ್ತಮವಾಗಿರುವುದರಿಂದ ಹೆಂಡದ ಬೇಕರಿಯು ಅಧಿಕವಾಗಿ ಈಗಿರುವ ಕೇಂದಿ ಅಂಗಡಿಗಳ ಬಳಿ ರಾಂತಿಯನ್ನೂ ಗಾಂಭೀರ್ಯವನ್ನೂ ಪಾಲಿಸುವುದು ಕಷ್ಟವಾಗಿರುವುದರಿಂದಲೂ, ಈಗಿರುವ ಕಂಟ್ರಾಕ್ಟುದಾರರ ಗುಂಪಿನವರು ಜೋರಿನಾದ ಲಾಭವನ್ನು ಪಡೆಯುತ್ತಿರುವುದರಿಂದಲೂ ಹೊಸ ಅಂಗಡಿಗಳನ್ನು ತೆರೆಯಬೇಕಾಗುವುದೆಂದು ಸರ್ಕಾರದವರು ತಿಳಿಸಿದ್ದಾರೆ

ಬಿಸಿ ಬಿಸಿ ಸುದ್ದಿ

ಬಿಡುಗಡೆ

ಸ್ವ ವ ಪ್ರೋ] ಬೆಂಗಳೂರು ೧೮

ಇನ್ನೂ ಬಂಧನದಲ್ಲಿದ್ದ ವಿದ್ಯಾರ್ಥಿ ಓಬಲಪ್ಪನವರ ಬಿಡುಗಡೆಗೆ ಈ ದಿನ ಆರ್ಡರ್ ಆಯಿತು

ಕ್ರಿಕೆಟ್ ಮ್ಯಾಚ್

ಈ ದಿನ ಅಂತರ ವಿಶ್ವವಿದ್ಯಾನಿಲಯದ ಕ್ರಿಕೆಟ್ ಪಂದ್ಯವು ಆರಂಭವಾಯಿತು ಮದ್ರಾಸ್—ಮೈಸೂರಿನವರೇ ಇಂದು ಆಡಿದರು. ಮದ್ರಾಸಿನವರು ಬ್ಯಾಟಿಂಗ್ ಆರಂಭ ಮಾಡಿ ಟೀ ಹೊತ್ತಿಗೆ ೨ ವಿಕೆಟ್ಟಿಗೆ ೩೦೮ ರನ್ನುಗಳನ್ನು ಮಾಡಿದ್ದರು. ಅವರಲ್ಲಿ ಒಬ್ಬರೇ ೧೧೪ ರನ್ನುಗಳನ್ನು ಮಾಡಿದ್ದರು.

ಸಿಲ್ವರ್ ಜೂಬಿಲಿ ಫೀಲ್ಡ್ ಸ್ಪೋರ್ಟ್ಸ್

ನೆನ್ನೆಯ ದಿನ ಹೈಸ್ಕೂಲುಗಳ ಸಿಲ್ವರ್ ಜೂಬಿಲಿ ಫೀಲ್ಡ್ ಸ್ಪೋರ್ಟ್ಸ್ ಎಂಟ್ರೆನ್ಸ್ ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ನಡೆಯಿತು ಇದರಲ್ಲಿ ವಿ.ಪಾರಂಭ ಹೈಸ್ಕೂಲಿಗೆ ೬೨ ಪಾಯಿಂಟುಗಳು, ಮೋಡಲ್ ಹೈಸ್ಕೂಲಿಗೆ ೫೭ ಪಾಯಿಂಟುಗಳೂ ಬಂದು ಜಯಶೀಲರಾದರು.

ಸಾವರ್ಕರರು ಹೋಗುವುದಿಲ್ಲ

ದೇಹಾಲಸ್ಯದ ನಿಮಿತ್ತ ಶ್ರೀ ಸಾವರ್ಕರರು, ಅವ್ಯಕ್ತ ರಕ್ತ ಹೊರಡುವುದರಿಂದ ಅಲ್ಲಿ ನಡೆಯುವ ಹಿಂದೂ ಮಹಾಸಭಾ ಅಧಿವೇಶನದ ರಜತೋತ್ಸವ ಸಮಾರಂಭಕ್ಕೆ ಡಾ|| ಶಾಮಪ್ರಸಾದ ಮುಖರ್ಜಿಯವರನ್ನು ಕೋರಿಕೊಳ್ಳುವಂತೆ ಅವರು ಸೂಚಿಸಿದ್ದಾರೆ.

ಜೈಪ್ರಕಾಶರ ಅರ್ಜಿ ವಜಾ

ಜೈ ಪ್ರಕಾಶನಾರಾಯಣರನ್ನು ಬಂಧನದಲ್ಲಿಟ್ಟಿರುವುದು ತಪ್ಪೆಂದು ಶ್ರೀಮತಿ ಪ್ರಭಾವತಿ ಮೂಲಕ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಲಾಹೋರ್ ಹೈಕೋರ್ಟಿನವರು ವಜಾಮಾಡಿದ್ದಾರೆ.

ಕಸ್ತೂರಿಬಾಯಿಯವರ ಬಿಡುಗಡೆ ವಿಚಾರ

ಕಾಮನ್ಸ್ ಸಭೆಯಲ್ಲಿಯೂ ಶ್ರೀಮತಿ ಕಸ್ತೂರಿಬಾಯಿ, ಗಾಂಧಿಯವರ ಬಿಡುಗಡೆ ವಿಷಯವಾಗಿ ಮಿ|| ಸೋರೆನ್‌ಸನ್‌ರವರು ಪ್ರಶ್ನೆ ಹಾಕಿದರು. ಆ್ಯಮರಿ ಸಭೆಯ ಉತ್ತರವನ್ನೇ ಮಿ|| ಅಮೆರಿಯವರು ಕೊಟ್ಟರು. ಅವರನ್ನು ಬಿಡುಗಡೆ ಮಾಡುವ ವಿಷಯವು ಪರಿಶೀಲಿಸಲ್ಪಟ್ಟಿತೆಂದೂ, ಅವರಿಗೆ ಬಂಧುಗಳನ್ನು ನೋಡಲು ಅವಕಾಶ ಕೊಡಲಾಗಿದೆಯೆಂದೂ ವೈದ್ಯಾಭಿಪ್ರಾಯದ ಪ್ರಕಾರ ಅವರು ಈಗ ಇರುವ ಸ್ಥಳವಲ್ಲದೇ ಸುರಕ್ಷಿತವಾಗಿರುವರೆಂದೂ ತಿಳಿಸಿದರು. ಹಾಗಾದರೆ ವೈದ್ಯರಾಗಲೀ ಆಕೆಯೇ ಆಗಲಿ ಬಂಧನದಿಂದ ಹೋಗ ಬೇಕೆಂದು ಅಪೇಕ್ಷಿಸಿದರೆ ಅವಕಾಶ ಕೊಡಲಾಗುವುದೇ? ಎಂಬ ಪ್ರಶ್ನೆಗೆ ಈ ವಿಷಯವನ್ನು ಇಂಡಿಯಾ ಸರ್ಕಾರಕ್ಕೆ ಬಿಡಬೇಕು ಎಂಬ ಉತ್ತರ ಬಂದಿತು

ಬಿಡುಗಡೆಯಾದವರು ಸಹಕರಿಸಬೇಕು

ಡೆಟಿನ್ಯೂಗಳನ್ನು ಬಿಡಬೇಕು ಅವರೂ ಆಹಾರ ಸಮಸ್ಯೆಯ ಪರಿಹಾರದಲ್ಲಿ ಸಹಕರಿಸುವಂತೆ ಸರ್ಕಾರದವರು ಮಾಡಬೇಕು ಎಂಬುದಾಗಿ ಇಂದು ಶಾಸನ ಸಭೆಯಲ್ಲಿ ಕೆಲವು ಠರಾವುಗಳು ಮಂಡಿಸಲ್ಪಟ್ಟಿದ್ದವು. ಈಗ ಅವರ ಬಿಡುಗಡೆಯೂ ಆಗಿದೆ ಅವರೆಲ್ಲರೂ ಶಾಂತವಾಗಿದ್ದ ಪರಿಸ್ಥಿತಿಯಲ್ಲಿ ಸೇರಿ ತಮ್ಮ ಸಲಹೆ ಸಮಾಚಾರಗಳನ್ನು ನೀಡುವರೆಂದು ನನ್ನ ನಂಬಿಕೆಯಿದೆ ಅವರಿಗೂ ಶ್ರೀ ಪ್ರಜಾಪಕ್ಷ ಪ್ರಧಾನರ ಯೋಗ್ಯತೆಗನುಗುಣವಾದ ಆಹ್ವಾನವಿದೆ— ಎಂಬುವಾಗಿ ಆಹಾರ ಸಚಿವರು ಸಭೆಯಲ್ಲಿ ತಿಳಿಸಿದರು

ಪ್ರಕಟಣೆ

'ಪತ್ರಿಕೋದ್ಯೋಗಿಗಳು ತಮ್ಮ ಜವಾಬ್ದಾರಿಯನ್ನು ತಿಳಿದು ನಡೆಯಲು ಅವರ ಸ್ವಂತ ಉಪಯೋಗಕ್ಕೆ ಬೇಕಾದ H.S [illegible] ಗಳಲ್ಲಿ [illegible] ಜವಾಬ್ದಾರಿ ಅಂದರೆ [illegible] ಇಂಥವರು [illegible] ರನ್ನು [illegible].'

(ಸಹಿ) ಕೆ. ಶ್ರೀನಿವಾಸನ್

[illegible]

ಪ್ರಭುಗಳ ಪ್ರವಾಸ

ಶಿವನಸಮುದ್ರ, ಮಳವಳ್ಳಿಗೆ ಭೇಟಿ

ಸ್ವಂ. ವ.] ಮೈಸೂರು ೧೭.

ಶ್ರೀಮನ್ಮಹಾರಾಜರವರು, ದಿವಾನರು ಮತ್ತು ಇತರ ಪರಿವಾರದೊಡನೆ ರಾಜಧಾನಿಯನ್ನು ನಿನ್ನೆ ಬೆಳಗ್ಗೆ ೯ ಗಂಟೆಗೆ ಬಿಟ್ಟು ಶಿವನಸಮುದ್ರಕ್ಕೆ ೧೧-೩೦ ಗಂಟೆಗೆ ತಲುಪಿದರು.

ಸೋಸಲೆ, ಹಾರೋಹಳ್ಳಿ, ದೊಡ್ಡಬ್ಯಾಗಿಲು, ಅಚ್ಚಯ್ಯನಹುಂಡಿ ಮತ್ತು ಇತರ ಹಳ್ಳಿಗಳಲ್ಲಿ ಗ್ರಾಮ ಪಂಚಾಯಿತಿ ಸದಸ್ಯರುಗಳು ಹಲವು ಜಾಗಗಳಲ್ಲಿ ಪ್ರಭುಗಳಿಗೆ ಸುಸ್ವಾಗತವಿತ್ತರು.

ಮಂಡ್ಯ ಜಿಲ್ಲೆಯ ಗಡಿಯಾದ ಚಿಕ್ಕಬ್ಯಾಗಿಲಿನಲ್ಲಿ ಜಿಲ್ಲಾಧಿಕಾರಿಗಳಾದ ಮಿ|| ಸಜ್ಜಾದ್ ಹುಸೇನರೂ, ಜಿಲ್ಲಾ ಬೋರ್ಡು ಅಧ್ಯಕ್ಷರೂ ಮತ್ತು ಇತರ ಅಧಿಕಾರಿಗಳೂ ಹಾರವನ್ನರ್ಪಿಸಿದರು. ಬೊಪ್ಪಗೌಡನಪುರದಲ್ಲಿ ಮಹಾಪ್ರಭುಗಳು ಮಂಟೇಸ್ವಾಮಿಗಳವರ ಮಠಕ್ಕೆ ದಯಮಾಡಿಸಿದರು. ಅಲ್ಲಿ ಶ್ರೀ ಕೆ. ಬಸವರಾಜ ಅರಸಿನವರು ಪ್ರಭುಗಳನ್ನು ಸ್ವಾಗತಿಸಿದರು. ಮಧ್ಯದಲ್ಲಿ ಕಲವು ನಿಮಿಷಗಳಿದ್ದು ಅಲ್ಲಿಂದ ಬೆಳಕವಾಡಿ ಮಾರ್ಗವಾಗಿ ಶಿವನಸಮುದ್ರಕ್ಕೆ ದಯಮಾಡಿಸಿದರು

ಶಿವನಸಮುದ್ರದಲ್ಲಿ

ಶಿವನಸಮುದ್ರದಲ್ಲಿ ಮಹಾಪ್ರಭುಗಳನ್ನು ಕಾವೇರಿ ಪವರ್ ಸ್ಕೀಮಿನ ಜನರಲ್ ಸೂಪರಿಂಟೆಂಡೆಂಟರಾದ ಮಿ|| ಹಯಾತ್ ರವರು, ಶ್ರೀ ರಾಮಕೃಷ್ಣರವರು ಸುಸ್ವಾಗತಿಸಿ, ಹಾರತುರಾಯಿಗಳನ್ನು ಅರ್ಪಿಸಿದರು.

ಮಧ್ಯಾಹ್ನ ಅಲ್ಲೇ ವಿಶ್ರಮಿಸಿಕೊಂಡು, ಸಂಜೆ ೫-೩೦ ಗಂಟೆಗೆ ಪ್ರಭುಗಳು ಶಿಂಷಾಪುರಕ್ಕೆ ಭೇಟಿ ಕೊಟ್ಟರು. ಅಲ್ಲಿ ಶ್ರೀ ಮಾಧವರಾಯರು ಹಾರವನ್ನು ಅರ್ಪಿಸಿದರು

ರಾತ್ರಿಯಲ್ಲಿ ಶಿವನಸಮುದ್ರವನ್ನು ಬಣ್ಣ ಬಣ್ಣದ ವಿದ್ಯುದ್ದೀಪಗಳಿಂದ ಅಲಂಕರಿಸಿದ್ದರು. ಜಲಪಾತದಲ್ಲಿ ಕಿಡಿಗಳಿಂದ ಕೂಡಿದ ವರ್ಣರಂಜಿತ ವಿದ್ಯುದ್ದೀಪಗಳನ್ನು ಹಾಕಿದ್ದನ್ನು ಪ್ರಭುಗಳು ವೀಕ್ಷಿಸಿದರು. ಈ ದಿನ ಬೆಳಗ್ಗೆ ಶಿವನಸಮುದ್ರವನ್ನು ೯ ಗಂಟೆಗೆ ಬಿಟ್ಟು, ಮಳವಳ್ಳಿ ಮಾರ್ಗವಾಗಿ ರಾಜಧಾನಿಗೆ ಹಿಂತಿರುಗಿದರು

ಮಳವಳ್ಳಿಯಲ್ಲಿ

ಮಳವಳ್ಳಿಯಲ್ಲಿ ಪ್ರಭುಗಳಿಗೆ ತಮ್ಮ ರಾಜಭಕ್ತಿಯನ್ನು ಅರ್ಪಿಸಲು ಸಾವಿರಾರು ಜನರು ರಸ್ತೆಗಳ ಅಕ್ಕಪಕ್ಕದಲ್ಲಿ ಕಿಕ್ಕಿರಿದು ತುಂಬಿದ್ದರು. ತಳಿರು ತೋರಣಗಳು ಮತ್ತು ಹಸಿರು ಮಂಟಪಗಳಿಂದ ನಗರವನ್ನು ಅಲಂಕರಿಸಿದ್ದರು. ಪೌರಸಭಾ ಮಂಟಪದಲ್ಲಿ ಸ್ವಾಗತಾಧ್ಯಕ್ಷರಾದ ಶ್ರೀ ಚಿಕ್ಕನಂಜಪ್ಪನವರು ಹಾರವನ್ನು ಅರ್ಪಿಸಿದರು. ಅಖಿಲಕರ್ನಾಟಕ ಜನರು ಸಿಲ್ವರ್ ಫಿಲ್ಡ್‌ಡರ್ [illegible] ಎಲೆಕ್ಟ್ರಿಕ್ [illegible] ಗಂಗೆಮತಸ್ಥರು ತಮ್ಮ [illegible] ರಾಜಭಕ್ತಿಯನ್ನು [illegible].

[illegible]

[illegible] ಶ್ರೀ ಟಿ. ರಾಮಯ್ಯನವರು [illegible]

[illegible]

ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ

ಮಂಗಳೂರಿನಲ್ಲಿ ನಡೆಯುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನದ ಏರ್ಪಾಡುಗಳು ಭರದಿಂದ ಸಾಗುತ್ತಿವೆ. ಆ ಸಮಯಕ್ಕೆ ಒಂದು ಪತ್ರಿಕಾ ಪ್ರದರ್ಶನವೂ ನಡೆಯುವುದಾಗಿದೆ. ಅದಕ್ಕೆ ಕರ್ನಾಟಕದ ಹಳೆಯ ಮತ್ತು ಹೊಸ ಪತ್ರಿಕೆಗಳ ಮತ್ತು ವಿಶೇಷ ಸಂಚಿಕೆಗಳ ಪ್ರತಿಗಳನ್ನು ಕಳುಹಿಸಿಕೊಡಬೇಕೆಂದು ಕೋರಲಾಗಿದೆ. ಮಹಾತ್ಮ ಗಾಂಧಿಯವರ ಪುತ್ರರೂ ದೆಹಲಿ ಹಿಂದೂಸ್ತಾನ್ ಟೈಮ್ಸ್ ಪತ್ರಿಕಾ ಸಂಪಾದಕರೂ ಆದ ಶ್ರೀ ದೇವದಾಸ್ ಗಾಂಧಿಯವರನ್ನು ಸಮ್ಮೇಳನದ ಅಧ್ಯಕ್ಷತೆಗಾಗಿ ಆಹ್ವಾನಿಸಲಾಗಿದೆ.

ಪಾನನಿರೋಧ ಸಮ್ಮೇಳನಕ್ಕೆ ಅಡ್ಡಿ

ನೆಲ್ಲೂರಿನಲ್ಲಿ ನಿನ್ನೆ ದಿನ ನಡೆಯಬೇಕಾಗಿದ್ದ ಉತ್ತರ ಆರ್ಕಾಟ್ ಜಿಲ್ಲೆಯ ಪಾನನಿರೋಧ ಸಮ್ಮೇಳನಕ್ಕೆ ಅಲ್ಲಿನ ಮ್ಯಾಜಿಸ್ಟ್ರೇಟರು ಅನುಮತಿ ಕೊಡಲಾಗುವುದಿಲ್ಲನೆಂದು ತಿಳಿಸಿದ್ದಾರೆ. ಶ್ರೀ ಸಿ. ರಾಜಗೋಪಾಲಾಚಾರಿಯವರು ಅದನ್ನು ಆರಂಭಗೊಳಿಸುವಂತಿದ್ದರು.

ಮದ್ರಾಸಿನಲ್ಲಿ ಬಿಕ್ಕಟ್ಟಿನ ಪರಿಹಾರ

ಇಂದಿನ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ಮದ್ರಾಸಿನಲ್ಲಿ ಪ್ರಜಾಸರ್ಕಾರದ ಮಂತ್ರಿಮಂಡಲವನ್ನು ಸ್ಥಾಪಿಸುವ ಉದ್ದೇಶದಿಂದ ಒಂದು ಸಮ್ಮೇಳನವನ್ನು ನಡೆಸಲು ಒಬ್ಬ ಪ್ರಮುಖ ಮಹನೀಯರು ಶಾಸನ ಸಭಾ ಸದಸ್ಯರುಗಳೊಡನೆ ಸಮಾಲೋಚನೆ ಮಾಡುತ್ತಿರುವರೆಂದೂ, ಈ ಸಮ್ಮೇಳನಕ್ಕೆ ಶಾಸನ ಸಭಾಧ್ಯಕ್ಷರಾದ ಶ್ರೀ ಬುಲುಸು ಸಾಂಬಮೂರ್ತಿಯವರು ಅಧ್ಯಕ್ಷರಾಗಬಹುದೆಂದೂ ಹೇಳಲಾಗಿದೆ.

ಕಲ್ಕತ್ತಾಕ್ಕೆ ರಕ್ಷಣಾ ನಿಲಯಗಳು

ಧಾಳಿಯ ಕಾಲದಲ್ಲಿ ಜನರು ರಕ್ಷಣೆಯನ್ನು ಹೊಂದಲು ಕಲ್ಕತ್ತೆಯ ರಕ್ಷಣಾ ಸ್ಥಾನಗಳನ್ನು ಹೆಚ್ಚು ಹೆಚ್ಚಾಗಿ ಏರ್ಪಡಿಸುವಂತೆ ಸರ್ಕಾರವನ್ನು ಒತ್ತಾಯ ಪಡಿಸಬೇಕೆಂದು ಅಲ್ಲಿನ ಕಾರ್ಪೊರೇಷನ್ ಸಭೆಯಲ್ಲಿ ನಿರ್ಣಯಿಸಲಾಯಿತು

ಕಟ್ಟಿಸಲು ೧೦ ಸಾವಿರ ರೂ. ಗಳು ಮತ್ತು ಹೊಸ ಆಸ್ಪತ್ರೆಗಾಗಿ ೫ ಸಾವಿರ ರೂ. ಗಳ ಉದಾರದಾನ ಮಾಡಿರುವುದನ್ನು ಜಿಲ್ಲಾಧಿಕಾರಿಗಳು ತಿಳಿಸಿ, ಪ್ರಭುಗಳಿಗೆ ಅವರನ್ನು ಪರಿಚಯ ಮಾಡಿಕೊಟ್ಟರು.

ಸೋಸಲೆಯಲ್ಲಿ

ಅನಂತರ ಸೋಸಲೆಯಲ್ಲಿ ಶ್ರೀ ವ್ಯಾಸರಾಯ ಮಠದ ಪರವಾಗಿ ಶ್ರೀ ರಾಜಾರಾವ್ ರವರು ಪ್ರಭುಗಳಿಗೆ ಮರ್ಯಾದೆಯನ್ನು ಸಲ್ಲಿಸಿದರು

ನಂತರ ಟಿ ನರಸೀಪುರದ ಮಾರ್ಗವಾಗಿ ಪ್ರಭುಗಳು ರಾಜಧಾನಿಗೆ ವಾಪಸು ಬಂದರು.

Edited, printed and published by A R. Nagarajan, at the Sadhvi Press, D Subbiah Road, Mysore.

ಚಕ್ರವರ್ತಿ ಕುಮಾರಿ ಮದುವೆಯೇ ?

ಬ್ರಿಟಿಷ್ ಚಕ್ರವರ್ತಿ ಕುಮಾರಿಯಾದ ರಾಜಕುಮಾರಿ ಎಲಿಜಬೆತ್ ರವರಿಗೆ ವಿವಾಹ ಗೊತ್ತಾಗಿದೆಯೆಂದೂ ಬರುವ ಏಪ್ರಿಲ್ ತಿಂಗಳಲ್ಲಿ ಅವರ ೧೮ ನೇ ವರ್ಧಂತಿ ಸಮಯದಲ್ಲಿ ಇದು ಪ್ರಕಟಿಸಲ್ಪಡುವುದೆಂದೂ ವದಂತಿ ಹರಡಿದೆ. ಆದರೆ ಯುದ್ಧಕಾಲದಲ್ಲಿ ರಾಜ ವಿವಾಹವು ನಡೆಯಬಾರದೆಂದು ತಿಳಿಸಲ್ಪಟ್ಟಿದೆ.

ಬೆಲ್ಜಿಯರ್ಗೆ ಹಿತೋಪದೇಶ

ಮಿತ್ರ ಸೈನ್ಯಗಳು ಬೆಲ್ಜಿಯಂಗೆ ನುಗ್ಗಿದಾಗ ಅವರಿಗೆ ಎಲ್ಲಾ ಗುಪ್ತ ಸಂಗತಿಗಳ ಮತ್ತು ಸಂಕೇತ ಸ್ಥಾನಗಳ ವಿವರಗಳನ್ನು ತಿಳಿಸಲು ಬೆಲ್ಜಿಯನ್ನರು ಸಿದ್ಧರಾಗಿರುವಂತೆ ಮಿತ್ರ ಮಿಲಿಟರಿ ನಾಯಕರಿಬ್ಬರು ಸೂಚಿಸಿರುತ್ತಾರೆ. ಜರ್ಮನರು ಇರುವ ಭೂಮಿಯ ಮೇಲಿನ ಸೈನ್ಯಗಳನ್ನು ತಿಳಿದುಕೊಳ್ಳುವುದು; ಜರ್ಮನರ ಪ್ರಕಟಣೆಗಳನ್ನು ನಂಬದಿರುವುದು; ಬ್ರಿಟಿಷರ ಹೇಳಿಕೆಗಳನ್ನೇ ಒಪ್ಪುವುದು; ಜರ್ಮನ್ ಸೋಲುಗಳನ್ನೆ ಪ್ರಚಾರ ಮಾಡುವುದು: ಈ ರೀತಿ ಬೋಧನೆಗಳನ್ನು ಅವರು ಮಾಡಿರುತ್ತಾರೆ

ಯುಗೋಸ್ಲಾವಿಯಾದಲ್ಲಿ ನಾಜಿಗಳ ಒತ್ತಾಯ

ಯುಗೋಸ್ಲಾವಿಯಾದಲ್ಲಿ ಅಲ್ಲಿನ ದೇಶಭಕ್ತರಿಗೆ ಸೇರಿದ ಪ್ರದೇಶಗಳ ಮೇಲೆ ಜರ್ಮನರು ತಮ್ಮ ಒತ್ತಾಯವನ್ನು ಬಲಪಡಿಸುವರೆಂದೂ, ಕ್ರಮಕ್ರಮವಾಗಿ ಸೈನ್ಯಸಾಮಗ್ರಿಗಳನ್ನು ಅಲ್ಲಿಗೆ ತರುತ್ತಿರುವರೆಂದೂ ಸ್ವತಂತ್ರ ಯುಗೋಸ್ಲಾವಿಯಾ ರೇಡಿಯೋ ತಿಳಿಸಿದೆ.

ಅಪೇರಾ ಟಾಕೀಸ್

ಈಗ ನಡೆಯುತ್ತಿದೆ

ಸನ್ ಆಫ್ ಪ್ಯೂರಿಟಿ

ಮುಂದಿನ ಬದಲಾವಣೆ--

೨೩—೧೨—೪೩ ರಿಂದ

ಭಕ್ತರಾಜ್

(ಹಿಂದಿ)

ಭಕ್ತಿರಸಪ್ರಧಾನವಾದ ಚಿತ್ರ

ನಟವರ್ಗ:- ವಿಷ್ಣುಪಂತ್ ಪಗ್ನಿಸ್, ವಾಸಂತಿ, ದೀಕ್ಷಿತ್, ಮುಬಾರಕ್, ಬಿಲ್ಲಿಮೋರಿಯಾ.

ದರ ತರಗತಿಗಳು-0-5-0, 0-3 0.

ಪತ್ರ ವ್ಯವಹಾರ

ರೇಷನ್ ಕಾರ್ಡು ತಿದ್ದುಪಡಿ

ತಿದ್ದುಪಡಿಯಾಗಬೇಕಾದ ರೇಷನಿಂಗ್ ಕಾರ್ಡುಗಳನ್ನು ೧೮ ನೇ ತಾ|| ನೊಳಗಾಗಿ ಆ ಇಲಾಖೆಗೆ ಕೊಟ್ಟು ಸರಿಪಡಿಸಿಕೊಳ್ಳಬಹುದೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಆದರೆ ಅನೇಕರು ತಮ್ಮ ಕಾರ್ಡುಗಳನ್ನು ಸರಿಪಡಿಸಿಕೊಳ್ಳಲು ಹೋಗಿ ನಿರಾಶರಾಗಿ ಬಂದಿರುವರು. ೨೦ ನೇ ತಾರೀಖು ಆಯಾ ಡಿಪೋಗಳಲ್ಲಿಯೇ ಇನ್ಸ್‌ಪೆಕ್ಟರವರು ತಿದ್ದುಪಡಿಮಾಡಿಕೊಡುತ್ತಾರೆಂದು ಹೇಳಿ ವಾಪಸು ಕಳುಹಿಸುತ್ತಿದ್ದಾರಂತೆ. ೨೦ನೇ ತಾ|| ಡಿಪೋಗಳಲ್ಲಿ ಕಾರ್ಡುಗಳನ್ನು ತಿದ್ದುಪಡಿಮಾಡುವುದು ಯಾವಾಗ? ಪಡಿಭತ್ಯವನ್ನು ಪಡೆಯುವುದು ಯಾವಾಗ? ಆಯಾ ಡಿಪೋಗಳಲ್ಲಿ ಆಯಾ ಮೊಹಲ್ಲಾ ಇನ್ಸ್‌ಪೆಕ್ಟರುಗಳು ೧೬ ನೇ ತಾ|| ಕಾರ್ಡು ಹಂಚಿಕೆಯಾದ ಬಗ್ಗೆಯೂ ಹಾಜರಿದ್ದು ಬಹು ಮುಖ್ಯವಾದ ಈ ತಿದ್ದುಪಡಿ ಕೆಲಸಕ್ಕೆ ಕೈಹಾಕಿದ್ದರೆ ಅನುಕೂಲವಾಗುತ್ತಿರಲಿಲ್ಲವೆ? ಮುಂಚಿದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಅನೇಕ ರೇಷನಿಂಗ್ ಕಾರ್ಡುಗಳಲ್ಲಿ ವಿವರಗಳು ತಪ್ಪುತಪ್ಪಾಗಿ ಬರೆಯಲ್ಪಟ್ಟಿವೆ. ಇವುಗಳು ಸಹಜವಾಗಿ ಕೈತಪ್ಪಿನಿಂದ ಬರೆಯಲ್ಪಟ್ಟಿದ್ದರೂ ಪರಿಣಾಮವು ಪ್ರಮಾದವಾಗುವುದು ಅಲ್ಲದೆ ಈ ತಪ್ಪುಗಳೆಲ್ಲವನ್ನೂ ತಾ|| ೧೮, ೧೯ ಈ ಎರಡು ದಿನಗಳಲ್ಲಿ ಸರಿಪಡಿಸಲು ಸಾಧ್ಯವೇ? ಮತ್ತೆ ೨೦ ನೇ ತಾ|| ದಿನವೇ ೪೫೦ ಜನರಿಗೆ ಒಂದೊಂದು ಡಿಪೋನಲ್ಲಿ ಪಡಿಭತ್ಯವನ್ನು ಹಂಚಲು ಸಾಧ್ಯವೇ? ಬರೀ ಸಕ್ಕರೆಯೊಂದನ್ನೇ ತೂಕಮಾಡಿಕೊಟ್ಟರೂ ಬೆಳಗಿನಿಂದ ಸಾಯಂಕಾಲದ ವರೆಗೂ ಹೊತ್ತು ಸಾಲದು ಈ ೨೦ ನೇ ತಾ|| ನ ಗಲಾಟೆಗೆ, ಸಂಬಂಧಪಟ್ಟ ಅಧಿಕಾರಿಗಳು ಏನು ವ್ಯವಸ್ಥೆ ಮಾಡಿರುವರು? ಪ್ರಜೆಗಳಿಗೆ ಸರಿಯಾಗಿ ತಿಳುವಳಿಕೆ ಕೊಡಬೇಕು. ಇಲ್ಲವಾದರೆ ಅನಾಹುತಕ್ಕೆ ಕಾರಣವಾಗುವುದಿಲ್ಲವೇ?

ಹಿತೈಷಿ.

ಬ್ರೆನ್ನರ್ ಕಣಿವೆ ಮುತ್ತಿಗೆ

ಒಂದು ನೂರಕ್ಕಿಂತ ಹೆಚ್ಚು ಮಿತ್ರ ವಿಮಾನಗಳು ಮೊನ್ನೆ ದಿನ ಬ್ರೆನ್ನರ್ ಕಣಿವೆ ಮೇಲೆ ಧಾಳಿ ನಡೆಸಿದವು ಇನ್ಸ್‌ಬ್ರುಕ್ ರೈಲ್ವೆ ಜಂಕ್ಷನ್ನಿನ ಮೇಲೂ ನೇರವಾದ ಹೊಡೆತಗಳನ್ನು ಕೊಡಲಾಯಿತು.

ಬಾಂಬು ಪತ್ತೆ

ಬೊಂಬಾಯಿ ನಗರದ ಸೈಸ್ಕೂಲೊಂದರಲ್ಲಿ ಸಜೀವ ಬಾಂಬು ಇದ್ದುದು ಕಂಡುಬಂದಿತೆಂದೂ ಪೋಲೀಸರು ಅದನ್ನು ತೆಗೆದುಹಾಕಿದರೆಂದೂ ವರದಿಯಾಗಿದೆ.

ಸ್ತ್ರೀಯರ ಶಾಕಾಹಾರಿ [illegible]

ತಾ|| ೧-೧ ೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ವಿಚಾರ ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರ್ಯಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಣ್ಣಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರ

ಮಿ ಸೂ — ಚಿಲ್ಲರೆಯಾಗಿ ಅಚ್ಚುಕಚ್ಚರೆ, ಬೂರಾಸಕ್ಕರೆ ಸಿಕ್ಕುತ್ತವೆ ಇಲ್ಲೂ ಮತ್ತು ಸಂಪೇಟೆ ಸರ್ಕಲ್ ಆಫೀಸಿನಲ್ಲೂ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ

ಸಂಪುಟ ೨] ಭಾನುವಾರ ೧೯--೧೨--೪೩ [ಸಂಚಿಕೆ ೧೩೧

ಬಿಕ್ಕಟ್ಟು ಬಗೆಹರಿಸಲು ಗಾಂಧೀಜಿಗೆ ಮನವಿ

ರಾಜಧಾನಿಯಲ್ಲಿ ನಾಳೆಯಿಂದ ರೇಷನಿಂಗ್ ಬರಲಿದೆ

ಮುಂದಿನ ವರ್ಷ ಗಾಂಧೀಜಿಯವರ ಬಿಡುಗಡೆಯೆ?

ನಾಳೆಯಿಂದ ರೇಷನಿಂಗ್ ಬರಲಿದೆ

೯೬ ಡಿಪೋಗಳನ್ನು ತೆರೆಯಲಾಗಿದೆ

ಮೈಸೂರು, ೧೮

ರಾಜಧಾನಿಯಲ್ಲಿ ನಾಳೆಯಿಂದ ಜಾರಿಗೆ ಬರಲಿರುವ ರೇಷನಿಂಗ್ ವಿಚಾರವಾಗಿ, ನಿನ್ನೆ ಸಂಜೆ ಅ|| ರೇಷನಿಂಗ್ ಅಧಿಕಾರಿಗಳಾದ ಶ್ರೀ ವೆಂಕಟಶಿವರೆಡ್ಡಿ ಯವರು ಪತ್ರಿಕಾ ಸಮ್ಮೇಳನದಲ್ಲಿ ಜನಗಳಲ್ಲಿರುವ ಕೆಲವು ಸಂದೇಹಗಳನ್ನು ನಿವಾರಿಸಿದರು.

ನಾಳೆಯಿಂದ ರೇಷನಿಂಗ್ ಬರುವುದು ನಿಶ್ಚಯವೆಂದೂ, ರೇಷನಿಂಗ್ ಪದಾರ್ಥಗಳು ಸುವ್ಯವಸ್ಥೆಯಾಗಿ ಜನಗಳಿಗೆ ಸರಬರಾಜಾಗಲು, ನಗರದಲ್ಲಿ ಎಲ್ಲ ಮೊಹಲ್ಲಾಗಳಲ್ಲೂ ಒಟ್ಟು ೯೬ ಡಿಪೋಗಳನ್ನು ತೆರೆಯಲಾಗಿದೆಯೆಂದೂ ತಿಳಿಸಿದರು (೬೮ ಸರ್ಕಾರಿ ಡಿಪೋಗಳು ಮತ್ತು ೨೮ ಸಹಕಾರ ಮತ್ತು ಸರ್ಕಾರಿ ಸ್ಟೋರುಗಳು) ಪ್ರತಿಯೊಂದು ಡಿಪೋವೂ ಬೆಳಗ್ಗೆ ೯ ರಿಂದ ೧೨ ಗಂಟೆಯವರೆಗೆ ಮತ್ತು ಮಧ್ಯಾಹ್ನ ೪ ರಿಂದ ೭ ರ ವರೆಗೆ ತೆರೆದಿರುತ್ತದೆ. ವಾರಕ್ಕೆ ಒಂದು ದಿನ ಡಿಪೋಗಳಿಗೆ ರಜ ಕೊಡಲಾಗುವುದು ಆದರೆ ಭಾನುವಾರ ಮತ್ತು ಇತರ ರಜ ದಿನಗಳಲ್ಲಿ ಡಿಪೋಗಳು ತೆರೆದಿರುತ್ತವೆ.

ವಾರದ ರೇಷನ್ನಂತೆ ತಿಂಗಳಿಗೆ ೩೦ ದಿನಗಳು ಮಾತ್ರ ಲೆಕ್ಕ ಮಾಡಿ ಮೂರು ದಿನಗಳು ಜನರೆಲ್ಲ ನಿರಾಹಾರದ ಏಕಾದಶಿ ವ್ರತ ಮಾಡಬೇಕೆಂಬ ಅಭಿಪ್ರಾಯ ತಪ್ಪೆಂದೂ, ವಾರಕ್ಕೆ ೭ ದಿವಸ ಲೆಕ್ಕಾಚಾರ ಮಾಡಿರುವುದರಿಂದ ತಿಂಗಳ ಲೆಕ್ಕಕ್ಕೆ ಬರುವುದಿಲ್ಲವೆಂದೂ, ೩೦ ದಿನಗಳು ಅದನಂತರ ಬರುವ ಮುಂದಿನ ವಾರಕ್ಕೆ ಸರಿಗಣಿಸಲಾಗುವುದೆಂದೂ, ತಿಳಿಸಿದರು.

ಪ್ರತಿಯೊಂದು ಸಂಸಾರದವರಿಗೂ ರೇಷನ್ ಕಾರ್ಡುಗಳನ್ನು ಈಗಾಗಲೇ ಹಂಚಲಾಗಿದೆ ಕನ್ನೇಗೌಡನ ಕೊಪ್ಪಲಿನಲ್ಲಿ ಪಡಿಯನ್ನು ಹೆಚ್ಚು ಮಾಡಬೇಕೆಂದು ಮೊದಲು ಪತಿತರ ಬೇಟೆಗಳನ್ನು ನಿರಾಕರಿಸಿದರೆಂದೂ, ಆದರೆ ಈಗ ಪ್ರತಿಯೊಬ್ಬರೂ ಕಾರ್ಡುಗಳನ್ನು ತೆಗೆದುಕೊಂಡಿದ್ದಾರೆಂದೂ ತಿಳಿಸಿದರು.

ರೇಷನ್ ಕಾರ್ಡುಗಳಲ್ಲಿ ಬಣ್ಣದ ಪೆನ್ಸಿಲಿನಲ್ಲಿ ಗುರುತು ಮಾಡಿರುವ ನಂಬರು ಆಯಾ ಡಿಪೋಗಳ ನಂಬರ ಗಳನ್ನು ಸೂಚಿಸುವುದು. ಪ್ರತಿಯೊಂದು ಮೊಹಲ್ಲಾಗಳಲ್ಲಿ ತೆರೆದಿರುವ ಡಿಪೋಗಳ ನಂಬರುಗಳನ್ನೂ ಪ್ರಕಟಿಸಿ ಜನಗಳಿಗೆ ಹಂಚಲಾಗಿದೆ. ೯೬,೦೦೦ ಕಾರ್ಡುಗಳಿಗೆ ಒಂದು ಡಿಪೋವಿನಂತೆಯೂ ಮತ್ತು ಪ್ರತಿಯೊಬ್ಬರಿಗೂ ಒಂದು ಚೀಟಿ ಗ್ಗೆ ಕೊಡುವುದರಿಂದ ಡಿಪೋಗಳಲ್ಲಿ ನೂಕು ನುಗ್ಗಲು ಇಲ್ಲದೆ ಸುವ್ಯವಸ್ಥೆಯಾಗಿ ಪದಾರ್ಥಗಳು ಸಿಕ್ಕುವುವು

ರೇಷನ್ ಕಾರ್ಡುಗಳಲ್ಲಿ ಮೂರು ವಿಧವಾಗಿವೆ: [೧] ಆಸ್ಪತ್ರೆಗಳಿಗಾಗಿ ವಾರಕ್ಕೆ ೪ ದಿನಗಳು ಆಹಾರ ಕೊಡಲಾಗುತ್ತದೆ. [೨] ವಾರಕ್ಕೆ ಒಂದಾವರ್ತಿ [೩] ಹಾಸ್ಟೆಲ್, ಹೋಟೆಲುಗಳು ಮತ್ತು ದೊಡ್ಡ ಸಂಸ್ಥೆಗಳಿಗಾಗಿ ತಿಂಗಳಿಗೆ ಒಂದಾವರ್ತಿ ಇಂತಹ ತಿಂಗಳಿನ ಕಾರ್ಡುಗಳನ್ನು ಜನಗಳಿಗೆ ಕೊಡಲಾಗಿಲ್ಲ. ಆದರೆ ತಿಂಗಳಿನ ಕಾರ್ಡುದಾರರಲ್ಲಿ ಮಾತ್ರ ಕಾರ್ಡುಗಳ ಇಷ್ಟ ನಡೆಸುವವರು ಅದನ್ನು ತೆಗೆದುಕೊಳ್ಳಬಹುದು.

ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿ

ದಕ್ಷಿಣ ಆಫ್ರಿಕದಲ್ಲಿರುವ ಬ್ರಿಟಿಷ್ ಹೈಕಮಿಷನರಾದ ಸರ್ ಶಫಾ ಅಹಮದ್ ಖಾನ್‌ರವರು, ಫೀಲ್ಡ್‌ಮಾರ್ಷಲ್ ಸ್ಮಟ್ಸ್‌ರವರನ್ನು ಭೇಟಿಮಾಡಿ ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯರಿಗೆ ತಂದೊಡ್ಡಿರುವ ಆತಂಕಗಳ ಬಗ್ಗೆ ಮಾತುಕತೆ ನಡೆಸಿದರೆಂದು ಹೇಳಲಾಗಿದೆ

ಗಾಂಧೀಜಿಯನ್ನು ಬಿಡುವರೆ?

ಹೊಸ ವರ್ಷ ಪ್ರಾರಂಭವಾಗಿ ಕೆಲವು ತಿಂಗಳಲ್ಲಿಯೇ ಶ್ರೀ|| ಅಮೆರಿಯವರು ಇಂಡಿಯಾ ಆಫೀಸನ್ನು ಬಿಡುವರೆಂದೂ, ಲಾರ್ಡ್ ವೇವೆಲ್ಲರು ಗಾಂಧಿ, ನೆಹರು, ನೆಹರು ಮುಂತಾದವರನ್ನು ಬಿಡುಗಡೆ ಮಾಡಿ, ರಾಷ್ಟ್ರೀಯ ಸರ್ಕಾರ ಸ್ಥಾಪನೆ ಮಾಡಲು ಪ್ರಯತ್ನ ಮಾಡುವರೆಂದು ಲಂಡನ್ನಿನಿಂದ ವರದಿಯಾಗಿದೆ.

ಜಪಾನಿ ಹಡಗುಗಳ ನಾಶ

ಪೆಸಿಫಿಕ್ ಮಹಾಸಾಗರದಲ್ಲಿ ಅಮೆರಿಕ ಜಲಾಂತರ್ಗಾಮಿಗಳು ೨೦ ಜಪಾನೀ ಹಡಗುಗಳನ್ನು ನಾಶಮಾಡಿರುವುದಾಗಿ ಹೇಳಲಾಗಿದೆ

ರಾಜಧಾನಿಗೆ ತಿಂಗಳಿಗೆ ಒಟ್ಟು ೧೦ ಸಾವಿರ ಪಲ್ಲ ಅಕ್ಕಿ ಮತ್ತು ೮ ಸಾವಿರ ಪಲ್ಲ ರಾಗಿ ಬೇಕಾಗುವುದು ನಾಯಿಗಳು ಮತ್ತು ಇತರ ಪ್ರಾಣಿಗಳಿಗೆ ಸಸ್ಯಕ್ಕೆ ಬೇಕಾದ ಏರ್ಪಾಡನ್ನೇನೂ ಮಾಡಿಲ್ಲವೆಂದೂ, ಭಿಕ್ಷುಕರು ಮತ್ತು ಪಾರದವರಿಗೆ ಅನುಕೂಲತೆ ಏರ್ಪಡಿಸಲು ಸರ್ಕಾರಕ್ಕೆ ಬರೆಯಲಾಗಿದೆಯೆಂದೂ ತಿಳಿಸಿದರು. ಸನ್ಯಾಸಿ ಪಕೀರರು, ಮತ್ತು ಇತರರಿಗೆ ದಿನಸಿಗಳನ್ನು ಹಾಗಲು ಅನುಮತಿ ಕೊಟ್ಟಿಲ್ಲ.

ಜನಿವಾರದವರುಗಳಿಗೆ ಒಬ್ಬನೆ ಜಿಲ್ಲೆಗಳು ರೇಷನಿಂಗ್ ಪಡಿತರ ಪ್ರಕಾರ ನಾಲ್ಕು ಬಂದಲ್ಲಿ ಮಾತ್ರವೇ ಅವರುಗಳಿಗೆ ದಿನಸಿಗಳನ್ನು ಕೊಡಲಾಗುವುದು

ರೇಷನಿಂಗ್ ಶಾಪಿಗೆ ಎಂದು ಕೆಲವು ವರ್ತಕರು ಜನಗಳಿಗೆ ಸ್ಟಿಕ್ಕರ್ ಕ್ಕಿ ಮತ್ತು ಇತರ ಸಾಮಗ್ರಿ ಗಳ ನಂದ ಬರುವದು. ಅ ಯೊಬ್ಬರೂ ಸಕರಿಸಿ ... ... ಕಾರಿಯಾಗುವಂತೆ ಮಾಡ ... ಶ್ರೀ ರೆಡ್ಡಿಯವರು ಕೋರಿದರು

ಗಾಂಧೀಜಿಯವರು ಬಗೆಹರಿಸಬೇಕು

ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಿ, ಜಪಾನಿನ ಮೇಲೆ ಕದನ ನಡೆಸಲು ತಮ್ಮ ಸಂಪೂರ್ಣ ಬೆಂಬಲ ಕೊಡಬೇಕೆಂದು ಚೈನಾದ ಜನರಲ್ ಚಿಯಾಂಗ್ ಕೈಷೇಕರು ಗಾಂಧೀಜಿ ಮತ್ತು ಇತರ ನಾಯಕರಿಗೆ ಮನವಿ ಮಾಡಿದ್ದಾರೆಂದು ಲಂಡನ್ನಿನ 'ಡೇಲಿ ಹೆರಾಲ್ಡ್' ಪತ್ರಿಕೆಯು ವರದಿ ಮಾಡಿದೆ ಈ ಮನವಿಯನ್ನು ಭಾರತಕ್ಕೆ ಇತ್ತೀಚೆಗೆ ಬಂದಿದ್ದ ಚೈನಾ ರಾಯಭಾರಿಯ ಸಂಗಡ ಕಳುಹಿಸಲಾಗಿತ್ತಂತೆ.

ಜಪಾನಿನ ಮೇಲೆ ಕದನ ನಡೆಸಲು ಭಾರತವನ್ನು ಮುಖ್ಯ ಕೇಂದ್ರವಾಗಿ ಮಾಡಬೇಕಾದಲ್ಲಿ ಸೈನಿಕರುಗಳಿಗೆ ಒಳ ವಿಚಾರದಲ್ಲಿ ಯಾವ ಗೊಂದಲವೂ ಇರದೆ, ಆಡಚಣೆ ಬರದಂತೆ ಮತ್ತು ಅಗಾಧ ಮುಕ್ತಿಗೆ ಆರಂಭಿಸುವ ನೋಡಲು ಭಾರತದಲ್ಲಿ ಸ್ವಾಪವ ಸ್ಥ ಸಂಪೂರ್ಣವಾಗಿ ಹೋಗಲಾಡಿಸಬೇಕೆಂದು ಚಿಯಾಂಗ್ ಕೈಷೇಕರವರು ಅಭಿಪ್ರಾಯಪಟ್ಟಿದ್ದಾರೆ

ಪೋಲೀಸ್ ಅಧಿಕಾರಿಗಳಿಗೆ ಹೈಕೋರ್ಟಿನಿಂದ ನೋಟೀಸ್

ಬೊಂಬಾಯಿ ಟ್ರಾನ್ಸ್‌ಪೋರ್ಟ್ ಪಾರ್ಟಿ ವಾಲಂಟಿಯರು ಶ್ರೀ ಜಯಪ್ರಕಾಶ್ ನಾರಾಯಣ್ ರವರ ಪರವಾಗಿ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಲಾಹೋರ್ ಹೈಕೋರ್ಟಿನಲ್ಲಿ ಹಾಕಲಾಯಿತು. ಅವರನ್ನು ಪೋಲೀಸರು ಬಂಧಿಸಿ, ಅವರನ್ನು ಬಂಧಿಖಾನೆಯಲ್ಲಿಟ್ಟು ನಂತರ ಬಿಡುಗಡೆ ಮಾಡಿದ್ದಾರು. ಈಗ ಅವರು ಕೋರ್ಟಿಗೆ ಒಪ್ಪಿಸಿದ ಅರ್ಜಿಯನ್ನು ಕಳುಹಿಸಲಿಲ್ಲವೆಂದೂ, ಕೋರ್ಟಿಗೆ ಅವಮಾನ ಮಾಡಿದರೆಂದೂ, ಪಂಜಾಬಿನ ಪೋಲೀಸ್ ಮುಖ್ಯಾಧಿಕಾರಿಗಳು, ಪೋಲೀಸ್ ಸೂಪರಿಂಟೆಂಡೆಂಟ್ ಮತ್ತು ಸಬ್-ಇನ್ಸ್‌ಪೆಕ್ಟರ್ ಇವರುಗಳ ಮೇಲೆ ಹೈಕೋರ್ಟಿನವರು ಕೋರ್ಟಿಗೆ ಹಾಜರಾಗಬೇಕೆಂದು ಏತಕ್ಕೆ ಶಿಕ್ಷಿಸಬಾರದೆಂದೂ ನೋಟೀಸ್ ಜಾರಿ ಮಾಡಿದ್ದಾರೆ

ಬ್ರಿಟಿಷ್ ಸೈನ್ಯದ ಮುಂದೋಟ

... ಬ್ರಿಟಿಷ್ ಸೈನ್ಯ ... ನಗಿ ಸುತ್ತಲಿನಲ್ಲಿ ಮುಂದುವರಿದಿದ್ದಾರೆಂದು ಹೇಳಲಾಗಿದೆ

ಚರ್ಚಾ ಸ್ಪರ್ಧೆ

ಮೈಸೂರು, ೧೮.

ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಶ್ರೀ ಎಂ. ಎಸ್. ಬಸವಲಿಂಗಯ್ಯನವರ ಸ್ಮಾರಕವಾಗಿ ಏರ್ಪಡಿಸಿದ್ದ ವಿದ್ಯಾ ಸಂಸ್ಥೆಗಳ ಚರ್ಚಾಕೂಟವು ಈ ದಿನ ಬೆಳಗ್ಗೆ ಟೌನ್‌ಹಾಲಿನಲ್ಲಿ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

"ವಿಶ್ವವಿದ್ಯಾನಿಲಯಗಳ ಶಿಕ್ಷಣವು ದೇಶಭಾಷೆಗಳ ಮೂಲಕ ನಡೆಯಬೇಕೆಂದು ಈ ಸಭೆಯ ಅಭಿಪ್ರಾಯ" ಎಂಬುದೇ ಚರ್ಚೆಯ ವಿಷಯ

ಸ್ಪರ್ಧೆಯಲ್ಲಿ ಈ ಕೆಳಗೆ ಕಂಡವರಿಗೆ ಬಹುಮಾನ ಹಂಚಲಾಯಿತು

ಕಾಲೇಜು ಬಹುಮಾನ—ಕೋಲಾರ್ ಗೋಲ್ಡ್ ಫೀಲ್ಡ್ಸ್ - ವಿಶ್ವವಿದ್ಯಾನಿಲಯದ ಯೂನಿಯನ್ನಿಗೆ ಮೊದಲನೇ ಬಹುಮಾನ ಶ್ರೀ ಗ. ಸ. ಹಾಲಪ್ಪನವರಿಗೆ, ಎರಡನೇ ಬಹುಮಾನ ಎ. ರಾಮಶರ್ಮರವರಿಗೆ, ಮೂರನೆ ಬಹುಮಾನ ಪದ್ಮನಾಭರಾವ್ ಸ್ಪೆಷಲ್ ಬಹುಮಾನ ಡಿ. ಟಿ. ಚಂದ್ರಶೇಖರಯ್ಯ

ಹೈಸ್ಕೂಲು ಬಹುಮಾನ—ಮೊದಲನೇ ಬಹುಮಾನ ವಹಾರಾಣಿ ಹೈಸ್ಕೂಲಿನ ಕೆ. ಸರೋಜ, ಎರಡನೇ ಬಹುಮಾನ ಶಾರದಾ ವಿಲಾಸ ಹೈಸ್ಕೂಲಿನ ಶಂಕರನಾರಾಯಣ ಮೂರನೇ ಬಹುಮಾನ ವೀರಶೈವ ಸಂಘದ ಶಿವಮೂರ್ತಿ, ಸ್ಪೆಷಲ್ ಬಹುಮಾನ ಮಹಾರಾಣಿ ಹೈಸ್ಕೂಲಿನ ಪುಟ್ಟನರಸಮ್ಮ. ಮತ್ತೊಂದು ಬಹುಮಾನವನ್ನು ಮೈಸೂರು ಮುನ್ಸಿಪಲ್ ಕಾಲೇಜಿನ ವಿದ್ಯಾರ್ಥಿ ಶ್ರೀ ಎಚ್. ಕೆ. ಕುಮಾರಸ್ವಾಮಿಯವರಿಗೆ ಕೊಡಲಾಯಿತು

ಸಿಲ್ವರ್ ಜೂಬಿಲಿ ಸ್ಪೋರ್ಟ್ಸ್

ರಾಜಧಾನಿಯಲ್ಲಿ ಅಂತರ ಹೈಸ್ಕೂಲುಗಳ ಸಿಲ್ವರ್ ಜೂಬಿಲಿ ಫೀಲ್ಡ್ ಸ್ಪೋರ್ಟ್ಸ್ ಪಂದ್ಯವು ನೆನ್ನೆ ಶುಕ್ರವಾರ ನಡೆದು, ಮಹಾರಾಜಾ ಹೈಸ್ಕೂಲಿನವರು ಫೀಲ್ಡ್ ಸ್ಪೋರ್ಟ್ಸ್ ಮತ್ತು ಜೊತೆಗೆ ಶೀಲ್ಡುಗಳನ್ನು ಪಡೆದರು ಕ್ರಿಕೆಟ್ ಶೀಲ್ಡನ್ನು ಸಹ ಅವರಿಗೇ ಬಂದಿತು ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರ ಬೊಂಬೋರಿಯವರು ಬಹುಮಾನಗಳನ್ನು ಹಂಚಿದರು

ವಾಲಿಬಾಲ್ ಶೀಲ್ಡ್ ಶಾರದಾ ವಿಲಾಸ ಹೈಸ್ಕೂಲಿಗೆ ಬಂದಿತು.

ಜರ್ಮನರನ್ನು ಓಡಿಸಲಾಯಿತು

ಇಟಲಿಯ ಏಡ್ರಿಯಾಟಿಕ್ ತೀರದಲ್ಲಿ ಬ್ರಿಟಿಷ್ ಎಂಟನೇ ಸೈನ್ಯವು ಮುಂದುವರಿಯುತ್ತ ಮುಖ್ಯ ರಸ್ತೆಯಾದ ... ಓರ್ಟೋನ-ಒರ್ಸೋಗ್ನ ರಸ್ತೆಯನ್ನು ಹಿಡಿದಿದ್ದಾರೆ ನ್ಯೂಜಿಲೆಂಡ್ ಸೈನ್ಯವು ... ನ ಪ್ರತಿಭಟನೆಯನ್ನು ಎದುರಿಸಿ ... ಅವರನ್ನು ಹಿಂದಕ್ಕೆ ... ಸೈನ್ಯಕ್ಕೆ ಗುರಿಯಾಗಿದ್ದಾರೆ

ಅರ್ಧ ಬೆಲೆಗೆ ಪುಸ್ತಕಗಳು

... ಪುಸ್ತಕಗಳ ... ವಿಶ್ವಕರ್ನಾಟಕ ... ಪುಸ್ತಕಗಳನ್ನು ... ಅರ್ಧ ಬೆಲೆಗೆ ... ಪುಸ್ತಕಗಳನ್ನು ... ನಗಳನ್ನು ... ಪಾಡಿಸಿದ

ಆರಂಭ ಭಾಷಣ

ಸ್ವಂ. ಸು.] ಮೈಸೂರು ೧೯

ಮಹಾರಾಜಾ ಕಾಲೇಜಿನ ಕ್ರಿಕೆಟ್ ಕ್ಲಬ್ಬಿನ ಆರಂಭೋತ್ಸವವನ್ನು ಶ್ರೀ ಮನ್ಮಹಾರಾಜರವರ ಅಸ್ತ್ರ ಕಾರ್ಯದರ್ಶಿಗಳಾದ ಶ್ರೀ ಕೆ. ಗುರುದತ್‌ರವರು ನಿನ್ನೆ ದಿನ ನೆರವೇರಿಸಿದರು. ಪ್ರೊ. ಪಿ. ಎಲ್. ವಿಸ್ವಾಜರವರು ಅಧ್ಯಕ್ಷತೆ ವಹಿಸಿದ್ದರು.

ಪದವೀಧರರ ಸಮ್ಮೇಳನ

ಆಯುರ್ವೇದ ಮತ್ತು ಯುನಾನಿ ಪದವೀಧರರ ಸಮ್ಮೇಳನವು ಜನವರಿ ೧, ೨, ೩ ನೇ ತಾ॥ ಗಳಲ್ಲಿ ನಡೆಯುವುದು. ನಂಜನಗೂಡಿನ ಭಿಷಗ್ರತ್ನ ಆ॥ ಪ॥ ಬಿ. ವಿ. ಪಂಡಿತರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ಕುಸ್ತಿ ಪಂದ್ಯ

ಮೈಸೂರು ವಿದ್ಯಾರ್ಥಿಗಳ ಕುಸ್ತಿ ಪಂದ್ಯವು ನಿನ್ನೆ ದಿನ ಮಹಾರಾಜರ ಹೈ ಸ್ಕೂಲ್ ಅಂಗಳದಲ್ಲಿ ಆರಂಭವಾಯಿತು. ಒಂದನೆ ಗ್ರೇಡಿನಲ್ಲಿ ಶ್ರೀ ಹೆಚ್. ಎಸ್. ವೆಂಕಟರಾಂರವರು ಗೆದ್ದರು. ಎರಡನೇ ಗ್ರೇಡಿನಲ್ಲಿ ಶ್ರೀ ಶಿವಲಿಂಗೇಗೌಡರೂ, ಮೂರನೇ ಗ್ರೇಡಿನಲ್ಲಿ ಶ್ರೀ ಲಕ್ಷ್ಮಣನವರೂ, ನಾಲ್ಕನೆಯದರಲ್ಲಿ ಶ್ರೀ ಜಿ. ಎಲ್. ಕೃಷ್ಣಮೂರ್ತಿಯವರೂ ಅನುಕ್ರಮವಾಗಿ ಜಯಿಸಿ, ವರದಣ್ಣ, ತಿಮ್ಮಯ್ಯ, ರಾಮಸ್ವಾಮಿ, ಶ್ರೀನಿವಾಸಮೂರ್ತಿ ಇವರುಗಳೂ ಗೆದ್ದರು. ಶ್ರೀಗಳಾದ ಜಿ. ರಾಮಸ್ವಾಮಿ, ಅಧ್ಯಕ್ಷ ಇವರಿಗೆ ಸಮವಾಯಿತು.

ರಾಜರುಗಳ ಹಿರಿಮೆ

ಇಂಡಿಯಾ ಸೆಕ್ರೆಟರಿ ಮಿ॥ ಅಮೆರಿಯವರು ಲಂಡನ್ನಿನ ಒಂದು ಭೋಜನ ಕೂಟದಲ್ಲಿ ಭಾಷಣ ಮಾಡುತ್ತಾ ದೇಶೀಯ ರಾಜರುಗಳ ಹಿರಿಮೆಯನ್ನು ಪ್ರಶಂಸಿಸಿದರು.

ಹಂಗೇರಿ ಸೈನ್ಯ ವಾಪಸು

ಯುಗೋಸ್ಲಾವಿಯಾದಿಂದ ಹಂಗೇರಿಗೆ ಕೆಂಪುದಳಿಯು ಬರುವುದರಿಂದ ರಷ್ಯದಲ್ಲಿರುವ ಹಂಗೇರಿ ಸೈನ್ಯವನ್ನೆಲ್ಲಾ ಕೂಡಲೇ ವಾಪಸು ಕರೆಸಬೇಕೆಂದು ಅಲ್ಲಿನ ಸೆನೆಟ್‌ನಲ್ಲಿ ಕೌಂಟ್ [illegible] ಒತ್ತಾಯಪಡಿಸಿದರು. ಅಲ್ಲಿ ೬೦೦೦೦ ಜನ ಹಂಗೇರಿ ಸೈನಿಕರಿದ್ದಾರೆ.

ಹಂಗೇರಿಯಲ್ಲಿ ರಾಜತ್ವ

[illegible] ಹಂಗೇರಿ ಸಿಂಹಾಸನದಲ್ಲಿ ಒಬ್ಬ ರಾಜನನ್ನು ಸ್ಥಾಪಿಸಲು ಯಾವ ಅಭಿಪ್ರಾಯ ಇಲ್ಲ. [illegible] ಹಂಗೇರಿ ಪ್ರಧಾನ ಮಂತ್ರಿ [illegible] ಹೇಳಿದ್ದಾರೆ.

ಆಹಾರವಿಲ್ಲ-ಹಾನಿಯು ಮಾತ್ರ

[illegible] ರೇಡಿಯೋ [illegible] ಪ್ರೆಂಚ್ [illegible] ಕೇವಲ ಟಿ. [illegible] ಹೇಳಲಾಗಿದೆ

ನೌಕರರೂ ಮನುಷ್ಯರು

ಸ್ವ. ಸು.] ಬೆಂಗಳೂರು ೧೮

ಇದಿನ ಶಾಸನ ಸಭೆಯಲ್ಲಿ, ಸರ್ಕಾರಿ ನೌಕರರು ಉಚಿತ ರುಸುವತ್ತುಗಳನ್ನು ತಿನ್ನುತ್ತಾರೆ, ಎಂದು ಮುಂತಾಗಿ ಒಬ್ಬ ಸದಸ್ಯರು ಹೇಳಲು ಸರಬರಾಜು ಮಂತ್ರಿಗಳು ಹೇಳಿದ್ದೇನೆಂದರೆ—ನೌಕರರೂ ಮನುಷ್ಯರು ಅವರು ದೇವತೆಗಳಲ್ಲ. ಸಭೆಯು ಸದಸ್ಯರ ಪೈಕಿ (ಕಾಂಗ್ರೆಸ್ ಪಕ್ಷದವರ ಕಡೆ ಕೈತೋರಿ) ಯಾರಾದರೂ ಅಂತಹವರಿದ್ದರೆ ನಾನು ಅವರನ್ನು ಅಗತ್ಯವಾಗಿ ಈ ಕೆಲಸಕ್ಕೆ ಸ್ವಾಗತಿಸುತ್ತೇನೆ.

ಅಮಲ್ದಾರರ ಮೇಲೆ ಮೊಕದ್ದಮೆ

ಪೌಂಡ್ ಬಾಕಿಗಳನ್ನು ಖಚಿತವಾಗಿ ನಿಲ್ಲಿಸಬೇಕೆಂದು ಕೋರ್ಟಿನವರು ಕೊಟ್ಟ ಹುಕುಮನ್ನು ಉಲ್ಲಂಘಿಸಿದುದಕ್ಕಾಗಿ ಗುಬ್ಬಿ ತಾ॥ ಅಮಲ್ದಾರರ ಮೇಲೆ ಕೋರ್ಟಿಗೆ ಅಪಮಾನ ಮಾಡಿದ್ದಕ್ಕಾಗಿ ಮೊಕದ್ದಮೆ ದಾಖಲಾಗಿದೆ.

ಸಕ್ಕರೆಗೆ ಹಿಟ್ಟು ಬೆರಕೆ

ಹಾಸನದ ಮುನಿಸಿಪಲ್ ಡಿಪ್ಪೋ ಒಂದರಲ್ಲಿ ಸಕ್ಕರೆ ಮೂಟೆಗೆ ಹಿಟ್ಟು ಬೆರಸಿದ್ದುದು ಕಂಡು ಬಂದುದರಿಂದ ಕೂಡಲೇ ಪೌರಸಭಾಧ್ಯಕ್ಷರು ಹೋಗಿ ಪರಿಶೀಲಿಸಿ ವಿಚಾರಣೆ ನಡೆಸುತ್ತಿರುವರು.

ರೈಲು ಕಂಬಿ ತಪ್ಪಿತು

ಕಳೆದ ಬುಧವಾರ ಅರಸೀಕೆರೆಯಿಂದ ಬೆಂಗಳೂರಿಗೆ ಹೋಗುತ್ತಿದ್ದ ಗೂಡ್ಸು ರೈಲು ಹೊನ್ನವಳ್ಳಿ ಸ್ಟೇಷನಲ್ಲಿ ಕಂಬಿ ತಪ್ಪಿತೆಂದೂ, ಅದ್ದರಿಂದ ಬೆಂಗಳೂರಿಗೆ ಹೋಗಬೇಕಾದ ಲೋಕಲ್ ರೈಲು ಮಧ್ಯಾಹ್ನ ಹೊರಟಿತೆಂದೂ ತಿಳಿದುಬಂದಿದೆ.

ತುಮಕೂರು ಚುನಾವಣೆ

ತುಮಕೂರು ಪೌರಸಭೆಗೆ ನಡೆದ ಚುನಾವಣೆಯಲ್ಲಿ ಹಲವು ಸ್ಥಾನಗಳು ಕಾಂಗ್ರೆಸ್ಸಿಗೂ ಎಂಟು ಸ್ವತಂತ್ರರಿಗೂ ದೊರಕಿವೆ.

ಮಧುಗಿರಿ ಚುನಾವಣೆ

ಮಧುಗಿರಿ ಪೌರಸಭೆಗೆ ನಡೆದ ಚುನಾವಣೆಯಲ್ಲಿ ೧೩ ಸ್ಥಾನಗಳು ಸ್ವತಂತ್ರರಿಗೂ ಎರಡು ಕಾಂಗ್ರೆಸ್ಸಿನವರಿಗೂ ದೊರಕಿವೆ.

ಕಲ್ಕತ್ತಾಕ್ಕೆ ರಕ್ಷಣಾ ಸ್ಥಾನಗಳು

ಕಲ್ಕತ್ತೆಯಲ್ಲಿ ಇರುವ ಎಲ್ಲಾ ವಿಮಾನ ಧಾಳಿ ರಕ್ಷಣಾ ಸ್ಥಾನಗಳನ್ನೂ ದುರಸ್ತು ಮಾಡಿಸುವಂತೆ ಬಂಗಾಳಾ ಸರ್ಕಾರದವರು ಕಲ್ಕತ್ತಾ ನಗರಾಭಿವೃದ್ಧಿ ಮಂಡಲಿಗೆ ನೋಟೀಸು ಕೊಟ್ಟಿದ್ದಾರೆ. ಕಲ್ಕತ್ತಾದಲ್ಲಿ ಇದುವರೆಗೆ ೧೧೦೦ ರಕ್ಷಣಾ ಕಂದಕಗಳು ತೋಡಲ್ಪಟ್ಟಿವೆ. ಇದಲ್ಲದೆ ಬೇರೆ ಬೇರೆ ರಕ್ಷಣಾ ಸ್ಥಾನಗಳಿವೆ. ಅವುಗಳಲ್ಲಿ ೧ ಲಕ್ಷ ಜನರಿಗೆ ಆವಕಾಶವಿದೆ.

ಅಮೆರಿಕನರು ವೈರಿ

ಇಂಡಿಯಾ ಸೆಕ್ರೆಟರಿ ಮಿ॥ ಅಮೆರಿಯವರು ತನ್ನ ಇರುವುದರಿಂದಲೇ ಹಿಂದೂಸ್ಥಾನದ ಸಮಸ್ಯೆ ಬಗೆಹರಿಯಲಿಲ್ಲವೆಂದೂ ಅವರು ನಮ್ಮ ಆಕಾಂಕ್ಷೆಗಳಿಗೆ ವೈರಿಯೆಂದೂ ಶ್ರೀ ಕೆ. ಎಂ. ಮುನ್ಷಿಯವರು ಹೇಳಿದ್ದಾರೆ.

ಗಡಿಯಾರದ ಬೆಲೆ ನಿಗದಿ

ಅಂಗಡಿಗಳಲ್ಲಿ ಮಾರಾಟಕ್ಕಿಡುವ ಗಡಿಯಾರಗಳ ಬೆಲೆಯನ್ನು ಅವುಗಳ ಮೇಲೆ ನಮೂದಿಸಬೇಕೆಂದು ಇಂಡಿಯಾ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಬಡೋಗ್ಲಿಯೋ ಅಧಿಕಾರ

ಮಿತ್ರ ಪಕ್ಷದ ಸಮಿತಿಯವರ ಶಿಫಾರಸ್ಸಿನಂತೆ ಸಿಸಿಲಿ, ಸಾರ್ಡಿನಿಯಾ ಮತ್ತು ದಕ್ಷಿಣ ಇಟಲಿಯ ಕೆಲವು ಪ್ರದೇಶಗಳ ಮೇಲಿನ ಅಧಿಕಾರವನ್ನು ಬಡೋಗ್ಲಿಯೋ ಸರ್ಕಾರಕ್ಕೆ ವಹಿಸಲಾಗುವುದು.

ಸಿಪಾಯಿಗಳಿಗೆ ಶಿಕ್ಷೆ

ಕೆಲವು ತಿಂಗಳ ಹಿಂದೆ ೩ ಜನ ಸಿಪಾಯಿಗಳು ತಮ್ಮ ಕೆಲಸವನ್ನು ನಿರ್ಲಕ್ಷಿಸಿ ಒಬ್ಬ ರೈಫಲ್, ೩ ರಿವಾಲ್ವರ್ ಒಂದು ಬೇರು ನೆಟ್ ಮತ್ತು ಸಾವಿರ ಗುಂಡುಗಳೊಡನೆ ಪರಾರಿಯಾಗಿದ್ದುದರಿಂದ ಅವರನ್ನು ಹಿಡಿದು ಮಿಲಿಟರಿ ಕೋರ್ಟಿನವರು ಅವರಿಗೆ ತಲಾ ೧೪ ವರ್ಷ ಕಠಿಣ ಶಿಕ್ಷೆ ವಿಧಿಸಿರುವರೆಂದು ಬರೇಲಿಯ ಸುದ್ದಿಯೊಂದು ತಿಳಿಸುತ್ತದೆ.

ಈಡನ್ನರು ಬ್ರಿಟಿಷ್ ಮುಖ್ಯ ಮಂತ್ರಿ

ಬ್ರಿಟಿಷ್ ಮುಖ್ಯ ಮಂತ್ರಿ ಮಿ॥ ವಿನ್‌ಸ್ಟನ್ ಚರ್ಚಿಲರು ಇನ್ನೂ ಮಧ್ಯಪ್ರಾಚ್ಯದಲ್ಲೇ ಇರುವರು. ಅವರ ದೇಹಸ್ಥಿತಿ ಇನ್ನೂ ಉತ್ತಮಗೊಂಡಿಲ್ಲ. ಅವರ ಶುಶ್ರೂಷೆಗಾಗಿ ಅವರ ಪತ್ನಿಯವರು ಅವರಲ್ಲಿಗೆ ತೆರಳಿರುವರು. ಅವರು ಇನ್ನೂ ಕೆಲವು ವಾರಗಳ ಕಾಲ ತಮ್ಮ ನಾಯಕತ್ವವನ್ನು ವಹಿಸಲು ಸಾಧ್ಯವಾಗಲಾರದು. ಮಿ॥ ಆಂತೋನಿ ಈಡನ್ನರು ಅವರ ಸ್ಥಾನದಲ್ಲಿ ನೇಮಿಸಲ್ಪಡಬಹುದೆಂದು ಜರ್ಮನ್ ವಿದೇಶಾಂಗ ಕಛೇರಿ ಊಹಿಸುತ್ತದೆ.

ಚರ್ಚಿಲ್-ರೂಸ್ವೆಲ್ಟ್-ಸ್ಟಾಲಿನ್‌ರನ್ನು ಅಪಹರಿಸಲು ಪಿತೂರಿ

ಟೆಹರಾನಿನಲ್ಲಿ ರೂಸ್ವೆಲ್ಟ್, ಚರ್ಚಿಲ್‌ರೂ, ಸ್ಟಾಲಿನ್‌ರೂ ಸೇರಿದ್ದಾಗ ತಮ್ಮುಗಳನ್ನು ಅಪಹರಿಸಲು ಜರ್ಮನರು ಒಂದು ಪಿತೂರಿ ನಡೆಸಿದರೆಂದೂ ಸ್ಟಾಲಿನರ ಜಾಗರೂಕತೆಯಿಂದ ತಾವು ಪಾರಾದ ಬಗೆಯೂ ಅಧ್ಯಕ್ಷ ರೂಸ್ವೆಲ್ಟರು ತಿಳಿಸಿದ್ದಾರೆ. ಈ ಅಂಶವು ತಿಳಿದ ಕೂಡಲೆ ಸ್ಟಾಲಿನರು ರೂಸ್ವೆಲ್ಟರನ್ನು ಅಮೆರಿಕ ರಾಯಭಾರಿ ಕಛೇರಿಯಿಂದ ರಷ್ಯದ ಕಛೇರಿಗೆ ಬರುವಂತೆ ಹೇಳಿದರು. ನೂರಕ್ಕಿಂತ ಹೆಚ್ಚು ಜರ್ಮನರು ಈ ಪಿತೂರಿಗಾಗಿ ಕೆಲಸ ಮಾಡುತ್ತಿದ್ದರು. ಅವರಿಂದ ಪಾರಾಗಿ ತಾವು ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ ಬಗೆ ಅಧ್ಯಕ್ಷರು ಹೇಳುತ್ತಾರೆ.

ಮದರಾಸಿನಲ್ಲಿ ರೇಷನ್ನೆಷ್ಟು?

ಮದರಾಸ್ ಪಟ್ಟಣದಲ್ಲಿ ತಲೆ ಒಂದಕ್ಕೆ ಎಷ್ಟು ರೇಷನ್ ಗೊತ್ತಾಗಿದೆಯೋ ಅಷ್ಟನ್ನೇ ಆ ಪ್ರಾಂತದ ಇತರ ಸ್ಥಳಗಳಲ್ಲಿಯೂ ಗೊತ್ತು ಮಾಡಿರುವುದಾಗಿ ಮದರಾಸ್ ಸರ್ಕಾರದವರು ಪ್ರಕಟಿಸಿದ್ದಾರೆ. ದೊಡ್ಡವರಿಗೆ ದಿನಕ್ಕೆ ೧ ಪೌಂಡು ಅಕ್ಕಿ ಕೊಡಲಾಗುವುದು. ಹೆಚ್ಚು ಬೆಳೆಯುವ ಪ್ರದೇಶಗಳಿಗೂ ಕಡಮೆ ಬೆಳೆಯುವವುಗಳಿಗೂ ಯಾವ ವ್ಯತ್ಯಾಸವನ್ನೂ ಮಾಡ ಲಾಗಿಲ್ಲ. 2½ ವರ್ಷದಿಂದ ಹನ್ನೆರಡು ವರ್ಷದೊಳಗಿರುವ ಮಕ್ಕಳಿಗೆ ಅರ್ಧ ರೇಷನ್, ಅದಕ್ಕೆ ಕಡಮೆ ಇರುವ ಮಕ್ಕಳಿಗೆ ರೇಷನ್ ಇಲ್ಲ.

ಬಟ್ಟೆಗಳ ದರ

ವಿದ್ಯುಚ್ಛಕ್ತಿಯ ಮಗ್ಗಗಳಿಂದ ತಯಾರಾದ ಬಟ್ಟೆಗಳ ಬೆಲೆಯು ಇನ್ನೂ ನಿರ್ಧರವಾಗಿಲ್ಲವಾದುದರಿಂದ ಅವುಗಳ ಮೇಲೆ ಮುದ್ರೆಗಳನ್ನು ಒತ್ತಲು ಅವಧಿಯನ್ನು ಫೆಬ್ರವರಿ ೧ ನೇ ತಾ॥ ವರೆಗೆ ಹೆಚ್ಚಿಸಬಹುದೆಂದು ಹೇಳಲಾಗಿದೆ.

ಸಿ. ಆರ್. ದಾಸರ ಅಳಿಯನ ಅಕಸ್ಮಿಕ ಮರಣ

ದಿವಂಗತ ದೇಶಬಂಧು ಚಿತ್ತರಂಜನ ದಾಸರ ಅಳಿಯಂದಿರಾದ ಬ್ಯಾರಿಸ್ಟರ್ ಶ್ರೀ ಸುಧೀರರಂಜನರಾಯರು ಕಲ್ಕತ್ತ ಹೈ ಕೋರ್ಟಿನಲ್ಲಿ ಒಂದು ಮೊಕದ್ದಮೆಯಲ್ಲಿ ವಾದಿಸುತ್ತಿರುವಾಗ ಇದ್ದಕ್ಕಿದ್ದಂತೆ ಹೃದಯ ವೇದನೆಯುಂಟಾಗಿ ಅರ್ಧ ಗಂಟೆಯೊಳಗೆ ಬಕ್ಕಿಂಗಾಂ ಕ್ಲಬ್‌ನಲ್ಲಿ ಸ್ವರ್ಗಸ್ಥರಾದರು.

ಶಾಸನ ಸಭೆಗೆ ವೈಸರಾಯರ ಭಾಷಣ

ಫೆಬ್ರವರಿ ೧೫ ನೇ ತಾ॥ ವೈಸರಾಯರು ಕೇಂದ್ರ ಶಾಸನ ಸಭೆ ಮತ್ತು ಕೌನ್ಸಿಲ್ ಆಫ್ ಸ್ಟೇಟುಗಳ ಜಂಟಿ ಅಧಿವೇಶನವನ್ನುದ್ದೇಶಿಸಿ ಭಾಷಣ ಮಾಡುವರೆಂದು ಹೇಳಲಾಗಿದೆ.

ಯಾವಾಗಲೂ ಕೊಳ್ಳಿರಿ!

ಏನನ್ನು? :: ಎಲ್ಲಿ?



ಅತ್ಯಾಧುನಿಕ ಬಗೆಯ, ಮನಮೆಚ್ಚುವ ಉಡಿಗೆ ತೊಡಿಗೆಗಳು

ಸ್ವಸ್ತಿಕ್ ಸ್ಟೋರ್ಸ್

ದಾಸಪ್ರಕಾಶ ಬಿಲ್ಡಿಂಗ್ಸ್, ಷಾಪ್ ನಂ. ೯ ಮಾಡರ್ನ ಕೆಫೆ, ಮೈಸೂರು.

Edited, printed and published by A. R. Nagarajan at the Sadhvi Press, D.Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಟು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಕ್ಷ್ಮೀ ಬ್ರಾಂಡ್ ಕಾಫಿಪುಡಿ

ಸಕ್ಕರೆ ಉಂಡೆಗಳು.

ಡಿ. ಕೃಷ್ಣಯ್ಯ ಟಿನಾಗಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] ಕಲ್ಲುಸಕ್ಕರೆ, ಬೂರಾಸಕ್ಕರೆ [illegible] ಬೆಲ್ಲ ಮತ್ತು ಸಂತೆ ಪೇಟೆ ದರಕ್ಕೆ ಅಕ್ಕಿ, ರವೆ ಮತ್ತು ಗೋಧಿ ಹಿಟ್ಟು ಸಹ ದೊರೆಯುತ್ತೆ.

WEEKLY EDITION

ಸಂಪುಟ ೮] ಸೋಮವಾರ ೨೦--೧೨--೪೬ [ಸಂಚಿಕೆ ೮

ಬ್ರಿಟನ್ನಿನಲ್ಲಿ ಅಮೆರಿಕಾ ಸೈನ್ಯಗಳ ಶಿಬಿರಗಳು

ಕಲ್ಕತ್ತಾ ಮೇಲೆ ಹಗಲು ಧಾಳಿಗಳ ಸಂಭವ

ಶಾರದಾ ವಿಲಾಸ ಹೈಸ್ಕೂಲಿನಲ್ಲಿ ಉಪವಾಸ ಸತ್ಯಾಗ್ರಹ

ಮಲೇರಿಯಾ ನಿವಾರಿಸಲು ಭರವಸೆ

ಮಂಡ್ಯದಲ್ಲಿ ಮಹಾಪ್ರಭುಗಳ ಭಾಷಣ

ಸ್ವಂ ಸು.] ಮೈಸೂರು ೨೦

ಶ್ರೀಮನ್ಮಹಾರಾಜರವರು, ದಿವಾನರು ಮತ್ತು ಅರಮನೆಯ ಉನ್ನತ ಅಧಿಕಾರಿಗಳೊಡನೆ ಇದಿನ ಬೆಳಗ್ಗೆ ರಾಜಧಾನಿಯನ್ನು ೯ ಗಂಟೆಗೆ ಬಿಟ್ಟು, ಮಂಡ್ಯಕ್ಕೆ ಭೇಟಿ ಇತ್ತರು.

ಮಾರ್ಗದಲ್ಲಿ ಸಿದ್ದಲಿಂಗಪುರ, ಕಳಸ್ತವಾಡಿ ಗ್ರಾಮಸ್ಥರು ಮಂಟಪದಲ್ಲಿ ರಾಜಭಕ್ತಿಯನ್ನು ಅರ್ಪಿಸಿದರು. ಮಂಡ್ಯ ಜಿಲ್ಲೆಯ ಗಡಿಯಾದ ಪಾಲಹಳ್ಳಿ ಹತ್ತಿರ ಮಂಡ್ಯದ ಜಿಲ್ಲಾಧಿಕಾರಿಗಳೂ ಮತ್ತು ಇತರ ಅಧಿಕಾರಿಗಳೂ ಪ್ರಭುಗಳನ್ನು ಸ್ವಾಗತಿಸಿದರು.

ನಂತರ ಪಶ್ಚಿಮವಾಹಿನಿ, ಶ್ರೀರಂಗಪಟ್ಟಣದ ಪೌರಸಭಾ ಸದಸ್ಯರೂ, [illegible]ಗೂರು, ಅರಕೆರೆ, ಹಾದಿಶೆಟ್ಟಿಹಳ್ಳಿ, ಗಣಂಗೂರು, ಲಿಂಗರಾಜ ಛತ್ರ, ಕೊಡಿಯಾಲ ಮತ್ತು ಹಿಂದವಾಳದ ಮಹಾಜನಗಳು ಮಂಟಪಗಳಲ್ಲಿ ಹಾರಗಳನ್ನು ಅರ್ಪಿಸಿದರು.

ಪ್ರಭುಗಳು ಮಂಡ್ಯವನ್ನು ತಲುಪಿದ ಕೂಡಲೇ ಪೌರಸಭಾ ಸದಸ್ಯರು ಸ್ವಾಗತಿಸಿದರು. ಬಾವಸಾರ ಕ್ಷತ್ರಿಯ ಸಮಾಜದವರು ಹಾರ ತುರಾಯಿಗಳನ್ನು ಮಂಟಪದಲ್ಲಿ ಅರ್ಪಿಸಿದರು. ಅನಂತರ ಪ್ರಭುಗಳು ಟ್ರಾವಲರ್ಸ್ ಬಂಗಲೆಗೆ ದಿಜಯಮಾಡಿ, ಅಲ್ಲಿಂದ ಮೋಟಾರಿನಲ್ಲಿ ದಿವಾನರು ಮತ್ತು ಜಿಲ್ಲಾಧಿಕಾರಿಗಳೊಡನೆ ನಗರದಲ್ಲಿ ಮೆರವಣಿಗೆಯಲ್ಲಿ ದಿಜಯಮಾಡಿದರು.

ನಗರದ ರಸ್ತೆಗಳನ್ನು ತಳಿರು ತೋರಣ ಮತ್ತು ಹಸುರುವಾಣಿ ಚಪ್ಪರಗಳಿಂದ ಅಲಂಕರಿಸಲಾಗಿತ್ತು. ರಸ್ತೆಯ ಎರಡು ಪಾರ್ಶ್ವದಲ್ಲೂ ಅಸಂಖ್ಯಾತ ಜನರು ಕಿಕ್ಕಿರಿದು ರಾಜಭಕ್ತಿಯನ್ನು ಪ್ರಕಟಿಸಿದರು.

ಬಿನ್ನವತ್ತಳೆ

ಪೌರಸಭಾ ಮಂಟಪದಲ್ಲಿ ಪ್ರಭುಗಳಿಗೆ ಪೌರಸಭಾ ಉಪಾಧ್ಯಕ್ಷರಾದ ಶ್ರೀ ಎ. ಎ. ಶಿಂಗಳಾಚಾರ್ಯರು ಬಿನ್ನವತ್ತಳೆಯನ್ನು [illegible] ಕರಂಡದಲ್ಲಿ ಅರ್ಪಿಸಿದರು. ಅನಂತರ ಜಿಲ್ಲಾಬೋರ್ಡಿನ ಅಧ್ಯಕ್ಷರಾದ ಶ್ರೀ ಕೆ. ಚಿಕ್ಕಲಿಂಗಯ್ಯನವರು ಬಿನ್ನವತ್ತಳೆಯನ್ನು ಸುಂದರವಾದ ಗಂಧದ ಮರದ ಕರಂಡದಲ್ಲಿ ಅರ್ಪಿಸಿದರು.

ಪೌರಸಭೆಯ ಬಿನ್ನವತ್ತಳೆಯಲ್ಲಿ ನಗರಕ್ಕೆ ಒಂದು ಸರ್ಕಾರಿ ಹೈಸ್ಕೂಲನ್ನೂ, ಸಬ್-ಕೋರ್ಟನ್ನೂ ಮತ್ತು ಪುರಾತನವಾದ ಶ್ರೀ ಸಕಲೇಶ್ವರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕಾಗಿ ಹಣವನ್ನೂ, ಕೊಡಬೇಕೆಂದು ಪ್ರಾರ್ಥಿಸಲಾಯಿತು. ನೀರಾ ಸರಬರಾಯಿ ಮತ್ತು ಚರಂಡಿ ಕಾಮಗಾರಿಗಳಿಗೆ ೧,೫೦,೦೦೦ ರೂ ಗಳು ಅವಶ್ಯಕವಾಗಿವೆಯೆಂದೂ ಮತ್ತು ಮಲೇರಿಯಾ ಹಾವಳಿಯನ್ನು ನಿರಂಕರಿಸಬೇಕೆಂದೂ [illegible].

[illegible] ಕಟ್ಟಡ ಇಲ್ಲದೆ ಬಹಳ ತೊಂದರೆ ಪಡುತ್ತಿ[illegible] ಸರ್ಕಾರದ [illegible], ಸಹಾಯ ಮಾಡಬೇಕೆಂದೂ ಕೋರಿದರು.

(ಪ್ರಭುಗಳ ಭಾಷಣವನ್ನು ೨ ನೇ ಪುಟದಲ್ಲಿ ಕೊಡಲಾಗಿದೆ)

ಆಸ್ಪತ್ರೆಗೆ ಭೇಟಿ

ಅಲ್ಲಿಂದ ಮಹಾಪ್ರಭು[illegible] ಆಸ್ಪತ್ರೆಗೆ ಭೇಟಿ ಕೊಟ್ಟರು. ಸೀನಿಯರ್

ಇಂಗ್ಲೆಂಡಿಗೆ ಅಮೆರಿಕಾ ಸೈನ್ಯ

ಮುಂದಿನ ವರ್ಷದ ಪ್ರಾರಂಭದಲ್ಲಿ ಪ[illegible] ಬಾಗದಿಂದ ೮ ಹರ್ಕ್ಯೂಲಿಸ್ ಬಿ ೩೬ [illegible]ಗೆ [illegible] ಅಮೆರಿಕದ ಹಡಗುಗಳಲ್ಲಿ [illegible] ಬಿಡಲಿರುವ ಸೈನಿಕರನ್ನು ಇಂಗ್ಲೆಂಡಿಗೆ ಕಳುಹಿಸಲಾಗುತ್ತಿದೆ. ಮಿತ್ರರಾಷ್ಟ್ರಗಳು ಹೊಸದಾಗಿ [illegible] ತಂತ್ರದ ಅಂಗವಾಗಿಯೇ ಈ ಕಾರ್ಯ ನಡೆಯುತ್ತಿದೆಯೆಂದು ಹೇಳಲಾಗಿದೆ.

ಸಾಜಿಗಳ ಚಿಟ

ಇಟಲಿಯಲ್ಲಿ [illegible] ಸಾಜಿ [illegible] ಸಾರ್ವಜನಿಕ [illegible] ಎಂಬುವರನ್ನು [illegible] ಹಿಡಿಯಲಾಗಿದೆ.

[illegible] ಪ್ರಭುಗಳನ್ನು ಸ್ವಾಗತಿಸಿ, ಆಸ್ಪತ್ರೆಯ ಹಲವು ಭಾಗಗಳನ್ನು ತೋರಿಸಿದರು.

ಸಕ್ಕರೆ ಕಾರ್ಖಾನೆಗೆ ಭೇಟಿ

ಹಲವು ಭವ್ಯ ಮಂಟಪಗಳ ಮಾರ್ಗವಾಗಿ ಪ್ರಭುಗಳು ಸಕ್ಕರೆ ಕಾರ್ಖಾನೆಗೆ ದಿಜಯಮಾಡಿದರು. [illegible] ಡೈರೆಕ್ಟರರಾದ ಸ್ರೀ ಎ. ಎ. [illegible], [illegible] ಮ್ಯಾನೇಜರ್ ಶ್ರೀ [illegible] ಸ್ವಾಗತಿಸಿ [illegible] ಅರ್ಪಿಸಿದರು. ಪ್ರಭುಗಳು ಅರ್ಧಘಂಟೆ ಕಾಲ ಕಾರ್ಖಾನೆಯನ್ನು ಪರಿಶೀಲಿಸಿದರು.

ಮೆರವಣಿಗೆ

ಅಲ್ಲಿಂದ ಹಳೆ [illegible] ಹೊರಟಿತು. [illegible] ಭವ್ಯವಾದ [illegible] ತೋರಣಗಳಿಂದಲೂ [illegible] ಮಾಡಿದ [illegible] ಬಂದಿತು. [illegible] ಪ್ರಭುಗಳಿಗೆ [illegible] ಅರ್ಪಿಸಲಾಯಿತು [illegible] ಜನ [illegible].

ಅನಂತರ ಪ್ರಭುಗಳು [illegible], [illegible] ರಾಜಧಾನಿಗೆ ಮರಳಿ ಬಂದರು.

ಚರ್ಚಿಲರ ಸ್ಥಿತಿ ಉತ್ತಮ

ಮಿ॥ ಚರ್ಚಿಲರ ನ ಡಿಯಲ್ಲಿ ಸ್ವಲ್ಪ ವ್ಯತ್ಯಾಸವಾಗಿದ್ದರೂ ಜ್ವರವು ಕಡಿಮೆಯಾಗಿ ನ್ಯೂಮೋನಿಯಾ ನಿವಾರಣೆಯಾಗುತ್ತಿದೆಯೆಂದು ತಿಳಿದುಬಂದಿದೆ. ತಮ್ಮ ಪತ್ನಿಯವರೂ [illegible] ಅವರ ಬಳಿ ಇದ್ದಾರೆ. ಅವರ ಮಾಯಿಲೆಯು [illegible] ಇಲ್ಲವೆಂದು [illegible] ದೇಹಸ್ಥಿತಿ ಉತ್ತಮಗೊಳ್ಳುತ್ತಿದೆಯೆಂದು ಗೊತ್ತಾಗಿದೆ.

ಕಲ್ಕತ್ತಾ ಮೇಲೆ ಹಗಲು ಧಾಳಿ ಸಂಭವ

[illegible] ಕಮಾಂಡರ್ [illegible] ಲಾಯಿ [illegible] ಅರಕಾನ [illegible] ಪ್ರವಾಸ ಮಾಡಿ [illegible] ಹಗಲು ಧಾಳಿಗಳನ್ನು [illegible] ನಾವು ನಿರೀಕ್ಷೆ ಮಾಡಿದ್ದೇವೆ. ಮುಂದಿನ [illegible] ಎಲ್ಲಾ ಸಿದ್ಧತೆಗಳನ್ನೂ ಮಾಡಿದ್ದೇವೆ. ಆಧಾರ [illegible] ಎಲ್ಲಾ ಶಕ್ತಿಗಳನ್ನೂ ಪ್ರಯೋಗಿಸುತ್ತೇವೆ. ಜಪಾನು [illegible] ಎಷ್ಟು [illegible] ಜಪಾನು [illegible] ಧಾಳಿಗಳನ್ನು [illegible] ಆಗುತ್ತಲೇ ಇರುತ್ತವೆ. [illegible] ಎಲ್ಲಾ [illegible] ವಹಿಸಬೇಕು.

ಸುಬ್ಬಕೃಷ್ಣಯ್ಯನ ಮೊಸೋರಿ ರಿಯಲ್ ಫ್ರೂಟ್ ಬಾಲ್

ನಿನ್ನೆ ದಿವಸ [illegible] ಕ್ಕೆ ನ್ಯಾಷನಲ್ [illegible] ನಲ್ಲಿ [illegible], [illegible] ಮಾಡಿ [illegible] ಆಯಿತು [illegible] ಎರಡು [illegible] ಜಯಗಳಿಸಿ ಕೊಂಡರು.

ವಿದ್ಯಾರ್ಥಿಗಳ ಸತ್ಯಾಗ್ರಹ

ಮೈಸೂರು, ೨೦

ಶಾರದಾ ವಿಲಾಸ ಹೈಸ್ಕೂಲಿನ ಸರ್ಟಿಫಿಕೇಟ್ ಪರೀಕ್ಷೆಯಲ್ಲಿ ೪೪ ಜನ ವಿದ್ಯಾರ್ಥಿಗಳಿಗೆ ಆಯ್ಕೆಯ ವಿಷಯದಲ್ಲಿ [illegible] ಪ್ಪದಲ್ಲ, ಡೆಪ್ಯುಟಿ ಡೈರೆಕ್ಟರು [illegible] ತಿಳಿಸಿ [illegible] ನ್ನು ವಿದ್ಯಾ ಮಂತ್ರಿಗಳಿಗೆ ತಿಳಿಸಿ [illegible] ವಿದ್ಯಾರ್ಥಿಗಳನ್ನೂ ಕಟ್ಟಿ [illegible] ಭರವಸೆ ಕೊಟ್ಟಿದ್ದರೆಂದೂ ಆದರೆ ಈ ವಿಷಯದಲ್ಲಿ ಇದುವರೆವಿಗೂ ಯಾವ ಕಾರ್ಯಕ್ರಮವೂ ಕೈಗೊಂಡಿಲ್ಲವೆಂದೂ ಮೇಲ್ಕಂಡ ವಿದ್ಯಾರ್ಥಿಗಳ ಪರವಾಗಿ, ಶ್ರೀಗಳಾದ ರಂಗಾಚಾರ್, ಪುಟ್ಟಸ್ವಾಮಿ, ದೊಡ್ಡೇಗೌಡ ಮತ್ತು [illegible] ಇವರುಗಳು ಇಂದಿನಿಂದ ಶಾರದಾ ವಿಲಾಸಾ ಹೈಸ್ಕೂಲಿನ ಮುಖ್ಯೋಪಾಧ್ಯಾಯರ ಆಫೀಸ್ ಮುಂಭಾಗದಲ್ಲಿ ನ್ಯಾಯ ವಿಮರ್ಶೆಯಾಗುವ ವರೆಗೂ ಉಪವಾಸ ವ್ರತವನ್ನು ಕೈಗೊಂಡಿದ್ದಾರೆಂದೂ ತಿಳಿದು ಬಂದಿದೆ.

ವಿದ್ಯಾರ್ಥಿ ಸಂಘ

ಮೈಸೂರು ವಿದ್ಯಾರ್ಥಿ ಸಂಘದ ಸಾಮಾನ್ಯ ಸಭೆಯು ನೆನ್ನೆ ಸಾಯಂಕಾಲ ೬ ಘಂಟೆಗೆ ಶ್ರೀ ಎಂ. ವಿ. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಛೇರಿಯಲ್ಲಿ ನಡೆಯಿತು. ನಗರದ ಆಹಾರ ಸಮಸ್ಯೆಯನ್ನು ಪರಿಶೀಲಿಸಲು ಒಂದು ಸ್ಥಾಯೀ ಸಮಿತಿಯನ್ನು ರಚಿಸುವಂತೆ ನಿರ್ಧರಿಸಲಾಯಿತು. ಸ್ಥಾಯೀ ಸಮಿತಿಯ ರಚನೆಯ ಅಧಿಕಾರವನ್ನು ಸಂಘದ ಕಾರ್ಯಕಾರೀ ಸಮಿತಿಗೆ ಒಪ್ಪಿಸಲಾಯಿತು.

ದಿಂಡಿ ಮಹೋತ್ಸವ

ಮೈಸೂರು ಚಾಮರಾಜ ಪುರದ ಬೀದಿ ಭಾವಸಾರ ಕ್ಷತ್ರಿಯ ಮಂಡಲಿಯವರ ಶ್ರೀ ಪಾಂಡುರಂಗ ಸ್ವಾಮಿ ದೇವಾಲಯದಲ್ಲಿ ಸಾಲಿಯಿಂದ ೨೬ ನೇ ತಾ॥ ಭಾನುವಾರ ಪ್ರಾತಃ ಶ್ರೀ ಕ್ಷೇತ್ರ ಪಾಪಸಮ್ಮಾರಕ್ಕೆ [illegible] ಪಾಧ್ಯಕ್ಷರಾದ ಶ್ರೀ ಸರ್ದಾರ್ ಸೋಮನಾಥರಾವ ವರ ಪುಣ್ಯತಿಥಿ ಮಹೋತ್ಸವವು ನಡೆಸಲ್ಪಡುತ್ತೆ. ರಾತ್ರಿ [illegible] ೬ ಗಂಟೆಗೆ ಪುಷ್ಪ ಪಲ್ಲಕ್ಕಿಯಲ್ಲಿ ದಿಂಡೀ ಉತ್ಸವವು ನಡೆಯುತ್ತದೆ.

ಕುಸ್ತಿ ಪಂದ್ಯಗಳು

ಮಹಾರಾಜಾ ಹೈಸ್ಕೂಲಿನ ಆವರಣದಲ್ಲಿ ಮೈಸೂರು ವಿದ್ಯಾರ್ಥಿಗಳ ಕುಸ್ತಿ ಪಂದ್ಯ ನಿನ್ನೆಯೂ ಮುಂದುವರಿದು ಈ ಕೆಳಗೆ ಕಂಡವರು ಗೆದ್ದರು:—

೧ ನೇ ಗ್ರೇಡಿನಲ್ಲಿ ಶ್ರೀ ಶಿವಸ್ವಾಮಿಯು ಮತ್ತು ೨ ನೇ ಗ್ರೇಡಿನಲ್ಲಿ ಶ್ರೀ ವೆಂಕಟಪ್ಪ ಮತ್ತು ದೊಡ್ಡನಾಗಲಿಯವರು, ೩ ನೇ ಗ್ರೇಡಿನಲ್ಲಿ ಶ್ರೀಗಳಾದ ಮುನಿವೆಂಕಟಪ್ಪ, ಗುರುಪಾದ, ನಾರಾಯಣ ಇವರು ೪ ನೇ ಗ್ರೇಡಿನಲ್ಲಿ ಶ್ರೀಗಳಾದ [illegible], [illegible] [illegible] ಇವರು [illegible].

ಜೇಸರ್ಕಾರ್ [illegible]

ಈಗ [illegible] ದೊರೆಯುತ್ತಿರುವ [illegible] ಸರ್ಕಾರ [illegible] ಬಾಕಿ ಇರುವ [illegible] ಬೇಕಾಗಿರುವ [illegible] ಲ್ಲಿ ಇರುವ [illegible] ಬ್ಯಾಂಕ್ [illegible] ನ [illegible].

ಮಂಡ್ಯ ಪ್ರಾಂತ್ಯದ ಪುರೋಭಿವೃದ್ಧಿ

ಶ್ರೀಮನ್ಮಹಾರಾಜರ ಭೇಟಿ

ಮಂಡ್ಯದ ಪೌರ ಸಭೆಯವರೂ, ಜಿಲ್ಲಾ ಬೋರ್ಡಿನವರೂ ಅದಿನ ಅರ್ಪಿಸಿದ ಬಿನ್ನವತ್ತಳೆಗೆ ಶ್ರೀಮನ್ಮಹಾರಾಜರವರು ಅನುಗ್ರಹಿಸಿದ ಉತ್ತರದ ವಿಸ್ತೃತ:—

ಈ ಊರಿನ ಮಾರ್ಗವಾಗಿ ನಾವು ಸಂಚಾರಮಾಡಿದಾಗಲೆಲ್ಲಾ ಹೊಸಹೊಸದಾದ ಅಭಿವೃದ್ಧಿ ಕಾರ್ಯಗಳು ನಡೆದಿರುವುದನ್ನು ಕಂಡು ಹರ್ಷಿಸಿದ್ದೇವೆ. ಈ ಊರನ್ನು ಒಂದು ಮಾದರಿ ಊರನ್ನಾಗಿ ಮಾಡುವ ವಿಷಯದಲ್ಲಿ ನಮ್ಮ ಸರ್ಕಾರದವರಿಗಿರತಕ್ಕ ಆಸಕ್ತಿಗೂ, ಸ್ಥಳೀಯ ಸಂಸ್ಥೆಗಳೂ ಮತ್ತು ಸಕ್ಕರೆ ಕಂಪನಿಯವರಿಗೂ ನಡೆಯುತ್ತಿರುವ ಪ್ರಯತ್ನಗಳಿಗೂ ಇವು ನಿದರ್ಶನಗಳಾಗಿವೆ. ಇರ್ವಿನ್ ನಾಲೆಯಿಂದ ನೀರಾವರಿ ವ್ಯವಸಾಯವು ಹೆಚ್ಚಿರುವುದರಿಂದಲೂ ಸಕ್ಕರೆ ಕಾರ್ಖಾನೆಯು ಏರ್ಪಡಿಸಿರುವುದರಿಂದಲೂ ಈ ಊರು ವಿಸ್ತಾರವಾಗಿ ಬೆಳೆದು ಪ್ರಾಮುಖ್ಯವಾಗಿ ಪರಿಣಮಿಸಿರುತ್ತದೆ. ಅಲ್ಲದೆ, ಹೊಸದಾಗಿ ಏರ್ಪಟ್ಟ ಡಿಸ್ಟ್ರಿಕ್ಟಿನ ಮುಖ್ಯ ಪಟ್ಟಣವಾಗಿಯೂ ಇದು ಪ್ರಾಶಸ್ತ್ಯ ಪಡೆದಿದೆ. ಅದಿನ ನಿಮ್ಮ ಊರಿಗೆ ಬರುವುದು ನಮಗೆ ವಿಶೇಷ ಸಂತೋಷವನ್ನುಂಟುಮಾಡಿದೆ.

ಈ ಪ್ರದೇಶದಲ್ಲಿ ನೀರಾವರಿ ಸಾಗುವಳಿಯು ಹೆಚ್ಚಿದುದರ ಪರಿಣಾಮವಾಗಿ ಜನಗಳ ಆರೋಗ್ಯ ಸ್ಥಿತಿಗೆ ಸಂಬಂಧಪಟ್ಟ ಹೊಸ ಸಮಸ್ಯೆಗಳು ಕಂಡುಬಂದಿವೆ. ಜನಾರೋಗ್ಯ ರಕ್ಷಣೆಯ ಇಲಾಖೆಯವರು ಈ ಪ್ರದೇಶದಲ್ಲಿ ಮಲೇರಿಯಾ ರೋಗದ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವುದಕ್ಕೂ ಮತ್ತು ರೋಗ ಪರಿಹಾರಕ್ಕೂ ನಾನಾ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಮಲೇರಿಯಾ ರೋಗವನ್ನು ಹತೋಟಿಗೆ ತಂದು ಈ ಪ್ರದೇಶದಲ್ಲಿ ಆರೋಗ್ಯಸ್ಥಿತಿಯನ್ನು ಉತ್ತಮಪಡಿಸುವ ವಿಷಯದಲ್ಲಿ ಅವುಗಳಿಂದ ಬಹುಮಟ್ಟಿಗೆ ಪ್ರಯೋಜನಕರವಾದ ಪರಿಣಾಮವುಂಟಾಗಿದೆ. ಇದು ಸಂತೋಷಕರವಾದ ಅಂಶ. ಅಭಿವೃದ್ಧಿಸ್ಥಿತಿಯಲ್ಲಿರುವ ಈ ಡಿಸ್ಟ್ರಿಕ್ಟಿನಲ್ಲಿ ಮಲೇರಿಯಾ ರೋಗ ಹರಡದಂತೆ ತಪ್ಪಿಸುವ ವಿಷಯದಲ್ಲಿ ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ನಡೆಯಿಸಲಾಗುವುದೆಂದು ನಿಮಗೆ ಭರವಸೆ ಕೊಡುತ್ತೇವೆ.

ಈ ಊರಿನಲ್ಲಿ ಜನಜೀವನಕ್ಕೆ ಬೇಕಾದ ಅನೇಕ ಸೌಕರ್ಯಗಳು ಈಗ ಉತ್ತಮ ರೀತಿಯಲ್ಲಿ ದೊರಕುತ್ತಿವೆ. ಜನರ ಬಾಳು ಕೂಲಿಗಳಿಗಾಗಿ ಇನ್ನೂ ಒದಗಿಸಬೇಕಾಗಿರುವ ಇತರ ಸೌಕರ್ಯಗಳ ಸಂಬಂಧವಾಗಿ ನಿಮ್ಮಿಂದ ನಡೆಯುತಕ್ಕ ಪ್ರಯತ್ನಗಳಿಗೆ ಸಹಾಯ ಮಾಡಲು ಸರ್ಕಾರದವರು ಸಿದ್ಧರಾಗಿರುತ್ತಾರೆ.

ಹಳೆ ಊರಿನ ಕೆಲವು ಭಾಗಗಳನ್ನು ಉತ್ತಮಸ್ಥಿತಿಗೆ ತರುವುದು ಅವಶ್ಯಕವಾಗಿದೆ. ಆದರೆ, ಮುಂದೂರಾದ ರಚನಾಕ್ರಮಕ್ಕೆ ಅನುಸಾರವಾಗಿ ನೂತನ ನಗರವನ್ನು ನಿರ್ಮಿಸುವುದೇ ನೀವು ಮುಖ್ಯವಾಗಿ ನೆರವೇರಿಸಬೇಕಾಗಿರತಕ್ಕ ಕಾರ್ಯವೆಂದು ಹೇಳಬಹುದು. ಈ ವಿಷಯದಲ್ಲಿ ಬಹುಮಟ್ಟಿಗೆ ಈಗಾಗಲೇ ಕೆಲಸ ನಡೆದಿದೆ. ಇಲ್ಲಿ ಜನಸಂಖ್ಯೆಯು ಹೆಚ್ಚುತ್ತಿರುವುದಕ್ಕೆ ತಕ್ಕಂತೆ ಮನೆಗಳು ಒದಗಲು ಇನ್ನೂ ಹೆಚ್ಚು ಹೆಚ್ಚು ಬಡಾವಣೆಗಳನ್ನು ಏರ್ಪಡಿಸುವ ಆವಶ್ಯಕತೆಯು ನಿಮಗೆ ಕಂಡುಬಂದೇ ಇದೆ. ಈ ಊರು ಬೇಗಬೇಗ ಅಭಿವೃದ್ಧಿಗೆ ಬರುತ್ತಿದೆ. ಆದಕಾರಣ, ಇಲ್ಲಿ ಹೊಸ ಬಡಾವಣೆಗಳನ್ನು ಏರ್ಪಡಿಸುವುದರಲ್ಲಿ ಸದ್ಯದ ಆವಶ್ಯಕತೆಗಳನ್ನು ಮಾತ್ರವೇ ಅಲ್ಲದೆ, ಮುಂದಿನ ಅವಶ್ಯಕತೆಗಳನ್ನೂ ಸಹ ದೃಷ್ಟಿಯಲ್ಲಿಟ್ಟುಕೊಂಡು ಕೆಲಸಮಾಡುವುದು ಅಗತ್ಯವಾಗಿದೆ.

ಮಂಡ್ಯ ಡಿಸ್ಟ್ರಿಕ್ಟ್ ಬೋರ್ಡಿನವರು ಒಪ್ಪಿಸಿರತಕ್ಕ ಬಿನ್ನವತ್ತಳೆಗಾಗಿ ಅವರನ್ನು ವಂದಿಸುತ್ತೇವೆ. ಮಂಡ್ಯ ಡಿಸ್ಟ್ರಿಕ್ಟ್ ಪ್ರತ್ಯೇಕವಾಗಿ ಏರ್ಪಡುವುದಕ್ಕೆ ಮುಂಚೆ ಈ ಸುತ್ತಮುತ್ತಿನ ತಾಲ್ಲೂಕುಗಳ ಆವಶ್ಯಕತೆಗಳಿಗೆ ಈಗಿನಷ್ಟು ಹೆಚ್ಚಾಗಿ ಗಮನ ಕೊಡಲು ಅವಕಾಶವಿರಲಿಲ್ಲ. ಈ ಡಿಸ್ಟ್ರಿಕ್ಟ್ ಪ್ರತ್ಯೇಕವಾಗಿ ಏರ್ಪಟ್ಟ ಮೇಲೆ, ಇಷ್ಟು ಸ್ವಲ್ಪ ಅವಧಿಯಲ್ಲೇ, ಈ ಡಿಸ್ಟ್ರಿಕ್ಟ್ ಬೋರ್ಡಿನವರು ಆ ಆವಶ್ಯಕತೆಗಳಲ್ಲಿ ಕೆಲವಕ್ಕೆ ಹೆಚ್ಚಿನ ಗಮನಕೊಟ್ಟು ಕೆಲಸ ನಿರ್ವಹಿಸಿರುವುದು ನಮಗೆ ಸಂತೋಷವನ್ನುಂಟುಮಾಡಿದೆ. ಮುಂದೆ ಈ ಡಿಸ್ಟ್ರಿಕ್ಟ್ ಬೋರ್ಡಿನಿಂದ ಇನ್ನೂ ಹೆಚ್ಚು ಹೆಚ್ಚು ಪ್ರಯೋಜನಕರವಾಗಿ ಪರಿಣಮಿಸುವ ರೀತಿಯಲ್ಲಿ ಕೆಲಸ ನಡೆಯುವುದೆಂದು ನಾವು ನಂಬಿದ್ದೇವೆ.

ನೀವು ತೋರಿರುವ ರಾಜಭಕ್ತಿ ವಿಶ್ವಾಸಗಳು ನಮ್ಮ ಮನಸ್ಸಿಗೆ ಅತ್ಯಂತ ಹರ್ಷವನ್ನುಂಟುಮಾಡಿವೆ. ನಿಮ್ಮೆಲ್ಲರ ಅಭ್ಯುದಯವೂ, ಸುಖಸಂತೋಷಗಳೂ ಹೆಚ್ಚುತ್ತಿರಲೆಂಬುದೇ ನಮ್ಮ ಹಾರೈಕೆಯಾಗಿದೆ.

———

ಅಮೇರಿಕದಲ್ಲಿ ರೈಲು ಅಪಘಾತ

ಮಿಯಾಮಿಯಿಂದ ನ್ಯೂಯಾರ್ಕಿಗೆ ಹೋಗುತ್ತಿದ್ದ ರೈಲೊಂದು ನ್ಯೂಯಾರ್ಕಿನಿಂದ ಟಂಪಾವಿಗೆ ಹೊರಟಿದ್ದ ಇನ್ನೊಂದು ರೈಲಿಗೆ ಢಿಕ್ಕಿ ಹೊಡೆದು ನೂರಕ್ಕಿಂತ ಹೆಚ್ಚು ಜನರು ಸತ್ತಿರುವರೆಂದೂ ಇನ್ನೂ ಅನೇಕರಿಗೆ ಗಾಯವಾಗಿದೆಯೆಂದೂ ತಿಳಿದು ಬಂದಿದೆ. ರೈಲಿನ ೯ ಗಾಡಿಗಳು ಕಂಬಿ ತಪ್ಪಿಕೊಂಡಿದ್ದವು.

ಇದು ನಿಮಗೆ ಗೊತ್ತೆ?

ಲಂಡನ್ನಿನಲ್ಲಿರುವ ಭಾರತೀಯ ಭವನದಿಂದ ಪ್ರತಿವಾರವೂ ಮೂರು ಸಾವಿರ (ಒಂದೂ ಸಹ್ಧರಿಯ) ತಿಂಡಿ ಪಾರ್ಸಲ್‌ಗಳು ಹಿಂದೂ ಸಮರ ಸೈನಿಕರಿಗಾಗಿ ರವಾನಿಸಲ್ಪಡುತ್ತಿವೆ.

• • • •

ಇಂಡಿಯಾದ ಕಾಡುಗಳು ರಕ್ಷಣಾ ಕಾರ್ಯ ಸಂಬಂಧವಾಗಿ ಸಕಲ ಸಾಮಗ್ರಿಗಳ ಬಗ್ಗೆ ೧ ಕೋಟಿ ಟನ್‌ಗಳಷ್ಟು ಮರವನ್ನು ಒದಗಿಸಿವೆ.

• • • •

ಸೈಕಲಾಜಿಕಲ್ ಸಮರ ನಿಧಿಯಿಂದ ಒಂದರಲ್ಲಿ ಹೊಗೆಸೊಪ್ಪಿನ ನಿಧಿಗೆ ೧೫ ಸಾವಿರ ರೂ. ಗ್ರಾಂಟ್ ಕೊಡಲಾಯಿತು. ಇದರಿಂದ ಭಾರತದಲ್ಲಿರುವ ಬ್ರಿಟಿಷ್ ಸೈನ್ಯಕ್ಕೆ ಪ್ರತಿ ತಿಂಗಳೂ ೧ ಕೋಟಿ ಸಿಗರೇಟುಗಳು ಸರಬರಾಜಾಗುತ್ತಿವೆ.

• • • •

ಯಾರ್ಕ್‌ಷೈರ್‌ನಲ್ಲಿರುವ ಒಂದು ರಕ್ತ ಶೇಖರಣೆಯ ಸಂಸ್ಥೆಗೆ ಪ್ರತಿವಾರವೂ ೬ ಸಾವಿರ ಪೈಂಟುಗಳಷ್ಟು ರಕ್ತವು ಶೇಖರವಾಗುತ್ತಿದೆ.

• • • •

ಬ್ರಿಟಿಷ್ ಆರ್ ವಾರ್ ಸಂಸ್ಥೆಗೆ ೧೯೪೨ನೇ ನವೆಂಬರ್‌ನಿಂದ ೧ ಕೋಟಿ ಪೌಂಡುಗಳಿಗೆ ಮೇಲ್ಪಟ್ಟು ವಾರವಾರದ ಧರ್ಮರೂಪವಾಗಿ ಶೇಖರಿಸಲಾಗಿದೆ.

• • • •

ಸಮುದ್ರದಾಚೆ ಇರುವ ಭಾರತೀಯ ಸೈನ್ಯದವರಿಗೆ ಕ್ರಿಸ್‌ಮಸ್ ಸಮಾರಂಭಕ್ಕಾಗಿಯೂ ಇಂಡಿಯಾ ಸಿಲೋನಿನಲ್ಲಿರುವ ಸೈನ್ಯದವರಿಗೆಲ್ಲಾ ಕ್ರಿಸ್‌ಮಸ್ ಸಂತೋಷಕೂಟಗಳನ್ನು ನಡೆಸುವುದಕ್ಕಾಗಿಯೂ ಸಮರನಿಧಿಯಿಂದ ೨೦ ಲಕ್ಷ ರೂ. ಗಳ ಗ್ರಾಂಟನ್ನು ವಿನಿಯೋಗಿಸಿದೆ.

• • • •

ಉಪಯೋಗಿಸಿದ ೧೦೦೦೦೦ ರೇಜರ್ ಬ್ಲೇಡ್‌ಗಳನ್ನು ಮಾರಿದ್ದರಿಂದ ೩೦೦ ಪೌಂಡುಗಳು ಉತ್ಪತ್ತಿಯಾಯಿತು. ಈ ಮೊಬಲಗು ರಾಯಲ್ ಏರ್ ಫೋರ್ಸ್ ನಿಧಿಗೆ ಹೋಯಿತು.

• • • •

ಒಂದು ಟ್ಯಾಂಕ್ ನಿರ್ಮಾಣಕ್ಕೆ ೩೦ ಟನ್ ಉಕ್ಕು ಬೇಕು. ಒಂದೇ ಒಂದು ಏರೋಪ್ಲೇನಿನಲ್ಲಿ ಎಪ್ಪತ್ತು ಸಾವಿರ ಭಿನ್ನ ಸರಕುಗಳಿರುತ್ತವೆ.

• • • •

೧೯೪೨ನೇ ಸೆಪ್ಟೆಂಬರ್ ೩೦ಕ್ಕೆ ಅಂತ್ಯವಾಗುವ ೬ ಮಾಸಗಳಲ್ಲಿ ಮೂವತ್ತೊಂಭತ್ತು ಕೋಟಿ ರೂ. ಗಳು ಸರ್ಕಾರದ ಸಾಲಪತ್ರಗಳಿಗೆ ಬಂದಿತು.

• • • •

೧೯೪೨ನೇ ಸಾಲಿನ ತ್ರೈಮಾಸಿಕಾವಧಿಯಲ್ಲಿ ಬ್ರಿಟಿಷ್ ಏರೋಪ್ಲೇನ್ ತಯಾರಿಕೆಯು ೧೯೪೧ನೇ ಸಾಲಿನ ಇದೇ ಅವಧಿಯಲ್ಲಿದ್ದುದಕ್ಕಿಂತ ಶೇ|| ಐವತ್ತೈದರಷ್ಟು ಜಾಸ್ತಿ ಬೆಳೆದಿದೆ.

• • • •

ಭಾರತೀಯ ಸೈನಿಕರ ಸಂಖ್ಯೆ ೧೯೩೯ನೇ ಸೆಪ್ಟೆಂಬರಿನಲ್ಲಿ ೩ ಲಕ್ಷ ಇದ್ದದ್ದು ಈಗ ಸುಮಾರು ೧೫ ಲಕ್ಷಕ್ಕೆ ವೃದ್ಧಿ ಹೊಂದಿರುತ್ತದೆ.

———

ಪುಸ್ತಕ ವಿಮರ್ಶೆ

ಅನ್ನ : ಅನ್ನ : ಅನ್ನ :

(ಪ್ರಗತಿ ಸಾಹಿತ್ಯ ಮಾಲೆಯ ಮೊದಲನೇ ಪುಸ್ತಕ : ಬೆಲೆ ೪ ಆಣೆ)

ಜನತೆಗೆ ಇಂದು ಬೇಕಾದ ಸಾಹಿತ್ಯವನ್ನು ಕೊಡಬೇಕೆಂಬ ಸದುದ್ದೇಶದಿಂದ ಕೆಲಸ ಆರಂಭಿಸಿರುವ ಈ ಸಾಹಿತ್ಯ ಮಾಲೆಗೆ ನಮ್ಮ ಶುಭಾಶಯಗಳು. ಮಾಲೆಯ ಮೊದಲನೆಯ ಪುಸ್ತಕ. ೪೩ ಪುಟಗಳಿವೆ. ಮುದ್ರಣ ಮನೋರಂಜಕವಾಗಿದೆ. ಸಾಮಾನ್ಯರೂ ಕೊಳ್ಳಬಹುದಾದ ಬೆಲೆಯುಳ್ಳದ್ದು.

ಈ ಪುಸ್ತಕದಲ್ಲಿ ಭಾರತಕ್ಕೆ ಇಂದು ತಗುಲಿರುವ ಮಹಾರೋಗದ ಪ್ರಶ್ನೆ ಚರ್ಚಿಸಲ್ಪಟ್ಟಿದೆ. ನಾವೆಲ್ಲಾ ಆ ರೋಗಕ್ಕೆ ತುತ್ತಾಗುತ್ತಿದ್ದೇವೆ. ಭಾರತದಲ್ಲಿ ಅದರ ಕಾವು ತಟ್ಟದ ಭಾಗವೇ ಇಲ್ಲ.

ಈ ರೋಗದ ಮೂಲ, ಪರಿಹಾರ, ಇವುಗಳ ವಿಷಯವನ್ನು ಲೇಖಕರು ಈ ಪುಸ್ತಕದ ಮೂಲಕ ಜನತೆಯ ಮುಂದೆ ಇಡಲು ಹೊರಟಿದ್ದಾರೆ. ಲೇಖಕರ ಪ್ರಕಾರ ಈ ವ್ಯಾಧಿಯ ಮೂಲ, 'ಆಗಸ್ಟ್ ದುರಂತ' ವೆಂದು ಅವರು ಕರೆಯುವರು. ಆದರ ಪರಿಹಾರ ಜನತೆ ಸಂಘಟಿತವಾಗಿ; ಶಾಂತಿಯುತ ಅನ್ನ ಚಳುವಳಿಯಿಂದ; ಈರೀತಿ ವಿಚಾರಮಾಡಿದ್ದಾರೆ ಲೇಖಕರು.

ನಮಗೆ ಈ ರೀತಿಯ ವಾದ ಸರಿ ಕಂಡು ಬಂದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಜನರೆಲ್ಲಾ ತಿಳಿದಿರುವಂತೆ, ಈ ಅನ್ನಕ್ಷಾಮ ಮಾನವ ಕೃತ,— ಜನತೆಯ ಹಿತಬಯಸದ ವಿದೇಶೀ ಆಡಳಿತದ ಮುತ್ಸದ್ದಿತನದ ಶೂನ್ಯತೆಯ ನೇರವಾದ ಫಲ. ಇಂಥ ಅನ್ನಾಭಾವದ ಕಾರಣ ಹಿಂದೆಯೇ ಕಂಡಿದ್ದರೂ ಜನತಾ ಸೇವಕರನ್ನು ನಿರ್ಲಕ್ಷಿಸಿ, ಆಡಳಿತವರ್ಗವು ಭಾರತದ ಜನತೆಗೆ ಎಸಗಿದ ಅಪಚಾರದ ಒಂದು ಅವತಾರ ಈ ಅನ್ನಕ್ಷಾಮ. ಇದರ ಪರಿಹಾರ ಬಹು ಸುಲಭ. ಜನತಾ ಪ್ರೇಮಿಯಾದ, ಜನರ ಹಿತಾಕಾಂಕ್ಷಿಯಾದ ಸರ್ಕಾರವೇ ಇದನ್ನು ಹೋಗಲಾಡಿಸಬಲ್ಲುದು. ಉಳಿದೆಲ್ಲ ಪ್ರಯತ್ನವು ಬರೀ ಕಣ್ಣೊರಸಿಕೆಯಾದೀತು. ಇದನ್ನು ಲೇಖಕರೂ ಸ್ವಲ್ಪಮಟ್ಟಿಗೆ ಒಪ್ಪುವರೆಂದು ನಮ್ಮ ನಂಬಿಕೆ.

ಅವರು ತಮ್ಮ ಪುಸ್ತಕದಲ್ಲಿ ಈ ಸಮಸ್ಯೆಗೆ ನೇರವಾದ ಪರಿಹಾರ ಕೊಡುವುದರ ಬದಲು, ಪ್ರಶ್ನೆಯನ್ನು ಹತ್ತಿರದ ವಿಷಯಗಳಿಗೆ ಗಂಟುಹಾಕಿ ಸಮಸ್ಯೆಯನ್ನು ಅತಿ ಜಟಿಲವಾಗುವಂತೆ ಮಾಡಿದ್ದಾರೆ. ಇದರಿಂದ ಅವರ ಘನೋದ್ದೇಶ ಎಷ್ಟರಮಟ್ಟಿಗೆ ಸಾರ್ಥಕವಾಗಿದೆಯೆಂಬುದು ಸಂದೇಹಾಸ್ಪದ. ಜೊತೆಗೆ ಲೇಖಕರು ಪುಸ್ತಕದಲ್ಲಿ ಕಾಲ್ಪನಿಕವಾದ 'ಪಂಚಮದಳ' 'ಆಗಸ್ಟ್ ದುರಂತ' ಇತ್ಯಾದಿ ವಿಷಯಗಳನ್ನು ಜೋಡಿಸಿರುವುದು ವಿಚಿತ್ರವಾಗಿದೆ.

ಅಂತೂ ಅವರ ಅನ್ನ ಸಮಸ್ಯೆಯ ವಿಚಾರ ಶೋಧನೆ, ಆ ಪ್ರಶ್ನೆಯನ್ನು ಮುಕ್ತವ್ಯ ತೊಡಕಾಗಿ ಮಾಡಿದೆ. ಒಟ್ಟಿನಲ್ಲಿ ಈ ಪುಸ್ತಕವು ಅನ್ನ ಸಮಸ್ಯೆಗೆ ಪರಿಹಾರ ಕೊಡುವುದಕ್ಕಿಂತ ಹೆಚ್ಚಾಗಿ ಕಮ್ಯುನಿಸ್ಟ್ ಪಕ್ಷದ ವಿಚಾರ ಪ್ರಚಾರದಲ್ಲಿ ಕೊನೆಗಂಡಿದೆ.

ಎಸ್. ಎಂ. ಎಸ್.

ಸ್ತ್ರೀಯರ ಸೌಕರ್ಯಕ್ಕಾಗಿ

೧೯೪೧ ೧೨-೧೨ ನೇ ತಾ. ಯಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ

ಡಿ. ಪುಟ್ಟಯ್ಯ ಟಿ. ಸನ್ಸ್, ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

೨ ರೂ.-- ಮೇಲ್ಪಟ್ಟು ಕೊಳ್ಳುವವರಿಗೆ, ಬೂದಾಳೆ ಸಿಲ್ವರ್ ಡಬ್ಬಿ ಮತ್ತು ಸಂಚಿ ಮೇಲೆ ಕೂಪನ್ ಆಫೀಸಿನಲ್ಲಿ ಕೊಟ್ಟು, ರಶೀದಿ ಗಿಫ್ಟ್ ಗಿರಾಕಿ ಒಟ್ಟು ಪಡೆದುಕೊಳ್ಳಿ.

ವಾರ ಭವಿಷ್ಯ

ತಾ|| ೭೦-೧೨-೪೩ರಿಂದ ೨೬-೧೨-೪೩ರವರೆಗೆ

(ಶ್ರೀ ಸಚ್ಚಿದಾನಂದ ಸ್ವಾಮಿಗಳಿಂದ)

ಮೇಷ—ಈ ವಾರ ಶಾರೀರಿಕ ದೃಷ್ಟಿಯಿಂದ ಕೊಂಚ ತಾಪದಾಯಕ. ಆಹಾರ ವಿಷಯದಲ್ಲಿ ಮಿತವಾಗಿರಿ. ಆರ್ಥಿಕ ಸ್ಥಿತಿ ಚೆನ್ನಾಗಿದೆ. ಖರ್ಚು ಅಧಿಕ ವ್ಯಾಪಾರ ಉದ್ಯೋಗಾದಿಗಳಲ್ಲಿ ಅಲಕ್ಷ್ಯ, ಬಂಧುಗಳಿಂದ ತೊಂದರೆ. ಆಸಿಚ್ಛಾಪೂರ್ವಕ ಪ್ರವಾಸ ದಾನ ಧರ್ಮಾದಿ ಶುಭಕಾರ್ಯಗಳಲ್ಲಿ ಉದಾಸೀನತೆ ತಾ|| ೨೦, ೨೧ ಖರ್ಚು ಹೆಚ್ಚು ಆಶ್ಚರ್ಯಕರ ವಾರ್ತೆ.

ವೃಷಭ—ಕೋಪದ ಭರದಲ್ಲಿ ಆಗುವ ಕೆಲಸವನ್ನು ಕೆಡಿಸದೆ. ಶಾಂತರೀತಿಯಿಂದ ವರ್ತಿಸಿ ಆರೋಗ್ಯ ಕೆಡಬಹುದು. ಕಿರುಕುಳ ಮಾನಸಿಕ ಚಿಂತೆ ಇವುಗಳಿಂದ ಜೀವನವೇ ಬೇಸರವಾಗುವುದು ಅತ್ಯಧಿಕ ವೆಚ್ಚ ಪ್ರವಾಸದಲ್ಲಿ ಅಪಮಾನಕರ ಪ್ರಸಂಗ ಒದಗುವುದು ವ್ಯಾಪಾರ ಉದ್ಯೋಗಗಳ ಸ್ಥಿತಿ ಕೂಡ ಚಿಂತಾಜನಕವಾಗುವುದು. ತಾ|| ೨೩, ೨೪ ಕಲಹ, ಪೆಟ್ಟು. ಅಗ್ನಿಭಯ, ಶತ್ರುಪೀಡೆ.

ಮಿಥುನ—ಅತಿಯಾಸೆ ಮಾಡಿ ಇದ್ದುದನ್ನೂ ಕಳೆದುಕೊಳ್ಳಬೇಡಿ. ದ್ರವ್ಯದ ಅಭಾವವು ನೋಡಲೇಬೇಕಾಗುವುದು. ಅಸ್ತರಿಂದ ಮೋಸಹೋಗುವ ಸಂಭವ ಒದಗಬಹುದು ವ್ಯಾಪಾರಾದಿಗಳಲ್ಲಿ ಭಯಾವಿಷಯಗಳು ಉಪ್ಪವಿಸುವವು ದುಷ್ಟಸ್ಥಳಾಟರೀತಿ ಮುಂತಾದುವುಗಳಲ್ಲಿ ಪ್ರವೃತ್ತರಾಗಬೇಡಿ. ಪ್ರವಾಸದಲ್ಲಿ ನಷ್ಟ ತಾ|| ೨೧ ಧನ ಚಿಂತೆ, ಗಲಾಟೆ.

ಕರ್ಕ—ಈ ವಾರ ನೀವು ಯೋಚಿಸಿದ ಕೆಲಸಗಳು ಕೈಗೂಡಿ ಮನಸ್ಸಿಗೆ ನೆಮ್ಮದಿಯುಂಟಾಗುವುದು ಆರೋಗ್ಯ, ಚೆನ್ನಾಗಿರುವುದು. ಮಾನಸಿಕ ಸ್ಥಿತಿ ಉತ್ತಮ ಆರ್ಥಿಕ ಸ್ಥಿತಿಯಂತೂ ಅತ್ಯುತ್ತಮ. ಉದ್ಯೋಗ ನೌಕರಿಗಳಲ್ಲಿ ಪ್ರಗತಿ ಮತ್ತು ಲಾಭ ಶುಭಕೆಲಸಗಳಲ್ಲಿ ಇಷ್ಟ. ಸ್ನೇಹಿತರಿಂದ ವಸ್ತುಲಾಭ ಅಪ್ರೀಪ್ಸಿತ ಭೇಟಿ. ಉತ್ಸಾಹ ಮತ್ತು ಉಲ್ಲಾಸ. ತಾ|| ೨೩, ೨೪ ಅಧಿಕ ಖರ್ಚು, ಚಿಂತೆ

ಸಿಂಹ—ಕೆಲವು ಸಾರಿ ವಿದ್ಯೆ ಮತ್ತು ಪ್ರೀತ್ಯರ್ಥಗಳಿಂದ ಶಕ್ತಿಯ ಅವಶ್ಯಕತೆ ಹೆಚ್ಚು

ಫುದೆಂದು ನೆನಪಿನಲ್ಲಿಡಲಿ. ಆರೋಗ್ಯ ಚೆನ್ನಾಗಿದೆ. ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಮಾನಸಿಕ ಚಿಂತೆ, ಶತ್ರುಪೀಡೆ ಅಸ್ವಸ್ಥಗಳು ಆಗಬಹುದು. ಉದ್ಯೋಗಾದಿಗಳಲ್ಲಿ ಗಮನವಿಟ್ಟು ವರ್ತಿಸಿ. ಪ್ರವಾಸ ಮತ್ತು ಶುಭಕಾರ್ಯಗಳಲ್ಲಿ ಉದಾಸೀನತೆ ತಾ|| ೨೩, ೨೪ ಮಿತ್ರರಿಂದ ಸಹಾಯ, ಮನಶ್ಶಾಂತಿ.

ಕನ್ಯಾ—ಈ ವಾರ ನಿಮ್ಮ ಮನಸ್ಸು ವ್ಯರ್ಥ ಯೋಚನೆಗಳಿಗೆ ಸಿಕ್ಕಿ ತುಂಬ ತೊಂದರೆಗೆ ಸಿಕ್ಕುವಿರಿ ಶತ್ರುಪೀಡೆಯು ಭಯ ಉದ್ಯೋಗ ನೌಕರಿಗಳಲ್ಲಿ ಮಾನಸಿಕ ಚಿಂತೆ ಅಸ್ತರ ತಪ್ಪು ತಿಳುವಳಿಕೆ ತಾ|| ೨೦ ಮಾನಸಿಕ ತೊಂದರೆ, ಪ್ರವಾಸ

ತುಲಾ—ಈ ವಾರ ದೈವಕೃಪೆ ನಿಮ್ಮ ಮೇಲೆ ಅಖಂಡವಾಗಿದೆ ಧೈರ್ಯದಿಂದ ಮುನ್ನುಗ್ಗಿ. ಈ ವಾರ ಆರೋಗ್ಯ, ಆರ್ಥಿಕ ಮಾನಸಿಕ ಸ್ಥಿತಿಗಳು ಚೆನ್ನಾಗಿರಲಾರವು ವ್ಯಾಪಾರಾದಿಗಳಲ್ಲಿ ಶತ್ರುಪೀಡೆ ಪ್ರವಾಸವನ್ನು ನಿಲ್ಲಿಸಿದರೆ ಉತ್ತಮ. ತಾ|| ೨೧ ಹೆಚ್ಚು ದುಃಖ, ಅಶಾಂತ

ವೃಶ್ಚಿಕ—ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿದ್ದರೂ ಮನಸ್ಥಿತಿ ಚೆನ್ನಾಗಿರಲಾರದು ದುಡ್ಡು ಎಷ್ಟೇ ಬಂದರೂ ಎಲ್ಲವೂ ಸ್ತ್ರೀಯರಿಂದ ಖರ್ಚಾಗಿಹೋಗುವುದು ವೃಥಾ ನಿಂದೆ ವ್ಯಾಪಾರ, ಉದ್ಯೋಗಾದಿಗಳಲ್ಲಿ ಶತ್ರುಗಳು ಹೆಚ್ಚುವರು. ತಾ|| ೨೩, ೨೪, ೨೫ ನಷ್ಟ, ಗುಪ್ತಚಿಂತೆ

ಧನುಸ್ಸು—ಸರ್ವ ದೃಷ್ಟಿಯಿಂದಲೂ ಈ ವಾರ ಉತ್ತಮವಾಗಿದೆ ಆರೋಗ್ಯ, ಸಾಂಪತ್ತಿಕ, ಮಾನಸಿಕ ಸ್ಥಿತಿಗಳು ಉತ್ತಮವಾಗಿವೆ ಉದ್ಯೋಗ, ನೌಕರಿಗಳಲ್ಲಿ ಏಳಿಗೆ ಮತ್ತು ಲಾಭ ಪ್ರವಾಸ ಮತ್ತು ದಾನಧರ್ಮಾದಿ ಶುಭ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು ತಾ|| ೨೩, ೨೪ ಮಿತ್ರಭೇಟಿ, ವಸ್ತ್ರಲಾಭ, ಸ್ತ್ರೀಸೌಖ್ಯ.

ಮಕರ—ಈ ವಾರ ಮಾನಸಿಕ ಸ್ಥಿತಿ ಚೆನ್ನಾಗಿದ್ದರೂ ಆರೋಗ್ಯದ ವಿಷಯದಲ್ಲಿ ಜಾಗರೂಕರಾಗಿರಿ ಆಪತ್ತಿನಿಂದ ಪಾರಾಗುವಿರಿ ನೌಕರಿ ಉದ್ಯೋಗಾದಿಗಳಲ್ಲಿ ಶತ್ರುಪೀಡೆ ಮನಸ್ಸು ನಾನಾವಿಧ ಭಾವನೆಗಳಿಗೆ ಸಿಕ್ಕಿ ತಲ್ಲಣಗೊಳ್ಳುವುದು ತಾ|| ೨೦, ೨೧ ದ್ರವ್ಯಲಾಭ

ಅಮೇರಿಯನರಿಗೆ ಗೊತ್ತಿಲ್ಲ

ಒಟ್ಟು ಬಂಗಾಳ ಪ್ರಾಂತದಲ್ಲೆಲ್ಲ ಕ್ಷಾಮ ದಿಂದ ಸಂಭವಿಸಿದ ಮರಣಗಳ ಸಂಖ್ಯೆ ಎಷ್ಟೆಂಬುದು ಇನ್ನೂ ತಮಗೆ ಗೊತ್ತಿಲ್ಲವೆಂದು ಇಂಡಿಯಾ ಸಕ್ರೆಟರಿ ಮಿ| ಅಮೇರಿಯವರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು. ಕಲ್ಕತ್ತಾದಲ್ಲಿ ಆಗಸ್ಟ್ ೧೬ ರಿಂದ ಡಿಸೆಂಬರ್ ೧೧ ರ ವರೆಗೆ ೧೬,೨೪೫ ಜನರು ದಿಕ್ಕುಗೊಟ್ಟಿಲ್ಲದವರು ಆಸ್ಪತ್ರೆಗೆ ದಾಖಲಾದರು. ಅವರಲ್ಲಿ ೬,೧೫೬ ಜನ ಸತ್ತರು. ಕಾಲರಾದಿಂದ ಬಂಗಾಳ ಪ್ರಾಂತದಲ್ಲಿ ಜುಲೈ ತಿಂಗಳಿಂದ ನವೆಂಬರ್ ವರೆಗೆ ೭೭,೯೫೮ ಜನರು ಸತ್ತರು ಎಂದು ಅವರು ಹೇಳಿದರು

---

೭೪೦ ಕೋಟಿ ರೂ. ಗಳ ನೋಟುಗಳು ೧೯೪೩ ನೇ ಜುಲೈ ೩೦ ರಲ್ಲಿ ಚಲಾವಣೆಯಲ್ಲಿತ್ತು. ಆದರೆ ೧೯೩೯ ರ ಸೆಪ್ಟೆಂಬರ್ ನಲ್ಲಿ ೧೭೨ ಕೋಟಿ ನೋಟುಗಳು ಮಾತ್ರ ಚಲಾವಣೆಯಲ್ಲಿತ್ತು. ಅಂದರೆ ೪ ವರ್ಷ ಕಾಲದಲ್ಲಿ ೫೬೮ ಕೋಟಿ ರೂ. ನೋಟುಗಳ ಚಲಾವಣೆ ಹೆಚ್ಚಿದಂತಾಯಿತು.

ಕುಂಭ—ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿರಲಾರದು ಮಾನಸಿಕ ಚಿಂತೆ ಆರ್ಥಿಕ ಸ್ಥಿತಿ ಚೆನ್ನಾಗಿದ್ದರೂ ಮತ್ತು ನಿರರ್ಥಕ ಖರ್ಚಾಗುವುದು. ವ್ಯಾಪಾರ, ಉದ್ಯೋಗಾದಿಗಳಲ್ಲಿ ತೊಂದರೆ ಪ್ರವಾಸ ಮತ್ತು ಶುಭ ಕಾರ್ಯಗಳಲ್ಲಿ ವಿಘ್ನ. ತಾ|| ೨೦, ೨೧ ಅಪ್ರಿಯ ವಾರ್ತೆ, ಪ್ರಾಣಾಪಾಯದ ಭಯ

ಮೀನ—ಯಾವ ನಿಂದೆಗೂ ಮತ್ತು ಹೊಗಳಿಕೆಗೂ ಗಮನ ಕೊಡಬೇಡಿ ಈ ವಾರ ಆರೋಗ್ಯ ಚೆನ್ನಾಗಿರುವುದು ಮಾನಸಿಕ ಮತ್ತು ಆರ್ಥಿಕ ಸ್ಥಿತಿ ಉತ್ತಮವಾಗಿರುವುವು ಉದ್ಯೋಗ, ನೌಕರಿಗಳಲ್ಲಿ ಮನಸ್ಸಿಟ್ಟು ಕೆಲಸ ಮಾಡಿ ಪ್ರವಾಸದಲ್ಲಿ ಜಯ. ತಾ|| ೨೩, ೨೪ ಖರ್ಚು, ಚಿಂತೆ, ಅಪಮಾನ

ವರ್ತಕರೂ ಯುದ್ಧನಿಧಿಯೂ

ಇಂಡಿಯಾ ಸರ್ಕಾರದ ರಾಜಧಾನಿಯಾದ ದೆಹಲಿಯಲ್ಲಿ ವಿಚಿತ್ರ ಸಂಗತಿಗಳು ನಡೆಯುತ್ತಿವೆ. ಅಧಿಕ ಲಾಭ ಮತ್ತು ದಾಸ್ತಾನಿಗೆ ವಿರುದ್ಧವಾಗಿ ಹೊರಡಿಸಿರುವ ಕಾನೂನನ್ನು ಅತಿಕ್ರಮಿಸಿದರೆಂದು ಅನೇಕ ಪ್ರಮುಖ ವರ್ತಕರ ಮೇಲೆ ಖಟ್ಲೆಗಳು ನಡೆಯುತ್ತಿವೆ. ವರ್ತಕರು ಒಂದು ಸಂಘವನ್ನು ಸ್ಥಾಪಿಸಿಕೊಂಡು ಅಧಿಕಾರಿಗಳೊಡನೆ ಚೌಕಾಶಿ ಮಾಡುತ್ತಿದ್ದಾರೆ. ಯುದ್ಧ ನಿಧಿಗೆ ನಾಲ್ಕು ಲಕ್ಷ ರೂ. ಕೊಡುವುದಾಗಿ ಹೇಳುತ್ತಿದ್ದಾರೆ ಸರ್ಕಾರಿ ಅಧಿಕಾರಿಗಳು ರೇಷ್ಮೆ, ಉಣ್ಣೆ ಮತ್ತು ಹತ್ತಿ ಬಟ್ಟೆಗಳಿಗೆ ಕಾಯಿದೆಯಲ್ಲಿ ಕೊಟ್ಟಿರುವುದಕ್ಕಿಂತ ಹೆಚ್ಚಿನ ದರಗಳನ್ನು ಗೊತ್ತು ಮಾಡುತ್ತಿದ್ದಾರೆ ಯುದ್ಧ ಸಹಾಯ ನಿಧಿಗಾಗಿ ಬಂದು ವರ್ತಕರ ಗುಂಪೇ ಆರಂಭವಾಗಿದೆ

ಎರಡು ಬೋಫರ್ಸ್ ಗಂಡುಗಳನ್ನು ತಯಾರಿಸಲು ಐದು ಟನ್ ಕಬ್ಬಿಣ ಬೇಕು. ಲಂಡನ್ ಹೈಡ್‌ಪಾರ್ಕಿನಲ್ಲಿದ್ದ ೪೫೦ ಟನ್ ಗಳಷ್ಟು ರೈಲ್ ಕಂಬಿಗಳು ಈಗ ಶತ್ರುನಾಶಕ ಫಿರಂಗಿಗಳಿಗಾಗಿ ಉಪಯೋಗವಾಗುತ್ತಲಿವೆ

ಕಳೆದ ಜುಲೈ ಅಂತ್ಯದವರೆಗೆ ಭಾರತ ರಕ್ಷಣಾ ಸಾಲದ ನಿಧಿಗೆ ೨೨೫ ಕೋಟಿ ರೂ. ಗಳು ಸಂಗ್ರಹವಾಗಿದೆ.

ಟಿ. ಸಿ. ನಟರಾಜ್
ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅತ್ಯಗತ್ಯವಾಗಿ ಬೇಕಾದ ಎಲ್ಲಾ ತರಹ ಔಷಧಿಗಳೂ ಕಡಿಮೆ ಕ್ರಯಕ್ಕೆ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಚತುರ ಸಲಹೆ ಉಚಿತವಾಗಿ ಮಾಡಲ್ಪಡುತ್ತದೆ

ಮುಂದಾಗುವವರ ಅಪೇಕ್ಷೆಯಂತೆ ಸಿದ್ಧಾಪಥಗಳಲ್ಲಿಯೂ ಸಹಾಯ ದೊರೆಯುತ್ತವೆ.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ನಿವಾರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ವೃದ್ಧಿಸಿ ದೇಹಕ್ಕೆ ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ, ೧೦೪ ಚೈನಾ ಬಜಾರು ರಸ್ತೆ, ಮದರಾಸು

ಏಜೆಂಟರು : ಅಶೋಕಾ ಫಾರ್ಮಸಿ ಹಳೇಮೈಸೂರುಬ್ಯಾಂಕು ರಸ್ತೆ, ಮೈಸೂರು

ನರ್ವನ್ಯಾಟೈನ್

ನರಗಳ ಶಕ್ತಿಗೆ; ವೀರ್ಯವೃದ್ಧಿಗೆ

ಉಪಯೋಗಿಸುವ ವಿಧಾನ.—

-ಮಲಗುವ ವೇಳೆ ಕಾಲು ಟೀಸ್ಪೂನಿನಂತೆ ಬಿಸಿ ಹಾಲಿನೊಡನೆ

ದೊಡ್ಡ ಬಾಟಲ್ ರೂ. 2-4-0 ಮಾತ್ರ

ಸಣ್ಣ ಬಾಟಲ್ ರೂ 1-4-0

ಪ್ಯಾಕಿಂಗ್ ಮತ್ತು ಪಾರ್ಸಲ್ ಚಾರ್ಜು ಪ್ರತ್ಯೇಕ

ಈ ನಮ್ಮ ಔಷಧಕ್ಕೆ ದಸರಾ ವಸ್ತು ಪ್ರದರ್ಶನದಲ್ಲಿ ಮೆಡಲು ದೊರೆಕಿರುತ್ತದೆ

ವಿಳಾಸ.—

ಕೆ. ಇ. ಐ. ಪ್ರೊಡಕ್ಟ್ಸ್

ಹಳೆ ಮೈಸೂರ ಬ್ಯಾಂಕ್ ರಸ್ತೆ, ಮೈಸೂರು

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಶುಭ್ರವಾಗುವುದಲ್ಲದೆ ಸುಗಂಧವಾಗುವುದು ಇದರ ಹೆಚ್ಚಿನ ಗುಣವೇನೆಂದರೆ ಉಷ್ಣಗಳನ್ನೆಲ್ಲಾ ನೀಗಿಸಿ ಚರ್ಮದ ಕಾಂತಿಯನ್ನು ಹೆಚ್ಚಿಸುವುದು ಆದರ ಮತ್ತು ಯ ಸುಗಂಧವು ಎಲ್ಲರನ್ನೂ ಆಕರ್ಷಿಸುವುದು.

ಮೈಸೂರು ಸ್ಯಾಂಡಲ್ ಸೋಪ್

ರೇಷನಿಂಗ್ ಜಾರಿಯ ಅವ್ಯವಸ್ಥೆ

ಶ್ರೀ ಎ. ರಾಮಸ್ವಾಮಿಯವರು ಹೀಗೆ ಬರೆಯುತ್ತಾರೆ:—

ಮೈಸೂರು ನಗರದಲ್ಲಿ ಇಂದು ರೇಷನಿಂಗ್ ಜಾರಿಗೆ ಬಂದಿದೆ. ಮೊಹಲ್ಲಾಗಳ ಅನೇಕ ಕಡೆಗಳಲ್ಲಿ ಡಿಪೋಗಳನ್ನು ತೆರೆದಿದ್ದಾರೆ. ಮಂಡಿ, ದೇವರಾಜ, ಬಿಸ್ಟೆಲ್ ಮೊಹಲ್ಲಾಗಳ ಹಲವು ಡಿಪೋಗಳನ್ನು ಇಂದು ಬೆಳಗ್ಗೆ ನೋಡಿಕೊಂಡು ಬಂದೆ. ಅವುಗಳ ಮುಂದೆ, ರೇಷನಿಂಗಾಗಿ ರೇಷನ್ ಕಾರ್ಡುಗಳನ್ನು ಹಿಡಿದುಕೊಂಡು ಬಂದಿರುವ, ಹೆಂಗಸರು, ಮಕ್ಕಳು ಮತ್ತು ಗಂಡಸರ ಗುಂಪುಗಳಿದ್ದುವೇ ವಿನಹ ಜನರಿಗೆ ದವಸಗಳನ್ನು ಕೊಡುತ್ತಿಲ್ಲ. ಕೇಳಿದರೆ ಬಂದಿಲ್ಲ. ಕೆಲವು ಡಿಪೋಗಳಿಗೆ ಇನ್ನೂ ದವಸಗಳೇ ಬಂದಿಲ್ಲ. ಕೆಲವದರಲ್ಲಿ ಕೂಡಲು ಇನ್ನೂ ಅಪ್ಪಣೆ ಬಂದಿಲ್ಲವೆಂದು ಹೇಳುತ್ತಿದ್ದಾರಂತೆ. ಹತ್ತು ಗಂಟೆಯ ಮೇಲೆ ಬಂದರೆ ಕೊಡುತ್ತೇವೆಂದು ಹೇಳುತ್ತಾರಂತೆ. ಬೆಳಗ್ಗಿನಿಂದ ಹೊಟ್ಟೆಗಿಲ್ಲದೆ ಗೋಳಿಡುವ ಮಕ್ಕಳು ಬೇರೆ.

ಅನೇಕರಿಗೆ ಇನ್ನೂ ರೇಷನ್ ಕಾರ್ಡೇ ಬಂದಿಲ್ಲ. ಅವರೆಲ್ಲಾ ಕೆಲಸಕಾರ್ಯಗಳನ್ನು ಬಿಟ್ಟು ರೇಷನ್ ಅಧಿಕಾರಿಗಳ ಕಛೇರಿಯನ್ನು ಅಲೆಯುತ್ತಿದ್ದಾರೆ. ಅನೇಕರು ಕಾರ್ಡುಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಕಾಯುತ್ತಿದ್ದಾರೆ. ಹೀಗೆ ಯಾವ ಡಿಪೋಗಳ ಮುಂದೆ ನೋಡಿದರೂ ಜನರ ಕೂಟ. ಕಛೇರಿಯ ಮುಂದೆ ದೊಡ್ಡ ಗಲಾಟೆಯೇ ಹಬ್ಬಿಬಿಟ್ಟಿದೆ. ಸುಮಾರು ೨ ಸಾವಿರಕ್ಕೆ ಮೇಲ್ಪಟ್ಟು ಜನರು ಸೇರಿದ್ದಾರೆ. ರೇಷನಿಂಗ್ ಜಾರಿಗೆ ತರುವ ಮೊದಲು ಎಲ್ಲಾ ಡಿಪೋಗಳನ್ನೂ ತೆರೆದು ಅವಕ್ಕೆ ಬೇಕಾಗುವ ದವಸಗಳನ್ನು ಒದಗಿಸಿ, ಎಲ್ಲ ಸಂಸಾರಗಳಿಗೂ ಕಾರ್ಡುಗಳನ್ನು ಹಂಚಿಸಿ, ಜನರಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟು ಈ ಪದ್ಧತಿಯನ್ನು ಜಾರಿಗೆ ತಂದಿದ್ದರೆ ಈ ಅವ್ಯವಸ್ಥೆಗೆ ಅವಕಾಶವಾಗುತ್ತಿರಲಿಲ್ಲ. ಜನಗಳು ಗೋಳಾಡಬೇಕಾಗಿರಲಿಲ್ಲ. ಅಂತೂ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನಕೊಟ್ಟು ಸರಿಪಡಿಸಬೇಕು.

ಅಕ್ಕಿಯಿದ್ದರೂ ಕೊಡುವವರಿಲ್ಲ

ಸಾಯಾಜಿರಾವ್ ರೋಡ್ ೩ ನೇ ಕ್ರಾಸ್ ನಲ್ಲಿ ಇಟ್ಟಿರುವ ೨ನೇ ನಂಬರ್ ಡಿಪೋವಲ್ಲಿ ಅಕ್ಕಿ ಇದ್ದರೂ ಬೆಳಗ್ಗೆ ರೇಷನ್ ಕಂಟ್ರೋಲ್‌ನವರನ್ನು ಡಿಪೋ ಮ್ಯಾನೇಜರು ಕಾಣಿಸಲಿಲ್ಲವೆಂದು ಸ್ಥಿತಿ ಅರ್ಧ ಗಂಟೆಗೂ ಇದೇ ಗಲಾಟೆ. ಹೇಳಿದವರು ಹನ್ನೆರಡು ಗಂಟೆಗೆ ಡಿಪೋ ಬಾಗಿಲು ಹಾಕಿಕೊಂಡು ಹೊರಟುಹೋದರು. ರೇಷನ್ ಕಾರ್ಡ್ ಪಡೆದು ಅದು ಬಾರಿ ಅದೇ ಬಂದು [illegible]

[illegible]

[illegible]

ಎ. ವರ್ಧಮಾನ ಪಂಡಿತ್,

[illegible]

Printed, published and published by [illegible] for the [illegible] Mysore

ರೇಷನಿಂಗ್ ಪದಾರ್ಥಗಳು ಸಾಕಾದಷ್ಟಿವೆ

ಮೈಸೂರು ನಗರದಲ್ಲಿ ಈ ದಿನದಿಂದ ಪಡಿಧಾನ್ಯದ ಪದ್ಧತಿಯು ಜಾರಿಗೆ ಬಂದಿರುವುದಷ್ಟೆ. ಒಂದೊಂದು ಡಿಪೋದಲ್ಲಿ ೪೦೦ ಸಂಸಾರಕ್ಕೆ ಪಡಿ ಕೊಡಲು ಏರ್ಪಡಿಸಿದೆ. ಆದರೆ ಈ ಏರ್ಪಾಟಿನ ಒಳನೀತಿಯು ಬಹಳ ಜನರಿಗೆ ತಿಳಿಯದಿರುವುದರಿಂದ ಜನರಿಗೆ ಅಭಾವದ ಭೀತಿಯಾಗಲಿ ಡಿಪೋಗಳಲ್ಲಿ ಜನಸಂದಣಿಯಾಗಲಿ ಇರುತ್ತಿರಲಿಲ್ಲ. ಒಂದು ವಾರದಲ್ಲಿ ಯಾವತ್ತು ಬೇಕಾದರೂ ಬಂದು ಪಡಿ ಪಡೆಯಬಹುದು. ಆದ್ದರಿಂದ ವಾರದ ಪ್ರಾರಂಭದಲ್ಲಿ ೩-೪ ದಿನಗಳ ದಾಸ್ತಾನು ಇರತಕ್ಕ ಸಂಸಾರಸ್ಥರು ದಯವಿಟ್ಟು ೩-೩ ದಿನಗಳು ಕಳೆದನಂತರ ತಮ್ಮ ಭಕ್ಷ್ಯ ತೆಗೆದುಕೊಂಡರೆ ಉತ್ತಮ. ತಾವೂ ತೊಂದರೆಪಟ್ಟುಕೊಂಡು ಡಿಪೋ ಅಧಿಕಾರಿಗಳಿಗೂ ತೊಂದರೆ ಕೊಡಬಾರದು. ರೇಷನಿಂಗ್ ಪದಾರ್ಥಗಳು ಸಾಕಾದಷ್ಟು ಎಲ್ಲಾ ಡಿಪೋಗಳಲ್ಲಿಯೂ ಇವೆ. ಆದ್ದರಿಂದ ಎಲ್ಲಿ ಮುಗಿದು ಹೋಗುವುದೋ ಎಂಬ ಭಯಕ್ಕೆ ಕಾರಣವಿಲ್ಲ.

ಚಿತ್ರಸಿ

ರೇಷನ್ ಪದ್ಧತಿ ಅನಾನುಕೂಲತೆ

ಈ ದಿನ ರೇಷನ್ ಪ್ರಾರಂಭವಾಯಿತು. ನಾನು ಕೃಷ್ಣರಾಜ ಮೊಹಲ್ಲಾದಲ್ಲಿ ಅನೇಕ ಡಿಪೋಗಳನ್ನು ನೋಡಿಬಂದೆನು. ಕೆಲವರಿಗೆ ಕಾರ್ಡ್ ಕೊಟ್ಟಿಲ್ಲ. ಕೊಟ್ಟಿರುವ ಕಾರ್ಡುಗಳಲ್ಲಿ ಕೆಲವಕ್ಕೆ ಡಿಪೋ ನಂಬರೇ ನಮೂದಿಸಿಲ್ಲ. ಅವರು ಹುಡುಕುತ್ತಾ ಇದ್ದಾರೆ. ಕೆಲವು ಕಡೆ ಸಕ್ಕರೆ, ರಾಗಿ ಮಾತ್ರ ಬಂದಿವೆ. ಕೆಲವು ಕಡೆ ಎಲ್ಲಾ ಸಾಮಾನೂ ಬಂದಿವೆ. ಆದರೆ ಅಳತೆಗೆ ಸೇರು ಪಾತ್ರೆ ಇಲ್ಲ. ಕೆಲವು ಕಡೆ ಎಲ್ಲಾ ಇವೆ, ಎಷ್ಟು ಜನಕ್ಕೆ ಎಷ್ಟೆಷ್ಟು ಕೊಡಬೇಕು? ಈ ಆರ್ಡರ್ ಅಥವಾ ತಿಳುವಳಿಕೆ ಬಂದಿಲ್ಲ.

ಈ ಸಂಬಂಧದಲ್ಲಿ ನಾನು ಪ್ರೆಸಿಡೆಂಟರಲ್ಲಿ ಅರ್ಧ ಗಂಟೆ ಮಾತನಾಡಿದೆನು. ಒಂದು ವಾರದ ವರೆಗೆ ಸ್ವಲ್ಪ ತೊಂದರೆಯಾಗುತ್ತೆ. ಎಲ್ಲರೂ ಸಹಕರಿಸಿ ಸಹಾಯ ಮಾಡಬೇಕು. ಕೂಡಲೇ ಪಾರ್ಡನ್ಸ್ ಗೊತ್ತು ಮಾಡುತ್ತೇನೆ-ಎಂದು ಹೇಳಿದರು.

ಅನೇಕರಿಗೆ ಈ ದಿನ ರೇಷನ್ ಸಿಕ್ಕದಿರುವ ಸಂಭವವಿದೆ. ಆದ್ದರಿಂದ ಕೊನೆಗೆ ಈ ದಿನ ಎಲ್ಲಾ ಡಿಪೋಗಳನ್ನೂ ರಾತ್ರಿ ಅರ್ಧ ೧೦ ಗಂಟೆವರೆಗೂ ತೆರೆದಿದ್ದು ಕೊನೆಯ ಪಕ್ಷ ೪ ದಿನಗಳಿಗಾದರೂ ಅಕ್ಕಿ ಮತ್ತು ರಾಗಿ ಕೊಡಿಸಬೇಕು. ಕೆಲವರು ಸಿನಿಮಾಯ್ ಉಪವಾಸವಿದ್ದರು ಎಂದು ತಿಳಿಸಿದೆನು. ಅದಕ್ಕೆ ನಮ್ಮ ಪ್ರೆಸಿಡೆಂಟರು ಒಪ್ಪಿಕೊಂಡು ಒಂದು ದಿನವೇಕೆ, ೩-೪ ದಿನಗಳ. ಈ ರೀತಿ ಮಾಡಿ ತೊಂದರೆ ತಪ್ಪಿಸಲು ಏರ್ಪಡಿಸುತ್ತೇನೆ ಎಂದು ಹೇಳಿದ್ದಾರೆ.

ಎ. ಎಸ್. ಸೂರ್ಯನಾರಾಯಣರಾವ್,

ಮುನಿಸಿಪಲ್ ಕೌನ್ಸಿಲರ್

ಮಂತ್ರಿ ಮತ್ತು ಗೌರ್ನರರ ಬಂಧನ

ಮಧ್ಯ ಪ್ರಾಂತ್ ನ ಮುಖ್ಯಮಂತ್ರಿ ಮಾಫ್ಟ್ ರೇ ಪತ್ರ ಆರ್ ಶಿಬಿರಾದ ಮಾಜಿ ಗೌರ್ನರ್ ಎಂ. ಹೆಟ್ಟೋರವರುಗಳನ್ನು ಫ್ರೆಂಚ್ ಸ್ವಕ್ಷೇತ್ರ ಸಮಿತಿಯವರು ಬಂಧನದಲ್ಲಿರಿಸಿರುವರೆಂದು ವರದಿಯಾಗಿದೆ.

ಇಂಡಿಯಾ ಸರ್ಕಾರದ ಮೇಲೆ ಸಿಂಧ್ ಸರ್ಕಾರದ ಪುಕಾರು

ತಮ್ಮ ಅಪ್ಪಣೆಯಿಲ್ಲದೆ ಆಹಾರ ಧಾನ್ಯಗಳ ಬೆಲೆಗಳನ್ನು ಏರಿಸಕೂಡದೆಂದು ಇಂಡಿಯಾ ಸರ್ಕಾರದವರು ಸಿಂಧ್ ಸರ್ಕಾರಕ್ಕೆ ಕೊಟ್ಟಿರುವ ಸೂಚನೆಯ ಮೇಲೆ ದೊಡ್ಡ ಬಿಕ್ಕಟ್ಟು ಪ್ರಾಪ್ತವಾಗುವಂತಿದೆ.

ತಮ್ಮ ಹಕ್ಕಿನಲ್ಲಿ ಕೇಂದ್ರ ಸರ್ಕಾರವು ಹಸ್ತಕ್ಷೇಪ ಮಾಡುತ್ತಿದೆಯೆಂದು ಸಿಂಧ್ ಮಂತ್ರಿಮಂಡಲವು ಪ್ರಕಟಿಸಿದೆ. ಪಂಜಾಬ್ ಸರ್ಕಾರವು ತನಗೆ ತೋಚಿದ ಬೆಲೆಗೆ ಧಾನ್ಯಗಳನ್ನು ಮಾರಲು ಇಂಡಿಯಾ ಸರ್ಕಾರವು ಅವಕಾಶ ಕೊಟ್ಟಿದ್ದರೂ ನಾವು ಮಾತ್ರ ಕಂಟ್ರೋಲ್ ದರಕ್ಕೇ ಮಾರಬೇಕೆಂದು ಒತ್ತಾಯಪಡಿಸುತ್ತಿದೆ. ಕೇಂದ್ರ ಸರ್ಕಾರದ ಈ ಪಕ್ಷಪಾತದಿಂದ ನಾವು ಕಷ್ಟ ಪಡಬೇಕಾಗಿದೆ. ಧಾನ್ಯ ಸಂಗ್ರಹದಲ್ಲಿಯೂ ಕೂಡ ಇಂಡಿಯಾ ಸರ್ಕಾರವು ಪಂಜಾಬಿಗೆ ಪಕ್ಷಪಾತವನ್ನು ತೋರಿಸುತ್ತಿದೆ. ಈ ವಿಷಯದಲ್ಲಿ ಎಲ್ಲಾ ಅಧಿಕಾರವನ್ನೂ ಇಂಡಿಯಾ ಸರ್ಕಾರದವರೇ ವಹಿಸಿಕೊಂಡಿರುವುದರಿಂದ ಧಾನ್ಯ ಸಂಗ್ರಹ ಮತ್ತು ಅವುಗಳ ವಿನಿಯೋಗದ ಸಂಪೂರ್ಣ ಜವಾಬ್ದಾರಿಯನ್ನೂ ಸಹ ಅವರೇ ವಹಿಸಿಕೊಳ್ಳಬೇಕಾದುದು ಸಹಜವೇ ಆಗಿದೆ. ನಾವು ಇದರಲ್ಲಿ ಯಾವ ಜವಾಬ್ದಾರಿಯನ್ನೂ ವಹಿಸುವುದಿಲ್ಲ. ನಮ್ಮ ಮನಃ ಪೂರ್ವಕವಾದ ಸಹಕಾರ ಹಸ್ತಕ್ಕೆ ಇಂಡಿಯಾ ಸರ್ಕಾರದ ವಿರೋಧವೇ ನಮಗೆ ದೊರೆತಿರುವ ಉತ್ತರವಾಗಿದೆ-ಎಂದು ಸಿಂಧ್ ಸರ್ಕಾರದವರು ಪುಕಾರು ಮಾಡಿದ್ದಾರೆ.

ಗಾಂಧೀಜೀ ಖುಲಾಸೆಯಾದರೆ

ಕಲ್ಕತ್ತೆಯ ಸ್ಟೇಟ್ಸ್‌ಮನ್ ಎಂಬ ಪತ್ರಿಕೆಯ ಸಂಪಾದಕರಾದ ಸರ್ ಫ್ರೀಶಿವಾಸ ಶರ್ಮರವರು ಒಂದು ಹೇಳಿಕೆಯನ್ನಿತ್ತು ಗಾಂಧೀಜೀಯವರು ಮತ್ತು ಇತರ ಸ್ನೇಹಿತರು ಖುಲಾಸೆಯಾಗಿ ಮಾತು ಬಿಟ್ಟರೆ ಅದರಿಂದ ಹಿಂದೂಸ್ಥಾನಕ್ಕೂ ಇಂಗ್ಲೆಂಡಿಗೂ ರಾಜಿಯಾಗುವ ಅವಕಾಶವು ಉತ್ಪನ್ನವಾಗಬಹುದು ಎಂದು ಹೇಳಿದ್ದಾರೆ.

ಹರಿಜನರಿಗೆ ಪ್ರವೇಶವಿಲ್ಲ

ಸಂಸ್ಥಾನದಲ್ಲಿರುವ ಗೀಟೆಲ್ ನ ಜರಾಯಿ ದೇವಾಲಯಗಳ ಪೈಕಿ ೫೦ ದೇವಸ್ಥಾನಗಳಲ್ಲಿ ಮಾತ್ರ ಹರಿಜನರಿಗೆ ಪ್ರವೇಶಿಸಲು ಅನುಕೂಲವಾಗುವುದಾಗಿ ರವಿನ್ಯೂ ಮಂತ್ರಿಗಳು ನ್ಯಾಯ ಸಭೆಯಲ್ಲಿ ಹೇಳಿದರು. ಅವರಿಗೆ ಅವಕಾಶ ಕೊಡಬೇಕೆಂದು ರಾಜರ ಸಭೆಯಲ್ಲಿ ನಿರ್ಣಯವೇನೋ ಆಗಿತ್ತು. ಆದರೆ ನಿರ್ಣಯಗಳನ್ನೆಲ್ಲಾ ಜಾರಿಗೆ ತರಬೇಕೆಂಬ ನಿರ್ಬಂಧವಿಲ್ಲ ಎಂದು ಅವರು ತಿಳಿಸಿದರು.

ಕಲ್ಲಿದ್ದಲು ಮುಷ್ಕರವಿಲ್ಲ

ಇನ್ನು ಎರಡು ವರ್ಷಕಾಲ ಮುಷ್ಕರ ಹೂಡುವುದಿಲ್ಲವೆಂದು ಅಮೇರಿಕಾದ ಕಲ್ಲಿದ್ದಲ ಗಣಿ ಕೆಲಸಗಾರರ ಸಂಘದ ಮುಖಂಡ ಜಾನ್ ಲ್ಯೂಯಿಸರವರು ಘೋಷಿಸಿರುವರು.

ಹ್ಯಾಲಿಫಾಕ್ಸರ ಖಾಯಿಲೆ

ಅಮೇರಿಕದಲ್ಲಿ ಬ್ರಿಟಿಷ್ ರಾಯಭಾರಿಯಾಗಿರುವ ಲಾರ್ಡ್ ಹ್ಯಾಲಿಫಾಕ್ಸರು ಇನ್‌ಫ್ಲುಯೆಂಜಾ ವ್ಯಾಧಿಯಿಂದ ಪೀಡಿತರಾಗಿದ್ದಾರೆ.

ವಿಟ ವಿಭವ

ಅಂದದ ಚಂದದ ಚಲುವಿನ ಸೂಳೆ
ನಿನ್ನಂದಲ್ಲದ ಮನೆಗಳು ಹಾಳೆ
ನಿನ್ನಯ ನೃತ್ಯವು ಜಗದಲಿ ಕೇಳು
ಮೀರಿಯುವೆ ಎಲ್ಲಾ ಗರತಿಯ ಬಾಳು ೧

ನಿನ್ನಯ ಭಕ್ತರು ನಲಿಯುತ ಬಂದು
ಹೂವಿಗೆ ಬದಲು ನೋಟನು ತಂದು
ಪೂಜಿಸುತಿರುವರು ದೇವಿಯೆ ನೋಡು
ಪ್ರೇಮದ ವರವನು ಅವರಿಗೆ ನೀಡು ೨

ಮನವನು ಸೆಳೆಯುವ ನಿನ್ನಯ ಥಳಕು
ನಿನ್ನಾ ದೇಹದಿ ತುಂಬಿದೆ ಕೊಳಕು
ಪೌಡರ್ ಸೆಂಟಿಲಿ ಮುಚ್ಚಿವೆ ಹುಳುಕು
ವಿಟರನು ಸೇರ್ವುದು ಮೋಹದ ಥಳಕು ೩

ನಿನ್ನಾ ಮನೆಯೋ ಜೂಜಿನ ಕಟ್ಟೆ
ಹೆಂಡವ ತುಂಬಿವೆ ವಿಟರಾ ಹೊಟ್ಟೆ
ಕುಣಿಯುತ ನಲಿಯುತ ತೋರುವೆ ಪ್ರೇಮ
ಕಡೆಯಲಿ ಹಚ್ಚುವೆ ತಿರುಕನ ನಾಮ ೪

ಸಹಜ ಪ್ರೇಮಕೆ ಬೆಲೆಯೇ ಇಲ್ಲ
ನಿನ್ನೀ ಪ್ರೇಮವು ಸಹಜವೆ ಅಲ್ಲ
ನೀನಾದರಿಸುವ ಗಂಡನೆ ದುಡ್ಡು
ಕಾಸಿಗೆ ಮಾರುವೆ ಪ್ರೇಮದ ಲಡ್ಡು ೫

ನಿನ್ನಯ ಪ್ರಿಯನಾಗಿಹನು ಕೇಳು
ದೇಹವ ಸೇರಿದ ರೋಗದ ಚೇಳು
ಕಡೆಯಲಿ ಕಂಡಿತ ಅಂತ್ಯದ ಬಾಳು
ವರ್ಣಿಸಲಸದಳ ಹೆಂಡತಿ ಗೋಳು ೬

ನೀನಗೂ ಮುದಿತನ ಬರುವುದು ಕೇಳು
ಭಕ್ತರೆ ಇಲ್ಲದೆ ಕಡೆವೇ ಗೋಳು
ನಿನ್ನೀ ಗರ್ವವು ಮುರಿವುದು ಅಂದು
ಯಾತಕೆ ನಲಿಯುವೆ ಸುಮ್ಮನೆ ಇಂದು ೭

ಗಳಿಸಿದ ಆಸ್ತಿಯು ಹಂಡತಿ ಮಾಡಿ
ಹರಿಯದ ಸೂಳೆಯ ಸೇವೆಗೆ ಸೇರಿ
ಪಾಪದ ಫಲವನು ಹೊಂದುವೆ ನೋಡು
ವರ್ಣಿಸಲಸದಳ ಮುಂದಿನ ಪಾಡು ೮

ಇಂದಿನ ನಿನ್ನಾ ಅಂದದ ಇಂಪು
ಇಂದಿನ ನಿನ್ನಾ ಗಾನದ ಸೊಂಪು
ಎಲ್ಲವ ಕೆಡಿಸುವ ಮುಂದಿನ ಮುಪ್ಪು
ಬೈಸ್ಕಿಗೆಕೊಡುವುದು ತಿರುಪೆಯ ಚಿಪ್ಪು ೯

ಅನುಭವಿ.

ಬಾವಿಯಿಂದ ತಾಯಿಯ ಕರೆ

ಸಾಲ್‌ಘಾಟಿಗೆ ಏಳು ಮೈಲಿ ದೂರದಲ್ಲಿರುವ ಅಧಿಕಾರಿ ಎಂಬಲ್ಲಿ ಕಂದುಸ್ವಾಮಿ ಎಂಬ ಒಬ್ಬ ಸಾಹುಕಾರನು ತನ್ನ ಹುಡುಗರು ಮಕ್ಕಳನ್ನು ಬಾವಿಗೆ ಎಸೆದು ತಾನೂ ಸಹ ತನ್ನ ತಂದೆಯ ಗೋರಿ ಬಳಿ ಗುಂಡಿನಿಂದ ಹೊಡೆದುಕೊಂಡ ಸುದ್ದಿಯು ಪ್ರಕಟವಾಗಿದೆ. ಅವನ ಹೆಂಡತಿಯು ನೆತ್ತರೋಗದಿಂದ ಅವನಿಗೆ ಬದ್ಧಿ ಭ್ರಮಣೆಯಾಗಿತ್ತೆಂದು ಹೇಳಲಾಗಿದೆ. ಅವನಿಗೆ ಒಂದು ರಾತ್ರಿ ಸ್ವಪ್ನವಾಯಿತೆಂದೂ ಅದರಲ್ಲಿ ನಿನ್ನ ತಾಯಿಯು ಬಾವಿಯೊಳಗೆ ಇದ್ದು ನನ್ನನ್ನು ಕರೆದೆಳೆಂದು ತನ್ನ ಮಕ್ಕಳಿಗೆ ತಿಳಿಸಿದನು. ಸ್ವಪ್ನವೇ ಬಾವಿಗೆ ಮಕ್ಕಳ ೭ ಎಸೆದು ಸಾವಿನ ಸೊಟ್ಟಿಯಂತೆ ಎಸೆದನು.

ಆಯಾಸದ ಅಳತೆ

ಮನುಷ್ಯನಿಗೆ ಉಂಟಾಗುವ ಆಯಾಸವನ್ನು ಅಳೆಯಲು ಅಮೆರಿಕದ ಪಿಟ್ಸ್‌ಬರ್ಗಿನ ವೈದ್ಯ ಡಾಯ್ ನೇಚರ್‌ರಾಚ್ ಎಂಬುವರು ಒಂದು ಯಂತ್ರವನ್ನು ಕಂಡು ಹಿಡಿದಿದ್ದಾರೆ.

ಸಂಪುಟ ೨] ಮಂಗಳವಾರ ೨೧—೧೨—೪೩ [ಸಂಚಿಕೆ ೧೩೨

ಜಪಾನೀ ನಗರಗಳ ಖಾಲಿಗೆ ಆಜ್ಞೆ

ಕಸ್ತೂರಿಬಾಯಿಯವರ ಸ್ಥಿತಿ ಕಳವಳಕರವಾಗಿದೆ

ಜರ್ಮನ್ ಸೈನ್ಯದಲ್ಲಿರುವ ರಾಜರುಗಳ ಉಚ್ಚಾಟನೆ

ಶ್ರೀ ಜಯಚಾಮರಾಜೇಂದ್ರ ಸೇತುವೆ ಆರಂಭೋತ್ಸವ

ಚಾಮರಾಜನಗರಕ್ಕೆ ಪ್ರಭುಗಳ ಭೇಟಿ

(ಸ್ವಂತ ಬಾತ್ಮೀದಾರರಿಂದ ತಂತಿ)

ಚಾಮರಾಜನಗರ ೨೧

ಶ್ರೀಮನ್ಮಹಾರಾಜರವರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು, ದಿವಾನರು ಮತ್ತು ಅರಮನೆಯ ಉನ್ನತ ಅಧಿಕಾರಿಗಳೊಡನೆ ಈ ದಿನ ಬೆಳಿಗ್ಗೆ [illegible] ಗಂಟೆಗೆ ರಾಜಧಾನಿಯನ್ನು ಬಿಟ್ಟು, ಚಾಮರಾಜನಗರಕ್ಕೆ ಭೇಟಿ ಇತ್ತರು.

ಬದನವಾಳಿಗೆ ಭೇಟಿ

ದಾರಿಯಲ್ಲಿ ಪ್ರಭುಗಳು ಬದನವಾಳು ನೂಲುವ ಕೇಂದ್ರಕ್ಕೆ ಭೇಟಿ ಇತ್ತರು. ಅದರ ವ್ಯವಸ್ಥಾಪಕರಾದ ಶ್ರೀ ರಾಜಾರಾಮಯ್ಯಂಗಾರ್ಯರವರೂ ಮತ್ತು ಸಬ್‌ಡಿವಿಷನ್ ಅಧಿಕಾರಿಗಳಾದ ಶ್ರೀ ಎಂ. ಕೆ. ನರಸಿಂಹಯ್ಯಂಗಾರ್ಯರವರೂ ಅವರನ್ನು ಸ್ವಾಗತಿಸಿದರು. ಅಲ್ಲಿ ನಡೆಯುತ್ತಿರುವ ಗೃಹ ಕೈಗಾರಿಕೆಗಳನ್ನು ಸ್ವಲ್ಪ ಕಾಲ ಪರಿಶೀಲಿಸಿ ಪ್ರಭುಗಳು ಅವುಗಳಲ್ಲಿ ಬಹಳ ಆಸಕ್ತಿಯನ್ನು ತೋರಿಸಿದರು.

ಚಾಮರಾಜನಗರದಿಂದ ನಾಲ್ಕು ಮೈಲಿ ದೂರವಿರುವ ಚಂದಕವಾಡಿ ಹತ್ತಿರ ಕಟ್ಟಲಾಗಿರುವ ಸುವರ್ಣಾವತಿ ನದಿಯ ಸೇತುವೆಯ ಆರಂಭೋತ್ಸವವನ್ನು ಪ್ರಭುಗಳು ನೆರವೇರಿಸಿದರು. ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಕೆ. ಸಿ. ಸುಬ್ಬಣ್ಣನವರು ಬಿನ್ನವತ್ತಳೆಯನ್ನು ಬೆಳ್ಳಿಯ ಕರಂಡದಲ್ಲಿ ಅರ್ಪಿಸಿದರು. ಚಾಮರಾಜನಗರದ ಪೌರ ಸಭೆಯವರು ಬಿನ್ನವತ್ತಳೆಯನ್ನು ಬೆಳ್ಳಿಯ ಕರಂಡದಲ್ಲಿ ಪ್ರಭುಗಳಿಗೆ ಅರ್ಪಿಸಿದರು.

ದಾರಿ ಉದ್ದಕ್ಕೂ ಸಾವಿರಾರು ಜನರು ಹಸುರುವಾಣಿ ಚಪ್ಪರಗಳಲ್ಲಿ ಪ್ರಭುಗಳನ್ನು ಸುಸ್ವಾಗತಿಸಿ, ಹಾರ ತುರಾಯಿಗಳನ್ನು ಅರ್ಪಿಸಿದರು.

ಉದಾರ ದಾನ

ಚಾಮರಾಜನಗರದ ಪೌರಸಭಾ ಸದಸ್ಯರೂ ಪ್ರಜಾಪ್ರತಿನಿಧಿ ಸಭಾ ಸದಸ್ಯರೂ ಆದ ಶ್ರೀ ವೆಂಕಟನಾಗಪ್ಪಶೆಟ್ಟಿರು ನಗರದಲ್ಲಿ ಒಂದು ಛತ್ರವನ್ನು ಕಟ್ಟಿಸಲು ಹತ್ತು ಸಾವಿರ ರೂ. ಗಳನ್ನೂ, [illegible] ಸುಲ್ತಾನ್ ಷರೀಫರು ತಿರ ವಿಹಾರಕ್ಕಾಗಿ ಐದು ಸಾವಿರ ರೂ. ಗಳನ್ನೂ ದಾನಮಾಡಲು ಒಪ್ಪಿರುತ್ತಾರೆ.

ಶ್ರೀಮನ್ಮಹಾರಾಜರವರು ಬಿನ್ನವತ್ತಳೆಗೆ ಈರೀತಿ ಉತ್ತರವಿತ್ತರು :—

ಪ್ರಭುಗಳ ಉತ್ತರ

ನಮ್ಮ ಪೂರ್ವಜರಲ್ಲೊಬ್ಬರ ನಾಮಾಂಕಿತವನ್ನು ಪಡೆದಿರುವ ಈ ಊರಿಗೆ ಬಂದಿರುವುದು ನಮ್ಮ ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡಿದೆ. ಈ ಊರು ಅಭಿವೃದ್ಧಿಹೊಂದುತ್ತಿರುವುದೂ ಮತ್ತು ಪೌರ ಸಭೆಯವರು ಪುರಜನರ ಹಿತಸಾಧನೆಗಾಗಿ ನಾನಾ ರೀತಿಗಳಲ್ಲಿ ಪ್ರಯತ್ನಮಾಡುತ್ತಿರುವುದೂ ತೃಪ್ತಿಕರವಾಗಿವೆ. [illegible] ನೀಲಗಿರಿಯಲ್ಲಿ ಇಲ್ಲಿಗೆ ರೈಲ್ವೆ ಸಂಬಂಧವೇರ್ಪಟ್ಟ ಮೇಲೆ, ಈ ಊರು ಅಭ್ಯುದಯ ಹೊಂದುವುದಕ್ಕೆ ಸಹಾಯವೇನೋ ಆಯಿತು. ಆದರೆ ಇಲ್ಲಿಂದ ರೈಲ್ವೆ ಮಾರ್ಗವನ್ನು ಮುಂದಕ್ಕೆ ವಿಸ್ತರಿಸಿ "ಸೌತ್ ಇಂಡಿಯನ್ ರೈಲ್ವೆ"ಯೊಡನೆ ಸಂಬಂಧವನ್ನು ಕಲ್ಪಿಸಬೇಕೆಂಬ ನಿಮ್ಮ ಅಭಿಲಾಷೆಯು ಇದುವರೆವಿಗೂ [illegible] ಈ ರೈಲ್ವೆ ಮಾರ್ಗವಿದ್ದರೆ ಎಷ್ಟು ಜನ ಕೂಲವಾಗುತ್ತಿತ್ತೆಂಬ ವಿಷಯವು ಸಂಚಾರ ಸೌಕರ್ಯಗಳು ಕಡಿಮೆಯಾಗಿರುವ ಈಗಿನ ಯುದ್ಧ ಸಮಯದಲ್ಲಿ ಸ್ಪಷ್ಟವಾಗಿ ಗೋಚರವಾಗಿದೆ. ಈ ವಿಚಾರದಲ್ಲಿ ಸಾವಕಾಶವೇನೋ ಆಗಿದೆ. ಆದರೆ ನಾವು ಮಾಡಬೇಕಾದ ಪ್ರಯತ್ನಗಳನ್ನೆಲ್ಲಾ ಮಾಡಲಾಗಿದೆ. ಯುದ್ಧಮುಗಿದನಂತರ ಸಂಚಾರ ಸೌಕರ್ಯಗಳನ್ನು ಹೆಚ್ಚಿಸುವುದಕ್ಕಾಗಿ ನಡೆಯುವ ಏರ್ಪಾಡುಗಳಲ್ಲಾದರೂ ಈ ವಿಷಯಕ್ಕೆ ತಕ್ಕ ಪ್ರಾಶಸ್ತ್ಯ ದೊರೆಯುವುದೆಂದು ನಂಬಿದ್ದೇವೆ.

ಜನರ ಸೌಕರ್ಯಗಳನ್ನು ಹೆಚ್ಚಿಸುವುದಕ್ಕಾಗಿ ನೀವು ನೆರವೇರಿಸಬೇಕೆಂದಿರುವ ಏರ್ಪಾಟುಗಳು ನಿಮ್ಮ ಬಿನ್ನವತ್ತಳೆಗಳಲ್ಲಿ ಸೂಚಿತವಾಗಿವೆ. ನಿಮ್ಮ ಊರಿಗೆ ಸಮರ್ಪಕವಾದ ನೀರಿನ ವಸತಿಯನ್ನು ಕಲ್ಪಿಸುವುದು ಅವುಗಳಲ್ಲೊಂದಾಗಿದೆ. ಸುವರ್ಣಾವತಿ ನದಿಯಿಂದ ನಿಮ್ಮ ಊರಿಗೆ ನೀರನ್ನೊದಗಿಸುವ ಒಂದು ಯೋಜನೆಯನ್ನು "ಸ್ಯಾನಿಟರಿ ಇಂಜನಿಯರಿಂಗ್" ಇಲಾಖೆಯವರು ಸಿದ್ಧಪಡಿಸಿದ್ದಾರೆಂದೂ, ಅದಕ್ಕೆ ಬೇಕಾದ ಸಾಮಾನುಗಳನ್ನು ತರಿಸುವುದು ಈಗಿನ ಸ್ಥಿತಿಯಲ್ಲಿ ಕಷ್ಟವಾಗಿರುವುದರಿಂದ ಕೆಲಸವನ್ನು ಮುಂದಕ್ಕೆ ಹಾಕಬೇಕಾಯಿತೆಂದೂ ತಿಳಿದುಬಂದಿದೆ. ಈಗ ಕಾವು[illegible] ನಡೆಯುತ್ತಿರುವ ಚರಂಡಿ ಏರ್ಪಾಡಿನ ಸಂಬಂಧದಲ್ಲಿ, ಸರ್ಕಾರದವರು ಈಗಾಗಲೇ ಸುಮಾರು ೨೦,೦೦೦ ರೂ ಗಳನ್ನು ಕೊಟ್ಟು ಸಹಾಯಮಾಡಿದ್ದಾರೆ. ಈ ಕಾಮಗಾರಿಯನ್ನು ಪೂರೈಸುವುದಕ್ಕಾಗಿ ಇನ್ನೂ ನಡೆಯಬೇಕಾಗಿರುವ ವೆಚ್ಚದಲ್ಲಿ ಒಂದು ಭಾಗವನ್ನು ವಹಿಸುವುದಕ್ಕೂ [illegible] ಸಿದ್ಧವಾಗಿದ್ದಾರೆ. ಹೈಸ್ಕೂಲು ಕಟ್ಟಡಕ್ಕಾಗಿ ತಗಲುವ ವೆಚ್ಚಕ್ಕೆ ಸರ್ಕಾರದಿಂದ ಸಹಾಯಮಾಡಬೇಕೆಂಬ ಅರಿಕೆಯೂ ಇನ್ನು ಕೆಲವು ಅಂಶಗಳೂ ಬಿನ್ನವತ್ತಳೆಯಲ್ಲಿ ಸೂಚಿತವಾಗಿವೆ. ನಿಮ್ಮ ಊರಿನಲ್ಲಿ ಸೌಕರ್ಯಗಳನ್ನು ಹೆಚ್ಚಿಸುವುದಕ್ಕಾಗಿ ನೀವು ಕೈಗೊಳ್ಳುವ ನಾನಾ ಕಾರ್ಯಗಳಿಗೆ ಸಾಧ್ಯವಾದಷ್ಟು ಮಟ್ಟಿಗೂ ಸಹಾಯಮಾಡಲು ನಮ್ಮ ಸರ್ಕಾರದವರು ಸಿದ್ಧರಾಗಿರುವರೆಂದು ನಾವು ತಿಳಿಸಲಿಚ್ಛೈಸುತ್ತೇವೆ.

ಡಿಸ್ಟ್ರಿಕ್ಟ್ ಬೋರ್ಡಿನವರು [illegible] ಅರ್ಪಿಸಿದ ಬಿನ್ನವತ್ತಳೆಯಲ್ಲಿ [illegible] ದ ಅಭಿವೃದ್ಧಿ ಕಾರ್ಯಗಳು ಸೂಚಿತವಾಗಿವೆ. ಅವರ ಇಷ್ಟುಮಟ್ಟಿಗೆ ಕಾರ್ಯಸಾಧನೆಮಾಡಿರುವುದು ನಮ್ಮ ಮನಸ್ಸಿಗೆ ಸಂತೋಷವನ್ನುಂಟುಮಾಡಿದೆ. ಡಿಸ್ಟ್ರಿಕ್ಟ್ ಬೋರ್ಡಿನವರು ಪ್ರಾರಂಭಿಸಿರುವ ಜನೋಪಯುಕ್ತವಾದ ಕೆಲಸಗಳಲ್ಲಿ ಕೆಲವು ಪೂರೈಸಿವೆ; ಕೆಲವು ನಡೆಯುತ್ತಿವೆ. ಅನೇಕ ರಸ್ತೆಗಳೂ, ಸೇತುವೆಗಳೂ ನಿರ್ಮಾಣವಾಗಿ ಡಿಸ್ಟ್ರಿಕ್ಟಿನ ಒಳಪ್ರದೇಶಗಳಲ್ಲಿ ಸಂಚಾರಕ್ಕೆ ಅನುಕೂಲವನ್ನು ಕಲ್ಪಿಸಲಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನವರು ಇದುವರೆಗೆ ೧೪ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಐದು ಸೇತುವೆಗಳನ್ನು ಕಟ್ಟಿಸಿದ್ದಾರೆ. ಇನ್ನೂ ನಾಲ್ಕು ಸೇತುವೆಗಳನ್ನು ಕಟ್ಟಿಸುವುದು ಯೋಚನೆಯಲ್ಲಿದೆ. [illegible] ಯಾನಾಕಾಲದಲ್ಲಿ ಅವುಗಳೂ ಕಾರ್ಯರೂಪಕ್ಕೆ ಬರುವುದನ್ನು ಆಸಕ್ತಿಯಿಂದ ನಾವು ನಿರೀಕ್ಷಿಸುತ್ತಿದ್ದೇವೆ. ಈಗ ಪ್ರಾರಂಭೋತ್ಸವವನ್ನು ನೆರವೇರಿಸುವ ಸುವರ್ಣಾವತಿ ನದಿಯ ಸೇತುವೆಯಿಂದ ಬಹುಕಾಲದಿಂದಿದ್ದ ಒಂದು ಕೊರತೆಯು ಪರಿಹಾರವಾಗಿದೆ. ಸುತ್ತಮುತ್ತಲಿನ ಗ್ರಾಮಗಳಿಂದ ಚಾಮರಾಜನಗರಕ್ಕೆ ಹೋಗಿ ಬರುವುದಕ್ಕೂ, ವ್ಯವಸಾಯದ ಉತ್ಪನ್ನಗಳನ್ನು ಮತ್ತು ಕಾಡುಗಳಿಂದ ಒದಗುವ ಪದಾರ್ಥಗಳನ್ನು [illegible] ಸ್ಥಳಗಳಿಗೆ ಸಾಗಿಸುವುದಕ್ಕೂ, ಈ ಸೇತುವೆಯಿಂದ ಅನುಕೂಲವಾಗಿದೆ. ಇಲ್ಲಿಗೆ ಸಮೀಪದಲ್ಲಿರುವ ಚಂದಕವಾಡಿ ಮತ್ತಿತರ ಗ್ರಾಮಗಳ ಜನರು ಈ ಸೇತುವೆ ಕೆಲಸದಲ್ಲಿ ವಿಶೇಷವಾಗಿ ಆಸಕ್ತಿ ತೋರಿಸಿದ್ದಾರೆಂದು ಕೇಳಿ ನಮ್ಮ ಮನಸ್ಸಿಗೆ ಬಹಳ ಸಂತೋಷವುಂಟಾಗಿದೆ. ಈ ಸೇತುವೆಗೆ ನಮ್ಮ ನಾಮಾಂಕಿತವನ್ನಿಡಬೇಕೆಂಬುದಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿರುವ ಅರಿಕೆಗೆ ನಾವು ಸಂತೋಷದಿಂದ ಸಮ್ಮತಿಸಿ, ಈ ಸೇತುವೆಯ ಪ್ರಾರಂಭೋತ್ಸವವನ್ನು ನೆರವೇರಿಸುತ್ತೇವೆ.

ಸತ್ಯಾಗ್ರಹ ಮುಂದುವರಿಯುತ್ತಿದೆ

ಬಿಹಾರ ವಿಶ್ವವಿದ್ಯಾನಿಲಯದ [illegible] ಕಾಲೇಜಿನ [illegible] ಮುಂಭಾಗದಲ್ಲಿ ೪ ಜನ ವಿದ್ಯಾರ್ಥಿಗಳು ತಮ್ಮ ಉಪವಾಸ [illegible] ವನ್ನು ಮುಂದುವರಿಸುತ್ತಿದ್ದಾರೆ. [illegible] ಸಂಬಂಧಪಟ್ಟ [illegible] ಇತರರು ಬಂದು [illegible] ಹೋದರು. 'ನ್ಯಾಯ [illegible] ತಮ್ಮ ಸತ್ಯಾಗ್ರಹ [illegible]' ಎಂಬುದಾಗಿ ವಿದ್ಯಾರ್ಥಿಗಳು ಹೇಳುತ್ತಾರೆ.

ಸತ್ಕಾರ

ಮೈಸೂರು ೨೧

ಕಾಯಿನಾಡು ಪತ್ರಿಕಾ ಸಂಪಾದಕರಾದ ಶ್ರೀ ಪಿ. ಬಿ. ಶ್ರೀನಿವಾಸನ್, ಅಸಿಸ್ಟೆಂಟ್ ಪಬ್ಲಿಸಿಟಿ ಆಫೀಸರ್ ಶ್ರೀ ಜಿ. ವಿ. [illegible] ರತ್ನಂ ಮತ್ತು ಇತರ ಪತ್ರಿಕೋದ್ಯೋಗಿಗಳನ್ನು ಸತ್ಕರಿಸಲು ನೆನ್ನೆ ದಿನ [illegible] ಪತ್ರಿಕೋದ್ಯೋಗಿಗಳ ಸಂಘದಲ್ಲಿ ಒಂದು ಸಂತೋಷಕೂಟವು ಏರ್ಪಾಟಾಗಿತ್ತು. ಉಪಾಹಾರಾನಂತರ ಸಂಘದ ಅಧ್ಯಕ್ಷರಾದ ಶ್ರೀ ಜಿ. ಆರ್. ಜೋಯಿಸ್‌ರವರು ಅತಿಥಿಗಳನ್ನು ಸ್ವಾಗತಿಸಿ ಭಾಷಣಮಾಡಿದರು. ಶ್ರೀ ಪಿ. ಬಿ. ಶ್ರೀನಿವಾಸನ್‌ರವರು ಸೂಕ್ತವಾದ ಉತ್ತರ ಕೊಟ್ಟ ನಂತರ ವಂದನಾ ಸಮರ್ಪಣೆಯಾಗಿ ಸಭೆಯು ಮುಕ್ತಾಯವಾಯಿತು.

ಜಾಲಿ ಕ್ಲಬ್

ನೆನ್ನೆ ದಿನ ಸಾಯಂಕಾಲ ಮೈಸೂರು ಬಿ. ಎ. ಜಾಲಿ ಕ್ಲಬ್ಬಿನ ವಾರ್ಷಿಕೋತ್ಸವವು ರಂಭವು ಶ್ರೀ ಬಿ. ಕುಪ್ಪುಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಧರ್ಮಪ್ರಕಾಶ ಎಲ್. ಎಸ್. ವೆಂಕಟಜೋಯಿಸರು ವ್ಯಾಪಾರೋತ್ಸವದ ವಿವಿಧ ಮಾರ್ಗಗಳನ್ನು ಕುರಿತು ಸ್ವಾರಸ್ಯವಾದ ಭಾಷಣಮಾಡಿದರು. ಶ್ರೀ ಬ್ರಹ್ಮಾನಂದರವರಿಗೆ [illegible] ಸ್ಪರ್ಧೆಗಾಗಿ ಪ್ರಥಮ ಬಹುಮಾನವನ್ನು ಕೊಡಲಾಯಿತು. ನಂತರ [illegible] ಬಿ. ದೇವೇಂದ್ರಪ್ಪನವರ ಮತ್ತು ಅವರ ಮಂಡಲಿಯವರ ಸುಶ್ರಾವ್ಯವಾದ ಗಾಯನವಾಯಿತು.

ಕಸ್ತೂರಿಬಾಯಿಯವರ ಸ್ಥಿತಿ ಕಳವಳ

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರಿಗೆ ಹೃದಯ ನೋವೆಂಬುದು ಇನ್ನೊಮ್ಮೆ ಬಹಳ ತೀಕ್ಷ್ಣವಾಗಿ ಪ್ರಾಪ್ತವಾಯಿತು. ಆದರಿಂದ ಪಾರಾಗಿ ಈಗ ಅವರು ಸ್ವಲ್ಪ ಉತ್ತಮಗೊಂಡಿದ್ದರೂ ಅವರ ವಯಸ್ಸು ಮತ್ತು ನಿಶ್ಶಕ್ತಿಗಳ ದೃಷ್ಟಿಯಿಂದ ಅವರ ದೇಹಸ್ಥಿತಿಯು ಕಳವಳಕರವಾಗಿಯೇ ಇರುತ್ತದೆಂದು ಬೊಂಬಾಯಿ ಸರ್ಕಾರವು ಪ್ರಕಟಿಸಿದೆ. ಇನ್ನೂ ಸಾವಕಾಶವಾಗಿ ಅಲ್ಲಿಗೆ ಹೋಗಬೇಕೆಂದಿದ್ದ ಶ್ರೀ ದೇವದಾಸ್ ಗಾಂಧಿಯವರು ಈಗಾಗಲೇ ಪತ್ನೀ ಪುತ್ರರೊಡನೆ ಆಗಾಖಾನರ ಅರಮನೆಗೆ ಭೇಟಿ ಇತ್ತಿದ್ದಾರೆ.

ಜಪಾನಿ ನಗರಗಳ ಖಾಲಿ

ಜಪಾನಿನ ಪ್ರಮುಖ ನಗರಗಳಲ್ಲಿ ವಾಸಿಸುವ ನಿವಾಸಿಗಳೆಲ್ಲರೂ ತಮ್ಮ [illegible] ಊರುಗಳನ್ನು ಬಿಟ್ಟು ಹೊರಗೆ ಹೋಗಬೇಕೆಂದೂ ಶತ್ರುವಿನ ವಿಮಾನ ದಾಳಿಯ ಸಂಭವ ಹೆಚ್ಚಾಗುವುದೆಂದೂ ಜಪಾನಿ ಸರ್ಕಾರವು ಆಜ್ಞೆ ಮಾಡಿದೆ. ಪತ್ರ ಭಾಗಗಳ [illegible] ಯಿಂದಲೇ ಈ ಕ್ರಮವು ಕೈಗೊಳ್ಳಲ್ಪಟ್ಟಿದೆಯೆಂದು ಹೇಳಲಾಗಿದೆ.

ರಾಜರುಗಳ ಉಚ್ಚಾಟನೆ

ಜರ್ಮನಿಯ ಹಿಂದಿನ ರಾಜವಂಶದವರಿಗೆ ಸೇರಿದವರ [illegible] ಅವರುಗಳನ್ನು ಕೂಡಲೇ [illegible] ನಿವೃತ್ತಿಮಾಡಬೇಕೆಂಬ ಹಿಟ್ಲರರ [illegible] ವಾಗಿ ಪರಿಣಮಿಸಿದೆ. [illegible] ಈ ಯುದ್ಧದಲ್ಲಿ ಸೇರಿದ [illegible] ಗಳೆಲ್ಲರೂ [illegible] ಯುದ್ಧರಂಗಗಳಲ್ಲಿ [illegible] ಇದಕ್ಕೆ ಕಾರಣ

ಡಿಪ್ಪೋಗಳ ವ್ಯವಸ್ಥೆ

ಶಾರಂಗಪಾಣಿ ಸನ್ನಿಧಿಯ ಶ್ರೀ ಬಿ. ನಾರಾಯಣ ಸ್ವಾಮಿಗಳವರು ಹೀಗೆ ಬರೆಯುತ್ತಾರೆ:—

ನಾನು ಈ ದಿವಸ ಬೆಳಿಗ್ಗೆ ಚಾಮರಾಜ ಮೊಹಲ್ಲಾದಲ್ಲಿರುವ ಸೊಸೈಟಿ ಮತ್ತು ಸರ್ಕಾರಿ ಡಿಪ್ಪೋಗಳಿಗೆ ಹೋಗಿದ್ದೆ. ರೇಷನ್ ವ್ಯವಸ್ಥೆ ನೋಡುವಲ್ಲಿ ಚಾಮರಾಜಪುರಂ ಸೊಸೈಟಿಯಲ್ಲಿ ರೇಷನ್ ಕಾರ್ಡು ಹೋಲ್ಡರುಗಳಿಗೆ ಸಾಮಾನು ಹಂಚಿಕೆ ಆಗುತ್ತಿತ್ತು. ರೇಷನ್ ಕೊಡುವ ಜಾಗ ಒಮ್ಮೆ ಕಿಷ್ಕಿಂಧವಾದ ಕಾರಣ ಜನರ ನೂಗ್ಗಾಟ ಹೆಚ್ಚಾಗಿತ್ತು.

ಕೃಷ್ಣಮೂರ್ತಿಪುರಂ ಬ್ರಾಂಚ್ ಸೊಸೈಟಿಯಲ್ಲಿಯೂ ಒಳಗಡೆ ನೂಗ್ಗಾಟ ಜಾಸ್ತಿಯಾಗಿತ್ತು. ಅದರ ಬಳಿ ಇರುವ ಸರ್ಕಾರಿ ಡಿಪ್ಪೋದಲ್ಲಿ ವ್ಯವಸ್ಥೆ ಚೆನ್ನಾಗಿಲ್ಲ. ಆ ಡಿಪ್ಪೋವಿಗೆ ಹೋಗಬೇಕೆಂದು ನಮೂದಾಗಿರುವ ಕಾರ್ಡುಗಳಲ್ಲಿ ರೇಷನ್ ಆಫೀಸರ್ ರವರು ಇಲ್ಲದೆ ಕೆಲವು ಕಾರ್ಡು ಹೋಲ್ಡರ್‌ಗಳಿಗೆ ಸಾಮಾನು ಸಿಗಲಿಲ್ಲ. ಕಾರ್ಡುಗಳಿಗೆ ಮುದ್ರೆ ಇಲ್ಲದೆ ಹಂಚುವುದಕ್ಕೆ ತಳ ಸಿದ್ಧ ಯೋಚನೀಯ ವಾಗಿದೆ.

ಕನ್ನೇಗೌಡನ ಕೊಪ್ಪಲು ಡಿಪ್ಪೋವಿನಲ್ಲಿ ಅಷ್ಟು ಗಲಾಟೆ ಕಾಣಲಿಲ್ಲ. ಸರಸ್ವತಿಪುರಂ ಸರ್ಕಾರಿ ಡಿಪ್ಪೋವಿನ ಬಳಿ ಅನೇಕರು ನಿಂತಿದ್ದರು. ಡಿಪ್ಪೋವನ್ನು ಬಹಳ ಹೊತ್ತಾದ ಮೇಲೆ ತೆರೆಯಲಾಯಿತು. ವಿಚಾರಿಸಿದ್ದರಲ್ಲಿ ಡಿಪ್ಪೋವಿನ 6 ಮೂಟೆ ರಾಗಿ ಮಾತ್ರ ಸಿಕ್ಕಿತ್ತು. ಅದು ಖರ್ಚು ಆಗಿ ಹೋದರೆ ಪುನಃ ರಾಗಿ ಕಳುಹಿಸಿಕೊಡುವಂತೆ ಕೇಳಲು ಸೆಂಟ್ರಲ್ ಡಿಪ್ಪೋವಿಗೆ ಹೋಗಬೇಕಾಗಿ ಬಂತು ಎಂಬುದಾಗಿ ಮ್ಯಾನೇಜರ್ ಹೇಳಿದರು. ಅಂತು ಡಿಪ್ಪೋವಿಗೆ ಇನ್ನೂ ಒಂದು ಬಾರಿ ರಾಗಿ ಸ್ಟಾಕು ಬಂದಿಲ್ಲ. ನಾನು ನೋಡಿದ್ದರಲ್ಲಿ ಈ ಡಿಪ್ಪೋವಿನಲ್ಲಿ ರಾಗಿ ಕೊಳ್ಳುವವರೇ ಹೆಚ್ಚಾಗಿದ್ದರು. ಈ ರೀತಿ ಸ್ಟಾಕು ಮಾಡದೆ ಡಿಪ್ಪೋ ತೆಗೆದಿರುವುದು ಆಶ್ಚರ್ಯವಾಗಿರುತ್ತೆ.

ಈ ಡಿಪ್ಪೋಗಳಲ್ಲಿ ಚಿಲ್ಲರೆ ಇಲ್ಲದೆ ಕಷ್ಟಪಡುತ್ತಿದ್ದರು. ಮೊದಲು ಡಿಪ್ಪೋಗಳಿಗೆ ಚಿಲ್ಲರೆ ದುಡ್ಡು ಪದಾನಿಸಬೇಕು. ಇವರುಗಳಿಗೆ ಕ್ಯಾಷ್ ಬಾಕ್ಸ್, ಮೇಜು, ಕುರ್ಚಿಗಳು ಯಾವುದೂ ಇಲ್ಲ. ಮುಖ್ಯವಾಗಿ ಕನ್ನೇಗೌಡನಕೊಪ್ಪಲು ಮತ್ತು ಸರಸ್ವತಿಪುರಂ ಡಿಪ್ಪೋಗಳಿಗೆ ಲೈಟು ಅವಶ್ಯಕ. ನಿನ್ನೆ ಒಹಳ ತೊಂದರೆ ಆಯಿತು. ಅನೇಕರ ರೇಷನ್ ಕಾರ್ಡ ತಪ್ಪಾಗಿತ್ತು. ಅದನ್ನು ಸರಿಪಡಿಸಲು ಅಧಿಕಾರಿಗಳು ಅಲ್ಲಿಗೆ ಡಿಪ್ಪೋ ಬಳಿ ಹೋಗುವುದು ಸೂಕ್ತ. ಮತ್ತು ಒಂದು, ಕಾರ ಗ್ರೂಪ್ ಸ್ಟಾಕು ಮಾರಬೇಕಾದ, ಅಗತ್ಯ. ಇಲ್ಲದಿದ್ದಲ್ಲಿ ಜನರಿಗೆ ಬಹಳ ತೊಂದರೆಯಾಗುತ್ತದೆ.

— —

ಸಿಲೋನ್ ಯುದ್ಧರಂಗವಾಗುವುದು

ಶ್ರೀಲಂಕಾ ಯುದ್ಧಕ್ಷೇತ್ರಗಳಿಗೆ ಸೀಮೆಯ ಸ್ಥಾನವಾಗಬಹುದು ಎಂದು ಜಾರ್ಜ್ ನ್ಯೂ ಹೇಳಿದ್ದಾರೆ. ಇವರು ಮೊನ್ನೆ ಪತ್ರಿಕೆಯಲ್ಲಿ ಬರೆದಿದ್ದಾರೆ. ಜಪಾನಿನ ಹವಾಯಿ ದ್ವೀಪದಲ್ಲಿ ಒಂದು ಸಿಲೋನಿನ ಪ್ರದೇಶವೂ ಇದಕ್ಕೆ ಎಲ್ಲರೂ ಸಿದ್ಧರಾಗಬೇಕೆಂದು ಹೇಳಿದರು.

ರೇಷನಿಂಗ್ ಕಾರ್ಡುಗಳ ಹಂಚಿಕೆ

ಮೈಸೂರು ಮ್ಯುನಿಸಿಪಲ್ ಕೌನ್ಸಿಲರ್ ಶ್ರೀ ಎಂ. ಆರ್. ಸಿ. ಬಸಪ್ಪನವರು ಹೀಗೆ ಬರೆಯುತ್ತಾರೆ:—

ಸರ್ಕಾರದವರು ಮೈಸೂರು ನಗರಕ್ಕೆ ಪಡಿ ಅಳತೆಯ ಪದ್ಧತಿಯನ್ನು ಡಿಸೆಂಬರ್ 1 ನೇ ತಾರೀಖಿಗೆ ಜಾರಿಗೆ ತರಬೇಕೆಂದಿದ್ದುದನ್ನು ಬದಲಿಸಿ 1943 ನೇ ಡಿಸೆಂಬರ್ 20 ನೇ ವರವಿಗೆ ಮುಂದುವರಿಸಿದರೂ ಸಹ, ಪಡಿ ಅಳತೆಯ ಚೀಟಿಯನ್ನು ಸಕಾಲದಲ್ಲಿ ಹಂಚದೆಯೂ, ಎ. ಆರ್. ಪಿ. ಯವರು ರೇಷನಿಂಗ್ ಜನಗಣತಿಯ ಅಂಕಿ ಅಂಶಗಳನ್ನು ತೆಗೆದುಕೊಂಡವರು, ಇವರಿಗೆ ಪಡಿ ಅಳತೆಯ ಹಂಚಿಕೆಯ ಪಟ್ಟಿಯನ್ನು ಕೊಟ್ಟು, ಕ್ಲುಪ್ತವಾದ ಕಾಲದಲ್ಲಿ ಪುರಜನರಿಗೆ ಪಡಿ ಅಳತೆಯ ಪಟ್ಟಿಯನ್ನು ಹಂಚದೆಯೂ ಸೊಸೈಟಿಗಳಲ್ಲಿಯೂ ಸಹ—ಎ—ಆ—ಇತ್ಯಾದಿ ಆಹಾರ ಪದಾರ್ಥಗಳನ್ನು ಮಾರುವುದನ್ನು ನಿಲ್ಲಿಸಿದ್ದರಿಂದ ಪುರಜನರಿಗೆ ಆಹಾರ ಪದಾರ್ಥಗಳು ದೊರೆಯದೆ ಬಹಳ ತೊಂದರೆಯಾಗಿರುವುದರಿಂದಲೂ, ಹೊಟ್ಟೆಗಿಲ್ಲದೆ ನರಳುತ್ತಿರುವ ಸಂಗತಿಯೂ ಸಹ ಅಧಿಕಾರವರ್ಗದವರ ಗಮನಕ್ಕೆ ಬಂದೇ ಇರುತ್ತದೆ.

ಎ. ಆರ್. ಪಿ. ವರ್ಗದವರಿಗೆ ಸುಮಾರು 200 ಅಥವಾ 300 ರೂಪಾಯಿಗಳನ್ನು ಖರ್ಚು ವೆಚ್ಚಕ್ಕೆ ಕೊಟ್ಟಿದ್ದ ಪಕ್ಷದಲ್ಲಿ ನಿಯಮಿತವಾದ ಕಾಲದಲ್ಲಿ ಪಡಿ ಅಳತೆಯ ಪಟ್ಟಿಯನ್ನು ಪುರಜನರಿಗೆ ಹಂಚಿಕೆಯಾಗಿಯೂ, ಆಹಾರ ಪದಾರ್ಥಗಳು ಸಕಾಲದಲ್ಲಿ ದೊರೆಯುತ್ತಿದ್ದುದರಿಂದ ರೇಷನಿಂಗ್ ಅಧಿಕಾರಿಗಳಿಗೂ, ಕಷ್ಟಪಟ್ಟು ಕೆಲಸ ಮಾಡಿದ ಅಧಿಕಾರ ವರ್ಗದವರಿಗೂ ಸಹ ಕೀರ್ತಿಯೂ, ಗೌರವವೂ ಬರುತ್ತಿತ್ತು.

ಕೆಲವರು ತಿಳಿದೋ ಅಥವಾ ತಿಳಿಯದೆಯೋ ಫೋಟೋ ಕಾಪಿಗಳನ್ನು ಕಳಿಸಿಕೊಂಡಿರುವರು. ನೆನ್ನೆ ದಿನ ಎನ್. ಆರ್. ಮೊಹಲ್ಲಾದಲ್ಲಿ ಕೆಲವರು ಪಡಿಅಳತೆಯ ಪಟ್ಟಿಯನ್ನು ಹೊಂದಲು ಅಧಿಕಾರ ವರ್ಗದವರಲ್ಲಿ ಫೋಟೋ ಕಾಪಿಗಳನ್ನು ಕೊಟ್ಟರೂ ಸಹ ಪಡಿ ಅಳತೆಯ ಪಟ್ಟಿಯನ್ನು ಕೊಡದೆ ಫೋಟೋ ಕಾಪಿಯನ್ನೂ ಸಹ ವಾಪಸ್ ಕೊಡದಿರುವ ಇದ್ದುದರಿಂದ, ಮನೆಗಳಿಗೆ ತುಂಬಾ ವ್ಯಸನದಿಂದ ಹಿಂತಿರುಗಿದವರು ಎಷ್ಟೋ ಜನರಿರುತ್ತಾರೆ. ಪುರಜನರಿಗೆ ಪಡಿ ಅಳತೆಯ ಪಟ್ಟಿಯನ್ನು ಎಲ್ಲಾ ಮೊಹಲ್ಲಾಗಳಲ್ಲಿಯೂ ಸರಿಯಾಗಿ ಹಂಚುವವರೆಗೂ, ಈ ಪದ್ಧತಿಯನ್ನು ಮುಂದುವರಿಸಿ, ಮಾಮೂಲಿನಂತೆ ಎಲ್ಲಾ ಸರ್ಕಾರಿ ಫೇರ್ ಪ್ರೈಸ್ ಡಿಪ್ಪೋ ಮತ್ತು ಸೊಸೈಟಿಗಳಲ್ಲಿಯೂ ಸಹ ಆಹಾರ ಪದಾರ್ಥಗಳು ದೊರೆಯುವಂತೆ, ಪೌರಸಭಾ ಅಧ್ಯಕ್ಷರು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರೂ ಇದನ್ನು ಮುಂದುವರಿಸುವುದು ಸೂಕ್ತವಾಗಿರುತ್ತದೆ.

— —

ಚರ್ಚಿಲರು ಬೇರೆ ದೇಶಕ್ಕೆ

ಮುಖ್ಯ ಮಂತ್ರಿ ಚರ್ಚಿಲರು ದೇಹಸ್ಥಿತಿ ಉತ್ತಮ ಗೊಳ್ಳುತ್ತಿದೆಯಾದರೂ ಅವರು ದೀರ್ಘಕಾಲ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರರವರು ಅಪೇಕ್ಷಿಸುತ್ತಾರೆ. ಹವಾ ನಿಜವಾಗಿ ಉತ್ತಮವಾಗಿರುವ ಬೇರೊಂದು ದೇಶಕ್ಕೆ ಅವರು ತೆರಳಬಹುದೆಂದು ಹೇಳಲಾಗಿದೆ.

ರಜ ಹೆಚ್ಚಿಸಿದೆ

ಸ್ವಂ. ವ.] ಬೆಂಗಳೂರು 20

ಸಂಸ್ಥಾನದ ಚೀಫ್ ಸೆಕ್ರೆಟರಿಯವರಾದ ಶ್ರೀ ವೇದವ್ಯಾಸಾಚಾರ್ಯರು ಖಾಯಿಲೆಯಿಂದ ನರಳುತ್ತಿರುವುದರಿಂದ ಅವರ ರಜವನ್ನು ಜನವರಿ 13 ರ ವರೆಗೆ ಹೆಚ್ಚಿಸಲಾಗಿದೆ.

ಕಮ್ಯೂನಿಸ್ಟ ನಾಯಕರ ಬಿಡುಗಡೆ

ನಂಜನಗೂಡಿನ ಕಾಂಗ್ರೆಸ್ ಸದಸ್ಯರೂ, ಕಮ್ಯುನಿಸ್ಟ ಮುಖಂಡರೂ ಆದ ಶ್ರೀ ಡಿ. ಶ್ರೀನಿವಾಸಯ್ಯನವರು ಈ ದಿನ ಶಿಕ್ಷೆ ಅವಧಿ ಮುಗಿದು ಸೆಂಟ್ರಲ್ ಜೈಲಿನಿಂದ ಹೊರಗೆ ಬಂದರು. ಕಮ್ಯೂನಿಸ್ಟ ಪಕ್ಷದವರು ಅವರನ್ನು ಜೈಲಿನ ಮುಂಭಾಗದಲ್ಲಿ ಎದುರುಗೊಂಡರು.

ಹೋಟೆಲಿನಲ್ಲಿ ಮರಣ

ನೆನ್ನೆ ದಿನ ಬೆಳಿಗ್ಗೆ ಬಳೇಪೇಟೆಯ ಹೋಟೆಲೊಂದರಲ್ಲಿ ಕಾಫಿ ಕುಡಿಯುತ್ತಾ ಹನುಮಂತರಾವ್ ಎಂಬುವರು ಇದ್ದಂತಿದ್ದಂತೆಯೇ ಹೃದಯಚಲನೆ ನಿಂತು ಮರಣಹೊಂದಿದರು. ಪೋಲೀಸರು ಮುಂದಿನ ಕ್ರಮ ನಡೆಸುತ್ತಿರುವರು.

ಬಟ್ಟೆಗಳಿಗೆ ವಿನಾಯಿತಿ

ಗುರುತುಹಾಕಿದ ಬಟ್ಟೆಯನ್ನು ಡಿಸಂಬರ್ 31 ನೇ ತಾ|| ಮೇಲೆ ಮಾರಾಟಮಾಡಕೂಡದೆಂದು ಸರ್ಕಾರ ಆಜ್ಞೆಯಾಗಿದೆ. ಬಿಡ್ಡಗೊಳಿಸಿದ ಬಟ್ಟೆ, ಪಂಚೆ, ಮತ್ತು ಸೀರೆ ವಿನಹ 3000 ಗಜಗಳಿಗೆ ಮೀರಿದ ಹೊಲಿಯುವ ದಾರ, ಟೇಪುಗಳು, ಸಣ್ಣಟವಲುಗಳು, ನ್ಯಾಪ್‌ಕಿನ್‌ಗಳು ಕವಸ್ತ್ರಗಳು ಮತ್ತು ಹತ್ತಿ ಬಟ್ಟೆ ತುಂಡುಗಳು ಇವಕ್ಕೆ ಮಾತ್ರ ಈ ಆಜ್ಞೆಯು ಅನ್ವಯಿಸುತ್ತದೆ.

ಭಾರಿ ಕೈಗಾರಿಕೆಗಳು

ದೊಡ್ಡ ಕೈಗಾರಿಕೆಗಳ ಬೆಳವಣಿಗೆಯು ಒಂದು ಪ್ರಾಂತ್ಯದ ಹೆಗ್ಗುರುತು. ಸರ್ಕಾರದವರು ಈ ಯುದ್ಧಕಾಲದಲ್ಲಿಯೂ ಅವಕ್ಕೆ ತಕ್ಕ ಪ್ರೋತ್ಸಾಹ ಕೊಟ್ಟಿಲ್ಲವಾದ್ದರಿಂದ ಮುಂದೆ ಎದುರು ಸಂಸ್ಥೆಯವರೂ ಮುಂದೆ ಬಂದು ಅವುಗಳನ್ನು ಬೆಳೆಸಬೇಕಾಗಿದೆ—ಎಂಬುದಾಗಿ ಸರ್ ಎಂ. ವಿಶ್ವೇಶ್ವರಯ್ಯನವರು ಬೊಂಬಾಯಿಯಲ್ಲಿ ಮೊನ್ನೆ ನಡೆದ ಸಭೆಯೊಂದರಲ್ಲಿ ಹೇಳಿರುವರು.

ನಡುಚೌಕದಲ್ಲಿ ಫಾಸಿ

ಪಾರ್ಸ್ಟೈನಿನ ನಾಲ್ಕು ಆಫೀಸರುಗಳನ್ನು ಸೇರುವ ಚೌಕದಲ್ಲಿ 40,000 ಜನ ನೋಡುತ್ತಿದ್ದ ಹಾಗೆ ಮೊನ್ನೆ ದಿನ ಖಾರ್ಕೋವ್ ನೊರಕಣ್ಣಮೇಯು ಜರ್ಮನರ ಧಿಗಳನ್ನು ಗಲ್ಲಿಗೇರಿಸಲಾಯಿತು.

Edited, printed and published by A. R. Nagarajan, at the Sadhvi Press, D.Subbaiah Road, Mysore.

ಆನೆಗಳ ಹಾವಳಿ

ಸ್ವಂ. ವ.] ಹೆಗ್ಗಡದೇವನಕೋಟೆ 20.

ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಹೋಬಳಿ ಕರಿಗಳದ ದೊಡ್ಡ ಕೆರೆ ಉತ್ತರ ನಾಲು ಗಾರೆ ಬಟ್ಟಲು, ಮನೆಗಳ ನಾಲುಕ ಪಕ್ಕದಲ್ಲೇ ಈಗ್ಗೆ 8 ದಿನದಲ್ಲಿ ಎರಡು ಗುಂಪುಗಳು ಸುಮಾರು 28 ಆನೆಗಳು ಬಂದು ಸುಮಾರು ೫೦ ಪಲ್ಲದ ಮೇಲೆಯ ಬೀಜವರಿಯ ಫಸಲು ಕಟಾವಿಗೆ ಬಂದಿದ್ದ ಭತ್ತದ ಫಸಲನ್ನ 3–4 ದಿವಸ ಊಟದಿಂದ ತಿಂದು, ತುಳಿದು ನಷ್ಟ ಪಡಿಸಿರುತ್ತವೆ. ಈ ಸಮಾಚಾರವನ್ನು ಆಜುಬಾಜು ಗ್ರಾಮಾಂತರದ 15–20 ಊರಿನ ಫಸಲು ಮಾಡಿರುವ ರೈತರೆಲ್ಲಾ ಒಟ್ಟಾಗಿ ರಾತ್ರಿ ಕಾಲದಲ್ಲಿ ಬೆಂಕಿ ಹಚ್ಚಿ, ಕೂಗುವ ರಭಸಗಳಿಂದ ಅರ್ಧಭಾಗ ಪಶ್ಚಿಮ ದಡ ಕೋಟೆ, ಬೈಲು ಗದ್ದೆಗಳ ಜಂಗಲುಕಡೆ ಓಡಿಸಿರುತ್ತಾರೆ. ಹಂಪಾಪುರದ ಫಾರೆಸ್ಟರು ಬಂದೂಕ, ಜವಾನರ ಕುಮ್ಮಕ್ ಕೊಟ್ಟು ಸಹಾಯಮಾಡಿದ ವಿಷಯ ಪ್ರಜೆಗಳೆಲ್ಲರಿಗೂ ಸಂತೋಷವನ್ನುಂಟುಮಾಡಿರುತ್ತೆ.

ಬಹುಮಾನ

ಮೈಸೂರು ವೀರಶೈವ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಮೊನ್ನೆ ದಿನ ನಡೆದ ಚರ್ಚಾಸ್ಪರ್ಧೆಯಲ್ಲಿ ಸ್ಪೆಷಲ್ ಬಹುಮಾನವನ್ನು ಮಹಾರಾಜಾಸ್ ಕಾಲೇಜಿನ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರಿಗೆ ಕೊಟ್ಟಿದ್ದು; ಡಿ. ಟಿ. ಚಂದ್ರಶೇಖರಯ್ಯನವರಿಗೆ ಒಲ್ಲ ಎಂದು ತಿಳಿಸಲಾಗಿದೆ.

ಕನ್ಯಾಪಹಾರ

ಶಿವಮೊಗ್ಗ ಜೇನಹಳ್ಳಿಯ ಗಂಗಪ್ಪ ಎಂಬುವನು ಸ್ಪಿನ್ನರ್ ಹುಡುಗಿಯನ್ನು ಕೆಲವರು ಅಪಹರಿಸಿ ಶಿಕಾರಿಪುರಕ್ಕೆ ಕರೆದೊಯ್ದಿದ್ದಾರೆ. ನ್ಯಾಮತಿ ಪೋಲೀಸಿನವರು ಪತ್ತೆ ಹಚ್ಚಿ ಅವರನ್ನು ಕೋರ್ಟಿನ ಮುಂದೆ ನಿಲ್ಲಿಸಿದ್ದಾರೆ.

ಬಿಸಿ ಬಿಸಿ ಸುದ್ದಿ

ಪ್ರಭುಗಳ ಪ್ರವಾಸ

ಮೈಸೂರು 20

ಶ್ರೀಮನ್ಮಹಾರಾಜರವರು ಚಾಮರಾಜನಗರದ ಪ್ರವಾಸವನ್ನು ಮುಗಿಸಿಕೊಂಡು, ರಾಜಧಾನಿಗೆ 8 ಗಂಟೆಗೆ ವಾಪಸುಬಂದರು.

ಚಾಮರಾಜನಗರದಲ್ಲಿ ವ್ಯಾಪ್ತಿ ವಿಶ್ರಮಿಸಿಕೊಂಡು, ಸಿವಿಲ್ ಸಬ್-ಡಿವಿಜನ್ ಅಧಿಕಾರಿಗಳಾದ ಶ್ರೀ ಕೆ ನರಸಿಂಹಯ್ಯಂಗಾರ್ಯರಿಗೆ ಪ್ರಭುಗಳು ಭೇಟಿ ದಯಪಾಲಿಸಿ, ಪ್ರವಾಸವನ್ನು ಸಮರ್ಪಕವಾಗಿ ನಡೆಸಿದ್ದಕ್ಕೆ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.

ಚಾಮರಾಜನಗರದ ಶ್ರೀ ಸಿ ವಿ ರಂಗರವರು ಅಲ್ಲಿನ ಹೈಸ್ಕೂಲಿನ ಸ್ವಸ್ಥಾನಿಗಾಗಿ 8 ಸಾವಿರ ರೂ. ದಾನಮಾಡಿರುವುದಾಗಿ ತಿಳಿಸಲಾಯಿತು.

ಶ್ರೀ ಯ ರ ಸೌ ಕ ರ್ಯ ಕ್ಕಾ ಗಿ

ಕಾ|| 1—0 ರಲ್ಲಿ ಒಂದ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಿದ ವಿಭಾಗವು ನಡೆಯುತ್ತಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ — ಚಿಲ್ಲರೆಯಾಗಿ ಅಕ್ಕಿ, ಬೇಳೆ, ಕಾಳುಗಳು ಸಿಕ್ಕುತ್ತವೆ ಇಲ್ಲೂ ಮತ್ತು ಸಂತೆಪೇಟೆ ಬ್ರಾಂಚ್ ಆಫೀಸಿನಲ್ಲಿ ಅಕ್ಕಿ, ರವೆ, ಗೋಧಿ ಹಿಟ್ಟು ದೊರೆಯುತ್ತವೆ.

[illegible]

ಸಂಪುಟ ೨] ಬುಧವಾರ ೨೫-೧೨-೪೬ [ಸಂಚಿಕೆ ೧೩೩

ಬೊಲೀವಿಯಾದಲ್ಲಿ ಮಿಲಿಟರಿ ಪಿತೂರಿ

ರಾಜಕೀಯ ಸಮಸ್ಯೆ ಬಗ್ಗೆ ವೈಸರಾಯರ ಉದಾಸೀನ

ರೇಷನಿಂಗ್ ಅವ್ಯವಸ್ಥೆಯಿಂದ ಜನಗಳಲ್ಲಿ ಹಾಹಾಕಾರ

ರೇಷನಿಂಗ್ ಅವ್ಯವಸ್ಥೆ

ಮೈಸೂರು ೨೩.

ರಾಜಧಾನಿಯಲ್ಲಿ ರೇಷನಿಂಗ್ ಜಾರಿಗೆ ಬಂದು ೩ ದಿನಗಳಾದರೂ ಅಧಿಕಾರಿಗಳು ಸರಿಯಾದ ವ್ಯವಸ್ಥೆ ಮಾಡದೆ, ಜನಗಳಿಗೆ ರೇಷನ್ ಸಿಕ್ಕದೆ, ಹಾಹಾಕಾರ ಉಂಟಾಗಿದೆ. ಎಷ್ಟೋ ಸಂಸಾರದವರಿಗೆ ರೇಷನ್ ಕಾರ್ಡು ಸಿಕ್ಕದೆ ಅಲೆದು ಬೇಸತ್ತಿದ್ದಾರೆ. ಡಿಪೋಗಳ ವ್ಯವಸ್ಥೆಯಂತೂ ಹೇಳಬೇಕಾದ್ದಿಲ್ಲ. ಕಾರ್ಡುಗಳಿದ್ದರೆ, ಡಿಪೋಗಳಲ್ಲಿ ಧಾನ್ಯಗಳಿಲ್ಲ. ಧಾನ್ಯಗಳಿದ್ದರೆ, ಅಳತೆ ಸೇರು ಮತ್ತು ತಕ್ಕಡಿ ಬೊಟ್ಟುಗಳು ಇಲ್ಲ. ಎಷ್ಟೋ ಡಿಪೋಗಳಲ್ಲಿ ಸಾಮಾನನ್ನು ದವಸಗಳ ದಾಸ್ತಾನೂ ಇಲ್ಲ. ಡಿಸೆಂಬರ್ ೧ನೇ ತಾ|| ನಿಂದಲೇ ಜಾರಿಗೆ ತರಬೇಕೆಂದು ಉತ್ಸಾಹಶಾಲಿಗಳಾಗಿದ್ದ ಅಧಿಕಾರಿಗಳು ೨೦ ದಿವಸಗಳು ತಮಗೆ ಅವಕಾಶವಿದ್ದರೂ ಕೂಡ, ಈ ರೀತಿ ಅವ್ಯವಸ್ಥೆ ಮಾಡಿರುವುದು ಬಹಳ ಶೋಚನೀಯವಾಗಿದೆ.

ಕೃಷ್ಣರಾಜಮೊಹಲ್ಲ ಚಾಮುಂಡಿಪುರದ ೯ ನೇ ನಂಬರ್ ಡಿಪೋವಿನಲ್ಲಿ ಮೊನ್ನೆ ೨೦ ನೇ ತಾ|| ದಿನವೆಲ್ಲಾ ರೇಷನ್ ಸಿಕ್ಕದೆ, ನೂರಾರು ಜನಗಳ ಗೋಳು ಹೇಳತೀರದು. ರಾತ್ರಿ ೧೨ ಗಂಟೆಯಲ್ಲಿ ಮುನಿಸಿಪಲ್ ಇಂಜನಿಯರ್ ಡಿಪೋ ಬಾಗಿಲನ್ನು ತೆಗೆಸಿ ೨೦೦ ಜನರಿಗೆ ಅಕ್ಕಿ ಕೊಡಿಸಬೇಕಾಯಿತೆಂದೂ, ಸುಣ್ಣದ ಕೇರಿಯ ಡಿಪೋವಿನಲ್ಲಿ ರಾತ್ರಿ ೧-೩೦ ಗಂಟೆಯಲ್ಲಿ ಅಕ್ಕಿ ಕೊಡಿಸಲಾಯಿತೆಂದು ಹೇಳಲಾಗಿದೆ.

ಈಗಲಾದರೂ ಅಧಿಕಾರಿಗಳು ಸರಿಯಾದ ವ್ಯವಸ್ಥೆಯನ್ನು ಮಾಡುವರೆಂದು ನಂಬಲಾಗಿದೆ.

ಸ್ವರ್ಣೋತ್ಸವ

ರಾಜಧಾನಿಯ ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲಿನ ಸ್ವರ್ಣೋತ್ಸವ ಸಮಾರಂಭವು ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ಈದಿವಸ ಸಂಜೆ ೫ ಗಂಟೆಗೆ ನಡೆಯಿತು.

ವಿದ್ಯಾರ್ಥಿಗಳ ಸತ್ಯಾಗ್ರಹ

ಶಾರದಾ ವಿಲಾಸ ಹೈಸ್ಕೂಲಿನಲ್ಲಿ ನಾಲ್ಕು ಜನ ವಿದ್ಯಾರ್ಥಿಗಳ ಉಪವಾಸ ಸತ್ಯಾಗ್ರಹವು ಮುಂದುವರಿಯುತ್ತಲೇ ಇದೆ. ಕಮಿಟಿ ಮೆಂಬರುಗಳು ಬಂದು ಸಮಾಧಾನ ಹೇಳಿದರೂ ಪ್ರಯೋಜನವಾಗಲಿಲ್ಲ. ವಿದ್ಯಾರ್ಥಿಗಳು ಆಗಾಗ ಸ್ವಲ್ಪ ನೀರನ್ನು ಉಪ್ಪು, ನಿಂಬೆರಸಗಳೊಡನೆ ಸೇವಿಸುತ್ತಿದ್ದಾರೆ. ಇತರ ಹಲವು ವಿದ್ಯಾರ್ಥಿಗಳೂ ಅವರೊಡನೆ ಸಹಾನುಭೂತಿ ತೋರಲು ಅವರ ಬಳಿ ಕುಳಿತಿದ್ದಾರೆ.

ಕೃಷ್ಣರಾಜಪೇಟೆ ತಾ|| ಆಹಾರ ಸಮ್ಮೇಳನ

೨೯-೧೨-೪೬ ನೇ ಭಾನುವಾರ ಮಧ್ಯಾಹ್ನ ೨ ಗಂಟೆಯಿಂದ ಕೃಷ್ಣರಾಜಪೇಟೆ ತಾಲ್ಲೂಕು ಕೊಸಗೋಳಲು ಸಂತೆ ನಡೆಯುವ ಮೈದಾನದಲ್ಲಿ ಶ್ರೀರಂಗಪಟ್ಟಣದ ಅಡ್ವೊಕೇಟರಾದ ಶ್ರೀ ಎ ಜಿ ಬಂಡಿಗೌಡರು ಸಮ್ಮೇಳನದ ಪ್ರಾರಂಭ ಭಾಷಣ ಮಾಡುತ್ತಾರೆ. ಶ್ರೀ ಮ ಹುಲಿಕೆರೆ ಎಸ್. ಕೆ. ಸಿದ್ದೇಗೌಡರು ಅಧ್ಯಕ್ಷತೆ ವಹಿಸುವರು. ಸಮ್ಮೇಳನದಲ್ಲಿ ಚರ್ಚಿಸಬೇಕಾಗಿರುವ ನಿರ್ಣಯಗಳನ್ನು ತಾ|| ೨೭-೧೨-೪೬ ನೇ ಶುಕ್ರವಾರ ೬ ಗಂಟೆಯೊಳಗಾಗಿ ಕೃಷ್ಣರಾಜಪೇಟೆಯಲ್ಲಿರುವ ಶ್ರೀ ಕೆ ಸಿ. ರಾಮಕೃಷ್ಣರವರಿಗೆ ಕಳುಹಿಸಬೇಕಾಗಿ ಕೋರಿಕೆ.

ಬೊಲೀವಿಯಾ ಅಧ್ಯಕ್ಷರ ದಸ್ತಗಿರಿ

ಬೊಲೀವಿಯಾ ದೇಶದಲ್ಲಿ ಮಿಲಿಟರಿ ಒಳಸಂಚು ನಡೆದು, ಅಲ್ಲಿನ ಅಧ್ಯಕ್ಷರನ್ನೂ, ಇಬ್ಬರು ಸದಸ್ಯರನ್ನೂ ದಸ್ತಗಿರಿಮಾಡಲಾಗಿದೆ. ಮೇಜರ್ ಆಲ್ಬರ್ಟ್ ಟೋರಿಬಿಯೋ ಎಂಬುವರ ಆಜ್ಞೆಯಂತೆ ದಸ್ತಗಿರಿ ಮಾಡಲಾಯಿತೆಂದು ಹೇಳಲಾಗಿದೆ. ಬೊಲೀವಿಯಾದಲ್ಲಿ ಹೊಸ ಸರ್ಕಾರವನ್ನು ಮೇಜರ್ ಗುಟ್ಟಿರೋಜ್ ವಿಲ್ಲಾರೋಲ್ ಎಂಬುವರು ರಚಿಸಿದ್ದಾರೆಂದೂ ಮತ್ತು ಈ ಸರ್ಕಾರವು ಪ್ರಜಾ ಪ್ರಭುತ್ವವನ್ನು ವಿರೋಧಿಸುವುದಿಲ್ಲವೆಂದೂ, ಸಂಯುಕ್ತ ಸಂಸ್ಥಾನದೊಡನೆ ಸ್ನೇಹ ಭಾವದಿಂದ ನಡೆದುಕೊಂಡು ವಿದೇಶಾಂಗ ನೀತಿಯನ್ನು ಬದಲಾಯಿಸುವುದಿಲ್ಲವೆಂದೂ ತಿಳಿಸಲಾಗಿದೆ.

ಅರಣ್ಯ ಯುದ್ಧ ಕಾರ್ಯಾಭ್ಯಾಸ

ದಕ್ಷಿಣ ಹಿಂದೂಸ್ಥಾನದ ಯಾವುದೋ ಒಂದು ಪ್ರದೇಶದಲ್ಲಿ ಸಮುದ್ರ ಮಟ್ಟದಿಂದ ೪೦೦೦ ಅಡಿ ಎತ್ತರದಲ್ಲಿ ಬೆಟ್ಟಗುಡ್ಡಗಳ ಪ್ರದೇಶದಲ್ಲಿ ೨೦೦೦೦ ಭಾರತೀಯ ಸೈನ್ಯ ಪೊಂದಕ್ಕೆ ಅರಣ್ಯ ಯುದ್ಧ ಕಾರ್ಯಾಭ್ಯಾಸವನ್ನು ಕಲಿಸಲಾಯಿತು. ಜಪಾನಿನ ಮೇಲೆ ಬೀಳಲು ಈ ಸೈನ್ಯವನ್ನು ಸಿದ್ಧಮಾಡಿರುವಂತೆ ತಯಾರು ಮಾಡುವುದೇ ಇದರ ಉದ್ದೇಶವಾಗಿತ್ತು. ಕೇವಲ ಎರಡೇ ವಾರಗಳಲ್ಲಿ ಆ ಗೊಂಡಾರಣ್ಯವನ್ನು ೩೦೦ ಗಜಗಳಷ್ಟು ಸುಂದರ ಗ್ರಾಮವಾಗಿ ಪರಿವರ್ತಿಸಲಾಗಿತ್ತು. ಅಲ್ಲಿ ಮೋಟಾರುಗಳೂ ವಿದ್ಯುಚ್ಛಕ್ತಿ ಟೆಲಿಫೋನ್ ಸಂಪರ್ಕವೂ ಕೂಡ ಏರ್ಪಾಡಾಗಿದ್ದವು. ಇಷ್ಟಾದರೂ ಈ ಏರ್ಪಾಡುಗಳು ಯಾರಿಗೂ ತಿಳಿಯದಂತೆ ಗೋಪ್ಯವಾಗಿಡಲಾಗಿತ್ತೆಂದು ವರದಿಯಾಗಿದೆ.

ಸರ್ಕಸ್ ಸಿಂಹ ತಪ್ಪಿಸಿಕೊಂಡಿತು

ಕರಾಚಿಯ ಬಳಿ ಇರುವ ಒಂದು ಗ್ರಾಮದಲ್ಲಿ ಸರ್ಕಸ್ ನಡೆಯುತ್ತಿದ್ದಾಗ, ಬೋನಿನಲ್ಲಿದ್ದ ಒಂದು ಸಿಂಹವು ತಪ್ಪಿಸಿಕೊಂಡು ಒಬ್ಬ ಮನುಷ್ಯನನ್ನೂ, ಒಂದು ಕುದುರೆಯನ್ನೂ, ಒಂದು ಎತ್ತನ್ನೂ ಮತ್ತು ಒಂದು ನಾಯಿಯನ್ನೂ ಕೊಂದುಹಾಕಿತೆಂದು ವರದಿಯಾಗಿದೆ. ಪೋಲೀಸರು ಆ ಸಿಂಹವನ್ನು ಗುಂಡಿಕ್ಕಿ ಕೊಲ್ಲಲಾಯಿತು.

ಸರ್ಕಾರದ ಹೃದಯ ಪರಿವರ್ತನೆಯಾಗಬೇಕು

ಸ್ವಂ. ವ.] ಬೆಂಗಳೂರು ೨೧

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಒಂದು ಹೇಳಿಕೆಯನ್ನು ಕೊಟ್ಟು ಸರ್ಕಾರದವರಿಗೆ ಹೃದಯ ಪರಿವರ್ತನೆಯಾಗಿದ್ದರೆ, ಕಾಂಗ್ರೆಸ್ ಸಂಸ್ಥೆಗಳ ಮೇಲಿರುವ ಪ್ರತಿಬಂಧಕಗಳನ್ನು ತೆಗೆಯಬೇಕು. ಗಡೀಪಾರು ಆಜ್ಞೆಗಳನ್ನು ರದ್ದು ಮಾಡಬೇಕು. ಶಿಕ್ಷೆಯಲ್ಲಿರುವವರನ್ನೆಲ್ಲಾ ಬಿಡುಗಡೆ ಮಾಡಬೇಕು; ಹಾಗೆ ಮಾಡಿದರೆ ಕಾಂಗ್ರೆಸ್ಸಿನವರು ಸರ್ಕಾರದೊಡನೆ ಸಹಕರಿಸಲು ಸಿದ್ಧರಾಗಿದ್ದಾರೆ ಎಂದು ತಿಳಿಸಿರುವರು.

ಪಾರ್ಲಿಮೆಂಟರಿ ಸಮಿತಿ

ಮೈಸೂರು ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಕಾರ್ಯಗಳನ್ನು ನಡೆಸಿಕೊಂಡು ಬರಲು ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಒಂದು ಸಮಿತಿಯನ್ನು ರಚಿಸಿದ್ದಾರೆ. ಅದಕ್ಕೆ ಶ್ರೀ ಕೆಚ್. ಸಿದ್ದಯ್ಯನವರು ಅಧ್ಯಕ್ಷರು. ಶ್ರೀ ಕೆ. ಆರ್ ಮಾದೇವಯ್ಯ ಕಾರ್ಯದರ್ಶಿ. ಶ್ರೀಗಳಾದ ಎಸ್ ಚನ್ನಯ್ಯ ಮತ್ತು ಎಸ್. ಸಿ ತಿಮ್ಮಾರೆಡ್ಡಿಯವರು ಸದಸ್ಯರು.

ತುಟ್ಟಿ ಭತ್ಯ ಹೆಚ್ಚಿಸಿದೆ

ಮೈಸೂರು ಬೆಂಗಳೂರು ನಗರಗಳಲ್ಲಿ ೫೦ ರೂ. ನಿಂದ ೧೦೦ ರೂ. ಸಂಬಳ ಬರುವವರಿಗೆ ೧೧ ರೂ ಸಂತೆಯೂ, ೧೦೦ ರೂ ನಿಂದ ೧೫೦ ರೂ ಬರುವವರಿಗೆ ೧೬ ರೂ ಸಂತೆಯೂ ಮತ್ತು ಇತರ ಕಡೆಗಳಲ್ಲಿ ೫೦ ರಿಂದ ೧೦೦ ರೂ. ಬರುವವರಿಗೆ ೮ ರೂ ಸಂತೆಯೂ ೧೦೦ ರೂ ನಿಂದ ೧೫೦ ರೂ. ಬರುವವರಿಗೆ ೧೦ ರೂ ಸಂತೆಯೂ ತುಟ್ಟಿ ಭತ್ಯವನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಈ ಆಜ್ಞೆಯು ಡಿಸಂಬರ್ ೧ ನೇ ತಾ|| ನಿಂದ ಜೂನ್ ಅಂತ್ಯದ ವರೆಗೂ ಜಾರಿಯಲ್ಲಿರುವುದು.

ಕಾವಲಾನಹಳ್ಳಿಯಲ್ಲಿ ದಸ್ತಗಿರಿ

ಕಾವಲಾನಹಳ್ಳಿಯ ಹಿಂದೂ ಮುಸ್ಲಿಂ ಗಲಭೆ ಸಂಬಂಧದಲ್ಲಿ ೧೦ ಜನ ಮುಸಲ್ಮಾನರನ್ನೂ, ೯ ಜನ ಹಿಂದೂಗಳನ್ನೂ ೩ ನೇ ಸಲ ಪೋಲೀಸರು ದಸ್ತಗಿರಿಮಾಡಿದ್ದಾರೆ. ಅವರ ಮೇಲೆ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗುವುದು.

ಚರ್ಚಾ ಸ್ಪರ್ಧೆ

ಮೈಸೂರು ೨೩

ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ, ಶ್ರೀ ವೆಂಕಣ್ಣಯ್ಯನವರ ಸ್ಮಾರಕ ಚರ್ಚಾ ಸ್ಪರ್ಧೆಯು ನಿನ್ನೆ ಸಂಜೆ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. "ಪ್ರಗತಿಪರ ರಾಷ್ಟ್ರಕ ರಾಷ್ಟ್ರಗಳಿಗೆ ರಾಜ ಸೂತ್ರವನ್ನು ಸ್ತ್ರೀಯರಿಗೆ ವಹಿಸಬೇಕು." ಎಂಬುದೇ ಚರ್ಚೆಯ ವಿಷಯ.

ಇಂಟರ್ ಕಾಲೇಜಿನ ಶ್ರೀ ಕುಮಾರಸ್ವಾಮಿಯವರಿಗೆ ಮೊದಲನೆಯ ಬಹುಮಾನವೂ, ಮಹಾರಾಣಿ ಟ್ರೈನಿಂಗ್ ಕಾಲೇಜಿನ ಶ್ರೀಮತಿ ಶಾರದಮ್ಮ ಮತ್ತು ಲಲಿತಮ್ಮರವರಿಗೆ ದ್ವಿತೀಯ ಮತ್ತು ತೃತೀಯ ಬಹುಮಾನಗಳೂ, ಮಹಾರಾಜಾ ಕಾಲೇಜಿನ ಶ್ರೀ ಮರಳು ಸಿದ್ಧಪ್ಪನವರಿಗೆ ಸಾಲ್ವನ್ ಬಹುಮಾನವೂ ಮತ್ತು ಶ್ರೀಮತಿ ಕಾಮಾಕ್ಷಮ್ಮನವರ ಬಹುಮಾನವು ಇಂಟರ್ ಕಾಲೇಜಿನ ಶ್ರೀ ಪದ್ಮನಾಭರವರಿಗೂ ಕೊಡಲಾಯಿತು.

ಓರಿಯಂಟಲ್ ಲೈಬ್ರರಿ

ಓರಿಯಂಟಲ್ ಲೈಬ್ರರಿಯನ್ನು ಇನ್ನು ಮುಂದೆ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಎಂದು ಕರೆಯಲಾಗುತ್ತೆ. ಡಾ|| ಎಂ ಹೆಚ್ ಕೃಷ್ಣಾರವರು ಇದರ ಡೈರೆಕ್ಟರಾಗಿರುತ್ತಾರೆ. ಪ್ರೊಫೆಸರ್ ಗ್ರೇಡ್ ಆದರೂ ಇನ್ನು ಮುಂದೆ ಅವರಿಗೆ ಅಲ್ಲಿ ಮಾತ್ರ ಕೆಲಸವೆಂದು ತಿಳಿದು ಬಂದಿದೆ.

ರಾಜಕೀಯ ವಿಷಯದ ಬಗ್ಗೆ ಉದಾಸೀನ

ವೈಸ್‌ರಾಯರು ಮೊನ್ನೆ ದಿ. ಕಲ್ಕತ್ತೆಯಲ್ಲಿ ಭಾಷಣ ಮಾಡಿ, ಆರ್ಥಿಕ ಮತ್ತು ಕೈಗಾರಿಕೆ ಅಭಿವೃದ್ಧಿ ಬಗ್ಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರೆ ಹೊರತು, ಮತ್ತೇನಿಲ್ಲ. ಭಾರತದ ರಾಜಕೀಯ ವಿಷಯದ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಉದಾಸೀನರಾಗಿದ್ದಾರೆ, ಎಂದು ದೆಹಲಿಯಲ್ಲಿ ಅಭಿಪ್ರಾಯ ಹೊರಬಿದ್ದಿದೆ.

ನಾಜಿ ಗುಪ್ತ ಅಸ್ತ್ರ

ಜರ್ಮನರು ಹೊಸದಾಗಿ ಕಂಡುಹಿಡಿದಿರುವ ಅಸ್ತ್ರವು [illegible] ರಾಕೆಟ್ ಎಂದು ಹೇಳಲಾಗಿದೆ. ಇದಕ್ಕೆ ವಿಶೇಷ ಕಿರಣಗಳನ್ನು ಇಂಗ್ಲೆಂಡ್ [illegible] ಪ್ರದೇಶದಲ್ಲಿ ಉಪಯೋಗಿಸಲಾಗಿದೆ. ಸನ್ನದ್ಧತೆಯೇ ಪಾತ್ರಗಳನ್ನು ಪ್ರಯೋಗಿಸಲಾಗುವುದು.

ದೇವದಾಸರು ತಾಯಿಯ ಬಳಿಗೆ

ಶ್ರೀ ದೇವದಾಸ್ ಗಾಂಧಿಯವರು [illegible] ಪತ್ರಿಕೆಯ ಸಂಪಾದಕ ಹುದ್ದೆಯಿಂದ [illegible] ಅವರ ತಾಯಿ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರ ಬಳಿ ಒಂದು ಗಂಟೆಯ ಕಾಲ ಇದ್ದರೆಂದು ಹೇಳಲಾಗಿದೆ.

ಲಾರಿ ನದಿಗೆ ಬಿತ್ತು

ಕಳೆದ ಶನಿವಾರ ಜನ [illegible] ಲ್ ಎಂಬಲ್ಲಿಗೆ ಹೊರಟ [illegible] ಯನ್ನು ಹತ್ತಿಕೊಂಡ ಲಾರಿಯು, ಜನ [illegible] ನದಿಯ ಸೇತುವೆ ದಾಟುತ್ತಿದ್ದಾಗ [illegible] ನದಿಗೆ ಬಿತ್ತೆಂದೂ [illegible] ಜನ ಸತ್ತರು.

ಪ್ರಭುಗಳ ಪ್ರವಾಸ ಮುಕ್ತಾಯ

ನಂಜನಗೂಡು-ಚಾಮರಾಜನಗರದಲ್ಲಿ ಅಪೂರ್ವ ಸ್ವಾಗತ

[ಸ್ವಂ ಸು] ಮೈಸೂರು ೨೨

ಶ್ರೀಮನ್ಮಹಾರಾಜರವರು, ಮೈಸೂರು ಮತ್ತು ಮಂಡ್ಯ ಜಿಲ್ಲೆಯಲ್ಲಿ ಕೈಗೊಂಡ ಆರು ದಿನಗಳ ಪ್ರವಾಸವು ನಿನ್ನೆಗೆ ಮುಕ್ತಾಯಗೊಂಡಿತು. ಈ ಪ್ರವಾಸದಿಂದ ಮೈಸೂರು ಜಿಲ್ಲೆಯಲ್ಲಿ ಒಟ್ಟು ೩೦ ಸಾವಿರ ರೂ.ಗಳ ದಾನವು ಸಾರ್ವಜನಿಕ ಉಪಯೋಗಕ್ಕಾಗಿ ಬಂದಿತು. ಜಿಲ್ಲೆಯ ಅನೇಕ ಅಧಿಕಾರಿಗಳು ಮತ್ತು ಪೋಲೀಸರು ಪ್ರವಾಸದ ವಿಷಯದಲ್ಲಿ ದಕ್ಷತೆಯಿಂದ ಸರ್ವ ಏರ್ಪಾಡನ್ನೂ ಮಾಡಿದ್ದರು.

ಮಹಾಪ್ರಭುಗಳು, ನಿನ್ನೆ ಪ್ರಕಟಿಸಿದಂತೆ, ನಂಜನಗೂಡು ಮತ್ತು ಚಾಮರಾಜನಗರಕ್ಕೆ ಭೇಟಿ ಇತ್ತರು. ರಾಜಧಾನಿಯನ್ನು ಬೆಳಗ್ಗೆ ೮ ಗಂಟೆಗೆ ಬಿಟ್ಟು, ೧೧-೩೦ ಗಂಟೆಗೆ ಚಾಮರಾಜನಗರವನ್ನು ತಲುಪಿದರು.

ನಂಜನಗೂಡಿನಲ್ಲಿ ಸ್ವಾಗತ

ನಂಜನಗೂಡಿನಲ್ಲಿ ಅದ್ಭುತ ಸ್ವಾಗತವು ನೀಡಲಾಯಿತು. ಊರಿನ ಬಾಗಿಲಿನಲ್ಲಿಯೇ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದವರು ಪ್ರಭುಗಳಿಗೆ ಫಲ ಮಂತ್ರಾಕ್ಷತೆಯನ್ನು ಅರ್ಪಿಸಿದರು. ನಗರದ ಬೀದಿಗಳು (ಬಾಗಿಲಿನಿಂದ ದೇವಸ್ಥಾನದವರೆಗೆ) ತಳಿರುತೋರಣ ಮತ್ತು ವಿಶೇಷ ಮಂಟಪಗಳಿಂದ ಅಲಂಕೃತವಾಗಿದ್ದವು. ಪೌರಸಭೆಯ ಮಂಟಪದಲ್ಲಿ ಪೌರಸಭಾಸದಸ್ಯರು ರಾಜಭಕ್ತಿಯನ್ನು ಅರ್ಪಿಸಿದರು. ಶ್ರೀ ಸಿ. ಪೆರುಮಾಳ್ ಚೆಟ್ಟಿ, ಶ್ರೀ ಬಿ. ವಿ. ಪಂಡಿತರು ಮತ್ತು ಇತರರು ತಮ್ಮ ಮಂಟಪಗಳಲ್ಲಿ ಹಾರವನ್ನು ಅರ್ಪಿಸಿದರು. ಶ್ರೀ ರಾಘವೇಂದ್ರಸ್ವಾಮಿ ಮಠದವರು ಮರ್ಯಾದೆಯನ್ನು ಅರ್ಪಿಸಿದರು.

ಬದನವಾಳಿಗೆ ಭೇಟಿ

ಅನಂತರ ಬದನವಾಳು ನೂಲುವ ಕೇಂದ್ರದಲ್ಲಿ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಡೈರೆಕ್ಟರವರಾದ ಶ್ರೀ ಎಂ. ಎಸ್. ನರಸಿಂಹ ಅಯ್ಯಂಗಾರ್ಯರು ಮತ್ತು ವ್ಯವಸ್ಥಾಪಕರಾದ ಶ್ರೀ ರಾಜಾರಾಮಯ್ಯಂಗಾರ್ಯರು ಪ್ರಭುಗಳನ್ನು ಸ್ವಾಗತಿಸಿದರು. ಅಲ್ಲಿ ನಡೆಯುತ್ತಿರುವ ಗೃಹ ಕೈಗಾರಿಕೆಗಳನ್ನು ಪರಿಶೀಲಿಸಿ, ಮೆಚ್ಚುಗೆಯನ್ನು ಸೂಚಿಸಿದರು. (ಖಾದಿ, ಅಲ್ಲದೆ ಕಾಗದ ಮತ್ತು ಬಾಚಿ ಕೈಗಾರಿಕೆಗಳನ್ನು ಪ್ರಾರಂಭಿಸಲಾಗಿದೆ)

ನಂಜಪ್ಪ ಎಂಬಾತನು ನರಸಿಂಹಾಂಬುಧಿ ಕೆರೆಯ ಬಳಿ ಇರುವ ತನ್ನ ಜಮೀನನ್ನು ವಾಪಸು ಕೊಡಿಸಿಕೊಡಬೇಕೆಂದು ಪ್ರಭುಗಳಲ್ಲಿ ಬಿನ್ನವಿಸಿಕೊಂಡನು. ಈಗ ಆ ಜಮೀನುಗಳೆಲ್ಲ ಅರಮನೆಗೆ ಸೇರಿವೆಯೆಂದೂ, ಹಿಂದೆ ಅರಮನೆಯವರು ಆ ಕೆರೆಯ ಜಮೀನನ್ನೆಲ್ಲಾ ಕೊಂಡುಕೊಂಡರೆಂದೂ ಹೇಳಲಾಗಿದೆ.

ಚಾಮರಾಜ ನಗರದಲ್ಲಿ

ಇಲ್ಲಿ ಪ್ರಭುಗಳು ಮೋಟಾರಿನಲ್ಲಿ ಮೆರವಣಿಗೆ ಹೊರಟರು. ದಾರಿ ಉದ್ದಕ್ಕೂ ಅಸಂಖ್ಯಾತ ಜನಗಳು ರಾಜಭಕ್ತಿಯನ್ನು ಸಲ್ಲಿಸಲು ಕಿಕ್ಕಿರಿದು ತುಂಬಿದ್ದರು. ಶ್ರೀ ಚಾಮರಾಜೇಶ್ವರ ದೇವಸ್ಥಾನದವರು ಫಲ ಮಂತ್ರಾಕ್ಷತೆಗಳನ್ನರ್ಪಿಸಿದನಂತರ, ಸಿಲ್ಕ್ ಫಿಲೇಚರ್ ಕಂಪೆನಿ, ಮುಸ್ಲಿಂ ಜನಾಂಗದವರು, ಹೈಸ್ಕೂಲಿನವರು, ಹಿಂದೂ ಮಹಾಸಭೆ ಮೊದಲಾದ ಸಂಸ್ಥೆಯವರು ಭವ್ಯವಾದ ಮಂಟಪದಲ್ಲಿ ಹಾರವನ್ನು ಅರ್ಪಿಸಿದರು.

ಬಿನ್ನವತ್ತಳೆ

ಪ್ರಭುಗಳು ಅಲ್ಲಿಂದ ಮೂರು ಮೈಲಿ ದೂರವಿರುವ ಸುವರ್ಣಾವತೀ ನದಿಯ ಸೇತುವೆಯ ಹತ್ತಿರ ತೆರಳಿ, ಅಲ್ಲಿ ನಿರ್ಮಿಸಿದ್ದ ದಿವ್ಯವಾದ ಹಸುರುವಾಣಿ ಚಪ್ಪರದಲ್ಲಿ ಜಿಲ್ಲಾ ಬೋರ್ಡ್ ಮತ್ತು ಪೌರಸಭೆಯ ಬಿನ್ನವತ್ತಳೆಯನ್ನು ಸ್ವೀಕರಿಸಿ, ಸುವರ್ಣಾವತಿ ನದಿ ಸೇತುವೆಯ ಆರಂಭೋತ್ಸವವನ್ನು ನೆರವೇರಿಸಿದರು. ಶ್ರೀ ಬಿಳಿಗಿರಿ ರಂಗಸ್ವಾಮಿ ಬೆಟ್ಟ ಮತ್ತು ಅದರ ಸುತ್ತಮುತ್ತಲಿನ ಅರಣ್ಯ ಪ್ರದೇಶಕ್ಕೂ, ಚಾಮರಾಜನಗರದ ತಾಲ್ಲೂಕು ಪ್ರದೇಶಕ್ಕೂ ಸೇರಿಸಲ್ಪಡುವ ಈ ಸೇತುವೆಯನ್ನು ೭೧,೫೦೦ ರೂ.ಗಳಿಂದ ಕಟ್ಟಲಾಗಿದ 'ಬೌಸ್ಟ್ರಿಂಗ್' ಗರ್ಡರ್ ಎಂದು ಪ್ರಸಿದ್ಧಿಯಾದ ಒಂದು ತರಹ ರೀಇನ್‌ಫೋರ್ಸ್ಡ್ ಸಿಮೆಂಟ್ ಕಾಂಕ್ರೀಟ್ ಗರ್ಡರುಗಳಿಂದ ಕಟ್ಟಲಾಗಿದೆ. ಸಂಸ್ಥಾನದಲ್ಲಿರುವ ಈ ತರಹ ಸೇತುವೆಗಳಲ್ಲಿ ಇದು ಎರಡನೆಯದು—ಎಂದು ಬೋರ್ಡಿನ ಬಿನ್ನವತ್ತಳೆಯಲ್ಲಿ ತಿಳಿಸಲಾಯಿತು.

ಪ್ರಭುಗಳು ಸೇತುವೆಯ ಆರಂಭೋತ್ಸವವನ್ನು ನೆರವೇರಿಸಿ ಚಾಮರಾಜನಗರಕ್ಕೆ ವಾಪಸು ಬಂದು, ಭೋಜನವನ್ನು ಅಲ್ಲೇ ಮುಗಿಸಿಕೊಂಡು, ೬-೩೦ ಗಂಟೆಗೆ ರಾಜಧಾನಿಗೆ ಪ್ರಯಾಣ ಬೆಳಸಿದರು.

ನಂಜನಗೂಡು ರೆವಿನ್ಯೂ ಸಬ್-ಡಿವಿಜನ್ ಅಧಿಕಾರಿಗಳಾದ ಶ್ರೀ ಕೆ. ನರಸಿಂಹ ಅಯ್ಯಂಗಾರ್ಯರಿಗೆ ಪ್ರಭುಗಳು ಭೇಟಿ ದಯಪಾಲಿಸಿ, ಪ್ರವಾಸವನ್ನು ಸುಖಮಯವಾಗಿ ನಡೆಸಿದ್ದಕ್ಕೆ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.

ಸಂಜೆ ೮ ಗಂಟೆಗೆ ರಾಜಧಾನಿಗೆ ವಾಪಸು ಬಂದರು.

ಟೆಂಡರ್ ನೋಟೀಸ್

ಮೈಸೂರು ಅರಮನೆಗೆ ಬೇಕಾದ ಸುಮಾರು ನಾಲ್ಕು ಸಾವಿರದ ಐದುನೂರು (೪೫೦೦) ಪಲ್ಲ ಹುರುಳಿಗಾಗಿ ಮೊಹರುಮಾಡಲ್ಪಟ್ಟ ಟೆಂಡರುಗಳನ್ನು ಈ ಕೆಳಗೆ ರುಜುಮಾಡಿರುವವರಲ್ಲಿ ೧೨-೧-೧೯೪೪ ರ ಬುಧವಾರ ಕೊಡಬಹುದು.

ನೋಟೀಸಿನ ಮುಖೇನ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬಹುದು.

ಮೈಸೂರು — ಸಾದೆಗ್ ಜಹ್ ಷಾ
[illegible] — ಹುಜೂರು ಸೆಕ್ರೆಟರಿಯವರು.

ಶುಭಾಶಯ ಬೇಡ

ಕಾಗದದ ಮಿತವ್ಯಯವನ್ನು ಸೂಚಿಸುವುದಕ್ಕಾಗಿ ಹೊಸ ವರ್ಷದ ಶುಭ ಸಂದೇಶಗಳ ಕಾರ್ಡುಗಳನ್ನು ತಮಗೆ ಯಾರೂ ಕಳುಹಿಸಬೇಕಾಗಿಲ್ಲವೆಂದೂ ತಾವೂ ಸಹಾ ಕಳುಹಿಸುವುದಿಲ್ಲವೆಂದೂ ಮದ್ರಾಸ್ ಗೌರ್ನರರೂ ಅವರ ಪತ್ನಿಯವರೂ ತಿಳಿಸಿದ್ದಾರೆ.

ಯಲಹಂಕ ಪೌರಸಭಾ ಚುನಾವಣೆ ನಡೆದು ೯ ಸ್ಥಾನಗಳು ಕಾಂಗ್ರೆಸ್ಸಿಗೂ ಒಂದು ಸ್ಥಾನವು ಸ್ವತಂತ್ರರಿಗೂ ದೊರೆತಿದೆ.

Edited, printed and published by A. R. Nagarajan, at the Sadhvi Press, D. Subbiah Road, Mysore.

ಯುದ್ಧಾನಂತರ ಮುಂದೇನು

ಯುದ್ಧ ಕೊನೆಗೊಂಡಮೇಲೆ ನೀವೇನು ಮಾಡಬೇಕೆಂದಿರುವಿರಿ? ಹಣ ಕೂಡಿಟ್ಟಿರುವವರಿಗೆ ಸದವಕಾಶಗಳು ಕಾದಿರುತ್ತವೆ. ಒಳ್ಳೆಯ ನೌಕರಿಗಳಿಗಾಗಿ ಬದಲಾವಣೆ ಹೊಂದುವುದು, ಲಾಭದಾಯಕವಾಗಿ ಕೊಳ್ಳುವುದು, ಅಗ್ಗವಾಗಿ ಒಂದು ಮನೆ ಕಟ್ಟುವುದು, ಯೋಗ್ಯವಾಗಿ ಸಂಪಾದಿಸಿದ ವಿಶ್ರಾಂತಿಯನ್ನನುಭವಿಸುವುದು. ಧಾರಣೆಗಳು ಈಗ ಹೆಚ್ಚಿರುವುದನ್ನು ನೋಡಿದಲ್ಲಿ ನಿಮಗೆ ಅತ್ಯವಶ್ಯಕವಾದುವುಗಳನ್ನು ಮಾತ್ರವೇ ಕೊಳ್ಳುವುದು ಮತ್ತು ನಿಮ್ಮಿಂದ ಸಾಧ್ಯವಾದಷ್ಟು ಹಣವನ್ನು ಬೆಲೆಗಳು ಇಳಿದು ಹೋಗುವ ಮುಂಬರುವ ದಿನಗಳಿಗೆ ಕೂಡಿಡುವುದು ಪೂರ್ಣ ವ್ಯವಹಾರಜ್ಞಾನವೇ ಸರಿ. ಈಗಲೇ ಆರಂಭಿಸಿರಿ!

ಮುಂಬರುವ ದಿನಗಳಿಗಾಗಿ ಕೂಡಿಡಿ

ನೀವು ಕೂಡಿಟ್ಟ ಹಣವು ಸುರಕ್ಷಿತವಾಗಿ ವಿನಿಯೋಗಿಸಲ್ಪಟ್ಟಿದೆಯೆಂಬುದರ ಬಗ್ಗೆ ಖಾತ್ರಿ ಮಾಡಿಕೊಳ್ಳಿ. ಬಂಗಾರ, ಬೆಳ್ಳಿ, ಆಭರಣಗಳು, ಭೂಮಿ, ಕಟ್ಟಡ, ಅಥವಾ ಸಾಮಾನುಗಳಮೇಲೆ ವಿನಿಯೋಗಿಸುವುದರಿಂದ ಏನೂ ಕೆಲಸವಾಗುವುದಿಲ್ಲ, ಏಕೆಂದರೆ ಇವುಗಳ ಬೆಲೆ ಈಗ ಮಿತಿಮೀರಿ ಹೆಚ್ಚಿದೆ ಮತ್ತು ಎಂದಾದರೊಂದು ದಿನ ಅನಿರೀಕ್ಷಿತವಾಗಿ ನಿಮ್ಮ ಗಳಿಕೆಯ ಅರ್ಧ ಭಾಗವನ್ನು ಹಣದ ಮೌಲ್ಯ [illegible] ಭದ್ರತೆಗೆ ಮತ್ತು [illegible] ಮೌಲ್ಯಕ್ಕೆ ಸರಕಾರ ಸಾಲ, ವಿಮೆ, ಬ್ಯಾಂಕ್ ಸೇವಿಂಗ್ಸ್ ಡಿಪಾಸಿಟ್, ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ಅಥವಾ [illegible] ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳ ವಿಧಗಳಲ್ಲಿ ನಿಮ್ಮ ಹಣವನ್ನು ಹಾಕಿ



ರಾಷ್ಟ್ರೀಯ ಯುದ್ಧ [illegible] — ದೇಶೀಯರಿಗೆ ಮಾಡುವ ಮನವಿ

CPI [illegible]

ಸಂಪುಟ ೨] ಗುರುವಾರ ೨೪-೧೨-೪೧ [ಸಂಚಿಕೆ ೧೩೪

ಯುದ್ಧ ದೀರ್ಘಕಾಲ ನಡೆಯಲಿದೆ

ಲಂಚ ಪಡೆದರೆಂದು ಐ. ಸಿ. ಎಸ್. ಅಧಿಕಾರಿಗಳ ದಸ್ತಗಿರಿ

ಭಾರತೀಯರ ಹಕ್ಕಿನ ಬಗ್ಗೆ ಆಫ್ರಿಕಾ ಮೋಯರ ಪ್ರತಿಭಟನೆ

ವಿದ್ಯಾರ್ಥಿಗಳ ಉಪವಾಸ

ಮೈಸೂರು ೨೩.

ಶಾರದಾ ವಿಲಾಸ ಹೈಸ್ಕೂಲಿನ ವಿದ್ಯಾರ್ಥಿಗಳ ಉಪವಾಸ ವ್ರತವು ಇನ್ನೂ ಮುಂದುವರಿಯುತ್ತಿದೆ. ಸತ್ಯಾಗ್ರಹಿಗಳ ಸ್ಥಿತಿಯು ಚಿಂತಾಜನಕವಾಗಿದೆ. ಮೌನದಿಂದಲೂ ಅಶಕ್ತರಾಗಿದ್ದಾರೆ. ಸತ್ಯಾಗ್ರಹಿಗಳಿಗೆ ಸಹಾನುಭೂತಿ ತೋರಿಸಲು ಇಂದು ಹಲವು ವಿದ್ಯಾರ್ಥಿಗಳು ತರಗತಿಗಳಿಗೆ ಹೋಗದೆ ಅವರ ಸುತ್ತಲೂ ಕುಳಿತಿರುತ್ತಾರೆ. ಅಧಿಕಾರಿಗಳು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲವೆಂದು ತಿಳಿದು ಬಂದಿದೆ.

ವೈಶ್ಯರ ಸಮ್ಮೇಳನ

ಮೈಸೂರು ಸಂಸ್ಥಾನದ ವೈಶ್ಯ ಯುವಜನ ಮಹಾಸಭೆಯ ಐದನೇ ಅಧಿವೇಶನವು ಜನವರಿ ೫ ನೇ ತಾ॥ ಬುಧವಾರ ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಶ್ರೀ ನೆಲ್ಲೂರ್ ಕೆ. ವೆಂಕಟರಂಗಯ್ಯ ಗುಪ್ತರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಅದೇ ಸ್ಥಳದಲ್ಲಿ ತಾ॥ ೬, ೭ ರಲ್ಲಿ ವೈಶ್ಯ ಸ್ತ್ರೀ ಸಮ್ಮೇಳನ, ಯುವಕ ಸಮ್ಮೇಳನ ಮತ್ತು ವ್ಯಾಯಾಮ ಸಮ್ಮೇಳನಗಳೂ ನಡೆಯುವುವು.

ಬೀಡಿ ಕೂಲಿಗಾರರಿಗೆ ಬಡ್ತಿ

ಮೈಸೂರು ಬೀಡಿ ಕೂಲಿಗಾರ ಸಂಘಗಳಿಗೂ, ಬೀಡಿ ಫ್ಯಾಕ್ಟರಿ ಮಾಲೀಕರುಗಳಿಗೂ, ಕೂಲಿ ಬಡ್ತಿ ಮೊದಲಾದ ವಿವಾದಗಳನ್ನು ಕುರಿತು ತಾ॥ ೧೯ ರಲ್ಲಿ, ಅಸಿಸ್ಟೆಂಟ್ ಲೇಬರ್ ಕಮಿಷನರ್, ಭದ್ರಾವತಿ ಡಿವಿಜನ್ ಶ್ರೀ ಟಿ. ಎಸ್. ಪುಟ್ಟಣ್ಣನವರ ಸಮಕ್ಷಮದಲ್ಲಿ ಈ ಕೆಳ ಕಂಡ ಒಪ್ಪಿಗೆಯಾಯಿತು :-

೧ ಯುದ್ಧಾಂತ್ಯವಾಗುವ ತನಕ ಬೀಡಿ ಕೂಲಿಗಾರರಿಗೆ ತಾ॥ ೧.೧.೪೨ ರಿಂದ ಲಾಗಾಯ್ತು ೧ ಸಾವಿರ ಬೀಡಿ ತಯಾರಿಕೆಗೆ ೧ ಆಣೆ ಬಡ್ತಿ ಕೊಡಲಾಗುವುದು. ಎಂದರೆ ೧೪ ಆಣೆ ಕೂಲಿಯಿಂದ ೧೫ ಆಣೆಗೆ ಏರಿಸಲಾಗುವುದು.

೨ ಈ ತೀರ್ಮಾನದ ಮೇರೆಗೆ ಜನವರಿ ೫ಕ್ಕೆ ನಿರ್ಣಯಿಸಿದ ಕಮ್ಮಲಿಯೇಷನ್ ಪ್ರೊಸೀಡಿಂಗ್ಸ್ ಹಿಂತೆಗೆದುಕೊಳ್ಳಬೇಕೆಂದು ತೀರ್ಮಾನವಾಯಿತು.

ಈ ಕೂಲಿಗಾರ ಸಂಘಗಳ ಪರವಾಗಿ ಶ್ರೀಗಳಾದ ಸಿ. ಎ. ಮ್ಯಾತ್ಯೂ, ಹರಿದಾಸಾಚಾರ್ಯ ಮತ್ತು ಇತರ ಸಂಘದ ಕಾರ್ಯಕರ್ತರು ವಾದಿಸಿದರು.

ಸೋಡಾ ತಯಾರಿಕರ ಸಂಘ

ರಾಜಧಾನಿಯ ಸೋಡಾ ಫ್ಯಾಕ್ಟರಿಗಳ ಮಾಲೀಕರ ಸಂಘದ ಪ್ರಥಮ ವಾರ್ಷಿಕೋತ್ಸವವು ನಿನ್ನೆ ವಿ ಫ್ಯಾಕ್ಟ್ ತಿಪ್ಪಯ್ಯಾಚಾರ್ ರವರ ಛತ್ರದಲ್ಲಿ ನಡೆಯಿತು. ಡಾ॥ ಎ. ಜೆ. ಅರ್ಗೋಟ್‌ರವರು ಅಗ್ರಾಸನವನ್ನು ವಹಿಸಿದ್ದರು. ಇವರು ತಮ್ಮ ಭಾಷಣದಲ್ಲಿ ಸೋಡಾ ತಯಾರಿಕೆಯ ಅಭಿವೃದ್ಧಿಗೆ ಬೇಕಾದ ಸಲಹೆಗಳನ್ನು ಕೊಟ್ಟು ಸರಕಾರದಿಂದಲೂ ಜನರಿಂದಲೂ ಸಂಘವನ್ನು ಅಭಿವೃದ್ಧಿಪಡಿಸಬೇಕೆಂದು ಪ್ರಾರ್ಥಿಸಿದರು. ಶ್ರೀಗಳಾದ ಶ್ರೀರಂಗಯ್ಯ, ಜಿ. ನಟರಾಜ್, ಎಂ. ರಾಮಸ್ವಾಮಯ್ಯ ಮುಂತಾದವರು ಭಾಷಣಗಳನ್ನು ಮಾಡಿದರು. ಕಾರ್ಯದರ್ಶಿಯವರು ವರದಿಯನ್ನು ಓದಿದ ಮೇಲೆ ಎಲ್ಲರಿಗೂ ಉಪಾಹಾರವಾಗಿ ಮಂಗಳಾರತಿಯೊಡನೆ ಸಭೆ ಮುಕ್ತಾಯವಾಯಿತು.

ಕುಸ್ತಿ ಪಂದ್ಯ

ಮಹಾರಾಜಾ ಹೈಸ್ಕೂಲಿನ ಆವರಣದಲ್ಲಿ ಮೈಸೂರು ವಿದ್ಯಾರ್ಥಿಗಳ ಕುಸ್ತಿಪಂದ್ಯವು ನಡೆಯುತ್ತಿದ್ದುದು ನಿನ್ನೆಗೆ ಮುಕ್ತಾಯವಾಯಿತು. ಶ್ರೀ ಕೆ. ಬಸವರಾಜ ಅರಸಿನವರು ಗೆದ್ದವರಿಗೆಲ್ಲಾ ಬಹುಮಾನಗಳನ್ನು ಹಂಚಿದರು.

ಒಂದನೇ ದರ್ಜೆ ಶ್ರೀ ವೆಂಕಟರಾಮು, ಎರಡನೇ ದರ್ಜೆ ಶ್ರೀ ಸಿ. ಶಂಕರಪ್ಪ, ಮೂರನೇ ದರ್ಜೆ ಶ್ರೀ ಲಕ್ಷ್ಮಣಪ್ಪ, ನಾಲ್ಕನೇ ದರ್ಜೆ ಶ್ರೀ ಶಂಕರಪ್ಪ. ಅಲ್ಲದೆ ಸೋತಂಥ ಶ್ರೀಗಳಾದ ಕರಿಯಣ್ಣ, ಶಿವಯ್ಯ, ಬಿ. ಎಲ್. ಕೃಷ್ಣಮೂರ್ತಿ ಮತ್ತು ಶ್ರೀನಿವಾಸ ಮುಂತಾದವರಿಗೂ ಬಹುಮಾನಗಳನ್ನು ಹಂಚಲಾಯಿತು.

ಕೈಲಾಸಂರವರ ಆಗಮನ

ಮೈಸೂರು ವಿಶ್ವವಿದ್ಯಾನಿಲಯ ಸಂಘದವರು ಆಚರಿಸುತ್ತಿರುವ "ನಾಡಹಬ್ಬ" ಸಮಾರಂಭದಲ್ಲಿ ಭಾಗಿಗಳಾಗಲು ಆಹ್ವಾನಿತರಾದ ಕನ್ನಡನಾಡಿನ ಸುಪ್ರಸಿದ್ಧ ನಾಟಕಕಾರರಾದ ಶ್ರೀಯುತ ಟಿ. ಪಿ. ಕೈಲಾಸಂರವರು ಇಂದು ಬೆಳಿಗ್ಗೆ ರಾಜಧಾನಿಗೆ ಆಗಮಿಸಿದರು.

ಓರಿಯಂಟಲ್ ಇಂಡಸ್ಟ್ರೀಸ್

ರಾಜಧಾನಿಯ ಓರಿಯಂಟಲ್ ಇಂಡಸ್ಟ್ರೀಸ್ ಸಂಸ್ಥೆಯ ಮಾಲೀಕರಾದ ಶ್ರೀ ಬಿ. ಎಸ್. ಸುಬ್ಬರಾಯರು ತಮ್ಮ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ನಿನ್ನೆ ರಾತ್ರಿ ೯ ಗಂಟೆಗೆ ಬಸ್ ನಿಲ್ದಾಣದ ಆವರಣದಲ್ಲಿ ಔತಣಕೂಟವನ್ನೇರ್ಪಡಿಸಿದ್ದರು. ನಗರದ ಅನೇಕ ಗಣ್ಯ ಮಾನ್ಯರುಗಳು ದಯಮಾಡಿಸಿದ್ದರು. ಔತಣವನ್ನು ಸಾಂಗವಾಗಿ ನೆರವೇರಿಸಲಾಗಿತ್ತು.

ದೊಡ್ಡ ರೋಗದ ಭೀತಿ

ಕೋಟೆ ಪ ಬಡಾವಣೆಯಲ್ಲಿ ಈ ಬಾರಿ ನಾಲ್ಕು ದಿವಸಗಳ ಹಿಂದೆಯೇ ದೊಡ್ಡರೋಗ ಹಬ್ಬಿದೆಯೆಂದು ಕಾರಣದಿಂದ ನಿನ್ನೆ ಸರಕಾರದಿಂದ ಪ್ರಕಟನೆ ಹೊರಟಿದೆ.

ಗೆಣಸು ರಫ್ತಿಗೆ ತಡೆ

ಸರ್ಕಾರದವರಿಂದ ಬರುವ ಅನುಮತಿ ಪತ್ರ ತೋರದೆ ಸಂಸ್ಥಾನದಿಂದ ಹೊರಗಡೆಗೆ ಗೆಣಸನ್ನು ರಫ್ತು ಮಾಡಕೂಡದೆಂದು ಆಜ್ಞೆಯಾಗಿದೆ.

ಯುದ್ಧ ಈಗಲೇ ಮುಗಿಯುವುದಿಲ್ಲ

ನ್ಯೂಜಿಲೆಂಡಿನ ಪ್ರಧಾನರಾದ ಮಿ॥ ಪೀಟರ್ ಫ್ರೇಸರ್‌ರವರು ತಮ್ಮ ದೇಶದ ಪ್ರಜೆಗಳಿಗೆ ಕ್ರಿಸ್‌ಮಸ್ ಹಬ್ಬದ ಸಂದೇಶಗಳನ್ನು ಕಳುಹಿಸುತ್ತ, ಈ ಕ್ರಿಸ್‌ಮಸ್ ಕಾಲವೇ ಯುದ್ಧದ ಅಂತ್ಯವಾಗುವುದಿಲ್ಲ. ಯುದ್ಧ ಇನ್ನೂ ಬಹಳ ಕಾಲ ನಡೆಯುವುದು. ಇದರಿಂದ ಬಹಳ ಜನರ ರಕ್ತಪಾತ ಮತ್ತು ಕಷ್ಟಸಾಧ್ಯವಾದ ಅನೇಕ ತೊಂದರೆಗಳು ಬರುವುವು.

ದಕ್ಷಿಣ ಆಫ್ರಿಕ ಮೋಯರರ ಪ್ರತಿಭಟನೆ

ದಕ್ಷಿಣ ಆಫ್ರಿಕದ ಭಾರತೀಯರಿಗೆ ಪೌರಸಭೆಯ ಚುನಾವಣೆಗೆ ನಿಲ್ಲುವ ಹಕ್ಕನ್ನು ಕೊಡಬೇಕೆಂದು ಅಲ್ಲಿನ ಮಂತ್ರಿಗಳು ಪೀಟರ್‌ಮರಿಟ್ಸ್‌ಬರ್ಗ್‌ನಲ್ಲಿ ಮಾಡಿದ ಭಾಷಣವನ್ನು ಬರ್ಬನ್ ಬರ್ಗ್ ಪೌರಸಭೆಯ ಮೇಯರವರು ಖಂಡಿಸಿ, ಭಾರತೀಯರು ಮತ್ತು ಕಪ್ಪು ಬಣ್ಣದ ಜನಾಂಗದವರೊಡನೆ ತಾವು ಕಲೆತುಕೊಳ್ಳಲು ಸಿದ್ಧರಾಗಿಲ್ಲವೆಂದು ಪ್ರತಿಭಟಿಸಿದ್ದಾರೆ.

ಐ. ಸಿ. ಎಸ್. ಅಧಿಕಾರಿಗಳ ದಸ್ತಗಿರಿ

ವಿಜಾಗಪಟ್ಟಣದ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಟಿ. ಎ. ವೇಷನ್ ಐ. ಸಿ. ಎಸ್. ರವರನ್ನು ಕಲ್ಕತ್ತದಲ್ಲಿ ಸ್ಪೆಷಲ್ ಬ್ರಾಂಚ್ ಪೋಲೀಸ್ ಸಬ್ ಇನ್ಸ್‌ಪೆಕ್ಟರು ದಸ್ತಗಿರಿ ಮಾಡಿದರು. ಬಾರಕ್‌ಪುರದ ಪೈವೇಟ್ ಮೊತ್ತದಿಂದ ಲಂಚ ಪಡೆದರೆಂಬ ಆಪಾದನೆಯ ಮೇಲೆ ದಸ್ತಗಿರಿ ಮಾಡಲಾಗಿದೆ.

ಕೇಂದ್ರ ಲೇಬರ್ ಸಮಿತಿ

ಕೇಂದ್ರ ಸರ್ಕಾರದ ಲೇಬರ್ ಸಚಿವರಾದ ಡಾ॥ ಬಿ. ಆರ್. ಅಂಬೇಡ್ಕರ್‌ರವರ ಅಧ್ಯಕ್ಷತೆಯಲ್ಲಿ ಜನವರಿ ೨೭ ನೇ ತಾರೀಖಿನಲ್ಲಿ ನಡೆಯುವ ಲೇಬರ್ ಸಮಿತಿ ಸಭೆ ದಿಲ್ಲಿಯಲ್ಲಿ ಸೇರುವುದು. ಮೈಸೂರು, [illegible] ವಾರು ಕೂಡ [illegible] ಪ್ರತಿನಿಧಿಗಳಾಗಿ ಮೈಸೂರಿನ [illegible] ಸಚಿವರಾದ ಶ್ರೀ ಟಿ. ಪಿ. [illegible] ರವರು ಈ ಸಭೆಯಲ್ಲಿ ಭಾಗಿಗಳಾಗುವರು.

ಮಲೇರಿಯಾದಿಂದ ಮರಣ

ಬಂಗಾಳ ಪ್ರಾಂತದ ಬರಿಸಾಲ್ ಜಿಲ್ಲೆಯಲ್ಲಿ ಕಾಲರ, ಮಲೇರಿಯಾ ಮತ್ತು ಸಿಡುಬಿನ ರೋಗಗಳ ಉಪದ್ರವವು ಪ್ರಬಲವಾಗಿ ಹಬ್ಬಿದೆ. ಜನರು ಸಾಯುತ್ತಿದ್ದಾರೆ. ಬೋಲ ಸಬ್-ಡಿವಿಜನ್ ಒಂದರಲ್ಲೇ ೮೦ ಸಾವಿರ ಜನರು ಮಲೇರಿಯಾದಿಂದ ನರಳುತ್ತಿರುವರು.

ಸ್ಟೇಷನ್ ಮಾಸ್ಟರಿಗೆ ಶಿಕ್ಷೆ

ಕಾಟಪಾಡಿ ರೈಲ್ವೆ ಸ್ಟೇಷನ್ ಮಾಸ್ಟರ್ ಶ್ರೀ ವೀರರಾಘವಾಚಾರ್ಯರವರು ಮಾಲಿನ ರಸೀತನ್ನು ಬಿಡುಗಡೆ ಮಾಡಲು ವ್ಯಾಗನ್ ಸರಬರಾಜಿಗೋಸ್ಕರ ೨೦ ರೂ. ಲಂಚವನ್ನು ತೆಗೆದುಕೊಂಡರೆಂಬ ಆಪಾದನೆಯ ಮೇಲೆ, ಮದರಾಸಿನ ಸ್ಪೆಷಲ್ ಕೋರ್ಟಿನವರು ೧ ವರ್ಷ ಕಠಿಣ ಶಿಕ್ಷೆ ಮತ್ತು ೫೦೦ ರೂ. ದಂಡವನ್ನು ವಿಧಿಸಿದರು.

ರೂಸ್‌ವೆಲ್ಟ್ ಕೊಲೆ ಪ್ರಯತ್ನಕ್ಕೆ ಶಿಕ್ಷೆ

ಅಧ್ಯಕ್ಷ ರೂಸ್‌ವೆಲ್ಟರನ್ನು ಗುಂಡಿನಿಂದ ಹೊಡೆದು ಕೊಲ್ಲಲು ಪ್ರಯತ್ನಿಸಿದ ವಾಲ್ಟರ್ ಜೆನ್ಸ್ ಎಂಬುವನನ್ನು ನೆನ್ನೆ ದಿನ ವಾಷಿಂಗ್‌ಟನ್ನಿನ ಫೆಡರಲ್ ಗ್ರ್ಯಾಂಡ್ ಜ್ಯೂರಿ ಕೋರ್ಟಿನ ಮುಂದೆ ವಿಚಾರಿಸಲಾಯಿತು. ಅವನಿಗೆ ೫ ವರ್ಷ ಕಠಿಣ ಸಜಾವನ್ನೂ, ೧೦೦೦ ಡಾಲರು ಜುಲ್ಮಾನೆಯನ್ನೂ ವಿಧಿಸಲಾಯಿತು.

ಬಿಸಿ ಬಿಸಿ ಸುದ್ದಿ

ಖಾಸಗಿ ಅಧ್ಯಕ್ಷರು ಬೇಕು

ಮೈಸೂರು ೨೩.

ಮೈಸೂರು ನಗರ ಪೌರಸಭೆಗೆ ಖಾಸಗಿ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕೆಂದು ಸರ್ಕಾರದವರನ್ನು ಕೇಳಲು ಈ ದಿನ ಸಂಜೆ ೪ ಗಂಟೆಗೆ ಮೈಸೂರು ಪೌರಸಭೆಯ ವಿಶೇಷ ಅಧಿವೇಶನವು ಶ್ರೀ ರಾಮಚಂದ್ರರಾವ್ ಬೋಂಕರ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀ ಟಿ. ವೆಂಕಟರಮಣಯ್ಯನವರು ನಿರ್ಣಯವನ್ನು ತಂದಿದ್ದರು. ಈ ಸಭೆಯು ಹಿಂದೆ ಅನೇಕ ಬಾರಿ ಇದೇ ವಿಷಯ ಮಾಡಿದ ನಿರ್ಣಯಗಳನ್ನೆಲ್ಲಾ ಜ್ಞಾಪಿಸಿದರು. ಖಾಸಗಿ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕು ಬಹಳ ದಿನಗಳ ಹಿಂದೆಯೇ ಮಾನವ ಸಂಸ್ಥಾನದ ನಗರಗಳಿಗೆ ರಾಜಧಾನಿ ನಗರ ಈ ನಗರಕ್ಕೆ ಕೊಡದಿದ್ದುದು ಶೋಚನೀಯ, ಈಗಲಾದರೂ ಸರ್ಕಾರದವರು ಕೂಡಲೇ ಅದನ್ನು ಕೊಡಬೇಕೆಂದು ಹೇಳಿದರು. ಶ್ರೀ ಬಿ. ನಾರಾಯಣಸ್ವಾಮಿ ನಾಯುಡುರವರು ನಿರ್ಣಯವನ್ನು ಅನುಮೋದಿಸಿದರು.

ಶ್ರೀಗಳಾದ ಸಿ. ಹೆಚ್. ರಾಮಯ್ಯ, ಮೊಹಮ್ಮದ್ ಯೂಸುಫ್, ಶ್ರೀ ಎಂ. ಎನ್. ಲಕ್ಷ್ಮಣರಾವ್ ಇವರುಗಳು ಸಹ ಮಾತನಾಡಿದರು.

ಶ್ರೀ ಎಸ್. ಸಿ. ರಾಮಚಂದ್ರನವರು ಇದು ಸಮಯೋಚಿತವಲ್ಲವೆಂದು [illegible] ಮಾತನಾಡಿದರು [illegible]

ಶ್ರೀಗಳಾದ [illegible] ಸಿಂಕ್‌ಲೇರ್, [illegible]

[illegible] ನಿರ್ಣಯ ಅಂಗೀಕೃತವಾಯಿತು.

ಆತ್ಮಸಂಯಮವೇ ಒಳ್ಳೇ ನಡತೆಯ ಅಸ್ತಿಭಾರ

ಅರಸು ಸ್ಕೂಲಿನ ಸುವರ್ಣೋತ್ಸವ

ಮೈಸೂರು ೨೨.

ರಾಜಧಾನಿಯ ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಶಾಲೆಯ ಸುವರ್ಣ ಮಹೋತ್ಸವವು ನಿನ್ನೆ ಸಂಜೆ ಮಹಾಪ್ರಭುಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ಅಧ್ಯಕ್ಷರಿಗೆ ಸ್ವಾಗತವನ್ನು ನೀಡಿದ ನಂತರ ಪ್ರಾರ್ಥನೆಯೊಡನೆ ಕಾರ್ಯಕ್ರಮಗಳು ಆರಂಭವಾದವು. ಅನಂತರ ಶ್ರೀ ಹೆಚ್. ಎಲ್. ಲಿಂಗರಾಜೇ ಅರಸರವರ ವೀಣಾ ವಾದನ ನಡೆಯಿತು. ಆಮೇಲೆ ಶಾಲಾ ವಿದ್ಯಾರ್ಥಿಗಳು ವ್ಯಾಯಾಮ ಪ್ರದರ್ಶನ ಮಾಡಿದರು.

ಶ್ರೀ ಆ ಗುರುದೇವರವರು ಶಾಲಾ ವರದಿಯನ್ನು ಓದಿ ಅದನ್ನು ಮಹಾರಾಜರಿಗೆ ಬೆಳ್ಳಿ ಕ್ಯಾಸ್ಕೆಟ್ಟಿನಲ್ಲಿಟ್ಟು ಒಪ್ಪಿಸಿದರು.

ಇಲ್ಲಿ ಕಲಿತ ಮತ್ತು ಕಲಿಯುತ್ತಿರುವ ವಿದ್ಯಾರ್ಥಿಗಳೂ ಅರಸು ಮಂಡಲಿಯಲ್ಲಿ ಗಣ್ಯರಾದ ಹಲವು ಮಹನೀಯರೂ ಈ ಸುವರ್ಣ ಮಹೋತ್ಸವದ ಜ್ಞಾಪಕಾರ್ಥವಾಗಿ "ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲಿನ ಕನಕಮಹೋತ್ಸವ ಸ್ಮಾರಕ ನಿಧಿ" ಎಂಬ ಹೆಸರಿನಲ್ಲಿ ದ್ರವ್ಯವನ್ನು ಶೇಖರಿಸಿಕೊಂಡು, ಈವರೆಗೆ ಹದಿನೈದು ಸಾವಿರ ರೂ. ಗಳನ್ನು ಕೂಡಿಸಿ ಇವರಲ್ಲಿ ರಾಜಸೇವಾಸಕ್ತ ಶ್ರೀ ಎಂ. ವೀರರಾಜ ಅರಸಿನವರು ಹತ್ತು ಸಾವಿರ ರೂ. ಗಳು, ಮತ್ತು ಶ್ರೀಮತಿ ರಾಜಕುಮಾರಿ ಲೀಲಾವತಿಯವರು, ಲೋಕಸೇವಾ ಬಸವರಾಜ ಅರಸಿನವರು, ಲೆಫ್ಟಿನೆಂಟ್ ಪಿ. ಬಸವರಾಜ ಅರಸಿನವರು, ಶ್ರೀಯುತರಾದ ಹೆಚ್. ಎಲ್. ದೇವರಾಜ ಅರಸಿನವರು, ಎ. ಸಿ. ರಾಜೇ ಅರಸಿನವರು, ಎಂ. ಚಲುವೇ ಅರಸಿನವರು, ಎಂ. ಡಿ. ವೆಂಕಟೇ ಅರಸಿನವರು, ಎಚ್. ಸಿದ್ಧರಾಜೇ ಅರಸಿನವರು ತಲಾ ಐದು ನೂರು ರೂ. ಗಳು ಕೊಟ್ಟಿದ್ದಾರೆಂದು, ಇನ್ನೂ ಬಾಕಿ ಬರಬೇಕಾಗಿರುವ ಮೊತ್ತವು ೭,೫೦೦ ರೂ. ಗಳು ಆಗಿದೆಯೆಂದು ತಿಳಿಸಿದರು.

ಕ್ರೀಡೆಗಳಲ್ಲಿ ಜಯಶಾಲಿಗಳಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿದ ಮೇಲೆ ಪ್ರಭುಗಳು ಭಾಷಣ ಮಾಡಿದರು.

ಪ್ರಭುಗಳ ಭಾಷಣ

ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಈ ರೀತಿಯಾಗಿ ಹೇಳಿದರು: ಆತ್ಮಸಂಯಮವೇ ಅಭಿವೃದ್ಧಿಯ ಮೂಲ ... ಅದರಿಂದಲೇ ನಿಜವಾದ ಪ್ರಗತಿ ... [illegible]

... ಒಳ್ಳೆಯ ನಡತೆಗೆ ನಿಮ್ಮ ... [illegible] ... ಲ್ಲ ಆತ್ಮ ಸಂಯಮವೇ ಒಳ್ಳೆ ನಡತೆಯ ಅಸ್ತಿಭಾರ.

ಸ್ವಾತಂತ್ರ್ಯದ ವೈಭವದ ವಿಷಯವಾಗಿ ಈ ಕಾಲದಲ್ಲಿ ನಾವು ಬಹಳವಾಗಿ ವರ್ಣನೆಗಳನ್ನು ಕೇಳುತ್ತಿದ್ದೇವೆ. ಆದರೆ ಸ್ವಾತಂತ್ರ್ಯದ ನಿಜವಾದ ಅರ್ಥವೇನೆಂಬುದನ್ನು ನೀವು ಶಾಂತವಾಗಿ ಪರ್ಯಾಲೋಚಿಸಿರುವಿರಾ? ನಿಮ್ಮ ಮನಸ್ಸು ಬಂದಂತೆ ವರ್ತಿಸಿ ಸರ್ಕಾರದ ಕಾನೂನುಗಳನ್ನೂ ಸಮಾಜದ ನಿಯಮಗಳನ್ನೂ ನಿರ್ಲಕ್ಷಿಸಬಹುದೆಂಬುದು ಖಂಡಿತವಾಗಿಯೂ ಅದರ ಅಭಿಪ್ರಾಯವಲ್ಲ. ಶಿಸ್ತು ಆತ್ಮ ಸಂಯಮಗಳಿಲ್ಲದ ಸ್ವಾತಂತ್ರ್ಯವು ಅವ್ಯವಸ್ಥೆಯಲ್ಲಿ ಪರ್ಯವಸಾನವಾಗುತ್ತದೆ.

ನಿಮಗೆ ಅನುಕೂಲವಾದ ಉದ್ಯೋಗವನ್ನು ಆರಿಸಲು ಶೀಘ್ರದಲ್ಲಿಯೇ ನೀವು ತೊಡಗಬೇಕಾಗುತ್ತದೆ. ಬೇರೆ ಯಾವುದೂ ದಾರಿಯೇ ಇಲ್ಲವೋ ಎಂಬಂತೆ ಸರ್ಕಾರಿ ಉದ್ಯೋಗವನ್ನೇ ನಿರೀಕ್ಷಿಸಿಕೊಂಡಿರುವ ಅಭ್ಯಾಸವು ಈಗಿನ ಕಾಲದಲ್ಲಿ ವಿಪರೀತವಾಗಿದೆ. ಸರ್ಕಾರಿ ಉದ್ಯೋಗದಲ್ಲಿ ಕೇವಲ ಕೆಲವರಿಗೆ ಮಾತ್ರ ಅವಕಾಶ ದೊರೆಯುತ್ತದೆ. ಯುದ್ಧಾನಂತರ ಹಿಂದೂಸ್ಥಾನದಲ್ಲಿ ಕೈಗಾರಿಕೆಗಳು ಅಪಾರವಾಗಿ ಬೆಳೆಯುತ್ತವೆ. ಕೈಗಾರಿಕೆಯ ವಿದ್ಯಾಭ್ಯಾಸಕ್ಕೆ ಎಲ್ಲಾ ಮುಂದುವರಿಯುವ ದೇಶಗಳಲ್ಲಿ ವಿಶೇಷ ಗಮನವನ್ನು ಕೊಡಲಾಗುತ್ತದೆ. ಈ ಭಾಗದಲ್ಲಿ ಸಂಪೂರ್ಣ ಸೌಕರ್ಯಗಳನ್ನು ಒದಗಿಸಲು ಮೈಸೂರು ಹಿಂದೆ ಬಿದ್ದಿಲ್ಲ.

ಶರೀರದ ಶ್ರಮದಿಂದ ಮಾಡಬೇಕಾದ ಕೆಲಸವನ್ನು ತಿರಸ್ಕರಿಸಬೇಡಿರಿ. ಅದು ಅವಮಾನಕರವೆಂದು ಭಾವಿಸಬೇಡಿರಿ. ವಿಜ್ಞಾನ ವಿಧಾನಗಳಿಂದ ಪರಿಷ್ಕೃತವಾದ ಶಾರೀರದ ಶ್ರಮವೇ ವ್ಯಕ್ತಿಗಳನ್ನೂ ರಾಷ್ಟ್ರಗಳನ್ನು ಮಹೋನ್ನತ ಪದವಿಗೆ ತಂದಿರುತ್ತವೆ.

ಜೀವನವು ಒಂದು ದೊಡ್ಡ ಸಂಗ್ರಾಮ. ಶಾಂತಿಯಿಂದಲೂ ಧೈರ್ಯದಿಂದಲೂ ಧೀರ ಸೇನಾದಿಗಳಂತೆ ಸುಸಂಸ್ಕೃತ ಪುರುಷರಂತೆ ನೀವು ಅದರಲ್ಲಿ ಹೋರಾಡಬೇಕು. ಕೈಕಸಬಿನಲ್ಲಿರುವ ಗೌರವವನ್ನು ಅರಿಯಬೇಕು. ಬುದ್ಧಿಶಕ್ತಿಯಿಂದಲೂ ದೇಹ ಬಲದಿಂದಲೂ ನಿಮ್ಮ ಕರ್ತವ್ಯವನ್ನು ನೆರವೇರ...

ರೇಷನಿಂಗ್ ಪ್ರಥಮ ಅನುಭವ

ರಾಜಧಾನಿಯಲ್ಲಿ ರೇಷನಿಂಗನ್ನು ಜಾರಿಗೆ ತಂದು, ಅತ್ಯಲ್ಪಕಾಲದಲ್ಲೇ ಸರಕಾರದವರು ಸಾಹಸದಿಂದ ಹಲವಾರು ಡಿಪೋಗಳನ್ನು ಅಲ್ಲಲ್ಲೇ ಏರ್ಪಡಿಸಿರುವುದು ಅಭಿನಂದನೀಯವಾದುದೇ ಸರಿ. ಆದರೆ ನಿನ್ನೆ ದಿನ ನಗರದ ನಾನಾ ಭಾಗಗಳ ಡಿಪೋಗಳಲ್ಲಿ ರೇಷನಿಂಗ್ ಕಾರ್ಡು ಪಡೆದವರಿಗೆ ದವಸಗಳು ದೊರೆಯದೆ ಜನರು ಪಡುತ್ತಿದ್ದ ಕಷ್ಟಗಳನ್ನು ಕಂಡ ಎಂಥಾ ಕಲ್ಲೆದೆಯಾದರೂ ಕರಗಿಹೋಗುತ್ತಿತ್ತು. ನಡು ರಾತ್ರಿಯಲ್ಲಿ ಮನೆ ಮಕ್ಕಳನ್ನು ಬಿಟ್ಟು, ಡಿಪೋಗಳ ಮುಂದೆ ಉಪವಾಸದಿಂದ ಪರಿತಪಿಸುತ್ತಿದ್ದ ಜನರ ಕಷ್ಟಗಳನ್ನು ಹೇಳತೀರದು.

೧೯ ನೇ ತಾರೀಖಿನ ದಿನ ಡಿಪೋಗಳಲ್ಲಿ ದವಸಗಳನ್ನು ಸಾಗಿಸದೆ ಹೋದದ್ದೇ ಇಷ್ಟು ಅವ್ಯವಸ್ಥೆಗೆ ಕಾರಣ. ಜನರು ಮರು ದಿವಸವಾದರೂ ದವಸಗಳು ಸಿಕ್ಕೀತೆಂಬ ಭರವಸೆಯಿಂದಿದ್ದರು. ಆದರೆ ಅಂದೂ ನಿರಾಶರಾದವರ ಪಾಡನ್ನು ಹೇಳಬೇಕೇ? ಎರಡು ದಿನಗಳಿಂದ ಹಸಿದು ಹೊಟ್ಟೆಗಾಗಿ ಅಲೆದಾಡುತ್ತಿದ್ದ ಅಂಥಾ ದೃಶ್ಯವನ್ನು ರಾಜಧಾನಿಯ ಚರಿತ್ರೆಯಲ್ಲಿ ನಾನೆಂದೂ ಕಂಡಿರಲಿಲ್ಲ. ಹಲವರಿಗಿನ್ನೂ ರೇಷನ್ ಕಾರ್ಡುಗಳೇ ತಲುಪಿಲ್ಲ. ತಲುಪಿದ ಕಾರ್ಡುಗಳಲ್ಲೂ ಹಲವಾರು ತಪ್ಪುಗಳು. ಡಿಪೋಗಳ ಸ್ಥಳಗಳೂ ಅನೇಕರಿಗೆ ಗೊತ್ತಿರಲಿಲ್ಲ. ಬಹುಮಂದಿ ವಿದ್ಯಾವಂತರೇ ದಿಗ್ಭ್ರಾಂತರಾಗಿ ಅಲೆಯುತ್ತಿದ್ದರೆಂದರೆ, ಅವಿದ್ಯಾವಂತರ ದುರವಸ್ಥೆಯನ್ನು ವರ್ಣಿಸಬೇಕೇ?

ನನ್ನೆ ನಡುರಾತ್ರಿಯಲ್ಲಿ ನನ್ನ ಮೊಹಲ್ಲಾದ ಸುಮಾರು ೬೦ ಮಂದಿ ಬಡವರು ದಿಕ್ಕುದೋರದೆ ನನ್ನ ಮನೆಯನ್ನು ಮುತ್ತಿದಾಗ, ನನ್ನ ಮನಸ್ಸು ತಾಳಲಾರದೆ, ನನ್ನಲ್ಲಿದ್ದ ರಾಗಿಯಲ್ಲಿ ತಲಾ ಅರ್ಧ ಸೇರು ಕೊಟ್ಟು ಕಳುಹಿಸಿದೆನು.

ಡಿಪೋಗಳ ಸಂಖ್ಯೆಯು ಸಾಲದಿರುವುದೇ ಈ ಗೊಂದಲಕ್ಕೆ ಮುಖ್ಯ ಕಾರಣ. ಸರಕಾರದವರು ಉದಾರ ಮನಸ್ಸಿನಿಂದ ವರ್ತಕ ವರ್ಗದವರನ್ನು ನಂಬಿ, ಅವರಿಗೂ ಜವಾಬ್ದಾರಿಯನ್ನು ವಹಿಸಿದ್ದರೆ ಜನರು ಈ ದುಸ್ತರವಾದ ಕಷ್ಟಗಳಿಗೀಡಾಗುತ್ತಿರಲಿಲ್ಲ. ಸರಕಾರದವರು ಇನ್ನಾದರೂ ಹೀಗೆ ಮಾಡುವರೇ?

ಮಹಾಜನರೂ ಕೂಡ ಈ ಸಂದರ್ಭದಲ್ಲಿ ತಮ್ಮ ಜವಾಬ್ದಾರಿಯನ್ನೂ, ರೇಷನಿಂಗ್ ವ್ಯವಸ್ಥೆಯ ಮೂಲೋದ್ದೇಶವನ್ನೂ ಮನಗಂಡು, ತಾಳ್ಮೆಯಿಂದ ವರ್ತಿಸಿದಲ್ಲಿ ಉಭಯತ್ರರಿಗೂ ಕಾರ್ಯವು ಸುಲಭವಾಗುವುದು.

ಎಂ. ವಿ. ವೆಂಕಟರಾಮಯ್ಯ,
ಮುನಿಸಿಪಲ್ ಕೌನ್ಸಿಲರ್.

ಸಟೀಕ ವಿಜಯಕ್ಕೆ ಸಣ್ಣ ದಾರಿಗಳು ಇಲ್ಲ. ಸತ್ಯ ಪ್ರಾಮಾಣಿಕತೆ ಧೈರ್ಯ ಮತ್ತು ನಿಸ್ವಾರ್ಥತೆ ನಿಮ್ಮ ಮಹಾ ಮಂತ್ರಗಳಾಗಿರಲಿ

ನಿಮಗೆ ಯಶಸ್ಸುಂಟಾಗಲೆಂದೂ ನೀವೆಲ್ಲರೂ ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲಿನ ಕೀರ್ತಿಗೆ ಅನುರೂಪವಾದ ವಿದ್ಯಾರ್ಥಿಗಳಾಗಲೆಂದೂ ಹಾರೈಸುತ್ತೇನೆ.

ಅನಂತರ ರಾಷ್ಟ್ರಗೀತೆಯೊಡನೆ ಉತ್ಸವವು ಮುಕ್ತಾಯಗೊಂಡಿತು.

ಚಿತ್ತಗಾಂಗ್ ಮೇಲೆ ಧಾಳಿ

೨೦ ನೇ ತಾ|| ಬೆಳಗ್ಗೆ ಜಪಾನೀ ವಿಮಾನಗಳು ಚಿತ್ತಗಾಂಗ್ ಕ್ಷೇತ್ರದ ಮೇಲೆ ಹಾರಾಡಿ ಹಲಕೆಲವು ಬಾಂಬುಗಳನ್ನು ಕೆಡವಿದವು. ಪ್ರಾಣಹಾನಿಯಾಗಲೀ ಆಸ್ತಿಪಾಸ್ತಿ ನಷ್ಟವಾಗಲೀ ಹೆಚ್ಚು ಪ್ರಮಾಣದಲ್ಲಿ ಸಂಭವಿಸಿಲ್ಲ

ಯಾವಾಗಲೂ ಕೊಳ್ಳಿರಿ!

ಏನನ್ನು? :: ಎಲ್ಲಿ?

Truefit READY MADE CLOTHES MADURA

ಆತ್ಯಾಧುನಿಕ ಬಗೆಯ, ಮನಮೆಚ್ಚುವ ಉಡಿಗೆ ತೊಡಿಗೆಗಳು

ಸ್ವಾಸ್ತಿಕ್ ಸ್ಟೋರ್ಸ್

ದಾಸಪ್ರಕಾಶ ಬಿಲ್ಡಿಂಗ್ಸ್, ಷಾಪ್ ನಂ. ೯ ಸಯ್ಯಾಜಿರಾವ್ ರಸ್ತೆ (?) ಮಂಡಿ ಪೇಟೆ, ಮೈಸೂರು

Edited, printed and published by A. R. Nagarajan, at the Sadhvi Press, D. Subbiah Road, Mysore

ಪ್ರತಿ ದಿನ ಮೂರು ಆಟಗಳು

ಅಪೇರಾ ಟಾಕೀಸ್

23-12-43 ರಿಂದ

[ಜಯಂತ್ ದೇಸಾಯಿಯವರ ತಯಾರಿಕೆ]

ಭಕ್ತರಾಜ್

ಅಥವಾ

ಅಂಬರೀಷ

(ಹಿಂದೀ ಭಾಷೆಯಲ್ಲಿ)

ನಟವರ್ಗ - ವಿಷ್ಣುಪಂತ್ ಪಗ್ನಿಸ್, ವಾಸಂತಿ, ದೀಕ್ಷಿತ್, ಮುಬಾರಕ್, ಇ. ಬಿಲ್ಲಿಮೋರಿಯಾ, ಕೌಸಲ್ಯ.

ದರ್ಜೆ ತರಗತಿಗಳು --0-5-0, 0 3 0, ಬಾಕಿ ತರಗತಿಗಳು ಮಾಮೂಲಿನಂತೆ

ಕೈಲಾಸಂರವರ ಅದ್ಭುತ ಪ್ರತಿಭೆ

ಮೈಸೂರು ೨೪

ನಿನ್ನೆ ಸಂಜೆ ವಿಶ್ವವಿದ್ಯಾನಿಲಯ ಸಂಘದ ಆಶ್ರಯದಲ್ಲಿ ನಡೆದ "ನಾಡಹಬ್ಬ"ದ ಸಮಾರಂಭಕ್ಕೆ ಶ್ರೀಮಾನ್ ಟಿ. ಪಿ. ಕೈಲಾಸಂರವರು ಮುಖ್ಯ ಅತಿಥಿಗಳಾಗಿ ದಯಮಾಡಿಸಿದ್ದರು. ಈ ಪ್ರಹಸನ ಪಿತಾಮಹರ ದರ್ಶನಕ್ಕಾಗಿ ವಿದ್ಯಾರ್ಥಿಗಳು ತುಂಬಾ ಉತ್ಸಾಹದಿಂದ ನೆರೆದಿದ್ದರು.

ಅನೇಕ ವಿದ್ಯಾರ್ಥಿಗಳು ಕೈಲಾಸಂರವರಿಗೆ ವಿವಿಧ ಪ್ರಶ್ನೆಗಳನ್ನು ಹಾಕಿದರು. ಕೈಲಾಸಂರವರ ಉತ್ತರಗಳು ಗುಡುಗು ಮಿಂಚುಗಳಂತೆ ಮರುಕ್ಷಣದಲ್ಲೇ ತೂರಿ ಹೊರಟು ಸಭಿಕರನ್ನು ಚಕಿತಗೊಳಿಸಿದವು. ಅವರು ಸಂಸ್ಕೃತ, ಇಂಗ್ಲಿಷ್, ಪರ್ಷಿಯನ್, ಸ್ಪ್ಯಾನಿಷ್, ಇಟಾಲಿಯನ್, ಲ್ಯಾಟಿನ್ ಮೊದಲಾದ ಅನೇಕ ಭಾಷೆಗಳ ಗಾದೆಮಾತುಗಳನ್ನು ಉದಹರಿಸಿದರು.

ದೇಶೀಯ ವಿದ್ಯಾಶಾಲಾ

೧೭–೧೨–೪೩ ನೆಯ ತಾ|| ಶುಕ್ರವಾರ ದೇಶೀಯ ವಿದ್ಯಾಶಾಲೆಯ ಸಹಾಯಾರ್ಥವಾಗಿ ಟೌನ್‌ಹಾಲಿನಲ್ಲಿ ನಡೆದ ವಿವಿಧ ವಿನೋದಾವಳಿಯ ಸಂದರ್ಭದಲ್ಲಿ ೧೧೧ ರೂ. ೧೨ ಆಣೆಗಳ ಟಿಕೆಟ್ಟುಗಳು ಮಾರಾಟವಾಗಿವೆ. ಇಂತಹ ಉದಾರವಾದ ಸಹಾಯ, ಪ್ರೋತ್ಸಾಹಗಳನ್ನಿತ್ತ ಎಲ್ಲ ಮಹಾಶಯರುಗಳಿಗೂ, ಸಮಾರಂಭವು ಅಷ್ಟು ಯಶಸ್ವಿಯಾಗಿ ನಡೆಯಲು ಕಾರಣರಾದವರೆಲ್ಲರಿಗೂ ಶಾಲೆಯ ಸಮಿತಿಯವರು ತಮ್ಮ ವಂದನೆಗಳನ್ನು ಅರ್ಪಿಸುತ್ತಾರೆ.

ಶಾಲಾ ಸದಸ್ಯರ ಸಾರ್ವತ್ರಿಕ ಸಭೆಯು ೨೬–೧೨–೪೩ ನೆಯ ಭಾನುವಾರ ಸಂಜೆ ೬ ಗಂಟೆಗೆ ಶಾಲೆಯಲ್ಲಿ ನಡೆಯುತ್ತದೆ. ವಾರ್ಷಿಕ ವರದಿಯನ್ನು ಹಣಕಾಸಿನ ಪಟ್ಟಿಯನ್ನೂ ಒಪ್ಪಿಸಲಾಗುವುದು.

ಉಪನ್ಯಾಸ

ಸ್ವಾಮಿ ಶ್ರದ್ಧಾನಂದರ ೧೭ ನೇ ವರ್ಷದ ಪುಣ್ಯದಿನವು ೨೬ ನೇ ತಾ|| ಭಾನುವಾರ ಸಂಜೆ ರಾಜಧಾನಿಯ ಬನುಮಯ್ಯಾ ಹೈಸ್ಕೂಲಿನಲ್ಲಿ ದಯಾನಂದ ಆಶ್ರಮ ಸಂಘದ ಆಶ್ರಯದಲ್ಲಿ ನಡೆಯುವುದು. ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರವರು ಅಧ್ಯಕ್ಷತೆ ವಹಿಸುವರು. ಮದರಾಸಿನ ಶ್ರೀ ಮಹಾಲಿಂಗಂ ಅಯ್ಯರ್‌ರವರು ಮದರಾಸಿನಲ್ಲಿ ಮುಂದೆ ಕೂಡಲಿರುವ ಅಖಿಲಭಾರತ ಆಹಾರ ಮತ್ತು ಕ್ಷೀರ ಸಮ್ಮೇಳನವನ್ನು ಕುರಿತು ಉಪನ್ಯಾಸ ಮಾಡುತ್ತಾರೆ.

ಉಪವಾಸ ಪ್ರಕರಣ

[illegible] ಕಾಲೇಜಿನ ಐದು ವಿದ್ಯಾರ್ಥಿಗಳ [illegible] ಪ್ರಕರಣದ ಸಂಬಂಧವಾಗಿ [illegible] ಸಮಿತಿಯ [illegible] ವರದಿಯನ್ನು [illegible] ಇಂದು ಸಾಯಂಕಾಲ [illegible] ನಾಳೆ ದಿನ ಪ್ರಕಟಿಸಲ್ಪಡುವುದು.

ಶ್ರೀ ವೆಂಕಟಪ್ಪ ಸ್ಮಾರಕ ಚರ್ಚೆ

[illegible] ನಡೆಯಬೇಕಾಗಿದ್ದ ಶ್ರೀ ವೆಂಕಟಪ್ಪ ಸ್ಮಾರಕ ಚರ್ಚೆಯನ್ನು ಕೆಲವು ಅನಿವಾರ್ಯಗಳಿಗಾಗಿ ಜನವರಿ [illegible] ಮುಂದೂಡಲಾಗಿದೆಯೆಂದು ವಿದ್ಯಾರ್ಥಿ [illegible] ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸಂಪುಟ ೨] ಶುಕ್ರವಾರ ೨೪—೧೨—೪೩ [ಸಂಚಿಕೆ ೧೩೫

ಮುಂದಿನ ಬ್ರಿಟಿಷ್ ಮುಖ್ಯಮಂತ್ರಿ ಯಾರು?

ಈಡನ್, ಆಂಡರ್ಸನ್, ಕ್ರಿಪ್ಸರಿಗಾಗಿ ಚಳುವಳಿ

ರೇಷನ್ ಬಗ್ಗೆ ಬಂಗಾಳಕ್ಕೆ ಇಂಡಿಯಾ ಸರ್ಕಾರದ ಒತ್ತಾಯ

ಶ್ರೀರಾಮ ಲೀಗ್

ಪ್ರತಿ ವರ್ಷವೂ ನಡೆಯುವಂತೆ ಶ್ರೀರಾಮ ಲೀಗಿನಲ್ಲಿ ೨೦-೧-೪೪ನೇ ತಾರೀಖಿನಿಂದ ಮಿಡಲ್‌ಸ್ಕೂಲು ವಿದ್ಯಾರ್ಥಿಗಳಿಗೆ ಕೋಚಿಂಗ್ ಕ್ಲಾಸುಗಳು ಸಾಯಂಕಾಲದಲ್ಲಿ ನಡೆಯುತ್ತವೆ. ಅದಕ್ಕೆ ಸೇರಲಿಷ್ಟಪಡುವವರು ೩೧-೧೨-೪೩ರೊಳಗಾಗಿ ಲೀಗಿನ ಸೆಕ್ರೆಟರಿಯವರಿಗೆ ಅರ್ಜಿ ಹಾಕಿಕೊಳ್ಳುವಂತೆ ತಿಳಿಸಲಾಗಿದೆ.

ಖದ್ದರ್ ಸೊಸೈಟಿ

ಬರುವ ೯ ನೇ ತಾ|| ಭಾನುವಾರ ಬೆಳಗ್ಗೆ ೯ ಗಂಟೆಗೆ ಮೈಸೂರು ಖದ್ದರ್ ಪರಸ್ಪರ ಸಹಾಯ ಸಂಘದ ೧೪ ನೇ ವಾರ್ಷಿಕ ಮಹಾಸಭೆಯು ಚಾಮರಾಜ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಡೆಯುವುದು.

ಒಂದೇ ಕಾಲದಲ್ಲಿ ಮೂರು ಮಕ್ಕಳು

ಸ್ವಂ. ವ.] ಬೆಂಗಳೂರು ೨೩

[illegible] ಒಬ್ಬ ಮಹಿಳೆಯು ಒಂದೇ ಕಾಲದಲ್ಲಿ ಮೂರು ಮಕ್ಕಳನ್ನು ಹಡೆದಿದ್ದಾಳೆ. ತಾಯಿಯೂ, ಇಬ್ಬರು ಹೆಣ್ಣುಮಕ್ಕಳು, ಒಂದು ಗಂಡುಮಗುವೂ ಸುಖವಾಗಿದ್ದಾರೆಂದೂ, ಅವರನ್ನು ವಾಣೀವಿಲಾಸ ಆಸ್ಪತ್ರೆಗೆ ಕಳುಹಿಸಲಾಗಿದೆಯೆಂದೂ ವರದಿಯಾಗಿದೆ.

ಪತ್ರಿಕೆಯ ಮೇಲೆ ಮಾನನಷ್ಟ ಮೊಕದ್ದಮೆ

ಬೆಂಗಳೂರಿನ "ಚಿತ್ರಸಮಾಚಾರ" ಎಂಬ ಪತ್ರಿಕೆಯ ಸಂಪಾದಕರಾದ ಶ್ರೀ [illegible] ಕೃಷ್ಣನ್ [illegible] ಶ್ರೀ [illegible] ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ಮಾನನಷ್ಟ ಮೊಕದ್ದಮೆಯನ್ನು [illegible] ತಮ್ಮ ಗೌರವಕ್ಕೆ [illegible] ಲೇಖನಗಳನ್ನು [illegible] ಮೊಕದ್ದಮೆಯು [illegible] ಕ್ಕೆ ಮುಂದೂಡಲಾಗಿದೆ.

ಪ್ರಾಂತಗಳ ಎ. ಆರ್. ಪಿ.

[illegible] ಸರ್ಕಾರದವರು [illegible] ಮಿತಿಯನ್ನು [illegible] ಕೇಂದ್ರಗಳನ್ನು ನಿರ್ಮಿಸಬೇಕೆಂದು [illegible] ಸಿದ್ದಾರೆ.

ರೇಷನಿಂಗ್ ಬಗ್ಗೆ ಕೇಂದ್ರ ಸರ್ಕಾರದ ಆಜ್ಞೆ

ಬಂಗಾಳದಲ್ಲಿ ರೇಷನಿಂಗ್ ಜಾರಿಗೆ ತರುವ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಬಂಗಾಳಾ ಸರ್ಕಾರಕ್ಕೆ ಮುಂದಿನ ಜನವರಿ ೩೧ ನೇ ತಾ|| ಒಳಗಾಗಿ ಸರ್ಕಾರಿ ಮತ್ತು ವರ್ತಕರ ಡಿಪೋಗಳನ್ನು ತೆರೆಯಬೇಕೆಂದು ಆಜ್ಞೆ ಮಾಡಿದ್ದಾರೆ.

ಆಹಾರ ಸಂಬಂಧವಾದ ವಿಷಯದಲ್ಲಿ ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಿಗೂ ಮತ್ತು ಬಂಗಾಳಾ ಮಂತ್ರಿಗೂ ಭಿನ್ನಾಭಿಪ್ರಾಯವುಂಟಾಗಿ ಬಂಗಾಳಾ ಸರ್ಕಾರದವರು ಸರ್ಕಾರದ ಡಿಪೋಗಳನ್ನು ಮಾತ್ರವೇ ತೆರೆಯಬೇಕೆಂದೂ ಮತ್ತು ಜನವರಿ ೧೫ ಕ್ಕೆ ರೇಷನಿಂಗ್ ಜಾರಿಗೆ ತರಬೇಕೆಂದೂ ಹೇಳಿರುವರು. ಇದನ್ನು ಕೇಂದ್ರ ಸರ್ಕಾರ ಒಪ್ಪದೆ, ಮೇಲೆ ಹೇಳಿದ ಆಜ್ಞೆಯನ್ನು ಜಾರಿಗೆ ತರಬೇಕೆಂದು ತಿಳಿಸಿದ್ದಾರೆ.

ಬ್ರಿಟಿಷ್ ಕಾನ್ಸಲೇಟ್ ಮುಂದೆ ಪ್ರದರ್ಶನ

ಬಂಗಾಳದ ಕ್ಷಾಮದಲ್ಲಿ ನೊಂದವರಿಗೆ ಸಹಾನುಭೂತಿ ತೋರಿಸಲು ನ್ಯೂಯಾರ್ಕಿನ ಯುವಕ ಸೋಷಲಿಸ್ಟ್ ಲೀಗಿನ ಮೂರು ಜನ ಯುವತಿಯರು ಬ್ರಿಟಿಷ್ ಕಾನ್ಸಲೇಟ್ ಮುಂಭಾಗದಲ್ಲಿ ಪ್ರದರ್ಶನ ನಡೆಸಿ ಪಿಕೆಟ್ ಮಾಡಿದರೆಂದೂ, ಅದರ ಫಲವಾಗಿ ಅವರನ್ನು ಕೋರ್ಟಿನ ಮುಂದೆ ನಿಲ್ಲಿಸಲು, ನ್ಯಾಯಾಧೀಶರು ತಮಗೆ ಸಂಬಂಧವಿಲ್ಲದ ಹೊರದೇಶದ ವಿಚಾರದಲ್ಲಿ [illegible] ತಮ್ಮ ದೇಶದ [illegible] ಕೆಡ [illegible] ಬುದ್ಧಿ ಹೇಳಿ ಕಳುಹಿಸಿದರು.

ಜಪಾನಿ ನಗರಗಳ ಖಾಲಿ

ಟೋಕಿಯೋ ಒಸಾಕಾ ಮೊದಲಾದ ದೊಡ್ಡ ನಗರಗಳಲ್ಲಿ ವಿಮಾನ ವಿರೋಧಕ ರಕ್ಷಣಾ ವ್ಯವಸ್ಥೆಗಳನ್ನು ಏರ್ಪಡಿಸಲು, [illegible] ಜನರನ್ನು ಬೇರೆ ಪ್ರದೇಶಕ್ಕೆ ಕಳುಹಿಸಲು [illegible] ನಡೆಯುತ್ತಿವೆಯೆಂದು ವರದಿಯಾಗಿದೆ.

ರಷ್ಯನರು ವಿಟೆಬ್ಸ್ಕ ಬಳಿ

ರಷ್ಯನ್ ಸೇನೆಗಳು ವಿಟೆಬ್ಸ್ಕ ಮೇಲೆ [illegible] ಸಮೀಪಕ್ಕೆ ಬಂದಿರುವುದಾಗಿ ವರದಿಗಳು ಬಂದಿವೆ.

ಮುಂದಿನ ಮುಖ್ಯ ಮಂತ್ರಿ ಯಾರು?

ಬ್ರಿಟಿಷ್ ಪ್ರಧಾನಿಗಳಾದ ಚರ್ಚಿಲ್ [illegible] ಕಾಯಿಲೆ ಬಿದ್ದಿರುವುದರಿಂದ, [illegible] ಪ್ರಧಾನಿಗಳಾರು ಎಂಬ ಪ್ರಶ್ನೆ ಲಂಡನ್ನಿನಲ್ಲಿ ಎದ್ದಿದೆ. ಮಿ|| ಈಡನ್, ಸರ್ ಜಾನ್ ಆಂಡರ್ಸನ್ ಮತ್ತು ಕ್ರಿಪ್ಸರುಗಳಿಗಾಗಿ ಈಗಿನಿಂದಲೇ ಪ್ರಚಾರ ಚಳುವಳಿ ನಡೆಯುತ್ತಿರುವುದಾಗಿ ತಿಳಿದುಬಂದಿದೆ.

ಜರ್ಮನರ ಪ್ರತೀಕಾರ

ಖಾರ್ಕೋವ್ ನಗರದಲ್ಲಿ ಜರ್ಮನರನ್ನು ಗಲ್ಲಿಗೇರಿಸಿದ ವಿಚಾರದಲ್ಲಿ ಜರ್ಮನಿಯು ಒಂದು ಅಧಿಕಾರಯುತವಾದ ಹೇಳಿಕೆಯನ್ನು ಹೊರಡಿಸಿ, ತನ್ನ ಕಡೆಯಲ್ಲಿರುವ ಬ್ರಿಟಿಷ್ ಮತ್ತು ಅಮೆರಿಕ ಯೋಧಬಂದಿಗಳನ್ನು ಅಂತರ್‌ರಾಷ್ಟ್ರೀಯ ಶಾಸನಗಳಿಗಾಗಿ ಜರ್ಮನ್ ಮಿಲಿಟರಿ ಕೋರ್ಟಿನಲ್ಲಿ ವಿಚಾರಣೆಗೆ ಒಳಪಡಿಸುವುದಾಗಿ ತಿಳಿಸಿದ್ದಾರೆ.

ಕಲ್ಕತ್ತಾ ಧಾಳಿ

ಕಲ್ಕತ್ತೆಯಲ್ಲಿ ಕಳೆದ ೫ ನೇ ತಾ|| ನಡೆದ ಶತ್ರು ಧಾಳಿಯಲ್ಲಿ ಬಾಂಬಿನ ಹೊಡೆತದಿಂದ ಗಾಯಗೊಂಡಿದ್ದ ಕೆಲವರನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು. ಮೊನ್ನೆ ದಿನ ಆಸ್ಪತ್ರೆಯಲ್ಲಿ ೧೭ ಜನರು ಮೃತರಾದರು. ಕಲ್ಕತ್ತೆಯ ಧಾಳಿಯಲ್ಲಿ ಇದುವರೆಗೆ ೩೫೦ ಜನ ಆಸ್ಪತ್ರೆಯಲ್ಲಿ ಮರಣಹೊಂದಿದರೆಂದು ವರದಿಯಾಗಿದೆ.

ಬಾಡಿಗೆ ಮನೆಯಿಂದ ಓಡಿಸಿದ್ದಕ್ಕೆ ಶಿಕ್ಷೆ

ಲಾಹೋರಿನ ಪ್ರಮುಖ ವರ್ತಕರಾದ ಸೇಠ್ ಖಾಲಿದ್ ಭಾಯಿ [illegible] ಎಂಬುವರು ತಮ್ಮ ಮನೆಯೊಂದರಲ್ಲಿ ಒಕ್ಕಲಿದ್ದ ಒಬ್ಬ ಹೆಂಗಸನ್ನು ಮನೆಯಿಂದ ಓಡಿಸಿ, ಆಕೆಯು ಮನವಿ ಮಾಡಿಕೊಳ್ಳಲು ಬಂದಾಗ ಆಕೆಯ ಐದು ವರ್ಷದ ಮಗುವನ್ನು ತಳ್ಳಿ ಗಾಯಪಡಿಸಿದರೆಂಬ ಆಪಾದನೆಯ ಮೇಲೆ ೫ ವರ್ಷ ಕಠಿಣ ಶಿಕ್ಷೆ ಮತ್ತು [illegible] ದಂಡ ವಿಧಿಸಲಾಯಿತು.

ಯುಗೋಸ್ಲೇವಿಯಾ ಸರ್ಕಾರದ ಹಕ್ಕು ಹೋಯಿತು

ಯುಗೋಸ್ಲೇವಿಯಾ ವಿಮೋಚನಾ ಸಮಿತಿ ನಾಯಕರಾದ ಮಾರ್ಷಲ್ ಟಿಟೋರವರು ಒಂದು ಹೇಳಿಕೆಯನ್ನಿತ್ತು, ಪೀಟರ್ ದೊರೆಗಳ ಸರ್ಕಾರದ ಹಕ್ಕನ್ನೆಲ್ಲಾ ಕಿತ್ತುಹಾಕಿ ದೇಶದ ವಿಮೋಚನಾಕಾಂಕ್ಷಿಗಳ [illegible] ಕೊಡಬೇಕೆಂದು ಆಜ್ಞೆ ಮಾಡಿದ್ದಾರೆ. ಯುಗೋಸ್ಲೇವಿಯಾ [illegible] ದೇಶದಲ್ಲಿ [illegible] ಸಹಾಯ ಮಾಡಬೇಕೆಂದು ಮಿತ್ರರಾಷ್ಟ್ರಗಳನ್ನು ಕೇಳಿಕೊಂಡಿದ್ದಾರೆ.

ಹಾಸನದ [illegible] ಬಗ್ಗೆ

ಮೈಸೂರಿನವರಿಗೆ ಮನವಿ

[illegible] ಅಜ್ಜಯ್ಯನವರ [illegible] ಮತ್ತು ಇತರ ಸಂಸ್ಥೆಗಳ [illegible] ಸರಕಾರದವರಿಗೆ ಒಂದು [illegible] ಕಳುಹಿಸಿದ್ದಾರೆ.

ಮಿಲಿಟರಿ ಲಾರಿಗಳ ಸಂಚಾರದ ಹತೋಟಿ

ಬಡಜನರ ಮನೆ ಅಕ್ವೈರ್ ಆದರೆ ಉಚಿತ ಸೈಟುಗಳು

ಮೈಸೂರು ಪೌರಸಭೆಯ ಮೀಟಿಂಗಿನ ಕಾರ್ಯಕಲಾಪಗಳು

ಮೈಸೂರು ೨೪

ಮೈಸೂರು ಪೌರಸಭೆಯ ಸಾಧಾರಣ ಮೀಟಿಂಗು ನಿನ್ನೆ ಸಾಯಂಕಾಲ ಶ್ರೀ ರಾಮಚಂದ್ರರಾವ್ ಬೋಂಘೋರೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸರ್ಕಾರದಿಂದ ಬಂದ ಕಾಗದಪತ್ರಗಳು ರಿಕಾರ್ಡು ಮಾಡಲ್ಪಟ್ಟವು

ಪ್ರಶ್ನೋತ್ತರಗಳು

ಪ್ರಶ್ನೆಗಳಿಗೆ ಉತ್ತರವಾಗಿ ಅಧ್ಯಕ್ಷರು ಶ್ರೀ ... ಮರಿದ ಸಮೀಪದಲ್ಲಿ ಕೆಲವರು ಗಾಡಿಗಳಲ್ಲಿ ಪದಾರ್ಥಗಳನ್ನು ತಂದು ಸುರಿದು ಅಳತೆ ವಗೈರೆ ವ್ಯಾಪಾರ ನಡೆಸುತ್ತಿರುವರೆಂದೂ, ಇದರಿಂದ ಸಾರ್ವಜನರ ಆರೋಗ್ಯಕ್ಕೆ ಧಕ್ಕೆ ಉಂಟಾಗುವುದಲ್ಲದೆ ತಿರುಗಾಡುವವರಿಗೆ ಅನಾನುಕೂಲವೂ ಆಗುವುದೆಂದೂ ತಿಳಿಸಿದರು. ಅನೇಕ ಎಚ್ಚರಿಕೆಗಳನ್ನು ಕೊಟ್ಟರೂ ಇನ್ನೂ ಇದು ನಡೆಯುತ್ತಲೇ ಇರುವುದರಿಂದ ಮುಂದೆ ತಕ್ಕ ಬಂದೋಬಸ್ತು ಮಾಡಲಾಗುವುದೆಂದು ಹೇಳಿದರು

ನಿರ್ಣಯಗಳು

ತಮ್ಮ ಜೀವನವನ್ನು ನಿರ್ವಹಿಸಲಾರದೆಯೂ ರೋಗಗಳಿಂದ ನರಳುತ್ತಲೂ ಇರುವ ಬಡಜನರು ರಸ್ತೆಯ ಪಕ್ಕಗಳಲ್ಲಿ ಬಿದ್ದುಕೊಂಡು ಭಿಕ್ಷಾಟನೆ ಮಾಡುತ್ತಾ ಇರುವುದರಿಂದ ರೋಗಗಳು ಹರಡುವ ಸಂಭವವಿರುವುದಾಗಿ ಅಂಥವರುಗಳನ್ನು ಆಸ್ಪತ್ರೆಗಳಿಗೆ ರವಾನಿಸುವ ಏರ್ಪಾಡು ಮಾಡತಕ್ಕದ್ದೆಂಬ ನಿರ್ಣಯವನ್ನು ಶ್ರೀ ಎಂ. ಆರ್. ಸಿ ಬಸಪ್ಪನವರು ತಂದರು. ಇಂತಹ ಜನರನ್ನು ಆಸ್ಪತ್ರೆಗಳಿಗೆ ರವಾನಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಈಗಾಗಲೇ ಹೊರಡಿಸಿರುವ ಪ್ರೊಸೀಜರನ್ನು ತಿಳಿಸಿದರು. ನಿರ್ಣಯವು ಅಂಗೀಕೃತವಾಯಿತು

ಬಡಜನರ ಮನೆಗಳನ್ನು ಅಕ್ವೈರ್ ಮಾಡಿಕೊಳ್ಳುವಾಗ ಅವರುಗಳಿಗೆ ಬೇರೆ ಕಡೆ ಮನೆಗಳನ್ನು ಕಟ್ಟಿಕೊಳ್ಳಲು ಸರಿಯಾದ ಸ್ಥಳಗಳನ್ನು ಉಚಿತವಾಗಿ ಕೊಟ್ಟನಂತರ ಅಕ್ವೈರ್ ಕಾರ್ಯಕ್ರಮವನ್ನು ನಡೆಸತಕ್ಕದ್ದೆಂದು ಶ್ರೀ ಇ ಪಿ ನಂಜಪ್ಪನವರು ತಂದ ನಿರ್ಣಯವು ಮಂಜೂರಾಯಿತು

ನಗರದಲ್ಲಿ ಮಿಲಿಟರಿ ಲಾರಿಗಳ ಸಂಚಾರದಿಂದ ಉಂಟಾಗುತ್ತಿರುವ ಪ್ರಾಣಹಾನಿಯನ್ನು ತಪ್ಪಿಸಲು ಅವುಗಳು ಊರಿನೊಳಕ್ಕೆ ಬರದಂತೆ ತಡೆಗಟ್ಟುವುದಕ್ಕೂ, ಮೃತಪಟ್ಟವರ ಕುಟುಂಬಗಳಿಗೆ ಪರಿಹಾರವನ್ನು ಕೊಡುವಂತೆ ... [illegible] ... ದನ್ನು ಕೂಡಲೇ ಅಧಿಕಾರಿಗಳ ಗಮನಕ್ಕೆ ತಂದರೆ ಪರಿಹಾರ ಮಾಡಲಾಗುವುದು. ಮಿಲಿಟರಿ ಲಾರಿಗಳಿಗಾಗಿ ಪ್ರತ್ಯೇಕ ಸಿಗ್ನಲ್‌ಗಳನ್ನು ಮಾಡಲಾಗಿದೆ. ಮಿಲಿಟರಿ ಪೋಲೀಸಿನವರನ್ನು ನೇಮಿಸಿ ಈ ಲಾರಿಗಳ ಸಂಚಾರವನ್ನು ಹತೋಟಿಯಲ್ಲಿಡಲಾಗಿದೆ ಎಂದು ಅಧ್ಯಕ್ಷರು ತಿಳಿಸಿದರು

ಆಹಾರ ಪದಾರ್ಥಗಳಂತೆಯೇ ಸೌದೆಯನ್ನೂ ಸಹ ಹತೋಟಿ ದರದಲ್ಲಿ ಜನರಿಗೆ ಒದಗಿಸುವಂತೆಯೂ ಅವಶ್ಯಕವಾದರೆ ಸರ್ಕಾರಿ ಡಿಪೋಗಳನ್ನು ತೆರೆಯುವಂತೆಯೂ ಶ್ರೀ ಜನಾರ್ದನಸ್ವಾಮಿಯವರು ತಂದ ನಿರ್ಣಯವು ಒಪ್ಪಿಗೆ ಪಡೆಯಿತು.

ಸಭೆಯ ಕಾರ್ಯಕ್ರಮಗಳೆಲ್ಲವೂ ಮುಗಿದ ಮೇಲೆ ಶ್ರೀ ಪಿ. ಸೀತಾರಾಮಯ್ಯನವರು ಭಾಷಣಮಾಡಿ ಕಳೆದ ೩ ವರ್ಷಗಳಿಂದ ಸದಸ್ಯರು ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿದರು ಈ ಸಭೆಯ ಅನೇಕ ಸದಸ್ಯರನ್ನು ನಿಷ್ಕಾರಣವಾಗಿ ೧೬ ತಿಂಗಳ ಕಾಲ ಬಂಧನದಲ್ಲಿಟ್ಟದ್ದರಿಂದ ಅವರುಗಳ ಸೇವೆಯು ಪುರಜನರಿಗೆ ದೊರಕದಿದ್ದುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿದರು

ಶ್ರೀ ಎಚ್. ಸಿ ದೇವರಾಜೇ ಅರಸ್‌ರವರು ಮಾತನಾಡಿ ಕಳೆದ ೩ ವರ್ಷಗಳಿಂದ ಅಮೋಘವಾದ ಸೇವೆಯಾಗಿರುವುದೇನೂ ಕೆಲವು ಸದಸ್ಯರು ತಮ್ಮ ಪ್ರಾಚೀನ ಪರ್ವದಿಂದ ಬಂಧನಕ್ಕೊಳಗಾಗಿದ್ದರೂ ಸಭೆಯ ಕೆಲಸಗಳು ತೃಪ್ತಿಕರವಾಗಿ ನಡೆದಿವೆ ಎಂದು ಹೇಳಿದರು

ಸಭೆಯನ್ನು ಉಪಸಂಹಾರಮಾಡಿ ಅಧ್ಯಕ್ಷರು ಪರಮಾತ್ಮನ ಸೇವೆಗೆ ಒದಗಿದ ಸೇವೆಯೇ ಆಧಾರವೆಂದೂ ಈ ಪವಿತ್ರ ಸ್ಥಾನದಿಂದ ಪುರಜನರ ಸೇವೆಯನ್ನು ಎಲ್ಲರೂ ಪ್ರೀತಿ ಸಹಕಾರಗಳಿಂದ ಒಟ್ಟುಗೂಡಿ ಮಾಡುವಂತಾಗಲೆಂದೂ ಹಾರೈಸಿದರು.

ಶಾಸನ ಸಭಾ ಸದಸ್ಯರ ಆರಾಭಂಗ

ಕಾಂಗ್ರೆಸ್ ಪಕ್ಷದ ನಾಯಕರ ಹೇಳಿಕೆ

ಚಿತ್ತಗಾಂಗ್ ಮೇಲೆ ಧಾಳಿ—೧೦ ಶತ್ರು ವಿಮಾನಗಳ ನಾಶ

ಆಹಾರ-ರಾಜಕೀಯ ಸಮಸ್ಯೆ

ಮೈಸೂರು ೨೮

ನಿನ್ನೆ ಸಂಜೆ ಮೈಸೂರು ಸುಬ್ಬರಾಯನ ಕೆರೆ ಮೈದಾನದಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಭಾರಿ ಬಹಿರಂಗ ಸಭೆ ನಡೆಯಿತು. ರಾಷ್ಟ್ರಗೀತೆಯೊಡನೆ ಸಭೆ ಆರಂಭವಾಯಿತು. ಅಧ್ಯಕ್ಷರು, ತಾವು ಬಿಡುಗಡೆಯಾದಂದಿನಿಂದ ಇದುವರೆಗೆ ನಡೆಸಿರುವ ಆಹಾರ ಸಮ್ಮೇಳನ, ಚುನಾವಣಾ ಕಾರ್ಯಕ್ರಮ ಮುಂತಾದುವುಗಳನ್ನು ವಿವರಿಸಿದರು.

ಶ್ರೀ ಚನ್ನಯ್ಯನವರು ಸರ್ಕಾರದವರ ನೀತಿಯನ್ನು ಟೀಕಿಸಿ ಇಂದಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕಾಂಗ್ರೆಸ್ಸಿನವರನ್ನು ಕರೆಸಿ ಒಂದು ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಹೇಳಿದರು.

ಶ್ರೀ ಟಿ ಮರಿಯಪ್ಪನವರು ನ್ಯಾಯವಿಧಾಯಕ ಸಭೆಯಲ್ಲಿ ಆಹಾರ ಸಮಸ್ಯೆ ವಿಷಯವಾಗಿ ಸರ್ಕಾರದವರು ಕೊಟ್ಟ ಅಭಿಪ್ರಾಯಗಳನ್ನೂ ಸದಸ್ಯರು ಸೂಚಿಸಿದ ತಿದ್ದುಪಡಿಗಳನ್ನೂ ತಿಳಿಸಿದರು.

ಶ್ರೀ ಎಸ್ ರಂಗರಾಮಯ್ಯನವರು ಪ್ರಜಾಸಂಗವಿಲ್ಲದ ಮಂತ್ರಿಗಳಿಂದ ಹೇಗೆ ಪ್ರಜಾಹಿತವು ಸಾಧಿಸುವುದಿಲ್ಲವೆಂಬುದನ್ನು ವರ್ಣಿಸಿದರು. ಜಯಕಾರದೊಡನೆ ಸಭೆ ಮುಗಿಯಿತು.

ಸತ್ಕಾರ

ರಾಜಧಾನಿಯ ಕಾಂಗ್ರೆಸ್ ಭಕ್ತರಾದ ಶ್ರೀ ಎಸ್. ಚನ್ನಯ್ಯನವರು ನಿನ್ನೆ ದಿನ ಕಾಂಗ್ರೆಸ್ ಕಛೇರಿಯಲ್ಲಿ ಮೈಸೂರು ಪೌರಸಭೆಯ ಸದಸ್ಯರನ್ನೂ ಇತರ ಹಲವು ಮುಖಂಡರನ್ನೂ ಬರಮಾಡಿಕೊಂಡು ಉಪಹಾರದೊಡನೆ ಸತ್ಕರಿಸಿದರು. ಶ್ರೀ ಚನ್ನಯ್ಯನವರೂ ಮತ್ತು ಶ್ರೀ ಹೆಚ್. ಸಿ ದಾಸಪ್ಪನವರೂ ಭಾಷಣ ಮಾಡಿ ಕಾಂಗ್ರೆಸ್ ಶಿಸ್ತಿನ ಪಾಲನೆಯ ವಿಷಯವನ್ನು ಒತ್ತಿ ಹೇಳಿದರು. ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಟಿ ವೆಂಕಟರಾಮಯ್ಯನವರ ಸತ್ಕಾರಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದರು.

ದೇಶೀಯ ವಿದ್ಯಾಶಾಲಾ

೨೬-೧೨-೪೩ ನೇ ಭಾನುವಾರ ಶಾಲೆಯ ವಾರ್ಷಿಕ ಜನರಲ್ ಬಾಡಿ ಸಭೆಯು ಶ್ರೀ ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಶ್ರೀ ಕೆ ಶಾಮಯ್ಯನವರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಕೆ ಎಸ್ ಸತ್ಯನಾರಾಯಣರಾವ್, ರಾ. ಗ. ಲಕ್ಷ್ಮೀನಾರಾಯಣರಾವ್, ಹೆಚ್ ಮೈ ಶಾರದಾ ಪ್ರಸಾದ್, ಬಿ ಬಾಲಯ್ಯ ಇವರುಗಳು ಕಾರ್ಯಕಾರಿ ಸಮಿತಿಯ ಸದಸ್ಯರುಗಳಾಗಿಯೂ ಚುನಾಯಿತರಾದರು. ೬-೧-೪೪ ರಿಂದ ೧೧-೨-೪೪ ರವರೆಗಿನ ಆಯವ್ಯಯ ಪಟ್ಟಿಯನ್ನು ಒಪ್ಪಿಕೊಳ್ಳಲಾಯಿತು. ಈ ಶಾಲೆಯಲ್ಲಿ ಆದಾಯ ೭೬೩-೧೫-೨ ರೂ. ವೆಚ್ಚ ೬೭೬-೧೦-೧೦ ರೂ. ಇವರಲ್ಲಿ ೧೭-೧೪-೪೮ ರಲ್ಲಿ ನಡೆದ ವಿವಿಧ ವಿನೋದಾವಳಿಯ ಲೆಕ್ಕ ಸೇರಿಲ್ಲ ಈ ಲೆಕ್ಕ ಈಗಾಗಲೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಅಕಡೆಮಿಕ್ ಕೌನ್ಸಿಲ್

ಮೈಸೂರಿನ ಡಾ|| ಪ್ರಿನ್ಸಿಪಾಲರಾಗಿರುವ ಶ್ರೀ ಆರ್. ಕೃಷ್ಣಾಚಾರ್ ಶೆಟ್ಟಿಯವರನ್ನು ವಿಶ್ವವಿದ್ಯಾಲಯದ ಅಕಡೆಮಿಕ್ ಕೌನ್ಸಿಲಿಗೆ ನಾಮಕರಣ ಮಾಡಲಾಗಿದೆ.

ಕಟಾವಿಗೆ ಅಪ್ಪಣೆ ಬೇಕಿಲ್ಲ

ರಾಗಿ, ಜೋಳ ಮುಂತಾದ ಧಾನ್ಯಗಳ ಕಟಾವನ್ನು ಸರ್ಕಾರಕ್ಕೆ ತಿಳಿಸದೆ ನಡೆಸಕೂಡದೆಂಬ ಭಾವನೆ ಜನರಲ್ಲಿ ಹರಡಿದೆ. ಅದು ಶುದ್ಧ ತಪ್ಪು. ಧಾನ್ಯಗಳ ಸಾಗಣೆಗೆ ಸರ್ಕಾರದ ಅಪ್ಪಣೆ ಬೇಕು. ಕಟಾವಿಗೆ ಅನುಮತಿ ಬೇಕಿಲ್ಲ. ಮಾಲೀಕರ ಜಮೀನೊಂದು ಕಡೆ ಮನೆ ಒಂದು ಕಡೆ ಇದ್ದರೆ ರವಾನೆ ಅನುಮತಿ ಪಡೆಯಬೇಕು. ಜಮೀನು ಮತ್ತು ಮನೆ ಒಂದೇ ಹಳ್ಳಿಯಲ್ಲಿದ್ದರೆ ಅಂಥಾ ಅನುಮತಿಗಳೂ ಬೇಕಿಲ್ಲ—ಎಂದು ಸರ್ಕಾರದ ಪ್ರಕಟನಾಧಿಕಾರಿಗಳು ತಿಳಿಸಿದ್ದಾರೆ.

ಶ್ರದ್ಧಾನಂದ ವರ್ಷೋತ್ಸವ

ಸ್ವಾಮಿ ದಯಾನಂದ ಸಂಘದ ಆಶ್ರಯದಲ್ಲಿ ಮೊನ್ನೆ ಗಾಯತ್ರಿ ಬಾವಿ ಬಯಲಿನಲ್ಲಿ ಸ್ವಾಮಿ ಶ್ರದ್ಧಾನಂದರವರ ನಿಧನದ ೧೭ ನೇ ವಾರ್ಷಿಕೋತ್ಸವವು ನಡೆಯಿತು. ಶ್ರೀ ಟಿ. ಎಸ್ ರಾಜಗೋಪಾಲಯ್ಯಂಗಾರ್ಯರು ಅಗ್ರಾಸನವನ್ನಲಂಕರಿಸಿದ್ದರು. ಮದ್ರಾಸಿನ ಶ್ರೀ ಮಹಾಲಿಂಗಯ್ಯರವರು "ಆಹಾರ ಮತ್ತು ಹಾಲು" ಎಂಬ ವಿಷಯವಾಗಿ ಭಾಷಣ ಮಾಡುತ್ತಾ ಗೋರಕ್ಷಣೆಯ ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಬೇಕೆಂದು ಹೇಳಿದರು.

ಕ್ರಿಕೆಟ್ ಕ್ರೀಡೆ

ಇದೇ ತಿಂಗಳು ೩೦, ೩೧, ಜನವರಿ ೧ ನೇ ತಾರೀಖು ಮೂರು ದಿನಗಳ ಕ್ರಿಕೆಟ್ ಪಂದ್ಯ ಮೈಸೂರು ಸೇನೆಯವರಿಗೂ ಮೈಸೂರಿನವರಿಗೂ ಬೆಂಗಳೂರಿನಲ್ಲಿ ನಡೆಯುತ್ತದೆ.

ಕಂಗರ್ ಚೀನೀ ವಶ

ಸಾಂಗಿಗೆ ೩೦ ಮೈಲಿ ವಾಯವ್ಯಕ್ಕಿರುವ ಕಂಗರ್ ಪಟ್ಟಣ ಚೀನಾ ವಶವಾಗಿದೆ. ಜಪಾನರು ಅಲ್ಲಿಂದ ಈಶಾನ್ಯಕ್ಕೆ ಓಡುತ್ತಿದ್ದಾರೆ.

ಜರ್ಮನ್ ನೌಕೆ ಪಾತಾಳಕ್ಕೆ

ಆರ್ಕ್‌ಟಿಕ್ ಸಮುದ್ರದಲ್ಲಿ ಸಂಚರಿಸುತ್ತಿದ್ದ ೨೬ ಸಾವಿರ ಟನ್ನಿನ ಜರ್ಮನರ ಭಾರಿ ಯುದ್ಧನೌಕೆಯಾದ ಸ್ಕಾರ್ನ್‌ಹಾರ್ಸ್ಟ್‌ನ್ನು ಬ್ರಿಟಿಷ್ ನೌಕಾಪಡೆಯವರು ಮುಳುಗಿಸಿರುವರು. ಜರ್ಮನರೂ ಇದನ್ನು ಒಪ್ಪಿಕೊಂಡಿರುವರು.

ಜನಪದ ಗೋಷ್ಠಿ

ಸ್ವಂ ವಿ ಸು.] ಶಿವಮೊಗ್ಗ ೨೮

ಈ ದಿನ ಮಧ್ಯಾಹ್ನ ಶ್ರೀ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಜನಪದಗೋಷ್ಠಿಯು ಪ್ರಾರಂಭವಾಯಿತು. ಅನೇಕರು ಪ್ರಬಂಧಗಳನ್ನು ಓದಿದರು.

ದಿವಂಗತ ಚಿ ವಾಸುದೇವಯ್ಯನವರ ಗ್ರಂಥಗಳ ಪ್ರಕಟಣೆ ವಿಷಯದ ವ್ಯವಸ್ಥೆ ವಹಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಯುವಕ ಬರಹಗಾರರ ಸಮ್ಮೇಳನ

ಈ ದಿನ ಬೆಳಿಗ್ಗೆ ೧೦ ಗಂಟೆಗೆ ೨೭ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಯುವಕ ಬರಹಗಾರರ ಸಮ್ಮೇಳನವು ಶ್ರೀ ನೇಗಿ ರಂಗನ ಶರ್ಮರ ಅಧ್ಯಕ್ಷತೆಯಲ್ಲಿ ನೆರವೇರಿತು. ಅನೇಕ ಯುವಕ ಬರಹಗಾರರು ತಮ್ಮ ಕವನ, ಗದ್ಯ, ಸಣ್ಣ ಕತೆಗಳನ್ನು ಓದಿದರು.

ಆಕಸ್ಮಿಕ ಸಿಗದೆ ಅಗ್ನಿಪ್ರವೇಶ

ಉತ್ತರ ಮಲಬಾರಿನ ಚಿರಕ್ಕಲ್ ತಾಲ್ಲೂಕಿಗೆ ಸೇರಿದ ಕವಡಿಯೂರಿನಲ್ಲಿ ೪೦ ವರ್ಷದ ಹೆಂಗಸೊಬ್ಬಳು ತನ್ನ ಇಬ್ಬರು ಹೆಣ್ಣುಮಕ್ಕಳೊಡನೆ ಅಗ್ನಿಪ್ರವೇಶ ಮಾಡಿದಳು. ಬಡತನ ಮತ್ತು ವ್ಯಾಧಿ ಪೀಡೆಯೊಂದಕ್ಕೆ ಕಾರಣವೆಂದು ಗೊತ್ತಾಗಿದೆ. ಅವರಿಗೆ ಅಕ್ಕಿಯೇ ದೊರಕದೆ ಹೋಯಿತು. ಜೀವನವು ಬೇಸರವಾಗಿ, ಮನೆ ಬಾಗಿಲುಗಳನ್ನು ಭದ್ರಪಡಿಸಿ ಒಳಗೇ ಉಳಿದುಕೊಂಡು, ಮನೆಗೆ ಬೆಂಕಿ ಹಚ್ಚಿಕೊಂಡು ಮನೆಯೊಡನೆ ತಾವೂ ಭಸ್ಮೀಭೂತರಾಗಿದ್ದಾರೆ. ಆ ಪ್ರಾಂತ್ಯದಲ್ಲಿ ಕಳೆದ ೧೦ ದಿನದಿಂದ ಅಕ್ಕಿಯೇ ಸಿಗುತ್ತಿಲ್ಲ.

ಇಟಲಿ ಬಂದರು ವಶ

ಪೆಸ್ಕಾರದಿಂದ ದಕ್ಷಿಣಕ್ಕೆ ೧೮ ಮೈಲಿ ದೂರದಲ್ಲಿರುವ ಒರ್ಟೋನಾ ಎಂಬ ಇಟಲಿ ಬಂದರನ್ನು ಬ್ರಿಟಿಷ್ ಎಂಟನೇ ಸೇನೆ ವಶಪಡಿಸಿಕೊಂಡಿದೆ.

ಅಮೆರಿಕದಲ್ಲಿ ಮುಷ್ಕರ

ಅಮೆರಿಕದ ಯಂಗ್ಸ್‌ಟೌನಿನ ಕಲಿಕೆಗಾರರು ಕೂಲಿ ಸಂಬಂಧವಾಗಿ ಮುಷ್ಕರ ಆರಂಭಿಸಿದರು. ೨೦೦೦ ಉಕ್ಕು ಸಂಸ್ಥೆಗಳಿಗೂ ೩,೫೦,೦೦೦ ಕೆಲಸಗಾರರಿಗೂ ಇನ್ನೂ ಒಪ್ಪಂದ ಮಾಡಿದಿಲ್ಲದಿರುವುದೇ ಇದಕ್ಕೆ ಕಾರಣ.

ಬಂಗಾಳದ ನೂತನ ಗೌರ್ನರ ಬಗ್ಗೆ ಪ್ರತಿಭಟನೆ

ಬಂಗಾಳಕ್ಕೆ ಗೌರ್ನರಾಗಿ ಆಸ್ಟ್ರೇಲಿಯಾ ದೇಶದ ಮಿ॥ ಕೇಸಿಯವರನ್ನು ನೇಮಿಸಿರುವುದನ್ನು ಪ್ರತಿಭಟಿಸಲು, ಬಂಗಾಳ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಮುಂದಿನ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ಮಂಡಿಸಲಿದ್ದಾರೆ.

ಪಂಡಿತ ಕುಂಜ್ರುರವರು ಒಂದು ಹೇಳಿಕೆಯನ್ನಿತ್ತು, ಭಾರತೀಯರಿಗೆ ಆಸ್ಟ್ರೇಲಿಯಾ ದೇಶದವರು ಅಲ್ಲಿ ವಾಸಿಸಲು ನಿರ್ಬಂಧವನ್ನು ಹಾಕಿರುವಾಗ ಅದೇ ದೇಶದ ಮಿ॥ ಕೇಸಿಯವರು ಬಂಗಾಳವನ್ನು ಆಳುವುದು ಅಸಮಂಜಸವೆಂದೂ, ಇದು ಭಾರತಕ್ಕೇ ಅಪಮಾನ ಮಾಡಿದಂತಾಯಿತೆಂದೂ ಹೇಳಿ ಪ್ರತಿಭಟಿಸಿದ್ದಾರೆ.

ಯೂರೋಪಿಗೆ ಕ್ಷಾಮ ಭೀತಿ

ಈಗಾಗಲೇ ಯೂರೋಪ್ ಖಂಡದ ಅನೇಕ ಕಡೆಗಳಲ್ಲಿ ಆಹಾರದ ಅಭಾವ ಕಂಡು ಬರುತ್ತಿದೆ. ಫ್ರಾನ್ಸ್ ಮೆಡಿಟರೇನಿಯನ್ ತೀರ, ಬಾಲ್ಕನ್, ಪೋಲೆಂಡ್ ಮತ್ತು ಸ್ಕಾಂಡಿನೇವಿಯನ್ ಪ್ರದೇಶದಲ್ಲಿ ಸದ್ಯದಲ್ಲೇ ಕ್ಷಾಮ ಪ್ರಾಪ್ತವಾಗಬಹುದೆಂಬ ಭೀತಿ ಉಂಟಾಗಿದೆ. ಆಕ್ರಮಿತ ಪೋಲೆಂಡ್ ಮತ್ತು ರಷ್ಯದಲ್ಲಿ ೩೦ ಕೋಟಿ ಜನರು ಹೊಟ್ಟೆಗಿಲ್ಲದೆ ನರಳುವ ಸಂಭವ ಒದಗಿದೆ.

ಚಿತ್ತಗಾಂಗ್ ಮೇಲೆ ಧಾಳಿ

ಮೊನ್ನೆ ದಿನ ಬೆಳಿಗ್ಗೆ ಜಪಾನೀ ವಿಮಾನಗಳು ಚಿತ್ತಗಾಂಗ್ ಪ್ರದೇಶದ ಮೇಲೆ ಧಾಳಿ ನಡೆಸಿದವು. ಮಿತ್ರ ವಿಮಾನಗಳು ಜಪಾನಿ ವಿಮಾನಗಳನ್ನು ಎದುರಿಸಿ ಅವನ್ನು ನಾಶಗೊಳಿಸಿ ಇನ್ನು ಮೂರಕ್ಕೆ ನಷ್ಟವುಂಟುಮಾಡಿದವು. ಧಾಳಿಯಿಂದಾದ ನಷ್ಟವೂ ಸಾವುನೋವುಗಳೂ ಅತ್ಯಲ್ಪವೆಂದು ಗೊತ್ತಾಗಿದೆ.

ಅಮೆರಿಕಾ ರೆಡ್‌ಕ್ರಾಸ್ ಔದಾರ್ಯ

ಅಮೆರಿಕಾದ ರೆಡ್‌ಕ್ರಾಸ್ ಸಂಸ್ಥೆಯವರು ಕೆಲವು ದಿನಗಳಲ್ಲೇ ೫೦೦೦೦೦ ಪೌಂಡುಗಳನ್ನು ಧನಸಹಾಯ ಕಾಲನ್ನೂ, ಕೋಟ್ಯಂತರ ವಿಟಮಿನ್ ಮಾತ್ರೆಗಳನ್ನೂ ಕ್ಷಾಮಪೀಡಿತರ ಉಪಯೋಗಕ್ಕಾಗಿ ಭಾರತಕ್ಕೆ ಕಳುಹಿಸಲು ಸಿದ್ಧರಿರುವುದಾಗಿ ಪ್ರಕಟಿಸಿದ್ದಾರೆ.

ಜರ್ಮನ್ ರೈಲ್ ನಾಶ

ಕ್ರೋಷಿಯಾದಲ್ಲಿ ಬೆಲ್‌ಗ್ರೇಡ್-ಜಾಗ್ರೆಬ್ ಲೈನ್ ನಡುವೆ ಸೇನೆ ಮತ್ತು ಸರಕುಗಳನ್ನು ಸಾಗಿಸುತ್ತಿದ್ದ ಜರ್ಮನರ ರೈಲುಗಾಡಿಗಳನ್ನು ಮಿತ್ರರು ಉರುಳಿಸಿ ಅಲ್ಲಿ ರೈಲುಗಳು ಸಂಚರಿಸದಂತೆ ಅತಂಕಪಡಿಸಿದ್ದಾರೆ.

ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ

ಸ್ವಂ.ವಿ ಸು.ಶಂಕ] ಶಿವಮೊಗ್ಗ ೨೮

ಕನ್ನಡ ಸಾಹಿತ್ಯ ಪರಿಷತ್ತಿನ ಮುಂದಿನ ವರ್ಷದ ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ಮುಂಡಿಯವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್‌ರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ರಾಘವಾಚಾರ್ ಮತ್ತು ಸುಬ್ರಾಯಪ್ಪನವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು. ಮೈಸೂರು, ಹೈದರಾಬಾದ್, ಉತ್ತರಕರ್ನಾಟಕ, ಮುಂಗಳೂರು ಮತ್ತು ಕೊಡಗಿನ ೧೩ ಜನ ಸದಸ್ಯರನ್ನೂ ಚುನಾಯಿಸಲಾಯಿತು.

ಬೆಂಗಳೂರು ರೈಲ್ವೆ ಸ್ಟೇಷನ್ ಆಡಳಿತ

ಸ್ವಂ ಸು.] ಬೆಂಗಳೂರು ೨೩

ಈ ದಿನ ಬೆಳಗ್ಗೆ ಬರಾಂಡ ಕಚೇರಿಯಲ್ಲಿ [illegible] ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತು. ಈ ಸಭೆಗೆ ಬ್ರಿಟಿಷ್ ರೈಲ್ವೆ ದಂಡಿನ ಪೋ॥ ಕಮಿಷನರೂ ರೈಲ್ವೆ ಮಂತ್ರಿಗಳಾದ ಮಿ॥ ಇವರಾರೆವರೂ ದಯಮಾಡಿಸಿದ್ದರು. ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ಅಧಿಕಾರವನ್ನು ಪೂರ್ಣವಾಗಿ ಎಂ. ಅಂಡ್ ಎಸ್. ಎಂ. ರೈಲ್ವೆಯವರಿಂದ ಮೈಸೂರು ಸರ್ಕಾರಕ್ಕೆ ತೆಗೆದುಕೊಳ್ಳುವ ನಿರ್ಧಾರವಾಗಿರುವ ವಿಚಾರದಲ್ಲಿ ತಪಶೀಲುಗಳನ್ನು ಗೊತ್ತುಮಾಡಲು ಸಮಾಲೋಚನೆ ನಡೆಯಿತು.

ಪುಸ್ತಕಕ್ಕೆ ಬಹಿಷ್ಕಾರ

ಶ್ರೀ ರಾಮಚಂದ್ರ ಶರ್ಮರವರಿಂದ ಬರೆಯಲ್ಪಟ್ಟಿರುವ 'ವಿಜಯ ಪತಾಕ' ಎಂಬ ಪುಸ್ತಕಕ್ಕೆ ಸರ್ಕಾರದವರು ಬಹಿಷ್ಕಾರ ಹಾಕಿದ್ದಾರೆ.

ರಫ್ತಿಗೆ ಪ್ರತಿಬಂಧಕ

ಭೂಗರ್ಭ ಇಲಾಖೆಯ [illegible] ಸಂಸ್ಥಾನದಿಂದ [illegible] ಎಂಬ ವಸ್ತುವನ್ನು ರಫ್ತುಮಾಡುವುದನ್ನು ಪ್ರತಿಬಂಧಿಸಿ ಒಂದು ಆಜ್ಞೆಯನ್ನು ಸಿವಿಲ್ ಸಪ್ಲೈ ಡೈರೆಕ್ಟರಿಂದ ಅನುಮತಿ ಪಡೆಯದೆ ಕಡಲೇಕಾಯಿ, ಎಣ್ಣೆ ಮತ್ತು ಬೀಜಗಳನ್ನು ರವಾನಿಸಲು ಪ್ರತಿಬಂಧಿಸಿ ಮತ್ತೊಂದು ಆಜ್ಞೆಯನ್ನೂ ಸರ್ಕಾರದವರು ಹೊರಡಿಸಿದ್ದಾರೆ.

ಹಿಂದೂಮಹಾಸಭಾ ಉತ್ಸವಕ್ಕೆ ಅಡ್ಡಿ

ಅಮೃತಸರದಲ್ಲಿ ಅಖಿಲ ಭಾರತ ಹಿಂದೂ ಮಹಾ ಸಭಾಧಿವೇಶನದ ಅಂಗವಾಗಿ [illegible] ಅಧ್ಯಕ್ಷ ಡಾ॥ ಮುಖರ್ಜಿಯವರ ಮೆರವಣಿಗೆಯನ್ನು ಜಿಲ್ಲಾ ಮ್ಯಾ॥ ನಿಷೇಧಿಸಿ, ಅನುಮತಿಯನ್ನು ರದ್ದುಗೊಳಿಸಲಾಯಿತೆಂದು ತಿಳಿಸಿ, ಮೆರವಣಿಗೆಯನ್ನು ತಡೆದರು.

ಮಹಾತ್ಮರ ಸಂದೇಶವಿಲ್ಲ

[illegible] ಭೇಟಿಗಾಗಿ ಹೋಗಿದ್ದ ಶ್ರೀ ದೇವದಾಸ್ ಗಾಂಧಿಯವರ ಮೂಲಕ ಮಹಾತ್ಮರು ಸಾರ್ವಜನಿಕರಿಗೆ ಸಂದೇಶ ಕಳುಹುವರೆಂಬ ಊಹಾಪೋಹವೆದ್ದಿತ್ತು. ಶ್ರೀ ದೇವದಾಸರು ಅದಲ್ಲ ಸುಳ್ಳೆಂದು ಹೇಳಿರುತ್ತಾರೆ.

ನ್ಯೂಯಾರ್ಕಿನಲ್ಲಿ ಎಚ್ಚರಿಕೆ ಧ್ವನಿ

ಶತ್ರುಗಳು ಕ್ರಿಸ್‌ಮಸ್ ಹಬ್ಬದ ಆರಂಭದ ದಿನ ನ್ಯೂಯಾರ್ಕ್ ನಗರದ ಮೇಲೆ [illegible] ಮುತ್ತಿಗೆ ನಡೆಸುವ ನಿರೀಕ್ಷೆ ಇತ್ತು. ಆ ಕಾರಣ ಇಂದು ಆ ನಗರದಲ್ಲಿ [illegible] ಎಚ್ಚರಿಕೆ ಧ್ವನಿಯನ್ನು ಕೊಡಲಾಗಿತ್ತು.

ಹೊಸ ಜ್ವಾಲಾಮುಖಿ

ಮೆಕ್ಸಿಕೊ ಪಟ್ಟಣದಿಂದ [illegible] ದೂರದಲ್ಲಿರುವ ಪ್ರದೇಶದ ಉತ್ತರದ ಭೂಮಿಯೊಂದರಿಂದ ಅಗ್ನಿಜ್ವಾಲೆಗಳು ಏಳುತ್ತಿವೆ. ಬೆಟ್ಟ [illegible] ಬರುವ ಜ್ವಾಲಾಮುಖಿ [illegible] ಸಮ ಭೂಮಿಯಲ್ಲಿ [illegible]

ಪತ್ರವ್ಯವಹಾರ

ತಾತಯ್ಯನವರ ಸ್ಮರಣೆ

ರಾಜಧಾನಿಯ ಅನಾಥಾಲಯವು ಪುಣ್ಯ [illegible] ಲಕ್ಷಾಂತರ ಜನರ ಸ್ಮೃತಿ ಪಥದಲ್ಲಿ ಬೆಳಗುತ್ತಿದೆ. ಪೂಜ್ಯ ಪಿತಾಮಹರಾದ ವೆಂಕಟಕೃಷ್ಣಯ್ಯನವರ ಅಂತಃಕರಣದಿಂದ [illegible] ಬಂದಿದೆ. ತಾತಯ್ಯನವರ [illegible] ಸ್ಮರಣೆ [illegible]

ಈ ಅನಾಥಾಲಯದವರು "ತಾತಯ್ಯನವರ ದಿನಾಚರಣೆಯನ್ನು" ಮೊನ್ನೆ ಜರುಗಿಸಿದರು. ಅವೂ ಅಲ್ಲಿನ [illegible] ಈ ಸಮಾರಂಭಕ್ಕೆ [illegible] ಧರ್ಮ ಪ್ರಕಾಶ ಶ್ರೀ ವೆಂಕಟ [illegible] ಇದಂ [illegible] ಅ [illegible] ಹಸ್ತದಿಂದ [illegible] ವಿದ್ಯಾಭಿವೃದ್ಧಿ, ದೇಶಭಕ್ತಿ, ಸಮಾಜ ಸುಧಾರಣೆ [illegible]

[illegible] ಸೇ—ನೆಯ್ಗೆ, ಕೂಲಿಗೆ [illegible] ಮುಂತಾದ [illegible]

[illegible] ವೆಂಕಟಕೃಷ್ಣಯ್ಯನವರ [illegible] ಈ ಸಂದರ್ಭವನ್ನು [illegible]

[illegible] ತಾತಯ್ಯನವರನ್ನು [illegible]

ಎ. ಎನ್. ಸೂರ್ಯನಾರಾಯಣರಾವ್ [illegible]

ಬ್ರಿಟಿಷರ ವಿಫಲ ಪ್ರಯತ್ನ

[illegible] ಬಂದಿಳಿದ [illegible] ಹಾಗೆ ಬಂದವರ [illegible]

ಮೈಸೂರು ಪಟ್ಟಣದ ಪಡಿ ಭತ್ಯ

ರೇಷನಿಂಗ್ ಇರುವುದು ಸರಿಯೆಂಬ ವಿಷಯದಲ್ಲಿ ವಿಚಾರವಂತರಾದವರು ಯಾರೂ ಆಕ್ಷೇಪಣೆ ಮಾಡುವುದಿಲ್ಲ. ಆದರೆ ಕೆಲವು ವಿಚಾರಗಳಲ್ಲಿ ಜನರಿಗೆ ತೊಂದರೆಯುಂಟಾಗಿರುವುದು ನಿಜ. ಈ ತೊಂದರೆಗಳನ್ನು ಅಧಿಕಾರಿಗಳು ನಿವಾರಣೆ ಮಾಡಲು [illegible] ಭರವಸೆ [illegible] ಕೆಲವು [illegible] ನಮ್ಮ ಅಧಿಕಾರಿಗಳ ಮತ್ತು ಜನರ ಅವಗಾಹನೆಗೆ ತರಲಿಚ್ಛಿಸುತ್ತೇನೆ. ರೇಷನಿಂಗ್ ಬರಲು ಯುದ್ಧವೇ ಕಾರಣ. ಯುದ್ಧಕ್ಕೆ ನಮ್ಮ ಸರ್ಕಾರದವರು ಜವಾಬ್ದಾರರಲ್ಲ. ಆದ್ದರಿಂದ [illegible] ಸರ್ಕಾರದವರ ಕೂಡ ಸಹಕರಿಸುತ್ತ ನಮ್ಮ ತೊಂದರೆಗಳಿಂದ [illegible] ಗಬೇಕು.

ಡಿಪೋ ಬಾಗಿಲಲ್ಲಿ ಗಲಾಟೆ ಮಾಡಬಾರದು [illegible] ಹೀಗೆಲ್ಲಾ [illegible] ಆಹಾರಗಳ [illegible] ಮಾಡಿಕೊಳ್ಳಬೇಕು.

ಹೊಸಕ್ಕಿಯನ್ನು ಹಳೇ ಅಕ್ಕಿಯ ಧಾರಣೆಗೆ [illegible] ಉಂಟು ಮಾಡಿದೆ. ಇಂದ [illegible] ಭತ್ತ ಎರಡು ತಿಂಗಳಾದರೂ ಆಗಬೇಡವೆ? [illegible] 'ಬ್ಲಾಕ್ ಮಾರ್ಕೆಟ್ ವ್ಯಾಪಾರ [illegible]' ಎನ್ನುತ್ತಾರೆ. [illegible] 4½ [illegible] ಹಳೇ ಅಕ್ಕಿಯನ್ನು ಡಿಪೋವಿನಲ್ಲಿ [illegible] ಹಾಗೆ ಮಾಡಿದರೆ ಹೊಸಕ್ಕಿ [illegible] ಹಳೇ [illegible] ಅಕ್ಕಿಯನ್ನು [illegible] ನ್ಯಾಯವಲ್ಲ. [illegible], ಮೊಸರು, ತುಪ್ಪ, ಬೆಣ್ಣೆ, ತರಕಾರಿ [illegible] ಆಹಾರ ಪದಾರ್ಥಗಳ ಬೆಲೆಯು [illegible] ಯೋಗ್ಯತೆಗೆ ಮೀರಿರುವುದರಿಂದ, [illegible] ಹಳೇ ಅಕ್ಕಿ [illegible] ಅವರು [illegible]

ಅಕ್ಕಿ, ರಾಗಿ ಮುಂತಾದ [illegible] ಆಹಾರ ಪದಾರ್ಥಗಳು [illegible] ಭರವಸೆಯು [illegible] ಆಹಾರ ಪದಾರ್ಥಗಳ ಬೆಲೆಯೂ

ದಿನಸಿ ಅಳತೆ ವ್ಯತ್ಯಾಸ

ಮೈಸೂರು ತಾಲ್ಲೂಕು ಆರ್. ಎ. ಮೆಂಬರಾದ ಶ್ರೀ ಎಂ. ಎಸ್. ಬಸವಣ್ಣನವರ ಬಳಿ ಈ ತಾಲ್ಲೂಕಿನಿಂದ ಭತ್ತ ತೆಗೆದುಕೊಂಡು ಬಂದಿದ್ದ ರೈತರು ತಮಗೆ ಸರ್ಕಾರದ ಕೊಳಗದಲ್ಲಿ ಸರ್ಕಾರದವರು ಅಳೆಯುವುದರಿಂದ ತಮ್ಮಗಳಿಗೆ ತುಂಬ ನಷ್ಟವಾಗುತ್ತಿರುವುದಾಗಿಯೂ [illegible] ದ್ವರಿಂದ ಅವರು [illegible] ಫುಡ್ ಅಸಿಸ್ಟೆಂಟರಾದ ಶ್ರೀ ನಿರಂಜನ ರಾಜೇ ಅರಸಿನವರಲ್ಲಿ ರೈತರಿಗೆ ಆಗುತ್ತಿರುವ ನಷ್ಟವನ್ನು ತಿಳಿಸಿದರು ಮತ್ತು ಅದೇ ಕಾಲದಲ್ಲಿ ಮೈಸೂರು ತಾಲ್ಲೂಕಿನ ಆರ್. ಎ. ಮೆಂಬರಾದ [illegible]ನವರು ಸಹ ತಮಗೆ ಉಂಟಾದ ನಷ್ಟದ ವಿಚಾರವನ್ನು ತಿಳಿಸಿದರು. ಸದರಿ ಶ್ರೀ ನಿರಂಜನ ರಾಜೇ ಅರಸಿನವರು ಎಲ್ಲವನ್ನೂ ಸಾವಧಾನವಾಗಿ ಕೇಳಿ [illegible] ರೈತರು [illegible] ಭತ್ತವನ್ನು ಅಳೆದು ತೆಗೆದುಕೊಳ್ಳುವುದಾಗಿಯೂ ಅಥವಾ ರೈತರು ಕೊಳಗಗಳನ್ನು ತಂದಲ್ಲಿ ಅದನ್ನು [illegible] ಸರಿಯಾಗಿ [illegible] ಅಳೆದುಕೊಡುವುದಾಗಿಯೂ ಹೇಳಿ ರೈತರಿಗೆ ಯಾವವಿಧದಲ್ಲೂ ತೊಂದರೆಯಾಗಕೂಡದೆಂಬುದಾಗಿ [illegible] ನೌಕರರಿಗೆ ತಿಳಿಸಿ, ಸರ್ಕಾರದ ವಿಶ್ವಾಸವನ್ನು [illegible]

ಜಾಮೀನು ನೀಡಿರುವವರ ದಸ್ತಗಿರಿ ಕೂಡದು

ಭಾಗಲ್ಪುರದ ನರಸಿಂಗ [illegible] ಎಂಬಾತನು ಗಲಭೆ ಮಾಡಿದನೆಂದು ಪೋಲೀಸರು ಅವನ ಮೇಲೆ ಎರಡು ಮೊಕದ್ದಮೆ ಹೂಡಿದ್ದರು. [illegible] ಬಿಡುಗಡೆಯಾಗಲು [illegible] ಹೂಡಿದರು. ಅದರಲ್ಲಿ ಆತನನ್ನು ಕೋರ್ಟಿನವರು ಜಾಮೀನಿನಮೇಲೆ ಬಿಟ್ಟರು. ಆದರೂ ಪೋಲೀಸರು ರಕ್ಷಣಾ ಶಾಸನದ ಪ್ರಕಾರ ಮತ್ತೆ ದಸ್ತಗಿರಿ ಮಾಡಿದರು. ಜಾಮೀನು ನೀಡಿರುವವರನ್ನು ದಸ್ತಗಿರಿ ಮಾಡುವುದು ಅಕ್ರಮವೆಂದು ಹೇಳಿ ಪಾಟ್ನಾ ಹೈಕೋರ್ಟಿನವರು ಆತನ ಬಿಡುಗಡೆಗೆ ಆಜ್ಞೆ ಮಾಡಿದ್ದಾರೆ.

ಅಭಿನಯವನ್ನೂ ಉಪಯೋಗಬಹುದೆಂಬುದು ತಿಳಿದವರಿಗೆ ಗೊತ್ತೇ ಇದೆ.

ಎಸ್. ಎ. ಸಂಪತ್ಕುಮಾರಾಚಾರ್
ಉಪಾಧ್ಯಾಯ

Edited, printed and published by A. R. Nagarajan, at the Sadhvi Press, D. Subbiah Road, Mysore.

ಸ್ತ್ರೀಯರ ಕೌಶಯರ ಕ್ಕಾಗಿ

[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಸರ್ವೋಪಯೋಗಿ

ಡಿ. ಪುಟ್ಟಯ್ಯ ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ರವೆ, ಗೋಧಿ [illegible] ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ.

ಸಂಪುಟ ೨] ಬುಧವಾರ ೨೯--೧೨--೪೩ [ಸಂಚಿಕೆ ೧೬೯

೧೯೪೪ರಲ್ಲಿ ಯೂರೋಪಿನಲ್ಲಿ ಜಯ

ಕಾಲೇಜುಗಳಲ್ಲಿ ಕನ್ನಡದ ಮೂಲಕ ಶಿಕ್ಷಣ ಕೊಡಬೇಕು

ರೋಡ್ಸ್ ದ್ವೀಪಕ್ಕೆ ಜರ್ಮನ್ ಸೈನ್ಯ ತರಾತುರಿಯಿಂದ ರವಾನೆ

ಅಖಿಲ ಕರ್ನಾಟಕ ವಿಶ್ವ ವಿದ್ಯಾನಿಲಯ

ಸಾಹಿತ್ಯ ಸಮ್ಮೇಳನದ ನಿರ್ಣಯಗಳು

ಸ್ವಂ ವ ಸ] ಶಿವಮೊಗ್ಗ ೨೮

ಅಖಿಲ ಕರ್ನಾಟಕ ವಿಶ್ವ ವಿದ್ಯಾನಿಲಯ ಸ್ಥಾಪನೆ ವಿಷಯವಾಗಿ ಶ್ರೀ ಸರ್ ಮಿರ್ಜಾ ... ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಚರ್ಚೆ ನಡೆಯಿತು. ಶ್ರೀಗಳಾದ ಕೆ. ಸಂಪದ್ಗಿರಿ ರಾಯರು, ರಂಗನಾಥರಾಯರು, ಮಹಾದೇವ, ಡಿ. ವಿ. ಆರ್ ... ಗೋಕಾಕ ... ಮೊದಲಾದವರುಗಳು ಭಾಷಣಗಳನ್ನು ಮಾಡಿದರು. ಇಡೀ ಕರ್ನಾಟಕ ದೇಶಕ್ಕೆಲ್ಲಾ ಒಂದು ವಿಶ್ವ ವಿದ್ಯಾನಿಲಯ ಸ್ಥಾಪನೆ ಆಗಬೇಕೆಂದು ನಿರ್ಣಯವಾಯಿತು.

ನಂತರ ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಿರ್ಣಯಗಳು

ಶ್ರೀಗಳಾದ ಜನರಲ್ ... ರಾವ್, ಎಸ್ ಎಸ್ ... ರಾವ್, ... ವೆಂಕಟನಾರಾಯಣಪ್ಪ, ... ಕೆ ... ನಾರಾಯಣರಾವ್, ... ಜೋಶಿ, ... ಸಹ ಸಂಪಾದಕ ... ಶ್ರೀನಿವಾಸ ... ಮೂರ್ತಿ, ... ಗೋವಿಂದರಾವ್, ... ಈ ವಿಷಯದ ಬಗ್ಗೆ ... ಯಿತು.

... ಎಲ್ಲಾ ಕರ್ನಾಟಕ ... ಸಂಪೂರ್ಣವನ್ನು ... ಬೇಕೆಂದು ... ಬೆಳಗಾವಿ, ... ಜಿಲ್ಲೆಗಳನ್ನು ಕರ್ನಾಟಕ ಪ್ರದೇಶಗಳನ್ನಾಗಿ ... ಬೇಕೆಂದು ... ಸುತ್ತದೆ.

ಬ್ರಿಟಿಷ್ ಕರ್ನಾಟಕಕ್ಕೆ ಸ್ವತಂತ್ರ ವಿಶ್ವ ವಿದ್ಯಾನಿಲಯವೊಂದನ್ನು ಸ್ಥಾಪಿಸಬೇಕಾಗಿದೆ. ... ಕಾರಣ ಅದರ ಸಂಸ್ಕೃತಿ, ಸಾಹಿತ್ಯಗಳ ... ಶೀಘ್ರವಾದ ... ಆದ್ದರಿಂದ ... ಸರ್ಕಾರದವರು ... ಸಮಿತಿಯನ್ನು ಈ ಬಗ್ಗೆ ನೇಮಿಸಬೇಕು ಎಂದು ಪ್ರಾರ್ಥಿಸುತ್ತದೆ.

ಶಿಕ್ಷಣವು ದೇಶ ಭಾಷೆಯ ಮೂಲಕ ನಡೆದು ... ಭಾಷೆಯ ಮೂಲಕ ನಡೆದುದು ನಮ್ಮ ನಾಡಿನ ದುರ್ದೈವ ... ಅನ್ಯ ಭಾಷಾ ಮಾಧ್ಯಮವು ನಾಡಿನ ಜನತೆಯಲ್ಲಿ ಜ್ಞಾನ ಪ್ರಸಾರಕ್ಕೆ ಅಡಚಣೆಯಾಗುವುದಲ್ಲದೆ ... ನಾಡಿನ ಜನತೆಗೂ ನಡುವೆ ... ನಮ್ಮ ... ವಿಶ್ವ ವಿದ್ಯಾನಿಲಯದ ಶಿಕ್ಷಣದ ಪೂರ್ಣ ಪ್ರಯೋಜನವಾಗದಂತೆ ಮಾಡಿದೆ. ಈ ಪರಿಸ್ಥಿತಿ ತೊಲಗಿ ... ಸಾಧಕವಾಗಬೇಕಾದರೆ ಶಿಕ್ಷಣದ ಎಲ್ಲ ಅಂತಸ್ತುಗಳಲ್ಲಿಯೂ ಸಾಧ್ಯವಾದಷ್ಟು ಶೀಘ್ರವಾಗಿ ದೇಶಭಾಷೆಯೇ ಮಾಧ್ಯಮವಾಗುವುದು ಅತ್ಯವಶ್ಯಕ. ಮೈಸೂರು ... ಸ್ಕೂಲು ... ಗಳಲ್ಲಿ ಭಾಷೇತರ ವಿಷಯಗಳನ್ನು ಕನ್ನಡದ ಮೂಲಕ ಬೋಧಿಸುವ ಏರ್ಪಾಡುಗಳನ್ನು ... ಮಾಡಿರುವುದಕ್ಕಾಗಿ ಈ ಸಮ್ಮೇಳನವು ಅಭಿನಂದಿಸುತ್ತದೆ. ಅದರ ... ಇಂಟರ್ ಮೀಡಿಯೆಟ್ ಕಾಲೇಜುಗಳಲ್ಲಿ ಕನ್ನಡದ ಮೂಲಕ ಶಿಕ್ಷಣ ... ವನ್ನು ಅಂಗೀಕರಿಸಿ ಇದಕ್ಕೆ ಬೇಕಾದ ಶಾಸ್ತ್ರೀಯ ಗ್ರಂಥರಚನೆ ಮುಂತಾದ ಸಿದ್ಧತೆಗಳನ್ನು ಮಾಡಬೇಕೆಂದೂ ಇಂಟರ್ ಕಾಲೇಜಿನ ಕಲಾವಿಭಾಗದ ತರಗತಿಗಳಲ್ಲಿ ೧೯೪೪--೪೫ನೇ ಸಾಲಿನಿಂದ ಕನ್ನಡದ ಮೂಲಕ ಶಿಕ್ಷಣ ಕೊಡುವಂತೆ ಆಜ್ಞೆ ಹಿಸಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸುತ್ತದೆ.

ಮಹಾರಾಷ್ಟ್ರ ವಿಶ್ವ ವಿದ್ಯಾನಿಲಯದ ಯೋಚನೆಯಲ್ಲಿ ಕನ್ನಡ ನಾಡಿನ ಕೆಲವು ಸಂಸ್ಥಾನಗಳನ್ನು ಅವುಗಳನ್ನು ಆಳುವವರು ಮಹಾರಾಷ್ಟ್ರವೆಂಬ ಕಾರಣದಿಂದ ಮಹಾರಾಷ್ಟ್ರವೆಂದು ಭಾವಿಸುವಂತೆ ಕಂಡು ಬರುತ್ತದೆ. ಈ ಸಭೆಯು ಈ ಭಾವನೆಯನ್ನು ಖಂಡಿಸುತ್ತದೆ ಮತ್ತು ತಮ್ಮ ಪ್ರಜೆಗಳ ಪ್ರೌಢ ವಿದ್ಯಾಭ್ಯಾಸವನ್ನು ಮಹಾರಾಷ್ಟ್ರ ವಿಶ್ವ ವಿದ್ಯಾನಿಲಯಕ್ಕೆ ಒಪ್ಪಿಸಕೂಡದೆಂದು ಈ ಸಂಸ್ಥಾನಗಳ ಪ್ರಭುಗಳನ್ನು ಪ್ರಾರ್ಥಿಸುತ್ತದೆ.

ಅರುನಾಟಕಗಳು

ನಿನ್ನೆ ದಿನ ... ಟಕಗಳ ಪ್ರದರ್ಶನ ನಡೆಯಿತು. ... ಬಾಗದವರು ಪಾತ್ರವಹಿಸಿದ್ದರು. ಶಿವಮೊಗ್ಗ ಕರ್ನಾಟಕ ಸಂಘದವರು ... ಕಲ್ಪ ... ಎಂಬ ನಾಟಕವನ್ನೂ, ಬೆಂಗಳೂರಿನವರು ... ಎಂಬ ... ಪ್ರದರ್ಶಿಸಿದರು. ... ಬಹುಮಾನಗಳು ಬಂದುವು.

ಸಂಗೀತ ಕಛೇರಿ

ಶ್ರೀ ಸಂಗೀತ ವಿದ್ವಾನ್ ದೇವೇಂದ್ರಪ್ಪನವರ ... ಮನೋಹರವಾದ ಗಾಯನದಿಂದ ... ಸಂತೋಷಪಡಿಸಿದರು.

ಇಂದಿನ ಬೆಳಗ್ಗೆ ಶ್ರೀ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಕವಿಗಳ ಗೋಷ್ಠಿಯು ನಡೆಯಿತು. ಗದ್ಯ, ಪದ್ಯ, ... ಅಖಿಲ ಕರ್ನಾಟಕ ಸಂಘದ ಸಮ್ಮೇಳನ ನಡೆಯಿತು. ಗಡಿನಾಡಿನ ... ವಿದ್ಯಾ ಸಂಸ್ಥೆಯ ಸಂಘಗಳು, ಕರ್ನಾಟಕದ ಸಂಘಗಳು, ... ಇವೇ ಮುಂತಾದ ವಿಷಯಗಳ ಚರ್ಚೆ ನಡೆಯಿತು.

ರಾಜಕೀಯ ಬಂದಿಗಳ ಬಿಡುಗಡೆ

... ಸಂಬಂಧಪಟ್ಟಿದ್ದ ... ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದು ... ಆಜ್ಞೆ.

ರೋಡ್ಸ್‌ಗೆ ಜರ್ಮನ್ ಸೈನ್ಯ

ರೋಡ್ಸ್ ದ್ವೀಪಕ್ಕೆ ಜರ್ಮನಿಯು ಸೈನ್ಯಗಳನ್ನು ಬಹಳ ತ್ವರೆಯಿಂದ ಕಳುಹಿಸುತ್ತಿದೆಯೆಂದೂ, ಹಡಗುಗಳ ಅಭಾವದಿಂದ ವಿಮಾನಗಳ ಮೂಲಕ ಸಾಮಗ್ರಿಗಳು ಸರಬರಾಜಾಗುತ್ತಿವೆಯೆಂದೂ ಅಂಕಾರದಿಂದ ಸುದ್ದಿ ಹೊರಟಿದೆ. ... ಯು ಅತಿ ಕಟ್ಟಿದೆಯೆಂದೂ, ಕರ್ಫ್ಯೂ ... ಜಾರಿಗೆ ತರಲಾಗಿದೆಯೆಂದೂ ಹೇಳಲಾಗಿದೆ.

ಕೀವ್ ಬಳಿ ರಷ್ಯನರ ಹೊಸ ಧಾಳಿ

ರಷ್ಯನರ ಹೊಸ ಆಕ್ರಮಣ ಧಾಳಿ ಆರಂಭವಾಗಿದ್ದು ಕೀವ್‌ಗೆ ಪಶ್ಚಿಮದಲ್ಲಿ ೬೦ ಮೈಲಿ ದೂರದ ರಣಕ್ಷೇತ್ರದಲ್ಲಿ ಜರ್ಮನರ ವ್ಯೂಹಗಳನ್ನು ಛೇದಿಸಿ, ಅರ್ಧ ರಣಕ್ಷೇತ್ರವನ್ನು ರಷ್ಯನರು ತಮ್ಮ ವಶಪಡಿಸಿಕೊಂಡಿರುವರು. ... ಜರ್ಮನರ ಶತ್ರುಗಳನ್ನು ಓಡಿಸಲಾಗಿದೆ. ವಿಟೆಬ್ಸ್ಕ್ ಕ್ಷೇತ್ರದ ಬಳಿ ೬೦ ... ರಷ್ಯನರ ವಶವಾಗಿದೆ. ಆ ಕ್ಷೇತ್ರದಲ್ಲಿ ರಷ್ಯನರು ಕೇವಲ ೮ ಮೈಲಿ ಹಿಮ್ಮೆಟ್ಟಿದರು.

ಶಕ್ತಿಯು ಬಲದಿಂದಲೇ ಸ್ವರಾಜ್ಯ

ಹಿಂದೂ ಮಹಾ ಸಭೆಯ ಸ್ವರಾಜ್ಯವನ್ನು ಅಮೃತಸರದಲ್ಲಿ ... ಅಗ್ರಸ್ಥಾನದ ಡಾ॥ ಶ್ಯಾಮಪ್ರಸಾದ್ ಮುಖರ್ಜಿಯವರು ಶಕ್ತಿಯು ಬಲವಿಲ್ಲದೆ ಸ್ವರಾಜ್ಯ ಸ್ಥಾಪನೆಯಾಗುವುದಿಲ್ಲವೆಂದು ಹೇಳಿದರು. ಅದರಿಂದಲೇ ಈ ದೃಷ್ಟಿಯಲ್ಲಿ ಶಕ್ತಿಯು ಬೆಳೆಸುವುದು ... ಮತ್ತು ಬೇಕಾದವರಿಂದ ಸ್ವಾತಂತ್ರ್ಯ ... ಯುದ್ಧದಿಂದಲೇ ಅದನ್ನು ಸಾಧಿಸಬೇಕೆಂದೂ ಅಭಿಪ್ರಾಯ ಪಟ್ಟರು.

ಮೈಸೂರರವರ ಗದೀಪಾರು

ರಷ್ಯಾದ ... ರಾಜ ಬಂಧನ ... ಶ್ರೀ ... ನಾಯಕರಾದ ... ಮಾಡಲಾಯಿತು.

ಬೇಂದ್ರೆಯವರ ಭಾಷಣ

ಮೈಸೂರು ೨೮

ಜನವರಿ ೨ನೇ ತಾ॥ ಭಾನುವಾರ ಬೆಳಗ್ಗೆ ೯-೩೦ ಗಂಟೆಗೆ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಉಪನ್ಯಾಸ ಮಾಡುವರು ... ಗೊಳಿಸಿದ್ದಾರೆ.

ಪುಸ್ತಕಕ್ಕೆ ಪ್ರೋತ್ಸಾಹ

ಧರ್ಮಪ್ರಕಾಶ ಶ್ರೀ ಎಲ್ ಎಸ್. ... ರವರು ಬರೆದಿರುವ ... ಪುಸ್ತಕಕ್ಕೆ ... ಬರೆದಿರುವ "ನಮ್ಮ ಹಿಂದೂಸ್ಥಾನ ಎಂಬ ಪುಸ್ತಕ" ದಂತೆ "ನಮ್ಮ ಮೈಸೂರು" ಎಂಬ ಪುಸ್ತಕವನ್ನು ಬರೆದವರಿಗೆ ೫೦೦ ರೂ. ಬಹುಮಾನವನ್ನು ಕೊಡುವುದಾಗಿ ತಿಳಿಸಿರುವರು.

೧೯೪೪ರಲ್ಲಿ ಯೂರೋಪಿನಲ್ಲಿ ಜಯ

"ಯೂರೋಪಿನ ಯುದ್ಧವನ್ನು ೧೯೪೪ರಲ್ಲಿ ಜಯಿಸುವೆವು" ಎಂದು ಯೂರೋಪಿನ ಮಿತ್ರಸೈನ್ಯದ ನೂತನ ದಂಡನಾಯಕರಾದ ಜನರಲ್ ಐಸೆನ್‌ಹವರ್‌ರವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು. ಈ ಯುದ್ಧವನ್ನು ಗೆಲ್ಲಬೇಕಾದರೆ ... ಸಂಪೂರ್ಣ ... ಬೇಕೆಂದೂ, ವಿಮಾನ ಧಾಳಿಯಿಂದಲೇ ಜರ್ಮನಿಯನ್ನು ಸೋಲಿಸಲಾಗುವುದಿಲ್ಲವೆಂದೂ ಅಭಿಪ್ರಾಯ ಪಟ್ಟರು. ... ಧಾಳಿಯೇ ಈ ಯುದ್ಧದ ನೂತನ ... ಫ್ರೆಂಚ್ ... ಸಂಪೂರ್ಣ ನಾಶಮಾಡಬೇಕೆಂದು ... ದ್ದಾರೆ.

ನ್ಯೂ ಬ್ರಿಟನ್ ದ್ವೀಪದಲ್ಲಿ ಅಮೇರಿಕನ್ನರು

ನ್ಯೂ ಬ್ರಿಟನ್ನಿನ ... ಗ್ಲಾಸ್ಟರ್ ... ಅಮೇರಿಕನ್ ಸೈನ್ಯ ... ತೆಂದೂ ಮತ್ತು ಅದರ ... ಪ್ರದೇಶವನ್ನು ಆಕ್ರಮಿಸಲಾಯಿತೆಂದು ... ಹಿಡಿಯಾಗಿದೆ. ... ಜಪಾನ್ ... ೬೦ ಶತ್ರು ವಿಮಾನಗಳನ್ನು ... ಯಿತು.

ಬ್ರಿಟನ್ನಿನಲ್ಲಿ ಅಮೇರಿಕನ್ ಸೈನ್ಯ

ಅಮೇರಿಕ ಸಂಯುಕ್ತ ಸಂಸ್ಥಾನದ ... ಬ್ರಿಟನ್ನಿಗೆ ... ಸೈನ್ಯವನ್ನು ... ಬ್ರಿಟಿಷ್ ... ಅಮೇರಿಕದ ... ಹೇಳಿದ್ದಾರೆ.

ಈ ವಿಷಯವಾಗಿ ಅಮೇರಿಕ ... ಕಳೆದ ವರ್ಷದಿಂದ ... ಹೊಂದಿದ ... ದಂತಾಗ ...

ರೇಷನ್ ಕಂಡು ಕೊರತೆಗಳು

ನಿನ್ನೆ ದಿನದ ತಮ್ಮ ಪತ್ರಿಕೆಯಲ್ಲಿ ಶ್ರೀ ಎನ್. ಎ. ಸಂಜೀವರಾಯಾಚಾರ್‌ರವರು ಪಡಿತಕ್ಕದ ವಿಚಾರವಾಗಿ ಹೊರಡಿಸಿರುವ ಹೇಳಿಕೆಯು ಗಮನಾರ್ಹವಾಗಿದೆ. ಅವರು ಹೇಳಿರುವಂತೆ ಈಗ ಹಾಲಿ ಡಿಪೋಗಳಲ್ಲಿ ಮಾರಾಟ ಮಾಡಲು ಹೊಸದು, ಹಳೇದು, ಮತ್ತು ಕೊಡಗು ಅಕ್ಕಿ ಇಡಲಾಗಿರುತ್ತೆ. ಎಲ್ಲ ವಿಧವಾದ ಅಕ್ಕಿಯನ್ನ ತಲೆಗೆಲ್ಲ ಒಂದೇ ಮಂಕ್ರ ಎಂಬಂತೆ ರೂ. ಗೆ 3½ ಸೇರಿನಂತೆ ಮಾರಾಟ ಮಾಡಲಾಗುತ್ತಿದೆ. ಇದರಿಂದ ಮಹಾಜನಗಳಿಗೆ ಅದರಲ್ಲೂ ಬಡವರಿಗೆ ಬಹಳ ಅನ್ಯಾಯವಾಗುತ್ತಿದೆ. ಹೊಸಕ್ಕಿಯನ್ನ ಹಳೇ ಅಕ್ಕಿ ಧಾರಣೆಗೆ ಮಾರುವುದು ಮತ್ತು ಮಾರ್ಕೆಟ್ ರೇಟಿನ ಗಜಪೋಗ ಮತ್ತು ಕೊಡಗಕ್ಕಿಯನ್ನು ರೂ. ಗೆ 3½ ಸೇರಿನಂತೆ ಮಾರು ತ್ತಿರುವುದು ಸರಿ ಇಲ್ಲ. ಹೊಸ ಪಡ್ಡಕ್ಕಿಯನ್ನ 4½ ಸೇರಿನಂತೆಯಾದರೂ ಮಾರಾಟ ಮಾಡುವುದು ನ್ಯಾಯ. ಗಜಪೋಗ ಮತ್ತು ಕೊಡಗಕ್ಕಿಯನ್ನು ರೂ. ಗೆ 4½ ಸೇರಿನಂತೆ ಮಾರಿದರೆ ಒಳ್ಳೆಯದು.

ಎಲ್ಲಾ ಜಾತಿಯ ಅಕ್ಕಿಯನ್ನೂ ಒಂದೇ ಪ್ರಮಾಣದಲ್ಲಿ ಮಾರುವುದು ತೊಂದರೆಗೆ ಕಾರಣವಾಗಿದೆ. ಹೊಸಕ್ಕಿಯನ್ನ, ಗಜಪೋಗ ಮತ್ತು ಕೊಡಗಕ್ಕಿಯನ್ನ ಪಡ್ಡಿನ ಪ್ರಮಾಣದಲ್ಲಿ ಮಾರಾಟ ಮಾಡುವುದು ಯುಕ್ತವಾಗಿದೆ. ಈ ವಿಷಯದಲ್ಲಿ ರೇಷನಿಂಗ್ ಮುಖ್ಯಾಧಿಕಾರಿಗಳು ಗಮನಕೊಡಬೇಕು. ಪ್ರಮಾಣವನ್ನು ಹೆಚ್ಚಿಸಿದ ಸಂದರ್ಭದಲ್ಲಿ ಪ್ರತಿಯೊಂದು ಡಿಪೋದಲ್ಲಿಯೂ ಸೂಚನೆ (ರಿಜಿಸ್ಟರ್) ಕಲ್ಲಾ ಬೆಲೆ ಕಂಡ ಹಿಡಿಯುವ ಪಟ್ಟಿಯನ್ನು) ಒದಗಿಸತಕ್ಕದ್ದು ಮುಖ್ಯ ಕರ್ತವ್ಯವಾಗಿರುತ್ತದೆ.

ಪ್ರತಿಯೊಂದು ಮೊಹಲ್ಲಾಗಳಲ್ಲಿ ಸ್ಥಾಪಿಸಿರುವ ಡಿಪೋ ಇಂಚಾರ್ಜ್ ಸ್ಥಳಗಳನ್ನು ಅವನ್ನು ಜಾಗ್ರತೆಯಾಗಿ ಪತ್ರಿಕೆಗಳ ಮೂಲಕ ಪೋಸ್ಟರ್, ಹಸ್ತಪತ್ರಿಕೆಗಳ ಮೂಲಕವೂ ಜನಗಳಿಗೆ ತಿಳುವಳಿಕೆ ಕೊಡದಿರಬಹುದು ತೊಂದರೆಗೆ ಮುಖ್ಯ ಕಾರಣವಾಗುತ್ತದೆ. ಡಿಪೋಗಳ ಮುಂದೆ ಜನಸಂದಣಿಯು ಪ್ರತಿಸ್ಪರ್ಧೆಯಿಂದ ಮಾರಾಟವನ್ನು ವಿರ್ಪಡಿಸಲು "ಕ್ಯೂ" ಮತ್ತು "ಟೋಕನ್" ಪದ್ಧತಿಯನ್ನು ಇವರವರಿಗೂ ಏರ್ಪಡಿಸದಿರುವುದು ಆಶ್ಚರ್ಯಕರವಾಗಿರುತ್ತದೆ.

ಹೆಂಗಸರಿಗೆ ಪ್ರತ್ಯೇಕ ಡಿಪೋಗಳನ್ನಾಗಲಿ ಅಥವ ದ್ವಾರಗಳನ್ನಾಗಲಿ ಏರ್ಪಡಿಸಿಲ್ಲ ಪ್ರತಿಯೊಂದು ಡಿಪೋದಲ್ಲೂ ಸಾಕಷ್ಟು ಸ್ಟಾಕ್ ಇಟ್ಟಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಅದರಲ್ಲೂ ಜಾಗ ಹೆಚ್ಚಾಗಿ ಸ್ಟಾಕ್ ಮಾಡುವುದು ಸಾಕ್ಷಿ ಕಂಡುಬರುತ್ತೆ.

ಮಹಾಜನಗಳು ತಮ್ಮ ಕುಂದು ಕೊರತೆಗಳನ್ನು ನಿವಾರಣೆ ಮಾಡಿಕೊಳ್ಳಲು ಎಷ್ಟು ಪರದಾಡುತ್ತಿರುವ ಸಂದರ್ಭದಲ್ಲಿ ಆ ರೇಷನ್ ಆಫೀಸಿಗೆ ಹೋಗಬೇಕಾಗಿದೆ. ಅನೇಕ ಸಂದರ್ಭಗಳಲ್ಲಿ ಕೂಡಲೇ ನಿವಾರಿಸಿಕೊಳ್ಳಲಾಗದೆ ತೊಂದರೆಗಳು ಇರುತ್ತೆ. ಸ್ಥಳದಲ್ಲೇ ನಿವಾರಿಸುವ ಅಧಿಕಾರಿಗಳು ತಕ್ಕ ವಿಚಾರಣೆ ನಡೆಸಲು ಉಚಿತ ವಿಧ ಅಧಿಕಾರವು ಇವರಿಗೆ ಇಂತಹ ನಡೆಯಬೇಕಾಗಿದೆ. ಎಂದು ಸರ್ಕಲ್ ಆಫೀಸ್‌ಗಳನ್ನು ಸ್ಥಾಪಿಸಿ, ಮಹಾಜ

ಉದಾರ ದಾನ

ಸ್ವ. ವ.] ಬೆಂಗಳೂರು, ಡಿ.

ಬೆಂಗಳೂರು ಸೌತ್ ಪರೇಡ್‌ನಲ್ಲಿರುವ ಅನಾಥ ಆಶ್ರಯ ಎಂಬ ಸಂಸ್ಥೆಯ ಕಟ್ಟಡದ ಸಹಾಯಾರ್ಥವಾಗಿ ಧರ್ಮ ಪ್ರಕಾಶ ದೇವರಾಜ್ ಶಿವರಾಮರವರು ಒಂದು ಸಾವಿರ ರೂ. ಗಳನ್ನು ಕೊಟ್ಟಿದ್ದಾರೆ.

ಪತ್ರಿಕೋದ್ಯೋಗಿ ಸಂಘಕ್ಕೆ ಸಹಾಯ

ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದವರು ಏರ್ಪಡಿಸಿರುವ ಪತ್ರಿಕೋದ್ಯೋಗಿಗಳ ಸಹಾಯ ನಿಧಿಗೆ ಬೆಲ್ಲೂರಿನ ಕಾಫಿ ಪ್ಲಾಂಟರಾದ ಶ್ರೀ ಕೆ. ಟಿ. ಬೀಸಯ್ಯನವರು ಒಂದು ನೂರು ರೂ. ಗಳ ದಾನ ಮಾಡಿದ್ದಾರೆ.

ಹೊಸ ಹುದ್ದೆ

ಎ ಆರ್ ಪಿ ಸಂಸ್ಥೆಯನ್ನು ರದ್ದು ಮಾಡಿರುವುದರಿಂದ ಬೆಂಗಳೂರಿನ ಎ ಆರ್ ಪಿ ಕಂಟ್ರೋಲರಾದ ಶ್ರೀ ಸಿ. ವಿ. ಶೇಷಗಿರಿಯ್ಯನವರನ್ನು ಪ್ರೆಸಿಡೆನ್ಸಿ ಜನರಲ್ ರವರ ಸ್ಪೆಷಲ್ ಅಸಿಸ್ಟೆಂಟರಾಗಿ ನೇಮಿಸಲಾಗುವುದೆಂದು ತಿಳಿದು ಬರುತ್ತೆ.

ರಜತ ಮಹೋತ್ಸವ

ಬೆಂಗಳೂರು ವೇದಿಯ ವಿದ್ಯಾ ಶಾಲೆಯ ರಜತ ಮಹೋತ್ಸವ ಸಮಾರಂಭಗಳು ಜನವರಿ 10, 11, 12 ಗಳಲ್ಲಿ ಆರಂಭವಾಗುತ್ತದೆ. ಶ್ರೀ ಆರ್. ಕೆ. ಶ್ರೀಕಂಠಶಾಸ್ತ್ರಿಗಳವರು ಪ್ರಾರಂಭೋತ್ಸವವನ್ನು ನೆರವೇರಿಸುತ್ತಾರೆ.

ಎಜ್ಯುಕೇಷನ್ ಲೀಗ್

ಸಂಸ್ಥಾನದ ಎಜ್ಯುಕೇಷನ್ ಲೀಗ್ ಸಂಸ್ಥೆಯ ಅಧಿವೇಶನವು ಜನವರಿ 10, 11, 12 ರಲ್ಲಿ ಬೆಂಗಳೂರಿನಲ್ಲಿ ನಡೆಯುವುದಾಗಿ ತಿಳಿದು ಬಂದಿದೆ.

ಸಕ್ಕರೆ ಬೆಲೆ ಏರಿತು

ಸೀಸೆ ಒಂದಕ್ಕೆ ರೆಕ್ಕಾರ್ಡಿಯಂತೆ ಎಲ್ಲಾ ಡಿಪೋಗಳಲ್ಲಿಯೂ ಮಂಡ್ಯದ ಸಕ್ಕರೆಯು ಮಾರಾಟವಾಗುತ್ತಿರುವುದಾಗಿ ತಿಳಿದು ಬಂದಿದೆ.

ಸಿಪಾಯಿಗಳ ಉನ್ಮಾದ

ಬಳ್ಳಾರಿಯ ವಸಾಹತಿನಲ್ಲಿ ಇದ್ದಿನ ಕೆಲವು ಸಿಪಾಯಿಗಳು ಮದ್ಯಪಾನದಿಂದ ಉನ್ಮತ್ತರಾಗಿ ತಮ್ಮ ದಾರಿಯಲ್ಲಿ ಸಿಕ್ಕಿದ ಶ್ರೀ ಎಂ. ಎಸ್. ವೇಣುಗೋಪಾಲ್ ಎಂಬವರ ಕೇಲಸನ್ನೂ ಮತ್ತು ಅವರ ನೆಂಟರಿಗೆ ಬಂದ ಶ್ರೀ ಬಿ ಕೆ. ರಾಜಗೋಪಾಲಾಚಾರ್ ಎಂಬ ಜಿಲ್ಲಾ ನ್ಯಾಯಾಧೀಶರ ಗುಮಾಸ್ತೆಯನ್ನೂ ನಿಷ್ಕಾರಣವಾಗಿ ಎಡ್ಡಾ ತಡ್ಡಾ ಹೊಡೆದಿದ್ದಾರೆ. ಆ ಗುಮಾಸ್ತೆಯು ತಪ್ಪಿಸಿಕೊಂಡ ಅಂಗಡಿಯೊಂದರೊಳ ಹೊಕ್ಕು ರಕ್ಷಣೆ ಪಡೆಯುತ್ತಿರಲು ಸಿಪಾಯಿಗಳು ಅಲ್ಲಿಗೂ ನುಗ್ಗಿ ಅವನನ್ನು ಹೊರಗೆಳೆದು ಹೊಡೆದಿದ್ದಾರೆ. ಈಗ ನ್ಯಾಯಾಧೀಶರ ಗುಮಾಸ್ತೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಸಿಪಾಯಿಗಳ ಮೇಲೆ ಮೊಕದ್ದಮೆ ಹೂಡಲಾಗಿದೆ. ಇಂದು ನಗರದಲ್ಲಿ ಅವರ ಹಾವಳಿ ಹೆಚ್ಚಾಗಿತ್ತು.

ನಗರ ಕುಂದುಕೊರತೆಗಳನ್ನ ಆದಷ್ಟು ಶೀಘ್ರದಲ್ಲೇ ನಿವಾರಿಸಲು ಏರ್ಪಡಿಸಬೇಕು.

ಬಿ. ನಾರಾಯಣಸ್ವಾಮಿ,
ಮುನಿಸಿಪಲ್ ಕೌನ್ಸಿಲರ್.

Edited, printed and published by A. R. Nagarajan, at the Sadhvi Press, D.Subbiah Road, Mysore.

ಕೋರಿಕೆ

ಬೆಂಗಳೂರು ನಗರದ ಪೌರಸಭಾ ಸದಸ್ಯ ಶ್ರೀ ಚಾಂಡಯ್ಯನವರು ಒಂದು ಹೇಳಿಕೆಯನ್ನು ಹೊರಡಿಸಿ, ದೇವರಾಜ ಮೊಹಲ್ಲಾ ರೀಟೈಲ್ ಡಿಪೋಗಳಲ್ಲಿ ಯಾರು ರೇಷನ್ ಕಾರ್ಡುಗಳನ್ನು ಪಡೆಯದೆ ಇದ್ದರೂ ಮತ್ತು ಇತರ ಯಾವ ವಿಧವಾದ ಕುಂದು ಕೊರತೆಗಳಿದ್ದರೂ ತಮಗೆ ತಿಳಿಸಬೇಕೆಂದು ಕೋರಿದ್ದಾರೆ.

ರಕ್ತ ಕುಂಕುಮ

ಅಖಿಲ ಭಾರತ ಹಿಂದೂ ಮಹಾಸಭೆಯ ಅಮೃತಸರದ ಅಧಿವೇಶನದಲ್ಲಿ ಸಭಿಕರ ಗುಂಪಿನಿಂದ ಒಬ್ಬ ಯುವಕನು ಡಾ॥ ಮುಖರ್ಜಿಯವರ ಬಳಿಗೆ ಹೋಗಿ ತನ್ನ ದೇಹದಿಂದ ಒಂದು ತೊಟ್ಟು ರಕ್ತವನ್ನು ತೆಗೆದು ಅದನ್ನು ಅವರ ಹಣೆಗೆ ಇಟ್ಟು, ಭಾರತೀಯ ದಾಸ್ಯ ನಿವಾರಣೆಗೆ ಇದು ಕುಂಕುಮವಾಗಲಿ ಎಂದು ಬಯಸಿದನು.

ಯುದ್ಧಾನಂತರದ ನಿಮ್ಮ ಧ್ಯೇಯವೇನು?

ಯುದ್ಧಾನಂತರ ಅಂಗಡಿಗಳಲ್ಲಿ ಸಾಮಾನುಗಳು ಭರ್ತಿಯಾಗಿ ತುಂಬಿರುತ್ತವೆ, ಮತ್ತು ಅವು ನ್ಯಾಯವಾದ ಬೆಲೆಗೆ ದೊರೆಯುತ್ತವೆ. ಯುದ್ಧಕಾಲದಲ್ಲಿ ದುಂದುವೆಚ್ಚ ಮಾಡಿದವರು ಪಶ್ಚಾತ್ತಾಪ ಪಡಬೇಕಾಗುವುದು: ಏಕೆಂದರೆ ಯುದ್ಧಸಮಯದ ಉಳಿತಾಯಗಳು ಮುಖ್ಯವಾದುವೇ ಸರಿ. ಯುದ್ಧಾನಂತರದ ನಿಮ್ಮ ಖಾಸಗೀ ಯೋಜನೆಗಳನ್ನು ಪೂರೈಸಲು ಈಗಿನಿಂದಲೇ ಕೂಡಿಡಲು ಆರಂಭಿಸಿ. ಅತ್ಯಾವಶ್ಯಕವಾದವುಗಳಿಗೆ ಹೊರತು ಉಳಿದ ಎಲ್ಲಾ ಖರ್ಚು ಬಾಬುಗಳನ್ನೂ ಜೋಪಾನ ಮಾಡಿ. ಕಮ್ಮಿ ಧಾರಣೆಗಳು ಬರುವ ದಿನಕ್ಕಾಗಿ ಕೂಡಿಡಿ.

ಮುಂಬರುವ ದಿನಗಳಿಗಾಗಿ ಕೂಡಿಡಿ

ನಿಮ್ಮ ಹಣವನ್ನು ಲಾಭ ತೋರುವಂತೆ ಕೂಡಿಡಿ. ಯುದ್ಧ ಮುಗಿಯುವವರೆಗೆ ನಿಮ್ಮ ಹಣವನ್ನು ಸುರಕ್ಷಿತವಾದ ಸರಕಾರ ಸಂಸ್ಥೆ, ಸೇವ್, ಬ್ಯಾಂಕ್ ಮತ್ತು ಪೋಸ್ಟಾಫೀಸ್‌ಗಳಲ್ಲಿ ಅಥವಾ ಇನ್ನೂವು ಸಲಗಿನ ಉತ್ತಮವಾದ ಪರ್ಚೇಸಿನ ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ವಿನಿಯೋಗಿಸಿ. ಬೆಳ್ಳಿ, ಬಂಗಾರ, ಆಭರಣಗಳು ಅಥವಾ ಸಾಮಾನುಗಳ ಮೇಲೆ ಹಣ ಹಾಕಬೇಡಿ. ಏಕೆಂದರೆ ವಿಜಯ ಸಾಧಿಸಿದಂತೆಲ್ಲ ಅವುಗಳ ಧಾರಣೆಗಳು ಬಿದ್ದು ಹೋಗುತ್ತವೆ.



ರಾಷ್ಟ್ರೀಯ ಯುದ್ಧ ಮುಂಬಡಗರು ಜೇಬೀಯವರಿಗೆ ಸೂಚನ ಮಾಡಿ

CPU-78.KN

ಸಂಪುಟ ೨] ಗುರುವಾರ ೩೦--೧೨--೪೩ [ಸಂಚಿಕೆ ೧೪೦

ಸುಭಾಷ್ ಬೋಸರಿಗೆ ಮಾತೃವಿಯೋಗ

ಮಿತ್ರರ ಮುತ್ತಿಗೆಯನ್ನು ಎದುರಿಸಲು ನಾಜಿ ಸಿದ್ಧತೆ

ಮೋಡಗಳನ್ನು ಭೇದಿಸಿ ಹೊಡೆಯುವ ಬಾಂಬರು ಶೋಧನೆ

ಮ್ಯಾತ್ಯೂರವರ ಗಡೀಪಾರು

ಮೈಸೂರು ೩೦

ಶ್ರೀ ಸಿ ಒ ಮ್ಯಾಥ್ಯೂರವರನ್ನು ಗಡೀಪಾರು ಮಾಡಲಾಯಿತಷ್ಟೆ. ಮೈಸೂರು ಪೋಲೀಸರು ಅವರನ್ನು ನಿನ್ನೆ ತಿರುವಾಂಕೂರಿಗೆ ಕರೆದುಕೊಂಡು ಹೋದರು.

ಫುಟ್‌ಬಾಲ್

ನೆನ್ನೆಯಿಂದ ಪ್ರಾರಂಭವಾದ ಎಂ ಎಸ್. ಎಸ್. ಚೆಟ್ಟಿ ಸ್ಮಾರಕ ಫುಟ್‌ಬಾಲ್ ಪಂದ್ಯಗಳ ಆಶ್ರಯದಲ್ಲಿ ವೈಲ್ಡ್ ಕ್ಲಬ್ಬಿಗೂ ಶಾರದಾ ಕ್ಲಬ್ಬಿಗೂ ನಡೆದ ಪಂದ್ಯವು ಡ್ರಾ ಆಯಿತು

ವೇತನ ಹಂಚಿಕೆ

ಮೈಸೂರು ನಗರದ ವೀರಶೈವ ವಿದ್ಯಾರ್ಥಿ ಸಂಘದ ವಿದ್ಯಾರ್ಥಿವೇತನ ಉತ್ಸವ ಮಿತಿಯು ತಾ|| ೨೭ ೧೨ ೪೩ ನೆಯ ಮಂಗಳವಾರ ಸಂಘದ ಉಪಾಧ್ಯಕ್ಷರಾದ ವಿದ್ವಾನ್ ಜಿ. ಮರುಳಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಮೈಸೂರು ಪಟ್ಟಣದ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ಅರ್ಹರಾದ ೧೫ ಮಂದಿ ವಿದ್ಯಾರ್ಥಿಗಳಿಗೆ ೧೦೭ ರೂಪಾಯಿಗಳ ವೇತನವನ್ನು ಹಂಚಲಾಯಿತು

ಪ್ರಜಾಪ್ರತಿನಿಧಿ ಸಭೆಯ ಉಪಚುನಾವಣೆ

ಬೆಂಗಳೂರಿನಲ್ಲಿರುವ ಮುಸ್ಲಿಂ ಕ್ಷೇತ್ರದಿಂದ ಪ್ರಜಾಪ್ರತಿನಿಧಿ ಸಭೆಗೆ ಚುನಾಯಿತರಾಗಿದ್ದ ಎ.|| ವಲೀಯುಲ್ಲಾರವರ ಚುನಾವಣೆಯು ಕ್ರಮವಾಗಿಲ್ಲವೆಂದು ತೀರ್ಮಾನವಾಗಿರುವುದರಿಂದಲೂ ಶಾಸನ ಸಭೆಗೆ ಶ್ರೀ ಕೆ ಸಿ ಸುಬ್ಬಣ್ಣನವರು ಚುನಾಯಿತರಾಗಿರುವುದರಿಂದಲೂ ಅವರುಗಳ ಸ್ಥಾನದಲ್ಲಿ ಬೆಂಗಳೂರು ನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಉಪಚುನಾವಣೆ ನಡೆಯುವಂತೆ ಸರ್ಕಾರದ ಆಜ್ಞೆಯಾಗಿದೆ

ಗಾಂಧೀಜಿ ಇಲ್ಲದೆ ಒಪ್ಪಂದವಿಲ್ಲ

ಬೊಂಬಯಿನಲ್ಲಿ ನಡೆದ ಮುಂದಾಳುಗಳ ೨೫ ನೇ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು ವಹಿಸಿ ಸರ್ ಮಹಾರಾಜಸಿಂಗ್‌ರವರು ಭಾಷಣ ಮಾಡುತ್ತಾ, ಗಾಂಧೀಜಿಯವರಿಲ್ಲದೆ ಭರತಖಂಡದ ರಾಜಕೀಯ ಬಿಕ್ಕಟ್ಟು ಪರಿಹಾರವಾಗ ಲಾರದಿಲ್ಲವೆಂದೂ ಅವರನ್ನು ಕೂಡಲೇ ಬಿಡುಗಡೆಮಾಡಬೇಕೆಂದೂ ಹೇಳಿದರು. ಮತ್ತು ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರವನ್ನೂ ಸಹಾ ಸ್ಥಾಪಿಸಬೇಕೆಂದೂ ಹೇಳಿದರು

ಸಿ. ವಿ. ರಾಮನ್‌ರೇ ಅಧ್ಯಕ್ಷರಾದರು

ಭಾರತದ ವಿಜ್ಞಾನ ಸಂಘದ ವಾರ್ಷಿಕ ಸಭೆಯು ಹೈದರಾಬಾದಿನಲ್ಲಿ ನೆನ್ನೆ ನಡೆದು ಮತ್ತೆ ಸರ್ ಸಿ. ವಿ ರಾಮನ್‌ರವರನ್ನೇ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು

ಬಿಹಾರ್‌ನಲ್ಲಿ ಧಾರಣೆ ಕಮ್ಮಿ ಬಿತ್ತು

ಮುಖ್ಯವಾದ ದವಸಧಾನ್ಯಗಳ ಬೆಲೆಯನ್ನು ಬಿಹಾರ್ ಸರ್ಕಾರದವರು ಮತ್ತೆ ಇಳಿಸಿದ್ದಾರೆ [illegible]ನಲ್ಲಿ ಕಮ್ಮಿ ಮಾಡಲಾಗುತ್ತಿದ್ದು [illegible] ಜನಸಾಮಾನ್ಯದ ಬಾರಿಗೆ ಒದಗುವುದು.

ಸುಭಾಸ್ ಬೋಸರಿಗೆ ಮಾತೃವಿಯೋಗ

ಮೊನ್ನೆ ರಾತ್ರಿ ಕಲ್ಕತ್ತಾದಲ್ಲಿ ದಿವಂಗತ ಜಾನಕೀನಾಥ್ ಬೋಸ್‌ರ ಪತ್ನಿ ಶ್ರೀಮತಿ ಪ್ರಭಾವತಿ ಬೋಸ್‌ರವರು ಕಾಲವಾದರು ಇವರು ತಮ್ಮ ಹಿಂದೆ ಪ್ರಿಯಪುತ್ರರುಗಳಾದ ಸತೀಶಚಂದ್ರಬೋಸ್, ಶರತ್ ಚಂದ್ರ ಬೋಸ್, ಡಾ || ಸುನೀಲ್ ಚಂದ್ರಬೋಸ್ ಮತ್ತು ಸುಭಾಷ್ ಚಂದ್ರಬೋಸ್ ಇವರೇ ಮೊದಲಾದ ಏಳು ಮಂದಿ ಗಂಡು ಮಕ್ಕಳನ್ನು ಬಿಟ್ಟು ಹೋಗಿರುವರು.

ರಾಯಭಾರಿ ಕಾರ್ಯಾಧಿ ಗೂಢಚಾರ

ಲಂಡನ್ನಿನಲ್ಲಿರುವ ಸ್ಪೈನ್ ದೇಶದ ರಾಯಭಾರಿಯ ಕಾರ್ಯಾಧಿ ಕಾರ್ಲೋಸ್ ವಿರ್ಜನೂಕ್ನಾ ಎಂಬಾತನು ಜರ್ಮನರ ಗೂಢಚಾರನಾಗಿ ವರ್ತಿಸಿದ್ದನ್ನು ನ್ಯೂಯಾರ್ಕಿನ ಪತ್ರಿಕೆಯವರು ಕಂಡುಹಿಡಿದಿರುತ್ತಾರೆ ಅವನಿಗೆ ಒಂದು ವರ್ಷ ಒಂದು ದಿನ ಸಜ ವಿಧಿಸಲಾಗಿದೆ.

ಅಮೆರಿಂಪನ್ನು ಇಳಿಸಿ

ಎ|| ಅವೆ ರಿಯವರನ್ನು ಭಾರತ ಕಾರ್ಯದರ್ಶಿ ಸ್ಥಾನದಿಂದ ತೆಗೆದು ಹಾಕಬೇಕು, ಈ ಕೂಡಲೆ ಭಾರತದಲ್ಲಿ ರಾಷ್ಟ್ರೀಯ ಸರ್ಕಾರವೇರ್ಪಡಬೇಕು, ರಾಜಕೀಯ ಬಂದಿಗಳೆಲ್ಲರನ್ನೂ ಖುಲಾಸೆ ಮಾಡಬೇಕು, ಮತ್ತು ಬಂಗಾಳ ಕ್ಷಾಮದ ವಿಚಾರಣೆ ನಡೆಯಬೇಕು ಎಂಬೀ ಠರಾವುಗಳು ಮೊನ್ನೆ ಕಾನ್ಪುರದಲ್ಲಿ ಸೇರಿದ್ದ ಅಖಿಲ ಭಾರತ ಹಿಂದೂ ಮಹಾ ಸಭೆಯ ಅಮೃತಸರದ ಅಧಿವೇಶನದಲ್ಲಿ ಪಾಸಾದವು

ಜರ್ಮನರ ಜ್ವಾಲಾ ಯುದ್ಧ

ಓರ್ಟೋನಾದಲ್ಲಿನ ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳುವಾಗ ಹೋರಾಡುತ್ತಿದ್ದ ಜರ್ಮನರು ಅಗ್ನಿಜ್ವಾಲೆಗಳನ್ನುಗುಳುವ ಯಂತ್ರಗಳನ್ನು ಉಪಯೋಗಿಸಿದರೆಂದು ಗೊತ್ತಾಗಿದೆ

ಅಮೆರಿಕನ್ನರು ಮುಂದಾದರು

ನ್ಯೂ ಬ್ರಿಟನ್ನಿನ ಪಶ್ಚಿಮ ಪ್ರದೇಶದಲ್ಲಿ ೩ ವಾರಗಳ ಹಿಂದೆ ಅಮೆರಿಕನ್ನರ ಮೇಲ್ಬೀಳುವ ಮೊದಲನೆಯ ಆಕ್ರಮಣ ಆರಂಭವಾಗಿತ್ತು ಅಲ್ಲಿ ಈಗ ಜಪಾನರ ಪ್ರತಿಭಟನೆ [illegible] ಬಿದ್ದಾಗಿರುವ ಕಾರಣ ಅಮೆರಿಕನ್ನರು ಮುಂದಕ್ಕೆ ಸರಿಯುತ್ತಿದ್ದಾರೆ

ಮೋಡಚ್ಛೇದಕ ಬಾಂಬುಗಳು

ಹಗಲು ಹೊತ್ತಿನಲ್ಲಿ ದಟ್ಟವಾದ ಮೋಡಗಳನ್ನು ಭೇದಿಸಿಕೊಂಡು ಗುರಿಗಳ ಮೇಲೆ ಬಾಂಬುಗಳನ್ನು ಸುರಿಸುವ ನೂತನ ಸಾಧನ ಯಂತ್ರವನ್ನು ಅಮೆರಿಕನ್ ಎಂಟನೇ ವಿಮಾನ ದಳದವರು ಕಂಡುಹಿಡಿದಿದ್ದಾರೆ ಈ ಸಾಧನದಿಂದ ಹೆಚ್ಚಿನ ಸಂಖ್ಯೆಯ ಬಾಂಬರುಗಳು, ಫೈಟರುಗಳು ಶತ್ರುವಿನ ಮೇಲೆ ಈ ವಿಧಾನವನ್ನು ಪ್ರಯೋಗಿಸಿವೆ

ಸರ್ಕಾರಿ ಬೆಲೆಗೆ ಸಿಗರೇಟ್ ಮಾರಾಟ

ಸಿಗರೇಟ್ ವ್ಯಾಪಾರದಲ್ಲಿನ ಸಂಘ ಮಾರಾಟವನ್ನು ತಪ್ಪಿಸಲು ಕೇಂದ್ರ ಸರ್ಕಾರದವರು ಸಿಗರೇಟುಗಳ ಬೆಲೆ ಪಟ್ಟಿಯ ಆಜ್ಞೆ ಹೊರಡಿಸಿ ಅದರಲ್ಲಿ ವಿವಿಧ ಸಿಗರೇಟುಗಳ ಬೆಲೆಗಳ ನಿಗದಿಯನ್ನು ನಮೂದಿಸಿರುವರು

ಕಾ|| ಹಲ್ಲ್‌ರ ಸಮರ್ಥನೆ

ಅಮೆರಿಕಾ ಸ್ಟೇಟ್ ಕಾರ್ಯದರ್ಶಿಗಳಾದ ಕಾ|| ಹಲ್ಲ್‌ರು ಜ|| ಸಿನ್ನರ್ ವೆಲ್ಸರ ಹೇಳಿಕೆಯನ್ನು ಸಮರ್ಥಿಸಿ ಹೇಗಿದ್ದರೂ ಜಯಸಿದ್ಧಿಯೇ ಶೀಘ್ರವೆಂಬ ಭಾವನೆಯನ್ನು ಬಿಟ್ಟು ರಷ್ಯಾ, ಇಂಗ್ಲೆಂಡ್ ಮತ್ತು ಚೀನಾ ಮತ್ತು ಅಮೆರಿಕಾ ಸಂಯುಕ್ತ ರಾಷ್ಟ್ರಗಳವರು ಒಮ್ಮತದಿಂದ ವರ್ತಿಸಿದರೆ ಬಹಳ ಬಲ್ಲ ಶತ್ರುವಿಗೇ ಯೋಧರ ವಿಜಯ ಸಿದ್ಧವೆಂದು ಹೇಳಿದರು

ಜರ್ಮನಿಗೆ ವಿರುದ್ಧ ಕಾರ್ಯ ನಡೆಸಿ

ಹಂಗೇರಿ ಜನಗಳು ಜರ್ಮನಿಗೆ ವಿರೋಧವಾದ ಕಾರ್ಯವನ್ನು ಆರಂಭಿಸಿ, ಜರ್ಮನಿಯ ಕೈಯಿಂದ ಪಾರಾಗಲು ಜನರಲ್ ಟಿಟೋರವರ ಯುಗೋಸ್ಲೇವ್ ಸೈನಿಕರು ಮತ್ತು ಜೆಕೋಸ್ಲೋವೇಕಿಯ ಶತ್ರುವಿರೋಧಕ ಸೈನಿಕರೊಂದಿಗೆ ಸೇರಬೇಕೆಂದು ಕೌಂಟ್ ಮಿಚಲ್ ಕರೋಲಿಯವರು ಹಂಗೇರಿ ಜನಗಳಿಗೆ ಮನವಿ ಮಾಡಿಕೊಂಡಿದ್ದಾರೆ

೨೯೨ ಜರ್ಮನ್ ವಿಮಾನಗಳ ನಾಶ

ಒಟ್ಟಿನಲ್ಲಿ ಮಿತ್ರ ವಿಮಾನಗಳು [illegible] ಫಲವಾಗಿ ಇಲ್ಲಿಯವರೆಗೆ ೨೯೨ ಜರ್ಮನ್ ವಿಮಾನಗಳ ನಾಶವಾಗಿ ದೆಯೆಂದು ಪ್ರಕಟವಾಗಿದೆ

ಎದುರಿಸಲು ನಾಜಿ ತಯಾರಿ

ಮಿತ್ರರು ಪ್ರಾರಂಭಿಸಲಿರುವ ದಂಡಯಾತ್ರೆಯನ್ನು ಎದುರಿಸಲು ಮಾರ್ಷಲ್ ರೋಮೆಲ್ ಸರ್ವ [illegible] ನ್ನು ಮಾಡುತ್ತಿದ್ದಾನೆ [illegible] ಮೆಲ್ಲರು ಮಾರ್ಷಲ್ ರನ್‌ಸ್ಟೆಡ್‌ರವರೊಡನೆ ಕಲೆತು ಸಮಾಲೋಚನೆ ನಡೆಸಿದರು.

೧೨ ಜಪಾನಿ ಹಡಗುಗಳ ನಾಶ

ಪೆಸಿಫಿಕ್‌ನಲ್ಲಿ ಅಮೇರಿಕನ್ ಸಬ್‌ಮೆರೀನುಗಳು ೧೨ ಜಪಾನಿ ಹಡಗುಗಳನ್ನು ಮುಳುಗಿಸಿದವೆಂದು ವರದಿಯಾಗಿದೆ

ಗಡಿಯಾರ ನಿಂತಿತು - - ಪ್ರಾಣ ಹೋಯಿತು

ಇಂಗ್ಲೆಂಡಿನಲ್ಲಿರುವ ಮ್ಯಾಟಿಸ್ ೭೮ ವರ್ಷ ವಯಸ್ಸಿನ ಪೆರ್ರಿನ್ ಎಂಬಾತನ ಮನೆಯಲ್ಲಿದ್ದ ಪ್ರಸಿದ್ಧ ಪುರಾತನ ಗಡಿಯಾರವು ಕ್ರಿಸ್‌ಮಸ್ ಹಬ್ಬದ ದಿನ ಮಧ್ಯರಾತ್ರಿ ನಿಂತು ಹೋಯಿತು. ಇದಾದ ಮೂರು ಗಂಟೆಗಳ ಮೇಲೆ ಪೆರ್ರಿ ಮೃತಪಟ್ಟನು

ಸಾಯುವುದನ್ನರಿತ ಸ್ವಾಮಿ

ತಂಜಾವೂರಿನ ದತ್ತಾತ್ರೇಯ [illegible] ಸ್ವಾಮಿಗಳು [illegible] ಶ್ರೀ [illegible] ಸ್ವಾಮಿಗಳು [illegible] ಅವರು [illegible] ಜಿಲ್ಲಾ ಕಲೆಕ್ಟರನ್ನೂ [illegible] ಬರೆದಿದ್ದರು.

ಹಿಂದೂ ಮಹಿಳಾ ಸಮ್ಮೇಳನ

ಅಮೃತಸರದಲ್ಲಿ ಹಿಂದೂ ಮಹಾ ಸಭಾ ಅಧಿವೇಶನದ ಅಂಗವಾಗಿ ಅಖಿಲ ಭಾರತ ಹಿಂದೂ ಮಹಿಳಾ ಸಮ್ಮೇಳನವು ನಡೆದು, [illegible] ಹಿಂದೂ [illegible] ಯಾಗಲು ನಿರಾಕರಿಸಬೇಕೆಂದೂ, [illegible] ಮಾಡಲಾಯಿತು

ಯುದ್ಧ ಅಪರಾಧಿಗಳ ವಿಚಾರಣೆ

ಹಿಟ್ಲರ್ ಮತ್ತು ಇತರ [illegible] ಮಿತ್ರರಾಷ್ಟ್ರಗಳ [illegible] ಜೆಕೋಸ್ಲೋವೇಕಿಯ [illegible] ಸಂಯುಕ್ತ ರಾಷ್ಟ್ರ [illegible] ಸಲಹೆಮಾಡಿದ

ಭದ್ರಾವತಿಯಲ್ಲಿ ನಾಟಕ

[illegible]

ಪುಸ್ತಕ ಬಹಿಷ್ಕಾರ

ಸ್ಪಿಂ ಸು] ಬೆಂಗಳೂರು ೨೯.

ಮೈಸೂರು ಸರ್ಕಾರದವರು ತಾಷ ನ್ ಮತ್ತು ವಿದ್ರೋಹಿ ಎಂಬೆರಡು ಹಿಂದೀ ಪುಸ್ತಕಗಳನ್ನು ಬಹಿಷ್ಕರಿಸಿರುವರು.

ರೇಷನ್ ಭತ್ತಿ ?

ಜನವರಿ ತಿಂಗಳಿಂದ ಪಡಿತರವನ್ನು ದ್ವಿಗುಣವಾಡುವರೆಂದು ಹೇಳಲಾಗುತ್ತಿದೆ.

ಸಟ್ಟಾವ್ಯಾಪಾರ ಕೂಡದು

ಭಾರತ ರಕ್ಷಣಾ ಶಾಸನದ ೮೧ ನೇ ರ ೦ನಂತೆ, ಅಕ್ಕಿ, ರಾಗಿ, ಜೋಳ, ನವಣೆ, ದಾರಕ, ಸಜ್ಜೆ, ಗೋಧಿ ಇವುಗಳ ಸಟ್ಟಾ ವ್ಯಾಪಾರ ಮಾಡಕೂಡದೆಂದು ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ ನಿನ್ನೆಯಿಂದ ಈ ಆಜ್ಞೆ ಜಾರಿಯಲ್ಲಿದೆ

ಮುಂದಿನ ಸಾಹಿತ್ಯ ಸಮ್ಮೇಳನ

ಸಾಹಿತ್ಯ ಸಮ್ಮೇಳನದ ಮುಂದಿನ ಅಧಿವೇಶನವನ್ನು ಸಾಂಗ್ಲಿ ಸಂಸ್ಥಾನದ ರಬಕವಿಯಲ್ಲಿ ನಡೆಸಬೇಕೆಂದು ಆಹ್ವಾನಿಸಲಾಗಿದೆ

ನೃತ್ಯರಿಗಾಗಿ ಸ್ಪರ್ಧೆಗಳು

ಜನವರಿ ಮೊದಲನೆ ವಾರದ ಬೆಂಗಳೂರು ಮಣಿಯಲ್ಲಿ ಸೇರುವ ವೈಶ್ಯ ಸಮ್ಮೇಳನದ ಅಂಗವಾಗಿ ವೈಶ್ಯ ವಿದ್ಯಾರ್ಥಿಗಳಿಗಾಗಿ ಚರ್ಚೆ, ಸಂಗೀತ, ವ್ಯಾಯಾಮ ಪ್ರದರ್ಶನ ಮತ್ತು ಆಟೋಟದ ಸ್ಪರ್ಧೆಗಳು ಏರ್ಪಾಡಾಗಿವೆ ಸ್ಪರ್ಧಿಗಳಾದವರು ೨ ನೇ ತಾ|| ನೊಳಗಾಗಿ ಅರ್ಜಿಗಳನ್ನು ಹಾಕಿಕೊಳ್ಳಬಹುದು—ಎಂದು ಸ್ಪರ್ಧಾ ವ್ಯವಸ್ಥಾಪಕರು ತಿಳಿಸುತ್ತಾರೆ.

ಜಪಾನರ ಬುರುಡೆ ಮಾತು

ಜಪಾನರು, ಕೇಪ್‌ಗ್ಲಾಸ್ಟರ್‌ನಲ್ಲಿದ್ದ ಅನೇಕ ಅಮೇರಿಕಾ ವಿಮಾನಗಳನ್ನೂ ವಿಮಾನಗಳನ್ನೂ ನಾಶಗೊಳಿಸಿದೆವೆಂದು ಹೇಳಿಕೊಂಡಿರುವುದನ್ನು ಟೀಕಿಸುತ್ತಾ ಕ|| ನಾಕ್ಸರು, ಅಮೆರಿಕನ್ನರು ಅಲ್ಲಿ ಇಳಿದು ನಾಲ್ಕು ಗಂಟೆಗಳಾದ ಮೇಲೆ ಜಪಾನರು ಒಂದು ವಿನಾಶಿಕೆ, ಒಂದು ವಿಮಾನವಾಹಕ ನೌಕೆ ಇವುಗಳನ್ನು ಮಾತ್ರ ನಷ್ಟಗೊಳಿಸಿದರೆಂದೂ, ಮಿಕ್ಕದ್ದೆಲ್ಲಾ ಬುರುಡೆಯೆಂದೂ ತಿಳಿಸಿದ್ದಾರೆ.

ಜರ್ಮನರ ಟ್ಯಾಂಕ್ ನಷ್ಟ

ರಷ್ಯಾ ರಣರಂಗದಲ್ಲಿ ನಿನ್ನೆ ಜರ್ಮನರ ೧೦೩ ಟ್ಯಾಂಕುಗಳನ್ನು ನಾಶಗೊಳಿಸಲಾಯಿತು

ಶತ್ರು ನಾಶಮಾಡಲು ಹಂಚಿಕೆ

ಯೂರೋಪಿನ ಮುತ್ತಿಗೆ ಆರಂಭವಾದ ಕೆಲವೆ ತಿಂಗಳೊಳಗಾಗಿ ಜರ್ಮನಿಯ ಶಕ್ತಿಯನ್ನು ಸಂಪೂರ್ಣವಾಗಿ ನಾಶಮಾಡುವ ಹಂಚಿಕೆಯನ್ನು ಅಮೇರಿಕದ ಹೆನ್ರಿ ವಾಲೇಸ್‌ರವರು ತಿಳಿಸಿದ್ದಾರೆ. ಯೂರೋಪಿನ ಮುತ್ತಿಗೆಯು ಸಂಗಡ ರಷಿಯನ್ನರ ಮತ್ತು ಇಟಲಿಯಲ್ಲಿರುವ ಮಿತ್ರ ಸೈನ್ಯಗಳ ಧಾಳಿ ಒಂದೇ ಸಮಯದಲ್ಲಿ ಆರಂಭವಾದರೆ, ಜರ್ಮನಿಯು ಬಹಳ ಕಷ್ಟಕ್ಕೀಡಾಗುವುದು ಶತ್ರುವನ್ನು ಸಂಪೂರ್ಣವಾಗಿ ನಾಶಮಾಡುವುದಲ್ಲದೆ, ಮುಂದೆ ಪ್ರಪಂಚದ ಜನರು ಕ್ಷಾಮ, ರೋಗ ಮತ್ತು ನಿರುದ್ಯೋಗ ಇವುಗಳನ್ನು ಹೋಗಲಾಡಿಸುವಂತೆ ಸಂಯುಕ್ತ ರಾಷ್ಟ್ರಗಳು ಸಹಾಯಕವಾಗಬೇಕೆಂದು ತಿಳಿಸಿದ್ದಾರೆ.

ಅಮೆರಿಕಾ ರೈಲ್ವೆಗಳು ಸರ್ಕಾರಕ್ಕೆ

ಅಮೇರಿಕಾ ಸಂಯುಕ್ತ ಸಂಸ್ಥಾನದ ರೈಲ್ವೆ ಕೆಲಸಗಾರರೆಲ್ಲರೂ ನಾಳೆಯಿಂದ ಮುಷ್ಕರ ಹಿಡಿಯುವುದಾಗಿ ತಿಳಿಸಿರುವುದರಿಂದ ಅಲ್ಲಿನ ರೈಲ್ವೆಗಳನ್ನೆಲ್ಲಾ ಯುದ್ಧಮಂತ್ರಿಯಾದ ಮಿ|| ಸ್ಟಿಂಸನ್ನರು ತಮ್ಮ ಅಧೀನಕ್ಕೆ ತೆಗೆದುಕೊಳ್ಳಬೇಕೆಂದು ಅಧ್ಯಕ್ಷ ರೂಸ್ವೆಲ್ಟರು ಆಜ್ಞೆ ಮಾಡಿದ್ದಾರೆ. ಅಮೇರಿಕಾದ ೧೧ ಕೋಟಿ ವ್ಯಾಲಿಗಳ ರೈಲ್ವೆಗಳನ್ನು ಈಗಾಗಲೇ ಇಬ್ಬರು ಮಿಲಿಟರಿ ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದಾರೆ.

ಫ್ರಾಂಕೋ ಔದಾರ್ಯ

ಮರಣ ದಂಡನೆಗೆ ಗುರಿಯಾಗಿದ್ದ ೧೮೧ ಮಂದಿಗೆ ಜ|| ಫ್ರಾಂಕೋರವರು ಕ್ರಿಸ್‌ಮಸ್ ಆರಂಭದ ದಿನ ಜೀವದಾನ ಮಾಡಿದರು ಸ್ಪೇಯಿನಿನ ಬಂದೀಖಾನೆಗಳಲ್ಲಿ ಕೊಳೆಯುತ್ತಿದ್ದ ೧೩೬ ರಾಜಕೀಯ ಬಂದಿಗಳನ್ನು ಕೆಲವು ಷರತ್ತುಗಳಿಗೊಳಪಡಿಸಿ ಬಿಡುಗಡೆಗೆ ಆಜ್ಞೆ ಮಾಡಲಾಗಿದೆ.

ಬಾಸ್ಕಿ ಕಾಳಗ

ಬಾಸ್ಕಿ ಕದನದಲ್ಲಿ ಯುಗೋಸ್ಲಾವಿಯನ್ನರ ಕೈ ಮೇಲಾಗಿದೆ. ಜಾಗ್ರೇಬ್ ಬಳಿ ಜರ್ಮನರು ತಮ್ಮ ಕೈಯಲ್ಲಿದ್ದ ವಿಮಾನ ನೆಲೆಯೊಂದನ್ನು ಕಳೆದುಕೊಂಡಿದ್ದಾರೆ. ಕ್ರೋಟಿಯಾದಲ್ಲಿ ಪಾರ್ಟಿಸಾನ್ ಸೇನೆಯ ೪೫೦೦ ಜನರನ್ನು ಜರ್ಮನರು ವಧಿಸಿದರೆಂದು ಹಂಗೇರಿ ರೇಡಿಯೋ ತಿಳಿಸುತ್ತದೆ.

Edited, printed and published by A. R. Nagarajan, at the Sadhvi Press, D.Subbiah Road, Mysore.

ಲೀಗ್-ಮಹಾಸಭಾ ಮೈತ್ರಿ

ಹಿಂದೂ ಮಹಾಸಭಾವಿಗೂ ಮುಸ್ಲಿಂ ಲೀಗಿಗೂ ಸ್ನೇಹವನ್ನುಂಟುಮಾಡಲು ಅವ್ಯತಕಸದಲ್ಲಿ ಪ್ರಯತ್ನಗಳಾಗುತ್ತಿವೆ ಪಾಕೀಸ್ಥಾನದ ವಿಷಯದಲ್ಲಿ ಎರಡು ಸಂಸ್ಥೆಗಳಿಗೂ ಸಂಪೂರ್ಣ ಭಿನ್ನಾಭಿಪ್ರಾಯವಿರುವುದಾದರೂ ಬ್ರಿಟಿಷ್ ನೀತಿಯಲ್ಲಿ ಇಬ್ಬರಿಗೂ ಬೇಸರವುಂಟಾಗಿರುವುದರಿಂದ ಉಭಯ ಸಂಗಡಗಳೂ ಪರಸ್ಪರ ಒಪ್ಪಂದದಿಂದ ಕೇಂದ್ರ ಸರ್ಕಾರದಲ್ಲಿ ಮಿಶ್ರ ಮಂತ್ರಿ ಮಂಡಲವನ್ನು ರಚಿಸುವಂತೆ ಪ್ರೇರೇಪಿಸಲು ಪ್ರಯತ್ನಗಳಾಗುತ್ತಿವೆ

ಲಕ್ನೋದಲ್ಲಿ ಪದವೀದಾನ

ಜನವರಿ ೧೫ ನೇ ತಾ|| ನಡೆಯಲಿರುವ ಲಕ್ನೋ ವಿಶ್ವ ವಿದ್ಯಾನಿಲಯದ ಪದವೀದಾನ ಸಮಾರಂಭದಲ್ಲಿ ಭಾಷಣವನ್ನು ಸರ್ ಸಿ. ವಿ ರಾಮನ್‌ರವರು ಮಾಡುವರು.

ಚಿತ್ತಗಾಂಗಿನಲ್ಲಿ ಶತ್ರು ನಷ್ಟ

ಕಳೆದ ೨೬ ನೇ ತಾ|| ಚಿತ್ತಗಾಂಗ್ ಪ್ರದೇಶದ ಮೇಲೆ ನಡೆದ ಧಾಳಿಯಲ್ಲಿ ಜಪಾನಿನ ಹತ್ತು ವಿಮಾನಗಳು ನಾಶವಾದುವೆಂದು ಹೇಳಲಾಗಿದೆ. ಧಾಳಿಕಾರರು ತಮ್ಮ ಎಲ್ಲಾ ಬಾಂಬುಗಳನ್ನು ಸುರಿಸಿದರೂ ಮಿಲಿಟರಿಗೆ ಯಾವ ನಷ್ಟವೂ ಆಗಲಿಲ್ಲ

ಹೆಚ್ಚಿನ ಭತ್ತದ ಬೆಳೆ

ಈ ವರ್ಷ ಹಿಂದೂಸ್ಥಾನದಲ್ಲೆಲ್ಲಾ ಬಹಳ ಹೆಚ್ಚಿನ ಭತ್ತದ ಬೆಳೆ ಆಗುವುದಾಗಿ ನಿರೀಕ್ಷಿಸಲ್ಪಟ್ಟಿದೆ ಕಳೆದ ೧೦-೧೫ ವರ್ಷಗಳಲ್ಲಿ ಆಗದ ಬೆಳೆಯು ಈ ಸಾರಿ ಆಗುವುದೆಂದು ನಂಬಲಾಗಿದೆ ೨ ಕೋಟಿ ೮೫ ಲಕ್ಷ ಟನ್ ಬೆಳೆಯಾಗುವುದು. ಈ ಹೆಚ್ಚಿನ ಬೆಳೆಯು ಎಲ್ಲಾ ಪ್ರಾಂತಗಳಲ್ಲೂ ಹಂಚಿಕೊಂಡಿದೆ.

ನೂತನ ವಿನಾಶಿಕೆ

ಮೊನ್ನೆ ಅಮೇರಿಕನ್ನರು ತಾವು ತಯಾರಿಸಿದ ನೂತನ ಮಾದರಿಯ "ಬ್ರಷ್" ಎಂಬ ಬಲಿಷ್ಠ ವಿನಾಶಿಕೆಯನ್ನು ವಾಷಿಂಗ್‌ಟನ್ನಿನಲ್ಲಿ ಸಮುದ್ರಯಾನ ಮಾಡಿಸಿದರು

ಯಾವಾಗಲೂ ಕೊಳ್ಳಿರಿ!

ಏನನ್ನು? :: ಎಲ್ಲಿ?



ಅತ್ಯಾಧುನಿಕ ಬಗೆಯ, ಮನವೆ ಚ್ಚುವ ಉಡಿಗೆ ತೊಡಿಗೆಗಳು

ಸ್ವಸ್ತಿಕ್ ಸ್ಟೋರ್ಸ್

ದಾಸಪ್ರಕಾಶ ಬಿಲ್ಡಿಂಗ್, ಷಾಪ್ ನಂ ೯ ಮಾರ್ಕೆಟ್ ಕಟ್ಟೆ, ಮೈಸೂರು

ಸ್ವತಂತ್ರ ಫ್ರೆಂಚರ ಪಾತ್ರ

ಯೂರೋಪಿನ ಮೇಲೆ ನಡೆಯುವ ಮುತ್ತಿಗೆಯಲ್ಲಿ ಫ್ರೆಂಚ್ ಸೈನ್ಯಗಳು ವಹಿಸಬೇಕಾದ ಭಾಗದ ವಿಷಯದಲ್ಲಿ ಫ್ರೆಂಚ್ ರಾಷ್ಟ್ರ ವಿಮೋಚನಾ ಸಮಿತಿಯವರು ಸಂಪೂರ್ಣವಾಗಿ ಸಮ್ಮತಿಸಿರುವರೆಂದು ತಿಳಿದುಬಂದಿದೆ

ಹೊಟೋ ದಾಟಿದರು

ಚೀಣಾದ ಯುದ್ಧರಂಗದಲ್ಲಿ ಮುನ್ನುಗ್ಗುತ್ತಿರುವ ಚೀಣೀಯರು ಹೊಟೋ ನದಿಯನ್ನು ದಾಟಿ ಶತ್ರುಗಳನ್ನು ಓಡಿಸುತ್ತಿದ್ದಾರೆಂದು ಸಮಾಚಾರ ಬಂದಿದೆ

ಓರ್ಟೊನೊವಿಂದ ಓಟ

ಓರ್ಟೊನೊ ನಗರವನ್ನು ಬಿಟ್ಟು ಜರ್ಮನರು ಓಡುತ್ತಿರುವರು. ಕೆನೇಡಿಯನ್ ಸೈನಿಕರು ಓಡುತ್ತಿರುವ ಜರ್ಮನರನ್ನು ಬೆನ್ನಟ್ಟುತ್ತಿರುವರು.

ಬರ್ಮಾವಿಗೆ ಮುಕ್ತಿ

ಬರ್ಮಾಕ್ಕೆ ಸ್ವಾತಂತ್ರ್ಯ ಲಭಿಸಿದೆ. ಪೂರ್ವ ಏಷ್ಯಾ ಐಕ್ಯತೆ ಕಾರ್ಯ ಮುಗಿಯಿತು—ಎಂದು ಜಪಾನಿನ ಮಂತ್ರಿಯೊಬ್ಬರು ಹೇಳಿರುತ್ತಾರೆ.

ದೀಪದ ಅನುಕೂಲತೆ

ನಾಣೀವಿಲಾಸಪುರಂ(ವಂಟಿಕೊಪ್ಪಲ್)ನಲ್ಲಿ ಎಲೆಕ್ಟ್ರಿಕ್ ದೀಪದ ಸೌಕರ್ಯವಿಲ್ಲದ ಮನೆಗಳಲ್ಲಿ ವಾಸಿಸುವ ಬಡ ವಿದ್ಯಾರ್ಥಿಗಳು ಸುಮಾರು ಹತ್ತು ಜನಕ್ಕೆ ರಾತ್ರಿ ವೇಳೆಯಲ್ಲಿ ಮಲಗಿಕೊಳ್ಳಲು ಮತ್ತು ವ್ಯಾಸಂಗ ಮಾಡಲು ಸ್ಥಳವನ್ನು ಏರ್ಪಡಿಸಿರುತ್ತೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ -

ಕೆ. ಶ್ರೀನಿವಾಸಮೂರ್ತಿ,

೭೭೭. ಶ್ರೀಕಂಠೇಶ್ವರ ಸ್ಟೋರ್ಸ್ ಬಳಿ, ಒಂಟಿಕೊಪ್ಪಲು

ಅಪೇರಾ ಟಾಕೀಸ್

ಭಕ್ತರಾಜ್

ಅಥವಾ

ಅಂಬರೀಷ

ನಟವರ್ಗ:- ವಿಷ್ಣುಪಂತ್ ಪಗ್ನಿಸ್, ವಾಸಂತಿ, ಕೌಸಲ್ಯ, ಶಾಂತಿಲಾಲ್. ಮುಂತಾದವರು

30-12-43 ರಿಂದ

2 ನೇ ವಾರ

ಕಡೇ ತರಗತಿಗಳು 0-5-0, 0-3-0, ಬಾಕಿ ತರಗತಿಗಳು ಮಾಮೂಲಿನಂತೆ.

ಟೆಂಡರ್ ನೋಟೀಸ್

ಮೈಸೂರು ಅರಮನೆಗೆ ಬೇಕಾದ ಸುಮಾರು ನಾಲ್ಕು ಸಾವಿರದ ಎರಡುನೂರು (೪೨೦೦) ನಲ್ಲ ಹುರುಳಿಗಾಗಿ ಮೊಹರುಮಾಡಲ್ಪಟ್ಟ ಟೆಂಡರುಗಳನ್ನು ಈ ಕೆಳಗೆ ರುಜುಮಾಡಿರುವವರಲ್ಲಿ ೧೫-೧-೧೯೪೪ರ ಸಾಯಂಕಾಲದ ವರೆಗೆ ಕೊಡಬಹುದು.

ಷರತ್ತುಗಳು ಮುಂತಾದ ಹೆಚ್ಚು ವಿಷಯಗಳನ್ನು ತಿಳಿಯಬಹುದು.

ಮೈಸೂರು — ಸಾಹೇಬ್ ಜಾನ್ ಷಾ ಹುಜೂರು ಸೆಕ್ರೆಟರಿಯವರು.

ಶ್ರೀ ಯುರ ಸೌ ಕರ್ಯ ಕ್ಕಾಗಿ

೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಇಲ್ಲೂ ಮತ್ತು ಸಂತೆಪೇಟೆ ಪೋಸ್ಟ್ ಆಫೀಸಿನಲ್ಲಿ ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ.

ಸಂಪುಟ ೨] ಶುಕ್ರವಾರ ೨೧--೧೨--೪೪ [ಸಂಚಿಕೆ ೧೪೧

ಮೂರು ಜರ್ಮನ್ ಡಿವಿಜನುಗಳ ನಾಶ

ಹಿಂದೂಮಹಾಸಭೆಯ ಮೆರವಣಿಗೆಯಲ್ಲಿ ಲಾಠಿ ಪ್ರಯೋಗ

ಸ್ಪೇನಿನಲ್ಲಿ ಮರಣ ದಂಡನೆ ವಜಾ ಮಾಡಲ್ಪಡುವುದು

ಯೂರೋಪ್ ಮುತ್ತಿಗೆ ಹಂಚಿಕೆ

ಯೂರೋಪಿನ ಮುತ್ತಿಗೆ ವಿಚಾರದಲ್ಲಿ ತಕ್ಕ ಹೊಣೆಗಾರರನ್ನು ದ್ವಿತೀಯ ರಣರಂಗದ ದಂಡನಾಯಕರಾದ ಜನರಲ್ ಐಸೆನ್ ಹೋವರ್ ಮತ್ತು ಜನರಲ್ [illegible] ರವರು ನಿರ್ಧರಿಸಿರುವರೆಂದು ಸ್ಟಾಕ್‌ಹೋಮಿನಿಂದ ವರದಿಯಾಗಿದೆ. ಈ ದಂಡನಾಯಕರು ಉತ್ತರ ಆಫ್ರಿಕದಿಂದ ಸ್ಪೇನಿಗೆ ಪ್ರಯಾಣ ಬೆಳೆಸಿ, ಅಲ್ಲಿ ಮಿಲಿಟರಿ ಅಧಿಕಾರಿಗಳೊಡನೆ ಸಮ್ಮೇಳನ ನಡೆಸಿದರೆಂದು ಹೇಳಲಾಗಿದೆ. ಈಗಾಗಲೇ ಯೂರೋಪಿನ ಮುತ್ತಿಗೆಗಾಗಿ ಸರ್ವ ಸಿದ್ಧತೆ ನಡೆಸಲಾಗಿದೆಯಂತೆ.

ಡಾಲ್ಮೇಷಿಯಾ ಕದನ

ಯುಗೋಸ್ಲಾವಿಯಾದ ಡಾಲ್ಮೇಷಿಯ ತೀರದಲ್ಲಿ, ಜರ್ಮನ್ ಕ್ರೂಸರ್ ಹಡಗೊಂದನ್ನು ಯುಗೋಸ್ಲಾವಿಯಾ ದೇಶಭಕ್ತ ಪಡೆಗಳು ಮತ್ತು ಮಿತ್ರವಿಮಾನಗಳು ಸೇರಿ ಪೂರ್ತಿ ನಾಶಗೊಳಿಸಿವೆ. ಡಾಲ್ಮೇಷಿಯಾ ಭೂಕದನದಲ್ಲಿ ಪೂರ್ವ ಬಾಸ್ನಿಯಾದಲ್ಲಿ ಉಗ್ರ ಕದನ ನಡೆಯುತ್ತಿದೆ. ಇಲ್ಲಿ ಜರ್ಮನರ ಎಲ್ಲ ಮುತ್ತಿಗೆಗಳನ್ನೂ ಹಿಮ್ಮೆಟ್ಟಿಸಲಾಗುತ್ತಿದೆ ಎಂದು ವರದಿಯಾಗಿದೆ.

ಚಿಲಿಯನ್ ಸರ್ಕಾರ ಉರುಳಿಸಲು ಒಳಸಂಚು

ಚಿಲಿಯ ಪ್ರಜಾಪ್ರಭುತ್ವ ಸರ್ಕಾರವನ್ನು ಉರುಳಿಸಲು ಚಿಲಿಯನ್ ಜನರು ಮತ್ತು ಪರದೇಶದವರು ಹೂಡಿದ ಒಳಸಂಚನ್ನು ಕಂಡುಹಿಡಿಯಲಾಯಿತೆಂದು ಸರ್ಕಾರದ ಒಳಮಂತ್ರಿಗಳು ತಿಳಿಸಿದ್ದಾರೆ. ಇದಕ್ಕೆ ದೇಶದ ಸೈನಿಕರ ಸಹಾಯವಿತ್ತೆಂದೂ, ಇದಕ್ಕೆ ಸಹಾಯ ಮಾಡಿದ ಕೆಲಗಣನೆಯವರನ್ನು ಗಡೀಪಾರುಮಾಡಿ, ಕಳ್ಳಜನರನ್ನು ಶಿಕ್ಷೆಗೆ ಒಳಪಡಿಸಲಾಗುವುದೆಂದೂ ಮಂತ್ರಿಗಳು ತಿಳಿದ್ದಾರೆ.

ಶಾಂತಿ ಮಾತ್ರ; ಕಾಲಿಲ್ಲ

ಪಾಪಸ್ವಾಮಿಗಳು ನಿಷೇಧಿಸಲ್ಪಟ್ಟ ಕೂಟವು ಅದರೊಡನೆ ಶಾಂತಿಯ ಕರಾರು ಮಾಡುವುದನ್ನೂ ಮಾಡಿಕೊಳ್ಳುವುದಿಲ್ಲವೆಂದೂ, ಕೇವಲ ಶಾಂತಿ ಘೋಷಣೆಯನ್ನು ಮಾತ್ರ ಮಾಡಲಾಗುವುದೆಂದೂ ಒಂದು ಅಧಿಕಾರ ವರ್ಗದಲ್ಲಿ ಹೇಳಲಾಗುತ್ತಿದೆ. ಬರ್ಲಿನ್ನಿನ ಸದಸ್ಯರೊಬ್ಬರು ಯುದ್ಧಾನಂತರ ಕೈಗೊಳ್ಳಬೇಕಾದ ಕಾರ್ಯಕ್ರಮದ ಬಗ್ಗೆ ಸಲಹೆಗಳನ್ನು ಕೊಡುತ್ತಾ, ಹಿಟ್ಲರನ್ನೂ ಮುಸೋಲಿನಿಯನ್ನೂ ಮತ್ತು ಇತರ ಆಕ್ಸಿಸ್ ನಾಯಕರನ್ನೂ ವಿಚಾರಿಸಲು ಒಂದು ಮಿತ್ರರಾಷ್ಟ್ರಗಳ ಕೋರ್ಟನ್ನು ಸ್ಥಾಪಿಸಬೇಕೆಂದು ಸೂಚಿಸಿದ್ದಾರೆ.

ಜರ್ಮನ್ ಹಡಗು ಜಲಸಮಾಧಿ

ಬಿಸ್ಕೆ ಕೊಲ್ಲಿಯಲ್ಲಿ ೩ ಜರ್ಮನ್ ಡಿಸ್ಟ್ರಾಯರುಗಳನ್ನು ನಾಶಗೊಳಿಸಲಾಯಿತೆಂದು ವರದಿಯಾಗಿದೆ. ಇನ್ನೂ ಕೆಲವು ಹಡಗುಗಳಿಗೆ ನಷ್ಟವುಂಟು ಮಾಡಿದವು. ಮಿತ್ರರ ವಿಮಾನಗಳು ಒಂದು ಶತ್ರು ಸಬ್‌ಮರೀನನ್ನೂ ಸಹ ನಾಶಗೊಳಿಸಿವೆ.

ರಬೌಲ್ ಮೇಲೆ ಧಾಳಿ

ನ್ಯೂ ಬ್ರಿಟನ್ನಿನಲ್ಲಿ ಜಪಾನಿನ ಕೇಂದ್ರವಾದ ರಬೌಲ್ ಮೇಲೆ ಮಿತ್ರ ವಿಮಾನಗಳು [illegible] ಧಾಳಿ ನಡೆಸಿದವೆಂದು ಟೋಕಿಯೋ ರೇಡಿಯೋದಿಂದ ವರದಿಯಾಗಿದೆ.

ಫ್ರಾಂಕೋರವರ ಔದಾರ್ಯ

ಸ್ಪೇನಿನಲ್ಲಿ ಒಳಯುದ್ಧ ನಡೆಸಿ ಮರಣದಂಡನೆಗೆ ಒಳಪಟ್ಟಿರುವ ಜನಗಳಿಗೆ ಇನ್ನು ಮುಂದೆ ಮರಣದಂಡನೆಯನ್ನು ವಿಧಿಸಲಾಗದೆಂದು ಜನರಲ್ ಫ್ರಾಂಕೋರವರು ಸಂಕಲ್ಪವಿಟ್ಟಿರುವರೆಂದು ತಿಳಿಸಲಾಗಿದೆ. ಈಗಿರುವ ಶಿಕ್ಷೆಯನ್ನು ಬದಲಾಯಿಸಿ, ಜೀವಾವಧಿ ವನವಾಸ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸಮಾಡಲು ಕಳುಹಿಸುವರೆಂದೂ ತಿಳಿಸುತ್ತಾರೆ.

ಗ್ರೀಕರ ಹೋರಾಟ

ಜರ್ಮನರ ಕೈಯಲ್ಲಿ ಸಿಕ್ಕ ಗ್ರೀಕ್ ನಗರಗಳೂ ಹಳ್ಳಿಗಳೂ ಹೆಚ್ಚು ಕಷ್ಟ ಪಡುತ್ತಿವೆ. ಅಲ್ಲಿರುವ ಗ್ರೀಕರು ತಮ್ಮ ನಗರಗಳನ್ನು ಕಳೆದುಕೊಂಡರೂ ಹೋರಾಟ ನಿಲ್ಲಿಸಿಲ್ಲ. ಗ್ರೀಕರು ಜರ್ಮನರ ವಿರುದ್ಧ ಬಂಡೆದ್ದು ಹೋರಾಡುತ್ತಿದ್ದಾರೆಂದೂ ಹೇಳಲಾಗಿದೆ. ಅವರ ಈ ಚಳುವಳಿಯನ್ನು ಅಡಗಿಸುವುದು ಅಸಾಧ್ಯವೆಂದು ಹೇಳಲಾಗಿದೆ.

ಫಿನ್‌ಲೆಂಡಿನಲ್ಲಿ ಅಶಾಂತಿ ?

ಫಿನ್‌ಲೆಂಡಿನಲ್ಲಿ ಅಶಾಂತಿ ಉಂಟಾಗಿ ಅಧಿಕಾರಿಗಳು ತಮ್ಮ ಸರ್ಕಾರದವರು ಪ್ರಕಟಿಸಿದ ಶಾಸನಗಳನ್ನು ಅಡಗಿಸುವುದು ಕಷ್ಟವೆಂದು ಫಿನ್ನಿಷ್ ಪತ್ರಿಕೆಯೊಂದು ವರದಿಮಾಡಿದೆ.

ಭಾರತ ಸೈನಿಕನ ಸಾಹಸ

ಮಧ್ಯ ಇಟಲಿಯ ಕದನದಲ್ಲಿ ಜರ್ಮನರ ಕೈಸೆರೆಯಾಗಿದ್ದ ನಲ್ವರು ಬ್ರಿಟಿಷ್ ಸೇನಾನಿಗಳಿಗೆ ಸೇರಿದ ವೀರ ಭಾರತ ಸೈನಿಕನೊಬ್ಬನು ನಾಜಿ ಶಿಬಿರದಿಂದ ತಪ್ಪಿಸಿಕೊಂಡು ಈಗ ಭಾರತಕ್ಕೆ ಬಂದಿದ್ದಾನೆ.

ಪೂರ್ವ ಇಂಡಿಯಾದಲ್ಲಿ ಚೀನಾ ಸೈನ್ಯ

"ಬರ್ಮಾ ರಸ್ತೆ ಬಿಡುಗಡೆ" ಎಂಬ ಚೀನಾ ಸೇನೆಯ ಸೈನಿಕರು ಪಡೆದಿರುವ ಪೂರ್ವ ಇಂಡಿಯಾದಲ್ಲಿ ಚೀನಾ ಸೈನ್ಯವು ಮಿತ್ರರೊಡನೆ ಕೂಡಿ ಕೆಲಸಮಾಡಲು ಬರಲಿದೆ.

ಆಹಾರದ ಅಭಾವ ತಪ್ಪಿತು

ಕೆಲವು ಸ್ಥಳಗಳ ಧಾನ್ಯ [illegible] ಬೆಳೆದ ಎಲ್ಲ ಕಡೆಗಳಲ್ಲಿ ಆಹಾರದ ಕೊರತೆ ಹೆಚ್ಚಾಗಿ ಆಹಾರವು ತಪ್ಪಿದ ಕಾರಣ ಅವರ ಚಳಿಗೆ [illegible] ಸರ್ಕಾರ ಸಹಾಯ ಮಾಡಿದ್ದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಗೌರ್ನರುಗಳ ಪ್ರವೇಶಕ್ಕೆ ನೀತಿ

ಕಲಕತ್ತೆಯಲ್ಲಿ ಮೊನ್ನೆ ನಡೆದ ಮಂತ್ರಿಗಳ ಸಮ್ಮೇಳನದಲ್ಲಿ ಮಂತ್ರಿಗಳಿಗೂ, ಗೌರ್ನರರಿಗೂ ಇರುವ ಸಂಬಂಧವನ್ನು ಸ್ಪಷ್ಟಪಡಿಸಬೇಕೆಂದು, ಪ್ರತಿನಿಧಿ ಸರ್ಕಾರದವನ್ನು ಕೇಳುವಂತೆ ತೀರ್ಮಾನವಾಯಿತು. ಹಲವು ಗೌರ್ನರರು ಮಂತ್ರಿಗಳ ದಿನಚರಿ ಆಡಳಿತದಲ್ಲಿ ಬಹಳವಾಗಿ ಪ್ರವೇಶಿಸುತ್ತಿದ್ದಾರೆಂದು ಪ್ರತಿಭಟಿಸಲಾಯಿತು.

ಭಾರತಕ್ಕೆ ಚೀನಾ ಸಹಾಯ

ಭಾರತದ ಕ್ಷಾಮ ಪರಿಹಾರ ನಿಧಿಗಾಗಿ ಚೀನಾ ದೇಶದ ಮಹಿಳಾ ಸಮಿತಿಯವರು ಲಕ್ಷ ರೂಪಾಯಿ ಹಣವನ್ನೂ ವಸ್ತುಗಳನ್ನೂ ಅನಾಥರಿಗೆ ಕಳುಹಿಸಿದರು. ಹಣವನ್ನು ಹಾಗೆಯೇ ನೀಡುವಂತೆ ಶ್ರೀಮತಿ ಸನ್ ಚಿಯಾಂಗ್ ಕೈಷೇಕ್ ರವರಿಗೆ ಕೊಟ್ಟಿದ್ದಾರೆ.

ಶತಮಾನೋತ್ಸವ

ಶ್ರೀ ಬಿ. ಸಿ. ರಾಯ್ ನಾಡಾ ಸಭೆಯ ಮೊದಲನೆ ಅಧ್ಯಕ್ಷರ ಹಿಂದಿನ ಶತಮಾನೋತ್ಸವ ಮೊನ್ನೆ ಕಲ್ಕತ್ತೆಯಲ್ಲಿ ವೈಭವದಿಂದ ನಡೆಸಲಾಯಿತು. ಡಾ॥ ಶ್ಯಾಮಪ್ರಸಾದರು ಅಧ್ಯಕ್ಷರಾಗಿ, ಅವರ ಗುಣಗಾನ ಮಾಡಿದರು.

ಚರ್ಚಿಲರು ಪ್ರವಾಸ ಹೊರಡುವರು

ಮಿ॥ ಚರ್ಚಿಲರು ಅಲ್ಲಿ ಜಾತಿಗೂ ತಿಳಿಯದಂತೆ ಇಳಿದುಕೊಂಡರು. ಅಲ್ಲಿಂದ ಗ್ರೀಕ್ ದೇಶದ ಮುಖ್ಯರಿಗೆ ಹಲವು ಜವಾಬ್ದಾರಿ ಪ್ರವಾಸ ಸಮಾರಂಭದ ಬಗ್ಗೆ ತಿಳಿಸಿದರು. ಇವರನ್ನು ಅಲ್ಲಿ ಎಲ್ಲರೂ ಸ್ವಾಗತಿಸಿದರು. ಈ ಕುರಿತು ಒಂದು ಪ್ರಕಟಣೆ ಹೊರಡಿಸುತ್ತಾ, ಹಿಂದಿನ ದಿವಸ ಹಲವಾರು ನವರಿಗೆ ಗ್ರೀಸಿನ ಚಿಂತನೆಯ ನಂತರ ನಾವು ಇಟಲಿ ಸಂಗ್ರಾಮಕ್ಕೆ ಭೇಟಿಕೊಡಬೇಕೆಂದಿದ್ದೆ, ಆಗ ನನಗೆ ಒಂದು ತೀರ್ಮಾನ ದೊರೆಯಿತು. ನಾನು ಬ್ರಿಟನ್ನಿನಲ್ಲಿ ನನಗೆ ಒಂದೆ ದಿನ ಸಿಕ್ಕಿತ್ತು ಎಂದು ಪ್ರಕಟಿಸಿದರು. ಅವರು ಆ ದಿವಸವೇ [illegible] ದಿವಸವೇ [illegible] ಹೊರಟರು. [illegible] ಮಾಡುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ಹಿಂದೂ ಮಹಾಸಭಾ ಮೆರವಣಿಗೆಯಲ್ಲಿ ಲಾಠಿಪ್ರಹಾರ

ಅಮೃತಸರದಲ್ಲಿ ನಡೆದ ಹಿಂದೂ ಮಹಾಸಭೆಯ ಮೆರವಣಿಗೆಯನ್ನು ಪೋಲೀಸರು ನಿಷೇಧಿಸಿದ್ದರೂ ಮೆರವಣಿಗೆಯು ಸ್ವಲ್ಪ ದೂರ ಹೋಗಲು ಪ್ರಾರಂಭಿಸಲು ಪೋಲೀಸರು ಅದರ ಮೇಲೆ ಲಾಠಿ ಪ್ರಯೋಗಮಾಡಿ ಅನೇಕರಿಗೆ ಗಾಯವುಂಟುಮಾಡಿದರೆಂದು ಹೇಳಲಾಗಿದೆ. ಇದನ್ನು ಖಂಡಿಸುವ ನಿರ್ಣಯವು ಮಹಾಸಭೆಯಲ್ಲಿ ಮಂಡಿಸಲಾಯಿತು.

ಕೊಲೆಯ ಪ್ರಸಂಗದಲ್ಲಿ ಜಮೀನುದಾರರ ದಸ್ತಗಿರಿ

ಜಬ್ಬಲ್‌ಪುರದ ಲಾಲ ಪ್ರಸಾದ್ ಎಂಬುವರ ಕೊಲೆಯ ಪ್ರಸಂಗದಲ್ಲಿ, ಮಂಡಲ ಜಿಲ್ಲೆಯ ಜಮೀನುದಾರರೂ ಮತ್ತು ಕೇಂದ್ರ ಶಾಸನ ಸಭಾ ಸದಸ್ಯರೂ ಆದ ಮಹೇಂದ್ರ ಲಾಲ್ ಚೌಧ್ರಿಯವರನ್ನು ನಾಗಪುರದಲ್ಲಿ ದಸ್ತಗಿರಿಮಾಡಲಾಗಿದೆ.

ಉಪವಾಸ ವ್ರತ

ಆಕ್ರಮಿತ ಯೂರೋಪಿನಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿರುವ ಜನಗಳಿಗೆ ಸಹಾನುಭೂತಿ ತೋರಿಸಲು, ಲಂಡನ್ನಿನ ಆಹಾರ ಪರಿಹಾರ ಸಮಿತಿಯ ಕೆಲವು ಹೆಂಗಸರು ಮತ್ತು ಗಂಡಸರು ೪೮ ಗಂಟೆಗಳ ಕಾಲ ಉಪವಾಸವನ್ನು ನಿನ್ನೆಯಿಂದ ಪ್ರಾರಂಭಿಸಿದ್ದಾರೆ.

—

ಬ್ರಿಟಿಷ್ ಪತ್ರಿಕೆಗಳ ನೋಟ

ಬಂಗಾಳದ ಗೌರ್ನರರ ಪದವಿಗೆ ಮಿ॥ ಕೇಸಿ ರವರ್ನ ಆಸ್ಟ್ರೇಲಿಯನರನ್ನು ನೇಮಿಸಿರುವ ವಿಷಯದಲ್ಲಿ ಭಾರತೀಯರಿಗೆ ಉಂಟಾಗಿರುವ ಅಸಮಾಧಾನವನ್ನು ಇಂಗ್ಲೆಂಡಿನ ಮ್ಯಾಂಚೆಸ್ಟರ್ ಗಾರ್ಡಿಯನ್ ಮತ್ತು ಸ್ಟ್ಯಾಟ್ಸ್‌ಮನ್ ಪತ್ರಿಕೆಗಳ ವಿನಃ ಬೇರೆ ಪತ್ರಿಕೆಗಳ್ಯಾವುವೂ ಪ್ರಕಟಿಸಿಲ್ಲ.

—

ಆಸ್ಟ್ರೇಲಿಯನ್ನರಿಗೆ ನೌಕರಿ ಬೇಕಂತೆ

ಬಂಗಾಳದ ಗೌರ್ನರರಾಗಿ ನೇಮಿಸಲ್ಪಟ್ಟಿರುವ ಮಿ॥ ಕ್ಯಾಸಿಯವರು ಲಂಡನ್ನಿನಲ್ಲಿ ಕೊಟ್ಟ ಒಂದು ಭೇಟಿಯಲ್ಲಿ ಆಸ್ಟ್ರೇಲಿಯನ್ನರಿಗೆ ಹೊರಗಡೆ ಹೆಚ್ಚು ಹೆಚ್ಚಿನ ನೌಕರಿಗಳು ದೊರೆಯಬೇಕಾಗಿದೆಯೆಂದು ತಿಳಿಸಿದ್ದಾರೆ.

—

ಇಟಲಿಯಲ್ಲಿ ಅಗ್ನಿಜ್ವಾಲೆ

ಸಿಸಿಲಿಯ ಇಟಲಿಯನ್ನು ನೇಪಲ್ಸ್ ಕೊಲ್ಲಿಯ ನೋಲಾ ಸಮೀಪ ಜ್ವಾಲಾಮುಖಿ [illegible] ಬ್ರಿಟಿಷ್ ಮತ್ತು ಅಮೆರಿಕನ್ ಸೈನಿಕರು ನೋಡುತ್ತಿದ್ದಾರೆ. ಈ ಪ್ರದೇಶಗಳು ಕಲ್ಲಿನ ಹೊಗೆಯಿಂದ ತುಂಬಿವೆ. ಅಗ್ನಿಜ್ವಾಲೆಯಂತೆ ಹೊರಬರುತ್ತಿದೆ.

—

ಪ್ರೆಸ್ ಬಿಲ್

ಎಂ. ಎ. ಎನ್. [illegible] ಹೊಸದಾಗಿ [illegible] ಸಿದ್ಧ [illegible] ಗಳನ್ನು [illegible] ಗಳಿಂದ ಹೊರಬಿತ್ತು.

ಬೆಂಗಳೂರು ಪೌರ ಸಭೆಗೆ ನಾಮಕರಣ

[ ] ಬೆಂಗಳೂರು, ೩೦

ಬೆಂಗಳೂರು ನಗರ ಪೌರಸಭೆಗೆ ಶ್ರೀಗ [illegible] ಅನಂತ, ಎ. ಕೆ. [illegible] ದಾಸ, ವಿಠ್ಠಲ್ ಪರ್‍ [illegible] ಗೌಡ ಮೊಹಮ್ಮದ್, ಎ. ಡಿ. [illegible] [illegible] ಇವರುಗಳನ್ನು ನಾಮಕರಣ ಸದಸ್ಯರನ್ನಾಗಿ ಸರ್ಕಾರದವರು ನೇಮಿಸಿದ್ದಾರೆ

ಸಚಿವರಲ್ಲಿ ನಿಯೋಗ

[illegible] ಬದಲ್ಲಿ ಸ್ಥಳದ ಜನರಿಗೆ [illegible] ಸರ್ಕಾರ ಈ ಮಾಡಬೇಕೆಂದ ಕೇಳ [illegible] [illegible] ನನ್ನ [illegible] ಮಾಡಲಾಗಿದೆ [illegible] ಭಾವನೆ ಮತ್ತು

ಡಿಪ್ಲೊಮಾಗಳಿಗೆ ರಜ

[illegible] ವಿಧಾನ ಡಿಪ್ಲೊಮಾಗಳಿಗೆ [illegible] ಬೇಕಿದ್ದ [illegible] [illegible] ಡಿಪ್ಲೊಮ [illegible]

ಪತಿಭಕ್ತ್ಯ ಇಳಿಯಿತು

[illegible] ತೊಂದರೆ [illegible] ಕೊಡಲಾಗುವುದು [illegible] ವೇಳೆ [illegible] ಕೊಡಲಾಗುವುದು [illegible] ಕೊಡಲಾಗುತ್ತದೆ

ವೈಶ್ಯ ಯುವಜನ ಮಹಾ ಸಭೆ

[illegible] ಪಂಡಿತ [illegible] ನಡೆಯು [illegible] ಪ್ರಧ [illegible] ಅಧ್ಯಕ್ಷ [illegible]

Edited, printed and published by [illegible] R. Nagarajan, at the Sadhvi Press, D Subedar Road, Mysore

ರೈಲ್ವೆ ಮುಷ್ಕರವಿಲ್ಲ

ಅಮೇರಿಕದಲ್ಲಿ ನಡೆಯಬೇಕಾಗಿದ್ದ ರೈಲ್ವೆ ಕೆಲಸಗಾರರ ಮುಷ್ಕರವನ್ನು ನಿಲ್ಲಿಸಲಾಗಿದೆ [illegible] ರೈಲ್ವೆ ಆಡಳಿತವನ್ನು ವಹಿಸಿಕೊಳ್ಳಲು ನೇಮಕವಾಗಿದ್ದ ಮೂವರು ಸೇನಾಧಿಕಾರಿಗಳಿಗೂ, ನಡುವರು ಲೇಬರ್ ಮುಖಂಡರುಗಳಿಗೂ ಸಮ್ಮೇಳನ ನಡೆದ ವೇಳೆ ಈ ಒಪ್ಪಂದಕ್ಕೆ ಬರಲಾಯಿತೆಂದು ತಿಳಿಸಿರು ಲೇಬರ್ ಮುಖಂಡರು ಸೇನಾಧಿಕಾರಿಗಳಿಗೆ ಭರವಸೆ ಕೊಟ್ಟು ಯುದ್ಧ ಪ್ರಯತ್ನಕ್ಕೆ ಅ [illegible] ಕಾರ್ಯಕ್ಕೂ [illegible] ಪ್ರತಿಜ್ಞೆ [illegible]

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ರೇಷನಿಂಗ್ ವ್ಯವಸ್ಥೆ ಸಂಬಂಧದಲ್ಲಿ ಈ ಕೆಳಗೆ ನಮೂದಿಸಿರುವಂತೆ ಸರ್ಕಲ್ ಆಫೀಸುಗಳನ್ನು ಈ ದಿವಸದಿಂದ [illegible] ಆಯಾ ಮೊಹಲ್ಲ [illegible] ಆಫೀಸುಗಳಲ್ಲಿ ತಮ್ಮ [illegible] ಪತ್ತು [illegible] ಆಫೀಸ್ ನಡೆಯುವ ಕಾಲಗಳಲ್ಲಿ [illegible] ಈ ಮೂಲಕ ಪ್ರಕಟಿಸಲಾಗಿದೆ

(1) I ನೇ ಸರ್ಕಲ್ ಆಫೀಸು (ನಜರಬಾದ್, ಲಷ್ಕರ್, ಮಂಡಿ ಮತ್ತು ದೇವರಾಜ ಮೊಹಲ್ಲಗಳಿಗೆ) ನಂ॥ [illegible] ಕಟ್ಟಡ, ಇರ್ವಿನ್ ರೋಡ್. (2) I ನೇ ಡಿವಿಜನ್ ಫುಡ್ ಇನ್ಸ್‌ಪೆಕ್ಟರ ಆಫೀಸು (ನಜರಬಾದ್ ಮತ್ತು ಲಷ್ಕರ್ ಮೊಹಲ್ಲಗಳಿಗೆ) [illegible] 2811 ನೇ ನಂಬರ್ ಮನೆ, [illegible] ರೋಡ್. (3) II ನೇ ಡಿವಿಜನ್ ಫುಡ್ ಇನ್ಸ್‌ಪೆಕ್ಟರ ಆಫೀಸು (ಮಂಡಿ, ದೇವರಾಜ ಮೊಹಲ್ಲಾಗಳಿಗೆ) ನಂ॥ ಚಂದ್ರಶೇಖರಯ್ಯನವರ ಕಟ್ಟಡ, 1168 ನೇ ನಂಬರ್, [illegible] ರೋಡ್. (4) II ನೇ ಸರ್ಕಲ್ ಆಫೀಸು [illegible] ಬಿಲ್ಡಿಂಗ್ [illegible] (5) III ನೇ ಡಿವಿಜನ್ ಫುಡ್ ಇನ್ಸ್‌ಪೆಕ್ಟರ ಆಫೀಸು (ಚಾಮುಂಡಿ, ಕೃಷ್ಣರಾಜ ಮತ್ತು ಚಾಮುಂಡಿ ಮೊಹಲ್ಲ) ಹಾಲಿ ಇದ್ದ ಎ. ಆರ್. ಪಿ. ಆಫೀಸ್, [illegible] ದೇವಸ್ಥಾನದ ಪಕ್ಕ, [illegible] ಅಗ್ರಹಾರ, ಚಾಮುಂಡಿಪುರಂ

ಟಿ. ಬಿ. ರೆಡ್ಡಿ,

ಅಸಿಸ್ಟೆಂಟ್ ರೇಷನಿಂಗ್ ಆಫೀಸರ್

ಪಂಜಾಬಿನಲ್ಲಿ ರಾಜಕೀಯ ಬಂದಿಗಳ ಬಿಡುಗಡೆ

[illegible] ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಶಿಕ್ಷಿಸಲ್ಪಟ್ಟಿರುವ ಅನೇಕರನ್ನು ಬಿಡುಗಡೆ ಮಾಡಲು ಪಂಜಾಬ್ ಸರ್ಕಾರವು ನಿರ್ಧರಿಸಿದೆ. ಮುಂದಿನ ತಿಂಗಳಿನ ಮಧ್ಯಭಾಗದಲ್ಲಿ ಅವರುಗಳ ಬಿಡುಗಡೆಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಸಹಾಯಕ್ಕಾಗಿ ನೇಮಕ

ಯುರೋಪಿನ ಮೇಲಿನ ದಂಡಯಾತ್ರೆಗಾಗಿ ಸುಪ್ರೀಂ ಕಮ್ಯಾಂಡರಾಗಿ ನೇಮಕವಾಗಿರುವ ಜ॥ ಐಸೆನ್‌ಹೋವರಿಗೆ ಸಹಾಯಕರಾಗಿ [illegible] ಕಮ್ಯಾಂಡರ್ [illegible] ಚೀಫ್‌ರಾಗಿ [illegible] ನೇಮಿಸಲಾಗಿದೆ

ರಷ್ಯನರಿಗೆ ಭಾರಿ ಜಯ

ಕೀವ್ [illegible] ರಷ್ಯನರು ಭಾರಿ ಜಯವನ್ನು ಹೊಂದಿರುವರು [illegible] ನಡೆದ ವೇಳೆ ರಷ್ಯನರು [illegible] ನಗರವನ್ನು ಪ್ರವೇಶಿಸಿದರು. ಇದು ಕೀವ್‌ಗೆ ವಾಯುವ್ಯದಲ್ಲಿ [illegible] ದೂರದಲ್ಲಿದೆ ಮತ್ತು ಭಾರಿ ರೈಲ್ವೆ ಜಂಕ್ಷನ್ [illegible], ಲೆನಿನ್‌ಗ್ರಾಡ್ ಮತ್ತು ಕೀವ್ [illegible] ರೈಲುಗಳು ಸಂಧಿಸುವ ಮುಖ್ಯ ಪ್ರದೇಶವಾಗಿದೆ

ಮಿತ್ರ ಕಮ್ಯಾಂಡೊ ಧಾಳಿ

ಇಂಗ್ಲೆಂಡ್ [illegible] ದ್ವೀಪದಲ್ಲಿ ಬಂದಿಳಿದು ಮಿತ್ರ ಕಮ್ಯಾಂಡೊ ದಳವು ಮೊನ್ನೆ ದಿನ [illegible] ಜರ್ಮನರ [illegible] ಈ ಧಾಳಿಗೆ [illegible] ದಿನದ ಹಿಂದೆ ಮಿತ್ರ ಧಾಳಿಯಾಗಿತ್ತು. ಈ ಎರಡು ಧಾಳಿಯ [illegible] ಮಿತ್ರರ ಪ್ರಯತ್ನ ನಿಷ್ಫಲವಾಯಿತೆಂದು ಜರ್ಮನ್ ವರದಿ ತಿಳಿಸುತ್ತದೆ. ಈ ಬಗ್ಗೆ ಮಿತ್ರರ ಸಮರ್ಥನೆ ದೊರೆತಿಲ್ಲ.

ಕರಾಚಿಯಲ್ಲಿ ರಷ್ಯನ್ ವೈಜ್ಞಾನಿಕರು

[illegible] ತಡೆಯಲು ಶೋಧನೆ ನಡೆಸುತ್ತಿರುವ [illegible] ವೈಜ್ಞಾನಿಕರು ಕರಾಚಿಗೆ ಬಂದಿರುವರು.

ಈ ಗುದ್ದಾಟವೇಕೆ ?

ಶ್ರೀ ರಾಜಗೋಪಾಲಯ್ಯಂಗಾರ್ ಮುಂತಾದ ಕೆಲವರು ಒಂದು ಹೊಸ ರಾಜಕೀಯ ಪಂಗಡವನ್ನೇರ್ಪಡಿಸುವರೆಂಬ ಬಗ್ಗೆ ಈಗಾಗಲೇ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಕಾಂಗ್ರೆಸ್ಸಿನಲ್ಲೇ ಇದ್ದು ತಮ್ಮ ತಮ್ಮ ವೇಷ ಮತ್ತು ಬಣ್ಣಗಳನ್ನು ಬದಲಾಯಿಸಿಕೊಂಡು ಜನಗಳ ಬೆಂಬಲವನ್ನು ಪಡೆಯುತ್ತೇವೆಂಬುದು ಶುದ್ಧ ಮರೀಚಿಕೆಯಾಗುವುದಿಲ್ಲವೇ ? ಜನ ಬೆಂಬಲವಿದ್ದು ಬಹಳ ಕಾಲದಿಂದ ಜನರ ಉದ್ಧಾರಕ್ಕಾಗಿ ಟೊಂಕ ಕಟ್ಟಿ ನಿಂತಿರುವ ಸಂಸ್ಥೆಗಳೇ ಕೆಲವು ವೇಳೆಗಳಲ್ಲಿ ಕಣ್ಣು ಕಣ್ಣು ಬಿಡುವಾಗ್ಗೆ, ಈ ಹೊಸ ಪಕ್ಷವು ನಗುವವರ ಮುಂದೆ ಎಡವಿ ಬಿದ್ದಂತಾಗುವುದರಲ್ಲಿ ಸಂದೇಹವೇ ಇಲ್ಲ. ಅಲ್ಲವೇ ?

ಯಾವ ಪಕ್ಷಕ್ಕೂ ಸೇರದವ

' ಕಿರಿಯರ ವಿಶ್ವಭಾರತಿ '

ಮೈಸೂರು [illegible] ಕೃಷ್ಣಮೂರ್ತಿಪುರದಲ್ಲಿ ಶ್ರೀ ರಾಮರಾವ್ ಜೆ. ನವರತ್ನಂ ಅವರ ಸಂಪಾದಕತ್ವದಲ್ಲಿ ಹೊರಡುತ್ತಿರುವ " ಕಿರಿಯರ ವಿಶ್ವಭಾರತಿ " ಮಾಸಪತ್ರಿಕೆಯು ಜನವರಿ ಸಂಚಿಕೆಯನ್ನು [illegible] ಆನಂದದಿಂದ ಸ್ವೀಕರಿಸಿದ್ದೇವೆ. ಇದರಲ್ಲಿ [illegible], ಚಂದ್ರ [illegible], [illegible] ಮುಂತಾದ [illegible]. ಬೆಲೆ [illegible], ಸರ್ವರಿಗೂ ಗ್ರಾಹ್ಯವಾಗಿದೆ

ಭಕ್ತ ರಾಜ್

ನಗರದ [illegible] ರಂಗ ಮಂದಿರದಲ್ಲಿ [illegible] ವಾರದಿಂದಲೂ ನಡೆಯುತ್ತಿರುವ [illegible] ಚಿತ್ರ. ಕಥಾಭಾಗವು ಬಹಳ ಚೆನ್ನಾಗಿದೆ. ಅಭಿನಯಿಸುವ ನಟರೆಲ್ಲರೂ [illegible] ದರ್ಶನವೂ [illegible] ಭಕ್ತಿರಸಕ್ಕೆ ಪ್ರಾಧಾನ್ಯತೆ ಕೊಡಬೇಕೆಂದು [illegible] ಭಕ್ತರಾಜ [illegible] ಅಭಿನಯ ಚೆನ್ನಾಗಿದೆ. [illegible] ಪ್ರತಿಯೊಬ್ಬರೂ ಭಕ್ತಿಪೂರಿತವಾದ ಭಕ್ತರಾಜವನ್ನು ಒಮ್ಮೆ ನೋಡಬೇಕಾದುದು

[illegible]

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ರೀತಿ ಪ್ರತ್ಯೇಕವಾಗಿ [illegible] ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

[illegible] ಬ್ರಾಂಡ್ ಕಾಫಿಪುಡಿ

[illegible]

[illegible] ದೇವರಾಜ ಮಾರ್ಕೆಟ್, ಮೈಸೂರು

[illegible] ಸಂಖ್ಯೆ [illegible] ಆಫೀಸಿನಲ್ಲೂ [illegible]

[illegible]

[illegible] ಮಾಡುತ್ತವೆ

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ [illegible] ಹೊಗದಾಗುವುದಲ್ಲದೆ ಅದರ [illegible] ರಂಧ್ರಗಳನ್ನೆಲ್ಲಾ [illegible] ಕೊಳೆಯನ್ನೆಲ್ಲಾ ತೆಗೆದುಹಾಕುವುದು. ಅದರ ನುಣ್ಣನೆಯ ಗುಣವೂ, ಸುಗಂಧವೂ ಚಿತ್ತಾಕರ್ಷಿಸುವುದು.

ಮೈಸೂರು ಸ್ಯಾಂಡಲ್ ಸೋಪ್